Regd. No. M. 3618.

Estd. 1921 ಸ್ಥಾಪನೆ

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.
ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ. 1-12-0. ಟ. ಖ. 0-4-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೧೮

FOUNDER
Sri. A. B. Shetty.

Vol. 24
No. 18

NAVAYUGA— Kannada Weekly —UDIPI, S. I.

ಉಡುಪಿ ● 6—1—1944 ● ಮಂಗಳೂರು.

ಕಿರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ
ಭಾರತೀಯ ಕತೆಗಳು

ಮೂಲ ಲೇಖಕರು: ಶ್ರೀ

ಪಂಚಾಪಕೇಶ ಅಯ್ಯರ್,
ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು:— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-14-0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

Is Your Scholarship Protected?

Donors of some well-known scholarships insist that their recipients should be insured to the extent of the whole scholarship amount. Why is that? Because they do not wish that, should the recipient's lives be lost their monies too should be lost. When they can easily avoid such loss, they are determined to do so. Hence their insistence on insurance

Are not Parents too donors of scholarships to their children? Then should not they also insure them?

Is it not in the mutual interests of both parents and children to do so? It is.

Parents should insure their children to the extent of the total amount of money required for their upkeep and education or students should prevail upon their parents to do so, especially, when it is a question of higher education and larger expenditure.

The Canara Mutual Assurance Co., Ltd.,
UDIPI.

Hearty New Year Greetings

To

All our Policy-holders, Agents, Medical Examiners and well-wishers.

We look forward to continue to serve every one of our clients in the New Year and Every Year to come.

KOCHIKAR BROTHERS LTD.,
Branch Secretaries for Madras Prcy.
Chief Agents for South India.

THE BOMBAY LIFE ASSURANCE CO., LTD.
"Bombay Life" Building,
UDIPI.

Bombay, Madras, Calicut, Manglore, Bangalore, Madura, Trivandrum.
And Agencies all over South India.

ಗನೋರಿಯಾ ... ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ. ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೇಸ್. (ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

IN APPRECIATION
1943—1944

Not because it is a time honoured custom, but because we would feel ungrateful if we did not express our appreciation to those whose loyalty, friendship and patronage make our success possible.

To our thousands of customer friends, the directors and staff of the Canara Bank send their sincere greetings with the wish that the New Year will bring to you continued prosperity and pleasure and the assurance of our continued efforts to render every assistance in the realisation of your desire.

ESTD. 1906
Canara Bank
Limited.

ಇಸವಿ 1943 ಹೋಗಿ 1944 ಬಂತು. ರಾತ್ರಿ ಹೋಗಿ ಹಗಲಾದಂತಲ್ಲ. ಸಂಕಟದ ಬದಲು ಶಾಂತಿಯೊದಗಿದಂತಲ್ಲ; ಪ್ರಥಮ ಜಾವ ಕಳೆದು ನಡುರಾತ್ರಿ ಬಂದಂತೆ, ಸಂಕಟವಾಗಿದ್ದುದು ಶೂಲೆಯಾಗಿ ಕಾಣಿಸಿಕೊಂಡಂತೆ, 1943 ತೊಲಗಿ 1944 ಬಂದಿದೆ. ಹೊಸಮತ, ಹೊಸ ರೀತಿ, ಹೊಸ ಯುಗವನ್ನು ಸ್ವಾಗತಿಸದೆ ಮುಷ್ಕರ ಹಿಡಿಯುವ ಹಳೇ ಮನೋವೃತ್ತಿಯವರಿರಬಹುದು; ಆದರೆ ಹೊಸವರ್ಷವನ್ನು ಒಲ್ಲೆನೆನ್ನುವುದು ಅಸಾಧ್ಯ. ಮನುಷ್ಯನು ಉನ್ನತಿ ಪಡೆದುದು ಸುಳ್ಳು; ನಾಗರಿಕತೆ ಬೆಳೆದಿದೆ! ಎಂಬುದು ತೀರಾ ಅಬದ್ಧ; ಕಾಲಗತಿ ತಡೆಯಿಲ್ಲದೆ ಸಾಗಿರುವದೊಂದೇ ಸತ್ಯ!

ದುರಂತಾಗ್ನಿಗೆ ಗಾಳಿಯೂದಿತು 1943-1944 ಘೋರ ವಿಜಯ ತರಬಹುದೆ?

1943-

ಗುಡುಗು ಮಿಂಚುಗಳ ವರುಷ. ಪ್ರಪಂಚವು ಇದು ವರೆಗಿನ ಆಯುಷ್ಯದಲ್ಲಿ ಇಂತಹ ಕಾಳವತ್ಸರವನ್ನು ಕಂಡಿರಲಾರದು. 1943ರಲ್ಲಿ ಯುದ್ಧ ಕಿಡಿ ಹಲವೆಡೆಗೆ ನಾಲಿಗೆ ಚಾಚಿತು. ಹೊಟ್ಟೆಯುರಿಯ ಜ್ವಾಲೆ ಕಾಳಕೂಟಸದೃಶವಾಯಿತು. ಸೂರೆ ಸುಲಿಗೆ, ಅವಿಶ್ವಾಸ, ಪರಸ್ಪರ ವಂಚನೆಗಳ ಜಗತ್ಪ್ರಸಿದ್ಧ ದಾಖಲೆಗಳು ಉಂಟಾದುದೂ ಈ ವರುಷದಲ್ಲೇ. ಅಂತೂ ಯುದ್ಧರಂಗ, ಜೀವನರಂಗ, ವ್ಯವಹಾರ ರಂಗ—ಇವು ಮೂರರಲ್ಲೂ ಕಾಠಿಣ್ಯ ಕಲ್ಮಷಗಳನ್ನೇ ನಿರ್ಮಿಸಿದ ಇಸವಿ 1943. ಮನುಷ್ಯ ವರ್ಗದಲ್ಲಿ ಪಶುಬುದ್ಧಿ ಸೇರಿ ಹೋದರೆ ಎಂತೆಂತಹ ಅತ್ಯಾಚಾರ, ಗಂಡಾಂತರಗಳು ನಡೆಯಲು ಸಾಧ್ಯವೋ ಅವೆಲ್ಲಾ 1943ರಲ್ಲಿ ನಡೆದು ಹೋದವು. ಅದೊಂದು ಇಸವಿಯಾಗಿರುವ ಬದಲಿಗೆ ಕಣ್ಣು ಕಿವಿಗಳುಳ್ಳ, ಭೇತಾಳನಾಗಿ ಇರುತ್ತಿದ್ದರೂ ರಷ್ಯಾರಣರಂಗದ ರಕ್ತದ ಕಾಲುವೆಯನ್ನು ಬಂಗಾಳದಂತಹ ಹಸಿವು ಮರಣಗಳನ್ನು, ನಿರಪರಾಧಿಗಳ ಆರ್ತನಾದಗಳನ್ನು ಕಂಡು ಕೇಳಿ ಎಂದೋ ಪಲಾಯನ ಮಾಡಬೇಕಾಗಿತ್ತು! ಆದರದೊಂದು ಇಸವಿ, ಹೃದಯರಹಿತ ಕಾಲಚಕ್ರದ ಒಂದು ಸುತ್ತು! ಅದ್ದರಿಂದ ತನ್ನ ಮೇಲಿನ ಅಪವಾದವನ್ನದು ಅರಿಯದು.

ಮುಖ್ಯ ಘಟನೆಗಳು—

ರಶ್ಯಾಯುದ್ಧ, ಉತ್ತರಾಫ್ರಿಕ ವಿಜಯ ಮತ್ತು ಇಟೆಲಿ ಯುದ್ಧ, ಮುಸಲನಿ ಪತನ, ಶಾಂತ ಸಮುದ್ರದಲ್ಲಿ ಪ್ರತಿಧಾಳಿ, ವಾಷಿಂಗ್ಟನ್ ಟೆಹರಾನ್ ಸಮ್ಮೇಲನಗಳು, ದ್ವಿತೀಯರಂಗದ ಸ್ಪಷ್ಟ ನಿರ್ಧಾರ—ಇವು 1943ರ ಲೋಕ ಪ್ರಾಮುಖ್ಯ ಘಟನೆಗಳು. ಇಡೀ ದೇಶದಲ್ಲಿ ಕಾಣಿಸಿಕೊಂಡ ಆಹಾರಾಭಾವ, ಬಂಗಾಳದ ಭೀಕರ ಬರಗಾಲ, ವೇವೆಲ್ ಲಿನ್‌ಲಿತ್‌ಗೋ ಆಮದು ರಫ್ತು—ಇವು ಹಿಂದುಸ್ಥಾನದ ಪಾಲಿನ ಪ್ರಾಮುಖ್ಯ ಆಗು ಹೋಗುಗಳು. ಇವುಗಳಲ್ಲಾವುದನ್ನೇ ಆದರೂ ಹೊಸದಾಗಿ ಆರಂಭಿಸಿದ ಕೀರ್ತಿ ಅಥವಾ ಅಪಕೀರ್ತಿ 1943 ಕ್ಕಿಲ್ಲ; ಎಲ್ಲವನ್ನೂ ಬಹಿರಂಗವಾಗಿ ಬೆಳೆಸಿದುದೊಂದೇ ಅದು ಮಾಡಿದ ಕಾರ್ಯ. ಅಷ್ಟೇ ಹೊರತು ಈ ಮಹಾಘಟನೆಗಳಲ್ಲಿ ಒಂದೇ ಒಂದನ್ನಾದರೂ ತೀರ್ಮಾನಪಡಿಸಿದ ಕೀರ್ತಿ ಕೂಡಾ ಕಳೆದ ವರುಷಕ್ಕಿಲ್ಲ. ರಶ್ಯದಲ್ಲಿ ಜರ್ಮನರಾಕ್ರಮಿಸಿದ ಮೂರರಲ್ಲೆರಡಂಶದಷ್ಟು ಸ್ಥಳವನ್ನು ಕೆಂಪು ಸೇನೆ ಇದೇ ವರುಷದಲ್ಲಿ ಪುನರಾಧೀನ ಪಡಿಸಿಕೊಂಡುದು ನಿಜ; ಆದರೆ ನಾಜಿಗಳು ಈಗಲೂ ಅಲ್ಲಿ ಆಕ್ರಮಣಗಾರರಾಗಿ ಇದ್ದಾರೆ. ಇಟೆಲಿಯಲ್ಲಿ ಮುಸಲನಿಯೊಮ್ಮೆ ಅಂತರ್ಧಾನವಾದ ಮರುಗಳಿಗೆಯಲ್ಲಿ ಪುನಃ ಕಾಣಿಸಿಕೊಂಡಿದ್ದಾನೆ. ಅಲ್ಲಿಯ ಯುದ್ಧ ಏಕಪ್ರಕಾರ ಸಾಗಿದೆ. ಶಾಂತ ಸಮುದ್ರ ದ್ವೀಪಗಳಿಂದ ಜಪಾನರನ್ನೋಡಿಸುವದು, ಅವರು ಪ್ರತಿಭಟಿಸುವದು ಕೊಟ್ಟು ಪಡೆಯುವ ಚಿರಸಂಬಂಧದಂತೆ ನಡೆದಿದೆ. ದ್ವಿತೀಯರಂಗದ ಅವಸ್ಥೆಯೂ ಹಾಗೇನೇ. ಆ ಕುರಿತು ಮಿತ್ರ ಪ್ರಮುಖರ ಕಂಠಸ್ವರ ಕಿವಿಯೊಡೆದು ಕೇಳಿಸುತ್ತಿದೆ ಹೊರತು ಗುಂಡು ಹಾರಾಟ ಕೇಳುವಂತಾಗಿಲ್ಲ. ಹಿಂದುಸ್ಥಾನದ ಬರಗಾಲ ಇದ್ದಂತಿದೆ; ಬಂಗಾಳದಲ್ಲಿ ಇನ್ನೂ ಹಸಿವು ಮರಣಗಳಾಗುತ್ತಲೇ ಇವೆ. ಇನ್ನೆಲ್ಲೆಲ್ಲಿ ಬಂಗಾಳವಾಗಲಿರುವದೋ ಎಂಬ ಭೀತಿಗೂ ಅವಕಾಶವಿದೆ. ಲೋರ್ಡ್ ಲಿನ್‌ಲಿತ್‌ಗೋರ ಬದಲಿಗೆ ಲೋರ್ಡ್ ವೇವೆಲ್ ಬಂದುದರಿಂದ ಮುಖ ಬದಲಾವಣೆಯಷ್ಟೇ ಹೊರತು ಧೋರಣೆ ಬದಲಾವಣೆಯಿಲ್ಲ. ಅಂತೂ 1943ನೇ ಇಸವಿಯೆಂಬುದು, ಯಾವುದನ್ನೂ ನಂದಿಸದೆ, ದುರಂತಾಗ್ನಿಯನ್ನು ಇನ್ನಷ್ಟು ಪ್ರಜ್ವಲಿಸುವ ಗಾಳಿಯಾಗಿ ಬೀಸಿ ಹೋಯಿತು. ಕೆಟ್ಟವರುಷ!

1944-

ಈಗ ಬಂದಿದೆ. ಅತ್ತ ರೋಮ್ ರಸ್ತೆಯಲ್ಲಿ ಮಿತ್ರದಂಡು ಕಾಲಿಟ್ಟಿದೆ; ಇತ್ತ ಒಡೆಸಾ-ಕ್ರಾಕೋ-ಬರ್ಲಿನ್ ರೈಲ್ವೇ ಲೈನಿನಲ್ಲಿ ಕೆಂಪು ಸೇನೆ ಕಾಲಿಟ್ಟಿದೆ—ಅವುಗಳಷ್ಟೇ ಮುಂಜಾಗರೂಕತೆ, ದೃಢತೆಯಿಂದ ಪ್ರಪಂಚವು 1944ಕ್ಕೆ ಕಾಲಿಟ್ಟಿದೆ! ಅತ್ಯಪಾಯಕಾರೀ ಹೆಜ್ಜೆ. 1944 ಅತಿ ಭೀಕರ ವರುಷ; 1943 ಮಾಡಿಟ್ಟ ಅರ್ಧಮರ್ಧ ಕೆಲಸಗಳನ್ನು ಪೂರ್ತಿಗೊಳಿಸಿ ಮುಗಿಸುವ ಹೊಣೆ ಹೊತ್ತ ವರುಷ. ಹೋದ ಇಸವಿ ಗೋಣಿಯೇರಿಸಿದ್ದುದಕ್ಕೆಲ್ಲಾ ಬಂದ ಇಸವಿ ಮಾಡುಕಟ್ಟಿ ಕಳಸವಿಡಬೇಕು. ಅಂತೂ ಕಗ್ಗತ್ತಲೆಯಂತಹ ವರುಷ. '1944ರ ಸುಖವನುಭವಿಸಲಿಕ್ಕಾಗಿ ಒಂದು ತುತ್ತು ಉಂಡು ಬದುಕುವೆಯಾ?' ಎಂದು ಅನ್ನಾನ್ನಗತಿಕ ಬಂಗಾಳಿಯೊಬ್ಬನನ್ನು ಕೇಳಿದರೂ ಅವ ಬೇಡವೆಂದಾನು! ಅಂತಹ ಕಠೋರ ಕಷ್ಟಗಳ ಮೂಟೆಯನ್ನೇ ಬೆನ್ನಿಗೆ ಕಟ್ಟಿಕೊಂಡು ಬಂದಿದೆ ಇಸವಿ 1944. ಈ ಇಸವಿಯಲ್ಲಿ ಏನೆಂದು ಹಾರೈಸಲಿ? ಯಾವ ದಿಕ್ಕಿನಿಂದ ಬೆಳಕನ್ನು ನಿರೀಕ್ಷಿಸಲಿ? ಕೆಂಪು ಸೇನೆ ನಾಜೀ ಸೇನೆಯನ್ನು ರಶ್ಯದ ಗಡಿಯಿಂದ ಹಿಡಿದು ಬರ್ಲಿನ್ ವರೆಗೂ ಹಿಂದೂಡುತ್ತಾ ಹೋಗಲಿದೆ ಎಂದು ಆಶಿಸಬಹುದೆ? ಅಸಾಧ್ಯ. ಅದಕ್ಕಾಧಾರ ಸಾಲದೆಂದೇ ಈ ತನಕ ಅತಂತಹ ಅಭಿಪ್ರಾಯ ಕೂಡಾ ಕೇಳಬರುವದಿಲ್ಲ. ಯುರೋಪಿನಲ್ಲಿ ಇದೇ ವರುಷ ದ್ವಿತೀಯ ರಂಗಾರಂಭವೊಂದು ಖಂಡಿತ; ಒಂದು ಮಾತು ನಿಜ. ಯಾವುದಾದರೊಂದು ಪಕ್ಷಕ್ಕೆ ಸೋಲಿನ ಸ್ಪಷ್ಟ ನಿರ್ಣಯ 1944 ಮುಗಿಯುವಂತಿಲ್ಲ. ಅವರೆ ಅದರ ಅಂತ್ಯವನ್ನು ಈ ವರುಷದಲ್ಲೇ ಕಾಣುವ ಆಸೆ ಕಟ್ಟಿಕೊಳ್ಳುವದಸಾಧ್ಯ. ಊಹೆಗೂ ಮಿಕ್ಕಿದ ಭೀಕರ ಯುದ್ಧವನ್ನು ಮಾತ್ರ ಕಾಣಲು ಸಾಧ್ಯ. ಇತ್ತ ಚೀನಕ್ಕೆ ಕ್ಷಯ ರೋಗವಾಗಿ ತಾಗಿರುವ ಜಪಾನೀ ಸೇನೆ ಹಿಮ್ಮೆಟ್ಟುವ ದೃಶ್ಯವನ್ನು 1944 ತೋರಿಸುವಂತಿಲ್ಲ. ಶಾಂತ ಸಮುದ್ರದ ದ್ವೀಪ ಸಮೂಹಗಳಲ್ಲಿ ಜಪಾನರಿಲ್ಲ ಎಂಬ ವಾರ್ತೆಯನ್ನಾದರೂ ಕೇಳಬಹುದೆ? ಜಪಾನರ ಸಿದ್ಧತೆಯನ್ನು ನೋಡಿದರೆ ಆಯಕಟ್ಟಿನ ದ್ವೀಪಗಳನ್ನು ಬಿಟ್ಟು ಮಿಕ್ಕವುಗಳ ಕುರಿತು ಹಾಗಾಗಬಹುದೇನೋ! ಬರ್ಮಾ ಧಾಳಿಯಾರಂಭವಾಗಬಹುದು; ಆದರೆ ಇಲ್ಲಿ ಆರಂಭಕ್ಕಿಂತಲೂ ಆ ಮೇಲಿನ ಸಾಹಸ ಮುಖ್ಯವಾದ್ದರಿಂದ ಆ ಕಡೆಯಿಂದಲೂ...

ಬರುವ ವಾರ

ನೆನಪಿರಲಿ!

ತಾ|13—1—1944ಕ್ಕೆ

ನವಯುಗದ ಪರ್ಯಾಯ ಸಂಚಿಕೆ

ಕಣ್ಸೆಳೆವ ಬಹಿರಂಗ
ಮನಸೆಳೆವ ಅಂತರಂಗ

?

ವಿಶೇಷ

ರೀತಿಯಲ್ಲಿ
ಹೊರಡುವುದು.

ಚಿತ್ರಗಳು?

ಏಕವರ್ಣದಲ್ಲಿ!
ದ್ವಿವರ್ಣಗಳಲ್ಲಿ!

ಶ್ರೀಗಳಾದ ಶಿವರಾಮ ಕಾರಂತರು, ಎ. ಬಿ. ಶೆಟ್ಟರು, ಪ್ರೊ. ಆರ್. ವಿ ಜಾಗಿರದಾರ್, M. A (London), **ಕಯ್ಯಾರ ಕಿಂಞಂಣ ರೈ**, ಬಿ. ವಿ. ಬಾಳಿಗಾ ಡಾ| ಎಸ್. ಪಾಲ್ ಚಿನ್ನಪ್ಪ, ಎಂ, ಸುಬ್ರಾಯನ್, ಎನ್. ಕೆ. ಕುಲಕರ್ಣಿ, ಎಂ. ಎ. ಬಿ. ಟಿ. ಕೆ. ವಿ. ಶೆಣೈ, ಬಿ ಎ. ಎಲ್. ಟಿ. ಕೊರಡ್ಕಲ್. ಶ್ರೀನಿವಾಸರಾವ್, ಡಾ|| ಪಿ. ಎ. ಅದ್ಯಂತಾಯ, ಪಿ. ವಿ ಉಪಾಧ್ಯಾಯ, ಬಿ. ಎ., ಎಲ್. ಎಲ್. ಬಿ. ಪಿ. ಕೆ. ಭಾರದ್ವಾಜರು, ವೈದ್ಯಗುರು, ಡಾ| ಗೋಪಾಲಕೃಷ್ಣ ರಾಯರು ಮೊದಲಾದ ಪ್ರಖ್ಯಾತ ಲೇಖಕರ. **ಶ್ರೀಮತಿಗಳಾದ** ಸರಸ್ವತಿ ಬಾಯಿ ರಾಜವಾಡೆ, ಲೀಲಾಬಾಯಿ ಕಾಮತ್, ಕುಮಾರಿ ಮಾಲತಿದೇವಿ, ಬಿ. ಎ, ಮೊದಲಾದ ಪ್ರಸಿದ್ಧ ಲೇಖಕಿಯರ, **ಕಥೆಗಳು—ಲೇಖನಗಳು—ಕವನಗಳು!**

ನೂರಕ್ಕೂ ಮಿಕ್ಕಿ ಪುಟಗಳು!

ಬೆಲೆ ಬರೇ 0—8—0.

ಬೇಕಾದವರು ಕೂಡಲೇ 0—8—0 ಸ್ಟಾಂಪು ಕಳುಹಿಸಬೇಕು.

ಮೆನೇಜರ್, ನವಯುಗ ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ರಕ್ತವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮುನೆಯ ಔಷಧಿಗಳು ದೊರೆಯುತ್ತವೆ.

ಕ್ಯಾಟೆ ಸಂಗ್ತಿ ಬರದಲ್ಲಿ ತಕ್ಕವಾದ ಔಷಧಿ ಚುನಾಯ್ಸಿ ರವಾನ್ನಿಬಹುದು.

ಕೆಟಲೋಗಿಗೆ ಬರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಉಡುಪಿ ಏಜಂಟರು:- **ನವಭಾರತ ಬುಕ್, ಡಿಪ್ಪೋ.**



ಉತ್ಸವಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಪಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಸ್ಥಿತಿಗತಿ

ರಶ್ಯಾರಂಗ.

ವಿಚಿತ್ರ ಪ್ರವಾಹದ ಬಾಯಿ ಮುಂದು ವರಿದಷ್ಟು ಮಿತ್ರ ಸೇನೆಗಳ ಹೆಜ್ಜೆ ಮುಂದೊತ್ತಿದುದು ಎಲ್ಲಿಯೂ ಗೋಚರಿಸುವದಿಲ್ಲ. ರಶ್ಯವೊಂದೇ; ಇದಕ್ಕಪವಾದ. ಇತ್ತೀಚೆಗೆ ಕೆಂಪು ಸೇನೆಯ ನೂತನ ಧಾಳಿಯಿಲ್ಲದ ವಾರವಿಲ್ಲ. ಒಂದೆಡೆಯಲ್ಲಿ 1939 ರ ಪೋಲೆಂಡ್ ಗಡಿಗೆ 18 ಮತ್ತು ಬೇರೊಂದು ಕಡೆಯಲ್ಲಿ ಕೇವಲ 15 ಮೈಲು ದೂರದ ವರೆಗೂ ರಶ್ಯಾ ಸೇನೆ ಮುಂದೊತ್ತಿದೆ. ಮತ್ತೊಂದು ರಂಗದಲ್ಲಿ 1939ರ ರುಮೇನಿಯಾ ಗಡಿಗೆ 40 ಮೈಲು ಬಾಕಿ ಇರುವ ವರೆಗೂ ಕೆಂಪು ಸೇನೆ ಬಂದಿದೆ. ಅಂತೂ ರಶ್ಯದ ಚಿತ್ರ ಹೀಗಿದೆ ಎನ್ನಬಹುದು:-- ಜರ್ಮನರಂತೂ ಧಾಳಿ ಶಕ್ತಿ ಕಳಕೊಂಡಿದ್ದಾರೆ. ಆದರೆ ರಶ್ಯಾನರಿಗೂ ಏಕಮೈಯ ಪ್ರಬಲ ಪ್ರತಿಧಾಳಿ ಹೂಡುವ ಸಾಮರ್ಥ್ಯವೀಗ ಉಳಿದಿಲ್ಲ. ಇಂದ್ರಜಾಲದಂತೆ ಅಲ್ಲೊಮ್ಮೆ ಇಲ್ಲೊಮ್ಮೆ ಧಾಳಿ ಹೂಡಿ ನಾಜಿಗಳನ್ನು ದಂಗುಪಡಿಸಿ, ದಣಿಸಿ ಗೆಲ್ಲುವದೇ ಅವರ ಪಾಲಿನ ಹಂಚಿಕೆಯಾಗಿ ಉಳಿದಿದೆ.

ಇತರ ರಣಕಣಗಳಲ್ಲಿ.

ಇಟೆಲಿಯಲ್ಲಿ ಈ ವರೆಗೂ ಅತಿಮಂದ ಹೆಜ್ಜೆಯಿಡುತ್ತಿದ್ದ ಮಿತ್ರ ಸೇನೆಗಳಿಗೆ ಈಗೀಗ ಅಷ್ಟು ಹೆಜ್ಜೆಯಿಡುವ ಅದೃಷ್ಟವೂ ದಗಿದೆ. ಎಂಟನೇ ಸೇನೆ ಮುಂದೊತ್ತಿದ 'ಆರೆಯೊಲ್ಲಿ' ಹೊಳೆಮುಖದಲ್ಲಿ ಜರ್ಮನರು ಪ್ರತ್ಯಕ್ಷ ನರಕವನ್ನೇ ನಿರ್ಮಿಸಿ ಪ್ರತಿಭಟನೆಗೆ ನಿಂತಿರುವದರಿಂದ ಹೆಜ್ಜೆ ಮುಂದಿಡುವದೇ ಅಸಾಧ್ಯವಾಗಿದೆ. ಜರ್ಮನರು ಆ ವಲಯದಲ್ಲಿ ಹೊಸ ರಕ್ಷಣಾ ಲೈನನ್ನು ಕಟ್ಟಿಕೊಂಡು ಸರ್ವ ಶಕ್ತಿಯಿಂದ ಪ್ರತಿಭಟಿಸಲು ಅಣಿಯಾಗಿರುವರು. ಶಾಂತ ಸಮುದ್ರದ ನ್ಯೂಗಿನಿಯಾ ದ್ವೀಪ ಸಮೂಹಗಳ ಸಾಯಿದೋರಿನಲ್ಲಿ ಮಿತ್ರ ದಂಡುಗಳು ನೆಲ, ಜಲ, ಆಕಾಶ ಧಾಳಿ ನಡಿಸಿ ಕಾಲೂರಿವೆ. ಕಳೆದ ವಾರ ಮತ್ತೊಂದು ಬಾರಿ ಬರ್ಲಿನಿನ ಮೇಲೆ ಪ್ರಬಲ ಬೋಂಬು ಧಾಳಿ ನಡೆಯಿತು.

ದ್ವಿತೀಯರಂಗವನ್ನು-

ಆರಂಭಿಸುವ ವಿಶೇಷೋತ್ಸಾಹದ ಬದಲಿಗೆ ಮಿತ್ರ ಪಾಳಯದಲ್ಲಿ ವಿಶೇಷ ಜಾಗರೂಕತೆ, ಭಯಗಳೆದ್ದಿರುವದು ಗೋಚರಿಸುತ್ತಿದೆ. ಧಾಳಿಯಾರಂಭಕ್ಕೆ ಬೇಕಾಗುವ್ವುದು ಜನಬಲ ಮಾತ್ರವಲ್ಲ; ಅದಕ್ಕಾಗಿ ಮಿಕ್ಕ ದಾಸ್ತಾನಿದ್ದುಕೊಳ್ಳಬೇಕು. ಉತ್ತರಾಫ್ರಿಕದಂತಹ ಯುದ್ಧಯೋಜನೆ ಯಿರಬೇಕು. ಯುದ್ಧಪ್ರವೃತ್ತ ಸೇನೆಗಳ ಕೆಲಸ ಕಡಿಸುವ ಯಾವ ಘಟನೆಯೂ ಗೃಹರಂಗದಲ್ಲಿ ಸಂಭವಿಸುವಂತಿರಬಾರದು. ರಶ್ಯಯುದ್ಧವು ಅಷ್ಟೇ ಬಿರುಸಿನಿಂದ ಸಾಗುತ್ತಿರಬೇಕು, ಇತ್ಯಾದಿ ಶರ್ತಗಳು ಪೂರ್ಣವಾಗಿಕೊಳ್ಳದೆ ದ್ವಿತೀಯ ರಂಗಾರಂಭವಾಗುವದಸಾಧ್ಯ. ಇತ್ತ ಜರ್ಮನಾಕ್ರಮಿತ ಯುರೋಪು, ಹಿಟ್ಲರರು ದೀರ್ಘಕಾಲ ರಕ್ಷಣಾ ಯುದ್ಧ ನಡೆಸಲಾಗುವಷ್ಟು ಯುದ್ಧೋಪಕರಣಗಳನ್ನೊದಗಿಸಿ ಕೊಡಬಲ್ಲುದೆಂದೂ ಆದ್ದರಿಂದ ಸುದೀರ್ಘ ಹೋರಾಟಕ್ಕೆ ತಯಾರಾಗಿಯೇ ದ್ವಿತೀಯರಂಗ ತೆರೆಯ ಬೇಕೆಂದೂ ಮಿತ್ರ ಸಂಗಡದ ಊಹಾತಜ್ಞರನ್ನುತ್ತಿದ್ದಾರೆ. ಆದರೆ ಜಪಾನಿಗೆ ಉಕ್ಕಿನ ಸರಬರಾಯಿ ಸಾಕಷ್ಟಿಲ್ಲ, ಹಡಗತಯಾರಿ ಏನೇನೂ ಸಾಲದು; ಆದ್ದರಿಂದ ಅದು ದುರ್ಬಲವಾಗಿದೆ ಎಂದು ಊಹೆ.

ಭಾರತದ ಪರಿಸ್ಥಿತಿ.

ವೈಸರಾಯರು ಕಲ್ಕತ್ತಾ ಭಾಷಣದಿಂದ ಹುಟ್ಟಿದ ನಿರಾಶೆ ದಿನದಿಂದ ದಿನಕ್ಕೆ ಬೆಳೆಯುವಂತಾಗಿದೆ. ಸ್ವಾಭಾವಿಕವಾಗಿ ಈಗ ಎಲ್ಲರ ಲಕ್ಷ್ಯವು ಆಹಾರ ಪ್ರಶ್ನೆಯ ಕಡೆಗೆ ಹರಿದಿದೆ. ಸಿಂಧಿನಲ್ಲಿ ಅಕ್ಕಿಯ ಬೆಲೆಯನ್ನೇರಿಸುವ ನಿರ್ಧಾರವನ್ನು ಅಲ್ಲಿಯ ಮುಖ್ಯ ಮಂತ್ರಿಗಳು ಪುನಃ ಸಾರಿದ್ದಾರೆ. ಇದನ್ನು ಈ ಮೊದಲೇ ಆಕ್ಷೇಪಿಸಿದ್ದ ಕೇಂದ್ರ ಸರಕಾರವು ಮುಂದೇನು ಮಾಡುವದೋ ನೋಡಲಿದೆ. ಬಂಗಾಳದ ಪ್ರಕಟಣಾ ಮಂತ್ರಿ ಮಿ. ಮುಲ್ಲಿಕರು ಅಲ್ಲಿಯ ಬರಗಾಲ ನಿವಾರಣೆಗಾಗಿ ಚಾಲ್ತಿವರುಷದಲ್ಲಿ 10ಕೋಟಿ ರೂಪಾಯಿಗಳು ಬೇಕಾಗುವವೆಂದೂ, ಈಗ ಬರಗಾಲ ನಿವಾರಣೆಗೊಂಡು ರೋಗ ರುಜೆಗಳ ಸರದಿಯಾರಂಭವಾಗಿದೆಯೆಂದೂ, ಆಕಾಶವಾಣಿ ಭಾಷಣವಿತ್ತಿದ್ದಾರೆ. ಬೊಂಬಾಯಿಯಲ್ಲಿ ನೇರಿದ ಅ. ಭಾ. ಮುಂದಾಳುಗಳ ವಾರ್ಷಿಕಾಧಿವೇಶನವು ರಾಷ್ಟ್ರ ಪ್ರಮುಖರ ಬಿಡುಗಡೆ, ಸಮ್ಮಿಶ್ರ ಜವಾಬಾರೀ ಸರಕಾರದ ಸ್ಥಾಪನೆ, ಮುಂಬರುವ ಶಾಂತಿ ಸಮ್ಮೇಲನದಲ್ಲಿ ಹಿಂದುಸ್ಥಾನದ ಪ್ರಾತಿನಿಧ್ಯ ಮೊದಲಾದುವುಗಳನ್ನು ಯೋಜಿಸಿವೆ.

ಒಳಸಂಕಷ್ಟಗಳು.

ಅಖಿಲ ಭಾರತವು ಆಹಾರ ಕೊರತೆ ಮತ್ತು ರಾಜಕೀಯ ಕಗ್ಗತ್ತಲೆಯಿಂದ ಕಣ್ಣು ರುಡುಸ್ಥಿತಿಯಲ್ಲಿದೆ. ಅಮೇರಿಕದಲ್ಲಿ ಮಹಾ ರೈಲ್ವೇ ಮುಷ್ಕರವಾರಂಭವಾಗುವ ಅಪಾಯವಿದೆ. ಅಧ್ಯಕ್ಷ ರುಸವೆಲ್ಟರ ಸಂಧಿಸೂಚನೆಯನ್ನು ಕಲಸಗಾರ ಸಂಘಗಳು ತಿರಸ್ಕರಿಸಿವೆ. ಅಮೇರಿಕದ ಪ್ರತಿಷ್ಠಾವಂತ ಸೇನಾನಾಯಕರೊಬ್ಬರು 'ಹಿಟ್ಲರರ ಸೂತ್ರಕ್ಕನುಸಾರವಾದ ವರ್ತನೆಯಿದು' ಎಂದು ಈ ಮುಷ್ಕರವನ್ನಾರೋಪಿಸಿ, ಅಮೇರಿಕದಲ್ಲೆಲ್ಲಾ ಉದ್ವೇಗವೆದ್ದಿದೆ. ಇತ್ತ ಜರ್ಮನಿಯಲ್ಲಿ ಹಿಟ್ಲರ್, ಗೋಬೆಲ್ಸರೂ, ಜಪಾನಿನಲ್ಲಿ ಜನರಲ್ ಟೋಜೋರವರೂ ಮುಂದಿನ ಕಠಿಣ ಪರೀಕ್ಷೆಗೆ ಸರ್ವ ಯೋಗ್ಯತೆ ಸಂಪಾದಿಸಬೇಕೆಂದು ತಂತಮ್ಮ ರಾಷ್ಟ್ರಗಳಿಗೆ ಎಚ್ಚರಿಕೆಯಿತ್ತಿದ್ದಾರೆ. ವೈರಿಗಳ ಹೊಡೆತಗಳಿಗಿಂತಲೂ ಸ್ವಂತ ಕೊರತೆಗಳೇ ಆಯಾಯ ರಾಷ್ಟ್ರಗಳಿಗೆ ಭೀಕರವಾಗಿ ಕಾಣುತ್ತಿರುವ ಕಾಲವಿದು!

ಭೀಕರ ಹೋರಾಟವಾಗಿ ಭಾರತದ ಮೇಲಾಗುವ ದುಷ್ಪರಿಣಾಮಗಳಿಗಿಂತ ಹೆಚ್ಚಿನದನ್ನು ಈ ವರುಷ ನಿರೀಕ್ಷಿಸಲಾಗದು. ಭಾರತದ ರಾಜಕೀಯ ಬಿಕ್ಕಟ್ಟು ಈ ಇಸವಿಯಲ್ಲಾದರೂ ಸುಖಕರವಾಗಿ ಬಿಡಿಸಲ್ಪಡಬಹುದೆಂಬ ಆಸೆ ತೋರುವದಿಲ್ಲ. ಯಾವುದಾದರೊಂದು ಅದ್ಭುತ ನಡೆಯದೆ ರಾಜಕೀಯ ಪ್ರಮುಖರ ಬಿಡುಗಡೆ ಕೂಡಾ ಅಸಾಧ್ಯವೇ! ಆಹಾರ ಸಮಸ್ಯೆಯ ಮಟ್ಟಿಗೆ ಈ ವರೆಗೆ ಸಂಪಾದಿಸಿದ ಅನುಭವವಿದೆ-ಆದರೆ ಅದರ ಸೂತ್ರಧಾರಿ ಸರಕಾರದಲ್ಲಿ ಸಾಕಷ್ಟು ಸೌಹಾರ್ದ್ರತೆಯಿಲ್ಲ. ತಾನು ತ್ಯಾಗ ಮಾಡದೆ-ವಿಶೇಷ ಪ್ರಯಾಸ ಪಡದೆ-ಅಲ್ಲಿಂದಲ್ಲಿಗೆ ಸುಧಾರಿಸುವ ವ್ಯವಸ್ಥೆಯನ್ನಾದರೂ ಸರಕಾರವು ಕೈಗೊಂಡರೆ, ಸ್ಥಿತಿ ಸುಧಾರಿಸಲವಕಾಶವಿದೆ. ಹೇಗೆ? ಎಲ್ಲರಿಗೂ ಹೊಟ್ಟೆ ತುಂಬುವಷ್ಟು ಧಾನ್ಯವನ್ನು ಹಂಚಿಕೊಟ್ಟಲ್ಲವಾದರೆ, ಎಲ್ಲರಿಗೂ ದಾಮಾಶಯ ಪ್ರಕಾರ ಹಸಿವನ್ನಾದರೂ ಹಂಚಿಹಾಕಿ ಅದರ ತೀಕ್ಷ್ಣತೆಯನ್ನು ತಗ್ಗಿಸಬಹುದು. 1944ನ್ನು ದಾಟಬೇಕು ಸಹನೆಯನ್ನೇ ಸರ್ವಸ್ವವಾಗಿಟ್ಟುಕೊಂಡು,-ಜೀವವನ್ನು ಕೈಯಲ್ಲಿ ಹಿಡಿದುಕೊಂಡೇ! ಹೊಸವರುಷದಲ್ಲಿ ಎಲ್ಲರ ಧೈರ್ಯ ಸ್ಥೈರ್ಯಗಳೂ ವಿಜಯ ಪಡೆಯಲಿ!

ಹೊಸ ವರ್ಷ! **ಹೊಸ ಡೈರಿಗಳು!!**

1944ನೇ ಇಸವಿಯ
ನವಭಾರತ ಪಾಕೆಟ್ ಡೈರಿ.

ಸುಭದ್ರ ಹೊದಿಕೆಯಿಂದೊಡಗೂಡಿ ನಯನ ಮನೋಹರವಾಗಿದೆ

ದರಗಳು:

ಸಣ್ಣ ಸೈಜು (ಸಾದಾ) 1—0—0 ದೊಡ್ಡ ಸೈಜು (ಕೆಲಿಕೊ) 2—0—0
,, (ಕೆಲಿಕೊ) 1—4—0 (ಮುಚ್ಚಳದ್ದು) 1—8—0
ದೊಡ್ಡ ಸೈಜು (ಮುಚ್ಚಳದ್ದು) 2—6—0

ಎಂದಿನಂತೆ ಈ ವರ್ಷವೂ **ನವಭಾರತ ಡೈರಿಗಳಿಗೆ** ಬಿಳುಪು ನುಣುಪಾದ ಹೊಳಪಿನ ಕಾಗದವನ್ನೇ ಉಪಯೋಗಿಸಲಾಗಿದೆ.

ವ್ಯಾಪಾರಿಗಳಿಗೆ ಕಮಿಶನ್ ಇದೆ. ಬೇಕಾದವರು ಮುಂಗಡದೊಂದಿಗೆ ಕೂಡಲೇ ಬರೆಯುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.
(ರಿಜಿಸ್ಟರ್ಡ್ ಪಬ್ಲಿಷರ್ಸ್)

ನಮ್ಮ ಡೈರಿಗಳು ಸಿಗುವ ಸ್ಥಳಗಳು:

1. ವಿಜಯಾ ಸ್ಟೋರ್ಸ್, ಕುಂದಾಪುರ. 2. ಕೆನರಾ ಛಾಪಖಾನೆ, ಮಂಗಳೂರು. 3. ಮೆಜೆಸ್ಟಿಕ್ ಪ್ರೆಸ್, ರಥಬೀದಿ, ಉಡುಪಿ. 4. ಎಂ. ಎಸ್. ಮಯ್ಯ, ನ್ಯೂಸ್ ಏಜಂಟ್, ಪುತ್ತೂರು. 5. ವೆಂಕಟೇಶಯ್ಯ & ಬ್ರದರ್ಸ್, ಶಿವಮೊಗ್ಗಾ. 6. ನೂತನ ಪುಸ್ತಕಾಲಯ. ಬಿಜಾಪುರ. 7. ಅನಂತ ವಾಮನ ಪೈ, ಕಾಗಲಕರ್, ಏರ್. 8. ಕಥಾಕುಂಜ ಗ್ರಂಥ ಭಂಡಾರ, ಬೆಂಗಳೂರು. 9 ಯು. ಲಕ್ಷ್ಮಣ ರಾವ್, 180 ಚೈನಾಬಜಾರ್, ಜಿ. ಟಿ ಮದ್ರಾಸ್. 10. ಯಸ್. ಯಸ್. ಬಾಸರ್, ಸಿರ್ಸಿ. 11. ಆರ್. ಯನ್. ಭಟ್ಕಲ್‌ಕರ್ & ಸನ್ಸ್, ಸಿದ್ಧಾಪುರ. 12 ಬಡವರ ಬಂಧು. ಪ್ರಿಂಟಿಂಗ್ ಪ್ರೆಸ್, ಲಿ. ಮಂಗಳೂರು. 13. ನವಯುಗ ಪ್ರೆಸ್, ಉಡುಪಿ. 14. ಲಕ್ಷ್ಮಣರಾವ್ ಎಂಡ್ ಸನ್ಸ್, ಉಡುಪಿ.

ಇತ್ಯಾದಿ– ಇತ್ಯಾದಿ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ.

O. S. 870/1943.

ಮಹ್. ಯಂ. ಅಬ್ದುಲ್ಲ ಕುಂಞ-ಮಮ್ಮಹಾಜಿ ಮಹಮ್ಮದ ಬ್ಯಾರಿ ಮಗ, ಕಳನಾಡು ಗ್ರಾಮದಲ್ಲಿರುವವ— ವಾದಿ.

ಮತ್ತು

ಮಲ್ಲಯ್ಯ. ಕೋಟದ ಸಾಂತ್ರಯ್ಯನ ಮಗ. ಕಳನಾಡು ಗ್ರಾಮದ ಪೊರವಂಗಳ ಕೂಡಾ 13 ಜನರು— ಪ್ರತಿವಾದಿಯು.

1ರಿಂದ 11ನೇ ವರೇಗಿನ ಪ್ರತಿವಾದಿಯು 12 ಮತ್ತು 13ನೇ ಪ್ರತಿವಾದಿರೀಗೆ ತಾರೀಕು 3-11-1943ರಲ್ಲಿ ರೂಪಾಯಿ 800-0 0ಕ್ಕೆ ಬರಕೊಟ್ಟ ಮಿಕ್ಕ್ವಾರವಾರ ದಸ್ತ್ಯಾವಜ 1ರಿಂದ 11ನೇ ವರೇಗಿನ ಪ್ರತಿವಾದೀರ ಸಾಲಗಾರರೀಗೆ ಮೋಸ ಕೊಡುವ ಉದ್ದೇಶದಿಂದ ಬರಕೊಟ್ಟದ್ದಾದ್ದರಿಂದ ಅದು ವಾದೀಯ ಮೇಲೂ ಇತರ ಸಾಲಗಾರರ ಮೇಲೂ ಬಾಧಿಸಕೂಡದ್ದೆಂಬ ಯೆಲ್ಲಾ ಸಾಲಗಾರರ ಪರವಾಗಿ ಡಿಕ್ಲರೇಷನ್ ಬಗ್ಗೆ ವಾದೀಯು ಮೇಲ್ಕಂಡ ದಾವೆ ಮಾಡಿದ್ದಾಗಿರುತ್ತದೆ; ಸದ್ರಿ ವ್ಯಾಜ್ಯವು ತಾರೀಕು 8-1-1944ಕ್ಕೆ ಪ್ರಥಮ ಚೆನ್ನಗೆ ಇಟ್ಟಿರುವದ್ರಿಂದ ಸದ್ರಿ ವ್ಯಾಜ್ಯದಲ್ಲಿ ಕಕ್ಷಿಯಾಗಿ ಸೇರುವದಿ ಮನಸ್ಸುಳ್ಳವರು ಆ ದಿವಸ ಯಾ ಅದಕ್ಕೆ ಮುಂಚಿತವಾಗಿ ಸೇರಿಕೊಳ್ಳಬಹುದು.

K. Sundar Rama Shetty.

ಕಾಸರಗೋಡು,
ತಾರೀಕು 30-12-43. } Vakil for Plaintiff

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸಿಹನದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ ಯಂ. ಕುನ್ಹಿರಾಮನ್,
ಮೆನೇಜರ್,

CHAMPAE'S
Snow & Castrex
Sole Distributers for (India.)
Sukhananda Stores
Snathekatte, UDIPI, S. K.

To Greet you

FOR THE PAST
REMEMBRANCE
FOR THE PRESENT
KIND THOUGHTS
FOR THE FUTURE
GOOD WISHES

From:
The Canara Banking Corporation Limited.
(Incorporated in British India with limited Liability)
ESTD: 1906
Head Office UDIPI.

ಉಡುಪಿ, ಗುರುವಾರ ೬-೧-೧೯೪೪

ಸಾಹಿತ್ಯ ಸಮ್ಮೇಲನ.

ಡಿಸೆಂಬರ ತಿಂಗಳ ಕೊನೆಯ ವಾರದಲ್ಲಿ ಶ್ರೀ. ದ. ರಾ. ಬೇಂದ್ರೆ ಎಂ. ಎ. ಇವರ ಅಧ್ಯಕ್ಷತೆಯಲ್ಲಿ ಇಪ್ಪತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನ ಶಿವಮೊಗ್ಗದಲ್ಲಿ ನೆರೆಯಿತು. ಅಧ್ಯಕ್ಷ ಭಾಷಣವು ಒಂದು ಮೇಲ್ತರಗತಿಯ ಸಾಹಿತ್ಯವೇ ಆಗಿತ್ತು. ಭಾಷಾ ಸೌಂದರ್ಯ, ಭಾವ ಮಾಧುರ್ಯಗಳ ಪುಟ್ಟಿಗೆ ಇವನ್ನು ಮಿಕ್ಕುವ ಇನ್ನೊಂದು ದಾಖಲೆ ಬೇಕೆಂದರೆ ದೊರೆಯದು. ಸಾಹಿತ್ಯ ಸಮ್ಮೇಲನದಲ್ಲಿ ಸಾಹಿತ್ಯದ ಸೌಂದರ್ಯ ಪ್ರದರ್ಶನವು ಅಧ್ಯಕ್ಷ ಭಾಷಣದ ಮೂಲಕ ಪೂರ್ಣವಾಗಿದೆ. ವಿಚಾರವನ್ನು ಹೊಡೆದೆಬ್ಬಿಸುವ, ಜಾಗ್ರತಿಯನ್ನುಂಟುಮಾಡುವ ಮಿಂಚುಗಳೂ ಅದರಲ್ಲಿ ಸುಳಿದಾಡಿವೆ. "ಉಳಿದ ಕನ್ನಡವನ್ನಾದರೂ ಉಳಿಸಿಕೊಳ್ಳಬೇಕು. ತಾತ್ಸಾರಕ್ಕೆ ಔದಾರ್ಯದ ಒಪ್ಪಹಾಕಬಾರದು. ಪರಾಕ್ರಮಣದ ಯುಗ ಆಗಿ ಹೋಯಿತು. ಆಕ್ರಮಣ ಮಾಡಬಾರದು, ಮಾಡಿಸಕೊಡಬಾರದು. ಇದೇ ನಮ್ಮ ಬಿರುದಾಗಬೇಕು. ಯಾರ ನಾಶವೂ ಬೇಡ. ಜೀವದ ನಾಶವೇ ಸಾಹಿತ್ಯಕ್ಕೆ ಒಪ್ಪಿಗೆಯಿಲ್ಲ. ದೇಶನಾಶ ಹೇಗೆ ಒಪ್ಪಿಗೆಯಾದೀತು?" ಎಂದ ಕವಿಬೇಂದ್ರೆಯವರು ಕನ್ನಡಿಗರ ಧರ್ಮವನ್ನಷ್ಟೇ ಅಲ್ಲ, ವಿಶ್ವಧರ್ಮವನ್ನು ಸಾರಿದ್ದಾರೆ. "ತುತ್ತಿನ ಚೀಲದ ಒಳಗಿನ ಒಳದನಿ ಪ್ರಳಯಕ್ಕೆ ಆಹ್ವಾನ. ದಿನಾಲು ನಾವು ಇದನ್ನೇ ಭೋಗಿಸುತ್ತಿದ್ದೇವೆ. ಅನ್ನವಿಲ್ಲದ ಸುದಾಮರು, ಸೀರೆ ಸೆಳೆದ ದ್ರೌಪದಿಯರು, ಸ್ನೇಹದ ಪಟ್ಟಬೇಡುವ ಧ್ರುವರು, ವಾಕ್ ಸ್ವಾತಂತ್ರ್ಯ ಕೇಳುವ ಪ್ರಹ್ಲಾದರು ಹಾದಿ ಬೀದಿಗೂ ಹರಿಬಿದ್ದಾರೆ. ನಮ್ಮ ಸಾಮಾಜಿಕರು ಪಶು ಜೀವನದ ಸಾಮಾಜಿಕರಾಗಿಯೇ ಉಳಿದರೆ, ಜೀವನದ ರಸಜೀವನವನ್ನು ಕೊಡಲು ಸಿದ್ಧರಾಗದಿದ್ದರೆ, ಸಾಹಿತ್ಯವು ಕಣಿಯಿಂದ ಕಡಲನ್ನು ಕಟ್ಟಿಸಬೇಕಾಗುವದು, ವಾಮನನಿಂದ ಮುಗಿಲನ್ನು ಮುಟ್ಟಿಸಬೇಕಾಗುವುದು, ಸತ್ಯವು ಪಿಶಾಚಿಯ ವೇಷ ತೊಡಬೇಕಾಗುತ್ತದೆ" ಎಂದಿದ್ದಾರೆ. ಸಾಹಿತ್ಯವು ಸ್ವಪ್ನವಲ್ಲ, ಸಾಹಿತಿ ಕನಸುಗಾರನೇ ಅಲ್ಲ, ಎಂದಾಗಬೇಕಾದರೆ ಹಾಗೆ ವಸ್ತುಸ್ಥಿತಿಗೆ ಹೊಂದಿಕೊಳ್ಳದೆ ಗತಿಯಿಲ್ಲ.

ಅಧ್ಯಕ್ಷರ ಅಭಿಪ್ರಾಯವೂ ಸಮ್ಮೇಳನದ ನಿರ್ಧಾರಗಳೂ ಸರ್ವಮಾನ್ಯವೆಂಬುದು ಖಂಡಿತ. ಆದರೆ ಸಾಹಿತ್ಯ ಸಮ್ಮೇಳನದಂತಹ ವಾರ್ಷಿಕಾಧಿವೇಶನಗಳು ವಾರ್ಷಿಕ ಹಬ್ಬಗಳಂತಲ್ಲ. ಅನುಭವಾಮೃತ ಸತ್ಕಾರ ಕೂಟವಾಗಿ ಅದು ಮುಗಿಯಬಾರದು; ಇಡೀ ವರುಷದ ಆಚರಣೆಯ ಆರಂಭವು ಅಲ್ಲಿ ಆಗಬೇಕು. "ಕನ್ನಡ ಸಾಹಿತ್ಯವು ಬೆಳೆಯುತ್ತಿದೆ, ಸಮ್ಮೇಳನನಾರಂಭಿಸಬೇಕೇನನ್ನು?" ಎಂಬ ಪ್ರಶ್ನೆ ಬರಬಹುದು. ಕರ್ನಾಟಕ ಏಕೀಕರಣದ ಪ್ರಯತ್ನವೀಗ ಸಾಕಷ್ಟು ನಡೆಯುತ್ತಿಲ್ಲ; ಹಿಂದೂವೆ. ಇದ್ದ 'ಏಕೀಕರಣ' ಸಂಘದ ಚಟುವಟಿಕೆಗಳು ಈಗ ಎಲ್ಲೆಲ್ಲಿಯೂ ಕಂಡುಬರುವದಿಲ್ಲ. ಸಾಹಿತ್ಯ ಪರಿಷತ್ತು, ತನ್ನ ಕಾರ್ಯಕ್ಷೇತ್ರದ ಗಡಿ ಮೀರಿದ ಪಾರಗೊಳಗಾಗದೇನೇ ಆ ಕಾರ್ಯವನ್ನು ತನ್ನದನ್ನಾಗಿ ಮಾಡಿಕೊಳ್ಳಬಹುದು— ಮಾಡಿಕೊಳ್ಳಲೇ ಬೇಕಾಗಿದೆ. ಮೈಸೂರು, ಉತ್ತರ ಕರ್ನಾಟಕ, ದಕ್ಷಿಣ ಕನ್ನಡಗಳಲ್ಲಿ ಭಾಷೆ ಹಾಗೂ ವ್ಯವಹಾರ ಭಿನ್ನತೆಗಳಿವೆ. ಸ್ವತಃ ಸಾಹಿತ್ಯ ಸಮ್ಮೇಳನದಲ್ಲೇ ಸರ್ವ ಭಾಗಗಳ ಸರಿಯಾದ ಪ್ರತಿನಿಧ್ಯ ಗೋಚರಿಸದಿರುವದು ಈ ಭಿನ್ನತೆಯಿಂದಾಗಿಯೇ. ಏಕೀಕರಣವಾಗದೆ ಅಂತಹ ಆಸಕ್ತಿ ಅಭಿರುಚಿಗಳು ಬೆಳೆಯಲಾರವೆಂದೂ ಹೇಳಬಹುದು; ಆಸಕ್ತಿ ಅಭಿರುಚಿ ಬೆಳೆಯದೆ ಏಕೀಕರಣವಸಾಧ್ಯವೆಂದೂ ಹೇಳಬಹುದು. ಹೇಗಿದ್ದರೂ ಭಾಷೆ, ಭಾವನೆಗಳ ಏಕೀಕರಣಕ್ಕೂ ಪ್ರಾಂತ್ಯದ ಏಕೀಕರಣವನ್ನು ಕಾಯಬೇಕೆಂದಿಲ್ಲ. ಎಲ್ಲಕ್ಕಿಂತ ಮೇಲಾಗಿ ಬೇಂದ್ರೆಯವರೇ ಹೇಳಿದಂತೆ, ಸಾಮಾಜಿಕರು ಪಶುಜೀವನದ ಪ್ರಾಣಿಗಳಾಗಿಯೇ ಇರುವಾಗ, ಸಾಹಿತಿಗಳು ಗಗನ ಸಂಚಾರದ ಪಕ್ಷಿಜೀವಿಗಳಾಗಿರದೆ ಕ್ರಾಂತಿಯ ಚಾಬೂಕುಧಾರಿಗಳಾಗಬೇಕು; ಪ್ರಗತಿಶೀಲ ಸಾಹಿತ್ಯದ ನಿರ್ಮಾಣ ಹೆಚ್ಚಬೇಕು. ಇದು ಸಾಹಿತಿಗಳ ಕೆಲಸ, ಸಾಹಿತ್ಯ ಸಮ್ಮೇಳನದಲ್ಲಾಗುವಂತಹದಲ್ಲ. ಆದರೆ ಸಮ್ಮೇಳನದ ಪ್ರೋತ್ಸಾಹ ಆ ವರ್ಗಕ್ಕೇನೇ ಮೀಸಲಿರಬೇಕು. ಸಾಹಿತಿಯೊಬ್ಬನು ತನ್ನ ಪೀಡಿತ ಎಲುಬುಗೂಡೆಂದನ್ನು ಇದ್ದಂತೆ ವರ್ಣಿಸಿದರೆ ಎಲುಬು ಸಂದುಗಳು ಸಮಾಜದ ಕಟ್ಟಡದ ಚೌಕಟ್ಟುಗಳಂತೆ ರಮ್ಯವಾಗಿಯೇ ಕಂಡಾವು. ಆದರೆ ಪ್ರಗತಿ ಶೀಲ ಸಾಹಿತಿಯು 'ಅದು ನಿಮ್ಮ ಕಾಪ್ಯ ಜೋಡಣೆ' ಎಂದು ಆ ಗೂಡಿನ ಸಂಕ್ರಾ ಮಾಂಸಗಳನ್ನು ತೋರಿದವರಿಗೆ ಬೆದರಿಕೆ ಹಾಕಬಲ್ಲನು. ಈ ಬಾರಿಯ ಸಾಹಿತ್ಯ ಸಮ್ಮೇಳನದಲ್ಲಿ ಅಂತಹ ಪ್ರಗತಿಯನ್ನು ನಾವು ಕಂಡಿಲ್ಲ. ಸಾಹಿತಿಗಳಾದರೂ ಪ್ರಗತಿಶೀಲರಾಗಲೆಂದು ಹಾರೈಸುತ್ತೇವೆ.

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಸೇವಕ ಸಂಘ, ಮಂಗಳೂರು.

ತಾ. 13-1-'44ನೇ ಗುರುವಾರ ಸಾಯಂಕಾಲ ಘಂಟೆ 7–30ಕ್ಕೆ ಮದರಾಸು ಪ್ರಾಂತ್ಯದ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮಾನ್ ಸಿ.ರಾಜಗೋಪಾಲಾಚಾರ್ಯರು ಕಾಸರಗೋಡು ತಾಲೂಕಿನ ಎಡನಾಡು ಗ್ರಾಮದ ಶೀತಂಗೋಳಿಯಲ್ಲಿ ಸ್ಥಾಪಿತವಾಗಲಿರುವ ಹರಿಜನ ವಸತಿಯ ಶಂಕು ಸ್ಥಾಪನೆಯನ್ನು ಮಾಡಲಿರುವರು. ಮಹಾಜನರೆಲ್ಲರೂ ಬಂದು ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಶೀತಂಗೋಳಿ ಹರಿಜನ ವಸತಿಗಾಗಿ ಮಾನ್ಯ ಸರಕಾರದವರು ಜಿಲ್ಲಾ ಸಂಘದ ವಶಕ್ಕೆ 31 ಎಕ್ರೆ ಸ್ಥಳವನ್ನು ಕೊಟ್ಟಿರುತ್ತಾರೆ. ಅದರಲ್ಲಿ ಪ್ರತಿಯೊಂದು ಮನೆಗೆ ರೂ.150/-ರ 12 ಮನೆಗಳನ್ನು ಕಟ್ಟಿಸುವ ಬಗ್ಗೆ ರೂ. 1800/- ಮತ್ತು 12 ಎಕ್ರೆ ಸ್ಥಳವನ್ನು ಬೇಸಾಯ ಮಾಡುವ ಹಾಗೂ ಬೇರೆ ಕೆಲವು ಅಗತ್ಯ ಕಾರ್ಯಕ್ರಮಗಳನ್ನು ಕೈಕೊಳ್ಳುವ ಮತ್ತು ಎರಡು ಬಾವಿಗಳನ್ನು ಸರಿಪಡಿಸುವ ಬಗ್ಗೆ ರೂ1200/- ಕೂಡಿ ರೂ. 3000/-ವನ್ನು ನಾವು ಕೂಡಲೇ ಸಂಗ್ರಹಿಸಬೇಕಾಗಿದೆ. ಇಷ್ಟರಲ್ಲಿ 6 ಜನ ಮಹನೀಯರು ಒಂದೊಂದು ಮನೆ ತಮ್ಮ ಹೆಸರಲ್ಲಿ ಕಟ್ಟಿಸಿಕೊಡುವುದಾಗಿ ವಾಗ್ದಾನ ಮಾಡಿರುವರು. ಜಿಲ್ಲೆಯ ಉದಾರಿಗಳಾದ ಮಹಿಳೆಯರೂ ಮಹನೀಯರೂ ಈ ಮಹಾಕಾರ್ಯಕ್ಕೆ ತಮ್ಮ ಪ್ರೀತಿಯ ಸಹಾಯವನ್ನು ಕೊಡುವರಾಗಿ ನಂಬಿರುವೆವು. ಸಹಾಯ ಧನಗಳನ್ನು ಈ ಕೆಳಗಿನವರಿಗೆ ಕಳಿಸಬಹುದು. ಎ. ಬಿ. ಶೆಟ್ಟಿ, ಅಧ್ಯಕ್ಷ, ಜಿಲ್ಲಾ ಹರಿಜನ ಸೇವಕ ಸಂಘ, ಅತ್ತಾವರ, ಮಂಗಳೂರು, ಅಥವಾ ಬಿ. ಎಸ್. ಕಕ್ಕಿಲ್ಲಾಯ ಉಪಾಧ್ಯಕ್ಷ, ತಾಲೂಕು ಹರಿಜನ ಸೇವಕ ಸಂಘ, ಕಾಸರಗೋಡು.

ದ. ಕ. ಜಿಲ್ಲಾ ಬಂಟರ ಯಾನ ನಾಡವರ ಸಂಘದ ಮಹಾಸಭೆ:-- ಯು ತಾ. 26-12-43ರಲ್ಲಿ ಜಮಾಪುರದ ನಿವೃತ್ತ ಫಾರೆಸ್ಟ್ ಆಫೀಸರ್ ಶ್ರೀ. ಸಿರಿಬಾಗಿಲು ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಯಥಾ ಸಾಂಗವಾಗಿ ಜರಗಿತು. ಡಾಕ್ಟರ್ ವಿಟ್ಠಲ್ ಶೆಟ್ಟಿ, ಶ್ರೀಗಳಾದ ಕೊಡಿಯಾಲ ಗುತ್ತು ರಾಮಯ್ಯ ಶೆಟ್ಟಿ, ಬ್ರಹ್ಮಾವರ ಮಹಾಬಲೇಶ್ವರ ಶೆಟ್ಟಿ, ಕೆದಿಂಜೆ ವೆಂಕಟಯ್ಯ ಹೆಗ್ಡೆ, ಕೆದಿಂಜೆ ತಿಮ್ಮಪ್ಪ ಹೆಗ್ಡೆ ಇವರ ನಿಧನದ ಬಗ್ಗೆ ದುಃಖ ಸೂಚನೆ ಮಾಡಲಾಯಿತು. ಅನಂತರ ಬೇರೆ ಸಂಘಗಳ ವರದಿಯನ್ನು ಓದಲಾಯಿತು. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳಿಗೆ ಬೇರೆ ಬೇರೆ ಹೊಸ ಕಮಿಟಿಗಳನ್ನು ಚುನಾಯಿಸಲಾಯಿತು. ಮಹಾ ಸಭೆಯ ಮೊದಲು ಹಳೆ ಕಾರ್ಯ ನಿರ್ವಾಹಕ ಕಮಿಟಿಯ ಸಭೆಯೂ ಕಡೆಗೆ ಹೊಸ ಕಮಿಟಿಯ ಸಭೆಯೂ ಇತ್ತು. ಮಧ್ಯಾಹ್ನ ಹೋಸ್ಟೆಲಿನಲ್ಲಿ ರಾವ್ ಬಹದ್ದೂರ್ ಕೆ. ಟಿ. ಆಳ್ವರು ಡಿನ್ನರು ಕೊಟ್ಟರು.

ಫಲಿಮಾರು-ಸ್ಥಳೀಕ ರೂರಲ್ ಡಿಸ್ಪೆನ್ಸರಿಯ ಹೊಸ ಕಟ್ಟಡದ ಆರಂಭೋತ್ಸವವು 24-12-43ರಲ್ಲಿ ಜಿಲ್ಲಾ ಮೆಡಿಕಲ್ ಆಫೀಸರ್ ಕೆಪ್ಟನ್ ಸಿ. ಕೃಷ್ಣಮೆನನ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಸ್ಥಳೀಕ ಮಠದ ಶ್ರೀಪಾದಂಗಳವರೂ ಅಧ್ಯಕ್ಷರೊಂದಿಗೆ ಮೆರವಣಿಗೆಯಿಂದ ಸಭಾಮಂದಿರಕ್ಕೆ ಚಿತ್ತೈಸಿದಾಗ ಡಾ! ನಂಬಿಯಾರರು ಸ್ವಾಗತ ಭಾಷಣಮಾಡಿದರು. ಅಧ್ಯಕ್ಷರು ಶ್ರೀಪಾದಂಗಳವರ ಆಶ್ರಯದಲ್ಲಿ ದಿನೇದಿನೇ ಅಭಿವೃದ್ಧಿಯನ್ನು ಹೊಂದುತ್ತಿರುವ ಈ ಫಲಿಮಾರಿನಂತಹ ಆದರ್ಶಗ್ರಾಮದ ಡಿಸ್ಪೆನ್ಸರಿಯ ಹೊಸ ಕಟ್ಟಡವನ್ನು ತೆರೆಯುವ ಸುಯೋಗವು ನನಗೆ ದೊರಕಿದುದಕ್ಕೆ ತುಂಬಾ ಸಂತೋಷಪಟ್ಟು ಕಟ್ಟಡದ ಉದ್ಘಾಟನೆಯನ್ನು ಮಾಡಿ ಶ್ರೀಪಾದಂಗಳವರ ಪರಿಶ್ರಮದಿಂದ ಇಲ್ಲಿ ತೆರೆಯಲ್ಪಟ್ಟ ಈ ಡಿಸ್ಪೆನ್ಸರಿಯ ಕಟ್ಟಡಕ್ಕೆ 'ಶ್ರೀ ರಘುಮಾನ್ಯ ಮಹಾಲ್' ಎಂಬ ನಾಮಕರಣದಿಂದ ಘೋಷಣೆ ಮಾಡಿದರು. ಬಳಿಕ ಶ್ರೀಪಾದಂಗಳವರೂ ತಮ್ಮ ಅಮೋಘವಾಣಿಯಿಂದ ಶುಭವನ್ನು ಕೋರಿ ಸಂದೇಶಪತ್ರ ಮೇಲೆ ಸಭಿಕರಲ್ಲಿ ಹಲವರ ಭಾಷಣವಾಗಿ, ಅಧ್ಯಕ್ಷರ ಸಮಾರೋಪ ಭಾಷಣದೊಂದಿಗೆ ಸಭಾ ಕಾರ್ಯವು ಅತ್ಯಂತ ಯಶಸ್ವಿಯಾಗಿ ನೆರವೇರಿತು.

ವಿಜಯಾ ಬ್ಯಾಂಕಿನ ಮಹಾಸಭೆ: ಯೂ ಅದೇ ದಿನ ಮಧ್ಯಾಹ್ನ 3 ಗಂಟೆಗೆ ಜರಗಿತು. ಡೈರೆಕ್ಟರರ ಮಂಡಳಿಗೆ ಹೊಸತಾಗಿ ಶ್ರೀಗಳಾದ ಕೊಳ್ಕೆಬೈಲು ಸಂಜೀವ ರಾಯ, ವಕೀಲ್, ಸಿರಿಬಾಗಿಲು ಶಂಕರ ಆಳ್ವ, ಗಣೇಶ ನಾರಾಯಣ ರಾವ್ ವಕೀಲ್ ಇವರು ಆರಿಸಲ್ಪಟ್ಟರು. (ಒಟ್ಟು ಡೈರೆಕ್ಟರರಸಂಖ್ಯೆ 10) ಶೇಕಡಾ 7ರಂತೆ ಡಿವಿಡೆಂಡ್ ಕೊಡಬೇಕೆಂದಾಯಿತು. ಪುತ್ತೂರಲ್ಲಿ ಬೇಗ ಬ್ಯಾಂಕಿನ ಶಾಖೆಯನ್ನು ತೆರೆಯಬೇಕೆಂದೂ ನಿರ್ಣಯಿಸಲಾಯಿತು.

ರಾಮಕೃಷ್ಣ ವಿದ್ಯಾರ್ಥಿ ಭವನದ ಹಳೆ ನಿವಾಸಿಕರ ಸಭೆ:- ಯೂ ಅದೇ ದಿನ ಸಂಜೆ ಜರಗಿತು. ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನಕ್ಕೆ ಸಹಾಯ ಧನವನ್ನು ಸಂಗ್ರಹಿಸಬೇಕೆಂದು ನಿರ್ಣಯಿಸಲಾಯಿತು. ಬೊಂಬಾಯಿಯಲ್ಲಿ ಧನ ಸಂಗ್ರಹ ಮಾಡಲು ಶ್ರೀಗಳಾದ ಬಾರ್ಕೂರು ನಾಗಣ್ಣ ಹೆಗ್ಡೆ, ಸೌಕೂರು ಅಂತಣ್ಣ ಶೆಟ್ಟಿ ಮತ್ತು ರಾಮಕೃಷ್ಣ ಪೂಂಜರು ಹೋಗಬೇಕೆಂದು ಕೇಳಿಕೊಳ್ಳಲಾಯಿತು. (ಇದರ ನಂತರ ಕಾರ್ಯನಿರ್ವಾಹಕ ಸಭೆಯಲ್ಲೂ ಮಂಜೂರಾಯಿತು) ಸಾಯಂಕಾಲ ಟೀಪಾರ್ಟಿಯಾಗಿ ಸಭಾ ವಿಸರ್ಜನೆಯಾಯಿತು.

ಬಂಟರಿಗೊಂದು ಹೊಸ ವ್ಯಾಪಾರಿ ಸಂಘ:--ವನ್ನು ಸ್ಥಾಪಿಸುವ ಕುರಿತ ಶ್ರೀಗಳಾದ ಕೆ. ಸದಾನಂದ ಹೆಗ್ಡೆ ಮತ್ತು ಬಿ. ಮಂಜಯ್ಯ ಹೆಗ್ಡೇರು ಇದೇ ದಿನ ಒಂದು ಸಭೆ ಕರೆದಿದ್ದರು. ಈ ಕುರಿತು ವಿಚಾರ ವಿನಿಮಯವಾಗಿ ಟ್ರೇಡಿಂಗ್ ಕಂಪನಿಯೊಂದನ್ನು ಸ್ಥಾಪಿಸುವುದು ಅಗತ್ಯವೆಂದಾಗಿ ಆ ಬಗ್ಗೆ ಸಿದ್ಧತೆಗಳನ್ನು ಮಾಡಬೇಕೆಂದಾಯಿತು.

Degrees: Books: Medicines
Free H. L. M. S. M. B. H. M. D. etc Free Homeo-Ayur- UnaniNatureo degree by post also—Practitioner also get soon Homeo MateriaMedica, Rs. 5 Homeo Practice book Rs. 4, Insanity Cure Pills Rs. 10 Enclose 2 annas stamp:—
Prof. Dr. N. H. Chhatbar,
Principal Indian Homeopathi Institute & Society (Govt. Regd)
P.O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No. 2 Rs. 5 No. 1 Rs. 7 Special Rs. 10, Extra Special Rs. 17 for love marriage health, wealth. Ask any six questions with M. O. Re. 1/- and get correct answers by returnpost Life reading Rs.10 No V.P.P. Send M.O. Free pamplets.
Prof. Dr. N. H Chhatbar.
P.O. MAHUVA (Kathiawar-India.)

ಸುದ್ದಿ ಸೂಚನೆ.

○ ಇಟೆಲಿಯಲ್ಲಿ ರೋಮ್ ಕಡೆಗೆ ದ್ವಿಮುಖವಾಗಿ ಸಾಗಿದ ಮಿತ್ರರ ಎಂಟನೇ ಮತ್ತು ಐದನೇ ಸೇನೆಗಳ ಗತಿ ಮಂದವಾಗಿದೆ

○ ಇಟೆಲಿ ರಣಮುಖದ 'ವಿಲ್ಲಾಗ್ರ್ಯಾಂಡೆ'ಯನ್ನು ಮೇಜರ್ ಸಿರ್ಧಾರಿ ಸಿಂಘರ ನಾಯಕತ್ವದ ಪಂಜಾಬಿ ಸೇನಾ ಸಮೂಹವೊಂದು ವಶಪಡಿಸಿಕೊಂಡ ಸಾಹಸವು ಬಹಳವಾಗಿ ಶ್ಲಾಘಿಸಲ್ಪಡುತ್ತಿದೆ.

○ ರಶ್ಯದಲ್ಲಿ ನೆವ್ರೋ ಪೆಟ್ರೋವ್‌ಸ್ಕ್ ರೈಲ್ವೇ ಹಾದಿಯು ಇಕ್ಕಡೆಯಿಂದಲೂ ರಶ್ಯನರಾರಂಭಿಸಿರುವ ನವಧಾಳಿಯ ಸುದ್ದಿಯನ್ನು ಬರ್ಲಿನ್ ರೇಡಿಯೋ ಪ್ರಕಟಿಸಿದೆ.

○ ಅಧ್ಯಕ್ಷ ರುಸುವೆಲ್ಟರು ಕೆಲದಿನಗಳಿಂದ ಅಂರಿಶೀತ ಜ್ವರತಾಗಿ ಹಾಸಿಗೆ ಹಿಡಿದಿದ್ದಾರೆ. 'ನಾವೀಗ ಮುಂಧಾಳಿಯ ಸ್ಥಿತಿಯಲ್ಲಿದ್ದೇವೆ' ಎಂದು ರುಸವೆಲ್ಟರು ಕ್ರಿಸ್‌ಮಸ್ ಸಂದೇಶದಲ್ಲಿಂದಿದ್ದಾರೆ.

○ 'ಮಿತ್ರರು ಫ್ರಾನ್ಸನ್ನಾಕ್ರಮಿಸುವ ಸಂದರ್ಭದಲ್ಲಿಯೂ ತಾನು, ವಿಧೇಯನಾಗಿರುವೆನೆಂದು ಪೆಟೈನರು ಹಿಟ್ಲರರಿಗಾಶ್ವಾಸನೆಯಿತ್ತಿದ್ದಾರೆ.

○ 'ಹುಲಿಯ ಮೇಲೆ ಹತ್ತಿದವನು ಸುಲಭದಲ್ಲಿ ಕೆಳಗಿಳಿಯಲಾರ' ಎಂದು ಜರ್ಮನಿಯ ಮಿತ್ರತ್ವದಲ್ಲಿರುವ ಜಾಪಾನಿಗೆ ರಶ್ಯದ 'ವಾರ್ ವರ್ಕಿಂಗ್ ಕ್ಲಾಸ್' ಪತ್ರಿಕೆಯ ವ್ಯಂಗ್ಯ ಎಚ್ಚರಿಕೆ.

○ ಕಾರ್ಕೋವಿನಲ್ಲಿ ಅತ್ಯಾಚಾರ ನಡೆಸಿದ ಜರ್ಮನರನ್ನು ನ್ಯಾಯ ಕಾಯಿದೆಯಂತೆ ಶಿಕ್ಷಿಸುವ ವಿಚಾರಣೆಯನ್ನು ರಶ್ಯಾನರಾರಂಭಿಸಿದ್ದಾರೆ. ಯುದ್ಧಾಂತ್ಯದವರೆಗೆ ಅದನ್ನು ಬಾಕಿಯಿಡಬೇಕೆಂದು ಕೆಲವು ಬ್ರಿಟನ್ನು ಪತ್ರಿಕೆಗಳ ಅಭಿಪ್ರಾಯ.

○ ಚೀನದ ಫೋರ್ಮೋಸದಲ್ಲಿ ಮಿತ್ರರಾಷ್ಟ್ರಗಳು ಯುದ್ಧ ನಿಲ್ದಾಣ ರಚಿಸಲು ಚೀನವು ಒಪ್ಪಬಹುದೆಂದು ತಿಳಿದುಬರುತ್ತದೆ.

○ ಜಾಪಾನಿನ ಸಂದುಕಟ್ಟಿನ ಪಟ್ಟಣಗಳಿಂದ ನಾಗರಿಕರನ್ನೆಲ್ಲಾ ಖಾಲಿಮಾಡುವಂತೆ ಜಾಪಾನೀ ಸರಕಾರವು ಎಚ್ಚರವಿತ್ತಿದೆ, ಮಿತ್ರರ ವಿಮಾನ ಧಾಳಿಯ ಭೀತಿಯಿಂದ.

○ 1944ರಲ್ಲಿ ಬೆಲ್ಜಿಯಮ್ ಸ್ವತಂತ್ರವಾಗುವದೆಂದು ಅಲ್ಲಿಯ ಮಾಜೀ ಪ್ರಧಾನಿಗಳು ಲಂಡನಿನಿಂದ ಕ್ರಿಸ್‌ಮಸ್ ಭಾಷಣವಿತ್ತಿದ್ದಾರೆ.

○ ಉತ್ತರ ಬರ್ಮದ ಮೂಲೆಯಲ್ಲಿ ಹಿಂದೀ ಸೇನೆಯು ನೆಲ ಹೋರಾಟ ನಡೆಸಿರುವದೆಂದೂ ಜಾಪಾನರ ಪ್ರತಿಧಾಳಿಗಳನ್ನು ಹಿಮ್ಮೆಟ್ಟಿಸಲಾಗುತ್ತಿದೆಯೆಂದೂ ದಶಂಬರ್ 31ರಲ್ಲಿ ನವಡಿಲ್ಲಿಯ ಪ್ರಕಟಣೆ.

○ ಶಾಂತಿಯು ದೊಡ್ಡ ರಾಷ್ಟ್ರಗಳಿಂದಲೇ ರಕ್ಷಿಸಲ್ಪಡುವಂತಿಲ್ಲ, ಎಂದು ಬ್ರಿಟಿಷ್ ಮಂತ್ರಿಗಳಲ್ಲೊಬ್ಬರಾದ ಮಿ. ರಿಚಾರ್ಡ್ ಲಾ, ಇವರ ಭಾಷಣ.

○ ಜರ್ಮನರು ಹೊಸ ಮಾದರಿಯ ಬೋಂಬುಗಳನ್ನು ಉಪಯೋಗಿಸಹತ್ತಿದ್ದಾರೆಂದು ವಾಷಿಂಗ್ಟನಿನಿಂದ ವರದಿ.

○ 'ಆಂಗ್ಲೋ ಅಮೆರಿಕಾನರ ವಿಮಾನಧಾಳಿಗಳ ಪರಿಣಾಮವಾಗಿ ಇಡೀ ಜಾಪಾನ್ ರಾಷ್ಟ್ರವೀಗ ಕಠಿಣ ಪರೀಕ್ಷೆಗೊಳಗಾಗುವ ಕಾಲಬಂದಿದೆ' ಎಂದು ಪ್ರಧಾನಿ ಟೋಜೋ ಜಾಪಾನರನ್ನೆಚ್ಚರಿಸಿದ್ದಾನೆ.

○ ಭಾರತೀಯ ಸೈಯನ್ಸು ಕಾಂಗ್ರೆಸಿನ ವಾರ್ಷಿಕಾಧಿವೇಶನವು ಇದೇ ತಾ. ೩ರಲ್ಲಿ ನವಡಿಲ್ಲಿಯಲ್ಲಿ ವೈಸರಾಯರಿಂದ ತೆರೆಯಲ್ಪಟ್ಟಿತು. ಸಭೆ ನಡೆಯುತ್ತಿದೆ.

● ಕಳೆದ ವಾರಾಂತ್ಯದಲ್ಲಿ ಆರನೇ ನಿಯಂತ್ರಣಕ್ಕನುಸಾರವಾಗಿ ಬೊಂಬಾಯಿಯಲ್ಲಿ ಪೋಲಿಸರು ಹಲವು ಅಂಗಡಿಗಳ ಶೋಧ ನಡಿಸಿ ಸುಮಾರು 85 ಸಾವಿರ ಗಜ ಬಟ್ಟೆಗಳನ್ನು ವಶಪಡಿಸಿಕೊಂಡರು.

ಶಿವಮೊಗ್ಗಾದಲ್ಲಿ ಕನ್ನಡ ಪ್ರಗತಿಶೀಲ ಲೇಖಕರ ಸಭೆ:—ಕನ್ನಡ ಸಾಹಿತ್ಯ ಸಮ್ಮೇಳನವು ಶಿವಮೊಗ್ಗಾದಲ್ಲಿ ಜರಗುತ್ತಿದ್ದ ಮೂರನೆಯ ದಿನ ಕನ್ನಡ ಪ್ರಗತಿಶೀಲ ಲೇಖಕರ ಸಭೆಯೊಂದು ಕರ್ನಾಟಕ ಸಂಘದ ಕಟ್ಟಡದೊಳಗೆ ಜರಗಿ ವಿಚಾರ ವಿನಿಮಯ ನಡೆಯಿತು. ಶ್ರೀಗಳಾದ ಕೃಷ್ಣಕುಮಾರ, ವೆಂಕಣ್ಣ ರಾ. ಕುಳಕುಂದ, ಅ. ನ. ಕೃಷ್ಣರಾಯ, ವಿ ಕೃ. ಗೋಕಾಕ, "ಆನಂದ" ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದರು. ಮುಂದಿನ ಮೇತಿಂಗಳಲ್ಲಿ ಅಖಿಲ ಕರ್ನಾಟಕ ಪ್ರಗತಿಶೀಲ ಲೇಖಕರ ಸಮ್ಮೇಳನವು ಚಿತ್ರದುರ್ಗದಲ್ಲಿ ಸೇರುವ ನಿರ್ಧಾರವಾಯಿತು. ಪತ್ರಿಕೋದ್ಯೋಗಿ ಸಮ್ಮೇಳನದ ಜತೆಯಲ್ಲಿ ಒಂದು ದಿನ ಕನ್ನಡ ಪ್ರಗತಿಶೀಲ ಲೇಖಕರ ಸಭೆಯನ್ನು ಜರಗಿಸಬೇಕೆಂಬ ಮಂಗಳೂರಿನ ಆಹ್ವಾನವು ಸ್ವೀಕರಿಸಲ್ಪಟ್ಟಿತು. ಶ್ರೀ. ವೆಂಕಣ್ಣ ಅವರು ಬರೆದ, ಪ್ರಗತಿಶೀಲ ಲೇಖಕರ ಸಂಘದವರು ಪ್ರಕಟಿಸಿದ "ಭಾರತಶಕ್ತಿ" ಎಂಬ ಗೀತನಾಟಕದ ಉದ್ಘಾಟನೆಯನ್ನು ಶ್ರೀ. ವಿ ಕೃ. ಗೋಕಾಕರು ಮಾಡಿದರು.

ದ. ಕ. ಮಂಗಳೂರು ಡಿ. ಮುನ್ಸೀಫರ ಕೋರ್ಟಿನಲ್ಲಿ.

O. S. 501/1943

ಬಿ. ಪುಟ್ಟಪ್ಪಯ್ಯ— ವಾದಿ.

ಮತ್ತು

ವೆಂಕಪ್ಪ ವಗೈರೆ ಕೂಡಾ ಪ್ರತಿವಾದಿಗಳು.

ನೋಟೀಸು.

ಮೇಲಿನ ವಾದಿಯು ಕ್ಕಷೆಡ್ಯೂಲ್ ಕ್ರ. ಶೆಡ್ಯೂಲ್ ಆಸ್ತಿಯ ಸ್ವಾಧೀನತೆ ವಗೈರೆ ಬಗ್ಗೆ ಮೇಲಿನ ದಾವೆಯನ್ನು ದಾಖಲು ಮಾಡಿರುತ್ತಾನೆ. ಸದ್ರಿ ವ್ಯಾಜ್ಯವು ತನಿಖೆ ಬಗ್ಗೆ ತಾ. 12-1-44ಕ್ಕೆ ಇಟ್ಟಿದೆ. ಈ ಕೆಳಗೆ ಕಾಣಿಸಿದ ಪ್ರತಿವಾದಿಗೆ ಏನಾದರೂ ಆಕ್ಷೇಪವಿದ್ದರೆ ಸದ್ರಿ ತಾರೀಕಿನಲ್ಲಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸಿಕೊಳ್ಳತಕ್ಕದ್ದು.

P. Ramachandra Rao.

ಮಂಗಳೂರು } Advocate for
ತಾ. 22-12-1943. } Plaintiff.

2ನೇ ಪ್ರತಿವಾದಿ ರಾಮಣ್ಣಯ್ಯನ ಮಗ ವೆಂಕಟ್ರಮಣಯ್ಯನವರ ಮಗ ಅರಳ ಗ್ರಾಮ, ಮಂಗಳೂರು ತಾಲ್ಲೂಕು.

5ನೇ ವೆಂಕಮ್ಮ ಯಾನೆ ಕಮಲಮ್ಮ, ವೆಂಕಪ್ಪಯ್ಯನವರ ವಿಧವೆ, ಬಡಗಬೆಳ್ಳೂರು ಗ್ರಾಮ, ಮಂಗಳೂರು ತಾಲ್ಲೂಕು.

The Victory Club

Both Vegetarian & Non-vegetarian dishes

Old Post office Building.

VICTORY CLUB ROAD, UDIPI.

(Furnishing Homes & Estats Ltd.)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

1944ನೇ

ಹೊಸವರ್ಷದಲ್ಲಿ ನಿಮಗೆ ಬೇಕಾದುದೇನು?

ಪಾಕೆಟ್ 'ಕೆಲೆಂಡರ್'

- 1944ನೇ ಇಸವಿಯ ಪಾಕೆಟ್ ಕೆಲೆಂಡರ್ ಈಗ ತಾನೆ ವಿಕರಿಗೆ ಸಿದ್ಧವಾಗಿದೆ.
- ಇದರಲ್ಲಿ ತಾರೀಕು, ತಿಂಗಳಿನ ವಿಶೇಷ ದಿನಗಳು, ಜ್ಞಾಪಕ ಪತ್ರ ಇತ್ಯಾದಿ ನಿತ್ಯೋಪಯೋಗೀ ಮಾಹಿತಿಗಳು ಕೊಡಲ್ಪಟ್ಟಿವೆ.
- ಪ್ರತಿಯೊಬ್ಬನಲ್ಲೂ ಅತ್ಯಾವಶ್ಯಕವಾಗಿ ಇರಬೇಕಾದ ಕೈಗನ್ನಡಿ.

ಬೆಲೆ ಕೇವಲ ಒಂದಾಣೆ ಮಾತ್ರ

0-1-9 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಗುತ್ತೆ.

ನಮಗಿಂದಾಗಲೇ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೇರಳ

ವೇಪ್ ಸೋಪು

VEP SOAP

ವೈದ್ಯಕೀಯ ಸಾಬೂನು

ಚುನಾಯಿತ ದಿನಸುಗಳಿಂದ ತಯಾರಿ

— ಸಿದುದು —

ಬೇವಿನೆಣ್ಣೆಯ ಸಾರಯುಕ್ತವಾದುದು

ಸುಪ್ರಸಿದ್ಧವಾದ ಚರ್ಮವರ್ಧಕ ಟಾನಿಕ್.

ಕೇರಳಾ ಸೋಪ್ ಇನ್ಸ್ಟಿಟ್ಯೂಟ್.

ಕಲ್ಲಿಕೋಟೆ. ಸರಕಾರೀ ಸಂಸ್ಥೆ

K. S. I. 2.

ಉಡುಪಿಯ ಉತ್ಸವಕ್ಕೊಂದು

ಸಿನೆಮಾದ ಶೋಭೆ—

ಮರೆಯದಿರಿ ನಿಮ್ಮ ಮನ ಮೆಚ್ಚುಗೆಯ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್,

ಉಡುಪಿ.

NOTICE.

In the Court of the Dt. Munsiff of Mangalore

S. C. Suit No 513/43

Between—

Mrs. Amy Colaco.......Plaintiff.

and

1. Gaspar Fernandes, 2. Rayyu Fernandes, —sons of Lawrence Ferandes — Defendants both residing at Kadubettu, Buntwal, Mangalore Taluk

Notice to the defendants is hereby given that the plaintiff has filed the above suit against them for the recovery of Rs. 151/-due under the promissory note for Rs.145/-dated 20-1-1943 executed by them in favour of the plaintiff and that said suit is posted to 1-1944 for hearing. on default of the defendants' apparance on the above said date, the suit will be heard and determined exparte.

(By Order)

John Gonsalves, LL B.

Vakil for Plaintiff.

Mangalore }
28-12-1943 }

ಶ್ರೀಕೃಷ್ಣ ಪರ್ಯಾಯ ಪ್ರಕಾಶಿನಿ

ಮಾಸಪತ್ರಿಕೆಯ

೧, ೨ನೆಯ ಸಂಪುಟಗಳು ಬೇಕಾದವರು ಕೂಡಲೇ ಬರೆಯುವುದು. ಕೆಲವೇ ಪ್ರತಿಗಳು ದೊರೆಯುತ್ತವೆ.

ಮೆನೇಜರ್,
ಶ್ರೀಕೃಷ್ಣಾಪುರ ಮಠ, ಉಡುಪಿ.

೩ನೇ ಸಂಪುಟವು ಜನವರಿಯಿಂದ ಆರಂಭವಾಗುವುದು. ಚಂದಾದಾರರಾಗುವವರಿಗೆ ಸುಸಂದರ್ಭ!

ಮೆನೇಜರ್,
ಶ್ರೀಕೃಷ್ಣ ಪರ್ಯಾಯ ಪ್ರಕಾಶಿನಿ,
ಸಂತೆಕಟ್ಟೆ, ಉಡುಪಿ

ಮಂಗಳೂರು

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಲನವು ಸದ್ಯವೇ ಮಂಗಳೂರಲ್ಲಿ ಜರಗುವ ಸಿದ್ಧತೆಗಳಾಗುತ್ತಿವೆಯೆಂದು ಪತ್ರಿಕೆಗಳಿಂದ ತಿಳಿದುಬರುತ್ತದೆ. ಆದರೆ ಚತುರ್ಥ ಸಮ್ಮೇಲನವು 1939ನೇ ಡಿಸೆಂಬರದಲ್ಲಿ ಬೆಳಗಾಂವಿಯಲ್ಲಿ ಶ್ರೀಮತಿ ಆರ್. ಕಲ್ಯಾಣಮ್ಮನವರ ಅಧ್ಯಕ್ಷತೆಯಲ್ಲಿ ಜರಗಿರುತ್ತದೆಂದೂ ಆದ್ದರಿಂದ ಇನ್ನು ನಡೆಯಲಿರುವುದು ಐದನೆಯ ಸಮ್ಮೇಲನವಾಗಬೇಕೆಂದೂ ಸಂಬಂಧಪಟ್ಟವರು ಹಾಗೆ ತಿದ್ದುಪಡಿಮಾಡಿಕೊಳ್ಳಬೇಕೆಂದೂ ಶ್ರೀ ಸ್ಯಾಟಶ್ಯಾಮರಾವ್, 'ಕಥಾಕುಂಜ' ಇವರು ತಿಳಿಸುತ್ತಾರೆ.

ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನ, ಮಂಗಳೂರು.

ದ. ಕ. ಜಲ್ಲೆ ಬಂಟರ ಯಾನೆ ನಾಡವರ ಸಂಘದ ಕಡೆಯಿಂದ ಸಮಾಜದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಮಂಗಳೂರಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನವು ಸ್ಥಾಪಿಸಲ್ಪಟ್ಟು ಸಮಾಜದ ವಿದ್ಯಾರ್ಥಿಗಳ ಪ್ರೌಢ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿರುವುದು ಸಕಲರಿಗೂ ತಿಳಿದ ವಿಷಯವಷ್ಟೆ! ಇದು ಎಷ್ಟೋ ವಿದ್ಯಾರ್ಥಿಗಳಿಗೆ ಆಶ್ರಯಸ್ಥಾನವಾಗಿದೆ. ಹಾಗೆಯೇ ಸಮಾಜದ ವಿದ್ಯಾರ್ಥಿನಿಯರಿಗೂ ಪ್ರೌಢ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಸಮಾಜದ ಕೆಲಮುಖಂತರು ಸೇರಿ ಎರಡು ವರ್ಷಗಳ ಹಿಂದೆ ಶ್ರೀರಾಮಕೃಷ್ಣ ವಿದ್ಯಾರ್ಥಿನಿ ಭವನವನ್ನು ತೆರೆದಿರುತ್ತಾರೆ. ಇದು ಸಮಾಜದ ಹಲವು ವಿದ್ಯಾರ್ಥಿನಿಯರೂ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿದೆ. ಆದರೆ ಈ ಸ್ತ್ರೀ ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡವಾಗಲಿ, ಬೇಕಷ್ಟು ನಿಧಿಯಾಗಲೀ ಇರುವುದಿಲ್ಲ. ಅದಕ್ಕೆ ತಕ್ಕ ನಿಧಿಯನ್ನು ಸಂಗ್ರಹಿಸಬೇಕೆಂದು ಇತ್ತೀಚೆಗೆ ಮಂಗಳೂರಲ್ಲಿ ಜರಗಿದ ಸಮಾಜದ ಮಹಾ ಸಭೆಯಲ್ಲೂ ಹಳೆ ವಿದ್ಯಾರ್ಥಿ ಸಭೆಯಲ್ಲೂ ಮಂಜೂರಾಗಿ ನಿಧಿಸಂಗ್ರಹದ ಬಗ್ಗೆ ಶ್ರೀಗಳಾದ ಮೂಲ್ಕಿ ರಾಮಕೃಷ್ಣ ಪೂಂಜ, ಕಾರ್ಕಳ ನಾಗಣ್ಣ ಹೆಗ್ಡೆ, ಸೌಕೂರು ಅಂತಣ್ಣ ಶೆಟ್ಟಿ ಇವರಿಗೆ ಅಧಿಕಾರ ಕೊಡಲಾಗಿದೆ. ಅವರು ಇದೇ ತಾ. 15ಕ್ಕೆ ಧನಸಂಗ್ರಹ ಮಾಡಲು ಬೊಂಬಾಯಿಗೆ ಹೋಗಲಿರುವರೆಂದು ತಿಳಿದುಬರುತ್ತದೆ. ಸ್ತ್ರೀ ವಿದ್ಯಾಭಿಮಾನಿಗಳೂ ಸಮಾಜ ಹಿತೇಚ್ಛುಗಳೂ ಈ ಸತ್ಕಾರ್ಯಕ್ಕೆ ಶಕ್ತಿಮೀರಿ ಸಹಾಯಮಾಡುವರೆಂದು ನಿರೀಕ್ಷಿಸಲಾಗಿದೆ. ಮುಂಬಯಿಯ ಸಮಾಜ ಬಂಧುಗಳೂ ಕನ್ನಡಿಗರೂ ಎಷ್ಟೋ ಬಾರಿ ತಮ್ಮ ಔದಾರ್ಯವನ್ನು ವ್ಯಕ್ತಪಡಿಸಿದ್ದಾರೆ. ಈ ಬಾರಿ ಹಿಂದಿಗಿಂತಲೂ ಮಿಗಿಲಾದ ಸಹಾಯವನ್ನು ಕೊಡದಿರಲಾರರೆಂದು ಆಶಿಸಲಾಗಿದೆ.

ಉಡುಪಿ.

ರೇಶನಿಂಗಿನಲ್ಲಿ ರಿಯಾಯಿತಿ ಬೇಕು: ಸದ್ಯವೇ ಉಡುಪಿಗೆ ರೇಶನಿಂಗ್ ಪದ್ಧತಿ ಬರಲಿದ್ದು ಅದಕ್ಕೆ ತಕ್ಕ ಸಿದ್ಧತೆಗಳಾಗುತ್ತಿರುವವಷ್ಟೆ! ಇದು ಜಾರಿಗೆ ಬಂದ ಮೇಲೆ 10 ಮುಡಿ ಅಕ್ಕಿಗಿಂತ ಹೆಚ್ಚಿಗೆ ಸಂಗ್ರಹಿಸಿಡಬಾರದೆಂದು ತಿಳಿದುಬರುತ್ತದೆ. ಎಷ್ಟೋ ವರ್ಗದಾರರು ತಮಗೆ ವರ್ಷಕ್ಕೆ ಬೇಕಾಗುವಷ್ಟು ಅಕ್ಕಿಯನ್ನು ಉತ್ತಮವಾದ ಅಕ್ಕಿಯನ್ನು ಕೂಡಿಡುವ ಪದ್ಧತಿ. ಆದ್ದರಿಂದ ರೇಶನಿಂಗ್ ಕ್ರಮದಂತೆಯೇ ಒಂದು ವರ್ಷಕ್ಕೆ ಬೇಕಾಗುವಷ್ಟನ್ನು ಸ್ಟಾಕು ಮಾಡುವರೆ ಅಪೇಕ್ಷಿಸಿದರಿಗೆ ವಿಶಿಷ್ಟ ಸಮ್ಮತಿ ಕೊಡಬೇಕೆಂದೂ ಹಾಗೆಯೇ ವ್ಯವಸಾಯ ಖರ್ಚಿಗೆ ಬೇಕಾಗುವಷ್ಟನ್ನು ಕೂಡಿಡಲಿಕ್ಕೂ ಅಪ್ಪಣೆ ದೊರೆಯಬೇಕೆಂದೂ ಶ್ರೀ ಬೈಲೂರು ವಾಸುದೇವರಾವ್ ವಕೀಲ್, ಇವರು ರೇಶನಿಂಗ್ ಆಫೀಸರರಿಗೆ ಬರೆದಿರುವರೆಂದು ತಿಳಿದುಬರುತ್ತದೆ.

ವಿಹಾರ ವಿನೋದ ಕೇಂದ್ರಗಳು: ಜಿಲ್ಲಾ ರೂರಲ್ ರಿಕ್ರಿಯೇಶನ್ ಆಫೀಸರ್ ಶ್ರೀ ಬಿ. ಎಮ್. ಬಾಳಿಗರ ವ್ಯವಸ್ಥಾಪಕತ್ವದಲ್ಲಿ ಕಳೆದ ತಾ. 28ರಲ್ಲು ಏಟ್ಲದಲ್ಲೂ ತಾ 30ರಲ್ಲು ಪುತ್ತೂರು ಕೇಂದ್ರದಲ್ಲೂ ವಿಹಾರ ವಿನೋದ ಸೆಂಟರುಗಳು ತೆರೆಯಲ್ಪಟ್ಟವು. ಪುತ್ತೂರಲ್ಲಿ ಸ್ತ್ರೀಯರಿಗೆ ಪ್ರತ್ಯೇಕ ಸಮಿತಿಯ ಏರ್ಪಾಡು ಮಾಡಲಾಗಿಯದೆ.

ದವಸಧಾನ್ಯಗಳ ಧಾರಣೆ ಪಟ್ಟಿ- ತಾ. 23ರಲ್ಲು ಸೇರಿದ ಉಡುಪಿ ತಾಲೂಕು ಬೆಲೆ ನಿಯಂತ್ರಣ ಸಮಿತಿಯವರು ದವಸಧಾನ್ಯಗಳ ಚಿಲ್ಲರೆ ಮಾರಾಟದ ಕ್ರಯವನ್ನು ಈ ರೀತಿ ನಿರ್ಣಯಿಸಿರುವರು— ಮಸ್ಕತಿ ಅಕ್ಕಿ ಸೇರಿಗೆ 0-5-6; ಕೊಳ್ಸಲು ಅಕ್ಕಿ ಸೇರಿಗೆ 0-4-9; ಬೆಳ್ತಿಗೆ ಅಕ್ಕಿ ಸೇರಿಗೆ 0-6-6; ಡಬ್ಬಿ ಬೆಲ್ಲ ಸೇರಿಗೆ 0-1-6 ಉಂಡೆ ಬೆಲ್ಲ ಸೇರಿಗೆ 0-1-6; ಉದ್ದು ಸೇರಿಗೆ 0-4-6, ಹೆಸ್ರು ಸೇರಿಗೆ 0-5-6; ಕಡ್ಲೆ ಸೇರಿಗೆ 0-6-6; ಹುರುಳಿ ಸೇರಿಗೆ 0-4-0; ತೊಗ್ರಿ ಬೇಳೆ ಸೇರಿಗೆ 0-10-0 ರಾಗಿ ಸೇರಿಗೆ 0-4-0; ಉಪ್ಪು ಸೇರಿಗೆ 0-1-3; ಗಾಟಿ ಮೆಣಸು ಸೇರಿಗೆ 0-5-6 ಊರು ಮೆಣಸು ಸೇರಿಗೆ 0-4-6; ಗೋದಿ ಸೇರಿಗೆ 0-7-3; ಸಜ್ಜಿಗೆ ಸೇರಿಗೆ 0-9-0 ಸಕ್ಕರೆ ಸೇರಿಗೆ 0-4-6; ಗೋಧಿಹಿಟ್ಟು ಸೇರಿಗೆ 0-4-9 (ಉಗ್ರಾಣ ಬಂದಾಗಿದೆ) ಚಿಮಿಣಿ ಎಣ್ಣೆ ಬಿಳಿ ಬಾಟ್ಲಿಗೆ 0-3-5; ಕೆಂಪೆಣ್ಣೆ 0-3-1; ಬೆಂಕಿಪೆಟ್ಟಿಗೆ, 60 ಕಡ್ಡಿಯುಳ್ಳದ್ದು 0-0-9.

—ತಾರುಣ್ಯ—

ಕೊಟ್ಟು, ವೀರ್ಯವೃದ್ಧಿಯನ್ನು ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುತ್ತಮ ಔಷಧಿ.

ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸ.

ಪುತ್ತೂರು ಏಜಂಟರು: **ಪೈ ಫಾರ್ಮಸಿ**

ಲಾಭ ಕೋರನೊಡನೆ ಹೋರಾಡಲು ಉತ್ತಮ ಉಪಾಯ

ಮುಂಬರುವ ದಿನಗಳಿಗಾಗಿ ಕೂಡಿಡಿ. ಅನವಶ್ಯ ಪದಾರ್ಥಗಳನ್ನು ಯುದ್ಧಕಾಲದಲ್ಲಿ ಕೊಳ್ಳುವುದು ಮೂರ್ಖತನ; ಆದರಿಂದ ಲಾಭಕೋರನಿಗೆ ಲಾಭವಾಗುತ್ತದೆ, ಆದರೆ ಏರಿದ ಬೆಲೆಯಲ್ಲಿ ನೀವು ಕೊಂಡ ಪ್ರತಿಸಾರಿಯೂ ನೀವು ನಷ್ಟ ಮಾಡಿಕೊಳ್ಳುವಿರಿ. ಹಣವನ್ನು ಇಂದೇ ಕೂಡಿಡಿ! ಅತ್ಯಾವಶ್ಯಕವಾದುವುಗಳಿಗೆ ಮಾತ್ರ ವೆಚ್ಚಮಾಡಿ. ವಿಜಯವು ಸರಿಯಾದ ಬೆಲೆಯನ್ನು ತರುವವರೆಗೆ ನೋಡಿ ಸಾಮಾನುಗಳನ್ನು ಕೊಳ್ಳಬೇಡಿ.

ಸುರಕ್ಷಿತವಾಗಿ ಕೂಡಿಡಿ ಎಚ್ಚರಿಕೆಯಿಂದಿರಿ! – ನೀವು ಕೂಡಿಡುವ ಹಣವನ್ನು ಇಟ್ಟುಕೊಳ್ಳುವ ಬಗ್ಗೆ. ಭಂಗಾರ ಬೆಳ್ಳಿ ಆಭರಣಗಳು, ಭೂಮಿ, ಕಟ್ಟಡಗಳು ಮತ್ತು ಸಾಮಾನುಗಳ ಮೇಲೆ ವಿನಿಯೋಗಿಸುವುದು ಬುದ್ಧಿವಂತಿಕೆಯಲ್ಲ. ಏಕೆಂದರೆ ಎಂದಾದರೂ ಒಂದುದಿನ ಈಗಿನ ಹೆಚ್ಚಿನ ಬೆಲೆಗಳು ಕುಸಿದು ಬೀಳುವುದು ನಿಜ, ಅದು ಹಠಾತ್ತಾಗಿ ಒದಗಿದರೂ ಒದಗಬಹುದು.

ಭದ್ರತೆಯ ಕುರಿತು ಆಲೋಚಿಸಿ ನಿಮ್ಮ ಹಣವನ್ನು ಮೌಲ್ಯತಗ್ಗದಕಡೆ ಕೂಡಿಡಿ. ಸಹಕಾರ ಸಂಸ್ಥೆಯಲ್ಲಿ ವಿನಿಯೋಗಿಸಿ, ಇನ್ಶೂರೆನ್ಸು ಪಾಲಿಸೀಯನ್ನು ತೊಗೊಳ್ಳಿ, ಬ್ಯಾಂಕ್, ಅದವಾ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ಹಣ ಕೂಡಿಡಿ ಇವೆಲ್ಲವುಗಳಿಗೂ ಉತ್ತಮವಾದುದೆಂದರೆ ಸರ್ಕಾರದ ಸಾಲಗಳಲ್ಲಿ ಮತ್ತು ಡಿಫೆನ್ಸ್ ಸರ್ಟಿಫಿಕೇಟ್‌ಗಳಲ್ಲಿ ವಿನಿಯೋಗಿಸುವುದು.

ದಿನವೂ ನಾಲ್ಕು ಆಣೆ ಕೂಡಿಡಿ!

ಲಾಭ ಕೋರರಿಗೆ ಕೊಡುವ ಬದಲಿಗೆ ನಿಮ್ಮ ಕಾಸುಗಳನ್ನು ಒಂದು ಹಣದ ಪೆಟ್ಟಿಗೆಯಲ್ಲಿ ಹಾಕಿಡಿ. ದಿನವೂ ನಾಲ್ಕು ಆಣೆ, ಸಾಧ್ಯವಾದರೆ ಹೆಚ್ಚಾಗಿ ಕೂಡಿಡುತ್ತಿದ್ದರೆ ನಿಮ್ಮ ಗುರಿಯಾಗಿರಲಿ. ಆನಂತರ ಕೂಡಿಟ್ಟ ನಗದು ಹಣವನ್ನು ಸುರಕ್ಷಿತವಾಗಿ ಬಡ್ಡಿ ತರುವ ಈ ಕೆಳಗೆ ಕಂಡ ವಿನಿಯೋಗಗಳಲ್ಲಿ ಕ್ರಮವಾಗಿ ಮಾಡುತ್ತಿರಿ.

ಮುಂಬರುವ ದಿನಗಳಿಗಾಗಿ ಕೂಡಿಡಿ

ರಾಷ್ಟ್ರೀಯ ಯುದ್ಧಮುಖದವರು ದೇಶೀಯರಿಗೆ ಮಾಡುವ ಮನವಿ

ದಕ್ಷಿಣ ಕನ್ನಡ

ಉಡುಪಿ.

ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ:—ಇದರ ಭವ್ಯ ವಠಾರದಲ್ಲಿ ತಾ| 1-1-44ನೇ ಮುಂಜಾನೆ 1944ನೇ ವರ್ಷದಲ್ಲಿ ಸದ್ರಿ ವಿಮಾ ಕಂಪೆನಿಗೆ ಚಂದಾತೆತ್ತ ಒಂದು ಕೋಟಿ ರೂಪಾಯಿ ಮೌಲ್ಯದ ವಿಮಾ ಬಿಸಿನೆಸ್ಸ್ ಸಾಧಿಸುವ ಗುರಿಯಿಟ್ಟುಕೊಂಡು, ಡಾ| ಮಾಧವಪೈಗಳು ತಮ್ಮ ನೇತೃತ್ವದಲ್ಲಿ ಸ್ಥಾಪಿತವಾಗಿರುವ ಸಂಸ್ಥೆಗಳೆಲ್ಲದರ ಡೈರೆಕ್ಟರರು, ಆಫೀಸರರು, ಸಿಬ್ಬಂದಿಯವರನ್ನು ಬರಮಾಡಿಸಿ ಸಭೆ ಜರಗಿಸಿದರು. ಲಘು ಉಪಾಹಾರವಾದೊಡನೆ ದೇವತಾ ಪ್ರಾರ್ಥನೆ ಮಾಡಿಕೊಂಡು, ಡಾಕ್ಟರ ಪೈಗಳು ಕೆನರಾ ಮ್ಯುಚುವಲ್ ವಿಮಾ ಕಂಪೆನಿಯ ಸಂಕ್ಷಿಪ್ತ ಪರಿಚಯದೊಂದಿಗೆ ಅದರ ಎಂಟು ವರ್ಷ ಬಾಲ್ಯಾವಸ್ಥೆಯಲ್ಲಿ ಚಂದಾತೆತ್ತ ಒಂದು ಕೋಟಿ ರೂಪಾಯಿ ವಿಮಾ ಇಳಿಸಿದ ಹೆಗ್ಗುರುತಿನ ಜ್ಞಾಪಕ ಮಾಡಿ, ಸದ್ರಿ ವಿಮಾ ಕಂಪೆನಿಯ ಅಭಿವೃದ್ಧಿಯ ಎರಡನೆ ಸೋಪಾನವಾಗಿ 1944ನೆ ಇಸವಿಯೊಂದರಲ್ಲೇ ಒಂದು ಕೋಟಿ ರೂಪಾಯಿಯ ವಿಮಾ ಇಳಿಸುವ ಧ್ಯೇಯವನ್ನಿಟ್ಟು ನವ ವರ್ಷವನ್ನು ಆರಂಭಿಸಬೇಕಾಗಿಯೂ ತಮ್ಮ ಆಡಳಿತದಲ್ಲಿರುವ ಹಲವಾರು ಸಂಸ್ಥೆಗಳೂ ಶಾಖೆಗಳೂ ಕೂಡ ಕಾರ್ಯ ನಿರ್ವಹಿಸಲು ಸಾಕಷ್ಟು ವ್ಯವಸ್ಥಾ ಪದ್ಧತಿಯಿರುತ್ತಾ ಆಗಲೇ 3.4 ಲಕ್ಷ ರೂಪಾಯಿಯ ವಿಮೆ ಪ್ರೋಪೋಸಲ್‌ಗಳು ಕರಗತವಾಗಿ, ಕ್ರಮದಂತೆ ಕಾರ್ಯಸಾಧಿಸಿದ್ದಲ್ಲಿ ಒಂದು ಕೋಟಿಗೆ ಮಿಗಿಲಾದ ವಿಮೆಯು ಸಿದ್ಧವಾಗುವದರಲ್ಲಿ ಸಂದೇಹವಿಲ್ಲವೆಂದರು. ಹಾಗೇ ತಮ್ಮ ಹಿತ ಕಾಂಕ್ಷಿಗಳ ಸೌಹಾರ್ದ ಸಹಕಾರಗಳ ಭರವಸೆಯನ್ನು ವ್ಯಕ್ತಮಾಡಿದರು. ಸಿಂಡಿಕೇಟ ಬ್ಯಾಂಕಿನ ಪರವಾಗಿ ಡೈರೆಕ್ಟರರಾದ ಡಾ| ಎನ್| ಶ್ರೀಪಾದರಾಯರೂ ಆಶ್ವಾಸನಪೂರ್ವ ಭಾಷಣಮಾಡಿದರು.

ತಾ| 2ನೆ ಮುಂಜಾನೆ 9.30ಕ್ಕೆ ಕೆನರಾ ಮ್ಯುಚುವಲಿನ ಭವ್ಯವಾಗಿ ಶೃಂಗರಿಸಲಾದ ವಠಾರದಲ್ಲಿ ಸಾವಿರಕ್ಕೆ ಮೇಲ್ಪಟ್ಟು ಸ್ತ್ರೀಪುರುಷರಾದಿ ನಾಗರಿಕ ಸಭೆಯು ಸೇರಿಸಲಾಗಿತ್ತು. ಉಪಹಾರವಾದೊಡನೆ ಸದ್ರಿ ವಿಮಾ ಕಂಪೆನಿಯ ಅಧ್ಯಕ್ಷರಾದ ಶ್ರೀ| ಬಿ| ವೈಕುಂಠಬಾಳಿಗರು ಅನಿವಾರ್ಯವಾಗಿ ಗೈರಹಾಜರಿದ್ದುದರಿಂದ ಡಾ| ಮಾಧವ ಪೈಗಳು ಸದ್ರಿ ಕಂಪೆನಿಯು ಜನ್ಮವೆತ್ತಿ ಎಂಟು ವರ್ಷಗಳ ಅವಧಿಯಲ್ಲಿ ಚಂದಾತೆತ್ತ ಒಂದು ಕೋಟಿ ವಿಮೆಯನ್ನು ಇಳಿಸಿದುದರ ಸಂತೋಷಾರ್ಥವಾಗಿ ಅದರಲ್ಲಿ ಸಹಭಾಗಿಗಳಾಗಿದ್ದವರಿಗೆಲ್ಲ ಉಪಕಾರ ಸ್ಮರಣೆ ಮಾಡುವ ಸಭಾ ಉದ್ದೇಶವನ್ನು ವ್ಯಕ್ತಮಾಡಿ ಭಾಷಿಸಿದರು. ಅನಂತರ ಶ್ರೀಗಳಾದ ಟಿ| ಅನಂತಪೈ, ಎಚ್| ಎಸ್| ಹುಸ್ಸೇನ್ ಸಾಹೇಬ ಬಹದ್ದೂರ್, ಎಲ್| ಎಚ್| ಕೃಷ್ಣ, ರೆವರೆಂಡ್ [illegible] ಪಿಂಟೋರವರು ಕಂಪೆನಿಯ ಶೀಘ್ರ ಅಭಿವೃದ್ಧಿ, ಯೋಗ್ಯ ಸ್ಥಾನಮಾನ ಪಡೆದು 1944ರಲ್ಲೇ ಮಾತ್ರ ಒಂದು ಕೋಟಿ ರೂಪಾಯಿಯ ವಿಮೆ ಉತ್ತರಿಸುವ ಧ್ಯೇಯ ಸಾಧನೆ, ಕಂಪೆನಿಯ ಶ್ರೇಯಸ್ಸುಗಳನ್ನು ಕುರಿತು ಸಂದರ್ಭೋಚಿತ ಭಾಷಣಗಳನ್ನು ಮಾಡಿದರು.

ಮಿ. ಸೆಬೆಸ್ತಿಯನ್ ಅಂದ್ರಾದೆಯವರಿಗೆ ಗೌರವ:—ಜನರಲ್ ಇನ್‌ವೆಸ್ಟ್‌ಮೆಂಟ್ಸ್ ಎಂಡ್ ಕಮರ್ಶಿಯಲ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆಯವರು ತಾ 1ಕ್ಕೆ ಮಾಮೂಲಿನಂತೆ ಉಡುಪಿ ನಾಗರಿಕರಲ್ಲಿ ಆದರ್ಶ ಹಿರಿಯರೊಬ್ಬರನ್ನು ಗೌರವಿಸಲಿಕ್ಕೆ ಶ್ರೀ. ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮಹಾಸಭೆ ಜರಗಿಸಿದರು. ಈ ನವವರ್ಷದ ಗೌರವಸ್ಥಾನವನ್ನು ಮಿ. ಸೆಬೆಸ್ತಿಯನ್ ಅಂದ್ರಾದೆಯವರಿಗೆ (ಮಿ. ವಿನ್‌ಸೆಂಟ್ ಅಂದ್ರಾದೆ ಮತ್ತು ಮಿ. ಆರ್. ಎಂ. ಅಂದ್ರಾದೆ ಇವರ ತಂದೆಯವರು) ಕೊಡಲಾಗಿತ್ತು. ಶ್ರೀ. ಯು. ಎ. ಪೈಗಳು ಕೇಳಿಕೊಂಡ ಮೇರೆಗೆ ಶ್ರೀ. ಶೆಟ್ಟರು ಅಧ್ಯಕ್ಷ ಪೀಠವನ್ನೇರಿದರು. ಶ್ರೀ. ಜನಾರ್ದನ ಆಳ್ವಿಯವರು ಸಭೆಯ ಉದ್ದೇಶವನ್ನು ವಿವರಿಸಿ ಅಂದಿನ ಅತಿಥಿಗಳ ಗುಣಕಥನಮಾಡಿದರು. ಬಳಿಕ ಶ್ರೀಗಳಾದ ಎಂ. ವಿಟ್ಠಲ ಕಾಮತ್, ರೊಕ್ಕೀ ಫೆರ್ನಾಂಡಿಸ್, ಬಿ. ರಾಮರಾಯಶೆಟ್ಟಿ, ಡಾ| ಮಾಧವ ಪೈ ಇವರು ಸಂದರ್ಭೋಚಿತವಾಗಿ ಮಾತನಾಡಿ ಮಿ. ಅಂದ್ರಾದೆಯವರು ಔದಾರ್ಯ, ಸತತೋದ್ಯೋಗ ಸರಳತೆ ಮೊದಲಾದ ಗುಣಗಳಿಂದ ಹೇಗೆ ಸ್ವಯಂ ನಿರ್ಮಿತ ವ್ಯಕ್ತಿಯಾದರೆಂಬುದನ್ನು ವಿವರಿಸಿದರು. ಅಧ್ಯಕ್ಷರು ವ್ಯವಸ್ಥಾಪಕರ ಮಾದರಿಯ ಯೋಜನೆಯನ್ನು ಶ್ಲಾಘಿಸಿ ಅತಿಥಿಗಳನ್ನು ಕೊಂಡಾಡಿ ಭಾಷಣವಿತ್ತರು. ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನ್:—ಇದರ ಎರಡನೇ ಪದವಿದಾನ ಸಮಾರಂಭವು ತಾ 2ನೇ ಅಪರಾಹ್ನ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜರಗಿತು. ಮದ್ರಾಸ್ ಸರಕಾರದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ ಎ. ಬಿ. ಶೆಟ್ಟರು ಅಭಿಭಾಷಣವಿತ್ತರು. ಎಕೆಡೆಮಿಯ ತರಗತಿಗಳಲ್ಲಿ ಪ್ರಥಮ ತೇರ್ಗಡೆ ಹೊಂದಿದ ಬೇಂಕಿಂಗ್ ವಿದ್ಯಾರ್ಥಿಗಳಿಗೆ, ಎಸ್ಸೋಸಿಯೇಟ್, ಫೆಲ್ಲೋಗಳಿಗೆ ಯೋಗ್ಯತಾಪತ್ರಗಳನ್ನು ವಿತರಣೆಮಾಡಲಾಯಿತು. ಶ್ರೀ ಶೆಟ್ಟರು ತಮ್ಮ ಅಭಿಭಾಷಣದಲ್ಲಿ ಎಕೆಡೆಮಿಯು ಸಕಾಲದಲ್ಲಿ ಅಗತ್ಯವಾದ ವಿದ್ಯಾಪ್ರಚಾರ ಕೈಕೊಂಡಿರುವ, ಔದ್ಯೋಗಿಕ ಶಿಕ್ಷಣದ ಆವಶ್ಯಕತೆ ಆರ್ಥಿಕ ಅಭಿವೃದ್ಧಿಗೆ ಕೈಗಾರಿಕೆಯ ಜೋಡಣೆ, ಯುದ್ಧಾನಂತರದ ಸಂಘಟಣೆ ಎಕೆಡೆಮಿಯು ಕಲಾ ಕೈಗಾರಿಕೆ ಮೊದಲಾದ ಔದ್ಯೋಗಿಕ ಶಿಕ್ಷಣದ ಮಹಾ ಸಂಸ್ಥೆಯಾಗುವ ಮಹದಾಸೆ, ಯಶಸ್ವಿಕ, ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಹಿತಬೋಧೆಗಳನ್ನೊಳಗೊಂಡ ಸುರಸ, ಚತುರ ಸಾಹಿತ್ಯ ಶೈಲಿಯ ಭಾಷಣಮಾಡಿದರು. ಒಟ್ಟು 41 ಫೆಲ್ಲೋ ಮತ್ತು 64 ಎಸ್ಸೋಸಿಯೇಟ್ ಯೋಗ್ಯತಾಪತ್ರಗಳು ವಿತರಣ ಮಾಡಲಾದವು. ಡಾಕ್ಟರ ಮಾಧವಪೈಗಳು ತಮ್ಮ ಐಚ್ಛಿಕತೆಯಿಂದ ಸ್ವಾನುಭವದಿಂದ ದೇಶದ ತರುಣ ವಿದ್ಯಾರ್ಥಿಗಳೊಳಗೆ ತೇರ್ಗಡೆ ಹೊಂದದೆ ಶಾಲಾ ಕಾಲೇಜು ಯುನಿವರ್ಸಿಟಿ ವಿದ್ಯಾಭ್ಯಾಸ ಮಾಡಲಾಗದೆ ಕಷ್ಟಕ್ಕೆ ಗುರಿಯಾಗಿ ತಂತಮ್ಮ ಜೀವನ ನಿರ್ವಾಹಕ್ಕೆ ಗತಿಯಿಲ್ಲವೆನ್ನುವ ನರಳುವ ಕೆಲವರನ್ನಾದರೂ ಈ ಎಕೆಡೆಮಿಯ ಮೂಲಕ ನಾನಾ ಔದ್ಯೋಗಿಕ ಕಲಾ ಕೈಗಾರಿಕೆ ಶಿಕ್ಷಣದ ಯೋಜನೆ ಮಾಡಿದ್ದು ಎರಡು ವರ್ಷಗಳೊಳಗೆ ಶ್ರೇಯಸ್ಸಿಗೆ ಪಾತ್ರವಾದುದು ಸ್ತುತ್ಯ. ಎಕೆಡೆಮಿಯ ಧ್ಯೇಯ ಅನುಭವದ ಪರಿಚಯ ಮಾಡಿ ನವ್ಯ ಪ್ರಾಂತ್ಯದ ನಾನಾ ಕಡೆಗಳಿಗೆ ಪ್ರವಾಸ ಕೈಕೊಳ್ಳಲು ಎಕೆಡೆಮಿಯು ಮಾಡಿರುವ ಉದ್ಯಮದಲ್ಲಿ ವಿದ್ಯಾಭಿಮಾನಿಗಳು ಪ್ರೋತ್ಸಾಹಿಸುವವರಾಗಿ ಆಶಿಸಲಾಗುತ್ತದೆ.

ರೇಶನಿಂಗ್ ಜ್ಯಾರಿಗೆ ಬರುವ ಮೊದಲು ಮಹಾಜನರು ಗಮನಿಸತಕ್ಕ ಪ್ರಾಮುಖ್ಯ ವಿಷಯಗಳು:- ನ್ಯಾಯವಾಗಿ ದೊರೆಯಬೇಕಾದ ರೇಶನ್ ವಿನಹ ಹೆಚ್ಚಿಗೆ ಪಡೆಯುವರೆ ಪ್ರಯತ್ನಿಸಕೂಡದು. ಒಂದು ತಿಂಗಳ ಗ್ರಾಸದ ಅಕ್ಕಿ ದಾಸ್ತಾನು ಇದ್ದಲ್ಲಿ ಅಂತಹ ವ್ಯಕ್ತಿಯು ರೇಶನ್ ಪಡೆಯುವಂತಾದ್ದು ನ್ಯಾಯನೀತಿಗೆ ವಿರೋಧವಾದದ್ದು. ರೇಶನ್ ಮಾಹಿತಿಯನ್ನೀಯುವಾಗ ಯಾವ ವ್ಯಕ್ತಿಯೇ ಆಗಲಿ, ತನ್ನ ಮನೆಯಲ್ಲಿರುವ ಜನ ಸಂಖ್ಯೆಗೆ ಜಾಸ್ತಿಯಾಗಿ ಅಂಕೆ ಸಂಖ್ಯೆಗಳನ್ನೀಯ ಕೂಡದು. ಅಪ್ರಾಯಸ್ಥರನ್ನು ಪ್ರಾಯಸ್ಥರೆಂದೂ ಹನ್ನೆರಡು ವರ್ಷಗಳೊಳಗಿನವರನ್ನು ಜಾಸ್ತಿ ವಯಸ್ಸಿನವರೆಂದೂ ಹೆಚ್ಚು ರೇಶನ್ ಪಡೆಯುವ ನಿಮಿತ್ತ ಸರ್ವಥಾ ಹೇಳಕೂಡದು. ಯಾರೇ ಆಗಲಿ, ತನ್ನ ಮನೆಯಲ್ಲಿ ಊಟ ಮಾಡದ ನೌಕರರ ಹೆಸರನ್ನು ರೇಶನಿಂಗ್ ಬಗ್ಗೆ ಸೇರಿಸಕೂಡದು. ಊರಲ್ಲಿ ಇಲ್ಲದವರನ್ನು ಸಹ ಲೆಕ್ಕಕ್ಕೆ ಕೂಡಿಸಬಾರದು.- ರೇಶನಿಂಗ್ ಪದ್ಧತಿಯಿಂದ ಖರ್ಚು ಕಡಿಮೆಯಾಗುವುದು ಮಾತ್ರವಲ್ಲದೆ ಕಳ್ಳಸಂತೆಗೂ ಅತ್ಯಧಿಕ ಲಾಭ ಪಡೆಯುವ ಅಭ್ಯಾಸಕ್ಕೂ ಎಡೆ ಸಿಗಲಾರದು. ರೇಶನಿಂಗ್ ಪದ್ಧತಿಯಿಂದ ಸರ್ವರಿಗೂ ಸರಿ ಸಮಾನವಾಗಿ ಅಕ್ಕಿ ದೊರೆಯುವುದು. ಆದುದರಿಂದ ರೇಶನಿಂಗ್ ಯಶಸ್ವಿಯಾಗಲು ಸರಕಾರದೊಂದಿಗೆ ಸರ್ವರೂ ಸಹಕರಿಸಬೇಕಾಗಿದೆ.

ರೇಶನಿಂಗ್ ಜ್ಯಾರಿಗೆ ಬಂದ ನಂತರ ಪಾಲಿಸತಕ್ಕ ವಿಷಯಗಳು— ಒಬ್ಬನ ರೇಶನಿಂಗ್ ಕಾರ್ಡನ್ನು ಇನ್ನೊಬ್ಬನಿಗೆ ಕೊಡುವುದಾಗಲೀ ಒಬ್ಬನ ಕಾರ್ಡನ್ನು ತೆಗೆದುಕೊಂಡು ಇನ್ನೊಬ್ಬನು ರೇಶನ್ ಪಡೆಯುವುದಾಗಲಿ ನ್ಯಾಯ ಬಾಹಿರವಾದುದು. ರೇಶನ್ ಕಾರ್ಡುಗಳು ಸರಕಾರದ ಸೊತ್ತಾದುದರಿಂದ ಅವನ್ನು ಯಾವ ವಿಧದಲ್ಲೂ ಹಾಳಾಗದಂತೆ ಜಾಗರೂಕತೆಯಲ್ಲಿರಿಸತಕ್ಕದ್ದು. ರೇಶನ್ ಕಾರ್ಡಿನಲ್ಲಿಯ ಜನಸಂಖ್ಯೆಯು ಕಡಿಮೆಯಾದರೆ ಕೂಡಲೇ ಆ ವಿಷಯವನ್ನು ರೇಶನಿಂಗ್ ಆಫೀಸರರಿಗೆ ತಿಳಿಸುವುದು. ಮನೆಯಿಲ್ಲದ ನಿರ್ಗತಿಕನ ಕಾರ್ಡನ್ನು ದುರುಪಯೋಗಿಸಕೂಡದು. ರೇಶನ್ ಕಾರ್ಡುಗಳು ಗೈರವಿಲೆಯಾದರೆ ಆ ಕುರಿತು ರೇಶನಿಂಗ್ ಆಫೀಸರರಿಗೆ ಕೂಡಲೇ ಬರೆದುಕೊಳ್ಳುವುದು. ಉಡುಪಿ ಪಟ್ಟಣವನ್ನು ಬಿಟ್ಟು ಪರವೂರಿಗೆ ಹೋದಾಗ ಬಾಬ್ತು ರೇಶನ್ ಪಡೆಯಕೂಡದು. ಒಂದಕ್ಕಿಂತ ಹೆಚ್ಚು ರೇಶನ್ ಕಾರ್ಡುಗಳನ್ನಿಟ್ಟುಕೊಳ್ಳುವುದು ಆಕ್ಷೇಪಕರ ಹಾಗೂ ಶಿಕ್ಷಾರ್ಹವಾದುದು. ಅನಧಿಕೃತ ವ್ಯಾಪಾರಿಗಳಿಂದ ಅಕ್ಕಿಯನ್ನು ಕೊಂಡುಕೊಳ್ಳಕೂಡದು. ರೇಶನ್ ಪಡೆಯುವವರೂ ಅಧಿಕೃತ ವರ್ತಕರೂ ರೇಶನಿಂಗ್ ನಿಯಮಗಳನ್ನು ಅಕ್ಷರಶಃ ಪಾಲಿಸಲುಬದ್ಧರು.

ಅನಾವರಣ ಸಮಾರಂಭ:—ಉಡ್ಪಿ ವೀವರ್ಸ್ ಕೋ ಒಪರೇಟಿವ್ ಸೊಸೈಟಿಯವರು ಸದ್ರಿ ಸೊಸೈಟಿಯ ಪ್ರಾರಂಭದಾರಭ್ಯ ಅಧ್ಯಕ್ಷರಾಗಿದ್ದ ದಿವಂಗತ ಶ್ರೀ|| ಪಿ. ಎ ಪೈಯವರ ಚಿತ್ರದ ಅನಾವರಣವನ್ನು ತಾ. 1-1-43ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜನಾಬ ಹುಸ್ಸೇನ್ ಸಾಹೇಬ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಅನಾವರಣವು ಶ್ರೀ ಪಿ. ಪದ್ಮನಾಭರಾವ್ B. A. B. L. ಇವರಿಂದ ಮಾಡಲ್ಪಟ್ಟಿತು. ದಿವಂಗತರು ವೀವರ್ಸ್ ಸೊಸೈಟಿಗೋಸ್ಕರ ಮಾಡಿದ ಪ್ರಯತ್ನವನ್ನೂ ಉಪಕಾರವನ್ನೂ ಸೊಸೈಟಿಯ ಸೂಕ್ಷ್ಮ ಪರಿಚಯವನ್ನೂ ಸೊಸೈಟಿ ಅಧ್ಯಕ್ಷರು ಮಾಡಿದನಂತರ ಸಭಿಕರಲ್ಲಿ ಕೆಲವರು ದಿವಂಗತರ ಗುಣಗಾನಮಾಡಿ ಮೃತರ ಆತ್ಮಕ್ಕೆ ಚಿರಕಾಲ ಶಾಂತಿ ದೊರೆಯುವಂತೆ ಪ್ರಾರ್ಥಿಸಿಕೊಂಡರು. ಅಧ್ಯಕ್ಷರ ಭಾಷಣದೊಡನೆ ಸಮಾರಂಭವು ಮುಕ್ತಾಯವಾಯ್ತು.

ಕಾರ್ಕಳ:—ಕಾರ್ಕಳ ತಾಲೂಕಿನ ಸಣ್ಣ ದೊಡ್ಡ ಬೇರೆ ಬೇರೆ ಕೇಂದ್ರಗಳಲ್ಲಿ ತಮ್ಮ ಬಿಡುವು ಸಮಯದಲ್ಲಿ ಹಿಂದೀ ಪ್ರಚಾರಮಾಡಿ ದೇಶ ಸೇವೆ ಮಾಡಲಿಚ್ಛಿಸುವ ಕಾರ್ಯಕರ್ತರು ಬೇಕಾಗಿದ್ದಾರೆಂದೂ ಅವರಿಗೆ ನಿಯಮಾನುಸಾರ ಪರಿಶ್ರಮಕ್ಕೆ ತಕ್ಕ ಪಾರಿಶ್ರಮಿಕವನ್ನು ಸಂಭಾವನೆಯಿಟ್ಟು ಕೊಡಲಾಗುತ್ತದೆಂದೂ ವಿವರಗಳಿಗಾಗಿ ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘದೊಡನೆ ಪತ್ರವ್ಯವಹಾರ ಮಾಡಬಹುದೆಂದೂ ಕಾರ್ಯದರ್ಶಿ ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ.

ಕಾಮ್ರೇಡ್, ರಾಯರ ಕರ್ನಾಟಕ ಸಂಚಾರ:—ಕಾ. ಎಂ. ಎನ್. ರಾಯ್ ಮತ್ತು ಎಲೆನ್‌ರಾಯ್ ಇವರು ಜನವರಿ ಎರಡನೇ ವಾರದಲ್ಲಿ ಧಾರವಾಡ ಮತ್ತು ಹುಬ್ಬಳ್ಳಿಗೆ ಬರುವವರಿದ್ದಾರೆ. ಧಾರವಾಡದಲ್ಲಿ ರ‍್ಯಾಡಿಕಲ್ ಡೆಮೊಕ್ರೆಟಿಕ್ ಪಾರ್ಟಿ, ರೆನೆಸಾನ್ಸ್ ಕ್ಲಬ್ ಮತ್ತು ರ‍್ಯಾಡಿಕಲ್ ಸ್ಟುಡೆಂಟ್ಸ್ ಯೂನಿಯನ್ ಇವುಗಳ ನೇತೃತ್ವದಲ್ಲಿ ಕಾಂ| ರಾಯ್‌ರವರ ಅನೇಕ ವ್ಯಾಖ್ಯಾನಗಳು ಜರಗಲಿವೆ. ಇಡೀ ಕರ್ನಾಟಕ ಪ್ರವಾಸಕ್ಕೆ ಕೊಳ್ಳುವುದು ಅವರಿಗೆ ಅಶಕ್ಯವಿದ್ದುದರಿಂದ ಧಾರವಾಡ, ಹುಬ್ಬಳ್ಳಿ ಮತ್ತು ಬೆಳಗಾಂವ ಇವುಗಳನ್ನಷ್ಟೇ ತಮ್ಮ ಕಾರ್ಯಕ್ರಮದಲ್ಲಿ ಇಟ್ಟುಕೊಂಡಿದ್ದಾರೆ. ಅವರು ಈಗ ಅಖಿಲಭಾರತ ಕಾಮಗಾರ ಪರಿಷತ್ತಿಗಾಗಿ ಮುಂಬಯಿಗೆ ಬಂದಿರುವರು.

ರಾಯ್ ದಂಪತಿಗಳೊಡನೆ ಕಾಂ. ಬ್ಯಾರಿಸ್ಟರ್ ತಾರ್ಕುಂಡೆ, ವಿ. ಬಿ. ಕರ್ಣಿಕ್, ಮಣಿಬೆನ್ ಕಾರಾ, ಮೊದಲಾದವರೂ ಬರಲಿರುವರು.

ಕರ್ನಾಟಕ ಪ್ರಾಂತೀಯ ರ‍್ಯಾಡಿಕಲ್ ಡೆಮೊಕ್ರೆಟಿಕ್ ಪಾರ್ಟಿಯ, ಕಾರ್ಯಕಾರಿ ಮಂಡಲದ ಸಭೆಯು ಅದೇ ಸಮಯದಲ್ಲಿ ಧಾರವಾಡದಲ್ಲಿ ಕೂಡಲಿರುವುದು. ಕರ್ನಾಟಕದ ಎಲ್ಲ ಭಾಗಗಳಿಂದಲೂ ಪಾರ್ಟಿಯ ಮುಖಂಡರು ಬರಲಿದ್ದಾರೆ.

ಇನ್ನೂ

'ನವಯುಗ'ದ ಚಂದಾ ಹಣ ಬಾಕಿ ಇರುವವರು ಅದನ್ನು ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸುತ್ತೇವೆ.

ಮೆನೇಜರ್.

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results
Dose: For adults:- 3 to 5 drops 2 to 3 times a day
with the decoction of cloves or ajwan.
For Children: 1 to 2 drops with the said decoction
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ
ನೂ ಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 3ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು
ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ
ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ
ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

GREETINGS

We wish a happy and prosperous
New Year 1944
to
all our share-holders, depositors
customers and well-wishers.

**The Pangal Nayak Bank
Limited, Udipi.**

ನಮ್ಮ ಸುವ
ರ್ಣೋತ್ಸವ
ಸಂಚಿಕೆಗೆ
ದಯಮಾಡಿ
ನಿಮ್ಮ

ಸಹೃದಯ ಸಂದೇಶವನ್ನು
ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ
**ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲಾರುಗಳೂ ಪ್ರಕಟ
ವಾಗುತ್ತವೆ.**
ವಾರ್ಷಿಕ ಚಂದಾ
ರೂ. **1-8-0** ಮಾತ್ರ
ಬೈಂಡು ಮಾಡಿದ ಪ್ರಥಮ
ಸಂಪುಟಕ್ಕೆ ರೂ. **2-8-0**
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಜನಪ್ರಿಯವಾದ ಕಿರಿಯರ ಪ್ರಪಂಚದ ಪ್ರಕಟಣೆಗಳು

ಮಧುವನ	೨	೮	೦	ರಂಗಭೂಮಿ	೦	೮	೦
ಪ್ರಕಾಶ	೧	೧೫	೦	ಸಂಶಯ ಪಿಶಾಚಿ	೦	೮	೦
ಭಾರತೀಯ ಕತೆಗಳು	೦	೧೪	೦	ಸೇವಾಪಥ	೦	೮	೦
ನಾರೀ ಹೃದಯ	೦	೧೪	೦	ಕುಶಲವ	೦	೫	೦
ದೇಶಭಕ್ತ	೦	೧೪	೦	ಹೆಂಡ್ತಿ ಗಂಡನಾದರೆ	೦	೪	೦
ಕಾವ್ಯ ಸಾಮ್ರಾಜ್ಯ	೦	೧೨	೦	ಪುರುಷವಧು	೦	೪	೦
ಪ್ರೇಮ ವಿಜಯ	೦	೧೨	೦	ಸ್ವತಂತ್ರ ಜೀವನೋಪಾಯ	೦	೩	೦
ವ್ಯಭಿಚಾರಿಣಿ ಯಾರು	೦	೧೨	೦	ನಾಡಕತೆಗಳು	೦	೩	೦
ನಂದಾದೀಪ	೦	೧೦	೦	ಮುಂದಿನ ದೇವರು	೦	೩	೦
ಸನ್ಯಾಸಿಯ ಸೋಗಿನಲ್ಲಿ	೦	೮	೦	ನೂರ ಪ್ರಹಸನಗಳು	೦	೧೪	೦

ಕಿರಿಯರ ಪ್ರಪಂಚ, ಉಡುಪಿ.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:— ಕುಂಬರವಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್ಸ. ಆರ್. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

The Moolky Bank, Ltd.,
MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

**(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ
1929ರಲ್ಲಿ ಸ್ಥಾಪಿತವಾದದ್ದು.)**

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager
ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ನವಜೀವಾತು ಎಂಬ ಸೂತಿಕಾರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಟಿನ್ನಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೮೦ ದಿವಸಗಳಿಗೆ ಬರುವವು, ಅಂದರೆ ಕೇವಲ ೮ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ.**

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಉಡುಪಿ. : : : : ಮಂಗಳೂರು.

THE VIJAYA BANK, LTD.,
Head office: MANGALORE.

Glad to announce that a Branch of the Bank will be opened at PUTTUR, shortly.

ನಮ್ಮ ಬ್ಯಾಂಕಿನ ಶಾಖೆಯೊಂದು ಸದ್ಯವೇ ಪುತ್ತೂರಲ್ಲಿ ತೆರೆಯಲ್ಪಡುವುದು.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ ಕಂಪನಿ** 1926

18 ಬಲ್ಮಠ ರಸ್ತೆ, ಮಂಗಳೂರು.
ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.
Crown Rubber Stamp Co. 18 Balmat Road, MANGALORE.
Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. India

Regd. No. M 3618.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೨೧

FOUNDER
Sri. A. B. Shetty.

Vol. 24
No. 21

NAVAYUGA— Kannada Weekly —UDIPI, S. I.

ಉಡುಪಿ 27—1—1944 ● ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ
ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ. 1-12-0. ಟ. ಖ. 0-1-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಿರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ
ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-14-0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

The Canara Mutual Assurance Co., Ltd.,

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

UDIPI
6-1-1944

T. R. A. Pai,
Managing Director.

Hearty New Year Greetings

To

All our Policy-holders, Agents, Medical Examiners and well-wishers.

We look forward to continue to serve every one of our clients in the New Year and Every Year to come.

KOCHIKAR BROTHERS LTD.,

Branch Secretaries for Madras Prcy.
Chief Agents for South India.

THE BOMBAY LIFE ASSURANCE CO., LTD.

"Bombay Life" Building,
UDIPI.

Bombay. Madras, Calicut, Manglore. Bangalore, Madura, Trivandrum. And Agencies all over South India.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಿಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ್ನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ: ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೇಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

IN APPRECIATION

1943—1944

Not because it is a time honoured custom, but because we would feel ungrateful if we did not express our appreciation to those whose loyalty, friendship and patronage make our success possible.

To our thousands of customer friends, the directors and staff of the Canara Bank send their sincere greetings with the wish that the New Year will bring to you continued prosperity and pleasure and the assurance of our continued efforts to render every assistance in the realisation of your desire.

ESTD. 1906

Canara Bank
Limited.

ದ. ಕನ್ನಡದಲ್ಲಿ ರಾಜಗೋಪಾಲಾಚಾರ್ಯರು.

ಮದ್ರಾಸ್ ಪ್ರಾಂತದ ಮಾಜಿ ಪ್ರಧಾನರಾದ ಶ್ರೀ| ಸಿ. ರಾಜಗೋಪಾಲಾಚಾರ್ಯರು ತಾ ೧೩ರಂದು ಮೈಲ್ ಬಂಡಿಯಲ್ಲಿ ಬಂದು ಕಾಸರಗೋಡಿನಲ್ಲಿಳಿದರು. ಸ್ಟೇಶನಿನಲ್ಲಿ ಸ್ವಾಗತವಿತ್ತು.

ಹರಿಜನ ಕೊಲೋನಿ ಶಂಕು ಸ್ಥಾಪನೆ.

ಅಲ್ಲಿಂದ ಕುಂಬಳೆಗೆ ಸಮೀಪದ ಎಡನಾಡು ಗ್ರಾಮದ ಶೀತಂಗೊಳಿಗೆ ಬಂದು ರಾತ್ರಿ 8 ಗಂಟೆಗೆ ಅಲ್ಲಿ ಹರಿಜನ ಸೇವಕ ಸಂಘದವರು ಸ್ಥಾಪಿಸಲಿರುವ ಹರಿಜನ ಕೊಲನಿಯ ಶಂಕು ಸ್ಥಾಪನೆ ಮಾಡಿದರು. ಅಂದಿನ ಸಭೆಗೆ ಶ್ರೀ| ಎ. ಬಿ. ಶೆಟ್ಟರು ಅಧ್ಯಕ್ಷರಾಗಿದ್ದರು. ತಾಲೂಕು ಹ| ಸೇ| ಸಂಘದ ಉಪಾಧ್ಯಕ್ಷ ಶ್ರೀ| ಬಿ. ಎಸ್ ಕಕ್ಕಿಲ್ಲಾಯರು ಸ್ವಾಗತ ಭಾಷಣ ಮಾಡಿದರು. ರಾಜಾಜಿಯವರ ಭಾಷಣವನ್ನು ಜಿಲ್ಲಾ ಹರಿಜನ ಸೇವಕರಾದ ಶ್ರೀ. ಎನ್. ಎಸ್. ಕಿಲ್ಲೆಯವರು ಭಾಷಾಂತರಿಸಿದರು. ರಾಜಾಜಿಯವರು ಹರಿಜನರಿಗೂ, ಕೆಲಸಗಾರರಿಗೂ ಪ್ರೋತ್ಸಾಹಪರ ಸಲಹೆಯಿತ್ತರು. ಕಾಸರಗೋಡಿನ ಇಬ್ಬರು ಮುನ್ಸೀಫರೂ, ಹಲವು ಮುಖಂಡರೂ, ವಕೀಲರೂ ಬಂದಿದ್ದರು. ಆಸುಪಾಸಿನ ಜನರೂ ಕಿಕ್ಕಿರಿದ್ದರು. ಅಖಿಲ ಭಾರತ ಹರಿಜನ ಸೇವಕ ಸಂಘದ ಶ್ರೀ ಥಕ್ಕರ್ ಬಾಪಾ ಹಾಗೂ ಮಂಗಳೂರಿನ ಡಾ| ಅಡಪ್ಪರೇ ಮೊದಲಾದವರಿಂದ ಸಂದೇಶಗಳು ಬಂದಿದ್ದವು. ರಾಜಾಜಿಯವರು ಈ ಕಾಲನಿಗೆ ಥಕ್ಕರ್ ಬಾಪರ ಹೆಸರಿಡಬೇಕೆಂದು ಸೂಚಿಸಿದ್ದನ್ನು ಒಪ್ಪಿಕೊಳ್ಳಲಾಯಿತು. ಡಾ| ಪಿ. ಎನ್. ಭಟ್ಟರು ವಂದನಾರ್ಪಣೆ ಮಾಡಿದರು. ಇಲ್ಲಿಗೆ ತಾಲೂಕಿನ ಬೇರೆ ಬೇರೆ ಕಡೆಗಳಿಂದ ಹರಿಜನರ ಮತ್ತು ಕೆಲಸಗಾರ ಜಾಥಾಗಳು ಬಂದಿದ್ದುವು. ರಾತ್ರಿ ರಾಜಾಜಿಯವರು ಮಾಯಿಪ್ಪಾಡಿ ಅರಮನೆಗೆ ತೆರಳಿ ಅಲ್ಲಿ ವಿಶ್ರಾಂತಿ ತೆಗೆದುಕೊಂಡರು. ಅಲ್ಲಿ ರಾತ್ರಿ ಹಲವು ಸಾರ್ವಜನಿಕ ಕೆಲಸಗಾರರಿಗೆ ಮಿಶ್ರ ಭೋಜನದ ವ್ಯವಸ್ಥೆಯಿತ್ತು. ಪ್ರತಿಯೊಂದಕ್ಕೆ ರೂ. 150ರ ಗುಡಿಸಲುಗಳನ್ನು ಕಟ್ಟಿಸಲು 8 ಜನರೂ ರೂ. 250ರ ವಂತಿಗೆ ಕೊಡಲು3ಜನರೂ ಒಪ್ಪಿದರು.ಶ್ರೀ ಕುಂಬ್ಳೆ ಗಣಪತಿ ನಾಯಕರು ತನ್ನ ಕಾರನ್ನು ಉಪಯೋಗಿಸಲು ಕೊಟ್ಟಿದ್ದರು.ಶ್ರೀ.ಎನ್. ಎಸ್. ಕಿಲ್ಲೆಯವರ ಕಾಲಿಗೆ ಈ ದಿನ ರಾತ್ರಿ ಒಂದು ಹಾವು ಕಚ್ಚಿತೆಂದೂ, ಆ ಮೇಲೆ ಅದು ನಿಷರಹಿತ ಹಾವೆಂದು ತಿಳಿದುಬಂದಿರುವುದಾಗಿಯೂ ಅವರು ಕುಂಬಳೆಯಲ್ಲೇ ಇರುವರಾಗಿಯೂ ಸುದ್ದಿ.

ಬಿಸೆಂಟ್ ಬಾಲಿಕಾ ಶಾಲೆಯಲ್ಲಿ.

ತಾ. ೧೪ರಂದು ರಾಜಾಜಿಯವರು ಕುಂಬಳೆಯಲ್ಲಿ ರೈಲು ಹತ್ತಿ ಮಂಗಳೂರಿಗೆ ಬಂದರು ರೈಲ್ವೇ ಸ್ಟೇಶನಿನಲ್ಲಿ ಸ್ವಾಗತ ಪಡೆದು ೧೦-೩೦ ಗಂಟೆಗೆ ಬಿಸೆಂಟ್ ಹೈಸ್ಕೂಲಿನ ಕಲಾಪ್ರದರ್ಶನದ ಉದ್ಘಾಟನೆ ಮಾಡಿದರು ಕಲಾ ಪ್ರದರ್ಶನದಲ್ಲಿ ಅನೇಕ ಕೈಗಾರಿಕೆ, ಕಸೂತಿ, ಭೂಗೋಲ, ಐತಿಹಾಸಿಕ, ವೈಜ್ಞಾನಿಕ ವಿಷಯಗಳು ಇದ್ದವು. ಹಲವು ಸಂಸ್ಥೆಯರು ಕಲಾ ಪ್ರದರ್ಶನಕ್ಕೆ ಸಾಧನ ಸಾಮಗ್ರಿ ಕಳುಹಿಸಿದ್ದರು. ಪ್ರಾರಂಭದಲ್ಲಿ ಬಾಲಿಕೆಯರಿಂದ ಪ್ರಾರ್ಥನೆ ಸ್ವಾಗತ ಗೀತೆಗಳಿದ್ದವು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಶೀಲಾ ಚೌಟರು ಸ್ವಾಗತ ಭಾಷಣ ಮಾಡಿದರು. ರಾಜಾಜಿಯವರು ತಮ್ಮ ಭಾಷಣದಲ್ಲಿ, ಲೋಕ ಸೇವೆಗೆ ಉಪಾಧ್ಯಾಯ ವೃತ್ತಿ ಮೇಲೆಂದೂ, ದಕ್ಷಿಣ ಕನ್ನಡವು ಶಿಕ್ಷಣದಲ್ಲಿ ಅದರಲ್ಲೂ ಸ್ತ್ರೀ ವಿದ್ಯಾಭ್ಯಾಸದಲ್ಲಿ ಮುಂದುವರಿದಿದೆಯೆಂದೂ ಹೇಳಿದರು. ವಿದ್ಯಾರ್ಥಿನಿಯರ ವ್ಯಾಯಾಮ ಪ್ರದರ್ಶನವಾಯಿತು.

ಈ ಕಾರ್ಯಕ್ರಮದ ನಂತರ ರಾಜಾಜಿ ಭಗಿನೀ ಸಮಾಜ, ಈಶ್ವರಾನಂದ ಮಹಿಳಾ ಸೇವಾಶ್ರಮಗಳನ್ನು ಸಂದರ್ಶಿಸಿದರು. ಸಂಜೆ ಡಿ ಸಿ ಎಂ. ಮತ್ತು ಹರಿಜನ ಸೇವಕ ಸಂಘದವರು ಸತ್ಕಾರ ಕೂಟವನ್ನೇರ್ಪಡಿಸಿದರು.

ಸಂಜೆ ಬಿಸೆಂಟ್ ಮಹಿಳಾ ಹೈಸ್ಕೂಲಿನ ರಜತೋತ್ಸವವು ನೆರವೇರಿತು. ರಾಜಾಜಿಯವರು ಅಧ್ಯಕ್ಷತೆ ವಹಿಸಿದ್ದರು. ಬಾಲಿಕೆಯರಿಂದ ಪ್ರಾರ್ಥನೆ ಸ್ವಾಗತಗಳಾದ ಮೇಲೆ, ಶ್ರೀ| ಏಕಾಂಬರ ರಾಯರು ದೇಶದ ನಾನಾ ಭಾಗಗಳಿಂದ, ಬಂದ ಸಂದೇಶಗಳನ್ನೋದಿದರು. ಶ್ರೀಮತಿ ಯು. ಪಾರ್ವತಿ ಬಾಯಿಯವರು ಶಾಲಾ ಶ್ರೇಯ ಪ್ರಾರ್ಥನೆಯ ಭಾಷಣವಿತ್ತು, ಶಾಲೆ ಪ್ರಾರಂಭವಾದ ಕಾಲದಿಂದ ಅದರ ಚಟುವಟಿಕೆಗಳನ್ನು ಪ್ರಶಂಶಿಸಿದರು. ಶ್ರೀ.ಎ.ಶ್ರೀನಿವಾಸ ಪೈಗಳು1908ರಿಂದ ಈ ಶಾಲೆ ಪ್ರಾರಂಭವಾದಂದಿನಿಂದ ಶಾಲೆಯೊಡನೆ ತನಗಿದ್ದ ಸಂಬಂಧ, ಶಾಲೆಯ ಪ್ರಗತಿ ವಿಚಾರ ಭಾಷಣವಿತ್ತರು. ಶ್ರೀ. ಎಂ. ಎಸ್. ಮಾಧವ ರಾಯರು ಶಾಲೆಯ ೨೫ ವರ್ಷಗಳ ಜೀವನದ ವರದಿಯೋದಿ ಶಾಲೆಗೆ ಧನ ಸಹಾಯ ಕೇಳಿದರು. ಡಾ| ಕೇಶವ ಪೈಗಳು ಮಾತನಾಡಿ ಮಹಿಳೆಯರ ರಾಷ್ಟ್ರೀಯ ವಿದ್ಯಾವರ್ಧಕ ಸಮಿತಿಯವರು ಈಗ ಈ ಶಾಲೆ ನಡೆಸುತ್ತಿರುವ ವಿಚಾರವಾಗಿ, ಬಾಲಿಕೆಯರು ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯಿಂದಾಗಿ ಅವನತಿ ಹೊಂದಿದ ವಿಚಾರ ತಿಳಿಸಿ, ನಮ್ಮ ದೇಶದ ಬಾಲಿಕೆಯರಿಗೆ ನಮ್ಮ ದೇಶದ ಸಂಸ್ಕೃತಿಯನ್ನು ಪದೇಶಿಸುವ ಶಿಕ್ಷಣ ಬೇಕೆಂದು ತಿಳಿಸಿದರು.

ಆ ಮೇಲೆ ರಾಜಾಜಿಯವರು ಮಾತನಾಡಿ ಶಾಲಾ ಶ್ರೇಯ ಪ್ರಾರ್ಥನೆಯ ಭಾಷಣ ಮಾಡಿದವರನ್ನು ಹೊಗಳಿ, ಈ ಶಾಲೆ ವಿಷಯ ಮಹಿಳೆಯರು ಮಾತ್ರವಲ್ಲ ತರುಣರೂ ಆಸಕ್ತಿಯಿಂದಿರಬೇಕೆಂದೂ, ಏಕೆಂದರೆ ಅವರಿಗೆ ಯೋಗ್ಯರಾದ ಹೆಂಡಂದಿರು ಇಲ್ಲಿ ಸಿಗುವರೆಂದೂ ಹೇಳಿ, ಈ ಶಾಲೆಯ ಉನ್ನತಿಗೆ ಅವರು ತಮ್ಮ ಹಣದಲ್ಲಿ ಒಂದು ಪಾಲು ಮೀಸಲಿರಿಸಬೇಕೆಂದೂ, ಬೇರೆ ಹಲವು ಕಡೆಗಳಿಗಿಂತ ಇಲ್ಲಿನ ಜನರ ಶಾಲೆಗಳ ಆಡಳಿತ ಚೆನ್ನಾಗಿದೆಯೆಂದೂ ಹೇಳಿ ವಿದ್ಯಾ ಸಂಸ್ಥೆ ಸರಕಾರದ 'ರಿಕಗ್ನಿಶನ್' ಪಡೆವುದಕ್ಕಿಂತಲೂ ಜನತೆಯ 'ರಿಕಗ್ನಿಶನ್' ಪಡೆವುದೇ ಮೇಲೆಂದೂ ಸರಕಾರದಿಂದ 'ರಿಕಗ್ನಿಶನ್' ಪಡೆದ ಶಾಲೆಗಳಲ್ಲಿ ವಿದ್ಯಾರ್ಥಿನಿಯರಲ್ಲಿ ಹಾಗೂ ಉಪಾಧ್ಯಾಯಿನಿಯರಲ್ಲಿ ಕ್ರಿಯಾಶಕ್ತಿ ಹಾಗೂ ಚಟುವಟಿಕೆ ಕುಂದುವುದೆಂದೂ ತಿಳಿಸಿ ನಮ್ಮ ದೇಶಕ್ಕೆ ರಾಷ್ಟ್ರೀಯ ಶಿಕ್ಷಣವು ಅಗತ್ಯವೆಂಬುದನ್ನು ವಿವರಿಸಿ, ಇಂದು ಮಹಿಳೆಯರ ಶಿಕ್ಷಣದ ರೀತಿ ಕೆಟ್ಟು ಹೋಗಿದೆಯೆಂಬುದನ್ನು ವಿಮರ್ಶಿಸುತ್ತಾ 'ಹಿಂದಿನ ಆ ಸೀತೆಯರು, ಆ ಗಾರ್ಗಿಯರು ಈಗ ಎಲ್ಲಿ?' ಎಂದು ಪ್ರಶ್ನಿಸಿ, ಈ ಸಂಸ್ಥೆ ಕ್ರೈಸ್ತ ಕೊನ್ವೆಂಟ್‌ಗಳ ವಿರುದ್ಧ ಹಿಂದೂ ಧರ್ಮದ ಸಂಸ್ಥೆಯಾಗಿ ಸ್ಪರ್ಧೆ ಮಾಡುವ ಉದ್ದೇಶವಿಟ್ಟುಕೊಳ್ಳುವುದು ಸರಿಯಲ್ಲವೆಂದೂ, ಭಾರತದ ಯಾವುದೇ ಮತ ಧರ್ಮಾನುಯಾಯಿಗಳಿರಲಿ, ಎಲ್ಲರ ಸಂಸ್ಕೃತಿಯೂ ಒಂದೇ ಇರುವುದೆಂದೂ ಸಂಸ್ಕೃತಿ ತಲೆ ನೂರು ದಾಟಿದಂತೆ ಹಳೆಯದರೊಡನೆ ಹೊಸದು ಸೇರಿ ಹೋಗುವುದೆಂದೂ ವಿವರಿಸಿ, ಭಾರತದ ರಾಷ್ಟ್ರೀಯ ಸಂಸ್ಕೃತಿಯು ಅಖಂಡ ಅಭೇದ್ಯವಾಗಿ ಏಕ ಸಂಸ್ಕೃತಿಯೆಂಬುದನ್ನು ತಿಳಿಸಿ ಹೇಳಿದರು.

"ಮಹಿಳೆಯರ ಶಿಕ್ಷಣಕ್ಕೆ ನಾವು ಪ್ರೋತ್ಸಾಹ ಕೊಡದಿದ್ದರೆ ನಮಗೆ ಉನ್ನತಿಯಿಲ್ಲ. ಸಂಸ್ಕೃತಿ ಮಹಿಳೆಯರ ಕೈಯಲ್ಲಿದೆ. ಮಹಿಳಾ ಶಿಕ್ಷಣವನ್ನು ನಾವು ಅಲ್ಲಗಳೆದರೆ ಸಂಸ್ಕೃತಿಯನ್ನೂ ಕಳಕೊಳ್ಳುವೆವು. ಬಂಜರು ಬಿದ್ದ ಬಂಡೆಗಲ್ಲಿನಂತಿರುವ ನಮ್ಮ ಸಮಾಜದಲ್ಲಿ ಆ ಸಂಸ್ಕೃತಿಯನ್ನು ನೆಟ್ಟು ಬೆಳೆಸಿ ಹಸನಾಗಿ ಮಾಡಬೇಕು." ಎಂದು ರಾಜಾಜಿ ಹೇಳಿದರು. ಕೊನೆಯಲ್ಲಿ ರಾಜಾಜಿಯವರು ಮಾತೃ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕಾದ ವಿಚಾರ ವಾದಿಸಿ ಇಂದಿನ ವಿಶ್ವವಿದ್ಯಾನಿಲಯದ ಶಿಕ್ಷಣ ಪದ್ಧತಿ ಹೇಗೆ ಅಕ್ರಮವಾಗಿದೆಯೆಂದು ವಿವರಿಸಿ ವಿದ್ಯಾವತಿಯರಾದ ಮಹಿಳೆಯರೇ ಸೇರಿ ತಮಗೆ ಬೇಕಾದ ಶಿಕ್ಷಣ ಯಾವುದೆಂಬುದನ್ನು ನಿಶ್ಚಯಿಸಬೇಕೆಂದು ಉಪದೇಶಿಸಿದರು.

ಶ್ರೀ. ಎ. ಬಿ. ಶೆಟ್ಟರು ಕೃತಜ್ಞತೆ ಹೇಳಿದ ಬಳಿಕ ವಿವಿಧ ವಿನೋದಾವಳಿಗಳಿಂದ ರಜತ ಮಹೋತ್ಸವವು ಕೊನೆಗೊಂಡಿತು.

Notice

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. A. 1440/43

O. S. 553/1938

ಮಂಜಪ್ಪ ಆಚಾರಿ-ಅರ್ಜಿದಾರ ವಾದಿ.

1 ಪುಟ್ಟಂಮ 2 ಅನಂತ ಆಚಾರಿ 3 ರಾಮಯಾಚಾರಿ 4 ನಾರಾಯಣ ಆಚಾರಿ (ಸಪ್ಲಿಮೆಂಟಲ್)-ಎದ್ರಿರು.

೩ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ-

ಮೇಲ್ಕಂಡ ವ್ಯಾಜ್ಯದಲ್ಲಿ ಆದ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಜವಾಬ್ದಾರಿ ಆಸ್ತಿ ಏಲಮಿಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತಲೂ ೩ನೇ ಪ್ರತಿವಾದಿ ರುದ್ರಪ್ಪ ಆಚಾಯು ಮೃತಪಟ್ಟಿರುವದ್ರಿಂದ ನಿಮ್ಮನ್ನು ಅವನ ವಾರಿಸ್ದಾರನಾಗಿ ಕಕ್ಷಿಯಲ್ಲಿ ಕೂಡಿಸಬೇಕೆಂತಲೂ ಸದ್ರಿ ಕೋರ್ಟಿ R. I. A. 1441/43ನೇ ಅರ್ಜಿ ಕೂಡಾ ವಾದಿಯು ದಾಖಲುಮಾಡಿರುತ್ತಾನೆ. ಆದ್ರಿಂದ ನಿಮ್ಮನ್ನು ಕಕ್ಷಿಯಲ್ಲಿ ಕೂಡಿಸುವ ಮಟ್ಟಿಗೂ ವ ಫೈನಲ್ ಡಿಕ್ರಿ ಕೊಡಿಸುವ ಮಟ್ಟಿಗೂ ನಿಮಗೆ ಆಕ್ಷೇಪಣೆ ಇರುವದಾದರೆ ನೀವು ಸದ್ರಿ ಅರ್ಜಿಗಳ ತನ್ನಿಖ್ಯಾದೆಯಾದ ತಾರೀಕು 4-2-1944ಕ್ಕೆ ಈ ಕೋರ್ಟಿ ಮುಂದೆ ಹಗಲು ಘಂಟೆ 10ಕ್ಕೆ ಹಾಜರ್‍ಗಿ ಉದಹರಿಸಿಕೊಳ್ಳತಕ್ಕದ್ದು ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನ ಮಾಡಲಾದೀತು.

ಪುತ್ತೂರು, ತಾ22-1-44 } B. Shivarama Holla, Advocate for petitioner.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ.ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರಮೊದನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವ್ರಮ, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ವರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕ್ಯಾಟೆ ಸಂಗ್ತಿ ಬರದಲ್ಲಿ ತಕ್ಕವಾದ ಔಷಧಿ ಚುನಾಯಿಸಿ ರವಾನಿಸಬಹುದು.

ಕೆಟಲೋಗಿಗೆ ಬರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಉಡುಪಿ ಏಜಂಟರು:- **ನವಭಾರತ ಬುಕ್, ಡಿಪೊ.**

ತಾರುಣ್ಯ

ಕೆಡಿಟ್ಟ್ಯ, ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುತ್ತಮ ಔಷಧಿ.

ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು.

ಪುತ್ತೂರು ಏಜಂಟರು: **ಪೈ ಫಾರ್ಮಸಿ**

ಸ್ಕೌಟ್ ರೇಲಿ.

ರಾಜಾಜಿಯವರು ತಾ. ೧೫ರಂದು ಬೆಳಿಗ್ಗೆ ಸಾಧಕಾಶ್ರಮದಲ್ಲಿ ಪ್ರಾರ್ಥನೆ ಮುಗಿಸಿ, ೯ ಗಂಟೆಗೆ ಕೆನರಾ ಹೈಸ್ಕೂಲಿಗೆ ಬಂದರು. ವಿದ್ಯಾರ್ಥಿಗಳು ಅವರನ್ನು ಅಲ್ಲಿ ಸ್ವಾಗತಿಸಿದರು. ರಾಜಾಜಿಯವರು ಅಲ್ಲಿ ಪದ್ಮಾವತಿ ಅಮ್ಮ ಸ್ಮಾರಕ ಕಟ್ಟಡವನ್ನು ಉದ್ಘಾಟನೆ ಮಾಡಿ ಅವರ ಭಾವಚಿತ್ರದ ಅನಾವರಣವನ್ನೂ ಮಾಡಿದರು. ಆ ಮೇಲೆ ಹಿಂದೂ ಫೆಡರಲ್ ಸ್ಕೂಲ್ಸ್ ಬೋರ್ಡು ಭಗಿನೀ ಸಮಾಜ, ವಿವೇಕಾನಂದ ಸಂಘ, ಡಿ. ಸಿ. ಯಂ. ಹಿಂದೂ ಸೇವಾ ಸಂಘ, ಈಶ್ವರಾನಂದ ಮಹಿಳಾ ಸೇವಾಶ್ರಮ ಮೊದಲಾದವುಗಳ ಮಾನಪತ್ರ ಸ್ವೀಕರಿಸಿದರು. ಮಾನಪತ್ರಗಳಿಗೆ ಉತ್ತರ ಕೊಡುತ್ತಾ ಧಾರ್ಮಿಕ ಶಿಕ್ಷಣ ಶಾಲೆಯಲ್ಲಿ ಬೇಡ, ಮನೆಯಲ್ಲಾಗಲಿ ಎಂದರು. ೧೧ ಗಂಟೆಗೆ ಶಂಕರನಾಡಿಯ ಬಾಲಿಕಾಶ್ರಮವನ್ನು ಸಂದರ್ಶಿಸಿದರು. ಸಂಜೆ ೫ ಗಂಟೆಗೆ ಕೆನರಾ ಹೈಸ್ಕೂಲಿನಲ್ಲಿ ಸ್ಕೌಟ್ ರ್‍ಯಾಲಿ ನಡೆಯಿತು. ನಮ್ಮ ದೇಶದಲ್ಲಿರುವ ಹಲವು ಸ್ಕೌಟು ಸಂಸ್ಥೆಗಳನ್ನು ಒಂದುಗೂಡಿಸುವ ಪ್ರಯತ್ನ ವಿಫಲವಾದ ವಿಚಾರ ವಿಷಾದಿಸಿ, ಅವುಗಳೆಲ್ಲ ಒಂದುಗೂಡಬೇಕಾದುದು ಅವಶ್ಯವೆನ್ನುತ್ತಾ ಈ ಏಕೀಕರಣಕ್ಕೆ ಹೆಚ್ಚಿನ ಪ್ರಯತ್ನ ಮಾಡುವುದು ಅಗತ್ಯವೆಂದರು.

ಗವರ್ನಮೆಂಟ್ ಕಾಲೇಜಿನಲ್ಲಿ.

ಇದೇ ದಿನ ಸಂಜೆ ರಾಜಾಜಿಯವರ ಅಧ್ಯಕ್ಷತೆಯಲ್ಲಿ ಗವರ್ನಮೆಂಟ್ ಕಾಲೇಜ್ ದಿನಾಚರಣೆ ನಡೆಯಿತು. ಪ್ರಾರ್ಥನೆಯ ಬಳಿಕ ಪ್ರಿನ್ಸಿಪಾಲ್ ಶ್ರೀ ಕೆ ಟಿ. ವರ್ಗಿಸರು ರಾಜಾಜಿಗೆ ಪುಷ್ಪಹಾರ ಹಾಕಿ ಕಾಲೇಜ್ ವರದಿಯನ್ನೋದಿದರು. ಕಲೆಕ್ಟರರ ಅಸಿಸ್ಟಾಂಟರಾದ ಶ್ರೀ. ಜಿ. ದತ್ತಾತ್ರೇಯ ರಾಯರು ಕಾಲೇಜಿನ ಶ್ರೇಯ ಪ್ರಾರ್ಥನೆ ಭಾಷಣವಿತ್ತರು. ಇದಕ್ಕೆ ಉತ್ತರವನ್ನು ಕಾಲೇಜ್ ಯೂನಿಯನ್ ಅಧ್ಯಕ್ಷರಾದ ಕುಮಾರಿ ಎಸ್. ಶಾಂತಾದೇವಿಯವರಿತ್ತರು. ಈ ಮಧ್ಯೆ ಅಧ್ಯಕ್ಷರು ಬಹುಮಾನ ಹಂಚಿದರು.

ರಾಜಾಜಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ವಿದ್ಯಾರ್ಥಿಗಳ ಉಲ್ಲಾಸಕ್ಕಾಗಿ ಸಂತೋಷ ಸೂಚಿಸಿ, ಪ್ರಿನ್ಸಿಪಾಲರು ಸಮರ್ಥರೆಂದು ಹೇಳುತ್ತಾ, ಪ್ರಿನ್ಸಿಪಾಲರನ್ನು ಒಳ್ಳೆಯ ಶಿಸ್ತುಪಾಲನೆಯಿಂದ ಸುಖಿಗಳನ್ನಾಗಿ ಮಾಡಿರೆಂದು ಬೋಧಿಸಿ, ಆಧುನಿಕ ಕಾಲದ ಸ್ಫೂರ್ತಿಯ ಕುರಿತು ವಿವರಿಸುತ್ತಾ ಶ್ರೀ ದತ್ತಾತ್ರೇಯರಾಯರ ಭಾಷಣ ಚೆನ್ನಾಗಿದ್ದರೂ ವಿದ್ಯಾರ್ಥಿಗಳಿಗೆ ತಾಳ್ಮೆ ಸಾಲದಾಯಿತೆಂದು ಹಾಸ್ಯಪೂರ್ಣ ಮಾತುಗಳನ್ನಾಡಿದರು. ಮತ್ತು ಮಕ್ಕಳಿಗೆ ತಕ್ಕ ಉಪದೇಶವನ್ನಿತ್ತರು. ಮಂಗಳೂರು ಒಂದು ದೊಡ್ಡ ವಿದ್ಯಾ ಕೇಂದ್ರವೆಂದೂ, ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಮಂಗಳೂರು ಬೇರಾಗುವುದು ಬೇಡವೆಂದೂ, ನೀವು ಸಂಪಾದಿಸಿದ ವಿದ್ಯೆಯಿಂದ ಸಾರ್ವಜನಿಕರ ಸೇವೆ ಮಾಡಬೇಕೆಂದೂ ಬೋಧಿಸಿದರು.

ವಿವಿಧ ವಿನೋದಾವಳಿಗಳಿಂದ ಉತ್ಸವ ಕೊನೆಗೊಂಡಿತು.

ಎಲಾಸಿಯಸ್ ಕಾಲೇಜಿನಲ್ಲಿ.

ಶ್ರೀ ರಾಜಗೋಪಾಲಾಚಾರ್ಯರು ತಾ. ೧೫ರಂದು ಸೈಂಟ್ ಎಲೋಶಿಯಸ್ ಕಾಲೇಜನ್ನು ಸಂದರ್ಶಿಸಿದರು. ಕಾಲೇಜ್ ರೆಕ್ಟರ್ ಮತ್ತು ಪ್ರಿನ್ಸಿಪಾಲ್ ರೆ ಫಾ। ಜೆ. ಎ. ಬಿ. ಕ್ವೈಲೋ ಅವರು ಸ್ವಾಗತಿಸಿದ ಬಳಿಕ ಅವರು 'ಚೆಪಲ'ನ್ನು ಸಂದರ್ಶಿಸಿದರು. 'ಎಕಡಮಿ' ಹಾಲಿನಲ್ಲಿ ಕಾಲೇಜ್ ಯೂನಿಯನ್ ಸದಸ್ಯರನ್ನುದ್ದೇಶಿಸಿ ಭಾಷಣವಿತ್ತರು.

ನೀಲೇಶ್ವರ ಹೈಸ್ಕೂಲಲ್ಲಿ.

ನೀಲೇಶ್ವರಂ ರಾಜಾಸ್ ಹೈಸ್ಕೂಲಿನ ರಜತೋತ್ಸವದಲ್ಲಿ ಅಧ್ಯಕ್ಷತೆ ವಹಿಸಲು ರಾಜಾಜಿಯವರು ತಾ. ೧೬ರಂದು ಬೆಳಗ್ಗಿನ ಮೈಲಿಗೆ ಮಂಗಳೂರಿಂದ ಬಂದರು. ಸ್ಟೇಶನಿನಲ್ಲಿ ಶಾಲಾ ಮುಖ್ಯೋಪಾಧ್ಯಾಯರೂ ಊರ ಪ್ರಮುಖರೂ ಸ್ವಾಗತಿಸಿ ಆನೆಗಳ ಸಮೇತ ಮೆರವಣಿಗೆಯಿಂದ ಕೊಂಡೊಯ್ದರು. ಶಾಲೆಯ ರಜತ ಮಹೋತ್ಸವವು ಈ ದಿನ ಸಂಜೆ ೫॥ ಗಂಟೆಗೆ ಶಾಲಾ ಆವಾರದಲ್ಲಿ ನಿರ್ಮಿಸಿದ ಅಂದವಾದ ಚಪ್ಪರದಲ್ಲಿ ನೆರವೇರಿತು. ಮುಖ್ಯೋಪಾಧ್ಯಾಯರಾದ ಶ್ರೀ. ಕೆ. ರಾಮಕೃಷ್ಣ ರಾಯರು ಸ್ವಾಗತಭಾಷಣ ಮಾಡಿ ಶಾಲೆಯ ಹಿಂದಿನ ವರ್ಷಗಳ ಪ್ರಗತಿಯ ಕುರಿತು ಸಂಕ್ಷಿಪ್ತ ವರದಿಯೋದಿದರು. ಶ್ರೀ. ಕೆ ನಂಬಿಯಾರರು ಸ್ಮಾರಕ ಭಾಷಣವಿತ್ತರು. ಅನಂತರ ಬಹುಮಾನ ವಿತರಣೆ ನಡೆಯಿತು.

ರಾಜಾಜಿಯವರು ತಮ್ಮ ಭಾಷಣದಲ್ಲಿ ಶಾಲೆಯ ಪ್ರಗತಿಗೆ ಕಾರಣರಾದ ಮಹನೀಯರನ್ನು ಅಭಿನಂದಿಸಿ, ಶಾಲೆ ಕಾಲೇಜಾಗಲೆಂದು ಹರಸಿ ನೀಲೇಶ್ವರವು ಕನ್ನಡ ಕೇರಳಗಳ ಗಡಿನಾಡಿನಲ್ಲಿದ್ದು ಈ ಉಭಯ ಪ್ರಾಂತ್ಯಗಳ ಸೌಹಾರ್ದ ಬೆಳೆಸಲು ಸಹಕಾರಿಯಾಗಿ ಇಲ್ಲಿ ಈ ಹೈಸ್ಕೂಲ್ ಶಾಶ್ವತವಾಗಿ ನೆಲೆಸಿದ್ದು ಠಾಗೂರರ ಶಾಂತಿನಿಕೇತನವು ವಿಶ್ವ ಮೈತ್ರಿಯನ್ನು ಬೆಳೆಸಿದಂತೆ ಈ ಹೈಸ್ಕೂಲು ಕನ್ನಡ ಕೇರಳ ಜನಾಂಗಗಳೊಳಗೆ ಮೈತ್ರಿ ಹರಡಲಿ ಎಂದು ಹರಸಿದರು. ಹಲವು ತರದ ಮನೋರಂಜಕ ನಾಟಕ ವಿನೋದಾವಳಿಗಳಾದ ಮೇಲೆ ಶ್ರೀ. ಕೆ. ಕೆ. ಎ. ಅಡಿಯೋಡಿಯವರು ಕೃತಜ್ಞತೆ ಅರ್ಪಿಸಿದ ಬಳಿಕ ರಜತೋತ್ಸವವು ಕೊನೆಗೊಂಡಿತು.

ಚೂರು-ಚೂರು

'ಯುದ್ಧಾನಂತರ ಹಿಂದುಸ್ಥಾನವು ಅಮೇರಿಕದ ಮುಖ್ಯ ಸಾಮಾನುಗಳ ಮಾರಾಟದ ಸಂತೆಯಾಗಲಿದೆ'--ಅಮೇರಿಕದ 'ಟಾಯ್ಮ್ಸ್' ಪತ್ರಿಕೆಯ ಆಸೆ.

ಅಮೇರಿಕದ ಸೈನಿಕರನ್ನೇ ಅಲ್ಲಿಯ ಮುಖ್ಯ ಸಾಮಾನುಗಳೆಂದಿಟ್ಟುಕೊಂಡರೆ ಹಿಂದುಸ್ಥಾನವು ಈಗಲೂ ಅಮೆರಿಕದ ಮಾರ್ಕೆಟ್ ಆಗಿದೆ.

●

'ಜಾಪಾನಿನಲ್ಲಿ ತಿಂಗಳಿಗರ್ಧ ಪೌಂಡು ಸಕ್ಕರೆ ಮಾತ್ರ ಸಿಗುತ್ತದೆ, ಆಹಾರ ರೇಶನಿಂಗಿನಲ್ಲಿ 'ಪ್ರತಿಯೊಬ್ಬನ ದೇಹಾವಶ್ಯಕತೆಯನ್ನು ನೋಡಲಾಗುತ್ತಿದೆಯಲ್ಲದೆ, ಅವನ ರುಚಿ ಅಥವಾ ಇಚ್ಛೆಯನ್ನು ಗಣಿಸುವದಿಲ್ಲ'--ಜಾಪಾನಿನಲ್ಲಿದ್ದು ಬಂದ ಅಮೇರಿಕದ ಮಿ. ಕ್ಲಾಡೆ ಬಸ್ಸ್—ಇವರ ಟೀಕೆ.

ಈ ಬಸ್ಸು ಬಂಗಾಳದ ರಸ್ತೆಯಲ್ಲಿಯೂ ಓಡಿ ಅನುಭವ ಪಡೆಯಲಿ.

●

'ಕ್ರೈರೋದಲ್ಲಿ ಜರ್ಮನಿಯ ರಿಬ್ಬೆಂಟ್ರಾಪ್ ಮತ್ತು ಇಬ್ಬರು ಬ್ರಿಟಿಷ್ ಮುತ್ಸದ್ದಿಗಳೊಳಗೆ ಮಾತು ಕತೆ ನಡೆಯಿತು'—ರಶ್ಯದ 'ಪ್ರಾವ್ಡಾ 'ಪತ್ರಿಕೆಗೆ ವರದಿ.'

ತಪ್ಪೇನು ರಿಬ್ಬೆಂಟ್ರಪನನ್ನು ಪ್ರಜಾಪ್ರಭುತ್ವವಾದಿಯಾಗಿ ಮತಾಂತರಗೊಳಿಸುವ ಪ್ರಯತ್ನ ನಡೆಸಿರಬಹುದು!

●

'ಪಾಕಿಸ್ತಾನ ಪ್ರಶ್ನೆಯನ್ನು ಮಿಕ್ಕವರೊಡನೆ ಚರ್ಚಿಸುವದಕ್ಕಾದರೂ ಮಿ. ಜಿನ್ನರು ಮುಂದೆ ಬರಬೇಕು'— ಶ್ರೀ. ಶ್ರೀನಿವಾಸ ಶಾಸ್ತ್ರಿಗಳ ಕರೆ.

ಆದರೆ ಹಾಗೆ ಚರ್ಚಿಸಲು ಕೂಡುವದಾವ ದೇಶದಲ್ಲಿ? ಪಾಕಿಸ್ತಾನದಲ್ಲೋ ಹಿಂದುಸ್ಥಾನದಲ್ಲೋ ಎಂದು ಜಿನ್ನರಿಗೆ ಖಂಡಿತವಾಗಿಕೊಳ್ಳಬೇಕು.

●

ಹಿಂದುಸ್ಥಾನದ ಎಲ್ಲಾ ಮುಖ್ಯ ನಗರಗಳಲ್ಲೂ ಇದೇ ತಾ. 26ರ ಸ್ವಾತಂತ್ರ್ಯ ದಿನಾಚರಣೆಯ ಪ್ರಯತ್ನಕ್ಕಾಗಿ ಹಲವರ ದಸ್ತಗಿರಿಯಾಗಿದೆ.

ದಸ್ತಗಿರಿಯಾಗದವರೆಲ್ಲಾ 'ಸ್ವತಂತ್ರ ಜನಾಚರಣೆ' ಮಾಡಿದರೆಂದು ಭಾವಿಸಿಕೊಳ್ಳಬೇಕು.

●

'ಇಟೆಲಿಯಲ್ಲಿ ರೋಮಿನ ದಕ್ಷಿಣ ಕಡೆಯಲ್ಲಿ ಮಿತ್ರ ಸೇನೆಗಳು ಕಾಲೂರಿದವು'--ವಿಶೇಷ ಯುದ್ಧ ವಾರ್ತೆ.

ಆ ಕಾಲನ್ನು ಎಷ್ಟೆಷ್ಟಿಂಚು ಆಳಕ್ಕೆ ಊರಿದವು?

●

'ಪಾಕಿಸ್ತಾನ್ ಯೋಜನೆಯಂತೆ ಜನ ಬದಲಾವಣೆ ಮಾಡಿಕೊಳ್ಳುವದು ವ್ಯವಹಾರ ಸಾಧ್ಯವಾದ ವಿಷಯವಲ್ಲ'-ಲಂಡನಿನ 'ಇಂಡಿಯನ್ ಎಫೇರ್ಸ್' ಪತ್ರಿಕೆಯ ಅಭಿಪ್ರಾಯ.

ವ್ಯವಹಾರಕ್ಕೆ ಸಾಧ್ಯವಾಗುವಂತೆ ಪಾಕಿಸ್ತಾನದಲ್ಲಿರುವ ಹಿಂದುಗಳನ್ನೆಲ್ಲಾ ಮುಸಲ್ಮಾನರಾಗಿ, ಹಿಂದುಸ್ಥಾನದ ಮುಸಲ್ಮಾನರನ್ನೆಲ್ಲಾ ಹಿಂದುಗಳಾಗಿ ಮಾರ್ಪಡಿಸಿಯಾದರೂ ಮಾಲುಪಟ್ಟಿಯಾಗಲೇಬೇಕು.

—ವಿನೋದಿ.

TENDER NOTICE.

Sealed tenders are invited for the supply of stationery articles for the use of the Offices of the South Kanara District Board and for printing works of the Board for the year from 1st April 1944 to 31st March 1945 will be received by the President District Board South Kanara on or before the following dates:—

Tenders for printing up to 5 P. M. on 31-1-1944.

Tenders for stationery articles up to 5 P. M. on 31-1-1944.

2. Printed forms of tender for pointing works and stationery articles with the torms and conditions governing the disposal of tenders, will be supplied on requisition and on payment of rupee one only for each set of tender forms during office hours on working days.

3. Tenders for the printing works and the supply of stationery articles should be sent in separate sealed covers superscribed "Tender for printing works for 1944—45" & "Tender for stationery articles for 1944-45". The sealed covers containing the tenders should be addressed to the President District Board, South Kanara, Mangalore. Tenders received after 5. P. M on 31-1-1944 will not accepted and if received by post will be rejected. Unsealed covers containing the tenders will be liable to be rejected.

4 In respect of Stationery articles the President, District Board reserves the right of accepting the lowest tender in respect of individual article or all the articles conjointly or groups of articles, as the case may be.

5. If any tenderer withdraws his tender after the tenders are opened, the earnest money deposited by him will be forfeited to the District Board.

South Kanara District Board Office Mangalore, Dated 15-1-1944. } (Sd.) A. Lakshminarayana Rao, President, District Board, S.K.

CHAMPAE'S
Snow & Castrex
(Sole Distributers for (India.)
Sukhananda Stores
Santhekatte, UDIPI, S. K.

Degrees: Books: Medicines
Free H. L. M. S, M. B. H, M. D, etc, Free Homeo-Ayur- UnaniNaturo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—
Prof. Dr. N. H. Chbatbar,
Principal Indian Homeopathic Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach-(Regd.)
No. 3 Rs 2, No. 2 Rs. 5 No. 1 Rs. 7 Special Rs. 10. Extra Special Rs 17 for love marriage health, wealth. Ask any six questions with M. O. Re. 1/4 and get correct answers by returnpost Life reading Rs.10 No V. P. P. Send M.O. Free, pamphlets
Prof Dr. N. H Chbatbar.
P. O. MAHUVA (Kathiawar India.)

ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲ್

ಇನ್ನಂಜೆ.

'ವಿಶ್ವೋತ್ತಮ ಭವನ'-ಹೊಸ ಕಟ್ಟಡದ ಉದ್ಘಾಟನಾ ಸಮಾರಂಭ

ತಾ. 23—1—44ರಲ್ಲಿ ಇನ್ನಂಜೆ **ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ,** ಹೊಸ ಕಟ್ಟಡದ ಉದ್ಘಾಟನಾ ಸಮಾರಂಭ ಮತ್ತು ಕಟ್ಟಡಕ್ಕೆ "ವಿಶ್ವೋತ್ತಮ ಭವನ"ವೆಂಬ ನಾಮಕರಣವು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ N. ಸುಬ್ಬರಾವ್ B. A. L. T. ಯವರಿಂದಲೂ, ಶಾಲಾ ಸ್ಥಾಪಕರಾದ ದಿವಂಗತ ಶ್ರೀ. ಸೋದೇಮಠದ ಶ್ರೀಮದ್ವಿಶ್ವೇಂದ್ರ ತೀರ್ಥ ಶ್ರೀಪಾದಂಗಳವರ ಭಾವಚಿತ್ರ ಅನಾವರಣ ಮತ್ತು ಈ ಸ್ಥಳಕ್ಕೆ "ವಿಶ್ವೇಂದ್ರ ನಗರ" ಎಂಬ ನಾಮಕರಣವು ದಕ್ಷಿಣಕನ್ನಡ ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಮತ್ತು ಉಡುಪಿ ಮುನ್ಸಿಪಲ್ ಚೆಯರ್‌ಮೇನರಾದ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರಿಂದಲೂ ಈಗಿನ ಸೋದೇಮಠದ ಶ್ರೀಗಳಾದ ಶ್ರೀಮದ್ವಿಶ್ವೋತ್ತಮತೀರ್ಥ ಶ್ರೀಪಾದಂಗಳವರ ಮತ್ತು ಕಾರ್ಕಳ, ಮಂಗಳೂರು, ಉಡುಪಿ ಮುಂತಾದ ಪರಊರ ಹಾಗೂ ಊರ ಸಾವಿರಾರು ಮಂದಿ ಮಹನೀಯರ ಸಮ್ಮುಖದಲ್ಲಿ ಬಹು ಸಂಭ್ರಮದಿಂದ ನೆರವೇರಿಸಲ್ಪಟ್ಟಿತು.

ಈಗಿನ ಶ್ರೀಪಾದಂಗಳವರು ಈ ಪುರಕ್ಕೆ ಪ್ರಥಮ ಪ್ರವೇಶ ಮಾಡುವುದರಿಂದ ಅವರನ್ನೂ, ದಿವಂಗತ ಶ್ರೀಪಾದಂಗಳ ದಿವ್ಯ ತೈಲಚಿತ್ರವನ್ನೂ ಒಂದು ಮೈಲು ದೂರದ ಶಂಕರಪುರದಿಂದ ವಾದ್ಯಘೋಷ ಮೆರವಣಿಗೆಗಳೊಡನೆ ಕರೆತಂದು ಶ್ರೀಗಳವರು ವಿಷ್ಣುಮೂರ್ತಿ ದೇವರ ದರ್ಶನ, ಪುರ ಪ್ರವೇಶಾದಿಗಳನ್ನು ಮಾಡಿದ ನಂತರ ನವೀನ ಕಟ್ಟಡದ ಬಳಿಗೆ ಬಂದು ಮೆನೇಜರ್ ಶ್ರೀನಿವಾಸ ಮಿತ್ತಂತಾಯರು ಈ ಕಟ್ಟಡದ ನಂ. 2 ಕೋಣೆಯ ಖರ್ಚಿಗಾಗಿ ರೂಪಾಯಿ 2001ನ್ನು ದಾನ ಮಾಡಿದ ಇನ್ನಂಜೆ ಸುಬ್ಬಣ್ಣ ಭಟ್ಟರ ಮತ್ತು 6ನೇ ನಂಬ್ರದ ಕೋಣೆಯ ಖರ್ಚಿಗಾಗಿ ರೂ. 1001ನ್ನು ಕೊಟ್ಟ ಇನ್ನಂಜೆ ವಿಶ್ವನಾಥಾಚಾರ್ಯರ ಉದಾರ ದಾನದ ಸಂತೋಷವನ್ನು ಸೂಚಿಸಿ ನವಕಟ್ಟಡದ ಉದ್ಘಾಟನೆಯನ್ನು ನೆರವೇರಿಸುವಂತೆ ಕೇಳಿಕೊಂಡಾಗ ಅಧ್ಯಕ್ಷರು ಶುಭವಾಗಲೆಂದು ದೇವರನ್ನು ಪ್ರಾರ್ಥಿಸಿ ಉದ್ಘಾಟನೆಯನ್ನು ನೆರವೇರಿಸಿದರು. ನಂತರ ಸಭೆ ಸೇರಿ ಪ್ರಾರ್ಥನೆಯ ನಂತರ ಮುಖ್ಯೋಪಾಧ್ಯಾಯರಾದ A. Shama ರಾಯರು ಊರಪರಊರ ಮಹನೀಯರಿಗೆ ಸ್ವಾಗತ ಬಯಸಿದರು.

ಬಳಿಕ ಶ್ರೀ ಮಿತ್ತಂತಾಯರು ದಿವಂಗತ ಪರಮಪೂಜ್ಯ ಶ್ರೀಗಳವರು ಈ ಸಂಸ್ಥೆಯನ್ನು ಸ್ಥಾಪಿಸಿ ಸುಲಭದಿಂದ ಬಡವರಿಗೆ ವಿದ್ಯಾಲಾಭವಾಗುವಂತೆ ಮಾಡಿದುದು ನಮ್ಮೆಲ್ಲರ ಭಾಗ್ಯವೆಂದೂ, ಶ್ರೀಗಳವರು ದಿವಂಗತರಾದರೂ ಅವರ ಅಂತರಾತ್ಮವು ಇಲ್ಲೇ ಇದ್ದು ಈ ಕೆಲಸವನ್ನು ಸಾಂಗಗೊಳಿಸುವಂತೆ ಎಲ್ಲರನ್ನೂ ಹುರಿದುಂಬಿಸುವುದೆಂದೂ ಹೇಳಿ ಈ ಗ್ರಾಮದವರೂ, ಇತರ ಮಹಾಶಯರೂ, ಈ ಸಂಸ್ಥೆಗೆ ಉದಾರ ದಾನ ಮಾಡಿದುದಕ್ಕಾಗಿ ಸಂತೋಷ ಸೂಚಿಸಿ, ಆ ದಾನ ಮಾಡಿದ ಮಹನೀಯರಿಗೆ ಚಿರಾಯುರಾರೋಗ್ಯಗಳನ್ನು ಬಯಸಿದರು.

ಈ ಕೆಳಗಿನ ಮಹಾಶಯರು ರೂ. 1000ಕ್ಕೆ ಮಿಕ್ಕಿ ಉದಾರ ದಾನ ಮಾಡಿ ಈ ಸಂಸ್ಥೆಯ ವ್ಯವಸ್ಥಾಪಕ ಮಂಡಳಿಯ ಸದಸ್ಯರಾಗಿರುವರು.

1.		**ಪ್ರಧಾನ ಸ್ಥಾಪಕರು:** ಶ್ರೀ ಮದ್ವಿಶ್ವೇಂದ್ರತೀರ್ಥ ಶ್ರೀಪಾದಂಗಳವರು.	
2.		**ಮೆನೇಜರ್:** ಇನ್ನಂಜೆ ಶ್ರೀನಿವಾಸ ಮಿತ್ತಂತಾಯರು	ರೂ. 1001-0-0
3		ಶ್ರೀ. ಪಟ್ಟು ಅನಂತರಾಮ ಆಚಾರ್ಯ	1001-0-0
4.	,,	ಒಕಡೆ ರಾಮಕೃಷ್ಣ ಭಟ್ರು	1001-0-0
5.	,,	ಇನ್ನಂಜೆ ಸುಬ್ಬಣ್ಣ ಭಟ್ರು	1001-0-0
		ಅಲ್ಲದೆ ನಂ. 2ನೇ ಕೋಣೆ ಖರ್ಚಿಗೆ	2001-0-0
6	,,	ಇನ್ನಂಜೆ ವಿಶ್ವನಾಥ ಆಚಾರ್ಯ ಮತ್ತು ಇವರ	
7.		ಸಹೋದರ ಶ್ರೀ ರಾಮದಾಸ ಭಟ್ರು ಇಬ್ಬರೂ	2001-0-0
		ಅಲ್ಲದೆ 6ನೇ ಕೋಣೆಗೆ	1001-0-0
8.	,,	ಇನ್ನಂಜೆ ನಾರಾಯಣ ಆಚಾರ್ಯರು	1001-0-0
9.	,,	ಇನ್ನಂಜೆ ವೆಂಕಟ್ರಾಜ ಮಿತ್ತಂತಾಯರು	1001-0-0
10.	,,	ಡಾ। ಇನ್ನಂಜೆ ವೆಂಕಟ್ರಮಣ ಮಿತ್ತಂತಾಯರು	1001-0-0
11.	,,	ಚಿಟ್ಪಾಡಿಯಲ್ಲಿರುವ ಇನ್ನಂಜೆ ಪುಟ್ಟಣ್ಣ ಭಟ್ರು	1001-0-0
12.	,,	ಇನ್ನಂಜೆ ಅಚ್ಯುತ ಭಟ್ರು	1001-0-0
13.	,,	ಇನ್ನಂಜೆ ಸೀತಾರಾಮ ಭಟ್ರು	1001-0-0
14.	,,	ಇನ್ನಂಜೆ ಸೂರ್ಯಣ್ಣ ಶೆಟ್ರು	1001-0-0
15.		ಇನ್ನಂಜೆ ಶ್ರೀ ವಿಷ್ಣುಮೂರ್ತಿ ಗ್ರಾಮಾಭಿವೃದ್ಧಿ ಸಂಘ	1001-0-0
16.		ಶ್ರೀ ಇನ್ನಂಜೆ ಮಡುಂಬು ಲೋಕು ಶೆಟ್ಟರು	1001-0-0

ಶ್ರೀ ಮಿತ್ತಂತಾಯರು ಮೇಲ್ಕಾಣಿಸಿದ ಮಹಾಶಯರಿಗೂ ಇತರ ಸಾಮಾನ್ಯ ಸಹಾಯಕರಿಗೂ ಕೃತಜ್ಞತೆಯನ್ನು ಸಮರ್ಪಿಸಿದರು. ಬಳಿಕ ಅಧ್ಯಕ್ಷರಾದ N. ಸುಬ್ಬರಾಯರು ಈ ಗ್ರಾಮದಲ್ಲಿ ಇಂತಹ ದೊಡ್ಡ ಸಂಸ್ಥೆಯು ಉದಯಿಸಿ ಈ ರೀತಿ ಅಭಿವೃದ್ಧಿ ಹೊಂದಿದುದೆಂದರೆ ಬಹಳ ವಿಸ್ಮಯಪ್ರದವೆಂದೂ ಇಲ್ಲಿಯ ಪೂರ್ವ ಚರಿತ್ರೆ ನೋಡುವಾಗ ಈ ಗ್ರಾಮವು ಪವಿತ್ರ ಹಾಗೂ ವಿದ್ಯಾಕೇಂದ್ರವಾಗಿರುವುದರಿಂದೂ ಇಲ್ಲಿ ಅಸ್ತಂಗತವಾಗಲಿದ್ದ ಎಲಿಮೆಂಟರಿ ಶಾಲೆಯೊಂದು ನಾಲ್ಕೈದು ವರ್ಷಗಳಿಂದೀಚೆ ಉತ್ಸಾಹಿಗಳ ಅಧಿಕಾರಂಕೊಳ್ಳಪಟ್ಟು ಈ ರೀತಿ ದೊಡ್ಡ ಸಂಸ್ಥೆಯಾದುದು ಬಹಳ ಸಂತೋಷದ ವಿಷಯವೆಂದೂ, ಬೇಕಾದ ಹವೆ ನೀರುಗಳು ಇಲ್ಲಿ ಅನುಕೂಲವಾಗಿದ್ದು, ಇದು ವಿದ್ಯಾಭ್ಯಾಸಕ್ಕೆ ಆರೋಗ್ಯಪ್ರದ ಯೋಗ್ಯ ಸ್ಥಳವೆಂದೂ ಇಂತಹ ಸ್ಥಳವು ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ಹಿಂದೂದೇಶದಲ್ಲಿ ದುರ್ಲಭವೆಂದೂ, ವಿದ್ಯಾರ್ಥಿಗಳು ದುರಾಚಾರಕ್ಕೊಳಗಾಗದಂತೆ ವಾದಿರಾಜ ಗುರುಕುಲದ' (Borading & Lodging) ಸಂಬಂಧವು ಈ ಸಂಸ್ಥೆಯ ಮಹತ್ವಕ್ಕೆ ಕಾರಣವೆಂದೂ ನಮ್ಮ ಜಿಲ್ಲೆಯ ಎಲ್ಲಾ ಹೈಸ್ಕೂಲುಗಳಲ್ಲಿ ಸಾಮಾನ್ಯವಾಗಿ ಸಾಕಷ್ಟು ಸ್ಥಳ ಯೋಗ್ಯ ಸಾಮಾಗ್ರಿಗಳಿಲ್ಲದೆ ಇಲಾಖಾ ನಿಯಮಗಳನ್ನು ಅನುಸರಿಸದಿರುವಾಗ ಇದು ಆ ಎಲ್ಲಾ ನ್ಯೂನತೆಗಳನ್ನು ಹೋಗಲಾಡಿಸಬಲ್ಲ ಆದರ್ಶ ಸಂಸ್ಥೆಯಾಗಿರುವುದೆಂದೂ ವಿಶೇಷ ದೈವಕೃಪೆಯು ಈ ಸಂಸ್ಥೆಗೆ ಇದ್ದುದರಿಂದಲೇ ಇದಕ್ಕೆ ಸುಲಭದಲ್ಲಿ ಮಂಜೂರಾತಿ ದೊರೆತು ಮಹಾಜನರ ಸಹಕಾರಗಳಿಂದಾಗಿ ಶೀಘ್ರ ಉನ್ನತಿಯನ್ನು ಏರುವಂತಾಯಿತೆಂದೂ ಇಲ್ಲಿ ಸಂಸ್ಕೃತಕ್ಕೆ ಪ್ರಾಧಾನ್ಯ ಕೊಡಲ್ಪಟ್ಟು ಇತರ ಸಂಸ್ಥೆಗಳಲ್ಲಿಲ್ಲದ ಧಾರ್ಮಿಕ ಶಿಕ್ಷಣವು ಈ ಸಂಸ್ಥೆಯ ಮತ್ತೊಂದು ವೈಶಿಷ್ಟ್ಯವೆಂದೂ ಎಲ್ಲಾ ಸಾಮಾಗ್ರಿಗಳಿಗೆ ಒಂದಕ್ಕೆ ಹತ್ತರಷ್ಟು ಕ್ರಯವಾಗಿರುವ ಈ ಸಮಯದಲ್ಲಿ ಧೈರ್ಯಗೆಡದೆ ಸುಮಾರು ಮೂವತ್ತು ಸಾವಿರ ರೂಪಾಯಿ ಖರ್ಚಿನ ಒಂದೆರಡು ಕಟ್ಟಡಗಳನ್ನು ಸಂಪೂರ್ಣಗೊಳಿಸಿ ಇನ್ನೂ ಹೊಸ ಕಟ್ಟಡಗಳನ್ನು ಕಟ್ಟಿಸುತ್ತಿರುವುದು ಬಹಳ ಸ್ತುತ್ಯ ಕಾರ್ಯವೆಂದೂ ಇದೇ ರೀತಿ ಮುಂದಕ್ಕೂ ಸಹಾ ಉತ್ಸಾಹಗುಂದದೆ ಮುಂದರಿಸಬೇಕೆಂದೂ ಮುಂತಾಗಿ ಹೇಳಿ ಈ ಸಂಸ್ಥೆಯು ಸರ್ವತೋಮುಖ ವೃದ್ಧಿ ಹೊಂದಲೆಂದು ದೇವರನ್ನು ಪ್ರಾರ್ಥಿಸಿ ಈ ಕಟ್ಟಡಕ್ಕೆ ಈಗಿನ ಶ್ರೀಗಳವರಾದ ಶ್ರೀ ವಿಶ್ವೋತ್ತಮ ತೀರ್ಥರ ಹೆಸರಿನಿಂದ "ವಿಶ್ವೋತ್ತಮ ಭವನ"ವೆಂದು ನಾಮಕರಣಮಾಡಿದರು.

ಬಳಿಕ ಮಾನ್ಯ ಆರೂರು ಲಕ್ಷ್ಮೀನಾರಾಯಣ ರಾಯರು ಶಾಲಾ ಸ್ಥಾಪಕರಾದ ದಿವಂಗತ ಶ್ರೀಪಾದಂಗಳವರ ಭಾವಚಿತ್ರವನ್ನನಾವರಣ ಮಾಡುತ್ತಾ ಈ ಅನಾವರಣ ಕಾರ್ಯಕ್ಕೆ ತನ್ನನ್ನು ಇಲ್ಲಿಯ ಅಧಿಕಾರಿಗಳು ಕೇಳಿಕೊಳ್ಳಲಿಕ್ಕೆ ದಿವಂಗತ ಸ್ವಾಮಿಯವರು ತನ್ನ ಮೇಲೆ ಅಭಿಮಾನವಿಟ್ಟು ಈ ಸಂಸ್ಥೆಯನ್ನು ಯೋಗ್ಯ ರೀತಿ ನಡೆಯುವಂತೆ ಮಾಡಬೇಕೆಂದು ತನಗೆ ಆಜ್ಞೆಯಿತ್ತಿದ್ದುದೇ ಕಾರಣವಾಗಿರಬೇಕೆಂದೂ ಉದಾರಿಗಳೂ ಸಮರ್ಥರೂ ವಾಗ್ಮಿಗಳೂ ವಿದ್ಯಾಭಿಮಾನಿಗಳೂ ಆದ ಶ್ರೀಗಳವರು ಲೌಕಿಕ ವಿದ್ಯಾ ಪ್ರಚಾರಕ್ಕಾಗಿ ಈ ಸಂಸ್ಥೆಯನ್ನು ಸ್ಥಾಪಿಸಿದ್ದು ಬಹಳ ಸ್ತುತ್ಯವೆಂದೂ ಪೂಜ್ಯ ಶ್ರೀಗಳು ದಿವಂಗತರಾದರೂ, ತನ್ನ ಅಪಾರಶಕ್ತಿಯಿಂದ ಎಲ್ಲರಿಗೂ ಪ್ರೇರೇಪಿಸಿ ಈ ಕೆಲಸ ಪೂರ್ಣವಾಗುವಂತೆ ಮಾಡುವರೆಂದೂ ಇದಕ್ಕೆ ಈ ವರೆಗೆ ಬಂದ ಉದಾರ ದಾನಗಳೇ ಸಾಕ್ಷಿಯೆಂದೂ ಹೇಳಿ ಚಿರಕಾಲ ಈ ಸಂಸ್ಥೆ ಬಾಳಲೆಂದು ದೇವರನ್ನು ಪ್ರಾರ್ಥಿಸಿ ಭಾವಚಿತ್ರ ಅನಾವರಣ ಮಾಡುತ್ತಾ ದಿವಂಗತರ ಸ್ಮಾರಕಾರ್ಥವಾಗಿ "ವಿಶ್ವೇಂದ್ರ ನಗರ"ವೆಂದೂ ಈ ಸ್ಥಳಕ್ಕೆ ನಾಮಕರಣ ಮಾಡಿದರು.

ಆ ಮೇಲೆ ಶಾಲಾ ಬಾಲಕ ಬಾಲಕಿಯರಿಂದ ನಾನಾ ವಿವಿಧ ವಿನೋದ ಪ್ರದರ್ಶನಗಳಾಗಿ ಸಭಿಕರಲ್ಲಿ ವಕೀಲ್ ಬಾಲಕೃಷ್ಣ ಶೆಟ್ಟರೂ, ವಕೀಲ್ M. S. ಅಧಿಕಾರಿಗಳೂ, ಕಾಪು ಕೃಷ್ಣಾಚಾರ್ಯರೂ ಈ ಸಂಸ್ಥೆಯ ಉದಯವು ಹಿಂದೂಗಳ ಭಾಗ್ಯೋದಯವೆಂದೂ ಇದು ಅನೇಕ ಬಾಲಕರಿಗಾಶ್ರಯವೀಯುವ ಆದರ್ಶ ಸಂಸ್ಥೆಯಾಗಲೆಂದೂ ಹೇಳಿದರು. ಲಘೂಪಹಾರ ತಾಂಬೂಲಾದಿಗಳಾದ ಮೇಲೆ ಕರೆಸ್ಪೋಂಡೆಂಟ್ ನಾಬಾಜ ಶ್ರೀನಿವಾಸ ಆಚಾರ್ಯರು ಶ್ರೀಗಳಿಗೂ ಅಧ್ಯಕ್ಷ ಮಹಾಶಯರಿಗೂ, ಊರ ಪರವೂರ ಮಹನೀಯರಿಗೂ ಧನ್ಯವಾದವನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು

(Advt.)

THE CANARA BANKING CORPORATION LTD.

(Incorporated in British India with Limited Liability.)

ESTD: 1906.

Head Office: **UDIPI,** S. Kanara.

Statement of affairs as on 31st December, 1943.

LIABILITIES	Rs	As.	Ps.
1. Paid up Capital	12,95,970	0	0
2. On other contracts (Deposits)	61,66,927	6	0
3. On estimated liabilities- (1) Reserve and other Funds, (2) Undisbursed profits, (3) unpaid dividends including revenue items etc.	4,59,692	1	4
4. Debts owing to Sundry Persons · Suspense Accounts etc.	11,78,216	6	8
5. Profits for the year ending 31-12-1943	1,08,522	4	0
Total	92,09,328	2	0

ASSETS	Rs.	As.	Ps
1. Investment on Govt. of India & Provincial Securities, (2) Deposits with banks, (3) Debentures & Shares, (4) Life Policies, & (5) Landed Properties.	26,04,671	6	8
2. Bills of Exchange, Hundies, Promissory Notes etc.	16,74,462	14	8
3. Loans on Jewels & other valuable securities	23,72,302	8	7
4. Office premises, furniture etc. ...	93,251	0	0
5. Cash on hand & with bankers in current accounts and short term deposits.	18,26,986	3	8
6. Sundries including revenue items.	6,37,634	0	5
Total	92,09,328	2	0

ನವಯುಗ

ಉಡುಪಿ, ಗುರುವಾರ ೨೭-೧-೧೯೪೪

ಒಡವರ ಅಕ್ಕಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ತಿ ಬೆಳೆಯು ಕಟಾವು ಮತ್ತು 'ಕಂಟ್ರೋಲ್' ಒಟ್ಟೊಟ್ಟಾಗಿ, ಬೆಲೆ ನಿಯಂತ್ರಣವೂ ಜನ್ನಲ್ಲೇ ಜ್ಯಾರಿಗೆ ಬಂದಾಗ ರೈತರೆಷ್ಟೇ ಸಂಕಷ್ಟವನ್ನನುಭವಿಸಿದರೂ, ಕೊಂಡು ಕೊಳ್ಳುವ ಜನಸಾಮಾನ್ಯರಿಗುಪಕಾರವಾಗುವದೆಂಬ ಒಂದು ಆಶೆಯಾದರೂ ಇತ್ತು. ರೆಕ್ವಿಶಿಶನಿನ ಅತಿರೇಕಗಳನ್ನು, ಅನ್ಯಾಯಗಳನ್ನು ಉತ್ಪಾದಕರು ಆಕ್ಷೇಪಿಸಿದ್ದರೇ ಹೊರತು ರೆಕ್ವಿಶಿಶನ್ ತತ್ವಕ್ಕೇನೇ ವಿರೋಧ ಮಾಡಿದುದಿಲ್ಲ ಯಾಕೆಂದರೆ? ಅಕ್ಕಿಯನ್ನು ಕ್ರಯಕ್ಕೆ ಪಡಕೊಂಡು ತಿನ್ನುವ ಜನಸಾಮಾನ್ಯರು ಉಪವಾಸ ಬೀಳಬಾರದೆಂಬುದಕ್ಕಾಗಿ. ಒಕ್ಕಲುಗಳ, ವರ್ಗದಾರರ ಆಕ್ಷೇಪಣಾ ಅರ್ಜಿಗಳು ಇನ್ನೂ ಅಧಿಕಾರಿಗಳ ವಶದಲ್ಲೇ ಇವೆ—ಅವು ಈ ರೀತಿ ಅನಾಥವಾಗಿಯೋ ಅಸಡ್ಡೆಗೊಳಗಾಗಿಯೋ ಒಂದೆಡೆರಾಶಿ ಬಿದ್ದಿರುವಾಗ, ವರ್ಗದಾರ ಸಂಘಗಳ ಸಹಕಾರ ಮೂಲಕ ಈ ದೋಷಯುಕ್ತ ರೆಕ್ವಿಶಿಶನಿಗನುಸಾರವಾಗಿಯೇ ಸಾಕಷ್ಟು ಅಕ್ಕಿ ಸಹಕಾರೀ ಸ್ಟೋರ್ಸುಗಳಿಗೆ ಬೆಳೆಸುವವರಿಂದ ಜಮೆ ಬಂದಿದೆ. ಹಳ್ಳಿಯ ರೈತರು ಹಲವು ಮೈಲು ದೂರದ ಸಂಗ್ರಹಾಲಯಗಳಿಗೆ ತಮ್ಮ ಅಮೂಲ್ಯ ಸಮಯ ಮತ್ತು ಅತಿಪ್ರಿಯ ಹಣವನ್ನು ವ್ಯಯಿಸಿ, ಅಕ್ಕಿ ಸಾಗಿಸುತ್ತಿರುವ ಕಷ್ಟನಷ್ಟಗಳು ರೈತರ ನಿತ್ಯ ಕರ್ಮಗಳಲ್ಲೊಂದೆಂಬ ಅಲಕ್ಷ್ಯಕ್ಕೊಳಗಾಗಿವೆ. ಆದರೆ ಅಕ್ಕಿಯನ್ನು ಪಡಕೊಳ್ಳುವ ಕೋ-ಅಪರೇಟಿವ್ ಸ್ಟೋರ್ಸುಗಳವರು, ಅದರ ಅಳತೆಗಾಗಿ ಬಗ್ಗಿ ನೆಟ್ಟಗಾಗುವ ಬೆನ್ನುವ್ಯಾಯಾಮವೂ ಬೆಲೆಬಾಳುತ್ತಿದೆ! ಮುಡಿಗೊಂದು ಪಾವಾಣೆಯಂತೆ, ಅಳತೇ ಮಜೂರಿಯನ್ನು ಈ ಸ್ಟೋರ್ಸುಗಳು ವಸೂಲು ಮಾಡುತ್ತಿವೆ ಎಂದು ಕೇಳುತ್ತೇವೆ. ಇನ್ನಷ್ಟು ವೇದನಾತ್ಮಕ ವಿಷಯವೆಂದರೆ ತಂದ ಅಕ್ಕಿಯನ್ನು ಅಳತೆ ಮತ್ತು ತೂಕ, ಇವೆರಡರ ಮೂಲಕವೂ ಗಣಿಸಿ, ಮುಡಿಗ ಸೇರು ಸೇರಕ್ಕಿಗಳೇ ಕಡಿಮೆ ಬೀಳುತ್ತಿದ್ದು ಒಕ್ಕಲುಗಳು ನಷ್ಟಕ್ಕೊಳಗಾಗುತ್ತಿದ್ದಾರೆ ಅಕ್ಕಿಯನ್ನು ಸಹಕಾರೀ ಸ್ಟೋರ್ಸುಗಳಿಗೊಪ್ಪಿಸಬೇಕೆಂಬುದು ಉತ್ಪಾದಕರ ಮೇಲಿರುವ ನಿರ್ಬಂಧ; ಆದಕ್ಕೆ ನಿಶ್ಚಿತ ಬೆಲೆ ತೆರಬೇಕೆಂಬುದು ಸ್ಟೋರ್ಸ್ ಮಾಲಕರಿಗಿರುವ ನಿರ್ಬಂಧ. ಇವರಿಬ್ಬರೊಳಗಿನ ಈ ಒತ್ತಾಯಬದ್ಧ ಸಂಬಂಧದಲ್ಲಿ, ಕೊಡುವವರು ಅಥವಾ ಕೊಳ್ಳುವವರು, ಅಕ್ಕಿಯ ರೂಪ ಕೆಡಿಸುವ, ಇಲ್ಲವೇ ಬೆಲೆ ಅಳತೆ ಕೆಡಿಸುವ ಕುತ್ಸಿತಬುದ್ಧಿಯನ್ನು ಪ್ರದರ್ಶಿಸದಂತೆ ತಡೆಗಟ್ಟುವ ಯಾವ ನಿರ್ಬಂಧವೂ ಇಲ್ಲ ಅದು ಕಾಯಿದೆ ಅಥವಾ ನಿಯಮಗಳಿಂದ ಸಾಧಿಸಲಾಗುವ ವಿಷಯವಲ್ಲ ಧರ್ಮಬುದ್ಧಿಯಿಂದ ಮಾಡಬೇಕಾದ ಕೆಲಸವು ಆದರೆ ಇಲ್ಲಿಯೂ ಕೊಡುವ ರೈತರಿಟ [illegible] ಕೊಂಡುಕೊಳ್ಳುವ ಸಹಕಾರೀ ಸಂಗ್ರಹಾಲಯಗಳ ಸಿಕಲಾಟ ಮಾತ್ರ ನಡೆಯಲು ಅಸ್ಪದವಿದೆ. ಮಾರಾಟಕ್ಕೆ ತರುವವನು, ಒನಕೆಯ ಎರಡು ಪೆಟ್ಟುಗಳನ್ನೂ, ಅರ್ಧ ಘಂಟೆಯ ಬಿಸಿಲನ್ನೂ ಕಡಿಮೆಮಾಡಿ ಅಕ್ಕಿಯ ರೂಪ ಕೆಡಿಸಬಹುದು; ಆದರೆ ಅದರ ತರಗತಿ ನಿರ್ಣಯಿಸಿ, ಅಳತೆ ಮಾಡಿ ಪಡಕೊಳ್ಳುವ ಪೂರ್ಣಾಧಿಕಾರವಿರುವ ಪಡಕೊಳ್ಳುವವನು ಇಷ್ಟು ಯೋಗ್ಯತೆಯನ್ನೂ ಇಲ್ಲವೆನ್ನಿಸಿ? ಮಾರುವ ರೈತನ ಕಿರುಬೆರಳ ಪಾಪದ ಫಲವನ್ನು ಎರಡೂ ಕೈಗಳಿಂದ ಉಣ್ಣಿಸಬಿಡಬಲ್ಲನು! ಬೇಸಾಯಗಾರರಿಗಿಂತಹ ಅನ್ಯಾಯವಾಗುತ್ತಿರುವ ದೂರುಗಳು ಸರ್ವತ್ರ ಕೇಳಬರುತ್ತಿವೆ. ಉಡುಪಿ ತಾಲೂಕು ವರ್ಗದಾರ ಸಂಘವು ಈ ಕುರಿತು ಮಾಡಿರುವ ನಿರ್ಣಯಗಳಿಗೆ ಯೋಗ್ಯ ಗಮನ ಕೊಡಲ್ಪಡುವದೆಂದು ನಂಬುತ್ತೇವೆ.

ಅಂತೂ, ಧಾನ್ಯ ಮತ್ತು ದರ ಇವೆರಡರ ನಿಯಂತ್ರಣದ ದುಷ್ಪರಿಣಾಮಗಳನ್ನಲ್ಲದೆ ಅದರ ಸತ್ಫಲಗಳನ್ನುಣ್ಣುವ ಸುಯೋಗವು ಉಡುಪಿ ತಾಲೂಕಿನಂತಹ ಹೆಚ್ಚಿನ ಪ್ರದೇಶಗಳಿಗಿನ್ನೂ ಒದಗಿಲ್ಲವೆಂಬುದು ಶೋಚನೀಯವಿದೆ. ಕೊಂಡುಕೊಳ್ಳುವ ಜನಸಾಮಾನ್ಯರು ಈಗಲೂ ಮುಡಿಗೆ ರೂ. 14ರಿಂದ 17ರ ವರೆಗಿನ ಕಳ್ಳ ಸಂತೆ ಧಾರಣೆಯನ್ನು ಕೊಟ್ಟೇ ಅಕ್ಕಿ ಪಡೆಯುತ್ತಿದ್ದಾರೆ. ಬೆಳ್ತಿಗೆ ಅಕ್ಕಿಯೇ ದೊರೆಯುವದಿಲ್ಲ—ಮುಡಿಗೆ ರೂ. 20ಕ್ಕೆ ಮಿಕ್ಕಿದ ಬೆಲೆಯಲ್ಲಿ ಅತಿ ಪ್ರಯಾಸದಿಂದ ದೊರೆಯುತ್ತಿದೆ ಎಂಬ ದೂರಿದೆ. ಈ ಅಕ್ಕಿ ವ್ಯಾಪಾರಿಗಳಿಗೆಲ್ಲಿಂದ ದೊರೆಯಿತು? ರೆಕ್ವಿಶಿಶನ್ ಆಗದುಳಿದ ದೊಡ್ಡ ವರ್ಗದಾರರ ಅಕ್ಕಿ ಕಳ್ಳ ಸಂತೆಗೆ ಹೋಗಿದೆ—ದರ ನಿಯಂತ್ರಣಕ್ಕೊಳಗಾಗದೆ ಅಂತಹ ಅಕ್ಕಿಯೇ ಇಂದು ಮಾರ್ಕೆಟಿನಲ್ಲಿದೆ ಎನ್ನುವಾಗ ಈ ಅನ್ಯಾಯಕ್ಕೇನೆನ್ನಬೇಕು! ಮಾರಾಟದ ಅಕ್ಕಿ ಎಲ್ಲಿದ್ದರೂ ಸ್ವಾಧೀನಪಡಿಸಿಕೊಳ್ಳಲಿಕ್ಕೂ 'ರೆಕ್ವಿಶಿಶನ್ ಅಡ—ಆಗದ' ಎಂಬ ತಾರತಮ್ಯ ನೋಡದೆ ಕಟ್ಟುನಿಟ್ಟಿನಿಂದ ಏಕದರ ವಿಧಿಸುವದಕ್ಕೂ ಸಂಬಂಧಪಟ್ಟ ಅಧಿಕಾರಿಗಳು ಹಿಂಜರಿದು ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಪರಿಸ್ಥಿತಿಯನ್ನು ಕೂಡಲೇ ನಿಯಂತ್ರಣಕ್ಕೆ ತಾರದಿದ್ದರೆ ಜನರಲ್ಲಿ ಹಾಹಾಕಾರವೇಳದಿರದು.

ದುರ್ಬೀನು

ಸುವಾಸನೆ ಹರಡಬೇಕಾದರೆ ಗಿಡ ಬಲಿತು ಹೂ ಬಿಡುವ ವರೆಗೆ ಕಾಯಬೇಕು; ದುರ್ವಾಸನೆಯಾದರೆ ಗಿಡದ ಬುಡಕ್ಕೆ ಹಾಕುವ ಗೊಬ್ಬರದಿಂದಲೇ ಬರುತ್ತದೆ. ಸತ್ಕೀರ್ತಿ ದೊರೆಯಬೇಕಾದರೆ ಸತ್ಕಾರ್ಯ ಸಿದ್ಧಿಯಾಗಿಕೊಳ್ಳಬೇಕು; ದುಷ್ಕೀರ್ತಿಯಾದರೆ ಬುದ್ಧಿಗೊಬ್ಬರವಾದೊಡನೆ ದೊರೆಯುತ್ತದೆ.

00 00 00

ಓಡುವಾಗ ದಮ್ಮು ಕಟ್ಟಿದವನು ನಿಂತ ಮೇಲಾದರೂ ಉಬ್ಬಸ ಬಿಟ್ಟಾನು; ಕಾರ್ಯ ಸಾಧನೆಗಾಗಿ ಕಾಠಿಣ್ಯತೆ ವಹಿಸಿದವನು ವಿರಾಮ ಕಾಲದಲ್ಲಾದರೂ ವಿಚಾರ ಮಾಡಿಯಾನು.

00 00 00

ಪತಿಭಕ್ತಿ, ಗೃಹ ವ್ಯವಸ್ಥೆ, ಮಕ್ಕಳ ಮಮತೆಯನ್ನು ಕಟ್ಟಿಕೊಂಡು ಒದ್ದಾಡುವ ಗೃಹಿಣಿಯ ಮೌಢ್ಯಕ್ಕೆ ವೇಶ್ಯೆ ನಗಬಹುದು, ಸಂಘಟನೆ, ಸಂಯಮನ, ಸೌಹಾರ್ದತೆಯಿಂದಾಳುವ ಅಧ್ಯಕ್ಷನ ನಿಷ್ಠೆಗೆ ಸಡಿಲು ವರ್ತನೆಯವ ಅಪಹಾಸ್ಯ ಮಾಡಬಹುದು.

00 00 00

ಕಲ್ಲು ಮಣ್ಣು ಸೇರಿಯೇ ಕಟ್ಟಡವಾಗುತ್ತದೆ; ಕಾಠಿಣ್ಯ, ಕಪಟಬುದ್ಧಿಯಿದ್ದರೇನೇ ಕಟ್ಟಾಳುವಾಗುತ್ತಾನೆ.

00 00 00

ತಂಬೂರಿ ಬಾರಿಸಿ ತಿರುಪೆಯೆತ್ತುವವನಲ್ಲಿ ಕಂಠ ಮಾಧುರ್ಯವಿರಲೇಬೇಕು; ಖಡ್ಗ ಧರಿಸಿ ಹೋರಾಡುವವ ಮಾತ್ರ ಘರ್ಜಿಸಬೇಕಾಗುತ್ತದೆ. ಹರಟೆ ಹೊಡೆದು ದಿನ ತೆಗೆಯುವವನಲ್ಲಿ ಉಪಚಾರ ಬುದ್ಧಿಯಿದ್ದೀತು; ಕಾರ್ಯ ಸಾಧಕ ಯೋಧ ನಿಷ್ಠುರನಾಗಿಯೇ ಇರಬೇಕಾಗುತ್ತದೆ.

00 00 00

ಹುಚ್ಚರ ಅಣಕಾಟವನ್ನು ಕಂಡು ಉರಿದು ಬೀಳುವದೂ ಒಂದು ವಿಧದ ಹುಚ್ಚು; ಅಜ್ಞಾನಿಗಳ ಆಟೋಪವನ್ನು ಕಂಡು ಪ್ರತಿಭಟಿಸಲೇಳುವದೂ ಒಂದು ರೀತಿಯ ಅಜ್ಞಾನ.

00 00 00

ಯಾರಾದರೂ ಕಂಠ ಹಿಸುಕಿದರೆ ಮಾತ್ರ ಕೂಗಿಕೋ—ಹೊತ್ತು ಹೋಯಿಂದ ಕಂಡ ನೋಯುತ್ತಿದ್ದರೆ ಕೈಕೊಡುವವರನ್ನು ಕರೆದು ಇಳಿಸಿಕೊಂಡರಾಯಿತು; ಅತ್ಯಾಚಾರಿಗಳ ಅನ್ಯಾಯಕ್ಕೆ ಬಲಿಯಾದರೆ ಬೇಕಾದಷ್ಟು ಖಂಡಿಸು; ಅತ್ಯಾಯಾಸ ಮಾತ್ರವಾದರೆ, ಅನ್ಯರಿಂದ ಕಾರ್ಯಭಾರ ವಿಳಿಸಿಕೊಂಡರಾಯಿತು.

ಮ. ವಿ. ಪೈ.

ನೋಟೀಸು.
ಮಂಗಳೂರು ಡಿ. ಮುನ್ಸಿಫ ಕೋರ್ಟಿನಲ್ಲಿ.

S. C. No. 555/1943.

ಮಿಜಾರ ಜನಾರ್ದನ ಪೈ— ವಾದಿ.

ಸಾಂತ ಸೆಟ್ಟಿ— ಪ್ರತಿವಾದಿ

ಸದ್ರಿ ಪ್ರತಿವಾದಿ ಸಾಂತ ಸೆಟ್ಟಿ—ಕಾರಂಬಾಡಿ ತ್ಯಾಂಪ ಅಡಪರ ಅಳಿಯ. ಬಂಜಾಲ ಗ್ರಾಮದಲ್ಲಿ ಇರುವದು—ಇವರೀಗೆ

ಪ್ರತಿವಾದಿಯು ತಾ. 3-9-1942ರಲ್ಲು ವಾದಿಗೆ ರೂಪಾಯಿ 157/-ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಅಸ್ಲು ಬಡ್ಡಿ ಹಣಗಳು ರೂಪಾಯಿ 170-13-3 ವಗಯಿರೆ ಬರಮಾಡಿಕೊಳ್ಳುವರೇ ಸದ್ರಿ ಪ್ರತಿವಾದಿಯ ಮೇಲೆ ವಾದಿಯು ಮಾಡಿದ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ಬರುವ ತಾ. 8-2-1944ರಲ್ಲು ಹಗಲು 10½ ಗಂಟೆಗೆ ತನಿಖೆಗೆ ಯಿಟ್ಟಿರುತ್ತದೆ. ಸದ್ರಿ ದಿನ ಪ್ರತಿವಾದಿಯು ಖುದ್ದು ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಾಹರಣೆ ಯಿದ್ರೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಯಿಲ್ಲದಿದ್ರೆ ಯೇಕಪಕ್ಷವಾಗಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವದು.

(By order of the Court)

M. Keshava Pai,

Mangalore. 20 1-1944. } Counsel for plaintiff

ಸಂಗೀತ ಕಚೇರಿ:—ವಿದ್ವಾಂಸ 'ಸುಂದರ ತರುಣ' ವಿಂಸ ಚೂಡಾಮಣಿಯು ಸಂಗೀತ ಕಚೇರಿಯೊಂದು ತಾ 17ರಲ್ಲಿ ಶ್ರೀ ರಾಮಕೃಷ್ಣ ಪ್ರಬೋಧಿನಿಯ ಶ್ರೀ ಆಚಾರ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೋತೃವರ್ಗ ಚಕಿತರಾದರು.

ಮಂಗಳೂರು.

ರಾಮಕೃಷ್ಣ ವಿದ್ಯಾರ್ಥಿ ಭವನ:- ದಿನಾಚರಣೆಯು ತಾ 29ನೇ ಶನಿವಾರ ಸಂಜೆ 6 ಗಂಟೆಗೆ ಜರಗಲಿರುವುದು.

ಉಡುಪಿ ತಾಲೂಕು ಜಮೀನ್ದಾರರ ಸಂಘ:—ದ ಸಭೆಯೊಂದು ತಾ. 6-2-44ನೇ ಆದಿತ್ಯವಾರ ನವಯುಗ ಪ್ರೆಸ್ಸಿನಲ್ಲಿ ಜರಗಲಿರುವುದು. ಸಭೆಯಲ್ಲಿ 31-1-43ರ ತನಕ ಆಯವ್ಯಯ ಪಟ್ಟಿ, ಕಾರ್ಯಕಾರಿ ಮಂಡಳಿಯ ಚುನಾವಣೆ, ಮತ್ತು ಸಂಘವನ್ನು ರಿಜಿಸ್ಟ್ರ ಮಾಡುವಿಕೆ ಮೊದಲಾದ ವಿಷಯಗಳು ಚರ್ಚಿಸಲ್ಪಡುವವು, ಎಲ್ಲಾ ಸದಸ್ಯರೂ ಬರಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ರಾಷ್ಟ್ರೀಯ ಯುದ್ಧ ಮುಖ ಸಪ್ತಾಹ:—ವು ಪರ್ಯಾಯದ ವೇಳೆ 7ದಿನಗಳವರೆಗೆ ಸಂಕೀರ್ತನೆ, ಭಾಷಣ, ಗಾಯನ, ನರ್ತನ ಮೊದಲಾದ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು. ಸಪ್ತಾಹದ ಸಮಯ ರಾಷ್ಟ್ರೀಯ ಯುದ್ಧ ಮುಖದ ಪ್ರಚಾರಕ ವಾಹನವು ಇಲ್ಲೇ ಇದ್ದು ಪ್ರತಿ ದಿನವೂ ಯುದ್ಧ ಸಂಬಂಧವಾದ ಚಿತ್ರಪ್ರದರ್ಶನ ಮಾಡುತ್ತಿತ್ತು. ತಹಸೀಲ್ದಾರ್ ಶ್ರೀ ಕೆ. ಕೆ. ಕುದ್ವರ ಅವಿಶ್ರಾಂತ ಶ್ರಮ ಮತ್ತು ವ್ಯವಸ್ಥೆಯಿಂದ ಯಶಸ್ವಿಯಾಗಿ ನೆರವೇರಿತೆಂದು ತಿಳಿದು ಬರುತ್ತದೆ.

ನಾಟಕ:—ಸಿದ್ದಾಪುರದ ಜಯಕರ್ನಾಟಕ ನಾಟಕ ಮಂಡಳಿಯವರು ಇಲ್ಲಿ ಮೊಕ್ಕಾಂಮಾಡಿದ್ದು ಚಿತ್ರಾಂಗದ, 'ಬಡತನದ ಭೂತ' ಮೊದಲಾದ ನಾಟಕಗಳನ್ನು ಪ್ರದರ್ಶಿಸುತ್ತಿರುವರು.

ಅಖಿಲ ಭಾರತ ಉತ್ಪಾದಕರ ಸಂಘ:—ಇದರ ದ. ಕ. ಜಿಲ್ಲಾ ಶಾಖೆಯ ಸಭೆಯೊಂದು ಕೆನರಾ ಮ್ಯೂಚುವಲ್ ಇನ್ಶೂರೆನ್ಸ ಕಂಪೆನಿಯ ಕಟ್ಟಡದಲ್ಲಿ ತಾ. 21ರಲ್ಲಿ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ. ಟಿ. ಅನಂತ ಪೈಗಳು ಸರ್. ಎಂ. ವಿಶ್ವೇಶ್ವರಯ್ಯನವರಿಂದ ಸ್ಥಾಪಿತವಾದ ಈ ಸಂಘದ ಮಾಹಿತಿಯನ್ನಿತ್ತರು. ಡಾ| ಟಿ. ಮಾಧವ ಪೈ, ಡಾ| ಸುಂದರಾಮ ಪೈಗಳು, ಡಾ| ಕೆ. ಯಲ್. ಪಿಕಳೆರು ಇಂತಹ ಸಂಘದ ಅತ್ಯಾವಶ್ಯಕತೆಯ ಕುರಿತು ಮಾತನಾಡಿದರು, ಬಳಿಕ ಸದಸ್ಯರಾದವರೊಳಗಿನ ಒಂದು ಆಡಳಿತ ಕಮಿಟಿಯು ರಚಿಸಲ್ಪಟ್ಟು ಮಂಗಳೂರು ಪತ್ರಿಕೋದ್ಯೋಗಿಗಳ ಪಂಕ್ತಿಗೆ ಬರುವ ಶ್ರೀ ಸಿ. ಆರ್. ಶ್ರೀನಿವಾಸನನ್ನು ಉಡುಪಿಗೂ ಆಮಂತ್ರಿಸಬೇಕೆಂದಾಯಿತು.

ಮಾನಪತ್ರ:—ಈಗ ತಾನೆ ತಮ್ಮ ಎರಡು ವರ್ಷಗಳ ಪರ್ಯಾಯವನ್ನು ನಿರ್ವಿಘ್ನವಾಗಿ ನೆರವೇರಿಸಿಕೊಂಡು ಪರ್ಯಾಯ ಪೀಠದಿಂದ ಎದ್ದ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರಿಗೆ ತಾ. 23ರಲ್ಲಿ ಮಾನಪತ್ರವೊಂದು ಉಡುಪಿ ನಿವಾಸಿಗಳಿಂದ ಸಮರ್ಪಿಸಲ್ಪಟ್ಟಿತು, ಶ್ರೀ. ಆರ್. ಆರ್. ಕುಂಜೂರರು ಮಾನಪತ್ರವನ್ನೋದಿದರು. ಶ್ರೀ. ಬಿ. ತ್ಯಾಗರಾಜ ಶೆಟ್ಟಿ, ಬಿ. ಎ. ಎಲ್. ಟಿ. ಯವರು ಶ್ರೀಗಳವರ ಗುಣಕಥನ ಮಾಡಿ ಅದನ್ನು ಸಮರ್ಪಿಸಿದರು. ಶ್ರೀ ಕೋಂಡ್ಯಲ್ಲರೂ ಸ್ವಾಮಿಯರ ಧೈರ್ಯ, ಸಾಹಸ, ವಿಚಾರ ವಿವೇಕಗಳನ್ನು ಶ್ಲಾಘಿಸಿದರು. ಇದೇ ದಿನ ಶ್ರೀಗಳವರು ತಮ್ಮ ಪರ್ಯಾಯ ಕಾಲದಲ್ಲಿ ಸಹಕಾರವನ್ನಿತ್ತ ಹಿಂದುಸ್ಥಾನ್ ಸ್ಕೌಟ್ ದಳದವರನ್ನು ಬರಮಾಡಿಸಿ ಉಪಚರಿಸಿ ಪ್ರೋತ್ಸಾಹಿಸಿದರು.

ಸಪ್ತೋತ್ಸವ:— ಶ್ರೀ ಕೃಷ್ಣಾಪುರ ಮಠದ ಕಡೆಯಿಂದ ತಾ. 9-1-44ರಿಂದ 15ರ ತನಕ ವಾಡಿಕೆಯಂತೆ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ತಾ 14ರಲ್ಲಿ ಮಕರ ಸಂಕ್ರಾಂತಿ ಜಾತ್ರೆಯೂ ತಾ 15ರಲ್ಲಿ ಚೂರ್ಣೋತ್ಸವವೂ ವಿಶೇಷ ಸಂಭ್ರಮದಿಂದ ನೆರವೇರಿತು. ತಾ 17ರಲ್ಲಿ ಶ್ರೀ ಕೃಷ್ಣಾಪುರ ಮಠದ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರು ಪರ್ಯಾಯ ಪಟ್ಟವನ್ನು ಬಿಟ್ಟುಕೊಡುವ ಪೂರ್ವ ಸೂಚನೆಯಾಗಿ ಮಹಾ ಸಂತರ್ಪಣೆಯನ್ನು ನೆರವೇರಿಸಿದರು. ರಾತ್ರಿ ವಿಜೃಂಭಣೆಯ ರಥೋತ್ಸವವಿತ್ತು. ಇವರ ಮಠದೆದುರಿನ ಚಪ್ಪರವು ನವೀನತರದ್ದಿದ್ದು ಕಲಾಪೂರ್ಣವಾಗಿತ್ತು.

ಪರ್ಯಾಯ:—ತಾ18ರಲ್ಲಿ ಪುತ್ತಿಗೆ ಶ್ರೀಪಾದಂಗಳವರ ಪರ್ಯಾಯ ಮಹೋತ್ಸವವು ಜರಗಿತು. ಪುತ್ತಿಗೆ ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರ ಸಂಸ್ಥಾನದ ಪೀಠಸ್ಥ ಶಿಷ್ಯ ಶ್ರೀ ಸುಜ್ಞಾನೇಂದ್ರ ತೀರ್ಥ ವಿದ್ಯಾವಲ್ಲಭ ಶ್ರೀ ಪಾದಂಗಳವರೊಂದಿಗೆ ಮೆರವಣಿಗೆಯಾಗಿ ಬಂದು ಪರ್ಯಾಯ ಪೀಠವನ್ನೇರಿದರು. ಎಲ್ಲೆಲ್ಲಿಯೂ ವಾದ್ಯ ಘೋಷಣೆ! ಜನಸಮೂಹದ ಗದ್ದಲ! ಪ್ರಾರಂಭದಲ್ಲಿ ಮದ್ರಾಸಿನಿಂದ ಬಂದಿದ್ದ ಕೃಷ್ಣಭಕ್ತೆ ಮಿಸ್ ಚೂಡಾಮಣಿಯವರ ಗಾಯನ ಸಭಾರಂಭವಾಗಿ ಶ್ರೀ ಅರೂರು ಲಕ್ಷ್ಮೀನಾರಾಯಣರ ಸ್ವಾಗತ ಭಾಷಣವಾಯಿತು. ಬಳಿಕ ಪಟ್ಟಣಿಗರು, ಶ್ರೀಪಾದಂಗಳವರಿಗೆ ಮಾನಪತ್ರಗಳ ಸಮರ್ಪಣೆ ಪ್ರಶಂಸಾಭಾಷಣ, ಸಭಾ ಸತ್ಕಾರಗಳಾದುವು. ಮಿಸ್ ಚೂಡಾಮಣಿಯವರ ಅಮೋಘ ಸಂಗೀತಕ್ಕೆ ಮೆಚ್ಚಿ 'ಸಂಗೀತ ಚೂಡಾಮಣಿ' ಎಂಬ ಬಿರುದನ್ನು ಬಂಗಾರದ ಪದಕವನ್ನು, ಶ್ರೀ ಪಾದಂಗಳವರೂ ದಯಪಾಲಿಸಿದರು, ಅನಂತರ ಇತರ ಸ್ವಾಮಿಗಳವರಿಂದಲೂ ಕೆಲವು ಮಹನೀಯರಿಂದಲೂ ಸಂಗ್ರಹಿಸಿ ರೂ 500-ರ ನಿಧಿಯನ್ನು ಚೂಡಾಮಣಿಯವರಿಗೆ ಅರ್ಪಿಸಲಾಯಿತೆಂದು ತಿಳಿದು ಬರುತ್ತದೆ. ಮಧ್ಯಾಹ್ನ ಪರ್ಯಾಯ ಕಾಲಿತ ಶ್ರೀ ಪಾದಂಗಳವರ ಮಹಾಸಂತರ್ಪಣೆಯೂ ರಾತ್ರಿ ಉತ್ಸವವೂ ಅತ್ಯುತ್ಸಾಹದಿಂದ ನೆರವೇರಿಸಲ್ಪಟ್ಟವು. ಪರ್ಯಾಯ ಮಠದ ಚಪ್ಪರವು ಅದೊಂದು ಅತ್ಯಾಧುನಿಕ ಮಾದರಿಯಿಂದ ಕಟ್ಟಿದಂತಿದ್ದು ಆಕರ್ಷಣೀಯವಿತ್ತು.

ಕೋಲೆರಾ ಮತ್ತು ಸಿಡುಬು:—ಉಡುಪಿಯಲ್ಲಿ ಆಸುಪಾಸಿನಲ್ಲಿ ಪಸರಿಸಿದ್ದ ಕೋಲೆರಾವು ಸಂದುಗೊಂದಿನಲ್ಲಿ ಇನ್ನೂ ಇರುವುದೆಂದೂ ಅಲ್ಲಲ್ಲಿ ಸಿಡುಬು ಕೂಡಾ ಕಾಣುತ್ತಿರುವುದೆಂದೂ ತಿಳಿದು ಬರುತ್ತದೆ. ಆಸುಪಾಸಿನ ಗ್ರಾಮಗಳಲ್ಲಿ ಇವುಗಳ ಹಾವಳಿ ವಿಶೇಷವಿದ್ದು ಹಲವು ಮರಣಗಳಾದ ವಾರ್ತೆ ಇದೆ, ಸಂಬಂಧಪಟ್ಟವರು ಇದನ್ನು ತಡೆಗಟ್ಟಲು ನಾಡಿಕೆಯ ಕೆಲಸಮಾಡುತ್ತಿರುವರೆಂದು ಸುದ್ದಿ.

ಧೂಳೀಧೂಳು:—ಉಡುಪಿಯ ವಿಶೇಷಗಳಲ್ಲಿ ಧೂಳಿನ ಹಾವಳಿಯು ವಿಶೇಷವೇ ಆಗಿರುವುದು. ರಸ್ತೆಯ ಜಲ್ಲಿಕಲ್ಲು ಮುಚ್ಚಲೆಂದು ಮುನ್ಸಿಪಾಲಿಟಿಯವರು ಇತ್ತೀಚೆಗೆ ರಸ್ತೆ ಮೇಲೆಲ್ಲಾ ಹುಡಿ ಮಣ್ಣು ಚೆಲ್ಲಿದರು. ನೀರಿಲ್ಲ- ಆ ಮಣ್ಣು ಮತ್ತಷ್ಟು ಹುಡಿಯಾಗಿ, ಧೂಳಾಗಿ ಈಗ ದಿನ ನಿತ್ಯ ಹಾವಳಿಯನ್ನುಂಟುಮಾಡುತ್ತಿದೆ, ಉಡುಪಿಯ ನಿವಾಸಿಗಳೂ ಪ್ರವಾಸಿಕರೂ ದಿನ ನಿತ್ಯವೂ ಇದರ ಪ್ರಸಾದವನ್ನು ಪಡೆಯುತ್ತಿದ್ದಾರೆ. ಮುನ್ಸಿಪಾಲಿಟಿಯವರು ನೀರು ಹಾಕಿ ಧೂಳು ಹಾರದಂತೆ ಮಾಡುವ ಬದಲಿಗೆ ಮಣ್ಣು ಹಾಕಿ ಧೂಳು ಏಳುವಂತೆ ಮಾಡಿದ್ದಾರೆ. ಮುನ್ಸಿಪಾಲಿಟಿಯವರು ಇನ್ನಾದರೂ ನೀರು ಹಾಕಲು ತಕ್ಕ ವ್ಯವಸ್ಥೆಯನ್ನು ಮಾಡುವರೆ? ಉತ್ಸವದ ವೇಳೆ ರಥಬೀದಿಗೆ 'ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ' ಎಂಬಂತೆ ತುಸು ನೀರು ಚುಮುಕಿಸುವ ಕಣ್ಣುಕಟ್ಟಿನ ವ್ಯವಸ್ಥೆ ಮಾಡಲಾಗಿತ್ತು. ಸಾರ್ವಜನಿಕರ ಆರೋಗ್ಯ ರಕ್ಷಣೆಗೆಂದು ಉತ್ಸವದ ವೇಳೆ ಇಲ್ಲಿ ಮೊಕ್ಕಾಂ ಮಾಡಿರುವ ಜಿಲ್ಲಾ ಆರೋಗ್ಯಾಧಿಕಾರಿಗಳು ಈ ಧೂಳಿನ ಕಾಟದಿಂದ ಜನರು ಪೀಡಿತರಾಗುವುದನ್ನು ನೋಡಿಯೂ ಸುಮ್ಮನಿರುವುದು ಆಶ್ಚರ್ಯವಲ್ಲವೇ ಎಂದೊಂದು ಬಾತ್ಮಿ.

ಕಿರಿಯರ ಸಮ್ಮೇಲನ:— ಅಖಿಲ ಕರ್ನಾಟಕ ಕಿರಿಯರ ಸಮ್ಮೇಲನವೆಂಬ ಸಮ್ಮೇಲನವೊಂದು ತಾ. 15, 16, 17ರಲ್ಲಿ ಉಡುಪಿ ಬೋರ್ಡ್ ಹೈಸ್ಕೂಲಿನ ಆವಾರದಲ್ಲಿ ಅದಕ್ಕಾಗಿ ನಿರ್ಮಿಸಲ್ಪಟ್ಟ ಭವ್ಯ ಚಪ್ಪರದಲ್ಲಿ ಜರಗಿತು. ಪ್ರಾರಂಭದ ದಿನ ಬೆಳಗ್ಗೆ ಧ್ವಜಾರೋಹಣ, ಪಂದ್ಯಾಟಗಳಾದುವು ಮಧ್ಯಾಹ್ನ ಶ್ರೀ. ಶಿವರಾಮ ಕಾರಂತರು ಉದ್ಘಾಟನಾ ಭಾಷಣಮಾಡುತ್ತಾ, "ಎಳೆಯರ ಜೀವನಕ್ಕೆ ಬೆಳಕು ತೋರುವಂಥಾ ಪ್ರಶಾಂತ ನಮಗೆ ಬೇಕು; ಹಿರಿಯರ ಮೇಲ್ಪಂಕ್ತಿಗಾಗಿ ಕಿರಿಯರು ಕಾಯಬೇಕಿಲ್ಲ, ಹಿರಿಯರ ಆಶ್ರಯ ಬೇಕಿದ್ದರೆ ನಮಗಿರಲಿ. ಆದರೆ ಅವರ ಮುದುಕು ನಮಗೆ ಬೇಡ" ಎಂಬರ್ಥದ ಭಾಷಣ ಮಾಡಿದರು. ಹಿರಿಯರ ಪರವಾಗಿ ಸ್ವಾಗತಾಧ್ಯಕ್ಷ ಡಾ| ಟಿ ಮಾಧವಪೈಗಳು 'ಶ್ರೀ ಕಾರಂತರು ಏನೇ ಹೇಳಲಿ, ಹಿರಿಯರು ಮಾಡುವುದೆಲ್ಲಾ ಕಿರಿಯರಿಗಾಗಿ, ಅವರು ಸರಿದಾರಿ ಹಿಡಿದುಕೊಂಡು ಹೋಗುವಂತೆ ಅವರಿಗೆ ಹಿರಿಯರ ಸೂಚನೆ ಅತ್ಯಗತ್ಯ. ಹಿರಿಯರ ಸಲಹೆ ಇಲ್ಲದಿದ್ದರೆ—ಅದನ್ನು ಮಕ್ಕಳು ಕೇಳದಿದ್ದರೆ-ಹಿರಿಯರಾಗಲೀ ಕಿರಿಯರಾಗಲಿ 'ಡಿಸ್ ಪ್ಲಿನ್' ಪಾಲಿಸದಿದ್ದರೆ ಆಗುವ ಅವಸ್ಥೆ ಇದೇ. ಇಲ್ಲೀಗ ನೆರೆದಿರುವ 30, 40 ಹಿರಿಯರು ಎದ್ದು ಹೋದರೆ ಉಳಿಯುವುದು ಬರೇ ಹತ್ತಿಪ್ಪತ್ತು ಮಂದಿ ಹುಡುಗರು ಮತ್ತು ಬಾಲಿಚಪ್ಪರ. ಹೊರಗಿನವರ ಸುದ್ದಿಯಂತಿರಲಿ, ಇಲ್ಲಿ ಮೂರು ಹೈಸ್ಕೂಲುಗಳು ಮತ್ತು ಕರ ಎಲಿಮೆಂಟರಿ ಶಾಲೆಗಳು ಇವೆ. ಸುತ್ತುಮುತ್ತಲೂ ಇತರ ಶಾಲೆಗಳಿವೆ. ಅಲ್ಲಿಯ ಹುಡುಗರನ್ನಾದರೂ ಆಮಂತ್ರಿಸಿ ಈ ಸಮ್ಮೇಲನದಲ್ಲಿ ಅವರೂ ಭಾಗವಹಿಸುವಂತೆ ಮಾಡಬಾರದಿತ್ತೆ? ಈ ಸಮ್ಮೇಲನವು ಉಡುಪಿಯ ಕೀರ್ತಿಗೆ ಮತ್ತು ಕಿರಿಯರಿಗೆ ಅವಮಾನವನ್ನುಂಟುಮಾಡುವುದಾಗಿದೆ" ಎಂದು ಆವೇಶಪೂರ್ವಕವಾಗಿ ಮಾತನಾಡಿದರು, ರಾತ್ರಿ ಬಾಲ-ಬಾಲಕಿಯರ ನಾಟಕಾಭಿನಯವಿತ್ತು. ತಾ16ನೇ ಬೆಳಗ್ಗೆ ಕಿರಿಯರ ಭಾಷಣ ಸ್ಪರ್ಧೆಗಳದ್ದುವು. ಮಧ್ಯಾಹ್ನ 5ಗಂಟೆಗೆ ಶ್ರೀ N. K. ಕುಲಕರ್ಣಿಯವರು 'ನಾಳೆಯ ಕನ್ನಡ-ಕರ್ನಾಟಕ' ಎಂಬ ಉಪನ್ಯಾಸದಲ್ಲಿ ಕನ್ನಡ ನಾಡು, ಅದರ ಪ್ರಾಚೀನ ವೈಭವ, ಹಿಂದಿನ ಕನ್ನಡದ ಇತಿಹಾಸದಿಂದ ಇಂದು ನಮಗೆ ಬಂದ ಹೊಸ ದೃಷ್ಟಿ, ಕನ್ನಡದ ಸಾಹಿತ್ಯ ಕಲೆಗಳಲ್ಲಿರುವ ಕುಂದು ಕೊರತೆ ಮೊದಲಾದುವನ್ನು ವಿವರಿಸಿದರು. ಕೆಲವರು ಮಕ್ಕಳ ಪದ್ಯಗಳನ್ನು ಹಾಡಿದರು. ಸಂಗೀತ ಸ್ಪರ್ಧೆಯೂ ನಡೆಯಿತು. ರಾತ್ರಿ ನಾಟಕ-ನೃತ್ಯಗಳದ್ದುವು. ಬನ್ನಂ[illegible]ಶಾಲೆಯ ಬಾಲಕಿಯರ 'ಸುಧನ್ವಕಾಳಗ' ಎಂಬ [illegible]ಕ್ಷಗಾನ ನಾಟಕವನ್ನಭಿನಯಿಸಿದರು.

ತಾ 17ರಲ್ಲಿ ಶ್ರೀ| ತ. ರಾ. ಸುಬ್ಬರಾಯರು 'ಮಕ್ಕಳೂ ಕಲಾಭಿರುಚಿಯೂ' ಎಂಬ ಕುರಿತು ಮಾತನಾಡಿದರು. ಕೆಲವು ಹಿರಿಯರು 'ಪ್ರಚಂಡ'ರಾ[illegible] ಮಕ್ಕಳನ್ನು ಅಭಿನಂದಿಸಿ ಕೆಲ ಸೂಚನೆಗಳನ್ನಿತ್ತರು. ಶ್ರೀ ಕೆ. ಎಲ್. ಭಟ್ಟರು ಭಾರತೀಯ ಸ್ತ್ರೀ[illegible]ದ ಕುರಿತು ಮಾತನಾಡಿದರು.

ರಾತ್ರಿ ನಾಟಕ- ನರ್ತನ, ಪ್ರಹಸನ, ಮಂ[illegible] ಬಹುಮಾನ ವಿತರಣೆ ಧನ್ಯವಾದಾರ್ಪಣೆಗಳದ್ದುವು.

ಇಂತೂ ಉಡುಪಿಯ ಕೆಲವು ಕಿರಿಯರೂ, ಅ[illegible]ರ ಜತೆಗೆ ನಡುವೆ ಗಂಟುಬಿದ್ದ ಮಂಗಳೂರಿನ ಕೆ[illegible]ವು ತರುಣರೂ ಸೇರಿ ಈ ಸಮ್ಮೇಲನವನ್ನು ಯ[illegible]ಸ್ವಿಯಾಗಿ ನಡೆಸಿಕೊಂಡರೆಂಬಲ್ಲೇ ಅವರು ಅ[illegible]ಭಿವಂದನೀಯರು. ಈ (ಸಮ್ಮೇಲನವು 'ಕಿರಿಯ[illegible] ಪ್ರಪಂಚ'ದವರದ್ದೆಂದು ಕೆಲವರು ತಪ್ಪು ಗ್ರಹಿ[illegible]ಕೊಂಡಿರುವುದಾಗಿಯೂ ಕೆಲವರಿಗೆ ಹಾಗೆ ಕಲ್ಪ[illegible] ಬರುವಂತೆ ಮಾಡಲಾಗಿರುವುದಾಗಿಯೂ ಸುದ್ದಿ.[illegible]ದರೆ ಈ ಸಮ್ಮೇಲನಕ್ಕೂ ಕಿರಿಯರ ಪ್ರಪಂಚಕ್ಕೂ ಯಾವ ಸಂಬಂಧವೂ ಇಲ್ಲವೆಂದು ಪ್ರಕಟವಾಗಿತ್ತು.)

ಮುಂಬಯಿ:—ಬಂಟರ ಯೂನಿಯನ್ ನಾಡ[illegible] ಸಂಘದ ನು ಇದರಿಸಲ್ಪಟ್ಟ ಮಹಾ ಸಭೆಯು [illegible] 16-1-44ರಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಮ[illegible]ಲ್ಕಿ ದೊಂಬ ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿದಾಗ ಸಂ[illegible]ಘದ ಮೆಂಬರರು ಬಹಳ ಕಡಿಮೆ ಇದ್ದುದರಿಂ[illegible] ಮೆಂಬರರಲ್ಲದ ಕೆಲವರು ಬಂದು ಆಡಳಿತ ಮಂ[illegible]ಳಿಗೆ ನಾಲ್ವರನ್ನು ಆರಿಸಿದುದು ಸಂಘದ ಕ್ರಮ[illegible]ಬಂಧನೆಗೆ ತೀರಾ ವಿರುದ್ಧವಾಗಿರುವುದು. ಆದ್ದರಿಂ[illegible] ಸಂಘದ ಮೆಂಬರರೆಲ್ಲರೂ ಇದನ್ನು ತಿಳಿದು ಸಂ[illegible]ದೇಳಿಗೆಯನ್ನು ಬಯಸಬೇಕಾಗಿ ಸಂಘದ ಮೆಂ[illegible]ರಲ್ಲೊಬ್ಬರಾದ ಶ್ರೀ. ವೈ. ಶ್ಯಾಮ ಶೆಟ್ಟರು ಬ[illegible]ಯುತ್ತಾರೆ.

NOTICE.

In the Court of the District Munsiff of Mangalore

S. C. No. 556 of 1943.

Between:—

P. N. Walia Plaintiff.

and

Somaya Pujari—Defendant.

To

The Defendant—Somaya Pujari nephew of Antha Pujari, residing at Hejmadi village, Mangalore Taluq.

Please take notice that the Plaintiff abovenamed has filed the above suit for recovery of Rs. 108—0—0 being the arrears of rental due till 31-3-1943 and that the same stands posted to 29-1-1944 for final disposal.

Mangalore, 19-1-1944. **M. A Talwar,** Vakil for Plaintiff.

ಯಶಸ್ವಿಯಾಗಿ 50 ದಿನಗಳ ತನಕ ನಡೆದ ಪ್ರಗತಿಯುವರ

ಕನ್ನಡ ಹರಿಶ್ಚಂದ್ರ—

ತಾ 28—1—1944ನೇ ಶುಕ್ರವಾರ ದಿನ

ಸುವರ್ಣ ಮಹೋತ್ಸವ

ಬರುವ ಚಿತ್ರ

ತಾರೀಖು 29—1—44ರಿಂದ ಫಮರ್ಮಾನ್

ಅನಂತರ:

ಬಂಗಲ್ ಪ್ರಿನ್ಸೆಸ್, ಬಸಂತ್, ಚೌರಂಗಿ, ಫುನರ್ ಮಿಲನ್ ಇತ್ಯಾದಿ

ವರನು ಬೇಕಾಗಿದೆ.

ಉಡುಪಿ ಮಧ್ವಬ್ರಾಹ್ಮಣ ಮತದ 19 ವರುಷ ಪ್ರಾಯದ S. S. L. C. ಕ್ಲಾಸಿನಲ್ಲಿ ವಿದ್ಯಾಭ್ಯಾಸ ಮಾಡುವ ಒಬ್ಬ ಹುಡುಗಿಗೆ ಯೋಗ್ಯ ವರನು ಬೇಕಾಗಿದೆ. ಇಚ್ಛೆ ಉಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

"Satyanarayana"
C/O "Navayuga"
Kanarese Weekly, UDIPI.
S. K.

ಸುದ್ದಿ ಸೂಚನೆ.

● [illegible]ತ್ಯದಲ್ಲಿ ಕ್ರಿಮಿಯಾದ ಕೆರ್ಚ್‌ನ ಬಳಿ ರಶ್ಯನ್ ದಂಡುಗಳು ಹೊಸ ಧಾಳಿಯಾರಂಭಿಸಿವೆ. ಸಮರವು ಅತ್ಯಂತ ಬಿರುಸಾಗಿ ಸಾಗಿದೆ.

● ಉತ್ತರ ರಂಗದಲ್ಲಿ ಲೆನಿನ್‌ಗ್ರಾಡ್ ವಳಯದ ಜರ್ಮನರ ರಕ್ಷಣಾ ಲೈನು ಕೆಂಪು ಸೇನೆಯಿಂದ ನುಚ್ಚುನೂರಾಗಿ ನಾಜಿಗಳು ಹಿಂದೆಗೆಯುತ್ತಿದ್ದಾರೆ.

○ ರಶ್ಯಾ-ಪೋಲೆಂಡ್ ಸಮಸ್ಯೆಯ ತೀ[illegible]ರ್ಮಾನದ ಕೀಲಿ ಕೈ ಮೋಸ್ಕೋದಲ್ಲಿಲ್ಲ ಲಂಡನಿನಲ್ಲಿದೆ. ಸದ್ಯದ ಪೋಲೆಂಡ್ ಸ[illegible]ಕಾರವು ಬದಲಾವಣೆಯಾಗಿ ತಮ್ಮ ನ[illegible] ಬಿಗೆಗರ್ಹರಾದ ಅಧಿಕಾರಿಗಳು ಬಾರ[illegible] ಸಂಧಾನವಿಲ್ಲ ಎಂದು ರಶ್ಯನರ ಖಂ[illegible]ತುಂಡ ಅಭಿಪ್ರಾಯ

ಸ್ಥಿತಿಗತಿ

ಕೆಂಪು ಸೇನೆಯ ವಿಜಯೀ ಧಾಳಿ.

ರಷ್ಯಾ ರಣರಂಗಗಳಲ್ಲಿ ಜರ್ಮನರು ಸಂದರ್ಭಕ್ಕೊಗ್ಗುವ ನಿಶ್ಚಿತ ಯೋಜನೆಯಂತೆ ಹಿಂದೆಗೆಯುತ್ತಿದ್ದಾರೆ ಎನ್ನುವ ಬದಲು ನಿಸ್ಸಂಶಯವಾಗಿ ಶಕ್ತಿಗುಂದಿದ್ದಾರೆ ಎನ್ನಲಾಗುವ ಯುದ್ಧ ಘಟನೆಗಳೊದಗಿವೆ. ಕೆಂಪು ಸೇನಾನಿ ಜನರಲ್ ವಾಟುಟಿನ್ ಪೋಲೆಂಡಿನ ಗಡಿಯೊಳಗೆ ನುಗ್ಗಿ ಯುದ್ಧಗತಿಯನ್ನೇ ಬದಲಾಯಿಸುವದರೊಂದಿಗೆ ರಶ್ಯನ್ ಸೇನೆಗೆ ಜಗದ್ಗೌರವವನ್ನೂ ನೊರಕಿಸಿದ್ದಾನೆ. ಈ ವಿಜಯಕ್ಕೆ ಹೊಂದಿಕೆಯಾಗಿ ಕೆಂಪು ಸೇನೆಯೀಗ ಆ ಭಾಗದ ಸಾವಿರ ಮೈಲುದ್ದದ ರಣರಂಗದಲ್ಲಿ ಪಶ್ಚಿಮಾಭಿಮುಖವಾಗಿ ಧಾವಿಸಿದೆ.

ಲೆನಿನ್‌ಗ್ರಾಡ್ ಮುಖ.

ಸುಮಾರು 16 ತಿಂಗಳ ಮೊದಲು ರಶ್ಯನರ ಅತಿ ಪ್ರೀತಿಯ ನಗರ ಲೆನಿನ್‌ಗ್ರಾಡಿನ ಮೇಲೆ ಜರ್ಮನರ ಭೈರವ ಮುತ್ತಿಗೆಯಾರಂಭವಾಗಿ, ಆ ಮೇಲೆ ನಾಲ್ಕು ತಿಂಗಳೊಳಗೆ ರಶ್ಯಾನರ ಆಕ್ರಮಣವನ್ನು ದೂರಗೊಳಿಸಿದ್ದರೂ ಈ ವರೆಗೂ ಮುತ್ತಿಗೆ ಮುಕ್ತಾಯವಾಗಿರಲಿಲ್ಲ. ಕಳೆದ ವಾರ ನೂರು ಮೈಲು ವಿಸ್ತೀರ್ಣದ ರಣರಂಗದಲ್ಲಿ ರಶ್ಯನರು ಎರಡು ನೂತನ ಧಾಳಿಯನ್ನಾರಂಭಿಸಿ ವಿಜಯಿಗಳಾಗಿದ್ದಾರೆ. ಲೆನಿನ್‌ಗ್ರಾಡ್ ನಗರದ ದಕ್ಷಿಣ ಪಶ್ಚಿಮಗಡೆಯಿಂದ ಕೆಂಪು ಸೇನೆಯು ಚರಿತ್ರಾರ್ಹ ಧಾಳಿಯಾರಂಭಿಸಿ, ಆ ವಲಯದಲ್ಲಿ ಸುಮಾರು 20 ಮೈಲೊಳಭಾಗದ ವರೆಗೂ ಜರ್ಮನರು ಕಟ್ಟಿದ್ದ ಬಲವಾದ ಕೋಟೆಯನ್ನು ಹಲವು ಕಡೆ ಮುರಿದು ಮುಂದೊತ್ತುತ್ತಿದ್ದಾರೆ. ಇದಕ್ಕೆ ಹೊಂದಿಕೆಯಾಗಿ ಉತ್ತರಗಡೆಯಲ್ಲಿ ಹಲವು ರಶ್ಯನ್ ಧಾಳಿಗಳಾರಂಭವಾಗಿವೆ. ಇವೆಲ್ಲವು ಫಲ ಕೊಡುವಾಗ ಜರ್ಮನರ ಭಾರೀ ಪರಾಜಯವನ್ನು ಕಾಣುವ ಸಂಭವವು ಹತ್ತಿರದಲ್ಲೇ ಇದೆ.

ಇಟೆಲಿಯಲ್ಲಿ

ಮಿತ್ರ ಸೇನೆಯ ಪ್ರಗತಿಗೆ ಕುಂದುಂಟಾಗಲಿಲ್ಲ. ಕಳೆದ ವಾರ ಒಂದೆರಡು ಸಾಹಸ ಕಾರ್ಯಗಳನ್ನೂ ಅವು ಕೈಕೊಂಡಿವೆ. 5ನೇ ದಳದ ಆಂಗ್ಲೋ ಅಮೆರಿಕಾನ ಸೈನಿಕರು ಪಶ್ಚಿಮ ಕರಾವಳಿಯಲ್ಲಿ ವಿರೋಧಿಯ ಪ್ರತಿಭಟನಾ ವ್ಯೂಹದೊಳಗಡೆ ತಳವೂರಿರುವರು ಇದು ರೋಮ್ ಆಕ್ರಮಣದ ಮಹಾ ಪ್ರಯತ್ನವಿದ್ದು ಅಲ್ಲಿ ಕಠಿಣ ಹೋರಾಟವನ್ನು ನಿರೀಕ್ಷಿಸಲಾಗಿದೆ. ಒಂದೆಡೆಯಲ್ಲಿ ಅಮೇರಿಕನ್ ಸೇನೆಯು ರೇಪಿಡೋ ನದಿಯನ್ನು ದಾಟಿ ಮುಂದೊತ್ತಿರುವುದು. ರೋಮ್ ನಗರ ವಲಯದ ವೈರಿ ವಿಮಾನ ನಿಲ್ದಾಣಗಳಲ್ಲಿ ಒಂದನ್ನು ಬಿಟ್ಟು ಮಿಕ್ಕೆಲ್ಲವೂ ನಿರರ್ಥಕಗೊಳಿಸಲ್ಪಟ್ಟವೆಯೆಂದೂ, ಜರ್ಮನರ ಸಂಚಾರ ಸಂಬಂಧಗಳಿಗೆ ತೊಡಕುಂಟಾಗಿದೆಯೆಂದೂ ತಿಳಿದುಬರುತ್ತದೆ.

ಜಪಾನರ ಸ್ಥಿತಿ.

ಶಾಂತ ಸಮುದ್ರದಲ್ಲಿ ಗಣನೀಯ ಯುದ್ಧ ಘಟನೆಯೇನೂ ನಡೆದಿಲ್ಲ. ಆದರೆ ಜಪಾನರ ಸಂಕಷ್ಟಗಳು ಸಾವಧಾನವಾಗಿ ಬೆಳೆಯುತ್ತಿರುವದೊಂದು ಖಚಿತವಾಗಿದೆ. ಜಪಾನರ ಧಾಳಿ ನಿರೋಧನೆಲೆಗಳಂತಿರುವ ಪೂರ್ವ ಶಾಂತ ಸಮುದ್ರದ ದ್ವೀಪಗಳ ಮೇಲೆ ಮಿತ್ರರ ಒತ್ತಡ ಬಲವಾಗುತ್ತಾ ಬರುತ್ತಿದೆ. ಕಳೆದ ಮಹಾಯುದ್ಧಕಾಲದಲ್ಲಿ ಮಿತ್ರ ರಾಷ್ಟ್ರಗಳ ಸಹಕಾರದಿಂದ, ಇಲ್ಲವೇ ಅವುಗಳನ್ನು ವಂಚಿಸಿ ಜಪಾನರು ಪಡೆದಿದ್ದ ಈ ದ್ವೀಪಗಳು ಅವರ ಕೈ ಬಿಡುವ ಕಾಲ ಸಮೀಪದಲ್ಲಿದ್ದಂತೆ ಕಾಣುತ್ತಿದೆ. ಜಪಾನರ ನಾವೆ, ವಿಮಾನ ನಿಲ್ದಾಣ, ದ್ವೀಪ ಕೇಂದ್ರಗಳ ಮೇಲೆ ಮಿತ್ರರ ವಿಮಾನ ಧಾಳಿಗಳು ನಡೆದಿವೆ. ಬರ್ಮದಲ್ಲಿ ಮಾಂಗ್ಡಾವನ್ನಾಕ್ರಮಿಸಿ ಮಿತ್ರ ಸೇನೆಗಳು ಬುಥಿಡಾಂಗ್ ಕಡೆ ಮುಂದೊತ್ತುತ್ತಿವೆಯಾದರೂ ಇದೊಂದು ಗಣನೀಯ ಧಾಳಿಯೆನ್ನಲಾಗುವದಿಲ್ಲ.

ರಶ್ಯಾ—ಪೋಲೆಂಡ್.

ತಿಕ್ಕಾಟವು ಈಗ ತುತ್ತ ತುದಿಗೆ ಮುಟ್ಟಿದೆ. ಕೆಂಪು ಸೇನೆ ಪೋಲೆಂಡ್ ಗಡಿಯೊಳಗೆ ನುಗ್ಗಿದೊಡನೆ ಲಂಡನಿನಲ್ಲಿರುವ ಪೋಲಿಶ್ ಅಧಿಕಾರಿಗಳು ರಶ್ಯಾ-ಪೋಲೆಂಡ್ ಗಡಿ ನಿರ್ಣಯವಾಗಬೇಕೆಂದು [illegible] ಸಿದರು ಈ ಕುರಿತು ಸ್ಟಾಲಿನರ ತ್ತಸೂಚನೆಯು ಉದಾರವಾದುದೆಂದು ಮಿತ್ರ ಪಂಗಡದವರ ಶ್ಲಾಘನೆ ಪಡೆದರೂ ಪೋಲೆಂಡ್ ಅಧಿಕಾರಿಗಳು ತೃಪ್ತಿ ಹೊಂದದ ದೆಸೆಯಿಂದ, ರಶ್ಯವು ಸದ್ಯದ ಪೋಲಿಷ್ ಅಧಿಕಾರಿಗಳೊಡನೆ ಸಂಧಾನವೇ ಅಸಾಧ್ಯವೆಂಬಷ್ಟು ಜಿಗುಪ್ಸೆ ಪ್ರದರ್ಶಿಸಿದೆ

ಉಡುಪಿ.

ಉಡುಪಿ ತಾಲೂಕು ವರ್ಗದಾರ ಸಂಘ:—ಇದರ ಸಭೆಯೊಂದು ತಾ. 16-1-44 ನೇ ಶುಕ್ರವಾರ್ನ ನವಯುಗ ಪ್ರೆಸ್ಸ್ ಕಟ್ಟಡದಲ್ಲಿ ವಕೀಲ್ ಶ್ರೀ-ಕೆ-ಜಿ-ಬಲ್ಲಾಳರ ಅಧ್ಯಕ್ಷತೆಯಲ್ಲಿ ನೆರೆದು ರೇಶನಿಂಗ್ ಕ್ಷೇತ್ರದೊಳಗಿರುವ ವರ್ಗದಾರರು ಮತ್ತು ಒಕ್ಕಲುಗಳು ತಮ್ಮ ಕುಟುಂಬ ವೆಚ್ಚಕ್ಕೆ, ಬೀಜಕ್ಕೆ ಮತ್ತು ಕೂಲಿತೆರಲು ಒಂದು ವರುಷಕ್ಕೆ ಬೇಕಾಗುವ ಬತ್ತ, ವ, ಅಕ್ಕಿಯನ್ನು ದಾಸ್ತಾನಿಟ್ಟು ಕೊಳ್ಳುವರೆ ಸಮ್ಮತಿಸುವಂತೆಯೂ ದೇವಸ್ಥಾನಗಳ ವಿನಿಯೋಗಗಳಿಗಾಗಿ ರೇಶನ್ ಕಾರ್ಡುಗಳಲ್ಲಿ ಸ್ಪೆಶಲ್ ರಿಯಾಯತಿ ತೋರಿಸುವಂತೆಯೂ ಸಂಬಂಧಪಟ್ಟ ಅಧಿಕಾರಿಗಳಿಗೊಂದು 'ಮೆಮೋರಾಂಡಮ್' ಕಳುಹಿಸುವ ನಿರ್ಧಾರವಾಯಿತು ಈ ಸಂಘವು ನಮೂದಿಸಿದಂತೆ ಎಗ್ರಿಕಲ್ಚರಲ್ ಡೆಮೋನ್‌ಸ್ಟ್ರೇಟರ್ ಮತ್ತು ಇತರ ಸಜ್ಜನ ಹಸ್ತರುಳ್ಳ ಕಮಿಟಿಯ ಸಹಾಯದಿಂದ, ರಿಕ್ವಿಜಿಶನ ಕುರಿತು ಬಂದಿದ್ದ ತಾಲೂಕಿನೊಳಗಿನ ಎಲ್ಲಾ ಆಕ್ಷೇಪಗಳನ್ನೂ ಕೂಡಲೇ ವಿಚಾರಿಸಿ ತೀರ್ಮಾನಿಸತಕ್ಕದ್ದೆಂದು ಸಂಬಂಧ ಪಟ್ಟ ಅಧಿಕಾರಿಗಳೊಡನೆ ವಿಜ್ಞಾಪಿಸಿ ಕೊಳ್ಳಲಾಯಿತು. ಇಡೀ ವರ್ಷದ ಉತ್ಪತ್ತಿ ಅಥವಾ ಮುನಾಫೆಯನ್ನು ಆಧರಿಸಿಯೇ ಈ ರಿಕ್ವಿಶಿಶನ್ ನಡೆಸಿರುತ್ತಾ ಸುಗ್ಗಿ ಬೆಳೆಯ ಭತ್ತವನ್ನೂ ರಿಕ್ವಿಶಿಶನ್ ಮಾಡುವ ಸೂಚನೆಯಿದೆ ಎಂದು ತಿಳಿದು ಬರುತ್ತದಾದ್ದರಿಂದ ಇದರಿಂದ ಇನ್ನಷ್ಟು ಹೆಚ್ಚಿನ ಸಂಕಷ್ಟವುಂಟಾಗಲಿದೆ ಎಂದ ಎಚ್ಚರಿಕೆ ಕೊಡಲಾಯಿತು. ಅಕ್ಕಿ ಭತ್ತಗಳ ಕಳ್ಳಸಂತೆ ವ್ಯಾಪಾರವು ಇನ್ನೂ ನಡೆಯುತ್ತಿರುವುದಕ್ಕಾಗಿ ಸಂಘವು ವಿಷಾದ ವ್ಯಕ್ತಪಡಿಸಿ, ಇಡೀ ಜಿಲ್ಲೆಯಲ್ಲಿ ರಿಕ್ವಿಶಿಶನ್ ಆದ ಅಥವಾ ಆಗದ ಅಕ್ಕಿ ಬತ್ತಗಳಿಗೆ ಏಕ ರೀತಿಯ ನಿಯಂತ್ರಣ ದರವಿಧಿಸಿ, ಅಕ್ಕಿ ಬತ್ತಗಳು ಹೊರಹೋಗದಂತೆ ಜಯಶೀಲವಾಗಿ ತಡೆಗಟ್ಟದಿದ್ದರೆ ಆಹಾರ ಪರಿಸ್ಥಿತಿಯನ್ನು ಯಶಸ್ವಿಯಾಗಿ ಮತ್ತು ಸಮಾಧಾನಕರವಾಗಿ ಸುಧಾರಿಸುವದು ಅಸಾಧ್ಯವೆಂಬ ತನ್ನ ದೃಢಾಭಿಪ್ರಾಯವನ್ನು ವ್ಯಕ್ತಗೊಳಿಸಿ ರಿಕ್ವಿಶಿಶನ್ ಅಕ್ಕಿಯನ್ನು ತೆಗೆದ ಕೊಳ್ಳುವಾಗ ಅಧ್ಯಕ್ಷರಿಂದ ಈ ನೊಡನೇ ಮಾಡಲ್ಪಟ್ಟದ್ದ ಈ ಕೆಳಗಿನ ಸೂಚನೆಗಳನ್ನು ಸಂಬಂಧಪಟ್ಟವರು ಅಂಗೀಕರಿಸಿಕೊಳ್ಳಬೇಕೆಂದು ಸಂಘವು ವಿಜ್ಞಾಪಿಸಿಕೊಂಡಿತು; 1. ಅಕ್ಕಿಯನ್ನು ಅಳತೆಮಾಡಿ ತೆಗೆದುಕೊಳ್ಳಬೇಕಲ್ಲದೆ ತೂಕ ಮಾಡಿಯಲ್ಲ. 2. ಮುಡಿಗೊಂದು ಪಾವಾಣೆಯಂತೆ ಕೆಲಸದ ಮಜೂರಿಯಾಗಿ ತೆಗೆಯುತ್ತಿರುವ ಕ್ರಮವನ್ನು ನಿಲ್ಲಿಸಬೇಕು. 3. ದ. ಕ. ಕೋಪರೇಟಿವ್ ಹೋಲ್ ಸೇಲ್ ಸ್ಟೋರ್ಸ್ಸಿನ, ಡಿಪೋಗಳ ಪ್ರತಿಯೊಬ್ಬ ಏಜಂಟನೊಡನೆ ಆಕ್ಷೇಪಣೆಯುವ ಕಾರ್ಯದಲ್ಲಿ ಸಹಕರಿಸುವ ಹಾಗೂ ವಿಚಾರಣೆ ತೆಗೆದುಕೊಳ್ಳುವ, ಸ್ಥಳೀಯ ಸಲಹೆಗಾರ ಸಮಿತಿಗಳ ನೇಮಕವಾಗಬೇಕು. ಎಂದು ನಿರ್ಧಾರವಾಯಿತು. ಕೊಂಡು ಕೊಳ್ಳುವವರಿಂದ ದೂರುಬಾರದಂತೆ, ಚಲಿಯಾಗಿ ಒಣಗಿಸಿದ ಅಕ್ಕಿಯನ್ನೇ ಕೊಡಬೇಕೆಂದು ಸಂಘವು ವರ್ಗದಾರರನ್ನೂ ವಿಜ್ಞಾಪಿಸಿಕೊಂಡಿದೆ ಅವಶ್ಯ ಬೇಕಾವ ಅಕ್ಕಿಯ ಕೊರತೆ ಇನ್ನೂ ಬಹಳವಿದ್ದರೆ, ಸುಗ್ಗಿ ಬೆಳೆಯ ಬತ್ತವನ್ನು ಮತ್ತು ಈ ತನಕ ಹೊರತ ಪಡಿಸಿದ ಸಣ್ಣ ವರ್ಗದಾರರ ಉತ್ಪತ್ತಿಯನ್ನು ರಿಕ್ವಿಶಿಶನ್ ಮಾಡುವ ಬದಲಿಗೆ ವರ್ಗದಾರರ ಮತ್ತು ಒಕ್ಕಲುಗಳ ಜೀವನಾವಶ್ಯ ಅಕ್ಕಿಯನ್ನು ಬಿಟ್ಟು, ಮಿಕ್ಕ ಎಲ್ಲಾ ಉಳಿತಾಯದ ಅಕ್ಕಿಯನ್ನು ರಿಕ್ವಿಶಿಶನ್ ಮಾಡಬೇಕೆಂದೂ, ಸಂಘವು ಮೊದಲೇ ಸೂಚಿಸಿದ್ದಂತೆ, ಈ ವರೆಗಿನ ಶೇಕಡಾ ಪ್ರಮಾಣದ ಕ್ರಮದ ರಿಕ್ವಿಶಿಶನ್ ವಜಾ ಆಗಬೇಕೆಂದೂ, ಆದರೆ ರಿಕ್ವಿಶಿಶನ್ ಆದ ಅಥವಾ ಆಗದ ಎಲ್ಲಾ ಅಕ್ಕಿಗೂ ಏಕದರ (ಸೀಲಿಂಗ್ ಪ್ರೈಸಸ್) ಇರಬೇಕಲ್ಲದೆ, ಸರಕಾರೀ ಏಜನ್ಸಿಗಳ ಹೊರತು ಮಿಕ್ಕವರ ಪಡಕೊಳ್ಳುವಿಕೆಯನ್ನು ನಿಲ್ಲಿಸಬೇಕೆಂದೂ ಸಂಘವು ನಿರ್ಧರಿಸಿದೆ. ಉಡುಪಿ ತಾಲೂಕಿನಲ್ಲಿ ದಿನಂಪ್ರತಿ 500 ಮುಡಿ ಭತ್ತಕ್ಕೆ ಕಡಿಮೆ ಯಿಲ್ಲದಷ್ಟು, ಆವಲಕ್ಕಿ, ಮುಂಡಕ್ಕಿ, ಹುರಿಯಕ್ಕಿಗಾಗಿ ಹೋಗುತ್ತಿದೆ. ಹೀಗಾಗಿ ವರುಷಕ್ಕೆ ಕಡಿಮೆಯೆಂದರೆ 180000 ಮುಡಿ ಬತ್ತವು ಊಟದ ಅಕ್ಕಿಯಾಗದಂತಾಗಿ ಕೊರತೆಯುಂಟಾಗುತ್ತಿದೆ. ಅದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಅವಲಕ್ಕಿ ತಯಾರಿ ನಡೆಯುವದನ್ನು ತಡೆಗಟ್ಟಬೇಕೆಂದೂ ಸಂಘವು ವಿಜ್ಞಾಪಿಸಿಕೊಂಡಿದೆ ರೇಶನಿಂಗ್ ಕ್ಷೇತ್ರದೊಳಗಿನ ವರ್ಗದಾರರು ಮತ್ತು ಬೇಸಾಯಗಾರರು ತಮ್ಮ ಕುಟುಂಬ ಖರ್ಚು, ಬೀಜ, ಕೂಲಿಗಳಿಗೆ ಒಂದು ವರುಷಕ್ಕೆ ಸಾಕಾಗುವಷ್ಟು ಅಕ್ಕಿಬತ್ತವನ್ನಿಟ್ಟುಕೊಳ್ಳಲು ಪರವಾನಗಿ ಕೊಡುವಂತೆಯೂ, ದೇವಸ್ಥಾನಗಳಿಗೆ ರೇಶನಿಂಗ್ ನಿರ್ಬಂಧವನ್ನನ್ವಯಿಸಬಾರದು, ಅಥವಾ ಅವುಗಳಿಗೆ ವಿಶೇಷ ರಿಯಾಯಿತಿ ಕೊಡುವಂತೆಯೂ ಪ್ರಾದೇಶಿಕ ರೇಶನಿಂಗ್ ಆಫೀಸರರಿಗೂ, ಜಿಲ್ಲೆಯ ಅಧಿಕಾರಿಗಳಿಗೂ, ಅಧ್ಯಕ್ಷ ವಕೀಲ ಶ್ರೀ. ಕೆ. ಜಿ. ಬಲ್ಲಾಳರು ಮೆಮೋರಾಂಡಮನ್ನು ಕಳುಹಿಸಿದ್ದಾರೆ.

ರಶ್ಯಾ ದ್ವೇಷಕ್ಕೆ ಹೆಸರಾದ ಈಗಿನ ಪೋಲೆಂಡ್ ಸರಕಾರವನ್ನೇ ರಶ್ಯನರು ಮನ್ನಿಸುವಂತಿಲ್ಲ. ಈ ಕುರಿತು ಇಂಗ್ಲಾಂಡು-ಅಮೇರಿಕಗಳು ಮಧ್ಯಸ್ಥಿಕೆ ವಹಿಸಲು ಮುಂದೆ ಬಂದು ದಿನಗಳು ಕಳೆದರೂ ಈ ತನಕ ತೀರ್ಮಾನವೇನೂ ಆಗಿಲ್ಲ.

ಭಾರತದ ಪರಿಸ್ಥಿತಿ.

ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಬದಲಾವಣೆಯಾಗಲಿದೆಯೆಂದೂ, ಮಿ. ಅಮೆರಿಯವರು ಸ್ಥಾನಚ್ಯುತರಾಗುವರೆಂದೂ ಪುನಃ ವಾರ್ತೆಯೆದ್ದಿದೆ. ವೈಸರಾಯಿ ಲೋರ್ಡ್ ವೇವೆಲರು ದೇಶ ಸಂಚಾರ ಕೈಗೊಂಡು ಈಗ ಬೊಂಬಾಯಿಗೆ ಬಂದಿದ್ದಾರೆ. ಹಿಂದೀ ರಾಜಕೀಯ ಬಿಕ್ಕಟ್ಟನ್ನು ಬಿಡಿಸಬೇಕೆಂಬ ಕೆಲವು ಬ್ರಿಟಿಷ್ ಪತ್ರಿಕೆಗಳ ಮತ್ತು ಮುತ್ಸದ್ದಿಗಳ ಬೇಡಿಕೆ ಬಲಗೊಂಡಿದೆ. ಅ. ಭಾ. ಪತ್ರಿಕಾ ಸಂಪಾದಕ ಪರಿಷತ್ತು ಕಳೆದ ವಾರ ಮದ್ರಾಸಿನಲ್ಲಿ ಶ್ರೀ. ಎಸ್. ಎ. ಬ್ರೆಲ್ವಿಯವರ ಅಧ್ಯಕ್ಷತೆಯಲ್ಲಿ ನೆರೆಯಿತು. ಮುಂಬರುವ ಶಾಂತಿ ಪರಿಷತ್ತಿನಲ್ಲಿ ಭಾಗವಹಿಸಲಾಗುವಂತೆ ಗಾಂಧೀಜೀ ಮೊದಲಾದವರ ಬಿಡುಗಡೆ ಸಾಧಿಸಬೇಕೆಂಬ ಆತುರ ನಿರ್ಮಾಣದಲ್ಲಿ ನಾ. ಶಾಸ್ತ್ರಿಗಳು ಮುತವರ್ಜಿ ವಹಿಸಿದ್ದಾರೆ.

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್,
ಮೆನೇಜರ್.

ಸೌಂದರ್ಯದ ಚೆಲುವಿಕೆಗೆ
ಕೇರಳ
ಸ್ಯಾಂಡಲ್ ವುಡ್ ಸೋಪು
SANDALWOOD SOAP
ಓರಿಯಂಟಿನ ಜಗದ್ವಿಖ್ಯಾತ ಸುವಾಸನೆ ಬೀರುವ ಗಂಧದೆಣ್ಣೆಯ ಸಾರದಿಂದ ಕೂಡಿದುದು.
ತಯಾರಿಸುವವರು: **ಕೇರಳ ಸೋಪು ಇನ್ಸ್ಟಿಟ್ಯೂಟ್.**
ಕಲ್ಲಿಕೋಟೆ. (ಸರಕಾರೀ ಸಂಸ್ಥೆ)
K. S. I-3.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಹೊಸ ವರ್ಷದ ಪಾಕೆಟ್ ಡೈರಿ

ಸಣ್ಣದು	(ಸಾದಾ)	ಮುಗಿದಿದೆ
,,	(ಕೆಲಿಕೊ)	1—4—0
,,	(ಮುಚ್ಚಳದ್ದು)	ಮುಗಿದಿದೆ.
ದೊಡ್ಡದು	(ಸಾದಾ)	1—12—0
,,	(ಕೆಲಿಕೊ)	2—0—0
,,	(ಮುಚ್ಚಳದ್ದು)	2—6—0

ಕೆಲವೇ ಪ್ರತಿಗಳು ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ತಾರಾನಾಥರ ವಿಚಾರ.

ಪಂಡಿತ ತಾರಾನಾಥರು ಸತ್ತು ಸ್ವರ್ಗ ಸೇರಿದರು. ಅವರಿಗೆ ಯಾರೂ ಕಣ್ಣೀರು ಸುರಿಸಿ, ಆತ್ಮಕ್ಕೆ ಶಾಂತಿ ಕೋರಬೇಕಾದ್ದಿಲ್ಲ. ಆ ಆತ್ಮ ಅಂತಹದು. ಅದಕ್ಕೆ ಖಂಡಿತ ಶಾಂತಿಯುಂಟಾಗಿದೆ.

ಕನ್ನಡಕ್ಕೆ—ಕನ್ನಡ ಜನತೆಗೆ ಸೇವೆ ಸಲ್ಲಿಸಿದವರಲ್ಲಿ ತಾರಾನಾಥರೂ ಒಬ್ಬರು. ಅವರ ಸೇವೆ ಇಂತಹುದೆಂದು, ಕೇವಲ ಒಂದೇ ಮಾರ್ಗ ಹಿಡಿದಿದ್ದೆಂದು ಹೇಳಲಾಗುವಂತಿಲ್ಲ. ಅವರು ವೈದ್ಯರಾಗಿ, ಕವಿಗಳಾಗಿ, ಕತೆಗಾರರಾಗಿ, ಸಂಪಾದಕರಾಗಿ ಕನ್ನಡಕ್ಕೆ ಸೇವೆ ಸಲ್ಲಿಸಿದ್ದಾರೆ. ಇಂದು 'ಪರಿಷತ್ತಿನಲ್ಲಿದ್ದುಕೊಂಡು ನಾವು ಕೆಲಸಮಾಡುತ್ತಿದ್ದೇವೆ' ಎಂದುಕೊಂಡಿರುವ ಎಷ್ಟೋ ಮಂದಿಗಿಂತ ಹೆಚ್ಚಾಗಿ ದುಡಿದಿದ್ದಾರೆ ಆದರೆ ಅವರು ಸತ್ತ ಮೇಲೆ ಕನ್ನಡ ನಾಡಿಗೆ ನಾಡೇ ಕಣ್ಣೀರಿಟ್ಟಾಗ, ಪರಿಷತ್ತಿನವರು-ಕನ್ನಡದಲ್ಲಿ ಕತೆಯೊಂದನ್ನು ಬರೆದು ಕಣ್ಮರೆಯಾದವರಿಗೆಲ್ಲಾ ಸಭೆ ಸೇರಿಸಿ ಅವರ ಮನೆಯವರಿಗೆ ಸಹಾನುಭೂತಿ ತೋರಿಸುವ ಪರಿಷತ್ತಿನವರು-ತಾರಾನಾಥರಿಗಾಗಿ ಒಂದು ಸಭೆ ಕರೆಯುವಷ್ಟು-ಅವರಿಗಾಗಿ, ಸತ್ತು ಶಾಂತಿ ಪಡೆದ ಅವರ ಆತ್ಮಕ್ಕಾಗಿ ಬೇಡ-ಅವರನ್ನು ಕಳೆದುಕೊಂಡು ದುಃಖಿಸುತ್ತಿರುವ ಅವರ ಬಂಧುಬಳಗಕ್ಕೆ- ಮಿತ್ರವರ್ಗಕ್ಕೆ ತಪ್ಪು ಸಹಾನುಭೂತಿ ತೋರಿಸಲಿಕ್ಕಾಗಿ ಒಂದು ಸಾಮಾನ್ಯ ಸಭೆ ಕರೆಯುವಷ್ಟು ಸಮಾಧಾನ, ಪರಿಷತ್ತಿನವರಿಗಿಲ್ಲವಾದುದು ತುಂಬಾ ಶೋಚನೀಯ

ಮೊನ್ನೆ ನಡೆದ ಸಮ್ಮೇಳನದಲ್ಲಿ ಕಣ್ಮರೆಯಾದ ಕನ್ನಡಿಗರೆಲ್ಲರ ಹೆಸರನ್ನೋದಿ ಸಂತಾಪ ಸೂಚಿಸಿದಾಗ ಪಂಡಿತರ ಹೆಸರೊಂದನ್ನು ಸೇರಿಸಬಹುದಾಗಿತ್ತು. ಆದರೆ ಇಲ್ಲ.

ಇದಕ್ಕೆ ಒಂದು ಕಾರಣವೂ ನಮಗೆ ತಿಳಿದು ಬಂದಿದೆ. ಪಂಡಿತರು ಪರಿಷತ್ತಿನ ಸದಸ್ಯರಾಗಿರಲಿಲ್ಲ. ಆದಕ್ಕಾಗಿ ಅವರ ಸಾವಿಗೆ ನಾವು ಕಣ್ಣೀರು ಸುರಿಸಬೇಕಾದ್ದಿಲ್ಲ ಎಂಬುದು ಪರಿಷತ್ತಿನ ನಿರ್ಣಯ.

ಈ ನಿರ್ಣಯಕ್ಕೆ ನಾವೇನು ಅರ್ಥಮಾಡೋಣ? ಪಂಡಿತಜೀಯವರು ಪರಿಷತ್ತಿನ ಲೈಸೆನ್ಸ್ ಪಡೆದು ಕನ್ನಡ ಕಾರ್ಯ ಮಾಡಲಿಲ್ಲ. ಅಂದ ಮೇಲೆ ಅವರು ಮಾಡಿದು ಸೇವೆಯೆ? ತ್ಯಾಗವೆ?

ಪರಿಷತ್ತು ಅವರು ಕೇವಲ ಪರಿಷತ್ತಿನ ಸದಸ್ಯರಾಗಿರಲಿಲ್ಲವೆಂದು ಅವರು ಮಾಡಿದ ಕನ್ನಡ ಸೇವೆ-ನಾಡಸೇವೆಯಲ್ಲವೆಂದು ಭಾವಿಸಿತೆ? ಹಾಗಿಲ್ಲವಾದರೆ ಪಂಡಿತರ ವೈಯುಕ್ತಿಕ ಜೀವನಕ್ಕಾಗಿ ಬೇಡ, ಅವರ ಕಾರ್ಯಕ್ಷೇತ್ರದ ಕಡೆ ಗಮನವಿಟ್ಟಾದರೂ ಅವರಿಗೆ ಸನ್ಮಾನಮಾಡಬೇಕಾಗಿದ್ದುದು ಪರಿಷತ್ತಿನ ಕರ್ತವ್ಯವಾಗಿತ್ತು.

ಸಮ್ಮೇಳನಕ್ಕೆ ಬರದವರನ್ನು—ಅವರಿಗೆ ಸೇವಾಕಾಂಕ್ಷೆ, ಕಾರ್ಯಾಶಕ್ತಿ ಇದೆಯೋ ಇಲ್ಲವೋ ನೋಡಿ ತಿಳಿಯುವುದಿರಲಿ, ಕೇಳಿ ಸಹ ತಿಳಿಯದೆ ಕಾರ್ಯಕಾರಿ ಸಮಿತಿಗೆ ಚುನಾಯಿಸಿರುವ ಪರಿಷತ್ತಿನವರು ಪಂಡಿತಜೀಯವರ ಮರಣಕ್ಕಾಗಿ ಎರಡು ನಿಮಿಷ ಮೌನವಾಚರಿಸುವುದು ತಪ್ಪೆಂದು, ಪರಿಷತ್ ನೀತಿಗೆ ವಿರುದ್ಧವೆಂದು, ತಿಳಿದಿದ್ದರೆ ಪರಿಷತ್ತಿನ ನೀತಿ, ರೀತಿ, ನಡವಳಿಕೆಗಳು ವಿಚಿತ್ರವೆನ್ನದೆ, ಪರಿಷತ್ತು ಇತರ ಸಭೆ-ಸಂಘಗಳಂತಲ್ಲವೆನ್ನದೆ ಯತ್ನವಿಲ್ಲ.

(ದೇಶಬಂಧು)

ಪ್ರಕಟನೆ.
ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

O. P. No. 4/1944.

1. ದ್ಯಾಮು ಶೆಟ್ಟಿ. 2. ಸೂರು ಶೆಟ್ಟಿ 3. ಚಂದು ಶೆಟ್ಟಿ 4. ಅಕ್ಕಣಿ ಶೆಟ್ಟಿ.

—ಅರ್ಜಿದಾರರು.

ಮತ್ತು

ಬೋಳ ಬಾಬು ಶೆಟ್ಟಿ--ಚಂದು ಶೆಟ್ರ ಮಗ- ಉಡ್ಪಿ ತಾಲ್ಕು ನಂದಿಕೂರು ಗ್ರಾಮದ ಕಲ್ಲಾರುಮನೆ.

—ಎದ್ರಿ.

ಯಿವರೊಳಗೆ.

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದ್ರೆ:—

1ನೆ ಅರ್ಜಿದಾರಳ ಮಗ 2 to 4ನೆ ಅರ್ಜಿದಾರರ ಸಹೋದರ ಮೃತ ಶಿವಪ್ಪ ಶೆಟ್ರ ಬಾಬ್ತು East & West Life Assurance Company Ltd., Bombay. ಯಿದ್ರ ಪೊಲಿಸಿ ನಂಬ್ರ 24174ನೆ ಪೊಲಿಸಿ ಪ್ರಕಾರ ಬರಾ ಐವೇಜು ವ್ವಲಿಗೆ ವಾರಿಸ ಸರ್ಟಿಫಿಕೇಟು ಕೇಳಿ ಅರ್ಜಿದಾರರು ಬರಕೊಂಡ ಸದ್ರಿ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 17-2-1944ಕ್ಕೆ ತಸ್ಕಗಿಟ್ಟಿದೆ. ಆಕ್ಷೇಪ ಉಳ್ಳವರು ಮೇಲ್ಕಂಡ ಕೋರ್ಟು ಮುಂದೆ ತಾ. 17-2-1944ನೆ ದಿನ ಬೆಳಗ್ಗೆ 11 ಗಂಟೆಗೆ ಸ್ವತಹಾ ಯಾ ವಕೀಲು ದ್ವಾರಾ ಹಾಜರಾಗಿ ಉದಹರಿಸತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

M. Mohandas Adyanthaya.
Advocate for petitioner.

ಮೊಕ್ಕಾಂ ಕಾರ್ಕಳ.
ತಾರೀಕು 20-1-1943

ಇನ್ನೂ

'**ನವಯುಗ**'ದ ಚಂದಾ ಹಣ ಬಾಕಿ ಇರುವವರು ಅದನ್ನು ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸುತ್ತೇವೆ.

ನೋಟೀಸು
ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. A. 1128/43
in O. S. 13/43.

ಅತ್ತಪ್ಪ ರೈ — ವಾದಿ - ಅರ್ಜಿದಾರ.
ಮುತ್ತಪ್ಪ ಗೌಡ ಕೂಡಾ — ಪ್ರತಿವಾದಿರು - ಯೆದ್ರಿರು.

1 ಮುತ್ತಪ್ಪ ಗೌಡ-ಪಾಲಡ್ಕ ಸಣ್ಣಣ್ಣ ಗೌಡನ ಮಗ-ಪುತ್ತೂರು ತಾಲ್ಕು ಆಲೆಟ್ಟಿ ಗ್ರಾಮದ ಕಲ್ಚರ್ಪೆ ಯೆಂಬಲ್ಲಿ-

2 ಉಂಮರೆ ಬ್ಯಾರಿ-ಪೋಜ್ರಿ ಅಬ್ದುಲ್ ಬ್ಯಾರಿ ಮಗ-ಕೊಡಗು ಜಿಲ್ಲಾ ಮಡಿಕೇರಿ ತಾಲ್ಕು ಕುಂದಲ್ಪಾಡಿ ಪೆರಾಜೆ ಗ್ರಾಮದ ಪೆರಾಜೆ ಪೇಟೆಯಲ್ಲಿ.

3 ಮಂಮ್ಮದೆ ಬ್ಯಾರಿ-ಅಜ್ಜಿಕರೆ ಬ್ಯಾರಿ ಮಗ-ಕೊಡಗು ಜಿಲ್ಲಾ ಮಡಿಕೇರಿ ತಾಲ್ಕು ಕುಂದಲ್ಪಾಡಿ ಪೆರಾಜೆ ಗ್ರಾಮದ ಪೆರಾಜೆ ಪೇಟೆಯಲ್ಲಿ.

4 ಪದ್ಮನಾಭಯ್ಯ-ವೆಂಕಪ್ಪಯ್ಯನವರ ಮಗ- ಕೊಡಗು ಜಿಲ್ಲಾ ಮಡಿಕೇರಿ ತಾಲ್ಕು ಕುಂದಲ್ಪಾಡಿ ಪೆರಾಜೆ ಗ್ರಾಮದ ಕೆಂಸಮಟ್ಟೆ ಯೆಂಬಲ್ಲಿ-ಇವರೆಲ್ಲರಿಗೆ

ಅರ್ಜಿದಾರನು ಅಸ್ತಿ ಮಾರಾಟ ಮಾಡ್ಸುವರೆ ಪೈನಲ್ ಡಿಕ್ರಿ ಕೊಡ್ಸ ಬೇಕೆಂತ ದಾಕ್ಲು ಮಾಡಿದ ಮೊಲೋರುವ ಅರ್ಜಿಯು ತಾ. 4-2-44ಕ್ಕೆ ಈ ಕೋರ್ಟಿನಲ್ಲಿ ತನ್ಕಿಗೆ ಯಿಟ್ಟಿರುವದ್ರಿಂದ ಆ ದಿವ್ಸ ಬೆಳಗ್ಯೆ 10 ಘಂಟೆಗೆ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಉದಹರಿಸದಿದ್ರೆ ನಿಂಮ ಗೈರಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸುವರು.

(By order of Court)
H. Sanjiva Shetty,
Advocate for petitioner Plaintiff

ನಿಮ್ಮ ಗಳಿಕೆಗಳನ್ನು ಕಾಪಾಡಿರಿ

ಅಮೂಲ್ಯ ಖನಿಜಗಳು, ಅಮೂಲ್ಯ ಹರಳು ಕಲ್ಲುಗಳು, ಭೂಮಿ, ಕಟ್ಟಡಗಳು ಅಥವಾ ತಯಾರಿಸಲ್ಪಟ್ಟ ಸಾಮಾನುಗಳಮೇಲೆ ಯುದ್ಧಕಾಲದಲ್ಲಿ ಕೂಡಿಟ್ಟ ಹಣವನ್ನು ವಿನಿಯೋಗಿಸಬೇಕೆಂಬುದು ಸ್ವಾಭಾವಿಕವಾದದ್ದು, ಆದರೆ ಇಂದು ಇದು ಬಹು ಅಪಾಯಕರವಾದ ದೀರ್ಘ ಅವಧಿಯ ಕೂಡಿಡುವ ವಿಧಾನವಾಗಿದೆ. ಭಂಗಾರ, ಬೆಳ್ಳಿ ಆಭರಣಗಳು, ಆಸ್ತಿ ಪಾಸ್ತಿ ಮತ್ತು ಸಾಮಾನುಗಳ ಬೆಲೆಯು ಇತರ ಧಾರಣೆಗಳ ಜೊತೆಗೆ ಮಿತಿಮೀರಿ ಏರಿವೆ; ಯುದ್ಧದಲ್ಲಿ ದೊರೆಯುತ್ತಿರುವ ವಿಜಯಗಳ ಫಲಿತವಾಗಿ ಈ ಬೆಲೆಗಳು ಒಂದು ದಿನ ಬಿದ್ದು ಹೋಗುತ್ತವೆ- ಹಠಾತ್ತಾಗಿ ಬೀಳಬಹುದು- ಮತ್ತು ನಿಮ್ಮ ಹಣದ ಹೆಚ್ಚಿಗ ಭಾಗವು ಮಾಯವಾಗಬಹುದು. ನಿಮ್ಮ ವ್ಯವಹಾರ ಜ್ಞಾನವನ್ನು ಬಳಸಿ ನೀವು ಪರಿಶ್ರಮಪಟ್ಟು ಕೂಡಿಟ್ಟ ಹಣವನ್ನು ಕಾಪಾಡಿಕೊಳ್ಳಿ.

ಮುಂಬರುವ ದಿನಗಳಿಗೋಸ್ಕರ ಸುರಕ್ಷಿತವಾಗಿ

ಕೂಡಿಡಿ

ಕೆಳಗೆ ಕಂಡವುಗಳಲ್ಲಿ ನಿಮ್ಮ ಕೂಡಿಟ್ಟ ಹಣವು ಸುರಕ್ಷಿತವಾಗಿರುತ್ತದೆ ಮತ್ತು ಶಾಶ್ವತಮೌಲ್ಯವುಳ್ಳದ್ದಾಗಿರುತ್ತದೆ.

★ ಸಹಕಾರ ಸಂಸ್ಥೆ.
★ ವಿಮೆ ಪಾಲಿಸಿ.
★ ಬ್ಯಾಂಕ್
★ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕ್

ಅಥವಾ ಇವಕ್ಕಿಂತಲೂ ಉತ್ತಮವಾದ ಸರ್ಕಾರಿ ಸಾಲಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟ್‌ಗಳು.



ರಾಷ್ಟ್ರೀಯ ಯುದ್ಧಮುಖದವರು | ದೇಶೀಯರಿಗೆ ಮಾಡುವ ಮನವಿ

ದಕ್ಷಿಣ ಕನ್ನಡ

ಮಂಗಳೂರು

ಜಿಲ್ಲೆಯಲ್ಲಿ ರೇಶನಿಂಗ್—ತಾ. 18ರಿಂದ ದಕ್ಷಿಣ ಕನ್ನಡದಲ್ಲಿ ರೇಶನಿಂಗ್ ಮಾಡುವುದಾಗಿ ಪ್ರಸಿದ್ಧಿಸಲ್ಪಟ್ಟ ಸ್ಥಳಗಳಲ್ಲಿ ಸರಕಾರದವರು ರೇಶನಿಂಗ್ ಆರ್ಡರು ಜಾರಿಮಾಡಿರುವರು.

ಜಿಲ್ಲಾ ಆಹಾರ ಸಮಿತಿ.

ಶ್ರೀ ಎ. ಬಿ. ಶೆಟ್ರ ಪ್ರಶ್ನೆಗಳು.

ಜಿಲ್ಲಾ ಆಹಾರ ಸಮಿತಿಯ ಸಭೆಯು ಇದೇ ತಾ ೪ರಂದು ಜರಗುವುದು. ಈ ಸಭೆಯ ಮುಂದೆ ಈ ಕೆಳಗಿನ ಮಾಹಿತಿಯನ್ನು ತಿಳಿಸಬೇಕಾಗಿ ಶ್ರೀ ಎ. ಬಿ. ಶೆಟ್ಟರು ಕಲೆಕ್ಟರಿಗೆ ಬರೆದಿದ್ದಾರೆ.

೧. ಪ್ರತಿ ತಾಲೂಕಿನಲ್ಲಿ ಉತ್ಪತ್ತಿಯಾಗುವ ಮತ್ತು ಉಪಯೋಗಕ್ಕೆ ಬೇಕಾಗುವ ಅಕ್ಕಿಯೆಷ್ಟು? ಹೆಚ್ಚು ಬೆಳೆ ಬೆಳೆಸಲು ಮಾಡಿದ ಪ್ರಯತ್ನಗಳು ಯಾವುವು? ೩. ಈ ಜಿಲ್ಲೆಗಾಗಿ ಬರುವ ಚಿಮಿಣಿ ಎಣ್ಣೆ ಮತ್ತು ಸಕ್ಕರೆ ಎಷ್ಟು, ಮತ್ತು ಆಯಾ ರೆವಿನ್ಯೂ ಡಿವಿಜನಿನಲ್ಲಿ ಇವನ್ನು ಹಂಚಲು ಯಾವ ಏರ್ಪಾಡು ಮಾಡಲಾಗಿದೆ? ಇದರ ಪೈಕಿ ಎಷ್ಟು ಸಹಕಾರಿ ಸ್ಟೋರುಗಳ ಮೂಲಕ ಮಾರಾಟವಾಗುತ್ತದೆ? ೪. ಕೃಷಿಯ ಉದ್ದೇಶದಿಂದ ಈ ಜಿಲ್ಲೆಗೆ ಕೊಟ್ಟ ಅಥವಾ ಕೊಡಬಹುದಾದ ಕಬ್ಬಿಣ ಮತ್ತು ಉಕ್ಕು ಎಷ್ಟು? ಇವುಗಳಿಂದ ಬೇಕಾದ ಉಪಕರಣಗಳನ್ನು ತಯಾರಿಸಲು ಯಾವ ಏರ್ಪಾಡು ಮಾಡಲಾಗಿದೆ; ಕೃಷಿಕರಿಗೆ ಇವನ್ನು ಸ್ಟೋರುಗಳ ಮೂಲಕ ಒದಗಿಸಲಾಗುವುದೆ? ೫. ಸಂಸರಗೋಡು ತಾಲೂಕಿನ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿ ಅಗತ್ಯವುಳ್ಳ ಕಾರ್ಯಕ್ರಮವನ್ನು ನಿರ್ಧರಿಸತಕ್ಕದ್ದು. ಮಂಗಳೂರಿನಿಂದ ಕಾಸರಗೋಡು ತಾಲೂಕಿಗೆ ಕಳುಹಿಸಿದ ಅಕ್ಕಿ ಎಷ್ಟು ಮತ್ತು ಯಾವ ಯಾವ ಕ್ರಯಕ್ಕೆ ಕೊಂಡು ಕೊಂಡದ್ದು?

ಜಾನುವಾರು ರೋಗ:—ಶ್ರೀ ಸೋಮಪ್ಪನವರು ಶ್ರೀ. ಸೆಟ್ಟರು ಈ ಕೆಳಗಿನ ನಿರ್ಣಯವನ್ನು ಸಭೆಯ ಮುಂದಿಡುವುದಾಗಿ ಕಲೆಕ್ಟರಿಗೆ ತಿಳಿಸಿದ್ದಾರೆ.

"ಈ ಜಿಲ್ಲೆಯಲ್ಲಿ ಜಾನುವಾರು ರೋಗ ವಿಪರೀತ ಹಬ್ಬಿಕೊಂಡಿದ್ದು ಇದರ ಪರಿಣಾಮವಾಗಿ ಬಹಳ ಜಾನುವಾರು ಸಾಯುತ್ತಲಿರುವುದರಿಂದ ಕೃಷಿಗೂ ಹಾಲು ಸಿಕ್ಕುವುದಕ್ಕೂ ಬಹಳ ತೊಂದರೆಯಾಗುವ ಸಂಭವವಿರುವುದರಿಂದ ಈ ಜಾನುವಾರುಗಳಿಗೆ ಚುಚ್ಚು ಹಾಕಿಸಲು ಬೇಕಾದ ಔಷಧಿಗಳನ್ನು ಕೂಡಲೇ ತರಿಸುವ ಏರ್ಪಾಡು ಮಾಡಬೇಕಾಗಿ ಸರಕಾರವನ್ನು ಈ ಸಭೆಯು ಒತ್ತಾಯಪಡಿಸುತ್ತದೆ. ಜಿಲ್ಲಾ ಕಲೆಕ್ಟರರು ಈ ನಿರ್ಣಯವನ್ನು ಕೂಡಲೇ ಮದ್ರಾಸು ಸರಕಾರಕ್ಕೆ ಕಳುಹಿಸತಕ್ಕದ್ದು".

ಜಾನುವಾರು ರೋಗದ ವಿಷಯದಲ್ಲಿ ಶ್ರೀ. ಶೆಟ್ಟರು ಮದ್ರಾಸು ಗವರ್ನರರ ಎಡ್ವೈಸರರಾದ ಶ್ರೀ ರಾಮಮೂರ್ತಿಯವರಿಗೂ ಒಂದು ಪತ್ರ ಬರೆದಿರುವರು.

ವಿದ್ಯಾರ್ಥಿ ಸಮ್ಮೇಳನ:—ಮಂಗಳೂರು ವಿದ್ಯಾರ್ಥಿ ಸಮ್ಮೇಳನವು ತಾ. ೩೦ರಲ್ಲಿ ಡಾ| ಪಿ. ಸುಬ್ಬರಾಯರವರ ಅಧ್ಯಕ್ಷತೆಯಿಂದ ಜರಗುವುದೆಂದೂ ಅದೇ ದಿನ ಶ್ರೀ| ರಾಮಕೃಷ್ಣ ವಿದ್ಯಾರ್ಥಿ ಭವನದ ವಿನಾಚರಣೆಯೂ ಜರಗುವುದೆಂದೂ ತಿಳಿದಿದೆ.

ಅ. ಕ. ಪತ್ರಿಕೋದ್ಯೋಗಿ ಸಮ್ಮೇಳನ:—ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿ ಸಮ್ಮೇಳನವು ಫೆಬ್ರವರಿ ತಾ. ೧೯, ೨೦ರಂದು ಮಂಗಳೂರಲ್ಲಿ ಜರಗಲಿರುವುದೆಂದೂ, 'ಸ್ವದೇಶ ಮಿತ್ರನ್' ಪತ್ರಿಕಾ ಸಂಪಾದಕ ಶ್ರೀ| ಸಿ. ಆರ್ ಶ್ರೀನಿವಾಸನರು ಪರಿಷದಧ್ಯಕ್ಷತೆ ವಹಿಸುವರೆಂದೂ, ಸಮ್ಮೇಳನಕ್ಕೆ ಬರಲಿರುವ ಪ್ರತಿನಿಧಿಗಳು ಬೇಗನೇ ಪ್ರತಿನಿಧಿ ಶುಲ್ಕ ಸಮೇತ ತಮ್ಮ ಹೆಸರು ವಿಳಾಸಗಳನ್ನು ತಿಳಿಸತಕ್ಕದೆಂದೂ ಸ್ವಾಗತ ಸಮಿತಿಯವರ ವಿನಂತಿಯಿದೆ.

ಅಡ್ಮಿನಿಸ್ಟ್ರೇಟಿವ್ ಕಮಿಟಿಗೆ ಆರಿಸಲ್ಪಟ್ಟವರು ಶ್ರೀಗಳಾದ (1) ಡಿ. ನರೋನಾ, ಬಿ. ಎ., ಬಿ. ಎಲ್, ಅಧ್ಯಕ್ಷರು; (2) ಆರೂರು ಲಕ್ಷ್ಮೀನಾರಾಯಣ ರಾವ್, ಉಪಾಧ್ಯಕ್ಷರು; (4) ಡಾ| ಟಿ. ಮಾಧವ ಪೈ, ರಿಜಿಸ್ಟ್ರಾರು; (4) ಕೆ. ಶ್ರೀನಿವಾಸ ಪೈ, ಖಜಾಂಚಿ; (5) ಆರ್. ಫೆರ್ನಾಂಡಿಸ್, (6) ಯು. ವೆಂಕಟರಾವ್, (7) ಕೆ. ವಿಠ್ಠಲ ಶೆಣೈ, (8) ಯು. ಮಂಡಳೀಕ ಶೆಣೈ, ಮತ್ತು ಕೆ. ಗುರುರಾಜರಾವ್, ಸದಸ್ಯರು.

ಪೆರ್ಡೂರು:—ಪೆರ್ಡೂರಿನಲ್ಲಿ ನಡೆದ ಪಬ್ಲಿಕ್ ಬೇಡ್ಮಿಂಟನ್ ಟೂರ್ನಮೆಂಟಿನ ಬಹುಮಾನ ವಿತರಣಾ ಸಮಾರಂಭವು ತಾರೀಕು 2-1-1944ರಲ್ಲು ಶ್ರೀ P N. ಮಾಧವರಾವ್, U-A-D. L. ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಲ್ಪಟ್ಟಿತು. Doubles ಫೈನಲ್ಸಿನಲ್ಲಿ ಗೆದ್ದ ಶ್ರೀ. ಬಿ. ಸಂಜೀವ ಹೆಗ್ಡೆಯರಿಗೂ, ಶ್ರೀ. ಎ. ಭುಜಂಗ ಹೆಗ್ಡೆಯರಿಗೂ, ಬೆಳ್ಳಿಯ ಕಪ್ಪುಗಳನ್ನೂ, ಎರಡನೇ ಬಹುಮಾನವಾದ ಮೆಡಲುಗಳನ್ನು ಶ್ರೀ. K. ಸುಂದರ ಸೆಟ್ಟಿಗೂ, ಲಾರೆನ್ಸ್ ಲೋಬೋ ಇವರಿಗೂ ಕೊಡಲಾಯಿತು. Fivesನ ಕಪ್ಪುಗಳನ್ನು ಕಾರ್ಕಳ ಟೀಮಿನವರೂ ಮೆಡಲುಗಳನ್ನು ಪೆರ್ಡೂರು ಟೀಮಿನವರೂ ಪಡೆದಿರುವರು. ಲಘು ಉಪಹಾರದೊಂದಿಗೆ ಸಭೆಯು ಯಶಸ್ವಿಯಾಗಿ ಕೊನೆಗೊಂಡಿತು. ಟೂರ್ನಮೆಂಟು ಯಶಸ್ವಿಯಾಗುವಂತೆ ಸಹಕರಿಸಿದ ಮಹನೀಯರಿಗೂ, ಭಾಗವಹಿಸಿದ ಎಲ್ಲಾ ಟೀಮಿನವರಿಗೂ, ಸೆಕ್ರೆಟರಿಯವರು ಕಮಿಟಿಯ ಪರವಾಗಿ ಧನ್ಯವಾದಗಳನ್ನರ್ಪಿಸುತ್ತಾರೆ.

ಹಡುಕೋಣೆ, ಕೆಮ್ಮಣ್ಣು:—ಇಲ್ಲೊಂದು ಕೊಆಪರೇಟಿವ್ ಸ್ಟೋರ್ಸ್ ಸ್ಥಾಪನೆಯಾಗಬೇಕೆಂಬ ಗ್ರಾಮಸ್ಥರ ಉತ್ಸಾಹವು ಪಂಚಾಯಿತ ಬೋರ್ಡ ಪ್ರೆಸಿಡೆಂಟ್ ಶ್ರೀ. ಪಿ ವೆಂಕಟಕೃಷ್ಣರಾಯರ ಹಾಗೂ ಇಲ್ಲಿಯ ಇಗರ್ಜಿಯ ರೆವರೆಂಡ್ ಫಾದರ್ ಎಸ್. ಎಮ್. ರಸ್ಕೀನ್ಹಾರ ನೇತೃತ್ವದಲ್ಲಿ ರೂಪಗೊಂಡು ಕಳೆದ ತಾ ೧೬ರಂದು ಅದರ ಆರಂಭೋತ್ಸವವು ಜರಗಿತು. ಈ ಉದ್ಘಾಟನಾ ಸಮಾರಂಭದ ಅಧ್ಯಕ್ಷರು ಮಂಗಳೂರು ಕ್ರಿಸ್ತರಾಜ ಚರ್ಚಿನ ರೆವರೆಂಡ್ ಫಾದರ್ ಹರ್ಮನ್ ಡಿಸೋಜರು, ಸ್ಟೋರ್ಸಿನ ಉದ್ಘಾಟಕರು ಶ್ರೀ, ಕೊರಡ್ಕಲ್ ಶ್ರೀನಿವಾಸರಾಯರು. ಯಥೋಚಿತವಾದ ಕಾರ್ಯಕ್ರಮಗಳಿಂದ ಉದ್ಘಾಟನಾ ಸಮಾರಂಭವು ಯಶಸ್ವಿಯಾಗಿ ನೆರವೇರಲು ಸ್ಟೋರ್ಸಿನಲ್ಲಿ ಉತ್ಸಾಹ ಪೂರ್ವಕವಾದ ವ್ಯಾಪಾರವು ನಡೆಯಿತು; ನಡೆಯುತ್ತಾ ಇದೆ. (ಎಂದು ನಮ್ಮ ಸ್ವಂತ ಸುದ್ದಿಗಾರರು ಬರೆಯುತ್ತಾರೆ)

ಬಡವರ ಗೋಳು:—ಸರಕಾರದವರು ಕಾಸರಗೋಡಿನ ಕಪ್ಪು ಪಟ್ಟಿಯ ಮೂರು ಗ್ರಾಮಗಳಿಗೆ ಮಾತ್ರ ಅಕ್ಕಿಯ ರೇಶನ್ ಕಾರ್ಡನ್ನು ಉಪಯೋಗಿಸುವುದರಿಂದ ಅಕ್ಕಿಗಾಗಿ ಕಟ್ಟಿಗೆ, ಮುಳಿಹುಲ್ಲು, ಚಾಪೆ, ಕೋಳಿ, ಇತ್ಯಾದಿ ಪೇಟೆಗೆ ತಂದು ಮಾರುವ ಊರ ಪರಿಗ್ರಾಮದ ಹಳ್ಳಿಯ ಬಡವರಿಗೆ, ಅಕ್ಕಿ ದೊರೆಯದೆ ಮಣಕ್ಕೆ 1-12-0ಆಗ ದರದ ಗೋಣಿಗಳಲ್ಲಿ ನೀರು ಕುಡಿಯುವ ಅವಸ್ಥೆ ಒದಗಿ ನಾಲ್ಕೈದು ದಿವಸಗಳಾಯ್ತು. ಮೊದಲಿನಂತೆ ಪೇಟೆಯ ಧಾನ್ಯ ವ್ಯಾಪಾರಿಗಳು ಪೇಟೆಯ ಮೂಲಾ ಕಪೆಗಳಲ್ಲಿಯೂ, ಅಕ್ಕಿಯನ್ನು ಮಾರಲು, ಸರಕಾರದ ಇಂಡಿಯಾ ಡಿಫೆನ್ಸ್ ಎಕ್ಟಿಗೆ ಹೆದರುವುದರಿಂದ, ರೇಶನ್ ಕಾರ್ಡು ಇಲ್ಲದ ಬಡಜನರು ಬಂಗಾಳದ ಅವಸ್ಥೆಗಿಂತಲೂ, ಕಡೆಯಾಗಿದ್ದಾರೆ. ಅಂತೂ, ಇಂತೂ, ಸರಕಾರವು "ಐಡೆಂಟಿಟಿ" ಲಿಸ್ಟಿನಲ್ಲಿ ಪಕ್ಷಪಾತವನ್ನು ತೋರಿಸಿರುವ ಅಗತ್ಯವುಳ್ಳ ಗ್ರಾಮಗಳಿಗಾಗಿ ಜಿಲ್ಲಾ ಬೋರ್ಡಿನವರು ಕಾಲರಾ, ಅಥವಾ ಬೇರೆ ರೋಗವು ಕೂಡಲೆ ತಲೆದೋರವ ಸಂಭವವಿರುವುದರಿಂದ ತಕ್ಕ ನಿಗಾ ತೆಗೆದುಕೊಳ್ಳಬೇಕೆಂದೂ ಸಂಬಂಧ ಪಟ್ಟ ಸರಕಾರದ ಇಲಾಖೆಯೂ ಕೂಡಲೇ ತಕ್ಕ ವ್ಯವಸ್ಥೆ ಮಾಡಬೇಕೆಂದೂ ಜಿಲ್ಲಾ ಬೋರ್ಡಿನ ಮೆಂಬರ್ ಕೆ. ಶಂಕರನವರು ಬರೆಯುತ್ತಾರೆ.

ಬಡಗಬೆಟ್ಟು:—ಇಲ್ಲಿಯ ಬೋರ್ಡ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳ ತಿಂಗಳ ಹಬ್ಬವು ತಾ 13-1-44ರಲ್ಲಿ ಅಕ್ಕಮ್ಮ ಹೆಗ್ಗಡ್ತಿಯವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ವಿದ್ಯಾರ್ಥಿಗಳ ವಿನೋದಾವಳಿಗಳು ಪ್ರೇಕ್ಷಣೀಯವಾಗಿದ್ದವು.

ಕುರಾಡಿ:—ಶಾಂತಿನಿಕೇತನ ಶಾಲಾ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಲಿಕ್ಕಾಗಿ ಶ್ರೀಗಳಾದ ಕುಂಬಾರ್ ತೇಜಪ್ಪಸೆಟ್ರು ಕುರಾಡಿ ಅಂತ್ಯ ಹೆಗ್ಡೆಯರೂ ಕಾಡೂರು ಪಟೇಲ್ ಜಗನ್ನಾಥ ಸೆಟ್ಟರು ಬಹಳ ಪ್ರೋತ್ಸಾಹವಿತ್ತು ಶಾಲೆಯು ಪೂರ್ಣ ಅಭಿವೃದ್ಧಿ ಸ್ಥಿತಿಗೆ ಬರುವಂತೆ ಮಾಡಿದ ವಿಚಾರವನ್ನು ಈ ರೇಂಜಿನ ಶಾಲೆಗಳ ಡಿ. ಇನ್ಸ್‌ಪೆಕ್ಟರ್ ಶ್ರೀ ಸಂಜೀವಭಟ್ಟರವರು ತಾ 11-1-44ರಲ್ಲಿ ಅಕಸ್ಮಿಕ ಸಂದರ್ಶಿಸಿ ನೋಡಿ, ಆತ್ಮಾನಂದಪಟ್ಟು, ಶಾಲೆಯು ಇದೇ ರೀತಿ ಜನರ ಆದರಕ್ಕೆ ಪಾತ್ರವಾಗಿ ಬೇಗನೇ ಹ್ಯಾಸ್ಕೂಲಾಗಿ ನಡೆಯಲಿ ಎಂದು ಆಶೀರ್ವದಿಸಿದರು.

ಬೋಳ ಪಿಲಿಯೂರು:—ಇಲ್ಲಿಯ ಶ್ರೀ ರಾಮಕೃಷ್ಣಾ ಎೈಡೆಡ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ 1-I-1944ರಲ್ಲಿ ಜಿಲ್ಲಾ ಎಡ್ಯುಕೇಶನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ಪೂರ್ವಾಹ್ನ ಮಾನ್ಯ ಕಮ್ಯಂಬತ್ತೋಡು ರೀಜನಲ್ ಫಿಸಿಕಲ್, ಡ್ಯಾರೆಕ್ಟರರ ನೇತೃತ್ವದಲ್ಲಿ ಶಾಲಾ ಮಕ್ಕಳ ಪಂದ್ಯಾಟಗಳು ಜರಗಿಸಲ್ಪಟ್ಟು, ಮಕ್ಕಳಿಗೂ ನೆರೆದಿದ್ದ ಮಹಾ ಜನರಿಗೂ ಅಲ್ಪ ಉಪಹಾರಾದಿಗಳು ಜರಗಿದಾಗ ಕಾರ್ಕಳ ತಾಲೂಕು ಪ್ರೆಸಿಡೆಂಟರಾದ ಶ್ರೀ ಯಸ್. ರಾ. ಕಾಮತರು ಅಧಿಕ ಆಹಾರ ವಸ್ತುಗಳ ಬೆಳವಣಿಗೆಯ ಕುರಿತು ನೆರೆದಿದ್ದವರ ಮುಂದೆ ಸುರಸವಾಗಿ ಭಾಷಿಸಿದರು.

ಅಪರಾಹ್ನ ಘಂಟೆ 8-30ರಿಂದ ಶಾಲಾ ವರದಿ, ಇನಾಂ ವಂಚೋಣಗಳಾದ ಮೇಲೆ, ಮಾನ್ಯ ಉಡುಪಿ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರು, ಮಾನ್ಯ ರೀಜನಲ್ ಫಿಸಿಕಲ್ ಡ್ಯಾರೆಕ್ಟರರು, ಮಾನ್ಯ ಕಾರ್ಕಳ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರು, ಕಾರ್ಕಳ ತಾಲೂಕು ಎಡ್ಯುಕೇಶನಲ್ ಎಡ್ವೈಜರಿ ಕಮಿಟಿಯ ಅಧ್ಯಕ್ಷರು, ಮುಂತಾದ ಮಹನೀಯರು ಶಾಲೆಯ ಹಿತವನ್ನು ಬಯಸಿ, ಭಾಷಿಸಿದ ಬಳಿಕ ಅಧ್ಯಕ್ಷರ ಭಾಷಣವಾದೊಡನೆ ಶಾಲಾ ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಗಳು ಜನಮನ ಮೆಚ್ಚುಗೆಯಾಗುವಂತೆ ಪ್ರದರ್ಶಿಸಲ್ಪಟ್ಟು ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಉಡುಪಿ.

ಕೃಷಿಪ್ರದರ್ಶನ:—ಜನವರಿ ತಿಂಗಳ 14ರಿಂದ 18ರ ವರೇಗೆ ಉಡುಪಿ ಪರ್ಯಾಯ ಮಹೋತ್ಸವದ ಸಮಯದಲ್ಲಿ ಉಡುಪಿ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರರ, ಶ್ರೀ ಕಾಪಣ್ಣರು ಮ:ರದ ಬ... ಪ್ರದರ್ಶನವೊಂದನ್ನು ಶಿರೂರುಸ್ವಾಮಿಗಳ ... ಏರ್ಪಡಿಸಿದ್ದರು. ಇದರಲ್ಲಿ ಆಹಾರದ ಬೆಳೆಗಳನ್ನು ಹೆಚ್ಚಿಸುವ ಸಮಸ್ಯೆಗೆ ತುಂಬಾ ಪ್ರಾಮುಖ್ಯತೆಯನ್ನು ಕೊಡಲಾಯಿತು.

ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್ ಮಣಿಪಾಲ—ಇದರ ಸುಪ್ರೀಮ್ ಗವರ್ನಿಂಗ್ ಬೋಡಿಯ ಸಭೆಯು ತಾ 16ಕ್ಕೆ ಕೆನರಾ ಮ್ಯುಚುವಲ್ ಬಿಲ್ಡಿಂಗ್ಸ್, ಉಡುಪಿಯಲ್ಲಿ ಜರಗಿ, ಮುಂದಿನ ವರ್ಷಕ್ಕೆ ಈ ಕೆಳಗಿನ ಸದಸ್ಯರನ್ನು ಆರಿಸಲಾಯಿತು. (ಮುಂದುವರಿದಿದೆ, ಮೇಲಿನ ಪಟ್ಟಿ ನೋಡಿ)

ನೋಟೀಸು.

ಉಡ್ಪಿ ಮುನ್ಸಿಪಾಲಿಟಿ ಮತ್ತು ರೇಶನಿಂಗಿಗೆ ಸಂಬಂಧಪಟ್ಟ ಗ್ರಾಮಗಳಲ್ಲಿರುವ ಎಲ್ಲಾ ಮನೆಗಳಿಗೂ ಹೊಟೇಲು ಮತ್ತು ತಿಂಡಿ ತಿನಸುಗಳನ್ನು ಮಾರುವ ಅಂಗಡಿಗಳಿಗೂ ರೇಶನ್ ಕೊಡುವುದರ ವಿಚಾರಣೆಯ ಕುರಿತು ಫಾರ್ಮುಗಳನ್ನು ಆಯಾ ವಾರ್ಡಿನ ಯಾ ಗ್ರಾಮದ ಎನುಮರೇಟರು ರೇಶನಿಂಗ್ ಆಫೀಸರಿಗೆ ಕಳುಹಿಸುತ್ತಾರೆ.

ಸದ್ರಿ ವಿಚಾರಣೆಯ ಫೋರ್ಮನ್ನು ಬರೆಯುದೆ ಬಾಕಿಯಿರುವ ಯಾವತ್ತೂ ಮನೆಯವರು ವ ಹೊಟೆಲಿನವರು ವ ತಿಂಡಿ ತಿನಸುಗಳ ಅಂಗಡಿಯವರು ಯಾರಾದರೂ ಇದ್ದರೆ ಅವರು ಕೂಡಲೆ, ಸದ್ರಿ ಫೋರ್ಮುಗಳನ್ನು ಉಡ್ಪಿ ರೇಶನಿಂಗ್ ಆಫೀಸಿನಿಂದ ಯಾ ಮುನ್ಸಿಪಾಲು ಕಚೇರಿಯಿಂದ ಪಡೆದು ಅದರಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆದು ತ್ವರ್ಯ ಉಡ್ಪಿ ರೇಶನಿಂಗ್ ಆಫೀಸಿನಲ್ಲಿ ದಾಖಲು ಮಾಡತಕ್ಕದ್ದು. ತಪ್ಪಿದಲ್ಲಿ ರೇಶನಿಂಗ್ ಆರಂಭಿಸಿದಾಗ ಅವರಿಗೆ ಅಕ್ಕಿ ದೊರಕುವದ ಕಷ್ಟವಾದೀತು.

Udipi, 9—1—44 | **C. N. Menoky,** Asst. Rationing Officer.

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction.

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್

ಮಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೋಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 3ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

(Incorporated in India in 1920)

Notice under Section 37 of the Indian Companies Act, 1913.

(As amended by Act XXII of 1936.)

It is hereby notified that the Register of Members of the above Bank will be closed during the period from Monday the 7th February 1944 to Saturday the 26th February 1944, both days inclusive.

By order of the Board

UDIPI, 15th January 1944. — **P Lakshman Nayak,** Secretary & Treasurer.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ **1929**ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ತರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

THE VIJAYA BANK, LTD.,

Head office: MANGALORE.

Glad to announce that a Branch of the Bank has been opened at PUTTUR on 21-1-1944.

ನಮ್ಮ ಬ್ಯಾಂಕಿನ ಶಾಖೆಯೊಂದು ತಾ.21-1-44 ರಲ್ಲಿ ಪುತ್ತೂರಿನಲ್ಲಿ ತೆರೆಯಲ್ಪಟ್ಟಿರುತ್ತದೆ.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.



ನಮ್ಮ ಸುವರ್ಣಮಹೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ

ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲರುಗಳೂ ಪ್ರಕಟ
ವಾಗುತ್ತವೆ

ವಾರ್ಷಿಕ ಚಂದಾ
ರೂ. **1-8-0** ಮಾತ್ರ
ಬೈಂಡು ಮಾಡಿದ ಪ್ರಥಮ
ಸಂಪುಟಕ್ಕೆ ರೂ. **2-8-0**
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0-6-0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1 ಗುಳಿಗೆ, ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.'

ಪಥ್ಯ:—ಹರವೀಸಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5-0-0 ಪೋಸ್ಟ ಚಾರ್ಜು 12 ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಹುಂಬರವಾದಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲಪಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾರಸಾಯನ



(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಣಂತಿತನಕ್ಕೆ ಸಾಕಾಗುವವು, ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಪಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ.**

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS UDIPI S. India.

Regd. N. M. 3618.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೨೨

FOUNDER
Sri. A. B. Shetty.

Vol 24
No 22

NAVAYUGA— Kannada Weekly —UDIPI, S. I.

ಉಡುಪಿ 3—2—1944 ● ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ
ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ. 1-12-0. ಟ. ಖ. 0-4-0
ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟ್ಯಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಿರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ,

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ
ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-14-0 ಟ. ಖ. 0-2-0
ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟ್ಯಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

The Canara Mutual Assurance Co., Ltd.,

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman

UDIPI
6-1-1944

T. R. A. Pai,
Managing Director.

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಸಮಯೋಚಿತವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ನಿಮ್ಮ ಸಮೀಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೋಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ ಏಜಂಟರು:-
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ.)

ಶಾಖಾ ಕಚೇರಿಗಳು:— ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರ ವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.**
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

IN APPRECIATION

1943—1944

Not because it is a time honoured custom, but because we would feel ungrateful if we did not express our appreciation to those whose loyalty, friendship and patronage make our success possible.

To our thousands of customer friends, the directors and staff of the Canara Bank send their sincere greetings with the wish that the New Year will bring to you continued prosperity and pleasure and the assurance of our continued efforts to render every assistance in the realisation of your desire.

ESTD. 1906

Canara Bank
Limited.

ಕನ್ನಡ ಸಾಹಿತ್ಯ ಪರಿಷತ್ತಿನ ಧೋರಣೆ ಮತ್ತು ಸಂಘಟನೆಯ ನಿಯಮಗಳ ಮಾರ್ಪಾಟದ ಆವಶ್ಯಕತೆ

(ಪರಿಷತ್ತಿನ ಹಿತೈಷಿಗಳೊಬ್ಬರಿಂದ)

ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿ ಸುಮಾರು ಇಪ್ಪತ್ತೇಳು ವರುಷಗಳಾದರೂ ನಿನ್ನೆ ಮೊನ್ನೆ ಹುಟ್ಟಿದ ಕೆಲವು ಸಂಘ ಸಂಸ್ಥೆಗಳಿಗಿರುವಷ್ಟು ಸದಸ್ಯರ ಸಂಖ್ಯೆ ಅದಕ್ಕಿಲ್ಲ. ಅದು ಅಖಿಲ ಕರ್ನಾಟಕದ ಪ್ರಾತಿನಿಧ್ಯವಿರುವ ಸಂಸ್ಥೆ ಎಂಬ ವಿಷಯದಲ್ಲಿಯೂ ಎಲ್ಲ ಕಡೆಗಳಲ್ಲಿ ಆಕ್ಷೇಪವಿದೆ. ಇಂತಹ ಆಕ್ಷೇಪವು ಹೋಗಬೇಕು. ಕರ್ನಾಟಕದ ಎಲ್ಲ ಮೂಲೆಗಳಲ್ಲಿಯೂ ಕನ್ನಡಿಗರು ಅದು ತಮ್ಮ ಸಂಸ್ಥೆಯೆಂದು ಬಗೆಗಾಣುವಂತಾಗಬೇಕು, ಬಗೆಗಂಡು ಸದಸ್ಯರಾಗಿ ಅದು ನಿಜವಾಗಿಯೂ ಅಖಂಡ ಕರ್ನಾಟಕದ ಪ್ರಾತಿನಿಧ್ಯವಿರುವ ಏಕಮಾತ್ರ ಸಂಸ್ಥೆಯೆಂದಾಗಬೇಕು ಅಂತಾಗಬೇಕಾದರೆ ಅದು ತಾನು ಅನುಸರಿಸಿಕೊಂಡು ಬಂದಿರುವ ಧೋರಣೆಯನ್ನು ಬಿಟ್ಟು ಕೊಟ್ಟು ತನ್ನ ಸಂಘಟನೆಯ ನಿಯಮಗಳನ್ನು ಮಾರ್ಪಾಟಗೊಳಿಸುವುದು ಅತಿ ಅವಶ್ಯವಿದೆ. ಈ ಅವಶ್ಯಕತೆಯ ಪೂರೈಕೆಯಾಗದಿದ್ದುದರಿಂದಲೇ ಕನ್ನಡ ಸಾಹಿತಿಗಳಲ್ಲಿ ಕನ್ನಡ ಅಭಿಮಾನಿಗಳಲ್ಲಿ ಬರೆಹಗಾರರಲ್ಲಿ ಗ್ರಂಥಕರ್ತರಲ್ಲಿ ಪತ್ರಿಕಾ ಸಂಪಾದಕರಲ್ಲಿ ಬಹು ಸಂಖ್ಯಾಕರು ಪರಿಷತ್ತಿನ ಹೊರಗೇ ಇದ್ದಾರೆ. ಎಂದ ಮೇಲೆ ಕನ್ನಡ ಜನಸಾಮಾನ್ಯರಲ್ಲಿ ಅದರ ಹರವನ್ನೂ ಅರಿವನ್ನೂ ಪ್ರಚಾರ ಮಾಡಿ ಅದರ ಕಡೆಗೆ ಅವರ ಒಲವನ್ನು ಒಲಿಸಿ ಕೊಡುವವರಾದರೂ ಯಾರು? ಆದಕಾರಣ ಇನ್ನಾದರೂ ಪರಿಷತ್ತು ಎಚ್ಚೆತ್ತು ತನ್ನ ನೀತಿರೀತಿ ನಿಯಮಗಳನ್ನು ಕೆಳಗೆ ಸೂಚಿಸಿದಂತೆ ಪರಿವರ್ತಿಸಿಕೊಳ್ಳುವ ವಿಷಯವನ್ನು ಪರ್ಯಾಲೋಚಿಸುವುದು ಯುಕ್ತವಿದೆ.

1 ಪರಿಷತ್ತು ಈಗ ಮಾಡಿಕೊಂಡಿರುವ ಕೆಲವು ವಿಭಾಗಗಳಿಂದಲೇ ಪರಿಷತ್ತಿಗೆ ಸದಸ್ಯರನ್ನು ಕೂಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲವಾದ ಕಾರಣ ಅಖಿಲ ಕರ್ನಾಟಕ ಎಲ್ಲೆಲ್ಲ ಕರ್ನಾಟಕ ಸಂಘಗಳನ್ನು ಏರ್ಪಡಿಸಲು ಪ್ರೋತ್ಸಾಹಿಸಬೇಕು ಈ ಸಂಘಗಳನ್ನು ಪರಿಷತ್ತು ಅಂಗೀಕರಿಸಬೇಕು. (ಎಂದರೆ ಇವು ಪರಿಷತ್ತಿಗೆ affiliate ಆಗಬೇಕು.) ಇಂತಹ ಸಂಘಗಳೇ ಪರಿಷತ್ತಿನ ಮೂಲ ಘಟಕಾಮಯ (units) ಗಳಾಗಿದ್ದು ಪರಿಷತ್ತಿಗೆ ಸದಸ್ಯರನ್ನು ಸೇರಿಯಬೇಕು. ಇಂತಹ ಪ್ರತಿಯೊಂದು ಸಂಘದ ಮೂಲಕ ಪರಿಷತ್ತಿಗೆ ದೊರಕುವ ಪ್ರತಿ 10 ಸದಸ್ಯತನಕ್ಕೆ ಒಂದರಂತೆ ಪರಿಷತ್ತಿನ ಕಾರ್ಯಕಾರಿ ಮಂಡಳಿಯಲ್ಲಿ ಪ್ರತಿನಿಧಿತ್ವ ದೊರಕಬೇಕು.

2 ಪ್ರತಿಯೊಂದು ಸಂಘದ ಮೂಲಕ ಪರಿಷತ್ತಿಗೆ ಸಲ್ಲುವ ಸದಸ್ಯತನದ ಚಂದಾ ಮೊಬಲಗಿನ ಮುಕ್ಕಾಲು ಅಂಶವು ಆ ಸಂಘಕ್ಕೆ ಅದರ ಸ್ಥಳೀಯ ಚಟುವಟಿಕೆಗಳ ವಿನಿಯೋಗಕ್ಕಾಗಿ ದೊರಕಬೇಕು. (ಪ್ರೊವಿನ್ಸಿಯಲ್ ಸರಕಾರದ ಉತ್ಪತ್ತಿಯಲ್ಲಿ ಸೆಂಟ್ರಲ್ ಸರಕಾರವು ಬರೇ ಒಂದಂಶವನ್ನು ಸ್ವೀಕರಿಸಿ ಉಳಿದುದನ್ನು ಪ್ರೊವಿನ್ಸಿಯಲ್ ಸರಕಾರದ ಅಂತರ್ವ್ಯವಸ್ಥೆಗೆ ಹೇಗೆ ಬಿಟ್ಟು ಕೊಡುವುದೋ ಹಾಗೆಯೇ ಪರಿಷತ್ತು ಸ್ಥಳೀಯ ಸಂಘಗಳಿಗೆ ಬಿಟ್ಟು ಕೊಡತಕ್ಕದ್ದು ಸ್ಥಳೀಯ ಸಂಘಗಳ ಕಡೆಗೆ ಆ ತರದ ಧೋರಣೆಯನ್ನಿಟ್ಟುಕೊಳ್ಳತಕ್ಕದು)

3 ವಿಸ್ತಾರವಾಗಿ ಹರಡಿದ ಬ್ಯಾಂಕು ಇನ್ಸೂರೆನ್ಸ್ ಕಂಪೆನಿ ಮುಂತಾದುವುಗಳ ಮಹಾ ಸಭೆಗಳಲ್ಲಿ ನಿರ್ಣಯವಾಗುವ ಡೈರೆಕ್ಟರರ ಚುನಾವಣೆ ಇತ್ಯಾದಿ ಮಹತ್ವದ ಕಾರ್ಯಕ್ರಮ ನಿರ್ಧಾರಗಳಲ್ಲಿ ಬಹುದೂರದಲ್ಲಿರುವ ಷ್ಯಾರು ಹೋಲ್ಡರ್‌ಗಳಿಗೋ ಪಾಲಿಸಿ ಹೋಲ್ಡರುಗಳಿಗೋ ಸ್ವತಃ ಹಾಜರಾಗಲು ಖರ್ಚುವೆಚ್ಚಗಳೂ ಅವರವರ ಉದ್ಯೋಗ ತಾಪತ್ರಯಗಳೂ ಪ್ರತಿಬಂಧಕವಾಗುವುದರಿಂದ ಅವರಿಗೆ ಹೇಗೆ ಪ್ರೋಕ್ಸಿ (proxy) ಮೂಲಕ ತಮ್ಮ ವೋಟಿನ ಅಧಿಕಾರ ಚಾಲನೆಗೆ ಹಕ್ಕಿರುವುದೋ ಅಂತೆಯೇ ಈ ಸ್ಥಳೀಯ ಸಂಘಗಳಿಗೂ ಪ್ರೋಕ್ಸಿ ಮೂಲಕ ಮತ ಪ್ರದಾನದ ಹಕ್ಕು ಇರಬೇಕು.

4 ಪರಿಷತ್ತಿನ ವಾರ್ಷಿಕ ಅಧಿವೇಶನದಲ್ಲಿ ಪರಸ್ಪರ ಸ್ತುತಿಗೀತೆಯ ಪ್ರವಚನವಾಗುವುದು ನಿಂತುಬಿಟ್ಟು ಮುಂಬರುವ ವರ್ಷದ ಬಗ್ಗೆ ಪರಿಣಾಮಕಾರಿಯಾದ ಕಾರ್ಯಕ್ರಮದ ಗೊತ್ತುವಳಿಗಳು ಸ್ಪಷ್ಟವಾಗಿ ನಿರ್ಣಯಿಸಲ್ಪಡಬೇಕು. ಅಂತಹ ಕಾರ್ಯಕ್ರಮಗಳನ್ನು ಸ್ಥಳೀಯ ಕರ್ನಾಟಕ ಸಂಘಗಳು ಕಾರ್ಯರೂಪದಲ್ಲಿ ಆಚರಣೆಗೆ ತರಲು ವರ್ಷವೆಲ್ಲ ದುಡಿದು ತ್ತ ವರದಿಗಳನ್ನು ಪರಿಷತ್ತಿಗೆ ಒಪ್ಪಿಸಬೇಕು. (halt yearly or quarterly reports) ಇಂತಹ ವರದಿಗಳನ್ನು ಪರಿಶೀಲಿಸಿ ಸಂಗ್ರಹಿಸಿ ವಾರ್ಷಿಕ ಅಧಿವೇಶನದ ಕಾಲದಲ್ಲಿ 'ಅಖಿಲ ಕರ್ನಾಟಕದ ಮುನ್ನಡೆ' ಎಂಬ ಸಮಗ್ರ ವರದಿಯನ್ನು ಪರಿಷತ್ತು ಪ್ರಕಟಿಸಬೇಕು. ಈ 'ವರದಿಯು ಆಯಾ ಸಂಘ ಕ್ಷೇತ್ರದಲ್ಲಿರುವ ವಾಚನಾಲಯ, ಪುಸ್ತಕ ಭಂಡಾರ, ಪುಸ್ತಕ ಪ್ರಕಟಣೆಗಳು, ಪತ್ರಿಕೆಗಳು, ಇತರ ಜನಜಾಗೃತಿಯ ಚಟುವಟಿಕೆಗಳು ಇತ್ಯಾದಿಗಳ ವಿವರಗಳನ್ನೊಳಗೊಂಡಿರಬೇಕು. ಹೀಗಾದರೆ ಮಾತ್ರ ಅಖಿಲ ಕರ್ನಾಟಕದ ಹಾಗೂ ಸಾಹಿತ್ಯದ ನಿಜವಾದ ವಿರಾಟ್ ಸ್ವರೂಪ ಗೊತ್ತಾಗುವುದಲ್ಲದೆ ಅಧ್ಯಕ್ಷ ಪೀಠವನ್ನೇರಿದವರು ತಮ್ಮ ಕೆಲವು ಗೆಳೆಯರ ಕೃತಿಗಳ ಹೊಗಳಿಕೆಯನ್ನು ಮಾತ್ರ ಮಾಡಿದರೆ ಅದು ಅವರ ಹೃದಯದ ವಿರಾಟ್ ಸ್ವರೂಪ ಮಾತ್ರವಾಗುತ್ತದೆ.

5 ಪರಿಷತ್ತು ತನ್ನ ವಾರ್ಷಿಕ ಅಧಿವೇಶನದ ಕಾಲದಲ್ಲಿ ಗತವರ್ಷದಲ್ಲಿ ಗತಿಸಿದ ಕರ್ನಾಟಕದ ಪ್ರಸಿದ್ಧ ವ್ಯಕ್ತಿಗಳು ಯಾರೇ ಇರಲಿ, ಅವರ ಕಾರ್ಯಕ್ಷೇತ್ರವ್ಯಾವುದೇ ಇರಲಿ, ಅವರು ಕರ್ನಾಟಕದ ಹೆಸರನ್ನು ಮೆರೆಯಿಸಿದ್ದರೆ, ಅವರು ಪರಿಷತ್ತಿನ ಸದಸ್ಯರಿರಲಿ, ಇಲ್ಲದಿರಲಿ. ಅವರ ನಿಧನದ ಸಂತಾಪಸೂಚಕ ನಿರ್ಣಯವನ್ನು ಮಾಡತಕ್ಕದು. ಹಾಗೆಯೇ ಪರಿಷತ್ತಿನ ಸದಸ್ಯನಲ್ಲದವನಾದರೂ ಯೋಗ್ಯ ಪುಸ್ತಕಗಳನ್ನು ಬರೆದು ಸಂಘ ಸಂಸ್ಥೆ ಸರಕಾರಗಳಿಂದ ಮನ್ನಣೆಯನ್ನು ಪಡೆದಿದ್ದರೆ ಅವರಿಗೆ ಅಭಿನಂದನೆಯನ್ನು ಮಾಡಬೇಕು (ಶ್ರೀಗಳಾದ ರಾಘವೇಂದ್ರರಾಯರಿಂದ Xರೇ ಪುಸ್ತಕ. ಕುಡ್ವರಿಂದ ಮೋಟರ್ ವಿಜ್ಞಾನವೆಂಬ ಯಾಂತ್ರಿಕ ವಿಷಯಕವಾದ ಪುಸ್ತಕ, ಮದ್ರಾಸಿನಲ್ಲಿರುವ ಅಡಿಗ ಸಹೋದರರ ರೇಡಿಯೋ ಪುಸ್ತಕ— ಇವೆಲ್ಲಕ್ಕೂ ಯುನಿವರ್ಸಿಟಿ ಬಹುಮಾನ ದೊರೆತರೂ ಇವರೆಲ್ಲ ಕೇವಲ ದಕ್ಷಿಣ ಕನ್ನಡಿಗರಾಗಿ ಹುಟ್ಟಿ ದುರ್ದೆಶೆಯಿಂದಲೋ ಏನೋ ಇವರನ್ನು ಪರಿಷತ್ತು ಅಭಿನಂದಿಸಲಿಲ್ಲ.)

6 ಪರಿಷತ್ತು ಬರೆಹಗಾರರಿಗೆ ಕಾಗದ ಮುಂತಾದುವನ್ನು ಒದಗಿಸಿಕೊಡುವ ಸಾಹಸಕ್ಕೆ ಕೈಹಾಕಿದರೆ ಅಂತಹದರ ಪ್ರಯೋಜನವು ಪ್ರತಿಯೊಂದು ಕರ್ನಾಟಕ ಸಂಘದ ಕ್ಷೇತ್ರದಲ್ಲಿರುವ ಬರೆಹಗಾರರಿಗೂ ಯಾವುದಾದರೊಂದು ನೀತಿಯನ್ನನುಸರಿಸಿ ದೊರಕುವಂತಾಗಬೇಕಲ್ಲದ ಪರಿಷತ್ತಿನ ಹಿರಿಯರ ಕೃಪಾನುಗ್ರಹಕ್ಕೆ ಪಾತ್ರರಾದ ಕೆಲವರಿಗೆ ಅವರ ಅವಶ್ಯಕತೆಗಿಂತ ಹೆಚ್ಚಾಗಿ ದೊರೆತು ಅವರೂ 'ಓದೋದು ಶಾಸ್ತ್ರ, ಇಕ್ಕೋದು ಗಾಳ' ಎಂಬಂತೆ ಕಾಗದವನ್ನು ಕಾಳಸಂತೆಯಲ್ಲಿ ವಿಕ್ರಯಿಸುವಂತೆ ಅವಕಾಶವೀಯಬಾರದು.

7 ಪರಿಷತ್ತು ಕೇವಲ ಕೇಂದ್ರ ಸಂಸ್ಥೆಯಾಗಿ ಮಾತ್ರ ನಿಂತು ಸಕಲ ಕರ್ನಾಟಕ ಸಂಘಗಳಿಗೂ ತನ್ನ ಆಶ್ರಯ ಪ್ರೋತ್ಸಾಹಗಳನ್ನು ನಿಷ್ಪಕ್ಷಪಾತದೃಷ್ಟಿಯಿಂದ ಕೊಡುತ್ತಿರಬೇಕು. ನಿರಂಕುಶ ಪ್ರಭುತ್ವದ ಧೋರಣೆಯನ್ನು ಬಿಟ್ಟುಕೊಟ್ಟು ಬಹುಮತಾನುಸಾರ ಕಾರ್ಯಕ್ರಮವನ್ನು ಕೈಗೊಳ್ಳಲು ಸಿದ್ಧವಾಗಬೇಕು.

8 ಪರಿಷತ್ತಿನ ಅಧ್ಯಕ್ಷರಾಗಲೀ ಇತರ ಅಧಿಕಾರಿ ವರ್ಗದವರಾಗಲೀ ತಮ್ಮ ಅಧಿಕಾರಯುಕ್ತ ವಾಣಿಯಲ್ಲಿ ಬಾಯ್ದೆರೆಯ ಬಿರುದುಗಳನ್ನು ಕೊಡುವಾಗ ಎಚ್ಚರವಿರಬೇಕು ಅಂತಹವು ಅಖಿಲ ಕರ್ನಾಟಕ ಮಾನ್ಯವಾಗಿವೆಯೋ ಎಂದು ನೋಡಿಕೊಳ್ಳತಕ್ಕದು. 'ಸಣ್ಣ ಕತೆಗಳ ತಾತ' ಎನ್ನಬೇಕಾದರೆ ಅಂತಹವರು ಲೇಖನಿ ಎತ್ತುವುದಕ್ಕೆ ಎಷ್ಟೋ ಮುಂಚೆ ಸಣ್ಣ ಕತೆಗಳನ್ನು ಯಶಸ್ವಿಯಾಗಿ ಬರೆದು ಅವರಿಗೇ ದಾರಿ ತೋರಿಸಿದವರೂ ಅಂತಹ ಭಾಗವೂ ಕರ್ನಾಟಕದಲ್ಲಿ ಇಲ್ಲವೇ ಎಂಬುದನ್ನು ಐತಿಹಾಸಿಕ ದೃಷ್ಟಿಯಿಂದ ಪರಿಶೀಲನೆ ಮಾಡಿರಬೇಕು. ಅಂತೆಯೇ 'ಆಧುನಿಕ ಪದ್ಯಗಳ ಆಚಾರ್ಯ', 'ಇಂದಿನ ಕನ್ನಡದ ಸ್ಥಾಪನಾಚಾರ್ಯ', ಹಳ್ಳಿಗಳ ಚಿತ್ರ ಸಿದ್ಧ ಹಸ್ತ' ಇತ್ಯಾದಿ ಬಾಯ್ದೆರೆ ಬಿರುದುಗಳನ್ನು ಅಧಿಕಾರ ಸ್ಥಾನದಿಂದ ಹೇಳುವಾಗ ಅವರಿಗಿಂತ ಮೊದಲು ಅಂತಹ ಸಿದ್ಧ ಹಸ್ತರಿದ್ದರೋ ಎಂಬುದನ್ನು ವಿಚಾರಮಾಡಿಕೊಳ್ಳತಕ್ಕದು. 'ಕೇವಲ ಗೆಳೆತನದ ಪ್ರತಿಫಲದ ಧನ ಸಹಾಯದ ಹಂಗಿಗೆ ಒಳಗಾಗಿ ಅಂತಹ ಬಿರುದುಗಳನ್ನು ಗೌರವಸ್ಥಾನದಲ್ಲಿ ಕುಳಿತು ಕೊಡಬಾರದು'

ಸಂಘಟನೆಯನ್ನೂ ಧೋರಣೆಯನ್ನೂ ಈ ತರದಲ್ಲಿ ಮಾರ್ಪಡಿಸಿಕೊಳ್ಳದೆ ಸುಮ್ಮಗೆ ಬೆಂಗಳೂರಲ್ಲಿರುವ ಕೆಲವರ ಒಂದು ಸಾಹಿತ್ಯ ಸಂಘಕ್ಕೆ ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತೆಂಬ ಹೆಸರಿಟ್ಟುಕೊಂಡು ಕರ್ನಾಟಕದವರೆಲ್ಲ ಸದಸ್ಯರಾಗಿ ಚಂದಾ ಅರ್ಪಿಸಿರೆನ್ನುವುದು ಪ್ರಾತಿನಿಧ್ಯವಿಲ್ಲದಲ್ಲಿಗೆ ಕರುಗ ತೆರಲಾಗುವುದಿಲ್ಲ. (No taxation without representation) ಎನ್ನುವ ಇಂದಿನ ಸ್ವತಂತ್ರಯುಗದ ಧರ್ಮವಾಗುವುದಿಲ್ಲ. ಮೇಲೆ ಸೂಚಿಸಿದಂತೆ (ಹಾಗೆಯೇ ಆಗಬೇಕೆಂಬ ಛಲದಿಂದಲ್ಲ-ಕೇವಲ ಆ ದೃಷ್ಟಿಯಿಂದ ನೋಡಿ-ಅವಶ್ಯವಿರುವ ಇತರ ಯುಕ್ತವಾದ) ಬದಲಾವಣೆಗಳನ್ನು ನಿಯಮಗಳಲ್ಲಿಯೂ ಧೋರಣೆಗಳಲ್ಲಿಯೂ ಮಾರ್ಪಾಡು ಮಾಡಲು ಪರಿಷತ್ತಿನ ರಾಜರೀತಿಗೆ ಭಂಗಬರುವುದೆಂದು ತಿಳಿಯುವುದಾದರೆ ಅದು ಅಖಿಲ ಕರ್ನಾಟಕ ಪ್ರತಿನಿಧಿತ್ವವಿರುವ ಏಕಮಾತ್ರ ಸಂಸ್ಥೆಯೆಂದು ತಾನು ಹೇಳಿಕೊಳ್ಳುವ ಹವ್ಯಾಸವನ್ನು ಬಿಟ್ಟು ಕೇವಲ ಬೆಂಗಳೂರಿನ ಸಾಹಿತ್ಯ ಸಂಘ ಎಂದು ತನ್ನ ಹೆಸರನ್ನು ನಿಜಸ್ಥಿತಿಗೆ ಒಪ್ಪುವಂತೆ ತಿದ್ದು ಮಾಡಿಕೊಳ್ಳುವುದೆ, ಚೆನ್ನ. ಇತರ ಭಾಗಗಳವರೂ ಅಲ್ಲಲ್ಲಿ ಸ್ವತಂತ್ರರಾಗಿ ಸಂಘಗಳನ್ನು ಕಟ್ಟಿಕೊಂಡು ತಮ್ಮ ತಮ್ಮ ಶಕ್ತ್ಯನುಸಾರ ನಾಡಿನ ಹಾಗೂ ನಾಡನುಡಿಯ ಸೇವೆಯನ್ನು ಮಾಡಲು ಯಾರದೂ ಅಡ್ಡಿಯಿಲ್ಲವಷ್ಟೆ

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮುನೆಯ ಔಷದಿಗಳು ದೊರೆಯುತ್ತವೆ.

ಕ್ವಾಲಿಟಿ ಸಂಗ್ತಿ ಬರದಲ್ಲಿ ತಕ್ಕವಾದ ಔಷದಿ ಚುನಾಯಿಸ್ಸಿ ರವಾನ್ನಿಬಹುದು.

ಕೆಟಲೋಗಿಗೆ ಬರೆ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಉಡುಪಿ ಏಜಂಟರು:- ನವಭಾರತ ಬುಕ್ ಡಿಪೊ, ಸಂತೆಕಟ್ಟೆ. ಉಡುಪಿ.

ಚತುರ್ಥ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ, ಮಂಗಳೂರು.

ಈ ಸಮ್ಮೇಳನದ ಕಾಲದಲ್ಲಿ ಪತ್ರಿಕೋದ್ಯೋಗಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಸಮಂಜಸವಾಗಿ ವಿಚಾರಿಸಿ ತರ್ಕಿಸಿ, ಪತ್ರಿಕೆಗಳ ಮುಂದಿನ ಜೀವನಕ್ಕೆ ಅನುಕೂಲವಾಗಬಹುದಾದ ಹಾದಿಯನ್ನು ನಾವು ಹುಡುಕಿಕೊಳ್ಳಬೇಕು. ತಮ್ಮೆಲ್ಲರ ಅವಗಾಹನೆಗಾಗಿ ಇಲ್ಲಿ ಕೆಲವೊಂದು ಸೂಚನೆಗಳನ್ನು ಕೊಡಬಹುದು.

ಪತ್ರಿಕೆಗಳ ಪ್ರಗತಿಗೆ ಮುದ್ರಣದ ಸಹಾಯ ಬೇಕಿದೆ. ಇಂದು ಕನ್ನಡ ಪತ್ರಿಕೆಗಳು ತೀವ್ರ ಪ್ರಚಾರವಾಗುವುದಕ್ಕಾಗಲಿ ಅದರ ರಚನೆ ಇನ್ನಷ್ಟು ಸುಲಭವಾಗುವುದಕ್ಕಾಗಲಿ ತುಂಬಾ ತೊಡಕುಗಳಿವೆ. ನಮ್ಮ ಕನ್ನಡ ಲಿಪಿಯೇ ಒಂದು ತೊಡಕಿನ ಸಮಸ್ಯೆಯಾಗಿದೆ. ಬೇಗ ಬರೆದುಕೊಳ್ಳಲು ಶುದ್ಧವಾದ ಬರಹಗಳನ್ನು ತಯಾರಿಸಲು ಶೀಘ್ರ ಲಿಪಿಯ ಪ್ರಚಾರ ಹೆಚ್ಚಾಗಿ, ಜತೆಗೆ ಕನ್ನಡ ಟೈಪ್‌ರೈಟರ್ ವ್ಯವಹಾರಕ್ಕೆ ಬರುವ ಮಾರ್ಗವನ್ನು ನಾವು ಹುಡುಕಬೇಕಾಗಿದೆ. ಇಂದು ದಿನಪತ್ರಿಕೆಗಳು ನಮ್ಮಲ್ಲಿ ಕಾಲಿರಿಸಿವೆ. ಈಗಿನ ಅಕ್ಷರಗಳು, ಆ ಅಕ್ಷರಗಳ ಜೋಡಣೆ ಇವುಗಳು ವೇಗಕ್ಕೆ ಸಹಾಯವಾಗಿಲ್ಲ. ಮೊನೋಟೈಪ್, ಲಿನೋಟೈಪ್ ಮೊದಲಾದ ಯಂತ್ರ ಸಲಕರಣೆಗಳು ನಮಗೆ ಕೈಗೂಡಬೇಕಾದರೆ ಕನ್ನಡ ಲಿಪಿ ಇನ್ನಷ್ಟು ಸುಲಭವಾಗಬೇಕು. ಅಕ್ಷರಗಳಲ್ಲಿ ಒಂದು ರೀತಿಯ ಸಾಮ್ಯತೆ ಬೇಕು. ಅನವಶ್ಯಕವಾದ ಅಕ್ಷರಗಳನ್ನು ತೆಗೆದುಹಾಕಬೇಕು. ದೀರ್ಘದ ಕ್ರಮದಲ್ಲಾಗಲೀ ಮಹಾ ಪ್ರಾಣದ ಕ್ರಮದಲ್ಲಾಗಲೀ ಒಂದೇ ಕ್ರಮ ಬೇಕು. ಈ ಬಗೆಯಿಂದ ಅಕ್ಷರಗಳ ಸಂಖ್ಯೆ ಕಡಿಮೆ ಮಾಡಿ ಮುದ್ರಣದ ಸಲಕರಣೆ ಬೆಳೆಯುವಂತೆ ಮಾಡಬೇಕು. ಈ ಎಲ್ಲಾ ವಿಷಯಗಳಲ್ಲಿ ಯೋಚನೆ ಮಾಡಿದವರು, ಟೈಪೋಗ್ರಫಿಯ ಮಾಹಿತಿಯುಳ್ಳವರು ತಮ್ಮ ಅನುಭವವು ಕಾರ್ಯರೂಪಕ್ಕೆ ಬರುವಂತೆ ಎಡೆ ಹುಡುಕಬೇಕು.

ನಮ್ಮ ಪತ್ರಿಕೆಗಳ ಬಾಹ್ಯ ಸೌಂದರ್ಯ ಚೆನ್ನಾಗುವಂತೆ ವ್ಯವಸ್ಥೆ ಪಡಿಸುವುದು ಅವಶ್ಯವಾಗಿದೆ. ಚಿತ್ರಗಳು, ವರ್ತಮಾನದ ಫೋಟೋಗಳು, ಅಣಕ ಅಲ್ಲವೇ ವ್ಯಂಗ್ಯ ಚಿತ್ರಗಳು ಇವುಗಳನ್ನು ದೊರಕಿಸಿಕೊಳ್ಳುವ ವ್ಯವಸ್ಥೆ ಮಾಡಬೇಡವೆ? ಕಾಲವೇ ಮುಖ್ಯವಾಗಿರುವ ದಿನಪತ್ರಿಕೆಗಳಲ್ಲಿ ರೋಟರಿ ಮೊದಲಾದ ಮುದ್ರಣಗಳ ಸಹಾಯ ನಮಗೆ ಬೇಡವೆ? ಇಂಥ ದೊಡ್ಡ ಯತ್ನಗಳಿಗೆ ಬೇಕಾಗುವ ಭಂಡವಲವನ್ನು ನಾವು ದೊರಕಿಸಿಕೊಳ್ಳುವ ಬಗೆ ಹೇಗೆ? ಪತ್ರಿಕೆಗಳ ಸಂಖ್ಯೆ ಹೆಚ್ಚಿ, ಆಕಾರ ಕುಗ್ಗಿ, ವರ್ಚಸ್ಸು ಕಳೆದುಕೊಳ್ಳುವುದಕ್ಕಿಂತ, ಸಾರ್ವಜನಿಕ ಜೀವನದಲ್ಲಿ ಪತ್ರಿಕೆಯೊಂದು ವರ್ಚಸ್ಸು ಎಂದು ಜನರಲ್ಲೂ ಸರಕಾರದಲ್ಲಿಯೂ ಆಗುವ ಸ್ಥಿತಿ ಕನ್ನಡ ಪತ್ರಿಕೆಗಳಿಗೆ ಬರಬೇಡವೆ? ಹೀಗಿದ್ದರೆ ಹಲವರು ತಮ್ಮ ಪ್ರಯತ್ನಗಳನ್ನು ಒಂದುಗೂಡಿಸಿ ಬೆಳೆಯುವ ದಾರಿ ಕಾಣಬೇಡವೆ?

ಕನ್ನಡ ವಾರ್ತೆಯ ಪಾತ್ರಿತನಕ್ಕೂ ವ್ಯವಸ್ಥೆಗೂ ಅನುಕೂಲವಾದ ವಾರ್ತಾ ಸಂಸ್ಥೆಯೊಂದರ ನಿರ್ಮಾಣವಾಗಬೇಕು. ಕರ್ನಾಟಕದ ಮಟ್ಟಿಗಾದರೂ ಮುಖ್ಯ ಎಲ್ಲಾ ಕೇಂದ್ರಗಳನ್ನು ಒಳಗೊಂಡ, ತಂತೀ ಮೂಲಕ ಸುದ್ದಿ ದೊರಕಿಸಿಕೊಡುವ, ನಂಬಿಗಸ್ಥ ಸಂಸ್ಥೆಯೊಂದು ಆಗಬೇಕಾಗಿದೆ

ಪತ್ರಿಕೋದ್ಯೋಗ ಬೆಳವಣಿಗೆ ಹೊಂದಲು ಪತ್ರಿಕೆಗಳ ವಿಷಯ ಸಂಗ್ರಹಕ್ಕೆ ನೆರವಾಗಬಲ್ಲ ವಿಶೇಷಜ್ಞರ(Specialists) ಸಹಾಯ ದೊರಕಬೇಕಾಗುತ್ತದೆ. ಒಬ್ಬನು ಎಲ್ಲಾ ವಿಷಯಗಳನ್ನು ಬರೆಯುವುದು, ಎಲ್ಲರೂ ಎಲ್ಲದಕ್ಕೂ ಕೈಹಾಕುವುದು ಈ ದಾರಿಗೆ ವಿರೋಧ. ವಾರ್ತೆ ವರದಿ ಮಾಡುವುದು ಎಂಬುದನ್ನು ಕುರಿತು ವಿಚಾರಿಸೋಣ. ಇದು ಒಂದು ಕಲೆ. ಜನಕ್ಕೆ ರಂಜನೆಯಾಗುವ ರೀತಿಯಲ್ಲಿ ಬರೆಯುವುದು, ಉಪಯುಕ್ತವಾದ ರೀತಿಯಲ್ಲಿ ಅರಿಸುವುದು, ಅಧಿಕಾರಿಗಳ ಅವರಣದಲ್ಲಿ ತಕ್ಕ ವರ್ಚಸ್ಸಿರುವುದು—ಇವೆಲ್ಲಾ ಆವಶ್ಯವಾದ ಕೆಲಸಗಳು. ಇನ್ನು ನಮ್ಮಲ್ಲಿ ಪ್ರತಿಯೊಂದು ಪತ್ರಿಕೆಯು ಪ್ರತಿಯೊಂದು ವಿಷಯಕ್ಕೂ ತಲೆಹಾಕುತ್ತದೆ. ಒಂದೊಂದು ವಿಷಯ ಅಥವಾ ಒಂದೊಂದು ವಿಷಯಗಳ ಗುಂಪನ್ನು ಅರಿಸುವ ಪತ್ರಿಕೆಗಳು ಬೇಕು. ಅವುಗಳಲ್ಲಿ ಅಧಿಕಾರವಾಣಿಯಿಂದ ಬರೆಯಬಲ್ಲ ತಜ್ಞರ ಬೆಂಬಲ ದೊರಕಿಸುವ ಯತ್ನ ನಡೆಯಬೇಕು.

ಪಾರಿಭಾಷಿಕ— ಇಂದಿನ ಪತ್ರಿಕೋದ್ಯೋಗಿಯು ನಿತ್ಯ ಅವಸರದಲ್ಲಿ ಬಳಕೆಗೆ ತರಲೇಬೇಕಾದಂಥ ಅನೇಕ ಪಾರಿಭಾಷಿಕ ಶಬ್ದಗಳಿವೆ ಇವುಗಳ ಬಗ್ಗೆ ಒಂದು ಶಬ್ದಕೋಶ ಮಾಡಬೇಕೆಂದು ಬಲು ಹಿಂದೆ ಬಾಗಲಕೋಟೆಯ ಸಮ್ಮೇಳನದಲ್ಲಿ ನಿರ್ಣಯವಾಗಿತ್ತು ಆದರೆ ಅದರ ಕೆಲಸ ನಿರ್ಣಯದೊಂದಿಗೆ ಮುಗಿಯಿತು ಈ ಹೊತ್ತು ನಮಗೆ ಅರ್ಥ ಶಾಸ್ತ್ರ, ರಾಜಕೀಯ, ಯುದ್ಧ ವಿಜ್ಞಾನ ಇವೇ ಮೊದಲಾದ ಹಲವು ಬಗೆಯ ಶಬ್ದಗಳನ್ನು ಪತ್ರಿಕೆಗಳಲ್ಲಿ ಬಳಕೆಗೆ ತಾರದೆ ಗತ್ಯಂತರವಿಲ್ಲ. ಒಬ್ಬೊಬ್ಬರು ತಮ್ಮ ಇಚ್ಛೆಗೆ ಕಂಡ ಒಂದೊಂದು ಶಬ್ದವನ್ನು ಉಪಯೋಗಿಸುವ ಬದಲು ಅಖಿಲ ಕರ್ನಾಟಕವು ಒಪ್ಪುವ ಶಬ್ದಕೋಶವನ್ನು ನಿರ್ಮಿಸಬೇಕಾಗಿದೆ

ಪತ್ರಿಕಾ ವ್ಯವಸಾಯಿಗಳು— ಇವರದೇ ಆದ ಒಂದು ಸಮಸ್ಯೆಯಿದೆ. ಈ ವ್ಯವಸಾಯಕ್ಕೆ ತಕ್ಕುದಾಗಲು ಕನಿಷ್ಠ ಯಾವ ಬಗೆಯ ಶಿಕ್ಷಣ ಬೇಕು, ಅದನ್ನು ಹೇಗೆ ದೊರಕಿಸಬೇಕು ಎಂಬುದೊಂದು. ಪತ್ರಿಕೆಯ ಚಾಲಕರಿಗೂ ಸಂಪಾದಕರಿಗೂ ಇರಬೇಕಾದ ಗೌರವದ ಸಂಬಂಧವೊಂದು. ಇನ್ನು ಅದರಲ್ಲಿ ದುಡಿಯುವ ವರದಿಕಾರರು, ಬರೆಹಗಾರರು ಇವರೊಳಗಿನ ಸಂಬಂಧವೊಂದು. ಯಾರೂ ಈಗಿನ ದಿನದಲ್ಲಿ ಬಿಟ್ಟಿಯಾಗಿ ದುಡಿಯುವುದಿಲ್ಲ. ಈ ಉದ್ಯೋಗ ಜೀವನಕ್ಕೂ ಒಂದು ದಾರಿಯಾಗಬೇಕು. ಬಂಡವಳಗಾರರ ಕೈಯ ಜನ ಕಾಫಿ ಹೊಟೆಲಿನ ದುಡಿತಕ್ಕೂ ಇದು ಕಡಿಮೆಯಲ್ಲವೆಂದು ತೋರಿಸಿಕೊಡಬೇಕು. ಇಂದು ನಮ್ಮ ನಾಡಿನಲ್ಲಿ ಬರೆಹಗಾರರ—ಪತ್ರಿಕೋದ್ಯೋಗಿಗಳ ಸ್ಥಿತಿ ಚೆನ್ನಾಗಿಲ್ಲವೆಂದೇ ಒಪ್ಪಿ ನಾವೀ ಪ್ರಶ್ನೆಯನ್ನು ಚರ್ಚಿಸಬೇಕು.

ವಿಶೇಷ ಪತ್ರಿಕೆಗಳು—ಇಂದು ಮಕ್ಕಳ ಮನಸ್ಸನ್ನು ರಂಜಿಸತಕ್ಕದ್ದೇ ಆಗಿ ಅವರಿಗೆ ಬೇಕಾಗುವ ಬಣ್ಣ ಬೆಡಗುರಂಜನೆಗಳಿಂದ ಕೂಡಿದ ಪತ್ರಿಕೆಯುಂಟೆ? ಆಧುನಿಕ ಜ್ಞಾನ ಪ್ರಸಾರಕ್ಕೆ ನಮ್ಮ ಸಾಮಾನ್ಯ ಹಳ್ಳಿಗನು ದೊರಕಬೇಕೆಂದು ಬಯಸುವ ಪತ್ರಿಕೆಯುಂಟೆ? ಮನಶ್ಶಾಸ್ತ್ರದ ಪ್ರಗತಿಯನ್ನಾಗಲಿ ಮಾನವ ಶಾಸ್ತ್ರದ ಪ್ರಗತಿಯನ್ನಾಗಲಿ ಜನರ ಮುಂದಿಡಬೇಡವೆ? ವಿವಿಧ ಕಲೆಗಳಿಗೆ ನವೀನ ದೃಷ್ಟಿಯನ್ನು ಕೊಡುವ ಪತ್ರಿಕೆಗಳು ನಮಗೆ ಬೇಡವೆ?

ಪತ್ರಿಕೆಯ ಇತಿಹಾಸ— ಕನ್ನಡ ಪತ್ರಿಕೆಯ ಬಾಳು ಎಷ್ಟೇ ಬಡವಾಗಿದ್ದರೂ ಅದಕ್ಕಾಗಿ ದುಡಿದವರ ಸಂಖ್ಯೆ-ದುಡಿದ ಪತ್ರಿಕೆಗಳು ಬಹಳ ಇದ್ದುವು; ಇವೆ ಇವುಗಳಲ್ಲಿ, ಇವುಗಳ ಕಥೆಯಲ್ಲಿ ಒಂದು ಶತಮಾನದ ಒಳಗಿನ ಬದುಕು. ಆದರೂ ವೃತ್ತಪತ್ರಿಕೆಗಳ ನೆನಪು ನಮಗೇನೇ ಅಳಿದು ಹೋಗಿದೆ. ಇದ್ದ ಇತಿಹಾಸದ ದೃಷ್ಟಿಯಿಂದಾದರೂ ಈ ವಿಷಯವಾದ ವಾರ್ತೆಯನ್ನು- ಅನುಭವವನ್ನು ಕಲೆತುಹಾಕಿ ಒಂದು ಪುಸ್ತಕ ಪ್ರಕಟಿಸಬೇಕು.

ಮುಖ್ಯತಃ ಒಂದು ಪಾಠಿಸ ನಂದಲ್ಲವಾಗದೆ ಕೇವಲ ಸೂಚನೆಗಳಿಗೇ ಮನಸೋಲದೆ, ಶಾಶ್ವತವಾಗಿ ನಮ್ಮ ಬೆಳವಣಿಗೆಗೆ ಬೇಕಾದ ಏರ್ಪಾಟನ್ನು ನಾವು ಮಾಡದೆ ಗತ್ಯಂತರವಿಲ್ಲ. ಸಮ್ಮೇಳನ ಕಾಲದಲ್ಲಿ ಈ ವಿಷಯಗಳಲ್ಲಿ ಅನುಭವಪೂರ್ವಕವನ್ನು ಮುಂದರಿಸಿಕೊಂಡು ವಿಚಾರಿಗಕೊಡನೆ ತರ್ಕಿಸಿ ಸ್ವಲ್ಪವಾದರೂ ಕೆಲಸ ಮಾಡಲಿಕ್ಕೆ ತೊಡಗುವುದವಶ್ಯ. ಇಲ್ಲವಾದರೆ ನಮ್ಮ ಎಲ್ಲಾ ಗದ್ದಲ, ಶ್ರಮ, ಸಾಹಸ ವ್ಯರ್ಥ ಈ ಸೂಚನೆಗಳ ಕುರಿತಾಗಲಿ, ತಮಗೆ ತೋರುವ ಇತರ ಸೂಚನೆಗಳ ಕುರಿತಾಗಲಿ ವಿವಿಧ ಪ್ರಾಂತ್ಯದ ಪತ್ರಿಕೋದ್ಯೋಗಿಗಳು ತಮ್ಮ ಅಭಿಪ್ರಾಯವನ್ನು ಸೂಚಿಸಿದಲ್ಲಿ ಸಮ್ಮೇಳನ ಕಾಲದಲ್ಲಿ ಇದಕ್ಕೊಂದು ಮೂರ್ತಸ್ವರೂಪ ಕೊಡಲು ಬಂದೀತು.

ಕೋ. ಶಿವರಾಮ ಕಾರಂತ.

ಮಂಗಳೂರು.
೨೦-೧-೧೯೪೪

ನೋಟೀಸು.

THE UDIPI BANK LIMITED, UDIPI.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ ನಗಗಳನ್ನು ಅಡವಿಟ್ಟು ಪಡಕೊಂಡ ಕೆಳಗೆ ನಮೂದಿಸಿರುವ ಸಾಲದ ಅಸ್ಲು ಬಡ್ಡಿ ಖರ್ಚುಗಳನ್ನು ತೆರದೆ ಬಾಕಿ ಇಟ್ಟಿರುವದರಿಂದಲೂ, ಆ ಬಗ್ಗೆ ಸದ್ರಿಯವರಿಗೆ ರಿಜಿಸ್ಟ್ರಿ ನೋಟಿಸು ಬಿಟ್ಟರೂ ಅವರು ಈ ವರೆಗೆ ಸದ್ರಿ ಸಾಲ ಸಂದಾಯ ಮಾಡದಿರುವುದರಿಂದಲೂ ಸದ್ರಿ ಸಾಲಗಳ ಬಾಬ್ತು ಅಡವಿಟ್ಟ ನಗಗಳನ್ನು ಇದೇ ತಾರೀಕು 14ನೇ ಫೆಬ್ರವರಿ 1944 ಸೋಮವಾರ ಪ. ಧ್ಯಾಹ್ನ 12ಘಂಟೆಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದೆಂತ ಈ ಮೂಲಕ ತಿಳಿಸೋಣಾಗಿಯದೆ-ಏಲಂ ಆ ದಿವಸ ಯಾವ ಕಾರಣದಿಂದಲೂ ನಡೆಯದಿದ್ದಲ್ಲಿ ಬ್ಯಾಂಕಿನವರಿಗೆ ಯುಕ್ತ ಕಂಡ ದಿನಕ್ಕೆ ಪ್ರತ್ಯೇಕ ನೋಟೀಸು ಇಲ್ಲದೆ ಮುಂದರಿಸಲಾದೀತು.

ಸಾಲಗಳ ವಿವರ

J. L. 44/41: U. Gopalachar son of Subrayachar,
Clrk, Taluk office, Kasargod. S. K.
Date of the loan 27-8-1941 Principal Rs 190/-

U. V. Prabhu
Manager

ಸಂತಸದ ಸಂಸಾರದಲ್ಲಿ ಸಂಶಯವು ತಲೆದೋರಿದರೆ ಅಂದಿಗೆ
ಅದರ ಅವಸಾನ ಖಂಡಿತ ವೆಂಬುದನ್ನು ಚಿತ್ರಿಸುವ

ಸಂಶಯ ಅಥವಾ ನಿರಾಲೀ ದುನಿಯಾ

ಶಾಮಿನ್, ಕಲ್ಯಾಣಿ, ಲಲಿತಾ ಪವಾರ್, ಯಿ. ಬಿಲ್ಲಿಮೋರಿಯಾ
ಮೊದಲಾದವರು

ತಾ**3 - 1 - 44**ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡ್ಪಿ
ಬರುವಚಿತ್ರ. ನವಯುಗದವರ
ಸಂಗಮ್.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

THE CANARA BANKING CORPORATION LTD.

(Incorporated in British India with Limited Liability.)

ESTD: 1906.

Head Office **UDIPI,** S. Kanara.

Statement of affairs as on 31st December, 1943.

LIABILITIES	Rs.	As.	Ps.	ASSETS	Rs.	As.	Ps.
1. Paid up Capital	12,35,970	0	0	1. Cash on hand & with Bankers ...	18,26,986	3	8
2. Reserves	3,55,379	1	6	2. Investments on (1) Govt. Securities, (2) Immovable properties etc.	26,64,671	6	8
3. Deposits	61,06,927	6	0	3. Loans on jewels & other valuable securities	23,72,302	8	7
4. Bills for collection	5,53,518	6	1	4. Loans on personal security & Bills purchased ...	16,74,482	14	8
5. Sundries including revenue items	7,00,981	0	5	5. Bills for collection as per contra	5,53,548	6	1
6. Profits for the year ending 31st December, 1943	1,08,522	4	0	6. Office premises, furniture etc.	93,251	0	0
				7. Sundries including revenue items	84,085	10	4
Total	92,09,328	2	0	Total	92,09,328	2	0

ನವಯುಗ

ಉಡುಪಿ. ಗುರುವಾರ ೩-೨-೧೯೪೪

ದೇಶ--ವಿದೇಶ — ವಾರ್ತೆ —

ಹಿಟ್ಲರನ ಆಕಾಶವಾಣಿ ಭಾಷಣ.

ಈ ಯುದ್ಧದ ಪರಿಣಾಮವೇನೇ ಆಗಲಿ ಇಂಗ್ಲಂಡವು ಯುರೋಪದಲ್ಲಿ ತನ್ನ ಸ್ಥಾನವನ್ನು ಕಳಕೊಂಡಿದೆ. ಶಕ್ತಿಯ ಸಮತೋಲನೆಯ ಪ್ರಶ್ನೆಯು ಈಗ ಉಳಿದಿಲ್ಲ. ಜರ್ಮನಿ ಮತ್ತು ರಶಿಯಾ ಇವೆರಡು ರಾಷ್ಟ್ರಗಳಲ್ಲಿ ಯಾವದಾದರೂ ಒಂದು ಉಳಿಯಬೇಕು- ಇನ್ನೊಂದು ಅಳಿಯಬೇಕು. ರಶಿಯದಂಥ ಮಹಾ ಶಕ್ತಿಯನ್ನೆದುರಿಸುವ ರಾಷ್ಟ್ರವು ಯುರೋಪದಲ್ಲಿ ಜರ್ಮನಿಯಲ್ಲದೆ ಮತ್ತೊಂದಿಲ್ಲ.

ಜರ್ಮನಿಯು ನಾಶಗೊಂಡರೆ ಯುರೋಪದ ಸರ್ವನಾಶವಾಯಿತು. ಜರ್ಮನಿಯು ಉಳಿದರೆ ಯುರೋಪವು ಉಳಿಯುವದು. ರಶಿಯವು ಗೆದ್ದರೆ ಎಲ್ಲವೂ ಸುಗಮವಾಗುವದೆಂದು ಬ್ರಿಟಿಶರು ಹೇಳುತ್ತಾರೆ. ಜರ್ಮನಿ ಸೋತು ರಶಿಯವು ಗೆದ್ದರೆ ಮುಂದೆ ಇಂಗ್ಲಂಡವು ರಶಿಯದ ವಿರುದ್ಧ ಯುದ್ಧ ಹೂಡಬೇಕಾಗುವದು. ಜಗತ್ತು ಸನ ತಾನಾದದ ಬೇಡಾಗುವದು. ಬ್ರಿಟನ್‌ವಾಗಲಿ-ಅಮೇರಿಕೆಯಾಗಲಿ ರಶಿಯನ್ನರ ವಿರುದ್ಧ ಹೋರಾಡುವಂತಿಲ್ಲ. ತಮ್ಮನ್ನು ಉಳಿಸಿಕೊಳ್ಳುವದೇ ಅವರಿಗೆ ಕಷ್ಟವಾಗುವದು. ಬ್ರಿಟನು ತಮ್ಮ ವಚನ ಮುರಿಯಲು ಬರುವದಿಲ್ಲ. ಆಗ್ಗೆಯೆ ಹೂದ್ಯರು ಅವರ ಕಾರ್ಯಕ್ರಮಕ್ಕೆ ತಡೆಯಾಗುವರು ಎಂದು ಹಿಟ್ಲರನು ಆವೇಶಯುಕ್ತವಾಣಿಯಿಂದ ತನ್ನವರಿಗೆ ತನ್ನ ರಾಜಧಾನಿಯಿಂದ ತಾನು ಅಧಿಕಾರಕ್ಕೆ ಬಂದ 11ನೇ ವಾರ್ಷಿಕೋತ್ಸವ ದಿನವಾದ ಇಂದು ಆಕಾಶವಾಣಿಯಲ್ಲಿ ಸಾರಿದನು.

ಜರ್ಮನಿಯು ಸೋತರೆ ಯುರೋಪವು ಮುಗಿದಂತಾಯಿತು. ಜರ್ಮನರು ಸಂಪೂರ್ಣ ನಾಶವಾಗುವವರೆಗೆ ಹೋರಾಡುವರು ಬ್ರಿಟನದ ಮಾರ್ಗವನ್ನನುಸರಿಸಿದವರು ಈ ರಶಿಯದ ಬೋಲ್ಶೆವಿಜಂ ಪ್ಲೇಗಿನಿಂದ ಸಾಯಬೇಕಾಗುವುದು. ಈ ಯುದ್ಧಕ್ಕೆ "ಸ್ವಾರ್ಥಿ ಯೆಹೂದ್ಯ"ರೇ ಕಾರಣ. ೧೯೩೩ರ ರಾಷ್ಟ್ರೀಕ ಸಮಾಜ ಯುದ್ಧವು ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವದು ೧೯೩೦ ರಿಂದ ಊರ್ಜಿತಕ್ಕೆ ಬಂದ ನೇಶನಲ್ ಸೋಶಾಲಿಷ್ಟ ಚಳವಳಿಗೆ ಜಾಗತಿಕ ಬೆಂಬಲ ದೊರೆಯುವದು.

ಎಷ್ಟೇ ಕಷ್ಟವಾದರೂ ಜರ್ಮನರು ಸಹಿಸಿ ಕಡುಗಲಿಗಳಾಗಿ ಕಾದುವರು. ಯುರೋಪವನ್ನು ಉಳಿಸುವದು ಅವರ ಪ್ರಯತ್ನ. ಕಷ್ಟದ ನಂತರ ಸುಖ ಹಾಗೂ ಗುಡುಗು ಮಿಂಚು ಆದ ವೇಳೆ ಆಕಾಶವು ಶುಭ್ರವಾಗುವುದು ಜಗತ್ತಿನ ರೂಢಿ. ಜಾಗತಿಕ ಹಿತದ ಸಲುವಾಗಿ ಜರ್ಮನರು ಹೋರಾಡುವರು. ಅವರ ಆತುರ ಹೆಚ್ಚಿದಂತೆ ಪ್ರತಿಫಲವು ಸುಗಮವಾಗುವದು ರಶಿಯನ್ನರು ಎಷ್ಟೇ ತಮ್ಮ ಪೈಶಾಚಿಕ ಕೃತಿ ಪ್ರದರ್ಶನಮಾಡಿದರೂ ಈ ಹೋರಾಟವು ಜರ್ಮನರ ವಿಜಯದಲ್ಲಿ ಕೊನೆಗೊಳ್ಳುವದೆಂದು ಹಿಟ್ಲರನು ವೀರವಾಣಿಯರಲ್ಲಿ ತಾ. ೩೦ ಬರ್ಲಿನನಲ್ಲಿ ತನ್ನವರಿಗೆ ಸಾರಿದನು.

● ಚುಡೋವೋವನ್ನು ರಶಿಯನ್ನರು ವಶಮಾಡಿಕೊಂಡರು. ಆದ ಕಾರಣ ಲೆನಿನ್ ಗ್ರಾಡ-ಮಾಸ್ಕೋ ರೈಲ್ವೆ ಮಾರ್ಗವು ಸಂಪೂರ್ಣವಾಗಿ ಜರ್ಮನರ ಕೈಯಿಂದ ತಪ್ಪಿದ್ದು ರಶಿಯನರ ವಶವಾಗಿದೆ.

ಲೆನಿನಗ್ರಾಡದಿಂದ ೬೦ ಮೈಲು ದಕ್ಷಿಣದಲ್ಲಿರುವ ನೋವ್ರೋಸೊಕೋಲ್ನಿಕಿಯು ರಶಿಯನ್ನರ ವಶವಾಗಿದೆಯೆಂದು ಸ್ಟ್ಯಾಲಿನರು ಜ. ಗೋವೋರವರಿಗೆ ಕಳಿಸಿದ ಆಜ್ಞಾಪತ್ರದಲ್ಲಿದೆ. ನೋವೋಸೊಕೋಲ್ನಿಕಿಯು ಲೆನಿನಗ್ರಾಡ-ಕೀವ್ ಮಾರ್ಗದಲ್ಲಿದೆ. ಬಹಳ ಆಶ್ಚರ್ಯಕಾರಕವಾದ ಅನಿರೀಕ್ಷಿತ ದಾಳಿಮಾಡಿ ಎರಡನೆ ಬಾಲ್ಟಿಕ್ ವ್ಯೂಹದ ಸೇನೆಗಳು ವಶಪಡಿಸಿಕೊಂಡವೆಂದೂ ಅದರಲ್ಲಿ ಹೇಳಲಾಗಿದೆ.

ಮಾಸ್ಕೋ--ಲೆನಿನ್‌ಗ್ರಾಡ ರೇಲ್ವೆಯ ಪಶ್ಚಿಮದಲ್ಲಿಯ ಕೆಲ ಭಾಗಗಳಲ್ಲಿ ಜರ್ಮನರು ಪಲಾಯನ ಮಾಡುವ ಸನ್ನಾಹದಲ್ಲಿದ್ದಾರೆ. ತನ್ಮಧ್ಯೆ ಇಕ್ಕುವ ಯೋಜನೆಯಿಂದ ಇಸ್ಟೋನಿಯದ ನಾರ್ವಾದಿಂದ ಹೊರಟ ಹಾಗೂ ಪುಸ್ಕೋವನ ದಂಡುಗಳು ಒಂದೇ ಸವನೆ ಮುನ್ನುಗ್ಗಿ ಅನೇಕ ಸ್ಥಿತ್ಯಂತರಗಳಾಗಬಹುದೆಂದು ಊಹಿಸಲಾಗಿದೆ. ಸೋವಿಯೆಟರ ಮುಖ್ಯ ದಂಡು ನಾರ್ವಾಕ್ಕೆ ಸನಿಯದಲ್ಲಿ ೩೦ ಮೈಲಿನ ಒಳಗಿದೆ. ಚುದೋವೋದಲ್ಲಿ ಜರ್ಮನರ ಎರಡು ದಂಡುಗಳು ಮರಣೋನ್ಮುಖವಾಗಿ ನಿಂತಿವೆ.

ಲೆನಿನಗ್ರಾಡದ ದಕ್ಷಿಣದಲ್ಲಿ ಹಿಂದೆ ಸರಿಯುತ್ತಿರುವ ಜರ್ಮನರನ್ನು ಸುತ್ತುಗಟ್ಟಲು ರಶಿಯನ್ನರ 2 ದಂಡುಗಳು ಬಹಳ ಪ್ರಯತ್ನ ನಡಿಸಿವೆ. ದೊಡ್ಡ ಪ್ರದೇಶವೇ ಈಗ ಗಂಡಾಂತರಕ್ಕೆ ಈಡಾಗಿದೆ ಸೋವಿಯೆಟರು ಲೂಗಾವನ್ನು ವಶಮಾಡಿಕೊಳ್ಳುವ ಬಗ್ಗೆ ಈ ಯೋಜನೆ ಮಾಡಿದ್ದಾರೆಂದು ಹೇಳಲಾಗಿದೆ ಲೂಗಾವು ಸಣ್ಣ ನಗರವಾದರೂ ಒಳ್ಳೆಯ ರೇಲ್ವೆ ಕೇಂದ್ರವಾಗಿದೆ. ಇಸ್ಟೋನಿಯಾಕ್ಕೆ ಹೋಗುವ ಮಾರ್ಗದಲ್ಲಿ ಇದೊಂದು ಮುಖ್ಯ ಕೇಂದ್ರವೆಂದರೂ ಸಲ್ಲುವದು. ಇದಕ್ಕೆ ಸನಿಯದಲ್ಲಿ ಅಂದರೆ 25 ಮೈಲು ದೂರದಲ್ಲಿ ಜನರಲ್ ಮೊರೆಟಸ್ಕೋವೋನ ದಂಡುಗಳಿವೆ. 35 ಮೈಲು ವಾಯುವ್ಯದಲ್ಲಿ ಜನರಲ್ ಗೊವೋರೋವನ ದಂಡುಗಳಿವೆ. ಲೂಗಾ ನದಿಯಲ್ಲಿ ಜರ್ಮನರು ಅತೀವ ಪ್ರಯತ್ನ ಮಾಡದಿದ್ದರೆ ಯಾವದೂ ಶತ್ರುವಿಗೆ ಶಕ್ಯವಾಗದ ಪರಿಸ್ಥಿತಿಯಾಗಿದೆ. ಸೋವಿಯೆಟ್ ವಾಹನ ದಳಗಳು ಜರ್ಮನರ ವ್ಯೂಹದ ಕಡೆಗೆ ಒಂದೇ ಸವನೆ ಧಾವಿಸುತ್ತಿವೆ.

ಲಂಚ ತಿಂದ ಆರೋಪದ ಮೇಲೆ ಮಿಲಿಟರಿ ಸೆಕ್ರೆಟರಿಯ ಬಂಧನ

ಯುದ್ಧ ಖಾತೆಯಲ್ಲಿ ಅಸಿಸ್ಟಂಟ ಮಿಲಿಟರಿ ಕಾರ್ಯದರ್ಶಿಗಳಾಗಿದ್ದ ಮೇಜರ ಇ ಇ ಎಲ್ ಡನ್ನೆಟ್ಟಿಯವರನ್ನು ಲಂಚ ತಿಂದ ಆರೋಪದ ಮೇಲೆ ಬಂಧಿಸಲಾಯಿತೆಂದು ಹೊಸದಿಲ್ಲಿಯ ತಾ. ೨೯ರ ವಾರ್ತೆ.

ಅವರನ್ನು ಬಂಧಿಸುವ ವೇಳೆಯಲ್ಲಿ ಅವರ ಮನೆಯಲ್ಲಿದ್ದ ೭೭ ಸಾವಿರ ರೂಪಾಯಿಗಳನ್ನು ಪೋಲೀಸರು ವಶಮಾಡಿಕೊಂಡರು.

ಮಿಲಿಟರಿ ಸೆಕ್ರೆಟರಿ ಖಾತೆಯಲ್ಲಿ ಕೆಲಸ ಮಾಡುತ್ತಿದ್ದ ಡನ್ನೆಟ್ಟಿಯವರಿಗೆ ವಿದೇಶದಲ್ಲಿ ಕೆಲವರನ್ನು ನೇಮಿಸುವ ಅಧಿಕಾರವಿತ್ತು. ಅವರು ಲಂಚ ತೆಗೆದುಕೊಂಡು ಹಲವರನ್ನು ನೇಮಕ ಮಾಡಿದರೆಂಬ ಆರೋಪವಿದೆ.

'ಹಿಂದು ಸಂಸಾರ' ಸಂಪಾದಕರ ಮೇಲೆ ಖಟ್ಲೆ

ಸಿಂಧ ಮೊ ಪಾಕಿಸ್ತಾನೀ ರಾಜ್ಯವೆಂಬ ಲೇಖವನ್ನು ಹಿಂದುಸಂಸಾರ ಪತ್ರಿಕೆಯಲ್ಲಿ ಬರೆದ ಮೂಲಕ ಅದರ ಸಂಪಾದಕರಾದ ಶ್ರೀ. ಆರ್. ಪಿ. ಸದರಂಗಾಣಿ ಇವರ ಮೇಲೆ ಖಟ್ಲೆ ಹೂಡಲಾಗಿದೆ. ಶ್ರೀ. ಸದರಂಗಾಣಿಯವರು 300 ರೂಪಾಯಿ ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು.

ಅ. ಭಾ. ಮಹಿಳಾ ಪರಿಷತ್ತಿನ ೧೭ನೇ ಅಧಿವೇಶನ

ಅಖಿಲ ಭಾರತ ಮಹಿಳಾ ಪರಿಷತ್ತಿನ 17ನೇ ವಾರ್ಷಿಕ ಅಧಿವೇಶನವು ಮುಂಬಯಿಯಲ್ಲಿ ಎಪ್ರಿಲ 7, 8 ಹಾಗು 9ನೇ ತಾರೀಖಿನ ದಿವಸ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಇವರ ಅಧ್ಯಕ್ಷತೆಯಲ್ಲಿ ಕೂಡತಕ್ಕದ್ದಿದ್ದು ದೇಶದಲ್ಲಿಯ ಆಹಾರ ಸಮಸ್ಯೆ, ಬಂಗಾಲ ಮೊದಲಾದವುಗಳಲ್ಲಿಯ ಬರಗಾಲ ಹಾಗೂ ಗಣಿಗಳಲ್ಲಿ ಸ್ತ್ರೀಯರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡದ್ದರಿಂದ ಉದ್ಭೂತವಾದ ಪರಿಸ್ಥಿತಿ ಮೊದಲಾದವುಗಳ ಬಗ್ಗೆ ವಿಚಾರವಾಗುವದು. ಪರಿಷತ್ತಿನ ಸ್ಥಾಯಿ ಸಮಿತಿಯ ಸಭೆಯು 5 ಹಾಗೂ 6ನೇ ಎಪ್ರಿಲಕ್ಕೆ ಕೂಡುವದೆಂದು ಪ್ರಕಟವಾಗಿದೆ.

ವಿಮಾನ ಧಾಳಿ.

ಬ್ರಿಟನದ ಕರಾವಳಿಯ ದೊಡ್ಡ ತೋಫುಗಳು ಡೋವರ ಜಲಸಂಧಿಯಲ್ಲಿ ತಾ. 29ನೇ ರಾತ್ರಿ ಸುಮಾರು 2 ತಾಸುಗಳ ವರೆಗೆ ಗುಂಡಿನ ಮಳೆಗರೆದವು ಫ್ರೆಂಚ ದಂಡೆಯಿಂದ ಜರ್ಮನ ತೋಫುಗಳು ಪ್ರತಿಯಾಗಿ ಗುಂಡಿನ ಮಳೆಗರೆದವು. ಈಶಾನ್ಯ ಇಂಗ್ಲಂಡದ ಮೇಲೆ ಧಾಳಿ ಮಾಡಬಂದ ಧಾಳಿಗ ವಿಮಾನಗಳು ಮರಳಿದೊಡನೆ ಈ ರೀತಿ ಸ್ವಲ್ಪ ಹೊತ್ತಿನ ವರೆಗೆ ಧಾಳಿ ನಡೆಯಿತು.

ದೇಶದ ಪುನರ್ಘಟನೆಯ ಬಗ್ಗೆ

ಇಟಾಲಿಯನ್ ವಿಮೋಚಕ ಪ್ರಾಂತಿಕ ಸಮಿತಿಗಳ ಪರಿಷತ್ತಿನಲ್ಲಿ ತಾ.29ನೇ ಶನಿವಾರ ದೇಶದ ಪುನರ್ಘಟನೆಯ ಪೂರ್ವ ಕುರುಹಾಗಿ ವಿಕ್ಟರ್ ಇಮ್ಯಾನುವೆಲರು ಸಿಂಹಾಸನ ತ್ಯಾಗ ಮಾಡಬೇಕೆಂದು ಕೇಳಿದ ಠರಾವು ಪಾಸಾಯಿತು ಎಂಬುದಾಗಿ ರೇಡಿಯೋದಲ್ಲಿ ಹೇಳಲಾಗಿದೆ.

ಜರ್ಮನರಿಗೆ ವಿಶೇಷ ಹೊಡೆತ.

ಸ್ಲೊವಾನಿಯಾದಲ್ಲಿಯ ಕಾರ್ಲಜಿನ ಸಿರಾಕಾದಲ್ಲಿ ಮತ್ತು ಬೆಲಜಾನಾದಲ್ಲಿ ಭೀಕರ ಯುದ್ಧವಾಯಿತೆಂದು ಸ್ವತಂತ್ರ ಯುಗೋಸ್ಲಾವ ರೇಡಿಯೋದಲ್ಲಿ ಭಾಷಣಮಾಡಲಾಗಿದೆ. ಪಶ್ಚಿಮ ಬೋಸ್ನಿಯಾದಲ್ಲಿಯ ಕಿಸಾವಿಕಾದಲ್ಲಿ ಜರ್ಮನ್ ಮತ್ತು ಚಿಟ್ನಿಕ ದಂಡುಗಳು ಸಂಪೂರ್ಣವಾಗಿ ಸೋತಿವೆ. ಬಾಂಜಲೂಕ-ಪ್ರಿಜೆಡೂರ ರೇಲ್ವೆ ಮಾರ್ಗದಲ್ಲಿ ಒಂದು ಮಿಲಿಟರಿ ಗಾಡಿಯು ಬಾಂಬಿನ ಹೊಡೆತಕ್ಕೆ ಆಹುತಿಯಾಗಿ ನಾಶವಾಗಿದೆ. ಪ್ರಿಜೆಡೋರ-ಬೊಸಾನಸ್ಕಿ-ನೋವೋ ರೈಲ್ವೆ ಮಾರ್ಗವು ಅಲ್ಲಲ್ಲಿ ಕತ್ತರಿಸಲ್ಪಟ್ಟಿದೆ.

ಜರ್ಮನರ ೯೧ ವಿಮಾನಗಳ ನಾಶ

ಹ್ಯಾನೋವರದ ಮುಖ್ಯ ರೈಲ್ವೇ ಕೇಂದ್ರಗಳ ಮೇಲೆ ಹಾಗೂ ಟ್ರಾನ್ಸವಿಕ್ಷದ ವಿಮಾನ ಕಾರ್ಖಾನೆಗಳ ಮೇಲೆ ಅಮೇರಿಕನ್ ಬಾಂಬರ ವಿಮಾನಗಳು ದಾಳಿ ಮಾಡಿದಾಗ ಜರ್ಮನರ 91 ವಿಮಾನಗಳು ನಾಶವಾಗಿವೆಯೆಂದು ಅಧಿಕೃತ ಪ್ರಕಟನೆ ಹೊರಬಿದ್ದಿದೆ.

೪ ದಿನಗಳಲ್ಲಿ ೧೨೬ ಶತ್ರು ವಿಮಾನ ನಾಶ

ಹದಿನೈದನೇ ಬಾಂಬರ ವಿಮಾನ ಪಡೆಗಳು ಈಶಾನ್ಯ ಇಟಲಿಯ ಮೇಲೆ ದಾಳಿ ನಡೆಯಿಸಿದಾಗ ಮಿತ್ರರ ಥಂಡರ್ ಬೋಲ್ಟ್ ವಿಮಾನಗಳು ಶತ್ರುವಿನ 36 ವಿಮಾನಗಳನ್ನುರುಳಿಸಿದವೆಂದೂ ಮಿತ್ರರ ಒಂದು ವಿಮಾನ ನಾಶವಾಗಿದೆಯೆಂದೂ ಉತ್ತರ ಆಫ್ರಿಕೆಯಿಂದ ತಿಳಿಸಲ್ಪಟ್ಟಿದೆ.

5000 ಅಡಿಯಿಂದ 20 ಸಾವಿರ ಅಡಿಗಳ ವರೆಗೆ ಗಗನದಲ್ಲಿ ಸಂಚರಿಸುತ್ತಿದ್ದ ಶತ್ರು ವಿಮಾನಗಳ ಮೇಲೆ ಕೈ ತೆಗೆದುಕೊಳ್ಳಲಾಯಿತು. ಥಂಡರ್ ಬೋಲ್ಟ್ ವಿಮಾನಗಳ ಬೆಂಬಲದಿಂದ ಹೊರಟ್ಟಿದ್ದ ವಿಮಾನಗಳು ಶತ್ರು ವಿಮಾನ ಕ್ಷೇತ್ರಗಳ ಮೇಲೆ ಗುಂಡಿನ ಮಳೆಗರೆದವು. ಕಳೆದ ೪ ದಿನಗಳಲ್ಲಿ ಜರ್ಮನರ 126 ವಿಮಾನಗಳು ನಾಶವಾಗಿವೆ ಮಿತ್ರರ 14 ವಿಮಾನಗಳು ನಾಶವಾಗಿವೆ.

ಇಟಲಿಯನ್ ರಣಭೂಮಿಯಲ್ಲಿ ಮಿತ್ರರ ಪ್ರಗತಿ

ಇಟಲಿಯ ರಣರಂಗದಲ್ಲಿಯ 5ನೇ ದಳದ ವ್ಯೂಹದಲ್ಲಿ ಫ್ರೆಂಚ ದಂಡುಗಳು ಶತ್ರುವಿನ ಉಗ್ರ ಪ್ರತಿದಾಳಿಯನ್ನು ತಡೆದು ಮುಂದೊತ್ತಿದವು ಬ್ರಿಟಿಶ ದಂಡುಗಳು ಮಹತ್ವದ ಗುಡ್ಡಗಳನ್ನು ಕೈವಶಮಾಡಿಕೊಂಡವು. ಹೀಗೆ ಎರಡೂ ಕಡೆಗಳಲ್ಲಿ ಶತ್ರು ಸೈನಿಕರಲ್ಲಿ ಅನೇಕರು ಸೆರೆಹಿಡಿಯಲ್ಪಟ್ಟರು. ಅಂಝಿಯೋದಲ್ಲಿ ಮಿತ್ರ ಸೇನೆಗಳು ಅನೇಕ ಕಡೆಗಳಲ್ಲಿ ಮುನ್ನುಗ್ಗಿದವೆಂದು ಈ ದಿನದ ಮಿತ್ರ ಪ್ರಕಟಣೆಯಲ್ಲಿ ಹೇಳಲಾಗಿದೆ.

ಅಷ್ಟಮ ದಲದ ಗಸ್ತಿ ಸೇನೆಗಳು ಬೇರೆ ಬೇರೆ ಕಡೆಗಳಲ್ಲಿ ಬಹಳ ಚಟುವಟಿಕೆಯನ್ನು ತೋರಿಸಿವೆ. ಅಂಕೋನಾ, ರಿಮಿನಿ ಮತ್ತು ಬೋಲೋಗ್ನಾದ ಮೇಲೆ ಬಾಂಬರ ದಾಳಿಯಾಯಿತು. ರೋಮ್ ನಗರದ ಉತ್ತರದಲ್ಲಿರವ ರೈಲ್ವೆಗಳ ಹಾಗೂ ಸ್ಯಾನ್ ಬೆನೆಡಿಟ್ಟೋ ಬಂದರದ ಮೇಲೆಯೂ ದಾಳಿ ನಡೆಯಿತು.

ಫ್ರೊಸಿನೋನ್ ಪ್ರದೇಶದಲ್ಲಿಯ ಸಾರಿಗೆ ಮೋಟಾರುಗಳೂ ದಾಳಿಗೆ ಈಡಾದವು. ಮೊನ್ನೆ ತಾ. 28–29ಕ್ಕೆ ಪೋಲಿಗ್ನೋ ಮತ್ತು ವೆರೋನ ರೈಲ್ವೇ ಅಂಗಣದ ಮೇಲೆ ದಾಳಿಯಾಗಿ ಶತ್ರುವಿನ 4 ವಿಮಾನಗಳು ನಾಶವಾದವು. ಮಿತ್ರರ ಮೂರು ವಿಮಾನಗಳು ಕಣ್ಮರೆಯಾಗಿವೆ.

ಕುಮಾರಿ ಮಣಿಬೆನ್ ಪಟೇಲರ ಬಿಡುಗಡೆ.

ಸರದಾರ ವಲ್ಲಭ ಭಾಯಿ ಪಟೇಲರ ಮಗಳಾದ ಕುಮಾರಿ ಮಣಿಬೆನ್ ಪಟೇಲ ಮತ್ತು ಕುಮಾರಿ ಪ್ರೇಮಕಂಠಕ ಇವರಿಬ್ಬರೂ ತಾ. 30ರಲ್ಲಿ ಅನಿರ್ಬಂಧವಾಗಿ ಬಿಡುಗಡೆ ಮಾಡಲ್ಪಟ್ಟರು

ಸಂದೇಶ ಪತ್ರಿಕೆಯ ಮೇಲಿನ ನಿರ್ಬಂಧಕಾಜ್ಞೆ.

ಸಂಪಾದಕರ ರಿವಿಜನ್ ಅರ್ಜಿ.

'ಅಹಮದಾಬಾದ್ ಸಂದೇಶ' ದಿನ ಪತ್ರಿಕೆಯ ಸಂಪಾದಕ ಮುದ್ರಕ ಮತ್ತು ಪ್ರಕಾಶಕರಾದ ಶ್ರೀ. ನಂದಲಾಲ ಚುನಿಲಾಲ ಬೋಡಿವಾಲಾರವರು ಡಿ ಮ್ಯಾಜಿಸ್ಟ್ರೇಟರ ಆಜ್ಞೆಯವಿರುದ್ಧ ಸೆಶ್ಶನ್ ಜಜ್ಜರಲ್ಲಿ ರಿವಿಜನ್ ಅರ್ಜಿ ದಾಖಲು ಮಾಡಿದ್ದಾರೆ.

ಜನವರಿ 26ನೇ ತಾರೀಕಿನ 'ಸಂದೇಶ' ಪತ್ರಿಕೆಯನ್ನು ಮಾರಾಟ ಮಾಡಕೂಡದೆಂದು ಜಿಲ್ಲಾ ಮ್ಯಾಜಿಸ್ಟ್ರೇಟರರು ನಿರ್ಬಂಧಕಾಜ್ಞೆ ಜಾರಿ ಮಾಡಿದ್ದರಲ್ಲದೆ ಆ ತಾರೀಕಿನ ಪ್ರತಿಗಳನ್ನು ಸರಕಾರವು ಜಪ್ತು ಮಾಡುವದೆಂದು ಸಾರಿದ್ದರು.

ಇದೇ ರೀತಿಯ ಆಜ್ಞೆಯು ಅನ್ವಯಿಸುವ ಅಹಮದಾಬಾದಿನ ಇತರ ಸಂಪಾದಕರೂ ಪ್ರಿವ್ಹಿಯವರೊಡನೆ ವಿಚಾರ ವಿನಿಮಯ ಮಾಡಲು ಮುಂಬಯಿಗೆ ಪ್ರಯಾಣ ಬೆಳೆಸಲಿದ್ದಾರೆ.

ಹಿಂದುಸ್ತಾನದಲ್ಲಿ ರಶಿಯನ್ ವೈಮಾನಿಕರು

ಮಿಡಚಿಗಳ ಹಾವಳಿಯನ್ನಡಗಿಸುವ ಬ್ರಿಟಿಶ ಮತ್ತು ಹಿಂದೀ ವಿಜ್ಞಾನಿಗಳೊಂದಿಗೆ ರಶಿಯನ ವೈಮಾನಿಕರು ಸಹಕರಿಸುತ್ತಿರುವರು.

ಮಧ್ಯಪೂರ್ವದ ಮಿಡಚಿ ವಿರೋಧ ಸಂಘವು ಮಾಡಿಕೊಂಡ ಒಪ್ಪಂದದನ್ವಯ 10 ರಶಿಯನ್ ವೈಮಾನಿಕರು ತಮ್ಮ ವಿಮಾನಗಳೊಂದಿಗೆ ಕರಾಚಿಗೆ ಬಂದಿದ್ದಾರೆ. ಮಿಡಚಿಗಳ ವಿಷ ದ್ರವಗಳನ್ನು ಪ್ರೋಕ್ಷಿಸಲು ಇದರಲ್ಲಿ ಎಲ್ಲ ವ್ಯವಸ್ಥೆಯಿದೆ.

ಮಧ್ಯಪೂರ್ವ ರಾಷ್ಟ್ರಗಳಲ್ಲಿ ಮಿಡಚಿಗಳು ಹಾವಳಿಯೆಬ್ಬಿಸಿದಾಗ ರಶಿಯನರು ಇಂಥ ಕೆಲವು ವಿಮಾನಗಳನ್ನು ಅಲ್ಲಿಗೆ ಕಳಿಸಿದ್ದರು. ಈಗ ಹಿಂದುಸ್ತಾನಕ್ಕೆ ಆ ದಳದ ಕೆಲವು ವಿಮಾನಗಳು ಬಂದಿವೆ ವಿಷ ದ್ರವವನ್ನು ಸುರಿಸಲು ಈ ವಿಮಾನವು ನೆಲದ 15 ಅಡಿ ಎತ್ತರದಲ್ಲಿ ಮಾತ್ರ ಹಾರಬೇಕಾಗಿರುವುದು. ಅದಕ್ಕೆ ಅನುಕೂಲವಾಗುವಂತೆ ವಿಮಾನವು ರಚಿಸಲ್ಪಟ್ಟಿರುವುದು. ಅದು ಅತ್ಯಂತ ಹಗುರವಿದೆ. ಮೂರ್ತಿಯು ಚಿಕ್ಕದು. ವೈಮಾನಿಕರೂ ನುರಿತವರು.

ಇಂಥ ವಿಮಾನಗಳಿಂದ ರಶಿಯನರು ತಮ್ಮ ದೇಶದಲ್ಲಿ ಮಿಡಚಿಗಳ ಹಾವಳಿಯನ್ನು ಅಡಗಿಸಿದರು.

ಉಡುಪಿ.

ಉಡುಪಿಯಲ್ಲಿ ಮಧ್ವನವಮಿ—ಉಡುಪಿಯ ಮಹೋತ್ಸವಗಳಲ್ಲಿ ಪಾವಿತ್ರ್ಯ ದೃಷ್ಟಿಯಲ್ಲಿ ಮಧ್ವನವಮಿಗಿಂತ ಮಿಗಿಲಾದುದು ಯಾವುದೂ ಇಲ್ಲ. ಆದರಲ್ಲಿಯೂ ಅಷ್ಟ ಮಠೀಯ ಶ್ರೀಗಳಿಗೆ ಪರಮ ಪವಿತ್ರ ದಿನ. ಉಡುಪಿಯಿಂದ ಸಾಧಾರಣ ದೂರದಲ್ಲಿ ಪ್ರವಾಸಿಗಳಾಗಿದ್ದ ಶ್ರೀಗಳವರೂ ಅಂದು ಉಡುಪಿಗೆ ಬಂದು ಶ್ರೀ ಮಧ್ವಾಚಾರ್ಯರ ಮೂರ್ತಿಯ ಮುಂದೆ ಪಾದ್ಯ ಪೂಜೆಯನ್ನು ಮಾಡಿ ಶ್ರೀಗಳವರೊಂದಿಗೆ ತೀರ್ಥ ಪ್ರಸಾದ ಭಿಕ್ಷೆಗಳಲ್ಲಿ ಸಹಭಾಗಿಯಾಗುವುದು ಮಧ್ವಾಚಾರ್ಯರ ಪಟ್ಟದ ಶಿಷ್ಯ ಪರಂಪರೆಯವರ ಆದ್ಯ ಕರ್ತವ್ಯ. ಹೀಗಿರುತ್ತ ಇಂದಿನ ಪರ್ಯಾಯ ಶ್ರೀಗಳವರ ಶಿಷ್ಯ 'ವಿದ್ಯಾ ವಲ್ಲಭ'ರು ಈ ಸತ್ಸಂಪ್ರದಾಯವನ್ನು ಮುರಿದು ಪಾದ್ಯಪೂಜೆಗೆ ಹೋಗದೆ ಸ್ವಮಠದಲ್ಲೇ ಪ್ರತ್ಯೇಕ ಭಿಕ್ಷೆಯನ್ನು ಕೈಗೊಂಡರೆಂಬುದನ್ನು ಕೇಳಿ ಪರಮಾಶ್ಚರ್ಯವೂ ವಿಷಾದವೂ ಆಗಿವೆ. ಉಡುಪಿಯ ಶ್ರೀ ಶೀರೂರು ಶ್ರೀಲಕ್ಷ್ಮೀಂದ್ರ ಶ್ರೀಗಳವರು ತಮ್ಮ ಮಠದಲ್ಲಿ ನಿನ್ನೆ ಮೊದಲ್ಗೊಂಡು ನಾಲ್ಕು ದಿನ ಶ್ರೀ ಮಧ್ವಾಚಾರ್ಯರ ವಿಷಯವಾಗಿ ಶ್ರೀ. ಹ ಶ್ರೀಪಾದ ದಾಸರಿಂದ ಹರಿಕತೆ ನಡೆಯಿಸುತ್ತಿರುವುದು ಸ್ತುತ್ಯವಿದೆ.

1944ರಲ್ಲಿ ವಾರ್ಡನ್ ನವೋನ್ನತಿಯನ್ನು ಮುಟ್ಟಿದೆ.

ದಾಖಲೆಗೆ ಸೇರಿರುವ ಹೊಸ ವ್ಯವಹಾರವು ರೂ. 71,00,000ಕ್ಕೆ ಮೀರಿದೆ

ಇದು ವಾರ್ಡನಿನ ಪ್ರಗತಿಪರವಾದ ಕಳೆದ 10 ವರ್ಷಗಳ ದಾಖಲೆಯಲ್ಲಿ ಇತ್ತೀಚೆಗಿನ ಉತ್ಕೃಷ್ಟ ವಿಜಯವನ್ನು ಸೂಚಿಸುತ್ತದೆ.

ವಾರ್ಡನಿನ ಕಾರ್ಯಕ್ಷೇತ್ರದಲ್ಲಿ ನಿಷ್ಠೆಯಿಂದಲೂ ಉತ್ಸಾಹದಿಂದಲೂ ದುಡಿಯುತ್ತಿರುವ ನೌಕರ ದಳದ ಬೆಂಬಲದಿಂದಲೂ ವಾರ್ಡನಿನ ಶಕ್ತಿಸ್ಥಿರತೆಗಳಲ್ಲಿ ಮಹಾ ಜನರಿಗೆ ಉಂಟಾಗಿರುವ ಉತ್ತರೋತ್ತರ ವಿಶ್ವಾಸದಿಂದಲೂ ವಾರ್ಡನ್ ಈ 1943ರ ಅಸದೃಶ ವಿಜಯವನ್ನು ಹೊಂದಿರುತ್ತದೆ ಇಂತಹ ಯಶಸ್ಸನ್ನು ಸಂಪಾದಿಸಲು ದೇಶದಲ್ಲೆಲ್ಲಾ ನೆರವಾದ ತನ್ನ ಪ್ರತಿನಿಧಿಗಳಿಗೂ ವಿಮಾ ಪತ್ರದಾರಿಗೂ ವಾರ್ಡನ್ ತನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಮತ್ತು ಅಭಿನಂದನೆಗಳನ್ನು ಅರ್ಪಿಸುತ್ತದೆ.

1944ನೆಯ ಈ ವರ್ಷದಲ್ಲಿ **ವಾರ್ಡನು** ಮತ್ತೂ ಸಾಹಸಾತ್ಮಕವಾದ ವಿಸ್ತೃತ ಕಾರ್ಯಕ್ರಮದ ಯೋಜನೆಯನ್ನು ಈಗಾಗಲೇ ತಯಾರಿಸಿದೆ. ಪೌರ್ವಾತ್ಯ ದೇಶಗಳಲ್ಲಿ ಅತ್ಯಂತ ಯಶಸ್ವಿಯಾಗಿ ಶೀಘ್ರವಾಗಿ ಅಭಿವೃದ್ಧಿ ಹೊಂದುತ್ತಿರುವ ವಿಮಾ ಸಂಘಗಳಲ್ಲಿ ಒಂದಾಗಿರುವ ಈ ಕಂಪೆನಿಯ ಕಾರ್ಯಕ್ರಮದಲ್ಲಿ ಕೈಗೊಡಲು ಬಯಸುವವರಿಗೆ ಪ್ರವೇಶಕ್ಕೆ ವಿವಿಧ ಉತ್ಕೃಷ್ಟ ದ್ವಾರಗಳಿವೆ. ಇಂತಹ ವಿಶೇಷ ಸಂದರ್ಭದ ಕೂಲಂಕಷ ವಿವರಕ್ಕೆ ನೀವು ಬರೆದು ಶೀಘ್ರ ಕಾರ್ಯ ಪ್ರವೃತ್ತರಾದರೆ ನಿಮಗೆ ಉದಾರತೆಯುಳ್ಳ ವಿಜಸ್ವಿ ಸೌಕರ್ಯಗಳು ನಿಮ್ಮನ್ನೆ ಕಾದು ಕೂತಿವೆ.

1943ರ ವಿಜಯವು ಹೊಸ ವ್ಯವಹಾರ ದೃಷ್ಟಿಯಿಂದ ಮಾತ್ರವಲ್ಲ, ಎಲ್ಲ ತರದ ಮಹತ್ತರ ಲಾಭದ ತುಲನಾತ್ಮಕ ದೃಷ್ಟಿಯಿಂದಲೂ

ಜೀವವಿಮೆ, ಅಗ್ನಿವಿಮೆ, ಅಪಘಾತವಿಮೆ

ಮುಂತಾದ ಎಲ್ಲ ಶಾಖೆಗಳ ಶಕ್ತಿ ವೃದ್ಧಿ ದೃಷ್ಟಿಯಿಂದಲೂ ಮಹತ್ವಪೂರ್ಣವಾಗುತ್ತದೆ

ವಾರ್ಡನ್ ಇನ್ಶೂರೆನ್ಸ್ ಕಂ. ಲಿ.

ಚೇರ್‌ಮನ್:
ಸರ್. ಚಿನೂಭಾಯಿ ಮಾಧವಲಾಲ್.
ಮೆನೇಜಿಂಗ್ ಡೈರೆಕ್ಟರ್:
ಎಸ್. ಎಚ್. ಥಾಕರ್,
ಎಸ್ಕ್ವೈಯರ್



ವಾರ್ಡನ್ ಹೌಸ್,
ಸರ್. ಫಿರೋಜ್ ಷಾ,
ಮೆಹತಾ ರೋಡ್,
ಫೋರ್ಟ್ ಬೊಂಬೈ

(ಶಕ್ತಿ ವೃದ್ಧಿಗಳಿಗೆ ವಿಚಾರ ದೃಷ್ಟಿಯಲ್ಲಿ ಪ್ರಸಿದ್ಧವಾದುದು.)

1944

ಹೊಸ ವರ್ಷದ ಪಾಕೆಟ್ ಡೈರಿ.

ಸಣ್ಣದು	(ಸಾದಾ)	ಮುಗಿದಿದೆ
,,	(ಕಲಿಕೊ)	1–1–0
,,	(ಮುಚ್ಚಳದ್ದು)	ಮುಗಿದಿವೆ.
ದೊಡ್ಡದು	(ಸಾದಾ)	1–12–0
,,	(ಕಲಿಕೊ)	2–0–0
,,	(ಮುಚ್ಚಳದ್ದು)	2–6–0

ಕೆಲವೇ ಪ್ರತಿಗಳು ದೊರೆಯುತ್ತವೆ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಲ್ಯಾಣಪುರ ಸೊ ಮಿಲ್ಸ್, ಕಲ್ಯಾಣಪುರ—ದ. ಕನ್ನಡ.

ಇಲ್ಲಿ ಸುಲಭ ದರದಲ್ಲಿ, ಬೇಕಾದ ನಮೂನೆಯಲ್ಲಿ ಎಲ್ಲಾ ತರದ ಮರವನ್ನು ಬಹು ಶೀಘ್ರವಾಗಿ ಸಿಗಿದು ಕೊಡಲಾಗುವುದು.

ಎಂತಹ ಮರವನ್ನಾದರೂ ತಡೆಬಿಡುವಿಲ್ಲದೆ ಗರಗರನೆ ಸಿಗಿಯುವ ಮಿಲ್ ನಮ್ಮಲ್ಲಿರುವುದರಿಂದ ಕೆಲಸವು ಬಹುಸುಲಭವಾಗಿಯೂ ನಾಜೂಕಾಗಿಯೂ ಸಾಗುವುದು.

ಗ್ರಾಹಕರಿಗೆ ಸರ್ವಾನುಕೂಲತೆಗಳನ್ನು ಒದಗಿಸಲಾಗುವುದು.

ವಿಶೇಷ ಮಾಹಿತಿಗೆ ಬರೆಯುವುದು ಯಾ ಮುಖತಃ ಮಾತನಾಡುವುದು.

ಮೆನೇಜರ್

KALLIANPUR SAW MILLS.
Kallianpur Post. S. K.

ಮಂಗಳೂರು

ಶ್ರೀ| ಅ. ನ. ಕೃಷ್ಣರಾಯರು:— ಸುಪ್ರಸಿದ್ಧ ಸಾಹಿತಿ ಶ್ರೀ| ಅ. ನ. ಕೃಷ್ಣರಾಯರು ಕಳೆದವಾರ ಮಂಗಳೂರಿಗೆ ಆಗಮಿಸಿದ್ದರು. ತಾ. 24ರಲ್ಲಿ ಅವರನ್ನು ಜಿಲ್ಲಾ ಪತ್ರಿಕೋದ್ಯೋಗಿ ಸಂಘದಲ್ಲಿ ಸತ್ಕರಿಸಲಾಯಿತು ಶ್ರೀ| ಸಡ್ಯಾಕು ಕೃಷ್ಣಭಟ್ಟರ ಅಧ್ಯಕ್ಷತೆಯಿಂದ ಅಂದು ಸಭೆ ಜರಗಿತು. ಪರಿಚಯಗಳಾದ ಮೇಲೆ ಶ್ರೀ| ಅ. ನ. ಕೃಷ್ಣರಾಯರು ಮಾತನಾಡುತ್ತಾ, ಕನ್ನಡ ಸಾಹಿತ್ಯ ಪರಿಷತ್ತು ಪ್ರಗತಿಗಾಮಿಯಾಗಬೇಕು. ತರುಣರು ಹೆಚ್ಚಾಗಿ ಸೇರಬೇಕು. ಇದರೊಂದಿಗೆ ಪ್ರಗತಿಶೀಲ ಸಾಹಿತ್ಯದ ಆಂದೋಲನವಾಗಬೇಕು ಎಂದು ಮುಂತಾಗಿ ವಿವರಿಸಿ ದಕ್ಷಿಣ ಕನ್ನಡ ಸಾಹಿತ್ಯ ಚಟುವಟಿಕೆಯನ್ನು ಪ್ರಶಂಸಿದರು ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ಧನ್ಯವಾದವನ್ನರ್ಪಿಸಿದರು.

ಮಂಗಳೂರು ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನದ ವಿದ್ಯಾರ್ಥಿ ಸಭೆಯವರು ತಾ. 25ನೇ ಬೆಳಿಗ್ಗೆ ಶ್ರೀ ಅ ನ. ಕೃಷ್ಣರಾಯರಿಗೆ ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಆ ಶ್ರೀಯವರು ಪ್ರಸ್ತುತ ಪರಿಸ್ಥಿತಿ ಮತ್ತು ಸಾಹಿತ್ಯ ಎಂಬ ಕುರಿತು ವಿದ್ವತ್ಪೂರ್ಣ ಭಾಷಣವಿತ್ತರು.

ಸಂಜೆ ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿ ಅಧ್ಯಾಪಕ ಸಂಘದ ಆಶ್ರಯದಲ್ಲಿ ಕನ್ನಡ ಸಾಹಿತ್ಯದ ಕುರಿತು ಭಾಷಣವಿತ್ತರು ಕನ್ನಡ ಸಾಹಿತ್ಯದ ವಿಹಂಗಮಾವಲೋಕನ ಮಾಡಿ, ಕನ್ನಡ ಸಾಹಿತ್ಯವು ಜೀವನ ಸಾಹಿತ್ಯವಾಗಿರಬೇಕೆಂದು ಹೇಳುತ್ತಾ, ಉಪಾಧ್ಯಾಯರು ಹಳ್ಳಿಯ ಜನಪದ ಸಾಹಿತ್ಯ, ಪಾಡ್ದನಗಳನ್ನು ಸಂಗ್ರಹಿಸಬೇಕೆಂದರು.

ಸೈಂಟ್ ಎಲೋಶಿಯಸ್ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ 'ಹಾಸ್ಯ'ದ ವಿಚಾರ ರಸಭರಿತ ಭಾಷಣವಿತ್ತರು ಆಂಗ್ಲ, ಸಂಸ್ಕೃತ ಕನ್ನಡ ಸಾಹಿತ್ಯಗಳಲ್ಲಿ ಹಾಸ್ಯವನ್ನು ಚಿತ್ರಿಸಿದ ಕವಿಗಳ ಕೃತಿಗಳ ನಿರೂಪಣೆ ಮಾಡಿ ಹಾಸ್ಯದಲ್ಲಿ ನಾಲ್ಕು ವಿಧವಿದೆಯೆಂದು ವಿವರಿಸಿ, ಜೀವನದ ಸಂಕಷ್ಟ ಮರೆಯಲು, ಹಾಸ್ಯವು ಇರಬೇಕೆಂದರು.

ಮರುದಿನ ಅಪರಾಹ್ನ 4 ಗಂಟೆಗೆ ಗವರ್ನಮೆಂಟ್ ಕಾಲೇಜಿನ ಕರ್ಣಾಟಕ ಸಂಘದಲ್ಲಿ 'ಕನ್ನಡ ಕಾದಂಬರಿ'ಗಳ ವಿಚಾರ ಭಾಷಣ ಮಾಡಿದರು. ಆಧುನಿಕ ಕಾದಂಬರಿಕಾರರು, ಶಾಂತ, ಪುಟ್ಟಪ್ಪ, ಮೊದಲಾದವರು ಹೇಗೆ ಜನಜೀವನವನ್ನು ಸುಂದರವಾಗಿ ಚಿತ್ರಿಸುತ್ತಾರೆಂದು ತಿಳಿಸಿ ಮುಂದಿನ ಕಾದಂಬರಿಕಾರರು, ಶ್ರಮಜೀವನವನ್ನು, ರಾಷ್ಟ್ರೀಯ ಹೋರಾಟದ ಜೀವನವನ್ನೆಲ್ಲಾ ಚಿತ್ರಿಸಿ ಸಾಹಿತ್ಯವನ್ನು ವೀರ್ಯವತ್ತಾಗಿ ಮಾಡಬೇಕೆಂದರು. ಸಂಘದ ಕಾರ್ಯದರ್ಶಿಗಳು ಧನ್ಯವಾದವಿತ್ತರು.

ಸಂಜೆ 7 ಗಂಟೆಗೆ ಮಿತ್ರ ಮಂಡಳಿಯವರು ಸತ್ಕಾರಕೂಟವೇರ್ಪಡಿಸಿ ಇಂದಿನ ಕನ್ನಡದ ಹಾದಿಯ ಕುರಿತು ಹೇಳಿ, ಕನ್ನಡಿಗರು ಕನ್ನಡ ನಾಡನ್ನು ಕಟ್ಟಬೇಕಾಗಿದೆ, ಅದರೊಂದಿಗೆ ಭಾರತ ರಾಷ್ಟ್ರವನ್ನೂ ನಿರ್ಮಿಸಬೇಕಾಗಿದೆಯೆಂದು ತಿಳಿಸಿ ನಮ್ಮಲ್ಲಿ ಅಂಥಾ ಸಾಹಿತ್ಯದ ನವನಿರ್ಮಾಣವಾಗಬೇಕೆಂದರು. ಮರುದಿನ ಶ್ರೀಯುತರು ಉಡುಪಿಗೆ ತೆರಳಿದರು.

ಬಡಬಗ್ಗರ ಗೋಳು:— ಅಕ್ಕಿಡಿಪೋಗಳಲ್ಲಿ ಹುಸುಗೆ ಕಾರ್ಡು ಇದ್ದರೂ ಸರಿಯಾಗಿ ಅಕ್ಕಿ ಕೊಡಲ್ಪಡುವುದಿಲ್ಲ ಎಂಬ ದೂರು ಕೇಳಿ ಬರುತ್ತದೆ. ದಿನಂಪ್ರತಿ ಅಕ್ಕಿ ತೆಗೆದುಕೊಂಡು ಹೋಗುವ ಬಡಬಗ್ಗರು ಸಂಜೆ ವರೆಗೆ ಕಾದು ಕುಳಿತರೂ 7 ಗಂಟೆಮೇಲೆ ಇನ್ನು ಗಂಟೆಯಾಯಿತೆಂದು ಅಂಗಡಿಗೆ ಬಾಗಿಲು ಹಾಕಿ ಕಾದು ಕುಳಿತ ಜನರನ್ನು ಹೊರಗಟ್ಟುತ್ತಾರೆಂದೂ ತಿಳಿದು ಬಂದಿದೆ. ಇನ್ನಾದರೂ ಸಂಬಂಧಪಟ್ಟವರು ಸರಿಯಾಗಿ ಅಕ್ಕಿ ಸಿಗುವ ವ್ಯವಸ್ಥೆ ಮಾಡದಿದ್ದರೆ ಬಡಬಗ್ಗರ ಗೋಳನ್ನು ಕೇಳಲಸಾಧ್ಯ. ಒಂದೇ ಡಿಪೋಗಳನ್ನು ಹೆಚ್ಚು ಮಾಡಬೇಕು ಇಲ್ಲವೇ ಡಿಪೋದ ಆಫೀಸ ಸಮಯವನ್ನು ಹೆಚ್ಚಿಸಬೇಕು. ಈ ಕಡೆಗೆ ಸಂಬಂಧಪಟ್ಟವರು ಗಮನಿಸುವರೇ ಎಂದೊಂದು ಬಾತ್ಮಿ.

ಮಂಗಳೂರು:— ಶ್ರೀ ರಾಮಕೃಷ್ಣ ವಿದ್ಯಾರ್ಥಿ ವಿದ್ಯಾರ್ಥಿನಿ ಭವನಗಳ ದಿನಾಚರಣೆಯು ತಾ 29ನೇ ಸಂಜೆ ರೆವರೆಂಡ್ ಫಾದರ್ ಟಿ.ಎ.ಬಿ. ಕೊಯ್ಲೊರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು ಪ್ರಾತಃಕಾಲ ಉಪಾಹಾರ ಮತ್ತು ಪಂದ್ಯಾಟಗಳಿದ್ದುವು. ಸಾಯಂಕಾಲ ಪ್ರಾರ್ಥನೆ ಅಧ್ಯಕ್ಷರ ಚುನಾವಣೆಯಾದನಂತರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳ ಪ್ರಗತಿಪರ ವರದಿಗಳು ಓದಲ್ಪಟ್ಟವು. ವಿದ್ಯಾರ್ಥಿನಿ ಭವನದ ಕಟ್ಟಡ ನಿಧಿ ಸಂಗ್ರಹಕ್ಕಾಗಿ ಬೊಂಬಾಯಿಗೆ ತೆರಳಿದ ಕಮಿಟಿಯವರು ಇಪ್ಪತ್ತರಲ್ಲಿ ಏಳೆಂಟುಸಾವಿರ ರೂಪಾಯಿ ಸಂಗ್ರಹಿಸಿರುವರೆಂದೂ ಬೊಂಬಾಯಿಯ ಪಾವಲ್ &ಕೊವಿನ ಪಾರ್ವತಿ ಬಾಯಿಯವರೊಬ್ಬರೆ 5000ರೂ. ಕೊಡಲೊಪ್ಪಿರುವರೆಂದೂ ಜಾಹೀರು ಮಾಡಲಾಯಿತು. ಭವನದ ಹಳೇ ನಿವಾಸಿಗಳಾಗಿದ್ದ ಶ್ರೀ ಕೆ. ಸಿ ನಾಯಕ್ B. Ag. M. Sc. ಯವರು ಭವನದ ಶ್ರೇಯೋ ಭಾಷಣ ಮಾಡಿದರು. ಅದಕ್ಕೆ ಕಾರ್ಯದರ್ಶಿಗಳು ಉತ್ತರವನ್ನಿತ್ತರು. ಅಧ್ಯಕ್ಷರ ಭಾಷಣವಾದ ಮೇಲೆ ವಿದ್ಯಾರ್ಥಿನಿಯರು ನರ್ತನ, ಇಂಗ್ಲಿಷ್ ಪ್ರಹಸನಗಳನ್ನೂ, ವಿದ್ಯಾರ್ಥಿಗಳು ಆಹುತಿ ಎಂಬ ಕನ್ನಡ ನಾಟಕವನ್ನೂ ಯಶಸ್ವಿಯಾಗಿ ಅಭಿನಯಿಸಿದರು.

ಉಡುಪಿ.

ಹರಿಶ್ಚಂದ್ರ ಚಿತ್ರದ ಸುವರ್ಣೋತ್ಸವ:— ಶ್ರೀ ರಾಮ ಕೃಷ್ಣ ಥಿಯೇಟರಿನಲ್ಲಿ 50 ದಿನಗಳಲ್ಲಿ ಪ್ರದರ್ಶನವಾಗುತ್ತಿದ್ದ ಹರಿಶ್ಚಂದ್ರ ಚಲಚಿತ್ರದ ಸುವರ್ಣೋತ್ಸವವು ತಾ. 28ನೇ ಸಂಜೆ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಕನ್ನಡ ಚಲಚಿತ್ರಗಳ ಹುಟ್ಟು ಬೆಳವಣಿಗೆಯನ್ನು ವಿವರಿಸಿ ಮೊದಲ ಕನ್ನಡ ಚಿತ್ರವು ಉಡ್ಪಿಯವರಿಂದಲೇ ಆರಂಭವಾಯಿತೆಂದೂ ಇನ್ನು ಉಡ್ಪಿಯವರದೇ ಆದ ಚಿತ್ರ ನಿರ್ಮಾಣಕ ಸಂಸ್ಥೆಯೊಂದು ಆಗುವ ಸುದಿನವನ್ನು ಕಾಣುವಂತಾಗಲೆಂದೂ ಹೇಳಿ ಹರಿಶ್ಚಂದ್ರ ಚಿತ್ರದ ಯಶಸ್ಸಿಗೆ ಕಾರಣವಾದ ಪ್ರಗತಿ ಫಿಲ್ಮಿನವರನ್ನು ಕೊಂಡಾಡಿದರು. ಶ್ರೀ ಸಿ. ಶೀನ ಸೆಟ್ಟರು ಧನ್ಯವಾದವನ್ನು ಅರ್ಪಿಸಿದರು.

ಸುರತ್ಕಲ್ಲಿನಲ್ಲಿ ಶ್ರೀ ಕೃಷ್ಣಾಪುರ ಸ್ವಾಮಿಗಳಿರವರಿಗೆ ಸ್ವಾಗತ; ಈಗ ತಾನೆ ಪರ್ಯಾಯಪೀಠವನ್ನು ಬಿಟ್ಟದ್ದ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ತಾ 28-1-44ನೇ ಸಂಜೆ ಉಡುಪಿಯಿಂದ ಕೃಷ್ಣಾಪುರಕ್ಕೆ ಬರುವಾಗ ಸುರತ್ಕಲ್ ನಿವಾಸಿಕರು ಅವರನ್ನು ಸಂಭ್ರಮದಿಂದ ಸ್ವಾಗತಿಸಿದರು. ಹಾದಿ ಬೀದಿಗಳು ತಳಿರು ತೋರಣಗಳಿಂದ ಶೃಂಗರಿಸಲ್ಪಟ್ಟದ್ದವು. ಸುಮಾರು ಮೂರು ಮೈಲು ದೂರದಿಂದ ಶ್ರೀಗಳವರನ್ನು ಬಿರುದಾವಳಿಗಳಿಂದ ಎದುರ್ಗೊಂಡು ಕರೆತರುವ ವ್ಯವಸ್ಥೆ ಮಾಡಲಾಗಿತ್ತು. ಸಾವಿರಾರು ಜನರು ಶ್ರೀಗಳವರ ದರ್ಶನ ಲಾಭ ಪಡೆದು ಕೃತಾರ್ಥರಾದರು.

ಶ್ರೀ. ಅ. ನ. ಕೃಷ್ಣರಾಯರ ಆಗಮನ:— ಬೆಂಗಳೂರಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಅ. ನ. ಕೃಷ್ಣರಾಯರು 27ರಲ್ಲಿ ಕುಮಾರ ವೆಂಕಣ್ಣ, ಶ್ರೀ ಭೂಪಾಲ, ಅವರೊಂದಿಗೆ ಉಡುಪಿಗೆ ಬಂದರು ಕುಮಾರ ವೆಂಕಣ್ಣನವರು 'ಮಕ್ಕಳಕೂಟ'ವನ್ನೂ ಶ್ರೀ. ಅ. ನ. ಕೃಷ್ಣರಾಯರು ಕರ್ನಾಟಕ ಸಂಘವನ್ನೂ ಉದ್ಘಾಟನೆ ಮಾಡಿದರೆಂದೂ ಕಿರಿಯರ ಸಾಹಿತ್ಯ ಸಂಘದವರು ಅವರಿಗೆ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರೆಂದೂ ತಿಳಿದು ಬರುತ್ತದೆ.

ತಾರುಣ್ಯ

ಕೆಟ್ಟ, ವೀರ್ಯಸ್ಖಲನ ವಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುತ್ತಮ ಔಷಧಿ,

ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,

184 ಚೈನ ಬಜಾರ್ ರೋಡ್, ಮದ್ರಾಸ

ಪುತ್ತೂರು ಏಜಂಟರು: **ಪೈ ಫಾರ್ಮಸಿ**

ವಿನಂತಿ

'ನವಯುಗ'ದ ಚಂದಾ ಹಣ ಬಾಕಿ ಇರುವವರು ಅದನ್ನು ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸುತ್ತೇವೆ.

ಮೆನೇಜರ್.

THE CANARA BANKING CORPORATION LIMITED.

(Incorporated in British India with Limited Liability)

ESTD. 1906

Head Office: **UDIPI,** S Kanara.

NOTICE.

The Ordinary Annual Meeting of the shareholders of the Corporation will be held at its Registered Office at Udipi on Sunday the 27th February 1944 at 2 P. M. to transact the following business:

1 To receive, consider and adopt the Directors Report and the Balance Sheet as at 31—12—1943 and the Profit & Loss Statement for the year 1943 with the Auditors Certificate.

2 To declare a dividend

3 To elect 4 Directors in place of

1 Dr U. Sunder Ram Pai, M. B. & B. S

2 Sri Kochikar Padmanabha Pai, B. A.

3 Sri M. Narayana Kamath, B. A.

4 Sri U. K. Bhujanga Nayak

who retire by rotation but are eligible for re-election (under Articles Nos. 105, 106 & 107)

4 To appoint an Auditor or Auditors for the year 1944 and fix the amount of his or their remuneration. (The last year's Auditors are eligible for re-election and are willing to accept the Office)

5 To fix the remuneration of Directors for attending the meetings of the Board of Directors or Committees. (under Article no. 92.)

It is requested that you will be kind enough to attend the meeting. If it should be inconvenient for you to attend the meeting in person, you may appoint another shareholder of the Corporation as your proxy.

The proxy form should be duly filled in and stamped with 2 one anna revenue stamps, bear your signature and should be deposited at the Registered Office of the Bank by 2 P. M. on 2—2—1944.

N B —The Register of Members and Transfer Books of the Corporation will remain closed from 14—2—1944 to 27—2—1944, both days inclusive.

(By Order of the Board)

Office of the Corporation, Udipi. 27th January, 1944

(Sd.) **V. R. Kamath,**
Manager.

ಔಷಧಗಳು

ನಮ್ಮಲ್ಲಿ **ಕಟಪಾಡಿಯ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡಿನ** ಜನಪ್ರಿಯವಾದ ಔಷಧಗಳೂ, ಮಂಗ**ಳೂರಿನ ಗಣಪಯ್ಯ ಎಂಡ್ ಸನ್ಸ**ರವರ ಪ್ರಸಿದ್ಧ ಔಷಧಗಳೂ, **ಕುಂಜಾಲಿನ ಸ್ವದೇಶಿ ಔಷಧ ಭಂಡಾರದ** ಜನಾದರಣೀಯ ಔಷಧಗಳೂ ಸಿಗುತ್ತವೆ.

ನವಭಾರತ ಪುಸ್ತಕ ಭಂಡಾರ,

ಸಂತೆಕಟ್ಟೆ : : **ಉಡುಪಿ.**

CHAMPAE'S

Snow & Castrex

(Sole Distributers for (India.)

Sukhananda Stores

Santhekatte, UDIPI, S. K.

Read & Advertise in

ANTARANGA

ದಕ್ಷಿಣ ಕನ್ನಡ.

ಮಂಗಳೂರು.

ಜಿಲ್ಲಾ ಆಹಾರ ಸಮಿತಿ — ಕಳೆದ ಸೋಮವಾರ ಜಿಲ್ಲಾ ಆಹಾರ ಸಮಿತಿ ಸಭೆಯು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಕಲೆಕ್ಟರರ ಆಫೀಸಿನಲ್ಲಿ ಸೇರಿ, ಕಾಸರಗೋಡಿಗೆ ಕಡಿಮೆ ಬಿದ್ದಿರುವ ಅಕ್ಕಿಯನ್ನು ಹೊರ ಜಿಲ್ಲೆಯಿಂದ ತರಿಸಬೇಕೆಂದೂ, ಜಿಲ್ಲೆಯ ಹೊರಗಿನ ಸಾವಿರ ಮುಡಿ ಬೆಳ್ತಿಗೆ ಅಕ್ಕಿ [illegible] ತಿಂಗಳಿಗೆ [illegible] ಬರಾಯಿಯನ್ನು ತಿಂಗಳಿಗೆ [illegible] ಗೋಣಿ ಹುಟ್ಟಿಸಬೇಕೆಂದೂ, ಕಂಟ್ರೋಲ್ ದರದಲ್ಲಿ ಕೃಷಿಯ ಉಪಕರಣಗಳನ್ನು ತರಿಸಿ ಸ್ಟೋರುಗಳ ಮೂಲಕ ಮಾರಾಟ ಮಾಡಿಸಬೇಕೆಂದೂ, ದನಕರುಗಳ ರೋಗಕ್ಕೆ ಅಗತ್ಯವಿರುವ ಔಷಧಿಗಳನ್ನು ಕೂಡಲೇ ತರಿಸಬೇಕೆಂದೂ, ಜಿಲ್ಲೆಯ ಕೇಂದ್ರಗಳಲ್ಲಿ ಅಕ್ಕಿ ಶೇಖರವಾಗಿ ಹಂಚುವ [illegible] ಬೇರೆ ಜಿಲ್ಲೆಯಲ್ಲಿಲ್ಲ ಅಕ್ಕಿಯ [illegible] ಕ್ರಯ ನಿರ್ಧಾರವಾಗಬೇಕೆಂದೂ [illegible] ಲಾಭವಾಗಿ ತಿಳಿಯುತ್ತದೆ.

ಅಕ್ಕಿ ಪರಿಸ್ಥಿತಿ ಕುರಿತು:— ಸಿವಿಲ್ ಸಪ್ಲೈಸ್ ಇಲಾಖೆಯ ಡೆಪ್ಯುಟಿ ಕಮಿಷನರ್ ಶ್ರೀ ಕೃಷ್ಣಲಿಂಗ ಪಿಳ್ಳೆಯವರು ಕಳೆದ [illegible] ಮಂಗಳೂರಿಗೆ ಬಂದಿದ್ದು ಅಕ್ಕಿ ಪರಿಸ್ಥಿತಿ ಕುರಿತು ಇದ್ದಿನ ಸ್ಥಿತಿಯ ಕುರಿತಾಗಿ ಚರ್ಚಿಸಿ ಹೊಸದಾಗಿ [illegible] ದಕ್ಷಿಣ ಮಂಗಳೂರು ಆಹಾರ ಸಮಿತಿ ಸಭೆಗೂ ಹಾಜರಿದ್ದು ಮದ್ರಾಸಿಗೆ ಹಿಂತಿರುಗಿದರು.

ಎಡ್ವೈಸರಲ್ಲಿ ವಿನಂತಿ:— ಕುಂಬಳೆ, ಕಾಪೂರು, ಪಚ್ಚನಾಡಿ, ಪದವು ಮತ್ತು ನಿರುಮಾರ್ಗಗಳ ಗ್ರಾಮಸ್ಥರ ಪ್ರತಿನಿಧಿಗಳು ಒಂದು ಶಿಷ್ಟ ಮಂಡಲವು ಕಳೆದ ಸೋಮವಾರ ಜಿಲ್ಲಾ ಕಲೆಕ್ಟರರನ್ನು ಕಾಣುತ್ತಾ, ಅವರ ವಿನಂತಿ ಪತ್ರವನ್ನು ಗವರ್ನರರ ಎಡ್ವೈಸರಿಗೆ ಕಳುಹಿಸ ಬೇಕೆಂದು ಬೇಡಿಕೊಂಡರು.

ಈ ವಿನಂತಿಯು ಭೂಮಿಯೊಡೆಗಳಲ್ಲದ ರೈತ ಬಳಿಯಲ್ಲಿ ಕರಕಾರಿ [illegible] ಮೊದಲಾದ ಚಿಲ್ಲರೆ ವ್ಯಾಪಾರ ಮಾಡುವವರ ಕಡೆಯದಾಗಿತ್ತು. ಮಂಗಳೂರು ಮುನ್ಸಿಪಾಲಿಟಿಯಲ್ಲಿ ಅಕ್ಕಿಗೆ ನಿಂದಿಕ [illegible] ನಿಶ್ಚಯವಾದ ಮೇಲೆ ತಮ್ಮಲ್ಲಿ ಅಕ್ಕಿಗೆ ಕ್ರಯ [illegible] ಹೆಚ್ಚಾಗಿದ್ದು ತಮಗೆ ಕಡಿಮೆ ಕ್ರಯದಲ್ಲಿ [illegible] ದೊರೆಯಿಸಿಕೊಡಬೇಕೆಂದು ಅದರಲ್ಲಿ ಕೇಳಿದೆ.

[illegible]ಟೆ, ಮೆರವಣಿಗೆಗಳಿಗೆ ಪುನಃ ನಿರ್ಬಂಧ.—"ಮಂಗಳೂರು, ಕಾಸರಗೋಡು [illegible] ಕುಗಂಜ್ಲಿ ಮತ್ತು ಉಡುಪಿ ಮುನ್ಸಿಪಾಲಿಟಿಯಲ್ಲಿ ಧಾರ್ಮಿಕ ಸಾಮಾಜಿಕಗಳಲ್ಲದ ಸಭೆ ಮೆರವಣಿಗೆ ಆಗುವುದನ್ನು ನಿಷೇಧಿಸಲಾಗಿದೆ ಈ ಆಜ್ಞೆ [illegible]ರಿಂದ [illegible] ತಿಂಗಳ ವರೆಗೆ ಜಾರಿಯಲ್ಲಿರುವುದು" ಎಂದು ಜಿಲ್ಲಾ ಕಲೆಕ್ಟರರು ಪುನಃ ಆಜ್ಞೆ ಹೊರಡಿಸಿದ್ದಾರೆ.

ಮುಷ್ಕರಗಾರರಿಗೆ ಶಿಕ್ಷೆ:— ಕಳೆದ ಮೇ ತಿಂಗಳಲ್ಲಿ ಪಾರ್ವತಿ ಕಟ್ಟೆಯ ರಂಗಿನ ಕಾರ್ಖಾನೆ [illegible] ಮುಷ್ಕರ ಹೂಡಿದಾಗ, ಮುಷ್ಕರಕ್ಕೆ ಸೇರದವರನ್ನು ಹೊಡೆದರೆಂಬ ಕಾರಣ [illegible] ಕಾರ್ಯದರ್ಶಿ [illegible] ಶ್ರೀಗಳಾದ ಮೈಂದಪ್ಪ ಅಮ್ಮಣ್ಣ, ರಾಮ ಒಲ್ಲಿಯ, ಕೋಟ್ಯಪ್ಪ, ಸಂಕಪ್ಪ ಮತ್ತು ಐತಪ್ಪ ಇವರಿಗೆ [illegible] ಪ್ರಕಾರ ಐದು ಮಂದಿ [illegible] ಆರೋಪಿಸಿತ್ತು ಅವರು ಜಿಲ್ಲಾ ಕೋರ್ಟಿನಲ್ಲಿ ಮಾಡಿದ ಅಪೀಲು ರದ್ದಾಗಿ ಅವರಿಗೆ ಹಿಂದಿನ ಶಿಕ್ಷೆಯೇ ಖಾಯಂ ಆದೆ ಕಕ್ಷಿಗಾರರ ಪರವಾಗಿ ಶ್ರೀ ರಾಂ. [illegible] ವ್ಯವಹರಿಸಿದ್ದರು.

ಪಡುಬಿದ್ರೆ—ತಾ 22 1 44ರಲ್ಲಿ ಬೋರ್ಡ್ [illegible] ವಿದ್ಯಾರ್ಥಿ [illegible] ಶ್ರೀ [illegible] ಬಿ ಎ ಬಿ ಟಿ [illegible] ವರ ಅಧ್ಯಕ್ಷತೆಯಲ್ಲಿ ಜರಗಿತು [illegible] ಹುಡುಗಿಯರಿಂದ "ಶ್ರೀ [illegible]" ಎಂಬ [illegible] ಪ್ರದರ್ಶಿಸಲಾಯಿತು. ಅಧ್ಯಕ್ಷರು ಈ ಶಾಲೆಗೆ ಇಷ್ಟೊಂದು ಜನತೆಯ [illegible] ನಿರುವುದು [illegible] ಮಕ್ಕಳ [illegible] ಆಶ್ಚರ್ಯವೆಂದೂ ಕೊಂಡಾಡಿ [illegible] ಭಾಷಣವನ್ನಿತ್ತರು.

ಮರುದಿನ ಊರ ಮಹನೀಯರು ಮತ್ತು ಕಾಡಿಪಟ್ಟ ಮೊಗವೀರ ಹತ್ತು ಸಮಸ್ತರು ಮಾನ್ಯ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರನ್ನಿರಿಸಿಕೊಂಡು ಒಂದು ಛಾಯಾಚಿತ್ರ ತೆಗೆಸಿ ಉಪಹಾರದಿಂದ ಸತ್ಕರಿಸಿದರು. ನೂತನ ಸತ್ಕಾರಗಳ ನಂತರ ಅಧ್ಯಕ್ಷರು ಜನತೆಯ ಸತ್ಕಾರದಿಂದ ಸಂತೃಪ್ತರಾಗಿ ಊರವರಿಗೆ ಶಾಲೆಯಲ್ಲಿ ಇಷ್ಟೊಂದು ಅಭಿಮಾನವಿರುವುದು ಕೊಂಡಾಡತಕ್ಕದೆಂದರು.

ಬೆಂಗಳೂರು· [illegible] ಯವೇದ ವಿದ್ಯಾಪೀಠದ [illegible] ಪರೀಕ್ಷೆಗಳು ಬೆಂಗಳೂರನ್ನು ಈ ವರ್ಷದಿಂದ ಕೇಂದ್ರವಾಗಿ ಏರ್ಪಡಿಸಲಾಗಿದೆ ಪರೀಕ್ಷೆಗಳು ಮಾರ್ಚ 22ರಿಂದ ಆರಂಭವಾಗುವವು ಹೆಚ್ಚು ವಿವರಗಳನ್ನು ತಿಳಿಯ ಬಯಸುವವರು [illegible] ವೈದ್ಯಗುರು ಡಿ ಕೆ ಭಾರದ್ವಾಜ ಅಧ್ಯಕ್ಷರು ಶ್ರೀ ರಾಮಕೃಷ್ಣ ವಿದ್ಯಾಪೀಠ, ಬಸವನಗುಡಿ, ಬೆಂಗಳೂರು ಇವರಿಗೆ ಬರೆಯಬೇಕು

ದಾಸ ಪ್ರಕಾಶ ಭವನದಲ್ಲಿ ಸತ್ಕಾರ.—ಕಿರ ವಾಂಕರು ದಿವಾನರಾದ ಸಚಿವೋತ್ತಮ ಸರ್ ಸಿ. ಪಿ. ರಾಮಸ್ವಾಮಯ್ಯರವರಿಗೆ, ಬೋರ್ಡ್ ಸದಸ್ಯರಾದ ಶ್ರೀ [illegible] ರಾಯರು ತಾ 23 1 44ರಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಧ [illegible] ಗಳಿಂದ ಅಲಂಕೃತವಾದ ದಾಸ ಪ್ರಕಾಶ ಭವನಕ್ಕೆ ಅನೇಕ ಸರಕಾರಿ ಮತ್ತು ಖಾಸಗಿ ದೊಡ್ಡ ಮನುಷ್ಯರು ದಯಮಾಡಿಸಿದರು.

ಶ್ರೀಯುತ [illegible] ರಾಯರು, ಅತಿಥಿಗಳಿಗೆ [illegible] ಕಥೆ ಭವನದ [illegible] ಪರಿಚಯವನ್ನು ಮಾಡಿಸಿಕೊಟ್ಟರು. ಫೋಟೋ ಉಪಹಾರಾದಿಗಳ ಅನಂತರ ಸರ್ ಸಿ ಪಿ ಯವರು, ಸಿನಿಮಾ [illegible] ಈ ವಿಧವಾದ ಜನಸೇವೆಗೆ ಮೆಚ್ಚಿ ರಾಜಧಾನಿಗೆ ಅತ್ಯಗತ್ಯವಾದ ಈ ಮಾದರಿ ಸಂಸ್ಥೆಯನ್ನು ರಚಿಸಿದ್ದ ಅವರ ಸಹಾಯಕ್ಕಾಗಿ ಅಭಿನಂದಿಸಿ ಅವರಿಗೆ ತಮ್ಮ ಉದ್ಯಮದಲ್ಲಿ ಶ್ರೇಯಸ್ಸನ್ನು ಕೋರಿದರು.

ವರನು ಬೇಕಾಗಿದೆ.

ಉಡಿಪಿ ಮಧ್ವಬ್ರಾಹ್ಮಣ ಮತದ 19 ವರುಷ ಪ್ರಾಯದ S S. L. C ಕ್ಲಾಸಿನಲ್ಲಿ ವಿದ್ಯಾಭ್ಯಾಸ ಮಾಡುವ ಒಬ್ಬ ಹುಡುಗಿಗೆ ಯೋಗ್ಯ ವರನು ಬೇಕಾಗಿದೆ ಇಚ್ಛೆ ಉಳ್ಳವರು ಈ ಕೆಳಗಿನ ವಿಳಾಸಕ್ಕೆ ಬರಿಯುವುದು

"Satyanarayana"
C/O **"Navayuga"**
Kanarese Weekly, UDIPI
S K.

Degrees Books; Medicines
Free H L M S, M B H M D, etc Free Homeo Ayur Unani Naturo degree by post also—Practitioner also get soon Homeo Materiamedica Rs 5 Homeo Practice Book Rs 4 Insanity Cure Pills Rs. 10 Enclose 2 annas stamp —
Prof. Dr N H Chhatbar,
Principal Indian Homeopathic Institute & Society (Govt Regd)
P O MAHUVA (Kathiawar Dt India)

Sidha-Kalpa Kavach (Regd)
No 3 Rs 2 No 2 Rs 5 No 1 Rs. 7 Special Rs. 10 Extra Special Rs 17 for marriage health wealth Ask any six questions with M O Re 1/4 and get correct answers by returnpost Life reading Rs 10 No V.P.P Send M O Prices complete
Prof Dr N H Chhatbar
P O MAHUVA (Kathiawar India)

ಪ್ರಕಟಣೆ

P. M Kunhi Raman, Manager
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ— ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ಸಿಂಪ, ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ

ಪಿ ಯಂ ಕುನ್ನಿರಾಮನ್,
ಮೆನೇಜರ್.

ಡಾ ಟಿ ಮಾಧವ ಪೈಗಳು ಮತ್ತವರ ಕುಟುಂಬ.

ಡಾ ಪೈಗಳ ಪ್ರಥಮ ಪುತ್ರ ಚಿ. ಮೋಹನದಾಸ ಇವರ ಉಪನಯನ ಸಮಾರಂಭವು ತಾ. 30-1 1944ನೇ ಪ್ರಾತಃಕಾಲ 9 ಗಂಟೆಗೆ ಕಡೆಕಾರಿನಲ್ಲಿ ಅತಿ ಸಂಭ್ರಮದಿಂದ ಸಾವಿರಾರು ಜನರ ನೆರವಿಯಲ್ಲಿ ಜರಗಿತು ಪಟದಲ್ಲಿ ಮಧ್ಯದಲ್ಲಿ [illegible] ಹಸ್ತಾಕ್ಷರವುಳ್ಳವರು (ನಗದಿ ಮತ್ತು ಸಾಮಾನು ಉಡುಗೊರೆಗಳು ಬಂದಿರುವುದಾಗಿ ತಿಳಿದು ಬರುತ್ತದೆ

THE BEST PREVENTIVE IN EPIDEMICS OF CHOLERA
"BHUVANENDRA"
CHANDRAMAS
Will give you the best results Try once and be satisfied with the results

Dose. For adults:- 3 to 5 drops 2 to 3 times a day with the decoction of cloves or ajwan
For Children: 1 to 2 drops with the said decoction

Also a sovereign remedy for Diarrhoea, Stomachache, Vomiting and Nausea

BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್

ಕಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 3ರಿಂದ 5 ಬೊಟ್ಟು ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ ಫಾರ್ಮಸಿ; ಡಾ. ಕೆ ಶೇಷಗಿರಿ ಪೈ L I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920)

Registered Office: Court Road UDIPI South Canara District

Business Offices Udipi Mangalore, Katapadi, Kanhangad and Kinnigoli. South Canara.

Authorised and Issued Capital Rs 2,00,000/-

Subscribed and Paid up Capital. Rs 2,00,000/-

Reserve Funds. Rs 1,75,853/-

Short term bills are discounted for approved parties Loans and advances are made and overdrafts granted on fairly easy terms.

Deposits are accepted at favourable rates of interest More than twenty-three years' reliable banking Service stands to our credit.

For further particulars please call at or apply to the nearest office

Dated 31-10-1943

The Victory Club

Both Vegetarian & Non-vegetarian dishes

Old Post office Building,

VICTORY CLUB ROAD: UDIPI.

(*Furnishing*: **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:— ಹರಪೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟಿ ಭೀರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:— ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:— ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಾಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

THE VIJAYA BANK, LTD.,

Head office: MANGALORE.

Glad to announce that a Branch of the Bank has been opened at PUTTUR on 21-1-1944.

ನಮ್ಮ ಬ್ಯಾಂಕಿನ ಶಾಖೆಯೊಂದು ತಾ. 21-1-44 ರಲ್ಲಿ ಪುತ್ತೂರಿನಲ್ಲಿ ತೆರೆಯಲ್ಪಟ್ಟಿರುತ್ತದೆ.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ.**

ನಮ್ಮ ಸುವರ್ಣೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ

ಸಹೃದಯ ಸಂದೇಶವನ್ನು

ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 361

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೨೩

FOUNDER
Sri. A. B. Shetty.

Vol. 24
No. 23

NAVAYUGA— Kannada Weekly —UDIPI, S. I.

ಉಡುಪಿ 10—2—1944 ● ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.
ಮೂಲ ಲೇಖಕರು :—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.
ಬೆಲೆ ರೂ. 1-12-0. ಟ. ಖ. 0-4-0
ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಿರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ
ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.
ಬೆಲೆ 0-14-0 ಟ. ಖ. 0-2-0
ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

The Canara Mutual Assurance Co., Ltd.,

NEW APPOINTMENTS.

Applications from candidates of S. S. L. C standard (both boys & girls) are invited for clerial posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman

UDIPI
6-1-1944

T. R. A. Pai,
Managing Director.

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಕಪಿಲಾಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಪ್ಪಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋ, ಉಷ್ಣ ರೋಗದ ಮೇಲೆ —ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉದುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರಹಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುದದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:- [illegible] ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿ ವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋಗುವಿಕೆ, ಸೊಂಟನೋವು, ಕೈಕಾಲು ಜುಮ್ಮು ಹಿಡಿಯುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತರಕ್ತವನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಖ್ಯಾತಿ ಸಂಗ್ತಿ ಬರೆದಲ್ಲಿ ತಕ್ಕವಾದ ಔಷದಿ ಚುನಾಯಿಸಿ ರವಾನಿಸಬಹುದು.

ಕೆಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 16 ಮಂಗಳೂರು
ಉಡುಪಿ ಏಜಂಟರು:- ನವಭಾರತ ಬುಕ್ ಡಿಪೊ. ಸಂತೆಕಟ್ಟೆ. ಉಡುಪಿ.

ದ. ಕ. ಜಿಲ್ಲೆಯ ವಿದ್ಯಾರ್ಥಿ ಸಮ್ಮೇಳನ

ದಕ್ಷಿಣ ಕನ್ನಡ ಜಿಲ್ಲಾ ಐದನೆಯ ವಿದ್ಯಾರ್ಥಿ ಸಮ್ಮೇಳನವು ಮೈಸೂರಿನ ಶ್ರೀಮತಿ ಕೇಸರೀ ಕೇಶವನ್, ಬಿ. ಎ (ಲಂಡನ್) ಇವರ ಅಧ್ಯಕ್ಷತೆಯಲ್ಲಿ ಜನವರಿ 30-31ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ಈ ದಿನ ಮುಂಜಾನೆ ವಿದ್ಯಾರ್ಥಿ ಧ್ವಜಾರೋಹಣವು ಕುಮಾರಿ ಶಾಂತಾಬಾಯಿಯವರಿಂದ ನೆರವೇರಿಸಲ್ಪಟ್ಟಿತು. ಮೈಸೂರಿನ ವಿದ್ಯಾರ್ಥಿ ಕಾಮ್ರೇಡ್ ಕೃಷ್ಣಮೂರ್ತಿಯವರು ಧ್ವಜದ ಪ್ರಾಧಾನ್ಯವನ್ನು ವಿವರಿಸಿದರು. ಬಳಿಕ ಪಂದ್ಯಾಟ, ವಕ್ತೃತ್ವ ಪ್ರಬಂಧ ಸ್ಪರ್ಧೆ ಜರಗಿತು.

ಸಂಜೆಯ ಅಧಿವೇಶನಾರಂಭದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಯೋಗೀಶ್ವರ ಹೊಳ್ಳರು, ಕೇ. ಕೇ. ಹಲ್ಸನಾಡು ಸಾರಸ್ವತ್ಯನವರಿಂದ ಆರಂಭವಾದ ವಿದ್ಯಾರ್ಥಿ ಸಂಘದ ಬೆಳವಣಿಗೆಯನ್ನು ವಿವರಿಸಿ, ಸಭೆ ಮೆರವಣಿಗೆಗಳ ನಿರ್ಬಂಧಗಳಿಂದ ವಿದ್ಯಾರ್ಥಿ ಸಂಘದ ಚಟುವಟಿಕೆಗಳ ಮೇಲೆ ಆಗಿರುವ ತೊಂದರೆಗಳನ್ನು ತಿಳಿಸಿ ಸ್ವಾತಂತ್ರ್ಯ ಶಾಂತಿ ಪ್ರಗತಿಗಳಿಗಾಗಿ ವಿದ್ಯಾರ್ಥಿಗಳು ಹೋರಾಡುವರೆಂದರು. ಕಾರ್ಯದರ್ಶಿ ಶ್ರೀ ಮಾಧವನ್ ನಾಯ್ನಾರರು ವಾರ್ಷಿಕ ವರದಿಯನ್ನು ಓದಿದರು. ಅಧ್ಯಕ್ಷೆಯವರು ತಮ್ಮ ದೀರ್ಘ ಭಾಷಣದಲ್ಲಿ "ವಿದ್ಯಾರ್ಥಿಗಳು ಇತರ ಚಟುವಟಿಕೆಗಳೊಂದಿಗೆ ಅನುದಿನದ ರಾಜಕೀಯವನ್ನು ಅಭ್ಯಸಿಸಬೇಕು. ನಮ್ಮ ರಾಷ್ಟ್ರದಲ್ಲಿ ವಿದ್ಯಾರ್ಥಿಗಳಿಗೆ ಬೇಕಾದಷ್ಟು ಸ್ವಾತಂತ್ರ್ಯವಿಲ್ಲ, ಲಂಡನಿನಲ್ಲಿ ವಿದ್ಯಾರ್ಥಿಗಳು ಬಹಿರಂಗವಾಗಿಯೇ 'ಅರಸು ಮತ್ತು ರಾಷ್ಟ್ರಕ್ಕಾಗಿ ನಾನು ಕಾದಾಡಲಾರೆ' ಎಂಬಂತಹ ವಿಷಯವನ್ನೆತ್ತಿ ಚರ್ಚಿಸುತ್ತಾರೆ. ಜಗದ ಸ್ವಾತಂತ್ರ್ಯಕ್ಕಾಗಿ ಹೋರಾಟವೆಂಬುದು ಅವರ ಧ್ಯೇಯ. ಇಂತಹ ಸ್ವಾತಂತ್ರ್ಯ ನಮಗಿಲ್ಲ. ವಿದ್ಯಾರ್ಥಿಗಳು ಒಂದಾಗಬೇಕು. ಅಖಿಲ ಕರ್ಣಾಟಕ ವಿದ್ಯಾರ್ಥಿ ಸಂಘವೊಂದನ್ನು ರಚಿಸಬೇಕು. ಆಗ ನಿಮ್ಮ ಉನ್ನತಿ, ದೇಶದ ಉನ್ನತಿ. ವಿದ್ಯಾರ್ಥಿಗಳು ಅಂತರ್ ರಾಷ್ಟ್ರೀಯ ವಿಚಾರ ಭಾವನೆಯುಳ್ಳವರಾಗಬೇಕೆಂದೆಲ್ಲಾ ವಿವರಿಸಿ ಇಂದು ಪ್ರತಿಯೊಂದು ಕಾರ್ಯದಲ್ಲಿಯೂ ಸ್ತ್ರೀಯು ಪುರುಷನೊಡನೆ ಸಮಭುಜಳಾಗಿ ನಿಂತಿರುವಾಗ, ಮಂಗಳೂರಿನ ವಿದ್ಯಾರ್ಥಿನಿಯರು ಈ ಸಮ್ಮೇಳನದಲ್ಲಿ ಅಧಿಕ ಸಂಖ್ಯೆಯಿಂದ ಭಾಗವಹಿಸದಿರುವ ಕುರಿತು ವಿಷಾದಿಸಿ, ಅವರು ಮುಂದೆ ಬರಬೇಕೆಂದು ಹಾರೈಸುತ್ತಾ, ದೇಶದ ಆಹಾರ ಸಮಸ್ಯೆಯಲ್ಲಿ ಎಲ್ಲರೂ ಒಂದಾಗಿ ದುಡಿಯಬೇಕೆಂದೂ, ಫೇಸಿಸಮ್ಮನ್ನು ವಿರೋಧಿಸಬೇಕೆಂದೂ ಹೇಳಿದರು.

ತರುವಾಯ ಶ್ರೀ ಎ. ಬಿ. ಶೆಟ್ಟರ ಸಮ್ಮೇಳನದ ಉದ್ಘಾಟನಾ ಭಾಷಣವಾಯಿತು. ಬೇರೆ ಬೇರೆ ಜಾತಿಗಳಿಗಾಗಿ, ಶಾಲೆ ವಿದ್ಯಾರ್ಥಿ ಭವನಗಳನ್ನೇರ್ಪಡಿಸುವುದರಿಂದ ರಾಷ್ಟ್ರೀಯ ಐಕ್ಯ ಹಾಳಾಗುತ್ತದೆನ್ನುತ್ತಾ, ವಿದ್ಯಾರ್ಥಿಗಳಲ್ಲಿ ಸಂಕುಚಿತ ರಾಷ್ಟ್ರಪ್ರೇಮವಿರಬಾರದೆಂದೂ, ನಾವು ಅಂತರ್ರಾಷ್ಟ್ರೀಯ ವಿಶಾಲ ದೃಷ್ಟಿಯಿಂದ ಯೋಚಿಸಬೇಕೆಂದೂ ಹೇಳಿ, ವಿದ್ಯಾರ್ಥಿಗಳು ಪ್ರಚಾರ ಒತ್ತಾಯಗಳಿಗೆ ಬಲಿಯಾಗದೆ ಸ್ವತಂತ್ರ ವಿಚಾರ ಶಕ್ತಿ ಬಲಗೊಳಿಸಬೇಕೆಂದರು. ರಾತ್ರಿ ವಿವಿಧ ವಿನೋದಾವಳಿಗಳು ನಡೆದವು.

ಮರುದಿನ ಪೂರ್ವಾಹ್ನ ಕಾಮ್ರೇಡ್ ಕೆಸರಿ ಕೇಶವನರ ಅಧ್ಯಕ್ಷತೆಯಲ್ಲಿ ಕೆಲ ಪ್ರತಿನಿಧಿಗಳ ಸಭೆ ಜರಗಿತು. ಬಹಿರಂಗ ಅಧಿವೇಶನದ ಮುಂದಿಡಬೇಕಾದ ನಿರ್ಣಯಗಳ ಕುರಿತು ಚರ್ಚೆಯಾಯಿತು. ಫ್ಯಾಸಿಸ್ಟ್ ವಿರೋಧ ಹೋರಾಡುವವರನ್ನು ಅಭಿನಂದಿಸುವ ಫ್ಯಾಸಿಸ್ಟ್ ಆಕ್ರಮಣ ವಿರೋಧಿಸಲು ದೇಶದಲ್ಲಿ ಐಕ್ಯವಿರಬೇಕೆನ್ನುವ, ಕಮ್ಯುನಿಸ್ಟರ ವಶವಿರುವ ಅ. ಭಾ. ವಿದ್ಯಾರ್ಥಿ ಫೆಡರೇಶನಿನ ಸೌಹಾರ್ದ ಸಂದೇಶ ಕಳುಹಿಸಬೇಕೆನ್ನುವ ಬಂಗಾಳಕ್ಕೆ ಸಹಾಯ ಕೊಡಬೇಕೆನ್ನುವ, ರೇಶನಿಂಗ್ ಜಾರಿಮಾಡಬೇಕೆನ್ನುವ ಹಾಗೂ ಶಾಲೆ ಕಾಲೇಜುಗಳ ಶಿಕ್ಷಣ ಮಾಧ್ಯಮವು ಸಂಪೂರ್ಣ ಕನ್ನಡ ಇಲ್ಲವೇ ಸಂಪೂರ್ಣ ಇಂಗ್ಲಿಷು ಆಗಬೇಕೆನ್ನುವ ನಿರ್ಣಯಗಳು ಮಂಜೂರಾಗಿ ಇವನ್ನು ಬಹಿರಂಗ ಅಧಿವೇಶನದಲ್ಲಿಡುವುದೆಂದಾಯಿತು.

ಅನಂತರ ಆಂಗ್ಲ-ಕನ್ನಡ ಭಾಷಣ ಸ್ಪರ್ಧೆಗಳಾದುವು. ಹುಡುಗಿಯರಿಗಾಗಿ ಬೆಸೆಂಟ್ ಬಾಲಿಕಾ ಶಾಲೆಯಲ್ಲಿ ಸ್ಪರ್ಧೆಗಳಿದ್ದುವು.

ಸಂಜೆ ಬಹಿರಂಗ ಅಧಿವೇಶನವು ಕಾಮ್ರೇಡ್ ಕೇಸರಿ ಕೇಶವನರ ಅಧ್ಯಕ್ಷತೆಯಿಂದ ಜರಗಿತು. ಹಿತಚಿಂತಕರಾಗಿ ಮೈಸೂರಿನ ವಿದ್ಯಾರ್ಥಿ ಕಾಮ್ರೇಡ್ ಕೃಷ್ಣಮೂರ್ತಿಯವರ ಭಾಷಣವಾದ ಬಳಿಕ ಮಂಗಳೂರಿನ ಹಿತಚಿಂತಕರಾಗಿ ಕಮ್ಯುನಿಸ್ಟ್ ಕೆಲಸಗಾರರಾದ ಕಾಮ್ರೇಡ್‌ಗಳು ಬಿ. ವಿ. ಕಕ್ಕಿಲ್ಲಾಯ ಮತ್ತು ಶಾಂತಾರಾಮ ಪೈಗಳು ಮಾತನಾಡಿದ ಮೇಲೆ ಶ್ರೀ ವಾಮನ ಶೇಟರು ಮಾತನಾಡಿದರು. ಬಳಿಕ ನೇಶನಲ್ ವಾರ್ ಫ್ರಂಟಿನ ಮಿಸ್ ರಾಧಾಬಾಯಿಯವರೂ ಭಾಷಣವಿತ್ತರು.

ಬಳಿಕ ಠರಾವುಗಳು ತರಲ್ಪಟ್ಟವು. ಶ್ರೀಗಳಾದ ಆರ್. ಎಸ್. ಪಂಡಿತ್ ಸತ್ಯಮೂರ್ತಿ ಬೇಗಂ ಆಜಾದ್, ಡಾ| ವಿಟ್ಠಲ ಶೆಟ್ಟಿ ಇವರ ನಿಧನದ ಬಗ್ಗೆ ಸಮ್ಮೇಳನ ಸಂತಾಪ ಸೂಚಿಸುವ ಠರಾವುಗಳಾದುವು. ಮುಂದೆ ಮುಖ್ಯ ಠರಾವುಗಳನ್ನು ಒಂದೊಂದಾಗಿ ಓದಿ, ಬಹಿರಂಗ ಅಧಿವೇಶನದಲ್ಲಿ ಚರ್ಚಿಸಲಿಡದೆಯೇ ಇದೆಲ್ಲಾ ಸರ್ವಾನುಮತದಿಂದ ಮಂಜೂರಾಗಿದೆಯೆಂದು ಓದುತ್ತಿರುವಾಗ ಶ್ರೀ ಎನ್. ಹೊಳ್ಳರು, 'ಪ್ರತಿನಿಧಿಗಳನ್ನು ಕೇಳದೆ ನಿರ್ಣಯ ಮಂಜೂರು ಮಾಡುವುದು ಸರಿಯೆ?' ಎಂದು ಪ್ರಶ್ನಿಸಿದರು. ಅಧ್ಯಕ್ಷರು 'ಪ್ರತಿನಿಧಿಗಳ ಮತ ತೆಗೆಯುವುದೇ ಕ್ರಮವಾಗಿದೆ. ಆದರೆ ಸಮ್ಮೇಳನದ ವ್ಯವಸ್ಥಾಪಕರು ಅಂಥಾ ಏರ್ಪಾಡು ಮಾಡದಿರುವುದರಿಂದ ಹೀಗೆ ಮಾಡಬೇಕಾಗಿದೆ' ಎಂದರು. 'ಹೀಗೆ ಸಮ್ಮೇಳನದ ಪ್ರಾಮುಖ್ಯ ವಿಷಯವಾದ ನಿರ್ಣಯಗಳ ಚರ್ಚೆಗೆ ಅವಕಾಶ ಕೊಡದಂತೆ ಮಾಡಿದ ಕಾರಣವೇನೆಂದು ವ್ಯವಸ್ಥಾಪಕರು ಹೇಳುವರೆ?' ಎಂದು ಪುನಃ ಪ್ರಶ್ನಿಸಿದ್ದಕ್ಕೆ, ಅಧ್ಯಕ್ಷರು, 'ಇದು ನಿಜವಾಗಿಯೂ ಸಮ್ಮೇಳನ ಮಾಡಿದ ಒಂದು ದೊಡ್ಡ ಅಪರಾಧ. ಆದರೆ ಈಗ ಏನೂ ಮಾಡಲಾಗುವುದಿಲ್ಲ' ಎಂದರು. ಇದರಿಂದಾಗಿ ಸಮ್ಮೇಳನ ಚಟುವಟಿಕೆಗಳಲ್ಲಿ ಇತರ ಪಕ್ಷದ ವಿದ್ಯಾರ್ಥಿಗಳು ಅಸಹಕಾರ ಪ್ರದರ್ಶಿಸಿದರು.

ಸಂದೇಶಗಳು ಓದಲ್ಪಟ್ಟ ಮೇಲೆ ಅಧ್ಯಕ್ಷರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಿದರು. ಕಮ್ಯುನಿಸ್ಟ್ ಪಕ್ಷದ ಧೋರಣೆ ತಿಳಿಸುವಂಥಾ ಪುಸ್ತಕಗಳೇ ಹೆಚ್ಚಾಗಿ ಬಹುಮಾನವಾಗಿ ಹಂಚಲ್ಪಟ್ಟಿದ್ದುವು.

ಅನಂತರ ಅಧ್ಯಕ್ಷೆಯವರು ಉಪಸಂಹಾರ ಭಾಷಣವೀಯುತ್ತಾ, ವಿದ್ಯಾರ್ಥಿಗಳನ್ನು ಸಂಘಟಿತರಾಗಬೇಕೆಂದು ಹುರಿದುಂಬಿಸುತ್ತಾ, ವಿದ್ಯಾರ್ಥಿನಿಯರು ಹೆಚ್ಚು ಸಂಖ್ಯೆಯಲ್ಲಿ ಸೇರಬೇಕೆಂದು ವಿನಂತಿಸಿದರು. ರಾತ್ರಿ ವಿವಿಧ ವಿನೋದಾವಳಿ ನಡೆದು ಧನ್ಯವಾದಗಳಾಗಿ ಸಮ್ಮೇಳನ ಮುಗಿಯಿತು.

ಪ್ರಕಟಣೆ

D. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ--
ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ಸಗ್ಗರಿ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗ್ಗರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಞ್ಞಿರಾಮನ್,
ಮೆನೇಜರ್.

ತಾರುಣ್ಯ

ಕೊಟ್ಟು, ವೀರ್ಯಸ್ಥಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುತ್ತಮ ಔಷಧಿ.

ಡಬ್ಬ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸು.
ಪುತ್ತೂರು ಏಜಂಟರು: – **ಪೈ ಫಾರ್ಮಸಿ**

ವರನು ಬೇಕಾಗಿದೆ.

ಉಡಿಪಿ ಮಧ್ವಬ್ರಾಹ್ಮಣ ಮತದ 19 ವರುಷ ಪ್ರಾಯದ S. S. L. C. ಕ್ಲಾಸಿನಲ್ಲಿ ವಿದ್ಯಾಭ್ಯಾಸ ಮಾಡುವ ಒಬ್ಬ ಹುಡುಗಿಗೆ ಯೋಗ್ಯ ವರನು ಬೇಕಾಗಿದೆ. ಇಚ್ಛೆ ಉಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

"Satyanarayana"
C/O **"Navayuga"**
Kanarese Weekly, UDIPI.
S. K.

Degrees: Books: Medicines
Free H. L. M. S, M, B, H. M, D, etc. Free Homeo-Ayur- Unani Natureo degree by post also—Practitioner also get soon Homeo Materiamedica, Rs. 5 Homeo Practice book Rs 4. Insanity Cure Pills Rs. 10 Enclose 2 annas stamp:—
Prof, Dr. N. H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No. 2 Rs. 5 No. 1 Rs. 7 Special Rs. 10, Extra Special Rs. 17 for love marriage health, wealth. Ask any six questions with M. O. Re. 1/4 and get correct answers by returnpost Life reading Rs. 10 No V.P.P. Send M.O. Free, pmplets
Prof Dr. N, H Chhatbar.
P. O. MAHUVA (Kathiawar India.)

CANARA BANK LIMITED

(Estd: 1906)

Genral Manager: **P. S. Nayak**, B. A., B. L., F. I. I. B.

LIABILITIES.	Dec. 31. 1943. Rs.	1942 Rs.
Capital Subscribed	30,00,000	20,00,000
Capital Paid up	22 49,438	14,96,072
Reserves	8,54,188	4,50,000
Deposits	1,97,85,847	1,45,50,503
Due to Bankers	20,00,000	13,50,000
Branch adjustments	10,08,553	10,36,559
Bills for collection and Foreign Bills negotiated	26,27,394	16,81,196
Other Liabilities	15,766	16,968
Profit for the year	2,68,576	1,53 310
Total	2 88 09,762	2 07,34,608

ASSETS.	Dec. 31 1943. Rs.	1942 Rs.
Cash	73,51,060	43,63,353
Government Securities	90,47,683	63,16,651
Advances to Customers	92,99,429	75,52,902
Bills for collection & Foreign Bills negotiate	26,27,394	16,81,196
Landed Properties	70,736	2,14,256
Bank Premises and Furniture & Fixtures	95,963	1,09,182
Other Assets	3,19,497	5,06,068
Total	2,88 09·762	2·07.34 608

ಕಾಂಗ್ರೆಸ್ ಮುಖಂಡರ ಬಿಡುಗಡೆಯು?

ಹಿಂದುಸ್ಥಾನದ ಪರಿಸ್ಥಿತಿಯು ದಿನದಿಂದ ದಿನಕ್ಕೆ ಕೆಡಹತ್ತಿರುವದರಿಂದ ಪಾರ್ಲಮೆಂಟಿನ ಅನೇಕ ಸದಸ್ಯರು ತಮ್ಮ ಚಿಂತೆ ವ್ಯಕ್ತಪಡಿಸಿದ್ದಾರೆ. ಅವರನ್ನು ಸಮಾಧಾನಪಡಿಸುವುದಕ್ಕಾಗಿ ಹಿಂದುಸ್ಥಾನ ಕಚೇರಿಯು ಎರಡು ಮಹತ್ವದ ಹಾಗೂ ಪ್ರಗತಿಪರ ಸೂಚನೆಗಳನ್ನು ಸಿದ್ಧಗೊಳಿಸಿರುವುದು ಎಂದು ಡೇಲಿ ಮೇಲ ಪತ್ರಿಕೆಯ ರಾಜಕೀಯ ಸುದ್ದಿಗಾರರು ಬರೆದಿದ್ದಾರೆ. ಕೆಲವು ವಾರಗಳೊಳಗಾಗಿ ಸ್ಥಾನಬದ್ಧ ಕಾಂಗ್ರೆಸ್ ಮುಖಂಡರ ಬಿಡುಗಡೆಯ ಪ್ರಶ್ನೆಯನ್ನು ಪುನರ್ವಿಮರ್ಶಿಸಬೇಕೆಂಬುದು ಮೊದಲನೇ ವಿಷಯ ಆರು ತಿಂಗಳಿಗಿಂತ ಹೆಚ್ಚು ಅವಧಿಯವರೆಗೆ ಸ್ಥಾನಬದ್ಧತೆಯಲ್ಲಿದ್ದ ಎಲ್ಲ ರಾಜಕೀಯ ಕೈದಿಗಳ ಬಂಧಮುಕ್ತತೆಯ ಪ್ರಶ್ನೆಯನ್ನು ಪರಿಶೀಲಿಸಬೇಕೆಂದು ಇತ್ತೀಚೆಗೆ ಒಂದು ಆಜ್ಞೆ ಜಾರಿ ಮಾಡಲ್ಪಟ್ಟಿತ್ತಷ್ಟೆ. ಕಾಂಗ್ರೆಸ್ ಮುಖಂಡರಿಗೂ ಆ ಆಜ್ಞೆಯು ಅನ್ವಯಿಸುವುದೆಂದು ಸ್ಪಷ್ಟಪಡಿಸಲಾಗಿದೆ.

ಎರಡನೆಯ ಸುದ್ದಿ ಹೀಗಿರುವುದು. ಹಿಂದುಸ್ಥಾನದ ಆರ್ಥಿಕ ಪುನರ್ರಚನೆಯ ಪ್ರಶ್ನೆಯನ್ನು ಪರ್ಯಾಲೋಚಿಸಲು ಒಂದು ಆಂಗ್ಲೋ—ಇಂಡಿಯನ್ ಕಮಿಶನ್‌ನ್ನು ಬೇಗನೆ ಕಳಿಸಲಾಗುವುದೆಂದು ಪಾರ್ಲಿಮೆಂಟ್ ಸದಸ್ಯರಿಗೆ ಭರವಸೆ ಕೊಡಲಾಗಿದೆಯಂತೆ. ಈ ಕಮಿಶನಿನ ಸದಸ್ಯರು ಔದ್ಯೋಗಿಕ, ಕೃಷಿ ಹಾಗೂ ಆರೋಗ್ಯ ಪ್ರಶ್ನೆಗಳನ್ನು ಪರಿಹರಿಸಲು ಅಧಿಕಾರ ಪಡೆದಿದ್ದಾರೆ. ಮೊದಲಿನೆರಡು ವಿಷಯಗಳನ್ನು ಕಮಿಶನದ ಹಿಂದೀ ಸದಸ್ಯರಿಗೆ ಬಿಟ್ಟುಕೊಡತಕ್ಕದೆಂದೂ ಬ್ರಿಟಿಶ ತಜ್ಞರು ಆರೋಗ್ಯ ಸುಧಾರಣೆಯ ಕಡೆ ಗಮನವನ್ನೀಯಬೇಕೆಂದೂ ಸೂಚಿಸಲಾಗಿದೆ

ಹಿಂದೀ ಕಚೇರಿಯವರು ಈ ಸುದ್ದಿಯನ್ನು ದೃಢಪಡಿಸಿಲ್ಲ. ಆದರೆ ಇವು ಬ್ರಿಟಿಶ ಸರಕಾರದ ನಿಶ್ಚಿತ ಸೂಚನೆಗಳಾಗಿವೆಯೆಂದು ಪಾರ್ಲಿಮೆಂಟ್ ಸದಸ್ಯರೆಲ್ಲ ನಂಬಿದ್ದಾರೆ.

ಸರಕಾರಿ ಅಧಿಕಾರಿಯ ಮನೆಯಲ್ಲಿ ಅಕ್ಕಿ ಕಳ್ಳ ಸಂಗ್ರಹದ ಜಪ್ತಿ.

ಇದೇ ತಾ. 3ರಲ್ಲಿ ಶ್ರೀ. ವ್ಹಿ. ಎಂ. ಕಾಳೆ ಎಂಬ ಇನ್‌ಸ್ಪೆಕ್ಟರ್ ಅಧಿಕಾರಿಗಳು ತಮ್ಮ ನೌಕರರೊಂದಿಗೆ ಬಾರ್ಸಿಯಿಂದ ಸೊಲ್ಲಾಪುರಕ್ಕೆ ಮೋಟರ ಕಾರಿನಲ್ಲಿ ಬರುತ್ತಿದ್ದಾಗ, ಸೀದಾ ಪೋಲೀಸರಿಂದ ಅದು ತಡೆಯಲ್ಪಟ್ಟು ಝಡತಿ ಮಾಡಲ್ಪಟ್ಟಿತು. ಆಗ ಅದರಲ್ಲಿ 40 ಸೇರು ಅಕ್ಕಿ ಒಂದು ಡ್ರಮ್ ಚಿಮಣಿ ಎಣ್ಣೆ ಮತ್ತು ಬೇರೆ ಕೆಲವು ಸೀದಾ ಪದಾರ್ಥಗಳು ಸಿಕ್ಕಿದವು. ಬಳಿಕ ಶ್ರೀ. ಕಾಳೆಯವರ ಸೊಲ್ಲಾಪುರದ ಮನೆಯನ್ನೂ ಜಪ್ತಿಮಾಡಲಾಯಿತು ಅಲ್ಲಿ 150 ಸೇರು ಅಕ್ಕಿ ಮತ್ತು ಇತರ ಸೀದಾ ಪದಾರ್ಥಗಳು ದೊರೆತವು.

ನಾಮೂರವು ಅಮೇರಿಕನರ ಸ್ವಾಧೀನವಾಯಿತು.

ಮಾರ್ಶಲ್ ದ್ವೀಪ ಸಾಲುಗಳಲ್ಲಿದ್ದ ನಾಮೂರ ದ್ವೀಪವನ್ನು ಅಮೇರಿಕನ್ ದಂಡುಗಳು ವಶಮಾಡಿ ಕೊಂಡವು. ಸಮೀಪದಲ್ಲಿದ್ದ ಸಣ್ಣ ಪುಟ್ಟ ದ್ವೀಪಗಳೂ ಅಮೇರಿಕನರ ವಶವಾಯಿತೆಂದು ಅಧಿಕೃತ ಪ್ರಕಟಣೆ ಇದೆ.

ನಾಮೂರ ದ್ವೀಪ ಹಾಗೂ ಅದರ ನೆರೆಹೊರೆಯ ದ್ವೀಪಗಳು ವಶವಾದುದನ್ನು ಮಿಮಿಜರ ಪ್ರಕಟಣೆಯೂ ತಿಳಿಸುತ್ತದೆ ಕ್ವಾಜಾಲೀನದಲ್ಲಿ ಶತ್ರು ಪ್ರತಿಭಟನೆಯು ಒಂದೇ ರೀತಿ ಸಾಗಿದೆ ಮಿತ್ರರ ಯಾಂತ್ರಿಕ ದಳಗಳು ಶತ್ರು ಸಂಹಾರ ಮಾಡಿ ಒಂದೇ ಸಮನೆ ಮುಂದೊತ್ತುತ್ತಿವೆ.

ನಾಮೂರವನ್ನು ಅಮೇರಿಕನ್ ನೌಕಾಬಲದ 4ನೇ ವಿಭಾಗದ ಸೇನೆಯು ವಶಮಾಡಿಕೊಂಡಿದೆಯೆಂದೂ ದ್ವೀಪದ ಉತ್ತರ ಭಾಗದಲ್ಲಿದ್ದ ಜಪಾನರನ್ನು ನಾಶಗೊಳಿಸಲಾಯಿತೆಂದೂ ಸುದ್ದಿ.

ಕ್ವಾಜಾಲೀನ್‌ದಲ್ಲಿ ನಿನ್ನೆಯ ವರೆಗೆ 1250 ಜರ್ಮನರು ಹತರಾದರೆಂದೂ 27 ಅಮೇರಿಕನ ಸೈನಿಕರು ಯುದ್ಧದಲ್ಲಿ ಮೃತಪಟ್ಟರೆಂದೂ ತಿಳಿದು ಬಂದಿದೆ. ಅಮೇರಿಕನ್ ಸೈನಿಕರಲ್ಲಿ 9 ಜನರು ಕಣ್ಮರೆಯಾಗಿದ್ದಾರೆ. 190 ಜನರು ಗಾಯಗೊಂಡಿದ್ದಾರೆ. ರಾಯಿ ದ್ವೀಪದ ಯುದ್ಧದಲ್ಲಿ 100 ಕ್ಕಿಂತ ಕಡಿಮೆ ಅಮೇರಿಕನರು ಮೃತಪಟ್ಟಿರುವರು. 400 ಜನರು ಗಾಯಗೊಂಡಿರುವರೆಂದೂ ತಿಳಿದು ಬಂದಿದೆ ಗಾಗಾನ್ [illegible] ಮತ್ತು ಎಡ್ಜಿಬೆನ್ ದ್ವೀಪಗಳೂ ಮಿತ್ರ ವಶವಾಗಿವೆಯೆಂದು ಓರ್ವ ಅಮೇರಿಕನ್ ಧುರೀಣನು ತಿಳಿಸುತ್ತಾನೆ, ಈ ವರೆಗೆ ಆದ ಹಾನಿಯ ಲೆಕ್ಕ ನೋಡಿದರೆ ಒಬ್ಬ ಅಮೇರಿಕನನಿಗೆ 40ರಂತೆ ಕ್ವಾಜಾಲೀನದಲ್ಲಿ ಜಪಾನರು ಹತರಾಗಿದ್ದಾರೆ. ಸದ್ಯದ ಯುದ್ಧ ಪರಿಸ್ಥಿತಿಯನ್ನು ನೋಡುವಾಗ ಕ್ವಾಜಾಲೀನದಲ್ಲಿ ಜಪಾನರ ಪ್ರತಿಭಟನೆಯನ್ನು ನಿಗ್ರಹಿಸಿ ಶತ್ರುವನ್ನು ಅಮೇರಿಕನರು ಬೇಗನೆ ಸೋಲಿಸುವ ಸಂಭವವಿದೆಯೆಂದೂ ತಿಳಿದು ಬರುತ್ತದೆ.

ಲಂಡನ್ ಹಿಂದೀ ಕಾಂಗ್ರೆಸಿಗರ ನಿರ್ಣಯ.

ಹಿಂದಿ ರಾಷ್ಟ್ರ ಸಭೆಯ ಆಜ್ಞೆಗನುಸಾರವಾಗಿಯಾಗಲಿ, ಸ್ಪಷ್ಟ ರಾಜಕೀಯ ಕಾರಣದಿಂದಾಗಲಿ ಗ್ರೇಟ್ ಬ್ರಿಟನದ ಸಶಸ್ತ್ರ ದಲಗಳಲ್ಲ ಸೇರಲು ಆರಂಭದಿಂದ ನಿರಾಕರಿಸುತ್ತ ಬಂದ ಹಿಂದಿಯರಿಗೆ ಈ ಕಮೀಟಿಯು, ತನ್ನ ಬೆಂಬಲ ಕೊಡುವುದಲ್ಲದೆ ಅವರ ಧೋರಣವನ್ನೂ ಮೆಚ್ಚುತ್ತದೆ ಎಂಬುದಾಗಿ ಹಿಂದಿ ಕಾಂಗ್ರೆಸ್ಸಿಗರ ಕಮಿಟಿಯವರು ನಿರ್ಣಯಿಸಿರುವರು. ಈ ಧೋರಣ ಸ್ವೀಕರಿಸಿದವರು ಪರಿಣಾಮಗಳಿಗೆ ಹೆದರದೆ ಕೊನೆಯ ವರೆಗೂ ಅದನ್ನು ಸಾಗಿಸಿಕೊಂಡು ಹೋಗತಕ್ಕದ್ದೆಂದೂ ಅಭಿಪ್ರಾಯವಿತ್ತು.

ಆದರೆ ಯುದ್ಧ ಪ್ರಯತ್ನಕ್ಕೆ ಹಿಂದಿಗ್ಲೆಂಡ. ಬಗೆಯಿಂದ ನೆರವಾದವರಿಗಾಗಲಿ, ರಾಜಕೀಯ ಇಲ್ಲವೆ ಪ್ರಾಮಾಣಿಕ ಮತಭೇದ ಹೊರತಾಗಿ ಉಳಿದ ಕಾರಣಗಳಿಂದ ಮಿಲಿಟರಿ ಸರ್ವೀಸದಿಂದ ಅಲಿಪ್ತ ಮಾಡಲ್ಪಟ್ಟವರಿಗಾಗಲಿ ಯಾ ಶಾರೀರಿಕ ದೌರ್ಬಲ್ಯದಿಂದಾಗಿ ಅದರಿಂದ ದೂರ ಉಳಿದವರಿಗಾಗಲಿ ಕಮಿಟಿಯವರ ಬೆಂಬಲ ವಿದೆಯೆಂದು ತಿಳಿಸಲಾಗಿದೆ.

ಮರಾಠಿ ಪತ್ರಿಕೋದ್ಯೋಗಿ ಸಮ್ಮೇಳನ.

"ನಮ್ಮ ಸಂಸ್ಕೃತಿ ನಾಶವಾಗದಂತೆ ಉಳಿಸಿಕೊಳ್ಳುವ ಹೊಣೆ ಮತ್ತು ನಮ್ಮ ದೇಶದ ವರ್ಚಸ್ಸು ಮತ್ತು ಧರ್ಮ ಅಚ್ಚಳಿಯದುಳಿವಂತೆ ನೋಡಿಕೊಳ್ಳುವದು ನಿಮ್ಮ ಕರ್ತವ್ಯವಾಗಿದೆ. ಏಕೆಂದರೆ ಆಧುನಿಕ ಜಗತ್ತಿನಲ್ಲಿ ಜನಸಾಮಾನ್ಯರಲ್ಲಿ ಜಾಗ್ರತಿಯನ್ನುಂಟುಮಾಡಿ ಅವರನ್ನು ಪ್ರಗತಿಪಥಕ್ಕೆ ಹಚ್ಚುವಲ್ಲಿ ಪತ್ರಿಕೆಗಳು ಒಳ್ಳೆ ಶಕ್ತಿ ಸಂಪನ್ನವಾಗಿವೆ" ಎಂಬದಾಗಿ ಕೊಲ್ಹಾಪುರದ ಕಿರಿಯ ಮಹಾರಾಣಿಯವರಾದ ವಿಜಯಮಾಲಾದೇವಿಯವರು ತಾ 5 ರಲ್ಲಿ ಕೊಲ್ಹಾಪುರದಲ್ಲಿ ಜರಗಿದ ಮರಾಠಿ ಪತ್ರಿಕೋದ್ಯೋಗಿಗಳ ನಾಲ್ಕನೇ ಅಧಿವೇಶನದ ಉದ್ಘಾಟನ ಸಮಾರಂಭವನ್ನು ನೆರವೇರಿಸುತ್ತ ಹೇಳಿದರು.

ಸುಮಾರು ೪೦೦ ಮರಾಠಿ ಪತ್ರಿಕೋದ್ಯೋಗಿಗಳೂ, ಹಲವು ಮಹಿಳೆಯರೂ ಬಂದಿದ್ದರು ಎಸ್. ಎ. ಬ್ರೇಲ್ವಿ. ಡಾ. ಜಯಕರ ಸರ್ ರಘುನಾಥ ಪರಾಂಜಪೆ, ಔಂಧದ ರಾಜರು ಮೊದಲಾದವರಿಂದ ಯಶಸ್ವಿಂತನಪರ ಸಂದೇಶಗಳು ಬಂದಿವೆ. ನವಾಕಾಳ ಪತ್ರಿಕೆಯ ಸಂಪಾದಕರಾದ ಶ್ರೀ ಯಶವಂತ ಕೃಷ್ಣ ಖಾಡಿಲಕರರ ಅಧ್ಯಕ್ಷತೆಯಲ್ಲಿ ಪರಿಷತ್ತು ಜರಗಿತು.

ಸ್ವೀಕಾರ ವಿಮರ್ಶೆ.

ಕರ್ಮವೀರ ಪರ್ಯಾಯ ಸಂಚಿಕೆ—ಉಡುಪಿಯ ಪರ್ಯಾಯದ ವೇಳೆ ಜಿಲ್ಲೆಯ ಹೊರಗಿನ ಪತ್ರಿಕೆಯಾದ ಕರ್ಮವೀರವು ಪ್ರಥಮವಾಗಿ ಪರ್ಯಾಯ ಸಂಚಿಕೆಯನ್ನು ಈ ಬಾರಿ ಪ್ರಕಟಿಸಿಯದೆ. ಅದರ ನಿತ್ಯ ಆಕಾರದ 36 ಪುಟಗಳಿವೆ. ಈ ಸಂಚಿಕೆಯಲ್ಲಿ ಉಡುಪಿಗೆ ಮತ್ತು ಪರ್ಯಾಯಕ್ಕೆ ಸಂಬಂಧಿಸಿದ ಲೇಖನಗಳೂ ಚಿತ್ರಗಳೂ ವಿಶೇಷವಾಗಿ ಕೊಡಲ್ಪಟ್ಟಿವೆ. ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರ 'ದಕ್ಷಿಣ ಕನ್ನಡದ ಜನಜೀವನ' ಎಂಬ ಲೇಖನವು ಉತ್ತಮವಾಗಿದೆ. ಸಂಚಿಕೆಯ ಬೆಲೆ 6 ಆಣೆ.

ಶರಣ ಸಾಹಿತ್ಯ—ಕೀರ್ತನ ಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಬೆಂಗಳೂರಿಂದ ಹೊರಡುತ್ತಿರುವ ಮಾಸಪತ್ರಿಕೆ. [illegible] ಆಕಾರದಲ್ಲಿ ಪ್ರತೀ ತಿಂಗಳೂ 64 ಪುಟಗಳು ಕೊಡಲ್ಪಡುತ್ತವೆ. ಇದರಲ್ಲಿ ಧಾರ್ಮಿಕ ಐತಿಹಾಸಿಕ ವಾಙ್ಮಯಾತ್ಮಕ ಲೇಖನಗಳೂ ಕವಿತೆಗಳೂ ಕೊಡಲ್ಪಡುತ್ತವೆ. ಬಿಡಿ ಪ್ರತಿಗೆ 6 ಆಣೆ, ವರ್ಷಕ್ಕೆ ರೂಪಾಯಿ ನಾಲ್ಕು.

ವಿಶೇಷ ಚರಿತ್ರೆ—ಕೀರ್ತನ ಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಹೊರಡುವ ಶರಣ ಸಾಹಿತ್ಯ ಗ್ರಂಥಮಾಲೆಯ ಮೂರನೇ ಕುಸುಮವಿದು. ಹಂಪೆಯ ಮಹಾಕವಿಯಾದ ರಾಘವಾಂಕನು ರಚಿಸಿದ ವಿಶೇಷ ಚರಿತೆಯನ್ನು ಇಲ್ಲಿ ಕಾವ್ಯರೂಪದಲ್ಲಿ ಕೊಡಲಾಗಿದೆ. ಕೊನೆಯಲ್ಲಿ ಕಥಾ ಸಾರಾಂಶವಿದೆ. 112 ಪುಟಗಳ ಈ ಸಚಿತ್ರ ಪುಸ್ತಕದ ಬೆಲೆ ರೂ. 1.

ಬಿಲ್ವಾಷ್ಟೋತ್ತರಮ್ ಮತ್ತು ಶಿವ ಸಂಕಲ್ಪ—ಇದೂ ಮೇಲಿನ ಶರಣ ಸಾಹಿತ್ಯ ಗ್ರಂಥಮಾಲೆಯ ಎರಡನೇ ಪುಷ್ಪ. ಶಿವಭಕ್ತರಿಗೆ ಉಪಯೋಗವಾದ 20 ಪುಟಗಳ ಸಣ್ಣ ಪುಸ್ತಕ. ಬೆಲೆ 2ಆಣೆ

ಪುರಾತನ ತ್ರಿವಿಧಿ--ಶರಣ ಸಾಹಿತ್ಯ ಗ್ರಂಥಮಾಲೆಯ ಪ್ರಥಮ ಪುಷ್ಪ. ದ್ರಾವಿಡ ದೇಶದಲ್ಲಿ ಸುಪ್ರಸಿದ್ಧರೂ ಶಿವ ಧರ್ಮೋದ್ಧಾರಕರೂ ಆದ 63 ಮಂದಿ ಶಿವ ಶರಣರನ್ನು ಕುರಿತು ಶ್ರೀ ವಿಜಗುಣ ಶಿವಯೋಗಿಯು ರಚಿಸಿದ ಗ್ರಂಥವಿದು. 36 ಪುಟಗಳ ಬೆಲೆ 6ಆಣೆ.

ಭಾರತ ಶಕ್ತಿ- ಈಗ ಬೆಂಗಳೂರಲ್ಲಿ ನೆಲೆಸಿರುವ ಮಂಗಳೂರಿನವರಾದ ಶ್ರೀ ವೆಂಕಣ್ಣನವರಿಂದ ರಚಿಸಲ್ಪಟ್ಟ ಗೀತಾ ನಾಟಕವಿದು. ಪ್ರಕಾಶಕರು ಬೆಂಗಳೂರಿನ ಪ್ರಗತಿಶೀಲ ಲೇಖಕರ ಸಂಘ. 24 ಪುಟ. ಬೆಲೆ 3 ಆಣೆ. ದಾಕ್ಷಿಣ್ಯಗಳಿಗೆ ಕಟ್ಟುಬಿದ್ದವರಿಂದ ಯಾವ ಸೇವೆಯೂ ಸಾಧ್ಯವಿಲ್ಲ, ದಾಕ್ಷಿಣ್ಯಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿಯ ತಡೆಗಳು. ಕೂಲಿಗಾರರು ಮತ್ತು ಸಾಮಾನ್ಯ ರೈತರು ಮಾತ್ರವೇ ಸ್ವಾತಂತ್ರ್ಯ ಸಾಧಿಸಬಲ್ಲರು. ಬಡವರ ಮುಂದಾಳುತನದಿಂದಲೇ ದೇಶದ ಏಳಿಗೆ ಎಂಬುದು ಭಾರತ ಶಕ್ತಿಯಲ್ಲಿ ಮೇಲಿಂದ ಮೇಲೆ ಚಿತ್ರಿತವಾಗಿದೆ.

1944ನೇ
ಹೊಸ ವರ್ಷದ
ಪಾಕೆಟ್ ಡೈರಿ.

ಸಣ್ಣದು	(ಸಾದಾ)	ಮುಗಿದಿದೆ.
,,	(ಕೆಲಿಕೊ)	1-1-0
,,	(ಮುಚ್ಚಳದ್ದು)	ಮುಗಿದಿದೆ.
ದೊಡ್ಡದು	(ಸಾದಾ)	1-12-0
,,	(ಕೆಲಿಕೊ)	2-0-0
,,	(ಮುಚ್ಚಳದ್ದು)	2-6-0

ಕೆಲವೇ ಪ್ರತಿಗಳು ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ತಾ 11—2—44ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ
ಬಾಂಬೆ ಟಾಕೀಸ್‌ನವರ
ಸ್ನೇಹಪ್ರಭಾ & ಕಿಶೋರ ಸಾಹು
ನಟಿಸಿರುವ
ಪುನರ್ ಮಿಲನ್
ಅನಂತರ:
ಚೌರಂಘಿ, ಬಸಂತ್.

THE CANARA BANKING CORPORATION LTD.

(Incorporated in British India with Limited Liability.)

ESTD: 1906.

Head Office: **UDIPI,** S. Kanara.

Statement of affairs as on 31st December, 1943.

LIABILITIES	Rs.	As.	Ps.	ASSETS	Rs.	As.	Ps.
1. Paid up Capital	12,95,970	0	0	1. Cash on hand & with Bankers ...	18,26,986	3	6
2. Reserves	5,83,379	1	6	2. Investments on (1) Govt. Securities, (2) Immovable properties etc.	26,04,671	6	8
3. Deposits	61,66,927	6	0	3. Loans on jewels & other valuable securities	23,72,302	8	7
4. Bills for collection	5,53,548	6	1	4. Loans on personal security & Bills purchased	16,71,482	14	8
5. Sundries including revenue items	7,00,981	0	5	5. Bills for collection as per contra	5,53,548	6	1
6. Profits for the year ending 31st December, 1943	41,08,522	4	0	6. Office premises, furniture etc.	93,251	0	0
				7. Sundries including revenue items	84,085	10	4
Total	92,09,328	2	0	Total	92,09,328	2	0

ನವಯುಗ

ಉಡುಪಿ, ಗುರುವಾರ ೧೦-೨-೧೯೪೪

ಉಡುಪಿಯಲ್ಲಿ ಅಕ್ಕಿಯ ಹಸುಗೆ (ರೇಶನಿಂಗ್)

ಉಡುಪಿಯಲ್ಲಿ ಕಳೆದ ವಾರದಿಂದ ತತ್ಕಾಲಿಕ (?)ವಾದ ಅಕ್ಕಿ ಹಸುಗೆಯ ಏರ್ಪಾಡು ಮಾಡಲಾಗಿದೆ. ಆದರೆ ಇದು ಯಾವ ಸೂತ್ರಗಳನ್ನಾಧರಿಸಿ ಮಾಡಲಾಗಿದೆಯೆಂಬುದು ಸಸೂತ್ರವಾಗಿ ಯಾರಿಗೂ ಗೊತ್ತಿಲ್ಲದಿರುವ ಪ್ರಯುಕ್ತ ಪಟ್ಟಣದಲ್ಲೆಲ್ಲ ಭಿನ್ನಾಭಿಪ್ರಾಯಗಳೂ ಅವ್ಯವಸ್ಥೆಯೂ ಉಂಟಾಗಿವೆ. ಸಂಬಂಧಪಟ್ಟ ಅಧಿಕಾರಿಗಳನ್ನು ಟೀಕಿಸುವ ಧ್ಯೇಯದಿಂದ ನಾವಿದನ್ನು ಬರೆಯುವುದಿಲ್ಲ. ಅವರ ಕಾರ್ಯವು ಯಶಸ್ವಿಯಾಗಿ ಪಟ್ಟಣದಲ್ಲಿ ಸುವ್ಯವಸ್ಥೆಯೂ ಶಾಂತಿಯೂ ನೆಲೆಯಾಗುವಂತೆ ನಾವೂ ಸಹಕರಿಸೋಣವೆಂತಲೇ ಈ ಕೆಳಗಿನ ಹಲವು ಸಂದಿಗ್ಧ ಸಂಗತಿಗಳನ್ನು ಅಧಿಕಾರಿಗಳ ಲಕ್ಷ್ಯಕ್ಕೆ ತರುತ್ತಿದ್ದೇವೆ. ಹಲವರು ಹಲವು ತರದ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಎಲ್ಲವೂ ಹೊಟ್ಟೆಯ ಪಾಡಿಗೆ ಸಂಬಂಧಪಟ್ಟವು; ಕೂಡಲೆ ಇತ್ಯರ್ಥವಾಗಿ ಹೊಟ್ಟೆಗೆ ಹಿಟ್ಟು ಬೇಕೆಂದು ಬೇಡುವ ವಿಷಯಗಳು. ನೌಕರ ವರ್ಗದ ಯಾತ್ರಾ ವ್ಯಾಪಾರ ಸಾಧನವಾಗಿ ಬಿಡಿಸಬಹುದಾದಂತಹ ಸಮಸ್ಯೆಗಳಲ್ಲ ಇವು. ಆದುದರಿಂದಲೇ ಇತ್ತೀಚೆಗೆ ತಹಶೀಲ್ದಾರರ ಮತ್ತು ಮೆಜಿಸ್ಟ್ರೇಟರ ಮನೆ ಮುಂದೂ ಕಚೇರಿಯ ಮುಂದೂ ನೂರುಗಟ್ಟಲೆಯ ಜನ ಸೇರಿ ತಮ್ಮ ತಮ್ಮ ಅವಸ್ಥೆಗಳೇನೆಂದು ಪ್ರಕಟಿಸುತ್ತಿದ್ದಾರೆ. ಹಲವು ವೇಳೆ ಅಧಿಕಾರಿಗಳು ಅಲ್ಲಿರದೆ ಕಾರಕೂನರೇ ಇದ್ದು ಪ್ರಶ್ನೆಗೆ ತಕ್ಕ ಉತ್ತರ ಕೊಡಲು ಅಸಮರ್ಥರಾಗುತ್ತಾರೆ. ಒಂದು ವೇಳೆ ಅಧಿಕಾರಿಗಳಿದ್ದರೂ ಈ ನೂರಾರು ಜನರ ಪ್ರಶ್ನೆಗಳನ್ನು ಉತ್ತರಿಸುವುದೆಂದರೆ ಎಂತಹ ಸಹನಾಶೀಲ ಅಧಿಕಾರಿಗೂ ತಾಳ್ಮೆಯು ಮೀರುವ ಸಂದರ್ಭವೆಂಬುದನ್ನು ನಾವು ಒಪ್ಪುತ್ತೇವೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಕೆಳಗಿನ ಪ್ರಶ್ನೆಗಳ ದೃಷ್ಟಿಯಿಂದ ಪರಿಸ್ಥಿತಿಯ ನೆಲೆಯನ್ನರಿತು ತಕ್ಕ ಪ್ರತ್ಯುತ್ತರ ರೂಪದ ಸರ್ಕ್ಯುಲರನ್ನು ಹೊರಡಿಸಿ ಅವುಗಳ ಪ್ರತಿಗಳನ್ನು ಪಟ್ಟಣದಲ್ಲೆಲ್ಲ ಹಂಚಿ, ಅಸ್ಪಷ್ಟವಾಗಿದ್ದಲ್ಲಿ ಅಕ್ಕಿಯ ಹಸುಗೆಯ ಡಿಪೋಗಳಲ್ಲೂ ಗೋಡೆಗಳಿಗೂ ಇತರ ಪ್ರಾಮುಖ್ಯ ಸ್ಥಳಗಳಲ್ಲಿಯೂ ಬಹಿರಂಗವಾಗಿ ಅಂಟಿಸಿ ಪ್ರಕಟಿಸಿದರೆ ಅಂತಹ ಅಧಿಕಾರ ವಾಣಿಯನ್ನು ಬಲ್ಲವರು ಓದಿ ಇತರರಿಗೂ ಹೇಳಿ ಅವ್ಯವಸ್ಥೆಯನ್ನು ಹೋಗಲಾಡಿಸಬಹುದು. ಸ್ಥಳೀಯ ಪತ್ರಿಕೆಗಳಿಗೂ ಈ ವಿಷಯದಲ್ಲಿ ಸಹಕರಿಸಲು ಸಹ ಸಿದ್ಧವಾಗಿಯೇ ಇವೆ. ಈಗಿನಂತೆ ಪಟ್ಟಣದಲ್ಲಿ ಡಂಗುರ ಹೊಡೆಯಿಸುವುದರಿಂದ ಜನತೆಗೆ ಏನೂ ತಿಳಿಯುವುದಿಲ್ಲ. ಅರ್ಧ ಫರ್ಲಾಂಗು ಡೋಲಿನ ಹೊಡೆತ, ಅನಂತರ ನಾಲ್ಕು ಹೆಜ್ಜೆ ಅಸ್ಪಷ್ಟವಾಗಿ ಕಿರಿಚುವ ಹುಡುಗನ ಧ್ವನಿ, ಅನಂತರ ತಿರುಗಿ ಅರ್ಧ ಫರ್ಲಾಂಗು ಡೋಲಿನ ಹೊಡೆತ, ಈ ಕ್ರಮವು ಭಿನ್ನಾಭಿಪ್ರಾಯಗಳ ಗೊಂದಲವನ್ನೂ ಅವ್ಯವಸ್ಥೆಯನ್ನೂ ಉಂಟು ಮಾಡಿರುತ್ತದೆ. ಆದುದರಿಂದ ಭಿನ್ನಾಭಿಪ್ರಾಯಕ್ಕೆ ಎಡೆಯಾಗಿರುವ ಕೆಳಗಿನ ಪ್ರಶ್ನೆಗಳ ಉತ್ತರಗಳು ಎಲ್ಲರಿಗೂ ತಿಳಿಯುವಂತೆ ಸಂಬಂಧಪಟ್ಟ ಅಧಿಕಾರಿಗಳು ಯಾವುದಾದರೊಂದು ಕ್ರಮದಿಂದ ಸ್ಪಷ್ಟವಾಗಿ ಪ್ರಕಟಿಸಿದ್ದರೆ ಜನತೆಯಾಗಲಿ, ಅಧಿಕಾರಿಗಳಾಗಲಿ ತಾಳ್ಮೆಗೆಡುವ ಪರಿಸ್ಥಿತಿ ಬಂದೀತು, ಏಕೆ, ಈಗಲೇ ಬಂದಿದೆ.

1 ಕೃಷಿಕರಿಗೂ ಭೂಮಾಲಿಕರಿಗೂ ಹಸುಗೆಯ ಚೀಟಿ ಕೊಡಲಾಗುವುದಿಲ್ಲವೆಂಬುದೂ ಅವರು ತಮ್ಮಲ್ಲಿರುವ ಅಕ್ಕಿಯನ್ನೂ ಒಕ್ಕಲುಗಳ ಮೂಲಕ ಬರುವ ಗೇಣಿಯನ್ನೇ ಉಪಯೋಗಿಸಿಕೊಳ್ಳತಕ್ಕದೆಂಬುದೂ ನಿಜವೇ? ಮುನ್ಸಿಪಾಲಿಟಿಯೊಳಗಿರುವ ಧನಿಯು ಮುನ್ಸಿಪಾಲಿಟಿಯ ಹೊರಗಿರುವ ತನ್ನ ಒಕ್ಕಲಿನಿಂದ ಗೇಣಿ ಅಕ್ಕಿಯನ್ನು ತರಿಸಿಕೊಳ್ಳುವುದಕ್ಕೆ ಪ್ರತಿಬಂಧಕವಿಲ್ಲವೆ? ಅಂತಹ ಕೃಷಿಕನೋ ಧನಿಯೋ ಮನೆಯಲ್ಲಿ ಎಷ್ಟು ಮುಡಿ ಅಕ್ಕಿಯನ್ನಿಟ್ಟುಕೊಳ್ಳಬಹುದು?

2 ವ್ಯಾಪಾರಿಗಳಿಗೆ ಹಸುಗೆಯ ಚೀಟಿ ಕೊಡಲಾಗುವುದಿಲ್ಲ ಎಂಬುದು ನಿಜವೇ? ಅಕ್ಕಿಯ ವ್ಯಾಪಾರಿಗಳೇ ತಮ್ಮಲ್ಲಿರುವ ಅಕ್ಕಿಯನ್ನು ವಿಕ್ರಯಿಸಕೂಡದೆಂತ ಸರಕಾರದವರು ಮೊಹರು ಮಾಡಿರುವರೆಂದೂ ಅವರೇ ಹಸುಗೆಯ ಚೀಟಿಗೆ ಹೋಗಬೇಕಾಗಿದೆಯೆಂದೂ ಹೇಳುತ್ತಿರುವಲ್ಲಿ ಅಕ್ಕಿಯ ವ್ಯಾಪಾರಿಗಳಲ್ಲದವರಿಗೆ ಹಸುಗೆಯ ಚೀಟಿಯಿಲ್ಲದಿದ್ದರೆ ಅವರಿಗೆ ಅಕ್ಕಿ ದೊರೆಯುವುದು ಹೇಗೆ? ಅಕ್ಕಿಯ ವ್ಯಾಪಾರಿಗಳು ಅಕ್ಕಿಯನ್ನು ಮಾರಕೂಡದೆಂಬ ನಿರ್ಬಂಧವಿದೆಯೇ? ಅಥವಾ ಮಾರುವ ಬೆಲೆಯ ಮಟ್ಟಿಗೆ ಮಾತ್ರ ನಿಯಂತ್ರಣವೆ? ಹಾಗಿದ್ದರೆ ಅವರು ಅಕ್ಕಿಯನ್ನಿಟ್ಟುಕೊಂಡೂ ಆ ನಿಯಂತ್ರಣ ಬೆಲೆಗೆ ಕೊಡದಿದ್ದರೆ ಹಸುಗೆಯ ಚೀಟಿ ಇಲ್ಲದಿದ್ದವರು ಆ ಅಕ್ಕಿಯನ್ನು ಪಡೆಯುವುದು ಹೇಗೆ?

3 ಹಸುಗೆಯ ಚೀಟಿ ಕೊಡಲ್ಪಡದಿದ್ದವರು ಅವಶ್ಯವಿದ್ದರೆ ಅಧಿಕಾರಿಗಳಿಗೆ ಅರ್ಜಿ ಬರೆದು ಹಾಜರಾಗಿ ಪಡೆಯತಕ್ಕದೆಂಬುದರ ಅರ್ಥವೇನು? ಅಕ್ಕಿಯ ವ್ಯಾಪಾರಿಗಳು ತಮ್ಮಲ್ಲಿರುವ ಅಕ್ಕಿಗೆ ಸರಕಾರದವರು ಮೊಹರು ಮಾಡಿದ ಪ್ರಯುಕ್ತ ಕೊಡಲಾಗುವುದಿಲ್ಲವೆಂದರೆ, ಭೂಮಾಲಿಕರು ಹೊರಗಿನ ತಮ್ಮ ಒಕ್ಕಲುಗಳಿಂದ ಗೇಣಿ ಅಕ್ಕಿಯನ್ನು ತರಿಸಿಕೊಳ್ಳಕೂಡದೆಂದಿದ್ದರೆ, ಎಲ್ಲರಿಗೂ ಹಸುಗೆಯ ಚೀಟಿಯ ಅವಶ್ಯಕತೆ ಇದ್ದೇ ಇದೆ. ಎಂದ ಮೇಲೆ ಇವರೆಲ್ಲ ಸಂಬಂಧಪಟ್ಟ ಅಧಿಕಾರಿಗಳ ಕಚೇರಿಯಲ್ಲೋ ಮನೆಯಲ್ಲೋ ನೂರುಗಟ್ಟಲೆಯಲ್ಲಿ ಗುಂಪುಕೂಡಿ ಕಾದು ತಮ್ಮ ಸಮಯವನ್ನೂ ಹಾಳುಮಾಡಿಕೊಂಡು ಅಧಿಕಾರಿಗಳ ಸಮಯವನ್ನು ಕೆಡಿಸಿ ಅವರನ್ನೂ ರೇಗಿಸಿ ತಾವೂ ರೇಗಿಕೊಂಡು ಬರುವಂತ ಸನ್ನಿವೇಶವುಂಟಾಗಲು ಅವಕಾಶ ಕೊಟ್ಟುದೇಕೆ? ಮೊತ್ತಮೊದಲು ಹೇಗೆ ಎಲ್ಲರಿಂದಲೂ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸಿದೆಯೋ ಅಂತೆಯೇ ಎಲ್ಲರಿಗೂ ಹಸುಗೆಯ ಚೀಟಿಗಳನ್ನು ಕೊಟ್ಟಿದ್ದರೆ ಈ ಗೊಂದಲವುಂಟಾಗುತಿತ್ತೆ? ಈಗಲಾದರೂ ಯಾರು ಯಾರು ಹಸುಗೆಯ ಚೀಟಿಗಾಗಿ ಅಧಿಕಾರಿಗಳಿಗೆ ಮನವಿ ಮಾಡಿಕೊಳ್ಳಬೇಕು? ಯಾರು ಯಾರಿಗೆ ಮನವಿ ಮಾಡಿಕೊಂಡಲ್ಲಿ ದೊರಕುತ್ತದೆ? ಯಾರು ಯಾರಿಗೆ ದೊರಕಲಾರದು? ದೊರಕಲಾರದವರು ಅಕ್ಕಿಯನ್ನು ಹೊಂದುವುದಕ್ಕೆ ಬೇರೇನು ಹಾದಿ ತೋರಿಸಲಾಗಿದೆ? ಎಂಬ ಸಮಸ್ಯೆಯನ್ನು ಅಧಿಕಾರಿಗಳು ಬಿಡಿಸಿ ಸ್ಪಷ್ಟವಾದ ಪ್ರಕಟಣೆಯನ್ನು ಹೊರಡಿಸಬೇಕಾಗಿ ಜನತಾಪರವಾದ ನಮ್ಮ ಆಗ್ರಹಪೂರ್ವಕ ಕೇಳಿಕೆ ಇದೆ.

4 ಮಾತ್ರವಲ್ಲ, ಸಕ್ಕರೆ ಮತ್ತು ಎಣ್ಣೆಯ ಹಸುಗೆಯ ಚೀಟಿಗಳು ಚೀಟೊಂದರ ಒಂದಾಣೆಯಂತೆ ಇಟ್ಟು ಆಯಾ ಲೈಸೆನ್ಸುದಾರರ ಮೂಲಕ ಜನವರಿಯ ಆದಿಯಲ್ಲೇ ಕಳುಹಲ್ಪಟ್ಟಿದ್ದರೂ ಇನ್ನೂ ಕೆಲವರಿಗೆ ಹೊಸ ಚೀಟಿಗಳು ಸಿಕ್ಕಲೇ ಇಲ್ಲ! ಆ ಲೈಸೆನ್ಸುದಾರನೊಡನಾಗಲೀ ಆ ವಾರ್ಡಿಗೆ ಸಂಬಂಧಪಟ್ಟ ಇತರ ಲೈಸೆನ್ಸುದಾರರೊಡನಾಗಲೀ ವಿಚಾರಿಸಿದರೆ ತಮ್ಮಲ್ಲಿಗೆ ಬಂದಿಲ್ಲವೆನ್ನುತ್ತಾರೆ. ಯಾರೊಡನೆ ಕೇಳಬೇಕು? ತಿರುಗಿ ಚೀಟಿಯನ್ನು ಪಡೆಯುವುದು ಹೇಗೆ?

5 ಹೊಸ ಚೀಟಿಗಳು ಬರುವಷ್ಟರಲ್ಲಿ ಜನವರಿ ತಿಂಗಳು ದಾಟಿದ್ದರಿಂದ ಎಷ್ಟೋ ಲೈಸೆನ್ಸುದಾರರು ಆ ತಿಂಗಳ ಬಾಬ್ತು ಸಕ್ಕರೆಯಾಗಲಿ, ಎಣ್ಣೆಯಾಗಲೀ ಚೀಟುದಾರರಿಗೆ ಕೊಡುವುದಿಲ್ಲ. ಅದಕ್ಕೆ ಅವಧಿ ಬಾಧಕ ಬಂದದೆ ಎನ್ನುವರು. ಹಾಗಾದರೆ ಜನವರಿ ತಿಂಗಳ ಬಾಬ್ತು ಆ ಲೈಸೆನ್ಸುದಾರರಿಗೆ ಸಕ್ಕರೆ ಮತ್ತು ಎಣ್ಣೆಯ ಸಪ್ಲೈ ಆಗಲಿಲ್ಲವೆ? ಅವರು ಚೀಟಿದಾರರನ್ನು ವಂಚಿಸಿ ಕಾಳಸಂತೆಯ ವ್ಯಾಪಾರಕ್ಕೆ ಇಳಿದಿರಬಹುದೇ?

ಈ ಎಲ್ಲ ವಿಚಾರಗಳು ಜನತೆಗೆ ಸ್ಪಷ್ಟವಾಗಿ ತಿಳಿಯುವಂತೆ ಅಧಿಕಾರಿಗಳು ಕರಪತ್ರ (handbills) ಪ್ರಕಟಿಸಬೇಕೆಂದು ನಾವು ಮತ್ತೊಮ್ಮೆ ಒತ್ತಿ ಕೇಳಿಕೊಳ್ಳುತ್ತೇವೆ. ಅಂತಾದರೆ ಮಾತ್ರ ಅಧಿಕಾರಿಗಳಿಗೂ ಜನತೆಗೂ ಮನಶ್ಶಾಂತಿಯುಂಟಾದೀತು. ಹಾಗಾಗದಿದ್ದರೆ ಎಲ್ಲರೂ ಅವ್ಯವಸ್ಥೆಯ ಸುಳಿಗುಂಡಿಯಲ್ಲಿ ಕರೆಗಾಣದೆ ತೊಳಲಾಡುವ ಪಾಡೆನ್ನಬೇಕಾಗುತ್ತದೆ.

ಉಡುಪಿ.

ಮೋಟರಿನ ಅಡಿಗೆ ಬಿದ್ದು ವಿದ್ಯಾರ್ಥಿಯ ವಿಷಾದಕರ ಮರಣ:— ಕಟಪಾಡಿ ಶ್ರೀ ಸುಬ್ರಾಯ ಚಿರ್ಮಪ್ಪ ಶ್ಯಾನುಭಾಗರ ಮಗನೂ ಉಡುಪಿ ಬೋರ್ಡ್ ಹೈಸ್ಕೂಲಿನ VI ಫಾರ್ಮ್ ವಿದ್ಯಾರ್ಥಿಯೂ ಆದ ಬಾಬುರಾಯ ಶೆಣೈ ಎಂಬಾತನು ತಾ 8ರಂದು ಕಟಪಾಡಿಯಿಂದ ಉಡುಪಿಗೆ ಸೈಕಲಿನಲ್ಲಿ ಬೆಳಿಗ್ಗೆ ಬರುತ್ತಿದ್ದಾಗ ಉದ್ಯಾವರ ಈಗರ್ಜಿ ಸಮೀಪದ ಇಳಿಜಾರಿನ ಸಂದಿನಲ್ಲಿ ಮೋಟರ್ ಅಪಘಾತಕ್ಕೆ ಈಡಾಗಿ ಮರಣಹೊಂದಿದುದು ಅತ್ಯಂತ ವಿಷಾದವೆನಿಸುತ್ತದೆ. ಮೃತನ ಶರೀರವು ಸ್ಥಳೀಯ ಆಸ್ಪತ್ರೆಯಲ್ಲಿ ಪೋಸ್ಟ್ ಮಾರ್ಟೆಮ್ ಮಾಡಲಾಯಿತು. ಈ ವಿದ್ಯಾರ್ಥಿಯು ಕಲಿಯುವಿಕೆಯಲ್ಲಿ ಬಹು ಚತುರನಿದ್ದು ಈ ಬಾರಿಯ ಸರಕಾರೀ ಪರೀಕ್ಷೆಯಲ್ಲಿ ಗ್ಯಾರಂಟಿ ಪಾಸಾಗತಕ್ಕವರಲ್ಲಿ ಒಬ್ಬನಾಗಿದ್ದನು. ಅಪಘಾತದ ವಾರ್ತೆಯೊಡನೆ ಸಂತಾಪ ಸೂಚಕಾರ್ಥವಾಗಿ ಹೈಸ್ಕೂಲಿನ ಶಾಲೆಯು ಮುಚ್ಚಲ್ಪಟ್ಟಿತು. ದಿವಂಗತನ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಆತನ ಬಂಧುಬಳಗಕ್ಕೆ ಉಂಟಾದ ಅಪಾರ ದುಃಖದಲ್ಲಿ ಸಹ ಸಂತಾಪವನ್ನು ಸೂಚಿಸುವೆವು.

ಕನ್ಸಿಲಿಯೇಶನ್ ಆಫೀಸರರ ನೇಮಕ— ದ ಕನ್ನಡ ಮತ್ತು ಮಲಬಾರು ಜಿಲ್ಲೆಗಳಲ್ಲಿನ ವ್ಯಾಪಾರದ ಜಗಳವನ್ನು ತೀರ್ಮಾನಿಸಲು ಸಹಾಯ ಮಾಡುವ ಅಥವಾ ಮಧ್ಯಸ್ಥಿಕೆ ನಡೆಸುವ ಕಾರ್ಯಭಾಗದ ಕನ್ಸಿಲಿಯೇಶನ್ ಆಫೀಸರರಾಗಿ ಶ್ರೀ ಪಿ. ಎಸ್. ಮೋಸಸ್ ಅವರು ನೇಮಿಸಲ್ಪಟ್ಟಿದ್ದಾರೆ.

CHAMPAE'S

Snow & Castrex

(Sole Distributors for India.)

Sukhananda Stores

Santhekatte, UDIPI, S. K.

ರಶಿಯನರ ವಿಜಯ—ಜರ್ಮನರಿಗೆ ಆಹಾರದ ಅಭಾವ!

ರಶಿಯನರ ವಿಜಯ.

ಜನರಲ್ ಮಲಿನೊವಿಸ್ಕಿಯವರ ನಾಯಕತ್ವದಲ್ಲಿ ಯುಕ್ರೇನಿಯನ್ ದಂಡುಗಳು ಕ್ರಿವೋಯಿರಾಗ್ ಮತ್ತು ನಿಕೊಪೋಲದ ಸಮೀಪ ಜರ್ಮನರ ಸೇನಾವ್ಯೂಹವನ್ನು ಮುರಿಯಲಾಗಿದೆ ಯೆಂದು ಮಾರ್ಶಲ್ ಸ್ಟಾಲಿನ್ನರು ಒಂದು ಘೋಷಣೆ ಹೊರಡಿಸಿದ್ದಾರೆ.

ನೂರು ಮೈಲು ವಿಸ್ತಾರವಾದ ರಣರಂಗದಲ್ಲಿ ಸೋವಿಯೆಟ್ ದಲಗಳು ದಾಳಿ ಹೊಡಿ ಅನೇಕ ತಿಂಗಳುಗಳ ವರೆಗೆ ತಲೆವೆತ್ತಿನಿಂತಿದ್ದ ಮನಸ್ಟೈಯಿನನ ಕೋಟೆಯ ಸಾಲನ್ನು ಪುಡಿಗಟ್ಟಿ,ಮೂವತ್ತು ಮೈಲು ಒಳನಾಡಿಗೆ ನುಗ್ಗಿ, ಅಪೊಸ್ತೊಲೊವ್ ಮತ್ತು ಮಾರ್ಗನೆಟ್ ಎಂಬ ಎರಡು ಸ್ಥಳಗಳನ್ನು ಆಕ್ರಮಿಸಿವೆ.

ಅಪೊಸ್ತೊಲೊವ್ ದೊಡ್ಡ ರೈಲ್ವೆ ಕೇಂದ್ರ. ಕ್ರಿವೋಯಿರಾಗ ಮತ್ತು ನಿಕೊಪೋಲಗಳ ಮಧ್ಯಇದೆ. ಮಾರ್ಗನೆಟ್ಸ್ ರೈಲ್ವೆ ಸ್ಟೇಶನ್ ನಿಕೋಪೋಲದ ೭ ಮೈಲು ಈಶಾನ್ಯದಲ್ಲಿದೆ. ಈ ಯುದ್ಧದಲ್ಲಿ ೪ ಜರ್ಮನ ಸೇನಾದಳಗಳೂ ಮೂರು ಟ್ಯಾಂಕು ದಳಗಳೂ ಅಪಜಯಕ್ಕೂ ಅಪಕೀರ್ತಿಗೂ ತುತ್ತಾದುವು. ೬೦ ಸಾವಿರ ಸೈನಿಕರು ರಶಿಯನರ ಬಲೆಯೊಳಗೆ ಸಿಕ್ಕಿ ಬಿದ್ದಿದ್ದಾರೆ. ಆಹಾರ ವಸ್ತುಗಳ ಕೊರತೆಯಿಂದ ಜರ್ಮನ ಸೈನಿಕರು ಕುದುರೆ, ನಾಯಿ ಮತ್ತು ಇಲಿಗಳ ಮಾಂಸ ತಿನ್ನುತ್ತಿರುವರೆಂದು ತಿಳಿದು ಬಂದಿದೆ. ಜರ್ಮನ ದಂಡುಗಳ ಸುತ್ತಲೂ ಉಂಗುರದಂತೆ ಜೇರೆ ಹೊಡೆದಿರುವ ರಶಿಯನರನ್ನು ಹೊಡೆದಟ್ಟಿ ಒಂದು ಬಿರುಕನ್ನು ಮಾಡಿ, ಸಹಾಯ ಸಲಕರಣೆಗಳನ್ನು ತರಿಸಿಕೊಳ್ಳ ಬೇಕೆಂಬ ಉದ್ದೇಶದಿಂದ ಜರ್ಮನ ಸೇನಾಪತಿಯು ೨೦ ಸಾವಿರ ಸೈನಿಕರೊಂದಿಗೆ ಯುದ್ಧವನ್ನಾರಂಭಿಸಿದನು. ಆದರೆ ರಶಿಯನರು ಸಜ್ಜುಗೊಳಿಸಿಟ್ಟಿದ್ದ ತೋಫಗಳ ಹೊಡೆತಕ್ಕೆ ಜರ್ಮನ ಟ್ಯಾಂಕುಗಳ ಆಟ ನಡೆಯಲಿಲ್ಲ.

ಪೋಲಂಡಿನಲ್ಲಿ ರಶಿಯನ್ ಸೇನೆ

ಇತ್ತ ಪೋಲಂಡಿನ ಒಳಪ್ರವೇಶಿಸಿರುವ ಜನರಲ್ ವಟುಟಿನರ ಸೇನೆಯು ರೊವ್ನೊ ಲಕ್ ಮೊದಲಾದವುಗಳನ್ನು ಆಕ್ರಮಿಸಿಕೊಂಡು, ಮುಂದೆ ನುಗ್ಗುತ್ತಿದೆ. ಕೆಲವು ಕಡೆ ರಶಿಯನ್ ಸೈನಿಕರು ಕರ್ಜನ ಗಡಿಗೆ ಕೇವಲ 40 ಮೈಲುಗಳ ದೂರದಲ್ಲಿರುವರು. ಲಕ್ ನಗರದಲ್ಲಿ ಹರಿಯುವ ಸ್ಟಿರ್ ನದಿಯನ್ನು ರಶಿಯನರು ದಾಟಿ ಈಗ ಕೊವೆಲ್ ರೈಲ್ವೆ ಜಂಕ್ಷನ್ ಕಡೆ ದೃಷ್ಟಿಯಿಟ್ಟು ತೆರಳುತಿದ್ದಾರೆ. ಜರ್ಮನರು ಕೊವೆಲ್ ಮತ್ತು ಲೊವೋವ್ ನಗರಗಳಿಗೆ ಹಿಂದೆ ಸರಿಯುತ್ತಿರುವರು. ಇವೆರಡೂ ದೊಡ್ಡ ರೈಲ್ವೆ ಕೇಂದ್ರಗಳು. ನೀಪರ್ ವಕ್ರಭಾಗದಲ್ಲಿರುವ ಮನಸ್ಟೈಯಿನನ ಸೇನೆಗೆ ಸಹಾಯ ಸಲಕರಣೆಗಳು ತೆರಳುತ್ತಿರುವುದು ಇದೇ ಮಾರ್ಗದಿಂದ. ರಶಿಯನ್ ಮುಂದಲಗಳು ಜರ್ಮನರನ್ನು ಬೆಂಬತ್ತಿವೆಯೆಂದು 'ರೆಡ್‌ಸ್ಟಾರ್' ಪತ್ರಿಕೆಯು ಬರೆದಿರುವುದು ಅಂತೂ ಪಶ್ಚಿಮ ಮತ್ತು ಕೊನೆಯ ಜಿಲ್ಲೆಯಲ್ಲಿ ರಶಿಯನರು ಕಾಲೂರಿದಂತಾಗಿದೆ.

ನಾರ್ವಾ ನಗರ ಪ್ರವೇಶಿಸಿದರು

ರಶಿಯನ್ ಸೈನಿಕರು ನಾರ್ವಾ ನದಿ ದಾಟಿ ಪಶ್ಚಿಮ ದಂಡೆಯಲ್ಲಿರುವ ನಾರ್ವಾ ನಗರಕ್ಕೆ ಪ್ರವೇಶಿಸಿವೆಯೆಂದು ಜರ್ಮನ ರೇಡಿಯೋ ಸಾರಿದೆ. ರಶಿಯನರು ಹಂಗೆನ್‌ಬರ್ಗ್ ಎಂಬಲ್ಲಿ ದಾಟಿದುದೆಂದು ತಿಳಿದು ಬರುತ್ತದೆ.

ಕಳೆದೆರಡು ವಾರಗಳಲ್ಲಿ ಲೆನಿನಗ್ರಾಡ ಭಾಗದಲ್ಲಿ ೯೦ ಸಾವಿರ ಜರ್ಮನ ಸೈನಿಕರು, ಹತರಾದರೆಂದೂ ೩ ಸಾವಿರ ಸೆರೆಸಿಕ್ಕಿರುವರೆಂದೂ ಮಾಸ್ಕೋ ರೇಡಿಯೋ ಹೇಳಿದೆ.

ಫೆಬ್ರುವರಿ ೫ನೇ ತಾರೀಕಿಗೆ ಎಲ್ಲ ರಣರಂಗಗಳಲ್ಲಿ ೯೨ ಜರ್ಮನ ಟ್ಯಾಂಕುಗಳನ್ನೂ ೩೦ ಶತ್ರು ವಿಮಾನಗಳನ್ನೂ ನಾಶಗೊಳಿಸಲ್ಪಟ್ಟವು.

ಅಮೇರಿಕೆಯ ಅಧ್ಯಕ್ಷ ಚುನಾವಣೆ

ಅಮೇರಿಕೆಯ ಅಧ್ಯಕ್ಷ ಪದವಿಗೆ ಈ ಸಲದ ಚುನಾವಣೆ ಸಂಬಂಧದಲ್ಲಿ ತಾ 5 ರಲ್ಲಿ ಚಿಕಾಗೊ ಟ್ರಿಬ್ಯೂನದ ಒಡೆಯರಾದ ಕರ್ನಲ್ ರಾಬರ್ಟ ಮೊಕೊರಮಿಕ್ ಹಾಗು ಜನರಲ್ ಡೊಗಲಾಸ ಮ್ಯಾಕಾರ್ಥರ ಇವರ ಹೆಸರುಗಳನ್ನು ಇಲಿನೊಯಿಯ ಪ್ರಾಥಮಿಕ ಮತಗಣನೆ ಸೂಚಿಸಿ, ಅರ್ಜಿ ಕೊಡಲಾಯಿತು ಎಪ್ರಿಲ ೧೧ನೇ ತಾರೀಖಿನ ದಿವಸ ಮತಗಣನೆ ನಡೆಯಲಿದ್ದು ಅದು ಸಲಹೆ ಸ್ವರೂಪದ್ದಿರುವದು. ಇಲ್ಲಿನೊಯಿಯ ಪ್ರತಿನಿಧಿಗಳಿಗೇನೂ ಅದು ಬಂಧನಕರ ವಿರುವದಿಲ್ಲ. ಅರ್ಜಿ ಕೊಡಲು ಉಮೇದುವಾರರ ಸಮ್ಮತಿ ಪಡೆದು ಕೊಳ್ಳುವ ಅವಶ್ಯವಿಲ್ಲ. ಫೆಬ್ರುವರಿ ೨೬ ರೊಳಗಾಗಿ ಅವರು ತಮ್ಮ ಹೆಸರು ಹಿಂತೆಗೆದುಕೊಳ್ಳಬಹುದಾಗಿದೆ.

ಮಿಡ್ನಾಪುರದಲ್ಲಿ ೧೩ಸಾವಿರ ಜನರ ಮರಣ

೧೯೪೨ನೇ ಇಸವಿ ಅಕ್ಟೋಬರ ತಿಂಗಳಲ್ಲಿ ಮಿಡ್ನಾಪುರ ಮತ್ತು ೨೪ ಪರಗಣೆ ಜಿಲ್ಲೆಗಳಲ್ಲುಂಟಾದ ಬಿರುಗಾಳಿಯಿಂದ ೧೩೭೬೩ ಜನರು ಮರಣ ಹೊಂದಿದರು. ಹಾಗೂ ೭೫೦೩೩ ದನಕರುಗಳು ಸತ್ತವು ೩ ಕೋಟಿ ರೂಪಾಯಿ ಬೆಲೆ ಬಾಳುವ ಪೈರು ಪಚ್ಚೆ ನಾಶವಾಯಿತು. ನಾಡಿನ ಮತ್ತು ಅಮ್ಲುಕ್ ಸಬ್ ಡಿವ್ಹಿಜನ್‌ದಲ್ಲಿ ಎಲ್ಲ ಅಕ್ಕಿ ಗಿರಣಿಗಳು ನೆಲಸಮವಾದವು. ಬಿದ್ದ ಮನೆಗಳ ಸಂಖ್ಯೆ ೩,೩೪,೧೫೨

೧೯೪೩ನೇ ಅಕ್ಟೋಬರ ೧ನೇ ತಾರೀಕಿನವರೆಗೆ ಸರಕಾರವು ಪರಿಹಾರಕ್ಕಾಗಿ ಒಟ್ಟು ೩ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆ. ಮನೆಗಳನ್ನು ಕಟ್ಟಲು ಸಾಲ, ಒಕ್ಕಲತನಕ್ಕಾಗಿ ಸಾಲ, ಬಾವಿ, ಕೆರೆಗಳನ್ನು ಅಗೆಯಲು ಹಾಗು ಸಾಂಕ್ರಾಮಿಕ ರೋಗಗಳನ್ನು ತಡೆಯಲು ಈ ಹಣವನ್ನು ಉಪಯೋಗಿಸಲಾಗಿದೆ.

ಸರ್ವ ಸಾಧಾರಣವಾಗಿ ಬಿರುಗಾಳಿಯು ೩,೦೬೯ ಚದರ ಮೈಲು ಪ್ರದೇಶದ ವರೆಗೆ ಬೀಸಿ ವ್ಯಾಪಿಸಿತು. ೨೨ ಲಕ್ಷ ಜನರು ಮನೆ ಮಠ ಕಳಕೊಂಡವರು" ಎಂದು ಬಂಗಾಳದ ಕಂದಾಯ ಮಂತ್ರಿ ಶ್ರೀ ತಾರಕನಾಥ ಮುಖರ್ಜಿಯವರು ವಿಧಿಮಂಡಲದಲ್ಲಿ ಹೇಳಿದ್ದಾರೆ.

ಇಟಲಿಯಲ್ಲಿ ಜರ್ಮನರ ಸಾಹಸ?

ಅಂಝಿಯೋ ತಾಣೆಯ ಪ್ರದೇಶದಲ್ಲಿ ಮಿತ್ರ ದಂಡುಗಳು ಶತ್ರು ಪ್ರತಿ ಹಲ್ಲೆಯನ್ನು ಎದುರಿಸಿ ಶತ್ರುಗಳಲ್ಲಿ ಅನೇಕರನ್ನು ಸೆರೆ ಹಿಡಿದುವು. ಅಮೇರಿಕನ ಸೈನಿಕರು ಮುನ್ನುಗ್ಗಿ ಪಕ್ಕದ ಕಾಂಪೋಲಿಯೊ ಮತ್ತು ಸಿಸ್ಟರ್ನಾ ರಸ್ತೆಯ ಎರಡು ನಗರಗಳನ್ನು ವಶಮಾಡಿಕೊಂಡರು.

ಮಿತ್ರರ ತಾಣೆಗಳನ್ನು ಮುರಿಯಬೇಕೆಂದು ಜರ್ಮನರು ಪ್ರಯತ್ನ ಮಾಡುತ್ತಿದ್ದಾರೆ. ಹಿಟ್ಲರ ಪಾಂಜರ ದಳಗಳು ಇದೇ ರಂಗದಲ್ಲಿ ಹೋರಾಡುತ್ತಿವೆ.

ಅಂಝಿಯೋ ದುರ್ಗದ ತಾಣೆಯಲ್ಲಿ ಆಂಗ್ಲೋ—ಅಮೇರಿಕನ್ ದಂಡುಗಳು ಜರ್ಮನರನ್ನು ಚನ್ನಾಗಿ ಪ್ರತಿಭಟಿಸಿದವು. ಕ್ಯಾಸಿನೋದ ಉತ್ತರ ಮತ್ತು ಪಶ್ಚಿಮದಲ್ಲಿ ಅಮೇರಿಕನ್ ಸೇನೆಗೆ ಪಕೇಪ ಲಾಭವಾಗಿದೆ. ಅಮೇರಿಕನ ದಳಗಳು ಮುನ್ನುಗ್ಗಿ ಎರಡು ನಗರಗಳನ್ನು ಸ್ವಾಧೀನ ಮಾಡಿಕೊಂಡರೆಂದು ಮಿತ್ರಕಚೇರಿಯ ಪ್ರಕಟನೆಯಿಂದ ತಿಳಿಯುತ್ತದೆ.

ಇನ್ನೇ ಪಲವಿರುವ ಕ್ಯಾಸಿನೋ ವ್ಯೂಹದಲ್ಲಿ ಘೋರ ಯುದ್ಧ ನಡೆದಿದೆ. ನಗರದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಮಿತ್ರ ಸೇನೆಗಳು ಮುಂದೆ ಸಾಗಿವೆ. ಅಂಝಿಯೋ ದುರ್ಗದ ತಾಣೆಯಲ್ಲಿ ಜರ್ಮನರ ಉಗ್ರ ಪ್ರತಿಭಟನೆಯನ್ನು ಎದುರಿಸಿ ಮಿತ್ರರು ಅನೇಕರನ್ನು ಸೆರೆ ಹಿಡಿದಿದ್ದಾರೆ. ಅಮೇರಿಕನ ದಳವು ಮುನ್ನುಗ್ಗಿ ಸಿಸ್ಟರ್ನಾ ರೋಡ ಮತ್ತು ಕಾಂಪೋಲಿಯೋನೆ ನಗರಗಳನ್ನು ವಶಮಾಡಿಕೊಂಡಿವೆ.

ಮಧ್ಯಮ ಗಾತ್ರದ ಬಾಂಬರ ವಿಮಾನಗಳು ಓರ್ಟೆಯಲ್ಲಿರುವ ರೈಲ್ವೆ ಅಂಗಣ ಹಾಗು ಸೇತುವೆಯ ಮೇಲೆ ಮತ್ತು ಪೆಸ ಕಾರ್ಟೆಯ ರೈಲ್ವೆ ಜಂಕ್ಷನದ ಮೇಲೆ ಧಾಳಿ ಮಾಡಿದವು. ರೋಮಿನ ಉತ್ತರ ಮತ್ತು ದಕ್ಷಿಣ ಮಾರ್ಗಗಳ ಮೇಲೆ ಲಾಯಿಟ ಬಾಂಬರ ವಿಮಾನಗಳು ಧಾಳಿ ನಡೆಯಿಸಿದವು. ಮುಖ್ಯ ಠಾಣೆಯ ಮೇಲೆ ಪಾಳಿಗಳು ಭದ್ರವಾಗಿ ಕಾಯ್ದುಕೊಂಡಿದ್ದವು. ಇಟಲಿಯ ನೈಋತ್ಯ ಕರಾವಳಿಯಲ್ಲಿಯ ಕ್ಯಾಂಪಿನೋ ಬಂದರದ ಹಡಗಗಳ ಮೇಲೆಯೂ ಮಧ್ಯಮ ಗಾತ್ರದ ವಿಮಾನಗಳು ಧಾಳಿ ಮಾಡಿದವು.

ಈ ಹೋರಾಟಗಳಲ್ಲಿ ಶತ್ರುವಿನ ೧೦ ವಿಮಾನಗಳು ನಾಶವಾಗಿವೆ. ಮಿತ್ರರ ೧೦ ವಿಮಾನಗಳು ಕಣ್ಮರೆಯಾಗಿವೆ.

ವಾರ್ಡನ್ ವಿಮಾ ಕ್ಷೇತ್ರದಲ್ಲಿ
ಉತ್ಸಾಹೀ ಜನರಿಗೆ ಅನೇಕ
ಲಾಭದಾಯಕ ಸುಸಂಧಿಗಳು

ವಾರ್ಡನ್ ವಿಮಾ ಕಂಪೆನಿಯು ತನ್ನ ಕಾರ್ಯಕ್ಷೇತ್ರವನ್ನು ಮದ್ರಾಸ್ ಸಂಸ್ಥಾನ, ಹೈದರಾಬಾದ್ (ಡೆಕ್ಕನ್) ಮತ್ತು ಸಿಲೋನಿನಲ್ಲಿ ವಿಸ್ತರಿಸಿರುವುದಲ್ಲದೆ ಇನ್ನು ಹತ್ತು ಹಲವು ಕೇಂದ್ರಗಳನ್ನು ಚೀಫ್ ಏಜಂಟರಿಗಾಗಿಯೂ,ಆರ್ಗನೈಸರರು ಮತ್ತು ಇನ್ಸ್‌ಪೆಕ್ಟರರಿಗಾಗಿಯೂ ಕಾದಿಟ್ಟಿರುತ್ತದೆ ಹತ್ತು ವರುಷಗಳಿಂದೀಚೆಗೆ ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಿ ಜನತೆಯ ಪ್ರೇಮಾದರಗಳನ್ನು ಪಡೆದ ಈ ಕಂಪೆನಿಯೊಡನೆ ಉತ್ಸಾಹಿ ಜನರು ಸಂಬಂಧ ಬೆಳೆಸಿ ಲಾಭದಾಯಕ ಕಾರ್ಯವನ್ನು ಕೈಗೊಳ್ಳಲು ಇದೀಗ ಸುವರ್ಣಸಂಧಿ.

ಇಂತಹ ಸುಯೋಗ ಪಡೆದು ಸುಖಜೀವನದಲ್ಲಿರಬೇಕೆಂದು ಬಯಸುವವರು ಈ ತನಕ ಯಾವುದೇ ಕಂಪೆನಿಯಲ್ಲಿ ಏಜನ್ಸಿ ಪಡೆದು ಕೃತಕೃತ್ಯರಾಗದೆ ನಿರಾಶೆ ಹೊಂದಿದವರು ಕೂಡಲೇ ಈ ಕಂಪೆನಿಯೊಡನೆ ಪತ್ರವ್ಯವಹಾರ ಮಾಡಿರಿ. ಕಂಪೆನಿಯ ಉತ್ಸಾಹೀ ಸುಪರಿಂಟೆಂಡೆಂಟರಾದ ಶ್ರೀ ಸುಂದರರಾಮ ಶೆಟ್ಟರು ಸದ್ಯ ನೇ ನಿಮ್ಮ ಪ್ರಾಂತ್ಯವನ್ನು ಸಂದರ್ಶಿಸಲಿರುವರು. ಸುಸಂಚಿತರಾದ ಅವರ ಆಗಮನದ ಸುಯೋಗವನ್ನು ಪಡೆಕೊಳ್ಳಬೇಡಿರಿ. ನಿಮ್ಮ ಪತ್ರ ತಲ್ಪಿದ ಕೂಡನೆ ಶ್ರೀ ಶೆಟ್ಟರು ಬರುವ ದಿನ, ತಂಗುವ ಸ್ಥಳ, ಭೆಟ್ಟಿಯಾಗತಕ್ಕ ಸಮಯ ಇತ್ಯಾದಿ ಮಾಹಿತಿಯನ್ನು ತಿಳಿಸಲಾಗುವುದು.

1943 ನೆ ಇಸವಿಯಲ್ಲಿ 71,00,000 ಎಪ್ಪತ್ತೊಂದು ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ.

ಇಂದೇ ಬರೆಯಿರಿ:
ದಿ ಮೆನೇಜಿಂಗ್ ಡೈರೆಕ್ಟರ್
ವಾರ್ಡನ್ ಇನ್ಶ್ಯೂರೆನ್ಸ್ ಕೊ. ಲಿ
ವಾರ್ಡನ್ ಹೌಸ್,
ಸರ್ ಫಿರೋಜ್ ಶಾ ಮೆಹತಾ ರೋಡ್,
ಫೋರ್ಟ್, ಬೊಂಬಾಯಿ.

ದಕ್ಷಿಣ ಕನ್ನಡ-

ಮಂಗಳೂರು

ಹಳ್ಳಿಯಿಂದ ಅಕ್ಕಿ ತರಿಸಲು ಪರ್ಮಿಟ್— ಮಂಗಳೂರು ಪಟ್ಟಣವಾಸಿಗಳು ಅವರ ಮನೆಯ ಉಪಯೋಗಕ್ಕಾಗಿ ಹಳ್ಳಿಗಳಿಂದ ಅಕ್ಕಿ ತರಿಸಬೇಕೆಂದಿದ್ದಾಗ ಅವರು ಶ್ರೀ| ವಕೀಲ್ ನರಸಪ್ಪಯ್ಯ ಅಥವಾ ಶ್ರೀ| ಕೆ. ಪಿ. ಟಿ. ಪ್ರಭು ಇವರಲ್ಲೊಬ್ಬರಿಗೆ ಅರ್ಜಿ ಕೊಟ್ಟು ಪರ್ಮಿಟುಗಳನ್ನು ತೆಗೆದುಕೊಳ್ಳಬಹುದು. ಅರ್ಜಿಯಲ್ಲಿ ವಾರ್ಡ್ ನಂಬ್ರ, ಯಾ ಹಳ್ಳಿಯ ಹೆಸರು, ಮನೆ ನಂಬ್ರ ಯಾ R. ನಂಬ್ರ, ಅರ್ಜಿದಾರನ ಹೆಸರು ಮತ್ತು ನಿಳಾಸ, ಮನೆಯಲ್ಲಿರುವ ಜನಸಂಖ್ಯೆ, ಬೇಕಾದ ಅಕ್ಕಿಯ ಪ್ರಮಾಣ, ಎಲ್ಲಿಂದ ಮತ್ತು ಯಾರಿಂದ ಅಕ್ಕಿ ಕೊಳ್ಳುವುದು, ಸ್ಪಷ್ಟವಾಗಿ ಬರೆಯಲ್ಪಟ್ಟಿರಬೇಕು.

ಶ್ರೀ. ಬಾಲಮಾರುತಿ ವ್ಯಾಯಾಮ ಮಂಡಲ— ಇದರ ೧೬ನೇ ವಾರ್ಷಿಕೋತ್ಸವವು ಶ್ರೀ| ಧರ್ಮಸ್ಥಳ ಮಂಜಯ್ಯ ಹೆಗ್ಡೆ, ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿಗಳಿಂದ ನಾನಾ ತರದ ವ್ಯಾಯಾಮ ಪ್ರದರ್ಶನಗಳಿದ್ದುವು. ಬಳಿಕ ಮಹನೀಯರ ಭಾಷಣ, ಬಹುಮಾನ ವಿತರಣೆ, ಧ್ವಜವಂದನೆ, ಅಧ್ಯಕ್ಷ ಭಾಷಣಗಳಾಗಿ ವಂದನಾರ್ಪಣೆಯಿಂದ ಉತ್ಸವ ಕೊನೆಗೊಂಡಿತು.

ಶಾಲಾ ವರ್ಧಂತಿ— ಮಂಗಳೂರು ಬಿ. ಇ. ಎಂ. ಸೆಕೆಂಡರಿ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವು ಕಳೆದ ಆದಿತ್ಯವಾರ ಸಂಜೆ ಶ್ರೀ. ಕೆ| ಬಿ| ವಗ್ಗೀಸರ ಅಧ್ಯಕ್ಷತೆಯಿಂದ ನೆರವೇರಿತು. ಸ್ವಾಗತ ಗೀತವಾದ ಮೇಲೆ ಶ್ರೀ| ಶ್ರೀನಿವಾಸರಾಯರು ಶಾಲಾ ಸ್ವಸ್ತಿ ವಾಚನ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ| ಎಸ್| ಎ| ಫರ್ಟಾಡೋರವರು ಶಾಲಾ ವರದಿಯನ್ನೋದಿದ ತರುವಾಯ ಬಹುಮಾನ ವಿತರಣೆಯಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ಚಟುವಟಿಕೆಗಳನ್ನು ಕೊಂಡಾಡಿದರು. ಕೊನೆಗೆ ಶಾಲಾ ಮುಖ್ಯೋಪಾಧ್ಯಾಯರು ಧನ್ಯವಾದಗಳನರ್ಪಿಸಿದ ಮೇಲೆ ವಿವಿಧ ವಿನೋದಾವಳಿಗಳಿತ್ತು.

ಮಹಾ ಸಭೆ— ಶಿಕ್ಷಕ ಕುಲೋದ್ಧಾರಕ ಸಂಘದ ವಾರ್ಷಿಕ ಮಹಾಸಭೆಯು ಶ್ರೀ| ಕೆ| ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ. ೩೦ರಂದು ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಕಾಮ್ರೇಡ್ ಕೇಸರಿ ಕೇಶವನಿಗೆ ವಿದ್ಯಾರ್ಥಿ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಲು ಬಂದ ಕಾಮ್ರೇಡ್ ಕೇಸರಿ ಕೇಶವನಿಗೆ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಸಂಘದವರು ಒಂದು ಸತ್ಕಾರ ಕೂಟವನ್ನೇರ್ಪಡಿಸಿದರು. ಶ್ರೀ| ಕೃಷ್ಣಪ್ಪಯ್ಯ ಇವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ 'ವಿದ್ಯಾರ್ಥಿಗಳೂ ರಾಜಕೀಯವೂ' ಎಂಬ ಕುರಿತು ಮಾತನಾಡಿದರು. ನೇಶನಲ್ ವಾರ್ ಫ್ರಂಟಿನ ಶ್ರೀಮತಿ ನಾಗೇಶರಾಯರೂ ವಿದ್ಯಾರ್ಥಿಗಳಿಗೆ ಉಪದೇಶವಿತ್ತರು. ಆ ಮೇಲೆ ಅಧ್ಯಕ್ಷರು ಮಾತನಾಡಿ ಮಂಗಳೂರಿನಲ್ಲಿ ತಾನು ವಿದ್ಯಾರ್ಥಿಯಾಗಿರುವಾಗ ಇದ್ದ ಸಂಘಟನೆಯ ಕುರಿತು ತಿಳಿಸಿ ಇದೀಗ ಬಂಗಾಳದ ವಿದ್ಯಾರ್ಥಿಗಳ ಮುಂದೆ ನಡೆಯುತ್ತಿರುವುದು ಹೇಳುತ್ತಾ, ಇಂದು ಅಪ್ರಾಗತಿಕ ಧೋರಣೆಯ ರಾಜಕೀಯ ಪಕ್ಷಗಳು ವಿದ್ಯಾರ್ಥಿ ಸಂಘದಲ್ಲಿ ಒಡಕು ಹುಟ್ಟಿಸಿವೆಯೆಂದು ತಿಳಿಸಿ ಈ ಸಲ ನಡೆದ ಸಮ್ಮೇಳನವು ಸರಿಯಾದ ಪ್ರಾತಿನಿಧಿಕವಲ್ಲವೆಂದು ಹೇಳಿ ಇನ್ನು ಮುಂದಾದರೂ ವಿದ್ಯಾರ್ಥಿಗಳು ಒಗ್ಗಟ್ಟಾಗಿ ಕೆಲಸಮಾಡಬೇಕೆಂದರು.

ಅನಂತರ ಸೈಂಟ್ ಎಲೋಶಿಯಸ್ ಕಾಲೇಜ್ ಹಾಸ್ಟೆಲಿನಲ್ಲಿ ಕಾಮ್ರೇಡ್ ಕೇಸರಿ ಕೇಶವನವರು 'ವಿದ್ಯಾರ್ಥಿಗಳೂ ಧರ್ಮವೂ' ಎಂಬ ಕುರಿತು ಮಾತನಾಡಿ, ಧರ್ಮದ ನಿಜವಾದ ತತ್ವ ಪ್ರಚಾರವಾಗಬೇಕಾದರೆ ಕಮ್ಯೂನಿಸಂ ಪ್ರಚಾರವಾಗದೆ ನಿರ್ವಾಹವಿಲ್ಲವೆಂದು ತಿಳಿಸಿದರು.

ಸಂಜೆ ಮಂಗಳೂರು ಕಮ್ಯೂನಿಸ್ಟ್ ಪಕ್ಷದ ಸಭೆಯಲ್ಲಿ ಮಾತನಾಡುತ್ತಾ, ವಿದ್ಯಾರ್ಥಿಗಳನ್ನು ಕಮ್ಯುನಿಸ್ಟ್ ಪಕ್ಷದ ವಿದ್ಯಾರ್ಥಿಗಳು ಸಂಘಟಿಸಬೇಕೆಂಬ ಕುರಿತು ಉಪದೇಶವಿತ್ತರು. ಆ ಮೇಲೆ ಪತ್ರಿಕೋದ್ಯೋಗಿ ಸಂಘದ ಕಚೇರಿಯಲ್ಲಿ ಮಂಗಳೂರು ಪೀಪ್‌ಲ್ಸ್ ಥಿಯೇಟರಿನ ಆಶ್ರಯದಲ್ಲಿ ಶ್ರೀ| ರಂ|ರಾ| ಶಿಲ್ಲೇರಿಕರರ ಅಧ್ಯಕ್ಷತೆಯಿಂದ ಪೀಪ್‌ಲ್ಸ್ ಥಿಯೇಟರ್ ಚಳವಳಿಯ ಕುರಿತು ಮಾತನಾಡಿದರು.

ಅನಂತರ ಬಿಸೆಂಟ್ ಬಾಲಿಕಾ ಶಾಲೆಯಲ್ಲಿ 'ಸ್ತ್ರೀಯರೂ ಅವರ ಹಕ್ಕುಗಳೂ' ಎಂಬ ಕುರಿತು ಮಾತನಾಡಿದರು. ಮಹಿಳಾ ಸೇವಾಶ್ರಮದಲ್ಲಿಯೂ ಅವರ ಒಂದು ಭಾಷಣವಿತ್ತು. ತಾ. ೩ರಂದು ಬೆಳಿಗ್ಗೆ ಅವರು ಮೈಸೂರಿಗೆ ಹಿಂತೆರಳಿದರು.

ನೇಮಕ— ಶ್ರೀ| ಬಿ| ಆನಂದ ಬಾಳಿಗರು ನಿವೃತ್ತರಾದ ಮೇಲೆ ತಿನ್ನವೆಲ್ಲಿ ಖಜಾನೆ ಡಿಪ್ಯುಟಿ ಕಲೆಕ್ಟರರಾಗಿ ನೇಮಕ ಹೊಂದಿದ್ದಾರೆ.

ಉಡುಪಿ.

ಶ್ರೀ ನಿಡ್ಲೋಣಿ ಅನಂತ ಉಪಾಧ್ಯಾಯರು-ಮಂಗ್ಳೂರಿನ ಸೇಂಟ್ ಎಲೋಸಿಯಸ್ ಕಾಲೇಜಿನ ನಿವೃತ್ತ ಸಂಸ್ಕೃತ ಅಧ್ಯಾಪಕ ಶ್ರೀ ನಿಡ್ಲೋಣಿ ಅನಂತ ಉಪಾಧ್ಯಾಯರು ಇದೇ ಕಳೆದ ಮಾಘ ನವಮೀ ಸಂಬಂಧ ಭಂಡಾರಿಕೇರಿಯಲ್ಲಿ ನಡೆದ ಶ್ರೀ ಭಂಡಾರಿಕೇರಿ ಶ್ರೀ ಮಠದ ಶ್ರೀಪಾದಂಗಳವರ ನೇತೃತ್ವದ ಈ ವರ್ಷವೇ ಆರಂಭವಾದ ನೂತನ ಸಭೆಗೆ ಶ್ರೀಗಳವರ ಆಮಂತ್ರಣದ ಮೇರೆಗೆ ತೆರಳಿ ಅಲ್ಲಿ ಇತರ ಭಾಷ್ಯಗಳೊಡನೆ ಶ್ರೀಮನ್ಮಧ್ವಾಚಾರ್ಯರು ರಚಿಸಿದ ಭಾಷ್ಯಕ್ಕೇನೇ ಉತ್ತಮತ್ವವನ್ನು ರಮ್ಯ ಸರಸವಾಣಿಯಿಂದ ಸಂಯುಕ್ತಿಕವಾಗಿ ಉಪನ್ಯಾಸ ಮಾಡಿ ಶ್ರೀ ಭಂಡಾರಿಕೇರಿ ಶ್ರೀಗಳವರುಗಳಿಂದ ಸಂಭಾವನೆಯನ್ನು ಹೊಂದಿ ಉಡುಪಿಗೆ ಬಂದು ಶ್ರೀ ಸೋದೆ ವಾದಿರಾಜ ಮಠದ ಶ್ರೀಗಳವರಿಂದ ಸ್ಥಾಪಿತವಾದ ಶ್ರೀಮಧ್ವ ನವಮೀ ಸಂಬಂಧದ ಸಭೆಯಲ್ಲೂ ವೇದವೇದಾರ್ಥ ವಿಚಾರವನ್ನು ವೈಜ್ಞಾನಿಕ ದೃಷ್ಟಿಯಿಂದ ವಿಮರ್ಶಿಸಿ ವಿದ್ವಜ್ಜನರನೇಕರ ಮನಸ್ಸಿಗೆ ಆಶ್ಚರ್ಯ ಸಂತೋಷವಾಗುವಂತೆ, ಭಾಷಣವನ್ನಿತ್ತು ಉಡುಪಿಯ ಅಷ್ಟಮಠದ ಶ್ರೀಪಾದಂಗಳವರಿಂದ ಸ್ಥಾಪಿತವಾದ S. M. S. P. ಕಾಲೇಜಿಯಲ್ಲಿಯೂ ಪಾಶ್ಚಾತ್ಯ ಪಂಡಿತರನೇಕರು ಮಾಡಿದ ವೇದ ವ್ಯಾಖ್ಯಾನಗಳನ್ನು ವಿಮರ್ಶಿಸಿ ವಿದ್ಯಾರ್ಥಿ ಬಾಲಕರಿಗೂ ಮನವಪ್ಪುವಂತೆ ಭಾಷಣವನ್ನಿತ್ತು ಮಂಗ್ಳೂರಿಗೆ ತೆರಳಿರುವರು.

ವರ್ಗಾವರ್ಗಿ--ಇಲ್ಲಿ ತಹಸೀಲ್ದಾರರಾಗಿದ್ದ ಶ್ರೀ ಕೇಶವ ಕುಸ್ವರಿಗೆ ರಿಪೆನ್ಯೂ ತಹಸೀಲ್ದಾರರಾಗಿ ಮಂಗಳೂರಿಗೂ, ಮಂಗಳೂರಿನ ರಿವೆನ್ಯೂ ತಹಸೀಲ್ದಾರರಾಗಿದ್ದ ಶ್ರೀ ಜೋಶ್ಯರು ತಹಸೀಲ್ದಾರರಾಗಿ ಇಲ್ಲಿಗೂ ವರ್ಗಾಯಿಸಲ್ಪಟ್ಟಿದ್ದಾರೆ.

ಬಡವರಿಗೆ ತಾತ್ಕಾಲಿಕ ರೇಷನಿಂಗ್:- ಇತ್ತೀಚೆಗೆ ಅಕ್ಕಿಯ ಕ್ರಯವು ಮಿತಿಮೀರಿ ಏರಿದುದರ ಪರಿಣಾಮದಿಂದ ಜನತೆಯಲ್ಲಿ ಕಳವಳ ಉಂಟಾಗದಂತೆ ವರ್ಗದಾರರು ಸಾಹುಕಾರರ ವಿನಃ ಇತರರಿಗೆ ತಾತ್ಕಾಲಿಕ ರೇಶನಿಂಗ್ ಕಾರ್ಡುಗಳು ಕೊಡಲಾಗಿವೆ. ಆದರೆ ರೇಷನಿಂಗ್ ಪ್ರಮಾಣವು ಮಾತ್ರ ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ ಎಂಬಂತೆ ಇದೆಯೆಂದು ನಗರದಲ್ಲೆಲ್ಲಾ ಕೂಗು ಕೇಳುತ್ತದೆ. ಅಕ್ಕಿ ಮಾರಾಟದ ಬಗ್ಗೆ ಆರು ಸಹಕಾರ ಡಿಪೋಗಳು ತೆರೆಯಲ್ಪಟ್ಟಿವೆ.

ಅಂಗಡಿಗಳಲ್ಲಿದ್ದ ಅಕ್ಕಿ ಸ್ವಾಧೀನ ಮಾಡಿಕೊಳ್ಳಲಾಯಿತು:-ಸಬ್ ಕಲೆಕ್ಟರ್ ಮಿ| ಸಾಥೆಯವರು ಕಳೆದ ಗುರುವಾರ ಇಲ್ಲಿಯ ಅಕ್ಕಿ ವಿಕ್ರಯದ ಅಂಗಡಿಗಳನ್ನು ಸಂದರ್ಶಿಸಿ ಸಾಧಾರಣ ಒಂದೂವರೆ ಸಾವಿರ ಮುಡಿ ಅಕ್ಕಿಗೆ ಮಟ್ಟುಗೋಲು ಹಾಕಿರುವರು. ಪರ್ಕಳ, ಬೆಳ್ಳೆ, ಬ್ರಹ್ಮಾವರ ಸೆಂಟರುಗಳಲ್ಲಿಯೂ ಅಕ್ಕಿ ಮುಡಿಗಳನ್ನು ಅಮಾನತು ಮಾಡಿರುವರಾಗಿ ವಾರ್ತೆ. ಅಕ್ಕಿ ವ್ಯಾಪಾರಿಗಳ ಸಭೆಯೊಂದು ಕಳೆದ ಗುರುವಾರ ಸಂಜೆ ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿ ಇಲಾಖಾ ಅಫೀಸರರು ನಿರ್ಣಯಿಸಿದ ಖಂಡಿತ ಕ್ರಯದಿಗೆ ಅಕ್ಕಿ ವಿಕ್ರಯಿಸುವೆವೆಂದು ವರ್ತಕ ಬಂಧುಗಳು ಆಶ್ವಾಸನೆ ಕೊಟ್ಟಿರುವರು. ಆದರೆ ಪೇಟೆಯಲ್ಲಿ ಮಾತ್ರ ಬಹಿರಂಗವಾಗಿ ಅಕ್ಕಿ ದೊರೆಯುವುದಿಲ್ಲ. ಬೆಳ್ತಿಗೆ ಅಕ್ಕಿ ಅಭಾವವು ಅಪ್ಪಿಷ್ಟೆಂದು ಹೇಳತೀರದು. ಅಧಿಕಾರಿಗಳು ಸಂಪೂರ್ಣ ಪ್ರಯತ್ನರಾಗದೆ ಅಕ್ಕಿ ಸರಾಗವಾಗಿ ಜನತೆಗೆ ದೊರೆಯುವ ಹಾಗಿಲ್ಲವೆಂದು ಜನರು ಹೇಳತೊಡಗಿರುವರು.

ಕಾಲಾಣೆ ವಸೂಲಿ ಮನ್ನಾ ಮಾಡಲಾಗಿಯದೆ--ಹೋಲ್‌ಸೇಲ್ ಸ್ಟೋರ್ಸಿನ ಡಿಪೋಗಳಲ್ಲಿ ರಿಕ್ವಿಜಿಶನ್ ಅಕ್ಕಿಯನ್ನು ಪಾವತಿ ಮಾಡುವಾಗ್ಗೆ ಅಕ್ಕಿ ಮುಡಿಗಳನ್ನು ಅತ್ತಿತ್ತ ಕೊಡಿಡವುದರ ಬಗ್ಗೆ ಮುಡಿ ಒಂದರ ಕಾಲಾಣೆಯಂತೆ ವಸೂಲು ಮಾಡುವುದನ್ನು ಕೆಲವು ದಿವಸಗಳಿಂದೀಚೆಗೆ ಮನ್ನಾ ಮಾಡಲಾಗಿಯದೆ, ಆದರೂ ಕೆಲವು ಡಿಪೋ ಏಜಂಟರು ಇನ್ನೂ ಈ ರೀತಿಯಲ್ಲಿ ಕಾಲಾಣೆಯಂತೆ ವಸೂಲು ಮಾಡುತ್ತಲೇ ಇರುವರೆಂದು ವಿಶ್ವಸನೀಯ ಸುದ್ದಿ. ಅಕ್ಕಿ ಮುಡಿಗಳನ್ನು ಸಲ್ಲಿಸುವವರು ಈ ಕಡೆ ನಿಗಾ ಕೊಡಬೇಕಾಗಿದೆ.

ವಿವಾಹ ಸಮಾರಂಭ—ಶ್ರೀ ಕೊಟ್ಟಾರ್ ಪದ್ಮನಾಭ ಪೈಗಳವರು ತಮ್ಮ ಪುತ್ರಿ ಶ್ರೀಮತಿ ಪ್ರೇಮಲತೆಯನ್ನು ಶ್ರೀ ಟಿ. ಉಪೇಂದ್ರ ಪೈಗಳವರ ಪುತ್ರ ಶ್ರೀ. ಟಿ. ಅನಂತ ಪೈಗಳವರಿಗೆ ತಾ 4ರಲ್ಲು ಬ್ರಹ್ಮಗಿರಿಯ ತಳಿರುತೋರಣ ವಿದ್ಯುದ್ದೀಪಗಳಿಂದಲಂಕೃತವಾದ ಭವ್ಯ ಮಂಟಪದಲ್ಲಿ ಊರ ಪರವೂರ ಗೃಹಸ್ಥ ಗೃಹಿಣಿಯರನೇಕರ ಸಮಕ್ಷಮ ಕನ್ಯಾದಾನ ಮಾಡಿದರು. ಜಿಲ್ಲಾ ಕಲೆಕ್ಟರ್, ಸಬ್ ಕಲೆಕ್ಟರ್, ಡಿ| ಮುನ್ಸೀಫ್ ಮೊದಲಾದ ಸರಕಾರೀ ಉದ್ಯೋಗಸ್ಥರು ವಿಶೇಷತಃ ಹಾಜರಿದ್ದರು. ನೂತನ ದಂಪತಿಗಳಿಗೆ ಶ್ರೇಯಸ್ಸನ್ನು ಕೋರಿಬಂದ ಶುಭ ಸಂದೇಶಗಳು 'ಲೌಡ್ ಸ್ಪೀಕರ್' ಮೂಲಕ ಓದಲಾಗಿತ್ತು. ವಧೂವರರಿಗೆ ವಿಶೇಷ ಉಡುಗೊರೆಗಳು ಊರುಪರವೂರುಗಳಿಂದ ಅಧಿಕ ಸಂಖ್ಯೆಯಲ್ಲಿ ಬಂದಿತ್ತು. ಮರುದಿನ ನಾಲ್ಕೈದು ಸಾವಿರ ಜನರಿಗೆ ತಾರತಮ್ಯವಿಲ್ಲದ ಘನತರ ಟೀಪಾರ್ಟಿಯಾಯಿತು. ಟೀಪಾರ್ಟಿ ಸಮಯದಲ್ಲಿ 'ಲೌಡ್ ಸ್ಪೀಕರ್' ಮೂಲಕ ಬೋರ್ಡ್ ಹೈಸ್ಕೂಲ್ ಹೆಡ್ಮಾಸ್ತರ್ ಮಿ| ಆರ್. ಫೆರ್ನಾಂಡೀಸರು ಜಾತಿ ಮತ ಬೇಧವಿಲ್ಲದೆ ಸರ್ವರೂ ಸಹಭಾಗಿಗಳಾದ ಈ ಆದರ್ಶ ಮದುವೆಯ ಮಹತ್ವವನ್ನು ಕೊಂಡಾಡಿ ವಧೂವರರನ್ನು ಆಶೀರ್ವದಿಸಿದರು. ಮದುಮಗ ಶ್ರೀ ಟಿ. ಅನಂತ ಪೈಗಳವರು ತನ್ನ ಮತ್ತು ತನ್ನ ಪತ್ನಿಯ ಪರವಾಗಿ ಧನ್ಯವಾದಗಳನ್ನಿತ್ತರು. ಇದೀ ಜಿಲ್ಲೆಯಲ್ಲಿ ಇದೊಂದು ಆದರ್ಶ ಮತ್ತು ವಿಜೃಂಭಣೆಯ ವಿವಾಹ ಸಮಾರಂಭವೆನ್ನಬಹುದು.

ಜವುಳಿ ವರ್ತಕರ ಸಭೆ:— ತಾ, 29-1-44ರಲ್ಲು ಜರಗಿದ ಉಡ್ಪಿ ಜವುಳಿ ವರ್ತಕರ ಸಂಘದ ಸಭೆಯಲ್ಲಿ 1944ನೆ ಯಿಸ್ವಿಗೆ ಶ್ರೀ ಜಮ್ನಾದಾಸ್ ನೇಲ್ಜಿ ಸೇಟ್ ಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಈಗ ಇರುವ ತಿಂಗಳ ಒಂದು ರಜೆಯ ಬದಲಿಗೆ ಇನ್ನು ಮುಂದೆ ತಿಂಗಳ ಕಡೇ ಆದಿತ್ಯವಾರ ಮತ್ತು ತಿಂಗಳ ಮಧ್ಯದ ಆದಿತ್ಯವಾರ ಹೀಗೆ ಎರಡು ದಿನವನ್ನು ರಜಾ ದಿನವಾಗಿ ಆಚರಿಸಲ್ಪಡುವದೆಂಬುದಾಗಿಯೂ ನಿರ್ಣಯಿಸಲಾಯಿತು. ಇದನ್ನು ಗಿರಾಕಿಗಳ ಅವಗಾಹನೆಗೆ ತರಬೇಕೆಂದಾಯಿತು.

ಬಾರಕೂರು—ಇತ್ತಲೂ ಆಸುಪಾಸಿನಲ್ಲಿಯೂ ಕೋಲೆರಾ ತಲೆದೋರಿದೆ. ಕೆಲವು ಮರಣಗಳೂ ಆಗಿವೆ.

ಇಲ್ಲಿಯ ಹಳ್ಳಿ ಖಾಸಗಿ ಶಾಲೆಯೊಂದಕ್ಕೆ ಯಾರೋ ಬೆಂಕಿ ಕೊಟ್ಟು ಸುಟ್ಟು ಹಾಕಿರುವರೆಂದೂ ಪೋಲೀಸ್ ತನಿಖೆ ನಡೆಯುತ್ತಿದೆಯೆಂದೂ ತಿಳಿದು ಬರುತ್ತದೆ.

ಕಾರ್ಕಳ— ಈ ತಾಲೂಕಿನಲ್ಲಿ ಅಲ್ಲಲ್ಲಿ ಜಾನುವಾರು ರೋಗವು ತಲೆದೋರಿರುವದರಿಂದ ತುಂಬಾ ಜಾನುವಾರುಗಳು ಮರಣ ಹೊಂದಿದವೆಂದೂ ವಾರ್ತೆ.

ಶಿಲೇಶ್ವರ—ಅಕ್ಕಿಯ ಪರಿಸ್ಥಿತಿ ಕೆಡುತ್ತಿದೆ. ಸೇರಿಗೆ ಏಳಾಣೆ ಕ್ರಯಕ್ಕೆ ಮಾರಾಟವಾಗುತ್ತಿದ್ದು ಬಡವರು ಇಲ್ಲಿ ಕಷ್ಟಕ್ಕೊಳಗಾಗಿದ್ದಾರೆ.

ಮದ್ಯದ ಅಂಗಡಿಗಳ ಏಲಂ— ಈಚೆಗೆ ನಡೆದ ಮದ್ಯದ ಅಂಗಡಿಗಳಲ್ಲಿ ಹಲವು ಕಳೆದ ವರ್ಷಕ್ಕಿಂತ ಬಹಳ ಹೆಚ್ಚಿನ ಮೊತ್ತಕ್ಕೆ ಹರಾಜಾಗಿವೆ. ಕೆಲವು ಅಂಗಡಿಗಳು ಕಳೆದ ಸಲಕ್ಕಿಂತ ಸುಮಾರು ೪-೫ ಪಾಲಷ್ಟು ಹೆಚ್ಚಿಗೆ ಮೊತ್ತಕ್ಕೇ ವಹಿಸಿಕೊಳ್ಳಲ್ಪಟ್ಟಿವೆ. ಸರಕಾರವು ಈ ವರ್ಷ ಹೆಚ್ಚಿಗೆ ಶರಾಬನ್ನು ಒದಗಿಸುವುದೆಂದು ಈ ರೀತಿಯ ಸ್ಪರ್ಧೆಯುಂಟಾಯಿತೆಂದು ತಿಳಿದುಬರುತ್ತದೆ. ಆದರೆ ಈಗ ತಾನೆ ಹೆಚ್ಚಿಗೆ ಶರಾಬು ಕೊಡಲು ಅಸಾಧ್ಯವೆಂದು ತಿಳಿದುಬಂದುದರಿಂದ ಅಂಗಡಿಗಳು ಪುನಃ ಏಲಂ ಆಗಬಹುದೆಂದೂ ಸುದ್ದಿ.

THE CANARA BANKING CORPORATION LIMITED.

(Incorporated in British India with Limited Liability)

ESTD. 1906

Head Office: **UDIPI**, S. Kanara.

NOTICE.

The Ordinary Annual Meeting of the shareholders of the Corporation will be held at its Registered Office at Udipi on Sunday the 27th February 1944 at 2 P. M. to transact the following business:

1 To receive, consider and adopt the Directors Report and the Balance Sheet as at 31—12—1943 and the Profit & Loss Statement for the year 1943 with the Auditors' Certificate.

2 To declare a dividend

3 To elect 4 Directors in place of,

1 Dr. U. Sunder Ram Pai, B. A. & M. B. & B. S.

2 Sri Kochikar Padmanabha Pai, B. A.

3 Sri M. Narayana Kamath, B. A.

4 Sri U. K. Bhujanga Nayak,

who retire by rotation but are eligible for re-election (under Articles Nos. 105, 106 & 107)

4 To appoint an Auditor or Auditors for the year 1944 and fix the amount of his or their remuneration. (The last year's Auditors are eligible for re-election and are willing to accept the Office.)

5 To fix the remuneration of Directors for attending the meetings of the Board of Directors or Committees. (under Article no. 92.)

It is requested that you will be kind enough to attend the meeting. If it should be inconvenient for you to attend the meeting in person, you may appoint another shareholder of the Corporation as your proxy.

The proxy form should be duly filled in and stamped with 2 one anna revenue stamps, bear your signature and should be deposited at the Registered Office of the Bank by 2 P. M. on 24—2—1944.

N. B.—The Register of Members and Transfer Books of the Corporation will remain closed from 14—2—1944 to 27—2—1944, both days inclusive.

(By Order of the Board)

Office of the Corporation
Udipi, 27th January, 1944

(*Sd*) **V. R. Kamath,**
Manager.

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಲನ, ಮಂಗಳೂರು.

ಪ್ರತಿನಿಧಿ ಶುಲ್ಕ:— ಇದೇ ಫೆಬ್ರವರಿ ತಾ. ೧೯ ಮತ್ತು ೨೦ರಲ್ಲಿ ಮದ್ರಾಸಿನ "ಸ್ವದೇಶ ಮಿತ್ರನ್" ಪತ್ರಿಕೆಯ ಸಂಪಾದಕರಾದ ಶ್ರೀ| ಸಿ. ಆರ್. ಶ್ರೀನಿವಾಸನ್ ಅವರ ಅಧ್ಯಕ್ಷತೆಯಲ್ಲಿ, ಜರಗಲಿರುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಲನಕ್ಕೆ ಬಂದು, ಸಮಾರಂಭಗಳಲ್ಲಿ ಭಾಗವಹಿಸುವ ಕರ್ನಾಟಕದ ವಿವಿಧ ಭಾಗಗಳ ಪ್ರತಿನಿಧಿಗಳು ಪ್ರತಿನಿಧಿಶುಲ್ಕ ಒಂದು ರೂಪಾಯಿಯನ್ನೂ ಅವರು ಅಧಿವೇಶನದ ಮುಂದಿಡಲು ಇಚ್ಛಿಸುವ ನಿರ್ಣಯಗಳಿದ್ದರೆ ಅವುಗಳನ್ನೂ ಫೆಬ್ರವರಿ ತಾ. ೧೫ರೊಳಗೆ ಸಮ್ಮೇಲನದ ಸ್ವಾಗತ ಸಮಿತಿಯವರಿಗೆ ಕಳುಹಿಸಿಕೊಡಬೇಕೆಂದು ವಿನಂತಿ. ಬರುವ ಪ್ರತಿನಿಧಿಗಳ ಊಟ-ವಸತಿಯ ಏರ್ಪಾಡನ್ನು ಸ್ವಾಗತ ಸಮಿತಿಯವರೇ ಮಾಡುವರು.

ವಿಚಾರ-ವಿನಿಮಯ-ಸಮನ್ವಯ ಕೂಟ:—ಸಮ್ಮೇಲನದ ಸಮಯದಲ್ಲಿ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಒಂದು ಸಮನ್ವಯ-ವಿಚಾರ ವಿನಿಮಯ ಕೂಟವನ್ನು (Symposium) ಜರಗಿಸಲು ನಿರ್ಧರಿಸಿದ್ದೇವೆ. "ಕನ್ನಡ ಲಿಪಿ ಸಂಸ್ಕರಣ"; ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಯ ಹಾದಿಗಳನ್ನು ಹುಡುಕುವುದಕ್ಕಾಗಿ ಪತ್ರಿಕೋದ್ಯಮದಲ್ಲಿ ಪ್ರಾವೀಣ್ಯ"; ಮತ್ತು ಕನ್ನಡ ಪತ್ರಿಕೋದ್ಯಮದ ಸುವ್ಯವಸ್ಥಿತ ಬಾಳ್ವೆಗಾಗಿ "ಪತ್ರಿಕೋದ್ಯೋಗಿ-ಸಂಪಾದಕ-ಮುದ್ರಕ- ನಿರ್ಮಾಪಕ--ಯಜಮಾನ ಇವರೊಳಗಿನ ಸೌಹಾರ್ದಿಕ ಸಂಬಂಧ"— ಈ ಮೂರು ವಿಷಯಗಳ ಮೇಲೆ ಕೆಲ ಬಲ್ಲಿದರ ನೇತೃತ್ವದಲ್ಲಿ ವಿಚಾರವಿನಿಮಯ ಮಾಡುವುದಕ್ಕೂ ಅವುಗಳಿಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳನ್ನು ತರ್ಕಿಸುವುದಕ್ಕೂ ಒಂದೊಂದು ಸಮನ್ವಯ ಕೂಟವನ್ನು ಏರ್ಪಡಿಸಲಾಗಿದೆ. ಈ ಕೂಟದಲ್ಲಿ ಭಾಗ ವಹಿಸಲಿಚ್ಛಿಸುವವರು ತಾವು ಸೂಚಿಸಬಹುದಾದ ವಿಷಯಗಳ ಸಂಕ್ಷಿಪ್ತ ವರದಿಯನ್ನು ನಾಲ್ಕೆಂಟು ದಿನ ಮುಂಚಿತವಾಗಿಯೇ ನಮಗೆ ತಿಳಿಸಿದರೆ ಚರ್ಚೆಯ ಸಮಯದಲ್ಲಿ ತಮಗೆ ಮಾತನಾಡುವ ಅವಕಾಶವನ್ನೊದಗಿಸಲು ಅನುಕೂಲವಾಗುವುದು. ಈ ವಿಚಾರಕೂಟದಲ್ಲಿ ರೂಪಿತವಾದ ನಿರ್ಣಯಗಳನ್ನು ಸಮ್ಮೇಳನದಲ್ಲಿ ಕೆಲ ಗೊತ್ತುವಳಿಗಳಾಗಿ ಮುಂಡಿಸಬೇಕೆಂಬುದೇ ನಮ್ಮ ಉದ್ದೇಶ.

ಪತ್ರಿಕಾ ಪ್ರದರ್ಶನ:—ಸಮ್ಮೇಲನದ ಸಮಯದಲ್ಲಿ ಏರ್ಪಡಿಸಲಾಗುವ ಪತ್ರಿಕಾ ಪ್ರದರ್ಶನಕ್ಕೆ ಈಗಾಗಲೇ ಹಲವು ಪತ್ರಿಕೆಗಳು ಬಂದಿವೆ ಉಳಿದಿರುವ ಎಲ್ಲಾ ರೀತಿಗಳ ಪತ್ರಿಕೆಯವರು ತಮ್ಮ ಅನುದಿನದ ಮತ್ತು ವಿಶೇಷ ಸಂಚಿಕೆಗಳನ್ನು, ಕರ್ನಾಟಕ ಪುರಾತನ ಪತ್ರಿಕೆಗಳ ಮಾಹಿತಿ ಮುಂತಾದುವನ್ನೂ ಆದಷ್ಟು ಬೇಗನೆ ಒದಗಿಸಿ ಕೊಟ್ಟು ಪ್ರದರ್ಶನವನ್ನು ಯಶಸ್ವಿಗೊಳಿಸುವುದರಲ್ಲಿ ಸಹಕರಿಸಬೇಕೆಂದು ನಮ್ಮ ಕೋರಿಕೆ.

ಅಧ್ಯಕ್ಷ, ಸ್ವಾಗತ ಸಮಿತಿ.

ಪ್ರಕಟಣೆ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 6/1944

1 ದೇವಕಿ ಶ್ರೀ ಕುಂದರ-2, 3ನೇಯವರ ಮಗ, 2 ಯಶಿಕೆಂಪಿಲ್ ಕುಂದರ, 3 ಶಾಂತಿ-2ನೇಯವ 1, 4ರಿಂದ 6ರ ವರೇಗಿನವರ ತಂದೆ; 3ನೇಯವಳು ಸದ್ರಿಯವರ ತಾಯಿ, 4 ರಾಜೀವ ಕುಂದರ, 5 ಮುತ್ತಣ್ಣ, 6 ರಮಣಿ-2, 3ನೇಯವರ ಮಕ್ಕಳು; 1ರಿಂದ 4ರ ವರೇಗಿನರು ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದಲ್ಲಿಯೂ, 5ನೇಯವಳು ಚಿ| ಬಡಗಬೆಟ್ಟು ಗ್ರಾಮದ ಮಿಶ್ಯನ್ ಕಂಪೌಂಡ್ ಬಳಿಯಲ್ಲಿಯೂ, 6ನೇಯವಳು ಮೂಡಬೆಟ್ಟು ಗ್ರಾಮದಲ್ಲಿಯೂ ಇರುವವರು— ಅರ್ಜಿದಾರರು.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನಂದ್ರೆ—

ಮೇಲ್ಕಂಡ ಅರ್ಜಿದಾರ್ರ ಪೈಕಿ 2. 3ನೇಯವರ ಮಗನ 1 ಮತ್ತು 3ರಿಂದ 6ರ ವರೇಗಿನವರ ಸಹೋದರ— ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದಲ್ಲಿ ತಾ. 24-10-43ರಲ್ಲು ಮೃತಪಟ್ಟರುವ ಆನಂದ ಕುಂದರನು ವಿಜಯ ಬೇಂಕ್ ಲಿಮಿಟೆಡ್ ಉಡುಪಿ-ಯವರಲ್ಲಿ ಸೇವಿಂಗ್ಸ್ ಬೇಂಕ್ ನಂಬ್ರ 82ನೇಗೆ ಡಿಪೋಜಿಟು ಇಟ್ಟಿರುವ ರೂ. 372-5-7ನ್ನು ಪಡೆಯುವರೆ 1ನೇ ಅರ್ಜಿದಾರನ ಹೆಸರಲ್ಲಿ ಸಂದು ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅಪೇಕ್ಷಿಸಿ ಮಾಡಿದ ಅರ್ಜಿ. ತಾ. 17-2-1944ಕ್ಕೆ ತನ್ಕಿಗೆ ಇಟ್ಟಿದೆ. ಸದ್ರಿ ಅರ್ಜಿಯಲ್ಲಿ ಯಾರಾದರೂ ಆಕ್ಷೇಪವುಳ್ಳವರು ಆ ದಿವ್ಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ವಾಬೀರು ಮಾಡಿಕೊಳ್ಳಬಹುದು.

ಉಡುಪಿ, ತಾ 5-2-1944 | K. Ramakrishna Rao, Vakil for Petitioners

ಪ್ರಕಟಣೆ.

ಕುಂದಾಪುರ ತಾಲೋಕ ಕಂಬದ ಕೋಣೆ ಗ್ರಾಮದ ಹಳಗೇರಿ ಕೋಣಿ ಮನೆಯಲ್ಲಿರುವ ಗರ್ಡಿಮನೆ ಮಂಜಮ್ಮ ಸೆಡ್ತಿರ ಮಗಳು ಚಿಕ್ಕಮ್ಮ ಸೆಡ್ತಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದ್ರೆ:—ನನಗೆ ವ ನನ್ನ ತಮ್ಮನ್ಯೆನರ ಮಹಾಬಲಗೆ ಕೂಡಾ ನನ್ನ ಅಜ್ಜ ಹೆಗ್ಡೆ ಶೇಶೆಟ್ರು ತಾರೀಕು 6-1-12ರಲ್ಲು ಬೈಂದೂರು. ಸ. ರಿ. ಆ. 1ನೇ ಪುಸ್ತಕದ. 155ನೇ ಸಂಚಿಕೆಯ 497-500ನೆ ಪುಟಗಳಲ್ಲಿ ನಂಬ್ರ 57/1912ನೇಗೆ ರಿಜಿಸ್ತ್ರ ವ್ಯವಸ್ಥಾಪತ್ರ ಬರಶಿಕೊಟ್ಟಿರುತ್ತಾರೆ ಸದ್ರಿ ಶೇಶೆಟ್ರು ಕೆಲವು ಸಮಯಗಳಿಂದ ಕಾಹಿಲೆಯಲ್ಲಿದ್ದು ತಾ 6-11-1943ರಲ್ಲು ಮೃತ ಪಟ್ಟಿರುತ್ತಾರೆ. ಅವರು ಮರಣ ಪಟ್ಟ ನಂತ್ರ ಅವರು ಬರದಿಟ್ಟ ವ್ಯವಸ್ಥಾ ಪತ್ರ ಪ್ರಕಾರ ಅವರ ಸ್ಥಿರಾಸ್ತಿ ಚರಾಸ್ತಿಗಳಿಗೆ ನಾನು ವ ಸದ್ರಿ ಮಹಾಬಲ ಕೂಡಾ ಹಕ್ಕುದಾರರಾಗಿರುತ್ತೇವೆ, ಸದ್ರಿ ಸ್ಥಿರ ಚರಸೊತ್ತುಗಳ ಆಡಳ್ತೆ ನೋಡಲಿಕ್ಕೆ ಸದ್ರಿ ವ್ಯವಸ್ಥಾಪತ್ರ ಪ್ರಕಾರ ನಾನು ಅರ್ಹಳಾಗಿರುತ್ತೇನೆ ಸದ್ರಿ ಶೇಶೆಟ್ಟರು ಮೃತ ಪಟ್ಟನಂತ್ರ 1944ನೇ ಜನವರಿ ತಿಂಗಳ ಕುಂದಾಪುರ ತಾಲೋಕ ಕಾಲ್ತೋಡ ಗ್ರಾಮದ ಶ್ಯಾನುಭಾಗ ರಾಮರಾಯರು. ಕಂಬದ ಕೋಣೆಗ್ರಾಮದ ಹಳಗೇರಿ ಗೊಮೆಬೆಟ್ಟನಾಗಿ ಸೆಡ್ತಿರ ಮಗ ನನ್ನ ವಿರುದ್ಧ ಕುಟುಂಬದ ದಾಯಾದಿ ಅಣ್ಣಪ್ಪ ಶೆಟ್ಟಿ ಸದ್ರಿ ಹೆಗ್ಡೆ ಶೇಶೆಟ್ರು ಮಗ ಮುಕ್ಕ ಗೋವಿಂದ ಶೆಟ್ರು ಸಹ ಸದ್ರಿ ಶೇಶೆಟ್ರು ಹೆಸರು ಪಟ್ಟೆಯನ್ನು ನನ್ನ ಹೆಸರಿಗೆ ತಬದಿಲು ಆಕಬೇಕೆಂತ ನನಗೆ ಹೇಳಿ ಅವರ ಮೇಲೆ ನನಗೆ ವಿಶ್ವಾಸ ಹುಟ್ಟುವ ಹಾಗೆ ಮಾಡಿ ನನ್ನಿಂದ ಸದ್ರಿ ಶೇಶೆಟ್ರು ಬರೆದಿಟ್ಟ ವ್ಯವಸ್ಥಾ ಪತ್ರ ವ. ಪಕ್ಲುಗಳ ಮೂಲಗೇಣಿ ವ ಚಾಲಗೇಣಿ ಯದ್ರುನುಡಿಗಳು ವಗೈರೆ ರಿಕಾರ್ಡುಗಳು ಸದ್ರಿ ಶೇಶೆಟ್ರ ವಿಕ್ಷ ರಿಕಾರ್ಡುಗಳನ್ನು ಪಡಕೊಂಡದ್ದಲ್ಲದೆ ಖಾಲಿ ಅರ್ಧ ತಾಂವ್ರು ಕಾಗದಕ್ಕೆ ನನ್ನ ಎಡಗೈ ಹೆಬ್ಬೆಟ್ಟ ಮೊಹರು ಬೇಕೆಂತ್ರ ಹೇಳಿ ಪಡಕೊಂಡು ವಜೆಡುಹೋಗಿರುತ್ತಾರೆ. ಅದ್ರಲ್ಲಿ ಅವರು ಪಟ್ಟೆ ತಬ್ದೀಲಿ ಸಮಂದವಾಗಿ ಯಾವ ರಿಕಾರ್ಡು ಮಾಡಿದ್ದಾಗಿ ಕಂಡು ಬರುವದಿಲ್ಲ. ಅವರು ಯಾ ಬೇರೆ ಯಾರೂ ಸದ್ರಿ ಕಾಗದದ ಮೇಲೆ ಯಾವ ರಿಕಾರ್ಡು ಮಾಡಿದರೂ ಅದ ನನಗೆ ಬಾಧಿಸತಕ್ಕದ್ದಲ್ಲ. ಮತ್ತು ಯಿನ್ನು ಮುಂದೆ ನಾನು ಮಾಡುವ ಯಾವ ರಿಕಾರ್ಡು ಆದರೂ ನನ್ನ ಎಡಗೈ ಹೆಬ್ಬೆಟ್ಟ ಮೊಹರು ವ, ನನ್ನ ಗಂಡ ಗೋವಿಂದ ಶೆಟ್ರ ಸಾಕ್ಷಿ ವಿನಹಾ ಮಾಡುವದಿಲ್ಲ ಯಿದಕ್ಕೆ ವಿರೋಧವಾಗಿ ಯಾರಾದ್ರೂ ಯಾವ ರಿಕಾರ್ಡು ಮಾಡಿದರೂ ಅದು ಮಂಜೂರು ಆಗತಕ್ಕದ್ದಲ್ಲ ವ ನನಗೆ ವಿರೋಧವಾಗಿ ಬಾಧಿಸತಕ್ಕದ್ದಲ್ಲಾ ಎಂಬ ಸಂಗ್ತಿ ಈ ಮೂಲ್ಕ ಸರ್ವ ಜನರಿಗೆ ತಿಳಿಯ ಪಡಿಸಿರುತ್ತೇನೆ.

|| ಈ ಎರಡುಗೆರೆ ಮತ್ತು ಈ ಎಡಗೈ ಹೆಬ್ಬೆಟ್ಟ ಮುದ್ರೆ ಚಿಕ್ಕಮ್ಮ ಸೆಟ್ತಿರದು. ಸದ್ರಿಯವಳ ಗಂಡ ಗೋವಿಂದ ಶೆಟ್ಟಿ ಸಾಕ್ಷಿ.

ತಾರೀಕು. 3-2-44 | ಕಂಬದ ಕೋಣೆ



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಕಲ್ಯಾಣಪುರ ಸೊ ಮಿಲ್ಸ್, ಕಲ್ಯಾಣಪುರ— ದ. ಕನ್ನಡ

ಇಲ್ಲಿ ಸುಲಭ ಗದರಲ್ಲಿ, ಬೇಕಾದ ನಮೂನೆಯಲ್ಲಿ ಎಲ್ಲಾ ತರದ ಮರವನ್ನು ಬಹು ಶೀಘ್ರವಾಗಿ ಸಿಗಿದು ಕೊಡಲಾಗುವುದು.

ಎಂತಹ ಮರವನ್ನಾದರೂ ತಡೆಬಿಡುವಿಲ್ಲದೆ ಗರಗರನೆ ಸಿಗಿಯುವ ಮಿಲ್ [illegible] ಕೆಲಸವು ಬಹುಸುಲಭವಾಗಿಯೂ ನಾಜೂಕಾಗಿಯೂ ಸಾಗುವುದು.

ಗ್ರಾಹಕರಿಗೆ ಸರ್ವಾನುಕೂಲತೆಗಳನ್ನು ಒದಗಿಸಲಾಗುವುದು.

ವಿಶೇಷ ಮಾಹಿತಿಗೆ ಬರೆಯುವುದು ಯಾ ಮುಖತಃ ಮಾತನಾಡುವುದು.

ಮೆನೇಜರ್

KALLIANPUR SAW MILLS.
Kallianpur Post. S. K.

THE BEST PREVENTIVE IN EPIDEMICS OF CHOLERA

"BHUVANENDRA"

CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920.)

Registered Office. Court Road UDIPI South Canara District

Business Offices Udipi, Mangalore, Katapadi, Kanhangad and Kinnigoli, South Canara

Authorised and Issued Capital	Rs	2,00 000/-
Subscribed and Paid up Capital.	Rs	2,00,000/-
Reserve Funds:	Rs	1,75,853/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty three years' reliable banking service stands to our credit.

For further particulars please call at or apply to the nearest office.

Dated 31-10-1943

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

THE VIJAYA BANK, LTD.,

Head office: MANGALORE.

Glad to announce that a Branch of the Bank has been opened at PUTTUR on 21-1-1944.

ನಮ್ಮ ಬ್ಯಾಂಕಿನ ಶಾಖೆಯೊಂದು ತಾ. 21-1-44 ರಲ್ಲಿ ಪುತ್ತೂರಿನಲ್ಲಿ ತೆರೆಯಲ್ಪಟ್ಟಿರುತ್ತದೆ.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.



ನಮ್ಮ ಸುವರ್ಣೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ

ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2—8—0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವುವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. N.M. 3618.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೨೪

FOUNDER
Sri. A. B. Shetty.

Vol. 24
No. 24

NAVAYUGA— Kannada Weekly —UDIPI, S. I.

ಉಡುಪಿ 17—2—1944 ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.

ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)

ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ. 1-12-0. ಟ. ಖ. 0-4-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ನಾಡ ಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಿರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ

ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,

ಅನುವಾದಕರು:— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0—14—0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ನಾಡ ಲಾಗುವದು.

ನವಭಾರತ ಪುಸ್ತಕ ಭಂಡಾರ.
ಉಡುಪಿ.

Lest History Should Repeat Itself

"I am the monarch of all that I survey" that was Alexander the Great who said it. He had conquered all the lands that he had known and seen and brought the Greek Empire to the zenith of its glory and power. But his sudden death in the prime of his life brought about the fall of that vast Empire and to-day Greece itself has lost even its freedom.

You are the monarch of your family and are solely responsible for its present and future status and lest History should repeat itself you should insure your life.

The Canara Mutual Assurance Co., Ltd.,

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸವಿಾಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ ಕನ್ನಡ.)

ಶಾಖಾ ಕಚೇರಿಗಳು:— ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋ ... ಮ್ಲ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದು ದದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಅಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಸ್ಟೋರ್ಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurv da Oush alaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಜಗ್ಗುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕ್ಯಾಟಲಾಗಿಗೆ ಬರೆದಲ್ಲಿ ತಕ್ಕವಾದ ಔಷಧಿ ಆರಿಸಿ ತರಿಸಿಕೊಳ್ಳಬಹುದು.

ಕೆಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

... ಏಜಂಟರು:. ನವಭಾರತ ಬುಕ್ ಡಿಪೋ ಕಂತೆಕಟ್ಟೆ ಉಡುಪಿ.

ದಿಲ್ಲಿಯಲ್ಲಿ ಸರ್ವ ಪಕ್ಷೀಯ ಪರಿಷತ್ತು.

ಪಂಡಿತ ಮದನ ಮೋಹನ ಮಾಲವೀಯವರು ಸದ್ಯದ ಪರಿಸ್ಥಿತಿಯನ್ನು ಸುಧಾರಿಸಲು ಒಮ್ಮತದಿಂದ ಯಾವ ಉಪಾಯಗಳನ್ನು ಕೈಗೊಳ್ಳುವುದು ಸಾಧ್ಯವಿದೆ ಎಂಬುದನ್ನು ಚರ್ಚಿಸುವುದಕ್ಕಾಗಿ ಬರುವ ತಿಂಗಳಲ್ಲಿ ದಿಲ್ಲಿಯಲ್ಲಿ ಸರ್ವಪಕ್ಷೀಯ ಪರಿಷತ್ತು ಸೇರಿಸಲು ನಿರ್ಧರಿಸಿದ್ದಾರೆ.

ಈ ಸಂಬಂಧವಾಗಿ ಅವರ ಮಗ ಪಂಡಿತ ರಾಧಾಕಾಂತ ಮಾಲವೀಯವರು ದಿಲ್ಲಿಗೆ ಬಂದಿದ್ದು ಅಸೆಂಬ್ಲಿ ಸದಸ್ಯರೊಡನೆ ವಿಚಾರ ವಿನಿಮಯ ಮಾಡಿದ ನಂತರ ಕೆಳಗಿನಂತೆ ಪ್ರಕಟಣೆ ಹೊರಡಿಸಿರುವರು.

ಈಗಿನ ಸ್ತಂಭಿತ ಪರಿಸ್ಥಿತಿಯನ್ನು ಕಂಡು ಮನಸ್ಸಿಗೆ ವೇದನೆಯಾಗುವದರಿಂದ ಮತ್ತು ಹಲವು ಪ್ರಮುಖರ ಪ್ರೇರಣೆಯಿಂದ ನನ್ನ ತಂದೆ ಪಂಡಿತ ಮದನ ಮೋಹನ ಮಾಲವೀಯರು ಪರಿಸ್ಥಿತಿಯನ್ನು ಸುಧಾರಿಸುವ ಕುರಿತು ಯೋಜನೆ ಮಾಡಲು ಸರ್ವಪಕ್ಷೀಯ ಪರಿಷತ್ತು ಕರೆಯಲು ನಿರ್ಧರಿಸಿದ್ದಾರೆ. ಅವರೀಗ ಅಲಹಾಬಾದದಲ್ಲಿರುವದರಿಂದ ಅಲ್ಲಿಯೇ ಈ ಪರಿಷತ್ತನ್ನು ಕರೆಯಬೇಕೆಂಬ ಆಲೋಚನೆ ಇತ್ತು. ಆದರೆ ಕೇಂದ್ರ ಶಾಸನ ಸಭಾ ಸದಸ್ಯರಿಗೆ ಅನುಕೂಲವಾಗಬೇಕೆಂದು ಹೊಸದಿಲ್ಲಿಯಲ್ಲಿಯೇ ಮಾರ್ಚ ತಾ. ೮ರಿಂದ ೧೦ರ ವರೆಗೆ ಕರೆಯಬೇಕೆಂದು ಈಗ ನಿರ್ಣಯಿಸಲಾಗಿದೆ, ಡಾ। ಜಯಕರ, ಸರ್ ಹೋಮಿ ಮೋದಿ, ಸರ್ ಪುರುಷೋತ್ತಮದಾಸ ಠಾಕೂರದಾಸ ಶ್ರೀ ಭೂಲಾಭಾಯಿ ದೇಸಾಯಿ ಮೊದಲಾದವರ ಸಹಕಾರವನ್ನು ಪಡೆಯಲು ನಾನು ಮುಂಬೈಗೆ ಹೋಗುವವನಿದ್ದೇನೆ. ವಿವಿಧ ಪಕ್ಷಗಳ ಸುಮಾರು ೫೦ ಜನ ಪ್ರಮುಖರಿಗೆ ಆಮಂತ್ರಣಗಳನ್ನು ಕಳಿಸಲಾಗುವದು. ಪರಿಷತ್ತು ಮಧ್ಯಾಹ್ನ 4ರಿಂದ 7-30 ಗಂಟೆಯ ವರೆಗೆ ಸೇರಲಿರುವದು.

ತಂದೆಯವರ ಪ್ರಕೃತಿ ಸುಧಾರಿಸಿದೆ. ಅಲಹಾಬಾದದಲ್ಲಿ ಇನ್ನೂ 15 ದಿನಗಳ ವರೆಗೆ ಇದ್ದು ನಂತರ ಈ ತಿಂಗಳ ಕೊನೆಯಲ್ಲಿ ದಿಲ್ಲಿಗೆ ಹೊರಡಲು [illegible] ಜನರು [illegible] ಕಂಡು ಮಾತಾಡಿ [illegible] ಪ್ರವಾಸದ ಶ್ರಮವನ್ನು ಅವರು ಸಹಿಸಿಕೊಳ್ಳಬಲ್ಲರು.

ಪ್ರಕಟಣೆ

P. M. Kunhi Raman, Manager,
Parassini Madappura Temple,
P O Parassinikkatavu
(Via) Pappinisseri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ--

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಒಂದು ಹರಿಕೆ ಕಾಣಿಕೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಸ್ತುಗಳನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸಿ ರಸೀದಿ. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್,
ಮೆನೇಜರ್.

ದಿಲ್ಲಿಯಲ್ಲಿ ಸರ್ವ ಪಕ್ಷೀಯ ಪರಿಷತ್ತು!

ಬಿಕ್ಕಟ್ಟು ನಿವಾರಣೆಗೆ ಬ್ರಿಟನದ ನವೀನ ಯೋಜನೆ

ಬಿಕ್ಕಟ್ಟು ನಿವಾರಣೆಗೆ ಬ್ರಿಟನದ ನವೀನ ಯೋಜನೆ.

ಬ್ರಿಟನದ ಹಿಂದುಸ್ಥಾನ ಧೋರಣೆಯನ್ನು ತಿರುಗಿ ವಿಮರ್ಶಿಸಲಾಗುವದೆಂದೂ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ಹೊಸ ಪ್ರಯತ್ನಗಳನ್ನು ಮಾಡಲಾಗುವದೆಂದೂ ಇತ್ಯಾದಿ ಸುದ್ದಿಗಳು ಇನ್ನೂ ಹಬ್ಬಿವೆ.

ಹಿಂದುಸ್ಥಾನದ ಪರವಾಗಿ ಹೊಸ ಯೋಜನೆಯನ್ನು ನಿರ್ಧರಿಸುವ ಬಗ್ಗೆ ಮತ್ತು ಜಪಾನದ ವಿರುದ್ಧ ಬೇಗನೆ ಕೈಕೊಳ್ಳುವ ಘೋರ ಧಾಳಿಯಲ್ಲಿ ಹಿಂದುಸ್ಥಾನದ ಸಂಪೂರ್ಣ ಸಹಕಾರವನ್ನು ಪಡೆಯುವ ಬಗ್ಗೆ ಚರ್ಚಿಲ್ಲರು ಇತ್ತೀಚಿಗೆ ಸ್ವದೇಶಕ್ಕೆ ಹಿಂತಿರುಗಿ ಬಂದ ಮೇಲೆ ಮಂತ್ರಿಮಂಡಳದ ಸದಸ್ಯರೊಡನೆ ವೈಯುಕ್ತಿಕವಾಗಿ ಮಾತುಕತೆ ನಡಿಸಿರುವರೆಂದೂ ತಿಳಿದು ಬಂದಿದೆ.

ಈ ಕೆಳಗಿನ ಮೂಲಭೂತ ತಳಹದಿಯ ಮೇಲೆ ಹೊಸ ಯೋಜನೆಗಳನ್ನು ತಯಾರಿಸಲಾಗಿದೆಯೆಂದು ನಂಬಲಾಗಿದೆ.

1 ಮುಖಂಡರ ಬಿಡುಗಡೆಯಿಂದ ಯುದ್ಧ ಪ್ರಯತ್ನಕ್ಕೆ ಕಾಂಗ್ರೆಸ್ಸಿನ ಪೂರ್ಣ ಸಹಕಾರ ದೊರೆಯುವದರಲ್ಲಿ ಸಂದೇಹವಿಲ್ಲವೆಂದು ಹಿಂದುಸ್ಥಾನ ಸರಕಾರಕ್ಕೆ ಸಮಾಧಾನವೆನಿಸಿದರೆ ಬಿಡುಗಡೆಗಾಗಿ ಆಗಸ್ಟ ಠರಾವನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಬೇಕಾಗಿಲ್ಲ. 2. ಎಲ್ಲ ಪಕ್ಷಗಳಿಗೂ ಸಮ್ಮತವಾಗುವ ಘಟನೆಗನುಸಾರ ಯುದ್ಧಾನಂತರ ಸ್ವಾತಂತ್ರ್ಯ ಕೊಡಲಾಗುವದೆಂಬ ಬ್ರಿಟಿಷರ ಯೋಜನೆಯನ್ನು ಹಿಂದೀಯರು ಸ್ವೀಕರಿಸಬೇಕು. 3. ಯುದ್ಧ ಕಾಲದಲ್ಲಿ ನ್ಯಾಸರಾಯರಿಗೆ ಹೊಣೆಗಾರವಾದ ತಾತ್ಪೂರ್ತಿಕ ರಾಷ್ಟ್ರೀಯ ಸರಕಾರ ರಚಿಸಲ್ಪಡುವುದು. ಹಾಗೂ ಪ್ರಾಂತಗಳಲ್ಲಿ ಜನಪ್ರಿಯವಾದ ಪ್ರಾಂತಿಕ ಸರಕಾರಗಳ ಪುನಸ್ಥಾಪನೆಯನ್ನು ಮಾಡಲಾಗುವುದು.

ಶ್ರೀಮತಿ ಸರೋಜಿನಿದೇವಿಯವರ ಮೇಲಿನ ನಿರ್ಬಂಧದಿಂದ ಹೌಹಾರಿದರೂ ಮೇಲಿನ ಯೋಜನೆಗಳ ಮೇಲೆ ಈ ನಿರ್ಬಂಧದಿಂದ ಯಾವ ಪರಿಣಾಮವೂ ಆಗಲಾರದೆಂದೂ ವಸಂತಮಾಸದಲ್ಲಿ ಸಾಮಂತ ರಾಜ್ಯಗಳ ಪ್ರಧಾನರ ಸಭೆಗೂಡುವ ಕಾಲಕ್ಕೆ ಸರಿಯಾಗಿ ಈ ಯೋಜನೆಗಳನ್ನು ಮುಂದಿಡಬಹುದೆಂದೂ ಗೊತ್ತಾಗಿದೆ.

ಹಿಂದುಸ್ಥಾನದ ಆರ್ಥಿಕ ಪುನರ್ರಚನೆಗೆ ಅನುಕೂಲವಾದ ರಾಜಕೀಯ ವಾತಾವರಣವು ಅವಶ್ಯವೆಂದು ಮನಗಾಣಲಾಗಿದೆ ಈ ಪರಿಸ್ಥಿತಿಯು ತಲೆ ಎತ್ತಬಹುದೆಂದು ನಿರೀಕ್ಷಿಸಿ, ಬ್ರಿಟಿಷ ಉದ್ದಿಮೆಗಾರರ ಮತ್ತು ಬ್ಯಾಂಕರರ ಪ್ರತಿನಿಧಿಗಳನ್ನೊಳಗೊಂಡ ಒಂದು ಔದ್ಯೋಗಿಕ ಸಮಿತಿಯನ್ನು ಹಿಂದುಸ್ಥಾನಕ್ಕೆ ಕಳಿಸುವ ಯೋಜನೆಯೂ ಪರಿಪೂರ್ಣವಾಗಿದೆ. ಹಿಂದುಸ್ಥಾನದ ಸಾಮಾಜಿಕ ಭದ್ರತೆಗಾಗಿ ಹಿಂದೀಯರು ಮತ್ತು ಬ್ರಿಟಿಷರೊಳಗೆ ಸಹಕಾರವನ್ನುಂಟು ಮಾಡಲು ಇವರು ಯತ್ನಿಸುವರು. ಸರ್ ಜಾರ್ಜ ಶುಸ್ಟರ್‌ರವರು ಈ ಶಿಷ್ಟ ಮಂಡಳದ ಮುಖಂಡರಾಗುವರೆಂದೂ ತಿಳಿದುಬಂದಿದೆ.

ಮಾಲವೀಯರ ಸೂಚನೆಯ ಪರ್ಯಾಲೋಚನೆ.

ತಾ.11ರಲ್ಲಿ ಮಧ್ಯವರ್ತಿ ಅಸೆಂಬ್ಲಿಯ ರಾಷ್ಟ್ರೀಯ ಪಕ್ಷದ ಸದಸ್ಯರು ಕೂಡಿ ಸರ್ವ ಪಕ್ಷೀಯ ಸಮ್ಮೇಲನವನ್ನು ಕೂಡಿಸಬೇಕೆಂದು ಪಂಡಿತ ಮದನ ಮೋಹನ ಮಾಲವೀಯವರು ಮುಂದಿಟ್ಟ ಸೂಚನೆಯನ್ನು ಪರ್ಯಾಲೋಚಿಸಿದರೆಂದು ಗೊತ್ತಾಗಿದೆ. ಪಕ್ಷದ ಹೇಳಿಕೆಯ ಮೇರೆಗೆ ಜಾಯಿಂಟ್ ಸೆಕ್ರೆಟರಿಗಳಾದ ರಾಮರತ್ನ ಗುಪ್ತರವರು ಮುಂದಿನ ವಾರ ಅಲಹಾಬಾದದಲ್ಲಿ ಮಾಲವೀಯರನ್ನು ಕಂಡು ತಮ್ಮ ಪಕ್ಷದ ಅಭಿಪ್ರಾಯವನ್ನು ತಿಳಿಸುವರು. ಇದೇ ಸಂಬಂಧವಾಗಿ ಗುಪ್ತರವರು ಮುಂಬಯಿಗೂ ಪ್ರಯಾಣ ಬೆಳೆಸಲಿರುವರಂತೆ.

ಹೃದಯ ಪರಿವರ್ತನೆಯಾಗದೆ ಪಂಡಿತ ಮದನ ಮೋಹನ ಮಾಲವೀಯರು ಯೋಚಿಸುತ್ತಿರುವ ಪರಿಷತ್ತು ವ್ಯರ್ಥವೆಂದು ಮುಂಬಯಿಯ ಪ್ರಮುಖರನೇಕರು ಅಭಿಪ್ರಾಯಪಡುತ್ತಾರೆ.

WARDEN INSURANCE COMPANY LIMITED
INCORPORATED IN INDIA

1943ರಲ್ಲಿ ವಾರ್ಡನ್ ನವೋನ್ನತಿಯನ್ನು ಮುಟ್ಟಿದೆ.

ದಾಖಲೆಗೆ ಸೇರಿರುವ ಹೊಸ ವ್ಯವಹಾರವು ರೂ 71,00,000ಕ್ಕೆ ಮೀರಿದೆ.

ಇದು ವಾರ್ಡನ್ನಿನ ಪ್ರಗತಿಪರವಾದ ಕಳೆದ 10 ವರ್ಷಗಳ ದಾಖಲೆಯಲ್ಲಿ ಇತ್ತೀಚೆಗಿನ ಉತ್ಕೃಷ್ಟ ವಿಜಯವನ್ನು ಸೂಚಿಸುತ್ತದೆ.

ವಾರ್ಡನ್ನಿನ ಕಾರ್ಯಕ್ಷೇತ್ರದಲ್ಲಿ ನಿಷ್ಠೆಯಿಂದಲೂ ಉತ್ಸಾಹದಿಂದಲೂ ದುಡಿಯುತ್ತಿರುವ ನೌಕರ ದಳದ ಬೆಂಬಲದಿಂದಲೂ ವಾರ್ಡನ್ನಿನ ಶಕ್ತಿಸ್ಥಿರತೆಗಳಲ್ಲಿ ಮಹಾ ಜನರಿಗೆ ಉಂಟಾಗಿರುವ ಉತ್ತರೋತ್ತರ ವಿಶ್ವಾಸದಿಂದಲೂ ವಾರ್ಡನ್ ಈ 1943ರ ಅಸದೃಶ ವಿಜಯವನ್ನು ಹೊಂದಿರುತ್ತದೆ ಇಂತಹ ಯಶಸ್ಸನ್ನು ಸಂಪಾದಿಸಲು ದೇಶದ ಎಲ್ಲಾ ಕಡೆ ನೆರವಾದ ತನ್ನ ಪ್ರತಿನಿಧಿಗಳಿಗೂ ವಿಮಾ ಪತ್ರದಾರರಿಗೂ ವಾರ್ಡನ್ ತನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಮತ್ತು ಅಭಿನಂದನೆಗಳನ್ನು ಅರ್ಪಿಸುತ್ತದೆ.

1944ನೆಯ ಈ ವರ್ಷದಲ್ಲಿ **ವಾರ್ಡನು** ಮತ್ತೂ ಸಾಹಸಾತ್ಮಕವಾದ ವಿಸ್ತೃತ ಕಾರ್ಯಕ್ರಮದ ಯೋಜನೆಯನ್ನು ಈಗಾಗಲೇ ತಯಾರಿಸಿದೆ. ಪೌರ್ವಾತ್ಯ ದೇಶಗಳಲ್ಲಿ ಅತ್ಯಂತ ಯಶಸ್ವಿಯಾಗಿ ಶೀಘ್ರವಾಗಿ ಅಭಿವೃದ್ಧಿ ಹೊಂದುತ್ತಿರುವ ವಿಮಾ ಸಂಘಗಳಲ್ಲಿ ಒಂದಾಗಿರುವ ಈ ಕಂಪೆನಿಯ ಕಾರ್ಯಕ್ರಮದಲ್ಲಿ ಕೈಗೂಡಲು ಬಯಸುವವರಿಗೆ ಪ್ರವೇಶಕ್ಕೆ ವಿವಿಧ ಉತ್ಕೃಷ್ಟ ದ್ವಾರಗಳಿವೆ, ಇಂತಹ ವಿಶೇಷ ಸಂದರ್ಭದ ಕೂಲಂಕಷ ವಿವರಕ್ಕೆ ನೀವು ಬರೆದು ಶೀಘ್ರ ಕಾರ್ಯ ಪ್ರವೃತ್ತರಾದರೆ ನಿಮಗೆ ಉದಾರತೆಯುಳ್ಳ ಏಜನ್ಸಿ ಸೌಕರ್ಯಗಳು ನಿಮ್ಮನ್ನೇ ಕಾದು ಕೂತಿವೆ.

1943ರ ವಿಜಯವು ಹೊಸ ವ್ಯವಹಾರ ದೃಷ್ಟಿಯಿಂದ ಮಾತ್ರವಲ್ಲ,ಎಲ್ಲ ತರದ ಮಹತ್ತರ ಲಾಭದ ತುಲನಾತ್ಮಕ ದೃಷ್ಟಿಯಿಂದಲೂ

ಜೀವವಿಮೆ, ಅಗ್ನಿವಿಮೆ, ಅಘಾತವಿಮೆ

ಮುಂತಾದ ಎಲ್ಲ ರಾಖೆಗಳ ಶಕ್ತಿ ವೃದ್ಧಿ ದೃಷ್ಟಿಯಿಂದಲೂ ಮಹತ್ವದ್ದಿರುತ್ತದೆ.

ವಾರ್ಡನ್ ಇನ್ಸೂರೆನ್ಸ್ ಕಂ. ಲಿ.

ಚೇಯರ್‌ಮೇನರು:
ಸರ್. ಚಿನೂಭಾಯಿ ಮಾಧವಲಾಲ್.
ಮೆನೇಜಿಂಗ್ ಡೈರೆಕ್ಟರ್:
ಎಸ್. ಎಚ್. ಥಾಕರ್,
ಎಸ್‌ಕ್ವೈಯರ್

ವಾರ್ಡನ್ ಹೌಸ್,
ಸರ್. ಫಿರೋಜ್ ಷಾ,
ಮೆಹತಾ ರೋಡ್,
ಫೋರ್ಟ್ ಬೊಂಬೈ

(ಶಕ್ತಿ, ವೃದ್ಧಿಗಳಿಗೆ ವಿಚಾರ ದೃಷ್ಟಿಯಲ್ಲಿ ಪ್ರಸಿದ್ಧವಾದುದು.

ತಾರುಣ್ಯ

ಕೆಟ್ಟ, ವೀರ್ಯಸ್ಥಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಸಾಯನ ವಿಲಾಸಿನಿ** ಅತ್ಯುತ್ತಮ ಔಷಧಿ,
ಡಬ್ಬಿ 1ಕ್ಕೆ ರೂ. 1.
ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸ.
ಪುತ್ತೂರು ಏಜಂಟರು: – **ಸೈ ಫಾರ್ಮಸಿ**

ಟರ್ಕಿ ಮತ್ತು ಮಿತ್ರರೊಳಗೆ ಒಡಕು.

ಆಕ್ರಮಿತ ಇಟೆಲಿಯಲ್ಲಿ ಬದೊಗ್ಲಿಯೋ ರಾಜ್ಯಭಾರ

ಆಕ್ರಮಿತ ಇಟೆಲಿಯಲ್ಲಿ ಬದೊಗ್ಲಿಯೋ ರಾಜ್ಯಭಾರ.

ಮಿತ್ರ ಸೈನಿಕರು ಡೇರೆ ಹೊಡೆದಿರುವ ಭಾಗವನ್ನು ಬಿಟ್ಟು ಆಕ್ರಮಿತ ಇಟೆಲಿಯ ಮಿಕ್ಕ ಪ್ರದೇಶದಲ್ಲೂ ಮಿತ್ರ ಮಿಲಿಟರಿ ಆಡಳಿತೆಯು ತಾ. 11ಕ್ಕೆ ಕೊನೆಗೊಂಡಿತು. ಸಾಲೆರ್ನೋ, ಲಾಪೆಂಡೂಸಾ, ಬಾರಿ ಪ್ರಾಂತಗಳು ಹಾಗೂ ಸಿಸಿಲಿ ದ್ವೀಪ ಇತ್ಯಾದಿ ರಾಜ್ಯಭಾರ ಹೊಣೆಯನ್ನು ಬದೊಗ್ಲಿಯೋ ಸರಕಾರಕ್ಕೆ ಬಿಟ್ಟುಕೊಡಲಾಗಿದೆ. ಆದರೆ ಪಾಂಟೆಲೇರಿಯಾ, ಲಾಪೆಂಡೂಸಾ ಮತ್ತು ಲಿನೋಸ ದ್ವೀಪಗಳನ್ನು ಮಿತ್ರ ಮಿಲಿಟರಿ ಮಂಡಲವು ತನ್ನಾಧೀನವೇ ಇಟ್ಟುಕೊಂಡಿದೆ. ಅಂತೂ 1 ಕೋಟಿ ಜನ ಇಟಾಲಿಯನ್ ಸರಕಾರದ ಸಿಕ್ಕದರೆಂದು ಹೇಳಬಹುದು.

ಮಿತ್ರ ಮಿಲಿಟರಿ ಮಂಡಲದ ಉಪಾಧ್ಯಕ್ಷ ಮೇಜರ್ ಜನರಲ್ ಮೆಕ್‌ಫಾರಲನ್‌ರವರು ತಾ. 10ನೇ ರಾತ್ರಿ ಮೇಲಿನ ಘೋಷಣೆ ಮಾಡಿದರು. ಬದೊಗ್ಲಿಯೋ ಸರಕಾರಕ್ಕೆ ಈ ಆಡಳಿತೆಯನ್ನು ಬಿಟ್ಟುಕೊಡುವೆನೆಂದೂ ಪರಿಸ್ಥಿತಿ ಹದಗೆಟ್ಟರೆ ಪುನಃ ವಶಪಡಿಸಿಕೊಳ್ಳುವೆನೆಂದೂ ಅವರು ನುಡಿದರು. ಮಿತ್ರ ಮಂಡಲದ ಅಧಿಕಾರಿಗಳು ಇಟಾಲಿಯನ್ ಅಧಿಕಾರಿಗಳಿಗೆ ಉಚಿತ ಸಲಹೆಗಳನ್ನು ಕೊಡುವರಂತೆ. ಇಟಾಲಿಯನ್ ಆಡಳಿತೆಗಾರರು ಸಮರ್ಥರಾಗಿರುವರೆಂದು ಕಂಡುಬಂದರೆ ಸಲಹೆಗಾರರ ಸಂಖ್ಯೆಯನ್ನು ಕಡಿಮೆ ಮಾಡಲಾಗುವುದಂತೆ. ಮಿತ್ರರ ಮೇಲೆ ಸಹಾನುಭೂತಿಯಿದ್ದು ಅಧಿಕಾರಿಗಳನ್ನು ನೇಮಿಸತಕ್ಕದ್ದು ಹಾಗೂ ರೋಮ ನಗರದ ಮೇಲೆ ಇಂದಿನ ಆಡಳಿತಾ ಪದ್ಧತಿಗೆ ಮನ್ನಣೆ ಕೊಡುವೆವೆಂದು ಭರವಸೆ ಕೊಡಲಾರೆವು ಎಂಬ ಈ ಎರಡು ಶರ್ತುಗಳನ್ನಿಟ್ಟು ಅಧಿಕಾರ ಬಿಟ್ಟುಕೊಡಲಾಗಿದೆಯೆಂದೂ ಅವರು ಸೂಚಿಸಿದ್ದಾರೆ.

ಟರ್ಕಿ ಮತ್ತು ಮಿತ್ರರೊಳಗೆ ಬಿಕ್ಕಟ್ಟು.

ಟರ್ಕಿ ಹಾಗು ಮಿತ್ರರ ನಡುವೆ ಸಂಗು ತಿದ್ದ ಮಾತುಕತೆಗಳು ಟರ್ಕಿಯು ಯುದ್ಧ ಸಂಬಂಧವಾಗಿ ವಹಿಸಿದ ಧೋರಣೆಯಿಂದ ನಿಲ್ಲಿಸಲ್ಪಟ್ಟು ಮಿತ್ರರ ಸಂಗರ ನಿಯೋಗಿ ಮಂಡಲದ ಪ್ರಮುಖರಾ ಅಂಕಾರದಿಂದ ಮರಳಿದರು. ಆದ ಕಾರಣ ಟರ್ಕಿ ಮತ್ತು ಮಿತ್ರರ ನಡುವೆ ಬಿಕ್ಕಟ್ಟಾಯಿತೆಂದು ತಿಳಿದುಬಂದಿದೆ. ಅಡಾನಾ ಮತ್ತು ಕೈರೋದಲ್ಲಿ ನಡೆದ ಪರಿಷತ್ತುಗಳಲ್ಲಿ ಟರ್ಕಿಯೊಡನೆ ಮಿತ್ರರು ನಡೆಸಿದ ಮಾತುಕತೆಗಳು ಕೆಲವು ದೃಷ್ಟಿಗಳಿಂದ ಫಲದಾಯಕವಾಗಿದ್ದರೂ ಮಿತ್ರರು ದೂರ ದೃಷ್ಟಿಯಿಂದ ಎಣಿಸಿದ ಮುಖ್ಯ ಗುರಿಯು ಅದರಿಂದ ಸಿದ್ಧಿಸಲಿಲ್ಲ. ಪೋರ್ತುಗಾಲದೊಡನೆ ಆದ ಅಝೋರಿಸ್ ಒಪ್ಪಂದದ ಕರಾರುಗಳ ಶರ್ತಗಳಂತೆ ಟರ್ಕಿಯು ಮಿತ್ರರಿಗೆ ವೈಮಾನಿಕ ಕೇಂದ್ರಗಳನ್ನು ಬಿಟ್ಟುಕೊಡಬೇಕೆಂದು ಮಿತ್ರರು ಕೇಳಿದ್ದರು.

ಆದರೆ ಮುಖ್ಯವಾದ ನಾಲ್ಕು ವಿಷಯಗಳನ್ನು ಕುರಿತು ಮಿತ್ರರ ಹಾಗೂ ಟರ್ಕಿಯ ನಡುವೆ ಮತಭೇದವುಂಟಾಗಿದೆ. ಅವ್ಯಾವವೆಂದರೆ:—1. ಜರ್ಮನರು ಟರ್ಕಿಯ ಮೇಲೆ ಮಾಡಬಹುದಾದ ದಾಳಿಯಿಂದ ಟರ್ಕಿಗುಂಟಾಗುವ [illegible] ಪರಮಾವಧಿ ಮಿತಿ 2 ಟರ್ಕಿಯ [illegible] ನಗರಗಳನ್ನು [illegible] ಇಸ್ತಂಬೂಲ್‌ವನ್ನು ಸಂರಕ್ಷಿಸಿಕೊಳ್ಳಬ ಟರ್ಕಿಯು ಸಂರಕ್ಷಣೆಗೆ ಬೇಕಾಗುವ ದಾಳಿಗಳ ವಿಮಾನ ಮತ್ತು ವಿಮಾನ ವಿರೋಧಕ ತೋಪುಗಳ ಮಿತಿ, ೩ ಟರ್ಕಿಯ ತಾಟಸ್ಥ್ಯ ಧೋರಣೆ ಬದಲಾಗುವುದರಿಂದ ಅದರ ಸಂರಕ್ಷಣೆಯನ್ನು ಒಪ್ಪಿಸುವ ಬಗ್ಗೆ ಬೇಕಾದ ಯುದ್ಧ ಸಾಮಗ್ರಿಗಳ ಮಿತಿ ಹಾಗೂ [illegible] ರುವ ಟರ್ಕಿಯ ಬಲದ ಸಹಾಯದಿಂದ ಲೇ ಥ್ರೇಸ್‌ದಲ್ಲಿ ಸಂರಕ್ಷಕ ವ್ಯೂಹವನ್ನು ರಚಿಸಲು ಟರ್ಕಿಯ ನಿರಾಕರಣೆ.

ಜರ್ಮನರು ೧೨ ಸುಸಜ್ಜಿತ ಡಿವಿಜನ್‌ಗಳನ್ನು ಥ್ರೇಸ್‌ದ ಇರುಬಿನ ಸ್ಥಳದಲ್ಲಿಟ್ಟು ಹೋರಾಡಬಹುದೆಂದು ಟರ್ಕಿಯ [illegible] ಮತ.

ವಿಶ್ವಶಾಂತಿಗಾಗಿ ಶತಕೋಟಿ ಯಜ್ಞ.

ಡಿಲ್ಲಿಯಲ್ಲಿ ಯಮುನಾ ನದಿ ದಡದಲ್ಲಿ ಜನವರಿ ತಾ. 30ರಿಂದ ಇದೇ ತಾ. 9ರ ವರೆಗೆ ವಿಶ್ವಶಾಂತಿಗಾಗಿ 'ಶತಕೋಟಿ' ಯಜ್ಞವೊಂದು ನಡೆಯಿತು. ಭರತಖಂಡದ ಪಂಡಿತೋತ್ತಮರು ಈ ಯಜ್ಞದಲ್ಲಿ ಭಾಗವಹಿಸಿದ್ದರು. ಒಂದು ನೂರ ಒಂದು ಯಜ್ಞ ಕುಂಡಗಳು ಪ್ರಜ್ವಲಿಸುತ್ತಿದ್ದು ಸಾಧಾರಣ ಒಂದೂವರೆ ಸಹಸ್ರ ಬ್ರಾಹ್ಮಣರು ಈ ಸಮಯದಲ್ಲಿ ಮಂತ್ರಘೋಷಗಳನ್ನು ಮಾಡಿದರು. ಅಗ್ನಿ ಪ್ರಜ್ವಲನೆ ಬಗ್ಗೆ ಐದು ಸಹಸ್ರಮಣ (ಬಂಗಾಲಿಮಣ) ಕಟ್ಟಿಗೆಯು ಉಪಯೋಗಿಸಲ್ಪಟ್ಟಿತು.

ಕಾಸಿನೋ ನಗರದಲ್ಲಿ ಭೀಕರ ಕದನ

ಮಿತ್ರರ ಮೇಲೆ ಪ್ರತಿಧಾಳಿಯನ್ನು ಕೈಕೊಳ್ಳಲು ಮಾರ್ಶಲ್ ಕೆಸ್ಸಲರಿಂಗನು ಆರೇಳು ದಂಡುಗಳನ್ನು ಸಜ್ಜುಗೊಳಿಸಿರುವನು. ಇದರಲ್ಲಿ ಒಂದು ೫ನೇ ದಂಡು ಈ ದಳದ ಸೈನಿಕರು ಸಾಂಗ್ರೋ ಮತ್ತು ಒರ್ಟೋನಾ ಯುದ್ಧಗಳಲ್ಲಿ ಭಾಗವಹಿಸಿ ಬ್ರಿಟಿಷ ಎನೇ ದಂಡಿನ ಏಟಿಗೆ ಹಲ್ಲು ಮುರಿದುಕೊಂಡರು. ವಿಶ್ರಾಂತಿಗಾಗಿ ಆ ದಂಡನ್ನು ಹಿಂದಕ್ಕೆ ಕರೆಸಿಕೊಂಡಿದ್ದರು. ಈಗ ಪುನಃ ಈ ಸೈನಿಕರನ್ನು ಪುನರ್ಘಟಿಸಿ ಆಳಿದವರ ಸ್ಥಳಕ್ಕೆ ಹೊಸಬರನ್ನು ತುಂಬಿ ರಣರಂಗಕ್ಕೆ ಅಟ್ಟಿದಂತೆ ಕಾಣುತ್ತದೆ. ಕೆಸ್ಸಲರಿಂಗನು ಇನ್ನೂ ದೊಡ್ಡ ಪ್ರಮಾಣದ ಧಾಳಿ ಆರಂಭಿಸಲು ಮಿತ್ರ ವ್ಯೂಹದಲ್ಲಿ ಎಡೆಕೆಗಳನ್ನು ಕಾಣಲು ಇನ್ನೂ ಯುಕ್ತಿ ಯುಕ್ತಿ ಸುತ್ತಿರುವನು.

ಕಾಸಿನೋ ಯುದ್ಧವು ಆರಂಭವಾಗಿ ಹಲವು ಜರ್ಮನರು ನಗರದ ಬಹುಭಾಗವನ್ನೂ "ಅಬೆಲ್" ಎಂದು ಕರೆಯಲ್ಪಡುತ್ತಿರುವ ಗುರುಗಳ ಮಠವಿರುವ ಒಂದು ಉನ್ನತ ಗುಡ್ಡವನ್ನು ಆಕ್ರಮಿಸಿಕೊಳ್ಳಲು ಸಾಹಸಪಡುತ್ತಿದ್ದಾರೆ. ಕಾಸಿನೋ ನಗರದಲ್ಲಿ ಅನೇಕ ಸಂಖ್ಯೆ [illegible] ನಗಳನ್ನ ವಶಪಡಿಸಿಕೊಂಡರು. ಮನೆಯ ಪ್ರತಿಯೊಂದು ಕೋಣೆಯನ್ನೂ ವಶಪಡಿಸಿಕೊಳ್ಳಬೇಕಾದರೂ ಅಮೇರಿಕನರು ಬಡಿದಾಡಬೇಕಾಯಿತು. ಕಾಸ್ಟೆಲಫೋರ್ಟೆ ಭಾಗದಲ್ಲಿ ನಾಲ್ಕಾರು ಶತ್ರು ಸೈನಿಕರ ತಂಡವೊಂದನ್ನು ತಮ್ಮ ವ್ಯೂಹದೊಳಗೆ ಬಿಟ್ಟುಕೊಟ್ಟು ಕೊನೆಗೆ ಸೆರೆ ಹಿಡಿದರು.

ಪೋಪರ ಬಂಗಲೆಗೆ ಬಾಂಬು!

ಪೋಪರ ಬೇಸಿಗೆ ಕಾಲದ ಕಾಸಲ್ ಗಾಂಡಲ್ಫೋ ಮನೆಗೆ ತಾ. 11ರಲ್ಲಿ ಮಿತ್ರ ವಿಮಾನಗಳು ಬಾಂಬೆಸೆದವೆಂದು ವಾಟಿಕನ್ ರೇಡಿಯೋ ಸಾರಿದೆ.

ಅನೇಕ ಬಾಂಬುಗಳು ಮನೆಗೂ ಅದರ ಸುತ್ತಮುತ್ತಲೂ ಬಿದ್ದವು. ಪೋಪರ ಆಸ್ತಿಪಾಸ್ತಿಗೂ ಹಾನಿಯಾಗಿದೆ.

ಮಂಗಳೂರಲ್ಲಿ ಪ್ಲೇಗು:— ಮಂಗಳೂರು ನಗರದ ಬಂದರದಲ್ಲಿ ಪ್ಲೇಗು ಇದೆಯೆಂದು ತಿಳಿದು ಬಗದಿದೆ. ಈ ರೋಗವು ಹರಡದಂತೆ ಅದರ ನಿವಾರಣೆಗಾಗಿ ಈಗಾಗಲೇ ಯೋಗ್ಯ ಉಪಾಯಗಳನ್ನು ಕೈಕೊಳ್ಳಲಾಗಿವೆ. ಪ್ಲೇಗಿನ ಚಿಹ್ನೆಗಳಿವೆಯೆಂದು ಮುನ್ಸಿಪಲ್ ಆರೋಗ್ಯ ಶಾಖೆಯಿಂದ ಟಿಪ್ಪಣಿಸಿ ಪ್ರಚಾರಪಡಿಸಲ್ಪಟ್ಟಿದೆ. ಮುನ್ಸಿಪಲ್ [illegible] ಮನೆಗಳಿಗೆ ಹೋಗಿ [illegible] ಕಡೆಗೆ [illegible] ಕರು ತಂತಮ್ಮ [illegible] ತಿಳಿ [illegible] ಕಡೆಗೆ [illegible] ಕೊಟ್ಟು ಪ್ಲೇಗ್ [illegible] ಅಲ್ಲಿಂದಲ್ಲಿಗೆ [illegible] ಆರೋಗ್ಯ [illegible] ಸಹಕರಿಸುವುದು ಅತ್ಯಾವಶ್ಯಕ.

ಶ್ರೀ. ಕೆ. ಆರ್. ಕಾರಂತರು:— ಕಳದ 1[illegible] ತಿಂಗಳುಗಳಿಂದ ಕಾರಾಗೃಹವಾಸದಲ್ಲಿದ್ದ [illegible] ರುವ ಅವರ ತಾಯಿಯನ್ನು ನೋಡಿ ಬರುವ ಸಲುವಾಗಿ ಕೆಲವೇ ದಿವಸಗಳ ಮಟ್ಟಿಗೆ ಅವರನ್ನು ಬಂಧ ಮುಕ್ತಗೊಳಿಸಲಾಗಿಯದೆ.

ನೋಟೀಸು.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

O S No. 557/43

ಕಾಂತಪ್ಪ ಹೆಂಗ್ಸು ಕೂಡಾ — ವಾದಿರು ಮತ್ತು

ಮೋನಪ್ಪ ಶೆಟ್ಟಿ ಕೂಡಾ — ಪ್ರತಿವಾದಿರ.

1ನೇ ಪ್ರತಿವಾದಿ ಮೋನಪ್ಪ ಶೆಟ್ಟಿ, ಕಡಂದಲೆ ಪರಾರಿ ಅಜ್ಜಂಣ ಶೆಟ್ರ ಅಳಿಯ, ಕಾರ್ಕಳ ತಾಲೂಕು ಕಡಂದಲೆ ಗ್ರಾಮದಲ್ಲಿರುವವರು—

1ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ಕೋರ್ಟು S. C. 749/1939 ಮತ್ತು S. C. 335/1940ನೇ ರಲ್ಲಿ ಆದ ಡಿಕ್ರಿಯ ರದ್ದತಿನ ಬಗ್ಗೆಂತ ವಗೈರೆ ಕಾಣ್ಸಿ ದಾಖಲು ಮಾಡಿದ ವ್ಯಾಜ್ಯವು, ತಾ 21-1-44ಕ್ಕೆ ತನ್ನಿಖೆ ಬಗ್ಗೆ ಇಟ್ಟಿರುತ್ತದೆ. ಆದ್ದರಿಂದ ನಿಮಗೇನಾದರೂ ಆಕ್ಷೇಪ ಇದ್ದಲ್ಲಿ ನಿಮ್ಮ ಆಕ್ಷೇಪವನ್ನು ಸದ್ರಿ ದಿವಸ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಂಬ್ರವು ನಿಮ್ಮ ಗೈರು ಹಾಜರಿಂದ ತೀರ್ಮಾನವಾಗುವುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

B. O.
B. M. Hegde.
Advocate for Plffs.

ಮಂಗಳೂರು
10-[illegible]-1943

Degrees: Books: Medicines Free H. L. M. S. M. B. H. M. D. etc Free Homeo Ayur Unani Naturo degree by post also—Practitioner also get soon Homeo Materiamedica, Rs. 5 Homeo Practice book Rs 3, Instantly Cure Pills Rs. 10 Enclose 2 annas stamp —

Prof. Dr. N. H. Chhatbar,
Principal Indian Homeopathic Institute & Society (Govt Regd)
P. O. MAHUVA (Kathiawar Dt. India.)

Sidha-Kalpa Kavach (Regd.)
No 3 Rs 2. No 2 Rs 5 No. 1 Rs. 7 Special Rs. 10. Extra Special Rs 17 for love marriage health, wealth. Ask any six questions with M. O Re. 1/4 and get correct answers by returnpost Life reading Rs. 10 No V.P.P. Send M.O. Free, pamphlets

Prof Dr. N. H Chhatbar.
P. O MAHUVA (Kathiawar India.)

ಭಿಕ್ಷುಕಿಯೋರ್ವಳು ರಾಜ ಕುಮಾರನನ್ನು ವರಿಸಲು ಅರ್ಹಳೇ?
ಅಲ್ಲವಾದಲ್ಲಿ ಆ ವಿವಾಹವು ಹೇಗೆ ಜರಗಿತು?—

ನೋಡಿರಿ-

ಫಜಲೀ ಬ್ರದರ್ಸ ಚಿತ್ರ ಪಟ-

ಚೌರಂಘಿ

ಅಲಾಪ, ಮುಕರಾಬ್, ಅನುಜಬಾದ್, ಕಾಶ್ಮೀರಿ

ತಾ 17—2—1944ರಿಂದ

ಶ್ರೀ ರಾಮಕೃಷ್ಣ ಥಿಯೇಟಿರ್ ಲಿಮಿಟೆಡ್ ಉಡುಪಿ.

ಅನಂತರ: ಬಸಂತ್.

ಪ್ರಕಟಣೆ

ಉಡುಪಿ ತಾಲೋಕು [illegible] ಗ್ರಾಮದ [illegible] ವ್ಯಕ್ತಿ [illegible] ಈ ಮೂಲಕ ಸರ್ವ ಜನರಿಗೆ [illegible] ನನ್ನ [illegible] ಟುಂಬದ [illegible] ರೂಪಾಯಿ 4000/ [illegible] ಕ್ರಯ [illegible] ಯಾವ [illegible] ಆವಶ್ಯ [illegible] ರಿಂದ [illegible] ಆಳ್ವ [illegible] ಯವನು [illegible] ವಿನ್ಯಗಳಿಂದ [illegible] ನನ್ನ ಕುಟುಂಬಕ್ಕೆ ರೂಪಾಯಿ 300/- ಮೂನ್ನೂರ [illegible] ಈ ದಿನ [illegible] ಆಸ್ತಿಗಳನ್ನು ವಿಕ್ರಯಿಸಲಿಕ್ಕಾಗಲಿ ಯಾವ [illegible] ಸ್ವಾಧೀನ ಮಾಡಲಿಕ್ಕಾಗಲಿ ಸದ್ರಿ ಆಕ್ಕನಿಗೆ ಸದ್ರೀಗೆ ಹಕ್ಕು ಇರುವದಿಲ್ಲ [illegible] ಹಾಗೆ [illegible] ವಿಷಯದಲ್ಲಿ ನನ್ನ [illegible] ಆದುದರಿಂದ [illegible] ಆಸ್ತಿ [illegible] ವಗೈರರು ಸದ್ರಿ [illegible] ಮಾಡಿಕೊಳ್ಳಬಹುದಾದ, [illegible] ಯಾವತ್ತು [illegible] ನನ್ನ ಕುಟುಂಬವನ್ನು ಬದ್ಧಪಡಿಸಲಿಕ್ಕಿಲ್ಲವಾಗಿಯೂ, ಆವುಗಳು [illegible] ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುತ್ತೇನ

● ಈ ಎಡ ಹೆಬ್ಬೆಟ್ಟಿನ ಗುರುತು ಸದ್ರೀ [illegible] ರುಜು.

ಈ ಬಗ್ಗೆ ಸಾಕ್ಷಿ—[illegible] ಗಂಡ [illegible] ಶೆಟ್ಟಿ ಸಾಕ್ಷಿ [illegible]

ತಾರೀಕು 1[illegible]-2-[illegible]
[illegible]

THE CANARA BANKING CORPORATION LTD.

(Incorporated in British India with Limited Liability)

ESTD 1906.

Head Office. **UDIPI,** S. Kanara

Statement of affairs as on 31st December, 1943.

LIABILITIES

		Rs.	As.	Ps.
1	Paid up Capital	12,[illegible]5,970	0	0
2	Reserves	3,[illegible]3,379	1	6
3	Deposits	61,66,927	0	0
4,	Bills for collection	5,53,548	0	1
5	Sundries including revenue items	7,00,951	0	5
6	Profits for the year ending 31st December, 1943	[illegible]1,08,512	[illegible]	0
	Total	92,09,328	2	0

ASSETS

		Rs.	As.	Ps.
1.	Cash on hand & with Bankers ...	18,25,986	3	8
2	Investments on (1) Govt. Securities, (2) Immovabe properties etc.	26,01,671	6	8
3	Loans on jewels & other valuable securities	23,72,302	8	7
4.	Loans on personal security & Bills purchased ...	16,71,482	14	5
5.	Bills for collection as per contra	5,53,548	6	1
6.	Office premises, furniture etc.	93,251	0	0
7,	Sundries including revenue items ..	84,085	10	1
	Total	92,09,328	2	0

ಉಡುಪಿ, ಗುರುವಾರ ೧೭-೨-೧೯೪೪

ಅಖಿಳ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ

ಈ ಸಮ್ಮೇಳನವು ಇದೇ ತಿಂಗಳ ತಾ. ೧೯, ೨೦ರಂದು ಮಂಗಳೂರಲ್ಲಿ ಜರಗುವುದು. ಮದ್ರಾಸಿನ 'ಸ್ವದೇಶೀ ಮಿತ್ರನ್' ಪತ್ರಿಕೆಯ ಸಂಪಾದಕರಾದ ಶ್ರೀ. ಸಿ. ಆರ್. ಶ್ರೀನಿವಾಸನ್ ಅವರೇ ಸಮ್ಮೇಳನದ ಅಧ್ಯಕ್ಷರು. ಅವರು ಬಹುಶಃ ಕನ್ನಡವನ್ನರಿಯದವರಿರಬಹುದಾದರೂ ದೇಶೀಯ ಭಾಷಾಪತ್ರಿಕೆಯೊಂದನ್ನು ಯಶಸ್ವಿಯಾಗಿ ನಡೆಯಿಸುತ್ತ, ಪತ್ರಿಕೋದ್ಯೋಗದಲ್ಲಿಯೂ ಇತರ ವಿಷಯಗಳಲ್ಲಿ ಅಖಿಳ ಭಾರತ ಖ್ಯಾತಿಯುಳ್ಳವರಾಗಿರುವ ಕಾರಣ ದೇಶೀಯ ಭಾಷಾ ಪತ್ರಿಕೆಗಳೆಲ್ಲ ಸಮನ್ವಯವಾಗುವಂತಹ ಸಮಸ್ಯೆಗಳಲ್ಲಿ ಅವರ ಅಸಾಧಾರಣ ಅನುಭವವು ಸಮ್ಮೇಳನಕ್ಕೆ ದೊರಕೀತೆಂಬುದರಲ್ಲಿ ಸಂದೇಹವಿಲ್ಲ. ಆದರೆ ಹಲವು ಆಧಿಪತ್ಯದೊಳಗೆ ಹಂಚಿಹೋಗಿರುವ ಕನ್ನಡ ನಾಡು, ಕನ್ನಡ ಪತ್ರಿಕೆಗಳ ತೊಡಕುತೊಂದರೆಗಳು ತಮಿಳು ನಾಡು ತಮಿಳು ಪತ್ರಿಕೆಗಳಿಗಿಲ್ಲ. ಆದುದರಿಂದ ಕನ್ನಡ ಪತ್ರಿಕಾ ಪ್ರಪಂಚಕ್ಕೇ ವೈಶಿಷ್ಟ್ಯವಾದ ಹಲವು ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಸಮ್ಮೇಳನದ ಪ್ರತಿನಿಧಿಗಳೇ ತಲೆಗೊಡಬೇಕಾದೀತು. ಕನ್ನಡ ಪತ್ರಿಕೋದ್ಯೋಗಿಗಳು ಒಂದು ಕಡೆ ಮೈಸೂರು ಸರಕಾರದ ಶಾಸನಾನುಸಾರವಾಗಿ ಉದ್ಯೋಗವನ್ನು ನೆರವೇರಿಸಿದರೆ ಮತ್ತೊಂದೆಡೆ ಮತ್ತೊಂದು ಸಂಸ್ಥಾನಕ್ಕೆ ಅಧೀನವಾಗಿಯೂ ಇನ್ನೊಂದೆಡೆ ಬೊಂಬಾಯಿ ಆಧಿಪತ್ಯಕ್ಕೂ ಮಗದೊಂದು ಕಡೆ ಮದ್ರಾಸು ಆಧಿಪತ್ಯಕ್ಕೂ ತಲೆವಾಗಿಯೂ ಕಾಲು ನೀಡಬೇಕಾಗುತ್ತದೆ. ಹೀಗೆ ಭಿನ್ನ ಭಿನ್ನ ಸರಕಾರಗಳ ಕ್ಷೇತ್ರಗಳಲ್ಲಿ ಪ್ರಕಟಿತವಾಗುವ ಪತ್ರಿಕೆಗಳಿಗೂ ಆಯಾ ಸರಕಾರಗಳಿಗೂ ಭಿನ್ನ ಭಿನ್ನ ಸಂಬಂಧವಿರುತ್ತ ಆಯಾ ಪರಿಸ್ಥಿತಿಗೆ ತಕ್ಕಂತೆ ಅವು ಹೊಂದಿಸಿಕೊಳ್ಳುವ ಯೋಚನೆ ನಡೆಸಬೇಕಲ್ಲದೆ ಎಲ್ಲಕ್ಕೂ ಸರಿ ಹೋಗುವ ಒಂದೇ ಮಾರ್ಗ ದೊರೆಯದು. ತರಾಂತರ ರೋಗಗಳಿಗೆ ಏಕ ಚಿಕಿತ್ಸಾ ವಿಧಾನವು ಹೇಗೆ ನಿಷ್ಪ್ರಯೋಜನಕಾರಿಯೋ ಅಂತೆಯೇ ಇಂದಿನ ಕನ್ನಡ ಪತ್ರಿಕೆಗಳ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ ಏಕ ಮಾರ್ಗವಿಲ್ಲ. ಪ್ರತಿಯೊಂದು ಸಂಸ್ಥಾನ ಯಾ ಆಧಿಪತ್ಯದ ಒಳಗಿನ ಪತ್ರಿಕೋದ್ಯೋಗಿಗಳು ತಮ್ಮ ತಮ್ಮ ಸ್ವಂತ ಸಂಘಗಳನ್ನು ಸ್ಥಾಪಿಸಿಕೊಂಡು ಪತ್ರಿಕಾ ವ್ಯವಸಾಯದಲ್ಲಿ ಆಯಾ ಪ್ರಾಂತದ ವೈಶಿಷ್ಟ್ಯವಾದ ಸಮಸ್ಯೆಗಳನ್ನು ಅವುಗಳ ಮೂಲಕ ಬಿಡಿಸಿಕೊಳ್ಳತಕ್ಕದ್ದು. ಅಖಿಳ ಕರ್ನಾಟಕ ಎಂಬ ಪ್ರಾಂತವೊಂದಿಲ್ಲದೆ ಅಖಿಲ ಕರ್ನಾಟಕ ಸಂಘಸಂಸ್ಥೆ ಪರಿಷತ್ತು ಸಮ್ಮೇಳನಗಳೆಂಬ ಮಾತುಗಳೆಲ್ಲ ಆಭಾಸವಾಗಿ ಕಂಡರೂ ನುಡಿಯೂ ಒಂದಾಗಿರುವುದರಿಂದ ಎಲ್ಲ ಭಾಗಗಳಿಗೂ ಅನ್ವಯಿಸುವ ಕೆಲವು ಸ್ಥೂಲ ವಿಚಾರಗಳಲ್ಲಿ ಎಲ್ಲ ಕಡೆಯವರೂ ಕೂಡಿ ನಿರ್ಧಾರ ಮಾಡಿಕೊಳ್ಳಲಿಕ್ಕಾಗುತ್ತದೆ. ಇದಕ್ಕಾಗಿ ಅಖಿಲ ಕರ್ನಾಟಕದ ಪತ್ರಿಕೋದ್ಯೋಗಿಗಳಿಗೆ ಒಂದು ಕೇಂದ್ರ ಸಂಘಬೇಕು. ಅದರ ಉಪಾಂಗವಾಗಿ ಆಯಾ ಸಂಸ್ಥಾನ ಯಾ ಆಧಿಪತ್ಯದೊಳಗಿನ ಪತ್ರಿಕೋದ್ಯೋಗಿಗಳ ಪ್ರತ್ಯೇಕ ಪ್ರತ್ಯೇಕ ಸಂಘಗಳಿರುವುದು ಅತ್ಯಾವಶ್ಯಕವೆಂಬುದನ್ನು ಸಮ್ಮೇಳನವು ಮರೆಯಬಾರದು. ಈ ಸಮ್ಮೇಳನದಲ್ಲಿ ಅಂತಹ ವೈಶಿಷ್ಟ್ಯ ಸಮಸ್ಯೆಗಳನ್ನು ತಂದು ಕಲಸು ಮೇಲೋಗರಮಾಡಿದರೂ ಪ್ರಯೋಜನವಾಗದು. ಈಗಾಗಲೆ ಸಮ್ಮೇಳನದ ಪರ್ಯಾಲೋಚನೆಗೆ ಹಲವು ಸೂಚನೆಗಳು ಬಂದಿವೆ. ಅವನ್ನೆಲ್ಲ ಮೇಲಿನ ದೃಷ್ಟಿಯಿಂದ ನೋಡಿ ಸೂಕ್ತವಾದವುಗಳನ್ನಷ್ಟೆ ಸಮ್ಮೇಳನವು ಆಯ್ದುಕೊಂಡು ಗೊತ್ತುವಳಿಗಳನ್ನು ಮಾಡಿಕೊಂಡರೆ ಚೆನ್ನ. ಇಂದು ಪತ್ರಿಕೆಗಳು ಉಸಿರು ಹಿಡಿದುಕೊಂಡು ಬದುಕುವುದೇ ಸಂಶಯಾಸ್ಪದವಾಗಿರುವಾಗ ಈ ಕಷ್ಟಕಾಲವು ದಾಟುವನಕ ಬದುಕಿ ಉಳಿದಿರುವುದು ಹೇಗೆಂಬ ವಿಷಯಗಳಿಗೆ ಸಮ್ಮೇಳನವು ಗಮನಕೊಡಬೇಕಲ್ಲದೆ ಸುಖ ಶಾಂತಿ ಸಮೃದ್ಧಿಗಳ ಕಾಲದಲ್ಲಿ ಅಪೇಕ್ಷಣೀಯವೆನಿಸಬಹುದಾದಂತಹ ದೊಡ್ಡ ಯತ್ನ, ದೊಡ್ಡ ಭಂಡವಳ, ರೋಟರಿ ಮುದ್ರಣ, ಬಾಹ್ಯ ಸೌಂದರ್ಯ, ಲಿಪಿಸಂಸ್ಕರಣ ಅಬಾಲವೃದ್ಧವಯೋಬುದ್ಧಿ ಧರ್ಮಾನುಸಾರವಾದ ಪತ್ರಿಕೆಗಳ ನಿರ್ಮಾಣ ಇತ್ಯಾದಿ ವಿಷಯಗಳನ್ನು ನಾಳಿನ ಸಮ್ಮೇಳನದಲ್ಲಿ ಚರ್ಚಿಸುತ್ತ ಕುಳಿತರೆ 'ಹಟ್ಟಿಯ ಬಾಗಿಲಲ್ಲಿ ಹುಲಿ ಬಂದು ನಿಂತಿರುವಾಗ ಆಚನ್ನಟ್ಟುವ ಯೋಚನೆಮಾಡದೆ, ಹುಲ್ಲುಗಾವಲಸಂವರ್ಧನೆ, ಅಡ್ಡತಳಿಯಿಂದ ಆಕಳುಗಳನ್ನು ಉತ್ತಮಗೊಳಿಸುವುದು, ಹಾಲು ಕರೆಯುವುದಕ್ಕೆ ಯಂತ್ರಗಳನ್ನು ಪಯೋಗಿಸುವುದು, ಇತ್ಯಾದಿ ವಿಷಯಗಳಲ್ಲಿ ಹರಟೆ ಹೊಡೆಯುತ್ತ ಕುಳಿತರು' ಎಂಬಂತಾಗದೇ? ಆದುದರಿಂದ ಇಂದಿನ ಈ ಭೀಕರ ಸಮರ ಪರಿಸ್ಥಿತಿಯಲ್ಲಿ ಎಲ್ಲ ಕನ್ನಡ ಪತ್ರಿಕೆಗಳಿಗೂ ಏಕಸಮಾನವಾಗಿ ಏನೇನು ಆಘಾತಗಳು ಬಂದಿವೆಯೋ ಅವನ್ನು ನಿವಾರಿಸಿಕೊಳ್ಳುವ ಬಗೆ ಹೇಗೆ ಎಂಬುದನ್ನಷ್ಟೆ ಸಮ್ಮೇಳನವು ಮಥಿಸಿ ಗೊತ್ತುವಳಿಗಳನ್ನು ಮಾಡಿಕೊಂಡರೆ, ಅವು ಬರೇ ಮೂರು ನಾಲ್ಕೇ ಇರಲಿ-ಸಮ್ಮೇಳನವು ಜರಗಿದುದು ಸಾರ್ಥಕವಾಯಿತೆಂದು ನಾವು ಹಿಗ್ಗಬಹುದು. ಇಂತಹ ವಿಷಯಗಳ ನಿರ್ಧಾರಗಳಲ್ಲಿ ಅಧ್ಯಕ್ಷರ ವಿಶೇಷಾನುಭವದ ನೆರವೂ ದೊರಕಿ ಅವರನ್ನು ಕರೆಯಿಸಿಕೊಂಡುದೂ ಸಾರ್ಥಕವೆನಿಸೀತು.

ಮಂಗಳೂರು

ನೃತ್ಯ ಭಾರತೀಯ ಶ್ರೀ ಕುಲಕರ್ಣಿಯವರು ದ ಕನ್ನಡಕ್ಕೆ ಬರುವರು:—ಧರ್ಮಸ್ಥಳದ ಪೂಜ್ಯ ಹೆಗಡೆಗಳವರು ೯-೨-೪೪ರಲ್ಲಿ ಮದ್ರಾಸಿನಲ್ಲಿ ಕುಲಕರ್ಣಿ ಶ್ರೀನಿವಾಸರ ನೃತ್ಯ ಭಾರತಿಯನ್ನು ಸಂದರ್ಶಿಸಿದರು. ಪೂಜ್ಯರು ಸಂಸ್ಥೆಯ ಬಾಲಬಾಲಿಕೆಯರ ಹಾಗೂ ಶ್ರೀನಿವಾಸರ ಕೆಲವು ನೃತ್ಯಗಳ ಪ್ರದರ್ಶನವನ್ನು ನೋಡಿ ತಮ್ಮ ಅತ್ಯಂತ ಸಂತೋಷವನ್ನು ವ್ಯಕ್ತಮಾಡಿದರು-ಕನ್ನಡಿಗರೊಬ್ಬರು ಮದ್ರಾಸಿಗೆ ಬಂದು ಈ ಬಗೆಯ ಸಂಸ್ಥೆಯನ್ನು ನಿರ್ಮಾಣಮಾಡಿಕೊಂಡು ಕಲಾ ಪ್ರಚಾರ ಮಾಡುತ್ತಿರುವದು ತುಂಬಾ ಅಭಿಮಾನಾಸ್ಪದವಾದುದೆಂದು ಹೇಳಿ, ಕರ್ನಾಟಕದ ನೃತ್ಯ ವೈಶಿಷ್ಟ್ಯವಾದ ಯಕ್ಷಗಾನ ನೃತ್ಯ ಪರಂಪರೆಗಳನ್ನು ಶ್ರೀನಿವಾಸರು ತಮ್ಮ ಸಂಸ್ಥೆಯ ಒಂದು ಅಂಗವಾಗಿ ಇಟ್ಟುಕೊಳ್ಳಬೇಕೆಂಬೂ ಅದಕ್ಕೆ ಆಗತ್ಯವಿರುವ ಎಲ್ಲ ಬಗೆಯ ಸೌಕರ್ಯಗಳನ್ನು ಮಾಡಿಕೊಡಲು ತಾವು ಸಂಪೂರ್ಣ ಸಿದ್ಧವಾಗಿರುವೆವೆಂದೂ ಹೇಳಿ ತಮ್ಮ ಜಿಲ್ಲೆಗೆ ಆಮಂತ್ರಿಸಿದರು. ಶ್ರೀ ಕುಲಕರ್ಣಿಯವರು ತಮ್ಮ ನೃತ್ಯ ಮಂಡಳಿಯವರೊಂದಿಗೆ ಸದ್ಯವೇ ನಮ್ಮ ಜಿಲ್ಲೆಗೆ ಬರಲಿರುವರು.

ದ. ಕ ಜಿಲ್ಲಾ ಮಜೂರರ ಪ್ರಥಮ ಪರಿಷತ್ತು:—ತಾ 7ರಲ್ಲು ಕಮ್ಯೂನಿಸ್ಟ್ ಪಕ್ಷದ ಮುಂದಾಳುಗಳಾದ ಕಾಮ್ರೇಡ್ ಎಸ್. ಎ. ಡಾಂಗೆಯವರ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಠಾರದಲ್ಲಿ ಜರಗಿತು. ಪ್ರತಿನಿಧಿಗಳು ಉಡುಪಿಯಿಂದಲೂ ಬಂದಿದ್ದರು. ಪರಿಷತ್ ಮಂದಿರವು 'ಶಾಂತಿ ನಗರ'ವೆಂತಲೂ ಅದರ ಮಹಾದ್ವಾರವು 'ಹೊಳ್ಳರ ಮಹಾದ್ವಾರ'ವೆಂತಲೂ ನಾಮಕರಣ ಮಾಡಲಾಗಿತ್ತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಅಧಿಕಾರಿಗಳ ನಿರ್ಬಂಧವಿರುವುದರಿಂದ ತಾನು ರಾಜಕೀಯ ವಿಷಯಗಳನ್ನೆತ್ತಿ ಮಾತಾಡುವುದಿಲ್ಲವೆಂದು ಹೇಳಿ ಬಡವರ ಬಟ್ಟೆಯ ಕುರಿತು ಕಥಾ ರೂಪದಲ್ಲಿ ಚಲೋ ರೀತಿ ವಿವರಿಸಿದರು. ತುಟ್ಟಿ ಭತ್ತೆ ಸಿಗಬೇಕೆನ್ನುವ, ರಾಷ್ಟ್ರೀಯ ಐಕ್ಯ ಸಾಧಿಸಬೇಕೆನ್ನುವ ಸೋವಿಯೆಟ್ ಕೆಂಪು ಸೇನೆಯ ಅಭಿವಂದನೆ ಮಾಡುವ ಇತ್ಯಾದಿ ಠರಾವುಗಳು ಪರಿಷತ್ತಿನಲ್ಲಿ ಮಾನ್ಯವಾದುವು.

ಭವಾಲ್ ಸನ್ಯಾಸಿ ಕೇಸಿನ ರಿಕಾರ್ಡು ಕಳವು!

ಭವಾಲ್ ಸನ್ಯಾಸಿ ಖಟ್ಲೆಯ ೧೪೨ ರಿಕಾರ್ಡು ಕಟ್ಟುಗಳಲ್ಲಿ ೧೭ ಕಟ್ಟುಗಳು ಕಲಕತ್ತಾ ಹಾಯಿಕೋರ್ಟಿನಲ್ಲಿ ಕಳವಾಗಿವೆ. ಪ್ರೀವಿ ಕೌನ್ಸಿಲ್‌ದಲ್ಲಿ ಇನ್ನೂ ಈ ಖಟ್ಲೆಯು ನಡೆಯುತ್ತಿರುವುದು.

ರಿಕಾರ್ಡ್ ಡಿಪಾರ್ಟ್‌ಮೆಂಟಿನಲ್ಲಿರುವವನೊಬ್ಬನು ಬಂಧಿಸಲ್ಪಟ್ಟಿದ್ದಾನೆ, ಕೋಣೆಯಿಂದ ಕೋಣೆಗೆ ರಿಕಾರ್ಡು ಸಾಗಿಸುವಾಗ ಆ ಕಟ್ಟುಗಳು ಕಳವಾಗಿವೆಯಂತೆ.

ಸರೋಜಿನಿ ದೇವಿಯವರ ೬೫ನೆ ವರ್ಧಂತಿ

ಶ್ರೀಮತಿ ಸರೋಜಿನಿ ದೇವಿಯವರ ೬೫ನೆಯ ಹುಟ್ಟು ಹಬ್ಬವು ತಾ. 14ರಲ್ಲಿ ವಿಶೇಷ ಆಡಂಬರವಿಲ್ಲದೆ ಮುಂಬಯಿಯಲ್ಲಿ ಆಚರಿಸಲ್ಪಟ್ಟಿತು.

ಜಾತಿ ಮತಭೇದವಿಲ್ಲದೆ ಅನೇಕ ದೇಶ ಹಾಗೂ ವಿದೇಶ ಮಿತ್ರರು ವಾಡಿಯಾರವರ ಮನೆಗೆ ಬಂದು ಅವರಿಗೆ ದೇವರು ಆಯುರಾರೋಗ್ಯವನ್ನು ದಯಪಾಲಿಸಲೆಂದು ಶುಭಕೋರಿದರು. ನೂರಾರು ಸಂದೇಶಗಳೂ ಬಂದಿದ್ದುವು.

ಲಂಡನಿನ ಮೇಲೆ ವಿಮಾನ ಧಾಳಿ.

ತಾ. 12ರಲ್ಲಿ ಲಂಡನದಲ್ಲಿ ವಿಮಾನ ಧಾಳಿ ಎಚ್ಚರಿಕೆಯನ್ನು ಕೊಡಲಾಯಿತು. ಧಾಳಿ ಮಾಡಿದ ವಿಮಾನಗಳಲ್ಲಿ ಒಂದನ್ನು ನೆಲಕ್ಕುರುಳಿಸಲಾಯಿತು. ಶತ್ರು ಧಾಳಿಯಿಂದ ಅಲ್ಪ ಸ್ವಲ್ಪ ಹಾನಿಯಾಗಿದೆ.

ಭಾರತಕ್ಕೆ ಆಸ್ಟ್ರೇಲಿಯದ ಆಹಾರ ಸಾಮಗ್ರಿ

ಸಿಂಧ ಸರಕಾರವು ೫ ಸಾವಿರ ಟನ್ ಆಸ್ಟ್ರೇಲಿಯನ ಗೋದಿಯನ್ನು ಸಾಲವಾಗಿ ಪಡೆಯುವುದೆಂದು ತಿಳಿದು ಬಂದಿದೆ. ಆಸ್ಟ್ರೇಲಿಯನ್ ಗೋದಿಯು ಬೇಗನೆ ಕರಾಚಿಗೆ ಬರಬಹುದೆಂದು ನಿರೀಕ್ಷಿಸಲಾಗಿದೆ

ಪೋಲಿಶ್ ಸರಕಾರ ಧೋರಣೆಯ ಖಂಡನೆ

ಪೋಲಿಶ್ ಸರಕಾರ ಧೋರಣೆಯ ಖಂಡನೆ.

ಕಮ್ಯೂನಿಸ್ಟ್ ಪಕ್ಷದ 'ಪ್ರವದಾ' ಎಂಬ ಪತ್ರಿಕೆಯು ಲಂಡನದಲ್ಲಿರುವ ಪೋಲಿಶ್ ಸರಕಾರದ ದ್ವಿಮುಖ ಧೋರಣೆಯನ್ನು ಖಂಡಿಸಿ ಬರೆದ ಒಂದು ಲೇಖನ ಹೀಗಿದೆ:-

"ಪೋಲಿಶ್ ಸರಕಾರವು ಹೊರಗೆ ಸ್ನೇಹದ ಸವಿಮಾತುಗಳನ್ನಾಡುತ್ತಿರುವುದು ಆದರೆ ಪರದೆಯ ಹಿಂದೆ ರಶಿಯದ ವಿರುದ್ಧ ಚಟುವಟಿಕೆಯನ್ನು ಕೈಕೊಂಡಿದೆ. ಫ್ಯಾಸಿಸ್ಟ್ ಮುತ್ಸದ್ದಿಗಳಿಂದ ತುಂಬಿರುವ ಈ ಸರಕಾರವು ವಿವೇಕವನ್ನು ಕಳೆದುಕೊಂಡಿದೆ. ನಕ್ಷತ್ರಯು ಬಿಸಿಲ್ಕುದುರೆಯ ರಾಜ್ಯದಲ್ಲಿ ಅದು ಇನ್ನೂ ವಿಹರಿಸುತ್ತದೆ. ಜನತೆಗೂ ಈ ಸರಕಾರಕ್ಕೂ ಯಾವ ಸಂಬಂಧವೂ ಇಲ್ಲ. ಸೋವಿಯೆಟ್ ಯೂನಿಯನದ ಪ್ರಜೆಗಳು ತಮ್ಮ ಹಗೆಗಳೆಂದು ಈ ಸಾಮ್ರಾಜ್ಯಶಾಹಿಗಳು ತಿಳಿದುಕೊಂಡ್ಡಾರೆ. ರಶಿಯವನ್ನು ಫ್ಯಾಸಿಸ್ಟರು ನಿರ್ನಾಮ ಮಾಡಲಿಯೆಂದೇ ಅವರು ಬಯಸುತ್ತಿರುವರು. ಆದರೆ ತಮ್ಮ ಈ ನಗ್ನ ಸ್ವರೂಪವು ಬಯಲಿಗೆ ಬೀಳದಂತೆ ಮೋರೆಗೆ ಮುಸುಕನ್ನೆಳೆದುಕೊಂಡು ಜರ್ಮನಿಯ ವಿರುದ್ಧ ಮಾತುಗಳನ್ನಾಡುತ್ತಿರುವರು."

ಕಥೋಲಿಕರಿಗೆ ಬಿಷಪರ ಕರೆ.

ರೋಮನ್ ಕಥೋಲಿಕ್ ಹಿರಿಯರ ಸಂಘದಲ್ಲಿ ವೆಸ್ಟ್ ಮಿನಿಸ್ಟರದ ಹೊಸ ಆರ್ಚ್ ಬಿಷಪರಾದ ಡಾ! ಬೆರ್ನಾಡ್ ಗ್ರಿಫಿನ್‌ರವರು ಭಾಷಣ ಮಾಡುತ್ತ ಪೋಪರ ಸುಖ ಸಂರಕ್ಷಣೆಯ ಸಲುವಾಗಿ ಪ್ರಾರ್ಥನೆ ಮಾಡಿರೆಂದರು.

"ಪೋಪರ ಇಂದಿನ ಸ್ಥಾನಮಾನವು ಅತ್ಯಂತ ದುಃಖದಾಯಕವಾಗಿದೆ. ಈ ಹಿಂದೆ ಆಗಿಹೋದ ಪೋಪರ ಉದಾತ್ತ ತತ್ವಗಳನ್ನು ಇವರೂ ಎತ್ತಿ ಹಿಡಿದಿದ್ದಾರೆ. ಶಾಂತಿ ಸ್ಥಾಪನೆಗಾಗಿಯೂ ಯತ್ನಿಸಿರುವರು. ಯುದ್ಧವನ್ನು ತಡೆಗಟ್ಟಲು ಸಾಹಸಪಟ್ಟರು. ನಾಜಿ ಜರ್ಮನಿಯು ಪರರಾಷ್ಟ್ರಗಳ ಮೇಲೆ ದಂಡೆತ್ತಿ ಹೋದಾಗ ಈ ಸಾಮ್ರಾಜ್ಯಶಾಹಿ ಆಕ್ರಮಣವನ್ನು ಖಂಡಿಸಿದರು. ಆದರೆ ಎಷ್ಟೋ ಬಾರಿ ಅವರ ಮಾತಿಗೆ ಅಪಾರ್ಥ ಮಾಡಿಕೊಳ್ಳಲಾಗಿದೆ. ಕ್ಷುಲ್ಲಕ ವಿಷಯಗಳನ್ನು ಆನೆಯಷ್ಟು ದೊಡ್ಡದನ್ನಾಗಿ ಮಾಡಲಾಗಿದೆ. ಅವರ ಇಂದಿನ ಕಷ್ಟಗಳ ಬಗ್ಗೆ ಸಹಾನುಭೂತಿ ಪಡದವರಾದರೂ ಯಾರಿದ್ದಾರೆ?"

ಪ್ರಥಮ ಹಿಂದೀ ಸ್ತ್ರೀ ಪದವೀಧರಳ ನಿಧನ.

ಹಿಂದೀ ಪ್ರಥಮ ಸ್ತ್ರೀ ಪದವೀಧರಳಾದ ಕು. ಚಂದ್ರಮುಖಿ ಬೋಸರು ಮೊನ್ನೆ ಫೆಬ್ರವರಿ ತಾ. ೩ರಲ್ಲಿ ಡೆಹ್ರಾಡೂನದಲ್ಲಿ ಮೃತಪಟ್ಟರೆಂದು ಅಮೃತ ಬಾಜಾರ ಪತ್ರಿಕೆಯು ಪ್ರಕಟಿಸಿದೆ.

ಮರಣ ಸಮಯದಲ್ಲಿ ಇವರಿಗೆ ೮೦ ವರ್ಷಗಳಾಗಿದ್ದವು. ದಿವಂಗತರು ಭುವನ ಮೋಹನ ಬೋಸರ ಮಗಳು. 1884ರಲ್ಲಿ ಇವರು ಎಂ. ಎ. ಪದವಿ ಪಡೆದರು. ಆಗ ಶ್ರೀ ಈಶ್ವರಚಂದ್ರ ವಿದ್ಯಾಸಾಗರರು ಶೆಕ್ಸಪಿಯರ ಮಹಾಕವಿಯ ಪುಸ್ತಕಗಳನ್ನು ಅವರಿಗೆ ಕಾಣಿಕೆಯಾಗಿ ಕೊಟ್ಟರು. ಮುಂದೆ ಕೂಡಲೆ ಕಲಕತ್ತೆಯ ಬೇಥೂನ (ಹೆಣ್ಣು ಮಕ್ಕಳ ಕಾಲೇಜದ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟರು.) ಆ ಸ್ಥಾನವನ್ನಲಂಕರಿಸಿದ ಹಿಂದೀ ಸ್ತ್ರೀಯರಲ್ಲಿ ಇವರೇ ಮೊದಲಿಗರು.

ಅಭಾವದ ಕಡೆಗಳಿಗೆ ಆಹಾರ ಸಾಮಗ್ರಿ ಪೂರೈಕೆ.

೧೯೪೩ನೇ ಜುಲಾಯಿ ತಿಂಗಳ ಮಧ್ಯದಿಂದ ಇಷ್ಟರ ವರೆಗೆ ಒಟ್ಟು ೭೦೭೦೦೦ ಟನ್ ಆಹಾರ ವಸ್ತುಗಳನ್ನು ಕೇಂದ್ರ ಸರಕಾರವು ಕಳಿಸಿಕೊಟ್ಟಿದೆ. ಇವರಲ್ಲಿ ಬಂಗಾಲ, ಮುಂಬಯಿ, ತಿರುವಾಂಕೂರು ಕೊಚ್ಚಿ ಮದ್ರಾಸಗಳಿಗೆ ಕ್ರಮವಾಗಿ ೪೦೪೦೦೦, ೭೯೦೦೦, ೫೭೦೦೦, ಮತ್ತು ೧೫೬೦೦೦ ಟನ್‌ಗಳನ್ನು ಕಳಿಸಲಾಗಿದೆ

ಯುದ್ಧ ಎಷ್ಟು ವರ್ಷ ನಡಿಯಬಹುದು?

ಯುದ್ಧವು ಎಷ್ಟು ಅವಧಿಯ ವರೆಗೆ ಸಾಗಬಹುದೆಂಬುದನ್ನು ಯಾರೂ ಹೇಳಲು ಶಕ್ಯವಲ್ಲ. ಇಟೆಲಿಯಲ್ಲಿ ಇಳಿದ ಸೈನಿಕರಿಗೆ ತಕ್ಕ ಪೂರೈಕೆ ವ್ಯವಸ್ಥೆ ಮಾಡಲು ಪ್ರತಿಕೂಲವಾದ ಹವಾಮಾನವು ತಡೆಯಾಯಿತು. ಇದು ನಮ್ಮ ಕೈಯೊಳಗಿನ ವಿಷಯವಲ್ಲ. ಅದೇ ಮೇರೆಗೆ ಶತ್ರು ಧಾಳಿಯನ್ನು ತಡೆಯುವದೂ ಕಠಿಣವಾಗುವುದು. ಅದೇ ರೀತಿ ಯುರೋಪದ ಮೇಲೆ ಧಾಳಿಯಾಗುವಾಗ ನಾವು ಎಂದೂ ನಿರೀಕ್ಷಿಸದ ಪರಿಸ್ಥಿತಿಯು ನಮ್ಮನ್ನು ಎದುರಿಸಿ ಕೆಲ ದಿನಗಳಲ್ಲಿ--ತಿಂಗಳುಗಳಲ್ಲಿ --ಅನೇಕ ವರ್ಷಗಳ ಅವಧಿಯ ವರೆಗೆ ಯುದ್ಧವನ್ನು ಬೆಳೆಸಬಹುದು ಎಂದು ತಾ. 11ರಲ್ಲಿ ಕೊಲಿಕಾರ ಪಕ್ಷದ ಹುದ್ದೆಯಾಳುಗಳನ್ನುದ್ದೇಶಿಸಿ ಕೆನಡಾದ ಮುಖ್ಯ ಮಂತ್ರಿ ಮೆಕಾಂಜಿಯು ಕಿಂಗರು ಹೇಳಿದರು

ಮಿತ್ರರಾಷ್ಟ್ರಗಳಿಗೆ ಚರ್ಚಿಲ್ಲರ ಸಮಾಧಾನೋಕ್ತಿ

ಪತ್ರಗಳು ಹೇಳುವಂತೆ ಆಂಝಿಯೋ ಕರಾವಳಿ ಠಾಣೆಯಲ್ಲಿ ಅಷ್ಟು ಗಂಡಾಂತರ ಪರಿಸ್ಥಿತಿಯಿಲ್ಲವೆಂದು ಚರ್ಚಿಲ್ಲರು ತಾ. 11ರಲ್ಲಿ ಒಂದು ಹೇಳಿಕೆ ಹೊರಡಿಸಿ ಕಳವಳಗೊಂಡ ಮಿತ್ರರಾಷ್ಟ್ರಗಳ ಜನರನ್ನು ಸಮಾಧಾಯಿಸಿದ್ದಾರೆ.

ಜನರಲ್ ವಿಲ್ಸನ್ ಮತ್ತು ಜನರಲ್ ಆಲೆಗ್ಝಾಂಡರರಿಂದ ಬಂದ ಆಶಾದಾಯಕ ಸುದ್ದಿಯನ್ನು ಅವರು ತಮ್ಮ ಹೇಳಿಕೆಯಲ್ಲಿ ಸೂಚಿಸಿರುವರು. ರೋಮ ನಗರದ ಆಕ್ರಮಣಕ್ಕಾಗಿ ನಡೆಯುವ ಇಂದಿನ ಈ ದೊಡ್ಡ ಸಂಗ್ರಾಮದಲ್ಲಿ ಜಯವು ನಿಶ್ಚಯವೆಂದು ಈ ಸೇನಾಧಿಕಾರಿಗಳಿಬ್ಬರೂ ಅತ್ಯ ವಿಶ್ವಾಸವನ್ನು ವ್ಯಕ್ತಪಡಿಸಿರುವರು. ಹವಾಮಾನವು ಕೆಟ್ಟಿರುವುದರಿಂದ ಒಂದೇ ಸಮನೆ ಸಹಾಯ ಸಲಕರಣೆಗಳನ್ನು ಪೂರೈಸಲು ಸ್ವಲ್ಪ ಅಡ್ಡಿ ಆತಂಕವಾಗಿದೆಯೇನೋ ನಿಜ. ಆದರೆ, ಯುದ್ಧವು ಆರಂಭವಾಗುವ ಮೊದಲೇ ಅವಶ್ಯವಿದ್ದ ತೋಫು ಟ್ಯಾಂಕು ಮೊದಲಾದ ಯುದ್ಧೋಪಕರಣಗಳನ್ನು ಇಳಿಸಲಾಗಿದೆ. ಆದುದರಿಂದ ನಿರಾಶೆಗೆ ಅವಕಾಶವೇ ಇಲ್ಲವೆಂದು ಚರ್ಚಿಲ್ಲರು ಕೊಟ್ಟ ಭರವಸೆಯು ಜರ್ಮನ್ ಪ್ರಚಾರದಿಂದ ತಲೆದೋರಿದ ಕಳವಳವನ್ನು ದೂರಮಾಡಿದೆಯಂತೆ.

ಶ್ರೀ 'ವಿದ್ಯಾವಲ್ಲಭ'ರ ವಿದ್ಯೆ

ಕಳೆದ ಮಧ್ವನವಮಿಯಂದು ಉಡುಪಿಯಲ್ಲಿದ್ದ ಶ್ರೀಗಳವರೆಲ್ಲ ಶ್ರೀ ಕೃಷ್ಣಮಠದಲ್ಲಿರುವ ಶ್ರೀಮಧ್ವಾಚಾರ್ಯ ಮೂರ್ತಿಯ ಸನ್ನಿಧಿಯಲ್ಲಿ ಸಾಧ್ಯಪೂಜೆಯನ್ನೆಸಗುವುದು ಆದ್ಯ ಪವಿತ್ರ ಕರ್ತವ್ಯವಿರುತ್ತ ಶ್ರೀ ಪುತ್ತಿಗೆ ಮಠದ ಪಟ್ಟದ ಶಿಷ್ಯರು ಈ ಕರ್ತವ್ಯವಿಮುಖರಾದುದಕ್ಕೆ ಸಮರ್ಪಕ ಕಾರ್ಯವನ್ನು ಪ್ರಕಟಿಸಲಾಗಿತ್ತಷ್ಟೆ? ಆ ಶಿಷ್ಯರ ಆಶ್ರಯದಿಂದ ತನ್ನ ಹಸಿದ ಹೊಟ್ಟೆಯನ್ನು ಸಂತೃಪ್ತಗೊಳಿಸಿಕೊಳ್ಳುವ ಆಚಾರ್ಯರೊಬ್ಬರು ಈ ಸತ್ಯವೃತ್ತಾಂತವನ್ನು ಅಲ್ಲಗಳೆಯಲು ಅಪಪ್ರಚಾರದ ಆ ಪ್ರಕಟಣಾ ಲೇಖನವನ್ನು 'ಧುರೀಣ'ನಲ್ಲಿ ತುರುಕಿಸಿದ್ದಾರೆ. ತೇವಿಯಲ್ಲೇ ಇರುವ 'ಧುರೀಣ' ಒಂದುವು ಅವಕ್ಕೆ ತನ್ನ ಅಧಿಕೃತವಾರ್ತಾ ಸ್ಥಾನವನ್ನು ಕೊಡದೆ ಕೇವಲ ಚಿಲ್ಲರೆ ಪ್ರಕಟಣಾ ಲೇಖನ ಸ್ಥಾನಕೊಟ್ಟುದರಿಂದಲೇ ಆಚಾರ್ಯರ ಮಾತಿನಲ್ಲಿ 'ಧುರೀಣ'ನಿಗೇ ಸಂದೇಹವಿದೆಯೆಂದು ವ್ಯಕ್ತವಾಗುತ್ತಿದೆ ಮೇಲಾಗಿ, ನವಯುಗದ ಅಧಿಕೃತವಾರ್ತೆಯನ್ನು ಅಲ್ಲಗಳೆಯುವುದಕ್ಕೆ 'ವಿದ್ಯಾವಲ್ಲಭ'ರು ಕೈಕೊಂಡ ದ್ರಾವಿಡ ಪ್ರಾಣಾಯಾಮದ ಹಾದಿಯನ್ನು ಕಂಡು ನಗು ಬರುತ್ತದೆ. ಈ ವಾರ್ತೆಯನ್ನು ಅಲ್ಲಗಳೆಯಲು ತನ್ನ ಹಿಂಗಿನ ಆಚಾರ್ಯ ಹಸ್ತಕ ಸಾಲದೆಂಬುದು ಅವರಿಗೆ ತಿಳಿಯದಿದ್ದುದು ಆಶ್ಚರ್ಯವೇ. ನಿಜವಾಗಿಯೂ 'ವಿದ್ಯಾವಲ್ಲಭ'ರು ಅಂದು ಆ ಕರ್ತವ್ಯವನ್ನು ನೆರವೇರಿಸಿದ್ದರೆ ಅದನ್ನು ಕಂಡಿರಬೇಕಾದ ಆಗ ಅಲ್ಲಿದ್ದ ಶ್ರೀ ಕಾಣಿಯೂರು ಮತ್ತು ಶ್ರೀಶೀರೂರು ಶ್ರೀಪಾದಂಗಳವರಿಂದ ಒಂದು ಪಂಕ್ತಿ ವಿಷಯವನ್ನು ಪಡೆದುಪ್ರಕಟಿಸಬಾರದಿತ್ತೇ? ಹಾಗೆ ಮಾಡಿದರೆ ಮಾತ್ರ 'ವಿದ್ಯಾವಲ್ಲಭ'ರ ವಿದ್ಯೆಯು ಸಾರ್ಥಕ. ಹಾಗಿಲ್ಲದೆ ತಮ್ಮ ಹಸ್ತಕರಿಂದ ಬೇಕು ಬೇಕಾದಂತೆ ಪ್ರಕಟಣಾ ಲೇಖನ ಕೊಡಿಸಿಕೊಳ್ಳುವ ಈ ವಿದ್ಯೆ ನಿರರ್ಥಕ.

ದ. ಕ. ಜಿಲ್ಲೆಯಲ್ಲಿ ಅಕ್ಕಿ ಮತ್ತು ಭತ್ತದ ಖಂಡಿತ ಕ್ರಯ

ಇದೇ ಫೆಬ್ರವರಿ ತಾ. 14ರಿಂದ ದ. ಕ. ಜಿಲ್ಲೆಯಲ್ಲಿಯ ಯಾವ ಲೈಸನ್ಸದಾರನೇ ಆಗಲಿ ಈ ಕೆಳಗೆ ಸೂಚಿಸಿದ ದರಕ್ಕಿಂತ ಜಾಸ್ತಿಯಾಗಿ ಅಕ್ಕಿ ಮತ್ತು ಬತ್ತವನ್ನು ಮಾರಕೂಡದಾಗಿಯೂ ಇದಕ್ಕೆ ಪ್ರತಿಕೂಲವಾಗಿ ವರ್ತಿಸಿದರೆ ಲೈಸೆನ್ಸು ರದ್ದತಿಯಾಗುವುದು ಮಾತ್ರವಲ್ಲದೆ ಆಹಾರ ಕಾಳುಗಳ ಕಂಟ್ರೋಲ್ ಆರ್ಡರಿನಂತೆ ಶಿಕ್ಷೆ ಸಹ ವಿಧಿಸಲಾಗುವುದೆಂದು ಜಿಲ್ಲಾ ಕಮರ್ಶಿಯಲ್ ಟೇಕ್ಸ ಆಫೀಸರ್ ಶ್ರೀ ಎಸ್. ಕೃಷ್ಣರಾಯರ ಪ್ರೊಸೀಡಿಂಗ್ಸಿನಿಂದ ಸ್ಪಷ್ಟವಾಗುತ್ತದೆ. ದರಗಳ ವಿವರ ಈರೀತಿಯಾಗಿದೆ:—

ವಿಸ್ತೀರ್ಣ	ಸೇರಿನ ದರ: ಸುಗ್ಗಿ, ರಾಶಿ, ಕಾಯಮೆ ಕೊಳ್ಕೆ ಅಕ್ಕಿ	ಸುಗ್ಗಿ, ರಾಶಿ, ಕಾಯಮೆ ಕೊಳ್ಕೆ ಬತ್ತ	ಗುಡ್ಡು ಅಕ್ಕಿ	ಗುಡ್ಡು ಬತ್ತ	ವಸ್ತಿ ಅಕ್ಕಿ	ವಸ್ತಿ ಬತ್ತ	ಬೆಳ್ತಿಗೆ ಅಕ್ಕಿ	ಬೆಳ್ತಿಗೆ ಬತ್ತ	ಗಂಧಸಾಲೆ, ಜೀರ, ಜಿ.ಬಿ. ಸಣ್ಣಕ್ಕಿ ಅಕ್ಕಿ	ಗಂಧಸಾಲೆ, ಜೀರ, ಜಿ.ಬಿ. ಸಣ್ಣಕ್ಕಿ ಬತ್ತ
ಮಂಗಳೂರು ನಗರ (ಮುನಿಸಿಪಾಲಿಟಿಯೊಳಗೆ)	0 4 3	0 1 11	0 4 5	0 2 0	0 4 8	0 2 1	0 5 0	0 2 3	0 5 5	0 2 5
ಮಂಗಳೂರು ತಾಲೂಕು (ಮುನ್ಸಿಪಾಲಿಟಿ ಹೊರಗೆ)	0 4 2	0 1 11	0 4 4	0 2 0	0 4 6	0 2 1	0 4 10	0 2 3	0 5 2	0 2 5
ಪುತ್ತೂರು ತಾಲೂಕು	0 4 2	0 1 11	0 4 4	0 2 0	0 4 6	0 2 1	0 4 10	0 2 3	0 5 2	0 2 5
ಕಾರ್ಕಳ ತಾಲೂಕು	0 4 2	0 1 11	0 4 4	0 2 0	0 4 6	0 2 1	0 4 10	0 2 3	0 5 2	0 2 5
ಉಡುಪಿ ತಾಲೂಕು	0 4 2	0 1 11	0 4 4	0 2 0	0 4 6	0 2 1	0 4 10	0 2 3	0 5 2	0 2 5
ಕಾಸರಗೋಡು ತಾಲೂಕು	0 4 7	0 2 [illegible]	0 4 9	0 2 4	0 4 11	0 2 5	0 5 4	0 2 8	0 5 8	0 2 11
ಹೊಸದುರ್ಗ ತಾಲೂಕು	0 4 8	0 2 4	0 4 10	0 2 5	0 5 0	0 2 6	0 5 3	0 2 9	0 5 9	0 3 0

ವಿ. ಸೂ.—ಮುಡಿಯ ಕ್ರಯವು ಸೇರಿನ ದರದಂತೆ 42ರಿಂದ ಗುಣಿಸಿ.

ಪ್ರಕಾಶಿನಿ

ಕನ್ನಡ ಮಾಸಪತ್ರಿಕೆ.

ಇದೇ ಕಳೆದ ಜನವರಿಯಿಂದ ಮೂರನೆ ವರ್ಷಾರಂಭವಾಗಿದೆ

ಚಂದಾ ಮತ್ತು ಜಾಹೀರು ದರಗಳಿಗೆ ಬರೆಯಿರಿ.

ಮೆನೇಜರ್,

'ಪ್ರಕಾಶಿನಿ'

ಉಡುಪಿ, ದ. ಕನ್ನಡ.

Read and Advertise in

'PRAKASHINI' UDIPI.

ದಕ್ಷಿಣ ಕನ್ನಡ

ಮಂಗಳೂರು

ರೇಶನಿಂಗ್:—ಅಕ್ಕಿ ರೇಶನಿಂಗ್ ಕಾರ್ಡ ಬರೆಯಲು ಪ್ರಾರಂಭವಾಗಿದೆ. ಮುನ್ಸಿಪಲ್ ಉಪಾಧ್ಯಾಯರಿಂದ ಈ ಕೆಲಸ ಮಾಡಿಸಲ್ಪಡುತ್ತಿದೆ. ಕೆಲ ದಿನಗಳಲ್ಲಿಯೇ ಕೆಲಸ ಮುಗಿದು ಮಾರ್ಚಿಗೆ ರೇಶನಿಂಗ್ ಜಾರಿಗೆ ಬರಲಿರುವುದಾಗಿ ಸುದ್ದಿ.

ವರ್ಧಂತ್ಯುತ್ಸವಗಳು:—ಶಿವಾಜಿ ಸಿವಿಕಲ್ ಕಲ್ಚರಲ್ ಇನ್‌ಸ್ಟಿಟ್ಯೂಟಿನ ವರ್ಧಂತ್ಯುತ್ಸವವು ಶ್ರೀ ಕಾರ್ಕಳ ಸದಾಶಿವರಾಯರ ಅಧ್ಯಕ್ಷತೆಯಿಂದ ನೆರವೇರಿತು. ಭ್ರಾಹ್ಮಣ ವಿದ್ಯಾರ್ಥಿ ಭವನದ ವರ್ಧಂತಿಯು ಸಬ್ ಜಡ್ಜ್ ಶ್ರೀ ಟಿ. ಟಿ. ರಾಮಯ್ಯ ಪಂತಲು ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಸದಾಶಿವ ಅಡಿಗರ ಭಾವಚಿತ್ರ ಅನಾವರಣೋತ್ಸವ ಅಧ್ಯಕ್ಷರ ಹಸ್ತದಿಂದ ನೆರವೇರಿತು. ಶ್ರೀ ಎ. ವಾಸುದೇವರಾಯರ ಸ್ವಾಗತ ಭಾಷಣವಿತ್ತರು. ಭವನದ ಶ್ರೇಯಃಪ್ರಾರ್ಥನೆಯನ್ನು ಶ್ರೀ ಕೆ. ರಾಮರಾಯರು ನೆರವೇರಿಸಿದರು, ಶ್ರೀಗಳಾದ ಕೆ. ನರಸಿಂಹ ಹೊಳ್ಳ ಮತ್ತು ಸುಬ್ರಾಯಭಟ್ಟರು ಉತ್ತರವಿತ್ತರು. ವಿದ್ಯಾರ್ಥಿ ಸಭೆಯ ವರದಿಯನ್ನು ಶ್ರೀ ಪಿ. ಕೆ. ಮಾಧವರಾಯರು ಓದಿದರು. ಅನಂತರ ಬಹುಮಾನ ವಿತರಣ, ಅಧ್ಯಕ್ಷ ಭಾಷಣಗಳಾಗಿ ಶ್ರೀ ಬಿ. ವೆಂಕಟರಮಣರಾಯರು ಕೃತಜ್ಞತೆಯಿತ್ತರು.

ಎಲೋಶಿಯಸ್ ಕಾಲೇಜ್ ಹಾಸ್ಟೆಲ್ ದಿನಾಚರಣೆಯು ಶ್ರೀ ಎಂ. ಕೆ. ನಂಬಿಯಾರರ ಅಧ್ಯಕ್ಷತೆಯಿಂದ ಸ್ವಾಗತ ಭಾಷಣ ಧನ್ಯವಾದಪೂರ್ವಕ ವಿವಿಧ ವಿನೋದಾವಳಿಗಳಿಂದ ಜರಗಿತು.

ಜಿಲ್ಲಾ ಆಹಾರ ಸಮಿತಿ ಸಭೆ:—ಕಲೆಕ್ಟರರ ಕಚೇರಿಯಲ್ಲಿ ಜರಗಿ, ಅನ್ನ ಸಾಮಗ್ರಿಗಳನ್ನು ದೊರಕಿಸಿಕೊಳ್ಳಲು ಹಂಚಲು ಶ್ರೀ ಎಂ. ಶಿವರಾಯರ ಸಮಿತಿ ತಯಾರಿಸಿದ ಯೋಜನೆಯನ್ನು ಸ್ವೀಕರಿಸಿತು. ಗವರ್ನರರ ಅಡ್ವೈಸರರಾದ ಶ್ರೀ ರಾಮಮೂರ್ತಿಯವರಲ್ಲಿಗೆ, ಇಲ್ಲಿಂದ ಒಂದು ಶಿಷ್ಟ ಮಂಡಳ ಹೋಗಿ, ಇಲ್ಲಿನ ಆಹಾರ ಪರಿಸ್ಥಿತಿ ಕುರಿತು ನಿವೇದಿಸಿಕೊಳ್ಳುವುದಲ್ಲದೆ ಈ ಜಿಲ್ಲೆಗೆ ಸಾಕಾಗದೆ ಇರುವ ಕನಿಷ್ಠಪಕ್ಷ ೫ ಲಕ್ಷ ಮುಡಿಗಳಷ್ಟು ಅಕ್ಕಿಯನ್ನಾದರೂ ಹೊರ ಜಿಲ್ಲೆಯಿಂದ ತರಿಸುವಂತೆ ಅವರಲ್ಲಿ ವಿನಂತಿಸುವುದೆಂದೂ ನಿರ್ಣಯವಾಯಿತು. ಮದ್ರಾಸಿನಲ್ಲಿ ಇದೇ ತಾ ೧೭ರಂದು ಈ ಶಿಷ್ಟ ಮಂಡಳಕ್ಕೆ ಭೇಟಿಕೊಡಲು ಅವಕಾಶ ಮಾಡಿಕೊಡಬೇಕೆಂದು ಶ್ರೀ ರಾಮಮೂರ್ತಿಯವರಿಗೆ ತಂತಿ ಕೊಡಲಾಗಿದೆ. ಶಿಷ್ಟ ಮಂಡಳದಲ್ಲಿ ಶ್ರೀಗಳಾದ ಎಂ. ಶಿವರಾವ್, ಎ. ಬಿ. ಶೆಟ್ಟಿ ಮೊದಲಾದವರಿದ್ದಾರೆ.

ಅ. ಕ. ಪತ್ರಿಕೋದ್ಯೋಗಿ ಸಮ್ಮೇಳನ:—ಸ್ವಾಗತ ಸಮಿತಿಯ ಸಭೆಯೊಂದು ತಾ ೯ರಲ್ಲಿ ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಕಟ್ಟಡದಲ್ಲಿ ಸ್ವಾಗತಾಧ್ಯಕ್ಷ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿ ಸಮ್ಮೇಳನವನ್ನು ಕೆನರಾ ಹೈಸ್ಕೂಲ್ ಭುವನೇಂದ್ರ ಸಭಾ ಸದನದಲ್ಲಿ ಜರಗಿಸುವ, ಪ್ರತಿನಿಧಿಗಳಿಗೆ ಊಟೋಪಚಾರ ಮೊದಲಾದವುಗಳ ಏರ್ಪಾಡು ಮಾಡುವ ಇತರ ಕೆಲವು ಪ್ರಮುಖ ವಿಷಯಗಳ ನಿರ್ಣಯಿಸಲ್ಪಟ್ಟವು.

ಅ. ಕ. ಪತ್ರಿಕೋದ್ಯೋಗಿ ಸಮ್ಮೇಳನ ಮಂಗಳೂರು, ಕಾರ್ಯಕ್ರಮ: ತಾ 18ನೇ ಸಂಜೆ ರೈಲ್ವೆ ಸ್ಟೇಶನಿನಲ್ಲಿ ಅಧ್ಯಕ್ಷರಿಗೆ ಸ್ವಾಗತ, 19ನೇ ಬೆಳಿಗ್ಗೆ 9. 30ರಿಂದ ಭುವನೇಂದ್ರ ಸಭಾ ಸದನದಲ್ಲಿ ಶ್ರೀ. ಸಿ. ಆರ್. ರಾಮಯ್ಯನವರಿಂದ ಪತ್ರಿಕಾ ಪ್ರದರ್ಶನದ ಪ್ರಾರಂಭೋತ್ಸವ, ಅಧಿವೇಶನ, ಸ್ವಾಗತಭಾಷಣ, ಸಂದೇಶ ವಾಚನ, ಕಾರ್ಯಕಾರಿ ಮಂಡಳಿಯ ಚುನಾವಣೆ, ಮಧ್ಯಾಹ್ನ 3 ಗಂಟೆಯಿಂದ ಸಂಘಸಂಸ್ಥೆಗಳಿಗೆ ಸಂದರ್ಶನಗಳು, ಉಪಾಹಾರ, ರಾತ್ರಿ 9ಕ್ಕೆ ಕಾರ್ಯಕಾರಿ ಮಂಡಳಿ ಸಭೆ, ತಾ. 20ನೇ ಬೆಳಿಗ್ಗೆ 9ಗಂಟೆಯಿಂದ ಮೈಸೂರಿನ ಶ್ರೀ ವಿ. ಸೀತಾರಾಮಯ್ಯನವರಿಂದ ಪತ್ರಿಕೋದ್ಯೋಗದ ತಜ್ಞತೆಯ ಕುರಿತು ಭಾಷಣ 10-15ಕ್ಕೆ ಮಹಾ ಅಧಿವೇಶನ ತದನಂತರ ನಿರ್ಣಯಗಳು. ಮಧ್ಯಾಹ್ನ 2 ಗಂಟೆಗೆ ವಿಷಯ ನಿಯಾಮಕ ಸಭೆ 4 ಗಂಟೆಗೆ ಅಧಿವೇಶನದ ಮುಕ್ತಾಯ, ಠರಾವುಗಳು ಮತ್ತು ಅಧ್ಯಕ್ಷರ ಕೊನೆಯ ಮಾತುಗಳು, ಧನ್ಯವಾದಪೂರ್ವಕ 6ಗಂಟೆಗೆ ಉಪಾಹಾರ, ರಾತ್ರಿ 9ಗಂಟೆಯಿಂದ ವಿನೋದ ಕಾಲಕ್ಷೇಪಗಳು. ತಾ. 21ನೇ ಸೋಮವಾರ ಬೆಳಿಗ್ಗೆ 6-45ಕ್ಕೆ ರೈಲ್ವೆ ಸ್ಟೇಶನಿನಲ್ಲಿ ಅಧ್ಯಕ್ಷರನ್ನು ಬೀಳ್ಕೊಡುವುದು. 10 ಗಂಟೆಗೆ ಪತ್ರಿಕೋದ್ಯೋಗಿಗಳ ಸಭೆ ಮತ್ತು ಸಾಮಾನ್ಯ ಚರ್ಚೆಗಳು.

ಅಪಘಾತ:—ರಥಬೀದಿಯಲ್ಲಿ ಸ್ಕೂಲ್ ಬಸ್ ಕಂಪನಿಯ ಬಸ್ಸು ತಾ ೧೦ರಂದು ಒಂದು ಜಟ್ಕಾ ರಭಸದಿಂದ ಓಡುತ್ತಿದ್ದಾಗ, ಸುಮಾರು ೧೦ ವರ್ಷ ಪ್ರಾಯದ ಹುಡುಗನೊಬ್ಬನಿಗೆ ತಾಗಿ, ತೀವ್ರ ಪೆಟ್ಟು ಆಗಿ ಆತ ಕೂಡಲೇ ಮೂರ್ಛೆ ಹೋದುದರಿಂದ, ಅವನನ್ನು ಆಸ್ಪತ್ರೆಗೆ ಕೊಂಡೊಯ್ದರು.

ಉಡುಪಿ.

ಶ್ರೀ ಕೃಷ್ಣಾಪುರ ಮಠದಲ್ಲಿ:—ದ. ಕ. ಮತ್ತು ಬಳ್ಳಾರಿ ಜಿಲ್ಲೆಗಳ ರಾಷ್ಟ್ರೀಯ ಯುದ್ಧ ಮುಂಚೂಣಿ ತರಬೇತಿ ಶಿಬಿರವೊಂದು ತಾ 13ರಿಂದ ಉಡುಪಿಯಲ್ಲಿ ಪ್ರಾರಂಭವಾಗಿದೆ. ಪ್ರಾರಂಭದ ದಿನ ಸಂಜೆ ಶ್ರೀ ಅಧಮಾರು ಮಠದವರು ಉಪಾಹಾರವೂ, ಶ್ರೀ ಕೃಷ್ಣಾಪುರ ಮಠದಲ್ಲಿ ರಾತ್ರಿ ಭೋಜನವೂ, ಯುದ್ಧ ನಿಧಿಯ ಸನ್ಮಾನಿಗಳು ಹಲವು ಸರಕಾರಿ ಅಧಿಕಾರಿಗಳಿಗೂ ಕೊಡಲ್ಪಟ್ಟಿತು. ಶ್ರೀ ಕೃಷ್ಣಾಪುರ ಮಠದ ಅಂಗಣದಲ್ಲಿ ಸಭೆ, ಭಾಷಣ, ನಾಟಕಾದಿಗಳೂ ಈ ದಿನ ಜರಗಿದವು.

ರೇಶನಿಂಗ್ ಅಕ್ಕಿಯ ದರವು:—ಸೇರಿಗೆ 0-4-2ವರೆ ಯಿದ್ದದು ಈಗ ನಾಲ್ಕು ಕಾಲುಆಣೆಯಾದೆ. ಸಿಗುವ ಅಕ್ಕಿಯೂ ಬೆಂಕಿಯಾಗಿರುತ್ತದೆ. ಅಂಗಡಿಗಳಲ್ಲಿ ಅಕ್ಕಿ ಕೊಡುವಾಗ ಮಾಡುವ ಅನುಕೂಲತೆಗಳಿಗನುಸಾರವಾಗಿ ಇರುವುದಿಲ್ಲವೆಂದೂ ಎಷ್ಟೋ ಮಂದಿ ಬಡವರು ಹಗಲಿಡೀ ಕ್ಯೂ ನಿಲ್ಲುತ್ತಾರೆಂದೂ ಇನ್ನು ಕೆಲ ಕಾರಣಗಳು ಮೊರೆತವಿಲ್ಲವೆಂದೂ ಸುದ್ದಿ. ಬೆಳ್ಳಿಗೆ ಅಕ್ಕಿ ಸಿಗುವುದೇ ಇಲ್ಲ. ಕಳ್ಳ ಸಂತೆಯಲ್ಲಿಯೋ ಒಂದಕ್ಕೆ ಇಮ್ಮಡಿ, ಮುಮ್ಮಡಿ ಬೆಲೆಕೊಟ್ಟರೆ ಸಿಗುವುದಂತೆ. ಇಲಾಖಾ ಅಧಿಕಾರಿಗಳು ಸ್ವಾಧೀನ ಪಡಿಸಿಕೊಂಡ ಅಕ್ಕಿಯಲ್ಲಿ ಬೆಳ್ತಿಗೆ ಅಕ್ಕಿ ಸಹ ಇರುವುದಂತೆ. ಈ ಅಕ್ಕಿಯನ್ನಾದರೂ ನಿಯಮಿತ ಕ್ರಯದಲ್ಲಿ ವಿಕ್ರಯ ನಡೆಸಬಾರದೇಕೆಂದು ಜನರು ಪ್ರಶ್ನಿಸುತ್ತಿರುವರು. ಸಂಬಂಧಪಟ್ಟವರು ಈ ಕುರಿತು ಗಮನಿಸುವರೆ ಎಂದೊಂದು ಚರ್ಚೆ.

ಅಪಘಾತ ಸ್ಥಳ ದುರಸ್ತಿಯ ಆವಶ್ಯಕತೆ:—ಕಳೆದ ಮಂಗಳವಾರ ದಿನ ಓರ್ವ ವಿದ್ಯಾರ್ಥಿಯು ಬಸ್ ಅಪಘಾತಕ್ಕೆ ತುತ್ತಾಗಿ ಮರಣಪಟ್ಟ ಉದ್ಯಾವರ ಕಲ್ಚಾರು ಸೇತುವೆ ಪಟೂರವು ಜನ, ವಾಹನ ಸಂಚಾರಗಳಿಗೆ ಅನುಕೂಲವಾಗುವಂತೆ ತೀವ್ರ ದುರಸ್ತಿಯಾಗಬೇಕಾಗಿದೆ. ಜಿಲ್ಲಾ ಇಂಜಿನಿಯರಿಂಗ್ ಇಲಾಖೆಯವರು ಈ ಕಡೆ ಕಣ್ಣು ಹಾಯಿಸಿ ಗಮನಕೊಡಬೇಕಾಗಿದೆ.

ಶ್ರೀ ಬಿ. ಎಮ್. ಬಾಳಿಗರ ನಿಧನ:—ಸ್ಥಳೀಯ ಬೋರ್ಡ ಹೈಸ್ಕೂಲಿನ ಡ್ರಿಲ್ ಮಾಸ್ಟರ್ ಮಾಸ್ತರರಾಗಿದ್ದು ತದನಂತರ ಜಿಲ್ಲಾ ರೂರಲ್ ರಿಕ್ರಿಯೇಶನ್ ಆಫೀಸರರಾಗಿ ನೇಮಕ ಹೊಂದಿದ್ದ ಶ್ರೀ. ಬಿ. ಎಮ್. ಬಾಳಿಗರು ತಾ 15ನೆ ಮಂಗಳವಾರ ಮಧ್ಯಾಹ್ನ ದೈವಾಧೀನರಾದರೆಂಬುವುದನ್ನು ವಾಚಕರ ಕಿವಿಗೆ ಮುಟ್ಟಿಸಲು ತುಂಬ ವ್ಯಸನವೆನಿಸುತ್ತದೆ. ಶ್ರೀಯುತರು ದೇಶೀ ಅಂಗಸಾಧನೆಯ ಪ್ರಾಬಲ್ಯವನ್ನು ಜಿಲ್ಲೆಯಲ್ಲೆಲ್ಲಾ ಪ್ರಚಾರಮಾಡಿ 'ಬಾಲಕರ ಬಾಳಿಗರು' ಎಂದು ಹೆಸರುವಾಸಿಯಾಗಿದ್ದರು. ಮೊನ್ನೆ ತಾನೆ ಪಡುಬಿದ್ರೆಯಿಂದ ಬಂದವರು ವಿಶೇಷ ಜ್ವರಪೀಡಿತರಾಗಿ ಹಾಸಿಗೆ ಹಿಡಿದಿದ್ದರು. ಕೀರ್ತಿಶೇಷರನ್ನು ಕಳಕೊಂಡ ಬಂಧುಗಳಿಗೆ ಸಹನಶಕ್ತಿಯನ್ನೂ ಮೃತರ ಆತ್ಮಕ್ಕೆ ಚಿರಶಾಂತಿಯನ್ನೂ ಭಗವಂತನು ಅನುಗ್ರಹಿಸಲಿ.

ಕತ್ತೆ ಕುರುಬನ ಹಾವಳಿ:—ಇತ್ತೀಚೆಗೆ ರಾತ್ರಿ ಕಾಲದಲ್ಲಿ ಸಂಚರಿಸುವ ಕತ್ತೆ ಕುರುಬನ ಹಾವಳಿಯಿಂದಾಗಿ ನೂರಾರು ಆಡುಗಳೂ ದನಗಳೂ ಮಾಯವಾದುವೆಂದೂ ಜತೆಯಲ್ಲಿ ಆಗಾಗ ಹುಲಿರಾಯನ ಸವಾರಿಯೂ ಇದೆಯೆಂದೂ ಸುದ್ದಿ. ನಗರದಲ್ಲಿಯ ಪಶ್ಚಾಶಿಕಾರಿಗಳ ಗಮನಕ್ಕೆ ಇದು ಬಂದಿಲ್ಲವೆ?

ಇನ್ನಂಜೆ:—ಜಿಲ್ಲಾ ವಿದ್ಯಾಧಿಕಾರಿಗಳು ಕಳೆದ ತಾ 28 ಮತ್ತು 29ರಲ್ಲಿ ಇಲ್ಲಿಯ ಎಸ್. ವಿ. ಯಚ್. ಹೈಸ್ಕೂಲಿನ ವಾರ್ಷಿಕ ಪರೀಕ್ಷೆಯನ್ನು ಜರಗಿಸಿ ಗ್ರಾಮದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಈ ಶಾಲೆಯ ಯೋಗ್ಯ ರೀತಿಯ ಹೊಸ ಕಟ್ಟಡ ಮತ್ತು ಸಲಕರಣೆ, ಸಾಕಷ್ಟು ಯೋಗ್ಯ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಸಂಖ್ಯೆ, ಉತ್ತಮ ರೀತಿಯ ಕಾರ್ಯ ಸಂಚಾಲನೆ, ಅತಿ ಅಗ್ಗ ದರದಲ್ಲಿ ಮಾದರಿ ಗುರುಕುಲದಲ್ಲಿ ಭೋಜನ ವಸತಿಗಳ ವ್ಯವಸ್ಥೆ ಇತ್ಯಾದಿಗಳಿಂದ ತುಂಬಾ ತೃಪ್ತಿ ಪಟ್ಟಿರುವರು.

ಮದ್ರಾಸಿನಲ್ಲಿ ಮಧ್ವನವಮಿ ಮಹೋತ್ಸವ ಸಮಾರಂಭ:—ಮದ್ರಾಸಿನ ಶ್ರೀ ಮಧ್ವಸಂಘದ ನೇತೃತ್ವದಲ್ಲಿ ಮಧ್ವನವಮಿ ಮಹೋತ್ಸವವು 'ದಾಸ ಪ್ರಸಾದ' ಮಂದಿರದಲ್ಲಿ ಜನವರಿ ತಾ. 25ರಿಂದ ಫೆಬ್ರವರಿ ತಾ 3ರ ತನಕ ಅತ್ಯಂತ ವಿಜೃಂಭಣೆಯಿಂದ ಜರಗಿತು. ಕಾರ್ಯಕ್ರಮದಲ್ಲಿ ಪುರಂದರದಾಸರ ಚರಿತ್ರೆ, ವಿಷ್ಣು ಸರ್ವೋತ್ತಮತ್ವ, ವಾಯು ಮಹಿಮೆ, ಜ್ಞಾನ ಯೋಗ, ಭಕ್ತಿ ಯೋಗ, ಭೀಷ್ಮ ಚರಿತ್ರೆ, ರಾಮಸ್ತ್ರೀಭ್ಯಾಸದ ಮಹಿಮೆ, ಮಧ್ವಾಚಾರ್ಯರ ಮಹಿಮೆ, ಇತ್ಯಾದಿ ಧಾರ್ಮಿಕ ಭಕ್ತಿ ಮಾರ್ಗಗಳ ವಿಷಯಗಳ ಮೇಲೆ ಉಪನ್ಯಾಸಗಳ ವ್ಯವಸ್ಥೆ ಮಾಡಲಾಗಿತ್ತು. ಮೈಸೂರು ಆಸ್ಥಾನ ವಿದ್ವಾನ್ ಸಂಗೀತ ಶಾಸ್ತ್ರ ರತ್ನ ಇತ್ಯಾದಿ ಬಿರುದಾಂಕಿತರಾದ ಶ್ರೀ ಕೆ ವಾಸುದೇವಾಚಾರ್ಯರಿಗೆ ಮಾನ ಪತ್ರವೂ ಈ ಪುಣ್ಯ ಕಾಲದಲ್ಲಿ ಮಧ್ವ ಸಂಘದ ಕಡೆಯಿಂದ ಕೊಡಲಾಯಿತು. ಮೋಡರ್ನ್ ಕೆಫೆ ಮ್ಹಾಲಕರಾದ ಶ್ರೀ ಕೆ ಶೀನಪ್ಪ ರಾಯರು ಈ ಮಹೋತ್ಸವವು ಯಶಸ್ವಿಯಾಗಲು ತನುಮನ ಧನಗಳಿಂದ ಸೇವೆ ಸಲ್ಲಿಸಿದುದು ಅತ್ಯಭಿನಂದನೀಯವು.

LIABILITIES.	Dec. 31. 1943.	1942
	Rs.	Rs.
Capital subscribed	29,00,000	20,00,000
Capital Paid up	22,10,436	14,96,072
Reserve	8,51,108	4,50,000
Deposits	1,97,55,547	1,45 50,503
Due to Bankers	20,10,000	13,50,000
[illegible]	10,08,551	10,36,559
Bills for collection &		
Foreign Bills negotiated	26,27,391	16,81,196
Other Liabilities	15,766	16,968
Profits for the year	2,64,576	1,53,310
Total	2-88,09,762	2 07,34,608

ASSETS.	Dec. 31. 1943.	1942
	Rs.	Rs.
Cash	73,51,060	43,63,353
Government Securities	90,47,683	63,16,651
Advances to Customers	93,99,429	75,52,902
Bills for collection &		
Foreign Bills negotiate	26,27,391	16,81,196
Landed Properties	70,736	2,14,256
Bank Premises and Furniture		
& Fixtures	93,965	1,00,182
Other Assets	3,19,497	5,06,068
Total	2,88 09.762	2,07,34,608

NOTICE

ಮಂಗಳೂರು ದಿ ಮು. ಕೋರ್ಟಿನಲ್ಲಿ

ಕ್ರಮ ವ್ಯಾಜ್ಯ ನಂಬ್ರ 427/1943

Between;—

ಕೆ. ಯು ನರಸಿಂಗರಾವ್..........ವಾದಿ

ಎದ್ರು

ನಾರಾಯಣ ಶಂಭಟ್ಟ ಕೂಡಾ

—ಪ್ರತಿವಾದಿರು.

ಮೇಲ್ಕಂಡ ದಾವೆಯ 4ನೆ ಪ್ರತಿವಾದಿ-ವಾಸುದೇವ ಶಂಭಟ್ಟನ ಮಗ-ಶ್ರೀನಿವಾಸ ಶಂಭಟ್ಟನಿಗೆ ಯೀ ಮೂಲಕ ತಿಳಿಯಪಡಿಸುವದೇನಂದ್ರೆ—.

ಪ್ರತಿವಾದಿರು ವಾದಿಗೆ ತಾ27-4-1931ರಲ್ಲಿ ಬರಕೊಟ್ಟ ರಿಜಿಸ್ತ್ರಿ ಕ್ರಯಚೀಟಿನಲ್ಲಿ ನಮೂದ್ಸಿದ ಆಸ್ತಿಗಳ ಪೈಕಿ ಶೆಡ್ಯೂಲ್ A 11 ವಗೈರೆ ಆಸ್ತಿಗಳು ಪ್ರತಿವಾದಿರ ಬಿಟ್ಟ ನಾಲಕ್ಕೆ ಸದ್ರಿ ಕೋರ್ಟ R. E. P. ನಂಬ್ರ 109/37ನೇ ಅಮಲ್ದಾರಿಯಲ್ಲಿ ಸೇಲ್ ಆಗಿಹೋದ್ದರಿಂದ-ಸದ್ರಿ ಕ್ರಯ ಚೀಟಿನಲ್ಲಿ ಬೋಂಡ್ ಕೊಟ್ಟಿರ್ವ ಆಸ್ತಿ ಜವಾಬ್ದಾರಿಯಿಂದ ವಗೈರೆ ರೂಪಾಯಿ 1500|- ತನಗೆ ನಷ್ಟ ರೂಪವಾಗಿ ಬರಬೇಕೆಂತ ಮೇಲಿನ ವಾದಿಯು ದಾವಾ ಮಾಡಿರುವದ್ರಿಂದ-ಸದ್ರಿ ದಾವೆಯು ತಾ21-2-1944ಕ್ಕೆ ಮುಂದುವರ್ಸಿಟ್ಟದೆ-ಸದ್ರಿ ದಿವಸ ನೀನು ಖುದ್ದಾಗಲೀ ವಕೀಲ್ ಮುಖಾಂತರ ವಾಗಲೀ ಮೇಲಿನ ಕೋರ್ಟಿನಲ್ಲಿ ಪೂರ್ವಾಹ್ನ ಘಂಟೆ11ಕ್ಕೆ ಹಾಜರಾಗುವರೆ ತಪ್ಪಿದ್ರೆ ಸದ್ರಿ ವ್ಯಾಜ್ಯವು ನಿನ್ನ ಗೈರ್ಹಾಜರಿಯಲ್ಲಿ ತೀರ್ಮಾನವಾಗುವುದು.

K Gopalakrishna Rao

Vakil for Plaintiff

ಮಂಗಳೂರು
ತಾ 7-2-44

☞ ಮುಟ್ಟುಗುಳಿಗೆ ☜

ಹಲತಿಂಗಳಿಂದ ಕಟ್ಟಿಸಿಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದಲೂ—'ಕುಮಾರಿ' (PILLS) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಅಪಾಯವಿಲ್ಲದಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುವು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/-, ಕೈವಿಶಿಷ್ಟ ಕೇಸುಗಳಿಗೆ ರೂ. 5/- (ವಿ. ಪಿ. 12 ಆಣೆ ಅಲಾಯಿದ).

Mrs. P. DEVEE, F. D. S., (N)
TOLLYGUNGE. CALCUTTA,

ಸ್ಟಾಕಿಸ್ಟ್ **Raja Medical Hall,**
31, Dharmaraja St. BANGALORE

ಆರೋಗ್ಯ ವಿಚಾರ

ಕೆಲವು ಹಣ್ಣು ಮೊದಲಾದುವುಗಳ ಗುಣಗಳು

ಅನಾನಾಸ್— ಪಾಚಕ, ಪೌಷ್ಟಿಕ, ಪಿತ್ತಹರ, ಕ್ರಿಮಿನಾಶಕ ಗುಣವುಳ್ಳದ್ದು. ರುಚಿಕರವೂ ಎಲ್ಲ ರೋಗಗಳಿಗೂ ಪಥ್ಯಕರವೂ ಆಗಿದೆ.

ಹಾಗಲಕಾಯಿ—ಕಹಿ, ಅಗ್ನಿದೀಪಕ, ಉಷ್ಣವಾಯು ಕಫಗಳನ್ನು ಹೆಚ್ಚಿಸುತ್ತದೆ. ಗುಲ್ಮಶೂಲೆಯಲ್ಲಿ ಪಥ್ಯಕರವಾಗಿದೆ.

ಖರ್ಜೂರ—ಉತ್ತಮ ಪೌಷ್ಟಿಕ. ಧಾತು ವಿಕಾರ, ಕಫ, ಕೆಮ್ಮು, ದಮ್ಮು, ತಲೆ ಕಾಯಿಲೆ, ವಿಸ್ಮರಣೆ ಮುಂತಾದ ರೋಗಗಳಲ್ಲಿ ಗುಣಕಾರಿಯಾಗಿದೆ.

ಜೀರಿಗೆ—ಪಾಚಕ ಗುಣವುಳ್ಳದ್ದು. ನೇತ್ರ, ಗರ್ಭ, ರುಚಿ, ಬಲ ಇವುಗಳಿಗೆ ಪಥ್ಯಕರವಾದದ್ದು. ಕ್ಷಯ, ಹೊಟ್ಟೆಯುಬ್ಬರ ಕುಷ್ಠ, ವಿಷ, ಜ್ವರ, ರಕ್ತದೋಷ, ಕ್ರಿಮಿ, ಪಿತ್ತ, ಗುಲ್ಮನಾಶಕ.

ತುಲಸೀ ಬೀಜ—ರಕ್ತಪಿತ್ತ, ರಕ್ತಬೀಳೋಣ, ದಾಹ ಮಸ್ತಕಶೂಲೆ ಇವುಗಳಿಗೆ ಗುಣಕಾರಿಯಾಗಿದೆ.

ನೆಲ್ಲಿಚೆಟ್ಟು—ಸಾರಕ, ಪಿತ್ತನಾಶಕ, ಪೌಷ್ಟಿಕ ಸೌಮ್ಯ ಗುಣವುಳ್ಳದ್ದು.

ಬಾಳೆಯದಿಂಡು—ಬಾಳೆಯ ಮರದೊಳಗಿನ ದಿಂಡು ಇದು ಬಹಳ ತಂಪು ಮತ್ತು ಕಫವನ್ನು ಹೆಚ್ಚು ಮಾಡುವುದಾಗಿದೆ.

ಮಾವಿನ ಹಣ್ಣು—ಫಲಗಳಲ್ಲಿ ಬಹು ಶ್ರೇಷ್ಠವಾದದ್ದು. ಪಕ್ವ ಮತ್ತು ಮಧುರವಾಗಿದ್ದರೆ ಉತ್ತಮ ಗುಣವನ್ನುಂಟು ಮಾಡುವುದು.

ಬ್ರಾಹ್ಮಿ (ಸರಸ್ವತಿ)—ರಸವನ್ನು ಸೇವಿಸುವುದರಿಂದ ಶೀತಲ, ಮೇದಸ್ಸು, ಶುಕ್ರ ಧಾತುಗಳನ್ನು ಶುದ್ಧಿ ಮಾಡುತ್ತದೆ. ಅಪಸ್ಮಾರ, ಉನ್ಮಾದ ನಾಶಕ. ಬುದ್ಧಿ, ಆಯುಸ್ಸು ಸ್ಮೃತಿ ಇವುಗಳ ವರ್ಧಕ. ನಿತ್ಯವೂ ಉಪಯೋಗಿಸುವುದು ಒಳ್ಳೆಯದು.

ಕೆಲವು ಸುಲಭ ಚಿಕಿತ್ಸೆಗಳು.

ಅಗ್ನಿಮಾಂದ್ಯ ಜ್ವರಕ್ಕೆ:— ಅಜೀರ್ಣವೇ ಮುಖ್ಯ ರೋಗವಾಗಿದ್ದು ಮೇಲಿಂದ ಮೇಲೆ ಜ್ವರ ಬರುತ್ತಿದ್ದರೆ ಈ ಕಷಾಯವು ಒಳ್ಳೇ ಗುಣವನ್ನು ಕೊಡುವುದು. ಅಮೃತ ಬಳ್ಳಿ, ಪರ್ಪಾಟಕ, ಭದ್ರಮುಷ್ಟಿ ನೆಲಬೇವು, ಒಣಶುಂಠಿ ಪ್ರತಿಯೊಂದನ್ನು ಕಾಲು ತೊಲೆಯಷ್ಟು ತೆಗೆದುಕೊಂಡು 40 ತೊಲೆಯಷ್ಟು ನೀರು ಹಾಕಿ ಚತುರ್ಥಾಂಶ ಕಷಾಯವಿಳಿಸಬೇಕು. ಇದನ್ನು ಹೊತ್ತಿಗೆ ೨-೩ ತೊಲೆ ದಿನಕ್ಕೆ ೩-೪ ಸಲ ಕೊಟ್ಟರೆ ದೀರ್ಘ ಜ್ವರ ಮಲೇರಿಯಾ ಜ್ವರ ಅಜೀರ್ಣಗಳು ಗುಣವಾಗುವವು.

ಜ್ವರ ಅತಿಸಾರಕ್ಕೆ— ಅತಿಸಾರವೆಂದರೆ ನೀರುನೀರಾಗಿ ಅತಿಯಾಗಿ ಹೊರಕಡೆಯಾಗುವುದು. ಅತಿಸಾರದೊಡನೆ ಜ್ವರವೂ ಇದ್ದರೆ ಚಿಕಿತ್ಸೆಯು ಕಠಿಣವಾಗುವುದು. ಆದರಲ್ಲಿ ಈ ಕಷಾಯವು ಬಹು ಮಟ್ಟಿಗೆ ಉಪಯುಕ್ತವಾಗುವುದು. ಅತಿಬಜೆ, ಶುಂಠಿ, ಕೊಸಿಗೆ, ಭದ್ರಮುಷ್ಟಿ, ಅಮೃತಬಳ್ಳಿ ಪ್ರತಿಯೊಂದು ಕಾಲುತೊಲೆ ಜಜ್ಜಿ, ಒಟ್ಟಿನ ೩೨ಪಾಲು ನೀರುಹಾಕಿ ಅಷ್ಟಮಾಂಶ ಕಷಾಯವಿಳಿಸಬೇಕು. ಇದನ್ನು ಹೊತ್ತಿಗೆ ಅರ್ಧ ಔನ್ಸಿನಷ್ಟು ದಿನಕ್ಕೆ ೨-೩ ಸಲ ಕೊಟ್ಟರೆ ಜ್ವರಾತಿಸಾರ ಕಡಿಮೆಯಾಗುವುದು.

ಚರ್ಮದ ಕಲೆಗಳಿಗೆ—ಕಜ್ಜಿ ಹುಣ್ಣುಗಳಿಂದಾಗಲಿ, ಗಾಯಗಳಿಂದಾಗಲಿ, ಕ್ರಿಮಿಗಳ ಕಚ್ಚುವಿಕೆಯಿಂದಾಗಲಿ ಚರ್ಮದಲ್ಲಿ ಕಲೆಗಳು ಉಳಿದರೆ ಮಂಜಿಷ್ಠೆಯನ್ನು ನೀರಿನಲ್ಲಿ ಗಂಧ ತೆಗೆದು ಲೇಪಿಸಬೇಕು. ೧೨ ಘಂಟೆಗಳ ನಂತರ ಆ ಲೇಪವನ್ನು ತೊಳೆದು ತೆಗೆದು ಹೊಸ ಲೇಪಹಾಕಬೇಕು. ಒಂದೆರಡು ವಾರ ಮಾಡಬೇಕು.

ಮಲಬದ್ಧತೆಗೆ—ದ್ವಿ ಪದ್ರಾಕ್ಷಿ ಮತ್ತು ಬೀಜದ ದ್ರಾಕ್ಷಿ ಎರಡೂ ಕೂಡಿ ಕಾಲು ತೊಲೆ ತೆಗೆದುಕೊಂಡು ಒಂದು ಕಪ್ ಬಿಸಿ ನೀರಿನಲ್ಲಿ ೩ ಗಂಟೆ ನೆನೆಯಿಡಬೇಕು. ನಂತರ ಅದನ್ನು ಚೆನ್ನಾಗಿ ಕಿವುಚಿ ನೀರನ್ನಷ್ಟೇ ಕುಡಿಯಬೇಕು. ಸಣ್ಣ ಅಳಲೆ ಕಾಯಿಯ ಪುಡಿಯನ್ನು ಕಾಲು ತೊಲೆಯಷ್ಟು ತೆಗೆದುಕೊಂಡು ಮೇಲಿನಂತೆ ಬಿಸಿನೀರಿನಲ್ಲಿ ನೆನೆಯಿಟ್ಟು ಕಿವುಚಿ ಶೋಧಿಸಿ ಕುಡಿಯಬೇಕು.

ತಾರಾನಾಥ ರಾತ್ರಿ ಶಾಲೆ, ಕೊಲ್ಹಾಪುರ:—ಕೊಲ್ಹಾಪುರದ ಪ್ರೇಮ ಡಿಸ್ಪೆನ್ಸರಿಯ ಡಾ। ಎಂ. ಎಸ್, ಹೆಗ್ಡೆಯಿಂದ, ತಾ4-2-44ರಲ್ಲಿ, ಕೊಲ್ಹಾಪುರದ ಪಾಪಕೋರ್ನರಿನ ಮಹಡಿಯಲ್ಲಿ, ತಾರಾನಾಥ ರಾತ್ರಿ ಶಾಲೆಯು ತೆರೆಯಲ್ಪಟ್ಟಿತು. ಇಲ್ಲಿ ಕನ್ನಡ+ಇಂಗ್ಲಿಷ್ ಶಿಕ್ಷಣವನ್ನು ರಾತ್ರಿ ೧½ ಘಂಟೆ(10ರಿಂದ 11-30) ಕೊಡಲಾಗುತ್ತಿದೆ. ಪ್ರಥಮ ದಿನವೇ ಹದಿನಾರು ವಿದ್ಯಾರ್ಥಿಗಳನ್ನು ದಾಖಲ್ಮಾಡಿಕೊಳ್ಳಲಾಯಿತು. ಮರಾಠೀ ಪ್ರಾಂತ್ಯವಾದ ಕೊಲ್ಹಾಪುರ ನಗರದೊಳಗೆ ಕನ್ನಡ ಶಿಕ್ಷಣವೆಂದರೆ ಇದೇ ಪ್ರಥಮ! ಇದು ಕ್ರಮವಾಗಿ ನಡೆದು, ಎಲ್ಲರ ಸಹಕಾರ, ಸಹಾನುಭೂತಿಗೊಳಗಾಗಲೆಂದು ಹಾರೈಕೆ.

ಮಂಗಳೂರು ತಾಲೂಕು ಬೋರ್ಡ್ ಶಾಲಾ ಉಪಾಧ್ಯಾಯರ ಸಭೆ:—ಮಂಗಳೂರು ತಾಲೂಕು ಬೋರ್ಡ್ ಎಲಿಮೆಂಟರಿ ಶಾಲಾ ಅಧ್ಯಾಪಕರ ಯೂನಿಯನ್ನಿನ ವರ್ಷಾವಧಿ ಮಹಾ ಸಭೆಯು ತಾ27-2-1944ನೇ ರವಿವಾರ ಪೂರ್ವಾಹ್ನ ಘಂಟೆ 11ಕ್ಕೆ ಮಂಗಳೂರಿನ ಗಣಪತಿ ಹೈಸ್ಕೂಲಿನ ಸಭಾ ಮಂದಿರದಲ್ಲಿ ಶ್ರೀ. ಯನ್. ರಾಮ ರಾವ್. ಬಿ ಎ. ಬಿ. ಯಲ್ ಎಡ್ವೊಕೇಟ್ ಮಂಗಳೂರು ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಶ್ರೀ ಅರೂರು ಲಕ್ಷ್ಮೀನಾರಾಯಣ ರಾವ್, ಬಿ. ಎ. ಬಿ. ಯಲ್‌ರವರು ಈ ಸಮ್ಮೇಲನವನ್ನು ಉದ್ಘಾಟನೆ ಮಾಡಲು ಒಪ್ಪಿರುವರು.

ಈ ತಾಲೂಕಿನ ಎಲ್ಲಾ ಬೋರ್ಡ್ ಎಲಿಮೆಂಟರಿ ಶಾಲಾ ಅಧ್ಯಾಪಕ—ಅಧ್ಯಾಪಕಿಯವರು ಅಂದು ತಪ್ಪದೆ ಬಂದು ಈ ಸಭೆಯನ್ನು ಯಶಸ್ವಿಯಾಗಿ ಕೊನೆಗಾಣಿಸುವಂತೆ ಸಹಕರಿಸಬೇಕಾಗಿ ವಿನಂತಿ. ಆ ಕ್ಷಿಪ್ತ ಸಭೆಯ ಮುಂದೆ ಮಂಡಿಸಲಿಕ್ಕೆ ಠರಾವುಗಳು ಏನಾದರೂ ಇದ್ದರೆ ಅಂಥವುಗಳನ್ನು ತಾ25-2-1944ರ ಒಳಗೆ ತಲಪುವಂತೆ ಕಾರ್ಯದರ್ಶಿಗಳ ಪತ್ತಾಸಕ್ಕೆ ಕಳುಹಿಸಿ ಕೊಡುವುದು

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ
R. I. A 1600/43 in O. S. 415/43
ಸಾಂತಪ್ಪ ರೈ — ಅರ್ಜಿದಾರ (ವಾದಿ)
ಸೀತಾರಾಮಭಟ್ಟ ಕೂಡಾ—ಎದ್ರಿದು (ಪ್ರತಿವಾದಿರು)

2ನೇ ಎದ್ರಿ—ರಾಮಕೃಷ್ಣ ಭಟ್ಟ, ಕೇದ್ಯಾಪು ಸೀತಾರಾಮ ಭಟ್ರ ಮಗ, ಮಂಗಳೂರು ರಾಷ್ಟ್ರಬಂಧು ಆಫೀಸಿನಲ್ಲಿ ಕ್ಲಾರ್ಕ್ ಈಗ ಹಾಲಿ ಪುತ್ತೂರು ಕಸಬೆಯಲ್ಲಿರುವವರಿಗೆ—

ಮೇಲ್ಕಂಡ ಅಡವಿನ ವ್ಯಾಜ್ಯದ ಸೀವು ರೂಪಾ 1750/ಕ್ಕೆ ಯೋಗ್ಯ ಜಾಮೀನು ಕೊಡುವ ತನಕ, ನಿಮ್ಮ ಪೈಕಿ 1ನೇ ಎದ್ರಿಗೆ ಕುಟುಂಬದ ಯಜಮಾನನ ನೆಲೆಯಲ್ಲಿ ಕೂಡಾ ಹಕ್ಕಿರುವ ಸ್ಥಿರಾಸ್ತಿಯ ಮೂಲಿಹಕ್ಕನ್ನು ಢಿಕ್ರಿ ಮುಂಚಿತವಾಗಿ ಜಪ್ತಿ ಮಾಡಬೇಕೆಂತ ಮೇಲ್ಕಂಡ ಅರ್ಜಿದಾಖಲು ಮಾಡಿರುತ್ತದೆ. ಸದ್ರಿ ಅರ್ಜಿಯು ತಾ 21-2-44 ಕ್ಕೆ ತನಿಖೆಗೆ ಇಟ್ಟಿರುವುದರಿಂದ ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ 11 ಗಂಟೆಗೆ ಸದ್ರಿ ವ್ಯಾಪಿಗೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಬಿಟ್ಟು ಯಿಮಾ ಏಕಪಕ್ಷ ತೀರ್ಮಾನಿಸಲಾಗುವುದು ಯೆಂತ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗಿದೆ.

(Sd) **N. V. Kolathaya.**
Vakil for Petr.

Puttur
25-1-44



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಕಲ್ಯಾಣಪುರ ಸೊ ಮಿಲ್ಸ್, ಕಲ್ಯಾಣಪುರ—ದ. ಕನ್ನಡ.
ಇಲ್ಲ ಸುಲಭ ದರದಲ್ಲಿ, ಬೇಕಾದ ನಮೂನೆಯಲ್ಲಿ ಎಲ್ಲಾ ತರದ ಮರವನ್ನು ಬಹು ಶೀಘ್ರವಾಗಿ ಸಿಗಿದು ಕೊಡಲಾಗುವುದು.
ಎಂತಹ ಮರವನ್ನಾದರೂ ತಡೆಬಿಡುವಿಲ್ಲದೆ ಗರಗರನೆ ಸಿಗಿಯುವ ಮಿಲ್ ನಮ್ಮಲ್ಲಿರುವುದರಿಂದ ಕೂಲಿಯು ಬಹುಸುಲಭವಾಗಿಯೂ ನಾಜೂಕಾಗಿಯೂ ಸಾಗುವುದು.
ಗ್ರಾಹಕರಿಗೆ ಸರ್ವಾನುಕೂಲತೆಗಳನ್ನು ಒದಗಿಸಲಾಗುವುದು.
ವಿಶೇಷ ಮಾಹಿತಿಗೆ ಬರೆಯುವುದು ಯಾ ಮುಖತಃ ಮಾತನಾಡುವುದು.
ಮೆನೇಜರ್
KALLIANPUR SAW MILLS.
Kallianpur Post S. K

CHAMPAE'S
Snow & Castrex
(Sole Distributors for (India.)
Sukhananda Stores
Santhekatte, UDIPI, S. K.

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction
Also a sovereign remedy for diarrnoea, Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ
ನೊಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 3ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು
ಲವಂಗ ಯಾ ಓಮನ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ
ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ
ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ ಕೆ ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920)

Registered Office: Court Road UDIPI South Canara District

Business Offices: Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs 2,00 000/-

Subscribed and Paid up Capital. Rs 2,00,000/-

Reserve Funds: Rs 1,75,853/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty three years' banking Service stands to our credit.

For further particulars please call at or apply to the nearest office.

Dated 31-10-1943

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing*: **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager

ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರಪೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:— ತುಂಬರವಾಡಿ ಸ್ಟೋರ್ಸ ದಾವಣಗೇರಿ:— ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸರ್ವ್ವೇಕ್ಷಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಚಿಕ್ಕ ಬಾಟ್ಲಿಗಳು ಹೆಚ್ಚು ಕಡಿಮೆ ೮ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ**

THE VIJAYA BANK, LTD.,

Head office: MANGALORE.

Glad to announce that a Branch of the Bank has been opened at PUTTUR on 21-1-1944.

ನಮ್ಮ ಬ್ಯಾಂಕಿನ ಶಾಖೆಯೊಂದು ತಾ. 21-1-44 ರಲ್ಲಿ ಪುತ್ತೂರಿನಲ್ಲಿ ತೆರೆಯಲ್ಪಟ್ಟಿರುತ್ತದೆ.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.



ನಮ್ಮ ಸುವರ್ಣೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ

ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ. ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ.

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

ಸ್ಥಾಪನೆ 1926

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd.o N.M. 3618.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೨೫

FOUNDER
Sri. A. B. Shetty.

Vol. 24 No. 25

NAVAYUGA— Kannada Weekly —UDIPI, S. I.

ಉಡುಪಿ 24—2—1944 ● ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.
ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.
ಬೆಲೆ ರೂ. 1-12-0. ಟ. ಖ. 0-4-0
ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಿರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ
ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.
ಬೆಲೆ 0-14-0 ಟ. ಖ. 0-2-0
ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಲಾಗುವುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

Lest History Should Repeat Itself

"I am the monarch of all that I survey" that was Alexander the Great who said it. He had conquered all the lands that he had known and seen and brought the Greek Empire to the zenith of its glory and power. But his sudden death in the prime of his life brought about the fall of that vast Empire and to-day Greece itself has lost even its freedom.

You are the monarch of your family and are solely responsible for its present and future status and lest History should repeat itself you should insure your life.

The Canara Mutual Assurance Co., Ltd.,

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಅವಲಂಬಿತರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು.-
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ...

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಶುದ್ಧಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುಗದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. **ಪೋಸ್ಟ್ ಖರ್ಚ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೇಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

Revanasiddappa Falappa Davangeri,
Ayurv. 'da Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವಿಕೆ, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮುನೆಯ ಔಷಧಿಗಳು ದೊರೆಯುತ್ತವೆ.

ಖ್ಯಾತಿ ಸಂಸ್ಥೆ ಬರದಲ್ಲಿ ತಕ್ಕದಾದ ಔಷದಿ ಚುನಾಯಿಸಿ ರವಾನಿಸಬಹುದು.

ಕೆಟಲಾಗಿಗೆ ಬರೆಯಿರಿ,

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು
ಉಡುಪಿ ಏಜಂಟರು:- ನವಭಾರತ ಬುಕ್ ಡಿಪೊ, ಸಂತೆಕಟ್ಟೆ. ಉಡುಪಿ.

★ ಅ. ಕ. ಪತ್ರಿಕೋದ್ಯೋಗಿ ಸಮ್ಮೇಳನ. ★

ಅಖಿಲ ಕರ್ಣಾಟಕ ಪತ್ರಿಕೋದ್ಯೋಗಿ ಸಮ್ಮೇಳನವು ತಾ 19ರಲ್ಲಿ ಮಂಗಳೂರಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಆರಂಭವಾಯಿತು.

ಪೂರ್ವಾಹ್ನ ೯||ಘಂಟೆಗೆ ಪತ್ರಿಕಾ ಪ್ರದರ್ಶನವನ್ನು ಉದ್ಘಾಟನೆ ಮಾಡುತ್ತ ಸಿ. ಶ್ರೀ. ಆರ್. ರಾಮಯ್ಯನವರು, (ಬೆಂಗಳೂರು 'ಡೇಲಿ ನ್ಯೂಸ್' ಪತ್ರಿಕೆಯ ಸಂಪಾದಕರು) ಹೀಗೆಂದರು:—

ಮಂಗಳೂರು ಕರ್ಣಾಟಕದ ನಂದನವನವೆಂದು ಹಿಂದೆ ಯಾರೋ ಹೇಳಿದ್ದರು. ಇಂದಿಗೂ ಆ ಹೆಸರು ಇದೆ. ಕಲೆ-ಕೈಗಾರಿಕೆ-ಸಂಸ್ಕೃತಿಯಲ್ಲಿ ಪ್ರಧಾನ ಪಾತ್ರ ವಹಿಸಿದೆ ಈ ಮಂಗಳೂರು ಇಂತಹ ಸ್ಥಳದಲ್ಲಿ ಈ ಸಮ್ಮೇಳನ ಜರಗುತ್ತಿರುವುದು ಸಮಂಜಸವೇ ಸರಿ.

ವೃತ್ತ ಪತ್ರಿಕೋದ್ಯಮದ ಕಡೆಗೆ ದೃಷ್ಟಿ ಹರಿಸಿದರೂ ಮಂಗಳೂರ ಪ್ರಾಧಾನ್ಯ ಕಂಡುಬರುತ್ತದೆ. ಇಲ್ಲಿನ ಮುದ್ರಣದ ಸ್ಫುಟತ್ವ ಮತ್ತು ಸೌಂದರ್ಯ ಹೆಸರುವಾಸಿಯಾದುದು. ಪತ್ರಿಕೆಗಳಲ್ಲೂ ತಮ್ಮದೇ ಆದ ಒಂದು ವೈಶಿಷ್ಟ್ಯವಿದೆ.

"ಆದರೂ ಸಮಗ್ರ ಕರ್ಣಾಟಕದಲ್ಲಿ ಆಗಬೇಕಾದಷ್ಟು ಪ್ರಗತಿ ಆಗಲಿಲ್ಲ. ಸಂಸ್ಕೃತಿ ಮತ್ತು ಭಾವನಾ ದೃಷ್ಟಿಯಿಂದ ಕರ್ಣಾಟಕ ಒಂದಾಗಿದೆ ಆದರೆ ಆಡಳಿತ ದೃಷ್ಟಿಯಿಂದ ಇನ್ನೂ ಕರ್ಣಾಟಕ ಸ್ವಂತ-ಸ್ವತಂತ್ರವಾಗಿಲ್ಲ. ಅಂತಹ ಏಕೀಕರಣವಿಲ್ಲದೆ ತಮಿಳು, ಆಂಧ್ರ, ಬಂಗಾಳಗಳ ಪತ್ರಿಕೆಗಳಂತೆ ನಾವು ಮುಂದುವರಿಯುವುದು ಸಾಧ್ಯವಿಲ್ಲ. ಗಾಂಧಿಯುಗ ಬಂದ ಮೇಲೆ ನಮ್ಮ ಪತ್ರಿಕೆಗಳ ಪ್ರಗತಿಗೆ ಆರಂಭವಾಯಿತು.

"ಪತ್ರಿಕೆಯನ್ನು ಮುದ್ರಿಸಿ ಹೊರ ಹಾಕುವುದು ಬಲು ಕಷ್ಟದ ಕೆಲಸ. ಸುದ್ದಿಗಾರನ ಮೇಲೂ ಹೆಚ್ಚಿನ ಭಾರವಿರುತ್ತದೆ. ಒಳ್ಳೆಯ ಶ್ರಮ ಜೀವಿ ಆತ. ಈ ಎಡೆಯಲ್ಲಿ ಪತ್ರಿಕೆಗಳ ವಾರ್ತೆಯ ಭಾಷೆ-ಶೈಲಿ ಒಳ್ಳೆಯದಾಗುವುದಿಲ್ಲವೆಂಬ ದೂರು ಇದೆ. ಅವಸರದಲ್ಲಿ ಒಳ್ಳೆಯದಾಗುವುದಾದರೂ ಹೇಗೆ?

"ಅಮೇರಿಕದಲ್ಲಿ ನೂರರಲ್ಲೊಬ್ಬರು ಪತ್ರಿಕೆ ಓದುತ್ತಾರೆ. ನಮ್ಮಲ್ಲಿ ನೂರರಲ್ಲಿ ಮೂರುಮಂದಿ ಓದುತ್ತಾರೆ! ಆದರೂ ನಮ್ಮ ದೇಶದ ಅಕ್ಷರಸ್ಥರ ಸಂಖ್ಯೆ ತೆಗೆದರೆ ಹೆಚ್ಚಿನ ಆಶ್ಚರ್ಯ ತೋರುವುದಿಲ್ಲ. ಆದರೂ ಇದು ಸಾಲದು. ಅಕ್ಷರಜ್ಞರ ಸಂಖ್ಯೆ ಹೆಚ್ಚಾಗಬೇಕು. ಚಂದಾದಾರರ ಸಂಖ್ಯೆಯೂ ಏರಿ ಜಾಹೀರಾತುಗಳಿಂದ ಸಿಗುವ ಪ್ರತಿಫಲವೂ ಹೆಚ್ಚಾಗಬೇಕು. ಎಲ್ಲಾ ಸೌಕರ್ಯಗಳಿದ್ದ ಮೇಲೆ ಕನ್ನಡ ಪತ್ರಿಕೋದ್ಯಮ ಉಜ್ವಲವಾಗಿ ಬೆಳೆಯುವುದು."

ಶ್ರೀ ಸಿ. ಆರ್. ರಾಮಯ್ಯನವರಿಂದ ಪತ್ರಿಕಾ ಪ್ರದರ್ಶನದ ಉದ್ಘಾಟನೆ.

ಶ್ರೀ| ವಿ| ಎಸ್| ಕುಡ್ವರ ಸ್ವಾಗತ ಭಾಷಣ:

ಕನ್ನಡ ಪತ್ರಿಕೋದ್ಯಮಕ್ಕೆ ಮತ್ತು ಮುದ್ರಣ ಕೈಗಾರಿಕೆಗೆ ನಮ್ಮ ಜಿಲ್ಲೆಯು ಕೊಟ್ಟ ಪ್ರೋತ್ಸಾಹವು ಅಪಾರ ಎಂಬುದನ್ನು ಅಭಿಮಾನಪೂರ್ವಕವಾಗಿ ನಾವು ಹೇಳಬಲ್ಲೆವು. ಜಿಲ್ಲೆಯ ಮುದ್ರಣ ಇತಿಹಾಸದಲ್ಲಿ ಮೊಟ್ಟಮೊದಲಿನ ಹಾಗು ಅತ್ಯುತ್ಕೃಷ್ಟ ರೀತಿಯ ಮುದ್ರಣಕ್ಕೆ ಹೆಸರು ಹೊಂದಿದ ಬಾಸೆಲ್ ಮಿಶನ್ ಮುದ್ರಣಾಲಯವು 1830ರಲ್ಲೇ ಇಲ್ಲಿ ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಈ ತನಕ ಅಸಂಖ್ಯ ಮುದ್ರಣಾಲಯಗಳು ಇಲ್ಲಿ ತಲೆ ಎತ್ತಿ, ಪ್ರತಿಯೊಂದೂ ಉತ್ತಮ ಮುದ್ರಣ ಮತ್ತು ಅತ್ಯುತ್ಕೃಷ್ಟ ರಚನೆಗೆ ಹೆಸರು ಹೊಂದಿರುತ್ತದೆ. ಪತ್ರಿಕೋದ್ಯಮವೂ ಇಲ್ಲಿಯ ಜನರನ್ನು ಹಲಕಾಲದ ಹಿಂದೆಯೇ ತನ್ನ ಕಡೆಗೆ ಆಕರ್ಷಿಸಿತ್ತು. ಮೊದಲನೆ ಕನ್ನಡ ಪತ್ರಿಕೆಯು 1810ರಲ್ಲಿ ಇಲ್ಲಿ ಪ್ರಕಟವಾಯಿತು. ನಮ್ಮ ಜಿಲ್ಲೆಯಲ್ಲಿ ತಲೆಯೆತ್ತಿದ ವೃತ್ತಪತ್ರಿಕೆಗಳ, ಮಾಸಪತ್ರಿಕೆಗಳ ಮತ್ತು ದೈನಿಕಗಳ ಪಟ್ಟಿಯೊಂದನ್ನು ತಯಾರಿಸಲು ಯತ್ನಿಸಿದರೆ ನಮ್ಮನ್ನೇ ನಾವು ಮರೆಯಬೇಕಾದೀತು-ಅಷ್ಟು ದೊಡ್ಡದಿದೆ ಆ ಸಂಖ್ಯೆ.

ಕರ್ನಾಟಕದಲ್ಲಿ ಪತ್ರಿಕೋದ್ಯಮವು ಇನ್ನೂ ರೂಪ ರಚನೆಯಲ್ಲಿಯೇ ಇದೆ. ಕೆಲವು ದುಸ್ತರವಾದ ತೊಂದರೆಗಳು ಇಲ್ಲಿಯ ಪತ್ರಿಕೋದ್ಯಮದ ಅಭಿವೃದ್ಧಿಗೆ ಕಲ್ಲು ಹಾಕಿವೆ—ನಮ್ಮ ಸಂಸ್ಥಿತಿಯ ವೈಶಿಷ್ಟ್ಯವಾದ ತೊಂದರೆಗಳವು. ನಮ್ಮಲ್ಲಿ ತೋರುವ ಒಂದು ದೊಡ್ಡ ಕುಂದು ಯಾವುದೆಂದರೆ, ಕನ್ನಡ ಭಾಷೆಯು ವ್ಯವಹಾರದಲ್ಲಿರುವ ಸಮಗ್ರಕ್ಷೇತ್ರವು ಸಾಂಸ್ಕೃತಿಕ ದೃಷ್ಟ್ಯಾ ಒಂದೇ ಆಗಿದ್ದರೂ, ರಾಜಕೀಯ ಪ್ರಭೇದಗಳು ಅದನ್ನು ಒಂದು ಸಮಸ್ಯಾತ್ಮಕ ರೀತಿಯಲ್ಲಿ ವಿಚ್ಛಿನ್ನವಾಗಿರಿಸಿರುತ್ತವೆ. ಈ ರೀತಿಯ ಭಿನ್ನ ರಾಜ್ಯಾಡಳಿತ ಭಿನ್ನ ಹಿತಗಳ ಕಾರಣದಿಂದ, ಯಾವುದೊಂದು ಪತ್ರಿಕೆಯೂ ಕರ್ನಾಟಕದ ಸಮಗ್ರ ಜನಸಮುದಾಯಕ್ಕೆ ವಾಚನೀಯವಾಗಿರುವುದಿಲ್ಲ; ಕಾರಣ, ಯಾವ ಪತ್ರಿಕೆಯನ್ನೂ ಸಮಗ್ರ ಕರ್ನಾಟಕಕ್ಕೆ ವಾಚನೀಯವಾಗುವಷ್ಟು ವಿಶಾಲವಾಗಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ದೊಡ್ಡ ಸಮಸ್ಯೆಯು ಎಲ್ಲಾ ಕಾರ್ಯಶಾಲಿ ಪತ್ರಿಕೋದ್ಯೋಗಿಗಳ ತಲೆಕೆಡಿಸಿತು. ಆದರಿಂದಾಗಿ ಕರ್ಣಾಟಕದಲ್ಲಿ ಕೇವಲ ವೈಯಕ್ತಿಕ ಪತ್ರಿಕೆಗಳು ಮಾತ್ರ ಉಳಿಯುವಂತಾಯಿತು ಹೊರತು ಸಮಗ್ರ ಕರ್ನಾಟಕಕ್ಕೆ ಪತ್ರಿಕೋದ್ಯಮವನ್ನು ಪ್ರತಿಬಿಂಬಿಸುವ ಒಂದು ಸಂಘಟಿತ ಶಕ್ತಿ ರಚನೆಯಾಗಲಿಲ್ಲ. ಕರ್ನಾಟಕದಲ್ಲಿ ಚೇತನಭರಿತವಾದ, ಜೀವಕಳೆ ತುಂಬಿ ತುಳುಕುತ್ತಿರುವ ಪತ್ರಿಕೋದ್ಯಮವು ಬೆಳೆಯದಿರಲು ವಿಘ್ನಕಾರಿಯಾದ ಮತ್ತೊಂದು ಎದರು-ವ್ಯವಹಾರ ಸೌಕರ್ಯಗಳ ಅಭಾವ.

ಇಂದು ಜಗತ್ತಿನ ರಾಜಕೀಯ ಅಂಗರಚನೆಯಲ್ಲಿ ಪತ್ರಿಕೋದ್ಯಮಕ್ಕೆ ಒಂದು ಪ್ರಾಮುಖ್ಯಸ್ಥಾನವಿದೆ. ಅದು ನಾಗರಿಕ ಹಕ್ಕಿನವುಗಳಾದ ಚತುಸ್ಸ್ವಾತಂತ್ರ್ಯಗಳಲ್ಲಿ ನಾಲ್ಕನೆಯದಾಗಿದೆ; ಸಾರ್ವಜನಿಕರ ಅಂತರಾಳದ ಕರೆಯದು; ಅದೊಂದು ಪ್ರತಿಬಿಂಬ, ಸಾರ್ವಜನಿಕರ ಅಭಿಪ್ರಾಯದ ಕನ್ನಡಿ, ಎಣಿಸಲ್ಪಡತಕ್ಕ ಶಕ್ತಿ. ಎಲ್ಲಾ ಪತ್ರಿಕೋದ್ಯೋಗಿಗಳು ಒಂದಾಗಿ, ಕರ್ನಾಟಕದಲ್ಲಿನ ಪತ್ರಿಕಾ ಶಕ್ತಿಯನ್ನು ಇನ್ನಷ್ಟು ಜನಮಾನ್ಯ, ಇನ್ನಷ್ಟು ಶಕ್ತಿಪೂರ್ಣ, ಇನ್ನಷ್ಟು ಉತ್ಪತ್ತಿದಾಯಕ ಹಾಗೂ ಗೌರವಪೂರ್ಣವನ್ನಾಗಿ ಮಾಡಲು ಪಂತತೊಟ್ಟು, ಕಾರ್ಯರಂಗಕ್ಕಿಳಿದು ಕೃತಕೃತ್ಯರಾದರೆ ಅಂದಿನ ಶುಭದಿನವು ಎಷ್ಟೊಂದು ಮಹತ್ವಪೂರ್ಣವೆನಿಸೀತು!

ಇಂದು ಕರ್ನಾಟಕದಲ್ಲಿ ಪತ್ರಿಕೋದ್ಯಮವು ಲಾಭದಾಯಕ ಉದ್ಯೋಗವಾಗಿ ಕಂಡುಬರುವುದಿಲ್ಲ. ಪತ್ರಿಕೆಗಳಲ್ಲಿ ಹಲವು, ಅಸ್ಥಿರ ಜೀವನ ನಡೆಸಿಕೊಂಡಿವೆ ಎಂದರೆ ತಪ್ಪಾಗದು-ಅರೆ ಹೊಟ್ಟೆಯಲ್ಲಿ ಜೀವಧಾರಣೆ ಮಾಡಿಕೊಂಡಿರುವ ಪತ್ರಿಕೆಗಳೂ ನಮ್ಮಲ್ಲಿವೆ. ಅಂತೆಯೇ ಪತ್ರಿಕೋದ್ಯೋಗಿಗಳಿಗೆ ಅಗತ್ಯವಿರುವ ಸಾಧನಗಳನ್ನು ಒದಗಿಸಕೊಡಲು ನಾವು ಮರೆಯಬಾರದು. ಇಂದು ನಮ್ಮಲ್ಲಿಯ ಪತ್ರಿಕೋದ್ಯೋಗಿಗೆ ನಾವು ಒದಗಿಸಿಕೊಡು[illegible] ಜ್ಞಾನವು ಕೇವಲ ಅನುಭವಸಿದ್ಧ ಪ್ರತ್ಯ[illegible]ಯದು. ಅವರನ್ನು ತರಬೇತಿಗೊಳಿಸು[illegible] ಯಾವ ರೀತಿಯ ವ್ಯವಸ್ಥೆಯೂ ನಮ್ಮ [illegible]ಶ್ವವಿದ್ಯಾಲಯಗಳಲ್ಲಿಲ್ಲ. ನಮ್ಮಲ್ಲಿಯ [illegible]ತ್ರಿಕೋದ್ಯೋಗಿಗೆ ತನ್ನ ಭಾಷಾಜ್ಞಾನ [illegible]ಕಾಸಗೊಳಿಸಲನುಗುಣವಾಗುವ ಯೋ[illegible] ಕನ್ನಡ ಪುಸ್ತಕಗಳ ಸಂಗ್ರಹ ಇಲ್ಲವೆ [illegible]ತರ ಪರಿವಾರ ಸಾಹಿತ್ಯ ಸಿಗುವುದಿಲ್ಲ; [illegible]ತ್ರಿಕಾಕಾಯಿದೆಗಳಾವುವು; ಮಾನನಷ್[illegible]ಕಾಯಿದೆಯನ್ವಯ ಬರುವ ವಿಷಯಗಳ[illegible]ವುವು, ಕೊಪಿರೈಟ್ ಆಕ್ಟ ಅಂದರೇನು, [illegible]ತ್ರಿಕೆಯ ಅಂಗರಚನೆ ಹೇಗಿರಬೇಕು-[illegible]ತ್ಯಾದಿ ವಿಷಯಗಳನ್ನು ತಿಳಿಯಬೇಕಾದ[illegible] ಅವನು ಸ್ವಯಂ ಶಿಕ್ಷಣದ ಮೇಲೆ ಅ[illegible]ಲಂಬಿಸಿರಬೇಕಲ್ಲದೆ, ಅವನಿಗೆ ಬೇರೆ ತ[illegible]ಬೇತಿ ಇಲ್ಲ. ಇದು ಖಂಡಿತವಾಗಿಯ[illegible] ಪತ್ರಿಕೋದ್ಯಮದ ಭಾವೀ ಬೆಳವಣಿಗೆ[illegible] ಅಷ್ಟೊಂದು ಚೆನ್ನಾಗಿ ಒಪ್ಪುವುದಿಲ್ಲ.

CANARA BANK LIMITED

(Estd: 1906)

Genral Manager: D. S. Nayak, B. A., B. L., F. I. I. B.

LIABILITIES.	Dec. 31. 1943. Rs.	1942 Rs.	ASSETS.	Dec. 31. 1943. Rs.	1942 Rs.
Capital Subscribed	20,00,000	20,00,000	Cash	73,51,060	43,63,353
Capital Paid up	24,49,436	14,96,072	Government Securities	90,47,683	63,16,651
Reserves	8,54,198	4,50,000	Advances to Customers	92,99,429	75,52,902
Deposits	1,97,85,817	1,45,50,503	Bills for collection & Foreign Bills negotiate	26,27,391	16,81,196
Due to Bankers	20,10,000	13,50,000	Landed Properties	70,736	2,14,256
Branch adjustments	10,08,553	10,36,559	Bank Premises and Furniture & Fixtures	93,963	1,00,182
Bills for collection and Foreign Bills negotiated	26,27,391	16,81,196	Other Assets	3,19,497	5,06,068
Other Liabilities	15,766	16,968			
Profit for the year	2,68,576	1,53,310			
Total	2,88,09,762	2,07,34,608	Total	2,88,09,762	2,07,34,608

NOTICE

In the Court of the District Munsif of Mangalore.

S. C. No. 564/194[illegible]

Between—

Lignory D'Souza by agen[t] Denis Saldanha ... Plaintif[f]

and

Benedict D' Souza-Defendan[t]

Notice to the defendant [B.] Souza son of the late Salvador D' Souza, residing in Bangrakuloor village, Mangalore Taluk is hereby given that the plaintiff has filed the above suit against him for the recovery of Rs. 56—9—0 being arrears of rental and interest due up to 31-3-1943 in respect of the property appertaining to S. Nos 23-2-15 at Padukodi village held by the defendant under the terms of the Chalgeni lease dated 9-2-1941, and that the suit is posted to 29—2—1944 for hearing. On the defendant's failure to appear in Court on the said day the suit will be proceeded with in his absence.

(By order of Court)

John Gonsalves,

Vakil for Pltf.

Mangalore 16-2-1944

ದುದರಿಂದ ಮೈಸೂರು ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಕಂಡು, ಪತ್ರಿಕೋದ್ಯೋಗದ ಕುರಿತು ಹೇಳಿಕೊಡುವ ಒಂದು ಪ್ರತ್ಯೇಕ ವಿಭಾಗವನ್ನು ಅವರ ಪಾಠಕ್ರಮದಲ್ಲಿ ಸೇರಿಸಿಕೊಳ್ಳಲು ಕೇಳಿಕೊಳ್ಳುವುದು ಆಗತ್ಯವಿವೆ. ಬ್ರಿಟಿಷ್ ಕರ್ನಾಟಕಕ್ಕೆ ತನ್ನದೇ ಆದ ಒಂದು ವಿಶ್ವವಿದ್ಯಾಲಯ ಇರುವುದಿಲ್ಲ. ಕರ್ನಾಟಕ ವಿಶ್ವವಿದ್ಯಾಲಯವೊಂದು ಸ್ಥಾಪನೆಯಾಗಬೇಕೆಂಬ ಚಳವಳಕ್ಕೆ ಬೆಂಬಲಕೊಡುವುದು ಅತ್ಯವಶ್ಯವಲ್ಲವೇ? ಈ ಪರಿಷತ್ತು ಪತ್ರಿಕಾ ವ್ಯವಸಾಯದಲ್ಲಿ ಒಂದು ವಿದ್ಯಾಂಗವನ್ನು ರಚಿಸಬೇಕು; ಆಗಾಗ್ಗೆ ಪರೀಕ್ಷೆಗಳನ್ನು ಏರ್ಪಡಿಸಿ ಉತ್ತೀರ್ಣರಾದವರಿಗೆ ಯೋಗ್ಯತಾಪತ್ರಗಳನ್ನು ಕೊಡಬೇಕು ಮತ್ತು ಪತ್ರಿಕೋದ್ಯೋಗಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಕನ್ನಡದಲ್ಲಿ ಪುಸ್ತಕಗಳನ್ನು ಪ್ರಕಟಿಸಬೇಕು ಎಂಬಿತ್ಯಾದಿ ಯೋಗ್ಯ ಸಲಹೆಯೊಂದು ಈ ಪರಿಷತ್ತಿನ ಮುಂದೆ ಬಂದಿದೆ. ಆ ಸಲಹೆಯನ್ನು ನಾನು ಮನಸಾರೆ ಒಪ್ಪುತ್ತೇನೆ.

ಪತ್ರಿಕೆಯನ್ನು ಆಕರ್ಷಕ ಮತ್ತು ಜನಪ್ರೀತವನ್ನಾಗಿ ಮಾಡುವುದು ಹೇಗೆ ಎಂಬ ವಿಷಯವನ್ನು ನಾವು ತೀವ್ರ ಚರ್ಚಿಸಬೇಕಾಗಿದೆ ಹಿತಕರವಾದ ಹಾಸ್ಯರಸವನ್ನು ಹೇಗೆ ಒದಗಿಸಿಕೊಡಬೇಕು, ಹೃದಯದ ಆಹ್ಲಾದದಿಂದ ಪ್ರೇರಿತವಾದ ನಗು ಹುಟ್ಟಿಸುವಂತೆ ಹೇಗೆ ಮಾಡಬಹುದು, ನಿಜವಾದ ಜ್ಞಾನವನ್ನು ಜನರಿಗೆ ಹೇಗೆ ತಿಳಿಸಬಹುದು, ಉಪಯುಕ್ತ ವಿಷಯಗಳನ್ನು ದೋಷರಹಿತವಾಗಿ ಹೇಗೆ ಒದಗಿಸಬಹುದು. ದ್ವೇಷರಹಿತವಾದ ಅಭಿಪ್ರಾಯಗಳಿಗೆ ಹೇಗೆ ರೂಪು ಕೊಡಬಹುದು ಎಂಬುದನ್ನು ಪತ್ರಿಕೆಗಳು ಚೆನ್ನಾಗಿ ಗಮನಿಸುವುದೊಳ್ಳಿತು.

ಅಖಿಲ ಕರ್ನಾಟಕದಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಸುದ್ದಿ ಮುಟ್ಟಿಸಲು 'ವಾರ್ತಾವಾಹಕ ಸಂಸ್ಥೆ'ಯೊಂದು ಆಗತ್ಯ ವ್ಯವಸ್ಥೆಯಾಗಬೇಕು. ಈ ಪ್ರಶ್ನೆಯನ್ನು ಪತ್ರಿಕೋದ್ಯೋಗಿಗಳು ಮುಖ್ಯತಃ ಚರ್ಚಿಸಬೇಕಾಗಿದೆ. ಲಿಪಿ ಸುಧಾರಣೆಯ ಪ್ರಶ್ನೆ, ಕನ್ನಡ ಟೈಪ್ ರೈಟಿಂಗ್, ಲಿನೋಟೈಪ್, ಮೊನೋ-ಟೈಪ್ ಮತ್ತು ರೋಟರಿ ಇವುಗಳನ್ನು ಬೆಳಕಿಗೆ ತರುವ ಯೋಜನೆ, ಈ ಮಹತ್ವದ ವಿಷಯಗಳನ್ನೂ ನಾವು ಚರ್ಚೆಗೊಳಪಡಿಸದಿದ್ದರೆ ಇಂದಿನ ನಮ್ಮ ವಿಚಾರ ವಿನಿಮಯಗಳು ಪೂರ್ಣತೆ ಹೊಂದುವಂತಿಲ್ಲ.

ಅ. ಕ. ಪತ್ರಿಕೋದ್ಯೋಗಿ ಸಮ್ಮೇಳನದಲ್ಲಿ

ಅಧ್ಯಕ್ಷ ಶ್ರೀ. ಸಿ. ಆರ್. ಶ್ರೀನಿವಾಸನರ ಭಾಷಣ.

ಇಂದು ಜಗತ್ತು ಪ್ರಳಯಕಾರೀ ಯುದ್ಧದ ವೇಗದಿಂದ ಕರಗುತ್ತಿದೆ. ಯುದ್ಧವು ಭಾರತದಲ್ಲಿರುವ ನಮಗೆ ಹೊಸ ಸಮಸ್ಯೆಗಳನ್ನು ತಂದೊಡ್ಡಿದೆ. ಪ್ರೆಸ್ ಕಾಯಿದೆಗಳು, ಪ್ರಿ-ಸೆನ್ಸರ್‌ಶಿಪ್ ಇವೇ ಮುಂತಾದ ಕಾನೂನುಗಳ ಶೃಂಖಲೆಯಿಂದ ಇಂದು ನಮ್ಮಲ್ಲಿಯ ಪತ್ರಿಕಾ ವ್ಯವಸಾಯವು ಬಿಗಿಯಲ್ಪಟ್ಟಿದೆ. ಈ ನಿರ್ಬಂಧಗಳು ಯುದ್ಧಯತ್ನಗಳ ಅವಶ್ಯಕತೆಯನ್ನು ಮೀರದಂತೆ ನೋಡಿಕೊಳ್ಳುವುದು ಪತ್ರಿಕೋದ್ಯೋಗಿಗಳಾದ ನಮ್ಮ ಕರ್ತವ್ಯವಾಗಿರುತ್ತದೆ. ಪತ್ರಿಕೆಗಳ ಹಕ್ಕನ್ನು ಕಾಪಾಡಲು ಭಗೀರಥ ಯತ್ನ ನಡೆಸುವ ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತಿಗೆ ಸಂಪೂರ್ಣ ಬೆಂಬಲವನ್ನು ನೀಡಬೇಕು.

ಅಧ್ಯಕ್ಷರ ಭಾಷಣ.

ಮದ್ರಾಸಿನ 'ಸ್ವದೇಶ ಮಿತ್ರನ್' ಪತ್ರಿಕಾ ಸಂಪಾದಕರೂ (ಸರ್ವ್ ಬ್ಯಾಂಕಿನ ಡೈರೆಕ್ಟರರಲ್ಲೊಬ್ಬರೂ ಆದ ಶ್ರೀ ಸಿ. ಆರ್. ಶ್ರೀನಿವಾಸನ್‌ರವರು ಭಾಷಣ ಮಾಡುತ್ತಾ:-"ಈ ಪರಿಷತ್ತಿನ ಅಧ್ಯಕ್ಷತೆ ವಹಿಸಲು ನಾನು ಪ್ರಯಾಸದಿಂದ ಆಮಂತ್ರಣವನ್ನು ಸ್ವೀಕರಿಸಿದ್ದೇನೆ. ನಾನೇನೂ ನಿಮ್ಮ ಗೌರವವನ್ನು ವಿಸ್ಮರಿಸುವ ಅವಿವೇಕಿಯಾಗಲಾರೆ; ಆದರೆ ಅದರ ಜತೆಯಲ್ಲಿರುವ ಜವಾಬ್ದಾರಿಕೆಯ ಕುರಿತು ವಿವೇಕಿಯಾಗಿರುವೆ. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ನಾನು ಹೆಚ್ಚಾಗಿ ಅಭ್ಯಾಸಿಸಬೇಕಾಗಿದ್ದಿತು ಹೇಗಿದ್ದರೂ ಇದು ಪತ್ರಿಕೋದ್ಯಮಿಗಳ ಪರಿಷತ್ತು, ಎಂಬ ಧೈರ್ಯದಿಂದ, ಈ ವೃತ್ತಿಯ ಹೆಚ್ಚು ಅನುಭವ ಮತ್ತು ಜ್ಞಾನವನ್ನು ಸಂಪಾದಿಸಲು ಮುಂದೆ ಬಂದಿರುತ್ತೇನೆ. ಕಳೆದ ೩೦ ವರ್ಷಗಳಿಂದ ನಾನು ದಕ್ಷಿಣಭಾರತದ ಅತ್ಯಂತ ಪ್ರಾಚೀನ ತಮಿಳು ದಿನಪತ್ರಿಕೆಯ ಒಡೆತನದ ಜವಾಬ್ದಾರಿಕೆಯಲ್ಲಿ ಭಾಗವಹಿಸಿರುತ್ತೇನೆ. ದಕ್ಷಿಣ ದೇಶದ ಮಹಾಮೇಧಾವಿ ಪತ್ರಿಕೋದ್ಯಮಿಯು ನನ್ನ 'ಈ ಕೈಗಾರಿಕೆ'ಯ ಪಾಠ ಕಲಿಸಿರುತ್ತಾನೆ ಆದುದರಿಂದ ಇತರರ ಕರೆ ಬಂದಾಗ, ನನ್ನ ಅನುಭವವನ್ನೀಯಲು ನಾನೆಂದಿಗೂ ಹಿಂಜರಿಯಲಾರೆ ಮತ್ತು ನೀವು ಇಷ್ಟ ಬಂದಂತೆ ನನ್ನನ್ನು ಉಪಯೋಗಿಸಿಕೊಳ್ಳಬಹುದು! ಕರ್ನಾಟಕಕ್ಕೆ ಸಂಬಂಧಿಸಿದ ವಿವಾದಾಸ್ಪದ ವಿಷಯಗಳನ್ನು ಪರಿಷತ್ತಿಗೊಪ್ಪಿಸಿ, ಕೇವಲ ನನ್ನ ಆತ್ಮತೃಪ್ತಿಯ ಸಲುವಾಗಿ, ಈ ರಾಷ್ಟ್ರದ ಪತ್ರಿಕೋದ್ಯಮ, ಅದರ ಬೆಳವಣಿಗೆ ರೂಪರೇಷಗಳ ಕುರಿತು ಭಾಷಣಮಾಡುವ ನನ್ನನ್ನು ಆರೋಪಿಸದೆ ದೋಷಮುಕ್ತಗೊಳಿಸಿರಿ!

ರಾಜ್ಯಘಟನಾ ಚರಿತ್ರೆಯ ವಿದ್ಯಾರ್ಥಿಗಳಿಗೆ ನಮ್ಮ ರಾಷ್ಟ್ರದ ಪತ್ರಿಕಾ ಇತಿಹಾಸವು ಚಿತ್ತಾಕರ್ಷಕವಾಗಿರುವುದು. ಸಂಶೋಧನಾ ವಿದ್ಯಾರ್ಥಿಗಳಿಗೆ ಯಥಾರ್ಥ ನೋಟದ ಲಿಖಿತ ಅಧ್ಯಾಯಗಳು ಕಡಿಮೆಯಾಗಿದ್ದರೂ ಹೇರಳ ಸಲಕರಣೆಗಳು ದೊರೆಯುತ್ತಿವೆ. ಹೇಗಿದ್ದರೂ ನಾನು ಅಂತರಾಳದ ವರೆಗೆ ಪ್ರವೇಶಿಸುವ ಹವ್ಯಾಸವನ್ನು ತ್ಯಜಿಸಿ, ಸ್ಥೂಲರೂಪದಿಂದ ವಿವರಿಸುತ್ತೇನೆ.

ಪತ್ರಿಕೆಯ ಪ್ರಾಚೀನ ಇತಿಹಾಸ

ಜಾನ್ ಕಂಪೆನಿ ಕಾಲದಲ್ಲಿ ಬ್ರಿಟಿಷರ ಇತರ ಸಂಸ್ಥೆಗಳಂತೆ, ಭಾರತ ಪತ್ರಿಕೋದ್ಯಮವೂ ಬ್ರಿಟಿಷ್ ಪತ್ರಿಕೆಯ ರೆಂಬೆಯಾಗಿ ನಮ್ಮ ರಾಷ್ಟ್ರದಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ಅಂದಿನ ಮಿಥ್ಯಾಭಾರತ ಪತ್ರಿಕೋದ್ಯಮವು ತನ್ನ ಆರಂಭ ಸ್ಥಿತಿಯಲ್ಲಿ ಭಾರತೀಯರ ಹಿತ ಬಯಸಲೂ ಇಲ್ಲ! ಭಾರತೀಯರ ಹೃದಯ-ವನ್ನರಿಯಲೂ ಇಲ್ಲ! ಭಾರತ ಪತ್ರಿಕೋದ್ಯಮದ ಧಾತೃಗಳಾದ ಜೇಮ್ಸ್ ಹಿಕಿ ಮತ್ತು ಸಿಲ್ಕ್ ಬಕಿಂಗ್ಹಾಮ್‌ರವರು ರಾಷ್ಟ್ರದ ಅದೃಷ್ಟ ಪರೀಕ್ಷೆಯ ಗೊಡವೆಯನ್ನು ತ್ಯಜಿಸಿ, ಕೇವಲ ಸ್ಥಾನಭದ್ರತೆಯ ಸ್ವಾರ್ಥ ಲೋಲುಪರಾಗಿದ್ದರು. ಈ ದೇಶದ ಜನರ ಸುಧಾರಣೆ ಮತ್ತು ಅಭ್ಯುದಯದ ಕೂಗನ್ನು ಪ್ರಥಮತಃ ಎಬ್ಬಿಸಿದವರು ಕ್ರಿಶ್ಚನ್ ಮಿಷನರಿಗಳಾಗಿರುವರು; ಆದರೆ ಅನ್ಯೊಂದು ಸುಧಾರಣೆಗಳು ಪ್ರಪಂಚದಲ್ಲಿ ಎಲ್ಲಿಯೂ ಲಭಿಸಲಾರದೆಂದು ಅವರ ಹೇಳಿಕೆ ನಿರಾಕರಿಸಲ್ಪಟ್ಟಿತು. ಅಂದಿನ ದಿನಗಳಲ್ಲಿ ಸುಲಭವಾಗಿ ಸಾಮ್ರಾಜ್ಯವನ್ನು ಕಸಿದುಕೊಳ್ಳಲು ಜಾನ್ ಕಂಪೆನಿಯವರು ವ್ಯವಹಾರದ ಸೋಗುಹಾಕಿಕೊಂಡಿದ್ದರು. ಅವರಸರು ಕೇವಲ ವ್ಯಾಪಾರದ ದೃಷ್ಟಿಯನ್ನಿಟ್ಟುಕೊಂಡು ಸರಕಾರದ ಚಟುವಟಿಕೆಗಳನ್ನು ನಿಯಂತ್ರಣಗೊಳಿಸಿದ್ದರು. ತಮ್ಮ ವ್ಯಾಪಾರ, ವ್ಯವಹಾರದ ಹಿತಾಶಯಗಳನ್ನು ಬಯಸಿ, ಅವರು ಕಾನೂನು ಮತ್ತು ನೈತಿಕತೆಯನ್ನು ಪೂರ್ಣವಾಗಿ ಲೋಪಗೊಳಿಸಿದ್ದರು.

ಅಂದಿನ ದಿನಗಳಲ್ಲಿ ಆಂಗ್ಲೋ-ಇಂಡಿಯನ್ ಪತ್ರಿಕೆಗಳಿಗೆ ರಾಜಕೀಯ ಹೋರಾಟ ನಡೆಸಲು ಅಧಿಕಾರವನ್ನೇರ್ಪಡಿಸಲಾಗಿದ್ದಿತು. ಅನಂತರ ದೇಶೀಯ ಪತ್ರಿಕೆಗಳು ಪೂರ್ಣವಾಗಿ ವಿವಿಧ ಧ್ಯೇಯಗಳನ್ನು ಪ್ರತಿಪಾದಿಸಲು ಅಂಕುರಿಸಿದವು. ಇಂಡಿಯಾ ಸರಕಾರವು ಚಕ್ರಾಧಿಪತ್ಯ ಆಡಳಿತೆಯಿಂದ ಹೊರಗೆ ಬಂದಮೇಲೆ, ಆಂಗ್ಲೋ ಇಂಡಿಯನ್ ಪತ್ರಿಕೆಗಳು ಸರಕಾರದ ವಿರುದ್ಧ ಭಿನ್ನಾಭಿಪ್ರಾಯಗಳ ಪಿಂಗಡವನ್ನು ತ್ಯಜಿಸಿ, "ಆಳುವ ತರಗತಿ"ಯವರೊಡನೆ ಪುನರ್ಮಿಲನ ಹೊಂದಿರುವುವು. ಲಕ್ನೋ ಪಯನೀರ್ ಪತ್ರಿಕೆಯು, ಒಂದು ಕಾಲದಲ್ಲಿ ಆಂಗ್ಲೋ-ಇಂಡಿಯನ್ ಪಕ್ಷದ ಪಕ್ಷವರ್ತಿಯಾಗಿದ್ದು, ಇಂದು ಭಾರತೀಯರ ಹಸ್ತಗತವಾಗಿರುವುದು. "ಇಂಗ್ಲಿಷ್ ಮನ್" ಪತ್ರಿಕೆಯು ಪ್ರಾಚೀನ ಕಾಲದ ಆಂಗ್ಲೋ-ಇಂಡಿಯನ್ ಪತ್ರಿಕೆಯಾದರೂ ಪ್ರಕೃತ ಅಸ್ತಿತ್ವವನ್ನು ಕಳೆದುಕೊಂಡಿರುತ್ತದೆ.

ಕಾಂಗ್ರೆಸ್ ಪಕ್ಷದ ಪತ್ರಿಕೆಗಳು.

ಭಾರತ ಪತ್ರಿಕೋದ್ಯಮದ ಪ್ರಾಚೀನ ಇತಿಹಾಸಗಳೇನೇ ಇದ್ದರೂ, ಸಹಜವಾಗಿ, ರಾಷ್ಟ್ರೀಯ ಕಾಂಗ್ರೆಸ್ ಜನಿಸಿದ ಬಳಿಕವೇ ಪತ್ರಿಕೋದ್ಯಮವು ಭಾರತದ ಜೀವನದಲ್ಲಿ ಅಗ್ರಸ್ಥಾನವನ್ನು ಪಡೆದಿರುವುದು. ಕಾಂಗ್ರೆಸಿನ ವಿರುದ್ಧ ಪ್ರತಿಗಾಮಿ ಧೋರಣೆಯ ಪತ್ರಗಳು ಕೂಡಾ, ಚೈತನ್ಯ ಮತ್ತು ತತ್ವವನ್ನು ಕಾಂಗ್ರೆಸಿನಿಂದಲೇ ಪಡೆದಿರುವುವೆಂಬುದನ್ನು ಯಾರೂ ಅಲ್ಲಗಳೆಯಲಾರರು! ಭಾರತ ರಾಜಕಾರಣಪಟುಗಳ ಆಕಾಂಕ್ಷೆ ಮತ್ತು ಧ್ಯೇಯ ಧೋರಣೆಗಳ ಕುರಿತು ಕಾಂಗ್ರೆಸ್ ಪಾಠ ಕಲಿಸಿರುವುದು. ಆರಂಭದಲ್ಲಿ ಕಾಂಗ್ರೆಸ್ ಕೇವಲ ಆ ಕಾಲದ ಅಸ್ತಿತ್ವ ಸರಕಾರದ ವಿರುದ್ಧ ಕ್ರಾಂತಿ 'ಪಕ್ಷ'ವಾಗಿದ್ದಿತಲ್ಲದೆ ಯಾವದೇ ಕರ್ತೃತ್ವ ಶಕ್ತಿಯಾಗಲಿ, ಯೋಜನೆ ನಿರೂಪಣೆಗಳಾಗಲಿ ಪತ್ರಿಕಾ ವ್ಯವಸಾಯ ಅದಕ್ಕಿರಲಿಲ್ಲ.

ಭಾರತ ಪತ್ರಿಕಾ ವ್ಯವಸಾಯವು ಈ ದಿನಗಳಲ್ಲಿ ಮೂರು ಪಂಗಡಗಳಾಗಿ ವಿಭಾಗಿಸಲ್ಪಟ್ಟಿವೆ. ಆಂಗ್ಲೋ-ಇಂಡಿಯನ್ ಪತ್ರಿಕೆ, ಹಿಂದೂ-ಇಂಗ್ಲಿಷ್ ಪತ್ರಿಕೆ ಮತ್ತು

೭ನೇ ಪುಟ ನೋಡಿ

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction.
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ ೩ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ.

THE CANARA BANKING CORPORATION LTD.

(Incorporated in British India with Limited Liability.)

ESTD: 1906.

Head Office: **UDIPI,** S. Kanara.

Statement of affairs as on 31st December, 1943.

LIABILITIES

	Rs.	As.	Ps.
1. Paid up Capital	12,95,970	0	0
2. Reserves...	3,83,379	1	6
3. Deposits	6,166,927	6	0
4 Bills for collection . . .	5,53,548	6	1
5. Sundries including revenue items ...	7,00,981	0	5
6 Profits for the year ending 31st December 1943	1,08,522	4	0
Total	92,09,328	2	0

ASSETS

	Rs.	As.	Ps.
1. Cash on hand & with Bankers ...	18,25,986	3	8
2. Investments on (1) Govt. Securities, (2) Immovabe properties etc. .	26,04,671	6	8
3. Loans on jewels & other valuable securities	23,72,302	8	7
4. Loans on personal security & Bills purchased	16,74,482	14	8
5. Bills for collection as per contra ...	5,53,548	6	1
6. Office premises, furniture etc. ...	93,251	0	0
7. Sundries including revenue items ...	84,085	10	4
Total	92,09,328	2	0

ಉಡುಪಿ, ಗುರುವಾರ ೨೪-೨-೧೯೪೪

ನಿರಾಶಾಜನಕ ಭಾಷಣ

ಹಿಂದುಸ್ಥಾನದ ವೈಸರಾಯರಾದ ಲಾರ್ಡ್ ವಾವೆಲ್ಲರು ತಾ.೧೭ರಂದು ಡಿಲ್ಲಿಯಲ್ಲಿ ಕಾಯದೆ ಮಂಡಲಗಳ ಸಂಯುಕ್ತ ಸಭೆಯ ಮುಂದೆ ಕೊಟ್ಟ ಭಾಷಣದ ಸ್ಪಷ್ಟ ನುಡಿಗಳು ಎಂತಹ ಆಶಾವಾದಿಯನ್ನೂ ನಿರಾಶೆಗೊಳಿಸುವಂತಹವಿವೆ. ಕಳೆದ ಎರಡೂವರೆ ವರುಷಗಳಿಂದ ಜನತಾ ಪ್ರಾತಿನಿಧ್ಯವಿರುವ ಸಂಘ ಸಂಸ್ಥೆಗಳೂ ಸಭಾ ಸಮ್ಮೇಲನಗಳೂ ಮುಂದಾಳುಗಳನ್ನು ಬಂಧವಿಮೋಚನೆ ಮಾಡಿರೆಂದು ಸರಕಾರವನ್ನು ಪ್ರತಿದಿನವೂ ಕೇಳಿಕೊಳ್ಳುತ್ತಲೇ ಇದ್ದುವು. ಇಂತಹ ಕೂಗು ನಿರರ್ಥಕವೆಂಬ ಚಿನ್ಹೆಯು ಸರಕಾರದ ಹಲವು ಕೃತ್ಯಗಳಿಂದ ಕಂಡುಬರುತ್ತಿದ್ದರೂ ಆಶಾವಾದಿಗಳಾದ ಎಷ್ಟೋ ಮಂದಿಗೆ ಹೊಸ ವೈಸರಾಯರಾದ ಲಾರ್ಡ್ ವಾವೆಲ್ಲರು ದೇಶಕ್ಕೆ ಸಮಾಧಾನಕರವಾಗುವ ಏನಾದರೊಂದು ಯೋಜನೆಯನ್ನು ಮುಂದಿಟ್ಟಾರೆಂಬ ನಿರೀಕ್ಷೆ ಇತ್ತು. ಅಂತಹರನ್ನೂ ಸಂಪೂರ್ಣ ನಿರಾಶೆಗೊಳಿಸಿದೆ ಅವರ ನೆನ್ನಿನ ಭಾಷಣ. ಧುರೀಣರನ್ನು ಬಿಡುಗಡೆ ಮಾಡಿರೆಂಬ ಜನತೆಯ ಕೇಳಿಕೆಯು ಕೇವಲ ನಿರರ್ಥಕವಾದುದೆಂದರು. ತಮ್ಮ ಹಿಂದಿನ ತಪ್ಪುಗಳನ್ನೆಲ್ಲ ತಿಳಿದುಕೊಂಡು ಇಷ್ಟೆಲ್ಲ ಅನರ್ಥಕ್ಕೆ ಕಾರಣವಾದ ಆಗಸ್ಟ ಗೊತ್ತುವಳಿಯನ್ನು ಆ ಧುರೀಣರು ಹಿಂತೆಗೆದುಕೊಳ್ಳುವ ವರೆಗೆ ಮತ್ತು ಮುಂದಿನ ಮಹತ್ವದ ಕಾರ್ಯಗಳಲ್ಲಿ ಸಹಕಾರದ ಸ್ಪಷ್ಟ ಆಶ್ವಾಸನವನ್ನು ಅವರು ಕೊಡುವ ವರೆಗೆ ಅವರನ್ನು ಬಿಡುಗಡೆಮಾಡಲು ಯಾವ ಕಾರಣವೂ ತನಗೆ ತೋರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದವರಿಗೆ ಈ ಮಾತು ಎಷ್ಟು ನಿರಾಶೆಯನ್ನುಂಟುಮಾಡಿಯದೆಯೋ ಅಷ್ಟೇ ನಿರಾಶೆಯು ಮುಸ್ಲಿಮ ಲೀಗಿನವರಿಗೂ ಉಂಟಾಗುವಂತಹ ಬೇರೆ ಮಾತೂ ವೈಸರಾಯರ ಬಾಯಿಂದ ಸ್ಪಷ್ಟವಾಗಿ ಬಂದಿದೆ. ಅದು ಪಾಕಿಸ್ಥಾನದ ವಿಷಯವಾದ ಅವರ ತೀರ್ಮಾನ. ದೇಶವನ್ನು ಇಬ್ಭಾಗಮಾಡಲು ಸಾಧ್ಯವಿಲ್ಲ. ಸಂರಕ್ಷಣೆಯ ದೃಷ್ಟಿಯಿಂದ, ಜಾಗತಿಕ ಬಾಂಧವ್ಯ ದೃಷ್ಟಿಯಿಂದ ಮತ್ತು ಹಿಂದೂಸ್ಥಾನಕ್ಕೆ ಸಂಬಂಧಪಟ್ಟ ಒಳ ಹೊರಗಿನ ಪರಿಸ್ಥಿತಿಗಳ ದೃಷ್ಟಿಯಿಂದಲೂ ಸಹ ಹಿಂದೂಸ್ಥಾನವು ಅಖಂಡ ರಾಷ್ಟ್ರವೇ ಆಗಿರಬೇಕಾಗಿದೆ ಭಿನ್ನಭಿನ್ನ ಧರ್ಮ ಮತ್ತು ಸಂಸ್ಕೃತಿಗಳಿಗೆ ಸೇರಿದ ಎರಡು ಜಾತಿಗಳು ಒಂದೇ ದೇಶದಲ್ಲಿ ಸ್ನೇಹದಿಂದ ಬಾಳಿ ಬದುಕಲು ಸಾಧ್ಯವಿದೆ. ಇತಿಹಾಸವು ಇಂಗ್ಲಾಂಡ್ ಸ್ಕಾಟ್‌ಲಾಂಡ್‌ಗಳ ಚರಿತ್ರೆಯಿಂದಲೂ ಕೆನಡಾದ ಬ್ರಿಟಿಷ್ ಫ್ರೆಂಚರುಗಳ ಸಂಯುಕ್ತ ಘಟನೆಯಿಂದಲೂ ಅದು ಶಕ್ಯವೆಂಬುದನ್ನು ತೋರಿಸಿ ಕೊಟ್ಟಿದೆ ಎಂದು ಹೇಳಿ ಪಾಕಿಸ್ಥಾನದ ಕೂಗೂ ನಿರರ್ಥಕವೆಂಬುದನ್ನು ಸ್ಪಷ್ಟಗೊಳಿಸಿದ್ದಾರೆ.

ಕ್ರಿಪ್ಸರ ಸಂಧಾನ ಪ್ರಯತ್ನದ ಕುರಿತು ವೈಸರಾಯರು ತನ್ನ ಸ್ಪಷ್ಟಾಭಿಪ್ರಾಯವನ್ನು ಹೇಳಿದರು. ಕ್ರಿಪ್ಸರ ಕೊಡುಗೆಯು ಒಳ್ಳೆಯ ಉದಾರವಾಗಿದ್ದಿತು. ಹಿಂದೂಸ್ಥಾನದ ಪ್ರಗತಿಗೆ ಸಾಧನವಾಗಿತ್ತು. ರಾಜಕೀಯ ಪ್ರಶ್ನೆಗಳನ್ನು ಬಿಡಿಸಲು ಅನುಕೂಲವಾಗಿತ್ತು. ಗಂಡಾಂತರದ ಪರಿಸ್ಥಿತಿಯಲ್ಲಿ ರಾಜಕೀಯ ಭಿನ್ನಾಭಿಪ್ರಾಯಗಳನ್ನೆಲ್ಲ ಸರಿಗೊಳಿಸುವ ಉದ್ದೇಶದಿಂದ ಕ್ರಿಪ್ಸರ ಪ್ರದಾನವು ಕೊಡಲಾಗಿತ್ತು. ಆದರೆ ಆ ಆಶೆಯು ಕೈಗೂಡಲಿಲ್ಲ. ಇನ್ನೂ ಆ ಕೊಡುಗೆಯನ್ನು ಹಿಂದುಸ್ಥಾನವು ಇಷ್ಟವಿದ್ದರೆ ಹೊಂದಲು ದ್ವಾರವು ತೆರೆದೇ ಇದೆ. ಆದರೆ ಅದರಂತೆ ಭಾವೀ ಸಂಘಟನೆಯು ಸಿದ್ಧವಾಗುವವನಕ ಸಂರಕ್ಷಣೆಯ ಹೊಣೆಯೆಲ್ಲ ಬ್ರಿಟಿಷ್ ಸರಕಾರದ ಮೇಲೆಯೇ ಇದೆ.

ಸರಕಾರದ ಧೋರಣೆಯ ಕುರಿತೂ ಸ್ಪಷ್ಟವಾದ ಮಾತುಗಳನ್ನು ವೈಸರಾಯರು ಆಡಿರುವರು. ಜರ್ಮನಿ ಮತ್ತು ಜಪಾನುಗಳನ್ನು ಬೇಗನೆ ಸೋಲಿಸುವುದರಲ್ಲಿ ಯಾವುದೇ ತರದ ಅಡ್ಡಿ ಅಡಚಣೆಗಳುಂಟಾಗದಂತೆ ಸರಕಾರವು ನೋಡಿಕೊಳ್ಳುತ್ತದೆ. ವಿವಾದಾತ್ಮಕವಾದ ಸಮಸ್ಯೆಗಳನ್ನು ಬಿಡಿಸುವುದರಲ್ಲಿಯೂ ಸದ್ಯದ ಯುದ್ಧದ ವಿಜಯ ಸಾಧನೆಯಲ್ಲಿಯೂ ನಮಗೆ ನಿಷ್ಠೆಯಿಂದ ಸಹಾಯ ಮಾಡಿದವರು ಮತ್ತು ಮುಂದೆ ಯಾವಾಗಲೂ ಸಹಾಯ ಮಾಡುವವರು, ಸೈನಿಕರು, ಸರಕಾರದ ಪ್ರತಿಜ್ಞಾಬದ್ಧತೆಯುಳ್ಳ ಸಂಸ್ಥಾನಿಕರು, ತಮಗೆ ನ್ಯಾಯದೊರಕೇಕೆಂದು ವಿಶ್ವಾಸವಿಟ್ಟಿರುವ ಅಲ್ಪಸಂಖ್ಯಾಕರು ಮುಂತಾದವರ ಹಿತಸಂಬಂಧಗಳನ್ನು ಸರಕಾರವು ಗಮನಿಸಬೇಕಾಗಿದೆ. ಯಾವ ಶಾಂತಿ, ಸುವ್ಯವಸ್ಥೆ ಮತ್ತು ಪ್ರಗತಿಗಳನ್ನು ಕಾಯಲು ಸರಕಾರವು ಪ್ರಯತ್ನಿಸುತ್ತಿರುವುದೋ ಅಂತಹ ಶಾಂತಿ, ಸುವ್ಯವಸ್ಥೆ ಮತ್ತು ಪ್ರಗತಿಗಳನ್ನುಂಟುಮಾಡಲಾಪ ಹಿಂದೀ ಆಡಳಿತೆಗಾರರಿಗೆ ಹಿಂದುಸ್ಥಾನವನ್ನು ಒಪ್ಪಿಸಿಕೊಡಲು ಬ್ರಿಟನ್ ನ್ಯಾಯವಾಗಿ ಬದ್ಧವಾಗಿದೆ. ಆದರೆ ಎರಡು ಮುಖ್ಯ ಪಕ್ಷಗಳಲ್ಲಿ ಐಕ್ಯವಾಗದೆ ಕೂಡಲೆ ಯಾವದೇ ಬಗೆಯ ಪ್ರಗತಿಯಾಗುವ ಲಕ್ಷಣಗಳು ಕಾಣುವುದಿಲ್ಲ. ಈ ಐಕ್ಯವನ್ನು ಸಾಧಿಸುವುದು ಹಿಂದೂ ಮುಸ್ಲಿಮರನ್ನೇ ಕೂಡಿಕೊಂಡಿದೆ ಎಂದು ಮುಂದಿನ ಧೋರಣೆಯನ್ನೂ ವೈಸರಾಯರ ಮಾತು ಸೂಚಿಸಿದೆ. ಯಾವುದಕ್ಕಲ್ಲವಾದರೂ ವೈಸರಾಯರ ಸ್ಪಷ್ಟೋಕ್ತಿಗಳಿಗಾಗಿ ಮೆಚ್ಚಬೇಕು. ಅವು ಸರ್ವ ಪಕ್ಷ ಪಂಥಗಳ ಮುಂದಿನ ಧೋರಣೆಗಳನ್ನು ನಿರೂಪಿಸಿಕೊಳ್ಳಲಿಕ್ಕಾದರೂ ವಿಶೇಷ ಸಹಕಾರಿಯಾಗಿವೆ.

ಉಡುಪಿ

ಇಲ್ಲಿಗೆ ಬಂದಿದ್ದ ಪತ್ರಿಕೋದ್ಯೋಗಿಗಳಿಗೆಲ್ಲಾ ಊಟ ಮತ್ತು ಉಳಕೊಳ್ಳುವ ವ್ಯವಸ್ಥೆಯು ಶ್ರೀ ಫಲಿಮಾರು ಮಠದಲ್ಲಿ ಸಂಸ್ಥಾನೋಚಿತವಾಗಿ ನಡೆದಿದ್ದಿತು. ಪತ್ರಿಕೋದ್ಯೋಗಿಗಳು ಸ್ಥಳೀಯ ಬೋರ್ಡು ಹೈಸ್ಕೂಲನ್ನು ಸಂದರ್ಶಿಸಿದರು. ಇಲ್ಲಿಯೂ ಇತರ ಕಡೆಗಳಲ್ಲಿಯೂ ಶ್ರೀ ಪಿ. ಆರ್. ರಾಮಯ್ಯನವರು ಮಾತನಾಡಿದ್ದರು. ಇವರು ಈ ಬೇರೆಬೇರೆ ಸಂದರ್ಭಗಳಲ್ಲಿ ಆಡಿದ ಮಾತುಗಳನ್ನು ಪರಿಶೀಲಿಸಿದರೆ ಅಖಿಲ ಕರ್ನಾಟಕದ ಪತ್ರಿಕೋದ್ಯೋಗಿಗಳ ಪರಿಷತ್ತಿನ ಉಪಾಧ್ಯಕ್ಷರುಗಳಲ್ಲೊಬ್ಬರಾಗಿರುವ ಇವರು ಅಖಿಲ ಕರ್ನಾಟಕದ ಭಾಗವಾಗಿರುವ ದಕ್ಷಿಣ ಕನ್ನಡವನ್ನು ಇನ್ನಾದರೂ ವಿವಿಧ ಮುಖಗಳಲ್ಲಿ ನೋಡಿ ತಿಳಿದುಕೊಳ್ಳುವದು ಒಳ್ಳಿತು ಅನ್ನಿಸುತಿತ್ತು. ಅವರೊಡನೆಯೇ ಬಂದಿದ್ದ ಶ್ರೀ. ನಂಜುಂಡಯ್ಯನವರಲ್ಲಿರುವ ಕರ್ನಾಟಕದ ಪ್ರತಿಯೊಂದು ಭಾಗವನ್ನು ಚೆನ್ನಾಗಿ ತಿಳಿದು ಕಲಿತುಕೊಳ್ಳಲಿಕ್ಕಿರುವುದನ್ನು ಸಂಗ್ರಹಿಸಬೇಕೆಂಬ ಆತುರವು ಪ್ರಶಂಸನೀಯವಿತ್ತು. ಅಂತಹ ಧೋರಣೆಯಿಂದಲ್ಲದೆ ಕೇವಲ ಉತ್ಸವ ಮೂರ್ತಿಗಳಾಗಿ ಕರ್ನಾಟಕದ ಇತರ ಭಾಗಗಳಿಂದ 'ಭಾರೀ' ಜನರು ಬಂದರೂ ಸರಿಯೇ, ಬಾರದಿದ್ದರೂ ಸರಿಯೇ.

ನೇಶನಲ್ ವಾರ್ ಫ್ರಂಟ್ ಪ್ರಚಾರಕರ ರಿಫ್ರೆಶರ್ ಕೋರ್ಸ್ ಮುಕ್ತಾಯ:—ಕಳೆದ ಶನಿವಾರ ಸಂಜೆ ಬೋರ್ಡು ಹೈಸ್ಕೂಲ್ ವಠಾರದಲ್ಲಿ ಸಬ್ ಕಲೆಕ್ಟರ್ ಶ್ರೀ ಸಾಥೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಪ್ತಾಹ ವ್ಯವಸ್ಥಾಪಕರಾದ ಎಚ್. ಎಸ್. ಹುಸೇನ್ ಸಾಹೇಬ್, ಎಮ್. ಎಲ್. ಎ. ಇವರು ಸಪ್ತಾಹದ ಉದ್ದೇಶ ಮತ್ತು ವರದಿಯನ್ನು ಸಭೆಯ ಮುಂದಿಟ್ಟರು. ಹೈಸ್ಕೂಲ್ ಹೆಡ್ಮಾಸ್ತರ್ ಶ್ರೀ ರೋಶಿ ಫೆರ್ನಾಂಡೀಸರು ದೇಶಕ್ಕೆ ಬಂದಿರುವ ಇಂದಿನ ಗಂಡಾಂತರದ ಪರಿಸ್ಥಿತಿಯಲ್ಲಿ ಸರ್ವ ಪಕ್ಷದವರೂ ಸರಕಾರದೊಡನೆ ಸಹಕರಿಸಿ ಯುದ್ಧ ಮುಕ್ತಾಯದ ಕಡೆಗೆ ಗಮನವೀಯಬೇಕೆಂದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಾರ್ ಫ್ರಂಟ್ ಯುದ್ಧ ವಿಜಯ ಪ್ರಾಪ್ತಿಯ ಧ್ಯೇಯದೊಡನೆ ಹೋಮ್ ಫ್ರಂಟ್, ಗೃಹರಕ್ಷಣೆಯು ಬಹು ಅತ್ಯಗತ್ಯವಿದೆಯೆಂದು ಸೂಚಿಸಿ ಸರ್ವರೂ ಈ ಧ್ಯೇಯ ಸಾಧನೆ ಸಲುವಾಗಿ ಯುದ್ಧ ಪ್ರಯತ್ನಗಳಲ್ಲಿ ಸಹಕರಿಸಬೇಕೆಂದರು. ಶ್ರೀ ಕೊರಡ್ಕಲ್ಲರು ಅವರ ಇಂಗ್ಲಿಷ್ ಭಾಷಣವನ್ನು ಕನ್ನಡಿಸಿದರು. ಹೈಸ್ಕೂಲ್ ಮಕ್ಕಳ ನರ್ತನಾಭಿನಯದೊಡನೆ ಸಮಾರಂಭವು ಕೊನೆಗೊಂಡಿತು.

ಕೊಡವೂರು:–ಇಲ್ಲಿಯ ಹೊಸ ಸೇತುವೆಯ ಅನಾವರಣವನ್ನು ಶ್ರೀ ಫಲಿಮಾರು ಮಠದ ಶ್ರೀಪಾದಂಗಳವರು ಜರಗಿಸಿದರೆಂದು ತಿಳಿದು ಬರುತ್ತದೆ.

ಇನ್ನಂಜೆ:–ಸ್ಥಳೀಕ ಹೈಸ್ಕೂಲಿನ ವರ್ಧಂತಿಯು ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿಯೂ ಶ್ರೀ ವಾದಿರಾಜ ಗುರುಕುಲ ಹೊಸಕಟ್ಟಡದ ಉದ್ಘಾಟನೆಯು ಶ್ರೀ ಫಲಿಮಾರು ಶ್ರೀ ಪಾದಂಗಳವರಿಂದಲೂ ನಡೆಯಲಿರುವರೆಂದು ಗೊತ್ತಾಗಿದೆ.

ಕುಂದಾಪುರ ತಾಲೂಕಿನಲ್ಲಿ ಅಕ್ಕಿ ಮತ್ತು ಭತ್ತದ ಖಂಡಿತ ಕ್ರಯ:—ಸುಗ್ಗಿ, ರಾತಿ, ಕಾಯಮೆ ಅಕ್ಕಿ ಸೇರಿಗೆ 0-4-2, ಭತ್ತ ಸೇರಿಗೆ 0-1-11. ಗುಡ್ಡ ಸೇರಿಗೆ 0-4-4, ಭತ್ತಕ್ಕೆ 0-2-0. ಮಸ್ಕತಿ ಸೇರಿಗೆ0-4-6, ಭತ್ತಕ್ಕೆ 0-2-1. ಬೆಳ್ತಿಗೆ ಸೇರಿಗೆ0-4-10, ಭತ್ತಕ್ಕೆ0-2-3, ಗಂಧಸಾಲೆ, ಜೀರ, ಜೆ. ಬಿ.ಸಣ್ಣಕ್ಕಿ ಸೇರಿಗೆ 0-5-2, ಭತ್ತಕ್ಕೆ 0-2-6.(ಮುಡಿಯ ದರವು ಸೇರಿನ ಕ್ರಯದಂತೆ 42ರಿಂದ ಗುಣಿಸಿ)

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದರೂ—'ಕುಮಾರಿ' (PILLS) ನಿಶ್ಚಿತವಾದವು—ಹಿಂದಿನಂತೆಯೇ, ಆರೋಗ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಪರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ತಪ್ಪಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ: ಬೆಲೆ ರೂ. 3/-, ಕೈಮೀರಿದ ಕೇಸುಗಳಿಗೆ ರೂ. 5/- (ವಿ. ಪಿ. 12 ಆಣೆ ಅಧಿಕ).

Mrs. P. DEVEE, F. D. S., (N)
TOLLYGUNGE, CALCUTTA,

ಸ್ಟಾಕಿಸ್ಟ್: **Raja Medical Hall,**
31, Dharmaraja St. BANGALORE

ಯುದ್ಧಗತಿ

ರಶ್ಯದಲ್ಲಿ ಕೆಂಪು ಸೇನೆಯು ಸಾರ್ವತ್ರಿಕ ವಿಜಯ ಪಡೆಯುತ್ತಿದೆ. ಸ್ಟಾರಯೂರುಸ್ಸಾ, ಪ್ಲಾಯಿಸ್ಸಾ, ಸ್ಕೋವಾ ಮೊದಲಾದ ಪ್ರಾಮುಖ್ಯ ಸ್ಥಳಗಳಲ್ಲಿ ರಶಿಯಾನರು ನಾಜಿಗಳನ್ನು ಸದೆಬಡಿಯುತ್ತಿರುವರಲ್ಲದೆ ಉಕ್ರೈನಿನೊಳಗೆ ಕೆಂಪು ಸೇನಾ ಶರಧಿಯೇ ನುಗ್ಗುತ್ತಿದೆ. ಇಟೆಲಿ ಯುದ್ಧವು ಪುನಃ ಮುಂದಗತಿಗೆ ಬಂದಿದೆ. ಬರ್ಮದ ಅರಕಾನಿನಲ್ಲಿ ಮಿತ್ರ ಸೇನೆಗಳು ಪ್ರಗತಿಯಲ್ಲಿವೆ.

ಮಹಾಧಾಳಿಗಳು.

ಕಳೆದವಾರ ಜರ್ಮನಿಯ ಹಲವು ನಗರಗಳ ಮೇಲೆ ಅಮೇರಿಕದ 2000 ವಿಮಾನಗಳು ಪ್ರಲಯತುಲ್ಯ ಧಾಳಿ ನಡಿಸಿದವು. ಜಾಪಾನಿನ ಟ್ರುಕ್ ನೆಲ್ದಾಣದ ಮೇಲೂ ಅಮೇರಿಕಾನರು ಧಾಳಿಯಿಟ್ಟು 19 ಜಾಪಾನೀ ನೌಕೆಗಳನ್ನು ಮುಳುಗಿಸಿ, ಪರ್ಲ್‌ಹಾರ್ಬರಿನ ಅತ್ಯಾಚಾರದ ಮುಯ್ಯನ್ನು ತೀರಿಸಿಕೊಂಡಿರುವರು. ಆಕ್ರಮಿತ ಯುರೋಪಿನ ಮೇಲೆ ಮಹಾ ಧಾಳಿ ನಡೆಸುವ ಸಿದ್ಧತೆ ಬ್ರಿಟನಿನಲ್ಲಾಗುತ್ತಿರುವ ವಾರ್ತೆ ಬಂದಿದೆ.

ಕಸ್ತೂರಿಬಾ ಗಾಂಧಿಯವರ

ಸ್ಥಿತಿ ತೀರಾ ಚಿಂತಾ ಜನಕವಾಗಿದೆ ಎಂದು ಇದೇ ತಾ 20ರಲ್ಲಿ ಬೊಂಬಾಯಿ ಸರಕಾರವು ಪ್ರಕಟಿಸಿದೆ. ದೇವದಾಸ ಗಾಂಧಿಯವರು ಮಾತೆಯ ದರ್ಶನಕ್ಕಾಗಿ ಧಾವಿಸಿದ್ದಾರೆ.

ರಶ್ಯದ ಘೋಷಣೆ.

"ರಶ್ಯಕ್ಕೆ ಪಶ್ಚಿಮ ಹಾಗೂ ಪಶ್ಚಿಮ ಯುರೋಪಿನಲ್ಲಿಯೂ ಕಾಲುಚಾಚಿ ಸಾಮ್ರಾಜ್ಯ ಸ್ಥಾಪಿಸಿಕೊಳ್ಳುವ ಇಚ್ಛೆಯಿಲ್ಲವೇ ಇಲ್ಲ. ರಶ್ಯಕ್ಕೆ ಯುರೋಪನ್ನು ಬಗಲಿಗೆ ಹಾಕಿಕೊಳ್ಳುವ ಬಯಕೆ ಯಿದೆಯೆಂದು ಕೆಲವೆಡೆ ಹಾಸ್ಯಾಸ್ಪದ ಸಂದೇಹವೆದ್ದಿದೆ. ಹಿಟ್ಲರ್ ಮತ್ತು ನನ್ನೊಳಗೆ ಸಾಮರಸ್ಯವನ್ನು ಕಾಣುವವರು ರಾಜಕೀಯ ಅಜ್ಞಾನಿಗಳೇ ಹೊರತು ಬೇರೇನೂ ಅಲ್ಲ"-ಎಂದು ಸ್ಟಾಲಿನರು ಸ್ಪಷ್ಟಪಡಿಸಿದ್ದಾರೆ.

ನಿರಾಶೆ ಕವಿಯಿತು.

ಲೋರ್ಡ್ ವೇವೆಲರ ಭಾಷಣದಿಂದ ಹಿಂದುಸ್ಥಾನದ ಪ್ರಮುಖರಲ್ಲಾ ನಿರಾಶೆ ವ್ಯಕ್ತಪಡಿಸಿದ್ದಾರೆ. 'ಮುಖಂಡರನ್ನು ಒಟ್ಟಾಗಲು ಬಿಡುಗಡೆ ಪಡಿಸಿರಿ' ಎಂದು ಸರ್. ಸಪ್ರುಗಳು ವಿನಂತಿಸಿ ಕ್ರಿಪ್ಸ್‌ದುರಂತವನ್ನು ಪ್ರಸ್ತಾಪಿಸಿ, ಲೋರ್ಡ್ ವೇವೆಲ್ ಭಾಷಣವನ್ನು ಖಂಡಿಸಿರುವರು. ಪಾಕಿಸ್ಥಾನ್ ಅಸಮ್ಮತಿಯ ಭಾಗಕ್ಕಾಗಿ ಕೆಲವು ಹಿಂದೂ ಮುಖಂಡರು ವೇವೆಲ್ ಭಾಷಣವನ್ನು ಶ್ಲಾಘಿಸುತ್ತಿದ್ದಾರೆ. ಲಂಡನಿನ 'ಟೈಮ್ಸ್' ನಂತಹ ಕೆಲವೇ ಪತ್ರಿಕೆಗಳನ್ನು ಬಿಟ್ಟರೆ ಹಿಂದೀಯರ ಮೇಲೆ ಸಹಾನುಭೂತಿಯಿರುವ ಇತರ ಇಂಗ್ಲಿಷ್ ಪತ್ರಿಕೆಗಳೂ ವೈಸರಾಯೀ ಭಾಷಣವನ್ನು ಹೀಗಳೆದಿವೆ.

ವೈಸರಾಯರ ಸಂಚಾರ.

ವೈಸರಾಯೀ ಲೋರ್ಡ್ ವೇವೆಲರು ಮದ್ರಾಸಿಗಾಗಮಿಸಿ ಅಲ್ಲಿಯ ಅಧಿಕಾರಿ ಹಾಗೂ ಅನಧಿಕಾರೀ ಪ್ರಮುಖರಿಂದ ಸಂಭ್ರಮದ ಸ್ವಾಗತ ಪಡೆದಿದ್ದಾರೆ

ಜಾಪಾನರ ಪ್ರಯತ್ನ.

ಒಂದೆಡೆ ಬರ್ಮದ ಅರಕಾನಿನಲ್ಲಿ ನುಗ್ಗಿದ ಮಿತ್ರ ಸೇನೆಗಳು ಅತೀವ ಹೋರಾಟದಲ್ಲಿದ್ದು ಇನ್ನು ಕೆಲವೇ ದಿನಗಳಲ್ಲಿ ಅಲ್ಲಿಯ ಸಮರವು ಉಗ್ರಾವಸ್ಥೆಗೆ ಬರುವ ಲಕ್ಷಣ ಕಂಡುಬರುತ್ತಿರುವಾಗ, ಜಾಪಾನರು ನಾಘಾ ಹೋಳೆದಾಟ ಭಾರತದಲ್ಲಿ ಕಾಲೂರಲು ಪ್ರಯತ್ನಿಸುತ್ತಿರುವ ಲಕ್ಷಣ ಕಂಡುಬಂದಿದೆ. ಮಿತ್ರರ ಜಲ ಸೇನೆಗಳು ಎಚ್ಚರದಿಂದ ಕಾಯುತ್ತಿವೆ.

ಮಾಲವೀಯರ ಪರಿಷತ್ತು.

ಪಂಡಿತ ಮಾಲವೀಯರು ಡಿಲ್ಲಿಯಲ್ಲಿ ಕರೆದಿರುವ ಸರ್ವ ಪಕ್ಷೀಯ ಪರಿಷತ್ತಿಗಾಗಿ ಧುರೀಣರನ್ನು ಆಮಂತ್ರಿಸಲು ಬೊಂಬಾಯಿಗಾಗಮಿಸಿದ್ದ ಮಾಲವೀಯರ ಪುತ್ರ ಪಂ. ರಾಧಾಕಾಂತ ಮಾಲವೀಯರಿಗೆ ಸಾಕಷ್ಟು ಪ್ರೋತ್ಸಾಹ ದೊರೆತಂತೆ ಕಾಣುವುದಿಲ್ಲ. ಇಂತಹ ಪರಿಷತ್ತುಗಳಿಂದ ಫಲದೊರೆಯುವಂತಿಲ್ಲ ವೆಂಬ ಪೂರ್ವಾನುಭವವೇ ಬೊಂಬಾಯಿ ಮುಖಂಡರ ಅಸಡ್ಡೆಗೆ ಕಾರಣ. ವೇವೆಲರ ಒಂಜೆ ಭಾಷಣವಂತೂ ಇದ್ದ ಅಲ್ಪ ಆಸೆಯನ್ನೂ ಹುಸಿಗೊಳಿಸಿಬಿಟ್ಟಿರುವದು.

ಕಸ್ತೂರಿಬಾನ ಕಠಿಣ ಸ್ಥಿತಿ!

ಒಂದು ಪರೀಕ್ಷೆ

ಇಂಗ್ಲಂಡಿನ ಡರ್ಬಶಾಯರಿನಲ್ಲಿ ಮೊನ್ನೆ ತಾನೇ ನಡೆದ ಉಪ ಚುನಾವಣೆಯಲ್ಲಿ ಚರ್ಚಿಲ್ ಪಕ್ಷದ ಲೋರ್ಡ್ ಹಾರ್ಟಿಂಗಟನ್‌ರನ್ನು ಸ್ವತಂತ್ರ ಸಾಮ್ಯವಾದಿ ಪಕ್ಷದ ಚಾರ್ಲಸ್‌ವ್ಹಾಯಿಲರ್ ಸೋಲಿಸಿದ್ದಾರೆ. ಚಾರ್ಲಸ್ ಇವರು 'ಹಿಂದೀ ಸ್ವಾತಂತ್ರ್ಯ ಮನ್ನಿಸಿರಿ' 'ಗಾಂಧೀಜೀಯನ್ನುಬಿಡಿರಿ' ಎಂದು ಚುನಾವಣಾ ಘೋಷಣೆ ಯಲ್ಲಂದಿದ್ದರು. ಬ್ರಿಟಿಷ್ ಧುರೀಣರು ಭಾರತ ಸ್ವಾತಂತ್ರ್ಯಕ್ಕೆ ವಿರೋಧವಿದ್ದರೂ ಸಾಮಾನ್ಯ ಜನತೆಯು ಗಾಂಧೀ ನಾಮದಿಂದ ಸ್ಫೂರ್ತಿ ಪಡೆಯುತ್ತಿದೆ ಎಂಬುದರ ನಿದರ್ಶನವಿದು.

ಲಂಡನಿನ ಮೇಲೆ

ನಾಜಿ ವಿಮಾನಗಳು ಲಂಡನಿನ ಮೇಲೆ ಕಳೆದ ವಾರ ವಿಮಾನ ಧಾಳಿ ನಡಿಸಿದವು. ಪಾರ್ಲಿಮೆಂಟ್ ಕಟ್ಟಡಕ್ಕೂ ಪೆಟ್ಟಾಗಿದೆ ಎಂದು ತಿಳಿದು ಬರುತ್ತದೆ.

ರೈಲ್ವೇ ದರವಿರಿತು.

ನೂರಕ್ಕೆ 25ರಂತೆ ರೈಲ್ವೇ ದರವನ್ನು ಏರಿಸುವ ಸೂಚನೆಯು ಈ ಬಾರಿಯ ನವ ಡಿಲ್ಲಿ ಎಸೆಂಬ್ಲಿಯ ಮುಂದೆ ಬಂದ ರೈಲ್ವೇ ಬಜೆಟಿನಲ್ಲಿದೆ. ಇದನ್ನು ಜನ ಪ್ರತಿನಿಧಿ ಪಕ್ಷಗಳೆಲ್ಲಾ ಒಗ್ಗಟ್ಟಾಗಿ ವಿರೋಧಿಸುವ ಸನ್ನಾಹ ನಡೆದಿದೆ.

ಎಲ್ಲಾ ರಾಷ್ಟ್ರಗಳ ಶಸ್ತ್ರತ್ಯಾಗ.

ಶಾಂತಿ ಸಾಧಿಸಬೇಕಾದರೆ ಅಪಜಯರಿಂ ಒ ಭೇದವಿಡದೆ ಎಲ್ಲಾ ರಾಷ್ಟ್ರಗಳನ್ನೂ ನಿಶ್ಶಸ್ತ್ರೀಕರಣಗೊಳಿಸುವುದೇ ಪ್ರಮುಖ ಸಾಧನವೆಂದು ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಪೂನಾದಲ್ಲಿತ್ತ ಭಾಷಣದಲ್ಲಿಂದಿದ್ದಾರೆ.

ಕಲ್ಲಿದ್ದಲ ಗನಿಗಳಲ್ಲಿ.

ಹಿಂದೂ ಸ್ತ್ರೀಯರನ್ನೂ ಕೆಲಸಕ್ಕೆ ತೆಗೆದುಕೊಳ್ಳುವ ಕುರಿತು ಹಿಂದೂದೇಶದಲ್ಲಿ ತೀವ್ರ ವಿರೋಧವೆದ್ದಿರುವದಷ್ಟೇ ಅಲ್ಲದೆ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರೂ ನಿಷೇಧಿಸಿದ್ದಾರೆ.

ರಶ್ಯದ ಆರೋಪ

ಬ್ರಿಟನಿಗೆ ಸೆರೆಸಿಕ್ಕಿದ್ದ ಸುಮಾರು 2400 ಮಂದಿ ಯುದ್ಧ ಹಾಗೂ ಶುದ್ಧಾರೋಗ್ಯದ ಜರ್ಮನ್ ಯುದ್ಧ ಕೈದಿಗಳನ್ನು ಒದಲಾವಣೆಯಾಗಿ ಬ್ರಿಟನರು ಜರ್ಮನಿಗೊಪ್ಪಿಸಿರುವರೆಂದೂ, ಅವರೀಗ ಪೂರ್ವ ಯುದ್ಧರಂಗದಲ್ಲಿ ಹೋರಾಡುತ್ತಿರುವರೆಂದೂ ರಶ್ಯದ 'ಪ್ರಾವ್ಡಾ' ಪತ್ರಿಕೆ ಆಲೋಚಿಸಿದೆ.

ವಾರ್ಡನ್ ವಿಮಾ ಕ್ಷೇತ್ರದಲ್ಲಿ ಉತ್ಸಾಹೀ ಜನರಿಗೆ ಅನೇಕ ಲಾಭದಾಯಕ ಸುಸಂಧಿಗಳು

ವಾರ್ಡನ್ ವಿಮಾ ಕಂಪೆನಿಯು ತನ್ನ ಕಾರ್ಯಕ್ಷೇತ್ರವನ್ನು ಮದ್ರಾಸ್ ಸಂಸ್ಥಾನ, ಹೈದರಾಬಾದ್ (ಡೆಕ್ಕನ್) ಮತ್ತು ಸಿಲೋನಿನಲ್ಲಿ ವಿಸ್ತರಿಸಿರುವುದಲ್ಲದೆ ಇನ್ನು ಹತ್ತು ... ಕೇಂದ್ರಗಳನ್ನು ಚೀಫ್ ಏಜಂಟರಿಗಾಗಿಯೂ, ಒರ್ಗನೈಸರರು ಮತ್ತು ಇನ್ಸ್‌ಪೆಕ್ಟರರಿಗಾಗಿಯೂ ಕಾದಿಟ್ಟಿರುತ್ತದೆ. ಹತ್ತು ವರುಷಗಳಿಂದೀಚೆಗೆ ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಿ ಜನತೆಯ ಪ್ರೇಮಾದರಗಳನ್ನು ಪಡೆದ ಈ ಕಂಪೆನಿಯೊಡನೆ ಉತ್ಸಾಹಿ ಜನರು ಸಂಬಂಧ ಬೆಳೆಸಿ ಲಾಭದಾಯಕ ಕಾರ್ಯವನ್ನು ಕೈಗೊಳ್ಳಲು ಇದೀಗ ಸುವರ್ಣಸಂಧಿ.

ಇಂತಹ ಸುಯೋಗ ಪಡೆದು ಸುಖಜೀವನದಲ್ಲಿರಬೇಕೆಂದು ಬಯಸುವವರು ಈ ತನಕ ಯಾವುದೇ ಕಂಪೆನಿಯಲ್ಲಿ ಏಜನ್ಸಿ ಪಡೆದು ಕೃತಕೃತ್ಯರಾಗದೆ ನಿರಾಶೆ ಹೊಂದಿದವರು ಕೂಡಲೇ ಈ ಕಂಪೆನಿಯೊಡನೆ ಪತ್ರವ್ಯವಹಾರ ಮಾಡಿರಿ. ಕಂಪೆನಿಯ ಉತ್ಸಾಹೀ ಸುಪರಿಂಟೆಂಡೆಂಟರಾದ ಶ್ರೀ ಸುಂದರರಾಮ ಸೆಟ್ಟರು ಸದ್ಯವೇ ನಿಮ್ಮ ಪ್ರಾಂತ್ಯವನ್ನು ಸಂದರ್ಶಿಸಲಿರುವರು. ಸುಪರಿಚಿತರಾದ ಅವರ ಆಗಮನದ ಸುಯೋಗವನ್ನು ಕಳಕೊಳ್ಳಬೇಡಿರಿ. ನಿಮ್ಮ ಪತ್ರ ತಲ್ಪಿದೊಡನೆ ಶ್ರೀ ಸೆಟ್ಟರು ಬರುವ ದಿನ, ತಂಗುವ ಸ್ಥಳ, ಭೆಟ್ಟಿಯಾಗತಕ್ಕ ಸಮಯ ಇತ್ಯಾದಿ ಮಾಹಿತಿಯನ್ನು ತಿಳಿಸಲಾಗುವುದು.

1943ನೆ ಇಸವಿಯಲ್ಲಿ 71,00,000 ಎಪ್ಪತ್ತೊಂದು ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ.

ಇಂದೇ ಬರೆಯಿರಿ:

ದಿ ಮೆನೇಜಿಂಗ್ ಡ್ಯಾರೆಕ್ಟರ್
ವಾರ್ಡನ್ ಇನ್ಸೂರೆನ್ಸ್ ಕೊ. ಲಿ.
ವಾರ್ಡನ್ ಹೌಸ್,
ಸರ್ ಫಿರೋಜ್ ಷಾ ಮೆಹತಾ ರೋಡ್,
ಫೋರ್ಟ್, ಬೊಂಬಾಯಿ.

ನೋಟೀಸು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 14/1944

1. ಬಬ್ಬಾವತಿ ಅಮ್ಮ, 2. ಕೆ. ವೆಂಕಟಗಿರಿ, ಶ್ರೀಧರ ಕಾಮತರ 1ನೇ ಅರ್ಜಿದಾರರು ಕೆ. ವೆಂಕಟೇಶ ಕಾಮತರ ಪತ್ನಿ, 2ನೇ ಅರ್ಜಿದಾರರು ಕೆ. ಶ್ರೀಧರ ಕಾಮತರ ಮಗ. ಉಡುಪಿ ತಾಲ್ಲೂಕು ಕಟಪಾಡಿ ವಾಸಿಯಾಗಿರುವವರು — ಅರ್ಜಿದಾರರು

1ನೇಯವರ ಗಂಡ ವ 2ನೇಯವರ ಅಜ್ಜ ಕೆ. ವೆಂಕಟೇಶ ತಾ 6-10-43ರಲ್ಲಿ ಮೃತಪಟ್ಟ ಕೆ. ವೆಂಕಟೇಶ ಕಾಮತರ ಬಾಬ್ತು Sun Life Assurance Co of Canada ಮತ್ತು Norwich Union Life Insurance Society ಕಂಪೆನಿಗಳಿಂದ ಸಿಕ್ಕತಕ್ಕ ಪಾಲಿಸಿಗಳ ಹಣವನ್ನು ಪಡೆಯುವರೆ, 1ನೇ ಅರ್ಜಿದಾರಳಿಗೆ ವಂಶ ಸರ್ಟಿಫಿಕೇಟು ಕೊಡಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ 21-3-44ಕ್ಕೆ ತನಿಖೆಗೆ ಇಟ್ಟಿರುತ್ತದೆಂತ ಸರ್ವಜನರಿಗೆ ಈ ಮೂಲಕ ತಿಳಿಸಲಾಗುತ್ತದೆ.

K. Vittal Nayak
Vakil for Petitioners

22-2-44 }
Udipi }

ಇನ್ಕಮ್ ಟೇಕ್ಸು ಮತ್ತು ವಿಕ್ರಯ ಟೇಕ್ಸು

ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಸಹಿ ಮಾಡಿದವರೊಡನೆ ಪತ್ರವ್ಯವಹಾರ ನಡಿಸಿದರೆ ಪರಸ್ಪರ ಪ್ರಯೋಜನವಾಗಬಹುದು.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ ಪ್ರಾಕ್ಟಿಶ್ನರ್ ವ ತೆರ್ಮಾ ಆಡಿಟರ್
ಪೋಸ್ಟು ಉಪ್ಪುಂದ P. O UPPUNDA

Degrees: Books: Medicines
Free H. L. M. S. M. B. H. M. D. etc. Free Homeo-Ayur- UnaniNaturco degree by post also—Practitioner also get some Homeo Materia Medica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp—
Prof. Dr. N. H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt India.)

Sidha-Kalpa Kavach (Regd.)
No 3 Rs 2. No. 2 Rs 5 No. 1 Rs. 7 Special Rs. 10, Extra Special Rs. 17 for love marriage health, wealth. Ask no six questions with M O. Re.1/4 and get correct answers by returnpost Life reading Rs.10 No V.P.P. Send M.O. Free, pamphlet.
Prof Dr. N. H Chhatbar,
P. O. MAHUVA (Kathiawar India.)

ದಕ್ಷಿಣ ಕನ್ನಡ-

ಮಂಗಳೂರು

ಜಿಲ್ಲಾ ಬೋರ್ಡು ಸಭೆ:— ತಾ|| ೧೫ ರಂದು ಶ್ರೀ ಆರ್ಷರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ತತ್ಪೂರ್ವ ಸೇರಿದ ವಿಶೇಷ ಸಭೆಯಲ್ಲಿ ಶ್ರೀ ವಾತಿ ಸ ಶಿಲಾ ಬ್ಯಾಟ ಅವರು ವಿದ್ಯೆಯ ಸ್ಥಾಯೀ ಸಮಿತಿಗೆ ಅನಧಿಕಾರಿ ಸದಸ್ಯರಾಗಿ ಆರಿಸಲ್ಪಟ್ಟರು. ಸಭೆಯಲ್ಲಿ ಹಲವಾರು ಪ್ರಶ್ನೆಗಳು ಅಧ್ಯಕ್ಷರಿಂದ ಉತ್ತರಿಸಲ್ಪಟ್ಟವು. ೧೯೪೧ರಿಂದ ಈವರೆಗೆ ಎಷ್ಟು ಮಂದಿ ಏ.ಆರ್. ವಾರ್ಡುಗಳಿಗೆ ಆಕ್ಷಿತ್ರ ವರ್ಗವಾಗಿದೆ, ಪ್ರಯಾಣಕ್ಕಾಗಿ ಸೆಟ್ಟವಾದ ಹಣವೆಷ್ಟು, ಆರೋಗ್ಯ ಇಲಾಖೆಯಲ್ಲಿ ಶಿಕ್ಷೆಗೆ ಗುರಿಯಾದವರ ಸಂಖ್ಯೆಯೆಷ್ಟು? ದ. ಕ. ಜಿಲ್ಲೆಯಿಂದ ವಿದೇಶಗಳಿಗೆ ಹೋಗುವ ಪ್ರಯಾಣಿಕರಿಗೆಲ್ಲ ಕೂಲಿ ದ ಪ್ರತಿಬಂಧಕ ದಾಕು ಹಾಕಿ. ಹಾಸ್ಪಿತ್ರದ ಸಭ್ಯದ ಅಕ್ಷರದ ಒಂದೊಂದು ದಿನ ವಸೂಲುಮಾಡುತ್ತಿದ್ದದು ನಿಜವೆ? ಅದು ಸರಿಯೆ? ಎಂಬಿತ್ಯಾದಿ ಪ್ರಶ್ನೆಗಳನ್ನು ಶ್ರೀ ಕರಿಯಪ್ಪ ಭಂಡಾರಿಯವರ ಹ ಎ.ಸಿ. ಕೇಳಿದರು. ಅಧ್ಯಕ್ಷರು ಉತ್ತರಿಸುತ್ತಾ ಸಭ್ಯದ ದಾಕ್ಷ್ಟರು ಒಂದೊಂದು ದಿನ ವಸೂಲು ಮಾಡುತ್ತಿದ್ದರೆಂಬ ವಾರ್ತೆಯುಷ್ಟು. ಅದು ಸರಿಯಲ್ಲ ಎಂದರು. ಶ್ರೀ| ಸರ್ವೋತ್ತಮ ಪೈಯವರು ಹೊಸ ಅಧ್ಯಕ್ಷರ ಚುನಾವಣೆಯ ಕಾಲದಲ್ಲಿ ಕ್ಷಿತವಾಗ ಬೇಕಾದವರಿಗೆ ಮೋಟರ್ ಪಾಸ್ ಕೊಟ್ಟುದು ನಿಜವೆ? ಛೀ ಏಕೆ! ಕೆಲಸದಲ್ಲಿ ಪ್ರಯಾಣ ಮಾಡುವಾಗ ಸ್ವಂತದ ಪಾಸು ಉಪಯೋಗಿಸಿದ್ದಾರೆಯೋ? ಅಧ್ಯಕ್ಷರು ಎಷ್ಟು ಟುಟ್ಟಿಭತ್ತೆ ಪಡೆದಿದ್ದಾರೆ ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿದರು. ಬೋರ್ಡು ಕೆಲಸದಲ್ಲಿ ಪ್ರಯಾಣ ಮಾಡುವಾಗ ಪಾಸು ಉಪಯೋಗಿಸಲಿಲ್ಲವೆಂದೂ, ರೂ. ೬೩೪೪ ನ್ನು ಈ ವರೆಗೆ ಟುಟ್ಟಿಭತ್ತೆಯಾಗಿಯೂ ಪ್ರಯಾಣದ ವೆಚ್ಚವಾಗಿಯೂ ತಾವು ಪಡೆದಿದ್ದೇವೆಂದೂ ಅಧ್ಯಕ್ಷರು ಹೇಳಿದರು. ಮೂಲ್ಕಿ ಆಸ್ಪತ್ರೆಗೆ ಬಡವರ ನಿಧಿಯಿಂದ ರೂ. ೪೦ರ ಔಷಧಿಯನ್ನು ಬೋರ್ಡು ವೆಚ್ಚದಿಂದ ಸ್ವೀಕರಿಸಿತು. ಕಾಸರಗೋಡಿನ ಪಿ.ಡಬ್ಲ್ಯು.ಡಿ.ಯಲ್ಲಿ ಹೈಸ್ಕೂಲೊಂದು ಸ್ಥಾಪಿಸಲ್ಪಡಬೇಕೆಂದು ಬಂದ ಸೂಚನೆಯನ್ನು ದಾ| ಟಿ| ಜಿ| ಆಚಾರ್ಯರು ಅನುಮೋದಿಸಿದರು. ಸರ್ವಾನುಮತದಿಂದ ಈ ಸೂಚನೆಯು ಸ್ವೀಕರಿಸಲ್ಪಟ್ಟಿತು.

ಶ್ರೀ ನಾರಾಯಣ ಗುರು ಬೇಂಕ್ ಲಿಮಿಟೆಡಿನ ಪ್ರವೇಶೋತ್ಸವವನ್ನು ಶ್ರೀ| ಸಿ| ಆರ್| ಶ್ರೀನಿವಾಸನರು ತಾ| ೧೯ರಂದು ಬೆಳಿಗ್ಗೆ ೯ ಗಂಟೆಗೆ ಹಂಪನಕಟ್ಟೆಯಲ್ಲಿರುವ ಬೇಂಕಿನ ಕಟ್ಟಡದಲ್ಲಿ ನೆರವೇರಿಸಿದರು.

ಶಿವಾರ್ ಪಂಚಾಯ್ತ್ ಬೋರ್ಡ್ ಪ್ರೆಸಿಡೆಂಟರಿಂದ

ಸಮಸ್ತ ಜನರಿಗೆ ಈ ಬಗ್ಗೆ ತಿಳಿಯ ಪಡಿಸುವುದೇನಂದ್ರೆ-

ಶಿರ್ವಾ ಪಂಚಾಯ್ತ್ ಬೋರ್ಡಿನ ಮಂಚಕಲ್ಲು **ಸಂತೆ ಮಾರ್ಕೇಟಿನಲ್ಲಿ ಮತ್ತು ದಿನಚರಿ ಮಾರ್ಕೇಟಿನಲ್ಲಿ 44—45 ನೇ ಒಂದು ವರ್ಷದಲ್ಲಿ** ವಸೂಲು ಮಾಡುವ ಹಕ್ಕು ಮತ್ತು ಪಂಚಾಯ್ತ್ ಬೋರ್ಡ್ ಲೈನ್ ಛಪ್ಪರಗಳು ವಾ ಎಡಿಶನಲ್ ಲೈನ್ ಕಟ್ಟೋಣಗಳಲ್ಲಿ ವ್ಯಾಪಾರ ಮಾಡುವ ಸ್ವತಂತ್ರವನ್ನು ಕೊಡಾ ತಾ 3—3—44ನೇ **ಶುಕ್ರವಾರ ಸಾಯಂಕಾಲ ಗಂಟೆ 4ಕ್ಕೆ ಪಂಚಾಯ್ತ್ ಬೋರ್ಡ ಆಫೀಸಿನಲ್ಲಿ** ಪ್ರೆಸಿಡೆಂಟರಿಂದ ವಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡಲ್ಪಡುವದು, ಮಾರ್ಕೇಟು ಶರ್ತ ವಿಸ್ತೃತಗಳನ್ನು ಪಂಚಾಯ್ತ್ ಬೋರ್ಡಿನ ಬಹಿರಂಗ ಪ್ರಕಟಣಾದಿಗಳನ್ನು ನೋಡಿ ತಿಳಿಯಬಹುದು. ಮಾರ್ಕೇಟುಗಳಲ್ಲಿ ವಸೂಲು ಮಾಡುವ ದರಗಳನ್ನು ಈ ಕೆಳಗಡೆ ಕಾಣ್ಸಿದಂತೆ ತಿದ್ದುಪಡಿ ಮಾಡೋಣಾಗಿಯದೆ.

1. ಪ್ರತೀ ಒಂದು ತಲೆಹೊರೆ ಸಾಮಾನಿನ ಮೇಲೆ 0-0-6; 2. ಪ್ರತೀ ಒಂದು ತಲೆಹೊರೆ ಮೀನಿನ ಮೇಲೆ 0-0-6; 3. ಸೈಕಲಿನಲ್ಲಿ ಬರುವ ಸಾಮಾನಿನ ಮೇಲೆ 0-1-0; 4. ಪ್ರತೀ ಗಾಡಿಯಲ್ಲಿ ಬರುವ ಸಾಮಾನಿನ ಗಾಡಿ 1ಕ್ಕೆ 0-4-0; 5. ವ್ಯಾಪಾರಕ್ಕೆ ಬರುವ ಪ್ರತೀ ಜಾನುವಾರು ಬಾಲ 1ಕ್ಕೆ 0-4-0:

ಪಂಚಾಯ್ತ್ ಬೋರ್ಡ ಆಫೀಸು ಶಿರ್ವಾ 15—2—44 } *(Sd)* ಯಸ್. ಅಂಣಯ್ಯ ಹೆಗ್ಡೆ

ಉಡುಪಿ.

ಸತ್ಕಾರ ಕೂಟಗಳು—ಮುಕುಂದ ನಿವಾಸ—ದಲ್ಲಿ ರಿಜರ್ವ್ ಬೇಂಕಿನ ಡೈರೆಕ್ಟರರಾದ ಶ್ರೀ| ಸಿ| ಆರ್| ಶ್ರೀನಿವಾಸನ್‌ರವರಿಗೆ ಸಿಂಡಿಕೇಟ್ ಬೇಂಕಿನ ಚೆಯರ್‌ಮೆನ್ ಡಾ| ಟಿ| ಮಾಧವ ಪೈಗಳವರು ತಾ| ೨೧ರಂದು ಮೂರೂವರೆ ಗಂಟೆಗೆ ಟೀಪಾರ್ಟಿಯನ್ನಿತ್ತು ಗೌರವಿಸಿದರು. ಈ ಸಮಾರಂಭಕ್ಕೆ ಊರವರನೇಕರು ಆಮಂತ್ರಿಸಲ್ಪಟ್ಟಿದ್ದರು. ಸಿಂಡಿಕೇಟ್ ಬೇಂಕಿನ ಪ್ರಗತಿಪರ ಅಂಕೆಸಂಖ್ಯೆಗಳ ಟಿಪ್ಪಣಿ ವರದಿಯನ್ನು ಜನರಲ್ ಮೆನೇಜರರಾದ ಶ್ರೀ| ಟಿ| ಅನಂತಪೈಗಳವರು ತಿಳಿಸಿದುದಕ್ಕೆ ಉತ್ತರ ರೂಪದಲ್ಲಿ ದ| ಕ| ಜಿಲ್ಲೆಯ ಬೇಂಕುಗಳಿಗೆ ರಿಜರ್ವ್ ಬೇಂಕಿನ ಸಹಾಯ ಸಲಹೆಗಳನ್ನು ತಾನು ಕೊಡಲು ಸಿದ್ಧನಿರುವನೆಂದು ಮಾನ್ಯ ಅತಿಥಿಗಳು ಆಶ್ವಾಸನೆಯಿತ್ತರು. ಸಿಂಡಿಕೇಟ್ ಬೇಂಕಿನ ಚಟುವಟಿಕೆಗಳನ್ನು ಪ್ರಶಂಸಿಸಿದರು. ಡಾ| ಪೈಗಳು ಧನ್ಯವಾದವನ್ನಿತ್ತರು.

ಮೈಸೂರು, ಬೆಂಗಳೂರು ಮೊದಲಾದ ಕಡೆಗಳಿಂದ ಬಂದಿದ್ದ ಪತ್ರಿಕೋದ್ಯೋಗಿಗಳಿಗೆಲ್ಲಾ ಕಾಪ್ಟೆ ಶಾರ್ ಸಹೋದರರು ಟೀಪಾರ್ಟಿಯನ್ನಿತ್ತರು. 'ಹ್ಯೂಮನ್ ಎಫರ್ಸ್' ಪತ್ರಿಕೆಯ ಯಜಮಾನರು ಏರ್ಪಡಿಸಿದ ಸತ್ಕಾರಕೂಟದ ಅಧ್ಯಕ್ಷತೆಯನ್ನು ಡಾ| ಟಿ| ಮಾಧವಪೈಗಳವರು ವಹಿಸಿದ್ದರು, ಪತ್ರಿಕೆಯ ಪರಿಚಯವನ್ನು ಪ್ರಧಾನ ಸಂಪಾದಕರಾದ ಶ್ರೀ| ಟಿ| ರಘುನಾಥ ಪೈಗಳವರು ಮಾಡಿಕೊಟ್ಟರು, ಅತಿಥಿಗಳ ಪರವಾಗಿ ಶ್ರೀ ರಾಮಯ್ಯನವರು ಉಪಕಾರ ಸ್ಮರಣೆ ಮಾಡಿದರು, ಶ್ರೀ| ಎನ್| ಎಸ್| ಪೈಗಳವರು ಧನ್ಯವಾದಗಳನ್ನರ್ಪಿಸಿದರು.

ಭೂಮಾಲಿಕರಲ್ಲಿ ವಿಜ್ಞಾಪನೆ:—

ನಮ್ಮ ಜಿಲ್ಲೆಯಲ್ಲಿ ಅಲ್ಲಲ್ಲಿ ರೈತರಲ್ಲಿದವರಿಗೆ ಅಕ್ಕಿ ನಗ್ದು ಬೆಲೆಯಲ್ಲಿ ಮಾರಾಟ ಮಾಡುವ ಕಾರ್ಯವನ್ನು ಈಗ ಪ್ರಾರಂಭಿಸಿರುತ್ತದೆ. ಇನ್ನು ಅನೇಕ ಕಡೆಯಲ್ಲಿ ಅದೇ ರೀತಿ ಮಾರಾಟ ಮಾಡುವ ಕಾರ್ಯವನ್ನು ಈಗ ಪ್ರಾರಂಭಿಸಿರುತ್ತದೆ. ಇನ್ನು ಅನೇಕ ಕಡೆಯಲ್ಲಿ ಅದೇ ರೀತಿ ಮಾರಾಟ ಮಾಡುವ ಕಾರ್ಯವನ್ನು ಕೈಕೊಳ್ಳಬೇಕೆಂದು ದ. ಕ. ಆಹಾರ ಕೌನ್ಸಿಲ್‌ನವರು ನಿಶ್ಚಯಿಸಿದ್ದಾರೆ. ಆದರೆ ಈಗ ಜಮೆ ಇರುವ ಅಕ್ಕಿಯು ಸಾಕಾಗಲಿಕ್ಕಿಲ್ಲ ಎಂಬ ಭಯದಿಂದ ಆ ಕಾರ್ಯವು ಬೇಗನೇ ಜಾರಿಗೆ ತರಲು ಅನಾನುಕೂಲವಾಗಿಯದೆ.

ಐದು ಎಕ್ರೆ ಮೇಲೆ ಜಮೀನು ಇರುವ ವರ್ಗದಾರರಿಂದ ಮತ್ತು ಸುಗ್ಗಿ ಬೆಳೆಯ ಉತ್ಪತ್ತಿಯಿಂದ ರಿಕ್ವಿಶಿಶನ್ ಆಗುವುದು ಭೂಮಾಲಿಕರು ಗಾಬರಿಗೊಳ್ಳುವುದು ಅವಶ್ಯವಿಲ್ಲ. ಭೂಮಾಲಿಕರು ಸಾಗುವಳಿಯ ಇತರ ಖರ್ಚಿಗೆ ಬೇಕಾಗುವಷ್ಟು ಅಕ್ಕಿಯನ್ನು ಅವರಲ್ಲಿಯೇ ಬಿಟ್ಟು ಮಾರಾಟ ಮಾಡುವ ಅಕ್ಕಿಯನ್ನು ಮಾತ್ರ ರಿಕ್ವಿಶಿಶನು ಮಾಡುವುದಲ್ಲದೆ ಇದರಿಂದ ಹಳ್ಳಿಯಲ್ಲಿ ಆಹಾರದ ಕೊರತೆಯು ಬಾರದಂತೆ ಜಾಗ್ರತೆ ತೆಗೆದುಕೊಳ್ಳುತ್ತದೆ. ಅಲ್ಲದೆ ಕೆಲವು ಹಳ್ಳಿಗಳಲ್ಲಿ ಕೂಡ ಆಹಾರದ ಕೊರತೆ ಇದ್ದರೆ ಅಂಥಾ ಹಳ್ಳಿಗಳಿಗೂ ಕೂಡಾ ಅಕ್ಕಿ ದೊರಕಿಸುವ ವಿಚಾರ ಕೂಡ ನಡಿಯುತ್ತದೆ. ಆ ಬಗ್ಗೆ ಈ ಜಿಲ್ಲೆಗೆ ಅಕ್ಕಿ ಹೊರಗಿನಿಂದ ಒದಗಿಸಿಕೊಡಬೇಕಾಗಿ ನಾವು ಮದ್ರಾಸು ಗವರ್ನಮೆಂಟಿಗೆ ಮನವಿ ಮಾಡಿಕೊಂಡಿರುತ್ತೇವೆ.

ಪುತ್ತೂರು ತಾಲೂಕಿನಲ್ಲಿ ಆಕ್ಷೇಪಣೆ ಅರ್ಜಿಗಳ ತನಿಖೆ ಮುಗಿಯಿತು. ಮಂಗಳೂರು ತಾಲೂಕು ಆಕ್ಷೇಪಣೆ ಅರ್ಜಿಗಳು ತನಿಖೆ ಆಗುತ್ತಲಿವೆ. ಅದೇ ರೀತಿ ಬಾಕಿ ತಾಲೂಕುಗಳಲ್ಲಿಯೂ ನಮ್ಮ ಸಂಘದ ಕಡೆಯಿಂದ ಪ್ರತಿನಿಧಿಗಳನ್ನು ಜತೆಗೆ ಸೇರಿಸಿಕೊಂಡು ಅವರ ಸಹಕಾರದ ಮೂಲಕವೇ ಆಕ್ಷೇಪಣೆ ಅರ್ಜಿಗಳು ತನಿಖೆ ಆಗುವುವು ಈ ವರೆಗೆ ನಡೆದ ತನಿಖೆಯಲ್ಲಿ ಭೂಮಾಲಿಕರಿಗೆ ಯಾವ ತೊಂದರೆಯೂ ಬರಲಿಲ್ಲವೆಂಬುದಕ್ಕೆ ಒಂದೇ ದೃಷ್ಟಾಂತ ಕೊಡುವುದಾದರೆ, ಪುತ್ತೂರು ತಾಲೂಕಿನಲ್ಲಿ ಆಕ್ಷೇಪಣೆ ಅರ್ಜಿಗಳು ತನಿಖೆಯಾದ ಕೂಡಲೆ ರಿಕ್ವಿಶಿಶನ್ ಆಗದೆ ಬಿಟ್ಟ ಸಾಧಾರಣ 5,000 ಮುಡಿ ಅಕ್ಕಿಯನ್ನು ವ್ಯಾಪಾರಸ್ಥರು ಹೆಚ್ಚಿನ ಬೆಲೆಗೆ ಪಡದು ಕಾಸರಗೋಡಿನಲ್ಲಿ ಬಹಳ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದ್ದಾರೆ; ಈಗಲೂ ಈ ಬ್ಲ್ಯಾಕು ಮಾರ್ಕೇಟು ನಡಿಯುತ್ತಾ ಇದೆ. ಕಾಸರಗೋಡಿಗೆ ಸಾಕಾಗುವಷ್ಟು ಅಕ್ಕಿಯು ಸ್ಟೋರ್ಸಿನಿಂದ ಕೊಡಲು ಅಸಾಧ್ಯವಾದ್ದರಿಂದ ಈ ಬ್ಲ್ಯಾಕು ಮಾರ್ಕೇಟು ನಿಲ್ಲಿಸಲು ವಿಳಂಬವಾಗಿಯದೆ. ಹೊರ ಪ್ರದೇಶದಿಂದ ಅಕ್ಕಿ ಬಂದ ಕೂಡಲೇ ಅದನ್ನು ನಿಲ್ಲಿಸುವರು.

ಕಾಸರಗೋಡು ಬಿಟ್ಟು ಮಿಕ್ಕ ೫ ತಾಲೂಕಿನಲ್ಲಿ ಒದಗುವ ಅಕ್ಕಿಯು ಈ ಐದು ತಾಲೂಕುಗಳಿಗೇನೇ ಸಾಕಾಗುವುದಿಲ್ಲವೆಂತ ಕಾಣುತ್ತದೆ. ಆದ್ದರಿಂದ ಮಂಗ್ಳೂರು ಶಹರಿಗೆ ಮತ್ತು ಕಾಸರಗೋಡು ತಾಲೂಕಿಗೆ ಬೇಕಾಗುವ ಸಾಧಾರಣ ನಾಲ್ಕು ಲಕ್ಷ ಮುಡಿ ಅಕ್ಕಿಯು ನಮಗೆ ಒದಗಿಸಬೇಕಾಗಿ ಮದ್ರಾಸು ಗವರ್ನಮೆಂಟಿಗೆ ಮನವಿ ಮಾಡಿಕೊಂಡಿದ್ದೇವೆ. ಇದೂ ಕೂಡ ಸಾಕಾಗಲಿಕ್ಕಿಲ್ಲವೆಂಬ ಭಯವಿದೆ.

ಆದ್ದರಿಂದ ಭೂಮಾಲಿಕರು ತಮ್ಮ ಮಾರಾಟದ ಅಕ್ಕಿಯನ್ನು ಬೇಗನೇ ಸ್ಟೋರ್ಸ್‌ಗಳಿಗೆ ಕೊಡಬೇಕು. ವಿಳಂಬವಾದರೆ ಹೊರಗಿನ ಅಕ್ಕಿ ಬಂದು ಅಕ್ಕಿಯ ಬೆಲೆಯು ಇನ್ನೂ ಕಮ್ಮಿ ಆಗುವುದಲ್ಲದೆ ಬಾರದಿದ್ದರೆ ಆಹಾರದ ಕೊರತೆಯು ಜಾಸ್ತಿ ಆಗಿ ನೆಮ್ಮದಿಯು ಹಾಳಾಗುವ ಸಂಭವ ಒದಗೀತು. ಭೂಮಾಲಿಕರು ಈ ವಿಚಾರಗಳನ್ನೆಲ್ಲ ನೆನವರಿಕೆ ಮಾಡಿ ನಮ್ಮ ಜಿಲ್ಲೆಯ ಆಹಾರದ ಸಮಸ್ಯೆಯನ್ನು ಬಗೆಹರಿಸಲು ಸಹಾಯಕರಾಗಬೇಕಾಗಿ ಬೇಡಿಕೊಳ್ಳುತ್ತೇವೆ ಎಂದು ದ.ಕ. ಭೂಮಾಲಿಕ ಸಂಘದ ಜತೆ ಕಾರ್ಯದರ್ಶಿಗಳಾದ ಶ್ರೀ ಕೆ.ಬಿ. ಜಿನರಾಜ ಹೆಗ್ಡೆ ಮತ್ತು ಕೆ. ಸದಾನಂದ ಹೆಗ್ಡೆಯರು ವಿನಂತಿಸುತ್ತಾರೆ.

ಕಲೆಯು ಮುಂದೆ ಕುಲೀನತೆ ತನ್ನ ಕೋಟೆಯನ್ನು ಕಟ್ಟಿದೆ.

ಆ ಕೋಟೆಯನ್ನು ಒಡೆದು ಕುಲೀನತೆಯನ್ನು ಇದಿರಿಸುವಷ್ಟು ಶಕ್ತಿ ಕಲೆಗೆ ಇದೆಯೋ? ಇಲ್ಲವೇ? ನೋಡಿರಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಬೊಂಬಾಯಿ ಟಾಕೀಸಿನವರ ಅತ್ಯುತ್ತಮ ಸಾಮಾಜಿಕ ಚಿತ್ರ

22-2-1944ರಿಂದ **'ಬಸಂತ'** 22-2-1944ರಿಂದ

ಮುಮುತಾಜ ಶಾಂತಿ ಮತ್ತು ಉಲ್ಹಾಸ

ಅನಂತರ:—ಪ್ರಭಾತ ಚಿತ್ರ **'ನಯಿಕ ಹಾನಿ'**

ಜೈರಾಜ್ ಮತ್ತು ರೋಸ್, ನಾಂದ್ರೇಕರ್.

೩ನೇ ಪುಟದಿಂದ

ದೇಶಭಾಷಾ ಪತ್ರಿಕೆಗಳು. ಇವುಗಳಲ್ಲಿ ಆರ್ಥಿಕ ದೃಷ್ಟಿಯಿಂದ, ವ್ಯವಹಾರ ಪ್ರಪಂಚದ ಮತ್ತು ಸರಕಾರದ ಬೆಂಬಲ ಪಡೆದಿರುವ ಪ್ರಥಮ ಪಂಗಡವು ಅತ್ಯಂತ ಪ್ರಭಾವಶಾಲಿಯಾಗಿರುವುದು. ರಾಜಕೀಯ ದೃಷ್ಟ್ಯಾ, ಎರಡನೆಯ ಪಂಗಡವು ವಿವಿಧ ರಾಜಕೀಯ ಪಕ್ಷ ಮುಖಂಡರುಗಳ ಮುಖ ಪತ್ರಿಕೆಯಾಗಿದ್ದು ಅತ್ಯಂತ ಬಲಶಾಲಿಯಾಗಿದೆನ್ನಬಹುದು. ಮೂರನೆಯ ಪಂಗಡವು ಕೇವಲ ಜನಸಾಮಾನ್ಯರ ಸಂಪರ್ಕದಿಂದ ಪ್ರಭಾವಶಾಲಿಯಾಗಿರುವುದು. ಕಳೆದ ಒಂದೆರಡು ವರ್ಷಗಳಿಂದ ಪತ್ರಿಕಾ ಸ್ವಾತಂತ್ರ್ಯ ಮತ್ತು ಹಿತರಕ್ಷಣೆಗಳ ಸಲುವಾಗಿ ಎಲ್ಲಾ ಮೂರು ಪಂಗಡಗಳೂ ಭ್ರಾತೃತ್ವದ ಮೈತ್ರಿ ಸ್ಥಾಪಿಸಲು ಯತ್ನಿಸುತ್ತಿವೆ. ಆದರೆ ಈ ಮೈತ್ರಿಯು ಕೆಲವು ಸನ್ನಿವೇಶಗಳಲ್ಲಿ ಹಾಗೂ ರಾಜಕೀಯ ಭಿನ್ನಾಭಿಪ್ರಾಯಗಳಲ್ಲಿ, ವೃತ್ತಿಯ ಔಚಿತ್ಯದ ಮೇರೆಗೆ ಅಪವಾದಕ್ಕೀಡಾಗುತ್ತಿದೆ. ಆದರೆ ಪರಸ್ಪರ ನಿಕಟ ಸಂಬಂಧವೂ, ಆದರ ಗೌರವ, ತಾಳ್ಮೆ, ಸಹಿಷ್ಣುತೆ, ಜಾಗರೂಕತೆಯು ಮೇಲ್ಪಂಗ್ತಿಯೂ ಪತ್ರಿಕೆಗಳ ಶಕ್ತಿ ಸಾಮರ್ಥ್ಯವನ್ನು ಅಜರಾಮರಗೊಳಿಸಿ ಕೀರ್ತಿ ಭಾಜನವಾಗುವಂತೆ ಸಾಗುತ್ತಿವೆ." ಎಂದರು.

ಅನಂತರ ಸಮ್ಮೇಳನಕ್ಕೆ ಶುಭವನ್ನು ಕೋರಿ ಬಂದಿದ್ದ ಸಂದೇಶಗಳನ್ನು ಸ್ವಾಗತ ಕಾರ್ಯದರ್ಶಿ ಶ್ರೀ| ಕುಳಕುಂದ ಶಿವರಾಯರು ಓದಿದರು. ರಾತ್ರೆ ವಿಷಯ ನಿರ್ಣಾಯಕ ಸಮಿತಿ ಸಭೆಯು ಶ್ರೀ. ಪಿ. ಆರ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿ ಮಹಾ ಅಧಿವೇಶನದ ಮುಂದಿಡತಕ್ಕ ನಿರ್ಣಯಗಳ ಕುರಿತು ಸುದೀರ್ಘ ಚರ್ಚೆ ನಡೆಯಿತು.

ಮರುದಿನ ಪ್ರಾತಃಕಾಲ 'ಪತ್ರಿಕೋದ್ಯಮದಲ್ಲಿ ಪ್ರಾವೀಣ್ಯ' ಎಂಬ ಕುರಿತು ವಿಚಾರ ವಿನಿಮಯ-ಸಮನ್ವಯ ಕೂಟ ಜರಗಿತು ತದನಂತರ ಮುಖ್ಯಾಯ ಅಧಿವೇಶನದ ಪ್ರಾರಂಭದಲ್ಲಿ ಶ್ರೀ. ಮಹದೇವ ದೇಸಾಯಿ, ಪಂಡಿತ ತಾರಾನಾಥ ಮೊದಲಾದವರ ನಿಧನದ ಕುರಿತು ಸಂತಾಪ ಸೂಚಕ ನಿರ್ಣಯವಾಯಿತು, ಪತ್ರಿಕೆಗಳಿಗೆ ಸಂಬಂಧಿಸಿದ ವಿಷಯಗಳ ಕುರಿತು ಸರಕಾರೀ ಧ್ಯೇಯಗಳನ್ನು ನಿಷೇಧಿಸಿ ನಿರ್ಣಯಗಳಾದುವು. ಪ್ರಾಂತಿಕ ಪತ್ರಿಕೋದ್ಯೋಗಿ ಸಂಘಕ್ಕೆ ಚಾಲ್ತಿ ವರುಷದ ಬಗ್ಗೆ ನಾಯಕ ಮಂಡಲಿಯ ಹೆಸರುಗಳ ಪಟ್ಟಿ ಓದಿ ಹೇಳಿದ್ದನ್ನು ಸ್ವೀಕರಿಸಲಾಯಿತು. ಮುಕ್ತಾಯ ಭಾಷಣದಲ್ಲಿ 'ನಿಮ್ಮ ನಾಡಿನ ಪತ್ರಿಕೋದ್ಯಮದ ಪ್ರಗತಿ ಸಾಧ್ಯವಾಗಲಿ' ಎಂದು ಅಧ್ಯಕ್ಷರು ಹರಸಿ ಭಾಷಣಮಾಡಿದರು. ಸಂಜೆ ಕೆನರಾ ಬೇಂಕಿನ ಮತ್ತು ಕೆನರಾ ಬೇಂಕಿಂಗ್ ಕೊರ್ಪರೇಶನಿನ ಕಡೆಯಿಂದ ಉಪಹಾರ ಕೂಟವೊಂದು ಯಶಸ್ವಿಯಾಗಿ ಜರಗಿತು. ತದನಂತರ 'ಲಿಪಿ ಸಂಸ್ಕರಣ'ದ ವಿಷಯದಲ್ಲಿ ಚರ್ಚೆನಡೆಯಿತು. ಶ್ರೀ ವಾಮನಕುದ್ವರ ನೇತೃತ್ವದಲ್ಲಿ ಶ್ರೀ ಹುರುಳಿ ಭೀಮರಾಯರ ಆದರ್ಶ ಪೌರುಷತ್ವದಲ್ಲಿ ಪ್ರತಿನಿಧಿ ಡೆಲಿಗೇಟರರಿಗೆ ದೊರೆತ ಊಟೋಪಚಾರಗಳು ಎತ್ತಿ ಹೇಳತಕ್ಕವಾಗಿವೆ.

ರೇಶನಿಂಗ್ ಅಧಿಕಾರಿಗಳೊಡನೆ

ಬರೆಹಗಾರ:—ಶ್ರೀ. ಬನ್ನಂಜೆ ರಾಮಾಚಾರ್ಯರು.

"ರೇಶನಿಂಗ್" ಈ ಶಬ್ದ ನಮ್ಮ ಜನಕ್ಕೆ ಇನ್ನೂ ಹೊಸತು. ಅದಕ್ಕಿಂತಲೆ ನಮ್ಮಲ್ಲಿ ರೇಶನಿಂಗ್ ಎಂದರೆ ಜನರಿಗೆ ದಿಗಿಲು. ಕದನ ಕಾಲಿಯ ಕೋಲಾಹಲ ಸರಕಾರದ ಎದೆಯನ್ನು ನಡುಗಿಸತೊಡಗಿದಾಗ—ಪ್ರಭುತ್ವ ಸ್ವರಕ್ಷಣೆಯ ದೀಕ್ಷೆಯಲ್ಲಿ ನಾಡಿನ ಸಕಲ ಸಂಪತ್ತನ್ನೂ ಸ್ವಾಯತ್ತೀಕರಿಸಿಕೊಳ್ಳುವುದು ಎಲ್ಲ ರಾಷ್ಟ್ರಗಳಲ್ಲೂ ಇದ್ದ ಮಾತು. ಆ ನೀತಿಯಂತೆಯೇ ಇಂದು ಪ್ರಭುತ್ವ ಯುದ್ಧದಲ್ಲಿ ಗೆಲವನ್ನು ದೊರಕಿಸಿಕೊಳ್ಳಲು ಹೆಣಗುತ್ತಿದೆ. ಯುದ್ಧ ನಮ್ಮ ರಾಷ್ಟ್ರಕ್ಕೆ ಸಂಬಂಧಪಟ್ಟದೆಯೇ? ನಮಗಿದರ ಗೊಡವೆ ಏತಕ್ಕಾಗಿ? ಬ್ರಿಟಿಷರೂ ಜರ್ಮನರೂ ಹಗೆಗಳಾಗಿ ಕಾದಾಡಿದ್ದಾಗ ನಾವು ಬನ್ನಪಡುವುದೇಕೆ? ಎಂಬ ಪ್ರಶ್ನೆಗಳಿಗೆ ಇಲ್ಲಿ ಉತ್ತರ ಕೊಡುವುದಿಲ್ಲ. ಅದು ಇನ್ನೊಂದು ಲೇಖದ ವಸ್ತುವಾಗಬಹುದು. ಸದ್ಯ ನಮ್ಮಲ್ಲಿ ಪ್ರಚಾರಕ್ಕೆ ಬಂದ-ಬರುವ ರೇಶನಿಂಗ್ (ಸೀದಾ ಹಸುಗೆ) ಪದ್ಧತಿಯ ಕುರಿತು ಕೆಲವು ಅಂಶಗಳನ್ನು ಚರ್ಚಿಸಬೇಕೆಂಬುದೆ ಈ ಬರೆಹದ ಉದ್ದೇಶ.

ಯುದ್ಧದ ಮಾರಿ ಸಾಧಾರಣ ವರ್ಗದ ಜನಗಳನ್ನು ಬಲಿ ತೆಗೆದುಕೊಳ್ಳುವುದಾದರೂ-ಹಲವು ವರ್ಗದ ಜನಗಳಿಗೆ ದುಡ್ಡಿನ ಸುರಿಮಳೆಯನ್ನೆ ಉಂಟು ಮಾಡುವುದು. ಈ ಬಗೆಯ ಜನರ ಲೋಭವೂ ಸರಕಾರದ ಅಜಾಗ್ರತೆ ಇಲ್ಲವೆ ಸ್ವಾರ್ಥ ಇವೂ ಸೇರಿದಾಗ ಇಂದು ನಾವು ಅನುಭವಿಸುವ ಗೊಂದಲವುಂಟಾಗುತ್ತಿದೆ. ಯುದ್ಧದ ಮೊದಲಿಗೆ ಪರದೇಶಗಳಿಂದ ಬರುತ್ತಿದ್ದ ಸಾಮಾನುಗಳು ನಿಂತಪಂತಲೆ ಇಂದಿನ ಕೊರತೆಯುಂಟಾಗಿದೆ ಎಂಬ ಮಾತು ಹಲವಂಶದಲ್ಲಿ ಸತ್ಯವಿದ್ದರೂ--ಮೇಲಿನ ಕಾರಣಗಳೆ ಈ ಗಲಿಬಿಲಿಗೆ ಹೇತು. ಯಾವುದನ್ನಾದರೂ ಇಲ್ಲದೆ ಕಳೆಯಬಹುದಾದರೂ ಹೊಟ್ಟೆಗೆ ಇಲ್ಲದೆ ಕಳೆಯಲಾಗುವುದೆ? ಅದುದರಿಂದಲೆ ಅಕ್ಕಿಯ ರೇಶನಿಂಗ್ ಎಂದಾಗ ಇಷ್ಟು ಮಹತ್ವ. ಈ ಆಹಾರದ ಹಸುಗೆ ಪದ್ಧತಿಯು ಬೇರೆ ಬೇರೆ ಕಡೆ ಪ್ರಚಾರದಲ್ಲಿ ಬಂದಿದೆ- ಯುದ್ಧ ಇನ್ನೂ ಕೆಲವು ಕಾಲವುಳಿದರೆ ಊರಿನ ಉದ್ದಗಲಕ್ಕೆಲ್ಲ ಈ ವ್ಯವಸ್ಥೆ ಹಬ್ಬಬೇಕಾದೀತು. ಆದರೆ ಈ ಲೇಖದ ಮೊದಲಿಗೆ ವಿವರಿಸಿದಂತೆ ನಮ್ಮ ನಾಡಿಗೆ ಇದು ಹೊಸತಾದ ಅಂಶ. ಜನರಿಗೂ ಹೊಸತು ಅಧಿಕಾರಿಗಳಿಗೂ ಹೊಸತು. ಇದರಿಂದ ವ್ಯವಸ್ಥೆಯಲ್ಲಿ ಅಕ್ಷಮ್ಯವಾದ ದೋಷವಾಗುತ್ತಿದೆ. ಅಧಿಕಾರಿಗಳ ಅಜ್ಞಾನ ಅನೇಕರ ನೋವಿಗೆ ಕಾರಣವಾಗುತ್ತಿದೆ. ಪ್ರತಿಯೊಬ್ಬನ ಜೀವನಕ್ಕೆ ಬೇಕಾದ ಆಹಾರವನ್ನು ಅಧಿಕಾರಿಗಳು-ಸರಕಾರ- ಒದಗಿಸಲೇಬೇಕು. ಈ ಕರ್ತವ್ಯಭಂಗದ ಪಾಪಕ್ಕೆ ಪಕ್ಕಾಗುವುದು ಮುಂದಿನ ಕೇಡನ್ನು ತಾವಾಗಿ ಕರೆದಂತೆ! ಆಹಾರ ಪೂರಯಿಕೆಯ ವೇಳೆಯಲ್ಲಿ "ಎಲ್ಲರಿಗೂ ಹೊಟ್ಟೆಯಿದೆ" ಎಂಬ ತತ್ವವನ್ನೇ ಮರೆತುಬಿಟ್ಟರೆ ಪ್ರಲಯ ಬಹಳ ದೂರವಿಲ್ಲ ಎಂಬುದರ ಅರಿವಾದೀತು ಸರಕಾರ--ಅಧಿಕಾರಿ ವೃಂದ--ಜನ ೧ರ ಇಂತಿಷ್ಟು ಎಂದು ವಿಧಿಸಿದ ಅಕ್ಕಿಯ ಪರಿಮಾಣ ಕೆಲವೆಡೆ-ನಮ್ಮ ಜಿಲ್ಲೆಯಲ್ಲಿ ಖಂಡಿತ ಸಾಲದು. ಹೀಗೆ ಮಾಡುವುದು ಒಂದು ಬಗೆಯ ಪ್ರಜಾದ್ರೋಹ. ಈ ಕುರಿತು 'ಹಿಂದು ಚರಿತ್ರದರ್ಪಣ' ಎಂಬ ಪುಸ್ತಕದಲ್ಲಿರುವ ಒಂದು ವಿಚಾರವನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ.

"....೧೮೭೭ರಲ್ಲಿ ಲಿಟ್ಟನ್ ಎಂಬವನಿಗೆ ವೈಸ್ರಾಯಿ ಕೆಲಸವಾಯಿತು ಇವನು ಬಂದ ಕೂಡಲೆ ವಿಂಧ್ಯ ಪರ್ವತದಿಂದ ಕನ್ಯಾ ಕುಮಾರಿಯ ವರೆಗಿನ ಸೀಮೆಗಳಲ್ಲೆಲ್ಲ ಮಳೆ ಇಲ್ಲದೆ ಪೈರು ಕೆಟ್ಟು ಇದ್ದ ಧಾನ್ಯವೂ ವೆಚ್ಚವಾಗಿ ದೊಡ್ಡ ಬರ ಬಂದಿತು. ಆಗ ಸರಕಾರದವರೇ ದೊಡ್ಡ ಪ್ರಮಾಣದಲ್ಲಿ ವೆಚ್ಚ ಮಾಡಿ ಜನರಿಗೆ ಆಹಾರವನ್ನು ಪೂರಯಿಸಿ ಕೊಡಬೇಕೆಂದು ಕೆಲವರು ಸರಕಾರಕ್ಕೆ ಬರೆದುಕೊಂಡರು. ಇದರ ನಿಶ್ಚಯವನ್ನು ತಿಳಿದು ತಕ್ಕ ಏರ್ಪಾಡು ಮಾಡಲು ಬಂಗಾಲದ ಗವರ್ನರನಾಗಿದ್ದ ಸರ್ ರಿಚರ್ಡ್‌ಟೆಂಪಲ್ ಎಂಬವನನ್ನು ವೈಸ್ರಾಯಿ ಈ ಸೀಮೆಗೆ ಕಳಿಸಿದನು. ಆವನು ಈ ದೇಶದ ಮತ್ತು ಜನಗಳ ನಿಜಸ್ಥಿತಿಯನ್ನು ತಿಳಿಯದೆ ತಲಾ ಒಂದೂ ಮುಕ್ಕಾಲು ಪಾವು ಧಾನ್ಯ ಸಾಕೆಂತಲೂ ಸರಕಾರ ಹೆಚ್ಚು ಖರ್ಚು ಮಾಡ[illegible] ದೊಡ್ಡ ಕ್ಷಾಮವಲ್ಲವೆಂತಲೂ ಬರೆದನು. ಈ ಕಲ್ಲು ಮನಸ್ಸಿನವನ ಮಾತು ಕೇಳಿ ವೈಸ್ರಾಯಿ ಹಾಗೇ ಮಾಡಿದ. ಇದರಿಂದ ಬೊಂಬಾಯಿ, ಪುನೆ, ಬಳ್ಳಾರಿ, ಮೈಸೂರು, ಮದರಾಸು ಪ್ರಾಂತ್ಯ, ತಂಜಾವೂರು ಪ್ರಾಂತ್ಯ ಇವೆಲ್ಲಾ ಹೊಟ್ಟೆಗಿಲ್ಲದೆ ೫೦—೬೦ ಲಕ್ಷದ ಮೇಲೆ ಜನರು ಸತ್ತರು. ಹೆಣಗಳನ್ನು ಬಂಡಿಗಳಲ್ಲಿ ಹೇರಿ ಸಾಗಿಸಬೇಕಾಯಿತು. ಅನೇಕ ಮನೆ, ಹೊಲ, ಹಳ್ಳಿ, ಗ್ರಾಮ ಹಾಳಾಗಿ ಹೋಯಿತು! ಇಂಥಾ ಬರ ಪ್ರಪಂಚಕ್ಕೇ ಬಂದಿರಲಿಲ್ಲವೆಂದು ತೋರುತ್ತ......

(—ಹಿಂದೂ ಚರಿತ್ರ ದರ್ಪಣ ಪುಟ ೧೭೭-೧೭೭.)

ಮೇಲೆ ವಿವರಿಸಿದಂತೆ ಸದ್ಯ ಇಲ್ಲಿ ಕ್ಷಾಮವಿಲ್ಲವಾದರೂ ಆಹಾರ ಪೂರಯಿಕೆಯ ಅಂಶದಲ್ಲಿ ಮೇಲೆ ವಿವರಿಸಿದ ತಪ್ಪು ಇಂದಿಗೂ ಆಚರಣೆಗೆ ಬರುವ ಹಾಗೆ ಕಾಣುವುದಿಲ್ಲವೆ? ಇದನ್ನು ಅಧಿಕಾರಿಗಳು ವಿಚಾರಿಸಬೇಡವೆ?

೧. ಪ್ರತಿಯೊಬ್ಬನಿಗೂ ಬೇಕಾದಷ್ಟು ಆಹಾರ ಪೂರೈಕೆ.

೨. ಕಚ್ಚಿಗೆ-ಬೆಳ್ತಿಗೆ-ಎಂಬ ಭೇದವಿದ್ದಲ್ಲಿ ಜನ ಯಾವುದನ್ನು ಅಪೇಕ್ಷಿಸುವುದೋ ಅದರ ಪೂರಯಿಕೆ.

೩. ಕಳ್ಳ ಪೇಟೆಯಲ್ಲಿ ಒಂದು ಕಾಳೂ ಅಕ್ಕಿ ದೊರೆಯದಂತೆ ವ್ಯವಸ್ಥೆ.

೪. ಕಳ್ಳ ಪೇಟೆಯಲ್ಲಿ ವಿಕ್ರಯಿಸಿದವನಿಗೂ ತೆಗೆದುಕೊಂಡವನಿಗೂ ಕಠಿಣ ದಂಡನೆ

೫ ಅಕ್ಕಿಯ ದರ ಯಾವ ಕಾಲಕ್ಕೂ ಏರಿಳಿಯದಂತೆ ನೋಡಿಕೊಳ್ಳುವಿಕೆ.

೬. ಯಾರಲ್ಲಿಯೆ ಆಗಲಿ ಅವರ ಖರ್ಚಿಗೆ ಮಿಗುವಷ್ಟು ಅಕ್ಕಿಯಿದ್ದರೆ ಅದನ್ನೆಲ್ಲ ಸಂಗ್ರಹ ಮಾಡುವಿಕೆ.

೭. ಯಾವನಿಗೂ ಯಾವ ವಿಧದಿಂದಲೂ ಅನ್ಯಾಯವಾಗದಿರುವಿಕೆ.

೮ ವಿತರಣೆಗಾಗಿ ಇನ್ನೂ ಹೆಚ್ಚಿನ ಕೇಂದ್ರಗಳ ತೆರೆಯುವಿಕೆ.

—ಇತ್ಯಾದಿ ಅಂಶಗಳ ಕಡೆಗೆ ವಿಮರ್ಶಾಪೂರ್ಣವಾಗಿ ಲಕ್ಷ್ಯಕೊಡಬೇಕು. ರೇಶನಿಂಗ್ ವ್ಯವಸ್ಥೆಯ ಉದ್ದೇಶ ಇದೇ ಆದರೂ ಜನಗಳಿಗೆ ಅದರ ಪ್ರಯೋಜನ ದೊರೆಯುತ್ತಿಲ್ಲ. ಇದು ಹೊಣೆ ಹೊತ್ತವರ ಅಪರಾಧ. ಹೊಣೆ ಹೊತ್ತವರು ತಮ್ಮ ಮನೆಯಲ್ಲಿ ಇರಬಹುದಾದ ವ್ಯವಸ್ಥೆಯನ್ನು ಊರಿನ ಇತರ ಸೋದರ-ಸೋದರಿಯರ ಮನೆಯಲ್ಲೂ ಇರಗೊಡಿಸಿದ್ದಾರೆಯೆ? ಅವರ ಆತ್ಮಸಾಕ್ಷಿಯಾಗಿ ಉತ್ತರ ಕೊಡುವಾಗ ಅವರಿಗೆ ಗಂಟಲು ನೋವಾಗದೆ ಇರಲಾರದು!

ಈ ಭಾಗದಲ್ಲಿ ಜನರ ಕರ್ತವ್ಯವೂ ಒಂದಿದೆ. ಈ ವಿಪತ್ತಿನ ವೇಳೆಯಲ್ಲಿ ಇಂತಹ ವ್ಯವಸ್ಥೆಗಳಲ್ಲಿ ಸರಕಾರದೊಡನೆ ಸಹಕರಿಸಬೇಕು--ತಮ್ಮ ಆವಶ್ಯಕತೆಗಾಗಿ ಹೋರಾಡಬೇಕು ಒಳಗೆಯೆ ಕುಳಿತು ಅಧಿಕಾರಿಗಳನ್ನು ದೂರಿಬಿಟ್ಟರೋ ಇಲ್ಲವೆ ಅಸಹಕಾರ ಮಾಡಿದರೋ ಕೇಡನ್ನು ಉಣ್ಣುವುದು ನಾವೆ ಅಲ್ಲವೆ ಎಂಬ ಮಹತ್ವದ ಅಂಶವನ್ನು ಮರೆಯಬಾರದು.

ಪ್ರಕಟಣೆ

ಉಡುಪಿ ತಾಲ್ಲೂಕು (ಕಾಪು) ಪಂಚಾಯ್ತ್ ಬೋರ್ಡಿಗೆ ವಪ್ಪಿದ ಹಪ್ತೆವಾರು ವ ದಿನವಹಿ ಮಾರ್ಕೇಟುಗಳಲ್ಲಿ ತಾರೀಕು 1-4-41ರಿಂದ ತಾ. 31-3-45ರ ವರೆಗೆ ವಸೂಲು ಮಾಡುವ ಮತ್ತು ಮಾರ್ಕೇಟು ಸ್ಟಾಲ್ಸುಗಳನ್ನು ಪೂರ್ವೋಕ್ತ ಅವಧಿಯ ವರ್ಷದಲ್ಲಿ ಸ್ವಾಧೀನತೆಯಿಂದ ಉಪಯೋಗಿಸುವ ಸ್ವಾತಂತ್ರ್ಯವನ್ನು ಇದೇ ಬರುವ ತಾರೀಕು 28-2-44ನೇ ಸೋಮವಾರ ಅಪರಾಹ್ನ ಗಂಟೆ 2ರಿಂದ ಪಂಚಾಯ್ತ್ ಬೋರ್ಡ್ ಆಫೀಸಿನಲ್ಲಿ ಪ್ರೆಸಿಡೆಂಟರಿಂದ ಯಾ, ಅವರು ಅಧಿಕೃತರನ್ನಾಗಿ ಮಾಡುವವರಿಂದ ಬಹಿರಂಗವಾದ ಯೇಲಂ ಮೂಲಕ ಮಾರಾಟ ಮಾಡಲಾಗುತ್ತದೆ ಮಾರ್ಕೇಟುಗಳನ್ನು ಏಲಂನಲ್ಲಿ ವಹಿಸಿಕೊಂಡವರು ತಾರೀಕು 8-3-44ರ ವರೆಗೆ ರೂ. ನಿಶ್ಚಿತ ಕರಾರುಬರೆಕೊಡಲಿಕ್ಕೆ ತಪ್ಪಿದ್ದಲ್ಲಿ ಅಂಥಾ ಮಾರ್ಕೇಟುಗಳನ್ನು ಮುಂದಿನ ನೋಟೀಸು ಬಾರದೆ ತಿರುಗಿ ತಾರೀಕು 10-3-44ನೇ ಶುಕ್ರವಾರ ಅಪರಾಹ್ನ ಗಂಟೆ 3ಕ್ಕೆ ಪುನಃ ಯೇಲಂ ಮಾಡಿ, ಹಾಗೆ ಮಾಡುವ ಯೇಲಂನಿಂದ ಉಂಟಾದ ನಷ್ಟವನ್ನು ಅದಕ್ಕೆ ಕಾರಣರಾದ ಕಂಟ್ರಾಕ್ಟರರ ಡಿಪೋಜಿಟು ವ್ಯಾಪೇಸಿನಿಂದ ವಜಾ ಮಾಡಲಾಗುತ್ತದೆ. ಸದ್ರಿ ಯೇಲಂ ಶರ್ತಗಳ ಕುರಿತು ಬೇಕಾದ ಅನುಭವವನ್ನು ಸ ಬೋರ್ಡ್ ಆಫೀಸಿನಲ್ಲಿ ಪಡಕೊಳ್ಳಬಹುದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

ಕಾಪು ಮಂಜುನಾಥ ಶೆಟ್ಟಿ,

ಕಾಪು 17-2-44 } ಪ್ರೆಸಿಡೆಂಟ್, ಪ ಬೋ. ಕಾಪು.

ಪ್ರಕಟಣೆ

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ--

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಮ್ಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಂಞರಾಮನ್,
ಮೆನೇಜರ್.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಕಲ್ಯಾಣಪುರ ಸೊ ಮಿಲ್ಸ್, ಕಲ್ಯಾಣಪುರ—ದ. ಕನ್ನಡ.

ಇಲ್ಲಿ ಸುಲಭ ದರದಲ್ಲಿ, ಬೇಕಾದ ನಮೂನೆಯಲ್ಲಿ ಎಲ್ಲಾ ತರದ ಮರವನ್ನು ಬಹು ಶೀಘ್ರವಾಗಿ ಸಿಗಿದು ಕೊಡಲಾಗುವುದು.

ಎಂತಹ ಮರವನ್ನಾದರೂ ತಡೆಬಿಡುವಿಲ್ಲದೆ ಗರಗರನೆ ಸಿಗಿಯುವ ಮಿಲ್ ನಮ್ಮಲ್ಲಿರುವುದರಿಂದ ಕೆಲಸವು ಬಹುಸುಲಭವಾಗಿಯೂ ಸಾಜಾಣಕಾಗಿಯೂ ಸಾಗುವುದು.

ಗ್ರಾಹಕರಿಗೆ ಸರ್ವಾನುಕೂಲತೆಗಳನ್ನು ಒದಗಿಸಲಾಗುವುದು.

ವಿಶೇಷ ಮಾಹಿತಿಗೆ ಬರೆಯುವುದು ಯಾ ಮುಖತಃ ಮಾತನಾಡುವುದು.

ಮೆನೇಜರ್.

KALLIANPUR SAW MILLS
Kallianpur Post. S. K.

CHAMPAE'S
Snow & Castrex
(*Sole Distributors for India.*)
Sukhananda Stores
Santhekatte, UDIPI, S. K.

ತಾರುಣ್ಯ

ಕೆಟ್ಟು ವೀರ್ಯಕ್ಷೀಣವಾದ ರಕ್ತಸ್ರಾವದಲ್ಲಿ ಪರಮಾನಂದವನ್ನುಂಟು ಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ.

ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸ
ಉಡುಪಿಯ ಏಜಂಟರು. - ಶ್ರೀ ಫಾರ್ಮಸಿ

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 19.0)

Registered Office: Court Road UDIPI South Canara District

Business Offices Udipi, Mangalore, Katapadi, Kanhangad and Kinnigoli, South Canara.

Authorised and Issued Capital Rs 2 00 000/-
Subscribed and Paid up Capital Rs 2,00,000/-
Reserve Funds. Rs 1,75,853/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty-three years' reliable banking Service stands to our credit.

For further particulars please call at or apply to the nearest office.

Dated 31-10-1943

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮಾನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

THE VIJAYA BANK, LTD.,

Head office: MANGALORE.

Glad to announce that a Branch of the Bank has been opened at PUTTUR on 21-1-1944.

ನಮ್ಮ ಬ್ಯಾಂಕಿನ ಶಾಖೆಯೊಂದು ತಾ. 21-1-44 ರಲ್ಲಿ ಪುತ್ತೂರಿನಲ್ಲಿ ತೆರೆಯಲ್ಪಟ್ಟಿರುತ್ತದೆ.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ನಮ್ಮ ಸುವರ್ಣೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2-8-0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ

ಸಾಮಾನ್ಯತರದ 0-6-0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟ ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೫-0-0 ಪೋಸ್ಟ ಚಾರ್ಜು ೧ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ— ಹುಂಬರವಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಿಗಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ **ಕೊಡಿಯಾಲಬೈಲು, ದ. ಕ.**

ಸ್ಥಾಪನೆ **ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. N. M. 3618.

Estd. 1921 ಸ್ಥಾಪಿತ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೨೬

FOUNDER
Sri. A. B. Shetty.

Vol. 24
No. 26

NAVAYUGA— Kannada Weekly —UDIPI, S. I.

ಉಡುಪಿ 2—3—1944 ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.

ಮೂಲ ಲೇಖಕರ :—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)

ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ. 1-12-0, ಟ. ಖ. 0-4-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಿರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ

ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,

ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-14-0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

Lest History Should Repeat Itself

"I am the monarch of all that I survey" that was Alexander the Great who said it. He had conquered all the lands that he had known and seen and brought the Greek Empire to the zenith of its glory and power. But his sudden death in the prime of his life brought about the fall of that vast Empire and to-day Greece itself has lost even its freedom.

You are the monarch of your family and are solely responsible for its present and future status and lest History should repeat itself you should insure your life.

The Canara Mutual Assurance Co., Ltd.,

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಸೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ನಮಿಾಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇಬರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ ಏಜಂಟರು:—

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ... ಗದ ...

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟಿ ಬದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದು ದದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ.

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕ್ಯಾಟಲೋಗ ಸಂಗ್ತಿ ಬರದಲ್ಲಿ ತಕ್ಕವಾದ ಔಷದಿ ಚುನಾಯ್ಸಿ ರವಾನ್ಸಿಬಹುದು.

ಕೆಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಉಡುಪಿ ಏಜಂಟರು:- ನವಭಾರತ ಬುಕ್ ಡಿಪೊ, ಸಂತೆಕಟ್ಟೆ. ಉಡುಪಿ.

ಯುದ್ಧ ವಿಮರ್ಶೆ

ವೈರಿ ಕಾಲ್ದೆಗೆಯುತ್ತಿದ್ದಾನೆ—ಕೈಸೋತಿಲ್ಲ!

ಲಂಡನ್ ಪ್ರಳಯ.

ಯುದ್ಧಗತಿಯಲ್ಲಿ ಕಳೆದವಾರ ಕಂಡು ಬಂದ ಮುಖ್ಯಕುನದಂತಹ ಒಂದು ನವೀನತೆಯೆಂದರೆ ಲಂಡನಿನ ಮೇಲೆ ದೊಡ್ಡ ಪರಿಮಾಣದಲ್ಲಿ ನಾಜೀ ಬೋಂಬು ಧಾಳಿ ನಡೆದುದು. ಮೂರು ವರುಷಕ್ಕೆ ಮೊದಲು ನಡೆದಂತಹ ಲಂಡನ್ ದಹನವು ಇನ್ನು ನಡೆಯುವಂತಿಲ್ಲವೆಂಬ ಧೈರ್ಯದಿಂದ ತಮ್ಮ ಹಳ್ಳೀ ಪಲಾಯನವನ್ನು ನಿಲ್ಲಿಸಿ ಪುನಃ ಲಂಡನ್ ಸೇರಿದ್ದವರನ್ನೆಲ್ಲಾ ಈ ಧಾಳಿಗಳು ದಿಗ್ಭ್ರಾಂತರನ್ನಾಗಿ ಮಾಡಿವೆ. ಒಂದು ಬಾರಿ 175 ನಾಜೀ ವಿಮಾನಗಳು ಲಂಡನಾಕಾಶದ ಹಾರ್ವೋಡಗಳಾಗಿ ಕವಿದು ಬೋಂಬು ವರ್ಷ ಕರೆದಿದ್ದುವು; ಪಾರ್ಲಿಮೆಂಟ್ ಭವನಕ್ಕೂ ಧಕ್ಕೆ ಕೊಟ್ಟಿದ್ದವು; ನೆದರ್ಲೆಂಡಿನ ರಾಣಿ ವಿಲ್‌ಹೆಲ್ಮಿನಾಳ ಮನೆಗೇನೇ ಬೋಂಬು ಬಿದ್ದು ಅಲ್ಲಿದ್ದ ಮೂವರು ಮಡಿದರೂ ರಾಣಿ ಸುದೈವ ವಶಾತ್ ಬದುಕಿಕೊಂಡಳು

ಮೈಯ್ಯಿಗೆ ಮೈಯ್ಯಿ

ನಾಜಿಗಳ ಲಂಕಾದಹನದ ಕಟು ಅನುಭವವುಳ್ಳ ಲಂಡನ್ ನಾಗರೀಕರನ್ನು ಈ ಬೋಂಬು ಬಿತು ಸ್ವಾಭಾವಿಕವಾಗಿ ದಿಗಿಲುಗೊಳಿಸಿದೆ. ಧಾಳಿ ನಡೆಸುವ 'ಫೈಟರ್' ವಿಮಾನಗಳ ಕೊರತೆ ಜರ್ಮನರಿಗಿಲ್ಲವೇ ಇಲ್ಲ; ಆದರೆ ಪ್ರತಿಭಟಿಸುವ 'ಫೈಟರ್' ವಿಮಾನಗಳ ಅವಶ್ಯಕತೆಯೀಗ ಬೆಳೆದಿದೆ. ರಷ್ಯಾ ಮತ್ತು ಬ್ರಿಟನುಗಳಿಂದ ದ್ವಿಮುಖ ಧಾಳಿಯು ಜರ್ಮನಿಯ ಮೇಲಾಗುವಾಗ ತಡೆಗಟ್ಟುವದಕ್ಕಾಗಿ ಫೈಟರ್ ವಿಮಾನಗಳನ್ನು ಅವರು ಸಾವಿರ ಸಂಖ್ಯೆಯನ್ನು ನಿರ್ಮಿಸುತ್ತಿದ್ದಾರೆಂದು ಮಿ. ಚರ್ಚಿಲ್ಲರೇ ಉದ್ಗರಿಸಿದ್ದುಂಟು ಆದರೆ ಮೊದಲಿನಷ್ಟು ಬಲವಾಗಿ ಬೋಂಬು ಧಾಳಿ ಮಾಡಲಾರದಷ್ಟು ನಾಜೀ ವಿಮಾನ ಪಡೆ ದುರ್ಬಲವಾಗಿರುವದೂ ನಿಜ; ಮೊದಲಿನಂತಹ ಕಷ್ಟ ನಷ್ಟಗಳಿಗೀಡಾಗದಷ್ಟು ಲಂಡನ್ ರಕ್ಷಣಾ ಸಿದ್ಧತೆ ಬಲಗೊಂಡಿರುವದೂ ನಿಜ. ಈ ಬಾರಿಯ ನಾಜೀ ಆಕಾಶಧಾಳಿಗಳ ಗುರಿಯೆಂದರೆ ಜರ್ಮನಿಯ ನಗರಗಳನ್ನು ಹೋಮ ಮಾಡಿದ ಮಿತ್ರರ ಮೈಯ್ಯನ್ನು ತೀರಿಸುವದೊಂದೇ. ಇಂಗ್ಲಂಡಿನ ಆರ್. ಎ. ಎಫ್. ಮತ್ತು ಅಲ್ಲಿಯೇ ನಿಲ್ದಾಣ ರಚಿಸಿಕೊಂಡಿರುವ ಅಮೇರಿಕನ್ ವಿಮಾನ ದಳಗಳು ಬರ್ಲಿನ್ ಮೊದಲಾದ ನಗರಗಳ ಮೇಲೆ ಒಮ್ಮೊಮ್ಮೆ 2000 ಸಂಖ್ಯೆಯಷ್ಟೂ ಹಾರಿ ಅಗ್ನಿತಾಂಡವ ನಡೆಸಿದ್ದುವು "ನಾವಿವಕ್ಕೆ ಪ್ರತೀಕಾರ ಮಾಡಲಿದ್ದೇವೆ; ಅಮೇರಿಕವು ದೂರವಿದ್ದರೂ, ಒಂದು ದ್ವೀಪ ಸಮೀಪದಲ್ಲಿದೆ" ಎಂದು ಹಿಟ್ಲರನು ಆಗಲೇ ಉಸುರಿದ್ದ, ತನ್ನಾ ಮಾತನ್ನು ಅವನೀಗ ನಡೆಸುತ್ತಿದ್ದಾನೆ. ಇಂತಹ ಧಾಳಿಗಳನ್ನು ಇನ್ನೆಷ್ಟೋ ಅನುಭವಿಸಬೇಕಾದೀತೆಂದು ಬ್ರಿಟನರು ನಿರೀಕ್ಷಿಸುತ್ತಿದ್ದಾರೆ.

ದಿಗಿಲಿಲ್ಲ--ಧೀರತೆಯಿದೆ!

ಹಿಟ್ಲರನೀಗ ಯೋಜನೆ ಗೀಡಾಗಿ ಮಂಕಾಗಿಲ್ಲ----ಯೋಜನೆಗನುಸಾರವಾದ ಕಾರ್ಯಾಚರಣೆಯಲ್ಲಿದ್ದಾನೆ ಎಂಬುದು ಇದರಿಂದ ಸ್ಪಷ್ಟ. 'ದ್ವಿತೀಯ ರಂಗ ನಿರ್ಮಾಣ ಮಾಡುವೆವು' ಎಂದ ಮಿತ್ರರ ಮಾತು ಇನ್ನೂ ಕಾರ್ಯರಂಗದಲ್ಲಿ ಬಂದಿಲ್ಲ; ಆದರೆ, ಅದಕ್ಕಿಂತ ಎಷ್ಟೋ ತಡವಾಗಿ ಉದ್ಗರಿಸಿದ 'ಬೋಂಬು ಧಾಳಿಗೆ ಪ್ರತೀಕಾರ ಮಾಡುವೆವು' ಎಂಬ ತನ್ನ ಮಾತಿಗೆ ಹಿಟ್ಲರನು ಇಷ್ಟರಲ್ಲೇ ಕಾರ್ಯರೂಪ ಕೊಡುತ್ತಿದ್ದಾನೆ. ಮುಖಾಮುಖಿ ಹೋರಾಟ ರಂಗಗಳನ್ನು ಕಂಡರೂ ನಾಜಿಗಳು ತಬ್ಬಿಬ್ಬಾದ ಚಿಹ್ನೆ ಕಂಡು ಬರುವದಿಲ್ಲ. ಇಟೆಲಿಯ ರಾಜಧಾನಿ ರೋಮನ್ನು ವಶಪಡಿಸಿಕೊಳ್ಳುವ ಗುರಿಯು ಈಗಲಾದರೂ ಆಕ್ರಮಣಾರಂಭದಲ್ಲಿದ್ದಷ್ಟೇ ದೂರದಲ್ಲಿದೆ. ಮಿತ್ರ ಸೇನೆಗಳು ನೆಟುನೋ ರಂಗಕ್ಕೇರಿದುದು ರೋಮನ್ನೆಟಕುವ ಮಣೆಯನ್ನೇ ಏರಿದೆವೆಂಬಷ್ಟು ವಿಶ್ವಾಸದಿಂದ. ಆದರೆ ನಾಜೀ ಸೇನಾನಿ ಕೆಸ್ಸೆಲ್‌ರಿಂಗನು ಉತ್ತರಗಡೆಯಿಂದ ಸೇನಾ ಸರಬರಾಯಿ ಮಾಡಿಸಿಕೊಂಡು ಆ ಕಾಲ್ಮಣೆಯನ್ನು ಅತಿ ಮೇಲು ಮಾಡಿಬಿಟ್ಟಿದ್ದಾನೆ. ಇದರಿಂದ ನಿರಾಶೆಗೊಂಡ ಜನತೆಯನ್ನು ಮಿ. ಚರ್ಚಿಲ್ಲರು ವಿಶೇಷ ಹೇಳಿಕೆಯೊಂದರ ಮೂಲಕ ಸಮಾಧಾನ ಪಡಿಸಬೇಕಾಯಿತು. ಆ ಬಳಿಕ ಇಟೆಲಿ ರಣರಂಗ ಮತ್ತೊಮ್ಮೆ ತಟಸ್ಥವಾಗಿದೆ ಇದು ಸಲ್ಲಕ್ಷಣವಲ್ಲ. ಯಾಕೆಂದರೆ ಅಲ್ಲಿ ಮಿತ್ರಸೇನೆಗಳ ಕಾರ್ಯ ಆಕ್ರಮಣ; ನಾಜೀ ಸೇನೆಯ ಕೆಲಸ ಅಡ್ಡಗಟ್ಟುವದಷ್ಟೇ. ಆಕ್ರಮಣ ಸಾಗದೆ ಯುದ್ಧಗತಿ ಮುಂದಡಾದರೆ ಪ್ರತಿಭಟನೆ ಫಲಿಸಿತೆಂದೇ ಅರ್ಥ.

ಪೋಲೆಂಡ್ ತ್ರಿಕೋಣ.

ರಷ್ಯಾದ ಮಾತು. ಅಲ್ಲಿ ಹಿಟ್ಲರನ ಆಶೆ ನಿಷ್ಫಲವಾಯಿತೆನ್ನೋಣ, ಆದರೆ ಅಪಕಾರವೇ ಸಮಾಪ್ತವಾಯಿತೆನ್ನಲು ಸಾಧ್ಯವಿಲ್ಲ. ಅಲ್ಲಿಯ ಪ್ರತಿಯೊಂದು ರಂಗದಲೂ ಜರ್ಮನರಿಗೆ ಸೋಲೇ. ಆ ಸೋಲನ್ನು ನುಬೇನು ಮೂಲಕ ಕಂಡರೆ, ನಾಜಿಗಳು ಕಾಲುಹಿಂದಿಡುತ್ತಿದ್ದಾರೆ ಹೊರತು ಕಾಲಡಿ ತಪ್ಪಿ ತೇಲಿಬರುತ್ತಿದ್ದಾರೆ ಎನ್ನಲಾಗುವದಿಲ್ಲ. ಮೇಲಾಗಿ ಕೆಂಪು ಸೇನೆ ಪೋಲೆಂಡ್ ಗಡಿಯೊಳಗೆ ನುಗ್ಗಿ ಜರ್ಮನರಿಗೆ ಮಾಡಿದ ಉಪಕಾರ ದೊಡ್ಡದು. ಪೋಲೆಂಡ್-ರಷ್ಯಾ ಗಡಿ ನಿರ್ಣಯದ ಕುರಿತು ಮಿತ್ರ ಪಾಳಯದೊಳಗಿದ್ದಿರುವ ಕಚ್ಚಾಟವೆಷ್ಟು ಕಠೋರದ್ದೆಂದರೆ, ಶಾಂತಿ ಕಾಲದಲ್ಲಿ ಯಾವ ಯುದ್ಧವೂ ಇದಕ್ಕಿಂತ ದೊಡ್ಡ ಕಾರಣಗಳಿಂದಾಗಿ ಹುಟ್ಟದುದಿಲ್ಲ. ಪೋಲೆಂಡಿನ ಮಣ್ಣಾ ಗುಣವಿದು! ಇಂದಿನ ಜರ್ಮನಿ ಯುದ್ಧಕ್ಕೆ ಹೇತುವಾದ ಪೋಲೆಂಡು ಮುಂದಿನ ರಷ್ಯಾ ರಣವನ್ನೂ ನಿರ್ಮಿಸುವ ಸಂಭವ ಕಾಣುತ್ತಿದೆ. ಲಂಡನಿನಲ್ಲಿರುವ ಪೋಲೆಂಡ್ ಸರಕಾರವನ್ನೇ ನಾಜಿಗಳ ಕೈಗೊಂಬೆಯೆಂದು ರಷ್ಯನರಾರೋಪಿಸಿ, ಅದರ ರದ್ಧತಿಯನ್ನಪೇಕ್ಷಿಸಿರುವಾಗ ಆ ಸರಕಾರವಲ್ಲಿಯೇ ಇದ್ದು ಕೊಂಡು ಮತ್ತೊಮ್ಮೆ ಸ್ಟಾಲಿನರ ಮುಖ ತಿವಿದು ಮಾತಾಡಿದೆ. "ಕರ್ಝೂನ್ ಲೈನನ್ನು ಗಡಿಯಾಗಿ ಸ್ವೀಕರಿಸದ ನಮ್ಮ ಧೋರಣೆ ದೃಢವಾಗಿದೆ. ಆದರೆ ಮುಂದೆ ಅನುಕೂಲ ಯುದ್ಧ ಘಟನೆಗಳು ನಡೆಯಬಹುದೆಂಬ ನಿರೀಕ್ಷೆಯಿಂದ ನಾವು ಮಿತ್ರರ ಭುಜಕ್ಕೆ ಭುಜಕೊಟ್ಟು ಹೋರಾಡುವದು ಖಂಡಿತ". ಈ ಮಾತಿನ ಅಂತರಾಳದಲ್ಲಿ ರಷ್ಯನರ ಹಠಭಂಗವಾಗುವ ಪರಿಸ್ಥಿತಿಯೊದಗಲಿದೆಯೆಂಬ ಆಶೆಯೋ ಹಾರೈಕೆಯೋ ಇದೆ ಎಂಬುದು ಸ್ಪಷ್ಟ. ಈ ಮಾತು ಚರ್ಚಿಲ್ ರುಜವೆಲ್ಟರ ಬಾಯಿಯಿಂದಲ್ಲವಾದರೂ, ಅವರ ಕಂಕುಳಡಿಯಿಂದ ಬರುತ್ತಿದೆ; ಅದರ ಪರಿಣಾಮವನ್ನು ದೂರದರ್ಶಿ ಸ್ಟಾಲಿನರೂಹಿಸಿಯೇ[?]ಇರಬಹುದು; ಹೀಗಾಗಿ ಮಿತ್ರರೊಳಗಿನ ಮನಃಕಷಾಯವೀಗ ಕುದಿದು ಘಮಘಮಿಸ ಹತ್ತಿದೆ ಎಂಬುದಕ್ಕನುಮಾನವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಪೋಲೆಂಡಿನಲ್ಲಿ ಕೆಂಪು ಸೇನೆ ಮುಂದಿಡುವ ಹೆಜ್ಜೆಗೊಂದು ಗುಲದಂತೆ ಮಿತ್ರ ಪಾಳಯದೊಳಗಿನ ಬಿರುಕೂ ಅಗಲ ಬೀಳುತ್ತಿದೆ; ಕೆಂಪು ಸೇನೆಯ ವಿಜಯವೇ ಗೋಬೆಲ್ಸನ ವಿಜಯ. ಪೋಲೆಂಡ್ ಗಡಿಯೊಳಗೆ ನಾಜೀ ಸೇನೆ ಹೆಜ್ಜೆ ಹಿಂದಿಡುತ್ತಿರುವದರಲ್ಲಿ ಈ ಉದ್ದೇಶವೂ ಇರಬಹುದೆಂದು ಊಹಿಸಿದರೆ ತಪ್ಪಾಗದು.

ಗತಿಮಾಂದ್ಯತೆ.

ಜಾಪಾನೀ ರಣರಂಗಗಳ ಸಾಮಾನ್ಯ ಸ್ಥಿತಿಯೂ ಹೀಗೇನೇ. ಶಾಂತ ಸಾಗರದಲ್ಲಿ ಮಾರ್ಶಲ್ಸ್ ನಡುಗುಡ್ಡೆಗಳನ್ನು ಆಕ್ರಮಿಸಿ ಕೊಂಡ ಮೇಲೆ ಅಮೇರಿಕಾನರು ಗಣ್ಯಲಾಭವಾವುದನ್ನೂ ಸಂಪಾದಿಸಲಾರದವರಾಗಿದ್ದಾರೆ. ಶರ್ತಿ ಪ್ರಕಾರ ರಾಬೂಲನ್ನಾಕ್ರಮಿಸಬೇಕಿತ್ತು. ಅಲ್ಲಿ ಜಾಪಾನರು ಹಿಂದಿನಂತೆ ಲಘುವಾಗಿ ನಿಲ್ಲದೆ ಬಿಗುವಾದ ಸಿದ್ಧತೆ ನಡೆಸಿದ್ದರಿಂದ ಅಸಾಧ್ಯವಾಗಿದೆ. ಬರ್ಮದಲ್ಲಿಯೂ ಅಷ್ಟೆ. ಮಾಂಗಡಾ-ಬುಥಿಡಾಂಗ ವಲಯದಲ್ಲಿ ಹೋರಾಟವೇನೂ ಸಾಗುತ್ತಿದೆ. ಅದರದೊಂದು ಗಣ್ಯ ರಣರಂಗವೇ ಅಲ್ಲ. ಇಡೀ ಲೋಕಯುದ್ಧದ ಪರಾಮರ್ಶೆ ಮಾಡಿ ಹೇಳುವದಾದರೆ ಮಿತ್ರ ಸೇನೆಗಳು ವೈರಿ ಸೇನಾ ಪ್ರವಾಹದ ಮಧ್ಯ ಆಳ ಭಾಗಕ್ಕೆ ಬಂದಿರುವದು ಈಗ ಮಾತ್ರ; ಈ ತನಕ ಮಹಾ ಸಂಭ್ರಮದಿಂದ ದಾಟಿದುದು ದಡದ ಬದಿಯ ಸೊಂಟದುದ್ದ ನೀರನ್ನಷ್ಟೆ! ಹೀಗೆ ರಣರಂಗ ಜಡವಾದಾಗ ಗೃಹರಂಗ ಚುರುಕೇರುವ ವಾಡಿಕೆ. ಅಂತೆಯೇ ಅಮೇರಿಕದಲ್ಲಿ ಅಧ್ಯಕ್ಷ ರುಜವೆಲ್ಟರನ್ನು ಕಾಂಗ್ರೆಸ್ ಬಿಕ್ಕಟ್ಟು ಇದಿರಿಸಿದೆ. ಅಲ್ಲಿಯ ಸಿನೆಟ್ ತಿರಸ್ಕರಿಸಿದ 'ತೆರಿಗೆ ಹೆಚ್ಚಳ'ದ ಮಸೂದೆಯನ್ನು ಅಧ್ಯಕ್ಷ ರುಜವೆಲ್ಟರು ತನ್ನ ವಿಶೇಷಾಧಿಕಾರದಿಂದ ಅಸ್ತಿತ್ವಕ್ಕೆ ತಂದೊಡನೆ ಓರ್ವ ಸಿನೆಟ್ ಮೆಂಬರರು ರಾಜೀನಾಮೆಯಿತ್ತರು. ಈಗ ಕಾಂಗ್ರೆಸು ಅದನ್ನು ಪುನಃ ತಿರಸ್ಕರಿಸಿರುವದರಿಂದ, ಅಮೇರಿಕದ ಅಧಿಕಾರ ಸಂಸ್ಥೆ ಮತ್ತು ಪ್ರಭು ಖಾಧಿಕಾರಿಯು ಮುಖಾಮುಖಿಯಾಗಿ ನಿಂತ ಸಂದಿಗ್ಧ ಪರಿಸ್ಥಿತಿಯೊದಗಿದೆ. ಇಟೆಲಿ ಯುದ್ಧ ಮಾಂದ್ಯತೆ, ಜರ್ಮನಿಯ ಮೇಲಿನ ವಿಮಾನ ಧಾಳಿಯ ಅಮಾನುಷತ್ವಗಳ ಕುರಿತು ಪಾರ್ಲಿಮೆಂಟಿನಲ್ಲಿ ಮಿ. ಚರ್ಚಿಲ್ಲರೂ ಚೇಂಬರ್ಲೇನರು ಕೇಳಿದಂತಹ ಟೀಕೆಗಳನ್ನೇ ಇದೀಗ ಪ್ರಥಮಬಾರಿ ಕೇಳ ಹತ್ತಿದ್ದಾರೆ.

ಶಿರ್ಸಿ ಪಂಚಾಯ್ತ್ ಬೋರ್ಡ್ ಪ್ರೆಸಿಡೆಂಟರಿಂದ

ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ-

ಶಿರ್ಸಿ ಪಂಚಾಯ್ತ್ ಬೋರ್ಡಿನ ಮಂಚಕಲ್ಲು **ಸಂತೆ ಮಾರ್ಕೇಟನಲ್ಲಿ ಮತ್ತು ದಿನಚರಿ ಮಾರ್ಕೇಟನಲ್ಲಿ 44-45ನೇ ಒಂದು ವರ್ಷದಲ್ಲಿ** ವಸೂಲುಮಾಡುವ ಹಕ್ಕು ಮತ್ತು ಪಂಚಾಯ್ತ್ ಬೋರ್ಡ್ ಲೈನ್ ಕಟ್ಟೋಣಗಳು ವಾ ಎಡಿಶನಲ್ ಲೈನ್ ಕಟ್ಟೋಣಗಳಲ್ಲಿ ವ್ಯಾಪಾರ ಮಾಡುವ ಸ್ವತಂತ್ರವನ್ನು ಕೊಡಾ **ತಾ 3-3-44ನೇ ಶುಕ್ರವಾರ ಸಾಯಂಕಾಲ ಗಂಟೆ 4ಕ್ಕೆ ಪಂಚಾಯ್ತ್ ಬೋರ್ಡ್ ಆಫೀಸಿನಲ್ಲಿ** ಪ್ರೆಸಿಡೆಂಟರಿಂದ ವಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಲಿಲಾಂ ಮಾಡಲ್ಪಡುವದು. ಮಾರ್ಕೆಟು ಶರ್ತುಗಳನ್ನು ಪಂಚಾಯ್ತ್ ಬೋರ್ಡಿನ ಬಹಿರಂಗ ಪ್ರಕಟಣಾದಿಗಳನ್ನು ನೋಡಿ ತಿಳಿಯಬಹುದು. ಮಾರ್ಕೆಟುಗಳಲ್ಲಿ ವಸೂಲು ಮಾಡುವ ದರಗಳು; ಈ ಕೆಳಗಡೆ ಕಾಣಿಸಿದಂತೆ ಇದ್ದು ಪಡಿ ವಸೂಲ ಮಾಡಬಹುದು.

1. ಪ್ರತಿ ಒಂದು ತಲೆಹೊರೆ ಸಾಮಾನಿನ ಮೇಲೆ 0-0-6; 2. ಪ್ರತಿ ಒಂದು ತಲೆಹೊರೆ ಮೀನಿನ ಮೇಲೆ 0-0-6; 3. ಸ್ಟೇಕಲ್‌ಗಳಲ್ಲಿ ಬರುವ ಸಾಮಾನಿನ ಮೇಲೆ 0-1-0; 4. ಪ್ರತೀ ಗಾಡಿಯಲ್ಲಿ ಬರುವ ಸಾಮಾನಿನ ಗಾಡಿ 1ಕ್ಕೆ 0-4-0; 5. ವ್ಯಾಪಾರಕ್ಕೆ ಬರುವ ಪ್ರತಿ ಜಾನುವಾರು ಬಾಲ 1ಕ್ಕೆ 0-4-0;

(Sd) ಯುಸ್. ಅಂಣಯ್ಯ ಹೆಗ್ಡೆ,
ಅಧ್ಯಕ್ಷ,

ಪಂಚಾಯ್ತ್ ಬೋರ್ಡ್ ಆಫೀಸು, ಶಿರ್ಸಿ
15-2-44

ಧನಕ್ಕಿಂತ ವಿಧಾನ ಮುಖ್ಯ

ಧನದ ಮೊತ್ತವೊಂದೇ ಗೌರವಾನ್ವಿತ ವಾಣಿಜ್ಯದ ಹೆಗ್ಗುರುತಲ್ಲ. ಧನಸಂಗ್ರಹ ಅಥವಾ ನಿಮ್ಮ ದುಡಿಮೆಯ ಮೊತ್ತಕ್ಕಿಂತ, ಅದನ್ನು ನಿರ್ವಹಿಸುವ ವಿಧಾನವೇ ವ್ಯಾಪಾರೋದ್ಯಮಗಳ ಯಶಸ್ಸಿಗೆ ಮುಖ್ಯವೆನಿಸಿದೆ.

ಕಳೆದ ನಲ್ವತ್ತು ವರ್ಷಗಳಿಂದ, ಕೆನರಾ ಬೇಂಕಿನೊಡನೆ ಇರುವ ಚಾಲತಿ ಲೇವಣಿಯ ಲೆಕ್ಕವು ವಾಣಿಜ್ಯದ ದೃಢತೆ ಮಾನ್ಯತೆಗಳ ದ್ಯೋತಕವಾಗಿ ಪರಿಗಣಿಸಲ್ಪಟ್ಟಿದೆ.

"ನಿಮಗೆ ಕೆನರಾ ಬೇಂಕಿನ ಒಂದು ಚೆಕ್ ಕೊಡುತ್ತೇನೆ" ಎನ್ನಲು ನೀವೂ ಆನಂದ ಪಡುವಿರಿ. ಮತ್ತೆ ನೆನಪಿನಲ್ಲಿರಲಿ—ಯಾವ ಚೆಕ್ ಆದರೂ **ಕೆನರಾ ಬೇಂಕಿನಲ್ಲಿ** ವಟಾಯಿಸಲ್ಪಡಲು ಐದು ನಿಮಿಷಗಳಿಗಿಂತ ಹೆಚ್ಚಿನ ವಿಳಂಬವಿಲ್ಲ.

ಸ್ಥಾಪಿತ: 1906.

ಕೆನರಾ ಬೇಂಕು, ಲಿಮಿಟೆಡ್.

CANARA BANK, Ltd.

ಸೌ. ಕಸ್ತೂರಿಬಾನ ಇಹಯಾತ್ರೆ ಮುಗಿಯಿತು!

ಫೆಬ್ರುವರಿ ತಾ 22ನೇ ಸಂಜೆ 7-15ಕ್ಕೆ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಆಗಾಖಾನ್ ಅರಮನೆಯಲ್ಲಿ ಪರಂಧಾಮವನ್ನೈದಿದರು; ಅಂದಿನ ಸೂರ್ಯನೊಂದಿಗೆ ಭಾರತದ ಭಾಗ್ಯ ರವಿಯೂ ಅಸ್ತಂಗತವಾಯಿತು. 74 ವರುಷದ ಮುದುಕಿಗೆ ಆಗಾಗ ಕಾಣಿಸಿಕೊಳ್ಳುತ್ತಿದ್ದ ಎದೆನೋವು ಕೊನೆಗೊಂದು ಬಾರಿ ಆ ಪವಿತ್ರ ಜೀವನ ಜಾತಕಕ್ಕೆ ಪೂರ್ಣ ವಿರಾಮವಾಗಿಯೂ ನಿಂತಿತು.' ಪಂಡಿತ ಮಾಲವೀಯರಂದಂತೆ ಆ ಆದರ್ಶ ಹಿಂದೂ ಗೃಹಿಣಿ ಸುಮಂಗಲಿಯಾಗಿಯೇ ತೊರಟು ಹೋದರು; ಆದರೆ ಲೋಕದ ಮಹಾತ್ಮನನ್ನು ಇಂದು ಬಂಧಿಯಾಗಿರುವದು ಸಾಲದೆಂದು ವಿಧುರನಾಗಿ ಮಾಡಿಯೂ ಹೋದರು! ಸ್ಮಶಾನ ಚರಿತ್ರೆಯಲ್ಲಿ ಪೂನೆಯ ಆಗಾಖಾನ್ ಅರಮನೆಗೆ ಪ್ರಮುಖಸ್ಥಾನ! ಗಾಂಧಿಜೀಯ ಪ್ರಾಣಾಪ್ತ ಕಾರ್ಯದರ್ಶಿ ಮಹದೇವದೇಸಾಯಿಗೆ ಮಸಣವಾದ, ಅರ್ಧಾಂಗಿ ಕಸ್ತೂರಿಬಾನ ಕಳೇಬರವನ್ನು ಭಸ್ಮಮಾಡಿದ ಕೀರ್ತಿ ಆ ಅರಮನೆಗೆ. ವಿಜಯೀ ಮಹಾತ್ಮನನ್ನು 'ಆಗಾಖಾನ್ ಅರಮನೆ ಇಷ್ಟರಲ್ಲೇ ಅರೆವಾಸಿ ಗೆದ್ದಿದೆ. ಈ ರಾಷ್ಟ್ರಯೋಧನನ್ನು ಆ ಕೋಟೆ ನಿತ್ರಾಣಗೊಳಿಸಿದಷ್ಟು ಇನ್ನೊಂದು ವೈರಿಕೋಟೆ ಇನ್ನೊಬ್ಬ ಯೋಧನನ್ನು ದಣಿಸಿದ ದಾಖಲೆಯಿಲ್ಲ ಇನ್ನು ಗಾಂಧಿಜೀಯ ಪಾಡು?!

ಹತಭಾಗಿ ಮಹಾತ್ಮ!

ಮಹಾತ್ಮಾಜೀ ಪ್ರೈ ರಕ್ತ ಕೊಡುವ ಅಥವಾ ಒಣಗಲಿಡುವ ತ್ಯಾಗವೀರ, ಕಣ್ಣೀರ ಕಲಿಯಲ್ಲ. ಆದರೆ ಅವರ ಇಡೀ ಜೀವಮಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯದಂತಹ ಅಭೇದ್ಯ ಕೋಟೆಯಿಂದ ಬರಿಸಲಾಗದ ಕಣ್ಣೀರನ್ನು, ಆಗಾಖಾನ್ ಅರಮನೆಯ ಗೋಡೆಯು ಎರಡುಬಾರಿ ಬರಿಸಿದೆ! ಒಮ್ಮೆ ತನ್ನ ಬಲಗೈ ಮಹದೇವದೇಸಾಯಿ ಸತ್ತಾಗ. ಗಾಂಧಿಜೀಯ ಅಂದಿನ ಕಳವಳವನ್ನು ಸರೋಜಿನಿ ದೇವಿ ವರ್ಣಿಸಿದ್ದಾರೆ:— "ದೇಸಾಯಿಯ ಪ್ರಾಣಹೋಯಿತು ಎಂಬುದನ್ನು ಕೇಳಿದಾಗ ಗಾಂಧಿಜೀ ಕರುಳು ಕರಗಿಸುವಂತೆ 'ಮಹದೇವ್, ಮಹದೇವ್' ಎಂದು ಕೂಗುತ್ತಾ ಬಂದಿದ್ದರು. 'ಒಕೊಳ್ಳು ಮಹದೇವ್, ಬಾಪೂಜೀ ಕರೆಯುತ್ತಾರಲ್ಲಾ!' ಎಂದು ಕಸ್ತೂರಿಬಾ ತನ್ನ ಪುತ್ರ ಸಮಾನ ದೇಸಾಯಿಯ ಮೈ ಅಲುಗಿಸಿ ಅಲುಗಿಸಿ ಅತ್ತಿದ್ದರು. ಯಾರು ತಡೆದರೂ ಕೇಳದೆ ಗಾಂಧಿಜೀ ಸ್ವತಃ ಆ ಕಳೇಬರವನ್ನು ಮೀಯಿಸಿ, ಒಂದು ಘಂಟೆಗಳ ವರೆಗೂ ಚಂದನ ಲೇಪಿಸಿದ್ದರು". ಮತ್ತೊಮ್ಮೆ ಇದೇ ಫೆಬ್ರುವರಿ ತಾ 22ರಲ್ಲಿ. 60 ವರುಷ ತನ್ನನ್ನು ಛಾಯೆಯಂತೆ ಅನುಕರಿಸಿದ್ದ ಸಹಧರ್ಮಿಣಿ—ತನ್ನ ಅನ್ಯಾಯ ಆವೇಗಗಳನ್ನು ಸಹನೆಯಿಂದ ತನ್ನ ಅತಿ ಕಾರ್ಕಶ್ಯ ಅಮಾನುಷ ತತ್ವಗಳನ್ನು ಭಕ್ತಿಯಿಂದ ಅಂಗೀಕರಿಸಿಕೊಂಡು, ತನ್ನೊಡನೆ ತನ್ನಾತ್ಮವಾಗಿ ಬೆರೆತು ಬಂದಿದ್ದ ಅರ್ಧಾಂಗಿ-ತನ್ನನ್ನಗಲುವಾಗ ಮಹಾತ್ಮನ ಆ ಅಚಲ ಹೃದಯವಾದರೂ ಒಮ್ಮೆ ಅಡಿಮೇಲಾಗಿರಬೇಕು! ಅವರ ಕರ್ತವ್ಯಬದ್ಧ ಅತಿಮಾನುಷ ಹೃದಯದ ಒಂದು ಮೂಲೆಯು ಕಸ್ತೂರಿಬಾಸಿಗಾಗಿ ಮೀಸಲಿರಲೇಬೇಕು. ಯಾಕೆಂದರೆ ಅಖಿಲ ಭಾರತ-ಮನುಷ್ಯ ವರ್ಗವೇ-ಮಹಾತ್ಮಾ ಗಾಂಧಿಯವರಿಗೆ ಋಣಿಯಾಗಿದ್ದರೆ ಆ ಮಹಾತ್ಮ ಕಸ್ತೂರಿಬಾಸಿಗೆ ಋಣಿ. "ಆಕೆಗೆ ಮಾಡಿದ ಅನ್ಯಾಯಕ್ಕೆ ತಕ್ಕ ಶಮನ ಮಾಡುವದು ನನ್ನಿಂದಾಗಿಲ್ಲ' ಎಂದು ಗಾಂಧಿಜೀ ತನ್ನ ಆತ್ಮಕಥೆಯಲ್ಲಿ ಋಣಿಮುಖವನೆ ವ್ಯಕ್ತಗೊಳಿಸಿದ್ದಾರೆ. ಗಾಂಧಿಯವರಾಗಲೀ ಹಿಂದೀಯರಾಗಲೀ ಕಸ್ತೂರಿಬಾನ ಋಣವನ್ನು ಇನ್ನು ಮುಟ್ಟಿಸುವುದೆಂತು?

ಆ ದಾಂಪತ್ಯ.

ಕರಮಚಂದ ಗಾಂಧಿ ಮತ್ತು ಕಸ್ತೂರಿಬಾ ಒಂದೇ ಇಸವಿಯಲ್ಲಿ, ಒಂದೇ ಸ್ಥಳದಲ್ಲಿ (ಪೋರ್ ಬಂದರ್) ಜನಿಸಿದವರು ವಿವಾಹದ ವೇಳೆ ಇಬ್ಬರ ಪ್ರಾಯವೂ 13 ಕಸ್ತೂರಿಬಾ ಶಾಲೆಗೆ ಹೋದವರಲ್ಲ. ಆದರೆ ಅವರ ಕರ್ತವ್ಯ ಬುದ್ಧಿ ಮತ್ತು ಪಾತಿವ್ರತ್ಯ [illegible] ಲೇ ಅಗಾಧವಿದ್ದಿತು. ರಾಜಾಜಿಯವರು ತನ್ನ ಅಳಿಯ ಶ್ರೀ ದೇವದಾಸ ಗಾಂಧಿಯವರಿಗೆ ಮೊನ್ನೆ ಕಳುಹಿದ್ದ ದುಃಖ ಸೂಚನೆಯು ಈ ಸಂದರ್ಭದಲ್ಲಿ ಉಲ್ಲೇಖನೀಯವಿದೆ. "ಬಾ ಇವರು ರಾಣೀ ಜೀವನ ನಡಿಸಲಿಕ್ಕಾಗಿ ಜನಿಸಿದವರು; ಅಂತೆಯೇ ಅವರಾಸ್ಥಾನವನ್ನು ಒಂದು ವಿಲಕ್ಷಣ ಹಾಗೂ ತ್ರಾಸದಾಯೀ ಹಾದಿಯ ಮೂಲಕ ಪಡೆದಿದ್ದಾರೆ. ಜೀವನವು ಜೀವನಕ್ಕಾಗಿ ಎಂಬುದನ್ನಾಧರಿಸಿ ನಾವು ನಮ್ಮ ಉದ್ರೇಕವನ್ನು ಹತ್ತಿಕ್ಕಿಕೊಳ್ಳೋಣ. ತಮ್ಮಾಟವನ್ನು ಮುಗಿಸಿಕೊಂಡ ಮೃತಾತ್ಮಗಳಿಗದು ಬೇಕಾಗಿಲ್ಲ. ಬಾ ಮತ್ತು ಮಹದೇವರ ಶಾಂತಿ ಭಂಗವಾಗದಿರಲಿ!". ಕಸ್ತೂರಿಬಾನ ಕೈಹಿಡಿಯುವಾಗ ಮೋಹ

ಭಾರತದ ಕಣ್ಣು ತೆರೆಯಿಸಿದವ

ತನ್ನ ಕಣ್ಣುಜ್ಜಿಕೊಂಡ!

ನದಾಸ ಗಾಂಧಿಯವರು ವಿದ್ಯಾರ್ಥಿಯಾಗಿದ್ದರು; ಆ ಮೇಲೆ ಬ್ಯಾರಿಸ್ಟರ್ ಆಗಿ, ದಲಿತೋದ್ಧಾರಕನನ್ನಿಸಿ, ಕೊನೆಗೆ ಮಹಾತ್ಮರಾದರು. ಈ ಅಂತಸ್ತುಗಳನ್ನವರು ಹಳ್ಳಿ ಹುಡುಗಿ ಕಸ್ತೂರಿಬಾನನ್ನೆಳಕೊಂಡೇ ಹತ್ತಿದ್ದಾರೆ; ಹಲವೂಮ್ಮೆ ಮುಗ್ಗರಿಸಿದರೂ ಬಾ ಅತಿ ಪ್ರಯಾಸದಿಂದ- ಆದರೆ ಆತ್ಮಸಂತೋಷದಿಂದ-ಪತಿಯನ್ನನುಸರಿಸಿದ್ದಾರೆ. ಗಾಂಧೀ ಆತ್ಮದೊಡನೆ ಪೂರ್ಣವಾಗಿ ಸಾಮರಸ್ಯ ಹೊಂದಿದ್ದ ಆತ್ಮ ಅದೊಂದೆ. ಅವರಿಗೆ ನಾಲ್ವರು ಮಕ್ಕಳು-ಹೀರಾಲಾಲ್ ಮಣಿಲಾಲ್, ರಾಮದಾಸ್, ದೇವದಾಸ್. ಹೀರಾಲಾಲ್ ಕುವರಿಯೇ ಅವರ ನಾತಕಣೆಯು ಹಾಗೂ ಅತಿ ಪ್ರೀತಿಯ ಮೊಮ್ಮಗಳು. ಆಕೆಯೂ, ಗಾಂಧೀ ಕುಟುಂಬದ ಹಾಗೂ ಆಶ್ರಮದ ಕೆಲವು ಸದಸ್ಯರೂ, ಹಿರಿಯ ಮತ್ತು ಕಿರಿಯ ಮಕ್ಕಳೂ ಮಾತೆ ಪ್ರಾಣಬಿಡುವ ವೇಳೆ ಹಾಜರಿದ್ದರು. ತಾ. 23ನೇ ಮುಂಜಾನೆ, ಮಹದೇವ ದೇಸಾಯಿಯವರ ಶವ ದಹನ ನಡೆದ ಸ್ಥಳದಲ್ಲೇ ಕಸ್ತೂರಿಬಾನ ಕಳೇಬರದ ಅಂತ್ಯವಿಧಿ ಶಾಸ್ತ್ರೋಕ್ತವಾಗಿ ನಡೆಯಿತು. ಅದುವರೆಗೂ ದುಃಖವನ್ನು ನುಂಗಿಕೊಂಡು ಎಲ್ಲರೊಡನೆ ಮಾತಾಡುತ್ತಾ ತನ್ನ ದುರ್ಬಲತ್ವವನ್ನು ತಾನೇ ಗೆದ್ದುಕೊಂಡಂತಿದ್ದ ಮಹಾತ್ಮಾಜೀ ಶವವನ್ನು ಪೆಟ್ಟಿಗೆಯಿಂದೆತ್ತಿ ಕಾಷ್ಠದಲ್ಲಿಡುವಾಗ ಶಾಲಿನಿಂದ ಕಣ್ಣುಜ್ಜಿಕೊಂಡರು. ಧರ್ಮ ಗ್ರಂಥಗಳ ವಾಚನ, ಪ್ರಾರ್ಥನೆ, ಭಜನೆ, ಎಲ್ಲರನ್ನೂ ತುಸು ಓರಿಗೆ ಸರಿಸಿ ಮಹಾತ್ಮಾಜೀ ಮಾಡಿದ ವಿಶೇಷ ಪ್ರಾರ್ಥನೆಯ ನಂತರ ಶ್ರೀ ದೇವದಾಸ ಗಾಂಧಿಯವರು ಶವಕ್ಕೆ ಬೆಂಕಿ ಕೊಟ್ಟರು. ಮಾತೆಯ ಎಲುಬು-ಶೇಷಗಳನ್ನು ಗಂಗೆಯಲ್ಲಿ ಹಾಕಬೇಕು—ತಾನೇ ಅದರ ಪೌರೋಹಿತ್ಯ ವಹಿಸಬೇಕು ಎಂದು ತಂತಿ ಬಿಟ್ಟ ಪಂಡಿತ ಮದನ ಮೋಹನ ಮಾಲವೀಯರ ಅಪೇಕ್ಷೆಯಂತೆ ತಂದೆಯಿಂದಾಜ್ಞಾಪಿಸಲ್ಪಟ್ಟ ಶ್ರೀ ದೇವದಾಸ ಗಾಂಧಿಯವರು ಜಿಂಕೆ ತೊಗಲಿನ ಚೀಲದಲ್ಲಿ ಅವಶೇಷಗಳನ್ನು ತುಂಬಿಕೊಂಡು ಅಲಹಾಬಾದಿಗೆ ಹೋಗಿ, ಅಲ್ಲಿಂದ ಮಾಲವೀಯರೊಡನೆ ಪ್ರಯಾಗಕ್ಕಾಗಮಿಸಿ ಗಂಗಾಸಮರ್ಪಣೆ ಮಾಡಿದ್ದಾರೆ.

ದೇಶದ ರೋದನ

ಕಸ್ತೂರಿಬಾನ ನಿಧನದಿಂದ ಅಖಿಲ ಭಾರತಕ್ಕೆ ಸಿಡಿಲು ಬಡಿದಂತಾಗಿದೆ; ಶೋಕ ಕಾರ್ಮೋಡ ಕವಿದಿದೆ. ದೇಶದ ಎಲ್ಲಾ ದೊಡ್ಡ ಸಣ್ಣ ಪಟ್ಟಣಗಳಲ್ಲೂ, ಹಳ್ಳಿ ಮೂಲೆಗಳಲ್ಲೂ ಹರತಾಳ ದುಃಖ ಸೂಚಕ ಸಭೆಗಳಾಗಿವೆ. ಮಹಾತ್ಮಾ ಗಾಂಧಿ, ದೇವದಾಸ ಗಾಂಧಿ ಮತ್ತು ಇತರ ಸಂಬಂಧಿಕರಿಗೆ ದುಃಖಭಾಗಿತ್ವ ಸಂದೇಶಗಳು ಅಗಣಿತ ಸಂಖ್ಯೆಯಲ್ಲಿ ಬಂದಿವೆ. ಪಕ್ಷ ಪಂಗಡಗಳ ಭೇದವಿಲ್ಲದೆ ಎಲ್ಲಾ ಪ್ರಮುಖರೂ ಮಾತೃ ವಿಹೀನರಾದವರಂತೆ ದುಃಖ ಪ್ರದರ್ಶಿಸಿದ್ದಾರೆ. ಬಜೆಟ್ ಚರ್ಚೆಗಳನ್ನು ನಡೆಸುತ್ತಿದ್ದ ಎಸೆಂಬ್ಲಿ ಕೌನ್ಸಿಲ್ ಓಫ್ ಸ್ಟೇಟುಗಳು ದುಃಖ ಪ್ರದರ್ಶಿಸಿವೆ. ಲಂಡನಿನ ಪಾರ್ಲಿಮೆಂಟಿನಲ್ಲಿಯೂ ಈ ದುರಂತರವು ಪ್ರಸ್ತಾಪಿಸಲ್ಪಡುವ ಸಂಭವ ಕಾಣುತ್ತಿದೆ. ಅಮೇರಿಕದ ಪತ್ರಿಕೆಗಳು ಈ ಶೋಚನೀಯ ಘಟನೆಗೆ ವಿಶೇಷ ಪ್ರಾಮುಖ್ಯತೆ ಕೊಟ್ಟಿವೆಯಲ್ಲದೆ ಲೋಕದ ಮಹಾ ಪುರುಷನ ಮಾನಸಿಕ ಆಘಾತಕ್ಕಾಗಿ ಇಡೀ ಲೋಕವೇ ಸಹಸಂತಾಪ ಪ್ರದರ್ಶಿಸಿದೆ. ಬೊಂಬಾಯಿ, ಅಹಮ್ಮದಾಬಾದ ಮೊದಲಾದ ನಗರಗಳಲ್ಲಿ ಸ್ಮಾರಕ ನಿಧಿಗಳ ಸಂಗ್ರಹವಾಗಹತ್ತಿದೆ. ದಕ್ಷಿಣಾಫ್ರಿಕದಲ್ಲಿಯೂ ಸ್ಮಾರಕವೊಂದನ್ನೇರ್ಪಡಿಸುವ ಪ್ರಯತ್ನ ನಡೆದಿದೆ. ಈ ವೃದ್ಧಾಪ್ಯದಲ್ಲೊದಗಿದ ಅಸಹನೀಯ ಯಾತನೆಯನ್ನು ಗೆಲ್ಲುವ ಚೇತನವು ಗಾಂಧಿಜೀಗುಂಟಾಗಲಿ, ಎಂದು ರಾಷ್ಟ್ರವು ಅಂತಃಕರಣಪೂರ್ವಕ ಹಾರೈಸುತ್ತಿದೆ ಪ್ರತಿಯೊಬ್ಬ ಭಾರತೀಯನ ಹೃದಯವೂ ಒಂದೊಂದು ಆಗಾಖಾನ್ ಅರಮನೆಯಾಗಿ ಆ ವಿಧುರ ಗಾಂಧಿಯ ಮೂರ್ತಿಯನ್ನು ತನ್ನಲ್ಲಿರಿಸಿಕೊಂಡು ಸಾಕುತ್ತಿದೆ!

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—
ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸಿವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ಹಿರಾಮನ್,
ಮೆನೇಜರ್.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

Degrees: Books: Medicines
Free H. L. M. S.M. B. H. M. D. etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp.—
Prof. Dr. N. H. Chhatbar,
Principal Indian Homeopathi Institute & Society (Govt Regd)
P. O. MAHUVA (kathiawar Dt. India.)

Sidha-Kalpa Kavach (Regd.)
No. 3 Rs 2. No 2 Rs 5 No. 1 Rs. 7 Special Rs. 10, Extra Special Rs. 17 for love marriage health, wealth. Ask an six questions with M. O Re. 1/4 and get correct answers by returnpost Life reading Rs. 10 No V.P.P. Send M.O. Free, pmplets
Prof Dr. N. H Chhatbar.
P. O. MAHUVA (Kathiawar India.)

THE CANARA BANKING CORPORATION LTD.

(Incorporated in British India with Limited Liability)

ESTD: 1906.

Head Office: **UDIPI,** S. Kanara.

Statement of affairs as on 31st December, 1943.

LIABILITIES	Rs.	As.	Ps.	ASSETS	Rs.	As.	Ps.
1. Paid up Capital	12,95,970	0	0	1. Cash on hand & with Bankers	18,25,986	3	8
2. Reserves	3,83,379	1	6	2. Investments on (1) Govt. Securities, (2) Immovable properties etc.	26,04,671	6	8
3. Deposits	6,166,927	6	0	3. Loans on jewels & other valuable securities	23,72,302	8	7
4. Bills for collection	5,53,548	6	1	4. Loans on personal security & Bills purchased	16,71,482	14	8
5. Sundries including revenue items	7,00,961	0	5	5. Bills for collection as per contra	5,53,546	6	1
6. Profits for the year ending 31st December 1943	1,08 522	4	0	6. Office premises, furniture etc.	93,251	0	0
				7. Sundries including revenue items	84,085	10	4
Total	92,09,328	2	0	Total	92,09,328	2	0

ಉಡುಪಿ, ಗುರುವಾರ ೨-೩-೧೯೪೪

ಪತ್ರಿಕೋದ್ಯೋಗಿ ಸಂಘ

ಕಳೆದ ವಾರ ಮಂಗಳೂರಲ್ಲಿ ಯಶಸ್ವಿಯಾಗಿ ಜರಗಿದ ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಮ್ಮೇಲನವು 'ಪತ್ರಿಕೋದ್ಯೋಗೀ ಸಂಘ'ವೊಂದನ್ನು ಸ್ಥಾಪಿಸಿಕೊಂಡುದರಿಂದಲೇ ಫಲದಾಯಿಯಾಯಿತೆನ್ನಬಹುದು. ಸಮ್ಮೇಲನದಲ್ಲಾದ ಪತ್ರಿಕೆಗಳ ಮೇಲಿನ ನಿರ್ಬಂಧದ ನಿಷೇಧ, ಇತ್ಯಾದಿ ನಿರ್ಧಾರಗಳು ಸಂಪ್ರದಾಯಬದ್ಧವಾದುವು. 'ಪತ್ರಿಕೋದ್ಯಮದ ಮೇಲೆ ಪುಸ್ತಕ' 'ಪಾರಿಭಾಷಿಕ ಶಬ್ದಕೋಶ' ಬರೆಯಿಸುವಂತಹ ಕಾರ್ಯಗಳಿಗಾಗಿ ಸಮ್ಮೇಲನವೇ ನೆರೆಯಬೇಕೆಂದಿರಲಿಲ್ಲ. ಕನ್ನಡ ಶೀಘ್ರ ಲಿಪಿಯ ಜ್ಞಾನ, ಕನ್ನಡ ಪ್ರಾಂತ್ಯದ ವಾರ್ತೆಗಳಿಗೆ ಸ್ಥಾನ, ಅ. ಭಾ. ಪತ್ರಿಕಾ ಸಂಪಾದಕ ಪರಿಷತ್ತಿನಲ್ಲಿ ಮೈಸೂರಿಗೊಂದು ಸ್ಥಾನ-ಇಂತಹ ನಿರ್ಧಾರಗಳು ಸಮ್ಮೇಲನಗಳಲ್ಲಾದುದರಿಂದ ಬೆಲೆಯಧಿಕ; ಆದರೆ ಅವೆಲ್ಲಾ ವಿನಂತಿ ರೂಪದಲ್ಲಿವೆ. 'ಪತ್ರಿಕೋದ್ಯೋಗೀ ಸಂಘ'ವೊಂದು ಸ್ಥಾಪನೆ ಹೊಂದದಿರುತ್ತಿದ್ದರೆ ಎಂದಾದರೊಮ್ಮೆ ಇವುಗಳ ಪುನರುಚ್ಚಾರವನ್ನು ಕೇಳುವ ಯೋಗವೊದಗುತ್ತಿತ್ತು; ಕಾರ್ಯ ರೂಪದಲ್ಲಿ ಕಾಣಲಾಗುತ್ತಿರಲಿಲ್ಲ. ಹಾಗಾಗದಂತೆ ಸಮ್ಮೇಲನವು 'ಸಂಘ'ವೊಂದನ್ನು ಸ್ಥಾಪಿಸಿ ಬದರಿತು; ಈ ರೀತಿ ಸಮ್ಮೇಳನ ನೆರೆಯಿಸಿದ ಮಂಗಳೂರು ಕಂಬಳದ ಗದ್ದೆಯಾಗಿ ಸಂಭ್ರಮದಲ್ಲೇ ಮಹಾಜನ ಬೀಜ ಬಿದ್ದ ಗದ್ದೆಯಾಗಿ ಪರಿಣಮಿಸಿದುದಕ್ಕಾಗಿ ಅಭಿನಂದಿಸುತ್ತೇವೆ.

ಮೈಸೂರು ಪತ್ರಿಕೋದ್ಯೋಗಿಗಳ ಸಂಘ ಪ್ರತ್ಯೇಕವಿದೆ. ಅ. ಭಾ. ಸಂಪಾದಕ ಪರಿಷತ್ತಿನಲ್ಲಿ ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯ ದೊರೆಯಬೇಕೆಂದು ಸಮ್ಮೇಲನವೂ ಕೇಳಿಕೊಂಡಿದೆ. ಭಿನ್ನಾಡಳಿತೆಗೊಳಪಟ್ಟವರನುಸರಿಸಬೇಕಾದ ಸಹಜವಾದ ಭಿನ್ನದಾರಿಗಳಿವೆ ಎಂದು ಸಮಾಧಾನಗೊಂಡರೆ, ಅಖಿಲ ಕರ್ನಾಟಕ ಭಾವನೆಗೆ ಘೋಷಣೆ ದೊರೆಯದು. ಮೈಸೂರು ಸಂಘ ಸ್ಥಾಪನೆ ತಪ್ಪಲ್ಲ. ಈ ಮೊದಲೇ ಸ್ಥಾಪನೆಗೊಂಡಿದ್ದ ಅದನ್ನು ಇನ್ನು ಮೇಲೆ ಈ ಸಂಘದ ಶಾಖೆಯಾಗಿ ಮಾರ್ಪಡಿಸಿಕೊಳ್ಳಬಹುದು. ಅ. ಭಾ. ಸಂಪಾದಕ ಪರಿಷತ್ತಿನಲ್ಲಿ ಪ್ರತ್ಯೇಕ ಸ್ಥಾನ ಕೇಳುವ ಆವಶ್ಯಕತೆಯೇನು? ಒಂದೋ-ಕರ್ನಾಟಕಕ್ಕೆ ಎರಡು ಸ್ಥಾನ ಸಂಪಾದಿಸಬೇಕು, ಬೇರೊಂದು ಸ್ಥಾನದ ಬೇರೆಯೇ ಬೇಡಿಕೆಯನ್ನು ಆಡಳಿತೆಗೊಳಪಟ್ಟವರ ಹೆಸರು ಹೇಳಿ ಮುಂದಿಟ್ಟರೇನೇ ಬೆಲೆ ಬರಬಹುದೆಂಬ ಕಾರ್ಯಜಾಣ್ಮೆಯಿದಾಗಿರಬೇಕು; ಇಲ್ಲವೇ ಮೈಸೂರವರ ಪ್ರತ್ಯೇಕ ಸಂಕಷ್ಟಗಳ ಅರಿವು ಮಿಕ್ಕವರಿಗಿಲ್ಲವೆಂಬ ಅತೃಪ್ತಿಯೇ ಇದಕ್ಕೆ ಹೇತುವಾಗಿರಬೇಕು. ಮೊದಲನೇ ಕಾರಣದಲ್ಲಿ ತಾತ್ಕಾಲಿಕ ಜಾಣತನವಿದೆಯಾದರೂ, ಕರ್ನಾಟಕದ ಏಕರೂಪವನ್ನು ಕಾಣುವ, ಕಾಣಿಸುವ ದೂರದರ್ಶಿತ್ವವಿಲ್ಲ; ಎರಡನೆಯದರಲ್ಲಿ ಪಾಕಿಸ್ತಾನ್ ಭಾವನೆಯೇ ಇದೆ. ಬೊಂಬಾಯಿ ಆಡಳಿತೆ, ಮದ್ರಾಸ್ ಆಡಳಿತೆ, ಮೈಸೂರು ಆಡಳಿತೆಗಳು ಭಿನ್ನ ಭಿನ್ನವಾಗಿಯೇ ಇರುವಾಗ ಈ ದೃಷ್ಟಿಯಿಂದ ಸಮ್ಮೇಲನವು ಎರಡಲ್ಲ, ಮೂರು ಸ್ಥಾನಗಳನ್ನು ಯಾಚಿಸಬೇಕಿದ್ದಿತು. ಹೀಗಿದ್ದರೂ ಮೈಸೂರು ಪತ್ರಿಕೋದ್ಯೋಗಿಗಳು 'ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಂಘ'ದ ಸದಸ್ಯರಾಗಲು ಎಲ್ಲರಿಗಿಂತ ಮುಂದಾಗಿದ್ದಾರೆ; ಅಭಿನಂದನೀಯ. ಈ ಸಂಘದ ಕಾರ್ಯಭಾರ ದೊಡ್ಡದಿದೆ. ಅದು, ಅ. ಭಾ. ಸಂಪಾದಕ ಪರಿಷತ್ತಿನ ಮಾದರಿಯಲ್ಲಿರಬೇಕು. ವಾರ್ಷಿಕಾಧಿವೇಶನದ ಅಧ್ಯಕ್ಷನೇ ಒಂದು ವರುಷದ ನಾಯಕತ್ವ ವಹಿಸಿ ಕಾರ್ಯ ಮುಂದೊತ್ತಬೇಕು; ಮಂಗಳೂರು ಸಮ್ಮೇಲನದ ಹಿನ್ನೆಲೆಯಲ್ಲಿದ್ದುದು ತಾತ್ಕಾಲಿಕ ಸಮಿತಿ; ಆದ್ದರಿಂದ ಶ್ರೀ. ಶ್ರೀನಿವಾಸನರಂತಹ ಪರಪ್ರಾಂತೀಯರ ಅಧ್ಯಕ್ಷತೆಗೊಂದು ಕ್ಷಮೆಯಿದೆ. ಈ ಬಾರಿ ಸಮ್ಮೇಲನವೊಂದು ಶಾಶ್ವತ ಸಂಘವನ್ನು ಮರಿಯಿಟ್ಟಿರುವಾಗ ಮುಂದಿನ ಅಧ್ಯಕ್ಷರು ನಮ್ಮವರೇ ಆಗಿ, ಅದರ ಸಾಕಣೆಯ ಕಾರ್ಯ ನಿರ್ವಹಿಸಬೇಕು. ಸಮ್ಮೇಲನದಲ್ಲಾದ ನಿರ್ಧಾರಗಳನ್ನು ಈ ಸಂಘವು ಕಾರ್ಯಕ್ಷೇತ್ರಕ್ಕಿಳಿಸಬೇಕು. ಪತ್ರಿಕೋದ್ಯಮದ ಘನತೆಗೆ, ಪತ್ರಿಕೋದ್ಯೋಗಿಗಳ ಸ್ಥಾನಮಾನಗಳಿಗೆ ಕಾವಲಾಗಿ ಈ ಸಂಘ ನಿಲ್ಲಬೇಕು. ಸಂಘದ ಮೂಲಕ 'ಉದ್ಯಮ ತರಬೇತಿ ಕೇಂದ್ರ'ವೊಂದನ್ನು ತೆರೆಯುವದು ಅಗತ್ಯ ಮತ್ತು ಸಾಧ್ಯ. ಅಖಿಲ ಕರ್ನಾಟಕದ ಪತ್ರಿಕೋದ್ಯಮಿಗಳ 'ಜಾತಕ'ವನ್ನು ಸಂಗ್ರಹಿಸಿ, ನ್ಯೂನಾತಿರೇಕಗಳ ಏರುತಗ್ಗುಗಳಲ್ಲಿ ಕೈಯ್ಯಾಡಿಸಿ ಸಮಮಟ್ಟಕ್ಕೆ ತರಬೇಕು. ಹಾಗಾಗದಿದ್ದರೆ ಈ 'ಸಂಘ ಸ್ಥಾಪನೆ'ಗಾದರೂ ಸಮ್ಮೇಲನದ ಇತರ ನಿರ್ಧಾರಗಳ ಸ್ಥಾನವೇ ದೊರೆಯಬಹುದು-- ಮಿಕ್ಕವುಗಳನ್ನು ಅಕ್ಷರಗಳಿಂದ ಜೋಡಿಸಿದ್ದಾದರೆ ಈ ಠರಾವಿನಲ್ಲಿ ಮನುಷ್ಯರನ್ನೂ ಜೋಡಿಸಿಟ್ಟ ಒಂದೇ ವ್ಯತ್ಯಾಸವುಳಿಯಬಹುದು!

ನೋಟೀಸು.

ಕುಂದಾಪುರ ತಾಲೂಕು ತಕ್ಕಟ್ಟೆ ಗ್ರಾಮದ ಪಟೇಲ ಮಾದಯ್ಯ ಸೆಟ್ರ ಅಳಿಯ ಟಿ. ಕೃಷ್ಣಪ್ಪ ಸೆಟ್ಟಿಯು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ. ನಮ್ಮ ಕುಟುಂಬಾರ್ತಕ್ಕೆ ಸುಮಾರು 90-0-0ರ ಸ್ವಾ ತೀರ್ವೆ ತೆರುವ ಆಸ್ತಿಯಿರುತ್ತದೆ ನಮ್ಮ ಕುಟುಂಬಕ್ಕೆ ಯೇನೂ ಸಾಲಯಿರುವುದಿಲ್ಲಾ. ಸದ್ರಿ ಮಾದಯ್ಯ ಸೆಟ್ಟಿ ಎಂಬವನು ಕುಟುಂಬದ ಯಜಮಾನನೂ, ಪಟ್ಟಾದಾರನೂ ಆಗಿರುತ್ತಾನೆ. ಆತನು ಸುಮಾರು 35 ವರುಷಗಳಿಂದ ಕುಟುಂಬದ ಮನೆಯನ್ನು ಬಿಟ್ಟು ತನ್ನ ಹೆಂಡ್ತಿ ಮಕ್ಕಳ ವಟ್ಟಿಗೇಯಿರುತ್ತಾನೆ. ಅಂದಿನಿಂದ ಕುಟುಂಬದ ಆಸ್ತಿಯ, ಮನೆಯ, ವ ಮೆಂಬರರ ಯಾವ ನಿಗಾವಣೆಯನ್ನೂ ನೋಡದೆ ಕೇವಲ ಹೆಂಡ್ತಿ ಮಕ್ಕಳ ಶ್ರೇಯಸ್ಸು ನೋಡುತ್ತಾ ಹೇರಾಳ ಸಮಾಯ ಮಾಡುತ್ತಾ, ಕುಟುಂಬದ ಹಕ್ಕಿನದ್ದಾದ, ಪಟೇಲಿಕೆಯನ್ನೂ ತನ್ನ ಮಗನಿಗೇ ಬಿಡ್ಲಿ ಕೊಡ-ಶಾಯಿರುತ್ತಾನೆ. ನಮ್ಮ ಕುಟುಂಬದಲ್ಲಿ ನಾನು ಕೂಡಾ ಮೂರು ಜನರು ಪಟೇಲಿಕೆ ಪಾಸಾದವರಿರುತ್ತೇವೆ. ಸದ್ರಿ ಮಾಧಯ್ಯ ಸೆಟ್ಟಿಯು ಈಗ ಸುಮಾರು 60 ವರುಷ ಪ್ರಾಯಕ್ಕೆ ಮಿಕ್ಕಿದ ಮುದುಕನಾಗಿ, ಯತ್ತೇಚೆಗೆ ಕೇವಲ ಹೆಂಡ್ತಿ ಮಕ್ಕಳ ದುರ್ಭೋದನೆಗೆ ವಳಪಟ್ಟು ಕುಟುಂಬದವರ ಮೇಲೆ ತುಂಬಾ ಆಗ್ರಹದ ಮೇಲೆ ಯಿದ್ದು ಮೊನ್ನೆ ತಾರೀಕು 22-2-1944ನೇ ದಿವ್ಸ ನಾನು ವ, ಯಿತರ ಗಂಡಸರು ಇಲ್ಲದ ಸಮಯ, ಮನೆಗೆ ಬಂದು ನನ್ನ ಅಜ್ಜಿ ತುಂಗಮ್ಮ ಸೆಡ್ತಿ, ಹಿರೇತಾಯಿ ನಾಗಮ್ಮ ಸೆಡ್ತಿ, ನನ್ನ ತಂಗಿ ಗೌರಮ್ಮ ಸೆಡ್ತಿ ಯಿವರುಗಳನ್ನು ಹೆದರಿಸಿ ಬಲಾತ್ಕಾರದಿಂದ ಕೆಲವು ಕಾಲಿಕಾಗದದ ಮೇಲೆ ಹೆಬ್ಬೆಟ್ಟು ಮುದ್ರೆಗಳನ್ನು ಪಡಕೊಂಡಿರುತ್ತಾನಾಗಿಯೂ ಈ ಪೈಕಿ ನನ್ನ ತಾಯಿ ಪಂಜುಮ ಸೆಡ್ತಿ ಎಂಬವಳು ಮಾತ್ರ ಹೆಬ್ಬೆಟ್ಟು ಹಾಕಲು ನಿರಾಕರಿಸಿದಕ್ಕೆ ಬಹಳ ಸಿಟ್ಟಿನಿಂದ ಯಿದ್ದು ಕುಟುಂಬಕ್ಕೆ ಕೇವಲ ಅನ್ಯಾಯಮಾಡುವ ವಿರಾದೆಯಲ್ಲಿರುತ್ತಾನಾಗಿ ತಿಳಿಯುತ್ತೇನೆ. ಆದ್ದರಿಂದ ಸದ್ರಿಯವನು ಕುಟುಂಬದ ಆಸ್ತಿ ಬಗ್ಗೆಗಲೀ, ಪಟೇಲಿಕೆ ಬಗ್ಗೆಗಲೀ ಯಾವ ತರದ ರಿಕಾರ್ಡು ಮಾಡಿದಾಗ್ಯೂ ಅದು ಸಿಂಧುವಾಗತಕ್ಕದ್ದಲ್ಲಾ. ವ, ಅವುಗಳು ಕುಟುಂಬಕ್ಕೆ ಬಾಧಿಸತಕ್ಕದ್ದಲ್ಲಾ ಎಂಬ ಸಂಗ್ತಿ ಈ ಮೂಲಕ ತಿಳಿಸುತ್ತೇನೆ.

T. Kristappa Shetty.

ತಾರೀಕು 24-2-1944.

ದುರ್ಬೀನು

ಕೊರಳಿಗೆ ಕತ್ತಿಯಿಟ್ಟರದು ವೈರ; ಕೂದಲಿಗೆ ಕತ್ತರಿಯಿಟ್ಟರದು ಕ್ಷೌರ. ಆತ್ಮವನ್ನು ನೋಯಿಸುವದನ್ಯಾಯ; ಅಪರಾಧ ಖಂಡನೆ ನ್ಯಾಯ.

○○ ○○ ○○

ಪೆಟ್ಟು ಕಾಲಿಗಾದರೂ ನರಳಬೇಕು ಬಾಯಿಯೇ; ಸಂಕಷ್ಟ ಸಾಮಾನ್ಯರಿಗೊದಗಿದರೂ ನೊಂದಬೇಕು ಧುರೀಣರೇ.

○○ ○○ ○○

ಧೂಳು ಹಾರಿದಂತೆ ಕಲ್ಲು ಹಾರುವದಿಲ್ಲ; ಲಘು ಬುದ್ಧಿಯ ಚಲ್ಲಾಟ ಘನಬುದ್ಧಿಗಿಲ್ಲ.

○○ ○○ ○○

ಕೊಳೆ ಹಲ್ಲಿದ್ದವನು ಮುಗುಳು ನಗೆಯಿಂದಲೇ ಮುಗಿಸಬೇಕು; ಭಾಷೆ ಬಾರದವನು ಭಾವಪ್ರದರ್ಶನದಿಂದಲೇ ತೀರಿಸಬೇಕು.

○○ ○○ ○○

ನೀರಲ್ಲಿ ಮುಣುಗಿ ಎರಡೇ ಮಿನಿಟು ಕಳೆತುಕೊಳ್ಳಬಹುದು; ನೀರಸ ವಿಷಯದಲ್ಲಿ ಅಲ್ಪ ಕಾಲ ಮಾತ್ರ ತಲ್ಲೀನವಾಗಬಹುದು.

○○ ○○ ○○

ಮೈಗೆಣ್ಣೆ ಹಚ್ಚಿಕೊಂಡವ ಸ್ನಾನವಾಡುವವರೆಗೆ ಮನೆಯಲ್ಲೇ; ಮನಕ್ಕೆ ಯೋಚನೆ ಹಚ್ಚಿಕೊಂಡವ, ನಿವಾರಣೆಯಾಗುವವರೆಗೆ ಇದ್ದಲ್ಲೇ.

ಶ್ರೀ ವಿದ್ಯಾವಲ್ಲಭರು ಮತ್ತು ಮಧ್ವನವಮಿ ಆಚರಣೆ

ಶ್ರೀ ಪತ್ತಿಗೆ ಮಠದ ಕಿರಿಯ ಸ್ವಾಮಿಗಳಾದ ಶ್ರೀ ವಿದ್ಯಾವಲ್ಲಭರು ಮಧ್ವನವಮಿಯಂದು ಶ್ರೀ ಮಧ್ವಾಚಾರ್ಯರ ಮೂರ್ತಿಯ ಮುಂದೆ ಪಾದ್ಯಪೂಜೆಯನ್ನು ಮಾಡದೆಯೂ ಇತರ ಶ್ರೀಗಳವರೊಂದಿಗೆ ತೀರ್ಥಪ್ರಸಾದ ಭಕ್ಷ್ಯಗಳಲ್ಲಿ ಸಹಭಾಗಿಯಾಗದೆಯೂ ಸತ್ಸಂಪ್ರದಾಯವನ್ನು ಉಲ್ಲಂಘಿಸಿ ವರ್ತಿಸಿದ ವಿಷಯ ನಮ್ಮ ನವಯುಗದ ಫೆಬ್ರವರಿ 3ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಅದು ಸುಳ್ಳು ಸುದ್ದಿಯೆಂದು ಮಠದ ಅಂಗಳದಾದ ಒಬ್ಬ ಆಚಾರ್ಯರು 'ಧುರೀಣ'ದಲ್ಲಿ ಪ್ರಕಟನೆ ಕೊಟ್ಟಿದ್ದರೂ ನಮ್ಮ ಸುದ್ದಿಯು ಅಲ್ಲಗಳೆಯಲಾಗದಷ್ಟು ಸತ್ಯವಾದುದೆಂಬುದನ್ನು ಸಮರ್ಥಿಸಿ ನವಯುಗದ ತಾ.17-2-44ನೇ ಸಂಚಿಕೆಯಲ್ಲಿ ಸಿದ್ಧಾಂತಗೊಳಿಸುವುದನ್ನು ಕಂಡು ನಿರುಪಾಯರಾಗಿ ವಿದ್ಯಾವಲ್ಲಭರು ಆದಿಯಿಂದ ಅಂತ್ಯದ ವರೆಗೆ ಈ ವಿಷಯದಲ್ಲಿ ಮೌನ ತಾಳಿದ್ದಾರೆ. ಇದೂ ಒಂದು ವಿದ್ಯೆ! ಇನ್ನು ಆಚಾರ್ಯ ಮಿಚೀನ ತೋರುವ ಮತ್ತೊಂದು ವಿದ್ಯೆಯೆಂದರೆ 'ನವಯುಗ' 'ಅಂತರಂಗ'ಗಳು ದುರುದ್ದೇಶದಿಂದ ವಿದ್ಯಾವಲ್ಲಭರ ವಿಷಯ ಅಪಪ್ರಚಾರ ಮಾಡುತ್ತಿರಬಹುದೋ ಎಂಬ ಶಂಕೆಯು ಬರುವಂತೆ ತಮ್ಮ ಹಸ್ತಕರ ಹಾಗೂ ಪತ್ರಿಕಾ ಮೂಲಕ ಅಪ್ರತ್ಯಕ್ಷವಾಗಿ ಪ್ರಕಟಣೆ ಮಾಡುತ್ತ ತನ್ನ ವಿದ್ವತ್ತಿನ ಪ್ರತಿಪಾದನೆಯನ್ನು ಮಾಡಿಸುತ್ತಿರುವದು! ಆದರೆ ಪಾಪ! ವಿದ್ಯಾವಲ್ಲಭರು ಯಾವ ಹಸ್ತಕರನ್ನು ನಂಬಿದ್ದರೋ ಅವರೇ ನಮ್ಮ ಸುದ್ದಿಯನ್ನು ಸಿದ್ಧಾಂತಗೊಳಿಸಿದ್ದಾರೆಂಬುವದು ಲೋಕಕ್ಕೆಲ್ಲಾ ತಿಳಿದರೂ ವಿದ್ಯಾವಲ್ಲಭರಿಗೆ ತಿಳಿಯದೆ ಹೋದುದು ಪರಮಾಶ್ಚರ್ಯ! ಇವರ ಹಸ್ತಕರಾದ ಆಚಾರ್ಯರ ಮೂಲಕ 'ಕಂಠೀರವ'ದ ತಾ. 29-2-44ರ ಸಂಚಿಕೆಯಲ್ಲಿ ವಿದ್ಯಾವಲ್ಲಭರು ಶ್ರೀಕೃಷ್ಣಮಠದಲ್ಲಿ ಶ್ರೀ ಮಧ್ವಾಚಾರ್ಯರ ಮೂರ್ತಿಯ ಸಮಕ್ಷಮ ಪಾದ್ಯಪೂಜೆ ನೆರವೇರಿಸಲಿಲ್ಲವೆಂಬುದನ್ನು ಒಪ್ಪಿಬಿಟ್ಟಿದ್ದಾರೆ. ಒಪ್ಪಿಯೂ ಒಪ್ಪದಂತೆ ನಟಿಸುವ ವಿದ್ಯೆಯು ಇರಬೇಕು ಹೀಗೆಯೇ! ನವಯುಗ, ಅಂತರಂಗಗಳು ಇಂದಾಗಲೀ ಮುಂದಾಗಲೀ ಯಾವ ತರದ ಯಾಚನೆಗೂ ಹೊಂದಿಡದೆ ಸ್ವತಂತ್ರವಾಗಿ ನಿಂತು ಕಂಡುದನ್ನು ಕಂಡಂತೆ ಹೇಳುವ ಧೋರಣೆಯುಳ್ಳ ಪತ್ರಿಕೆಗಳೆಂದು ವಾಚಕ ಲೋಕಕ್ಕೆ ಗೊತ್ತೇ ಇದೆ. ಹಾಗೆ ಕಂಡುದನ್ನು ಕಂಡಂತೆ ಹೇಳಿದುದು ಬರಿ ಎಳೆದಂತಾದ ಕಾರಣ ಉರಿ ತಾಳದೆ ಬರೆ ಎಳೆದವರನ್ನು ಬಾಯಿಗೆ ಬಂದಂತೆ ಬೊಗಳ ಜರಿಸುವುದು ಸಹಜ ಎಂಬ ವಿಚಾರ ನಮ್ಮ ವಾಚಕ ವರ್ಗಕ್ಕೆ ಗೊತ್ತೇ ಇರುವ ಕಾರಣ ಹೆಚ್ಚಿಗೆ ಹೇಳಬೇಕಾಗಿಲ್ಲವಷ್ಟೆ.

ಕಾಂಗ್ರೆಸ್ ಗಲಭೆಯ ಕಾಲದ ಅಧಿಕಾರಿಗಳ ಡಿಸ್‌ಮಿಸ್!

ರಶ್ಯದಲ್ಲಿ.

ಬಾಲ್ಟಿಕ್‌ನ ಹೆಬ್ಬಾಗಿಲಂತಿರುವ ಪ್ಸ್ಕೋವ್‌ನ ಕಡೆಗೆ ಕೆಂಪು ಸೇನೆಯು ಮಹಾ ಸಾಹಸದಿಂದಾರಂಭಿಸಿರುವ ಧಾಳಿಯೇ ಅಲ್ಲಿಯು ಈ ವಾರದ ಮುಖ್ಯ ಯುದ್ಧಘಟನೆಯೆನ್ನಲಹುದು. ಈ ಸಂದುಕಟ್ಟಿನ ಸ್ಥಳಕ್ಕೆ ಬೆರಳೆಣಿಕೆಯ ಮೈಲುಗಳಷ್ಟು ದೂರದಲ್ಲೀಗ ರಶ್ಯಾನರಿರುವರು. ಜರ್ಮನರಲ್ಲಿಗೆ ಹೆಚ್ಚಿನ ವಿಮಾನ ಬಲವನ್ನು ಸರಬರಾಯಿ ಮಾಡಿಕೊಂಡಿರುವರು.

ದಕ್ಷಿಣ ಭಾಗದಲ್ಲಿ.

ಅಲ್ಲಿಂದ ದಕ್ಷಿಣ ಭಾಗದ ನೊವೊಸೊಕೊಲ್ನಿಕಿ ವಿಭಾಗದಲ್ಲಿ ಪಶ್ಚಿಮಾಭಿಮುಖವಾಗಿ ಮುಂದೊತ್ತಿದ ಕೆಂಪು ಸೇನೆ, ಪಶ್ಚಿಮ ಬಿಳಿರಶ್ಯಾದ ಕಡೆಗೆ ಬಹುದೂರದ ವರೆಗೂ ಬಂದಂತಾಗಿದೆ. ನೀಪರ್ ನದಿಯ ಕೆಳಭಾಗದಲ್ಲಿ ಕೆಂಪು ಸೇನಾನಿ ಪುನಃ ಧಾಳಿಯನ್ನಾರಂಭಿಸಿ ಜರ್ಮನರನ್ನು 15 ಮೈಲು ಹಿಂದಕ್ಕೋಡಿಸಿದ್ದಲ್ಲದೆ ಮುಂದೊತ್ತುತ್ತಿದ್ದಾನೆ.

ಲಕ್ ವಿಭಾಗದಲ್ಲಿ.

ಕೆಲದಿನಗಳಿಂದ ವಿಶೇಷ ಪ್ರಸಿದ್ಧಿಕೇಳಿದ್ದ ಲಕ್ ರಣರಂಗದಲ್ಲಿ ಒಮ್ಮೆ ಜರ್ಮನರು ಪ್ರತಿಧಾಳಿಯನ್ನಾರಂಭಿಸಿ ಪ್ರಥಮ ವಿಜಯಗಳನ್ನು ಪಡೆದರೂ ರಶ್ಯನರ ಸಂದರ್ಭೋಚಿತ ಪ್ರತಿಧಾಳಿಗಳಿಂದಾಗಿ ಅವರು ಕೊನೆಗೆ ತಮ್ಮ ಮೊದಲ ನೆಲೆಗಳನ್ನೂ ಬಿಟ್ಟು ಹಿಂಜರಿಯಬೇಕಾಯಿತು. ಕೆಲವು ತಿಂಗಳುಗಳಿಂದ ನಾಜೀ ಸೇನೆಯ ಅಭ್ಯಾಸವಾಗಿ ಪರಿಣಮಿಸಿದ್ದ ಹಿಂದೋಟವು ಇನ್ನೂ ಸಾಗಿದೆ.

ಇಟಲಿಯಲ್ಲಿ.

ದೀರ್ಘಾವಧಿ ತಟಸ್ಥವಾಗಿದ್ದ ಕೆಸ್ಸಿನೋ ರಣರಂಗದಲ್ಲಿ ಜರ್ಮನರು ಘಕ್ಕನೆ ಎರಡು ಧಾಳಿಗಳನ್ನಾರಂಭಿಸಿದರೂ ಮಿತ್ರರವನ್ನು ನಿಷ್ಫಲಗೊಳಿಸಿರುವರು. ಅಸ್ಸಿಯೋ ಸಂಕಶಿರದಲ್ಲಿ ಜರ್ಮನರು ಮತ್ತೊಮ್ಮೆ ಮಿತ್ರಕೋಟೆಯೊಳಗೆ ನುಗ್ಗಲು ಪ್ರಯತ್ನಿಸಿದರೂ ಫಲಕಾರಿಯಲ್ಲ. ಅಂತೂ ಇಟಲಿ ರಣರಂಗಗಳಲ್ಲಿ ಈ ವಾರ ನವಚೇತನ ಕಂಡುಬರುವದಿಲ್ಲ. ಅಲ್ಲಿಯ ಯುದ್ಧಾರಂಭದ ನಂತರ 14 ಸಾವಿರಕ್ಕೆ ಮಿಕ್ಕಿ ಜರ್ಮನರು ಸೆರೆಸಿಕ್ಕಿದ್ದಾರೆ.

ಶಾಂತ ಸಮುದ್ರದಲ್ಲಿ.

ಜಾಪಾನರ ನಿಲ್ದಾಣಗಳ ಮೇಲೆ ಪ್ರಬಲ ಆಕಾಶ ಧಾಳಿಗಳು ನಡೆಯುತ್ತಿವೆ. ಈ ಮೊದಲು ಟ್ರೂಕ್‌ನ ಮೇಲೆ ನಡಿಸಿದ್ದ ಅತಿ ಪ್ರಬಲ ಧಾಳಿಯಿಂದ 23 ಜಾಪಾನೀ ಹಡಗುಗಳು ಮುಳುಗಿ 16ಕ್ಕೆ ಜಖಮಾಗಿದೆ ಎಂದು ಪ್ರಕಟವಾಗಿದೆ. ಜಪಾನಿನ ಕಡೆಗೆ ಮುಂದೊತ್ತಲು ಶಾಂತ ಸಮುದ್ರ ವಿಭಾಗದಲ್ಲಿ ಮಿತ್ರರ ಪ್ರಬಲ ಸನ್ನಾಹ ಸಂಪೂರ್ಣವಾಗಿದೆಯೆಂದೂ ಸಮಯ ನಿರೀಕ್ಷಿಸುತ್ತಿದ್ದಾರೆಂದೂ ತಿಳಿದು ಬರುತ್ತದೆ.

ಬರ್ಮಾದಲ್ಲಿ.

ಅರಕಾನ್ ರಣರಂಗದಲ್ಲಿ 14ನೇ ಸೇನೆಯ ಬ್ರಿಟಿಷ್ ಮತ್ತು ಹಿಂದೀ ಯೋಧರು ಜಾಪಾನರಿಗೆ ಗಣನೀಯ ಅಪಜಯ ಉಂಟುಮಾಡಿದ್ದಾರೆ; 14ನೇ ಸೇನೆಯ ಸಂಚಾರಾನು ಕೂಲತೆ ಕಡಿದು ಸುತ್ತುಗಟ್ಟಲು ಬಂದಿದ್ದ ಸುಮಾರು 8 ಸಾವಿರ ಜಾಪಾನೀ ಸೈನಿಕರು ತಾವೇ ಸಿಕ್ಕಿಬಿದ್ದು ಹೆಚ್ಚಿನವರು ಮೃತಪಟ್ಟರು.

ರುಂಡ್‌ಸ್ಟೆಡ್ ಆಜ್ಞೆ.

ಫ್ರಾನ್ಸಿನ ಜರ್ಮನ್ ಸೇನಾನಿಯಾಗಿರುವ ಫೀಲ್ಡ್ ಮಾರ್ಶಲ್ ವೋನ್ ರುಂಡೆಸ್ಟೆಡ್ ಹೊಸಾಜ್ಞೆಯೊಂದನ್ನು ಹೊರಡಿಸಿ, ಫ್ರಾನ್ಸಿನಲ್ಲಿ ಕೆಡವಿದ ಅಥವಾ ಇಳಿದ ಮಿತ್ರ ಕಡೆಯ ಗಾಳಿ ಕೊಡೆಯವರೊಡನೆ, ವೈಮಾನಿಕರೊಡನೆ, ವಿಮಾನ, ಅಥವಾ ಯಾವುದಾದರೊಂದು ಸಾಮಾಗ್ರಿಯೊಡನೆ ಸಂಬಂಧವಿಟ್ಟುಕೊಳ್ಳುವ ಫ್ರೆಂಚರು ಸೈನ್ಯ ಕಾಯಿದೆಯನ್ವಯ ಕಠಿಣ ಶಿಕ್ಷೆಗೆ ಗುರಿಯಾಗುವರೆಂದು ಸಾರಿದ್ದಾನೆ.

ಜರ್ಮನರಿಗಗಾಧ ಹಾನಿ.

ಮಿತ್ರರು ಕಾರ್ಖಾನೆಗಳ ಮೇಲೆ ನಡಿಸಿದ ಆಕಾಶ ಧಾಳಿಗಳ ಪರಿಣಾಮವಾಗಿ ಜರ್ಮನಿಯ ಆಕಾಶ ಬಲವನ್ನೇ ಹತ ಮಾಡಿದಂತಾಗಿದೆ. ಕಳೆದ ವಾರ ತಮ್ಮಲ್ಲೇ ಮತ್ತು ಲಂಡನಿಗೆ ಹಾರಿಬಂದು ಜರ್ಮನರ 700 ವಿಮಾನಗಳು ನಷ್ಟವಾದವು ಎಂದು ಮಿತ್ರರು ಲೆಕ್ಕ ಹಾಕಿದ್ದಾರೆ.

ಟರ್ಕಿಯ ತಾಟಸ್ಥ್ಯ.

ಆಂಗ್ಲೋ-ಟರ್ಕಿಶ್ ಒಪ್ಪಂದದಂತೆ ಸಂದರ್ಭಾನುಸಾರ ಟರ್ಕಿಯು ಯುದ್ಧಭಾಗಿಯಾಗಲಿದೆ ಎಂಬ ಆಶೆಯು ಕೈರೋ ಸಂಭಾಷಣೆಯ ನಂತರ ಹುಸಿಯಾಗಿದೆ. ಟರ್ಕಿಯ ಮೇಲೆ ಧಾಳಿ ನಡೆದರೆ ಬ್ರಿಟನು ಸಹಾಯಕ್ಕೆ ಬರಬೇಕಲ್ಲದೆ ಟರ್ಕಿಯು ತಾನೇ ಅನ್ಯಾಯ ಸ್ವೀಕರಿಸಬೇಕೆಂದು ಆ ಒಪ್ಪಂದದಲ್ಲಿಲ್ಲವೆಂದು ಟರ್ಕಿಯವರ ಅಭಿಪ್ರಾಯ.

ಸರಕಾರದ ಪರಾಭವ.

ಈ ಬಾರಿ ನವದೆಹಲಿಯ ಕೇಂದ್ರ ಎಸೆಂಬ್ಲಿಯ ಬಜೆಟ್ ಅಧಿವೇಶನದಲ್ಲಿ, ಪ್ರಯಾಣ ದರವನ್ನು ಶೇಕಡಾ 25ರಷ್ಟು ಹೆಚ್ಚಿಸುವ ರೈಲ್ವೇ ಬಜೆಟಿನ ಮೇಲೆ ಶ್ರೀ. ಬಿ. ದಾಸರು ತಂದ ಕಡಿತದ ಸೂಚನೆಯು ಮುಸ್ಲಿಂ ಲೀಗ್, ರಾಷ್ಟ್ರಪಕ್ಷ ಮತ್ತು ಪಕ್ಷರಹಿತ ಸದಸ್ಯರೆಲ್ಲರ ಬೆಂಬಲದಿಂದ ಮಂಜೂರಾಗಿರುವದು ಸರಕಾರೀ ಧೋರಣೆಯನ್ನು ಕೆಲವರು ಕಟುವಾಗಿ ಟೀಕಿಸಿದ್ದಾರೆ. ರೈಲ್ವೇ ಕೆಲಸಗಾರರ ತುಟ್ಟಿಬತ್ತಿನಿಧಿಯನ್ನು ವಿಸ್ತೃತಗೊಳಿಸಬೇಕೆಂದು ಶ್ರೀ ಎನ್. ಎಮ್. ಜೋಶಿ ತಂದ ಕಡಿತದ ಸೂಚನೆಯೂ ಮಂಜೂರಾಯಿತು.

ಶ್ರೀಮತಿ ರಾಧಾಬಾಯಿ ಸುಬ್ಬರಾಯನರು.

ಎಸೆಂಬ್ಲಿಯಲ್ಲಿ ರೈಲ್ವೇ ಬಜೆಟಿನ ಮೇಲೆ ಭಾಷಣಮಾಡಿಯ ತ್ರಾಬಾಳುವ ಮತ್ತು ರಾಜಕೀಯ ಸ್ವಾತಂತ್ರ್ಯ ಸಂಪಾದನೆ ಹೇಗೆ ಎಂಬುವೇ ಈಗ ಭಾರತೀಯರ ಮೂಲ ಸಮಸ್ಯೆಯಾಗಿದೆಯೆಂದೂ ಮಿಕ್ಕ ಪ್ರಶ್ನೆಗಳಿಗೆ ಎರಡನೇ ಸ್ಥಾನವೆಂದೂ ಹೇಳಿ ಸರಕಾರೀ ವರ್ತನೆಯನ್ನು ಖಂಡಿಸಿದ್ದಾರೆ.

ಜಿಲ್ಲಾಧಿಕಾರಿಗಳ ಡಿಸ್‌ಮಿಸ್.

ಸಿಗಾರ್‌ನ ಕಲೆಕ್ಟರ್ ಮತ್ತು ಬಾಲಿಯಾದ ಪೋಲಿಸ್ ಸುಪರಿಂಟೆಂಡೆಂಟ್ ಮಿ. ನಿಜಾಮುದ್ದಿನ್ ಅಹಮ್ಮದ್, ಇವರಿಬ್ಬರನ್ನೂ ಭಾರತ ಸೆಕ್ರೆಟರಿಗಳು ಅನುಕ್ರಮವಾಗಿ ಐ. ಸಿ. ಎಸ್. ಹುದ್ದೆ ಮತ್ತು ಪೋಲಿಸ್ ಸರ್ವಿಸಿನಿಂದ ಕಿತ್ತುಹಾಕಿದ್ದಾರೆ. ಇವರಿಬ್ಬರೂ ಕಳೆದ ಆಗೋಸ್ತು ಗಲಭೆಯ ವೇಳೆ ಅಧಿಕಾರದಲ್ಲಿದ್ದವರು. ಕೆಲಕಾಲ ಅಮಾನತ್ ಮಾಡಲ್ಪಟ್ಟಿದ್ದು ಈಗ ಡಿಸ್‌ಮಿಸ್ ಮಾಡಲ್ಪಟ್ಟಿದ್ದಾರೆ.

ರಶ್ಯಾ--ಫಿನ್ಲೆಂಡ್ ಒಪ್ಪಂದ?

ಫಿನ್ಲೆಂಡಿನ ರಾಜಧಾನಿಯ ಮೇಲೆ ರಶ್ಯಾನರು ಆಗಾಗ ಆಕಾಶ ಧಾಳಿ ನಡೆಸಿದ್ದಾರೆ. ಯುದ್ಧಸ್ಥಿತಿಯೂ ಫಿನ್ನಿಶರನ್ನು ಯೋಚನೆಗೀಡು ಮಾಡಿ ಸಂಧಾನಾತುರವನ್ನು ಹುಟ್ಟಿಸಿದೆ. ಇವೆಲ್ಲವುಗಳ ಪರಿಣಾಮವಾಗಿ ಫಿನ್ಲೆಂಡ್ ಶಾಂತಿಯಾಚಕ ಸಮಿತಿಯೊಂದು ಮೋಸ್ಕೋವಿಗೆ ಬರಬೇಕೆಂದು ರಶ್ಯಾನರಾಮಂತ್ರಣವಿದೆ.

ಭಕ್ಷ್ ಕ. ಲಿಯ ಪ್ರತಿಧ್ವನಿ.

ಸಿಂಧಿನ ಮಾಜೀ ಮಂತ್ರಿ ಅಲ್ಲಾಭಕ್ಷರ ಕೊಲೆಯ ಆರೋಪಿಗಳ ವಿಚಾರಣೆಯು ಸುಕ್ಕೂರಿನ ಜೈಲಲ್ಲೇ ನಡೆದು ಮೂವರಿಗೆ ಮರಣ ದಂಡನೆ, ನಾಲ್ವರಿಗೆ ಜೀವಾವಧಿ ಸಜೆ ವಿಧಿಸಲ್ಪಟ್ಟಿದೆ.

ವೈಸರಾಯರು.

ಪ್ರಾಂತ್ಯ ಪ್ರಾಂತ್ಯಗಳ ಸಂಚಾರಕ್ಕೆ ಹೊರಟಿರುವ ವೈಸರಾಯರು ಈಗ ಮಧ್ಯಪ್ರಾಂತ ಸಂದರ್ಶನೆಯಲ್ಲಿದ್ದಾರೆ. ನಾಗಪುರದ ಟೆಕ್ನೋಲೋಜಿಕಲ್ ಇನ್ಸ್ಟಿಟ್ಯೂಟನ್ನು ಸಂದರ್ಶಿಸಿ ಶ್ಲಾಘನೆ ಸಲ್ಲಿಸಿದ್ದಾರೆ.

ಮುಸ್ಲಿಂ ಲೀಗ್ ಚಿತ್ರ.

ಕರಾಚಿಯ ಮುಸ್ಲಿಂಲೀಗ್ ಅಧ್ಯಕ್ಷ ಮೆರವಣಿಗೆಯ ಚಿತ್ರವೆತ್ತಲು ಕೇಂದ್ರ ಸರಕಾರವು ಸಮ್ಮತಿಯಿತ್ತಿರುವದು ನಿಜವೆಂದೂ, ಇದು ಯಾರಿಗಾದರೂ ಪ್ರಾಮುಖ್ಯತೆ ಕೊಡುವ ಉದ್ದೇಶದಿಂದಲ್ಲದೆ ವಾರ್ತಾ ಯೋಗ್ಯತೆಯಿರುವದನ್ನೆತ್ತಿಕೊಳ್ಳುವ ಸರಕಾರೀ ಚಲಚ್ಚಿತ್ರ ಶಾಖೆಯ ಧ್ಯೇಯವೆಂದೂ, ಹಿಂದೀ ಸರಕಾರದ ಸುದ್ದಿ ಶಾಖೆಯ ಸದಸ್ಯ ಸರ್. ಸುಲ್ತಾನ್ ಅಹಮ್ಮದರು ಎಸೆಂಬ್ಲಿ ಸವಾಲೊಂದಕ್ಕೆ ಉತ್ತರವಿತ್ತಿದ್ದಾರೆ.

ಕೇಂದ್ರ ಎಸೆಂಬ್ಲಿಯ

ರೈಲ್ವೇ ಬಜೆಟ್ ಚರ್ಚೆಯು ಈಗ ಸಂಪೂರ್ಣವಾಗುತ್ತಾ ಬಂದಿದೆ. ಮುಂದಿನ ವಾರ ಸಾಮಾನ್ಯ ಬಜೆಟ್ ಚರ್ಚೆ ನಡೆಯಲಿದೆ. ಕಾಂಗ್ರೆಸ್ ಸದಸ್ಯರು ಕೆಲವೊಮ್ಮೆ ಹಾಜರಿರುವ ದೆಸೆಯಿಂದ ಎಸೆಂಬ್ಲಿಗೆ ಜೀವ ಕಳೆ ಬಂದಂತಾಗಿದೆ. ವಿರೋಧೀ ಪಕ್ಷಗಳೆಲ್ಲಾ ಒಮ್ಮತದಿಂದ ಸರಕಾರೀ ಸೂಚನೆಗಳನ್ನು ವಿರೋಧಿಸಬೇಕೆಂಬ ಒಗ್ಗಟ್ಟಿನ ಯತ್ನ ನಡೆಯುತ್ತಿದೆ.

ಬೊಮ್ಮರಬೆಟ್ಟು ಬೈದರ್ಕಳ ಗರಡಿಯ ಜೀರ್ಣೋದ್ಧಾರ ಪ್ರತಿಷ್ಠೆಯ ಉತ್ಸವವು, 10-3-44ಕ್ಕೆ ಜರಗಲಿರುವದೆಂದು ಶ್ರೀ. ಕೊಲ್ಯಾರು ವಿಠ್ಠಲ ಶೆಟ್ಟರು ತಿಳಿಸುತ್ತಾರೆ.

ಹೊಸವರ್ಷದ

ಶ್ರೀಪತಿ ಪಂಚಾಂಗವು

ಇದೀಗ ಬಿಕರಿಗೆ ಸಿದ್ಧವಾಗಿದೆ. ಬೇಕಾದವರು ಕೂಡಲೇ ಬರೆಯುವುದು.

ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರು

೨೦ ಜನ ನರ್ತಕ-ನರ್ತಕಿಯರು ಹಾಗೂ ವಾದ್ಯಗಾರರ ಅಪೂರ್ವ ನೃತ್ಯಮಂಡಳಿಯೊಂದಿಗೆ ಶೀಘ್ರದಲ್ಲಿಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸಮಾಡಲಿದ್ದಾರೆ

ಸ್ಥಳ ಅಂಕಿಕನ್ನು ನಿರೀಕ್ಷಿಸಿರಿ!

'ನೃತ್ಯಭಾರತಿ' ೪೧ ರಾಯಪೇಟೆ ಹಾಯ್ ರೋಡ್, ಮದ್ರಾಸು.

ದಿ ಜುಪಿಟರ್ ಜನರಲ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸು: ಬೊಂಬಾಯಿ

ಇಂಡಿಯಾ, ಬರ್ಮಾ, ಸಿಲೋನ್, ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲಿ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ಇದರ ವ್ಯವಹಾರಾದಿ ಹೆಚ್ಚಿನ ಮಾಹಿತಿಯನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.

ಉಡುಪಿಯಲ್ಲಿ ಇದರ ಚೀಫ್ ಏಜನ್ಸಿ ಆಫೀಸು ಇದೀಗಲೇ ಪ್ರಾರಂಭವಾಗಿದೆ.

ವಿಮಾಮಾಡಲಿಕ್ಕಾಗಲೀ, ಪ್ರಾತಿನಿಧ್ಯ ವಹಿಸಲಿಕ್ಕಾಗಲೀ ಕೂಡಲೇ ಬರೆಯಿರಿ.

ಪಿ. ಡಿ. ನಾಸಯ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ

THE JUPITER GENERAL
INSURANCE CO. LTD.,
BOMBAY

ತಾರುಣ್ಯ

ಕೆಟ್ಟು, ವೀರ್ಯಸ್ಖಂಭನೆ ವಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ.

ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,
184 ಬ್ರಾಡ್‌ವೇ ರೋಡ್, ಮದ್ರಾಸು.
ಪುತ್ತೂರು ಏಜಂಟರು: ಪೈ ಫಾರ್ಮಸಿ

ಚೂರು—ಚೂರು

“ಪತ್ರಿಕೋದ್ಯಮಕ್ಕೆ ಜೀವಕಳೆಯಿತ್ತುದು ಕಾಂಗ್ರೆಸ್ ಚಳವಳಿ”-ಮಂಗಳೂರಿನ ಪತ್ರಿಕೋದ್ಯೋಗಿ ಸಮ್ಮೇಳನಾಧ್ಯಕ್ಷರ ಮಾತು.

ಅಂದ ಮೇಲೆ ಪತ್ರಿಕೆಗಳ ಸ್ಥಾನ (ಸದ್ಯಸ್ಥಿತಿಯಲ್ಲಿ ಆಯುಷ್ಯವೂ ಕೂಡ) ಓರ್ಡಿನೆನ್ಸುಗಳದೇ!

●

ಪತ್ನೀ ವಿಯೋಗಕ್ಕೊಳಗಾದ ಮಹಾತ್ಮಾಜೀಯವರಿಗೆ ನೂರಾರು ದುಃಖಸೂಚಕ ತಂತಿಗಳು ಬರುತ್ತಿವೆ’

ಸದ್ಯ ಅವರ ಖಾಸಗೀ ಕಾರ್ಯದರ್ಶಿ ಕಾರ್ಯ-ಮಾಡುತ್ತಿರುವ ಬೊಂಬಾಯಿ ಸರಕಾರವವುಗಳನ್ನೋದಿಕೊಳ್ಳುತ್ತಿದೆ

●

‘ಬಂಗಾಳದಲ್ಲಿ (ಸರ್ವ ಪಕ್ಷೀಯರ ಮಂತ್ರಿಮಂಡಲ ರಚನೆಯಾಗಬೇಕು’-ಅಲ್ಲಿಯ ಎಸೆಂಬ್ಲಿಯಲ್ಲಿ ವಿರೋಧ ಪಕ್ಷದವರ ಸೂಚನೆ.

ಬಂಗಾಳದಲ್ಲಿ ಬಹುಪಕ್ಷೀಯರಾಗಿರುವ ನಿರಾಹಾರೀ ಪಕ್ಷಕ್ಕೇನು?

●

‘ಗಾಂಧಿಜೀಯನ್ನು ಕೂಡಲೇ ಬಿಡುಗಡೆಮಾಡಿ ಬಿಕ್ಕಟ್ಟು ನಿವಾರಿಸಬೇಕು’—ಕಸ್ತೂರಿಬಾನ ಮರಣದ ಕುರಿತು ಅಮೇರಿಕದ ಇಂಡಿಯಾ ಲೀಗಿನ ಠರಾವು

ಕಸ್ತೂರಿಬಾನನ್ನು ಪತಿಯಿಂದಗಲಿಸದಿದ್ದ ದಯಾಮಯಿ ಸರಕಾರವು ಪತ್ನಿಯಗಲಿದ ಸ್ಥಳದಿಂದ ಮಹಾತ್ಮರನ್ನು ಹೊರದಬ್ಬುವ ಕ್ರೂರಕೃತ್ಯ ಮಾಡುವಂತೇನೇ ಇಲ್ಲ.

●

‘ನಾನು ಸರ್ವಪಕ್ಷೀಯ ಸಮ್ಮೇಳನ ಕರೆಯುವದನ್ನೇ ಮನಸ್ಸಾಪಡಿಸಿಕೊಂಡೆನೆಂದು ಹಬ್ಬಿರುವ ವಾರ್ತೆ ಸುಳ್ಳು’-ಮಾಲವೀಯಜೀ.

ಬದಲಿಗೆ ಮಾಲವೀಯರ ಕರೆಯೊಂದಿಗೆ, ಲೋರ್ಡ್ ವೇವಲರ ‘ಕರೆಕರೆ’ಯೂ ಸೇರಿತೆಂಬುದು ಮಾತ್ರ ಸತ್ಯ.

●

‘ರಶ್ಯಾದ ಒಕ್ಕಟ್ಟು ನಮಗೂ ಮಾದರಿಯಾಗಬೇಕು’-ರಶ್ಯಾ ಸಂಬಂಧದ ಪುಸ್ತಕವೊಂದಕ್ಕೆ ಬರೆದ ಮುನ್ನುಡಿಯಲ್ಲಿ ಶ್ರೀ. ಎಮ್. ಆರ್. ಜಯಕರ್.

ಅಂದ ಮೇಲೆ ಜಯಕರರಂಥವರು ಸ್ಟಾಲಿನ್ ಅಥವಾ ಮೊಲಟವ್ ಆಗಬೇಕು!

●

‘ಅಮೇರಿಕದ ಸುಪ್ರಸಿದ್ಧ ಪತ್ರಿಕಾ ಮ್ಹಾಲಕ ರಾಂಡೋಲ್ಫ್ ಹರ್ಸ್ಟ ಹಿಟ್ಲರನ ಏಜೆಂಟಾಗಿ ಕೆಲಸ ಮಾಡುತ್ತಿದ್ದಾನೆ’-ರಶ್ಯದ ಪ್ರಾವ್ಡಾ ಪತ್ರಿಕೆಯ ಆರೋಪ.

ಅಧ್ಯಕ್ಷ ರುಸವೆಲ್ಟರ ಹಸ್ತಸಾಮುದ್ರಿಕೆ ಕಂಡರ ಅವರಿಂದಲೂ ಹಿಟ್ಲರನಿಗುಪಕಾರವಾಗಿರುವದನ್ನು ತಿಳಿಯಬಹುದು

●

‘ಅಖಿಲ ಕರ್ನಾಟಕದಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಸುದ್ದಿ ಮುಟ್ಟಿಸಲು ವಾರ್ತಾವಾಹಕ ಸಂಸ್ಥೆಯೊಂದು ಅಗತ್ಯಬೇಕು.’ಮಂಗಳೂರು ಪತ್ರಿಕಾ ಸಮ್ಮೇಳನದ ಸ್ವಾಗತಾಧ್ಯಕ್ಷರ ಸೂಚನೆ.

ಈ ತನಕ ಕೆಲವು ಮಹಾನುಭಾವರನ್ನೇ ಹಾಗೆಂದು ಭಾವಿಸಲಾಗಿತ್ತು.

—ವಿನೋದಿ

●

NOTICE

In the Court of the District Judge of South Kanara.

Original Petition No. 16/of 1944.

In the matter of Jagadish Shetty minor,

Shesharama Shetty & others - Petrs

And to all whom it may concern

Take notice that, on the 12th day of February, 1944 the abovenamed petitioners presented an application to this court praying that the 1st petitioner may be appointed the guardian of the person and property of the abovenamed minor, and for other relief and that the 24th day of March, 1944 has been fixed for the hearing of the application, and that if you desire to oppose the said application or to apply for the apointment of any person other than the said 1st petitioner as guardian of the person or property of the said minor, you must appear on the said 24th day of March 1944, in this court, in person, or by a duly authorised pleader, and be prepared to adduce any documentary and oral evidence upon which you rely, and that in default of your appearance, the said application may be heard and determined in your absence. Any relation or friend of the minor may appear and be heard upon the said application, and may inspect and obtain a copy of the petition, and it is not necessary to present any petition for this purpose.

B. O.

Mangalore, 24-2 1944 } **B. Manjaya Hegde,** Advocate for Petitioner.

ಮಂಗಳೂರು

ರಾಮ ಕೃಷ್ಣ ವಿದ್ಯಾರ್ಥಿ ಭವನ, ಮಂಗಳೂರು:-ಮಹಾತ್ಮಾ ಗಾಂಧಿಯವರ ಧರ್ಮಪತ್ನಿ ಶ್ರೀಮತಿ ಕಸ್ತೂರಿಬಾ ಗಾಂಧಿಯವರ ನಿಧನದ ಸಲುವಾಗಿ ತಾ 24-2-44ರಲ್ಲಿ ಶ್ರೀ ರಾಮ ಕೃಷ್ಣ ಮಲ್ಲಿ, ಎಡ್ವೋಕೇಟ್ ಇವರ ಅಧ್ಯಕ್ಷತೆಯಲ್ಲಿ ಒಂದು ಸಂತಾಪ ಸೂಚಕ ಸಭೆಯು ಸೇರಿ ಶ್ರೀಮತಿಯವರ ಆತ್ಮಕ್ಕೆ ಚಿರಃಶಾಂತಿಯನ್ನು ಭಗವಂತನು ಪಾಲಿಸಲೆಂದು ಬೇಡಿ ದುಃಖ ಸಂತಾಪ ಸೂಚಕ ಠರಾವೊಂದನ್ನು ಮೃತರ ಸುಪುತ್ರ ಶ್ರೀ ದೇವದಾಸ್ ಗಾಂಧಿಯವರಿಗೆ ಕಳುಹಿಸುವುದೆಂದು ನಿರ್ಣಯಿಸಲಾಯಿತು

ಉಡುಪಿ

ಶ್ರೀ. ಪಿ ಮಂಜುನಾಥ ನಾಯ್ಕರು—ಅವರ ಅಜ್ಜರಕಾಡು ನಿವಾಸಗೃಹದಲ್ಲಿ ಕಳೆದ ತಾ. 19ರಲ್ಲು ಸಬ್ ಇನ್ಸ್‌ಪೆಕ್ಟರ್ ಮಿ| ಫರ್ಟಾಡೋ ಅವರಿಂದ ದಸ್ತಗಿರಿ ಮಾಡಲ್ಪಟ್ಟರು. ಇವರ ವಿಚಾರಣೆಯು ಭಾರತ ಸಂರಕ್ಷಣಾ ಕಾನೂನಿಗನುಸಾರವಾಗಿ ಇದೇ ತಾ. 4ರಲ್ಲು ಸಬ್ ಕಲೆಕ್ಟರರ ಮುಂದೆ ನಡೆಯಲಿರುವುದು ಶ್ರೀ ನಾಯ್ಕರು ಈಗ ಸ್ಥಳೀಯ ಸಬ್ ಜೈಲಿನಲ್ಲಿರುವರು.

ಜಾನುವಾರು ಪ್ರದರ್ಶನ--ಉಡುಪಿ ಶಿವಳ್ಳಿ ಗ್ರಾಮದ ರೈತ ಸಂಘದಿಂದ ಏರ್ಪಡಿಸಲಾದ ತಾಲೂಕಿನ ಜಾನುವಾರು ಪ್ರದರ್ಶನವು ತಾ. 27ರಲ್ಲು ಮುನಿಸಿಪಲ್ ಮೈನ್ ಶಾಲಾ ವಠಾರದಲ್ಲಿ ಜರಗಿತು. ಅಂದೇ ತಾಲೂಕಿನ ಕೃಷಿಕರ ಸಭೆಯೂ ಜಿಲ್ಲಾ ಎಗ್ರಿಕಲ್ಚರಲ್ ಆಫೀಸರ್ ಶ್ರೀ ರಾಘವನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕುಂಜೂರ್ ರಾಮಚಂದ್ರ ರಾವ್, ಎಗ್ರಿಕಲ್ಚರಲ್ ಡಿಮೋನ್‌ಸ್ಟ್ರೇಟರ್ ಸಂಜೀವ ಸೆಟ್ಟರೇ ಮೊದಲಾದವರು ಕೃಷಿ, ಬೇಸಾಯ ಮೊದಲಾದವುಗಳ ಕುರಿತು ಭಾಷಣವಿತ್ತರು ಸುಧಾರಿತ ರೀತಿಯಲ್ಲಿ ಬೆಳೆಗಳನ್ನು ಬೆಳೆಸಿದವರಿಗೆ ಕಪ್ಪುಗಳು ಹಂಚಲಾದುವು. ಶ್ರೀಗಳಾದ ಕುಂಜೂರು ರಾಮಚಂದ್ರ ರಾವ್, ಎ ಕೃಷ್ಣಯ್ಯ ಹೆಗ್ಡೆ, ಯು. ಎ. ಪೈ, ಎ. ಬಿ. ರಜೇಲೋ, ಬಿ. ರಾಮಯ್ಯ ಹೆಗ್ಡೆ, ಬಿ. ವೆಂಕಪ್ಪ ರೈ, ಯು. ಅನಂತ ಮಯ್ಯ,ಪಿ. ವ್ಯಾಸರಾವ್, ಎಸ್. ಕೆ ಗೋವಿಂದ ರಾವ್, ಕೆ. ನರಸಿಂಹ ಕಾರಂತ ಇವರುಗಳಿಗೆ ಬಹುಮಾನ ದೊರೆಯಿತು. ಉತ್ತಮ ತರದ ಜಾನುವಾರುಗಳನ್ನು ಪ್ರದರ್ಶಿಸಿದ ಶ್ರೀಗಳಾದ ಆರ್. ಆರ್. ಕುಂಜೂರ್, ಹಿರಿಯಣ್ಣ ಹೆಗ್ಡೆ, ಪಿ. ಲಕ್ಷ್ಮೀನಾರಾಯಣ ನಾಯಕ್, ಶಂಕರ ನಾರಾಯಣ ರಾವ್ ಮತ್ತು ರಮಾನಾಥ ಪೈಗಳವರಿಗೆ ಸಹ ಕಪ್ಪುಗಳು ಕೊಡಲಾದುವು.

ಶಿರ್ವ-ಮುಟ್ಲುಪಾಡಿ ಎಲಿಮೆಂಟರಿ ಶಾಲಾ ವರ್ಷ ವರ್ಧಂತ್ಯುತ್ಸವವು ತಾ 26-2-44ರಲ್ಲಿ ಶಿರ್ವಾ ಪಂಚಾಯ್ತಿ ಬೋರ್ಡ್ ಪ್ರೆಸಿಡೆಂಟ್ ಶ್ರೀ.ಎಸ್. ಅಣ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನಾ ನಂತರ ವರದಿ ವಾಚನವಾಗಲು ಲೆಜಿಮು,ಕೋಲಾಟ, ಕುಮ್ಮಿ, ಪ್ರಹಸನಗಳೂ ಯಕ್ಷಗಾನ ಮೊದಲಾದುವೂ ಜರಗಿದವು. ಮಕ್ಕಳಿಗೆ ಇನಾಮು ಹಂಚಲ್ಪಟ್ಟ ನಂತರ ಕೆಲವು ಸಭಿಕರ ಭಾಷಣವಾಗಲು ಅಧ್ಯಕ್ಷರು “ಒಮ್ಮೆ ಮುಚ್ಚಲ್ಪಟ್ಟ ಈ ಶಾಲೆಯು ಕಟಪಾಡಿ ವಿದ್ಯಾವರ್ಧಕ ಸಂಘದವರಿಂದ ಪುನಃ ತೆರೆಯಲ್ಪಟ್ಟು ಇಂದು ಪ್ರಾಥಮಿಕ ಶಾಲೆಗಳಲ್ಲಿ ಒಂದು ಆದರ್ಶ ಶಾಲೆಯಾಗಿದೆ. ಎಳೆಯ ಮಕ್ಕಳ ಚಟುವಟಿಕೆಗಳು ಬಹು ಚೆನ್ನಾಗಿವೆ. ಪುತ್ತೂರಿಂದ ಬಂದು ಈ ಶಾಲೆಯಲ್ಲಿ ಅವಿಶ್ರಾಂತವಾಗಿ ಈ ಹಳ್ಳಿಗಾಗಿ ದುಡಿಯುವ ಶ್ರೀಮತ್ತು ಶ್ರೀಮತಿ ರಾಮಚಂದ್ರ ನಾಯಕರ ಪರಿಶ್ರಮಗಳು ಸ್ತುತ್ಯವಾಗಿವೆ ಈ ಶಾಲೆಯು ಶ್ರೇಯಸ್ಸು ಹೊಂದಲಿ” ಎಂಬ ಸಮಯೋಚಿತವಾದ ಭಾಷಣವೀಯಲು, ಭಜನಾಮಂಗಳ ಅಭಿನಂದನೆ, ರಾಷ್ಟ್ರ ಗೀತೆಯಿಂದ ಸಭೆ ಚದರಿತು.

ಅತ್ತಿಕಾನ್, ಚ ಮರಾಜ ನಗರ:-ಇಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಶ್ರೀ. ತಾಳ್ತ ಮನೆ ರಘುನಾಥ ರೈಯವರ ಅಧ್ಯಕ್ಷತೆಯಲ್ಲಿ ತಾ 19-2-44ರಲ್ಲಿ ಸಭೆ ಜರಗಿಸಲಾಯಿತು. ಡಾಕ್ಟರ್ ಕೆ. ಕೆ. ಐಯ್ಯಂಗಾರವರು ಸಭೆ ಸೇರಿದಉದ್ದೇಶ್ಯವನ್ನ ಸಭಿಕರಿಗೆ ವಿವರಿಸಿ ಹೇಳಿದ ನಂತರ, ಅಧ್ಯಕ್ಷರು ಭಾಷಣ ಮಾಡಿ ಕರ್ನಾಟಕ ಏಕೀಕರಣದಿಂದ ಕನ್ನಡ ನಾಡಿನವರಿಗೆ ಉಂಟಾಗುವ ಪ್ರಯೋಜನಗಳನ್ನು ವಿವರಿಸಿದರು. ಶ್ರೀ. ಕೆ. ರಾಮಚಂದ್ರ ರಾವ್, ಶ್ರೀ. ಬಿ. ಕೆ. ಶೆಟ್ಟಿ ವಗೈರೆಯವರು ಏಕೀಕರಣವನ್ನು ಸಮರ್ಥಿಸಿದರು. ರಾತ್ರಿ“ಉಗನಿ ಕಾಟೇಜ್”ನ ಕಂಪೌಂಡಿನಲ್ಲಿ ಅಮ್ಮನಪುರದ ಮಹಿಳೆಯವರು” ಕೃಷ್ಣ ಲೀಲ್ ಎಂಬ ನಾಟಕವನ್ನು ಅಭಿನಯಿಸಿದರು.

ಕರಡಿಗಳ ಹಾವಳಿ:-ಅತ್ತಿಕಾನ್ ಜಂಗಲಿನಲ್ಲಿ ಕರಡಿಗಳ ಹಾವಳಿಗಳು ವಿಪರೀತವಾಗಿವೆ 4-5ಜನರನ್ನು ಜಖಂ ಮಾಡಿರುತ್ತವೆ. ತಾ 16ನೇ ರಾತ್ರಿ 2ಕರಡಿಗಳನ್ನು ಶ್ರೀಮಾನ್ ಕಾಟಕೇರಿ ಎಸ್ಟೇಟಿನ ಸುಪರಿಂಟೆಂಡೆಂಟ್ ಶ್ರೀ. ರಘು ನಾಥರೈಗಳು ಹೊಡೆದಿರುವರು.

ಯಶಸ್ವೀ 2ನೇವಾರ

— ‘ಬಸಂತ’ —

ಬೊಂಬಾಯಿ ಟಾಕೀಸಿನವರ ಚಿತ್ರಪಟ—

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಪಕಾರ್ಳ ಪಂಚಾಯ್ತ ಬೋರ್ಡು ಪ್ರೆಸಿಡೆಂಟರು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:—

ಪಕಾರ್ಳ ವಾರ ಸಂತೆಯಲ್ಲಿ ದಿನವಹಿ ಮೀನು ಮಾರ್ಕೇಟಿನ ಮತ್ತು ಗಾಡಿ ಚೌಕದಲ್ಲಿ 1944ನೇ ಎಪ್ರೀಲು ತಿಂಗಳ ತಾರೀಕು 1ರಿಂದ 1945ನೇ ಇಸವಿ ಮಾರ್ಚ ತಿಂಗಳ ತಾರೀಕು 31ರ ವರೆಗೆ ಒಂದು ವರ್ಷದಲ್ಲಿ ಪರಿ ವಸೂಲು ಮಾಡುವ ಹಕ್ಕುಗಳನ್ನು ಪ್ರತ್ಯ ಪ್ರತ್ಯೇಕವಾಗಿ ಇದೇ ಮಾರ್ಚ ತಾರೀಕು 11ನೇ ಶನಿವಾರ ಸಾಯಂಕಾಲ ಗಂಟೆ 3ಕ್ಕೆ ಶುರುವಾಗಿ ಪ್ರೆಸಿಡೆಂಟರಿಂದ ಯಾ-ಅವರಿಂದ ಅಧಿಕಾರ ಹೊಂದಿದವರಿಂದ, ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಲಾಗುವುದು.

ಹೆಚ್ಚಿನ ಏಲಂ ಶರ್ತ-ವ-ನಿಬಂಧನೆಗಳನ್ನು ಆಫೀಸು ನೋಟೀಸು ಬೋರ್ಡಿನಲ್ಲಿ ಹಾಕಿರುವ ಪ್ರಕಟಣೆಯನ್ನು ನೋಡಿ ತಿಳಿಯಬಹುದು.

ವಿ. ಸೂ:-ಎರಡೂ ಮಾರ್ಕೆಟುಗಳಲ್ಲಿ ವಸೂಲು ಮಾಡುವ ಸುಂಕದ ದರಗಳನ್ನು ಹಿಂದಿನ ವರ್ಷಗಳಿಗಿಂತ ಕಮ್ಮಿ ಮಾಡಲಾಗಿದೆ.

S. ಹಿರಿಯಣ್ಣ ಹೆಗ್ಡೆ.
ಪ್ರೆಸಿಡೆಂಟ್.

ಪಂಚಾಯ್ತ ಬೋರ್ಡು ಆಫೀಸು, ಪಕಾರ್ಳ.
ತಾರೀಕು 26-2-1944

ದಕ್ಷಿಣ ಕನ್ನಡ-

ಮಂಗಳೂರು

ಸಂತಾಪ ಸೂಚನೆ- ಕಸ್ತೂರಿ ಬಾಆವರ ನಿಧನದ ಸಂತಾಪ ಸೂಚನಾರ್ಥವಾಗಿ ತಾ. ೨೩-೨ರಂದು ಹೆಚ್ಚಿನ ಅಂಗಡಿಗಳು ಮುಚ್ಚಿದ್ದುವು.

ತಾ. ೨೩ರಂದು ಸಂಜೆ ಕಮ್ಯೂನಿಸ್ಟ ಪಾರ್ಟಿಯ ಆಶ್ರಯದಲ್ಲಿ ಕೆಂಪು ಪಡೆಯ ೨೬ನೆಯ ದಿನವನ್ನು ಆಚರಿಸುವ ಸಲುವಾಗಿ ಸಾರ್ವಜನಿಕ ಸಭೆಯೊಂದು ಮೈದಾನಿನಲ್ಲಿ ಸೇರಿತು. ಈ ಸಂದರ್ಭದಲ್ಲಿ ಶ್ರೀಮತಿ ಕಸ್ತೂರಿ ಬಾಯಿ ಅವರ ನಿಧನದ ಬಗ್ಗೆ ಸಂತಾಪ ಸೂಚಿಸುವ ಠರಾವೊಂದು ಶ್ರೀ ಶಾಂತಾರಾಂ ಪೈ ಅವರಿಂದ ಸಭೆಯ ಮುಂದಿಡಲ್ಪಟ್ಟಿತು. ಶ್ರೀ. ವೆಂಕಟೇಶ ಪ್ರಭುಗಳು ಕಸ್ತೂರಿ ಬಾ ಅವರ ಜೀವನದ ಹಲವು ಸನ್ನಿವೇಶಗಳನ್ನು ಹೇಳುತ್ತ, ಚಿಕ್ಕ ಭಾಷಣವಿತ್ತರು. ಸಭೆಯ ಅಧ್ಯಕ್ಷರಾಗಿದ್ದ ಕಾಂ. ಕೇರಳೀಯನ್, ಬಿ. ವಿ. ಕಕ್ಕಿಲ್ಲಾಯ, ಹರಿದಾಸಾಚಾರ್ ಮೊದಲಾದವರು ರಷ್ಯದ ಕೆಂಪು ಸೇನೆಗಳನ್ನು ಪ್ರಶಂಸಿಸಿ ಮಾತನಾಡಿದರು.

ಪ್ಲೇಗು- ಇಲ್ಲಿ ಇದೆ ಎಂದು ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ. ಮುನಿಸಿಪಲ್ ಹೆಲ್ತ್ ಆಫೀಸರರಾದ ಶ್ರೀ ಸುಬ್ರಾಯ ಬಾಳಿಗರಿಗೆ ಪ್ಲೇಗನ್ನು ಪ್ರತಿಭಟಿಸಲು ವಿಶೇಷ ಅಧಿಕಾರಗಳನ್ನು ಕೊಡಲಾಗಿದೆ.

ಗೋಖಲೆ ದಿನಾಚರಣೆ-- ಡಿ. ಸಿ. ಮಿಶನಿನ ಕಟ್ಟಡದಲ್ಲಿ ಶ್ರೀಮತಿ ನಯಂಪಳ್ಳಿ ಲಲಿತಾ ಬಾಯಿಯವರ ಅಧ್ಯಕ್ಷತೆಯಲ್ಲಿ ತಾ. ೧೯ರಂದು ಜರಗಿತು. ಪತ್ರಿಕೋದ್ಯೋಗಿಗಳ ಪರಿಷತ್ತಿನ ಅಧ್ಯಕ್ಷರಾಗಿ ಬಂದಿದ್ದ ಶ್ರೀ ಸಿ. ಆರ್. ಶ್ರೀನಿವಾಸನ್, ಶ್ರೀಮತಿ ಲಲಿತಾ ಸೆಟ್ಟಿ, ಶ್ರೀ ಎಚ್. ಆರ್. ಮೊಹರೆ ಮೊದಲಾದವರು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸ್ಥಾಪಕರಾಗಿ, ಭಾರತದ ಉದ್ಧಾರಕ್ಕಾಗಿ ಗಾಂಧಿಜಿ ತಿಲಕರಂತೆಯೇ ದುಡಿದು ಅಳಿದ ಗೋಖಲೆಯವರ ವಿಚಾರ ಮಾತನಾಡಿದರು. ಡಿ. ಸಿ ಮಿಶನಿನ ಶ್ರೀ ವೆಂಕಟ್ರಮಣನವರು ಧನ್ಯವಾದವನ್ನರ್ಪಿಸಿದರು.

ಆರ್ಯ ಸಮಾಜದ ವಾರ್ಷಿಕೋತ್ಸವ-- ತಾ. ೨೦ರಂದು ಸಂಜೆ ಶ್ರೀ. ಜಿ. ದತ್ತಾತ್ರೇಯ ರಾವ್, ಆಡಿಶನಲ್ ಡಿ| ಮೆಜಿಸ್ಟ್ರೇಟ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ವೈದಿಕ ಭಜನೆ, ಪ್ರಾರ್ಥನೆಗಳ ಅನಂತರ ಶ್ರೀ. ಯು. ಗೋಪಾಲ ನಾಯಕರು ಶ್ರದ್ಧಾನಂದ ಅನಾಥಾಶ್ರಮದ ವರದಿಯನ್ನು ಸಭೆಯ ಮುಂದಿಟ್ಟರು. ಯೋಗ್ಯ ವಿದ್ಯಾರ್ಥಿಗಳಾಗಿರುವ ಅನಾಥಾಶ್ರಮದ ಬಾಲಕ ಬಾಲಕಿಯರಿಗೆ ಇನಾಮು ಹಂಚಲಾಯಿತು. ಅನಂತರ ಶ್ರೀಮತಿ ಬೆಳ್ಳಿಪಾಡಿ ಸೀತಾದೇವಿ, ಶ್ರೀಗಳಾದ ದಾಸಪ್ಪ ಶೆಣೈ, ಬಿ. ಎಂ. ತಿಂಗಳಾಯ ಅವರು ಶ್ರೀಮದ್ದಯಾನಂದರ ಜೀವನ, ಋಷಿಬೋಧೆಯ ವಿಚಾರ ಮಾತನಾಡಿದರು. ಅಧ್ಯಕ್ಷರ ಸಂದರ್ಭೋಚಿತ ಭಾಷಣವಾದ ಮೇಲೆ ಶ್ರೀ ಗೋಪಾಲ ನಾಯಕರು ಧನ್ಯವಾದವನ್ನರ್ಪಿಸಿದರು

ಮಂಗಳೂರಿನ ಚಾಲತಿ ಧಾರಣೆ- ಮಸ್ಕತಿ ಅಕ್ಕಿ 12-4-0. ಗುಡ್ಡು 11-15-0. ಸುಗ್ಗಿ ಅಕ್ಕಿ ರಾಶಿ 11-2-6. ಊರ ಬೆಲ್ಲ ಖಂಡಿ 1ಕ್ಕೆ 80-0-0 95-0-0. ಉಪ್ಪು ಗೋಣಿ 7-0-0, 9-0-0. ಕಾಳು ಮೆಣಸು ಮಣ 1ಕ್ಕೆ 14-0-0, 14-4-0. ಕೊಬ್ಬರಿ ಖಂಡಿ 1ಕ್ಕೆ 155-0-0, 160-0-0. ಕೊಬ್ರಿ ಹಿಂಡಿ ಖಂಡಿ 1ಕ್ಕೆ 60-0-0, 62-0-0. ಎಳ್ಳೆಂಡಿ ಖಂಡಿ 1ಕ್ಕೆ 45-0-0, 57-8-0 ಕೊಬ್ರಿ ಎಣ್ಣೆ ಮಣ 1ಕ್ಕೆ 13-12-0, 14-12-0. ಊರ ಮೆಣಸಿನಕಾಯಿ ಮಣ 1ಕ್ಕೆ 12-8-0, 15-8-0 ಹೊಸ ಅಡಿಕೆ 425-0-0, 520-0-0. ಹಳೆ ಅಡಿಕೆ 450-0-0, 550-0-0. ಪೀಬ್ರಿ ಹಂಡ್ರಡ್‌ವೇಟ್ 1ಕ್ಕೆ 116-0-0, 120-0-0. ಯಾಲಕ್ಕಿ ಮಣ 1ಕ್ಕೆ (ಕೊ) 38-0-0, 45-0-0. ಕಬ್ಬಿಣ ಸಂಪು ಮಣ 1ಕ್ಕೆ 12-0-0, 16-0-0. ತಾಮ್ರ ಪಾತ್ರಗಳು ಮಣ 1ಕ್ಕೆ 56-0-0, 63-0-0. ಸಪನು 1ಕ್ಕೆ 49-12-0

ಉಡುಪಿ.

ಬಹುಮಾನ ವಿತರಣ:— ದಿ ಸೋದರ್ನ್ ಇಂಟರ್‌ಸ್ಕೂಲ್ ಎತ್ಲೆಟಿಕ್ ಎಸೋಶಿಯೇಶನಿನ ಬಹುಮಾನ ವಿತರಣಾ ಸಮಾರಂಭವು ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ ಶ್ರೀ. ಬಿ ವೈಕುಂಠಬಾಳಿಗ ಚೇಯರ್ ಮೇನ್ ಕೆನರಾ ಮ್ಯೂಚುವಲ್ ಎಶೂರೆನ್ಸ್ ಕಂಪೆನಿ-ಅವರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆಯಾದ ಬಳಿಕ ಎಸೋಶಿಯೇಶನಿನ ಅಧ್ಯಕ್ಷರಾದ ಶ್ರೀ ಕೆ. ವಿ. ಶೆಣೈ ಬಿ. ಎ. ಎಲ್. ಟಿ. ಯವರು ವರದಿಯನ್ನು ಓದಿದರು. ಶ್ರೀ. ಬಾಳಿಗರು ಕ್ರಿಕೆಟ್ ವೋಲಿಬೋಲ್ ಮತ್ತು ಸ್ಪೋರ್ಟ್ಸ್ ಪಂದ್ಯಾಟಗಳಲ್ಲಿ ಗೆದ್ದ ಶಾಲೆಗಳಿಗೆ 'ಕೆನರಾ ಮ್ಯೂಚುವಲ್ ಕಪ್ಪು'ಗಳನ್ನೂ ಆಟಗಾರರಲ್ಲಿ ಹಲವರಿಗೆ ಇತರ ಮಹನೀಯರು ದಾನ ಮಾಡಿದ ಪದಕಗಳನ್ನೂ ಇತ್ತರು. ತಮ್ಮ ಭಾಷಣದಲ್ಲಿ ಎಸೋಸಿಯೇಶನ್ ಮಾಡುತ್ತಿರುವ ಕೆಲಸವನ್ನು ಪ್ರಶಂಸಿಸಿ ಆಟಗಳೊಂದಿಗೆ ಕುಸ್ತಿ, ಈಜು ಮುಂತಾದುವುಗಳನ್ನೂ ಸೇರಿಸಿದರೆ ಉತ್ತಮವೆಂದು ಸಲಹೆ ಕೊಟ್ಟರು. ಸಂಘದ ಕಾರ್ಯದರ್ಶಿ ಶ್ರೀ. ಬಿ. ಅನಂತಕೃಷ್ಣ ರಾವ್, ಇವರು ಧನ್ಯವಾದ ಸಮರ್ಪಿಸಿದರು. ಉಡುಪಿ ಬೋರ್ಡ್ ಹೈಸ್ಕೂಲ್ ವಿದ್ಯಾರ್ಥಿ ನೀಲಪ್ಪನ ಆಸನಗಳ ಮತ್ತು ಚೆಂಡಿಯಾಟ ಪ್ರದರ್ಶನದೊಂದಿಗೆ ಸಮಾರಂಭವು ಕೊನೆಗಂಡಿತು. ಅದೇ ದಿನ ಸಂಘದ ಸ್ಪೋರ್ಟ್ಸ್ ಪಂದ್ಯಾಟಗಳು ಜರಗಿದುವು. ಸೀನಿಯರ್ ಪಂದ್ಯಾಟಗಳಲ್ಲಿ ಉಡುಪಿ ಕ್ರಿಶ್ಚನ್ ಹೈಸ್ಕೂಲ್‌ನವರೂ (ಜೋನ್ ಕೌಂಡಿನ್ಯ 15 ಮಾರ್ಕು) ಜೂನಿಯರ್‌ನಲ್ಲಿ ಕಲ್ಯಾಣಪುರ ಮಿಲಾಗ್ರಿಸ್‌ನವರೂ (ರತ್ನಾಕರ–15ಮಾರ್ಕು) ಜಯಶಾಲಿಗಳಾದರು. ಪ್ರತಿಯೊಂದು ಪಂದ್ಯಾಟದಲ್ಲಿ ಪ್ರಥಮ ಸ್ಥಾನವನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳೂ ಕೊಡಲ್ಪಟ್ಟವು

ಶ್ರೀ. ಹನುಮಂತ ರಾವ್ ಮೋಹರೆಯವರ ಸಂದರ್ಶನ- ದಕ್ಷಿಣ ಕನ್ನಡ ಜಿಲ್ಲೆಗೆ ಬಂದರೆ ಬರಬೇಕು ಶ್ರೀ ಮೋಹರೆಯವರಂತಹರು. ಅವರು ಪತ್ರಿಕೋದ್ಯಮಿ ಸಮ್ಮೇಳನಕ್ಕೆ ಬಂದವರು ಈ ಜಿಲ್ಲೆಯಲ್ಲಿ ನಾಲ್ಕೈದು ದಿನಗಳ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡು ಇಲ್ಲಿಯ ಪತ್ರಿಕೆಗಳು, ಮುದ್ರಣಾಲಯಗಳು, ಸಂಘ ಸಂಸ್ಥೆಗಳು ಏನೇನು ಮಾಡುತ್ತಿವೆ, ಏನೇನನ್ನು ಸಾಧಿಸಿವೆ ಎಂಬುದನ್ನು ತಿಳಿದುಕೊಳ್ಳಲು ಅವನ್ನು ಸಂದರ್ಶಿಸಿ ವಿಚಾರ ವಿನಿಮಯ ಮಾಡಿಕೊಂಡು, ಅಖಿಳ ಕರ್ನಾಟಕ ದೃಷ್ಟಿಯಲ್ಲಿ ದಕ್ಷಿಣ ಕನ್ನಡದ ನಿಲುವು ಒಲವುಗಳನ್ನು ತಿಳಿದುಕೊಂಡು ತಮ್ಮ ಸಂದರ್ಶನವನ್ನು ಸಾರ್ಥಕಗೊಳಿಸಿದರು.

ರಾವ್ ಸಾಹೇಬ ಎಸ್. ಜಿ. ಗ್ರುಬ್— ತಾ 26ರಲ್ಲು ಮಿ| ಡಿ. ನೊರೋನ್ಹಾ, ಡಿ| ಮುನ್ಸೀಫ್ ಅವರ ಅಧ್ಯಕ್ಷತೆಯಲ್ಲಿ ಮುನಿಸಿಪಲ್ ಮೈದಾನ್ ದಾಲೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಫುಡ್ ಕಂಟ್ರೋಲರರಾದ ರಾವ್ ಸಾಹೇಬ್ ಎಸ್. ಜಿ ಗ್ರುಬ್ ಅವರು ರೇಶನಿಂಗ್ ಪದ್ಧತಿಯ ಕುರಿತು ಭಾಷಣವಿತ್ತರು. ಉಡುಪಿಯಲ್ಲಿ ಸದ್ಯ ಜ್ಯಾರಿಗೆ ಬರಲಿರುವ ರೇಶನಿಂಗಿನ ಪೂರ್ವ ಸಿದ್ಧತೆಗಳೆಲ್ಲಾ ತಯಾರಾಗಿವೆ. ನಗರವಾಸಿಗಳು ತಮ್ಮ ಕುಟುಂಬದ ಅಂಕೆ ಸಂಖ್ಯೆಗಳನ್ನು ತಿಳಿಸಿರುವರಾದರೂ ಅವುಗಳಲ್ಲಿ ಹೆಚ್ಚು ಕಡಿಮೆಗಳಿದ್ದರೆ ತಿದ್ದುಪಡಿಯ ಬಗ್ಗೆ ಕೂಡಲೇ ರೇಶನಿಂಗ್ ಆಫೀಸರರಿಗೆ ತಿಳಿಸತಕ್ಕದ್ದೆಂದೂ ಹಾಗೆ ಮಾಡದಿದ್ದರೆ ಇಲಾಖಾ ನೌಕರರು ಪರಿಶೀಲನೆಗೆ ಬಂದಾಗ ದೋಷಗಳು ಕಂಡುಬಂದಲ್ಲಿ ಜುಲುಮಾನೆ ಮತ್ತು ಶಿಕ್ಷೆಗೆ ಗುರಿಯಾಗಬೇಕಾಗುವುದೆಂದೂ ಸೂಚಿಸಿದರು. ಸಮಾಭಗಳಲ್ಲಿಯ ಮುಂದುಗಾರಿಕೆಯ ವೆಚ್ಚವನ್ನು ಕಡಿಮೆ ಮಾಡತಕ್ಕದೆಂದರು. ಕೃಷಿಕರು ವರ್ಗದಾರರು ಮಾತ್ರ ತಮ್ಮ ಕುಟುಂಬ ಪೋಷಣೆ ಬಗ್ಗೆ ರೇಶನಿಂಗ್ ಪ್ರಮಾಣ ಪ್ರಕಾರ ಒಂದು ವರುಷದ ಅಕ್ಕಿಯನ್ನೂ ನಾಗುವಳಿ ಮತ್ತು ಬೇಸಾಯದ ಖರ್ಚಿನ ಬಗ್ಗೆ ಬೇಕಾಗುವ ಅಕ್ಕಿಯಾ ಭತ್ತವನ್ನೂ ಮಾತ್ರ ಇಟ್ಟುಕೊಳ್ಳಬಹುದಾಗಿಯೂ ಬಾಕಿ ಉಳಿದ ಅಕ್ಕಿಯನ್ನು ಸರಕಾರದ ಅಧಿಕೃತ ಡಿಪೋಗಳಿಗೆ ಕೊಡತಕ್ಕದೆಂದೂ ಸೂಚಿಸಿದರು. ಅಕ್ಕಿಯನ್ನು ಕ್ರಯಕ್ಕೆ ಕೊಂಡುಕೊಳ್ಳುವವರಲ್ಲಿ ಒಂದು ತಿಂಗಳಿಗೆ ಮಿಕ್ಕಿದ ಅಕ್ಕಿ ವ ಭತ್ತ ದಾಸ್ತಾನು ಇರಕೂಡದಾಗಿಯೂ ತಿಳಿಸಿದರು. ದೇವ ದೇವಸ್ಥಾನಗಳಲ್ಲಿಯ ನೈವೇದ್ಯವು ಎಷ್ಟೇ ಇರಲಿ– ರೇಶನಿಂಗ್ ಕಾಲದಲ್ಲಿ ಒಬ್ಬ ಪುರುಷನ ಆಹಾರದ ನೈವೇದ್ಯದಲ್ಲೇ ದೇವರು ತೃಪ್ತಿ ಹೊಂದುವರೆಂದು ಹೇಳಿದರು ಕೊನೆಯದಾಗಿ ರೇಶನಿಂಗ್ ಪದ್ಧತಿಯನ್ನು ಟೀಕಿಸುವುದರ ಬದಲಾಗಿ ಎಲ್ಲರೂ ಈ ಪದ್ಧತಿಯು ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ವಿನಂತಿಸಿದರು. ರೇಶನಿಂಗ್ ಬೇಗನೆ ಜ್ಯಾರಿಗೆ ಬರಬೇಕೆಂದೂ ಎಲ್ಲರೂ ಸರಕಾರದೊಡನೆ ಸಹಕರಿಸಬೇಕೆಂದೂ ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಹೇಳಿದರು.

ಮುಟ್ಟುಗುಪಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದಲೂ—'ಕುಮಾರಿ' (PILLS) ನಿಶ್ಚಿತವಾದುದು—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕ್ಲೈಮಾಂದ ಕೇಸುಗಳಿಗೆ ರೂ. 5. (ವಿ. ಪಿ. 12 ಆಣೆ ಅಲಾಯಿದ)

Mrs. P. DEVEE, F. D. S., (N)
TOLLYGUNGE. CALCUTTA,
ಸ್ಟಾಕಿಸ್ಟ್. **Raja Medical Hall,**
31, Dharmaraja St. BANGALORE

THE BEST PREVENTIVE IN EPIDEMICS OF

CHOLERA

"BHUVANENDRA"

CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.

For Children: 1 to 2 drops with the said decoction.

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920)

Registered Office Court Road UDIPI South Canara District

Business Offices Udipi, Mangalore, Katapadi, Kanhangad and Kirnigoli, South Canara

Authorised and Issued Capital Rs 2,00 000/-

Subscribed and Paid up Capital Rs 2,00,000/-

Reserve Funds Rs 1,75,853/-

Short term bills are discounted for approved parties Loans and advances are made and overdrafts granted on fair, easy terms

Deposits are accepted at favourable rates of interest More than twenty-three years' reliable banking Service stands to our credit

For further particulars please call at or apply to the nearest office

Dated 31-10-1943

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI

(*Furnishing* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತೆರ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅಪರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, ಯಂ. ಆರ್. ಪೂಂಜ,

President & Manager ಪ್ರೆಸಿಡೆಂಟ್ ಮತ್ತು ಮೆನೇಜರ್.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಸಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ೧ಅಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೆರೆ.—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಳದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

FOR SAFETY & SERVICE

THE VIJAYA BANK, LTD.,

Head office: MANGALORE

Branches at:—Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ

ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು:— ಮಂಗಳೂರು.

ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿಶ್ಚೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪೦ರೂಪಾಯ್ಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ,ಆಯುರ್ವೇದ ಭೂಷಣ ,ನಂ. 5 **ಕೊಡಿಯಾಲಬೈಲು,ದ.ಕ**

ನಮ್ಮ ಸುವರ್ಣ ಮಹೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ

ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ

ರೂ. **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. —8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ್-ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon.

PRINTED & PUBLISHED BY K. H. SHETTY AT THE NAVAYUGA PRESS, UDIPI, S. India

Regd. N. M. 3618. | Estd. 1921 ಸ್ಥಾಪನೆ.

NAVAYUGA
ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೨೭

FOUNDER
Sri. A. B. Shetty.

Vol. 24
No. 27

NAVAYUGA— Kannada Weekly —UDIPI, S. I.

ಉಡುಪಿ 9—3—1944 ● ಮಂಗಳೂರು.

ಕಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.
ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.
ಬೆಲೆ ರೂ. 1-12-0. ಟ. ಖ. 0-4-0
ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟ್ಯಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಿರಿಯರ ಪ್ರಪಂಚದ ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ
ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.
ಬೆಲೆ 0-14-0 ಟ. ಖ. 0-2-0
ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟ್ಯಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

Lest History Should Repeat Itself

"I am the monarch of all that I survey" that was Alexander the Great who said it. He had conquered all the lands that he had known and seen and brought the Greek Empire to the zenith of its glory and power. But his sudden death in the prime of his life brought about the fall of that vast Empire and to-day Greece itself has lost even its freedom.

You are the monarch of your family and are solely responsible for its present and future status and lest History should repeat itself you should insure your life.

The Canara Mutual Assurance Co., Ltd.,

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೋಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು.
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಎಲ್ಲ ಮೇಹ ರೋಗದ ರೋಗ [illegible]

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕ್ಯಾಟಲಾಗ್ ಸಂಗ್ರಹ ಬರದಲ್ಲಿ ತಕ್ಕವಾದ ಔಷಧಿ ಚುನಾಯಿಸಿ ರವಾನಿಸಬಹುದು.

ಕೆಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಉಡುಪಿ ಏಜಂಟರು:- ನವಭಾರತ ಬುಕ್ ಡಿಪೋ, ಸಂತೆಕಟ್ಟೆ. ಉಡುಪಿ.

ಅರಕಾನಿನಲ್ಲಿ ಎರಡನೇ ಪರೀಕ್ಷೆಯಲ್ಲಿ ತೇರ್ಗಡೆ!

ದ್ವಿತೀಯ ರಂಗದ ದಿನಬಂತೆ?

ಸೂಕ್ಷ್ಮವಾಗಿ ತುಲನೆ ಮಾಡುವವರು ಸಮಾಧಾನ ಪಡಲಾಗುವಂತಹ ಗಣ್ಯಘಟನೆ ಯಾವುದೂ ಇಲ್ಲದೆ ಕಳೆದ ವಾರವೂ ಹೋಯಿತು. ಇಡೀ ಲೋಕವು ಒಂದು ವಾರದಲ್ಲಿ ಖರ್ಚುಮಾಡಿದ ಯುದ್ಧವೆಚ್ಚವೆಷ್ಟೆಂದು ನೋಡಬೇಕು-ಇದೇ ಅವಧಿಯಲ್ಲಿ ಸಾಗಿದ ಯುದ್ಧ ಪ್ರಗತಿಯೆಷ್ಟೆಂಬುದನ್ನು ಇನ್ನೊಂದು ತಕ್ಕಡಿಯಲ್ಲಿಡಬೇಕು. ಹಾಗೆ ತೂಗಿದರೆ ಕಳೆದ ವಾರದ ಯುದ್ಧ ಆಯ-ವ್ಯಯವೂ ಸರ್. ಜೆರೆಮಿಯವರ ಹಿಂದೀ ಬಜೆಟಿನಂತೆಯೇ ಇದೆ!

ಆರಕಾನ್ ಜಯ ದುಂದುಭಿ

ಕಳೆದವಾರ ಮಿತ್ರ ಪ್ರಮುಖರಿಂದ ಹರ್ಷೋದ್ಗಾರಗಳನ್ನು ಹೊರಡಿಸಿದ ಮುಖ್ಯ ವಿಜಯ ದೊರಿತುದು ಬರ್ಮದ ಆರಕಾನಿನಲ್ಲಿ. ಇದಕ್ಕಾಗಿ ಮಿ. ಚರ್ಚಿಲ್ಲರು ಲೋರ್ಡ್ ಮೌಂಟ್ ಬೇಟನರಿಗೆ-ಲೋರ್ಡ್ ಮೌಂಟ್ ಬೇಟನರು ಬರ್ಮದಲ್ಲಿರುವ ಸೇನೆಗಳಿಗೆ-ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ತಪ್ಪಲ್ಲ. ಮಿತ್ರ ಸೇನೆಗಳು ಹೋದವರುಷ ನಾಪಾಸಾದ ದರ್ಜೆಯಲ್ಲಿ ಈ ವರುಷ ತೇರ್ಗಡೆ ಹೊಂದಿವೆ. ಜನರಲ್ ವೇವೆಲರ ನಿರ್ದೇಶಕತ್ವದಲ್ಲಿ ಕಳೆದ ವರುಷ ಇದೇ ಆರಕಾನಿನೊಳಗೆ ನುಗ್ಗಿದ ಮಿತ್ರ ಸೇನೆಗಳು ಜಾಪಾನರಿಂದ ಮುಖಕ್ಕೆ ಮಸಿ ಹಚ್ಚಿಸಿಕೊಂಡು ಓಡಿ ಬಂದಿದ್ದುವು; "ವನ ಯುದ್ಧದ ಅನುಭವವಿಲ್ಲದ ಸಣ್ಣ ಸೇನೆಯನ್ನು ಅಲ್ಲಿ ನುಗ್ಗಿಸಿ, ಅನುಭವ ಮತ್ತು ಅನುಕೂಲತೆ ಯೆರಡೂ ಇದ್ದ ಜಾಪಾನೀ ಯೋಧರ ಕೈಯಿಂದ ಹೊಡೆತ ತಿನ್ನಿಸ ಬೇಕಾಯಿತು. ಆ ಅಪಜಯದ ಮುಖ್ಯ ಹೊಣೆ ನನ್ನದೇ. ಆದರೆ ಈ ಅನುಭವದಿಂದಾಗಿ ಹಿಂದೀ ಯೋಧರು ಇನ್ನೊಮ್ಮೆ ಸಂದರ್ಭ ಬಂದಾಗ ಕಾರ್ಯ ಸಾಧಿಸುವರೆಂದು ನನಗೆ ವಿಶ್ವಾಸವಿದೆ"-ಎಂದು ಜನರಲ್ ವೇವೆಲರು ವೈಸರಾಯರಾಗುವ ಮೊದಲು 'ಅಟ್ಲಾಂಟಿಕ್' ಪತ್ರಿಕೆಯಲ್ಲಿ ಬರೆದಿದ್ದರು.

ಬೆಲೆಯುಳ್ಳ ವಿಜಯ

ವೇವೆಲರ ಆಸೆ ಸುಳ್ಳಾಗಲಿಲ್ಲ. ಇದೇ ಆರಕಾನ್ ವಲಯವನ್ನು ಮೂರು ವಾರಗಳ ಹೋರಾಟದ ಬಳಿಕ ಬ್ರಿಟಿಷ್ ಹಿಂದೀ ಸೇನೆಗಳು ಕಳೆದ ವಾರ ಗೆದ್ದುಕೊಂಡಿವೆ. ಜಾಪಾನರ ಆರಣ್ಯಾಭಿಯೋಗ ವಿದ್ಯೆಯನ್ನು ತಾವೂ ಬಲ್ಲೆವು ಎಂದು ಜಾಹೀರು ಮಾಡಿವೆ. ಅಲ್ಲಿ ನುಗ್ಗಿ ಬಂದ 14 ಸೇನೆಯನ್ನು ಸರಬರಾಯಿ ಪಥಗಳಿಂದ ಅಡ್ಡೈಸಿ ಸುತ್ತುಗಟ್ಟಿ, ಒಂದೋ ಶರಣು ಬರುವ ಅಥವಾ ಸಮುದ್ರ ಮೂಲಕ ಪಲಾಯನ ಮಾಡುವ ದುರದೃಷ್ಟವನ್ನು ತಂದೊಡ್ಡಬೇಕೆಂದು ಜಾಪಾನೀ ಸೇನಾನಿ ಕರ್ನಲ್ ಟನಬಾಶಿಯ ಹಂಚಿಕೆಯಿತ್ತು. ಈ ಕಾರ್ಯಕ್ಕಾಗಿ 7000 ಸೇನೆಯನ್ನು 200 ವಿಮಾನ ಸಹಾಯದೊಂದಿಗೆ ಅವನು ನುಗ್ಗಿಸಿದ್ದ. ಒಳಗಡೆಗೆ ಸೇರಿಹೋದ ಭಾರತೀಯ ಸೇನೆಗಳು ಎದೆ ಕಳಕೊಳ್ಳುತ್ತಿದ್ದರೆ ಜಾಪಾನರ ಕೆಲಸ ಆಗಿಯೂ ಹೋಗುತ್ತಿತ್ತು. ಜಾಪಾನರಿಲ್ಲಿಯ ಬಾಸ್ಲೀ-ಮಾಂಗ್ಡಾ ರೈಲ್ವೇ ಲೈನನ್ನು ಕಡಿದು ಕಣಿವೆಯನ್ನು ಸ್ವಾಧೀನ ಪಡಿಸಿಕೊಂಡು ವಿಜಯವನ್ನು ಪೂರ್ತಿಗೊಳಿಸುತ್ತಾ ಬಂದಿದ್ದರು. ಆದರೆ ಇದಿರುಗಡೆಯವರು ತಬ್ಬಿಬ್ಬಾಗದೆ, ಆಕಾಶ ಸಹಾಯವನ್ನಷ್ಟೇ ಆಧರಿಸಿ ಸಣ್ಣ ಸಣ್ಣ ಗುಂಪುಗಳಾಗಿ ಹೋರಾಟ ಕೊಡ ಹತ್ತಿದರು. ಈ ಹೋರಾಟದಲ್ಲಿ ಡ್ರೈವರುಗಳು ಮತ್ತು ಕ್ಲಾರ್ಕುಗಳು ಕೂಡಾ 'ಸ್ಟೇರಿಂಗ್' 'ಪೆನ್ನು'ಗಳನ್ನು ಕೆಳಗಿಟ್ಟು ಬೆಯನೆಟ್ ಧರಿಸಿ ಜಾಪಾನರ ಮೇಲೆ ಬಿದ್ದರು. ಕೊನೆಗೆ ಉತ್ತರಗಡೆಯಿಂದ ಸೇನಾ ಸಹಾಯವೂ ಭೋರ್ಗರೆಯುತ್ತಾ ಬಂದು ಸುತ್ತುಗಟ್ಟಿದವರೇ ಸುತ್ತುಗಟ್ಟಲ್ಪಟ್ಟು ನಿಪಾತವಾದರು. ಜಾಪಾನರಲ್ಲಿ ಸಾವಿರ ಮಂದಿ ಅಲ್ಲಿಯೇ ಸತ್ತು ಬಿದ್ದರಲ್ಲದೆ ಎಲ್ಲಾ ಸಂದುಕಟ್ಟಿನ ಸ್ಥಳಗಳೂ, ರೈಲ್ವೇ ಲೈನುಗಳೂ ಈಗ ನಮ್ಮವರ ವಶವಾಗಿವೆ.

ಅಭ್ಯಾಸ ಮಂಡಲಿ.

ಆದರೆ ಇಷ್ಟಕ್ಕಾಗಿ ಹಿಗ್ಗಲಾಗುವದಿಲ್ಲ-ಆರಕಾನ್ ವಿಭಾಗವು ಬರ್ಮದ ಎದೆವಲಯವಲ್ಲ; ಅಲ್ಲಿ ಹೋರಾಡಿ ಬರ್ಮಾಯುದ್ಧ ಮಾಡಲಾಗುವದಿಲ್ಲ ಎಂಬುದನ್ನು ಕಳೆದ ವರುಷ ಮಿತ್ರ ಪ್ರಮುಖರೇ ಒಪ್ಪಿಕೊಂಡಿದ್ದರು. ಆರಕಾನ್ ಈಗಲೂ ಇದ್ದಲ್ಲಿಯೇ ಇದೆಯಷ್ಟೆ? ಮೇಲಾಗಿ ಕಳೆದ ವರ್ಷ 'ಫೈಲ್' ಆದ ದರ್ಜೆಯಲ್ಲಿ ಈ ವರುಷ ಪಾಸಾದ ಮಾತ್ರಕ್ಕೆ ಅಂಥವರನ್ನು ಚುರುಕು ಹುಡುಗರ ಪಟ್ಟಿಗೆ ಸೇರಿಸಲಾಗುವದಿಲ್ಲ. ಅಥವಾ ಅಪಜಯದಿಂದ ಪಾಠ ಕಲಿಯಲು ಮಿತ್ರರಷ್ಟು ಜಾಪಾನರಿಗೆ ತಿಳಿದಿಲ್ಲವೆನ್ನುವದೂ ತಪ್ಪು—ಆರಕಾನ್ ಅಪಜಯದಿಂದ ಜಾಪಾನರು ಬ್ರಿಟಿಷರಿಗಿಂತಲೂ ಮುಂದಾಗಿ ಪಾಠ ಕಲಿತು ಪರೀಕ್ಷೆ ಕೊಡಲು ಬಂದಾರು. ಯಾಕೆಂದರೆ ಬರ್ಮಾದ ಸ್ಥಿತಿಗತಿಯು ಜಾಪಾನರಿಗೊಗ್ಗುತ್ತದೆ; ಅದು ಅವರ ಹತ್ತೋಟಿಯಲ್ಲಿದೆ; ಅಲ್ಲಿ ಅವರ ಅನುಕೂಲತೆ ಹೆಚ್ಚು. ಆದ್ದರಿಂದ ಬರ್ಮಾ ಯುದ್ಧದ ಮುಂದಿನ ಗತಿಯನ್ನು ಆತುರದಿಂದ ನಿರೀಕ್ಷಿಸಬೇಕು. ಮೇಲಾಗಿ ಜರ್ಮನರ ಮಿಲಿಟರಿ ಅಂದಾಜನ್ನು ಕಟ್ಟಿದಂತೆ ಜಾಪಾನರ ಗುಟ್ಟನ್ನರಿಯಲು ಮಿತ್ರರಿಂದೀ ತನಕ ಆಗಿಲ್ಲ. ಅದಕ್ಕಾಗಿಯೇ ಅಮೇರಿಕ, ಆಸ್ಟ್ರೇಲಿಯಾ, ನ್ಯೂಜೀಲೇಂಡ್, ನ್ಯೂಗಿನಿಯಾ, ಸೊಲಮನ್ಸ್, ಹಿಂದುಸ್ಥಾನ, ಬರ್ಮಾ ರಣಮುಖಗಳಲ್ಲಿ ಬ್ರಿಟಿಷ್ ತಜ್ಞ ಮಂಡಲಿಯೊಂದು ಸಂಚರಿಸಿ ಸ್ಥಿತಿಜ್ಞಾನ ಸಂಪಾದಿಸಿದೆ. ಜರ್ಮನಿಗೆ ಪೂರ್ಣ ಪರಾಭವವೊದಗುವ ವರೆಗೆ ಜಾಪಾನರ ಕಡೆಗಿಷ್ಟೇ! ಶಾಂತ ಸಮುದ್ರದಲ್ಲಿ ಯಾವ ವಿಶೇಷವೂ ಘಟಿಸಿಲ್ಲ. ಜಾಪಾನೀ ನೌಕಾ ಪಡೆಯೀಗ ಸಿಂಗಾಪುರಕ್ಕೆ ಬಂದಿದೆ. ಹಿಂದೀ ಸಮುದ್ರ ಕದಡಬಹುದು!

ರಶ್ಯಾ ಮತ್ತು ಇಟಲಿಯಲ್ಲಿ.

ಸ್ಟಾಲಿನ್ ಭೈರವನಿಗಾಮಂತ್ರಣ ಕೊಡುವದಕ್ಕಾಗಿಯೇ ತಾವು ಹಿಟ್ಲರನ ಬೆನ್ನು ಹಿಡಿದು ಹೋದಂತಾಯಿತೇ? ಎಂದು ಜರ್ಮನಿಯ ಸಹಾಯಕ ಸಣ್ಣ ರಾಷ್ಟ್ರಗಳು ಚಿಂತಿಸುವ ಪರಿಸ್ಥಿತಿಯೀಗ ಬಂದಿದೆ. ಕೆಂಪು ಸೇನೆಯು ಒಂದೆಡೆಯಲ್ಲಿ ನಾರ್ವದ ಪಶ್ಚಿಮಗಡೆಯ ಫಿನ್ಲೆಂಡ್ ಕೊಲ್ಲಿಯ ಗಡಿಯ ವರೆಗೂ ಬಂದಿದೆ; ಅದೇ ಸಮಯದಲ್ಲಿ ಎಸ್ಟೋನಿಯಾದ ದಕ್ಷಿಣ ಹೆಬ್ಬಾಗಿಲಾದ ಪ್ಸ್ಕೋವ್‌ದಲ್ಲಿ ಜರ್ಮನರ ಸೇನಾ ವ್ಯೂಹ ಕುಸಿದು ಬೀಳುತ್ತಿದೆ. ದಕ್ಷಿಣ ಗಡೆಯಲ್ಲಿ ಲಟ್ವಿಯಾದ ಗಡಿಗೆ ಹನ್ನೆರಡೇ ಮೈಲಿರುವ ಒಸ್ಟ್ರೋವ್ ಕೆಂಪು ಸೇನೆಯ ಇಕ್ಕಳ ಧಾಳಿಯಿಂದ ಕಂಪಿಸಹತ್ತಿದೆ. ತನ್ನಲ್ಲಿಗೆ ಬಂದವರ ಮನೆಗೆ ತಾನು ಹೋಗುವ ಶಿಷ್ಟ ಸಂಪ್ರದಾಯವನ್ನೀಗ ಕೆಂಪು ಸೇನೆಯನುಸರಿಸುತ್ತಿದೆ! ಇಟಲಿಯಲ್ಲಿ ರೋಮ್ ವಲಯಕ್ಕೆ ಬಂದ ಮಿತ್ರಸೇನೆಗೆ ಹೆಜ್ಜೆ ಮುಂದಿಡುವದು ಪ್ರಯಾಸವಾಗಿದೆ. ಆಂಝಿಯೋ ಭಾಗದಲ್ಲಿ ಮೇಲಿಂದ ಮೇಲೆ ಅಪಜಯಗೊಂಡರೂ ನಾಝಿಗಳು ಮತ್ತೂ ಮತ್ತೂ ಧಾಳಿಡುತ್ತಿರುವದನ್ನು ಕಾಣುವಾಗ-ಮಿತ್ರರು ಒಮ್ಮೆ ಕಳಕೊಂಡ ಕಾಲೂರಿದ ನೆಲವನ್ನು ಮರು ಸಂಪಾದಿಸಿಕೊಂಡೇ ತೃಪ್ತಿ ಪಡುತ್ತಿರುವಾಗ-ಅಲ್ಲಿ ಏನೋ ತಪ್ಪು ನಡೆದಿದೆ ಎಂಬುದು ಸ್ಪಷ್ಟವಾಗುತ್ತದೆ. ಆದರೂ ಇದೀಗ ಪ್ರಥಮಬಾರಿ ರೋಮಿನ ಮೇಲೆ ಬಲವಾದ ಆಕಾಶ ಧಾಳಿನಡಿಸುವ ಅನುಕೂಲತೆ ಮಿತ್ರರಿಗೊದಗಿದೆ.

ದ್ವಿತೀಯ ರಂಗ-

ಇದರ ಸಿಡಿಮದ್ದು ಜಡಿದಾಗಿದೆ.-ಬೆಂಕಿಕೊಡುವದೊಂದೇ ಈಗ ಬಾಕಿ! 'ವಿರೋಧಿಗಳ ಅದ್ಭುತ ತಯಾರಿ ಮುಗಿದು, ಅಪಾರ ಸೇನೆಗಳೀಗ ಹಾದಿಯಲ್ಲಿವೆ' ಎಂಬು ಜರ್ಮನ್ ರೇಡಿಯೋ ತಮ್ಮವರನ್ನೆಚ್ಚರಿಸಿದೆ. "ಇನ್ನೊಂದು 'ಡಂಕರ್ಕ್' ಇಲ್ಲ, ಜರ್ಮನ್ ಸೇನೆಯ ಕಂಠಕ್ಕೆ ಕೈಹಾಕಿ ಪ್ರಾಣಾಪಹಾರ ಮಾಡಲು ನಾವು ಯುರೋಪು ನುಗ್ಗುತ್ತೇವೆ"-ಬ್ರಿಟನಿನ ಗೃಹಮಂತ್ರಿ ಮೋರಿಸನ್ ಮೊನ್ನೆ ಹೇಳಿದ್ದಾರೆ. ಅಂತೂ ಮಿತ್ರ ಪ್ರಮುಖರ ಬಾಯಿಯಿಂದೀಗ ದ್ವಿತೀಯರಂಗದ ಕುರಿತು ಚುಟುಕಾದ ಚೂಪಾದ ಮಾತುಗಳೇ ಹೊರಡುತ್ತಿವೆ-ಆದ್ದರಿಂದ ಇನ್ನು ದ್ವಿತೀಯ ರಂಗಾರಂಭವು ಯಾವ ದಿನವೂ ಆಗಬಹುದು. ಈ ಮುಹೂರ್ತದಲ್ಲಿ ಯುರೋಪು ಸ್ಫೋಟಪೂರ್ವ ಜ್ವಾಲಾಮುಖಿಯಂತಿದೆ. ತನ್ನ ಕೊನೆಯಂಕದಲ್ಲಿ ಹಿಟ್ಲರನು ಪ್ರಲಯ ತಾಂಡವವಾಡಲಿದ್ದಾನೆ ಎಂಬ ಭಯ ಎಲ್ಲರಲ್ಲೂ ಇದೆ. ಕಳೆದ ದಿನಗಳು ಹೇಗಿದ್ದರೂ ಬರುವ ದಿನಗಳು ಮಹತ್ವದ್ದೆನಿಸುವದರಿಂದ ಆತುರದಿಂದ ನಿರೀಕ್ಷಿಸಬೇಕು. 'ಆದುದು ಸಾಸಿವೆಯಷ್ಟು; ಆಗಲಿರುವದು ಕುಂಬಳದಷ್ಟು'!

ಧನಕ್ಕಿಂತ ವಿಧಾನ ಮುಖ್ಯ

ಧನದ ಮೊತ್ತವೊಂದೇ ಗೌರವಾನ್ವಿತ ವಾಣಿಜ್ಯದ ಹೆಗ್ಗುರುತಲ್ಲ. ಧನಸಂಗ್ರಹ ಅಥವಾ ನಿಮ್ಮ ದುಡಿಮೆಯ ಮೊತ್ತಕ್ಕಿಂತ, ಅದನ್ನು ನಿರ್ವಹಿಸುವ ವಿಧಾನವೇ ವ್ಯಾಪಾರೋದ್ಯಮಗಳ ಯಶಸ್ಸಿಗೆ ಮುಖ್ಯವೆನಿಸಿದೆ.

ಕಳೆದ ನಲ್ವತ್ತು ವರ್ಷಗಳಿಂದ, ಕೆನರಾ ಬೇಂಕಿನೊಡನೆ ಇರುವ ಚಾಲತಿ ಠೇವಣಿಯ ಲೆಕ್ಕವು ವಾಣಿಜ್ಯದ ದೃಢತೆ ಮಾನ್ಯತೆಗಳ ದ್ಯೋತಕವಾಗಿ ಪರಿಗಣಿಸಲ್ಪಟ್ಟಿದೆ.

"ನಿಮಗೆ ಕೆನರಾ ಬೇಂಕಿನ ಒಂದು ಚೆಕ್ ಕೊಡುತ್ತೇನೆ" ಎನ್ನಲು ನೀವೂ ಆನಂದ ಪಡುವಿರಿ. ಮತ್ತೆ ನೆನಪಿನಲ್ಲಿರಲಿ—ಯಾವ ಚೆಕ್ ಆದರೂ **ಕೆನರಾ ಬೇಂಕಿನಲ್ಲಿ** ಪಟಾಯಿಸಲ್ಪಡಲು ಐದು ನಿಮಿಷಗಳಗಿಂತ ಹೆಚ್ಚಿನ ವಿಳಂಬವಿಲ್ಲ.

ಸ್ಥಾಪಿತ: **1906.**

ಕೆನರಾ ಬೇಂಕು, ಲಿಮಿಟೆಡ್.

CANARA BANK, Ltd.

NOTICE.

In the Court of the District Munsif of Mangalore.

O. P. No. 72 of 1943.

Between

J. M. Pinto – Petitioner.

and

Inthru Sequeira and others – Respondents.

To

Respondents 2 and 3.

2. Pascu Sequeira, 3. Marian Sequeira, sons of Inas Sequeira, residing in Mudanadugodu village of Mangalore Taluk.

Take notice that the above petition has been filed by the petitioner for setting aside the order dismissing the Suit No.25 of 1942 on the file of the Bantval Panchayath Court and for transfer of the said suit to any other neighbouring Panchayath Court and the same is posted to 13-3-1944 for your appearance. In default of your appearance in person or by a pleader on the said date the application will be heard exparte.

(By order of the Court)

B. Srinivasa Pai,
Vakil for Petitioner.

Mangalore,
6-3-1944.

——ಹಿಂದೀ ಸರಕಾರದ ಆಯವ್ಯಯ——

ದಿಲ್ಲಿಯ ಕೇಂದ್ರ ಎಸೆಂಬ್ಲಿಯಲ್ಲಿ ಕಳೆದ ತಾ ೨೯ರಲ್ಲಿ ಆರ್ಥಿಕ ಸದಸ್ಯ ಸರ್. ಜೆರೆಮಿ ರೈಸ್‌ಮೇನರಿಂದ ಮಂಡಿಸಲ್ಪಟ್ಟು ಈಗ ಚರ್ಚಿಸಲ್ಪಡುತ್ತಿರುವ ೧೯೪೪-೪೫ರ ಆಯವ್ಯಯ ಅಂದಾಜು ಪತ್ರಿಕೆಯ ಮುಖ್ಯಾಂಶ ಹೀಗಿದೆ. ೧೯೪೩-೪೪ರ ಉತ್ಪನ್ನದಲ್ಲಿ ೯೩-೪೫ಕೋಟಿ ರೂ. ಗಳಷ್ಟು ಕೊರತೆ ಕಾಣುತ್ತಿದೆ. ಸದ್ಯದ ತೆರಿಗೆ ಪದ್ಧತಿಯನ್ನೇ ಅನುಕರಿಸಿದರೆ ೧೯೪೪-೪೫ಕ್ಕೆ ೭೮-೨೧ಕೋಟಿ ರೂ. ಕಡಿಮೆ ಬೀಳುವದು. ಅರ್ಥಾತ್ ೧೯೪೪-೪೫ರ ಆಯ ೨೮೮-೯೭ಕೋಟಿ. ವ್ಯಯ ೩೬೩-೧೮ಕೋಟಿ.

ಮೂಲ ಸೂತ್ರಗಳು.

ಆ ಆಯವ್ಯಯ ಪಟ್ಟಿಯ ಆಧಾರ ಸೂತ್ರಗಳಿವು:-ಆರ್ಥಿಕಉಬ್ಬಂದವು ಹಿಂದಿನಂತೆಯೇ ಸಾಗುವದು. ವಿಸ್ತಾರದ ಹೊಸ ಸೇನಾನಿತ್ವ ರಚನೆಯಿಂದ ದೇಶದ ಆರ್ಥಿಕ ಸ್ಥಿತಿಯಲ್ಲಿ ಬದಲಾವಣೆಯಿಲ್ಲ. ಅತಿ ಪ್ರಸರಣ ನಿರೋಧಕ್ಕಾಗಿ ೧೯೪೩-೪೪ರಲ್ಲಿ ಕೈಕೊಂಡ ಉಪಾಯಗಳು ಇಚ್ಛಿತ ಪರಿಣಾಮವಿತ್ತಿವೆ. ಸ್ಟರ್ಲಿಂಗ್ ಸಮಾನ ರೂಪಾಯಿ ಸಾಲಪತ್ರಗಳ ಸರಕಾರೀ ಯೋಜನೆಯು ಅತ್ಯಂತ ಯಶಸ್ವಿಯಾಗಿದೆ. ೫೪೭ಕೋಟಿ ರೂ. ಈ ಮೂಲಕ ಸಾಲವೆತ್ತಲ್ಪಟ್ಟು ಕಳೆದ ಒಂದು ವರ್ಷದಲ್ಲಿ ಅವುಗಳ ಅರೆವಾಸಿಯಷ್ಟು ಹಣ ವಾಪತಿಯಾಗಿದೆ.

ಹೊಸ ತೆರಿಗೆಗಳು.

ಮುಂಗಡ ಆಯ-ವ್ಯಯ ಪಟ್ಟಿಯಲ್ಲಿ ತೋರುವ ಕೊರತೆಯ ನಿವಾರಣೆಗಾಗಿ ಈ ಕೆಳಗಿನ ಹೊಸಕರಗಳು ಹೇರಲ್ಪಡಲಿವೆ. ಚಹಾ, ಕಾಫಿ, ಅಡಿಕೆಗಳ ಮೇಲೆ ಪೌಂಡಿಗೆ 2 ಆಣೆಯಂತೆ ತೆರಿಗೆ ಹಾಕಿ, ದನಸಿ ಮಾನ್ಯರ ಬಾಯಿ ಹಲ್ಲುಗಳನ್ನೂ ಆಂಕೆಯಲ್ಲಿಟ್ಟಂತಾಗಿದೆ. ಟೇಕ್ಸ್ ಬೀಳುವ ಉತ್ಪತ್ತಿಯ ಮಿತಿಯು 1500 ಎಂದಿದ್ದುದನ್ನು 2000ಕ್ಕೇರಿಸಿ ಸಣ್ಣ ವ್ಯಾಪಾರಸ್ಥರಿಗೆ ಉಪಕಾರವಾಗಿದೆ. ಈ ಉತ್ಪತ್ತಿಯು 10ಸಾವಿರದ ವರೆಗಿರುವವರ ಮೇಲೆ ತೆರಿಗೆ ಹಿಂದಿನದೇ. 10ಸಾವಿರದಿಂದ 15ಸಾವಿರ ರೂ. ವರೆಗೆ 24ಪೈಯ ಮೂಲ ದರದ ಮೇಲೆ ಈ ವರೆಗಿದ್ದ ಸರ್‌ಚಾರ್ಜ್ 16 ಪೈಯನ್ನು 2ಪೈ ಹೆಚ್ಚಿಸಿ 18ಪೈ ಮಾಡಲಾಗಿದೆ. 15ಸಾವಿರಕ್ಕೆ ಮಿಕ್ಕಿದವುಗಳಿಗೆ 20ಪೈ ಮೂಲದರದ ಮೇಲೆ 4ಪೈ ಹೆಚ್ಚಿಗೆ; ಅಂದರೆ ಈ ವರೆಗೆ 20ಪೈ ಇದ್ದುದು ಇನ್ನು ಮುಂದೆ 24ಪೈ. 35ಸಾವಿರದಿಂದ 2ಲಕ್ಷದ ವರೆಗೆ ಸರ್‌ಚಾರ್ಜು ಅರ್ಧಾಣೆ ಹೆಚ್ಚಿದೆ. ವಿದೇಶಾಮದಿನ ಮೇಲಿನ 100ಕ್ಕೆ 20ರಷ್ಟರ ವಿಶೇಷ ಸರ್‌ಚಾರ್ಜು ಮುಂದಿನ ವರ್ಷವೂ ಇದೆ. ತಂಬಾಕು, ಸ್ಪಿರಿಟುಗಳ ಸರ್‌ಚಾರ್ಜನ್ನು 1/2 ರಿಂದ 1/2ಕ್ಕೇರಿಸಲಾಗಿದೆ. ಉತ್ಪತ್ತಿ ತೆರಿಗೆಯ ಮೂರು ತಿಂಗಳ ಹಣ ಮೊದಲೇ ತೇವಾಗಿ ಇಡಬಹುದು; ಹಾಗಿಟ್ಟರೆ ಅವುಗಳಿಗೆ 2೦ ಸಲೆಯ ಬಡ್ಡಿಯಿದೆ. ಲೈಫ್ ಇನ್ಶೂರೆನ್ಸ್ ಸಂಬಂಧವಾಗಿಯೂ ರೂಪಾಯಿಗೆ 63ಪೈ ಕಾಯಂ ನಿರ್ಧಾರವಾಗಿದೆ. ಈ ಹೊಸ ಕರಗಳಿಂದ 23-50ಕೋಟಿ ಉತ್ಪನ್ನವಾಗುವದೆಂದು ಅಂದಾಜು ಮಾಡಲಾಗಿದೆ.

ತಜ್ಞರ ಅಭಿಪ್ರಾಯ.

ಮುಕ್ಕಾಲಂಶ ಅವನತಿ ಕಾಲ, ಅಭಿವೃದ್ಧಿಯಿರುವ ಮುಂಗಡಪತ್ರಿಕೆಯಿದು ಎಂದು ದೇಶದ ಆರ್ಥಿಕತಜ್ಞರ ಅಭಿಮತ. ಅರ್ಥ ಸಚಿವ ಸರ್. ಜೆರೆಮಿಯವರು ವ್ಯಕ್ತಿಶಃ ಸಹಾನುಭೂತಿಗರ್ಹರೆಂದು ತೆರೆಯ ಮರೆಯಾಟ ಬಲ್ಲವರನ್ನುತ್ತಾರೆ. ಅವರು ಈ ಬಜೆಟ್ ತಯಾರಿಯಲ್ಲಿ ಬ್ರಿಟಿಷ್ ಸರಕಾರದೊಡನೆ ನಿಷ್ಫಲ ಹೋರಾಟಗಳನ್ನಾದರೂ ಹೂಡಿದ್ದಾರೆ; ದೇಶದ ಆರ್ಥಿಕ ಸ್ಥಿತಿ ಸುಧಾರಣೆಗೆ ಶಕ್ಯವಿದ್ದಷ್ಟು ಯತ್ನಿಸಿದ್ದಾರೆ, ಎನ್ನುವವರಿದ್ದಾರೆ. ಭಾರತದ ಪ್ರಮುಖ ಆರ್ಥಿಕ ವ್ಯವಹಾರಜ್ಞ, ಲ್ಯೊಬ್ಬರಾದ ಪ್ರೊ. ಬಿರ್ಲಾರವರು ಅತಿ ಪ್ರಸರಣದ ಹಾಸಿಗೆ ಕೃತ್ರಿಮ ಶಮನಗಳಷ್ಟೇ ಈ ಬಜೆಟನಲ್ಲಿವೆ ಎಂದು ನಿರಾಶೆ ವ್ಯಕ್ತಪಡಿಸಿದ್ದಾರೆ. 'ಧೀರತ್ವ ಅಂತೆಯೇ ಕತ್ತರಿತ್ವವಿರುವ ಬಜೆಟ್' ಎಂದು ಜಮುನಾ ದಾಸ ಮೆಹತಾ, 'ನಿರಾಶಾ ಜನಕ' ಎಂದು ಸರ್. ಯಾಮಿನ್ ಖಾನರು, 'ಪಾಕಗೃಹ ತೆರಿಗೆಯ ಬಜೆಟ್' 'ಬೆಲೆ ಹೆಚ್ಚಿಸುವ ಬಜೆಟ್' -ಎಂದೆಲ್ಲಾ ಬೇರೆ ಕೆಲವರು ಬಿರುದು ದಾನಮಾಡಿದ್ದಾರೆ. ಕೇಂದ್ರ ಎಸೆಂಬ್ಲಿಯಲ್ಲಿ ಪ್ರಜಾಪ್ರತಿನಿಧಿ ಸದಸ್ಯರ ಟೀಕೆಗಳೊಡನೆ ಈ ಅಂದಾಜು ಪತ್ರಿಕೆಯೀಗ ತೀವ್ರವಾಗಿ ಚರ್ಚಿಸಲ್ಪಡುತ್ತಿದೆ

ಹೊಸವರ್ಷದ
ಶ್ರೀಪತಿ ಪಂಚಾಂಗವು
ಇದೀಗ ಬಿಕರಿಗೆ ಸಿದ್ಧವಾಗಿದೆ. ಬೇಕಾದವರು ಕೂಡಲೇ ಬರೆಯುವುದು.

ಮುಟ್ಟುಗುಳಿಗೆ
ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದಿದ್ದರೂ—'ಕುಮಾರಿ' (PILLS) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವವು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ, ರೂ. 3/- ಕೈಮೀರಿದ ಕೇಸುಗಳಿಗೆ ರೂ. 5- (ವಿ. ಪಿ. 12 ಆಣೆ ಅಲಾಯಿದ).
Mrs. P. DEVEE, F. D. S., (N) TOLLYGUNGE. CALCUTTA.
ಸ್ಟಾಕಿಸ್ಟ್- **Raja Medical Hall**, 31, Dharmaraja St. BANGALORE

ಚೂರು--ಚೂರು

"ಕೆಲವು ಇಟಲಿ ಯುದ್ಧ ಹಡಗಗಳನ್ನು ರಷ್ಯಕ್ಕೆ ರವಾನಿಸಿಕೊಡುವೆವು"-ಅಧ್ಯಕ್ಷ ರುಜವೆಲ್ಟರ ಮಾತು.

ಸಾಧ್ಯವಿದ್ದರೆ ಇಟಲಿಯುದ್ಧವನ್ನೂ ಅಲ್ಲಿಗೇನೇ ರವಾನಿಸುವದು ಕ್ಷೇಮಕರ.

●

"ಸಿಂಗಾಪುರಕ್ಕೆ ಜಾಪಾನೀ ನೌಕಾಪಡೆ ಹೋಗಿದೆ-ಅದು ಹಿಂದೀ ಸಮುದ್ರದಲ್ಲಿ ಬ್ರಿಟಿಷ್ ಹಡಗಗಳೊಡನೆ ಹೋರಾಟಕ್ಕೆ ನಿಲ್ಲುವದು ಸಂಭವನೀಯ"-ಮಿ. ಆಲಿಯಟರ ಎಚ್ಚರಿಕೆ.

ಹಾಗೇಕೆ ಕೆದರಬೇಕು? ಸಿಂಗಾಪುರವನ್ನು ಪಾಲಿಮಾಡಲು ಅವು ಹೋಗಿರಬೇಕೆಂದು ಧೈರ್ಯಗೊಳ್ಳುವ ಸಂಪ್ರದಾಯವನ್ನೇಕೆ ಬಿಡಬೇಕು?

●

"ಹೈದರಾಬಾದ್ ಸಂಸ್ಥಾನವೊಂದರಲ್ಲೇ 11 ಲಕ್ಷ ವಿಧವೆಯರಿದ್ದಾರೆ. ಅವರಲ್ಲಿ 10 ಸಾವಿರ 12ವರುಷಗಳೊಳಗಿನ ಬಾಲವಿಧವೆಯರು"-ಅಲ್ಲಿಯ ಮಹಿಳಾ ಸಮ್ಮೇಲನದ ಅಧ್ಯಕ್ಷೆ ಬೇಗಮ್ ಜಾಹಿರ್ ಜಂಗ್, ಇವರ ಮಾತು.

ಇವರ 'ವಿಧವೆ' ಎನ್ನುವ ಹೆಸರನ್ನೇ ತತ್ಕಾಲಕ್ಕೆ 'ಯೋಧ' ಎಂದು ಬದಲಾಯಿಸಿದರೆ ಜಾಪಾನರನ್ನು ಹೆದರಿಸಬಹುದು!

●

ಕಲ್ಕತ್ತಾ ಕೋರ್ಟಿನಲ್ಲಿ ಸುಭಾಸ್ ಬೋಸರ ಮೇಲೆ ನಡೆದಿರುವ ಖಟ್ಲೆಯೊಂದನ್ನು ಪುನಃ ಜೂನ್ 20ಕ್ಕೆ ಮುಂದುವರಿಸಲಾಯಿತು.

ಜನರಲ್ ಟೋಜೋ ಹಿಂದುಸ್ಥಾನದಲ್ಲಿ ಕಾಲಿಟ್ಟೊಡನೆ ಕೈದು ಮಾಡಲಾಗುವಂತೆ ಅವನಮೇಲೂ ಒಂದು ಖಟ್ಲೇ ಹಾಕಿಡಬಾರದೇಕೆ?

●

'ಬಿರಿಸ್ತಾನದ ಬರಹಾಂಪುರ ಜೈಲಿನೊಳಗೆ ಜನವರಿ ತಾ 26ರಲ್ಲಿ ಲಾಠೀ ಚಾರ್ಜು ನಡೆದು ಪಾಜಿ ಪ್ರಧಾನಿ ವಿಶ್ವನಾಥ ದಾಸರಿಗೂ ಪೆಟ್ಟುಬಿತ್ತು'-ಒರಿಸ್ಸಾ ಎಸೆಂಬ್ಲಿಯಲ್ಲಿ ಚರ್ಚೆ.

ಈ ರೀತಿ ಶಾಂತಿ ಪಾಲನೆಗಾಗಿ ಜೈಲು ಸೇರಿದ ಅಲ್ಲಿಯ ಪೋಲಿಸರಿಗೆ ಮಿ. ಅಮೆರಿಯವರ ವಿಶೇಷ ಸಂಭಾವನೆ ದೊರೆಯಬಹುದು.

●

'ಹೆಂಗಸರಲ್ಲಿ ಸುಶಿಕ್ಷಿತೆಯರು ಸ್ವಲ್ಪ ಮಂದಿ ಇರುವದು ನಿಜವಾದರೂ 100ರಲ್ಲಿ 8 ಮಂದಿ ಮಾತ್ರ ವಿದ್ಯಾವಂತರಿರುವ ಹಿಂದುಸ್ಥಾನದಲ್ಲಿ ಸುಶಿಕ್ಷಿತ. ಪುರುಷರೆಷ್ಟಿದ್ದಾರೆ?" ಕೇಂದ್ರ ಎಸೆಂಬ್ಲಿಯಲ್ಲಿ 'ಹಿಂದೂ ವಿವಾಹ ಮಸೂದೆಯ ಚರ್ಚೆಯ ವೇಳೆ ಶ್ರೀ ರೇಣುಕಾರ್ಯ್ಯರವರ ಪ್ರಶ್ನೆ-

ಎಲ್ಲರೂ-ಹೆಂಡಂದಿಯರಿಂದ ಶಿಕ್ಷಿಸಲ್ಪಡುವ ಎಲ್ಲಾ ಪುರುಷರೂ 'ಸುಶಿಕ್ಷಿತ'ರೇ!

●

'ಜಿನ್ನರಿಗೆ-ವಿಭಾಗಿಸಿ ಹೊರಟು ಹೋಗಿ' ಎಂದು ಬ್ರಿಟಿಷರಿಗೆ ಹೇಳುವಂತಿಷೆಯಾದರೂ ಅದರ ನಿಜವಾದ ಅರ್ಥ 'ವಿಭಾಗಿಸಿ ನಿಂತುಬಿಡಿ' ಎಂಬುದೇ'-ಡಾ| ಲತೀಫರ ಟೀಕೆ.

ಮಿ. ಜಿನ್ನರು ಕೂಡಲೇ 'ಪಾಕಿಸ್ತಾನ್ ಶಬ್ದಕೋಶ'ವೊಂದನ್ನು ಪ್ರಕಟಿಸಬೇಕು.

—ವಿನೋದಿ.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ 102/1944

1 ಖದಿಜಮ್ಮ,ಆಸಮ್ಮ ಮಗಳು,ವ M. A. ಮಮ್ಮಿ ಬ್ಯಾರಿ ಹೆಂಡ್ತಿ. 2. ಅಮುದ್ 1ನೇಯವಳ ಮ್ಯಾನರ ಮಗ. ಯೀತನ ಹಿತ ಚಿಂತಕಳ್. 1ನೇ ವಾದಿ ಮೊಗ್ರಾಲ ಗ್ರಾಮದಲ್ಲಿರುವವರು--ವಾದೀರು.

ಮತ್ತು

1. ಕ್ಷೈಕೋಟ್ ಕಡವತ್ತ ಕುಂಞಿ ಮೊಯಿದಿನ್ ಹಾಜಿ,ಕುಂಞಿ ಪಾತ್ತುಮ್ಮನ ಮಗ,ತರವಾಟ ಕಾರ್ನವ ಮತ್ತು ಅಡಳ್ತದಾರ. 2. ಹಳೇಕೋಟೆ ಮುಹಮ್ಮದ ಬ್ಯಾರಿ. ಹಳೇಕೋಟೆ ಕುಂಞಿ ಮ್ಯಾಕುಟ್ಟಿ ಬ್ಯಾರಿಗೆ ಆತನ ಹೆಂಡ್ತಿ ಕುಂಞಿ-ಪಾತ್ತುಮ್ಮಳಲ್ಲಿ ಹುಟ್ಟಿದ ಮಗ. 3 ಕ್ಷೈಕೋಟ್ ಕಡವತ್ತ ಮಹಮ್ಮದ್ ಕುಂಞಿ ಹಾಜಿ, ಕುಂಞಿಪಾತ್ತುಮ್ಮನ ಮಗ. 4. ಕೆ. ಮಮ್ಮುಂಞಿ. ಮರಿಯಮ್ಮನ ಮಗ, ಎಡ್ವೋಕೇಟ್. 1-3ನೇಯವರು ತಳಂಕರ ತ್ರಿಕರ್ಪೂರ ಗ್ರಾಮದ ಕ್ಷೈಕೋಟ್ ಕಡವ್ರ ಯೆಂಬಲ್ಲಿಯೂ, 2ನೇಯವನು ತಮನಾಡ ಗ್ರಾಮದಲ್ಲಿಯೂ 4ನೇ ಯವನು ಕಾಸರಗೋಡು ಕಸಬೆಯಲ್ಲಿ ಕೂಡಾ ಯಿರುವವರು-ಪ್ರತಿವಾದೀರು.

ಯಿವರೊಳಗೆ.

ವಾದೀರ ತರವಾಟಿನಲ್ಲಿ ಆದ ಸಬ್ ಕೋರ್ಟ O. S. No. 11/1925ನೇ ವಾರ್ಡು ಡಿಕ್ರಿ ಪ್ರಕಾರ1937ನೇ ಯಿಸ್ವಿ ಅಗಸ್ಟ್ ತ್ತು 31-1-1944ರ ವರೆಗೆ ವಾದೀರಿಗೆ ಬರತಕ್ಕ ಜೀವನಾಂಶದ ರೂಪಾ 2498-9-8ನ್ನು ತರವಾಡು ಸೊತ್ತುಗಳಿಂದ ಬರಮಾಡಿಕೊಳ್ಳುವರೆ ತರವಾಡಿನ ಮೇಲೆ ಡಿಕ್ರಿ ಅಪೇಕ್ಷಿಸಿ ತರವಾಡಿನ ಯೀಗಿನ ಕಾರ್ನವನಾದ 1ನೇ ಪ್ರತಿವಾದಿ ಮೇಲೂ ನಂತ್ರದ ಹಿರೀ ಮೆಂಬರಾದ 2ರಿಂದ 4ನೇ ಪ್ರತಿವಾದೀರ ಮೇಲೂ ಕೂಡಾ ವಾದೀರು ಮೇಲ್ಕಂಡ ದಾವೆಮಾಡಿದ್ದಾಗಿರುತ್ತದೆ. ಸದ್ರಿ ವ್ಯಾಜ್ಯವು ಪ್ರಥಮ ತನ್ಕಿ ಬಗ್ಗೆ 16-3-1944ಕ್ಕೆ ಯಿಟ್ಟಿದೆ. ಯೀ ವ್ಯಾಜ್ಯದಲ್ಲಿ ತಕ್ರಿಯಲ್ಲಿ ಸೇರಿ ಉದಹರ್ಸುವ ಮನಸ್ಸುಳ್ಳವರು ಸದ್ರಿ ತಾರೀಕಿನ ಮುಂಚಿತವಾಗಿ ಬಂದು ಕೋರ್ಟಿಗೆ ಅರ್ಜಿಕೊಟ್ಟು ಸೇರಿಕೊಳ್ಳಬಹುದು

(Sd) **K. Sundarama Shetty.**
Plaintiff's Vakil.

ಕಾಸರಗೋಡು
ತಾರೀಕು 6-3-44

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸು: **ಬೊಂಬಾಯಿ**

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ಉಡ್ಪಿಯ ಕೋರ್ಟುರೋಡಿನಲ್ಲಿ ಇದರ ಚೀಫ್ ಏಜನ್ಸಿ ಆಫೀಸು ಇದೀಗಲೇ ಪ್ರಾರಂಭವಾಗಿದೆ.

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

ಪಿ. ಡಿ. ನಾಯಕ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Ansurance Company, Ltd.,
BOMBAY.

The Canara Banking Corporation Limited.
ESTD. 1906.

Authorised Capital	Rs. 25,00,000/-
Subscribed ,, ...	,, 16,00,000/-
Paid up	,, 13,25,785/-
Reserves	,, 4,10,000/-

With a net work of Branches and Agencies, in almost all the principal Cities of India, we offer exceptional facilities and competitive rates for collection of Bills and issue of Drafts and Telegrapic Transfers.

ಉಡುಪಿ, ಗುರುವಾರ ೯-೩-೧೯೪೪

ಆಯವ್ಯಯ ಪತ್ರಿಕೆ

ಹಿಂದೀ ಸರಕಾರದ ಅರ್ಥಿಕ ಸದಸ್ಯ ಸರ್ ಜೆರೆಮಿ ರೈಸ್‌ಮೇನರು ತನ್ನ ಸನೇಯದ ಬಜೆಟನ್ನು ಕೇಂದ್ರ ಅಸೆಂಬ್ಲಿಯಲ್ಲಿ ಮಂಡಿಸಿದ್ದಾರೆ. ಬಜೆಟನ್ನೋದುತ್ತ, ಅಧಿಕ ಕರದ ಅಧ್ಯಾಯಕ್ಕೆ ಬಂದಾಗ ಸರ್. ಜೆರೆಮಿಯವರು ತುಸು ನಿಧಾನಿಸಿ, ಒಂದು ಗ್ಲಾಸು ನೀರು ಕುಡಿದುಕೊಂಡರೆಂದು ಸಮಾಚಾರವಿದೆಯಲ್ಲಿದೆ; ಅದನ್ನು ಕೇಳಿದ ಮೇಲೆ ಪ್ರತಿಯೊಬ್ಬ ಹಿಂದೀಯನಿಗೂ ಒಂದು ಗ್ಲಾಸು ನೀರು ಕುಡಿಯಲೇ ಬೇಕಾದಷ್ಟು ಹೊಟ್ಟೆಯುರಿಯೇಳಬಹುದು! ಯುದ್ಧವೆಚ್ಚ ವರುಷದಿಂದ ವರುಷಕ್ಕೆ ಹೆಚ್ಚುತ್ತಿದೆ, ಅದನ್ನು ಬಾಯಿಗೂಡಿಸಿಕೊಳ್ಳಲು ಭಾರತೀಯರ ಮೇಲೆ ವರುಷಂಪ್ರತಿ ಅಧಿಕಾಧಿಕ ಕರಬೀಳುತ್ತಿದೆ ಎಂಬುದರಿಂದಾಗಿಯೇ ಇದು ವ್ಯಯ ಮತ್ತು ಆಯದ ಪಟ್ಟಿ!

1944-45ರ ಈ ಆಯವ್ಯಯ ಅಂದಾಜಿನಂತೆ ಸದ್ಯದ ಕರಭಾರಕ್ಕೆ ಇನ್ನೊಂದು 24 ಕೋಟಿಯನ್ನು ಹೆಚ್ಚಿಗೆ ಸೇರಿಸಲಾಗಿದೆ. ಇವುಗಳಲ್ಲಿ ತಂಬಾಕು ತೆರಿಗೆಯ ಹೆಚ್ಚಳ ಮತ್ತು ಕಾಫಿ, ಚಹ, ಅಡಿಕೆಯ ಮೇಲೆ ಬಿದ್ದ ಹೊಸ ಕರಗಳೂ ಸೇರಿವೆ. ಕಾಫಿ, ಎಲೆಯಡಿಕೆಗಳ ಮೇಲೆ ಹೇರಿದ ಕರವೇ ಜನಸಾಮಾನ್ಯರ ಗಂಟಲು, ಹಟ್ಟೆಗಳಿಗೂ ಸರ್ ಜೆರೆಮಿಯವರು ಇಕ್ಕಿದ ಕರ! ಅಧಿಕೋತ್ಪತ್ತಿಯಿರುವವರ ಮೇಲೆ ಬಿದ್ದ ವಿಶೇಷ ದಾಯ ತೆರಿಗೆಯಾಗಲೀ, ಮರಣದಲ್ಲಿರುವ ಮರಣ ತೆರಿಗೆಯಾಗಲೀ, ಶ್ರೀಮಂತರ ಕಾಲಿಸವಾದ್ದರಿಂದ ತಪ್ಪಲ್ಲ. ಆದಾಯ ತೆರಿಗೆಯ ಮಿತಿಯನ್ನು ರೂ. 2000ದ ಉತ್ಪತ್ತಿಗೇರಿಸಿದುದರಿಂದ ಬಹುಸಂಖ್ಯಾಕ ಸಣ್ಣ ವ್ಯಾಪಾರಸ್ಥರಿಗೆ ಉಪಕಾರವಾಗಿದೆ. ಅಂತೆಯೇ ರಾಷ್ಟ್ರೀಯ ಔದ್ಯೋಗಿಕ ಶೋಧನೆಗಾಗಿ ಹಣ ಪ್ರತ್ಯೇಕಿಸಿಟ್ಟುದು—ಯುದ್ಧಾನಂತರದ ಅಭಿವೃದ್ಧಿಗಾಗಿ 'ಮೋರಲ್ ಫಂಡ್' ನಿರ್ಮಾಣದ ಸೂಚನೆಯಿರುವದು—ಈ ಅಂದಾಜುಪತ್ರದ ಮತ್ತೆರಡು ಉತ್ತಮಾಂಶಗಳು.

ಆದರೆ ಇವೆಲ್ಲಾ ಇಂಥವುಗಳಂತಿದ್ದು ಈ ಬಜೆಟಿನ ಕಾಂಡದಲ್ಲೇ ಹುಳಬಿದ್ದಿದೆ. ಯಾವ್ದರಿಂದ ಹಿಂದೀಯರು ದಿಗಿಲುಗೊಳ್ಳಬೇಕಾಗಿದೆ. ಯುದ್ಧಜನ್ಯ ಆರ್ಥಿಕ ಘೋರಣೆಯೇ ಈ ಆಯವ್ಯಯ ಪಟ್ಟಿಯ ಅಸ್ತಿವಾರ. ಸರಕಾರದ ಅರ್ಥಿಕ ಖಾತೆಯ ಪ್ರಕಟಣೆಯಂತೆ, 1943-44ಕ್ಕೆ ಅಂತ್ಯವಾಗುವ 5 ವರುಷಗಳಲ್ಲಿ ದೇಶದ ಒಟ್ಟು ವ್ಯಯ 1,004-76 ಕೋಟಿ. ಯುದ್ಧಪೂರ್ವದಲ್ಲಿ ಈ ಅವಧಿಯ ಸಾಮಾನ್ಯ ಖರ್ಚು ಕೇವಲ 426 ಕೋಟಿ. ಅರ್ಥಾತ್ 579 ಕೋಟಿಗಳಷ್ಟರ ಅಧಿಕ ವ್ಯಯವು ಯುದ್ಧ ಸ್ಥಿತಿಯಿಂದಾಗಿ ಎಂಬುದು ಸ್ಪಷ್ಟ. ಬಡಭಾರತೀಯರ ಮೇಲೆ ಬಿದ್ದ ಯುದ್ಧಭಾರವಿಷ್ಟೇ ಎಂದು ಭಾವಿಸಬಾರದು. ಇದು ತೆರಿಗೆ ರೂಪದಿಂದ ಬಿದ್ದ ಪ್ರತ್ಯಕ್ಷಾಂಶ; ಇನ್ನು ಊಟ, ಉಡುಗೆ, ಗೃಹೋಪಕರಣಗಳ, ಕಡಿತಗಳ ರೂಪದಿಂದ ಕಡಿಮೆಯೆಂದರೆ ತಲೆಗೆ 10 ರೂ. ಗಳಂತೆ ಯುದ್ಧಭಾರಬೀಳುತ್ತಿದೆ. ವರುಷಂಪ್ರತಿ ಈ 100 ಕೋಟಿ ರೂ. ಗಳನ್ನು ರಕ್ಷಣಾವೆಚ್ಚದ ಪ್ರತ್ಯಕ್ಷಾಂಶಗಳಿಗೆ ಸೇರಿಸಿ ನೋಡಿದರೆ, ಹಿಂದೀಯರಿಗೆ ತಾಗಿರುವ ಕ್ಷಯವು ದಿಗಿಲೆಬ್ಬಿಸದಿರದು.

ಯುದ್ಧ ಕಾಲದಲ್ಲಿ ಸಹಜವಾದ ವ್ಯಯಾಧಿಕ್ಯವನ್ನೇ 'ಕ್ಷಯರೋಗ' ಎಂದು ತಪ್ಪಾಗಿ ನಾವು ಕರೆದುದಲ್ಲ; ಅನ್ಯ ದೇಶಗಳ ಮಾತು ಬೇರೆ. ಅಲ್ಲೆಲ್ಲಾ ಯುದ್ಧದೆಸೆಯಿಂದಾಗಿ ಔದ್ಯೋಗಿಕಾಭಿವೃದ್ಧಿಯು ಮುಮ್ಮಡಿ, ನಾಲ್ಮಡಿಯಷ್ಟಾಗಿದೆ ಉತ್ಪತ್ತಿ ಹೆಚ್ಚಿದೆ; ಅದಕ್ಕನುಗುಣವಾಗಿ ವ್ಯಯವೂ ಹೆಚ್ಚಿದೆ. ಆದ್ದರಿಂದ ಅದು 'ಕ್ಷಯ'ವಲ್ಲ- 'ಜೀರ್ಣ' ಹಿಂದೂದೇಶದ ಪಾಡು ಹಾಗಲ್ಲ; ಯುದ್ಧಜನ್ಯ ಅಧಿಕ ವ್ಯಯವು ಇಲ್ಲಿಯ ಕಾರ್ಖಾನೆಗಳಲ್ಲಿ ಅಥವಾ ಉದ್ಯಮಗಳ ಮೂಲಕ ಆಗುತ್ತಿದ್ದರೆ, ಪರಿಸ್ಥಿತಿ ಇಷ್ಟೊಂದು ಕೆಡುತ್ತಿದ್ದಿಲ್ಲ; ಈ ಖರ್ಚೆಲ್ಲಾ ಜನರ ಹಾಗೂ ಕಾರ್ಯಾಲಯಗಳ ಹೊಟ್ಟೆಗಿಳಿದು ಪುಷ್ಟೀಕರಿಸುತ್ತಿತ್ತು. ಆದರೆ ಅವುಗಳಲ್ಲಿ ಹೆಚ್ಚಿನಂಶವೀಗ ವಿದೇಶಿ ಮಾರ್ಕೆಟುಗಳಿಗೆ ಅಥವಾ ವಿದೇಶೀ ವ್ಯಾಪಾರೀಕೂಟಗಳಿಗೆ ಮೀಸಲಿವೆ. ಯುದ್ಧ ಸಂಬಂಧೋಪಕರಣ ಕಾರ್ಖಾನೆಗಳಿಗೆ ಹಿಂದುಸ್ಥಾನದಲ್ಲಿ ಅಸ್ತಿತ್ವವಿಲ್ಲ; ಆ ಸಂಬಂಧದ ಯಾವ ವಿಧದ ವಹಿವಾಟುಗಳೂ ಹಿಂದೀಯರ ಕೈಯಲ್ಲಿಲ್ಲ. ಇಂತಹ ಸ್ಥಿತಿಯಲ್ಲಿಯೂ ಯುದ್ಧಾನಂತರದ ಯೋಜನೆಗಳ ಕುರಿತು ದೊಡ್ಡ ದೊಡ್ಡ ಮಾತುಗಳನ್ನಾಡಿದ ಸರ್. ಜೆರೆಮಿಯವರ ಎದೆಗಾರಿಕೆಯು ಅಲೌಕಿಕವಾದುದು! ಈ ಯುದ್ಧದಲ್ಲಿ ಬಿಕ್ಷುವರನ್ನೇನೇ ಮಾಡಿದರೂ, ಹಿಂದೀಯರನ್ನಂತೂ ಬ್ರಿಟಿಷರು ಕೋರಿಸುವದು ಖಂಡಿತ ಎಂಬುದಕ್ಕೆ ಈ 'ಆಯವ್ಯಯ'ವೊಂದು ನಿದರ್ಶನ.

ಶ್ರೀರಾಮಕೃಷ್ಣ ವಿದ್ಯಾರ್ಥಿನಿ ಭವನ ಮಂಗಳೂರು.

ಇದರ ಸಹಾಯ ಸಂಗ್ರಹ ಸಮಿತಿಯ ಪ್ರಕಟಣೆಯೊಂದನ್ನು ಈ ಸಂಚಿಕೆಯ ಪುರವಣಿಯಾಗಿ ಇಟ್ಟಿದ್ದೇವೆ. ಸ್ಥಳ ಮತ್ತು ಕಟ್ಟೋಣಕ್ಕಾಗಿ ಧನ ಸಹಾಯ ಪಡೆಯಲು ನಾಡವ ಸಂಘಗದ ಮಹಾಸಭೆ'ಯವರು ನೇಮಿಸಿದ್ದ ಅಧ್ಯ ಮಹನೀಯರು ಬೊಂಬಾಯಿ ಮೊದಲಾದ ಕಡೆಗಳಲ್ಲಿ ಸಮಾಜದ ಬಂಧುಭಗಿನಿಯರಿಂದ ಸಂಗ್ರಹಿಸಿದ ಸಹಾಯಗಳ ಯಾದಿ ಅದರಲ್ಲಿದೆ. ಇದುವರೆಗೆ ಸಂಗ್ರಹವಾದ, ಹಾಗೂ ವಾಗ್ದಾನವಾದ ಮೊತ್ತವು ಧ್ಯೇಯಸಾಧನೆಗಿನ್ನೂ ದೂರದಲ್ಲಿದೆ. ನಾಡವ ಸಮಾಜದಲ್ಲಿ ಸ್ತ್ರೀ ವಿದ್ಯಾಭ್ಯಾಸದ ಪ್ರಗತಿಯಂತೂ ಗಂಡಿಗಿಂತಲೂ ಹಿಂದಿದೆ. ಊರು ಪರ ಊರುಗಳಲ್ಲಿ ವ್ಯಾಪಾರೋದ್ಯಮದಲ್ಲಿರುವವರ ಪಾಲಿಗೆ ಇಂದಿನ ಅನುಕೂಲಕಾಲ; ಅಂದಮೇಲೆ ಅಗತ್ಯವಾಗಿ ನೆರವೇರಬೇಕಾದ ಸಮಾಜಹಿತ ಕಾರ್ಯವೊಂದು ಈ ಕಾಲದಲ್ಲೂ ಬಾಕಿಯುಳಿಯುವದು ಭೂಷಣವಲ್ಲ. ಆದ್ದರಿಂದ ವಿದ್ಯಾರ್ಥಿನಿ ಭವನರಚನೆಯ ಈ ಸತ್ಕಾರ್ಯವನ್ನು ಪೂರೈಸಿಕೊಡಲು ಎಲ್ಲರೂ ನೆರವಾಗಬೇಕೆಂಬ ಸಮಿತಿಯ ವಿನಂತಿಯನ್ನು ನಾವು ಅನುಮೋದಿಸುತ್ತೇವೆ.

NOTICE.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 15/1944.

ಲೀಲಾವತಿ (ಪ್ರಾಯಸ್ಥಳು) ರಕ್ಷಕ ತಂದೆ ಲಕ್ಷ್ಮಣ ಶಿವರಾಮ ರಾವ್-ಸುಬ್ರಾಯರ ಮಗ, ಪಳ್ಳಿ ಗ್ರಾಮ— ಅರ್ಜಿದಾರಳು.

ಅರ್ಜಿದಾರಳ ತಾಯಿ ಮೃತಪಟ್ಟ ವನಜಾಕ್ಷಿಯಂಮ್ಮಗ ಕುಕ್ಕುಜೆ ಗ್ರಾಮದ ಬರಂಬೆಟ್ಟಿನಲ್ಲಿರುವ ಅಧಿಕಾರಿ ಕೃಷ್ಣಯ್ಯನವರ ಮಗ ನಾರಾಯಣಯ್ಯನು ತಾರೀಕು 27-9-1941ರಲ್ಲಿ ರೂಪಾಯಿ 150—0—0ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ಅೈವೇಜು ವಸೂಲು ಮಾಡುವ ಹಾಗೆ ಅರ್ಜಿದಾರಳ ಬಗ್ಗೆ ಅವಳ ರಕ್ಷಕನಿಗೆ ವಾರಿಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಕ್ಲು ಮಾಡಿದ ಸದರಿ ಅರ್ಜಿಯು ತಾರೀಕು 16-3-1944ಕ್ಕೆ ತನಕಿಗೆ ಯಿಟ್ಟಿದೆ ಆಕ್ಷೇಪಣೆಯಿದ್ದವರು ಆ ದಿವಸ ಹ್ಯಾಜೀರುಮಾಡಿಕೊಳ್ಳತಕ್ಕದ್ದು

K. Naraina Rao.
Advocate for Petitioner.

ಉಡುಪಿ
1—3—1944

ಬೇಕಾಗಿದ್ದಾರೆ.

ಸದ್ಯದಲ್ಲೇ ರಂಗಭೂಮಿಗೆ ಬರಲಿರುವ ಅತ್ಯಾಧುನಿಕ ಸಾಮಾಜಿಕ ನಾಟಕ.

'ಸ್ವಾಮಿಯ ಸೋಲು'

ಈ ನಾಟಕದಲ್ಲಿ ಪಾತ್ರ ವಹಿಸಲು ಯೋಗ್ಯರಾದ ನಟನಟಿಯರು ಬೇಕಾಗಿದ್ದಾರೆ.

ಬರೆಯಿರಿ-

X ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ದುರ್ಬೀನು

ಅಂಗಾತ ಕೆಡವಿದ ಕುಸ್ತಿ ನಿಲ್ಲಿಸಬಾರದು; 'ಅಹುದು, ಅಸ್ಸಿ'ಸದೆ ವಾದ ನಿಲ್ಲಿಸಬಾರದು.

೦೦ ೦೦ ೦೦

ಖಡ್ಗ, ಕೋವಿಗಳದು ಯೋಧಯೋಗ್ಯ ಹೋರಾಟ; ನಖದಂತಗಳದು ಕ್ರೋಧಜನ್ಯ ಕಚ್ಚಾಟ. ಸಯುಕ್ತಿಕತೆಯಿದ್ದರದು ತರ್ಕ; ನಿರ್ಯುಕ್ತಿಕತೆಗಿಳಿದಂವ ಮೂರ್ಖ.

೦೦ ೦೦ ೦೦

ಕೊಳಲಿಗೆ ತೂತುಗಳಿರಬೇಕು ನಿಜ-ಹಾಗೆಂದು ಬಿರುಕೂ ಸೇರಿ ಹೋದರೆ ಸ್ವರವ್ಯಂಗ್ಯವಾದೀತು; ಕಾರ್ಯಕರ್ತರಿಗೆ ಅನುಯಾಯಿಗಳೇನೋ ಬೇಕು--ಹಾಗೆಂದು ಅನ್ಯಾಯಿಗಳೂ ಸೇರಿಕೊಂಡರೆ ಧೋರಣೆ ಭಂಗವಾದೀತು.

೦೦ ೦೦ ೦೦

ಹುಲ್ಲು ಮೇಯುವ ಅಭ್ಯಾಸ ಮಾತ್ರವಿರುವ ಕುದುರೆಯನ್ನು ಕಟ್ಟಿಬಿಟ್ಟರೆ ಗಾಡಿಯನ್ನೂ ಹುಲ್ಲುಗಾವಲಿಗೆಳೆದೀತು; ಒಣ ಸಂಪ್ರದಾಯ ದವನನ್ನನುಕರಿಸಿದರೆ, ಸುಧಾರಕರನ್ನೂ ಅಲ್ಲಿಗೆಳೆದಾನು.

೦೦ ೦೦ ೦೦

ಮಣ್ಣುಮರೆಯಲ್ಲಿದ್ದ ಕಪ್ಪೆ 'ಫೋರಂಕ್' ಎಂದರೆ ಭೂತಾಯಿಯೇ ಬಾಯಿಬಿಟ್ಟಂತಲ್ಲ; ಅಶ್ರುಯದಲ್ಲಿರುವ ಅಲ್ಪರ ಕಿರಿಚಾಟವೇ ಅಧ್ಯರ ಅಭಿಪ್ರಾಯವಿಲ್ಲ.

೦೦ ೦೦ ೦೦

ಕಾಮ್ಯಕ್ಕಿರುವ ಬೆಂಕಿಯನ್ನು ಕೊಳ್ಳಿಯಿಂದಲೇ ಇಡಲು ಸಾಧ್ಯ; ಅಂಧಾಚಾರದ ಅಸ್ತವ್ಯಸ್ತತೆಗೆ ಕೊಳ್ಳಿ, ಅಂಧಶ್ರದ್ಧೆಯವರೇ ಆಗಲು ಸಾಧ್ಯ.

ಬಲ್ಗೇರಿಯಾದ ಶಾಂತಿ ಯೋಚನೆ?

ಬಲ್ಗೇರಿಯವು ಯುದ್ಧದಿಂದ ಹೊರಗೆ ನಿಲ್ಲಲು ಇಚ್ಛಿಸುತ್ತಿದೆಯೆಂದು ಹಿಂದಿನ ವಾರ್ತೆ. ಅದು ರಶ್ಯದ ಮೇಲೆ ಯುದ್ಧಸಾರಿಲ್ಲ. ತಾನು ಗ್ರೀಸ್ ಮತ್ತು ಯುಗೊಸ್ಲೋವಿಯಾಗಳಿಂದ ಅಪಹರಿಸಿದ್ದ ಭೂಭಾಗಗಳನ್ನು ಮರಳಿ ಕೇಳದಿದ್ದರೆ ಮಿತ್ರರೊಡನೆ ಶಾಂತಿಯಲ್ಲಿರಲು ಅದರ ಆಕ್ಷೇಪವಿಲ್ಲ. ರಶ್ಯಾದ ಮೂಲಕ ಶಾಂತಿ ಸೂಚನೆ ಕೊಡಬಹುದೆಂದು ನಿರೀಕ್ಷೆ. ಆದರೆ ಈಗ ಆ ಕುರಿತು ಪ್ರಸ್ತಾಪವಿಲ್ಲ.

ಫಿನ್ಲೆಂಡು ಸಮಯವುಳಿಸುತ್ತಿದೆ!

ರಶ್ಯವು ಫಿನ್ಲೆಂಡಿಗೆ ಕೊಟ್ಟ ಶಾಂತಿ ಸೂಚನೆಗಳು ಅತ್ಯುದಾರವಿವೆ ಎಂದು ಲಂಡನ್ ಹಾಗೂ ವಾಷಿಂಗ್ಟನಿನ ಅಭಿಪ್ರಾಯ. ಆದರೆ ಫಿನ್ಲೆಂಡ್ ಆ ಕುರಿತು ಸಮಾಧಾನಪಟ್ಟಿಲ್ಲ. ಮಾತ್ರವಲ್ಲ, ಜರ್ಮನ್ ಅಧಿಕಾರಿಗಳೊಡನೆ ವಿಚಾರವಿನಿಮಯದಲ್ಲಿದ್ದು ಕಾಲಾನುಕೂಲತೆಗಾಗಿ ಕಪಟ ನಾಟಕವಾಡುತ್ತಿದೆಯೆಂಬ ಊಹೆಯಿದ್ದಿದೆ. ರಶ್ಯವು ತನ್ನ ಸೂಚನೆಗಳಲ್ಲಿ ಒಂದು ಶಬ್ದವನ್ನು ಕೂಡಾ ಇನ್ನು ಕಡಿಮೆಮಾಡಿಕೊಳ್ಳುವಂತಿಲ್ಲವೆಂದೂ ಒಂದು ಮಿನಿಟು ಕಾಯುವಂತೆಯೂ ಇಲ್ಲವೆಂದೂ ನಿಶ್ಚಿತವಾಗಿ ತಿಳಿಸಿಬಿಟ್ಟಿದೆ. ಫಿನ್ಲೆಂಡಿನಲ್ಲಿರುವ ನಾಜೀ ಸೇನೆಗಳನ್ನೋಡಿಸಬೇಕು, ಇಲ್ಲವೇ ಬಂಧಿಸಿಡಬೇಕು ಎಂಬ ರಶ್ಯದ ಸೂಚನೆಯನ್ನಂಗೀಕರಿಸುವದು ಅದಕ್ಕೆ ಕಷ್ಟವಾಗಿದೆಯಂತೆ.

ಆಯವ್ಯಯ ಧೋರಣೆಯ ಆಮೂಲಾಗ್ರ ಖಂಡನೆ!

ಟರ್ಕಿಯ ತಾಟಸ್ಥ್ಯ

ಇದು ಇನ್ನೊಂದು ಸಮಸ್ಯೆ. ಟರ್ಕಿಯನ್ನು ಯುದ್ಧಕ್ಕಿಳಿಸಲು ಕೈರೋ ಪರಿಷತ್ತಿನ ವೇಳೆ ಮಿತ್ರರ ಪ್ರಯತ್ನ ನಡೆದಿತ್ತೆಂದೂ, ಆದರೆ ಟರ್ಕಿಯು ಅಸಂದಿಗ್ಧವಾಣಿಯಲ್ಲದನ್ನು ತಿರಸ್ಕರಿಸಿಬಿಟ್ಟಿತೆಂದೂ ಈಗ ಸ್ಪಷ್ಟವಾಗಿದೆ. ಟರ್ಕಿಯು ಒಪ್ಪಂದದ್ರೋಹ ಮಾಡಿತೆಂದು ಮಿತ್ರಪಾಳಯದಿಂದ ಬಂದ ಆರೋಪಕ್ಕೆ ಟರ್ಕಿ ರೇಡಿಯೋ ಉತ್ತರಕೊಟ್ಟಿದೆ. "ವಾಗ್ದತ್ತ ಸಹಾಯವು ಸಂಪೂರ್ಣವಾಗಿ ನಮಗೆ ಸಿಗದೆ ನಾವು ಯುದ್ಧಕ್ಕಿಳಿಯುವೆವೆಂದು ಮಿತ್ರರು ನಿರೀಕ್ಷಿಸುವದೇ ತಪ್ಪು. ಆ ಶರ್ತ ಪೂರೈಸಲ್ಪಟ್ಟರೆ ಯುದ್ಧಭಾಗಿಯಾಗಲು ಮತ್ತೆ ಹಿಂದ ಮುಂದು ನೋಡುವಂತಿಲ್ಲ" ಎಂಬುದೇ ಟರ್ಕಿಯ ಅಭಿಪ್ರಾಯ. ಮಾತುಕತೆ ಮುರಿದ ದಿನವೇ ಟರ್ಕಿಗೆ ಹೋಗುತ್ತಿದ್ದ ಮಿತ್ರರಾಷ್ಟ್ರಗಳ ಉಪಕರಣಗಳು ಪೂರ್ತಿ ನಿಂತುಹೋಗಿವೆ.

ಜಪಾನಿನಲ್ಲಿ

ನಾವಿಕರು ಉಪಹಾರ ಗೃಹ, ನಾಟ್ಯಗೃಹ, ಮನೋರಂಜನಾಲಯಗಳನ್ನು ಸರಕಾರವು ಮುಚ್ಚಿಸಿಬಿಟ್ಟಿದೆ. ಇದರಿಂದ ಯುದ್ಧ ಕಾರ್ಖಾನೆಗಳಲ್ಲಿ ದುಡಿಯಲು ೬೫ ಸಾವಿರ ಕೆಲಸಗಾರರು ಹೆಚ್ಚಿಗೆ ದೊರೆತಿದ್ದಾರೆ.

ಹಿಂದೂ ವಿವಾಹ ಕಾಯಿದೆ

ಡಿಲ್ಲಿಯ ಕೇಂದ್ರ ಎಸೆಂಬ್ಲಿಯಲ್ಲಿ ಹಿಂದೂ ವಿವಾಹ ಕಾಯಿದೆ ಕ್ರೋಢೀಕರಣದ ಮಸೂದೆಯನ್ನು ಶಾಸನ ಮಂಡಳಗಳ ಸಂಯುಕ್ತ ಸಮಿತಿಯೊಂದರ ಪರಿಶೀಲನೆಗೊಪ್ಪಿಸಬೇಕೆಂಬ ಕಾನೂನು ಮಂತ್ರಿಗಳ ಸೂಚನೆಯನ್ನು ಸನಾತನೀ ಹಿಂದುಗಳ ಪರವಾಗಿ ಶ್ರೀ. ವೈಜನಾಥ ಬಜೋರಿಯಾರವರು ವಿರೋಧಿಸಿದರು. ಮಹಿಳಾ ಸದಸ್ಯೆ ಶ್ರೀಮತಿ ರೇಣುಕಾರೇಯವರು ಅದನ್ನು ಸಮರ್ಥಿಸಿದರು. ಮಸೂದೆಯು ಸಮಿತಿಗೊಪ್ಪಿಸಲ್ಪಟ್ಟಿದೆ.

ಒಕ್ಕಲಿಗರ ಸಹಾಯಕ್ಕಾಗಿ

10ಕೋಟಿ ರೂ. ಗಳನ್ನು ಸಾಲವೆತ್ತಬೇಕು; ಅಧಿಕಾಹಾರೋತ್ಪತ್ತಿಗಾಗಿ ಇದನ್ನು ರೈತರಿಗೆ ಸಹಾಯವಾಗಿ ಸಲ್ಲಿಸಬೇಕು ಎಂದು ಡಾ। ದೇಶಮುಖರು ಎಸೆಂಬ್ಲಿಯಲ್ಲಿ ತಂದ ನಿರ್ಣಯವು ಮಂಜೂರಾಗಿದೆ.

ಬಂಗಾಳದಲ್ಲಿ ಪುನಃ ಬರಗಾಲ

ಬಂಗಾಳದ ಈ ವರ್ಷದ ಬೆಳೆಯುತ್ತಮವಿದ್ದು, ಆರಿವಾಸಿಯಷ್ಟು ಇಷ್ಟರಲ್ಲೇ ಮಾರ್ಕೆಟಿಗೆ ಬಂದಿದೆಯಾದರೂ ಸಾಮಾನ್ಯರಿಗೆ ಅಕ್ಕಿ ಸಿಕ್ಕುತ್ತಿಲ್ಲ; ಬೆಲೆಕಡಿಮೆಯಾಗಿಲ್ಲ. ಸರಕಾರವು ತಟಸ್ಥವಾಗಿ ನಿರೀಕ್ಷಿಸುತ್ತಿದೆ ಹೊರತು ವ್ಯವಸ್ಥೆ ಕೈಗೊಂಡಿಲ್ಲ. ಆದ್ದರಿಂದ ಬಂಗಾಳದಲ್ಲಿ ಮತ್ತೊಮ್ಮೆ ಬರಗಾಲ ತಲೆಯೆತ್ತುವ ಭೀತಿಯಿದೆ. ಎಂದು ಆ ಪ್ರಾಂತ್ಯವನ್ನು ಸಂಚರಿಸಿ ಬಂದ ಶ್ರೀ ಅಮೃತಲಾಲ್ ಶೇಟರಿಂದಿದ್ದಾರೆ.

ಪ್ರಮುಖರ ಜೈಲು ವೆಚ್ಚ

ಆಗಾಖಾನ್ ಅರಮನೆಯಲ್ಲಿ ಗಾಂಧೀಜೀ ಮತ್ತು ಅವರೊಡನಿರುವ ಅನುಯಾಯಿಗಳಿಗೆ ತಿಂಗಳಿಗೆ ೫೫೦ ರೂ ಖರ್ಚಾಗುತ್ತದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರಲ್ಲಿ ಒಬ್ಬನಿಗೆ 100 ರೂ.ಗಳಂತೆ ಖರ್ಚಾಗುತ್ತಿದೆ ಎಂದು ಎಸೆಂಬ್ಲಿಯಲ್ಲಿ ಶ್ರೀ ನಿಯೋಗಿಯವರ ಪ್ರಶ್ನೆಗೆ ಮೇಕ್ಸವೆಲ್ಲರು ಉತ್ತರವಿತ್ತಿದ್ದಾರೆ.

ಅನುಕೂಲತೆಗಳು

ಅವರೆಲ್ಲಾ ಅವರಿಗೆ ಬೇಕಾಗುವ ಪತ್ರಿಕೆಗಳನ್ನು ತರಿಸಿಕೊಳ್ಳಬಹುದು. ಆದರೆ ಕುಟುಂಬಿಕರೊಡನೆ ಅಥವಾ ಮಿತ್ರರೊಡನೆ ಸಂಭಾಷಣೆಗೆ ಅವಕಾಶ ಕೊಡುವದಿಲ್ಲ. ಗಾಂಧಿಯವರಿಗೆ 15 ಪತ್ರಿಕೆಗಳೂ ಇತರ ವರ್ಕಿಂಗ್ ಕಮಿಟಿ ಮೆಂಬರರಿಗೆ 16 ಪತ್ರಿಕೆಗಳೂ ದೊರೆಯುತ್ತವೆ. ಮೆಂಬರರ ಪೈಕಿ ಬಾಬು ರಾಜೇಂದ್ರ ಪ್ರಸಾದ್ ಮತ್ತು ಜೈರಾಮ್‌ದಾಸ್ ದೌಲತರಾಮರು ತಂತಮ್ಮ ಪ್ರಾಂತಗಳಲ್ಲೇ ನಿರ್ಬಂಧದಲ್ಲಿದ್ದಾರಾದ್ದರಿಂದ, ಅವರ ಸಂಬಂಧದ ಜವಾಬ್ದಾರಿ ಆಯಾಯಾ ಪ್ರಾಂತಿಕ ಸರಕಾರಗಳದ್ದೇ ಎಂದೂ ಸರಕಾರೀ ಸದಸ್ಯರು ವಿದಿತ ಪಡಿಸಿದ್ದಾರೆ.

ಬರ್ಲಿನಿನ ಮೇಲೆ

ಆಗಾಗ ಬ್ರಿಟಿಷ್ ಹಾಗೂ ಅಮೇರಿಕನ್ ವಿಮಾನಗಳು ಬೋಂಬು ಹಾಕುತ್ತಲೇ ಇವೆ. ಲಂಡನಿನ ಮೇಲೆ ಜರ್ಮನರ ಧಾಳಿಯು ಅಗಿಂದಾಗ ನಡೆಯುತ್ತಲೇ ಇದೆ. ವಿಮಾನ ಸಂಖ್ಯೆ ... ಸಿಪ್ಪುಕಲ್ಪಗಳ ತುಲನೆಮಾಡುವಾಗ ಮಿತ್ರರ ಧಾಳಿಗೆ ಜರ್ಮನರದು ಸಾಟಿಯಿಲ್ಲವೆಂದು ಬ್ರಿಟಿಷ್ ಪ್ರಕಟಣೆಗಳಿಂದ ತಿಳಿಯಲಾಗುತ್ತದೆ.

ರುಮೇನಿಯದ ಶಾಂತಿಯಾಚನೆ?

ಫಿನ್ಲೆಂಡ್ ಸಂಧಾನೇಚ್ಛೆಯನ್ನೂ ಅಸಿಸ್ಥಿತವಿದ್ದಾಗ ರುಮೇನಿಯವು ಸಂಧಾನಕ್ಕ ತಯಾರಾಗಿದೆಯೆಂಬ ವಾರ್ತೆ ಬಂದಿದೆ. ರುಮೇನಿಯದ ಪ್ರಮುಖಾಧಿಕಾರಿಯೊಬ್ಬರು ಸ್ಪೆಶ್ಯಲ್ ವಿಮಾನವೊಂದರಲ್ಲಿ ಕುಳಿತು ಸ್ವೀಡನಿನಲ್ಲಿರುವ ರಶ್ಯನ್ ರಾಯಭಾರಿ ಮೇಡಮ್ ಕೊಲೊಂಟಾಯಿಯೊಡನೆ ಮಾತಾಡಲು ಸ್ಟೋಕ್‌ಹಾಮಿಗೆ ಹಾರಿರುವರೆಂದು ತಟಸ್ಥ ರಾಷ್ಟ್ರಗಳಿಂದ ಸುದ್ದಿ.

ಇಟೆಲಿಯ ನೌಕಾ ವಿಚ್ಛೇದ

ಇಟೆಲಿಯ ನೌಕೆಗಳಲ್ಲಿ ಕೆಲವನ್ನು ರಶ್ಯಕ್ಕೆ ಕೊಡುವೆವೆಂದ ಅಧ್ಯಕ್ಷ ರುಜವೆಲ್ಟರ ಮಾತಿನ ಸೂರ್ಣ ವಿವರಣೆಯನ್ನು ಮಾರ್ಶಲ್ ಬೊಡೊಗ್ಲಿಯೋ ಕೇಳಿದ್ದಾನೆ. ಇಟೆಲಿಯ ಎಲ್ಲಾ ಯುದ್ಧ ಹಡಗಗಳನ್ನೂ ತಮ್ಮ ಸಮುದ್ರಕ್ಷೇತ್ರ ತಂದು ಅಲ್ಲಿ ಮಿತ್ರರ ಪಕ್ಷ ವಹಿಸಿ ಮುಖ್ಯವಾಗಿ ಜಪಾನಿ ಯುದ್ಧಕ್ಕೆ ಉಪಯೋಗಿಸಬೇಕೆಂಬುದೇ ಬೊಡೊಗ್ಲಿಯೋ ಸರಕಾರದ ಬಯಕೆಯಂತೆ.

ಜಪಾನ

ಎಡ್ಮಿರಲ್ಟಿ ದ್ವೀಪಗಳಲ್ಲಿ ಅಮೇರಿಕನ್ ಸೈನಿಕರಿಗೂ ಜಪಾನಿಯರಿಗೂ ಹೋರಾಟ ನಡೆದ ಸುದ್ದಿ ಕೆಲದಿನಗಳ ಹಿಂದೆ ಬಂದಿತ್ತು. ಆ ವೇಳೆಗೆ ನ ಸ್ಪಷ್ಟ ವಾರ್ತೆ ದೊರೆತಿಲ್ಲ. ಟ್ರಕ್‌ನಲ್ಲಿ ದೊಡ್ಡದಾಗಿರುವ ನೊನಾಪ ದ್ವೀಪದ ಮೇಲೆ ಇತ್ತೀಚೆಗೆ ಅಮೇರಿಕನ್ ಧಾಳಿ ನಡೆಯಿತು.

ಪಕ್ಷ ರಹಿತರ ಪರಿಷತ್ತು

ಎಪ್ರಿಲ್ 7 ಮತ್ತು 8ಕ್ಕೆ ಪಕ್ಷರಹಿತರ ಪರಿಷತ್ತು ಲಕ್ನೋದಲ್ಲಿ ನೆರೆಯಲಿದೆಯೆಂದೂ ಸರ್. ಸಪ್ರುಗಳು ಅಧ್ಯಕ್ಷರಾಗುವರೆಂದೂ ಕಾರ್ಯದರ್ಶಿ ಕುಂಜ್ರುರವರ ಸರ್ ಜಗದೀಶ್ ಪ್ರಸಾದರು ಪ್ರಕಟಿಸಿದ್ದಾರೆ. ಈ ಸಂದರ್ಭದಲ್ಲಿ ಸರ್ವ ಪಕ್ಷೀಯ ಪರಿಷತ್ತನ್ನು ಕರೆಯುವದು ನಿರರ್ಥಕವೆಂದು ಅವರೆಲ್ಲರ ಅಭಿಪ್ರಾಯ.

ದಿವಂಗತ ಕಸ್ತೂರಿ ಬಾ

ಇವರ ಬಿಡುಗಡೆಯ ಚಿನ್ನಹವಾವು ದೂ ಸರಕಾರಕ್ಕೆ ಬಂದಿರಲಿಲ್ಲ; ಆಗಾಖಾನ್ ಅರಮನೆಯಿಂದ ಅವರನ್ನು ಹೊರಡಿಸಿದರೆ ಅದೊಂದು 'ದಯೆ'ಯಾಗುವದೇದು ಸರಕಾರಕ್ಕೆ ತೋರಲಿಲ್ಲ. ಅನಾರೋಗ್ಯದ ವೇಳೆ ಗಾಂಧಿಯವರು ಸದಾ ಹಾಜರಿದ್ದರಲ್ಲದೆ ದಿವಂಗತೆಯ ಸ್ವರಾಜ ಕ್ರಿಯೆಯು ಅವರಿಚ್ಛೆಯನ್ನನುಸರಿಸಿಯೇ ನಡೆಯಿತೆಂದು ನನಗೆ ವಾರ್ತೆಬಂದಿದೆ, ಎಂದು ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಮಿ. ಅಮೆರಿಯರ ಪರವಾಗಿ ಮಿ. ಬಟ್ಲರು ಉತ್ತರವಿತ್ತಿದ್ದಾರೆ.

ಅಧಿಕಾರಿಗಳ ಮೇಲೆ ಫೋಜದಾರಿ ಆರೋಪ!

ರಾಜಮಹೇಂದ್ರಿಯಲ್ಲಿ ಸಬ್ ಕಲೆಕ್ಟರ್ ಆಗಿದ್ದ ಶ್ರೀ. ಟಿ. ಎಸ್ ಸ್ವಾಮಿನಾಥನ್ ಐ ಸಿ ಎಸ್,ಮತ್ತು ಜೊರಂಟ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಬೆಂಚ್ ಕ್ಲಾರ್ಕ್ ಆಗಿದ್ದ ಕೆ. ಅಚ್ಯುತ ರಾಮಯ್ಯ, ಇವರಿಬ್ಬರ ಮೇಲೆ ಕ್ರಿಮಿನಲ್ ತಕ್ಸೀರು, ವಿಶ್ವಾಸ ದ್ರೋಹ ಮತ್ತು ಫೋರ್ಜರಿ ಲೆಕ್ಕಪತ್ರಗಳ ಆರೋಪದಿಂದ ರಾಜ ಮಹೇಂದ್ರಿಯಲ್ಲಿ ವಿಚಾರಣೆಗಾರಂಭವಾಗಿದೆ. ಸಾಕ್ಷಿ ವಿಚಾರಣೆಯು ವೇಳೆ ಅಧಿಕಾರಿಗಳ ವರ್ತನೆಯ ವಿಲಕ್ಷಣ ಮಾದರಿಗಳು ಕೆಲವು ಬೆಳಕಿಗೆ ಬಿದ್ದಿವೆ.

ಬಜೆಟ್ ಚರ್ಚೆ

ಇದೇ ತಾ ೭ರಿಂದ ಎಸೆಂಬ್ಲಿಯಲ್ಲಿ ಬಜೆಟ್ ಚರ್ಚೆ ಆರಂಭವಾಗಿದೆ. ಪ್ರಜಾಪ್ರತಿನಿಧಿ ಸದಸ್ಯರು ಪಕ್ಷಭೇದವಿಲ್ಲದೆ ಸರಕಾರದ ಆರ್ಥಿಕ ಧೋರಣೆಯನ್ನು ಕಠಿಣವಾಗಿ ಟೀಕಿಸಿದ್ದಾರೆ. 'ಬ್ರಿಟನ್ನಿನ ಶ್ರೀಮಂತಿಕೆಯುಳಿಸುವ ಪ್ರಯತ್ನವಿದು' 'ಬಡವರ ಮೇಲೆ ಅಸಹನೀಯ ಹೊರೆ' 'ಅನೈತಿಕ ಹಾಗೂ ಅಯೋಗ್ಯ ಪಥ ಹಿಡಿಯಲಾಗಿದೆ' ಎಂದೆಲ್ಲಾ ಅವಿನಾಶಲಿಂಗ ಚೆಟ್ಟಿಯಾರ್, ಕೃಷ್ಣಮಾಚಾರಿ, ಅಬ್ದುಲ್ ರಶೀದ್ ಚೌದರಿ, ಸರದಾರ ಸಂತ ಸಿಂಗ್ ಮೊದಲಾದವರು ಟೀಕಿಸಿದ್ದಾರೆ.

ಬ್ರಿಟಿಷ್ ಸೈನಿಕರ ಸಂಬಳ

ಸೈನಿಕರ ಸಂಬಳವನ್ನು ಹೆಚ್ಚಿಸಬೇಕು ಕೊನೆಯ ಪಕ್ಷ ಅಮೇರಿಕ ಅಥವಾ ಡೊಮಿನಿಯನ್ ಸೇನೆಗಳಿಗೆ ದೊರೆಯುವಷ್ಟಾದರೂ ಕೊಡಬೇಕು ಎಂಬ ಕುರಿತು ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಸಜೀವ ಚರ್ಚೆ ನಡೆಯಿತು. ಈ ಸೂಚನೆಯನ್ನು ಮಾನ್ಯಮಾಡಿದರೆ ವರುಷಕ್ಕೆ 100,000.000ಪೌಂಡುಗಳಷ್ಟು ವೆಚ್ಚ ಹೆಚ್ಚಾಗುವದೆಂದು ಯುದ್ಧಮಂತ್ರಿಗಳು ವಿರೋಧಿಸಿ ಅದು ಬಿದ್ದು ಹೋಯಿತು.

ಅಜೇಯ ಚರ್ಚಿಲ್!

ಲಂಡನಿನ ಔತನ ಸಮಾರಂಭವೊಂದರಲ್ಲಿ ಮಿ. ಚರ್ಚಿಲ್ಲರೊಂದಿಗೆ ಭಾಗವಹಿಸಿದ್ದ ಲೋರ್ಡ್ ಮೋರನರು (ಚರ್ಚಿಲ್ಲರು ಇತ್ತೀಚೆಗೆ ಕಾಯಿಲೆ ಬಿದ್ದಾಗ ಚಿಕಿತ್ಸೆಮಾಡಿದ ಡಾಕ್ಟರರೊಬ್ಬರು) ಭಾಷಣವೀಯುತ್ತಾ "ನಿರಾಶಾಜನಕ ಹಿಂದೋಟಗಳ ವಾರ್ತೆ ಬರುವ ಹೊತ್ತಿನಲ್ಲಿ ಒಮ್ಮೆಯಲ್ಲ—ಹಲವು ವೇಳೆ ನಾನು ಚರ್ಚಿಲ್ಲರ ಬಳಿಯಿದ್ದೆ. ಈ ಅನುಭವದಿಂದ ಅವರನ್ನು ಅಜೇಯರೆಂದು ತಿಳಿದಿದ್ದೇನೆ" ಎಂದರು.

ರಶ್ಯನರ ನೂತನ ಧಾಳಿ

ರಶ್ಯದ ಉಕ್ರೈನ್ ವಿಭಾಗದಲ್ಲಿ ಕೆಂಪುಸೇನಾನಿಯಾಗಿದ್ದ ಜನರಲ್ ವಾಟುಟಿನನ ಅನಾರೋಗ್ಯದ ನಿಮಿತ್ತ 1941ರಲ್ಲಿ ಮೋಸ್ಕೋವನ್ನು ಉಳಿಸಿ, ಸ್ಟಾಲಿನ್‌ಗ್ರಾಡಿನ ಜರ್ಮನರಿಗೆ ಮೃತ್ಯುಪ್ರಾಯನಾದ ಮಾರ್ಶಲ್ ಝುಕೋವನ್ನು ಅಲ್ಲಿಗೆ ನೇಮಿಸಲಾಗಿದೆ. ಅವನೀಗ ಉಕ್ರೈನ್ ವಿಭಾಗದಲ್ಲಿ 120 ಮೈಲು ವಿಸ್ತಾರಕ್ಕೆ ಧಾಳಿಯಾರಂಭಿಸಿ ೩೦ ಮೈಲು ಮುಂದೆ ಹೋಗಿದ್ದಾನೆ. ಜರ್ಮನರಲ್ಲಿ ಅತಿಕಷ್ಟದ ಪ್ರಾಣ ಮತ್ತು ಉಪಕರಣ ನಷ್ಟಕ್ಕೀಡಾಗುತ್ತಿದ್ದಾರೆ.

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ.

1944ರಿಂದ 3ನೇ ಸಂಪುಟಾರಂಭ.

ವಾರ್ಷಿಕ ಚಂದಾ 3-0-0

ಬಿಡಿ ಪ್ರತಿಗೆ 0-4-0

ಜಾಹೀರಾತು ದರ, ವಿವರಗಳಿಗೆ ಬರೆಯಿರಿ.

ಮೆನೇಜರ್, ಪ್ರಕಾಶಿನಿ, ಉಡುಪಿ.

ಮುದ್ರಣ:- ನವಯುಗ ಪ್ರೆಸ್.

The Canara Industrial & Banking Syndicate, Ltd.

(Incorporated in British India. Liability of Members Limited).

Head Office:—UDIPI.

NOTICE.

The Register of Members and Transfer Books of the Syndicate will remain closed from 16th March 1944 to 13th April 1944 both days inclusive.

(By Order.)

"MUKUND NIVAS", UDIPI, 2nd March, 1944.

K. V. Shenoy,
Secretary.

ದಕ್ಷಿಣ ಕನ್ನಡ-

ಮಂಗಳೂರು

ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ವಾರ್ಷಿಕ ಸಭೆಯು ತಾ. 29-2-44ರಲ್ಲಿ ಶ್ರೀ| ಹುರುಳಿ ಭೀಮರಾಯರ ಅಧ್ಯಕ್ಷತೆಯಿಂದ ಜರಗಿ, ಶ್ರೀ| ಕು| ಶಿ| ರಾಯರಿಂದ ವರದಿ ವಾಚನವಾಗಿ ಲೆಖ್ಖಪತ್ರಗಳ ಪರಿಶೀಲಿಸಿದಬಳಿಕ ಕಾರ್ಯಕಾರೀ ಮಂಡಲಕ್ಕೆ ಕೆಳಗಿನವರು ಚುನಾಯಿತರಾದರು. ಶ್ರೀಗಳಾದ ಹುರುಳಿ ಭೀಮರಾಯರು (ಅಧ್ಯಕ್ಷ), ಎಸ್| ಮುಕುಂದರಾಯರು (ಉಪಾಧ್ಯಕ್ಷ), ಕಯ್ಯಾರ ಕಿಞ್ಞಣ್ಣ ರೈಗಳು (ಕಾರ್ಯದರ್ಶಿ ಮತ್ತು ಕೋಶಾಧಿಕಾರಿ), ಬಿ| ವಿ| ಬಾಳಿಗರು, ಎನ್| ಸುಬ್ಬರಾಯರು, ಹಿರಿಯಡ್ಕ ರಾಮರಾಯ ಮಲ್ಯರು ಮತ್ತು ಉಡುಪಿ ಗೋವಿಂದರಾಯರು (ಸದಸ್ಯರು).

ಶ್ರೀ. ಕೈಡೆಲ್ ತಿಮ್ಮಪ್ಪ ಶೆಟ್ಟರು- ಒಂದು ತಿಂಗಳ ಪೆರೋಲ್‌ನ ಮೇಲೆ ತಂಜಾವೂರು ಸೆರೆಮನೆಯಲ್ಲಿ ಸ್ಥಾನಬದ್ಧರಾಗಿರುವ ಶ್ರೀ| ಕೈಡೇಲ್ ತಿಮ್ಮಪ್ಪ ಶೆಟ್ಟರು ಮಂಗಳೂರಿಗೆ ಬಂದಿರುವರು.

ಅನಿರ್ಬಂಧ ಬಿಡುಗಡೆ- ತಂಜಾವೂರು ಸೆರೆಮನೆಯಲ್ಲಿ ಸ್ಥಾನಬದ್ಧರಾಗಿದ್ದ ಶ್ರೀ| ಬಾಲಪ್ಪ ಇವರು ಅನಿರ್ಬಂಧ ಬಿಡುಗಡೆ ಹೊಂದಿ ಮಂಗಳೂರಿಗೆ ಬಂದಿರುವರು. ಸ್ಥಾನಬದ್ಧತೆಯಲ್ಲಿದ್ದ ಶ್ರೀ ಲೋಕಯ್ಯಶೆಟ್ಟರೂ ಪೆರೋಲಿನಲ್ಲಿ ಬಂದಿರುವರು.

ಕಯ್ಯೂರು ಕುಟುಂಬಗಳಿಗೆ ಬ್ರಿಟಿಷ್ ಮಜೂರರ ೩,೩೦೦೦ ದಾನ— ಪೋಲೀಸನೊಬ್ಬನು ಕೊಲ್ಲಲ್ಪಟ್ಟನೆಂಬ ಆರೋಪದಿಂದ ಕಳೆದ ವರುಷ ಮಾರ್ಚ ೨೯ರಂದು ಗಲ್ಲಿಗೇರಿಸಲ್ಪಟ್ಟ ಕಯ್ಯೂರು ಗ್ರಾಮದ ಶ್ರೀಗಳಾದ ಮಠತಿಲ್ ಅಪ್ಪು, ಚಿರುಕಂಡನ್, ಅಬೂಬಕರ್ ಮತ್ತು ಕುಞ್ಞಂಬು ನಾಯರ್ ಇವರ ನಾಲ್ಕು ಕುಟುಂಬಗಳಿಗೆ ಸಹಾಯವಾಗಿ ಬ್ರಿಟಿಷ್ ಮಜೂರರು ೬೭,೦೦೦ ರೂ|ಗಳನ್ನು ಸಂಗ್ರಹಿಸಿ ಮುಂಬಯಿಯ ಶ್ರೀ| ಎನ್| ಎಂ| ಜೋಶಿ, ಎಂ| ಎಲ್| ಎ| ಇವರಿಗೆ ಕಳುಹಿಸಿಕೊಟ್ಟಿದ್ದ ಹಣವು, ಮಂಗಳೂರಿಗೆ ಬಂದಿದ್ದು ಆ ಹಣವನ್ನು ಆ ಕುಟುಂಬದವರು ಬಂದು ಬ್ಯಾಂಕಿನಿಂದ ಪಡಕೊಂಡರು.

ಇನ್ನೂ ಸೆರೆಮನೆಯಲ್ಲಿರುವ ರಾಜಕೀಯ ಕೈದಿಗಳಿಗೆ ಸಹಾಯಕೊಡುವುದಕ್ಕಾಗಿ ಆ ನಾಲ್ಕು ಕುಟುಂಬದವರು ಒಟ್ಟು ೧೨೦೦ ರೂಪಾಯಿಗಳ ಒಂದು ನಿಧಿ ಮಾಡಿ ಅದನ್ನು ಕಮ್ಯುನಿಸ್ಟ್ ಪಕ್ಷದ ವಶಕೊಟ್ಟಿರುವರು.

ಪ್ಲೇಗು ರೋಗ ನಿವಾರಣೆಗೆ ಬಂದರ ಸಾಹುಕಾರರ ಸಭೆ— ಕಳೆದ ತಾ. ೨೭ರಂದು ಬಂದರ ಸಾಹುಕಾರರ ಸಭೆಯೊಂದು ಕೆನರಾ ವಾಣಿಜ್ಯ ಸಂಘದ ಆಶ್ರಯದಲ್ಲಿ ಶ್ರೀ| ಸೇಡಿಯಾಪು ರಾಜ ಪಡಿವಾಳರ ಅಧ್ಯಕ್ಷತೆಯಲ್ಲಿ ಸೇರಿ, ಮಂಗಳೂರಲ್ಲಿ ಪ್ಲೇಗು ರೋಗದ ಸೂಚನೆಯಿರುವುದರಿಂದ ಅದರ ನಿವಾರಣೆಗಾಗಿ ತಾ| ೬ರಿಂದ ಮಾರ್ಚ ೫ರ ವರೆಗೆ ಬಂದರದ ಎಲ್ಲಾ ಸಾಹುಕಾರರೂ ಸ್ವಚ್ಛಗೊಳಿಸುವ ವಾರ ಆಚರಿಸಬೇಕೆಂದೂ, ಕೊಯಮುತ್ತೂರಲ್ಲಿ ಪ್ಲೇಗು ಬೇನೆ ಹರಡಿರುವುದರಿಂದ ಅಲ್ಲಿಂದ ಸರಕನ್ನು ಆಮದುಗೊಳಿಸಬಾರದಾಗಿಯೂ ನಿರ್ಣಯವಾಗಿದೆ.

ಹಜೂರಾಫೀಸು ಮುಚ್ಚಿದೆ— ಇಲಿ ಬಿದ್ದ ಸಂಬಂಧ ಮಂಗಳೂರು ಹಜೂರು ಆಫೀಸು ಒಂದು ವಾರದ ವರೆಗೆ, ಮಾರ್ಚ ೧೧ರ ವರೆಗೆ ಮುಚ್ಚಲಾಗಿದೆ. ಮಂಗಳೂರಲ್ಲಿ ಪ್ಲೇಗು ಇನಾಕುಲೇಶನ್ ಕಾರ್ಯ ನಡೆಯುತ್ತಿದೆ.

ಮಿಶನ್ ಹೈಸ್ಕೂಲಲ್ಲಿ ಇಲಿ ಬಿದ್ದಿದೆಯಾಗಿ ಆ ಸಂಬಂಧ ಕೆಲ ದಿನಗಳ ವರೆಗೆ ಈ ಶಾಲೆಯನ್ನು ಮುಚ್ಚಲಾಗಿದೆ.

ಮಂಗಳೂರಲ್ಲಿ ಬೇಗನೆ ರೇಶನಿಂಗ್ ಇಲ್ಲ?— ಪ್ರಾಂತಿಕ ರೇಶನಿಂಗ್ ಆಫೀಸರರಾದ ಶ್ರೀ| ಗ್ರಬ್ಬರು ಮಂಗಳೂರಿಗೆ ಬಂದಿದ್ದು, ಕಳೆದ ಆದಿತ್ಯವಾರ ಗವರ್ನಮೆಂಟ್ ಕಾಲೇಜಿನಲ್ಲಿ ಒಂದು ಸಭೆ ಸೇರಿ ಅವರು ರೇಶನಿಂಗ್ ವಿಚಾರ ಕೆಲವು ಮಾಹಿತಿಯಿತ್ತರು. ಶ್ರೀಗಳಾದ ಆರ್| ಆರ್| ತಲ್ಚೇರಿಕರ್, ಸಿ| ಎಲ್| ಲೋಬೋ ಮೊದಲಾದವರು ಕೇಳಿದ ಪ್ರಶ್ನೆಗಳಿಗೆ ಗ್ರಬ್ಬರು ಉತ್ತರಕೊಡುತ್ತಾ ಸುಮಾರು ೧|| ತಿಂಗಳ ಅಕ್ಕಿ ದಾಸ್ತಾನು ಆದ ಕೂಡಲೆ ಮಂಗಳೂರಲ್ಲಿ ಪೂರ್ಣ ರೇಶನಿಂಗ್ ಜಾರಿಗೆ ಬರುತ್ತದೆ ಈಗ ಅಷ್ಟು ತಯಾರಾಗಿಲ್ಲ; ಎಂದರೆ ೬೦ ಸಾವಿರ ಮುಡಿ ಅಕ್ಕಿ ಬೇಕು; ಈಗ ೧೪ ಸಾವಿರ ಮುಡಿ ಅಕ್ಕಿ ಇದೆ. ರೇಶನಿಂಗಿನ ಇತರ ಕೆಲಸಗಳೆಲ್ಲಾ ಸಿದ್ಧವಾಗಿವೆ ಎಂದರು. ಚಿಮ್ಣಿ ಎಣ್ಣೆಯ ಅಭಾವದ ಕುರಿತು ಪ್ರಶ್ನಿಸಲು ಈ ಕುರಿತು ನೀವು ನಿಮ್ಮ ಕಲೆಕ್ಟರರನ್ನು ಕೇಳಿ ಎಂದರು. ಬರುವ ತಿಂಗಳ ಅಂತ್ಯದ ಸುಮಾರಿಗೆ ಪೂರ್ಣ ರೇಶನಿಂಗ್ ಆಗುವುದೆಂದು ಗ್ರಬ್ಬರು ಹೇಳಿದರು.

ವಿವಾಹ— 'ನವಭಾರತ' ಮತ್ತು 'ಸಾರಸ್ವತ' ಪತ್ರಿಕೆಯ ಉಪಸಂಪಾದಕರಾದ ಶ್ರೀ| ಬಿ| ವಾಸುದೇವ ಬಾಳಿಗರ ವಿವಾಹವು ಶ್ರೀ| ಬೈಲೂರು ಪಾಂಡುರಂಗ ಶೆಣೆಯವರ ಪುತ್ರಿ ಶ್ರೀಮತಿ ಉಮಾಬಾಯಿ ಯವರೊಡನೆ ತಾ. 27ರಂದು ಮುಣ್ಣಗದ್ದೆಯ ವಧುವಿನ ಮನೆಯಲ್ಲಿ ಸಂಭ್ರಮದಿಂದ ಜರಗಿತು. ವಧೂವರರಿಗೆ ಹಲವು ಶುಭಸಂದೇಶಗಳೂ ಉಡುಗೋರೆಗಳೂ ಬಂದಿದ್ದುವು.

ಉಡುಪಿ.

ಸಾಕಷ್ಟು ಮಂದಿ ಹಾಜರಿಲ್ಲ— ಇದೇ ತಾ. ೬ರಲ್ಲು ಜರಗಬೇಕಾಗಿದ್ದ ಉಡುಪಿ ಮುನಿಸಿಪಲ್ ಕೌನ್ಸಿಲ್ ಸಭೆಗೆ ಸಾಕಷ್ಟು ಮಂದಿ ಸದಸ್ಯರು ಹಾಜರಿಲ್ಲದ ಕಾರಣ ಸಭೆಯನ್ನು ಮುಂದರಿಸಬೇಕಾಗಿ ಬಂತು. ಗೈರು ಹಾಜರಾದ ಮೆಂಬರರಲ್ಲಿ ಚೆಯರ್‌ಮೇನರೂ ಒಬ್ಬರು.

ಮರುದಿನ- ಮುಂದರಿಸಲ್ಪಟ್ಟ ಸಭೆಯು ಅರ್ಜಂಟ್ ಮೀಟಿಂಗ್ ಆಗಿ ಮರುದಿನ ಚೆಯರ್‌ಮೆನ್ ಶ್ರೀ. ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ 1944-45ನೆ ವರುಷದ ಬಜೆಟನ್ನು ವಿಮರ್ಶಿಸಿ ಅದನ್ನು ಸಮತೂಕದಲ್ಲಿರಿಸುವರೆ ಸರಕಾರವು ಕೊಟ್ಟ ಸೂಚನೆಗಳನ್ನು ಪರಿಶೀಲಿಸಲಾಯಿತು. ಪ್ರಾಪರ್ಟಿ ಟೇಕ್ಸ್ ಜಾಸ್ತಿ ಮಾಡಲು ಸಾಧ್ಯವಿಲ್ಲವೆಂದು ಕೌನ್ಸಿಲು ಅಭಿಪ್ರಾಯಪಟ್ಟು ಇತರ ಲೈಸನ್ಸ್ ಫೀಸುಗಳನ್ನು ಮಾತ್ರ ಏರಿಸಿ ಬಜೆಟಿನ ಏರುತಗ್ಗುಗಳನ್ನು ಸಮಪಟ್ಟಕ್ಕೆ ತರುವುದೆಂದಾಯಿತು.

ಶ್ರೀ. ಪಿ. ಮಂಜುನಾಥ ನಾಯ್ಕರು- ಡಿಫೆನ್ಸ್ ಒಫ್ ಇಂಡಿಯಾ ಶಾಸನದ ಮೇರೆಗೆ ಕೈದು ಮಾಡಲ್ಪಟ್ಟವರು ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು. ಇವರ ವಿಚಾರಣೆಯು ತಾ. 20ರಲ್ಲು ಕುಂದಾಪುರ ಮೆಜಿಸ್ಟ್ರೇಟನಲ್ಲಿ ಜರಗಲಿರುವುದು

ಮಳೆ:- ಕೆಲವು ದಿನಗಳಿಂದ ಸೆಕೆಯಿದ್ದು ಎರಡು ಮೂರು ದಿವಸಗಳಿಂದ ಮಳೆ ಬರುತ್ತಲಿದೆ. ಧೂಳು ಹಾರುವುದು ಸ್ವಲ್ಪ ನಿಂತಿತು.

ಸಿಡುಬು- ನಗರ ಕ್ಷೇತ್ರದೊಳಗೆ ಅಲ್ಲಲ್ಲಿ ಸಿಡುಬು ತಲೆದೋರಿರುವುದು.

ಕಟಪಾಡಿ— ಶ್ರೀ| ಕೆ| ಮುದ್ದು ಸುವರ್ಣರ ವಿವಾಹವು ತಾ| 30-1-44ರಲ್ಲು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಚಿತ್ತಾಕರ್ಷಕವಾಗಿ ಮದುವೆ ಚಪ್ಪರ, ಮಂಟಪಗಳನ್ನು ತಯಾರಿಸಿದ ಶ್ರೀ| ಯಂ| ನಾರಾಯಣ ಪೈ, ಕಾರ್ಕಳ ಇವರಿಗೆ ಶ್ರೀ| ಸುವರ್ಣರು ಸುವರ್ಣ ಪದಕವೊಂದನ್ನು ಕೊಟ್ಟು ಸನ್ಮಾನಿಸಿದರು

ಕಾಸರಗೋಡು— ಇಲ್ಲಿಯ ವಕೀಲ ಪ್ರಮುಖರೂ ಜನಪ್ರಿಯರೂ ಆದ ಶ್ರೀಮಾನ್ ಚಂದಾವರ ರಾಮರಾಯರವರು ಇದೇ ಕಳೆದ ತಾ. ೩ನೇ ಶುಕ್ರವಾರ ಬೆಳಿಗ್ಗೆ ೫|| ಘಂಟೆಗೆ ತಮ್ಮ ೬೨ನೇ ವಯಸ್ಸಿನಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಪತ್ನಿಯು ಕೆಲವು ವರ್ಷಗಳ ಮೊದಲೇ ಸ್ವರ್ಗಸ್ಥರಾಗಿದ್ದು, ಇವರಿಗೆ ಒಂದು ಹೆಣ್ಣು ಮತ್ತು ಮೂವರು ಗಂಡು ಮಕ್ಕಳೂ ಇರುವರು. ಇವರ ವಿಯೋಗಕ್ಕಾಗಿ ದುಃಖಿಸುವ ಇವರ ಮಕ್ಕಳಿಗೂ, ಇತರ ಬಂಧುಮಿತ್ರರಿಗೂ ನಮ್ಮ ಸಹಾನುಭೂತಿಯನ್ನೊಪ್ಪಿಸುವುದಲ್ಲದೆ, ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ

ವರ್ಗ— ಬಹುಜನಪ್ರಿಯರಾದ ಇಲ್ಲಿಯ ಸ್ಟೇಶನ್ ಹೌಸ್ ಆಫೀಸರ್ ಮಿ| ಫರ್ಟಾಡೋರವರಿಗೆ ಇಲ್ಲಿಂದ ಕೋಯಮುತ್ತೂರಿಗೆ ವರ್ಗವಾಗಿರುವುದೆಂದು ತಿಳಿಯುತ್ತೇವೆ. ಧೈರ್ಯಶಾಲಿಗಳೂ, ಸತ್ಯಪ್ರಿಯರೂ ಆದ ಈ ಮಹನೀಯರನ್ನು ಸ್ವಲ್ಪ ಸಮಯ ಇಲ್ಲಿಯೇ ಇರಗೊಡಿಸುವಂತಾದರೆ ಊರಿನ ಸೇವ್ಯದಿಗೆ ಉಪಕಾರವಿತ್ತೆಂಬು ಮಹಾಜನರ ಅಪೇಕ್ಷೆ.

ಕಲೆಕ್ಟರರ ಪ್ರಕಟಣೆ— "೧೯೪೩ನೇ ಇಸವಿ ಡಿಶಂಬರ ೧೫ನೇ ತಾರೀಕಿಗೆ ಮತ್ತು ಅನಂತರ ಯಾವನೊಬ್ಬ ಹುಣಸೆ ಹುಳಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದಿನೊಳಗಿನ ಯಾವ ಸ್ಥಳದಿಂದಲೂ ಮದ್ರಾಸು ಅಧಿಪತ್ಯದೊಳಗಿನ ಯಾವ ಕಡೆಗೂ ಜಿಲ್ಲಾ ಕಲೆಕ್ಟರವರಿಂದ ಯಾ ಈ ಬಗ್ಗೆ ನೇಮಕ ಪಟ್ಟ ಇತರ ಆಫೀಸರರಿಂದ ಕೊಡಲ್ಪಟ್ಟ ರಹದಾರಿ ವಿನಾ ಒಯ್ಯಕೂಡದು. ಈ ಹುಕ್ಕುಮನ್ನು ಉಲ್ಲಂಘಿಸುವ ಯಾವನೊಬ್ಬನು ಮೂರು ವರ್ಷಗಳಿಗೆ ವಿಸ್ತಾರದ ಸಜೆಯೂ ದಂಡವೂ ಯಾ ಇವೆರಡು ವಿಧಿಸಿ ಶಿಕ್ಷಿಸಲ್ಪಡಲು ಗುರಿಯಾಗುತ್ತಾನೆ.

ಪಿರಿಯಾಡಿಕಲ್ ಕಾನ್ಫರೆನ್ಸ್— ಇತ್ತೀಚೆಗೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜಿ| ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದ ಕಾನ್ಫರೆನ್ಸಿನಲ್ಲಿ ಕುಮ್ರಿ ಬೇಸಾಯದ ಕುರಿತು ಸರಕಾರ ತಿರುಗಿ ಆಲೋಚಿಸಬೇಕೆಂದು ಕೇಳಿಕೊಳ್ಳುವ, ರೈತರಿಗೆ ನೀರಾವರಿ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ಗ್ರಾಂಟು ಮಂಜೂರು ಮಾಡುವ, ಪಂಚಾಯತ ಬೋರ್ಡು ಇತ್ಯಾದಿಗಳು ಬೇಡದ ಕೆಲಸಗಳಿಗಾಗಿ ಉಚಿತ ಗ್ರಾಂಟು ಕೊಡುವ ಸೂಚನೆಗಳು ವ್ಯರ್ಥವಾದುವು; ಕುಂಬಳೆ ಹೊಳೆಯ ಭಾಗದ ೧೫೦ ಅಡಿ ನೆಲವನ್ನು ಉಪಯೋಗಿಸುವ ಯೋಜನೆಯ ವಿಚಾರದಲ್ಲಿ ಪಶ್ಚಿಮ ಕರಾವಳಿ ಭಾಗದ ಎಗ್ಜಿಕ್ಯೂಟಿವ್ ಇಂಜನಿಯರರ ವರದಿಯನ್ನು ನಿರೀಕ್ಷಿಸಲಾಗಿದೆ. ಜಿಲ್ಲೆಯ ಪ್ರತಿಯೊಂದು ತಾಲೂಕು ಹೆಡ್ ಕ್ವಾರ್ಟರ್ಸಿನಲ್ಲಿಯೂ ಒಂದೊಂದು ವೆಟರ್ನರಿ ಆಸ್ಪತ್ರೆಯನ್ನು ಸ್ಥಾಪಿಸಿ ದನಕರುಗಳ ರೋಗವನ್ನು ನಿವಾರಿಸಬೇಕೆಂಬ ಸೂಚನೆಯನ್ನು ಈ ಕಾನ್ಫರೆನ್ಸಿನವರು ಪ್ರಬಲವಾಗಿ ಸಮರ್ಥಿಸಿರುತ್ತಾರೆ

ಬೊಂಬಾಯಿ:— ದ. ಕ. ಜಿಲ್ಲೆಯ ನಾಡವ ಸಮಾಜದ ವಿದ್ಯಾರ್ಥಿನಿಯರ ಹೊಸ್ಟೆಲು ಕಟ್ಟಡದ ಬಗ್ಗೆ ಸಮಾಜದ ಬಂಟರಯಾನೆ ನಾಡವರ ಸಂಘದವರು ಮಾಡಿದ ಮನವಿಯನ್ನು ಮನ್ನಿಸಿ ಬೊಂಬಾಯಿಯಲ್ಲಿ ಶ್ರೀ. ಕೆ. ವಿಠಲ ಸೆಟ್ಟರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯವರು ಧನ ಸಹಾಯದ ಬಗ್ಗೆ ಸಮಾಜದವ ಇತರ ಹಿತಚಿಂತಕರನ್ನು ಭೇಟಿಯಾದ್ದಲ್ಲಿ ಉದಾರ ಹಸ್ತದಿಂದ ಸಹಾಯವೀಯಬೇಕಾಗಿ ಕಮಿಟಿಯ ವಿನಂತಿಯಿದೆ ಎಂದು ಕಮಿಟಿಯ ಜತೆಕಾರ್ಯದರ್ಶಿಯರಾದ ಶ್ರೀ. ಟಿ. ಎಸ್ ಹೆಗ್ಡೆ ಮತ್ತು ಶ್ರೀ. ಕೆ. ಎಸ್. ಸೆಟ್ಟರು ತಿಳಿಸುತ್ತಾರೆ.

ಉಡುಪಿ ತಾಲೂಕು ವರ್ಗದಾರರ ಸಂಘ.

ನೋಟೀಸು.

ಉಡುಪಿ ತಾಲೂಕಿನಲ್ಲಿ ಈಗ ತಾನೆ ಹೊಸತಾಗಿ ಅಕ್ಕಿ ರಿಕ್ವಿಜಿಶನ್ ಮಾಡಲಾಗುವ ರೀತಿ ನೀತಿಗಳನ್ನು ಆಲೋಚಿಸುವದಕ್ಕೂ ಆ ಕುರಿತು ನಮ್ಮ ಸಂಘಕ್ಕೆ ಅಭಿಪ್ರಾಯವನ್ನೀಯುವದಕ್ಕೂ ನಮ್ಮ ಸಂಘದ ಮಹಾಸಭೆಯನ್ನು ಇದೇ ತಿಂಗಳ ತಾ. 12ನೆ ಆದಿತ್ಯವಾರ ಅಪರಾಹ್ನ 3½ ಘಂಟೆಗೆ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಜರಗಿಸಬೇಕಾಗಿ ನಿಶ್ಚಯಿಸಲಾಗಿಯದೆ. ಸಂಘದ ಮೆಂಬರರು ವ ಇತರ ವರ್ಗದಾರರು ಸಕಾಲದಲ್ಲಿ ತಪ್ಪದೆ ಹಾಜರಿರಬೇಕಾಗಿ ವಿನಂತಿ.

ಕೆ. ಜಿ. ಬಲ್ಲಾಳ್,
ಅಧ್ಯಕ್ಷ.

ತಾ 9—3—1944ರಿಂದ

ಪ್ರಭಾತ ಫಿಲ್ಮ್ ಕಂಪೆನಿಯವರ

ನವೀನ ಕಥಾವಸ್ತು

—ನಯಿ ಕಹಾನಿ—

ಜೈರಾಜ್, ರೋಸ್, ನಾಂದ್ರೇಕರ್, ಪರೇಶಬ್ಯಾನರ್ಜಿ.

ಅನಂತರ- ಮಾಸೂಮ್

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

Degrees: Books: Medicines

Free H. L. M. S. M. B. H. M. D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—

Prof. Dr. N. H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach (Regd.)

No. 3 Rs 2. No. 2 Rs 5 No. 1 Rs. 7 Special Rs. 10, Extra Special Rs. 17 for love marriage health, wealth. Ask any six questions with M. O. Re. 1/4 and get correct answers by returnpost Life reading Rs.10 No V.P.P. Send M.O. Free pmplets

Prof Dr. N. H Chhatbar,
P. O. MAHUVA (Kathiawar India.)

CHAMPAE'S
Snow & Castrex
(Sole Distributers for (India.)
Sukhananda Stores
Santhekatte, UDIPI, S. K.

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣಿ ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸು.
ಪುತ್ತೂರು ಏಜಂಟರು: - ಪೈ ಫಾರ್ಮಸಿ

Read & Advertise in
ANTARANGA

ವಿದ್ಯಾವಲ್ಲಭರ ವಾದ ವಿಮರ್ಶೆ

ಯಾರು ತಪ್ಪು ಯಾರು ಸರಿ?

ಉಡುಪಿಯ ಶ್ರೀ ಕೃಷ್ಣ ಮಠದಲ್ಲಿರುವ ಜಗದ್ಗುರು ಶ್ರೀಮದಾನಂದ ತೀರ್ಥ ಭಗವತ್ಪಾದಾಚಾರ್ಯರ ದಿವ್ಯಸಮ್ಮುಖದಲ್ಲಿ ನಡೆಯಬೇಕಾದ ಪಾದ್ಯ ಪ್ರದಾನ ಸಮಾರಂಭದಲ್ಲಿ ಮೊನ್ನೆ ಮಧ್ವನವಮಿಯಂದು ಇತರ ಶ್ರೀಗಳವರ ಜತೆಗೆ ಪುತ್ತಿಗೆ ಮಠದ ಕಿರಿಯ ಸ್ವಾಮಿಗಳು ಬಂದಿಲ್ಲ-ಹಾಗೂ ಭಿಕ್ಷೆಗೂ ಇತರ ಶ್ರೀಗಳವರೊಂದಿಗೆ ಸೇರದೆ ಮಹಾ ಸಂಭ್ರಮದಲ್ಲಿ ಇತರ ಮಹಾಸ್ವಾಮಿಗಳವರೂ ಸಹಸ್ರಾರು ಬ್ರಾಹ್ಮಣರೂ ಕಲೆತುಣ್ಣುವ ಮಹಾ ಪ್ರಸಾದದಲ್ಲಿ ಭಾಗಿಗಳಾಗಿಲ್ಲ—ಎಂಬ ಅಂಶ ನವಯುಗದಲ್ಲಿ ಪ್ರಕಟವಾಗಿತ್ತು. "ಕಿರಿಯ ಶ್ರೀಗಳು ಮಧ್ವನವಮಿ ಪೂಜೆಯಲ್ಲಿ ಸಹಕರಿಸಿದಾರೆ--ಅನಂತೇಶ್ವರದಲ್ಲಿ ಶ್ರೀ ಆಚಾರ್ಯರ ಸನ್ನಿಧಿಗೆ ಪೂಜೆ ಸಲ್ಲಿಸಿದ್ದಾರೆ" ಎಂದು ಅದಕ್ಕೆ ಉತ್ತರವಾಗಿ ಇನ್ನೊಂದು ಪತ್ರಿಕೆಯಲ್ಲಿ ಮುರೀಯ ಬ್ರಾಹ್ಮಣರೊಬ್ಬರು ಪ್ರಕಟಿಸುತ್ತಿದ್ದಾರೆ. ಆ ತರುವಾಯ ಈಚೆಗೆ ವಾದ ಪ್ರತಿವಾದ ನಡೆಯುತ್ತಲೆ ಇದೆ. ಈ ಅವಕಾಶದಲ್ಲಿ ಈ ವಿಚಾರವಾಗಿ ಸ್ವಲ್ಪ ವಿಸ್ತಾರವಾಗಿಯೆ ವಿಮರ್ಶಿಸುವುದು ಆವಶ್ಯವೆನಿಸಿದೆ.

ನವಯುಗದ ಸುದ್ದಿಯ ಸಾರವೇನು ಎಂಬುದನ್ನು ಮೇಲೆಯೆ ದೊಡ್ಡದಾದ ಅಕ್ಷರಗಳಲ್ಲಿ ವಿವರಿಸಿದೆ. ಅದಕ್ಕೆ ಬಂದ ಉತ್ತರದ ಸಾರವನ್ನು ಕೆಳಗೆ ಕೊಟ್ಟಾಗಿದೆ. ವಿಮರ್ಶಾಧಿಕಾರವುಳ್ಳ ಓದುಗರಿಗೆ ಈ ಕುರಿತು ಹೆಚ್ಚಿನ ಮಾತು ಅನಗತ್ಯ. ಅನಂತೇಶ್ವರದಲ್ಲಿರುವ ಶ್ರೀಮದಾಚಾರ್ಯರ ಸನ್ನಿಧಿಗೆ ಹೋಗಿದ್ದಾರೆಯೆ ಇಲ್ಲವೆ ಎಂಬ ಪ್ರಶ್ನೆಯ ತೀರ್ಮಾನಕ್ಕೆ ನವಯುಗ ಯತ್ನಿಸಲಿಲ್ಲ. ಅವರದಕ್ಕೆ ಹೋಗಿರಬಹುದು, ಇತರ ಶ್ರೀಗಳವರ ಜತೆಗೆ ಭಗವಾನ್ ಕೃಷ್ಣ ಮಂದಿರದಲ್ಲಿರುವ ಶ್ರೀಮದಾಚಾರ್ಯರ ಮೂರ್ತಿಯ ಮುಂದೆ ನಡೆಯಬೇಕಾಗಿದ್ದ ವಿಧಿಗೆ ಕಿರಿಯ ಶ್ರೀಗಳು ಲೋಪ ಮಾಡಿದ್ದಾರೆ ಎಂಬುದು ನವಯುಗದ ಸುದ್ದಿ. ಅವರು ಅಲ್ಲಿ ಪೂಜೆಸಲ್ಲಿಸಿದ್ದಾರೋ? ಎಂಬುದು ಇದಕ್ಕೆ ನ್ಯಾಯವಾದ ಉತ್ತರವಾಗಿದೆ. ಅನಂತೇಶ್ವರ--ಕೃಷ್ಣ ಮಠ—ಎರಡೂ ಕಡೆ ಶ್ರೀಮದಾಚಾರ್ಯರ ಪೂಜೆಯ ಆವಶ್ಯಕತೆಯೇನು--ಎಂಬ ಪ್ರಶ್ನೆ ಇಲ್ಲಿ ಬೇಡ. ಇದುವರೆಗೂ ನಡೆದುಬಂದ ಸತ್‌ಸಂಪ್ರದಾಯವನ್ನು ಮುರಿದಿರುವ ವಿಚಾರ ಮಾತ್ರ ಇಲ್ಲಿ ಮುಖ್ಯ. ಈ ಅಪವಾದದ ಸಂಕಲೆಯಿಂದ ಕಿರಿಯ ಶ್ರೀಗಳನ್ನು ಬಿಡಿಸಲು ಸಾವಿರ ವೆಂಕಟರಮಣರು ಬಂದರೂ ಸಂಕಟ ನಿವೃತ್ತಿಯಾಗುವಂತಿಲ್ಲ. ಧಾರೀಣದಲ್ಲಿ ಕೊಟ್ಟ ಉತ್ತರ, ನವಯುಗದ ಸುದ್ದಿಯನ್ನೆ ಒಪ್ಪಿ, ಹಾರಿಕೆಯ ಉತ್ತರ ಕೊಡುವ ಒಂದು ಬಾಲ ಭಾಷಣವೆಂದು ಹೇಳಬಹುದು. ಆ ಮೇಲೆ ಅವರು ಹೊರಡಿಸಿದ ಹೇಳಿಕೆಗಳಲ್ಲೆಲ್ಲ ಒಂದು ಅಸ್ಥಿರತೆ--ಒಂದು ನೋವು-ಒಂದು ಗಲಿಬಿಲಿ--ಒಂದು ನಂಜು-- ಇಷ್ಟು ಕಾಣಬರುತ್ತಿದೆಯಲ್ಲದೆ ಬೇರೇನೂ ಹುರುಳಿಲ್ಲ!

"ಕಿರಿಯ ಶ್ರೀಗಳಿಗೆ 'ವಿದ್ಯಾವಲ್ಲಭ' ಬಿರುದಿದೆ---ಅವರು ಮಧ್ವನವಮಿಯಲ್ಲಿ ವಿಧಿ ಲೋಪ ಮಾಡಿದರೆನ್ನುವ ಜನಕ್ಕೇನು ಬಿರುದಿದೆ?" ಇದು ಅವರ ಹೇಳಿಕೆಯಲ್ಲಿಯ ಒಂದು ಅಂಶ. ಇದಕ್ಕೆ ಉತ್ತರ ಅನವಶ್ಯ. ಧರ್ಮಪ್ರಿಯ ಮನೋವೃತ್ತಿ ನಮ್ಮ ಜನಗಳ ಒಂದು ರಕ್ತಗತ ಸಂಸ್ಕಾರ. ಈ ಸೌಜನ್ಯ ಅವರಿಗೆ 'ವಿದ್ಯಾವಲ್ಲಭ' ಬಿರುದನ್ನಿತ್ತದ್ದೆನಿಸಬಹುದು. ಆದರೆ "ಬಿರುದು" ವಿಧಿಲೋಪಕ್ಕೆ ಅಧಿಕಾರಿಯನ್ನಾಗಿ ಮಾಡುವುದಿಲ್ಲವಷ್ಟೆ? ಆ ಬಿರುದಾದರೂ ಯಾವುದಾದರೊಂದು ಸಂಸ್ಥೆಯಲ್ಲಿ ಕ್ರಮವಾಗಿ ಶಾಸ್ತ್ರಾಭ್ಯಾಸ ಮಾಡಿ, ಪರೀಕ್ಷೆಗೊಟ್ಟು ಪಡೆದ ಡಿಗ್ರಿಯೇ? ಅಥವಾ ಕೇವಲ ಸಂಸ್ಥಾನಾಧಿಪತ್ಯದಿಂದ ಒಂದು ಸಂಸ್ಥೆಯು ಗೌರವಾರ್ಥವಾಗಿ ಕೊಟ್ಟ ಬಿರುದೆ? ಬಿರುದು ಕೊಟ್ಟವರನ್ನೆ ಕೇಳೋಣ, ಅದು ಹೇಗಿದ್ದರೂ ಅದನ್ನು ಅಷ್ಟೊಂದು ದೊಡ್ಡದುಮಾಡಿ ಮಂದಿಯ ಮುಂದೆ ಮೆರೆಯಿಸಿ ತನ್ನ ಲೋಪದೋಷಗಳನ್ನು ಮರೆಯಿಸಿಕೊಳ್ಳುವುದೂ ಉಚಿತವಲ್ಲ.

ನವಯುಗದ ಸುದ್ದಿಯಲ್ಲಿ "ಕಾಣಿಯೂರು ಶೀರೂರು ಶ್ರೀಗಳವರಿಂದ ಒಂದು ಮಾತು ಒಪ್ಪಿಸಬಹುದು" ಎಂಬ ನಯವಾದ ಸಾಧುವಾದ--ಆಹ್ವಾನವಿತ್ತು. ಅಂಥ ದಾರಿಯನ್ನು ಬಿಟ್ಟುಬಿಡಲೇನು ಹೇತು? ಕಾಣಿಯೂರು ಶ್ರೀಗಳೂ ಶೀರೂರು ಶ್ರೀಗಳೂ ಸುಳ್ಳು ಹೇಳಲಾರರೆಂದೇ ಅಲ್ಲವೆ ಅವರ ದಿಗಿಲು?

ದ್ವೈತಮತ ಸಾಮ್ರಾಜ್ಯದಲ್ಲಿಯೆ ವಿಧೂತ ಪರ್ಯ ಹರಿಸಿಕೊಂಡ ನ್ಯಾಯಸ್ಕರರೆನಿಸಿದ ಶ್ರೀ ಶ್ರೀ ಸತ್ಯಧ್ಯಾನತೀರ್ಥ ಶ್ರೀಮಚ್ಚರಣರವರು, ಉತ್ತರಾದಿ ಮಠದ ಮಹಾ ಪೀಠದಲ್ಲಿ ವಿರಾಜಮಾನರಾಗಿದ್ದಾಗ (ಸದ್ಯ ಆ ಮಹನೀಯರು ಭಗವತ್ ಸನ್ನಿಧಾನಕ್ಕೆ ಸೇರಿದ್ದಾರೆ) ಅವರ ಮಠ ಸಂಪ್ರದಾಯದ ಟೀಕೆ ಮಾಡಿದ್ದ ಈ ವಿದ್ಯಾವಲ್ಲಭರು ತನ್ನ ಮಠದ ವಿಧಿಗಳಲ್ಲಿ ಲೋಪ ತಂದರಲ್ಲಾ ಎಂದು ಸುದ್ದಿಗಾರರು ಚಿಂತೆ-ಕಳವಳ-ಗಳನ್ನು ಸೂಚಿಸಿದರೆ ಅದು ಅವರ ಮೇಲಿನ ದ್ವೇಷದಿಂದಲ್ಲ-ಸಂಸ್ಕೃತಿಯ ಮೇಲಿನ ಅಭಿಮಾನದಿಂದ ಇದನ್ನು ತಿಳಕೊಳ್ಳುವ ವಿವೇಕ ಬೇಕು-ಅಷ್ಟೆ!

ಈ ಕಿರಿಯ ಶ್ರೀಗಳ ಪೂರ್ವವೃತ್ತದ ಕಡೆಗೆ ಬೆಳಕು ಹಾಯಿಸೋಣವೆ? ಸದ್ಯ ಆ ವಿಷಯ ಬೇಡ.

ಶ್ರೀ ವೆಂಕಟರಮಣಾಚಾರ್ಯರು ಒಂದೇ ಬಟ್ಟಲಲ್ಲಿ ಉಣ್ಣುವಷ್ಟು ಪ್ರೀತಿಯನ್ನು ಶ್ರೀಗಳಲ್ಲಿ ಇಟ್ಟಿರುವುದೊಂದೇ ಕಾರಣಕ್ಕೆ ಕಟ್ಟುಬಿದ್ದು ಬರಿಯ ಬಾಯ್ಮಾತಿನ ಮುಖದಾಕ್ಷಿಣ್ಯದಿಂದ ಪ್ರತಿಭಟನೆಗೆ ಹೋಗುವುದಕ್ಕಿಂತ ಸುಮ್ಮಗೆ ಕುಳಿತಿದ್ದರೆ ಶ್ರೇಯಸ್ಕರ.

ಮೊತ್ತದಲ್ಲಿ ನವಯುಗದಲ್ಲಿ ಪ್ರಕಟವಾದ ಸುದ್ದಿ ಸಂಪೂರ್ಣ ಸತ್ಯ. ನವಯುಗ, ವಿದ್ಯಾವಲ್ಲಭರಿಗೊಬ್ಬರಿಗೆ ಅಪ್ರಿಯವಾಗಬಹುದಾದರೂ ಬಹು ಜನ ಸಮ್ಮತವಾದ ಸತ್ಯದ ನುಡಿಗಳನ್ನಾಡಿದೆ. ಆ ಕುರಿತು ನವಯುಗದ ಮೇಲಾಗಲೀ-ನವಯುಗದ ಆಪ್ತರ ಮೇಲಾಗಲೀ ವೈಯಕ್ತಿಕ ದೂಷಣೆಯ ಕಾಂಡ ಆರಂಭವಾದರೆ- ವೈಚಾರಿಕ ಧೋರಣೆಯನ್ನು ಮಟ್ಟ ಅಡಗಿಸುವ ಶಕ್ತಿ ಅದಕ್ಕಿಲ್ಲವೇ?

—ವಾಚಕ

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ--
ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಪು ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ನಿರಾಮನ್,
ಮೆನೇಜರ್.

"ಕ್ರಾಸ್‌ವರ್ಡ್ ವಲ್ಲಭ"ರಾಗಿರಿ.

(ಕ್ರಾಸ್‌ವರ್ಡ್ ಪ್ರಿಯ)

ಇದೊಂದು ಒಗಟಿನ ಮಾಲೆ— ಇದೇನೆಂದು ಗ್ರಹಿಸಬಲ್ಲಿರಾ? ಇದನ್ನು ಸರಿಯಾಗಿ ಬಿಡಿಸಿದವರಿಗೆ- ಇದೋ ಬಿರುದು **"ಕ್ರಾಸ್ ವರ್ಡ್ ವಲ್ಲಭರು!"** ಯಾರೂ ಉತ್ತರವನ್ನು ಬರೆದು ಕಳಿಸಿಕೊಡಬೇಕಾಗಿಲ್ಲ. ಒಗಟನ್ನು ಬಿಡಿಸಿದೊಡನೆ-ಬಿರುದನ್ನು ತಾವೇ ಧರಿಸಿಕೊಳ್ಳಬಹುದು!

1. ಗಿರಿಜಾ ಕಲ್ಯಾಣವೆಂದರೇನು?
2. ವೆಂಕಟರಮಣೀ ವಿಲಾಸವೆಂದರೆ?
3. ದೇವೀಬೋಲ ಎಂದರೆ?
4. ತಾಪಸೀ ವಿಯೋಗವೆಂದರೆ?
5. ಚೂಡಾಮಣಿ ಚೌರ್ಯವೆಂದರೆ?
6. ವಿದ್ಯಾ ದರಿದ್ರ ಪ್ರಹಸನವೆಂದರೆ?
7. ಕಿರಿಮಣಿಯ ಕಲ್ಪವೆಂದರೆ?
8. ಯೋಗಿಯೋ ಭೋಗಿಯೋ ಎಂದರೆ

— ಉಳಿದುದಿನ್ನೊಮ್ಮೆ.

NOTICE.

In the Court of the District Munsif of Mangalore.

Claim No. 769 of 1941-42.
R. E. P. No. 7 of 1944

Between

S. K. Government Servants' Co-operative Society-Petitioner.

and

M. K Krishnan Nambiar(dead) and others-- Respondents

2. Mrs. Narayani Amma, widow of M. K. Krishnan Nambiar, residing at Azhiyoor, Kottayam Taluk, Malabar.
3 Madhavan, 4. Sarashandran 5 Bhaskaran. 6. Leela---
Minors by guardian ad-litem 2nd Respondents Narayani Amma.

Whereas the petitioner above-named has made application for Execution of the decree in claim No. 769/1941-42, this is to give you notice that you are to appear before this Court either in person or by pleader on the 22nd day of March 1944 to show cause why the execution should not be granted; failing which the application will be heard and determined in your absence.

M. Janardan Malya,
Pleader for the Petitioner,

Mangalore,
Dated 2-3-44.

ಭಾರತೀಯ ನೃತ್ಯ ಪ್ರದರ್ಶನ

ನೂರಾರು ಚಿತ್ರಗಳ ನಿರ್ದೇಶಕರೂ, ನೃತ್ಯ ಕಲಾಕೋವಿದರೂ ಆದ
ಕುಲಕರ್ಣಿ ಶ್ರೀನಿವಾಸ, ಬಿ ಎ. ಇವರು
ಮಲಬಾರಿನ ಸುಪ್ರಸಿದ್ಧ ಕಥಕ್ಕಳಿ ನರ್ತಕರಾದ

ಆನಂದ ಶಿವರಾಮರೊಡನೆ

ಸುಂದರ ನರ್ತಕ ನರ್ತಕಿಯರ ಮಂಡಲಿಯೊಂದಿಗೆ ನುರಿತ ವಾದ್ಯಗಾರರ ವಾದ್ಯಗೋಷ್ಠಿಯ ಜೊತೆಯಲ್ಲಿ
ಎಪ್ರಿಲ್ ತಿಂಗಳಲ್ಲಿ ಉಡುಪಿಗೆ ಬರಲಿದ್ದಾರೆ.

ತಾರೀಖನ್ನು ಗಮನಿಸಿರಿ. —Kulkarni.

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the [illegible] decoction.

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 6 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಬಿ. ಆಚಾರ್ಯ ಫಾರ್ಮಸಿ; ಡಾ. ಕೆ. ಶೇಷಗಿರಿ ಶೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.**

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920)

Registered Office: Court Road UDIPI South Canara District

Business Offices: Udipi, Mangalore, Katapadi, Kanhangad and Kinnigoli, South Canara.

Authorised and Issued Capital: Rs 2,00 000/-

Subscribed and Paid up Capital: Rs. 2,00,000/-

Reserve Funds: Rs. 1,75,853/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty-three years' reliable banking Service stands to our credit.

For further particulars please call at or apply to the nearest office.

Dated 31-10-1943

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು.)

ಕಡಿಮೆ ದರದ ಬಡ್ಡಿಯಿಂದ ಹಣವನ್ನು ನಾನಾ ತರದಲ್ಲಿ ಒದಗುವಂತೆ ಮಾಡುವದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲವರ ಸಹಕಾರ ಅಪೇಕ್ಷಿಸುವುದು.

M. R. Punja, President & Manager — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

ಸುಖನಿವಾಸಕ್ಕೆ ಬನ್ನಿ!

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ, ವಿದ್ಯುದ್ದೀಪಾಲಂಕೃತ ಕೋಣೆ. ಕಡಿಮೆ ದರ.

ಸುಖನಿವಾಸ

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.

ಉಡುಪಿ : : : : ಮಂಗಳೂರು.

FOR SAFETY & SERVICE

THE VIJAYA BANK, LTD.,

Head office: MANGALORE.

Branches at:—Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ

ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು:—ಮಂಗಳೂರು.

ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.



ನಮ್ಮ ಸುವರ್ಣ ಮಹೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ

ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ. ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧ಹಿಡೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ತುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ.**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd.o N. M. 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೨೮

FOUNDER
Sri. A. B. Shetty.

Vol. 24
No. 28

NAVAYUGA— Kannada Weekly —UDIPI, S. I.

ಉಡುಪಿ • 16—3—1944 • ಮಂಗಳೂರು.

ಕರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.
ಮೂಲ ಲೇಖಕರು —ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)
ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ. 1-12-0. ಟ. ಖ. 0-1-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಡ ಲಾಗುವದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕರಿಯರ ಪ್ರಪಂಚದ
ಇನ್ನೊಂದು ಪ್ರಕಟಣೆ.

ಭಾರತೀಯ ಕತೆಗಳು

ಸಣ್ಣ ಕತೆಗಳ ಸಂಗ್ರಹ
ಮೂಲ ಲೇಖಕರು— ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,
ಅನುವಾದಕರು— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-14-0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಡ ಲಾಗುವುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

Lest History Should Repeat Itself

"I am the monarch of all that I survey" that was Alexander the Great who said it. He had conquered all the lands that he had known and seen and brought the Greek Empire to the zenith of its glory and power. But his sudden death in the prime of his life brought about the fall of that vast Empire and to-day Greece itself has lost even its freedom.

You are the monarch of your family and are solely responsible for its present and future status and lest History should repeat itself you should insure your life.

The Canara Mutual Assurance Co., Ltd.,

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಕವಿಾಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಸ್ವಾಮುಖ್ಯ ಏಜಂಟರು.-

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಿಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ [illegible] ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ. ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಶೋಷಯುವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುದದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪವಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತರಕ್ತವನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕ್ಯಾಟಲಾಗಿನ ಸಂಗ್ತಿ ಬರದಲ್ಲಿ ತಕ್ಕವಾದ ಔಷಧಿ ಚುನಾಯಿಸಿ ರವಾನಿಸಬಹುದು.

ಕೆಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಉಡುಪಿ ಏಜಂಟರು:- ನವಭಾರತ ಬುಕ್ ಡಿಪೊ, ಸಂತೆಕಟ್ಟೆ - ಉಡುಪಿ.

"75 ಹಿಡಿಯುವಾಗ ಗಾಂಧಿಜೀ 75 ಲಕ್ಷವನ್ನೂ ಹಿಡಿಯಲಿ"!

ಕಸ್ತೂರಿಬಾ ಸ್ಮಾರಕ ನಿಧಿಗಾಗಿ ಮುಖಂಡರ ವಿನಂತಿ

'ಕಸ್ತೂರಿ ಬಾ ಗಾಂಧಿ ರಾಷ್ಟ್ರೀಯ ನಿಧಿ' ಎಂಬ ಹೆಸರಿನಿಂದ 75 ಲಕ್ಷ ರೂಪಾಯಿಗಳ ನಿಧಿಯೊಂದನ್ನು ಸಂಗ್ರಹಿಸಿ, ಭಾರತದ ಮಹಿಳೆಯರ ಕಲ್ಯಾಣಾರ್ಥವಾಗಿ ಹಾಗೂ ವಿದ್ಯಾಭ್ಯಾಸಕ್ಕಾಗಿ ವ್ಯಯಿಸುವಂತೆ, ಬರುವ ಅಕ್ಟೋಬರ್ 2ಕ್ಕಾಗುವ ಗಾಂಧಿಜೀಯ 75ನೇ ಜನ್ಮದಿನ ಅವರ ಹಸ್ತಕ್ಕೊಪ್ಪಿಸಬೇಕು-ಎಂಬ ವಿಜ್ಞಾಪನೆಯೊಂದು ಪಂಡಿತ ಮದನಮೋಹನ ಮಾಲವೀಯರೇ ಮೊದಲಾದ 40 ಮಂದಿ ದೇಶಪ್ರಮುಖರ ಸಹಿಯಿಂದ ಭಾರತೀಯರ ಅವಗಾಹನೆಗಾಗಿ ಪ್ರಕಟಿಸಲ್ಪಟ್ಟಿದೆ. ದೇಶಕ್ಕಾಗಿ ಪತ್ನಿಯನ್ನು ಬಲಿಕೊಟ್ಟ ಮಹಾತ್ಮಾಜೀಯನ್ನು ಒಂಟಿಯಾಗಿರಲು ಬಿಡದೆ, 'ಮಹಿಳಾ ಕಲ್ಯಾಣ ರೂಪೀ' ಸಹಧರ್ಮಿಣಿಯನ್ನು ದೇಶವೊದಗಿಸಿಕೊಟ್ಟು ಋಣ ಸಂದಾಯ ಮಾಡಬೇಕು ಎಂಬುದೇ ಈ ನಿಧಿ ನಿರ್ಮಾಣದ ಪವಿತ್ರೋದ್ದೇಶ. ಕನ್ನಡಿಗರ ಅವಗಾಹನೆಗಾಗಿ ಆ ಹೃದಯಸ್ಪರ್ಶೀ ಮನವಿಯನ್ನೇ ಇಲ್ಲಿ ಕೊಡಲಾಗಿದೆ.

ವಿಜ್ಞಾಪನೆ

"ಶ್ರೀಮತಿ ಕಸ್ತೂರಿ ಬಾ ಗಾಂಧಿಯವರ ಶೋಚನೀಯ ನಿಧನವು ದೇಶವ್ಯಾಪೀ ಕಳವಳ ಹಾಗೂ ದುಃಖವನ್ನು ನಿರ್ಮಿಸಿದೆ. ಅವರು ಕಳೆದ 30 ವರುಷಗಳಿಂದ ಭಾರತೀಯ ಜೀವನದಲ್ಲಿ ಪಡೆದ ಸ್ಥಾನ-ಅದಕ್ಕನುಗುಣವಾಗಿ ಜೈಲಲ್ಲೇ ಹೊಂದಿದ ಮರಣ-ಈ ಘಟನೆಯು ಇತ್ತೀಚೆಗೆ ಬೇರಾವುದೂ ಹುಟ್ಟಿಸಿರದಂತಹ ಆವೇಗವನ್ನು ದೇಶದಲ್ಲಿ ಹುಟ್ಟಿಸಿದೆ. ಲೋಕದ ಮಹಾ ಮನುಷ್ಯರೆಲ್ಲ ತಮ್ಮ ಶ್ಲಾಘನೆಯೊಪ್ಪಿಸಿದ್ದಾರೆ; ಹಿಮಾಲಯದಿಂದ ಕನ್ಯಾಕುಮಾರಿಯ ವರೆಗಿನ ಸ್ತ್ರೀಪುರುಷ ಆಬಾಲವೃದ್ಧರು ನೊಂದೆದೆಯಿಂದ ಹಾಗೂ ಪೂಜ್ಯಭಾವನೆಯಿಂದ ಕಣ್ಣೀರಿಡುತ್ತಿದ್ದಾರೆ. ಅಂತಹ ಮಹಿಳೆಗೂ ತಮಗೂ ತಕ್ಕುದಾದ ಪರಿಮಾಣದಲ್ಲಿ ಆಕೆಯ ಸ್ಮಾರಕವೊಂದನ್ನೇರ್ಪಡಿಸಿಕೊಳ್ಳದೆ ಹಿಂದುಸ್ಥಾನದ ಜನರು ಚಿತ್ತಸ್ವಾಸ್ಥ್ಯಗೊಳ್ಳುವಂತಿಲ್ಲವೆಂದು ನಮಗೆ ಮನವರಿಕೆಯಾಗಿದೆ.

ಮಹಾತ್ಮರಿಗೊಪ್ಪುವಂತೆ

"ಕಸ್ತೂರಿಬಾರ ಯಾವುದೇ ಸ್ಮಾರಕವು ಮಹಾತ್ಮಾಜೀಯವರು ತನ್ನ ಪ್ರಾಣವನ್ನೇ ಮುಡಿಪಾಗಿ ಇಟ್ಟಿರುವ ಮಹತ್ತಾದ ಮಾನವ ಸೇವಾ ಕಾರ್ಯಗಳಲ್ಲಿ ಕೊನೆಯ ಪಕ್ಷ ಒಂದಕ್ಕಾದರೂ ಹೊಂದಿಕೆಯಾಗುವಂತಿರಬೇಕು ಎಂದು ರಾಷ್ಟ್ರದ ನಿರೀಕ್ಷೆಯಿದೆ. ಆದ್ದರಿಂದ ಅಖಿಲ ಭಾರತದಲ್ಲ-ಧನಿಕ ಹಾಗೂ ದರಿದ್ರರಿಂದ-ಎತ್ತಲ್ಪಡುವ ಈ ನಿಧಿಯು 'ಕಸ್ತೂರಿ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ'ಯೆಂಬ ಹೆಸರಿನಿಂದ, ಗಾಂಧಿಜೀಗೆ ಅವರ ಈ ಬಾರಿಯ ಜನ್ಮ ದಿನದಲ್ಲಿ ಸಮರ್ಪಿಸಲ್ಪಟ್ಟು ಭಾರತೀಯ ಮಹಿಳೆಯರ ಹಿತ ಸಾಧನೆ ಹಾಗೂ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಲ್ಪಡಬೇಕೆಂದು ನಾವಿಲ್ಲಿ ಸೂಚಿಸುತ್ತೇವೆ. ಹೀಗನ್ನುವಾಗ ಇತರ ವಿಷಯಗಳೊಟ್ಟಿಗೆ, ಗಾಂಧಿಜೀಯ ಮೆಚ್ಚುಗೆ ಪಡೆದಿರುವ, ಹಾಗೂ ರಾಷ್ಟ್ರದ ವಿದ್ಯಾವಂತ ವಂಗಡದ ಒಮ್ಮತದ ಬೆಂಬಲವಿರುವ ಕೈಗಾರಿಕಾ ಶಿಕ್ಷಣ ತತ್ವ ಪ್ರಸಾರೋದ್ದೇಶವೂ ನಮ್ಮ ದೃಷ್ಟಿಪಥದಲ್ಲಿದೆ. ಸದ್ಯದ ಅಸಾಮಾನ್ಯ ಸಂದರ್ಭವನ್ನು ಗಮನಿಸಿ, ಮಹಾತ್ಮ ಗಾಂಧಿಯವರು ಮುಂದಿನ ಒಕ್ಟೋಬರ್ 2ಕ್ಕೆ 75ನೇ ಪ್ರಾಯಕ್ಕೆ ಬಂದುದರ ಕುರುಹಾಗಿ 75ಲಕ್ಷ ರೂ. ಗಳಿಗೆ ಕಡಿಮೆಯಾಗದಷ್ಟನ್ನು ಸಂಗ್ರಹಿಸುವ ಗುರಿಯಿಟ್ಟುಕೊಳ್ಳಬೇಕೆಂದು, ರಾಷ್ಟ್ರದೊಡನೆ ನಮ್ಮ ವಿನಂತಿ.

ಋಣ ಸಂದಾಯ.

"ಈಗ ಅಥವಾ ಇನ್ನು ಮುಂದೆ ಗಾಂಧಿಜೀಯ ಹೆಸರೆತ್ತುವಾಗ ಭಾವೋದ್ರೇಕ ಇಲ್ಲವೇ ಹೊಗಳಿಕೆ ಪಡದಿರಲು ಭಾರತೀಯರಾದವರಿಂದ ಅಸಾಧ್ಯ. ಆದರೆ ಈ ಭಾವ ಅಥವಾ ಹೊಗಳಿಕೆಗಳು ಬೆಲೆಬಾಳುವದು ಅವು ಗಾಂಧಿಜೀಯ ಜೀವನ ತತ್ವಗಳನ್ನು ಎಷ್ಟರ ವರೆಗೆ ಪ್ರತಿಬಿಂಬಿಸುವವೋ ಅಷ್ಟುಮಾತ್ರ. ಮಾನವ ವರ್ಗದ ಸೇವಕನಾಗಿ-ಹೆಚ್ಚೇನು ಆ ಮಾನವ ವರ್ಗದ ಒಂದು ಭಾಗವಾದ ಭಾರತದ ಸೇವಕನಾಗಿ-ಗಾಂಧಿಜೀ ಇದ್ದಾರೆ; ಮುಂದೆಯೂ ಹಾಗೇನೇ ಇದ್ದು ಅದಕ್ಕಾಗಿಯೇ ಗೌರವಿಸಲ್ಪಡಲಿದ್ದಾರೆ. ಒಬ್ಬ ನಾಗರಿಕನಾಗಿ ಅಥವಾ ರಾಜಕೀಯ ವ್ಯಕ್ತಿಯಾಗಿ ಹೆಸರು ಹೊಂದಬೇಕೆಂಬುದು ಎಂದೂ ಅವರ ಧ್ಯೇಯವಾಗಿರಲಿಲ್ಲ. ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿಯೂ ಅವರ ಪ್ರತಿಷ್ಠೆ ಹರಡಿದುದಿದ್ದರೆ ಅದಕ್ಕೆ, ಮಾನವ ವರ್ಗದ ಹಿತಸಾಧನೆಗಾಗಿ ಎಲ್ಲಾ ವಿಧದ ಸಂಕಷ್ಟಗಳನ್ನೂ ನಿವಾರಿಸಬೇಕೆಂಬ ಅವರ ಸೇವಾನಿಷ್ಠೆಯೇ ಕಾರಣ. ಆದ್ದರಿಂದ ನಮ್ಮ ಕಾಲದ ಮನುಷ್ಯ ವರ್ಗದಲ್ಲೇ ಅಗ್ರಗಣ್ಯನಾದವನ 75ನೇ ಜನ್ಮದಿನೋತ್ಸವವನ್ನು, ಯಾರ ಹೆಸರು ಎಂದೆಂದಿಗೂ ದೇಶದಲ್ಲಿ ಚಿರಸ್ಥಾಯಿಯಾಗಲಿರುವದೋ, ಆ ಆತನ ಜೀವನ ಸಂಗಾತಿಯ ಇಂತಹ ಸ್ಮಾರಕದೊಡನೆ ಆಚರಿಸಿದರೇನೇ ಅದು ತಕ್ಕ ಗೌರವವಾಗುವದು.

ಟ್ರಸ್ಟಿಗಳ ನೇಮಕ.

"ಸಂಗ್ರಹ ಕಾರ್ಯ ಹಾಗೂ ನಿಧಿಯ ಮೇಲ್ವಿಚಾರಕ್ಕಾಗಿ ನಾವು ಈ ಕೆಳಗಿನ ಕಮಿಟಿಯನ್ನು ನೇಮಿಸಿದ್ದೇವೆ. ಅವರು ಹೆಚ್ಚಿನವರನ್ನು ಸೇರಿಸಿಕೊಳ್ಳುವ ಅಧಿಕಾರದೊಡನೆ ಈ ಫಂಡಿನ ಟ್ರಸ್ಟಿಗಳಾಗಿಯೂ ಇರುವರು. ಸರ್. ಎಸ್. ರಾಧಾಕೃಷ್ಣನ್, ಶ್ರೀ. ಜಿ. ಡಿ. ಬಿರ್ಲಾ, ಸರ್. ಪುರುಷೋತ್ತಮದಾಸ್ ಥಾಕೂರ್‌ದಾಸ್, ಶ್ರೀ. ಸಿ. ರಾಜಗೋಪಾಲಾಚಾರ್. ಡಾ. ಕೆ. ಎನ್. ಕಟಜು, ಶ್ರೀ. ಜೆ. ಆರ್. ಡಿ. ತಾತಾ, ಶ್ರೀ. ಕಸ್ತೂರಿ ಭಾಯ್ ಲಾಲ್‌ಭಾಯ್, ಶ್ರೀಮತಿ ಸರೋಜಿನಿ ನಾಯಿಡು. ಲೇಡಿ ವಿಠಲ್‌ದಾಸ್ ಥಾಕರ್ಸೆ, ಡಾ। ಝಾಕೀರ್ ಹುಸ್ಸೇನ್, ಶ್ರೀ. ಕೆ. ಎಮ್. ಮುನ್ಷಿ. ಶ್ರೀ ಎ. ವಿ. ಥಕ್ಕರ್, ಶ್ರೀ ದೇವದಾಸ ಗಾಂಧಿ, ಶ್ರೀ. ಶಾಂತಿಕುಮಾರ್ ನರೋತ್ತಮ ಮೊರಾರ್‌ಜಿ. ಈ ಪೈಕಿ ಶ್ರೀ. ಎ. ವಿ. ಥಕ್ಕರ್ ಇವರು ಕಾರ್ಯದರ್ಶಿಯಾಗಲು ದಯವಿಟ್ಟು ಒಪ್ಪಿರುವರು. ನಾವು ಮೇಲ್ಗಡೆ ನಮೂದಿಸಿರುವಂತೆ, ಈ ನಿಧಿಯು ಮುಂಬರುವ ಜನ್ಮದಿನದಂದು ಗಾಂಧಿಜೀಗೊಪ್ಪಿಸಲ್ಪಡಬೇಕು. ಆ ಹೊತ್ತಿಗೆ ಅವರು ಬಿಡುಗಡೆಹೊಂದಿ, ಅಂದಿನಿಂದ ಟ್ರಸ್ಟಿನ ಅಧ್ಯಕ್ಷನಾಗಿ ಕೆಲಸಮಾಡಲು ಅವರಿಗೆ ಸಾಧ್ಯವಾಗುವದೆಂದು ನಾವು ಆಶಿಸುತ್ತೇವೆ. ದುರ್ದೈವವಶಾತ್ ಹಾಗಾಗದೆ ಹೋದರೆ ಆಗ ಟ್ರಸ್ಟಿಯು ತಾತ್ಕಾಲಿಕ ಅಧ್ಯಕ್ಷನೊಬ್ಬನನ್ನು ನೇಮಿಸಿಕೊಂಡು ಕೆಲಸ ಸಾಗಿಸುವದು"

ಜಾತಿಮತ ಭೇದವಿಲ್ಲದೆ ಇಡೀ ಭಾರತದಲ್ಲಿ ಸ್ಥಳೀಕ ಸಮಿತಿಗಳನ್ನು ಸ್ಥಾಪಿಸಿಕೊಂಡು ಹಣಸಂಗ್ರಹಕ್ಕಿಳಿಯಬೇಕೆಂದೂ, ಬೊಂಬಾಯಿಯ ಅದರ ಮುಖ್ಯ ಕಾರ್ಯಾಲಯದಿಂದ ಕಾರ್ಯದರ್ಶಿಗಳು ಆಗಾಗ ಸೂಚನೆ ಕೊಡುವರೆಂದೂ, ದೇಶದ ಪ್ರಥಮ ವರ್ಗದ 40ಮಂದಿ ಪ್ರಮುಖರು ಅಖಿಲ ರಾಷ್ಟ್ರದೊಡನೆ ವಿನಂತಿಮಾಡಿಕೊಂಡಿದ್ದಾರೆ. ಇಷ್ಟರಲ್ಲೇ ಅಲ್ಲಲ್ಲಿ ಕಮಿಟಿಗಳು ಸ್ಥಾಪಿಸಲ್ಪಟ್ಟು ನಿಧಿ ಸಂಗ್ರಹಕ್ಕಾರಂಭವಾದ ವಾರ್ತೆಗಳು ಬರುತ್ತಿವೆ. ಗಾಂಧಿ ದಂಪತಿಗಳ ಸೇವೆಯ ಋಣದಲ್ಲಿ ಅಲ್ಪಾಂಶವನ್ನಾದರೂ ಸಂದಾಯಮಾಡುವ ಒಂದು ಹಾದಿಯನ್ನು ತೋರಿಸಿಕೊಟ್ಟುದಕ್ಕಾಗಿ, ಈ ಯೋಜನೆ ನಿರ್ಮಾಪಕರನ್ನು ಅಭಿನಂದಿಸುತ್ತಾ ದೇಶವು ಸಂಗ್ರಹನಿರತವಾಗಿದೆ.

NOTICE.

It is hereby informed to all members of the Hospital Poor Fund' that the General Body Meeting will be held on Friday the 31st March 1944 at 6 P. M. in the Office of the Panchayat Board, Mulki. All are cordially invited to attend.

M. R. Punja,
Secretary,
Hospital Poor Fund, Mulki.

MULKI, }
6-3-1944. }

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing*: **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

ಮುಟ್ಟುಗುಳಿಗೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (PILLS) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವವು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ. ರೂ. 3/- ತ್ವರಿತದ ಕೇಸುಗಳಿಗೆ ರೂ. 5. (ವಿ. ಪಿ. 12 ಆಣೆ ಅಧಿಕ).

Mrs. P. DEVEE, F. D. S., (N)
TOLLYGUNGE, CALCUTTA,

ಸ್ಟಾಕಿಸ್ಟ್: **Raja Medical Hall,**
31, Dharmaraja St. BANGALORE

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣವಿಲಾಸಿನಿ** ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನ ಬಜಾರ್ ರೋಡ್, ಮದ್ರಾಸು.

ಪುತ್ತೂರು ಏಜಂಟರು: **ಪೈ ಫಾರ್ಮಸಿ**

ಬೇಕಾಗಿದ್ದಾರೆ.

ಸದ್ಯದಲ್ಲೇ ರಂಗಭೂಮಿಗೆ ಬರಲಿರುವ ಅತ್ಯಾಧುನಿಕ ಸಾಮಾಜಿಕ ನಾಟಕ.

'ಸ್ವಾಮಿಯ ಸೋಲು'

ಈ ನಾಟಕದಲ್ಲಿ ಪಾತ್ರ ವಹಿಸಲು ಯೋಗ್ಯರಾದ ನಟನಟಿಯರು ಬೇಕಾಗಿದ್ದಾರೆ.

ಬರೆಯಿರಿ.

X ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಿತ್ರರರಾಗಕ್ಕೆ ಶ್ರುತಿ ಹಿಡಿಯಲು ತಟಸ್ಥರ ನಿರಾಕರಣೆ!

ಕಳೆದವಾರ ಯುದ್ಧಕಾಳಿಯು ಕಾಲು ದಣಿದಂತಿದ್ದು, ರಣ ಪ್ರಗತಿಯಿರಲಿಲ್ಲ ವೆನ್ನಬಹುದು. ಉಕ್ರೈನಿನಲ್ಲಿ ಮುನ್ನುಗ್ಗಿದ ಕೆಂಪುಸೇನೆ ಅಲ್ಲಿಯ ಪ್ರಾಮುಖ್ಯ ಕೇಂದ್ರ ಸ್ಥಳವಾದ ಉಮಾನನ್ನು ವಶಪಡಿಸಿಕೊಂಡು ಕೀವ್ ಜಿಲ್ಲಾ ಕೇಂದ್ರಸ್ಥಳಗಳು ಹಲವನ್ನು ಬಗಲಿಗೆ ಸೇರಿಸಿಕೊಂಡ ಗಣನೀಯ ವಿಜಯವೊಂದನ್ನು ಬಿಟ್ಟರೆ ಮಿಕ್ಕ ರಣರಂಗಗಳಲ್ಲಿ ಮಿತ್ರಸೇನೆಗಳು ನಿಂತಲ್ಲೇ ತಡವರಿಸಿವೆ ಹೊರತು ಹೊಸ ಸಂಪಾದನೆಯಿಲ್ಲ. ಕೆಲವು ವಾರಗಳಿಂದ ನಾಮೋಚ್ಚಾರಣೆಯಾಗುತ್ತಿರುವ ಟೋವ್ ದ್ವಾರದ ಸಂಕಟವೊಂದರಲ್ಲೇ ಇತ್ತಂಡದವರಿನ್ನೂ ಇದ್ದಾರೆ. ಮಿತ್ರಪಾಳಯದ ಯುದ್ಧಪ್ರಕಟಣೆಗಳಾದರೂ, ಇಟೆಲಿ ಯುದ್ಧ ಮುಗಿಯಿತೇನೋ ಎಂಬಂತೆ, ಯುದ್ಧಾರಂಭದಿಂದ ಈ ವರೆಗೆ 15 ಸಾವಿರ ಜರ್ಮನರನ್ನು ಸೆರೆಹಿಡಿದೆವು ಎಂದಲ್ಲಾ ಅಂಕೆಸಂಖ್ಯೆಗಳಿಂದಲೇ ಸ್ಥಳ ತುಂಬಿಸಿಕೊಳ್ಳುತ್ತಿವೆ. ಬರ್ಮದಲ್ಲಿ ಅರಕಾನ್ ವಿಜಯ ಪಡೆದ ಬ್ರಿಟಿಷ್ ಸೇನೆಗಳ ಆ ಮೇಲಿನ ಪ್ರಗತಿಯ ಸೊಲ್ಲೇ ಕೇಳಿಬರುವದಿಲ್ಲ; ಬದಲಾಗಿ ಉತ್ತರ ಬರ್ಮದೊಳಗೆ ಚೀನೀಸೇನೆಗಳು ಅಕಸ್ಮಾತ್ ನುಗ್ಗಿದವು; ಮಿಯಿಟ್ ಕಿಯಿನಾದ ಕಡೆಗೆ 170 ಮೈಲಷ್ಟು ಬಂದವು; ಜಪಾನರ ೫೫ನೇ ಸೇನೆಯ ಅರೆವಾಸಿಯಷ್ಟನ್ನು ಧ್ವಂಸ ಮಾಡಿಬಿಟ್ಟವು ಎಂಬ ವಾರ್ತೆ ಬಂದಿವೆ. ಶಾಂತ ಸಮುದ್ರವಂತೂ ಈಗ ಹೆಸರನ್ನು ಳಿಸಿಕೊಂಡಿದೆ!

ದ್ವಿತೀಯರಂಗದ ಪೂರ್ವರಂಗ

ಯುದ್ಧರಂಗವು ಜಡವಾದರೂ ವ್ಯವಹಾರರಂಗ (Diplomatic front) ಚುರುಕೇರಿದೆ. ಇದು ದ್ವಿತೀಯರಂಗದ ಪೂರ್ವಸೂಚನೆಯೆಂದು ನಿರ್ವಿವಾದವಾಗಿ ಹೇಳಬಹುದು. ಈ ಯುದ್ಧದಲ್ಲಿ ಎಲ್ಲಿಯೋ ಐದಾರು ಅಲ್ಪರಾಷ್ಟ್ರಗಳು ಮಾತ್ರ ತಟಸ್ಥವಾಗಿ ಉಳಿದಿವೆ. ಮಿಕ್ಕವುಗಳನ್ನು ಹಿಟ್ಲರ್ ತನ್ನ ಥಾಳಿಯ ಕಾಲಪಲ್ಲಿ ತನ್ನ ಸಾಲಿಗೇನೇ ಎಳೆದುಕೊಂಡಿದ್ದ. ಈಗ ಮಿತ್ರರು ಧಾಳಿಯಾರಂಭಿಸುವ ಸರ್ತಿಬಂದಿದೆ; ಉಳಿದವುಗಳನ್ನು ತಾವು ತಮ್ಮ ಕೈನಿಗೆಳೆದುಕೊಳ್ಳೋಣವೆಂದು ಅವರು ಆತುರಗೊಂಡಂತಿದೆ. ಆದರೆ ಯಾವ ರಾಷ್ಟ್ರವೂ ಸ್ವಸಮ್ಮತಿಯಿಂದ ಮಿತ್ರಪಾಳಯ ಸೇರಿ ಯುದ್ಧಭಾಗಿಯಾಗಲು ತಯಾರಿಲ್ಲವೆಂಬುದು ಗಮನಾರ್ಹ ವಿಷಯ. ಹಿಟ್ಲರನಿನ್ನೂ ಹಲ್ಲು ಕಳಚಿದ ಹಾವಾಗಿಲ್ಲವೆಂಬ ಭಯ ಎಲ್ಲರನ್ನೂ ಪೀಡಿಸುತ್ತಿದೆ ಎಂಬುದಕ್ಕೆ ಇದೂ ಒಂದು ದೃಷ್ಟಾಂತ.

ಟರ್ಕಿಯ ತಾಟಸ್ಥ್ಯ

ಟರ್ಕಿಯು 1939ರಲ್ಲೇ ಬ್ರಿಟನ್, ಫ್ರಾನ್ಸುಗಳೊಂದಿಗೆ ಪರಸ್ಪರ ಸಹಾಯದ ಒಪ್ಪಂದವನ್ನು ಮಾಡಿಕೊಂಡಿತ್ತು. ಆದರೆ ಸ್ವಾರಸ್ಯವೆಂದರೆ, ಟರ್ಕಿಯ ಆಕ್ರಮಣ ನಡೆದರೆ ಇಂಗ್ಲೆಂಡು ಸಹಾಯಕ್ಕೆ ಬರಬೇಕೆಂಬುದೊಂದೇ ಆ ಒಪ್ಪಂದದ ಅರ್ಥವೆಂದು ಟರ್ಕಿಯ ಭಾವನೆ; ಸಂದರ್ಭ ಬಂದಾಗ ಟರ್ಕಿಯು ತನ್ನ ಸಾಲುಹಿಡಿದು ಯುದ್ಧಕ್ಕಿಳಿಯಬೇಕೆಂಬುದೂ ಆ ಕರಾರಿನ ಅರ್ಥವೆಂದು ಇಂಗ್ಲೆಂಡಿನ ಸಾಧನೆ. ಮಿತ್ರರಾಷ್ಟ್ರಗಳ ಕೈಮೇಲಾಗುತ್ತಾ ಬಂದಂತೆ, ಈ ಭಿನ್ನತೆಯೂ ಒಡೆದು ಮೂಡಹತ್ತಿತು. ಆಕ್ಸಿಸ್ ರಾಷ್ಟ್ರಗಳ ಮೇಲೆ ಧಾಳಿ ನಡಿಸಲಾಗುವಂತೆ ಟರ್ಕಿಯಲ್ಲಿ ವಿಮಾನ ನಿಲ್ದಾಣಗಳು ದೊರೆತರಾಯಿತೆಂದು ಪ್ರಥಮತಃ ಕೈರೋ ಮತ್ತು ಅದಾನಾ ಸಮ್ಮೇಲನಗಳಲ್ಲಿ ಮಿತ್ರರು ಯಾಚಿಸಿದರು. ಅಂತಹ ಪರಾಧೀನತೆ ತನ್ನ ಘನತೆಗೆ ಕುಂದೆಂದು ಟರ್ಕಿ ತಿರಸ್ಕರಿಸಿತ್ತು, ಸರಿ. ಹಾಗಾದರೆ ಟರ್ಕಿ ಪ್ರತ್ಯಕ್ಷವಾಗಿ ಯುದ್ಧಕ್ಕಿಳಿಯಬೇಕು—ಅದಕ್ಕೆ ಬೇಕಾಗುವ ಶಸ್ತ್ರೋಪಕರಣಗಳನ್ನು ಮಿತ್ರರೊದಗಿಸಿಕೊಡಬೇಕು—ಎಂಬಲ್ಲಿಗೆ ವಾದ ಮುಂದುವರಿಯಿತು. ತಾವು ಕೇಳಿದಷ್ಟು ಸಹಾಯ ದೊರೆತರೆ, ಮಿತ್ರರು ಕೇಳಿದ ರೀತಿ ಯುದ್ಧಭಾಗಿಯಾಗಲು ಟರ್ಕಿ ತಯಾರು. ಆದರೆ ಇತ್ತಂಡದವರ ಅಳತೆಯ ಮಾನಗಳಲ್ಲಿ ಕಳಸಿಗೆ-ಪಾವುಗಳಿಗಿರುವಷ್ಟೇ ಅಂತರ! ಆಂಗ್ಲೋ ಅಮೆರಿಕಾನರ ಅಂದಾಜಿನಂತೆ [illegible] ಟರ್ಕಿಯ ಮೇಲೆ ಬೀಳುವ ಸ್ಥಿತಿಯಲ್ಲಿಲ್ಲ; ಮಿತ್ರರ ಹೊಸಾಕ್ರಮಣದ ಬಳಿಕಂತೂ ಹಿಟ್ಲರನು ಕಂಗೆಡಲಿದ್ದಾನಲ್ಲದೆ ಕಣ್ಗೆಂಪೇರಿಸ ಮಂತಿಲ್ಲ; ಆದ್ದರಿಂದ ಟರ್ಕಿಗೆ ವಿಶೇಷ ಶಸ್ತ್ರ ಸಹಾಯವಗತ್ಯವಿಲ್ಲ. ಆದರೆ ಟರ್ಕಿಯ ಪ್ರಮುಖರು ಈ ವಿಷಯವು ಅಷ್ಟು ಲಘುವಾದುದೆಂದು ಭಾವಿಸಲಸಮರ್ಥರಾದರು. ಟರ್ಕಿ ಯುದ್ಧಕ್ಕಿಳಿದು ಏಜಿಯನ್ ದ್ವೀಪಗಳ ಪುನರಾಧೀನತೆ—ಡಾರ್ಡನೆಲ್ಸಿನ ನಿರ್ಮಾಣ-ಬಾಲ್ಕನ್ ರಾಷ್ಟ್ರಗಳ ಮೇಲೆ ರಾಜಕೀಯ ಸೈನಿಕ ಸತ್ವರೀಣಾಸು, ಇವಿಷ್ಟನ್ನು ಸಾಧಿಸಿಕೊಂಡರೆ ಹಿಟ್ಲರ್ ಸಹಿಸಲಾರ. ಜರ್ಮನಿಗದು ಅತ್ಯಪಾಯಕರವಿರುವದರಿಂದ ಸರ್ವಶಕ್ತಿಯಿಂದ ಟರ್ಕಿಯ ಮೇಲೆ ಬೀಳುವದು ಖಂಡಿತ. ಈ ಅಂದಾಜಿಗನುಸಾರವಾಗಿ ಟರ್ಕಿ ಯಾಚಿಸಿದ ಸಹಾಯಕೊಡಲು ಆಂಗ್ಲೋ-ಅಮೆರಿಕಾನರು ನಿರಾಕರಿಸಿದರು. ಸಂಧಾನ ಮುರಿಯಿತು. ಅಂದಿನಿಂದಲೇ ಟರ್ಕಿಗೆ ಹೋಗುತ್ತಿದ್ದ ಅಲ್ಪಸ್ವಲ್ಪ ಸಹಾಯವೂ ನಿಂತಿತು. ಈಗ ಈ ಕುರಿತು ಮಾತುಕತೆ ನಡೆಸಲು ಟರ್ಕಿ ಮಂಡಲವೊಂದು ಲಂಡನಿಗೆ ಹೊರಟಿದೆಯೆಂದು ವಾರ್ತೆ.

ಆಯರ್ಲೇಂಡಿನ ನಿರಾಕರಣೆ

ಇನ್ನೊಂದು ಆತುರಜನ್ಯ ವಾರ್ತೆಯೆಂದರೆ ರೂಸವೆಲ್ಟರ ವಿಜ್ಞಾಪನೆಯೊಂದನ್ನು ಡಿ ವೆಲರಾ ತಿರಸ್ಕರಿಸಿದುದು. ಅಮೇರಿಕದ ವಿಜ್ಞಾಪನೆಯಲ್ಲಿದ್ದಂತೆ ಐರ್ಲೆಂಡಿನ ಭೌಗೋಲಿಕ ಸ್ಥಾನವದನ್ನು ಆಕ್ಸಿಸ್ ರಾಷ್ಟ್ರಗಳಿಗನುಗುಣವಾಗಿ ಇಟ್ಟಿದೆ; ಮಿತ್ರರಾಷ್ಟ್ರೀಯರಿಗದು ಮೂಲತಃ ಪ್ರತಿಕೂಲ. ಹೀಗಿರುವಾಗ ಆಯರ್ಲೇಂಡಿನ ತಾಟಸ್ಥ್ಯದಿಂದ ಹಿಟ್ಲರನಿಗುಪಕಾರ; ಮಿತ್ರರಿಗಪಕಾರ. ಅಲ್ಲಿಯ ರಾಜಧಾನಿ ಡಬ್ಲಿನಿನಲ್ಲಿ ಜರ್ಮನಿ, ಜಪಾನುಗಳ ಪ್ರತಿನಿಧಿ ಕಚೇರಿಗಳಿವೆ. ಇವುಗಳಿಗೆ ಪೂರ್ಣಸ್ವಾತಂತ್ರ್ಯವಿದೆ. ಮಿತ್ರರಾಷ್ಟ್ರಗಳು ಅತಿಗುಪ್ತವಾಗಿ ನಡೆಸುತ್ತಿರುವ ಯುರೋಪು ಆಕ್ರಮಣದ ವಿಷಯಗಳೂ ಜರ್ಮನಿ ಜಪಾನುಗಳಿಗೆ ಈ ಪ್ರತಿನಿಧಿಗಳಿಂದ ಮುಂದಾಗಿ ತಿಳಿದು ಮಿತ್ರಯೋಜನೆಗೆಂಟಾಗುತ್ತಿರುವ ಅಪಾಯವು ಅಲ್ಪಸ್ವಲ್ಪ. ಆದ್ದರಿಂದಲೇ ಅಮೇರಿಕವು ಡಬ್ಲಿನಿನಲ್ಲಿರುವ ತನ್ನ ಮಂತ್ರಿಯ ಮೂಲಕ, ಜರ್ಮನಿ ಜಪಾನ ರಾಯಭಾರಿಗಳನ್ನು ಹೊರಗಟ್ಟಬೇಕೆಂಬ ವಿನಂತಿಯನ್ನು ಆಯರ್ಲೇಂಡಿನ ಪ್ರಧಾನಿ ಡಿ ವೆಲರರಿಗೊಪ್ಪಿಸಿತು. ಆ ವಿನಂತಿಯನ್ನು ಕಂಡಾಗ ಒಂದು ಮಿನಿಟೂ ತಡಮಾಡದೆ "ಇದು ಅಸಾಧ್ಯ" ಎಂದು ಡಿವೆಲರಾ ಹೇಳಿದ್ದರು. ಈಗ ಆಯರ್ಲೆಂಡು ಅಧಿಕೃತವಾಗಿ ಅದನ್ನು ಧಿಕ್ಕರಿಸಿಬಿಟ್ಟಿದೆ. ಆಯರ್ಲೆಂಡು ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಹಾಯಮಾಡಿದ್ದ ಅಮೆರಿಕಾನರ ಮೇಲೆ ಐರಿಶ್ ಜನರಿಗೆ ಸಹಾನುಭೂತಿಯಿದೆಯಾದರೂ ತಮ್ಮ ತಾಟಸ್ಥ್ಯ ನೀತಿಯನ್ನು ಮುರಿದುಕೊಳ್ಳಲು ಅವರು ತಯಾರಿಲ್ಲ. ಡಬ್ಲಿನಿನಲ್ಲಿ ಇತ್ತಂಡದ ಪ್ರತಿನಿಧಿಗಳೂ ಇದ್ದಾರೆ. ಮನುಷ್ಯೇತರ ಅನುಕೂಲತೆಗಳು ಒಂದು ಪಕ್ಷದವರಿಗಿಂತ ಇನ್ನೊಂದು ಕಡೆಯವರಿಗೆ ಹೆಚ್ಚಿದ್ದರೆ ಅದಕ್ಕೆ ತಾವುಹೊಣೆಯಲ್ಲವೆಂದು ಐರಿಷ್ ಸರಕಾರವನ್ನುತ್ತಿದೆ. ಹೌದು ತಾನೆ?

ಫಿನ್ಲೆಂಡಿನ ಫಿತೂರಿ

ಇನ್ನೊಂದು ಫಿನ್ಲೆಂಡಿನ ಸಂಧಾನ ಸಮಾಚಾರ. ರಶ್ಯವು ಅದಕ್ಕೆ ಕೊಟ್ಟ ಶಾಂತಿಸೂಚನೆಗಳು ಸ್ವತಃ ಸ್ಟಾಲಿನರ ಉದಾರ ಮನೋದ್ಯೋತಕಗಳಂತೆ; ಫಿನ್ಲೆಂಡನ್ನು ಕಠಿಣವಾಗಿ ದಂಡಿಸಬೇಕೆಂದು ಸೋವಿಯೆಟ್ ಸೇನಾನಿಗಳ ಕರೆಯಿರುವಂತಿದೆ. ತಮ್ಮ [illegible] ತನ್ನ [illegible] ಬೇಡಿ ಎಂದು ರಶ್ಯಾದ 'ಪ್ರಾವ್ದಾ' ಪತ್ರಿಕೆ ಎಚ್ಚರಿಸಿದೆ. ಆದರೆ ಫಿನ್ಲೆಂಡು ಮಾತ್ರ ಇನ್ನೂ ಫಿತೂರಿ ಬಿಟ್ಟಿಲ್ಲ—ನಮ್ಮಲ್ಲಿರ ನಾಜೀಸೇನೆಗಳನ್ನು ಓಡಿಸಿಬಿಡುವದು ಅಥವಾ ಕೂಡಿಸಿಡುವದು ಸದ್ಯಸ್ಥಿತಿಯಲ್ಲಿ ಅಸಾಧ್ಯ; ಮಿಕ್ಕ ವಿಷಯಗಳಲ್ಲಿ ಸಮಾಧಾನಕರ ಒಪ್ಪಂದವನ್ನು ಸಮ್ಮೊಡನೆ ಮಾಡಿ ಮುಗಿಸಿಕೊಳ್ಳಿ. ಆ ಮೇಲೆ ಜರ್ಮನರನ್ನು ಸಮಜಾಯಿಸಿಯಾದರೂ ನಾಜೀ ಸೇನೆಯನ್ನು ಹಿಂದೆಗೆಯಿಸುತ್ತೇವೆ' ಎಂದು ಫಿನ್ನಿಶರು ರಶ್ಯನರನ್ನು ಆಡಿಸುವಂತಿದೆ. ಈಗ ನಾಜೀ ಸೇನೆಯನ್ನು ಆಧರಿಸಿಕೊಂಡೇ ಇದ್ದು, ರಶ್ಯನರಿಂದ ಆದಷ್ಟು ಹೆಚ್ಚಿನ ಪ್ರಯೋಜನ ಪಡೆದಾದ ಮೇಲೆ ಯುದ್ಧಕಾರ್ಯದಿಂದಲೂ ಪಾರಾಗಿಬಿಡೋಣ ಎಂದು ಫಿನ್ನಿಶ್ ಸರಕಾರ ಯುಕ್ತಿಮಾಡಿದಂತಿದೆ. ತಮ್ಮ ಸೂಚನೆಯಲ್ಲಿ ಇನ್ನೊಂದು ಶಬ್ದವನ್ನೂ ಬದಲಾಯಿಸಲಾರೆವು, ಎಂಬ ಹಠದಲ್ಲಿರುವ ರಶ್ಯನರ ಮುಂದೆ ಈ ಯುಕ್ತಿ ಹೇಗೆ ಫಲಿಸುವದೋ ಹೇಳಲಾಗುವದಿಲ್ಲ.

ಟರ್ಕಿ ತಮ್ಮ ಸಾಲು ಸೇರಿದರೆ—ಆಯರ್ಲೆಂಡ್ ತಮಗಾಗದವರನ್ನು ಓಡಿಸಿಬಿಟ್ಟರೆ—ಫಿನ್ಲೆಂಡು ಹಿಟ್ಲರನ ಬೆನ್ನು ಬಿಟ್ಟರೆ—ದ್ವಿತೀಯರಂಗ ಪ್ರಾರಂಭದ ಮೊದಲು ವಿರೋಧಿಯ ತೇಜೋವಧೆ ಮಾಡಿ ಕೃತಕೃತ್ಯರಾಗಿಕೊಂಡಂತಾಯಿತೆಂದು ಮಿತ್ರರಾಷ್ಟ್ರ ಪ್ರಮುಖರು ಊಹಿಸಿದ್ದರು. ಆಸೆ ಬಯಲಾಗಿದೆ ವ್ಯವಹಾರರಂಗದಲ್ಲಿ ಹೀಗೆ; ಇನ್ನು ರಣರಂಗದ ಸಿದ್ಧತೆ ಹೇಗೋ!

ಪ್ರಕಟಣೆ.

D. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಡಿ. ಯಂ. ಕುನ್ನಿರಾಮನ್,
ಮೆನೇಜರ್.

ಧನಕ್ಕಿಂತ ವಿಧಾನ ಮುಖ್ಯ

ಧನದ ಮೊತ್ತವೊಂದೇ ಗೌರವಾನ್ವಿತ ವಾಣಿಜ್ಯದ ಹೆಗ್ಗುರುತಲ್ಲ. ಧನಸಂಗ್ರಹ ಅಥವಾ ನಿಮ್ಮ ದುಡಿಮೆಯ ಮೊತ್ತಕ್ಕಿಂತ, ಅದನ್ನು ನಿರ್ವಹಿಸುವ ವಿಧಾನವೇ ವ್ಯಾಪಾರೋದ್ಯಮಗಳ ಯಶಸ್ಸಿಗೆ ಮುಖ್ಯವೆನಿಸಿದೆ.

ಕಳೆದ ನಲ್ವತ್ತು ವರ್ಷಗಳಿಂದ, ಕೆನರಾ ಬೇಂಕಿನೊಡನೆ ಇರುವ ಚಾಲತಿ ಠೇವಣಿಯ ಲೆಕ್ಕವು ವಾಣಿಜ್ಯದ ದೃಢತೆ ಮಾನ್ಯತೆಗಳ ದ್ಯೋತಕವಾಗಿ ಪರಿಗಣಿಸಲ್ಪಟ್ಟಿದೆ.

"ನಿಮಗೆ ಕೆನರಾ ಬೇಂಕಿನ ಒಂದು ಚೆಕ್ ಕೊಡುತ್ತೇನೆ" ಎನ್ನಲು ನೀವೂ ಆನಂದ ಪಡುವಿರಿ. ಮತ್ತೆ ನೆನಪಿನಲ್ಲಿರಲಿ—ಯಾವ ಚೆಕ್ ಆಗಲಿ ಕೆನರಾ ಬೇಂಕಿನಲ್ಲಿ ಪಟಾಯಿಸಲ್ಪಡಲು ಐದು ನಿಮಿಷಗಳಿಗಿಂತ ಹೆಚ್ಚಿನ ವಿಳಂಬವಿಲ್ಲ.

ಸ್ಥಾಪಿತ: 1906.

ಕೆನರಾ ಬೇಂಕು, ಲಿಮಿಟೆಡ್.
CANARA BANK, Ltd.

CHAMPAE'S
Snow & Castrex
(*Sole Distributers for (India.)*)
Sukhananda Stores
Santhekatte, UDIPI, S. K.

The Canara Banking Corporation Limited.
ESTD 1906

Authorised Capital Rs. 25,00,000/-
Subscribed ,, ,, 16,00,000/-
Paid up ,, 13,25,785/-
Reserves ,, 1,10,000/-

With a net work of Branches and Agencies in almost all the principal Cities of India we offer exceptional facilities and competitive rates for collection of Bills and issue of Drafts and Telegrapic Transfers

ನವಯುಗ

ಉಡುಪಿ, ಗುರುವಾರ ೧೬-೩-೧೯೪೪

ರೈತ್ವಾರಿಯಲ್ಲೊಂದು ನವ ಪ್ರಯೋಗ

ಸಾಮಾನ್ಯ ಕಾಲಗಳಲ್ಲಿ ಶತಮಾನಗಳಲ್ಲಾಗುವಂತಹ ಸಾಮಾಜಿಕ ಬದಲಾವಣೆಗಳು ಈ ಯುದ್ಧಕಾಲದ ಅಲ್ಪಾವಧಿಯಲ್ಲೇ ಆಗಿವೆ, ಯುದ್ಧಾವಶ್ಯಕತೆಗಾಗಿ, ಇಂಗ್ಲಾಂಡಿನಂತಹ ಶ್ರೀಮಂತರ ದೇಶದ ಜೀವನದಲ್ಲಿ ಕೂಡಾ ಈಗ ಸೌಮ್ಯ ರೀತಿಯ ಸಮಾಜವಾದವು ತೂರಿಹೋಗಿವೆ ಉತ್ಪತ್ತಿ ವ್ಯಾಪಾರೋದ್ಯಮಗಳಿಂದ ಹಿಡಿದು, ಊಟ ಉಡುಗೆ ತೊಡುಗೆಗಳು ಕೂಡಾ ದೇಶಹಿತ ದೃಷ್ಟಿಯಿಂದ ನಿರ್ಬಂಧಕ್ಕೊಳಗಾಗಿವೆ, ಸರ್ವ ಸಾಮಾನ್ಯ ಸಮಮಟ್ಟದಲ್ಲೇ ಇವೆ ಈ ಮಾರ್ಪಾಟವು ಯುದ್ಧ ವ್ಯಯವನ್ನು ಬಾಯಿಗೂಡಿಸಿಕೊಳ್ಳಲು ನಿರ್ಮಾಣಗೊಂಡಿತು ಹೊರತು ಸಮತಾವಾದದ ಮೊದಲ ಮೆಟ್ಟಿಲಾಗಿ ಹುಟ್ಟಿದುದಲ್ಲವೆಂಬುದು ನಿಜ ಆದರೆ ವ್ಯಾಯಾಮೋದ್ದೇಶವಿಟ್ಟುಕೊಂಡು ಓಡಿದವನಂತೆಯೇ ಹೆದರಿ ಓಡಿದವನಿಗೂ ದೇಹವ್ಯಾಯಾಮವು ದೊರೆಯುತ್ತದೆ ಉದ್ದೇಶಿಸಿ ಮಾಡಿಕೊಂಡ ಬದಲಾವಣೆಯಂತೆಯೇ, ಆವಶ್ಯಕತೆಗಾಗಿ ಮಾಡಿಕೊಂಡ ಮಾರ್ಪಾಟುಗಳೂ ಪರಿಣಾಮಕಾರಿಯಾಗುತ್ತವೆ ಹಾಗಾಗಿ ಇಂದಿನ ಯುದ್ಧಜನ್ಯ ಸಾಮೂಹಿಕ ಪದ್ಧತಿಗಳು ಭಾವೀ ಜಗತ್ತಿನ ಉಪಕರಣಗಳಾಗಿ ನಿಂತುಬಿಡುವದು ಅಸಂಭವವಲ್ಲ

ಹಿಂದೂ ದೇಶದಲ್ಲೂ ಅದೇ ಪಾಡು. ದೃಷ್ಟಾಂತಕ್ಕಾಗಿ ಧಾನ್ಯ ನಿಯಂತ್ರಣ, ರೇಶನಿಂಗ್ ಮೊದಲಾದ ನಿರ್ಬಂಧಗಳ ಅನುಭವವೇ ನಮ್ಮ ಜನರಿಗೀವರೆಗಿರಲಿಲ್ಲ ತನ್ನ ದೇಹಶ್ರಮದ ಉತ್ಪತ್ತಿಯನ್ನು ತಾನಿಟ್ಟುಕೊಳ್ಳುವದಕ್ಕೂ ನಿರ್ಬಂಧವೆಂದರೇನು, ಎಂದು ಪ್ರಶ್ನಿಸುವವರು ಇದ್ದಾರೆ. 'ಎಲ್ಲರನ್ನು ಉಳಿಸುವದಕ್ಕಾಗಿಯೇ ಎಲ್ಲರ ಉಳಿತಾಯಕ್ಕೂ ಕಡಿತ' ಎಂಬುದೇ ಅದಕ್ಕುತ್ತರ ಈಗ ಜನರಿಗಿದರ ಅರ್ಥವಾಗಿದೆ, ಅವರ ನ್ಯಾಯಬುದ್ಧಿಯಿದನ್ನೊಪ್ಪುತ್ತದೆ ಹೀಗಾಗಿ ಸಾಮೂಹಿಕ ಭಾವನೆಯೊಂದು ಸರ್ವ ವ್ಯಾಪಿಯಾಗಿದೆ, ಅದಕ್ಕಾಗಿ ಈ ಯುದ್ಧವನ್ನು ಅಭಿನಂದಿಸಬೇಕು. ಈ ಭಾವನೆಯನ್ನು ಇನ್ನಷ್ಟು ಬೆಳೆಸಿ ಸಾಮಾಜಿಕ ಜೀವನದಲ್ಲಿ ಅದಕ್ಕೆ ಶಾಶ್ವತ ಸ್ಥಾನ ದೊರೆಯಬೇಕು ಕೆಲವರ ಉತ್ಪತ್ತಿಯನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳುವಂತಹ ಸಮಾನ ಭಾವನೆಯೀಗ ಮೂಡಿ ಒಂದಿದೆ, ಸಾಮೂಹಿಕ ಜೀವನ ಪದ್ಧತಿಯೇ ಅಸಾಧ್ಯ, ಸಮಾಜವಾದವೊಂದು ಹಗಲುಗನಸು ಎನ್ನುತಿದ್ದವರು ಬಾಯಿ ಮುಚ್ಚಿಕೊಳ್ಳುವಂತಾಗಿದೆ ಜನಹಿತ ಸಾಧನೆ, ಲೋಕ ಕಲ್ಯಾಣದ ಬೀಜವಿದು ಎಂದು ಭಾವಿಸಿ, ಎಲ್ಲ ರಾಷ್ಟ್ರಗಳೂ ಅದನ್ನು ಇನ್ನು ಮುಂದೆಯೂ ಬೆಳೆಯಿಸಿ ಕೊಂಡರಾಗದೆ

ಬರೋಡದ ಬೇಸಾಯ ಪದ್ಧತಿಯ ನವ ಪ್ರಯೋಗವು ಈ ಪಥದಲ್ಲೊಂದು ಹೆಜ್ಜೆ. ಇಡೀ ದೇಶವು ಅದರ ಪರಿಣಾಮವನ್ನು ನಿರೀಕ್ಷಿಸಿ, ಮೇಲ್ಪಂಕ್ತಿಯಾಗಲು ಯೋಗ್ಯವೆನ್ನಿಸುವುದೋ ಎಂದು ಕಾಯಬೇಕಾಗಿದೆ ಬರೋಡಾ ಯೋಜನೆಯ ರೂಪರೇಷೆ ಹೀಗಿದೆ ಬೇಸಾಯಗಾರರಿಂದ ಶ್ರೀಮಂತರು ಕ್ರಯಕ್ಕೆ ಪಡಕೊಂಡಿದ್ದ ಕೆಲವು ಹಳ್ಳಿಗಳನ್ನು ಸರಕಾರವು ಹಿಂತಿರುಗಿ ಪಡಕೊಂಡು ಮೂಲ ಬೇಸಾಯಗಾರರಿಗೇನೇ ಸಾಗುವಳಿಗೀಯುವದು ಆಧುನಿಕ ರೀತಿಯ ಬೇಸಾಯ ಕ್ರಮವನ್ನೇ ಜ್ಯಾರಿಗ ತರುವದು. ಅಲ್ಲಿ ಚತುರ್ವಿಧ ಪದ್ಧತಿಯ ಪ್ರಯೋಗವಾಗಲಿದ ಒಂದು ಹಳ್ಳಿಯಲ್ಲಿ ಬೇಸಾಯಗಾರರಿಗೆ ಶಾಶ್ವತ ಹಕ್ಕನ್ನು ಕೊಡಲಾಗುವದು, ಇನ್ನೊಂದರಲ್ಲಿ ಇಡೀ ಹಳ್ಳಿಯನ್ನು ಸರಕಾರೀ ಹೊಲವಾಗಿ ಗಣಿಸಿ, ಅಲ್ಲಿ ಬೇಸಾಯಗಾರರು ಕೆಲಸಗಾರರಾಗಿ ದುಡಿಯಬೇಕು ಆದರೆ ಅವರಿಗ ಲಾಭಾಂಶದಲ್ಲಿ ಹಕ್ಕಿದೆ ಮೂರನೆಯದರಲ್ಲಿ ಸಾಮೂಹಿಕ ಕ್ರಮವನ್ನೂ (Collective farming) ನಾಲ್ಕನೆಯದರಲ್ಲಿ ಪರಸ್ಪರ ಸಹಾಯಕ ಕ್ರಮವನ್ನೂ (Co-operative farming) ಜ್ಯಾರಿಗೆ ತಂದು ಪರಿಣಾಮವನ್ನು ಪರೀಕ್ಷಿಸಲಾಗುವದು. ಹೀಗಾಗಿ, ಸಾಮೂಹಿಕ ಜೀವನ ಇಲ್ಲವೇ ಸಮಾಜವಾದದ ಒಂದು ಪ್ರಯೋಗವು ಅಲ್ಲಿ ನಡೆಯುತ್ತಿದೆ ಸಹಜವಾಗಿ ಇಡೀ ರಾಷ್ಟ್ರವು ಅತ್ತ ಲಕ್ಷ್ಯಕೊಡಬೇಕಾಗಿದೆ. ಬೇಸಾಯದಲ್ಲಿ ಸಾಮೂಹಿಕ ಹಾಗೂ ಸರಕಾರೀ ಕ್ಷೇತ್ರಪದ್ಧತಿಯನ್ನು ನಿರ್ಮಿಸಿ ರಶ್ಯವು ಪಡೆದ ಶಕ್ತಿಯು ಲೋಕಶ್ರುತವಾದುದು ಬೇಸಾಯಜೀವಿ ಹಿಂದುಸ್ಥಾನಕ್ಕೆ ಆ ಕ್ರಮವು ಅನಗತ್ಯವೂ ಅಲ್ಲ, ಅಸಾಧ್ಯವೂ ಅಲ್ಲ 'ಖಾಸಗೀ ಮೋಹ'ವೊಂದೇ ಇಂತಹ ಪ್ರಗತಿಗೆ ತಡೆ ಆದರ ಇಂದಿನ ಯುದ್ಧ ವಾತಾವರಣವು ಈ ವ್ಯಾಮೋಹ ನಿವಾರಣೆಗನುಕೂಲವಿದೆ. ಬರೋಡಾ ಯೋಜನೆ ಜಯಶೀಲವಾಗಿ ಅಖಿಲ ರಾಷ್ಟ್ರಕ್ಕೆ ಮೇಲ್ಪಂಕ್ತಿಯಾಗುವದೆಂದು ಭಾವಿಸುತ್ತೇವೆ.

ದುರ್ಬೀನು

ಚಪ್ಪಾಳೆಗಿಂತ ಚಪಾತಿ ರುಚಿ, ಶಹಭಾಸಿಗಿಂತ ಸಹಾಯ ವಾಸಿ.

೦೦ ೦೦ ೦೦

ನೀರಕೊಳದಲ್ಲಿ ಈಜು ಗೊತ್ತಿದ್ದರೆ ಆಳಕ್ಕೂ ಹೋಗಬಹುದು, ಕೆಸರುಕೊಳದಲ್ಲಿಯೂ ಮುಂಮೊತ್ತಿದರೆ ಹೂತುಹೋಗುವಿ ಅಮೂಲ್ಯ ವಿಚಾರದಲ್ಲಿ ವಾದ ತಿಳಿದರ ಎಷ್ಟೂ ಮುಂದೊತ್ತಬಹುದು, ಅಶ್ಲೀಲ ವಿಷಯದಲ್ಲಿಯೂ ಮುಂದೊತ್ತಿದರೆ ಅಧಮನೆನ್ನಿಸವಿ

೦೦ ೦೦ ೦೦

ನಾಯಿಯನ್ನು ಕೋಲಿನಿಂದ ಹೊಡೆದು ಬೆಚ್ಚಿಸಿದ ಮೇಲೆ ಅದು ಕಚ್ಚಲು ಓಡುವಾಗಲೂ ಕೋಲನ್ನೇ ಮುಂದೆ ಚಾಚಬೇಕು, ಕೋಲು ಮುರಿದೀತೆಂದು ಕೈ ಚಾಚುವದಲ್ಲ ಪ್ರಾಗತಿಕರನ್ನು ಕೆಣಕಲು ಮುಂದಾದವನನ್ನೇ ಹೋರಾಟಕ್ಕೂ ಮುಂದೂಡಬೇಕು, ಅವನಿಗಸಾಧ್ಯವೆಂದು ಮೈ ಮೇಲೆ ಹಾಕಿಕೊಳ್ಳುವದಲ್ಲ

೦೦ ೦೦ ೦೦

ಮಾಡಿನೊಳಗಿಂದ ಇಲಿಕಿರಿಚಿಕೊಂಡರ 'ಮಾಡಿನ ಜಂತಿ ಮುರಿಯಿತು' ಎಂದು ಭಾವಿಸುವವ ಮೂಢ ಸಂಸ್ಥೆಯ ಮರೆಯಲ್ಲಿ ಅಧಮರ ಕಿರಿಚಾಟ ಕೇಳಬಂದರೆ 'ಅದರ ಸ್ಥಿತಿಭಂಗವಾಯಿತು' ಎನ್ನುವವ ಮೂರ್ಖ

೦೦ ೦೦ ೦೦

'ಬಸಂತ್'ದಲ್ಲಿ ಗೋಹರ್ ಕರ್ನಾಟಕಿ ಹಾಡಿದಳು, ಮುಮ್ತಾಜ್ ಶಾಂತಿ ಹಾಡಿದಂತೆ ಮಾಡಿದಳು ಕೋರಿ ರಾಗಗಳೂ ಹಾಗೇನೇ--ಹಾಡುವವನೊಬ್ಬ ಅಭಿನಯದಿಂದ ಅದನ್ನು ತನ್ನದಾಗಿ ಮಾಡಿಕೊಳ್ಳುವವನಿನ್ನೊಬ್ಬ.

೦೦ ೦೦ ೦೦

ಅನ್ಯರ ಬೆಂಗಡೆ ನಿಂತು ಕಂಕುಳದಿಯಿಂದ ಕೈಯೊಡ್ಡಿದರಾಯಿತು, ಹಿಡಿತವೆಲ್ಲಾ ಆ ಕೈಗೆ, ಹೊಡೆತವೆಲ್ಲಾ ಮುಂಭಾಗದವನ ಮುಖಕ್ಕೆ! ಹೀನಾಯ ಸಿಕಟ ಹೀಗೇನೇ

೦೦ ೦೦ ೦೦

ಕಣ್ಣಿಗೆ ಕೈಯಡ್ಡ ಬಂದರೆ, ಸರಸವಾಡುತಿದ್ದಾ ದೂಡಿದರಾಯಿತು, ಕಣ್ಣನಲ್ಲೇ ಪರ ಮೂಡಿದರೆ ಮಾತ್ರ ಕಷ್ಟ ನಿಮ್ಮ ಸಧನಗೆ ಅನ್ಯರಾತಂಕವಿದ್ದರೆ ಅಣಕಿಸಿಯೂ ಗೆಲ್ಲಬಹುದು, ಕಾರ್ಯ ರೀತಿಯಲ್ಲೇ ಕೊರತೆಯಿದ್ದರದು ಕಷ್ಟ

೦೦ ೦೦ ೦೦

ಆಹಾರದಲ್ಲಿಯೋ--ಬಿಸಿಯಿರಲಿ, ಬೆಂಕಿಯಿರುವದು ಬೇಡ ಆಚರಣೆಯಲ್ಲಿಯೋ—ಕಟ್ಟಿರಲಿ, ಕಿಚ್ಚು ಇರುವದು ಬೇಡ

—ಪಿ

ಈ ತಿಂಗಳ

'ಪ್ರಕಾಶಿನಿ'

ಮಾಸಪತ್ರಿಕೆಯಲ್ಲಿ

ಹುಂಕಾರ-ಭೂತದ ಕೋಲ
ಪ್ರೇಮಾಗ್ನಿ-ಧರ್ಮಗುರು
ಸನ್ಯಾಸಿ-ಯುವತಿ
ಸೊಸೆ-ವಯೋದೋಷ

ಉತ್ತರ ಬರ್ಮಾದಲ್ಲಿ

ಮೆಯಿಂಗ್ ಕ್ವಾನ್ ಮತ್ತು ವಾಲಾಬ್ಬುಮ್ ವಲಯಗಳಲ್ಲಿ ಅಮೆರಿಕಾನ್ ಮತ್ತು ಚೀನೀ ಸೇನೆಗಳು ಜಪಾನರ ಆಳಿದುಳಿದ 18 ಸೇನೆಯನ್ನು ನಿರ್ಮೂಲನ ಮಾಡಿವೆ ಅಲ್ಲಿ 2000 ಜಪಾನರು ಸತ್ತಿದ್ದಾರ ಆ ವಲಯದಲ್ಲಿ ಹಿಮ್ಮೆಟ್ಟುತ್ತಿರುವ ಜಪಾನರು ಅಟ್ಟಲ್ಪಡುತ್ತಿದ್ದಾರೆ

ಶಾಂತ ಸಮುದ್ರದಲ್ಲಿ

ಜಪಾನೀ ದ್ವೀಪಗಳ ಮೇಲೆ ಅಮೆರಿಕಾನರು ಅತಿ ಪ್ರಬಲ ವಿಮಾನ ಧಾಳಿಗಳನ್ನು ನಡೆಸುತ್ತಿದ್ದಾರೆ ನೆಲ ಹೋರಾಟದ ವಿಶೇಷ ವಾರ್ತೆಯಿಲ್ಲ ರಬೌಲ್ ಹಾಗೂ ಮಾರ್ಶಲ್ಸ್ ದ್ವೀಪಗಳ ಮೇಲೆ ಅಮೆರಿಕಾನರು ಬೋಂಬು ಧಾಳಿ ನಡಿಸಿ ಅತಿ ಹೆಚ್ಚಿನ ಹಾನಿಯೊಡ್ಡಿದ್ದಾರೆ.

ರಶ್ಯದಲ್ಲಿ

ಮಧ್ಯ ಉಕ್ರೈನಿನೊಳಗೆ ನುಗ್ಗಿದ ಮಾರ್ಶಲ್ ಕೂನೀವನು ನಾಜಿಗಳಿಗೆ ಪ್ರಳಯವನ್ನೇ ನಿರ್ಮಿಸುತ್ತಿರುವಂತಿದೆ ರಶ್ಯಾಸರ ಪರಿವಾರದ ಪ್ರಾಮುಖ್ಯ ನೆಲೆ ಉಮಾನಿನ ಮೂರೂ ದಿಕ್ಕುಗಳ ಜರ್ಮನ್ ಸೇನೆಯೂ ಕೆಂಪು ಸೇನೆಯ ವಿಚಕ್ಷಣ ಧಾಳಿಯಿಂದ ಹರಿಹಂಚಾಗುತ್ತಿದೆ ರಶ್ಯಾನರ ಮುತ್ತಿಗೆಯ ಪರಿಣಾಮಗಳ ಅನುಭವವುಳ್ಳ ನಾಜಿಗಳು ಅವಸವಸರದಿಂದ ಹಿಂದೆಗೆದು ಪ್ರಾಣವುಳಿಸಿಕೊಳ್ಳುವ ಹಂಚಿಕೆಯಲ್ಲಿದ್ದಾರೆ.

ಇಟಲಿಯಲ್ಲಿ

ರೋಮ್ ರಣರಂಗದಲ್ಲಿ ಯಾವ ಪ್ರಗತಿಯೂ ಇಲ್ಲ. ಅಭಿಷೇಕ ವರ್ಧಂತಿಯ ದಿನ ರೋಮಿನ ಪೋಪ್ ಗುರುಗಳು ಭಾಷಣವೀಯುತ್ತಾ 'ಆಕಾಶ ಯುದ್ಧವು ಕಾನೂನನ್ನರಿಯದು ರೋಮನ್ನು ರಣಕ್ಷೇತ್ರವಾಗಿ ಮಾರ್ಪಡಿಸುವದು ನಿಜಕ್ಕೂ ಅನ್ಯಾಯ ಇತ್ತಂಡದ ಯುದ್ಧನಾಯಕರಲ್ಲೂ ಶಾಂತಿದಾಯಕರಾಗಿರಿ ಎಂದು ನಾವು ಮತ್ತೊಮ್ಮೆ ವಿನಂತಿಮಾಡಿಕೊಳ್ಳುತ್ತೇವೆ ರೋಮನರೇ, ನಿಮ್ಮ 'ಕ್ರಾಸ್'ಧರಿಸಿ ಮುನ್ನಡೆಯುವಂತೆ ರಕ್ಷಣೆಯೀಯುವ ಆ ಪರಮಾತ್ಮನ ಕಡೆಗೆ ನಿಮ್ಮ ಕಣ್ಣು ಮತ್ತು ಹೃದಯವನ್ನು ಎತ್ತಿಕೊಳ್ಳಿರಿ. ಚರಿತ್ರೆಯಲ್ಲೆಂದೂ ನ್ಯಾಯವಾದ ಸ್ಥಾನ ದೊರೆಯದ ಅನ್ಯಾಯವನ್ನು ಮಾಡಬೇಡಿ ಎಂದು ಇತ್ತಂಡಕ್ಕೂ ನಮ್ಮ ವಿಜ್ಞಾಪನೆ" ಎಂದಿದ್ದಾರೆ

ಎಸೆಂಬ್ಲಿಯಲ್ಲಿ

ಅಮೆರಿಕಯಲ್ಲಿರುವ ಹಿಂದೀ ಸರಕಾರದ ಏಜಂಟರಂದಂತೆ ಕಸ್ತೂರಿ ಬಾನ ಬಿಡುಗಡೆಯ ಕುರಿತು ಸರಕಾರವು ಎಂದಾದರೂ ಸೂಚನೆ ಕೊಟ್ಟು ಕೇಳಿದುದಿದೆಯೇ ಎಂದು ಪ್ರಶ್ನಿಸಿದಾಗ ಕಸ್ತೂರಿ ಬಾ ಗಾಂಧಿಯವರಿಗೆ ಹಾಗ ತಿಳಿಸಿದುದಿಲ್ಲವೆಂದು ಸರಕಾರೀ ಸದಸ್ಯರು ಒಪ್ಪಿಕೊಂಡರು

ಸಿಲ್ಹಾರಿನ ಮೇಲೆ ಜಪಾನರ ಬೋಂಬು.

ಇದೇ ಮಾರ್ಚ ತಾ. 12ರಲ್ಲಿ ಜಪಾನರ ಅಲ್ಪ ಸಂಖ್ಯೆಯ ವಿಮಾನಗಳು ಸಿಲ್ಹಾರ್ ಕ್ಷೇತ್ರದ ಮೇಲೆ ಬೋಂಬು ದಾಳಿ ನಡಿಸಿದವು ಆದ ನಷ್ಟ ಮತ್ತು ಪ್ರಾಣಹಾನಿ ಅತ್ಯಲ್ಪವೆಂದು ಪ್ರಥಮ ವರದಿಯಿಂದ ತಿಳಿಯಬರುತ್ತದ' ಎಂದು ನವ ದಿಲ್ಲಿಯಿಂದ ಹೊರಟ ಸರಕಾರೀ ಪ್ರಕಟಣೆಯನ್ನುತ್ತಿದೆ

ದಕ್ಷಿಣ ಕನ್ನಡ-

ಮಂಗಳೂರು

ನಗರ ಸಭೆ:—ತಾ. ೯ರಂದು ಸೇರಿದ ಸಭೆಯ ಆರಂಭದಲ್ಲಿ, ಅಧ್ಯಕ್ಷ ಜ| ಮಹಮ್ಮದ್ ಹುಸೇನ್ ಸಾಹೇಬರು ಶ್ರೀಮತಿ ಕಸ್ತೂರಿ ಬಾ ಗಾಂಧಿಯವರ ನಿಧನದಲ್ಲಿ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಸಭೆಯ ಮುಂದಿಟ್ಟರು. ಸಭಿಕರೆಲ್ಲರೂ ಎದ್ದು ನಿಂತು ನಿರ್ಣಯವನ್ನು ಅಂಗೀಕರಿಸಿದರು.

ಅನಂತರ 'ಮಲದ ಡಬ್ಬಿಗಳನ್ನು ಸರಿಯಾಗಿ ತೆಗೆಸುವ ವ್ಯವಸ್ಥೆ ಇಲ್ಲದೆ ನಗರವು ನಾರುತ್ತಿದೆ' ಎಂಬ ಆಕ್ಷೇಪವನ್ನು ಶ್ರೀ. ಸಿ. ಎಲ್. ಲೋಬೋರವರು ಎತ್ತಿದರು. ಶ್ರೀ ಸುವರ್ಣರು ಅದನ್ನು ಸಮರ್ಥಿಸಿದರು. 'ಜಾಡಿಗಳು ಸಿಗುವುದಿಲ್ಲ. ನಾನೇನು ಮಾಡಲಿ?' ಎಂದು ಹೆಲ್ತ್ ಆಫೀಸರರು ಹೇಳಲಾಗಿ 'ಜಾಡಿ ಸಿಗದಿರಲು ಯಾರು ಹೊಣೆ?' ಎಂದು ಸಭಿಕರು ಪ್ರಶ್ನಿಸಿದರು. ಬೋಣಿಯನ್ನು ಉಪಯೋಗಿಸಬೇಕು; ಗಾಡಿಯ ಮೂಲಕ ಒಯ್ಯಬೇಕು ಎಂಬ ಸೂಚನೆಗಳು ಸಭಿಕರಿಂದ ಬಂದುವು. ಕೊನೆಗೆ ಲೋಬೋಗಳನ್ನೂ ಆದಷ್ಟು ಬೇಗನೆ ದುರಸ್ತಿಪಡಿಸಿ ಕೊಡುವುದಾಗಿ ಕಮಿಶನರರು ಭರವಸೆ ಇತ್ತರು. ಕದ್ರಿ ಮೈದಾನದ ಕುರಿತು ನಗರ ಸಭೆಯು ಅಭಿಪ್ರಾಯವನ್ನು ಕೇಳ ಕಲೆಕ್ಟರರಿಂದ ಬಂದಿದ್ದ ಅಭಿಪ್ರಾಯವು ದೀರ್ಘ ಚರ್ಚೆಗೊಳಗಾಗಿ, ಕೊನೆಗೆ ವಿದ್ಯಾರ್ಥಿಗಳ ಆಟಕ್ಕೆಂದು ಪ್ರತ್ಯೇಕಿಸಿಟ್ಟ ಸ್ಥಳವನ್ನು ಬಿಟ್ಟು ಉಳಿದುದನ್ನು ವಿಹಾರ ಸ್ಥಳವಾಗಿಡಬೇಕು. ಎಂದು ಬಹುಮತದಿಂದ ತೀರ್ಮಾನಿಸಲಾಯಿತು ಪ್ಲೇಗ್ ನಿರೋಧಕ ಚುಚ್ಚುಮದ್ದಿನ ಖರ್ಚಿಗಾಗಿ ರೂ. ೩೮ ಮಂಜೂರಾಯಿತು

ಶ್ರೀ ಕೆ. ಆರ್. ಕಾರಂತರು:— ತಮ್ಮ ಮಾತೆಯ ಕಾಯಿಲೆಯ ನಿಮಿತ್ತ ಒಂದು ತಿಂಗಳ ವರೆಗೆ ಬಿಡುಗಡೆ ಹೊಂದಿಬಂದಿದ್ದ ಶ್ರೀ| ಕಾರಂತರ ಪೆರೋಲ್ ಅವಧಿಯನ್ನು ಇನ್ನೂ ಒಂದು ತಿಂಗಳು ಹೆಚ್ಚಿಸಲಾಗಿದೆ

ಜಿಲ್ಲಾ ಕಲೆಕ್ಟರರಿಗೆ ವರ್ಗ:— ನಮ್ಮ ಜಿಲ್ಲಾ ಕಲೆಕ್ಟರರಾದ ಪಿ., ಕರುಣಾಕರ ಮೆನನ್ ಅವರಿಗೆ ಚಿತ್ತೂರಿಗೆ ವರ್ಗವಾಗಿದೆ. ಕಮರ್ಷಿಯಲ್ ಟೇಕ್ಸ್ ಆಫೀಸಿನ ಡಿ| ಕಮಿಶನರಾಗಿದ್ದ ಕೆ. ಯಂ. ಉಣ್ಣಿತ್ತನ್ ಐ. ಸಿ. ಎಸ್ ಅವರು ದ. ಕ. ಜಿಲ್ಲಾ ಕಲೆಕ್ಟರರಾಗಿ ಚಾರ್ಜು ವಹಿಸಿಕೊಳ್ಳಲಿರುವರು.

ದ. ಕ. ಜಿಲ್ಲಾ ಪತ್ರಿಕೋದ್ಯೋಗಿಗಳ ಕಾರ್ಯಕಾರಿ ಸಮಿತಿಯೊಂದು ತಾ. ೭ರಂದು ಸೇರಿ ಮುಂದಿನ ವರ್ಷದ ಕಾರ್ಯಕ್ರಮಗಳನ್ನು ನಿಷ್ಕರ್ಷಿಸಿತು. ಸುಮಾರು ನೂರು ರೂ ಗಳ ಪತ್ರಿಕೋದ್ಯೋಗಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಕೊಂಡು ಸಮಿತಿಯು ನಿರ್ಧರಿಸಿದೆ.

ಚಿತ್ರಾಪುರ ಸಾರಸ್ವತ ಕೂಟ:— ಇದರ ತೃತೀಯ ವರ್ಧಂತಿಯು ತಾ, ೫ರಂದು ಕೂಟದ ಅಧ್ಯಕ್ಷ ಶ್ರೀ| ಜಿ. ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆ ವರದಿವಾಚನಗಳ ಬಳಿಕ ಶ್ರೀಮತಿ ಕಸ್ತೂರಿ ಬಾ, ಶ್ರೀ| ಪ್ಯಾಂಡೂರು ದಿನಕರ ರಾವ್; ನಕ್ರೆಡಿ ರಮೇಶ ರಾವ್ ಇವರ ನಿಧನಕ್ಕೆ ಸಲುವಾಗಿ ಸಂತಾಪ ಸೂಚಿಸಲಾಯಿತು. ಭಾಷಣ ಸಂಗೀತಗಳ ಬಳಿಕ ಸಭೆಯು ಮುಕ್ತಾಯವಾಯಿತು

ಬೋಳೂರು ಲೇಬರ್ ಶಾಲೆಯ ಮಕ್ಕಳಿಗೆ ವಸ್ತ್ರದಾನ:—ತಾ ೨೮.೧೧ ೪೩ರಲ್ಲಿ ಜರಗಿದ ಬೋಳೂರು ಲೇಬರ್ ಶಾಲೆಯ ಹೆತ್ತವರ ಸಭೆಯ ಕೇಳಿಕೆಯ ಮೇರೆಗೆ ಮಿಜಾರ್ ಕಾರ್ ಕಂಪೆನಿಯ ಮ್ಯಾನೇಜರರು ಶಾಲಾ ಹುಡುಗರಿಗೊಂದೊಂದು ಅಂಗಿ, ಒಂದೊಂದು ಇಜಾರು ಹುಡುಗಿಯರಿಗೊಂದೊಂದು ಕುಪ್ಪಸ, ಒಂದೊಂದು ಗವನಿನಂತೆ ತಾ ೨೪.೨ ೪೪ರಲ್ಲಿ ಅವರ ಕಂಪೆನಿಗೆ ಕರೆದು ಒಟ್ಟು ೩೦ ಮಂದಿ ಮಕ್ಕಳಿಗೆ ದಾನ ಮಾಡಿದರು.

ಸೆಂಟ್ ಎಲೋಸಿಯುಸ್ ಕಾಲೇಜಿನಲ್ಲಿರುವ ಜೂನ್ ತಿಂಗಳಿನಿಂದ, ಕೆಮಿಸ್ಟ್ರಿ ಮತ್ತು ಫಿಸಿಕ್ಸ್ ವಿಭಾಗದ ಬಿ. ಎಸ್ ಸಿ. ಕ್ಲಾಸುಗಳನ್ನೂ ಮತ್ತು ಬಿ. ಕಾಮ್ ಕ್ಲಾಸನ್ನೂ ತೆರೆಯುವ ಸಲುವಾಗಿ ಪ್ರೊ| ಸಪ್ರೋರ್, ಡಾ| ದೇ ಮೊದಲಾದವರು ಕಾಲೇಜಿಗೆ ಬಂದಿದ್ದಾರೆ.

"ಬ್ಲೇಕ್ ಔಟ್" ತೆಗೆಯಲ್ಪಟ್ಟಿದೆ. ಮಂಗಳೂರಿನಲ್ಲಿ ಕಳೆದೆರಡು ವರ್ಷಗಳಿಂದ "ಬ್ಲೇಕ್ ಔಟ್" ಇದ್ದುದನ್ನು, ಇದೇ ಮಾರ್ಚ ತಾ ೧ರಿಂದ ತೆಗೆದು ಹಾಕಿರುವರು. ನಗರದಲ್ಲಿ, ಯುದ್ಧ ಪೂರ್ವದ ಆ ಶೋಭೆಯು ಈಗ ಪುನಃ ಕಾಣಿಸುತ್ತಿದೆ.

ಪ್ಲೇಗು ಹಬ್ಬುತ್ತಿದೆ:— ಬಂದರದಿಂದ ಪ್ಲೇಗು ಪೂರ್ವ ದಿಕ್ಕಿಗೆ ಹರಡುವಂತಿದೆ. ಇಲಿಗಳು ಬೀಳುತ್ತಲೇ ಇವೆ ಮುಖ್ಯಪ್ರಾಣ ದೇವಸ್ಥಾನದ ಕೇರಿಗೂ (ಹಳೇ ಬುಡ್ಡೆಗಲ್ಲಿ)ಹರಡಿದೆ ಮುಖ್ಯಪ್ರಾಣ ದೇವಾಲಯಕ್ಕೆ ಹೊಂದಿಕೊಂಡಿರುವ ರಸ್ತೆಯಲ್ಲಿ ಮೊನ್ನೆ ಪ್ಲೇಗಿನಿಂದ ಎರಡು ಮರಣಗಳಾದುವು. ಪೇಟೆಪ್ಪೆಲಿನಲ್ಲಿಯೂ, ಗೇರುಬೀಜ ಕಾರ್ಖಾನೆ ಬಳಿ ಇಲಿಗಳು ಬೀಳುತ್ತಿವೆ. ಜೆಪ್ಪುವಿನಲ್ಲಿಯೂ ಇಲಿಗಳು ಬೀಳುತ್ತಿವೆಯೆಂತೆ ವರದಿಯಿದೆ. ಇಲಿಗಳು ಬಿದ್ದ ಮನೆಗಳನ್ನು ಕ್ರಿಮಿನಾಶಕ ದ್ರಾವಕಗಳಿಂದ ಶುದ್ಧಪಡಿಸುವ ಮತ್ತು ಚುಚ್ಚುಮದ್ದು ಹಾಕುವ ಕಾರ್ಯವು ಭರದಿಂದ ನಡೆದಿದೆ. ಇಲಿಗಳು ಬಿದ್ದ ಬಗ್ಗೆ ಅವಶ್ಯವಾಗಿ ಮುನಿಸಿಪಾಲಿಟಿಯವರಿಗೆ ವರದಿ ಮಾಡಿ, ಆ ಸ್ಥಳಗಳನ್ನು ಸ್ವಚ್ಛಗೊಳಿಸಬೇಕೆಂದು ಜನರಿಗೆ ವಿನಂತಿಸಲಾಗಿದೆ.

ಉಡುಪಿ.

ಸತ್ಕಾರ:—ಇತ್ತೀಚೆಗೆ ವಿವಾಹವಾದ ಶ್ರೀಯುತ ಮತ್ತು ಶ್ರೀಮತಿ ಟಿ ಎ. ಪೈ ಹಾಗೂ ಶ್ರೀಯುತ ಮತ್ತು ಶ್ರೀಮತಿ ಕೆ. ಕೆ. ಪೈ ಇವರಿಗೆ ತಾ 13 3-44ರಲ್ಲಿ ಶ್ರೀ ರಾಮಕೃಷ್ಣ ದಿಯೇಟರಿನಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಶ್ರೀ ವಕೀಲ್ ಪದ್ಮನಾಭರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಎ. ಜಿ. ಆಳ್ವರವರು ನೂತನ ದಂಪತಿಗಳಿಗೆ ಶುಭವನ್ನು ಕೋರಿ ಮಾತನಾಡಿದರು. ಶ್ರೀ. ಟಿ. ಎ. ಪೈಗಳು ಅದಕ್ಕುತ್ತರವಿತ್ತರು. ಅಧ್ಯಕ್ಷರ ಭಾಷಣ, ಶ್ರೀ. ಪಿ ಶೀನ ಶೆಟ್ಟರ ಧನ್ಯವಾದ ಉಪಾಹಾರದೊಂದಿಗೆ ಸಭಾಂತ್ಯವಾಯಿತು.

ಸೋದೆ (ಉತ್ತರ ಕನ್ನಡ)— ಶ್ರೀ ಸೋದಾ ರಮಾ ತ್ರಿವಿಕ್ರಮ ದೇವರ ಸನ್ನಿಧಿಯಲ್ಲಿ ನಡೆಯತಕ್ಕ ವಾರ್ಷಿಕ ರಥೋತ್ಸವವು ಈ ಬಾರಿ ಸೋದೆ ಮಠದ ಯಾಜಮಾನ್ಯದಲ್ಲಿ ಶ್ರೀ ವಿಶ್ವೋತ್ತಮ ತೀರ್ಥರ ಉದಾರಾಶ್ರಯದಲ್ಲಿ ಜಯಶೀಲವಾಗಿ ಜರಗಿತು. ತಾ. 13 ಮತ್ತು 14ರಲ್ಲು ಶ್ರೀ ಗುರುರಾಜರ ಹಾಗೂ ಶ್ರೀ ವ್ಯಾಸರಾಜರ ಆರಾಧನೆಗಳು ಅನ್ನಸಂತರ್ಪಣೆಯೊಂದಿಗೆ ವಿಜೃಂಭಣೆಯಿಂದ ನಡೆದವು. ಕೀರ್ತಿಶೇಷ ಶ್ರೀ ವಿಶ್ವೇಂದ್ರ ತೀರ್ಥ ಮಹಾ ಸ್ವಾಮಿಗಳವರ ಸಂಕಲ್ಪದಂತೆ ಅಲ್ಲಿಯ ಕಟ್ಟಡವು ತ್ವರಿತ ದುರಸ್ತಿ ಮಾಡಲ್ಪಡಬೇಕಾಗಿದೆ ಸಂಬಂಧಪಟ್ಟವರು ಈ ಕಡೆ ನಿಗಾ ಕೊಡುವುದು ಸಂದರ್ಭೋಚಿತವಷ್ಟೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್ ಲಿಮಿಟೆಡ್:—ಇದರ 1943ನೇ ಡಿಶಂಬರಕ್ಕೆ ಅಂತ್ಯವಾಗುವ 38ನೇ ವರ್ಷದ ವರದಿಯು ನಮ್ಮ ಹಸ್ತಗತವಾಗಿದೆ. ವಿಮರ್ಶೆಯನ್ನು ಮುಂದೆ ಕೊಡಲಾಗುವುದು.

ಸಂಸ್ಕೃತ ಕಾಲೇಜಿಗೆ ಸ್ವಂತ ಕಟ್ಟಡದ ಯೋಜನೆ— ನಾಮದಾರ್ ಡಾ| ರಾಮ ರಾಯರು ಸ್ಥಳೀಯ ಸಂಸ್ಕೃತ ಕಾಲೇಜಿಗೆ ಸ್ವತಂತ್ರ ಕಟ್ಟಡ ಕಟ್ಟಿಸಿಕೊಳ್ಳಲು ಉಡುಪಿ ಪಟ್ಟಣದ ಕೇಂದ್ರದಲ್ಲಿರುವ ಒಂದು ಎಕ್ರೆಗೂ ಮಿಕ್ಕಿದ ಭೂಮಿಯನ್ನು ದಾನ ಮಾಡಿರುವರ - ಶ್ರೀರಂಗದಲ್ಲಿರುವ ದೇಶ ಭೂಷಣ ಮಾನ್ಯ ಆರ್. ಕೆ. ಶ್ರೀ ಪ್ರಸನ್ನ ವೆಂಕಟೇಶ ರಾಯರು ಮಂಗಳೂರಲ್ಲಿರುವ ಸಾಧಾರಣ 8 ಸಹಸ್ರ ರೂಪಾಯಿ ಬೆಲೆ ಬಾಳುವ ತಮ್ಮ ಜಮೀನನ್ನು ಶಾಲಾ ಕಟ್ಟಡದ ಬಗ್ಗೆ ಧಾರೆಯೆರೆದಿರುವರು. ಇಬ್ಬರು ಮಹನೀಯರ ಉದಾರತೆಯು ಅಭಿನಂದನೀಯವು.

ಕಲೆಕ್ಟರರ ಪ್ರಕಟಣೆ--ಉಡುಪಿ ಮ್ಯುನಿಸಿಪಾಲಿಟಿಯ ಮತ್ತು ಅದರ ಆಸುಪಾಸಿನ ಗ್ರಾಮಗಳಲ್ಲಿ ಇದೇ ತಾ.17ರಿಂದ ಲ್ಯಾಸೆನ್ಸು ಪಡೆದ ವ್ಯಾಪಾರಿಗಳ ಹೊರತು ಇತರರ ಸ್ವಾಧೀನ 10 ಮುಡಿಕ್ಕಿಂತ ಜಾಸ್ತಿ ಅಕ್ಕಿ ಅಥವಾ ಭತ್ತವಿದ್ದರೆ ಅದನ್ನು ಅಧಿಕಾರಿಗಳ ಬರಹ ಮೂಲಕ ಒಪ್ಪಿಗೆ ಪಡೆದ ವಿನಹಾ ಮಾರಾಟ ಮಾಡುವುದಾಗಲೀ ಸ್ಥಳಾಂತರಗೊಳಿಸುವುದಾಗಲೀ ನಿಷೇಧಿಸಲ್ಪಟ್ಟಿದೆ.

ರೇಶನಿಂಗ್-ಇದೇ ತಾ 12ರಲ್ಲು ನಗರದ ಮತ್ತು ಸಮೀಪದ ಗಡಿನಾಡುಗಳಲ್ಲಿ ಪ್ರಾರಂಭವಾಗಿಯದೆ. ರೇಶನಿಂಗ್ ಕ್ಷೇತ್ರದ ಹೊರಗಿನವರಿಗೆ ಅಕ್ಕಿ ಒದಗಿಸಿಕೊಡುವ ವ್ಯವಸ್ಥೆ ಕೂಡಲೇ ಮಾಡಬೇಕಾಗಿದೆ.

ಇನ್ನಂಜೆ—ಕೀರ್ತಿಶೇಷ ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೇಂದ್ರ ತೀರ್ಥ ಶ್ರೀಪಾದಂಗಳವರಿಂದ ಸ್ಥಾಪಿಸಲ್ಪಟ್ಟ ಎಸ್. ವಿ ಯಚ್ ಹೈಸ್ಕೂಲಿಗೆ ಸಂಬಂಧಪಟ್ಟ ಶ್ರೀ ವಾದಿರಾಜ ಗುರುಕುಲದ ಪ್ರವೇಶೋತ್ಸವವು ಕಳೆದ ತಾ. 27ರಲ್ಲು ಶ್ರೀ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ಜರಗಿತು ಶಾಲಾ ವರ್ಧಂತಿ ಸಮಾರಂಭವು ಡಾ| ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ವಿವಿಧ ಕಾರ್ಯಕ್ರಮಗಳಿಂದ ಸಮಾರಂಭಗಳು ಯಶಸ್ವಿಯಾಗಿ ಕೊನೆಗೊಂಡವು, ತಾ. 20ರಲ್ಲು ಡಿವಿಜನಲ್ ಇನ್ಸ್‌ಪೆಕ್ಟರರು ಜಿಲ್ಲಾ ವಿದ್ಯಾಧಿಕಾರಿಗಳೊಡನೆ ಶಾಲೆಯನ್ನು ಸಂದರ್ಶಿಸಿ ಸದಭಿಪ್ರಾಯವನ್ನಿತ್ತಿರುವರೆಂದು ತಿಳಿದು ಬರುತ್ತದೆ.

ಕುಂದಾಪುರ-ಅಂಜುಮನ್ ಇಸ್ಲಾಮಿಯಾ ಹಾಲ್ ಮುಸ್ಲಿಮ್ ಕಟ್ಟಡದಲ್ಲಿ ಇದೇ ತಾ. ೮ರಲ್ಲು ಹಜ್ರತ್ ಮಹಮ್ಮದ್ ಪೈಗಂಬರರ ಜನ್ಮ ದಿನಾಚರಣೆಯು ಖಾಯಿದೆ-ಮಿಲ್ಲತ್, ನವಾಬ್ ಬಹದೂರ್ ಯಾರ್‌ಜಂಗ್ (ಆಲ್ ಇಂಡಿಯಾ ಸ್ಟೇಟ್ ಮುಸ್ಲಿಂ ಲೀಗ್ ಅಧ್ಯಕ್ಷ) ಅವರ ಸಭಾ ನಾಯಕತ್ವದಲ್ಲಿ ಜರಗಿತು.

ಸುರತ್ಕಲ್:- ಹಿಂದೂ ವಿದ್ಯಾದಾಯಿನೀ ಸಂಘದಿಂದ ನಡೆದುಬಂದ ಇದ್ದ ವಿದ್ಯಾದಾಯಿನೀ ಶಾಲೆಯು ಹೈಸ್ಕೂಲಾಗಿ ಬರುವ ಜೂನ್ ತಿಂಗಳಿಂದ ಮಾರ್ಪಾಟು ಹೊಂದಿ ಜನತಾ ಸೇವೆಯನ್ನು ಮಾಡಲಿರುವುದು, ವಿದ್ಯಾಭಿಮಾನಿಗಳು ಸಹಕಾರ ಸಹಾಯಾದಿಗಳನ್ನಿತ್ತು ಪ್ರೋತ್ಸಾಹಿಸಬೇಕಾಗಿದೆ.

ಕರ್ನಾಟಕದಲ್ಲಿಯ ಎಲ್ಲ ಪತ್ರಿಕೋದ್ಯೋಗಿಗಳಲ್ಲಿ ಪ್ರಾರ್ಥನೆ.

ಮಂಗಳೂರಲ್ಲಿ ಕೂಡಿದ ಪಸೇ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಲನವು ಅತ್ಯಂತ ಯಶಸ್ವಿಯಾಗಿ ಜರಗಿತು. ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೋದ್ಯೋಗಿಗಳು ಉತ್ಸಾಹದಿಂದ ಮುಂದೆ ಬಂದು ಈ ಸಮ್ಮೇಲನದ ಹೊಣೆಯನ್ನು ಹೊತ್ತದ್ದಕ್ಕಾಗಿ ಅವರು ಅಭಿನಂದನೆಗೆ ಪಾತ್ರರೆಂದು ಬೇರೆ ಹೇಳಬೇಕಿಲ್ಲ. ೧೯೨೯ನೇ ಇಸವಿಯಲ್ಲಿ ಶ್ರೀ ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಮ್ಮೇಲನವು ಜರಗಿದಾಗ ಸ್ಥಾಪಿಸಲ್ಪಟ್ಟ ಕರ್ನಾಟಕ ಪತ್ರಿಕೋದ್ಯೋಗಿಗಳ ಸಂಘವು ಈಗ ಪುನರುತ್ಥಾನಗೊಳಿಸಲ್ಪಟ್ಟಿದೆ. ಕರ್ನಾಟಕ ಪತ್ರಿಕೋದ್ಯೋಗದ ಇತಿಹಾಸವನ್ನು ಬರೆಯಿಸುವ ಮೊದಲಾದ ಅನೇಕ ಕಾರ್ಯಗಳನ್ನು ಕೈಕೊಳ್ಳಬೇಕೆಂಬ ಉತ್ಸಾಹವಿದೆ.

ಸಂಘದ ಮುಖ್ಯ ಕಾರ್ಯಾಲಯವು ಮಂಗಳೂರಿನಲ್ಲಿಯೇ ಇರತಕ್ಕದ್ದು. ಮತ್ತು ಉಪಾಧ್ಯಕ್ಷರಲ್ಲೊಬ್ಬರಾದ ಶ್ರೀ. ವಿ ಎಸ್. ಕುಡ್ವರವರು ಕಾರ್ಯಾಲಯವನ್ನು ನಡೆಸಲು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಎಲ್ಲ ಪತ್ರವ್ಯವಹಾರವನ್ನು ಈ ವರ್ಷದ ಮಟ್ಟಿಗೆ ಮಂಗಳೂರಿನಲ್ಲಿಯ ಮುಖ್ಯ ಕಾರ್ಯಾಲಯದ ವಿಳಾಸಕ್ಕೆ ಮಾಡಬೇಕು. ಎಲ್ಲ ಪತ್ರಿಕೋದ್ಯೋಗಿಗಳು ದಯವಿಟ್ಟು ಮುಂದೆ ಸಂಘವನ್ನು ಪ್ರೋತ್ಸಾಹಿಸಬೇಕಾಗಿ ಬಿನ್ನವಿಸುತ್ತೇನೆ.

ತಮ್ಮ,

ಮೋಹರೆ ಹಣಮಂತರಾಯ

ಅಧ್ಯಕ್ಷ.

೧೫—೩—೧೯೪೪.

ಕರ್ನಾಟಕ ಪತ್ರಿಕೋದ್ಯೋಗಿ ಸಂಘ.

Degrees: Books: Medicines

Free H L M. S. M. B. H. M. D. etc. Free Homeo Ayur- UnaniNatureo degree by post also—Practitioner also get soon Homeo Mater-amedica, Rs. 5 Homeo Practice book Rs 4. Insanity Cure Pills Rs. 10 Enclose 2 annas stamp:—

Prof. Dr. N H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach (Regd.)

No. 3 Rs 2. No 2 Rs 5 No. 1 Rs. 7 Special Rs. 10, Extra Special Rs. 17 fo ove marriage health, wealth. Ask an six questions with M. O. Re. 1/4 an get correct answers by returnpost Life reading Rs. 10No V.P.P. Send M.O Free, pmplets

Prof Dr. N. H Chhatbar.
P. O. MAHUVA (Kathiawar India.)

THE BEST PREVENTIVE IN EPIDEMICS OF

CHOLERA

"BHUVANENDRA"

CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan

For Children: 1 to 2 drops with the said decoction.

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ಸಾಂಕ್ರಾಮಿಕ ಬೇಧಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೂ ಇಟ್ಟಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.**

ದಕ್ಷಿಣ ಕನ್ನಡ

ಮಂಗಳೂರು

ನಗರ ಸಭೆ:—ತಾ. ೯ರಂದು ಸೇರಿದಾಗ ಆರಂಭದಲ್ಲಿ, ಅಧ್ಯಕ್ಷ ಡಾ| ಮಹಮ್ಮದ್ ಹುಸೇನ್ ಸಾಹೇಬರು ಶ್ರೀಮತಿ ಕಸ್ತೂರಿ ಬಾ ಗಾಂಧಿಯ ಮರಣದಲ್ಲಿ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಸಭೆಯ ಮುಂದಿಟ್ಟರು. ಸಭಿಕರೆಲ್ಲರೂ ೨ ನಿಮಿಷ ಎದ್ದುನಿಂತು ನಿರ್ಣಯವನ್ನು ಮನ್ನಿಸಿದರು.

ಅನಂತರ 'ಮಲದ ಬಕೆಟ್ಟುಗಳನ್ನು ಸರಿಯಾಗಿ ತೆಗೆಯುವ ವ್ಯವಸ್ಥೆ ಇಲ್ಲದೆ ನಗರವು ನಾರುತ್ತಿದೆ' ಎಂಬ ಆಕ್ಷೇಪವನ್ನು ಶ್ರೀ. ಸಿ. ಎಲ್. ಲೋಬೋರವರು ಎತ್ತಿದರು. ಶ್ರೀ ಸುವರ್ಣರು ಅದನ್ನು ಸಮರ್ಥಿಸಿದರು. 'ಆಳುಗಳು ಸಿಗುವುದಿಲ್ಲ, ನಾನೇನು ಮಾಡಲಿ?' ಎಂದು ಹೆಲ್ತಾಫೀಸರರು ಹೇಳಲಾಗಿ 'ಆಳು ಸಿಗದಿರಲು ಯಾರು ಹೊಣೆ?' ಎಂದು ಸಭಿಕರು ಪ್ರಶ್ನಿಸಿದರು. ದೋಣಿಯನ್ನು ಉಪಯೋಗಿಸಬೇಕು, ಗಾಡಿಯ ಮೂಲಕ ಒಯ್ಯಬೇಕು ಎಂಬ ಸೂಚನೆಗಳು ಸಭಿಕರಿಂದ ಬಂದುವು. ಕೊನೆಗೆ ಲೋಪಗಳನ್ನು ಆದಷ್ಟು ಬೇಗನೆ ದುರಸ್ತಿಪಡಿಸಿ ಕೊಡುವುದಾಗಿ ಕಮಿಶನರರು ಭರವಸೆ ಇತ್ತರು. ಕದ್ರಿ ಮೈದಾನಿನ ಕುರಿತು ನಗರ ಸಭೆಯ ಅಭಿಪ್ರಾಯವನ್ನು ಕೇಳಿ ಕಲೆಕ್ಟರರಿಂದ ಬಂದಿದ್ದ ಅಭಿಪ್ರಾಯವು ದೀರ್ಘ ಚರ್ಚೆಗೊಳಗಾಗಿ, ಕೊನೆಗೆ ವಿದ್ಯಾರ್ಥಿನಿ ಶಾಲೆಗೆಂದು ಪ್ರತ್ಯೇಕಿಸಲಾದ ಸ್ಥಳವನ್ನು ಬಿಟ್ಟು ಉಳಿದುದನ್ನು ವಿಹಾರ ಸ್ಥಳವಾಗಿಡಬೇಕು, ಎಂದು ಬಹುಮತದಿಂದ ತೀರ್ಮಾನಿಸಲಾಯಿತು. ಪ್ಲೇಗ್ ನಿರೋಧಕ ಜಾಹೀರು ಪತ್ರಗಳ ವೆಚ್ಚಕ್ಕಾಗಿ ರೂ ೨೮ ಮಂಜೂರಾಯಿತು.

ಶ್ರೀ ಕೆ. ಆರ್. ಕಾರಂತರು:—ತಮ್ಮ ಪ್ರಕೃತಿಯ ಕಾಯಿಲೆಯ ನಿಮಿತ್ತ ಒಂದು ತಿಂಗಳ ಮಟ್ಟಿಗೆ ಬಿಡುಗಡೆ ಹೊಂದಿಬಂದಿದ್ದ ಶ್ರೀ| ಕಾರಂತರ ಪೆರೋಲ್ ಅವಧಿಯನ್ನು ಇನ್ನೂ ಒಂದು ತಿಂಗಳು ಹೆಚ್ಚಿಸಲಾಗಿದೆ.

ಜಿಲ್ಲಾ ಕಲೆಕ್ಟರರಿಗೆ ವರ್ಗ:—ನಮ್ಮ ಜಿಲ್ಲಾ ಕಲೆಕ್ಟರರಾದ ವಿ. ಕರಮತಲ್ಲ ಅವರಿಗೆ ಚಿತ್ತೂರಿಗೆ ವರ್ಗವಾಗಿದೆ. ಕಮರ್ಶಿಯಲ್ ಟ್ಯಾಕ್ಸ್ ಆಫೀಸಿನ ಡಿ| ಕಮಿಶನರಾಗಿದ್ದ ಕೆ. ಯಂ. ಉನ್ನಿತ್ತನ್ ಐ. ಸಿ. ಎಸ್. ಅವರು ದ. ಕ. ಜಿಲ್ಲಾ ಕಲೆಕ್ಟರರಾಗಿ ಚಾರ್ಜು ವಹಿಸಿಕೊಳ್ಳಲಿರುವರು.

ದ. ಕ. ಜಿಲ್ಲಾ ಪತ್ರಿಕೋದ್ಯೋಗಿಗಳ ಕಾರ್ಯಕಾರಿ ಸಮಿತಿಯೊಂದು ತಾ. ೭ರಂದು ಸೇರಿ ಮುಂದಿನ ವರ್ಷದ ಕಾರ್ಯಕ್ರಮಗಳನ್ನು ನಿಷ್ಕರ್ಷಿಸಿತು. ಸುಮಾರು ನೂರು ರೂ ಗಳ ಪತ್ರಿಕೋದ್ಯೋಗಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಕೊಳ್ಳಲು ಸಮಿತಿಯು ನಿರ್ಧರಿಸಿದೆ.

ಚಿತ್ರಾಪುರ ಸಾರಸ್ವತ ಕೂಟ:—ಇದರ ತೃತೀಯ ವರ್ಧಂತಿಯು ತಾ. ೫ರಂದು ಕೂಟದ ಅಧ್ಯಕ್ಷ ಶ್ರೀ| ಜಿ. ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ ವರದಿವಾಚನಗಳ ಬಳಿಕ ಶ್ರೀಮತಿ ಕಸ್ತೂರಿ ಬಾ; ಶ್ರೀ| ಬೈಂದೂರು ದಿನಕರ ರಾವ್, ನಿರ್ಕೋಡಿ ರಮೇಶ ರಾವ್ ಇವರ ನಿಧನದ ಸಲುವಾಗಿ ಸಂತಾಪ ಸೂಚಿಸಲಾಯಿತು, ಭಾಷಣ ಸಂಗೀತಗಳ ಬಳಿಕ ಸಭೆಯು ಮುಕ್ತಾಯವಾಯಿತು.

ಬೋಳೂರು ಲೇಬರ್ ಶಾಲೆಯ ಮಕ್ಕಳಿಗೆ ವಸ್ತ್ರದಾನ:—ತಾ ೨೮.೧೧. ೪೪ರಲ್ಲಿ ಜರಗಿದ ಬೋಳೂರು ಲೇಬರ್ ಶಾಲೆಯ ಹೆತ್ತವರ ಸಭೆಯ ಕೇಳಿಕೆಯ ಮೇರೆಗೆ ಮಿಜಾರ್ ಕಾರ್ ಕಂಪೆನಿಯ ಮ್ಹಾಲಕರಿಂದ ಶಾಲಾ ಹುಡುಗರಿಗೊಂದೊಂದು ಅಂಗಿ, ಒಂದೊಂದು ಇಜಾರು ಹುಡುಗಿಯರಿಗೊಂದೊಂದು ಕುಪ್ಪ, ಒಂದೊಂದು ಗವನಿನಂತೆ ತಾ ೨೪-೨ ೪೪ರಲ್ಲಿ ಅವರ ಕಂಪೆನಿಗೆ ಕರೆದು ಒಟ್ಟು ೪೦ ಮಂದಿ ಮಕ್ಕಳಿಗೆ ದಾನ ಮಾಡಿದರು.

ಸೆಂಟ್ ಎಲೋಸಿಯಸ್ ಕಾಲೇಜಿನಲ್ಲಿ ಬರುವ ಜೂನ್ ತಿಂಗಳಿನಿಂದ, ಕೆಮಿಸ್ಟ್ರಿ ಮತ್ತು ಫಿಸಿಕ್ಸ್ ವಿಭಾಗದ ಬಿ. ಎಸ್ ಸಿ. ಕ್ಲಾಸುಗಳನ್ನೂ ಮತ್ತು ಬಿ. ಕಾಮ್ ಕ್ಲಾಸನ್ನೂ ತೆರೆಯುವ ಸಲುವಾಗಿ ಪ್ರೊ| ಸಮ್ಮೂರ್, ಡಾ| ದೇ ಮೊದಲಾದವರು ಕಾಲೇಜಿಗೆ ಬಂದಿದ್ದಾರೆ.

"ಬ್ಲೇಕ್ ಔಟ್" ತೆಗೆಯಲ್ಪಟ್ಟಿದೆ. ಮಂಗಳೂರಿನಲ್ಲಿ ಕಳೆದೆರಡು ವರ್ಷಗಳಿಂದ "ಬ್ಲೇಕ್ ಔಟ್" ಇದ್ದುದನ್ನು, ಇದೇ ಮಾರ್ಚ ತಾ. ೧ ರಿಂದ ತೆಗೆದು ಹಾಕಿರುವರು. ನಗರದಲ್ಲಿ, ಯುದ್ಧಪೂರ್ವದ ಆ ಶೋಭೆಯು ಈಗ ಪುನಃ ಕಾಣಿಸುತ್ತಿದೆ.

ಪ್ಲೇಗು ಹಬ್ಬುತ್ತಿದೆ:—ಬಂದರದಿಂದ ಪ್ಲೇಗು ಪೂರ್ವ ದಿಕ್ಕಿಗೆ ಹಬ್ಬುವಂತಿದೆ. ಇಲಿಗಳು ಬೀಳುತ್ತಲೇ ಇವೆ. ಮುಖ್ಯಪ್ರಾಣ ದೇವಸ್ಥಾನದ ಕೇರಿಗೂ (ಹಳೇ ಬುಡ್ಡೆಗಲ್ಲಿ) ಹರಡಿದೆ. ಮುಖ್ಯಪ್ರಾಣ ದೇವಾಲಯಕ್ಕೆ ಹೊಂದಿಕೊಂಡಿರುವ ರಸ್ತೆಯಲ್ಲಿ ಮೊನ್ನೆ ಪ್ಲೇಗಿನಿಂದ ಎರಡು ಮರಣಗಳಾದುವು. ನೀರೇಶ್ವಲಿನಲ್ಲಿಯೂ, ಗೇರುಬೀಜ ಕಾರ್ಖಾನೆ ಬಳಿ ಇಲಿಗಳು ಬೀಳುತ್ತಿವೆ. ಜೆಪ್ಪುವಿನಲ್ಲಿಯೂ ಇಲಿಗಳು ಬೀಳುತ್ತಿವೆಯಂತೆ ವರದಿಯಿದೆ. ಇಲಿಗಳು ಬಿದ್ದ ಮನೆಗಳನ್ನು ಕ್ರಿಮಿನಾಶಕ ದ್ರಾವಕಗಳಿಂದ ಶುದ್ಧಪಡಿಸುವ ಮತ್ತು ಟಾಕು ಹಾಕುವ ಕಾರ್ಯವು ಭರದಿಂದ ನಡೆದಿದೆ. ಇಲಿಗಳು ಬಿದ್ದ ಬಗ್ಗೆ ಅವಶ್ಯವಾಗಿ ಮುನಿಸಿಪಾಲಿಟಿಯವರಿಗೆ ವರದಿ ಮಾಡಿ, ಆ ಸ್ಥಳಗಳನ್ನು ಸ್ವಚ್ಛಗೊಳಿಸಬೇಕೆಂದು ಜನರಿಗೆ ವಿನಂತಿಸಲಾಗಿದೆ.

ಉಡುಪಿ.

ಸತ್ಕಾರ:—ಇತ್ತೀಚೆಗೆ ವಿವಾಹವಾದ ಶ್ರೀಯುತ ಮತ್ತು ಶ್ರೀಮತಿ ಟಿ. ಎಂ. ಪೈ ಹಾಗೂ ಶ್ರೀಯುತ ಮತ್ತು ಶ್ರೀಮತಿ ಕೆ. ಕೆ. ಪೈ ಇವರಿಗೆ ತಾ 13-3 44ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಶ್ರೀ ವಕೀಲ್ ಪದ್ಮನಾಭರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಎ. ಜಿ. ಆಳ್ವರವರು ನೂತನ ದಂಪತಿಗಳಿಗೆ ಶುಭವನ್ನು ಕೋರಿ ಮಾತನಾಡಿದರು. ಶ್ರೀ. ಟಿ. ಎ. ಪೈಗಳು ಆದರಕ್ಕುತ್ತರವಿತ್ತರು. ಅಧ್ಯಕ್ಷರ ಭಾಷಣ, ಶ್ರೀ. ಪಿ. ಶೀನ ಶೆಟ್ಟರ ಧನ್ಯವಾದ ಉಪಾಹಾರದೊಂದಿಗೆ ಸಭಾಂತ್ಯವಾಯಿತು.

ಸೋದೆ (ಉತ್ತರ ಕನ್ನಡ)—ಶ್ರೀ ಸೋದಾ ರಮಾ ತ್ರಿವಿಕ್ರಮ ದೇವರ ಸನ್ನಿಧಿಯಲ್ಲಿ ನಡೆಯತಕ್ಕ ವರ್ಷಾವಧಿ ರಥೋತ್ಸವವು ಈ ಬಾರಿ ಸೋದೆ ಮಠದ ಬಾಲಯತಿಗಳಾದ ಶ್ರೀ ವಿಶ್ವೋತ್ತಮ ತೀರ್ಥರ ಉದಾರಾಶ್ರಯದಲ್ಲಿ ಜಯಶೀಲವಾಗಿ ಜರಗಿತು. ತಾ- 13 ಮತ್ತು 14ರಲ್ಲು ಶ್ರೀ ಗುರುರಾಜರ ಹಾಗೂ ಶ್ರೀ ವ್ಯಾಸರಾಜರ ಆರಾಧನೆಗಳು ಅನುಕ್ರಮವಾಗಿ ನಡೆದವು. ಕೀರ್ತಿಶೇಷ ಶ್ರೀ ವಿಶ್ವೇಂದ್ರ ತೀರ್ಥ ಮಹಾ ಸ್ವಾಮಿಗಳವರ ಸಂಕಲ್ಪದಂತೆ ಅಲ್ಲಿಯ ಕಟ್ಟಡವು ತ್ವರ್ಯ ದುರಸ್ತಿ ಮಾಡಲ್ಪಡಬೇಕಾಗಿದೆ. ಸಂಬಂಧಪಟ್ಟವರು ತಕ್ಕ ನಿಗಾ ಕೊಡುವುದು ಸಂದರ್ಭೋಚಿತವಷ್ಟೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್:—ಇದರ 1943ನೇ ಡಿಸೆಂಬರಕ್ಕೆ ಅಂತ್ಯವಾಗುವ 38ನೇ ವರ್ಷದ ವರದಿಯು ನಮ್ಮ ಹಸ್ತಗತವಾಗಿದೆ. ವಿಮರ್ಶೆಯನ್ನು ಮುಂದೆ ಕೊಡಲಾಗುವುದು.

ಸಂಸ್ಕೃತ ಕಾಲೇಜಿಗೆ ಸ್ವಂತ ಕಟ್ಟಡದ ಯೋಜನೆ— ನಾಮದಾರ್ ಡಾ| ರಾಮರಾಯರು ಸ್ಥಳೀಯ ಸಂಸ್ಕೃತ ಕಾಲೇಜಿಗೆ ಸ್ವತಂತ್ರ ಕಟ್ಟಡ ಕಟ್ಟಿಸಿಕೊಳ್ಳಲು ಉಡುಪಿ ಪಟ್ಟಣದ ಕೇಂದ್ರದಲ್ಲಿರುವ ಒಂದು ಎಕ್ರೆಗೂ ಮಿಕ್ಕಿದ ಭೂಮಿಯನ್ನು ದಾನ ಮಾಡಿರುವರು. ಶ್ರೀರಂಗದಲ್ಲಿರುವ ದೇಶ ಭೂಷಣ ಮಾನ್ಯ ಆರ್. ಕೆ. ಶ್ರೀ ಪ್ರಸನ್ನ ವೆಂಕಟೇಶ ರಾಯರು ಮಂಗಳೂರಲ್ಲಿರುವ ಸಾಧಾರಣ 8 ಸಹಸ್ರ ರೂಪಾಯಿ ಬೆಲೆ ಬಾಳುವ ತನ್ನ ಜಮೀನನ್ನು ಶಾಲಾ ಕಟ್ಟಡದ ಬಗ್ಗೆ ಧಾರೆಯೆರೆದಿರುವರು. ಇಬ್ಬರು ಮಹನೀಯರ ಉದಾರತೆಯು ಅಭಿನಂದನೀಯವು.

ಕಲೆಕ್ಟರರ ಪ್ರಕಟಣೆ--ಉಡುಪಿ ಮ್ಯುನಿಸಿಪಾಲಿಟಿಯ ಮತ್ತು ತದ ಆಸುಪಾಸಿನ ಗ್ರಾಮಗಳಲ್ಲಿ ಇದೇ ತಾ-12ರಿಂದ ಲೈಸೆನ್ಸು ಪಡೆದ ವ್ಯಾಪಾರಿಗಳ ಹೊರತು ಇತರರ ಸ್ವಾಧೀನ 10 ಮಣಕ್ಕಿಂತ ಜಾಸ್ತಿ ಅಕ್ಕಿ ಅಥವಾ ಭತ್ತವಿದ್ದರೆ ಅದನ್ನು ಅಧಿಕಾರಿಗಳ ಬರಹ ಮೂಲಕ ಒಪ್ಪಿಗೆ ಪಡೆದ ವಿನಾ ಮಾರಾಟ ಮಾಡುವುದಾಗಲೀ ಸ್ಥಳಾಂತರಗೊಳಿಸುವುದಾಗಲೀ ನಿಷೇಧಿಸಲ್ಪಟ್ಟಿದೆ.

ರೇಶನಿಂಗ್-ಇದೇ ತಾ 12ರಲ್ಲು ನಗರದ ಮತ್ತು ಸಮೀಪದ ಗಡಿನಾಡುಗಳಲ್ಲಿ ಪ್ರಾರಂಭವಾಗಿಯದೆ. ರೇಶನಿಂಗ್ ಕ್ಷೇತ್ರದ ಹೊರಗಿನವರಿಗೆ ಅಕ್ಕಿ ಒದಗಿಸಿಕೊಡುವ ವ್ಯವಸ್ಥೆ ಕೂಡಲೇ ಮಾಡಬೇಕಾಗಿದೆ.

ಇನ್ನಂಜೆ—ಕೀರ್ತಿಶೇಷ ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೇಂದ್ರ ತೀರ್ಥ ಶ್ರೀಪಾದಂಗಳವರಿಂದ ಸ್ಥಾಪಿಸಲ್ಪಟ್ಟ ಎಸ್. ವಿ ಹೈ ಸ್ಕೂಲಿಗೆ ಸಂಬಂಧಪಟ್ಟ ಶ್ರೀ ವಾದಿರಾಜ ಗುರುಕುಲದ ಪ್ರವೇಶೋತ್ಸವವು ಕಳೆದ ತಾ. 27ರಲ್ಲು ಶ್ರೀ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ಜರಗಿತು. ಶಾಲಾ ವರ್ಧಂತಿ ಸಮಾರಂಭವು ಡಾ| ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ವಿವಿಧ ಕಾರ್ಯಕ್ರಮಗಳಿಂದ ಸಮಾರಂಭಗಳು ಯಶಸ್ವಿಯಾಗಿ ಕೊನೆಗೊಂಡವು. ತಾ- 20ರಲ್ಲು ಡಿವಿಜನಲ್ ಇನ್ಸ್‌ಪೆಕ್ಟರರು ಜಿಲ್ಲಾ ವಿದ್ಯಾಧಿಕಾರಿಗಳೊಡನೆ ಶಾಲೆಯನ್ನು ಸಂದರ್ಶಿಸಿ ಸದಭಿಪ್ರಾಯವನ್ನಿತ್ತಿರುವರೆಂದು ತಿಳಿದು ಬರುತ್ತದೆ.

ಕುಂದಾಪುರ—ಅಂಜುಮನ್ ಯಿಸ್ಲಾಹುಲ್ ಮುಸ್ಲಿಮ್ ಕಟ್ಟಡದಲ್ಲಿ ಇದೇ ತಾ. 8ರಲ್ಲು ಹಜ್ರತ್ ಮಹಮ್ಮದ್ ಪೈಗಂಬರರ ಜನ್ಮ ದಿನಾಚರಣೆಯು ಖಾಯಿದೆ-ಮಿಲ್ಲತ್, ನವಾಬ್ ಬಹದೂರ್ ಯಾರ್‌ಜಂಗ್ (ಆಲ್ ಇಂಡಿಯಾ ಸ್ಟೇಟ್ ಮುಸ್ಲಿಂ ಲೀಗ್ ಅಧ್ಯಕ್ಷ) ಅವರ ಸಭಾ ನಾಯಕತ್ವದಲ್ಲಿ ಜರಗಿತು.

ಸುರತ್ಕಲ್:—ಹಿಂದೂ ವಿದ್ಯಾದಾಯಿನೀ ಸಂಘದಿಂದ ನಡೆಯುವ ಇದ್ದ ವಿದ್ಯಾದಾಯಿನೀ ಶಾಲೆಯು ಹೈಸ್ಕೂಲಾಗಿ ಬರುವ ಜೂನ್ ತಿಂಗಳಿಂದ ಮಾರ್ಪಾಟು ಹೊಂದಿ ಜನತಾ ಸೇವೆಯನ್ನು ಮಾಡಲಿರುವುದು. ವಿದ್ಯಾಭಿಮಾನಿಗಳು ಸಹಾಯಾದಿಗಳನ್ನಿತ್ತು ಪ್ರೋತ್ಸಾಹಿಸಬೇಕಾಗಿದೆ.

ಕರ್ನಾಟಕದಲ್ಲಿಯ ಎಲ್ಲ ಪತ್ರಿಕೋದ್ಯೋಗಿಗಳಲ್ಲಿ ಪ್ರಾರ್ಥನೆ.

ಮಂಗಳೂರಲ್ಲಿ ಕೂಡಿದ ೫ನೇ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಲನವು ಅತ್ಯಂತ ಯಶಸ್ವಿಯಾಗಿ ಜರಗಿತು. ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೋದ್ಯೋಗಿಗಳು ಉತ್ಸಾಹದಿಂದ ಮುಂದೆ ಬಂದು ಈ ಸಮ್ಮೇಲನದ ಹೊಣೆಯನ್ನು ಹೊತ್ತದ್ದಕ್ಕಾಗಿ ಅವರು ಅಭಿನಂದನೆಗೆ ಪಾತ್ರರೆಂದು ಬೇರೆ ಹೇಳಬೇಕಿಲ್ಲ. ೧೯೩೮ನೇ ಇಸವಿಯಲ್ಲಿ ಶ್ರೀ ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಮ್ಮೇಲನವು ಜರಗಿದಾಗ ಸ್ಥಾಪಿಸಲ್ಪಟ್ಟ ಕರ್ನಾಟಕ ಪತ್ರಿಕೋದ್ಯೋಗಿಗಳ ಸಂಘವು ಈಗ ಪುನರುತ್ಥಾನಗೊಳಿಸಲ್ಪಟ್ಟಿದೆ. ಕರ್ನಾಟಕ ಪತ್ರಿಕೋದ್ಯೋಗದ ಇತಿಹಾಸವನ್ನು ಬರೆಯುವ ಮೊದಲಾದ ಅನೇಕ ಕಾರ್ಯಗಳನ್ನು ಕೈಕೊಳ್ಳಬೇಕೆಂಬ ಉತ್ಸಾಹವಿದೆ.

ಸಂಘದ ಮುಖ್ಯ ಕಾರ್ಯಾಲಯವು ಮಂಗಳೂರಿನಲ್ಲಿಯೇ ಇರುತ್ತದೆ. ಮತ್ತು ಉಪಾಧ್ಯಕ್ಷರಲ್ಲೊಬ್ಬರಾದ ಶ್ರೀ. ವಿ ಎಸ್. ಕುಡ್ವರವರು ಕಾರ್ಯಾಲಯವನ್ನು ನಡೆಸಲು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಎಲ್ಲ ಪತ್ರವ್ಯವಹಾರವನ್ನು ಈ ವರ್ಷದ ಮಟ್ಟಿಗೆ ಮಂಗಳೂರಿನಲ್ಲಿಯ ಮುಖ್ಯ ಕಾರ್ಯಾಲಯದ ವಿಳಾಸಕ್ಕೆ ಮಾಡಬೇಕು. ಎಲ್ಲ ಪತ್ರಿಕೋದ್ಯೋಗಿಗಳು ದಯವಿಟ್ಟು ಮುಂದೆ ಸಂಘವನ್ನು ಪ್ರೋತ್ಸಾಹಿಸಬೇಕಾಗಿ ಬಿನ್ನವಿಸುತ್ತೇನೆ.

ತಮ್ಮ,

ಮೊಹರೆ ಹಣಮಂತರಾಯ

ಅಧ್ಯಕ್ಷ.

೧೫—೩—೧೯೪೪.

ಕರ್ನಾಟಕ ಪತ್ರಿಕೋದ್ಯೋಗಿ ಸಂಘ.

Degrees: Books: Medicines
Free H. L M S.M, B. H. M, D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—
Prof, Dr. N, H, Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt India.)

Sidha-Kalpa Kavach (Regd.)
No. 3 Rs 2, No 2 Rs 5 No. 1 Rs. 7 Special Rs. 10, Extra Special Rs. 17 fo ove marriage health, wealth. Ask an six questions with M. O. Re. 1/4 an get correct answers by returnpost Life eading Rs.10No V.P.P.Send M.O Free, pmplets
Prof Dr. N. H Chhatbar,
P. O. MAHUVA (Kathiawar India.)

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction.
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ ೩ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗಿ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ- ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಚೂರು—ಚೂರು

'ಇದೇ ಮಾರ್ಚ 2ಕ್ಕೆ ಅಂತ್ಯವಾಗುವ ವಾರದಲ್ಲಿ ತ್ರಾವಂಕೋರು ಕೊಚ್ಚಿಗಳಿಗೆ 12700, ಬೊಂಬಾಯಿಗೆ 6800, ಬಂಗಾಳಕ್ಕೆ 6100 ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಕೇಂದ್ರ ಆಹಾರ ಖಾತೆಯವರು ಕಳುಹಿದರು'—ವರದಿ.

'ಉಂಟು ಮಾಡಿದ ದೇವ ಊಟ ಕೊಡಲಾರನೇ?' ಎಂಬುದು ಬರಗಾಲಕ್ಕೂ ಅನ್ವಯಿಸುತ್ತದೆ!

●

ಇರಾಣಿನ 'ಸಂಸ್ಕೃತಿ ಮಂಡಲ'ವೊಂದು ಹಿಂದೂದೇಶ ಮತ್ತು ಇರಾನುಗಳೊಳಗೆ ಸಂಸ್ಕಾರ ಸಂಬಂಧ ನಿರ್ಮಾಣಕ್ಕಾಗಿ ಭಾರತಕ್ಕೆ ಬಂದಿದೆ.

ಭಿನ್ನ ಸಂಸ್ಕೃತಿಗಾಗಿ ಭಿನ್ನ ರಾಷ್ಟ್ರವಾಗಬೇಕೆನ್ನುತ್ತಿರುವ ಜಿನ್ನರ ಪಾಲಿಗೆ ಇಂತಹ ಸಮಿತಿಗಳ ಆಗಮನವು ಇನ್ನೊಬ್ಬ ಚೋರಿವಾಲನ ಆಗಮನದಷ್ಟೇ ಅಸಹನೀಯ!

●

'ಸಾಯುಖಾನೆ ಸಾಗಿಸುವ ಲೋರಿಗಳಿಂದ ಪಟ್ಟಣ ನಾರುತ್ತಿದೆ' ಮಂಗಳೂರು ನಗರ ಸಭೆಯಲ್ಲಿ ದೂರು.

ಈ ಸುದ್ದಿಯು ಲಂಡನಿನ 'ಗ್ಯಾಸ' ಮಾಸ್ಕ' ಕಾರ್ಖಾನೆಗಳಿಗೆ ಮುಟ್ಟುವದೆಂದು ನಮ್ಮ ಆಸೆ.

●

'ಮುಖ್ಯಪ್ರಾಣ ದೇವರ ಕೇರಿಯಲ್ಲೂ ಪ್ಲೇಗಿನ ಇಲಿಗಳು ಬಿದ್ದಿವೆ'-ಮಂಗಳೂರಿನಿಂದ ಗಾಬರಿಯ ವಾರ್ತೆ.

ಗಾಬರಿ ನಿವಾರಣೆಗಾಗಿ ಬಿಡಿಸಿ ಹೇಳಲಿ—ಇಲಿ ಬಿದ್ದುದೆಲ್ಲಿಗೆ, ಈ ಕಾಲದ ಮುಖ್ಯ ಮುಖ್ಯಪ್ರಾಣಗಳಿದ್ದಲ್ಲಿಗೋ? ತ್ರೇತಾಯುಗದ ಆ ಮುಖ್ಯಪ್ರಾಣ ದೇವರ ಕೇರಿಗ ಮಾತ್ರವೊ?

●

'ವೈಸರಾಯಿ ಕೌನ್ಸಿಲಿನಲ್ಲಿ ಗೃಹಖಾತೆಯ ಸದಸ್ಯನಾಗಿರುವ ಸರ್. ರೆಜಿನಾಲ್ಡ ಮೇಕ್ಸ್‌ವೆಲ್ಲರ ಅವಧಿಯು ಎಪ್ರಿಲ್ 4ಕ್ಕೆ ಗುಜಾರಾಗುವದರಿಂದ ಅವರ ಸ್ಥಾನಕ್ಕೆ ಮಿ. ಆರ್. ಎಫ್. ಮುಡಿಯವರ ನೇಮಕವಾಗಿದೆ'-ಸರಕಾರೀ ಪ್ರಕಟಣೆ.

ಆಹಾರಾಭಾವದ ಈ ಕಾಲದಲ್ಲಿ ಅತಿ ಸಂತೋಷದವಾರ್ತೆ-ಗೃಹಖಾತೆಗೆ ಮುಡಿ ಬಂತು!

●

"ಬ್ರಿಟಿಷರಲ್ಲಿ ಭಾರತ ಸ್ವಾತಂತ್ರ್ಯದಾನಕ್ಕೆ ಸಮ್ಮತಿ ನಿರ್ಮಿಸುವ ಒಂದೇ ಒಂದು ಹಾದಿಯೆಂದರೆ ಮುಸ್ಲಿಂ ಲೀಗಿನೊಡನೆ ಒಪ್ಪಂದ ಮಾಡಿಕೊಳ್ಳುವದು"-ಮನಃ ರಾಜಾಜಿ.

ರಾಜಾಜಿಯು ಈ ಹುಚ್ಚನ್ನು ಬಿಡಿಸುವ ಒಂದೇ ಒಂದು ಹಾದಿಯೆಂದರೆ ಅವರನ್ನೇ ಒಪ್ಪಂದಕ್ಕಾಗಿ ಮಿ ಜಿನ್ನರಲ್ಲಿಗೆ ಕಳುಹಿಕೊಡುವದು

●

'ಜರ್ಮನಿಯ ಭವಿಷದ್ರೂಪದ ಕುರಿತು ಚರ್ಚಿಸಲು, ಅಮೇರಿಕದ ಉಪ ಸ್ಟೇಟ್ ಸೆಕ್ರೆಟರಿ ಮಿ. ಎಡ್ವರ್ಡ ಸ್ಟೆಟ್ಟಿನಸ್ ಲಂಡನಿಗೆ ಬಂದಿದ್ದಾರೆ'

ಭವಿಷ್ಯ ಕೇಳುವವರೆಲ್ಲಾ ಇತ್ತ ಗಮನಿಸಬೇಕು—ಯಾರೋ ಒಬ್ಬ ಮಹಾ ಜೋತಿಷಿ ಲಂಡನಿನಲ್ಲಿದ್ದಾನೆ!

—ವಿನೋದಿ.

ಉಡುಪಿ.

ತಾಲೂಕು ವರ್ಗದಾರರ ಸಭೆಯು

ತಾ. 12ರಲ್ಲು ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ವಕೀಲ್ ಶ್ರೀ. ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ಠರಾವುಗಳನ್ನು ಮಾಡಿತು. ವರ್ಗದಾರರೂ ಗೇಣಿ ಒಕ್ಕಲುಗಳೂ ರೆಕ್ವಿಜಿಶನ್ ಆಕ್ಷೇಪಣಾ ಅರ್ಜಿಗಳನ್ನು ಕೊಟ್ಟಿದ್ದರೂ ಅವು ಈ ತನಕವೂ ಇತ್ಯರ್ಥ ಹೊಂದದೆ ಬಾಕಿಯುವೆ. ರೆಕ್ವಿಜಿಶನ್ ಆಫೀಸರರು ಗ್ರಾಮ ಉದ್ಯೋಗಸ್ಥರೊಂದಿಗೆ ಹಳ್ಳಿಹಳ್ಳಿಗಳಿಗೆ ಹೋಗಿ ಈ ಮುಂಚೆ ರೆಕ್ವಿಜಿಶನ್ ಮಾಡಲ್ಪಟ್ಟ ಅಕ್ಕಿಯ ಕುರಿತು ಏನೂ ನಿಗಾ ತೆಗೆದುಕೊಳ್ಳದೆ ಮನಬಂದಂತೆ ಇನ್ನೊಮ್ಮೆ ರಿಕ್ವಿಜಿಶನ್ ಬಗ್ಗೆ ನೋಟೀಸು ಕೊಟ್ಟಿರುತ್ತಾರೆ.ಸದ್ರಿ ಅಧಿಕಾರಿಗಳು ಇದೇ ರೀತಿ ಮುಂದರಿಸಿದರೆ ಮುಂದಿನ ಸಾಗುವಳಿಗೂ ರೈತರಿಗೂ ಒಕ್ಕಲುಗಳಿಗೂ ಗಂಡಾಂತರದ ಧಕ್ಕೆ ತಗಲಬಹುದಾದುದರಿಂದ ಆ ಬಗ್ಗೆ ತುಂಬಾ ವಿಷಾದವಾಗುತ್ತದೆ.ಅದೂ ಅಲ್ಲದೆ ದೊಡ್ಡ ವರ್ಗದಾರರಿಂದ ಅವರ ಕುಟುಂಬ ಪೋಷಣೆಗೆ ಬೇಕಾದಷ್ಟು ಮಾತ್ರ ಅಕ್ಕಿಯನ್ನ ಬಿಟ್ಟು ಉಳಿದ ಅಕ್ಕಿಯನ್ನು ರಿಕ್ವಿಜಿಶನ್ ಮಾಡಿದ ದೆಸೆಯಿಂದ ಅವರಿಗೂ ಅಕ್ಕಿಯ ಅಭಾವ ಬರಬಹುದೆಂದೂ ರಿಕ್ವಿಜಿಶನ್ ಮಾಡದ ಅಕ್ಕಿಯನ್ನು ತಮ್ಮ ಒಕ್ಕಲುಗಳಿಂದ ವಸೂಲು ಮಾಡುವುದು ಕಷ್ಟ ಸಾಧ್ಯವಾಗುವುದೆಂದೂ ಸಭಾ ಅಭಿಪ್ರಾಯ ಪಡುತ್ತದೆ. ಆದುದರಿಂದ ಪ್ರತಿಗ್ರಾಮಕ್ಕೊಂದ ಗ್ರಾಮ ಕೂಟಗಳಿಗೂ ಸ್ಥಳೀಯ ಕಮಿಟಿಗಳನ್ನು ಸ್ಥಾಪಿಸಿ ಅವುಗಳ ಸಹಾಯದಿಂದ ಅಲ್ಲಲ್ಲಿ ಉಳಿಯುವ ಜಾಸ್ತಿ ಉಳಿತಾಯ ಅಕ್ಕಿಯನ್ನು ಸ್ವಾಧೀನ ಪಡಿಸಿಕೊಂಡು ಆಯಾಯಾ ಸ್ಥಳದ ಜನರಿಗೆ ಅಕ್ಕಿ ಸರಬರಾಯಿಯಾಗಬೇಕಾಗಿದೆಯೆಂದು ಸಭೆಯ ಅಭಿಪ್ರಾಯವಾಗಿದೆ.

ವರ್ಗದಾರರ ಹಾಗೂ ಒಕ್ಕಲುಗಳ ಕಷ್ಟಗಳನ್ನ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವರೆ ಶ್ರೀಗಳಾದ ಕೆ ಜಿ ಬಲ್ಲಾಳ್, ಬಿ. ವಾಸುದೇವ ರಾವ್, ಬಿ ಕೃಷ್ಣಯ್ಯ ಹೆಗ್ಡೆಯವರಿರುವ ಶಿಷ್ಟಮಂಡಲಿಯು ನೇಮಿಸಲ್ಪಟ್ಟಿತು

ರಿಕ್ವಿಜಿಶನ್ ಮಾಡಿದ ಹಳ್ಳಗ ಅಕ್ಕಿಯನ್ನು ಗಿಡ್ಡ ಅಕ್ಕಿಯಿಂದೂ ಕಡಿಮೆ ಮತ್ತು ಮುಗಿನೊಲ್ಲು ಅಕ್ಕಿಯನ್ನು ಮುಸ್ಕತಿ ಅಕ್ಕಿಯಾಗಿಯೂ ದರ ನಿಶ್ಚಯಿಸುವಾಗ ಗಮನದಲ್ಲಿಡತಕ್ಕದೆಂದೂ ಎರಡು ಮುಡಿ ಭತ್ತವನ್ನು ಅಕ್ಕಿ ಮಾಡುವರೆ ಎಳ್ಳುಸೇರು ಭತ್ತ ಕೂಲಿ ಸಿಗಬೇಕಾಗಿಯೂ ಎಕ್ರೆ ಒಂದರ ಸಾಗುವಳಿ ಖರ್ಚಿಗೆ ಕನಿಷ್ಠ ಐದು ಮುಡಿ ಅಕ್ಕಿಯಾದರೂ ಸಿಕ್ಕುವಂತಾಗಬೇಕೆಂದೂ ನಿರ್ಣಯಿಸಲಾಯಿತು.

ಕೊನೆಯದಾಗಿ ರೇಶನಿಂಗ್ ಕಮಿಟಿಗಳಲ್ಲಿ ಈ ಸಂಘಕ್ಕೆ ಪ್ರಾತಿನಿಧ್ಯ ದೊರೆಯಬೇಕಾಗಿಯೂ ಸೂಚಿಸಿ ಠರಾವಾಯಿತು.

ಧರ್ಮಸ್ಥಳ:—ಮೈಸೂರಿನ ಶ್ರೀಮನ್ಮಹಾರಾಜರವರು ಮಾರ್ಚ ೮ನೇ ತಾರೀಕು ಸಾಯಂಕಾಲ ಉಜಿರೆಯಲ್ಲಿ ಮೈಸೂರು ಗಡಿಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವೇಶ ಮಾಡಿದರು. ಸಿ. ಪಿ. ಸಿ. ಕಂಪೆನಿಯ ಶ್ರೀ ವಿ. ಎಸ್. ಕುಡ್ವರು ಪ್ರಭುಗಳನ್ನು ಸ್ವಾಗತಿಸಿದರು.

ಪ್ರಭುಗಳ ಸವಾರಿಯು ಧರ್ಮಸ್ಥಳಕ್ಕೆ ದಯಮಾಡಿಸಲಾಯಿತು. ಅಲ್ಲಿ ಶ್ರೀ ಮಂಜಯ್ಯ ಹೆಗ್ಡೆಯವರು ಪ್ರಭುಗಳನ್ನು ವೈಭವದಿಂದ ಸ್ವಾಗತಿಸಿದರು. ಪ್ರಭುಗಳು ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥ ದೇವಾಲಯದಲ್ಲಿ ಪೂಜೆ ನಡೆಸಿದರು.

ಎರಡನೇ ದಿನ ಬೆಳಗ್ಗೆ ಶ್ರೀಮನ್ಮಹಾರಾಜರು ಹೊಳೆಗೆ ಸ್ನಾನ ಮಾಡಿ ಶ್ರೀ ರಾಜರಾಜೇಶ್ವರಿ ದೇವಿಯವರ ಪೂಜೆ ಮಾಡಿದರು. ನವಚಂಡಿಕಾ ಹೋಮವನ್ನು ಮಾಡಿದರು. ಮಧ್ಯಾಹ್ನದ ಮೇಲೆ ಕಟೀಲಿಗೆ ಹೋಗಿ ಶ್ರೀ ದುರ್ಗಾಪರಮೇಶ್ವರಿ ಪೂಜೆ ನಡೆಸಿದರ, ಸಾಯಂಕಾಲ ಭದ್ರಾವತಿಗೆ ಆಗುಂಬೆ ಮಾರ್ಗವಾಗಿ ಪ್ರಯಾಣ ಮಾಡಿದರು.

ತಾರಣ ಸಂವತ್ಸರದ
ಉಡುಪಿ ಪಂಚಾಂಗ ರಿಜಿಸ್ಟರ್ಡ್
ಕ್ರಯ 0—5—0
ಪ್ರತಿಗಳೆಲ್ಲಾ ಕಡೆಗಳಲ್ಲಿಯೂ ದೊರೆಯುತ್ತವೆ.

UDIPI MUNICIPALITY NOTICE.

(Under section 78 of the Madras District Municipalities Act, 1920 as amended)

It is hereby notified that the Municipal Council of Udipi proposes to increase the rates of taxes on the carriages, animals and carts as shown below with effect from 1—4—1944.

		Half yearly tax
1.	For every two wheeled vehicle with springs or other appliances acting as springs constructed to be drawn by one or more animals.	from Rs. 4/- to Rs. 5/-
2	For every bicycle or tricycle.	from Rs. 1-8-0 to Rs. 1-14-0.
3.	For every horse or mule not under 12 hands	from Rs. 1/ to Rs. 6/-
4.	For every horse or mule under 12 hands.	from Re. 1/ to Rs 2/-
5.	For every bull or bullock	from Re. 0-8-0 to Re. 1-0-0
6.	For every cart	from Rs. 2/- to Rs. 4/-

Any objection to the above proposal will be considered by the Udipi Municipal Council, if presented within one month from the date of publication of this notice in the South Kanara District Gazette.

Municipal Office, Udipi, Dated 14-3-1944 } K. Ramanunni Nayar, COMMISSIONER.

ಉಡುಪಿ ಮುನಿಸಿಪಾಲಿಟಿ.

ನೋಟೀಸು

(1920ನೇ ಯಿಸವಿ ಮದ್ರಾಸು ಡಿಸ್ಟ್ರಿಕ್ಟ ಮುನಿಸಿಪಾಲಿಟಿಗಳ ಆಕ್ಟಿನ 78ನೇ ಸೆಕ್ಷನ್ ಪ್ರಕಾರ)

1944ನೇ ಯಿಸವಿ ಎಪ್ರಿಲ್ ತಿಂಗಳ ತಾರೀಕು 1ರಿಂದ ವಾಹನಗಳ ಮೃಗಗಳ ಮತ್ತು ಗಾಡಿಗಳ ಮೇಲಣ ತೆರಿಗೆಗಳ ದರಗಳನ್ನು ಈ ಕೆಳಗೆ ಕಾಣಿಸಿದ ಪ್ರಕಾರ ಏರಿಸುವದಾಗಿ ಉಡ್ಪಿ ಮುನಿಸಿಪಲ್ ಕೌನ್ಸಿಲು ಯಿದರ ಮೂಲಕ ಸರ್ವ ಜನರಿಗೆ ತಿಳಿಯಪಡಿಸುತ್ತದೆ.

	ಏರಿಸಲ್ಪಡುವ ಅರ್ಧ ವರ್ಷದ ತೆರಿಗೆ ದರ.
1. ಸ್ಪ್ರಿಂಗುಗಳುಳ್ಳ ಯಾ ಸ್ಪ್ರಿಂಗುಗಳಂತೆಯೇ ಇತರ ಸಾಧನ ಉಳ್ಳ ಒಂದು ಯಾ ಹೆಚ್ಚಿಗೆ ಮೃಗಗಳಿಂದ ಎಳೆಯಲ್ಪಡುವ ಪ್ರತಿ ಒಂದು ಎರಡು ಚಕ್ರಗಳ ವಾಹನದ ಮೇಲೆ—	ರೂಪಾಯಿ 4ರಿಂದ ರೂಪಾಯಿ 5ಕ್ಕೆ
2 ಪ್ರತಿ ಒಂದು ಬೈಸಿಕಲ್ ಯಾ ಟ್ರೈಸಿಕಲ್ ಮೇಲೆ—	ರೂಪಾಯಿ 1-8-0ರಿಂದ ರೂಪಾಯಿ 1-14-0ಕ್ಕೆ.
3. 12 ಮುಷ್ಟಿಗಳಿಗೆ ಕಡಿಮೆ ಎತ್ತರ ಇಲ್ಲದ ಪ್ರತಿ ಒಂದು ಕುದುರೆಯ ಮೇಲೆ—	ರೂಪಾಯಿ 1ರಿಂದ ರೂಪಾಯಿ 6ಕ್ಕೆ
4. 12 ಮುಷ್ಟಿಗಳಿಗೆ ಕಡಿಮೆ ಎತ್ತರ ಇರುವ ಪ್ರತಿ ಒಂದು ಕುದುರೆಯ ಮೇಲೆ—	ರೂಪಾಯಿ 1ರಿಂದ ರೂಪಾಯಿ 2ಕ್ಕೆ
5. ಪ್ರತಿ ಒಂದು ಎತ್ತು ಯಾ ಬಸವನ ಮೇಲೆ—	ರೂಪಾಯಿ 0-8-0ಯಿಂದ ರೂಪಾಯಿ 1ಕ್ಕೆ.
6. ಪ್ರತಿ ಒಂದು ಗಾಡಿಯ ಮೇಲೆ—	ರೂಪಾಯಿ 2ರಿಂದ ರೂಪಾಯಿ 4ಕ್ಕೆ

ಈ ನೋಟೀಸು ದಕ್ಷಿಣ ಕನ್ನಡ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಿದ ಒಂದು ತಿಂಗಳೊಳಗೆ ಮೇಲಿನ ಸೂಚನೆಗೆ ಹಾಜರುಪಡಿಸೋಣಾಗುವ ಆಕ್ಷೇಪಣೆಗಳು ಉಡ್ಪಿ ಮುನಿಸಿಪಲ್ ಕೌನ್ಸಿಲಿನವರಿಂದ ಆಲೋಚಿಸಲ್ಪಡುವವು

ಉಡುಪಿ ಮುನಿಸಿಪಲ್ ಆಫೀಸು, ಮೊಕ್ಕಾಂ:— ಉಡುಪಿ ತಾರೀಕು 14—3—1944 } ಕೆ. ರಾಮನ್ ಉಣ್ಣಿ ನಾಯರ್, ಕಮಿಷನರ್.

ಕೀರ್ತಿವಂತರ 'ಖಿಲಾಡಿ'ತನ!

ಎಸೆಂಬ್ಲಿ ಸದಸ್ಯರ ಬಾಯಿ ಕೈ ಪ್ರಯೋಗಗಳು

ಕ್ರೋಧ, ಮದ, ಮತ್ಸರಗಳು ಮನುಷ್ಯನಾದವನನ್ನು ಬಿಟ್ಟಿರುವಂತಿಲ್ಲ. ಆದರೆ ಅವುಗಳ ಪ್ರದರ್ಶನದಲ್ಲಿ ತರಗತಿ ಭೇದವೊಂದಿದೆ. ಹುಲಿಗೆ ಸಿಟ್ಟು ಬಂದರ ಘರ್ಜಿಸುತ್ತದೆ ಹೊರತು ಬಗುಳುವಂತಿಲ್ಲ. ಘನವಂತರು ಹಾಗಿರಬೇಕು. ನ್ಯಾಯವಿಧಾಯಕ ಸಭೆಗಳಿಗೆ ಜನಪ್ರತಿನಿಧಿಗಳಾಗಿ ಚುನಾಯಿಸಲ್ಪಡುವವರೆಲ್ಲ 'ಘನವಂತ'ರೇ. ಸಾವಿರಾರು ರೂ. ಗಳನ್ನು ವ್ಯಯಿಸಿ, ಸಾವಿರಾರು ಜನರ ಪ್ರತಿನಿಧಿತ್ವವಹಿಸಿ ಕೇಂದ್ರ ಎಸೆಂಬ್ಲಿ ಪ್ರಾಂತಿಕ ಎಸೆಂಬ್ಲಿಗಳ ಸದಸ್ಯರಾಗುವದು ಪ್ರಯಾಣ ಭತ್ತೆಯಿಂದಾಕರ್ಷಿಸಲ್ಪಟ್ಟಲ್ಲ; ಗೌರವಕ್ಕಾಗಿ, ಸ್ಥಾನಮಾನ ಸಂಪಾದನೆಗಾಗಿ. ಅವರೆಲ್ಲಾ ವಿದ್ಯಾವಂತರು, ಶ್ರೀಮಂತರು, ಪ್ರತಿಷ್ಠಾವಂತರು—ಒಟ್ಟಿನ ಮೇಲೆ ಪ್ರಥಮ ವರ್ಗದ ಮನುಷ್ಯರು! ಅವರ ರಾಗ ದ್ವೇಷಾದಿಗಳು ಹೇಗಿರಬಹುದೆಂದು ನಿಮ್ಮ ಭಾವನೆ? 'ಛೀ! ಅವರ ಮನಸ್ಸು ಸಣ್ಣಪುಟ್ಟ ವಿಷಯಗಳಿಗಾಗಿ ಉದ್ರೇಕಗೊಳ್ಳದು—ಸರ್ವಜನೋಪಯೋಗಿ ಮಹತ್ಕಾರ್ಯಗಳಿಗೆ ಮಾತ್ರವೇ ಕೆರಳಿ ನಿಂತೀತು.' ಎಂದು ನೀವು ನೆನಸಿರಬಹುದು. ಹಚ್ಚಿ ಹಚ್ಚಿಗೆ ಶಬ್ದಮಾಡುವ ಗಾಡಿ! ಎತ್ತಿನಕುತ್ತಿಗೆಯ ಘಂಟೆಯಂತಿರದೆ, ಪ್ರಾರ್ಥನೆಗೆ ಮಾತ್ರ ಬಾರಿಸಲ್ಪಡುವ ಇಗರ್ಜಿಯ ಘಂಟೆಯಂತೆ—ಎಂದು ಎಸೆಂಬ್ಲಿ ಸದಸ್ಯರ ಮನಸ್ಸನ್ನು ನೀವು ಚಿತ್ರಿಸಿಕೊಂಡಿರಬಹುದು. ತಪ್ಪಿದಿರಿ; ಒಮ್ಮೊಮ್ಮೆ ಅವರು ತೋರಿಸುವ 'ಖಿಲಾಡಿಗಿರಿ'-ಅವರಾಡುವ ನಂಜುಮಾತು-ಅವರ ಬೇಜವಾಬ್ದಾರಿತನ-'ಪೋಕರಿ' ಮಟ್ಟಕ್ಕೆ ಇಳಿಯುವದಿದೆ. ದೃಷ್ಟಾಂತಕ್ಕಾಗಿ ಈಗ ನಡೆಯುತ್ತಿರುವ ಎಸೆಂಬ್ಲಿಯ ಕೆಲವು ಘಟನೆಗಳನ್ನಿಲ್ಲಿ ಉದ್ಧರಿಸಿದ್ದೇವೆ

'ಜಾತಿಕೆಟ್ಟು ಹುಟ್ಟಿದ ಭೇತಾಳ ಮಗು'

ಕೇಂದ್ರ ಎಸೆಂಬ್ಲಿಯಲ್ಲಿ ಕಳೆದೆರಡು ವಾರಗಳಿಂದ ನಡೆಯುತ್ತಿರುವ ಆಯವ್ಯಯ ಪಟ್ಟಿಯ ಚರ್ಚೆಯ ವೇಳೆ ವೈಸರಾಯಿ ಕಾರ್ಯಕಾರೀ ಸಮಿತಿಗೆ ಮಾಡಲ್ಪಡುವ ಸರಬರಾಯಿ ಗ್ರಾಂಟಿಗೆ ಕಾಂಗ್ರೆಸ್ ಸದಸ್ಯ ಮಿ. ಅಬ್ದುಲ್ ಕ್ವಾಯುಮರು ತಂದ ಕಡಿತದ ಸೂಚನೆಯ ವೇಳೆ ತೀವ್ರ ವಾಗ್ಬಾಣ ಪ್ರಯೋಗಗಳು ನಡೆದಿದ್ದುವು. ಆ ಸೂಚನೆಗೇನೇ ಕಾಂಗ್ರೆಸ್, ಮುಸ್ಲಿಂಲೀಗ್ ಮತ್ತು ಎಲ್ಲಾ ಜನ ಪ್ರತಿನಿಧಿ ಪಕ್ಷಗಳ ಬೆಂಬಲದಿಂದ 50 ಅನುಕೂಲ ... ಪ್ರತಿಕೂಲ ... ದೊರೆತು ಸರಕಾರವು ಸೋಲಬೇಕಾಯಿತು. ಮಿ. ಕ್ವಯುಮರು ... ಮಾಡಿದ ಆರೋಪವು ... ಮೆಂಬರರ ಮೇಲಲ್ಲ.

ಹಿಂದೀ ಸದಸ್ಯರು ಯಾರೊಬ್ಬರ ಪ್ರತಿನಿಧಿಗಳೂ ಅಲ್ಲ. (ಆಗಲೇ, ಸಭೆಯಿಂದೊಬ್ಬರ ಕೂಗು:-'ಸ್ವತಃ ಅವರ ಕುಟುಂಬದ ಪ್ರತಿನಿಧಿಗಳೂ ಅಲ್ಲ'-ಸಭೆಯಿಡೀ ನಗೆಯ ಕೋಲಾಹಲ) ಸದ್ಯದ ವೈಸರಾಯೀ ಎಗ್ಜಿಕ್ಯೂಟಿವ್ ಕೌನ್ಸಿಲೆಂದರೆ ಬ್ರಿಟಿಷ್ ಸಾಮ್ರಾಜ್ಯವಾದ ಮತ್ತು ಭಾರತೀಯ ಶ್ರೀಮಂತಿಕೆಯ ಹಳೇ ಹಕ್ಕು ಬಾಧ್ಯತೆಗಳೊಳಗಿನ ಹೇಯ ಪ್ರಣಯಸಂಬಂಧದಿಂದ ಹುಟ್ಟಿದ ವರ್ಣಸಂಕರದ ದೈತ್ಯ ಮಗು" ಎಂದುಬಿಟ್ಟರು. ಅವರನ್ನು ಸಮರ್ಥಿಸಿದ ಇತರ ಸದಸ್ಯರು ಕೂಡಾ ಕಾರ್ಯಕಾರೀ ಮೆಂಬರರನ್ನು ಪ್ರಾಣಿಗಳಿಗೂ ಕೀಳೆಂಬಂತೆ ಜರೆದು ಮಾತನಾಡಿದ್ದರು. ಸರಕಾರದ ಸರ್ವ ಇಲಾಖೆಗಳಲ್ಲಿ ಬುಡದಿಂದ ತುದಿಯ ವರೆಗೂ ದಿವಾಳಿ ಖೋರತನವೇ ತುಂಬಿದೆ ಎಂದು ಎಲ್ಲರೂ ಬಾಯಿಬಿಟ್ಟು ಆರೋಪಮಾಡಿದರು

'ಸೂತ್ರದ ಗೊಂಬೆಗಳು'!

ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ದ್ವೇಷಕ್ಕೆ ಹೆಸರು ಹೊಂದಿದ ಸರ್ ಎ. ರಾಮಸ್ವಾಮಿ ಮುದಲಿಯಾರರು (ವ್ಯಾಪಾರ ಮಂತ್ರಿ) ಕೊಟ್ಟ ಪ್ರತಿ ಹೊಡತಗಳು ಇನ್ನಷ್ಟು ತೀಕ್ಷ್ಣವಿದ್ದವು ''ನಮ್ಮ ವಿರೋಧೀ ಸದಸ್ಯರ ಸ್ವರೂಪವಿಂತಹದೇ ಎಂಬುದು ಮಿತ್ರ ರಾಷ್ಟ್ರಗಳಿಗೆ ಗೊತ್ತಾಗುವಂತೆ ಮಿ. ಕ್ವಯುಮ್ ಮತ್ತು ಬೇರೆ ಕೆಲವರ ಭಾಷಣಗಳನ್ನು ಇದ್ದಂತೆಯೇ ಪ್ರಚಾರಮಾಡಿಬಿಡಿ ಎಂದು ಸುದ್ದಿ ಖಾತೆಯ ಸದಸ್ಯರಿಗೆ ಸೂಚನೆ ಕೊಡುವ ಮೂಲಕ ಅವರು ನಂಜುಕಾರಿದರು. ಆಗಲೇ ಮಿ. ಕ್ವಯುಮರಂದರು—"ನೀವು ದೇಶದ್ರೋಹಿ". ಕಾಂಗ್ರೆಸ್ ಮೆಂಬರರ ಕಡೆಗೆ ಕೈ ತೋರಿಸುತ್ತಾ ಸರ್. ಮುದಲಿಯಾರರಾಡಿದ ಕೆಲವು ಮಾತುಗಳು ಮುಖದ ಮೇಲೆ ಉತ್ತರ ಬರಿಸುವಂತಹವು! "ನಿಜವಾದ ಸೂತ್ರದ ಗೊಂಬೆಗಳು ಇಲ್ಲಿವೆ. ಅವುಗಳಿಗೆ ಯೋಚನಾಧಿಕಾರವಿಲ್ಲ; ಎಲ್ಲಾ ಕಾಲಕ್ಕೂ ಬೇರೆಯವರ ಅಪ್ಪಣೆ ಪ್ರಕಾರ ಒಂದಿನಿಂದ ಹೋಗುವ ಒಂದೇ ಅಧಿಕಾರ ಮಾತ್ರ. ಅವುಗಳೆಂದರೆ ಮಾತಾಡುವ ಗೊಂಬೆಗಳು, ಯಾಕೆಂದು ಕಾರಣ ಹೇಳಲಿಕ್ಕಿಲ್ಲದೆ ಕಣ್ಣುಮುಚ್ಚಿ ಮತಕೊಡುವವು ....(ನಡುವೆ ಸರ್. ಕವಾಸ್ಜಿ ಜಹಾಂಗೀರ್—''ಮತ್ತು ಸಾಯುವದು!') ಮತ್ತು ಸಮಯ ಬಂದಾಗ ಸಾಯುವದು-ಇಷ್ಟೇ ಗೊತ್ತು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರು ಕ್ರಿಪ್ಸ್ ಸೂಚನೆ ಯಪರಾಮರ್ಶೆಯಲ್ಲಿ ಸಮಯ ಕಳೆಯುತ್ತಿದ್ದಾಗ 'ಮಕ್ಕಳು' ಎಂದು ಅಪಹಾಸ್ಯಕರವಾಗಿ ಸಂಬೋಧಿಸಲ್ಪಟ್ಟರು. ಯಾಕೆಂದರೆ ತಮ್ಮ ದೈವಿಕ ಅಥವಾ ದೇವ ಸಮಾನ ಮುಖಂಡನ ಮೂಲಕ ಕ್ರಿಪ್ಸ್ ಸೂಚನೆಯನ್ನು ಒಮ್ಮೆಗೇ ಧಿಕ್ಕರಿಸಬಿಡದುದಕ್ಕಾಗಿ" ಮೇಲಿನ ಉದ್ಗಾರಕ್ಕೆ ಸಭೆಯು ಪ್ರತಿಧ್ವನಿಗಳನ್ನೆಬ್ಬಿಸಿದಾಗ ಸರ್ ಮುದಲಿಯಾರರು 'ಇಂತಹ ಮಕ್ಕಳಿಗೆ ಇದಕ್ಕಿಂತ ಗಂಭೀರ ಸಂಭಾವನೆ ಕೊಡಲು ನನ್ನಿಂದ ಅಸಾಧ್ಯ" ಎಂದು ತಾತ್ಸಾರಮಾಡಿದರು-''ನಿರಾಶೆಯ ಮತ್ಸರದಿಂದ ಕುದಿಯುವರು'' ''ಸೂತ್ರದ ಗೊಂಬೆಗಳು'' 'ದಿಕ್ಕುಗಾಣದೆ ಒದ್ದಾಡುವವರು"—ಕಾಂಗ್ರೆಸ್ ಸದಸ್ಯರಿಗೆ ಸರ್. ಮುದಲಿಯಾರರಿಂದ ದೊರೆತ ಬಿರುದುಗಳಲ್ಲಿ ಇವು ಕೆಲವು.

"ಪ್ರಣಯ ಸಂಬಂಧ"

ಇದೇ ಸಂದರ್ಭದಲ್ಲಿ ಸರಕಾರವನ್ನು ಸಮರ್ಥಿಸಿದ ಯುರೋಪಿಯನ್ ಪಕ್ಷದ ಸರ್. ಫ್ರೆಡರಿಕ್ ಜೇಮ್ಸರು, ಇಂಗ್ಲಾಂಡು ಮತ್ತು ಹಿಂದೀ ಸಾಮ್ರಾಜ್ಯವಾದಿಗಳೊಳಗಿನ ನಂಟುತನವನ್ನು ಪ್ರಣಯ ಸಂಬಂಧವೆಂದ ಮಿ. ಕ್ವಯುಮರಿಗೆ ಉತ್ತರವಾಗಿ ಸಭೆಯಲ್ಲಿ ನಗೆಯೆಬ್ಬಿಸುತ್ತಾ ಕೇಳಿದರು. ''ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳೊಳಗಿನ ಈ ಪ್ರಣಯ ಸಂಬಂಧಕ್ಕೇನನ್ನುವಿರಿ?"

ಒಂದುಸ್ವರ—''ಅದು ರಶ್ಯಾ ಮತ್ತು ಇಂಗ್ಲಾಂಡುಗಳೊಳಗಿನ ಸಂಬಂಧದಂತಹದು''.

ಡಾ। ಖರೆ:—''ಇದೊಂದು ಪಾರ್ಟಿಂಗ್ ಕಿಸ್ ಮಾತ್ರ'

ಸರ್. ಫ್ರೆಡರಿಕ್—''ಇದು ಎರಡು ಪಕ್ಷಗಳೊಳಗಿನ ಕೇವಲ ತಾತ್ಕಾಲಿಕ ಒಮ್ಮತ''.

ಶ್ರೀ ಬದ್ರಿದತ್ತಪಾಂಡೆ-''ಹೌದು, ಪ್ರ 'ತಾತ್ಕಾ'ರೊಡನೆ ಮಾಡಿಕೊಂಡ ಒಡಂಬಡಿಕೆಯಂತೆ!" (ಸಭೆಯಲ್ಲಿ ಗಟ್ಟಿನಗು)

ಹರಿತ-ಹಗುರ ಮಾತುಗಳು

ಮಕ್ಕಳಂತಹ ಲಘುಮಾತು, ಮಂಗಚೇಷ್ಟೆ, ಸ್ವಚ್ಛಂದವೃತ್ತಿ-ಇವೆಲ್ಲವಕ್ಕೂ ನ್ಯಾಯವಿಧಾಯಕ ಸಭೆಯಂತಹ ದೇಶದ ಅದೃಷ್ಟ ರೇಖೆಯೆಳೆಯುವ ಸಭೆಗಳಲ್ಲಿ ಆಸ್ಪದವಿದೆ; ಅಂತಹ ಕುಚೇಷ್ಟೆಗಳನ್ನು ಆ ಶ್ರೇಷ್ಠ ಪ್ರತಿನಿಧಿಗಳು ಪ್ರದರ್ಶಿಸಬಲ್ಲರು ಎಂದರೆ ಹೆಚ್ಚಿನವರಿಗಾಶ್ಚರ್ಯವಾಗಬಹುದು. ಹಿಂದೀ ಸರಕಾರವು ಅಮೇರಿಕಕ್ಕೆ ಕಳುಹಿರುವ ಪ್ರಚಾರ ಸಮಿತಿಯ ಕುರಿತು ಓರ್ವ ಮೆಂಬರರು ಪ್ರಶ್ನಿಸಿದರು ''ಅವರೇನು, ಹೊಲಿವುಡ್ಡಿನ ಸಿನೆಮಾ ನಟಿಯರ ಸಂಬಂಧ ಬೆಳೆಸಲು ಕಳುಹಲ್ಪಟ್ಟಿರುವರೆ?'' ಇದೇ ತಾ 17ರ ಅಧಿವೇಶನದಲ್ಲಿ ಆರ್ಥಿಕ ಮಸೂದೆಯ ಮೇಲೆ ಮದ್ರಾಸಿನ ಶ್ರೀ ಟಿ. ಎಸ್ ಅವಿನಾಶ ಲಿಂಗಮ್ ಚೆಟ್ಟಿಯಾರರು ಭಾಷಣಮಾಡುತ್ತಾ, ಕಾಂಗ್ರೆಸ್ ಗಲಭೆಯ ಪ್ರಸ್ತಾಪವೆತ್ತಿದರು. ''ನಾನು ಮದ್ರಾಸಿನಲ್ಲಿರುವಾಗ, ತಂತೀ ಕಡಿಯಬೇಕೆಂಬ ಸೂಚನೆಗಳಿದ್ದ ನೋಟೀಸೊಂದನ್ನು ನೋಡಿದೆ. ಆದರೆ ಆ ನೋಟೀಸು ಹೊರಡಿಸಿದವರಾರೆಂಬುದು ಇನ್ನೂ ತಿಳಿದುಬಂದಿಲ್ಲ ಕುರಿತು ವರ್ಕಿಂಗ್ ಕಮಿಟಿ ಮೆಂಬರರೊಬ್ಬರನ್ನು ಪ್ರಶ್ನಿಸಿದಾಗ ವರ್ಕಿಂಗ್ ಕಮಿಟಿಯು ಯಾವ ಕಾರ್ಯಕ್ರಮಗ

(೭ನೇ ಪುಟ ನೋಡಿರಿ.)

ನೋಟೀಸು

ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಕಡೆಯಿಂದ ಮೂಲ್ಕಿ ಹೊಸಮನೆ ದಿ॥ ನ ಸೆಟ್ರ ಅಳಿಯ ಶ್ರೀ। ಯಂ. ಸಿದ್ದುಶೆಟ್ರನ್ನು ಸದ್ರಿ ದೇವಳದ ಪಾರುಪತ್ಯಗಾರ (Manager)ರನ್ನಾಗಿ ನೇಮಿಸಿದ್ದು, ಸದ್ರಿಯವರು ಇದೇ ಕಳೆದ ತಾ 9 3-1944ರಲ್ಲು ಚಾರ್ಜು ವಹಿಸಿ ಕೊಂಡಿರುವರ, ಇನ್ನು ಮುಂದೆ ಸದ್ರಿ ದೇವಳಕ್ಕೆ ಸಂಬಂಧಪಟ್ಟ ಸರ್ವ ವ್ಯವಹಾರಗಳನ್ನು ಅವರ ಮೂಲಕವೇ ನಡಿಸುತ್ತೇವೆ.

(By order of the Council of Trustees)

M. Siddu Shetty,
Manager.

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing*- **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

ಮುಟ್ಟುಗುಳಿಕೆ

ಹಲತಿಂಗಳಿಂದ ಮಟ್ಟುಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (PILLS) ನಿಶ್ಚಿತ ನಿರಾಪತ್ತವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹಾಯಗೊಡುವುದು., ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ, ರೂ. 3/- ಕೈಮೀರಿದ ಕೇಸುಗಳಿಗೆ ರೂ. 5- (ವಿ ಪಿ. 12 ಆಣೆ ಅಧಿಕ).

Mrs P. DEVEE, F. D. S, (N)
TOLLYGUNGE CALCUTTA,

ಸ್ಟಾಕಿಸ್ಟ್ Raja Medical Hall,
31, Dharmaraja St BANGALORE

ತಾರುಣ್ಯ

ಕಳೆದ್ದು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ** ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು,

ಪುತ್ತೂರು ಏಜಂಟರು, **ಪೈ ಫಾರ್ಮಸಿ**

ಬೇಕಾಗಿದ್ದಾರೆ.

ಸದ್ಯದಲ್ಲೇ ರಂಗಭೂಮಿಗೆ ಬರಲಿರುವ ಅತ್ಯಾಧುನಿಕ ಸಾಮಾಜಿಕ ನಾಟಕ.

'ಸ್ವಾಮಿಯ ಸೋಲು'

ಈ ನಾಟಕದಲ್ಲಿ ಪಾತ್ರ ವಹಿಸಲು ಯೋಗ್ಯರಾದ ನಟನಟಿಯರು ಬೇಕಾಗಿದ್ದಾರೆ.

ಬರೆಯಿರಿ-

X ರಾಮಕೃಷ್ಣ ಥಿಯೇಟರ್ ಲಿಮಿಟೆಡ, ಉಡುಪಿ.

ಜರ್ಮನರಿಗೆ ಸಂಧಾನ ಸಾಧಕರು ಬೇಕಾಗಿದ್ದಾರೆ?

ಪ್ರತ್ಯಕ್ಷ ಯುದ್ಧರಂಗಗಳಲ್ಲಿ ಇದ್ದಲ್ಲೇ ಇದ್ದಾರೆ-ಅಥವಾ ಮಿತ್ರ ಸೈನಿಕರು ಅಷ್ಟೊಂದು ಗಣನೀಯವಲ್ಲದ ಒಂದೊಂದಂಗುಲದಷ್ಟು ವಿಜಯ ಪಡೆದಿದ್ದಾರೆ. ವ್ಯವಹಾರರಂಗಗಳಲ್ಲಿ ಅನ್ಯ ತಾಟಸ್ಥ್ಯರು ತಮಗನುಕೂಲವಾಗುವರೆಂಬ ಆಸೆ ಬಿಟ್ಟು, ಮಿತ್ರರು ಈಗ ಬೆದರಿಕೆ ಬೀರ ಹತ್ತಿದ್ದಾರೆ-ಹಿಂದಿನವಾರಕ್ಕಿಂತ ಈ ವಾರದ ಬದಲಾವಣೆಯಿಷ್ಟೆ. ಸಾಕಷ್ಟು ಪ್ರಗತಿಯಾಗದ ವಾರಗಳಲ್ಲೊಂದಾಗಿ ಕಳೆದವಾರವೂ ಉರುಳಿತು.

ಬರ್ಮಾದಲ್ಲಿ

ಉತ್ತರ ಬರ್ಮಾದಲ್ಲಿ ಬ್ರಿಟಿಷರೊಂದು ನಿಲ್ದಾಣ ಮಾಡಿಕೊಂಡು, ಅಲ್ಲಿಗೆ ಆಕಾಶ ಮೂಲಕವೇ ಸೇನೆ ಸರಬರಾಯಿಗಳನ್ನಿಳಿಸಿ, ತಳವೂರಿಸಿಂತು 15ದಿನಗಳು ಕಳೆದುವು. ಈ ಗುಟ್ಟು ಮೊನ್ನೆ ತಾನೇ ಹೊರಬಿದ್ದಿದೆ. ಬರ್ಮಾದ 150 ಮೈಲು ಒಳಗಡೆ ಜಾಪಾನೀ ಸೇನೆಗೆ ನೂರು ಮೈಲು ದೂರದ ಹಿಂಭಾಗದಲ್ಲಿ ಈ ಠಾಣ್ಯ ನಿರ್ಮಾಣವಾಗಿದೆ. ಇದರ ರಚನೆಯಾಗಿ ಹದಿನಗಳಾಗುವ ವರೆಗೂ ಜಾಪಾನರಿಗದನ್ನು ಪತ್ತೆಹಚ್ಚಲಾಗಲಿಲ್ಲ. ಆ ಮೇಲೆ ಆಕಾಶಧಾಳಿ ನಡೆಸಿದರೂ ಫಲಬರಲಿಲ್ಲ. ಆದರೆ ಜಾಪಾನೀ ಸೇನೆಗಳು ಚಿಂಡ್ವಿನ್ ಹೊಳೆಯನ್ನು ಬಹು ಸಂಖ್ಯೆಯಲ್ಲಿ ದಾಟಿ ಪಶ್ಚಿಮ ಕಡೆಯಲ್ಲಿ ಮಿತ್ರ ಸೇನೆಯನ್ನು ಸಂಧಿಸಿ ಈಗ ಹೋರಾಟ ಸಾಗುತ್ತಿರುವ ಗಣನೀಯ ಘಟನೆಯನ್ನು ಅಲಕ್ಷ್ಯಿಸಲಾಗದು. ಬ್ರಿಟಿಷರು ಗುಪ್ತವಾಗಿ ಠಾಣ್ಯವೂರುವ ಹಂಚಿಕೆಯಲ್ಲಿ ಜಯಿಸಿದರೆ, ಜಪಾನರೀ ರೀತಿ ಚಿಂಡ್ವಿನ್ ಹೊಳೆದಾಟುವ ಎದೆಗಾರಿಕೆ ಪ್ರದರ್ಶಿಸಿದ್ದಾರೆ. ಮೇಲಾಗಿ ಎಷ್ಟೆಂದರೂ ಉತ್ತರ ಬರ್ಮಾದ ಈ ಹೋರಾಟವು ಯುರೋಪು ಯುದ್ಧಕ್ಕೊಂದು ಪುರವಣಿ ಹೊರತು ಬರ್ಮಾಗಲ್ಲುವ ಹೋರಾಟವೂ ಅಲ್ಲ; ಒಂದು ಗಣನೀಯ ಯುದ್ಧಭಾಗವೂ ಅಲ್ಲ, ಎಂದು ಮಿತ್ರ ಪ್ರಮುಖರೇ ಒಪ್ಪುತ್ತಾರೆ.

ರಶ್ಯ-ಇಟಲಿ

ರಶ್ಯನರು ಬುಗ್ ಹೊಳೆ-ಡ ನೀಸ್ಟರನ್ನು ಪ್ರವೇಶಿಸಿದರು. ಅರ್ಥಾತ್ ರುಮೇನಿಯಕ್ಕೆ ಮುಖಾಮುಖಿಯಾದರು. ಆ ಮಿಲ ರಶ್ಯದ ಇತರ ಹತ್ತು ಹಲವು ಸಣ್ಣ ದೊಡ್ಡ ರಣರಂಗಗಳಲ್ಲೂ ನಾಜಿಗಳ ಪಾಡು ಹೀಗೇನೇ. ಜರ್ಮನ್ ಸೇನಾನಿ ಮಾನ್‌ಸ್ಟೀನನು ಸ್ವತಃ ತನ್ನ ಮುಖ್ಯ ಕಾರ್ಯಾಲಯವನ್ನೇ ನೀಸ್ಟರಿಗೆ 80ಮೈಲು ಪಶ್ಚಿಮಕ್ಕಿರುವ ಜೇಸ್ಸಿಗೆ ವರ್ಗಾಯಿಸಿಕೊಳ್ಳಬೇಕಾಯಿತು. ಜರ್ಮನರಿಗಲ್ಲಿ ಪಲಾಯನವೇ ಖಾಂಡಿತ್ಯವಾಗಿ ಪರಿಣಮಿಸಿದೆ. ಸ್ಟಾಲಿನನಿಗೀಗ ದಿನಕ್ಕೊಂದೆರಡು ಬಾರಿ ವಿಜಯ ಸ್ತುತಿ (ಓರ್ಡರ್ ಓಫ್‌ದಿಡೇ) ತಿಳಿಸುವ ಸುಸಂದರ್ಭಗಳೊದಗುತ್ತಿವೆ. ರಶ್ಯಾಯುದ್ಧಗತಿಯೊಂದು ಸಮಸ್ಯೆಯಾಗಿ ಕಾಣುತ್ತಿದೆ; ನಾಜೀ ಹೆಗ್ಗಳಿಕೆಗೊಗ್ಗದ ಶೀಘ್ರದ ಪಲಾಯನವನ್ನು ಅಲ್ಲಿ ನಾಜೀ ಸೇನೆಯನ್ನು ಸರಿಸುತ್ತಿದೆ. ಆದೂ ಸರ್ವಶಕ್ತಿಯಿಂದ ಹೋರಾಡಿ ಸರ್ವಸ್ವವನ್ನು ಕಳಕೊಂಡು ಓಟಕ್ಕಿಡುವವಲ್ಲ. ಇದೇಕೆ ಹೀಗೆ? ಕೆಲವು 'ಅಗ್ರಗಾಮಿ'ಗಳ ಊಹನೆಯಂತೆ ರಶ್ಯಾ-ಜರ್ಮನಿ ಗುಪ್ತ ಒಡಂಬಡಿಕೆಯಿರಬಹುದೆ? ಅಥವಾ ರಶ್ಯಾಕ್ರಮಣದ ಆಸೆಬಿಟ್ಟ ಹಿಟ್ಲರನು ರಶ್ಯದ ಗಡಿಮೀರಿ ಕೆಂಪುಸೇನೆ ಮುಂದೊತ್ತುವಂತಿಲ್ಲವೆಂಬ ಭರವಸೆಯಿಂದ, ಅಲ್ಲಿಯ ಯುದ್ಧವನ್ನು ಸಾವಧಾನವಾಗಿ ಮುಗಿಸುವ ಹಂಚಿಕೆಯಿರಬಹುದೆ? ಏನೆಂಬುದು ತಿಳಿಯದು. ನಾಜಿಗಳು ಅಲ್ಲಿ ಹಿಂಜರಿಯುತ್ತಿರುವದೊಂದು ನಿಜ. ಇಟಲಿ ಯುದ್ಧ ಈಗ ನೀರಸವಾಗಿದೆ. ಕೆಲವು ವಾರಗಳಿಂದ ನಾಮೋಚ್ಚಾರದ ಭಾಗ್ಯ ಪಡೆದ ಕೇಸಿನೋ ನಗರದಲ್ಲೇ ಇನ್ನೂ ಹೋರಾಟ. ಅಲ್ಲಿಯ ರೈಲ್ವೇ ಸ್ಟೇಶನನ್ನು ಮಿತ್ರ ಸೇನೆಗಳೀಗ ವಶಪಡಿಸಿಕೊಂಡಿವೆ. ಬೇರೆ ಮಹತ್ತ್ವೇನೂ ಇಲ್ಲ. ಜರ್ಮನಿಯ ಮೇಲೆ ಕಳೆದ ವಾರದ ನಾಲ್ಕು ದಿನಗಳಲ್ಲಿ ಮೂರು ಬಾರಿ ಸಾವಿರ ಸಂಖ್ಯೆಯ ವಿಮಾನಗಳು ಹಗಲು ಧಾಳಿ ನಡೆಸಿದವು; ಲಂಕಾದಹನವೇ ನಡೆದಿರಬಹುದು. ಶಾಂತ ಸಮುದ್ರ ವಿಭಾಗದಲ್ಲೂ ಜಾಪಾನೀ ದ್ವೀಪಗಳ ಮೇಲೆ ಅಮೇರಿಕಾದ ಆಕಾಶ ಧಾಳಿಗಳು ನಡೆಯುತ್ತಿವೆ. ಹೊಸತಾಗಿ ಸ್ಥಳಾಕ್ರಮಣವಿಲ್ಲ.

ಹೆದರಿಸಹತ್ತಿದ್ದಾರೆ.

ತಮ್ಮ ರಾಗಕ್ಕೆ ಶ್ರುತಿ ಹಿಡಿಯದವರನ್ನು ಮಿತ್ರರೀಗ ಹೆದರಿಸಹತ್ತಿದಂತಿದೆ. ಅಮೇರಿಕದ 'ನಾಜೀ ರಾಯಭಾರಿ ರದ್ದತಿ' ಸೂಚನೆಯನ್ನು ಡಿವೆಲೆರಾರವರು ಧಿಕ್ಕರಿಸಿದ ಕೆಲವು ದಿನಗಳ ವರೆಗೆ ಐಯರ್ಲೆಂಡು ಆತುರಗೊಂಡಿತ್ತು. ಸೇನೆ ಗಡಿನಾಡಿನಲ್ಲಿ ಸಿದ್ಧವಾಗಿ ನಿಂತಿತ್ತು. ಆದರೆ ಮಿತ್ರರು ಅದರ ಮೇಲೆ ಆರ್ಥಿಕ ಪ್ರತಿಕ್ರಿಯೆ ಕೈಗೊಂಡಾರು ಹೊರತು ಸೈನಿಕಾಚರಣೆಗೆ ಹೋಗುವಷ್ಟು ಹುಚ್ಚುಗಟ್ಟುವಂತಿಲ್ಲವೆಂಬುದೀಗ ಸ್ಪಷ್ಟವಾಗಿದೆ. ಆರ್ಥಿಕ ನಿರ್ಬಂಧದಿಂದ ಐಯರ್ಲೆಂಡು ಎದೆಕಳಕೊಳ್ಳುವಂತಿಲ್ಲ. ಎಷ್ಟೆಂದರೂ ಸಾಮಗ್ರಿಸರಬರಾಯಿ ನಿಂತೊಡನೆ ಓರ್ಕಂಗಾಲಾದಂತೆ ಇಂಗ್ಲಂಡು ಅಮೇರಿಕಗಳ ಪೆಟ್ರೋಲು, ಜವಾ ಮೊದಲಾದ ಉಪಯುಕ್ತ ಸಾಮಗ್ರಿಗಳು ಬಾರದು. ನಿಂತರೂ ಐಯರ್ಲೆಂಡು ಗಣ್ಯಕ್ಕೆ ತರುವಂತಿಲ್ಲ. ಮಿ. ಚರ್ಚಿಲ್ಲರೊಂದು ಚರಿತ್ರಾರ್ಹ ಎಚ್ಚರಿಕೆಕೊಟ್ಟು 'ಐಯರ್ಲೆಂಡಿನಲ್ಲಿರುವ ನಾಜೀ ಏಜಂಟರಿಂದಾಗಿ ಮಿತ್ರ ಸೇನೆಗಳಿಗೆ ಹಾನಿಬಂತೆಂದರೆ, ಅದು [illegible] ಕೂಡಾ ಒಂದಾಗಿಸಲಾಗದಂತಹ ಬಿರುಕನ್ನು ಇಂಗ್ಲಾಂಡು ಐಯರ್ಲೆಂಡುಗಳ ನಡುವೆ ನಿರ್ಮಿಸುವದಂತೂ ಖಂಡಿತ' ಎಂದಿದ್ದಾರೆ. ಇದಕ್ಕುತ್ತರವೋ ಎಂಬಂತೆ ಡಿವೆಲರಾರವರು, ಅಪಜಯದಲ್ಲೂ ವಿಜಯಿಗಳಾದ ತನ್ನ ಜನಾಂಗದ ಹೆಗ್ಗಳಿಕೆಯನ್ನು ಸಾರಿ ಸಂದರ್ಭ ಬಂದರೆ ಐರಿಶ್ ಜನರು ಒಂದಿಂಚು ಬಗ್ಗದೆ ತಮ್ಮ ಹಕ್ಕನ್ನುಳಿಸಿಕೊಳ್ಳುವರೆಂದು ಘೋಷಿಸಿದ್ದಾರೆ. ಹೀಗೆ ಐಯರ್ಲೆಂಡು ಗಣ್ಯಮಾಡದೆ ಇದೆ. ಫಿನ್ಲೆಂಡಿನ ಸಂಧಿ ಸಮಾಚಾರದ ಸುದ್ದಿ ಥಂಡಾಗಿದೆ. ಈಗ ಒಂದೆಡೆಯಿಂದ ಬ್ರಿಟಿಷ್ ಆಕಾಶವಾಣಿ ರುಮೇನಿಯವನ್ನು ಬೆದರಿಸುತ್ತಿದೆ. ಇನ್ನೊಂದು ಕಡೆಯಿಂದ ಅಮೇರಿಕನ್ ವಿಮಾನಗಳು ಬೋಂಬಿನೊಟ್ಟಿಗೆ ಕರಪತ್ರಗಳನ್ನೂ ಜರ್ಮನಿಯ ಮೇಲೆ ಚೆಲ್ಲುತ್ತಿವೆ. "ರಶ್ಯನರು ನೀಸ್ಟರ್ ನುಗ್ಗಿದ್ದಾರೆ; ನಿಮ್ಮ ಪತನಕಾಲ ಸಮೀಪಿಸುತ್ತಿದೆ ಎಂದು ತಿಳಿದುಕೊಳ್ಳಿ. ಜರ್ಮನಿ ಅಜೇಯವೆಂದಿದ್ದುದು ಸುಳ್ಳಾದುದರೊಟ್ಟಿಗೆ, ಅದು ನಿಮ್ಮ ರಕ್ಷಕನೆಂಬುದೂ ಸುಳ್ಳಾಗಿದೆ" ಎಂದು ರುಮೇನಿಯಕ್ಕೆ ಎಚ್ಚರಿಕೆ. "ನಾಜಿಗಳನ್ನು ಹೊರದಬ್ಬಿರಿ. ಇಲ್ಲವಾದರೆ ನಮ್ಮ ವಿಮಾನ ಬಲವು ನಿಮ್ಮನ್ನು ಮುಡಿಗುಟ್ಟುವದು. 'ಜರ್ಮನ ಜನರನ್ನು ಗುಲಾಮರಾಗಿ ಮಾಡುವದು ಮಿತ್ರರಾಷ್ಟ್ರಗಳ ಧ್ಯೇಯವಲ್ಲ' ಎಂದು ಅಧ್ಯಕ್ಷ ರುಸವೆಲ್ಟರು ಬಹಿರಂಗ ಆಶ್ವಾಸನಕೊಟ್ಟುದನ್ನು ನೆನಪಿಸಿಕೊಳ್ಳಿ"-ನೆಂದು ಜರ್ಮನರಿಗೆ ಪ್ರೇರಣೆಗೆ. ಕೇಳಲು ದೊರೆವ ವಿಷಯಗಳಿಷ್ಟು. ಎಚ್ಚರಿದಿರು ಹೊಸತಾಗಿ ಪರಿಣಾಮಕಾರಿಯೊಡ್ಡುತ್ತಾ ಬಂದವರ ವಾರ್ತೆಯಿಲ್ಲ.

ಊಹಾ ಪೋಹೆಗಳು.

ಆದರೆ ಆ ಕುರಿತು ಗಾಳಿವರ್ತಮಾನಗಳೆಷ್ಟೋ ಹಬ್ಬಿವೆ. ವ್ಯಾರಿಸಿನಲ್ಲಿರುವ ಜರ್ಮನ್ ರಾಯಭಾರಿ ಕೆರ್. ಒಟೆಟ್ಟನು, ಸ್ವೀಡನಿನ ರಾಯಭಾರಿ ಗೋರಿನ್ನಾ ಸೋಡ್ಲಿಂಗನೊಡನೆ ಸ್ವೀಡನಿನ ಅರಸರು ಸಂಧಾನ ಮಧ್ಯಸ್ಥಿಕೆ ವಹಿಸಿಯಾರೇ ಎಂದು ವಿಚಾರಿಸಿದನೆಂದು ತಟಸ್ಥ ಪಕ್ಷದ ಒಂದು ವರದಿ. ಆದರೆ ರಾಜಾ ಗುಸ್ತೋವ್ ಒಪ್ಪಿಗೆ ಸೂಚಿಸದೆ ತಾವು ಅವರನ್ನು ಸಂಧಿಸುವಂತಿಲ್ಲವೆಂದು ಜರ್ಮನರಂದಿದ್ದಾರಂತೆ. ಆದರೆ ನಿಶ್ಶರ್ತವಾಗಿ ಶರಣುಬರಲು ಜರ್ಮನರು ತಯಾರೆಂಬುದು ತಿಳಿದುಬಾರದೆ ಸ್ವೀಡಿಶ್ ರಾಜರು ಸಂಧಾನದ ಹೊಣೆ ಹೊರುವಂತಿಲ್ಲ. ಒಂದೆಡೆ ಇಂತಹ ವಾರ್ತೆಗಳು; ಇನ್ನೊಂದೆಡೆ ಹಿಟ್ಲರನನ್ನು ಸೋಲಿಸಿದ ಮೇಲೆ ಜಾಪಾನನನ್ನು ಪಡೆಬಡಿಯಲು ಸಮಯ. ಬೇಕೆಂದಿಲ್ಲ. ಯಾಕೆಂದರೆ ರಶ್ಯವೂ ಆಗ ಮಿತ್ರರೊಡನೆ ಸೇರಿಕೊಳ್ಳುವದು ಖಂಡಿತ. ಆದರೆ ಹಿಟ್ಲರನು ಮಾತ್ರ ಇನ್ನೂ ಪ್ರಬಲನಿದ್ದಾನೆ, ಎಂದು ಮಿತ್ರರ ಹಂಬಲ. ಅಂತೂ ಕಳದರ ಗುಂಡು ಹಾರಾಟಕ್ಕಿಂತಲೂ ಇತ್ತಂಡದವರ ಗುಂಡಿಗೆ ಹಾರುವ ಘಟನೆಗಳೇ ಹೆಚ್ಚಿಗೆ

ಧನಕ್ಕಿಂತ ವಿಧಾನ ಮುಖ್ಯ

ಧನದ ಮೊತ್ತವೊಂದೇ ಗೌರವಾನ್ವಿತ ವಾಣಿಜ್ಯದ ಹೆಗ್ಗುರುತಲ್ಲ. ಧನಸಂಗ್ರಹ ಅಥವಾ ನಿಮ್ಮ ದುಡಿಮೆಯ ಮೊತ್ತಕ್ಕಿಂತ, ಅದನ್ನು ನಿರ್ವಹಿಸುವ ವಿಧಾನವೇ ವ್ಯಾಪಾರೋದ್ಯಮಗಳ ಯಶಸ್ಸಿಗೆ ಮುಖ್ಯವೆನಿಸಿದೆ.

ಕಳೆದ ನಲ್ವತ್ತು ವರ್ಷಗಳಿಂದ, ಕೆನರಾ ಬೇಂಕಿನೊಡನೆ ಇರುವ ಚಾಲತಿ ಠೇವಣಿಯ ಲೆಕ್ಕವು ವಾಣಿಜ್ಯದ ದೃಢತೆ ಮಾನ್ಯತೆಗಳ ದ್ಯೋತಕವಾಗಿ ಪರಿಗಣಿಸಲ್ಪಟ್ಟಿದೆ.

"ನಿಮಗೆ ಕೆನರಾ ಬೇಂಕಿನ ಒಂದು ಚೆಕ್ ಕೊಡುತ್ತೇನೆ" ಎನ್ನಲು ನೀವೂ ಆನಂದ ಪಡುವಿರಿ. ಮತ್ತೆ ನೆನಪಿನಲ್ಲಿರಲಿ-ಯಾವ ಚೆಕ್ ಆದರೂ **ಕೆನರಾ ಬೇಂಕಿನಲ್ಲಿ** ನಗದಾಯಿಸಲ್ಪಡಲು ಐದು ನಿಮಿಷಗಳಿಗಿಂತ ಹೆಚ್ಚಿನ ವಿಳಂಬವಿಲ್ಲ.

ಸ್ಥಾಪಿತ: **1906**

ಕೆನರಾ ಬೇಂಕು, ಲಿಮಿಟೆಡ್.

CANARA BANK, Ltd.

ಹತ್ತು ಲಲಿತ ಕವನಗಳು

ನೀವು ಅಗತ್ಯ ನೋಡಲೇಬೇಕು

ಜವಾಬ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

(ಮುಂದರಿಯುತ್ತದೆ.)

ಅನಂತರ -ವಾಡಿಯಾ ಚಿತ್ರ

ಜಂಗಲ್ ಪ್ರಿನ್ಸೆಸ್

"Wanted immediately.

Estate lorry driver with Ghat Road Experience Chevrolet charcoal gas lorry Must be able to keep lorry in order. Salary Rs. 60/- per month. Dearness Allowance Rs. 12/2/9 per month. Provident Fund. Apply with copies of testimonials to:

Manager,
Kalasa Tea & Produce Co. Ltd Hirebile, P. O.
Kadur District Mysore State"

CHAMPAES
Snow & Castrex
(Sole Distributors for (India.)
Sukhananda Stores
Santhekatte, UDIPI. S. K.

The Canara Banking Corporation Limited.

ESTD: 1906.

Authorised Capital	Rs. 25 00.000/-
Subscribed ,, ..	,, 16.00.000/-
Paid up	,, 13.25.785/-
Reserves	,, 4.10.000/-



With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegrapic Transfers

ಉಡುಪಿ, ಗುರುವಾರ ೨೩-೩-೧೯೪೪

ಜಿಲ್ಲಾ ಆಹಾರ ವ್ಯವಸ್ಥೆ

ಇತ್ತೀಚೆಗೆ ಮಂಗಳೂರಿನಲ್ಲಿ ಜಿಲ್ಲಾ ಕಲೆಕ್ಟರರ ಬಂಗಲೆಯಲ್ಲಿ ಸೇರಿದ ದಕ್ಷಿಣ ಕನ್ನಡ ಜಿಲ್ಲಾ ಆಹಾರ ಸಮಿತಿಯು ಒಂದು ಹೊಸ ಹೆಜ್ಜೆಯಿಟ್ಟಿದೆ, ಆದರೆ ಮುಂದಿಟ್ಟಿದ್ದಲ್ಲ, ಕಾಲು ಹಿಂದಿಟ್ಟಿದೆ. 'ಗುರುತು ಚೀಟು ಹಾಗೂ ಹಸುಗೆ ಚೀಟುಗಳುಳ್ಳವರಿಗೆ ಅಕ್ಕಿ ಹಂಚಲು ಕೂಡಿಬರುವಂತೆ ಅಕ್ಕಿಯ ಸಂಗ್ರಹವನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ, ಸ್ವಾಧೀನಪಡಿಸಿಕೊಳ್ಳದೆ ಇರುವ ಅಕ್ಕಿಯನ್ನು ಸಂಗ್ರಹಿಸಬಲ್ಲ ವ್ಯಾಪಾರಿಗಳ ಸಹಾಯವನ್ನು ಪಡೆದು, ಆ ವ್ಯಾಪಾರಿಗಳ ಮೂಲಕವೇ ಸರಕಾರವು ನಿಶ್ಚಯಿಸಲಿರುವ ಬೆಲೆಗೆ ಮಾರಾಟಮಾಡಿಸಬೇಕು'- ಎಂದು ಸಮಿತಿಯ ನಿರ್ಧಾರ. ಆದಿಯಿಂದಲೂ ಜಿಲ್ಲೆಗು ಅಕ್ಕಿಗೂ, ವ್ಯಾಪಾರಿಗಳಿಗೂ ಮಾತ್ರ ನಂಟುತನವಿತ್ತು; ಸರಕಾರದ ಹೊಸ ನಂಟುತನ ಗಂಟುಬಿದ್ದುದು ಈ ವರುಷವೇ. ಸಹಜವಾಗಿ ಲಾಭಾಕಾಂಕ್ಷಿಯಿರುವ ಖಾಸಗೀ ವ್ಯಾಪಾರಿಗಳ ಕೈಯಲ್ಲೇ ಅಕ್ಕಿಯ ಅಭಾವವುಂಟಾಗಿರುವ ಈ ಕಾಲದಲ್ಲೂ ವ್ಯಾಪಾರವನ್ನಿಂಗೊಟ್ಟರೆ, ಅಕ್ಕಿಯ ವಿತರಣೆ ಸರಿಯಾಗಲಾರದು ಎಂಬುದರಿಂದಲೇ 'ಕೋ ಅಪರೇಟಿವ್ ಸ್ಟೋರ್ಸ್'ಗಳ ಮೂಲಕ ಹಂಚುವ ವ್ಯವಸ್ಥೆ ಬಂದಿದೆ. ಹಿಂದೂ ಪತ್ರಿಕೆಯ [illegible] ಸೂಚನೆಯೊಂದರಲ್ಲಿ 'ವ್ಯಾಪಾರಿಗಳನ್ನು ಹೊರಗಟ್ಟಬೇಕು' ಎಂದಿದ್ದಕ್ಕೆ ಮಂಗಳೂರಿನ ವ್ಯಾಪಾರೀ ಸಂಘದ ಪ್ರಮುಖಾಧಿಕಾರಿಯೊಬ್ಬರು ವಿರೋಧ ಸೂಚಿಸಿದುದು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ. ಈ ಘೋಷಣೆ ಹಾಗೂ ವರ್ತನೆಗಳಿಂದ ಸರಕಾರವು ಖಾಸಗೀ ಅಕ್ಕಿ ವ್ಯಾಪಾರಿಗಳ ಮೇಲೆ ಅಪ್ರತ್ಯಕ್ಷ ಯುದ್ಧ ಹೂಡಿದ್ದಿತೆಂಬುದನ್ನೊಪ್ಪಬೇಕು. ಆಹಾರ ಸಮಿತಿಯವರ 'ವ್ಯಾಪಾರಿಗಳ ಮೂಲಕವೂ ಅಕ್ಕಿ ವ್ಯಾಪಾರ ನಡೆಯಬೇಕು' ಎಂಬ ಇಂದಿನ ನಿರ್ಧಾರದಿಂದ ಆಹಾರಾಧಿಕಾರಿಗಳು ಸೋತು ಅಥವಾ ಸೋಲದ ವ್ಯಾಪಾರಿಗಳೊಡನೆ ಯುದ್ಧ ಮುಕ್ತಾಯಗೊಳಿಸಿ ಸಂಧಾನಕ್ಕೆ ಬಂದರೆಂದು ಭಾವಿಸಬಹುದೆ? ಆ ಯುದ್ಧವೇಕಾಗಿ? ಈ ಸಂಧಾನವೇನೆಂದು?-ಎಂಬ ಪ್ರಶ್ನೆ ಹುಟ್ಟುತ್ತದೆ. ಸಹಕಾರೀ ಸಂಗ್ರಹಾಲಯಗಳಿಗೆ ಅಕ್ಕಿ ಸಂಗ್ರಹ ಮತ್ತು ಮಾರಾಟದ ಅಧಿಕಾರವನ್ನು ಕೊಟ್ಟುದು ವ್ಯಾಪಾರೀ ಲಾಭಕೋರತನದ ನಿರ್ನಾಮಕ್ಕಾಗಿ ಹೊರತು ವ್ಯಾಪಾರಿಗಳನ್ನು ದಮನಿಸುವದಕ್ಕಲ್ಲ. ಈಗ ವ್ಯಾಪಾರಿಗಳಿಗೆ ಪರವಾನಗಿ ಕೊಡುವದೂ ನಿಶ್ಚಿತ ಬೆಲೆಗೆ ಮಾರುವದಕ್ಕೆ ಮಾತ್ರ. ತತ್ವತಃ ಇದರಲ್ಲೇನೂ ತಪ್ಪಿಲ್ಲ. ಆದರೆ ತತ್ವದಂತೆ ಕಾರ್ಯವಾಗುವ ನಂಬಿಕೆ ಮಾತ್ರವಿಲ್ಲ. ಮಿಕ್ಕ ಜೀವನಾವಶ್ಯಕ ಸಾಮಗ್ರಿಗಳ ವ್ಯಾಪಾರಕ್ಕೆ ಇದ್ದಲ್ಲೇ ನಿಯಂತ್ರಣ ಬಿದ್ದಿದ್ದರೆ ಅಕ್ಕಿಯ ಮಟ್ಟಿಗೆ ವ್ಯಾಪಾರೀ ಮಾರ್ಗವನ್ನೇ ಬದಲಾಯಿಸಿದುದು ಖಾಸಗೀ ವ್ಯಾಪಾರಿಗಳನ್ನು ನಿಯಂತ್ರಣದಲ್ಲಿಡುವದು ಅಸಾಧ್ಯವೆಂಬುದರಿಂದಲೇ. ಈಗ ಪುನಃ ಅವರಿಗೆ ಅಕ್ಕೀ ವ್ಯಾಪಾರದ ಅಧಿಕಾರವೇಕೆ ಕೊಡಲ್ಪಟ್ಟಿತು? ಇದೊಂದು ವಿಲಕ್ಷಣ ಸಮಸ್ಯೆಯಾಗಿ ಕಾಣುತ್ತಿದೆ. 'ಸ್ವಾಧೀನಪಡಿಸಿಕೊಳ್ಳದ ಅಕ್ಕಿಯನ್ನು ಸಂಗ್ರಹಿಸಬಲ್ಲವರು' ಎಂದು ಅವರಿಗೊಂದು ಶಿಫಾರಸು ದೊರೆತಿರುವದನ್ನಲ್ಲವರೆಯಬಹುದು. 'ರೆಕ್ವಿಸಿಶನ್' ಸಂಗ್ರಹಿಸದೆ ಬಿಟ್ಟುದನ್ನು ಇವರು ಸಂಗ್ರಹಿಸಬೇಕೆಂಬ ಅರ್ಥವೆ? ಹಾಗಾದರೆ ಅದು ಪತ್ತೇದಾರಿ ಚಾತುರ್ಯದಿಂದಲ್ಲ; ಅಧಿಕ ಬೆಲೆಕೊಟ್ಟೇ ಸಂಗ್ರಹಿಸಬೇಕು ಎಂಬುದು ಸ್ಪಷ್ಟ. ಅಧಿಕ ಬೆಲೆಕೊಟ್ಟು ಪಡೆದವರು ಅಧಿಕಾಧಿಕ ಬೆಲೆಗೆ ಮಾರಬೇಕಾಗುತ್ತವೆಂಬುದು ಖಂಡಿತ. ಆದರೆ ಅದಕ್ಕವಕಾಶ ಕಾಣುವದಿಲ್ಲ. ಸರಕಾರವು ನಿಶ್ಚಯಿಸುವ ಬೆಲೆಗೇನೇ ಮಾರಬೇಕೆಂಬ ಶರ್ತವಿದೆ. ವ್ಯಾಪಾರಿಗಳು ಕೊಟ್ಟ ಬೆಲೆಯನ್ನಾಧರಿಸಿಯೇ ಸರಕಾರವು ಅವರ ಅಕ್ಕಿಯ ಮಟ್ಟಿಗೆ ಪ್ರತ್ಯೇಕ ಬೆಲೆ ನಿಶ್ಚಯಿಸುತ್ತದಾದರೆ ಆಹಾರನಿಯಂತ್ರಣದ ಅಸ್ತಿವಾರವೇ ಅಡಿಮೇಲಾಯಿತೆನ್ನಬೇಕು. ಈಗ ಇರುವ ನಿಯಂತ್ರಣ ಬೆಲೆಯಲ್ಲೇ ವ್ಯಾಪಾರ ಮಾಡುವ ಹಕ್ಕು ಮಾತ್ರ ಅವರಿಗೆ ಕೊಡಲ್ಪಟ್ಟಿದೆಯಾದರೆ ಇಷ್ಟು ತಡವಾಗಿ ಇದೇಕೆ ಬಂತು? ಸರಕಾರದ ಒತ್ತಾಯದಿಂದ ಹೊರಡದ ಅಕ್ಕೀ ಮುಡಿಗಳು ವ್ಯಾಪಾರಿಗಳ ನಗುಮೊಗವನ್ನು ಕಂಡೊಡನೆ ಹೊರಬರುತ್ತವೆಂದು ನಮಗನ್ನಿಸುವದಿಲ್ಲ. ಮುಡಿಗಳೆಲ್ಲಾ ಕೋ-ಅಪರೇಟಿವ್ ಸ್ಟೋರ್ಸುಗಳಲ್ಲಿ ಒತ್ತೊತ್ತಾಗಿ ತುಂಬಿ ಹೊರಗುರುಳ ಹತ್ತಿದುದರಿಂದ, ಇತರರ ವ್ಯಾಪಾರಕ್ಕೂ ಅವಕಾಶ ಕಲ್ಪಿಸಿಕೊಡುವ ಆವಶ್ಯಕತೆಯೊದಗಿತೆಂದರದಂತೂ ಹಾಸ್ಯಾಸ್ಪದ! ಖಾಸಗೀ ವ್ಯಾಪಾರಿಗಳ ಮೇಲಿನ ಬಹಿಷ್ಕಾರವನ್ನು ತೆಗೆದು ಅವರನ್ನು ಸಮಾಧಾನಪಡಿಸುವ ಆವಶ್ಯಕತೆಯು ಅಧಿಕಾರಿಗಳಿಗೊದಗಿತು ಎಂಬುದೊಂದು ಮಾತ್ರ ಸ್ಪಷ್ಟವಾಗುತ್ತದೆ. ಅದ್ದರಿಂದ ಆಹಾರ ಸಮಿತಿಯು ಈ ನಿರ್ಧಾರಕ್ಕೆ ಹೆದರಬೇಕಾಗಿದೆ. ಯಾಕೆಂದರೆ-'ಇಷ್ಟೇ ಬೆಲೆಗೆ ಪಡೆದು ಇಷ್ಟೇ ಬೆಲೆಗೆ ಮಾರಬೇಕು'-ಎಂಬ ನಿರ್ಬಂಧಿತ ವ್ಯಾಪಾರವು ಖಾಸಗೀ ವ್ಯಾಪಾರಿಗಳಿಗೆ ಸಮಾಧಾನಕರವಾಗುವಂತಿಲ್ಲ. ಅವರು ತಾವು ತೃಪ್ತಿಪಡುವಷ್ಟು ಜಾಣ್ಮೆಯಿಂದ ವ್ಯಾಪಾರ ನಡೆಸಲಾಗುವಂತೆ ನಿರ್ಬಂಧಗಳನ್ನು ಸಡಲಿಸಿಬಿಟ್ಟರೆ ಕೊಂಡುಕೊಳ್ಳುವವರ ಶಕ್ತಿಯ ಕೊಲೆಮಾಡಿದಂತೆಯೆ! [illegible] ಆಹಾರ ಸಮಿತಿಯವರ ಈ ಹೊಸನಿರ್ಧಾರ, ಬತ್ತಕುಟ್ಟುವ ಕೈಗಾರಿಕೆಗೆ ಆಘಾತವಾಗುವಂತೆ ಮಿಲ್ ತಯಾರಿಕೆಗೆ ಪ್ರೋತ್ಸಾಹಕೊಡುವ ಮತ್ತೊಂದು ನಿರ್ಧಾರ- ಇವುಗಳಿಂದ ಜನಸಾಮಾನ್ಯರಿಗನ್ಯಾಯವಾಗುತ್ತಿದೆ ಎಂದು ನಮ್ಮ ಆಕ್ಷೇಪ.

ದುರ್ಬೀನು

ಜನವಳಬೇಕು ಹೊರತು ಹಣವಳುವಂತಿಲ್ಲ; ಮಾನುಷತ್ವವಿದ್ದವನು ಮರುಕಗೊಂಡಾನು ಹೊರತು ಜಡನಲ್ಲ.

೦೦ ೦೦ ೦೦

ಕೆಂಪಂಗಿಯಲ್ಲಾದ ರಕ್ತದ ಕಲೆ ಕಾಣದು; ಪೌರುಷವಂತನಿಗಾದ ಪರಾಭವ ತಿಳಿಯದು.

೦೦ ೦೦ ೦೦

ಹಸನ್ಮುಖವಿಲ್ಲದವನು ಹಲ್ಲು ಬಿಟ್ಟರೆ ಬಾಯಿ ತೆರೆದಂತಾದೀತು- ನಕ್ಕಂತಾಗದು! ಶಕ್ತಿಯಿಲ್ಲದವನು ಬಡಾಯಿ ಹಾರಿಸಿದರೆ 'ಪಟಾಕಿ' ಯುನ್ನಿಸೀತು - ಪ್ರತಾಪವಾಗಲಾರದು

೦೦ ೦೦ ೦೦

ಹತ್ತಿಯಲ್ಲಾದರೂ ಬೀಜಗಟ್ಟಿಯಿರುತ್ತದೆ; ಮೃದುಮನಸ್ಸಿನಲ್ಲಾದರೂ ಧ್ಯೇಯ ದೃಢವಿರಬೇಕು.

೦೦ ೦೦ ೦೦

ಕೋಲು ಮತ್ತು ಕೋಲಿನ ಹೊಡೆತವೇ ಕೋಲಾಟ; ಕೋಲಿನಿದಿರು ಮರವಿದ್ದರೆ ಕೋಲಾಟವಾಗದು. ಎರಡೂ ಸಣ್ಣ ಮನಸ್ಸಾದರೆ ಹೋರಾಟ; ಅಲ್ಪ ಬುದ್ಧಿಯಿದಿರು ಘನ ಘೋರಣೆಯಿದ್ದರೆ ಕಚ್ಚಾಟವಿಲ್ಲ

೦೦ ೦೦ ೦೦

ಉತ್ತಮ ಅಡುಗೆಯಾದರೂ ಸಮಯ ಮೀರಿದರೆ ಹುಳಿ ಸಾರುತ್ತದೆ; ಉತ್ತಮ ಯೋಜನೆಯೂ ಹಾಗೇನೇ.

೦೦ ೦೦ ೦೦

ನೆರಿಗೆಯಿಂದ ವಸ್ತ್ರ ಉಡಿಸುತ್ತಾ ಹೋಗುವವಳು, ಕಸಬರಿಕೆ ಹಿಡಿದು ರಸ್ತೆ ಗುಡಿಸಿಯಾಳೆಂದು ಭಾವಿಸಬೇಡಿ; ಮಾತು ಮೂಲಕ ದೊಡ್ಡ ದೊಡ್ಡ ಸುಧಾರಣೆ ಸೂಚಿಸುವವರು, ಕಾರ್ಯತಃ ಕೈಗೊಂಡಾರೆಂದು ನಿರೀಕ್ಷಿಸಬೇಡಿ.

೦೦ ೦೦ ೦೦

ತಲೆಯ ಮೇಲೆ ಗೊಬ್ಬರದ ಬುಕ್ಕೆ ಯೇರುವಾಗಲೂ ಹೂ ಮುಡಿಯುವಾಗಲೂ ಒಳಗಿನ [illegible] ಮೈ ಮೇಲೆ ಬಂದ ಸಂದರ್ಭ ನೀಚವಿರಲಿ, ಉಚ್ಚವಿರಲಿ-ಮಾನುಷತ್ವವಿದ್ದವನು ಒಂದೇ ರೀತಿ.

೦೦ ೦೦ ೦೦

ಹರ್ಷಾಶ್ರು-- ದುಃಖಾಶ್ರು ಎರಡೂ ಕಣ್ಣಿನಿಂದಲೇ ಬರುತ್ತವೆ; ನ್ಯಾಯಾನ್ಯಾಯವೆರಡೂ ಮನುಷ್ಯನಿಂದಲೇ ಹುಟ್ಟುತ್ತವೆ.

೦೦ ೦೦ ೦೦

ಬೀಸುವ ಗಾಳಿ ಸಾಲದೆ ಹೋದವರು ಬೀಸಣಿಗೆ ಹಿಡಿಯುತ್ತಾರೆ; ಅನ್ಯರ ಶ್ಲಾಘನೆ ದೊರೆಯದೆ ಹೋದವರು ಆತ್ಮಶ್ಲಾಘನೆಗಿಳಿಯುತ್ತಾರೆ.

NOTICE.

In the Court of the Dt. Munsif of Mangalore.

O. S. No 10/1944

Between-

A. P Rego son of Manuel Rego -Cloth merchant near marnamikatta, mangalore Town-- Plaintiff

and

Paul Souza son of Anthony Souza, residing in Ullal kasba village Mangalore Taluk-- Defendant.

To

the abovenamed deft

Notice is hereby given that the Plff abovenamed has filed the above suit for recovery of arrears of mulageni rent due amounting to Rs. 141-10-3 and that the said suit stands posted to 1st april 1944 for your appearance. you may appear either in person or by pleader & file your written statement Indefault the suit will be heard and decreed exparte.

(By order of the Court)

P. D. Souza B. A. B. L.

&

L. S. Pais B. A. B. L.

Vakils for Plff.

Mangalore
17-3 44

ನೋಟೀಸು.

ಪುತ್ತೂರ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ.

S- C- N- 2/1944

ರಾಮಣ್ಣ ರೈ ಡೆಂಬಳೆ ಕರಿಯಪ್ಪ ಬಂಟ್ರ ಅಳಿಯ ಪುತ್ತೂರು ತಾಲ್ಲೂಕು ಪುತ್ತೂರು ಕಸಬಾ ಗ್ರಾಮದ ಸಕ್ರಬೆಟ್ಟು— ವಾದಿ

ಬಟ್ಯಪ್ಪ ಯಾನೆ ಬಾಲಪ್ಪ ಗೌಡ ಕಂಪದ್ಕ ದೇರಣ್ಣ ಗೌಡರ ಮಗ--- ಕುಟುಂಬದ ಯಜಮಾನ ವ ಅಡಳ್ತೆದಾರ [illegible] ಬಲ್ನಾಡು ಗ್ರಾಮದ ಪುತ್ತೂರು ತಾಲ್ಲೂಕು-- ಪ್ರತಿವಾದಿ,

ಸದ್ರಿ ಪ್ರತಿವಾದಿಗೆ ಈಮೂಲಕ ತಿಳಿಯ ಪಡಿಸುವುದೇನೆಂದರೆ—

ಪ್ರತಿವಾದಿಯಿಂದ ದಿವಾಂದು ಪ್ರೋಮಿಸರಿ ನೋಟ ಪ್ರಕಾರ ಬಾಕಿ ಬರತಕ್ಕ ರೂಪಾಯಿ 50-9-8ನ್ನು ವಸೂಲಿ ಕುರಿತು ವಾದಿಯು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 30-3-1944ಕ್ಕೆ ತನಿಖೆಗೆ ಇಟ್ಟದರಿಂದ ಸದ್ರಿ ವ್ಯಾಜ್ಯದಲ್ಲಿ ನಿಮ್ಮ ಆಕ್ಷೇಪಣೆ ಯಿದ್ದರೆ ಸದ್ರಿ ತನಿಖೆ ದಿವಸ ಹಗಲು 10 ಗಂಟೆಗೆ ಈ ಕೋರ್ಟು ಮುಂದೆ ನೀವು ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಉಜರಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಗೈರುಹಾಜರಾಗಿ ಮಾಡಿ ಕೋರ್ಟಿನವರಿಗೆ ಯುಕ್ತ ತೋರುವಂತೆ ತೀರ್ಮಾನಿಸಲ್ಪಡುವದು, ತಿಳಿದಿರಲಿ--

ಶ್ರೀ ಎಸ್. ಮಲ್ಯ.
ವಾದಿ ಕಡೆ ವಕೀಲ.

ಮೊಕ್ಕಾಂ ಪುತ್ತೂರು
ತಾರೀಕು 18-3-49.

Degrees: Books: Medicines

Free H L. M. S. M, B. H. M, D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4, Insanity Cure Pills Rs. 10 Enclose 2 annas stamp:—

Prof. Dr. N H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach (Regd.)

No. 3 Rs 2 No 2 Rs 5 No. 1 Rs. 7 Special Rs. 10, Extra Special Rs. 17 to ove marriage health, wealth. Ask an six questions with M. O. Re. 1/4 an get correct answers by returnpost Life reading Rs.10No V.P.P.Send M.O Free pmplets.

Prof Dr. N H, Chhatbar.
P. O. MAHUVA (Kathiawar India.)

644 ಲಕ್ಷ ಉಳಿತಾಯವಿರುವ 1944-45ರ ಮದ್ರಾಸ್ ಬಜೆಟ್.

ಮದ್ರಾಸ್ ಬಜೆಟ್.

ಇದೇ ತಾ 20ರಲ್ಲಿ ಮದ್ರಾಸ್ ಸರಕಾರವು ಪ್ರಕಟಿಸಿರುವ 1944-45ರ ಆಯವ್ಯಯಪಟ್ಟಿಯಲ್ಲಿ 644. ರೂ. ಗಳ ಮಿಗ ಉಳಿತಾಯವು ಕಂಡು ಬರುತ್ತದೆ. ಅಂದಾಜುಪತ್ರದಂತೆ ಕಂದಾಯ ಜಮೆ ರೂ.30 20. 38. ಲಕ್ಷಗಳು. ಮತ್ತು ಖರ್ಚು ರೂ. 23. 75. 97 ಲಕ್ಷಗಳು.

ಹೊಸ ಯೋಜನೆಗಳಿಗೆ.

ಮೇಲಿನ ಮುನಾಫೆಯ ಅಂಶದಿಂದ ರೂ. 39. 61ಲಕ್ಷಗಳನ್ನು ಹೊಸಯೋಜನೆಗಳಿಗಾಗಿ ಮೀಸಲಿಡಲಾಗಿದೆ ಈ ಯೋಜನೆಯಲ್ಲಿ, ಪ್ರೊಫೆಶನ್ ಟೇಕ್ಸ್ ಮತ್ತು ವಾಹನ ತೆರಿಗೆ ಇತ್ಯಾದಿಗಳಿಂದ ಸ್ಥಳೀಯ ಸಂಸ್ಥೆಗಳಿಗಾದ ನಷ್ಟಕ್ಕೆ ಕೊಡುವ ಪರಿಹಾರ ಧನವೂ ಸೇರಿದೆ.

ಆಯವ್ಯಯ ಪಟ್ಟಿಯಲ್ಲಿ ಹೆಚ್ಚಿನ ಲಕ್ಷ್ಯ ಸಹಾಯವು ಕೊಡಲ್ಪಟ್ಟಿರುವ ಇತರ ಯೋಜನೆಗಳೆಂದರೆ:- ಮದ್ರಾಸ್ ಯುನಿವರ್ಸಿಟಿಯಲ್ಲಿ ಹೊಸ 'ಟೆಕ್ನೊಲೋಜಿಕಲ್ ಕೋರ್ಸ್'ಗೆ ಗ್ರೇಂಟು. ಗವರ್ನಮೆಂಟ್ ಮಹಮ್ಮದೀಯ ಕಾಲೇಜಿನಲ್ಲಿ ಚರಿತ್ರೆ ಮತ್ತು ಸಂಸ್ಕೃತಿಯ 'ಓನರ್ಸ್ ಕೋರ್ಸ್' ತೆರೆಯುವದಕ್ಕೂ ಇಂಟರ್ ಮಿಡಿಯೇಟ್ ಕೋರ್ಸಿನಲ್ಲಿ ನೇಚುರಲ್ ಸಯನ್ಸ್‌ಗ್ರೂಪ್ ತೆರೆಯುವದಕ್ಕೂ ಸಹಾಯಧನ ಎಂಜಿನಿಯರಿಂಗ್ ಮತ್ತು ಮೈಡಿಕಲ್ ಶಾಲೆಗಳಿಗೆ ತುಟ್ಟಿಭತ್ತೆಯನ್ನು ಹೆಚ್ಚಿಸುವದಕ್ಕಾಗಿ ಹೆಚ್ಚಿನ ಸಹಾಯಧನ; ಅಕ್ಕೀ ಸಂಶೋಧನಾಲಯಗಳನ್ನು ಹೆಚ್ಚಿಸುವದಕ್ಕಾಗಿ ಹಣ; ಎಲ್ಲಾ ಲೇಬರ್ ಶಾಲೆಗಳ ವಿದ್ಯಾರ್ಥಿಗಳಿಗೂ ಧರ್ಮಾರ್ಥ ಮಧ್ಯಾಹ್ನದೂಟ ಹಾಕಲು ವಿಶೇಷ ಸಹಾಯಧನವಾಗಿ 2ಲಕ್ಷ ವಿ-ಇಷ್ಟು.

ಹೀಗೆ ಹೊಸಯೋಜನೆಗಳ ಸಹಾಯಧನವನ್ನು ಪ್ರತ್ಯೇಕಿಸಿಟ್ಟು, ರೂ. 554 ಲಕ್ಷವನ್ನು ಯುದ್ಧಾನಂತರದ ಪುನರ್ರಚನೆ ಹಾಗೂ ಅಭಿವೃದ್ಧಿ ಯೋಜನೆಗಳಿಗಾಗಿ ರೆವಿನ್ಯೂ ರಿಸರ್ವ್ ಫಂಡಿಗೆ ಸೇರಿಸಿದ ಮೇಲೂ ರೂ. 77ಲಕ್ಷದಷ್ಟು ಉಳಿಯುತ್ತದೆ.

ಕೇಂದ್ರ ಸರಕಾರವು ತಂಬಾಕಿನ ಮೇಲೆ ಹಾಕಲಿರುವ ಹೊಸ ಕರದ ಮೇಲಿಂದ ಮದ್ರಾಸ್ ಸರಕಾರವು 'ಮದ್ರಾಸ್ ತಂಬಾಕು ಕಾಯಿದೆ'ಯನ್ನು ರದ್ದುಪಡಿಸಿಕೊಳ್ಳುವದೆಂಬ ಒಂದು ಸೂಚನೆಕೊಟ್ಟಿದೆ.

ಮದ್ರಾಸ್ ಪ್ರಾಂತ್ಯದಲ್ಲಿರುವ ತೆರಿಗೆ ಹೆಚ್ಚಳವು ಈ ಬಾರಿ ತಗ್ಗಬಹುದೆಂದಿದ್ದ ಆಸೆಗಳನ್ನೆಲ್ಲಾ ಆಯ-ವ್ಯಯ ಪಟ್ಟಿಯು ಹುಸಿಗೊಳಿಸಿದೆ. "ಮದ್ರಾಸಿನಲ್ಲಿ ಪ್ರಚಲಿತವಿರುವ ಕಂದಾಯ ಮಟ್ಟವನ್ನು ಯುದ್ಧಾವಧಿಯ ವರೆಗೆ ಹೀಗೇನೇ ಇಡುವದು ಅಗತ್ಯವಿದೆ. ಯಾಕೆಂದರೆ ಯುದ್ಧಾನಂತರ ದೊಡ್ಡ ದೊಡ್ಡ ಅಭಿವೃದ್ಧಿ ಯೋಜನೆಗಳಿಗಾಗಿ ಈ ಪ್ರಾಂತದ ಕೈಯಲ್ಲಾಗ ಷ್ಟಾಕಷ್ಟು ದೊಡ್ಡ ನಿಧಿಯಿರುವದು ಆವಶ್ಯಕ" ಎಂದು ಸರಕಾರವು ಕಾರಣಕೊಟ್ಟಿದೆ.

ಸಾಮಾನ್ಯ ಸ್ವರೂಪ.

ಈ ಬಜೆಟಿನ ವೈಶಿಷ್ಟ್ಯವೆಂದರೆ, ತೆರಿಗೇ ರೂಪದಿಂದ ಜನತೆಯ ಮೇಲೆ ಹಾಕಲು ಸಾಧ್ಯವಿರುವ ಭಾರವು ತತ್ತ ತುದಿಯನ್ನು ಮುಟ್ಟಿದೆ; ಆದರೆ ಜನಂಗೆ ಕೊಡಬೇಕಾದ ಇದರ ಪ್ರಯೋಜನವನ್ನು ಶಕ್ಯವಿದ್ದಷ್ಟು ಕಡಿಮೆ ಮಾಡಿಕೊಳ್ಳಲಾಗಿದೆ ಸಾರ್ವಜನಿಕ ಆರೋಗ್ಯ ಮತ್ತು ವಿದ್ಯೆಗಾಗಿ ಅಲ್ಪಾಂಶ. ಸುಂಕವಸೂಲಿಯಲ್ಲಿ ಮತ್ತು ಪ್ರೊಫೆಶನ್ ಟೇಕ್ಸ್‌ನಲ್ಲಿ ಸ್ಥಳೀಯ ಸಂಸ್ಥೆಗಳು ಹೊಂದಿದ ನಷ್ಟ ಪರಿಹಾರಕ್ಕಾಗಿ ಮೊದಲನೆಯದಕ್ಕೆ 45-20ಲಕ್ಷ, ಎರಡನೆಯದಕ್ಕೆ 11-73ಲಕ್ಷವಿಡಲಾಗಿದೆ ಮುಸಲ್ಮಾನ್ ವಿದ್ಯೆ ಸಂಸ್ಕೃತಿಗೆ ಸಮರ್ಥನೆ ದೊರತಿದೆ. ಆದರೆ 30ಕೋಟಿ ರೂಪಾಯಿಗಳಿಗೆ ಮಿಕ್ಕಿದ ಈ ಆಯ-ವ್ಯಯ ಪಟ್ಟಿಯಲ್ಲಿ ನೀರಾವರಿ, ವ್ಯವಸಾಯ ಪ್ರೋತ್ಸಾಹ ಮೊದಲಾದ ಅತ್ಯವಶ್ಯಕ ಯೋಜನೆಗಳನ್ನು ಗಣನೆಗೆ ತಾರದಿದ್ದುದು ಆಶ್ಚರ್ಯ. ಯುದ್ಧಾನಂತರದ ಪುನರ್ನಿರ್ಮಾಣಕ್ಕಾಗಿ, ಮೊದಲೇನೂ ನೋಲ್ಪಟ್ಟದಕ್ಷಿರದ ಮದ್ರಾಸಿನ ಜನಜೀವನವನ್ನು ಇನ್ನಷ್ಟು ಕಳಗೊತ್ತಿರುವ ಮಿತಿಮೀರಿದ ತೆರಿಗೆಗಳ ಭಾರವನ್ನು ಇನ್ನೂ ತಗ್ಗಿಸದಿದ್ದುದು ಅಸಮಾಧಾನಕರ. ಈ ಆಯವ್ಯಯದಿಂದ ಜನಮತವು ಅತಿಯಾಗಿ ನೊಂದುಕೊಳ್ಳಲಿದೆ.

ಬರ್ಮಾದಲ್ಲಿ ಜಪಾನರ ದೊಡ್ಡ ಪರಿಮಾಣದ ಧಾಳಿಯಾರಂಭ!

ಇಂಫಾಲ್‌ನ ಮೇಲೆ ಜಪಾನೀ ಬಾಂಬು

ಅಸ್ಸಾಮಿನ ಇಂಫಾಲ್ ಎಂಬಲ್ಲಿ ಇದೇ 16ರಲ್ಲಿ ಹಲವು ಜಪಾನೀ ವಿಮಾನಗಳು ಧಾಳಿನಡಿಸಿದವು. ಎರಡು ದೇವಸ್ಥಾನಗಳು ನಾಶವಾದುದನ್ನು ಬಿಟ್ಟರೆ, ಜನ ಮತ್ತು ಸೊತ್ತು ಹಾನಿಯಾದುದು ಅತ್ಯಲ್ಪವೆಂದು ನವದಿಲ್ಲಿಯ ಪ್ರಕಟಣೆಯಿದೆ. ಜಪಾನರ ಒಂದು ವಿಮಾನವನ್ನು ಉರುಳಿಸಲಾಯಿತು, ನಮ್ಮದೇನೂ ಹೋಗಿಲ್ಲ ತಾ. 17ರಲ್ಲಿ ಪುನಃ ಇಂಫಾಲಿನ ಮೇಲೆ ವೈರಿವಿಮಾನಗಳು ಧಾಳಿಯಿಟ್ಟು ಕೆಲವು ಪ್ರಾಣಹಾನಿಗಳಾದವು ಎಂದು ಆ ಪ್ರಕಟಣೆಯಲ್ಲಿದೆ

ಬರ್ಮಾದಲ್ಲಿ ಜಪಾನರ ನವಧಾಳಿ

ಬರ್ಮಾದ ಚಿಂಡ್ವಿನ್ ಕ್ಷೇತ್ರದಲ್ಲಿ ಜಪಾನರು ಪ್ರಬಲ ಧಾಳಿಯೊಂದನ್ನು ದೊಡ್ಡ ಪರಿಮಾಣದಲ್ಲಿ ಆರಂಭಿಸಿದ್ದಾರೆ. ಚಿಂಡ್ವಿನ್ ಹೊಳೆಯನ್ನು ಜಾಮಂತೀ ಗಡಿಯೊಂದರಲ್ಲಿ ದಾಟಿದರೆಂದು ಪ್ರಥಮತಃ ತಿಳಿದುಬಂದರೂ ಈಗ ಹಲವೆಡೆಯಲ್ಲಿ ಹೊಳೆದಾಟಿ ಧಾಳಿಯು ದೊಡ್ಡ ರೂಪದಲ್ಲಾರಂಭವಾಗಿದೆ ಎಂದು ಈಗ ಖಚಿತವಾಗಿ ತಿಳಿದುಬಂದಿದೆ. ಇತರ ರಂಗಗಳ ಸಣ್ಣಪುಟ್ಟ ಹೋರಾಟಗಳಲ್ಲಿ ಮಿತ್ರ ಸೇನೆ ಹಾಗೂ ಚೀನೀ ಸೇನೆಗಳು ಮೇಲ್ಗೈಯಾಗಿವೆ. ಉತ್ತರ ಬರ್ಮಾದಲ್ಲಿ ಲೆಫ್ಟನೆಂಟ್ ಜನರಲ್ ಜೋಸೆಫ್ ಸ್ಟಿಲ್‌ವೆಲರ ಸೇನೆಯು ವಿಜಯಿಯಾದುದಕ್ಕಾಗಿ ಮುಖ್ಯ ಸೇನಾನಿ ಲೋರ್ಡ್ ಮೌಂಟ್ ಬೇಟನರು ಶ್ಲಾಘನೆ ಸಲ್ಲಿಸಿದ್ದಾರೆ.

ರಶ್ಯನರ ವಿಜಯ.

ಡೀಸ್ಟರ್ ನದಿದಾಟಿದ ರಶ್ಯನರು ಬೆಸ್ಸರೇಬಿಯಾದ ಸೊರೊಕಾ ಎಂಬನಗರವನ್ನು ಸ್ವಾಧೀನಪಡಿಸಿಕೊಂಡರು ಈಗ ಕೆಂಪುಸೇನೆ ರುಮೇನಿಯಾ. ಝೆಕೊಸ್ಲೊವೇಕಿಯಾ ಮತ್ತು ಹಂಗೇರಿಗಳ ಗಡಿಯನ್ನು ಮುಟ್ಟಿದೆ ಜರ್ಮನರ ಪ್ರಬಲ ರಕ್ಷಣಾ ಕೋಟೆಯನ್ನು ಭೇದಿಸಿ ರಶ್ಯನರು ಪೋಲೆಂಡಿನ ಕ್ರೆಮೆನಿಕ್ ನಗರವನ್ನು ಆಕ್ರಮಿಸಿಕೊಂಡಿದ್ದಾರೆ ಇದು ಯುದ್ಧ ಮೊದಲಿನ ಪೋಲೆಂಡಿನ ಪೂರ್ವಸೀಮೆ ಗಡಿಯಿರುವ ಸ್ಥಳ

ಸ್ಮಟ್ಸ್ ವಿರೋಧ

ದಕ್ಷಿಣಾಫ್ರಿಕದ ಜನರಲ್ ಸ್ಮಟ್ಸರು ಬ್ರಿಟಿಷ್ ಕಾಮನ್‌ವೆಲ್ತ್ ಸಂಬಂಧಗಳು ಚಿರಂಜೀವಿಗಳಾಗಿಯೇ ಇರಬೇಕೆಂದು ಅಲ್ಲಿಯ ಯೂನಿಯನ್ ಪಾರ್ಲಿಮೆಂಟಿನಲ್ಲಿ ವ್ಯಕ್ತಪಡಿಸಿದ್ದಾರೆ. ಸಣ್ಣ ರಾಷ್ಟ್ರಗಳು ರಿಪಬ್ಲಿಕ್‌ಗಳಾಗಿ ಬ್ರಿಟಿಷ್ ಕಾಮನ್‌ವೆಲ್ತಿನ ಸಂಬಂಧ ಕಡಿದುಕೊಂಡಿರಬೇಕೆಂಬ ಆಯರ್ಲೇಂಡಿನಂತಹ ತೀವ್ರಗಾಮಿಗಳ ಧೋರಣೆಯನ್ನು ಟೀಕಿಸಿ "ನಾನಿದಕ್ಕೆ ಬದ್ಧವಿರೋಧವೆಂದು ಅಸಂದಿಗ್ಧವಾಣಿಯಲ್ಲಿ ತಿಳಿಸುತ್ತೇನೆ ಎಂದರು.

ವಿಲ್ಕಿ ವಿಚಾರ.

"ಸ್ವಸ್ಯ ಪ್ರಯೋಗಕ್ಕೂ ಸಿದ್ಧವಿರುವ ಬಲಶಾಲೀ ಅಂತರ್ರಾಷ್ಟ್ರೀಯ ಸಂಘವೊಂದರ ನಿರ್ಮಾಣ ಮತ್ತು ಕಾರ್ಯಭಾರ ನಿರ್ವಹಣದಲ್ಲಿ ಅಮೇರಿಕವು ತನ್ನ ಸಾಮ್ರಾಜ್ಯ ಶಕ್ತಿಯನ್ನು ಉಪಯೋಗಿಸದಿದ್ದರೆ ಇನ್ನೊಂದು ಜಾಗತಿಕ ಯುದ್ಧದ ಭಯ ನಿವಾರಣೆಯಾಗಲಾರದು.' ಎಂದು ಮುಂದಿನ ಅಧ್ಯಕ್ಷರೆಂದು ಊಹಿಸಲ್ಪಟ್ಟಿರುವ ಮಿ. ವೆಂಡಲ್ ವಿಲ್ಕಿಯವರು 'ಫೋರಿನ್ ಎಫೇರ್ಸ್' ಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯ ಪ್ರಕಟಿಸಿರುವರು.

NAVAYUGA ENTERPRISE LIMITED.

NOTICE

The register of members and share transfer books of the Company will remain closed from the 25th March 1944 to 20th April, 1944 (both days inclusive'

(By order of the Board

Office of the Company
FALUKOTE, UDIPI
Date 12—3—1944

K. Hornayya Shetty.
Managing Director

ಅಖಿಲ ಕರ್ನಾಟಕದ ಪುರೋಗಾಮಿ ಮಾಸಪತ್ರಿಕೆ

ಪ್ರಕಾಶಿನಿ

ಮಾರ್ಚ್ ತಿಂಗಳ ಸಂಚಿಕೆಯಲ್ಲಿ

ಹುಂಕಾರ—ಭೂತದ ಕೋಲ—ಪ್ರೇಮಾಗ್ನಿ—ಧರ್ಮಗುರು—ಸನ್ಯಾಸಿ ಯುವತಿ— ಸೊಸೆ— ವಯೋದೋಷ—ಹನಿಗವನ್ನೋಟಗಳು—ತಿಂಗಳ ಭವಿಷ್ಯ (ವ್ಯಂಗ್ಯ) ಕವಿತೆಗಳು—ಇತ್ಯಾದಿ.

ಏಜಂಟರು ಬೇಕಾಗಿದ್ದಾರೆ

ಬಿಡಿ ಸಂಚಿಕೆಗೆ 0—4—0
ವಾರ್ಷಿಕ ಚಂದಾ ರೂ. 3—0—0

ಮಾದರಿ ಸಂಚಿಕೆಗೆ 0—4—0 ಸ್ಟಾಂಪಿನೊಂದಿಗೆ ಬರೆಯಿರಿ.

ಮೆನೇಜರ್,
ಪ್ರಕಾಶಿನಿ,
ನವಯುಗ ಪ್ರೆಸ್, ಉಡುಪಿ

ಪ್ರಕಟಣೆ.

D. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ--

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಡಿ. ಯಂ ಕುನ್ನಿರಾಮನ್,
ಮೆನೇಜರ್.

ಮುಂಬಾಯಿ ಬಂಟರ ಯಾನೇ ನಾಡವರ ಸಂಘದ ವಾರ್ಷಿಕ ಸಾರ್ವಜನಿಕ ಸಭೆಯು ತಾ 16-1-1944ರಲ್ಲಿ ಸೇಂಟ್ ಕ್ಸೇವಿಯರ್ಸ್ ಕಾಲೇಜಿನಲ್ಲಿ ಸೇರಿ 31ಜನರ ಆಡಳಿತ ಮಂಡಳಿಯನ್ನು ರಚಿಸಲಾಯಿತು, ಶ್ರೀ ಬಾಂಗ್ಲೆ ಮಹಾಬಲ ಶೆಟ್ಟರನ್ನು ಸಂಘದ ಅಧ್ಯಕ್ಷರನ್ನಾಗಿಯೂ, ಶ್ರೀ ಕಾವು ಕಾಂತಪ್ಪ ಶೆಟ್ಟರನ್ನು ಉಪಾಧ್ಯಕ್ಷರನ್ನಾಗಿಯೂ ಶ್ರೀ ಕೆಮ್ಮಣ್ಣು ವಿ.ಕಾಂತ ಶೆಟ್ಟಿ, ಮತ್ತು ಶ್ರೀ ಬೆಳ್ಳಿಪ್ಪಾಡಿ ಮುತ್ತಯ ಕೃಷ್ಣ ಶೆಟ್ಟರನ್ನು ಜತೆ ಕಾರ್ಯದರ್ಶಿಗಳನ್ನಾಗಿಯೂ ಶ್ರೀ ಮೂಲಂಕಿ ಶ್ರೀಧರ ಶೆಟ್ಟರನ್ನು ಕೋಶಾಧಿಕಾರಿ ಮತ್ತು ಶ್ರೀ ಎರ್ಮಾಳು ಮಹಾಬಲ ಶೆಟ್ಟರನ್ನು ಸಹಾಯಕ ಕೋಶಾಧಿಕಾರಿಗಳನ್ನಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟಿರುವರು, ಇತರ ಕಾರ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ನಡೆದಿರುವದು,

ದಕ್ಷಿಣ ಕನ್ನಡ-

ಮಂಗಳೂರು

ಜಿಲ್ಲಾ ಆಹಾರ ಸಮಿತಿಯು— ಇತ್ತೀಚೆಗೆ ಜಿಲ್ಲಾ ಕಲೆಕ್ಟರರ ಬಂಗಲೆಯಲ್ಲಿ ಜರು ಗಿ ಕೆಳಗಿನ ನಿರ್ಣಯಗಳನ್ನು ಸ್ವೀಕರಿಸಿತು.

೧. ಗುರುತು ಚೀಟು ಮತ್ತು ಹಸುಗೆಯ ಚೀಟುಗಳುಳ್ಳವರಿಗೆ ಅಕ್ಕಿ ಹಂಚಲನುಕೂಲವಾಗುವಂತ ಅಕ್ಕಿ ಸಂಗ್ರಹವನ್ನು ಇಟ್ಟುಕೊಳ್ಳುವದಕ್ಕಾಗಿ ಸ್ವಾಧೀನಪಡಿಸಿಕೊಳ್ಳದೆ ಇರುವ ಅಕ್ಕಿಯನ್ನು ಸಂಗ್ರಹಿಸಬಲ್ಲ ವ್ಯಾಪಾರಿಗಳ ನೆರವನ್ನು ಪಡೆದು ಆ ಅಕ್ಕಿಯನ್ನು ವ್ಯಾಪಾರಿಗಳ ಮೂಲಕವೇ ಸರಕಾರವು ನಿಶ್ಚಯಿಸಿದ ಬೆಲೆಗೆ ಮಾರಾಟ ಮಾಡಬೇಕು.

೨. ಮೆಸರ್ಸ್ ಕೃಷ್ಣನಾಯಕ್ ಎಂಡ್ ಸನ್ಸ್ ಅವರು ತಮ್ಮ ಮಿಲ್ಲಿನಲ್ಲಿ ಅಕ್ಕಿ ತಯಾರಿಸಲು ಭತ್ತವನ್ನು ಕೇಳಿರುವರು. ಮೊದಲು ಒಂದು ಮುಡಿ ಭತ್ತಕ್ಕೆ ಎಷ್ಟು ಅಕ್ಕಿಯು ಸಿಗುತ್ತವೆಂಬುದನ್ನು ಸರಿಯಾಗಿ ತಿಳಿದುಕೊಳ್ಳುವದಕ್ಕಾಗಿ, ಸ್ವಲ್ಪ ಭತ್ತವನ್ನು ಕೊಟ್ಟು ನೋಡಬೇಕು.

೩. ಉತ್ತಮ ಬೆಳತಿಗೆ ಅಕ್ಕಿಯ ಬೆಲೆಯು ಕಗ್ಗಕ್ಕಿಯ ಬೆಲೆಯಷ್ಟೇ ಇರಬೇಕು.

೪. ಕಾರ್ಕಳದ ವ್ಯಾಪಾರಿಗಳು ಕೆಲವರು ತಾವು ೧೫೦೦ ಮುಡಿ ಗಂಧಸಾಲೆ ಅಕ್ಕಿ ಕೊಡುವೆವು, ಪ್ರತಿಯಾಗಿ ತಮಗೆ ರಿಕ್ವಿಸಿಶನ್ ಅಕ್ಕಿಯನ್ನು ಕೊಡಬೇಕೆಂದು ಕೇಳಿರುವರು. ಈ ಕೇಳಿಕೆಯನ್ನು ಸ್ವೀಕರಿಸಲಾಯಿತು.

೫. ಆಹಾರ ಧಾನ್ಯಗಳನ್ನು ಹೆಚ್ಚು ಬೆಳೆಯಿಸಲು ಅನುಕೂಲವಾಗುವಂತೆ ನೀರಾವರಿ ಕೆಲಸವನ್ನು ನಿರೀಕ್ಷಿಸುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸಬೇಕಾಗಿ ಸರಕಾರವನ್ನು ಕೇಳಿಕೊಳ್ಳಲಾಯಿತು.

ಹೊರಗಿನಿಂದ ಅಕ್ಕಿ.— ಮಂಗಳೂರಿಗೆ ಸಧ್ಯವೇ ಕೆಲವು ಸಾವಿರ ಬೆಳತಿಗೆ ಮತ್ತು ಕಚ್ಚಾಲು ಅಕ್ಕಿ ಬರಲಿದೆ ಎಂದು ತಿಳಿದು ಬಂದಿದೆ.

ದ. ಕ. ಜಿಲ್ಲೆಯ ಹೊಸ ಕಲೆಕ್ಟರರು:— ಈ ಮೊದಲು ಶ್ರೀ ಉನ್ನಿತನ್ ಅವರು ತಾತ್ಕಾಲಿಕ ಕಲೆಕ್ಟರಾಗಿ ಬರುವರು ಎಂದು ಪ್ರಕಟವಾಗಿತ್ತು. ಈಗ ರಾವ್ ಬಹದ್ದೂರ್ ಪಿ. ರಾಮದಾಸ್ ಎಂಬವರು ಏಪ್ರಿಲ್ ತರಂಭದಲ್ಲಿ ಅವರ ಅನಂತರ ನಮ್ಮ ಜಿಲ್ಲೆಯ ಕಲೆಕ್ಟರರಾಗಿ ಚಾರ್ಜು ವಹಿಸಿಕೊಳ್ಳುವರು ಎಂದು ಪ್ರಕಟವಾಗಿದೆ. ಹೊಸ ಕಲೆಕ್ಟರರು ಈಗಾಗಲೇ ಮಂಗಳೂರಿಗೆ ಬಂದಿದ್ದಾರೆ.

ಬಂಟರ ಯಾನೆ ನಾಡವರ ಬಡ ವಿದ್ಯಾರ್ಥಿ ಫಂಡು, ಶಿರ್ವ ಪೋಸ್ಟು, ದ. ಕ.— ಶಿರ್ವ ಮಂಚಕಲ್ಲಲ್ಲಿ ಹೊಸತಾಗಿ ಹೈಸ್ಕೂಲು ಬೇಗನೆ ಆಗಲಿರುವುದರಿಂದ, ತಾ 9 3 '44ರಲ್ಲಿ ಡಾ! ಕುಂಡದ್ಕ ಶಾಂತಪ್ಪ ರೈಗಳ ಅಧ್ಯಕ್ಷತೆಯಲ್ಲಿ ಸ್ವಜಾತಿ ಬಾಂಧವರ ಒಂದು ಸಭೆ ಸೇರಿ, ನಮ್ಮ ಬಡ ವಿದ್ಯಾರ್ಥಿಗಳಿಗೆ ಸಹಾಯವನ್ನೀಯುವುದಕ್ಕಾಗಿ, ಒಂದು ಬಡ ವಿದ್ಯಾರ್ಥಿ ಫಂಡನ್ನೇರ್ಪಡಿಸಬೇಕಾಗಿ ನಿಶ್ಚಯಿಸಲಾಯಿತು. ಸದ್ರಿ ಫಂಡಿಗೆ ಮೆಂಬರರಾಗಿ ಸೇರುವವರು ಪ್ರತಿ ಒಬ್ಬರೂ ರೂ. 5/ ಮೆಂಬರುತನದ ಫೀಸು ಕೊಡುವದಲ್ಲದೆ ತಮ್ಮ ಶಕ್ತ್ಯಾನುಸಾರ ದಾನರೂಪವಾದ ಧನಸಹಾಯ ಕೂಡ ಮಾಡಬೇಕಾಗಿ ವಿನಂತಿಸಿಕೊಳ್ಳಲಾಗುತ್ತದೆ. ಇದನ್ನು ಯೋಗ್ಯ ರೀತಿಯಲ್ಲಿ ನಡಿಸುವದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಲಾಗಿದೆ. ಸರ್ವ ಮಹನೀಯರೂ ತಮ್ಮ ಉದಾರ ಹಸ್ತದಿಂದ ಸಹಾಯಗೈದು ವಿದ್ಯಾ ದಾನಕ್ಕೆ ಪ್ರೋತ್ಸಾಹ ಕೊಡಬೇಕಾಗಿ ಕಾರ್ಯಕಾರಿ ಮಂಡಳಿಯ ಪ್ರಾರ್ಥನೆ ಇದೆ.

ಪುತ್ತೂರು ಡಿ. ಮುನ್ಸಿಫ ಕೋರ್ಟಿನಲ್ಲಿ

O S. 457/1938

R. E. P. 552/1943

ಮಾಡ ಜೋವ ಕ್ಕೆ ಪೌತಿ ವಿಠಲ ರೈ ಕೊಡು—

Petitioners

ಮಿ ರಜಿತೀಶಗಿರಿರಾವ್, ಮೋಹಟ ಕೃಷ್ಣಯ್ಯನ ಮಗ—ಕೊಡಗು ಜಿಲ್ಲಾ ಮಡಿಕೇರಿಯಲ್ಲಿ ವಾಸಿಸುವ ಸಂತತಿಯೆಂಬಲ್ಲಿ—

Respdt

ಸದ್ರಿ ಅಮಲ್ಜಾರಿಯಲ್ಲಿ ಅರ್ಜಿದಾರಗೆ ಬಹುತ್ವದ ವಸೂಲಿಗೆ ದಾವಾ ಆಸ್ತಿ ಯೇಲಂನಿಂದ ಪೊಂದಿಕೊಳ್ಳುವರೆ ಎದ್ರಿಗೆ ಅಮಲ್ಜಾರಿ ನೋಟೀಸು ಮಾಡಿಸಿ ಅವರ ನೋಟೀಸಿನ ತನ್ನ ತಾ. 24-3-1944ಕ್ಕೆ ಇಟ್ಟಿರುವದ್ರಿಂದ ಎದ್ರಿಯು ಆಕ್ಷೇಪಗಳೇನಾದರೂ ಹೇಳುವದಿದ್ದರೆ ಆ ಮ್ಯಾದೆಗೆ ಈ ಕೋರ್ಟಿನ ಮುಂದೆ 11 ಘಂಟೆಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು, ತಪ್ಪಿದರೆ ಅವರನ್ನು ಏಕಪಕ್ಷ ಎಂತ ಮಾಡಿ ಮುಂದಿನ ವ್ಯವಹಾರವನ್ನು ಮುಂದರಿಸಲಾಗುವದು ಎಂತ ಈ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

B. Ramachandra Rao.

Pleader for Petitioner.

ತಾ. 3-3-1944

Puttur S.K

ಶ್ರೀ. ಕೃಷ್ಣ ಶೆಟ್ಟರ ಬಿಡುಗಡೆ.— ಧಾರವಾಡ ಕರ್ನಾಟಕ ಹೈಸ್ಕೂಲ್ ಅಧ್ಯಾಪಕರಾಗಿದ್ದ ಮಂಗಳೂರಿನ ಶ್ರೀ. ಕೆ. ಕೃಷ್ಣ ಶೆಟ್ಟಿ ಬಿ. ಎ. ಇವರು ಡಿ. ಓ. ಇ. ಕಾನೂನಿನಂತೆ ಮಂಗಳೂರಿನಲ್ಲಿ ಬಂಧಿಸಲ್ಪಟ್ಟವರು ತಮ್ಮ ಶಿಕ್ಷೆ ಅವಧಿ ತೀರಿಸಿ ಹಿಂಡಲಗಿ ಸೆರೆಮನೆಯಿಂದ ಬಿಡುಗಡೆಯಾಗಿ ಮಂಗಳೂರಿಗೆ ಬಂದಿದ್ದಾರೆ.

ಜಾನುವಾರು ರೋಗ:— ನಮ್ಮ ಜಿಲ್ಲೆಯಲ್ಲಿ ಜಾನುವಾರು ರೋಗ ಈ ವರ್ಷ ಪ್ರಬಲವಾಗಿ ಬಂದು ಎಷ್ಟೋ ಸಾವಿರ ಜಾನುವಾರುಗಳು ಸತ್ತವೆ. ಸರಕಾರಗೋಡ ತಾಲೋಕೊಂದರಲ್ಲಿಯೇ ಎಂಟು ಸಾವಿರಕ್ಕೆ ಮಿಕ್ಕ ಜಾನುವಾರಗಳು ಈ ರೋಗದಿಂದ ಮೃತಪಟ್ಟರುವುದಾಗಿ ತಿಳಿದಿದೆ. ಹಳ್ಳಿಯ ಕೆಲವು ರೈತರ ಇಡೀ ಹಟ್ಟಿಹಟ್ಟಿಗಳೇ ಈ ರೋಗದಿಂದಾಗಿ ಖಾಲಿಯಾಗಿರುವವು. ಇದರಿಂದಾಗಿ ರೈತರಿಗೆ ಮುಂದಿನ ಬೆಳೆ ಮಾಡಲು ಬಹಳ ಕಷ್ಟವಾಗುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಈ ಸಂಬಂಧ ರೈತರಿಗೆ ಸರಕಾರದವರು ಏನಾದರೂ ಪರಿಹಾರ ಕೊಡುವುದು ಅವಶ್ಯವಿದೆ. ಸಾಲವನ್ನಾದರೂ ಕೊಟ್ಟು ಅವರ ಸಹಾಯಕ್ಕೆ ಸರಕಾರ ಬರಬೇಕು. ಬೇಗನೇ ಈ ಕುರಿತು ಸಂಬಂಧಪಟ್ಟವರು ಕಾರ್ಯಕ್ರಮ ಕೈಗೊಳ್ಳುವರೆಂದು ಹಾರೈಸಲಾಗಿದೆ.

ಉಡುಪಿ

ಉಡುಪಿ:— ರೇಶನಿಂಗ್ ಪದ್ಧತಿಯು ಇದೇ ತಾ 12ರಿಂದ ಜ್ಯಾರಿಗೆ ಬಂದಿರುವುದಷ್ಟೆ. ಪ್ರಥಮ ವಾರದಲ್ಲಿ ಕೆಲವು ದಿವಸಗಳಲ್ಲಿ ಮಾತ್ರ ಬೆಳ್ತಿಗೆ ಅಕ್ಕಿ ದೊರೆಯಿತು. ಎರಡನೆ ವಾರದ ಬೆಳ್ತಿಗೆ ಅಕ್ಕಿಯ ಸುಳಿವಿಲ್ಲ. ಆಧಿಕೃತ ಡಿಪೋಗಳೆಂದು ತೂಗ ಹಾಕಿದ ಬೋರ್ಡುಗಳಲ್ಲಿ ವಿವಿಧ ಅಕ್ಕಿಯ ಧಾರಣೆಮಾತ್ರ ಸೂಚಿಸಲಾಗಿಯದೆ. ಮಸ್ಕತಿ ಅಕ್ಕಿ ಅಪರೂಪ ದರ್ಶನವನ್ನೀಯುತ್ತಿದೆ. ಆದರೆ ರಾಶಿ ಅಕ್ಕಿ ಮಾತ್ರ ಯಾವಾಗಲೂ ದೊರೆಯುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಜನತೆಯ ಬೇಕೆಗೆ ಅಕ್ಷೇಪವೀಯದಂತೆ ತಕ್ಕ ಏರ್ಪಾಡು ಮಾಡುವುದು ಆತ್ಯಾವಶ್ಯಕ.

ಮಂಗಳೂರಿನ ಬೋರ್ಡ್ ಬಿಶೋಪರು ಉಡುಪಿ ಮುನಿಸಿಪಾಲಿಟಿಯ ಮೇಲೆ ಮಾನನಷ್ಟ ದಾವೆಹೂಡಿದ್ದರಷ್ಟೆ. ಅಪ್ಪೀಲು ತೀರ್ಮಾನವು ಸ್ಥಳೀಯ ಮುನ್ಸೀಫ್ ಕೋರ್ಟಿನಲ್ಲಿ ತಾ 20ರಲ್ಲಿ ನಡೆದು ಮುನಿಸಿಪಾಲಿಟಿಗೆ ಜಯವಾದುದು ಮಾತ್ರವಲ್ಲದೆ ಕೋರ್ಟು ಖರ್ಚು ಸಹ ನಗರ ಸಭೆಗೆ ಕೊಡಬೇಕೆಂದಾಗಿ ದಾವೆ ಡಿಸ್‌ಮಿಸ್ ಮಾಡಲಾಯಿತೆಂದು ತಿಳಿದು ಬರುತ್ತದೆ.

ಬ್ಲೇಕ್‌ಮಾರ್ಕೆಟ್ ಮಂಗಳೂರಲ್ಲಿ ನಡೆದ ಹಾಗೆಲ್ಲ ಟ್ಟರೂ ಉಡುಪಿಯಲ್ಲಿ ಮಾತ್ರ ಇನ್ನೂ ಅಮಲಿನಲ್ಲಿದೆ. ಕಾರಣವೇನೆಂದೋ ತಿಳಿಯದು.

ಕುಂದಾಪುರದಲ್ಲಿ ಶ್ರೀ ರಾಮನವಮಿ ಮಹೋತ್ಸವವು:— ಕುಂದೇಶ್ವರ ದೇವಸ್ಥಾನದಲ್ಲಿ ತಾ 25-3-44ರಿಂದ ತಾ 2-4-44ರ ತನಕ ಶ್ರೀ ಫಲಿಮಾರು ಮಠದ ಶ್ರೀಮದ್ವಿದ್ಯಾಮಾನ್ಯ ತೀರ್ಥ ಶ್ರೀ ಪಾದಂಗಳವರಿಂದ ಜರಗಿಸಲ್ಪಡುವುದು. ಪ್ರತಿದಿನ ಬೆಳಗ್ಗೆ, ಸಂಜೆ, ರಾತ್ರಿ ಪೂಜೆ, ರಾಮಾಯಣ ವಾಚನ, ಭಾಷಣ, ಹರಿಕಥಾ ಕಾಲಕ್ಷೇಪಾದಿ ವಿವಿಧ ಕಾರ್ಯಕ್ರಮಗಳಿರುವವು. ಈ ಸಮಾರಂಭಕ್ಕೆ ಬಂದು ಶ್ರೀ ರಾಮಚಂದ್ರ ದೇವರ ಪರಮಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಭಕ್ತವೃಂದಕ್ಕೆ ಶ್ರೀ ಮಠದ ಅಧಿಕಾರಿಗಳ ಅಪೇಕ್ಷೆಯಿದೆ. ಶ್ರೀಗಳವರ ನೇತೃತ್ವದಲ್ಲಿ ಶ್ರೀ ರಾಮನವಮಿ ಮಹೋತ್ಸವವು 1942ರಲ್ಲಿ ಮುಂಡಪ್ಪರಲ್ಲಿಯೂ 1943ರಲ್ಲಿ ಮಂಗಳೂರಲ್ಲಿಯೂ ವಿಶೇಷ ಸಂಭ್ರಮದಿಂದ ಜರಗಿತ್ತು.

ಕಾರ್ಕಳ:— ಸ್ಥಳೀಯ ಹಿಂದು ಬಾಲಿಕಾ ಪಾಠಶಾಲೆಯಲ್ಲಿ ಅಧ್ಯಾಪಕಿಯರಾಗಿದ್ದ ಶ್ರೀಮತಿ ಸುಲೋಚನಾ ಬಾಯಿಯವರ ಕೆಲವು ದಿವಗಳ ಹಿಂದೆ ಧಾರವಾಡ ಎಡ್ವೊಕೇಟ್ ಶ್ರೀ. ಯಂ. ಸಿ. ಹಿರೇಮಠರವರನ್ನು ಅಂತರ್ಜಾತಿಯ ವಿವಾಹ ಮಾಡಿಕೊಂಡರು. ಶ್ರೀಮತಿಯವರು ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಸಮಾಜಕ್ಕೆ ಸೇರಿದ ಕುಲೀನ ಮನೆತನದ ಒಬ್ಬ ಬಾಲ ವಿಧವೆಯಾಗಿದ್ದಾರೆ.

ಕಾರ್ಕಳ ಬೋರ್ಡ್ ಹೈಸ್ಕೂಲಿನ ಹಿಂದುಸ್ಥಾನಿ ಅಧ್ಯಾಪಕರಾದ ಶ್ರೀ. ಇ. ಧರ್ಮಪಾಲರವರು ಸ್ವಲ್ಪ ಸಮಯದ ಹಿಂದೆ ವಿಧುರರಾದವರು. ಈಗ ದಾನಪ್ರವೃತ್ತಿಗಳಾಗಿ ಶೀಘ್ರದಲ್ಲಿ ಸನ್ಯಾಸ ಆಶ್ರಮವನ್ನು ಸ್ವೀಕರಿಸಲಿರುವದರಿಂದ, ಅವರು ಹೈಸ್ಕೂಲಿನ ತಮ್ಮ ಅಧ್ಯಾಪಕ ವೃತ್ತಿಗೆ ರಾಜಿನಾಮೆಯನ್ನು ಬರೆದು ಕಳುಹಿಸಿರುವರು.

ಆರೂರು:— ಆರೂರು ಗ್ರಾಮದ ಹೆಸರಾಂತ ರೈತರಲ್ಲಿ ಒಬ್ಬರಾಗಿದ್ದು, ವೈಶ್ಯವಾಣಿ ಸಮಾಜದ ಉತ್ತಮ ಮನೆತನದಲ್ಲಿ ಜನ್ಮವೆತ್ತಿ, ಜನಪ್ರಿಯರಾಗಿದ್ದ ಶ್ರೀ ಆರೂರು ಅಣ್ಣಯ್ಯ ಯಾನೆ ಲಕ್ಷ್ಮಣ ಶೆಣೈಯವರು ತಾರೀಖು 6-3-44ರಲ್ಲಿ ಎಪ್ಪತ್ತೆಂಟನೆಯ ವಯಸ್ಸಿನಲ್ಲಿ ಪರಂಧಾಮವನ್ನೈದಿದರು ಎಂದು ತಿಳಿಸಲು ಖೇದಪಡುತ್ತೇವೆ. ಮೃತರ ಆತ್ಮಕ್ಕೆ ಶಾಂತಿದೊರಕಲಿ.

ಬೈಲೂರು:— ಕೇಂದ್ರಕ್ಕೆ ಸೇರಿದ ಬೋರ್ಡ್ ಹ್ಯಾಯರ್ ಎಲಿಮೆಂಟರಿ, ಬಿ. ಇ. ಮಿಶನ್, ಮತ್ತು ಬೋರ್ಡು ಹಿಂದ ಸ್ಕೂಲ ಶಾಲೆಗಳ ಶಿಕ್ಷಕರು ವಿದ್ಯಾರ್ಥಿಗಳು ಒಂದಾಗಿ ತಾ 11-3-44ನೇ ಶನಿವಾರ ಸಾಯಂಕಾಲ ಶ್ರೀ ಕೆ. ಅಂತಯ ಶೆಟ್ರ ಅಧ್ಯಕ್ಷತೆಯಲ್ಲಿ ಹಿಂದುಸ್ಥಾನದ ಸ್ಕೌಟ್ ಸಂಘದ ಪತಿಯಿಂದ ಬೈಲೂರು ಪೇಟೆಯ ಬಳಿ ಒಂದು ಶಿಬಿರಾಗ್ನಿಯನ್ನು ಜರಗಿಸಿದರು. ಪ್ರಕೃತಿದ ರಾಜಕೀಯ ಮತ್ತು ಸಾಮಾಜಿಕ ಮಾತಾವರಣದ ಮೇಲೆ ಚತುರಾಮಣಿ ಪ್ರಸಂಗ, ಭೀಷ್ಮ ಪ್ರತಿಜ್ಞೆ, ಪ್ರಹಸನ, ಕುಣಿತ, ಕೋಲಾಟ ಇವೇ ಮೊದಲಾದ ವಿನೋದಾವಳಿಗಳಿಂದ ನೆರೆದು ಬಂದ ಮಹನೀಯರನ್ನು ಆನಂದಗೊಳಿಸಿದರು.

"ಬಂಟರ ಯಾನೆ ನಾಡವರ ಏಳಿಗೆ ನಿಧಿ" ಮುಂಬಾಯಿ

ಮಾ। ರಾ। ಎಮ್. ಎಸ್. ಹೆಗ್ಡೇರ ಸಂದರ್ಭೋಚಿತದ ಸೂಚನೆ ಮೇರೆಗೂ ಶ್ರೀಯುತರುಗಳಾದ ಎಮ್. ಸೀತಾರಾಮ ಸೆಟ್ರು ಬಿ. ಎ., ಕೆ ವಿಠಲ ಸೆಟ್ರು, ಟಿ. ಎಸ್. ಹೆಗ್ಡೇರು ಬಿ. ಎ. ಎಲ್. ಎಲ್. ಬಿ, ಇವರುಗಳ ಅಪೇಕ್ಷೆ ಮೇರೆಗೂ, ಶ್ರೀಯುತರುಗಳಾದ ಸೂಡ ವೀರಪ್ಪ ಸೆಟ್ರು, ಮಡಂಬು ಉಜ್ಜಣ್ಣ ಸೆಟ್ರು, ಮೂಲ್ಕಿ ನಾಲಿದಡಿ ಕಾಳು ಸೆಟ್ರು, ಪಿಲಾರು ಅಣ್ಣು ಸೆಟ್ರು ವಗೈರೆಯವರ ಪ್ರೋತ್ಸಾಹದಿಂದಲೂ, ಮತ್ತು ಇನ್ನಿತರ ಹಲವು ಸ್ವಜಾತಿ ಗೃಹಸ್ಥರ ಕೋರಿಕೆಯ ಮೇರೆಗೂ, ಇದೇ ಮಾರ್ಚಿ ತಾ. 5ಕ್ಕೆ ರಾಣಿ ಭಾಗದಲ್ಲಿ ಡಾಕ್ಟರ್ ಎಸ್. ವಿಶ್ವನಾಥ ಅದ್ಯಂತಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಸೇರಿ ಮೇಲ್ಕಾಣಿಸಿದ ನಿಧಿಯು ಸ್ಥಾಪಿಸಲ್ಪಟ್ಟಿರುವುದು. ಸದ್ರಿ ಸಭೆಯಲ್ಲಿ ಇದಕ್ಕಾಗಿ 51 ಜನರ ಒಂದು ವರ್ಕಿಂಗ್ ಕಮಿಟಿಯನ್ನೇರ್ಪಡಿಸಿರುವುದು. ಈ ಕೆಳಗಿನ ಮೆಂಬರರನ್ನು ಅದರ ಉದ್ಯೋಗಸ್ಥರನ್ನಾಗಿ ಆರಿಸಿರುವುದು.

1. ಮಾ| ರಾ| ಮೂಲ್ಕಿ ನಾಲಿದಡಿ ಕಾಳು ಸೆಟ್ರು, ಅಧ್ಯಕ್ಷರು. 2. ಮಾ| ರಾ| ಮಡಂಬು ಉಜ್ಜಣ್ಣ ಸೆಟ್ರು, 3. ಮಾ| ರಾ| ಸೂಡ ಸಂಜೀವ ಸೆಟ್ರು—ಜತೆ ಉಪಾಧ್ಯಕ್ಷರು. 4. ಮಾ| ರಾ| ಕೆ. ವಿಟ್ಠಲ ಸೆಟ್ರು 5. ಮಾ|ರಾ| ಎಮ್. ಪ್ರತಾಪ ಕುಮಾರ ಸೆಟ್ರು—ಗೌ| ಜೊತೆಕೋಶಾಧಿಕಾರಿಗಳು. 6. ಮಾ| ರಾ| ಸೂಡ ವೀರಪ್ಪ ಸೆಟ್ರು 7. ಬ್ರಹ್ಮಾವರ ನಾರಾಯಣ ಸೆಟ್ರು B. A. ಗೌ| ಜತೆ ಕಾರ್ಯದರ್ಶಿಗಳು.

ಈ ... ಕ್ರಮ ನಿಬಂಧನೆಗಳನ್ನು ತಯಾರಿಸುವುದಕ್ಕಾಗಿ ಈ ಕೆಳಗಿನ 7 ಜನರ ಕಮಿಟಿಯನ್ನು ಏರ್ಪಡಿಸಿರುವದು. ಶ್ರೀಯುತರುಗಳಾದ ಎಮ್. ಎಸ್. ಹೆಗ್ಡೇರು ಟಿ ಎಸ್. ಹೆಗ್ಡೇರು B. A. L. L. B. 3 ಎಮ್. ಸೀತಾರಾಮ ಸೆಟ್ರು B A. 4. ಕೆ. ಶ್ಯಾಮ ಸೆಟ್ರು. 5. ಎಸ್ ನಾಗಪ್ಪಸಟ್ರು. 6. ಕೆ. ಶಾಂತಪ್ಪ ಸೆಟ್ರು, 7. ಬಿ. ನಾರಾಯಣ ಸೆಟ್ರು B. A.

ಜಾತಿಯ ಏಳಿಗೆಯನ್ನು ಹಾರೈಸಿ, ಜಾತಿಯ ಬಡಬಗ್ಗರಿಗೆ ಎಲ್ಲಾ ವಿಧಾನಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸಹಾಯ ಮಾಡುವುದೂ, ಜಾತಿಯೊಳಗಣ ಒಗ್ಗಟ್ಟು ಪರಸ್ಪರ ಪ್ರೀತಿ ಹುಟ್ಟಿಸುವುದೂ, ಜಾತಿಯ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದೂ ಈ ನಿಧಿಯ ಮುಖ್ಯ ಉದ್ದೇಶವಾಗಿರುವುದು. ಅದ್ದರಿಂದ ಮುಂಬಾಯಿಯಲ್ಲಿ ವಾಸವಾಗಿರುವ ಪ್ರತಿಯೊಬ್ಬ ... ವರ್ಷ 1ಕ್ಕೆ ರೂ. 1ರಂತೆ ಚಂದಾ ಹಣ ಕೊಟ್ಟು ಮೆಂಬರನಾಗಿ ಸೇರಿ ಈ ಸಾರ್ವಜನಿಕ ಸಂಸ್ಥೆಯನ್ನು ಅಭಿವೃದ್ಧಿಗೊಳಿಸಬೇಕಾಗಿ ನಮ್ಮ ವಿಜ್ಞಾಪನೆ. ಈ ನಿಧಿಯನ್ನು ಸ್ಥಾಪಿಸಲು ಅತೀ ಶ್ರದ್ಧೆಯಿಂದ ಶ್ರಮಪಟ್ಟು ಕೆಲಸ ಮಾಡಿದ ಮಾ| ರಾ| ಎಮ್. ಎಸ್. ಹೆಗ್ಡೇರು ಅಭಿವಂದನೀಯರು.

ಈ ವಾರದ

'ಅಂತರಂಗ'

ವಾರಪತ್ರಿಕೆಯಲ್ಲಿ

ತಾಳಮೇಳ— ಇವುಗಳಿಗಗ್ರ ಪೂಜೆ— ತುಂತುರು— ಅರ್ಥವಿಲ್ಲದ ವ್ಯಥಾಲಾಪ (ವಿದ್ಯಾರ್ಥಿಭರ ಪಕ್ಷದ ವಾದವಿವಾದ) ದಿವಾನ್ ಬಹದೂರ್ (ಕಾಲ್ಪನಿಕ ಕತೆ) ಮನೆಮುದುಕ ಮಾಲವೀಯ (ವ್ಯಕ್ತಿ ಚಿತ್ರ) ಗೃಹರಂಗವೋ?- ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ— ನಾಟ್ಯಕಲಾ ಚಪಲ ಸಾಧನಾ— ವಾರಭವಿಷ್ಯ ಇತ್ಯಾದಿ, ಇತ್ಯಾ .

ಬಿಡಿ ಸಂಚಿಕೆಗೆ 0—1—6

ವಾರ್ಷಿಕ ಚಂದಾ ರೂ. 4—8—0

ಅಂತರಂಗ, ಉಡುಪಿ.

(೨ನೇ ಪುಟದಿಂದ ಮುಂದುವರಿದುದು)

ಳನ್ನೂ ಹಾಕಿಲ್ಲವೆಂದು ಅವರಂದರು. ಹಾಗಾದರೆ ದಹನ ಧ್ವಂಸ ಕ್ರಿಯೆಗಳು ಹೇಗೆ ನಿರ್ಮಾಣಗೊಂಡವೆಂಬ ಪ್ರಶ್ನೆಯೇಳಬಹುದು. ಇದಕ್ಕೆ ನಾನು ಜೈಲಿನಲ್ಲಿರುವಾಗ ತಿಳಿದುಬಂದ ಕಾರಣವಿದು:–1942ನೇ ಅಗೋಸ್ತು 9ರಲ್ಲಿ ಮಿ. ಅಮೆರಿಯವರೊಂದು ಬ್ರಾಡ್‌ಕಾಸ್ಟ ಭಾಷಣವಿತ್ತು. ಈ ಬಾರಿ ಕಾಂಗ್ರೆಸಿನದು ಹಿಂಸಾತ್ಮಕ ಧ್ವಂಸ ಕಾರ್ಯವೆಂದು, ತಿಳಿಸಿ ಅದರ ಕಾರ್ಯಕ್ರಮಗಳನ್ನೆಲ್ಲಾ ವಿವರವಾಗಿ ವರ್ಣಿಸಿ ಹೇಳಿದರು. ಇದು ಕಾಂಗ್ರೆಸಿನ ಯಥಾರ್ಥ ಕಾರ್ಯ ರೀತಿಯೆಂದು ಕೆಲವು ಕಾಂಗ್ರೆಸಿಗರು ನಂಬಿ ತದನುಗುಣವಾಗಿ ವರ್ತಿಸಿದರು". ಶ್ರೀ. ಚೆಟ್ಟಿಯಾರರ ಈ ಮಾತುಗಳು ಸರಕಾರೀ ಸದಸ್ಯರಿಗೆ ಮುಳ್ಳಿನಂತೆ ಚುಚ್ಚಿ ಅವರು 'ಹೆಹೆ' ಎಂದು ಪರಿಹಾಸ್ಯದ ನಗೆ ಬೀರಿದರು. ಗೃಹಮಂತ್ರಿ ಸರ್. ಮೆಕ್ಸ್‌ವೆಲ್ಲರು-ಪುಣ್ಯಾತ್ಮ-ಆ ತನಕ ಸಭೆಗೆ ಬಂದಿರಲಿಲ್ಲ. ಅಧಿಕಾರೀ ಸದಸ್ಯರು ನಗುವದಕ್ಕೂ ಇವರು ಸಭಾಭವನದೊಳಗೆ ಹೋಗುವದಕ್ಕೂ ಗಂಟುಬಿತ್ತು. ಏನು, ಯಾಕೆ, ಎಂಬುದನ್ನರಿಯದ ಆ ಬಿಳಿ ಮೊಗವೂ, 'ಹೆಹೆಹೆ' ಎಂದು ಚೆಟ್ಟಿಯಾರರ ಕಡೆಗೆ ವ್ಯಂಗ್ಯ ನಗೆಬೀರಿತು. ಇಂತಹ, 'ಗುಂಪಿನೊಡನೆ ಗೋವಿಂದಾ'ಗಳು ಎಸೆಂಬ್ಲಿಯಲ್ಲ ಬೇಕಾದಷ್ಟು.

ಅಂಕೆಯಿಲ್ಲದ ಬಿಂಕ

ದೇಶ ರಕ್ಷಣಾ ಕಾನೂನು ಎಸೆಂಬ್ಲಿ ಭವನಗಳೊಳಗೆ ಕಾಲಿಡುವಂತಿಲ್ಲ. ಕೌನ್ಸಿಲ್ ಗೃಹಗಳಲ್ಲಿ ನಡೆಯುವಂತಹ ಕಾಯಿದೇ ಭಂಗಗಳು ಹೊರಗೆಲ್ಲಿಯಾದರೂ ನಡೆದರೆ ವರುಷಾವಧಿ ಕಾರಾಗೃಹ ಸೇರಬೇಕಾದೀತು. ಮೊನ್ನೆ ಕೇಂದ್ರ ಎಸೆಂಬ್ಲಿಯಲ್ಲಿ ದೇಶರಕ್ಷಣಾ ಕಾನೂನಿನ ದುರುಪಯೋಗದ ಕುರಿತು ತೀವ್ರ ಖಂಡನೆ ಮಾಡುತ್ತಾ ಮುಸ್ಲಿಂ ಲೀಗಿನ ಸರ್. ಯಾಮಿನ್ ಖಾನರು, ಕೌನ್ಸಿಲ್ ಓಫ್ ಸ್ಟೇಟ್ ಸದಸ್ಯ ಮಿ. ಹುಸ್ಸೇನ್ ಇಮಾಮರು ತಾನು 'ಯುದ್ಧ ಬೋಂಡ್'ಗಳನ್ನು ಪಡಕೊಳ್ಳಲಿಲ್ಲ; ಅನ್ಯರು ಪಡಕೊಳ್ಳದಂತೆಯೂ ಆತಂಕಿಸಿದರು ಎಂಬ ಕಾರಣಕೊಟ್ಟು, ಅವರ ಮೇಲೆ ನೋಟಿಸು ಜ್ಯಾರಿಯಾದ ನಿದರ್ಶನ ಕೊಟ್ಟಾಗ ಯುರೋಪಿಯನ್ ಸದಸ್ಯ ಮಿ. ಗ್ರಿಫಿತರು ಪ್ರಶ್ನಿಸಿದರು. "ಅನ್ಯರು ಯುದ್ಧ ಬೋಂಡುಗಳನ್ನು ಪಡಕೊಳ್ಳದಂತೆ ಯಾರೇಕೆ ಆತಂಕಿಸಬೇಕು?". ಕೂಡಲೇ ಪ್ರಜಾಪ್ರತಿನಿಧಿ ಸದಸ್ಯರು ಸಿಟ್ಟುಗೊಂಡು ಪ್ರಶ್ನಿಸಿದರು: "ಆತಂಕಿಸಬಾರದೆಂದೇನು?" ಸರ್. ಯಾಮಿನ್ ಖಾನರು ಇನ್ನಷ್ಟು ಗಟ್ಟಿ ಸ್ವರದಿಂದ ಮತ್ತಷ್ಟು ಸ್ಪಷ್ಟವಾಗಿ ಹೇಳಿದರು: "ಯುದ್ಧ ಸಾಲಕ್ಕೆ ಹಣಹಾಕುವದು ಲಾಭಕರವೋ ಎಂದು ನನ್ನ ಮಿತ್ರನೊಬ್ಬ ಕೇಳಿದರೆ 'ಅಲ್ಲ' ಎಂದು ಹೇಳುವ ಸ್ವಾತಂತ್ರ್ಯಾಧಿಕಾರ ನನಗಿದೆ". ಇಂತಹ ಮಾತನ್ನು ಬೇರೆ ಕಡೆಗಳಲ್ಲಾರಾದರೂ ಹೇಳುತ್ತಿದ್ದರೆ ಅವರ ಬಾಯಿಗೆ ಬೀಗ, ಕೈಗೆ ಕೋಳಬೀಳಲು ಮಿನಿಟು ತಡವಿರಲಿಲ್ಲ!

ತಂತಮ್ಮ ಭಾಷೆಯಲ್ಲಿ ತಂತಮ್ಮ ಸಕ್ತ್ಯನುಸಾರ ಕೂಡಿದಷ್ಟು ಬೈಯ್ಯಲಾಗುವದೊಂದೇ ಭಾರತೀಯ ಎಸೆಂಬ್ಲಿಗಳಿಗಿರುವ ಭಾಗ್ಯ! ಅವರಿವರ ಮಾತೇಕೆ-ನಮ್ಮ ದಕ್ಷಿಣ ಕನ್ನಡದಿಂದ ಕೇಂದ್ರ ಎಸೆಂಬ್ಲಿಗೆ ಹೋಗಿರುವ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ಇಲ್ಲಿಯ ನಂ. 1ನೇ ಬೈಯನ್ನು ಅಲ್ಲಿ ಬಿಟ್ಟುಬಂದಿದ್ದಾರೆ: "ನಿಮ್ಮ ಆಯವ್ಯಯ ಪಟ್ಟಿಗೆ ಚಿಕ್ಕಾಸಿನ ಬೆಲೆ ಕೊಡಲಾರೆ"-ಎಂದು ಬಿಟ್ಟರವರು 'ಚಿಕ್ಕಾಸು ಬೆಲೆ' 'ಮೂರು ಕಾಸಿನವ'-ಇವೆಲ್ಲಾ ನಮ್ಮಲ್ಲಿಯ ಅಮೂಲ್ಯ ಬೈಗಳು.

ಮುಖಕ್ಕೇರಿಸಿಯೇ ಬಿಟ್ಟರು.

ಎಲ್ಲಕ್ಕಿಂತ ಸ್ವಾರಸ್ಯವಿರುವ–ಬಯಲಾಟಗಳಲ್ಲಿ ಮಾತ್ರ ಕಾಣಲು ಸಾಧ್ಯವಿರುವ-ಒಂದು ಘಟನೆ ಇದೇ ತಾ 17ನೇ ರಾತ್ರಿ ಬಂಗಾಳ ಎಸೆಂಬ್ಲಿಯಲ್ಲಿ ನಡೆಯಿತು. ಒಟ್ಟು ಅಧಿವೇಶನ ನಡೆಯುತ್ತಿತ್ತು. ಅಧ್ಯಕ್ಷರು ಕಡಿತದ ಸೂಚನೆಗಳನ್ನು ಓಟಿಗೆ ಹಾಕಲು ಏಳುವನೆನ್ನುವಾಗಲೇ ಕೆಲವು ಮಂತ್ರಿ ಪಕ್ಷದ ಸದಸ್ಯರೆದ್ದು ಅಧ್ಯಕ್ಷರೊಡನೆ ದೂರುತ್ತಾ ತೋರಿಸಿದರು:– "ನೋಡಿ, ವಿರುದ್ಧ ಪಕ್ಷದ ಇಬ್ಬರು ಮೆಂಬರರು ನಮ್ಮ ಬೆಂಚಿಗೆ ಬಂದು ನಮ್ಮ ಕಡೆಯ ಸದಸ್ಯರೊಬ್ಬರೊಡನೆ ಸೇರಿ ಕುಳಿತಿದ್ದಾರೆ". ತಪ್ಪು ಸ್ಥಾನ ಹಿಡಿದವರು ತಮ್ಮ ಸ್ಥಾನಕ್ಕೇನೇ ಹೋಗಬೇಕೆಂದು ಅಧ್ಯಕ್ಷರ ಆಜ್ಞೆಯಾಯಿತು. ಅಷ್ಟರೊಳಗೆ ಸರಕಾರೀ ಕಡೆಯ ಮೂರು ನಾಲ್ಕು ಸದಸ್ಯರು ಅಸ್ತಳಕ್ಕೆ ಧಾವಿಸಿ ಬಂದು ನೂಕಾಟ, ಜಗ್ಗಾಟ, ಹೊಡೆತಗಳ ಗಲಭೆಯೋ ಗಲಭೆ! ಪಕ್ಷ ಪ್ರಮುಖರು ಆ ಗಲಭೆಯ ಸ್ಥಳಕ್ಕೋಡಿ ಜಟ್ಟಿಗಳ ಮಲ್ಲ ಯುದ್ಧವನ್ನು ಹೇಗೂ ಬಿಡಿಸಿದರು. ಹೊಡೆತ ತಿಂದವರು ವಿರುದ್ಧ ಪಕ್ಷದ ಮಿ. ಎ. ಎಫ್. ಎ. ಝುಮಾನ್ ಎಂಬವರು; ಕೊಟ್ಟವರು ಸರಕಾರೀ ಕಡೆಯ ಮಿ. ಕೆ. ನೂರುದ್ದೀನ್. "ನಮ್ಮ ಕಡೆಯ ಓರ್ವ ಮೆಂಬರರು ಮರವೆಯಿಂದ ಹೋಗಿ ಅವರ ನಡುವೆ ಕುಳಿತಿದ್ದರು; ಅವರನ್ನು ಈ ಕಡೆಗೆ ಕರೆಯಲಿಕ್ಕಾಗಿ ನಾನು ಹೋದೆನು. ಅಧ್ಯಕ್ಷರ ಆಜ್ಞೆಯಾದೊಡನೆ ನಾನು ಎದ್ದೆ; ಆದರೆ ನನ್ನ ಪಕ್ಷದಲ್ಲಿ ಕುಳಿತಿದ್ದ ಸರಕಾರೀ ಮೆಂಬರರು ಏಳಲು ಬಿಡಲಿಲ್ಲ. ಅಷ್ಟರಲ್ಲಿ ಬೇರೆ ಸರಕಾರೀ ಮೆಂಬರರೋಡಿಬಂದು ನನ್ನನ್ನು ದೂಡಿ ಹೊಡೆದರು" ಎಂದು ಪೆಟ್ಟುತಿಂದವರ ಹೇಳಿಕೆ. "ಅಧ್ಯಕ್ಷರ ಅಪ್ಪಣೆಯ ನಂತರವೂ ವಿರುದ್ಧ ಪಕ್ಷದ ಮೆಂಬರರು ಕದಲದಿದ್ದುದರಿಂದ ನಾನು ಸರಕಾರೀ ಮೆಂಬರರ ಸಹಾಯಾರ್ಥವಾಗಿ ಅಲ್ಲಿ ಹೋದೆ. ಆಗ ವಿರುದ್ಧ ಪಕ್ಷದ ಮೆಂಬರರು ನನ್ನನ್ನು ದೂಡಿ ಹೊಡೆಯಲು ಕೈಯೆತ್ತಿದರು. ನಾನವರನ್ನು ಪ್ರತಿಯಾಗಿ ದೂಡಿ ಮುಖಕ್ಕೊಂದು ಬಾರಿಸಿದ್ದು ನಿಜ" ಎಂದು ಹೊಡೆದವರ ವಾಗ್ಮೂಲ. ಅಂತೂ ಕೊನೆಗೆ ಅಧ್ಯಕ್ಷರ ವಿನಂತಿಯಂತೆ ಝುಮಾನ್ ಮತ್ತು ನೂರುದ್ದೀನ್ ಇಬ್ಬರೂ ಸಭಾಸ್ಥಳದ ಮಧ್ಯಕ್ಕೆ ಬಂದು, ಇಡೀ ಸಭೆಯ ಪ್ರಚಂಡಕರತಾಡನಗಳ ನಡುವೆ ಪರಸ್ಪರ ಹಸ್ತಲಾಘವ ಮಾಡಿಕೊಂಡು ಜಗಳ ರಾಜಿಯಾಯಿತೆನ್ನಿ! ತಾ 18ರಲ್ಲೇ ಬಂಗಾಳ ಎಸೆಂಬ್ಲಿಯಲ್ಲಿ ಅಧ್ಯಕ್ಷರ ಮುಂದೆ ಸರಕಾರೀ ಪಕ್ಷದ ನಾಯಕರ ಮತ್ತೊಂದು ದೂರು 'ತಮ್ಮ ಕಡೆಯ ಸದಸ್ಯರೊಬ್ಬರು ಹೆರ್ರಿಸನ್ ರಸ್ತೆಯಲ್ಲಿ ಬರುತ್ತಿದ್ದಾಗ ವಿರುದ್ಧ ಪಕ್ಷದ ಓರ್ವ ಮೆಂಬರು ಅವರನ್ನು ಕಾರುಹತ್ತಿಸಿ ಮತ್ತೊಬ್ಬ ಸದ್ರಿ ಪಕ್ಷದ ಮೆಂಬರರ ಮನೆಗೊಯ್ದು ಅಲ್ಲಿ 10ಘಂಟೆಯವರೆಗೂ (ಮತಗಣನೆ ಮುಗಿಯುವವರೆಗೆ) ಬಲವಾದ ಕಾವಲಲ್ಲಿ ಬಂಧಿಸಿಟ್ಟರು. ವಿಚಾರಣೆಯಾಗಬೇಕು' ಎಂದವರ ಪ್ರಾರ್ಥನೆ. ಅಧ್ಯಕ್ಷರು ವಿಚಾರಣೆ ಬಾಕಿಯಿಟ್ಟಿದ್ದಾರೆ. ಎಂತೆಂತಹ ಪಿಕಲಾಟಗಳು!

ಮಾನ್ಯ ಮೆಂಬರರುಗಳ ಮರ್ಜಿ ಹೀಗೆ! ಸ್ವಚ್ಛಂದ ವರ್ತನೆ, ಬೇಜವಾಬ್ದಾರೀ ಮಾತುಗಳನ್ನಾಡುವವನಿದ್ದರೆ ಅಂಥವನಿಗೆ 'ಎಸೆಂಬ್ಲಿಗೆ ಹೋದವ' ಎಂಬ ಬಿರುದು ಕೊಡುವಿರಾದರೆ ಕೊಡಿ-ತಪ್ಪಾಗದು!

ಅಪೂರ್ವ ನಾಟ್ಯ ಪ್ರದರ್ಶನ

ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರು

ಮಲಬಾರಿನ ಆನಂದ ಶಿವರಾಮರೊಡನೆ

ಉಷಾರಾಣಿ, ಸೀತಾದೇವಿ, ಗಜಲಕ್ಷ್ಮಿ, ವನಜಾಕ್ಷಿ,

ಮೊದಲಾದ ಸುಂದರ ನರ್ತಕಿಯರೊಡನೆ

ನೃತ್ಯ ಭಾರತಿ ಆರ್ಕೆಸ್ಟ್ರಾ ಹಿಮ್ಮೇಳನದಲ್ಲಿ

ಭಾರತೀಯ ನೃತ್ಯಗಳನ್ನು

ಪ್ರದರ್ಶಿಸುವರು

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹೋಲಿನಲ್ಲಿ--ಮಾರ್ಚಿ ೨೪-೨೫, ಶುಕ್ರವಾರ, ಶನಿವಾರ. ವೀರಾಜಪೇಟೆ–ಹೈಸ್ಕೂಲ್ ಹೋಲಿನಲ್ಲಿ–ಮಾರ್ಚ್ ೨೬ ರವಿವಾರ. ಸೋಮವಾರಪೇಟೆ--ಮಿಡ್ಲ್ ಸ್ಕೂಲ್ ಹೋಲಿನಲ್ಲಿ--ಮಾರ್ಚಿ ೨೭ ಸೋಮವಾರ. ಪುತ್ತೂರು--ಸ್ಕೂಲ್ ಹೋಲಿನಲ್ಲಿ-ಏಪ್ರಿಲ್ ೨ ರವಿವಾರ. ಮಂಗಳೂರು–ಬಾಲಾಜಿ ಥಿಯೇಟರಿನಲ್ಲಿ–ಏಪ್ರಿಲ್ ೭ ಶುಕ್ರವಾರ ಉಡುಪಿ–ರಾಮಕೃಷ್ಣ ಥಿಯೇಟರಿನಲ್ಲಿ-ಏಪ್ರಿಲ್ ೯ ರವಿವಾರ.

ಪ್ರತಿದಿನ ಎರಡು ಆಟಗಳು ಸಾಯಂಕಾಲ ೭ ಮತ್ತು ೧೦ಕ್ಕೆ

NOTICE

The Bombay Life Assurance Company, Limited.

Notice having been given of the loss of Policy No. 97946 on the life of Mr. K. Prabhakar Narahari Kamath a duplicate policy will be issued unless objection is lodged with us within one month from this date.

Bombay, 16-3-'44. } Jyotendra L. Mehta. *Managing Director.*

THE BEST PREVENTIVE IN EPIDEMICS OF CHOLERA

"BHUVANENDRA"

CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.

For Children: 1 to 2 drops with the said decoction

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಓ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920)

Registered Office Court Road UDIPI South Canara District

Business Offices Udipi, Mangalore, Katapadi, Kanhangad and Kinnigoli, South Canara.

Authorised and Issued Capital Rs 2,00,000/-

Subscribed and Paid up Capital Rs 2,00,000/-

Reserve Funds. Rs 1,75,653/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty-three years' reliable banking Service stands to our credit.

For further particulars please call at or apply to the nearest office.

Dated 31-10-1943

ದಿ ಜ್ಯುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸು: ಬೊಂಬಾಯಿ

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ಉಡ್ಪಿಯ ಕೋರ್ಟರೋಡಿನಲ್ಲಿ ಇವರ ಚೀಫ್ ಏಜನ್ಸಿ ಆಫೀಸು ಇದೀಗಲೇ ಪ್ರಾರಂಭವಾಗಿದೆ

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರು: ಬೇಕಾಗಿದ್ದಾರೆ.

ಪಿ. ಡಿ. ನಾಯಕ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Company. Ltd.,
BOMBAY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದಂಡಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಳಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಪೀಪಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ನಿರಾಳ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ, ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ.—ದಾವಣಗೇರಿ ಪ್ರೆಸ್. ಆರ್ ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ಸಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅನೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೬ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೧೮ ದಿವಸಗಳಿಗೆ ಬರುವವು. ಅಂದರೆ ಕೇವಲ ೧ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ**

FOR SAFETY & SERVICE
THE VIJAYA BANK, LTD.,

Head office: MANGALORE

Branches at:—Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ

ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು:— ಮಂಗಳೂರು.

ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.

ನಮ್ಮ ಸುವರ್ಣ ಮಹೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟ ಪ್ರಾರಂಭವಾಗಿದೆ. ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2—8—0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6

Estd. 192[illegible] ನೇ ಇಸವಿ.

NAVAYUGA
ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೩೦

FOUNDER Sri. A. B. Shetty.

Vol. 24 No. 30

NAVAYUGA— Kannada Weekly —UDIPI, S. I.

ಉಡುಪಿ • 30—3—1944 • ಮಂಗಳೂರು.

ಹಿರಿಯರ ಪ್ರಪಂಚದ ಹೊಸ ಪ್ರಕಟಣೆ

—ಪ್ರಕಾಶ—

ಸಾಮಾಜಿಕ—ರಾಜಕೀಯ ನಾಟಕ.

ಮೂಲ ಲೇಖಕರು:—ಶೇಟ್ ಗೋವಿಂದ ದಾಸ್, ಎಂ. ಎಲ್. ಎ. (ಸೆಂಟ್ರಲ್)

ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ.

ಬೆಲೆ ರೂ. 1-12-0. ಟ. ಖ. 0-4-0

ರೂ. 2ನ್ನು ಮನಿಯಾರ್ಡರ್ ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳುಹಿಸಲಾಗುವದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹಿರಿಯರ ಪ್ರಪಂಚದ ಇನ್ನೊಂದು ಪ್ರಕಟಣೆ

ಬಾರತೀಯ ಕತೆಗಳ

ಸಣ್ಣ ಕತೆಗಳ ಸಂಗ್ರಹ

ಮೂಲ ಲೇಖಕರು – ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್. ಲಾ., ಎಫ್. ಆರ್. ಎಸ್. ಎಲ್.,

ಅನುವಾದಕರು:— ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರು.

ಬೆಲೆ 0-14-0 ಟ. ಖ. 0-2-0

ರೂ. 1/ನ್ನು ಮನಿಯಾರ್ಡರು ಮಾಡಿದರೆ ಯಾ ಅಷ್ಟೇ ಬೆಲೆಯ ಸ್ಟಾಂಪುಗಳನ್ನು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮೂಲಕ ಕಳುಹಿಸಲಾಗುವದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

Lest History Should Repeat Itself

"I am the monarch of all that I survey" that was Alexander the Great who said it. He had conquered all the lands that he had known and seen and brought the Greek Empire to the zenith of its glory and power. But his sudden death in the prime of his life brought about the fall of that vast Empire and to-day Greece itself has lost even its freedom.

— You are the monarch of your family and are solely responsible for its present and future status and lest History should repeat itself you should insure your life.

The Canara Mutual Assurance Co., Ltd.,

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಅವಲಂಬಿತರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪನಿ ಲಿ.

ಇವರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ —ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದು ದಡು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಪ್ರೇಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ. ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ, ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮುನೆಯ ಔಷಧಿಗಳು ದೊರೆಯುತ್ತವೆ.

ಕಾಗದ ಬರೆದಲ್ಲಿ ತಕ್ಕವಾದ ಔಷದಿ ಚುನಾಯಿಸಿ ರವಾನಿಸಬಹುದು.

ಕೆಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಉಡುಪಿ ಏಜಂಟರು.- ನವಭಾರತ ಬುಕ್ ಡಿಪ್ಪೋ, ಸಂತೆಕಟ್ಟೆ. ಉಡುಪಿ.

ಭಾರತದೊಳಗಡೆ ಜಾಪಾನೀ ಸೇನೆ ನುಗ್ಗಿತು!

ಯುದ್ಧಾರಂಭವಾದಂದಿನಿಂದ ಹಿಂದುಸ್ಥಾನವು ಕಾಣುತ್ತಿದ್ದ ಭೀಕರ ಕನಸು ನಿಜವಾಗುವ ಕಾಲ ಬಂತು; ಜಾಪಾನರು ಹಿಂದುಸ್ಥಾನದ ಗಡಿಯೊಳಗೆ ನುಗ್ಗಿದರು! ಚರಿತ್ರಾಪೂರ್ವ ಘಟನೆ; ರೋಮಾಂಚಕಾರೀ ಸನ್ನಿವೇಶ; ಅನೇಕಾಶ್ಚರ್ಯಭರಿತ ವಿದ್ಯಮಾನ. ಅನ್ಯ ದೇಶಗಳಲ್ಲಾದರೆ ಗಡಿಯೊಳಗೆ ವೈರಿ ಸೇನೆಯು ಒತ್ತಡ ಪ್ರಾರಂಭವಾಗುವಾಗ, ದೇಶೀಯರ ರಕ್ತದೊತ್ತಡವೂ ಅಷ್ಟೇ ಬಲಗೊಳ್ಳುವ ಸಂಪ್ರದಾಯ. ಹಿಂದುಸ್ಥಾನದಲ್ಲಿ? ಪಾರತಂತ್ರ್ಯದ ಕಗ್ಗತ್ತಲಲ್ಲಿ ಸಿಡಿಯುವ ಗುಂಡಿನ ಬೆಂಕಿ, ಉತ್ಸವದ ಬಿರುಸುಬಾಣಗಳೊಳಗಿನ ವ್ಯತ್ಯಾಸವನ್ನರಿಯುವದು ಕಷ್ಟ. ಜನತೆ ಮಂಕಾಗಿದೆ; ಆಕ್ರಮಣವೊಂದು ವಾರ್ತೆಯಾಗಿದೆ.

ಹೊಸ ಘಟನೆ.

ಹಿಂದುಸ್ಥಾನ ಚರಿತ್ರೆಯಲ್ಲಿ ಇದೊಂದು ಹೊಸ ಪುಟ. ಕಳೆದ ಶತಮಾನಗಳಲ್ಲಿ ಹಳೆಯ ರೀತಿಯ ಧಾಳಿಗಳ ಅನುಭವ ಹಿಂದುಸ್ಥಾನಕ್ಕಿದ್ದಿತು; ಬಾಂಬು ವಿಮಾನಗಳ, ಟ್ಯಾಂಕು ರೆಂಕಾರಗಳ ಇಂತಹ ಧಾಳಿಯು ದೇಶದ ಜೀವಮಾನದಲ್ಲಿ ಇದೊಂದೆ. 'ಜಾಪಾನರು ನುಗ್ಗಬಹುದು' ಎಂಬಿದ್ದುದು 'ನುಗ್ಗಿದರು' ಎಂಬಲ್ಲಿವರೆಗೂ ಬಂತು. ಅಸ್ಸಾಮುಗಡಿಯ ದಟ್ಟಾರಣ್ಯಗಳ ನಡುವಿನಿಂದ ಸಿಂಗಳೀಕ ವದನಗಳು ಹೊರಬಿದ್ದುವು; ಒಂದು ಭೂಖಂಡವೇ ಆದ ವಿಶಾಲ ಭೂಮಿ ಭಾರತದ ಒಂದು ಮೂಲೆಯಲ್ಲಿ ತಮ್ಮ ಕುಳ್ಳ ಹೆಜ್ಜೆಯ ಮುದ್ರೆಯೊತ್ತಲು ಸಮರ್ಥವಾದುವು! ಹಿಂದುಸ್ಥಾನವನ್ನು ಬಹುಕಾಲದಿಂದ ಆವರಿಸಿರುವ ದಾಸ್ಯದ ಕರಿಛಾಯೆಯೊಂದಲ್ಲದಿರುತ್ತಿದ್ದರೆ ಈ ಕಿರಿಮೂರ್ತಿಗಳ ಗಿಡ್ಡ ಛಾಯೆಯನ್ನು ಅವಿಲ ರಾಷ್ಟ್ರವು 'ರಾಹು ಸೋಂಕು' ಎಂಬಷ್ಟು ಕಳವಳದಿಂದ ಕಾಣುತ್ತಿತ್ತು; ಆದರೆ ಈಗ ದೇಶೀಯರ ಮನಸ್ಸಿಗೆ ಸಾಕಷ್ಟು ಬಿಸಿ ತಾಗಿದೆಯೆ? ಬಿಸಿ ತಾಗಿದೆ-ಆದರೆ ಬೇನೆಯಿದ್ದಲ್ಲಿ ಒತ್ತಿದ ಹಾಗಿದೆಯಷ್ಟೆ!

ಆಕಸ್ಮಿಕ!

ನಿಜಕ್ಕೂ ಇದೊಂದು ಮಹೇಂದ್ರಜಾಲದಂತಹ ಧಾಳಿ. ಒಂದೆಡೆಯಲ್ಲಿ ಮುಚ್ಚಿಟ್ಟಂತೆಯೇ ಇನ್ನೊಂದೆಡೆ ಕಾಣಿಸಿಕೊಳ್ಳುವ ಐಂದ್ರಜಾಲಿಕನ ಚೆಂಡು--ಈ ಜಾಪಾನರ ಗುಂಡು! ಅರಕಾನದಲ್ಲಿ ಜಾಪಾನರನ್ನ ಸೋಲಿಸಲಾಯಿತು! ಬರ್ಮದ ಎಡೆ ಪಲಯದಂತಹ ಒಳ ಪ್ರದೇಶದಲ್ಲಿ ಉತ್ತರಗಡೆಯು 11ನೇ ಸೇನೆಗಭಿಮುಖವಾಗಿರುವ ಜಾಪಾನೀ ಸೇನೆಯು 250 ಮೈಲು ದೂರದ ಬೆಂಭಾಗದಲ್ಲಿ, ಅತಿ ಸಾಹಸದಿಂದ ಗುಪ್ತ ಆಕಾಶ ನಿಲ್ದಾಣ ರಚಿಸಿಕೊಂಡು ತಳವೂರಿಯಾಯಿತು; ಉತ್ತರಗಡೆಯಲ್ಲಿ ಜನರಲ್ ಸ್ಟಿಲ್‌ವೆಲ್ಲರು ಪ್ರಾಮುಖ್ಯ ನಿಲ್ದಾಣಗಳನ್ನು ವಶಪಡಿಸಿಕೊಂಡು ಜಾಪಾನೀ ಸೇನೆಯನ್ನು ಹಣ್ಣು ಮಾಡುತ್ತಿದ್ದಾರೆ-- ಎಂದು ಮೊನ್ನೆಯವರೆಗೂ ನಾವು ವಿಜಯದ ಮೇಲೆ ವಿಜಯದ ವಾರ್ತೆಗಳನ್ನು ಕೇಳುತ್ತಿದ್ದೆವು. ಮೊನ್ನೆ ಆಕಸ್ಮಾತ್ ವಾರ್ತೆ- ಜಾಪಾನೀ ಸೇನೆ ಅಸ್ಸಾಮಿನಭಿಮುಖವಾಗಿ ಚಿಂಡ್ವಿನ್ ಹೊಳೆ ದಾಟಿ ಮುಂದೊತ್ತಿತು. ಹಾಗೆ ಮುಂದೊತ್ತಿದವರು ಒಂದೆರಡೇ ದಿನಗಳಲ್ಲಿ ಸೋಮ್ರಾ ಪರ್ವತದ ಗುಡ್ಡಗಾಡು ಪ್ರದೇಶವನ್ನು ದಾಟಿದರು. ಹಿಂದುಸ್ಥಾನದ ಈಶಾನ್ಯ ಮೂಲೆಯ ಮಣಿಪುರದೊಳಗೆ ನುಗ್ಗಿದರು. ಆ ವರೆಗೂ ಅವರು ಮನುಷ್ಯಕೃತ ಪ್ರತಿಭಟನೆಯನ್ನಿದಿರಿಸಬೇಕಾಗಿಬರಲಿಲ್ಲ. ಆದರೆ ದಟ್ಟಾರಣ್ಯ, ಇಕ್ಕಟ್ಟಾದ ಹಾದಿಗಳ ಪ್ರಕೃತಿಜನ್ಯ ಆತಂಕಗಳಿದ್ದೇ ಇದ್ದುವು. ಕಲ್ಗೊಂಬೆ ಜಾಪಾನೀ ಯೋಧನಿಗದು ಗಣ್ಯವೆನಿಸದೆ ಮಣಿಪುರದ ಮಣ್ಣಿನವನ ಹೆಜ್ಜೆ ಮೂಡಲು-ಆಕಾರವಿಲ್ಲವನ ಕೋವಿಯು ಹೊಗೆಯಾಡಲು-ಸಮಯ ಹಿಡಿಯಲಿಲ್ಲ. ಇದೊಂದು ಸಾಹಸ ಕಾರ್ಯ!

ಮಣಿಪುರ ಸಂಸ್ಥಾನ

ಭಾರತ ಮತ್ತು ಬರ್ಮಗಳು ಚಾವಡಿ ಮತ್ತು ಪಡಸಾಲೆಗಳಂತಿದ್ದರೆ ಮಣಿಪುರವು ಅವುಗಳ ನಡುವಿನ ತಡಿಮೆಯಂತಿರುವ ರಾಜ್ಯ. ಆದಿಯಿಂದಲೂ ಹಿಂದುಸ್ಥಾನದಿಂದ ಬರ್ಮಕ್ಕೆ ನುಗ್ಗುತ್ತಿದ್ದುದು, ಬರ್ಮೀಯರು ಹಿಂದುಸ್ಥಾನದೊಳಗೆ ಕಾಲಿಡುತ್ತಿದ್ದುದು ಈ ಮೆಟ್ಟಲನ್ನು ಹಾದುಹೋಗಿಯೇ. ಅಸ್ಸಾಮಿನ ಗಣನೀಯ ಆಶ್ರಿತ ರಾಜ್ಯವೆಂದರೆ ಮಣಿಪುರವೊಂದೇ. 8620 ಚಚ್ಚೌಕ ಮೈಲು ವಿಸ್ತೀರ್ಣವಿದ್ದು ಪರ್ವತವಲಯ, ಗುಡ್ಡಗಾಡು ಪ್ರದೇಶಗಳೇ ಅಧಿಕವಿರುವ ಈ ಸಂಸ್ಥಾನದ ಸದ್ಯದ ರಾಜರು, ಮಹಾರಾಜ್ ಸರ್. ಚೂರಾಚಾಂದ್ ಸಿಂಗ್. ಸುಮಾರು 5 ಲಕ್ಷ ಜನರಿರುವ ಚಿಕ್ಕನಾಡು. ಎಲ್ಲಾ ಕಡೆಯಲ್ಲೂ ಮುಚ್ಚಲ್ಪಟ್ಟಿರುವ 50 ಮೈಲು ಉದ್ದ 20 ಮೈಲು ಅಗಲದ ಒಂದು ಕಂದರವು ಪ್ರಕೃತಿದತ್ತ 'ಶೆಲ್ಟರ್' ಆಗಿ ಅಲ್ಲಿದೆ. ಪ್ರಥಮ ಬರ್ಮಾ ಯುದ್ಧ ನಡೆದಾಗ ಅದು ಬರ್ಮೀಯರ ಸ್ವಾಧೀನವಾಗಿ ಕೊನೆಗೆ 1826ರ ಸಂಧಾನಶರ್ತದಂತೆ ಅದಕ್ಕೆ ಸ್ವಾತಂತ್ರ್ಯ ಕೊಡಲ್ಪಟ್ಟಿತು. ಅಸ್ಸಾಮಿನ ಅಂತೆಯೇ ಅಖಿಲ ಹಿಂದುಸ್ಥಾನದ ತುತ್ತತುದಿಯ ಈಶಾನ್ಯಮೂಲೆಯದು. ಇಂಫಾಲ್ ಅದರ ರಾಜಧಾನಿ. ಆಕ್ರಮಣದ ಪೂರ್ವ ತಯಾರಿಗಾಗಿ ಈ ಪಟ್ಟಣದ ಮೇಲೆ ಕಳೆದ ಒಂದೆರಡು ವಾರಗಳಿಂದ ಜಾಪಾನರು ಬಾಂಬು ಸುರಿಸುತ್ತಲೇ ಇದ್ದರು. ಈಗ ಅದನ್ನು ಸಮೀಪಿಸುತ್ತಿದ್ದಾರೆ.

ಕಠಿಣ ಮನುಷ್ಯರು

ಮಣಿಪುರದಲ್ಲಿ ಮಾನವನ ಪ್ರತಿಷ್ಠೆಗಿಂತಲೂ ಪ್ರಕೃತಿಯ ವರ್ಚಸ್ಸು ಹೆಚ್ಚಿದೆ. ಮನುಷ್ಯನ ಕಾರುಬಾರು ನಡೆಯುವಲ್ಲಿ ಕಲ್ಲುಮರಗಳೂ ಮೃದುತ್ವಕ್ಕೆ ಬರುತ್ತವೆ; ಮನುಷ್ಯರ ಅಂಕಗೊಳಗಾಗುತ್ತವೆ. ಪ್ರಕೃತಿಯ ಪ್ರತಾಪವೇ ನಡೆಯುವಲ್ಲಿ ಮನುಷ್ಯರೂ ಕಲ್ಲುಮರಗಳಂತಾಗಬೇಕು. ಅಂತೆಯೇ ಮಣಿಪುರದ ಜನರು ಕಠಿಣ ಮನುಷ್ಯರು; ಪ್ರಕೃತಿಯ ಮಕ್ಕಳು. ಕಲ್ಲುಮುಳ್ಳುಗಳಿಗೂ ರಕ್ತದ ಅಭಿಷೇಕ ಮಾಡಿ ಅನುಭವವುಳ್ಳ ಅವರು, ಕೆನ್ನೀರೋಕುಳಿಗಂಜುವವರಲ್ಲ. ರಕ್ತಕೇಳಿ, ಪ್ರಾಣದಾಟಗಳು ಅವರ ವಿನೋದಗಳು. ಹಿಂದೊಮ್ಮೆ ಪಂಡಿತ ಜವಾಹಿರಲಾಲರು ಆ ಗುಡ್ಡಗಾಡು ಪ್ರದೇಶಗಳನ್ನು ಸಂಚರಿಸಿ ಬಂದು ತನ್ನ ಅನುಭವಗಳನ್ನು ರೋಮಾಂಚಕಾರಿಯಾಗುವಂತೆ ಪ್ರಕಟಿಸಿದ್ದರು. 1931ರ ಚಳವಳಿಯ ವೇಳೆ ಆ ಗುಡ್ಡಗಾಡಿನ ನಾಗಜನರ ಮುಂದಾಳಾಗಿ ನಾಗರಾಣಿ ಗ್ವಿಡೆಲ್ಲೋ ಎಂಬ 17ರ ಯುವತಿ ಸರಕಾರದ ವಿರುದ್ಧ ಬಂಡಾಯವನ್ನೇ ಹೂಡಿದ್ದಳು. ದೇಶಾಭಿಮಾನ ಮತ್ತು ವಸ್ತುಸ್ಥಿತಿಯ ಅಜ್ಞಾನ-ಇ[illegible] ತುತ್ತತುದಿಯನ್ನು ಮುಟ್ಟಿದ್ದ ಆ ಗುಡ್ಡಗಾಡಿನ ನಾಗ ಜನರು-ಮರಿಶಿಲೆಗಳು-'ಗಾಂಧೀ ದೇವರು' 'ಗಾಂಧೀ ರಾಜ್ಯ' ಎಂಬ ಸವಿಗನಸಿನಲ್ಲಿದ್ದಂತೆಯೇ ಸರಕಾರದ ಅಸ್ತಿವಾರವನ್ನೇ ಅಲ್ಲ ಅಡಿಮೇಲು ಮಾಡಿಬಿಟ್ಟಿದ್ದರು. ಅದನ್ನಡಗಿಸಲು ಸರಕಾರಕ್ಕೆ ಸಾಕು ಸಾಕಾಗಿ ಹೋಗಿತ್ತು; ವೀರನಾಯಕಿ ಗ್ವಿಡೆಲ್ಲೋ ಬಾವು ಶಿಕ್ಷೆಗೊಳಗಾಗಿ, ದೇಶಾಭಿಮಾನಕ್ಕೆ ನವತಾರುಣ್ಯವನ್ನು ಬಲುವಳಿಯಾಗಿ ಕೊಟ್ಟು ಕಾರಾಗೃಹದಲ್ಲಿ ಕೊಳೆಯುತ್ತಿರುವ ಆ ದೃಶ್ಯವು ಪಂಡಿತ ನೆಹರುಗಳ ಲೇಖನಿಯ ಮೂಲಕ ಭಾರತೀಯರೆಲ್ಲರ ಹೃದಯದಲ್ಲಿಯೂ ಚಿತ್ರಿಸಲ್ಪಟ್ಟಿದ್ದಿತು. ಆಗ ಎಸೆಂಬ್ಲಿಯಲ್ಲಿ 'ಆಕೆ ಕೊಲೆಗಾತಿ, ಬಂಡಾಯಗಾತಿ, ನೆಹರುಗಳು ಭ್ರಮೆಗೊಂಡಿದ್ದಾರೆ' ಎಂದು ಸರಕಾರೀ ಸದಸ್ಯರು ಆಕ್ಷೇಪಿಸಿದ್ದರು. ಜಾಪಾನರು ಆ ವಲಯ ನುಗ್ಗುವಾಗ ಅಲ್ಲಿಯ ವಾತಾವರಣ ಹೇಗಿದ್ದೀತು? ಜನರೂ ಮರಕಲ್ಲುಗಳೂ ಒಂದೇ ಮರ್ಜಿ ವಹಿಸಿರಬಹುದೆ?

ಉದ್ದೇಶವೋ ಉದ್ರೇಕವೋ?

ಭಾರತ ಸೇನಾನಿ ಜನರಲ್ ಸರ್. ಆಖ್‌ಲೆಕರು ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ಜಾಪಾನರ ಧಾಳಿಯ ಕುರಿತು ಸಮಾಧಾನ ಪಡಿಸಿದ್ದಾರೆ. 'ಇವರು ಸೇನಾನಿತ್ವಕ್ಕೆ ಉತ್ತಮ ಮನುಷ್ಯನಲ್ಲವೆಂಬುದನ್ನು ತಿಳಿಯುವದು ಸಾಧ್ಯವಿತ್ತು'-ಎಂಬೊಂದು ಯೋಗ್ಯತಾರೇಖೆಯು, ಟೋಬ್ರುಕ್ ಪತನದ ವೇಳೆಯು ಈ ಸೇನಾನಿಯ ಕುರಿತು ಎಂಟನೇ ಸೇನೆಯ ಅಧಿಕಾರೀ ದಾಖಲೆಯಲ್ಲಿ ಸೇರಿ ಹೋಗಿರುವದು ಈಗ ತಾನೆ ಬೆಳಕಿಗೆ ಬಂದಿದೆ. ಈ ಟೀಕೆಯ ಗೆರೆಯನ್ನು ಇನ್ನಷ್ಟು ಉಜ್ವಲ್ಪಕ್ಕೆಳೆದುಕೊಳ್ಳುವರೋ ಎಂಬಂತೆ ಸರ್. ಆಖ್‌ಲೆಕರು ಜಾಪಾನೀಧಾಳಿಯನ್ನು ತಾತ್ಸಾರವಾಡಿದಂತೆ

(೭ನೇ ಪುಟ ನೋಡಿರಿ)

"Wanted Immediately.

Estate lorry driver with Ghat Road Experience Chevrolet charcoal gas lorry. Must be able to keep lorry in order. Salary Rs. 60/- per month. Dearness Allowance Rs. 12/2/9 per month. Provident Fund. Apply with copies of testimonials to:-

Manager,

Kalasa Tea & Produce Co. Ltd. Hirebile, P. O.

Kadur District. Mysore State"

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ--

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಞ್ಞಿರಾಮನ್,
ಮೆನೇಜರ್.

ಮುಟ್ಟುಗುಳಿಗೆ

ಹಲತಿಂಗಳಿಂದ ಕಟ್ಟುಗಿದ್ದರೂ, ಕತ್ತಲ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದಲೂ--'ಕುಮಾರಿ' (PILLS) ನಿಶ್ಚಿತ ನಿರುಪದ್ರವಿ-- ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವದು; ಬೇಕಾದಂಗ ಗರ್ಭಧಾರಣೆಯನ್ನು ನಿಲ್ಲಿಸುವದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ, ರೂ. 3/- ಕೈಪಾಂದ ಕೇಸುಗಳಿಗೆ ರೂ. 5. (ವಿ. ಪಿ. 12 ಆಣೆ ಅಲಾಯಿದ).

Mrs. P. DEVEE, F. D. S., (N)
TOLLYGUNGE, CALCUTTA,
ಸ್ಟಾಕಿಸ್ಟ, **Raja Medical Hall,**
31, Dharmaraja St. BANGALORE

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

★ ದಕ್ಷಿಣ ಕನ್ನಡದ ಪ್ರಕೃತದ ಆಹಾರ ಪರಿಸ್ಥಿತಿ. ★

(ಶ್ರೀ. ಎ ಬಿ ಶೆಟ್ಟರು)

ಸರಕಾರದ ಲೆಕ್ಕಾಚಾರದಂತೆ, ಈ ಜಿಲ್ಲೆಯು ಆಹಾರ ಸರಬರಾಯಿಯ ಮಟ್ಟಿಗೆ ಸ್ವಾವಲಂಬಿಯೆಂದು ಗಣಿಸಲ್ಪಟ್ಟಿದೆ. ಆಹಾರ ಸಮಿತಿಯ ಒಂದು ಕಮಿಟಿಯು ಎರಡು ತಿಂಗಳುಗಳಿಗೆ ಮೊದಲೇ ಈ ಪ್ರಶ್ನೆಯನ್ನು ಗಾಢವಾಗಿ ಪರ್ಯಾಲೋಚಿಸಿ ಈ ವರುಷ ನಮ್ಮ ಸಾಗುವಳಿ ಬೆಳೆಯನ್ನು ಹಾಳು ಮಾಡಿದ, ಅನಾವೃಷ್ಟಿ ಮಳೆಯ ಅಭಾವ, ಇತ್ಯಾದಿ ಕಾರಣಗಳಿಂದಾಗಿ, ಬಳಸುವದಕ್ಕೆ ಸಿಕ್ಕುವ (ಬೀಜದ ಭತ್ತವನ್ನು ಬಿಟ್ಟರೆ) ಅಕ್ಕಿಯು ಹೆಚ್ಚು ಕಡಿಮೆ 46 ಲಕ್ಷ ಮುಡಿಯೆಂದು ಕಂಡುಹಿಡಿಯಿತು. ಪ್ರಾಯಸ್ಥರಿಗೆ ದಿನಕ್ಕರ್ಧ ಸೇರಿನ ಲೆಕ್ಕದಂತೆ ನಮ್ಮ ಜಿಲ್ಲೆಯ ಜನರಿಗೆ ಬೇಕಾಗುವ ಅಕ್ಕಿ 51 ಲಕ್ಷ ಮುಡಿ. ಹೀಗೆ 5 ಲಕ್ಷ ಮುಡಿ ಅಕ್ಕಿಯ ಕೊರತೆ ಕಂಡುಬರುತ್ತದೆ.

ಆಹಾರ ಸಮಿತಿಯ ಪರವಾಗಿ ಕಳೆದ ಫೆಬ್ರವರಿ ತಾ. 12ರಲ್ಲಿ ಡೆಪ್ಯುಟೇಶನೊಂದು ಎಡ್ವೈಸರ್ ಶ್ರೀ ರಾಮಮೂರ್ತಿಯವರನ್ನು ಸಂಧಿಸಿ, ಸರಕಾರವು 16 ಸಾವಿರ ಟನ್ನು (5 ಲಕ್ಷ ಮುಡಿ) ಅಕ್ಕಿಯನ್ನು ಇಲ್ಲಿಗೆ ಕಳುಹಿಕೊಡಬೇಕೆಂದು ಒತ್ತಾಯ ಪೂರ್ವಕ ಕೇಳಿಕೊಂಡಿತು. ಸಿವಿಲ್ ಸಪ್ಲೈಸ್ ಕಮಿಶನರಾದ ಮಿ. ಸ್ಟ್ರೇಟ್ ಬೌಸರು, ಇದೇ ತಿಂಗಳ ಮೂರನೇ ವಾರದಲ್ಲಿ ಈ ಜಿಲ್ಲೆಗಾಗಮಿಸಿ, ಆಹಾರ ಸ್ಥಿತಿಯನ್ನು ಮುಂದಟ್ಟು ಮಾಡಿಕೊಳ್ಳಲು ಹಲವು ಸ್ಥಳಗಳನ್ನು ಸಂದರ್ಶಿಸಿದರು. ಜಿಲ್ಲೆಯಲ್ಲಿ ತನ್ನ ಆವಶ್ಯಕತೆಯನ್ನು ಪೂರೈಸಿಕೊಳ್ಳುವಷ್ಟು ಅಕ್ಕಿಯಿದ್ದರೂ ನಾವು ಆ ಆವಶ್ಯಕತೆಯನ್ನು ಅತಿಶಯಗೊಳಿಸಿ ತೋರಿಸಿರುವೆವೆಂಬ ಅಭಿಪ್ರಾಯವನ್ನು ಕಟ್ಟಿಕೊಂಡೇ ಅವರು ಬಂದಿದ್ದರೂ, ಜಿಲ್ಲೆಗೆ ಸಹಾಯವಗತ್ಯವಿದೆಯೆಂಬುದನ್ನು ಕೊನೆಗವರು ಮನಗಂಡಂತೆ ಕಾಣುತ್ತದೆ. ಜಿಲ್ಲೆಯಲ್ಲಿ ಅತಿ ಹೆಚ್ಚಿನ ಕೊರತೆಯಿರುವ ತಾಲೂಕೆಂದರೆ ಕಾಸರಗೋಡು. ಅಲ್ಲಿ ಆಹಾರ ಸ್ಥಿತಿಯು ಇಷ್ಟರೊಳಗೇನೇ ತೀರಾ ನಿಕೃಷ್ಟವಾಗಿದೆ. ಕಾಸರಗೋಡು ತಾಲೂಕಿಗೆ ಬೇಕಾಗುವ ಅಕ್ಕಿಯನ್ನೆಲ್ಲಾ ಸರಕಾರವು ಕಳುಹಿಕೊಡಲಿದೆಯೆಂದು ನಿರೀಕ್ಷೆಯಿದೆ. ಅಧಿಕ ಪರಿಮಾಣದ ಆಹಾರ ಸರಬರಾಯಿಯ ಅಗತ್ಯವಿರುವ ಮತ್ತೊಂದು ಕ್ಷೇತ್ರವೆಂದರೆ ದಿನಕ್ಕೆ 1500 ಮುಡಿಯಂತೆ ಬೇಕಾಗುವ ಮಂಗಳೂರು ನಗರ. ಇಲ್ಲಿ ರೇಶನಿಂಗ್ ಆರಂಭ ಮಾಡುವ ಮೊದಲು ರಿಸರ್ವಾಗಿ ಇರಬೇಕಾದ ಒಂದು ತಿಂಗಳ ಅಕ್ಕಿಯನ್ನು ಸರಕಾರವು ಕಳುಹಿಕೊಡುವದೆಂದು ನಾವು ಆಶಿಸುತ್ತೇವೆ. ಉಡುಪಿ ಪಟ್ಟಣದಲ್ಲಿ ಇದೇ ತಿಂಗಳ 12ರಿಂದಲೇ ರೇಶನಿಂಗ್ ಜ್ಯಾರಿಗೆ ಬಂದಿದೆ ಮಂಗಳೂರು ಮತ್ತು ಕಾಸರಗೋಡಿನ ಪಟ್ಟಣಗಳಲ್ಲಿ ರೇಶನಿಂಗ್ ಬಂದ ಮೇಲೆ ಈ ಜಿಲ್ಲೆಯ ಆಹಾರ ಸಮಸ್ಯೆಯನ್ನು ಬಿಡಿಸಲು ಸುಲಭವಾಗುವದು. ನಿಶ್ಚಯಾತ್ಮಕ ಧಾರಣೆಗಳು (Ceiling prices) ಜಿಲ್ಲೆಯಲ್ಲಿ ಅಕ್ಕಿಯ ಬೆಲೆಯನ್ನಿನ್ನೂ ನಿಯಂತ್ರಣಕ್ಕೆ ತರಲಿಲ್ಲವೆಂಬುದು ವಿಷಾದಕರವಿದೆ. ಜಿಲ್ಲೆಯ ಸರ್ವ ಕಡೆಗಳಲ್ಲಿಯೂ ಅಧಿಕ ಬೆಲೆಗೆ ಪಡಕೊಳ್ಳುವಿಕೆ ಮತ್ತು ಮಾರುವಿಕೆಗಳು ನಡೆದೇ ಇವೆ.

ಸೆಂಟ್ರಲ್ ಕೋಪರೇಟಿವ್ ಹೋಲ್‌ಸೇಲ್ ಸ್ಟೋರ್ಸಿನ ಅಧ್ಯಕ್ಷ ಶ್ರೀ ಎಮ್. ಶಿವರಾಯರು ಸಂಗ್ರಹಿಸಿದ ಗಣನೆಗಳಂತೆ, ಈ ತನಕ ರಿಕ್ವಿಜಿಶನ್ ಮಾಡಿದ ಒಟ್ಟು ಅಕ್ಕಿಯ ಮೊತ್ತ 4,20,791 ಮುಡಿ; ಅವೈಕಿ ಇದೇ ತಿಂಗಳ 15ನೇ ತಾರೀಕಿನವರೆಗೆ ಸ್ವಯಂ ತಾವಾಗಿ ಜಮೆಬಂದ ಅಕ್ಕೀ ಮುಡಿಗಳು 203770, ಅರ್ಥಾತ್ ಒಟ್ಟು ಸಂಖ್ಯೆಯ ಅರೆವಾಸಿಗಿಂತಲೂ ತುಸು ಕಡಿಮೆ. ಈಗ ಜ್ಯಾರಿಯಲ್ಲಿರುವ ಸ್ವಯಂ ಸರಬರಾಯಿ ಯೋಜನೆಯ ಪ್ರಕಾರ ಮಾರ್ಚ 1ನೇ ತಾರೀಕಿನೊಳಗೆ ರಿಕ್ವಿಜಿಶನ್ ಆದ ಅಕ್ಕಿಯ ⅓ ಅಂಶವು ಸ್ಟೋರ್ಸುಗಳಿಗೆ ದೊರೆಯಬೇಕಿದ್ದಿತು. ಕಾರ್ಕಳವೊಂದನ್ನು ಬಿಟ್ಟರೆ ಬೇರಾವ ತಾಲೂಕೂ ತನ್ನ ಪಾಲಿನ ⅓ನೇ ಅಂಶವನ್ನು ಈ ತನಕ ಕೊಟ್ಟಿಲ್ಲ. ಕಾಸರಗೋಡು ತಾಲೂಕು ಎಲ್ಲಕ್ಕಿಂತ ಹಿಂದಿದೆ. ಎಪ್ರಿಲ್ 1ರೊಳಗೆ ರಿಕ್ವಿಜಿಶನ್ ಆದ ಎಲ್ಲಾ ಮೊತ್ತವೂ ಜಮೆ ಬರಬೇಕಾಗಿದೆ.

ನಿಶ್ಚಯಾತ್ಮಕ ಧಾರಣೆಯ ಕ್ರಮವು ಜಯಶೀಲವಾಗದೆ, ಉಳಿತಾಯದ ಎಲ್ಲಾ ಅಕ್ಕಿಯನ್ನೂ ಪೇಟೆ ಪಟ್ಟಣಗಳವರ ಆವಶ್ಯಕತೆಗಾಗಿ ಸರಕಾರವು ವಶಪಡಿಸಿಕೊಳ್ಳಲಿಕ್ಕಿರುವದರಿಂದ ಈ ವಿಭಾಗದಲ್ಲಿ ಸರಕಾರವು ಮತ್ತೊಂದು ಹೆಜ್ಜೆಯಿಟ್ಟಿದೆ. ಕೋಪರೇಟಿವ್ ಸ್ಟೋರುಗಳಿಗೆ ಅಥವಾ ಚಿಲ್ಲರೆಯಾಗಿ ತಮ್ಮ ಕ್ಷೇತ್ರಗಳಲ್ಲಿ ಅಕ್ಕಿ ವ್ಯಾಪಾರ ಮಾಡುವರೆ ನೇಮಕಗೊಂಡು ಸರವಾನಗಿ ಪಡೆದಿರುವ ಇತರ ಚಿಲ್ಲರೆ ವ್ಯಾಪಾರಿಗಳಿಗಲ್ಲದೆ ಮಿಕ್ಕವರಾರಿಗೂ ವರ್ಗದಾರರು ಇಲ್ಲವೇ ಒಕ್ಕಲುಗಳು ತಮ್ಮ ಅಕ್ಕಿಯನ್ನು ಮಾರಕೂಡದೆಂದು ನಿಷೇಧ ಹಾಕಿದೆ. (ಈ ಸಂಬಂಧವಾದ ಒಂದು ವಿವರಣೆಯು 24-3-44ರ ಗಝೇಟಿನಲ್ಲಿ ಪ್ರಕಟವಾಗಿದೆ).

ರಿಕ್ವಿಜಿಶನ್ ಆಗದುಳಿದ ತಮ್ಮ ಉಳಿತಾಯದ ಅಕ್ಕಿಯನ್ನು ಸ್ವಯಂಪ್ರೇರಣೆಯಿಂದ ಆದಷ್ಟು ಬೇಗನೇ ತಂದೊಪ್ಪಿಸುವವರಿಗೆ ಮುಡಿಗೆ ಎಂಟಾಣೆಯಂತೆ ಅಧಿಕ ಬೆಲೆ ಕೊಡಲಾಗುವದು. ಈ ತನಕ ರಿಕ್ವಿಜಿಶನ್ ಆಗಿರುವ 4 ಲಕ್ಷ 20 ಸಾವಿರ ಮುಡಿಗಳಷ್ಟು ಅಕ್ಕಿಯು ರೇಶನಿಂಗ್ ಜ್ಯಾರಿಗೆ ಬರುವ ಕ್ಷೇತ್ರಗಳಿಗೆ ಸಾಕಾಗುವಂತಿಲ್ಲವೆಂದೂ ಇನ್ನೊಂದು 5 ಲಕ್ಷವಾದರೂ ಈ ಉದ್ದೇಶ ಸಾಧನೆಗೆ ಬೇಕಾಗಬಹುದೆಂದೂ ಅಂದಾಜು ಕಟ್ಟಿರುವದರಿಂದ, ತಾವಾಗಿ ತಂದೊಪ್ಪಿಸದ ಇತರರ ಮಾರಾಟಕ್ಕುಳಿಯುವ ಅಕ್ಕಿಯನ್ನು ಸಂಗ್ರಹಿಸಲಾಗುವದು. ರಿಕ್ವಿಜಿಶನ್ ಆಗದ ಅಕ್ಕಿಯನ್ನು ತಾವಾಗಿ ಸ್ಟೋರ್ಸುಗಳಿಗೆ ತಂದುಕೊಡುವವರಿಗೆ ಮಂಗಳೂರಲ್ಲಿ ಕೊಡಲ್ಪಡುವ ಮುಡಿಗೆಂಟಾಣೆ ಹೆಚ್ಚಿನ ದರವನ್ನು ಇತರ ತಾಲೂಕು ಕೇಂದ್ರಗಳಲ್ಲಿಯೂ ಕೊಡಲಾಗುವುದೋ ಎಂಬುದನ್ನು ನೋಡಲಿಕ್ಕಿದೆ.

ಬಂಟ್ವಾಳ, ಕಾಸರಗೋಡು, ಹೊಸದುರ್ಗದಂತಹ ಹಲವು ಸ್ಥಳಗಳು ಹಸಿವು ಪೀಡೆಗೊಳಗಾಗಿವೆ. ರೇಶನ್ ಕಾರ್ಡುಗಳಿದ್ದವರು ಕೂಡಾ ತಮ್ಮ ದಿನದ ಅಕ್ಕಿಯನ್ನು ಪಡೆಯದಂತಾಗಿದೆ. ಜಿಲ್ಲೆಯ ಅಧಿಕಾರಿಗಳು ನಿಶ್ಚಿತ ಅವಧಿಗೆ ರಿಕ್ವಿಜಿಶನ್ ಮೊತ್ತವನ್ನು ತಂದೊಪ್ಪಿಸದ ರೈತರ ಅಕ್ಕಿಯನ್ನು ಸಂಗ್ರಹಿಸುವ ಕಾರ್ಯಕ್ರಮ ಕೈಕೊಳ್ಳಹತ್ತಿದ್ದಾರೆ. ಈಗ ಜಿಲ್ಲೆಯಲ್ಲಿ ಜ್ಯಾರಿಯಲ್ಲಿರುವ ಯೋಜನೆಗೆ ತಮ್ಮ ಪೂರ್ಣ ಸಹಕಾರವನ್ನಿತ್ತು ಜನರ ಆಹಾರ ಸಂಕಷ್ಟವನ್ನು ತಮ್ಮಿಂದಾದಷ್ಟು ನಿವಾರಿಸುವದು ಎಲ್ಲಾ ವರ್ಗದಾರರ ಕರ್ತವ್ಯವಿದೆ.

ಈಗಿನ ಕಲೆಕ್ಟರರು ಜಿಲ್ಲೆಯ ಅಧಿಕಾರ ವಹಿಸಿಕೊಂಡಂದಿನಿಂದ ಆಹಾರ ನಿಯಂತ್ರಣ ಯೋಜನೆಯು ಬಹುಮುಖದಿಂದ ಬಲಗೊಂಡಿದೆ. ಇತ್ತೀಚೆಗೆ ಹೊರಡಿಸಲ್ಪಟ್ಟಿರುವ ಆಜ್ಞೆಗಳನ್ನು ಹಾಗೂ ಕೈಕೊಳ್ಳಲ್ಪಡುವವೆಂದು ಸೂಚಿಸಲ್ಪಟ್ಟಿರುವ ಕಾರ್ಯವಿಧಾನಗಳನ್ನೆಲ್ಲಾ ಸಕ್ರಮವಾಗಿ ಪ್ರಕಟಿಸಿ, ಜನರು ಸಂಗತಿ ತಿಳಿಯದೇನೇ ತಪ್ಪಿಗೊಳಗಾಗದಂತೆ ನೋಡುವದು ಅಗತ್ಯವಿದೆ. ಉಳಿತಾಯದ ಅಕ್ಕಿಯನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವ ಕಾರ್ಯ ಮಗ್ನರಾಗುವ ರೆವಿನ್ಯೂ ನೌಕರರು, ವರ್ಗದಾರರ ಹಾಗೂ ಒಕ್ಕಲುಗಳ ಮನೆ ಮತ್ತು ಬೇಸಾಯದ ಖರ್ಚಿಗೆ ಸಾಕಷ್ಟನ್ನು ಬಿಡಬೇಕಲ್ಲದೆ, ಹಳ್ಳಿಯ ಬೇಸಾಯಗಾರರಲ್ಲದ ವರ್ಗಗಳಿಗೆ ಬೇಕಾಗುವಷ್ಟು ಅಕ್ಕಿಯನ್ನೂ ಉಳಿಯಗೊಡಬೇಕೆಂದು ತಮಗೆ ಕಲೆಕ್ಟರರಿಂದ ದೊರೆತಿರುವ ಸೂಚನೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವರೆಂದು ನಾವು ಆಶಿಸುತ್ತೇವೆ.

ಧನಕ್ಕಿಂತ ವಿಧಾನ ಮುಖ್ಯ

ಧನದ ಮೊತ್ತವೊಂದೇ ಗೌರವಾನ್ವಿತ ವಾಣಿಜ್ಯದ ಹೆಗ್ಗುರುತಲ್ಲ. ಧನಸಂಗ್ರಹ ಅಥವಾ ನಿಮ್ಮ ದುಡಿಮೆಯ ಮೊತ್ತಕ್ಕಿಂತ, ಅದನ್ನು ನಿರ್ವಹಿಸುವ ವಿಧಾನವೇ ವ್ಯಾಪಾರೋದ್ಯಮಗಳ ಯಶಸ್ಸಿಗೆ ಮುಖ್ಯವೆನಿಸಿದೆ.

ಕಳೆದ ನಲ್ವತ್ತು ವರ್ಷಗಳಿಂದ, ಕೆನರಾ ಬೇಂಕಿನೊಡನೆ ಇರುವ ಚಾಲತಿ ಠೇವಣಿಯ ಲೆಕ್ಕವು ವಾಣಿಜ್ಯದ ದೃಢತೆ ಮಾನ್ಯತೆಗಳ ದ್ಯೋತಕವಾಗಿ ಪರಿಗಣಿಸಲ್ಪಟ್ಟಿದೆ.

"ನಿಮಗೆ ಕೆನರಾ ಬೇಂಕಿನ ಒಂದು ಚೆಕ್ ಕೊಡುತ್ತೇನೆ" ಎನ್ನಲು ನೀವೂ ಆನಂದ ಪಡುವಿರಿ. ಮತ್ತೆ ನೆನಪಿನಲ್ಲಿರಲಿ—ಯಾವ ಚೆಕ್ ಆದರೂ ಕೆನರಾ ಬೇಂಕಿನಲ್ಲಿ ವಟಾಯಿಸಲ್ಪಡಲು ಐದು ನಿಮಿಷಗಳಿಗಿಂತ ಹೆಚ್ಚಿನ ವಿಳಂಬವಿಲ್ಲ.

ಸ್ಥಾಪಿತ: 1906.

ಕೆನರಾ ಬೇಂಕು, ಲಿಮಿಟೆಡ್.

CANARA BANK, Ltd.

ನೋಟೀಸು

ದೂಪದ ಮರ ಮತ್ತು ಹೆಬ್ಬಲಸು ತುಂಡುಗಳ ಏಲಂ

ಪೆರ್ಡೂರು ಶ್ರೀ ಅನಂತಪದ್ಮನಾಭ ದೇವಸ್ಥಾನದ ಬಾಬ್ತು ಪೆರ್ಡೂರು ಗ್ರಾಮದ ಸ ನಂ $\frac{157}{15A}$ ನೇ ಸ್ಥಳದಲ್ಲಿರುವ ಉತ್ತಮ ತರಗತಿಯ ದೂಪದ ಮರಗಳು 21 ಮತ್ತು ಸದ್ರಿ ದೇವಸ್ಥಾನದ ಸಮೀಪವಿರುವ ಕೊಪ್ಪಲದಲ್ಲಿ ಕಡದು ಹಾಕಿರುವ ಹೆಬ್ಬಲ್ಸು ತುಂಡುಗಳು 20 (ಅಂದಾಜು c feet 550) ಸಹಾ ತಾ. 9-4-1944 ನೆ ಆದಿತ್ಯವಾರ ಬೆಳಿಗ್ಗೆ 10 ಘಂಟೆಗೆ ದೇವಸ್ಥಾನದ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತವೆ. ಏಲಂ ಶರ್ತಗಳು ಎಂದಿನಂತೆಯೇ ಆಗಿರುತ್ತವೆ ಹೆಚ್ಚಿನ ಮಾಹಿತಿ ಸ್ವತಹಾ ವ ಪತ್ರಮೂಲಕ ದೇವಸ್ಥಾನದ ಆಫೀಸಿನಿಂದ ಪಡೆಯಬಹುದು

ಪೆರ್ಡೂರು
ತಾ. 29-3-44

ಪಿ ಎನ್. ಮಾಧವ ರಾವ್,
ದೇವಸ್ಥಾನದ ಎಕ್ಸಿಕ್ಯುಟೀವ್ ಆಫೀಸರ್.

Degrees. Books: Medicines
Free H. L. M. S. M. B. H. M. D. etc Free Homeo-Ayur- Unani Natureo degree by post also—Practitioner also get soon Homeo Materiamedica, Rs. 5 Homeo Practice book Rs 4. Insanity Cure Pills Rs. 10 Enclose 2 annas stamp:—
Prof. Dr. N. H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No. 2 Rs 5 No. 1 Rs. 7 Special Rs. 10, Extra Special Rs. 17 for love marriage health, wealth. Ask any six questions with M. O. Re. 1/- and get correct answers by returnpost Life reading Rs. 10 No V.P.P. Send M.O. Free, amplets.
Prof Dr. N. H. Chhatbar,
P. O. MAHUVA (Kathiawar India.)

The Canara Banking Corporation Limited.
ESTD 1906.

Authorised Capital	Rs.	25 00 000/-
Subscribed ,, ..	,,	16 00 000/-
Paid up . .	,,	13 25,785/-
Reserves . ..	,,	1 10,000/-

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegrapic Transfers

ನವಯುಗ

ಉಡುಪಿ, ಗುರುವಾರ ೩೦-೩-೧೯೪೪

ಧುರೀಣರನ್ನು ಬಿಡಲಿ!

ಹಿಂದೂಸ್ಥಾನದ ಸರಕಾರವನ್ನು ಈಗೂ ಮ್ಮೆ ತೆಗೆದ, ಹಿಂದಿನದರೊಡನೆ ಹೋಲಿಸಿ ನೋಡಿದರೆ ಅದರ ಈರಾನ್ಯ ಮೂಲೆಯೀಗ ಕಡಿದು ಹೋಗಿರುವ ವ್ಯತ್ಯಾಸ ಕಾಣಬಹುದು ಆ ಕಡೆಯಲ್ಲಿ ತ್ರಿಮುಖವಾಗಿ ಪ್ರಾರಂಭವಾದ ಜಪಾನೀ ದಾಳಿಯು ತ್ರಿಶೂಲವಾಗಿ ಹಿಂದೂಸ್ಥಾನದ ಎದೆಯನ್ನಿರಿಯಲು ಮುಂದೊತ್ತುತ್ತಿರುವಂತೆ ಭಾಸವಾಗುತ್ತಿದೆ. ಈ ಅಪಾಯಕ್ಕೆ ಸರಿಯಾಗಿ ಸ್ಪಷ್ಟ ಚಿತ್ರಿಸುವ ಇಷ್ಟ ನಮ್ಮದಲ್ಲ. ಆದರೆ 200 ಮೈಲಿಗಳಲ್ಲೇ– ಮುತ್ತರ ... ಯುದ್ಧದ ಸರಬರಾಯಿ ಕೇಂದ್ರವಾದ ಇಂಫಾಲನ್ನೇ ಗುರಿಯಾಗಿಟ್ಟುಕೊಂಡು–ಪ್ರಾರಂಭವಾದ ಈ ವಿರೋಧಿ ಯೋತ್ನದಲ್ಲಿ ಟೊಳ್ಳನ್ನು ಕಾಣುವದು ಎಷ್ಟಕ್ಕೂ ಅಸಾಧ್ಯ ಈ ಮೊದಲೇ ತಿಳಿದು ಬಂದಂತೆ ಇಂಫಾಲಿನ ಸರಬರಾಯಿ ರಸ್ತೆಗಳು ಕಡಿಯಲ್ಪಡುವದು ಸಂಭವನೀಯ. ಇಂದು ನಿನ್ನೆಯ ವಾರ್ತೆಯೇನೆಂಬುದು ಗೊತ್ತಿಲ್ಲ. ಚಿತ್ತಗಾಂಗ್ ಜಿಲ್ಲೆಯ ಕಾಕ್ಸ್ ಬಝಾರದ ಮೇಲೆ ತಾ 25ರಲ್ಲಿ ಜಪಾನೀ ವಿಮಾನಗಳು ಬಾಂಬು ಹಾಕಿದವು, ನೂರು ನಷ್ಟ ಕಡಿಮೆ ಯಾದರೂ ಸೈನಿಕ ಮತ್ತು ನಾಗರಿಕ ಪ್ರಾಣ ಹಾನಿಯಾಗಿದೆ ಎಂದು ನವ ... ಪ್ರಕಟಣೆಯೇ ಹೇಳುತ್ತಿದೆ ಅಸ್ಸಾಮಿನಲ್ಲಿ ಕಾಲೂರಿದ ಜಪಾನರಿಂದ ಬಂಗಾಳಕ್ಕೊ ಕರ ಹೋಯಿತು ಎಂಬುದೇ ಇದರ ಅರ್ಥ ಇಂತಹ ಒಂದು ದೂರದೃಷ್ಟಿಯುಳ್ಳ ವ್ಯವಸ್ಥಿತ ಧಾಳಿಯನ್ನೂ, ಕೆಲವು ಜಡ ಭರತರ ಮಾತಿನ ಮೇಲಿಂದ ಅಗಣ್ಯವೆನ್ನಲು ಸಾಧ್ಯವೇ? ಮಾಡಿಗೆ ಬೆಂಕಿ ಹತ್ತಿದಾಗಲೂ ಮನೆ ಮಾಡಿಕೆ ಗೊರಕೆ ಹೊಡೆಯುವದಿದೆ! ಜಪಾನರ ಯೋಜನೆಯನ್ನು ನಿಷ್ಫಲಗೊಳಿಸಿ ಅವರ ಮುಖಭಂಗ ಮಾಡಿ ಹಿಂದಕ್ಕಟ್ಟುವಷ್ಟು ಸೇನಾಶಕ್ತಿ ಮಿತ್ರ ರಾಷ್ಟ್ರೀಯರಲ್ಲಿರಬಹುದು, ಆದರೆ ಈಗ ಬ್ರಿಟಿಷ ಜನತೆಯನ್ನೇ ಚಕಿತಗೊಳಿಸಿರುವ ಪ್ರಬಲ ಆಕಸ್ಮಿಕ ಧಾಳಿಯನ್ನು ಹಿಂದುಸ್ಥಾನದೊಳಗಡೆಯಲ್ಲೇ ಜಪಾನರು ಪ್ರಾರಂಭಿಸಿರುವದು ನಿಜ.

'ಈ ಧಾಳಿಯಲ್ಲಿ ಸೇನಾಗುರಿಗಿಂತಲೂ. ರಾಜಕೀಯೋದ್ದೇಶವೇ ಹೆಚ್ಚಿಗಿದೆ 'ಭಾರತೀಯರನ್ನು ದಿಗಿಲುಗೊಳಿಸಲು–ತಮ್ಮ ಜನರಲ್ಲಿ ಆಶೆ ಬಳಿಸಲು ಜಪಾನರು ಹೂಡಿದ ಹಂಚಿಕೆಯಿದು'–ಎನ್ನುವವರ ಸಂಖ್ಯೆಯೇ ಇಂಗ್ಲಾಂಡ, ಅಮೇರಿಕಗಳಲ್ಲಿ ಅಧಿಕವಿದ್ದಂತೆ ಕಾಣುತ್ತಿದೆ. ಈ ಆಕ್ರಮಣ ಪ್ರಯತ್ನವನ್ನು ಇದಕ್ಕಿಂತಲೂ ಕಿರಿದುಗೊಳಿಸಿ ತೋರಿಸುವದಸಾಧ್ಯವಾದ್ದರಿಂದ ಇಷ್ಟು! ಕೇವಲ ಗೊಂದಲ ನಿರ್ಮಾಣಕ್ಕಾಗಿ ಸೇನ ಹೊಗಿಸಿದ ದಾಖಲೆಯೊಂದು ಈ ಯುದ್ಧ ಪಲ್ಲಗಲೀ ಹಿಂದಿನ ಯುದ್ಧಗಳ ಲ್ಲಾಗಲೀ ಕಂಡು ಬರುವದಿಲ್ಲ, ಅದರ ಹಿಂದೆಯೂ ಷ್ಟು ಗೊಂದಲರಹಿತ ಸಾಧು ಪ್ರಾಣಿಗಳು ಕೂಡಾ ಬೇರೆಲ್ಲಿಯೂ ಕಂಡು ಬರುವದಿಲ್ಲವಾದ್ದರಿಂದ ಅವರ ಗೊಂದಲಕ್ಕೆಷ್ಟು ಬೆಲೆಯಿದೆ ಎಂದು ಭಾವಿಸಿ 'ಗೊಂದಲವೇ ಈ ದಾಳಿಯ ಗುರಿ' ಎಂಬುದನ್ನು ವಾದಕ್ಕಾಗಿ ಒಪ್ಪಿಕೊಳ್ಳೋಣ ಆ ಗೊಂದಲ ಪಷ್ಟೇ ನಡೆದರೂ ಗಾಬರಿಯಿಲ್ಲವೆಂದು ಮಿತ್ರರ ಭಾವನೆಯೆ? ಭಾರತೀಯರಲ್ಲಿ ಅಥವಾ ಮಿತ್ರ ರಾಷ್ಟ್ರಗಳಲ್ಲಿ ಆತುರ ಗಾಬರಿ, ಭೀತಿಗಳ ನಿರ್ಮಾಪಕ ನಿಲಯಗಳಾಗಿ ಅಸ್ಸಾಮು ಬಂಗಾಲಗಳ ಕೆಲವು ಸ್ಥಳಗಳನ್ನು ಜಪಾನರು ಪ್ರಥಮತಃ ಹಿಡಿದುಕೊಳ್ಳಬಹುದು—ತಮ್ಮ ವಿರೋಧಿ ಪ್ರಚಗಳು ಸಾಕಷ್ಟು ಗೊಂದಲಕ್ಕೊಳಗಾದ ಮೇಲೆ ಹೊಂಟು ಹೋಗಬಹುದು-ಎಂದು ನಿರೀಕ್ಷಿಸಲಾಗುವದಿಲ್ಲವಷ್ಟೆ? ಯುದ್ಧ ... ಸ್ವತಂತ್ರ ..., ಮಹಾ ಪ್ರಪ್ರ ಕೂಡಾ ಈ ತರ್ಕವನ್ನೊಪ್ಪುವದಿಲ್ಲ. ಕಾರಣವಿನಹಾ ಗೊಂದಲ ವೇಳದು, ಗೊಂದಲ ವೆಬ್ಬಿಸುವವರೂ ಕಾರ್ಯಕ್ಕಾಗಿಯೇ ಜಪಾನರಾಕ್ರಮಣ ಮೂಲಕವೇ ಗೊಂದಲವೆಬ್ಬಿಸಬೇಕು, ಗೊಂದಲ ವೆಬ್ಬಿಸುತ್ತ ತಮ್ಮ ಕಾರ್ಯವನ್ನು ಸುಗಮವಾಗಿ ಸಾಗಿಸಬೇಕು ಇವೆರಡನ್ನು ಬೇರ್ಪಡಿಸಿ ತೋರಿಸುವಷ್ಟು ದೊಡ್ಡ ಆತ್ಮವಂಚನೆ ಮತ್ತೊಂದಿರಲಾರದು.

ಆದ್ದರಿಂದ ಮಿತ್ರರಾಷ್ಟ್ರಗಳ ಜವಾಬ್ದಾರಿಯೀಗ ದೊಡ್ಡದಿದೆ ಭಾರತೀಯರಲ್ಲಿರುವ ಸಂದೇಹ ಶಂಕೆಗಳನ್ನು ನಿವಾರಿಸಿ ಭೀತಿಯ ಬದಲ ಧೀರತ್ವವನ್ನು ತುಂಬಿ, ಈ ಅಪಾಯ ನಿವಾರಣಗಣೆಯಾಗುವಂತ ಮಾಡುವ ಕಾಲವೀಗಲಾದರೂ ಬಂದಿದೆ. ಈಗಲೇ ಬಂದುದಲ್ಲ- ಈಗಲ್ಲವಾದರೆ ಇನ್ನೆಂದೂ ಇಲ್ ಎಂಬಂತೆ ಸಂದರ್ಭದ ಕೊನೆಯ ಘಂಟೆ ಮಾತ್ರವುಳಿದಿದೆ ಈ ಕೊನೆಯ ಮುಹೂರ್ತವನ್ನಾದರೂ ಸಾಧಿಸಿಕೊಳ್ಳಬೇಕೆಂಬ ಬಯಕೆ ಸರಕಾರಕ್ಕಿದ್ದರೆ ರಾಷ್ಟ್ರ ಮುಖಂಡರ ಬಿಡುಗಡೆಯೊಂದೇ ಅದಕ್ಕಿರುವ ಹಾದಿ ದೇಶದ ಜನತೆಯ ಹೆಚ್ಚಿನಂಶವು ಈಗಲೂ ಮಂಕಾಗಿಯೇ ಇದೆ, ಅಲ್ಪಾಂಶ ತಬ್ಬಿಬ್ಬಾಗಿದೆ. ಈ ಕಗ್ಗತ್ತಲೆಯ ನಿವಾರಣೆಯಾಗಬೇಕಾದರೆ ನಂಬಿಕೆ ಹುಟ್ಟಬೇಕು-ವಿಶ್ವಾಸದ ಪ್ರಕಾಶವು ಬೀಳಬೇಕು ಈಗ ಬಂಧನದಲ್ಲಿರುವ ರಾಷ್ಟ್ರ ಪ್ರಮುಖರು ಜನತೆಯ ವಿಶ್ವಾಸ ಸಂಪಾದಿಸಿದವರು–ಅಂಥವರಿರುವದು ಅವರೇ ಹೊರತು ಇನ್ನೊಬ್ಬರಿಲ್ಲ ಇಂದಿನ ಸಂದಿಗ್ಧ ಕಾಲದಲ್ಲಿ ಮುಖಂಡರ ಬಿಡುಗಡೆಮಾಡಿ ತಾನು ಜನತೆಯ ಅಭಿನಂದನೆಗೆ ಗುರಿಯಾದೇನೆಂದು ಸರಕಾರ ಹೆದರಬೇಕಾಗಿಲ್ಲ ಆ ಕಾಲ ಕಳೆಯಿತು, ಈಗ, ಜಪಾನರ ಮೇಲೊಗೆಯಲು ಸಂಗ್ರಹಿಸಿಟ್ಟಲ್ಲಿಂದ ಹೊರತೆಗೆಯುವ ಬಾಂಬುಗಳಂತೆ ಈ ಧುರೀಣರನ್ನೂ ಹೊರತೆಗೆದು ಸ್ವಕಾರ್ಯವನ್ನೇ ಸಾಧಿಸಿಕೊಳ್ಳಲಿ!

ದುರ್ಬೀನು

ಧೂಳು ಬಾಯಿಗೆ ಬಿದ್ದಾಗಲೂ 'ಥೂ' ಎಂದುಗುಳಬಾರದೆ? ಕೀಳುಭಾವನೆ ಯೆದ್ದರೂ 'ಥುತ್' ಎಂದು ಬಿಟ್ಟುಬಿಡಬಾರದೆ?

೦೦ ೦೦ ೦೦

ನೀರಲ್ಲಿ ಮೃಗಕ್ಕೆ, ನೆಲದಲ್ಲಿ ಮೀನಿಗೆ ಉಸಿರುಕಟ್ಟುತ್ತದೆ, ಮಾತಿದ್ದಲ್ಲಿ ಚಿಂತಕನಿಗೆ, ಮೌನವಿದ್ದಲ್ಲಿ ವಾಚಾಳಿಗೆ ಉಸಿರು ಕಟ್ಟುತ್ತದೆ

೦೦ ೦೦ ೦೦

ಪಟಾಕಿಯೊಡೆದವನೂ ಬಾಂಬೊಗೆದವನೂ ಸಮಾನರಲ್ಲ, ವಿಗತು ಭಂಗ ಮಾಡಿದವನೂ ಮಾನ ಭಂಗಮಾಡಿದವನೂ ಒಂದೇ ಅಲ್ಲ.

೦೦ ೦೦ ೦೦

ಸೆಗಣಿ ಸಾರಿಸಿದರೆ ಚೊಕ್ಕಟವಾಗುತ್ತೆಂದು ಕೆಸರನ್ನೂ ಬಳೆದು ನೋಡಿದರೆ ಆಗದು, ವಿಚಾರಣೆ ಮಾಡಿದರೆ ಸಂಗತಿ ತಿಳಿಯುತ್ತದೆಂದು ವಿರೋಧವನ್ನೂ ಮಾಡಿನೋಡಿದರೆ ಸಾಗದು

೦೦ ೦೦ ೦೦

ದೇವರ ಪ್ರಸಾದವೆಂದ ಗಂಧಪುಷ್ಪಗಳನ್ನು ಪಡೆಯಬಹುದು-ಮೂರ್ತಿಯ ಕಂಠದಹಾರಕ್ಕೇನೇ ಕೈಯೊಡ್ಡುವದಲ್ಲ. ಮೈತ್ರಿ ಸೂಚಕವಾಗಿ ಸೌಹಾರ್ದ, ಸಂಭಾವನೆ ಪಡೆಯಬಹುದು, ಪ್ರೇಮವನ್ನೇ ಯಾಚಿಸುವದಲ್ಲ

೦೦ ೦೦ ೦೦

ಪ್ರವಾಹದೊಳಗಡೆ ... ಸುತ್ತುತ್ತಿರುವ ಸುಳಿಗಳೆಷ್ಟೋ ಇವೆ, ಆದರೆ ಪ್ರವಾಹದ ಮುಖತಿರುಗಿಸಿದಾಗಲೇ ನೀರು ಬೇರೆಕಡೆಗ ತಿರುಗೀತು. ಯೋಚನೆಗಳೆಲ್ಲಾ ಸುಳಿಯಂತೆ–ಧೋರಣೆಯೊಂದೇ ಪ್ರವಾಹ

೦೦ ೦೦ ೦೦

ಗಾಳಿಹೊಗಲೆಂದು ಅಂಗಿಯ ಗುಂಡಿ ತೆಗೆದು ಎದೆತೆರೆದಿಡಬಹುದು-ಆದರೆ ಎದೆಯ ಕವಾಟವನ್ನೂ ತೆರೆಯಲಾಗುವದಿಲ್ಲ. ಉಪಚಾರ ವಾಣಿಗಳನ್ನು ವ ನಬಿಚ್ಚಿ ಕೇಳಬಹುದು. ಮನಸ್ಸನ್ನೇ ... ಗುವದಿಲ್ಲ

೦೦ ೦೦ ೦೦

ಕಲ್ಪವೃಕ್ಷದ ಕಾಯಿಯಾದರೂ ತಲೆಗೆ ಬೀಳುವುದಾರಿಗೆ ಬೇಕು? ಎಂತಹ ಮಹಾತ್ಮನೇ ಆದರೂ ಅಧಿಕಾರ ಪ್ರಯೋಗಿಸುವದಾರಿಗೆ ಬೇಕು?

ಮಿ ಚರ್ಚಿಲ್ಲರ ಭಾಷಣ

ಬ್ರಿಟಿಷ್ ಪ್ರಧಾನಿ ಮಿ. ಚರ್ಚಿಲ್ಲರು ಇದೇ ತಾ 26ನೇ ರಾತ್ರಿ ತನ್ನ ದೇಶಕ್ಕೊಂದು ಆಕಾಶವಾಣಿ ಭಾಷಣವಿತ್ತರು ಭಾಷಣೋದ್ದೇಶವು ಯುದ್ಧಸ್ಥಿತಿಯ ಪರಾಮರ್ಶೆಯಾಗಿರದೆ ಪ್ರಚಾರಮಾತ್ರವಾಗಿದ್ದುದರಿಂದ ಸ್ವಾಭಾವಿಕವಾಗಿ ಅದರ ಬಹುಭಾಗವು ಸ್ವಕಾರ್ಯ ರೀತಿಗಳ ಸಮರ್ಥನೆಯೇ ಆಗಿದ್ದಿತು. ಮಿತ್ರ ರಾಷ್ಟ್ರೀಯರೀಗ ನಡೆಸುತ್ತಿರುವ ಎರಡು ಮುಖ್ಯ ಯುದ್ಧವಿಭಾಗಗಳ ಕುರಿತು ಮಾತಾಡುತ್ತಾ ಬ್ರಿಟಿಷ್ ಪ್ರಧಾನಿಗಳು ಶಾಂತ ಸಮುದ್ರದ ಯುದ್ಧವು ಈ ಮೊದಲ ನಿರೀಕ್ಷೆಯನ್ನು ಮೀರಿ ಅತಿಬೇಗನೇ ಪ್ರಬಲಗೊಳ್ಳಬಹುದೆಂದರು 'ಜರ್ಮನಿಯ ಪತನ ಮತ್ತು ಜಪಾನಿನ ಪತನದ ನಡುವೆ ಸಮಯಹೋಗಬಹುದೆಂದು ಒಂದು ವರುಷಕ್ಕೆ ಮೊದಲು ನೆನಸಿದಂತೆ ನಾನೀಗ ನೆನಸುವದಿಲ್ಲ" ಎಂದವರ ಆಶಾದಾಯೀ ಮಾತು.

ಹಿಂದೀ ಸಮುದ್ರದಲ್ಲಿ ಪ್ರಬಲ ನೌಕಾಪಡೆ.

ಜಪಾನರ ಯುದ್ಧ ಹಡಗಗಳು ಅಮೇರಿಕಾನಿಂದ ಯುದ್ಧ ವಿಮುಖವಾಗಿ ಪಶ್ಚಿಮಕ್ಕೆ ಸಾಗಿಬಂದಂತೆ ಹಿಂದೀ ಸಮುದ್ರದಲ್ಲಿ ಸಶಕ್ತ ನೌಕಾಪಡೆಯನ್ನಿರಿಸಿದ್ದೇವೆಂದು ಮಿ ಚರ್ಚಿಲ್ಲರೆಂದರು. ಕಳೆದ ವರುಷ ಮಿ ಚರ್ಚಿಲ್ಲರೊಡನೆ ವಾಷಿಂಗ್ಟನಿಗೆ ಪ್ರಯಾಣಮಾಡಿದ್ದ, ಎಡ್ಮಿರಲ್ ಸರ್ ಜೇಮ್ಸ್ ಸೋಮರ್‌ವೆಲ್ಲೆಯವರು ಈ ನೌಕಾದಳದ ನಾಯಕರಾಗಿದ್ದಾರೆ ಬಾಲ್ಕನ್ ಮತ್ತು ಪೂರ್ವ ಭೂಮಧ್ಯ ಸಮುದ್ರ ವಲಯದ ಕೆಲಸಗಳೆಷ್ಟೋ ಇನ್ನು ಬಾಕಿಯಿವೆ ಎಂಬುದನ್ನು ಚರ್ಚಿಲ್ಲರೊಪ್ಪಿ, ಬಾಲ್ಕನ್ ವ್ಯವಸ್ಥೆ ಹಾಗೂ ಇಟೆಲಿ ವಿಜಯದ ಭರವಸೆ ವ್ಯಕ್ತಪಡಿಸಿದ್ದಾರೆ

ದ್ವಿತೀಯ ರಂಗ.

ಕಳೆದ ಮಾರ್ಚಿಯಲ್ಲಿ, ಯುರೋಪು ಯುದ್ಧವು 1941ರಲ್ಲಿ ಅಥವಾ 1945ರ ... ದಲ್ಲಿ ಅಂತ್ಯಗೊಳ್ಳುವದೆಂದು ಭವಿಷ್ಯವಾಡಿದ್ದ ಚರ್ಚಿಲ್ಲರು ಈ ಬಾರಿ ಅಂತಹ ಭರವಸೆಯನ್ನೇನೂ ಕೊಟ್ಟಿಲ್ಲ ಇಟೆಲಿಯಲ್ಲಿ ಕೇವಲ 25 ಡಿವಿಜನು ನಾಜೀ ಸೇನೆಗಳೆದಿರು ತಡವರಿಸುತ್ತಿರುವ ತಮ್ಮ ದೌರ್ಬಲ್ಯವನ್ನವರು ಮನಗಂಡಂತಿದೆ ಇದೀಗಿನ ಮೂರನೇ ವರುಷದಲ್ಲಾದರೂ ನಾಜೀ ಸೇನೆಯ ಹೆಚ್ಚಿನ ಭಾಗವನ್ನು ತಡಗಟ್ಟುವ ಹೊಣೆಯನ್ನು ಹೊತ್ತಿರುವ ರಾಷ್ಟ್ರವೆಂದರೆ ರಶ್ಯವೆಂದು ಬ್ರಿಟಿಷ್ ಪ್ರಧಾನಿಗಳು ಒಪ್ಪಿಕೊಂಡು, ದ್ವಿತೀಯ ರಂಗದ ಪೂರ್ವಭಾವೀ ಸಂಕಷ್ಟಗಳನ್ನು ಚಿತ್ರಿಸಿ ಆರಂಭಕ್ಕೆನ್ನೂ ಸಮಯಬೇಕೆಂಬ ಸೂಚನೆ ಕೊಟ್ಟಿದ್ದಾರೆ. ಆಂಗ್ಲೋ-ಅಮೇರಿಕಾನ ಆಕಾಶ ಹೊಡೆತದಿಂದ ಜರ್ಮನಿಯು ತತ್ತರಿಸುತ್ತಿದೆ ಎನ್ನುತ್ತಾ, ಈ ವರುಷದಲ್ಲೇ ಆರಂಭವಾಗಲಿರುವ ದ್ವಿತೀಯ ರಂಗದ ಆಶ್ವಾಸನೆ ಕೊಟ್ಟಿದ್ದಾರೆ.

ತಾರಣ ಸಂವತ್ಸರದ
ಉಪ್ಪು ಪಂಚಾಂಗ ರಜಿಸ್ಟರ್.
ಕ್ರಯ 0—5—0
ಪ್ರತಿಗಳು ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ

ಹಿಟ್ಲರನ ಹೊಸ ಹೆಜ್ಜೆ-ಹಿಂಭಾಗದಲ್ಲಿದ್ದವರು ಕಾಲಡಿಗೆ!

ಇಟಲಿಯಲ್ಲಿ ನಿರಾಶೆ

ಕೇಸಿನೋ ನಗರದಲ್ಲಿ ಪ್ರಬಲ ವಿಮಾನಧಾಳಿಯನ್ನನುಸರಿಸಿಕೊಂಡು ಅಷ್ಟೇ ಪ್ರಾಬಲ್ಯದಿಂದ ಮಿತ್ರರ 5ನೇ ಸೇನೆಯಾರಂಭಿಸಿದ ಧಾಳಿಯು ಅವಿಶ್ರಾಂತವಾಗಿ 10 ದಿನ ನಡೆದು ಈಗ ಪೂರ್ಣ ನಿರಾಶೆ ಕವಿದಿದೆ. ಜರ್ಮನರ ಹಿಮಾಲಯ ತುಲ್ಯ ರಕ್ಷಣಾಕೋಟೆಯನ್ನು ಭೇದಿಸಲಾರದೆ ಈಗ ಹೋರಾಟವನ್ನು ತಾವಾಗಿ ಸ್ತಬ್ಧಗೊಳಿಸಿಕೊಂಡಂತಿದೆ. ಈ ಭಗ್ನ ಮನೋಭೀಷ್ಟದಿಂದಾಗಿ ಮಿತ್ರ ಪಾಳಯದಲ್ಲೇ ನಿರಾಶೆ ಕವಿಯಹತ್ತಿದೆ.

ರಶ್ಯದಲ್ಲಿ.

ಇಡೀ ರಶ್ಯವೀಗ ತನ್ನ ಮೈಗೆ ಹತ್ತಿದ ನಾಜೀ ಕೊಳೆಯನ್ನೆಲ್ಲಾ ತೊಳೆದುಕೊಂಡು ಹಿಮ್ಮಡಿಯುಜ್ಜುತ್ತಿರುವ ಕೊನೆಯ ಕಾರ್ಯದಲ್ಲಿರುವ ನಿರ್ಮಲಜೀವಿಯಂತೆ-ಕೃತಕೃತ್ಯನಂತೆ-ಕಾಣುತ್ತದೆ. ಒಂದೆಡೆಯಿಂದ ಮಾರ್ಶಲ್ ಝುಕೋವನು ನೀಸ್ಟರಿನಿಂದ 10 ಮೈಲು ಉತ್ತರದ ಅತಿ ಪ್ರಾಮುಖ್ಯ ಕೇಂದ್ರ ಸ್ಥಳ ಪ್ರೋಸ್ಕುರೋವನ್ನು ವಶಪಡಿಸಿಕೊಂಡು, ಹಂಗೇರಿ ಮತ್ತು ಝೆಕೋಸ್ಲೊವೇಕಿಯಾಗಳ ಹೆಬ್ಬಾಗಿಲಿಂತಿರುವ ಕೆರ್ನಾಟಿಗೆ ನುಗ್ಗುತ್ತಿದ್ದಾನೆ. ಇನ್ನೊಂದು ಬದಿಯಿಂದ ಬೆಸ್ಸರೇಬಿಯಾದ ಮಾರ್ಶಲ್ ಕೊನೀವನು ಪ್ರುತ್ ಹೊಳೆ ದೃಷ್ಟಿಗೆ ಬೀಳುವವರೆಗೂ ಮುಂದೊತ್ತಿ ರುಮೇನಿಯಾದ ಗಡಿಯಲ್ಲೇ ಪ್ರತಿಭಟನಾ ಲೈನು ರಚಿಸಿಕೊಳ್ಳಲು ಜರ್ಮನರಿಗೆ ಸಮಯ ಸಾಕಾಗದಂತೆ ಮಾಡಿಬಿಟ್ಟಿದ್ದಾನೆ

ನಾಜೀಗಂಡಾಂತರ.

ಈ ಭಾಗದ ನಾಜೀ ಸೇನಾನಿ ಮೇನ್‌ಸ್ಟೀನನ ಸೇನೆ ಚೆಲ್ಲಾಪಿಲ್ಲಿಯಾಗುತ್ತಿದೆ. ಅವನು ಇನ್ನಷ್ಟು ಹಿಂದೆಸರಿದು ತೀರಾ ಪಶ್ಚಿಮದಲ್ಲಿ ನೆಲೆನಿಲ್ಲಬೇಕಾಗಿ ಬಂದಿದೆ. ರುಮೇನಿಯದ ಪ್ಲೋಯಿಸ್ಟಿ ಎಣ್ಣೆ ಬಾವಿಗಳ ಆಕ್ರಮಣಕ್ಕಾಗಿ ಕೆಂಪು ಸೇನೆ ಈಗ ಧಾವಿಸುತ್ತಿದೆ. ರುಮೇನಿಯದ ಎಣ್ಣೆಗವಿಗಳನ್ನೂ ಬಾಲ್ಕನಿನ ತನ್ನ ಸ್ಥಾನಮಾನಗಳನ್ನೂ ಉಳಿಸಿಕೊಳ್ಳುವದು ಹೇಗೆ ಎಂಬುದೇ ಈಗ ಹಿಟ್ಲರನ ಮೂಗಿನವರೆಗೂ ಬಂದಿರುವ ಮಹಾಸಂಕಟ.

ಹಂಗೇರಿ, ರುಮೇನಿಯಾ.

ಹಂಗೇರಿಯೊಳಗೆ ನಾಜೀ ಸೇನೆ ನುಗ್ಗಿಸಿ ಅದನ್ನು ಪೂರ್ತಿ ಸ್ವಾಧೀನ ಪಡಿಸಿಕೊಂಡು ಹಿಟ್ಲರನು ತನ್ನ ಸೂತ್ರಧಾರೀ ಅಧಿಕಾರಿಗಳನ್ನು ನೇಮಿಸಿದ್ದಾನೆ. ಈಗ ಹಿಟ್ಲರನ ಅಪೇಕ್ಷೆಯಂತೆ ಅಲ್ಲಿ ಸಾರ್ವತ್ರಿಕ ಸೈನ್ಯ ಸಂಗ್ರಹವಾರಂಭವಾಗಿದೆ. ಜೆನ್ನಲ್ಲೇ ರುಮೇನಿಯದ ಸರ್ತಿ. ರುಮೇನಿಯವನ್ನು ಸಂಪೂರ್ಣ ಸ್ವಾಧೀನ ಪಡಿಸಿಕೊಂಡು ಅಲ್ಲಿಯೂ ಸಾರ್ವತ್ರಿಕ ಸೇನಾ ತರಬೇತಿಯ ಆಜ್ಞೆ ಹೊರಟಿದೆ- ಸ್ವೀಟ್ಸರ್ಲೆಂಡಿನಲ್ಲಿ ತಲೆಮರೆಸಿಕೊಂಡಿರುವ ರುಮೇನಿಯದ ಮಾಜೀ ಪ್ರಭು ರಾಜಾ ಕೆರೋಲರು ಅಲ್ಲಿ ಬಹುವಾಗಿ ತನ್ನನ್ನಪೇಕ್ಷಿಸುತ್ತಿದೆಯೆಂದು ಮಿತ್ರರ ಪಕ್ಷಪಾತಿಯಾಗಿ ನುಡಿದಿದ್ದಾರೆ.

ಬಲ್ಗೇರಿಯಾ

ಆ ಮೇಲೆ ಬಲ್ಗೇರಿಯಾ. ಇಲ್ಲಿಯ ಅಧಿಕಾರಿಗಳನ್ನು ತನ್ನಲ್ಲಿಗೆ ಕರೆಸಿಕೊಂಡು ಸ್ವಸ್ವತಯಾರಿಯ ಕುರಿತು ಹಿಟ್ಲರನು ಕೊಟ್ಟ ಆಜ್ಞೆಗಳನ್ನೆಲ್ಲಾ ಬಲ್ಗೇರಿಯವು ಶಿರಸಾ ವಹಿಸಿದೆ. ಅಲ್ಲಿಯೂ ಭರದಿಂದ ಸೇನಾ ಸಂಗ್ರಹ ಕಾರ್ಯವಾರಂಭವಾಗಿದೆ ಅಂತೂ ರಶ್ಯನ್ ಸೇನೆ ಈ ರಾಷ್ಟ್ರಗಳ ಗಡಿಯೊಳಗೆ ನುಗ್ಗಿ ಬರುವ ಹೊತ್ತಿನಲ್ಲಿ ಅವೆಲ್ಲಾ ಸಂಪೂರ್ಣ ನಾಜೀಮಯವಾಗಿ ಕೆಂಪು ಸೇನೆಯನ್ನೆದುರಿಸಲಿವೆ. ರಶ್ಯಾ-ಜರ್ಮನಿಗಳ ಇಂತಹ ಭೇತಾಳ ಶಕ್ತಿಯನ್ನು ಕಂಡು ಲೋಕ ಕಂಗೆಟ್ಟುಕೊಂಡಿದೆ.

ರಶ್ಯನರ ಪ್ರಗತಿ

ರುಮೇನಿಯದ ಸಂದಿನಲ್ಲಿ ಕೆಂಪು ಸೇನೆಯ ಅಪ್ರತಿಮ ಮುನ್ನಡೆಯು ಸಾಗಿದೆ ಜೇಸ್ಸಿಯಿಂದ 48 ಮೈಲು ಮತ್ತು ಪ್ರುತ್ ಹೊಳೆಗೆ 4 ಮೈಲು ದೂರದ, ಆದಿಯಲ್ಲಿ ರುಮೇನಿಯವಲ್ಲಿ ಜರ್ಮನರ ಮುಖ್ಯ ಕಾರ್ಯಾಲಯವಿದ್ದ ಬೆಸ್ಸರೇಬಿಯದ ಬಾಲ್ಟಿಯನ್ನು ಕೆಂಪು ಸೇನೆ ಸ್ವಾಧೀನಪಡಿಸಿಕೊಂಡುದು ಮಹ ವಿಜಯವೇ ಸರಿ. ಕ್ರಿಮಿಯವನ್ನು ಸಂಪೂರ್ಣವಾಗಿ ಖಾಲಿ ಮಾಡಿ ಹಿಂದೆ ಸರಿಯಬೇಕೆಂದು ಜರ್ಮನರು ಹವಣಿಸಿರುವದು ತಿಳಿದುಬಂದಿದೆ.

ಕೇಂದ್ರ ಎಸೆಂಬ್ಲಿಯಲ್ಲಿ.

ಸರಕಾರದ ಆರ್ಥಿಕ ಮಸೂದೆಯ ಚರ್ಚೆ ನಡೆಯುತ್ತಿದೆ. ಡಾ ಖರೆಯವರು ಕಾಂಗ್ರೆಸ್ ಹಾಗೂ ಇತರ ವಿರುದ್ಧ ಪಕ್ಷೀಯರನ್ನು ವಿಷಯಬಿಟ್ಟು ಟೀಕಿಸಿದರು ಮುಸ್ಲಿಂ ಲೀಗಿನ ಉಪನಾಯಕ ನವಾಬ್ ಝಾದಾ ಲಿಯಾಖತ್ ಆಲಿಖಾನರು ಡಾ ಖರೆಯವರ ಬಣ್ಣಬದಲಾವಣೆಯ ಸಿಕಬಾಟಗಳನ್ನೆತ್ತಿ ತೋರಿಸಿ ಸಮರ್ಪಕ ಉತ್ತರಕೊಟ್ಟರು ಸರಕಾರ ಹಾಗೂ ವಿರುದ್ಧ ಪಕ್ಷಗಳವರು ಆರ್ಥಿಕ ಮಸೂದೆಯ ಪುರಸ್ಕಾರ ಮತ್ತು ತಿರಸ್ಕಾರಗಳಿಗಾಗಿ ತಂತಮ್ಮ ಪಕ್ಷೀಯರನ್ನೆಲ್ಲಾ ಒಟ್ಟುಗೂಡಿಸಿದ್ದಾರೆ. ಶ್ರೀಮತಿ ಸರೋಜಿನಿ ನಾಯಿಡು ಹಾಗೂ ಕಾಂಗ್ರೆಸ್ ಎಸೆಂಬ್ಲಿ ಸದಸ್ಯರೊಡನೆ ಪರ್ಯಾಲೋಚನೆ ನಡೆಸಿ, ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಭುಲಾಭಾಯಿ ದೇಸಾಯಿಯವರೂ ತಾ 27ರ ಎಸೆಂಬ್ಲಿ ಅಧಿವೇಶನಕ್ಕೆ ಹಾಜರಿದ್ದರು. ಆ ದಿನವೇ ಆರ್ಥಿಕ ಮಸೂದೆಯನ್ನು ಮತಕ್ಕೆ ಹಾಕುವ ಪ್ರಯತ್ನ ನಡೆದಿದೆ, ಇತ್ತಂಡದವರೂ ತಮಗೇನೇ ಬಹುಮತ ದೊರಕಲಿದೆ ಎನ್ನುತಿದ್ದಾರೆ. ಪ್ರೇಕ್ಷಕ ಗೆಲರಿಯಲ್ಲಿ ಶ್ರೀಮತಿ ನಾಯಿಡುಗಳೂ ಇದ್ದರು

ಕಾಂಗ್ರೆಸ್ ರಿಕಾರ್ಡುಗಳಿಗೆ ಗೆದ್ದಲು

ಅಲಹಾಬಾದಿನ ಅಖಿಲ ಭಾರತರಾಷ್ಟ್ರಸಭೆಯ ಆಫೀಸಿಗೆ ಸರಕಾರವು ಬೀಗಮುದ್ರೆ ಹಾಕಿ 1೯ ತಿಂಗಳ ನಂತರ ಮೊನ್ನೆ ತಾನೇ ಬಾಗಿಲು ತೆಗೆದಾಗ ಕಾಂಗ್ರೆಸ್ ಲೈಬ್ರರಿಯ ಪುಸ್ತಕಗಳೂ ಪತ್ರಿಸರಿತೆಗಳೂ ಗೆದ್ದಲು ಹಿಡಿದು ಮಣ್ಣುಪಾಲಾಗಿರುವದು ಕಂಡುಬಂತು. ಈ ರಾಷ್ಟ್ರೀಯ ಸೊತ್ತುಗಳ ರಕ್ಷಣೆಯ ಮುಂಜಾಗ್ರತೆ ವಹಿಸದ ಸರಕಾರದ ವರ್ತನೆಯ ಕುರಿತು ತರ್ಕಿಸಲು ಕೇಂದ್ರ ಎಸೆಂಬ್ಲಿಯಲ್ಲಿ ಶ್ರೀ ಎಮ್. ಎಸ್. ಗುಪ್ತರು ತಂದ ಸಭೆ ಮುಂದಿರಿಸುವ ಸೂಚನೆಯನ್ನು ಅಧ್ಯಕ್ಷರು ನಿಯಮ ಬಾಹಿರ ಮಾಡಿದರು.

ಬರ್ಲಿನ್—ಲಂಡನ್.

ಬರ್ಲಿನಿನ ಮೇಲೆ ಸಾವಿರಗಣನೆಯ ವಿಮಾನಗಳು ಕಳೆದ ವಾರದಲ್ಲಿಯೂ ಧಾಳಿ ನಡೆಸಿರುವವು; ಲಂಡನಿನ ಮೇಲೆ ನಾಜೀ ವಿಮಾನಗಳು ಅಗ್ನಿ ಬೋಂಬುಗಳನ್ನು ಸುರಿಸಿರುವವು.

ಭಾರತೀಯರ ಧೋರಣೆ

'ಯುದ್ಧಾರಂಭದ ನಂತರದ ಎಲ್ಲಾ ಘಟನೆಗಳ ಮೇಲಿಂದ ಹಿಂದೀಯರಿಗೆ ಜಪಾನರ ಮೇಲೆ ತೀಕ್ಷ್ಣ ದ್ವೇಷವಿದೆಯೆಂದು ತಿಳಿಯಬಹುದು ಜಪಾನಿನಲ್ಲಿಯೇ ಮುಸೀದಿಗಳ ರಚನೆಗನುಕೂಲತೆ ಮಾಡಿಕೊಟ್ಟು ಜಪಾನರು ಇಸ್ಲಾಮ್ ಮತೀಯರ ಸೌಹಾರ್ದ್ರ ಸಂಪಾದನೆಗೆ ಎಷ್ಟೇ ಪ್ರಯತ್ನಿಸಿದರೂ ಭಾರತೀಯ ಮುಸಲ್ಮಾನರಲ್ಲಿ ಜಪಾನರ ಮೇಲೆ ಸದಭಿಪ್ರಾಯವಿರುವವರು ಯಾರೂ ಇಲ್ಲ ಜಪಾನರ ಶಿಂಟೋತ್ವದೊಡನೆ ಹಿಂದೂತ್ವಕ್ಕೆ ಪ್ರತಿಯೊಂದು ವಿಷಯದಲ್ಲೂ ಘರ್ಷಣೆ ನಡೆಯುವ ಸಂಭವವು ಇದ್ದೇ ಇದೆ. 'ಸಹಕಾರ ಬದ್ಧ ಅಭಿವೃದ್ಧಿ' ಯೆಂದು ಜಪಾನರು ಸಾರುತ್ತಿರುವ ಅವರ ಸಂಬಂಧವು ಭಾರತೀಯ ರಾಷ್ಟ್ರೀಯತ್ವವನ್ನು ಧ್ವಂಸಗೊಳಿಸಲಿದೆ."-ಎಂದು ಸರ್. ಆಲ್ಫ್ರೆಡ್ ವಾಟ್ಸನರು 'ಗ್ರೇಟ್ ಬ್ರಿಟನ್ ಎಂಡ್ ದಿ ಈಸ್ಟ್' ಎಂಬ ಪತ್ರಿಯಲ್ಲಿ ಸ್ವಾನುಭವವನ್ನು ಬರೆದಿದ್ದಾರೆ.

ಸಾಹಸಿ ವಿಂಗಾಟೆ.

ಉತ್ತರ ಬರ್ಮಾದಲ್ಲಿ ಜನರಲ್ ಸ್ಟಿಲ್ ವೆಲ್ಲರನ್ನೆದುರಿಸಿನಿಂತ ಜಪಾನೀ ಸೇನೆಯ ಹಿಂಭಾಗದಲ್ಲಿ ಮಿತ್ರರಿಗೊಂದು ವಿಮಾನ ನಿಲ್ದಾಣ ರಚಿಸಿಕೊಂಡಿರುವ ಸಾಹಸ ಕಾರ್ಯವು ಎಲ್ಲರಿಂದ 'ಶಹಭಾಸ್' ಸಂಪಾದಿಸಿದೆಯಷ್ಟೆ. ಈ ಕೌತುಕಮಯೀ ನಿಲ್ದಾಣತಯಾರಿಯ ನಾಯಕ ಮೇಜರ್ ಜನರಲ್ ಓರ್ಡೆ ಚಾರ್ಲ್ಸ್ ವಿಂಗಾಟೆ,ಡಿ.ಎಸ್.ಓ. 1943ರಲ್ಲಿ ಇಂತಹದೇ ಒಂದು ಸಾಹಸವನ್ನು ಮಾಡಿ ವಿಂಗಾಟೇ ಅನುಭವ ಪಡೆದವರು ಪೂರ್ತಿಯಾಗಿ ಜಪಾನರಿಂದಾಕ್ರಮಿಸಲ್ಪಟ್ಟಿದ್ದ ಬರ್ಮಾದೊಳಗೆ ಅದಕ್ಕಾಗಿಯೇ ವಿಶೇಷ ತರಬೇತಿ ಪಡೆದಿದ್ದ ತನ್ನದೊಂದು ಸೇನೆಯೊಂದಿಗೆ ಬಹುದೂರಕ್ಕೆ ಕಳ್ಳಬಟಿಕೆಯಿಂದ ನುಗ್ಗಿ ಹೋಗಿ, ಎಷ್ಟೆಷ್ಟೋ ಕೌತುಕಗಳನ್ನು ನಿರ್ಮಿಸಿ ಸುರಕ್ಷಿತವಾಗಿ ಇವರು ಮರಳಿದ್ದರು ವಿಂಗಾಟೆಯ ಪ್ರಾಯ ಕೇವಲ 39. ಗೂಢಾಚರಣೆ, ಕಷ್ಟ ಸಹನೆ, ದೂರದೃಷ್ಟಿ, ಗುಪ್ತಗುಪಿತ್ವ-ಇವೆಲ್ಲಾ ಅವರಲ್ಲಿ ಮೂರ್ತಿಮತ್ತಾಗಿವೆ. ಅವರ ತರುಣಪತ್ನಿಯೀಗಲೂ ಲಂಡನಿನಲ್ಲಿದ್ದಾಳೆ. ತನ್ನ ಅನುಯಾಯಿಗಳ ಮೇಲೆ ಅತುಲ ಪ್ರೇಮ, ಆದರೆ ಶಿಸ್ತೆಂದರೆ ಪ್ರಾಣವಾಗಿರುವ ಈ ವಿಂಗಾಟೆ, ಪೆಲಸ್ತೈನಿನ ತನ್ನ ಘನಕಾರ್ಯಗಳಿಂದಾಗಿ ಡಿ. ಎಸ್. ಓ. ಸಂಪಾದಿಸಿದ್ದರು. ಆ ಮೇಲೆ ಅಬಸೀನಿಯದ ಜನರನ್ನು ಇಟಲಿಯಾನರಿಗಿದಿರಾಗಿ ಗೊರಿಲ್ಲಾ ವಿಧಾನದಿಂದ ಎತ್ತಿಕಟ್ಟುವ ಸಾಹಸಮಾಡಿದ್ದರು ಹೀಗೆ ಗುಪ್ತಗಾಮಿ ಚಟುವಟಿಕೆಗಳಿಗೆ ಹೆಸರು ಹೊಂದಿದವರೀಗ ವೈರಿಯಾಕ್ರಮಿತ ಬರ್ಮಾವಲಯದೊಳಗಡೆಯಲ್ಲೇ ವಿಮಾನ ನಿಲ್ದಾಣವೊಂದನ್ನು ರಚಿಸಿ ಒಂದು ಹೊಸಯುದ್ಧ ಚಮತ್ಕೃತಿಯನ್ನೇ ನಿರ್ಮಿಸಿದರು.

ಗೃಹ ಸಮಸ್ಯೆ.

ಬ್ರಿಟನಿನ ಗೃಹಾಡಳಿತವನ್ನು ಟೀಕಿಸುತ್ತಿರುವವರನ್ನು ತೀವ್ರವಾಗಿ ಖಂಡಿಸಿ, ಗೌರವಾನ್ವಿತ ಹಾಗೂ ಪ್ರಾಮುಖ್ಯ ವ್ಯಕ್ತಿಗಳು ಕೂಡಾ ಭಾವೀ ಜಾಗತಿಕ ವ್ಯವಸ್ಥೆಯ ಪ್ರತಿಬಿಂಬವೇನೆಂಬುದನ್ನು ತಿಳಿಸದುದಕ್ಕಾಗಿ ಸರಕಾರವನ್ನು ಟೀಕಿಸುತ್ತಿರುವದಕ್ಕೆ ಅಸಮ್ಮತಿ ವ್ಯಕ್ತಪಡಿಸಿ, ಈ ಯುದ್ಧಕಾಲದಲ್ಲಾದರೂ ಜನತೆಯ ಸಾಮಾಜಿಕ ಅಭಿವೃದ್ಧಿಗಾಗಿ ಇಂಗ್ಲೆಂಡಿನ ಮಟ್ಟಿಗೆ ನಡೆದಿರುವ ಕಾರ್ಯಗಳನ್ನು ವರ್ಣಿಸಿದರು.

The Canara Industrial & Banking Syndicate, Ltd.

Estd] Head Office. UDIPI. [1925

NOTICE.

Is hereby given that 92 5 % Cumulative Preference Shares in the Syndicate, each Re. 1 paid will be sold by public auction at the Registered Office of the Syndicate ("Mukund Nivas", Udipi) on Saturday 8th April, 1944 at 4 P. M. in order to recover the debts due to the Syndicate by the concerned Share-holders

Intending bidders are requested to be present at the time of auction.

"MUKUND NIVAS" UDIPI. 28—3—1944.

K. V. Shenoy. Secretary.

ನವಯುಗ

ವಾರ್ಷಿಕ ಚಂದಾ ವಿವರ.

(1943ನೇ ವಾರ್ಷಿಯಿಂದ)

ವರ್ಷಕ್ಕೆ (ಸ್ಥಳೀಯ) 3-12-0

(ಟಪ್ಪಾಲು ದ್ವಾರ)-4-8-0

ಚಂದಾ ಹಣ ಬಾಕಿಯಿರುವವರು ದಯಮಾಡಿ ಕೂಡಲೇ ಕಳುಹಿಸಿ ಕೊಡುವಂತೆ ಅಪೇಕ್ಷಿಸಲಾಗಿದೆ

ಮೆನೇಜರ್.

ದಕ್ಷಿಣ ಕನ್ನಡ

ಮಂಗಳೂರು

ಪ್ಲೇಗಿನ ವರದಿ:—ತಾ ೧೯-೩-೪೪ ರಿಂದ ೨೪-೩-೪೪ರ ವರೆಗೆ ವೆಬ್‌ಸ್ಟರ್ ಮಾರ್ಕೆಟ್ ವಠಾರ, ಅದರ ಸುತ್ತುಮುತ್ತಿನಲ್ಲಿ ಇಲಿಗಳು ಬೀಳುತ್ತಲಿರುವ ತಾ ೨೩ರಂದು ಫಲ್ನೀರ್ ಬಜಾರದಲ್ಲಿ ಬಿಡಾರವಿದ್ದ ಒಬ್ಬರಿಗೆ ಪ್ಲೇಗು ತಗಲಿದ್ದು ಅವರನ್ನು ಗವರ್ನಮೆಂಟ್ ಆಸ್ಪತ್ರೆಗೆ ಒಯ್ಯಲಾಗಿದೆ.

'ವಿಶ್ವಕರ್ನಾಟಕ'ದ ಮೇಲಿನ ನಿರ್ಬಂಧ:—ಕರ್ನಾಟಕದ ಪತ್ರಿಕೋದ್ಯೋಗಿ ಸಂಘದ ಕಾರ್ಯನಿರ್ವಾಹಕ ಮಂಡಲದ ಅವಸರದ ಸಭೆಯು ತಾ. ೨೫ರಂದು ಉಪಾಧ್ಯಕ್ಷ ಶ್ರೀ ಪಿ ಎಸ್. ಕುಡ್ವ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಂಗಳೂರಿನ ವಿಶ್ವಕರ್ನಾಟಕ ದೈನಿಕದ ಮೇಲೆ 'ಒಂದು ವರ್ಷದ ವರೆಗೆ ಪತ್ರಿಕೆಯನ್ನು ಹೊರಡಿಸಬಾರದು' ಎಂದು ಮೈಸೂರು ಸರಕಾರವು ಹೊರಡಿಸಿರುವ ನಿರ್ಬಂಧವನ್ನು ಸಮಿತಿಯು ಖಂಡಿಸುವ ಮತ್ತು ಸರಕಾರವು ಮೇಲಿನ ಆಜ್ಞೆಯನ್ನು ಒಡನೆಯೇ ಹಿಂತೆಗೆಯಬೇಕೆಂದು ಒತ್ತಾಯಿಸುವ ಗೊತ್ತುವಳಿಯನ್ನು ಸಮಿತಿಯು ಸ್ವೀಕರಿಸಿತು.

ಆಸ್ಪತ್ರೆಯಲ್ಲಿ ಮರಣ:—ಉಪ್ಪಿನಂಗಡಿಯ ಬಳಿ ಕೆಲವರಿಂದ ತಿವಿಯಲ್ಪಟ್ಟು ವೆನ್‌ಲಾಕ್ ಆಸ್ಪತ್ರೆಗೆ ತರಲ್ಪಟ್ಟಿದ್ದ ಶ್ರೀ ನಾರಾಯಣ ರೈಗಳು ತಾ ೧೮ರಂದು ಮರಣ ಹೊಂದಿದರು.

ಗೆಣಸು ಹೊರ ಹೋಗಬಾರದು - ಜಿಲ್ಲಾ ಕಲೆಕ್ಟರರು ತಮ್ಮ ಒಂದು ಪ್ರಕಟಣೆಯಲ್ಲಿ, ಗೆಣಸನ್ನು ನಮ್ಮ ಜಿಲ್ಲೆಯಿಂದ ವಿದ್ಯಾ [illegible] ಆಧಿಪತ್ಯದ ಹೊರಗಿನ ಯಾವ ಪ್ರಾಂತ್ಯಕ್ಕೂ ಕಳುಹಿಸಬಾರದಾಗಿ, ಭಾರತ ರಕ್ಷಣಾ ಶಾಸನ ವಿಧಿಗನುಸಾರವಾಗಿ ನಿರ್ಬಂಧಿಸಿದ್ದಾರೆ.

ಜಿಲ್ಲೆಯ ಪ್ರಮುಖ ಜಮೀನ್ದಾರ:—ರ ಸಭೆಯೊಂದು ತಾ. ೧೯ರಂದು ಜರಗಿ, ವ್ಯವಸಾಯದ ಅಭಿವೃದ್ಧಿಗಾಗಿ ಸಹಕಾರಿ ಸಂಘವೊಂದನ್ನು ಸ್ಥಾಪಿಸಿದರು.

ಕಸದ ರಾಶಿಗಳು:—ಪ್ರತಿಯೊಂದು ರಸ್ತೆಯಲ್ಲಿಯಂತೆ ಕಸದ ರಾಶಿಗಳು ಕಾಣಿಸುತ್ತಿವೆ; ಡಬ್ಬಿಗಳು ಹಾರಿಹೋಗಿವೆ, ದಾಂತೇಲಬ ನಾರ್ತ್ವದೆ ಕಸವನ್ನು ಸಾಗಿಸುವ ಯತ್ನ ಕಾಣುವುದಿಲ್ಲ. ಹಾಗೆಯೇ ಅನೇಕ ರಸ್ತೆಗಳಲ್ಲಿ ಚರಂಡಿಗಳೂ ಕೊಳೆಯಿಂದ ತುಂಬಿ ನಾರುತ್ತಿವೆ.

ಬ್ಯಾಂಕಿನ ಶಾಖೆ: —ಮಾಂಗಳೂರ ನಾಯಕ್, ಲಿಮಿಟೆಡ್-ಇವರ ಬ್ಯಾಂಕ್ ಶಾಖೆಯೊಂದು, ಇದೇ ಬರುವ ಎಪ್ರಿಲ್ ಮೊದಲನೇ ವಾರದಲ್ಲಿ ನಗರ ಲೇಕ್ಸ್‌ವ್ಯೂದಲ್ಲಿ ತೆರೆಯಲ್ಪಡುವುದೆಂದು ತಿಳಿದು ಬರುತ್ತದೆ

ಧಾನ್ಯ ದವಸಗಳ ಧಾರಣೆಗಳು:- ಏರುತ್ತಲಿವೆ, ಕೇಳಿದಷ್ಟು ವಸ್ತುಗಳು ಸಿಕ್ಕುತ್ತಲೇ ಇಲ್ಲ.

ಪೋಲಿಸ್ ಪಂದ್ಯಾಟಗಳು: - ಕಳೆದ ಶನಿವಾರ, ಪೋಲಿಸ್ ಮೈದಾನಿನಲ್ಲಿ ಜರಗಿದುವು. ಮಾನ್ಯ ಜಿಲ್ಲಾ ಜಡ್ಜರು ಬಹುಮಾನ ವಿತರಣ ಮಾಡಿದರು, ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರ ಪತ್ನಿಯವರ ಹಸ್ತದಿಂದ ಬಹುಮಾನಗಳು ಕೊಡಲ್ಪಟ್ಟವು.

ಕೃಷ್ಣಪ್ಪ ಸ್ಮಾರಕ ಬೆಡ್‌ಮಿಂಟನ್ ಟೂರ್ನಮೆಂಟ್ ನಡೆದು, ಬಹುಮಾನ ವಿತರಣವು, ಜಿಲ್ಲಾ ಕೇಂದ್ರದ ಶ್ರೀ ಎಸ್. ಅಣ್ಣಪ್ಪ ಕಾಮತ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ತಾರುಣ್ಯ

ಕಳೆದುಹೋದ ವೀರ್ಯಸ್ತಂಭನ ಮತ್ತು ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು,

ಪುತ್ತೂರು ಏಜಂಟರು: **ಪೈ ಫಾರ್ಮಸಿ**

ಉಡುಪಿ

ಜೀರ್ಣೋದ್ಧಾರ ಕಾರ್ಯ:—ಉಡುಪಿ ತಾಲೂಕು ಕೊಡವೂರು ಗ್ರಾಮದ ದೈವಳಕಂಬಳಕಟ್ಟದಲ್ಲಿರುವ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರಾಂಗ ಲಿಂಗಪ್ರತಿಷ್ಠಾ, ಅಷ್ಟಗಂಧ, ಬ್ರಹ್ಮಕಲಶ ಮಹಾಭಿಷೇಕ, ರಂಗಪೂಜಾದಿ ಮಹೋತ್ಸವಗಳು ನಿಷ್ಠೆ ವಿಧಿಲೋಪವಿಲ್ಲದೆ ದೈವಳಕಂಬಳ ಮನೆ ಕೊಡಂಕೂರು ಸೀನ ಸೆಟ್ಟರ ನೇತೃತ್ವದಲ್ಲಿ ಜರಗಿದವು. ಸಾಧಾರಣ ಹದಿನೈದು ವರುಷಗಳಿಂದ ಸರಕಾರೀ ತಸದೀಕು ಸಿಕ್ಕದೆ ಇದ್ದುದು ಇನ್ನು ಸಿಕ್ಕುವಂತಾದುದು ಅಭಿನಂದನೀಯವು.

ಶ್ರೀಕೃಷ್ಣ ಸನ್ನಿಧಾನದ ಭೋಜನ ಶಾಲೆಯಲ್ಲಿ ಕೆಲವು ಅನಾಥ ನಿರ್ಗತಿಕರಿಗೆ ಪ್ರವೇಶ ಚೀಟುಗಳು ಕೊಡಲಾಗಲಿಲ್ಲವೆಂದು ಸುದ್ದಿ.

ಸಹಕಾರಿ ಡಿಪೋಗಳಲ್ಲಿ ಬೆಳ್ತಿಗೆ ಅಕ್ಕಿಯು ಸಿಗುವುದಿಲ್ಲ. ಈ ವಾರ ಕೆಲವು ಡಿಪೋಗಳಲ್ಲಿ ಬೆಳ್ತಿಗೆ ಅಕ್ಕಿ ಚೀಟಿನವರಿಗೆ ಒಂದು ಯಾ ಎರಡು ಸೇರಿನಂತೆ ಸುಗ್ಗಿ ಅಕ್ಕಿ ಕೊಡಲಾಯಿತೆಂದು ತಿಳಿದು ಬರುತ್ತದೆ, ತಾರತಮ್ಯದ ಕುಚ್ಚಿಗೆ ಅಕ್ಕಿ ಸಹ ಬಡವರಿಗೂ ಸಿರಿವಂತರಿಗೂ ಒಂದೇ ತರನಾಗಿ ದೊರೆಯುವುದಿ ವದರು ಬಡಬಗ್ಗರ ದೂರಿದ್ದಿದೆ ಎಂದೋದು ಬಾತ್ಮಿ.

ಹರಿಜನ ಸೇವಾ ಸಂಘ:—ತಾ 12-3-44ರಿಂದ 19-3-44ರ ತನಕ ಪುತ್ತೂರು, ಬೆಳ್ಳರೆ ಮತ್ತು ಬೊಕ್ಕಾಡಿ ಮೊದಲಾದ ಕಡೆಗಳಲ್ಲಿ ಹರಿಜನ ಸೇವಾ ಪ್ರಚಾರಕಾರ್ಯವು ನಡೆದಿತ್ತು. ಸುಮಾರು ರೂ 400|-ರಷ್ಟು ಸಂಗ್ರಹವಾಗಿದೆ ಇದೇ ಸಂಬಂಧ ಪುತ್ತೂರಿನಲ್ಲಿ ಒಂದು ಯಕ್ಷಗಾನ ಸಮಾರಂಭವೂ ಯಶಸ್ವಿಯಾಗಿ ಜರಗಿತ್ತು. ಜಿಲ್ಲಾ ಸೇವಕರಾದ ಶ್ರೀ ನಾರಾಯಣ ಕಿಲ್ಲೆಯವರೊಡನೆ ಶ್ರೀ ಬಿ. ನಾರಾಯಣ ಶೇಕರ್ ಮೊದಲಾದ ಮಹನೀಯರು ತುಂಬಾ ಸಹಕರಿಸಿದ್ದರು.

ತಾ. 26-3-44ರಲ್ಲಿ ಶ್ರೀ ಕಿಲ್ಲೆಯವರು ಕುಂದಾಪುರಕ್ಕೆ ಹೋಗಿದ್ದು ಅಲ್ಲಿಯ ಹರಿಜನ ಸೇವಕ ಸಂಘದ ಸದಸ್ಯರ ಸಭೆಯು ಶ್ರೀ ಗಂಗೊಳ್ಳಿ ಸಂಜೀವರಾಯರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಶ್ರೀ ಕಸ್ತೂರಿಬಾ ಗಾಂಧಿಯವರ ನಿಧನಕ್ಕಾಗಿ ದುಃಖಿಸಿ ಆಚರಿಸಿದ ತರುವಾಯ, ಬರುವ ವರ್ಷಕ್ಕೆ ಬೇಕಾದ ಖರ್ಚಿನ ಬಗ್ಗೆ ಧನಶೇಖರಿಸುವ, ಹಾಗೂ ಯೋಗ್ಯ ವಿದ್ಯಾರ್ಥಿಗಳನ್ನು ಆರಿಸಿ ಭವನಕ್ಕೆ ಸೇರಿಸುವ ಕೆಲಸಗಳ ಬಗ್ಗೆ ಅಗತ್ಯವಿರುವ ಠರಾವುಗಳಾದ ಮೇಲೆ, ಸಭೆಯು ಮುಕ್ತಾಯವಾಯಿತು.

ಉಡುಪಿ ಶ್ರೀ ಫಲಿಮಾರು ಮಠದ ಶ್ರೀಪಾದಂಗಳವರು:— ಶ್ರೀರಾಮನವಮಿ ಉತ್ಸವದ ಸಲುವಾಗಿ ಕುಂದಾಪುರಕ್ಕೆ ತಾ 24-3-44ನೇ ದಿನ ಸಾಯಂಕಾಲಕ್ಕೆ ಸೇರಿ ತಾ 25-3-44ರಿಂದ ಶ್ರೀ ರಾಮೋತ್ಸವದ ಕಾರ್ಯಕ್ರಮವನ್ನು ಆರಂಭಿಸಿರುವರು. ತಾ 25ರಲ್ಲಿ ಶ್ರೀ ಸಿದ್ದಕೋಡಿ ಅನಂತ ಉಪಾಧ್ಯಾಯರು ವೇದದಿಂದಾದ ಶ್ರೀ ಸರಸ್ವತಿಯಿಂದ ಉಪನ್ಯಾಸಗೈದರು, ತಾ 26ರಲ್ಲಿ ಶ್ರೀ ನಾರಾಯಣ ಕಿಲ್ಲೆಯವರು ಸನಾತನ ಧರ್ಮ ವಿಷಯವನ್ನು ಶ್ರೀರಾಮ ಚರಿತ್ರೆ ಪುರಸ್ಸರವಾಗಿ ಆಧುನಿಕ ದೃಷ್ಟಿಯಿಂದ ವಿಮರ್ಶಿಸಿ ಉಪನ್ಯಾಸದ ಸುರಸ ತಾತ್ಪರ್ಯದಿಂದ ಭಾಷಣವಿತ್ತರು. ಕುಂದಾಪುರದ ಮಹನೀಯರನೇಕರು ಪುರಜನರು ಈ ಕಾರ್ಯಕ್ರಮದಲ್ಲಿ ಸಹಭಾಗಿಗಳಾಗಿ ಪ್ರೋತ್ಸಾಹವನ್ನೀಯುತ್ತಲಿದ್ದಾರೆ. ತಾ 25ರಂದು ಕೋಟೇಶ್ವರದ ಮಾಗಣೆ ಹತ್ತುಸಮಸ್ತರ ಬೆಳ್ಳಿ ದಿಂಡಲೂ ತಾ 26ರಲ್ಲಿ ಕುಂದಾಪುರ ಶ್ರೀ ರಾಮ ಭಜನಾ ಸಂಘದ ಹತ್ತು ಸಮಸ್ತರಿಂದಲೂ ಪೂಜೆ ನಡೆದದೆ.

ಮೂಲ್ಕಿ:—ಸ್ಥಳೀಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜಾತ್ರೆ ಕಾಲಾವಧಿ ಉತ್ಸವವು ಈ ಕೆಳಗಿನಂತೆ ಜರಗಲಿರುವವು ತಾ 7-4-44ನೇ ಶುಕ್ರವಾರ ಧ್ವಜಾರೋಹಣ, ತಾ 8-4-44ನೇ ಶನಿವಾರ ಅಯನೋತ್ಸವ, ತಾ 9-4-44ನೇ ರವಿವಾರ ಪೇಟೆಸವಾರಿ, ತಾ 10-4-44ನೇ ಸೋಮವಾರ ಕೊಪ್ಪಲಸವಾರಿ, ತಾ 11-4-44ನೇ ಮಂಗಳವಾರ ಬಾಕಿ ಮಾರುದೀಪ, ತಾ 12-4-44ನೇ ಬುಧವಾರ ಕೆರೆದೀಪ, ತಾ 13-4-44ನೇ ಗುರುವಾರ ರಥಾರೋಹಣ (ಹಗಲು) ತಾ 14-4-44ನೇ ಶುಕ್ರವಾರ ರಥೋತ್ಸವ ಮತ್ತು ಅವಭೃತ. (ರಾತ್ರೆ)

ಕರಂಗಿಪೇಟೆ:— ಸ್ಥಳೀಯ ಹಾಯರ್ ಎಲಿಮೆಂಟರಿ ಶಾಲೆಯ ಇಪ್ಪತ್ತೇಳನೇ ವಾರ್ಷಿಕೋತ್ಸವ ಧರ್ಮಂತಿಯು ತಾ 1-4-1944ಕ್ಕೆ ಖಾನ್ ಸಾಹೇಬ್ ಎಚ್. ಎಸ್. ಹುಸ್ಸೇನ್ ಸಾಹೇಬ್, ಬಹದ್ದೂರ್ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ನೋಟೀಸು.

ಉಡುಪಿ ಡಿ. ಮುಂ. ಕೋರ್ಟಿನಲ್ಲಿ.

O. P No 38/1944.

1 ಸಂಸ್ಥಿತಿಯಾಗಿ ಸೀಲುಮತಿ ಬಾಯಿ-2ನೇ ಅರ್ಜಿದಾರನ ಹೆಂಡ್ತಿ 2. ಗಿರಿರಾಯ ಪೈ-ಉಡ್ಪಿ ರಾಮಚಂದ್ರ ಕುಂದಾಪೈಗಳ ಮಗ, ಶಿವಳ್ಳಿ ಗ್ರಾಮದ ಉಡ್ಪಿ ಕಸಬಾ — ಅರ್ಜಿದಾರರು ಯಾ ಮೂಲಕ ಸರ್ವಜನರಿಗೆ ತಿಳಿಯ ಪಡಿಸುವದೇನಂದ್ರೆ:—

ಅರ್ಜಿದಾರರ ಮಗ ಉಡ್ಪಿ ಕಸಬೆಯಲ್ಲಿ ತಾ 25-10-43ಲ್ಲಿ ಮೃತಪಟ್ಟ ವಾಸುದೇವ ಪೈಯು "The Canara Mutual Assurance [illegible] d, Udipi." ಕಂಪೆನಿಯಲ್ಲಿ ಪಡದ ನಂಬ್ರ 6420ನೇ ಪೊಲಿಸಿಬಾಬ್ತು ಬರತಕ್ಕ ರೂಪಾ 487-12-0ಮತ್ತು "The Bombay Baroda Life Assurance Co ,Ltd., Baroda" ಕಂಪೆನಿಯಲ್ಲಿ ಪಡದ ನಂಬ್ರ P/B 6352ನೇ ಪೊಲಿಸಿ ಬಾಬ್ತು ಬರತಕ್ಕ ರೂಪಾ 1000|-ಕೂಡಾ ರೂಪಾ 1487-12-0ನ್ನು ವಸೂಲು ಮಾಡುವರೆ 1ನೇ ಅರ್ಜಿದಾರಳಗೋಸ್ಕರ 2ನೇ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ದಾಖಲು ಮಾಡಿದ ಸದ್ರಿ ಅರ್ಜಿಯು ತಾ 11-4-44ಕ್ಕೆ ತನಿಗೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಅರ್ಜಿತನಿಕೆ ಸಮಯ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬೇಕಾಗಿ ಯಾ ಮೂಲಕ ಸರ್ವ ಜನರಿಗೆ ತಿಳಿಯ ಪಡಿಸಲಾಗುತ್ತದೆ.

Haradi Ramanatha Pai.
Advocate for Petitioners

Udipi, South Kanara
Date 29—3—1944.

ಅಖಿಲ ಕರ್ನಾಟಕದ ಪುರೋಗಾಮಿ ಮಾಸಪತ್ರಿಕೆ

ಪ್ರಕಾಶಿನಿ

ಮಾರ್ಚಿ ತಿಂಗಳ ಸಂಚಿಕೆಯಲ್ಲಿ

ಹುಂಕಾರ—ಭೂತದ ಕೋಲ—ಪ್ರೇಮಾಗ್ನಿ—ಧರ್ಮಗುರು—ನ್ಯಾಸಸಿ—ಯುವತಿ—ಸೊಸೆ—ವಯೋದೋಷ—ಹನಿಗವ್ನೋಟಗಳು—ತಿಂಗಳ ಭವಿಷ್ಯ (ವ್ಯಂಗ್ಯ) ಕವಿತೆಗಳು—ಇತ್ಯಾದಿ.

ಏಜಂಟರು ಬೇಕಾಗಿದ್ದಾರೆ

ಬಿಡಿ ಸಂಚಿಕೆಗೆ 0—4—0
ವಾರ್ಷಿಕ ಚಂದಾ ರೂ. 3—0—0

ಮಾದರಿ ಸಂಚಿಕೆಗೆ 0—4—0 ಸ್ಟಾಂಪಿನೊಂದಿಗೆ ಬರೆಯಿರಿ.

ಮೆನೇಜರ್,
ಪ್ರಕಾಶಿನಿ,
ನವಯುಗ ಪ್ರೆಸ್, ಉಡುಪಿ.

ತಾರೀಕು **29—3—44**ರಿಂದ

ಪ್ರೋಹನ್ ಪಿಕ್ಚರ್ಸ್‌ನವರ

ಜೀವಾರ್

ಮಾಸ್ಟರ್ ಜಯಂತ್‌ನ ಮುಖ್ಯ ಭೂಮಿಕೆ.

ಅನಂತರ

ಸುರೇಂದ್ರ ಮತ್ತು ಬಿಬು ನಟಿಸಿರುವ

ಸಾಗರ ಚಿತ್ರ:

ಸೇವಾ ಸಮಾಜ

ನಿರೀಕ್ಷಿಸಿರಿ:- ಕನ್ನಡ ರಾಧಾರಮಣ

ಈ ವಾರದ

'ಅಂತರಂಗ'

ವಾರಪತ್ರಿಕೆಯಲ್ಲಿ

ತಾಳಮೇಳ—ಹೆಸರೇ ಹೇಳುತ್ತಿದೆ—ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ—ಜಾಣಾಣಿ ನುಗ್ಗಿದರು—ಸುಧಾರಣೆಯ ಸೋಗು—ವಾರ ಭವಿಷ್ಯ ಇತ್ಯಾದಿ.

ಬಿಡಿ ಸಂಚಿಕೆಗೆ 0—1—6

ವಾರ್ಷಿಕ ಚಂದಾ ರೂ. 4—8—0

ಅಂತರಂಗ, ಉಡುಪಿ.

CHAMPAE'S
Snow & Castrex
(Sole Distributors for India.)
Sukhananda Stores
Santhekatte, UDIPI, S. K.

ಭಾರತದೊಳಗಡೆ ಜಾಪಾನೀ ಸೇನೆ ನುಗ್ಗಿತು!

(೨ನೇ ಪುಟದಿಂದ ಮುಂದುವರಿದುದು.)

ಪ. 'ನಾನು ಕಳೆದ ಡಿಸೆಂಬರದಲ್ಲಿ ಹೇಳಿದ್ದಂತೆ ಬರ್ಮಾದಲ್ಲಿ ನಮ್ಮ ಧಾಳಿಬಲಗೊಂಡಾಗ ಉದ್ರೇಕಗೊಂಡ ಜಾಪಾನರು ಹಿಂದುಸ್ಥಾನದ ಗಡಿಯೊಳಗೆ ನುಗ್ಗುದುದರಲ್ಲಿ ಆಶ್ಚರ್ಯವೇನೂ ಇಲ್ಲ. ಆರಕಾನಿನಲ್ಲಿ ನುಗ್ಗಿ ಅಪಜಯಗೊಂಡ ಜಾಪಾನರು ಅಸ್ಸಾಮಿನ ರಕ್ಷಣಾರಹಿತ ಗುಡ್ಡ ಪ್ರದೇಶದೊಳಗೆ ಹೊಕ್ಕಿದ್ದಾರೆ ಮಾತ್ರ. ಅಸ್ಸಾಮಿನಲ್ಲಿರುವ ನಮ್ಮ ರೈಲು, ಹೊಳೆ ಪಥಗಳು ಹಾಗೂ ವಿಮಾನ ನಿಲ್ದಾಣಗಳ ಮೇಲೆ ಧಾಳಿಯಿಡಪೆ ಅವರು ಯಾವ ಅಪಾಯವನ್ನೂ ನಮಗೊಡ್ಡಲಾರರು. ಈ ಧಾಳಿಗೆ ಬೇಕಾಗುವ ಆಕಾಶ ಬಲ ಹಾಗೂ ಸರಬರಾಯಿ ಸಲಕರಣೆಗಳು ಜಾಪಾನರಿಗಿಲ್ಲವೇ ಇಲ್ಲ. ಭೂಪಟದಲ್ಲಿ ಹಿಂದುಸ್ಥಾನದ ಗಡಿಯೆಂದು ಕಾಣಿಸಿರುವ ಆ ಕಾಡುಗೆರೆಯೊಂದನ್ನು ಜಾಪಾನರು ದಾಟಿದ ಮಾತ್ರಕ್ಕೆ ನಾವು ಅನಗತ್ಯ ಆತುರಪಡಬಾರದು" ಎಂದು ಭಾರತ ಸೇನಾನಿಯ ಅಭಯದಾನ. ಆದರೆ ಅಮೇರಿಕದ ಪತ್ರಿಕೆಗಳು ದೊಡ್ಡ ದೊಡ್ಡ ತಲೆಬರೆಹಗಳೊಡನೆ ಈ ಸುದ್ದಿಗೆ ಗಣನೀಯ ಯುದ್ಧ ಘಟನೆಯ ಸ್ಥಾನ ಕೊಟ್ಟಿವೆ. 'ಜಾಪಾನರ ಭಾರತಾಕ್ರಮಣ' 'ಭಾರತದಲ್ಲಿ ಮಿತ್ರರ ಪ್ರತಿ ಹೊಡೆತ'–ಇತ್ಯಾದಿ ಕಣ್ಣ ಸೆಳೆಯುವ ದೊಡ್ಡ ದೊಡ್ಡ ತಲೆಬರಹಗಳಡಿಯಲ್ಲಿ ಬರ್ಮಾ ಗಡಿಯ ಯುದ್ಧವರ್ಣನೆ ಅಮೇರಿಕೆಯಲ್ಲಿ ಆರಂಭವಾಗಿದೆ. ಬರ್ಮಾದಲ್ಲಿ ಮಿತ್ರರ ಸೇನಾ ಪ್ರಾಬಲ್ಯದ ವರ್ಣನೆಯನ್ನಷ್ಟೇ ಕೇಳಿದ್ದ ಲಂಡನ್ ಪ್ರಜೆಗಳನ್ನೂ ಪತ್ರಿಕೆಗಳನ್ನೂ ಜಾಪಾನರ ಈ ಒತ್ತಡವು ಕೌತುಕಗೊಳಿಸಿದೆ. 'ಇದು ಸೈನಿಕಾಚರಣೆಗಿಂತಲೂ ಹಿಂದೂ ದೇಶವನ್ನು ದಿಗಿಲುಗೊಳಿಸುವ ರಾಜಕೀಯಾಚರಣೆ' ಎಂದು ಚೀನದ ಸೇನಾ ವಾಗ್ಮಿಯ ಅಭಿಪ್ರಾಯ. 'ಜಾಪಾನರು ತಮ್ಮ ಪ್ರತಿಷ್ಠೆಯನ್ನುಳಿಸಿಕೊಳ್ಳಲು, ಪ್ರಜೆಗಳಿಗೆ ನವ ಧಾಳಿಯ ವಾರ್ತೆಯೊಂದನ್ನು ಮೊರಕಿಸಿ, ಅವರ ನಿರಾಶೆಯನ್ನು ತೊಲಗಿಸಲು ಮಾಡಿದ ಉಪಾಯ ಮಾತ್ರ; ಜತೆಯಲ್ಲಿ ಭಾರತೀಯರನ್ನು ದಿಗಿಲುಗೊಳಿಸಲು ಹೂಡಿದ ಹಂಚಿಕೆ'– ಎಂದು ಮಿತ್ರರ ಕಡೆಯ ಅಂಬೋಣ.

ಧಾಳಿಯ ರೂಪ

ಆದರೆ ವಸ್ತುಸ್ಥಿತಿಯನ್ನು ಹೊಗಳಿಕೆ ಅಥವಾ ತೆಗಳಿಕೆಯಿಂದ ಬದಲಾಯಿಸಲಾಗುವದಿಲ್ಲ. ಆದ್ದರಿಂದಲೇ ಜಾಪಾನರ ಅಸ್ಸಾಮು ಪ್ರವೇಶದ ಕುರಿತು ಉದ್ವೇಗಗೊಳ್ಳದಿರುವದು ಅಸಾಧ್ಯ. ಇದೇ ತಾ. 14ರ ವರೆಗೆ ಜಾಪಾನರ ಇಂತಹ ಧಾಳಿಯನ್ನು ನಿರೀಕ್ಷಿಸುವದು ಕೂಡಾ ಅಸಾಧ್ಯವಿತ್ತು. ತಾ. 15ರಲ್ಲಿ ರಾದರೂ ಹೀಗಾಗಬಹುದೆಂದು ಭವಿಷ್ಯವಾಡುತ್ತಿದ್ದರೆ ಅವನೊಬ್ಬ ಹುಚ್ಚನೆಂದು ಪರಿಹಾಸ್ಯ ಮಾಡುವಷ್ಟು ಬರ್ಮಾ ಗಡಿಯ ಬ್ರಿಟಿಷ್ ಸೇನಾಧಿಕಾರಿಗಳು ನಿಶ್ಚಿಂತೆಯಲ್ಲಿದ್ದರು. ಹಲವು ವಾರಗಳಿಂದ ಉತ್ತರ ಬರ್ಮಾದಲ್ಲಿ ಜನರಲ್ ಸ್ಟಿಲ್‌ವೆಲ್ಲರ ಧಾಳಿ ಸಾಗುತಿತ್ತು; ಹುಕಾಂಗ್ ಕ್ಷೇತ್ರದಲ್ಲಿ 4000 ಜಾಪಾನರನ್ನು ಬಲಿಗೊಟ್ಟು ಸ್ಟಿಲ್‌ವೆಲರದನ್ನು ವಶಪಡಿಸಿಕೊಂಡಿದ್ದರು ಚಿಡ್ವಿನ್ ಹೊಳೆ ದಾಟಿ ಮುಂದೊತ್ತಿದ ಆಂಗ್ಲೋ–ಅಮೆರಿಕಾನ ಸೇನೆಯೊಂದು ಉತ್ತರ ಬರ್ಮಾದ ಮುಖ್ಯ ಕೇಂದ್ರ ಮಿಯಿಟ್ಕಿನಾದ ಕಡೆಗೆ ಧಾವಿಸುತ್ತಿದ್ದು ಸ್ಟಿಲ್‌ವೆಲರ ಸೇನೆಯೊಡನೆ ಮಿಲನಗೊಂಡರೆ ಆ ನಗರ ಬಗಲಿಗೆ ಬಿದ್ದಂತೆಯೇ. ಈ ನಡುವೆ ಸ್ಟಿಲ್‌ವೆಲರ ಸೇನೆಯನ್ನಿದಿರಿಸಿ ನಿಂತಿದ್ದ ಜಾಪಾನರ 18ನೇ ಸೇನಾ ವಿಭಾಗದ ಹಿಂಬದಿಯಲ್ಲೇ ಆಕಾಶ ಮೂಲಕ ಸೇನೆಗಳನ್ನು ಬ್ರಿಟಿಷರಿಳಿಸಿ ತಳವೂರಿಯಾಗಿತ್ತೆ ಇಂತಹ ಪರಿಸ್ಥಿತಿಯಲ್ಲಿ ಜಾಪಾನರು ಪ್ರತಿಭಟನೆಯೇ ಸರ್ವಸ್ವವೆಂದು ಒಳಗಡೆಯಲ್ಲೇ ಹುದುಗಿಕೊಂಡು ಹೋರಾಡುತ್ತಿರಬೇಕಿತ್ತು, ಆದರೆ ಜಾಪಾನೀ ಸೇನೆ ಪ್ರಬಲ ಸಂಖ್ಯೆಯಿಂದ ಟೆಂಕು ಮೊದಲಾದ ಸರ್ವೋಪಕರಣ ಸಮೇತ ಚಿಡ್ವಿನ್ ಹೊಳೆದಾಟಿ ಪಶ್ಚಿಮಾಭಿಮುಖವಾಗಿ ಧಾವಿಸಹತ್ತಿದುದೊಂದು ಕೌತುಕವೇ ಸರಿ! ಈ ಧಾಳಿಯಾದರೂ ಎಷ್ಟೊಂದು ಗುಪ್ತವಾಗಿತ್ತು, ತಾ 14ರಲ್ಲೇ ಧಾಳಿತೊಡಗಿದ್ದರೂ 19ರ ತನಕ ಅದರ ಪರಿಮಾಣವೆಂತಹುದೆಂಬುದೇ ನಮ್ಮವರಿಗೆ ತಿಳಿದಿರಲಿಲ್ಲ. ಈಗ ತಿಳಿದು ಬರುತ್ತದೆ– ಅಸ್ಸಾಮ್ ಗಡಿಯಲ್ಲಿ ಆರಂಭವಾದ ಅಪಾಯಕರ ಪ್ರಬಲ ಧಾಳಿಗೆ ತ್ರಿಮುಖಗಳಿವೆ; ಉತ್ತರ ಬರ್ಮಾದ ಸೇನೆಗಳಿಗೆ ಸರಬರಾಯಿ ಕೇಂದ್ರವಾಗಿರುವ ಇಂಫಾಲವನ್ನೂ ಅಲ್ಲಿಯ ಮುಖ್ಯ ರಸ್ತೆಯನ್ನೂ ವಶಪಡಿಸಿಕೊಳ್ಳಲು ಅದು ತ್ರಿಶೂಲವಾಗಿ 200 ಮೈಲು ವಿಸ್ತೀರ್ಣಕ್ಕೆ ಚಾಚಿಕೊಂಡು ಬರುತ್ತಿದೆ. ಇಂಫಾಲ್–ಟಿಡ್ಡಿಂ ಮತ್ತು ಇಂಫಾಲ್—ಟಮ್ಮು ರಸ್ತೆಯ ಎರಡು ಧಾಳಿಗಳನ್ನು ನಾವು ತಡೆಗಟ್ಟುತಿದ್ದೇವೆ. ಆದರೆ ನೋಮ್ರಾ ಪರ್ವತಗಳ ಈಶಾನ್ಯ ಮೂಲೆಯಿಂದ ಪ್ರಾರಂಭವಾದ ಜಾಪಾನೀ ಧಾಳಿಯ ಸ್ವರೂಪವೇ ತಿಳಿಯದಾಗಿದೆ– ಎಂದೆಲ್ಲಾ ವಾರ್ತೆ ಬರುತ್ತಿದೆ. ಉತ್ತರ ಬರ್ಮಾಯುದ್ಧದ ಸೂತ್ರ ಮೂಲದಂತಿರುವ ಇಂಫಾಲ್ ಕೇಂದ್ರ ಸ್ಥಳವನ್ನು ಆಕ್ರಮಿಸಿಕೊಳ್ಳುವದೇ ಜಾಪಾನರ ತೀವ್ರಗುರಿಯೆಂಬುದು ದುಃಖಂಡಿತ; ವೈರಿಯ ಪ್ರಗತಿಯೆಷ್ಟು, ನಮ್ಮವರ ಪ್ರತಿಭಟನೆಯೆಷ್ಟು ಎಂಬ ವಾರ್ತೆಗಳೇ ಈಗೀಗ ಸರಿಯಾಗಿ ದೊರೆಯುತ್ತಿಲ್ಲ. ಅಸ್ಸಾಮಿನಲ್ಲಿ ಬ್ರಿಟಿಷರ ಮುಂಜಾಗರೂಕತೆಯ, ಪ್ರತಿಭಟನಾ ಸಿದ್ಧತೆಯ ವಾರ್ತೆಗಳು ಬರುತ್ತಿವೆ; ವೈರಿಗಳ ಸರಬರಾಯಿ ಲೈನುಗಳ ಮೇಲೆ ಬೋಂಬು ಹಾಕುತ್ತಿರುವ ಗುಡುಗಾಟ ಕೇಳಿ ಬರುತ್ತಿದೆ; ಆದರೆ ಜಾಪಾನರ ಧಾಳಿ ಈ ತನಕ ಪ್ರಬಲವಿದೆ. ಭಾರತಮಾತೆಯ ತುದಿ ಸೆರಗು ಹಿಡಿದೆಂಬಂತೆ ಆಕ್ರಮಣವೇನೋ ಆರಂಭವಾಗಿದೆ!

ನೋಟೀಸು.

ಬಪ್ಪನಾಡು ಶ್ರೀ. ದುರ್ಗಾಪರಮೇಶ್ವರಿ ದೇವಸ್ಥಾನದ ಕಡೆಯಿಂದ ಮೂಲ್ಕಿ ಹೊಸಮನೆ ದಾಸಸೆಟ್ರ ಅಳಿಯ ಶ್ರೀ ಯಂ. ಸಿದ್ದುಶೆಟ್ರನ್ನು ಸದ್ರಿ ದೇವಳದ ಪಾರುಪತ್ಯಗಾರ (Manager)ರನ್ನಾಗಿ ನೇಮಿಸಿದ್ದು, ಸದ್ರಿಯವರು ಇದೇ ಕಳೆದ ತಾ. 9-3-1944ರಲ್ಲು ಚಾರ್ಜು ವಹಿಸಿಕೊಂಡಿರುವರು. ಇನ್ನು ಮುಂದೆ ಸದ್ರಿ ದೇವಳಕ್ಕೆ ಸಂಬಂಧಪಟ್ಟ ಸರ್ವ ವ್ಯವಹಾರಗಳನ್ನು ಅವರ ಮೂಲಕವೇ ನಡಿಸುವುದು.

(By order of the Council of Trustees)

M. Siddu Shetty,
Manager.

ಅಪೂರ್ವ ನಾಟ್ಯ ಪ್ರದರ್ಶನ

ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರು

ಮಲಬಾರಿನ ಆನಂದ ಶಿವರಾಮರೊಡನೆ

ಉಷಾರಾಣಿ, ಸೀತಾದೇವಿ, ಗಜಲಕ್ಷ್ಮಿ, ವನಜಾಕ್ಷಿ.

ಮೊದಲಾದ ಸುಂದರ ನರ್ತಕಿಯರೊಡನೆ

ನೃತ್ಯ ಭಾರತಿ ಆರ್ಕೆಸ್ಟ್ರಾ ಹಿಮ್ಮೇಳನದಲ್ಲಿ

ಭಾರತೀಯ ನೃತ್ಯಗಳನ್ನು

ಪ್ರದರ್ಶಿಸುವರು

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹೋಲಿನಲ್ಲಿ–ಮಾರ್ಚಿ ೩೧-೩೧, ಶುಕ್ರವಾರ, ಶನಿವಾರ. ವೀರಾಜಪೇಟೆ–ಹೈಸ್ಕೂಲ್ ಹೋಲಿನಲ್ಲಿ–ಮಾರ್ಚ್ ೨೬ ರವಿವಾರ. ಸೋಮವಾರಪೇಟೆ–ಮಿಡ್ಲ್ ಸ್ಕೂಲ್ ಹೋಲಿನಲ್ಲಿ–ಮಾರ್ಚಿ ೨೭ ಸೋಮವಾರ. ಪುತ್ತೂರು–ಸ್ಕೂಲ್ ಹೋಲಿನಲ್ಲಿ–ಎಪ್ರಿಲ್ ೨ ರವಿವಾರ. ಮಂಗಳೂರು–ಬಾಲಾಜಿ ಥಿಯೇಟರಿನಲ್ಲಿ–ಎಪ್ರಿಲ್ ೭ ಶುಕ್ರವಾರ. ಉಡುಪಿ–ರಾಮಕೃಷ್ಣ ಥಿಯೇಟರಿನಲ್ಲಿ–ಎಪ್ರಿಲ್ ೯ ರವಿವಾರ.

ಪ್ರತಿದಿನ ಎರಡು ಆಟಗಳು ಸಾಯಂಕಾಲ ೭ ಮತ್ತು ೧೦ಕ್ಕೆ

ಬೇಕಾಗಿದ್ದಾರೆ.

ಸದ್ಯದಲ್ಲೇ ರಂಗಭೂಮಿಗೆ ಬರಲಿರುವ ಅತ್ಯಾಧುನಿಕ ಸಾಮಾಜಿಕ ನಾಟಕ.

'ಸ್ವಾಮಿಯ ಸೋಲು'

ಈ ನಾಟಕದಲ್ಲಿ ಪಾತ್ರ ವಹಿಸಲು ಯೋಗ್ಯರಾದ ನಟನಟಿಯರು ಬೇಕಾಗಿದ್ದಾರೆ.

ಬರೆಯಿರಿ.

X ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

THE BEST PREVENTIVE IN EPIDEMICS OF

CHOLERA

"BHUVANENDRA"

CHANDRAMAS

Will give you the best results. Try once and be satisfied with the results.

Dose: For adults:– 3 to 5 drops 2 to 3 times a day with the decoction of cloves or ajwan.

For Children: 1 to 2 drops with the said decoction.

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ ೩ರಿಂದ ೫ ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್

(Incorporated in India in 1920)

Registered Office: Court Road UDIPI South Canara District

Business Offices: Udipi, Mangalore, Katapadi, Kanhangad and Kinnigoli, South Canara

Authorised and Issued Capital Rs 2,00,000/-

Subscribed and Paid up Capital Rs 2,00,000/-

Reserve Funds Rs 1,75,853/-

Short term bills are discounted to approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty three years reliable banking Service stands to our credit.

For further particulars please call at or apply to the nearest office.

Dated 31-10 1943

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ **15** ವರ್ಷಗಳಿಂದ ಠೇವೋಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದ.

The Moolky Bank Ltd, Moolky, S. K.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ನಾನಾತರ್ಹ ವಿದದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿದ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಮಂಜೆ ಪ್ರಭಾಕರಾಚಾರ್ಯರ ಇವರಲ್ಲಿಗ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

FOR SAFETY & SERVICE

THE VIJAYA BANK, LTD.,

Head office MANGALORE

Branches at:—Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ

ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು —ಮಂಗಳೂರು.

ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.



ನಮ್ಮ ಸುವರ್ಣೋತ್ಸವ ಸಂಚಿಕೆಗೆ ದಯವಿಟ್ಟು ನಿಮ್ಮ

ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು

ಬೊಂಬಾಯಿ ಪೆಟ್ಟಿ ಕಲ್ಕತ್ತಾ

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟ ಪ್ರಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ

ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ

ರೂ **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ

ಸಂಪುಟಕ್ಕೆ ರೂ **2—8—0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸು: ಬೊಂಬಾಯಿ

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ಉಡುಪಿಯ ಕೋರ್ಟುರೋಡಿನಲ್ಲಿ ಇದರ ಚೀಫ್ ಏಜನ್ಸಿ ಆಫೀಸು ಇದೀಗಲೇ ಪ್ರಾರಂಭವಾಗಿದೆ

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರ ಬೇಕಾಗಿದ್ದಾರೆ

ಪಿ. ಡಿ. ನಾನಯ್ಯ,
ದ ಕನ್ನಡದ ಚೀಫ್ ಏಜಂಟರು,
ಉಡುಪಿ

The Jupiter General Insurance Company, Ltd.,
BOMBAY

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷದವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ.—ಹಣ್ಣೇನಿದ್ದಿ ಬಿಡಬೇಕು ೭ ದಿವಸ ಸಂಪೂರ್ಣ ಔಷದದ ಕಿಮ್ಮತ್ತು ರೂಪಾಯಿ ೨—೦—೦ ಪೋಷ್ಟ ಖರ್ಚು ೧೦ಆಣೆ

ಮಾಲಕರು —ಪಾಲಪ್ಪ ಫಕೀರಪ್ಪಾ ಡಾ ಪಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷದಗಳು ಸಿಕ್ಕುತ್ತವೆ

ಹುಬ್ಬಳ್ಳಿ ಧ ವ ರ್ ಗ್ — ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ —ಕುಂಬರವಾಡಿ ಸ್ಟೋರ್ಸ ದಾವಣಗೇರಿ — ದಾವಣಗೇರಿ ಪ್ರೆಸ್ —ಆರ್ ಎಲ್ ಕರಲದಾನಿ, ಕಮಿಸ್ಸ, ಹಾವೇರಿ, ಎಮ್ಮಿಗಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಸುಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಒಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೨ **ಕೊಡಿಯಾಲಬೈಲು, ದ.ಕ**

ಸ್ಥಾಪಿತ **ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, **ಮಂಗಳೂರು**

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE.

Approved firm by the Govt Mysore

Certified by the Agent of the Govt of India in Ceylon

EDITED PRINTED & PUBLISHED BY K. H. SHETTY AT THE NAVAYUGA PRESS UDIPI S INDIA

Regd o N.M 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd 1921 ಸ್ಥಾಪಿತ

1944ನೇ ಜನವರಿಯಿಂದ ಮೂರನೆ ಸಂಪುಟಾರಂಭ ವಾಗಿದೆ.

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿಗೆ ರೂ. 0—4—0

ಮಾದರಿ ಪ್ರತಿಗೆ ಏಜಂಟ

ಸ್ಟಾಂಪಿನೊಂದಿಗೆ ಬರೆಯುವುದು.

PRAKASHINI

UDIPI

NAVAYUGA PRESS

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೩೧

FOUNDER
Sri. A. B. Shetty.

Vol. 24 No. 31

NAVAYUGA— Kannada Weekly —UDIPI, S. I.

ಉಡುಪಿ • 6—4—1944 • ಮಂಗಳೂರು.

ANTARANGA

UDIPI

ಅಖಿಲ ಕರ್ನಾಟಕದ ಹೊಸ ಮಾದರಿಯ ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ 4-8-0

ಬಿಡಿ ಪ್ರತಿಗೆ 0—1—6

ಮೆನೇಜರ್,
ಅಂತರಂಗ, ಉಡುಪಿ

The Canara Mutual Assurance Co., Ltd.

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

UDIPI, 3-4-1944 | T. K. A. Pai, MANAGING DIRECTOR.

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ನಿಮ್ಮಾಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಒಳ್ಳೆಯ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ಸೌತ್ ಕೆನರಾ ಜಿಲ್ಲೆಯ ಭಾಗದ ಪ್ರಮುಖ ಏಜಂಟರು

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ (ದ. ಕನ್ನಡ.)

ಶಾಖಾ ಕಛೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಹೊರಕ್ಕೆ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, .. ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಿಗೆ ಕೆಂಪು ಸರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸಿಖಾರ,ಕುಂಬಳಕಾಯಿ,ಬಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜಂಟರು:—ಗದಗ.-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. (ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ರಕ್ತವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಜುಮ್ಮು ಹಿಡಿ, ಮಲಬದ್ಧತೆ, ಜೀರ್ಣಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಶೇರ್ಯ ರಕ್ತವನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ರಕ್ತವರ್ಧಕ. ಪ್ರಸವ-ಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತರಕ್ತವನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತ ಮಾಡುವುದು ಬಾಟ್ಲಿ 1ರ ದರ 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕ್ರಯಪಟ್ಟಿ ಬರೆದಲ್ಲಿ ತಕ್ಷಣ ಉಚಿತದಿ ಕಳುಹಿಸಲಾಗುವುದು.

ಕೆಳವಿಳಾಸಕ್ಕೆ ಬರೆಯಿರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಷಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಉಡುಪಿ ಏಜಂಟರು:- ನವಭಾರತ ಬುಕ್ ಡಿಪ್ಪೊ, ಸಂತೆಕಟ್ಟೆ, ಉಡುಪಿ.

'ವೈರಿಯು ಹೊರಟಿದ್ದಲ್ಲಿಗೆ ಹೊಡೆದಟ್ಟುವೆವು'!

ಎಸೆಂಬ್ಲಿಯಲ್ಲಿ ಭಾರತ ಸೇನಾನಿಯ ಭಾಷಣ

ಜಪಾನರು ಅಸ್ಸಾಮ ಪ್ರವೇಶ ಮಾಡಿ- ಬ್ರಿಟಿಷ್ ಅಮೇರಿಕಾ ಪತ್ರಿಕೆಗಳ ಹಾಗೂ ಹೆಚ್ಚಿನ ಮಿತ್ರ ಸೇನಾ ತಜ್ಞರ ಅಭಿಪ್ರಾಯದಂತೆ ಹಿಂದುಸ್ಥಾನದ ನಕಾಶೆಯ ಮೂಲೆಯೊಂದನ್ನು ಹರಿದಂತಾಗಿದೆ! ಹಿಂದುಸ್ಥಾನದೊಳಗೇನೇ ನುಗ್ಗಿ ಬಂದಂತಾಗಿಲ್ಲ. ನವಡಿಲ್ಲಿಯಿಂದ ಹೊರಡುತ್ತಿರುವ ಆಗ್ನೇಯಾ ಏಸ್ಯಾ ಯುದ್ಧಮುಖ್ಯಾಲಯದ ಪ್ರಕಟಣೆಗಳು ಜಪಾನರ 'ನಷ್ಟ ಜಾತಕ'ಗಳಂತಿವೆ ಹೊರತು ಮುಂದಿಟ್ಟಾಗುವಂತೆ ಯುದ್ಧ ಸ್ಥಿತಿಯನ್ನು ವಿವರಿಸುತ್ತಿಲ್ಲ. ವಿರೋಧಿಗಳ ಸಾವು ಸುದ್ದಿಯನ್ನು ತಿಳಿಸಿ ಸಂತೋಷವನ್ನುಂಟುಮಾಡುವದಲ್ಲದೆ ಬೇರಾವ ಶುಭವಾರ್ತೆಯನ್ನೂ ಕೊಡಬಾರದೆಂಬ ಸಂಕಲ್ಪವು ಬ್ರಿಟಿಷ್ ಸರಕಾರಕ್ಕೇನೇ ಇರುವಂತಿದೆ. ಕಳೆದವಾರ ಬ್ರಿಟಿಷ್ ಜನತೆಗೆ ಮಿ. ಚರ್ಚಿಲ್ಲರಿತ್ತ ಆಕಾಶವಾಣೀ ಭಾಷಣದಲ್ಲಿ ಹಿಂದೀ ಸಮುದ್ರದಲ್ಲಿ ಪ್ರಬಲ ನೌಕಾಪಡೆಯನ್ನು ಕಾವಲಿಟ್ಟಿರುವೆವೆಂಬ ಧೈರ್ಯೋತ್ತೇಜಕ ಮಾತಿನೊಡನೆ 'ಅತಿ ಮುಖ್ಯ ಸಂಗತಿಯೆಂದರೆ ಬರ್ಮಾದಲ್ಲಿ, ನಮ್ಮಲ್ಲೊಬ್ಬನಿಗೆ ಎರಡು ಅಥವಾ ಮೂರು ಮಂದಿಯಂತೆ ಜಪಾನರನ್ನು ಕೊಲ್ಲುತ್ತಿದ್ದೇವೆ' ಎಂಬೊಂದೇ ಬಡಾಯಿಯಲ್ಲಿ ಬರ್ಮಾ ಯುದ್ಧ ಪುರಾಣವನ್ನೇ ಮುಗಿಸಿಬಿಟ್ಟಿದ್ದಾರೆ! 'ಒಳನುಗ್ಗಿದ ಜಪಾನೀ ಸೇನೆಯ ಗುರಿ ಮುಂದಿಲ್ಲ-ಹಿಂದಿದೆ. ಉತ್ತರ ಬರ್ಮಾ ಮತ್ತು ಅರಕಾನಿನ ನಮ್ಮ ಒತ್ತಡವನ್ನು ಕಡಿಮೆ ಮಾಡುವದಕ್ಕಾಗಿಯೇ ಈ ವಿರುದ್ಧ ದಿಕ್ಕಿನ ಸಾಹಸ' ಎನ್ನುವವರೇ ಬಹುಮಂದಿ 'ಇಂಫಾಲ್ ಯುದ್ಧ ದೃಷ್ಟಿಯಿಂದ ಅಷ್ಟೊಂದು ಮುಖ್ಯವಲ್ಲ'- ಎಂದು 'ದ್ರಾಕ್ಷೆ ಕಹಿ' ಎಂಬ ಜಂಬುಕ ನೀತಿಯಂಗೀಕರಿಸಿದವರು ಕೆಲವರು. ಇಂತಹ ಟೊಳ್ಳುವಾದಗಳಿಂದ ವಾತಾವರಣವು ಮುಸುಕಾಗಿರುವಾಗ ಹಿಂದುಸ್ಥಾನದ ಕಮಾಂಡರ್-ಇನ್-ಚೀಫ್ ಜನರಲ್ ಸರ್. ಕ್ಲಾಡೆ ಅಚಿನ್‌ಲೆಕರು ಕಳೆದ ತಾ 31ರಲ್ಲಿ ಕೇಂದ್ರ ಎಸೆಂಬ್ಲಿಯಲ್ಲಿತ್ತ ಭಾಷಣವೊಂದು ತೋರ್ಗಂಭದಂತಿದೆ. ಅವರಾಡಿರುವ ಭವಿಷ್ಯವಿನ್ನೂ ಕಾಲಗರ್ಭದಲ್ಲಿದೆ-ಆದರೆ ಅವರು ಬಿಡಿಸಿ ತೋರಿಸಿದ ಸದ್ಯಸ್ಥಿತಿಯ ನಕಾಶೆಯು ಮಾತ್ರ ನಮ್ಮ ಮುಂದೇನೇ ಇದೆ. ಆದ್ದರಿಂದ ಅದರ ಮುಖ್ಯಭಾಗವನ್ನು ಇಲ್ಲಿ ಉದ್ಧರಿಸಿದ್ದೇನೆ.

ಸೇನಾನಿಯ ಭಾಷಣ

ಹಲವು ವರುಷಗಳ ನಂತರ ಇದೀಗ ಪ್ರಥಮ ಬಾರಿ ಎಸೆಂಬ್ಲಿಯ ಬಹಿರಂಗ ಅಧಿವೇಶನದಲ್ಲಿ ಬಾಯಿ ತೆರೆದ ಜನರಲ್ ಸರ್ ಆಚ್‌ಲೆಕ್ನರು "ಈ ಸಭೆಗೆ ತಿಳಿದಿರುವಂತೆ, ಇಲ್ಲಿಯ ಯುದ್ಧ ಚರಣೆಯ ಹೊಣೆ ಹೊತ್ತಿರುವ ಲೋರ್ಡ್ ಲುಯಿಸ್ ಮೌಂಟ್‌ಬೇಟನರು ನನಗೆ ತಿಳುಪಿಸಿದಂತೆ ನಾನಿದನ್ನು ನಿವೇದಿಸಿಕೊಳ್ಳುತ್ತೇನೆ"ಎಂಬ ಮುನ್ನುಡಿಯೊಡನೆ ಭಾಷಣವಾರಂಭಿಸಿದರು. "ಹಿಂದುಸ್ಥಾನದೊಳಗೆ ನುಗ್ಗಲು ಜಪಾನರಿಗೆ ಬರ್ಮಾದಲ್ಲಿರುವ ಹಾದಿಗಳೆಂದರೆ ಎರಡು. ಒಂದು ಅರಕಾನಿನಿಂದ ಚಿತ್ತಗಾಂಗ್ ಮತ್ತು ಬಂಗಾಳ ಪ್ರಾಂತ್ಯದ ವರೆಗಿರುವ ದಕ್ಷಿಣದ ಹಾದಿ, ಮತ್ತೊಂದು, ನಿಬಿಡ ಪರ್ವತ ವಲಯಗಳ ಮಣಿಪುರ ಅಸ್ಸಾಮುಗಳ ಕಡೆಗಿರುವ ಉತ್ತರದ ಹಾದಿ. ಅರಕಾನಿನಲ್ಲಿ ಜಪಾನರ ಪರಾಭವದ ವಾರ್ತೆಯನ್ನು ನಾನು ಈ ಮೊದಲೇ ನಮೂದಿಸಿದ್ದೇನೆ. ಅಲ್ಲಿ ನಮ್ಮ ಸೇನೆಗಳು ಈ ವರೆಗೂ ಧಾಳಿಯಿಡುತ್ತಲೇ ಇವೆ. ಮಾಂಗ್ಡವನ್ನು ಬುಥಿಡೋಂಗನೊಡನೆ ಕೂಡಿಸಿರುವ ಪ್ರಾಮುಖ್ಯ ಸ್ಥಳದಲ್ಲಿ, ದೃಢವಾದ ಹಾಗೂ ಕೆಲವೊಮ್ಮೆ ಆತ್ಮಹತ್ಯಕಾರೀ ಪ್ರತಿಭಟನೆಗಳನ್ನಿದಿರಿಸುತ್ತಾ ವೈರಿಯನ್ನು ಹಿಂದಕ್ಕಟ್ಟುತ್ತಿವೆ. ಈ ಅತಿ ಮುಖ್ಯ ಸಂದುಕಟ್ಟಿನ ಸ್ಥಳದಲ್ಲಿ ತಡೆದು ನಿಲ್ಲಬೇಕೆಂದು ಜಪಾನರಿನ್ನೂ ನಿಕರ ಹೋರಾಟಕೊಡುತ್ತಿದ್ದಾರೆ; ಆದರೆ ನಾನೆಂದಂತೆ ಅವರು ನಿಧಾನವಾಗಿ ನೆಲೆದಪ್ಪುತ್ತಿದ್ದಾರೆ. ಇದೀಗ ದಕ್ಷಿಣ ಕಡೆಯ ಅರಕಾನ್ ವಲಯದ ಪರಿಸ್ಥಿತಿ; ನನ್ನ ಅಭಿಪ್ರಾಯದಂತೆ ಇದು ಸಮಾಧಾನಕರ.

ಪರ್ವತ ಪ್ರದೇಶ ಉತ್ತರವಲಯ.

"ಆದ್ದರಿಂದ ವಿರೋಧಿಯೀಗ ಎರಡನೇ ಹಾದಿಯಾದ ಉತ್ತರಗಡೆಯಲ್ಲಿ-ಇಂಫಾಲಿನ ದಕ್ಷಿಣದ ಚಿನ್ ಪರ್ವತದಿಂದ ಉತ್ತರ ಪೂರ್ವಕಡೆಗೆ ನೋಮ್ರಾ ಪರ್ವತಗಳ ವರೆಗಿನ 200 ಮೈಲು ವಿಸ್ತೀರ್ಣದ ದುರ್ಗಮದಟ್ಟಾರಣ್ಯ ಪರ್ವತ ಪ್ರದೇಶಗಳಲ್ಲಿ ತನ್ನ ಸೇನೆಯನ್ನು ನೂಗಿಸುತ್ತಿದ್ದಾನೆ. ಇದೇ ಕ್ಷೇತ್ರದಲ್ಲಿ ನಮ್ಮ ಮುಖ್ಯ ಸಪ್ಲೈರಸ್ತೆಯು-ಮಣಿಪುರದಿಂದ ಹೊರಟು ಕೊಹಿಮಾದ ಮಾರ್ಗವಾಗಿ ಇಂಫಾಲಿನ ತನಕ-ಮುಖ್ಯ ರಣರಂಗದ ಸಾಲಲ್ಕೇಲು ಹಿಡಿದೇ ಇದೆ. ಇದೊಂದು ಮಾರ್ಮಿಕ ಅನಾನುಕೂಲತೆ. ಆದರಿದು ಪ್ರಕೃತಿದತ್ತ ಪರಿಸ್ಥಿತಿ. ಈ ಭಾಗದ ಪರ್ವತಗಳೆಲ್ಲಾ ಉತ್ತರ ಮತ್ತು ದಕ್ಷಿಣದಲ್ಲಿ ಹಾಡಿಕೊಂಡಿದ್ದು, ಸೈನ್ಯಗಳು ಹಾಗೂ ಬಹುಸಂಖ್ಯೆಯ ಸಾಮಾಗ್ರಿಗಳು ಸಾಗಲಾಗವ

ಅಸಾಧ್ಯಯೋಧ ಜಪಾನೀ
ಇವನನ್ನೋಡಿಸ ಬಿಡುತ್ತಾರಂತೆ!

ಹಾದಿಯಿರುವದೆಂದರೆ ಅವುಗಳ ನಡುವಿನ ಕಂದರಗಳು ಮಾತ್ರ. ಹೀಗಾಗಿ, ಆ ಪರ್ವತಗಳಲ್ಲಿರುವ ಕಾಲ್ನಡಿಗೆಯಲ್ಲಿ ಮಾತ್ರ ಹೋಗಲಾಗುವ ಇಳಿಜಾರುಗಳ, ಕಾಲುಹಾದಿಗಳ ಮೂಲಕ ವೈರಿಯು ಮುಂಚೂಣಿ ವಂಗಡಗಳಿಗೆ ಸರಬರಾಯಿ ಪಥದ ಮೇಲೆ ಬೀಳಲು ಸಾಧ್ಯವಾಗುತ್ತದೆ. ಇಂತಹ ಕಾಲುಹಾದಿಗಳು ಅಲ್ಲಿ ಎಷ್ಟೋ ಇವೆ. ಅವುಗಳಲ್ಲೆಲ್ಲಾ ತಡೆಗಟ್ಟುವ ಪ್ರಯತ್ನಮಾಡಿದರೆ ನಮ್ಮ ಶಕ್ತಿಯು ಹರಿಹಂಚಾಗುವದಲ್ಲದೆ, ನಾವು ಎಲ್ಲೆಡೆಗಳಲ್ಲೂ ಶಕ್ತಿಹೀನರಾಗಿ ಬಿಡುತ್ತೇವೆ.

ವೈರಿಯ ಶೀಘ್ರ ವಿಜಯದ ಆತೂರ

"ವಿರೋಧಿಯ ಮುಖ್ಯ ಧಾಳಿಯಾರಂಭವಾಗಿರುವದು ಈ ಹಾದಿಯ ಮೇಲೇ ... ಉತ್ತರಗಡೆಯಲ್ಲಿ ಮಣಿಪುರದಿಂದಾರಂಭವಾಗಿ ದಕ್ಷಿಣದ ಟಿಡ್ಡಿಮ್ ಮತ್ತು ಟಾಮೂ (ಇವೆರಡೂ ಬರ್ಮಾ ಗಡಿಯಲ್ಲಿವೆ) ವರೆಗಿನ ಈ ಕ್ಷೇತ್ರದಲ್ಲೇ ಈಗಿನ ಮುಖ್ಯ ಹೋರಾಟ ನಡೆಯುತ್ತಿದೆ. ವಿರೋಧಿಯು ಕ್ಷಿಪ್ರ ತೀರ್ಮಾನ ಹೊಂದಲು ಹೆಣಗಾಡುತ್ತಿದ್ದಾನೆ. ಅವನ ಸಮೀಪದ ಹಿಂಭಾಗದಲ್ಲಿ ವ್ಯವಸ್ಥಿತ ಸರಬರಾಯಿ ಪಥವೇನೂ ಇಲ್ಲ. ಸಾಲದುದಕ್ಕೆ ಉತ್ತರ ಬರ್ಮಾದಲ್ಲಿ ಆಕಾಶ ಮೂಲಕ ಇಳಿದಿದ್ದ ನಮ್ಮ ಸೇನೆಗಳಿಂದ ಅವನಿಗಪಾಯ ಕಾದಿದೆ. ರೈಲು, ನದೀ ಹಾದಿ, ಮೊದಲಾದುವನ್ನು ಕಡಿಯುತ್ತಾ ವೈರಿಯ ಸರಬರಾಯಿ ವ್ಯವಸ್ಥೆಯನ್ನೇ ಹಾಳುಮಾಡುತ್ತಾ ಈ ಸೇನೆಗಳು ತಮ್ಮ ಇರವಿಕೆಯನ್ನೀಗ ತೋರಿಸಹತ್ತಿವೆ. ಅವುಗಳ ಧಾಳಿ ವಿಸ್ತಾರಗೊಂಡಂತೆ, ಮಣಿಪುರದ ಕಡೆಗೆ ನುಗ್ಗುತ್ತಿರುವ ವಿರೋಧಿಯ ಸರಬರಾಯಿಗೆ ಭಂಗ ಬಂದು, ಅವನು ತನ್ನ ಹಿಂಬದಿಯ ಅಪಾಯ ನಿವಾರಿಸಿಕೊಳ್ಳಲು ನಿರ್ವಾಹವಿಲ್ಲದೆ ಸೈನ್ಯವನ್ನತ್ತ ಸಾಗಿಸಬೇಕಾಗುವದೆಂಬ ಆಸೆಯಿದೆ. ವಿರೋಧೀ ಸೇನೆಯ ಹಿಂಭಾಗದಲ್ಲಿರುವ ನಮ್ಮ ಈ ಬಲಗಳ ಪೂರ್ಣ ಒತ್ತಡವು ಅತಿ ಬೇಗ

(೬ನೇ ಪುಟ ನೋಡಿರಿ)

NOTICE.

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

R. E. P. 668/42

ದಿ ಪ್ರೈಮರಿ ಬೆಂಕ ಲಿಮಿಟೆಡ್, ಮಂಗ್ಳೂರು- -ವಾದಿ, ಅರ್ಜಿದಾರ

ಮತ್ತು

ಹಸನ ಕುಂಞ-2ನೇ ಪ್ರತಿವಾದಿ ರೆಸ್ಪೊಂಡೆಂಟ ನಲ್ಲಿ ರೆಸ್ಪೊಂಡೆಂಟ ಮಂಗ್ಳೂರು ಕೈಕಾರ ಕುದ್ರೋಳಿಯಲ್ಲಿರುವ ಮೊಯಿದಿನ ಕುಂಞಾಯವರ ಮಗ ಹಸನ ಕುಂಞಾಯವರಿಗೆ,

ಮೇಲ್ಕಂಡ ಅಪ್ಲಿಕೇಶನಿನಲ್ಲಿ ಮೇಲ್ಕಂಡ ರೆಸ್ಪೊಂಡೆಂಟ ಹಸನ ಕುಂಞಾಯವರಿಗೆ ಸಬ್ಸ್ಟಿಟ್ಯೂಟ್ ಸರ್ವಿಸ್ ನೋಟೀಸು ಹುಕುಂ ಆಗಿ ತಾ. 11-4-1944ಕ್ಕೆ ತನ್ನ ಬಗ್ಗೆ ಯಿಟ್ಟಿರುತ್ತದೆ-ರೆಸ್ಪೊಂಡೆಂಟರಿಗೆ ಯೇನಾದ್ರೂ ಉದಾಹರಣೆ ಕೊಡುವದಿದ್ದರೆ ತಾ 11-4-1944ನೇ ಹಗಲು 11 ಗಂಟೆಗೆ ನ್ಯಾಯಾಲಯದಲ್ಲಿ ಖುದ್ದಾಗಿ ಯಾ ವಕೀಲರ ಮೂಲಕವಾಗ್ಲಿ ಹಾಜರಾಗಿ ಹೇಳಿಕೊಳ್ಳದಿದ್ರೆ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು. ತಿಳಿದಿರುವದು-

G Narayana Rao.
Vakil for Petitioner.

ಮಂಗ್ಳೂರು
ತಾ. 28-3-44

The Victory Club

Both Vegetarian & Non vegetarian dishes

Old Post office Building,

VICTORY CLUB ROAD, UDIPI.

(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

ತಾರೀಕು **3—4—1944**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್‌ನಲ್ಲಿ

ರಣಜಿತ್ ಚಿತ್ರ

ದಿ ಗೆಸ್ಟ್ ಅಥವಾ ಮೆಹೆಮಾನ್

ಈಶ್ವರಲಾಲ್, ಶಾಮಿಮ್, ಮಾಧುರಿ, ಮುಬಾರಕ್ ಮೊದಲಾದವರು.

ಅನಂತರ:- **ಮಲಯಾಳಿ ಪ್ರಹ್ಲಾದ**

ತಾರೀಕು 9-4-44ಕ್ಕೆ ಶ್ರೀನಿವಾಸ ಕುಲಕರ್ಣಿಯವರ ಮತ್ತು ಪಾರ್ಟಿಯ "ಡಾನ್ಸ್"

ರಾವಣ ಸಭೆಯ ಹನುಮಾಂಗದರು!

ಸುರೇಶ ವೈದ್ಯ ಮತ್ತು ಡಾ। ಪ್ರೇಮ

ಬ್ರಿಟಿಷ್ ಸಾಮ್ರಾಜ್ಯದ ಕೇಂದ್ರ ನೆಲೆಯಲ್ಲಿ—ಪ್ರತ್ಯಕ್ಷ ಇಂಗ್ಲಂಡಿನಲ್ಲಿ—ಇಬ್ಬರು ಧೀರ ಭಾರತೀಯರು ಸಾಮ್ರಾಜ್ಯದ ಶಕ್ತಿಯೊಡನೆ ಎದೆಯೊಡ್ಡಿ ನಿಂತು ಘನತೆ ಮತ್ತು ಗೌರವ ಸಂಪಾದಿಸಿದ್ದಾರೆ; ಭಾರತದ ಸ್ವಾಭಿಮಾನವನ್ನೆತ್ತಿ ಹಿಡಿದಿದ್ದಾರೆ. ಆ ಪೈಕಿ, ಬ್ರಿಟನ್ನಿನಲ್ಲಿರುವ ಖಡ್ಡಾಯ ಸೈನಿಕ ಕಾನೂನನ್ನೇ ತಿರಸ್ಕರಿಸಿ, ಹೆಚ್ಚಾಗಿ ಪ್ರಾಣವನ್ನೇ ಪ್ರಾಯಶ್ಚಿತ್ತವಾಗಿ ಕೇಳುವ 'ಕೋರ್ಟ್ ಮಾರ್ಶಲ್' ವಿಚಾರಣೆಗೊಳಗಾಗಿ ಸುದೈವವಶಾತ್ ಈಗ 98 ದಿನಗಳ ಕಠಿಣ ಶಿಕ್ಷೆಗೊಳಗಾಗಿರುವ ಪತ್ರಿಕೋದ್ಯಮಿ ಶ್ರೀ ಸುರೇಶ ವೈದ್ಯರ ಎದೆಗಾರಿಕೆಯು ಅತಿ ಹೆಚ್ಚಿನದು. ಮತ್ತೊಬ್ಬರು ಬರ್ಮಿಂಗ್ಹಾಮಿನ ಭಾರತೀಯ ಸಂಘದ ಕಾರ್ಯದರ್ಶಿ ಡಾ। ಧನಿರಾಮ್ ಪ್ರೇಮ್, ಇವರು, ಮುಂದಿನ ಪಾರ್ಲಿಮೆಂಟ್ ಚುನಾವಣೆಯಲ್ಲಿ ಬರ್ಮಿಂಗ್ಹಾಮಿನಿಂದ ಭಾರತ ಸೆಕ್ರೆಟರಿ ಮಿ. ಅಮೆರಿಯವರ ಪ್ರತಿಸ್ಪರ್ಧಿಯಾಗಲು ಅವರು ನಡೆಯಿಗಿದಿದ್ದಾರೆ.

ಸುರೇಶ್ ವೈದ್ಯ.

ಈ ಲೇಖಸಿಯೋಧನ ಒಂದು ಒಂದು ಸರಕಾರವು ಬ್ರಿಟಿಷ್ ಸಾಮ್ರಾಜ್ಯ ದರ್ಪವನ್ನು ಕುಗ್ಗಿಸಿದನ್ನು, ನಮ್ಮ ಮಹಾ ಪ್ರಮುಖರ ಸಾವಿರ ಸಾವಿರ ಭಾಷಣಗಳು ತಗ್ಗಿಸಲಾರವು! ಆಜ್ಞೆಯಂತೆ ಪ್ರತಿಯೊಬ್ಬನೂ ಸೈನ್ಯಕ್ಕೆ ಸೇರಲೇ ಬೇಕೆಂಬ ಕಡ್ಡಾಯದ ಸೈನ್ಯ ಕಾನೂನಿರುವ ಇಂಗ್ಲಂಡಿನಲ್ಲಿದ್ದುಕೊಂಡು 'ನಾನು ಭಾರತೀಯ. ಸ್ವತಂತ್ರ ಭಾರತೀಯನಾಗಿ ಹೋರಾಡಬಲ್ಲೆ. ಹೊರತು ಬ್ರಿಟಿಷ್ ಸಾಮ್ರಾಜ್ಯಕ್ಕಾಗಿ ಹೋರಾಡಲಾರೆ' ಎಂಬುದೇ ಅಲ್ಲಿಯ ಸೇನಾಧಿಕಾರಿಗಳಿಗೆ ಶ್ರೀ ವೈದ್ಯರು ಕೊಟ್ಟ ಉತ್ತರ. ಸೈನ್ಯ ಶಾಖೆಯವರು ಮೂರು ವರುಷ ಬೆಂಬತ್ತಿ ಉಪದ್ರವಿಸಿದರೂ ವೈದ್ಯರ ನಿರ್ಧಾರ ಕದಲಲಿಲ್ಲ. ಕೊನೆಗೆ ಗಯೇ ಜನವರಿ 19ರಲ್ಲಿ ಸೈನಿಕ ಕಾಯಿದೆಯಂತೆ ಅವರನ್ನು ದಸ್ತಗಿರಿ ಮಾಡಿ ಬಂಧಿಸಿಟ್ಟರು. 'ಕೋರ್ಟ್ ಮಾರ್ಶಲ್' ವಿಚಾರಣೆ! ಸೇನಾ ಕಾಯಿದೆ ಮುಂದ ಜೀವಭಾಂಡಾದ ಅಪರಾಧ! ಆದರೆ ಸುರೇಶ್ 'ಪ್ರಾಣ ಬಿಡಬಲ್ಲೆ—ದೇಶದ ಗೌರವ ಕೆಡಿಸಲಾರೆ' ಎಂದು ವಿಚಾರಣೆಗೊಳಗಾದರು. ಇದೇ ಮಾರ್ಚ ೮ರಲ್ಲಿ ವಿಚಾರಣೆಯಾಗಿ 98ದಿನಗಳ ಕಠಿಣ ಶಿಕ್ಷೆಯಾಗಿದೆ. ಲಂಡನಿನಲ್ಲೀಗ ಅವರ ಬಿಡುಗಡೆಯ ಚಳವಳವೆದ್ದಿದೆ.

ಸುರೇಶ ವೈದ್ಯರು ಬೊಂಬಾಯಿಯ ರು ಕಾಲೇಜಿನಲ್ಲಿರುವಾಗಲೇ ಕಾಂಗ್ರೆಸಿನ ಉಗ್ರಗಾಮಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದವರು. ಹುಟ್ಟು ಪತ್ರಿಕೋದ್ಯೋಗಿ. ತಂದೆ ಐ. ಸಿ. ಎಸ್. ಕಲಿಯಲು ಇಂಗ್ಲಂಡಿಗೆ ಕಳುಹ ಬೇಕೆಂದಿದ್ದಾಗ ಅದಕ್ಕೊಪ್ಪದೆ ಪತ್ರಿಕೋದ್ಯಮಿಯಾಗಿ ಅಮೇರಿಕಾ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸಿ, ಕಷ್ಟ ಕಾರ್ಪಣ್ಯಗಳನ್ನನುಭವಿಸಿ 'ಟೈಮ್ಸ್' ಮತ್ತು 'ಲೈಫ್' ಪತ್ರಿಕೆಗಳ ಭಾರತ ವಿಭಾಗದ ಸಂಪಾದಕರಾಗಿ ನೇಮಿಸಲ್ಪಟ್ಟಿದ್ದರು. ಒಂದೆರಡು ಪುಸ್ತಕಗಳನ್ನೂ ಬರೆದಿದ್ದಾರೆ. ಅವರ ಇಂಗ್ಲಿಷ್ ಪತ್ನಿ ಮಾರ್ಜೋರೀ ವೈದ್ಯಳು ಪತಿಯಷ್ಟೇ ಧೀರೆಯಿದ್ದು, ಗಂಡನಂತೆಯೇ ಅವನ ಮಾತೃಭೂಮಿಯನ್ನೂ ಪ್ರೀತಿಸುವವಳು. ಅವರಿಗಿಬ್ಬರು ಮಕ್ಕಳಿದ್ದಾರೆ.

ಡಾ। ಧನಿರಾಮ್ ಪ್ರೇಮ್

"ಅಮೇರಿಯವರು ಮಿಸ್ಟರ್ ಅಮೇರಿಯೇ ಆಗಿದ್ದರೆ ನಾನವರನ್ನು ವಿರೋಧಿಸಿ ನಿಂತೇ ಸಿದ್ಧ, ಬದಲು ಮಿ. ಅಮೇರಿ ಅಲ್ಲವಾದರೆ ನಾನು ದೇಶದ ಯಾವ ಮೂಲೆಗಾದರೂ ಹೋಗಲು ತಯಾರು. ವ್ಯಕ್ತಿಶಃ ಅಮೇರಿಯವರ ಮೇಲೆ ನನಗೇನೂ ದ್ವೇಷವಿಲ್ಲ. ಇರುವ ಒಂದೇ ಒಂದು ಸಾಮಾನ್ಯ ಕಾರಣವೆಂದರೆ, ಭಾರತ ಕಾರ್ಯದರ್ಶಿಯ ಆಫೀಸು ಮುಚ್ಚಲ್ಪಡಬೇಕು; ಅವರ ಪ್ರಥಮ ಹೆಜ್ಜೆಯಾಗಿ ಆ ಆಫೀಸನ್ನು ಹಿಡಿದುಕೊಂಡವನೇ ಪಾರ್ಲಿಮೆಂಟಿನ ಸ್ಥಾನಕ್ಕಾಗಿ ಹೋರಾಡಬೇಕು. ಭಾರತದ ಪ್ರಶ್ನೆಯ ಕುರಿತು ಸಾರ್ವಜನಿಕ ಅಭಿಪ್ರಾಯ ಹೇಗಿದೆ ಎಂಬುದನ್ನು ತಿಳಿಯಲು ಇದೊಂದು ಪರೀಕ್ಷೆಯಾಗುವದು" ಎನ್ನುತ್ತಾ ಬರ್ಮಿಂಗ್ಹಾಮಿನ ಹಿಂದೀ ಡಾಕ್ಟರ್ ಧನಿರಾಮ್ ಪ್ರೇಮ್ ಮಿ. ಅಮೇರಿಗೆ ಸವಾಲನ್ನು ಕೊಡೆದಿದ್ದಾರೆ.

ಡಾ। ಪ್ರೇಮ್ ಅಲ್ಲಿಯ ಕಾಮನ್ ವೆಲ್ತ್ ಪಕ್ಷದವರು. ಆದರೂ ಮಿ. ಅಮೇರಿಯನ್ನು ಸ್ಪರ್ಧಿಸಲು ಅವರು ಆ ಪಕ್ಷದ ಟಿಕೇಟಿನಿಂದ ನಿಲ್ಲಲಿಚ್ಛಿಸುವುದಿಲ್ಲ. ಹಾಗೆ ನಿಂತರೆ ಅದೊಂದು ಪಕ್ಷದ ಪ್ರಶ್ನೆಯಾಗುತ್ತದೆ. ನನಗೆ ಭಾರತದ ಪ್ರಶ್ನೆಯೊಂದೇ ಎದ್ದು ತೋರ ಬೇಕಾಗಿದೆ. ಆದ್ದರಿಂದ ಸ್ವತಂತ್ರವಾಗಿ ನಿಲ್ಲುತ್ತೇನೆ—ಎಂದು ಡಾ। ಧನಿರಾಮರೆಂಬೋಣ. ಅವರ ಅಭಿಪ್ರಾಯದಂತೆ ಈಗಲೇ ಇಂಡಿಯಾ ಆಫೀಸು ಬರಖಾಸ್ತು ಹೊಂದ ಬೇಕು; ಭಾರತದ ಮುಖ್ಯ ಪಕ್ಷಗಳ ಸಹಕಾರ ಪಡೆದು ವೈಸರಾಯರೇ ಯುದ್ಧಾವಧಿಯ ತನಕ ಎಗ್ಜಿಕ್ಯುಟಿವ್ ಶಿರಸ್ಸಾಗಿದ್ದು ಅವರ ಸ್ಥಾನ ಮಾಸಗಳು ಡೊಮಿನಿಯನುಗಳ ಗವರ್ನರ್ ಜನರಲುಗಳದೇ ಇರಬೇಕು. ಆ ಮೇಲೆ ಆಡಳಿತ ನಿರ್ಮಾಣಕ್ಕಾಗಿ ಸಾರ್ವತ್ರಿಕ ಚುನಾವಣೆಯಾಗ ಬೇಕು. ಡಾ। ಧನೀ ರಾಮ್ ಪ್ರೇಮ್ ಬರ್ಮಿಂಗ್ಹಾಮ್ ಕ್ಷೇತ್ರದಲ್ಲಿ ಒಳ್ಳೇ ವರ್ಚಸ್ಸಿರುವ ಮನುಷ್ಯ. ಮಿ. ಅಮೇರಿಯನ್ನು ಪಾರ್ಲಿಮೆಂಟಿಗೆ ತನ್ನ ಪರವಾಗಿ ಆರಿಸಿ ಕಳುಹಿಸಿದ ಬರ್ಮಿಂಗ್ಹಾಮ್ ಈಗ, ಅದಕ್ಕಾಗಿ ತಾನೊಂದು ಮಹಾಪರಾಧ ಮಾಡಿದಂತೆ ಕುದಿಯುತ್ತಿದೆ. ಭಾರತ ಸೆಕ್ರೆಟರಿಯನ್ನು ತನ್ನ ಹೊಟ್ಟೆಯಲ್ಲೇ ಹುಟ್ಟಿದ ರೋಗ ಎಂಬಂತೆ ದ್ವೇಷಿಸುತ್ತಿದೆ. 'ಮಿ. ಅಮೇರಿ ರಾಜೀನಾಮೆ ಕೊಡಬೇಕು' ಎಂದು ಇಲ್ಲಿಯ ಮತದಾರರು ಒತ್ತಾಯಿಸಿಕೊಂಡಿದ್ದರು. ಮತ್ತೆ ಇಲ್ಲಿನ ಸಾರ್ವಜನಿಕ ಸಭೆಯಲ್ಲಿ ಅಮೇರಿಯವರ ಪ್ರತಿಯೊಂದು ಮಾತೂ ಪ್ರತಿಭಟನೆಗೆ ಗುರಿಯಾಗಿ ಕೊನೆಗೆ ಅವರ ಪದ್ಮುಖದಲ್ಲೇ ಅವಿಶ್ವಾಸ ಸೂಚನೆ ಸ್ವೀಕೃತವಾಗಿತ್ತು. ಹೀಗೆ ಬರ್ಮಿಂಗ್ಹಾಮ್ ಈಗ ಅಮೇರಿಯವರ ಪಾಲಿಗೆ ಕಾದ ನೆಲವಾಗಿ ಸುಡುತ್ತಿದೆ. ಇಲ್ಲಿಂದಲೇ ಡಾ। ಪ್ರೇಮರ ಧೈರ್ಯದವರಿಗೆ ತಲುಪಿದೆ ಭಾರತ ಕಾರ್ಯದರ್ಶಿಯನ್ನು ಇಲ್ಲಿಯೇ ಚುನಾವಣೆಗೆ ನಿಲ್ಲುವರೋ ಬೇರೆ ಮತದಾರ ಕ್ಷೇತ್ರವನ್ನು ಆರಿಸುವರೋ ನೋಡಬೇಕಿದೆ.

ಪ್ರಕಟಣೆ.

ಉಡುಪಿ ತಾಲೂಕು ಉಪ್ಪಿನಕೋಟೆಯ ಹವರಾಲು ಬೈಲು ಮನೆ ಕಾಳಮ್ಮ ಶೆಡ್ತಿಯವರ ಮಗಳು ನನ್ನ ತಾಯಿ ... ಶೆಡ್ತಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ

ಕಳೆದ ತಾ 17-2-1944ರ ನವಯುಗಪತ್ರಿಕೆಯಲ್ಲಿ ನನ್ನ ಹೆಸರಿನದ್ದಾಗಿಯೆಂದು ಪ್ರಕಟಣೆಯನ್ನು ಪ್ರಕಟಿಸುವರೆ ತಾ 10-2-44ರಲ್ಲಿ ನನ್ನ ದಸ್ಕತನ್ನು ಮಾಡಿಕೊಳ್ಳ ಬೈಲು ರಾಮಯ್ಯ ಹೆಗ್ಡೆಯ ವಗೈರೆಯವರು ಕೂಡಿ ಪಡೆದು ಪ್ರಕಟಿಸಿರುತ್ತಾರಾಗಿ ತಿಳಿಯುತ್ತೇನೆ.

ಸದ್ರಿ ಪ್ರಕಟಣೆಯಲ್ಲಿ ಕಾಣುವ ವಿಶಿಷ್ಟ ಸಂಗತಿಗಳು ತೀರಾ ಸುಳ್ಳು ವ, ಕಲ್ಪನೆಯವುಗಳು. ಅದು ನನ್ನ ತಿಳುವಳಿಕೆಯಿಂದ ಪ್ರಕಟಿಸಲ್ಪಟ್ಟವುಗಳಲ್ಲ. ಅದು ನಿಜವಾಗಿ ನಾನು ತಾ 13-2-44ರಲ್ಲಿ ದಸ್ಕತು ಮಾಡಿದ್ದಾಗಿರುತ್ತದೆ.

ನಾವು ಸುಮಾರು 15 ಹದಿನೈದು ಜನ ಮೊಂದಿರುವ ಒಂದು ಅವಿಭಕ್ತ ಕುಟುಂಬದವರಾಗಿರುತ್ತೇವೆ. ನಮಗೆ ತೀರಾ ಬೂಟಿಬೆ ಜಮೀನು ಮಾತ್ರವಿದ್ದು ಅದ್ರ ಹುಟ್ಟುವಳಿ ಉತ್ಪತ್ತಿಯಿಂದ ನಮ್ಮೆಲ್ಲರ ಜೀವನ ನಡೆಸಿಕೊಂಡು ಬರುವದು ಅತೀ ಕಷ್ಟವಾಗಿ ನನ್ನೊಳಗೆ ವೈಮನಸ್ಯ ಉಂಟಾಗುವ ಸಂದರ್ಭದಲ್ಲಿ ನಮ್ಮ ಹಿತಚಿಂತಕರೆನಿಸಿದ್ದ, ನಾವೆಲ್ಲರೂ ಕೂಡಿ ನಮ್ಮ ಕುಟುಂಬದ ನ್ಯಾಯವಾದ ಪ್ರಲೋಭನವ, ಹಿತಕ್ಕಾಗಿ ಶ್ರೀಯುತ ಅಲ್ತಾರು ಭುಜಂಗ ಶೆಟ್ಟಿಗೆ ನ್ಯಾಯವಾದ ಬೆಲೆಗೆ ಸದ್ರಿ ಭೂಮಿಯನ್ನು ಕ್ರಯಕ್ಕೆ ಕೊಡುವದಾಗಿ ನಿರ್ಣಯಿಸಿ ತಾ 5-2-1944ರಲ್ಲಿ ಕ್ರಯಪತ್ರವನ್ನು ಬರೆಸಿ ದಸ್ಕತು ಸಿದ್ಧ ಮಾಡಿಸಿ ಸದ್ರಿ ಪತ್ರವನ್ನು ರಿಜಿಸ್ಟ್ರಿ ಬ್ರಹ್ಮಾವರ ಸಬ್ ಆಫೀಸಿನಲ್ಲಿ ಅರ್ಜಿದಾಖಲು ಮಾಡಿದ ತರುವಾಯ ವೈಲ್ಯೂಯವ ಮಹಾಶಯರುಗಳ, ಅತೀ ಕಮ್ಮಿ ಬೆಲೆಗೆ ಸದ್ರಿ ಆಸ್ತಿಯನ್ನು ತಾವೇ ಪಡೆಯುವ ದುರಾಲೋಚನೆಯಿಂದ ನನ್ನನ್ನು ದುರ್ಬೋಧಿಸಿ ನನಗೆ ಬೇಕು ಬೇಕಾದ ಅಕಿಕೋರಿಕೆ ರಿಜಿಸ್ಟ್ರಿ ವೇಳೆ ರಿಜಿಸ್ಟ್ರಿಗೆ ಹೋಗದಂತೆ ಆತಂಕಿಸಿ ನಿಲ್ಲಿಸಿದ್ದಲ್ಲದೆ ತಾ 18-3-1944ರಲ್ಲಿ ಸದ್ರಿ ಸಬ್ ರಿಜಿಸ್ಟ್ರಾರವರ ಮುಂದೆ ಸದ್ರಿ ದಸ್ತಾವೇಜು ರಿಜಿಸ್ಟ್ರಿ ಬಗ್ಗೆ ನನ್ನ ಕಬೂಲು ಯಿಲ್ಲವೆಂಬುದಾಗಿ ನನ್ನಿಂದಾಗಿಯೆಂದು ಆಕ್ಷೇಪಣೆ ಹೇಳಿಕೆಯನ್ನು ಸಹಾ ಕೊಡಿಸಿ ಕಡೆಗೆ ನನ್ನನ್ನು ಮೋಸಗೊಳಿಸಿದರು.

ತರುವಾಯ ಕ್ರಯದಾರರಾದ ಶ್ರೀಯುತ ಆಲ್ತಾರು ಭುಜಂಗ ಶೆಟ್ರು ಸದ್ರಿ ದಸ್ತಾವೇಜಿನ ರಿಜಿಸ್ಟ್ರೇಷನ್ನಿಗೆ ಬಗ್ಗೆ ಮುಂದಿನ ವ್ಯವಹಾರ ನಡೆಸುತ್ತಾರೆಂತ ನಾನು ತಿಳಕೊಂಡು, ನನ್ನ ದುರಭಿಪ್ರಾಯದ ತಪ್ಪನ್ನು ಅವರೊಡನೆ ಹೇಳಿಕೊಂಡು, ಸದ್ರಿ ದಸ್ತಾವೇಜಿಗೆ ನಾನು ಕಬೂಲಿ ಪತ್ರದ್ವಾರ ತಾ. 29-3-44ರಲ್ಲಿ ಸಮ್ಮತಿಯನ್ನು ಕೊಟ್ಟು ರಿಜಿಸ್ಟ್ರ ಮಾಡಿ ಸದ್ರಿ ನೇಲ್ಪಣವ ಕ್ರಯದಸ್ತಾವೇಜಿನಲ್ಲಿ ವಿವರತೋರುವ ಪ್ರಕಾರ ಕ್ರಯದ ಪ್ರತಿಫಲವನ್ನು ಸಂಪೂರ್ಣ ಪಡೆದುಕೊಂಡಿರುತ್ತೇನೆ. ಆದ್ದರಿಂದ ಸದ್ರಿ ಕ್ರಯಕ್ಕೆ ಕಾರ್ಯವಾದ ವಿಶಿಷ್ಟ ಆಸ್ತಿವಗೈರೆಯಲ್ಲಿ ನನಗೆ ಯಾ ನಮ್ಮ ವಾರಿಸ್ದಾರ್ ಪ್ರತಿನಿಧಿಯರಿಗೆ ಯಾವ ತರದ ಯಿಷ್ಟವನ್ನಾದ್ರೂ ಹಕ್ಕು ಸಂಬಂಧ ಯಿರುವದಿಲ್ಲ.

ಯಿನ್ನು ಮುಂದೆ ಯಾರಾದ್ರೂ ನನ್ನಂತೆ ಕುತಂತ್ರಿಗಳ ಕುತಂತ್ರಕ್ಕೆ ಮರುಳಾಗಿ ನಷ್ಟಕಷ್ಟಕ್ಕೆ ಶಿಲುಕಬಾರದೆಂದು ನಾನು ಯಿ ಮೂಲಕ ಸರ್ವ ಜನರಿಗೆ ವಿನಂತಿಸಿಕೊಳ್ಳುತ್ತೇನೆ.

ಎಡಪಕ್ಕಂ, ಹವರಾಲು

॥ ಯಿ ಗೆರೆ ನಿರ್ಶಾನಿ ...ದು

● ಯಿ ಯಿಡಗೈ ಹೆಬ್ಬೆಟ್ಟಿನ ಗುರ್ತು ಸಪ್ರಿ ನಶೆಡ್ತಿಯದು. ಯಿ ಬಗ್ಗೆ ಸಾಕ್ಷಿ ಶೀನಪ್ಪಶೆಟ್ಟಿ ... ಯಿದು ಸದ್ರಿ ನಾ... ಶೀನಪ್ಪಶೆಟ್ಟಿ ಸಾಕ್ಷಿ ಒಳಿತ ...

ಅಖಿಲ ಭಾರತ ಕೀರ್ತನ ಸಮ್ಮೇಳನ

ವು ಬೊಂಬಾಯಿಯಲ್ಲಿ ಮೇ ತಿಂಗಳ ಎರಡನೆ ವಾರದಲ್ಲಿ ಜರಗಲಿರುವುದು. ಅದರ ಯಿವಲ್ಲಿ ಕೀರ್ತನ ಸ್ಪರ್ಧೆ ಹಾಗೂ ಸಂಪೂರ್ಣಹಾ ವಿಶ್ವ ವಿದ್ಯಾಲಯದ ವ ಕ್ತೃತ್ವ ಸ್ಪರ್ಧೆ ಇತ್ಯಾದಿಗಳು ಜರಗಿ ಗೆದ್ದವರಿಗೆ ಪಾರಿತೋಷಕಗಳು ಕೊಡಲ್ಪಡುವವು

ಜನರಿಂದಲೇ ಬೇಂಕುಗಳು

— ಧನ ಮತ್ತು ಧನಗೃಹಗಳಿಂದಲ್ಲ. —

ಬೇಂಕಿನ ಸಾವಿರಾರು ಕಾರ್ಯ ವಿವರಗಳನ್ನು ಪರಿಶೀಲಿಸಿ ನಿರ್ವಹಿಸುವ—ಗಿರಾಕಿಗಳ ಪೂರ್ತಿಕೆಗಳೇನೆಂದು ತಿಳಕೊಂಡು ಒದಗಿಸುವ—ಅದರಂತೆ ನಿಮಗೆ ಇತರ ಅಸಂಖ್ಯಾತ ಚಿಕ್ಕ ಪುಟ್ಟ ವಿಧಾನಗಳಲ್ಲಿ ಸೇವೆಸಲ್ಲಿಸುವ—ಆ ಜನರು......

ಭದ್ರತೆಗಾಗಿ, ಅನುಕೂಲತೆಗಾಗಿ ತಮ್ಮ ಹಣವನ್ನು ಭರವಸೆಯಿಂದ ಬೇಂಕುಗಳಿಗೆ ತರುವ ಆ ಸ್ತ್ರೀ ಪುರುಷರು............

ತಮ್ಮ ಆರ್ಥಿಕ ಅಡಚಣೆಗಳಲ್ಲೋ ಸಮಸ್ಯೆಗಳಲ್ಲೋ ಬೇಂಕುಗಳ ಸಹಕಾರವನ್ನಪೇಕ್ಷಿಸಿ ಬರುವ ಆ ಮಹನೀಯರು, ಮಹಿಳೆಯರು........

.........ಈ ಜನರಿಂದಲೇ ಬೇಂಕುಗಳಾಗುವುವು. ಈ ಮಾನವೀ ಸಂಬಂಧಗಳಿಂದ ಬೆಳೆದು ಬರುವ ಸ್ನೇಹಮಯ ಭಾವವೇ ಯಾವ ಬೇಂಕಿನ ಯಶಸ್ಸು ಮತ್ತು ಪ್ರಗತಿಯಲ್ಲಾದರೂ ಪ್ರಾಮುಖ್ಯವೆನಿಸುವುದು.

ಕೆನರಾ ಬೇಂಕು ಮೂವತ್ತೇಳು ವರುಷಗಳ ತನ್ನ ಜನತಾ ಸೇವೆಯಲ್ಲಿ ಗಳಿಸಿದ ಗೆಳೆತನಕ್ಕಾಗಿ ಗೌರವಪಡುವುದು.

ಸ್ಥಾಪಿತ. 1906.

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

Degrees Books Medicines
Free H. L. M. S, M. B, H. M. D, etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs 4. Insanity Cure Pills Rs. 10 Enclose 2 annas stamp —
Prof. Dr. N. H. Chhatbar,
Principal Indian Homeopathic Institute & Society (Govt Regd)
P. O. MAHUVA (Kathiawar Dt. India)

Sidha-Kalpa Kavach (Regd)
No. 3 Rs 2. No. 2 Rs 5 No. 1 Rs 7 Special Rs. 10. Extra Special Rs 17 Love marriage health, wealth. Ask any six questions with M. O Pe. 1/- and get correct answers by returnpost Life reading Rs.10No V.P.P.Send M. O. Free, pamphlets.
Prof Dr N. H. Chhatbar.
P. O. MAHUVA (Kathiawar India)

The Canara Banking Corporation Limited.
ESTD 1906.

Authorised Capital	Rs. 25,00,000/-
Subscribed ,,	,, 16,00,000/-
Paid up ,, ..	,, 13,25,785/-
Reserves	,, 4,10,000/-

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegrapic Transfers

ನವಯುಗ

ಉಡುಪಿ, ಗುರುವಾರ ೬-೪-೧೯೪೪

ನ್ಯಾಯಶೋಧನೆ

ಭಾರತ ರಕ್ಷಣಾ ಶಾಸನದ ಹೆಸರಿನಿಂದ ಅಧಿಕಾರಿಗಳಿಂದಾದ ಅನ್ಯಾಯಗಳನ್ನು ಸರಕಾರದಿಂದಲೇ ನೇಮಿಸಲ್ಪಟ್ಟ ನ್ಯಾಯಸ್ಥಾನಗಳು ಬೆಳಕಿಗೆಳೆದು ಖಂಡಿಸಿದಷ್ಟು ಒಳಿವಾಗಿ ನಿಷೇಧಿಸಿದವರು ಬೇರೊಬ್ಬರಿಲ್ಲ. ಹಿಂದುಸ್ಥಾನದ ಚರಿತ್ರೆಯಲ್ಲಿ ರಕ್ಷಣಾ ಶಾಸನದ ಅವಧಿಯೊಂದು ಕಾಳ ಅಧ್ಯಾಯವಾದರೆ ಅಲ್ಲಿ ಮಿಂಚುವ ಸುವರ್ಣಾಕ್ಷರಗಳಾಗಿ ನ್ಯಾಯಸ್ಥಾನಗಳ ತೀರ್ಮಾನಗಳಿವೆ. ಐತಿಹಾಸಿಕ ಆಗೋಸ್ತು ಗಲಭೆಯ ನಂತರ ನ್ಯಾಯಸ್ಥಾನಗಳಿಗೂ ಸರಕಾರೀ ಕಾನೂನು ಪ್ರಯೋಗಾಧಿಕಾರಿಗಳಿಗೂ, ಪ್ರತಿಯೊಂದು ಸಂದರ್ಭದಲ್ಲಿಂಬಂತೆ ನಡೆದು ಬಂದ ಘರ್ಷಣೆಗಳ ವಿದ್ಯಮಾನವನ್ನು ತನ್ನದೇ ಆದ ಮನಸ್ಸಾಕ್ಷಿ ಮತ್ತು ಮದಾಂಧತೆಗಳ ಪರಸ್ಪರ ಘರ್ಷಣೆಯಿಂದ ಕದಡಿಹೋದ ಒರ್ವ ವ್ಯಕ್ತಿಯ ಅಂತರಂಗಾಂದೋಲನಕ್ಕೆ ಹೋಲಿಸಬಹುದು! ಈ ಕುರಿತು ಒಂದು ವರುಷಕ್ಕೆ ಮೊದಲೇ ಇಂಗ್ಲೆಂಡಿನ 'ಮ್ಯಾಂಚೆಸ್ಟರ್ ಗಾರ್ಡಿಯನ್' ಬರೆದಿದ್ದ ಲೇಖನವನ್ನಿಲ್ಲಿ ಉದ್ಧರಿಸಬಹುದು. ಸಾವಿರಾರು ಮಂದಿ ಭಾರತೀಯರನ್ನು ವಿಚಾರಣೆ ವಿನಹ ಬಂಧಿಸಿಡಿಸಿದ ದೇಶರಕ್ಷಣಾ ಕಾನೂನಿನ 26ನೇ ನಿಯಮವು ಕ್ರಮಬಾಹ್ಯವೆಂದು ಫೆಡರಲ್ ಕೋರ್ಟು ತೀರ್ಮಾನಿಸಿತ್ತಾಗ 'ಗಾರ್ಡಿಯನ್' ಪತ್ರಿಕೆ ಬರೆಯಿತು 'ಅಲ್ಲಿ ಇದೊಂದು ಸಮಾಧಾನಕರ ಸಂಗತಿಯಿರುತ್ತಿದ್ದಿಲ್ಲವಾದರೆ ಅತಿದೊಡ್ಡ ಅತೃಪ್ತಿಯೇ ಗತಿಯಾಗುತಿತ್ತು. ಅದೆಂದರೆ ಭಾರತದಲ್ಲಿ ನಮ್ಮ ಪಾಲಿಗೆ ಸ್ವತಂತ್ರ ನಿಷ್ಪಕ್ಷಪಾತ ಕೋರ್ಟುಗಳಿವೆ (ಪ್ರತಿಯೊಂದು ಸಂದರ್ಭದಲ್ಲಿ ಅವುಗಳ ಅಧ್ಯಕ್ಷಸ್ಥಾನದಲ್ಲಿ ಬ್ರಿಟಿಷರವರೇ ಇರುತಿದ್ದರು) ಅವು, ತಾವು ಕಾನೂನಿಗೆ ಕಟ್ಟಿದ ಅರ್ಥಕ್ಕೆ ವಿರುದ್ಧವಾಗಿ ವರ್ತಿಸುವ ಎಗ್ಜಿಕ್ಯೂಟಿವ್ ಅಧಿಕಾರಿಗಳ ವರ್ತನೆಗಳನ್ನು ಖಂಡಿಸಲು ಸಿದ್ಧವಿರುವವೇ. ಆದರೆ ಅಧಿಕಾರಿಗಳು ಮಾತ್ರ ಇದರಿಂದ ಪಾಠ ಕಲಿತು ಉತ್ತಮ ಗೊಳ್ಳುತ್ತಿಲ್ಲ" ಈಗ ಒಂದು ವರುಷದ ನಂತರವಾದರೂ ಈ ವಾಣಿಯ ರಸವಾದಲ್ಲಿಲ್ಲ ನ್ಯಾಯಪಾಲಕ ನಾಮಧಾರಿಗಳ ಮತ್ತು ನ್ಯಾಯಶೋಧಕ ಕೋರ್ಟುಗಳ ವಿರುದ್ಧ ದಿಕ್ಕುಗಮನವು ನಡೆದೇ ಇದೆ. ಫೆಡರಲ್ ಕೋರ್ಟು, ಹೈಕೋರ್ಟುಗಳಂತಹ ನಿಷ್ಪಕ್ಷಪಾತಿ ನ್ಯಾಯಸ್ಥಾನಗಳು ನೆಟ್ಟು ತೋರಿಸಿದ ಕೈಗಂಭಗಳ ಕಡೆಗೆ ಪೋಲಿಸ್ ಅಧಿಕಾರಿಗಳು ಬೆನ್ನು ಹಾಕುತ್ತಾ ಬಂದಿದ್ದಾರೆ ದೃಷ್ಟಾಂತಕ್ಕಾಗಿ, ಪಾರ್ಡಿವಾಲಾ ಮೊಕದ್ದಮೆಯನ್ನು ಉಲ್ಲೇಖಿಸಬಹುದು. ದಸ್ತಗಿರಿ ಮಾಡಲ್ಪಟ್ಟಿದ್ದ ಶ್ರೀ ಜೈಪ್ರಕಾಶ್ ನಾರಾಯಣರ ಪರವಾಗಿ ಅರ್ಜಿಯೊಂದನ್ನು ಕೊಡಲು ಬೊಂಬಾಯಿಯ ಶ್ರೀ ಪಾರ್ಡಿವಾಲಾರವರು ಲಾಹೋರು ಹೈಕೋರ್ಟಿಗೆ ಹೋಗಿದ್ದಾಗ, ಕೋರ್ಟಿನ ವರಾಂಡದಲ್ಲಿಯೇ ಪೋಲಿಸರಿಂದ ದಸ್ತಗಿರಿ ಮಾಡಲ್ಪಟ್ಟಿದ್ದರು. ರಿಮಾಂಡಿನಲ್ಲಿದ್ದ ಶ್ರೀ ಪಾರ್ಡಿವಾಲರು ಹೈಕೋರ್ಟಿಗೆ ತನ್ನದೊಂದು ಅರ್ಜಿ ಬರೆದು ಪೋಲಿಸ್ ಅಧಿಕಾರಿಗಳೊಡನೆ ಕೊಟ್ಟದನ್ನು ಅಧಿಕಾರಿಗಳು ಕೋರ್ಟಿಗೆ ಮುಟ್ಟಿಸಡಿದ್ದುದಷ್ಟೇ ಅಲ್ಲ, ಅದನ್ನು ನಾಶಮಾಡಿ ಬೂದಿಮಾಡಿಸಿಕೊಂಡು ನಿಶ್ಚಿಂತೆಯಿಂದಿದ್ದರು. ಶ್ರೀ. ಪಾರ್ಡಿವಾಲರು ಈ ಕುರಿತು ಮೊಕದ್ದಮೆ ಹೂಡಿದಾಗ, 'ಅವರ ಬಿಡುಗಡೆಯಾಗಲಿದ್ದುದರಿಂದ ಈ ಅರ್ಜಿ ಅನಾವಶ್ಯಕವೆಂದು ನಾವದನ್ನು ನಾಶಮಾಡಿದೆವು' ಎಂದು ಸಂಬಂಧಪಟ್ಟ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಸುಪರಿಂಟೆಂಡೆಂಟರ ವಾದ. ಲಾಹೋರ್ ಹೈಕೋರ್ಟಿನವರು ಕಳೆದವಾರ ಕೊಟ್ಟ ತಮ್ಮ ತೀರ್ಮಾನದಲ್ಲಿ "ಹೈಕೋರ್ಟಿಗೆ ಬರೆದ ಪ್ರತಿಯೊಂದು ಅರ್ಜಿಯ ಗುಣಾವಗುಣದ ಕುರಿತು ತೀರ್ಮಾನಿಸುವ ಅಧಿಕಾರವು ಈ ಕೋರ್ಟಿನದೇ ಹೊರತು ಆ ಜವಾಬ್ದಾರಿಯನ್ನು ತನ್ನ ಮೇಲೆ ಹಾಕಿಕೊಳ್ಳುವ ಅಧಿಕಾರ ಬೇರಾರಿಗೂ ಇಲ್ಲ. ಈ ಕೋರ್ಟಿಗೆ ಕಳುಹಲ್ಪಟ್ಟ ಒಂದು ಅರ್ಜಿಯ ಕುರಿತು ಯಾವುದಾದರೊಂದು ನಿರ್ಧಾರಕ್ಕೆ ಬರುವದು ಯಾವನೊಬ್ಬ ಅಧಿಕಾರಿಯ ಕರ್ತವ್ಯವೂ ಅಗಿಲ್ಲ. ಆದ್ದರಿಂದ ಮುಂದೆಂದಿಗೂ ಯಾವ ಕಾರಣದಿಂದಾದರೂ, ಕೊಟ್ಟ ಅರ್ಜಿಯನ್ನು ತಡೆಗಟ್ಟುವ ಕೆಲಸ ನಡೆಯಲಾರದೆಂದು ನಾನು ನಂಬುತ್ತೇನೆ"-ಎಂದು ಚೀಫ್ ಜಸ್ಟೀಸರು ಒತ್ತಿ ಬರೆದಿದ್ದಾರೆ.

ಇದು ಬೆಳಕಿಗೆ ಬೀಳುವ ಅವಕಾಶ ದೊರಕಿಸಿಕೊಂಡ ಒಂದು ಘಟನೆ. ಶ್ರೀ. ಪಾರ್ಡಿವಾಲಾರಂತಹ ಬೊಂಬಾಯಿಯ ಪ್ರಸಿದ್ಧ ವಕೀಲರಿಗಾದ ಅನ್ಯಾಯವು ಲಾಹೋರು ಹೈಕೋರ್ಟಿನಂತಹ ನ್ಯಾಯಸ್ಥಾನದಲ್ಲಿ ಮುಂದೆ ಬಂದಾಗ ಸಹಜವಾಗಿ ಬಿದ್ದ ಬೆಳಕಿನು. ಆದರೆ ಪೋಲಿಸರ ಇಂತಹ ಅಧಿಕ ಪ್ರಸಂಗಗಳು ದೇಶದಲ್ಲೆಲ್ಲಾ ನಡೆಯುತ್ತಿದ್ದರೂ ಇನ್ನೂ ಅವ್ಯಕ್ತವಾಗಿಯೇ ಇವೆ ಕಾನೂನಿನ ಹೊಣೆ ಹೊತ್ತ ಮೇಲಧಿಕಾರಿಗಳು ನ್ಯಾಯಸ್ಥಾನಗಳು ಹಚ್ಚಿದ ಬೆಳಕಿನಲ್ಲಿ ಕಣ್ತೆರೆದು ನೋಡಿದರಾದರೆ ಇಂತಹ ನಿದರ್ಶನಗಳು ಹಲವಾರು ಕಾಣಬಹುದು. ಆದ್ದರಿಂದ 'ಕಾನೂನನ್ನು ಉಳಿಸಿರಿ' ಎಂದು ಕಾನೂನು ರಕ್ಷಕರನ್ನೇ ಈಗ ಕೇಳಿಕೊಳ್ಳಬೇಕಾಗಿ ಬಂದಿದೆ. ಸರಕಾರೀ ಕೋರ್ಟುಗಳು ದೇಶಾಭಿಮಾನವನ್ನು ಮುಂದಿಟ್ಟುಕೊಂಡು ತೀರ್ಮಾನ ಕೊಡುವದಿಲ್ಲ; ಕಾನೂನನ್ನು ಕಣ್ಣ ಮುಂದಿಟ್ಟುಕೊಂಡೇ ತೀರ್ಮಾನಿಸುತ್ತವೆ. ಪಾರ್ಡಿವಾಲಾ ನುರಂತದಂತಹ ಮೊಕದ್ದಮೆಗಳು ಮುಂದೆ ಬಂದಾಗಲೆಲ್ಲಾ ನಿಯಮೋಲ್ಲಂಘನೆಯು ಅಧಿಕಾರಿಗಳಿಂದಾದಷ್ಟು ಮಿಕ್ಕವರಿಂದಾಗಿಲ್ಲವೆಂಬುದನ್ನವು ಕಂಡು ಹಿಡಿದಿವೆ. ದೊಡ್ಡ ಅಧಿಕಾರಿಗಳ ಬಾಯಿಯಿಂದ ಆಗಾಗ ಬರುತ್ತಿರುವ ಗೊಂದಲ ನಿರ್ಮಾಪಕರು "ಶಾಂತಿ ಭಂಜಕರು' ಇತ್ಯಾದಿ ಬಿರುದುಗಳನ್ನು ಈ ಬೆಳಕಿನಡಿಯಲ್ಲಿ ಕಂಡರೆ, ಅವು ಸರಕಾರೀ ನೌಕರರ ಪಾಲಿನವೆಂಬುದು ಸ್ಪಷ್ಟವಾಗದಿರದು 'ಶಾಂತಿ ರಕ್ಷಕ'ರು, ಈ ರೀತಿ 'ಕಾನೂನು ಮುರಿದೇ ಕಾನೂನು ರಕ್ಷಣೆ ಮಾಡುವ'ತಮ್ಮ ವರ್ತನೆಯನ್ನು ಇನ್ನಾದರೂ ನ್ಯಾಯಸ್ಥಾನಗಳ ಸೂಚನೆಗಳಂತೆ ತಿದ್ದಿಕೊಳ್ಳಬಹುದೆ?

ದುರ್ಬೀನು

ಹೊಗೆಯೇಳುವಲ್ಲೆಲ್ಲಾ ಹೋಮವೇ ನಡಿಯುತ್ತಿರುವುದಿಲ್ಲ ನಗೆಯಿದ್ದಲ್ಲೆಲ್ಲಾ ನಲ್ಮೆಯೇ ಇರುವದಿಲ್ಲ.

೦೦ ೦೦ ೦೦

ಉಗುರು ಬೆಳೆಸಿದವನು ಪ್ರೇಮದಿಂದ ಬೆನ್ನು ಸವರಿದರೂ ಕೀರಿದಂತಾದೀತು; ಅನಾಗರಿಕನ ಸೌಹಾರ್ದ್ರವೂ ಸಂಕಟವನ್ನು ತಂದೊಡ್ಡೀತು.

೦೦ ೦೦ ೦೦

ಮಾವಿನ ಕಾಯಿಯಲ್ಲಿ ತಿರುಳು ಹೊರಗೆ-ಗೆರಟೆಯೊಳಗೆ, ತೆಂಗಿನಕಾಯಿಯಲ್ಲಿ ಗೆರಟೆ ಹೊರಗೆ-ತಿರುಳು ಒಳಗೆ. ಶಂಕೆಯಿರುವ ಸಜ್ಜನ ಮಾವಿನಕಾಯಿ-ಬಿಂಕವಿರುವ ಸಜ್ಜನ ತೆಂಗಿನಕಾಯಿ

೦೦ ೦೦ ೦೦

ಚೂರಿ ತೆಗೆದವನು ತಿವಿಯಬೇಕೆಂದೇ ಇಲ್ಲ-ಹಣ್ಣು ಕೊಯ್ದು ಕೊಡಲೂ ಬಹುದು. ಉರಿದೆದ್ದವನು ಮರ್ಮ ಭೇದಿಸಬೇಕೆಂದೇ! ಇಲ್ಲ-ಕರ್ತವ್ಯಬೋಧೆ ಕೊಡಲೂ ಬಹುದು

೦೦ ೦೦ ೦೦

ಕಾಲುಬಲವಿಲ್ಲದವ ಕೋಲನ್ನಾಧರಿಸಿಯಾದರೂ ನಿಲ್ಲುತ್ತಾನೆ, ಆತ್ಮಬಲವಿಲ್ಲದವ ಅಲ್ಪರನ್ನಾಧರಿಸಿ ನಿಂತಾದರೂ ಬಾಳುತ್ತಾನೆ

೦೦ ೦೦ ೦೦

ಬೀಜವೊಂದರಿಂದಾದ ಮರ ಹಲವು ಬೀಜಗಳನ್ನು ಬಿಡುತ್ತದೆ; ಕಾರ್ಯವೊಂದರಿಂದ ದೊರೆತ ಕೀರ್ತಿಯಿಂದಲೇ ಹಲವು ಕಾರ್ಯಸಾಧನೆಯಾಗುತ್ತದೆ.

೦೦ ೦೦ ೦೦

ಪಲ್ಲಕಿ ಹೊರುವವರು ಬೇರೆ, ಪಲ್ಲಕಿಯೇರುವವರು ಬೇರೆ ಕಾರ್ಯವೂ ಹಾಗೇನೇ-ಪ್ರಯತ್ನವೊಬ್ಬರದಾದರೆ ಪ್ರತಿಫಲವಿನ್ನೊಬ್ಬರಿಗೆ.

ವಿಲಯ ಹೊಂದಿದ ವಿಂಗೇಟ್!

ಯುದ್ಧಕಾಲ; ಅಲ್ಪ-ಅಮೂಲ್ಯವೆಂಬ ಭೇದವಿಲ್ಲದೆ ಇಂದಿದ್ದುದನ್ನು ನಾಳೆಯೇ ಇಲ್ಲದಂತೆ ಮಾಡುವ ಅದ್ಭುತ ಕಾಲ. ವೈರಿಯಾಕ್ರಮಿತ ಬರ್ಮವನ್ನು ತನ್ನ ಸ್ವಂತ ಮನೆಯಂಗಳದಂತೆ ಭಾವಿಸಿ, ಅಲ್ಲಿ ಕೌತುಕದಾಯೀ ಆಟಗಳನ್ನಾಡಿದ್ದ ಮೇಜರ್ ಜನರಲ್ ವಿಂಗೇಟರ ಸಾಹಸಗಳನ್ನು ಕಳೆದ ವಾರ ವರ್ಣಿಸಿದ್ದರೆ ಈ ವಾರ ಅವರ ಸಾವನ್ನೇ ತಿಳಿಸುವ ಯೋಗ ಒದಗಿತು! ಹೆಗ್ಗಣ ಕಾರ್ಯ ಪ್ರವೀಣ—ಗೋರಿಲ್ಲಾ ಶಿಖಾಮಣಿ-ಜನರಲ್ ವಿಂಗೇಟರು ವಿಮಾನ ಅವಘಡದಿಂದ ಕೊಲ್ಲಲ್ಪಟ್ಟರು.

ಬರ್ಮದೊಳಗಡೆ ವಿರೋಧಿ ಸೇನೆಯ ಹಿಂಭಾಗದಲ್ಲಿ ತಾನೇ ವಿಮಾನ ಮೂಲಕ ಇಳಿಸಿದ್ದ ಸೇನಾ ಶಿಬಿರಾಣಗಳ ಪರೀಕ್ಷಾ ಕಾರ್ಯ ಮುಗಿಸಿಕೊಂಡು ಜನರಲ್ ವಿಂಗೇಟರು ಮಾರ್ಚಿ ತಾ 24ರಲ್ಲಿ ವಿಮಾನ ಹತ್ತಿ ಹಿಂದುಸ್ಥಾನಕ್ಕೆ ಹೊರಟಿದ್ದರು. ಹಿಂದುಸ್ಥಾನ-ಬರ್ಮಾಗಡಿಯ ಅರಣ್ಯ ಪ್ರದೇಶಗಳ ಮೇಲಿಂದ ಅಮೇರಿದ್ದ ಅಮೇರಿಕನ್ ಬೋಂಬರ್ B-25. ವಿಮಾನ ಹಾರಿ ಬರುತಿತ್ತು-ವಿಮಾನದಲ್ಲಿ ನಾಲ್ಕೈದು ಮಂದಿ ಅಮೆರಿಕಾನರು, ಬೇರಿಬ್ಬರು ಪ್ರಯಾಣಿಕರು ಕೂಡಾ ಇದ್ದರಂತೆ. ಬರ್ಮಾಗಡಿದಾಟಿ ಭಾರತಾಕಾಶಕ್ಕೆ ಬಂದಾಗಲೇ ವಿಮಾನ ಅವಘಡಗೊಂಡು ಬೆಂಕಿಹತ್ತಿ ಭಾರತ ಗಡಿಯೊಳಕ್ಕೆ ಬಿದ್ದು ಬಿಟ್ಟಿತು, ಎಲ್ಲರೂ ಮರಣಗೊಂಡರು. ಅವಘಡಕ್ಕೇನು ಕಾರಣ? ಎನೆಂಬುದು ಈ ವರೆಗೂ ತಿಳಿದಿಲ್ಲ. ಆ ರಾತ್ರಿ ಒಬ್ಬ ಅಮೇರಿಕನ್ ವೈಮಾನಿಕನು ಪರ್ವತ ವಲಯದಲ್ಲಿ ಉಲ್ಕಾಪಾತದಂತಹ ದೊಡ್ಡ ಬೆಂಕಿಯನ್ನು ಕಂಡು ವರದಿ ಮಾಡಿದ; ವಿಂಗೇಟರ ವಿಮಾನವು ಮರಳಿ ಬಂದಿಲ್ಲವೆಂಬುದನ್ನರಿತ ವಿಮಾನಾಧಿಕಾರಿಗಳು ಮರುದಿನ ಮುಂಜಾನೆಯೇ ಹಲವು ವಿಮಾನಗಳನ್ನು ಶೋಧನೆಗಾಗಿ ಕಳುಹಿ ಕೊಟ್ಟರು. ಮುರಿದು ಬಿದ್ದ ವಿಮಾನಾವಶೇಷಗಳನ್ನೂ ವಿಂಗೇಟ್ ಮತ್ತು ಇತರರ ಶವಗಳನ್ನೂ ಪತ್ತೆ ಹಚ್ಚಿದವರು ಇವರೇ. ಆ ಪರ್ವತಾರಣ್ಯದಲ್ಲಿ ಬಲವಾದ ಬಿರುಗಾಳಿಯೆದ್ದು ಇಂತಹ ಅವಘಡ ವುಂಟಾಗಿರಬೇಕೆಂದು ಊಹಿಸಲಾಗಿದೆ. ಆ ಕಡೆಯಲ್ಲೆಲ್ಲಾ ಬಿರುಗಾಳಿಯಂತಹ ಜಾಪಾನೀಯೋಧರ ಸುಳಿಯುತ್ತಿದ್ದಾರೆಂಬುದನ್ನು ಮರೆಯಬಾರದು.

ವಿಂಗೇಟ್ ನಿಧನದಿಂದ ಬ್ರಿಟಿಷರ ಅಗ್ರಗಣ್ಯ ಗೊರಿಲ್ಲಾ ಯುದ್ಧ ಪ್ರವೀಣನು ಅಂತರ್ಧಾನ ಹೊಂದಿದಂತಾಯಿತು. ಹೆಗ್ಗಣಚಾತುರ್ಯದಲ್ಲಿ ಅವರನ್ನು ಸರಿಗಟ್ಟುವ ಇನ್ನೊಬ್ಬನು ಜಾಪಾನೀ ಪಾಳಯದಲ್ಲಿರಬಹುದೇನೋ, ಬ್ರಿಟಿಷರಲ್ಲಿಲ್ಲ. 'ಜಾಪಾನೀ ಕಮಾಂಡರರೆಲ್ಲಾ ಮೂರನೇ ವರ್ಗದವರು ಆದರೆ ಜಾಪಾನೀ ಯೋಧರ ಯೋಗ್ಯತೆ ಬೇರೆ. ಅದು ಕೂಡಾ ಶಿಸ್ತು ಮತ್ತು ತರಬೇತಿಯ ಕೆಲಸ" ಎಂದಿದ್ದರು ವಿಂಗೇಟ್, ಅವರ ನಿಧನದಿಂದ ಬರ್ಮಾ ಯುದ್ಧದ ಇಂದಿನ ಸ್ಥಿತಿಯಲ್ಲಿ ಮಿತ್ರರಿಗಾದ ಹಾನಿಯು ಅಲ್ಪವಲ್ಲ.

ರುಮೇನಿಯದೊಳಗೆ ಕೆಂಪು ಸೇನೆಯ ಸವಾರಿ!

ಜಪಾನರಿಗೆ ಇಂಫಾಲ್ ಸಮೀಪಿಸುತ್ತಿದೆ

ಪಾಳಯದೊಳಗಿನ ಕಚ್ಚಾಟ

ಆಂಗ್ಲೋ-ಅಮೆರಿಕ-ರಶ್ಯಾಗಳೊಳಗಿನ ಮತಭೇದವು ಮತ್ತೊಮ್ಮೆ ಪ್ರಕಟವಾಗುವ ರೂಪದಿಂದ ಕಾಣಿಸಿಕೊಂಡಿದೆ. ಮಿತ್ರರನ್ನು ಸಮ್ಮತಿಕೊಡದ ಇಟೆಲಿಯ ಬೊಡೊಗ್ಲಿಯೋ ಸರಕಾರಕ್ಕೆ ರಶ್ಯಾವು ಮಂಜೂರಾತಿ ಸಲ್ಲಿಸಿ, 'ಬ್ರಿಟಿಷ್ ಅಮೇರಿಕಗಳು ಪೋಲೆಂಡಿನ ಸಂಬಂಧದಲ್ಲಿ ಅಧಿಕಾರಬದ್ಧವಾಗಿ ಮಾತಾಡುವಂತೆ ಇಟೆಲಿ ಮೊದಲಾದ ಪೂರ್ವ ಯುರೋಪು ರಾಷ್ಟ್ರಗಳ ಸಂಬಂಧದಲ್ಲಿ ರಶ್ಯದ ಅಭಿಪ್ರಾಯಕ್ಕೂ ಸಮಾನ ಮಾನ್ಯತೆ, ಮತ್ತು ಐಕ್ಯಕ್ಕೆ ಸಮಾನಾಧಿಕಾರವಿರಬೇಕೆಂದು ಸ್ಪಷ್ಟವಾಗಿ ತಿಳಿಸಿದೆ. ಇದನ್ನು ಬ್ರಿಟಿಷ್ ಅಮೇರಿಕಗಳು ಸಂತೋಷಪೂರ್ವಕ ಒಪ್ಪಿಕೊಳ್ಳುವಂತೆ ಕಾಣುವದಿಲ್ಲ.

ರಶ್ಯಕ್ಕೆ ಬೆಂಬಲಕೊಡಬೇಕಾದರೆ

ಜಪಾನಿನ ಮೇಲಿನ ಯುದ್ಧದಲ್ಲಿ ರಶ್ಯವು ಸಹಕರಿಸಬೇಕೆಂದು ಅಮೇರಿಕಾ ಸರಕಾರವು ಕೇಳಿಕೊಂಡ ಸುದ್ದಿ ಬಂದಿದೆ. ಯುದ್ಧಾನಂತರ ಮೂರು ವರುಷಗಳ ವರೆಗೆ ತನಗೆ 'ಕಡಪತ್ರಿ ಕಾಯಿದೆ'ಯಂತೆ ಸಹಾಯವನ್ನು ಸಲ್ಲಿಸಬೇಕೆಂದು ರಶ್ಯವು ಅಮೇರಿಕವನ್ನು ಕೇಳಿಕೊಂಡದಕ್ಕೆ ಅಂತಹ ಸಹಾಯ ದೊರೆಯಬೇಕಾದರೆ ಜಪಾನಿನ ಯುದ್ಧದಲ್ಲಿ ರಶ್ಯವು ಪೂರ್ಣವಾಗಿ ಸಹಕರಿಸಬೇಕೆಂದು ಅಮೇರಿಕವು ಉತ್ತರವಿತ್ತಿದೆಯಂತೆ.

ರಶ್ಯಾ-ಜಪಾನು ಎಣ್ಣೆ ಮೀನು ಒಪ್ಪಂದ.

ರಶ್ಯಾ ಮತ್ತು ಜಪಾನುಗಳೊಳಗೆ ಎಣ್ಣೆರಿಯಾಯತಿ ಮತ್ತು ಮೀನು ಹಿಡಿಯುವಿಕೆಯ ಕುರಿತು ಈ ಮೊದಲೇ ಇದ್ದ ಒಪ್ಪಂದಗಳ ಪುನರ್ವಿಮರ್ಶೆ ಕಳೆದ ವಾರ ಮೋಸ್ಕೋದಲ್ಲಿ ನಡೆದು ಹೊಸ ಒಪ್ಪಂದಗಳಾಗಿವೆ. ರಶ್ಯಾದ ಈಶಾನ್ಯ ಮೂಲೆಯ ಕರಾವಳಿ ದ್ವೀಪವಾಗಿದ್ದು ಜಪಾನಿನ ಮುಖ್ಯ ದ್ವೀಪಗಳ ಉತ್ತರಗಡೆಯಲ್ಲಿರುವ ಸಖಾಲಿನಿನ ಎಣ್ಣೆ ಮತ್ತು ಕಲ್ಲಿದ್ದಲನ್ನು ರಶ್ಯವೊಂದು ಒಪ್ಪಂದದಂತೆ 1925ರಲ್ಲಿ ಜಪಾನಿಗೆ ಬಿಟ್ಟುಕೊಟ್ಟಿದ್ದಿತು. 1941ರಲ್ಲಿ ರಶ್ಯಾ-ಜಪಾನಿನ ತಟಸ್ಥ ಒಪ್ಪಂದವಾದಾಗ ಇದನ್ನೆಲ್ಲಾ ಕೆಲವೇ ತಿಂಗಳೊಳಗ ಮರಳಿಕೊಡುವೆವೆಂದು ಆಗಿನ ಜಪಾನೀ ವಿದೇಶ ಮಂತ್ರಿ ಮಟ್ಸುವೋಕಾರವರು ಬರಹ ಮೂಲಕ ವಾಗ್ದಾನ ಮಾಡಿದ್ದರೂ ರಶ್ಯವು ಅಪಾಯದಲ್ಲಿರುವದನ್ನರಿತ ಜಪಾನು ಈ ತನಕ ಬಿಟ್ಟುಕೊಡಲಿಲ್ಲ. ಈಗ ಕೆಂಪು ಸೇನೆಯ ಪ್ರಾಬಲ್ಯವನ್ನು ಕಂಡು ಜಪಾನು ಕೂಡಲೆ ಸಖಾಲಿನ್ ದ್ವೀಪದ ಎಣ್ಣೆ ಕಲ್ಲಿದ್ದಲನ್ನೆಲ್ಲಾ ಬಿಟ್ಟುಕೊಟ್ಟಿದೆ.

ಮೀನು ಹಿಡಿಯುವ ಒಪ್ಪಂದ

ಅಂತೆಯೇ ಸೋವಿಯೆಟ್ ಸಮುದ್ರದಲ್ಲಿ ಮೀನು ಹಿಡಿಯುವ ಕುರಿತು ರಶ್ಯಾ ಜಪಾನುಗಳೊಳಗೆ ಮೊದಲಿನಿಂದಲೂ ಇದ್ದ ಒಪ್ಪಂದವನ್ನು ಪುನಃ ೫ ವರುಷಕ್ಕೆ ಬೆಳೆಸಲಾಗಿದೆ. ಅದನ್ನು ಪುನರಾವರ್ತನಗೊಳಿಸುವಾಗ ಯುದ್ಧಾವಧಿಯ ವರೆಗೆ ಜಪಾನರಾಗಲೀ ಬೇರೆ ವಿದೇಶೀಯರಾಗಲೀ ಮೀನು ಹಿಡಿಯದಂತೆ ಕೆಲವು ಸ್ಥಳಗಳನ್ನು ವಿಂಗಡಿಸಿ ಬೇರ್ಪಡಿಸಲಾಗಿದೆ. ಇವೆರಡು ಒಪ್ಪಂದಗಳಿಂದಾಗಿ ಕೆಂಪು ಸೇನೆಯ ಪ್ರಾಬಲ್ಯವನ್ನು ಮನಗಂಡು ಜಪಾನರು ತುಸು ಸೋತಂತೆ ಕಾಣುತ್ತದೆ. ಹಿಟ್ಲರನ ವಿಜಯದ ಕುರಿತು ಜಪಾನರಿಗಿದ್ದ ಭರವಸೆಯೂ ಕುಸಿದಿದೆಯೆಂದೂ, ಇದು ರಶ್ಯಕ್ಕಾದ ಮಹಾ ವ್ಯವಹಾರ ವಿಜಯವೆಂದೂ ಹೇಳಲಾಗುತ್ತಿದೆ.

ರಶ್ಯನರು ರುಮೇನಿಯಾ ಹೊಕ್ಕಿದರು!

ರುಮೇನಿಯಾ ಗಡಿಯತ್ತ ಜರ್ಮನರನ್ನು ಹಿಂದೊತ್ತುತ್ತಾ ಸಾಗಿದ ಕೆಂಪು ಸೇನೆ ಅಲ್ಲಿಯ ಪ್ರುತ್ ಹೊಳೆಯನ್ನು ದಾಟಿ ಈಗ ರುಮೇನಿಯದೊಳಗಡೆ ಭರದಿಂದ ನುಗ್ಗುತ್ತಿರುವದೆಂದು ತಾ ೨ರಲ್ಲೇ ಸುದ್ದಿ ಬಂದಿದೆ. ರಶ್ಯಾದ ವಿದೇಶ ಮಂತ್ರಿ ಮೊಲೊಟವರು ಈ ಶುಭವಾರ್ತೆಯನ್ನು ಸಾರುವದರೊಂದಿಗೆ, ರುಮೇನಿಯದ ಸ್ಥಳಾಪೇಕ್ಷೆಯಾಗಲೀ ಅಲ್ಲಿಯ ಸಾಮಾಜಿಕ ಜೀವನವನ್ನು ಬದಲಾಯಿಸುವ ಬಯಕೆಯಾಗಲೀ ರಶ್ಯಕ್ಕಿಲ್ಲವೆಂದು ಸ್ಪಷ್ಟಪಡಿಸಿರುವರು. ಕಾರ್ಪೇಥಿಯನ್ ಕಣಿವೆಯ ಮೂಲಕ ಹಂಗೇರಿಯೊಳಗೆ ನುಗ್ಗುವ ಮೊದಲು ಪೂರ್ವ ರುಮೇನಿಯವನ್ನು ರಶ್ಯಾನರು ಸಂಪೂರ್ಣ ಸ್ವಾಧೀನಪಡಿಸಿಕೊಳ್ಳಲಿರುವರೆಂದು ಊಹಿಸಲಾಗಿದೆ.

ಒಡೆಸ್ಸಾದ ಕಡೆಗೆ ಓಟ

ಇತ್ತ ರಶ್ಯಾ ಸರಹದ್ದಿನ ಒಳಗಡೆ ಕಾರ್ಪೇಥಿಯನ್ ಪರ್ವತ ವಲಯದಿಂದ ಕಪ್ಪು ಸಮುದ್ರ ಕರಾವಳಿ ವರೆಗಿನ 300 ಮೈಲು ವಿಸ್ತೀರ್ಣದಲ್ಲಿ ಬೇರೆಬೇರೆ ವಿಭಾಗವಾಗಿ ಕೆಂಪು ಸೇನೆಯ ಮೂರು ಧಾಳಿಗಳು ಸಿಡಿಲ್ಮಿಂಚಿನ ರೂಪದಿಂದಾರಂಭವಾಗಿವೆ. ಜರ್ಮನರು ತಬ್ಬಿಬ್ಬಾಗುವಂತೆ ಮಾಡಿವೆ. ಉಕ್ರೈನಿನ ಒಡೆಸ್ಸಾವನ್ನು ಅರ್ಧ ಚಂದ್ರಾಕೃತಿಯಲ್ಲಿ ಮುತ್ತಿದ ಕೆಂಪು ಸೇನೆ ಈಗ ಪ್ರತ್ಯಕ್ಷ ಅದರ ಮೇಲೆ ಬಿದ್ದಂತೆ ಕಾಣುತ್ತಿದೆ. ಜರ್ಮನರು ಒಡೆಸ್ಸಾವನ್ನು ಉಳಿಸಲು ಪ್ರಾಣಾವಧಿ ಹೋರಾಡುತ್ತಾ ಹಿಮ್ಮೆಟ್ಟುತ್ತಿರುವರು. ಜರ್ಮನರ 18ನೇ ಕಾಲ್ದಳದ 44ನೇ ರೆಜಿಮೆಂಟನ್ನು ಅದರ ಕರ್ನಲ್ ಮತ್ತು ಅಧಿಕಾರಿ ವರ್ಗದೊಡನೆ ಸಂಪೂರ್ಣವಾಗಿ ರಶ್ಯಾನರು ಸೆರೆ ಹಿಡಿದಿರುವರು. ಇಟೆಲಿ ಯುದ್ಧವೇ ಕೋ ಅಲ್ಲಿ ಯಥಾಸ್ಥಗೊಂಡಿತ್ತಿದೆ.

ಶಾಂತ ಸಮುದ್ರದಲ್ಲಿ.

ಫಿಲಿಪ್ಪೈನ್ ದ್ವೀಪಗಳಿಗೆ 500 ಮೈಲು ದೂರದಲ್ಲಿರುವ ಜಪಾನರ ನಾವಿಕಾಶ್ರಯ ಸ್ಥಾನವಾದ ಪಲಾವು ದ್ವೀಪದ ಮೇಲೆ ಅಮೇರಿಕನ್ ನಾವೆಗಳು ನಾವೆಯ ಚರಿತ್ರೆಯಲ್ಲೇ ಅಪೂರ್ವವಾದ ಪ್ರಬಲ ಧಾಳಿ ನಡಿಸಿದವು. ಅಮೇರಿಕದ ಯುದ್ಧ ಖಾತೆಯು ಇದು ವರೆಗಿನ ಶಾಂತ ಸಮುದ್ರ ಯುದ್ಧಸ್ಥಿತಿಯ ವಿಮರ್ಶೆ ಮಾಡುತ್ತಾ, ಮಾರ್ಶಲ್ಸ್, ಉತ್ತರ ಸೊಲೊಮಾನ್ ಮತ್ತು ಬಿಸ್ಮಾರ್ಕಿನ ಸಮುದ್ರ ವಲಯದ ಸುಮಾರು 1 ಲಕ್ಷ ಜಪಾನರು, ಗುಂಡಿನಿಂದ ಅಥವಾ ಉಪವಾಸದಿಂದ ಮರಣ ಹೊಂದುವ ದುರದೃಷ್ಟಕ್ಕೀಗ ಒಳಗಾಗಿದ್ದಾರೆ ಎಂದು ಪ್ರಕಟಿಸಿದೆ. ಈ ವಿಭಾಗದ ಜಪಾನರಿಗೆ ಸಮುದ್ರ ಮತ್ತು ಆಕಾಶ ಹಾದಿಗಳನ್ನೆಲ್ಲಾ ಸಂಪೂರ್ಣವಾಗಿ ದಿಗ್ಬಂಧಿಸಲಾಗಿವೆಯೆಂದೂ ಕೆಲವು ವಾರಗಳಿಂದ ಅವರಿಗೇನೂ ಸಪ್ಲೈ ಆಗುತ್ತಿಲ್ಲವೆಂದೂ ತಿಳಿಸಿದೆ.

ಬರ್ಮಾ ಯುದ್ಧ.

ಬರ್ಮದೊಳಗಿನ ದಕ್ಷಿಣಭಾಗದ ಅರಕಾನ್ ಬುಥಿಡಾಂಗ್ ವಲಯದಲ್ಲಿ ವಿಶೇಷ ಬದಲಾವಣೆಯಿಲ್ಲ. ಉತ್ತರ ಬರ್ಮಾದ ಸ್ಟಿಲ್‌ವೆಲ್ ನಾಯಕತ್ವದಲ್ಲಿ ಲಬಾನ್ ಕ್ಷೇತ್ರದಲ್ಲಿ 24 ಘಂಟೆಗಳ ಹೋರಾಟದ ಬಳಿಕ ಅಮೇರಿಕ ಮತ್ತು ಚೇನೀ ಸೇನೆಗಳು ಜಪಾನರನ್ನು ನಾಶಗೊಳಿಸಿದ ವಾರ್ತೆ ಬಂದಿದೆ. ಅಲ್ಲಿಯ ಹೊಳೆಯನ್ನು ದಾಟಿ ಚೇನೀ ಅಮೇರಿಕಾ ಸೇನೆಗಳು ಜಪಾನರಿದ್ದ 2 ಚತುರಶ್ರ ಮೈಲಿನಷ್ಟು ಸ್ಥಳವನ್ನು ಆಕ್ರಮಿಸಿಕೊಂಡಿವೆ. ಕಳೆದ ವಾರದ ವರೆಗೆ ಈ ಭಾಗದಲ್ಲೇ 5000 ಜಪಾನರು ನಾಶವಾದರಂತೆ.

ಅಸ್ಸಾಮು ರಣಕಣ

ಇಂಫಾಲಿನ ದಕ್ಷಿಣ ಕಡೆಯ ಟಿಡ್ಡಿಮ್-ಇಂಫಾಲ್ ರಸ್ತೆ, ಬಾಮು-ಪಲಾಲ್ ರಸ್ತೆಗಳಲ್ಲಿ ಮುಂದೊತ್ತಿದ ಜಪಾನರನ್ನು ಹಿಮ್ಮೆಟ್ಟಿಸುವಿಕೆ ಪುನಃ ಜಪಾನೀ ಸೇನೆ ಕಾಣಿಸಿಕೊಳ್ಳುವಿಕೆ-ಇಂತಹ ಹೋರಾಟಗಳು ನಡೆದಿವೆ. ಆದರೆ ಇಂಫಾಲಿನಿಂದ ಉತ್ತರಕಡೆಯ ಕೋಹಿಮಾದ ಪೂರ್ವಕಡೆಯ ಪರ್ವತ ವಲಯದಲ್ಲಿ ಬಿರುಸಾದ ಹೋರಾಟವಾಗಿದೆ. ಚಿನ್ ಪರ್ವತ ವಲಯದಲ್ಲಿ ಜಪಾನರು ಬಲವಾದ ಸೈನ್ಯ ಸಂಗ್ರಹಿಸುತ್ತಿದ್ದಾರೆಂದೂ ಅಲ್ಲಿ ಮಿತ್ರ ವಿಮಾನಗಳ ಧಾಳಿ ನಡೆಯುತ್ತಿದೆಂದೂ ತಿಳಿದುಬಂದಿದೆ. "ಇಂಫಾಲಿನ ಮೈದಾನಿನೊಳಕ್ಕೇನೇ ಜಪಾನರ ಮುಂಚೂಣೀ ದಳಗಳು ನುಗ್ಗಿ ಬಂದು ಹೊಡೆತ ತಿಂದು ಹಿಂದೆ ಹೋಗಿವೆ.

ಜಿಲ್ಲಾ ಕಲೆಕ್ಟರರ ಪ್ರಕಟಣೆ

(ಅಕ್ಕಿ ಮತ್ತು ಭತ್ತ ಒಯ್ಯೋಣದ ಬಗ್ಗೆ ಪರ್ಮಿಟುಗಳ ಆವಶ್ಯಕತೆ)

ಮಂಗಳೂರು ಶಹರಿನಲ್ಲಿ ವಾಸಿಸುವ ಜಮೀನ್ದಾರರು ತಮ್ಮ ರೇಷನ್ ಕಾರ್ಡುಗಳ ಲೆಖ್ಖದ ಮಿತಿಯಲ್ಲಿ ಒಂದು ವರುಷಕ್ಕೆ ಬೇಕಾಗುವ ಅಕ್ಕಿಯನ್ನು ಅವರ ಸ್ವಂತ ಭೂಮಿಯಿಂದ ತರಿಸಬೇಕಾದರೆ ಜಿಲ್ಲಾ ಕಲೆಕ್ಟರರ ಪರ್ಮಿಟು ಅತ್ಯಾವಶ್ಯಕ. ಇತರರ ಸ್ವಾಧೀನ ಯಾವ ಕಾಲದಲ್ಲೂ ಒಂದು ತಿಂಗಳಿಗೆ ಬೇಕಾಗುವುದಕ್ಕಿಂತ ಜಾಸ್ತಿ ಅಕ್ಕಿ ಇರುವಂಥಾದ್ದು ಅಪರಾಧವಾಗುವುದು. ಆದರೆ ಈ ಮುಂಚೆಯೇ ಪರ್ಮಿಟುಗಳನ್ನು ಪಡೆದು ಅಕ್ಕಿ ದಾಸ್ತಾನು ಮಾಡಿದವರಿಗೆ ಪ್ರಕೃತ ಈ ಕಾನೂನು ಅನ್ವಯಿಸಲಾರದು. ಅವರೆ ಸಂದರ್ಭಾನುಸಾರ ಅಂತಹ ದಾಸ್ತಾನು ಅಕ್ಕಿ ಬಿಟ್ಟುಕೊಡಬೇಕಾದೀತು. ಈ ಕಾನೂನುಗಳು ಕಾಸರಗೋಡು ರೇಶನಿಂಗ್ ಕ್ಷೇತ್ರಕ್ಕೂ ಅನ್ವಯಿಸುವವು.

ಒಂದು ತಾಲೂಕಿನಲ್ಲಿ ವಾಸ್ತವ್ಯವಿಸಿಕೊಂಡಿರುವ ಜಮೀನ್ದಾರನು ಇನ್ನೊಂದು ತಾಲೂಕಿನಲ್ಲಿರುವ ತನ್ನ ಸ್ವಂತ ಭೂಮಿಯಿಂದ ಅಕ್ಕಿ ವ ಭತ್ತವನ್ನು ತನ್ನ ಉಪಯೋಗಕ್ಕಾಗಿ ತರಬೇಕಾದರೆ ಆತನು ರಿಕ್ವಿಜಿಶನ್ ಮಾಡಿದ ಪೂರ್ಣ ಅಕ್ಕಿಯನ್ನು ಸಂದಾಯ ಮಾಡಿರಬೇಕು. ಮತ್ತು ಆತನ ಅರ್ಜಿಯೊಂದಿಗೆ ತಹಶಿಲ್ದಾರರ ಅಥವಾ ಡಿಪ್ಯುಟಿ ತಹಶಿಲ್ದಾರರ ಸರ್ಟಿಫಿಕೇಟು ಆ ಬಗ್ಗೆ ಇರತಕ್ಕದ್ದು.

ಒಂದೇ ತಾಲೂಕಿನಲ್ಲಿಯೂ ಒಂದು ಸ್ಥಳದಿಂದ ತನ್ನ ವಾಸ್ತವ್ಯದ ಇನ್ನೊಂದು ಸ್ಥಳಕ್ಕೆ ತನ್ನ ಸ್ವಂತ ಪ್ರಯೋಜನಾರ್ಥವಾಗಿ ಅಕ್ಕಿ ವ ಭತ್ತವನ್ನು ಒಯ್ಯಲಪೇಕ್ಷಿಸುವ ಜಮೀನ್ದಾರನು ಕಲೆಕ್ಟರರ ಹುಕುಮಿನಂತೆ ರಿಕ್ವಿಜಿಶನ್ ಮತ್ತು ಉಳಿತಾಯ ಅಕ್ಕಿಯನ್ನು ಸಹಕಾರಿ ಸ್ಟೋರ್ಸಿಗೆ ವಹಿಸಿ ಮಾಡಿದ ಬಗ್ಗೆ ತಹಶಿಲ್ದಾರರ ವ ಡಿಪ್ಯುಟಿ ತಹಶಿಲ್ದಾರರ ಸರ್ಟಿಫಿಕೇಟ ಪಡೆದು ಅರ್ಜಿ ಮಾಡತಕ್ಕದ್ದು.

ರಿಕ್ವಿಜಿಶನ್ ಮಾಡಲ್ಪಟ್ಟ ಅಕ್ಕಿ ವ ಭತ್ತ ಅಥವಾ ಉಳಿತಾಯವನ್ನು ಹೋಲ್‌ಸೇಲ್ ಸ್ಟೋರ್ಸಿನಾಗಲೀ ಅದರ ಡಿಪೋಗಳಿನಾಗಲೀ ಒಯ್ಯುವಾಗ ತಹಶಿಲ್ದಾರ್, ಡಿ. ತಹಶಿಲ್ದಾರ್ ವ ಮಣೆಗಾರರ ಸರ್ಟಿಫಿಕೇಟುಗಳನ್ನು ಆ ಬಗ್ಗೆ ಪಡೆಯತಕ್ಕದ್ದು. ಮೇಲಿನ ಎಲ್ಲಾ ಉಪಯೋಗಗಳಿಗೆ ಕೊಡೋಣಾಗುವ ಪರ್ಮಿಟುಗಳು ದುರುಪಯೋಗಪಡಿಸದಂತೆ ದೃಷ್ಟಿಯಿಡಲಾದೀತು.

ಪರ್ಮಿಟು ವಿನಹ ಮೇಲಣ ಉದ್ದೇಶಗಳಿಗೆ ಒಯ್ಯಲ್ಪಡುವ ಅಕ್ಕಿ ವ ಭತ್ತವನ್ನು ಜಪ್ತಿ ಮಾಡಲ್ಪಡುವದೀತು.

☞ ಮುಟ್ಟಾಗುವಿಕೆ ☜

ಹಲವು ತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (PILLS) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರ ರೀತಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವದು' ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ. ರೂ. 3/- ಕ್ಷಿಪ್ರಕಾರಿದ ಕೇಸುಗಳಿಗೆ ರೂ. 5- (ವಿ. ಪಿ. 12 ಆಣೆ ಅಲಾಯಿದ)

Mrs. P DEVEE, F.D S, (N)
TOLLYGUNGE CALCUTTA,
ಸ್ಟಾಕಿಸ್ಟ್ Rajr Medical Hall,
31 Dharmaraja St. BANGALORE

ನವಯುಗ

ವಾರ್ಷಿಕ ಚಂದಾ ವಿವರ.

(1943ನೇ ಮಾರ್ಚಿಯಿಂದ)

ವರ್ಷಕ್ಕೆ (ಸ್ಥಳೀಯ) 3-12-0

(ಟಪ್ಪಾಲು ದ್ವಾರ)-4-8-0

ಚಂದಾ ಹಣ ಬಾಕಿಯುಳ್ಳವರು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸಲಾಗುತ್ತದೆ

ಮೆನೇಜರ್

ತಾರಣ ಸಂವತ್ಸರದ

ಉಪ್ಪಿ ಪಂಚಾಂಗ ರೆಡಿಯಾಗಿದೆ

ಕ್ರಯ 0—5—0

ಪ್ರತಿಗಳು ಎಲ್ಲಾ ಕಡೆಗಳಲ್ಲಿಯೂ ದೊರೆಯತಕ್ಕದ್ದು

CHAMPAES

Snow & Costrex

(Sole Distributors for India)

Sukhananda Stores

Santhekatte, UDIPI, S. K.

ದಕ್ಷಿಣ ಕನ್ನಡ.

ಮಂಗಳೂರು

ಜಿಲ್ಲಾ ಬೋರ್ಡು ಸಭೆ:—ತಾ. ೨೭ರಂದು ಶ್ರೀ ಆರೂರರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲು ಶ್ರೀಮತಿ ಕಸ್ತೂರಿಬಾ ಮತ್ತು ಬೋರ್ಡು ಸದಸ್ಯರಾಗಿದ್ದ ಶ್ರೀ ಕೆ. ಪಿ. ರಾಘವೇಂದ್ರ ರಾವ್ ಇವರ ನಿಧನದಲ್ಲಿ ದುಃಖ ಸೂಚಿಸಲಾಯಿತು. ದಿವಂಗತ ರಾಘವೇಂದ್ರ ರಾಯರ ಸ್ಥಾನಕ್ಕೆ ಆರಿಸಿ ಬಂದ ಡಾ। ನರಸ್ ಭಂಡಾರಿಗಳು ರಾಜಭಕ್ತಿ ಪ್ರಮಾಣ ಮಾಡಿದರು. ಸರಕಾರಿ ನೌಕರರಿಗೆ ಸಿಗುವ ಪ್ಯೇತ ತುಟ್ಟಿಭತ್ತೆ ಬೋರ್ಡ ನೌಕರರಿಗೂ ಸಿಗಬೇಕೆಂಬ ಸರಕಾರದ ಸೂಚನೆಯು ಮಾನ್ಯವಾಯಿತು. ಉಪ್ಪಿನಂಗಡಿಯ ಎಡನೀರು ಬೋ. ಎ. ಶಾಲೆಯಲ್ಲಿ ಆರನೆಯ ತರಗತಿ ತೆರೆಯಲು ಬೋರ್ಡು ಸಮ್ಮತಿಸಿತು. ಜಿಲ್ಲಾ ಬೋರ್ಡಿನ ಇಂಜನಿಯರರು ತಯಾರಿಸಿದ ಐದು ವರ್ಷದ ಯೋಜನೆಯೊಂದು ಸರಕಾರಕ್ಕೆ ಒಪ್ಪಿಸಲ್ಪಟ್ಟಿತು.

ಡಿ. ಬೋ. ಅಧ್ಯಕ್ಷರೂ ಎಂಜಿನಿಯರಿಂಗ್ ಖಾಯಂ ಸದಸ್ಯರೂ ಒಟ್ಟು ಮೂರು ದಿನಗಳಿಗಿಂತ ಹೆಚ್ಚು ದಿನ ವ. ಸಂಘರ್ ಬಂಗಲೆಗಳಲ್ಲಿರಲು ಬೋರ್ಡ ಸಮ್ಮತಿಸಿತು. ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಸರಿಯಾಗಿ ಕೆಲಸ ಮಾಡದಿದ್ದರೆ ಅವರನ್ನು ತಪ್ಪಿಸಿ ಬೇರೆಯವರನ್ನು ತಾತ್ಕಾಲಿಕವಾಗಿ ನೇಮಿಸುವ ಅಧಿಕಾರ ಜಿಲ್ಲಾ ಕಲೆಕ್ಟರರಿಗಿದೆ ಎಂಬ ಸರಕಾರದ ಆಜ್ಞೆಯು ಪ್ರತಿಷೇಧದೊಡನೆ ಸ್ವೀಕಾರ ಮಾಡಲಾಯಿತು.

ನಿಧನ—ಗೌಡ ಸಾರಸ್ವತ ಸಮಾಜದ ಸುಪ್ರಸಿದ್ಧ ವಕೀಲರಾದ ಶ್ರೀ ವಿಜಯ ಗಣೇಶ ಪೈಗಳು ತಮ್ಮ ೭೪ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಕಾಲವಾಗುವ ವನ್ನಾ ದಿನದ ವರೆಗೂ ಆರೋಗ್ಯ ದೃಢಕಾಯರಾಗಿದ್ದು ತಮ್ಮ ವಕೀಲ ವೃತ್ತಿಯನ್ನು ನಿರ್ವಹಿಸಿಕೊಂಡಿದ್ದರು.

ಅಡಿಕೆ ತೋಟಿಗಾರರಿಗೆ ಸೂಚನೆ

ಇದೇ ಎಪ್ರಿಲ್ ತಾ ೨೦ರಿಂದ ಅಡಿಕೆಯ ಮೇಲಿನ ಅಬ್ಕಾರಿ ಸುಂಕದ ಕಾನೂನು ಜಾರಿಗೆ ಬರುವುದರಿಂದ, ಕಾನೂನಿನ ಮೇರೆಗೆ ಅಡಿಕೆ ಬೆಳೆಯುವವರು ಅಡಿಕೆಯನ್ನು ಒಣಗಿಸುವವರು ಮತ್ತು ಅಡಿಕೆಯನ್ನು ವಿಕ್ರಯಿಸುವ ವ್ಯಾಪಾರಿಗಳು ಪ್ರತ್ಯೇಕ ಪ್ರತ್ಯೇಕವಾಗಿ ಲೈಸನ್ಸ್ ಪಡೆದುಕೊಳ್ಳಬೇಕಾಗಿದೆ. ಮುಂದಿಯ ಐದು ಕದಿನ ಬೆಳೆಸುವವರಿಗೆ ಲೈಸನ್ಸು ಧರ್ಮಾರ್ಥವಾಗಿ ಕೊಡಲಾಗುವುದು. ಆದರೆ ಹೆಚ್ಚು ಬೆಳೆಸುವವರು ಅವರವರ ಬೆಸಾಯದ ಮೇರೆಗೆ ರೂ- ೫ರಿಂದ ೫೦೦ರೂ. ಗಳ ವರೆಗೆ ತೆತ್ತು ಲೈಸೆನ್ಸ್ ಪಡೆಕೊಳ್ಳಬೇಕು. ಅಡಿಕೆಯನ್ನು ಒಣಗಿಸುವ ಮತ್ತು ಅಡಿಕೆಯನ್ನು ಹರಿತಿಗೆ ದಾಸ್ತಾನು ಮಾಡುವ ಬಗ್ಗೆಯೂ ಪ್ರತ್ಯೇಕ ಪ್ರತ್ಯೇಕವಾಗಿ ಲೈಸೆನ್ಸು ಪಡೆದುಕೊಳ್ಳಬೇಕು. ಅಡಿಕೆಯನ್ನು ಬೆಳೆಯಿಸುವ ಸ್ಥಳದಿಂದ ಹೊರಗೆ ಸಾಗಿಸಬೇಕಾದರೆ ಪರ್ಮಿಟ್ ಪಡಕೊಳ್ಳಬೇಕು. ಲೈಸೆನ್ಸ್ ಹೊಂದಿದ ಭಂಡಸಾಲೆಗಳಲ್ಲಿ (Bonded ware-houses) ಅಡಿಕೆಯನ್ನು ಮಾರುವವನು ಮಾರುವ ಮೊದಲು ರಾ. ೩೦ ಆಣೆಯಂತೆ ಸುಂಕವನ್ನು ತೆರಬೇಕು.

ಹೆಚ್ಚಿನ ಮಾಹಿತಿಗಳನ್ನು ಅಡಿಕೆ ಅಬ್ಕಾರಿ ಆಫೀಸರರಿಂದ ತಿಳಿಯಬಹುದು.

ಅಡಿಕೆ ಬೆಳೆಸಲು ಮತ್ತು ಒಣಗಿಸಲು ಲೈಸೆನ್ಸ್ ಪಡಕೊಳ್ಳಬೇಕೆಂಬ ಮತ್ತು ಅಡಿಕೆಯ ಮೇಲೆ ಹೊರಿಸಲ್ಪಟ್ಟ ಅಬ್ಕಾರಿ ಸುಂಕವು ೧೯೩೫ನೆಯ ಇಸವಿಯ ಭಾರತ ಸೂತ್ರಗಳಿಗೆ ವಿರೋಧವಾಗಿ, ಭಾರತ ಸರಕಾರದ ಅಧಿಕಾರಕ್ಕೆ ಮಿಕ್ಕಿದೆಂದು ಅಭಿಪ್ರಾಯವಿರುತ್ತದೆ. ಮತ್ತು ಈ ಸುಂಕವು ಭಾರತ ಸರಕಾರದ ಅಧಿಕಾರದಿಂದ ಬಹಿರವಾದುದೆಂದೂ ಕೋರ್ಟಿನಲ್ಲಿ ವ್ಯವಹರಣೆ ನಡೆಸಬೇಕೆಂದೂ ಮಾರ್ಚಿ ೨೬ ರಂದು ಪುತ್ತೂರಲ್ಲಿ ಜರಗಿದ ಅಡಿಕೆ ವ್ಯಾಪಾರಿಗಳ ಸಭೆಯಲ್ಲಿ ನಿರ್ಣಯವಾಗಿರುವುದರಿಂದ ಅಂಗೆ ವ್ಯವಹರಣೆ ನಡೆಸಿ ಅಡಿಕೆ ಸುಂಕವು ತೆಗೆಯಲ್ಪಡುವ, ಹಾಗೆ ತೀರ್ಮಾನವಾಗುವ ತನಕ ತಾನು ತೆತ್ತ ಸುಂಕ ಮತ್ತು ಲೈಸೆನ್ಸು ಹಣವನ್ನು ಹಿಂದಕ್ಕೆ ಕೇಳುವ ಹಕ್ಕನ್ನು ಕಾಪಾಡಿಕೊಂಡು ಇಟ್ಟುಕೊಳ್ಳಬೇಕಾದದರಿಂದ ಸುಂಕವನ್ನು ಆಕ್ಷೇಪ ಸಹಿತ (Under Protest) ತೆರತಕ್ಕದ್ದು—ಎಂದು ಅಡಿಕೆ ವ್ಯವಸಾಯಿಗಳ ಸಂಘದ ಪರವಾಗಿ ಅಡ್ವೊಕೇಟ್ ಶ್ರೀ ಜಿ. ಕೆ. ಗೋವಿಂದ ಭಟ್ಟರು ತಿಳಿಸುತ್ತಾರೆ.

ಪ್ಲೇಗಿನ ವರದಿ:—೩೧ನೇ ತಾರೀಕಿನ ವರದಿಯಂತೆ, ಹೊಸತಾಗಿ ಪ್ಲೇಗ್ ರೋಗವು ಯಾರಿಗೂ ತಗಲಿಲ್ಲ, ಮರಣವಿಲ್ಲ. ಆರಂಭದಿಂದ ಇಂದಿನ ವರೆಗೆ ೧೪ ಜನರಿಗೆ ತಗಲಿತ್ತು, ೧೧ ಮರಣಗಳಾಗಿದ್ದುವು. ಇದು ವರೆಗೆ ೮೮೭೩ ಜನರಿಗೆ 'ಇನಾಕ್ಯುಲೇಶನ್' ಕೊಡಲಾಗಿದೆ.

ಲೇಬರ್ ಕನ್ಸಿಲಿಯೇಶನ್:—ಆಫೀಸರಾದ ಶ್ರೀ ವೆಂಕಟೇಶರು ಮಂಗಳೂರಿಗೆ ಬಂದಿದ್ದು ಇಲ್ಲಿಯ ಕೆಲಸಗಾರರ ಪರಿಸ್ಥಿತಿಯನ್ನು ತಿಳಿದು ಹಿಂತಿರುಗಿದರು.

ಇಲ್ಲಿಯ ಟೈಲ್ ಫ್ಯಾಕ್ಟರಿಯಲ್ಲಿ ನಾಲ್ವರು ಹೆಂಗಸರನ್ನು ಕೆಲಸದಿಂದ ತೆಗೆದು ಹಾಕಿದ ನಿಮಿತ್ತ ಕೆಲಸಗಾರರ ಕ್ಷೋಭೆ ಉಂಟಾಗಿತ್ತು. ಮೇಲೆ ಹೇಳಿದ ಸಂಧಾನ ಪ್ರಯತ್ನದಿಂದ ಎಲ್ಲ ಕೆಲಸದಿಂದ ತೆಗೆದು ಹಾಕಲ್ಪಟ್ಟವರು ಪುನಃ ಸೇರಿರುತ್ತಾರೆ.

ಉಡುಪಿ.

ಮುನ್ಸಿಪಲ್ ಕೌನ್ಸಿಲ್ ಮೀಟಿಂಗು.—ತಾ. 30 ರಂದು ಚೆಯರ್‌ಮೆನ್ ಶ್ರೀ ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರೀ ಸೂಚನೆಯಂತೆ ಕೌನ್ಸಿಲಿನ 1944 45ನೆ ವರುಷದ ಎಲೆಕ್ಟ್ರಿಕಲ್ ಬಜೆಟನ್ನು ಭರ್ತಿ ಮಾಡುವ ವಿದ್ಯುತ್ತೆರಿಗೆಯನ್ನು ಸೇಕಡಾ 2 ಇದ್ದುದನ್ನು 2½ ಕ್ಕೆ ಏರಿಸುವುದೆಂದು ನಿರ್ಧಾರವಾಗಿ ೩ ಲಕ್ಷ ರೂ. ವರೆಗಿನ ಸಾಲ ಕರ್ಜುಗಳನ್ನು ವಸೂಲು ಮಾಡಬೇಕಾದ ನಿಮಿತ್ತ ... ರೂಪಾಯಿ 701 ಕ್ಕೆ ಏರಿಸಲಾಯಿತು.

ತೆರಿಗೆವಸೂಲಿ:—ಮಾರ್ಚಿ ತಾ. 31ಕ್ಕೆ ಅಂತ್ಯವಾದ ವರುಷದಲ್ಲಿ ನಗರ ಸಭೆಗೆ ಸೇಕಡಾ 99 ೩/೪ ತೆರಿಗೆ ವಸೂಲಾಗಿರುತ್ತದೆ. ಉಡುಪಿಗೆ ಮುನಿಸಿಪಾಲಿಟಿ ಬಂದಂದಿನಿಂದ ಈ ಮಿತಿಯ ತೆರಿಗೆ ವಸೂಲಾಗಲಿಲ್ಲವೆಂದು ತಿಳಿದು ಬರುತ್ತದೆ. ಎಂ. ಬಿ. ಇಬ್ರಾಹಿಮ್ ಸಾಹೇಬರು ಅವರ ತಾಜೆಯ ಎರಡನೆ ವಾರ್ಡುಗಳಲ್ಲಿ ಸೆಂಟ್ ಪರ್ಸೆಂಟ್ ಟೇಕ್ಸ್ ವಸೂಲಿ ಮಾಡಿರುತ್ತಾರೆ. ಎ. ಡಬ್ಲ್ಯು. ಕರ್ನಲಿಯೊರವರು ಅಜ್ಜರಕಾಡು ವಾರ್ಡಿನಿಂದ ಸೇಕಡಾ ಶೆರಿಗೆ ವಸೂಲಿ ಮಾಡಿರುತ್ತಾರೆ. ಇವರೀರ್ವರಿಗೂ ಮುನಿಸಿಪಲ್ ನೌಕರರ ಸಂಘದ ಕಡೆಯಿಂದ ಕಪ್ಪುಗಳನ್ನು ಸದ್ಯವೇ ಕೊಡಬೇಕೆನ್ನುವ ಯೋಜನೆ ನಡೆದಿದೆ. ಕಳೆದ ಆದಿತ್ಯವಾರ ಮುನಿಸಿಪಲ್ ಕಮೀಶನರ್ ಶ್ರೀ ರಾಮಣ್ಣ ನಾಯರರು ಬಿಲ್ ಕಲೆಕ್ಟರರಿಗೆ ಲಘು ಉಪಹಾರವನ್ನಿತ್ತು ತೆರಿಗೆ ವಸೂಲಿ ಪ್ರಯತ್ನದ ಕುರಿತು ತನ್ನ ತೃಪ್ತಿಯನ್ನು ಪ್ರದರ್ಶಿಸಿದರು.

ಶ್ರೀ ರಾಮೋತ್ಸವವು:—ಮಹತೋಭಾರ ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ಎಂದಿನಂತೆ ಆರಂಭವಾಗಿ ಕಳೆದ ಆದಿತ್ಯವಾರ ಮುಕ್ತಾಯವಾಯಿತು. ದಿನಾಲೂ ಹರಿಕಥೆಯನ್ನು ಮಾಡುತ್ತಿದ್ದ ಮಲ್ಪೆ ಕೆರೆಕಟ್ಟೆ ಘನಪಾಟಿ ಗೋವಿಂದ ಉಪಾಧ್ಯರಿಗೆ 'ಕೀರ್ತನ ಪಂಚಾನನ' ಬಿರುದು ಸಹ ಕೊಡಲಾಯಿತು.

ಪಾಡಿಗಾರು ಮಠದಲ್ಲಿ.—ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀಪಾದಂಗಳವರು ಕಳೆದ ಆದಿತ್ಯವಾರ ಶ್ರೀ ರಾಮನವಮಿ ಪರ್ವದಿನವನ್ನು ಧಾರ್ಮಿಕ ಶುಭ ಸಂಪ್ರದಾಯಗಳನುಸಾರವಾಗಿ ಚಲೋ ರೀತಿಯಲ್ಲಿ ಆಚರಿಸಿದರು.

ಸಭೆ—ರೇಶನಿಂಗ್ ಆಫೀಸರರು ಜಾಹೀರು ಪಡಿಸಿದಂತೆ ರೇಶನಿಂಗ್ ಕ್ಷೇತ್ರದಲ್ಲಿಯ ವರ್ಗದಾರರ ಮತ್ತು ಬೇಸಾಯಗಾರರ ಸಭೆಯೊಂದು ಕಳೆದ ಆದಿತ್ಯವಾರ ಶ್ರೀ ಅಥವಾರು ಮಠದ ಮುಂಭಾಗದಲ್ಲಿ ಜರಗಿತು. ಬೀಜ ಬಿತ್ತಿ ಅಗೆ ತಯಾರಿಸಿ ಗದ್ದೆಗಳನ್ನು ಹೂಡಿ ಬೇಸಾಯ ಮಾಡುವಾಗ ಕೆಲಸದವರಿಗೆ ಕೊಡುವ ಮಜೂರಿ ಅಕ್ಕಿಯನ್ನು ಯಾರ್‍ಯಾರಿಗೆ ಎಷ್ಟೆಷ್ಟು ಕೊಟ್ಟರುತ್ತದೆ ಎಂಬಿತ್ಯಾದಿ ... ಗಳನ್ನು ರೇಶನಿಂಗ್ ಕ್ರಮಗಳಂತೆ ರೇಶನಿಂಗ್ ಆಫೀಸರರಿಗೆ ಸಕಾಲದಲ್ಲಿ ತಿಳಿಸಬೇಕು. ಅದಕ್ಕೆ ವಿರುದ್ಧವಾಗಿ ವರ್ತಿಸಿದರೆ ಕಷ್ಟನಷ್ಟಕ್ಕೆ ಗುರಿಯಾಗಬೇಕಾದೀತು. ಆದುದರಿಂದ ಕೆಲಸಗಾರರಿಗೆ ಅಕ್ಕಿ ಕೊಡುವ ಬದಲಾಗಿ ನಗದು ಹಣವನ್ನು ಕೊಡುವ ಯೋಜನೆಯನ್ನು ಕೈಕೊಂಡರೆ ಸ್ಟೇಟ್‌ಮೆಂಟ್ ಒಪ್ಪಿಸುವ ಜವಾಬ್ದಾರಿ ತಪ್ಪಿದಂತಾಗುವುದೆಂದು ರೇಶನಿಂಗ್ ಆಫೀಸರ್ ಶ್ರೀ ವೇಂಕಟೇಶರವರು ಉಪದೇಶ ವಾಕ್ಯಗಳನ್ನಾಡಿದರು. ಎಷ್ಟೋ ವರುಷಗಳಿಂದ ನಡೆದುಬಂದ ಪದ್ಧತಿಯನ್ನು ಒಮ್ಮೆಗೇ ಬದಲಾಯಿಸಲು ಸರ್ವಸಾಧ್ಯವಾಗದ ಮಾತು ಅದೂ ಅಲ್ಲದೆ ಚಿಲ್ಲರೆಯ ಅಭಾವವು ಇನ್ನೂ ತಲೆಯೆತ್ತಿಕೊಂಡೇ ಇರುವುದು. ಇಂಥಾ ಪರಿಸ್ಥಿತಿಯಲ್ಲಿ ಅಕ್ಕಿ ಕೊಡುವುದೇ ಲೇಸೆಂದು ಕೆಲವರು ಅಭಿಪ್ರಾಯಕೊಟ್ಟರು. ಇನ್ನು ಕೆಲವು ಬೇಸಾಯಗಾರರೂ ವರ್ಗದಾರರೂ ರೇಶನಿಂಗ್ ಆಫೀಸರರ ಉಪದೇಶವಾಕ್ಯಗಳನ್ನೇ ಪುನರುಚ್ಚರಿಸಿದರು. ಒಮ್ಮತದ ನಿರ್ಧಾರಕ್ಕೆ ಬಾರದೆ ಸಭೆಯು ತನ್ನಷ್ಟಕ್ಕೇ ಚದರಿತು. ಜಡಿಮಳೆ ಸುರಿಯುತ್ತಿರುವ ಬೇಸಾಯದ ವೇಳೆ ಹೊಟ್ಟೆ ತುಂಬ ಅನ್ನ ಸಿಕ್ಕದ ಒಂದೇ ಉಪಾಯ ನೋಟುಗಳು ದೂರೆತರೆ ಒಕ್ಕಲಿಗನ ಜಠರಾಗ್ನಿ ಶಾಂತವಾಗುವುದೇ ಎಂಬುದನ್ನು ಗಮನಿಸಬೇಕಾಗಿದೆ.

ಅಕ್ಕಿ ಸಮಸ್ಯೆ.—ರೇಶನಿಂಗ್ ಕ್ಷೇತ್ರದಲ್ಲಿಯ ಸಹಕಾರಿ ಡಿಪೋಗಳಲ್ಲಿ ವಾರಕ್ಕೆ ಒಂದರಿಷ್ಟು ಸೇರಿನಂತೆ ಮಾತ್ರ ಬೆಳ್ತಿಗೆ ಅಕ್ಕಿ ದೊರೆಯುತ್ತಲಿದೆ. ಕೆಲವು ಡಿಪೋಗಳಲ್ಲಿ ಮುಷ್ಟಿ ಅಕ್ಕಿ ದೊರೆಯುವುದಿಲ್ಲ. ದೂರೆಯುವ ಪಾಪರೂ ... ಸಂಬಂಧಪಟ್ಟವರಿಗೆ ನೇರ ಅಂತೆ ಕಜೆ, ಹಳ್ಳಿಗ ಇತ್ಯಾದಿ ಮಿಶ್ರಿತ ರೀತಿ ಅಕ್ಕಿಗೆ ಮಾತ್ರ ಅಭಾವವಿಲ್ಲವಂತೆ. ಡಿಪೋಗಳಿಗೆ ಸಪ್ಲೈ ಮಾಡುವ ಹೋಲ್ ಸೇಲ್ ಸ್ಟೋರ್ಸ್‌ನವರು ಸ್ವಲ್ಪ ಉದಾರ ಮನಸ್ಸು 'ಹಾಡಿ ತಾನು ಪರರಿಗೆ ಪರರು ತನಗೆ' ಎಂಬ ಸಹಕಾರ ತತ್ವವನ್ನು ಕಾರ್ಯತಃ ಪಾಲಿಸಬೇಕಾಗಿದೆ.

ಕುಂದಾಪುರ:—ಇಲ್ಲಿಯ ಕುಂದೇಶ್ವರ ದೇವಸ್ಥಾನದಲ್ಲಿ ಉಡುಪಿಯಿಂದ ದಯಮಾಡಿಸಿದ ಶ್ರೀ ಫಲಿಮಾರು ಮಠದ ಶ್ರೀಪಾದಂಗಳವರು ತಮ್ಮ ಮಠದ ಸಂಪ್ರದಾಯದಂತೆ ಶ್ರೀ ರಾಮನವಮೀ ಮಹೋತ್ಸವ ಸಮಾರಂಭವನ್ನು ಬಹು ಸಂಭ್ರಮದಿಂದ ಜರಗಿಸಿದರು. ಅನೇಕ ಸಂಘ ಸಂಸ್ಥೆಗಳಿಂದಲೂ ನಾಗರಿಕ ಮಹಾಶಯರಿಂದಲೂ ಅಧಿಕಾರಿ ವರ್ಗದವರಿಂದಲೂ ತುಂಬಾ ಸಹಾಯವಾಗಿ ಉತ್ಸವಕ್ಕೆ ಅತ್ಯುತ್ಕೃಷ್ಟ ರೂಪ ಒಂದಿತ್ತು. ಪ್ರತಿ ದಿನವೂ ವೇದ ಶಾಸ್ತ್ರ ಪಾರಾಯಣ ಪೂಜಾಸಮಾರಂಭಗಳೊಂದಿಗೆ ಸಾಯಂಕಾಲ ಪಂಡಿತರುಗಳ ಧಾರ್ಮಿಕ ಭಾಷಣಗಳೂ ಏರ್ಪಟ್ಟಿದ್ದವು.

ತಾ. 2-4-44ನೇ ದಿನ ರಾಮ ನವಮೀ ನಿಮಿತ್ತ, ಪಂಚಾಮೃತಾಭಿಷೇಕವೂ ಸಂತರ್ಪಣೆಯೂ ಬಡಬಗ್ಗರಿಗೆ ಅನ್ನದಾನವೂ ಯಥೋಚಿತವಾಗಿ ನಡೆದದ್ದಲ್ಲದೆ ಸಾಯಂಕಾಲ ಶ್ರೀ ರಾಮದೇವರ ಪಾಲಕಿ ಉತ್ಸವವು ಮುಖ್ಯ ಬೀದಿಗಳಲ್ಲಿ ಹೊರಟಿತು. ಉತ್ಸಾಹ ಪೂರಿತರಾದ ಭಕ್ತರೂ ಅಧಿಕಾರಿ ವರ್ಗದವರೂ ಜಿಲ್ಲಾ ಬೋರ್ಡು ಅಧ್ಯಕ್ಷರೂ ಇದರಲ್ಲಿ ಭಾಗವಹಿಸಿದ್ದರು. ರಾತ್ರೆ ಹರಿ ಕಥಾ, ಮಂಗಲ ಸಮಾರಂಭ ಭಾಷಣಗಳು ನಡೆದವು. ಕೊನೆಗೆ ಶ್ರೀಗಳವರು ಭಕ್ತವೃಂದಕ್ಕೆ ಫಲಮಂತ್ರಾಕ್ಷತೆಯನ್ನು ಕೊಟ್ಟು ಶ್ರೀ ರಾಮದೇವರ ಆರಾಧನೆಯಿಂದ ದೇಶಕ್ಕೆ ಕ್ಷೇಮವಾಗಲೆಂದು ಹರಸಿದರು.

ಬೇಕಾಗಿದ್ದಾರೆ.

ಸದ್ಯದಲ್ಲೇ ರಂಗಭೂಮಿಗೆ ಬರಲಿರುವ ಅತ್ಯಾಧುನಿಕ ಸಾಮಾಜಿಕ ನಾಟಕ

'ಸ್ವಾಮಿಯ ನೋಟು'

ಈ ನಾಟಕದಲ್ಲಿ ಪಾತ್ರ ವಹಿಸಲು ಯೋಗ್ಯರಾದ ನಟನಟಿಯರು ಬೇಕಾಗಿದ್ದಾರೆ.

ಬರೆಯಿರಿ:

X ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಅಪೂರ್ವ ನಾಟ್ಯ ಪ್ರದರ್ಶನ

ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರು

ಮಲಬಾರಿನ ಆನಂದ ಶಿವರಾಮರೊಡನೆ

ಉಷಾ ರಾಣಿ, ಸೀತಾದೇವಿ, ಗಜಲಕ್ಷ್ಮಿ, ವನಜಾಕ್ಷಿ,

ಮೊದಲಾದ ಸುಂದರ ನರ್ತಕಿಯರೊಡನೆ

ನೃತ್ಯ ಭಾತಿ ಆರ್ಕೆಸ್ಟ್ರಾ ಹಿಮ್ಮೇಳದಲ್ಲಿ

ಭಾರತೀಯ ನೃತ್ಯಗಳನ್ನು

ಪ್ರದರ್ಶಿಸುವರು

ಮಂಗಳೂರು-ಬಾಲಾಜಿ ಥಿಯೇಟರಿನಲ್ಲಿ-ಎಪ್ರಿಲ್ ೭ ಶುಕ್ರವಾರ

ಉಡುಪಿ-ರಾಮಕೃಷ್ಣ ಥಿಯೇಟರಿನಲ್ಲಿ-ಎಪ್ರಿಲ್ ೮ ಶನಿವಾರ

ಪ್ರತಿದಿನ ೭ನೆ ಆಟಗಳು ಸಾಯಂಕಾಲ ೧೦-೩೦ ಮತ್ತುಕ್ಕೆ

ನೇ ರೂಪುಗೊಳ್ಳಲಾರದಾದರೂ ದೃಢವಾಗಿ, ಹಾಗೂ ನಿಧಾನವಾಗಿ ಅದು ಬೆಳೆಯುವ ಸಂಭವವಿದೆ. ಮಾತ್ರವಲ್ಲ. ವೈರಿಗಳ ಸಪ್ಲೈಹಾದಿಗಳು ಹಾಗೂ ಮುಂಚೂಣಿ ನಿಲ್ದಾಣಗಳಿಗೆ ಉತ್ತರಗಡೆಯ ಹುಕಾಂಗ್ ಕಂದರದಲ್ಲಿ ದಕ್ಷಿಣಾಭಿಮುಖವಾಗಿ ಮುಂದೊತ್ತುತ್ತಿರುವ ಜನರಲ್ ಸ್ಟಿಲ್‌ವೆಲರ ಸೇನೆಗಳಿಂದಲೂ ಅಪಾಯವಿದೆ. ಇನ್ನೊಂಡೆಡೆ, ತೀರಾ ದಕ್ಷಿಣ ರಣರಂಗದಲ್ಲಿ ಬಹುದೂರ ಹಿಮ್ಮೆಟ್ಟಿದ ಮತ್ತು ಇನ್ನೂ ಹಿಮ್ಮೆಟ್ಟುತ್ತಿರುವ ಜಪಾನಿಗಳಿಗಾದ ಮಹತ್ತಾದ ಕಷ್ಟನಷ್ಟಗಳಂತೂ ಪ್ರತ್ಯೇಕವಿವೆ. ಇವೆಲ್ಲಾ ಒತ್ತಡಗಳು ಮಾತ್ರವಲ್ಲ— ನಮ್ಮ ವಿಮಾನಗಳು ವಿರೋಧಿಯ, ರೈಲು ಹೊಳೆಹಾದಿಗಳನ್ನು, ಸಂಗ್ರಹಾಲಯಗಳನ್ನು ಅಂತೂ ಆವನ ಸೇನಾ ಹಿಂಭಾಗದ ಸರಬರಾಯಿ ವ್ಯವಸ್ಥೆಯನ್ನೇ ನಿಷ್ಠುರವಾಗಿ. ಧ್ವಂಸಮಾಡುತ್ತಿವೆ. ಹೀಗೆ ಕ್ರಮಶಃ ಬೆಳೆಯುತ್ತಿರುವ ನಮ್ಮ ಆಕಾಶ ಹೊಡೆತಗಳು, ವಿರೋಧಿಗೆ ನಷ್ಟ ಹಾಗೂ ಸಮಯ ವ್ಯಯವನ್ನುಂಟುಮಾಡಿದ ಸಾಕಷ್ಟು ನಿದರ್ಶನಗಳು ಅಲ್ಲಿವೆ.

ಜಾಪಾನರ ಗುರಿ

"ಮಳೆಗಾಲದ ಮೊದಲೇ ಇಂಫಾಲ್ ಕೊಹಿಮಾ ಕ್ಷೇತ್ರವನ್ನು ಸ್ವಾಧೀನಪಡಿಸಿಕೊಂಡು ಆ ಮೇಲೆ ಕಲ್ಕತ್ತದಿಂದ ಹಿಡಿದು ಬ್ರಹ್ಮಪುತ್ರದಿಂದ ಉತ್ತರ ಪೂ

'ವೈರಿಯು ಹೊರಟದ್ದಲ್ಲಿಗೆ ಹೊಡೆದಟ್ಟುವೆವು'!

(೨ನೇ ಪುಟದಿಂದ ಮುಂದುವರಿದುದು)

ರ್ವ ಅಸ್ಸಾಮುವರೆಗಿನ ನಮ್ಮ ರೈಲು ಮತ್ತು ಹೊಳೆ ಹಾದಿಗಳನ್ನೆಲ್ಲಾ ಕಡಿದು ಹಾಕಬೇಕೆಂಬುದೇ ವೈರಿಯ ಗುರಿಯಾಗಿರುವಂತೆ ಕಾಣುತ್ತದೆ. ಈ ಉದ್ದೇಶ ಸಾಧನೆಗಾಗಿ ವಿರೋಧಿಯು ಆರಂಭಿಸಿದ ಧಾಳಿಯ ರೂಪ ಹೀಗಿದೆ--ಪ್ರಥಮತಃ ಇಂಫಾಲಿನ ಕಡೆಗೆ ಅವನು ದಕ್ಷಿಣದಿಂದ ಮುಂದೊತ್ತಿದ; ಎರಡನೆಯದಾಗಿ ಉತ್ತರ ಮತ್ತು ಈಶಾನ್ಯದಿಂದ ಇಂಫಾಲಿನ ಕಡೆಗೆ ಧಾಳಿಹೂಡಿದ. ಈ ಪೈಕಿ ದಕ್ಷಿಣದ ಅಂದರೆ ಚಿನ್ ಪರ್ವತ ವಲಯದ ಟಿಡ್ಡಿಮ್ ಕ್ಷೇತ್ರದಲ್ಲಿ ನಮ್ಮ ಮುಂಚೂಣಿ ಸೇನೆಗಳ ಹಿಂಭಾಗವನ್ನಾಕ್ರಮಿಸಿಕೊಂಡು ಅವುಗಳ ಆಧಾರವಾಗಿರುವ ಸರಬರಾಯಿ ಪಥವನ್ನು ಮುಚ್ಚಿಬಿಡುವದೇ ವೈರಿಯ ಉದ್ದೇಶವೆಂಬುದು ಸ್ಪಷ್ಟ. ಅರಕಾನಿನಲ್ಲಿ ಅವನು ತನಗೆ ತಾನೇ ನಿರತಂದುಕೊಂಡುದು. ಇಂತಹ ಪ್ರಯೋಗವನ್ನು ಮಾಡಿಯೇ ಇಂಫಾಲನ್ನು ಈ ದಿಕ್ಕಿನಿಂದ ಆಕ್ರಮಿಸಬೇಕೆಂಬ ಇಚ್ಛೆ ಅವನಿಗಿದ್ದಂತೆ ಕಾಣುವದಿಲ್ಲ. ಪ್ರಕೃತ ಟಿಡ್ಡಿಮ್ ನಮಗೊಂದು ಪರ್ಮ ಮುಖ್ಯ ಸ್ಥಳವಲ್ಲವಾದ್ದರಿಂದ ನಾವದನ್ನು ಹಿಡಿದು ನಿಲ್ಲುವ ಪ್ರಯತ್ನವನ್ನೂ ಮಾಡಲಿಲ್ಲ. ಉತ್ತರಗಡೆಯ ರಸ್ತೆಗಳನ್ನು ಮುಚ್ಚುತ್ತಾ ಮುಂದೊತ್ತುತ್ತಿರುವ ವೈರಿ ಸೇನೆಯು ತಮ್ಮ ಗುರಿಯೆಂದು ಸರಿಯಾದ ಯುದ್ಧ ತತ್ವಗಳಿಗನುಸಾರವಾಗಿ ನಮ್ಮ ಕಮಾಂಡರರ ನಿರ್ಧಾರವಾಯಿತು. ಅಂತೆಯೇ ಟಿಡ್ಡಿಮಿನಲ್ಲಿದ್ದ ನಮ್ಮ ಸೇನೆಗಳನ್ನು ಅಲ್ಲಿಂದ ಉತ್ತರಕ್ಕೆ ಸಾಗಿಸಿ, ಕಲದಿನಗಳಿಂದ ಅಲ್ಲಿಯ ವೈರಿ ಸೇನೆಯನ್ನು ಮುಂದಕ್ಕೊತ್ತುತ್ತಿದ್ದಾರೆ. ಇದೇ ಸಮಯದಲ್ಲಿ ಇಂಫಾಲ್ ವಿಭಾಗದಲ್ಲಿದ್ದ ನಮ್ಮ ಸೇನೆಯೂ ಅಲ್ಲಿಂದ ಹೊರಬಿದ್ದು, ಈಗ ವಿರೋಧಿಯ ಮೇಲೆ ಇವೆರಡು ಸೇನೆಗಳು ದಕ್ಷಿಣದಿಂದಲೂ ಉತ್ತರದಿಂದಲೂ ಮುಂದೊತ್ತಿ ಒಹು ಮಟ್ಟಿಗೆ ವಿಜಯಗಳಾಗಿವೆ. ಇವೆರಡೂ ಸೇನೆಗಳು ಮಿಲನ ಹೊಂದಿ ವೈರಿಗಪಾರ ಹಾನಿಯೊಡ್ಡಿವೆಯಾದರೂ ಈ ಇಂಫಾಲ್-ಟಿಡ್ಡಿಮ್ ರಸ್ತೆಯಲ್ಲಿ ಇನ್ನೂ ಜಪಾನರ ಸಣ್ಣ ಸಣ್ಣ ಸೇನಾಂಶಗಳಿವೆ. ಅವುಗಳನ್ನು ಕಿತ್ತೊಗೆಯಲು ಹೆಚ್ಚು ಸಮಯ ತಾಗದು. ಇದೀಗ ಇಂಫಾಲಿನ ಒತ್ತು ಪಶ್ಚಿಮಭಾಗದ ಪರಿಸ್ಥಿತಿ: ಟಾಮು ವಲಯದಲ್ಲಿ ವೈರಿಯು ಅಲ್ಪ ಅಭಿವೃದ್ಧಿಹೊಂದಿದ್ದಾನೆ; ಆದರೆ ಟಾಮು-ಇಂಫಾಲ್ ರಸ್ತೆಯ ವಾಹನಗಳಿಗಾತಂಕ ಮಾಡಲು ಶಕ್ತನಾಗಿಲ್ಲ. ಕಳೆದ ಹಲವು ತಿಂಗಳಿಂದ ನಾವು ಕಟ್ಟುತ್ತಿರುವ ದ್ವಿತೀಯ ರಸ್ತೆಯೆಂದರೆ ಇದೇ.

ಇಂಫಾಲ್ ಸುರಕ್ಷಿತವಿದೆ!

"ಇಂಫಾಲ್ ಇನ್ನೂ ನಮ್ಮ ಕೈಯಲ್ಲೇ ಇದೆ; ಅದನ್ನು ಜಪಾನರು ವಶಪಡಿಸಿಕೊಂಡಿಲ್ಲ; ಮತ್ತು ಅದರ ರಕ್ಷಣಾ ವ್ಯವಸ್ಥೆ ಪ್ರಬಲವಿದೆ-ಎಂದು. ನಾನಿಲ್ಲಿ ಸ್ಪಷ್ಟವಾಗಿ ತಿಳಿಸಲಿಚ್ಛಿಸುತ್ತೇನೆ. ಜಾಪಾನರ ಸಣ್ಣ ಗುಂಪುಗಳು ಇಂಫಾಲ್ ಮೈದಾನಿನೊಳಗೆ ಪ್ರವೇಶಿಸುವದು ಎಂದೆಂದಿಗೂ ಸಾಧ್ಯ. ಅಲ್ಲಿಯ ಭೂಸ್ಥಿತಿಯೇ ದಾಗಿ ಇದು ಸಂಭವನೀಯ. ಆದರೆ ಇಂತಹ ಪ್ರವೇಶವು ದೊಡ್ಡ ಪರಿಮಾಣದಲ್ಲಾಗುವದು ಅಸಂಭವ. ಅಮೇರಿಕದ ಪತ್ರಿಕೆಯೊಂದರಲ್ಲಿ ಇಂಫಾಲಿನ ಪತನವು ಅಗಣ್ಯವೆಂದು ಪ್ರಕಟವಾಗಿರುವ ಅಭಿಪ್ರಾಯ ತಪ್ಪು. ಇಂಫಾಲ್ ವೈರಿಯ ಹಸ್ತಗತವಾಗಬೇಕೆಂದು ತಮ್ಮ ಕಮಾಂಡರರು ಇಚ್ಛೆಯಿಲ್ಲ.

ಇಂಫಾಲಿನ ಈ ಭಾಗದ ಧಾಳಿಗೆ ಹೊಂದಿಕೆಯಾಗಿ ನಮ್ಮ ಅತಿ ಮುಖ್ಯ ರೈಲು ಹಾದಿಯಿರುವ ಇಂಫಾಲ್— ಮಣಿಪುರದ ಉತ್ತರ ಭಾಗದ ರಸ್ತೆಯ ಕಡೆಗೆ ವೈರಿಯು ಮತ್ತೊಂದು ಧಾಳಿ ಹೂಡಿದ್ದಾನೆ. ಇವರಡು ಧಾಳಿಗಳೂ ಹೆಚ್ಚು ಕಡಿಮೆ ಕೊಹಿಮಾದತ್ತ ಸಾಗಿದ್ದು ವಿರೋಧಿಯಲ್ಲಿ ಸ್ವಲ್ಪ ಮುಂದೊತ್ತಿದ್ದಾನೆ. ಆದರೆ ನಾವು ಪೂರ್ವ ತಯಾರಿ ಹಂಚಿಕೆಯಂತೆ ಇಲ್ಲಿ ಕಟ್ಟಿರುವ ರಕ್ಷಣಾ ಲೈನಿಗೀಗ ತಾನೇ ಆತ ಒಂದುದರಿಂದ ಪ್ರಬಲ ಪ್ರತಿಭಟನೆಗೀಡಾಗಿದ್ದಾನೆ.

ನಾನು ಇಷ್ಟರಲ್ಲೇ ಹೇಳಿರುವಂತೆ ಬ್ರಿಟಿಷ್ ಮತ್ತು ಹಿಂದೀ ಸೇನೆಗಳ ಬೆಂಬಲ ದೊಡನೆ ಜನರಲ್ ಸ್ಟಿಲ್‌ವೆಲ್ಲರ ಅಮೇರಿಕನ್ ಮತ್ತು ಚೀನೀ ಸೇನೆಗಳು ಹುಕಾಂಗ್ ಕಂದರದಲ್ಲಿ ಮುಂದೊತ್ತಿ ಮಿಟ್ಕೈನಾ ವಲಯದ ಜಪಾನೀ ಸೇನೆಗೆ ಅಪಾಯಕಾರಿಯಾಗಿ ಪರಿಣಮಿಸುತ್ತಾ ಬರುತ್ತಿವೆ.

ನಮಗೆ ತಿಳಿದು ಬಂದೊಡನೆಯೇ ನಾವು ಪ್ರತಿಯೊಂದು ಜಪಾನೀ ಧಾಳಿಯನ್ನೂ ತಡೆಗಟ್ಟಲು ಸಾಧ್ಯವಿಲ್ಲ. ಆದ್ದರಿಂದ ಅವುಗಳಲ್ಲಿ ಕೆಲವಕ್ಕಾದರೂ ನಮ್ಮ ಸರಬರಾಯಿ ಪಥಗಳನ್ನು ತಾತ್ಕಾಲಿಕವಾಗಿ ಹಾಳು ಮಾಡಲು ಸಾಧ್ಯವಾಗುವದು ಸದಾ ಸಂಭವನೀಯ. ಇದೀಗ ನಾವು ಸದ್ಯ ಕ್ಕೊಪ್ಪಿಕೊಳ್ಳಲೇ ಬೇಕಾದ ವಸ್ತುಸ್ಥಿತಿ. ಹೇಗಿದ್ದರೂ ನನಗೆ ಮುಂದಟ್ಟಾಗಿರುವ ಸಂಗತಿಯೆಂದರೆ—ಭಾರತದ ಭದ್ರತೆಯ ಮಾತಂತಿರಲಿ, ಅಸ್ಸಾಮಿನ ಸುರಕ್ಷತೆಗೆ ಕೂಡಾ ಎಂದೂ ಅಪಾಯ ಬಂದಿಲ್ಲ. ನಾವು ನಮ್ಮ ಮುಂಭಾಗದ ಸರಬರಾಯಿ ಪಥಗಳನ್ನು ಉಳಿಸಿಕೊಂಡು ವಿರೋಧಿಯನ್ನು ಅವನ ಮೂಲಸ್ಥಾನ ಮತ್ತು ಅದಕ್ಕೂ ಒಳಗಡೆಗೆ ಹೊಡೆದಟ್ಟುವೆವೆಂಬುದು ನನಗೆ ಖಚಿತವಾಗಿದೆ".

ಜನರಲ್ ಆಚಿನ್‌ಲೆಕರ ಭಾಷಣದ ಇಂಫಾಲನ್ನು ಬಿಟ್ಟು ಕೊಡುವಂತಿಲ್ಲವೆಂಬ ಮಾತೂ ಕೊನೆಯ ಎರಡು ವಾಕ್ಯಗಳೂ ಸಭೆಯಲ್ಲಿ ಉತ್ಸಾಹ-ಆತ್ಮುತ್ಸಾಹಗನ್ನೆಬ್ಬಿಸಿದುವು.

ನೋಟೀಸು.

ಮಂಗಳೂರು ಡಿ. ಮು. ಕೋರ್ಟಿನಲ್ಲಿ,

೨ C. No. 58/1944

ಇಬ್ರಾಹಿಂ ಯೂಸೆ ಶೇಖಾ ಸಾಹೇಬ್ ವಾದಿ

ಮತ್ತು

ಸಿ. ಪುಂಞಾ ಬ್ಯಾರಿ-ಗುಲಾಂ ಬ್ಯಾರಿ ಮಗ. ಕಲಾ ಸಿ-ಮಂಗಳೂರು ತಾಲೂಕು ಉಳ್ಳಾಲ ಗ್ರಾಮಸ — ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ-ನಿಮ್ಮ ಮೇಲೆ ವಾದಿಯು ದಾಖಲ್ಲು ಮಾಡಿದ ಮೇಲಿನ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 17-4-1944ಕ್ಕೆ ಯಿಟ್ಟಿರುವದರಿಂದ ಸದ್ರಿ ದಿನ ಹಗಲು 11ಘಂಟೆಗೆ ನೀವು ಖುದ್ದಾಗಲೀ ಯಾ ವಕೀಲದ್ವಾರವಾಗಲೀ ಹಾಜರು ಆಗಿ ನಿಮ್ಮ ಉದಾಹರಣೆಯನ್ನು ದಾಖಲುಮಾಡದೆ ಯಿದ್ದರೆ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾಡಲಾಗುವುದು. ತೀದಿನಲಿ

(B O.)

A. Moosabba.
B A B. L
Vakil for Plff

Mangalore }
28-3-1944. }

ಪ್ರಕಟಣೆ

D. M Kunhi Raman. Manager,
Parassini Madappura Temple,
P O Parassinikkatavu
(Via) Pappinisserri

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ--

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವಂತಃ ಒಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಿದ್ದಲ್ಲಿ ನಿಂತ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸಿವದು. ಬೇರೆ ಯಾರ ಕೈಯಲ್ಲೂ ಕಳುಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಞ್ಞಿರಾಮನ್,
ಮನೇಜರ್.

ಕಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸ.
ಪುತ್ತೂರು ಏಜಂಟರು, **ಪೈ ಫಾರ್ಮಸಿ**

THE BEST PREVENTIVE IN EPIDEMICS OF CHOLERA

"BHUVANENDRA"

CHANDRAMAS

Will give you the best results Try once and be satisfied with the results

Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 3ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ.**

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920)

Registered Office: Court Road UDIPI South Canara District

Business Offices: Udipi, Mangalore, Katapadi, Kanhangad and Kinnigoli, South Canara.

Authorised and Issued Capital Rs 2,00,000/-
Subscribed and Paid up Capital. Rs 2,00,000/-
Reserve Funds: Rs 1,75,853/-

Short term bills are discounted for approved parties. Loans and advances are made and overdrafts granted on fairly easy terms.

Deposits are accepted at favourable rates of interest. More than twenty-three years' reliable banking Service stands to our credit.

For further particulars please call at or apply to the nearest office.

Dated 31-10-1943

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸು: **ಬೊಂಬಾಯಿ**

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ಉಡುಪಿಯ ಕೋರ್ಟುರೋಡಿನಲ್ಲಿ ಇದರ ಚೀಫ್ ಏಜನ್ಸಿ ಆಫೀಸು ಇದೀಗಲೇ ಪ್ರಾರಂಭವಾಗಿದೆ

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರ ಬೇಕಾಗಿದ್ದಾರೆ.

ಪಿ. ಡಿ. ನಾಯಕ್,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Company, Ltd., BOMBAY.

ದಿ ಮುಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd. Moolky, S. K.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರಪೇಸಲ್ಲ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ನಿರಾಳ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ ವಿಜಾಪೂರ—ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಕುಂಬಾರಮಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯರ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಪ್ಪು ಸಾಮಾನುಗಳಿವೆ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಿಲ್ಲ ಟ್ರೇಡ್.)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೨ **ಕೊಡಿಯಾಲಬೈಲು, ದ. ಕ**

FOR SAFETY & SERVICE
THE VIJAYA BANK, LTD.,

Head office: MANGALORE.

Branches at:—Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ

ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು:—ಮಂಗಳೂರು.

ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.



ನಮ್ಮ ಸುವರ್ಣೋತ್ಸವ ಸಂಚಿಕೆಗೆ ದಯಮಾಡಿ ನಿಮ್ಮ

ಸಹೃದಯ ಸಂದೇಶವನ್ನು ಕಳುಹಿಸಿ ಕೊಡಿರಿ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ ರೂ. **1-8-0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2—8—0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. INDIA

Regd. N. M 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪಿತ

1944ನೇ ಜನವರಿಯಿಂದ ಮೂರನೆ ಸಂಪುಟಾರಂಭವಾಗಿದೆ.

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿಗೆ ರೂ. 0-4-0

ಮಾದರಿ ಪ್ರತಿಗೆ ಎದಾಣೆ ಸ್ಟಾಂಪಿನೊಂದಿಗೆ ಬರೆಯುವುದು:

'PRAKASHINI'

NAVAYUGA PRESS

UDIPI

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೩೨

FOUNDER Sri. A. B. Shetty.

Vol. 24 No. 32

NAVAYUGA— Kannada Weekly —UDIPI, S. I.

ಉಡುಪಿ • 13—4—1944 • ಮಂಗಳೂರು.

ANTARANGA UDIPI

ಅಖಿಲ ಕರ್ನಾಟಕದ ಹೊಸ ಮಾದರಿಯ ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ 4-8-0

ಬಿಡಿ ಪ್ರತಿಗೆ 0-1-6

ಮೆನೇಜರ್,

ಅಂತರಂಗ, ಉಡುಪಿ

The Canara Mutual Assurance Co., Ltd.

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman

UDIPI, 3-4-1944.

T. R. A. Pai,
MANAGING DIRECTOR

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸವಿಶಾಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.-

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. [ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕ್ಯಾಟಲಾಗ್ ಬರದಲ್ಲಿ ತಕ್ಕವಾದ ಔಷಧಿ ಆರಿಸಿ ತರಿಸಬಹುದು.

ಕೆಟಲೂಗಿಗೆ ಬರೆಯಿರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಉಡುಪಿ ಏಜಂಟರು:- ನವಭಾರತ ಬುಕ್ ಡಿಪ್ಪೊ, ಸಂತೆಕಟ್ಟೆ, ಉಡುಪಿ.

ವಾರದ ಯುದ್ಧ ಗತಿ.

ಜಾಪಾನರ ಯುಕ್ತಿ ಯುಕ್ತ ಹಿಡಿತ!

ರಶ್ಯಾನರ ಶಕ್ತಿ ಯುಕ್ತ ಹೊಡೆತ!

'ಒಂದೋ ಮಾತು ಮುಂದುವರಿಸಿದಷ್ಟೇ ಕಾರ್ಯವನ್ನೂ ಮುಂದುವರಿಸಿರಿ; ಅಸಾಧ್ಯವಾದರೆ ಕಾರ್ಯ ಮುಂದರಿದಷ್ಟೇ ಮಾತನ್ನು ಮುಂದುವರಿಸುತ್ತಾ ಹೋಗಿ,' ಎಂದು ಮಿತ್ರ ಪ್ರಮುಖರನ್ನು ಒತ್ತಾಯ ಪೂರ್ವಕ ಮತ್ತೊಮ್ಮೆ ಕೇಳಿಕೊಳ್ಳುವಂಥ ಸನ್ನಿವೇಶವುಳಿದಿದೆ. ಇಡೀ ಪ್ರಪಂಚದ ಬೇರೆಬೇರೆ ರಣರಂಗಗಳನ್ನು ಅವಲೋಕಿಸಿದರೆ ಕೆಂಪು ಸೇನೆಯೊಂದನ್ನುಳಿದು ಬೇರಾವ ಮಿತ್ರ ಸೇನೆಯೂ ಹೊಗಳಿಸಿಕೊಳ್ಳುವಂತಹ ಮಹತ್ತನ್ನು ಎಲ್ಲಿಯೂ ಸಾಧಿಸಿಲ್ಲ. 'ಕಾದು ನೋಡಿ' 'ಸಹಿಸಿ ನಿಲ್ಲಿ'- ಎಂಬ ಸೂಚನೆಗಳನ್ನಲ್ಲದೆ 'ವಿಜಯ ಸಮೀಪಿಸಿತು' ಎಂಬ ಆಶೆಯನ್ನು ಯಾವುದೊಂದು ಯುದ್ಧ ಘಟನೆಯೂ ಕೊಡುವಂತಿಲ್ಲ. ರಶ್ಯಾ ಹೋರಾಟವು ಒಂದು ತುದಿಯ ಅಸ್ಸಾಮು ಗಿದ್ದರೆ ಇಟೆಲಿ ಯುದ್ಧವು ಇನ್ನೊಂದು ತುದಿಯ ಸಿಂಹಶಯ್ಯೆಯಾಗಿದೆ; ಬರ್ಮಾ—ಅಸ್ಸಾಮು ಹೋರಾಟವು ಇವುಗಳ ಮಧ್ಯ ಸ್ಥಾನದಲ್ಲಿದೆ. ಈ ವಾರದ ಅವಧಿಯ ವರೆಗಿನ ಇಡೀ ಪ್ರಪಂಚದ ವಿವಿಧ ರಣಕಣಗಳ ಕಡೆ ತುಸು ಬೆಳಕು ಹಾಯಿಸೋಣ.

ಅಸ್ಸಾಮು—ಬರ್ಮಾ

ಬರ್ಮಾ ಅರೆವಾಸಿ ಮತ್ತು ಅದಕ್ಕೆ ತಾಗಿರುವ ಅಸ್ಸಾಮು ವಲಯದ ಯುದ್ಧ ಸ್ಥಿತಿ ಹೀಗಿದೆ: ಉತ್ತರ ಬರ್ಮಾದಲ್ಲಿ ಜನರಲ್ ಸ್ಟಿಲ್‌ವೆಲ್ಲರ ನಾಯಕತ್ವದ ಅಮೇರಿಕನ್ ಮತ್ತು ಚೀನೀ ಸೇನೆಗಳ ಒತ್ತಡಸಾಗಿದೆ; ಅದಕ್ಕೆ ಹೊಂದಿಕೆಯಾಗಿ ಆ ವಲಯದಲ್ಲಿ ಆಕಾಶಗಾಮಿತ್ವದಿಂದ ಸ್ಥಾಪನೆ ಹೊಂದಿದ ದಿವಂಗತ ವಿಂಗೇಟರ 'ಚಿಂಡಿಟ್'ಗಳು 'ಗೊರಿಲ್ಲಾ' ಸಾಹಸ ಪ್ರದರ್ಶಿಸುತ್ತಲೇ ಇವೆ. ದಕ್ಷಿಣ ಬರ್ಮಾದಲ್ಲಿ ಅರಕಾನ್ ವಲಯವೇ ಯುದ್ಧ ರಂಗ; ಇಲ್ಲಿ ಆಗಾಗ ಧಾಳಿ ಪ್ರತಿ ಧಾಳಿಗಳು ನಡೆಯುತ್ತಿವೆ; ಕೆಲವು ದಿನಗಳವರೆಗೆ ರಣರಂಗ ಸ್ತಬ್ಧವಾಗುತ್ತದೆ; ಪುನಃ ಚೇತನಗೊಳ್ಳುತ್ತದೆ. ಅರಕಾನಿನಿಂದ ಮರ್ಮ ನೋಡಿ ಮುನ್ನುಗ್ಗುವ ಯೋಚನೆ ಜಾಪಾನರಿಗಿರಬಹುದಾದರೂ ಅದನ್ನು ಸಾಧಿಸಿಯೇ ಬಿಡಬೇಕೆಂಬ ಹಠ ಅಥವಾ ಆವಶ್ಯಕತೆ ಅವರಿಗಿಲ್ಲ. ಈಗ ಅಸಾಮು ರಣರಂಗದ ಸ್ಥಿತಿಯನ್ನು ನೋಡೋಣ. ಅದು ನಿಜಕ್ಕೂ ಆತುರ ಹುಟ್ಟಿಸುತ್ತಾ ಬೆಳೆದಿದೆ. ಗುಟ್ಟಕ್ಕೆ ಮತ್ತಾರವಿರಬಾರದಾದರೆ, ಹಿಂದು ಮುಂದಿನ ಯೋಚನೆಯೊಡನೆ ಸದ್ಯಸ್ಥಿತಿಗೆ ಹೋಲಿಕೊಳ್ಳಲು ಜಾಪಾನರರಿತಂತೆ ಮಿಕ್ಕವರರಿತಿಲ್ಲವೆನ್ನಬಹುದು. ಇನ್ನು ನಾಲ್ಕೇ ವಾರಗಳೊಳಗೆ ಮಳೆಗಾಲಾರಂಭ; ಯುದ್ಧ ಮುಖದ ಸರಬರಾಯಿಯನ್ನು ತಡೆಗಟ್ಟುವ ಪ್ರಕೃತಿಯ ಆತಂಕವೇ ಪ್ರಾರಂಭ! ಆ ಮೊದಲೇ ಜಾಪಾನರು ಮಾಡಿ ಮುಗಿಸಬೇಕಾದ ಕೆಲಸವೆಂದರೆ ಮಣಿಪುರ ರಸ್ತೆಯನ್ನು ಹಿಡಿದುಕೊಂಡು, ಅತಿ ಮುಖ್ಯ ರೈಲ್ವೇ ತುದಿಯಾದ ಮಾಪುರದ ನಿಯಂತ್ರಣ. ಅದನ್ನು ಸಾಧಿಸಿ ಬಿಟ್ಟರೆ ಉತ್ತರ ಬರ್ಮಾದ ಸ್ಟಿಲ್‌ವೆಲ್ ಸೇನೆಯ ಎಲ್ಲಾ ಸರಬರಾಯಿಯನ್ನೂ ತಡೆಗಟ್ಟಿದಂತಾಗುವದು; ಬಾಡ ಕತ್ತರಿಸಿ ಶಿಖರ ಪ್ರೋಣಗಿಸುವ ಕಾರ್ಯ ಪೂರ್ಣಗೊಳ್ಳುವದ; ಜಪಾನರೀ ರಸ್ತೆಯನ್ನು ಮುಚ್ಚಿ ಬಿಟ್ಟರೆ ಸ್ಟಿಲ್‌ವೆಲ್ಲರ ಮೂಗಿನ ಸೊಳ್ಳೆಗಳನ್ನೇ ಮುಚ್ಚಿಬಿಟ್ಟಂತೆ; ಉಸಿರು ಕಟ್ಟುವದೇ ಗತಿ! ಮೇಲಾಗಿ, ಮಿತ್ರ ರಾಷ್ಟ್ರಗಳ ಬಹುಕಾಲದ ಯೋಜನೆಯಾಗಿರುವ, ಚೀನಾದೊಡನೆ ಭೂಪಥ ನಿರ್ಮಿಸಿಕೊಳ್ಳುವ ಹಂಚಿಕೆಯೂ ಆಗಲೇ ಮಣ್ಣು ಪಾಲಾಗುವದು. ಮಣಿಪುರ ವಲಯದಲ್ಲಿ ಜಾಪಾನೀ ಧಾಳಿಯ ಗುರಿ ಇದೇ. ಅಸ್ಸಾಮು ಧಾಳಿಯಷ್ಟೊಂದು ಭೀಕರವಾಗಿ ಕಾಣುವದಿಲ್ಲವೇಕೆ ಗೊತ್ತೇ? ಜಾಪಾನರು ಜುಟ್ಟು ಹಿಡಿದು ಬಗ್ಗಿಸಿ ಗುದ್ದುವ ಧೃತ್ಯವಲ್ಲಿಲ್ಲ- ಬದಲಿಗೆ ಸಂಚು ನೋಡಿ ಸಂದು ಕಟ್ಟಿನ ನರಗಳನ್ನೇ ಕಡಿಯುವ ಮೌನ ಸಾಹಸ ನಡೆಯುತ್ತಿದೆ ಸಾಗಿದೆ; ಒಂದನೆಯದಕ್ಕಿಂತ ಎರಡನೆಯದೇ ಅಪಾಯಕರ!



ಅಜೇಯ ಸ್ಟಾಲಿನ್.

ಲಾಭ—ನಷ್ಟ

ತಮ್ಮೀ ಉದ್ದೇಶ ಸಾಧಿಸಬೇಕಾದರೆ ಜಾಪಾನರು ಇಂಫಾಲ್ ಮತ್ತು ಅದರ ಉತ್ತರಗಡೆಯ ಕೊಹಿಮಾಗಳನ್ನು ಸ್ವಾಧೀನಪಡಿಸಿಕೊಳ್ಳಲೇ ಬೇಕು. ಅವೆರಡರ ಮೇಲೂ ಹತ್ತಿರ ಹತ್ತಿರದಿಂದ ಅವರ ದೃಷ್ಟಿಯೀಗ ಬಿದ್ದಿದೆ. ಪ್ರಾರಂಭದಲ್ಲಿ ಇಂಫಾಲಿನ ದಕ್ಷಿಣಗಡೆಯಲ್ಲಿದ್ದ ಟಿಡ್ಡಿಮ್-ಟಾಮು ವಲಯಗಳ ಜಾಪಾನೀ ಧಾಳಿಗಳು ಈಗ ಅಂತರ್ಧಾನ ಹೊಂದಿವೆ. ಸದ್ಯ ಬೆಂಕಿ ಕಾಣಿಸಿಕೊಂಡಿರುವದು ಪ್ರಾಮುಖ್ಯತೆಗೇರಿದ ಉತ್ತರ ಗಡೆಯ ಇಂಫಾಲ್ ಮತ್ತು ಕೊಹಿಮಾಗಳಲ್ಲಿ. ಇಂಫಾಲ್ ಈಗ ಸಂಪೂರ್ಣವಾಗಿ ಆವರಿಸಲ್ಪಟ್ಟಂತಿದೆ ಯಾವರೂ ಜಾಪಾನರ ಮೊದಲ ಗುರಿ ಕೊಹಿಮಾ ಎಂಬುದಕ್ಕೆ ವರ ದೊಡ್ಡ ಪರಿಮಾಣದ ಮುಖ್ಯ ಧಾಳಿಯು ಅಲ್ಲಾರಂಭವಾಗಿರುವದೇ ಸಾಕ್ಷಿ. ವೈರಿಯ ಮುಂಭಾಗದ ಸೇನೆಯೊಮ್ಮೆ ಕೊಹಿಮಾ ವಲಯಕ್ಕೆ ನುಗ್ಗಿ ಬಂತೆಂದೂ, ಆದರೆ ನಮ್ಮವರು ಪ್ರತಿಧಾಳಿ ಹೂಡಿ ಹಿಮ್ಮೆಟ್ಟಿಸಿದರೆಂದೂ ಎಲ್ಲಕ್ಕಿಂತ ತಡವಾಗಿ ಬಂದ ಯುದ್ಧ ವರದಿಯಲ್ಲಿದೆ. ಇವೆಲ್ಲಾ ವಿದ್ಯಮಾನಗಳಿಂದ ಅಪಾಯಕಾರೀ, ಆತುರದಾಯೀ ಧಾಳಿಯೊಂದು ಅಸ್ಸಾಮಿನಲ್ಲೀಗ ನಡೆಯುತ್ತಿದೆ. ಎಂಬುದನ್ನೊಪ್ಪಲೇಬೇಕು; ಇಂದುಗೋಚರಿಸದಿರುವ ಹೊಡ್ಡ ಪರಿಮಾಣದ ಪ್ರತಿಧಾಳಿಯೊಂದು ನಡೆಯದೆ ಜಾಪಾನರನ್ನು ಹಿಮ್ಮೆಟ್ಟಿಸುವದು ಅಸಾಧ್ಯವೆಂಬುದೀಗ ಸ್ಪಷ್ಟ; ಇದು ಅಸ್ಸಾಮು ಯುದ್ಧ ಬಜೆಟಿನಲ್ಲಿ ನಮ್ಮ ಪಾಲಿನ ನಷ್ಟದ ತಪ್ಸೆ; ಈ ಭಯಾತೆಯಲ್ಲಿ, ದಕ್ಷಿಣದ ಟಿಡ್ಡಿಮ್ ತಾಮೂವಲಯದಲ್ಲಿದ್ದ 17ನೇ ಡಿವಿಜನ್ ಸೇನೆಯು, ವೈರಿಯನ್ನು ಜಯಶೀಲವಾಗಿ ಪ್ರತಿಭಟಿಸುತ್ತಾ ಸಶಕ್ತವಾಗಿ ಸುರಕ್ಷಿತವಾಗಿ ಇಂಫಾಲಿಗೆ ಹೋಗಿ ಸೇರಿಕೊಂಡ ಒಂದು ಘಟನೆ—ವೈರಿಗಳು ಬಯಲಿಗೆ ಬಂದಾಗ ಅವರನ್ನಿದಿರಿಸಲು ಸಾಕಷ್ಟು ಸಂಖ್ಯೆಯ ಸೈನ್ಯಗಳಲ್ಲಿ ಜಮೆಯಿರುವ ಇನ್ನೊಂದು ಸಂಗತಿ—ಮೇಲಾಗಿ ಬರ್ಮಾದೊಳಗಡೆಯ ರಣರಂಗಗಳಲ್ಲಿ ಮಿತ್ರ ಸೇನೆಗಳೇ ಮೇಲ್ಮೈಯಾಗಿರುವ ಅನುಕೂಲತೆ, ಇನಿಷ್ಟಿವೆ. ಇನ್ನು ಈ ಲಾಭ ನಷ್ಟವೆರಡನ್ನೂ ತುಲನೆ ಮಾಡಿದರೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಬೇರೆಬೇರೆ ರಣರಂಗಗಳಲ್ಲಿ ಹರಿಹಂಚಾಗಿರುವ ಮಿತ್ರ ಸೇನೆಗಳು ಏಕಮೈಯಿಂದ ಜಾಪಾನರನ್ನು ಅಸ್ಸಾಮು ಗಡಿಯಿಂದ ಟ್ಟುವಂತಿಲ್ಲ; ಅವುಗಳನ್ನು ಒಮ್ಮೆ ಖಿಗೊಳಿಸುವ ಯೋಜನೆಯೊಂದಿಲ್ಲ. ಹಾಗಾಗಿ ಇಂಫಾಲ್ ಕೊಹಿಮಾವಲಯಗಳ ಪ್ರಬಲ ಜಾಪಾನೀ ಧಾಳಿಗೆ ತಕ್ಕಂತಹ ಪ್ರತಿಧಾಳಿ ಪ್ರತ್ಯೇಕವಾಗಿ ರೂಪುಗೊಳ್ಳಬೇಕು; ಹಾಗೆ ರೂಪುಗೊಳ್ಳದೆ ಹೋದರೆ ಬರ್ಮಾದೊಳಗಡೆ ವಿಜಯ ಪಡೆಯುತ್ತಿರುವ ಸ್ಟಿಲ್‌ವೆಲ್ಲರ ಸೋಲನ್ನೂ ಜಾಪಾನರು ಮಣಿಪುರದಲ್ಲೇ ನಿರ್ಮಿಸಬಲ್ಲರು! ಈ ಕಡೆಯಲ್ಲಿ ಅವರ ಯುದ್ಧ ಕಾಳಿ ಆರಾಧನೆಯ ಮೂಲ ಪೀಠವೂ ಅದಾಗುವದು.

(೭ನೇ ಪುಟ ನೋಡಿರಿ).

NOTICE.

In the Court of the District Munsif of Puttur

R. E. P. No. 586 of 1943. O. S. 390/1942.

M. Radhakrishna Rao-Petitioner

Vs.

Gopalkrishna Vylaya and others Respondent's

To The 2nd Respondent Parameshwara Vylaya, son of Venkatramana Vylaya, residing in Aduru village, Puttur Taluk.

Notice is hereby given to the 2nd respondent that the abovenamed petitioner has applied for sale of the immoveable properties detailed in the sale proclamation and the 18th day of April 1944 is fixed for settling the terms of the draft sale Proclamation and you are hereby informed that in case you have any objection to the same you must file your objection on the above mentioned date before the above court at 10A-M: otherwise you will be placed exparte and the petition be decided in your absence.

By Order of Court

Sd. **P. Krishna Bhat,**

Vakil for petitioner.

Puttur
1-1-1944

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 35/1944.

1. ಕೆ. ಸುಬ್ಬರಾವ್ 2. ಮಂಜುನಾಥ (ಮೈನರು) ಇವನ ಕ್ಷೇಮ ಚಿಂತಕ 1ನೇ ಅರ್ಜಿದಾರ, 3. ಪುಟ್ಟಮ್ಮ 4. ಬನದಮ್ಮ (ಮೈನರರು) ಇವರ ಕ್ಷೇಮ ಚಿಂತಕ ಇವರ ಗಂಡ ಸೋಮಯ್ಯ ಕರ್ಣಿಕ 5. ಲಕ್ಷ್ಮಮ್ಮ — ಅರ್ಜಿದಾರರು

ಅರ್ಜಿದಾರರೆಲ್ಲರೂ ಕಾರ್ಕಳ ತಾಲೂಕು ಕೆರೆಬೆಟ್ಟು ಗ್ರಾಮಸ್ಥರು.

ಕಾರ್ಕಳ ತಾಲೂಕು ಕೆರೆಬೆಟ್ಟು ಗ್ರಾಮದಲ್ಲಿದ್ದು ಮೃತವಾದ I. ಶ್ರೀಮಯ್ಯನೆಂಬವನಿಗೆ ಬರತಕ್ಕ ಸಾಲಗಳನ್ನು ವಸೂಲು ಮಾಡುವರೆ ತಾವು ಅರ್ಹರೆಂತಾ sec. 372ರ ಮೇರೆಗೆ ವಾರಿಸುಸರ್ಟಿಫಿಕೇಟು ಕೊಡಬೇಕೆಂತಾ ಅರ್ಜಿ ಕೊಟ್ಟಿರುತ್ತಾರೆ. ಅದುದರಿಂದ ಈ ಕುರಿತು ಆಕ್ಷೇಪವುಳ್ಳಂತವರು ತಾ. 21-4-1944ನೇ ಹಗಲು 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಅವರ ಆಕ್ಷೇಪಣೆಗಳನ್ನು ತಿಳಿಸಿ ರುಜು ಪಡಿಸಿಕೊಳ್ಳತಕ್ಕದ್ದು- ತಪ್ಪಿದ್ದಲ್ಲಿ ಅರ್ಜಿದಾರರ ಅಪೇಕ್ಷೆಯಂತೆ ಅವರಿಗೆ ಸಕ್ಸೆ ವಾರಿಸು ಸರ್ಟಿಫಿಕೇಟು ಕೊಡಲ್ಪಡುವುದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗುತ್ತದೆ.

K. M. Hegde,

ಅರ್ಜಿದಾರರ ಕಡೆ ವಕೀಲ್,

ಕಾರ್ಕಳ,
ತಾ. 5-4-44

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

★ ವಾರದ ಸಭೆ ಸಮ್ಮೇಲನಗಳು ★

ಶ್ರೀಮತಿ ಕಮಲಾ ದೇವಿ.

ಕಳೆದ ವಾರವು ಭಾರತದ ಮಟ್ಟಿಗೆ ಪರಿಷತ್ತುಗಳ ಪರ್ವಕಾಲ. ಎಪ್ರಿಲ್ 7,8ರಲ್ಲಿ ಸರ್. ತೇಜಬಹದೂರ್ ಸಪ್ರುಗಳ ಸಮರ್ಥ ಅಧ್ಯಕ್ಷತೆಯಲ್ಲಿ ಲಕ್ನೋದಲ್ಲಿ ಜರಗಿದ ಪಕ್ಷರಹಿತರ ಪರಿಷತ್ತಿನ ಭಾಷಣಗಳು ಮತ್ತು ನಿರ್ಧಾರಗಳು ದೇಶದ ಮುಖ್ಯ ಕೊರತೆಗಳ ಕಡೆಗೆಸೆದ ತೀಕ್ಷ್ಣಬಾಣಗಳಂತಿವೆ. ಬೊಂಬಾಯಿಯಲ್ಲಿ ತಾ 7ರಲ್ಲಿ ಶ್ರೀಮತಿ ಕಮಲಾ ದೇವಿಯರ ಅಧ್ಯಕ್ಷತೆಯಲ್ಲಿ ನೆರೆದ ಅ. ಭಾ. ಮಹಿಳಾ ಪರಿಷತ್ತಿನ 17ನೇ ವಾರ್ಷಿಕಾಧಿವೇಶನವು ಮಹಿಳೆಯರಿಗೆ ಮಾರ್ಗದರ್ಶಿಯಾಗಿ ನಿಂತಿದೆ. ಶಿವಮೊಗ್ಗದಲ್ಲಿ ತಾ 8ರಲ್ಲಿ ಶ್ರೀ ಸಾವರ್ಕರರ ಸಮ್ಮುಖದಲ್ಲಿ ಸಂಸ್ಥಾನಿಕ ಹಿಂದೂ ಮಹಾಸಭೆಯ ಅಧಿವೇಶನವು ಉದ್ಘಾಟನೆ ಹೊಂದಿ ಶ್ರೀ. ಬಿ. ಜಿ. ಕಪರ್ದಿಯವರ ಅಧ್ಯಕ್ಷತೆಯಲ್ಲಿ ಜರಗಿದೆ. ಅಂತೂ ವಸಂತಕಾಲದ ಮಿಕ್ಕ ಉತ್ಸವಗಳಂತೆ ರಾಷ್ಟ್ರೀಯ ಸಭಾ ಸಮಾರಂಭೋತ್ಸವಗಳಿಗೂ ಕೊರತೆಯಿಲ್ಲ

ಪಕ್ಷರಹಿತರ ಪರಿಷತ್ತು

ಪಕ್ಷಾತೀತರ ಸಮ್ಮೇಲನವೊಂದು ರೂಪುಗೊಂಡಂದಿನಿಂದ, ಸರಕಾರಕ್ಕದು ತೋರಿಸಿಕೊಟ್ಟ ಸುಗಮ ಹಾಗೂ ಕ್ಷೇಮ ನ್ಯಾಯೀ ಪಥದ ಕುರಿತು ಆಕ್ಷೇಪ ಹೂಡುವದು ಮಿ. ಅಮೇರಿಯವರಿಂದ ಕೂಡಾ ಅಸಾಧ್ಯ. ಈ ಬಾರಿಯ ಲಕ್ನೋ ಸಮ್ಮೇಲನಾಧ್ಯಕ್ಷ ಸರ್. ಸಪ್ರುಗಳು ತಮ್ಮ ಭಾಷಣದಲ್ಲಿ 93ನೇ ಸೆಕ್ಷನಿನಾಳ್ವಿಕೆಯನ್ನು-ಸಲಹೆಗಾರದರ್ಬಾರನ್ನು ತೀಕ್ಷ್ಣವಾಗಿ ಖಂಡಿಸಿ, ದೇಶದ ಬಿಕ್ಕಟ್ಟು, ಕೇಂದ್ರದಲ್ಲಿರುವ ಬೇಜವಾಬ್ದಾರಿತ್ವಗಳ ಮೇಲೆ ಸ್ಪಷ್ಟ ಪ್ರಕಾಶ ಚೆಲ್ಲಿ, ಗಾಂಧಿಜೀ ಮೊದಲಾದ ಪ್ರಮುಖರ ಬಿಡುಗಡೆಯೊಂದಿಗೆ ಪ್ರಜಾ ಜವಾಬ್ದಾರೀ ಸರಕಾರ ಸ್ಥಾಪಿಸುವ ಅವಶ್ಯಕತೆಯನ್ನು ಮತ್ತೊಮ್ಮೆ ಎತ್ತಿತೋರಿಸಿದ್ದಾರೆ. ಸಂಬಂಧದ ನಿರ್ಣಯಗಳು ಮಂಜೂರಾಗಿ ಸೆಕ್ಷನ್ 93ರ ಆಳ್ವಿಕೆಗೆ ಮತ್ತೊಮ್ಮೆ ಜೀವದಾನಮಾಡಲು ಪಾರ್ಲಿಮೆಂಟಿನ ಮುಂದೆ ಬಂದ ಮಿ. ಅಮೇರಿಯವರು, 'ಸಂದರ್ಭಕ್ಕೆ ಸರಿಯಾಗಿ ಭಾರತದ ಮುಖಂಡರು ತೋರಿಸಿದ ಹಾದಿಯತ್ತ ತಿರುಗಿ ಇಂಗ್ಲೆಂಡು-ಭಾರತವೆರಡಕ್ಕೂ ಕ್ಷೇಮವನ್ನುಂಟುಮಾಡಲು ಸಾಧ್ಯವಿದೆ. ಆದರೆ ಅಮೇರಿಯಂತಹ ಅಧಿಕ ಪ್ರಸಂಗಿಗಳಿಂದಲೂ ಅಂತಹವನ್ನು ನಿರೀಕ್ಷಿಸಬಹುದೆ?

ಮಹಿಳಾ ಸಮ್ಮೇಳನ

ಕಳೆದ ವರುಷ ಏರುವಾಗ ಸಧವೆಯಾಗಿದ್ದ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ಅಧ್ಯಕ್ಷ ಪೀಠವಿಳಿಯುವಾಗ ವಿಧವೆಯಾಗಿದ್ದರು! ಶ್ರೀಮತಿ ಕಮಲಾ ದೇವಿಯರು ಬೊಂಬಾಯಿಯಲ್ಲಿ ಅ. ಭಾ. ಮಹಿಳಾ ಪರಿಷತ್ತಿನ ಅಧ್ಯಕ್ಷ ಪೀಠದಿಂದಿತ್ತ ಭಾಷಣವು ಮನನೀಯವಿದೆ. ದೇಶದ ವಿಷಮಾವಸ್ಥೆಗಳನ್ನೆಲ್ಲಾ ಅವರು ಚಿತ್ರಿಸಿ ಜನತಾ ಸರಕಾರವೊಂದೇ ಸದ್ಯದ ಆಹಾರ ಸಮಸ್ಯೆಯನ್ನ ಜಯಶೀಲವಾಗಿ ನಿವಾರಿಸಬಲ್ಲುದ; ತನ್ನ ಅದೃಷ್ಟವನ್ನು ತಾನೇ ರೂಪಿಸಿಕೊಳ್ಳುವ ಹಕ್ಕು ಇತರ ದೇಶಗಳಂತೆ ಭಾರತಕ್ಕೂ ಇದೆ; ಹಿಂದುಸ್ಥಾನವೇ ಮಿತ್ರರಾಷ್ಟ್ರೀಯ ಧೋರಣೆಯ ನಿಜ ಒರೆಗಲ್ಲು ಎಂದು ಕಂಠೋಕ್ತವಾಗಿ ಸಾರಿದ್ದಾರೆ. "ಹಿಂದುಸ್ಥಾನವು ಕೇವಲ ಒಂದು ಒರೆಗಲ್ಲು ಮಾತ್ರವಲ್ಲ ಅದೊಂದು ಗುರುಗಲ್ಲೂ ಅಹುದು. ಅದೆಂದರೆ ವಸ್ತುಸ್ಥಿತಿ ಹೀಗೇನೇ ಆಗಬೇಕೆಂದು ಇಡೀ ಪ್ರಪಂಚವು ನೋಡಿ ತಿಳಿಯಬೇಕಾದ ಒಂದು ಕನ್ನಡಿ. ಜಾಗತಿಕ ಯುದ್ಧಗಳು ಇಲ್ಲದಂತಾಗಿ ಮಾನವ ವರ್ಗವು ಸುವ್ಯವಸ್ಥೆ, ಶಾಂತಿ, ಸುಖಗಳನ್ನು ಅನುಭವಿಸುವಂತಾಗಬೇಕಾದರೆ ಭಾರತದ ಹಾಗೂ ಲೋಕದ ಮಹಿಳೆಯರು ಅದಕ್ಕಾಗಿ ಒದ್ದಾಡಬೇಕು" ಎಂದು ಶ್ರೀಮತಿಯವರ ಅಂಬೋಣ. ಸಮ್ಮೇಲನದಲ್ಲಿ ಮಹಿಳಾ ಸುಧಾರಣೆ, ಸ್ವಾತಂತ್ರ್ಯಗಳ ಸಂಬಂಧವಾದ ಹಾಗೂ ದೇಶದ ಸ್ಥಿತಿಗತಿಗಳಿಗೆ ಹೊಂದಿಕೆಯಾಗುವ ಹಲವು ನಿರ್ಧಾರಗಳೂ ಆಗಿವೆ.

ಅ. ಭಾ. ಸಂ. ಹಿಂದೂ ಮಹಾಸಭೆ.

ಅಖಿಲಭಾರತ ಸಂಸ್ಥಾನಿಕ ಹಿಂದೂ ಮಹಾ ಸಭೆಯ ಅಧ್ಯಕ್ಷರಾಗಿ ಶ್ರೀ ಕಾಪರ್ದೆಯವರು ತಮ್ಮ ಭಾಷಣದಲ್ಲಿ ಪಾಕಿಸ್ಥಾನದ ಪ್ರಸ್ತಾಪವೆತ್ತಿ 'ಅಪ್ರಾಸಂಗಿಕ, ಅಸಾಧ್ಯ ಹಾಗೂ ಅನರ್ಥಕಾರೀ ಕೂಗು.' ಎಂದದನ್ನು ಸಂಬೋಧಿಸಿ ಅದನ್ನು ಸರ್ವಶಕ್ತಿಯಿಂದ ವಿರೋಧಿಸಬೇಕೆಂದರು

"CONSENT OF THE CENTRAL GOVERNMENT HAS BEEN OBTAINED TO THE ISSUE UNDER DEFENCE OF INDIA RULE 94-A.

It must be distinctly understood that in giving this consent the Government of India do not uudertake any responsibility for the financial soundness of any schemes or for the correctness of the statements made or opinions expressed with regard to them".

SRI NARAYAN GURU BANK, LIMITED.,

(Incorporated in British India Liability of members limited)

Registered Head Office CENTRAL HAMPANKATTA,

MANGALORE, S. INDIA.

THIS IS NOT A PROSPECTUS BUT A TRADE ADVT.' ONLY.

Authorised Capital Rs 2,00,000 — 4,000 Ordinary shares of Rs. 50 each.
Issued Captial Rs. 1,00,000 — 2,000 Ordinary shares of Rs. 50 each
to be fully paid with an Entrance Fee of Re. 1 per share

The Bank's Directors have taken up shares worth Rs 15,000 in all.

The First and the only New bank in South Kanara to be floated after the promulgation of the Control Order of Capital Issues The Bank is fortunae tenough to receive the consent of the Central Government for its capital issues especially when so many institutions could not get the consent.

BOARD OF DIRECTORS

1. *Sri Mangalore Jarappa*, Special Magistrate, Banker & Managing Director The Badavara Bandhu Printing Press, Ltd., Mangalore.
2. *Sri B Narsappa*, Banker, Associate Editor 'The Friend of the Poor', English daily & President, Panchayat Court, Bolur, Mangalore.
3. *Sri A. Bacha Merakala*, Landlord, Vessel Owner, Director, The Shanker Vittal Motor Co., Ltd., & The Homes & Estates Ltd., Hungarkatta, S K.
4. *J. M. Misquith Esq.*, Land-lord & Sub-Inspector of Police (Retd.) Bolar Mangalore.
5. *Sri D Kochanna Shetty*, Zamindar & Ex District Board Member, Kunjathbail, S. K.
6. *Sri K Krishna Rao*, B. A., Branch Manager Sri Narayan Guru Press, Sanyasigudde, Mangalore.

MANAGING DIRECTOR
Sri Mangalore Jarappa, Special Magistrate and Banker, Mangalore.

BANKERS
IMPERIAL BANK OF INDIA

LEGAL ADVISER
Sri B Vaikunta Baliga, B. A. L. L., Mangalore.

AUDITOR
Sri P. M Hegde, G. D. A. A., Registered Accountant Mangalore.

REGISTERED OFFICE
CENTRAL HAMPANKATTA, MANGALORE.

BROKERS
Messrs Jenason & Company, Hampankatta Mangalore.

PUBLICITY OFFICERS
The Badavara Bandhu Printing Press, Ltd., Mangalore

The Board of Directors,
Sri Narayan Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944 Your patronage is solicited.

The Canara Banking Corporation Limited.

ESTD 1906.

Authorised Capital	Rs. 25,00,000/-
Subscribed ,, ...	,, 16,00,000/-
Paid up ,, ...	,, 13,25,785/-
Reserves	,, 4,10,000/-

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegrapic Transfers

ನವಯುಗ

ಉಡುಪಿ, ಗುರುವಾರ ೧೩-೪-೧೯೪೪

93ನೇ ಸೆಕ್ಷನಿನಾಳ್ವಿಕೆ

ಹಿಂದುಸ್ಥಾನದ ಪಾಲಿಗೆ 'ಪ್ರಜಾಪ್ರಭುತ್ವ' 'ಜನ ಮತದಾಳ್ವಿಕೆ' ಮೊದಲಾದ ರಮ್ಯ ತತ್ವಗಳು ಕನಸಿನ ಮಂಡಿಗೆಗಳು. ಆಫ್ರಿಕ, ಇಟಲಿ, ಬರ್ಮಾ ಮೊದಲಾದ ರಣರಂಗಗಳಲ್ಲಿ ಬಿಳಿಯ ಸೋಲ್ಜರನಿಂದಾಗದುದನ್ನು ಹಿಂದೀಯೋಧ ಸಾಧಿಸಿ ಕೊಡಬಹುದು; ಅದಕ್ಕಾಗಿ ಬ್ರಿಟಿಷ್ ಯುದ್ಧ ಪ್ರಮುಖರಿಂದಲೇ ಶ್ಲಾಘನೆ ಪಡೆಯಬಹುದು. ಆದರೆ ಭಾರತೀಯರು ಇಂತಹ ಯೋಗ್ಯತೆಗಳಿಂದ ಸ್ವಾತಂತ್ರ್ಯಕ್ಕರ್ಹರಾಗುವದಿಲ್ಲ. ಭಾರತೀಯರಿಂದ ತಮಗಾದ ಅನನ್ಯಸಾಧ್ಯ ಉಪಕಾರಗಳಿಗಾಗಿ ಬ್ರಿಟಿಷರವರಿಗೆ ಸ್ವಾತಂತ್ರ್ಯದಾನಮಾಡುವಂತಿಲ್ಲ. ಬ್ರಿಟಿಷರಿಗೆ ಭಾರತೀಯರ ಮೇಲಿದೆಯೆಂದು ಬಹಳವಾಗಿ ಪ್ರಚಾರ ಮಾಡಲ್ಪಟ್ಟಿರುವ ಗೌರವದ ರೂಪ ರೀತಿ ಹೀಗಿದೆ! ವಸ್ತುಸ್ಥಿತಿ ಹೀಗಿದ್ದರೂ 'ಹಿಂದುಸ್ಥಾನದಲ್ಲಿ ಪ್ರಜಾಪ್ರಭುತ್ವವೇ ಇದೆ' ಎಂದು ಅಮೇರಿಕಾ ಮೊದಲಾದ ದೇಶಗಳಲ್ಲಿನ್ನೂ ಪ್ರಚಾರ ನಡೆಯುತ್ತಿದೆ; ಪ್ರಪಂಚದ ಪ್ರಥಮ ವರ್ಗದ ಸುಳ್ಳು ನಿರ್ಮಾಣದ ಹೆಗ್ಗಳಿಕೆಯೂ ಬ್ರಿಟಿಷರಿಗೇನೆ ಸಲ್ಲಬೇಕು!

ಕೇಂದ್ರದಲ್ಲಿ ಜವಾಬ್ದಾರಿ ಸರಕಾರವಿಲ್ಲವೆಂಬುದು ಮೊದಲ ಕೊರತೆಯಾದರೆ ಪ್ರಾಂತ್ಯಗಳಲ್ಲಿ ಯುದ್ಧಾರಂಭದಿಂದಲೂ ಪ್ರಜಾಪ್ರಭುತ್ವವನ್ನು ತುಳಿದು ಹಿಡಿಯಲು ಬಿಡಲಾಗಿದೆ ಎಂಬುದು ಎರಡನೆಯದು. ದೇಶದ ಬಹುಭಾಗವೀಗ 93ನೇ ಸೆಕ್ಷನಾಳ್ವಿಕೆಯಲ್ಲಿದೆ; ಇಡೀ ಪ್ರಾಂತ್ಯದ ಅಧಿಕಾರ ಸೂತ್ರವು ಓರ್ವ ಗವರ್ನರನ ಕೈಹಿಡಿಯೊಳಗಾಗಿದೆ; ಒಂದೊಂದು ಬಿಳಿಮೊಗವು ಒಂದೊಂದು ಪ್ರಾಂತ್ಯದ ಏಕಛತ್ರವಾಗಿ ದರ್ಬಾರು ನಡೆಸುತ್ತಿದೆ! ಹಿಂದೆ ಕಾಂಗ್ರೆಸ್ ಸರಕಾರವಿದ್ದ ಮದ್ರಾಸ್, ಬೊಂಬಾಯಿ, ಮಧ್ಯಪ್ರಾಂತ್ಯ, ಸಂಯುಕ್ತಪ್ರಾಂತ್ಯ ಮತ್ತು ಬಿಹಾರಗಳಲ್ಲೀಗ 93ನೇ ಸೆಕ್ಷನಿನಾಳ್ವಿಕೆಯು. ಇಂತಹ ಆಳ್ವಿಕೆಗೆ ಒಂದು ಬಾರಿಗೊಂದೇ ವರುಷದ ಜೀವದಾನ ಮಾಡಲು ಸಾಧ್ಯ. ಈ ಬಾರಿಯ ವರುಷ ಇದೇ ಎಪ್ರಿಲ್ ೩೦ಕ್ಕೆ ಮುಗಿಯಲಿರುವದರಿಂದ ಪುನಃ ಜೀವದಾನಮಾಡಲು ಮಿ. ಅಮೇರಿಯವರು ಕಟಿಬದ್ಧರಾಗಿದ್ದಾರೆ, ಎಂಬ ವಾರ್ತೆಬಂದಿದೆ.

'ಗಲಭೆಯ ಹೊಣೆ ಕಾಂಗ್ರೆಸಿಗರದು' ಎಂದು ಪುಸ್ತಕವನ್ನೇ ಪ್ರಕಟಿಸಿದ ಸರಕಾರವು ಈ ಬಿಕ್ಕಟ್ಟಿನ ಹೊಣೆಯನ್ನು ಕಾಂಗ್ರೆಸಿನ ಮೇಲೆ ಹೊರಿಸುವದಕ್ಕೆಂತೂ ದಾಕ್ಷಿಣ್ಯ ಮಾಡದು. ಮೇಲಿನ ಪ್ರಾಂತ್ಯಗಳಲ್ಲಿ ಬಹುಪಕ್ಷೀಯರಾಗಿದ್ದ ಕಾಂಗ್ರೆಸಿಗರ ಅಧಿಕಾರತ್ಯಾಗದ ದೆಸೆಯಿಂದ 93ನೇ ಸೆಕ್ಷನ್ ಜಾರಿಗೆ ಬಂತೆಂಬುದು ನಿಜ. ಆದರೆ ಸರಕಾರವು ಎಸೆಂಬ್ಲಿಗಳನ್ನು ನಿರ್ಮಿಸಿದುದು ಕಾಂಗ್ರೆಸಿಗರಿಗಾಗಿ ಅಲ್ಲವೆಂಬುದು ನಿಜವಾದರೆ, ಕಾಂಗ್ರೆಸಿಗರು ತ್ಯಜಿಸಿದೊಡನೆ ಎಸೆಂಬ್ಲಿಯ ಕಾರ್ಯಕಲಾಪಗಳನ್ನು ಮುನ್ನಡೆಸಿ 93ನೇ ಸೆಕ್ಷನನ್ನು ಜಾರಿಗೆ ತಂದೇ ಬಿಡಬೇಕೆಂದಿರಲಿಲ್ಲ; ಪುನಃ ಚುನಾವಣೆ ನಡೆಸುವ ನ್ಯಾಯವಾದ ಹಾದಿಯುಳಿದಿತ್ತು. ಅವರ ಬದಲಿಗೆ ಪ್ರಾಂತ್ಯಕ್ಕೊಬ್ಬ ಸರ್ವಾಧಿಕಾರಿಯಾಗಿ ಕಳೆದ ಅರ್ಧ ಶತಮಾನಗಳಿಂದ ದೇಶವು ಅನುಭವಿಸಿರದಂತಹ ದಾರುಣತೆ ಭೀಷಣತೆಗಳನ್ನು ಈ ಆಳ್ವಿಕೆಯು ಕಳೆದ ನಾಲ್ಕೂವರೆ ವರುಷಗಳಿಂದ ಅನುಭವಿಸುವಂತಾಗಿದೆ. ಚರ್ಚಿಲ್ ಸರಕಾರವು ತನ್ನ ಬಾಯಿ ಪ್ರತಿಜ್ಞೆಯಂತೆ ನಿಜಕ್ಕೂ ಸರ್ವಾಧಿಕಾರಿ ದ್ವೇಷಿಯಾಗಿದ್ದರೆ ತನ್ನ ಕಂಕುಳಡಿಯ ಈ ಸರ್ವಾಧಿಕಾರಿಗಳ ದಂಡವನ್ನು ಪ್ರಥಮತಃ ಕಿತ್ತು ಕೊಂಡು ಪ್ರಜಾ ಪ್ರತಿನಿಧಿಗಳ ಕೈಗೆ ಕೊಡಬೇಕು. ಲಕ್ನೋದಲ್ಲಿ ನೆರೆದ ಪಕ್ಷ ರಹಿತರ ಸಮ್ಮೇಲನದ ಬೇಡಿಕೆಯಂತೆ ಪ್ರಾಂತ್ಯಗಳಲ್ಲಿ ಚುನಾವಣೆ ನಡೆಸಬೇಕು. ಕೇಂದ್ರದಲ್ಲಿ ಜವಾಬ್ದಾರಿ ದೊರೆಯದೆ, ಇಂತಹ ಚರ್ವಿತ ಚರ್ವಣ ನಡೆಸಿದೊಡನೆ ದೇಶವು ತೃಪ್ತಿಹೊಂದಲಾರದೆಂಬುದು ನಿಜ. ಆದರೆ ಮಿ. ಅಮೇರಿಯವರೀಗ ಅಣಿಯಾದಂತೆ 'ಸಲಹೆಗಾರರ ಸರಕಾರ'ಕ್ಕೆ ಇನ್ನೂ ಆಯುಷ್ಯ ದಾನಮಾಡಿದರೆ, ಅದರಿಂದ ಬ್ರಿಟಿಷ್ ಪರಂಪರಾಗತ ಸ್ವಾರ್ಥ ಮತ್ತು ಇಲ್ಲಿಯ ಲಾಭ ಬಡಕರು ತೃಪ್ತಿಹೊಂದಲನುಕೂಲ. ಸದ್ಯದ ಆಹಾರ ಮತ್ತು ಆರ್ಥಿಕ ಸ್ಥಿತಿಯಲ್ಲಿ 93ನೇ ಸೆಕ್ಷನ್ ಆಳ್ವಿಕೆಯನ್ನು ಇನ್ನೂ ಮುಂದೊತ್ತುವದೆಂದರೆ ದೇಶದ ಕಂಠ ಹಿಸುಕಿದಂತೆಯೇ ಸರಿ; ಮಿತ್ರ ರಂಗಗಳಲ್ಲಿ ನಾಜಿಗಳೊಡನೆ ಹೋರಾಡಿ ಗೆಲ್ಲಲಣಿಯಾದರೆ, ಭಾರತದಲ್ಲಿ ನಾಜಿಗಳೊಡನೆ ಸ್ಪರ್ಧಿಸಿ ಗೆದ್ದಂತೆಯೇ ಸರಿ! ಆದರೆ ಸ್ಮಶಾನ ಘಟ್ಟವನ್ನು ನೋಡುವ ರಣಹದ್ದಿನಂತೆ, ಭಾರತದ ಸದ್ಯದ ಬಿಕ್ಕಟ್ಟನ್ನೇ ಮಿ. ಅಮೇರಿಯವರು ಸಂತೋಷದೃಷ್ಟಿಯಿಂದ ಕಾಣುತ್ತಿರುವಂತಿದೆ. ಅವರು 93ನೇ ಸೆಕ್ಷನಿನ ದುಃಖಾಧ್ಯಾಯಕ್ಕೆ ಮತ್ತೊಂದು ಹಾಳೆಯನ್ನು ಸೇರಿಸಲಿದ್ದಾರೆ. ಮದ್ರಾಸಿನಲ್ಲಿ, '[illegible] ತನ್ನ ಸ್ವಕಾರ್ಯದ ಸಲುವಾಗಿ ಎಸೆಂಬ್ಲಿ ಸದಸ್ಯತ್ವಕ್ಕೆ ರಾಜೀನಾಮೆಯಿತ್ತ ಮಿ. ಸಿ. ಜೆ. ವರ್ಕಿಯವರ ಸ್ಥಾನಕ್ಕೆ ಕೂಡಾ ಉಪಚುನಾವಣೆ ನಡೆಯುವದಿಲ್ಲವೆಂದು ಪ್ರಕಟವಾಗಿದೆ. ಏನೇನೋ ಅಪಪ್ರಚಾರಗಳಿಂದ ದೇಶ-ವಿದೇಶಗಳವರು ಮಂಕಾದಂತೆ, ಹಿಂದುಸ್ಥಾನದ ಪರಿಸ್ಥಿತಿಯನ್ನು ಇದ್ದಂತೆ ಚಿತ್ರಿಸಿ ತೋರಿಸುವ ವಿದ್ಯಮಾನವಿದು. ವೈಸರಾಯ ಕೌನ್ಸಿಲಿನಲ್ಲಿ 10ಮಂದಿ ಹಿಂದೀಯರನ್ನು ತುರುಕಿಸಿ ಕೊಂಡುದನ್ನೇ 'ಸರಕಾರದ ಹಿಂದೀಕರಣ' ವೆಂದು ಹೇಳಬಹುದಾದರೆ-ದೇಶದ ಬಹು ಭಾಗವಾಗಿರುವ ಹೆಚ್ಚಿನ ಪ್ರಾಂತ್ಯಗಳಲ್ಲಿ ಬಿಳಿ ಸಲಹೆಗಾರರ(ಎಲ್ಲಾ ಪ್ರಾಂತ್ಯಗಳ ಸಲಹೆಗಾರರಲ್ಲಿ ಹಿಂದೀಯರಿರುವದು ಮೂರು ಅಥವಾ ನಾಲ್ಕುಮಂದಿ ಮಾತ್ರ) ನಿರಂಕುಶಾಧಿಕಾರ ನಡೆಯುತ್ತಿರುವದಕ್ಕೇನೆನ್ನಬೇಕು?

ದುರ್ಬೀನು

ಪರಿಮಳವನ್ನು ಮರೆಸಿ ಕೆಡಿಸಲಾಗುವದಿಲ್ಲ; ಸತ್ಕೀರ್ತಿಯನ್ನು ನಿಂದಿಸಿ ಕೆಡಿಸುವದಸಾಧ್ಯ.

oo oo oo

ಹಕ್ಕಿಯ ಗರಿಯಿಂದ ಲೇಖನಿ ಮಾಡಬಹುದಾದರೂ ಹಕ್ಕಿಯ ತಲೆಯೊಳಗೆ ವಿದ್ಯೆಯಿರಲಾರದು; ಒಬ್ಬನ ಕಾರ್ಯದಿಂದ ಸಹಾಯ ಹೊಂದಬಹುದಾದರೂ ಅವನೇ ಸಹಾಯಕನಾಗಲಾರ.

oo oo oo

ಕಸಬಿದ್ದ ಕಣ್ಣನ್ನು ಮತ್ತೂ ಮತ್ತೂ ತಿಕ್ಕಿಕೊಳ್ಳಬಾರದು; ದುಃಖ ಬೆರೆತ ಹೃದಯವನ್ನು ಮತ್ತೂ ಮತ್ತೂ ಕದಡಬಾರದು.

oo oo oo

ಖಡ್ಗ ಹರಿತವಿರಬೇಕು, ಆದರೆ ಅದರ ಹಿಡಿಯು ಹಿಡಿಯಲಾಗುವಂತೆ ನಯವಿರಬೇಕು, ಮಾತು ತೀಕ್ಷ್ಣವೇ ಇರಲಿ, ಆದರೆ ಮನಸ್ಸು ಮಿಲನಹೊಂದಲಾಗುವಂತೆ ಮೃದುವಿರಬೇಕು.

oo oo oo

ಎಲೆಯ ಮರೆಯಲ್ಲಿರುವ ಹುಳವಾದರೂ ಹಸುರಾಗಿರುತ್ತದೆ, ಅರೆಹುಚ್ಚರ ಸಂಗಾತಿಗಳೂ 'ಅರೆ ಪಚ್ಚೆ'ಯೇ ಆಗುತ್ತಾರೆ.

oo oo oo

ಪನ್ನೀರಿನ ಹನಿ ಮಾತ್ರ ಬಿದ್ದೀತು; ತಣ್ಣೀರನ್ನಾದರೆ ಪಿತ್ಥ ಇಳಿಯುವ ವರೆಗೂ ಕೊಡಕೊಡ ಹೊಯಿದುಕೊಳ್ಳಬಹುದು. ಉಪಚಾರ ವಾಣಿ ಒಂದೆರಡೇ; ಉಪದೇಶೋಕ್ತಿಯನ್ನಾದರೆ ಬುದ್ಧಿ ಬರುವ ವರೆಗೂ ಪಡೆಯಬಹುದು.

oo oo oo

ಮೇಲಿನ ಮಣ್ಣು ತೆಗೆದು ಹೊಂಗಿನ ಪಾಗಾರ ಕಟ್ಟಿಯಾರು; ಗರ್ಭದೊಳಗಿನ ಭಂಗಾರ ಅಗೆದು ತೆಗೆದರೆ ಒಳಗಿನ ಪೆಟ್ಟಿಗೆಯಲ್ಲಿಟ್ಟಾರು. ಬಾಯಿಯಿಂದ ಹೊರಟ 'ಶಹಭಾಸ್' ಕಿವಿಗೆ ಮಾತ್ರ ಮುಟ್ಟೀತು—ಮನಸ್ಸಿನಿಂದೆದ್ದುದೇ ಮನಸ್ಸಿಗೆ ಹೊಕ್ಕೀತು

ಆಡಿದವರಿಗೇನೇ ಅರ್ಥವಾಗದ ಮಾತುಗಳು.

"ಜಾಪಾನಿಯು ಜರ್ಮನಿಯಂತೆಯೇ ಸಂಪೂರ್ಣ ಸೋಲಿಸಲ್ಪಡದೆ ಆರ್ಥಿಕ ಅಥವಾ ಸೈನಿಕ ಸುರಕ್ಷಿತತೆಯೆಂಬುದು ದೊರೆಯದು; ಜಾಪಾನೀ ಹೆಬ್ಬಯಕೆಯನ್ನು ಪೂರ್ತಿ ನಿರ್ನಾಮ ಮಾಡಿಕೊಳ್ಳುವದನ್ನು ಹೊಂದಿಕೊಂಡೇ ಲೋಕ ಶಾಂತಿ ಮತ್ತು ಸೌಖ್ಯವಿದೆ"

ವೈಸರಾಯಿ, 20-12-43

"ಭಾರತಾಕ್ರಮಣವನ್ನು ನೆಲ,ಜಲ,ಅಥವಾ ಆಕಾಶ ಮೂಲಕ ಸಾಧಿಸುವ ಶಕ್ತಿಯೀಗ ಜಾಪಾನರಲ್ಲಿದೆಯೆಂದು ನಾನು ನಂಬುವದಿಲ್ಲ. ಅವರು ಕಳೆದ ವರುಷ ಒಂದಲ್ಲೊಂದು ಪ್ರಯತ್ನ ಮಾಡಬಹುದಿತ್ತು; ಆದರೆ ಈಗ ಸಂದರ್ಭ ಕಳಕೊಂಡಿದ್ದಾರೆಂದು ನನಗನ್ನಿಸುತ್ತದೆ"

ಸೇನಾನಿ ಅಚಿನ್‌ಲೆಕ್
15-12-43

"ನಮ್ಮಲ್ಲಿ ಪ್ರತಿಯೊಬ್ಬನೂ ಪಾಲು ಪಡಕೊಳ್ಳಬೇಕಾಗಿದೆ. ರಾಷ್ಟ್ರೀಯ ವಿಪತ್ತಿನ ಇದಿರಲ್ಲಿ ನಾವು ತಾತ್ಕಾಲಿಕವಾಗಿಯಾದರೂ ನಮ್ಮ ಪಕ್ಷಭೇದಗಳನ್ನು ಬಿಡಬೇಕು ನಿಮ್ಮ ತಲೆ ಮತ್ತು ಹೃದಯವನ್ನು ಒಂದಾಗಿರಿಸಿ, ಓರ್ವ ಮನುಷ್ಯನೆಂಬಂತೆ ವರ್ತಿಸಿರಿ, ಆಗ ಯಾವುದೊಂದು ಸಮಸ್ಯೆಯೂ ನಿಮಗೆ ದೊಡ್ಡದಾಗದು"

ಸರ್. ಸುಲ್ತಾನ್ ಅಹಮ್ಮದ್,
12-12-43

"ಸೇನೆಗಳನ್ನು ನಾವು ಇಳಿಸಬಹುದಾದ ಗಂಡಾಂತರಗಳ ಪೈಕಿ, ಈಗ ಬರ್ಮಾ ಗಡಿಯಲ್ಲಿರುವ ಸೇನೆಗಳು ಕೈಕೊಂಡ ಕಾರ್ಯವು ಅತ್ಯಂತ ಕಠಿಣವಾದುದು"—

ಮಿ. ಅಂತೋನಿ ಈಡೆನ್.

"ಭಾರತೀಯ ಯೋಧನೇ ನಿಜವಾದ ಪ್ರತಿನಿಧಿಯಾಗಿರುವ ಭಾರತೀಯರ ಹಿತಸಾಧನೆಯನ್ನು ನನ್ನ ಶಕ್ತಿಯಿದ್ದಷ್ಟು ಸಾಧಿಸಿ, ಹಿಂದೀ ಸೈನಿಕರು ಸಲ್ಲಿಸಿರುವ [illegible] ಸೇವೆಗಾಗಿ ನನ್ನ ಖಾಸಗೀಋಣವನ್ನು ಸಂದಾಯ ಮಾಡಬೇಕೆಂದಿದ್ದೇನೆ"

—ಲೋರ್ಡ್ ವೇವೆಲ್.

"ಭಾರತವು ಬಹಳ ಯುದ್ಧ ಸಹಾಯವಿತ್ತಿದೆ. ಆದರೆ ಯುದ್ಧವಿನ್ನೂ ಮುಗಿದಿಲ್ಲವಾದ್ದರಿಂದ ನಮ್ಮ ಪ್ರಯತ್ನವನ್ನು ಬಲಗೊಳಿಸಬೇಕು"

—ಸರ್. ಮೌರಿಸ್ ಹೇಲೆಟ್

ಸದ್ಯದಲ್ಲೇ ರಂಗಭೂಮಿಗೆ ಬರಲಿರುವುದು

'ಸ್ವಾಮಿಯ ಸೋಲು'

ಅತ್ಯಾಧುನಿಕ ಸಾಮಾಜಿಕ ನಾಟಕ

ಮಾಹಿತಿಗೆ ಬರೆಯಿರಿ:

X ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಒಡೆಸ್ಸಾದಿಂದ ನಾಜಿಗಳ ಶೀಘ್ರ ಪಲಾಯನ!

ಕೊಹಿಮಾ ಇಂಫಾಲ್ ಎರಡರ ಮೇಲೂ ಜಾಪಾನೀ ಮುತ್ತಿಗೆ

ಒಡೆಸ್ಸಾದ ಪತನ!

ಕಪ್ಪು ಸಮುದ್ರದ ಪ್ರಮುಖ್ಯ ಬಂದರವಾದ ಒಡೆಸ್ಸಾದೊಳಗೆ ಪ್ರಲಯ ನೆರೆಯಂತೆ ನುಗ್ಗಿ ಬಂದ ಕೆಂಪು ಸೇನೆಯ ಧಾಳಿಗಿದಿರು ನಿಲ್ಲಲಾರದೆ ನಾಜೀ ಸೇನೆಯು ದನ್ನು ಖಾಲಿ ಮಾಡಿ ಹಿಂದೆ ಸರಿಯಿತು. ತಾ. 10ರಲ್ಲಿ ಜರ್ಮನ್ ವಾರ್ತಾ ಸಂಸ್ಥೆಯು ದನ್ನು ಒಪ್ಪಿಕೊಂಡಿದೆ.

ಇಟೆಲಿ ಯುದ್ಧ

ಈಗ ಮಿತ್ರರಾಷ್ಟ್ರೀಯರ ಪಾಲಿನ ಸ್ಥಿರಾಶಿಯಾಗಿ ಸ್ತಬ್ಧಗೊಂಡ ಇಟೆಲಿಯ ಹೋರಾಟವನ್ನು ಉಜ್ವಲಗೊಳಿಸುವದಕ್ಕಾಗಿ ಮಿತ್ರರು ಇಟೆಲಿಯ ಉತ್ತರ ಕರಾವಳಿಯ ಎರಡು ಕಡೆಗಳಲ್ಲೂ ಹೊಸ ಸೇನೆಗಳನ್ನು ತಂದಿಳಿಸಲಿದ್ದಾರೆಂದು ಅಲ್ಲಿಯ ನಾಜೀ ಸೇನಾನಿ ಕೆಸ್ಸರ್ ಲಿಂಗನು ನಿರೀಕ್ಷಿಸುತಿದ್ದಾನೆ. ಜರ್ಮನ್ ಆಕಾಶವಾಣಿಯು 'ಇಟೆಲಿ ಯುದ್ಧವು ಈಗ ನಮಗನುಕೂಲವಾಗಿ ತಾಟಸ್ಥ್ಯ ಹೊಂದಿದೆ. ಆದರೆ ವೈರಿಯು ಹೊಸ ಸರಬರಾಯಿ ಸೇನೆಗಳನ್ನು ಕರಾವಳಿಯಲ್ಲಿ ತಂದಿಳಿಸುವನೆಂಬುದನ್ನು ಪ್ರತಿ ಘಂಟೆಗೂ ನಿರೀಕ್ಷಿಸಬೇಕಾಗಿದೆ' ಎಂದು ತಿಳಿಸಿದೆ. ಅಲ್ಲಿಯ ಆಂಝಿನೋ ರಣರಂಗದಲ್ಲಿ ಜರ್ಮನರು ತಮ್ಮ ನೂತನಾಯುಧವಾದ, ರೇಡಿಯೋ ನಿಯಂತ್ರಣಬದ್ಧ ಟೇಂಕುಗಳನ್ನು ಉಪಯೋಗಿಸಿದ್ದಾರೆ.

ಜಾಪಾನರ ಮಾಯಾ ಯುದ್ಧ?

ಅಸ್ಸಾಮಿನಲ್ಲಿ ಇದೀಗ ಹೊಸತಾಗಿ ದಕ್ಷಿಣದ ಟಿಡ್ಡಿಮ್ ರಸ್ತೆಯಿಂದ ಮುಂದೊತ್ತಿದ ಜಾಪಾನೀ ಸೇನೆಗಳು ಇಂಫಾಲ್ ಹೊರವಲಯದ ವರೆಗೂ ಮುಂದೊತ್ತಲಾರಂಭಿಸಿವೆ ಆ ಮುಖ್ಯ ನಗರದ ಆಗ್ನೇಯಮೂಲೆಯ ಬಿಶೆನ್‌ಪುರ ಸರಹದ್ದಿನಲ್ಲಿ ಕಾಳಗ ನಡೆಯುತ್ತಿದೆ. ಟಿಡ್ಡಿಮ್ ಟಾಮೂವಲಯಗಳು ಪ್ರಾಮುಖ್ಯಯುದ್ಧನೆಲೆಗಳಲ್ಲವೆಂದೂ ಆ ಭಾಗದಿಂದ ಇಂಫಾಲನ್ನಾಕ್ರಮಿಸಿಕೊಳ್ಳುವದು ವೈರಿಯ ಧ್ಯೇಯವಲ್ಲವೆಂದೂ ತಿಳಿದು ಅಲ್ಲಿದ್ದ ಸೇನೆಯನ್ನು ಇಂಫಾಲಿಗೆ ಸಾಗಿಸಿರುವದನ್ನು ಸರ್ ಆಚಿನ್‌ಲೆಕರೇ ಕಳೆದ ವಾರ ಸಮರ್ಥಿಸಿ ಮಾತಾಡಿದ್ದರು. ಇತ್ತ ಇನ್ನೊಂದು ಮುಖ್ಯ ನೆಲೆಯಾದ ಕೊಹಿಮಾದ ಮೇಲಿನ ಜಾಪಾನೀ ಒತ್ತಡವೂ ಬಲಗೊಂಡಿದೆ. ಈ ಘಟನೆಗಳಿಂದ ಇಂಫಾಲ್ ಕೊಹಿಮಾಗಳೆರಡನ್ನೂ ಒಂದೇ ಬಾರಿ ಕೆಡಹುವ ಪ್ರಯತ್ನ ಜಾಪಾನರದೆನ್ನಬಹುದು. ಇವೆರಡು ಪಟ್ಟಣಗಳ ಮೇಲೆ ನುಗ್ಗಿ ಬಂದ ಜಾಪಾನರನ್ನು ಹಿಂದಟ್ಟಿ ತುಸು ದೂರ ಕ್ಕೋಡಿಸಿಹಿವೆವೆಂದು ನವಡಿಲ್ಲಿಯಿಂದ ಯುದ್ಧ ವಾರ್ತೆ. ಟಾಮು ಈಗ ಜಾಪಾನರ ಕೈಸೇರಿದೆ.

ಯು. ಬೋಟುಗಳ ಚಟುವಟಿಕೆ

ಮಾರ್ಚ ತಿಂಗಳಲ್ಲಿ ವಿಶೇಷಗೊಂಡಿತೆಂದೂ ಅವುಗಳ ಆ ಕಾರ್ಯವು ಬಾರೆಂಟ್ಸ್ ಸಮುದ್ರದಿಂದ ಹಿಡಿದು ಹಿಂದೀ ಸಮುದ್ರದ ವರೆಗಿನ ವಿಸ್ತಾರದಲ್ಲಿ ನಿರಂತರವಾಗಿ ನಡೆಯಿತೆಂದೂ, ಉತ್ತರ ಹಾದಿಯಿಂದ ರಶ್ಯಕ್ಕೆ ಹೋಗತಕ್ಕ ಸರಬರಾಯಿಯನ್ನು ತಡೆಯಲು ವೈರಿಯು ಸೀರ್ಘಕ ಪ್ರಯತ್ನಮಾಡಿರುವನೆಂದೂ ಚರ್ಚಿಲ್ ರುಸವೆಲ್ಟರ ಜತೆ ಹೇಳಿಕೆಯಲ್ಲಿದೆ.

'ಯುದ್ಧ ದೀರ್ಘವಾಗಬಹುದು'

"ಅತಿ ಕಡಿಮೆಯೆಂದರೆ ಜರ್ಮನಿಯನ್ನು ಸೋಲಿಸಲು ಒಂದು ವರುಷ ಬೇಕಾಗಬಹುದು; ಮರುವರುಷದಲ್ಲೇ ಜಾಪಾನು ಸೋಲಿಸಲ್ಪಟ್ಟರೆ ನಾವು ಅದೃಷ್ಟಶಾಲಿಗಳೆನ್ನಬೇಕು. ಇಟೆಲಿ ಯುದ್ಧವು ಮಿತ್ರರ ನಿರೀಕ್ಷಿತ ಮಟ್ಟಕ್ಕೆ ಅಭಿವೃದ್ಧಿ ಹೊಂದಿಲ್ಲ. ಆದ್ದರಿಂದ ನಾವು ಕೆಲವು ವರುಷಗಳಲ್ಲಿ ಮುಗಿಯುವಂತಹ ಸುರಕ್ಷಿತ ಯುದ್ಧ ಹಾದಿ ಹಿಡಿಯಬೇಕು" ಎಂದು ಆಸ್ಟ್ರೇಲಿಯದ ಸೇನಾಮಂತ್ರಿ ಮಿ ಫೋರ್ಡೆಯವರು ಒಂದು ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ತಿರುಪತಿ ಬೆಟ್ಟಕ್ಕೆ ಬಸ್ಸು ರಸ್ತೆ.

ಅಖಿಲ ಹಿಂದುಸ್ಥಾನದ ಅಗಣಿತ ಯಾತ್ರಿಕರ ಪುಣ್ಯ ಸ್ಥಳವಾಗಿರುವ ತಿರುಪತಿಯ ಚರಿತ್ರೆಯಲ್ಲಿ ಇದೇ ತಾ10ಕ್ಕೆ ಒಂದು ನೂತನಾಧ್ಯಾಯವಾರಂಭವಾಗಿದೆ. ಮ. ಬೆಟ್ಟದ ಬುಡದಿಂದ ಶಿಖರದವರೆಗೆ ಸುಮಾರು 12ಮೈಲುದ್ದದ ಮೋಟಾರು ರಸ್ತೆಯೊಂದು ಸಾಧಾರಣ 6ಲಕ್ಷ ರೂಪಾಯಿ, ಮತ್ತು ತಜ್ಞ ಇಂಜಿನಿಯರ್ ವತ್ತು ಕೆಲಸಗಾರರ ಚಾತುರ್ಯಗಳ ವೆಚ್ಚದಿಂದ ನಿರ್ಮಾಣಗೊಂಡು ಇದೇ ತಾ10ರಲ್ಲಿ ಮದ್ರಾಸ್ ಗವರ್ನರರಿಂದ ತೆರೆಯಲ್ಪಟ್ಟಿದೆ. ಈ ರಸ್ತೆಯು ದಟ್ಟಾರಣ್ಯ ಮತ್ತು ಒಂದೆರೆ ದೊಡ್ಡ ಕಣಿವೆಯನ್ನು ಹಾದು ಹೋಗಿದೆ. ಸುಮಾರು 3000ಅಡಿ ಎತ್ತರದ ಶಿಖರದಲ್ಲಿರುವ ತಿರುಪತಿದೇವಸ್ಥಾನಕ್ಕೆ ಈ ತನಕ ಯಾತ್ರಿಕರು ಸುಮಾರು ಒಮ್ಬೈಲು ಉದ್ದದ ಮೆಟ್ಟಲು ಹಾದಿಯಲ್ಲಾಗಲೀ, 2ಮೈಲು ಉದ್ದದ ಚಂದ್ರಗಿರಿ ಹಾದಿಯ ಅತಿ ಕಡಿದಾದ ಕಾಡು ಹಾದಿಯಲ್ಲಾಗಲೀ ಹತ್ತಬೇಕಾಗಿದ್ದಿತು. ರಾಜರಸ್ತೆ ನಿರ್ಮಾಣಗೊಂಡುದು ಇದೀಗ ಮೊದಲ ಬಾರಿ. ಈ ರಸ್ತೆಯ ಬಸ್ ಸರ್ವಿಸನ್ನು ದೇವಸ್ಥಾನದ ವತಿಯಿಂದಲೇ ನಡೆಸಲಾಗುವದು.

ಅ. ಭಾ. ಮಹಿಳಾ ಪರಿಷತ್ತು.

ಬೊಂಬಾಯಿಯಲ್ಲಿ ನೆರೆದಲ್ಲಿಯೇ ಶ್ರೀಮತಿ ಸರೋಜಿನಿ ದೇವಿಯವರ ಸೇವೆಗಾಗಿ ಅವರಿಗೊಂದು ಮಾನಪತ್ರ ಮತ್ತು ರೂ 15616 ನಿಧಿಯೊಂದನ್ನರ್ಪಿಸಿದೆ. ಈ ಸಂದರ್ಭದಲ್ಲಿ ಶ್ರೀಮತಿ ರಾಮೇಶ್ವರಿ ನೆಹರುಗಳು ಸರೋಜಿನಿಯವರನ್ನು 'ಭಾರತದ ಮಾತೆ'ಯೆಂದು ಸಂಬೋಧಿಸಿ "ನೀವು ಮಾತಾಡಿರಿ, ಮಾತಾಡದೇನೇ ಇರಿ; ನಿಮ್ಮ ನಗೆಯ ಛಾಯೆ ನಮ್ಮ ಹೃದಯಗಳಲ್ಲಿ ಮೂಡುತ್ತದೆ" ಎಂದರು.

ಡಿಗೋಲೆ-ಜಿರಾಡ್ ಸ್ಪರ್ಧೆ

ಸ್ವತಂತ್ರ ಫ್ರೆಂಚರ ಸರ್ವ ಸೇನಾನಿಯಾಗಿ ಜನರಲ್ ಡಿಗೋಲೆಯವರನ್ನು ನೇಮಿಸಿ ಸೇನೆಯ ಇನ್ಸ್‌ಪೆಕ್ಟರ್ ಜನರಲ್ ಆಗಿ, ತನ್ನನ್ನು ಅವರ ಕೈಕೆಳಗೆ ನೇಮಿಸಿದುದನ್ನು ಜನರಲ್ ಜಿರಾಡರು ತಿರಸ್ಕರಿಸಿ ಬಿಟ್ಟಿದ್ದಾರೆ ತಾನು ಮುಖ್ಯ ಸೇನಾನಿತ್ವವನ್ನು ಬಿಟ್ಟುಕೊಡಲಾರೆನೆಂದೂ ಡಿಗೋಲೆಯವರು ಅದನ್ನು ಹೇಗೆ ಕಿತ್ತುಕೊಳ್ಳುವರೋ ನೋಡುವೆನೆಂದೂ ಸ್ಪರ್ಧೆ ಹೂಡಿದುನಿಂತಿದ್ದಾರೆ.

ಮಿ. ಈಡೆನರು ರಾಜೆಕೊಡುವದಿಲ್ಲ.

ಈಗ ಇಂಗ್ಲೆಂಡಿನ ವಿದೇಶ ಮಂತ್ರಿ ಮತ್ತು ಕಾಮನ್ಸ್ ಸಭೆಯ ನಾಯಕನಾಗಿರುವ ಮಿ. ಆಂತೋನಿ ಈಡೆನ್ನರು ಎರಡರಲ್ಲೊಂದನ್ನು ಬಿಡಬೇಕಾಗಿ ಬಂದಿದೆಯೆಂದೂ ಅವರು ವಿದೇಶ ಮಂತ್ರಿತ್ವವನ್ನೇ ಬಿಡಲಿರುವರೆಂದೂ ಖಚಿತವಾದ ವಾರ್ತೆಯಿದ್ದಿತು. ಆದರೆ ಮಿ. ಚರ್ಚಿಲ್ಲರು ಸದ್ಯ ತನ್ನ ಮಂಡಲದಲ್ಲಿ ಯಾವ ಬದಲಾವಣೆಯನ್ನೂ ಮಾಡಿಕೊಳ್ಳಲಿಚ್ಛಿಸುವದಿಲ್ಲವಂತೆ

ರೈಲ್ವೇ ದರ ಹೆಚ್ಚಿಸುವದಿಲ್ಲ

ಈ ಬಾರಿಯ ಹಿಂದೀ ರೈಲ್ವೇ ಬಜೆಟಿನಲ್ಲಿ ಪ್ರಯಾಣಿಕರ ದರವನ್ನು ಸೇಕಡಾ 25ರಷ್ಟು ಹೆಚ್ಚಿಸುವ ಸೂಚನೆಯಿದ್ದು ಅದನ್ನು ಎಸೆಂಬ್ಲಿಯ ಸರ್ವಜನ ಪ್ರತಿನಿಧಿ ಪಕ್ಷಗಳೂ ವಿರೋಧಿಸಿ ಅದು ಬಿದ್ದು ಹೋಗಿತ್ತು. ಆದರೆ ಸರಕಾರವು ತನ್ನ ಸಂಪ್ರದಾಯದಂತೆ ಅದನ್ನು ಮುಂದೊತ್ತುವವೆಂಬ ನಿರೀಕ್ಷೆಯಿದ್ದರೂ, ದರ ಹೆಚ್ಚಿಸುವದಿಲ್ಲವೆಂದು ಸಂಚಾರ ವಿಭಾಗದ ಮಂತ್ರಿ ಸರ್ ಎಡ್ವರ್ಡ್ ಬೆಂಥಾಲರು ಪ್ರಕಟಿಸಿರು ಮಾಡಿರುವರು.

ಬ್ರಿಟಿಷ್ ಸಾಮ್ರಾಜ್ಯದ ಜನನಷ್ಟ

ಈ ಯುದ್ಧದ ಪ್ರಥಮ ನಾಲ್ಕು ವರುಷಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕಾದ ಜನಹಾನಿ 66715 ಎಂದು ಮಿ ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ಲೆಕ್ಕ ಕೊಟ್ಟಿದ್ದಾರೆ. - ಪೈಕಿ ಸತ್ತವರು 158/41, ಕಾಣೆಯಾದವರು 78,204. ಘಾಯಗೊಂಡವರು 159,219, ಯುದ್ಧಕೈದಿಗಳಾದವರು 270,995.

ಮಿ. ವಾರ್ಕಿಯವರ ರಾಜಿನಾಮೆ

ಪಶ್ಚಿಮ ಕರಾವಳಿಯ ಕ್ರಿಶ್ಚಿಯನ್ ಮತದಾರ ಕ್ಷೇತ್ರದಿಂದ ಮದ್ರಾಸ್ ಎಸೆಂಬ್ಲಿಗೆ ಆರಿಸಲ್ಪಟ್ಟಿದ್ದು ರಾಜಾಜಿ ಮಂತ್ರಿಮಂಡಲದಲ್ಲಿ ವಿದ್ಯಾಮಂತ್ರಿಗಳಾಗಿದ್ದ ದಕ್ಷಿಣ ಕನ್ನಡದ ಮಿ ಸಿ. ಜೆ. ವಾರ್ಕಿಯವರು "ಎರ್ನಾಕ್ಯುಲಮಿನ 'ಫಸ್ಟ್ ಗ್ರೇಡ್' ಕೋಲೆಜೊಂದರ ವೈಸ್ ಪ್ರಿನ್ಸಿಪಾಲ್ ಹುದ್ದೆಯ ನಿಮಿತ್ತ ಎಸೆಂಬ್ಲಿ ಸದಸ್ಯತ್ವಕ್ಕೆ ರಾಜಿಕೊಟ್ಟಿದ್ದಾರೆ.

NOTICE.

ಉಡುಪಿ ಡಿ. ಮು. ಕೋರ್ಟಿನಲ್ಲಿ.

R. I- A- No315/1944.
O. S No- 118/1944,

ಅಂಗರ ಶೆಟ್ಟಿ — ವಾದಿ,

ಮತ್ತು

ಅಂತಯ್ಯ ಶೆಟ್ಟಿ ಕೊಡಾ — ಪ್ರತಿವಾದಿರು

ಯವರೊಳಗೆ

ಮೂರೂರು ಗ್ರಾಮದ ಮೂಡುಮನೆ ಬಾಬು ಶೆಟ್ಟಿಯು ಮೃತಪಟ್ಟನಂತರ-ವಾದಿಕೊಡಾ ಆತನ ಸಾಲಗಾರರಿಗೆ ಪಾವತಿಕೊಡಬೇಕೆಂಬ ವಿರಾದಿಯಂ ಬಿ ಆತನ ವಾರಿಸುದಾರರೆಂದ 1ಮತ್ತು 2ನೇ ಪ್ರತಿವಾದಿರು ಆತನ ಸ್ಥಿರಾಸ್ತಿಯನ್ನು 3ರಿಂದ 5ನೇ ವರೇಗಿನ ಪ್ರತಿವಾದಿರಿಗೆ ಸ್ವಾಧೀನ ಮಾಡಿರುವ ಬಗ್ಗೆ ತಾ 1-8-1940ರಲ್ಲು ಬರಕೊಟ್ಟ ಕ್ರಯಚೀಟು ರದ್ದತಿ ವಗೈರೆ ಕೇಸ-ತಾದಿಯು ಸ್ವತಹಾ ವ ಶದ್ದಿ ಬಾಟ ಸೆಟ್ಟಿಗೆ ಸಂಬಂಧಪಡಾದ ಯಿಲ್ಲಾ ಸಾಲಗಾರರಿಗೋಸ್ಕರ ಕೊಡಾ ಮೇಲ್ಕಂಡ ವ್ಯಾಜ್ಯ ದಾಖಲುಮಾಡಿ.ಪ್ರಾನೆ ವ ಯಿ ಬಗ್ಗೆ ಕೋರ್ಟು ವಿನೋಶನ್ ಕೊಡಾ ನಿಕ್ಕಿಯಿದೆ. ಸದ್ರಿ ವ್ಯಾಜ್ಯವನ್ನು ತಾರೀಕು 22-4-44ಕ್ಕೆ ತನ್ನಿಗೆ ಯಿಡುವಕಾಗಿಯದೆ, ಯಿ ಸಂಗ್ತಿಯನ್ನು ಸಂಬಂಧ ಪಟ್ಟವರು ತಿಳಿದಿರುವದು.

K. J. Ballal
Vakil for plaintiff

ತಾರೀಕು 12-4-1944 }
ಸ್ಥಳ: ಉಡುಪಿ. }

The
Warden Insurance Co, Ltd.,
H. O. BOMBAY.

We have the pleasure to announce that the Chief Agency Office for the Mysore State has been opened at 242, Gandhinagar, Bangalore City With Sri N. C. Thimma Reddy. B. A., B. L. as our Chief Agent.

Applications for agencies may be addressed to him or to The Managing Director, The Warden Insurance Co. Ltd., Warden House, Sir P. M. Road, Fort, Bombay.

ನವಯುಗ
ಚಂದಾ ವಿವರ.
ವರ್ಷಕ್ಕೆ (ಸ್ಥಳೀಯ)3-12-0
(ಟಪ್ಪಾಲು ದ್ವಾರ)-4-8-0
ಚಂದಾ ಹಣ ಬಾಕಿಯಿರುವವರು ದಯ ಮಾಡಿ ಅದನ್ನು ಕೂಡಲೇ ಕಳುಹಿಸಿ ಕೊಡುವಂತೆ ಅಪೇಕ್ಷಿಸಲಾಗುತ್ತದೆ
ಮೆನೇಜರ್.

ದಕ್ಷಿಣ ಕನ್ನಡ-

ಮಂಗಳೂರು

ನಗರ ಸಭೆ:—ಮೊನ್ನೆಯ ತಾರೀಕಿಗೆ ನಗರಸಭೆ ಸೇರಿತು. ನಗರದ ಮಧ್ಯವನ್ನು ಒಮ್ಮೆಲು ಪೆಟ್ರೋಲಿನ ಉಪಯೋಗದಿಂದ ನೂರು ಲಾರಿಗಳನ್ನು ನಡೆಯಿಸ ಬಹುದೆಂದು ಕಲೆಕ್ಟರರು ಒಪ್ಪಿಗೆ ಕೊಟ್ಟಿದ್ದರು. ಸದಸ್ಯರು ಸಂತೋಷ ಸೂಚಿಸಿದರು. ಬಿಜೈಯಲ್ಲಿ ತೆರೆಯುವ ಆಯುರ್ವೇದ ಚಿಕಿತ್ಸಾಲಯಕ್ಕೆ ೫೦೦ ರೂಪಾಯಿಯನ್ನು ಕೊಡುವುದೆಂದಾಯಿತು. ನಗರದ ಸಕಲ ಭಾಗಗಳಿಗೂ ಲಭಿಸುವಂತೆ ಸಂಚಾರಿ ಪುಸ್ತಕ ಭಂಡಾರವನ್ನು ಗಾಡಿಯಲ್ಲಿ ಸಾಗಿಸುವ ವಿಷಯವನ್ನಾಲೋಚಿಸುವುದಕ್ಕೆ ಒಂದು ಉಪಸಮಿತಿಯು ರಚಿಸಲ್ಪಟ್ಟಿತು.

ಶ್ರೀನಿವಾಸರ ನೃತ್ಯ:-ಶ್ರೀ. ಶ್ರೀನಿವಾಸ ಕುಲಕರ್ಣಿ ಮತ್ತು ಪರಿವಾರದ ನೃತ್ಯಕಲಾ ಪ್ರದರ್ಶನವು ಮೊನ್ನೆ (ತಾ. ೭) ಅತಿಯಶಸ್ವಿಯಾಯಿತು. ಶ್ರೀಗಳಾದ ಕುಲಕರ್ಣಿ ಆನಂದ ಶಿವರಾಮ ಇವರ ಭಾವಾಭಿನಯವು ಉತ್ತಮ ರೀತಿಯದಾಗಿತ್ತು.

ಮಿತ್ರ ಮಂಡಲಿಯ ವಾರ್ಷಿಕಾಧಿವೇಶನವು ಮೊನ್ನೆ ೨ನೆಯ ತಾರೀಕಿನ ದಿನ ಸೇರಿ, ಹೊಸ ವರ್ಷದ ಕಾರ್ಯಕಾರಿಗಳನ್ನು ಆರಿಸಿತು. ಗ್ರಂಥಮಾಲೆಯ ಪ್ರಕಟನೆಯನ್ನು ತೊಡಗುವುದು, ವಿವಾಹೇತರ ಕೂಟಗಳನ್ನೇರ್ಪಡಿಸುವುದು, ಸಂಚಾರಿ ಪುಸ್ತಕ ಭಂಡಾರವನ್ನು ತೆರೆಯುವುದು ಇತ್ಯಾದಿ ನಿರ್ಣಯಗಳಾದುವು.

ನಿಷೇಧಾಜ್ಞೆ:—ಸಭೆಗಳನ್ನೂ ಮೆರವಣಿಗೆಗಳನ್ನೂ ನೆರೆಯಿಸುವುದಕ್ಕಿರುವ ನಿಷೇಧವು ಇನ್ನೊಂದು ತಿಂಗಳವರೆಗೆ ಮುಂದುವರಿಸಲ್ಪಟ್ಟಿದೆ.

ಕೋರ್ಟು ರಜೆ:—ಮಂಗಳೂರು ಜಿಲ್ಲಾಕೋರ್ಟು, ಸಬ್ ಕೋರ್ಟು ಇವುಗಳ ವಾರ್ಷಿಕ ರಜೆಯು ತಾ. ೨೫-೪-೪೪ಕ್ಕೆ ಪ್ರಾರಂಭವಾಗಿ ತಾ. ೩೧-೬-೪೪ಕ್ಕೆ ಅಂತ್ಯವಾಗುತ್ತದೆ. ಜಿಲ್ಲೆಯ ಎಲ್ಲಾ ಮುನ್ಸೀಫ ಕೋರ್ಟುಗಳೂ ತಾ. ೨೫-೪-೪೪ಕ್ಕೆ ಮುಚ್ಚಲ್ಪಟ್ಟು ತಾ. ೬-೬-೪೪ಕ್ಕೆ ತೆರೆಯಲ್ಪಡುವುವು.

ಪ್ರಕಟಣೆ

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisseri

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ---

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ಪಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ಪಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ನಿರಾಮನ್,
ಮೆನೇಜರ್.

ತಾರುಣ್ಯ

ಕೆಟ್ಟು, ಪೀರ್ಯಕ್ಷೀಣತೆ ಮಾಡಿ ಗತಿಸುವುದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣೀ ವಿಲಾಸಿನಿ** ಅತ್ಯುತ್ತಮ ಔಷಧಿ
ಡಬ್ಬಿ 1ಕ್ಕೆ ರೂ. 1
ಮದನಮಂಜರಿ ಫಾರ್ಮಸಿ,
184 ಚೈನ ಬಜಾರ್ ರೋಡ್, ಮದ್ರಾಸು,
ಪುತ್ತೂರು ಏಜಂಟರು: **ಪೈ ಫಾರ್ಮಸಿ**

ಉಡುಪಿ

ಪತ್ರಿಕೋದ್ಯೋಗಿ ಸಂಘದ ಮಹಾ ಸಭೆಯು—ತಾ ೬ರಲ್ಲಿ ನವಯುಗ ಪ್ರೆಸ್ಸಿನಲ್ಲಿ ಜರಗಿತು. ಶ್ರೀಮತಿ ಕಸ್ತೂರಿ ಬಾ ಗಾಂಧಿಯವರ ನಿಧನದ ಸಲುವಾಗಿ ದುಃಖ ಪ್ರದರ್ಶಿಸಿದ ಬಳಿಕ ಬೆಂಗಳೂರಿನ 'ವಿಶ್ವಕರ್ನಾಟಕ' ಪತ್ರಿಕೆಯ ಮೇಲೆ ಮೈಸೂರು ಸರಕಾರವು ಹೊರಿಸಿದ ಪ್ರತಿಬಂಧಕಾಜ್ಞೆಯ ಕುರಿತು ನಿಷೇಧ ಸೂಚಿಸಿ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ಕಾರ್ಯಕಾರೀ ಮಂಡಳಿಯು ಕಳೆದ ತಾ 25ರಲ್ಲು ಮಂಗಳೂರಲ್ಲಿ ಮಾಡಿದ ನಿರ್ಣಯವನ್ನು ಪುಷ್ಟೀಕರಿಸುವ ನಿರ್ಣಯವಾಯಿತು. ಚಾಲ್ತಿ ವರುಷಕ್ಕೆ ನಯಿ ಮಂಡಳಿಯ ಸದಸ್ಯರನ್ನು ಆರಿಸಿದ ಬಳಿಕ ಸಭಾಂತ್ಯವಾಯಿತು.

ಹಿಂದುಸ್ಥಾನ್ ಸ್ಕೌಟು ಎಸೋಸಿಯೇಶನ್ ಉಡುಪಿ:—ಇದರ 4ನೇ ಮಹಾಸಭೆಯು ತಾ. 23-4-44ನೇ ಆದಿತ್ಯವಾರ ಬೋರ್ಡು ಹೈಸ್ಕೂಲ್ ಕಟ್ಟಡದಲ್ಲಿ ಆಯ ವ್ಯಯದ ಪಟ್ಟಿಯ ಮಂಜೂರಾತಿ ಮತ್ತು ಹೊಸವರ್ಷದ ಕಾರ್ಯಕಾರಿ ಸಮಿತಿಯ ಆಯ್ಕೆಗಾಗಿ ಜರಗಲಿರುವದೆಂದೂ ಅದಕ್ಕೆ ಸರ್ವರು ಬರಬೇಕೆಂದೂ ಗೌರವ ಕಾರ್ಯದರ್ಶಿ ಶ್ರೀ. ಕೆ. ಲಕ್ಷ್ಮೀನಾರಾಯಣರು ಅಪೇಕ್ಷಿಸುತ್ತಾರೆ.

ದಿವಂಗತ ಬಿ. ಯಂ. ಬಾಳಿಗರ ಸ್ಮಾರಕವೊಂದನ್ನೇರ್ಪಡಿಸಬೇಕೆಂದು ಹಿಂದುಸ್ಥಾನ್ ಎಸೋಸಿಯೇಶನವರು ನಿರ್ಧರಿಸಿ ಅದಕ್ಕೆ ಸಹಾಯವಾಡ ಬಯಸುವವರು ಸಹಾಯ ಧನವನ್ನು ಅಸಿಸ್ಟಾಂಟ್ ಡಿಸ್ಟ್ರಿಕ್ಟ್ ಕಮಿಶನರಾದ ಶ್ರೀ. ಎಂ. ಆರ್. ಕಾರ್ನಾಡ್ ಉಡುಪಿ, ಇವರಿಗೆ ಕಳುಹಿಸಬಹುದೆಂದು ವಿನಂತಿಸುತ್ತಾರೆ.

ಶ್ರೀ. ಕುಲಕರ್ಣಿಯವರ ನೃತ್ಯ ಪ್ರದರ್ಶನ:—ಕರ್ನಾಟಕದ ಪ್ರಸಿದ್ಧ ನೃತ್ಯಗಾರರಾದ ಶ್ರೀ. ಕುಲಕರ್ಣಿ ಶ್ರೀನಿವಾಸ ಬಿ. ಎ. ಮತ್ತು ಪಾರ್ಟಿಯವರು ತಾ 9ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಭಾರತೀಯ ನೃತ್ಯ ಪ್ರದರ್ಶನವಾಡಿದರು. ಪ್ರದರ್ಶನಾಂತ್ಯದಲ್ಲಿ ಶ್ರೀ ಶಿವರಾಮ ಕಾರಂತರು ಮಾತನಾಡುತ್ತ ಶ್ರೀ ಕುಲಕರ್ಣಿಯವರ ಪರಿಚಯ ಮಾಡಿಕೊಟ್ಟರು.

ಅಲೆವೂರು ಐಗಳ ನಿವಾಸದಲ್ಲಿ ರಾಮಭಜನ ಸಪ್ತಾಹವು ಬಹು ವಿಜೃಂಭಣೆಯಿಂದ ಶ್ರೀ. ಯು. ಕೃಷ್ಣಭಟ್ಟರ ವ್ಯವಸ್ಥಾಪಕತ್ವದಲ್ಲಿ ಭಾಷಣ,ಹರಿಕಥಾದಿ ಕಾರ್ಯಕ್ರಮಗಳಿಂದ ಜರಗಿತು.

ಶೀರೂರು:—ಶ್ರೀ ಶೀರೂರು ಶ್ರೀಪಾದಂಗಳವರು ದಯಪಾಲಿಸಿದ ಕಟ್ಟಡದಲ್ಲಿರುವ ಶೀರೂರು ಕಲ್ಲಾಳ ಬೋರ್ಡು ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವ ಹಾಗೂ ಹೆತ್ತವರ ಸಂಘದ ಸಭೆಯು ತಾ. 2-4-44ರಲ್ಲು ಶ್ರೀ. ಪಿ. ಎಂ. ಎಲ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ ವರದಿವಾಚನಾನಂತರ ಬಾಲಬಾಲಕಿಯರು ಏಕಲವ್ಯನನ್ನು ಮೊದಲಾದ ವಿನೋದಾವಳಿಗಳನ್ನು ಅಭಿನಯಿಸಿದರು. ಶೀರೂರು ಮಠದ ಕಡೆಯಿಂದ ಅನ್ನದಾನಬಟ್ಟೆ ಇನಾಂಗಳನ್ನು ಹಂಚಲಾಯಿತು.

ಹೆಗ್ಗೆ:—ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲೆಗೆ ಶ್ರೀ ಸಟ್ಟುಬೆಟ್ಟು ಭವಾನಿಶಂಕರ ಹೆಗ್ಡೆಯವರು ಹೊಸತಾಗಿ ಕಟ್ಟಿಸಿದ ಶಾಲಾ ಕಟ್ಟಡದ ಪ್ರವೇಶೋತ್ಸವವು ತಾ 5-4-44ರಲ್ಲಿ ಉಡುಪಿ ಡಿ. ಮುನ್ಸೀಫ್ ಡಿ. ಸೋರೇನ್ಸ್ ರವರ ಅಧ್ಯಕ್ಷತೆಯಲ್ಲಿ ಸಭಿಕರ ಅಧ್ಯಕ್ಷರ ಸಮಯೋಚಿತ ಭಾಷಣ, ಧನ್ಯವಾದ ಸಮರ್ಪಣೆ, ಲಘು ಉಪಹಾರಾದಿ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರಗಿತು. ರಾತ್ರಿ ಶಾಲೆಯ ಹೆತ್ತವರ ಕೂಟದ ಮಹಾಸಭೆಯು ಶ್ರೀಯುತ ಸಂಜೀವಭಟ್ M·A·L·T· ರವರ ಅಧ್ಯಕ್ಷತೆಯಲ್ಲಿ ಜರಗಿತು. ಶಿಕ್ಷಕರ ಕಿಟಿಚಗ್ಗಿಯ ನಂತರ ಶ್ರೀ ರಾಮಪಟ್ಟಾಭಿಷೇಕ ಯೆಂಬ ನಾಟಕವು ಬಹಳ ಹೆಮ್ಮೆಯಿಂದ ಅಭಿನಯಿಸಲ್ಪಟ್ಟಿತು. ನಾಟಕದಲ್ಲಿ ಅಭಿನಯಿಸಿದ ವಿದ್ಯಾರ್ಥಿಗಳೆಲ್ಲರಿಗೂ ಶ್ರೀ ಮಂಚಟ್ಟು ತಿಮ್ಮಪ್ಪ ಹೆಗ್ಡೆಯವರು ರೂ. ಒಂದೊಂದರಂತೆ ಇನಾಮು ಕೊಟ್ಟಿರುವುದು ಪ್ರಶಂಸನೀಯ.

ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಮಹಾ ಸಭೆಯು—ತಾ 8ರಲ್ಲಿ ಕ್ರಿಶ್ಚಿಯನ್ ಹೈಸ್ಕೂಲಲ್ಲಿ ಮಿ। ಎ ಎಸ್. ಕಾಂಟರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರೀ ಶಾಲೆಗಳ ಅಧ್ಯಾಪಕರಿಗೆ ಸಿಕ್ಕುವ ಸ್ಕೇಲಿನ ದರದಲ್ಲಿ ಖಾಸಗಿ ಶಾಲೆಗಳ ಉಪಾಧ್ಯಾಯರಿಗೂ ತುಟ್ಟಿಭತ್ತೆ ಸಿಗಬೇಕು. ಖಾಸಗಿ ಶಾಲೆಗಳ ಮೆನೇಜ್ಮೆಂಟಿನವರಿಗೆ ತುಟ್ಟಿಭತ್ತೆಯ ಸಲುವಾಗಿ ಸಹಾಯಧನ ದೊರೆಯಬೇಕು. ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗಬೇಕಾದ ವರುಷವನ್ನು 55ರಿಂದ 60ಕ್ಕೆ ಏರಿಸಬೇಕಾಗಿಯೂ ನಿರ್ಣಯಗಳಾದುವು.

ಬೆಳ್ಳಾರೆ:—ತಾ. 1 4-44ರಲ್ಲು ಶ್ರೀ. ಕೆ ಎಸ್. ಗುರಿಕಾರರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಶ್ರೀ ಕೆ. ಗಣೇಶ ಸುಬ್ರಹ್ಮಣ್ಯನವರ ಧರ್ಮಪತ್ನಿ ಶ್ರೀಮತಿ ಕೋಟಿಸಾವಿತ್ರಿಯವರ ಅಕಾಲ ನಿಧನದ ಬಗ್ಗೆ ಸಂತಾಪಸೂಚಿಸಿ ಒಂದು ಸ್ಮಾರಕ ನಿಧಿ ಸಂಗ್ರಹಿಸಬೇಕಾಗಿ ಆ ಬಗ್ಗೆ ಒಂದು ಸಮಿತಿಯ ರಚನೆಯಾಯಿತು.

ವಾರ್ಡನ್ ಇನ್ಷೂರೆನ್ಸ್ ಕಂಪೆನಿಯ ಮೈಸೂರು ಕಚೇರಿ ಆರಂಭೋತ್ಸವ

(ಸ್ವಂತ ವಾರ್ತಾಹರರಿಂದ, ಬೆಂಗಳೂರು)

ಬೊಂಬಾಯಿ ವಾರ್ಡನ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ಮೈಸೂರು ಸಂಸ್ಥಾನದ ಚೀಫ್ ಏಜೆನ್ಸಿಯನ್ನು ಮೈ॥ ಕಾಂಗ್ರೆಸ್ ಮುಂದಾಳೂ, ವಕೀಲರೂ ವ್ಯಾಪಾರೋದ್ಯೋಗಿಗಳಾದ ಶ್ರೀ ಎಸ್ ಸಿ ತಿಮ್ಮಾರೆಡ್ಡಿಗಳು ವಹಿಸಿಕೊಂಡಿದ್ದಾರೆ. ಈ ಕಚೇರಿಯನ್ನು ಬೆಂಗಳೂರಿನಲ್ಲಿರುವ ಶ್ರೀ ಎಸ್. ಕೆ ವೆಂಕಟರಂಗೈಂಗಾರ್ (ಗಾಂಧಿ ನಗರ) ಮನೆ ಮಹಡಿ ಮೇಲೆ ತೆರೆಯಲಾಗಿದೆ. ಸದ್ರಿ ಕಂಪೆನಿ ಆಫೀಸ್‌ನ ಆರಂಭೋತ್ಸವವನ್ನು ಶ್ರೀ ಆರ್. ಎಂ. ಪಟೇಲ್‌ರವರು ನೆರವೇರಿಸಿದರು. ಹೆಚ್. ಸಿ. ಸೂರ್ಯನಾರಾಯಣರಾಯರು ಅಧ್ಯಕ್ಷತೆ ವಹಿಸಿದ್ದರು.

ಎಲ್ಲ ಆಹ್ವಾನಿತರಿಗೂ ಸೊಗಸಾದ ಉಪಹಾರ ನಡೆಯಿತು.

ಶ್ರೀ ರೆಡ್ಡಿಗಳು ಅವರಿಗೆ ಇತ್ತ ಬೆಂಬಲಕ್ಕೆ ಎಲ್ಲರಿಗೂ ವಂದಿಸಿ, ವಿಮೆಯ ವರ್ಗಗಳಿಂದ ಜನತೆಯ ಹೆಚ್ಚಬೇಕೆಂದೂ, ಆರ್ಥಿಕ ಸ್ವರಾಜ್ಯವು ಬೊಂಬಾಯಿ ಅಹಮದಾಬಾದ್‌ಗಳಲ್ಲಿ ಇವೆ ಎಂದೂ ಹೇಳಿ, ವಾರ್ಡನ್ ಇನ್ಷೂರೆನ್ಸ್ ಕಂಪೆನಿ ಚರಿತ್ರೆ ವಿವರಿಸಿ, ಭಾಷಣ ಮಾಡಿದರು. ಸದ್ರಿ ಕಂಪೆನಿ ಏಜೆನ್ಸಿ ಸುಪರಿಂಟೆಂಡೆಂಟರಾದ ಶ್ರೀ ಎಂ. [illegible] ಸೆಟ್ಟಿಯವರೂ ಸಮಾರಂಭದ ಕಾಲದಲ್ಲಿ ಪೂರ್ತಿ ಹಾಜರಿದ್ದು, ಎಲ್ಲವನ್ನೂ ಯಶಸ್ವಿಯಾಗಿ ಜರಗಿಸಿದರು. ವಂದನಾರ್ಪಣೆಯೊಡನೆ ಸಮಾರಂಭ ಮುಗಿಯಿತು.

"ಬಂಟರ ಯೂನಿ ನಾಡವರ ಯೋಳಿಗೆ ನಿಧಿ" ಮುಂಬಾಯಿ:—ಈ ನಿಧಿಯ ನೇತೃತ್ವದಲ್ಲಿ ಎಪ್ರಿಲ್ ತಾ 16ನೇ ಆದಿತ್ಯವಾರ ಅಪರಾಹ್ನ ಗಂಟೆ 3-30ಕ್ಕೆ ಡಾಕ್ಟರ್ ಎಮ್. ವೆಂಕಟರಾಯಸೆಟ್ಟಿ ಜೆ. ಪಿ. ಅವರ್ಗಳ ಅಧ್ಯಕ್ಷತೆಯಲ್ಲಿ ನೇಶನಲ್ ಮೆಡಿಕಲ್ ಕಾಲೇಜಿನ ಮಂದಿರದಲ್ಲಿ ಜರಗಲಿರುವ ಸಭೆಗೆ ಸ್ವಜಾತಿ ಗೃಹಸ್ಥರೆಲ್ಲರೂ ಚಿತ್ತೈಸಿ, ಅಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ನಿಧಿಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ. ಕಾರ್ಯಕ್ರಮ. 1. ನಿಧಿಯ ಯೋಳಿಗೆ ಕುರಿತು ಅಧ್ಯಕ್ಷರ ಭಾಷಣ. 2. ನಿಧಿಯ ಕ್ರಮ ನಿಬಂಧನೆಗಳನ್ನು ಸಭೆಯ ಮುಂದಿಟ್ಟು ಚರ್ಚಿಸುವುದು. 3. ಮಾ। ರಾ। ಮೂಲ್ಕಿ ನಾಲಿಡಿ ಕಾಳು ಸೆಟ್ಟಿ ಅಧ್ಯಕ್ಷತೆಯಲ್ಲಿ ನಿಧಿಯ ಕ್ರಮ ನಿಬಂಧನೆಗಳನ್ನು ಸಭೆಯ ಮುಂದಿಟ್ಟು ಮಂಜೂರು ಮಾಡುವುದು. 4. ಸಭಿಕರ ಭಾಷಣ. 5. ಅಧ್ಯಕ್ಷರ ಭಾಷಣ.

ಸೂಡ ವೀರಪ್ಪ ಸೆಟ್ಟಿ.
ಬ್ರಹ್ಮಾವರ ನಾರಾಯಣ ಸೆಟ್ಟಿ.
ಗೌ. ಜೊತೆ ಕಾರ್ಯದರ್ಶಿಗಳು.

ಜನರಿಂದಲೇ ಬೇಂಕುಗಳು

— ಧನ ಮತ್ತು ಧನಗೃಹಗಳಿಂದಲ್ಲ. —

ಬೇಂಕಿನ ಸಾವಿರಾರು ಕಾರ್ಯ ವಿವರಗಳನ್ನೂ ಪರಿಶೀಲಿಸಿ ನಿರ್ವಹಿಸುವ--- ಗಿರಾಕಿಗಳ ಪ್ರತ್ಯೇಕಗಳೇನೆಂದು ತಿಳಕೊಂಡು ಒದಗಿಸುವ—ಅದರಂತೆ ನಿಮಗೆ ಇತರ ಅಸಂಖ್ಯಾತ ಚಿಕ್ಕ ಪುಟ್ಟ ವಿಧಾನಗಳಲ್ಲಿ ಸೇವೆಸಲ್ಲಿಸುವ—ಆ ಜನರು......

ಭದ್ರತೆಗಾಗಿ, ಅನುಕೂಲತೆಗಾಗಿ ತಮ್ಮ ಹಣವನ್ನು ಭರವಸೆಯಿಂದ ಬೇಂಕುಗಳಿಗೆ ತರುವ ಆ ಸ್ತ್ರೀ ಪುರುಷರು..............................

ತಮ್ಮ ಆರ್ಥಿಕ ಅಡಚಣೆಗಳಲ್ಲೋ ಸಮಸ್ಯೆಗಳಲ್ಲೋ ಬೇಂಕುಗಳ ನೆರವನ್ನಪೇಕ್ಷಿಸಿ ಬರುವ ಆ ಮಹನೀಯರು, ಮಹಿಳೆಯರು..........................

.........ಈ ಜನರಿಂದಲೇ ಬೇಂಕುಗಳಾಗುವುವು. ಈ ಮಾನವೀ ಸಂಬಂಧಗಳಿಂದ ಬೆಳೆದು ಬರುವ ಸ್ನೇಹಮಯ ಭಾವವೇ ಯಾವ ಬೇಂಕಿನ ಯಶಸ್ಸು ಮತ್ತು ಪ್ರಗತಿಯಲ್ಲಾದರೂ ಪ್ರಾಮುಖ್ಯವೆನಿಸುವುದು.

ಕೆನರಾ ಬೇಂಕು ಮೂವತ್ತೇಳು ವರುಷಗಳ ತನ್ನ ಜನತಾ ಸೇವೆಯಲ್ಲಿ ಗಳಿಸಿದ ಗೆಳೆತನಕ್ಕಾಗಿ ಗೌರವಪಡುವುದು.

ಸ್ಥಾಪಿತ: **1906.**

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

10—4—1944ರಿಂದ

ಮಲೆಯಾಳಿ ಭಾಷೆಯ

ಪೌರಾಣಿಕ ಚಿತ್ರ.

ಭಕ್ತ ಪ್ರಹ್ಲಾದ

ಅನಂತರ —ಪಾಂಚೋಲಿ ಚಿತ್ರ—

15—4—1944ರಿಂದ

ಖಾನ್‌ದಾನ್

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡುಪಿ.

ರಶ್ಯನರ ಭೀಷಣ ಧಾಳಿ!

ಈ ಯುದ್ಧದಲ್ಲಿ-ರೋಮಾಂಚಕಾರೀ ಆಶ್ಚರ್ಯಾದ್ಭುತಗಳನ್ನು ನಿರ್ಮಿಸಿದವರಲ್ಲಿ ಜರ್ಮನರಿಗೆ ಪ್ರಥಮ ಮರ್ಯಾದೆ ಸಲಬೇಕಾದರೆ, ಇಡೀ ಪ್ರಪಂಚದ ಬೆರಳು ಕಚ್ಚಿಸಿದ ಭೇತಾಳ ಸಾಹಸವು ರಶ್ಯನರದು ಮಾತ್ರ! ರಶ್ಯಾ ಯುದ್ಧದ ಬಹುದೊಡ್ಡ ರಕ್ತಾಧ್ಯಾಯವೊಂದು ಇಷ್ಟರಲ್ಲೇ ಮುಗಿದು, ಹೊಸ ಅಂಕವಾರಂಭವಾಗಿದೆ. ಕೆಂಪು ಸೇನೆಯು ರುಮೇನಿಯಾದೊಳಗೆ ಪ್ರವೇಶಿಸಿ, ಕಪ್ಪು ಸಮುದ್ರದ ಮುಖ್ಯ ಬಂದರ ಒಡೆಸ್ಸಾವನ್ನು ಮುತ್ತಿದಾಗಲೇ ಅಲ್ಲಿಯ ಉಕ್ರೈನ್ ಯುದ್ಧ ಮುಗಿದು ಬಾಲ್ಕನ್ ಹೋರಾಟವಾರಂಭವಾದಂತಾಯಿತು ಜತೆಯಲ್ಲೇ ಬಾಲ್ಕನ್ ರಾಷ್ಟ್ರಗಳಲ್ಲಿ ಗಣನೀಯ ಒಳಮಂಥನವಾರಂಭವಾಗಿವೆ; ನಾಜಿಗಳಿಗಾತಂಕ ಅಡಚಣೆಗಳು ಹೆಚ್ಚುತ್ತಿವೆ. ರುಮೇನಿಯದೊಳಗೆ ನುಗ್ಗಿದ ರಶ್ಯಾನರೀಗ ಝೆಕೋಸ್ಲೊವೇಕಿಯಾ ಗಡಿಗೆ ಮುಟ್ಟಿದೊಡನೆ ತಮ್ಮ ಸ್ವಾತಂತ್ರ್ಯ ದಾತರೆಂದು ಝೆಕ್ ಅಧ್ಯಕ್ಷ ಡಾ| ಬೆನಸರಿಂದ ಅಭಿನಂದನಾ ಸಂದೇಶವು ಸ್ಟಾಲಿನರಿಗೆ ಹೋಗಿದೆ. ರುಮೇನಿಯಾ ಪ್ರವೇಶವು ಯುದ್ಧಾವಶ್ಯಕತೆಗಲ್ಲದೆ, ಸ್ಥಳಾಕ್ರಮ

NOTICE.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 139/1943.

ಭಾಗೀರಥಿ ಅಮ್ಮ — ವಾದಿಳು

ವೆಂಗುತ್ತ ಗೋಪಾಲ ಪ್ರಭು ಕೂಡಾ—

ಪ್ರತಿವಾದಿರು.

2ನೇ ಪ್ರತಿವಾದಿಳು:-ರುಕ್ಮಾಬಾಯಿ ಯಾನೆ ರಮಾಬಾಯಿ, ಕುಂದಾಪುರ ವಿಟ್ಠಲ ಪ್ರಭುಗಳ ವಿಧವೆ. ಮಂಗಳೂರು ಪಕಾರಿನಲ್ಲಿರುವವರು–

ವಾದಿಯು ಗೇಣಿ ಬಾಕಿ ಬಗ್ಗೆ ಮಾಡಿದ ದಾವೆಯು ತಾರೀಕು 19-4-44ಕ್ಕೆ ತನಿಖೆಗೆ ಯಿಟ್ಟಿರುತ್ತದೆಂತಲೂ ಆ ದಿವಸ ಕೋರ್ಟು ಮುಂದೆ ಹಾಜರು ಆಗಲಿಕ್ಕೆ ತಪ್ಪಿದ್ರೆ ಮುಂದಿನ ತನಿಖೆಯು ನಡೆಯುವದೆಂತಲೂ ಸಹಾ 2ನೇ ಪ್ರತಿವಾದಿಗೆ ಈ ಮೂಲ್ಕ ತಿಳಿಸಲಾಗುತ್ತದೆ.

G. Sanjiva Rao. B.A.L.L.B.
Pleader for plaintiff,

ಕುಂದಾಪುರ
ತಾ. 5-4-44

CHAMPAE'S
Snow & Castrex
(Sole Distributers for (India.)
Sukhananda Stores
Santhekatte, UDIPI, S. K.

—— ವಾರದ ಯುದ್ಧ ಗತಿ ——

(೨ನೇ ಪುಟದಿಂದ ಮುಂದುವರಿದುದು)

ಣ ಅಥವಾ ಸಾಮಾಜಿಕ ಒದಲಾವಣೆಗಾಗಿಯಲ್ಲವೇ ಅಲ್ಲವೆಂದು, ಮೊಲೊಟವರ ಬಾಯಿಯಿಂದ ರಶ್ಯದ ಸ್ಪಷ್ಟ ಘೋಷಣೆ ಹೊರಬಿದ್ದುದರಿಂದ ಇಂಗ್ಲೆಂಡು–ಅಮೇರಿಕಗಳು ಸಂಪೂರ್ಣ ಸಮಾಧಾನಗೊಂಡಿವೆ. ಇತ್ತ ಪೋಲೆಂಡ್ ಗಡಿಯಾದ ಕರ್ಝನ್ ಲೈನನ್ನು ಕೆಂಪುಸೇನೆ ದಾಟಿದೊಡನೆಯೇ ಪೋಲೆಂಡಿನವರಿಗಾಗಿ ಸ್ಟಾಲಿನರೊಂದು ಜ್ಯಾಹೀರುನಾಮೆ ಹೊರಡಿಸಿ ಸಮಾಧಾನ ಪಡಿಸಲಿದ್ದಾರೆ. ರಶ್ಯವಿಂತು ರಣರಂಗದ ದಿಸ್ಸೆಗಳನ್ನು ಒಂದೊಂದಾಗಿ ಏರಿ ಈಗ ಖಂಡಿತ ವಿಜಯದ ಮೆಟ್ಟಲನ್ನೇ ಹತ್ತುತ್ತಿರಬೇಕು; ಕಳೆದ ಎರಡುಮೂರು ವರುಷಗಳಿಂದ ನಾಜೀ ಸೇನೆಯ ಬಹುದೊಡ್ಡ ಹೊರೆಯನ್ನು ಏಕಾಕಿಯಾಗಿ ಹೊತ್ತು, ಒಂದಂಶ ಭೂಭಾರವನ್ನೇ ತಗ್ಗಿಸಿದಂತೆ ಕಾಣುತ್ತಿರುವ ಕೆಂಪು ಸೇನೆಗೆ ಲೋಕವೇ ತಲೆತಗ್ಗಿಸಬೇಕಾಗಿದೆ.

ದ್ವಿತೀಯ ರಂಗ!

ಇದೀಗ ಜತೆಸಿಕ್ಕಿಯವಾಗಿ ಕಾಲಕಳೆದರೂ ದಿನ ನಿಕ್ಕಯವಾಗದೆ ನೆನೆಗುದಿಗೆ ಬಿದ್ದ ನಿರೀಕ್ಷಿತಮದುವೆಯಂತಿದೆ. ಇಟೆಲಿ ಯುದ್ಧಗತಿಯು, ಒಳಗಿಂದೊಳಗಿನ ದ್ವಿತೀಯರಂಗ ಸಿದ್ಧತೆಯನ್ನು ಕುರಿತು ಗೊಳಿಸಿರಬೇಕು. ಇಟೆಲಿಯಲ್ಲಿ ರೋಮ್‌ವರೆಗೆ ಅತಿ ಪ್ರಯಾಸದಿಂದ ಮುಂದೊತ್ತಿದ ಮಿತ್ರ ಸೇನೆಯು ಕೇಸಿನೋ ರಂಗದಲ್ಲಿ ಹೂಡಿದ ಧಾಳಿಯು ದುರಾದೃಷ್ಟದಿಂದಾಗಿ ತುಳಿದ ನೆಲವನ್ನೇ ತುಳಿಯುತ್ತಾ ಮಣ್ಣು ಹದಗೊಳಿಸುತ್ತಿದೆ ಹೊರತು ನಾಜೀ ಸೇನೆಯನ್ನು ಮರ್ದಿಸುತ್ತಿಲ್ಲ! ಇಟೆಲಿ ಹೋರಾಟವು ದ್ವಿತೀಯ ರಂಗದ ಪೂರ್ವಾಂಕವಲ್ಲವಾದರೂ, ಅದರ ಒಂದು ಪರೀಕ್ಷಾರ್ಥ ಪ್ರಯೋಗವೆನ್ನಬಹುದು; ಹುಲಿಬೇಟೆಗೆ ಹೊರಡುವ ಮೊದಲು ಬೆಕ್ಕನ್ನು ಹೊಡೆದು ಈಡು ಪರೀಕ್ಷಿಸಿಕೊಳ್ಳುವಂತೆ, ಮಿತ್ರ ಸೇನಾತಜ್ಞರು ಇಟೆಲಿಯನ್ನೊಂದು ಪರೀಕ್ಷೆಯೆಂದು ಪರಿಗ್ರಹಿಸಿದ್ದರು; ಫೈಲ ದರು. ಆದರಿದು ಎದೆಗೆಡುವ ಸೋಲಲ್ಲ. ಇಂಗ್ಲೆಂಡಿನ ರೈಲ್ವೆಗಳನ್ನು ಪೂರ್ವ ಸೂಚನೆ ಕೊಡದೆಯೇ ಸೈನಿಕೋಪಯೋಗಕ್ಕಾಗಿ ನಾಗರಿಕರ ಪಾಲಿಗೆ ಮುಚ್ಚಿಬಿಡಬಹುದು, ಎಂಬ ಸೂಚನೆ; ನೂರಾರು ಚಚ್ಚೌಕ ಮೈಲುಗಳಷ್ಟು ವಿಸ್ತೀರ್ಣದ ನೆಲವನ್ನು ಸೈನ್ಯಕಾರ್ಯಕ್ಕಾಗಿ ಪ್ರತ್ಯೇಕಿಸಿಟ್ಟ ಸಿದ್ಧತೆ ಮುಂತಾದುವು ಯುರೋಪು ಧಾಳಿಯು ಒಡನೀಡಿ ಬರುತ್ತಿದೆ ಎಂಬುದನ್ನು ಸೂಚಿಸುತ್ತಿವೆ. ಅಮೇರಿಕನರು ಈ ವಿಷಯದಲ್ಲಿ ಇನ್ನೊಂದು ಹೆಜ್ಜೆ ಮುಂದಿಟ್ಟು ಯುರೋಪು ಆಕ್ರಮಣದಿಂದ ತಮಗಾಗುವ ಹಾನಿಗಳ ಸಂಖ್ಯೆಯನ್ನು ಕೂಡಾ ಕೂಡಿಸಿನೋಡ ಹತ್ತಿದ್ದಾರೆ. ಧಾಳಿಯಾರಂಭವಾದ ಪ್ರಥಮ ತಿಂಗಳೊಂದರಲ್ಲಿ ಹೆಚ್ಚೆಂದರೆ 150,000 ಅಮೆರಿಕಾನರು ಹತರಾಗಬೇಕಾದೀತೆಂದು ಅಲ್ಲಿಯ 'ಸರ್ವೀಸ್ ಡಿಪಾರ್ಟ್‌ಮೆಂಟ್'ನ ಅಂದಾಜು. ಧಾಳಿಯಾರಂಭವಾದ ಒಂದು ತಿಂಗಳ ನಂತರ ಇದಕ್ಕಿಂತ ಎಷ್ಟೋ ಕಡಿಮೆ ಹಾನಿಯಾದ ಲೆಕ್ಕ ಕೊಟ್ಟು 'ಯುದ್ಧವು ನಿರೀಕ್ಷೆಗೆ ಮಿಕ್ಕಿ ಲಾಭದಾಯಕವಾಗಿ ಸಾಗುತ್ತಿದೆ' ಎನ್ನುವದಕ್ಕೂ ಇದು ಅನುಕೂಲವೇ ಎನ್ನಿ! ಹೇಗಿದ್ದರೂ ದ್ವಿತೀಯ ರಂಗಾರಂಭವಂತೂ ಖಂಡಿತವೆಂಬುದು ಇಂತಹ ವಿಧ್ಯಮಾನಗಳಿಂದ ಸ್ಪಷ್ಟ.

ಒಟ್ಟಿನಲ್ಲಿ ಕಳೆದವಾರ ಕೃತಾರ್ಥರೆನ್ನಿಸಿದವರೆಂದರೆ ಮಣಿಪುರ ವಲಯದಲ್ಲಿ ಜಪಾನರು ಕಾಲಂತ; ರಶ್ಯದಲ್ಲಿ ರಶ್ಯಾನರು ಮುಕ್ಕಾಲಂಶ; ಇಟೆಲಿಯಲ್ಲಿ ಇತ್ತಂಡದವರೂ ಸೊನ್ನೆಗಾತ್ರವಷ್ಟೆ!

Degrees: Books: Medicines
Free H. L. M. S, M. B, H. M. D, etc.
Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs 4. Insanity Cure Pills Rs, 10 Enclose 2 annas stamp:—
Prof. Dr. N. H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2, No 2 Rs 5 No. 1 Rs. 7 Special Rs. 10, Extra Special Rs. 17 fo ove marriage health, wealth. Ask an six questions with M. O. Re. 1/4 an get correct answers by returnpost Life reading Rs,10NoVP PSend M.O Free, pmplets.
Prof Dr. N. H. Chhatbar.
P. O. MAHUVA (Kathiawar India.)

ಕರಧೃತ ಮಂಥದಂಡಾ ಭೃಗಾತ್ರಾ ಕಮಲದಳಸುನೇತ್ರಾ ಪೂಜನೀಯಾ ೨ಃ ಧಾತ್ರ್ಯಾ !
ಸುರಪತಿ ಪರವಸ್ತ್ರೈಃ ಸಾಧುಭಿರ್ಗೀರ್ಪತಿರ್ಭಿಃ, ಪರಿಶ್ರುತ ಜನಾರ್ಥಿಃ ಪಾತುನಃ ಕೃಷ್ಣಮೂರ್ತಿಃ ||

"ತಾರಣ ಸಂದ ಉಡುಪಿ ಪಂಚಾಂಗಂ"

ನೂತನ ವರ್ಷದಲ್ಲಿ ಉಡುಪಿ ಪಂಚಾಂಗ ವಾಚಕ ಮಹನೀಯರಿಗೆ, ಆ ಶ್ರೀಕೃಷ್ಣ ಪರಮಾತ್ಮನು, ಶ್ರೀ ಸೂರ್ಯಾದಿ ನವಗ್ರಹರು ಸಹ–ಸಕಲದುರಿತಗಳನ್ನು ಪರಿಹರಿಸಿ ದೀರ್ಘಾಯುಷ್ಯ ನಿತ್ಯ ಮಾಂಗಲ್ಯವನ್ನು ಅನುಗ್ರಹಿಸಲಿ!!

ಅತ್ತೂರು ವಾಸುದೇವ ಉಡುಪ.
ಶ್ರೀ ರವಿಪ್ರಸಾದ ಜ್ಯೋತಿಷ್ಯಾಲಯ,
ಕೊಯಂಬುತ್ತೂರು.

☞ ಮುಟ್ಟುಗುಳಿಗೆ ☜

ಹಲತಿಂಗಳಿಂದ ಕಟ್ಟಿಹೋಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದರೂ—'ಕುಮಾರಿ' (PILLS) ನಿಶ್ಚಿತ ನಿರುಪದ್ರವಿ ಸಿದ್ಧಿಸಂಪನ್ನವೂ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಗುಣಹೊಂದುವುದು; ಬೇಕಾದಾಗ ಗರ್ಭಧಾರಣೆಯನ್ನು ತಿಳಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ. ರೂ. 3/- ತ್ವರಿತವಾದ ಕೇಸುಗಳಿಗೆ ರೂ. 5- (ವಿ. ಪಿ. 12 ಆಣೆ ಅಧಿಕ).

Mrs. P DEVEE. F. D. S., (N)
TOLLYGUNGE. CALCUTTA,
ಸ್ಟಾಕಿಸ್ಟ್ Popular Stores,
P. B. 60, MANGALORE.

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction.
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 3ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗಿ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ- ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜೆ. ಆಚಾರ್ಯ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(Incorporated in India in 1920.)

Registered Office: Court Road, UDIPI, South Canara District.
Business Offices: Udipi, Mangalore, Katapadi, Kanhangad and Karkal-igoli, South Canara.

Authorised and Issued Capital Rs. 2,00,000/-
Subscribed and Paid up Capital Rs. 2,00,000/-
Reserve Funds. Rs. 1,75,853/-

Short term bills are discounted for approved parties. Loans and advances are made and overdrafts granted on fairly easy terms.
Deposits are accepted at favourable rates of interest. More than twenty-three years' reliable banking Service stands to our credit.
For further particulars please call at or apply to the nearest office.
Dated 31-10-1943

ದಿ ಜ್ಯುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸು: ಬೊಂಬಾಯಿ

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವುಳ್ಳ ಜಗದ್ವಿಖ್ಯಾತ ವಿಮಾಸಂಸ್ಥೆ

ಉಡ್ಪಿಯ ಕೋರ್ಟುರೋಡಿನಲ್ಲಿ ಇದರ ಚೀಫ್ ಏಜನ್ಸಿ ಆಫೀಸು ಇದೀಗಲೇ ಪ್ರಾರಂಭವಾಗಿದೆ

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

ಪಿ. ಡಿ. ನಾಯಕ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ

The Jupiter General Insurance Company, Ltd.,
BOMBAY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ನಿರಾಳ.

ಮಾಲಕರು:— ಕಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ–ಸಿಟಿ.
ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ— ಕುಂಬರಮಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್ಸ. ಆರ್. ಎಲ್. ಕವಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅನೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚುಕಡಿಮೆ ೮೦ ದಿವಸಗಳಿಗೆ ಬರುವವು, ಅಂದರೆ ಕೇವಲ ೮ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ**

FOR SAFETY & SERVICE
THE VIJAYA BANK, LTD.,
Head office: MANGALORE

Branches at:— Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ
ವಿಜಯಾ ಬೇಂಕ್ ಲಿಮಿಟೆಡ್
ಹೆಡ್ ಆಫೀಸು:— ಮಂಗಳೂರು.
ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.

REGD.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವದು, ಚೇಳು ವಿಷ ಮುಂತಾದ ಬೇನೆಗಳಿಗೂ, ಶೀತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ. ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ
ವಾರ್ಷಿಕ ಚಂದಾ
ರೂ. **1—8—0** ಮಾತ್ರ
ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2—8—0**
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ ಉಡುಪಿ.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.
Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. N. M 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

ಸ್ಥಾಪಿತ 1921 ಸ್ಥಾಪಿತ.

1944ನೇ ಜನವರಿಯಿಂದ ಮೂರನೆ ಸಂಪುಟಾರಂಭವಾಗಿದೆ.

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿಗೆ ರೂ. 0-4-0

ಮಾದರಿ ಪ್ರತಿಗೆ ಐದಾಣೆ ಸ್ಟಾಂಪಿನೊಂದಿಗೆ ಬರೆಯುವುದು.

'PRAKASHINI'

NAVAYUGA PRESS

UDIPI

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೩೩

FOUNDER Sri. A. B. Shetty.

Vol 24 No 33

NAVAYUGA— Kannada Weekly —UDIPI, S. I.

ಉಡುಪಿ ● 20—4—1944 ● ಮಂಗಳೂರು.

ANTARANGA UDIPI

ಅಖಿಲ ಕರ್ನಾಟಕದ ಹೊಸ ಮಾದರಿಯ ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ 4-8-0

ಬಿಡಿ ಪ್ರತಿಗೆ 0-1-6

ಮೆನೇಜರ್, ಅಂತರಂಗ, ಉಡುಪಿ.

The Canara Mutual Assurance Co., Ltd.

NEW APPOINTMENTS.

Applications from candidates of S. S. L. C standard (both boys & girls) are invited for clerical posts in the Company.

Applicants should possess a good hand, a good command of English a good moral character and should be quick at figures.

All applications must be accompanied by two testimonials one from the Headmaster of the School and another from any local gentleman

UDIPI, 3-4-1944 } T. R. A. Pai, MANAGING DIRECTOR

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಕುಟುಂಬದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ಸೌತ್ ಕೆನರಾ ಮತ್ತು ಕೊಡಗು ಭಾಗದ ಪ್ರಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿ :—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವೇಂಡ್ರಂ

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಾದೀ ಹಾಗು ಕತ್ತು ಕಿತ್ತರೆ ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ..ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಪದಂಶ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ. ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟುಕು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ. ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ. ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. (ಮಾಲಕರ ವಿಳಾಸಕ್ಕೆ ಪತ್ರ ವ್ಯವಹಾರ ನಡೆಸಬೇಕೆಂದು ವಿನಂತಿ)

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.

ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri

Ayurveda Oushadalaya. GADAG

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೋಗಿ ಬೀಳುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಅಜೀರ್ಣ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅವಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವ ನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕ್ವಾಲೆ ಸಂಗ್ತಿ ಬರದಲ್ಲಿ ತಕ್ಕನಾದ ಔಷಧಿ ಮುಫತ್ತು ರವಾನಿಸಬಹುದು.

ಕಲೆಬಾಗಿಗೆ ಬರೆಯಿರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಶಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಉಡುಪಿ ಏಜಂಟರು:- ನವಭಾರತ ಬುಕ್ ಡಿಪ್ಪೊ, ಸಂತೆಕಟ್ಟೆ, ಉಡುಪಿ.

ಬೊಂಬಾಯಿ ಹಡಗ ಧಕ್ಕೆಯಲ್ಲಿ ಅಗ್ನಿಪ್ರಳಯ!

169 ಮಂದಿ ಸುಟ್ಟು ಸತ್ತರು!

ಸಾವಿರಕ್ಕೆ ಮಿಕ್ಕಿ ಅರ್ಧ ಬೆಂದರು!

ಹಿಂದೀಯರ ಎದೆ,ಹೊಟ್ಟೆಯೆರಡನ್ನೂ ಸುಡುತ್ತಿರುವ ಬೆಂಕಿ ಬೇರೆಯಿದೆ; ಜಪಾನರು ಒಂದು ಮೂಲೆಯಲ್ಲಿ ಹಚ್ಚಿರುವ ಬೆಂಕಿ ಪ್ರತ್ಯೇಕವಿದೆ; ಸಾಲದುದಕ್ಕೆ ಇದೇ ತಾ. 14ನೇ ಶುಕ್ರವಾರ ಅಪರಾಹ್ನ ನಾಲ್ಕು ಘಂಟೆಗೆ ಬೊಂಬಾಯಿಯ ಡೋಕ್ (ಹಡಗಗಳ ಸಾಮಾನಿಳಿಸುವ ಹತ್ತಿಸುವ ಸಮುದ್ರ ಬದಿ ನಿಲ್ದಾಣ)ದಲ್ಲಿದ್ದ ಹಡಗವೊಂದರಲ್ಲಿ ಬೆಂಕಿಯೆದ್ದು ನಿಯಂತ್ರಣಕ್ಕೆ ಸಿಗದೆ ಅಲ್ಲಿದ್ದ ಮದ್ದು ಗುಂಡುಗಳಿಗೆ ತಗಲಿ, ಒಡನೆಯೇ ಎರಡು ಭಯಂಕರ ಸ್ಫೋಟಗಳನ್ನುಂಟುಮಾಡಿ ಆಸುಪಾಸಿನ ನಿಬಿಡ ಸ್ಥಳಕ್ಕೆ ಸಿಡಿದು, ನೈಜುಮ್ಮೆನ್ನಿಸುವ ಅಗ್ನಿಪ್ರಳಯವೇ ಉಂಟಾಯಿತು! ಸರಕಾರದ ಗಣನೆಯಂತೆ, 102 ಶವಗಳನ್ನು ಕಾಷ್ಠದಿಂದೆತ್ತಿದಂತೆ ಬೆಂಕಿ ಹಿಡಿದ ಸ್ಥಳದಿಂದಲೇ ತೆಗೆಯಲಾಗಿತ್ತು. 67 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೊಳಗಾದವರು ಸತ್ತರು; 1000ಕ್ಕೆ ಮೇಲ್ಪಟ್ಟು ಮೈ ಸುಡಿಸಿಕೊಂಡಿದ್ದಾರಾದರೂ 500ರಷ್ಟು ಮಂದಿಯು. ದೀರ್ಘ ಚಿಕಿತ್ಸಾವಶ್ಯಕತೆಯಿಂದಾಗಿ ಇನ್ನೂ ಆಸ್ಪತ್ರೆಯಲ್ಲಿದ್ದಾರೆ, ಮಿಕ್ಕವರು ಪ್ರಥಮ ಚಿಕಿತ್ಸೆ ಪಡೆದು ಮರಳಿದ್ದಾರೆ. ಶುಕ್ರವಾರ ಅಪರಾಹ್ನ 4 ಘಂಟೆಗೆ ಹಿಡಿದ ಬೆಂಕಿಯೊಡನೆ, ಅಗ್ನಿದಳ, ಸೇನೆ, ಪೋಲಿಸ್, ಸ್ವಯಂಸೇವಕರು ಎ ಆರ್. ಪಿ.ಯವರು ಸುಮಾರು ಹದಿನಾಲ್ಕು ಘಂಟೆ ಹೋರಾಡಿ ಅದರ ಪ್ರಭಾವವನ್ನು ತಗ್ಗಿಸುವಾಗ ಶನಿವಾರ ಮುಂಜಾನೆ ಆರು ಘಂಟೆಯಾಗಿತ್ತು. ಈ ನಡುವೆ ಡಕ್ಕೆಯ ಪಕ್ಕದ ಅತಿದಟ್ಟ ನಿವಾಸಗಳ ನೂರಾರು ಮನೆಗಳು ಸುಟ್ಟು ಹೋಗಿ ಸಾವಿರಾರು ಮಂದಿಗೀಗ 'ಆಕಾಶವೇ ಮಾಡು-ಭೂಮಿಯೇ ಚಾವಡಿ' ಎಂಬ ಗತಿಯಾಗಿದೆ! ಸ್ಮರಣೆಗೂ ಅಸಹನೀಯವಾಗುವಂತಹ ಅನಾಹುತ! ಈ ಕಾಲದಲ್ಲಿ ಎಲ್ಲೆಲ್ಲೂ ಆಹುತಿ ಪಡೆಯುತ್ತಿರುವ ಅಗ್ನಿ ನಾರಾಯಣನಿಗೊಂದು ದೊಡ್ಡ ತುತ್ತು.

ಬೆಂಕಿ ಹೇಗೆ ಹುಟ್ಟಿತು?

ಯಾರು ಬಲ್ಲ! ಬೆಂಕಿ ಹುಟ್ಟಿ ಮಾಡಿದ ಅನಾಹುತಗಳ ವಾರ್ತೆಯೆಲ್ಲಾ ಪ್ರಕಟವಾಗಿದೆ. ಆದರೆ ಅದು ಹೇಗೆ ಹುಟ್ಟಿತೆಂಬ ಸುದ್ದಿ ಬಂದಿಲ್ಲ. ಅದನ್ನು 'ಒಂದು ವಿಷಮ ಕೋಲು' ಎಂದಂತೆ ಉಪ್ಪಳಯಾಗ್ನಿಗೆ 'ಒಂದು ಆಕಸ್ಮಿಕ ಬೆಂಕಿ (an accidental fire) ಎಂದು ನಾಮಕರಣ ಮಾಡಲಾಗಿದೆ. ಆಕಸ್ಮಿಕವೆಂತೂ ಹೌದು; ಜತೆಯಲ್ಲಿ 'ಅತಿ ಶೋಚನೀಯ' 'ಅತ್ಯಪಾಯಕಾರಿ' 'ಮಹಾ ಅನಾಹುತ'ವೂ ನಿಜ; ಇಷ್ಟು ಸ್ವತಃ ವೇದ್ಯವಾಗಬಲ್ಲುದು ಜನರಿಗೀಗ ತಿಳಿಯಬೇಕಾದುದು ಇದರ ಹೇತುವಾವುದೆಂಬುದೇ. ಬೊಂಬಾಯಿಯಲ್ಲಿ 'ಸ್ವದೇಶೀ ಬೊಂಬು'ಗಳು ಅಲ್ಲಲ್ಲಿ ಆಗಾಗ ಸ್ಫೋಟಿಸಿದ ವಾರ್ತೆಗಳನ್ನು ಕೇಳುತ್ತಾ ಬಂದಿದ್ದೇವೆ; ದೇಶದ ಒಂದು ಮೂಲೆಯಲ್ಲಿ ಕಾಲೂರಿದ ಜಪಾನಿಗಳೂ ಕುಹಕ ಕ್ಷುಲ್ಲಕ ಒಳಾಂದೋಲನಕ್ಕೆ ಹೇಸುವವರಲ್ಲ. ಇಂತಹ ಕಲುಷಿತ ವಾತಾವರಣದಲ್ಲಿ ಕಾಣಿಸಿಕೊಂಡ ಬೆಂಕಿಯ ಕಾರಣ ಸ್ಪಷ್ಟವಾಗಬೇಕು ಇಲ್ಲವಾದರದು ಪ್ರಾಣ, ಸೊತ್ತುಗಳಿಗೆ ಮಾಡಿದ ಹಾನಿಗೆ ಮಿಕ್ಕಿ ಮಾನಸಿಕ ಪರಿಣಾಮವನ್ನುಂಟು ಮಾಡಬಲ್ಲುದು. ಬೊಂಬಾಯಿಯಂತಹ ಅಖಿಲ ಭಾರತದ ಕೇಂದ್ರ ಸ್ಥಳದಲ್ಲಿದ್ದ ಈ ನಷ್ಟದ ಕರಿಹೊಗೆ ದೇಶದ ಮೂಲೆ ಮೂಲೆಗೂ ಹರಡಿದಂತಿದೆ; ಏನೇನೋ ವಾರ್ತೆಗಳು ಹುಟ್ಟಿಕೊಂಡಿವೆ ಈ ಮನೋರೋಗ ನಿವಾರಣೆಗೆ ಸರಕಾರದ ಸ್ಪಷ್ಟೀಕರಣವು ಅತ್ಯಗತ್ಯ.

ಭೀಕರ ದೃಶ್ಯ!

ಆ ಅಗ್ನಿತಾಂಡವ ದೃಶ್ಯವು ಅಸಾಮಾನ್ಯವಿದ್ದು, ಇಡೀ ಬೊಂಬಾಯಿಯ ಅಗ್ನಿಪರೀಕ್ಷೆಯೇ ಆದಾಗಿದ್ದಿತು. ಸುಮಾರು ಹನ್ನೆರಡು ಘಂಟೆಗಳ ವರೆಗೆ, ಭಾರತದ ಈ ಹೆಬ್ಬಾಗಿಲಿನ ಸರ್ವ ಶಕ್ತಿಯು ಅಗ್ನಿಶಮನಕ್ಕಾಗಿ ಮೀಸಲಿದ್ದಿತು. ಸೇನೆ, ಪೋಲಿಸ್, ಎ. ಆರ್. ಪಿ.ಯವರು ಪೂರ್ಣಸಮ್ಮಿಲನಗೊಂಡು, ಎಷ್ಟು ಕ್ಕೂ ಅಂಕೆಗೆ ಸಿಗಲು ಕೇಳದ ಆ ಅತಿನಿಬಿಡವಲಯದಲ್ಲಿ ಸ್ಥಿರ ಮತ್ತು ಶೀಘ್ರಾಕ್ರಮಣ ಮಾಡುತ್ತಾ ಬಂದ ಬೆಂಕಿಯೊಡನೆ ಹೋರಾಡಿ ಅಪ್ರತಿಮ ಸಾಹಸವನ್ನೇ ಪ್ರದರ್ಶಿಸಿದ್ದಾರೆ. ಸೈನಿಕರು ಪೋಲಿಸರು ಕಾವಲು ಬೇಲಿಯಾಗಿ ಸುತ್ತುಗಟ್ಟಿ ನಿಂತು ಲೂಟಿ ದರೋಡೆಗಳು ನಡೆಯದಂತೆ ನೋಡಿದ್ದಾರೆ. ಸ್ಫೋಟವುಂಟಾದೊಡನೆಯೇ ತಮ್ಮ ಬೆಲೆಯುಳ್ಳ ಸಾಮಾನುಗಳನ್ನು ಹೊತ್ತುಕೊಂಡು ಧಕ್ಕೆಯ ಬಳಿಯ ನಿವಾಸಿಗಳೆಲ್ಲಾ ದಿಕ್ಕು ದೆಸೆಗೆ ಓಡಹತ್ತಿದರು. ಶುಕ್ರವಾರ ಅಪರಾಹ್ನ 7 ಘಂಟೆಗೆ ಧಕ್ಕೆಯ ಬಳಿಯ ವಲಯವು-ಅಂದು ನಾಲ್ಕು ಘಂಟೆಯ ವರೆಗೂ ಹಿಂದುಸ್ಥಾನದ ಅತಿನಿಬಿಡ ನಿವಾಸವಾಗಿದ್ದಾ ಸ್ಥಳವು-ಮರು ಭೂಮಿಯಂತೆ ನಿರ್ಜನವಾಗಿ ಹೋಗಿತ್ತು. ಅಗ್ನಿಯದನ್ನು ಆಕ್ರಮಿಸಿಕೊಂಡು ಮನೆಮನೆ ಹೊಕ್ಕಾಗ ಅಲ್ಲಿಯ ಸಾವಿರಾರು ನಿವಾಸಿಗಳು ಬಟ್ಟಬಯಲಾದ ಮೈದಾನುಗಳಲ್ಲಿ ಆ ರಾತ್ರಿಯನ್ನು ಕಳೆದಿದ್ದರು. ಪಟ್ಟಣದ ಎಲ್ಲಾ ಪ್ರಮುಖಾಸ್ಪತ್ರೆಗಳೂ ಆ ರಾತ್ರಿಮತ್ತು ಹಗಲು ಅರೆಬೆಂದ ಜೀವಗಳಿಂದ ತುಂಬಿ ಹೋಗಿದ್ದವು. ಶನಿವಾರ ಪ್ರಾತಃಕಾಲ ಬೆಂಕಿಯೋಧರು ಕೆಂಡ ನಂದಿಸುವ ದರಲ್ಲಿ ಮತ್ತು ಬಿದ್ದ ಕಟ್ಟಡಗಳ ಮಾಡುಮಣ್ಣು ಗುಡಿಸುವದರಲ್ಲಿ ನಿರತರಾಗಿದ್ದರು. ಬೊಂಬಾಯಿ ಗವರ್ನರರು ಸ್ವತಃ ಆ ಸ್ಥಳವನ್ನು ಸಂದರ್ಶಿಸಿದರು.

ಅದೊಂದು ರಣರಂಗ!

ಬೊಂಬಾಯಿಯ ರಕ್ಷಣಾ ಬಲಗಳೆಲ್ಲಾ ಆ ದಿನ ಧಕ್ಕೆವಲಯದಲ್ಲಿ ತನ್ನ ಸರ್ವ ಶಕ್ತಿಯನ್ನು ಪ್ರಯೋಗಿಸಿ ಒದ್ದಾಡಿತು. ಎಂಬ್ಯುಲೆನ್ಸುಗಳು, ಬೆಂಕಿ ಎಂಜಿನುಗಳು,—ಅಗ್ನಿಶಾಮಕವಾದ ಪ್ರತಿಯೊಂದು ಉಪಕರಣವೂ-ಆ ಸ್ಥಳಕ್ಕೆ ಧಾವಿಸಿತು. ಧಕ್ಕೆಯ ಕಾರ್ಯಾಲಯಗಳ ಕೆಲಸಗಾರರ ತಂಡತಂಡಗಳು ತಮ್ಮ ಕಾರ್ಖಾನೆಗಳ ಅಗ್ನ್ಯುತ್ಪಾದಕ ಸಾಮಾಗ್ರಿಗಳನ್ನು ಸಾಗಿಸುತ್ತಿರುವ ದೃಶ್ಯ, ಅವರನ್ನೊಯ್ಯಲು ಎಡೆಬಿಡದೆ ಧಾವಿಸಿಬರುತ್ತಿರುವ ಟೇಕ್ಸಿಗಳು, ತಗಲಲ್ಲಿ ಗಂಟು-ಮೂಟೆಗಳನ್ನೋ ಬೆಂಕಿಯಿಂದ ಬೆಂದವರನ್ನೋ ಹೊತ್ತುಕೊಂಡು ಬರುತ್ತಿರುವ ಸ್ವಯಂಸಹಾಯಕರು, ಬೆಂಕಿಯಾವರಿತ ಸ್ಥಳಗಳೊಳಗೆ ದೂರಕ್ಕೂ ನುಗ್ಗಿ ಹೋಗಿ ಬಿದ್ದವರನ್ನೆತ್ತಿಕೊಂಡು ಬರುವ ಧೀರರು, ನೆಲ, ಜಲ,ಆಕಾಶ ಸೇನೆಗಳು-ಇವೆಲ್ಲ ಒಂದಾಗಿ ಸಾವಿರ ಸಂಖ್ಯೆಯ ಪ್ರಾಣಿಗಳಿದವು. ಅಗ್ನಿಯೋಧರಿಗೆ ಕಾಫಿ, ಚಹಾ ಮತ್ತು ಚಿಕಿತ್ಸೆಯೊದಗಿಸಿ ಸ್ತ್ರೀ ಸ್ವಯಂಸೇವಿಕೆಯರು ದುಡಿದಿದ್ದರು. ಅಂತೂ ಮಾನವ ವರ್ಗದ ಮೇಲೆ ಪ್ರಲಯವಪ್ಪಳಿಸಿ ಬಿದ್ದಾಗ ಅಧಿಕಾರಿ-ಅನಧಿಕಾರಿ, ಸ್ವಕೀಯ-ಪರಕೀಯವೆಂಬ ಭೇದವಿಲ್ಲದೆ ಎಲ್ಲರೂ ಒಗ್ಗಟ್ಟಾಗುವರೆಂಬುದಕ್ಕೆ ಬೊಂಬಾಯಿಯ ಅಗ್ನಿ ಶಮನ ಕಾರ್ಯವೊಂದು ನಿದರ್ಶನವಾಯಿತು. ಅಲ್ಲಿಯ 'ವಿಕ್ಟೋರಿಯಾ ಟರ್ಮಿನಸಿ'ನ ಸ್ಥಳೀಯ ರೈಲು ಚಲಾವಣೆಯೀಗ ನಿಂತಿದೆ.

ಕೆಲವು ಧೀರ ದಾಖಲೆಗಳು

ಈ ಅಗ್ನಿ ಪ್ರತಾಪದಿದಿರಲ್ಲಿ ಹಲವರ ವೈಯಕ್ತಿಕ ಶಕ್ತಿ ಸಾಹಸಗಳು ಬೆಳಕು ಕಂಡಿವೆ. ಆ ಬೆಂಕಿಯಿಂದಹಲವು ಧೀರ ಚರಿತೆಗಳು ಪಾಕಗೊಂಡಿವೆ ಒಬ್ಬ ಸೈನ್ಯ ಸಾರ್ಜೆಂಟ್ ಮತ್ತೊಬ್ಬ ವೈಮಾನಿಕನು ಬೆಂಕಿ ಹತ್ತಿದಾಗ ಆ ಮುಹೂರ್ತದಲ್ಲಿ ಆ ಹಡಗದಲ್ಲೇ ಇದ್ದುಕೊಂಡು ಒಂದು ರಕ್ಷಣಾದಳವೇರ್ಪಡಿಸಿಕೊಂಡರು. ಈ ದಳದಿಂದ ರಕ್ಷಿಸಲ್ಪಟ್ಟವರಲ್ಲಿ—ತಪ್ಪೊಂದನ್ನಪ್ಪಿ ಹಿಡಿದಂತೆಯೇ ಸ್ಮೃತಿ ತಪ್ಪಿಹೋಗಿದ್ದ ಯುರೋಪಿಯಾನನೊಬ್ಬ, ಒಂದು ಮುರಿದ ಗೋಡೌನಿನಡಿಯಲ್ಲಿ ಸಿಕ್ಕಿಬಿದ್ದು ರಟ್ಟೆ ಮುರಿದುಕೊಂಡು ಅರೆಜೀವವಾಗಿದ್ದ ಕೂಲಿಯೊಬ್ಬ ಅಲ್ಲದ್ದೆ ಒಬ್ಬ ನಾವಿಕಾಧಿಪತಿಯು ನೆಲ,ಜಲ,ಆಕಾಶ ಬಲಗಳಒಂದು ಸ್ವಯಂಸೇವಕ ದಳವನ್ನು ಅಲ್ಲಿಯೇ ಒಟ್ಟುಗೂಡಿಸಿ ಪ್ರಳಯಾಗ್ನಿಯ ಒಂದು ದೊಡ್ಡ ತುತ್ತನ್ನೇ ಅಪಹರಿಸಿಬಿಟ್ಟಿದ್ದ. ಒಂದು ಗೋಡೌನ್ ತುಂಬಾ ಅಗ್ನಿಸ್ಪರ್ಶೀ ಸಾಮಾನುಗಳು ತುಂಬಿದ್ದವು; ಬೆಂಕಿಯು ಅದರ 20ಗಜ ದೂರದ ವರೆಗೂ ಬಂದಿತ್ತು. ನೌಕಾದಳದ ಈ ಸಂಧಿಗ್ಧಾವಸ್ಥೆಯಲ್ಲಿ ಇಡೀ ಗೋಡೌನನ್ನು ಪೂರ್ತಿ ಖಾಲಿ ಮಾಡಿ ಅಲ್ಲಿಯ ಸಿಡಿಮದ್ದುಗಳನ್ನೆಲ್ಲಾ ಲೋರಿಗಳಲ್ಲಿ ತುಂಬಿಸಿ ಸಾಗಿಸಿಬಿಟ್ಟಿತು. ಆರ್. ಎಸ್. ಎಮ್. ಜೆ ಎಚ್. ರೋಬರ್ಟ್ಸ್ ಎಂಬ ಸೈನ್ಯಾಧಿಕಾರಿಯೊಬ್ಬನು ಅಲ್ಲಿಯ ತನ್ನ ಆಫೀಸಿನಲ್ಲಿದ್ದಂತೆಯೇ ಮಾಡು ಸುಟ್ಟುಬಿದ್ದು ಘಾಯಗೊಂಡಿದ್ದ. ಅದರದನ್ನು ಗಣಿಸದೆ ಮುಂದೊತ್ತಿ ಒಂದು ಮುರಿದ ಕಟ್ಟಡದಲ್ಲಿದ್ದ 17 ಮಂದಿ ಹಿಂದೀ ಸೋಲ್ಜರರಿಗೆ ಸುರಕ್ಷಿತ ಸ್ಥಳದ ಮಾರ್ಗದರ್ಶಕನಾದ. ಈ ಅಗ್ನಿ ಪ್ರಳಯದಲ್ಲಿ ಮೃತ್ಯು ದವಡೆಯಿಂದ ಜೀವಗಳನ್ನು ಉಳಿಸಿದ—ಯಜ್ಞಾಹುತಿಯಾಗಲಿದ್ದ ಹತ್ತಿ ಸಂಗ್ರಹ, ಮದ್ದುಗುಂಡುಗಳ ದಾಸ್ತಾನು, ಧಾನ್ಯ ಸಂಗ್ರಹಗಳನ್ನು ತಪ್ಪಿಸಿದ-ಅಮಾನುಷ ಸಾಹಸಿಗಳೆಷ್ಟೋ ಮಂದಿ ಇದ್ದಾರೆ. 'ಸುಟ್ಟುಹೋದವುಗಳಲ್ಲಿ ಧಾನ್ಯ ಸಂಗ್ರಹವೂ ಇದೆಯಾದರೂ ಇದರಿಂದ ರೇಶನಿಂಗ್ ಕ್ರಮಕ್ಕೆ ಭಂಗಬರಲಾರದು' ಎಂದು ಸರಕಾರದ ಆಶ್ವಾಸನೆಯಿದೆ. ಸರಕಾರದಿಂದ ಆರ್ಥಿಕ ಸಹಾಯ ಪಡೆದು ರಕ್ಷಣಾ ಕೇಂದ್ರಗಳನ್ನು ರಚಿಸಲು ಬೊಂಬಾಯಿ ಮುನಿಸಿಪಾಲಿಟಿ ನಿರ್ಧರಿಸಿದೆ. ಶರಿಫರು ನಗರದ ಪ್ರಮುಖ ನಾಗರೀಕರ ಸಭೆ ಕರೆದು ಸಂಕಷ್ಟಕ್ಕೊಳಗಾದವರಿಗೆ ಸಹಾನುಭೂತಿ ಸೂಚಿಸಿ, ಸಹಾಯ ಸಲ್ಲಿಸುವ ವ್ಯವಸ್ಥೆ ಕೈಗೊಂಡಿದ್ದಾರೆ. ಅಂತೂ ಭಾರತದಲ್ಲಿ ಅಸಾಮಾನ್ಯ ಘಟನೆಗಳ ನಿರ್ಮಾಣಕ್ಕೆ ಹೆಸರುಹೊಂದಿದ ಬೊಂಬಾಯಿಯ ಈ ಬೆಂಕಿಯೂ ಆಕಸ್ಮಿಕಾದ್ಭುತಗಳ ಪ್ರಥಮ ಪಂಕ್ತಿಗೆ ಸೇರುವಂತಹದೇ!

ಮುಟ್ಟುಗುಳಿಗೆ

ಹಲಕಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದರೂ—'ಕುಮಾರಿ' (PILLS) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಮರಳಿ ಬರುವದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ. ಬೆಲೆ. ರೂ. 3|- ಕೈವಾರಿಡ ಕೇಸುಗಳಿಗೆ ರೂ. 5. (ಪಿ. ಪಿ. 12 ಆಣೆ ಅಲ್ಲದೆ).

Mrs. P DEVEE, F.D.S., (N)
TOLLYGUNGE, CALCUTTA,
ಸ್ಟಾಕಿಸ್ಟ್: Popular Stores,
P. B. 60, MANGALORE.

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing:* **Homes & Estats Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

ಇವೆರಡರಲ್ಲಿ ಸತ್ಯವೆಷ್ಟು ಸುಳ್ಳೆಷ್ಟು?

- ಸಂಧಾನಕ್ಕಾಗಿ ಸಪ್ರುಗಳಿಗಾಮಂತ್ರಣ?
- ಸರಕಾರದಿಂದ ರೋಯಿಗಳಿಗೆ ಸಹಾಯಧನ.

ವಿಲಕ್ಷಣ ಮೂರ್ತಿ ಶ್ರೀ ರೋಯ್.

ಕಳೆದವಾರ ಅಖಿಲ ಭಾರತದ ಲಕ್ಷ್ಯವು ದೇಶದ ಇಬ್ಬರು ಮುಖಂಡರ ಮೇಲೆ-ಸರ್. ತೇಜಬಹದೂರ್ ಸಪ್ರು ಮತ್ತು ಕಾಮ್ರೇಡ್ ರೋಯಿಗಳ ಮೇಲೆ-ಬಿದ್ದಿದೆ. ಇಬ್ಬರು ಎರಡು ವಿಧದಾತುರಗಳ ಗುರಿಯಾಗಿ ಕಾಣಿಸುತ್ತಿದ್ದಾರೆ. ದೇಶದ ಬಿಕ್ಕಟ್ಟು ನಿವಾರಣೆಗೆ ಸರ್. ಸಪ್ರುಗಳ ಸಹಾಯ ಪಡೆಯಲು ಲೋರ್ಡ್ ವೇವೆಲರು ಮನಸ್ಸುಮಾಡಿರುವರೆಂಬ ಸಂತೋಷದಾಯಿ-ಆದರೆ ಸಂದೇಹಾಸ್ಪದ-ವಾರ್ತೆಯೊಂದು ಹಬ್ಬಿದೆ. ಭಾರತ ಸರಕಾರವು ಪ್ರಚಾರಕ್ಕಾಗಿ ಕಾಮ್ರೇಡ್ ರೋಯಿಗಳಿಗೆ ತಿಂಗಳಿಗೆ 13 ಸಾವಿರ ರೂಪಾಯಿ ಕೊಡುತ್ತಿದೆ ಎಂಬ ಮತ್ತೊಂದು ಅಧಿಕೃತ ವಾರ್ತೆಯು ದೇಶದಲ್ಲಿ ಪ್ರಕಟವಾಗಿ ಸಂದೇಹಬ್ಬಿಸಿದೆ.

ಸರ್. ಸಪ್ರು.

ಸರ್. ತೇಜಬಹದೂರು ಸಪ್ರುಗಳ ವಿಶೇಷ ವ್ಯಕ್ತಿತ್ವವು ದೇಶದ ಕಣ್ಣಿಗೆ ಬೀಳುವಂತೆ ಕಾಣಿಸುವಂತಹ ದೊಡ್ಡ ಬೆಳಕು ಪ್ರಥಮಬಾರಿ ಬಿದ್ದುದು ಆ ಸರ್ಮಣೀಯ ಸಪ್ರು-ಜಯಕರರ ಸಂಧಾನದವೇಳೆ. 1930ರ ಕಾಯಿದೆಭಂಗ ಚಳವಳವು ವಿರಾಟ್ಸ್ವರೂಪತಾಳಿ ಗಾಂಧೀ ನೆಹರುಗಳನ್ನು ಇಂದಿನಂತೆಯೇ ಜೈಲುಪಾಲು ಮಾಡಿದ್ದಿತು. ಆಗಿನ ವೈಸರಾಯಿ ಲೋರ್ಡ್ ಇರ್ವಿನರು (ಇಂದಿನ ಲೋರ್ಡ್ ಹಲಿಫೇಕ್ಸ್) ವ್ಯಕ್ತಿಶಃ ಸೌಮ್ಯ ಸ್ವಭಾವದವರಿದ್ದು, ಕಾಯಿದೆಭಂಗ ಚಳವಳಿಯನ್ನು ದಮನಿಸುವದರಲ್ಲಿ ಪ್ರಥಮತಃ ಔದಾಸೀನ್ಯವಹಿಸಿದಂತಿದ್ದರು. ಆಗ ಬರೇ 'ನಗಾರಿ'ಯಾಗಿದ್ದ ಮಿ ಚರ್ಚಿಲ್ಲರ ಬಾಯಿಯಿಂದ ಹೊರಬಿದ್ದು ಭಾರತೀಯರಿಂದಲಾಗಾಗ ಸ್ಮರಿಸಲ್ಪಡುತ್ತಿರುವ 'ಅರೆಬತ್ತಲೆ ಫಕೀರನು ಸಮಾನತೆ ಪಡೆದು ವೈಸರಾಯಿ ಭವನ ಪ್ರವೇಶಿಸುವದೆಂದರೇನು?'-ಎಂಬ ಮಾತಿಗೆ ಲೋರ್ಡ್ ಇರ್ವಿನರ ಅದೊಂದು ವಿಧದ ಉದಾರ ಬುದ್ಧಿಯೇ ಕಾರಣ. ಅಂದು, ಅರೆಬತ್ತಲೆ ಫಕೀರನನ್ನು ವೈಸರಾಯಿ ಭವನ ಹೊಗಿಸಿದ ಕೀರ್ತಿಯಲ್ಲಿ ದೊಡ್ಡಪಾಲು ಸರ್. ಸಪ್ರುಗಳಿಗೆ ಸಲ್ಲುತ್ತಿದೆ. ಸಪ್ರು ಜಯಕರರು ಸರಕಾರ ಮತ್ತು ಕಾಂಗ್ರೆಸುಗಳೊಳಗೆ ರಾಜಿಮಾಡಿಸುವ ಸಲುವಾಗಿ, ನವದಿಲ್ಲಿಯಿಂದ ಎರವಾಡಾ ಜೈಲಿಗೆ-ಎರವಾಡಾದಿಂದ ನೈನಿತಾಲ್ ಜೈಲಿಗೆ, ವೈಸರಾಯಿ, ಗಾಂಧೀನೆಹರುಗಳ ಅಭಿಪ್ರಾಯ ಜೋಡಣೆಗಾಗಿ ಓಡಾಡಿದ್ದರು. ಪ್ರಥಮತಃ ಅಪಜಯಗೊಂಡು ಕಾಲಾನಂತರ ಕಾರ್ಯಸಾಧಿಸಿದ್ದರು. ಅಂದಿನಿಂದ ಸರ್. ಸಪ್ರುಗಳು ಪ್ರಥಮ ವರ್ಗದ ರಾಷ್ಟ್ರೀಯ ವ್ಯಕ್ತಿಯಾಗಿ ನಿಂತಿದ್ದಾರೆ; ದಿನಕಳೆದಂತೆ ಅವರ ಮಸ್ತಿಷ್ಕತೆಯ ಜ್ಞಾನ, ಅಗಾಧ ರಾಜ್ಯರಚನಾತ್ಮಕ ಜಾಣ್ಮೆ, ದೇಶಪ್ರೇಮ ಶಾಂತಿಪ್ರೇಮಗಳು ಅಧಿಕಾಧಿಕವಾಗಿ ಪ್ರಕಾಶಗೊಂಡು ಸರ್. ಸಪ್ರುಗಳಿಗೀಗ ದೇಶದ ರಾಜಕೀಯದಲ್ಲೊಂದು ಅನನ್ಯ ವಿಶಿಷ್ಟ ಸ್ಥಾನ ದೊರೆತಿದೆ.

ಸಂಧಾನ ವೀರ.

ಸರ್. ಸಪ್ರುಗಳು ರಣರಂಗಕ್ಕಾಗುವ ಸೇನಾನಿಯಲ್ಲ; ಆದರೆ ವ್ಯವಹಾರ ರಂಗದಲ್ಲಿ ಅವರಂತಹ ಸೇನಾನಿ ಬೇರೊಬ್ಬನಿಲ್ಲ. ರಾಜಕೀಯದ ರಸ-ಕಸವನ್ನು ಹಿಂಗಡಿಸಿ ತೋರಿಸಬಲ್ಲ ಅವರ ಅಸಾಧಾರಣ ತೀರ್ಮಾನಶಕ್ತಿ, 'ಸಿಕ್ಕ'ನ್ನು ಎಳೆಯಳೆಯಾಗಿ ಬಿಡಿಸಿ ತೋರಿಸಬಲ್ಲ ಅವರ ರಚನಾ ಚಾತುರ್ಯ-ಶಾಂತಿಕಾಲದ ಸ್ವತಂತ್ರ ಭಾರತದ ಸೂತ್ರಧಾರತ್ವಕ್ಕವರನ್ನು ಯೋಗ್ಯರನ್ನಾಗಿಸಿದೆ. ಸರ್. ಸಪ್ರುಗಳ ಈ ಗುಣವು ದೇಶದ ಇಂದಿನ ಬಿಕ್ಕಟ್ಟಿನಿದಿರಲ್ಲಿ ಖಡ್ಗದ ಥಳಪಿನಂತೆ ಕಾಣುತ್ತಿದೆ. ಸರಕಾರ ಮತ್ತು ಕಾಂಗ್ರೆಸಿನ ಧೋರಣೆಗಳು ಆ ಬದಿ ಈ ಬದಿಯಂತಿದ್ದು ನಡುವೆ ಆಳವಾದ ಕಣಿವೆ ಬಿದ್ದಿದ್ದರೆ ಸಪ್ರುಧೋರಣೆ ಸೇತುವಾಗಬಲ್ಲುದು. ಕಳೆದವಾರ ಲಕ್ನೋದಲ್ಲಿ ನೆರೆದ ತೃತೀಯ ಪಕ್ಷರಹಿತ ಸಮ್ಮೇಲನದ ಅಧ್ಯಕ್ಷಸ್ಥಾನದಿಂದ ಅವರು ಮಾಡಿರುವ ಭಾಷಣವು ಪಕ್ಷಭೇದವಿಲ್ಲದೆ 'ಸೈ' ಪಡೆದಿದೆ. ಅದಕ್ಕನುಗುಣವಾದ ಬೆಲೆಕೊಡಲು ಲೋರ್ಡ್ ವೇವೆಲರು ಮುಂದೆ ಬಂದಿದ್ದಾರೆಂಬ ಸಂತೋಷದಾಯೀ ವಾರ್ತೆಯೊಂದು ಬಂದಿದೆ.

ಸಂಧಿಯತ್ನ?

ಅದು ಜಯಶೀಲವಾದೀತೇ, ಆಗಲಾರದೇ ಎಂದು ತರ್ಕಿಸುವ ಮೊದಲು ವಾರ್ತೆ ಸತ್ಯವೋ ಸುಳ್ಳೋ ಎಂಬುದೇ ತಿಳಿದಿಲ್ಲ; ಆದರೆ ಸುದ್ದಿಯೇನೋ ಮೋಹಕವಾದುದು. ವೈಸರಾಯಿ ವೇವೆಲರ ಪರವಾಗಿ ಹಿಂದೀ ಸರಕಾರದ ಪ್ರಮುಖಾಧಿಕಾರಿಯೊಬ್ಬರು, ಪಕ್ಷಾತೀತ ಪರಿಷತ್ತು ಮುಗಿದೊಡನೆಯೇ ಸರ್. ಸಪ್ರುಗಳ ಭೇಟಿ ಪಡೆದು ವಿಚಾರವಿನಿಮಯನಡೆಸಿದರಂತೆ. ಕೊನೆಯಲ್ಲಿ ಸಪ್ರುಗಳು, ವೈಸರಾಯರ ಭೇಟಿ ಪಡೆಯಬೇಕು ಎಂಬ ಸೂಚನೆ ಬಂತು. 'ಲೋರ್ಡ್ ವೇವೆಲರು ಅಧಿಕೃತವಾಗಿ ಕರೆಯದೆ ನಾನು ಹೋಗಲಾರೆ' ಎಂದು ಸಪ್ರುಗಳು ಸಹಜವಾಗಿ ಉತ್ತರಿಸಿದರು. ಅಧಿಕಾರಿ ನವದಿಲ್ಲಿಗೆ ಮರಳಿದ್ದಾರೆ, ವೈಸರಾಯರಿಂದ ಅವರಿಗೆ ಆಮಂತ್ರಣ ಬರುವಸಂಭವ ಎಂಬುವೇ ಆ ಸಿಹಿವಾರ್ತೆ. ಪಕ್ಷರಹಿತ ಪರಿಷತ್ತಿನ ಭಾಷಣದಲ್ಲಿ ಅಧ್ಯಕ್ಷ ಸಪ್ರುಗಳು ಇಂದಿನ ಯೋಧ ವೈಸರಾಯಿಯಲ್ಲಿ ಸ್ವಾಭಾವಿಕವಾಗಿರುವ ಬಿಕ್ಕಟ್ಟು ನಿವಾರಣಾ ಯೋಗ್ಯತೆಯನ್ನು ಗುಣೈಕ ದೃಷ್ಟಿಯಿಂದ ಹೊಗಳಿದ್ದರು. ಫೀಲ್ಡ್ ಮಾರ್ಷಲ್ ಸೈನಿಕ ಬುದ್ಧಿಯ ಲೋರ್ಡ್ ವೇವೆಲರ ಮೇಲದು ಮೋಹನಾಸ್ತ್ರವಾಗಿ ನಾಟಿರಬಹುದೊಂದು ವಿಶೇಷವಲ್ಲ. ಲಂಡನಿನ 'ಡೈಲಿ ಟೆಲಿಗ್ರಾಫ್' ಪತ್ರಿಕೆಯು ಈ ಕುರಿತು ಬರೆಯುತ್ತಾ 'ಸರ್. ಸಪ್ರುಗಳು ರಾಜ್ಯ ರಚನಾ ವಿಭಾಗದಲ್ಲಿ ವೈಸರಾಯರ ಬಲಗೈಯಾಗಬಲ್ಲರು" ಎಂದು ಹೊಗಳಿದೆ. ಲೋರ್ಡ್ ರೀಡಿಂಗರು ವೈಸರಾಯಿಯಾಗಿದ್ದಾಗ ಸರ್. ಸಪ್ರುಗಳು ಕಾಯಿದೆ ಮಂತ್ರಿಯಾಗಿದ್ದುದನ್ನು ನೆನಪು ಮಾಡುತ್ತಾ ಆ ಪತ್ರಿಕೆಯನ್ನುತ್ತಿದೆ "ಇಂಗ್ಲೆಂಡಿನ ಆ ಮಾಜೀ ಚೀಫ್ ಜಸ್ಟೀಸರೂ ಮ್ಯಾತಾನೆಂದಿಗೂ ಈ ಹಿಂದೀ ಅನುಯಾಯಿಯ ಕಾಯಿದೇ ಅನುಭವನ್ನು ದಾಟಿ ಹೋದುದಿಲ್ಲ, ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿದ್ದರು". ಸರ್. ಸಪ್ರುಗಳ ಯೋಗ್ಯತೆ ಸಂದೇಹಾತೀತ, ಲೋರ್ಡ್ ವೇವೆಲ ವ್ಯಕ್ತಿಗತ ಔದಾರ್ಯವೂ ನಿಜವಿರಬಹುದು; ಆದರೆ; 97ನೇ ಕಲಮಿನಾಳ್ವಿಕೆಗೆ ಜೀವದಾನ ಮಾಡಲು ಮುಂದೆ ಬಂದಿರುವ ಮಿ ಅಮೆರಿ ಮತ್ತು ಮಿ. ಚರ್ಚಿಲ್ಲರಿರುವವರೆಗೆ ಇದು ಕೇವಲಬಯಲಾಸೆಯಲ್ಲವೆ?

ಕಾ ರೋಯಿ.

ಒಂದು ವಿಕಟ ಹಾಗೂ ವಿವಾದಾತ್ಮಕವಾದ ಹೊಸವಾರ್ತೆಯೆಂದರೆ ಹಿಂದೀ ಸರಕಾರವು ಕಾ. ಎಮ್. ಎನ್. ರೋಯಿಗಳ 'ಭಾರತದ ಕೂಲಿಗಾರ ಸಂಘ'ಕ್ಕೆ ಪ್ರಚಾರದ ಸಲುವಾಗಿ 13ಸಾವಿರ ರೂ. ಗಳಂತೆ ಮಾಸಿಕ ಸಹಾಯ ಅಥವಾ ಅವಧಿ ಲಂಚಕೊಡುತ್ತಿದೆ ಎಂಬುದೇ! ಈ ಕುರಿತು ಈ ಬಾರಿಯ ಎಸೆಂಬ್ಲಿ ಅಧಿವೇಶನದ ಕೊನೆಯ ದಿನ ಒಂದು ಪ್ರಶ್ನೆ ಬಂತು. ಕೂಲಿಗಾರ ಸದಸ್ಯ ಡಾ. ಅಂಬೇಡ್ಕರ್ ಅನಿರ್ವಾಹವಾಗಿ ಅದನ್ನು ಉತ್ತರಿಸಬೇಕಾಯಿತು. "ನಿಜ. ಕೆಲಸಗಾರರಲ್ಲಿ ಶಿಸ್ತು ಸಂಘಟನಾ ಕಾರ್ಯದ ಸಲುವಾಗಿ ಮೇಲಿನ ರೋಯಿ ಸಂಘಕ್ಕೆ ಸರಕಾರವು 1300 ರೂ. ಗಳಂತೆ ಪ್ರತಿತಿಂಗಳು ಕೊಡುತ್ತಿದೆ. ಅದರ ಲೆಕ್ಕ ಪತ್ರಗಳನ್ನವರು ಸರಕಾರಕ್ಕೊಪ್ಪಿಸುತ್ತಿದ್ದಾರೆ." ಎಂದವರೊಪ್ಪಿಕೊಂಡರು. ಈ ಒಪ್ಪಿಗೆಯೇ ರೋಯಿಗಳ ಮುಖದಿದಿರು ಹಿಡಿದ ದೀವಿಗೆಯಾಗಿ ಅವರ ನಿಜರೂಪವನ್ನು ಸ್ಪಷ್ಟಗೊಳಿಸಿತು; ದೇಶವೊಂದು ಒಗಟನ್ನೇ ಬಿಚ್ಚಿತು. ಒಂದು ಕಾಲದಲ್ಲಿ ಉಗ್ರಕ್ರಾಂತಿಕಾರಕನಾಗಿ ಸರಕಾರವು ತನ್ನ 'ಅಸ್ತಿವಾರದಡಿಯ ಅಡ್ಡಬೇರು' ಎಂದು ಕಡಿದು ತೆಗೆಯಲು ನೋಡಿದ್ದ ಈ ಅಪಾಯಕರ ವ್ಯಕ್ತಿಯು ಇತ್ತೀಚೆಗೆ ಸರಕಾರೀ ಧೋರಣೆಯ ಕೊಳಲಾಗಿ ಸ್ವರಕೊಡುತ್ತಿರುವದರ ಗುಟ್ಟು ಈಗ ಬಯಲಾಯಿತು. ರೋಯಿಗಳ ವಾರಪತ್ರಿಕೆಯಾಗಿದ್ದ 'ಇಂಡಿಪೆಂಡೆಂಟ್ ಇಂಡಿಯಾ' ದೈನಿಕವಾದುದರ ಮರ್ಮವೂ ತಿಳಿದುಹೋಯಿತು. ದೇಶವಿಡೀ ವ್ಯಂಗ್ಯ ಟೀಕೆಗಾರಂಭ!

ತರ್ಕ-ವಿತರ್ಕ

ಇದು ರೋಯಿಸ್ಟರಿಗಸಹನೀಯವಾಗಿದೆ. "ಹಣವೇ ರೋಯಿ ಸಂಘದ ಗುಣ" ಎಂದು ದೇಶವು ತೀರ್ಮಾನಿಸಿಕೊಂಡು ಕುಳಿತರೆ, ತಮ್ಮ ಭವಿಷ್ಯಕ್ಕೆ ಹಾನಿ ಎಂಬುದನ್ನವರು ಬಲ್ಲರು. 'ಸರಕಾರವು ತನ್ನ ಸಾವನ್ನು ತಾನೇ ಹಣಕೊಟ್ಟು ಬರಿಸುತ್ತಿದಾದರೆ, ನಾವೇಕೆ ಬೇಡವೆನ್ನಬೇಕ ?" -ಎಂಬ ಚಾತುರ್ಯದ ಮಾತಿನಿಂದ ಅಪರೀ ಅಪವಾದನೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದರು. ಆದರದು ಈ ಥಳಕಿನ ವಿರುಗನ್ನು ಮತ್ತಷ್ಟು ಹೆಚ್ಚಿಸಿತು. ಇತ್ತ ಸರಕಾರವೂ ಲಂಚ ಕೊಡುವವನ ಸ್ಥಾನದಲ್ಲಿರಲು ಸಮ್ಮತಿಸದೆ ಈ 13 ಸಾವಿರದ ಪುರಾಣವನ್ನೇ ಬಿಚ್ಚಿತು, 'ನಾವು ಇದೇ ರೀತಿಯ ಸಹಾಯ ಸೂಚನೆಯನ್ನು ಕಮ್ಯೂನಿಸ್ಟರ ಟ್ರೇಡ್ ಯೂನಿಯನ್ ಕಾಂಗ್ರೆಸಿಗೂ ಕಳುಹಿದ್ದೆವು. ಆದರೆ ಅದರ ಕಾರ್ಯದರ್ಶಿ ಶ್ರೀ. ಎಮ್. ಎನ್. ಜೋಶಿಯವರು ಆ ಪತ್ರಕ್ಕೆ ಉತ್ತರಕೊಡುವಷ್ಟು ಸಹಕಾರವನ್ನು ಕೂಡಾ ಪ್ರದರ್ಶಿಸಲಿಲ್ಲ. ಎಮ್. ಎನ್. ರೋಯಿಗಳದನ್ನು ಸ್ವೀಕರಿಸಿದರು' ಎಂದು ನಿಷ್ಪಕ್ಷಪಾತ ಬುದ್ಧಿಯ ಪ್ರದರ್ಶನ ಯತ್ನ ನಡೆಸಿತು. ಈ ಆಶ್ಚರ್ಯದಲ್ಲೊಂದು ಪರಮಾಶ್ಚರ್ಯವೇ ಈಗ ನಿರ್ಮಾಣಗೊಂಡಿದೆ. ರೋಯಿಗಳ 'ಇಂಡಿಯನ್ ಫೆಡರೇಶನ್ ಒಫ್ ಲೇಬರ್'ನ ಇಂದಿನ ಅಧ್ಯಕ್ಷರು ಎಲ್ಲವನ್ನೂ ತುಳಿವ ಹೆಗ್ಗುಣಕ್ಕೆ ಹೆಸರುಹೋದ ಶ್ರೀ. ಜಮುನಾದಾಸ ಮೆಹತಾ ಅವರು ಕಳೆದ ಬಾರಿಯ ತನ್ನ ಅಧ್ಯಕ್ಷ ಭಾಷಣದಲ್ಲಿ -ಆ ವೇಳೆ ಗಾಳಿ ಸುದ್ದಿಯಾಗಿದ್ದ "ಸರಕಾ

(ಹಸೆ ಪುಟ ನೋಡಿರಿ)

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of **"Parimala Bhavan"**, opposite Municipal Bus Stand, Udipi, on the 11th April, 1944 Your patronage is solicited.

Mangalore Jarappa,
Managing Director.

The Canara Banking Corporation Limited.

ESTD 1906.

Authorised Capital	Rs. 25,00,000 -
Subscribed ,,	,, 16,00,000/-
Paid up ,,	,, 13,25,785/-
Reserves	,, 4,10,000 -

DO YOU KNOW THAT TODAY'S BEST INVESTMENT IS NATIONAL SAVINGS CERTIFICATES

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers

ನವಯುಗ

ಉಡುಪಿ ಗುರುವಾರ ೨೦-೪-೧೯೪೪

ಯುದ್ಧಗತಿ.

ಕಳೆದವಾರದಲ್ಲಿ ಯುದ್ಧವು ಎರಡು ರಣರಂಗಗಳಲ್ಲಿ ಗಣನೀಯ ಅಭಿವೃದ್ಧಿ ಪಡೆದಿದೆ. ಒಂದನೆಯದು ರಶ್ಯಾರಣರಂಗ: ಎರಡನೆಯದು ಅಸ್ಸಾಮು ಸಮರಕ್ಷೇತ್ರ. ರಶ್ಯನ್ ಸೇನೆಗಳು ವಿರೋಧಿಗಳನ್ನು ಕಸದಂತೆ ಗುಡಿಸುತ್ತಾ ಹೋಗುವ ಕ್ಕೆ ಒಡಿಸೆ ಕಪ್ಪು ಸಮುದ್ರದ ಮುತ್ತು ಎಂದೆನಿಸುವ ಒಡೆಸ್ಸಾವು ಕಳೆದ ವಾರ ಕೈಗೆ ಬಂದಷ್ಟು ಸುಲಭದಲ್ಲಿ ರಶ್ಯನರ ವಶವಾಗಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಆದರೆ ಸ್ವಾಮಿ ಸ್ಮೃತಿಯಂತಹ ಸಂಜೀವ ಸೇನೆಯ ಪ್ರಯತ್ನದಲ್ಲೊಂದು ಅಣುವನ್ನೂ ಉಳಿಯಗೊಡದ ಇದನ್ನು ರಕ್ಷಿಸಲು ಹೋರಾಡುವರೆಂದು ನಿರೀಕ್ಷಿಸಲಾಗಿತ್ತು. ಆದರೆ ಕಳೆದ ಮೂವತ್ತು ತಿಂಗಳಿಂದ ಬೇರುಬಿಟ್ಟಂತೆ ದೃಢವಾಗಿ ನಿಂತಿದ್ದ ಆ ಜರ್ಮನ್ ಸೇನೆಯು ನಾಜಿಗಳ ಪಾಲಿಗೆ ಕೆಂಪು ಸೇನೆಯ ದರ್ಶನ ಮಾತ್ರದಿಂದಲೇ ಕೂಡ ಸಲವಾಗಿ ಪರಿಣಮಿಸಿ ಅವರು ಪಲಾಯನ ಗೈದರು. ಈಗ ಸೆಬಸ್ತಾಪೋಲಿನ ಹಾಗೂ ರಶ್ಯನರು ಕ್ರಿಮಿಯಾದ ಕಠಿಣ ಹೋರಾಟದಲ್ಲಿ ನಿರತರಾಗಿದ್ದಾರೆ. ಅವರ ಮುಂದಿನ ದೊಡ್ಡ ಗುರಿ ರುಮೇನಿಯವೆನ್ನಬಹುದು. ರುಮೇನಿಯದ ವಿತರ್ಕಾಗಿ ಅಲ್ಲಿಯ ಎಣ್ಣೆ ಗಣಿಗಳು ರಶ್ಯನರ ವಶವಾದರೆ ಹಿಟ್ಲರನ ಬಳಿ ನಾಲಗೆಯು ಜೀವನ್ಮರಣ ಪ್ರಶ್ನೆಯಾದಂತೆಯೇ ಸರಿ! ಮಿತ್ರರಲ್ಲಾ ನಾಮಧಾರಿಗಳು ರಶ್ಯನರು ಮಾತ್ರ 'ಯೋಧ'ರು. ಎಲ್ಲ ಉಳಿದವರು ಕೀರ್ತಿಯೋಗ ಕೆಂಪುಸೇನೆಯದು!

ಪಶ್ಚಿಮದ ಕುಯುಕ್ತಿಯಂತಹದಿರಬೇಕು. ಇಲ್ಲಿಯ ನಮ್ಮಲ್ಲಿಯ ಯುದ್ಧ ಪ್ರಕಟಣೆಗಳ ಸ್ವರೂಪವಿನ್ನೂ ಅಸ್ಪಷ್ಟವಾಗಿದೆ. ಅಸ್ಸಾಮು ರಣರಂಗದ ಯುದ್ಧಚಿತ್ರವೂ ಮಾಯಾಜಾಲವಾಗಿ ಗೋಚರಿಸುತ್ತಿದೆ. ಜಪಾನರು ಒಂದು ಹೆಚ್ಚು ಮುನ್ನಡೆಯನ್ನು ವಿಸ್ತರಿಸಿದ ಎಂಬ ವಾರ್ತೆ ಬಂದ ಮರುದಿನವೇ ಇಂಫಾಲಿನ ನೈಋತ್ಯಗಡಿಯ ಒಲಿನ್ ಪುರ್-ಸಿಲ್ಚರ್ ರಸ್ತೆಯಲ್ಲಿ ಧಾಳಿಯಾರಂಭವಾದ ಸುದ್ದಿ ಹೊರಟಿತು. ದಕ್ಷಿಣದಲ್ಲಿ ಟಿಡ್ಡಿಮುವನ್ನು ಕಳಕೊಂಡ ಮಿತ್ರರು ಅಲ್ಲಿ ಇತ್ತೀಚೆಗೆ ಕಡಿದ ಹೊಸರಸ್ತೆಯನ್ನೂ ಕಳಕೊಂಡಂತಾಗಿದೆ. ಈಗ ಬಲವಾದ ಉತ್ತರದಕ್ಕೊಳಗಾಗಿರುವ ಕೊಹಿಮಾದ ಆಕ್ರಮಣಕೂಡ ಮೊದಲ ದಿನದವರೆಗೆ ನಿರೀಕ್ಷಿಸಲ್ಪಟ್ಟಿರಲಿಲ್ಲ. ಮೊನ್ನೆಯ ವಾರ್ತೆ ಇಂಫಾಲಿನ ಮೈದಾನಿಗೆ ಮುಂದೊತ್ತಿಬಂದ ಜಪಾನರ ಸಣ್ಣ ದಳಗಳನ್ನು ನೂಕಿಸಿ ಹತ್ತಿರದ ಪರ್ವತ ವಲಯಕ್ಕೋಡಿಸಲಾಯಿತು, ಜಪಾನರ ಚಟುವಟಿಕೆ ತಟಸ್ಥವಾಗಿದೆ, ಹೆಚ್ಚಿನ ಸಬಲಾಯಿ ಬರುವವರೆಗೆ ಅವರು ಕಾಯಬೇಕಾಗಿದೆ' ನಿನ್ನೆಯ ವಾರ್ತೆ- 'ಇಂಫಾಲ್ ಮೈದಾನಿನ ಉತ್ತರ ಮತ್ತು ಈಶಾನ್ಯ ವಲಯದಲ್ಲಿ ತೀವ್ರ ಹೋರಾಟ ನಡೆಯುತ್ತಿದೆ' ಅಂತೂ ಭಾರತೀಯರ ಪಾಲಿಗೆ ಇದೊಂದು ತೂಗುಯ್ಯಾಲೆ!

ಸೇನಾನಿ ಸರ್ ಅಚಿನ್‌ಲೆಕರ ಅಭಿಪ್ರಾಯದಂತೆ ಮಳೆಗಾಲಾರಂಭದ ಮೊದಲು ಇಂಫಾಲ್ ಕೇಂದ್ರವಾಗವನ್ನು ಸ್ವಾಧೀನಪಡಿಸಿಕೊಂಡು, ಬರ್ಮಾವಲಯದ ಏಕಮಾತ್ರ ಸಂಚಾರಿ ರಸ್ತೆಯನ್ನು ತಡೆಗಟ್ಟಿ ಕುಳಿತು, ಅಲ್ಲಿಂದ ಆ ಮೇಲೆ ಸ್ವೇಚ್ಛೆಯಾಗಿ ಆಕ್ರಮಣ ಪ್ರಾರಂಭಿಸುವುದೇ ಜಪಾನರ ಗುರಿಯಾಗಿದ್ದರೆ ಅವರು ಆ ಗುರಿಗೀಗ ಸಮೀಪಿಸಿದ್ದಾರೆ. ನಿಧಾನವಾಗಿ ನಡೆದರೂ ಮಳೆಗಾಲದ ಆಗಮನಕ್ಕಿಂತ ಹೆಚ್ಚಿನ ಅವಸರವು ಜಪಾನೀ ಧಾಳಿಯಲ್ಲದ ಅಥವ ಇತ್ತ ಜಪಾನರ ಯೋಜನೆಯಂತೆ ಕಾರ್ಯ ಸಾಗುತ್ತಿದೆ. ಆದರೆ ಅವರನ್ನು ತಡೆಗಟ್ಟಿ ಹಿಂದೂಡಿಸುವ ಕಾರ್ಯವು, ಈಗ ಗೋಚರಿಸುತ್ತಿರುವ ಪ್ರತಿಭಟನ ಸಿದ್ಧತೆಯಿಂದ ಸಾಧಿಸಲ್ಪಡುವಂತೆ ಕಾಣುವದಿಲ್ಲ. ಅಮೇರಿಕದ ಯುದ್ಧ ಕಾರ್ಯದರ್ಶಿಯ ಅಭಿಪ್ರಾಯವನ್ನೇ ಅಸ್ಸಾಮು ಯುದ್ಧ ಹಂಚಿಕೆಯೆಂದು ಭಾವಿಸಬಹುದಾದರೆ ಮಿತ್ರರೀಗ ಲಕ್ಷ್ಯ ನಾಕೇಂದ್ರಗಳು, ಅಂತೆಯೇ ಸರಬರಾಯಿ ನೆಲೆಗಳೂ ಆದ ಕೆಲವು ಸ್ಥಳಗಳಲ್ಲಿ ದೃಢಾಶ್ರಯ ಪಡೆದು ನಿಂತು ಜಪಾನರ ಅರಣ್ಯ ಯುಕ್ತಿಗಳಿಂದಲೇ ಜಪಾನರನ್ನು ನೂಕಿಸಲು ಸಾಧ್ಯವೆಂದು ನಿರ್ಧರಿಸಿದ್ದಾರೆ. ಇದು ಅತಿಸ್ನೇಹಭಾವದ ಆತ್ಮವಿಶ್ವಾಸವಂತಿದೆ. ದೀರ್ಘಕಾಲದಿಂದ ಒರ್ಮದ ಪರಾಧೀನತೆಯ ಆಶ್ವಾಸನೆ ಕೇಳುತ್ತಿದ್ದವರು ಈಗ ಇಂತಹ ಭರವಸೆಗಳನ್ನು ಕೇಳುವ ಯೋಗವೂ ಬಂದಿದೆ. ಒಂದೆ ನಿರೀಕ್ಷಿಸಬೇಕು ಅಸ್ಸಾಮು ಯುದ್ಧದ ವಾರ್ತೆಯಾದರೂ ಸರಿಯಾಗಿ ದೊರೆಯಲಿ, ನಿಜಸುದ್ದಿ ಕೊಡಬಲ್ಲಷ್ಟು ಪರಕೀಯರೆಂಬ ಭಾವನೆಯಲ್ಲಿ ಈ ಯುದ್ಧಘಟನೆಯ ಪ್ರತ್ಯಕ್ಷ ಅನುಭವ ಪಡೆಯುತ್ತಿರುವ ಹಿಂದೀ ಪುರುಷನ್ನು ಕಾಣಬೇಕಿತ್ತು-ಎಂಬುದೇ ಅಧಿಕಾರಿಗಳೊಡನೆ ನಮ್ಮ ವಿನಂತಿ

ರಾಜಾಜಿಗೆ ಕೊನೆಯ ತಫರಾಕು

ಮಿ. ಜಿನ್ನರ ಮಹತ್ವಾಕಾಂಕ್ಷೆಗೆ ಸರಿಗಟ್ಟಬಲ್ಲ ಮತ್ತೊಂದು ಹೆಬ್ಬಯಕೆಯೆಂದರೆ ಶ್ರೀ. ಸಿ ರಾಜಗೋಪಾಲಾಚಾರಿಯವರದೇ. ಮೊದಲನೆಯವರಲ್ಲಿ ಪ್ರಕೃತಿಸ್ಥಾನ ಸಾಧಿಸಬಹುದೆಂಬ ಆಸೆಯಿದ್ದರೆ, ಎರಡನೆಯವರಲ್ಲಿ ಜಿನ್ನರನ್ನೊಲಿಸಬಹುದೆಂಬ ಭರವಸೆಯಿದ್ದಿತು. ಈ ಬಯಕೆಯು ರಾಜಾಜಿಯವರು ಜೀವಮಾನದಲ್ಲಿ ದುಡಿದು ಸಾಧಿಸಿದ್ದ ಪ್ರಾಣಪ್ರಿಯ ಸಂಬಂಧಗಳನ್ನು ಹಾಗೂ ಕೀರ್ತಿಯನ್ನು ಕೂಡಾ ಬಲಿಗೊಂಡಿದ್ದಿತು. ಮಿ. ಜಿನ್ನರ ಅಭಿಪ್ರಾಯವನ್ನು ತಿಳಿದುಕೊಂಡು ಅವರ ಮೈತ್ರಿ ಸಾಧಿಸಬೇಕೆಂಬ ಒಂದೇ ಉದ್ದೇಶಕ್ಕೆ ಬಲಿಯಾಗಿ ಆಚಾರ್ಯರು ಕಾಂಗ್ರೆಸಿನಲ್ಲಿದ್ದ ತನ್ನ ಸ್ಥಾನ ಮತ್ತು 'ಕಾಂಗ್ರೆಸ್ ವಕ್ತಾರ'ನೆಂದು ತನಗಿದ್ದ ಮಾನವನ್ನೂ ತೆತ್ತಿದ್ದರು. ಇಂತಹ ಐಕ್ಯ ಪ್ರವಾದಿಯೀಗ ಮಿ. ಜಿನ್ನರಿಂದಲೇ ಪೂರ್ತಿ ನಿರಾಶೆಗೊಂಡು, ಕೊನೆಯಬಾರಿಗಿಷ್ಟರಿಂದ ವಿಮುಖರಾದರು ಎಂಬ ವಾರ್ತೆ ಬಂದಿದೆ. ನವದೆಹಲಿಯಲ್ಲಿ ಮಿ. ಜಿನ್ನರೊಡನೆ ತನ್ನ ಸರ್ವಶಕ್ತಿ ಚಾತುರ್ಯಗಳನ್ನು ಉಪಯೋಗಿಸಿದರೂ ರಾಜಾಜಿ ಸಂಧಾನ ಯತ್ನದಲ್ಲಿ ಭಗ್ನಮನೋರಥರಾದರು.

ಈ ಮಾತುಕತೆಯ ಪೂರ್ವ ಸೂಚಿಕೆ ಹೀಗಿದೆ. ಈ ಬಾರಿಯ ಕೇಂದ್ರ ಎಸೆಂಬ್ಲಿಯ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷವು ಮತ್ತು ಮುಸ್ಲಿಂ ಲೀಗ್ ಪಾರ್ಟಿಯು ಸರಕಾರಕ್ಕೆ ಕೆಲವು ಪ್ರಾಮುಖ್ಯ ಸೋಲನ್ನೊಡ್ಡುವದರಲ್ಲಿ ಕೈಕೈ ಹಿಡಿದು ನಿಂತಿದ್ದವು. ಈ ಸ್ನೇಹವೊಂದು ವಾಸಿಂಗ್ ಕೋ' ಎಂಬ ನಂಜು ಮಿಶ್ರಿತ ಬರುದನ್ನೂ ಸರಕಾರೀ ಸದಸ್ಯರಿಂದ ಪಡೆದಿದ್ದವು. ಇಂತಹ ಅನುಕೂಲ ವಾತಾವರಣದಲ್ಲಿ, ವಿಶಾಲ ಧೋರಣೆಯ ಶ್ರೀಮತಿ ಸರೋಜಿನಿ ದೇವಿಯವರ ಸಮ್ಮುಖದಲ್ಲಿ ಶ್ರೀ. ಭುಲಾಭಾಯಿ ದೇಸಾಯಿ ಮತ್ತು ಲೀಗಿನ ಉಪನಾಯಕ ನವಾಬ ಝಾದಾರವರು ಕಾಂಗ್ರೆಸ್ ಲೀಗ್ ಒಪ್ಪಂದದ ಮಾತುಕತೆ ನಡೆಸಿದ್ದರು. ಈ ವಿಚಾರವಿನಿಮಯದಲ್ಲಿ ಒಪ್ಪಂದದ ಸಾಧ್ಯತೆಯು ಮನವರಿಕೆಯಾಗಿರಬೇಕು ಅಂತೆಯೇ ರಾಜಾಜಿ, ಜಿನ್ನರ ಭೇಟಿಗೆ ಧಾವಿಸಿದುದಾಗಿರಬೇಕು. ಆದರೆ ಜಿನ್ನರ ಘಂಟಿಗೊಂಡೇ ಸ್ವರ! ಅವರ ಹೇಳಿಕೆಯಿಷ್ಟೆ "ಪಾಕಿಸ್ತಾನ್ ಯೋಜನೆಯನ್ನು ಈಗ ಲೀಗ್ ಯಾಚಿಸುತ್ತಿರುವಂತೆಯೇ ಪೂರ್ತಿಯಾಗಿ ಪ್ರಥಮತಃ ಒಪ್ಪಿಕೊಳ್ಳಬೇಕು. ಮುಂದೆ ಅದರ ರೂಪರೇಖೆಯನ್ನು ಸ್ಪಷ್ಟೀಕರಿಸಿಕೊಳ್ಳುವ ಪೂರ್ಣ ಹೊಣೆಯನ್ನು ನನ್ನ ಪಾಲಿಗೇನೇ ಬಿಡಬೇಕು. ಈ ಶರ್ತವಿನಹ, ಪ್ರಕೃತ ಕೇಂದ್ರದಲ್ಲಿ ಸಮ್ಮಿಶ್ರಾಧಿಕಾರಸ್ಥಾಪಿಸುವ ಯಾವ ಯೋಜನೆಗೂ ನಾನು ಒಪ್ಪುವಂತಿಲ್ಲ". ಇದೂ ಒಂದು ಸಂಧಾನವಾಗುವ ಸೌಹಾರ್ದ್ರತೆಯೆ? ಜಿನ್ನರವಾದವನ್ನು ಚುಟುಕಿನಲ್ಲಿ ಹೇಳುವದಾದರೆ 'ಭಾವೀ ಭಾರತದ ಬ್ರಹ್ಮನು ನಾನಾಗಬೇಕು' ಎಂದೇ ಅವರು ಕೇಳಿದ್ದಾರೆ! ಮಿ. ಜಿನ್ನರ ಪಾಕಿಸ್ತಾನ್ ಬೇಡಿಕೆಯು ಕೇವಲ ನಿಷೇಧಾತ್ಮಕ ಮುಂದಲಿದಿದೆ ಹೊರತು ಯಾವುದೇ ನಿರ್ಮಾಣಕ್ಕೂ ಬಂದುದಲ್ಲವೆಂಬುದು ಇನ್ನಾದರೂ ವೇದ್ಯವಾಗದೆ?

'ಏದ್ಯಾವಲ್ಲ'ಭರ ಉತ್ತರ- ನಮ್ಮ ನಿರ್ಧಾರ

●

ಇದೇ ಕಳೆದ ಫೆಬ್ರವರಿ ತಿಂಗಳ ಉದಯಭಾರತದಲ್ಲಿ ಪುತ್ತಿಗೆ ಮಠದ ಪಟ್ಟದ ಶಿಷ್ಯ ಶ್ರೀ ವಿದ್ಯಾವಲ್ಲಭರ ... ತ ತೋರುವ, ನಮಗೆ ಮಾನಹಾನಿಕರವಾದ ಲೇಖನವನ್ನು ಪ್ರಕಟಿಸಿದ ಸಂಬಂಧ ನಾವು ಸದರಿ 'ವಿದ್ಯಾವಲ್ಲಭ'ರಿಗೂ ಆ ಲೇಖಕರಿಕ್ಕೆ ಸಂಬಂಧಪಟ್ಟ ಇತರರಿಗೂ ರಿಜಿಸ್ಟ್ರಿ ನೋಟೀಸುಗಳನ್ನು ಕೊಟ್ಟಲ್ಲಿ ಸದರಿ ವಿದ್ಯಾವಲ್ಲಭರು ಆ ಪ್ರಕಟಣೆಯಲ್ಲಿ ಕಾಣುವ ಯಾ ಸಾಧಾರಣ ಅದನ್ನೇ ಅನುಸರಿಸಿ ಇತರ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳ ಯಾವತ್ತೂ ವಿಷಯವನ್ನು ನಿರಾಕರಿಸಿ ಅದಕ್ಕೆ ತಾನು ಹೊಣೆಗಾರನಲ್ಲವೆಂದು ಉತ್ತರಕೊಟ್ಟಿರುತ್ತಾರೆ. ಆದಕಾರಣ ಸದರಿ ಲೇಖನಗಳಲ್ಲಿ ನಮ್ಮ ಮೇಲೆ ಮಾಡಿರುವ ಆರೋಪವು ಸ್ಥಾನಮಾನಗಳಲ್ಲಿ ಗಣ್ಯರಾದವರಿಂದ ಬಂದುದಲ್ಲವೆಂದೂ ಸದರಿ ಎ ವೆಂಕಟರಮಣಾಚಾರ್ಯರಂತಹ ವ್ಯಕ್ತಿಗಳೊಡನೆ ವ್ಯವಹರಣೆ ನಡೆಸುವುದು ಪತ್ರಿಕೆಗೆ ಅಗೌರವವೆಂದೂ ... ಕಾಭಿಮಾನಿಗಳಾದ ನಮ್ಮ ಹಲವು ಹಿತೈಷಿಗಳು ಅಭಿಪ್ರಾಯಪಟ್ಟುದರಿಂದ ಮುಂಬರಿಯುವುದು ಅನಾವಶ್ಯಕವೆಂದು ತೋರುವ ತನಕ ಪ್ರಕೃತ ವ್ಯವಹರಣೆ ನಡೆಸುವ ಸಂಕಲ್ಪವನ್ನು ಮುಂದಕ್ಕಿಟ್ಟಿದ್ದೇವೆ.

ದುರ್ಬೀನು

ಗಂಗೆತ್ತು ತಲೆಯಾಡಿಸಿ ಸಂಪಾದನೆ ಮಾಡುತ್ತದೆ, ಗಾಡಿಯೆತ್ತು ಭಾರವೆಳೆದೇ ದುಡಿಯಬೇಕು. ಆಡಂಬರ ಜೀವಿ ಗಂಗೆತ್ತು-ಶ್ರಮ ಜೀವಿ ಗಾಡಿಯೆತ್ತು.

೦೦ ೦೦ ೦೦

... ಏರಿಯುತ್ತದೆ, ಬಳಪ ಬರೆಯುತ್ತದೆ. ತೀವ್ರ ಗಾಮಿತ್ವ ನೋಯಿಸುತ್ತದೆ; ಶಾಂತ ವರ್ತನೆ ಸಂತೈಸುತ್ತದೆ.

೦೦ ೦೦ ೦೦

ಬಿಳಿ ಹೂ ಮುಡಿಸಿದ್ದರೆ ತಲೆ ನರೆತಂತಲ್ಲ; ಸಮ್ಮತಿ ತುಂಬಿದ್ದರೆ ಪರಾಭವಗೊಂಡಂತಲ್ಲ.

೦೦ ೦೦ ೦೦

ಕಾಲಿಗೆ ಬೆರಳಿದ್ದರೂ ಕಾಲುಂಗುರವನ್ನು ಕೈ ಬೆರಳೇ ಇಡಬೇಕು. ಸೋಮಾರಿಯು ಸ್ವಂತ ಕಾರ್ಯವನ್ನಾದರೂ ಕಾರ್ಯಪಟುವೇ ಸಾಧಿಸಿ ಕೊಡಬೇಕು.

೦೦ ೦೦ ೦೦

ಬಳ್ಳಿ ನೆಲತುಂಬ ಹರಡಬಲ್ಲುದು; ಮರವು ಹಾಗೆ ನೆಲಹಿಡಿಯುವದು ಕಡಿದುರುಳಿಸಿದಾಗಲೇ. ಚಂಚಲ ಧೋರಣೆ ಸರ್ವವ್ಯಾಪಿಯಾಗಬಲ್ಲುದು, ದೃಢ ನಿಷ್ಠೆಯೂ ಹಾಗೆ ಚೆದರಬೇಕಾದರೆ ವಿಶ್ವಾಸಭಂಗವಾಗಬೇಕು.

೦೦ ೦೦ ೦೦

ಒಂದು ಭಾವ ಚಿತ್ರದ ದೃಷ್ಟಿ ಯಾರು ಹಿಡಿದು ನೋಡುತ್ತಾರೋ ಅವರಲ್ಲೇ ನೆಟ್ಟಂತಿರುತ್ತದೆ. ಏಕನಿಷ್ಠೆಯಿಲ್ಲದ ಚಿತ್ರಸನ್ನಾನರೂ ಬಾಗಿಯೇ-ಎಲ್ಲದವಲ್ಲಿಕ್ಕೆ

★ ಮಹಾತ್ಮಾಜೀಗೆ ಮಲೇರಿಯ! ★

ಮಹಾತ್ಮಾಜಿಗೆ ಜ್ವರ

'ಗಾಂಧಿಯವರು ಕಳೆದ ಮೂರು ದಿನಗಳಿಂದ ಮಲೇರಿಯಾ ಪೀಡಿತರಾಗಿದ್ದಾರೆ ಅವರು ನಿತ್ರಾಣಗೊಂಡಿದ್ದಾರಾದರೂ ಅವರ ಸಾಮಾನ್ಯ ಪ್ರಕೃತಿಯು ನಿರೀಕ್ಷೆಗನುಗುಣವಾದ ಸಮಾಧಾನಕರ ಸ್ಥಿತಿಯಲ್ಲಿದೆ' -ಎಂದು ಇದೇ ತಾ. 16ರಲ್ಲಿ ಬೊಂಬಾಯಿ ಸರಕಾರವು ಪ್ರಕಟಣೆಯೊಂದನ್ನು ಹೊರಡಿಸಿದೆ.

ಮೌಂಟ್ ಬೇಟನ್ ಆಫೀಸು ವರ್ಗ

ಕಳೆದ ಐದು ತಿಂಗಳುಗಳಲ್ಲಿ ನವದಿಲ್ಲಿಯಲ್ಲಿದ್ದು, ಭಾರತ ಸೇನಾನಿ ಸರ್ ಆಚಿನ್‌ಲೆಕರೊಡನೆ ನಿಕಟ ಸಂಬಂಧ, ದೈನಿಕ ವಿಚಾರ ವಿನಿಮಯ ನಡೆಸುವ ಅನುಕೂಲತೆಯನ್ನೊದಗಿಸಿದ್ದ, ಲೋರ್ಡ್ ಲುಯಿಸ್ ಮೌಂಟ್ ಬೇಟನರ, ಆಗ್ನೇಯ ಏಶ್ಯಾ ಯುದ್ಧ ಚಾಲು ಮುಖ್ಯ ಕಾರ್ಯಾಲಯವೀಗ ಗುಪ್ತವಾಗಿ ಸಿಲೋನಿಗೆ ವರ್ಗಾಯಿಸಲ್ಪಟ್ಟಿದೆ. ಇದಕ್ಕೆ ಕಾರಣವೇನೆಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲವಾದರೂ ಆಗ್ನೇಯ ಏಶ್ಯಾ ದಳದ ಮುಖ್ಯ ಹಡಗಿನ ಬಲ್ದಾಣವು ಸಿಲೋನಿನಲ್ಲಿರುವದರಿಂದ ಮೌಂಟ್ ಬೇಟನರು ನಾವಿಕಾಧಿಕಾರಿಯೊಡನೆ ನಿಕಟ ಸಂಬಂಧವಿಟ್ಟುಕೊಳ್ಳುವ ಒಂದು ಅನುಕೂಲತೆಯನ್ನು ಹೇಳಲಾಗುತ್ತಿದೆ. ಒಮಾನ ದಿಣವು ಯಿಕ್ಕ ಮೌಂಟ್ ಬೇಟನರು ಸಿಲೋನಿನಿಂದ ಹಾರಿಬರಲು, ನವದಿಲ್ಲಿಗಿಂತ ಕಲವೇ ಘಂಟೆಗಳು ಮಾತ್ರ ಹೆಚ್ಚು ದೊರೆತರೆ ಸಾಕು. ಹಿಂದುಸ್ಥಾನ ಸೇನಾನಿತ್ವವು ಮೌಂಟ್ ಬೇಟನರ ಕೈಯಲ್ಲಿಲ್ಲ. ಆದ್ದರಿಂದ ಈ ಕಾರ್ಯಾಲಯವನ್ನು ಸಿಲೋನಿಗೆ ವರ್ಗಾಯಿಸಲ ನಿರ್ಧರಿಸಿದ ಕಾರ್ಯಾಲಯ ಮತ್ತು ಕಾರ್ಯಕರ್ತರನ್ನು ಹಿಂದುಸ್ಥಾನದೊಳಗಡೆ ಸ್ಪೆಶಲ್ ಟ್ರೈನಿನಮೂಲಕ ಗುಪ್ತವಾಗಿಯೂ ಅನೇಕ ವಿಮಾನ ಮತ್ತು ಆದರ್ಮ ಸಂದಕಡವುಗಳ ಮೂಲಕವೂ ಸಿಲೋನಿಗೆ ಸಾಗಿಸಲಾಯಿತು. ನವದಿಲ್ಲಿಯಲ್ಲಿ ಶಿರಮಸಯಂತಹ ಕಾರ್ಯಾಲಯದಲ್ಲಿದ್ದ ಮೌಂಟ್ ಬೇಟನರು ಸಿಲೋನಿನಲ್ಲಿ ಅವಸರದ ಸಿದ್ಧತೆಯ ನ ದಾಬವನಗಳಲ್ಲಿದ್ದು ಯುದ್ಧ ಚಾಲುಮಾಡಲಿದ್ದಾರೆ

ಬೊಂಬಾಯಿಯ ಅಗ್ನಿ ದುರಂತ!

ಹಡಗ ಅಗ್ನಿಸ್ಫೋಟದ ಕುರಿತು ವಿಚಾರಣೆಯಾಗಬೇಕೆಂದ 'ಟೈಮ್ಸ್ ಓಫ್ ಇಂಡಿಯಾ'ದಂತಹ ಪತ್ರಿಕೆ ಒತ್ತಾಯಿಸಿದೆ. ಬೊಂಬಾಯಿಯ ಕೆರಿನ್ ಮತ್ತು ಸರ್ ಫ್ರಾಂಕ (...) ಮುಂತಾದ ಪ್ರಮುಖರೂ ಕೇಳಿಕೊಂಡಿದ್ದಾರೆ. ಒದ ಪ್ರಾಣಹಾನಿ ಮತ್ತು ಸೊತ್ತುನಷ್ಟಗಳ ಸರಿಯಾದ ಅಂಕೆಸಂಖ್ಯೆ ಸಂಗ್ರಹಿಸುವದು ಇನ್ನೂ ಅಸಾಧ್ಯವಾಗಿದೆ. ತಾ 17ನೇ ಸೋಮವಾರ ಮಧ್ಯಾಹ್ನದ ವರೆಗೆ ದೊರೆತ ಸತ್ತ ನಾಗರಿಕರ ಸಂಖ್ಯೆ 281 ಕೋಟಿಗಟ್ಟಲೆ ರೂ ಗಳ ಅಪಾರ ಹಾನಿಯಾಗಿದೆ ಬೆಂಕಿ ಹಿಡಿದ 48 ಘಂಟೆಗಳ ವರೆಗೂ ಅದನ್ನು ನಂದಿಸುವ ಹೋರಾಟವನ್ನೇ ನಡೆಸಬೇಕಾಗಿತ್ತು, ಜ್ವಾಲೆಯ ನಾಲಿಗೆ ಮೈಲುಗಟ್ಟಲೆಗಳ ವರೆಗೆ ಕಾಣಿಸುತ್ತಿತ್ತು ಸುತ್ತ ಮೂರು ದಿನಗಳವರೆಗೆ ಆ ಬಾಗದ ಆಕಾಶಕ್ಕೆ ಕರಿಹೊಗೆಯ ಪರದೆ ಬಿದ್ದಿತ್ತು. ಆ ಸ್ಫೋಟದಿಂದ ಸಿಡಿದ ಕೆಲವು ಮದ್ದುಗುಂಡುಗಳು ದೂರದ ರಸ್ತೆಗಳಲ್ಲಿ ಸ್ಫೋಟವಾಗದೆ ಬಿದ್ದಿರಬಹುದೆಂದೂ, ಅವುಗಳ ಕುರಿತು ಜಾಗ್ರತೆಯಿಲ್ಲದಿರಬೇಕೆಂದೂ ಮಿಲಿಟರಿ ಅಧಿಕಾರಿಗಳ ಎಚ್ಚರಿಕೆಯಿದೆ. ದೇಶದ ಸರ್ವಕಡೆಯಿಂದ ಸಹಾನುಭೂತಿ ಸೂಚಕ, ಸಹಾಯದ ನವಾಗುತ್ತಿದೆ ಸತ್ತವರ ಹೆಸರುಗಳ ಪರಿಚಯವಾಗಿಲ್ಲ. ಸತ್ತವರ ಸಂಬಂಧಿಕರು ತಲೆ ಎದೆ ಬಡಿಕೊಳ್ಳುತ್ತಿ ವ ರಣಾಪೀಸನ್ನು ಮುತ್ತುತ್ತಿರುವ ದೃಶ್ಯವು ಶೋಚನೀಯವಾಗಿತ್ತು. ಬೊಂಬಾಯಿ ಆಸ್ಪತ್ರೆಗಳು 'ರಕ್ತ ಸಹಾಯ'ವನ್ನು ಯಾಚಿಸಿವೆ. ಹಲವರು ರಕ್ತದಾನ ಮಾಡಿದ್ದಾರೆ

ಚನ್ನಿನ ಮರ್ಯೋಲ್ಲಿ— ತಾ 12 4 1944ರಲ್ಲಿ [illegible]

ಡಾ ಎಂ ಎಸ್. ಹೆಗ್ಡೆಯವರು: [illegible] 10-3 4ರಿಂದ [illegible]

ಇನರಡರಲ್ಲಿ ಸತ್ಯವೆಷ್ಟು ಸುಳ್ಳೆಷ್ಟು?

(ನ. ಪ್ರತಿನಿಧಿ ತ ರಿಂದ)

ಂದ ಸಹಾಯ"ವನ್ನು ಪೂರ್ತಿಯಾಗಿ ಅಲ್ಲಗಳೆದು 'ಇದು ಶುದ್ಧ ಸುಳ್ಳುವಾರ್ತೆ' ಎಂದು, ಮಹದನ್ಯಾಯಕ್ಕೊಳಗಾದವರೆಂತೆ ಘರ್ಜಿಸಿದ್ದರು ಡ| ಅಂಬೇಡ್ಕರರ ನಿರ್ಣಯ ಪಡೆಯೊಂದಾಗಿ ಶ್ರೀ. ಮೊಹತಾರ ಮುಖದ ಮುಂದೆ ಇಡೀ ದೇಶವೆಳೆದ ಒಂದು ದೊಡ್ಡ ಪ್ರಶ್ನಾರ್ಥಕ ಚಿಹ್ನೆ ನಿಂತಿತು! ಮೆಹತಾರು ಅಷ್ಟ ಹಾದಿಯಿಂದ ನುಸುಳಿ ತಪ್ಪಿಸಿಕೊಳ್ಳಬಹುದೆಂದು ಊಹಿಸಿದ್ದವರೆಲ್ಲಾ ದಂಗುಬಡಿಯುವಂತೆ ಅವರು ಈಗಲೂ ಸುದ್ದಿಯನ್ನು ಪುನಃಪೂರ್ತಿ ಅಲ್ಲಗಳೆದಿದ್ದಾರೆ. 'ಸರಕಾರವು ಯಾವುದೇ ಪ್ರಚಾರ ಸಲುವಾಗಿ ಪೆಡರೇಶನಿಗೆ 13000 ರೂ. ಮಾಸಿಕ ಸಹಾಯಕೊಡುತ್ತಿದೆ ಎಂಬುದನ್ನು ಅಧ್ಯಕ್ಷ ಶ್ರೀ ಜಮುನಾದಾಸ ಮೆಹತಾರು ಸಂಪೂರ್ಣವಾಗಿ ಅಲ್ಲಗಳೆಯುತ್ತಾರೆ ಕಳೆದ ಡಿಸೆಂಬರದಲ್ಲಿ ಬೊಂಬಾಯಿಯಲ್ಲಿ ನೆರೆದ ಫೆಡರೇಶನಿನ ವಾರ್ಷಿಕಾಧಿವೇಶನದಲ್ಲಿ ಈ ಪ್ರಶ್ನೆ ಮುಂದೆ ಬಂದಿದ್ದು ಸಬ್ ಕಮಿಟಿಯೊಂದರ ಪರಿಶೀಲನೆಗೊಪ್ಪಿಸಲ್ಪಟ್ಟಿದ್ದಿತು. ಯಾವ ಉದ್ದೇಶಕ್ಕಾಗಿಯಾದರೂ ಸರಕಾರದಿಂದ ಯಾವುದೇ ಸಹಾಯವು ಫೆಡರೇಶನಿಗೆ ಬರುವದಿಲ್ಲವೆಂದು ಶ್ರೀ. ಎಮ್ ಎನ್ ರೋಯಿಗೆ ಸ್ಪಷ್ಟ ಹೇಳಿಕೆ ಕೊಟ್ಟಿದ್ದರು ಇಂತಹ ಪರಿಸ್ಥಿತಿಯಲ್ಲಿ, ಪತ್ರಿಕೆಗಳಲ್ಲಿ ಸರಕಾರವು ಕೊಡುತ್ತಿದೆ ಎಂದು ಆರೋಪಿಸಲ್ಪಟ್ಟ ಆ 13000 ರೂಪಾಯಿಯ ಆರ್ಥಿಕ ಸಹಾಯವು ಫೆಡರೇಶನಿಗೆ ದೊರೆಯುತ್ತಿಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು. ಆದರೆ ಆದಾಯಗಳೆಲ್ಲಾ ಸಂಪೂರ್ಣವಾಗಿ ಇದರ ಅಂತ [illegible] ಪ್ರಕಟಿಸಲ್ಪಡುತ್ತಿವೆ ಹಾಗಿರತ ಸರಕಾರಕ್ಕಾಗಲೀ ಹೊರಗಿನ ಇನ್ನಾವುದೇ ಅಧಿಕಾರಿಗಳಿಗಾಗಲೀ ಲೆಕ್ಕಪತ್ರಗಳನ್ನೊಪ್ಪಿಸಬೇಕಾದ ಯಾವುದೊಂದು ಹಂಗೂ ಈ ಫೆಡರೇಶನಿಗಿಲ್ಲ'-ಎಂದು ಮೆಹತರ ಪ್ರಕಟಣೆಯನ್ನು ಕ್ಕಿದ 'ಹಣಕಾಣದುತ್ತಿದ್ದವೇ. ಲೆಕ್ಕ ಸಡೆಯುತ್ತಿದ್ದವೇ'-ಎಂದ ಡಾ। ಅಂಬೇಡ್ಕರ್ ಇದಕ್ಕೇನನ್ನುವರು' ಸರಕಾರವು ಹಣ ಸುರಿಯುತ್ತಿರುವದು ಫಡರೇಶನಿನ ಖಜಾನೆಗಲ್ಲ-ದೊಣೆಯಿಗಳ ಕಿಸಗೆಂದು ಊಹಿಸಬಹುದೆ?

NOTICE

In the Court of the Dt. Munsif of Mangalore.

O S No 82/44

Between
Albert – Sequeara Plff
and
Joseph Michael Meranda & C –Defts

To

1st deft Joseph Michael Miranda, son of J. Miranda residing in Maidakhon of Boloor Village, Mangalore Town

Please take notice that the above suit, filed by Plff for reliefs claimed in the plaint, stands posted to 12th June 1944 for your appearance You may appear either in person or by pleader and file your written statement, failing which the suit will be decreed in your absence.

By order of the court.

P. D Souza, B. A., B. L.
&
L. C Pais, B. A., B. L.
Vakils, for Plff

Mangalore, 17-4 44

CHAMPAE'S
Snow & Castrex
(*Sole Distributors for India*)
Sukhananda Stores
Santhekatte, UDIPI, S. K.

ಜನರಿಂದಲೇ ಬೇಂಕುಗಳು

— ಧನ ಮತ್ತು ಧನಸಗ್ರಹಗಳಿಂದಲ್ಲ. —

ಬೇಂಕಿನ ಸಾವಿರಾರು ಕಾರ್ಯ ವಿವರಗಳನ್ನು ಪರಿಶೀಲಿಸಿ ನಿರ್ವಹಿಸುವ— ಗಿರಾಕಿಗಳ ಪೂರೈಕೆಗಳೇನೆಂದು ತಿಳಿಕೊಂಡು ಒದಗಿಸುವ—ಇದರಂತೆ ಸಮಗ ಇತರ ಅಸಂಖ್ಯಾತ ಚಿಕ್ಕ ಪುಟ್ಟ ವಿಧಾನಗಳಲ್ಲಿ ನೆರವಾಗುವ—ಆ ಜನ . . .

ಭದ್ರತೆಗಾಗಿ, ಅನುಕೂಲತೆಗಾಗಿ ತಮ್ಮ ಹಣವನ್ನು ಭರವಸೆಯಿಂದ ಬೇಂಕುಗಳಿಗೆ ತರುವ ಆ ಸ್ತ್ರೀ ಪುರುಷರು. . . . .

ತಮ್ಮ ಆರ್ಥಿಕ ಅಡಚಣೆಗಳಲ್ಲೊ ಸಮಸ್ಯೆಗಳಲ್ಲೊ ಬೇಂಕುಗಳ ಸಹಕಾರವನ್ನಪೇಕ್ಷಿಸಿ ಬರುವ ಆ ಮಹಿಳೆಯರು, ಮಹನೀಯರು. . . . .

. . . ಈ ಜನರಿಂದಲೇ ಬೇಂಕುಗಳಾಗುವುವು. ಈ ಮಾನವೀ ಸಂಬಂಧಗಳಿಂದ ಬೆಳೆದು ಬರುವ ಸ್ನೇಹವೂ, ಜಾವವೇ ಯಾವ ಬೇಂಕಿನ ಮುನ್ನಡೆ ಮತ್ತು ಪ್ರಗತಿಯಲ್ಲಾದರೂ ಪ್ರಧಾನ್ಯವನ್ನು ವಹಿಸುವದು.

ಕೆನರಾ ಬೇಂಕು ಮೂವತ್ತೆಂಟು ವರುಷಗಳ ತನ್ನ ಜನತಾ ಸೇವೆಯಲ್ಲಿ ಗಳಿಸಿದ ಗೆಳೆತನಕ್ಕಾಗಿ ಗೌರವಪಡುವುದು

ಸ್ಥಾಪಿತ **1906**

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

ತಾರೀಕು 16—4—1944 ರಿಂದ

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್ ಉಡ್ಪಿ.

ಮನೋರಮಾ, ನೂರಜಹಾನ್ ಮೊದಲಾದವರು ನಟಿಸಿರುವ

ಖಾನ್‌ದಾನ್ ಅಥವಾ ಮನೆತನ

'ಖಜಾಂಚಿ'ಯನ್ನು ಸಿದ್ಧಗೊಳಿಸಿ ಜನಪ್ರೀತಿಗಳಿಸಿದ

'ಪಂಚೋಲಿ ಚಿತ್ರ'ದವರೇ

ಈ ಚಿತ್ರವನ್ನು ತಯಾರಿಸಿರುವರು.

ನಿರೀಕ್ಷಿಸಿರಿ ಕನ್ನಡ 'ರಾಧಾರಮಣ'

ಪ್ರಕಟಣೆ

P M Kunhi Raman, Manager
Parassini Madappura Temple
P. O. Parassinikkadavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ಪರಸಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮನಿಯಾರ್ಡರ್ ಮೂಲಕ ಕಳುಹಿಸಿಸಿ ಹಿಸುವದು. ಬೇರೆಯವರ ಕೈಯಲ್ಲಿ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ ಎಂ ಕುನ್ಹಿರಾಮನ್,
ಮೆನೇಜರ್.

ದಕ್ಷಿಣ ಕನ್ನಡ

ಮಂಗಳೂರು

ಪ್ಲೇಗು:—ಊರಲ್ಲಿ ಪ್ಲೇಗು ರೋಗವು ಇರವಾಗ ಇಲಿಗಳನ್ನು ವಿಷವಿಟ್ಟು ಕೊಲ್ಲುವುದು ಯುಕ್ತವಲ್ಲ. ಏಕೆಂದರೆ ಸಹಜವಾಗಿ ಪ್ಲೇಗು ತಗಲಿ ಸತ್ತ ಇಲಿಗಳನ್ನು ವಿಷ ತಿಂದು ಸತ್ತ ಇಲಿಗಳೆಂದು ಭಾವಿಸಿ ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಮಾಡದೆಹೋದರೆ ಅಂಥಾ ಇಲಿಗಳು ಬಿದ್ದ ಸ್ಥಳದಲ್ಲಿ ಇರುವ ಮನುಷ್ಯರಿಗೆ ಪ್ಲೇಗು ತಗಲದೆ ಬಿಡಲಾರದು. ಎಚ್ಚರಿಕೆ ಇರಲಿ ಎಂದು ಹೆಲ್ತಾಫೀಸರರು ತಿಳಿಸಿದ್ದಾರೆ.

ವಿಮರ್ಶಾಗೋಷ್ಠಿ: ಇದೇ ತಾ. ೬ರಂದು ಪ್ರಕಾಶ ಸಾಹಿತ್ಯಕೂಟದ ಆಶ್ರಯದಲ್ಲಿ ಶ್ರೀ| ಬಿ ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಕೆ. ರೈ ಅವರ ಶ್ರೀಮುಡಿ ಕವಿತಾ ಸಂಗ್ರಹದ ಅಭ್ಯಾಸಗೋಷ್ಠಿಯು ಜರಗಿತು. ಶ್ರೀಗಳಾದ ಪಿ. ಕೆ. ನಾರಾಯಣ, ಬಿ. ಯಂ. ಇದಿನಬ್ಬ, ಯಂ. ವಿ. ಪ್ರಭು, ಅಮ್ಮೆಂಬಳ ಶಂಕರ ನಾರಾಯಣ, ತಿರುಮಲೇಶ್ವರ ಭಟ್ ಮೊದಲಾದವರು ವಿಮರ್ಶೆಯಲ್ಲಿ ಭಾಗವಹಿಸಿದ್ದರು.

ವಸಂತೋತ್ಸವ: ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಶಾಲೆಯಲ್ಲಿ ತಾ. ೮ರಂದು ಸಂಜೆ ಜರಗಿತು. ಪ್ರಿನ್ಸಿಪ್ರಲ್ ಸಬ್ ಜಡ್ಜರಾದ ಶ್ರೀ| ಸಿ. ಕೆ. ಮೆನೋನರು ಉತ್ಸವದ ಉದ್ಘಾಟನೆಯನ್ನು ನೆರವೇರಿಸಿದರು. ಶಾಲೆಯ ಮುಖ್ಯೋಪಾಧ್ಯಾಯಿನಿಯರಾದ ಶ್ರೀಮತಿ ಸುಶೀಲಾ ಟೊಪ್ಪರು ನೆರೆದವರಿಗೆ ಸ್ವಾಗತವನ್ನು ಬಯಸಿದರು. ವಿವಿಧ ವಿನೋದಾವಳಿಗಳೊಡನೆ ಉತ್ಸವವು ಕೊನೆಗೊಂಡಿತು.

ಬಸ್ ಪ್ರಯಾಣಿಕರ ದರ- ಮೈಲಿಗೆ ೯ ಪೈಯಂತೆ ಸರಕಾರದ ಹುಕುಮಿನ ಮೇರೆಗೆ ನಿರ್ಧರಿಸಲಾಗಿದೆ. ಫಸ್ಟ್‌ಕ್ಲಾಸ್ ಎಂಬ ಭೇದವನ್ನು ತೆಗೆದು ಹಾಕಲಾಗಿದೆ.

ಸೋವಿಯಟ್ ಸೌಹಾರ್ದ ಸಮಿತಿ. ಇದರ ಸಭೆಯೊಂದು ತಾ| ೧೩ರಂದು ಸಂಜೆ ಸಮಿತಿಯ ಅಧ್ಯಕ್ಷರಾದ ಶ್ರೀ| ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿ. ಸಮಿತಿಯ ಚಟುವಟಿಕೆಯನ್ನು ವೃದ್ಧಿಸಲು ಐವರು ಸದಸ್ಯರನ್ನೊಳಗೊಂಡ ಉಪಸಮಿತಿಯೊಂದರ ರಚನೆಯಾಯಿತು.

ಮಂಗಳೂರು ಕೋಪರೇಟಿವ್ ಸ್ಟೋರ್ಸ್:—ವರ್ಷಾವಧಿ ಮಹಾ ಸಭೆಯು ಇದೇ ತಿಂಗಳ ತಾರೀಕು ೨ನೇ ರವಿವಾರ ಹಂಪನಕಟ್ಟೆಯ ಸ್ಟೋರ್ಸಿನ ಹೆಡ್ಡಾಫೀಸಿನಲ್ಲಿ ಜರಗಿತು. ಉಪಹಾರಗಳು ನಡೆದ ಬಳಿಕ ಮೆಂಬರರ ಪರವಾಗಿ ಶ್ರೀಯುತ ಎಂ. ಆರ್. ಪೈಗಳವರು ಮಂಗಳೂರು ಸಹಕಾರಿ ಸ್ಟೋರ್ಸಿನ ಡೈರೆಕ್ಟರುಗಳಿಗೂ ಸಹಕಾರಿ ಸಂಘದ ಮಾನ್ಯ ಡಿಪ್ಯುಟಿರಜಿಸ್ಟ್ರಾರರಿಗೂ ಮಂಗಳೂರು ಪಟ್ಟಣದ ಅಕ್ಕಿ ಸರಬರಾಯಿ ಕಾರ್ಯಕ್ರಮಗಳನ್ನು ಶ್ಲಾಘಿಸಿ ಅವರ ಮಹೋಪಕಾರಕ್ಕೆ ವಂದನೆಯನ್ನಿತ್ತರು.

ಮಕ್ಕಳ ಕೂಟ—ಗದ್ದೆ ವಿದ್ಯಾದಾಯಿನಿ ಮಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ| ಆರ್. ರಾಮರಾಯರ ಅಧ್ಯಕ್ಷತೆಯಿಂದ ತಾ. ೬ರಲ್ಲಿ ಮಂಗಳೂರು ಮಕ್ಕಳ ಕೂಟದ ಸಭೆ ಜರಗಿತು. ಆ ದಿನದ ಸಭೆಯಲ್ಲಿ ಶ್ರೀ| ಎಂ. ಗೋಪಾಲ ಇವರು ಅಧ್ಯಕ್ಷರಾಗಿ, ಶ್ರೀ| ಶಂಕರನಾರಾಯಣ ಇವರು ಕಾರ್ಯದರ್ಶಿಗಳಾಗಿ ಒಂದು ಮಕ್ಕಳ ಕೂಟ ಸ್ಥಾಪಿತವಾಯಿತು. ಕೆನರಾ ಹೈಸ್ಕೂಲ್ ವಿದ್ಯಾರ್ಥಿ ಶ್ರೀ ಸಿ. ಶ್ರೀನಿವಾಸ ಕೂಡ್ವ ಇವರು ಆ ಶಾಲೆಯ ವಿದ್ಯಾರ್ಥಿಗಳನ್ನು ಕೊಡಿಯಾಲ ಬೈಲಲ್ಲಿ ಜರಗುವ ತಮ್ಮ ಒಂದು ಸಭೆಗೆ ಆಮಂತ್ರಿಸಿದರು. ಶ್ರೀ ಎಂ. ಆರ್. ಶಾಸ್ತ್ರಿಗಳು ಭಾಷಣವಿತ್ತರು. ಈ ತಿಂಗಳ ಬೆಂಗಳೂರಲ್ಲಿ ಜರಗುವ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನದ ಅಧ್ಯಕ್ಷರಾಗಿ ಕೆನರಾ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ| ಬಿ. ವ್ಯಾಸರಾಯರು ಆಧ್ಯಕ್ಷರಾಗಿ ಆರಿಸಲ್ಪಟ್ಟ ಕಾರಣ ಅವರನ್ನು ಅಭಿನಂದಿಸುವ ಠರಾವಾಯಿತು.

ಇಬ್ಬರ ಬಂಧನ:—ಇತ್ತೀಚೆಗೆ ಸ್ಥಾನಬದ್ಧತೆಯಿಂದ ಬಿಡುಗಡೆಯಾಗಿ ಬಂದ ಶ್ರೀ| ಕೃಷ್ಣ ಶೆಟ್ಟಿ ಮತ್ತು ಕೋಯಮುತ್ತೂರಿನಿಂದ ಬಿಡುಗಡೆಯಾಗಿ ಮಂಗಳೂರಿಗೆ ಬಂದಿದ್ದ ಮದರಾಸಿನ ಶ್ರೀ. ಎಂ. ವಿ. ಜಗನ್ನಾಥನ್ ಇವರಿಬ್ಬರು ಕಳೆದ ಬುಧವಾರ ಬಂಧಿತರಾದರು.

ನಿವೃತ್ತರಾದರು:—ಮಲಬಾರ್, ದಕ್ಷಿಣ ಕನ್ನಡ, ನೀಲಗಿರಿಗಳ ಹುಡುಗಿಯರ ಶಾಲೆಗಳ ಇನ್‌ಸ್ಪೆಕ್ಟ್ರೆಸ್ ಆಗಿದ್ದ ಮಿಸ್. ಸಿ. ಡಿ. ಸೋಜ, ಬಿ. ಎ., ಎಫ್. ಆರ್. ಜಿ. ಎಸ್. (ಲಂಡನ್) ಇವರು ತಾ. ೬ರಿಂದ ನಿವೃತ್ತರಾದರು.

ಬಂದರದಲ್ಲಿ ಬೆಂಕಿ:—ಶ್ರೀ ಹರೆಕಳ ರಾಮನ ಪೈಗಳ ಎಣ್ಣೆಯ ಗೋಡೌನಿಗೆ ತಾ ೭ರಂದು ರಾತ್ರಿ ಬೆಂಕಿಬಿದ್ದು, ಕೂಡಲೇ ಅಗ್ನಿ ನಿರೋಧಕ ಯಂತ್ರಗಳು ಹೋಗಿ ಬೆಂಕಿ ನಂದಿಸಿದವು.

ಉಡುಪಿ.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್:—ಈ ಸಂಸ್ಥೆಯ ಪಾಲುಗಾರರ ಮಹಾಸಭೆಯು ತಾ, 16ರಲ್ಲಿ ಆದರ ಕಾರ್ಯಾಲಯದಲ್ಲಿ ವಕೀಲ ಶ್ರೀ ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಪಾಲು ಒಂದರ ನೂರಕ್ಕೆ 5%ರಂತೆ ಡಿವಿಡೆಂಡ್ ಹಂಚುವ ನಿರ್ಣಯವಾಯಿತು.

ರೆಡ್‌ಕ್ರೋಸ್ ಸಂಘಕ್ಕೆ ಸಹಾಯದ ಸಲುವಾಗಿ ಉಡುಪಿ ತಾಲೂಕಿನಲ್ಲಿ ಹದಿನೈದು ದಿವಸಗಳಲ್ಲಿ ರೆಡ್‌ಕ್ರಾಸ್ ಪತಾಕೆಗಳ ಮಾರಾಟವು ನಡೆಯಿತು. ಸ್ಥಳೀಯ ಹೈಸ್ಕೂಲುಗಳ ಮತ್ತು ಎಲಿಮೆಂಟರಿ ಶಾಲೆಗಳ ಬಾಲ ಬಾಲಕಿಯರು ಈ ಭಾಗಗಳಲ್ಲಿ ವಿಶೇಷ ಶ್ರಮವಹಿಸಿದ್ದರು. ತಾ. 15ರಲ್ಲಿ ತಾಲೂಕು ಕಚೇರಿಯಿಂದ ಮೆರವಣಿಗೆಯೊಂದು ಹೊರಟು ಪ್ರಮುಖ ಬೀದಿಗಳಲ್ಲಿ ಸುತ್ತಾಡಿದ ಬಳಿಕ ಮುನಿಸಿಪಲ್ ಬೈಸ್ ಶಾಲೆಯಲ್ಲಿ ಸಾರ್ವಜನಿಕ ಸಭೆಯೊಂದು ಬೋರ್ಡು ಹೈಸ್ಕೂಲ್ ಹೆಡ್ಮಾಸ್ತರ್ ಪಿ. ಆರ್. ಫೆರ್ನಾಂಡಿಸರ ಅಧ್ಯಕ್ಷತೆಯಲ್ಲಿ ಜರಗಿತು. ಪಿ. ಫೆರ್ನಾಂಡೀಸರವರು ಆರ್ತರ ಸೇವೆಯೇ ಧ್ಯೇಯವಾಗಿರುವ ಆದರಲ್ಲೂ ನಮ್ಮ ಹಿಂದೀ ಸೈನಿಕರ ಸೌಕರ್ಯ ಸೌಲಭ್ಯಗಳಿಗಾಗಿಯೇ ವಿನಿಯೋಗಿಸಲ್ಪಡುವ ಧನಸಂಗ್ರಹ ಕಾರ್ಯದಲ್ಲಿ ಸಕಲ ಪಂಥ ಪಕ್ಷದವರೂ ಸೇರಬೇಕಾದುದು ಧರ್ಮದೃಷ್ಟಿಯಲ್ಲಿ ಮಾನವನ ಆದ್ಯ ಕರ್ತವ್ಯವಿದೆ ಎಂಬುದನ್ನು ಬಗೆ ಮುಟ್ಟುವಂತೆ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಅನಂತರ ಮಕ್ಕಳಿಗೆ ಮಿಟಾಯಿ ಹಂಚಲಾಯಿತು. ಸಾಯಂಕಾಲ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮೇಲ್ಕಂಡ ಉದ್ದೇಶಕ್ಕೆ ಧನ ಸಂಗ್ರಹಾರ್ಥವಾಗಿ ಬೋರ್ಡ್ ಹೈಸ್ಕೂಲಿನ ವಿದ್ಯಾರ್ಥಿ ವಿದ್ಯಾರ್ಥಿನಿಗಳಿಂದ ಸಂಗೀತ ನರ್ತನ ನಾಟಕ ಮುಂತಾದ ವಿವಿಧ ವಿನೋದಾವಳಿಗಳಿದ್ದವು. ಕೃತಿಯೊಂದು ಮುನ್ಸಿಪಲ್ ಶಾಲೆಯ ಬಾಲಿಕಾ ಕೂಟವೂ ಈ ಕಾರ್ಯದಲ್ಲಿ ಸಹಭಾಗಿಯಾಗಿತ್ತು. ಹೈಸ್ಕೂಲಿನ ಹುಡುಗರೂ ಹುಡುಗಿಯರೂ ಸಮ್ಮಿಳಿತರಾಗಿ ನಾಟಕದಲ್ಲಿ ಭಾಗವಹಿಸಿದುದು ಬಹುಶಃ ಇದೇ ಮೊದಲನೆಯದಾಗಿ, ಶ್ರೀ- ಕೊರಡ್ಕಲ್ಲರ ಈ ನವಪ್ರಯೋಗವು ಅನುಸರಣೀಯವಿದೆ. ರೆಡ್‌ಕ್ರಾಸ್ ಫಂಡಿಗೆ ಸಾಧಾರಣ ಒಂದೂವರೆ ಸಾವಿರಕ್ಕೆ ಮೇಲ್ಪಟ್ಟು ಹಣಸಂಗ್ರಹವಾಗಿರುತ್ತದೆ.

ದಿ| ಕೆನರಾ ಬೇಂಕಿಂಗ್ ಕೋರ್ಪರೇಶನ್, ಲಿಮಿಟೆಡ್:— ಮೇಲಿನ ಸಂಸ್ಥೆಯ 1943ನೇ ಡಿಶಂಬರ್ 31ಕ್ಕೆ ಅಂತ್ಯವಾಗುವ ವರುಷದ ಪರಿಶೋಧಿತ ಲೆಕ್ಕಪತ್ರಗಳನ್ನೊಳಗೊಂಡ ವಾರ್ಷಿಕ ವರದಿ ವಿಮರ್ಶೆಗಾಗಿ ನಮ್ಮ ಕೈ ಸೇರಿದೆ. ವರದಿಯ ಅವಧಿಯು ಈ ಹಿರಿಯ ಆರ್ಥಿಕ ಸಂಸ್ಥೆಯನ್ನು ಎಲ್ಲಾ ದಿಕ್ಕಿನಿಂದಲೂ ಸುದೃಢ ಅಭಿವೃದ್ಧಿಯ ಕಡೆಗೆ ಒಯ್ದ ವರುಷಗಳಲ್ಲೊಂದೆನ್ನಬಹುದು. ಈ ವರುಷದಲ್ಲಿ ೨ಲಕ್ಷ ರೂ. ಮೌಲ್ಯದ 18000 'ಪ್ರಿಫರೆನ್ಸ್ ಶೇರು'ಗಳನ್ನು ಈ ಬೇಂಕು ಜಯಶೀಲವಾಗಿ ಸಂಗ್ರಹಿಸಿದೆ; ಠೇವಣಾತಿಯು ಶೇಕಡಾ 50ರಷ್ಟು ಹೆಚ್ಚಿದೆಯಲ್ಲದೆ ಮುನಾಫೆಯೂ ಗಣನೀಯ ಸಂಖ್ಯೆಯಲ್ಲೇರಿದೆ. ವರದಿಯ ವರುಷದಲ್ಲಿ ಕೊಯಮುತ್ತೂರು ಮತ್ತು ಬೆಂಗಳೂರು ಸಿಟಿಯಲ್ಲಿ ಹೊಸದಾಗಿ ತೆರೆಯಲ್ಪಟ್ಟ ಎರಡು ಶಾಖೆಗಳ ಸಮೇತ ಈ ಬೇಂಕಿಗೀಗ ಭಾರತದ ಬೇರೆ ಬೇರೆ ಕಡೆಗಳಲ್ಲಿ 23 ಶಾಖೆಗಳಿವೆ.

ವರುಷದ ನೆಟ್ ಮುನಾಫೆ ರೂ. 1.08,522-4 0. ಕಳೆದ ವರುಷದ ಶಿಲ್ಕು ರೂ. 528-0-11ಕೂಡಿ ಈ ವರುಷದ ವಿತರಣೆಗೆ ದೊರೆಯುವ ಒಟ್ಟು ರೂ.109,950-4-11. ಈ ಪೈಕಿ ರಿಸರ್ವ್ ಫಂಡಿಗೆ ಪುನಃ ರೂ 25,000ವನ್ನು ಸೇರಿಸಿ ಅದನ್ನು ರೂ. 3,35,000ಕ್ಕೇರಿಸಲಾಗಿದೆ. ಸಾದಿಲವಾರು ಫಂಡಿಗೆ ರೂ. 1620-14-6 ನ್ನು ಸೇರಿಸಿ. ಅದನ್ನು ರೂ 75,000ಗೊಳಿಸಲಾಗಿದೆ. ಆದಾಯ ತೆರಿಗೆಗೆ ರೂ 20,000 ಹೋಗಿದೆ. 5%ಮತ್ತು 4½%ಯ ಫಸ್ಟ್ ಪ್ರಿಫರೆನ್ಸ್ ಶೇರುಗಳಿಗೆ ಅನುಕ್ರಮವಾಗಿ 5% ಮತ್ತು 4½%ಯಂತೆ ಡಿವಿಡೆಂಟ್ ಕೊಡಲಾಗಿದೆ. ಮಿಕ್ಕ ಓರ್ಡಿನರಿ ಶೇರುಗಳಿಗೆಲ್ಲಾ ಬ್ರಿಟಿಷ್ ಆದಾಯ ತೆರಿಗೆ ವಿರಹಿತವಾದ 8%ಡಿವಿಡೆಂಡ್ ಮತ್ತು 2%ಬೋನಸ್ ಕೆರಲಾಗಿದೆ. ಅಭಿವೃದ್ಧಿ ಪರಜನೋಪಯೋಗೀ ಆರ್ಥಿಕ ಸಂಸ್ಥೆಯಾದ 'ಕೋರ್ಪರೇಶನ್' ಬೇಂಕನ್ನು ಅದರ ಇಂತಹ ವಿಜಯಕ್ಕಾಗಿ ಅಭಿನಂದಿಸಿ, ಇನ್ನಷ್ಟು ಅಭಿವೃದ್ಧಿಯನ್ನು ಕೋರುತ್ತೇವೆ.

ಟೀಪಾರ್ಟಿ ಸತ್ಕಾರಕೂಟ:—ಹನುಮಾನ್ ಮೋಟರ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯ್ಕರು ತನ್ನ ಪುತ್ರ ಶ್ರೀ ಸುರೇಂದ್ರ ನಾಯ್ಕರ ವಿವಾಹದ ಶುಭಸೂಚನಾರ್ಥವಾಗಿ ತಾ 16ರಲ್ಲು ಮೋಡರ್ನ್ ಹಾ| ಎ| ಶಾಲೆಯಲ್ಲಿ ಟೀಪಾರ್ಟಿ ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಆಮಂತ್ರಿತರನೇಕರು ಈ ಸತ್ಕಾರ ಕೂಟದಲ್ಲಿ ಭಾಗವಹಿಸಿದ್ದರು.

ಪಡಿಯಕ್ಕಿ ಸಮಾಚಾರ:—ಕಳೆದ ವಾರ ಬೆಳ್ತಿಗೆ ಅಕ್ಕಿ ರೇಶನ್ ಕಾರ್ಡಿನವರಿಗೆ ಸರ್ವಸಾಧಾರಣ ಮೂರು ಸೇರು ಬೆಳ್ತಿಗೆಯಾ ಬಾಕಿ ಅಂಶ ಕುಚ್ಚಿಗೆಯೂ ದೊರೆತಿತ್ತು. ಸದ್ಯವೇ ಬೆಳ್ತಿಗೆ ಅಕ್ಕಿ ಬರಲಿರುವುದಂತೆ. ವೈಶಾಖಮಾಸದಲ್ಲಾದರೂ ಪೂರ್ಣ ಬೆಳ್ತಿಗೆ ಅಕ್ಕಿಯ ಸರಬರಾಯಿಯನ್ನು ನಿರೀಕ್ಷಿಸಬಹುದೇ ಎಂಬುದೀಗ ಪ್ರಶ್ನೆ?

ರೇಶನಿಂಗ್ ಸಲಹೆ ಸಮಿತಿಯ ಸ್ಥಾಪನೆಯೆಂದು?- ಪ್ರಾಂತಿಕ ರೇಶನಿಂಗ್ ಆಫೀಸರ್ ರಾವ್‌ಸಾಹೇಬ್ ಎಸ್. ಜಿ. ಗ್ರಬ್ಬರು ಕಳೆದಬಾರಿ ಉಡುಪಿಗೆ ಚಿತ್ತೈಸಿ ಮುನಿಸಿಪಲ್ ಬೈಸ್ ಶಾಲೆಯಲ್ಲಿ ಜರಗಿದ ಮಹಾಜನ ಸಭೆಯಲ್ಲಿ ರೇಶನಿಂಗ್ ಸಮಸ್ಯೆಯ ಕುರಿತು ಭಾಷಣಮೀಯುತ್ತಾ ಬಡಜನರ ಹಾಗೂ ಮಜೂರಿ ವರ್ಗದವರ ಹಾಲಾಹವಾಲಿಗಳನ್ನೂ ಸಂಕಷ್ಟಗಳನ್ನೂ ಪರ್ಯಾಲೋಚಿಸಿ ಪರಿಹರಿಸುವರೆ ರೇಶನಿಂಗ್ ಸಲಹೆ ಸಮಿತಿ ಸ್ಥಾಪಿಸಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದಲ್ಲದೆ ತಾಲೂಕು ವರ್ಗದಾರರ ಸಂಘದವರೂ ತಮಗೆ ಆ ಸಮಿತಿಯಲ್ಲಿ ಪ್ರಾತಿನಿಧ್ಯ ದೊರೆಯಬೇಕೆಂದು ವಿನಂತಿಸಿದ್ದರಷ್ಟೆ. ರೇಶನಿಂಗ್ ತಾರೆಯು ಉದಯವಾಗಿ ಒಂದು ತಿಂಗಳಾಯಿತಾದರೂ ಈ ಸಮಿತಿಯ ಸ್ಥಾಪನೆಯಾದದ್ದು ತೋರಿ ಬರುವದಿಲ್ಲವಲ್ಲ? ಇನ್ನಾದರೂ ಸರ್ವ ಪ್ರಾತಿನಿಧ್ಯವುಳ್ಳ ಸಮಿತಿಯ ರಚನೆಯಾಗಿ ಅಕ್ಕಿ ಕೊಂಡುಕೊಂಡು ವಿನಿಯೋಗಿಸುವವರ ಹಿತಸಾಧಿಸಲಾಗುವುದೆಂದು ನಿರೀಕ್ಷಿಸಲೆ? ಎಂದು ಶ್ರೀ ಯು. ಎಸ್. ಭಟ್ಟರು ಬರೆಯುತ್ತಾರೆ.

ಧನಸಹಾಯ:—ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ಕಟ್ಟಡದ ಸಹಾಯಾರ್ಥವಾಗಿ ಬೊಂಬಾಯಿಯಲ್ಲಿ ಆ ಬಗ್ಗೆ ರಚನೆಯಾದ ಕಮಿಟಿಯ ಗೌ| ಕಾರ್ಯದರ್ಶಿ ಶ್ರೀ| ಎಮ್. ಎನ್. ಹೆಗ್ಡೆಯವರಿಂದ ಪ್ರಥಮ ಕಂತಾಗಿ ರೂಪಾಯಿ 500|-ದನಸಹಾಯ ಬಂದಿರುತ್ತದೆ ಎಂದು ಮಂಗಳೂರು ಕಮಿಟಿಯವರು ತಿಳಿಸುತ್ತಾರೆ.

ಶಿರ್ವ.—ರಾಜಾಪುರ ಸಾರಸ್ವತ ಬ್ರಾಹ್ಮಣ ವೃಂದವು ಸ್ಥಾಪಿಸಿ ನಂಬಿಕೊಂಡು ಬಂದಿರುವ ಬಂಟಕಳಲ್ಲು ಶ್ರೀ ಚ ಗಾರ್ಪೆರಮ್ಮೇಶ್ವರೀ ದೇವಸ್ಥಾನದ ವರ್ಷಾವಧಿ ಉತ್ಸವವು ३-४-४४ರಂದು ವಿಜೃಂಭಣೆಯಿಂದ ನಡೆಯಿತು. ಭಜನಾ ಸಪ್ತಾಹವೂ ಜರಗಿತು.

ಸುರತ್ಕಲ್:—ಇಡ್ಯಾ ವಿದ್ಯಾದಾಯಿನಿ ಶಾಲೆಯ ವರ್ಧಂತಿಯು ತಾ. 23-4-44ರಂದು ಜರಗಲಿರುವುದು.

ಪಾಂಡೇಶ್ವರ:—ಶಂಕರನಾರಾಯಣ ದೇವಸ್ಥಾನದ ಗದಾತೀರ್ಥವೆಂಬ ಕೆರೆಯನ್ನು ಶ್ರೀ ಮಹಾಬಲ ಭಟ್ಟರು ಜೀರ್ಣೋದ್ಧಾರ ಮಾಡಿ ತಾ 12ರಲ್ಲಿ ಅದಾ ಶುದ್ಧಿ ಸಂಸ್ಕಾರವು ವಿಜೃಂಭಣೆಯಿಂದ ಜರಗಿತು.

ದ. ಕ. ಸ್ತ್ರೀಯಾಶಕ್ತಿ ಸಮಾಜ ಬೊಂಬಾಯಿ:—ದಕ್ಷಿಣ ಕನ್ನಡ ಸ್ತ್ರೀಯಾಶಕ್ತಿ ಸಮಾಜದ ಉದ್ಘಾಟನಾ ಸಮಾರಂಭವು ಇದೇ ತಿಂಗಳ ತಾರೀಕು 9ನೇ ಆದಿತ್ಯವಾರ ಪೂರ್ವಾಹ್ನ ದೇವಕರಾನ್‌ನಾಂಚಿ ಬಿಲ್ಡಿಂಗಿನ ಒಂದನೇಯ ಮಾಳಿಗೆಯಲ್ಲಿ ಶ್ರೀಯುತ ಕೃಷ್ಣರಾಯ ಬೋಳಾರರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ಪ್ರಾರ್ಥನೆ ತೀರಿದೊಡನೆ 'ಸಮಾಜದ ಭವಿಷ್ಯದಭ್ಯುದಯದ ಕುರಿತು' ಅಧ್ಯಕ್ಷರು ಪೀಠಿಕಾ ಭಾಷಣವನ್ನಿತ್ತರು. ಸಭಿಕರಲ್ಲಿ ಹಲ ಕೆಲವು ಯುವಕರು ಸಮಾಜ, ಉದ್ದೇಶ, ಭದ್ರತೆ, ಹಾಗೂ ಸುಧಾರಣೆಯ ವಿಷಯಗಳಲ್ಲಿ ಸುರಸ ಸೂಚಕ ಚಿಕ್ಕ ಚಿಕ್ಕ ಭಾಷಣಗಳನ್ನಿತ್ತರು. ತಾತ್ಕಾಲಿಕ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದ ಶ್ರೀಯುತ ಬೋಳಾರ ಪದ್ಮನಾಭನವರ ಭಾಷಣವಾದ ಮೇಲೆ ಈ ಸಂಸ್ಥೆಯು "ದಕ್ಷಿಣ ಕನ್ನಡ ಸ್ತ್ರೀಯ ಶಕ್ತಿ ಸಮಾಜ" ಎಂಬ ಅಭಿದಾನವನ್ನು ಹೊಂದಿತು. ಶ್ರೀ ಬೋಳಾರ ಪದ್ಮನಾಭನವರು ಅಧ್ಯಕ್ಷರಾಗಿಯೂ, ಶ್ರೀ. ಯು. ಸುಬ್ಬರಾಯರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಬೋಳಾರ ಮಾಧವನವರು ಹಾಗೂ ಬಿ. ಸಿ. ಮಹಾಬಲನವರು ಗೌರವ ಜೊತೆ ಕಾರ್ಯದರ್ಶಿಗಳಾಗಿಯೂ ಉಚ್ಚಿಲ ರಾಮಪ್ಪ ಬಂಗೇರರವರು ಗೌರವ ಕೋಶಾಧಿಕಾರಿಯಾಗಿಯೂ ಇತರ ಹನ್ನೊಂದಿಗಳು ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಆರಿಸಲ್ಪಟ್ಟರು. ಅಧ್ಯಕ್ಷಭಾಷಣ ಉಪಾಹಾರಗಳಿಂದ ಸಭೆ ಮುಗಿಯಿತು.

ಬೇಕಾಗಿದ್ದಾರೆ. :—(WANTED)

ಎಸ್. ವಿ. ಎಚ್. ಹೈಸ್ಕೂಲ್, ವಿಶ್ವೇಂದ್ರನಗರ, ಇನ್ನಂಜೆ, ಕಾಪು, ದ. ಕ.

3 ಜನ ಎಲ್. ಟಿ. ಪಾಸಾದವರೂ, 1 ಜನ ಸೆಕೆಂಡರಿಟ್ರೈನ್ಡ್ ಉಪಾಧ್ಯಾಯ, ಉಪಾಧ್ಯಾಯಿನಿಯರೂ, ಟೈಪ್‌ರೈಟಿಂಗ್ ಬಲ್ಲ ಅನುಭವಸ್ಥ ಗುಮಾಸ್ತರೊಬ್ಬರೂ (ಎಲ್ಲರೂ ಕನ್ನಡ ಬಲ್ಲವರು) ಬೇಕಾಗಿದ್ದಾರೆ. ವೇತನ ಯೋಗ್ಯತಾನುಸಾರ.

ಅರ್ಜಿದಾರರು, ಯೋಗ್ಯತೆ, ಪ್ರಾಯ, ಜಾತಿ, ಅನುಭವ ಇತ್ಯಾದಿಗಳೊಡನೆ ತಾ. 10—5—44ರೊಳಗೆ ಅರ್ಜಿಯನ್ನು ಕಳುಹಿಸತಕ್ಕದ್ದು.

ಶ್ರೀನಿವಾಸ ಮಿತ್ತಂತಾಯ
ಮೆನೇಜರ್,

ಇನ್ನಂಜೆ,
13—4—'44

ನವಯುಗ

ಚಂದಾ ವಿವರ.

ವರ್ಷಕ್ಕೆ (ಸ್ಥಳೀಯ)3—12-0
(ಟಪ್ಪಾಲು ದ್ವಾರ)—4-8—0

ಚಂದಾ ಹಣ ಬಾಕಿಯಿರುವವರು ದಯಮಾಡಿ ಅದನ್ನು ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

ಮಿಸ್. ಮತಾಯಿ ಅಂತರ್ಧಾನ

ಮಾನವ ಜೀವನದ ಆಕಾಶಪಾತಾಳದಂತಹ ವಿರುದ್ಧ ತುದಿಗಳೆರಡೂ ಇರುವ ದೇಶವೆಂದರೆ ಅಮೇರಿಕವೆನ್ನಬೇಕು. ಅಲ್ಲಿ ತುತ್ತ ತುದಿಯ ಶ್ರೀಮಂತರಿರುವಂತೆಯೇ, ಪಶು ಸಮಾನ ನಿರ್ಗತಿಕರಿದ್ದಾರೆ; ಅಗ್ರಗಣ್ಯ ನಾಗರಿಕತೆಯಿದ್ದಂತೆಯೇ ಅತಿ ವಿಲಕ್ಷಣ ದರೋಡೆಗಾರ ವೃತ್ತಿಯೂ ಇದೆ. ವಿಲಾಸ ವಿಭ್ರಮಗಳಿವೆ, ವಿಕಾರ ವಿಚಿತ್ರ ದುರ್ಮರಣಗಳೂ ಇವೆ. ನ್ಯೂಯೋರ್ಕಿನ ಕೊಲಂಬಿಯಾ ವಿಶ್ವವಿದ್ಯಾಲಯ ವಿದ್ಯಾರ್ಥಿನಿಯಾಗಿ ಹೋಗಿದ್ದ ಭಾರತೀಯ ಯುವತಿ ಮಿಸ್ ವಲ್ಲಾ ಮತಾಯಿಯು ಕೆಲವು ವಾರಗಳಮೊದಲು ಹಿಮ ಬಿದ್ದ ಒಂದು ರಾತ್ರಿ ವಿಚಿತ್ರ ರೀತಿಯಿಂದ ಕಾಣೆಯಾದವಳ ಪತ್ತೆಹಚ್ಚಲು ಅಲ್ಲಿಯ ಅತಿ ವಿಚಕ್ಷಣ ಗುಪ್ತ ಪೋಲೀಸು ಪಡೆಯಿಂದ ಈ ವರೆಗೆ ಅಸಾಧ್ಯವಾಗಿದೆ. ನ್ಯೂಯೋರ್ಕ್ ಪೋಲೀಸ್ ಪಡೆಯ ಶೋಧನಾ ಚರಿತ್ರೆಯಲ್ಲಿ ಇದೊಂದು ಗಣನೀಯ ಘಟನೆಯೆಂದು ಇಷ್ಟರಲ್ಲೇ ಗಣಿಸಲ್ಪಟ್ಟಿದೆ; ಸೈನ್ಯ ಜಾತಿಯ ಶೋಧಕಜ್ಞರು ಪತ್ತೇದಾರಿಗಳಿಗೆ ನೆರವಾಗಿದ್ದಾರೆ; ಆದರೆ ಈತನಕ ಎಲ್ಲರೂ ಸೋತಿದ್ದಾರೆ. ಸದ್ಯ ಆಕೆಯ ಭಾವಚಿತ್ರ ಮತ್ತು ಪರಿಚಯಗಳುಳ್ಳ ಸಾವಿರಾರು ಹಸ್ತಪತ್ರಿಕೆಗಳನ್ನು ದೇಶ ತುಂಬಾ ಹಂಚಿರುವದರಿಂದ, ಅವು ಏನಾದರೊಂದು ಚಿಹ್ನೆಯನ್ನು ದೊರಕಿಸಿ ಕೊಟ್ಟಾವೆಂಬ ಏಕಮಾತ್ರ ಆಸೆಯಲ್ಲಿ ಅಮೆರಿಕಾಧಿಕಾರಿಗಳಿದ್ದಾರೆ.

ಪ್ರಣಯದೊಂದು ಸುದ್ದಿ.

ಕುಮಾರಿ ವಲ್ಲಾ ಭಾರತೀಯ ಮಹಿಳೆಯ ಹೆಗ್ಗುಣವಾದ ಸಂಕೋಚ ಸ್ವಭಾವವಿದ್ದ ಯುವತಿಯಂತೆ. ಆಕೆ ಏಕಾಂತ ಪ್ರೇಮಿ. ಯಾರೊಂಡನೆಯೂ ಅತಿಯಾಗಿ ಬೆರೆಯುತ್ತಿದ್ದಿಲ್ಲ. ಆದರೆ ಓರ್ವ ಪೈಮಾನಿಕನೊಡನೆ ಆಕೆಗೆ ಬಹಳ ಮೈತ್ರಿಯಿತ್ತು. ಕಾಣೆಯಾದ ದಿನ ಆಕೆಯನ್ನು ಕಡೆಗೆ ಕಂಡಿದ್ದ ವ್ಯಕ್ತಿಯೆಂದರೆ ಇವನೇ. ಇವರೊಳಗಿನ ಮೈತ್ರಿಯು ಪ್ರಣಯ ವ್ಯಾಪಾರವೆಂಬ ಸಂದೇಹವು ಪೋಲಿಸರಿಗೆ ಬಂದಿದ್ದಿತಾದರೂ ಅದಕ್ಕಾವ ರುಜುವಾತೂ ದೊರೆತಿಲ್ಲ; ಪ್ರಣಯ ಪತ್ರ ಸಿಕ್ಕಿಲ್ಲ. ಅವನ ನಡತೆ, ವರ್ತನೆ, ಕಾಣೆಯಾದ ದಿನದ ರಾತ್ರಿ ವರೆಗಿನ ಆಕೆಯ ವಹಿವಾಟುಗಳ ಸುದ್ದಿಗಳೆಲ್ಲಾ ದೊರಕಿವೆ. ಆದರೆ ಅವಳ ಅಂತರ್ಧಾನದ ಗುಟ್ಟು ದೊರೆತಿಲ್ಲ. ಪೋಲಿಸರು ಹಿಮ, ಗಸಗಳನ್ನು ಅಗೆದು ಶೋಧಿಸಿದುದೂ ನಿಷ್ಫಲವಾಗಿದೆ.

ಮತ್ತೊಂದು ವಾರ್ತೆ

ಅಮೇರಿಕದ 'ಜರ್ನಲ್ ಅಮೇರಿಕನ್' ಪತ್ರಿಕೆಯಿಂದ, ಅದೃಶ್ಯ ಮತಾಯಿಗೀಗ ರಾಜಕೀಯ ವ್ಯಕ್ತಿತ್ವ ಬಂದಿದೆ. ಸಾಲ್ಮಾ ಬಿಶ್ಲಾವಿ ಎಂಬ ಈಜಿಪ್ಟ್ ಹುಡುಗಿಯೊಬ್ಬಳು ಕುಮಾರಿ ವಲ್ಲಾನ ಸ್ನೇಹಿತೆ. ಜರ್ನಲ್ ಅಮೇರಿಕನ್ ಪತ್ರಿಕೆಯಲ್ಲಿ ಅವಳ ಹೇಳಿಕೆ ಬಂದಿದೆ. ಕುಮಾರಿ ವಲ್ಲಾ ಮತಾಯಿ ಹಿಂದುಸ್ಥಾನದಲ್ಲಿರುವಾಗಲೇ ಕ್ರಾಂತಿಕಾರಕಿಯಿದ್ದಳಂತೆ. ಬೊಂಬಾಯಿ ಯುನಿವರ್ಸಿಟಿಯಲ್ಲಿರುವಾಗ ಅವಳು ರಾಜಕೀಯತಃ ಎಷ್ಟೊಂದು ಚಟುವಟಿಕೆಯುಳ್ಳವಳಾಗಿದ್ದಳೆಂದರೆ, ಅಧಿಕಾರಿಗಳು ಅವಳನ್ನು ಎಚ್ಚರಿಸಬೇಕಾಯಿತು. ಆ ಮೇಲೇನೇ ಅವಳು ಹಿಂದುಸ್ಥಾನ ಬಿಟ್ಟು ಇಲ್ಲಿ ಒಂದು ಕೊಲಂಬಿಯಾ ಯುನಿವರ್ಸಿಟಿಯ ವಿದ್ಯಾರ್ಥಿನಿಯಾದುದು. ನ್ಯೂಯಾರ್ಕಿನಲ್ಲಿ ಕೂಡಾ ಅವಳು ತನ್ನ 'ಸ್ವತಂತ್ರ ಭಾರತ' ಚಳವಳಿಯನ್ನು ಇಮ್ಮಡಿ ಹುರುಪಿನಿಂದ ನಡೆಸುತ್ತಿದ್ದಳು. ಅವಳ ಪರಮಾಪ್ತ ದೋಸ್ತಿಯೆಂದರೆ ಪ್ರಿತಂ ಕುಮಾರಪ್ಪ. ವಲ್ಲಾ ಕಾಣೆಯಾದ ದಿನದ ಮಧ್ಯರಾತ್ರಿಯ ವರೆಗೂ ಇವರಿಬ್ಬರೂ ತನ್ನ ಕೋಣೆಯಲ್ಲಿ ಹಲವು ಘಂಟೆಗಳವರೆಗೆ ಒಟ್ಟಿಗಿದ್ದರು— ಎಂದು ವಿಶ್ಲಾವಿಯು ತಿಳಿಸುತ್ತಾಳೆ.

ಅಮೇರಿಕದ 'ಇಂಡಿಯಾಲೀಗ್' ಅಧ್ಯಕ್ಷ ಸರ್ದಾರ್ ಜೆ. ಜೆ. ಸಿಂಗರ ಅಭಿಪ್ರಾಯವೇ ಬೇರೆ 'ಆ ವರೆಗೆಂದೂ ಹಿಮ ಪತನವನ್ನು ಕಾಣದಿದ್ದ ಹುಡುಗಿಯಾಕೆ. ಆ ದಿನ ಸಂಚಾರಕ್ಕೆ ಹೋಗಿದ್ದಳು. ಆ ಸುಂಟರು ಹಿಮದಲ್ಲಿ ಎಲ್ಲಿಯೋ ಕಾರಿನಡಿಗೆ ಬಿದ್ದಿರಬೇಕು. ಹೆಣವನ್ನು ಡ್ರೈವರ್ ಕಾರಿನಲ್ಲಿ ಹಾಕಿಕೊಂಡು ಹೋಗಿ ಅಜ್ಞಾತ ಸ್ಥಳದಲ್ಲಿ ಹುಗಿದಿರಬೇಕು' ಎಂದು ಅವರ ಊಹೆ. ಅಂತೂ ಕುಮಾರಿ ಮತಾಯಿ ಕಾಣೆಯಾಗಿ ಅಮೇರಿಕದವರ 'ಮಾತಾಯಿ' ಯಾಗಿ ಹೋದಳು—ಎಲ್ಲರೂ ಅವಳನ್ನು ಸ್ಮರಿಸುವವರೇ!

ಪ್ರಕಟಣೆ.

ಉಡುಪಿ ಪಂಚಾಯ್ತಾ ಕೋರ್ಟಿನಲ್ಲಿ,

ರಘುನಾಥಶೆಟ್ಟಿ ವಾದಿ,

ಮತ್ತು

ನರಸಿಂಹ ಶೆಟ್ಟಿ, ಕೃಷ್ಣಯ್ಯ ಹೆಗಡೇರ ಮೊಮ್ಮಗ ಬೇರ್ಕಾಡಿ ಗ್ರಾಮದ ಹುತ್ತ ಹೊಸಮನೆಯಲ್ಲಿರುವವ— ಪ್ರತಿವಾದಿ

ಇವರೊಳಗೆ

ವಾದಿಗೆ ಪ್ರತಿವಾದಿಯು ತಾರೀಕು 23 12 1940ರಲ್ಲಿ ರುಪಾಯಿ 35ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಅಸಲುಬಡ್ಡಿ ಹಣಗಳನ್ನು ವಸೂಲು ಕೇಳಿ ವಾದಿಯು ಪ್ರತಿವಾದಿಯ ಮೇಲೆ ದಾಖಲ್ಮಾಡಿದ ಮೊಕದ್ದಮೆಯ ದಾವೆಯು ತಾ 29 4 1944ಕ್ಕೆ ತನಿಖೆಗೆ ಇಟ್ಟಿದೆ. ಆ ತಾರೀಕು ಅಕ್ಷೇಪವಿದ್ದರೆ ಅದಿ ದಿನ 2ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಾಗಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನೀವು ಗೈರಹಾಜರಿಯಲ್ಲಿ ಮೇಲ್ಕಂಡ ದಾವೆಯು ತೀರ್ಮಾನಿಸಲ್ಪಡುವದು.

I. Narayana Shetty

ತಾ 16—4—44.

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣಿ ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನ ಬಜಾರ್ ರೋಡ್, ಮದ್ರಾಸ.

ಪುತ್ತೂರು ಏಜಂಟರು: ಶೈ ಫಾರ್ಮಸಿ

ಪ್ರತಿ ತಿಂಗಳೂ 'ಪ್ರಕಾಶಿನಿ'ಯನ್ನೋದಿರಿ!

ಎಪ್ರಿಲ್ ತಿಂಗಳ 'ಪ್ರಕಾಶಿನಿ'ಯಲ್ಲಿ

ವಿರುತಗ್ಗು—ಸದ್ಯಸ್ಥಿತಿ ಮತ್ತು ಕೃತಿ—ಸಾಹಿತ್ಯದ ಸಮಸ್ಯೆ—ವಿಶ್ವಗರ್ಭದ ಗೋಳ—ಹೊನ್ನಿಯ ಮಲ್ಲಯ್ಯ (ಕತೆ)—ಪ್ರೇಮಿ ಜತೆ—ಸಹಕರಿಯುವ—ಬ್ರಿಟಿಷರನ—ಲೇಖಕ—ನ್ಯಾಯಮೂರ್ತಿ (ಕತೆ)—ಹನಿಗವನ ಕೋಟೆಗಳು—ಪ್ರಣಯ ಪ್ರದರ್ಶನಕ್ಕೆ ಚಿತ್ರದಲ್ಲೊಂದು ಸ್ಥಾನ—ರಣಹದ್ದುಗಳು—ತಿಂಗಳ ಭವಿಷ್ಯ (ವ್ಯಂಗ್ಯ).

ಇಷ್ಟಿದ್ದರೂ ಬೆಲೆ ಬರೇ ನಾಲ್ಕಾಣೆ.

ಪ್ರತಿಗಳು ನಿಮ್ಮೂರ ಏಜಂಟರಲ್ಲಿ ಸಿಗದಿದ್ದರೆ ೦-೫-೦ ಸ್ಟಾಂಪಿನೊಂದಿಗೆ ಒಡನೆ ಬರೆಯಿರಿ.

ಮೆನೇಜರ್,

ಪ್ರಕಾಶಿನಿ,

ನವಯುಗ ಪ್ರೆಸ್, ಉಡುಪಿ.

ಪ್ರಕಟಣೆ.

ಈ ಮೂಲಕ "ಬ್ರಹ್ಮ ಶ್ರೀಗುರುನಾರಾಯಣ ಸ್ವಾಮಿ ಸೇವಾ ಸಮಿತಿ" ಕಟಪಾಡಿ, (ದ. ಕ.)ಯ ವರಿಗೆ ತಿಳಿಯ ಪಡಿಸುವುದೇನಂದ್ರೆ, ಇದೇ ಬರುವ ಜೂನ್ ತಾರೀಕು 1ರೊಳಗೆ (ತಾ 1 6-1944)ಕ್ಕೆ ಮೊದಲೇ ನಮಗೆ ಒಡೆದು ಕಳುಹಿಸುವ, ನಮ್ಮ ಮಹಾ ಸಭೆಯಲ್ಲಿ ಮಂಜೂರಾದ ಎಲ್ಲಾ ಶರ್ತಗಳನ್ನು ಒಪ್ಪಿ ರಸೀ ಕಾಗ್ದದಲ್ಲಿ ಬರೆದು ಸಹಿಮಾಡಿಕೊಳ್ಳದೆ ಹೋದಲ್ಲಿ, ನಿಮಗೂ, ನಮಗೂ ನಡೆದಿರುವ ನಮ್ಮ ಆಸ್ತಿಯ ಪಟ್ಟಾ ನಂಬ್ರ 33ನೇ, ಕೋಟೆಗ್ರಾಮ ನಂಬ್ರ 97ನೇ ಕಟಪಾಡಿ, (ದ. ಕ.)ಆಸ್ತಿಯ ಸಂಬಂಧ ಎಲ್ಲಾ ಪತ್ರ ವ್ಯವಹಾರಗಳೂ; ಸದ್ರಿ ಎಲ್ಲಾ ಶರ್ತಗಳೂ ರದ್ದಾಯಿತೆಂದೂ ಸದ್ರಿ ಆಸ್ತಿಯಲ್ಲಿ ನಿಮಗೆ ಯಾವ ಸಂಬಂಧದಿಂದಲೂ ಪ್ರವೇಶಿಸಲು ಹಕ್ಕಿರುವುದಿಲ್ಲವೆಂದೂ ತಿಳಿದಿರತಕ್ಕದ್ದು.

ದಿ ... ಕರ್ನಾಟಕ ಬಿಲ್ಲವ ಚಾರಿಟಿ ಸಂಘ,

ಮುಂಬಾಯಿ;

ವೈ. ಜಿ. ಬಂಗೇರ.

ಗೌರವ ಪ್ರಧಾನ ಕಾರ್ಯದರ್ಶಿ,

Degrees: Books: Medicines Free H. L M S.M, B H. M, D, etc. Free Homeo-Ayur UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs 4. Insanity Cure Pills Rs. 10 Enclose 2 annas stamp.—

Prof, Dr. N. H, Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach (Regd.)
No 3 Rs 2. No 2 Rs 5 No. 1 Rs. 7 Special Rs. 10, Extra Special Rs. 17 for love marriage health, wealth. Ask all six questions with M. O. Re. 1/4 and get correct answers by returnpost Life reading Rs.10No V.P P.Send M.O Free, pmplets.

Prof Dr. N. H. Chhatbar.
P. O. MAHUVA (Kathiawar India.)

THE BEST PREVENTIVE IN EPIDEMICS OF CHOLERA

"BHUVANENDRA"

CHANDRAMAS

Will give you the best results. Try once and be satisfied with the results

Dose: For adults:- 3 to 5 drops 2 to 3 times a day with the decoction of cloves or ajwan.

For Children: 1 to 2 drops with the said decoction

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಯ ಫಾರ್ಮಸಿ; ಡಾ. ಕೆ. ಶೇಷಗಿರಿ ಶೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

The Pangal Nayak Bank Limited.

Established in 1920

Registered Office: Court Road, UDIPI

Branches at Udipi, Mangalore, Katapadi, Kanhangad, Kinnigoli and Nileshwar, South Canara District.

Discounting of demand and short term negotiable instruments for approved parties granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public.

For business proper please enquire at any one of our Offices

15th April 1944.

ದಿ ಜ್ಯುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸು: ಬೊಂಬಾಯಿ

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲಿಯೂ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ಉಡುಪಿಯ ಕೋರ್ಟುರೋಡಿನಲ್ಲಿ ಇದರ ಚೀಫ್ ಏಜನ್ಸಿ ಆಫೀಸು ಇದೀಗಲೇ ಪ್ರಾರಂಭವಾಗಿದೆ.

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರ ಬೇಕಾಗಿದ್ದಾರೆ.

ಪಿ. ಡಿ. ನಾಯಕ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ

The Jupiter General Insurance Company, Ltd.,
BOMBAY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

-- ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹರಪೇನಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—0—0 ಪೋಸ್ಟ ಖರ್ಚು ನಿರಾಳೆ

ಮಾಲಕರು. ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಮುಲ್ಕಿ ಫಾರ್ಮಸಿ, ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ ವಿಜಾಪೂರ—ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ ಕುಂಬರವಾಡಿ ಸ್ಟೋರ್ಸ ದಾವಣಗೇರಿ —ದಾವಣಗೇರಿ ಸ್ಟೋರ್ಸ ... ಎಲ್. ಕಲಘಟಗಿ, ಕರಿಹಟ್ಟಿ, ಹಾವೇರಿ, ಬ್ಯಾಡಗಿ.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ಅಭೀದಿಯ

ಕಲ್ಸಂಕಬಳಿ ವ್ಯಾಸಾಚಾರ್ಯರ ಅವರಲ್ಲಿಗೆ ಬನ್ನಿರಿ ಅಲ್ಲಿ ನೋಡಿದರೆ ಕೊಳ್ಳದೆ ಬಿಡೆನ್ನು ಎನ್ನುವಿರಿ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೫ ಬಿಲ್ಲೆನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೊಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ **ಕೊಡಿಯಾಲಬೈಲು, ದ. ಕ**

FOR SAFETY & SERVICE
THE VIJAYA BANK, LTD.,

Head office: MANGALORE

Branches at: - Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ

ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು.—ಮಂಗಳೂರು.

ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.

REGD

ಅಮೃತಾಂಜನ ತಲೆನೋವು, ನೆಗಡಿ, ಸೊಂಟನೋವು, ಉಳುಕು, ಕುತ್ತಿಗೆ ಘಾತ, ಹಲ್ಲು ವೇದನೆಗಳಿಗೂ ಎದೆನೋವು, ಸ್ನಾಯುಗಳ ಬಾತು ಕೀಲುನೋವು, ಚೇಳು ಕಡಿತ ಮೊದಲಾದ ಬೇನೆ ಕಷ್ಟಗಳ ನೋವು ಮೊದಲಾದ ಎಲ್ಲ ರೋಗಗಳಿಗೂ ಸಿದ್ಧೌಷಧ.

ಪ್ರಪಂಚಾದ್ಯಂತ ಎಲ್ಲಾ ಔಷಧ ಅಂಗಡಿಗಳಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ ರೂ 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

ಸ್ಥಾಪನೆ **ಕ್ರೌನ್ ರಬ್ಬರ ಸ್ಟಾಂಪ ವರ್ಕ್ಸ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.

Certified by the Agent of the Govt. of India in Ceylon

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. N.M. 3618.

ವಾರ್ಷಿಕ ಚಂದಾ ರೂ. 4 3—0 ಬಿಡಿ ಸಂಚಿಕೆ 0—1—6.

Estd 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೩೪

FOUNDER
Sri. A. B. Shetty.

Vol. 24
No. 34

NAVAYUGA— Kannada Weekly —UDIPI, S. I.

ಉಡುಪಿ • 27—4—1944 • ಮಂಗಳೂರು.

1944ನೇ ಇಸವಿಯಿಂದ ಮೂರನೆ ಸಂಪುಟಾರಂಭವಾಗಿದೆ

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ
ವಾರ್ಷಿಕ ಚಂದಾ ರೂ. 3-0-0
ಬಿಡಿ ಪ್ರತಿಗೆ ರೂ. 0-4-0
ಮಾದರಿ ಪ್ರತಿಗೆ ಐದಾಣೆ ಸ್ಟಾಂಪಿನೊಂದಿಗೆ ಬರೆಯುವುದು.

'PRAKASHINI'
NAVAYUGA PRESS
UDIPI

ANTARANGA
UDIPI

ಅಖಿಲ ಕರ್ನಾಟಕದ ಹೊಸ ಮಾದರಿಯ ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ

The Canara Mutual Assurance Co., Ltd.

NEW APPOINTMENTS.

Applications from candidates of S.S.L.C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

UDIPI,
3-4-1944

T. R. A. Pai,
MANAGING DIRECTOR

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಿ ... ದಯವಿಟ್ಟು ವಿಚಾರಿಸಿರಿ:

ಕೊಚಿಕಾರ್ ಬ್ರದರ್ಸ್, ಲಿಮಿಟೆಡ್

[illegible]

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ (ದ ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಳದೀ ಬಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿದರ ದಿವಸ ಬೆಳಗ್ಗೆ ಒಂದೇ ಸಾರ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್. [ಮಾಲಕರ ವಿಳಾಸಕ್ಕೆ ಶತ ವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ

Revanasiddappa Halappa Davangere
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರ ಸಂಗಡ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಅಜೀರ್ಣ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—0—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವದ ಆಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

ಕಾಯಿಲೆ ಲಕ್ಷಣ ಬರೆದಲ್ಲಿ ತಕ್ಕವಾದ ಔಷಧಿ ಚುನಾಯಿಸಿ ರವಾನಿಸಲಾಗುವುದು.

ಕೆಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಉಡುಪಿ ಏಜಂಟರು: ನವಭಾರತ ಬುಕ್ ಡಿಪ್ಪೊ, ... ಶೆಟ್ಟಿ. ಉಡುಪಿ

ವಾರದ ಹೋರಾಟ

ಸಾಬಾಂಗ್ ಧಾಳಿ!

ಕಳೆದ ವಾರಾಂತ್ಯದಿಯ ಒಂದಿನ ಮುಂಜಾನ ಸುಮಾತ್ರಾದ್ವೀಪದ ಉತ್ತರ ಮೂಲೆಯಾದ ಸಾಬಾಂಗ್ ಮತ್ತು ಲೋಂಗಾ ನೆಲ್ದಾಣಗಳ ಮೇಲೆ ಮಿತ್ರನಾವಿಕಾಧಿಪ ಅಡ್ಮಿರಲ್ ಸೋಮರ್ ವಿಲ್ಲೆಯವರು-ಕ್ರೂಯ್ಸರ್, ಡಿಸ್ಟ್ರೋಯರ್, ಮತ್ತು ಸಬ್‌ಮೆರೀನ್‌ಗಳ ಪ್ರಬಲ ನೌಕಾಪಡೆಯನ್ನು ಪ್ರಯೋಗಿಸಿ ಮಾಡಿದ ಆಕಸ್ಮಿಕ ಧಾಳಿಯು ಹಿಂದೀ ಸಮುದ್ರವನ್ನು-ಅಂತೆಯೇ ಜಪಾನರ ಹೃದಯವನ್ನು ಕದಡಿರಬೇಕು. ಈ ಸುದ್ದಿಯನ್ನು ಆಕರ್ಷಣೀಯ ತಲೆಬರಹಗಳೊಡನೆ ಪ್ರಾಮುಖ್ಯಯುತ ಘಟನೆ ಎಂಬಂತೆ ಅಮೇರಿಕಾ ಪತ್ರಿಕೆಗಳು ಪ್ರಕಟಿಸಿವೆ. ಧಾಳಿಯು ಆಕಸ್ಮಿಕವಿದ್ದಂತೆಯೇ ಶುಭ ಭವಿಷ್ಯ ಸೂಚಕವಾಗಿಯೂ ಇದೆ. ಸಾಬಾಂಗ್ ಮಿತ್ರರ ಆಕಾಶವೃಷ್ಟಿ ತೀಕ್ಷ್ಣವಾಗಿ ಬಿದ್ದಿರುವ ವೈರಿಯ ಎರಡು ನೆಲ್ದಾಣಗಳಲ್ಲೊಂದು. ಇದು ಸಿಂಗಾಪುರ ಮತ್ತು ಸೀಲೋನುಗಳ ನಟ್ಟನಡುವೆ, ಸೀಲೋನಿಗೆ 1000 ಮೈಲು ದೂರದಲ್ಲಿದೆ. ಈ ಭಾಗದಲ್ಲಿ ಜಪಾನರ ಎರಡು ಪ್ರಾಮುಖ್ಯ ವಿಮಾನ ನೆಲ್ದಾಣಗಳೆಂದರೆ ಈಗ ಅಡ್ಮಿರಲ್ ಸೋಮರ್ ವಿಲ್ಲೆಯವರ ನೌಕೆಯಿಂದ ಕಂಪಿಸಿದ ಸಬಾಂಗ್ ಮತ್ತು ಲೋಂಗಾಗಳೇ. ಸುಮಾತ್ರೆಯ ಮೇಲೆ ಇಳಿಯುವ ಜಾಪಾನೀ ಬೊಂಬರುಗಳು ಇವೆರಡು ನೆಲ್ದಾಣಗಳಲ್ಲೇ. 1942ನೇ ಮಾರ್ಚಿಯಲ್ಲಿ ಜಾಪಾನರು ಇವುಗಳನ್ನು ಆಕ್ರಮಿಸಿಕೊಂಡಿದ್ದರು. ಸಿಲೋನ್ ಮತ್ತು ಹಿಂದೀ ಸಮುದ್ರವಲಯದ ಯುದ್ಧಾಚರಣೆಗಳ ಉಗಮಸ್ಥಾನಗಳಾಗಿ ಅವನ್ನು ಜಾಪಾನರು ಭದ್ರಪಡಿಸಿಕೊಂಡಿದ್ದರು. ಎರಡು ವರುಷಗಳಿಗೆ ಮೊದಲು ಇವೇ ನೆಲ್ದಾಣಗಳ ಆಶ್ರಯದಿಂದ ಹೊರಟ ಜಾಪಾನರ ಪ್ರಬಲ ನೌಕಾಪಡೆಯು ಸಿಲೋನಿನತ್ತ ಧಾವಿಸಿ ಕೊಲಂಬೊ ಮತ್ತು ಟ್ರಿನ್‌ಕೊಮಾಲಿಗಳ ಮೇಲೆ ದಾಳಿ ನಡಿಸಿ ಹೋಗಿದ್ದವು; ಅಂದು ಕೊಟ್ಟ ಸಾಲವನ್ನೀಗ ಅವರು ಬಡ್ಡಿ ಸಮೇತ ಮರಳಿ ಪಡೆದಿದ್ದಾರೆ. ಮಾತ್ರವಲ್ಲದೆ ಪರ್ಲ್ ಹಾರ್ಬರಿನ ಮರೆಯಾಗದ ಜಾಪಾನೀ ದಗಾಖೋರತನದ ಮಚ್ಚೆಯನ್ನು ತೀರಿಸುವದರಲ್ಲಿ ಅಮೇರಿಕಾನರು ಯಾವ ಸಂದರ್ಭವನ್ನೂ ಕಳಕೊಳ್ಳುವಂತಿಲ್ಲ ಎಂಬುದಕ್ಕೆ ಇಂತಹ ಆಕಸ್ಮಿಕ ಧಾಳಿಗಳೊಂದು ನಿದರ್ಶನ. ಇತ್ತೀಚೆಗೆ 'ಸಿಲೋನ್ ಸುರಕ್ಷಿತವಲ್ಲ' ಎಂಬ ಭೀತಿ ಮೂಡಿದ್ದು ಅಲ್ಲಿಯ ಸೇನಾನಿ ಜಪಾನೀ ಧಾಳಿ ನಿರೀಕ್ಷೆಯಿಂದ ಎಚ್ಚರಿಕೆ ಕೊಟ್ಟಿದ್ದರು. ಲೋರ್ಡ್ ಮೌಂಟ್ ಬ್ಯಾಟನರು ತನ್ನ ಕಾರ್ಯಾಲಯವನ್ನು ಆಕಸ್ಮಾತ್ತಾಗಿ ಸಿಲೋನಿಗೆ ವರ್ಗಾಯಿಸಿ, ಅಲ್ಲಿಯ ನಾವಿಕಾಧಿಪತಿಯೊಡನೆ ಸಮ್ಮಿಲನಗೊಂಡ ಕೆಲವೇ ದಿನಗಳೊಳಗೆ ಸುಮಾತ್ರಾದ ಮೇಲೆ ನಡಿಸಿದ ಈ ದಾಳಿಯೊಂದು ಮುಂಜಾಗ್ರತೆ—ಭಾವೀ ಯೋಜನೆಗಳ ಪೂರ್ವ ಸೂಚಕ—ಎಂದೂ ಭಾವಿಸಬೇಕು

 oo oo oo

ಅಸ್ಸಾಮು ಯುದ್ಧ! ಇದುವರೆಗಿನ ಅಲ್ಲಿಯ ಜಗ್ಗಾಟಗಳಿಂದ ಇಷ್ಟನ್ನು ಊಹಿಸಬಹುದು-ಜಪಾನರ ಧಾಳಿಯು ಮಿತ್ರರಿಂದ ಬಿಸರುಪಡೆದಂತೆ ಪರಿಚಯಾತ್ಮಕವೂ ಅಲ್ಲ; 'ಚವರಿ ಚಲ್ಲಾಪಿಲ್ಲಿಯಾಗುವವರು ಇತ್ತ ಇಟ್ಟ ಹೆಜ್ಜೆ'ಯೂ ಅಲ್ಲ, 'ನಿರಾಶಾಜನ್ಯ ನಿಷ್ಫಲಕ್ರಿಯೆ'ಯೂ ಅಲ್ಲ. ವ್ಯವಸ್ಥಿತ ಪ್ರಬಲ ಧಾಳಿ' ಜಪಾನರನ್ನು ಹಿಮ್ಮೆಟ್ಟಿಸಲು ಅತಿಹೆಚ್ಚಿನ ಶ್ರಮ ಮತ್ತು ಸಮಯ ಬೇಕು. ಪ್ರಕೃತ ಎಲ್ಲರ ಲಕ್ಷ್ಯವನ್ನು ಸೆಳೆದಿರುವ ರಣರಂಗವೆಂದರೆ ಇಂಫಾಲಿಗೆ 90 ಮೈಲಿರುವ-ಸುಮಾರಾಯಿ ರಸ್ತೆಗೆ ಬದರಷ್ಟೇ ಆಧಾರವಾಗಿರುವ-ಕೊಹಿಮಾ ನಗರ. ಜಾಪಾನರೀಗ ಆ ನಗರಪ್ರಾಂತ್ಯದ ಪರ್ವತದಲ್ಲಿ ಸುರಕ್ಷಿತಾಶ್ರಯ ಪಡೆದು ನಗರದ ಇಬ್ಬದಿಯ ಆ ಭಾಗಗಳನ್ನೂ ಆಕ್ರಮಿಸಿಕೊಂಡು ಅಲ್ಲಿಯ ರಸ್ತೆಯನ್ನು ತಮ್ಮ ಅಂಕೆಗೆ ಸೇರಿಸಿಕೊಂಡಂತೆ ಕಾಣಲು ಶಕ್ತರಾಗಿದ್ದಾರೆ. ಹೊರಗಿನಿಂದ ರಕ್ಷಣೆಗಾಗಿ ಅತ್ತ ಧಾವಿಸಿದ ಮಿತ್ರಸೇನೆಯೀಗ ಅತಿ ಪ್ರಯಾಸದಿಂದ ಕೊಹಿಮಾದಲ್ಲಿದ್ದ ಸೇನೆಯನ್ನು ಕೂಡಿಕೊಂಡ ಸುವಾರ್ತೆ ಬಂದಿದೆ. ಕ್ಷಿಪ್ರದಲ್ಲೇ ಇತ್ತಂಡದವರ ಬಲಾಬಲಗಳ ಪರೀಕ್ಷೆಯಾಗುವ ಮಹಾ ಹೋರಾಟವಲ್ಲಿ ನಡೆಯುವ ಆತುರದಾಯೀ ನಿರೀಕ್ಷೆಯಿದೆ. ಇಂಫಾಲ್ ಮೈದಾನ್ ವರೆಗೆ ಬಂದ ಜಾಪಾನರು, ಇನ್ನೂ ದೊಡ್ಡ ಹೋರಾಟಕ್ಕೆಳಿಯದೆ ಅಡ್ಡಾದಿಡ್ಡಿ ಸಿಕಲಾಟಗಳನ್ನಷ್ಟೇ ಒಡ್ಡುತ್ತಿರುವದರಲ್ಲಿ ಜಾಪಾನರ ದೌರ್ಬಲ್ಯಕ್ಕಿಂತಲೂ ಮಿತ್ರರ ದಿಗ್ಭ್ರಮಿತತೆಯೇ ಒಡೆದು ಕಾಣುತ್ತಿದೆ. ಯಾಕೆಂದರೆ, ಯಾವದೋ ಒಂದು ಕಾರಣದಿಂದ ಒಮ್ಮೆಯೇ ಬಯಲಿಗೆ ಬೀಳಬಾರದೆಂದು ವಿರೋಧಿ ನಿರ್ಧರಿಸಿದಂತಿದೆ. ಮಿತ್ರರು ತಮಗನುಕೂಲವಾಗುವಂತೆ ಅವನನ್ನು ಬಯಲಿಗೆಳೆಯಲು ಅವಸರ ಪಡಬೇಕಾಗಿದ್ದಿತು. ಆದರೆ ಇಂಫಾಲಿನ ಈಶಾನ್ಯ ಮೂಲೆಯೊಂದರಲ್ಲಿ ಮುನ್ನುಗ್ಗಿರುವ ಹೊರತು ಬ್ರಿಟಿಷ್ ಸೇನೆಗಳು ಬೇರೆ ಸಾಹಸವನ್ನೂ ಪ್ರದರ್ಶಿಸಿಲ್ಲ. ಅಂತೂ ಅಸ್ಸಾಮು ಯುದ್ಧದ ಫಲಶ್ರುತಿ ಹೀಗಿದೆ.—ಅರಕಾನಿನಲ್ಲಿ ಒಡೆದಂತಹ ಅಲ್ಪ ಸೇನೆ ಅಸ್ಸಾಮಿನೊಳಗೆ ನುಗ್ಗಿ ಬೆಂಗಡೆಯ ಬದಲಿಗೆ ಮುಂಗಡೆ ನೋಡಬಲ್ಲ ಪ್ರಬಲ ಜಾಪಾನೀ ದಳಗಳು ಅಲ್ಲವೆ. ಅಲ್ಲಿಯ ಗುಡ್ಡಗಾಡು ದೇಶಗಳನ್ನು ಬ್ರಿಟಿಷರು ಅಡ್ಡಿ ಆತಂಕಗಳೆನ್ನುತ್ತಿದ್ದರೆ ಜಾಪಾನರು ಪ್ರಕೃತಿ ದತ್ತ ವರವೆನ್ನುತ್ತಿದ್ದಾರೆ; ಟಿಡ್ಡಿಮ್-ದಾಮು ರಸ್ತೆಗಳ ಹತೋಟಿ ದೊರೆತೊಡನೆ ಅವರಿಗೆ ಬೇಕಾದಷ್ಟು ಸೇನಾಸಂಚಾರಯೂ ದೊರೆಯಬಲ್ಲುದು; ಮಿತ್ರರಿಗೀಗ ಸಮಸ್ಯೆಯಾಗಿರುವ ಅಸ್ಸಾಮು ರಂಗವು ಅಗ ಸಂಕಟವಾಗಿ ಪರಿಣಮಿಸಲ್ಲುದು. ಮಳೆಗಾಲ ಬರುವದರೊಳಗೆ ಇಂಫಾಲ್, ಕೊಹಿಮಾಗಳ ಪತನವಾದರೆ, ಜಾಪಾನರ ಯೋಜನ ಫಲಿಸಿದಂತೆಯೇ. ಆ ಬಳಿಕ ಕಣ್ಣೀರ ರಭಸವಂತಹ ಪ್ರತಿಕ್ರಿಯೆಗಳು ಮಿತ್ರಪಕ್ಷದಲ್ಲಿ ಈ ತನಕ ರೂಪುಗೊಂಡಿಲ್ಲ. ಅದನ್ನು ನಿರೀಕ್ಷಿಸಬೇಕು

oo oo oo

ಕೆಂಪು ಸೇನೆಯೀಗ 'ಕ್ರಿಮಿಯಾ ಪೆನಿನ್ಸುಲಾ'ದ ಉಳಿದುಳಿದ ನಾಜೀಸೇನೆಯನ್ನು ಗುಡಿಸುವ ಕೊನೆಯ ಅಂಕದಲ್ಲಿದೆ. ಮಾತ್ರವಲ್ಲ, ಕಾರ್ಪೇಥಿಯನ್ ಗುಡ್ಡಬುಡಗಳಲ್ಲಿ ತೀವ್ರ ಹೋರಾಟನಿರತವಾಗಿದೆ. ಕಾರ್ಪೇಥಿಯನ್ ಧಾಳಿಯು ನಾಜೀಸೇನಾನಿ ಮೇನ್‌ಸ್ಟೀನನ ಸರ್ವ ಸಹನೆಯ ಮೇರೆಯನ್ನೂ ಮೀರಿದ್ದು, ಅಪಸಿಂಗ ಘಾಯಗೊಂಡ ಹುಲಿಯ ಅವಸ್ಥೆಗೊಳಗಾದ್ದಾನೆ. ತನ್ನ ಅಸಹಾಯ ಹಾನಿಯನ್ನು ತೃಣೀಕರಿಸಿ, ಅಲ್ಲಿಯ ರಷ್ಯ ಸೇನೆಯ, ಆಶ್ರಯಸ್ಥಾನಗಳ ಮೇಲೆಲ್ಲಾ ಅತಿ ಪ್ರಬಲ ಹಾಗೂ ಅನಾಹುತಕಾರೀ ಆದರೆ ನಿಷ್ಫಲ ಧಾಳಿಯಾರಂಭಿಸಿದ್ದಾನೆ. ಕೆಂಪು ಸೇನೆಯು ಇದುವರೆಗೂ ಅಜೇಯ ಕೋಟೆಯಂತೆ ತನ್ನ ಮೂಲಸ್ಥಾನದಲ್ಲಿ ಕದಲದೆ ನಿಂತಿದ್ದು ಜರ್ಮನ್ ಸೇನೆಯ ತಾಡನವನ್ನು ಥಂಡಾಗೊಳಿಸುತ್ತಿದೆ. ಎಸ್ಟೋನಿಯದೊಳಗಕ್ಕೆ, ಆಕಾಶ ಧಾಳಿಯನ್ನನುಸರಿಸಿ ಕೆಂಪು ಸೇನೆ ನುಗ್ಗಿ ಹೋದ ವಾರ್ತೆಯೂ ಬಂದಿದೆ.

ಜಾಪಾನರ ಹಾವಳಿ!

oo oo oo

ಪೋಪ್ ಜಗದ್ಗುರುಗಳ ಪ್ರಾರ್ಥನೆ ಫಲಿಸಿತೋ ಎಂಬಂತೆ ರೋಮ್ ಬಳಿಯವರೆಗೆ ಬಂದ ಮಿತ್ರ ಸೇನೆಗಳೀಗ ಮಂಕಾಗಿ 'ಮುಂದಿಲ್ಲ—ಹಿಂದಿಲ್ಲ' ಎಂಬಂತಹ ಸ್ಥಿತಿಗೊಳಗಾಗಿ ಸ್ತಬ್ಧವಾಗಿವೆ. ಇನ್ನು ಬಿಕ್ಕಟ್ಟನ್ನು ಜರ್ಮನರ ನಿರೀಕ್ಷೆಯಂತೆ ಹೊಸ ಸೇನಾ ಸರಬರಾಯಿ ಮೂಲಕವೇ ಮಿತ್ರರು ಒಡೆಯಬೇಕು. ಅಂತಹ ಹೊಸಾಗಮನವಾದರೂ ಅದೇಕೋ ಆಕರ್ಷಣೆ ಕಳಕೊಳ್ಳುವಷ್ಟು ಹಿಂದೆಬಿದ್ದಿವೆ. ಈ ಸ್ತಬ್ಧತೆಯೊಂದು ಪೂರ್ಣ ವಿರಾಮವೆನ್ನಲು ಬರುವದಿಲ್ಲವಾದರೂ ಅರ್ಧ ವಿರಾಮವೆನ್ನಲಡ್ಡಿಯಿಲ್ಲ. ಇಂತಹ ಮುಕ್ತಾಯದ ವೇಳೆಯಲ್ಲಿ ಇದುವರೆಗಿನ ಇಟೆಲಿ ಆಕ್ರಮಣದ ಫಲಿತಾಂಶವನ್ನು ಊಹಿಸಿದರೆ ಮಿತ್ರರಿಂದ ಹಿಟ್ಲರನಿಗುಪಕಾರವಾಗಿದ ಹೋರಾಟ ನೆವದಿಂದ ನಿರಪವಾದಿತವಾಗಿ ಇಟೆಲಿಯ ಬಹುಭಾಗವನ್ನಾಕ್ರಮಿಸಿಕೊಳ್ಳುವ ಅನುಕೂಲತೆ ನಾಜಿಗಳಿಗೊದಗಿತು. ದುರ್ಬಲ ಫೇಸಿಸ್ಟ್ ಪಕ್ಷದ ರಾಜ್ಯ ಸೂತ್ರವು ಪ್ರಬಲ ನಾಜೀ ಹಸ್ತಕ್ಕೆ ವರ್ಗಾಯಿಸಲ್ಪಟ್ಟಿತು. ನಿಶ್ಶಕ್ತ-ಆದರ-ನಿಜಮಿತ್ರ ಮುಸಲಿನಿಯನ್ನು ಹಿಂಭಾಗದಲ್ಲಿಟ್ಟುಕೊಂಡು, ಅವನಿಗೆ ಹಾಗೂ ತನಗೆ ದ್ರೋಹ ಬಗೆದ ಇಟೆಲಿಯ ರಾಜ ಮತ್ತು ಬೊಡೊಗ್ಲಿಯೋರವರನ್ನು ಮಿತ್ರರ ಬೆಂಗಡೆಗಟ್ಟುವ ಅನುಕೂಲತೆಯೂ ದೊರೆಯಿತು. ಮಿತ್ರಸೇನೆಯು ರೋಮ್ ನಗರದ ದಕ್ಷಿಣಭಾಗದ ಒಂದು ಮೂಲೆಯನ್ನಷ್ಟೇ ಆಕ್ರಮಿಸಿಕೊಂಡಿರುವಾಗ, ನಾಜೀ ಸೇನೆಯು ಇಟೆಲಿಯ ಮಿಕ್ಕ ಎಲ್ಲಾ ಭಾಗವನ್ನೂ ಆಕ್ರಮಿಸಿಕೊಂಡು ನಿಂತಿದೆ ಎಂಬುದನ್ನು ಮರೆಯು

oo oo oo

'ಇಡೀ ಯುದ್ಧದ ಆಕಾಶಧಾಳಿಗಳಲ್ಲಿ ಅತಿ ಭಯಂಕರವಾದ (10ಘಂಟೆ)' ಇದ್ದುದು ಕಳೆದ ವಾರದಲ್ಲ. ಸಾವಿರ ಸಂಖ್ಯೆಯ ವಿಮಾನಧಾಳಿಗಳ ಅಂಕವನ್ನು ಮಿತ್ರರಾರಂಭಿಸಿ ಕೆಲವು ತಿಂಗಳುಗಳಾದವು. ಆದರೆ ಕಳೆದ ವಾರ ಉತ್ತರ ಫ್ರಾನ್ಸ್ ಮತ್ತು ಜರ್ಮನಿಯ ಮೇಲೆ ಮಿತ್ರ ವಿಮಾನಗಳು ನಡಸಿದ್ದ ಧಾಳಿಯು ಅಭೂತಪೂರ್ವವಾದುದೆನ್ನಬೇಕು. ಜರ್ಮನಿಯ ಉತ್ಪಾದಕ ಕೇಂದ್ರಗಳು, ರೈಲು ರಸ್ತೆಗಳು, ಸಂಕ ಸೇತುವೆಗಳು, ವ್ಯವಹಾರ ಕೇಂದ್ರಗಳು ಆಕಾಶ ಯಜ್ಞದ ಪೂರ್ಣಾಹುತಿಗಳಾಗಿದ್ದವು. ದ್ವಿತೀಯರಂಗದ ಪೂರ್ವ ಸೂಚಿಕೆಯಾದೀ ಆಕಾಶ ಹೊಡೆತಗಳು—ತೆನೆ ಕೊಯ್ಯುವ ಮೊದಲು ಸೆಗಣಿ ಸಾರಣೆ ತೆಗೆಯುವ ಕೃತ್ಯಕ್ಕೆ ಸಮಾನ! ನಾಜೀ ಯುದ್ಧದ ಕೊನೆಯ ಅಂಕ ಹಾಗೂ ನಿರ್ಣಯಾತ್ಮಕ ಕುಸ್ತಿಯಾದ ಯುರೋಪು ಧಾಳಿಯ ದಿನ ಸಮೀಪಿಸಿತೆಂದೂಹಿಸಬಹುದು.

ಸದ್ಯದಲ್ಲೇ ರಂಗಭೂಮಿಗೆ ಬರಲಿರುವುದು
'ಸ್ವಾಮಿಯ ಸೋಲು'
ಅತ್ಯಾಧುನಿಕ ಸಾಮಾಜಿಕ
ನಾಟಕ
ಮಾಹಿತಿಗೆ ಬರೆಯಿರಿ:
X ರಾಮಕೃಷ್ಣ ಥಿಯೇಟರ್
ಲಿಮಿಟೆಡ್, ಉಡುಪಿ.

The Victory Club
Both Vegetarian & Non-vegetarian dishes
Old Post office Building,
VICTORY CLUB ROAD, UDIPI.
(Furnishing Homes & Estats Ltd)
ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ
ಮತ್ತು ವಿಶ್ರಾಂತಿ ಗೃಹ.
ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.
ವಿಕ್ಟರಿ ಕ್ಲಬ್
ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.
ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

ದಿವಂಗತ ಡಾ। ಸಿ. ವಿಜಯ ರಾಘವಾಚಾರ್

ಭಾರತದ ಪ್ರತಾಪಶಾಲೀ ಪಿತಾಮಹ!

'ಸೇಲಮ್ ರಾಘವಾಚಾರ್.' 'ಹಿರಿಯಜ್ಜ' ಎಂದು ಇತ್ತೀಚೆಗಿನ ಕೆಲವು ವರುಷಗಳಲ್ಲಿ—'ಧರ್ಮವೀರ ತರುಣ' 'ಕಾಂಗ್ರೆಸ್ ಅಗ್ರಗಾಮಿ' ಎಂದು ತನ್ನ ಜೀವಮಾನದ ಆದಿಭಾಗದಲ್ಲಿ—ಸಂಬೋಧಿಸಲ್ಪಡುತ್ತಿದ್ದ ಡಾ। ಸಿ ವಿಜಯ ರಾಘವಾಚಾರ್ಯರು—ಕಾಂಗ್ರೆಸ್ ಮತ್ತು ಹಿಂದೂ ಮಹಾಸಭೆಗಳ ಒಂದು ಕಾಲದ ಅಧ್ಯಕ್ಷರು—ತನ್ನ 93ನೇ ಪರಿಪಕ್ವ ವಯಸ್ಸಿನಲ್ಲಿ ಕಳೆದ ತಾ. 19ನೇ ರಾತ್ರಿ ಸೇಲಮಿನಲ್ಲಿ ಜೀವನ ಯಾತ್ರೆಯನ್ನು ಮುಗಿಸಿದರು. ಹಲವು ಏರುತಗ್ಗುಗಳನ್ನು ಎದೆಗಾರಿಕೆಯಿಂದ ದಾಟಿ ಬಂದಿದ್ದ ದೀರ್ಘ ಪ್ರಯಾಣ—ಆಚಾರ್ಯರ ಜೀವನ. ಕೆಲವು ದಶಮಾನಗಳ ಹಿಂದಿನ ಭಾರತ ಪುರುಷ ಸಿಂಹಗಳ ಪಂಕ್ತಿಯಲ್ಲಿ ಆಚಾರ್ಯರೂ ರಾಜಿಸಿದ್ದರು. ನೌರೋಜಿ, ಹ್ಯೂಮ್, ವೆಡ್ಡರ್ ಬರ್ನ್, ಬೆನರ್ಜಿ, ಮಾಲವೀಯ, ತಿಲಕ, ಅನಂತಾಚಾರ್ಲು, ಮುಧೋಳ್ಕರ್, ಶಂಕರನ್ ನಾಯರೇ ಮೊದಲಾದವರ ನಡುವೆ ವಿಜಯ ರಾಘವಾಚಾರರನ್ನು ಗಣಿಸದೆ ಬಿಟ್ಟರೆ, ಆ ಕಾಲದಲ್ಲದೊಂದು ತಪ್ಪು ಲೆಕ್ಕವೆನ್ನಿಸುತಿತ್ತು. ಗಡಿಕಲ್ಲು ಬಳಿಗೆ ಬಂದಂತಿದ್ದ ಅಷ್ಟು ವಯಸ್ಸಿನ ಅವರ ಮರಣದಿಂದ ಹಿಂದೂ ದೇಶವೀಗ 'ಮನೆಬೆಳಗಿದ ಮುದಿಯಜ್ಜ'ನನ್ನು ಕಳಕೊಂಡಂತಾಗಿದೆ. ಶುದ್ಧ ಸನಾತನೀ ವಂಶದಲ್ಲಿ ಹುಟ್ಟಿದ್ದ ಅವರಲ್ಲಿ ಹಿಂದೂ ಧರ್ಮಾಭಿಮಾನವು ರಕ್ತಗತವಾಗಿ ಬಂದಿತ್ತು; ದಾಸ್ಯಪೀಡಿತ ವಾತಾವರಣದಲ್ಲಿ ಬೆಳೆಯುವಾಗ ದೇಶಾಭಿಮಾನವು ಹೃದಯದೊಡನೆ ವಿಕಾಸಗೊಂಡಿತ್ತು—ಹೀಗಾಗಿ ಆಚಾರ್ಯರು ಮಾತುಕಲಿಯುವಾಗಲೇ ಧರ್ಮ ಮತ್ತು ರಾಷ್ಟ್ರಗಳ ಸ್ವಾತಂತ್ರ್ಯ ಘೋಷಣೆಯನ್ನು ಕಲಿತರೆನ್ನಬಹುದು. ಆ ಕಾಲದ ನ್ಯಾಯವಿಧಾಯಕ ಸಭೆಗಳಲ್ಲಿ ಆಚಾರ್ಯರ ಘನವ್ಯಕ್ತಿತ್ವ—ಅಮೋಘ ವಕ್ತೃತ್ವವು ಸ್ವಪಕ್ಷೀಯವಾದಗಳಿಗೊಂದು ಆಧಾರಸ್ತಂಭವಾಗಿದ್ದಂತೆಯೇ ವಿಪಕ್ಷೀಯ ವಾದಗಳಿಗೆ ಪಾತೀಕಂಭವಾಗಿ ಹೆಸರು ಪಡೆದಿದ್ದಿತು. ಕಾಂಗ್ರೆಸ್ ಅಧ್ಯಕ್ಷರಾಗಿ ಅವರು ಸಲ್ಲಿಸಿದ ದೇಶ ಸೇವೆಯು ಅಮೋಘವಿದ್ದಿತು. ದಕ್ಷಿಣ ಭಾರತದಲ್ಲಿ ವರ್ಚಸ್ಸು ಮತ್ತು ವಯಸ್ಸನ್ನು ತೂಗಿನೋಡಿ ಕೊಡುವ ಯಾವ ಗೌರವಕ್ಕಾದರೂ ವಿಜಯ ರಾಘವಾಚಾರ್ಯರಿರುವ ವರೆಗೆ ಪ್ರಥಮ ಬಾಧ್ಯರವರೇ. ಇಂಥವರನ್ನು ಕಳಕೊಂಡ ಹಿಂದೂದೇಶಕ್ಕಿನ್ನು ಆ ತಲೆಮಾರಿನವರುಳಿದಿರುವುದು ಪಂಡಿತ ಮಾಲವೀಯರೊಬ್ಬರೇ.

ಅವರ ಪಾಠಶಾಲೆ ಮಂಗಳೂರು!

ಪಂಜಾಬಿನ ಜಾಲಿಯಾನ್‌ವಾಲಾಬಾಗು ಮೋಹನದಾಸ ಗಾಂಧಿಯನ್ನು ಮಹಾತ್ಮಾ ಗಾಂಧಿಯಾಗಿ ಮಾರ್ಪಡಿಸಿತು; ನಮ್ಮ ಜಿಲ್ಲೆಯ ಮಂಗಳೂರು ಲೆಕ್ಚರರ್ ರಾಘವಾಚಾರಿಗೆ ಒಬ್ಬ ದೇಶಭಕ್ತ ರಾಘವಾಚಾರ್ ಆಗಿ ತಿದ್ದಿತು! ವೀರಪುತ್ರರನ್ನು ಪಡೆದ ಉತ್ತಮ ಕೀರ್ತಿ ಮಂಗಳೂರಿಗಿಲ್ಲವಾದರೂ, ಸಿ. ವಿ. ಆಚಾರ್ಯರಂತಹ ವೀರ ಶಿಷ್ಯರನ್ನು ಪಡೆದ ಯಶಸ್ಸು ಅದರ ಪಾಲಿನದು. ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ 1875ರಲ್ಲಿ 'ಗ್ರೇಜ್ಯುವೇಟ್' ಆದೊಡನೆಯೇ ಆಚಾರ್ಯರು ಮಂಗಳೂರಿನ ಗವರ್ನಮೆಂಟ್ ಕಾಲೇಜಿನಲ್ಲಿ 'ಲೆಕ್ಚರರ್' ಆಗಿ ನೇಮಕಹೊಂದಿದರು; ಮೂರು ವರುಷ ಆ ಸ್ಥಾನದಲ್ಲಿದ್ದು ವಿದ್ಯಾರ್ಥಿಗಳ ಅನನ್ಯ ಭಯ ಭಕ್ತಿ, ಪಟ್ಟಣಿಗರ ಗೌರವಗಳನ್ನು ಸಂಪಾದಿಸಿದ್ದರು. ಅವರಿ ಗವರ್ನಮೆಂಟ್ ಕಾಲೇಜಿನ ವಾತಾವರಣವು ಇಪ್ಪತ್ತೈದರ ಯುವಕ ಆಚಾರ್ಯರ ಕರುಳಲ್ಲಿ ಕ್ರಾಂತಿ ಬೀಜವನ್ನೂರಿತು; ಆಚಾರ್ಯರು ಶಾಶ್ವತವಾಗಿ ನಿದ್ರಿಸುವ ವರೆಗೂ ಕೆರಳಿಕೊಂಡೇ ಇದ್ದ ಅವರ ಆತ್ಮಾಭಿಮಾನ, ದೇಶಾಭಿಮಾನಗಳು ಪ್ರಥಮತಃ ಎಚ್ಚತ್ತುದು ಮಂಗಳೂರಲ್ಲಿ! ಗವರ್ನಮೆಂಟ್ ಕಾಲೇಜಿನ ಅಂದಿನ ಯುರೋಪಿಯನ್ ಪ್ರಿನ್ಸಿಪಾಲರಲ್ಲಿದ್ದ ಹಿಂದುಗಳ ಮೇಲಿನ ತಾತ್ಸಾರಬುದ್ಧಿಯು ಆಚಾರ್ಯರ ಅಭಿಮಾನಕ್ಕೆ ಧುರೀಣ್ಯವಿತ್ತಿತು; ಘರ್ಷಣೆಗಾರಂಭವಾಯಿತು. ಕೊನೆಗೆ ಯುರೋಪಿಯನ್ ಪ್ರಿನ್ಸಿಪಾಲರ ಜಾತಿದ್ವೇಷ ವರ್ತನೆಯ ನಿಷೇಧಾರ್ಥವಾಗಿ ಆಚಾರ್ಯರು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟರು; 'ನೌಕರಿ'ಯನ್ನು ಮಾಡಲಾರೆನೆಂಬ ಶಪಥಪೂರ್ವಕ ತಿಲಾಂಜಲಿಬಿಟ್ಟರು. ಹೀಗೆ ಮಂಗಳೂರಲ್ಲಿ ಬೀಜರೂಪವಾಗಿ ನೆಲೆಕೊಂಡಾಗ ಕೆಲಸ ಬಿಡಿಸಿದ ಸ್ವಾಭಿಮಾನವು, ಮುಂದೆ ಚಿಗುರಿ ಬೆಳೆದು ಫಲಿಸುತ್ತಾ ಒಂದಂತೆ ತದನುಗುಣವಾದ ರಾಷ್ಟ್ರವ್ಯಾಪಿ ಮಹತ್ಕಾರ್ಯಗಳನ್ನು ಆಚಾರ್ಯರಿಂದ ಮಾಡಿಸಿತು.

ಸೇಲಂ ವೀರ.

ಮಂಗಳೂರಿನಿಂದ ಕಾಲ್ತೆಗೆದವರಿಗೆ ಸೇಲಮಿನಲ್ಲಿ ವಕೀಲಿ ವೃತ್ತಿ—ಸಮರ್ಥ ವಕೀಲನೆಂಬ ಪ್ರಸಿದ್ಧಿ—ಅಲ್ಲಿಯ 1882ರ ಮಸೀದಿಯಿದಿರ ಸಂಗೀತಪಂದ್ಯ ಹಿಂದೂ-ಮುಸ್ಲಿಮ್ ಮಹಾದಂಗೆಯಲ್ಲಿ ಹಿಂದುಗಳ ನಾಯಕತ್ವವಹಿಸಿ 10 ವರುಷಗಳ ಸಜೆ—ಹೈ ಕೋರ್ಟು ಸಾಧನೆಯಿಂದ ತನ್ನ ಹಾಗೂ ತನ್ನ ಪಕ್ಷೀಯರ ಬಂಧ ವಿಮೋಚನೆ—ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲುಗಳ ಸದಸ್ಯನಾಗಿ ಜನಹಿತ ಸಾಧನೆ—ಕಾಂಗ್ರೆಸ್ ಸ್ಥಾಪಕರಲ್ಲೊಬ್ಬನಾಗಿದ್ದು 1920ರ ಆ ಚರಿತ್ರಾರ್ಹ ಹಾಗೂ ಕಾಂಗ್ರೆಸ್ ಜೀವಮಾನದ ಹೊಸಾಧ್ಯಾಯಾರಂಭದ ನಾಗಪುರ ಕಾಂಗ್ರೆಸಿನ ಅಧ್ಯಕ್ಷತೆ—ಅಂತೂ ಅಖಿಲ ರಾಷ್ಟ್ರೀಯ ರಂಗದಲ್ಲಿ 50 ವರುಷಗಳಿಗೆ ಮೇಲ್ಪಟ್ಟ ಸೇವೆ ಸಲ್ಲಿಸಿ, ತನ್ನ 93ನೇ ವಯಸ್ಸಿನಲ್ಲಿ—ಕೆಲಸದ ಅವಧಿಯ ಕೊನೆಯ ಮಿನಿಟಿನವರೆಗೂ ದುಡಿದು ಸಂಬಳ ಪಡೆಯಲು ಹೊರಟ ಕೆಲಸಗಾರನಂತೆ—ರಾಷ್ಟ್ರಪಿತಾಮಹ ಕಳೇಬರವನ್ನುಳಿದರು. ಧನ್ಯಜೀವನ! ಕೃತಾರ್ಥಜೀವಿ!

ಸ್ವೀಕಾರ-ವಿಮರ್ಶೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಉಡುಪಿ.

ಮೇಲಿನ ಜೀವವಿಮಾ ಸಂಸ್ಥೆಯ 1943ನೇ ದಶಂಬರ 31ಕ್ಕೆ ಅಂತ್ಯವಾಗುವ ವರುಷದ ಲೆಕ್ಕಪತ್ರಗಳ ತಃಖ್ತೆಯನ್ನೊಳಗೊಂಡ ವರದಿಯು ಪರಿಶೀಲನೆಗಾಗಿ ಬಂದಿದೆ. ವರದಿಯಲ್ಲಿ ನಮೂದಿಸಲ್ಪಟ್ಟಿರುವ ಆಯವ್ಯಯ, ಋಣ ಮೂಲ, ಕಾರ್ಯ ಬಾಹುಳ್ಯ ಮೊದಲಾದುವುಗಳ ಅಂಕೆ ಸಂಖ್ಯೆಗಳಲ್ಲಿ ಈ ಕಂಪೆನಿಯು ತನ್ನ ವ್ಯಯವನ್ನು ಹಿಡಿತದಲ್ಲಿಟ್ಟು, ಕಾರ್ಯಕ್ಷೇತ್ರ ವಿಸ್ತಾರ ಮತ್ತು ಜನತಾವಿಶ್ವಾಸ, ಸಹಕಾರಗಳ ಸಂಪಾದನೆಯಲ್ಲಿ ಅತ್ಯುದಾರ ಧೋರಣೆ ವಹಿಸಿರುವ ಅಭಿನಂದನೀಯಾಂಶಗಳು ಕಂಡುಬರುತ್ತಿವೆ. 1938ನೇ ದಶಂಬರಾಂತ್ಯದ ವರೆಗಿನ ಅದರ ಪ್ರಥಮ ಚಾತುರ್ವಾರ್ಷಿಕ ವ್ಯಾಲುಯೇಶನ್‌ನಲ್ಲಿ ಕಂಪೆನಿಯ ಸೊತ್ತುಗಳಿಗೆ ನೇಕಡಾ 3½ ದರದ ಬಡ್ಡಿಯನ್ನು ಹುಟ್ಟುವಳಿ ಎಣಿಸಿದ್ದರೆ, ದ್ವಿತೀಯ ಚಾತುರ್ವಾರ್ಷಿಕ ಮೌಲ್ಯ ನಿರ್ಣಯದಲ್ಲಿ ನೇಕಡ 3ರ ದರದಲ್ಲೇ ಬಡ್ಡಿ ಹಿಡಿಯಲಾಗಿದೆ. ಹೀಗೆ ಕಡಿಮೆ ದರದ ಬಡ್ಡಿ ಹಿಡಿದೂ ಕಂಪೆನಿಯು ಮಿಗಿತಾಯವನ್ನು ತೋರಿಸಲು ಶಕ್ಯವಾಗಿರುವುದು ಅಭಿನಂದನೀಯ. ಕಂಪೆನಿ ಆಸ್ತಿಗಳ ಒಟ್ಟು ಮೊತ್ತವು 1942ರಲ್ಲಿ ರೂ. 5,66,816-7-6 ಇದ್ದುದು ವರದಿಯ ವರುಷದಲ್ಲಿ ರೂ. 8,01,386-7-9ಕ್ಕೇರಿದೆ. ಈ ಪೈಕಿ ಇಂಡಿಯಾ ಸರಕಾರದ ಸೆಕ್ಯೂರಿಟಿಗಳಲ್ಲಿ ರೂ. 4,97,113-12-0; ಇಂಡಿಯದ ಪ್ರಾಂತಿಕ ಮತ್ತು ಸಂಸ್ಥಾನಿಕ ಸೆಕ್ಯೂರಿಟಿಗಳಲ್ಲಿ ರೂ. 16,111-4-0; ಇತರ ದೇಶೀಯ ಸಂಸ್ಥೆಗಳ ಶೇರುಗಳಾಗಿ ರೂ. 1,21 469-6-0 ಹಾಕಲ್ಪಟ್ಟಿವೆ. ಭದ್ರತೆಯುಳ್ಳ ಸಾಲಗಳು, ಜೀವಪಾಲಿಸಿಗಳ ವಿನಿಯೋಗಿಸಿರುವ ಮೊತ್ತ, ಹಳೇ ಚರ ಸೊತ್ತುಗಳಿಗೆ ಬೆಲೆ ತಗ್ಗಿಸಿ ಕಟ್ಟಿದ ಮೌಲ್ಯ ಮೊದಲಾದುವುಗಳು ಸೇರಿ ಮೇಲಿನ ನಿಧಿಯಷ್ಟಾಗುತ್ತದೆ. ಲೈಫ್ ಫಂಡಾಗಿ ರೂ. 7,40,000-5-10ನ್ನು ಇರಿಸಿದೆ. ತೆರಬೇಕಾಗಿರುವ ವಿಮಾಪತ್ರಗಳ ಮೌಲ್ಯ ರೂ. 44 862-8-0. ವರದಿಯ ವರುಷದಲ್ಲಿ ಕಂಪೆನಿಯು ರೂ. 36,60,550 0-0ರ ಹೊಸ ವಿಮಾ ಪೊಲಿಸಿಗಳನ್ನು—ಹಿಂದಿನ ವರುಷದ ಮೂರು ಪಾಲಿಕ್ಕು ಅಧಿಕವನ್ನು—ಕೊಟ್ಟಿದೆ. ಇದು ಮತ್ತು ಪ್ರಗತಿಸೂಚಕವಾದ ಇಂತಹ ಇತರ ಅಂಕೆಸಂಖ್ಯೆಗಳು ಈ ಜೀವವಿಮಾ ಸಂಸ್ಥೆಯು ಸಂಪಾದಿಸಿರುವ ಜನತಾವಿಶ್ವಾಸ ಮತ್ತು ಅದರ ಉತ್ಕೃಷ್ಟ ಕಾರ್ಯಕಲಾಪಗಳಿಗೆ ನಿದರ್ಶನಗಳಾಗಿವೆ. 'ಕೆನರಾ ಮ್ಯೂಚುವಲ್'ಗೆ ಸರ್ವತೋಮುಖ ಶ್ರೇಯಸ್ಸನ್ನು ಕೋರುತ್ತೇವೆ.

ಬೇಕಾಗಿದ್ದಾರೆ :—(WANTED.)

ಎಸ್. ವಿ. ಎಚ್. ಹೈಸ್ಕೂಲ್, ವಿಶ್ವೇಂದ್ರನಗರ, ಇನ್ನಂಜೆ, ಕಾಪು, ದ. ಕ.

3 ಜನ ಎಲ್. ಟಿ. ಪಾಸಾದವರೂ, 1 ಜನ ಸೆಕೆಂಡರಿಟ್ರೈನ್ಡ್ ಉಪಾಧ್ಯಾಯ, ಉಪಾಧ್ಯಾಯಿನಿಯರೂ, ಟೈಪ್‌ರೈಟಿಂಗ್ ಬಲ್ಲ ಅನುಭವಸ್ಥ ಗುಮಾಸ್ತರೊಬ್ಬರೂ (ಎಲ್ಲರೂ ಕನ್ನಡ ಬಲ್ಲವರು) ಬೇಕಾಗಿದ್ದಾರೆ. ವೇತನ ಯೋಗ್ಯತಾನುಸಾರ.

ಅರ್ಜಿದಾರರು, ಯೋಗ್ಯತೆ, ಪ್ರಾಯ, ಜಾತಿ, ಅನುಭವ ಇತ್ಯಾದಿಗಳೊಡನೆ ತಾ. 10—5—44ರೊಳಗೆ ಅರ್ಜಿಯನ್ನು ಕಳುಹಿಸತಕ್ಕದ್ದು.

ಶ್ರೀನಿವಾಸ ಮಿತ್ತಂತಾಯ
ಮೆನೇಜರ್,

ಇನ್ನಂಜೆ, 13—4—'44

ಮುಟ್ಟುಗುಳಿಗೆ

ಹಲತಿಂಗಳಿಂದ ಕಟ್ಟಿಹೋಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದಾದರೂ—'ಕುಮಾರಿ' (PILLS) ಪ್ರತಿ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗಿಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು' ಸಾವಿರಾರು ಮಂದಿ ತೃಪ್ತರಾಗಿದ್ದಾರೆ. ಬೆಲೆ, ರೂ. 3/- ಕ್ಯೂರಿಡ ಕೇಸುಗಳಿಗೆ ರೂ. 5. (ವಿ. ಪಿ. 12 ಆಣೆ ಅಲಾಯಿದ)

Mrs. P DEVEE, F.D.S., (N)
TOLLYGUNGE, CALCUTTA.
ಸ್ಟಾಕಿಸ್ಟ್: Popular Stores,
P B 60, MANGALORE

ನವಯುಗ

ಚಂದಾ ವಿವರ.

ವರ್ಷಕ್ಕೆ (ಸ್ಥಳೀಯ) 3-12-0
(ಟಪ್ಪಾಲು ದ್ವಾರ) -4-8-0

ಚಂದಾ ಹಣ ಬಾಕಿಯಿರುವವರು ದಯಮಾಡಿ ಅದನ್ನು ಕೂಡಲೇ ಕಳುಹಿಸಿ ಕೊಡುವಂತೆ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director.

The Canara Banking Corporation Limited.

(Incorporated in British India.)

ESTD 1906.

Head Office UDIPI.

ANNOUNCEMENT.

A Branch of the bank will be opened at tobacco street, CALICUT on 26-5-1944.

ಉಡುಪಿ, ಗುರುವಾರ ೨೭-೪-೧೯೪೪

ಬೊಂಬಾಯಿ ದುರಂತ

ಕಳೆದವಾರ ಅರ್ಧಪೂರ್ಣ ವಾರ್ತೆಯನ್ನು ಮಾತ್ರ ಕೊಡಲು ನಮ್ಮಿಂದ ಸಾಧ್ಯವಾಗಿದ್ದ, ಬೊಂಬಾಯಿ ಹಡಗ ಧಕ್ಕೆಯ ಅಗ್ನಿಪ್ರಳಯದ ಕುರಿತು ಆ ಮೇಲೆ ದೊರೆತ ವಾರ್ತೆಗಳು ನಿರೀಕ್ಷೆಗೂ ಮಿಕ್ಕಿ ಭೀಕರವಿವೆ; ಇಡೀ ದೇಶಕ್ಕೊಂದು ಅಪಶಕುನವಾಗಿ ಪರಿಣಮಿಸಿ ರೋಮಾಂಚವನ್ನೆಬ್ಬಿಸಿವೆ. ಬೊಂಬಾಯಿಯು ಅಖಿಲ ಭಾರತದ ಸರ್ವ ಪ್ರಥಮ ವ್ಯಾಪಾರ ಕೇಂದ್ರ ನಗರ ಅಲ್ಲವೆ. ಈ ಪ್ರಳಯಾಗ್ನಿಯು ರಾಷ್ಟ್ರದ ಹೃದಯಾಗ್ನಿಯಾಗಿ ಪರಿಣಮಿಸಿದುದರಲ್ಲಿ ಆಶ್ಚರ್ಯವಿಲ್ಲ. ಕೊನೆಯ ಅಧಿಕೃತ ಪ್ರಕಟಣೆಯಂತೆ ಸತ್ತ ಮರ್ತ್ಯರುಗಳ ಸಂಖ್ಯೆ 3?7, ಜೆಂಕಿಜಹಂಗಿರ್ ಗೋಕುಲದಾಸ ಆಸ್ಪತ್ರೆಯ ಮಂಚ ಹಿಡಿದ ಆಸಕ್ತಗೊಳಗಾದ ನಿರಪರಾಧಿಗಳು 1806 ಆದರೆ ಈ ಅಂಕೆಗಳು ಮರಣ ಲೆಕ್ಕದ ಒಂದು ಸಂಗ್ರಹ ಹೊರತು ಪೂರ್ಣ ಮೊತ್ತವಲ್ಲವೆಂಬುದನ್ನು ಮರೆಯಬಾರದು. ಬೆಂಕಿ ನಂದಿಸಲು ಹೋದ ಕೋರ್ಪರೇಶನ್ ಅಗ್ನಿಶಾಮಕದಳಗಳ 1?ಮಂದಿ ಅಲ್ಲಿಯೇ ಸತ್ತು, ನ?ಮಂದಿ ಸತ್ತಿರಬೇಕೆಂದು ನಂಬಲಾಗುವಂತೆ ಕಾಣೆಯಾಗಿ, 71 ಮಂದಿ ಗಾಯಗೊಂಡಿದ್ದಾರೆಂದು ಮೇಯರ್ ಶ್ರೀ ನಗಿನ್‌ದಾಸ್ ಟಿ ಮಾಸ್ತರ್ ಅಂದಿದ್ದಾರೆ. ಅಲ್ಲಿಯ ಧಕ್ಕೆಗಳ ಜನರಲ್ ಮೆನೇಜರ್ ಲೆಫ್ಟಿನೆಂಟ್ ಕರ್ನಲ್ ಸಾಡ್ಲರರೇ ನೋಡಲಾದ ಹೆಚ್ಚಿನ ಅಧಿಕಾರಿಗಳು [illegible], ಸಮೀಪದ [illegible] ಜನಸಂದಣಿಗಳ ಬೆಂಕಿ ಶಮನಕ್ಕಾಗಿ ಹೋದವರ ಪಾಡು ಹಿ ಗಾಗಿರುವಾಗ, ಆಕಸ್ಮಿಕವಾಗಿ ಅನಾಹುತಕ್ಕೊಳಗಾದ ಅಲ್ಲಿಯ ಪಟ್ಟಣ ಜನಸಂದಣಿಯಲ್ಲಿ ಎಷ್ಟು ಜೀವಗಳು ಉರಿದು ಮುರಿದು ಹೋಗಿರಬಹುದೆಂಬುದನ್ನು ಊಹಿಸಬಹುದು! ಮಾತ್ರವಲ್ಲ, ಈ ಆಕಸ್ಮಿಕಾಗ್ನಿಗೆ ಅಜ್ಞಾನದ ಗಾಳಿಯೂ ಬೀಸಿತೆಂಬುದನ್ನು ಕೇಳುವಾಗ ಇನ್ನಷ್ಟು ವೇದನೆಯಾಗುತ್ತಿದೆ "ದುರ್ಧೈವವೆಂದರೆ ಸ್ಫೋಟವನ್ನು ಕೇಳಿದ ಜನರು ವಿನೋದ ನೋಡೋಣವೆಂದು ಹಿಂಡುಗಟ್ಟಿ ಆ ಕಡೆಗೆ ಧಾವಿಸಿಬಂದರು" ಎಂದು ಅನಾಹುತದ [illegible] ಅಲ್ಲಿಯೇ ಒಂದು ಕಟ್ಟಡದಲ್ಲಿದ್ದ ಸೇವಾಜೀವಿ, ಯಥಾರ್ಥವಾದಿ ಶ್ರೀ. ಎ. ಸಿ. ಧಕ್ಕರರನ್ನು ತಿಳಿಸಿದ್ದಾರೆ, ಆಕಸ್ಮಿಕ ಅನಾಹುತ ಅತಿಸಾಮಾನ್ಯ ಸಹಜ. ಅಜ್ಞಾನ ಮೋಹ ಅಂಧ ಸಮಾನಿಧಿಯ ಮಾನವಧ್ವಂಸಾತ್ಮಕ ಶಕ್ತಿಗಳ ಮೂಲಸಿದು. ಅದರಿಂದಾದ ಹಾನಿಯನ್ನು ನೂರರ ಸಂಖ್ಯೆಯಲ್ಲೇ ಗುಣಿಸಿದರೆ ಅದೂ ಒಂದು ಅಜ್ಞಾನವಾಗಬಹುದು "ಅತ್ಯವಸರದಿಂದ ರಕ್ಷಣೆ ದೊರೆಯಬೇಕಾದ ನಿರ್ಗತಿಕರು ಕಡಿಮೆಯೆಂದರೆ 20 ಸಾವಿರ ಮಂದಿ ಶ್ರೀ ಧಕ್ಕರರ ಅಂದಾಜು. ಹಿಂದೀ, ಬ್ರಿಟಿಷ್ ಮತ್ತು ಅನ್ಯರಾಷ್ಟ್ರೀಯ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರಾತಿನಿಧ್ಯ ಪಡೆದ 9 ಮಂದಿಯುಳ್ಳ ಸಿನಾಯತಜ್ಞರ ಸಮಿತಿಯೊಂದು ಅಗ್ನಿಪೀಡಿತ ಸ್ಥಳವನ್ನು ಸಂದರ್ಶಿಸಿ, ನೂರು ನಷ್ಟವು 100 ಕೋಟಿ ರೂ ಗಳಷ್ಟಾಗಬಹುದೆಂದು, ಸ್ಥೂಲ ಪರಿಮಾಣ ಕಟ್ಟಿದೆ. ಈ ಸಾಮೂಹಿಕ ಮೃತ್ಯುವಿಗೆ ಒಳಗಾದ [illegible] ಹೊರಡಿಸಿ ಒಯ್ಯುವ, ಹೊರತು ಅವರನ್ನಾರೂ ಅಲ್ಲಿಂದ ಹೊರಡಿಸಿ ತರಲಾರರು! ಆದರೆ ತಮ್ಮಚೇತನಾವಧಿಯ ದುಡಿಮೆಯ ಸರ್ವಸ್ವವನ್ನು ಕಳಕೊಂಡು ನಿರ್ಗತಿಕರಾದವರು ಸಾವಿರ ಸಂಖ್ಯೆಯಲ್ಲಿ-ಇಡೀ ರಾಷ್ಟ್ರದ ಮೂಲೆಮೂಲೆಗಳಿಂದ ವ್ಯಾಪಾರೋದ್ಯಮ ನೌಕರಿಗಳಿಗಾಗಿ ಬೊಂಬಾಯಿಗೆ ಹೋಗಿ ನೆಲಸಿದವರಿದ್ದಾರೆಂಬುದನ್ನು [illegible] ಲಕ್ಷಸಂಖ್ಯೆಯಲ್ಲಿ-ಇದ್ದಾರೆ. ಇಂಥವರಿಗೆ ಶಮನಾತ್ಮಕ ಪರಿಹಾರ ಪ್ರಾಯ ಒದಗಿಸಲು ನಿರ್ಧಾರ ನಡೆದಿದೆ ವೈಸರಾಯರು, ರಾಜರುಗಳೇ ಆದಿಯಾಗಿ, ಸಾವಿರ ಸಂಖ್ಯೆಯಂದ ಸಹಾಯ ಒದಗುತ್ತಿದೆ. ಆದರೆ ಅನಾಹುತದ ಪರಿಮಾಣದ ಮೇಲಿಂದ ಇಷ್ಟರವರೆಗಿನ ಪರಿಹಾರ, 'ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ'ಯೇ ಸರಿ. ಪೀಡಿತರ ದುಃಖ ಶಮನಕ್ಕೆ ಸಾಕಾಗುವಷ್ಟು ಸಹಾಯನಿಧಿ ಬೆಳೆಯುವದೆಂದೂ, ದುಃಖ ನಿವಾರಣದ ಹೊಣೆ ಯಾರಿದ್ದರೂ ಅದರ ಶಮನದ ಜವಾಬ್ದಾರಿಯನ್ನು ಸರಕಾರವು ಹೊರುವದೆಂದೂ ಆಶಿಸುತ್ತೇವೆ.

ಇನ್ನೂ-ಯಾವುದೊಂದು ಚಿಹ್ನೆಯೂ ಗೋಚರಿಸದಿರುವ ಈ ದುರಂತದ ಹೇತು ಯಾವುದೆಂಬುದೇ ಒಂದು ಮಹಾ ಸಮಸ್ಯೆಯಾಗಿದೆ. ಬೆಂಕಿ ಹೇಗೆ ಬಿತ್ತೆಂಬುದರ ತಿಳುವಳಿಕೆ ಮಾತ್ರದಿಂದ ಸಂದಿಹೋಗ [illegible] ಪಸರಿಸಿಯಾಗಿದೆ. ಆದರೆ ಯಾವುದಾದರೊಂದು ಅಲ್ಪ ಪ್ರಮಾದವು-ಅಗ್ನಿಯಾವಿರ್ಭಾವ ಹೇಗಾಗಿದ್ದರೂ ಅದಕ್ಕೂ ಅಲಕ್ಷ್ಯವೇ ಕಾರಣವೆಂಬುದು ನಿರ್ವಿವಾದ-ಎಂತಹ ಭಯಂಕರ ಪರಿಣಾಮವನ್ನುಂಟು ಮಾಡಬಲ್ಲುದೆಂಬುದನ್ನು ನಾವೀಗ ಅನುಭವಿಸುತ್ತಾ ಬರುತ್ತಿದ್ದೇವೆ. ಒಂದು ಹೋರಾಟದ ಅನಿವಾರ್ಯ ಸಂಕಷ್ಟಗಳನ್ನನುಭವಿಸ ಬಹುದು; ಆದರೆ ಅಸಡ್ಡೆಯಿಂದಾಗುವ ಅಪಮೃತ್ಯು ಅಸಹನೀಯ. ಅಟ್ಲಾಂಟಿಕ್, ಶಾಂತ ಸಮುದ್ರಗಳಲ್ಲಾಗುತ್ತಿರುವ ಹಡಗನಷ್ಟಗಳು ಅಸಿನಾಯರ್-ಪರ್ಲ್ ಹಾರ್ಬರ್ ದುರಂತವು ಅಸಹನೀಯ. ಅಂತೆಯೇ ಬೊಂಬಾಯಿ ದುರಂತದ ಕಾರಣವಾವುದೇ ಇದ್ದರೂ ಕ್ಷಮಾರ್ಹವಾದುದಲ್ಲ. ಆದ್ದರಿಂದ ಹಲವು ಜವಾಬ್ದಾರಿ ವ್ಯಕ್ತಿಗಳ ಬೇಡಿಕೆಯಂತೆ ಈ ಕುರಿತು ವಿಚಾರಣೆ [illegible].

ಬೊಂಬಾಯಿ ಧಕ್ಕೆ ಹಡಗದ ಬೆಂಕಿ ಬಂದರಿನವಲಯಕ್ಕೆ ಸಿಡಿದಂತೆ, ಅದರ ಕಿಡಿಗಳು ದೇಶದ ಮೂಲೆಮೂಲೆಗೂ ಸಿಡಿದಿವೆ! ಬೊಂಬಾಯಿ ಅಗ್ನಿ ಅನಾಹುತವು ದಕ್ಷಿಣ ಕನ್ನಡಿಗರಿಗೆ ಸ್ಥಳೀಯ ಅನಾಹುತದಂತಹ ನಷ್ಟವನ್ನೇ ತಂದೊಡ್ಡಿದೆ. ದೇಶದ ಇತರ ಭಾಗಗಳಂತೆ ಕನ್ನಡಿಗರು-ಅದರಲ್ಲೂ ದಕ್ಷಿಣ ಕನ್ನಡಿಗರು-ಬೊಂಬಾಯಿಯ ಬೇರೆಬೇರೆ ಕಡೆಗಳಲ್ಲಿ ಮುಖ್ಯವಾಗಿ ಬಂದರಿನಲ್ಲಿ ವ್ಯಾಪಾರೋದ್ಯಮಗಳನ್ನು ನಡೆಸುತ್ತಿದ್ದಾರೆ ಬೊಂಬಾಯಿಯ ಸಂಬಂಧವಿಲ್ಲದ ಹಳ್ಳಿ ಮನೆಯೇ ದಕ್ಷಿಣ ಕನ್ನಡದಲ್ಲಿಲ್ಲವೆಂದರೂ ಸಲ್ಲುವದು; ಸಾವಿರಾರು ಕುಟುಂಬಗಳ ಜೀವನ ನಿರ್ವಹಣ ಪ್ರವಾಹದ ಮೂಲ ಒರತೆಗಳಿಗೆ ಬೊಂಬಾಯಿಯೇ ಉಗಮಸ್ಥಾನ ತಮ್ಮವರ ಜೀವಾವಧಿಯ ಸಂಪಾದನೆ, ಅಮೂಲ್ಯ ಪ್ರಾಣಗಳನ್ನು ಬಲಿಗೊಂಡ ಆ ಪ್ರಳಯಾಗ್ನಿಯ ಹೆಸರಿನಿಂದ ಜಿಲ್ಲೆಯ ಹಲವೆಡೆಯಲ್ಲಿ ರೋದನವೆದ್ದಿರುವದು ಕೇಳಿಸುತ್ತಿದೆ. ಇಂಥವರೊಡನೆ ಹಾರ್ದಿಕ ಸಹಾನುಭೂತಿಯ ಸೂಚಿಸುತ್ತೇವೆ.

ದುರ್ಬೀನು

ಒಣ ಸೋಗೆ ಉದುರಿಬಿದ್ದರೆ ತೆಂಗಿನ ಮರದೊಂದು ಭಾಗವೇ ನಷ್ಟವಾದಂತಲ್ಲ; ಒಣ ಗೌರವಕ್ಕೆ ಭಂಗ ಬಂದರೂ ಅಭಿಮಾನ ಭಂಗವಾದಂತಲ್ಲ.

oo oo oo

ಕಾಲಿನ್ನೆತ್ತಿ ಇಟ್ಟರೆ ನೆಲಬಿಟ್ಟಂತಾಗುವದೆಂದು ಹೆಜ್ಜೆ ದೂಡುತ್ತಾ ಹೋದರೆ ಎಡವ ಬೇಕಾದೀತು; ಹೃದಯ ವಿಕಾಸವು ಕೇವಲ ಭ್ರಮೆಯೆಂದು ಸಂಕುಚಿತ ಭಾವನೆ ವಹಿಸಿದರೆ ಪಾಮರನನ್ನಿಸಬೇಕಾದೀತು.

oo oo oo

ಯಂತ್ರವು ಅಗ್ನಿಯನ್ನು ಧರಿಸಿಕೊಂಡಿರಬೇಕು ಹೊರತು ಬೆಂಕಿ ಕಾರಬಾರದು; ಮನುಷ್ಯನು ಕಷ್ಟ ಸಹಿಸಿಕೊಂಡಿರಬೇಕು ಹೊರತು ಕಷ್ಟವನ್ನು ವಹಿಸಿಕೊಡಬಾರದು.

oo oo oo

ಧಾವಿಸಿ ಬರುವ ಕಾರಿಗೆ ದಸ್ತ ಬಿಟ್ಟು ಕೊಡಬೇಕು; ರಿಪೇರಿಯಲ್ಲಿರುವ ಬಂಡಿಗೂ ದೂರ ಸರಿಯಬೇಕೆಂದಿಲ್ಲ; ಕಾರ್ಯಕರ್ತನಿಗೆ ತೆರವು ಮಾಡಿಕೊಡಬೇಕು; ಆಲಸಿಗನಿಗಲ್ಲ ಅಳುಕ ಬೇಕೆಂದಿಲ್ಲ.

oo oo oo

ನೂರು ಕೂಗು ಕಹಳೆಯಲ್ಲ. ನರಳಾಟದ ಪ್ರಾಸ ಸಹಜ ತರ್ಕವಲ್ಲ

ವಿಧ್ವಂಸಕ ಕ್ರಿಯಾವಾದ

ಮಿ. ಜಿನ್ನ.

ಮಿ. ಜಿನ್ನರೊಡನೆ ಕಳೆದವಾರ ನವದಿಲ್ಲಿಯಲ್ಲಿ ಸಂಧಾನ ಮಾತುಕತೆ ನಡೆಸಿ ಜೋಲುಮೋರೆಯಿಂದ ಹೊರಬಂದರಾಜಾಜಿಯವರು 'ನಮ್ಮೊಳಗಿನ ಸಂಭಾಷಣೆಯಿಂದ ಹೇಳಿಕೊಳ್ಳುವಂತಹದೇನನ್ನೂ ನಾವು ಸಂಪಾದಿಸಿಲ್ಲ'-ಎಂಬ ಏಕವಾಕ್ಯದಿಂದ ಪತ್ರಿಕಾ ಬಾತ್ಮೀದಾರರನ್ನು ಬೀಳ್ಕೊಟ್ಟಿದ್ದರು ಆದರೆ ಅವರು ಈ ಪಂಗ್ತಿಗೆ ತಲೆಬಾಲ ಹುಟ್ಟಿಸಿ 'ರಾಜಾಜಿಯ ಕೊನೆಯ ನಿರಾಶೆ'ಯಾಗಿ ಅದನ್ನು ಚಿತ್ರಿಸಿದಾಗ ಆಚಾರ್ಯರು ಅದೇನೂ ಕೊನೆಯದಲ್ಲವೆಂದು ತಿದ್ದಿದ್ದಾರೆ. ಹೇಗಿದ್ದರೂ ಬೆಣಚು ಕಲ್ಲನ್ನು ಹಿಸುಕಿ ತಿಳಿರಸ ತೆಗೆಯಲಾಗುವದಿಲ್ಲ. ಮಿ. ಜಿನ್ನರನ್ನು ಸಮಜಾಯಿಸಿ ಸಂಧಾನ ಸೌಲಭ್ಯ ಪಡೆಯುವದಸಾಧ್ಯ.

ಈಗ ಮಿ. ಜಿನ್ನರ ಘೋಷಣೆಯು ಕಟ್ಟಕಡೆಯದಾಗಿ ಪಂಜಾಬಿನ ಯೂನಿಯನಿಸ್ಟ್ ಮಂತ್ರಿಮಂಡಲದ ಭವಿಷ್ಯವೇ ಕತ್ತಲಾಗುವ ಸಂಭವ ಕಾಣುತ್ತಿದೆ ಪಂಜಾಬಿನ ಈಗಿನ ಮುಖ್ಯ ಮಂತ್ರಿ ಮಾಲಿಕ್ ಖಿಜ್ರ್‌ಹಯತ್‌ಖಾನರು—ಗತಿಸಿದ ಸರ್. ಸಿಕಂದರ್ ಹಯತ್ ಖಾನರ ಪುತ್ರ—ಲೀಗ್ ಘೋಷಣೆಯವರಾದರೂ ಪಂಜಾಬಿನ ಸಿಖ್, ಹಿಂದೂ ಪ್ರಾತಿನಿಧ್ಯವುಳ್ಳ 'ಯೂನಿಯನಿಸ್ಟ್ ಪಾರ್ಟಿ'ಯ ಪ್ರಮುಖರು. ಪ್ರಾಂತಿಕ ಪರಿಸ್ಥಿತಿಯಿಂದಾಗಿ ಇಂತಹ ಸಮ್ಮಿಶ್ರ ಮಂತ್ರಿ ಮಂಡಲವು ಅನಿವಾರ್ಯವಾಗಿ ಅಲ್ಲಿ ಸ್ಥಾಪನೆಗೊಂಡಿದ್ದಿತು. ಆದರೆ ಮಿ. ಜಿನ್ನರಿಗಲ್ಲಿ ಲೀಗ್ ಮಂತ್ರಿ ಮಂಡಲವನ್ನೇ ಕಾಣಬೇಕಾಗಿದೆ; ಲೀಗ್ ಘೋಷಣೆಯನ್ನೇ ಮೆರೆದಾಡಿಸಬೇಕಾಗಿದೆ. ಅಗಿನಂತೆ ಲೀಗಿಗೆ ವರ್ಚಸ್ಸು ಮಾತ್ರ ದೊರೆತರೆ ಸಾಲದು-ಪಂಜಾಬಿನ ಪರ್ನನಯೂ ಲೀಗಿನದೇ ಇರಬೇಕು, ಎಂದವರ ಹಠ. ಈ ಹಠಸಾಧನೆಗಾಗಿ ಮಿ. ಜಿನ್ನರು ಲಾಹೋರಿಗೆ ಧಾವಿಸಿ ಮುಖ್ಯ ಮಂತ್ರಿಗಳೊಡನೆ [illegible] ನಿರರ್ಗಳವಾಗಿ ಸಂಭಾಷಿಸಿದಾರೆ. ಸಂಧಾನಯತ್ನ ಜಯಶೀಲವಾಗದೆ, ಮುಸ್ಲಿಂ ಲೀಗು ಪಕ್ಷವು ಯೂನಿಯನಿಸ್ಟ್ ಪಕ್ಷದಿಂದ ಬೇರಾಗಿ ಯುದ್ಧ ಹೂಡುವ ಸಂಭವ ಕಾಣುತ್ತಿದೆ. ಮಿ ಮಾಲಿಕ್ ಹಯತ್‌ಖಾನರಿಗೆ ತಂದೆಯ ಮರಣಾನಂತರ ತನ್ನ ಹೆಗಲ ಮೇಲೆ ಬಿದ್ದಿರುವ ಗೃಹಕೃತ್ಯಗಳ ಹೊಣೆಯೇ ಮೂಗಿನ ವರೆಗಿದೆಯಂತೆ. ಮೇಲಾಗಿ ಜಿನ್ನರ ನಾಯಕತ್ವವನ್ನೊಪ್ಪಿಕೊಂಡಿರುವ ಅವರಿಗೀಗ ತ್ರಿಶಂಕು ಅವಸ್ಥೆಯೊದಗಿದೆ; ರಾಜಕೀಯದಿಂದಲೇ ನಿವೃತ್ತಿಹೊಂದುವಷ್ಟು ನಿಸ್ಸಹಾಯಕತೆಯಲ್ಲಿದ್ದಾರೆ. ಮಿ. ಜಿನ್ನರ ಬೊಂಬಾಯಿ ಬೆಂಕಿಯಂತಹ ಘೋಷಣೆಯು-ದೋಷಯುಕ್ತವಾಗಿದ್ದರೂ ಸರ್ವಮತೀಯ ಸಹಕಾರ ಪಡೆದಿದ್ದ ಪಂಜಾಬಿನ ಸದ್ಯದ ಮಂತ್ರಿ ಮಂಡಲವನ್ನು ಧ್ವಂಸಮಾಡುವ [illegible] ಬಹುದು. ಲಾಹೋರಿನ ಮುಸ್ಲಿಂ ವಿದ್ಯಾರ್ಥಿ ಫೆಡರೇಶನಿನ ಭಾಷಣದಲ್ಲಿ ಮಿ. ಜಿನ್ನರು ಪಂಜಾಬು ಮಂತ್ರಿ ಮಂಡಲಕ್ಕಿತ್ತಿದ್ದ ಎಚ್ಚರಿಕೆಯು 'ಹಿಟ್ಲರ್ ಅಲ್ಟಿಮೇಟಮ್' ಆಗಿ ಈಗ ಕ್ರಿಯಾರೂಪದ ಪ್ರಯೋಗದಲ್ಲಿದೆ!

ರಶ್ಯಾ ರಣರಂಗವೀಗ ಸಬ್ಧವಾಗಿದೆ

ಹೊಲ್ಲಾಂಡಿಯಾ ಆಕ್ರಮಣ.

ಆಗ್ನೇಯ ಶಾಂತ ಸಮುದ್ರ ವಲಯದಲ್ಲಿ ಡಚ್ ನ್ಯೂಗಿನಿಯಾದ ಉತ್ತರ ಕರಾವಳಿಯ ಒಂದು ಜಾಪಾನೀ ನೆಲೆಯಾ ಗಿರುವ ಹೊಲ್ಲಾಂಡಿಯಾವನ್ನು ತಾ. 21ರಲ್ಲಿ ಮಿತ್ರ ಸೇನೆಗಳಾಕ್ರಮಿಸಿಕೊಂಡಿವೆ. ಕೆಲಕಾಲದಿಂದ ವಿಮಾನ ದಾಳಿಯನ್ನನುಭವಿಸುತಿದ್ದು ಜಾಪಾನರು ಗಣಿಸದೆ ಬಿಟ್ಟಂತಿದ್ದ ಆ ದ್ವೀಪದಲ್ಲಿ ವೈರಿವಿರೋಧವೇನೂ ಇಲ್ಲ. ಈ ಆಕ್ರಮಣದ ದೆಸೆಯಿಂದ ೧ ಲಕ್ಷ ಪರೀಕ್ಷಿ ಸೇನೆಗಳನ್ನು ಬೇರ್ಪಡಿಸಿಬಿಟ್ಟಂತಾಗಿದೆ.

ಅಸ್ಸಾಮು ಯುದ್ಧ

ಕೊಹಿಮಾದಲ್ಲಿ ಆಕ್ರಮಿಸಿಕೊಂಡು ಒರತ್ತಿದ್ದ ಜಾಪಾನೀ ಸೇನೆಯನ್ನು ಇದುವರೆಗೂ ತಡೆದು ನಿಂತಿದ್ದ ಮೂಲ ಮಿತ್ರ ಸೇನೆಯ ರಕ್ಷಣಾರ್ಥವಾಗಿ ಅತಿ ಪ್ರಯಾಸದಿಂದ ಮುಂದೊತ್ತಿದ ಮಿತ್ರ ಸೇನೆಯು ಈಗ ಕೊನೆಗೆ ಸೇರಿದ ಮುಂದೂ ರಕ್ಷಣಾಕಾರ್ಯವು ಪೂರ್ಣವಾಯಿತೆಂದೂ ವಾರ್ತೆ ಬಂದಿದೆ. ಕೊಹಿಮಾದಿಂದ ದಿಮಾಪುರ ವರೆಗಿನ ರಸ್ತೆಗೆ ಇನ್ನೂ ಹಲವು ಕಡೆಗಳಲ್ಲಿ ಆತಂಕ ... ಅವುಗಳ ತೆರವುಗೊಳಿಸಲ್ಪಟ್ಟಿದೆ. ಜಾಪಾನರು ... ಮಣಿಪುರದಲ್ಲಿ ತಮ್ಮ ಸೇನೆಗಳ ಮುನ್ನಡೆಯನ್ನು ನಿರಂತರ ಗಿದ್ದು ಕ್ಷಿಪ್ರದಲ್ಲೇ ಅತಿ ಪ್ರಬಲ ಹೋರಾಟವಾಗುವ ಸಂಭವವಿದೆ. ಬಿಷೆನ್‌ಪುರ್ ಕ್ಷೇತ್ರದಲ್ಲಿಯೂ ವೈರಿಯ ಮುಂದೊತ್ತಡವನ್ನು ತಡೆಗಟ್ಟಲಾಗಿದೆ.

ಒಂದು ತಿಂಗಳ ಯುದ್ಧ.

ಅಸ್ಸಾಮಿನ ಒಂದು ತಿಂಗಳ ಹೋರಾಟದ ಫಲಿತಾಂಶವಾಗಿ ಜಪಾನರು ತಮ್ಮ ಉದ್ದೇಶ ಸಾಧನೆಯಲ್ಲಿ ವಿಫಲರಾಗಿದ್ದಾರೆ ಮತ್ತು ಆದಿಯ ಸ್ಫೂರ್ತಿಯನ್ನು ಕಳಕೊಂಡಿದ್ದಾರೆ ಎಂದು ಮಿತ್ರ ಪಕ್ಷೀಯರು ಊಹಿಸಿ ... ಜಾಪಾನೀ ಪ್ರಚಾರಕರು 'ಮಿತ್ರ ಸೇನೆಗಳು ಮೃತ್ಯುಮುಖದಲ್ಲಿವೆ' ಎಂದೂ ಲಾರ್ಡ್ ಮೌಂಟ್ ಬೇಟನರ ಸಿಲೋನ್ ಸಗಿತವು ಅವರು ಗೊಂದಲಕ್ಕೊಳಗಾದ ಸೂಚನೆಯೆಂದೂ ಪ್ರಚಾರಮಾಡುತಿದ್ದಾರೆ. ... ಮಳೆಗಾಲ ಆರಂಭಕ್ಕಿರುವ ಇನ್ನು ಮೂರು ವಾರಾವಧಿಯಲ್ಲಿ ಅಸ್ಸಾಮು ರಣವು ಬಗೆವ ಗತಿ ... ನಿರೀಕ್ಷಿಸಿದೆ.

ರಶ್ಯದಲ್ಲಿ ಸ್ತಬ್ಧತೆ

ಯುದ್ಧಾರಂಭದಿಂದ ಇದೀಗ ಮೊದಲು ಬಾರಿ ರಶ್ಯನ್ ಪತ್ರಿಕೆಗಳು ವಿಶೇಷ ಯುದ್ಧವಾರ್ತೆಗಳಿಲ್ಲದೆ ಹೊರಡುತ್ತಿವೆ; ಕಳೆದ ಒಕ್ಟೋಬರ್ ... ಇದೇ ಪ್ರಥಮ ಬಾರಿ ಸ್ಥಿತಿಬದಲಾವಣೆಯಿಲ್ಲ ಎಂಬ ವಾರ್ತೆಗಳು ... ರಣರಂಗದಿಂದ ಬರುತ್ತಿವೆ. ಅದೀಗ ಸಬ್ಧವಾಗಿದೆ. ಆದರೆ ರಶ್ಯನರು ಮುಂದಿನ ಹೊಸ ಧಾಳಿಗಾಗಿಯಾಗಲು ಈ ಅವಧಿಯನ್ನು ಉಪಯೋಗಿಸುತಿದ್ದಾರೆಂದೂ ಮಿತ್ರರು ... ಯುರೋಪಿನ ಧಾಳಿಯಾರಂಭವಾಗುವಾಗ ಅದಕ್ಕೆ ಹೊಂದಿಕೆಯಾಗಿ ರಶ್ಯನರು ಆಕ್ರಮಣಾರಂಭಿಸುವರೆಂದೂ ಊಹೆಯಿದೆ. ಆವರೆಗೆ ರಶ್ಯದ ಸ್ಟಾಲಿನ್ ಮೊದಲಾದ ಕಡೆಗಳಲ್ಲಿ ಜರ್ಮನರು ಪ್ರತಿಧಾಳಿಗಳನ್ನು ಹೂಡುತ್ತಿದ್ದಾರೆ.

ಅನುಚಿತ ಅಸಂಬದ್ಧ

ಹಿಂದುಸ್ಥಾನದ ಪ್ರಾಂತ್ಯಗಳಲ್ಲಿರುವ 93ನೇ ಸೆಕ್ಷನಿನನ್ವಯ ಅಡ್ವೈಸರ್ ಆಳ್ವಿಕೆಗೆ ಮುಗಿಸಿ ಒಂದು ಮಧ್ಯದ ಜನರು ... ಸೂಚನೆಯನ್ನು ಮಿ. ಅಮೆರಿಯವರು ಕಾಮನ್ಸ್ ಸಭೆಯ ಮುಂದೆ ತಂದು 'ವಿಧ್ವಂಸಕ ಗೊಂದಲಗಳಿಗೆ ಕಾಂಗ್ರೆಸ್ ಪ್ರಮುಖರೇ ಹೊಣೆಗಾರರೆಂಬ ತಮ್ಮ ಹಳೇ ಪಲ್ಲವಿಯನ್ನು ಒತ್ತಿ ಹಾಡಿ, ಮತ್ತಷ್ಟು ವರ್ಣಿಸತೊಡಗಿದಾಗ, ಇಂತಹ ವಾದಗಳು ಕಾಲವಿರೋಧವೆಂದೂ ಈ ... ಅಪ್ರಸ್ತುತವೆಂದೂ ಲೇಬರ್ ಸದಸ್ಯರು ಆಕ್ಷೇಪಿಸಿ, ... ಕಾರಣಗಳು ... ಹೋರಾಟ ... ಕಡಿತಬಿದ್ದ ... ತೋರಿಸುತ್ತಿದ್ದರು.

ಜನರಿಂದಲೇ ಬೇಂಕುಗಳು

— ಧನ ಮತ್ತು ಧನಗೃಹಗಳಿಂಗಲ್ಲ

ಬೇಂಕಿನ ಸಾವಿರಾರು ಕಾರ್ಯ ವಿವರಗಳನ್ನು ಗಮನಿಸಿ ನಿರ್ವಹಿಸುವಂಗಿಂತಲೂ ಪರಿಶ್ರಮದಿಂದ ತೀವ್ರವಾಗಿ ಒದಗಿಸುವ—ಅದರಂತೆ ಎಲ್ಲಾ ಇತರ ಅಸಂಖ್ಯಾತ ಚಿಕ್ಕ ಪುಟ್ಟ ವಿಧಾನಗಳಲ್ಲಿ ಸೇವೆಸಲ್ಲಿಸುವ—ಆ ಜನರು

ಭದ್ರತೆಗಾಗಿ, ಅನುಕೂಲತೆಗಾಗಿ ತಮ್ಮ ಹಣವನ್ನು ಭರವಸೆಯಿಂದ ಬೇಂಕುಗಳಿಗೆ ತರುವ ಆ ಸ್ತ್ರೀ ಪುರುಷರು . . . .

ತಮ್ಮ ಆರ್ಥಿಕ ಆವಶ್ಯಕತೆಗಳಲ್ಲೂ ಸಮಸ್ಯೆಗಳಲ್ಲೂ ಬೇಂಕುಗಳ ಸಹಕಾರವನ್ನಪೇಕ್ಷಿಸಿ ಬರುವ ಆ ವ್ಯವಹಾರಸ್ಥರು ಮಹಿಳೆಯರು.

ಈ ಜನರಿಂದಲೇ ಬೇಂಕುಗಳು ಗುಪ್ತವು ಈ ಮಾನವೀ ಸಂಬಂಧಗಳಿಂದ ಬೆಳೆದು ಬರುವ ಸ್ನೇಹಮಯ ... ಯಾವ ಬೇಂಕಿನ ಯಶಸ್ಸು ಮತ್ತು ಪ್ರಗತಿಯುಳ್ಳವನೂ ಪ್ರಮುಖವೆನಿಸುವುದು.

ಕೆನರಾ ಬೇಂಕು ಮೂವತ್ತೇಳು ವರುಷಗಳ ತನ್ನ ಜನತಾ ಸೇವೆಯಲ್ಲಿ ಗಳಿಸಿದ ಗಳಿಕೆಗಾಗಿ ಗೌರವಪಡುವುದು.

ಸ್ಥಾಪಿತ 1906

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

ಪ್ರತಿ ತಿಂಗಳೂ 'ಪ್ರಕಾಶಿನಿ'ಯನ್ನೋದಿರಿ!

ಏಪ್ರಿಲ್ ತಿಂಗಳ 'ಪ್ರಕಾಶಿನಿ'ಯಲ್ಲಿ

ಏರುತಗ್ಗು—ಸದ್ಯಸ್ಥಿತಿ ಮತ್ತು ಕೃತಿ—ಸಾಹಿತ್ಯ ಸಮಸ್ಯೆ—ವಿಶ್ವ

ಗರ್ಭದ ಗೋಳು—ಹೊನ್ನಿಯ ಮಲ್ಲಯ್ಯ (ಕತೆ)—ಪ್ರೇಮ

ಜಿತ—ಪಹರೆಯವ—ಬ್ರಿಟಿಷರ—ಲೇಖಕ—ನ್ಯಾಯ

ಮೂರ್ತಿ (ಕತೆ)—ಹಣೆಗಣ್ಣೋಟಗಳು—ಪ್ರಣಯ

ಪ್ರದರ್ಶನಕ್ಕೆ ಚಿತ್ರದಲ್ಲೊಂದು ಸ್ಥಾನ—ರಣ

ಹದ್ದುಗಳು—ತಿಂಗಳ ಭವಿಷ್ಯ (ವ್ಯಂಗ್ಯ)

ಇಷ್ಟಿದ್ದರೂ ಬೆಲೆ ಬರೇ ನಾಲ್ಕಾಣೆ.

ಪ್ರತಿಗಳು ನಿಮ್ಮೂರ ಏಜಂಟರಲ್ಲಿ ಸಿಗದಿದ್ದರೆ ೦-೪-೦ ದ ಎಂ.ಒ. ದೊಂದಿಗೆ ಒಡನೆ ಬರೆಯಿರಿ

ಮೆನೇಜರ್,

ಪ್ರಕಾಶಿನಿ,

ನವಯುಗ ಪ್ರೆಸ್, ಉಡುಪಿ.

ಪ್ರಕಟಣೆ

"ದಿ ಎಂ. ಕಮ್ಮಾರು ಬಿಲ್ಲವ ಟ್ರಾಂಟಿ ಸಂಸ್ಥೆ, ಬೊಂಬಾಯಿ" ಇವರು ತಾ 20-4-44ರ ನವಯುಗದಲ್ಲಿ ಕೊಟ್ಟ ಪ್ರಕಟಣೆಗೆ ಉತ್ತರ,

ದಿ. ಬಾ. ಬಿ. ಟ್ರಾಂಟಿ ಸಂಸ್ಥೆ, ಬೊಂಬಾಯಿ ಇವರು ಒಪ್ಪಿಗೆಯಿಂದ ತಯಾರಿಸಿ ಕಳುಹಿಸಿರುವ ಷರತ್ತುಗಳಿಗೆ "ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ಕಟಪಾಡಿ"ಯವರು ಸಮ್ಮತಿಪಟ್ಟು ಒಪ್ಪಂದವನ್ನು ಬರೆದುಕೊಟ್ಟಿದ್ದು ಬಳಿಕ ನಿಮ್ಮ ಪ್ರಕಟಣೆಯಲ್ಲಿರುವ ಪ್ರಕಾರದ ಆಸ್ತಿಯನ್ನು ಪಡೆದುಕೊಂಡು, ಸದ್ರೀ ಸ್ಥಳದಲ್ಲಿ ಎಲ್ಲಾ ಸಾರ್ವಜನಿಕ ಹಿತಕ್ಕಾಗಿ ತಾ 11-3-1943ರಲ್ಲು ಶಿಲಾನ್ಯಾಸ ಸಮಾರಂಭ ಜರಗಿಸಿ ದೇವಸ್ಥಾನವನ್ನು ಕಟ್ಟಿಸುವ ಏರ್ಪಾಡುಮಾಡಿ ಎರಡನೇ ಶರ್ತವನ್ನು ಪೂರೈಸಿರುತ್ತದೆ. ಸದ್ರೀ ಸ್ಥಳದಲ್ಲಿ ರೂಪಾಯಿ 1500-0-0 ಕಿಮ್ಮತ್ತಿನ ಕಟ್ಟೋಣಗಳನ್ನು ಕೆರೆ, ಬಾವಿ ಇತ್ಯಾದಿಗಳನ್ನು ಸೇವಾ ಸಮಿತಿಯು ಈ ಮೊದಲೇ ರಚಿಸಿಕೊಂಡು ಒಪ್ಪಂದ ಪ್ರಕಾರದ ಎಲ್ಲಾ ಶರ್ತಗಳನ್ನು ಕ್ರಮದಲ್ಲಿ ಪಾಲಿಸುತ್ತಿದೆ. ಸದ್ರೀ ಒಪ್ಪಂದದ ಶರ್ತಗಳಿಗೆ ವಿರುದ್ಧ ಕಾರಣಗಳ ನೆವನದಿಂದ ಶರ್ತಗಳನ್ನು ರದ್ದು ಪಡಿಸುವ ಹಕ್ಕು ಬಾಧ್ಯತೆಯು ಸದ್ರೀ ಟ್ರಾಂಟಿ ಸಂಸ್ಥೆಗೆ ಇರುವುದಿಲ್ಲ. ಕೇವಲ ಅನ್ಯಾಯವಾಗಿ ಕೊಟ್ಟಿರುವ ನಿಮ್ಮ ಪ್ರಕಟಣೆಯನ್ನು ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿಯು ಆಕ್ಷೇಪಿಸಿರುತ್ತದೆ ಎಂಬದಾಗಿ ಈ ಮೂಲಕ ತಿಳಿಸಲಾಗಿಯದೆ,

K. Deju

ಗೌ. ಕಾರ್ಯದರ್ಶಿ

ಬ್ರ. ಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ಕಟಪಾಡಿ ದ. ಕ.

26—4—44

ಮಹಾತ್ಮರ ಮಲೇರಿಯಾ

ನಾಲ್ಕು ದಿನಗಳ ಜ್ವರದ ನಂತರ ಮಹಾತ್ಮರಿಗೆ ಆ ಮೇಲೆ ಜ್ವರ ಬಂದ ವಾರ್ತೆ ಬಂದಿಲ್ಲ. ಈ ಘಟನೆಯ ಸಂಬಂಧವಾಗಿ ಇಂಗ್ಲೆಂಡಿನ 'ನ್ಯೂಸ್ ಕ್ರಾನಿಕಲ್' ಪತ್ರಿಕೆಯು ಒಂದು ವ್ಯಂಗ್ಯ ಚಿತ್ರ ಪ್ರಕಟಿಸಿ ಲೋಕದ ಕಣ್ಣನ್ನು ತೆರೆದಿದೆ. ಆ ಚಿತ್ರದಲ್ಲಿ ಗಾಂಧೀಜೀ ಜೈಲು ಕೋಣೆಯೊಳಗೆ ತುದಿಗಾಲ ಮೇಲೆ ಕುಳಿತಿದ್ದಾರೆ. ಹೆಗ್ಗಳಿಕೆಯಿಂದ ಹಂಸ ಹೆಜ್ಜೆಯಿಡುತ್ತಾ ಜೈಲಿನಿಂದ ಹೊರಹೋಗುತ್ತಿರುವ ಕಪ್ಪು ಯೂನಿಫೋರ್ಮು ಧರಿಸಿದ ಓರ್ವ ಮನುಷ್ಯನ ನೋಟದಲ್ಲೇ ಅವರ ಮನಸ್ಸು ನೆಟ್ಟುಹೋಗಿದೆ. ಆ ಮನುಷ್ಯನ ಬೆಂಗಿನ ಬೆನ್ನಿಗೆ 'ಪ್ಲೆಬಿಟಿಸ್' ((ಸರ್ ಓಸ್ವಾಲ್ಡ್ ಮೋಸ್ಲಿಯವರಿಗೆ ತಾಗಿದ್ದ ರೋಗ) ಎಂಬ ಪಟ್ಟಿಕಟ್ಟಿದೆ. ಈ ವ್ಯಂಗ್ಯ ಚಿತ್ರದ ತಲೆಬರಹ "ನನಗೆ ಕೇವಲ ಮಲೇರಿಯಾ. ನಾಜೀ ಪಕ್ಷ ಪತಿ ಮೋಸ್ಲಿಯನ್ನು 'ಪ್ಲೆಬಿಟಿಸ್' ನೆಪಮಾತ್ರಕ್ಕೆ ಬಿಡುಗಡೆ ಮಾಡಿದ ಬ್ರಿಟಿಷ್ ಸರಕಾರವು ಗಾಂಧೀಜಿಯ ಕಡೆಗೆ ತೋರಿಸುವ ವರ್ತನೆಯೇ ಆ ಕಾರ್ಟೂನಿನ ಭಾವಾರ್ಥ.

ಒಂದು ವಿಸ್ಮಯಕಾರೀ ದರೋಡೆ

ಬೊಂಬಾಯಿಯ ಪ್ರೋಪೆಸರ್‌ಲಾಲ್ ... ಎಂಬ ವರ್ತಕರನ್ನು ವಿಚಿತ್ರ ರೀತಿಯಿಂದ ವಂಚಿಸಿ, ರೂ 20 ಸಾವಿರ ಮೌಲ್ಯದ ಹಣ ಮತ್ತು ಆಭರಣಗಳನ್ನು ಅಪಹರಿಸಿದ ಸಾಹಸವುಳ್ಳ ದರೋಡೆಕಾರರು ... ಪೋಲೀಸರಂತೆ ಒಬ್ಬ, ಸೋಲ್ಜರನಂತೆ ಒಬ್ಬ ಡ್ರೆಸ್ ಮಾಡಿಕೊಂಡಿದ್ದರು. ಈ ಸಾಹುಕಾರರ ಮನೆಗೆ ಬಂದು ತಾವು ಅಧಿಕಾರಿಗಳೆಂಬಂತೆ ತೋರಿಸಿ 'ನೀವು ವೈರಿಯೊಡನೆ ವ್ಯಾಪಾರ ನಡೆಸುತಿದ್ದೀರಿ ಎಂಬ ಅನುಮಾನ ಬಂದಿದೆ. ಆದ್ದರಿಂದ ನಿಮ್ಮ ಅಂಗಡಿ ಜಪ್ತಿಯಾಗಬೇಕಾಗಿದೆ' ಎಂದು ಪ್ರೋಪಟ್ ಲಾಲರನ್ನು ಮನೆಯಿಂದ ಮೂರು ಮೈಲು ದೂರದ ಅಂಗಡಿಗೆ ಕರೆತಂದರು. ಅಲ್ಲಿದ್ದ ಕೆಲವು ಸೇವಕರಿಗೆ ಹೊರಟುಹೋಗುವಂತೆ ಆಜ್ಞೆಯಾಯಿತು. ತಿಜೋರಿಯನ್ನು ತೆರೆಯುವಂತೆ ಸಾಹುಕಾರನಿಗೆ ಅಪ್ಪಣೆಯಾಯಿತು. ... ಅವನನ್ನು ತೆಂದೊಡನೆಯೇ ಒಂದೇ ಹೊಡೆತದಿಂದ ಅವನನ್ನು ಕೆಡವಿ ಇದ್ದುದನ್ನೆಲ್ಲಾ ದೋಚಿಕೊಂಡು, ಸಮೀಪದಲ್ಲಿ ಕಾಯುತ್ತಿದ್ದ ಕಾರು ಹತ್ತಿ ಬಿಟ್ಟರು ಪರಾರಿ! ಈ ತನಕ ಪತ್ತೆ ಯಾಗಿಲ್ಲ.

ಪೆಗ್ಗಿಂಗ್ ಕಾನೂನು ರದ್ದು

ದಕ್ಷಿಣ ಆಫ್ರಿಕದಲ್ಲಿರುವ ಹಿಂದೀಯರನ್ನು ಸ್ಥಳಭ್ರಷ್ಟರನ್ನಾಗಿ ಮಾಡುವ—ಸಂಪೂರ್ಣ ಜಾತಿಯ ಮೇಲೆ ಹಿಂದೀಯರೆಲ್ಲರ ತೀವ್ರ ನಿಷೇಧಕ್ಕೊಳಗಾಗಿದ್ದ—ಪೆಗ್ಗಿಂಗ್ ಶಾಸನವನ್ನು ರದ್ದುಪಡಿಸಿ, ಅದರ ಬದಲಿಗೆ ಈ ಸ್ಥಳ ಸಮಸ್ಯೆ ... ನಿರ್ಣಯಿಸುವ ಹೊಸ ಕಾನೂನನ್ನು ತರಲು ದಕ್ಷಿಣ ಆಫ್ರಿಕ ಸರಕಾರವೀಗ ಒಪ್ಪಿದೆ. ಅಲ್ಲಿಯ ನಾಟಾಲ್ ಇಂಡಿಯನ್ ಕಾಂಗ್ರೆಸಿನ ನಿಯೋಗ ಮಂಡಲಿಗೆ, ಪ್ರಧಾನಿ ಜನರಲ್ ಸ್ಮಟ್ಸರೇ ಮೊದಲಾದ ಅಧಿಕಾರಿಗಳನ್ನು ಭೇಟಿಯಾದಾಗ ಈ ಆಶ್ವಾಸನೆ ದೊರೆಯಿತು.

CHAMPAES

Snow & Castrex

(Sole Distributors for (India)

Sukhananda Stores

Santhekatte, UDIPI, S. K.

ದಕ್ಷಿಣ ಕನ್ನಡ

ಮಂಗಳೂರು

ನಗರ ಸಭೆ:—ತಾ. ೧೭ರಂದು ಸೇರಿದ ಸಭೆಯಲ್ಲಿ ವ್ಯಾಪಾರಿಗಳಾದ ಹಾಜಿ ಅಬ್ದುಲ್ ಖಾದರ್ ಬಾವಾ ಅವರು ತಮ್ಮ ಕೆಲಸಗಳಿಗಾಗಿ, ವಿದ್ಯುತ್ ಮೋಟರ್ ಯಂತ್ರಗಳನ್ನು ಉಪಯೋಗಿಸಬಾರದಾಗಿ, ನಗರದ ಆರೋಗ್ಯಾಧಿಕಾರಿಗಳು ಅವರ ಲೈಸನ್ಸ್ ರದ್ದುಗೊಳಿಸಿದುದು ಚರ್ಚೆಗೆ ಬಂತು. ಶ್ರೀ. ಶ್ರೀಕಂಠ ಬಾಳಿಗರು ವ್ಯಾಪಾರಿಗಳ ಪರವಾಗಿ ವಾದಿಸಿದರು. ಈ ವಿಷಯದ ಪರಿಶೀಲನೆಯ ಬಗ್ಗೆ ೭ ಮಂದಿ ಸದಸ್ಯರಿರುವ ಸಮಿತಿಯೊಂದರ ನೇಮಕವಾಯಿತು. ಹೊಯಿಗೆ ಬಜಾರಿನ ಈಗಿನ ಮಾರ್ಕೆಟು ಸ್ಥಳವನ್ನು ಅದರ ಒಡೆಯರಿಗೆ ಕೊಟ್ಟು, ಅವರಿಂದಲೇ ಮಾರ್ಕೆಟಿಗಾಗಿ ಬೇರೆ ಸ್ಥಳವನ್ನು ಕೇಳಲು ನಿರ್ಧರಿಸಿತು. ವೆಬ್‌ಸ್ಟರ್ ಮಾರ್ಕೆಟನ್ನು ಆದಷ್ಟು ಬೇಗ ಸ್ಥಳಾಂತರಿಸಬೇಕೆಂದೂ ಆ ಕಟ್ಟಡದಲ್ಲಿಯೇ ಮಾರ್ಕೆಟು ನಡೆಯಬಹುದಾಗಿಯೂ ಆರೋಗ್ಯಾಧಿಕಾರಿಯ ಎಸಿಸ್ಟೆಂಟ್ ಡೈರೆಕ್ಟರು ಅಭಿಪ್ರಾಯಪಟ್ಟಿರುವರಾಗಿಯೂ ತಿಳಿದು ಬಂದಿದೆ.

ಪ್ಲೇಗಿನ ವರದಿ:—ತಾ. ೧೫ಕ್ಕೆ ಅಂತ್ಯವಾದ ವಾರದಲ್ಲಿ ಒಟ್ಟು ೧೫ ಇಲಿಗಳು ಬಿದ್ದಿವೆ. ಹಿಂದಿನ ವಾರ ಬಿದ್ದ ಇಲಿಗಳನ್ನು ಪರೀಕ್ಷೆಗಾಗಿ ಮದ್ರಾಸಿಗೆ ಕಳುಹಿಸಿದವುಗಳಲ್ಲಿ, ಕನ್ನಡಿಗನ ಗುಡ್ಡ ಮಸೀದಿಯ ಬಳಿ ಬಿದ್ದ ೧೧ನೇ ವಾರ್ಡಿನ ಸೋಮಯ ಕಾಲೋನಿಯ ಓಣಿಯಲ್ಲಿ ಬಿದ್ದ ಕೆಲವು ಇಲಿಗಳು ಪ್ಲೇಗಿನವು ಎಂದು ಸಿದ್ಧವಾಗಿದೆ. ಕಳೆದ ಎರಡು ವಾರಗಳಿಂದ ಪ್ಲೇಗು ಯಾರಿಗೂ ತಗಲಲಿಲ್ಲ. ಇಲಿಗಳ ವಿನಾಶ ಕಾರ್ಯವು ಬಿರುಸಿನಿಂದ ಸಾಗುತ್ತಲೇ ಇದೆ— ಎಂದು ಆರೋಗ್ಯಾಧಿಕಾರಿಗಳು ತಿಳಿಸುತ್ತಾರೆ.

ತೆಂಗಿನೆಣ್ಣೆ ಹೊರಹೋಗಕೂಡದು—ಜಿಲ್ಲೆಯ ಬಳಕೆದಾರರಿಗೆ ಬೇಕಾದಷ್ಟು ತೆಂಗಿನೆಣ್ಣೆಯನ್ನು ಪೂರೈಸುವುದಕ್ಕಾಗಿ ಜಿಲ್ಲಾ ಕಲೆಕ್ಟರರು ಮತ್ತೊಂದು ಪ್ರಕಟಣೆಯನ್ನು ಹೊರಡಿಸಿ, ದ. ಕ. ಜಿಲ್ಲೆಯಿಂದ ಯಾವ ಹೊರಪ್ರದೇಶಕ್ಕೂ ತೆಂಗಿನೆಣ್ಣೆಯನ್ನು ಒಯ್ಯಬಾರದು—ಅಥವಾ ಕಳುಹಿಸಬಾರದೆಂದು ವಿಧಿಸಿದ್ದಾರೆ. ಈ ನಿಯಮವನ್ನು ಅತಿಕ್ರಮಿಸುವವರನ್ನು ಕಠಿಣವಾಗಿ ಶಿಕ್ಷಿಸಲಾಗುವುದೆಂದೂ ಪ್ರಕಟಿಸಿದ್ದಾರೆ.

ಗೇಣಸು:—ಈ ಮೊದಲಿನ ಒಂದು ಪ್ರಕಟಣೆಯಲ್ಲಿ ಕಲೆಕ್ಟರರು ದ. ಕ. ಜಿಲ್ಲೆಯಿಂದ ಮದ್ರಾಸು ಅಧಿಪತ್ಯದ ಹೊರಗಿನ ಯಾವ ಪ್ರದೇಶಕ್ಕೂ ಗೆಣಸನ್ನು ಕಳುಹಿಸಬಾರದಾಗಿ ಪ್ರಕಟಿಸಿದ್ದರು. ಈಗ, ಹೊಸತೊಂದು ಪ್ರಕಟಣೆಯಲ್ಲಿ, ನಮ್ಮ ಜಿಲ್ಲೆಯಿಂದ ಯಾವ ಹೊರಪ್ರದೇಶಕ್ಕೂ ಗೆಣಸು ಹೋಗಬಾರದಾಗಿ ವಿಧಿಸಿದ್ದಾರೆ. ಈ ನಿಯಮವನ್ನು ಅತಿಕ್ರಮಿಸಿದವರ ಕಠಿಣವಾಗಿ ಶಿಕ್ಷಿಸಲ್ಪಡುವರು.

ದಸ್ತಗಿರಿ:—ನಿಗ್ರಹಬಂಧನದಿಂದ ಆನಿರ್ಬಂಧವಾಗಿ ಇತ್ತೀಚೆಗೆ ಬಿಡುಗಡೆ ಹೊಂದಿದ್ದ ಶ್ರೀಗಳಾದ ಪ್ರಭಾಕರ ಶೇಟ್ ಮತ್ತು ಯಂ. ವಿ. ಜಗನ್ನಾಥನ್ ಇವರಿಬ್ಬರನ್ನು ಪುನಃ ಬಂಧಿಸಲಾಗಿದೆ.

ಪ್ರಕಟಣೆ.

P M Kunhi Raman, Manager,
Parassini Madappura Temple,
P. O Parassinikkatavu
(Via) Pappinisseri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—
ಪರಸಿನಿ ಕಡವು ದೇವಸ್ಥಾನದಿಂದ 'ಮಡಪ್ಪುರ' ಬಿನ್ನಹ.

ಪರಸಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ಪಣ್ಯೆರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲಿ ನಿಂಮ ಹರಿಕೆ ಪಣ್ಯೆರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸಿಪದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುಞ್ಞಿರಾಮನ್,
ಮೆನೇಜರ್.

ಮಿ। ಗನ್ಸಾಲ್ವಿಸರ ನಿಧನ:—ಮಾಜಿ ಜಿ. ಬೋರ್ಡ್ ವೈಸ್ ಪ್ರೆಸಿಡೆಂಟರೂ, ಮುನಿಸಿಪಾಲಿಟಿಯ ಕೌನ್ಸಿಲರರೂ ಆಗಿದ್ದ ಮಿ। ಪಿ. ಸಿ. ಗನ್ಸಾಲ್ವಿಸರು ಇದೇ ತಾ. ೧೫ರಂದು ದಿವಂಗತರಾದರು.

ಗವರ್ನಮೆಂಟ್ ಕಾಲೇಜನ್ನು:—ಪಸ್ಟ್ ಗ್ರೇಡ್ ಕಾಲೇಜಾಗಿ ಮಾರ್ಪಡಿಸಬೇಕೆಂದು ಕೇಳಿಕೊಳ್ಳುವ ಸಲುವಾಗಿ ಈ ಶಾಲೆಯ ಹಳೆಯ ವಿದ್ಯಾರ್ಥಿಗಳು ಡಾ। ರಾಮಬಾಳಿಗರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಗವರ್ನರಿಗೂ ವಿದ್ಯಾಂಗದ ಡೈರೆಕ್ಟರರಿಗೂ ಮನವಿ ಕಳುಹಲು ನಿರ್ಧರಿಸಿದ್ದಾರೆ.

ರಾಮಕುಂಜ:—ಇದೇ ತಾ ೧೮ರಂದು ಇಲ್ಲಿಯ ಎಡ್ವಾನ್ಸ್‌ಡ್ ಸಂಸ್ಕೃತ ಪಾಠಶಾಲೆಯಲ್ಲಿ ಕಡಬದಿಂದ ಇಲ್ಲಿಗೆ ದಯಮಾಡಿಸಿದ್ದ ಶ್ರೀ ಸ್ವಾಮಿ ಆತ್ಮಾನಂದರು ಯವರು 'ವೇದಾಂತ'ವೆಂಬ ವಿಷಯದ ಕುರಿತು ಭಾಷಣವಿತ್ತರು. ಪ್ರಾರಂಭದಲ್ಲಿ ಕಡಬದ ಶ್ರೀ ಶಂಕರನಾರಾಯಣರಾಯರು ಶ್ರೀ ಸ್ವಾಮಿ ಜೀಯವರ ಪರಿಚಯವನ್ನು ಮಾಡಿಕೊಟ್ಟರು.

ವರ್ಧಂತ್ಯುತ್ಸವ:—ಇದೇ ತಾ. ೨೮, ೨೯ನೇ ಶುಕ್ರವಾರ ರಾಮಕುಂಜ ಸಾವಿತ್ರಿಯ ಸಂಸ್ಕೃತ ಪಾಠಶಾಲೆಯ ೧೯ನೇ ವರ್ಧಂತ್ಯುತ್ಸವವು ಶ್ರೀ ಎಚ್ ರಾಮರಾವ್ ಡಿ. ಬೋ. ವಿದ್ಯಾಧಿಕಾರಿ, ಇವರ ಅಧ್ಯಕ್ಷತೆಯಲ್ಲೂ ಇದೇ ಶಾಲೆಯ ಹೊಸ ಕಟ್ಟಡದ ಶಂಕುಸ್ಥಾಪನಾ ಸಮಾರಂಭವು ಶ್ರೀ ಬಿ ಪ್ರಭಾಕರರಾವ ವಕೀಲ್ ಪುತ್ತೂರು, ಇವರ ಅಮೃತ ಹಸ್ತದಿಂದಲೂ ಜರಗಲಿರುವುದು. ವಿದ್ಯಾಭಿಮಾನಿಗಳೆಲ್ಲರೂ ಈ ಉಭಯ ಸಮಾರಂಭಗಳಿಗೂ ದಯಮಾಡಿ ಬಂದು ಸಮಾರಂಭಗಳನ್ನು ಯಶಸ್ವಿಗೊಳಿಸುವದಲ್ಲದೆ ಹೊಸ ಕಟ್ಟೋಣದ ಸಲುವಾಗಿ ಉದಾರ ಸಹಾಯ ಮಾಡಬೇಕಾಗಿ ಆ ಶಾಲಾ ಕಮಿಟಿಯ ಅಧ್ಯಕ್ಷರು ಪ್ರಾರ್ಥಿಸುತ್ತಾರೆ.

ಕಲೆಕ್ಟರರ ಪ್ರಕಟಣೆಗಳು

ಅಕ್ಕಿಯ ಬೆಲೆ ಇನ್ನೂ ಇಳಿಯಲಿದೆ:—ಇದೇ ಮೇ ತಾ. ೧ರಿಂದ ಅಕ್ಕಿಯ ನಿಯಂತ್ರಿತ ಬೆಲೆಯನ್ನು ಇನ್ನೂ ಇಳಿಸಲಾಗುವುದೆಂದು ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ. ಸೆಲ್ಲೂರು ಚಿದಂಬರಂ ಮೊದಲಾದೆಡೆಗಳಿಂದ ಬಂದಿರುವ ಅಕ್ಕಿಯು, ಊರ ಅಕ್ಕಿಗಿಂತ ಉತ್ತಮ ದರ್ಜೆಯ ಬೆಲೆಕಡಿಮೆ ಇರುವುದರಿಂದ, ಬೆಲೆಯನ್ನು ಸಮಮಟ್ಟಕ್ಕೆ ತರುವ ಸಲುವಾಗಿ, ಊರ ಅಕ್ಕಿಯ ಬೆಲೆಯನ್ನು ಇಳಿಸಲಾಗುವುದು.

ಉಡುಪಿ.

ಕೌನ್ಸಿಲ್ ಮೀಟಿಂಗು:—ಉಡುಪಿ ಮುನಿಸಿಪಲ್ ಕೌನ್ಸಿಲಿನ ಮೀಟಿಂಗು ತಾ 20ರಲ್ಲು ಚೆಯರ್‌ಮನ್ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಗುಂಡಿಬೈಲು ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿಯ ಸವರ್ಣ ಹುಡುಗರಿಂದ ನಿರ್ದಿಷ್ಟ ದರದಲ್ಲಿ ಶಾಲಾ ಫೀಸನ್ನು ವಸೂಲು ಮಾಡುವರೆ ಆ ಶಾಲೆಯ ಅಧಿಕಾರಿಗಳಿಗೆ ಸಮ್ಮತಿಯನ್ನೀಯುವ ವಿಷಯದಲ್ಲಿ ತಮ್ಮ ಆಕ್ಷೇಪವಿಲ್ಲವೆಂದು ಈ ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರರಿಗೆ ತಿಳಿಸಬೇಕೆಂದಾಯಿತು. ಸೆಂಟ್ರಲ್ ವಾರ್ಡಿನ ಟೌನ್ ಪ್ಲಾನಿಂಗ್ ಯೋಜನೆಗೆ ಕೌನ್ಸಿಲಿನ ಅಭಿಪ್ರಾಯ ಸರ್ವಾನುಮತದ ಒಪ್ಪಿಗೆ ಕೊಡಲಾಯಿತು. ಉಡುಪಿ ಹರಿಜನ ವಿದ್ಯಾರ್ಥಿ ಭವನದ ಉಪಯೋಗಾರ್ಥವಾಗಿ ಜಿಲ್ಲಾ ಹರಿಜನ ಸೇವಕ ಸಂಘಕ್ಕೆ ರೂಪಾಯಿ 25/- ಕೊಡ ತಕ್ಕದೆಂದಾಯಿತು.

ಹಿಂದುಸ್ಥಾನ್ ಸ್ಕೌಟ್ ಎಸೋಶಿಯೇಶನಿನ ಉಡುಪಿ ಶಾಖೆ:—ಯ ಮಹಾ ಸಭೆಯು ತಾ 23ರಲ್ಲು ಬೋರ್ಡ ಹೈಸ್ಕೂಲಲ್ಲಿ ಮಿ। ಆರ್ ಫೆರ್ನಾಂಡೀಸ್, ಬಿ. ಎ. ಎಲ್. ಟಿ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಗತವರ್ಷದ ವರದಿ ವಾಚನ, ಲೆಕ್ಕಪತ್ರಗಳ ಪರಿಶೀಲನೆ, ಹೊಸ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರ ಆಯ್ಕೆ ಮೊದಲಾದ ಕಾರ್ಯಕ್ರಮಗಳಲ್ಲದೆ ಸ್ಕೌಟ್ ಚಟುವಟಿಕೆಗಳ ಪ್ರದರ್ಶನವೂ ಇತ್ತು.

ರೇಶನಿಂಗ್ ಅಕ್ಕಿ:—ಕಾರ್ತಿ ಬೆಳೆಯ ಅಕ್ಕಿ ಸಾಕಷ್ಟು ದಾಸ್ತಾನು ಇದ್ದಾಗಲೂ ಸುಗ್ಗಿ ಅಕ್ಕಿಯನ್ನೇ ಇತ್ತೀಚೆಗೆ ಹೋಲ್‌ಸೇಲ್ ಸ್ಟೋರ್ಸ್ ಡಿಪೋದಿಂದ ಸರಬರಾಯಿ ಬಗ್ಗೆ ಒದಗಿಸಲಾಗುತ್ತದೆಂದು ಜನರಾಡಿಕೊಳ್ಳುತ್ತಿರುವರು. ಸರ್ವಸಾಧಾರಣ ಸುಗ್ಗಿ ಅಕ್ಕಿ ಮಳೆಗಾಲದಲ್ಲಿ ಉಪಯೋಗಿಸತಕ್ಕುದಾಗಿದೆ. ರೇಶನಿಂಗ್ ಪ್ರಾರಂಭ ಅವಸ್ಥೆಯಲ್ಲಿ ಜತೆಯಾದ ಕಾರ್ತಿ ಬೆಳೆಯ ಹಸಿಬಿಸಿ ಅಕ್ಕಿಯನ್ನು ಹಾಗೇನೇ ಇಟ್ಟರೆ ಕ್ರಿಮಿಗಳಾಗಿ ಉಪಯೋಗಿಸಲು ಕಷ್ಟವಾಗುವುದೆಂದು ಬಲ್ಲವರ ಹಾಗೂ ಅನುಭವಸ್ಥರ ಮಾತು. ಅಧಿಕಾರಿಗಳು ಇತ್ತ ನಿಗಾ ಕೊಡಬೇಕಾಗಿದೆ.

ನಿಧನ:—ಉಡುಪಿಯಲ್ಲಿ ಪ್ರೆಸ್ ಕೆಲಸಗಾರರಲ್ಲೊಬ್ಬನಾಗಿದ್ದ ಶ್ರೀ. ಬಸಪ್ಪ ದೇವಾಡಿಗನು ಕೆಲಕಾಲದ ಕಾಹಿಲೆಯಿಂದ ಹುಡುಗ ಪ್ರಾಯದಲ್ಲೇ ತಾ. 24-4-44ರಲ್ಲಿ ದಿವಂಗತನಾದುದು ವಿಷಾದಕರವಿದೆ.

ಬ್ರಹ್ಮಾವರ:—ಕುಮ್ರಗೋಡು ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಈಗ 140ಕ್ಕೆ ಮಿಕ್ಕಿ ವಿದ್ಯಾರ್ಥಿಗಳಿರುವುದರಿಂದ ಒಬ್ಬ ಸೆಕೆಂಡರಿ ಗ್ರೇಡ್ ಉಪಾಧ್ಯಾಯರೂ ಇಲ್ಲದಿರುವುದು ಬಹಳ ಶೋಚನೀಯ. ಸಮ್ಮಂಧಪಟ್ಟ ಅಧಿಕಾರಿಗಳು ಈ ಕುರಿತು ಆಲೋಚಿಸುವರೇ ಎಂದೊಂದು ಬಾತ್ಮಿ.

ಸುಬ್ರಹ್ಮಣ್ಯ:—ಶ್ರೀ ಸಂಪುಟ ನರಸಿಂಹ ದೇವರ ಮಠದಲ್ಲಿ ನರಸಿಂಹ ಜಯಂತಿಯು ತಾ 7-5-44ರಿಂದ 9-5-44ರ ತನಕ ಜರಗಲಿದೆ.

ಪುತ್ತೂರು

ಅಡಿಕೆ ಕೃಷಿಕರು:—ಸಂಘದ ಉಪಾಧ್ಯಕ್ಷರಾದ ಶ್ರೀ। ಸಿ. ಎಸ್. ಶಾಸ್ತ್ರಿಗಳು ಪುತ್ತೂರು ತಾಲೂಕಿನ ಹಳ್ಳಿಗಳಲ್ಲಿ ಸಂಚರಿಸಿ ಸಂಘವನ್ನು ಬಲಪಡಿಸುತ್ತಿದ್ದಾರೆ. ಈ ಗಾಗಲೆ, ವಿಟ್ಲ, ಕನ್ಯಾನ, ಬೆಳ್ಳಾರೆಗಳನ್ನು ಸಂದರ್ಶಿಸಿರುವರು.

"ಬಂಟರಯಾನೆ ನಾಡವರ ಯೋಗಕ್ಷೇಮನಿಧಿ" ಡಾಕ್ಟರ್. ಎಮ್. ಎಂ. ಶೆಟ್ಟಿ. ಜಿ. ಪಿ. ಮುಂಬಾಯಿ, ಇವರ ಅಧ್ಯಕ್ಷತೆಯಲ್ಲಿ ಇದೇ ಎಪ್ರಿಲ್ ತಾ. 16ಕ್ಕೆ ಆನಂದಾಶ್ರಮದ ಮಂದಿರದಲ್ಲಿ ಸಾರ್ವಜನಿಕ ಸಭೆಯು ಜರಗಿಸಲ್ಪಟ್ಟಿತು. ಅಧ್ಯಕ್ಷರು ನಿಧಿಯ ಉದ್ದೇಶಗಳನ್ನು ಸ್ಥಾಪಿಸಿ, ನಿಧಿಯ ಮೆಂಬರರಾಗಿ ಸೇರಿ ನಿಧಿಯನ್ನು ಪ್ರೋತ್ಸಾಹಿಸುವರು ಪ್ರತಿಯೊಬ್ಬ ಸ್ವಜಾತಿ ಗೃಹಸ್ಥನ ಕರ್ತವ್ಯವಾಗಿರುವುದೆಂದು ಬೋಧಪ್ರದವಾದ ಭಾಷಣವಿತ್ತರು.

ಅಂದೇ ನಿಧಿಯ ಅಧ್ಯಕ್ಷ ಶ್ರೀ ಮಹಾಬಲ ನಾಯಕ ಕಾಳುಸೆಟ್ಟಿ ಅಧ್ಯಕ್ಷತೆಯಲ್ಲಿ ನಿಧಿಯ ಕ್ರಮನಿಬಂಧನೆಗಳನ್ನು ಸರ್ವಾನುಮತದಿಂದ ಮಂಜೂರುಮಾಡಿಸುವರು, ಸದಸ್ಯರೆಲ್ಲರೂ ತಮ್ಮ ತಮ್ಮ ಅಂದಿನ ಕಾಣಿಕೆಗಳನ್ನೂ, ಫಲಕಗಳನ್ನೂ ಮುಂದೆಗೊತ್ತು ಬಟ್ಟು ಅತೀ ಉತ್ತೇಜನದಿಂದ ಸಭೆಗೆ ಬೆತ್ತಿ ಪ್ರೋತ್ಸಾಹಿಸಿದುದಕ್ಕಾಗಿ ನಮ್ಮ ಅಭಿವಂದನೆಗಳು.

ನಿಧಿಯ ಉದ್ದೇಶಗಳು:— (1) ಮುಂಬಾಯಿಯಲ್ಲಿ ವಾಸವಾಗಿರುವ ಬಂಟರಯಾನೆ ನಾಡವರ ಜಾತಿಯ ಸದಸ್ಯರಲ್ಲಿ ಪರಸ್ಪರ ಪ್ರೀತಿ ಮತ್ತು ಒಗ್ಗಟ್ಟನ್ನು ಬೆಳೆಸುವುದು. (2) ಮುಂಬಾಯಿಯಲ್ಲಿ ವಾಸವಾಗಿರುವ ಬಂಟರಯಾನೆ ನಾಡವರ ಜಾತಿಯವರ ಅನುಕೂಲತೆಗಾಗಿ ಒಂದು ಕಟ್ಟಡವನ್ನು ಸ್ಥಾಪಿಸುವುದು. (3) ಬಂಟರಯಾನೆ ನಾಡವರ ಜಾತಿಯ ಸಾರ್ವಜನಿಕ ಸಂಸ್ಥೆಗಳಿಗೆ ಧನಸಹಾಯ ಮಾಡುವುದು. (4) ಬಂಟರಯಾನೆ ನಾಡವರ ಜಾತಿಯ ಬಡವಿದ್ಯಾರ್ಥಿಗಳಿಗೆ ವೇತನ ನೀಡುವುದು. ಮೇಲ್ಕಾಣಿಸಿದ ಧ್ಯೇಯವನ್ನಿಟ್ಟುಕೊಂಡು, ಬಡವರು, ದೊಡ್ಡವರು, ಹೆಂಗಸರು ಗಂಡಸರು ಎಂಬ ಭೇದವನ್ನು ಇಡದೆ ಎಲ್ಲಾ ತರಗತಿಯ ಸದಸ್ಯರಿಗೆ ಸರಿಸಮಾನ ಹಕ್ಕು ಬಾಧ್ಯತೆಗಳನ್ನು ಇಟ್ಟು ಜಾತಿಯ ಏಳಿಗೆಯ ಒಂದೇ ಗುರಿಯನ್ನು ಇಟ್ಟು ಕೆಲಸಮಾಡುತ್ತಿರುವ ಈ ನಿಧಿಗೆ ಎಲ್ಲಾ ಸ್ವಜಾತಿ ಗೃಹಸ್ಥರು ಸದಸ್ಯರಾಗಿ ಸೇರಿ ಪ್ರೋತ್ಸಾಹಿಸಬೇಕಾಗಿ ನಮ್ಮ ವಿಜ್ಞಾಪನೆ.

ಸೂಡ ವೀರಪ್ಪ ಸೆಟ್ಟಿ, ಬ್ರಹ್ಮಾವರ ನಾರಾಯಣ ಸೆಟ್ಟಿ } ಜೊತೆಕಾರ್ಯದರ್ಶಿಗಳು

ನೋಟೀಸು.

ಈ ಕೆಳಗೆ ಸಹಿಮಾಡಿದ ಯನ್ ರಾಮಯ್ಯ ಶೆಟ್ಟಿಯೆಂಬ ನಾನು ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನಂದರೆ:-

ದಕ್ಷಿಣ ಕನ್ನಡಾ ಜಿಲ್ಲಾ, ಮಂಗಳೂರು ತಾಲೂಕು, ಮಂಗಳೂರು ಮುನ್ಸಿಪಾಲ್ ಕೋರ್ಟು ವಾರ್ಡಿನ ಕ್ಸಬಾ ಬಜಾರು ಗ್ರಾಮದ ಪಟ್ಟನಂಬ್ರ 918ಕ್ಕೆ ಒಪ್ಪಿದ ಸ. ನಂಬ್ರ 1789/Aಯಲ್ಲಿ ಬಂದ ತನ್ನ ಸಂಪಾದಿತ ಆಸ್ತಿಗೆ, ನನ್ನ ಮೃತ ತಾಯಿ ಲಕ್ಷ್ಮೀ ಹೆಂಗ್ಸು ತನ್ನ ಆತ್ಮಸಂತೋಷದಿಂದ ನನ್ನನ್ನು ತನ್ನ ತಾರೀಕು 1-10-1941ರ ಆಸ್ತಿ ವಿಲುನಾಮೆಯ ಮೂಲಕ ಹಕ್ಕುದಾರನಾಗಿ ಸ್ಥಾಪಿಸಿರುತ್ತಾರೆ.

ಸದ್ರಿ ಆಸ್ತಿಯನ್ನು ನನ್ನ ಮೃತ ತಾಯಿಯು ತಾ 20-3-39ರಲ್ಲು ರೂಪಾಯಿ 200/-(ಇನ್ನೂರ)ಕ್ಕೆ ಕಲಪಾಡಿ ಐತಪ್ಪ ಮೂಲ್ಯರಿಗೆ ಅಡವು ದಸ್ತಾವೇಜು ಮಾಡಿಕೊಟ್ಟಿರುತ್ತಾರಲ್ಲದೆ ಇನ್ನಾರಿಗೂ ಯಾವದೊಂದೂ ತರದಿಂದಲೂ ನನ್ನ ತಾಯಿಯಾಗಲೀ ನಾನಾಗಲೀ ಪರಾಧೀನ ಮಾಡಿಕೊಡಲಿಲ್ಲ.

ಸದ್ರಿ ಆಸ್ತಿಯಲ್ಲಿ ನನ್ನ ಅಕ್ಕ—ಬೈಕಂಪಾಡಿ ಎರ್ಮಾಳ ಕೊರಗು ಶೆಟ್ಟರ ಹೆಂಡ್ತಿ ಅಬ್ಬಕ್ಕೆ—ಯೂ ನನ್ನ ಸೋದರ ಮಾವ-ಪಡಂಗಾರು ರಾಮಪ್ಪಶೆಟ್ಟಿ, ಯೂ ಇತರ ಕುಟುಂಬದವರಾರಿಗೂ ಯಾವದೊಂದೂ ತರದ ಹಕ್ಕು ಬಾಧ್ಯತೆಗಳಿಲ್ಲವೆಂಬುದನ್ನೂ ಒಂದು ವೇಳೆ ನನ್ನ ಕುಟುಂಬದವರು. ನಾನು ಪರದೇಶದಲ್ಲಿರುವದರಿಂದ ನನ್ನ ಗೈರುಹಾಜರಿಯ ಲಾಭತೆಗೆದುಕೊಂಡು ಸದ್ರಿ ಆಸ್ತಿಯನ್ನು ಯಾವದೇ ರೀತಿಯಿಂದಲೇ ಆಗಲಿ ಪರಾಧೀನ ಮಾಡಿದರೆ ಅದಕ್ಕೆ ನಾನು ಜವಾಬ್ದಾರನಲ್ಲವೆಂಬುದನ್ನೂ ಈ ಮೂಲಕ ವಿದಿತ ಪಡಿಸುತ್ತೇನೆ,

N. Ramayya Shetty.
E. S. Writer
Distrtic & Sessions Court, Surat.

ವರರು ಬೇಕು.

ಶಿವಳ್ಳಿ ಬ್ರಾಹ್ಮಣ ಹಾಯರ್ ಟ್ರೈಂಡ್ ಮತ್ತು ಕೋಟಬ್ರಾಹ್ಮಣ ಸೆಕೆಂಡರಿ ಟ್ರೈಂಡ್ ವಧುಗಳಿಗೆ ಯೋಗ್ಯ ವರನು ಬೇಕಾಗಿದ್ದಾರೆ. ಸೆಕೆಂಡರಿ ಯೂ ಹಾಯರ್ ಟ್ರೈಂಡ್ ವರರು ಉತ್ತಮ. ವಧುವರರಿಗೆ ಒಂದೇ ಶಾಲೆಯಲ್ಲಿ ಕೆಲಸ ದೊರೆಯುತ್ತದೆ. ಸೆಕೆಂಡರಿ ಗ್ರೇಡ್‌ನವರಿಗೆ ರೂ. 30/- ಹಾಯರ್ ಗ್ರೇಡ್‌ನವರಿಗೆ ರೂ. 25/- ಕೊಟ್ಟು ಇದೆ. ಅಧ್ಯಾಪಕರಲ್ಲದ ಬ್ರಾಹ್ಮಣರಾದರೂ ಆಗಬಹುದು. ವಾಸಸ್ಥಳ ಊಟದ ಅನುಕೂಲತೆ ಕೊಡಲ್ಪಡುವುದು. ಹೆಚ್ಚಿನ ವಿವರಗಳಿಗೆ ಜಾತಕಗಳೊಂದಿಗೆ ಬರೆಯಿರಿ.

X
C/o. **Navayuga**
Udipi.

ತಾರೀಕು 27—4—1944ರಿಂದ

ರಾಮೋಲಾ ಮತ್ತು ಜ್ಯೋತಿ ಪ್ರಕಾಶ

ಅಭಿನಯಿಸಿರುವ ಸಂಗೀತಚಿತ್ರ

ಮನಚಲೀ

★ ಎಪ್ರಿಲ್ ಅಂತ್ಯದೊಳಗೆ ದ್ವಿತೀಯರಂಗವೆ? ★

ಜರ್ಮನ ರೇಡಿಯೋ ಮತ್ತು ವಕ್ತಾರರ ಊಹೆ.

ಒಂದೆರಡು ವರುಷಗಳಿಂದ ಕನಸಿನ ಮಂಡಿಗೆಯಾಗಿದ್ದ ದ್ವಿತೀಯರಂಗ ನಿರ್ಮಾಣಕ್ಕಾಗಿ ಪ್ರತ್ಯಕ್ಷ ಕಾರ್ಯಕ್ಕಿಳಿಯುವ ವರೆಗೂ ಮಿತ್ರ ಪ್ರಮುಖರು ಅದರ ಮನಮೋಹಕ ವರ್ಣನೆಯನ್ನಷ್ಟೇ ಮಾಡುತ್ತಿದ್ದರು. ಆದರೆ ಇತ್ತೀಚಿನ ಕೆಲವು ತಿಂಗಳುಗಳಿಂದ ಅವರು ನಿಜಕ್ಕೂ ಆ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ಅವರ ಈ ಮಹಾಪ್ರಾಟದ ಪ್ರಥಮ ಸೂಚನೆಯೆಂದರೆ ಮೌನ. ಎರಡನೆಯದಾಗಿ ಟರ್ಕಿಯನ್ನು ಯುದ್ಧಕ್ಕಿಳಿಸಲು ಮಾಡಿದ ನಿಷ್ಫಲ ಯತ್ನ, ಐರ್ಲೆಂಡಿನಿಂದ ನಾಸಿಸ್ಟ್ ರಾಯಭಾರಿಗಳನ್ನೋಡಿಸಲು ನೋಡಿದ ನಿರರ್ಥಕ ಬಯಕೆ–ಇವೂ ಆ ಪ್ರಯತ್ನದ ಅಂಗಗಳೇ! ಇಂಗ್ಲಾಂಡಿನ ಸಾವಿರಾರು ಚದರ ಮೈಲುಗಳಷ್ಟು ಸ್ಥಳವನ್ನು ಸೈನ್ಯೋಪಯೋಗಕ್ಕಾಗಿ ಬಹಿಷ್ಕೃತ ಸ್ಥಳವಾಗಿ ಮಾರ್ಪಡಿಸಿದುದು, ಸೈನಿಕ ಕಾರ್ಯ ದಕ್ಷತೆಯಿಂದಾಗಿ ಅಲ್ಲಿಯ ನೈಸರ್ಗಿಕ ಅನುಕೂಲತೆಯನ್ನು ಕಳಕೊಳ್ಳಲು ನಾಗರಿಕರು ಸಿದ್ಧರಿರಬೇಕೆಂದು ಎಚ್ಚರಿಸಿದುದೇ ಮೊದಲಾದ ವಾರ್ತೆಗಳು ಆ ಮಹಾ ಸಿದ್ಧತೆಯ ಧಾಳಿ ಸುದ್ದಿಗಳೇ ಹೊರತು ಬೇರೆ ಅಲ್ಲ. 'ಮಾತು ಮಲ್ಲ ಕಾರ್ಯ ನಿಷ್ಫಲರ' 'ಕಾರ್ಯ ಶೂರ ಮಾತು ದುರ್ಬಲರ' ಎಂಬ ಎರಡು ನಾಣ್ನುಡಿಗಳಿಗೂ ಎರಡು ಸಂದರ್ಭಗಳಲ್ಲಿ ಮಿತ್ರಪಾತ್ರವು ನಿದರ್ಶನವಾಗಿದೆ. ಯುರೋಪು ಧಾಳಿಯ ಕುರಿತು ಆಗ ಬರೇ ಬಡಾಯಿ–ಈಗ ಬಾಯಿ ಮುಚ್ಚಿಕೊಂಡರೆ ಸಿದ್ಧತೆ!

ಕಣ್ಣಿಗೆಣ್ಣೆಯಿಟ್ಟು ಕಾಯುತಿದ್ದಾರೆ!

ಆದರೆ ಜರ್ಮನ್ ಪಾಳಯದಿಂದ ಕೇಳಿಬರುತ್ತಿರುವುದು, 'ನಿಜನ ಹೊರತು ಗೂರ್ಕೆಯಲ್ಲ!' ಅತಿಥಿಯಾಗಿ ಹೂಡದವನ ಶೃಂಗಾರ ಮುಗಿಯುವ ಮೊದಲೇ ಆಮಂತ್ರಣಪತ್ರವ ಅಡುಗೆ ಮಾಡಿಟ್ಟು ಕಾಯುತಿದ್ದಾನೆ–ಜರ್ಮನರು ಸರ್ವ ಸಿದ್ಧತೆ ಮುಗಿಸಿ ಧಾಳಿ ನಿರೀಕ್ಷೆಯಲ್ಲಿದ್ದಾರೆ. ಅವರ ಆಕಾಶವಾಣಿಗಳು, ವಕ್ತಾರರು ಮಿತ್ರರ ಧಾಳಿ ಯೋಜನೆಯ ಡಂಗುರಗಳಾಗಿ ಹೋಗಿವೆ. ಇದೇ ತಾ 21ರಲ್ಲಿ ಜರ್ಮನ್ ರೇಡಿಯೋ–ತನ್ನ ಮರಣ ಮುಹೂರ್ತವನ್ನು ತಾನೇ ತಿಳಿಸಿದ್ದ ಸಾಧು ತುಕಾರಾಮನಂತೆ–ಘೋಷಿಸಿದ: "ಬ್ರಿಟಿಷ್ ನೌಕಾಪಡೆಗಳು ತವ್ವ ಸಮುದ್ರದಲ್ಲಿ ಇಷ್ಟರಲ್ಲೇ ಜಮೆಯಾಗುತ್ತಿವೆ. ಇದು ಡಂಕರ್ಕಿನ ನಂತರ ನಡೆದ ಅತಿ ಹೆಚ್ಚಿನ ಹಡಗು ಜಮೆಯೆನ್ನಬೇಕು. ಅಮೇರಿಕ, ಫ್ರಾನ್ಸ್ ಮತ್ತು ಇತರ ಮಿತ್ರ ರಾಷ್ಟ್ರಗಳ ಹಡಗಗಳು ಮತ್ತು ಇಪಿಲಿ ನೌಕೆಯ ದಳಗಳು ಇದರಲ್ಲಿ ಮಿಲನಗೊಂಡಿವೆ. ದಿನಂಪ್ರತಿ ಲಂಡನ್ ಸ್ಟೇಶನುಗಳಿಂದ ಸೇನೆಗಳನ್ನು ತುಂಬಿಕೊಂಡ ಟ್ರೇನುಗಳು ಕಾಲುವೆ ಸಂದಿನ ಹಾಗೂ ಫ್ರಾನ್ಸ್ ದಕ್ಷಿಣ ಕರಾವಳಿಗಳ ಬಂದರಗಳಿಗೆ ಹೋಗುತ್ತಿವೆ"

ಎಪ್ರಿಲ್ ಅಂತ್ಯದೊಳಗೆ!

ನಾಗರಿಕ ನಿರೀಕ್ಷಣೆಯನುಸರಿಸಿ, ಮಿತ್ರ ಸಿದ್ಧತೆಸಾಗಿದೆ ಎಂಬಂತಹ ಪರಿಸ್ಥಿತಿ! ಅನ್ಯರ ಮನಸ್ಸಿನಲ್ಲಿದ್ದುದನ್ನು ಹೇಳಬಲ್ಲ ಮಂತ್ರವಾದಿಯ ಸ್ಥಾನದಲ್ಲಿ, ಮಿತ್ರರ ಪಾಲಿಗೆ ಜರ್ಮನ ವಕ್ತಾರರಿರುವರು ಅಷ್ಟೊಂದು ಸುಖಕರ ಕೆಲಸವಾಗುವುದಿಲ್ಲ. ಬರ್ಲಿನ ಒಬ್ಬ ಸೇನಾ ವಕ್ತಾರನ ಅಭಿಪ್ರಾಯವನ್ನು ಜರ್ಮನ್ ನಿಯಂತ್ರಣದಲ್ಲಿರುವ ಸ್ಕಾಂಡಿನೇವಿಯದ ಟೆಲಿಗ್ರಾಫ ಬ್ಯೂರೋವು ಎತ್ತಿ ಪ್ರಕಟಿಸಿದೆ. "ಆಕ್ರಮಣವೀಗ ನಿಜಕ್ಕೂ ಬರುತ್ತಿದೆ. ಮಿತ್ರರ ಯೋಜನೆಯಲ್ಲಿ ಇಳಿತ ಭರತಗಳಿಗೊಂದು ಪ್ರಾಮುಖ್ಯ ಒದಗಿದೆ. ಇದೇ ತಿಂಗಳ ಕೊನೆಯ ಹತ್ತು ದಿನಗಳಲ್ಲಿ ಇಂಗ್ಲಿಷ್ ಕಾಲುವೆಯ ಒಹಳ ಉಬ್ಬರದಲ್ಲಿರುವುದರಿಂದ ಧಾಳಿಗದು ಅತ್ಯನುಕೂಲ ಕ್ಷಣವಾದಿಂತಾಗಿ–ಮತ್ತು ಜರ್ಮನರಿಗೆ ದೂರಿತ ಚಿಹ್ನೆಗಳ ಮೇಲಿಂದ ಪ್ರಾಯಶಃ ಈ ಅವಧಿಯನ್ನು ಆಕ್ರಮಣಾರಂಭದ ಅವಧಿಯೆಂದು ಗಣಿಸಬೇಕು." ಎಂದು ಅವನನ್ನುತ್ತಾನೆ. ಪಶ್ಚಿಮ ಯುರೋಪಿನ ಮೇಲೆ ಧಾಳಿಯಿಡುವಾಗಲೇ ಉತ್ತರ ಇಟಲಿಯಲ್ಲೂ ಹೊಸ ಸೇನಾ ಧಾಳಿಯನ್ನು ಹೂಡಬಹುದೆಂದೂ ಜರ್ಮನ್ ಸೇನಾನಿಗಳು ನಿರೀಕ್ಷಿಸುತಿದ್ದಾರೆ.

ಅಮೇರಿಕದ ಆತ್ಮವಿಶ್ವಾಸ

'ಅಮೇರಿಕದ ಆಯುಧಗಳ ಹಾಗೂ ಸಾಮಗ್ರಿಗಳ ಗಣನೀಯ ರಕ್ಷಣಾಗುಂಪಿನ ಯಾಗಿ ಆ ಮಹಾ ಧಾಳಿಯ ವೇಳೆ ಸಾವಿರಾರು ಪ್ರಾಣಗಳನ್ನುಳಿಸಬಲ್ಲದು,'–ಎಂದು ಅಮೇರಿಕದ ಯುದ್ಧ ವಸ್ತು ನಿರ್ಮಾಪಕ ಬೋರ್ಡಿನ ಅಧ್ಯಕ್ಷ ಮಿ. ಡೊನಾಲ್ಡ್ ಎಮ್ ನೆಲ್ಸನ್‌ರು ಬರವಸೆಯಿಂದಾಡಿದ್ದಾರೆ. ನೆಲ್ಸನರ ಅಭಿಪ್ರಾಯದಂತೆ ಯುರೋಪ್ ಧಾಳಿ ವೇಳೆಯು ಅಮೇರಿಕನ ಸಾಮರ್ಥ್ಯದಿಂದ ನೆಲಗಳು ಎದೆ ಕಳಕೊಳ್ಳಬೇಕು! ಜರ್ಮನಿಯ ಕಡೆಗೆ ಆ ಮಹತ್ವದ ಪ್ರತಿಷ್ಠಾತ್ಮಕ ತ್ತರ ದಾಳಿಯಾರಂಭವಾದಲ್ಲಿ ಅಮೇರಿಕನ್ ತಯಾರಿಸಿದ ಗುಣ ಮತ್ತು ಸಂಖ್ಯೆಯ ಆಘಾತ ವಸ್ತು ಜರ್ಮನರು ತಿಳಿಯುವಂತೆ ಗುಪ್ತ. ಯುರೋಪು ತೀರದಲ್ಲಿಳಿಸಲು ಸೇನೆಗಳನ್ನು ಹೊತ್ತು ತರುವ ಹಡಗಗಳಲ್ಲೇ ಅಂತಹ ಅಪೂರ್ವ ಗುಣದ ಅನುಭವ ಅವರಿಗಾಗಲಿದೆ. ಯಾವುದೇ ಒಂದು ರಾಷ್ಟ್ರ ಅಥವಾ ರಾಷ್ಟ್ರಗಳ ಸಮೂಹವು ಆಕಾರ ಅಥವ ಇಂಜಿನಿಯರಿಂಗ್ ಮತ್ತು ನಿರ್ಮಾಣದಲ್ಲಿ ನಮ್ಮ ಆಕ್ರಮಣ ಮಾರ್ಗಗಳಿಗೆ ಸರಿಗಟ್ಟಲಿಲ್ಲ. ಸಮೂಹವನ್ನು ಜಮಾಯಿಸಿದ ಚರಿತ್ರೆಯಲ್ಲೇ ಇಲ್ಲ. ನಾವೀಷ್ಟರಲ್ಲೇ 20,000 ಹಡಗಗಳನ್ನು ಕಟ್ಟಿದ್ದೇವೆ, ಮತ್ತು ನಮ್ಮ ನಿರ್ಮಾಣದ ಕಾರ್ಯಕ್ರಮವು ಪೂರ್ತಿಗೊಳ್ಳುವಾಗ ನಮ್ಮ ಸೇನೆಗಳನ್ನು ಮಹಾ ಯುದ್ಧಕ್ಕೆ ತಕ್ಕಂತೆ ಕೊಂಡೊಯ್ಯಬಲ್ಲ 15 ವಿಶೇಷ ಮಾದರಿಗಳುಳ್ಳ 60,000 ಹಡಗಗಳಾಗುವವು. ಇವುಗಳ ಮೇಲ್ಗಡ ಲೋಕದಲ್ಲೇ ಪ್ರಥಮ ವರ್ಗ ಪಡೆದ ಅಮೇರಿಕನ್ ವಿಮಾನಗಳು ಜಲ ಧಾವಣೆಯಂತೆ ತೇಲಿ ಹೋಗಲಿವೆ. ಪಶ್ಚಿಮ ಯುರೋಪಿನ ರಕ್ಷಣಾ ವಿಭಾಗದೊಳಗೆ ಬಹುದೂರ ನುಗ್ಗಿ ಹೋಗಲಿರುವ ಅಮೇರಿಕನ್ ಟೇಂಕುಗಳು–ಅದರಲ್ಲೂ ಗುರಿ ಮತ್ತು ಧಾಳಿಯಲ್ಲಿ ಅನುಪಮವಾದವೆಂದು, ಟೇಂಕು ಮೂಲನಿರ್ಮಾಪಕರಾದ ಬ್ರಿಟನರಿಂದಲೇ ವಿಖ್ಯಾತಿ ಪಡೆದಿರುವ M 1 ಟೇಂಕುಗಳು. ಆಕ್ರಮಣ ಸೇನೆಯ ಮುಂಭಾಗದಲ್ಲಿ ಮುನ್ನುಗ್ಗಲಿವೆ"–ಮೇಲಿನ ವರ್ಣನೆಯೇನೋ ಚಿತ್ತಾಕರ್ಷಕವಾದುದು. ಪ್ರಕೃತ ಸಮೀಪದಾಪತ್ತುಗಳನ್ನೆಲ್ಲಾ ನಿವಾರಿಸಿಕೊಂಡ ಅಮೇರಿಕಾನರೀಗ ಹೆಗ್ಗಳಿಕ ಪ್ರದರ್ಶನಕ್ಕೆ ಅನಗತ್ಯ ಅವಕಾಶವನ್ನು ದೊರಕಿಸಿಕೊಂಡಂತಿದೆ. ಅವರದು ಅತಿಮಧುರ ಸುಖಸ್ವಪ್ನ! "ಶಾಂತಸಮುದ್ರದ ಯಾವುದೇ ಸಂದರ್ಭದಲ್ಲಿ, ವಾಹಕ ಹಡಗಗಳಿಂದ ಒಂದು ಸಾವಿರ ಮತ್ತು ಆಗತ್ಯಬಿದ್ದರೆ ಅದಕ್ಕೂ ಹೆಚ್ಚಿನ ವಿಮಾನಗಳ ಧಾಳಿ ನಡಿಸಲು ಅಮೇರಿಕನ್ ನೌಕಾಪಡೆಯೀಗ ಸಮರ್ಥವಾಗಿದೆ. ನಮ್ಮ ಧಾಳೀ ಸೇನೆಗಳು ದಿನದಿಂದ ದಿನಕ್ಕೆ ಬಲಗೊಳ್ಳುತ್ತಿರುವಾಗ, ಆಕಸ್ಮಿಕ ಮುತ್ತಿಗೆ ಮತ್ತು ವಿಧ್ವಂಸಕ ಧಾಳಿಗಳಿಂದ ಪ್ರತ್ಯಕ್ಷ ಪೆಸಿಫಿಕ್ ಕರಾವಳಿ ಕೂಡಾ ಸುರಕ್ಷಿತವಾಗಿಲ್ಲ. ಆ ದಿನವು ಜಪಾನರ ನಿರೀಕ್ಷೆಗಿಂತ ಮೊದಲೇ ಬರಲು ಸಾಧ್ಯ–"ಎಂದು ಅಮೇರಿಕದ ಪತ್ರೊಬ್ಬ ನಾವಿಕಾಧಿಕಾರಿ ರೇಯರ್ ಅಡ್ಮಿರಲ್ "ಅರ್ಥರ್ ಡಬ್ಲ್ಯು ರೇಡ್‌ಫೋರ್ಡ್" ಅಂದಿದ್ದಾರೆ. 'ತಿಯಾಸ್ತು' ಎನ್ನಬಹುದು, ಆದರೆ ಇಂದು ನಾಳೆಯಲ್ಲಿ ಸಾಗರಗಿರೀ ತೀರುವದಂಬ ಆಸೆಕಟ್ಟಿಕೊಳ್ಳಲು ಮೇಲಿನ ಮಾತುಗಳಲ್ಲಿ ಅಡಕವಾಗಿರುವ 'ಬಡಾಯಿ' ಅಂಶವೊಂದು ಆತಂಕವಾಗುತ್ತದೆ!

Degrees Books Medicines

Free H L M S, M, B H M D etc Free Homeo Ayur Unani Naturco degree by post also—Practitioner also get soon Homeo Materiamedica Rs 5 Homeo Practice book Rs 1 Insanity Cure Pills Rs. 10 Enclose 2 annas stamp —

Prof, Dr N H Chhatbar,
Principal Indian Homeopathic Institute & Society (Govt Regd)
P. O. MAHUVA (Kathiawar Dt India)

Sidha-Kalpa Kavach (Regd)

No 3 Rs 3 No 2 Rs 5 No 1 Rs 7 Special Rs 10, Extra Special Rs 17 for love marriage health wealth Ask any six questions with M O Re 1/4 and get correct answers by returnpost Life reading Rs 10 No V, P P Send M O Free pamphlets

Prof Dr N H. Chhatbar
P O MAHUVA (Kathiawar India)

ತಾರುಣ್ಯಶ್ರೀ

ಕೊಟ್ಟು, ವೀರ್ಯಸ್ತಂಭನ ಮಾಡಿ ರತಿಸಂಬದ್ಧ ಪರಮಾನಂದವನ್ನುಂಟು ಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸು.
ಪುತ್ತೂರು ಏಜಂಟರು. ಪೈ ಫಾರ್ಮಸಿ

THE BEST PREVENTIVE IN EPIDEMICS OF CHOLERA

"BHUVANENDRA"

CHANDRAMAS

Will give you the best results Try once and be satisfied with the results

Dose: For adults— 3 to 5 drops 2 to 3 times a day with the decoction of cloves or ajwan

For Children 1 to 2 drops with the said decoction.

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 1ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದ

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ ಆರ್ ಎಸ್. ಶೆಣೈ, ರಥಬೀದಿ, ಡಾ. ಪಿ ಜಿ. ಆಚಾರ್ಸ್ ಫಾರ್ಮಸಿ; ಡಾ ಕೆ ಶೇಷಗಿರಿ ಪೈ L I M; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

The Pangal Nayak Bank Limited.

(Incorporated in 1920)

Registered Office Court Road, UDIPI

Branches at — Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public

For business proper please enquire at any one of our Offices.

15th April 1944.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಪಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

FOR SAFETY & SERVICE

THE VIJAYA BANK, LTD.,

Head office: MANGALORE.

Branches at:—Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ

ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು:— ಮಂಗಳೂರು.

ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.



REGD

ಅಮೃತಾಂಜನ

ತಲೆನೋವು, ನಿರೋ ವೇದನೆ, ಉಳುಕು, ಶ್ವಾಸಕ್ಕೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾವು ಕೊಳ್ಳುವುದು, ಚೇಳು ವಿಷ ಮುಂತಾದ ಜಾನೆ ವಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ

ಸರ್ವ,ಜನರಿಗೆ ಬುದ್ಧಿ ನಿಜ ಸಮ್ಮರಿಸಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕಾರಿ ಆರ್ಡರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ ಉಡುಪಿ.

ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸು: **ಬೊಂಬಾಯಿ**

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ಉಡುಪಿಯ ಕೋರ್ಟುರೋಡಿನಲ್ಲಿ ಇದರ ಚೀಫ್ ಏಜನ್ಸಿ ಆಫೀಸು ಇದೀಗಲೇ ಪ್ರಾರಂಭವಾಗಿದೆ

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರ ಬೇಕಾಗಿದ್ದಾರೆ.

ಪಿ. ಡಿ. ನಾಯಕ,
ದ ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Company, Ltd.,
BOMBAY.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೫—0—0 ಪೋಸ್ಟ ಚಾರ್ಜು ನಿರಾಳೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ.—ದಾವಣಗೇರಿ ಪ್ರೆಸ್, ಆರ್. ಎಲ್. ಕರಬಂದಿನ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ವಿಷಸ್ಸರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ಸಿಕ್ಕಿಗನಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೪ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೯ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ,ನಂ. 5 **ಕೊಡಿಯಾಲಬೈಲು, ದ. ಕ**

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸ್ಟೆನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd o N. M. 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೩೫

FOUNDER
Sri. A. B. Shetty.

Vol. 24
No. 35

NAVAYUGA— Kannada Weekly —UDIPI, S. I.

ಉಡುಪಿ • 4—5—1944 • ಮಂಗಳೂರು.

1944ನೇ ಜನವರಿಯಿಂದ
ನೂರನೆ ಸಂಪುಟಾರಂಭ
ವಾಗಿದೆ.

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ
ವಾರ್ಷಿಕ ಚಂದಾ ರೂ. 3-0-0
ಬಿಡಿ ಪ್ರತಿಗೆ ರೂ. 0-4-0
ಮಾದರಿ ಪ್ರತಿಗೆ ಐದಾಣೆ
ಸ್ಟಾಂಪಿನೊಂದಿಗೆ ಬರೆಯುವುದು:

'PRAKASHINI'
NAVAYUGA PRESS
UDIPI

ANTARANGA
UDIPI

ಅಖಿಲ ಕರ್ನಾಟಕದ
ಹೊಸ ಮಾದರಿಯ
ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ.

The Canara Mutual Assurance Co., Ltd.

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

UDIPI, 4-4-1944. } T. R. A. Pai, MANAGING DIRECTOR

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸವಿಾಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾಗದ ಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್
ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ೫ ಮುಂಜಾನೆ·ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕೆಂದುವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ವಾಲಿ ಸಂಗ್ತಿ ಬರದಕ್ಕ ರೋಗಳಿ, ತಕ್ಕವಾದ ಔಷಧಿ ರವಾನಿಸಬಹುದು.

ಕತೆಕಾದಂಬರಿಗಳು—ಕವನ—ನಾಟಕಗಳು
ಯಾವ ಪುಸ್ತಕ ಬೇಕಾದರೂ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜಿನ್ನರ ಅಧಿಕಾರಕ್ಕೆ ಪಂಜಾಬು ಪ್ರಧಾನರ ಧಿಕ್ಕಾರ!

ಪಂಜಾಬು ಮುಖ್ಯ ಮಂತ್ರಿ ಮಾಲಿಕ್ ಕಿಝಾರ್ ಹಯತ್ ಖಾನರನ್ನು ವಿನಯ ವಿರೋಧವರಪಡ ಮೂಲಕವೂ ಒಗ್ಗಿಸಿ, ಆತ್ಲಿಯ ಯೂನಿಯನಿಸ್ಟ್ ಮಂತ್ರಿ ಮಂಡಲದ ಕೊರಳಿಗೆ 'ಲೀಗ್ ಮಂತ್ರಿ ಮಂಡಲ' ಎಂಬ ಪಟ್ಟಿಯನ್ನು ಕಟ್ಟಬೇಕೆಂದು ಒದ್ದಾಡಿದ ಮಿ. ಜಿನ್ನರು ಪರಾಭವಗೊಂಡ ವಾರ್ತೆ ಪ್ರಕಟವಾಗಿದೆ; 'ಕ್ವಯದ್-ಇ-ಆಝಮ್'ರಾದ ಈ ಮುಖಭಂಗದ ಮೊದಲ ದಿನವೇ, ಅವರ ನಿಷ್ಠಾವಂತ ಅನುಯಾಯಿಯಾಗಿದ್ದ ಮೇಜರ್ ಶೌಕತ್ ಹಯತ್ ಖಾನರನ್ನು ಒಬ್ಬ ಕಾರಕೂನನ ರದ್ದತಿಗೆ ಮಾತ್ರ ಸಾಕಾಗುವಂತಹ ಅಲ್ಪ ಕಾರಣಕ್ಕಾಗಿ ಗವರ್ನರರು ಡಿಸ್‌ಮಿಸ್ ಮಾಡಿಬಿಟ್ಟಿದ್ದಾರೆ. ಈ ರೀತಿ ರಾಜಕೀಯ ವಿಜಯವೊಂದನ್ನು ಸಂಪಾದಿಸಲು ಲಾಹೋರಿಗೆ ಹೋದ ಜಿನ್ನರ ಮುಖಕ್ಕೆ ಎರಡು ಒತ್ತುಗಳ ಮಂಗಳಾರತಿ ನಡೆದಿದೆ. ಕ್ವಯದ್-ಇ-ಆಝಮರು ತನ್ನ ಪರಾಭವವನ್ನು ಜೀರ್ಣಿಸಿಕೊಳ್ಳುವ ವ್ಯಕ್ತಿಯಲ್ಲ; ಆದ್ದರಿಂದ ಅವರ ಪ್ರತಿಕ್ರಿಯೆಯ ಫಲವಾಗಿ ಪಂಜಾಬು ಮಂತ್ರಿ ಮಂಡಲದ ಹಾದಿಯಲ್ಲಿ ಸುಂಟರಗಾಳಿಯೇಳುವದನ್ನು ನಿರೀಕ್ಷಿಸಬೇಕು!

'ಯೂನಿಯನಿಸ್ಟ್ ಪಾರ್ಟಿ'

ಈ 'ಸಮ್ಮಿಶ್ರ ಪಕ್ಷ'ವೆಂಬುದು ಮುಸಲ್ಮಾನ ಬಹುಮತವಿರುವ ಪಂಜಾಬಿನಲ್ಲಿ ಗತಿಸಿದ ಮಿಯಾನ್ ಸರ್ ಫಜ್ಲಿ ಹುಸ್ಸೇನ್‌ರವರಿಂದ ಜಾತಿ ಭೇದಗಳ ಬದಲಿಗೆ ಶಿಕ್ಷಣ, ಆರ್ಥಿಕ, ಹಾಗೂ ರಾಜಕೀಯ ಧ್ಯೇಯಗಳನ್ನಿಟ್ಟುಕೊಂಡು 192?ರಲ್ಲಿ ಸ್ಥಾಪನಗೊಂಡಿದ್ದಿತು. ಈ ಪಕ್ಷದ ಸ್ಥಾಪಕನಂತೆಯೇ ಅದರ ಇದುವರೆಗಿನ ನಾಯಕರೂ ಮುಸಲ್ಮಾನ್ ಮುತ್ಸದ್ದಿಗಳೇ. ಮುಸ್ಲಿಂ ಲೀಗಿನಿಂದ ಈ ಪಕ್ಷವನ್ನು ಪ್ರತ್ಯೇಕಿಸಿ ತೋರಿಸುವ ಅದರ ಒಂದೇ ಒಂದು ಸಲ್ಲಕ್ಷಣವೆಂದರೆ 'ಧನಿಕ ದರಿದ್ರ' 'ಅಭಿವೃದ್ಧಿ-ಅವನತಿ' ಎಂಬ ಭೇದವಲ್ಲದೆ 'ಹಿಂದೂ—ಮುಸ್ಲಿಮ್' ಭಿನ್ನತೆಯು ಅದರ ಆಧಾರವಲ್ಲ. ಸರ್. ಹುಸ್ಸೇನರಿದ್ದಾಗಲೇ ಮಿ. ಜಿನ್ನರವರನ್ನು ಲೀಗ್ ಪತ್ರಪಡಿಗೆಳೆಯಲು ಭಗೀರಥ ಯತ್ನ ನಡೆಸಿ ನೋಡಿದ್ದರು. ಆ ಮೇಲೆ 'ಯೂನಿಯನಿಸ್ಟ್' ಪಕ್ಷೀಯರಿಗೆ ಬಿರಾಗಿ ಲೀಗ್ ಉಮೇದ್ವಾರಿಗಳನ್ನು ನಿಲ್ಲಿಸಿಯೂ ಪರಾಭವಗೊಂಡಿದ್ದರು. ಪಂಜಾಬಿನಲ್ಲಿ ಈ ಸಮ್ಮಿಶ್ರ ಪಕ್ಷದ ವರ್ಚಸ್ಸಿದ್ದರೂ ಇದು ವರೆಗೂ ಅದಕ್ಕುಪವಾದ ತಪ್ಪಿದ್ದಿಲ್ಲ. ಬಹುಸಂಖ್ಯಾತರಾಗಿರುವ ಮುಸಲ್ಮಾನ್ ದಲಿತರ ಉದ್ಧಾರವನ್ನದು ಸಾಧಿಸುವದರಿಂದ 'ಜಾತೀಯ ಪಕ್ಷಪಾತಿ' ಎಂಬ ಆರೋಪಕ್ಕೊಳಗಾಗಿಟ್ಟಿತು. ಇತ್ತ ಜಿನ್ನರಂತಹ ಜಾತಿಭ್ರಮಿತ ಮುಸಲ್ಮಾನ್ ಧುರೀಣರ ಸವತಿ ಮತ್ಸರಕ್ಕೂ ಬಲಿಯಾಗಿದ್ದಿತು. ಆದರೆ ಅಲ್ಪ ಸಂಖ್ಯಾತರಾಗಿರುವ ಪಂಜಾಬಿನ ಹಿಂದೂ-ಸಿಖ್ಖರಿಗೆ 'ಯೂನಿಯನಿಸ್ಟ್' ಪಕ್ಷ ಛದ್ರ ಛತ್ರಪಡಿಯ ಕಾಪ ನೆರಳನ್ನು ಬಿಟ್ಟರೆ ಮತ್ತೆ ಮುಸ್ಲಿಂ ಲೀಗಿನ ಪ್ರಖರ ಬಿಸಿಲೇ ಗತಿಯೆಂಬ ಭಯವಿರುವದರಿಂದ ಅವರೀ ಪಕ್ಷದೊಡನೆ ಮಿಲನ ಹೊಂದಿದ್ದರು.

ಸರ್. ಸಿಕಂದರರ ಕಾಲದಲ್ಲಿ

ಸರ್. ಹುಸೇನರ ಕಾಲ ಕಳೆಯಿತು. ಸರ್ ಸಿಕಂದರ್ ಹಯತ್‌ಖಾನರು ಮೇಲಿನ ಪಕ್ಷದ ನಾಯಕರಾದರು. ಮಿ. ಜಿನ್ನರಲ್ಲಿ ಮುಸ್ಲಿಂ ಲೀಗ್ ಪಕ್ಷವನ್ನು ಸ್ಥಾಪಿಸಿದ್ದರೂ, ಪ್ರಾಂತಿಕ ಪ್ರಶ್ನೆಗಳ ಮಟ್ಟಿಗೆ ಪಂಜಾಬು ಮುಸಲ್ಮಾನರಿಗೂ ಯೂನಿಯನಿಸ್ಟ್ ಪಕ್ಷದಷ್ಟು ಇದು ಆಕರ್ಷಣೀಯವಾಗಲಿಲ್ಲ. ತತ್ಫಲವಾಗಿ 1937ರಲ್ಲಿ ನಡೆದ ಚುನಾವಣೆಯಲ್ಲಿ ಅಧಿಕಾರ ವಹಿಸಿಕೊಳ್ಳಲಾಗ ವಂತಹ ಬಹುಮತವನ್ನು ಲೀಗನ್ನು ಹಿಂದ ಹಾಕಿ ಯೂನಿಯನಿಸ್ಟ್ ಪಕ್ಷವೇ ಸಂಪಾದಿಸಿತು. ಜಿನ್ನರ ಸರ್ವಾಧಿಕಾರೀ ದೃಷ್ಟಿಗೆ, ತನ್ನ ಮತಕ್ಕೆ ಭಿನ್ನವಾದ ಇಡೀ ಪ್ರಾಂತ್ಯದ ಅಭಿಪ್ರಾಯವಾದರೂ ಅಸಹನೀಯ ಹೊರತು ಅಂಗೀಕಾರಾರ್ಹವಲ್ಲ. ಆದರ ಅನ್ಯಥಾ ಉಪಾಯವಿಲ್ಲದೆ, ಮೀಸೆ ಮೊಗಸಿ ದೇಹ ಮೊಗಿಸುವ ಯುಕ್ತಿಯನ್ನವಲಂಬಿಸಿ 1937ರಲ್ಲಿ ಸರ್. ಸಿಕಂದರರೊಡನೊಂದು ಕರಾರು ಮಾಡಿಕೊಂಡರು. ಅದೇ 'ಸಿಕಂದರ್-ಜಿನ್ನಾ ಒಪ್ಪಂದ'. ಈ ಒಪ್ಪಂದದನ್ವಯ ಪಂಜಾಬಿನ ಎಲ್ಲಾ ಮುಸ್ಲಿಂ ಮೆಂಬರರೂ ಲೀಗ್ ಪ್ರತಿಜ್ಞಾ ಪತ್ರಕ್ಕೆ ಸಹಿಹಾಕಬೇಕು. ಪಂಜಾಬು ಪ್ರಾಂತಿಕ ಪ್ರಶ್ನೆಗಳ ಮಟ್ಟಿಗೆ ಯೂನಿಯನಿಸ್ಟ್ ಪಕ್ಷದ ಧೋರಣೆಯೇ ಮಾನ್ಯವಾಗಬೇಕು. ಅಂದಿನಿಂದ ಮೊನ್ನೆಯ ವರೆಗೂ ಪಂಜಾಬು ಆಡಳಿತೆಯು ಈ ಒಪ್ಪಂದದ ಶರ್ತಗಳಿಗನುಗುಣವಾಗಿಯೇ ನಡೆದಿದ್ದಿತು.

ಪುನಃ ಜಿನ್ನರೆದ್ದರು!

ಸರ್. ಸಿಕಂದರರು ಇಹಯಾತ್ರೆ ಮುಗಿಸಿದಾಗ ಕ್ರಮಬದ್ಧನಾಗಿ ಮಂತ್ರಿ ಮಂಡಲದ ಅತಿ ಹಿರಿಯ ಸದಸ್ಯ ಸರ್. ಛೋಟುರಾಮರು ಪ್ರಧಾನಿಯಾಗಬೇಕಿದ್ದಿತು. ಆದರೆ ಅವರು ಹಿಂದುವಾಗಿ ಹುಟ್ಟಿದ ಅಪರಾಧಕ್ಕಾಗಿ ಆ ಪಟ್ಟವು ಮಾಲಿಕ್ ಕಿಝಾರ್ ಹಯತ್‌ಖಾನ್ ತಿವಾನರ ಪಾಲಿಗೆ ಬಂತು. ಅದೀರೀತಿ ಜಾತೀಯಾನುಸಾರವಾಗದೆ, ಯಾವನಾದರೊಬ್ಬ ಹಿಂದು ಅಥವಾ ಸಿಖ್ಖನ ಪಾಲಿಗೆ ಬರುತ್ತಿದ್ದರೆ, ಆ ಅಧಿಕಾರಕ್ಕೆ ಮೂರೇ ದಿನದಾಯುಷ್ಯ ದೊರೆಯುತ್ತಿತ್ತು; ಆದ್ದರಿಂದ ಈ ಕುರಿತು ಗೊಣಗಿದವರಿಲ್ಲ. ಹಿಂದಿನ ಪ್ರಧಾನಿ ಸರ್. ಸಿಕಂದರರಂತೆಯೇ ಈಗಿನವರಾದ ಮಾಲಿಕ್ ತಿವಾನರೂ ಲೀಗಿನ ಏಕಾಗ್ರ ನಿಷ್ಠೆಯವರು; ಮಂತ್ರಿ ಮಂಡಲದ ಧೋರಣೆಯಲ್ಲಿ ಲೀಗ್ ವಾಸನೆಯೇ ಹೊರಡುತ್ತಿತ್ತು. ಆದರ ಮಿ. ಜಿನ್ನರಿಗಿಷ್ಟರಲ್ಲೇ ತೃಪ್ತಿಯಿಲ್ಲ. ಪಂಜಾಬು ಅಧಿಕಾರಾಲಯದ ಮುಂಭಾಗದಲ್ಲಿ 'ಲೀಗ್ ಮಂತ್ರಿ ಮಂಡಲ' ಎಂಬ ಬೋರ್ಡು ತೂಗಾಡುತ್ತಿರಬೇಕೆಂದೇ ಅವರ ಹಠ.

ಸುದೀರ್ಘ ಚರ್ಚೆ

ಈ ಹಠ ಸಾಧನೆಗಾಗಿ ಕ್ವಯದ್-ಇ-ಆಝಮರು ಮಾರ್ಚ 19ರಲ್ಲೊಮ್ಮೆ ಲಾಹೋರಿಗಾಗಮಿಸಿ, ಪಂಜಾಬು ಪ್ರಧಾನಿಗಳೊಡನೆ ಜಗಳದ ಬುನಾದಿಕಲ್ಲು ಹಾಕಿ ಹೋಗಿದ್ದರು. ಪೂರ್ತಿ ಒಂದು ತಿಂಗಳ ನಂತರ—ಎಪ್ರಿಲ್ ತಾ. 20ಕ್ಕೆ—ಮತ್ತೊಮ್ಮೆ ಲಾಹೋರಿಗೆ ಬಂದವರು ಆ ಕಲಹಾಸ್ತಿವಾರದ ಮೇಲೆ ಕಟ್ಟಡ ಕಟ್ಟಿ ಗೋಪುರವೇರಿಸಿದ್ದಾರೆ, ಅಂದು ಲೀಗ್-ಯೂನಿಯನಿಸ್ಟ್ ಪಕ್ಷಗಳೊಳಗಿನ ಸಂದುಕಟ್ಟನ್ನು ಬಿಡಿಸಿ ಹೋದವರು ಈ ಬಾರಿ ಬಂದು ಅದನ್ನು ಸರೀ ಇಬ್ಭಾಗ ಮಾಡಿ ಹಾಕಿದ್ದಾರೆ. ಕಳೆದ ತಾ.20ರಿಂದ 27ರ ವರೆಗಿನ ಒಂದು ವಾರದಲ್ಲಿ ಆರು ಬಾರಿ ನಡೆದ - [illegible]ಗಳಲ್ಲಿ ಪ್ರತಿಯೊಂದೂ ಎರಡು ಮೂರು ಘಂಟೆಯ ಮಂಥನವಾಗಿಸಾಗಿದ ಪರಿಣಾಮವಾಗಿ ಕೊನೆಗೆ ಜಿನ್ನರ ಪಾಲಿಗೆ ಹಾಲಾಹಲವೇ ಹುಟ್ಟಿಕೊಂಡಿತು. ಮಿ. ಜಿನ್ನರ ಶರ್ತಗಳು ಮೂರು 1 ಪಂಜಾಬು ಎಸೆಂಬ್ಲಿಯ ಪ್ರತಿಯೊಬ್ಬ ಮುಸಲ್ಮಾನ್ ಸದಸ್ಯನೂ, ಸಂಪೂರ್ಣವಾಗಿ ಮುಸ್ಲಿಂ ಲೀಗ್ ಪಕ್ಷವೊಂದಕ್ಕೇನೇ ಬಾಧ್ಯನಾಗಿರಬೇಕು ಹೊರತು ಯೂನಿಯನಿಸ್ಟ್ ಪಕ್ಷದ ಅಥವಾ ಇನ್ನಾವುದೇ ರಾಜಕೀಯ ಪಕ್ಷದ ಅಂಕೆಗೊಳಗಾಗಬಾರದು. 2 ಮಂತ್ರಿಮಂಡಲದ ಸದ್ಯದ ಮುಖಪಟ್ಟಿಯಾದ 'ಯೂನಿಯನಿಸ್ಟ್ ಪಕ್ಷ'ವೆಂಬುದು ಹೋಗಬೇಕು. 3 ಈ ಸಮ್ಮಿಶ್ರ ಪಕ್ಷದ ನಾಮಧೇಯವು 'ಮುಸ್ಲಿಂಲೀಗ್ ಸಮಿಶ್ರ ಪಕ್ಷ' ಎಂದಾಗಬೇಕು ಈ ಮೂರು ಶರ್ತಗಳೆಂದರೆ ಹೆಚ್ಚೆ ಮುಂದಿಡಬಾರದೆಂದು ಪಂಜಾಬು ಪ್ರಧಾನಿಗಳೆದಿರು ಸರ್ವಾಧಿಕಾರೀ ಜಿನ್ನರೆಳೆದ ಮೂರುಗೆರೆಗಳೇ ಸರಿ! ಸರ್ ಛೋಟುರಾಮ್ ಮತ್ತು ಸರದಾರ್ ಬಲದೇವಸಿಂಗರಂತಹ ಸಮರ್ಥ ಹಿಂದೂ ಸಿಖ್ ಮಂತ್ರಿಗಳು ತನ್ನ ಎಡ ಬಲ ರೆಕ್ಕೆಗಳಂತಿರುವಾಗ, ಮಾಲಿಕ್ ಕಿಝಾರ್ ಹಯಾತ್‌ಖಾನರು ಈ ಗಡಿಯೊಳಗೆ ತಡೆದು ನಿಲ್ಲಲೊಪ್ಪಲಿಲ್ಲ. ಹೀಗಾಗಿ ಸಂಧಾನ ಮುರಿಯಿತು. ಬಾಯ್ದೆರೆಯಾಗಿ ಎಷ್ಟೆಷ್ಟೋ ಸಂಗತಿಗಳನ್ನು ಪಂಜಾಬು ಪ್ರಧಾನಿಗಳು ಕೊನೆಯ ಉತ್ತರವಾಗಿ ಹೇಳಿದಾಗ, ಮೇಲಿನ ತನ್ನ ಶರ್ತಗಳಿಗೆ ಬರೆಹಮೂಲಕ ಉತ್ತರ ಕೊಡಿರೆಂದು ಕಳುಹಿಸಿದ ಪತ್ರಕ್ಕೆ ಪ್ರಧಾನರು ಸ್ವೀಕಾರ ರಶೀದಿ ಕೂಡಾ ಕೊಡದೆ ತಪ್ಪಿಸಿಕೊಂಡು ಅಸಭ್ಯ ವರ್ತನೆ ಪ್ರದರ್ಶಿಸಿದರೆಂದು ಮಿ. ಜಿನ್ನರ ಆರೋಪ. ಈ ಅಲ್ಪಾರೋಪವೇ ಅಸಂಬಂಧವಿದ್ದು ತಾನು ಎಲ್ಲವನ್ನೂ ಸ್ಪಷ್ಟವಾಗಿ ತಿಳಿಸಿರುವೆನೆಂದು ಮಾಲಿಕ್ ತಿವಾನರ ಉತ್ತರ. ರಾಜಮುರಿದೊಡನೆ ಇಬ್ಬರು ಮುಸ್ಲಿಂ ಪಾರ್ಲಿಮೆಂಟರಿ ಕಾರ್ಯದರ್ಶಿಗಳು ರಾಜೀನಾಮೆ ಕೊಟ್ಟು ಲೀಗನ್ನು ಸೇರಿಕೊಂಡಿದ್ದಾರೆ. ಮಿ. ಜಿನ್ನರು ಲೀಗ್ ಪಕ್ಷೀಯರ ಸಭೆ ಕರೆದು ಕಾರ್ಯಕ್ರಮ ಹಾಕಿದ್ದಾರೆ. ಪಂಜಾಬು ಮಂತ್ರಿ ಮಂಡಲದ ಪತನ, ಇಲ್ಲವೇ ಲೀಗ್ ವರ್ಚಸ್ಸಿನ ನಿರ್ನಾಮ—ಇವೆರಡರಲ್ಲೊಂದು ಪ್ರತಿಫಲ ದೊರೆಯದ ಇನ್ನು ವಿವಾದ ಮುಕ್ತಾಯವಿಲ್ಲ.

ಶೌಕತ್ ಹಯತ್‌ಖಾನರ ರದ್ದತಿ.

ಈ ನಡುವೆ ಪಂಜಾಬು ಮಂತ್ರಿಗಳಲ್ಲೊಬ್ಬನ ಅದೃಷ್ಟ ರೇಖೆಯನ್ನು ಗವರ್ನರರುಜ್ಜಿ ತೆಗೆದ ವಿಶೇಷ ಘಟನೆ ನಡೆಯಿತು. ಮೇಜರ್ ಶೌಕತ್ ಹಯತ್‌ಖಾನರು ಸರ್. ಸಿಕಂದರ್ ಹಯತ್‌ಖಾನರ ಹಿರಿಮಗ, ಮುಸ್ಲಿಂ ಲೀಗಿನ ಅನನ್ಯ ಭಕ್ತ, ಪಂಜಾಬು ಗೊಂದಲಕ್ಕೆ ಇವರೇ ಮಿ. ಜಿನ್ನರ ಪ್ರೇರಣಾ ಶಕ್ತಿ. ಇಂಥವರನ್ನು—'ಕಾಗದ ಚಿತ್ತು ಮಾಡಿದ್ದಕ್ಕಾಗಿ ಕಾರಕೂನನ ಡಿಸ್‌ಮಿಸ್' ಎಂಬಂತಹ ಸಮರ್ಪ ಎಚ್ಚರಿಕೆಯೊಡನೆ ಆಡಳಿತೆಯ ಒಂದು ಅಪರಾಧಕ್ಕಾಗಿ ಗವರ್ನರರು ಡಿಸ್ ಮಿಸ್ ಮಾಡಿ ಬಿಟ್ಟರು. ಮಿ. ಜಿನ್ನರ ಗೌರೀ ಶಂಕರ ಶಿಖರದಂತಹ ಸ್ವಾಭಿಮಾನ-ಹಿಂದುಸ್ಥಾನದಲ್ಲಿರುವ ಪ್ರಜಾಧಿಕಾರದ ವರ್ಣನೆಗಾಗಿ ಅತಿ ಮತ್ತಿಂದ ಸ್ವಜಗಳಂತೆ ಹಾರಾಡುತ್ತಿರುವ ಸಾವಿರ ಸಾವಿರ ಬಿಳಿ ನಾಲಗೆಗಳು—ಇದೊಂದೇ ಪೆಟ್ಟಿಗೆ ಮುರಿದು ಬೀಳುವಂತಾಗಿದೆ! ಲಾಹೋರು ಕೋರ್ಪರೇಶನಿನ ಶಿಕ್ಷಣ ಇಲಾಖಾ ಸುಪರಿಂಟೆಂಡೆಂಟ್ ಶ್ರೀಮತಿ ದುರ್ಗಾದಾಸರನ್ನು ಮಿ. ಹಯತ್‌ಖಾನರು ರದ್ದುಪಡಿಸಿದ ಅಪರಾಧಕ್ಕಾಗಿ ಈ ಶಿಕ್ಷೆಯಂತೆ! ತಾನು ಏಳು ದಿನಗಳಿಗೆ ಮೊದ

The Victory Club

Both Vegetarian & Non-vegetarian dishes

Old Post office Building,

VICTORY CLUB ROAD, UDIPI.

(*Furnishing.* **Homes & Estates Ltd.**)

ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.

ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.

ವಿಕ್ಟರಿ ಕ್ಲಬ್

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.

ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

ಯುರೋಪು ಧಾಳಿಯಾರಂಭವಾಯಿತೆ?

— ರಶ್ಯಾರಂಗವೇಕೆ ತಟಸ್ಥವಾಗಿದೆ? —

ಇದೀಗ ಇವನ ಶಕ್ತಿ ಮತ್ತು ಅದೃಷ್ಟ ಪರೀಕ್ಷೆಯ ಕಾಲ

ರಶ್ಯದಲ್ಲಿ

ಕಳೆದ ಹಲವು ತಿಂಗಳುಗಳಲ್ಲಿ, ಹಿಟ್ಲರನ ಸಮುದ್ರಾಸ್ತ್ರವಾರದ ಬಾಹಾದಿಕಲ್ಲನ್ನೇ ಅಲುಗಾಡಿಸುತ್ತಿದ್ದ ಕೆಂಪು ಸೇನೆಯು ಕಳೆದ ವಾರದಿಂದ ಅದೇಕೋ ತಟಸ್ಥವಾದಂತಿದೆ. 'ವಾಸ್ತವಿಕ ಬದಲಾವಣೆಯೇನೂ ಇಲ್ಲ' ಎಂದು ಎಷ್ಟೋ ತಿಂಗಳ ನಂತರ ರಶ್ಯನ್ ಯುದ್ಧ ಪ್ರಕಟಣೆಗಳೀಗ ಹೇಳಹತ್ತಿವೆ. ರಶ್ಯಾ ಯುದ್ಧಾರಂಭದಿಂದ ಇದೀಗ ಪ್ರಥಮ ಬಾರಿ ಅಲ್ಲಿಯ ಪತ್ರಿಕೆಗಳು ಚುಟುಕು ಯುದ್ಧ ವಾರ್ತೆಗಳನ್ನಷ್ಟೇ ಕೊಡಹತ್ತಿವೆ. ಇಂತಹ ಸ್ತಬ್ಧತೆಯು, ಜರ್ಮನರು ಪ್ರತಿ ಧಾಳಿಗಳನ್ನು ಹೂಡ ಹತ್ತಿದ ಮೇಲೆ ನಿರ್ಮಾಣಗೊಂಡಿತೆಂಬುದರಿಂದ ಆ ಕೀರ್ತಿ ನಾಜಿಗಳದಿರಬಹುದೇ ಎಂಬ ಅನುಮಾನ ಮೂಡುತ್ತಿದೆ. ರಶ್ಯದ ಮೂರು ಮುಖ್ಯ ರಣರಂಗಗಳ ಕೆಂಪು ಸೇನೆಯ ಧಾಳಿಗಳಲ್ಲಿ ಆದಿಯ ರಭಸವೀಗ ಕುಂದಿದ್ದು ಧಾವಿಸಿಬಂದ ಪ್ರವಾಹ ಪಸರಿ ಹೋದಂತೆ ಈಗ ಮಂದಗತಿಯುಳ್ಳದ್ದಿದೆ. ಕ್ರಿಮಿಯದಲ್ಲಿ, ಇಷ್ಟರಲ್ಲೇ ಧೂಳೀಲೇ ತನ್ನ ರಾಜೀನಾಮೆಯನ್ನು ಪ್ರಧಾನಿಗಳಿಗೊಪ್ಪಿಸಿದ್ದೇನೆ. ಅವರದನ್ನು ಅಂಗೀಕರಿಸಿಕೊಳ್ಳದ ಮಿ. ಜಿನ್ನರೊಡನೆ ಸಂಧಾನ ಮುರಿಯುವ ಮುಂಚಿನ ದಿನವೇ ಈ ರೀತಿ ತನ್ನನ್ನು ವಜಾಮಾಡಬೇಕಾದರೆ, ಅದರಲ್ಲೇನೋ ಒಂದು ಗೂಢವಡಗಿದೆ ಎಂದು ಪದವಿ ಕಳಕೊಂಡವರ ಹೇಳಿಕೆ. ಅವಿಭಕ್ತ ಜವಾಬ್ದಾರಿಯ ಒಂದು ಮಂತ್ರಿಮಂಡಲದಲ್ಲಿ, ಒಂದು ಅಪರಾಧಕ್ಕೆ ಓರ್ವ ಮಂತ್ರಿಯನ್ನು ಬಿಂಗಡಿಸಿ ವಿನಾಯತಿ ಪಡಿಸುವದು ಶಾಸನ ಸಮ್ಮತವೇ ಎಂಬ ಕ್ರಮ ಸಂಬಂಧದ ಒಂದು ಪ್ರಶ್ನೆಯೂ ಈ ಕುರಿತು ಎದ್ದಿದೆ; ಈ ರೀತಿ ಪ್ರಕೃತ 'ಬರೆಯುವ ಉಜ್ಜ್ವಲ ಆಂದೋಲನವು' ನಡೆಯುತ್ತಿರುವ ಪಂಜಾಬು ಕರಿಹಲಗೆಯಲ್ಲಿ ಕೊನೆಗೆ ರೂಪುಗೊಳ್ಳಲಿರುವ ಚಿತ್ರವಾವುದೋ ನೋಡಲಿಕ್ಕಿದೆ.

ಪಟವಾಗಿರುವ ಸೆಬಸ್ತಾಪೂಲನ್ನು ನಾಜಿಗಳಿಂದ ಕಿತ್ತುಕೊಳ್ಳುವದು ಪ್ರಯಾಸಕ್ಕಿಟ್ಟಿದೆ. ಆ ಬಂದರ ಕೈಬಿಟ್ಟರೆ ಕಪ್ಪು ಸಮುದ್ರದ ಸ್ವಾಧೀನತೆ ತಪ್ಪಿದಂತಾಗಿ ರುಮೇನಿಯಾ ಮತ್ತು ಬಲ್ಗೇರಿಯಾ ಬಂದರಗಳ ಮೇಲೆ ರಶ್ಯನರು ಧಾಳಿಯಿಡಬಹುದು; ಡೆನ್ಯೂಬ್ ಪಥರಕ್ಷಕ ಲೈನಿನ ಬದಿಯಲ್ಲೇ ಸೇನೆಯನ್ನು ಕೂಡಾ ಇಳಿಸಬಹುದು. ಅದ್ದರಿಂದ ಈ ವರೆಗೂ ಎದೆ ಕಳಕೊಳ್ಳದ ನಾಜಿಗಳು ಈ ನಗರವನ್ನೂ ಕಳಕೊಳ್ಳಬಾರದೆಂಬ ಶಪಥ ತೊಟ್ಟು ನಿಂತಿದ್ದಾರೆ ಡೆನ್ಯೂಬ್ ಕಣಿವೆ ದ್ವಾರದಲ್ಲಿಯೂ ನಾಜಿಗಳ ಪ್ರತಿಭಟನೆ ಬಿರುಸುಗೊಂಡಿದೆ ದಕ್ಷಿಣ ರಂಗದ ಇನ್ನೊಂದು ತುದಿಯಾದ ಪೋಲೆಂಡಿನ ಲ್ವೊವ್ ದುರ್ಗದ ಮೇಲೆ ಕತ್ತರೀ ಧಾಳಿ ಚಾಚುತ್ತಾ ಒಂದ ಮಾರ್ಶಲ್ ಝುಕೋವನಿದಿರು ನಾಜೀ ಸೇನಾನಿ ಮೇನ್‌ಸ್ಟೀನನು ಹೂಡಿದ ಪ್ರತಿ ಧಾಳಿಯೂ ಅತ್ಯುತ್ತಮ ಸಮರ ಚಾತುರ್ಯವೆನ್ನಬೇಕು. ಆ ಪಟ್ಟಣದ ದಕ್ಷಿಣ ಮತ್ತು ನೈಋತ್ಯ ದಿಕ್ಕುಗಳಿಂದ ಮುಂದಾಗಿ ಹೊಡೆತವಾರಂಭಿಸಿ ಲ್ವೊವ್ ರಶ್ಯಾ ಸಂಗೆಟಕದಂತೆ ಮಾಡಿಬಿಟ್ಟಿದ್ದಾನೆ. ಸೆಬಸ್ತಾಪೂಲನ್ನು ಹಿಡಿದು ನಿಂತು ಕಪ್ಪು ಸಮುದ್ರ ಮತ್ತು ರುಮೇನಿಯಾ ಬಲ್ಗೇರಿಯಾಗಳ ಅಪಾಯವನ್ನು ದೂರಮಾಡಿಕೊಂಡಂತೆ, ಲ್ವೊವನ್ನು ನಿಲ್ದಾಣಮಾಡಿ ನಿಂತು ಹಂಗೇರಿ ಮತ್ತು ಝೆಕೊಸ್ಲೊವೇಕಿಯದೊಳಗೆ ನುಗ್ಗುವ ರಶ್ಯನ್ ಸೇನೆಗೆ ಆನಾಯಪೊಡ್ಡುವದರೊಡನೆ ಪೋಲೆಂಡ್ ಆಕ್ರಮಣವನ್ನೂ ತಡೆಗಟ್ಟಬಹುದು. ಹೀಗೆ, ಕೆಂಪು ಸೇನೆಯು ರಶದ ಗಡಿಯಿಂದ ಹೆಜ್ಜೆ ಮುಂದಿಡದಂತೆ ದ್ವಾರ ದ್ವಾರಗಳಲ್ಲಿ ನಾಜೀ ಸೇನೆಗಳು ನಡಿಸಿದ ಸರ್ಪ ಕಾವಲೇ ರಶ್ಯಾರಂಗದಲ್ಲಿ ಸ್ತಬ್ಧತೆಯನ್ನು ನಿರ್ಮಿಸಿತೆನ್ನಬಹುದು. ಯುರೋಪಿನಲ್ಲಾರಂಭವಾಗುವ ದ್ವಿತೀಯ ರಂಗಕ್ಕೆ ಹೊಂದಿಕೆಯಾಗುವ ನವ ಧಾಳಿಯ ಸಿದ್ಧತೆಗಾಗಿ ರಶ್ಯಾನರು ಪಡೆದ ವಿರಾಮವಿದು ಎನ್ನುತ್ತಿರುವ ಆಂಗ್ಲೋ-ಅಮೆರಿಕಾನರ ಮಾತಿನಲ್ಲಿ ಹುಸಿ ಬಯಕೆಯಿಲ್ಲವಾದರೂ ಸದ್ಯ ಸ್ಥಿತಿಯ ಚಿತ್ರವದಲ್ಲ

ಅಸ್ಸಾಮಿನಲ್ಲಿ.

ರಶ್ಯದಲ್ಲಿ ಮಾತ್ರವೆಂದೇನು? ಬಿರುಗಾಳಿಯ ನೊದಲ ಶಾಂತತೆಯಂತೆ ಪ್ರಪಂಚದ ಸರ್ವ ರಣರಂಗಗಳೂ ಈ ವಾರ ಇಳಿತದಲ್ಲಿವೆ. ಇಟಲಿ ರಣರಂಗವು ಈಗೀಗ ಒಂದೊಂದು ಪಂಕ್ತಿಗಾಗುವ ಸುದ್ದಿಯನ್ನೂ ನಿರ್ಮಿಸುತ್ತಿಲ್ಲ. ಅಲ್ಲಿಯ ಸೇನೆಗಳು ಮತ್ತು ರಣಭೂಮಿ ಕೂಡ ತಪಸ್ಸಿಗೆ ಕುಳಿತಂತಿದೆ. ಅಸ್ಸಾಮಿನಲ್ಲಿ ಕೊಹಿಮಾದ ಆಗ್ನೇಯ ಮೂಲೆಯ ಒಂದು ಗುಡ್ಡ ತಪ್ಪಲೊಳಗೆ ಮುನ್ನುಗ್ಗುವ ದ್ವಾರವೊಂದು ಮಿತ್ರಸೇನೆಗಳಿಗೆ ದೊರೆತು ವಾರ ಕಳೆಯಿತು. ಆದರೆ ಇದುವರೆಗೂ ಗಣನೀಯ ಪ್ರಗತಿಯಿಲ್ಲ. ಇಂಫಾಲಿಗೆ ಬ್ರಿಟಿಶ್ ಹಿಂದುಸ್ಥಾನದಿಂದ ಸಾಗುತ್ತಿದ್ದ ಸರಬರಾಯಿಯ ಮುಖ್ಯ ರಸ್ತೆಯು ಜಪಾನರಿಂದ ಕಡಿಯಲ್ಪಟ್ಟು ಅದು ಮುತ್ತಿಗೆಗೊಳಗಾಗಿ ತಿಂಗಳು ಕಳೆಯಿತು. ಎರಡು ಮುಖ್ಯ ನೆಲೆಗಳೂ ಈ ತನಕ ಪತನಗೊಂಡುದೂ ಇಲ್ಲ; ಬಿಡುಗಡೆ ಹೊಂದಿದುದೂ ಇಲ್ಲ. ಕಳೆದ ತಾ. 29ರಲ್ಲಿ ಲೋರ್ಡ್ ಮೌಂಟ್ ಬೇಟನರ ಮುಖ್ಯ ಕಾರ್ಯಾಲಯದಿಂದ ಹೊರಟ ಹೇಳಿಕೆಯಂತೆ— 'ಕೊನೆಗೆ ವಿಜಯ ಸಿದ್ಧವಾದರೂ 800 ಮೈಲಷ್ಟಿರುವ ಬರ್ಮಾ—ಅಸ್ಸಾಮು ಯುದ್ಧ ಮುಗಿಸಲು ಕೆಲವು ವಾರಗಳು ಸಾಕಾಗುವಂತಿಲ್ಲ. ಜಾಪಾನರೊಡನೆ ಸಾಮಾನ್ಯರು ಸಾಮಾನ್ಯತಃ ಊಹಿಸಿರುವದಕ್ಕಿಂತ ಎಷ್ಟೋ ಪಾಲು ಅಧಿಕ ನೆಲ ಸೇನೆಯಿದೆ. ಭೀಕರ ಹೋರಾಟವು ಮುಂದೆ ಕಾದಿದೆ'!

ದ್ವಿತೀಯರಂಗ ಪ್ರಾರಂಭ?

ಇಟಲಿಯ ಧಾಳಿಯನ್ನು ಧಂಡಾಗೊಳಿಸಿ, ಮುಂದೋಟದಲ್ಲಿದ್ದ ರಶ್ಯಾನರನ್ನು ಮುಗ್ಗಗೊಳಿಸಿದಂತಿರುವ ಹಿಟ್ಲರನಿಗೆ ಬಿಡುವು ಹೊಂದುವ ಭಾಗ್ಯವಿಲ್ಲವೆಂಬಂತೆ ಯುರೋಪು ಧಾಳಿಯಾರಂಭವಾದ ಬಿಸಿ ವಾರ್ತೆ ಬಂದಿದೆ. ಫಿನ್ನಿಶ್ ಪತ್ರಿಕೆ 'ಸಾನೋಮತ್'ನಲ್ಲಿ ಪ್ರಕಟವಾದ ಆಕ್ರಮಣ ವಾರ್ತೆಯನ್ನು ನ್ಯೂಯೋರ್ಕ್ ಪತ್ರಿಕೆಗಳು ತಾ 2೦ಲ್ಲಿ ಎತ್ತಿ ಪ್ರಕಟಿಸಿವೆ. ಆ ವಾರ್ತೆಯಂತೆ, ವರ್ಷಾವಧಿ ನಿರೀಕ್ಷೆಯ ಆ ಅಭೂತಪೂರ್ವ ಯುರೋಪು ಧಾಳಿಯೀಗ ಪ್ರತ್ಯಕ್ಷ ಆರಂಭವಾಗಿದೆ. "ಪ್ರಾಯಶಃ ಹಲವು ಕಡೆಗಳಲ್ಲೀಗ ಸೇನೆಗಳು ಕಾಲೂರುತ್ತಿವೆ" ಎಂದು ವರದಿಯಲ್ಲಿದೆ. ಇದು ನಿಜವಾದರೆ ವಿದ್ಯಮಾನಗಳನ್ನೇ ಕಡೆಯಾಗಿಟ್ಟು 'ಎಪ್ರಿಲ್ ಅಂತ್ಯದೊಳಗೆ ದ್ವಿತೀಯರಂಗಾರಂಭ'ವೆಂದು ಕಣಿಹೇಳಿದ್ದ ನಾಜೀವಕ್ತಾರರ ಮಾತು ನಿಜವಾಯಿತೆನ್ನಬೇಕು. ಈ ಸಂಚಿಕೆ ಹೊರಡುವ ಮೊದಲೇ ಯುರೋಪು ಧಾಳಿಯ ಅಧಿಕೃತ ವಾರ್ತೆ ಹೊರಡಬಹುದು ಹಿಟ್ಲರನ ಅದೃಷ್ಟ ರೇಖೆಗೆ ಅಡ್ಡಗೆರೆ ಬಂತು—ಮುಂದೇನು? ನೋಡಿ ತಿಳಿಯಬೇಕು!

ಶ್ರೀ. ದುರ್ಗಾ ಪರಮೇಶ್ವರಿ ದೇವಸ್ಥಾನ,

ಮುಂದಾರ್ತಿ.

ಹೆಗ್ಗುಂಜೆ ಗ್ರಾಮ, ಉಡುಪಿ ತಾಲೂಕು, ಬಾರ್ಕೂರು ಪೋಸ್ಟು. ದ. ಕ.

ಟೆಂಡರ್ ನೋಟೀಸು.

ಮದ್ರಾಸ್ ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಬೋರ್ಡಿನ ಮೇಲ್ವಿಚಾರಕ್ಕೊಳಪಟ್ಟ ಮೇಲೆ ಸೂಚಿಸಲ್ಪಟ್ಟ ಶ್ರೀ ಮುಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಸಂಬಂಧಪಟ್ಟ ವಿವಿಧ ಕಟ್ಟೋಣಗಳನ್ನು ಕಟ್ಟಿಸುವರೆ ಈಗ ತಾನೆ ಎಂಡೋಮೆಂಟ್ ಬೋರ್ಡಿನಿಂದ ಎಸ್ಟಿಮೇಟ್ ಮತ್ತು ಪ್ಲಾನುಗಳು ಮಂಜೂರಾಗಿ ಬಂದಿವೆ ಸಾಧಾರಣ 15,000 ರೂಪಾಯಿಗಳಿಗೆ ಮಿಕ್ಕಿದ ಈ ಕೆಲಸವನ್ನು ಕಂಟ್ರಾಕ್ಟು ವಹಿಸಿಕೊಳ್ಳಲಪೇಕ್ಷಿಸುವ ಉಮೇದ್ವಾರರು ಮೊಹರ್ ಮಾಡಿದ ಟೆಂಡರುಗಳನ್ನು ತಾ 31-5-44ನೇ ಬುಧವಾರ ಸಂಜೆಯೊಳಗಾಗಿ ಆಡಳ್ತೆ ಮೊಕ್ತೇಸರರಿಗೆ ಕಳುಹಿಸಿಕೊಡೋಣಾಗಬೇಕು. ಐದು ವರುಷಗಳಲ್ಲಿ ಮುಗಿಸತಕ್ಕ ಆಯಾಯ ವರ್ಷದ ಪ್ರತ್ಯೇಕ ಪ್ರತ್ಯೇಕ ಕಟ್ಟೋಣಗಳ ಎಸ್ಟಿಮೇಟ್, ಪ್ಲಾನು ಶರ್ತ ಇತ್ಯಾದಿ ಅನುಭವವನ್ನು ದೇವಸ್ಥಾನದ ಆಫೀಸಿನಲ್ಲಿ ಪಡೆದೇ ಅರ್ಜಿ ಹಾಕಬೇಕಾಗಿದೆ. ಈ ಮುಂಚೆಯೇ ದೇವಸ್ಥಾನ ಕಟ್ಟೋಣದ ಬಗ್ಗೆ ಸಂಗ್ರಹಿಸಿಡಲ್ಪಟ್ಟ ಶಿಲಾ ಕಲ್ಲುಗಳನ್ನು ಕಂಟ್ರಾಕ್ಟರರು ವಹಿಸಿಕೊಳ್ಳಬೇಕು. ಬೋರ್ಡಿನ ನಿಯಮಗಳನ್ನು ಪಾಲಿಸತಕ್ಕದ್ದು. ಈ ಶರ್ತಗಳನ್ನು ಅನುಸರಿಸಿ ಬರುವ ಕಡಿಮೆ ಮೌಲ್ಯದ ಟೆಂಡರುಗಳನ್ನು ಸ್ವೀಕರಿಸಲಾಗುವುದು.

ಶ್ರೀ ಮುಂದಾರ್ತಿ ದೇವಸ್ಥಾನದ ಆಫೀಸು, ತಾ. 28-4-1944.

ಎಚ್. ಶೇಷ ಹೆಗ್ಡೆ,
ಆಡಳ್ತೆ ಮೊಕ್ತೇಸರ.

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944

Your patronage is solicited.

Mangalore Jarappa,
Managing Director.

The Canara Banking Corporation Limited.

(Incorporated in British India)

ESTD 1906.

Head Office · UDIPI·

ANNOUNCEMENT.

A Branch of the bank will be opened at tobacco street, CALICUT on 26-5-1944.

ಉಡುಪಿ, ಗುರುವಾರ ೪-೫-೧೯೪೪

ಮಲಬಾರಿನ ಪಾಠ

ದಕ್ಷಿಣ ಕನ್ನಡದ ಆಹಾರ ಸಮಸ್ಯೆಯು ನಿವಾರಣೆಯೇನೂ ಆಗಿಲ್ಲ, ಆದರ ತುತ್ತತುದಿಯ ವಿಷಮಾವಸ್ಥೆಯು ಒಡಿಯೋಡಿ ಬರುತ್ತಿರುವ ಮಳೆಗಾಲದಲ್ಲಿ ಒದಗುವಾಗಲೇ ಆಹಾರ ವ್ಯವಸ್ಥಾಪಕರ ಶಕ್ತಿಯು ನಿಜವಾದ ಪರೀಕ್ಷೆಯಾಗಲು ಬಾಕಿಯಿದೆ ಎಂಬುದನ್ನೊಪ್ಪಿಕೊಳ್ಳುತ್ತೇವೆ. ಈ ಮಧ್ಯಾವಧಿಯಲ್ಲೊಮ್ಮೆ ಜಿಲ್ಲೆಯ ಆಹಾರ ವ್ಯವಸ್ಥೆಗೆ ಧನ್ಯವಾದವೀಯೋಣವೆನ್ನಿಸುತ್ತದೆ. ಜಿಲ್ಲೆಯ ಧಾನ್ಯ ಭಂಡಾರಗಳು ಈಗಿದ್ದಂತೆಯೇ ಇರುತ್ತಿದ್ದರೂ, ಇಂದಿನ ಆಹಾರ ಸುವ್ಯವಸ್ಥೆಯಿಲ್ಲದೆ ಹೋಗುತ್ತಿದ್ದರೆ ಇಷ್ಟರಲ್ಲೆ ಹಸಿವಿನ ಹಾಹಾಕಾರವೇಳುತ್ತಿತ್ತು. ಅಕ್ಕಿಯೆಲ್ಲಾ ಖಾಸಗಿ ವ್ಯಾಪಾರಿಗಳ ಕೈಯಲ್ಲಿ ಸಿಲುಕಿ ಕೆಲವಂಶ ಸಾರ್ವಜನಿಕರದಿರು ಕಣ್ಣುಮುಚ್ಚಾಲೆಯಾಡುತ್ತಿತ್ತು, ಮಾರ್ಕೆಟಿನಲ್ಲಿ ಕಾಣಿಸಿಕೊಳ್ಳಬಹುದಾಗಿದ್ದ ಉಳಿದ ಭಾಗಗಳ ಬೆಲೆ ಈಗಿನದಕ್ಕಿಂತ ಇಮ್ಮಡಿ ಮುಮ್ಮಡಿಯೇರುತಿತ್ತು. ರೆಕ್ವಿಜಿಶನ್, ನಿಯಂತ್ರಣ, ಹಂಚಿಕೆ ಪದ್ಧತಿಗಳಲ್ಲಿರುವ ಹಲವಾರು ದೋಷಗಳಿಂದ ಕೊರತೆಗಳ ಕಷ್ಟಾನುಭವವನ್ನು ಪಡೆಯುತ್ತಿರುವಾಗಲೂ ಸಾರ್ವಜನಿಕರು ಅವುಗಳಿಂದಾಗಿರುವ ಉಪಕಾರವನ್ನು ಮರೆಯಬಾರದೆನ್ನುತ್ತೇವೆ. ಈ ಹೊಸ ವ್ಯವಸ್ಥೆಯ ಬದಲಿಗೆ ಹಿಂದಿನ ಲಾಭಬಡುಕ ವ್ಯಾಪಾರಕ್ರಮವೇ ಅಸ್ತಿತ್ವದಲ್ಲಿರುತ್ತಿದ್ದರೆ ಬಡವನ ಪಾಲಿನ ಅನ್ನದ ತುತ್ತು ಇಷ್ಟರಲ್ಲೇ ಅಪಹಾರವಾಗುತ್ತಿತ್ತು. ಆಹಾರ ವಸ್ತು ವ್ಯವಸ್ಥಾಧಿಕಾರಿಗಳು ಜನಪ್ರತಿನಿಧಿಗಳ ಸೂಚನೆಗಳಿಗೆ ಇನ್ನಷ್ಟು ಲಕ್ಷ್ಯಕೊಡಬೇಕು; ತಮ್ಮ ಯೋಜನೆಯ ಜಯಶೀಲತೆಗೆ ಅವರ ಸಹಕಾರವೇ ಕಾರಣವೆಂಬುದನ್ನು ಮರೆಯಬಾರದು; ನಿಯಂತ್ರಣ ಕಾರ್ಯಪ್ರವೃತ್ತರಾದ ಕೆಳ ನೌಕರರು ತಮ್ಮ ಅಸಡ್ಡೆ, ಅಹಂಭಾವ, ಅನ್ಯೋದ್ದೇಶಗಳಿಗೆ ಹೊಟ್ಟೆಪಾಡಿನ ಈ ಗೋಳಿನ ಸಮಸ್ಯೆಯಲ್ಲಿ ಸ್ಥಾನವಿಲ್ಲವೆಂಬುದನ್ನು ಖಂಡಿತ ತಿಳಿದಿರಬೇಕು. ಇಂತಹ ಸದ್ಭಾವನೆ ನೆಲೆಸಿದ್ದರೆ ಮುಂದಕ್ಕಾದರೂ ಜಿಲ್ಲೆಯ ಭವಿಷ್ಯವು ಭಯಂಕರವಾಗುವ ಭೀತಿಯನ್ನು ತಪ್ಪಿಸಬಲ್ಲೆವೆಂದು ಧೈರ್ಯವಾಗಿ ಹೇಳಬಹುದು.

ನಾವು ಈ ಹಿಂದೆಯೂ ಹೇಳಿರುವಂತೆ ಅಲ್ಲಲ್ಲಿ ಕೆಲವು ದೊಡ್ಡ ದೊಡ್ಡ ತಪ್ಪುಗಳನ್ನು ಮಾಡಿರುವುದಲ್ಲದೆ, ದಕ್ಷಿಣಕನ್ನಡವು ಆಹಾರ ವ್ಯವಸ್ಥೆಯ ಆಸ್ತಿವಾರವನ್ನೇ ತಪ್ಪಾಗಿ ಹಾಕಿಕೊಂಡುದಿಲ್ಲ. ರೆಕ್ವಿಜಿಶನಿನಲ್ಲಿ ಅನ್ನದಾತ ರೈತರಿಗಾದ ಎಷ್ಟೋ ಅನ್ಯಾಯಗಳ ನೂರುಗಳಿನ್ನೂ ತೀರ್ಮಾನ ಹೊಂದದಿವೆ; ಆಹಾರ ವಿತರಣೆಯಲ್ಲಿಯೂ ಲೋಪದೋಷಗಳಿವೆ; ಕಳ್ಳವ್ಯಾಪಾರಗಳ ನಿಯಂತ್ರಣ ನಿರ್ಬಂಧಗಳ ಮಟ್ಟಿಗೆ ಅನಗತ್ಯ ದಾಕ್ಷಿಣ್ಯ ತೋರಿಸಲಾಗಿದೆ. ಇಂತಹ ಕೊರತೆಗಳಿದ್ದರೂ, ಜಿಲ್ಲೆಯಲ್ಲಿ ಇದಿಷ್ಟು ಬೆಳೆಬಹುದಾದ ಅಕ್ಕಿಯನ್ನು ಸರಬರಾಯಿ ಪಡಿಸಿಕೊಂಡು, ಈಗಿನಂತೆ ಕೊಂಡುಣ್ಣುವವರ ಮುಕ್ಕಾಲು ಹೊಟ್ಟೆಯನ್ನಾದರೂ ಮಳೆಗಾಲ ದಾಟುವವರೆಗೆ ತುಂಬಿಸುತ್ತಾ ಬಂದರೆ, ಆಹಾರಾಧಿಕಾರಿಗಳ ಅಪರಾಧಗಳೆಲ್ಲಾ ಕೊನೆಗೆ ಕ್ಷಮಿಸಲ್ಪಡುವ ಸಂಭವವಿದೆ. ಸಂಪತ್ತು ಬಂದಾಗ ತನ್ನನ್ನು ಮಿಕ್ಕಿದ ಭಾಗ್ಯಶಾಲಿಗಳಿರುವದನ್ನು ಜ್ಞಾಪಿಸಿಕೊಳ್ಳಬೇಕು—ಆಪತ್ತಿನ ವೇಳೆ ಮಹಾಪತ್ತಿನಿಂದೊದ್ದಾಡುವವರನ್ನು ನೆನಪಿಕೊಳ್ಳಬೇಕು ಎಂಬುದೊಂದು ನಾಣ್ಣುಡಿ. ಅದರಂತೆ ನಮ್ಮ ನೆರೆಯ ಜಿಲ್ಲೆಯಾದ ಮಲಬಾರನ್ನು ನೋಡಿ ನಾವು ಪಾಠ ಕಲಿಯಬೇಕಾಗಿದೆ. ದಕ್ಷಿಣ ಮಲಬಾರಿನ ಪೊನ್ನಾನಿ ಮತ್ತು ಕಲಿಕೋಟ ತಾಲೂಕುಗಳು ಹಾಗೂ ಉತ್ತರ ಮಲಬಾರಿನ ಸಂಪೂರ್ಣ ಒಳಭಾಗವು ಬಂಗಾಳವಾಗುವ ಸ್ಪಷ್ಟ ಲಕ್ಷಣ ತೋರುತ್ತಿದೆ. ಈ ದುರ್ದೈವೀ ಪ್ರದೇಶಗಳು ಆಹಾರಧಾನ್ಯಗಳ ಬದಲಿಗೆ ಶುಂಠಿ, ಮೆಣಸು, ತೆಂಗಿನಕಾಯಿಗಳಂತಹ ಮಸಾಲೆ ಸಾಮಗ್ರಿ ಬೆಳೆಯುವ ನೆಲೆಗಳು. ಆದ್ದರಿಂದ ಅವು ನೋಲೋಗರ ಮಾಡಿಟ್ಟು ಅನ್ನವೆಲ್ಲಿಂದಬರುತ್ತಿದೆ ಎಂದು ಕೆಲವು ವಾರಗಳಿಂದ ಕಾಯುತ್ತಿವೆ! ನಮ್ಮ ಜಿಲ್ಲೆಯ ಕಾಸರಗೋಡು ತಾಲೂಕಿನಂತಹ ಕೆಲವು ಭಾಗಗಳೂ ಇಂತಹ ದೈನ್ಯತೆಗೊಳಗಾಗಿವೆಯೆಂಬುದನ್ನು ಜ್ಞಾಪಿಸಿಕೊಳ್ಳಬೇಕು. ಮಲಬಾರಿನ ಅಧಿಕಾರಿಗಳು ಕೊಂಗನಿಂದ ಧಾನ್ಯ ಪಡಕೊಂಡಿದ್ದರು; ಅವುಗಳನ್ನೊಯ್ಯುವ ವಾಹನಾನುಕೂಲತೆಯಿಲ್ಲದ ದೆಸೆಯಿಂದ ಅವು ಸಮಯಕ್ಕೊದಗಿಲ್ಲ; ಮಲಬಾರಿನ ಹಸಿವು ನಿಂತಿಲ್ಲ. ಸರಬರಾಯಿ ಸೌಕರ್ಯದ ಅಭಾವವು ಒಂದೆಡೆಯ ಧಾನ್ಯಕೋಠಿಗಳಲ್ಲಿ ಹುಳ ಹುಟ್ಟಿಸಿ, ಇನ್ನೊಂದೆಡೆಯ ಅನ್ನಕೋಠಿಗಳಲ್ಲಿ ಬೆಂಕಿ ಹುಟ್ಟಿಸಬಲ್ಲುದು! ಹೊರಗಿನಿಂದ ಹೆಚ್ಚಿನ ಸರಬರಾಯಿಯ ಆವಶ್ಯಕತೆಯಿರುವ ದಕ್ಷಿಣಕನ್ನಡವು ಅಗತ್ಯವಾಗಿ, ಅತ್ಯವಸರವಾಗಿ ಬಿಡಿಸಿಕೊಳ್ಳಬೇಕಾದ ಸಮಸ್ಯೆಯಿದು.

ದುರ್ಬೀನು

ನಿರ್ಗುಣ್ಣಿನ ಮುಂಡಾಸಿಗೆ ಹಕ್ಕೀ ಗರಿ; ಮದುಮಗನ ಮುಂಡಾಸಿಗೆ ರೇಶ್ಮೆ ಜರಿ, ಉಪಜೀವಿಯ ಹಗ್ಗುರಿ ಮನಮಂಕುಗೊಳಿಸುವದು; ಉಪಕಾರಿಯ ಧ್ಯೇಯ ಮನತಣಿಸುವದು.

೦೦ ೦೦ ೦೦

ಕಡಲೆ ಜಗಿಯಬಲ್ಲ ಹಲ್ಲನ್ನಾದರೂ ಹುಳ ಕೊರೆಯುವದಿದೆ; ಮಹತ್ಕಾರ್ಯ ಸಾಧಕನನ್ನಾದರೂ ಮನೋವೇದನೆ ಸೋಲಿಸುವದಿದೆ.

೦೦ ೦೦ ೦೦

ತಲೆಗೆ ತೈಲವಿಟ್ಟುಕೊಂಡರೆ ಕಣ್ಣು ತಂಪಾಗುತ್ತದೆ; ಆದರೆ ಕಣ್ಣಿಗೇನೇ ಎಣ್ಣೆ ಹಾಕಿಕೊಂಡರೆ ಉರಿದೀತು. ವಿಚಾರತಾಗಿದರೆ ಮನೋಗತಿ ಸ್ವತಃ ಸುಧಾರಿಸುತ್ತದೆ; ನೇರಾಗಿ ಮನಸ್ಸಿಗೇನೇ ವ್ಯಥೆತಾಗಿಸಿಕೊಂಡರೆ ಅದು ಮತ್ತಷ್ಟು ಕೆಡುತ್ತದೆ.

೦೦ ೦೦ ೦೦

ಶೀತವಾಗಿ ಸೀನು ಬಂದರದು ಘರ್ಜನೆಯಲ್ಲ. ಮನೋಜಾಡ್ಯದಿಂದೇಳುವ ಗೊಣಗುಮಾತು ಪ್ರತಿಭಟನೆಯಲ್ಲ.

೦೦ ೦೦ ೦೦

ಬಾಯಿ ಮುಚ್ಚಿಕೊಂಡು ಬಹು ಕಾಲವಿರಬಹುದು; ಶ್ವಾಸಕಟ್ಟಿಕೊಂಡು ದೀರ್ಘಾವಧಿಯಿರಲಾಗುವದಿಲ್ಲ. ಅಭಿಪ್ರಾಯವನ್ನೆಷ್ಟೂ ದಮನಿಸಿಟ್ಟುಕೊಳ್ಳಬಹುದು; ಆತ್ಮದ ಆಹ್ವಾನವನ್ನು ಹಾಗೆ ತಡೆದಿಟ್ಟುಕೊಳ್ಳಲಾಗದು.

೦೦ ೦೦ ೦೦

ಕಾಲು ಹಿಸುಕುವವರಿದಿದ್ದು ಅಂಗಾತ ಮಲಗಿಕೋ; ಕಂಠ ಹಿಸುಕುವವರಿದಿರಲ್ಲೂ ಹಾಗೆ ಸಾಧ್ಯವೆ? ಚಿಕಿತ್ಸಾತ್ಮಕ ವಿಮರ್ಶೆ ಬಂದರೆ ಸ್ವಾಗತವಿರಲಿ; 'ಛೀ' ಹಾಕುವ ದೂಷಣೆಯಿದಿರೂ ಸಹನೆಯೆ?

೦೦ ೦೦ ೦೦

ಕಟ್ಟಡಕಾಧಾರವಾಗಬಲ್ಲ ಕಲ್ಗಂಭ ಜಾರಿ ಬಿದ್ದು ಅಡಿಯಲ್ಲಿದ್ದವರ ತಲೆಯೊಡೆಯಬಹುದು; ತನಗೆ ಹಿತಕರಿವಾಗಬಲ್ಲ ಜೆವರಿಳಿಸುವ ಪ್ರಯಾಸವ... ...ಸಿಕೊಂಡರೆ ಆಶ್ರಿತರ ಕಣ್ಣೀರಿಳಿಯಬಹುದು.

೦೦ ೦೦ ೦೦

ಸಿಳ್ಳು ಹಾಕ ಬೇಕಾದರೆ ಕರೆ; ಸುಳ್ಳು ಹೇಳಿ ಕರೆತರಬೇಡ. ಠೇಂಕಾರವನ್ನಾದರೂ ಪ್ರದರ್ಶಿಸು; ಕಪಟ ವಂಚನೆ ಬೇಡ.

೦೦ ೦೦ ೦೦

ಬೆಳದಿಂಗಳಲ್ಲಿ ಆಡ ಬಹುದು; ಚಂದ್ರಬಿಂಬವನ್ನೇ ಆಡಿಸುವೆವೆಂದರೆಟಕವು; ಮಹಾತ್ಮರ ವರ್ಚಸ್ಸನ್ನು ಉಪಯೋಗಿಸಿಕೊಳ್ಳಬಹುದು-ಮಹಾತ್ಮರನ್ನೇ ಉಪಯೋಗಿಸಿಕೊಳ್ಳುವ ಬಯಕೆಯಸಾಧ್ಯ.

ಮಲಬಾರು ದಕ್ಷಿಣಕನ್ನಡದ ನೆರೆಯ ಜಿಲ್ಲೆ- ಅದೀಗ ಬರಗಾಲಾಂಧಕಾರದಲ್ಲಿ ಬಂಗಾಳದ ಸಾಲು ಹಿಡಿಯಲು ಧಾವಿಸುತ್ತಿರುವ ಒಂದು ವೇಗ ವ್ಯತ್ಯಾಸವನ್ನು ಬಿಟ್ಟರೆ, ಆಹಾರ ಸಮಸ್ಯೆಗಳ ಮುಖ್ಯ ರೂಪರೇಖೆಗಳು ಎರಡು ಜಿಲ್ಲೆಗಳಲ್ಲೂ ಏಕರೀತಿ. ಆದ್ದರಿಂದ ಮಲಬಾರಿನಿಂದ ಪಾಠ ಕಲಿತು, ದಕ್ಷಿಣಕನ್ನಡವು ಈಗಿನಿಂದಲೇ ಎಚ್ಚರಿಕೆಯಿಂದಿರಲಿ!

NOTICE.

It is observed that many of the dealers in woollen goods, cigarettes, bicycles and bicycle parts, photographic materials, arms and ammunition, boot polish, sports goods, fountain pens, Razor blades, leather and hides, Japanese fibre and silk yarm, wines and liquors, and electric bulbs do not exhibit prominently in their shops the ceiling prices fixed by the Government for such articles under the Hoarding and Profiteering Prevention Ordinance 1943. It is also observed that dealers in watches, clocks and time pieces have not marked the prices in the articles and kept uptodate the catalogues received from their wholesale dealers. All dealers who have failed to do so are finally warned that if they fail to comply with the notification on the subject forthwith steps will be taken for prosecution

(*Sd*). **S. Krishna Rao,**
Commercial Tax Officer.

ಶ್ರೀ. ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲ್, ವಿಶ್ವೇಂದ್ರ — ನಗರ. ಇನ್ನಂಜೆ —
ಕಾಪು. ದ. ಕ.

ತಾ. 1-6-44ನೇ ಗುರುವಾರ ಶಾಲಾರಂಭ.

ಮೊದಲಿನ I, II, III ಫೋರ್ಮುಗಳಲ್ಲದೆ ಹೊಸದಾಗಿ IV ಫೋರ್ಮು ತೆರೆಯಲ್ಪಡುವುದು.

ಪರಊರ ಎಲ್ಲಾ ಜಾತಿಯ ಬಾಲಕ ಬಾಲಿಕೆಯರಿಗೆ "ಶ್ರೀ ವಾದಿರಾಜ ಗುರುಕುಲ"ದಲ್ಲಿ(Boarding & lodging) ಊಟ ವಸತಿ, ದೀಪಗಳ ಯೋಗ್ಯ ವ್ಯವಸ್ಥೆಯು ಅತಿ ಸುಲಭ ದರದಲ್ಲಿ ಏರ್ಪಡಿಸಲ್ಪಡುವುದು. ನಾಡವ ಸಮಾಜದ ಬಾಲಕರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯದ ವ್ಯವಸ್ಥೆ ಇರುವುದು.

ಹೊಸ ವಿದ್ಯಾರ್ಥಿಗಳ ತೆಗೆದುಕೊಳ್ಳುವಿಕೆಯು (Admission) ನಿಯಮಿತ (limited)ವಾಗಿರುವುದರಿಂದ ಬೇಕಾದ ವ್ಯವಸ್ಥೆಗಳನ್ನು ಮುಂದಾಗಿ ಮಾಡಿಕೊಳ್ಳಿರಿ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸ್ಪಷ್ಟವಾಗುವುದು. ಹುಡುಗಿಯರಿಗೆ ಸ್ಕೂಲ್ ಫೀಸಿನಲ್ಲಿ ತುಂಬಾ ರಿಯಾಯತಿ ಇದೆ.

ಇನ್ನಂಜೆ, 12—4—'44 **Headmaster.**

ತಾರುಣ್ಯ

ಕೆಟ್ಟು, ವೀರ್ಯಸ್ಥಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು,

ಪುತ್ತೂರು ಏಜಂಟರು: - **ಸ್ಟೈ ಫಾರ್ಮಸಿ**

ದ್ವಿತೀಯರಂಗ ಮತ್ತು ಜರ್ಮನಿಯ ಬಲಾಬಲ

ಮೂಗಿನ ಮುಂದಿರುವ ದ್ವಿತೀಯ ರಂಗ

ಸ್ಟೋಕ್ ಹೋಮಿನಲ್ಲಿ ಹುಟ್ಟಿ ನ್ಯೂಯೋರ್ಕ್ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಗಿರುವ ಆ ಉತ್ತೇಜನಕಾರೀ ಯುರೋಪು ಧಾಳಿಯಾರಂಭದ ವರದಿಯು ತೀರಾ ಕಟ್ಟುಕಥೆಯೆಂದು ಲಂಡನಿನಿಂದ ವಾರ್ತೆ ಬಂದಿದೆ. ಇಷ್ಟರೊಳಗೇನೇ ಡೆನ್ಮಾರ್ಕ್ ಆಕ್ರಮಣವಾರಂಭಿಸಿರುವದು ಸುಳ್ಳು.

ಮೂರು ಮುಖದ ಧಾಳಿ

ಆದರೆ ಯುರೋಪು ಧಾಳಿಯ ಸಿದ್ಧತೆಯಾಗ ಸ್ಫೋಟಕ್ಕೊಂದೇ ನಿಮಿಷ. ಮೊದಲಿನ ಜ್ವಾಲಾಮುಖಿಯು ಗರ್ಭಾಂಧಕಾರದಂತೆ ಅತಿರಭಸದಿಂದ ಸಾಗಿದೆ. ಮಿತ್ರರು ರಷ್ಯಾ, ಇಂಗ್ಲಾಂಡು ಮತ್ತು ಭೂಮಧ್ಯ ಸಮುದ್ರ, ಈ ರೀತಿ ಮೂರು ಕಡೆಯಿಂದ ಒಂದೇಬಾರಿ ಜರ್ಮನಿಯ ಮೇಲೇರಿ ಬರುವ ಸಂಭವವಿದೆ.

ಗೊರಿಲ್ಲಾ ಯೋಧರಿಗೆ ಎಚ್ಚರಿಕೆ

'ಅವಸರ ಮಾಡಬೇಡಿ' ಎಂದು ಅಮೇರಿಕದ ಯುದ್ಧ ಸುದ್ದಿಖಾತೆಯು ಯುರೋಪಿನಲ್ಲಿ ಅಡಗಿ ಕುಳಿತು ಜರ್ಮನರನ್ನು ಪ್ರತಿಭಟಿಸುತ್ತಿರುವ ಸೇನಾದಲಗಳಿಗೆ ಎಚ್ಚರಿಕೆಯಿತ್ತಿದೆ. "ಸಮಯ ಬರುವ ಮೊದಲೇ ಮುಖ ಹೊರಗೆ ಹಾಕುವ ಪ್ರಮಾದ ಮಾಡಬೇಡಿ. ವಿರೋಧಿಯ ದಿರ್‍ಬೀಳುವ ಕಾಲ ಬಂದಾಗಲೇ ನಾವು ನಿಮಗೆ ಸೂಚನೆ ಕೊಡುತ್ತೇವೆ ಪಶ್ಚಿಮ ರಂಗದ ಮುಖ್ಯ ಸೇನಾನಿ ಜನರಲ್ ಐಸೆನೋವರರಿಂದಾಗಲೀ ದಕ್ಷಿಣರಂಗದ ಸೇನಾನಿ ವಿಲ್ಸನರಿಂದಾಗಲೀ ಬರುವ ಆಜ್ಞೆಗಾಗಿ ಮಿತ್ರರ ಆಕಾಶವಾಣಿಗಳಿಗೆ ಕಿವಿಗೊಡುತ್ತಾ ಇರಿ" ಎನ್ನುತ್ತಿದೆ ಆ ಎಚ್ಚರಿಕೆ.

ಅಸಾಧ್ಯ ಚಟುವಟಿಕೆ

ಕಳೆದ ಎಪ್ರಿಲ್ ತಿಂಗಳಲ್ಲಿ ಅದರಲ್ಲೂ ಅಂತ್ಯ ಭಾಗದಲ್ಲಿ ಇಂಗ್ಲಾಂಡಿನಲ್ಲಿರುವ ಅಮೇರಿಕಾ - ಬ್ರಿಟನುಗಳ ವಿಮಾನಗಳ ಚಟುವಟಿಕೆಯು ರಾತ್ರಿ ಹಗಲು ನಡೆದಿತ್ತು. ಆಕಾಶಮೂಲಕ ಒಂದೆಡೆಯಿಂದ ಇನ್ನೊಂದೆಡೆಗೆ ಸೇನೆಗಳನ್ನೊಯ್ಯಿಳಿಸುವಿಕೆ; ನಾಗರಿಕರನ್ನು ತಡೆದು ಎಲ್ಲಾ ರೈಲ್ವೆಗಳಲ್ಲಿಯೂ ಸೈನ್ಯ ಸಂಚಾರ, ಕರಾವಳಿಯ ನೆಲೆಗಳಲ್ಲೆಲ್ಲಾ ಸೇನಾ ಕೇಂದ್ರೀಕರಣ ಮೊದಲಾದುವು ನಡೆದಿವೆ.

ಅಸ್ಸಾಮು ಯುದ್ಧ

ಕೊಹಿಮಾದ ಹೊರವಳಯದ ವೈರಿಸೇನೆಯನ್ನು ಟೇಂಕು, ಡೈವ್ ಬೋಂಬರುಗಳ ಬೆಂಬಲದಿಂದ ಮಿತ್ರ ಸೇನೆಗಳು ಹಿಂದೋಡಿಸಿವೆ. ಇಂಫಾಲ್ ಮೈದಾನಿನ ಒಂದೆಡೆಯಲ್ಲಿ ಮುಂದೊತ್ತಿದ್ದ ಮಿತ್ರ ಸೇನೆಗಳೀಗ ಉಖ್ರುಲನ್ನು ಸಮೀಪಿಸಿವೆ. ಇಂಫಾಲಿನ ಮೇಲೆ ಸಾಮೂಹಿಕ ಧಾಳಿ ಹೂಡಲು ಜಾಪಾನರೆಡೆಯಾಗುತ್ತಿದ್ದಾರೆ.

ಅಂತರ್ರಾಷ್ಟ್ರೀಯ ಕೂಲಿಗಾರ ಸಂಸ್ಥೆ

ಇದರ ಮಹಾಧಿವೇಶನವು ಕಳೆದ ತಿಂಗಳಾಂತ್ಯದಲ್ಲಿ ಫಿಲಾಡೆಲ್ಫಿಯಾದಲ್ಲಿ ಜರಗಿದೆ, ಹಿಂದುಸ್ಥಾನದ ಕೂಲಿಗಾರರ ಪರವಾಗಿ ಶ್ರೀ. ಜೋಶಿ, ಡಾಂಗೆ, ಮಹತಾ ಮೊದಲಾದವರು ಹಾಜರಿದ್ದರು. ಲೋಕ ಪ್ರಾಮುಖ್ಯ ವಿಷಯಗಳು ಚರ್ಚಿಸಲ್ಪಟ್ಟು ನಿರ್ಧಾರಗಳಾಗಿವೆ.

ನಾಜಿ ಶಕ್ತಿ.

ಈ ಸಂದರ್ಭದಲ್ಲಿ ಜರ್ಮನಿಯ ಆಹಾರ ಮತ್ತು ಮನುಷ್ಯ ಬಲವೆಷ್ಟೆಂಬುದನ್ನು ಮಿತ್ರ ತಜ್ಞರು ತೂಗಿ ನೋಡಿದ್ದಾರೆ. 1918ರಲ್ಲಿ ಜರ್ಮನರ ಅಪಜಯಕ್ಕೆ ಹೇತುವಾಗಿ ಆಗಿದ್ದ ಆಹಾರ ಸ್ಥಿತಿಗಿಂತ ಈಗಿನ ಸ್ಥಿತಿ ಎಷ್ಟೋ ಉತ್ತಮವಿದೆ. ಅಲ್ಲಿ ಸರ್ವತ್ರ ರೇಶನಿಂಗ್ ಜಾರಿಯಲ್ಲಿದ್ದು ಆಹಾರ ಉಳಿತಾಯವೇನೂ ಇಲ್ಲವಾದರೂ ಉಪವಾಸ ಪೀಡೆಯಿಲ್ಲ. ಬಟಾಟೆಯ ಅಭಾವವು ಎಲ್ಲಕ್ಕಿಂತ ದೊಡ್ಡದು. ಆದರೆ ಆಕ್ರಮಿತ ರಾಷ್ಟ್ರಗಳಿಂದ ಜರ್ಮನಿಗೆ ಒಹಳ ಆಹಾರ ವಸ್ತು ಸರಬರಾಯಿಯಾಗುತ್ತಿದೆ. ಗೋಧಿ, ಬಾರ್ಲಿ, ಮತ್ತು ಸಕ್ಕರೆಯ ಬೆಳೆ ಈ ವರ್ಷ ಬಹಳವಾಗಿದ್ದರು ರೋನಿಯವು ರೇಶನಿಂಗನ್ನು ರದ್ದು ಪಡಿಸಿದ್ದಲ್ಲದೆ ತನ್ನ ಉಳಿತಾಯದ ಆಹಾರವನ್ನೆಲ್ಲಾ ಜರ್ಮನಿಗೆ ಕಳುಹಿಸಿಕೊಡುತ್ತಿವೆ ಹೀಗಾಗಿ ಆರ್ಥಿಕ, ಆಹಾರ ವಿಭಾಗದಲ್ಲಿ ನಾಜಿಗಳ ಸ್ಥಿತಿ ಸಮಾಧಾನಕರವಿದೆ. ಮಿಲಿಟರಿ ಶಕ್ತಿಯಲ್ಲಿಯೂ ನ್ಯೂನತೆ ಕಂಡುಬರುವದಿಲ್ಲ. ನಾಜಿಗಳ ಆಕಾಶ ಬಲವು ಹಿಂದಿನಷ್ಟಿಲ್ಲವಾದರೂ 'ಲುಫ್ಟ್‌ವಾಫ್' ಇನ್ನೂ ತಾಡನ ಶಕ್ತಿ ಕಳಕೊಂಡಿಲ್ಲ. 1939ನೇ ಸಪ್ಟೆಂಬರದ ಗಣನೆಯಂತೆ ಜರ್ಮನ್ ಪುರುಷರ ಸಂಖ್ಯೆ ಸುಮಾರು 41½ ಮಿಲಿಯ. ಈ ಪೈಕಿ ಅನಿವಾರ್ಯವಾದ ಕೆಲವಂಶವನ್ನು ಬಿಟ್ಟರೆ, ಸೇನೆಗೆ ಜಮಾಯಿಸಬಹುದಾದ ಒಟ್ಟು ಸಂಖ್ಯೆ 19 ಮಿಲಿಯ. ಈ ಪೈಕಿ, ಮರಣವೇ ಮೊದಲಾದ ಹಾನಿಗೊಳಗಾಗುವವರ ಸಂಖ್ಯೆ 6 ಮಿಲಿಯವೆಂದು ಹಿಡಿದರೆ, ಗೃಹರಕ್ಷಣೆ ಹಾಗೂ ಇತರ ಎಲ್ಲಾ ರಂಗಗಳ ಯುದ್ಧಕ್ಕುಳಿಯುವ ಸೇನೆ 12,320,000. ಅರ್ಥಾತ್ ಯುದ್ಧಾರಂಭಿಸುವಾಗ ಹಿಟ್ಲರನಲ್ಲಿದ್ದಷ್ಟೇ ಸೇನೆಗಳು ಈಗಲೂ ಉಳಿದಿವೆ ಎಂದು ಮಿತ್ರಜ್ಞರು ಅಂದಾಜು ಕಟ್ಟಿಯೇ ದ್ವಿತೀಯ ರಂಗಕ್ಕಣಿಯಾಗಿದ್ದಾರೆ.

ಸ್ಟಾಲಿನರ ಮೇ ದಿನೋಪದೇಶ

ತನ್ನ ಮೇ ದಿನದ ಸಂದೇಶದಲ್ಲಿ ಕಾಮ್ರೇಡ್ ಸ್ಟಾಲಿನರು ಚರಿತ್ರಾರ್ಹ ಸ್ಟಾಲಿನ್‌ಗ್ರಾಡ್ ವಿಜಯಾನಂತರ ಕೆಂಪು ಸೇನೆ ಪಡೆದಿರುವ ಅಮೋಘ ವಿಜಯಗಳಿಗಾಗಿ ಆನಂದ ವ್ಯಕ್ತಪಡಿಸಿರುವರು. ಹಿಟ್ಲರ್ ಹಿಂಬಾಲಕ ರಾಷ್ಟ್ರಗಳಿಗೆ ಸ್ಪಷ್ಟ ಎಚ್ಚರಿಕೆ ಕೊಟ್ಟು, ಹಿಟ್ಲರಾಕ್ರಮಿತ ರಾಷ್ಟ್ರಗಳನ್ನು ಸ್ವತಂತ್ರಗೊಳಿಸುವ ವರೆಗೂ ಯುದ್ಧ ಮುಂದೊತ್ತುವ ತನ್ನ ಧ್ಯೇಯವನ್ನು ಸಾರಿ, ನಾಜಿಗಳನ್ನು ರಷ್ಯದಿಂದೋಡಿಸಿದುದಕ್ಕಿಂತಲೂ ಕಷ್ಟ ಕಾರ್ಯವಿದೆಂದೂ ಮಿತ್ರ ರಾಷ್ಟ್ರಗಳ ನೆರವಿನಿಂದ ಅದನ್ನು ಸಾಧಿಸಲಾಗುವದೆಂದೂ ತಿಳಿಸಿರುವರು. ರಷ್ಯದಲ್ಲಿ ಈ ಬಾರಿಯ ಮೇ ದಿನಾಚರಣೆಯು ವಿಜಯೋತ್ಸವದಂತೆ ಆಚರಿಸಲ್ಪಟ್ಟಿದೆ.

ಮಹಾತ್ಮರ ಆರೋಗ್ಯ.

ರಕ್ತ ತಜ್ಞ ಡಾಕ್ಟರ್ ಕಜ್ಜರರು ತಾ. 1 ಮತ್ತು 2ರಲ್ಲಿ ಬೊಂಬಾಯಿಯಿಂದ ಪೂನೆಗೆ ಹೋಗಿ ಗಾಂಧಿಜೀಯ ದೇಹ ಪರೀಕ್ಷೆ ನಡೆಸಿದ್ದಾರೆ. ಡಾ. ಬಿ ಸಿ. ರೋಯರು ಮಹಾತ್ಮರನ್ನು ಪರೀಕ್ಷಿಸಿ, ಬೊಂಬಾಯಿಗೆ ಹೋಗಿ ಡಾ। ಕಜ್ಜರರೊಡನೆ ವಿಚಾರ ಮಸಲತು ನಡೆಸಿದರು. ಲಂಡನಿನಲ್ಲೀಗ ನೆರೆಯುತ್ತಿರುವ ಬ್ರಿಟಿಷ್ ವಸಾಹತು ಪ್ರಧಾನಿಗಳ ಸಮ್ಮೇಳನದ ಪ್ರಮುಖರಾದ ಸ್ಮಟ್ಸ್, ಮೆಕೆಂಜೀಕಿಂಗ್, ಪೀಟರ್ ಫ್ರಾಸರ್, ಕರ್ಟಿನ್ ಮತ್ತು ಚರ್ಚಿಲ್ ಪ್ರತಿನಿಧಿಗಳು ಗಾಂಧಿಜೀಯ ಬಿಡುಗಡೆಯ ಒತ್ತಾಯ ಹಾಕಬೇಕೆಂದು ಲಂಡನಿನ 'ಸ್ವರಾಜ್ಯ ಭವನ' ಕಾರ್ಯದರ್ಶಿಗಳ ವಿನಂತಿ. ಈ ಪ್ರಶ್ನೆಯು ಪುನಃ ಪಾರ್ಲಿಮೆಂಟಿನ ಮುಂದೆಯೂ ಬರಲಿದೆ.

ಸಿ. ಆರ್. ಸಿಲೋನಿನಲ್ಲಿ

ಸಿಲೋನಿಗಳ ಆಮಂತ್ರಣದಂತೆ ಅಲ್ಲಿಗೆ ಹೋಗಿರುವ ಶ್ರೀ ಸಿ ರಾಜಗೋಪಾಲಾಚಾರ್ಯರು, ಭಾರತ-ಸಿಲೋನು ಸಂಬಂಧದ ಕುರಿತು ಹಲವು ಭಾಷಣಗಳನ್ನೀಯುತ್ತಿರುವರು.

ಪಂಜಾಬು ಲೀಗ್ ಸಮ್ಮೇಲನ

ಜಿನ್ನಾ-ಖಿಜಾರು ಮಾತುಕತೆ ಮುರಿದೊಡನೆಯೇ ಪಂಜಾಬು ಪ್ರಾಂತಿಕ ಮುಸ್ಲಿಂ ಲೀಗ್ ಸಮ್ಮೇಲನವು ಸಿಯಾಲ್ಕೋಟಿನಲ್ಲಿ ನೆರೆದಿದೆ. ಪ್ರಧಾನಿ ಕಿಝಾರ್ ಹಯಾತ್‌ಖಾನರ ವರ್ತನೆಯ ಖಂಡನೆ, ಯೂನಿಯನಿಸ್ಟ ಪಕ್ಷದ ಅಂತ್ಯಕ್ರಿಯೆ ಮಾಡಿ 'ಲೀಗ್' ನಾಮಕರಣ, ಶೌಕತ್ ಹಯಾತ್‌ಖಾನರ ರದ್ದತಿಯ ನಿಷೇಧ ಮೊದಲಾದ ಹಲವು ನಿರ್ಧಾರಗಳಾಗಿವೆ ಮಿ. ಜಿನ್ನರು ಜಿನ್ನಾ-ಸಿಕಂದರ್ ಒಪ್ಪಂದವನ್ನೇ ಅಲ್ಲಗಳೆದು ಪ್ರಧಾನಿಗಳ ವರ್ತನೆಯನ್ನು ಕಠಿಣವಾಗಿ ಖಂಡಿಸಿ 'ಯೂನಿಯನಿಸ್ಟ' ಪಕ್ಷದ ದಫನವಾಗದೆ ಶಾಂತಿ ಹೊಂದುವಂತಿಲ್ಲವೆಂದೂ, ಶೌಕತ್ ಹಯಾತ್‌ಖಾನರನ್ನು ಡಿಸ್‌ಮಿಸ್ ಮಾಡಿದ ಗವರ್ನರರ ವರ್ತನೆ ನ್ಯಾಯಬಾಹಿರವಾದದ್ದೆಂದೂ ಟೀಕಿಸಿರುವರು. ಎಲ್ಲಾ ಮುಸ್ಲಿಂ ಸದಸ್ಯರೂ ಲೀಗಿಗೆ ಮಾತ್ರ ಬಾಧ್ಯರೆಂದೂ ಶೌಕತ್ ಖಾನರಿಗೆ ನ್ಯಾಯ ದೊರೆಯದಿದ್ದರೆ ಲೀಗ್ ಮಂತ್ರಿಗಳು ರಾಜಿನಾಮೆ ಕೊಡಬೇಕೆಂದೂ ಸಾರಲಾಗಿದೆ.

ಅಸ್ಸಾಮು ಯುದ್ಧ- ಗತಿಯ ಕುರಿತು ಪ್ರತ್ಯಕ್ಷ ಪರಿಣಾಮವನ್ನನುಭವಿಸಬೇಕಾದ ಹಿಂದುಸ್ಥಾನಕ್ಕಿಂತ ಹೆಚ್ಚಿನ ಆತುರವು ಅಮೇರಿಕಕ್ಕಿದೆ. ಗುಪ್ತವಾಗಿ ಅಸ್ಸಾಮು ಧಾಳಿಯು ಮಿತ್ರರ ಯುದ್ಧ ಹಂಚಿಕೆಗಳನ್ನು ಅಡಿಮೇಲುಗೊಳಿಸಿರಬಹುದೇ ಎಂಬ ಸಂದೇಹವು ಅಮೇರಿಕಕ್ಕಿದೆ. ಈ ಕುರಿತು ಅಮೇರಿಕದ ಏಜನ್ಸಿಯೊಂದು ಸಿಲೋನಿನಲ್ಲಿರುವ ಆಗ್ನೇಯ ಏಸಿಯಾ ಸೇನಾನಿಗೆ ಆಕಾಶವಾಣಿ ಮೂಲಕ ಕೇಳಿದ ಪ್ರಶ್ನೆಗಳಿಗೆ ಅಸ್ಸಾಮು ಯುದ್ಧದಿಂದಾಗಿ ಮಿತ್ರರ ಯುದ್ಧ ಯೋಜನೆಗೇನೂ ಧಕ್ಕೆಯಿಲ್ಲವೆಂಬ ಉತ್ತರ ಬಂದಿದೆ.

ವರರು ಬೇಕು.

ಶಿವಳ್ಳಿ ಬ್ರಾಹ್ಮಣ ಹಾಯರ್ ಟ್ರೈಂಡ್ ಮತ್ತು ಕೋಟಬ್ರಾಹ್ಮಣ ಸೆಕೆಂಡರಿ ಟ್ರೈಂಡ್ ವಧುಗಳಿಗೆ ಯೋಗ್ಯ ವರನು ಬೇಕಾಗಿದ್ದಾರೆ. ಸೆಕೆಂಡರಿಯ ಹಾಯರ್ ಟ್ರೈಂಡ್ ವರರು ಉತ್ತಮ. ವಧುವರರಿಗೆ ಒಂದೇಶಾಲೆಯಲ್ಲಿ ಕೆಲಸ ದೊರೆಯುತ್ತದೆ. ಸೆಕೆಂಡರಿ ಗ್ರೇಡ್‌ನವರಿಗೆ ರೂ. 30।- ಹಾಯರ್ ಗ್ರೇಡ್‌ನವರಿಗೆ ರೂ. 25।- ಸಂಬಳ ಇದೆ. ಅಧ್ಯಾಪಕರಲ್ಲದ ಬ್ರಾಹ್ಮಣವರರೂ ಆಗಬಹುದು. ವಾಸಸ್ಥಳ ಊಟದ ಅನುಕೂಲತೆ ಕೊಡಲ್ಪಡುವುವು. ಹೆಚ್ಚಿನ ವಿವರಗಳಿಗೆ ಜಾತಕಗಳೊಂದಿಗೆ ಬರೆಯಿರಿ.

X
C/o. **Navayuga**
Udipi,

ದ್ವಿತೀಯ ರಂಗ

ವೇಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು.

ದ್ವಿತೀಯರಂಗ-ರಷ್ಯದ ರಣರಂಗದಲ್ಲಿ ಜರ್ಮನಿಯ ಮರ್ದನ-ಜರ್ಮನಿಯಲ್ಲಿ ಜನರ ನೈತಿಕ ಭಂಗ-ಜರ್ಮನರ ಪತನ-ಯುದ್ಧ ಸಮಾಪ್ತಿ-ಯುದ್ಧ ಸಾಮಾಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ-ಜನರ ನಿರುದ್ಯೋಗದ ಸಂಕಟಗಳು ಪೇಟೆಗೆ ರಾಶಿರಾಶಿಯಾಗಿ ಬರೋಣ-ಧಾರಣೆಗಳ ಇಳಿತ-ನಷ್ಟ-ಕೊರತೆ-ಕೇಡುಗಳು-ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

WANTED

Two Secondary Grade Trained Teachers.

Apply to

Manager,
Adi-Udipi Higher Ele. School
Post **Udipi, S. K.**

ನವಯುಗ

ಚಂದಾ ವಿವರ.

ವರ್ಷಕ್ಕೆ (ಸ್ಥಳೀಯ) 3-12-0
(ಟಪ್ಪಾಲು ದ್ವಾರ)-4-8-0

ಚಂದಾ ಹಣ ಬಾಕಿಯಿರುವವರು ದಯಮಾಡಿ ಅದನ್ನು ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

ದಕ್ಷಿಣ ಕನ್ನಡ-

ಮಂಗಳೂರು

ಆಗಮನ:—ಕೆಪ್ಟನ್ ಜ ಶ್ರೀನಿವಾಸ ಮೂರ್ತಿ ಬಿ. ಎ ಬಿ ಎಲ್, ಯಂ.ಬಿ.ಇ.ಡಿ. ಎ. ಎಮ್, ಇವರು ತಾ ೨೭ನೇ ಗುರುವಾರ ಮಂಗಳೂರಿಗೆ ಬಿಜಯಿಸಿ ಸಾಯಂಕಾಲ ಥಿಯೋಸೋಫಿಕಲ್ ಲೋಜಿನಲ್ಲಿ ಸಾರ್ವಜನಿಕ ಭಾಷಣವನ್ನಿತ್ತರು. ಅದೇ ದಿನ ರಾತ್ರಿ ೮-೩೦ಕ್ಕೆ ಜಿಲ್ಲಾ ಯ ಎಲ್ ಐ. ಎಮ್. ಎಸೋಸಿಯೇಶನಿನವರು ಇವರಿಗೆ ಉಪಾಹಾರವನ್ನಿತ್ತು ಸತ್ಕರಿಸಿದರು

ಬಿಡುಗಡೆ:—ಸ್ಥಾನಬದ್ಧ ಕೈದಿಗಳಾಗಿದ್ದ ಶ್ರೀ ಸಿ. ಕೆ ರಾಘವನ್ ಮತ್ತು ಯಂ ಉಮೇಶರಾಯರನ್ನು ತಂಜಾವೂರು ಜೈಲಿನಿಂದ ಬಿಡುಗಡೆ ಮಾಡಲಾಗಿದೆ.

ಶ್ರೀ ಕಾಶೀಮಠಾಧೀಶರ ಶಿಷ್ಯ ಪರಿಗ್ರಹಣ:—ಶ್ರೀ ಕಾಶಿ ಮಠಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು, ಶಿಷ್ಯ ಪರಿಗ್ರಹಣ ಮಾಡುವ ಶುಭ ದಿನವು ಇದೇ ಬರುವ ಮೇ ತಾ. ೨೪ ಎಂದು ತಿಳಿದು ಬರುತ್ತದೆ.

ಸಂಗೀತ ಕಚೇರಿ:—ಕುಮಾರಿ ಗಂಗೂ ಬಾಯಿ ಪಂಡಿತ ಅವರ ಗಾಯನ ಕಚೇರಿಯು, ತಾ. ೩೦—೪—೪೪ನೇ ಸಾಯಂಕಾಲ ಶ್ರೀ ವೆಂಕಟೇಶ ಪೈ "ಶ್ರೀ ರಂಗಭವನ"ದಲ್ಲಿ ಜರಗಿತು

ಕೆನರಾ ಹೈಸ್ಕೂಲಿನ ಶಾಖೆ.—ಯೊಂದನ್ನು ಇದೇ ಬರುವ ಜೂನ್ ತಿಂಗಳಲ್ಲಿ, ಪೆಂಟ್ಲೆಂಡ್ ಪೇಟೆಯಲ್ಲಿ ತೆರೆವ ನಿರ್ಧಾರವಾಗಿದೆ. ಇದರಲ್ಲಿ I ಫಾರ್ಮಿನಿಂದ IV ಫಾರ್ಮ್ ವರೆಗೆ ತರಗತಿಗಳಿರುವುವು." ಪೆಂಟ್ಲೆಂಡ್ ಪೇಟೆಯು ಹಾಗೂ ಆಸುಪಾಸಿನ ವಿದ್ಯಾರ್ಥಿಗಳ ಅನುಕೂಲತೆಗಾಗಿ ಈ ವ್ಯವಸ್ಥೆ ಮಾಡಿರುವರೆಂದು ತಿಳಿದು ಬರುತ್ತದೆ

ಆಹಾರ ಸಮಿತಿ ಸಭೆ.—ಜಿಲ್ಲಾ ಆಹಾರ ಸಮಿತಿ ಸಭೆಯು, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ತಾ. ೨೪ರಲ್ಲಿ ಜರಗಿತು, ಜಿಲ್ಲಾಧಿಕಾರಿಗಳು, ವರ್ತಕರಿಗೂ ಒಕ್ಕಲುಗಳಿಗೂ ಸಾಕಷ್ಟು ಅಕ್ಕಿಯನ್ನಿಟ್ಟುಕೊಳ್ಳುವ ಹಾಗೂ ಉಳಿದ ಸ್ಟಾಕನ್ನು ರಿಕ್ವಿಝಿಶನ್ ಮಾಡಿಸುವ ವಿಷಯವಾಗಿ ತಾವು ಆಗಿಂದಾಗ್ಗೆ ಅಪ್ಪಣೆಕೊಡಿಸಿದುದನ್ನೂ, ಆಹಾರ ಜೀನಸುಗಳು ಕಳ್ಳಾಟಿಕೆಯಿಂದ ಅತ್ತಿತ್ತ ಹೋಗದಂತೆ ತಡೆಹಾಕುವಲ್ಲಿಯೂ ಕೈಕೊಂಡ ಕ್ರಮವನ್ನೂ ವಿವರಿಸಿದರು, ಈ ಸಂಬಂಧವಾಗಿ ಪೋಲೀಸರ ಸಹಕಾರವನ್ನೂ ಜಿಲ್ಲಾಧಿಕಾರಿಗಳು ಶ್ಲಾಘಿಸುತ್ತ, ರಿಕ್ವಿಝಿಶನ್, ಮಾಡಲ್ಪಟ್ಟ ಆಹಾರ ಜೀನಸುಗಳ ಸ್ಟಾಕು ಹೆಚ್ಚಿದೆಯೆಂದೂ, ಅದನ್ನು ಮುಖ್ಯ ರಾಜ್ಯಕ್ಕೆ ಸಾಗಿಸಲು ಹೆಚ್ಚೆಚ್ಚು ಲೋರಿಗಳನ್ನು ನಿಯಮಿಸಬಹುದಿತ್ತೆಂದೂ ಹೇಳಿದರು. ಆಹಾರ ಸಮಿತಿಯವರು, ಜಿಲ್ಲಾಧಿಕಾರಿಗಳು ಈ ವಿಭಾಗದಲ್ಲಿ ಕೈಕೊಂಡ ಎಲ್ಲ ಉಪಾಯಗಳನ್ನು ಅನುಮೋದಿಸಿದರು ಮತ್ತು, ಕೆಳ ಅಧಿಕಾರಿಗಳು ತಮ್ಮ ಅಧಿಕಾರದ ಉಪಯೋಗ ಮಾಡುವಾಗ ಅವಿವೇಕವಾಗದಂತೆ ನೋಡಿಕೊಳ್ಳತಕ್ಕದಾಗಿ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು ತಾವೂ ರೆವೆನ್ಯೂ ಡಿವಿಜನಲ್ ಆಫೀಸರರೂ ಪ್ರತಿಯೊಂದು ದೂರನ್ನು ಸ್ವತಃ ವಿಚಾರಿಸಿ ತಕ್ಕ ಏರ್ಪಾಡು ಮಾಡುತ್ತಿರುವವೆಂದರು. ಒಕ್ಕಲುಗಳೊಡನೆ ಇರುವ ಸ್ಟಾಕು, ಅವಶ್ಯವಿರುವ ಬೀಜ ಇತ್ಯಾದಿಗಳ ವಿಷಯವಾಗಿ ರಿಕ್ವಿಝಿಶನ್ ಆಫೀಸರರು ಕೆಲವು ವಿಶಿಷ್ಟ ವಿಷಯಗಳನ್ನು ದಾಖಲು ಮಾಡಿಕೊಳ್ಳಬೇಕೆಂದು ಶ್ರೀ ಜನಾರ್ದನ ಹೆಗ್ಡೆಯವರು ಸೂಚಿಸಿದರು. ಜಿಲ್ಲಾಧಿಕಾರಿಗಳು, ಆ ಸೂಚನೆಯನ್ನು ಕಾರ್ಯರೂಪಕ್ಕೆ ತರುವುದಾಗಿ ಆಶ್ವಾಸನೆಯಿತ್ತರು.

"ಹೆಚ್ಚು ಬೆಳೆಯಾಗಲಿ":—"ಗ್ರೋ ಮೋರ್ ಫುಡ್" ವಿಷಯವಾಗಿ ಜಿಲ್ಲಾಧಿಕಾರಿಗಳು ಆಹಾರ ಸಮಿತಿಯ ಸದಸ್ಯರೊಡನೆ, ಹೆಚ್ಚು ಪ್ರಚಾರವಾಗುವಂತೆಯೂ, ಸದಸ್ಯರು ತಮ್ಮ ವರ್ಚಸ್ಸನ್ನು ಪ್ರಯೋಗಿಸಬೇಕೆಂದೂ ಸೂಚಿಸುತ್ತ, ಬೆಳೆಯನ್ನು ವರ್ಧಿಸುವ ಕುರಿತು ಸದಸ್ಯರಿಂದ ಸೂಚನೆಗಳನ್ನು ಆಹ್ವಾನಿಸಿದರು. ಗೊಬ್ಬರಗಳನ್ನೊದಗಿಸುವ ಪ್ರಶ್ನೆಯೂ ಆಹಾರ ಸಮಿತಿಯಲ್ಲಿ ಚರ್ಚಿಸಲ್ಪಟ್ಟು, ಈ ವಿಭಾಗದಲ್ಲಿ ರಾವ್ ಸಾಹೇಬ್ ಸಿ. ರಂಗನಾಥ ಪೂಂಜರವರೂ ಎಗ್ರಿಕಲ್ಚರಲ್ ಆಫೀಸರರೂ ತಮ್ಮ ಕೈಲಾದಷ್ಟನ್ನು ಮಾಡುವಂತೆ ವಿನಂತಿಸಲಾಯಿತು ಜಿಲ್ಲಾಧಿಕಾರಿಗಳು ಈ ವಿಷಯವನ್ನು ಎಗ್ರಿಕಲ್ಚರಲ್ ಆಫೀಸರರೊಡನೆ ಚರ್ಚಿಸಿ, ಅವಶ್ಯವಿರುವ ಅಪ್ಪಣೆಕೊಡಿಸಿದ್ದಾರೆ, ಸರಕಾರಿ ಕೆಲಸಗಳನ್ನು ಸುಧಾರಿಸುವ ಕುರಿತು, ಈ ಮೊದಲು ಶ್ರೀ ಎ. ಬಿ. ಶೆಟ್ಟರು ಕೊಟ್ಟ ಸೂಚನೆಯು ಪರ್ಯಾಲೋಚಿಸಲ್ಪಡುತ್ತಿದೆ.

ಭತ್ತದ ವಿಚಾರ.—ಕಾಸರಗೋಡು ತಾಲೂಕಿನಲ್ಲಿ ಬರುವ ಮಳೆಗಾಲದ ಬೆಳೆಗೆ ಅವಶ್ಯವಿರುವ ಭತ್ತವನ್ನು ಸಂಗ್ರಹಿಸಿಡುವ ವಿಷಯವಾಗಿ, ಜಿಲ್ಲಾಧಿಕಾರಿಗಳು, "ದ ಕ. ಜಿಲ್ಲಾ ಸಿ. ಸಿ. ಡಬ್ಲ್ಯು. ಸ್ಟೋರ್ಸ್‌ಗಳಿಗೆ, ದೊರೆವಷ್ಟು ಭತ್ತವನ್ನು ರಿಸರ್ವ್ ಮಾಡಿಸಬೇಕೆಂದೂ, ಬೆಳೆಯ ಪೂರ್ತಿಕೆಯ ನಂತರವೇ ಉಳಿದುದನ್ನು ಜನರ ಆಹಾರ ಉಪಯೋಗಾರ್ಥ ಹಂಚಿ ಕೊಡಬೇಕೆಂದೂ" ತಿಳಿಸಿರುವರು, ರಿಕ್ವಿಝಿಶನ್ ಆದ ಅಕ್ಕಿಯನ್ನು ಹಳ್ಳಿಗಳಿಂದ ಸಾಗಿಸುವ ಬಗ್ಗೆ ಪರವಾನಗಿ ಕೊಡಿಸಲು ಗ್ರಾಮಾಧಿಕಾರಿಗಳಿಗೆ ಅಧಿಕಾರ ಕೊಡಲಾಗಿದೆ

ಸಂಚಾರ ಪುಸ್ತಕಾಲಯ:—ಮಂಗಳೂರು ನಗರದಲ್ಲಿ ಸಂಚಾರ ಪುಸ್ತಕಾಲಯವೊಂದನ್ನು ಆರಂಭಿಸಬೇಕೆಂಬ ಸೂಚನೆಯೊಂದು ಮಂಗಳೂರು ಮುನಿಸಿಪಲ್ ಕೌನ್ಸಿಲರರೊಳಗಿತ್ತು, ಇದನ್ನು ಕೂಡಲೇ ಆರಂಭಿಸಬೇಕೆಂದು, ಕಳೆದ ಸೋಮವಾರ ಸೇರಿದ ಮುನಿಸಿಪಲ್ ಸಭೆಯಲ್ಲಿ, ಅಧ್ಯಕ್ಷರು ಸೂಚಿಸಿರುವರು.

ವಿಕ್ಟೋರಿಯಾ ಜುಬಿಲಿ ಸ್ಕಾಲರ್ ಶಿಪ್:—ಸಿವಿಲ್, ಮೆಕೆನಿಕಲ್, ಮೆರೀನ್ ಅಥವಾ ಸೆನಟರಿ ಇಂಜಿನಿಯರಿಂಗ್, ಫೋರೆಸ್ಟ್ರಿ, ಮೈನಿಂಗ್ ಎಂಡ್ ಮೆಟಲ್ಲರ್ಜಿ ಈ ವಿಷಯಗಳಲ್ಲಿ ಹಿಂದೂ ದೇಶದ ಯಾವುದಾದರೂ ಸರಕಾರೀ ಶಿಕ್ಷಣ ಪಡೆಯಲಿಚ್ಛಿಸುವ (a) ಮಹಮ್ಮದೀ ವಿದ್ಯಾರ್ಥಿಯೊಬ್ಬ (b) ಬ್ರಾಹ್ಮಣ ವಿದ್ಯಾರ್ಥಿಯೊಬ್ಬ (c) ಬ್ರಾಹ್ಮಣೇತರ ವಿದ್ಯಾರ್ಥಿಯೊಬ್ಬ—ಇವರಿಗೆ ಮೂರು ಮಾಸಿಕ ವಿದ್ಯಾರ್ಥಿವೇತನಗಳನ್ನು ಕೊಡುವ ಬಗ್ಗೆ ಸ್ಪರ್ಧಾ ಪರೀಕ್ಷೆಯು ಗವರ್ನಮೆಂಟ್ ಕಾಲೇಜಿನಲ್ಲಿ ತಾ 26 6-44ನೇ ಸೋಮವಾರ ಪೂರ್ವಾಹ್ನ 11 ಗಂಟೆಗೆ ಜರಗುವುದು. ಹೆಚ್ಚಿನ ಮಾಹಿತಿ ಬಗ್ಗೆ ಮಂಗಳೂರು ಜಿಲ್ಲಾ ಜಡ್ಜರ ಕೋರ್ಟಿಗೆ ಬರಕೊಳ್ಳಬೇಕು.

ಉಡುಪಿ.

ಶಾಲಾ ವರ್ಧಂತಿ:—ಇದೇ ತಾ 7ನೇ ಆದಿತ್ಯವಾರ ಸಂಜೆ ಉಡುಪಿ ಮುನ್ಸಿಪಲ್ ಸೋರ್ತ್ ಶಾಲೆಯ ವರ್ಧಂತಿಯು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎನ್. ಸುಬ್ಬರಾವ್, B. A. L. T.ಯವರ ಅಧ್ಯಕ್ಷತೆಯಲ್ಲಿ ಜರಗಲಿದೆ, ಸರ್ವರೂ ಈ ಸಮಾರಂಭದಲ್ಲಿ ಭಾಗಿಗಳಾಗಿ ಅದನ್ನು ಸಾಂಗಗೊಳಿಸಬೇಕಾಗಿ ಸ್ಕೂಲ್ ಡೇ ಕಮಿಟಿ, ಶಾಲಾ ಮುಖ್ಯೋಪಾಧ್ಯಾಯ ಹಾಗೂ ಸಹಾಯಕ ಉಪಾಧ್ಯಾಯರುಗಳು ವಿನಂತಿ ಮಾಡಿಕೊಳ್ಳುತ್ತಾರೆ.

ದಶಾವತಾರ ಜೋಡಾಟ:—ಯುದ್ಧ ನಿಧಿಯ ಸಹಾಯಾರ್ಥವಾಗಿ ಕಳೆದ ಗುರುವಾರ ಆದಿಉಡ್ಪಿ ಮೈದಾನದಲ್ಲಿ ಮಂದಾರ್ತಿ ಮತ್ತು ಅಮೃತೇಶ್ವರಿ ದಶಾವತಾರ ಮೇಳಗಳ ಜೋಡಾಟ ಪ್ರದರ್ಶನವಾಯಿತು, ಟಿಕೇಟು ಮಾರಾಟದಿಂದ ಸಾಧಾರಣ ಮೂರೂವರೆ ಸಾವಿರ ರೂಪಾಯಿ ಜಮೆಯಾಗಿದೆಯೆಂದು ತಿಳಿದು ಬರುತ್ತದೆ.

ಟೀಚರ್ಸ್ ಕೋಆಪರೇಟಿವ್ ಸೊಸೈಟಿಯ ಮಹಾಸಭೆ:—ಸಭೆಯು ತಾ 30ರಲ್ಲಿ ಶ್ರೀಯುತ ವೆಂಕಟ್ರಾವ್, ಬಿ. ಎ. ಎಲ್. ಟಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು, ಆಡಿಟ್ ರಿಪೋರ್ಟ್ ಸ್ವೀಕಾರ, ಬಜೇಟು ಮಂಜೂರಾತಿಗಳಾದ ಬಳಿಕ ನಾಯಕ ಮಂಡಳಿಯ ಸದಸ್ಯರ ಚುನಾವಣೆ ನಡೆಯಿತು, ಏಳು ಸೀಟುಗಳಿಗೆ ಹನ್ನೆರಡು ಮಂದಿ ಉಮೇದ್ವಾರರಿದ್ದು ಅಂದಿನ ಸಭೆಯಲ್ಲಿ ಮೆಂಬರರು ಚುನಾವಣೆಯ ಕಡೆಗೆ ಹೆಚ್ಚಿನ ನಿಗಾ ಕೊಟ್ಟಂತೆ ಭಾವಿಸಲಾಗುತ್ತಿತ್ತು.

ಬೋರ್ಡು ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ:—ಅಧಿವೇಶನವು ತಾ 30ರಲ್ಲಿ ಆ ಶಾಲೆಯ ಹೆಡ್ಮಾಸ್ತರ್ ಮಿ। ಆರ್ ಫೆರ್ನಾಂಡೀಸ್, ಬಿ ಎ. ಎಲ್. ಟಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂಘವು ಮುಂದೆ ಕೈಕೊಳ್ಳತಕ್ಕ ಕಾರ್ಯಕ್ರಮವನ್ನು ನಿರ್ಧರಿಸಿದ ಬಳಿಕ ಕಾರ್ಯನಿರ್ವಾಹಕ ಮಂಡಳಿಗೆ ಹೊಸ ಸದಸ್ಯರ ಚುನಾವಣೆ ನಡೆಯಿತು. ಉಡುಪಿಗೊಂದು ಕಾಲೇಜಿನ ಆವಶ್ಯಕತೆಯ ಕುರಿತು ಅಧ್ಯಕ್ಷರ ಭಾಷಣವಾಗಿ ಉಪಹಾರದೊಂದಿಗೆ ಸಭಾಂತ್ಯವಾಯಿತು.

ಹವಾಮಾನ:—ದಿನೇ ದಿನೇ ಸೆಕೆ ಜಾಸ್ತಿಯಾಗುತ್ತಲಿದೆ, ಅಗೆ ಹಾಕುವ ಸಮಯ ಬಂತು. ಬೇಸಾಯಗಾರರು ಮೇಘರಾಜನ ಅನುಗ್ರಹ ನಿರೀಕ್ಷಣೆಯಲ್ಲಿರುವರು.

ಕಡಿಯಾಳಿ ಹಾ। ಎ। ಶಾಲಾ ವರ್ಧಂತಿಯು:—ತಾ 29ರಲ್ಲಿ ಡಾ। ಟಿ ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ಇನಾಮು ಹಂಚೋಣ, ಬಾಲ ಬಾಲಕಿಯರ ವಿವಿಧ ವಿನೋದಾವಳಿ ಪ್ರದರ್ಶನ, ಶ್ರೀ ಕೆ. ವಿಠಲ ಶೆಣ್ಯ, ಬಿ. ಎ. ಎಲ್. ಟಿ ಮೊದಲಾದವರ ಭಾಷಣ ಮೊದಲಾದ ಕಾರ್ಯಕ್ರಮಗಳು ಜಯಶೀಲವಾಗಿ ಕೊನೆಗೊಂಡವು.

ಸಿಡುಬು:—ಇನ್ನೂ ಶಾಂತವಾಗಿಲ್ಲ. ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿವೆ. ಕೆಲವು ಮರಣಗಳು ಉಂಟಾಗಿವೆಯೆಂದು ವಾರ್ತೆ.

ಉಡ್ಪಿ ಟೆನ್ನಿಸ್ ಟೂರ್ನಮೆಂಟ್:—ಉಡ್ಪಿ ಟೆನಿಸ್ ಕ್ಲಬ್ಬಿನ ಆಶ್ರಯದಲ್ಲಿ ಜರಗಿದ ಟೆನಿಸ್ ಟೂರ್ನಮೆಂಟಿನಲ್ಲಿ ಸಿಂಗಲ್ಸ್ 'ಎ'ಯಲ್ಲಿ ಶ್ರೀ ಕೆ. ಸಂಜೀವ ಶೆಟ್ಟರೂ ಡಬಲ್ಸ್‌ನಲ್ಲಿ ಮಿ। ಡಿ. ಸೋರೇನ್ಸಾ ಮತ್ತು ಶ್ರೀ ಟಿ. ಎನ್. ... ನಂಬಿಯಾರರೂ ಸಿಂಗಲ್ಸ್ 'ಬಿ'ಯಲ್ಲಿ ಶ್ರೀ ಟಿ ಎನ್. ಕೆ. ನಂಬಿಯಾರರೂ ಜಯಶೀಲರಾಗಿರುವರು. ಪಾರಿತೋಷಗಳನ್ನು ಡಾ। ಟಿ ಎಮ್. ಎ ಪೈಗಳವರು ಹಂಚಿದರು.

ಅಖಿಲ ಭಾರತೀಯ ದ್ವಿತೀಯ ಕೀರ್ತನ ಪರಿಷದ್:—ಮೇಲೆ ಬರೆದ ಪರಿಷತ್ತು ತಾ ೧೧-೫-೪೪ರಿಂದ ತಾ. ೧೫-೫-೪೪ರ ವರೆಗೆ ದಾದರಿನಲ್ಲಿ(ಮುಂಬಯಿ) ಪೂಜ್ಯಪಾದ ಶ್ರೀ ಗೋಸ್ವಾಮೀ ಶ್ರೀ ೧೦೮ ಶ್ರೀ ಗೋಕುಲನಾಥ ಮಹಾರಾಜ ಇವರ ಅಧ್ಯಕ್ಷತೆ ಕೆಳಗೆ ಜರಗುವದು ಇದರಲ್ಲಿ ಕನ್ನಡ, ಮರಾಠೀ, ಗುಜರಾಥೀ, ತಮಿಳು ತೆಲುಗು, ಬಂಗಾಲಿ, ಇತ್ಯಾದಿ ಪ್ರಾಂತಗಳ ಕೀರ್ತನಕಾರರಿಗೂ ಕೀರ್ತನ ಪ್ರೇಮಿಗಳಿಗೂ ಜಾಹೀರ ಆಮಂತ್ರಣಗೆ ಉಂಟು. ಪರಿಷತ್ತಿನ ಕಾರ್ಯಕ್ರಮವು ಖಲಾಲಾಸವಾಗಿ ತೀವ್ರವೇ ಪ್ರಸಿದ್ಧಿಸುವುದು. ಮಾಹಿತಿಗೆ

Secrteary
Akhil Bharateeya Keertan
Sanstha Dadar-

24 4·44

The Canara Land Investments, Ltd.

"SHANTHI BHAVAN"
MANIPAL, S. INDIA.

NOTICE

Is hereby given that the following shares in the Canara Land Investments Ltd. will be sold by public auction at the Registered Office of the Company, "Shanthi Bhavan", Manipal, on 28th May 1944 at 10 A. M. in order to recover the debt to the Company by the concerned share-holders.

25 Ordinary shares Nos. 5939 to 5963 each fully paid up Rs 10/-

U. A. Pai,
Managing Director.

27-4-1944.

ತಾರೀಕು 1—5—1944 ರಿಂದ
ರಾಯಲ್ ಟಾಕೀಸ್‌ನವರ

ಸಾವಿತ್ರಿ

ಶಾಂತಾ ಆಪ್ಟೆ ಎಮ್. ಎಸ್. ಸುಬ್ಬುಲಕ್ಷ್ಮಿ,
ವೈ. ವಿ. ರಾವ್. ಮೊದಲಾದವರು ನಟಿಸಿರುವ
ಅತ್ಯುತ್ತಮ ಚಿತ್ರ.

ಅನಂತರ:—ಶಕುಂತಲಾ

ಮೇ ತಿಂಗಳಲ್ಲಿ ಸಮಯ ಬದಲಾವಣೆಗಳನ್ನು ಗಮನಿಸಿರಿ.
ಪ್ರತಿದಿನ 2 ದೇಖಾವೆಗಳು ಮಾತ್ರ.
ಪ್ರಥಮ ದೇಖಾವೆ 5-30ಕ್ಕೆ, ದ್ವಿತೀಯ ದೇಖಾವೆ 9-30ಕ್ಕೆ

☞ ಮುಟ್ಟುಗುಳಿಗೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (PILLS) ನಿಶ್ಚಿತ ನಿರಪಾಯವು—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು, ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ. ರೂ. 3/- ಕೈಮೀರಿದ ಕೇಸುಗಳಿಗೆ ರೂ. 5- (ವಿ. ಪಿ. 12 ಆಣೆ ಅಲಾಯಿದ)

Mrs. P DEVEE, F. D. S., (N)
TOLLYGUNGE CALCUTTA.
ಸ್ಟಾಕಿಸ್ಟ್. Popular Stores,
P. B. 60, MANGALORE.

Degrees Books Medicines
Free H L M S.M. B. H M, D, etc
Free Homeo-Ayur- Unani Natureo degree by post also—Practitioner also get soon Homeo Materiamedica, Rs. 5 Homeo Practice book Rs. 4 Insanity Cure Pills Rs. 10 Enclose 2 annas stamp.—

Prof. Dr. N H. Chhatbar,
Principal Indian Homeopathi Institute & Society (Govt Regd)
P. O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2 No 2 Rs 5 No. 1 Rs. 7 Special Rs. 10, Extra Special Rs 17 fo ove marriage health wealth Ask an six questions with M. O Re. 1/- an get correct answers by returnpost Life reading Rs.10 No. V. P. P Send M. O free, pmplets

Prof Dr. N. H. Chhatbar.
P. O. MAHUVA (Kathiawar India)

CHAMPAE'S
Snow & Castrex
(Sole Distributers for India.
Sukhananda Stores
Santhekatte, UDIPI, S. K.

★ ಮಹಾತ್ಮಾಜೀಗೆ ಚಿಂತಾಜನಕ ನಿತ್ರಾಣ ★

“ಗಾಂಧಿಯವರಿಗೆ ಪುನಃ ಜ್ವರ ಕಾಣಿಸಿಕೊಳ್ಳಲಿಲ್ಲವಾದರೂ, ಅವರು ಇತ್ತೀಚೆಗಿನ ಕಾಹಿಲೆಯಿಂದ ನಿರೀಕ್ಷಿಸಿದಷ್ಟು ಸುಧಾರಿಸಿಲ್ಲ; ಅವರ ಸಾಮಾನ್ಯ ದೇಹಸ್ಥಿತಿಯು ನಿತ್ರಾಣಗೊಂಡಿದ್ದು ತುಸು ಆತುರಕ್ಕೆ ಕಾರಣವಾಗಿದೆ”--ಅಖಿಲ ರಾಷ್ಟ್ರವನ್ನೇ ಕಳವಳಕ್ಕೀಡುಮಾಡುವ ಮೇಲಿನ ಮಾತುಗಳು ಬೊಂಬಾಯಿ ಸರಕಾರದ ಕಳೆದ ಶುಕ್ರವಾರದ ಪ್ರಕಟಣೆಯಲ್ಲಿದ್ದುವು. ಆದರೆ ಅಂತಹ ಆವೇಗವನ್ನು ಬಹುಕಾಲ ಬಾಳಲು ಬಿಡುವ ಸಹಕಾರ ನಮ್ಮದಲ್ಲ. ಮರುದಿನವೇ ದೇಶದ ಚಿಂತಾ ನಿವಾರಕ ಮತ್ತೊಂದು ಪ್ರಕಟಣೆ ಹೊಂಟಿತು. “ಬೊಂಬಾಯಿ ಸರಕಾರದ ಸರ್ಜನ್ ಜನರಲ್ ಆದ ಮೇಜರ್ ಜನರಲ್ ಕೇಂಡಿ ಐ. ಎಮ್. ಎಸ್, ಇವರಿಂದ ಗಾಂಧಿಯವರೀದಿನ ಪರೀಕ್ಷಿಸಲ್ಪಟ್ಟರು ಅವರ ವರದಿಯಂತೆ ನಿನ್ನೆಯಿಂದ ಗಾಂಧಿಯವರು ಸಮಾಧಾನಕರವಾಗಿ ಸುಧಾರಿಸಿದ್ದಾರೆ. ಅವರು ಇತ್ತೀಚೆಗನುಭವಿಸಿದ ಮಲೇರಿಯಾ ಪೀಡೆಯಿಂದಾಗಿ, ಈಗಲೂ ದೇಹದಲ್ಲಿ ರಕ್ತಶೂನ್ಯತೆ ಕಂಡುಬರುತ್ತಿದ್ದು ರಕ್ತದೊತ್ತಡವು ಬಹಳ ನಿಧಾನ ಸ್ಥಿತಿಗಿಳಿದಿದೆ. ಆದರೆ ನಿನ್ನೆಯಿಂದ ಅವು ಸಾಕಷ್ಟು ಅಭಿವೃದ್ಧಿಗೊಂಡಿವೆ. ಅವರು ಉತ್ತಮೋತ್ಸಾಹದಿಂದಿದ್ದಾರೆ. ಹೆಚ್ಚೆಚ್ಚು ಪೌ

ಖಾನ್ ಅಬ್ದುಲ್ ಗಫರ್‌ಖಾನರಿಗೆ ಕಠಿಣ ಕಾಹಿಲೆ!

ಷ್ಟಿಕ ಆಹಾರ ಹಾಗೂ ಟೋನಿಕ್‌ಗಳನ್ನು ತಗೆದುಕೊಳ್ಳಬೇಕೆಂಬ ಹಿತಸೂಚನೆ ಕೊಡಲಾಗಿದೆ.

ದೇಶದ ಕಳವಳ

ರಕ್ತಶೂನ್ಯತೆಯಿಂದಾಗಿ ಗಾಂಧಿಜೀ ‘ನಿರೀಕ್ಷೆಯಷ್ಟು ಸುಧಾರಿಸಿಲ್ಲ’ ‘ಸ್ಥಿತಿ ಚಿಂತೆಗವಕಾಶವಿತ್ತಿದೆ’ ಎಂಬ ಸುದ್ದಿ ಅಖಿಲಭಾರತದ ಪಾಲಿಗೊಂದು ದುರ್ವಾರ್ತೆಯಾಯಿತು. ಬೊಂಬಾಯಿಯು ಮತ್ತೊಂದು ಸ್ಫೋಟಕಕ್ಕೊಳಗಾದಂತೆ ದಿಗಿಲುಗೊಂಡಿತು. ಮಹಾತ್ಮರಿಗೆ ಮಲೇರಿಯಾ ಎಂಬ ಸುದ್ದಿಯನ್ನು ಪ್ರಥಮತಃ ಎಪ್ರಿಲ್ 16 ರಲ್ಲಿ ಬೊಂಬಾಯಿ ಸರಕಾರವು ತನ್ನ ಇಪ್ಪತ್ತಾರೇ ಶಬ್ದಗಳ ಪ್ರಕಟಣೆಯೊಳಗೆ ತುರುಕಿಸಿ ಬೋಂಬೊಗೆದಂತೆ ಬಯಲಿಗೆ ಹಾಕಿತ್ತು. ಎರಡು ದಿನಗಳ ನಂತರ ‘ದೇಹಸ್ಥಿತಿ ಸಾಮಾನ್ಯ ಮಟ್ಟಕ್ಕೆ ಬಂದಿದೆ; ಅಭಿವೃದ್ಧಿ ಸಮಾಧಾನಕರವಿದೆ’ ಎಂದು ಸರಕಾರವೇ ಸರ್ವರನ್ನೂ ಸಂತೈಸಿತು. ಅಂದಿನಿಂದ ಪೂರ್ತಿ 10 ದಿನಗಳ ಬಳಿಕ ‘ನಿರೀಕ್ಷಿಸಿದ ಪ್ರಗತಿಯಿಲ್ಲ-- ಆತುರಕ್ಕವಕಾಶವಿದೆ’ ಎಂಬುದನ್ನು ತಿಳಿಸುವವಕ್ಕಾಗಿಯೇ ಸರಕಾರದ ಮತ್ತೊಂದು ಪ್ರಕಟಣೆ; ಆ ಪ್ರಕಟಣೆಯಿಂದಷ್ಟ ಆತುರ ಶಮನಕ್ಕಾಗಿ ಮರುದಿನ ಬೇರೊಂದು ಪ್ರಕಟಣೆ! ಇವನ್ನೆಲ್ಲಾ ಪರ್ಯಾಲೋಚಿಸುವಾಗ ‘ಗಾಂಧಿಜೀ ಇರಬೇಕಾದ ಸ್ಥಿತಿಯಲ್ಲಿಲ್ಲ’ ಎಂದು ಭಯಪಡಬೇಕಾಗುತ್ತದೆ. ಸರಕಾರೀ ಪ್ರಕಟಣೆಯು ಇನ್ನು ಯಾವ ಮುಹೂರ್ತದಲ್ಲಿ ಯಾವ ರೂಪಾಂತರ ಹೊಂದುವದೋ ಎಂದು ಆತುರಪೂರ್ವಕ ನಿರೀಕ್ಷಿಸಬೇಕಾಗುತ್ತದೆ

ಪ್ರತಿಕೂಲ ವಾತಾವರಣ.

ಪೂನಾದಲ್ಲಿ ಈಗ ಇರುವ ಸೆಕೆಯಿಂದರೆ ಮೃಗಗಳ ಮೈಯಲ್ಲೂ ಬೆವರಿಳಿಸುವಂತಹದು! ಅಲ್ಲಿರುವವರಿಗೆ ಬಿಸಿಲೇ ಒಂದು ಜ್ವರ. ಸ್ವಾಮಾನ್ಯನಾಗಿ ಅಲ್ಲಿಯ ಅನುಕೂಲಸ್ಥರೆಲ್ಲಾ ಈ ಸಮೆ ಕಾಲದಲ್ಲಿ ಕರಾವಳಿಯ ಮಹಾಬಲೇಶ್ವರಕ್ಕೆ ಹೋಗಿ ನೆಲಸುವ ವಾಡಿಕೆ ಇನ್ನು ಪೂನದ ಆ ಆಗಾಖಾನ್ ಅರಮನೆ-- ಅದು ಮಲೇರಿಯ ರೋಗಿಗಳ ಮಟ್ಟಿಗೆ ಮಸಣ ಸದೃಶ ಹೆಸರು ಅರಮನೆಯೆಂದಿದ್ದರೂ ಅದು ಸಹಜವಾಗಿ ಸೊಳ್ಳೆಮನೆ ಅಲ್ಲಿರುವ ಸುಸಿಗಳ ಸ್ವರ ಮನುಷ್ಯವಾಣಿಗಳನ್ನು ಕೇಳಬಿಡದಷ್ಟು ಬಲ; ವಿಶ್ವಾಮಿತ್ರ ತಪಸ್ಸನ್ನಾದರೂ ಭಂಗಪಡಿಸುವಷ್ಟು ಅಲ್ಲಿ ಸುಸಿಗಳ ಹಾರಾಟ! ಇಂತಹ ವಾತಾವರಣದಲ್ಲಿರುವಾಗಲಾದರೂ ಗಾಂಧಿಜೀ ತನ್ನ ಸದ್ಧತಿಯ ಬಯಲು ನಿದ್ರೆಯನ್ನ ಬಿಟ್ಟಿರಲಿಲ್ಲ. ಯಾವುದೇ ಸೊಳ್ಳೇ ಪರದೆಯನ್ನು ಹಾಕಿಕೊಳ್ಳದೆ ಬಟ್ಟ ಬಯಲಲ್ಲಿ ಮಲಗುವದು ಅವರ ಸಂಪ್ರದಾಯ. ಇವೆಲ್ಲಾ ಪ್ರತಿಕೂಲ ಪರಿಸ್ಥಿತಿಯಿಂದಾಗಿ, ಮಾನಸಿಕ ಗೊಂದಲಗಳಂತೆಯೇ ದೈಹಿಕ ದೌರ್ಬಲ್ಯಗಳನ್ನೂ ತನ್ನ ಆತ್ಮಶಕ್ತಿಯಿಂದ ಅತಿ ಬೇಗನೆ ನಿವಾರಿಸಿಕೊಳ್ಳುತ್ತಿದ್ದ ಗಾಂಧಿಜೀ ಈ ಬಾರಿ ಹಾಗೆ ಮಾಡಲಶಕ್ಯರಾಗಿದ್ದಾರೆ—ಅಲ್ಲಿಯೇ ನವೆಯ ಹತ್ತಿದ್ದಾರೆ. ದೌರ್ಬಲ್ಯವನ್ನವರು ಗೆಲ್ಲುವ ಬದಲಿಗೆ ಈ ಬಾರಿ ದೌರ್ಬಲ್ಯವೇ ಅವರನ್ನು ಗೆಲ್ಲುತ್ತಿದೆ, ಇದು ಸಲ್ಲಕ್ಷಣವಲ್ಲ!

ಡಾಕ್ಟರ್ ಪರೀಕ್ಷೆ.

ಗಾಂಧೀ ಪ್ರಕೃತಿಯ ದೀರ್ಘಾನುಭವ ಪರಿಚಯವಿರುವ ಡಾ। ಬಿಧನ್‌ಚಂದ್ರ ರೋಯಿಯವರನ್ನು ದೇಹ ಪರೀಕ್ಷೆಗೆ ಬಿಡಬೇಕೆಂದು ಸಾರ್ವಜನಿಕ ಬಯಕೆಯಿದ್ದಿವೆ ಕಳೆದ ವರುಷದ ಉಪವಾಸದ ವೇಳೆ ಮಹಾತ್ಮರ ಆರೋಗ್ಯಕ್ಕೆ ಆಧಾರವಾಗಿದ್ದವರು ಡಾ। ಬಿ. ಸಿ ರೋಯಿಯವರೆಂಬುದನ್ನು ಮರೆಯಬಾರದು. ಆದರೆ ಆ ಉಪವಾಸದ ಒಂದು ತಿಂಗಳ ಬಳಿಕ, ಗಾಂಧಿಜೀಯನ್ನು ಪರೀಕ್ಷಿಸಲು ಬಿಡಬೇಕೆಂದು ಪ್ರಾರ್ಥಿಸಿಕೊಂಡ ಡಾ। ರೋಯಿ ಬಳಗದವರನ್ನು ಸರಕಾರವು ಧಿಕ್ಕರಿಸಿತ್ತು. ಆ ಅಪಮಾನವನ್ನು ಮರೆಯುವ ಡಾ। ಬಿ. ಸಿ. ರೋಯಿಯವರು ಈ ಬಾರಿ ಸಂದರ್ಶನಾನುಮತಿ ಅರ್ಜಿ ಕಳುಹಲು ನಿರಾಕರಿಸಿದ್ದರು. ಸರಕಾರವಾಗಲೀ ಗಾಂಧಿಜೀಯಾಗಲೀ ಕೇಳಿಕೊಂಡರೆ ತಾನು ಆಗಾಖಾನ್ ಅರಮನೆ ಪ್ರವೇಶಿಸಲು ಯಾವ ಘಳಿಗೆಗೂ ಸಿದ್ಧನೇ ಎಂದು ಈ ಗಾಂಧೀ ದಾಕ್ತರರನ್ನುತ್ತಾರೆ. ಬೊಂಬಾಯಿಯ ರಕ್ತತಜ್ಞ ಡಾಕ್ಟರ್ ಗಜ್ಜರರನ್ನು ಮಹಾತ್ಮರ ಶೋಣಿತ ಶೋಧನಮಾಡಿ ಬರಲು ಸರಕಾರವು ವಿನಂತಿಸಿಕೊಂಡಿತ್ತೆಂದು ತಿಳಿದುಬರುತ್ತದೆ ‘ಗಾಂಧಿಯವರ ದೇಹಸ್ಥಿತಿ ಸುಧಾರಿಸುತ್ತಿದೆ. ಅಗತ್ಯ ಬೀಳದೆ ಇನ್ನಾ ಕುರಿತು ಪ್ರಕಟಣೆ ಹೊರಡಿಸುವದಿಲ್ಲ’ ಎಂದು ತಾ. 30ರ ಸರಕಾರೀ ಪ್ರಕಟಣ ಅಭಯ ಕೊಟ್ಟಿದೆ. ಡಾ। ಗಜ್ಜರರು ಪೂನೆಗಾಗಮಿಸಿ ಮಹಾತ್ಮರ ರಕ್ತ ಪರೀಕ್ಷೆ ನಡೆಸಿದ್ದಾರೆ. ಡಾ। ಬಿ. ಸಿ. ರೋಯಿಗಳು ಪೂನಾದ ಮಾರ್ಗವಾಗಿ ಹೋಗಲಿದ್ದವರು ಹಲವರ ಒತ್ತಾಯದಿಂದ ಗಾಂಧೀ ದೇಹ ಪರೀಕ್ಷೆಗೆ ಅನುಮತಿಯಾಚಿಸಿದ್ದಾರೆ; ಸರಕಾರದ ಒಪ್ಪಿಗೆ ದೊರೆತಿದೆ. ಪಂಡಿತ ಮಾಲವೀಯರು, ಗಾಂಧೀ ಗಫರ್‌ಖಾನರ ಆರೋಗ್ಯ ಲಾಭಕ್ಕಾಗಿ ದೇಶವ್ಯಾಪೀ ಸಾಮೂಹಿಕ ಪ್ರಾರ್ಥನೆಗಳನ್ನು ನಡೆಸುವಂತೆ ವಿನಂತಿಸಿಕೊಂಡಿದ್ದಾರೆ. ‘ಕಠಿಣ ಕಾಹಿಲೆಯ ದೆಸೆಯಿಂದಾದರೂ ಗಾಂಧಿಜೀಯನ್ನು ಬಿಡುಗಡೆ ಮಾಡಬಹುದೆ?’—ಎಂದು ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಬಂದಾಗ, ನೆಪ ಮಾತ್ರದ ವೇದನೆಗಾಗಿ ನಾಜೀ ಪಕ್ಷಪಾತಿ ಮೋಸ್ಲಯನ್ನು ಬಿಡುಗಡೆ ಮಾಡಿದ್ದ ಬ್ರಿಟಿಷ್ ಸರಕಾರದ ಪರವಾಗಿ ಮಿ. ಅಮೆರಿ ‘ಸದ್ಯಕ್ಕಂತೂ ಕಠಿಣ ಸ್ಥಿತಿಯಲ್ಲ’ ಎಂದುತ್ತರ ಕೊಟ್ಟಿದ್ದಾರೆ. ಸರಕಾರಕ್ಕೊಂದು ಪರಿಸ್ಥಿತಿ ಕಠಿಣವಾಗಿ ಕಾಣಬೇಕಾದರೆ ಅಮೆರಿಯವರ ಕಂಠನಾಳ ಬಲಗುಂದಬೇಕು ಹೊರತು ಮಹಾತ್ಮರ ರಕ್ತ ಕುಂದಿದರೆ ಸಾಲದು!

ಗಡಿನಾಡು ಗಾಂಧಿಯ ಕಾಹಿಲೆ

ಪೇಶಾವರದ ಹರಿಪುರ ಜೈಲಲ್ಲಿರುವ ಖಾನ್ ಅಬ್ದುಲ್ ಗಫರ್‌ಖಾನರೂ ಕಠಿಣ ಕಾಹಿಲೆಯಲ್ಲಿದ್ದಾರೆ. ಅವರ ಅಣ್ಣ ಡಾ। ಖಾನ್ ಸಾಹೇಬರು ತಮ್ಮನ ಇಬ್ಬರು ಮಕ್ಕಳನ್ನು ಕರಕೊಂಡು ಸಂದರ್ಶನೆಗಾಗಿ ಧಾವಿಸಿದ್ದಾರೆ. ಇಂತಹ ಸ್ಥಿತಿಯಲ್ಲಿಯೂ ರಾಷ್ಟ್ರ ಪ್ರಮುಖರಿಗೆ ಬಿಡುಗಡೆಯಿಲ್ಲವೆ? ದೈಹಿಕ ಅನಾರೋಗ್ಯದಿಂದ ಮಂಚ ಹಿಡಿದವರನ್ನು ಬಿಡುಗಡೆ ಮಾಡಿದರೂ, ಅವರು ಮಾನಸಿಕ ಅಂಟುರೋಗಗಳನ್ನು ದೇಶ ತುಂಬಾ ಹಬ್ಬಿಸಬಹುದೆಂದು ಸರಕಾರಕ್ಕೆ ಭಯವೇ? ಎಲ್ಲಕ್ಕಿಂತ ಮೊದಲು ಚಿಕಿತ್ಸೆಯಾಗಬೇಕಾದುದು ಸರಕಾರದ ಸಂದೇಹ ರೋಗಕ್ಕೇನೆ!

ಪ್ರಕಟಣೆ.

P. M. Kunhi Raman, Manager,
Parassini Madappura Temple,
P. O. Parassinikkatavu
(Via) Pappinisserri.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ--- ಪರಶಿನಿ ಕಡವು ದೇವಸ್ಥಾನದಿಂದ ಮಾಡುವ ಬಿನ್ನಹ.

ಪರಶಿನಿ ಕಡವು ಮುತ್ತಪ್ಪ ದೇವರಿಗೆ ಸ್ವತಃ ಬಂದು ಹರಿಕೆ ವಗೈರೆ ತಲುಪಿಸುವದಕ್ಕೆ ಅನಾನುಕೂಲವಾದಲ್ಲ ನಿಂಮ ಹರಿಕೆ ವಗೈರೆಯನ್ನು ಮೇಲ್ಕಂಡ ವಿಳಾಸಕ್ಕೆ ಮಣಿಯಾರ್ಡರ್ ಮೂಲಕ ತಲುಪಿಸುವದು. ಬೇರೆ ಯಾರ ಕೈಯಲ್ಲೂ ಕಳುಹಿಸಬೇಡವಾಗಿ ಪ್ರಾರ್ಥನೆ.

ಪಿ. ಯಂ. ಕುನ್ನಿರಾಮನ್,
ಮನೇಜರ್.

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction
Also a sovereign remedy for diarrhoea, Stomachache, Vomiting and Nausea
BHUVANENDRA PRODUCTS Ltd.

“ಭುವನೇಂದ್ರ”
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 4ರಿಂದ ೬ ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ.

The Pangal Nayak Bank Limited.

(Incorporated in 1920.)

Registered Office: Court Road, UDIPI.

Branches at — Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public.

For business proper please enquire at any one of our Offices.

15th April 1944.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಬೊಂಬಾಯಿ

ಚೀಫ್ ಏಜನ್ಸಿ ಆಫೀಸು:— ಉಡುಪಿ.

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ

ನಿಮ್ಮ ಮತ್ತು ನಿಮ್ಮ ಕುಟುಂಬದ ಭಾವೀ ಕಲ್ಯಾಣಕ್ಕಾಗಿ.

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರ ಬೇಕಾಗಿದ್ದಾರೆ.

ಪಿ. ಡಿ. ನಾನಯ್ಯ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Co. Ltd., Bombay.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ.— ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಚೊಕ್ಕಪ್ಪ ಸಾಮಾನುಗಳವೆ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೦ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ**

FOR SAFETY & SERVICE

THE VIJAYA BANK, LTD.,

Head office: MANGALORE.

Branches at:— Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ

ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು:— ಮಂಗಳೂರು.

ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.

REGD

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವದು, ಚೇಳು ವಿಷ ಮುಂತಾದ ಚಿನ್ನೆ ವಕ್ಕಣಾತ ವೇದನೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ. ಹುಳುಕಟ್ಟಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2—8—0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. of Mysore.
Certified by the Agent of the Govt of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6 Estd. 1921 ಸ್ಥಾಪನೆ.

1944ನೇ ಜನವರಿಯಿಂದ
ಮೂರನೆ ಸಂಪುಟಾರಂಭ
ವಾಗಿದೆ.

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ
ವಾರ್ಷಿಕ ಚಂದಾ ರೂ. 3-0-0
ಬಿಡಿ ಪ್ರತಿಗೆ ರೂ. 0-4-0
ಮಾದರಿ ಪ್ರತಿಗೆ ಐದಾಣೆ
ಸ್ಟಾಂಪಿನೊಂದಿಗೆ ಬರೆಯುವುದು:
'PRAKASHINI'
NAVAYUGA PRESS
UDIPI

NAVAYUGA
ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೩೬

FOUNDER
Sri. A. B. Shetty

Vol. 24
No. 36

NAVAYUGA— Kannada Weekly —UDIPI, S. I.

ಉಡುಪಿ • 11—5—1944 • ಮಂಗಳೂರು

ANTARANGA
UDIPI
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ.

The Canara Mutual Assurance Co., Ltd.

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman

UDIPI, 3-4-1944.

T. R. A. Pai,
MANAGING DIRECTOR

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸವಿಾಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.
ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ಸೇಟನ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು:-
ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್
ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurv da Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅವಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.
— ಎಂ. ಗಣಪಯ್ಯ ಎಂಡ್ ಸನ್ಸ್. —
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬರದಲ್ಲಿ ರೋಗಗಳಿಗೆ ತಕ್ಕ ಔಷಧ ... ಬರೆಯಿರಿ.

ಕತೆ ಕಾದಂಬರಿಗಳು—ಕವನ,—ನಾಟಕಗಳು
ಯಾವ ಪುಸ್ತಕ ಬೇಕಾದರೂ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಹಿಡಿದುದು—
ತಾ 9—8—42ರಲ್ಲಿ

ಬಿಟ್ಟದು—
ತಾ 6—5—44ರಲ್ಲಿ

ಮಹಾತ್ಮಾಜೀಯ ಬಿಡುಗಡೆ

★

ಇದೇ ಮೇ ತಾ 6ನೇ ಶನಿವಾರ ಮುಂಜಾನೆ 8ಕ್ಕೆ ಮಹಾತ್ಮಾಜೀಯವರು ಹಿಂದೀ ಸರಕಾರದ ಆಜ್ಞೆ ಮೇರೆಗೆ ಬಿಡಲ್ಪಟ್ಟರು.

1942ನೇ ಅಗೋಸ್ತು 9ರಲ್ಲಿ ದಸ್ತಗಿರಿಯಾಗಿ ಪೂನೆಯ ಆಗಾಖಾನ್ ಅರಮನೆಯೊಳಗೆ ಪ್ರವೇಶಿಸಿದ್ದ 'ಓಟನ್ಸೂ ಗಾಂಡಿ' 21 ತಿಂಗಳ ಬಳಿಕ ಪ್ರಾಣಾಪತ್ತಿನ ಕಾಯಿಲೆಯೊಂದರ ವಿನಹಾ ಬೇರಾವ ನಿರ್ಬಂಧವೂ ಇಲ್ಲದೆ ಸ್ವತಂತ್ರ ವ್ಯಕ್ತಿಯಾಗಿ ಹೊರ ಬಂದರು.

ಬಿಡುಗಡೆಯ ಸಂಬಂಧವಾಗಿ ಅದೇ ದಿನ ಹೊರಬಿದ್ದ ಹಿಂದೀ ಸರಕಾರದ ಪ್ರಕಟಣೆ ಹೀಗಿದೆ "ಗಾಂಧಿಯವರ ಆರೋಗ್ಯ ಸಂಬಂಧದ ಡಾಕ್ಟರೀ ವರದಿಗಳ ಆಧಾರದಿಂದ ಸರಕಾರವು ಅವರನ್ನು ನಿಶ್ಶರ್ತವಾಗಿ ಬಿಡುಗಡೆಮಾಡಲು ನಿರ್ಧರಿಸಿದೆ. ಕೇವಲ ವೈದ್ಯಕೀಯ ಕಾರಣಕ್ಕಾಗಿ ಈ ನಿರ್ಧಾರವನ್ನು ಕೈಕೊಳ್ಳಲಾಗಿದೆ. ಬಿಡುಗಡೆಯು ಮೇ ತಾ 6ನೇ ಮುಂಜಾನೆ 8 ಘಂಟೆಗೆ ನಡೆಯುವದು'

ಒಳಗಿನಿಂದ ಹೊರಗೆ

ತಾ 6ರ ಅತಿ ಮುಂಜಾನೆಯಲ್ಲೇ ಆಗ ಖಾನ್ ಅರಮನೆಯ ಮುಂಭಾಗದಲ್ಲಿ ನೆರೆದು ಆತುರದಿಂದ ಕಾಯುತ್ತಿದ್ದ ಜನತಂಡದ ಪಾಲಿಗೆ ಆ ಮುಹೂರ್ತವು ದೀಪದರ್ಶನದ ಸುಪ್ರಭಾತವೆಂಬಂತೆ ಕಾಣುತ್ತಿತ್ತು. ಸರಿ 7—30ಕ್ಕೆ ಜಿಲ್ಲಾ ಮಜಿಸ್ಟ್ರೇಟ್ ಮತ್ತು ಪೋಲೀಸ್ ಸುಪರಿಂಟೆಂಡೆಂಟರು ಆಗಾಖಾನ್ ಅರಮನೆಯನ್ನು ಪ್ರವೇಶಿಸಿದರು. ಅವರನ್ನನುಸರಿಸಿ ಜೈಲುಗಳ ಇನ್ಸ್ಪೆಕ್ಟರ್ ಜನರಲರಾದ ಕರ್ನಲ್ ಭಂಡಾರಿಯವರೂ ಆಗಮಿಸಿದರು. ಸೂಚನೆ ದೊರೆಯೊಡನೆ ಮಹಾತ್ಮಾಜೀಯವರು ಮಹದೇವ ದೇಸಾಯಿ ಮತ್ತು ಕಸ್ತೂರಿಬಾ ದಹನ ಕ್ರಿಯೆ ನಡೆದಲ್ಲಿಗೆ ಹೋಗಿ ತನ್ನ ಕೊನೆಯ ಪುಷ್ಪಗಳನ್ನು ಸಮರ್ಪಿಸಿದರು. ಸರಿ 8 ಘಂಟೆಗೆ ಡಾಕ್ಟರ್ ಸುಶೀಲಾ ನಾಯರರೊಂದಿಗೆ ಗಾಂಧಿಜೀ ಗೇಟಿನ ಬಾಗಿಲನ್ನು ದಾಟಿ ಬರುತ್ತಿರುವದು ಕಂಡು ಬಂತು, ಹೆಜ್ಜೆಯು, ಅದು ಭಾರತದ ಪಾಲಿನ ಮಹೋದಯ. ತಮ್ಮ ಹೃದಯವನ್ನು ಕಣ್ಣಿಗೆ ತಂದು ಬಾಪೂಜೀಯನ್ನು ಕಾಣುತ್ತಿದ್ದ ಜನ ಸಂದಣಿ ಪದ್ಧತಿಯ 'ಜೈಕಾರ'ವನ್ನು ಕೂಡಾ ಹಾಕಲಿಲ್ಲ. ರೋಗಿ ನಾಯಕನ ನಯವಾದ ಲೋಕನವಲ್ಲ ಅದು ಅಷ್ಟೂ ಮೈಮರೆತಿತ್ತು! ಜತೆಯಲ್ಲೇ ಇದ್ದ ಕರ್ನಲ್ ಭಂಡಾರಿಗಳೊಡನೆ ಅವರ ಕಾರನ್ನು ಗಾಂಧಿಜೀ ಹತ್ತಿದರು. ಕಾರು ಸೀದಾ ಪರ್ಣಕುಟಿಯ ಕಡೆಗೆ ಧಾವಿಸಿತು.

ಪರ್ಣಕುಟಿಯಲ್ಲಿ

ಸ್ವಾಮಿ ಆನಂದ, ಶ್ರೀ ಶಾಂತಿ ಕುಮಾರ ಮೊರಾರ್ಜಿ, ಶ್ರೀ ಜಮುನಾದಾಸ್ ಗಾಂಧಿ ಮತ್ತು ಬೊಂಬಾಯಿ ಮೇಯರ್ ಶ್ರೀ ನಾಗಿನದಾಸ್ ಮಾಸ್ತರರು ಪರ್ಣ ಕುಟಿಯಲ್ಲಿ ಕಾದು ನಿಂತಿದ್ದರು. ರಾಜರಸ್ತೆಯ ಜನಸಂದಣಿಯನ್ನು ತಪ್ಪಿಸಿಕೊಳ್ಳುವದಕ್ಕಾಗಿ ಗಾಂಧಿಜೀಯ ಕಾರನ್ನು ಅಡ್ಡದಾರಿಯಿಂದ ಸುತ್ತಾಗಿ ಪರ್ಣಕುಟಿಗೆ ತರಲಾಯಿತು. ಮಹಾತ್ಮಾಜೀ ದಣಿದು ಕಂಗಾಲಾಗಿದ್ದುದನ್ನು ಕಂಡೊಡನೆ ಅರಿಯಬಹುದಾಗಿದ್ದರೂ ಅವರು ಅತ್ಯುತ್ಸಾಹಪಲ್ಲಿದ್ದರು. ಕುಟಿಯಲ್ಲಿ ಕಾಯುತ್ತಿದ್ದವರು ಗೇಟಿನಲ್ಲೇ ಸ್ವಾಗತಿಸಿ ಕರೆದೊಯ್ದರು. ಲೇಡಿ ಠಾಕರ್ಸೆಯವರನ್ನು ಧರಿಸಿಕೊಂಡು ಪರ್ಣಕುಟಿಯ ಮೆಟ್ಟಲುಗಳನ್ನು ಒಂದೊಂದಾಗಿ ಹತ್ತುತ್ತಾ, ಹತ್ತು ವರುಷಗಳಿಗೆ ಮೊದಲು ತಾನು 21 ದಿನಗಳ ಉಪವಾಸ ಕುಳಿತಿದ್ದ ಅಲ್ಲಿಯ ಪೂರ್ವಪರಿಚಿತ ಕೋಣೆಯೊಳಗೆ ಮಹಾತ್ಮಾಜೀ ಪ್ರವೇಶಿಸಿದರು. ಕೋಣೆ ಹೊಕ್ಕ ಸ್ವಲ್ಪ ಹೊತ್ತಿನಲ್ಲೇ ಮುಂಜಾನೆಯ ವೈದ್ಯಕೀಯ ಸೇವೆ, ಆ ಮೇಲೆ ಡಾಕ್ಟರರಿಂದ ದೇಹ ಪರೀಕ್ಷೆ ನಡೆದು ಪೂರ್ಣ ವಿಶ್ರಾಂತಿ ಪಡಕೊಳ್ಳುವ ಸಲಹೆ ದೊರೆಯಿತು. ಮಹಾತ್ಮಾಜೀಯೊಂದಿಗೆ ಬಿಡುಗಡೆ ಹೊಂದಿದ ಡಾ। ಗಿಲ್ಡರ್, ಶ್ರೀ ಪ್ಯಾರೆಲಾಲ್, ಮತ್ತು ಮಿಸ್ ಮೀರಾ ಬೆನ್ನರೂ ಗಾಂಧಿಜೀ ಹೊಕ್ಕ ಹದಿನೈದೇ ಮಿನಿಟುಗಳೊಳಗೆ ಪರ್ಣಕುಟಿಗೆ ಹೊಕ್ಕರು.

ಪ್ರಥಮ ಸ್ವತಂತ್ರ ಕರಪತ್ರ

ಗಾಂಧಿಜೀ ಪರ್ಣಕುಟಿಗೆ ಬಂದು ಮುಟ್ಟಿದ ಅರ್ಧತಾಸಿನ ನಂತರ ಅವರ ದೇಹಸ್ಥಿತಿಯನ್ನು ತಿಳಿಸುವ ಪ್ರಥಮ ಸ್ವತಂತ್ರ 'ಆರೋಗ್ಯಕರ ಪತ್ರ' ಹೊರಟಿತು. 1942 ನೇ ಆಗೋಸ್ತು ಪ್ರಥಮವಾರದ ಇದು ವರೆಗೂ ತಮ್ಮ ಏಕಮಾತ್ರ ಹೇಳಿಯ ರೋಗಿಯಾಗಿದ್ದ ಗಾಂಧಿಜೀಯು ಪ್ರತಿಯೊಂದು ನರಸಂದಿನ, ಪ್ರತಿಯೊಂದು ರಕ್ತಬಿಂದುವಿನ ಪರಿಚಯವುಳ್ಳ ಡಾ। ಎಮ್. ಡಿ. ಡಿ ಗಿಲ್ಡರ್ ಮತ್ತು ಡಾ। ಸುಶೀಲಾ ನಾಯರರ ಸಹಿಯುಳ್ಳ ಪ್ರಕಟಣೆಯು:—ಮಹಾತ್ಮಾ ಗಾಂಧಿಯವರು ಕಳೆದ ಎಪ್ರಿಲ್ 10ರಿಂದಲೇ ಪೂರ್ಣ ಸತ್ವಹೀನರಾಗಿರುವಂತೆ ಕಾಣುತ್ತಿದ್ದರು. ಎಪ್ರಿಲ್ 11ರಲ್ಲಿ ಅಕಸ್ಮಾತ್ ಛಳಿಜ್ವರ ಕಠಿಣ ಜ್ವರ ಕಾಣಿಸಿಕೊಂಡಿತು. ಮರುದಿನವೂ ಅವರ ಮೈ ಕಾಯುತ್ತಿತ್ತಲ್ಲದೆ ತಾ 16ರಲ್ಲಿ ಜ್ವರ ವಿಪರೀತಕ್ಕೇರಿತು, ಛಳಿಯೂ ಅತಿರೇಕವಾಯಿತು. ಮೈಯಲ್ಲಿ ಜ್ವರವೇರಿದಾಗಲೆಲ್ಲಾ ಅವರಿಗೆ ಮತಿಭ್ರಂಶವುಂಟಾಗುತ್ತಿತ್ತು. ರಕ್ತದಲ್ಲಿ ಎರಡು ದಿನಕ್ಕೊಮ್ಮೆಯ ಸರ್ತಿಮಲೇರಿಯಾದ ಭೀಕರ ಚಿಹ್ನೆ ಕಾಣುತ್ತಿತ್ತು. ಈ ಜ್ವರದಾಹದಿಂದಾಗಿ ಅವರ ರಕ್ತದೊತ್ತಡವಿಳಿಮುಖವಾಗ ತ್ವರಿತ ತೀರಾ ಮಂದತ್ವಕ್ಕಿಳಿಯಿತ್ತು. ಬಂತು ಅವರಲ್ಲಿ ರಕ್ತಾಭಾವವೂ ಬಾಧುದಲ್ಲದ ಮೂತ್ರಪಿಂಡ ಕ್ರಿಯೆಯು ಬಹಳ ದುರ್ಬಲಗೊಂಡಿದೆ. ಅವರು ಶರೀರಾ ನಿತ್ರಾಣಗೊಂಡಿದ್ದಾರೆ, ಉತ್ಸಾಹದಲ್ಲಿದ್ದಾರಾದರೂ ದೇಹ ಮತ್ತು ಬುದ್ಧಿಯ ಬಲ ಬರಿದಾಗಿದೆ. ದರ್ಶನಾತುರರಲ್ಲಿರುವ ಅವರ ಮಿತ್ರರು ಹಾಗೂ ಅನುಯಾಯಿಗಳು ಈ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕೆಲಕಾಲದ ವರೆಗೆ ಅವರಿಗಾವ ತೊಂದರೆಯನ್ನೂ ಕೊಡಬಾರದು'!

ಆರೋಗ್ಯ ಮರುಸಂಪಾದನೆ ಪ್ರಥಮ ಕಾರ್ಯ

'ನನ್ನ ಆರೋಗ್ಯವನ್ನು ಪುನ ತುಂಬಿಸಿಕೊಳ್ಳುವದೇ ನನ್ನ ಮೊದಲ ಕರ್ತವ್ಯ' ಎಂಬುದೇ ಬಿಡುಗಡೆಗಾಗಿ ಅಭಿನಂದನ ಸಲ್ಲಿಸಿದ ಮಿತ್ರರಿದಿರು ಆ ಮುಂಜಾನೆ ಗಾಂಧಿಜೀ ಬಾಯಿಂದ ಬಂದ ಮೊದಲ ಸಂದೇಶ. ಅಕಸ್ಮಾತ್ ಬಿಡುಗಡೆಯಿಂದಪ್ಪ ಉಲ್ಲಾಸ ಮತ್ತು ಪರ್ಣಕುಟಿ ಪ್ರಯಾಣದ ಆಯಾಸಗಳು, ಹಿಂದಿನ ದಿನದ ವರೆಗೂ ಮಂದವಾಗಿದ್ದ ಗಾಂಧಿಜೀಯ ರಕ್ತದೊತ್ತಡವನ್ನು ಒಮ್ಮೆಗೇ ಹೆಚ್ಚಿಸಿವೆ. ಪರ್ಣಕುಟಿಗೆ ಬಂದೊಡನೆ ಡಾ। ಮೆಹತರಿಂದ ಆರೋಗ್ಯ ಸಲಹೆ ಪಡೆದ, ಒಂದು ಗ್ಲಾಸು ಕಿತ್ತಳೆ ರಸವನ್ನು ಕುಡಿದುಕೊಂಡರು. ಆ ಮೇಲೆ ಪರ್ಣಕುಟಿಗೆ ಹೋದವರು, ಕಟ್ಟಡದ ತಂಪು ಮೂಲೆಯೊಂದರಲ್ಲಿ ಪವಡಿಸಿ ವಿಶ್ರಾಂತಿ ಪಡೆಯುತ್ತಿರುವ ಗಾಂಧಿಜೀಯನ್ನು ಕಾಣಬಹುದಾಗಿದ್ದಿತು. ಅಲ್ಲಿಯೂ ಗಾಂಧಿಜೀ ತನ್ನಂತಹ ಮತ್ತೊಬ್ಬ ಹಳಬ ಶ್ರೀ ಎ. ವಿ. ಠಕ್ಕರರೊಡನೆ ತಮಾಷೆಯಾಡುತ್ತಿದ್ದರು. ನಿಮ್ಮ 'ಕಸ್ತೂರಿಬಾ ಸ್ಮಾರಕ ನಿಧಿಯ' ಕಾರ್ಯ ಹೇಗೆ ಸಾಗುತ್ತಿದೆ?'—ಎಂದು ಗಾಂಧಿಜೀ ಪ್ರಶ್ನಿಸಿದರು. 'ನಿಮ್ಮ ಈ ಬಿಡುಗಡೆಯ ಸಂತೋಷಾರ್ಥವಾಗಿ ಇನ್ನೊಂದು 75ಲಕ್ಷದ ನಿಧಿಯನ್ನು ಪ್ರಾರಂಭಿಸಿ ನಿಮ್ಮ ಮುಂದಿನ ಜನ್ಮದಿನದಲ್ಲಿ ಅಥವಾ ಅದಕ್ಕೂ ಮೊದಲು ನಿಮಗದನ್ನು ಸಮರ್ಪಿಸಬೇಕೆಂಬ ನಮ್ಮ ಬಯಕೆಗೇನೆನ್ನುವಿರಿ?'— ಎಂದು ಠಕ್ಕರ್‌ಬಾಪಾ ವಿಚಾರಿಸಿದಾಗ ಗಾಂಧಿಜೀ ಬರಿಯ ನಗೆ ಸೂಸಿ ಸುಮ್ಮಗಾದರು. ಪರ್ಣಕುಟಿಯಲ್ಲಿ ದೀರ್ಘಾವಧಿ ನಿಲ್ಲುವ ಬಯಕೆ ಗಾಂಧಿಯವರದಲ್ಲ, ಅವರು ಆರೋಗ್ಯ ಹೊಂದಬೇಕಾದರೆ ಕೊನೆಯ ಪಕ್ಷ 15 ದಿನಗಳಾದರೂ ಬೇಕಾಗಬಹುದೆಂದು ಈಗಿನ ಊಹೆ. ಡಾಕ್ಟರರ ಅನುಮತಿ ದೊರೆತೊಡನೆಯೇ ಬೊಂಬಾಯಿಗೆ ಹೋಗಬೇಕೆಂದು ಮಹಾತ್ಮರಿಚ್ಛೆಯಿದೆ. ಪರ್ಣಕುಟಿಗೆ ಲೇಡಿ ಠಾಕರ್ಸೆಯವರೇ ಯಜಮಾನ್ತಿಯಾಗಿ ನಿಂತು, ಪ್ರವೇಶಕ್ಕೆ ಪ್ರಬಲ ಪ್ರತಿಬಂಧವೊಡ್ಡಿದ್ದಾರೆ. ಸಮ್ಮತಿ ಪಡೆದ ಸಂದರ್ಶಕರಾದರೂ ಪೂರ್ವಾಹ್ನ, ಅಪರಾಹ್ನಗಳಲ್ಲಿ, ಇಂತಿಷ್ಟೇ ಘಂಟೆಯೊಳಗೆ ಬಂದು ಹೋಗತಕ್ಕದ್ದೆಂಬ ನಿರ್ಬಂಧವಿದೆ.

ಆ ದಿನವಿಡೀ

ಸಂದರ್ಶಕರು ತಂಡ ತಂಡವಾಗಿ ಪರ್ಣಕುಟಿಗೆ ಬಂದು, ಡಾಕ್ಟರರ ನಿರ್ಬಂಧದಿಂದಾಗಿ ಗಾಂಧಿಜೀಯ ದರ್ಶನ ಸಿಗದೆ ಮರಳಬೇಕಾಯಿತು. ಅವರ ಕಾರ್ಯದರ್ಶಿ ಶ್ರೀ ಪ್ಯಾರೆಲಾಲರು ಹೀಗೆ ನಿರಾಶೆಗೊಂಡ ವರದಿಗಾರರೊಡನೆ ಕ್ಷಮಾಪಣೆ ಬೇಡುತ್ತಾ ಹೀಗೆಂದರು "ಸದ್ಯಕ್ಕೆ ನನ್ನನ್ನು ಕ್ಷಮಿಸಿರಿ. ಗಾಂಧಿಜೀ ಡಾಕ್ಟರರ ಸೂಚನೆಗಳನ್ನು ಶಿರಸಾವಹಿಸಿದ್ದಾರಾದರೂ ಅವರ ಭೀತಿ ಮತ್ತು ಆಸೆಗಳನ್ನು ಒಪ್ಪಿಕೊಂಡಿಲ್ಲ. ಡಾಕ್ಟರರ ಸಲಹೆ ಮೇಲನೆಯಲ್ಲಿ ವರದಿಗಾರರು ಮತ್ತು ಸಾರ್ವಜನಿಕರು ಅವರೊಡನೆ ಸಹಕರಿಸಿದರೆ ದೇವರ ದಯೆಯಿಂದ ಅವರು ಡಾಕ್ಟರರ ಹೆದರಿಕೆಗಳನ್ನೆಲ್ಲಾ ಹುಸಿಗೊಳಿಸಲಿದ್ದಾರೆ". ಬೊಂಬಾಯಿ ವ್ಯಾಪಾರೀ ವರ್ಗದವರು ಶ್ರೀ ದೇವಕರಣ ನಾನ್ಜೀಯವರ ಮೂಲಕ ಕಳುಹಿಸಿದ್ದ ಅಭಿನಂದನೆಗಾಗಿ ಕೃತಜ್ಞತೆ ಸೂಚಿಸುತ್ತಾ ಗಾಂಧಿಜೀಯೆಂದರು "ನಾನು ಕ್ಷಿಪ್ರದಲ್ಲೇ ಗುಣಹೊಂದುವೆನೆಂದು ನನಗೆ ಭರ

(೭ನೇ ಪುಟ ನೋಡಿರಿ)

The Victory Club
Both Vegetarian & Non-vegetarian dishes
Old Post office Building,
VICTORY CLUB ROAD, UDIPI.
(Furnishing Homes & Estates Ltd.)
ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.
ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.
ವಿಕ್ಟರಿ ಕ್ಲಬ್
ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.
ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

ಯುದ್ಧಗತಿ

ದ್ವಿತೀಯ ರಂಗವೇಕೆ ಗಣಪತಿ ಮದುವೆಯಾಗಿದೆ?

ಯುರೋಪು ಧಾಳಿಯಿನ್ನೂ ಆರಂಭವಾಗಿಲ್ಲ. ಇಂಗ್ಲಾಂಡು ಕರಾವಳಿಯ ಸಿದ್ಧತೆ ಮತ್ತು ಜರ್ಮನ್ ವಕ್ತಾರರ ಭವಿಷದ್ವಾಣಿಗಳ ಮೇಲಿಂದ ಅದು ಪ್ರಾರಂಭವಾಗಿ ವಾರ ಕಳೆಯಬೇಕಿದ್ದಿತು. ಆದರೆ ಅದು ಮಿತ್ರರ ಪಾಲಿನ ಜೀವನ್ಮರಣ ನಿರ್ಧಾರದ ಮಹಾ ಸಾಹಸ; ಆದರೆ ಮುಂಜಾಗರೂಕತೆಗಾಗಿ ತಾಳ್ಮೆ ತಪ್ಪುವಷ್ಟು ಸಮಯವನ್ನಾದರೂ ಅವರು ದೂಡಬಲ್ಲರು, ಎಂಬುದೀಗ ಮನವರಿಕೆಯಾಗುತ್ತಿದೆ. ಲಂಡನಿನಲ್ಲಿ ಪ್ರಧಾನಿ ಚರ್ಚಿಲ್ಲರ ನೇತೃತ್ವದಲ್ಲಿ ಕಳೆದವಾರ ಜರುಗಿದ ಸಾಮ್ರಾಜ್ಯ ಪ್ರಧಾನಿಗಳ ಸಮ್ಮೇಲನವೂ ದ್ವಿತೀಯ ರಂಗಕ್ಕೆ ಒಮ್ಮುಖದ ಬಂಬಲವೀಯುವದನ್ನೇ ತನ್ನ ಮುಖ್ಯ ಹಾಗೂ ಗುಪ್ತ ಕಾರ್ಯಕ್ರಮವಾಗಿ ಇಟ್ಟುಕೊಂಡಿದ್ದಿತು. ಅಂತೂ ಅದಿನ್ನೂ ತಯಾರಾಗಿಲ್ಲದ್ದು, ಆದರೆ ಅನತಿ ದೂರದಲ್ಲೇ ಆಕಸ್ಮಿಕವಾಗಿ ಅದರ ಆರಂಭವಾರ್ತೆಯನ್ನು ನಾವು ಕೇಳಲಿದ್ದೇವೆ.

ಜರ್ಮನ್ ಕುಯುಕ್ತಿ

ಹಿಂದಿನ ವಾರಾಂತ್ಯದಲ್ಲಿ ಸ್ವೀಡಿಶ್ ಪತ್ರಿಕೆಯೊಂದು ಈ ಸಂಬಂಧವಾಗಿ ಸ್ಫೋಟಕ ಸಿಡಿಗುಂಡೊಂದನ್ನು ಹಾರಿಸಿತು. 'ಡೆನ್ಮಾರ್ಕಿನ ಮೇಲೆ ನುಗ್ಗುವ ಮೂಲಕ ದ್ವಿತೀಯರಂಗವು ಪ್ರಾರಂಭಿಸಿತು' ಎಂದು ಆ ಪತ್ರಿಕೆಯ ಸುದ್ದಿ. ಈ ಸುದ್ದಿಯ ಉಗಮಸ್ಥಾನ ಫಿನ್ಲೆಂಡು ಆದುದರಿಂದ ಅದು ಜರ್ಮನರ ಸ್ವಕಪೋಲ ಕಲ್ಪನೆಯೆಂಬುದು ಖಂಡಿತ. ಇದು ನಾಜಿಗಳಿಗೀಗ ಬೀಳುತ್ತಿರುವ 'ಕಂಸಸ್ವಪ್ನ'ವೆನ್ನಬಹುದೆ? ಅಲ್ಲ. ಉದ್ದೇಶಪೂರ್ವಕ ಅವರು ಹೂಡಿದ ಯುಕ್ತಿಯಿದು. ಹೀಗೆ ಊಹಿಸಿ ಹೇಳಿಬಿಟ್ಟರೆ, ನಿಜವಾರ್ತೆಯು ಮಿತ್ರಪಾಳಯದಿಂದ ಬರಬಹುವೆಂಬುದು ಇಂತಹ ಕಲ್ಪನಾ ಕಥೆಗಳ ಒಂದು ಉದ್ದೇಶ; ಎರಡನೆಯದಾಗಿ 'ದ್ವಿತೀಯ ರಂಗಾರಂಭ'ವಾಯಿತೆಂದು ಧೈರ್ಯಗೊಂಡು, ನಾಜೀ ಆಕ್ರಮಿತ ಯುರೋಪಿನ ಗುಪ್ತ ಚಳವಳಗಾರರು ತಲೆಹೊರಹಾಕುವಂತೆ ಮಾಡಿ ಧ್ವಂಸಗೊಳಿಸಬೇಕೆಂಬ ಉದ್ದೇಶವೂ ಅದರಲ್ಲಿದ್ದಿತು. ಅದನ್ನರಿತೇ ಮಿತ್ರ ಪಾಳಯದಿಂದ ಗೊರಿಲ್ಲಾ ವೀರರಿಗೆ ಎಚ್ಚರಿಕೆ ಹೋಗಿದೆ.

ಆಶ್ಚರ್ಯ ಕಾದಿದೆ?

ಆಕ್ರಮಿತ ಯುರೋಪು ಕರಾವಳಿಯ ಆ ತುದಿಯಿಂದ ಈ ತುದಿಯ ವರೆಗೂ ನಾಜಿಗಳು ಧಾಳಿ ಪ್ರತಿಭಟನೆಯ ಅಪೂರ್ವ ಸಿದ್ಧತೆ ಮಾಡಿಟ್ಟು ಕಾಯುತ್ತಿದ್ದಾರೆಂಬುದು ಖಂಡಿತ, ಇತ್ತೀಚೆಗಿನ ಘಟನೆಗಳಿಂದ ಅಖಿಲ ಯುರೋಪಿನ ನಾಡೀ ಬಡಿತವೇ ರಿದೆಯೆಂಬುದೂ ನಿಜ. ರಶ್ಯಾ ರಣರಂಗವು ನಾಜೀ ಸೇನೆಯ ಗಣನೀಯ ಭಾಗಕ್ಕೆ ಸ್ಮಶಾನವಾಗಿ ಪರಿಣಮಿಸಿದ್ದರೂ ಹಿಟ್ಲರರ ವಶದಲ್ಲೀಗ ಅವರು ಯುದ್ಧಕ್ಕಿಳಿಯುವಾಗ ಇದ್ದಷ್ಟೇ ಸೇನಾ ಬಲವುಳಿದಿದೆ ಎಂಬುದನ್ನು ಮಿತ್ರರು ಬಲ್ಲರು. ಮಿತ್ರರ ಅಗಾಧ ಸಿದ್ಧತೆಯನ್ನು ಮಿತ್ರರಿಗಿಂತಲೂ ಹೆಚ್ಚಾಗಿ ಜರ್ಮನರು ತೂಕಮಾಡಿರುವರು. ಪರಸ್ಪರರೊಳಗಿನ ಈ ಗೂಢ ಪರಿಚಯದಿಂದಾಗಿ ಮುಂದಿನ ಮಹಾ ಹೋರಾಟದಲ್ಲಿ ಯಾವ ಪಕ್ಷಕ್ಕೂ ಕೌತುಕವು ಕಾದಿಲ್ಲವೆನ್ನೋಣವೆ? ನಾಜೀ ಪ್ರಮುಖರು ಹೆದರಿಸುತ್ತಿದ್ದಾರೆ—ಯುರೋಪಿನಲ್ಲಿ ಕಾಲಿಟ್ಟ ಮಿತ್ರ ಸೇನೆಗಳಿಗೆ ಆಕಸ್ಮಿಕ ಆಶ್ಚರ್ಯಗಳು ಕಾದಿವೆ ಎನ್ನುತ್ತಿದ್ದಾರೆ!

ಗೋಬೆಲ್ಸ್-ರೋಮೆಲ್

'ಡಾಸ್‌ರೀಖ್' ಪತ್ರಿಕೆಯಲ್ಲಿ ಡಾ॥ ಗೋಬೆಲ್ಸನ ಜಾದುಕೋಲಿನಂತಿರುವ ಲೇಖನಿಯೆಳೆದ ಗೆರೆಗಳಿವು. "ವೈರಿಯು ಆಕ್ರಮಣ ಸಿದ್ಧತೆಗಳೆಲ್ಲಾ ಈಗ ಪೂರ್ಣಗೊಂಡಿವೆ ಎಂಬುದನ್ನು ನಾವು ಬಲ್ಲೆವು. ಯುರೋಪಿನ ಪ್ರಯಾಸಪೂರ್ಣ ಪ್ರಯಾಣವು ವಿರೋಧಿಯ ಊಹೆಗೆ ಸಿಲುಕದೇ ಅವನಿಗಾಗಿ ಕಾದಿರುವ ಅನೇಕಾಶ್ಚರ್ಯಗಳ ಪೂರ್ವ ಸೂಚನೆಯಾಗುವದು"- ಇದು ಜರ್ಮನ್ ಪ್ರಚಾರ ಮಂತ್ರಿಯ ಬಾಯಬೋಂಬು! "ನಮ್ಮ ತೋಳುಗಳಲ್ಲೀಗಲೂ ಕೆಲವು 'ಟ್ರಂಪ್‌ಕಾರ್ಡ'ಗಳುಳಿದಿವೆ. ಇತ್ತಂಡದ ಅನುಕೂಲತೆಗಳನ್ನು ಯಥಾರ್ಥವಾಗಿ ತೂಗಿ ನೋಡಿಯೇ, ನಾವು ಭರವಸೆ ಪಡಲು ಕಾರಣವಿದೆ ಎಂದು ತಿಳಿದಿದ್ದೇವೆ'-ಎಂದು ಗೋಬೆಲ್ಸ್‌ಆರ್ಭಿಡಿದ್ದಾನೆ. ದುರದೃಷ್ಟಪೀಡಿತ, ಆದರೆ ದುರ್ದಮನೀಯ ಸೇನಾನಿಯೆಂದು ಶತ್ರು ಮಿತ್ರ ಭೇದವಿಲ್ಲದೆ ಶ್ಲಾಘಿಸಲ್ಪಟ್ಟಿರುವ ಅಗ್ರಗಣ್ಯ ನಾಜೀ ಸೇನಾನಿ ಫೀಲ್ಡ್ ಮಾರ್ಶಲ್ ರೋಮೆಲನು, ಭೂಮಧ್ಯ ಸಮುದ್ರ ಕರಾವಳಿಯಲ್ಲಿ ತನಖೀ ಸಂಚಾರ ಮುಗಿಸಿ ಬಂದವನು, ನಾಜೀ ಕಮಾಂಡರಂಗಿತ್ತ ಭಾಷಣದಲ್ಲಂದಿದ್ದಾನೆ "ಅಸಿವಾರ್ಯವೆಂದು ಗಣಿಸಲ್ಪಟ್ಟಿರುವ ವಿರೋಧಿಯ ನಿಯೋಜಿತ ಧಾಳಿಯು ಹಲವು ಅನಿರೀಕ್ಷಿತ ಕೌತುಕಗಳನ್ನೂ ಕಾಣಲಿವೆ. ಪರಚ್ಯೂಟ್ ಮೊದಲಾದುವುಗಳ ಮೂಲಕ ಕರಾವಳಿಯ ಒಳಗಡೆಗಿಳಿಯುವ ವೈರಿತಂಡಗಳ ಮಟ್ಟಿಗಂತೂ ಈ ಮಾತು ವಿಶೇಷತಃ ಸತ್ಯ. ಜರ್ಮನ್ ಯೋಧನಿಗೆ ತನ್ನ ಹೋರಾಟ ವಿಧಾನಗಳು ತಿಳಿದೇ ಇವೆ" ಇನ್ನೂ ಕಾಲಗರ್ಭದಲ್ಲಿರುವ ದ್ವಿತೀಯ ರಂಗದ ಗರ್ಭದಲ್ಲಿ ಹಲವು ಅದ್ಭುತ, ಆಶ್ಚರ್ಯಗಳಡಗಿವೆ ಎಂಬುದಂತೂ ಖಂಡಿತ.

ರಣರಂಗಗಳಲ್ಲಿ

ಇನ್ನು ಒಂದೆರಡು ವಾರಗಳಲ್ಲೇ ಮಳೆಯಾರಂಭವಾಗಲಿದೆಯಾದರೂ ಅಸ್ಸಾಮು ರಣರಂಗದ ಕಾವು ಏರಬೇಕಾದಷ್ಟೇರಿಲ್ಲ. ಕೊಹಿಮಾದಲ್ಲಿ ಮಿತ್ರ ಸೇನೆಗಳೀಗ ಪಾಡಾಪಾಡಿ ಹೋರಾಟವಾರಂಭಿಸಿ ಜಪಾನರ ಕೈಯಿಂದ ಕೆಲವು ಸರಹದ್ದುಗಳನ್ನು ಬಿಡಿಸಿಕೊಂಡವೆಂಬ ವಾರ್ತೆಬಂದಿದೆ. ಇಂಫಾಲ್ ಹೋರಾಟದ ಸುದ್ದಿಯಿಲ್ಲ. ಚಿತ್ತಗಾಂಗ್-ಬರ್ಮಾಗಡಿಯ ಪಾಲೆಟ್ವಾವನ್ನು ಜಪಾನರು ವಶಪಡಿಸಿಕೊಂಡುದು ಅನಗತ್ಯವೆಂಬುದು ತೋರಿ ಬಿಟ್ಟುಬಂದೆವೆಂದು ಮಿತ್ರರಂದರೂ ಅರಕಾನಿನ ಬುಥಿಡಾಂಗಿನಿಂದ ಮಿತ್ರ ಸೇನೆ ಕಾಲ್ತೆಗೆದುದೇ ಮೊದಲಾದ ಕೆಲವು ಅಗಣ್ಯ ದೌರ್ಬಲ್ಯಗಳು ಗೋಚರಿಸಿವೆ. ಬಂಗಾಳಕೊಲ್ಲಿಯಲ್ಲಿ ಜಪಾನರ ಒಂದು ಡಿಸ್ಟ್ರೋಯರ್ ಮತ್ತು 2 ಸರಬರಾಯಿ ಹಡಗಗಳಿಗೆ ಜಲಸಮಾಧಿ ಕೊಟ್ಟ ಮಿತ್ರ ಸಾಹಸವು ಶ್ಲಾಘನೀಯ. ಅತ್ತ ಚೀನದಲ್ಲಿ ಪೀಪಿಂಗ್-ಹಾಂಕೋ ರೈಲ್ವೆ ಸ್ವಾಧೀನತೆಗಾಗಿ ಜಪಾನರು ಅತಿಪ್ರಬಲ ಹಾಗೂ ಜಯಶೀಲ ಧಾಳಿ ಹೂಡಿದ್ದಾರೆ; ಇದರಿಂದ ಚೈನದಲ್ಲಿ ಕಡಿದುಳಿದ ಪ್ರಮುಖ ನಾಡಿಯೊಂದನ್ನೇ ಜಪಾನರು ಸಂದು ತಪ್ಪಿಸಿದಂತಾಗುವದು. ಇಟೆಲಿಯಲ್ಲಿ 16ದಿನಗಳ ಸ್ತಬ್ಧತೆಯ ನಂತರ ಕಳೆದ ವಾರ ಸೆಬಸ್ತಪೋಲಿನ ಮೇಲೆ ಕೆಂಪು ಸೇನೆ ಪುನಃ ಧಾಳಿಯಾರಂಭಿಸಿದೆ. ಮಿತ್ರವಿಮಾನಗಳು ಆಕ್ರಮಿತ ಯುರೋಪನ್ನು ಬೋಂಬು ಹಾಕಿ ಮೃದಗೊಳಿಸುವ ಕಾರ್ಯ ಇನ್ನಷ್ಟು ಮುತವರ್ಜಿಯಿಂದ ಸಾಗಿದೆ.

ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನ,

ಮುಂದಾರ್ತಿ.

ಹೆಗ್ಗುಂಜೆ ಗ್ರಾಮ, ಉಡುಪಿ ತಾಲೂಕು, ಬಾರ್ಕೂರು ಪೋಸ್ಟು. ದ. ಕ.

ಟೆಂಡರ್ ನೋಟೀಸು.

ಮದ್ರಾಸ್ ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಬೋರ್ಡಿನ ಮೇಲ್ವಿಚಾರಕ್ಕೊಳಪಟ್ಟ ಮೇಲೆ ಸೂಚಿಸಲಾದ ಶ್ರೀ ಮುಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಸಂಬಂಧಪಟ್ಟ ವಿಶಿಷ್ಟ ಕಟ್ಟೋಣಗಳನ್ನು ಕಟ್ಟಿಸುವರೆ ಈಗ ತಾನೆ ಎಂಡೋಮೆಂಟ್ ಬೋರ್ಡಿನಿಂದ ಎಸ್ಟಿಮೇಟ್ ಮತ್ತು ಪ್ಲಾನುಗಳು ಮಂಜೂರಾಗಿ ಬಂದಿವೆ. ಸುಮಾರು 15,000 ರೂಪಾಯಿಗಳಿಗೆ ಮಿಕ್ಕದ ಈ ಕೆಲಸವನ್ನು ಕಂಟ್ರಾಕ್ಟು ವಹಿಸಿಕೊಳ್ಳಲಪೇಕ್ಷಿಸುವ ಉಮೇದ್ವಾರರು ಸೀಲು ಮಾಡಿದ ಟೆಂಡರುಗಳನ್ನು ತಾ 31-5-44ನೇ ಬುಧವಾರ ಸಂಜೆಯೊಳಗಾಗಿ ಆಡಳ್ತೆ ಮೊಕ್ತೇಸರರಿಗೆ ಕಳುಹಿಸಿಕೊಡೋಣಾಗಬೇಕು. ಐದು ವರುಷಗಳಲ್ಲಿ ಮುಗಿಸತಕ್ಕ ಆಯಾಯ ವರ್ಷದ ಪ್ರತ್ಯಪ್ರತ್ಯೇಕ ಕಟ್ಟೋಣಗಳ ಎಸ್ಟಿಮೇಟ್, ಪ್ಲಾನು ಶರ್ತ ಇತ್ಯಾದಿ ಅನುಭವವನ್ನು ದೇವಸ್ಥಾನದ ಆಫೀಸಿನಲ್ಲಿ ಪಡೆದೇ ಅರ್ಜಿ ಹಾಕಬೇಕಾಗಿದೆ. ಈ ಮುಂಚೆಯೇ ದೇವಸ್ಥಾನ ಕಟ್ಟೋಣದ ಬಗ್ಗೆ ಸಂಗ್ರಹಿಸಿಟ್ಟ ಶಿಲಾ ಕಲ್ಲುಗಳನ್ನು ಕಂಟ್ರಾಕ್ಟರರು ವಹಿಸಿಕೊಳ್ಳಬೇಕು. ಬೋರ್ಡಿನ ನಿಯಮಗಳನ್ನು ಪಾಲಿಸತಕ್ಕದ್ದು. ಈ ಶರ್ತಗಳನ್ನು ಅನುಸರಿಸಿ ಬರುವ ಕಡಿಮೆ ಮೌಲ್ಯದ ಟೆಂಡರುಗಳನ್ನು ಸ್ವೀಕರಿಸಲಾಗುವುದು.

ಶ್ರೀ ಮುಂದಾರ್ತಿ ದೇವಸ್ಥಾನದ ಆಫೀಸು, ತಾ. 28-4-1944.

ಎಚ್. ಶೇಷ ಹೆಗ್ಡೆ,
ಆಡಳ್ತೆ ಮೊಕ್ತೇಸರ.

ಕಾರ್ಕಳ.

ಸ್ಥಳೀಯ ಕಾಸ್ಮೊಪೊಲಿಟನ್ ಕ್ಲಬ್ಬಿನ ವಾರ್ಷಿಕೋತ್ಸವವು ಶ್ರೀ- ವಕೀಲ ಕೆ- ಗಣಪತಿ ಕಾಮತರ ಅಧ್ಯಕ್ಷತೆಯಲ್ಲಿ ನಡೆದು, ವರದಿ ಮತ್ತು ಲೆಕ್ಕಪತ್ರಗಳ ಮಂಜೂರಾತಿಯೊಂದಿಗೆ, ಶ್ರೀ ಕೆ- ಪಾಂಡುರಂಗ ವೆಂಕಟ್ರಾಯ ನಾಯಕರವರು ಅಧ್ಯಕ್ಷರಾಗಿ ಹೊಸ ಕಾರ್ಯಕಾರಿ ಸಮಿತಿಯನ್ನು ಚುನಾಯಿತ.

Degrees: Books: Medicines

Free H. L. M S. M. B. H. M. D. etc Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs 1 Insanity Cure Pills Rs. 10 Enclose 2 annas stamp—

Prof. Dr N. H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach (Regd)

No. 3 Rs 2. No 2 Rs 5 No. 1 Rs. 7 Special Rs. 10, Extra Special Rs 17 fo ove marriage health wealth. Ask an six questions with M O Re. 1/4 an get correct answers by returnpost Life reading Rs.10 No. V. P. Send M.O Free. pmplets.

Prof Dr. N. H. Chhatbar,
P. O. MAHUVA (Kathiawar India.)

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of **"Parimala Bhavan"**, opposite Municipal Bus Stand, Udipi, on the 11th April, 1944 Your patronage is solicited.

Mangalore Jarappa,
Managing Director.

The Canara Banking Corporation Limited.

(Incorporated in British India.)

ESTD: 1906.

Head Office · UDIPI·

ANNOUNCEMENT.

A Branch of the bank will be opened at tobacco street, CALICUT on 26-5-1944.

ಉಡುಪಿ, ಗುರುವಾರ ೧೧-೫-೧೯೪೪

ಗಾಂಧಿಜೀ

"ಬ್ರಿಟಿಷ್ ಸರಕಾರವಿಟ್ಟ ಈ ಹೆಜ್ಜೆಯಲ್ಲಿರುವ ಘನತೆಯನ್ನು ಕಿರಿದಾಗಿ ಕಾಣುವದು ಒಂದು ಅಲ್ಪ ಬುದ್ಧಿಯೇ ಸರಿ. ಅಪರಾಧವಮಾಡುವವರಿಗೆ ಅದನ್ನು ತಿದ್ದಿಕೊಳ್ಳುವ ಬಯಕೆ ಮೂಡುವದಸಂಭವ. ಅಂತಹ ಸಂಗತಿ ನಡೆದಾಗಲೂ ಅದಕ್ಕರ್ಹವಾದ ಪೂರ್ಣ ಸಂಭಾವನೆ ಸಲ್ಲಿಸದಿರುವದು ತಪ್ಪು. ಪ್ರತಿಯೊಂದು ಸತ್ಕಾರ್ಯದಲ್ಲೂ ಒಂದಲ್ಲೊಂದು ವಿಧದ ಸ್ವಾರ್ಥವಿದ್ದೇ ಇದೆ. ಆದರೆ ನಾವು ಅದರಲ್ಲಿ ದುರ್ಭಾವನೆಯನ್ನಷ್ಟೇ ಚಿತ್ರಿಸುತ್ತಾ ಕುಳಿತರೆ ಘನಸ್ಥಿಕೆಯು ಮುಕ್ಕಾಯಗೊಳ್ಳುವದು" ಎಂದ ರಾಜಾಜಿಯ ಮಾತಿನಂತೆ ಗಾಂಧಿಜೀಯ ಬಿಡುಗಡೆಗಾಗಿ ಬ್ರಿಟಿಷ್ ಸರಕಾರಕ್ಕೆ–ಅದರಲ್ಲೂ ತನ್ನ ಅಧಿಕಾರದ ಆದಿಭಾಗದಲ್ಲೇ ಈ ಸುಯೋಗ ದೊರಕಿಸಿಕೊಂಡ ಪುದೈವಿ ಲೋರ್ಡ್ ವೇವೆಲರಿಗೆ–ಅಖಿಲ ರಾಷ್ಟ್ರದ ಹೃತ್ಪೂರ್ವಕ ಧನ್ಯವಾದಗಳಿರಲಿ! ಈ ಔದಾರ್ಯದ ಬೆಳಕಿನಲ್ಲಿ ಎದ್ದು ಮೂಡಿ ಜ್ಞಾಪಕಕ್ಕೆ ಬರುತ್ತಿದೆ–ಮಹದೇವದೇಸಾಯಿ, ಕಸ್ತೂರಿ ಬಾರವರ ಅಂತಿಮಾವಸ್ಥೆಯ ವೇಳೆ ಸರಕಾರವು ವಹಿಸಿದ್ದ ನಿಷ್ಠುರ ಧೋರಣೆ! ಪ್ರಾಣಾಪತ್ತಿಗೊಳಗಾದವರನ್ನು ಬಂಧಮುಕ್ತಗೊಳಿಸುವ ಧರ್ಮಬುದ್ಧಿಯು ನೆನ್ನೆ ತಾನೇ ಜಪಾನೀ ಸೇನೆಯೊಂದಿಗೆ ಹಿಂದೀ ಸರಕಾರದ ಕಡೆಗೆ ನುಗ್ಗಿ ಬಂದುದಲ್ಲ! ಆದಿಯಿಂದಲೂ ಇದ್ದು, ಗಾಂಧಿಜೀ ಸಂಬಂಧದಲ್ಲಿ ಈಗ ತಾನೇ ಮತ್ತೊಮ್ಮೆ ವ್ಯಕ್ತವಾದ ಈ ಆಪದ್ಧರ್ಮವು ಮಹಾತ್ಮರ ಪ್ರಾಣಾಪ್ತರಿಬ್ಬರ ಅವಸಾನದ ವೇಳೆಯಲ್ಲೇಕೆ ಅಡಗಿ ಕುಳಿತಿತೋ- ಮಿ. ಅಮೆರಿಗೇನೇ ಗೊತ್ತು! ಆ ಮಹಾಪರಾಧವು ಈ ಬಾರಿಯೂ ನಡೆಯುತ್ತಿದ್ದರೆ, ಅದಕ್ಕೆ ಬಲಿಯಾಗಲಿದ್ದುದು ಮಹಾತ್ಮರ ಜೀವ-ಮಾನವ ಸರ್ಗದ ಅಮೂಲ್ಯ ಸೊತ್ತು! ಅಂತಹ ಜಾಗತಿಕ ಪ್ರಮಾದವನ್ನು ನಿವಾರಿಸಿದ ಅಪಾರ ಅಸದೃಶ ಪುಣ್ಯವನ್ನು ಸರಕಾರ ಹಿಂದು ಸಂಪಾದಿಸಿದೆ. ಸಂದರ್ಭಕ್ಕೆ ಕಟ್ಟುಬಿದ್ದು ಪೂನೆಯ ಹಾದಿ ಹಿಡಿಯಬೇಕಾಗಿ ಬಂದು, ಸಕಾಲದಲ್ಲಿ ಗಾಂಧಿಜೀಯ ದೇಹ ಪರೀಕ್ಷೆಮಾಡುವ ಸುಯೋಗ ಸಂಪಾದಿಸಿ, ಸರಕಾರವನ್ನು ಚುಚ್ಚಿ ಎಚ್ಚರಿಸುವ ವರ[illegible] ಗಳಿಂದಾದ ಉಪಕಾರ ದೊಡ್ಡದು! ಅವರಿವರೆಂದಿಲ್ಲ, ಈ ಸಂದರ್ಭದಲ್ಲಿ ಎಲ್ಲರೂ ಗೆದ್ದವರೇ, ವಿರೋಧಿಗಳಿಲ್ಲದ ವಿಜಯವಿದು! ಈ ಕಾರ್ಯಸಾಧಕರ ಕೈಯನ್ನು ಮತಭೇದವಿಲ್ಲದೆ ಯಾರೂ ಕುಲುಕಬಹುದು–ಅಂತೆಯೇ ಪ್ರತಿಯೊಬ್ಬನೂ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳಬಹುದು! ಮಹಾತ್ಮಾಜೀಯ ಬಿಡುಗಡೆ–ಸರ್ವರ ಪಾಲಿನ ಮಹದಾನಂದ!

ಅಖಿಲ ರಾಷ್ಟ್ರದ ಕಳೆದ 21 ತಿಂಗಳ ಪಯೋಗ್ಯ ಯಾಚನೆ-- ಸಂಯುಕ್ತಿಕವಾದ--ಸಮಗ್ರ ಸಂಕಟಗಳಿಂದ ಸಾಧಿಸಲ್ಪಡದುದು ಗಾಂಧಿಜೀಯ ನಾಲ್ಕು ದಿನಗಳ ಜ್ವರದಿಂದ ಸಾಧಿಸಲ್ಪಟ್ಟಿದೆ. ಮಿ. ಅಮೆರಿಯಿಂದ 'ಕ್ಷಮೆಯಾಚಿಸಿ ಬಿಡುಗಡೆ ಹೊಂದಬೇಕಾದ ದರೋಡೆಗಾರ' ಎಂಬ ಗುರುತು ಪಟ್ಟಿಯಂಟಿಸಿಕೊಂಡಿದ್ದ ಗಾಂಧಿಜೀ ಕ್ಷಮೆಯ ಬದಲಿಗೆ ಕ್ಷಮಿಸಿ ಬಿಡುಗಡೆ ಹೊಂದಿದರು. ಮಾನವ ಪ್ರಯತ್ನ ಸೋತಲ್ಲಿ ಗಾಂಧಿಜೀಯ ಮಾತಿನ 'ದೈವಚಿತ್ತ' ಗೆದ್ದಿತು. ಈಗಿನ ತುರವೆಂದರೆ 'ಗಾಂಧಿಜೀಗೇನಾಗಬಹುದು--ಆ ಗಾಂಧಿಜೀಯಿಂದೇನಾಗಬಹುದು?' ಎಂಬುದೇ. ಅನಾರೋಗ್ಯವು ದೇಶವನ್ನು-ಡಾಕ್ಟರರನ್ನು ಕೂಡಾ ದಿಗಿಲುಗೊಳಿಸಿದಷ್ಟು ಗಾಂಧಿಜಿಯನ್ನು ಗಾಬರಿಪಡಿಸಿಲ್ಲ. ಸಕ್ಕರೆ ತುಂಬಿದ ಗೋಣಿ ಚೀಲವು ಸಿಡಿಗೊಳ್ಳುವಂತೆ, ಗಾಂಧಿಜೀಯ ಆತ್ಮಶಕ್ತಿಯು ಅವರ ದೇಹಬಲದಲ್ಲೂ ಅಂಶತಃಮೂಡಿ ಡಾಕ್ಟರರ ನಿರೀಕ್ಷೆಯನ್ನು ಈ ಮೊದಲು ಹುಸಿಮಾಡಿದುದಿದೆ. ಈ ಬಾರಿಯೂ ಅಂತಹ ಭರವಸೆ ಗಾಂಧಿಜೀಯಲ್ಲಿದೆ. ಆಧರಿಸಿಕೊಂಡು ಮೆಟ್ಟಲೇರುವಷ್ಟು-ಆಧರಿಸದೆ ನಡೆಯುವಷ್ಟು ಪರ್ಣಕುಟಿಯ ಗಾಂಧಿ ಈಗಲೂ ಸಮರ್ಥರೇ. ಅವರ ಹೃದ ಪುಪ್ಪುಸ ತುಸು ಎಚ್ಚರದೆ; ರಕ್ತ ಕೋಶಗಳು ಬಿರುಸುಗೊಂಡಿವೆ-ಎಂದು ತಾ. ೮ರಲ್ಲಿ ತೆಗೆದ 'ಎಕ್ಸ್‌ರೇ' ಚಿತ್ರ ತಿಳಿಸುತ್ತಿದೆ. ಆದಗೂ ಗಾಬರಿಗವಕಾಶವಿಲ್ಲ; ಗಾಂಧಿಜೀಯು ಆರೋಗ್ಯ ಸಂಪಾದನೆಗೆ ಕೆಲವೇ ದಿನಗಳ ಸಾವಕಾಶವಾತ್ರವೆಂದು ನಾವು ಆಶಿಸಬಹುದು ಗುಣಹೊಂದಿದಮೇಲೆ ದೇಶದ ಮಾರ್ಗದರ್ಶಿಯಾಗುವ ಅವಕಾಶವು ಗಾಂಧಿಜೀಗೆ ದೊರೆಯಬಹುದೆ? ಬ್ರಿಟಿಷ್ ಪತ್ರಿಕೆಗಳ ಬೇಡಿಕೆಯಂತೆ ಅಂತಹ ಮಾರ್ಗದರ್ಶಕತೆಗಗತ್ಯವಿರುವ-ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರ ಬಿಡುಗಡೆಯಾದೀತೆ? 'ಕೇವಲ ವೈದ್ಯಕೀಯ ಕಾರಣಕ್ಕಾಗಿ' ಎಂದು ಗಾಂಧೀ ಬಿಡುಗಡೆಯ ಪ್ರಕಟಣೆಯಲ್ಲಿ ಸರಕಾರವೊಂದು ಕುಂಟು ಪಂಗ್ತಿಯನ್ನು ಬುದ್ಧಿಪೂರ್ವಕ ಸೇರಿಸಿದೆ. ಮಿ. ಫಜಲುಲ್ ಹಕ್ಕರೆಂದಂತೆ, ಕಾರಣವಾವುದೇ ಇದ್ದರೂ ನಾವು ನಮ್ಮ ಧುರೀಣನನ್ನು ಮರಳಿ ಪಡೆದಿದ್ದೇವೆ; ಇನ್ನು ಮೃತ್ಯುವಿನ, ಅಥವಾ ಅಂತಹ ಇನ್ನೊಬ್ಬರ ಕೈಗೆಕೊಡಲು ಅಲ್ಲಗಳೆಯುತ್ತೇವೆ; ಮಾನವ ವರ್ಗಕ್ಕಾಗಿ ಅವರನ್ನು ನಮ್ಮಲ್ಲೇ ಇಟ್ಟುಕೊಳ್ಳಲಿದ್ದೇವೆ! 'ಎಂದೂ ಬಿಡುಗಡೆಯಿಲ್ಲ' ಎಂದು ಹೇಳುತ್ತಾ ಬಂದಿದ್ದ ಸರಕಾರವು ಕೇವಲ ಸ್ವಾಭಿಮಾನಕ್ಕಾಗಿ ಮೇಲಿನ ಕುಂಟು ಪಂಗ್ತಿಯನ್ನು ಸೇರಿಸಿತೆಂದು ನಮ್ಮ ಸಮಾಧಾನ. ಆರೋಗ್ಯ ಸಂಪಾದಿಸಿದ ಮೇಲೆ ಗಾಂಧಿಜೀಯವರ ಬೆಂಬತ್ತಿ ಬರುವ ನಿರ್ಬಂಧವಾವುದೂ ಪ್ರಕೃತಕ್ಕಿಲ್ಲವಾದ್ದರಿಂದ ಈ ಆಕೆಗಾಧಾರವಿದೆ. ಗಾಂಧಿಜೀ ಕ್ಷಿಪ್ರಾರೋಗ್ಯ ಹೊಂದಿ ಮರುಕ್ಷಣದಲ್ಲೇ ದೇಶದ ಅನಾರೋಗ್ಯ ನಿವಾರಕ ಚಿಕಿತ್ಸಕರಾಗಿ ಮಾರ್ಪಡಲಿ, ಎಂದು ಹಾರೈಸುತ್ತೇವೆ.

ದುರ್ಬೀನು

ಶಿಖರಕ್ಕೇರಿದವ ಕೆಳಗಿಳಿದಾನು; ತಳಬುಡಕ್ಕೇರಿದವ ಮತ್ತೆ ಬರಲಾರ. ಆತಿಗಾಮಿಯಾದರೂ ಸ್ಥಿಮಿತಕ್ಕೆ ಬಂದಾನು; ಅತಿ ಗರ್ವ ಅಲ್ಲಿಯೇ ಅಂತ್ಯ

೦೦ ೦೦ ೦೦

ಒಗೆದು ಬಿಡುವ ಕಸವನ್ನಾದರೂ ಪ್ರಥಮತಃ ಎತ್ತಿಕೊಳ್ಳದೆ ಆಗದು; ಅಪ್ಪಳಿಸಿ ಹಾಕುವ ಅಧಮನನ್ನಾದರೂ ಮೊದಲು ಆಧರಿಸಬೇಕು.

೦೦ ೦೦ ೦೦

ಬುಗರಿಯನ್ನು ಗರ್ರನೆ ತಿರುಗಿಸಬಹುದು; ಬುರುಡೆಯನ್ನೂ ಹಾಗೆ ತಿರುಗಿಸಿದರಾಗದು. ಮಾತು ಪರ್ಯಟನ ತಪ್ಪಲ್ಲ; ಮತಿ ಪರ್ಯಟನ ಸಲ್ಲದು.

೦೦ ೦೦ ೦೦

ಧಾರೆಯಾಗಿ ಬೆವರಿಳಿಯುತಿದ್ದವನಿಗೇನೇ ನೀರು ಬೇಕು; ದುರ್ಬುದ್ಧಿ ಮಿತಿಮೀರಿದವನಿಗೇನೇ ಸದ್ಬೋಧೆ ಬೇಕು;

೦೦ ೦೦ ೦೦

ಪೆಟ್ಟಿಗೆ ಭಾರವಾದರೆ ಸಾಕೆ?—ಹಾಗಾದರೆ ನಗ ನಾಣ್ಯಗಳೇ ಬೇಕೆಂದಿಲ್ಲ, ಕಲ್ಲು ಮಣ್ಣನ್ನು ತುಂಬಿಸಿದರಾಯಿತು ಮನುಷ್ಯ ದೊಡ್ಡವನಾದರೆ ಸಾಕೆ?—ಹಾಗಾದರೆ ನ್ಯಾಯ ನೀತಿಯನ್ನೇ ಅನುಸರಿಸಬೇಕೆಂದಿಲ್ಲ, ಅಹಂಕಾರ ಅತ್ಯಾಚಾರ ಮಾಡಿದರಾಯಿತು.

೦೦ ೦೦ ೦೦

ತಂಬೂರಿ ಮೀಂಟಿದರೆ ಸ್ವರ ಹೊರಡುವಂತೆ, ತಂಬಿಗೆಗೆ ತಾಗಿದರೂ ಸ್ವರವೇನೋ ಹೊರಡುತ್ತದೆ. ವಿಚಾರಿಗಳನ್ನು ಮಾತಾಡಿಸಿದರೆ ಸದ್ಬೋಧೆ ದೊರೆಯುವಂತೆ ವಿಕಾರಿಗಳನ್ನು ಕೆಣಕಿದರೂ ಮಾತೇನಾದರೂ ಬರುತ್ತದೆ.

೦೦ ೦೦ ೦೦

ಸ್ವರ ಹೊರಡುತ್ತದಾದರೆ ಮಾತ್ರ ಬಾರಿಸು; ಮಾನ್ಯತೆ ದೊರೆಯುತ್ತದಾದರೆ ಮಾತ್ರ ಮಾತಾಡು; ಹಾದಿ ಗೋಚರಿಸುತ್ತದಾದರೆ ಮಾತ್ರ ಹಂಬಲಿಸು

೦೦ ೦೦ ೦೦

ಮೆಟ್ಟಲುಗಳಲ್ಲಿ ಅಂತಸ್ತಿದ್ದಂತೆ ಅದನ್ನು ಮೆಟ್ಟುವ ಕಾಲುಗಳೂ ಗಿಡ್ಡ ಉದ್ದವಿದ್ದರಾಗದು. ಪ್ರಪಂಚದಲ್ಲಿ ಕಾಠಿಣ್ಯ ಲಾಲಿತ್ಯಗಳಿರುವಂತೆ ಪ್ರಾಪಂಚಿಕರಲ್ಲೂ ಮೇಲು ಕೀಳಿದ್ದರಾಗದು.

ಪ್ರಕಟಣೆ

ಶಿರ್ವ:—ಇಲ್ಲಿಯ ಜನಪ್ರೀತರಾದ ವೆರಿ ರೆವರೆಂಡ್ ಫಾದರ್ ಎಚ್. ಗೋನ್ಸಾಲ್ವಿಸ್‌ರವರ ಪ್ರಯತ್ನದಿಂದಾಗಿ ಇಲ್ಲಿ ಇದೇ ಬರುವ ಜೂನ್ ತಿಂಗಳಲ್ಲಿ ಹೈಸ್ಕೂಲೊಂದು ತೆರೆಯಲ್ಪಡಲು ವಿದ್ಯಾ ಇಲಾಖೆಯವರು ಅನುಮತಿ ಕೊಟ್ಟಿರುವುದರಿಂದ ಇಲ್ಲಿಯ ಮತ್ತು ಸಮೀಪಸ್ಥ ಊರಿನ ಮಕ್ಕಳ ವಿದ್ಯಾಭ್ಯಾಸದ ಚಿಂತನೆಯು ಪುರೋಗಾಮಿಯಾಗಿ ಸಾಧಿಸಲು ಅನುಕೂಲವಾಯಿತು. ಊರ ಪ್ರಮುಖರು ಹರ್ಷಚಿತ್ತದಿಂದ ಹೈಸ್ಕೂಲು ಪ್ರಾರಂಭದ ತಾರೀಕನ್ನು ನಿರೀಕ್ಷಿಸುತ್ತಿರುವರಲ್ಲದೆ, ತಮ್ಮ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಬೇರೆ ಬೇರೆ ವಿಧದಿಂದ ದುಡಿಯುತ್ತಿರುವರೆಂಬುದು ಆಗಲೇ ಸ್ಥಾಪಿತವಾದ "ಬಂಟರಯಾನೆ ನಾಡವರ ಬಡ ವಿದ್ಯಾರ್ಥಿ ಫಂಡು" ಎಂಬುವರ ಮೂಲಕ ವಿದಿತವಾಗದಿರದು. ಭರದಿಂದ ಉನ್ನತಿಗೇರುತ್ತಿರುವ ಶಿರ್ವ ಗ್ರಾಮವು ಹಲವು ಸಮಯದಿಂದ ನಿರೀಕ್ಷಿಸುತ್ತಿದ್ದ ಹೈಸ್ಕೂಲನ್ನು ಪಡೆದು ಗ್ರಾಮಾಭಿವೃದ್ಧಿಯ ಸಾಧನೆಯ ಒಂದು ಭಾಗದಲ್ಲಿ ಜಯಶೀಲವಾದಂತಾಯಿತು. ಇದಕ್ಕಾಗಿ ಸಂಬಂಧಪಟ್ಟವರಿಗೆ ಕೃತಜ್ಞತೆಯು ಸಲ್ಲಬೇಕಾಗಿದೆ.

– ಊರ ಹಿತೈಷಿ.

ಬನ್ನಾಡಿ–ಶ್ರೀ ಪರಮಹಂಸ ಪ್ರಾಥಮಿಕ ಶಾಲಾ ವರ್ಧಂತಿಯು ಕಳೆದ ತಾ. 29–4-44ರಲ್ಲಿ ಶ್ರೀ. ಬಿ. ವಿ ರಮಣ M.A L.T. ಅವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು ಅಂದಿನ ಚಟುವಟಿಕೆಗಳನ್ನೂ, ಚಿಕ್ಕ ಬಾಲಿಕೆಯರಿಂದ ಅಭಿನಯಿಸಲ್ಪಟ್ಟ ಸೀತಾ ಪರಿತ್ಯಾಗವೆಂಬ ಯಕ್ಷಗಾನ ನಾಟಕವನ್ನೂ ನೋಡಿ ಜನರು ಸಂತೋಷಗೊಂಡರು. ಮಕ್ಕಳಿಗೆ ಪಾರಿತೋಷಕಗಳು ಹಂಚಲ್ಪಟ್ಟ ತರುವಾಯ ಅಧ್ಯಕ್ಷರು ತಮ್ಮ ಸುರಸ ಭಾಷಣದಲ್ಲಿ ಇದೊಂದು ಆದರ್ಶ ಶಾಲೆಯೆಂತಲೂ, ಇಲ್ಲಿಯ ಮಕ್ಕಳು ಹಸುಗೂಸುಗಳಾಗಿರುವುದಾದರೂ, ಪ್ರೌಢ ವಿದ್ಯಾ ಶಾಲೆಯ ಚಟುವಟಿಕೆಗಳನ್ನು ಸರಿಗಟ್ಟುವ ಶಕ್ತಿ--[illegible]ವರಾಗಿರುತ್ತಾರೆಂತಲೂ ವ್ಯಕ್ತಪಡಿಸಿ, ಈ ಶಾಲಾ ಮೆನೇಜರರ ಉನ್ನತ ಉದ್ದೇಶವು ಸಫಲವಾಗಲೆಂದು ಹಾರೈಸಿದರು.

ಕಟಪಾಡಿ–"ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಮಿತಿಯ ಪ್ರತಿನಿಧಿ ಕಮಿಟಿ ಬೊಂಬಾಯಿ" ಇವರು ಕಳುಹಿಸಿರುವ ಬ್ರಹ್ಮಶ್ರೀ ನಾರಾಯಣಗುರು ದೇವರ ತೈಲಚಿತ್ರವನ್ನು ಇದೇ ತಾ. 7-5-44ನೇ ರವಿವಾರ ಪೂರ್ವಾಹ್ನ ಮಲ್ಪೆಯ ಭಜನಾ ಮಂದಿರದಿಂದ ಮೆರವಣಿಗೆಯಲ್ಲಿ ತಂದು ಶ್ರೀ. "ಕೆ. ಆರ್. ಗುರು" ಸೆಕ್ರೆಟರಿ, ಜಿಲ್ಲಾ ಬಿಲ್ಲವ ಯೂನಿಯನ್, ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಅದೇ ದಿನ ರಾತ್ರಿ ಪ್ರತಿಷ್ಠೆ ಮಾಡಲಾಯಿತು.

ತಾರುಣ್ಯ

ಕೆಂಡಸ್ತು, ವೀರ್ಯಸ್ತಂಭನ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುತ್ತಮ ಔಷಧ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನ ಬಜಾರ್ ರೋಡ್, ಮದ್ರಾಸ್.

ಪುತ್ತೂರು ಏಜಂಟರು: - ಶ್ಯೆ ಫಾರ್ಮಸಿ

ಮಹಾತ್ಮಾಜೀಯ ಎದೆಗುಂಡಿಗೆಯಲ್ಲೇ ದೋಷ!

ಮಹಾತ್ಮಾಜೀಯನು

ಇದೇ. ತಾ. 8ರಲ್ಲಿ ಪೂನೆಯ ಸ್ಥಳೀಯ ಚಿಕಿತ್ಸಾಲಯವೊಂದಕ್ಕೊಯ್ದು 'ಎಕ್ಸ್‌ರೇ' ಪರೀಕ್ಷೆ ನಡಿಸಲಾಯಿತು ಅವರ ಹೃದಯ ಕೋಶವು ತುಸು ಉಬ್ಬಿರುವುದೂ ಶ್ವಾಸಕೋಶಗಳು ಬಿರುಸುಗೊಂಡಿರುವದೂ ರೇಡಿಯೋ ಗ್ರಾಫಿನಲ್ಲಿ ಕಂಡುಬಂತು ಎಕ್ಸ್‌ರೇ ಸ್ಪೆಶಲಿಸ್ಟರಾದ ಡಾ। ಕೋಯಾಜೀಯವರು ಸಂಪೂರ್ಣ ದೈಹಿಕ ಹಾಗೂ ಮಾನಸಿಕ ವಿಶ್ರಾಂತಿ ಪಡಯಬೇಕೆಂದೂ ಪೂನೆಯಲ್ಲಿರುವದಸಾಧ್ಯವಾದರೆ ಯಾವು ದಾದರೊಂದು ಸಮುದ್ರ ಬದಿಯಲ್ಲಿ ವಾಸಿಸುವದು ವಿಹಿತವೆಂದೂ ಸಲಹೆ ಇತ್ತಿದ್ದಾರೆ, ಬೊಂಬಾಯಿಗೆ 12 ಮೈಲು ದೂರದಲ್ಲಿದ್ದು, 1924ರಲ್ಲಿ ನಡೆದ ಅದೊಂದು ಉಪದೇಶಸಿನ ವೇಳೆ ಗಾಂಧಿಜೀ ವಿಶ್ರಾಂತಿ ಪಡೆದಿದ್ದ, ಸಮುದ್ರ ಕರಾವಳಿಯ ಆ ಜ್ಯು ಜುಹುವಿಗೆ ಈ ಬಾರಿಯೂ ಹೋಗಬಹುದು.

ಸಂದರ್ಶಕರ ಗಲಭೆ.

ಪರ್ಣಕುಟಿಯಲ್ಲಿ ದಿನದಿಂದ ದಿನಕ್ಕೆ ಭೇಟಿಗಾಗಿ ಬರುವವರ ಕೂಟ ಹೆಚ್ಚುತ್ತಿದೆ. ತಾ. ೬ರಲ್ಲಿವಿಜಯಲಕ್ಷ್ಮಿ ಪಂಡಿತ್, ಮುನ್ಶಿ ಜತೆ, ಹಠೀಸಿಂಗ್ ಜತೆ, ಮಹಾತ್ಮರ ಪ್ರಾಣಪ್ರಿಯ ದಿವಂಗತ ಅಬ್ಬಾಸ್ ತಯಾಬ್ಜಿಯವರ ಪುತ್ರಿ, ಶ್ರೀಮತಿ ಪೆರಿನ್ ಬೆನ್‌ಕೆಪ್ಟನ್ ದಾದಾಭಾಯಿ ನೌರೋಜಿಯ ಮೊಮ್ಮಗಳು ಮಿಸ್. ಕೆ. ನೌರೋಜಿ, ಮೊದಲಾದವರ ತಂಡವೇ ಬಂದಿತ್ತು. ಡಾ. ಸುಶೀಲಾ ನಾಯರರು 'ಸಮಯ ಮೀರಿ ಮಾತಾಡುತ್ತಿದ್ದೀರಿ' ಎಂದು ಸಂದರ್ಶಕರಿಗೆ ಮೂರು ಬಾರಿ ಎಚ್ಚರಿಕೆ ಕೊಟ್ಟರೂ ಗಾಂಧಿಜೀ ಕಡೆ ದರು. ಆ ದಿನ ಪ್ರಾರ್ಥನೆಗೆ 2000

ಅಸ್ಸಾಮಿನ ಸರ್ವರಂಗಗಳಲ್ಲಿ ಜಾಪಾನರೊತ್ತಡ.

ಮಂದಿ ನೆರೆದು ಜೈಕಾರವೆಬ್ಬಿಸಿದ್ದರು. ಮಿಸ್. ತಯಾಬ್ಜಿಯವರು ಶ್ರೀ ಕೃಷ್ಣನ ಮೇಲೆ ಸ್ವತಃ ಕಟ್ಟಿದ್ದ ಕವನವೊಂದನ್ನು ಹಾಡಿದಾಗ ಪ್ರಾರ್ಥಿಸಿ ಗಾಂಧಿಜೀ ಭಕ್ತಿಭಾವ ತಲ್ಲೀನರಾಗಿ ಹೋದರು. ದಿನಂಪ್ರತಿ ನೂರಾರು ಟೆಲಿಗ್ರಾಮುಗಳೂ ಟ್ರಂಕ್ ಟೆಲಿಫೋನು ಕರೆಗಳೂ ಬರುತ್ತಿವೆ. ಟೆಲಿಫೋನ್ ತಂತಿ ತಡೆಯ ಲಾರದೆ ಪ್ರಾರ್ಥನೆ, ಮತ್ತು ಊಟದ ವೇಳೆ 'ರಿಸೀವರ್'ನ್ನು ಕೆಳಗಿಟ್ಟು ಬಿಡುತಿದ್ದಾರೆ ಗಾಂಧಿಜೀ ಪೂರ್ಣ ಗುಣ ಹೊಂದಲು ಕೆಲವು ವಾರ ತಾಗಬಹುದು. ತಮ್ಮ ನಂದೀ ಗುಡ್ಡೆಗೆ ಬಂದು ನಿಲ್ಲಿರೆಂದು ಮೈಸೂರಿನಿಂದಲೂ ಮಹಾಬಲೇಶ್ವರಕ್ಕೆ ಬನ್ನಿರೆಂದು ಅಲ್ಲಿಯ ಮಿತ್ರರಿಂದಲೂ ಕರೆ ಹೋಗಿದೆ. ಆದರೆ ಗಾಂಧಿಜೀ ಚುನಾಯಿಸಿರುವದು ಬೊಂಬಾಯಿಯ ಜುಹುವನ್ನು; ಅಂತಹ ಗಲಭೆಯ ಸ್ಥಳವನ್ನು ಡಾಕ್ಟರರು ಶಿಫಾರಸು ಮಾಡಿರುವದಿಲ್ಲ ಗಾಂಧಿಜೀ ಪತ್ರಿಕೆಗಳ ಮೇಲೆ ದೃಷ್ಟಿಯನ್ನಷ್ಟೇ ಓಡಿಸಿ, ಹೆಚ್ಚಿನ ಸಮಯವನ್ನು ನೂಲುವದರಲ್ಲಿ ತೆಗೆಯುತ್ತಾರೆ. ದಿಂಬಿಗೊರಗಿಕೊಂಡು ನೂಲಿರೆಂದು ಮಿತ್ರರು ಸೂಚಿಸಿದಾಗ ನೂಲು ಒಳ್ಳೆಯದಾಗುವದಿಲ್ಲವೆಂದು ಗಾಂಧಿಜೀಯೊಪ್ಪಲಿಲ್ಲ ಅವರ ಪ್ರಾಣಾಪ್ತ ಸಹವರ್ತಿಗಳ ಪೈಕಿ ಅವಶೇಷದಂತುಳಿದಿರುವ ಕಾರ್ಯದರ್ಶಿ ಪ್ಯಾರೇಲಾಲರಿಗೆ, ದೇಶವಿದೇಶಗಳ ಪತ್ರಿಕಾ ಬಾತ್ಮೀದಾರರನ್ನು ಸಮಾಧಾನ ಪಡಿಸಿ ಒಂದಂತೆಯೇ ಹಿಂದೆ ಕಳುಹಿಸುವದು ಪ್ರಯಾಸಕ್ಕಿಟ್ಟಿದೆ ಸೇವಾಗ್ರಾಮ ಮತ್ತು ವಾರ್ಧಾ ಆಶ್ರಮಗಳಲ್ಲಿ ಜೀವಕಳೆ ಸಂಚರಿಸ ಹತ್ತಿದೆ, ಗಾಂಧಿಜೀ ಬರಬಹುದೆಂದು ಸೇವಾಗ್ರಾಮದ ಅವರ ಗುಡಿಸಲು ಈಗಲೇ ದುರಸ್ತಿಯಾಗಿದೆ.

ಆಗಾಖಾನ್ ಅರಮನೆ

ತಾ. 6ನೇ ಮುಂಜಾನೆ 8 ಘಂಟೆಯಿಂದ ಆಗಾಖಾನ್ ಅರಮನೆಯು ತನ್ನ ಸೆರೆಮನೆ ಎಂಬ ಅಭಿದಾನವನ್ನೇ ಕಳಕೊಂಡಿದೆ ಪಹರೆಗಾರರನ್ನು ವಜಾಮಾಡಲಾಗಿದೆ; ಸುತ್ತಲಿನ ತಂತೀ ಬೇಲಿಯನ್ನು ಕೀಳಲಾಗಿದೆ. ತನ್ನ ಸಾಮಾನುಗಳನ್ನೆಲ್ಲಾ ಸರಕಾರವು ತೆಗೆಯಿಸಿ, ಕಟ್ಟಡವನ್ನು ಮಾಲೀಕರಿಗೇನೇ ಮರಳಿ ಬಿಟ್ಟುಕೊಡುವ ವ್ಯವಸ್ಥೆ ಮಾಡಿದೆ. ಶ್ರೀಮತಿ ಸರೋಜಿನಿ, ಮತ್ತು ಗಾಂಧೀ ಮೊಮ್ಮಗ ಕಾನು ಗಾಂಧಿಯವರು ಆಗಾಖಾನ್ ಅರಮನೆಗೆ ಹೋಗಿ, ಬಾ-ದೇಸಾಯಿಗಳ ಸಮಾಧಿಗಳಿಗೆ ಪುಷ್ಪ ಸಮರ್ಪಿಸಿ ಬಂದಿದ್ದಾರೆ. ಈಗ ಸಿರ್ಬಂಧವಿಲ್ಲದ್ದರಿಂದ ಆ ಸಮಾಧಿಗಳನ್ನು ಹಲವರು ಸಂದರ್ಶಿಸಿ ಬಂದರು. ಅದೊಂದು ಯಾತ್ರಾಸ್ಥಳವಂತಾಗಿದೆ. ಅವೆರಡು ಸಮಾಧಿಗಳ ಮಣ್ಣುರಾಶಿಯಲ್ಲಿಯೂ ಗಾಂಧಿಜೀಯ ಅಕ್ಷರಗಳಿವೆ. ಮಹದೇವ ದೇಸಾಯಿಯ ಮಣ್ಣುರಾಶಿಯ ಮೇಲೆ 'ಓಂ, ಓಂ' ಎಂದೂ, ಕಸ್ತೂರಿಬಾನ ಮೃತ್ತಿಕೆಯಲ್ಲಿ 'ಹರೇರಾಮ್' ಎಂದೂ ಗಾಂಧಿಜೀ ಸಂಸ್ಕೃತದಲ್ಲಿ ಬರೆದಿಟ್ಟಿದ್ದಾರೆ.

ಅಸ್ಸಾಮು ಯುದ್ಧ

ತಾ. ೭ರ, ಮೌಂಟ್ ಬೇಟನ್ ಪ್ರಕಟಣೆಯಂತೆ ಅಸ್ಸಾಮಿನ ಎಲ್ಲಾ ರಂಗಗಳಲ್ಲೂ ಜಾಪಾನರ ಸಾರ್ವತ್ರಿಕ ಧಾಳಿಯು ಬಿರುಸಿನಿಂದಾರಂಭವಾಗಿದೆ. 'ತಾವು ಇತ್ತೀಚೆಗೆ ಕಳಕೊಂಡ ಸ್ಥಳಗಳ ಮರು ಸಂಪಾದನೆಗಾಗಿ ಜಾಪಾನರು ಪ್ರಬಲ ಪ್ರತಿಧಾಳಿಗಳನ್ನು ಹೂಡುತ್ತಿದ್ದಾರಾದರೂ ಬಹಳ ಹಾನಿಗೊಳಗಾಗುತ್ತಿದ್ದಾರೆ' ಎಂದು ಆ ಪ್ರಕಟಣೆಯನ್ನುತ್ತಿದೆ. ಕೊಹಿಮಾದ ಯುದ್ಧವೇಗ ಅತಿರಭಸದಲ್ಲಿದೆ. ಉತ್ತರ ಬರ್ಮಾದಲ್ಲಿ ಚೀನೀ ಸೇನೆ ಮತ್ತಷ್ಟು ಮುಂದೊತ್ತಿದ ವಾರ್ತೆ ಬಂದಿದೆ. ಜಾಪಾನೀ ಯುದ್ಧವನ್ನು ನೆನೆಗುದಿಗೆ ಹಾಕುವದರಿಂದ ಅಪಾಯವಿದೆಯೆಂದು, ವಸಾಹತ ಪ್ರಧಾನಿಗಳ ಸಮ್ಮೇಲನಕ್ಕಾಗಿ ಲಂಡನಿಗೆ ಹೋಗಿರುವ ಆಸ್ಟ್ರೇಲಿಯಾ ಪ್ರಧಾನರಂದಿದ್ದಾರೆ.

ರಶ್ಯಾನರು

ಸೆಬಸ್ಟಾಪೂಲಿನ ಮೇಲೆ ಪ್ರಬಲವಾಗಿ ಆಕ್ರಮಣ ನಡೆಸುತಿದ್ದಾರೆ. ಒಮ್ಮೆಗೇ ಮುನ್ನುಗ್ಗಿ ಹೋಗಲಾಗದಷ್ಟು ಅಲ್ಲಿ ನಾಜಿಗಳ ರಕ್ಷಣಾಸಿದ್ಧತೆಯಿರುವಂತಿದೆ. ರುಮೇನಿಯದೊಳಕ್ಕೆ ಕೆಂಪುಸೇನೆಯ ಒತ್ತಡ ವಾರಂಭವಾಗಿದೆ. ದ್ವಿತೀಯ ರಂಗವು ಪ್ರಾರಂಭವಾಯಿತೆಂದೂ, ನೂರುಕತೆಗಳಲ್ಲಿ ಮಿತ್ರ ಸೇನೆಗಳು ಕಾಲೂರಿವೆಯೆಂದೂ ಪುನಃ ವಾರ್ತೆ.

ಬೊಂಬಾಯಿ ಬೆಂಕಿ

ಆನಾಹುತದ ವಿಚಾರಣೆ ನಡೆಸಲು ಸರಕಾರದಿಂದ ನೇಮಿಸಲ್ಪಟ್ಟಿರುವ ಸಮಿತಿಯು ಧಕ್ಕೆ ವಲಯದ ಸ್ಥಳ ತನಿಖೆ ಮುಗಿಸಿ ಕೌನ್ಸಿಲ್ ಹಾಲಿನಲ್ಲಿ ಜನರ ಸಾಕ್ಷ್ಯಗಳನ್ನು ಪಡೆಯ ಹತ್ತಿದ್ದಾರೆ. ವಿಚಾರಣೆಯು 2 ತಿಂಗಳು ನಡೆಯಬಹುದೆಂದು ಊಹೆ.

ಉಪ್ಪೂರು:—ಇಲ್ಲಿಯ ಶ್ರೀ. ದುರ್ಗಾ ನರೇನ್ಸ್ರ ಅಮ್ಮನವರ ಹೊಸ ಕಟ್ಟಡದ ಪ್ರವೇಶೋತ್ಸವ ಕಳೆದ ತಿಂಗಳ ತಾ 29 ಮತ್ತು 30 ರಲ್ಲಿ ಬರ್ಕೆ ಶ್ರೀ ರಾಮಚಂದ್ರ ಶಾಸ್ತ್ರಿಗಳವರ ಪೌರೋಹಿತ್ಯ ಹಾಗೂ ಕಾಪು ಶ್ರೀ. ರಾಮಣ್ಣ ಶಾಸ್ತ್ರಿಗಳವರ ದರ್ಶನಯುಕ್ತ ಮಾರ್ಗ ಶಿಕ್ಷಣದ ಇನ ಸಂದಣಿಯಿಂದ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಶ್ರೀ. ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲ್, ವಿಶ್ವೇಂದ್ರ ನಗರ. ಇನ್ನಂಜೆ — ಕಾಪು ದ. ಕ.

ತಾ. 1-6-44ನೇ ಗುರುವಾರ ಶಾಲಾರಂಭ

ಮೊದಲಿನ I, II, III ಫೋರ್ಮುಗಳಲ್ಲದೆ ಹೊಸದಾಗಿ IV ಫೋರ್ಮು ತೆರೆಯಲ್ಪಡುವುದು.

ಪರಊರ ಎಲ್ಲಾ ಜಾತಿಯ ಬಾಲಕ ಬಾಲಿಕೆಯರಿಗೆ "ಶ್ರೀ ವಾದಿರಾಜ ಗುರುಕುಲ"ದಲ್ಲಿ (Boarding & lodging) ಊಟ, ವಸತಿ, ದೀಪಗಳ ಯೋಗ್ಯ ವ್ಯವಸ್ಥೆಯು ಅತಿ ಸುಲಭದರದಲ್ಲಿ ಏರ್ಪಡಿಸಲ್ಪಡುವುದು. ನಾಡಿನ ಸಮಾಜದ ಬಾಲಕರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯದ ವ್ಯವಸ್ಥೆ ಇರುವುದು.

ಹೊಸ ವಿದ್ಯಾರ್ಥಿಗಳ ತೆಗೆದುಕೊಳ್ಳುವಿಕೆಯು (Admission) ನಿಯಮಿತ (limited) ವಾಗಿರುವುದರಿಂದ ಬೇಕಾದ ವ್ಯವಸ್ಥೆಗಳನ್ನು ಮುಂದಾಗಿ ಮಾಡಿಕೊಳ್ಳಿರಿ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸ್ಪಷ್ಟವಾಗುವುದು. ಹುಡುಗಿಯರಿಗೆ ಸ್ಕೂಲ್ ಫೀಸಿನಲ್ಲಿ ತುಂಬಾ ರಿಯಾಯತಿ ಇದೆ.

ಇನ್ನಂಜೆ. 12-4-'44 } **Headmaster.**

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯರಂಗ-ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ-ಜರ್ಮನಿಯಲ್ಲಿ ಜನರ ನೈತಿಕ ಭಂಗ-ಜರ್ಮನರ ಪತನ-ಯುದ್ಧ ಸಮಾಪ್ತಿ-ಯುದ್ಧ ಸಾಮಾಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣ ದಿಂದ ಉಂಟಾದ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ-ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿರಾಶಿಯಾಗಿ ಬರೋಣ-ಧಾರಣೆಗಳ ಇಳಿತ-ನಷ್ಟ-ಕೊರತೆ-ಕೇಡುಗಳು-ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಆಗತ್ಯವಿರಬಹುದೆಂದು ತೋರುವ ಹಣದ ಏರ್ಪಾಡನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು

ಸ್ಥಾಪಿತ: 1906

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

ತಾರೀಕು 11—5—1944ರಂದ

M.S. ಸುಬ್ಬುಲಕ್ಷ್ಮಿ, C.N. ಬಾಲಸುಬ್ರಹ್ಮಣ್ಯಂ.

N.S. ಕೃಷ್ಣನ್, T.A. ಮಧುರಮ್

ಅಭಿನಯಿಸಿರುವ

ಕಾಳಿದಾಸ ಮಹಾ ಕವಿಯ ಮಹಾ ಕಾವ್ಯ

ಅಭಿಜ್ಞಾನ ಶಾಕುಂತಲಾ

NOTICE

The Municipal road watering Lorry without the water-tank will be sold by public auction in the Municipal Office, Udipi at 4 P. M. on friday the 19th May 1944. For particulars please apply to the undersigned or enquire at the Municipal Office, Udipi

K. Ramanunni Nayer.
Commissioner, U. M.

Municipal Office, Udipi,
Dated 1-5-1944

ದಕ್ಷಿಣ ಕನ್ನಡ

ಮಂಗಳೂರು

ಮಂಗಳೂರಲ್ಲಿ ಹಸುಗೆ:– ಕೆಲವೇ ದಿನಗಳಲ್ಲಿ ಆರಂಭಿಸುವ, ಹಸುಗೆಯ ಚೀಟನ್ನು ನಾಗರಿಕರಿಗೆ ಹಂಚಲಾಗುತ್ತಿದೆ. ಹಂಚುವ ಕೆಲಸವು ತಾ. ೧೦ನೆಯ ದಿನ ಕೊನೆಗೊಂಡುದರಿಂದ ಎಂದು ಅಧಿಕಾರಿಗಳು ಪ್ರಕಟಿಸಿದ್ದಾರೆ. ಜಿಲ್ಲಾಧಿಕಾರಿಗಳ ಅವಿರತ ಪ್ರಯತ್ನದಿಂದ, ಬೇಕಾದ ಅಕ್ಕಿಯು ದಾಸ್ತಾನು ಆಗಿರುವುದರಿಂದ ಇದೇ ತಿಂಗಳು ೧೫ರಿಂದ ಹಸುಗೆಯು ಜಾರಿಗೆ ಬರುವುದೆಂದು ನಿರೀಕ್ಷಿಸಲಾಗಿದೆ.

ಪ್ಲೇಗಿನ ವರದಿ– ತಾ. ೨೯-೪-೪೪ಕ್ಕೆ ಅಂತ್ಯವಾಗುವ ವಾರದಲ್ಲಿಯೂ ಅದರ ಹಿಂದಿನ ವಾರದಲ್ಲಿಯೂ ಮನುಷ್ಯರಿಗೂ ಪ್ಲೇಗು ತಗಲಲಿಲ್ಲ. ಅಥವಾ ಪ್ಲೇಗಿನಿಂದ ಯಾರೂ ಸಾಯಲಿಲ್ಲ. ಆದರೆ ಈ ಕಡೆಗಳಲ್ಲಿ ಇಲಿ ಎಷ್ಟು ವಾರ್ತೆ ಇದೆ. ಹಿಂದಿನ ವಾರ 14 ಇಲಿಗಳು ಎದ್ದಿದ್ದವು. ಇಲಿಗಳು ಎಲ್ಲಾ ಮಾರು ಹಾಳ ವಿಕಗಳು ಭರದಿಂದ ನಡೆಯುತ್ತಿವೆ. ವರ್ಟ್ಸರ್ ಮಾರ್ಕೆಟು ಮತ್ತು ಮೈದಾನದಲ್ಲೇ ಇರುವುದು.

ಟಿ. ಯಂ. ಎಸ್. ಕಾಮತರ— ದಿವಾಚರಣೆಯು ಮಂಗಳೂರಿನ ಪ್ರಕಾರ ಕೊಟ್ಟ ಆಶ್ರಯದಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಭವನದಲ್ಲಿ ತಾ. 1ರಂದು ಶ್ರೀ. ಯಂ. ವಾಧವ ರಾಯರ ಅಧ್ಯಕ್ಷತೆಯಿಂದ ಜರಗಿತು. ಶ್ರೀಗಳಾದ ಜಿ. ವಾಸುದೇವ ಪೈ, ಯಂ. ಸುಬ್ರಾಯ, ಮೂಲ್ಕಿ ಸುಬ್ಬರಾವ್, ಯಂ. ವೆಂಕಟೇಶ ಪ್ರಭು, ಮಂಜುನಾಥ ನಾಯಕ್, ಮತ್ತು ಬಿ. ವಿ. ಕಕ್ಕಿಲ್ಲಾಯರು ಮಾತನಾಡಿದರು. ಡಾ। ಗಿರಿಧರ ರಾಯರ ಧನ್ಯವಾದಗಳೊಡನೆ ಸಭೆಯು ಕೊನೆಗೊಂಡಿತು.

ಕಲೆಕ್ಟರರ ಪ್ರಕಟಣೆ

ಭಾರತ ರಕ್ಷಣಾ ಶಾಸನದನ್ವಯ ಜಿಲ್ಲಾ ಕಲೆಕ್ಟರರು ಹೀಗೆ ಪ್ರಕಟಿಸುತ್ತಾರೆ –

ಕಾಸರಗೋಡು ತಾಲೂಕಿನ, ಕೆಳಗೆ ನಮೂದಿಸಿದ ವಿಭಾಗಗಳಿಂದ ಇದೇ ತಾ. ೧೪ರ ಅನಂತರ ಯಾರೊಬ್ಬರೂ (ಅಧಿಕೃತ ವ್ಯಾಪಾರಿಯನ್ನು ಬಿಟ್ಟು) ಅಕ್ಕಿ ಅಥವಾ ಭತ್ತವನ್ನು ಸ್ಥಳಾಂತರಗೊಳಿಸಬಾರದು. ಅಲ್ಲದೆ ಆ ವಿಭಾಗಗಳಲ್ಲಿ ಯಾರೊಬ್ಬರಾದರೂ ೧೦ ಮಣಕ್ಕಿಂತ ಜಾಸ್ತಿ ಅಕ್ಕಿ ಯಾ ಭತ್ತವಿದ್ದರೆ, ಹಾಗೆ ಹೆಚ್ಚಿಗಿದ್ದ ಅಕ್ಕಿ ಅಥವಾ ಭತ್ತವನ್ನು ಸ್ಥಳೀಯ ಹಸುಗೆ ಆಫೀಸರರ ಅಪ್ಪಣೆ ವಿನಹಾ ಸ್ಥಳಾಂತರಗೊಳಿಸಬಾರದು.

ಹಸುಗೆ ಜಾರಿಯಾದ ವಿಭಾಗ.—ಕಾಸರಗೋಡು ಟೌನ್ ಮತ್ತು ಅದರ ಆಸುಪಾಸು, ಅಡ್ಕತ್ತಬೈಲ, ಕೂಡ್ಲು, ಕಾಸರಗೋಡು, ತಲಂಗೆರೆ, ಚೆಮ್ನಾಡ್, ಕಳನಾಡ್ ಮತ್ತು ಮೊಗ್ರಾಲು (ಕಾಸರಗೋಡು ತಾಲೂಕು) ಗ್ರಾಮಗಳು.

ಮೇಲೆ ತೋರುವ ವಿಭಾಗದ ನಿವಾಸಿಗಳು, ಇದೇ ತಾ. ೧೪ರೊಳಗೆ, ತಮ್ಮ ಬಳಿ ೧೦ ಮಣಕ್ಕಿಂತ (ಒಂದು ಮಣವೆಂದರೆ 82 7/2 ರಾತಲು ಎಂದು ತಿಳಿಯತಕ್ಕದ್ದು) ಹೆಚ್ಚು ಅಕ್ಕಿ ಅಥವಾ ಭತ್ತವಿದ್ದರೆ ಹಾಗಿದ್ದ ಅಕ್ಕಿ ಅಥವಾ ಭತ್ತವು ತಮ್ಮ ಸ್ವಂತದ್ದಾಗಿರಲಿ ಅಥವಾ ಹಲವರ ಜತೆಯಾಗಿದ್ದಿರಲಿ, ಅವುಗಳ ತಪಶೀಲನ್ನು ತಾ. ೧೦ ಗಂಟೆಯೊಳಗೆ ಸ್ಥಳೀಯ ಹಸುಗೆ ಆಫೀಸರರಿಗೆ ತಿಳಿಸಬೇಕು.

ಅಕ್ಕಿಯ ಬೆಲೆ ನಿಯಂತ್ರಣ:— ಈ ನೊಟಲು ಜಿಲ್ಲಾ ಕಲೆಕ್ಟರರು ಪ್ರಕಟಿಸಿದಂತೆ ಮೇ ತಾ. ೧ರಿಂದ ಅಕ್ಕಿಯ ಬೆಲೆಯನ್ನು ಈ ಕೆಳಗಿನಂತೆ ನಿಯಂತ್ರಿಸಿದ್ದಾರೆ. ಮೇ ತಾ. ೧ರಿಂದ ಬೆಲೆಯು ಇನ್ನೂ ಇಳಿಯಲಿದೆ ಎಂದೂ ತಿಳಿಸಿದ್ದಾರೆ. ವರ್ತಕರು ಸಾಮಾನ್ಯ ಕೊಡುವ ಅಕ್ಕಿಯ ಬೆಲೆ:– ಮುಡಿಗೆ ಸುಗ್ಗಿ ಮತ್ತು ರಾಶಿ ೯—೮—೦; ಗುಡ್ಡು ೧೦—೦—೦; ಮಸ್ಕತಿ ೧೦—೮—೦; ಕಜೆ ಕುಚ್ಚಿಗೆ ೯—೦—೦; ಸಾಮಾನ್ಯ ಬೆಳ್ತಿಗೆ ೧೧—೮—೦; ಉತ್ತಮ ಬೆಳ್ತಿಗೆ ೧೨—೮—೦;

ರಿಕ್ಟೇಲರ್ ಮೂಲಕ ವರ್ತಕರಿಂದ ಅಕ್ಕಿಯ ದರ:– ಮುಡಿಗೆ ಸುಗ್ಗಿ ಮತ್ತು ರಾಶಿ ೯—೦—೦; ಗುಡ್ಡು ೯—೮—೦, ಮಸ್ಕತಿ ೧೦—೦—೦; ಕಜೆ ಕುಚ್ಚಿಗೆ ೮—೦—೦; ಸಾಮಾನ್ಯ ಬೆಳ್ತಿಗೆ ೧೧—೦—೦; ಉತ್ತಮ ಬೆಳ್ತಿಗೆ ೧೨—೦—೦,

ಮದ್ರಾಸು ಸಂಸ್ಥಾನದಿಂದ ಹೊರಗಿನ ಪ್ರದೇಶಗಳಿಗೆ ನ್ಯಾಯವಾಗಿ ಕೇಡಲ್ಪಟ್ಟ ಪರ್ಮಿಟು ವಿನಾ ಭತ್ತ, ಅಕ್ಕಿ ಮತ್ತು ಕೆಳಗೆ ನಮೂದಿಸಿದ ಇತರ ಜೀನಸುಗಳ ಒಯ್ಯೋಣವನ್ನು ಮದ್ರಾಸು ಸರಕಾರವು ನಿರ್ಬಂಧಿಸಿರುವುದರಿಂದ ಅಂತಹ ಜೀನಸನ್ನು ಕಳ್ಳಸಾಗಣೆಯಿಂದ ರಫ್ತು ಮಾಡುವುದನ್ನು ತಡೆಯುವುದು ಅಗತ್ಯವಾಗಿರುವುದರಿಂದ ಗಡಿ ಮಾರ್ಗಗಳಲ್ಲಿ ಹೋಗುವ ಯಾವತ್ತೂ ವಾಹನಗಳನ್ನು ನಿಲ್ಲಿಸಿ ಪರಿಶೋಧಿಸುವುದಕ್ಕೆ ಮತ್ತು ಅವುಗಳಲ್ಲಿ ಸಾಗುವ ಭತ್ತ, ಅಕ್ಕಿ ಅಥವಾ ಇತರ ಜೀನಸುಗಳಿಗೆ ನ್ಯಾಯವಾದ ಪರ್ಮಿಟು ಇದೆಯೋ ಎಂದು ತನಿಖೆ ನಡೆಸಿ, ಜೀನಸುಗಳ ಚಲಾವಣೆಯನ್ನು ತಪಾಸಣೆಮಾಡಲು ಗಡಿನಾಡು ಮಾರ್ಗಗಳು ಇರುವ ಠಾಣ್ಬಂದಿಯ ಫಿರ್ಕಾ ಇನ್‌ಸ್ಪೆಕ್ಟರ್ ಮತ್ತು ಅವರ ಮೇಲಿನ ತರಗತಿಯ ರೆವಿನ್ಯೂ ಇಲಾಖೆಯ ಎಲ್ಲಾ ಆಫೀಸರರಿಗೂ, ಆಸಿಸ್ಟೆಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರು ಮತ್ತು ಅವರ ಮೇಲಿನ ತರಗತಿಯ ಕಮರ್ಶಿಯಲ್ ಟೇಕ್ಸ್ ಇಲಾಖೆಯ ಎಲ್ಲಾ ಆಫೀಸರರಿಗೂ, ಸಬ್ ಇನ್‌ಸ್ಪೆಕ್ಟರ ಮತ್ತು ಅವರ ಮೇಲಿನ ತರಗತಿಯ ಪೋಲೀಸು ಮತ್ತು ಎಕ್ಸೈಜು ಇಲಾಖೆಗಳ ಎಲ್ಲಾ ಆಫೀಸರರಿಗೂ ಡಿಫೆನ್ಸ್ ಓಫ್ ಇಂಡಿಯಾ ಕಾನೂನುಗಳ ಪ್ರಕಾರ ಜಿಲ್ಲಾ ಕಲೆಕ್ಟರರು ಅಧಿಕಾರ ಕೊಟ್ಟಿರುತ್ತಾರೆ.

ಮದ್ರಾಸು ಸಂಸ್ಥಾನದ ಹೊರಗಿನ ಪ್ರದೇಶಗಳಿಗೆ ಪರ್ಮಿಟು ವಿನಾ ನಿರ್ಯಾತವು ನಿರ್ಬಂಧಿಸಲ್ಪಟ್ಟ ಜೀನಸುಗಳ ಪಟ್ಟಿ:

ಭತ್ತ ಮತ್ತು ಅಕ್ಕಿ (ತೌಡುಸಮೇತ), ಗೋಧಿ ಮತ್ತು ಅದರ ತಯಾರಿಕೆಗಳು, ಜೋಳ; ಕಂಬು (ಬಜ್ರ), ಕೊರ್ರಾಲು, ಕಡಲೆ; ಹುರುಳಿ, ತೊಗರಿ, ಹೆಸರು ಉದ್ದು, ಬಟಾಣಿ ಬೇಳೆ ಬಗೆಯೇ; ಸಕ್ಕರೆ, ಬೆಲ್ಲ. ಮೆಣಸು ಮತ್ತು ಮೆಣಸಿನ ತಯಾರಿಕೆಗಳು, ಹುಣ್ಸೆ ಹಣ್ಣು, ನೀರುಳ್ಳಿ, ಬೆಳ್ಳುಳ್ಳಿ; ಎಳ್ಳೆಣ್ಣೆ, ನೆಲಗಡಲೆಣ್ಣೆ, ಜಾನುವಾರು ಹುಲ್ಲು, ವನಸ್ಪತಿಯಿಂದ ತಯಾರಿಸಿದ ತುಪ್ಪ, ಬೆಣ್ಣೆ; ಜಾನುವಾರುಗಳು, ಕುರಿಗಳು, ಆಡುಗಳು; ಬಟಾಟೆ; ಉಪ್ಪು; ಎಣ್ಣೆಯ ಬೀಜಗಳು, ಮತ್ತು ಹತ್ತಿಯ ಬೀಜ, ಎಲ್ಲಾ ತರದ ಹಿಂಡಿಗಳು, ಗೊಬ್ಬರದ ಪೊಪ್ಪಸ ಬೀಜಗಳು; ಮೀನಿನ ಪುಡಿ, ಮೀನಿನ ಹಿಂಡಿ; ಎಲುಬುಗಳು. ಎಲುಬಿನ ಪುಡಿ, ಬೋನ್‌ಗ್ರಿಸ್ಟ್; ಬೋನ್‌ಸುಪರ್ ಪುಸ್ಟ್. ಕೋಲಟ, ಹೋಸ್ ವಿಲ್, ಹೆಸನ್ ವಿಲ್, ಹತ್ತಿಯ ನೂಲು, ಕಪ್ಪಗಳು; ಕಣಬು (Aloe fibre or their products) ಸಿಲ್ಕ್; ಸಿಂಕೋನದ ತೊಗಟೆ.

ಜಿಲ್ಲೆಯ ಪ್ರಮುಖರ ಸಭೆ

ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಮತ್ತು ಇತರರ ಸಭೆಯೊಂದು ತಾ. ೧ರಂದು ಪ್ರಭಾತ ಆಫೀಸು ಕಟ್ಟಡದಲ್ಲಿ ಶ್ರೀ। ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒದಗಿತು.

ಕಸ್ತೂರಿ ಭಾಗ್ಯ ನಿಧಿಗೆ ನಮ್ಮ ಜಿಲ್ಲೆಯಿಂದ ಹಣ ಸಂಗ್ರಹಿಸುವುದಕ್ಕಾಗಿ ಈ ಕೆಳಗಿನ ಮಂದಿಯನ್ನೊಳಗೊಂಡ ಸಮಿತಿಯೊಂದರ ರಚನೆಯಾಯಿತು. ಶ್ರೀಗಳಾದ ಬಿ. ವೈಕುಂಠ ಬಾಳಿಗ (ಅಧ್ಯಕ್ಷ); ಎ. ಬಿ. ಶೆಟ್ಟಿ ಮತ್ತು ಜಿನರಾಜ ಹೆಗ್ಡೆ (ಉಪಾಧ್ಯಕ್ಷರು) ವಿರಲ್‌ಚ ವಾಧವಜಿ (ಖಜಾಂಚಿ) ಎಂ. ಡಿ. ಅಧಿಕಾರಿ, ಕುಟ್ಟಿ ವಾಸುದೇವ ಶೆಣೈ, ಕುಳಕುಂದ ಶಿವರಾಯ, ಕೆ. ಕೃಷ್ಣರಾವ್, ಕೆ. ಕೇಶವ ಶೆಣೈ, ಮಂಗಳೂರು ಜಾರಪ್ಪ, ಕಟ್ಪಾಡಿ ಲಕ್ಷ್ಮೀನಾರಾಯಣ ನಾಯಕ್, ಮತ್ತು ಯಂ. ಉಮೇಶರಾಯ ಎ – ಇತರ ಸದಸ್ಯರು. ವಂತಿಯ ಸ್ವೀಕಾರ ಸಭೆಯು ನಡೆಯಿತು. ಈ ಮಾಸ ಕೊನೆಯ ವರೆಗೆ ಆ ಬಗೆ ನಮ್ಮ ಜಿಲ್ಲಾ ಸಮಿತಿಯು ಸೇರಿ ಕಾರ್ಯಕ್ರಮಗಳನ್ನು ಕೈಕೊಳ್ಳುವುದು.

ಜಿಲ್ಲೆಯ ಆಹಾರ ಪರಿಸ್ಥಿತಿಯನ್ನೂ ಸಭೆಯು ಪರಿಶೀಲಿಸಿತು. ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು, ಜಿಲ್ಲೆಯ ಆಹಾರದ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಹೊಸ ಕಲೆಕ್ಟರರೂ ಅಧಿಕಾರಿಗಳೂ ಮಾಡುತ್ತಿರುವ ಪ್ರಯತ್ನಗಳನ್ನು ವಿವರಿಸಿದರು. ಜನತಾ ಆಹಾರ ಸಮಿತಿಗಳ ಪ್ರಯೋಜನವನ್ನು ಶ್ರೀಗಳಾದ ಹೆಗ್ಡೆಯವರೂ ಬಿ. ವಿ. ಕಕ್ಕಿಲ್ಲಾಯರೂ ವಿವರಿಸಿದರು. ಬಳಿಕ, ಜಿಲ್ಲೆಯ ಗ್ರಾಮಾಂತರಗಳಲ್ಲಿ ಕೆಡುತ್ತಿರುವ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಜಿಲ್ಲೆಯ ಬೇರೆ ಬೇರೆ ವಿಭಾಗಗಳಲ್ಲಿ ಜನತಾ ಆಹಾರ ಸಮಿತಿಗಳನ್ನು ರಚಿಸುವುದಕ್ಕಾಗಿ ಕೆಳಗಿನ ಮಹನೀಯರನ್ನೊಳಗೊಂಡ ಕಮಿಟಿಯೊಂದರ ರಚನೆಯಾಯಿತು. ಶ್ರೀ। ಗಳಾದ ಕಟ್ಪಾಡಿ ಲಕ್ಷ್ಮೀನಾರಾಯಣ ನಾಯಕ್, ಎಂ. ಡಿ. ಅಧಿಕಾರಿ, ಬಿ. ವಿ. ಕಕ್ಕಿಲ್ಲಾಯ, ಕೆ. ಬಿ. ಜಿನರಾಜ ಹೆಗ್ಡೆ, ಮತ್ತು ದೇವಪ್ಪ ಆಳ್ವ.

ಮಂಗಳೂರಿನ ಚಾಲತಿ ಧಾರಣೆ— ಊರು ಬೆಲ್ಲ ಖಂಡಿ ರೂ. 1ಕ್ಕೆ 100,110ಉಪ್ಪಿಗೋಣಿ 10, 11-8, ಕಾಳು ಮೆಣಸು ಮಣ 1ರ 12, 12-8 ಕೊಬ್ಬರಿ ಖಂಡಿ 1ರ 155, 160 ಕೊಬ್ಬರಿ ಹಿಂಡಿ ಖಂಡಿ 1ರ 55, 60 ಎಳ್ಳೆಂಡಿ 65-0-0, 70-0-0, ಕೊಬ್ಬರಿ ಎಣ್ಣೆ ಮಣ 1ಕ್ಕೆ, 13-0-0, 14-4-0, ಊರ ಮೆಣಸಿನ ಕಾಯಿ ಮಣ 1ಕ್ಕೆ 12-8 0, 15-8-0 ಹೊಸ ಅಡಿಕೆ 420-0-0, 540-0-0, ಹಳೆ ಅಡಿಕೆ 400-0-0, 450 0 0, ಸೀಬ್ರ ಹಂಡ್ರಡ್ ವೇಟ್ 1ರ 116 0-0, 121-0-0, ಯಾಲಕ್ಕಿ ಮಣ 1ರ (ಕೊ.) 30-0-0, 35-0-0 ಕಬ್ಬಿಣ ಸರಳು ಮಣ 1ರ 12 0 0, 16-0-0 ತಾಮ್ರ ಪಾತ್ರಗಳು ಮಣ 1ರ 65 0 0 ಪವನ 1ರ 53 0 0, 70 0-0.

ಉಡುಪಿ.

ಸ್ಕೂಲ್ ಡೇ ಸಮಾರಂಭ:— ಮುನಿಸಿಪಲ್ ನೋರ್ತ್ ಎಲಿಮೆಂಟರಿ ಶಾಲೆಯ ಸ್ಕೂಲ್ ಡೇ ಸಮಾರಂಭವು ತಾ. 7ರಂದು ದ. ಕ. ಜಿಲ್ಲಾ ವಿದ್ಯಾಧಿಕಾರಿ ಶ್ರೀ. ಯನ್. ಸುಬ್ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಪೂರ್ವಾಹ್ನ ಶಾಲಾ ಮಕ್ಕಳಿಗೆ ತಿಂಡಿ ಹಂಚಿದರು. ಮುಖ್ಯೋಪಾಧ್ಯಾಯರಿಂದ ವರದಿ ವಾಚನ, ಬಹುಮಾನ ವಿತರಣ, ಸಭಿಕರ ಭಾಷಣ, ಅಧ್ಯಕ್ಷ ಮಹಾಶಯರ ಸಮಯೋಚಿತ ಭಾಷಣ, ವಿವಿಧ ವಿನೋದಾವಳಿಗಳ ಪ್ರದರ್ಶನಗಳಾದ ಮೇಲೆ "ಶ್ರೀ ರಾಮ ಪಾದುಕಾ ಪಟ್ಟಾಭಿಷೇಕ" ನಾಟಕವು ಶಾಲಾ ಬಾಲ ಬಾಲಕಿಯರಿಂದ ಅಭಿನಯಿಸಲ್ಪಟ್ಟಿತು. ಶ್ರೀ ಕಟ್ಪಾಡಿ ರಾಮದಾಸ ನರಸಿಂಹ ಕಾಮತ್ ಡಾ। S. R. ಪೈ, ಶ್ರೀ ... ತ್ ಎಲ್. ಆಚಾರ್ ಶ್ರೀ. ಕೆ. ದೇವೇಂದ್ರ ಶೆಣೈ ರಿಂದ ಕೊಡಲ್ಪಟ್ಟ ಕಪ್ಪುಗಳು ನಾಟಕದಲ್ಲಿ ಪಾತ್ರ ವಹಿಸಿದ ಉತ್ತಮ ನಟರುಗಳಿಗೆ ಬಹುಮಾನವಾಗಿ ಕೊಡಲ್ಪಟ್ಟವು. ಬಾಲಕೋಪಿನ ಜನಾಬ್ ಬ. ಡಾನ್ ಬಹದೂರ್ ಸಾಹೇಬರವರ ನಾಟಕಕ್ಕೆ ಬೇಕಾದ ಜರಿಯ ಡ್ರೆಸ್ಸನ್ನು ಒದಗಿಸಿ ಕೊಟ್ಟರು. ಶಾಲಾ ಮುಖ್ಯಾಧ್ಯಾಪಕ ಶ್ರೀ ಕೇಶವ ಕಾಮತರ ಶ್ರಮವು ಅಭಿನಂದನೀಯ.

ರೇಶನಿಂಗ್— ಅಕ್ಕಿಯ ಮಿತಿಯನ್ನು ಈ ವಾರದಿಂದ ಕಡಿಮೆ ಮಾಡಲಾಗಿಯದೆ. ಸದ್ಯ ಮೇ ರೇಶನಿಂಗ್ ಅಕ್ಕಿಯೊಂದಿಗೆ ಗೋಧಿ ಕೂಡಾ ಖಡ್ಡಾಯವಾಗಿ ಕೊಡಲಾಗುವದಂತೆ.

ಸಕ್ಕರೆ– ಇನ್ನೂ ನಾಲ್ಕು ವಾರಗಳಿಗೆ ಪೂರೈಕೆಯಿಲ್ಲ ಪರ್ಮಿಟ ಒದಗಿಲ್ಲವಂತೆ.

ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ— IVಫಾರ್ಮಿನಿಂದ VIಫಾರ್ಮುಗಳ ತನಕ ಶಿಕ್ಷಣವನ್ನು ಇಂಗ್ಲಿಷ್ ಭಾಷೆಯಲ್ಲಿ ಕೊಡಬಹುದೆಂದು ಶಾಲಾ ಮುಖ್ಯಾಧ್ಯಾಪಕರಿಂದ ತಿಳಿದುಬರುತ್ತದೆ.

ಶ್ರೀ ನರಸಿಂಹ ಜಯಂತ್ಯುತ್ಸವವು ಕಳೆದ ಆದಿತ್ಯವಾರ ಪಾಡಿಗಾರು ಮಠದಲ್ಲಿ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದಂಗಳವರಿಂದ ಧಾರ್ಮಿಕ ಶಭ ಸಂಪ್ರದಾಯಗಳಿಗನುಸಾರವಾಗಿ ವೈಭವದಿಂದ ಜರಗಿಸಲ್ಪಟ್ಟಿತು.

ಟೆನ್ನಿಸ್ ಟೂರ್ನಮೆಂಟ್:— ಡಬ್ಬಲ್ಸ್ ರನ್ನರ್ಸ್ ಅಪ್ ಮೆಡಲ್ ಶ್ರೀ ಬಿ. ಸಚ್ಚಿದಾನಂದ ಹೆಗ್ಡೇರು ಮತ್ತು ಶ್ರೀ. ಪಿ. ಆರ್ ಕಿದಿಯೂರು ಇವರಿಗೂ ರನ್ನರ್ಸ್ ಅಪ್ ಸಿಂಗಲ್ಸ್ ಮೆಡಲು ಡಿಸ್ಟ್ರಿಕ್ಟ್ ಮುನ್ಸಿಫ್ ಮಿ. ಡಿ. ನೊರೋನ್ಹರಿಗೂ ದೊರಕಿವೆ.

ಮುನಿಸಿಪಲ್ ಕೌನ್ಸಿಲಿನ ಸ್ಪೆಶಲ್ ಸಭೆಯು:— ತಾ. 8ರಲ್ಲು ಶ್ರೀಮತಿ ಲಿ. ಲಾಬಾಯಿ ಕಾಮತರ ಅಧ್ಯಕ್ಷತೆಯಲ್ಲಿ ಜರಗಿ ಬಸ್ ಸ್ಟೇಂಡಿನ ಪಾರ್ಸೆಲು ರೂಮಿಗೆ ತಿಂಗಳೊಂದರ ರೂಪಾಯಿ 10 ಬುಕ್ಕಿಂಗ್ ಆಫೀಸಿಗೆ ರೂಪಾಯಿ 15ರಂತೆಯೂ 1—4—44ರಿಂದ ಬಾಡಿಗೆ ವಸೂಲು ಮಾಡಬೇಕಾಗಿ ನಿರ್ಣಯವಾಯಿತು. ಸಾಮಾನ್ಯ ಸಭೆಯೂ ಅಂದೇ ಜರಗಿತು.

ಹವಾಮಾನ:— ವಿಶೇಷ ಉರಿ ಮೋಡಗಳಿದ್ದು ತಾ. 9ರಲ್ಲು ಸಂಜೆ ನಾಲ್ಕಾರು ಹನಿ ಮಳೆ ಸುರಿಯಿತು. ಸದ್ಯಕ್ಕೆ ಧಾರಾಕಾರದಲ್ಲಿ ಮಳೆ ಬೀಳುವ ಚಿಹ್ನೆ ಇದೆ.

— ಪ್ರಾರ್ಥನೆ —

ಉಡುಪಿ:— ಶ್ರೀ ಲಕ್ಷ್ಮೀ ವೆಂಕಟೇಶ ದೇವರ ಸನ್ನಿಧಿಯಲ್ಲಿ ತಾರೀಕು 9-5-1944ರಲ್ಲು ಮಹಾತ್ಮಾಗಾಂಧಿಯವರ ಬಿಡುಗಡೆಯ ಸಂತೋಷಾರ್ಥವಾಗಿ ಹಾಗೂ ಅವರ ಆಯುರಾರೋಗ್ಯ, ಶ್ರೇಯೋಭಿವೃದ್ಧಿಗಾಗಿ ಶ್ರೀ ಟಿ. ರಮಾನಾಥ ಪೈಯವರ ಕಾರ್ಯದರ್ಶಿತ್ವದಲ್ಲಿ ಸ್ಥಳೀಕ ಮಹನೀಯರ ಪೂಜಾನಮಾರಂಭ ಜರಗಿತು

ಬಂಟರ ಯಾನೆ ನಾಡವರ ವಿದ್ಯಾರ್ಥಿ ಭವನ, ಇನ್ನಂಜೆ–ಇನ್ನಂಜೆಯಲ್ಲಿ ಹೊಸತಾಗಿ ಕಟ್ಟಿಸುತ್ತಿರುವ ಸದ್ರಿ ಭವನದ ಕೆಲಸವನ್ನು ಸಂಪೂರ್ಣ ಮುಂದರಿಸದೆ ಅರ್ಧದಲ್ಲಿಯೇ ನಿಲ್ಲಿಸೋಣಾಗುತ್ತದೋ ಎಂಬ ಅನುಮಾನದಿಂದ, ಕಟ್ಟಡದ ಕೆಲಸಕ್ಕೆ ಧನ ಸಹಾಯ ಮಾಡಿದ ಮಹನೀಯರೂ, ಇತರ ಗೃಹಸ್ಥರೂ ನನ್ನೊಡನೆ ಆಗಾಗ್ಗೆ ಪ್ರಶ್ನಿಸುತ್ತಿರುವುದು ಸ್ವಾಭಾವಿಕವಿದೆ.

ಕಟ್ಟಡ ಕಮಿಟಿಯಲ್ಲಿ ಹಲವು ಕಾರ್ಯಕಾರಿಗಳಿರುವುದು ನಿಜವಾಗಿದ್ದರೂ ಕಟ್ಟಡದ ಕೆಲಸಕ್ಕೆ ದೊರೆತ ಹಣ ಸಂಗ್ರಹವೂ, ಅದರ ಖರ್ಚಿನ ಲೆಕ್ಕ ಪತ್ರವೂ ಕಟ್ಟಡ ಕಮಿಟಿಯ ಪ್ರೆಸಿಡೆಂಟ್, ಶ್ರೀ. ಕೆ. ಸೀತಾರಾಮ ಧೋರೆ ಬಲ್ಲಾಳರ ಸ್ವಾಧೀನವೇ ಇರುತ್ತದೆಂತಲೂ, ಕಟ್ಟಡದ ಕೆಲಸವು ನಡೆಯುತ್ತಾ ಇದೆ ಎಂತಲೂ, ಶ್ರೀ ಧೋರೆ ಬಲ್ಲಾಳರು ಸದ್ರಿ ಭವನದ ಕೆಲಸವನ್ನು ಬರುವ ಜೂನ್ ತಿಂಗಳಲ್ಲಿ ಸಂಪೂರ್ಣಗೊಳಿಸುವ ನಿರ್ಧಾರದಲ್ಲಿರುತ್ತಾರೆಂತಲೂ, ಎಂಬ ವಿಚಾರವನ್ನು ಜನತೆಯ ಸಮಾಧಾನದ ಬಗ್ಗೆ ಪ್ರಕಟಿಸೋಣಾಗಿದೆ.

ಕುರುಕಾಲು ಗಣಪಯ್ಯ ಶೆಟ್ಟಿ.

ಕುರುಕಾಲು. ತಾ. 8-5-44. | ಸೆಕ್ರೆಟರಿ, ಕಟ್ಟಡದ ಕಮಿಟಿ, ಇನ್ನಂಜೆ.

advt

ಸೌಂದರ್ಯದ ಚೆಲುವಿಕೆಗೆ

ಕೇರಳ

ಸ್ಯಾಂಡಲ್ ವುಡ್ ಸೋಪು

SANDAL WOOD SOAP

ಒರಿಯಂಟಲ ಜಗದ್ವಿಖ್ಯಾತ ಸುವಾಸನೆ ಬೀರುವ ಗಂಧದೆಣ್ಣೆಯ ಸಾರದಿಂದ ಕೂಡಿದುದು.

ತಯಾರಿಸುವವರು: ಕೇರಳ ಸೋಪು ಇನ್ಸ್ಟಿಟ್ಯೂಟ್

ಕಲ್ಲಿಕೋಟೆ. (ಸಹಕಾರೀ ಸಂಸ್ಥೆ)

K S. I-3.

ಸಿಯಿದೆ. ಇದರ ಎಲ್ಲವೂ ಹೆಚ್ಚಾಗಿ ಡಾಕ್ಟರರನ್ನೇ ಅವಲಂಬಿಸಿದೆ 21 ತಿಂಗಳ ಮೊದಲು ದಸ್ತಗಿರಿಮಾಡಲ್ಪಟ್ಟಿದ್ದ ಜೊಂಬಾಯಿಗೆ ಹೋಗಿ, ಹಿಂದ ಒಂದೆರಡು ಬಾರಿ ನನಗೆ ಕ್ಷಿಪ್ರಗುಣಕಾರಿಯಾಗಿ ಪರಿಣಮಿಸಿದ್ದ ಆಲ್ಲಿಯ ಜುಹು ಹವೆಯನ್ನು ಸೇವಿಸಬೇಕೆಂಬ ಆತುರ ನನಗಿದೆ ಆದರೆ ಆ ಕಾರ್ಯಕ್ರಮವು ನನ್ನ ಕಾಯಿಲೆಯ ಕುರಿತು ನಾನು ಘನನ್ನಾಭಿಪ್ರಾಯದಿಂದಿರುವ ಡಾಕ್ಟರರನ್ನು ಅವಲಂಬಿಸಿದೆ ನಾನೀಗ ನೆಲಸಿಕೊಂಡಿರುವದಕ್ಕಿಂತ ನನ್ನ ರೋಗನಿವೃತ್ತಿ ಪಾಲು ಹೆಚ್ಚಾಗದು ಎಂದು ಡಾಕ್ಟರರ ಗಳಿಸಿಪ್ಪಾಯ. ನಾನವರ ಕೃತಿಯಲ್ಲಿ ಹೀಗಿಯಾಗಲಾರ. ಆದರೆ ಅಪರ ಕೈಯಲ್ಲಿ ಕವನಕ ಅವರಿಗೆ ಅಧಿಕೇಂದ್ರಗಲಾರೆ". ಆ ದಿನ ಅಪರಾಹ್ನದ ಪ್ರಾರ್ಥನೆಗಾಗಿ, ಯಾರನ್ನೂ ಆಧರಿಸದೆ, ತನ್ನ ಸತ್ಯದ ಬಿದಿರು ಕೋಲನ್ನು ಕೂಡಾ ಊರಿಕೊಳ್ಳದೆ, ಗಾಂಧಿಜೀ ಪರ್ಣಕುಟಿಯ ಕೋಣೆ ಬಿಟ್ಟು ಬಹಿರಂಗ ಪಲಯಕ್ಕೆ ಸ್ವತ ನಡೆದು ಹೋಗಿ, ಹೆಚ್ಚಾಗಿ ಮಹಿಳೆಯರೇ ಇದ್ದ 400 ಮಂದಿಯನ್ನು ತಲ್ಲೀನಗೊಳಿಸಿದ ಪ್ರಾರ್ಥನೆಯಲ್ಲಿ ಭಾಗವಹಿಸಿದರು. ಪ್ರಾರ್ಥನಾ ನಂತರ ಅತಿ ಕ್ಷೀಣ ಸ್ವರದಲ್ಲಿ ಎರಡೇ ವಾಕ್ಯಗಳ ಮೂಲಕ ಹರಿಜನ ಫಂಡಿಗೆ ಸಹಾಯ ಯಾಚಿಸಿದರು ಬಂಧನದಲ್ಲಿದ್ದಾಗ ಗಾಂಧಿಜೀ ಕತ್ತರಿಸಿ ಇಟ್ಟಿದ್ದ ಪತ್ರಿಕಾ ತುಂಡುಗಳ ದೊಡ್ಡ ದೊಡ್ಡ ಪೆಟ್ಟಿಗೆಗಳು ತಾ ೬ನೇ ಅಪರಾಹ್ನ ಆಗಾಖಾನ್ ಅರಮನೆಯಿಂದ ಪರ್ಣಕುಟಿಗೆ ಒಂದು ಮುಷ್ಟಿವೆ ಬೇರದ ಗೊಂದಲ ಸ್ಥಿತಿಯನ್ನು ಗಾಂಧಿಜೀ ಆದಿಯಿಂದಲೂ ಅವಗಾಹನೆಗೆ ತಂದು ಕೊಳ್ಳುತ್ತಿದ್ದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ

ತಾ 7ರಲ್ಲಿ

"**ದೇವರ ಕೈಯಲ್ಲಿರುವ ನನ್ನ ಆರೋಗ್ಯ ಅಥವಾ ಆಯುಷ್ಯದ ಕುರಿತು ಗಾಬರಿಗೊಳ್ಳಬೇಡಿ ಅವನು ತನ್ನ ಆಪಾರ ದಯೆಗಾವುದು ಹಿತಕರವೆಂದು ತೋರುವದೋ ಅದನ್ನೇ ಮಾಡುವನು**"-ತನ್ನ ಆರೋಗ್ಯ ಸಂಬಂಧ ಪ್ರಶ್ನೆ ಮಾಡಿದ ಮಿತ್ರರಿಗೆ ಗಾಂಧಿಯವರ ಮಾತಿದು. ತಾ ೧೦ಲ್ಲಿ ಏರಿದ್ದ ರಕ್ತದೊತ್ತಾಟ 7ರಲ್ಲಿ ಪುನಃ ಇಳಿದು ಹೋಗಿತ್ತು. ರಕ್ತ ಚಲನೆಯ ಈ ರೀತಿ ಏರಿಳಿತಗಳ ತುತ್ತ ತುದಿಗೆ ಹೋಗುತ್ತಿರುವ ರೋಗಿಯೊಬ್ಬನ ಅಧ್ವಕೆಯು ಪಾಕ್ಷ

❖ ಮಹಾತ್ಮಾಜೀಯ ಬಿಡುಗಡೆ ❖

(೨ನೇ ಘಟದಿಂದ ಮುಂದುವರಿದುದು)

ರರ ಪಾಲಿಗೆ ಅತ್ಯಂತ ಕಠಿಣಾನುಭವ. ರಕ್ತದೌರ್ಬಲ್ಯತೆಯ ಚಿಕಿತ್ಸೆಗಗತ್ಯ- ಆದರ ತನ್ನ ಆಹಾರ ನಿಯಮಕ್ಕೆ ವಿರುದ್ಧವಾದ ಯಾವ ಟೋನಿಕ್‌ನ್ನಾದರೂ ಗಾಂಧಿಜೀ ಸೇವಿಸಲೊಪ್ಪುವದಿಲ್ಲ ದೇಶ ಚಿಕಿತ್ಸೆಯಲ್ಲೇ ಅವರಿಗೆ ವಿಶ್ವಾಸ ಇದರಲ್ಲಿ ತಜ್ಞರಾದ ಡಾ. ದಿನ್‌ಶಾ ಮೆಹತರು ತಾ 7ರಲ್ಲಿ ಈ ಲೋಕಚಿಕಿತ್ಸಕನಿಗೆ ೨ಘಂಟೆ ಕಾಲ ಗಾಡಾಪು ತೈಲಚಿಕಿತ್ಸೆಯನ್ನಿತ್ತರು. ಸಂದರ್ಶಕರೊಡನೆ ಮಾತಾಡುವಾಗ ಇಲ್ಲವೇ ಅವರ ಮಾತಿಗೆ ಕಿವಿಗೊಡುವಾಗ ಗಾಂಧಿಜೀಯ ದೌರ್ಬಲ್ಯ ಹೆಚ್ಚುವದನ್ನು ಕಂಡ ಡಾಕ್ಟರರು ನಿರ್ಬಂಧವನ್ನು ಬಿಗುಗೊಳಿಸಿದ್ದಾರೆ ಅಪರಾಹ್ನ 2ರಿಂದ 3 ಮತ್ತು 5ರಿಂದ ೬ ಘಂಟೆಗಳೊಳಗೆ ದಿನಕ್ಕೆರಡೆರಡು ತಂಡಗಳು ಮಾತ್ರವೇ ಒಳಬರಬೇಕೆಂದು ವಿಧಿಸಿದ್ದಾರೆ. ಸ್ವಭಾವತಃ ಮಾತು ಪ್ರೇಮಿಯಾಗಿದ್ದ ಗಾಂಧಿಜೀ ತನ್ನ ದೀರ್ಘಾವಧಿಯ ಬಾಯಿಬೀಗದಿಂದಾಗಿ ಸಂದರ್ಶಕರೊಡನೆ ಮಾತಾಡುವ ಸಹಜೋತ್ಸುಕತೆಯಿಂದಿದ್ದರೂ ಡಾಕ್ಟರರು ಯಾರನ್ನೂ 5ನಿಮಿಷಗಿಂತ ಹೆಚ್ಚಿಗೆ ಮಾತಾಡಿ ಸಿಲ್ಲಗೊಡುವದಿಲ್ಲ. ಸರೋಜಿನಿ ದೇವಿಯವರು ತಾ-7ರಲ್ಲಿ ಪರ್ಣಕುಟಿ ಸೇರಿ ದೀರ್ಘಕಾಲ ಗಾಂಧಿಯವರೊಡ್ಡನಿದ್ದು ತನ್ನ ಸಂಚಾರಾನುಭವದ ಮೇಲಿಂದ ದೇಶ ಸ್ಥಿತಿಯನ್ನು ಸಮಗ್ರವಾಗಿ ಅವರು ಗಾಂಧಿಜೀಯೊಡನೆ ನಿವೇದಿಸಿಕೊಂಡರೆಂದು ತಿಳಿದುಬರುತ್ತದೆ 'ಮಹಾತ್ಮರ ದೇಹಸ್ಥಿತಿಯು ಬಹುತೇಕವಾಗಿ ಏಕರೀತಿಯಲ್ಲಿದೆ' ಎಂದು ತಾ 7ರ ಡಾ ಸುಶೀಲಾ ನಾಯರ್ ಪ್ರಕಟಣೆಯನ್ನಿತ್ತಿದೆ ಸರ್. ಟಿ ಬಿ. ಸಪ್ರುಗಳು ಮಹಾತ್ಮಾಜೀಗೊಂದು ತಂತಿಬಿಟ್ಟು 'ದಯವಿಟ್ಟು ನಿಮ್ಮ ದೇಹಸ್ಥಿತಿಯ ಕುರಿತು ತಂತಿಬಿಡಿ. ನಾವೆಲ್ಲ ಪ್ರಾರ್ಥಿಸುತ್ತಿರುವ ಪೂರ್ಣಾರೋಗ್ಯ ದೂರೆಯುವ ವರೆಗೆ ಕೆಲಸಮಾಡಬೇಡಿ' ಎಂದು ವಿನಂತಿಸಿಕೊಂಡಿದ್ದಾರೆ. "ಅವರು ನಿತ್ರಾಣಗೊಂಡಿದ್ದಾರಾದರೂ ನಿರ್ಮಲೋತ್ಸಾಹದಲ್ಲಿದ್ದಾರೆ. ನಮ್ಮ ಆತುರ ಪಡುವ ಕಾರಣವಿಲ್ಲ" ಎಂದು ಮಹಾತ್ಮಾಜೀಯ ಪ್ರಕೃತದ ಮನೆಯೊಡತಿ ಲೇಡಿ ಥಾಕರ್ಸೆಯವರು ನಪ್ರುಗಳಿಗುತ್ತರವಿತ್ತಿದ್ದಾರೆ

ಬಿಡುಗಡೆಯ ಪುಣ್ಯ ಯಾರಿಗೆ"—

ಬಹ್ಪಂಶ ಲೇಡಿ ವೇವೆಲ್ಲಗೆ! ಅವರ ಜವಾಬ್ದಾರಿಯಂತ ಸೂಚನೆಯಾಗಿ ವೈಸರಾಯರದೇ 'ಗಾಂಧೀ ಬಿಡುಗಡೆಯ ಕುರಿತು ನಿಮ್ಮ ಅಭಿಪ್ರಾಯವೇನು? ಎಂದು ಪ್ರಶ್ನಿಸಲ್ಪಟ್ಟಾಗ 'ವಿಷಯವು ವೈಸರಾಯರ ಕೈಯಲ್ಲಿದ ಗಾಂಧಿಯವರ ಬಿಡುಗಡೆಯ ಮೂಲ ಸಂಬಂಧಿಕರು ಅವರೇ' ಎಂದು ಮಿ. ಅಮೆರಿ ಉತ್ತರವಿತ್ತಿದ್ದಾರೆ ಹಿಂದೀ ಸರಕಾರದ ಹುಚ್ಚು ದುರ್ಗಾಣವಾಗಿದ್ದ ಆಸನ್ದಿಗೆ ಲಾರ್ಡ ವೇವೆಲರು ಈ ಮಟ್ಟಿಗೆ ಒಂದೇ ಒಂದು ಮಿನಿಟು ಕೂಡಾ ಬಲಿ ಬೀಳಲಿಲ್ಲ ಮಹಾತ್ಮಾಜೀಯ ವಿಷಮಾವಸ್ಥೆಯೊಂದಿಗೆ ಅವರನ್ನು ಬಂಧ ಮುಕ್ತಗೊಳಿಸುವ ತನ್ನ ಖಂಡಿತಾಭಿಪ್ರಾಯವನ್ನು ಇಂಡಿಯಾ ಆಫೀಸಿಗೆ ತಿಳಿಸಿ, ಮಿ. ಅಮೆರಿಯವರ ಅನುಮತಿ ಪಡೆದು. ಸಮಯ ಮೀರುವ ಮೊದಲೇ ಆಗಾಖಾನ್ ಅರಮನೆಯ ಬಾಗಿಲು ತೆರೆಯುವ ಸ್ತುತ್ಯಕಾರ್ಯವನ್ನು ವೈಸರಾಯ ವೇವೆಲ್ ಸಾಧಿಸಿದ್ದಾರೆ ಸಂಚಾರದಲ್ಲಿರುವ ವೈಸರಾಯರು ನವ ಢಿಲ್ಲಿಗೆ ಇನ್ನು ತಾನೇ ಹೋಗಬೇಕು; ಸರ್. ಮಹಮ್ಮದ್ ಉಸ್ಮಾನ್ ಮತ್ತು ಸರ್ ಜೋನ್ ಥೋರ್ನೆಯವರ ಹೊರತು ಮಿಕ್ಕ ಎಗ್ಸಿಕ್ಯೂಟಿವ್ ಮೆಂಬರರು ತಿರುಗಾಟದಲ್ಲೇ ಇದ್ದಾರೆ, ಕಳದ ವಾರ ವೈಸರಾಯೀ ಕೌನ್ಸಿಲು ಸಭೆ ಸೇರಿದುದಿಲ್ಲ ಹೀಗಾಗಿ ಬಿಡುಗಡೆಯ ಈ ಅವಸರದ ನಿರ್ಧಾರವು ಅಮೆರಿ, ಅಥವಾ ವೇವೆಲರ ವ್ಯಕ್ತಿಗತ ತೀರ್ಮಾನವೆಂಬುದು ಸ್ಪಷ್ಟ ಅಮೆರಿ ಅಂತಹ ವ್ಯಕ್ತಿಯಲ್ಲವೆಂಬುದನ್ನು ನಾವು ಬಲ್ಲೆವು, 'ಅದರ ಹೊಣೆ ನನ್ನದಲ್ಲ' ಎಂದು ಅವರೂ ಒಪ್ಪಿಕೊಂಡಿದ್ದಾರೆ ಅಂದ ಮೇಲೆ ಅಖಿಲ ಪ್ರಪಂಚದ ನಿರ್ಮಾತೃ ಸ್ತುತಿ ಪಾತ್ರ-ನವ ಸ್ವ ಹಿಂದೀಯರ ಹೃತ್ಪೂರ್ವಕ ದನ್ಯವಾದಗಳ-ಸುರಿಮಳೆಯು ಲೋರ್ಡ್ ವೇವೆಲರ ಮ್ಯಾಲಿನ ಮೇಲೆ!

ಧುರೀಣರ ಹರ್ಷೋದ್ಗಾರ

ಮಹಾತ್ಮಾಜೀಯವರ ಆಕಸ್ಮಾತ್ ಬಿಡುಗಡೆಯು ಅಖಿಲ ಭಾರತದಲ್ಲಿ ಅನಿರೀಕ್ಷಿತ ನಿಧಿ ದೊರೆತಂತಹ ಕೌತುಕಾನಂದವನ್ನೆಬ್ಬಿಸಿದ ಬ್ರಿಟಿಷ್ ಸರಕಾರದ ಹೃದಯದೊಂದು ಮೂಲೆಯಲ್ಲಾದರೂ ಗಾಂಧಿಜೀವದ ಮೇಲಿನ ಸಹಾನುಭೂತಿಯ ಅಂಶವಿಲ್ಲವೆಂದು ಕೊನೆಯ ಘಳಿಗೆಯವರೆಗೂ ನಂಬಿದ್ದವರಿಗೆ ತಾ ೬ರ ಸರಕಾರೀ ಪ್ರಕಟಣೆಯು ರಣಬೇರಿಯಿಂದ ಹೊರಟ ತಂಬೂರಿ ಸ್ವರದಂತಹ ಕೌತುಕವನ್ನುಂಟುಮಾಡಿತು. ಕರ್ಣಾಕರ್ಣಿಕೆಯಿಂದ ಈ ಶುಭವಾರ್ತೆ ಕೇಳಿದ ಧುರೀಣರು ಕೂಡಾ ಪ್ರಥಮತಃ ಅದನ್ನು ನಂಬದಾದರು. ಅಂತಹ ವಿಶ್ವಾಸವು ತಮ್ಮ ಯೋಚನಾಧಿಕ್ಯೊಂದು ನ್ಯೂನತೆಯೆಂಬ ಭಾವನೆಯಿಂದ ಸತ್ಯ ಶೋಧನೆಗಾರಂಭಿಸಿದರು. ಅದು ನಿಜವೆಂದಾಗ ಶ್ರೀಗಳಾದ ಶ್ರೀನಿವಾಸ ಶಾಸ್ತ್ರಿ, ವೆಂಕಟ ಸುಬ್ಬರಾವ್, ವೆಂಕಟರಾಮ ಶಾಸ್ತ್ರಿ, ಆರುಂಡೇಲ್, ರಾಜಗೋಪಾಲಾಚಾರಿ, ಫಜಲುಲ್ ಹಕ್, ಟಿ ಎಸ್. ಎಸ ರಾಜನ್, ಬಾಪ್ಪಮ್‌ಚೆಟ್ಟಿ, ಮಾಲವೀಯ, ಸಪ್ರು, ಶಾಸ್ತ್ರಿ, ಮಹಾರಾಜಾಸಿಂಗ್, ಸಾವರ್ಕರ್, ನಟಲ್ವಾಡ್ ಶ್ಯಾಮುಪ್ರಸಾದ್, ನಳಿನೀರಂಜನ್, ರಾಮರತನ್‌ಗುಪ್ತ, ಶ್ರೀ ಪ್ರಕಾಶ್ ಗಯ್ದಾರ್, ಸಿಡ್ವಾ, ಮಿಶ್ರ, ಜಗಜೀವನ್‌ರಾಮ್ ಮೊದಲಾದ ಸರ್ವಮುಖಂಡರೂ ಹರ್ಷಪುಳಕೋದ್ಗಾರವೆತ್ತಿದ್ದಾರೆ. ದೇಶವಿಡೀ ಸಂತೋಷ ಸಾಗರದಲ್ಲದ್ದಿದೆ ಗಾಂಧಿಜೀಯ ಕ್ಷಿಪ್ರಾರೋಗ್ಯ ಲಾಭಕ್ಕಾಗಿ ರಾಷ್ಟ್ರದ ಮೂಲೆಮೂಲೆಗಳಲ್ಲಿ ಪ್ರಾರ್ಥನೆ ನಡೆಯುತ್ತಿದೆ ಬ್ರಿಟಿಷ್ ಅಮೇರಿಕ ಪತ್ರಿಕೆಗಳೂ ಸಂತೋಷ ಪ್ರದರ್ಶಿಸಿವೆ ಪಂಡಿತ ನೆಹರುಗಳೇ ಮೊದಲಾದ ವರ್ಕಿಂಗ್ ಕಮಿಟಿ ಸದಸ್ಯರನ್ನೂ ಬಿಡುಗಡೆ ಮಾಡಿ ಕಾಂಗ್ರೆಸ್ ಪ್ರಮುಖರ ಮಂತ್ರಾಲೋಚನೆಗನುಕೂಲಮಾಡಿಕೊಡಬೇಕೆಂಬ ಅಭಿಪ್ರಾಯವೆದ್ದಿದೆ

☞ ಮುಟ್ಟುಗುಳಿಕೆ ☜

ಹಲತಿಂಗಳಿಂದ ಕಟ್ಟಿಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದಲೂ —'ಕುಮಾರಿ' (PILLS) ನಿಶ್ಚಿತವಾದ ವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವದ, ಆರಂಭದ ಗರ್ಭಧಾರಣೆಯನ್ನು ನಿಲ್ಲಿಸುವದು' ನ ನಿರ ರು ಮಂದಿ ತೃಪ್ತರಾಗಿದ್ದಾರೆ ಬೆಲೆ ರೂ. 3 ಕೈವಿಶಾರದ ಕೇಸುಗಳಿಗೆ ರೂ. 5. (ವಿ ಪಿ, 12 ಆಣೆ ಅಲಾಯಿದ)

Mrs P DEVEE, F.D S (N)
TOLLYGUNGE CALCUTTA.
ಸ್ಟಾಕಿಸ್ಟ Popular Stores,
P B 60, MANGALORE.

THE BEST PREVENTIVE IN EPIDEMICS OF CHOLERA

"BHUVANENDRA"

CHANDRAMAS

Will give you the best results. Try once and be satisfied with the results

Dose: For adults:- 3 to 5 drops 2 to 3 times a day with the decoction of cloves or ajwan

For Children: 1 to 2 drops with the said decoction

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ಸಾಂಕ್ರಾಮಿಕ ರೋಗಗಳಲ್ಲಿ ಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ ೩ರಿಂದ ೫ ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; **ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; . ಡಾ. ಕೆ. ಶೇಷಗಿರಿ ಪೈ** L. I. M.; **ಡಾ. ವೆಂಕಟ ರಾವ್, ಕೊರಡ್ಕರ್; ನವಭಾರತ ಬುಕ್ ಡಿಪೊ.**

The Pangal Nayak Bank Limited.

(Incorporated in 1920)

Registered Office: Court Road, UDIPI

Branches at— Udipi, Mangalore, Katapadi, Kanhangadi Kinnigoli and Nileshwar, South Canara District

Discounting of demand and short-term negotiable instruments for approved parties granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public

For business proper please enquire at any one of our Offices.

15th April 1944.

ದಿ ಜುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಬೊಂಬಾಯಿ

ಚೀಫ್ ಏಜನ್ಸಿ ಆಫೀಸು:— ಉಡುಪಿ.

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ನಿಮ್ಮ ಮತ್ತು ನಿಮ್ಮ ಕುಟುಂಬದ ಭಾವೀ ಕಲ್ಯಾಣಕ್ಕಾಗಿ.

ತ್ವರೆಯವಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

ಪಿ. ಡಿ. ನಾಯಕ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Co. Ltd., Bombay.

ದಿ ಮುಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯೊಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಪೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಕುಂಬಾರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ್, ೭ರ್. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಜಿಸ್ಟರು ಮಾಡಲ್ಪಟ್ಟದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ನೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಸೆಟ್ಟು ಕಡಿಮೆ ೪೮ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ**

FOR SAFETY & SERVICE

THE VIJAYA BANK, LTD.,

Head office: MANGALORE

Branches at:—Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ

ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು:— ಮಂಗಳೂರು.

ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. of Mysore.
Certified by the Agent of the Govt. of India in Ceylon.

REGD

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕಡಿತ, ಚೇಳು ವಿಷ ಮುಂತಾದ ಚೇಪ ಕೀಟಾದ ವೇದನೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಸ್ತ್ರೀ ರುಕಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಈಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

EDITED PRINTED & PUBLISHED BY K H. SHETTY AT THE NAVAYUGA PRESS, UDIPI, S. INDIA

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Regd. No. M. 3618.

Estd. 1921

1944ನೇ ಜನವರಿಯಿಂದ ಮೂರನೆ ಸಂಪುಟಾರಂಭವಾಗಿದೆ.

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿಗೆ ರೂ. 0-4-0

ಮಾದರಿ ಪ್ರತಿಗೆ ಒಂದಾಣೆ ಸ್ಟಾಂಪಿನೊಂದಿಗೆ ಬರೆಯುವುದು.

'PRAKASHINI'
NAVAYUGA PRESS
UDIPI

NAVAYUGA
ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೩೭

FOUNDER
Sri. A. B. Shetty.

Vol. 24
No. 37

NAVAYUGA— Kannada Weekly —UDIPI, S. I.

ಉಡುಪಿ • 18—5—1944 • ಮಂಗಳೂರು.

ANTARANGA
UDIPI

ಅಖಿಲ ಕರ್ನಾಟಕದ ಹೊಸ ಮಾದರಿಯ ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ 4-8-0

ಬಿಡಿ ಪ್ರತಿಗೆ 0-1-6

ಮೆನೇಜರ್,
ಅಂತರಂಗ, ಉಡುಪಿ.

The Canara Mutual Assurance Co., Ltd.

NEW APPOINTMENTS.

Applications from candidates of S. S. L. C standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

UDIPI, 5-4-1944 } T. R. A. Pai, MANAGING DIRECTOR

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್. ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತರಕ್ತವನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸಬಹುದು.

ಕತೆ ಕಾದಂಬರಿಗಳು—ಕವನ,—ನಾಟಕಗಳು

ಯಾವ ಪುಸ್ತಕ ಬೇಕಾದರೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗಾಂಧಿಜೀ ಕಾಹಿಲೆಯೊಡನೆ ಕಾದಾಡುತ್ತಿದ್ದಾರೆ!

— ಹದಿನೈದು ದಿನ ಮೌನ. —

ಬಿಡುಗಡೆಯಾದಂದಿನಿಂದ ಮಹಾತ್ಮಾಜೀಯ ಪ್ರಕೃತಿ ದಿನದಿಂದ ದಿನಕ್ಕೆ ಸುಧಾರಿಸುತ್ತಿದೆ. ಗಾಂಧಿಜೀಯ ಪಾಲಿಗೆ, ಬಂದ ವಿಮೋಚನೆಯೆಂಬುದು ಸಾಮಾನ್ಯ ಕೈದಿಗೆ ಬಂದಮುಕ್ತತೆಯೇಯು ವಂತಹ ದೈಹಿಕ ಸ್ವಾತಂತ್ರ್ಯವನ್ನು ಕೊಡುವಂತಿಲ್ಲ. ಸತ್ಯಸ್ಥಿತಿಯು ಹೀಗಿರುವುದು. ಮಹಾತ್ಮರು ಆಗಾಖಾನ್ ಅರಮನೆಯಲ್ಲಿದ್ದಾಗ ಸಂಕಾಂಡ ನಿರ್ವಾಣ, ನಿಜ ಅಂಥವೇ, ಅವರ ವೃಗಾವಲಾಗಿ ನಿಂತು ಜನಗೊಂದಲವನ್ನು ನಿವಾರಿಸಿದ್ದಿತು. ಅಲ್ಲಿಂದ ಹೊರಬಿದ್ದ ಮೇಲೆ ಕೋರ್ಯನರ್ ಸ್ವಾರೇಲಾಬಿದ ದಾಕ್ಷಿಣ್ಯಯುಕ್ತ ನಿರ್ಬಂಧವು ಪ್ರೇಕ್ಷಕ ಪ್ರವಾಹಗಳನ್ನು ಪೂರ್ತಿ ತಡೆಗಟ್ಟಲು ಅಶಕ್ತವಾಗಿದೆ. ಜನತೆಯ ಹೃದಯ ಸೀರಕ್ಷೇರಿಸಿಕೊಂಡಿರುವ ಗಾಂಧೀ ಮೂರ್ತಿಗೆ ಎಲ್ಲಿಲ್ಲಿಯೂ ಆಗಾಖಾನ್ ಅರಮನೆಯಂತಹ ಸ್ಥಾನ ಬದಿ ತಯೇ ಹೊರತು ಮೈಬಿಟ್ಟು ಸಂಚರಿಸಲಿಕ್ಕಿಲ್ಲ! ಆದರೆ ಮಾನವನ ಜೀವಾಳವಾಗಿರುವ ಮಾನಸಿಕ ನೆಮ್ಮದಿ, ವ್ಯವಹಾರ ಸ್ವಾತಂತ್ರ್ಯಗಳು ದೂರತ ಗಾಂಧಿಜೀ ಈಗ ಹೊಸಜೀವ ಸಂಪಾದಿಸಿದ್ದಾರೆ. ಮೇಲಾಗಿ ಕಠಿಣ ಸಜೆ ಮತ್ತು ಸುಸಿಗೆ ಕಾಟಕ್ಕೆ ಹೆಸರು ಹೋದ ಆಗಾಖಾನ್ ಅರಮನೆಯ ವಾತಾವರಣವು, ಈ ರಕ್ತಾಭಾವದ ನಿತ್ರಾಣೀ ರೋಗಿಯನ್ನು ಆಹುತಿಗೊಳ್ಳಲು ಏನೂ ಪ್ರಯಾಸವಿರಲಿಲ್ಲ. ಸಕಾಲದಲ್ಲಾದ ಅವರ ಬಿಡುಗಡೆಯು ಮೃತ್ಯು ದವಡೆಯೊಳಗೆ ನುಗ್ಗುತ್ತಿದ್ದವನನ್ನು ಹೊರಗೆಳದು ಹಾಕಿದಂತಾಗಿದೆ. ಈಗ ಸಾವಕಾಶವಾಗಿ ಅವರು ಸುಧಾರಿಸ ಹತ್ತಿದ್ದಾರೆ.

ಪರ್ಣಕುಟಿಯ ಪಂಚಮಿ!

ತಾ ೬ನೇ ಮುಂಜಾನೆ ಪರ್ಣಕುಟಿಗೆ ಒಂದು ಹೊಕ್ಕ ಗಾಂಧಿಜೀ ಲೇಡಿ ಠಾಕರ್ಸೀಯವರ ಐದೇ ದಿನಗಳ ಅತಿಥಿಯಾಗಿದ್ದರು. ತಾ. 11ನೇ ಮುಂಜಾನೆ ಪರಿವಾರ ಸಮೇತ ಜುಹುವಿಗೆ ಹೊರಟು ಹೋದರು. ಬಿಡುಗಡೆಯ ಪ್ರಾರಂಭದ ಆತುರಗಳೆಲ್ಲ ಇಳಿಯುವವರೆಗೆ ಮಾತ್ರ ಅವರು ಪರ್ಣಕುಟಿಯ ಆಶ್ರಯ ಪಡೆದರು. ಆರೋಗ್ಯ ಸಂಪಾದನೆಗೆ ಪೂನೆಯು ಸರಿಹೋಗಿಸಿದ್ದಿಲ್ಲವೆಂದು ಡಾಕ್ಟರರ ಅಭಿಪ್ರಾಯವಿದ್ದಂತೆ ಗಾಂಧೀಜಿಗೂ ಆದಿಯಿಂದಲೂ 'ಜುಹುಸ್ವಪ್ನ' ಬೀಳುತಿತ್ತು. ಪ್ರಥಮತಃ ಪರ್ಣಕುಟಿಯ ಮೆಟ್ಟಲನ್ನು ಹತ್ತಲು ಲೇಡಿ ಠಾಕರ್ಸೀಯ ತೋಳಿನಾಧಾರದಿಂದ ಮಾತ್ರ ಗಾಂಧಿಜೀಗೆ ಸಾಧ್ಯವಾಗಿತ್ತು. ಅವರ ಅಂದಿನಿಂದಲೇ ಅನ್ಯರ ತೋಳನ್ನಾಗಲೀ ತನ್ನ ಕೋಲನ್ನಾಗಲೀ ಅಧರಿಸದೇನೇ ಅವರು ನಡೆಯ ಕಲಿತರು. ರೋಗಿಯಾಗಿ ಇರುವ ಬದಲಿಗೆ ಡಾಕ್ಟರರ ಭಯರೋಗನಿವಾರಣೆ ಮಾಡುವ ಡಾಕ್ಟರರ ಡಾಕ್ಟರರಾದರು! ಮೂರನೇ ದಿನ ಆಗಾಖಾನ್ ಅರಮನೆಗೆ ಹೋಗಿ, ಬಾ-ದೇಸಾಯಿಗಳ ಸಮಾಧಿಗಳಿಗೆ ಪುಷ್ಪಾರ್ಪಣೆಮಾಡಿ ಬಂದ ಗಾಂಧಿಜೀ ಪರ್ಣಕುಟಿಯ ಅದೇ ಮೆಟ್ಟಲನ್ನು ನಿರಾಧಾರ ತ್ರಾಣಿಯಾಗಿ ಹತ್ತುತ್ತಿರುವ ಗಾಂಧಿಜೀಯನ್ನು ಕಂಡು ಸರೋಜಿನಿದೇವಿ ತಮಾಷೆಮಾಡಿದ್ದರು— 'ಅಗೋ, ನಮ್ಮ ಪಹಿಲ್ವಾನ್ ಹೋಗುತ್ತಿದ್ದಾನೆ!' (ಮರಣೋನ್ಮುಖ ರೋಗಿಯೆಂದು ಬಾಪಿಸಿ, ಬಿಡುಗಡೆ ಮಾಡಿದರೆ ಮೂರನೇ ದಿನವೇ ಪಹಿಲ್ವಾನ್ ಆಗಿಹೋದ ಈ ಅಪಾಯಕರ ವ್ಯಕ್ತಿಗಿನ್ನೇನು ಚಿಕಿತ್ಸೆ?—ಎಂದು ಲೋರ್ಡ್ ವೇವೆಲರು ಚಿಂತೆಗೊಳಗಾಗಿರಬಹುದ?) ಪೂನೆಯ ಪ್ರಸಿದ್ಧ ಆಯುರ್ವೇದ ಡಾಕ್ಟರ್ ಬದ್ಕಂಕರರು ನಾಲ್ಕನೇ ದಿನ ಪರ್ಣ ಕುಟಿಗೆ ಬಂದಿದ್ದರು. ತಾನು ಒದುಕಿಯೇ ಸಿದ್ಧವೆಂದು ಗಾಂಧಿಜೀ ಬದ್ಕಂಕರರಿಗಿಂತಲೂ ಬದ್ಧಕಂಕಣರಾಗಿದ್ದರೆಂಬುದು ಆಗ ತಿಳಿಯಿತು. "ನನಗೆ ದೀರ್ಘಕಾಲ ಬಾಳುವ ಬಯಕೆಯಿದೆ. ಇನ್ನೊಂದು 25ವರುಷ ಬದುಕಲಾಗುವಂತೆ ನಿಮ್ಮ ಔಷಧಗಳು ನನಗೆ ಸಹಾಯ ಮಾಡಬಲ್ಲವೆ?"-ಎಂದವರೊಡನೆ ಗಾಂಧಿಜೀಯ ಪ್ರಶ್ನೆ. ಈ ಪ್ರಶ್ನೆಯು ಆ ಆಯುರ್ವೇದ ಡಾಕ್ಟರರ ಹುಟ್ಟುಗುಣವನ್ನೆಚ್ಚರಗೊಳಿಸಿತು. ಅವರು ತಮ್ಮ ಕೆಲವು ಟೋನಿಕ್‌ಗಳ ವರ್ಣನೆಗಾರಂಭಿಸಿದರು. ಗಾಂಧಿಜೀ ... ಹಾಕಿ ಕೇಳಿದರು. "ಈ ವರ್ಣನೆಗಳನ್ನು ನಿಮ್ಮ ಟೆಕ್ಸ್ಟ್ ಬುಕ್‌ಗಳಿಂದ ಆಯ್ದುಕೊಂಡಿರಾ? ಅಥವಾ ಸ್ವಾನುಭವದಿಂದಲೋ" ಡಾಕ್ಟರರು ನನ್ನ ಅನುಭವದ ಮಾತಿದು ಎಂದೇ ಉತ್ತರಕೊಟ್ಟರೆನ್ನಿ.

ಗಾಂಧಿಜೀ ಈ ತನಕ ಇಂತಹ ಲಘು ವಿನೋದಗಳಿಗಲ್ಲದೆ, ದೇಶದ ಪರಿಸ್ಥಿತಿ ಸಂಘಟಿತದ ಬಿಗು ವಿಚಾರವಾವುದಕ್ಕೂ ತಲೆ ಹಾಕಿಲ್ಲ; ಮಾತಾಡುವದಂತಿರಲಿ, ಅನ್ಯರ ಮಾತನ್ನಾಲಿಸುವಾಗ ಕೂಡಾ ಗಾಂಧಿಜೀಯ ಆಯಾಸ ಹೆಚ್ಚುತ್ತಿದೆಯಾದ್ದರಿಂದ, ರಾಜಕೀಯ ವಿಚಾರವಾವುದಕ್ಕೂ ಅವಕಾಶವೀಯದ ಡಾಕ್ಟರರೇ ಈಗ ಪಂದನಾರ್ಹ ದೇಶಕಂಟಕರಾಗಿ ಮಾರ್ಪಟ್ಟಿದ್ದಾರೆ!

ಜುಹು ಪ್ರಯಾಣ

ಮೊದಲ ದಿನವೇ ವ್ಯವಸ್ಥೆಯಾದಂತೆ ತಾ 11ನೇ ಮುಂಜಾನೆ ಗಾಂಧಿಜೀ ಮತ್ತು ಅವರ ಪರಿವಾರವು ಬೊಂಬಾಯಿಗೆ 12 ಮೈಲು ದೂರದ, ಕರಾವಳಿ ವಲಯ ಜುಹುವಿಗೆ ಬಂದು ಮುಟ್ಟಿತು. ಕೈದಿಗಳನ್ನು ಹಿಡಿದಲ್ಲಿಯೇ ಕೊಂಡೊಯ್ದು ಇಳಿಸಿ ಬಿಡುವ ಸರಕಾರೀ ಸಂಪ್ರದಾಯದಂತೆ ಜೈಲುಗಳ ಇನ್ಸ್ಪೆಕ್ಟರ್-ಜನರಲರು ರೈಲ್ವೆಯಲ್ಲಿ ಗಾಂಧಿ ಪರಿವಾರಕ್ಕಾಗಿ ಎರಡನೇ ತರಗತಿಯ ಏರ್ಪಾಡು ಮಾಡಿದ್ದರು. ಮೂರನೇ ತರಗತಿಯಲ್ಲೇ ಪ್ರಯಾಣ ಮಾಡುವ ಗಾಂಧಿಜೀ ವಿನೋದಗೊಂಡು ಕೇಳಿದರು. "ಒಂದನೇ ತರಗತಿಯೇಕಿಲ್ಲ? ಸರಕಾರವು ನಮ್ಮನ್ನು ಕೈದು ಮಾಡಿ ಇಲ್ಲಿಗೆ ತಂದಿದ್ದುದು ಒಂದನೇ ತರಗತಿಯಲ್ಲೇ". ಕೊನೆಗೆ ಗಾಂಧಿಜೀಯ ಮರ್ಜಿಗನುಗುಣವಾಗಿ, ಮೂರನೇತರಗತಿಯ ಕಂಪಾರ್ಟ್‌ಮೆಂಟೇ ದೊರೆಯಿತು. ಅವರನ್ನು ಕುರ್ಚಿಯೊಂದರಲ್ಲಿ ಕುಳ್ಳಿರಿಸಿ ರೈಲಿಗೊಯ್ಯಬೇಕಾಯಿತು. ಪ್ರಯಾಣವು ಗುಟ್ಟಾಗಿದ್ದುದರಿಂದ ವಿಶೇಷ ಸಂದಣಿ ನೆರೆದಿರಲಿಲ್ಲ, ರೈಲು ಹೊರಬಾಗ ಜೈಕಾರವದ್ದಿತ. ದಾದರ್ ಸ್ಟೇಶನಿನಲ್ಲಿ ಅಸಂಖ್ಯಾತ ಜನರು ನೆರೆದು ಕಾಯುತಿದ್ದುದರಿಂದ ಈ ಗಲಭೆಯ ನಿವಾರಣೆಗಾಗಿ ಮಾತುಂಗಾ ... ರೈಲನ್ನು ನಿಲ್ಲಿಸಿ ಗಾಂಧಿಜೀಯನ್ನು ಕೆಳಗಿಳಿಸಿದರು. "ನನ್ನ ಬೆಗ್ಗೇ ಚೆಲ್ಲಿದೆ" ಎಂದು ಇಳಿದೊಡನೆ ಅವರ ಪ್ರಶ್ನೆ. ಬೊಂಬಾಯಿ ಮೆಯರ್ ನಾಗಿನ್‌ದಾಸ್ ಮಾಸ್ಟರ್, ಭುಲಾಭಾಯಿ ದೇಸಾಯಿ, ಮೊರಾರ್ಜಿ, ಸ್ವಾಮಿ ಆನಂದ, ದೇವದಾಸ ಗಾಂಧಿ ಮೊದಲಾದವರು ಸ್ವಾಗತಕ್ಕೆ ತಯಾರಿದ್ದರು. ಕುಶಲ ಪ್ರಶ್ನೆ ನಡೆದ ಮೇಲೆ, ಡಾ। ಸುಶೀಲಾ ನಾಯರ್, ಡಾ। ಗಿಲ್ಡರ್, ದೇವದಾಸಗಾಂಧಿ, ಮೊರಾರ್ಜಿಯವರೊಂದಿಗೆ ಒಂದನೇ ಕಾರಿನಲ್ಲಿ ಗಾಂಧಿಜೀ ಕುಳಿತರು. ಎರಡನೆಯದರಲ್ಲಿ ನಾಗಿನ್‌ದಾಸ್ ಮಾಸ್ಟರ್ ಮತ್ತು ಭುಲಾಭಾಯಿ ದೇಸಾಯಿ ಹೊರಟರು. ಸರೀ 10 ಘಂಟೆ 55 ಮಿನಿಟಿಗೆ ಎಲ್ಲರೂ ಜುಹುವಿನಲ್ಲಿ ಒಕ್ಕಲಾದರು. ಆಧುನಿಕ ಸಾರದರಂತೆ ಅಲ್ಲಿಯೂ ಪ್ರತ್ಯಕ್ಷವಾದ ಪತ್ರಿಕಾ ಬಾತ್ಮೀದಾರರು 'ಹೇಗೆ, ಸುಖಪ್ರಯಾಣವೆ?' ಎಂದು ಪ್ರಶ್ನಿಸಿದಾಗ (ಗುಟ್ಟು ಹೊರ ಹಾಕುವದೊಂದನ್ನುಳಿದು ಇಂತಹ ಯೋಗಕ್ಷೇಮ ವಿಚಾರವು ವರದಿಗಾರರಿಗೆ ಜನ್ಮಾರಭ್ಯದಿಂದ ಹೊಸತಾದರೂ, ಗಾಂಧಿಜೀಯ ಮಟ್ಟಿಗೆ ಸದ್ಯಕ್ಕಿಷ್ಟೆ!) "ಹೌದು" ಎಂದು ಗಾಂಧಿಜೀಯ ಉತ್ತರ. ಶಂಕಿಸುತ್ತಾ ಬಾತ್ಮೀದಾರರು ಕೇಳಿದರು. "ಪತ್ರಿಕೆಗಳಿಗೆ ಕೊಡುವಂತಹದೇನಾದರೂ ಇದೆಯೇ?" ಮಹಾತ್ಮರು ನಗುನಗುತ್ತಾ ಹೇಳಿದರು- "ನಾನು ಇಬ್ಬರು ಡಾಕ್ಟರರ ಮಧ್ಯದಲ್ಲಿದ್ದೇನೆ"!

ಅಲ್ಲಿಯ ವಸತಿ.

ಜುಹುವಿನ ಗಾಂಧೀ ಗೃಹವೆಂದರೆ 'ಗಾಂಧೀಗ್ರಾಮ' ಎಂಬ ನಾಮಧಾರಿ ಮೊರಾರ್ಜಿ ಆಸ್ತಿಯಲ್ಲಿರುವ ಒಂದು ಮನೆ. 1924ರಲ್ಲಿ ನಡೆದ ಓಪರೇಶನಿನ ನಂತರ ಮಹಾತ್ಮರು ವಿಶ್ರಾಂತಿ ಪಡೆದಿದ್ದ ನಿಲಯವಿದು. ಗಾಂಧಿಜೀಯ ಹಳೆಯ ಮಿತ್ರ-'ವ್ಯಾಪಾರಿಗಳ ಧೊರೆ' ಎಂಬ ಮಹಾತ್ಮಾಜೀ ದತ್ತ ಬಿರುದುಧಾರಿ-ದಿವಂಗತ ನರೋತ್ತಮ ಮೊರಾರ್ಜಿಯವರೇ ಅದರ ಮೂಲ ಮಾಲಕರು. ಅವರ ಪುತ್ರ-ಈಗಿನ ಧೊರೆ—ಶಾಂತಿಕುಮಾರ ಮೊರಾರ್ಜಿಯವರು ಅಲ್ಲಿಯ ಮುಖ್ಯ ಭವನ ಸಮೇತ ಇಡಿಯ ವಲಯವನ್ನೇ ಈಗ ಗಾಂಧಿಜೀ ವಸತಿಗಾಗಿ ಬಿಟ್ಟುಕೊಟ್ಟಿದ್ದಾರೆ. ಅ... ಸ್ಫೂರ್ತಿಪ್ರೇರಕ ಪ್ರಕೃತಿ ಸೌಂದರ್ಯವುಳ್ಳ ಸ್ಥಳ. ಗಿಳಿ ಮತ್ತು ಕೆಂಪು ವರ್ಣದೆಯ ಗುಬ್ಬಚ್ಚಿ ಹಕ್ಕಿಗಳ ತವರು ನೆಲೆಯಾಗಿರುವ ಬೈನೀ ಮರಗಳು ಮನಾನಂದಕರವಾಗಿ-ನಯನ ಮನೋಹರವಾಗಿ ಅಲ್ಲಿ ಸುತ್ತಲೂ ಬೆಳೆದಿವೆ. ಜಲಸ್ನಾನಕ್ಕೆ ಹೆಸರು ಹೋದ ಜುಹು ಸಮುದ್ರ ಕಿನಾರೆಯಿಂದ ಗೂರವಿದ್ದು, ಇಲ್ಲಿ ಪ್ರಕೃತಿದೇವಿ

(೬ನೇ ಪುಟ ನೋಡಿ.

Degrees Books Medicines
Free H L M S.M, B H M D, etc
Free Homeo Ayur Unani Naturco degree by post also—Practitioner also get soon
Homeo Materiamedica, Rs 5 Homeo Practice book Rs 4 Insanity Cure Pills Rs. 10 Inclose 2 annas stamp —
Prof. Dr N H Chhatbar,
Principal Indian Homeopathic Institute & Society (Govt Regd)
P O MAHUVA (Kathiawar Dt India.)

Sidha-Kalpa Kavach (Regd)
No 3 Rs 2 No 2 Rs 5 No 1 Rs. 7 Special Rs 10, Extra Special Rs 17 for love marriage health wealth Ask an six questions with M O Re 1/4 and get correct answers by returnpost Life reading Rs 10 No V P P Send M O Free, pamphlets
Prof Dr N H, Chhatbar
P. O MAHUVA (Kathiawar India)

The Victory Club
Both Vegetarian & Non-vegetarian dishes
Old Post office Building,
VICTORY CLUB ROAD, UDIPI.
(Furnishing Homes & Estates Ltd)
ಅತ್ಯಾಧುನಿಕ ನಾಗರಿಕ ವ್ಯವಸ್ಥೆಯಿಂದೊಡಗೂಡಿದ ಭೋಜನ ಮತ್ತು ವಿಶ್ರಾಂತಿ ಗೃಹ.
ಸಾಮಾನ್ಯತರದ 0—6—0 ಊಟವೂ ದೊರೆಯುತ್ತದೆ.
ವಿಕ್ಟರಿ ಕ್ಲಬ್
ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿದೆ.
ಹಳೆ ಪೋಸ್ಟಾಫೀಸು ಕಟ್ಟಡ, ವಿಕ್ಟರಿ ಕ್ಲಬ್ ರೋಡ್, ಉಡುಪಿ.

ನೋಟೀಸು.

ದಿ ಉಡುಪಿ ಯಗ್ರಿಕಲ್ಚರಲ್ ಇಂಡಸ್ಟ್ರಿಯಲ್ ಸೊಸೈಟಿ L. No 2803 ಪಾಲು ಮಾಲಕರಿಗೆ ತಿಳಿಯಪಡಿಸುವದೇನಂದ್ರೆ, ಮ। ರಾ। ಡೆಪ್ಯುಟಿ ರಿಜಿಸ್ಟ್ರಾರರವರು R. C. 1984/4 B ತಾ। 29-3 44ರಲ್ಲು ಕೊಟ್ಟ ಹುಕುಂ ಮೇರೆಗೆ ಸದ್ರಿ ಸಂಘದ ಡೈರೆಕ್ಟರ್ ಬೋರ್ಡಿನವರು ತಾ 11-5-44ರಲ್ಲು ಮಾಡಿದ ನಿರ್ಣಯ ಪ್ರಕಾರ ಯೆಲ್ಲಾ ಪಾಲುಗಾರರೂ ತಮ್ಮ ಪಾಲಿನ ಹಣವನ್ನು ತೆಗೆದು ... ಹಿಂದಾಗಿಯೂ, ಸೈಕವಾದ ಪಾಲುಗಾರರ ವಾರ್ಸಿದಾರರು ತಮ್ಮ ನ್ಯಾಯವಾದ ವಾರ್ಸಿತಕ್ಕನ್ನು ರುಜು ಪಡ್ಸಿ ತಮ್ಮ ಹಣಗಳನ್ನು ಪಡಿಯಬೇಕಾಗಿಯೂ, ಸಹಾ ಅಪೇಕ್ಷಿಸುವದಾಗುತ್ತದೆ.

U. Keshava Prabhu
Secretary.

12—5—1944
ಉಡುಪಿ

ಯುದ್ಧಗತಿ-ಇಟೆಲಿಯಲ್ಲಿ ನವಧಾಳಿ!

ಕಳೆದ ವಾರದಲ್ಲಿ, ದ್ವಿತೀಯ ರಂಗಾರಂಭಕ್ಕೆ ಇನ್ನು ವಿಳಂಬವಾದರೆ ನಿರಾಶೆಯೇ ಗತಿಯೆಂಬಷ್ಟು ಆತುರವೇರಿತ್ತು. ಆಸ್ಸಾಮು ರಣರಂಗದಿಂದ ಒಂದು ದಿನ ಮಿತ್ರ ಪ್ರಗತಿಯ ವಾರ್ತೆ ಬಂದರೆ ಮರುದಿನವೇ ಜಪಾನರೊತ್ತಡದ ಸುದ್ದಿ ಬಂದಿದೆ. 'ಕೊನೆಯುಸಿರು ಬಿಡುವವರೆಗೆ ಸೆಬಸ್ತಾಪೋಲನ್ನು ಬಿಡಬೇಡಿ' ಎಂದು ಹಿಟ್ಲರನ ಆಜ್ಞೆ ಶಿರಸಾವಹಿಸಿ ನಿಂತ ನಾಜೀ ಸೇನೆಯ ಮೇಲೆ ಗಿಡುಗ ಧಾಳಿ ನಡಿಸಿ ಕೆಂಪುಸೇನೆ ಸೆಬಸ್ತಾಪೋಲನ್ನು ಕಿತ್ತುಕೊಂಡುದೊಂದು ಗಣನೀಯ ಯುದ್ಧ ಘಟನೆ-ಇಟೆಲಿಯಲ್ಲಿ ಮಿತ್ರ ಸೈನಿಕರು ನೂತನ ಧಾಳಿ ಹೂಡಿ ಮುಂದೊತ್ತಲಾರಂಭಿಸಿರುವದೂ ಒಂದು ಮಹಾ ಸಾಹಸವೇ. ತನ್ನ ಶಕ್ತಿ ಪೊತ್ತದಲ್ಲಿ ಇಷ್ಟರಲ್ಲೇ ಮುಕ್ಕಾಲಂಶವನ್ನು ಕಳಕೊಂಡಿರುವ ಚೈನದ ಅವತಾರವನ್ನು ಈ ಬಾರಿ ಪೂರ್ತಿ ಮುಗಿಸಿ ಬಿಡಬೇಕೆಂದು ಜಪಾನರು ಹೊರಟಂತಿವೆ. ಇದಂತೂ ಭಯಾನಕ ವಿದ್ಯಮಾನ. ಆಕ್ರಮಿತ ಯುರೋಪಿನ ಮೇಲೆ ಅಧಿಕ ಸಂಖ್ಯೆಯ ಆಕಾಶ ಧಾಳಿಗಳು—ಸಮುದ್ರದಲ್ಲಿ ವೈರಿ ಹಡಗ ಯು ಬೋಟುಗಳ ಬೇಟೆ—ಇವು ಯಥಾವಿಧಿ ನಡೆದಿವೆ.

ಇಟೆಲಿಯ ನವಪ್ರಯತ್ನ.

ಒಂದೆರಡು ತಿಂಗಳ ಪೂರ್ವದಲ್ಲಿ, ತಮ್ಮ ಕೊನೆಯಂಕದ ಹೊಡೆತವಾಗಿ ಕೆಸಿನೋದಲ್ಲಿ ಆರಂಭಿಸಿದ ಧಾಳಿಯು ನಿಷ್ಫಲಗೊಂಡ ಮೇಲೆ ಇಟೆಲಿಯಲ್ಲಿ ಮಿತ್ರ ಸೇನೆಗಳು ಬಕಧ್ಯಾನ ನಿರತವಾಗಿದ್ದವು. ಆದರೆ ಈ ಅವಧಿಯನ್ನು ಕೇವಲ ಚಿಂತೆಯಲ್ಲೇ ಮಿತ್ರ ಸೇನಾನಿಗಳು ಕಳೆದಿಲ್ಲವೆಂಬುದರ ದ್ಯೋತಕವಾಗಿ ಮೇ ತಾ 11ರಲ್ಲಿ ಜರ್ಮನರ ಮುಖ್ಯ ರಕ್ಷಣಾ ಮುಖವಾದ ಗುಸ್ಟೊವ್ ಲೈನಿನ ಮೇಲೆ ನೂತನ ಧಾಳಿ ಆರಂಭವಾಗಿದೆ. ವೈರಿಗಳ ಆತಂಕವಿಲ್ಲದೆ, ಜನರಲ್ ಅಲೆಕ್ಸಾಂಡರರು ತನ್ನ ಸೇನಾತಂಡಗಳನ್ನು ಪುನರ್ಘಟಿಸಿ, ಹೊಡೆತವನ್ನು ಪ್ರಾರಂಭಿಸಿದ್ದಾರೆ. ಈ ಧಾಳಿಯ ಪ್ರಾಬಲ್ಯವನ್ನು ನಾಜಿಗಳೂ ಒಪ್ಪಿಕೊಂಡಿದ್ದಾರೆ. 'ಕೊನೆಯ ಹೋರಾಟಗಳಲ್ಲಿ ಮೊದಲನೆಯದು' ಎಂದು ಈ ಧಾಳಿಗೆ ಮಿತ್ರ ಸೇನಾನಿಗಳ ನಾಮಕರಣ. ಅರ್ಥಾತ್ ಮುಂದಿನ ದ್ವಿತೀಯ ರಂಗ ಸೂರ್ಯೋದಯದ ಮೊದಲ ಅರುಣೋದಯವಿದು ಎಂಬಿದನ್ನು ತಿಳಿಯಲಾಗಿದೆ. ಮಿತ್ರರ ಎಂಟು ಮತ್ತು ಐದನೇ ಸೇನೆಗಳು ಈ ಧಾಳಿಯನ್ನಾರಂಭಿಸಿವೆ. 8ನೇ ಸೇನೆಯು ರೇಪಿಡೋ ಹೊಳ ದಾಟಿ ಮುನ್ನುಗ್ಗಿರುವದೆಂದೂ ಜರ್ಮನರ ಪ್ರಬಲ ಪ್ರತಿಭಟನೆಯಿದಿರಲ್ಲಿ ಕೆಸ್ಸಿನೋ ಮೇಲ್ಭಾಗದಿಂದ ಟಿರ್ರೆನಿಯನ್ ಸಮುದ್ರವರೆಗಿನ 30 ಮೈಲು ವಿಸ್ತೀರ್ಣದಲ್ಲಿ ಸಮರವು ಅತಿ ಬಿರುಸಾಗಿ ಸಾಗುತ್ತಿದೆಯೆಂಬ ವಾರ್ತೆ ಬಂದಿದೆ. ನಾಜಿಗಳು ಕ್ಷಿಪ್ರದಲ್ಲೇ ಇಟೆಲಿ ಹೋರಾಟದ ಪುನರುತ್ಥಾನವನ್ನು ನಿರೀಕ್ಷಿಸಿದ್ದರೂ, ಜನರಲ್ ಅಲೆಗ್ಸಾಂಡರರ ಇಂದಿನ ಅಪೇಕ್ಷಿತ ಧಾಳಿಯು ಪ್ರಥಮತಃ ಅವರನ್ನು ದಂಗುಗೊಳಿಸಿತಂತೆ. ಈಗ ಚೇತರಿಸಿಕೊಂಡು ಒಂದರ ಮೇಲೊಂದರಂತೆ ಪ್ರತಿ ಧಾಳಿಗಳನ್ನು ಹೂಡ ಹತ್ತಿದ್ದಾರೆಂದು ತಿಳಿದುಬರುತ್ತದೆ.

ರಶ್ಯದಲ್ಲಿ.

ಕಳೆದ ವಾರಾದಿಯಲ್ಲೇ ತಮ್ಮ ಕೆಲವಾರದ ನಿಷ್ಕ್ರಿಯೆಯನ್ನು ನಿಲ್ಲಿಸಿ ರಶ್ಯನರು ಸೆಬಸ್ತಾಪೋಲಿನ ಮೇಲೆ ಧಾಳಿಯಾರಂಭಿಸಿ ಅದನ್ನೀಗ ವಶಪಡಿಸಿಕೊಂಡಿದ್ದಾರೆ. ಕಪ್ಪು ಸಮುದ್ರದ ಕೇಂದ್ರ ಬಂದರಾಗಿರುವ ಸೆಬಸ್ತಾಪೋಲಿನ ಪತನದೊಂದಿಗೆ ನಾಜೀ ಹೆಗ್ಗಳಿಕೆ ಮಾತ್ರವಲ್ಲ. ಆ ವಲಯದ ಹಿಂಬಾಲಕ ಕಿರಿರಾಷ್ಟ್ರಗಳ ಮೇಲಿನ ಹಿಟ್ಲರ್ ಹಿಡಿತವೂ ಸಡಿಲುಗೊಂಡಿತೆನ್ನಬೇಕು. ಆದರೆ ಕೆಂಪುಸೇನೆಯು ಸೆಬಸ್ತಾಪೋಲಿಗಾಗಿ ಮಾತ್ರ ಎಚ್ಚರಗೊಂಡಂತಿದ್ದು, ಈಗ ಪುನಃ ರಷ್ಯಾರಂಗದಲ್ಲಿ ತಾಟಸ್ಥ್ಯ ಕವಿದಿದೆ. ಇದು ಮುಂದಿನ ಹೆಜ್ಜೆಯ ಸಿದ್ಧತೆಗಾಗಿ ಎಂದು ಊಹಿಸಬಹುದು.

ದ್ವಿತೀಯರಂಗ ಸಿದ್ಧತೆ

ಅದೇನೋ ಅಗಾಧ! ಅತ್ಯಪೂರ್ವ! ಅಜೇಯ ಎಂದು ವರ್ಣನೆಯಲ್ಲಿ ಆಶ್ಚರ್ಯ ಚಿಹ್ನೆಗಳನ್ನೆಲ್ಲಾ ವ್ಯಯಿಸುವಂತಹ ರೋಮಾಂಚಕಾರೀ ವಾರ್ತಾ ಗಾಳಿಯು ಯುರೋಪ್ಯ ರಂಗ ಸಿದ್ಧತೆಯಾಗುತ್ತಿರುವಲ್ಲಿಂದ ಬೀಸುತ್ತಿದೆ. ಕಳೆದ ವಾರ ಮಿ. ಚರ್ಚಿಲ್ಲರು, ವಸಾಹತು ಪ್ರಧಾನೀ ಸಮ್ಮೇಲನಕ್ಕೆ ಬಂದಿದ್ದ ಜನರಲ್ ಸ್ಮಟ್ಸ್, ಮೆಕೆಂಜೀಕಿಂಗ್ ಮೊದಲಾದ ಸಾಮ್ರಾಜ್ಯ ಪ್ರಮುಖರೊಡನೆ, ಬ್ರಿಟಿಷ್ ಆಕ್ರಮಣ ದಳಗಳಿಗೆ ಮಿಂಚು ದರ್ಶನ ಕೊಟ್ಟರೆಂಬ ವಾರ್ತೆ ಬಂದಿದೆ. ರೋಮೆಲ್ಲನ ಅಟ್ಲಾಂಟಿಕ್ ಗೋಡೆಯನ್ನು ಹುಡಿಗೊಳಿಸಲಿರುವ ನೂತನಾಯುಧವೊಂದರ ಪ್ರಯೋಗ ಪ್ರದರ್ಶನವೂ ಈ ಸಂದರ್ಭದಲ್ಲಿ ಪ್ರಧಾನಿಗಳದಿರು ನಡೆಯಿತಂತೆ. ಆ ಅದ್ಭುತವನ್ನು ಬೆರಗುಗೊಂಡು ನೋಡಿದ ಚರ್ಚಿಲ್ಲರು 'ಭೀಕರ ಕಿರಿದೆವ್ವಗಳಿವು; ಅಲ್ಲವೇನು?' ಎಂದು ಸ್ಮಟ್ಸರೇ ಮೊದಲಾದವರೊಡನೆ ಉದ್ಗರಿಸಿದರಂತೆ. 'ಹುಡುಗರೇ, ಕಾಲ ಒದಗುತ್ತಿದೆ, ಬರುತ್ತಿದೆ'-ಎಂದು ಜನರಲ್ ಸ್ಮಟ್ಸರು ಯೋಧರೊಡನೆ ಉದ್ವೇಗದಿಂದ ಹೇಳುತ್ತಾ ಹೋದರಂತೆ. ಅರ್ಥಾತ್ ಯುದ್ಧತಜ್ಞರೂ ಸಾಮಾನ್ಯರಂತೆ ಉದ್ವೇಗಗೊಳ್ಳುವಷ್ಟು ದ್ವಿತೀಯರಂಗದ ಸಿದ್ಧತೆ ಅಮೋಘವಿದೆ-ಎಂದು ಈ ವಿದ್ಯಮಾನಗಳಿಂದ ಖಚಿತ. ಅತ್ತ ತನ್ನ ರಕ್ಷಣಾ ವ್ಯವಸ್ಥೆಯ ಮೇಲ್ಮನವಿ ನಡೆಸಿ ಬಂದ ಜನರಲ್ ರೋಮೆಲನೂ ಇಷ್ಟೇ ಭಾವಾವೇಶಗೊಂಡಾಡುತ್ತಿದ್ದಾನೆ. ಇಂತಹ ಅನುಪಮ ಹೋರಾಟದ ಮುಹೂರ್ತವೆಂದಿಗೆ? ಎಂಬುದಿನ್ನೂ ತಿಳಿದಿಲ್ಲ. ಈಗೀಗ 'ಆರಂಭವಾಯಿತು' ಎಂದೇ ವಾರ್ತೆಗಳು ಥಕ್ಕನೆ ಎಲ್ಲಿಂದಲೋ ನುಸುಳಿಕೊಂಡು ಬರಲಾರಂಭಿಸಿವೆ-'ಹುಲಿ ಬಂತು' ಎಂಬ ಹುಸಿ ರೋದನದಂತೆ!

ಚೀನದ ಪ್ರಾಣಾಪತ್ತು.

1938ರ ಬಳಿಕ ಈ ತನಕ ಹಿಂದೆಂದೂ ಹೂಡದಂತಹ ಪ್ರಬಲ ಧಾಳಿಯನ್ನು ಚೀನದ ಹೂನನ್ ಪ್ರಾಂತ್ಯದಲ್ಲಿ ಜಪಾನರಾರಂಭಿಸಿ ಮೂರೇ ವಾರಗಳಲ್ಲಿ ಅತಿ ವಿಶಾಲ ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದಾರೆ. ಈ ತನಕ ಆಗಾಗ ಚೀನದ ರಾಜಧಾನಿಯಾಗಿದ್ದ ಅಲ್ಲಿಯ ಲೊಯಾಂಗ್ ನಗರದ ಆಸೆಯನ್ನೇ ಚೈನೀಯರೀಗ ಬಿಟ್ಟಿದ್ದಾರೆ. ಮುಖ್ಯ ಸಂಬಂಧಿ ಪಥವಾದ ಪೀಪಿಂಗ್-ಹಾಂಕೋ ರೈಲ್ವೆಯ ಅದೃಷ್ಟವೂ ಅಲ್ಲಿಗೆ ಬಂದಿದೆ. ಚೈನದ ಸಮೃದ್ಧಿ ಸ್ಥಳವಾದ ವಾಯುವ್ಯ ಪ್ರಾಂತಗಳಿಗೂ ಹಳದೀ ಹೊಳೆದಾಟೀ ಜಪಾನೀ ಸೇನೆ ನುಗ್ಗಿ ಹೋಗುವ ಸಂಭವವಿದೆ. ನಿಸ್ಸಂದೇಹವಾಗಿ ಕೈಗೂಡುವ ಜಪಾನರ ಈ ಯೋಜನೆಯಿಂದ ಚೀನದ ಸರ್ವನಾಶವಾದಂತೆಯೇ ಸರಿ! ಆದರೆ ಇಂತಹ ಯುದ್ಧ ಸಂಭವಗಳಿಗೆ ಮಿತ್ರ ಪ್ರಚಾರದಲ್ಲಿ ಗಣನೀಯ ಸ್ಥಾನ ದೊರೆತಿಲ್ಲ. ಉಳಿಸಿಕೊಳ್ಳಲಸಾಧ್ಯವೆನ್ನಿಸಿದವುಗಳೆಲ್ಲಾ ಅಲ್ಪವಾದವುಗಳೆಂಬ ಸ್ವವಂಚನೆಯೇ ಇದಕ್ಕೆ ಕಾರಣವಿರಬೇಕು.

ಅಸ್ಸಾಮು ರಂಗ

ಅಸ್ಸಾಮಿನಲ್ಲಿ ಇಕ್ಕಡೆಯ ಸೇನೆಗಳಿಗಿಂತಲೂ ಮಳೆಯ ಧಾಳಿಯೇ ಪ್ರಬಲವಾಗಲು ಇನ್ನು ಅವಧಿ ಉಳಿದಿಲ್ಲ. ಆದರೆ ಅಲ್ಲಿಯ ಎರಡು ಮುಖ್ಯ ಗುರಿಗಳಾದ ಕೊಹಿಮಾ ಮತ್ತು ಇಂಫಾಲಿನ ಸ್ವಾಧೀನತೆಯನ್ನೂ ಜಪಾನರಿಂದಾಗಿಲ್ಲ; ಕೆಲವೇ ದಿನಗಳೊಳಗೆ ಆಗುವ ಸಂಭವವೂ ಕಾಣುವದಿಲ್ಲ. ಮಿತ್ರರ ಸಾಹಸವಾದರೂ ಅಷ್ಟಷ್ಟೆ. ಜಪಾನರು ಮೈಲುಪಟ್ಟಕ್ಕೆ ನುಗ್ಗಿ ಬಂದ ಸ್ಥಳಗಳನ್ನು ಅಲ್ಲಲ್ಲಿ ಕೆಲವೆಡೆ ಮಾಡುವದಕ್ಕೆ ಮಾತ್ರ, ಇವರು ಪುನರಾಧೀನ ಪಡಿಸಿಕೊಂಡಿರುವದು ಕಾಣುತ್ತಿದೆ. ಅತ್ತ ಚಿತ್ತಗಾಂಗಿಗೆ ನೇರವಾದ ಆರಕಾನ್ ವಲಯದಲ್ಲಿ ಪಾಲೆಟ್ವಾವನ್ನು ಜಪಾನರಾಕ್ರಮಿಸಿಕೊಂಡುದಲ್ಲದೆ, ಆ ವಲಯದಲ್ಲಿ ಅವರ ವಿಶೇಷ ಚಟುವಟಿಕೆಯಾರಂಭವಾಗಿರುವದರ ಕಡೆಗೆ ಹೆಚ್ಚಿನ ಲಕ್ಷ್ಯವೀಯಬೇಕಾಗಿದೆ. ಮಿತ್ರರ ತಡೆಗಟ್ಟು ಆ ವಿಭಾಗದಲ್ಲೊಡೆದರೆ ಜಪಾನೀ ಸೇನಾ ಪ್ರವಾಹ ಬಂಗಾಳದತ್ತ ಹರಿಯಲನುಕೂಲ. ಅಂತೂ ಬರ್ಮಾ-ಅಸ್ಸಾಮು ವಲಯದಲ್ಲಿ ಪ್ರಕೃತಿಯಾಟಕ್ಕಿರುವ ಪ್ರಾಮುಖ್ಯತೆ ಪರಾಕ್ರಮಕ್ಕಿಲ್ಲ. ಅಲ್ಲಿಯ ಭೂಸ್ಥಿತಿಯು ಈ ತನಕ ಇತ್ತಂಡದ ಸೇನೆಗಳನ್ನೂ ತಡವರಿಸುವಂತೆ ಮಾಡಿದ್ದರೆ, ಮುಂದಿನ ಮಳೆಗಾಲವು ತಡೆದು ನಿಲ್ಲುವಂತೆ ಮಾಡಬಹುದು. ಆದರೆ ಜಪಾನರು ಮಳೆಗಾಲದಲ್ಲಾದರೂ ಸುಮ್ಮನಿರುವಂತಿಲ್ಲವೆಂಬ ಲಕ್ಷಣಗಳು ಕಾಣಹತ್ತಿದೆ.

ಸ್ವೀಕಾರ-ವಿಮರ್ಶೆ.

ದಿ ಪೊಪ್ಯುಲರ್ ಇನ್ಶ್ಯುರೆನ್ಸ್ ಕೊ. ಲಿಮಿಟೆಡ್— ಮೇಲಿನ ವಿಮಾ ಸಂಸ್ಥೆಯ 1943ನೇ ದಶಂಬರ 31ಕ್ಕೆ ಅಂತ್ಯವಾದ 1[illegible]ನೇ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರಗಳ ಪ್ರತಿಯು ನಮ್ಮ ಪರಾಮರ್ಶೆಗಾಗಿ ಬಂದಿದೆ. ವರದಿಯ ವರುಷದಲ್ಲಿ ಕಂಪೆನಿಯು ರೂ 11,75,600ರಷ್ಟರ ಪ್ರೊಪೋಸಲ್‌ಗಳನ್ನು ಪಡೆದಿತ್ತು; ಆ ಪೈಕಿ ರೂ. 10,[illegible]9,700ರಷ್ಟು 743 ಪಾಲಿಸಿಗಳಾಗಿ ನಿರ್ಮಾಣಗೊಂಡಿವೆ. ಕಂಪೆನಿಯ ಇತರ ಎಲ್ಲಾ ವರ್ಷಗಳನ್ನೂ ಹಿಂದೆ ಹಾಕಿದ ಉದ್ಯೋಗಾಭಿವೃದ್ಧಿಯ ವರುಷವದು. 1942ಕ್ಕಿಂತ ಶೇಕಡಾ 26ರಷ್ಟು ಆಧಿಕ್ಯ ಈ ವರುಷದ ಉದ್ಯೋಗದಲ್ಲಿ ದೊರೆತಿದೆ. ಹಿಂದಿನ ವರುಷ ರೂ. 1,19,526-6-7 ಆಗಿದ್ದ ಪ್ರಿಮಿಯಮ್ ವಸೂಲಾದವುಗಳ ಮೊತ್ತವು ವರದಿಯ ವರುಷ ರೂ. 1,[illegible]2,006-0-6ರಷ್ಟೇರಿದೆ. ಈ ವರುಷದಲ್ಲಿ ಉದ್ಯೋಗಾದಾಯ ಹೆಚ್ಚಿದ್ದರೂ ಪ್ರಿಮಿಯಮ್ ಮುನಾಫೆಯ ವ್ಯಯಾಂಶವು ಬಹುತೇಕವಾಗಿ ಹಿಂದಿನ ವರ್ಷದಷ್ಟೇ— ಅಂದರೆ ಶೇಕಡಾ 38.7ರಷ್ಟು ಮಾತ್ರವಿರುವದು ಸ್ತುತ್ಯವಿದೆ. ಖರ್ಚಿನ ಇತರ ವಿಭಾಗಗಳ ಮಟ್ಟವನ್ನೂ ತಗ್ಗಿಸಿಕೊಂಡಿರುವದು ಕಂಪೆನಿಯ ಲಾಭದಾಯಿ ವ್ಯವಸ್ಥೆಗೊಂದು ನಿದರ್ಶನ. ಲೈಫ್ ಫಂಡಿಗೆ ಈ ವರುಷ ಹೊಸತಾಗಿ ರೂ. 75,951-10-3ನ್ನು ಸೇರಿಸಿ ಅದು ವರದಿಯ ವರುಷಾಂತ್ಯದಲ್ಲಿ ರೂ. 3,76,181-15-8ರಷ್ಟಾಗಿದೆ. ಬೋನಸ್ ಸಮೇತ ಮರಣಗಳಿಂದಾಗಿ ಹಾಗೂ ಪಕ್ವಗೊಂಡ 'ಕ್ಲೈಮ್ಸ್' ಹಣ ಸಂದಾಯ ರೂ. 20,449-13-0. ಈಪೈಕಿ ಸರಿಯಾದ ದಾಖಲೆಗಳು ದೊರೆಯದೆ ಸಂದಾಯವಾಗಲುಳಿದುದು ಹಾಗೂ ಹಿಂದಿನ ವರುಷದ ಬಾಕಿ ಕೂಡಿ ರೂ. [illegible]-5-4 ಹೀಗೇನೇ ಇನ್ನು. ಸರಕಾರೀ ಸೆಕ್ಯೂರಿಟಿಗಳು, ಸುಭದ್ರ ಶೇರುಗಳೇ ಮೊದಲಾದವುಗಳಲ್ಲಿ ಈ ಕಂಪೆನಿಯು ಹಾಕಿರುವ ಹಣವು ಜುಮ್ಲಾ ರೂ. 3,16,655-2-0 ಎಂದು ಆಯವ್ಯಯ ಪಟ್ಟಿಯಲ್ಲಿ ಕಾಣಿಸಿದ್ದರೂ ವರುಷಾಂತ್ಯದಲ್ಲಿ ಅವುಗಳ ಮಾರ್ಕೆಟ್ ಧಾರಣೆಯು ಅದಕ್ಕಿಂತ ರೂ. 10,536-2-0ರಷ್ಟು ಅಧಿಕವಿತ್ತು. ಸಮರ್ಥ ಆಡಳಿತ ಮಂಡಳಿ, ದಕ್ಷ ಕಾರ್ಯಕರ್ತರಿರುವ ಈ [illegible] ನಾಮದ ವಿಮಾಸಂಸ್ಥೆಗೆ ಇನ್ನು [illegible] ಭವಿಷ್ಯವನ್ನು ಹಾರೈಸುತ್ತೇವೆ.

ಕುಂಭಾಶಿ— ಶ್ರೀ ಗಜಾನನ ಯು[illegible]ದ ತೃತೀಯ ವಾರ್ಷಿಕೋತ್ಸವವು ತಾ. 9-5-44ರಲ್ಲು ಶ್ರೀ ಗೋವಿಂದ ಉಪಾಧ್ಯಾಯ "ಶಿರೋಮಣಿ" ಇವರ ಅಧ್ಯಕ್ಷತೆಯಲ್ಲಿ ಜರಗಿತು. ವಂದಿ ವಾಚನಗಳಾದ ಮೇಲೆ ಮಕ್ಕಳ ಭಜನೆ ಮೆರವಣಿಗೆ, ಕೊಳಲು ವಾದನ, ಕು.ವಾರಿ ಲಲಿತಳ ನೃತ್ಯ ಪ್ರದರ್ಶನಗಳಾದವು. ಬಹು ಉತ್ಸಾಹದೊಂದಿಗೆ ಸಭೆ ಮುಕ್ತಾಯಗೊಂಡಿತು.

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director.

The Canara Banking Corporation Limited.

(Incorporated in British India)

ESTD: 1906.

Head Office · UDIPI·

ANNOUNCEMENT.

A Branch of the bank will be opened at Tobacco Street, CALICUT on 26-5-44.

ಉಡುಪಿ. ಗುರುವಾರ ೧೮-೫-೧೯೪೪

ಭಾರತದ ಬಿಕ್ಕಟ್ಟು.

ಮಹಾತ್ಮಾಜೀ ಬಂಧನದಿಂದ ಬಿಡುಗಡೆ ಹೊಂದಿ ಎರಡು ವಾರವಾಗುತ್ತಾ ಬಂತು, ಅಂಗಳಾವಧಿಯೊಳಗೆ ಅನಾರೋಗ್ಯದಿಂದ ಪೂರ್ಣ ಬಿಡುಗಡೆ ಹೊಂದಲವರಿಗೆ ಸಾಧ್ಯವಾದರೆ ಅದು ರಾಷ್ಟ್ರದೊಂದು ಸುದೈವವೆಂದೇ ಹೇಳಬಹುದು. ಆ ವರೆಗೆ ರಾಜಕೀಯ ಸಂಬಂಧವಾದ ಒಂದೇ ಒಂದು ಸೊಲ್ಲನ್ನಾಡುವದು ಅವರಿಂದ ಅಸಾಧ್ಯ. ಈಗಂತೂ ಎರಡು ವಾರಗಳ ಮೌನ ವ್ರತದಲ್ಲಿದ್ದಾರೆ ಗಾಂಧೀ ಬುರುಡೆಯೊಳಗೆ ಡಾಕ್ಟರರ ಮೆದುಳು ಸೇರಿ, ದೇಶ ರಕ್ಷಣೆಗೆ ಮೊದಲು ದೇಹ ರಕ್ಷಣೆಯ ಕಾರ್ಯ ಮಾಡಿಸುತ್ತಿದೆ. ಸದ್ಯಕ್ಕಿದು ಅನಿವಾರ್ಯ. ಹಿಡ್ಗಕ್ಕೆ ಹಿಡಿದ ತುಕ್ಕು ಝಾಡಿಸಿಕೊಂಡೇ ಹೋರಾಟಕ್ಕಿಳಿಯಬೇಕು; ಅಷ್ಟಾಯುಧ ಗಾಂಧಿಜೀ ಗುಣ ಹೊಂದಿದ ಮೇಲೇನೇ ರಾಷ್ಟ್ರ ಕಾರ್ಯ ಹೀಗಾಗಿ ಇನ್ನು ಕೆಲ ಸಮಯದ ವರೆಗೆ ಭಾರತದ ರಾಜಕೀಯ ವಿಕ್ಷ್ಟಿನ ಮೇಲೆ ಯಾವ ಹೊಸ ಬೆಳಕೂ ಬೀಳುವಂತಿಲ್ಲ. 'ಕೇವಲ ಆರೋಗ್ಯಕ್ಕಾಗಿ' ಬಿಡುಗಡೆ ಮಾಡಿದ ಸರಕಾರವು ಈ ತನಕ 'ಕೇವಲ ಆರೋಗ್ಯ' ಪಾಲನೆಯಾಗುತ್ತಿರುವದನ್ನು ಕಂಡು ಸುಮ್ಮಗಿದೆ ಗಾಂಧಿಜೀ ಅನ್ಯಾಯದ ವಿರುದ್ಧ ಹೋರಾಟಕ್ಕಿಳಿದಾಗ, ಸರಕಾರವು 'ಇದು ನಾಸ್ತೇ' ಎಂದು ಕಟಿ ಬಿಗಿದು ಮುಂದೆ ಬಂದೀತು; ಆದರೆ ಅವರು ಆನಾರೋಗ್ಯದೊಡನೆ ಮಾಡುವ ಕಾದಾಟವನ್ನು 'ತನ್ನೊಡನೆ' ಎಂದು ಲೋರ್ಡ್ ವೇವೆಲ್ ಭಾವಿಸುವಂತಿಲ್ಲ. ಆದರೆ ಈ ಕಾದಾಟ ಮುಗಿಯುವ ಕಾಲ ದೂರವಿಲ್ಲ; ಗಾಂಧಿಜೀ ಗುಣ ಹೊಂದಿದ ಮೇಲೇನು? ಎಂಬುದೇ ಸದ್ಯದ ಪ್ರಶ್ನೆ.

ಅದಕ್ಕೆ ಉತ್ತರವಿಲ್ಲ; ಲೋರ್ಡ್ ವೇವೆಲರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರನ್ನೆಲ್ಲಾ ಬಿಡುಗಡೆ ಮಾಡಲು ಯೋಚಿಸುತ್ತಿದ್ದಾರೆ; ಗಾಂಧಿಜೀಯವರನ್ನು ಭೇಟಿಗೆ ಕರೆಯಲಿದ್ದಾರೆ; ಎಂಬ ಊಹಾಪೋಹ ಕೇಳಬರುತ್ತಿದ್ದಿದೆ. ವೈಸರಾಯರ ಮನೋಧರ್ಮವನ್ನರಿತ ಖಾಸಗೀ ಮಿತ್ರರುಕೂಡಾ ಕೇವಲ ಅನಾರೋಗ್ಯಕ್ಕಾಗಿಯೇ ಅವರು ಗಾಂಧಿಜೀಯನ್ನು ಬಿಟ್ಟುದಲ್ಲವೆನ್ನುತಿದ್ದಾರೆ. ವ್ಯಕ್ತಿಶಃ ಲೋರ್ಡ್ ವೇವೆಲರಲ್ಲಿ ಸೌಜನ್ಯವಿದೆ ಎಂಬುದು ನಿರ್ವಿವಾದ. ಲೋರ್ಡ್ ಲಿನ್‌ಲಿತ್‌ಗೋರ ಕಾಲದಲ್ಲಿ ಗಾಂಧಿಜೀ 21 ದಿನಗಳ ಉಪವಾಸ ಕುಳಿತು ಒಮ್ಮೆ ಮೃತ್ಯುವನ್ನು ಈ ಬಾರಿಗಿಂತಲೂ ಸಮೀಪಿಸಿದ್ದರು. ಆಗ "ಬಿಡುಗಡೆ ಹೊಂದುವ ಹಂಬಿಕೆಯಿದು' ಎಂದು ಅಧಿಕಾರದಲ್ಲಿದ್ದವರ ಬಾಯಿ ತೆರೆಯಿತು, ಹೊರತು ಆಗಾಖಾನ್ ಅರಮನೆಯ ಬಾಗಿಲು ತೆರೆಯಲಿಲ್ಲ. ಅದೇನೂ ಆಲೀಬಾಬನ ಕಥೆಯ ಗವಿಯ ಬಾಗಿಲಲ್ಲವೆಂಬುದನ್ನು ತೋರಿಸಿಕೊಟ್ಟವರು ಲೋರ್ಡ್ ವೇವೆಲರೇ. ಪೂನೆಯ, ಹವೆಯೊಗ್ಗುವದಿಲ್ಲವೆಂಬುದಕ್ಕಾಗಿ 'ವರ್ದೋದ ಪ್ರೇರಕ ಬಂಧಿ' ಯೊಬ್ಬನನ್ನು ನಿಶ್ಯರ್ತವಾಗಿ ಬಿಡಬೇಕೆಂದಿಲ್ಲ. ಉತ್ತಮ ಸ್ಥಳವೊಂದಕ್ಕೆ ವರ್ಗಾಯಿಸಿ, ಆ ಊರ ಮಟ್ಟಿಗೆ ಸಡಿಲು ನಿರ್ಬಂಧಗಳನ್ನಾದರೂ ಹಾಕಿ, ಆರೋಗ್ಯ ಸಂಪಾದಿಸಲು ಬಿಡಬಹುದಿತ್ತು. ಸರಕಾರಕ್ಕೆ ಮನಸಿದ್ದರೆ ಈಗಿನ ಜುಹುವಿನಲ್ಲೇ ನಿರ್ಬಂಧದೊಡನೆ ಗಾಂಧಿಜೀಯನ್ನಿಡಲು ಸಾಧ್ಯವಿದ್ದಿತು. ಆದ್ದರಿಂದ ಇಂದಿನ ನಿಶ್ಯರ್ತ ಬಿಡುಗಡೆಗೆ ಕಾಹಿಲೆಯು ಕಾರಣವಾಯಿತೆನ್ನುವದಕ್ಕಿಂತ ನೆಪವಾಯಿತೆಂದರೂ ಸಲ್ಲುವದು.

ಆದರೆ ಇದು ಸರಕಾರೀ ಧೋರಣೆಯ ಸ್ಪಷ್ಟ ಬದಲಾವಣೆಯಲ್ಲ. ಆಮೇರಿ ಲಿನ್‌ಲಿತ್‌ಗೋರವರು 'ಅಪಾಯಕರ'ವೆಂದು ಹಿಂದೆ ಸರಿದಿದ್ದ ಒಂದು ಆಟವನ್ನು 'ಟ್ರಿಯಲ್' ಮೂಲಕ ಪರೀಕ್ಷಿಸಿ ನೋಡೋಣವೆಂಬ ಎದೆಗಾರಿಕೆ ಲೋರ್ಡ್ ವೇವೆಲರದಾಗಿರಬೇಕು. ಈ ಪ್ರಥಮ ಪ್ರಯೋಗವು ಸಮಾಧಾನಕರವೆಂದು ತೋರಿದ ವೈಸರಾಯರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರ ಬಿಡುಗಡೆ ಮಾಡಲಾರರು; ಗಾಂಧಿಜೀಯನ್ನು ಸಂಧಾನಕ್ಕೆ ಕರೆಯಲಾರರು. ಮಹಾತ್ಮಾಜೀಯ ಸ್ವಷ್ಟಾಭಿಪ್ರಾಯ ಹೊರಬೀಳುವ ಮೊದಲೇ ಸರಕಾರವು ಈ ಭಾಗದಲ್ಲಿ ಇನ್ನೊಂದು ಹೆಜ್ಜೆಯಿಡಬಹುದೆಂದೂಹಿಸುವದು ಅಜ್ಞಾನವೇ ಸರಿ. ಮಹಾತ್ಮರಂತೂ ಪ್ರಕೃತ ಪ್ರೇಕ್ಷಕರ ಗಲಭೆಯನ್ನೂ ಸಹಿಸಲಾಗದಷ್ಟು ನಿತ್ರಾಣ; 'ಗಾಂಧೀ ಹಿತಚಿಂತಕರ ಕೈಯಿಂದ ಗಾಂಧಿ ಪಾರಾಗಲಿ!' ಎಂದು ಪ್ರಾರ್ಥಿಸುವಂತಹ ಪರಿಸ್ಥಿತಿ! ಗುಣಹೊಂದಿದ ಗಾಂಧಿಯನ್ನಾದರೂ ಮಂಕುಗಟ್ಟಿಸುವ ಮಬ್ಬು ವಾತಾವರಣವಿದ್ದೇ ಇದೆ. ಅವರು ಹಾದಿ ಕಂಡುಕೊಳ್ಳುವದು ಅತ್ಯಂತ ಪ್ರಯಾಸವಾಗಬಹುದು. ಲೋರ್ಡ್ ವೇವಲರು ನಿರೀಕ್ಷಿಸಿ ನಿಂತ ಹಾದಿಗಂತೂ ಅವರು ಹೋಗಲಾರರು. ಅಂದ ಮೇಲೆ ಸಂಧಾನ ಹಾರೆಯಿದೆಯೆ?

'ಸೋಲ್ಜರ್' ವೈಸರಾಯ ವೇವೆಲರು ಧೀರ ಸೇನಾನಿಯಂತೆ ಹೆಜ್ಜೆ ಮುಂದಿಟ್ಟರೆ ಅಂತಹ ಆಸೆಯಿದೆ. ಬರ್ಮದೊಳಗೆ ಜಾಪಾನರು ನುಗ್ಗಿದಾಗ, ಅಲ್ಲಿಯ ಪ್ರತಿಕೂಲ ಜನಮತದಿಂದಾಗಿ ತಮಗಾಗಿದ್ದ ಹಾನಿಯನ್ನು ಲೋರ್ಡ್ ವೇವೆಲ್ ಮರೆತಿರಲಾರರು. ಅದರ ಪ್ರತಿರೂಪವಾಗಿಯೇ ಹಿಂದುಸ್ಥಾನದ ಪರಿಸ್ಥಿತಿಯಿಂದು ವೈಸರಾಯರ ಕಣ್ಣಮುಂದಿದೆ. 'ಯುದ್ಧ ಪ್ರಯತ್ನ' ವೆಂಬ ಹೆಸರಿನಿಂದ ಜನತೆಯ ಅನುಕೂಲತೆಗಳನ್ನ ಸಹರಿಸಿದರೆ ಸಾಲದು, ಅವರ ಮನಃಕ್ಷಾಭವನ್ನೂ ನಿವಾರಿಸಿಕೊಳ್ಳಬೇಕು ಎಂಬ ಬಯಕೆ ವೈಸರಾಯರಿಗೆ ಇದ್ದರೆ, ಮಹಾತ್ಮಾಜೀ ಗುಣ ಹೊಂದಿದ ಅಪರಾಹ್ನವೇ ನೆಹರು ಆಜಾದ್ ಮೊದಲಾದವರೊಡನೆ ಪರ್ಯಾಲೋಚನೆ ನಡೆಸುವಂತಾಗಬೇಕು. ಆದರೆ ಅವರಾರಿಗೂ ಈ ತನಕ ಪ್ರಾಣಾಪತ್ತು ಬಂದಿಲ್ಲ; ರಕ್ತಾಧ್ಯಾಯ ನಿರ್ಮಿಸಿದ 'ಬಂಗೆಗಾರ' ರಲ್ಲಿ ನವಮಾತ್ರಕ್ಕಾದರೂ ರಕ್ತಾಭಾವವುಂಟಾಗದೆ, ಅವರನ್ನು ಬಿಟ್ಟುಬಿಡುವ ಅಭ್ಯಾಸ ಸರಕಾರಕ್ಕಿಲ್ಲ. ಅಂದಮೇಲೆ ಬಯಲಾಸೆ ಕಟ್ಟಿಕೊಳ್ಳುವ ಅದೊಂದು ಅಭ್ಯಾಸ ನಮ್ಮಲ್ಲೇಕೆ?

ದುರ್ಬೀನು

ನಡೆಯುವಷ್ಟು ತ್ರಾಣವಿರುವಾಗ ನರಳಬೇಕೇಕೆ? ಬೆವರಿಳಿಸುವಷ್ಟು ಶಕ್ತಿಯಿರುವಾಗ ಬೇಡಬೇಕೇಕೆ?

೦೦ ೦೦ ೦೦

ಬಾಗಿಲಲ್ಲಿ ಬಗ್ಗಿ ನಡೆಯುವದು ತಡಿಮೆ ತಾಗುವದನ್ನು ತಪ್ಪಿಸಿಕೊಳ್ಳುವದಕ್ಕಾಗಿ; ಬಾಯಿಯಲ್ಲಿ 'ಅಯ್ಯಾ' ಎನ್ನುವುದು 'ಅಯ್ಯೋ!' ಎನ್ನುವದನ್ನು ನಿವಾರಿಸಿಕೊಳ್ಳುವದಕ್ಕಾಗಿ.

೦೦ ೦೦ ೦೦

ನಟನೆಗಾಗಿ ಬೀಳುವವನು ಪೆಟ್ಟಾಗದಂತೆ ಬಿದ್ದಾನು; ಜಾರಿ ಬೀಳುವವನಿಂದದು ಅಸಾಧ್ಯ. ವಂಚಿಸಲಿಕ್ಕಾಗಿ ದಿವಾಳಿ ಹೋಗುವವನು ನಷ್ಟ ಬೀಳದಂತೆ ನೋಡಿಕೊಂಡಾನು; ನಿಜಕ್ಕೂ ದಿವಾಳಿಯಾಗುವವನಿಂದದಾಗದು.

೦೦ ೦೦ ೦೦

ಹುಲ್ಲು ಕೊಯ್ಯುವ ಕತ್ತಿ ಗಡ್ಡ ಬೋಳಿಸಲಿಕ್ಕಾಗದು; ಒರಟು ವಿಚಾರದಿಂದ ಸೂಕ್ಷ್ಮ ಕಾರ್ಯಸಾಧಿಸದು.

೦೦ ೦೦ ೦೦

ಒಗ್ಗಾಣದಲ್ಲಿ ಕಸಬಂದು ಸೇರಿದರೆ ಅದೂ ಸಾಮಗ್ರಿಯಲ್ಲ; ಆಪ್ತರಲ್ಲಿ ನೇರಿಕೊಳ್ಳುವ ಅಲ್ಪಾಭಿಲಾಷೆಯೂ ಒಂದು ಆಪ್ತತೆಯಲ್ಲ.

೦೦ ೦೦ ೦೦

ಸಲಿಗೆಯವನ ಮುನಿಸಿನಲ್ಲೂ ಮಾಧುರ್ಯವಿದೆ; ಅಪರಿಚಿತನ ಮೌನದಲ್ಲೂ ಮದೋನ್ಮತ್ತತೆ ಕಾಣುತ್ತದೆ. ಗುಟ್ಟಿನಂತ ಕಾರ್ಯದ ಅಗಾಧತೆಯಾದರೂ ಅತಿ ಸುಲಭ. ಗೂಢವರಿಯದ ಸುಲಭ ಕಾರ್ಯವೂ ಅಸಾಧ್ಯವೇ.

೦೦ ೦೦ ೦೦

ಬಾಯಾರಿದಾಗ ನಾಲಗೇ ರಸವು ಒಣಗುವ ಸಂಪ್ರದಾಯ ಆಪತ್ತೊದಗಿದಾಗ ಇದ್ದ ಅಲ್ಪಾನುಕೂಲತೆಯೂ ಮಾಯವಾಗುವ ಪದ್ಧತಿ.

ವಿಲಕ್ಷಣ ವಾರ್ತೆಗಳು.

ಮಹಾಪರಾಧ.

ಪೋಲೆಂಡಿನ ರೆವ್. ಆರ್ಚ್ಬಿಷಪ್ ಎಂಬ ಕ್ರೈಸ್ತ ಗುರುಗಳು ಸ್ಟಾಲಿನರೊಡನೆ ಸಂಭಾಷಿಸಿ ಬಂದ ಅಪರಾಧಕ್ಕಾಗಿ, ಅವರ ಗುರುತ್ವದ ಅಧಿಕಾರಗಳನ್ನೆಲ್ಲಾ ಮೇಲಿನ ಕ್ರೈಸ್ತ ಗುರುಗಳು ಅಪಹರಿಸಿದ್ದಾರೆ.

ಸಿಯಾನೋ ಹತ್ಯೆ.

ಫೇಸಿಸ್ಟ್ ದ್ರೋಹಕ್ಕಾಗಿ ಗುಂಡಿಗಾಹುತಿಯಾದ ಮುಸಲನಿಯಳಿಯ ಕೌಂಟ್ ಸಿಯಾನೋವಿನ ಮರಣಕ್ಕೆ ಮೂರು ತಿಂಗಳ ಮೊದಲೇ ಅವನ ಪತ್ನಿ ಎಡ್ಡಾ ಆತನೊಡನೆ ವಿವಾಹ ವಿಚ್ಛೇದ ಮಾಡಿಕೊಂಡಿದ್ದಳಂತೆ. ಫೇಸಿಸ್ಟ್ ದ್ರೋಹಕ್ಕಾಗಿ ಅವನ ಕೊಲೆಯಾದುದೇ ನ್ಯಾಯವೆಂದು ಅವಳ ಅಭಿಮತವಂತೆ.

ಆಸ್ತಿ ಹಕ್ಕು.

ದಿವಂಗತ ಆರ್. ಎಸ್. ಪಂಡಿತರ ರೂ. 1,73,034ರ ಆಸ್ತಿಗೆ ತಾನು ಬಾಧ್ಯಳೆಂದು ಅವರ ಪತ್ನಿ ವಿಜಯಲಕ್ಷ್ಮೀ ಪಂಡಿತರು ಅಲ್ಲಹಾಬಾದ್ ಜಡ್ಜ್ ಕೋರ್ಟಿಗೆ ಮಾಡಿದ ಅರ್ಜಿಗೆ ದಿವಂಗತರ ಸಹೋದರ ಪ್ರತಾಪ ಸೀತಾರಾವ್ ಪಂಡಿತರು ಪ್ರತಿವಾದಿಯಾಗಿ ಆಕ್ಷೇಪ ಹೇಳಿದ್ದಾರೆ. ವ್ಯವಹರಣೆ ನಡೆಯುತ್ತಿದೆ.

ಪೂರ್ತಿ ಸುಳ್ಳು.

ಗಾಂಧಿಜೀ 1942ನೇ ಆಗೋಸ್ತಿನಲ್ಲಿ ಮಿ. ಜಿನ್ನರ ಸ್ವನಿರ್ಧಾರ ತತ್ವಕ್ಕೊಪ್ಪಿಗೆ ಕೊಟ್ಟು ಸಂಧಾನಕ್ಕಾಗಿ ಅವರಿಗೊಂದು ಪತ್ರ ಬರೆದಿದ್ದರೆಂದು ಆಗ ಕೆಲವು ಪತ್ರಿಕೆಗಳು ಪ್ರಕಟಿಸಿದ್ದುವು. 'ಇದು ಕೇವಲ ಪತ್ರಿಕಾಕಥೆ' ಎಂದು ಗಾಂಧಿಜೀಯ ಕಾರ್ಯದರ್ಶಿ ಶ್ರೀ ಪ್ಯಾರೇಲಾಲರಂದಿದ್ದಾರೆ.

ವಂಚನೆ:

ಜಾಪಾನ್ ಯುದ್ಧಕ್ಕಿಳಿಯುವ ದಿನವೇ ಅಧ್ಯಕ್ಷ ರೂಸವೆಲ್ಟರು ಜಾಪಾನ್ ಚಕ್ರವರ್ತಿಗೊಂದು ಕೊನೆಯ ಪತ್ರ ಬರೆದಿದ್ದರಂತೆ. ಆದರೆ ಅಲ್ಲಿಯ ಅಧಿಕಾರಿಗಳು ಆ ಪತ್ರವನ್ನು ಚಕ್ರವರ್ತಿಗೆ ಮುಟ್ಟಿಸಲು ತಡಮಾಡಿ, ಅತ್ತ ಪರ್ಲ್ ಹಾರ್ಬರ್ ಧಾಳಿ ನಡಿಸುವ ಹೊತ್ತಿನಲ್ಲೇ ಅದನ್ನವರಿಗೆ ಮುಟ್ಟಿಸಿದರಂತೆ.

ಮತ್ತೊಂದು ಸುಳ್ಳು.

ಕಾಂಗ್ರೆಸ್ ಪಕ್ಷೀಯ ಚಟುವಟಿಕೆಗಳನ್ನು ಪುನರುಜ್ಜೀವನಗೊಳಿಸುವ ಇಚ್ಛೆಯಿಂದ ಮಹಾತ್ಮಾ ಗಾಂಧಿಯವರು 'ಕಸ್ತೂರಿ ಬಾಸ್ಮಾರಕ ನಿಧಿ'ಯ ಅಧ್ಯಕ್ಷತೆ ವಹಿಸಿಕೊಂಡಿದ್ದಾರೆಂದು ಲಂಡನಿನ 'ಟೈಮ್ಸ್'ನಲ್ಲಿ ಸುದ್ದಿ ಪ್ರಕಟವಾಗಿದೆ. 'ಇದು ಪೇನಾಯಮಾನ ಅಸತ್ಯ' ಎಂದು ನಿಧಿಯ ಕಾರ್ಯದರ್ಶಿ ಠಕ್ಕರ್ ಬಾಪಾ ಪ್ರಕಟಿಸಿದ್ದಾರೆ.

ತಾರುಣ್ಯ

ಕಳೆದ ಯೌವನವನ್ನು ಪುನಃ ಪಡೆದು ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣೀ ವಿಲಾಸಿನಿ** ಅತ್ಯುತ್ತಮ ಔಷಧ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು.

ಪುತ್ತೂರು ಏಜಂಟರು: - **ಪೈ ಫಾರ್ಮಸಿ**

‘ಮಿತ್ರರ ದುರಭಿಲಾಷೆಯನ್ನು ಭಂಗಿಸುವೆವು’ ಟೋಜೋ

ಟೋಜೋನ ಯುದ್ಧ ವಿಮರ್ಶೆ.

ಜಪಾನಿನ ಪ್ರಧಾನಿ ಜನರಲ್ ಹಿಡೆಕಿ ಟೋಜೋನ ಭಾಷಣವೊಂದು ಇದೇ ತಾ 14ರ ಟೋಕಿಯೋ ರೇಡಿಯೋದಲ್ಲಿ ಬಂದಿದೆ. “ಪೂರ್ವ ಮತ್ತು ಪಶ್ಚಿಮಗಳ ಯುದ್ಧಸ್ಥಿತಿಯೀಗ ಅತಿ ಮುಖ್ಯ ಹೋರಾಟಗಳು ನಡೆಯ ಬೇಕಾದ ಒಂದು ಅಧ್ಯಾಯಕ್ಕೆ ಬಂದಿದೆ. ಜಪಾನನ್ನು ಕಿತ್ತೊಗೆಯಬೇಕೆಂದು ಬ್ರಿಟನ್ ಅಮೇರಿಕಗಳು ತಮ್ಮ ಶಕ್ತಿಯ ಪ್ರತಿಯೊಂದು ಕಣವನ್ನೂ ಉಪಯೋಗಿಸುತ್ತಿವೆ. ಜಪಾನು ಕೊನೆಯವರೆಗೂ ಕಾದಾಡಿ ಆ ರಾಷ್ಟ್ರಗಳ ಸ್ವಾರ್ಥಮಯೀ ಹಂಚಿಕೆಗಳನ್ನೆಲ್ಲಾ ಮಣ್ಣುಗೂಡಿಸಬೇಕೆಂದು ನಿರ್ಧರಿಸಿದೆ. ಶಾಂತ ಸಮುದ್ರದಲ್ಲಿ ಅಮೇರಿಕದ ಪ್ರತಿಧಾಳಿಯು ದೊಡ್ಡ ಪರಿಮಾಣದಲ್ಲಿ ಮತ್ತು ಅತ್ಯಂತ ಸಾಹಸ ಪೂರ್ವಕ ಮುಂದೂಡಲ್ಪಡಲಿದೆ. ಅವರ ಒತ್ತಡದಲ್ಲಿ ತೀವ್ರತೆಯುಂಟಾಗಿದೆ. ಬರ್ಮಾದಲ್ಲಿ ಜಪಾನೀ ಸೇನೆಗಳು ಭಾರತದ ಗಡಿಯೊಳಗೆ ನುಗ್ಗಿ ಈಗ ಇಂಫಾಲಿನ ಕದಗೊತ್ತುತ್ತಿವೆ ಪೂರ್ವ ಆಸ್ವಾಡ ಜಪಾನೀ ಧಾಳಿಗೆ ಹೊಂದಿಕೆಯಾಗಿ ಜರ್ಮನಿಯು ತನ್ನ ಸ್ಥಾನ ಭದ್ರತೆ ಮಾಡಿಕೊಂಡು ಪ್ರತಿಧಾಳಿಗಳನ್ನು ನಡೆಸುವದರಲ್ಲಿದೆ. ಅದಿಷ್ಟರಲ್ಲೇ ಪ್ರತಿಧಾಳಿಯಾರಂಭಿಸುವ ಲಕ್ಷಣಗಳು ಕಾಣಿಸುತ್ತಿವೆ. ಅಮೇರಿಕಾ ಮತ್ತು ಬ್ರಿಟನುಗಳೊಡನೆ ನಿರ್ಣಯಾತ್ಮಕ ಹೋರಾಟಕ್ಕೆ ನಿಲ್ಲುವ ಸುಯೋಗವನ್ನು ಅದೀಗ ಪೂರ್ಣ ನಿಶ್ವಾಸದಿಂದ ಕಾಯುತ್ತಿದೆ’!

ಇಟಲಿ ಧಾಳಿ.

ಇಟಲಿಯ ಗುಸ್ಟೋವ್ ಲೈನಿನ ಮೇಲೆ ಮಿತ್ರರಾರಂಭಿಸಿದ ನವಧಾಳಿಯು ಜರ್ಮನರ ಪ್ರಬಲ ಪ್ರತಿಭಟನೆಯಿದಿರಲ್ಲಿ ಪ್ರಗತಿಹೊಂದುತ್ತಿದೆ. ಎಂಟನೇ ಸೇನೆಯು ರೇಪಿಡೋ ಹೊಳೆಗೆ ಸಂಕಕಟ್ಟಿಸಿಕೊಂಡು ಮುಂದೊತ್ತಿದೆ. ಐದನೇ ಸೇನಾ ವಿಭಾಗದಲ್ಲಿ ಕೆಲವು ಪರ್ವತ ಶಿರಗಳು ಮಿತ್ರರ ವಶವಾಗಿವೆ. ಅವಿಲ ಗ್ಯಾರಿಗ್ಲಿಯಾನೋ ಕ್ಷೇತ್ರದ ಮುಖ್ಯ ನೆಲೆಗಳಲ್ಲೊಂದಾದ ‘ಕೇಸ್ಟಲ್ ಪೋರ್ಟ’ಯನ್ನು ಮಿತ್ರ ಸೇನೆಗಳು ವಶಪಡಿಸಿಕೊಂಡವೆಂದು ಜರ್ಮನರೂ ಒಪ್ಪಿದ್ದಾರೆ ರೇಪಿಡೋ ಹೊಳೆಬದಿಯು ಒಂದೆರಡು ಊರುಗಳನ್ನು ಹಿಂದೀ ಸೇನೆಗಳು ವಶಪಡಿಸಿಕೊಂಡು ಶ್ಲಾಘನೆ ಪಡೆದಿವೆ. ಇಟಲಿ-ಜರ್ಮನಿಗಳನ್ನೊಂದುಗೂಡಿಸುವ ಬ್ರೆನ್ನರ್ ಕಣಿವೆಯ ರೈಲ್ವೆಯು ಮಿತ್ರ ವಿಮಾನ ಧಾಳಿಯಿಂದ ಕಡಿದು ಹೋಯಿತು.

ಅಸ್ಸಾಮು ಯುದ್ಧ.

ಕೊಹಿಮಾವಲಯದಲ್ಲೀಗ ಪುನಃ ಬಿರುಸಾದ ಹೋರಾಟವಾರಂಭವಾಗಿದೆ. ಪಾಲೆಲ್ ಮತ್ತು ಬಿಶೆನ್‌ಪುರ್ ವಲಯಗಳಲ್ಲಿ ಜಪಾನರು ಧಾಳಿಯಾರಂಭಿಸಿದ್ದಾರೆ ಉತ್ತರ ಬರ್ಮಾ ರಂಗಗಳಲ್ಲಿ ಚೀನೀ ಸೇನೆಗಳು ಮುಂದೊತ್ತಿವೆ. “ಕೊಹಿಮಾ ರಂಗದ ಯುದ್ಧಾರಂಭವಾದ ಎಪ್ರಿಲ್ 10ರಿಂದ ಮೇ 12ರ ವರೆಗೆ ಅದೊಂದೇ ಕ್ಷೇತ್ರದಲ್ಲಿ 2 066 ಜಪಾನರ ಹೆಣ ದೊರೆತಿವೆ ಯೆಂದು ಮಿತ್ರರ ಪ್ರಕಟಣೆ.

ರಶ್ಯದಲ್ಲಿ

ಕ್ರಿಮಿಯದಲ್ಲಿದ್ದ ಹಾಗೂ ಸಿಬಸ್ತೊಪೋಲಿನ ಸುತ್ತುವಲಯಗಳಲ್ಲಿದ್ದ ಜರ್ಮನಿ ಮತ್ತು ರುಮೇನಿಯನ್ ಸೇನೆಗಳು ತಮ್ಮ ಮೂಲ ಸ್ಥಳಕ್ಕೇನೇ ಹಿಂದಿರುಗಿವೆಯಂತೆ. ಮುಂದೆ ವಿಶೇಷ ಹೋರಾಟವಾಗಲಿದೆ ಎಂದು ರಶ್ಯನ್ ಪತ್ರಿಕೆಗಳ ಊಹೆ. ಜರ್ಮನರು ರಶ್ಯದಲ್ಲಿ ಅಗಣಿತ ಸಂಖ್ಯೆಯಲ್ಲಿ ಟೇಂಕು ಮೊದಲಾದುವುಗಳನ್ನು ಕಳಕೊಂಡುದರಿಂದ ಈಗ ಆಯುಧ ನಷ್ಟವಾಗದಂತಹ ಜಾಗ್ರತೆಯಲ್ಲಿದ್ದಾರಂತೆ ರಶ್ಯನರು ಜರ್ಮನಿಯೊಳಕ್ಕೂ ನುಗ್ಗಿ ಹೋಗಬಹುದೆಂದು ಮಾರ್ಶಲ್ ಟಿಟೋನ ನಿರೀಕ್ಷೆ.

ಆಕಾಶ ಧಾಳಿ.

ಆಕ್ರಮಣದ ಪೂರ್ವಭಾವಿ ಆಕಾಶ ಧಾಳಿಗಳಿಂದ ಜರ್ಮನರು ತಬ್ಬಿಬ್ಬಾಗಿದ್ದಾರೆಂದೂ, ಕಳದ ಕೆಲವು ದಿನಗಳಲ್ಲಿ ಫ್ರಾನ್ಸ್, ಹೊಲ್ಲೆಂಡ್, ಬೆಲ್ಜಿಯಮುಗಳ ಮೇಲೆ ನಡೆದಂತಹ ಆಕಾಶ ಧಾಳಿಯು ಕಾಲೂರುವ ಖಂಡಿತ ಸಾಹಸವೆಂದು ಬಿವರಿ ಹೋಗಿರುವರೆಂದೂ ಮಿತ್ರ ವಕ್ತಾರರ ವರ್ಣನೆ. ಫ್ರೆಂಚ್ ಆರ್ಚ್ ಬಿಶೋಪರು ನಾಗರಿಕರ ಮೇಲೆ ಆಕಾಶಧಾಳಿ ನಡಿಸದಂತೆ ಅಧಿಕಾರಿಗಳನ್ನು ಒತ್ತಾಯಿಸಬೇಕೆಂದು ಇಂಗ್ಲಾಂಡು ಅಮೇರಿಕಗಳ ಧರ್ಮ ಗುರುಗಳಲ್ಲಿ ವಿಜ್ಞಾಪಿಸಿಕೊಂಡಿದ್ದಾರೆ. ಬಿ. ಬಿ ಸಿ. ಯು 24 ಭಾಷೆಗಳಲ್ಲಿ ನಾಗರಿಕರು ಮುಂಜಾಗ್ರತೆ ವಹಿಸಬೇಕೆಂಬ ಎಚ್ಚರಿಕೆಯಿತ್ತಿದೆ.

ಚಕ್ರವರ್ತಿಗಳು.

ತಮ್ಮ ಸಮುದ್ರದಲ್ಲಿದ್ದ ಆಕ್ರಮಣ ಸಜ್ಜಿತ ಹಡಗು ದಳಗಳನ್ನು ಸಂದರ್ಶಿಸಿ, ಹರಸಿ ಬಂದಿದ್ದಾರೆ.

ಮಹಾತ್ಮಾಜೀ.

ತಾ. 15ರಲ್ಲಿ ಪರೀಕ್ಷಿಸಿದ ಡಾ। ಸಿ.ಸಿ. ಬರೂಚಾರವರು ಮಹಾತ್ಮಾಜೀಗೆ ಕರುಳ ಉಪದ್ರವಿದೆಯೆಂದೂ ಹೊಟ್ಟೆಯಲ್ಲಿ ಕೊಕ್ಕೇ ಹುಳದ ಬಾಧೆಯಿರುವದು ಕಂಡು ಬಂದಿದೆಯೆಂದೂ ಪ್ರಕಟಿಸಿದ್ದಾರೆ. ಗಾಂಧೀ ಗ್ರಾಮಕ್ಕೆ ಅಧಿಕ ಸಂಖ್ಯೆಯಲ್ಲಿ ಪ್ರೇಕ್ಷಕರು ಬರಹತ್ತಿದ್ದಾರೆ. ಅಲ್ಲಿಯೇ ಇರುವ ಬ್ರಿಟಿಷ್ ಅಮೇರಿಕನರೂ ಇತರ ತಂಡಗಳೊಂದಿಗೆ ಅಧಿಕ ಸಂಖ್ಯೆಯಲ್ಲಿ ಗಾಂಧೀಜೀಯ ಪ್ರಾರ್ಥನೆ ನೋಡಲು ಬರುತ್ತಿದ್ದಾರೆ.

ಫ್ರಾಂಕೋನ ಅಬ್ಬರ.

ಸ್ಪೈನಿನ ಜನರಲ್ ಫ್ರೇಂಕೋ ತನ್ನದೊಂದು ಭಾಷಣದಲ್ಲಿ ಬೊಲ್ಶೆವಿಕ್ ಹಾವಳಿಯನ್ನು ವರ್ಣಿಸಿ, ರಶ್ಯದೊಡನೆ ಹೋರಾಡುವ ತನ್ನ ಸ್ವಯಂ ಸೇವಕ ದಳಗಳನ್ನು ಶ್ಲಾಘಿಸಿ, ತನ್ನ ದೇಶ ವ್ಯವಹಾರದಲ್ಲಿ ವಿದೇಶಿಯರು ಕೈ ಹಾಕಲು ಯತ್ನಿಸುವದನ್ನು ಸ್ಪೈನು ಎಂದೆಂದಿಗೂ ಸಹಿಸಲಾರದೆಂದು ಎಚ್ಚರಿಸಿರುವನು.

ಅಯರ್ಲೆಂಡ್ ಚುನಾವಣೆ.

ಅಯರ್ಲೆಂಡ್ ಪಾರ್ಲಿಮೆಂಟಿನಲ್ಲಿ ಡಿ. ವೆಲರಾ ಸರಕಾರದಿಂದ ಮಂಡಿಸಲ್ಪಟ್ಟ ಮಸೂದೆಯೊಂದು ಒಂದು ಓಟಿನಿಂದ ಬಿದ್ದು ಹೋದುದಕ್ಕಾಗಿ ಡಿವೆಲರಾ ಸರಕಾರವು ರಾಜೀನಾಮೆ ಕೊಟ್ಟಿದೆ. ಈ ತಿಂಗಳಾಂತ್ಯದಲ್ಲಿ ಮರು ಚುನಾವಣೆ ನಡೆಯುವದು. ಅಯರ್ಲೆಂಡಿನ 1½ ಮಿಲಿಯ ಮತದಾರರು ಮತದಾನ ಮಾಡಲಿದ್ದಾರೆ. ಡಿ, ವೆಲರಾರ ವ್ಯಕ್ತಿತ್ವ ಮತ್ತು ಜನತಾ ವಿಶ್ವಾಸವು ಅಲ್ಲಿ ಬೇರಾವ ಪ್ರಮುಖನಿಗೂ ಇಲ್ಲವಾದ್ದರಿಂದ ಅವರೇ ಪ್ರಬಲ ವಿಜಯ ಪಡೆಯುವ ಸಂಭವವಿದೆ.

ಭಾರತದ ಶೀವರ್ಮಾನ

ನ್ಯೂಜೀಲೇಂಡಿನ ಮುಖ್ಯ ಮಂತ್ರಿಗಳು ಮಹಾತ್ಮರ ಬಿಡುಗಡೆಯಿಂದಾಗಿ ಭಾರತದ ಬಿಕ್ಕಟ್ಟು ನಿವಾರಣೆಗೊಳ್ಳುವದೆಂಬ ಆಸೆ ವ್ಯಕ್ತಪಡಿಸಿದ್ದಾರೆ. ಲಂಡನಿನ ‘ಸಂಡೇ ಒಬ್ಸರ್ವರ್’ ಮೊದಲಾದ ಪತ್ರಿಕೆಗಳು ಭಾರತದ ಒಕ್ಕಟ್ಟಿಗೆ ಬಾಧೆಯಿಲ್ಲದ ನೂತನ ಪಾಕಿಸ್ಥಾನ್ ಯೋಜನೆಯಂತಹ ಕಾರ್ಯಕ್ರಮಗಳನ್ನು ಹಾಕಿಕೊಡಲಾರಂಭಿಸಿವೆ.

ಪಂಜಾಬು ಮಂಥನ.

ಪಂಜಾಬು ಮಂತ್ರಿಮಂಡಲಕ್ಕೆ ಖಾನ್ ಬಹದೂರ್ ನವಾಬ್ ಸರ್. ಮಹಮ್ಮದ್ ಜಮಾಲ್‌ಖಾನ್ ಮತ್ತು ಮೇಜರ್ ನವಾಬ್ ಆಶಿಕ್ ಹುಸ್ಸೇನರನ್ನು ಅಲ್ಲಿಯ ಗವರ್ನರರು ಹೊಸತಾಗಿ ನೇಮಕ ಮಾಡಿ, ಹೊಸ ಮಂತ್ರಿಗಳ ಪ್ರತಿಜ್ಞಾಸ್ವೀಕಾರವಾಗಿದೆ. ಶೌಕತ್ ಹಯಾತ್‌ಖಾನರ ರದ್ದತಿ ಮತ್ತು ಲೀಗಿನ ಶಿಸ್ತು ಭಂಗಕ್ಕಾಗಿ ಮುಖ್ಯ ಮಂತ್ರಿ ಮಾಲಿಕ್ ಕಿಝರ್ ಹಯಾತ್ ಖಾನರು ಲೀಗಿನ ಕಾರ್ಯಪ್ರವೃತ್ತ ಸಮಿತಿಯ ಮುಂದೆ ಉದಾಹರಣೆ ಕೊಡಬೇಕೆಂದು ಸಮಿತಿಯ ಕಾರ್ಯದರ್ಶಿಯಿಂದ ನೋಟೀಸು ಜ್ಯಾರಿಯಾಗಿದೆ. ಪ್ರಧಾನಿಗಳದನ್ನು ನಿರಾಕರಿಸಿದ್ದಾರೆ: ಈಗ ಲೀಗ್ ಸಮಿತಿಯ ಸಭೆಯು ನವಡೆಲ್ಲಿಯಲ್ಲಿ ನೆರೆದಿದ್ದು ಪಂಜಾಬು ಪ್ರಧಾನಿಗಳ ಮೇಲೆ ಶಿಸ್ತು ಜ್ಯಾರಿಯಾಗುವ ಸಂಭವವಿದೆ.

ಶ್ರೀ. ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲ್, ವಿಶ್ವೇಂದ್ರ — ನಗರ, ಇನ್ನಂಜೆ —
ಕಾವು. ದ. ಕ.

ತಾ. 1-6-44ನೇ ಗುರುವಾರ ಶಾಲಾರಂಭ.

ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸುಲಭ ದರದಲ್ಲಿ ಭೋಜನ, ವಸತಿ, ದೀಪಗಳ ಯೋಗ್ಯ ವ್ಯವಸ್ಥೆ ಇರುವುದು.

I, II, III ಮತ್ತು IV ಫೋರ್ಮುಗಳಿಗೆ ಸೇರಲಿರುವವರಿಗೆ ಸುಸಂದರ್ಭ.

ಹುಡುಗಿಯರಿಗೆ ಸ್ಕೂಲ್ ಫೀಸಿನಲ್ಲಿ ತುಂಬಾ ರಿಯಾಯತಿ ಇದೆ.

ಇನ್ನಂಜೆ 12-4-'44 } **Headmaster.**

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು.

ದ್ವಿತೀಯರಂಗ-ಪಶ್ಚಿಮ ರಣರಂಗದಲ್ಲಿ ಜರ್ಮನಿಯ ದುರ್ದೆಶೆ-ಜರ್ಮನಿಯಲ್ಲಿ ಜನರ ನೈತಿಕ ಭಂಗ-ಜರ್ಮನರ ಪತನ-ಯುದ್ಧ ಸಮಾಪ್ತಿ-ಯುದ್ಧ ಸಾಮಾಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿರುದ್ಯೋಗ ಪರಿಣಾಮ ಸರಕುಗಳು ಪೇಟೆಗೆ ರಾಶಿರಾಶಿಯಾಗಿ ಬರೋಣ-ಧಾರಣೆಗಳ ಇಳಿತ-ನಷ್ಟ-ಕೊರತೆ-ಕ್ಷೇಮಗಳು-ಆರ್ಥಿಕ ಬಿಕ್ಕಟ್ಟು.

— ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೇವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

ತಾರೀಖು 20-5-1944ರಿಂದ

ಕರ್ನಾಟಕದ ಕೀರ್ತಿವೆತ್ತ ಚಿತ್ರತಾರೆ

ಅಶ್ವತ್ಥಮ್ಮ

ಮತ್ತು

ವಿನೋದರತ್ನ ಸಾರಂಗಪಾಣಿ

ಇವರು ಅಭಿನಯಿಸಿದ

ಸಂತ ಸಖೂಬಾಯಿ

ಪ್ರಶಾಂತತೆಯನ್ನೇ ಗರ್ಭದಲ್ಲಿಟ್ಟುಕೊಂಡಂತಿದೆ. ಕೆಲಸವಿದ್ದವರು ಬಂದುಹೋಗಲು ಸಮೀಪ-ಅನ್ಯ ಕಾರ್ಯಾಗಸಕ್ತರಿಂ ಅನಾವಶ್ಯಕ ಗಲಭೆಗೆ ದೂರವಾಗಿದೆ. ಗಾಂಧೀ ಕಾಹಿಲೆಯನ್ನು ಅಂದೇ ನಿರೀಕ್ಷಿಸಿ, ಅದಕ್ಕನುಗುಣವಾಗಿ ನಿರ್ಮಿಸಿದ ವಸತಿಯಿದು ಎಂಬಷ್ಟು ಅನುಕೂಲವಿದೆ. ಅಲ್ಲಿಗೆ ತೀರಾ ಸಮೀಪದ 'ಬಿ ಬಿ.ಸಿ ಐ' ರೈಲ್ವೇ ಸ್ಟೇಶನು ಎರಡು ಮೈಲು ದೂರದಲ್ಲಿದ್ದು ಆ ಮೇಲೆ ಬಸ್ಸು ಅಥವಾ ಟೇಕ್ಸಿ ಹತ್ತಿ ಹೋಗಬೇಕಾಗುತ್ತದೆ. ಗಾಂಧಿಜೀಯ ಸಂಜೆ ಮುಂಜಾನೆಯ ಬಹಿರಂಗ ಪ್ರಾರ್ಥನೆಗನುಕೂಲವಾಗಿ ಹೊಯಿಗೆ ವರಾಂಡ, ಸಂಜೆ ಮುಂಜಾನೆಯ ಸಂಚಾರಕ್ಕನುಕೂಲವಾಗಿ ವಿಶಾಲ ಸಮುದ್ರ ದಂಡೆಯಿದ್ದು, ಮನುಷ್ಯ ಪ್ರಯತ್ನಕ್ಕಸಾಧ್ಯವಾದ ಒಂದು ಅನುಕೂಲ ವಸತಿಯನ್ನು ಪ್ರಕೃತಿಯೇ ನಿಶಾಂತಿ ಗಾಂಧಿಗಾಗಿ ನಿರ್ಮಿಸಿಟ್ಟಂತಿದೆ. ಮಣ್ಣಿ ಗೋಡೆ, ಹುಲ್ಲು ಮಾಡಿನ ಗುಡಿಸಲುಗಳಲ್ಲಿ ವಾಸಿಸಿ ಅಭ್ಯಾಸವಿರುವ ಗಾಂಧಿಜೀಯ ಮರ್ಜಿಗನುಗುಣವಾದ ಇಂದಿನ ಆ ಗುಡಿಸಲಿನಲ್ಲಿ ವಿದ್ಯುಚ್ಛಕ್ತಿ ಬೀಸಣಿಗೆಗಳನ್ನು ಮತ್ತು ಒಂದು ರೇಡಿಯೋವನ್ನಿರಿಸಲಾಗಿದೆ. ಇಲ್ಲಿ ಮಹಡೀ ಮೆಟ್ಟಲು ಹತ್ತುವ ಪ್ರಯಾಸವೂ ಇಲ್ಲ. ಗಾಂಧೀ ಗುಡಿಸಲಿನ ಒತ್ತು ಗುಡಿಯಲ್ಲಿ ಸರೋಜಿನಿ ದೇವಿ ಬಂದು ನೆಲಸಿದ್ದಾರೆ. ಅಲ್ಲಿಗೆ ಸಮೀಪದಲ್ಲೇ ಬೊಂಬಾಯಿಯ, ಅಮೇರಿಕನ್ ಹಾಗೂ ಇಂಗ್ಲಿಷ್ ವ್ಯಾಪಾರಿಗಳ ಹಲವು ಮನೆಗಳಿವೆ. ಗಾಂಧೀ ಆಗಮನ ಸೂಚನಾರ್ಥವಾಗಿ ಆ ವಠಾರದ ಸ್ವಾಭಾವಿಕ ಹಸುರು ಪತಾಕೆಗಳೊಡನೆ ತ್ರಿವರ್ಣ ಧ್ವಜಗಳೂ ಮಿಲನಗೊಂಡು ಹಾರಾಡುತ್ತಿವೆ. ಮಹಾತ್ಮರೀ 'ಎಸ್ಟೇಟ್'ನಲ್ಲಿ ಕೊನೆಯ ಪಕ್ಷ ಮೂರುವಾರ ನಿಲ್ಲಬಹುದು; ಸಾಧ್ಯವಾದಷ್ಟು ಬೇಗ ಸೇವಾಗ್ರಾಮಕ್ಕೆ ಹೋಗಿ ಸೇರಬೇಕೆಂದು ಅವರ ಆತುರ.

ಮುಂದಿನ ಪ್ರಗತಿ.

ಈ ವರೆಗೂ ಮಹಾತ್ಮರ ಪ್ರಕೃತಿ ಸುಧಾರಣೆಯು ಸ್ಪಷ್ಟ ಹಾದಿ ಹಿಡಿದು ಸಾಗಲಾರಂಭಿಸಿಲ್ಲ. ಒಮ್ಮೆ ಬಹು ಹಸನ್ಮುಖಿಯಾಗಿ ಕಂಡು ಬಂದರೆ ಮರುಕ್ಷಣವೇ ಆಯಾಸಕ್ಕೊಳಗಾಗುತ್ತಾರೆ. ಪರ್ಣಕುಟಿಯಲ್ಲಿ ಕಂಡು ಬಂದ ಪ್ರಗತಿ ಜುಹುವಿನಲ್ಲಿಲ್ಲ. ಬೊಂಬಾಯಿಯ ಹವಾಮಾನವೇ ಇದಕ್ಕೆ ಕಾರಣವೆಂದು ನಂಬಲಾಗಿದೆ. ಆ ವಲ್ಲಿನ್ನೂ ಚೇತನವಾಗಲೀ ಪ್ರಾಮುಖ್ಯ ವಿಷಯಗಳಲ್ಲಿ ಅಭಿರುಚಿಯಾಗಲೀ ಮೂಡಿಲ್ಲ; ಅನಾರೋಗ್ಯಜನ್ಯ ಜಾಡ್ಯವೇ ತುಂ

ಗಾಂಧಿಜೀ ಕಾಹಿಲೆಯೊಡನೆ ಕಾದಾಡುತಿದ್ದಾರೆ!

(೨ನೇ ಪುಟದಿಂದ ಮುಂದುವರಿದುದು)

ಜಿವ. ದೂರಕ್ಕೆ ನಡೆಯುವುದಸಾಧ್ಯ; ಪ್ರಾರ್ಥನೆಗೆ ನಿಂತು ಬಂದಾಗಲೂ ದಣಿವೇರುತ್ತಿದೆ ಆದ್ದರಿಂದ ಮಹಾತ್ಮಾಜೀ ದೇಹಸ್ಥಿತಿಯು ಇನ್ನೂ ಆತುರಕ್ಕವಕಾಶವಿತ್ತಿದೆ. ಸಂಪೂರ್ಣ ವಿಶ್ರಾಂತಿಯ ಅಗತ್ಯ ಬಿದ್ದುದರಿಂದ ಈಗೀಗ, ಸರೋಜಿನೀ ದೇವಿ, ಶಾಂತಿ ಕುಮಾರ್ ಮೊರಾರ್ಜಿಯಂಥವರೇ ಬಾಗಿಲು ಪಹರೆಗೆ ನಿಂತು, ಭೇಟಿಗೆ ಬಂದವರನ್ನೆಲ್ಲಾ ಹಿಂದಟ್ಟಲಾರಂಭಿಸಿದ್ದಾರೆ. ಅಸ್ರತಿಬಂಧ ವಿಶ್ರಾಂತಿ ಹೊಂದುವದಕ್ಕಾಗಿ ಇದೇ ತಾ| ೧೫ರಿಂದ ಒಂದು ಪಕ್ಷ ಪರಿಯಂತ ಗಾಂಧಿಜೀ ಮೌನ ವ್ರತ ಧಾರಣೆ ಮಾಡಿದ್ದಾರೆ ಈತವನ್ನು ವಿರುದ್ಧ ಪರಿಣಾಮವನ್ನಿತ್ತರೆ, ಅದನ್ನು ಮಧ್ಯದಲ್ಲೇ ವಿಸರ್ಜಿಸಲಾಗುವುದು. ಬೊಂಬಾಯಿ ಹವೆಯ ಉಪಟಳವು ನಿಲ್ಲದಿದ್ದರೆ ತಂಪು ಸ್ಥಳಕ್ಕೆ ಗಾಂಧಿಜೀ ಸ್ಥಾನಾಂತರ ಹೊಂದುವ ಸಂಭವವೂ ಇದೆ ಲೀರಸಿಂಗ್ ಆಫೀಸರು ಗಾಂಧೀ ಗ್ರಾಮಕ್ಕೆ ಬಂದು ಗಾಂಧಿ ಪರಿವಾರದ ಎಲ್ಲರ ಸಹಿಯನ್ನೂ ಪಡೆದು ಒಂದು ಅರ್ಜಿಯನ್ನು ಗಾಂಧಿಜೀಯ ಮುಂದೆ ಹಿಡಿದಾಗ "ನಾನು ಧಾನ್ಯ ಸೇವಿಸುವವನಲ್ಲ; ಕೇವಲ ಹಣ್ಣು ಹಂಪಲುಗಳನ್ನಷ್ಟೇ ತೆಗೆದುಕೊಳ್ಳುವವ" ಎಂದು ನಗನಗುತ್ತಾ ಸಹಿ ಹಾಕಲು ನಿರಾಕರಿಸಿದರು.

ಆಗಾಖಾನ್ ಅರಮನೆ.

ಹತಭಾಗೀ ಆಗಾಖಾನ್ ಅರಮನೆಯಿಂದ ಆತ್ಮಹಾರಿಹೋದ ಶವವಂತಿದೆ ಯುದ್ಧಾನಂತರ ಬ್ರಿಟಿಷ್ ವಿಮಾನ ಶಾಖಾನೆಗಳಿಗೊದಗಲಿರುವ ದುರ್ಗತಿಗೆ ಆ ಗಾಖಾನ್ ಅರಮನೆ ಈಗಲೇ ಒಳಗಾಗಿದೆ. ಮಹಾತ್ಮಾಜೀಯಿದ್ದ ಕೋಣೆಯ ಗೋಡೆಯಲ್ಲಿ, ಕೈದಿಗಳ ಎತ್ತರಗಳನ್ನು ಪೆನ್ಸಿಲಿನಿಂದ ಬರೆದು ಹಾಕಿದ್ದುದು ಹಾಗೇನೇ ಉಳಿದಿದೆ. ಈ ಪಟ್ಟಿಯಲ್ಲಿ ಎತ್ತರದ ಮಟ್ಟಿಗೆ ಒಂದನೆಯವರಾಗಿ ಮಿಸ್. ಮೀರಾ ಬೆನ್, ಎರಡನೇ ಗಾಂಧಿಜೀ ಬಂದಿದ್ದಾರೆ ಎಲ್ಲರಿಗಿಂತ ಗಿಡ್ಡವೆಂದರೆ ಕಸ್ತೂರಿಬಾ. ಬಾ ಮತ್ತು ದೇಸಾಯಿಗಳ ಸಮಾಧಿಸ್ಥಳದ ತುಂಡನ್ನು ಕ್ರಯಕ್ಕೆ ಕೊಡುವಂತೆ ಗಾಂಧಿಜೀ ಸರಕಾರದೊಡನೆ ಪತ್ರವ್ಯವಹಾರ ನಡೆಸಿರುವರೆಂದು ವಾರ್ತೆ. ಇಡೀ ಆಗಾಖಾನ್ ಅರಮನೆಗೆ ತಾವು ಕ್ರಯತೆತ್ತು ಪಡೆದು ರಾಷ್ಟ್ರೀಯ ಸ್ಮಾರಕವಾಗಿ ಸಮರ್ಪಿಸುವೆವೆಂದು ಕೆಲವು ಮಿತ್ರರು ಮುಂದೆ ಬಂದಿದ್ದಾರೆ

ಮುಂದೇನು?

ಅಖಿಲ ಪ್ರಪಂಚದ ಸುವಿಚಾರಿಗಳೆಲ್ಲರ ಒತ್ತಾಯದ ಬೇಡಿಕೆಯಾಗಿದ್ದ ಗಾಂಧೀ ಬಿಡುಗಡೆಯನ್ನು, ಯಾವ ಕಾರಣದಿಂದಾದರೂ ಬ್ರಿಟಿಷ್ ಸರಕಾರವೀಗ ಮಾಡಿರುವದರಿಂದ, ದೇಶವಿದೇಶಗಳಲ್ಲಿ "ಮುಂದೇನು? ಎಂಬ ಪ್ರಶ್ನೆಯೆದ್ದಿದೆ. 'ಇದು ಸರೋಜಿನೀ ಮಾದರಿಯ ಬಿಡುಗಡೆಯಾಗಬಾರದು', 'ಈ ಸುವರ್ಣ ಸಂಧಿಯನ್ನು ಬ್ರಿಟಿಷ್ ಸರಕಾರವೆಂದೂ ಕಳಕೊಳ್ಳದಿರಲಿ'; 'ಜನ್ಮತಃ ಫೇಸಿಸಂ ವೈರಿಗಳಾದ ನೆಹರು, ಆಜಾದರೇ ಮೊದಲಾದವರನ್ನು ಕೂಡಲೇ ಬಿಟ್ಟುಬಿಡಿ' 'ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರ ಕೂಟಾಲೋಚನೆಗನುಕೂಲತೆ ಮಾಡಿಕೊಡುವ ಎರಡನೇ ಹೆಜ್ಜೆಯಿಡಿ'-ಎಂದೆಲ್ಲಾ ಬ್ರಿಟಿಷ್ ಪತ್ರಿಕೆಗಳು ಘಂಟಾಘೋಷವಾಗಿ ಸಾರುತ್ತಿವೆ. "ಜೈಲಿನಲ್ಲಿ ಸತ್ತರೆ, ಅವನ ಪ್ರೇತವು ಬ್ರಿಟಿಷ್ ಹಿಂದುಸ್ಥಾನವನ್ನು ಸದಾ ಪೀಡಿಸಿ ಬಹುದೆಂಬ ಭೀತಿಯಿಂದ ಗಾಂಧೀ ಬಿಡುಗಡೆಯಾಯಿತು. ಆದರೆ ಹಲವು ಬಾರಿ ಮರಣವನ್ನು ವಂಚಿಸಿದ್ದ ಗಾಂಧಿಗೆ ಇನ್ನೂ ಹಲವು ವರುಷಗಳ ಆಯುಷ್ಯವಿರಬಹುದು. ಮಹಾತ್ಮರ ಬಿಡುಗಡೆಯ ಈ ಸಂದರ್ಭವು ಎಷ್ಟಕ್ಕೂ ಕಳಕೊಳ್ಳಕೂಡದಂತಹ ಒಂದು ಸುಯೋಗವೆಂಬುದನ್ನು ಲೋರ್ಡ್ ವೇವಲರು ತಿಳಿಯಲಿದ್ದಾರೆ" ಎಂದು ಲಂಡನಿನ 'ನ್ಯೂ ಸ್ಟೇಟ್ಸ್‌ಮೇನ್' ಪತ್ರಿಕೆ ಮಾರ್ಮಿಕವಾಗಿ ನುಡಿದಿದೆ. ಬ್ರಿಟಿಷ್ ಪತ್ರಿಕೆಗಳ ಹಿಂದಿ ಪ್ರತಿಯಂತಿರುವ ಮದ್ರಾಸಿನ ಸರ್. ಸಿ. ಆರ್. ರೆಡ್ಡಿಗಳಂಥವರು ಕೂಡಾ 'ಕಾಂಗ್ರೆಸು ಜಪಾನ್ ಅಥವಾ ಜರ್ಮನಿಗೆ ಮಿಕ್ಕಿದ ವೈರಿಯಲ್ಲವೆಂದು ತಿಳಿದು ಸರಕಾರವದರೊಡನೆ ಸಂಧಾನಕ್ಕೆ ಬರಲಿ? ಎಂದು ಆಜ್ಞಾಪಿಸಿದ್ದಾರೆ, ಗಾಂಧೀ ಬಿಡುಗಡೆಯ ಕುರಿತು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದಾಗ 'ಬಿಡುಗಡೆಯು ಕಠಿಣ ಕಾಹಿಲೆಗಾಗಿ ಮಾತ್ರ' ಎಂದು ಮಿ. ಅಮೆರಿಯ ಉತ್ತರ. ಇತರ ಕಾಂಗ್ರೆಸ್ ಧುರೀಣರನ್ನೂ ನಿಶ್ಶರ್ತವಾಗಿ ಬಿಡುಗಡೆಮಾಡಬಾರದೇಕೆ? ಎಂಬ ಪ್ರಶ್ನೆಬಂದಾಗ, ಭಾರತ ಕಾರ್ಯದರ್ಶಿಯು ಆ ಜವಾಬ್ದಾರಿಯು ಹಿಂದೀ ಸರಕಾರದ ಹೆಗಲ ಮೇಲಿರುವದನ್ನು ತೋರಿಸಿರುವರು. "ಗಾಂಧಿಯವರು ಗುಣಹೊಂದಿದರೆ ಅವರನ್ನು ಪುನಃ ಬಂಧಿಸಲು ಮಿ ಅಮೆರಿ ಯೋಚಿಸಲಾರರಲ್ಲವೆ? ಎಂದು ಮಿ. ಟಿಂಕರ್ ಕೆಣಕಿ ಕೇಳಿದಾಗ "ಅದನ್ನು ಸಂದರ್ಭ ಬಂದಾಗ ಆಲೋಚಿಸಲಾಗುವದು' ಎಂಬ ಉತ್ತರ ಬಂದಿದೆ. ಪಂಡಿತ ನೆಹರುಗಳೂ ಗಫರ್‌ಖಾನರಂತೆಯೇ ಅನಾರೋಗ್ಯದಲ್ಲಿರುವರೆಂಬ, ಅನ್ಯಾದೃಷ್ಟ ಸುದ್ದಿಯೊಂದು, ಈ ಸಂಬಂಧವಾಗಿ ಮಿ. ಸೊರೆನ್ಸನರು ಮಿ. ಅಮೆರಿಯನ್ನು ಪ್ರಶ್ನಿಸಿದಾಗ ಬೆಳಕಿಗೆ ಬಿದ್ದಿದೆ. ೭ ... ಲೋಕಮತದ ಅಭಿಪ್ರಾಯದಂತೆ, ಸಹೃದಯೀ ವೇವೆಲರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರನ್ನೆಲ್ಲಾ ಬಿಡುಗಡೆಮಾಡುವ ಸನ್ನಾಹದಲ್ಲಿದ್ದಾರೆ. ಆದರೆ ಗಾಂಧಿಜೀಯ ಧೋರಣೆಯ ಪರಿಚಯವಾಗದ, ಸರಕಾರವು ಅಂತಹ ಸತ್ಕಾರ್ಯ ಪ್ರವೃತ್ತವಾಗುವದೆಂದು ಊಹಿಸುವದು ಬಯಲಾಸೆಯೇ ಸರಿ!

NOTICE

Applications are invited from qualified Ayurvedic and Allopathic Medical Practitioners who are willing to be appointed as Medical Practitioners in short leave and other vacancies in Rural Ayurvedic and Allopathic Dispensaries under this District Board

2 Applications with true copies of diplomas and registration certifecates should reach the President, District Board, South Kanara by the 25th May 1944.

3 Applicants should either remit to this District Board, or credit to any of the Government Treasuries in the District to the credit of District Board rupee one only towards the petition fees Petitions received without payment of the above fees will not be considered

A Lakshminarayana Rao.
President, Dt. Board, South Kanara

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction
Also a sovereign remedy for diarrhoea, Stomachache, Vomiting and Nausea
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ.
ದೊಡ್ಡವರಿಗೆ ೩ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ- ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ದಕ್ಷಿಣ ಕನ್ನಡ

ಮಂಗಳೂರು

ಕಟ್ಟಿಗೆಯ ಬೆಲೆಯು:— ದಿನದಿಂದ ದಿನಕ್ಕೆ ಏರುತ್ತ ಬರುತ್ತಿದೆ. ಸದ್ಯದಲ್ಲಿ ಜಿಲ್ಲಾ ಕಲೆಕ್ಟರರು ಕಟ್ಟಿಗೆಯ ಬೆಲೆಯನ್ನು ನಿಯಂತ್ರಿಸುವ ಆಜ್ಞೆಯಿಂದಿಷ್ಟು ದೇಶ ರಕ್ಷಣಾ ಶಾಸನವನ್ನು ಜಾರಿಗೆ ತರಲಿರುವರೆಂದು ತಿಳಿದುಬರುತ್ತದೆ.

ಬುದ್ಧ ಜಯಂತಿ:— ಬೆಸೆಂಟ್ ಹೆಣ್ಣುಮಕ್ಕಳ ಶಾಲೆಯಲ್ಲಿ ತಾ. ೮ರಂದು ಡಾ| ರಾಮಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಯುತರುಗಳಾದ ಎಂ. ಯಸ್. ಮಾಧವರಾಯರು, ಎಂ. ಯಸ್. ಪೀತಾಂಬರರಾಯರು ಮತ್ತು ಬಿ. ಅನಂತರಾಯರು, ಬುದ್ಧನ ವಿಚಾರ ಮಾತನಾಡಿದರು.

ಇಂಡಿಯನ್ ಫೆಡರೇಶನ್ ಓಫ್ ಲೇಬರ್:— ಶ್ರೀ. ಎಂ. ಎನ್. ರಾಯರಿಂದ ಸ್ಥಾಪಿತವಾದ ಈ ಸಂಸ್ಥೆಯ ಸಮಿತಿಯೊಂದು ಇತ್ತೀಚೆಗೆ ಮಂಗಳೂರಲ್ಲಿ ಪುನರ್ನಿರ್ಮಾಣಗೊಂಡು ಕಾರ್ಯಪ್ರವೃತ್ತವಾಗಿದೆ. ಶ್ರೀ| ಗಳಾದ ಎನ್. ಶಂಕರಭಟ್ಟರು ಕಾರ್ಯದರ್ಶಿಗಳಾಗಿಯೂ ಜ. ಕೆ. ನೆಟ್ಟೂರ್ ಮತ್ತು ಕೆ. ಆರ್. ರಾಯರು ಉಪಕಾರ್ಯದರ್ಶಿಗಳಾಗಿಯೂ ನಿಯುಕ್ತರಾಗಿದ್ದಾರೆ.

ರೂ. ೧೩,೦೦೦ ಏಕೆ?

ಭಾರತ ಸರಕಾರವು ಇಂಡಿಯನ್ ಫೆಡರೇಶನ್ ಆಫ್ ಲೇಬರ್ ಸಂಸ್ಥೆಗೆ ತಿಂಗಳೊಂದರ ರೂ. ೧೩,೦೦೦ ಕೊಡುವುದರ ವಿಚಾರ, ಫೆಡರೇಶನಿನ ಇತ್ತೀಚೆಗೆ ಜರಗಿದ ಸಭೆಯಲ್ಲಿ ಈ ರೀತಿಯ ವಿವರಣಾ ನಿರ್ಣಯ ಒಂದು ಮಂಜೂರಾಯಿತು:— ಯುದ್ಧ ಕಾರ್ಯವು ಜಯಪ್ರದವಾಗುವಂತೆ ಮಜೂರರನ್ನು ಸಂಘಟಿಸುವ ಸಲುವಾಗಿ ಈ ಹಣವು ವ್ಯಯಿಸಲ್ಪಡುತ್ತಿದೆ.

ಉಡುಪಿ.

ಸ್ಥಳೀಯ ಬೋರ್ಡ್ ಹ್ಯಾಸ್ಕೂಲಿನಲ್ಲಿ, ಬರುವ ಜೂನ್‌ನಿಂದ ಹ್ಯಾಸ್ಕೂಲ್ ತರಗತಿಗಳಿಗೆ ಶಿಕ್ಷಣವನ್ನು ವಿದ್ಯಾರ್ಥಿಗಳ ಇಚ್ಛೆಯಂತೆ ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮಗಳಲ್ಲಿ ಕೊಡಿಸಲು ತಾವು ಮಾಡಿರುವ ಏರ್ಪಾಡಿಗೆ ಅಧಿಕಾರಿಗಳ ಅನುಮತಿ ನಿರೀಕ್ಷಿಸಲಾಗುತ್ತಿದೆಯೆಂದು ಶಾಲೆಯ ಮುಖ್ಯೋಪಾಧ್ಯಾಯರು ತಿಳಿಸುತ್ತಾರೆ.

ಉಡುಪಿ ತಾಲೂಕು ಉಪಾಧ್ಯಾಯರ ಸಭೆ:— ಯ್ಯಿಡೆಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ಯೂನಿಯನ್ ಸಭೆಯು ಇದೇ ತಾ 6ರಂದು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಕಾರ್ಯಕಾರಿ ಮಂಡಳಿಯ ಚುನಾವಣೆಯಾಗಿ ಈ ಠರಾವುಗಳು ಮಂಜೂರಾದುವು. ಅಧ್ಯಾಪಕ ವರ್ಗದವರಿಗೆ ಸಿಗುವ ಗ್ರ್ಯಾಂಟು ತೀರಾ ಕಡಿಮೆಯಾದುದರಿಂದ, ಗ್ರ್ಯಾಂಟಿನ ದರಯೇರಿಸುವುದಲ್ಲದೆ, ತುಟ್ಟೀ ಭತ್ತೆಯ ದರವನ್ನು ಕೂಡಾ—ಇತರ ಸರಕಾರೀ ಮತ್ತು ಲೋಕಲ್ ಬೋರ್ಡ್ ನೌಕರರಿಗೆ ಸಿಗುವ ದರದಷ್ಟೇ, (10—0—0 ರೂಪಾಯಿಗಳಂತೆ) ಕೊಡಿಸೋಣಾಗುವಂತೆಯೂ, ತರಬೇತಿ ಹೊಂದುವ ಅಧ್ಯಾಪಕರಿಗೆ ಸೇಕಡಾ 100ರಷ್ಟು ಸ್ಟೈಫೆಂಡ್ ದರ ಏರಿಸುವಂತೆಯೂ, ಗ್ರ್ಯಾಂಟು ತಿಂಗಳೊಂದರ ಬಟವಾಡೆ ಮಾಡುವಂತೆಯೂ, ಆಹಾರ ಸಾಮಗ್ರಿಗಳನ್ನು ತಿಂಗಳೊಂದರ ಕೊಡಿಸೋಣಾಗುವಂತೆಯೂ, ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಕೆಲಸ ಮಾಡುವ ಪಂಡಿತರಿಗೆ, ಮೇಲಣ ದರ್ಜೆಗಳಲ್ಲಿ 3ಕ್ಕಿಂತ ಹೆಚ್ಚಿಗೆ ಸೆಕ್ಷನ್‌ಗಳಿದ್ದಲ್ಲಿ ಮಾತ್ರ, ಅವರಿಗೆ ಸೆಕೆಂಡರಿ ಗ್ರೇಡ್ ದರದಲ್ಲಿ ಗ್ರ್ಯಾಂಟು ಎಣಿಸಲಾಗುವುದೆಂದು ಹಾಕಿದ ಶರ್ತವನ್ನು ಸಡಲಿಸುವಂತೆಯೂ ಕೇಳಿಕೊಂಡ ನಿರ್ಣಯಗಳು ಸರ್ವ ಸಮ್ಮತಿಯಿಂದ ಮಂಜೂರು ಮಾಡಲ್ಪಟ್ಟವು.

ಪದ್ಮಸಾಲಿ ವೈಶ್ಯ ಸಮಾಜ ಸೇವಾ ಸಂಘದ:— ಚತುರ್ಥ ವಾರ್ಷಿಕೋತ್ಸವವು ತಾ 28ನೆ ಆದಿತ್ಯವಾರ ಸಂಜೆ ಗಂಟೆ 4ಕ್ಕೆ ಉಡುಪಿ ಕಿನ್ನಿ ಮೂಲ್ಕಿ ಶ್ರೀ ವೀರಭದ್ರ ದೇವಸ್ಥಾನದ ಮೊಕ್ತೇಸರ್ ಶ್ರೀ ಶೇಷಪ್ಪ ಶೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಕೆಮ್ಮಣ್ಣು:— ಹಾಯರ್ ಎಲಿಮೆಂಟರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದವರು ಸದರಿ ಶಾಲೆಯಲ್ಲಿ ಹೊಸತಾಗಿ ಕಟ್ಟಲ್ಪಡುತ್ತಿರುವ ಕಟ್ಟಡದ ಸಹಾಯಾರ್ಥವಾಗಿ 'ಕರ್ಣಾರ್ಜುನ' ನಾಟಕವನ್ನು ತಾ 20—5—44ನೇ ಶನಿವಾರ ರಾತ್ರಿ ಗಂಟೆ 10ಕ್ಕೆ ಅಭಿನಯಿಸಲಿರುವರು.

ಕೋಟೇಶ್ವರ:— ಶ್ರೀ ಆನಂದರಾವ್ ಮತ್ತು ಪಾರ್ಟಿಯವರು ಕಳೆದ ಒಂದು ತಿಂಗಳಿನಿಂದ ಕುಂದಾಪುರ ತಾಲೂಕಿನ ಶಂಕರನಾರಾಯಣ, ಕೋಟೇಶ್ವರ, ಕುಂದಾಪುರ, ಗಂಗೊಳ್ಳಿ, ಹಾಲಾಡಿ, ಮತ್ತು ಉಡುಪಿ ತಾಲೂಕಿನ ಕೋಟ ಮುಂತಾದ ಅನೇಕ ಸ್ಥಳಗಳಲ್ಲಿ ಸಂಗೀತ ಕಚೇರಿಗಳನ್ನು ಏರ್ಪಡಿಸಿ ಎಲ್ಲಾ ಜನರ ಆದರ ಸತ್ಕಾರಗಳಿಗೆ ಪಾತ್ರರಾದದ್ದಲ್ಲದೆ ಕೋಟೇಶ್ವರ ಮತ್ತು ಹಾಲಾಡಿಯಲ್ಲಿ ಸುವರ್ಣ ಪದಕ ಪಡೆದಿರುವರು.

ಕೋಟೇಶ್ವರದಲ್ಲಿ ಕನ್ನಡ ವಸಂತೋತ್ಸವವು ಶ್ರೀಮಾನ್ ಎಚ್. ವೆಂಕಟಕೃಷ್ಣ ಉಡುಪರ ಅಧ್ಯಕ್ಷತೆಯಲ್ಲಿ ಕೋಟೇಶ್ವರ ಶಾಲೆಯ ವಠಾರದಲ್ಲಿ ತಾ 21—5—44ರಂದು ಸಂಜೆ 5-30ಕ್ಕೆ ಜರಗಲಿದೆ.

ರಜಕ ಬಂಧುಗಳಲ್ಲಿ, ಮುಂಬಾಯಿ ಶ್ರೀ ರಜಕ ಸಂಘದ ವಿನಂತಿ.

ನಮ್ಮ ಬಡ ಜಾತಿಯು ವಿದ್ಯೆಯಲ್ಲಿ ಹಿಂದುಳಿದಿರುವುದೆಂದು ಎಲ್ಲರೂ ಅರಿತ ವಿಷಯವಾಗಿದೆ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಯೊಬ್ಬ ಆಗಸ ವ್ಯಕ್ತಿಯೂ ತಮ್ಮ ಬಾಲಕ ಬಾಲಕಿಯರನ್ನೆಲ್ಲಾ ಹತ್ತಿರದ ಶಾಲೆಗಳಿಗೆ ಕಳುಹಿಸಿ ಕೈಲಾದಷ್ಟು ವಿದ್ಯೆಯನ್ನು ಕೊಡುವಂತೆ ಪ್ರಯತ್ನಿಸಬೇಕೆಂದು ನಾವು ಬಹಳವಾಗಿ ಅಪೇಕ್ಷಿಸುತ್ತೇವೆ.

ಬಡ ಬಂಧುಗಳಿಗೆ ತಮ್ಮ ಮಕ್ಕಳನ್ನು ಶಾಲೆಗೆ ಹಾಕಲು ಮತ್ತು ಹೆಚ್ಚಿಗೆ ಕಲಿಸಲು ಆರ್ಥಿಕ ಕಷ್ಟದಿಂದ ಅಸಾಧ್ಯವಾದರೆ ದಯಮಾಡಿ ನಮ್ಮ ಸಂಘದ ಈ ಕೆಳಗಿನ ವಿಳಾಸಕ್ಕೆ ವಿದ್ಯಾರ್ಥಿ ವೇತನಕ್ಕೆ ಮತ್ತು ಪುಸ್ತಕ ವಗೈರೆಗೆ ತಕ್ಕ ಧನ ಸಹಾಯಕ್ಕೆ ತಾ 20—6—1944ರ ವರೆಗೆ ಬರೆದುಕೊಳ್ಳಬಹುದು. ಅಂತಹ ಕೋರಿಕೆ ಪತ್ರಗಳನ್ನು ಪರಿಶೀಲಿಸಿ, ಕೈಲಾದಷ್ಟು ಧನ ಸಹಾಯವನ್ನೀಯುವರೇ ಸಂಘವು ತುಂಬಾ ಸಂತೋಷಪಡುತ್ತದೆ. ವಿಳಾಸ: ಮೂಡಬಿದ್ರಿ ಡಿ. ಈಶ್ವರ, ಗೌ. ಕಾರ್ಯದರ್ಶಿ, 169 ಬೋರ ಬಜಾರ್ ಸ್ಟ್ರೀಟ್, 4ನೇ ಮಾಳಿಗೆ, ಕೋಟೆ, ಮುಂಬಾಯಿ.

ಬಂಟರ ಯುವಕ ಸಂಘ ಮುಂಬಾಯಿ.

ಇದರ ತೃತೀಯ ವಾರ್ಷಿಕ ಮಹಾ ಸಭೆಯು ತಾ. 23-4-44ರಲ್ಲಿ ಶ್ರೀ| ಯಂ. ಶ್ರೀಧರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಂಘದ ಶಾಲೆಯಾದ ದಿ. ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನ ವಠಾರದಲ್ಲಿ ಜರಗಿತು. ವಾರ್ಷಿಕ ವರದಿ ಮಂಜೂರಾತಿಯಾದ ಬಳಿಕ ಸಂಘದ ಹೊಸ ಕ್ರಮ ನಿಬಂಧನೆಗಳಿಗನುಸಾರವಾಗಿ ಆಡಳಿತ ಮಂಡಳಿಯನ್ನು ರಚಿಸಲಾಯಿತು. ಸಂಘದ ರಾತ್ರಿ ಶಾಲೆ ಮತ್ತು ವಾಚನಾಲಯವನ್ನು ಬಲಪಡಿಸಬೇಕೆಂಬ ನಿರ್ಧಾರವಾಯಿತು.

ಬಗ್ವಾಡಿ ಹೋಬಳಿಯ ಮೊಗವೀರ ಸಂಘ ಮುಂಬಾಯಿ:— ಇದರ ತೃತೀಯ ವಾರ್ಷಿಕ ಮಹಾ ಸಭೆಯು ತಾ. 7-5-44ರಂದು ಶ್ರೀ|| ಎಸ್. ವಿ. ಕಾಂಚನರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಮುಂದಾಭಿವೃದ್ಧಿಯ ಕುರಿತು ಹಲವರ ಭಾಷಣಗಳಾದುವು

CHAMPAE'S
Snow & Castrex
(*Sole Distributers for (India.)*
Sukhananda Stores
Santhekatte, UDIPI, S. K.

The progress of the "**POPULAR**" is in every aspect a concrete proof of the business acumen and enterprise of **KARNATAKA.**

You have a duty towards your OWN institutions which can be best manifested by your co-operation and patronage.

In taking out your Life Assurance Policy in a LOCAL company or representing it as an AGENT, SPECIAL AGENT or A DISTRICT AGENT, you contribute to the continued Success and Progress of LOCAL institutions.

Prefer the "POPULAR" for your Life Assurance.

	New business completed	Rs. 10,40,000
1943	Life Assurance fund	Rs. 3,76,000
	Renewal expense Ratio	17·6%

Claims Paid exceed Rs. 1,00,000 Assets exceed Rs. 4,60,000

THE POPULAR INSURANCE COMPANY LIMITED,

MANGALORE.

The Pangal Nayak Bank Limited.

(Incorporated in 1920)
Registered Office Court Road, UDIPI
Branches at— Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up to-date Banking service is at the disposal of all the sections of the discreet public.

For business proper please enquire at any one of our Offices.

15th April 1944.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿದ್ದುದು.

The Moolky Bank Ltd. Moolky, S. K.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

FOR SAFETY & SERVICE

THE VIJAYA BANK, LTD.,

Head office: MANGALORE

Branches at:—Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ
ವಿಜಯಾ ಬೇಂಕ್ ಲಿಮಿಟೆಡ್
ಹೆಡ್ ಆಫೀಸು:—ಮಂಗಳೂರು.
ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.

REGD.

ಅಮೃತಾಂಜನ ತಲೆನೋವು, ನೆಗಡಿ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾವು ಕೀಲ್ನೋವು, ಚೇಳು ವಿಷ ಮುಂತಾದ ಬೇನೆ ಜಾಡ್ಯ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧಿ.
ಎಲ್ಲಾ ಜಾಗಗಳಲ್ಲಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ
ವಿದ್ಯಾಶಾಖೆಗೆ ಸಂಬಂಧಿಸಿದ
ಸರ್ಕ್ಯುಲರುಗಳೂ ಪ್ರಕಟ
ವಾಗುತ್ತವೆ
ವಾರ್ಷಿಕ ಚಂದಾ
ರೂ. **1—8—0** ಮಾತ್ರ
ಬೈಂಡು ಮಾಡಿದ ಪ್ರಥಮ
ಸಂಪುಟಕ್ಕೆ ರೂ. **2—8—0**
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: **ಬೊಂಬಾಯಿ**
ಚೀಫ್ ಏಜೆನ್ಸಿ ಆಫೀಸು:—ಉಡುಪಿ.
ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.
ನಿಮ್ಮ ಮತ್ತು ನಿಮ್ಮ ಕುಟುಂಬದ ಬಾವೀ ಕಲ್ಯಾಣಕ್ಕಾಗಿ.
ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.
ಉತ್ಸಾಹೀ ಏಜಂಟರ ಬೇಕಾಗಿದ್ದಾರೆ.

ಪಿ. ಡಿ. ನಾನಯ್ಯ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Co. Ltd., Bombay.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರನೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೫—0—0 ಪೋಷ್ಟ ಚಾರ್ಜು ೧೨ಆಣೆ.

ಮಾಲಕರು.—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ. ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾನ, ಕೆಮಿಸ್ಟ. ಹಾವೇರಿ, ಬ್ಯಾಡಗಿ.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ,ಆಯುರ್ವೇದ ಭೂಷಣ ,ನಂ. 5 ಕೊಡಿಯಾಲಬೈಲು, ದ.ಕ

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.
ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.
Approved firm by the Govt. of Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6

Regd. No M 3618. | Estd 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೩೮

FOUNDER Sri. A. B. Shetty.

Vol 24 No. 38

NAVAYUGA— Kannada Weekly —UDIPI, S I.

ಉಡುಪಿ • 25-5-1944 • ಮಂಗಳೂರು

1944ನೇ ಜನವರಿಯಿಂದ ಮೂರನೆ ಸಂಪುಟಾರಂಭ ವಾಗಿದೆ

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿಗೆ ರೂ. 0-4-0

ಮಾದರಿ ಪ್ರತಿಗೆ ಎಂಟಾಣೆ ಸ್ಟಾಂಪಿನೊಂದಿಗೆ ಬರೆಯುವುದು:

'PRAKASHINI'

NAVAYUGA PRESS

UDIPI

ANTARANGA

UDIPI

ಅಖಿಲ ಕರ್ನಾಟಕದ ಹೊಸ ಮಾದರಿಯ ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ 4-8-0

ಬಿಡಿ ಪ್ರತಿಗೆ 0-1-6

ಮೆನೇಜರ್,

ಅಂತರಂಗ, ಉಡುಪಿ

The Canara Mutual Assurance Co., Ltd.

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

UDIPI, 3-4-1944 } T. R. A. Pai, MANAGING DIRECTOR

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು ಆರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು:-

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹನಿದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದ್ದುವುದು. ಮೊದಲ ದಿವಸ ಬೆಳಿಗ್ಗೆ ೮ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿಂಗೆ ೩ ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ.—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಸ್ಟೋರ್ಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ. ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,

Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣಕೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ರಕ್ತವರ್ಧಕ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ. ಕ್ಯಾಟಲಾಗಿಗೆ ಬರೆದಲ್ಲಿ ರೋಗಗಳ ಲಕ್ಷಣದ ವಿವರ ಪುಸ್ತಕವನ್ನು ಕಳುಹುವೆವು.

ಕತೆ ಕಾದಂಬರಿಗಳು—ಕವನ,—ನಾಟಕಗಳು

ಯಾವ ಪುಸ್ತಕ ಬೇಕಾದರೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗಾಂಧಿಜೀ ಗುಣಹೊಂದುತಿದ್ದಾರೆ!

ಜುಹುವಿನ ಗಾಂಧಿಯೀಗ ನಿಧಾನವಾಗಿ ಗುಣ ಹೊಂದುತಿದ್ದಾರೆ. ಅವರ ಪಾಕ್ಷಿಕ ಮೌನವ್ರತವು ಶಕ್ತಿದಾಯೀ ಟೋನಿಕ್ ಆಗಿ ಪರಿಣಮಿಸಿದಂತಿದೆ. ಮೂತ್ರ ಕ್ರಿಯೆಯ ದೋಷ ನಿವಾರಣೆಗೊಳ್ಳುತ್ತಿದೆ; ಕೊಕ್ಕೇ ಹುಳದ ಬಾಧೆಯನ್ನೂ ಇದೆಯಾದರೂ ಅದು ದುಷ್ಪರಿಣಾಮ ಕೊಡುವ ಮೊದಲೇ ಡಾಕ್ಟರರಿಂದ ಕೊಲ್ಲಲ್ಪಡುವ ಸಂಭವವಿದೆ. ಆದರೊಂದು ಆತಂಕ—ಅದಕ್ಕಾಗಿ ಡಾಕ್ಟರರು ಕೊಡುವ ಔಷಧವೆಲ್ಲವನ್ನೂ ಗಾಂಧಿಜೀ ನಿಶ್ಚಲ ಘೋರಣೆಯಿಂದ ನಿರಾಕರಿಸುತಿದ್ದಾರೆ. ಪ್ರಕೃತಿ ಚಿಕಿತ್ಸೆಯಿಂದಲೇ ಗುಣಹೊಂದಬಲ್ಲೆನೆಂದು ಅವರ ವಿಶ್ವಾಸ. ಆದರೆ ಡಾ। ಗಿಲ್ಡರರ ಡಾಕ್ಟರೀ ಹಠವೀ ತನಕ ಪರಾಭವಗೊಂಡಿಲ್ಲ. ಕೆಲವು ಔಷಧಗಳನ್ನಾದರೂ ಸೇವಿಸುವಂತೆ ಮಹಾತ್ಮಾಜೀಯನ್ನವರು-ಕಹಿಯೌಷಧ ಕುಡಿಯಲೊಪ್ಪದ ಮಗುವನ್ನು ಸಮಜಾಯಿಸುವಂತೆ-ಸಮಜಾಯಿಸುತ್ತಿದ್ದಾರೆ. ನಿತ್ರಾಣ ಗಾಂಧಿಗೀಗ ಸುಖನಿದ್ರೆ ಬೀಳುತ್ತಿದೆ, ಅವರು ಹಸನ್ಮುಖಿಗಳಾಗಿ ಕಾಣುತ್ತಿದ್ದಾರೆ; ದೇಹತ್ರಾಣಗೊಂಡು, ಬುದ್ಧಿಯೂ ಎಚ್ಚರಗೊಳ್ಳಹತ್ತಿದೆ

ಸರ್ಪಗಾವಲ ಸರೋಜಿನಿ!

ತನಗೆ 'ಮಿಕ್ಕಿಮೌಸ್' 'ಪಹಿಲ್ವಾನ್' ಇತ್ಯಾದಿ ಬಿರುದುಗಳನ್ನಿತ್ತ ಸರೋಜಿನೀ ದೇವಿಯ ಋಣವನ್ನು 'ಕಾವಲನಾಗಿಣಿ' ಎಂಬ ಸನ್ನದನ್ನಿತ್ತು ಗಾಂಧಿಜೀ ಈಗ ತೀರಿಸಿಕೊಳ್ಳಬಹುದು. ನಿಜಕ್ಕೂ ಜುಹುವಿನಲ್ಲಿರುವ ಈ ರಾಷ್ಟ್ರೀಯ ನಿಧಿಗೆ ಸರೋಜಿನಿ ಸರ್ಪಗಾವಲು ನಡಿಸಿ, ಉಳಿಸಿಕೊಟ್ಟಿರೆನ್ನಬೇಕು; ಅದಕ್ಕಾಗಿ ರಾಷ್ಟ್ರವವರಿಗೆ ಚಿರಋಣಿಯಿರಬೇಕು. ಈಗ ಗಾಂಧಿಜೀಯ ಹೃದಯದೊಂದು ಶಾಶ್ವತ ಯಾತನೆಯಾಗಿ ಉಳಿದಿರುವ ಶ್ರೀ ಮಹದೇವ ದೇಸಾಯಿಯರೂಮ್ಮೆ ಗಾಂಧೀ ಕಾಹಿಲೆಯ ಕುರಿತು 'ಪ್ರೇಕ್ಷಕರ ಗಲಭೆ ತಪ್ಪಿದರೆ ತನ್ನನ್ನು ತಾನೇ ಗುಣ ಪಡಿಸಿಕೊಳ್ಳುವ ಶಕ್ತಿ ಗಾಂಧೀಜೀಯಲ್ಲಿದೆ'ಎಂದು ಬರೆದಿದ್ದರು. ಡಾ।ಗಳಾದ ಗಿಲ್ಡರ್, ನಾಯರ್, ಗಜ್ಜರ್, ಮೊದಲಾದವರು ಈ ಬಾರಿಯೂ ಗಾಂಧಿಯೊಳಗಡೆಯಲ್ಲಿ ತಮ್ಮನ್ನೂ ಮಿಕ್ಕಿದ ಡಾಕ್ಟರನೊಬ್ಬನಿದ್ದಾನೆ ಎಂಬ ಅನುಭವ ಪಡೆದಿದ್ದರು. ಆದರೆ ಲಕ್ಷ್ಯವು ಸಂದರ್ಶಕರ ಕಡೆಗೆ ಬೀಳುವಾಗ ಗಾಂಧಿಜೀಯ ದಣುವೇರುವ ಸಂಪ್ರದಾಯ. ದೀರ್ಘಾವಧಿ ಕಾಣೆಯಾಗಿ ಈಗ ತಾನೇ ಕಾಣಿಸಿಕೊಂಡಿರುವ ವಿಧುರ-ರೋಗಿ-ಮಹಾತ್ಮನ ಮುಖಾವಲೋಕನ ಮಾಡಬೇಕೆಂಬ ಜನತೆಯ ಈ ಬಾರಿಯ ಅತುರವಂತೂ ದುರ್ದಮನೀಯವೇ ಸರಿ. ಒಬ್ಬಾಕೆ ಸರೋಜಿನಿಯಲ್ಲದಿರುತ್ತಿದ್ದರೆ ಜುಹೂ ಗಾಂಧಿಯ ಸಮ್ಮುಖದಲ್ಲಿ ದ್ವಿತೀಯ ಸಮುದ್ರವಾಗಿ ಜನಕಂಡವು ರಾತ್ರಿಹಗಲು ಘೋರ್ಗರೆಯುತಿತ್ತು. ಮಹಾತ್ಮರ ನೆಮ್ಮದಿಯೊಡನೆ ಆರೋಗ್ಯವೂ ಕೆಟ್ಟು ಹೋಗುತಿತ್ತು. ಆದರೆ ಸರೋಜಿನಿಯಿದ್ದಾಕೆ—ಆಕೆ ಜುಹುವಿಗೆ ಧಾವಿಸಿ, ಮಹಾತ್ಮರ ಗುಡಿಸಲ ಪಕ್ಕದ ಮನೆಯನ್ನಾಕ್ರಮಿಸಿಕೊಂಡು ನಿಂತುದು ಈ ದುರಂತ ನಿವಾರಣೆಗಾಗಿಯೇ! ಆಕೆ ಗಾಂಧೀ ಅಸಲಿಯ ಮೆಜಿಸ್ಟ್ರೇಟಳಾಗಿ ಸ್ಥಾಪನೆಗೊಂಡು, ಸಂದರ್ಶಕರ ಅತ್ಯಾತುರದ ಧಾಳಿಯಿದಿರು ಅಜೇಯಳಾಗಿ ನಿಂತಿದ್ದಾಳೆ!

ನಿಷ್ಠುರ ನಿದರ್ಶನಗಳು

ಒಮ್ಮೆ ಸಂದರ್ಶಕರು ಗಾಂಧೀ ಮೂರ್ತಿಯನ್ನು ನುಂಗಲೆಂಬಂತೆ ಕವಿದುಬಿದ್ದರು. ಸರ್ಪಗಾವಲ ಸರೋಜಿನಿ ಚಂಡಿಯವತಾರ ಧರಿಸಿ ಅವರನ್ನೆಲ್ಲಾ ತೆಳೆಳ ಲಾಠಿ ಬೀಸಿ ನಿಷ್ಠುರವಾಗಿ ಚದರಿಸಿದಾಗ ಗಾಂಧಿಜೀ ಆ ಹತಭಾಗೀ ಸಂದಣಿಯ ಮೇಲೆ ಮರುಕಗೊಂಡರು. ಕೂಡಲೇ ಸರೋಜಿನಿ ಹಿಂದಿರುಗಿ ಗಾಂಧಿಜೀಯನ್ನು ಗದರಿಸಿದರು: "ನಾನು ನಿಮಗೆ ಹೆದರುವೆನೆಂದು ಭಾವಿಸಿದಿರಾ? ನೀವು ನನ್ನ ಮಗನಾಗಿರುತ್ತಿದ್ದರೆ ಚಾಟಿ ಹಿಡಿದು ಬಾರಿಸುತ್ತಿದ್ದೆ!"-ಕಲ್ಯಾಣ ಸಾಧನೆಗಾಗಿ-ಇಂತಹ ಕಾಳಿಯವತಾರ ಧರಿಸುವ ಅಧಿಕಾರ ಮತ್ತು ಶಕ್ತಿಯಿರುವದು ಸರೋಜಿನೀದೇವಿಗೆ ಮಾತ್ರ. ಗಾಂಧೀ ಭೇಟಿಗೆ ಬಂದ ಓರ್ವ ಮಿಲಿಯಾಧಿಪತಿ ಈ ಪಹರೆಗಾರಳನ್ನು ಪ್ರಾರ್ಥಿಸಿಕೊಂಡರು: '15 ಮಿನಿಟು ಗಾಂಧೀ ದರ್ಶನ ಮಾಡಲು ಬಿಟ್ಟರೆ ಕಸ್ತೂರಿ ಬಾ ನಿಧಿಗೆ 50 ಸಾವಿರ ರೂಪಾಯಿ ಕೊಡುತ್ತೇನೆ'. ಉತ್ತರಕ್ಕೆ ಮಿನಿಟೂ ತಡವಾಗಲಿಲ್ಲ. ಬರಿಗೈ, ಮೂಕ ಬಾಯಿಯಿಂದ ಬಂದಿದ್ದ ಸಾವಿರಾರು ಮಂದಿಗೆ ದೊರೆತ ಉಡುಗೊರೆಯೇ ಈ ಮಿಲಿಯಾಧಿಪನಿಗೂ ದೊರೆಯಿತು-'ಸಾಧ್ಯವಿಲ್ಲ'! ಶ್ರೀಮತಿ ನಾಯಿಡು ನಿರ್ಧಾರಪೂರ್ವಕ ಹೇಳಿದರು: "ಯಾವ ಕಾರಣಕ್ಕಾದರೂ ನಾನು ನನ್ನ ನಿಯಮವನ್ನು ಮುರಿಯಲಾರೆ. ಸ್ಮಾರಕನಿಧಿಗೆ ಸಹಾಯ ಮಾಡುವದು, ಬಿಡುವದು ನಿಮ್ಮಿಷ್ಟ. ಪ್ರಾರ್ಥನೆಯ ವೇಳೆಯಲ್ಲಲ್ಲದೆ ನೀವು ಗಾಂಧಿಯವರನ್ನು ಕಾಣಲಾರಿರಿ". ಈ ದ್ವಾರಪಾಲಕಿ ಅನುಗ್ರಹಾಗ್ರಹವೆರಡನ್ನೂ ಅರಿಯಳು. ಒಂದೇ ವಾರಕ್ಕೆ ಮೊದಲು ಗಾಂಧಿಜೀಯನ್ನು ಮನೆಯತಿಥಿಯಾಗಿ ಇಟ್ಟುಕೊಂಡಿದ್ದ ಪರ್ಣಕುಟಿಯ ಒಡತಿ|ಲೇಡಿ ಥಾಕರ್ಸೆಯವರಿಗೂ ಜುಹುವಿನಲ್ಲಿ ಮಿಕ್ಕವರ ಪಂಗ್ತಿಯೇ! ಅವರು ತನ್ನಂತಹ ಓರ್ವ ಮಹಿಳೆ-ಉಕ್ಕಿನಂತಹ ಶಿಸ್ತಿಗಾಗಿ ಹೆಗ್ಗಳಿಕೆಗೊಂಡು ಪ್ರಾರ್ಥನೆಯ ಸಮಯ ಕಾದು ಗಾಂಧೀ ದರ್ಶನ ಪಡೆದು ಸಂತುಷ್ಟರಾದರು. ಶ್ರೀ. ಆರ್. ಡಿ. ಬಿರ್ಲರಂಥವರಿಗೂ ಅದೇ ನಿರ್ಬಂಧವೇದ ಮೇಲೆ, 'ನಾನು ನಾಳೆಯೇ ಇಂಗ್ಲಾಂಡಿಗೆ ಹೊರಡುವವ; ಒಮ್ಮೆ ಗಾಂಧೀ ದರ್ಶನ ಕೊಡಿ' ಎಂದು ಫೋನ್ ಮೂಲಕ ಪ್ರಾರ್ಥಿಸಿಕೊಂಡ ಮತ್ತೊಬ್ಬ ಮಿತ್ರರಿಗೆ 'ಊಹೂಂ' ಎಂದುದರಲ್ಲಿ ಆಶ್ಚರ್ಯವಿಲ್ಲ. ಗಾಂಧೀ ಕಾವಲಿಗೆ ಸಿಂಹಿಣಿಯನ್ನೇ ಕಟ್ಟಿಹಾಕಿದಂತಾಗಿದೆ-ಅಲ್ಲಿರುವ ಸರೋಜಿನೀ ದೇವಿಯ ಹಾಜರಿ! ಬುದ್ಧಿಯಿದ್ದವರೆಲ್ಲಾ ಈ ಜಯವಿಜಯೆಯೊಡನೆ ಸಹಕರಿಸಿ ಮಹಾತ್ಮರ ಆರೋಗ್ಯ ಸಾಧನೆಗೆ ನೆರವಾಗುತಿದ್ದಾರೆ.

ಆ ಪತ್ರ

ಸ್ವಾಸ್ಥ್ಯ ಚೇತರಿಕೆ ಪ್ರಾರಂಭವಾದಂತೆ ಮಹಾತ್ಮರ ಮನಸ್ಸೂ, ತನ್ನ ಸ್ವಸ್ಥಾನವಾದ ಸಾರ್ವಜನಿಕ ವಿಷಯಗಳ ಕಡೆಗೋಡಲಾರಂಭಿಸಿದೆ. ಚರ್ಚಾಸ್ಪದ ವಿಷಯವಾವುದಕ್ಕೂ ಮಹಾತ್ಮರು ತಲೆ ಹಾಕಬಾರದೆಂಬ ಡಾಕ್ಟರೀ ನಿರ್ಬಂಧವಿದ್ದಂತೆಯೇ ತಪ್ಪಿಸಿಕೊಂಡ ಒಂದು ಜಿಗುಟು ವಿಚಾರವೀಗ ಒಳಗೆ ಸೇರಿಹೋಗಿದೆ. ಕಾಂಗ್ರೆಸ್ ಮುಖಂಡ ಅಲ್ಲಾಮಾ ಮಶ್ರೀಕಿಯವರು ಕ್ಷೇಮಾಕಾಂಕ್ಷಿಸಿ ಮಹಾತ್ಮರಿಗೆ ಬಿಟ್ಟ ಸಂಪ್ರದಾಯ ಬದ್ಧ ತಂತಿಯಲ್ಲಿ ಜಿನ್ನರೊಡನೆ ಒಪ್ಪಂದಕ್ಕೊದಗಬೇಕೆಂಬ ಅಪೇಕ್ಷೆಯೂ ಸೇರಿದ್ದಿತು. 'ಕಳೆದ ವರುಷ ಜಿನ್ನರಿಗೆ ಬರೆದಿದ್ದ ಪತ್ರದಲ್ಲಿದ್ದ ವಿಜ್ಞಾಪನೆಯೀಗಲೂ ಇದೆ' ಎಂದು ಗಾಂಧಿಜೀಯ ಪರವಾಗಿ ಕಾರ್ಯದರ್ಶಿ ಪ್ಯಾರೇಲಾಲರವನ್ನು ಉತ್ತರಿಸಿದರು. 'ಆ ಪತ್ರದಲ್ಲಿದ್ದುದೇನು? ಸರಕಾರವದನ್ನು ತಡೆದಿಟ್ಟುಕೊಂಡಿದೆ ಜಿನ್ನರೋದಿರಲಿಲ್ಲ; ಮುಸಲ್ಮಾನರ ಅವಗಾಹನೆಗಾಗಿ ಅದನ್ನು ಪ್ರಕಟಿಸಿಬಿಡಿ'-ಎಂದು ಮುಸ್ಲಿಂ ಲೀಗಿನ ಮುಖಪತ್ರ 'ಡಾನ್'ನ ಸೂಚನೆ ಬಂತು. 'ಯೋಗ್ಯ ಸಲಹೆ' ಎಂದು ಹೊಗಳುತ್ತಾ ಪ್ಯಾರೇಲಾಲರು ಗಾಂಧಿಜೀಯ ಸಮ್ಮತಿಯಿಂದದನ್ನು ಪ್ರಕಟಿಸಿದ್ದಾರೆ. ಅದು ಹೀಗಿದೆ:

'ಪ್ರಿಯ ಕ್ವಯದ್—ಇ—ಅಝಾಮರೇ, ನನ್ನ ಬಂಧನದ ತುಸು ಕಾಲಾನಂತರ, ನನ್ನ ಅಪೇಕ್ಷೆಯ ಪತ್ರಿಕೆಗಳ ಪಟ್ಟಿಯೊಂದನ್ನು ಸರಕಾರವು ಕೇಳಿತು. ನಾನು ಆ ಯಾದಿಯಲ್ಲಿ 'ಡಾನ್' ಹೆಸರನ್ನೂ ಸೇರಿಸಿದ್ದೆ. ಹೆಚ್ಚುಕಡಿಮೆ ಸಂದಿ ಪ್ರಕಾರ ಅದು ನನಗೆ ತಲಪುತ್ತಿದೆ. ನಾನದನ್ನು ಲಕ್ಷ್ಯಗೊಟ್ಟು ಓದುತಿದ್ದೇನೆ. ಅದರಲ್ಲಿ ಬಂದ ಲೀಗ್ ಕಾರ್ಯಕ್ರಮಗಳನ್ನು ನಾನು ಮನನಮಾಡಿದ್ದೇನೆ. ನಾನೊಂದು ಪತ್ರ ಬರೆಯಬೇಕೆಂದು ನೀವು ನನಗಿತ್ತ ಆಮಂತ್ರಣವನ್ನು ಗುರುತು ಮಾಡಿಕೊಂಡಿದ್ದೇನೆ-ಅದರಂತೆ ಈ ಪತ್ರ. ನಿಮ್ಮ ಆಮಂತ್ರಣಕ್ಕೆ ನನ್ನ ಸ್ವಾಗತ. ಪತ್ರವ್ಯವಹಾರ ನಡಿಸುವದಕ್ಕಿಂತ ನಾನೂ ನೀವೂ ಮುಖಾಮುಖಿಯಾಗಿ ಚರ್ಚಿಸಿಕೊಳ್ಳುವದುತ್ತಮವೆಂದು ನನ್ನ ಸೂಚನೆ. ಆದರೆ ನಾನು ನಿಮ್ಮ ಕೈಯಲ್ಲಿದ್ದೇನೆ. ಈ ಪತ್ರವನ್ನು ಸರಕಾರವು ನಿಮಗೆ ಮುಟ್ಟಿಸುವದೆಂದೂ, ನನ್ನ ಅಭಿಪ್ರಾಯವು ನಿಮಗೆ ಮಾನ್ಯವಾದಲ್ಲಿ ನನ್ನ ಭೇಟಿಗೆ ನಿಮ್ಮನ್ನು ಬಿಡುವದೆಂದೂ ಆಶಿಸುತ್ತೇನೆ. ಒಂದು ವಿಷಯವನ್ನು ನಾನಿಲ್ಲಿ-ಪ್ರಸ್ತಾಪಿಸುವದು ವಿಹಿತ. ನಿಮ್ಮ ಕರೆಯಲ್ಲೊಂದು 'ರೆ' ಸೇರಿಕೊಂಡಿದೆ. ನಾನು ಹೃದಯ ಬದಲಾವಣೆಗೊಂಡರೆ ಮಾತ್ರ ಪತ್ರ ಬರೆಯಬೇಕೆನ್ನುವಿರಾ? ಮನುಷ್ಯರ ಹೃದಯಗಳನ್ನರಿತವನು ದೇವನೊಬ್ಬನೇ. ನಾನಿರುವಂತೆಯೇ ನನ್ನನ್ನು ಸ್ವೀಕರಿಸಿಕೊಳ್ಳಬೇಕೆಂದು ನನ್ನ ಬಯಕೆ. ನೀವು ಮತ್ತು ನಾನು ಈ ಮಹತ್ವಾದ ಜಾತೀಯ ಪ್ರಶ್ನೆಗೊಂದು ತೀರ್ಮಾನ ಹೊಂದಿಯೇ ಸಿದ್ಧನೆಂಬ ದೃಢನಿರ್ಧಾರ ಧಾರಿಗಳಾಗಿ ಒಬ್ಬರನ್ನೊಬ್ಬರು ಸಂಧಿಸಬಾರದೇಕೆ? ಮತ್ತು ಈ ಪ್ರಶ್ನೆಗೆ ಸಂಬಂಧಿಸಿದ ಹಾಗೂ ಅಭಿರುಚಿಯುಳ್ಳ ಎಲ್ಲರಿಗೊಪ್ಪಿಗೆಯಾಗುವಂತೆ ಅದನ್ನು ಸಾಧಿಸಬಾರದೇಕೆ?—ನಿಮ್ಮ ವಿಶ್ವಾಸಪಾತ್ರ ಎಂ. ಕೆ. ಗಾಂಧಿ.

(೭ನೇ ಪುಟ ನೋಡಿರಿ).

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು.

ದ್ವಿತೀಯರಂಗ-ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ-ಜರ್ಮನಿಯಲ್ಲಿ ಜನರ ನೈತಿಕ ಭಂಗ-ಜರ್ಮನರ ಪತನ-ಯುದ್ಧ ಸಮಾಪ್ತಿ-ಯುದ್ಧ ಸಾಮಾಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿರ್ಲೋಪದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿರುದ್ಯೋಗ-ಉಪಯೋಗದ ಸರಕುಗಳು ಪೇಟೆಗೆ ಧಾರಾಳವಾಗಿ ಬರೋಣ-ಧಾರಣೆಗಳ ಇಳಿತ-ನಷ್ಟ-ಕೊರತೆ-ಕೇಡುಗಳು-ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: **1906**.

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

ನೋಟೀಸು.

ದ. ಕ. ಮಂಗಳೂರು ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 99/1944

ಕೆ. ಹುಸೇನ್ ಬ್ಯಾರಿ — ವಾದಿ

ಮತ್ತು

ತ್ಯಾಂಪ ಸೆಟ್ಟಿ ಸುಬ್ಬಯ್ಯ ಸೆಟ್ಟಿ, ಆಳಿಯ ಮಂಗ್ಳೂರು ತಾಲ್ಲೂ ಪಡಂಬೂರು ಗ್ರಾಮದ ಬೋರ್ಡಿಯಲ್ಲಿರುವವ — ಪ್ರತಿವಾದಿ

ಪ್ರತಿವಾದಿಗೆ

ಮೇಲೆ ಹೆಸರು ಕಾಣಿಸಿದ ವಾದಿ ಗೇಣಿ ಬಾಕಿ ಬಗ್ಗೆ ದಾಖಲು ಮಾಡಿದ ಮೇಲಿನ ವ್ಯಾಜ್ಯವು ತಾ 17-6-1944ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಪ್ರತಿವಾದಿಗೆ ಆಕ್ಷೇಪವಿದ್ದರೆ, ತಾ 17-6-1944ನೇ ದಿವಸ 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜಾಹೀರು ಪಡಿಸಿಕೊಳ್ಳಬಹುದು.

ಕೋರ್ಟು ಹುಕುಂ ಪ್ರಕಾರ

B. Rama Achar.

ವಾದಿಕಡೆ ಎಡ್ವಕೇಟ್

ಮಂಗಳೂರು
ತಾ 24-4-1944

CHAMPAE'S
Snow & Castrex
(Sole Distributers for (India.)
Sukhananda Stores
Santhekatte, UDIPI, S. K.

ಇಟೆಲಿ ಅಸ್ಸಾಮು ರಂಗಗಳಲ್ಲಿ ಮಿತ್ರರ ಮುಂದೋಟ!

ಕಳೆದ ವಾರವು ಮಿತ್ರ ಸೇನೆಗಳ ಪಾಲಿನ ಅನುಕೂಲಾವಧಿಯಾಗಿತ್ತು. ಇಂದಿನ ಸಜೀವ ಹೋರಾಟರಂಗಗಳಾದ ಇಟೆಲಿ ಮತ್ತು ಅಸ್ಸಾಮು-ಬರ್ಮಾ ರಂಗಗಳಲ್ಲಿ ಮಿತ್ರ ಸೇನೆಗಳ ಕೈ ಮೇಲಾಗಿದೆ ಹಲವು ಚಿರಸ್ಮರಣೀಯ ನಿರಾತೆಗಳನ್ನು ಪಡೆದು ದೀರ್ಘಾವಧಿ ಸ್ತಬ್ಧವಾಗಿದ್ದ ಇಟಲಿ ರಂಗದಲ್ಲಿ ಜನರಲ್ ಅಲೆಕ್ಸಾಂಡರರು, ನಿರ್ಮಿಸಿದ ನವಚೇತನವು ಈ ತನಕ ಮರ್ದನು ನೀಯುವನ್ನಿಸಿದೆ. ರೋಮ್ ನಗರದ ಮುಖ್ಯ ಹಾದಿಯಲ್ಲಿ ನಾಜಿಗಳು ನಿರ್ಮಿಸಿದ್ದ ಗುಸ್ಟೋವ್ ಲೈನ್ ಮತ್ತು ಹಿಟ್ಲರ್ ಲೈನುಗಳನ್ನು ಅನುಕ್ರಮವಾಗಿ ಪುಡಿಗುಟ್ಟಿ ಎಂಟನೇ ಮತ್ತು ಐದನೇ ಸೇನೆಗಳ ಮುಂದೋಟ ಸಾಗಿದೆ. ಹಿಟ್ಲರ್ ಲೈನಿನೊಳಗೆ ನುಗ್ಗಿಬಂದ ಮಿತ್ರ ಸೇನಾಪ್ರವಾಹದ ಸೆಳೆತವೆಷ್ಟು ಬಲವಾಗಿತ್ತೆಂದರೆ, ಲೈನಿನಲ್ಲಿ ಸುಸಂಘಟಿತವಾಗುವ ಅವಕಾಶವು ಕೂಡಾ ನಾಜೀ ಸೇನೆಗಳಿಗೆ ದೊರೆಯಲಿಲ್ಲವಂತೆ. ಆದರೆ ಜರ್ಮನರೀಗ ಅವಸರವಸರದಿಂದ ಹೆಚ್ಚಿನ ಸೇನೋಪಕರಣ ಸರಬರಾಯಿಯೊಡನೆ ಹಿಟ್ಲರ್ ಲೈನಿನಲ್ಲಿ ಕೊಡುತ್ತಿರುವ ಪ್ರತಿಭಟನೆಯು ರಭಸವೇರಿದೆ.

ಅನಿರೀಕ್ಷಿತ ಧಾಳಿ?

ಮಿಂಚುಧಾಳಿಗೆ ಹೆಸರುಹೋದ ಜರ್ಮನರನ್ನು ಅಲೆಗ್ಝಾಂಡರರ ಈ ನವಧಾಳಿ ಕೋಲ್ಮಿಂಚಾಗಿ ಬಡಿದು ದಿಗಿಲುಗೊಳಿಸಿತು ಎಂದು ವಾರ್ತೆ. ಇಟೆಲಿಯಲ್ಲಿ ಮಿತ್ರ ಸೇನೆಯ ಮರು ಸಾಹಸವನ್ನು ಜರ್ಮನರು ನಿರೀಕ್ಷಿಸಿದ್ದರು; ಆದರೆ ಅದಕ್ಕೆ ಕಲ ದಿನಗಳ ಅವಕಾಶವಿದೆ ಎಂದು ಭಾವಿಸಿದ್ದರು. ಸೆರೆಸಿಕ್ಕಿದ ಜರ್ಮನ್ ಯೋಧನೊಬ್ಬನೊಡನಿದ್ದ ಸೇನಾನಿ ಕೆಸ್ಸರ್‌ಲಿಂಗನ ಆಜ್ಞಾಪತ್ರವೊಂದು 'ಮೇ 24ನೇ ರಾತ್ರಿ 12 ಘಂಟೆಗೆ ವೈರಿಯು ಧಾಳಿ ಹೊಡವ ಸಂಭವವಿದೆ. ತಯಾರಿರಿ' ಎನ್ನುತಿತ್ತು. ಆದರೆ ಕೆಸ್ಸರ್‌ಲಿಂಗನು ಸೂಚಿಸಿದ ಆ ದಿನಕ್ಕೆ ಅಲೆಗ್ಝಾಂಡರರು ಧಾಳಿಯಾರಂಭಿಸಿ ವಾರ ಕಳೆದಿದ್ದಿತು ಹೀಗಾಗಿ ಪ್ರಥಮತಃ ನಾಜಿಗಳು ಸಿದ್ಧಗಣ್ಣಿಲ್ಲೇ ಹೋರಾಡಿದರೆನ್ನಬೇಕು. ಹಿಟ್ಲರ್ ಲೈನಿನ ಗುಡ್ಡ ಶಿಖರಗಳೇ ಮೊದಲಾದ ಹಲವು ಆಯಕಟ್ಟಿನ ಸ್ಥಳಗಳು ಮಿತ್ರರ ವಶವಾಗಿವೆ.

ಅಪಾಯಕರ ಆಟ!

ಇಟೆಲಿಯ ಇಂದಿನ ರಕ್ಷಣಾ ಲೈನಿಗೆ ಹಿಟ್ಲರನು ತನ್ನ ಹೆಸರನ್ನು ದಾನಮಾಡಿದ. ಅದು ಅಭೇದ್ಯವೆಂಬ ದೃಢವಿಶ್ವಾಸದಿಂದ; ಹಿಟ್ಲರ್ ಲೈನನ್ನುಳಿಸಿಕೊಳ್ಳಲು ನಾಜಿಗಳೀಗ ಹಿಂದು ಮುಂದು ನೋಡದೆ ಸೇನಾ ಸರಬರಾಯಿ ಮಾಡಿಕೊಂಡಿರುವದು ಅದು ಪ್ರಾಮುಖ್ಯ ನೆಲೆಯೆಂಬ ಕಾರಣದಿಂದ. ಇದು ನಾಜಿಗಳ ಪಾಲಿಗೊಂದು ಜುಗಾರಿಯಾಗಿ ಪರಿಣಮಿಸಲಿದೆ. ಉತ್ತರಗಡೆಯಿಂದ ಸೇನೆಗಳನ್ನೆಲ್ಲಾ ಇತ್ತ ತರಿಸಿಕೊಂಡು ಮಾರ್ಶಲ್ ಕೆಸ್ಸರ್‌ಲಿಂಗ್ ಆ ಭಾಗವನ್ನು ದುರ್ಬಲಗೊಳಿಸಿದ್ದಾನೆ. ಇಟೆಲಿಯಲ್ಲಿನ ನಾಜೀ ಸೇನಾ ಸಂಚಾರವು, ಮಾರ್ಕ್ಸ್ ಮೊದಲಿನ ಮಹಾತ್ಮಾಜೀಯ ರಕ್ತಸಂಚಾರದಂತಾಗಿದೆ! ಸರ್ವಸಿದ್ಧತೆಯನ್ನು ಮೊದಲೇ ಮಾಡಿಕೊಂಡಿರುವ ಮಿತ್ರ ಸೇನೆಗಳು ಜರ್ಮನರಿಗೆ ಲೈನಿನಲ್ಲಿ ಪರಾಭವವುಂಟುಮಾಡುವದು ಬಹುಮಟ್ಟಿಗೆ ಸಂಭವನೀಯ. ಆ ಅಪಜಯವು 'ಹಿಟ್ಲರ್‌ಲೈನ್' ಎಂಬ ಒಂದೇ ರಂಗದ ಸೋಲಾಗದೆ ಅಖಿಲ ಇಟೆಲಿಯ ಸೋಲಾಗಿ ಜರ್ಮನರ ಪಾಲಿಗೆ ಪರಿಣಮಿಸಬಹುದು. ಮಾತ್ರವಲ್ಲ, ಇಲ್ಲಿಯ ಹೋರಾಟ ಪ್ರಾಬಲ್ಯವೇ ರಷ್ಯಾರಂಗದಲ್ಲಿಯ ನಾಜಿಗಳ ಕೈಯನ್ನೂ ಸಡಿಲುಗೊಳಿಸಿದೆ

ಕೆಂಪುಸೇನೆಯ ಮುಖವೆತ್ತ?

ರಷ್ಯನ್ ಸೇನೆಯ ಮುಂದಿನ ಹೆಜ್ಜೆಯೆಲ್ಲಿ? ಜರ್ಮನಿಯೊಮ್ಮೆ ಆಕ್ರಮಿಸಿಕೊಂಡ ತನ್ನ ನೆಲದ ಪ್ರತಿಯೊಂದು ಇಂಚನ್ನೂ ಕೆಂಪು ಸೇನೆಯೀಗ ಮರಳಿ ಪಡೆಗೊಂಡಿದೆ. ಅದರ ಮುಂದಿನ ಏಡಿ ಕವಲೊಡೆದಿದೆ. ಆ ವೈಕಿ ಯಾವುದನ್ನಾರಿಸಿಕೊಳ್ಳಲಿ, ಎಂದದು ಈಗ ಚಿಂತಿಸುತ್ತಿರುವಂತಿದೆ ಅದು ಪಶ್ಚಿಮಾಭಿಮುಖವಾಗಿ ಮುಂದೊತ್ತಬಹುದು; ಹಾಗೆ ಮುಂದೊತ್ತಿ ಪೋಲೆಂಡ್ ಮತ್ತು ಜೆಕೊಸ್ಲೋವೇಕಿಯವನ್ನು ಹಿಟ್ಲರನ ಭೀಕರ ಮುಷ್ಟಿಯಿಂದ ಬಿಡಿಸಬಹುದು. ಇಲ್ಲವೇ ಪೂರ್ವಾಭಿಮುಖವಾಗಿ ಧಾಳಿಯಿಡಬೇಕು; ಆ ಮೂಲಕ ಬಾಲ್ಕನ್‌ಗಳ ಜರ್ಮನ್ ಸೇನಾ ಕೇಂದ್ರಗಳನ್ನು ಪುಡಿಗುಟ್ಟಬೇಕು. ಮೇಲಿನೆರಡು ಕವಲುಗಳ ಪೈಕಿ ಕೊನೆಯದೇ ರಶ್ಯಾನರ ಪಾಲಿಗೆ ಪ್ರಾಮುಖ್ಯ. ಬಾಲ್ಕನ್ ರಾಷ್ಟ್ರಗಳಲ್ಲಿ ಅದರಲ್ಲೂ ರುಮೇನಿಯದಲ್ಲಿ ಪರರಾಷ್ಟ್ರಗಳ ಪ್ರಭಾವವಿರುವದನ್ನು ರಶ್ಯದ ವಿದೇಶ ಸಂಬಂಧ ಖಾತೆಯ ಝಾರನ ಕಾಲದಿಂದಲೂ ಸಹಿಸುತ್ತಿರಲಿಲ್ಲ. ಕಳೆದ ಒಂದು ತಿಂಗಳ ವಿದ್ಯಮಾನಗಳನ್ನು ಅವಲೋಕಿಸಿದರೆ ಸ್ಟಾಲಿನರು 'ಅತಿ ಪ್ರಯಾಸದ ಕಾರ್ಯ'ವೆಂದ ಆ ಮುಂದಿನ ಹೆಜ್ಜೆಯನ್ನು ಬಾಲ್ಕನ್ ನೆತ್ತಿಯ ಮೇಲೂರಲು ರಶ್ಯವು ಸಿದ್ಧತೆಮಾಡುತ್ತಿದೆ ಎನ್ನಬಹುದು.

ಅಸ್ಸಾಮು-ಬರ್ಮಾ.

ಇಲ್ಲಿಯ ಅವಸ್ಥೆಯೂ ಬಹುಮಟ್ಟಿಗೆ ಇಟೆಲಿಯಂತೆಯೇ. ಅಸ್ಸಾಮಿನ ಇಡೀ ರಣರಂಗದಲ್ಲಿ ಯುದ್ಧವಿನ್ನೂ ಪ್ರಬಲವಾಗಿ ಸಾಗುತ್ತಿದೆ; ವಿಜಯ ಕೈಸೇರಿಲ್ಲ; ಆದರೆ ಒಂದೆರಡುವಾರಗಳಿಂದ ಮಿತ್ರ ಸೇನೆಗಳು ಮೇಲ್ಗೈಯಾಗಿವೆ. ಮಣಿಪುರ ರಸ್ತೆಯ ಯುದ್ಧವಿನ್ನೂ ನಡೆದಿದೆಯಾದರೂ ವೈರಿಯನ್ನಲ್ಲಿಂದ ಝಾಡಿಸಿಬಿಡುವ ಕಾರ್ಯವು ಜಯಶೀಲವಾಗಿ ಸಾಗುತ್ತಿದೆ. ಇಂಫಾಲ್-ಕೊಹಿಮಾ ವಲಯಗಳಲ್ಲಿ ಈಗಲಾದರೂ ಜಪಾನರ ಪ್ರತಿಧಾಳಿ ನಿಂತಿಲ್ಲ. ಆದರವು ಮಿತ್ರರ ಹಸ್ತದಲ್ಲಿ ಸುಭದ್ರವಾಗಿವೆ. ಸಿಲ್ಚಾರ್ ರಸ್ತೆಯ ಮೂಲಕ ಮುಂದೊತ್ತಿ ಇಂಫಾಲ್-ದಿಮಾಪುರ್ ರಸ್ತೆಯನ್ನು ಹಿಂದೆಹಾಕಬೇಕೆಂಬ ಜಪಾನರ ರಣಚಾತುರ್ಯವನ್ನೂ ನಿರರ್ಥಕಗೊಳಿಸಲಾಗಿದೆ. ಆದರೆ ತಾವು ಇಂಫಾಲ್ ಕೊಹಿಮಾ ವಲಯಗಳಲ್ಲಿ ಸಂಪಾದಿಸಿದುದನ್ನು ಎಂದೂ ಕಳಕೊಳ್ಳಬಾರದೆಂದು ಜಪಾನರ ನಿರ್ಧಾರವಿರುವಂತಿದೆ. ಬರ್ಮಾವಲಯದೊಳಗೆ ಅರಕಾನ್ ಕ್ಷೇತ್ರವಿನ್ನೂ ಜಪಾನರಿಗನುಕೂಲವಿದೆ. ಉತ್ತರ ಬರ್ಮದಲ್ಲಿ ಜನರಲ್ ಸ್ಟಿಲ್‌ವೆಲ್ಲರ ನಾಯಕತ್ವದಲ್ಲಿ ಮೂರು ಕಡೆಗಳಿಂದ ಬಕ್ಷಿಣಕ್ಕೆ ಮುಂದೊತ್ತಿಬಂದ ಚೀನಾ ಅಮೆರಿಕಾ ಸೇನೆಗಳು ಈಗ ಮೈಯಿಟ್ಕೆಯಿನಾವನ್ನಾಕ್ರಮಿಸಿಕೊಂಡಿವೆ. ಅಲ್ಲಿರುವ ಪ್ರಬಲ ಜಪಾನೀ ಸೇನೆಯು ಸುತ್ತುಗಟ್ಟಲ್ಪಟ್ಟಿದೆ. ಇವುಗಳಿಗೆ ಸ್ಟಾಲಿನ್ ಗ್ರಾಡಿನಲ್ಲಿ ನಾಜೀ ಸೇನೆಗಳಿಗೊದಗಿದ ಅದೃಷ್ಟವೇ ಕಾದಿರುವಂತಿದೆ. ವಿರೋಧಿಗಳಿಗೆ ಗ್ರಹಗತಿಯನುಕೂಲವಿದೆ ಎಂದು ಇನ್ನು ಹೇಳಲಾಗುವದಿಲ್ಲ!

ಮಂಗಳೂರು. ಡಿ. ಮು ಕೋರ್ಟಿನಲ್ಲಿ.

R. E. A. ನಂಬ್ರ 164/1944
R. E. P. ನಂಬ್ರ 119/1944
O. S. ನಂಬ್ರ 341/1918

ಕೃಷ್ಣವೇಣಿ — ಅರ್ಜಿದಾರಳು,

ಎದ್ರು

ಸೀತಮ್ಮ ಕೂಡಾ — ರೆಸ್ಪೋಂಡೆಂಟ್ರು

ರೆಸ್ಪೋಂಡೆಂಟ್ರು ಕುತ್ಯೆತ್ತೂರು ಗ್ರಾಮದಲ್ಲಿರುವವರು.

2ನೇ ದಾರಮ್ಮ ಹೆಂಗ್ಸಿನ ಮಗ ಗುಡ್ಡಶೆಟ್ಟಿ 1. 3ನೇ ಪೂರ್ಣ ಉಪಾಧ್ಯಾಯನ ಮಗ ವಾಸುದೇವಯ್ಯ 1, 4ನೇ ಕೃಷ್ಣಭಟ್ಟ ಮಗ ಪುಟ್ಟಣ್ಣಯಾನೆ ಪದ್ಮನಾಭ ಭಟ್ಟ 1. ಬೋಳೂರು ಗ್ರಾಮದಲ್ಲಿರುವ 5ನೇ ಮಂಚಿಗೆ ಸಾವಾನ ಶೆಟ್ಟಿ ಅಳಿಯ ಪೂವಪ್ಪ ಶೆಟ್ಟಿ 1. ಕೆಂಜಾರು ಗ್ರಾಮದಲ್ಲಿರುವ 6ನೇ ಸೀಮುಬ್ಯಾರಿ ಮಗ ಹಮ್ಮದಬ್ಯಾರಿ 1 ಕೂಡಾ ಯವರಿಗೆ ತಿಳಿಯಪಡಿಸುವದೇನೆಂದ್ರೆ

ಮೇಲಿನ ವ್ಯವಹರಣೆಯಲ್ಲಿ ಅರ್ಜಿದಾರಳು ಡಿಕ್ರಿ ವಿಧಿಪ್ರಕಾರ ತನಗೆ ಬರ ಅಶನಾರ್ಥ ಬಾಕಿಗೆ ನಟ್ಟಿರುವ ಅಮಲ್ದಾರಿಯಲ್ಲಿ ನಿಮ್ಮನ್ನು ಸಪ್ಲಿಮೆಂಟಲ್ ರೆಸ್ಪೋಂಡೆಂಟರಾಗಿ ಸೇರ್ಸಿಕೊಳ್ಳುವ ಬಗ್ಗೆ ಅರ್ಜಿಕೊಟ್ಟಿರುವದ್ರಿಂದ ಅದರ ಕುರಿತು ನಿಮಗೆ ಯೇನಾದರೂ ಆಕ್ಷೇಪಣೆಯಿದ್ದಲ್ಲಿ ಬರುವ ತಾ, 16-6-1944ರಲ್ಲು ಹಗಲು 11ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಖುದ್ದಾಗಲೀ ವಕೀಲ್ ದ್ವಾರವಾಗಲೀ ಹಾಜರಾಗಿ ತಿಳಿಸಿಕೊಳ್ಳಬೇಕು. ಯದಕ್ಕೆ ತಪ್ಪಿದರೆ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(By order)

K. Gopalakrishna Rao.
Vakil for Petitioner.

ಮಂಗಳೂರು
18-5-44

ಪ್ರಕಟಣೆ.

ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ಕಟಪಾಡಿ, ದ. ಕ. ಇವರು ತಾ. 27-4-44ರಲ್ಲು ಕೊಟ್ಟ ಪ್ರಕಟಣೆಗೆ ಉತ್ತರ.

ನಮ್ಮ ಸದ್ರಿ ಪ್ರಕಟಣೆಯಲ್ಲಿ ದಿ. ಬಾ. ಬಿ. ಚಾರಿಟಿ ಸಂಘ, ಮುಂಬಯಿಯವರಿಗೆ ಒಪ್ಪಂದ ಪತ್ರವನ್ನು ಬರೆದು ಕೊಟ್ಟಿರುತ್ತೇವೆಂದು ತಿಳಿಸಿರುವದು ಶುದ್ಧ ಸುಳ್ಳು. ಇದಕ್ಕೆ ನಾವು ತಾ 4-5-1943ರಲ್ಲಿ 11-9-1943ರಲ್ಲಿ 12-10-1943ರಲ್ಲಿ 2-11-1943ರಲ್ಲಿ ಮತ್ತು 29-1-1944ರಲ್ಲಿ ಸದ್ರಿ ಬ್ರ. ಶ್ರೀ. ನಾರಾಯಣಗುರುಸ್ವಾಮಿ ಸೇವಾಸಮಿತಿ, ಕಟಪಾಡಿಯವರಿಗೆ ಬರೆದಿರುವ ಪತ್ರಗಳೂ ಅದಕ್ಕೆ ಪ್ರತ್ಯುತ್ತರವಾಗಿ ಸದ್ರಿ ಸಮಿತಿಯವರು ತಾರೀಕು 14-5-1943ರಲ್ಲಿ 17-5-1943ರಲ್ಲಿ ಮತ್ತು 15-12-1943ರಲ್ಲಿ ನಮಗೆ ಬರೆದಿರುವ ಪತ್ರಗಳನ್ನು ಇನ್ನೊಮ್ಮೆ ಸದ್ರಿ ಸಮಿತಿಯವರು ಪುನಃ ಓದಿ ವಾಚಿಸಿದಲ್ಲಿ ತಿಳಿಯುವುದಲ್ಲದೆ ನಮ್ಮ ಸಂಘದ ಪ್ರತಿನಿಧಿಗಳೊಡನೆ ಅವರು ಕಟಪಾಡಿಯಲ್ಲಿಯೇ ಕಳೆದ ನವಂಬರ ತಿಂಗಳಲ್ಲಿ ಜರಗಿಸಿದ ಸಭೆಯ ಟಿಪ್ಪಣಿಯಿಂದ ಖಚಿತವಾಗಿ ತಿಳಿದುಬರುವುದು. ನಂದ್ರೆ ಒಪ್ಪಂದ ಪತ್ರವನ್ನು ಬರೆದುಕೊಡಲಿಲ್ಲವೆಂದು ಹೀಗಿದ್ದರೂ ಸುಳ್ಳುಸುದ್ದಿಯನ್ನು ಸಮಾಜಪ್ರೇಮಿಗಳಾದ ಸದ್ರಿ ಸಮಿತಿಯವರು ಯಾಕೆ ಹಬ್ಬಿಸುತ್ತಾರೆಂದು ತಿಳಿಯಲಾಗುವುದಿಲ್ಲ. ಹೀಗೆಯೇ ನವೆಂಬರದ ಸಭೆಗೆ ತುಚ್ಛೀಕರಿಸಿ ಕ್ರಮತಪ್ಪಿ ನಿಮಗೆ ಆಸ್ತಿಯನ್ನು ಪಡೆಯಬೇಕೆಂದು ತಿಳಿಸಿದ ನಮ್ಮ ಸಂಘದ ಅಧ್ಯಕ್ಷರೀಗೆ ಅವಿಶ್ವಾಸ ರಜಾವು ಪಾಸಾಗಿ ಆಗಿನ ಕಾರ್ಯಕಾರಿ ಸಮಿತಿಯನ್ನು ಮಹಾಸಭೆಯಲ್ಲಿ ರದ್ದುಪಡಿಸಿದೆಯೆಂದೂ ನೀವು ತಿಳಿದುಕೊಳ್ಳತಕ್ಕ ವಿಷಯ. ಹೀಗಿರುತ್ತಾ ಬಾ. ಬಿ. ಚಾರಿಟಿ ಸಂಘಕ್ಕೆ ಈ ವರೆಗೂ ಒಪ್ಪಂದ ಪತ್ರವನ್ನು ನೀವು ಬರಕೊಡಲಿಲ್ಲವೆಂದು ಖಂಡಿತ ತಿಳಿಸುವೆವು ನಿಮ್ಮ ಪ್ರಕಟಣೆ ಸರಿಯಾಗಿರದೆ ಸುಳ್ಳಾಗಿರುವುದರಿಂದ ನಾವು ಪ್ರಾರಂಭದಿಂದಲೂ ಸದ್ರಿ ಒಪ್ಪಂದ ಪತ್ರಕ್ಕೆ ಒತ್ತಾಯಮಾಡಿ ನಿಮಗೆ ಆಸ್ತಿಗೆ ಪ್ರವೇಶಿಸಲು ಅಧಿಕಾರವಿಲ್ಲವೆಂದು ಪತ್ರಮೂಲಕ ತಿಳಿಸಿರುವಂತೆಯೇ ಇಲ್ಲಿ ಕೂಡಾ ತಿಳಿಸುತ್ತೇವೆ ಮಾತ್ರವಲ್ಲದೆ ಸದ್ರಿ ನಮ್ಮ ಆಸ್ತಿಯಲ್ಲಿ ನಿಮಗೆ ಯಾವತರದ ಹಕ್ಕು ಇರುವುದಿಲ್ಲ. ನಮ್ಮ ಆಸ್ತಿಯನ್ನು ನಾವು ನಿಮಗೆ ಈ ವರೆಗೂ ಬಿಟ್ಟುಕೊಡಲಿಲ್ಲ. ಒಂದೊಮ್ಮೆ ಈ ಜಾಹೀರಾತನ್ನು ಅಲ್ಲಗಳೆದು ಆಸ್ತಿಯಲ್ಲಿ ಈಗಿರುವ, ಕೆರೆ, ಬಾವಿ, ಮರ, ಪಟ್ಟಿ, ಮನೆ ವಗೈರೆಗಳಲ್ಲಿ ಏನಾದರೂ ತಿದ್ದುಪಡಿ ಮಾಡಿದ್ದೇ ಆದರೆ ಅದರ, ನಷ್ಟ, ಕಷ್ಟಗಳಿಗೆ ನೀವು ಅಂದರೆ ಸಮಿತಿಯ ಸದಸ್ಯರು ಬಾಧ್ಯಸ್ಥರಾಗಿರತಕ್ಕದ್ದೆಂದು ತಿಳಿದುಕೊಳ್ಳತಕ್ಕದ್ದು.

ವೈ. ಜಿ. ಬಂಗೇರ,
ಗೌರವ ಕಾರ್ಯದರ್ಶಿ,
ದಿ. ಬಾರ್ಕೂರು ಬಿಲ್ಲವ ಚಾರಿಟಿ ಸಂಘ,
ಮುಂಬಾಯಿ 11-5-1944.

ಶ್ರೀ ಬಸ್ರೂರು ಹಿರಿಯಣ್ಣ ಶೆಟ್ರ ನಿಧನ:—ಇದೇ ತಾ 16ರಲ್ಲಿ ಬಸ್ರೂರಿನ ಪ್ರತಿಷ್ಠಾವಂತ ಮನೆತನದ ಶ್ರೀ ಬಸ್ರೂರು ಹಿರಿಯಣ್ಣ ಶೆಟ್ರು ಹಿಮೂತ್ರ ರೋಗದಿಂದ ನಿಧನ ಹೊಂದಿದರೆಂಬುದು ವಿಷಾದಕರವಿದೆ. ಮೃತರ ಆತ್ಮಕ್ಕೆ ಶಾಂತಿ ದೊರಕಲಿ.

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944 Your patronage is solicited.

Mangalore Jarappa,
Managing Director

The Canara Banking Corporation Limited.

(Incorporated in British India.)

ESTD: 1906.

Head Office · UDIPI·

ANNOUNCEMENT.

A Branch of the bank will be opened at Tobacco Street, CALICUT on 26-5-44.

ನವಯುಗ

ಉಡುಪಿ, ಗುರುವಾರ ೨೫-೫-೧೯೪೪

ಚೀನದ ಅಂತಿಮಾವಸ್ಥೆ.

ಕಳೆದ ಏಳು ವರುಷಗಳಿಂದ ಬಹುತೇಕನಾಗಿ ಬರಿಗೈ, ಬರಿಹೊಟ್ಟೆಯ ಭಟನಾಗಿಯೇ ಚೀನವು ಜಪಾನಿನೊಡನೆ ಹೋರಾಡುತ್ತಿದೆ. ಇಂಗ್ಲಂಡು--ಅಮೇರಿಕಗಳ ಪಾಲಿಗೆ ಚೀನದ ಸಾಹಸವೊಂದು ಮೆಚ್ಚುಗೆಯ ವಿಷಯವಾದುದು, ಜಪಾನೀ ಹೊಡೆತದ ರುಚಿಯನ್ನು ಅವು ಪ್ರತ್ಯಕ್ಷ ನವಿದ ಮೇಲೆಯೇ; ಅರ್ಥಾತ್ ಸುಮಾರು ಮೂರು ವರುಷಗಳಿಂದೀಚೆಗೆ. ಪರ್ಲ್ ಹಾರ್ಬರ್ ದುರಂತದ ವರೆಗೂ ಅಮೇರಿಕದ ಸಾಮಾಗ್ರಿ ಸಹಾಯವು ಜಪಾನಿಗೆ ಹೋಗುತಿತ್ತು; ಯುರೋಪು ಯುದ್ಧ ಮಧ್ಯದಲ್ಲಿ ಜಪಾನರೊತ್ತಾಯದಂತೆ ಬರ್ಮಾ ರಸ್ತೆಯನ್ನು ಮುಚ್ಚಿಸಿದವರು ಈ ಗಂಡುಗಲಿ ಚರ್ಚಿಲ್ಲರೇ. ಇವೆಲ್ಲಾ ಉಪಕಾರಗಳು ಹಾವಿಗೆ ಹಾಲೆರೆದಂತಾಗಿ, ಜಪಾನು ಮಿತ್ರರಾಷ್ಟ್ರಗಳ ಮೇಲೆ ನೆಗೆದೊಡನೆಯೇ 'ಚೀನಕ್ಕೂ ನಮಗೂ ಒಂದೇ ಪಂಗ್ತಿ' ಎಂಬ ಜ್ಞಾನೋದಯವು ಮಿತ್ರರಾಷ್ಟ್ರಗಳಲ್ಲಾಯಿತು. ಈ ಹೊಸ ಸಂಬಂಧದಿಂದ ಚೀನಕ್ಕಾದ ಉಪಕಾರವೆಷ್ಟು, ಅಪಕಾರವೆಷ್ಟು? ಜಪಾನಿಗೆ ಹೋಗುತ್ತಿದ್ದ ಸರಬರಾಯಿಯನ್ನು ಪೂರ್ತಿ ನಿಲ್ಲಿಸಿ, ಮಿತ್ರರಾಷ್ಟ್ರಗಳು ಚೀನಕ್ಕೆ ಪೂರ್ಣ ಸಹಾಯ ಕೊಡುವ ವಾಗ್ದಾನ ಮಾಡಿದವು; ಜಪಾನೀ ಯುದ್ಧದಲ್ಲಿ ಚೀನವನ್ನು ಸ್ವತಂತ್ರಗೊಳಿಸುವದು ತಮ್ಮದೊಂದು ಗುರಿಯೆಂದೂ ಸಾರಿದವು. ಆದರೆ ಮೊದಲಿನದು ಈ ತನಕ ಫಲಿಸಿಲ್ಲ, ಎರಡನೆಯದರ ಅವಧಿ ಬಂದಿಲ್ಲ. ಹೀಗೆ ಪೂರ್ಣ ಫಲಿಸದ ಉಪಕಾರಕ್ಕಿಂತ ಚೀನದ ಪಾಲಿಗೆ ತುಂಬಿಬಂದ ಅಪಕಾರವೇ ದೊಡ್ಡದೆನ್ನಬೇಕು. ಆ ವರೆಗೂ 'ಒಂದು ಘರ್ಷಣೆ'ಯೆಂದು ಕಲ್ಲಿಯ ಯುದ್ಧವನ್ನು ತಾತ್ಸಾರ ಮಾಡುತ್ತಿದ್ದ ಜಪಾನರು, ಮಿತ್ರ ಸಂಘಕ್ಕೊಂದು ಕೊಂಡಿಯಾಗಿ ಚೀನವು ಸೇರಿಕೊಂಡೊಡನೆ ಬರ್ಮವನ್ನಾಕ್ರಮಿಸಿಕೊಂಡರು, ಮಿತ್ರರ ಸಂಬಂಧಾಯಿಯ ಏಕಮಾತ್ರ ನೆಲರಸ್ತೆಯನ್ನು ಮುಚ್ಚಿಬಿಟ್ಟರು. ಚೀನದ ಉಸಿರು ಕಟ್ಟಿತು. ಅದಕ್ಕೆ ಅತ್ಯಾವಶ್ಯಕವಿರುವ ವಿಮಾನ, ಟೇಂಕು ಮೊದಲಾದ ಆಧುನಿಕ ಯುದ್ಧೋಪಕರಣಗಳು ಆಕಾಶ ಮೂಲಕ ಹಾರಿಬರಲೊಪ್ಪಲಿಲ್ಲ. ಚೀನದೊಳಗಡೆ ನುಗ್ಗಿದ ಜಪಾನೀ ಸೇನೆಯ ಒಬ್ಬನೇ ಒಬ್ಬ ಸೋಲ್ಜರನನ್ನು ಇನ್ನೊಂದು ರಂಗಕ್ಕೆಳೆಯುವ ಆವಶ್ಯಕತೆ, ಎರಡು ಪ್ರಥಮ ಪ್ರಮುಖ್ಯ ರಾಷ್ಟ್ರಗಳೊಡನೆ ಹೋರಾಡುವಾಗಲಾದರೂ ಜಪಾನಿಗೊದಗಲಿಲ್ಲ. ಚೀನವೇನು ಮಾಡಬೇಕು? ಅದು ಈ ವರೆಗೂ ತನ್ನ ಎದೆಗಾರಿಕೆಯೊಂದನ್ನೇ ಸರ್ವೋಪಕರಣಗಳ ಬದಲಿಗೆ ಪ್ರಯೋಗಿಸಿ ಹೋರಾಡಿತು, ಯಾಂತ್ರಿಕ ಚಟುವಟಿಕೆಯೇ ಶಕ್ತಿಯಾಗಿರುವ ಈ ಕಾಲದ ಹೋರಾಟಗಳಲ್ಲಿ, 'ಚೀನ'ವೊಂದು ಮಾತ್ರ ಗತಕಾಲದ ದೈಹಿಕ-ಮಾನಸಿಕ ಶಕ್ತಿಯನ್ನಾಧರಿಸಿ ಇದುವರೆಗೆ ತಡೆದು ನಿಂತಿತು. ಈಗ ಅದೂ ಬರಿದಾಗಿದೆಯೆಂಬ ಶೋಚನೀಯ ವಾರ್ತೆ ಬಂದಿದೆ. ಚೀನದ ರಾಷ್ಟ್ರೀಯ ಸರಕಾರದ ಪಾಲಿಗೆ ಅವಶೇಷದಂತುಳಿದಿರುವ ಭಾಗಗಳಲ್ಲಿ ಮುಖ್ಯವಾದ ಹೋನಾನ್ ಪ್ರಾಂತ್ಯದಲ್ಲಿ ಜಪಾನರೀಗ ಆರಂಭಿಸಿರುವ ಧಾಳಿಯು ಚೀನೀ ಪಕ್ಷಪಾತಿಗಳ ಎದೆಗುಂದಿಸುತ್ತಿದೆ. ಅದು ಅಂತಿಮ ಹೊಡೆತವೆಂಬಂತೆ ಕಾಣುತ್ತಿದೆ. ಚರ್ಚಿಲ್—ರುಸವೆಲ್ಟರು ಇದಕ್ಕೆ ಕೊಡುವ ಸಮಾಧಾನವೇನು?

ಸಮಾಧಾನಕ್ಕೆ ಕುಂದಿಲ್ಲ; ಆಶ್ವಾಸನೆಗಳಿಗೆ ಬರಗಾಲವಿಲ್ಲ. ಅಮೇರಿಕದ ಉಪಾಧ್ಯಕ್ಷ ಮಿ. ಹೆನ್ರಿ ವಲ್ಲಾಸರನ್ನು ಚೀನಕ್ಕೆ ಬೀಳ್ಕೊಡುವಾಗ "ನಮ್ಮ ಭಾವೀ ಶಾಂತಿ ಮತ್ತು ಅಭಿವೃದ್ಧಿಗೆ ಅತಿ ಮುಖ್ಯವಾದ ಯುದ್ಧವಲಯದಿಂದ ಸಂಗತಿ ಸಂಗ್ರಹಿಸಿ ಬರಲು ನಾನವರನ್ನು ಕಳುಹಿಕೊಡುತ್ತಿದ್ದೇನೆ" ಎಂದು ಅಧ್ಯಕ್ಷ ರುಸವೆಲ್ಟರ ಗಂಭೀರವಾಣಿ. "ಚೀನಕ್ಕೆ ಸಹಾಯ ನೀಡುವ ನಮ್ಮ ಅಂತರ್ಯವು ಶಾಶ್ವತವಾಗಿದ್ದು, ವಿಜಯ ದೊರಕುವ ವರೆಗೂ ಮುಂದುವರಿಯಲಿದೆ ಎಂಬುದನ್ನು ನೂರಾರು ಮಿಲಿಯ ಚೀನೀಯರಿಗೆ ಮನದಟ್ಟು ಮಾಡುವದೇ ನನ್ನ ಪ್ರಯಾಣದ ಏಕೋದ್ದೇಶ"—ಎಂದು ವೆಲ್ಲೇಸರ ಸಿಹಿಮಾತು. ಆದರೆ ಇಂತಹ ಆಡಂಬರೋದ್ಗಾರಗಳು ಏನೇನೂ ಅನ್ವಯಿಸದಷ್ಟು ಚೀನಾಸ್ಥಿತಿ ಕಳಮುಖವಾಗಿದೆ; ಈ ಆಶ್ವಾಸನೆಗಳೀಗ ಹುರುಪುಗೊಡುವ ಬದಲು ಜಿಗುಪ್ಸೆ ಹುಟ್ಟಿಸುತ್ತಿವೆ. ಪ್ರತ್ಯಕ್ಷ ಪ್ರಮಾಣವಾಗಿರುವ ಚೀನಾ ವಿಧ್ವಸಾನವನ್ನು ನಂಬದೆ ಕ್ಷಣಿಕ ಮಾತುಗಳನ್ನೇ ಆದರಿಸಿಕೊಳ್ಳುವಷ್ಟು ಕಣ್ಣುಬಿಡು ಹೊಂದಲು ಲೋಕವೊಪ್ಪದು. ಚೀನಕ್ಕೆ ಕೊಡುವ ಇಂದಿನ ಬಾಯಿ ಆಶ್ವಾಸನೆಗಳಿಗೆ, ಆಕ್ರಮಿತ ರಾಷ್ಟ್ರಗಳಾದ ಪೋಲೆಂಡು, ನೋರ್ವೆಗಳಿಗೆ ದೊರಕುತ್ತಿರುವ ನಾಲಿಗೆ ದಾನಗಳಿಗಿಂತ ಹೆಚ್ಚಿನ ಬೆಲೆಯುಂಟೆಂದು ನಮಗನ್ನಿಸುವದಿಲ್ಲ. ಬದಲಿಗೆ ಬರ್ಮಾ ಯುದ್ಧವನ್ನು ಬಲಗೊಳಿಸಿ, ಅಲ್ಲಿಯ ರಸ್ತೆ ಬಿಡಿಸಿ--ಶಾಂತಸಮುದ್ರದಲ್ಲಿಯೂ ಜಪಾನರ ಮೇಲಿನ ಒತ್ತಡವನ್ನು ಹೆಚ್ಚಿಸುವ ಮೂಲಕ ಮಿತ್ರರು ಚೀನದ ರಕ್ಷಣೆಯನ್ನು ಅತ್ಯವಸರದಿಂದ ಮಾಡಬೇಕು. ಬಟಲಿ ದ್ವಿತೀಯ ರಂಗನಿರ್ಮಾಣಕ್ಕೆ ತಮ್ಮ ಸರ್ವಲಕ್ಷ್ಯವನ್ನು ಕೇಂದ್ರೀಕರಿಸಿರುವ ಮಿತ್ರರು ಈ ಸಾಹಸಕ್ಕೀಗ ಇಳಿಯುವಂತಿದೆಯೆ? ಇಲ್ಲವಾದರೆ ಚೀನವೊಂದು 'ವೀರಸ್ಮರಣೆ' ಮಾತ್ರವಾಗಿ ಉಳಿಯುವ ಕಾಲ ಬರಬಹುದು.

ದುರ್ಬೀನು

ಹಸಿವಾದರೆ ಹಲ್ಲು ಕಿರಿಯುವದಲ್ಲ, ಹಣ್ಣು ತಿನಬೇಕು; ಸಂಕಟವೊದಗಿದರೆ ಸಂತಾಪಗೊಳ್ಳುವದಲ್ಲ, ಸಾಧಿಸಿ ನೋಡಬೇಕು

೦೦ ೦೦ ೦೦

ಕೆಂಡವಾರಿ ಬೂದಿಯಾದರೆ ಸನ್ಯಾಸಿಯೂ ಮೈಗೆ ಬಳಿದುಕೊಳ್ಳುತ್ತಾನೆ; ಸ್ವಾಭಿಮಾನವಾರಿ ದಾಸ್ಯಬುದ್ಧಿ ಮೂಡಿದರೆ ಉಚ್ಚನೂ ನೀಚನಿಗೆ ಹಚ್ಚುತ್ತಾನೆ.

೦೦ ೦೦ ೦೦

ಹತ್ತಿ ಹಾರಾಡುವಂತೆ ಹಣ್ಣು ಹಾರಾಡದು; ಲಘುಬುದ್ಧಿಯ ಚೆಲ್ಲಾಟ ಘನಬುದ್ಧಿಗಿಲ್ಲ.

೦೦ ೦೦ ೦೦

ಅನ್ಯರ ಮುಂದಲೆಯಲ್ಲಿ ಕೈಯ್ಯಾಡಿಸುವದಕ್ಕಿಂತ ತನ್ನ ಮೀಸೆಯ ಮೇಲೆ ಬೆರಳಾಡಿಸುವದು ವಾಸಿ; ಇನ್ನೊಬ್ಬರ ಮುಖಸ್ತುತಿ ಮಾಡುವದಕ್ಕಿಂತ ತನ್ನ ಹೆಗ್ಗಳಿಕೆ ಪ್ರದರ್ಶಿಸುವದು ಉತ್ತಮ.

೦ ೦೦ ೦೦

ಕಾಲು ಜಾರಿ ಬಿದ್ದವನನ್ನು ಎತ್ತಿದರದು ಉಪಕಾರ; ಕಾಲ ಕೆರ ಜಾರಿದರೆ ಅದನ್ನೂ ಎತ್ತಿ ಕೊಟ್ಟರದು ಚಾಕರಿ ಕೆಲಸ ಕೆಟ್ಟರೆ ಸಹಾಯ ಸಲ್ಲಿಸಿದರದು ಸತ್ಕಾರ್ಯ; ಠೇಂಕಾರಕ್ಕೆ ಸರಿಯಾಗಿ ಶ್ರುತಿ ಹಿಡಿಯುವದು ಹೀನವರ್ತನೆ

೦೦ ೦೦ ೦೦

ಕಲ್ಲು ಬಿದ್ದಾಗ 'ಗುಳುಂ' ಎಂದು ನೀರು ಕೂಡಾ ದನಿಗೊಡುತ್ತದೆ; ಕರಗಿದ ಹೃದಯಕ್ಕೆ ಕಲ್ಲು ಹಾಕಿದರದು 'ಘುಡುಂ' ಗುಡುಗದೆ?

೦೦ ೦೦ ೦೦

ಕಾಯಿಯೊಡೆದಂತೆ ಕಲ್ಲೊಡೆಯಲಾದೀತೆ? ತಿರುಳಿದ್ದವರನ್ನು ಖಂಡಿಸಿದಂತೆ ತಿಳಿಗೇಡಿಗಳನ್ನು ಭಂಗಿಸಲಾದೀತೆ?

೦೦ ೦೦ ೦೦

ನಮ್ಮ ಬೆನ್ನನ್ನು ನಾವೇ ಚಪ್ಪರಿಸಿಕೊಳ್ಳುವದು ಅಥವಾ ತಾಡಿಸಿಕೊಳ್ಳುವದೆಟಕದು; ಅಂತೆಯೇ ದುರಭಿಮಾನ ಇಲ್ಲವೇ ನಿರಭಿಮಾನ ಸಲ್ಲದು.

೦೦ ೦೦ ೦೦

ಸಮುದ್ರ ದಂಡೆಯಲ್ಲಿದ್ದವನು ತೆರೆಬಡಿದೀತೋ ನೋಡಬೇಕು; ಕೆಗ್ಗಾಡಿನಲ್ಲಿದ್ದವನಿಗೆ ಆ ಭಯವೇನು? ವಿಶಾಲ ಬುದ್ಧಿಯುಳ್ಳವನಲ್ಲಿ ಅವೇಶವೇಳುವದಿದೆ; ಸಂಕೋಚ ಬುದ್ಧಿಯುಳ್ಳವನಿಂದ ಅಂತಹ ಅಪಾಯವಿಲ್ಲ.

೦೦ ೦೦ ೦೦

ಮಲಗುವಿಯಾದರೆ ಮೈಗೊತ್ತಿದಂತೆ ಮಲಗಬಲ್ಲೆ--ಮುಗುಚಿ ಬೀಳುವಾಗಲೂ ಹಾಗಾಗಲು ಸಾಧ್ಯವೆ? ಸಮಾಧಾನಗೊಂಡಾಗ ಸ್ವೇಚ್ಛೆಯಿಂದ ಶಾಂತನಾಗಬಲ್ಲೆ; ಒತ್ತಾಯದ ಬಾಯಿ ಬೀಗ ಬಿದ್ದಾಗಲೂ ಆ ಶಾಂತಿಯಿದೆಯೆ?

ಗಣ್ಯರು ಮತ್ತು ಘರ್ಷಣೆ

ಸರೋಜಿನಿ ಬಾಯ್ಬಂಧನ.

ಯಾವ ಸಾರ್ವಜನಿಕ ಹೇಳಿಕೆಯನ್ನೂ ಕೊಡಕೂಡದೆಂದು ಶ್ರೀಮತಿ ಸರೋಜಿನೀ ದೇವಿಯ ಮೇಲೆ ಭಾರತ ಸರಕಾರವು ನಿರ್ಬಂಧ ಹಾಕಿದೆಯಷ್ಟೆ. ಇದರಂತೆ ಶ್ರೀಮತಿಯವರು ಪತ್ರಿಕಾ ಬಾತ್ಮೀದಾರರೆದಿರು ವಿಷ್ಣು ಸಹಸ್ರನಾಮಗಳನ್ನು ಪಠಿಸಿದರೂ ಶಿಕ್ಷೆಗೊಳಗಾಗಬಹುದು! ಸರಕಾರವೀಗ ತನ್ನ ಅತಿರೇಕಕ್ಕಾಗಿ ತಾನೇ ನಾಚಿದಂತಿದೆ. 'ರಾಜಕೀಯೇತರ ವಿಷಯಗಳಲ್ಲಿ ಈ ನಿರ್ಬಂಧವನ್ನು ಸಡಿಲುಗೊಳಿಸುತ್ತೇವೆ; ಅದು ಹೇಗಿರಬೇಕೆಂಬ ಕುರಿತು ನಿಮ್ಮ ಅಪೇಕ್ಷೆಯನ್ನು ತಿಳಿಸಿ' ಎಂದು ಭಾರತ ಸರಕಾರವು ಸರೋಜಿನೀ ದೇವಿಯನ್ನು ಕೇಳಿಕೊಂಡಿತು; ಆದರೆ ತಾನು ಈ ನಿರ್ಬಂಧದ ಮಟ್ಟಿಗೆ ಯಾವುದೊಂದು ಶರ್ತವನ್ನು ಅಥವಾ ಅರ್ಧಮರ್ಧ ಸುಧಾರಣೆಯನ್ನೊಪ್ಪುವಂತಿಲ್ಲವೆಂದು ಸರೋಜಿನಿಯವರು ಧಿಕ್ಕರಿಸಿಬಿಟ್ಟಿದ್ದಾರೆ.

ವಿಂಡ್ಸರ್ ವಿಚಾರ.

ಬ್ರಿಟನಿನ ಮಾಜೀ ಚಕ್ರವರ್ತಿ—ಈಗಿನ ಡ್ಯೂಕ್ ಓಫ್ ವಿಂಡ್ಸರರು ಪ್ರಕೃತ ಬಹಾಮಾದ ಗವರ್ನರರಾಗಿದ್ದಾರೆ. ಅವರೀಗ ಈ ಗವರ್ನರ್ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದಾರೆಂದೂ ಅಮೇರಿಕದಲ್ಲಿ ನೆಲೆನಿಲ್ಲಲಿಚ್ಛಿಸಿ ಅಲ್ಲಿಯ ನಾಗರಿಕ ಹಕ್ಕನ್ನಪೇಕ್ಷಿಸಿದ್ದಾರೆಂದೂ ಅಮೇರಿಕದಲ್ಲಿ ದಟ್ಟವದಂತಿ ಹರಡಿದ್ದಿತು. ಈಗ ವಿಂಡ್ಸರರದನ್ನು ಕಂಠೋಕ್ತವಾಗಿ ಅಲ್ಲಗಳೆದು 'ಸುದ್ದಿಯೊಂದು ಕಲ್ಪನೆ' ಎಂದಿದ್ದಾರೆ.

ಬೆವನ್ ಬೆದರಿಕೆ.

ಒಂದು ಕಾಲದಲ್ಲಿ ಉಗ್ರ ಕೂಲಿಗಾರ ಮುಖಂಡರಾಗಿದ್ದು ಇಂದಿನ ಬ್ರಿಟಿಷ್ ಯುದ್ಧಮಂಡಲದಲ್ಲಿ ಓರ್ವ ಮಂತ್ರಿಯೂ ಕೂಲಿಗಾರರ ವಿರುದ್ಧ ಕತ್ತಿಕಟ್ಟಿದ ಬೆವನರ ಮೇಲೆ ಪಾರ್ಲಿಮೆಂಟಿನ ಲೇಬರ್ ಪಕ್ಷೀಯರು ಶಿಸ್ತುಕ್ರಮಮಾಡಿ ಪಕ್ಷದಿಂದಲೇ ಹೊರಗಟ್ಟುವಷ್ಟು ಕ್ರೋಧಗೊಂಡಿದ್ದರು. ಆದರೆ ಕಾರಣಕೊಟ್ಟು ತನಗೆ ಪೂರ್ತ ಒಂದುವಾರದೊಳಗೆ ಬೆವನರು ಪಕ್ಷನಾಯಕರ ಸೂಚನೆಯನ್ನು ಶಿರಸಾವಹಿಸಿ ವರ್ತಿಸುವೆನೆಂಬ ವಿಧೇಯತಾ ಭರವಸೆಯನ್ನಿತ್ತು ಈ ಹೊಡೆತವನ್ನು ತಪ್ಪಿಸಿಕೊಂಡರು.

ವ್ಯಾತವಮತ್ಕಾರ.

ನ್ಯೂಯೋರ್ಕಿನಲ್ಲಿ ಕೆಲವು ತಿಂಗಳ ಮೊದಲೇ ವಿಲಕ್ಷಣರೀತಿಯಿಂದ ಕಾಣೆಯಾಗಿದ್ದು ಎಂತೆಂತಹ ಪತ್ತೇದಾರಿಗಳಿಂದಲೂ ಶೋಧಿಸಲಾಗದೆ ಲೋಕವನ್ನೇ ಬೆರಗುಗೊಳಿಸಿದ್ದ ಹಿಂದೀಯ ತರುಣಿ ಕುಮಾರಿ ವಲ್ಸಾಮತ್ತಾಯಿಯ ಕೊಳೆತ ಶವವು ನ್ಯೂಯೋರ್ಕಿನ ಹುಡ್ಸನ್ ಹೊಳೆಯಲ್ಲಿ ಇತ್ತೀಚೆಗೆ ದೊರೆತಿದೆ. ಅವಳು ಪ್ರಣಯಭಂಗದಿಂದ ಆತ್ಮಹತ್ಯೆ ಮಾಡಿಕೊಂಡಿರಬೇಕೆಂದು ಊಹೆ. ಮೃತಳ ಕೋಣೆಯಲ್ಲಿ ಅವಳೇ ಕಟ್ಟಿದ್ದ ನಾಲ್ಕು ಪಂಗ್ತಿಗಳ ಕವನವೊಂದು ದೊರೆತಿದೆ. ಅದರ ಭಾವಾರ್ಥ ಹೀಗೆ:-'ಹಗಲು ಸರಿದು ಕತ್ತಲು ಕವಿಯಿತು; ನಾನು ಏಕಾಂಗಿಯಾಗಿದ್ದು ಬೆಳಕನ್ನು ಕಾಯುತಿದ್ದೇನೆ. ಆದರೆ ಪುನಃ ನಾನೊಬ್ಬಳೇ."

★ ದ್ವಿತೀಯರಂಗ ತಯಾರಿಯ ಗುಡುಗಾಟ! ★

ಸಾಮ್ರಾಜ್ಯ ಪ್ರಧಾನಿಗಳ ಸಮ್ಮೇಲನ

ಬ್ರಿಟಿಷ್ ಸಾಮ್ರಾಜ್ಯದ, ವಸಾಹತುಗಳಾದ ಕೆನಡಾ, ಆಸ್ಟ್ರೇಲಿಯ, ನ್ಯೂಜೀಲೇಂಡ್ ಮತ್ತು ದಕ್ಷಿಣಾಫ್ರಿಕದ ಮುಖ್ಯ ಮಂತ್ರಿಗಳ ಸಮ್ಮೇಲನವು ಮಿ. ಚರ್ಚಿಲ್ಲರ ನೇತೃತ್ವದಲ್ಲಿ ಲಂಡನಿನಲ್ಲಿ 17 ದಿನ ನಡೆದು ಕೊನೆಗೊಂಡು ಹೇಳಿಕೆ ಪ್ರಕಟಿಸಿದೆ. ವಿಜಯದಲ್ಲಿ ವಿಶ್ವಾಸ, ಸಾಮ್ರಾಜ್ಯಾಂಗಗಳ ಪರಸ್ಪರ ಸಹಕಾರ, ಯುದ್ಧಾನಂತರ ಲೋಕ ಶಾಂತಿ ಪಾಲಿಸುವ ಸಂಸ್ಥೆಯೊಂದರ ನಿರ್ಮಾಣ--ಮೊದಲಾದ ಅಂಶಗಳು ಆ ಘೋಷಣೆಯಲ್ಲಿವೆ ಬ್ರಿಟಿಷ್ ಯುದ್ಧ ಮಂಡಲದಲ್ಲಿ ಹಿಂದೀ ಪ್ರತಿನಿಧಿಗಳಾಗಿರುವ ಸರ್. ಫಿರೋಜ್‌ಖಾನ್ ನೂನ್ ಮತ್ತು ಕಾಶ್ಮೀರದ ಮಹಾರಾಜರು ಇದರ ಸಭೆಗಳಲ್ಲಿ ಭಾಗವಹಿಸಿದ್ದರು. ಇಂತಹ ಬಣ ಘೋಷಣೆಗಳು ಹುರುಳಿಲ್ಲದುವೆಂದೂ ಹಿಂದುಸ್ಥಾನವೇ ಬ್ರಿಟಿಷ್ ಯಥಾರ್ಥತೆಯ ಒರೆಗಲ್ಲೆಂದೂ ಬ್ರಿಟಿಷ್ ವಿಚಾರಿಗಳೇ ಆಕ್ಷೇಪ ಹೂಡಿದ್ದಾರೆ.

ಸಿಂಧಿನಲ್ಲಿ ಲೀಗ್ ಧೋರಣೆ

ಗತಿಸಿದ ಅಲ್ಲಾಭಕ್ಷರು ಪ್ರಯೋಗಾರ್ಥವಾಗಿ ಸಿಂಧ ಪ್ರಾಂತದ ಮುನ್ಸಿಪಾಲಿಟಿಗಳಿಗೆ ಸಮ್ಮಿಶ್ರ ಮತದಾರ ಮಂಡಳಿಯನ್ನು ನಿರ್ಮಿಸಿದ್ದುದನ್ನು ಈಗಿನ ಲೀಗ್ ಮಂತ್ರಿ ಮಂಡಲವು ರದ್ದುಪಡಿಸಿದೆ. ಈ ಬದಲಾವಣೆಗಾಗಿ ಬರುವ ಜೂನಿನಲ್ಲಿ ನಡೆಯಬೇಕಾದ ಅಲ್ಲಿಯ ಚುನಾವಣೆಗಳನ್ನು ನವಂಬರ್ 15ಕ್ಕೆ ಮುಂದುವರಿಸಲಾಗಿದೆ.

ಅಮೆರಿಯವರಲ್ಲಿ ಶಿಷ್ಟಮಂಡಲ

ಕೇಂಟರ್ಬರಿಯ ಆರ್ಚ್ ಬಿಶೋಪರ ನಾಯಕತ್ವದಲ್ಲಿ ಬ್ರಿಟಿಷ್ ಚರ್ಚುಗಳ ಸಭೆಯ ಪರವಾದ ಶಿಷ್ಟಮಂಡಲವೊಂದು ಭಾರತ ಸೆಕ್ರೆಟರಿ ಮಿ. ಅಮೆರಿಯನ್ನು ಸಂಧಿಸಿ ಭಾರತ ಪ್ರಮುಖರು ಒಟ್ಟಾಗಿ ಪರಿಸ್ಥಿತಿಯನ್ನು ಚರ್ಚಿಸಲು ಅವಕಾಶವೊದಗಿಸಿಕೊಡಬೇಕೆಂದು ಬಿನ್ನವಿಸಿಕೊಂಡಿದೆ. ಇಂಗ್ಲಂಡಿನ ಹಿಂದೀ ವಿದ್ಯಾರ್ಥಿ ಸಂಘವೂ ರಾಷ್ಟ್ರೀಯ ಸರಕಾರ ಸ್ಥಾಪನೆಗಾಗಿ ಒತ್ತಾಯಿಸಿದೆ. ಕೂಲಿಗಾರ ಪಕ್ಷದ ಕೆಲವು ಪಾರ್ಲಿಮೆಂಟ್ ಸದಸ್ಯರೊಂದು ವಿಜ್ಞಾಪನೆಯನ್ನು ಮಿ. ಅಮೆರಿಯವರಿಗೊಪ್ಪಿಸಿ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಿ ರಾಷ್ಟ್ರೀಯ ಸರಕಾರ ಸ್ಥಾಪನೆಯ ಅಸ್ತಿವಾರ ಹಾಕಬೇಕು. ಆಸ್ವಾಮು ಯುದ್ಧವು ಥಂಡಾಗೊಳ್ಳುವ ಮೊದಲಲ್ಲೇ ಚುನಾವಣೆಗಳನ್ನು ನಡಿಸಬೇಕು ಎಂದು ಕೇಳಿಕೊಂಡಿದೆ

Degrees: Books: Medicines
Free H. L. M. S. M. B. H. M. D. etc. Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs 10 Enclose 2 annas stamp.—
Prof. Dr. N. H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India.)

Sidha-Kalpa Kavach (Regd.)
No. 3 Rs 2. No. 2 Rs. 5 No. 1 Rs. 7 Special Rs. 10, Extra Special Rs 17 for love marriage health wealth. Ask any six questions with M. O. Re. 1/4 and get correct answers by returnpost Life reading Rs. 10 No. V. P. Send M. O. Free pamplets.
Prof. Dr. N. H. Chhatbar.
P. O. MAHUVA. (Kathiawar India.)

ಆರಿಹೋಗಲಿದೆ!

ಚೀನದ ಹಳದೀ ಹೊಳೆ ಸರಹದ್ದಿನಲ್ಲಿ ಜಪಾನರಾರಂಭಿಸಿರುವ ಧಾಳಿಯು ಪತ್ರಿಕೆಗಳಲ್ಲೋದುವಾಗ ಅತ್ಯಪಾಯಕರವೆಂದು ಕಂಡುಬಂದರೂ, ಸದ್ಯವೇ ಒಣಗಿ ಹೋಗಲಿರುವ ಅಲ್ಪಾಯುಷ್ಯವೆಂದು ಚುಂಕಿಂಗಿನ ರೂಟರ್ ಬಾತ್ಮಿದಾರನು ಬರೆಯುತ್ತಾನೆ.

'ಚೀನವು ಈ ಯುದ್ಧದಲ್ಲಿ ಉಳಿಯಬಲ್ಲುದೆ?

ಎಂಬ ತಲೆಬರಹ ಕೊಟ್ಟು 'ಸಂಡೇ ಡಿಸ್ಪೇಚ್' ಪತ್ರಿಕೆಯ ಯುದ್ಧಭವಿಷ್ಯಕಾರನಾದ ಸಾಪ್ರಲ್ ರೆಂಕರ್ "ಸಾವಧಾನವಾಗಿ ಆದರೆ ದೃಢವಾಗಿ ಚೀನವು ಸಂಧಿಗ್ಧ ಸ್ಥಿತಿಗೆ ಮುಟ್ಟಿದೆ. ಅಮೇರಿಕದ ಉಪಾಧ್ಯಕ್ಷರ ಆಗಮನವು ಆದರ ಒಂದು ಹೊರ ಚಿಹ್ನೆ' ಎಂದು ಬರೆದಿದ್ದಾನೆ.

ಯುರೋಪು ಧಾಳಿಗೆ ಸೇನಾಸಿದ್ಧತೆ.

ದ್ವಿತೀಯರಂಗದ ಸೇನಾನಿಯಾಗಿ ನೇಮಿಸಲ್ಪಟ್ಟಿರುವ ಜನರಲ್ ಐಸೆನ್ ಹಾವರರು ಇಂಗ್ಲಂಡಿನ ದಕ್ಷಿಣ ಕರಾವಳಿಯಲ್ಲಿ 50ದಳಗಳನ್ನೂ 80ಸಾವಿರ ಕೊಡೆ ಸೈನಿಕರನ್ನೂ ಸಜ್ಜುಗೊಳಿಸಿಟ್ಟಿದ್ದಾರೆಂದು ಪ್ಯಾರಿಸ್ ರೇಡಿಯೋದಲ್ಲಿ ಹೇಳಲಾಗಿದೆ. ಸೈನ್ಯಗಳನ್ನು ಸಾಗಿಸುವದಕ್ಕಾಗಿ ಅತ್ಯಪಾರ ಹಡಗದಳವೂ ಜಮೆಯಾಗಿದೆಯಂತೆ ಮಿತ್ರರ ನೌಕಾ ಪಡೆಯ ದೊಡ್ಡಭಾಗವೆಲ್ಲಿರುವದೆಂದು ಈ ವರೆಗೂ ತಿಳಿದುಬಂದಿಲ್ಲ. ದ್ವಿತೀಯ ರಂಗಾರಂಭವಾದ ದಿನವನ್ನಲ್ಲದೆ ಆರಂಭವಾಗುವ ದಿನವನ್ನು ಲೋಕವು ಕೇಳುವಂತಿಲ್ಲ. ಆದರೆ ಯುರೋಪಿನ ಆ ಮೂಲೆಯಿಂದ ಈ ಮೂಲೆಯವರೆಗೆ ನಾಜೀ ಸೈನಿಕರು ಪ್ರತಿಯೊಂದು ಕ್ಷಣಕ್ಕೂ ಧಾಳಿಯನ್ನು ನಿರೀಕ್ಷಿಸಿ ತುದಿಗಾಲಲ್ಲಿ ನಿಂತಿರುವದರಿಂದ ಜನರಲ್ ಐಸೆನ್‌ಹಾವರರು ಮಿಂಚುಧಾಳಿನಡಿಸಿ ಜರ್ಮನರನ್ನು ಚಕಿತಗೊಳಿಸಲಾರರು

ಆಕಾಶಧಾಳಿಗಳು.

'ದ್ವಿತೀಯ ರಂಗೋದಯದ ಅರುಣರಾಗ'ವೆಂದು ಹೆಸರು ಪಡೆದ ಮಿತ್ರರ ಆಕಾಶ ಧಾಳಿಗಳು ಸಾವಿರ ಸಂಖ್ಯೆಯ ವಿಮಾನಗಳಿಂದ ಜರ್ಮನಿ, ಫ್ರಾನ್ಸ್ ಮತ್ತು ಇತರ ಆಕ್ರಮಿತ ಯುರೋಪಿನ ಕೇಂದ್ರಸ್ಥಳಗಳ ಮೇಲೆ ನಡೆಯುತ್ತಲೇ ಇವೆ.

ಟರ್ಕಿ ಅಧ್ಯಕ್ಷರ ಎಚ್ಚರಿಕೆ.

ಟರ್ಕಿಯಲ್ಲಿ ತರುಣರನ್ನು ಉದ್ರೇಕಿಸುವ ಪಂಚಮದಳದವರ ಚಟುವಟಿಕೆಗಳು ಮಿತಿಮೀರಿದಂತಿವೆ. ಈ ಕುರಿತು ಅಲ್ಲಿಯ ಅಧ್ಯಕ್ಷ, ಇನ್ನಾನು ಅವರು ಸ್ಪಷ್ಟ ಎಚ್ಚರಿಕೆಯೊಂದನ್ನು ಕೊಟ್ಟು ಅವರನ್ನೆಲ್ಲಾ ನಿಷ್ಕರವಾಗಿ ದಮನಿಸಲಾಗುವದೆಂದು ಜ್ಯಾಹೀರುಮಾಡಿದ್ದಾರೆ

ಮಾಜೀ ಸೇನಾಧಿಕಾರಿಗೆ ಶಿಕ್ಷೆ.

ವಿ. ವಾಟ್ಸ್, (ಹಿಂದ ಮೇಜರ್‌ವಾಟ್ಸ್) ಎಂಬ ಮಾಜೀ ಸೇನಾಧಿಕಾರಿಯೊಬ್ಬರು ಸರಕಾರವನ್ನು ವಂಚಿಸಿದ ಆರೋಪದಿಂದ ಎರಡು ಸೆಕ್ಶನುಗಳನ್ವಯ ಅನುಕ್ರಮವಾಗಿ 3ವರುಷ ಕಠಿಣ ಸಜೆ ಮತ್ತು 2000 ರೂ. 2000 ಜುಲ್ಮಾನೆ, 1 ವರ್ಷ ಕಠಿಣ ಸಜೆ ಮತ್ತು 2000 ರೂ ಜುಲ್ಮಾನೆಯ ಶಿಕ್ಷೆಗೊಳಗಾಗಿದ್ದಾರೆ. ಪ್ರೊಸಿಕ್ಯೂಶನಿನ ಸಾರಾಂಶವಿಷ್ಟು ಮೇಜರ್‌ವಾಟ್ಸ್ ಪೂರ್ವ ಪರ್ಷಿಯಾದಲ್ಲಿ ರೋಯಲ್ ಇಂಜಿನೀಯರ್ ದಳದ ಡಿಪ್ಯುಟಿ ಕಮಾಂಡರರಾಗಿದ್ದರು. ಅವರು ಹಿಂದುಸ್ಥಾನಕ್ಕೆ ಬಂದು ಮರಳುವಾಗ ಲಾಹೋರಿನಿಂದ ೫ ಅತಿಬೆಲೆಯ ಕಾರುಗಳನ್ನು ಪಡೆಕೊಂಡರು. ಇದು ಪರ್ಶಿಯಾದ ಮೂವರು ಖಾಸಗೀ ಮಿತ್ರರಿಗಾಗಿ ಆದರೆ ಹಿಂದುಸ್ಥಾನದಿಂದ ಪರ್ಶಿಯಕ್ಕೆ ಕೊಂಡುಹೋಗುವಾಗ ಇವು ಸೈನಿಕೋದ್ದೇಶಕ್ಕಾಗಿ ಕೊಂಡು ಕೊಂಡ ಸೈನಿಕ ಕಾರುಗಳೆಂದು ಸುಳ್ಳುಹೇಳಿ ಸರಕಾರೀ ಪೆಟ್ರೋಲಿನಿಂದಲೇ ಸಾಗಿಸಿದರು. ಲಾಹೋರು ಡಿಪೋವಿನಿಂದ 92 ಗೆಲನು, ಲೋರಾಲಾಲ್ ಡಿಪೋಟಿನಿಂದ 52ಗೆಲನು ಪೆಟ್ರೋಲುಗಳನ್ನು ಹಾಗೆ ಹೇಳಿ ಪಡಕೊಂಡಿದ್ದರು. ಕ್ವೆಟ್ಟಾದಿಂದ ಪರ್ಶಿಯದ ಝಾಹಿದಾನ್ ವರೆಗೂ ಸರಕಾರೀ ಖರ್ಚಿನಲ್ಲಿ ರೈಲಿನಲ್ಲೇ ಆ ಕಾರುಗಳನ್ನು ಸಾಗಿಸಿ ಅತಿ ಹೆಚ್ಚಿನ ಬೆಲೆಗೆ ಅವನ್ನೆಲ್ಲಮಾರಿ ಲಾಭಪಡೆದರು

ಲೀಗ್ ಕಾರ್ಯದರ್ಶಿ ಅಭಿಪ್ರಾಯ

'ಗಾಂಧಿಜೀ ಪಾಕಿಸ್ಥಾನಕ್ಕೊಪ್ಪಿಗೆ ಕೊಟ್ಟವಿನಹ ಗಾಂಧೀ–ಜಿನ್ನಾ ಮಾತುಕತೆಯಿಂದ ಪ್ರಯೋಜನಬಾರದು'-ಎಂದು ಮುಸ್ಲಿಂಲೀಗಿನ ಜತೆಕಾರ್ಯದರ್ಶಿ ಮಹಾ. ಜಮಾಲ್ ಮಿಯಾನರ ಅಭಿಪ್ರಾಯ "ಸರಕಾರವು ಪಂಜಾಬನಲ್ಲಿ ಮಾಡಿದಂತೆ ಮಿಕ್ಕ ಪ್ರಾಂತ್ಯಗಳಲ್ಲಿಯೂ ಲೀಗಿನೊಡನೆ ಜಗಳ ಗಂಟು ಹಾಕಿಕೊಂಡರೆ ಲೀಗವನ್ನು ಎದೆಗಾರಿಕೆಯೊಡನೆ ಎದಿರಿಸುವದು"–ಎಂದಿದ್ದಾರೆ. 'ಜಿನ್ನರನ್ನು ದಸ್ತಗಿರಿ ಮಾಡಿದರೆ?' ಎಂದು ಪ್ರಶ್ನಿಸಲ್ಪಟ್ಟಾಗ "ನಾವೆಲ್ಲಾ ನಮ್ಮ ನಾಯಕನನ್ನನುಸರಿಸುವೆವು, ಮತ್ತು ಸಾಧ್ಯವಿದ್ದ ತ್ಯಾಗವನ್ನೆಲ್ಲಾ ಮಾಡುವೆವು" ಎಂದು ಮಿಯಾನರ ವೀರವಾಣಿ.

ಹೊನಾನ್ ಯುದ್ಧ

ಚೀನದ ಹೊನಾನ್ ಯುದ್ಧವು ನಿಧಾನಗೊಳ್ಳುತ್ತಿದೆಯೆಂದೂ ಲೋಯಾಂಗ್ ಕಡೆಗಿನ ಜಾಪಾನೀ ಧಾಳಿಯನ್ನು ತಡೆಗಟ್ಟಲಾಗಿದೆಯೆಂದೂ ಸಾಲ್ವೀನ್ ರಣಮುಖದಲ್ಲಿ ಜಪಾನರ ಪ್ರತಿಧಾಳಿಯು ನಿಷ್ಫಲವಾಯಿತೆಂದೂ ವಾರ್ತೆಬಂದಿದೆ. ಉತ್ತರ ಬರ್ಮದ ಮಿಯಿಟ್ಕೀನಾ ನಗರದೊಳಗಡೆ ಮೂರು ಕಡೆಗಳಿಂದ ಒತ್ತಲ್ಪಟ್ಟು ಸಿಕ್ಕಿಬಿದ್ದಿರುವ ಜಪಾನೀ ಸೇನೆಯು ಸಂಧಿಗ್ಧಾವಸ್ಥೆಯಲ್ಲಿದೆಯಂತೆ.

ಮಹಾತ್ಮಾ ಗಾಂಧಿ

ಇದೇ ತಾ 21ರಲ್ಲಿ ಜುಹುವಿನ ತನ್ನ ನಿವಾಸ ಗೃಹದಲ್ಲೇ ಮಹಾತ್ಮಾಜೀ-'ಮೋಸ್ಕೋವಿಗೆ ನಿಯೋಗ' (Mission to Moscow) ಎಂಬ ಸಿನೆಮವನ್ನು ಕಂಡರು. ಮಹಾತ್ಮರಿಗಾಗಿಯೇ ಈ ಪ್ರದರ್ಶನವನ್ನೇರ್ಪಡಿಸಲಾಗಿತ್ತು. ಆಶ್ಚರ್ಯವೆಂದರೆ ತನ್ನ ಜೀವಮಾನದಲ್ಲೇ ಗಾಂಧಿಜೀ ಸಿನೆಮಾ ನೋಡುವದು ಇದೇ ಮೊದಲು. ಈ ಚಿತ್ರಪ್ರದರ್ಶನದ ಮೊದಲು ವಾಲ್ಟರ್ ಡಿಸ್ನೆಯವರ ಮಿಕ್ಕಿ ಮೌಸ್ ಕಾರ್ಟೂನ್ ಪ್ರದರ್ಶಿಸಲ್ಪಟ್ಟಾಗ ಗಾಂಧಿಜೀ ಅತ್ಯಂತ ವಿನೋದಗೊಂಡರು. ಪಕ್ಕದಲ್ಲೇ ಇದ್ದ ಸರೋಜಿನೀ ದೇವಿಯು ಆಗಾಗ ಚಿತ್ರವಿಷಯವಾಗಿ ಏನನ್ನೋ ಹೇಳಿಕೊಡುತ್ತಿದ್ದರು. ಎರಡು ಘಂಟೆ ಕಾಲ ಸಿನೆಮಾ ನೋಡಿದ ಪರಿಣಾಮವು ಗಾಂಧಿಜೀಯ ಮೇಲೆ ಅತಿರೇಕವಾಗಿದೆಯೆಂದೂ ಅವರು ತೀರಾ ದಣಿದು ಹೋಗಿದ್ದು ಪುನಃ ಪೂರ್ಣ ವಿಶ್ರಾಂತಿಯ ಅಗತ್ಯ ಬಿದ್ದಿದೆಯೆಂದೂ ಮರುದಿನ ಮುಂಜಾನೆ ಡಾಕ್ಟರರ ಪ್ರಕಟಣೆ ಹೊರಟಿದೆ. ನಾಜಿಗಳಿಗೆ ಸೆರೆಸಿಕ್ಕಿದ್ದ 78ವರುಷದ ಸುಪ್ರಸಿದ್ಧ ಫ್ರೆಂಚ್ ಸಾಹಿತಿ ರೋಮಾ ರೋಲೇಂಡರು ಮೃತಪಟ್ಟರೆಂಬ ವಾರ್ತೆಬಂದು ಇಡೀ ಪ್ರಪಂಚವೇ ಒಮ್ಮೆ ಮರುಕವನ್ನು ಪ್ರದರ್ಶಿಸಿದ್ದರೂ ಅವರು ಸುಖವಾಗಿದ್ದಾರೆಂದು ಮೇ. 10ರಲ್ಲಿ ಅವರ ಪರವಾಗಿ ಮಹಾತ್ಮರಿಗೊಂದು ತಂತಿಬಂದಿದೆ. ಗಾಂಧಿಜೀ ಜಿನ್ನರಿಗೆ ಬರೆದ ಪತ್ರದ ಕುರಿತು ಕಾಶ್ಮೀರ್ ಮುಖಂಡ ಅಲ್ಲಾಮಾ ಮಶ್ರಿಕಿಯವರು ಆಶ್ಚರ್ಯಾನಂದ ಪ್ರಕಟಿಸಿ, ಮಿ. ಜಿನ್ನರಿನ್ನು ತಡಮಾಡದೆ, ಕಾಶ್ಮೀರದಿಂದಿಳಿದು ಬಂದು ಭಾರತದ ಅದೃಷ್ಟ ರೂಪಿಸಲು ಮಹಾತ್ಮರನ್ನು ಸಂಧಿಸಬೇಕೆಂದು ಆಗ್ರಹಪೂರ್ವಕ ಕೇಳಿಕೊಂಡಿರುವರು. ಮಹಾತ್ಮರ ಸೌಹಾರ್ದ್ರ ಭಾವನೆಯು ಮಶ್ರಿಕಿಯವರನ್ನು ಮೋಹಿಸಿದಂತಿದೆ.

ಇಟಲಿಯಲ್ಲಿ

ಮಿತ್ರಸೇನೆಗಳು ಅವ್ಯಾಹತವಾಗಿ ಮುಂದೊತ್ತುತ್ತಿವೆ. ಐದನೇ ಸೇನಾದಲದ ಫೋರ್ಮಿಯಾ ಕೇಸಿನೋ ಪಂತೆಯೋ ಮಿತ್ರರ ಹಸ್ತಗತವಾಯಿತು.

ತಾ. 24—5—44ರಿಂದ

ಕರ್ನಾಟಕದ ಕೀರ್ತಿವೆತ್ತ

ಅಶ್ವತ್ಥಮ್ಮಾ ಮತ್ತು ತಮಿಳು ಹಾಸ್ಯಪಟು

ಸಾರಂಗಪಾಣಿಯವರ ಮಿಲನ

ಸಂತ ಸಖು

ದಕ್ಷಿಣ ಕನ್ನಡ-

ಮಂಗಳೂರು

ಹಸುಗೆ

ಮಂಗಳೂರು ನಗರ ಮತ್ತು ದರ ಆಸ ಪಾಸುಗಳಲ್ಲಿ ತಿಂಗಳು ಹಸುಗೆಯು ಜಾರಿಗೆ ಬಂದಿರ ವುದ. ಹಸುಗೆಯ ಕ್ಷೇತ್ರಗಳಲ್ಲಿ ಜನರು ಪಾಲಿಸ ಬೇಕಾದ ನಿಯಮಾವಳಿಗಳು.

(ಜಿಲ್ಲಾ ರೇಶನಿಂಗ್ ಆಫೀಸರ್ ಶ್ರೀ ಕೆ ಕೃಷ್ಣಯ್ಯ ಇವರಿಂದ)

ಒಬ್ಬನ ಹಸುಗೆಯ ಚೀಟನ್ನು ಇನ್ನೊಬ್ಬನು ಬದಲು ಮಾಡಿಕೊಳ್ಳುವುದು ಕಾನೂನಿಗೆ ವಿರೋಧ. ಮತ್ತೊಬ್ಬರ ಹಸುಗೆಯ ಚೀಟನ್ನು ಉಪಯೋಗಿಸಬೇಡಿರಿ.

ನಿಮ್ಮ ಮನೆಯಲ್ಲಿ ಜನಸಂಖ್ಯೆ ಕಮಿಯಾದ ಕೂಡಲೇ ಹಸುಗೆಯ ಪ್ರಮಾಣವನ್ನು ಕಡಿಮೆ ಮಾಡುವ ಬಗ್ಗೆ ಕೂಡಲೇ ರೇಶನಿಂಗ್ ಅಥವಾ ಅಸಿಸ್ಟೆಂಟ್ ರೇಶನಿಂಗ್ ಆಫೀಸರಿಗೆ ಬರೆದುಕೊಳ್ಳಿರಿ.

ನೀವು ಹಸುಗೆಯ ಕ್ಷೇತ್ರವನ್ನು ಬಿಟ್ಟು ಹೋಗುವುದಾದರೆ ಕೂಡಲೇ ನಿಮ್ಮ ಹಸುಗೆಯ ಚೀಟನ್ನು ಅಸಿಸ್ಟೆಂಟ್ ಅಥವಾ ರೇಶನಿಂಗ್ ಆಫೀಸರಿಗೆ ವಾಪಸು ಮಾಡಿರಿ.

ಒಬ್ಬನು ಒಂದಕ್ಕಿಂತ ಹೆಚ್ಚಿನ ಹಸುಗೆ ಚೀಟುಗಳಲ್ಲಿ ಹಸುಗೆಯ ಪಡಿಯನ್ನು ಪಡೆಯಕೂಡದು.

ಹಸುಗೆಯ ಕ್ಷೇತ್ರದಲ್ಲಿ ಹಾಜರು ಇಲ್ಲದವರ ಬಗ್ಗೆ ಹಸುಗೆ ಪಡೆಯಕೂಡದು.

ಮದ್ರಾಸ್ ಎಸೆನ್ಶಿಯಲ್ ಆರ್ಟಿಕಲ್ಸ್ ರಿಸ್ಟ್ರಿಕ್ಟೆಡ್ ಎಕ್ವಿಸಿಶನ್ ಆರ್ಡರಿನ ಪ್ರಕಾರ ಒಬ್ಬನಲ್ಲಿ ಒಂದು ತಿಂಗಳಿಗೆ ಸಾಕಷ್ಟು ಪಡಿ ಇರುವುದಾದರೆ (ಅಕ್ಕಿ ಯಾ ಭತ್ತ) ಅವನು ರೇಶನ್ ಅಂಗಡಿಯಿಂದ ರೇಶನ್ ಪಡೆಯಕೂಡದು ಹಾಗೆ ಪಡೆದರೆ ಅದು ಕಾನೂನಿಗೆ ವಿರೋಧ.

ಹಸುಗೆ ಜಾರಿಯಾದ ಅನಂತರ ಹಸುಗೆಗೆ ಸಂಬಂಧಪಟ್ಟ ಟೌನು ಯಾ ಊರುಗಳಲ್ಲಿ ರೇಶನಿಂಗ್ ಆಫೀಸರರ ಬರೆಹ ಮೂಲಕದ ಸುಕುಂ ವಿನಾ ಯಾರೊಬ್ಬನೂ ಪೈರಿನ ಬೆಳೆ ಕಟಾವು ಮಾಡಕೂಡದು. ಹಾಗೆ ಮಾಡಿದರೆ ಅದು ಕಾನೂನಿಗೆ ವಿರೋಧ.

ಸಾಗುವಳಿ ಗದ್ದೆಯಿಂದ ಪೈರು ಕಟಾವು ಮಾಡಿ ತೆಗೆಯುವ ಮುಂಚೆ ರೈತರು ಬೆಳೆ ಕಟಾವು ಮಾಡುವುದಕ್ಕಿಂತ ಕನಿಷ್ಠ ಪಕ್ಷಕ್ಕೆ ಒಂದು ವಾರಕ್ಕೆ ಮೊದಲು ಮುಂಚಿತವಾಗಿ ಬೆಳೆ ಕಟಾವು ಮಾಡುವ ತಾರೀಕು ಕಾಣಿಸಿ ಸದರಿ ಬೆಳೆಯುವ ಸರ್ವೆ ನಂಬ್ರ ವಿಸ್ತೀರ್ಣ ಮತ್ತು ಅಂದಾಜಿನ ಫಸಲು ಕಾಣಿಸಿ ಮತ್ತು ಕಟಾವು ಮಾಡಿದ ಪೈರನ್ನು ಹೇಗೆ ಉಪಯೋಗಿಸುತ್ತದು ಎಂಬುದೇ ಮುಂತಾದ ತಪಸೀಲುಗಳನ್ನು ಕಾಣಿಸಿ ರೇಶನಿಂಗ್ ಆಫೀಸರರಿಗೆ ಬರಹ ಮೂಲಕ ನೋಟೀಸು ಕೊಡತಕ್ಕದ್ದು. ಹಾಗೆ ನೋಟೀಸು ಕೊಡದೆ ಪೈರು ಕಟಾವು ಮಾಡಿ ಗದ್ದೆಯಿಂದ ಸಾಗಿಸಿಕೊಂಡು ಹೋದರೆ ಅದು ಕಾನೂನಿಗೆ ವಿರೋಧ

ಸುಮಾರು ಒಂದು ವರ್ಷಕ್ಕೆ ಬೇಕಾಗುವಷ್ಟು (ಒಂದು ತಿಂಗಳಿಗೆ ಮಿಕ್ಕಿ ಹನ್ನೆರಡು ತಿಂಗಳ ವರೆಗೆ) ಅಕ್ಕಿ ಯಾ ಭತ್ತ ಮನೆಯಲ್ಲಿ ಕೂಡಿಸಿಟ್ಟ ರೈತರು ಯಾ ಜಮೀನುದಾರರು ತಮ್ಮ ಸ್ವಾಧೀನವಿರುವ ಅಕ್ಕಿ ಯಾ ಭತ್ತದ ಬಗ್ಗೆ ಒಂದು ಲೆಕ್ಕ ಪುಸ್ತಕವನ್ನು ತೆರೆದು ಅದರಲ್ಲಿ ಖರ್ಚಿನ ಬಗ್ಗೆ ತೆಗೆದ ಅಕ್ಕಿ ಯಾ ಭತ್ತವನ್ನು ಸರಿಯಾಗಿ ಕಾಣಿಸಬೇಕು. ಬೇರಾಯದ ಖರ್ಚಿನ ಬಗ್ಗೆ ಅಕ್ಕಿ ಭತ್ತವನ್ನು ಈ ಸಂಗ್ರಹದಿಂದ ಖರ್ಚು ಮಾಡಿದ್ದಾದರೆ ಅದು ಯಾರ, ಯಾರಿಗೆ ಎಷ್ಟೆಷ್ಟು ಬಟವಾಡೆ ಮಾಡಿದ್ದು ಎಂಬ ವಿವರವನ್ನೂ ಲೆಕ್ಕ ಪುಸ್ತಕದಲ್ಲಿ ಸರಿಯಾಗಿ ಕಾಣಿಸಬೇಕು. ಜಮೀನುದಾರರು ಯಾ ರೈತರು ತಮ್ಮ ಮನೆಯ ಖರ್ಚಿನ ಬಗ್ಗೆ ತಿಂಗಳಿಗೆ ಬೇಕಾದಷ್ಟು ಅಕ್ಕಿಯನ್ನು ಎರಡು ತಿಂಗಳಿಗೊಮ್ಮೆ ಈ ಸಂಗ್ರಹದಿಂದ ತೆಗೆದು ಉಪಯೋಗಿಸಬಹುದು; ಆದರೆ ಲೆಖ್ಖವನ್ನು ಮೇಲೆ ಕಾಣಿಸಿದಂತೆ ಸರಿಯಾಗಿ ಇಡಬೇಕು. ಈ ಸಂಗ್ರಹ ಮತ್ತು ಲೆಖ್ಖಪುಸ್ತಕವನ್ನು ರೇಶನಿಂಗ್ ಇಲಾಖೆಯ ಅಧಿಕಾರಸ್ಥರು ಆಗಾಗ ತನಿಖೆ ಮಾಡಲಿರುವರು.

ಕಳ್ಳಸಂತೆಯ ನಿರ್ಮೂಲನ:— ಜಿಲ್ಲಾ ಮೆಜಿಸ್ಟ್ರೇಟರು, ಜಿಲ್ಲೆಯಲ್ಲಿ ಕಳ್ಳಸಂತೆಯು ತಲೆಯೆತ್ತದಂತೆ ಬಲವಾದ ಕಾರ್ಯಕ್ರಮಗಳನ್ನು ಕೈಕೊಂಡಿರುವರು. ಅಕ್ಕಿಯನ್ನು ಗುಪ್ತವಾಗಿ ಕೂಡಿಟ್ಟಿದ್ದ ಜಿಲ್ಲೆಯ ಒಬ್ಬಿಬ್ಬರು ಪ್ರಧಾನ ವ್ಯಾಪಾರಿಗಳನ್ನು ಬಂಧಿಸಿ ಪಟ್ಟಿಯು ನಡೆಯುತ್ತಿದೆ—ಎಂದು ಕೇಳುತ್ತೇವೆ. ಇನ್ನೂ ಕೆಲವರ ಬಂಧನವಾಗಲಿದೆ ಎಂದೂ ತಿಳಿದುಬರುತ್ತದೆ.

ಸಭೆ ಮೆರವಣಿಗೆಗಳ ನಿಷೇಧ— ಕಲೆಕ್ಟರರ ಆಜ್ಞಾ ಮೇರೆಗೆ ಮಂಗಳೂರು ನಗರದೊಳಗೆ ಪುನಃ ೨ ತಿಂಗಳು ಸಭೆ ಮೆರವಣಿಗೆಗಳು ನಿಷೇಧಿಸಲ್ಪಟ್ಟಿವೆ.

ಉಡುಪಿ.

ಇಲೆಕ್ಟ್ರಿಕ್ ತಂತಿತಾಗಿ ಮರಣ:- ಇದೇ ತಾ 20ನೆ ಶನಿವಾರ ಮುಂಜಾನೆ ಅಂಬ್ಲಪಾಡಿಯ ಮಹಮ್ಮದ್ ಸಾಹೇಬ್ ಎಂಬವನು ಗಾಡಿ ಹೊಡೆದುಕೊಂಡು ಹೋಗುತ್ತಿದ್ದಾಗ ಸಿರಿಬೀಡು ಕಲ್ಸಂಕ ರಸ್ತೆಯಲ್ಲಿ ಕೆಳಗೆಬಿದ್ದಿದ್ದ ಇಲೆಕ್ಟ್ರಿಕ್ ಸರಿಗೆಯು ಗಾಡಿಎತ್ತಿನ ಕಾಲಿಗೆತಗಲಿ ಕೂಡಲೇ ಎತ್ತು ಬೀಳಲು ಅದೇನೆಂದು ನೋಡಲು ಗಾಡಿಯಿಂದ ಇಳಿದು ಎತ್ತಿನಬಳಿಗೆ ಹೋದ ಇವನಿಗೂ ಸರಿಗೆಯು ತಾಗಿ ಎತ್ತಿಗೂ ಈತನಿಗೂ ಕೂಡಲೇ ಮರಣ ಸಂಭವಿಸಿತು. ಸಶಕ್ತ ಇಲೆಕ್ಟ್ರಿಕ್ ಸರಿಗೆಯು ಕೆಳಗೆ ಬಿದ್ದು ಇದ್ದುದು 'ಪವರ್ ಹೌಸಿ'ಗೆ ಗೊತ್ತಾಗುವುದಿಲ್ಲವೋ? 'ಪವರ್ ಹೌಸಿ'ನ ನೌಕರರ ಅಲಕ್ಷ್ಯದಿಂದ ಗೊತ್ತಾಗಲಿಲ್ಲವೋ? ಈ ರೀತಿ ರಾಜಮಾರ್ಗದಲ್ಲಿ ಸಶಕ್ತ ಸರಿಗೆಯು ಬಿದ್ದಿದ್ದು ಅದರ ಆಘಾತದಿಂದ ಮರಣ ಉಂಟಾದುದಕ್ಕೆ ಯಾರು ಹೊಣೆ ಎಂಬುವುದು ವಿಚಾರಣೀಯ. ಒಡಗಾಡಿಯವನ ಮರಣದಿಂದ ನಿರ್ಗತಿಕರಾದ ಆತನ ಕುಟುಂಬಕ್ಕೆ ಕಂಪೆನಿಯು ತಕ್ಕ ಪರಿಹಾರ ದ್ರವ್ಯ ಕೊಡುವುದು ನ್ಯಾಯವಲ್ಲವೇ? ಮುಂಬರುವ ಮಳೆಗಾಲದ ಕತ್ತಲೆ ರಾತ್ರಿಗಳಲ್ಲಿ ಇಂತಹ ಶೋಚನೀಯ ಅಪಘಾತಗಳು ಸಂಭವಿಸದಂತೆ ತಕ್ಕ ಮುಂಜಾಗ್ರತೆಯಲ್ಲಿರುವುದು ಕಂಪೆನಿಯ ಆದ್ಯ ಕರ್ತವ್ಯವಿದೆ.

ಬಡಶಾಲಾ ಮೆನೇಜರರ ಗೋಳು- ಶಾಲಾ ಮೆನೇಜರರು ತಮ್ಮ ಶಾಲೆಗಳ ಗ್ರ್ಯಾಂಟಿನ ಬಿಲ್ಲುಗಳನ್ನು ಪಟಾಯಿಸಲು ತಾಲೂಕು ಕಚೇರಿ ಟ್ರೆಜರಿಗೆ ತಕ್ಕ ಹೊತ್ತಿನಲ್ಲಿ ಬಂದು ಬಿಲ್ಲುಗಳನ್ನು ಕೊಟ್ಟು ದಿನವೆಲ್ಲಾ ಕಾದರೂ ಸಂಜೆ ಅವು ಪಟಾಯಿಸಲಾಗುವುದಿಲ್ಲವೆಂದೂ ಮರುದಿನ ಬರಬೇಕೆಂದೂ ಅಪ್ಪಣೆಯಾಗುತ್ತದಂತೆ! ಮನೇಜರಿಗೆ ಬಿಲ್ಲುಪಟಾಯಿಸುವರ ದ್ಯೂಟಿ ನೇರಿಬಿಯಿರುವ ಒಂತೇ ಒಂದು ದಿನವು ಈ ರೀತಿ ವ್ಯರ್ಥವಾದರೆ ಮರುದಿನ ಅವರು ಈ ಕೆಲಸಕ್ಕಾಗಿ ಬರುವುದು ಹೇಗೆ? ಇದಕ್ಕಾಗಿ ದೂರದೂರದಿಂದ ಬಂದು ಪಟ್ಟಣದಲ್ಲಿ ಎರಡುದಿನ ನಿಲ್ಲುವ ಖರ್ಚುವೆಚ್ಚಗಳನ್ನು ಕೊಡುವವರು ಯಾರ? ಎಂಬದನ್ನು ಸಂಬಂಧಪಟ್ಟವರು ವಿಚಾರಕ್ಕೆ ತಂದುಗೊಂಡು ಬಡ ಮೆನೇಜರರನ್ನು ಗೋಳಾಡಿಸದಿರುವುದು ನ್ಯಾಯವಲ್ಲವೇ?

ಜನ್ಮ ದಿನಾಚರಣೆ:— ಅನ್ನದಾನಕ್ಕೆ ಹೆಸರುವಾಸಿಯಾದ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ತಮ್ಮ ಹುಟ್ಟು ಹಬ್ಬದ ಸಲುವಾಗಿ ತಾ 23ರಲ್ಲು ಪಾಡಿಗಾರು ಮಠದಲ್ಲಿ ವಿಶೇಷ ಪೂಜಾದಿಗಳನ್ನು ಜರಗಿಸಿ ದಾನದಕ್ಷಿಣೆಗಳನ್ನಿತ್ತರು. ಈ ಸಮಾರಂಭಕ್ಕೆ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು ಆಮಂತ್ರಿತರಾಗಿದ್ದರು.

ನೃತ್ಯಪ್ರದರ್ಶನ:— ತಾ 19-5-44ರಲ್ಲು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮಹರಾಜಾ ಬಿಂದಾದಿನ್ ನೃತ್ಯಕಲಾ ಶಾಲೆಯ ಬಾಲಕ ಬಾಲಕಿಯರು ತಮ್ಮ ಅನುಪಮ ಕಥಕ್ ನೃತ್ಯ ಪ್ರದರ್ಶನಗಳನ್ನು ಮಾಡಿದರು. ಜನರು ಕಿಕ್ಕಿರಿದು ನೆರೆದಿದ್ದರು.

ಕಾಸರಗೋಡು- ಇಲ್ಲಿ ಇದೇ ಬರುವ ಜೂನ್ ತಿಂಗಳ ಪ್ರಾರಂಭದಲ್ಲಿ ಮುಸ್ಲಿಂ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಒಂದು ಹೈಸ್ಕೂಲನ್ನು ಹೊಸತಾಗಿ ತೆರೆಯಲ್ಪಡುವುದು. ಈ ವಿದ್ಯಾಲಯದಲ್ಲಿ ಸದ್ಯಕ್ಕೆ I, II, III ಈ ಮೂರು ಫೋರ್ಮುಗಳು ನಡಿಸಲ್ಪಡುವುವು, ಭಾಷಾಪಾಠಗಳಲ್ಲದೆ ಇತರ ವಿಷಯಗಳು ಇಂಗ್ಲೀಷಿನಲ್ಲಿಯೇ ಕಲಿಸಲ್ಪಡುವುವು. ಉರ್ದು ಭಾಷಾಭ್ಯಾಸಕ್ಕೆ ಒಬ್ಬ ಉರ್ದು ಮುನಿಶಿಯು ನಿಯಮಿತನಾಗುವನು.

ಸುರತ್ಕಲ್:— ಸ್ಥಳೀಯ ಹಿಂದೂ ವಿದ್ಯಾದಾಯಿನೀ ಸಂಘವು ಇಲ್ಲಿ ಹೊಸತಾಗಿ ನಡೆಸುವ ವಿದ್ಯಾದಾಯಿನೀ ಹೈಸ್ಕೂಲಿನ ಪ್ರಾರಂಭೋತ್ಸವವು 31-5 1944ನೇ ಬುಧವಾರ ಅಪರಾಹ್ನ ಘಂಟೆ 3-45ಕ್ಕೆ ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ಶ್ರೀಪಾದಂಗಳವರ ದಿವ್ಯ ಸನ್ನಿಧಾನದಲ್ಲಿ ಜರಗಲಿರುವುದು.

ಕುಂದಾಪುರ:— ಸ್ಥಳೀಯ ಬೋರ್ಡ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಕಟೀಲ್ ಗಣಪತಿರಾವ್, ಬಿ. ಓ. ಎಲ್. ಇವರು ಮದ್ರಾಸ್ ಯುನಿವರ್ಸಿಟಿಯ ಎಲ್. ಟಿ. ಪರೀಕ್ಷೆಯಲ್ಲಿ ಸೆಕೆಂಡ್ ಕ್ಲಾಸಿನಲ್ಲಿ ಉತ್ತೀರ್ಣರಾಗಿದ್ದಾರೆ. ನಮ್ಮ ಜಿಲ್ಲೆಯಿಂದ ಈ ವರ್ಷ ಎಲ್. ಟಿ. ಪಾಸಾದ ಗಂಡಸರಲ್ಲಿ ಸೆಕೆಂಡ್ ಕ್ಲಾಸಿನಲ್ಲಿ ಉತ್ತೀರ್ಣರಾದವರು ಇವರೊಬ್ಬರೇ.

ಶ್ರೀ. ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲ್, ವಿಶ್ವೇಂದ್ರ — ನಗರ, ಇನ್ನಂಜೆ —

ಕಾಪು. ದ. ಕ.

ತಾ. 1-6-44ನೇ ಗುರುವಾರ ಶಾಲಾರಂಭ

ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸುಲಭ ದರದಲ್ಲಿ ಭೋಜನ, ವಸತಿ, ದೀಪಗಳ ಯೋಗ್ಯ ವ್ಯವಸ್ಥೆ ಇರುವುದು.

I, II, III ಮತ್ತು IV ಫೋರ್ಮುಗಳಿಗೆ ಸೇರಲಿರುವವರಿಗೆ ಸುಸಂದರ್ಭ.

ಹುಡುಗಿಯರಿಗೆ ಸ್ಕೂಲ್ ಫೀಸಿನಲ್ಲಿ ತುಂಬಾ ರಿಯಾಯತಿ ಇದೆ.

ಇನ್ನಂಜೆ 12-4-'44 **Headmaster.**

WANTED

Applications are invited from Schoolfinal candidates who are willing to undergo Second Class Vaccinator's training in South Kanara District. The training will be at the cost of the candidate for a period of about 4 to 6 weeks. The candidate should furnish in his applications, his date of birth, educational qualifications, caste and community and his place of residence. The applications should reach the undersigned on or before 10-6-1944.

Mangalore, 19-5-1944.

K P. Thomas.
District Health Officer,
South Kanara.

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ! ರತಿಸುಖದ ಪರಮಾನಂದವನ್ನುಂಟು ಮಾಡಲು **ರಮಣ** ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು.

ಪುತ್ತೂರು ಏಜಂಟರು: - **ಪೈ ಫಾರ್ಮಸಿ**

THE BEST PREVENTIVE IN EPIDEMICS OF CHOLERA

"BHUVANENDRA"

CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.

For Children: 1 to 2 drops with the said decoction.

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 3ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.**

ಪ್ರತಿಕ್ರಿಯೆ

'ಗಾಂಧಿಯವರಿಗೆ ಮನಸ್ಸಿದ್ದರೆ ನನಗೊಂದು ಪತ್ರ ಬರೆಯಲು ಆತಂಕವೇನು? ನನ್ನ ವಿಳಾಸಕ್ಕೆ ಬರುವ ಪತ್ರವೊಂದನ್ನು ತಡೆಯುವ ಧೈರ್ಯ ಯಾವ ಸರಕಾರಕ್ಕಿದೆ?'–ಎಂದು ಜಿನ್ನರು 1943ನೇ ಲೀಗ್ ಅಧಿವೇಶನದ ಅಧ್ಯಕ್ಷ ಭಾಷಣದಲ್ಲಿ ಎದೆತಟ್ಟಿಕೊಂಡಾಗ, ಆ ಬಯಕೆಯನ್ನೀಡೇರಿಸಿಕೊಟ್ಟ ಪತ್ರವಿದು. ಆದರೆ ಲೋರ್ಡ್ ಲಿನ್‌ಲಿತ್‌ಗೋರವರಲ್ಲಿ ಅದನ್ನು 'ತಡೆಯುವ ಧೈರ್ಯ'ವಿದ್ದುದರಿಂದ, ಜಿನ್ನರ ವಿಳಾಸ ಸಮೇತ ಅದು ಸರಕಾರದ ಕೈಯಲ್ಲಿಯೇ ಉಳಿದಿತ್ತು! ಈಗ ಆ ಪತ್ರದೊಡನೆ ಜಾತೀಯ ಐಕ್ಯತೆಗಾಗಿ ಗಾಂಧೀಜೀ ಪಡುತ್ತಿರುವ ಆತುರವೂ ಪ್ರಕಟಗೊಂಡಿದೆ. 'ಇಂತಹ ತರ್ಕಾತ್ಮಕ ಸಮಸ್ಯೆಗೆ ಪೂರ್ತಿ ಗುಣಹೊಂದುವ ಮೊದಲೇ ತಲೆಹಾಕಿ ಗಾಂಧೀಜೀ ತಪ್ಪುಮಾಡಿದರು' ಎಂದು ಗಾಂಧೀ ಗ್ರಾಮದಲ್ಲಿ ಯಾತನಗೊಂಡವರಿದ್ದಾರೆ. ಪ್ರಕೃತ ಶ್ರೀನಗರ ಸಮೀಪದ ದಾಲ್ ಸರೋವರ ದಂಡೆಯ ಆ ಚರಿತ್ರಾರ್ಹ ನಿಶಾತ್ ಉದ್ಯಾವನದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಮಿ. ಜಿನ್ನರಿಗೆ ಆ ಪತ್ರವನ್ನು ತೋರಿಸಿ ಅಭಿಪ್ರಾಯ ಕೇಳಿದಾಗ "ಸದ್ಯ ಈ ಕುರಿತೇನನ್ನು ಹೇಳುವ ಇಚ್ಛೆಯೂ ನನಗಿಲ್ಲ" ಎಂದುಬಿಟ್ಟರು. 'ಡಾನ್' ಪತ್ರಿಕೆಯು 'ಮೃತ ಪತ್ರ' ಎಂಬ ತಲೆಬರೆಹದೊಡನೆ ಹೊಸತೇನನ್ನೂ ಸೂಚಿಸದ ಆ ಪತ್ರವನ್ನು ಟೀಕಿಸಿ, 'ಗಾಂಧಿಯವರು 1943ರ ಈ ವಿಜ್ಞಾಪನಾ ಉದ್ದಿಮೆಯನ್ನು ಇಲ್ಲಿಗೇ ನಿಲ್ಲಿಸಿ, ಮುಸಲ್ಮಾನರ ಬೇಡಿಕೆಯ ಪೂರ್ಣ ಅರ್ಥಮಾಡಿಕೊಳ್ಳಲಾರಂಭಿಸಬೇಕು' ಎಂದು ಆಜ್ಞಾಪಿಸಿದ! ಪತ್ರವು ಲಂಡನಿನಲ್ಲೂ ಪ್ರತಿಧ್ವನಿಗೊಟ್ಟಿದ

ಗಾಂಧಿಜೀ ಗುಣಹೊಂದುತ್ತಿದ್ದಾರೆ!

(೨ನೇ ಪುಟದಿಂದ ಮುಂದುವರಿದುದು)

ಬೊಂಬಾಯಿ ದರ್ಶನ

ಕಳೆದ ತಾ 19ರಲ್ಲಿ, ಬೊಂಬಾಯಿಯ ಅಗ್ನಿಪೀಡಿತ ಸ್ಥಳಕ್ಕೆ ಆಕಸ್ಮಿಕ ಭೇಟಿಕೊಟ್ಟು, ಕಟ್ಟಡ ಕಸಗಳಡಿಯಲ್ಲಿ ಇನ್ನೂ ಮಿಣುಕುತ್ತಿರುವ ಕೆಂಡಗಳ ಸಮೇತ ಎಲ್ಲಾ ಭಗ್ನಾವಶೇಷಗಳನ್ನೂ ಮಹಾತ್ಮಾಜೀ ಒಂದು ಘಂಟೆ ಕಾಲ ಕಂಡುಬಂದಿದ್ದಾರೆ. ಬಿಡುಗಡೆಯಾದೊಡನೆ ಅಲ್ಲಿಗೆ ಧಾವಿಸುವ ಆತುರ ಗಾಂಧಿಜೀಗಿದ್ದರೂ ಡಾಕ್ಟರರು ತಡೆದಿದ್ದರು. ಈ ಪ್ರಯಾಣದ ಪ್ರಯಾಸವನ್ನು ದೈಹಿಕವಾಗಿ ಅವರು ಸಹಿಸಿಕೊಂಡರೂ ಮಾನಸಿಕ ಬಾಧೆಯಿಂದ ಆ ರಾತ್ರಿ ಸರಿಯಾಗಿ ನಿದ್ದೆ ಬಿದ್ದಿರಲಿಲ್ಲ. ಗಾಂಧಿಜೀ ಗುಣಹೊಂದಿದೊಡನೆ ಸರ್ ಟಿ. ಬಿ. ಸಪ್ರುಗಳು ಬೊಂಬಾಯಿಯಲ್ಲಿ ಅವರೊಡನೆ ರಾಜಕೀಯ ಬಿಕ್ಕಟ್ಟು ನಿವಾರಣೆಗಾಗಿ ಚರ್ಚಿಸಲಿದ್ದಾರೆ. ಎಲ್ಲಾ ಪಕ್ಷಗಳ ಪ್ರತಿನಿಧ್ಯವಿರುವ ರಾಷ್ಟ್ರೀಯ ಸರಕಾರ ಸ್ಥಾಪನೆಗಾಗಿ ಗಾಂಧಿಜೀ ತಮ್ಮ ಪೂರ್ಣ ಲಕ್ಷ್ಯಕೊಡಲಿದ್ದಾರೆ–ಎಂದು ಸರ್ ಸಪ್ರುಗಳ ನಂಬಿಕೆ. ಅದಕ್ಕಾಗಿ ಗಾಂಧಿಜೀ ಸರ್ವ ಪ್ರಮುಖರ ಸಮ್ಮೇಲನವೊಂದನ್ನು ಕರೆಯಬೇಕೆಂದು ಸಪ್ರು ಬಯಕೆ.

ಅನುಕೂಲ ವಾತಾವರಣ.

ಮೇಲಿನ ವಿದ್ಯಮಾನಗಳಿಂದ ಗಾಂಧಿಜೀಯನ್ನು ಕಾಹಿಲೆಯಂತೆಯೇ ದೇಶದ ಸಂಕಟ ಸಂಬಂಧದ ಮನೋಪೀಡೆಯೂ ಬಾಧಿಸುತ್ತಿದೆಯೆಂಬುದು ಸ್ಪಷ್ಟ. ಅದರ ನಿವಾರಣೆಯಾಗದ ಕಳೆಯುವ ಕ್ಷಣವೊಂದು ಯುಗದಂತ ಅವರಿಗೆ ತೋರುತ್ತಿದೆ ಎಂಬುದೂ ಖಂಡಿತ, ಅತ್ತ ಬ್ರಿಟಿಷ್ ಮುತ್ಸದ್ದಿಗಳ ಹೃದಯಗಳೂ ಮೃದುಗೊಂಡ ಲಕ್ಷಣಗಳು ಕಾಣುತ್ತಿವೆ. ಅಮೆರಿಕದಲ್ಲಿ ಬ್ರಿಟಿಷ್ ರಾಯಭಾರಿಯಾಗಿರುವ, ಇಂತಹ ಒಂದು ಸಂಧಿಗ್ಧ ಕಾಲದಲ್ಲೇ ಭಾರತ ವೈಸರಾಯಿಯಾಗಿದ್ದು ಅನುಭವವಿರುವ, ಲೋರ್ಡ್ ಹೆಲಿಫೇಕ್ಸರು, ಒಂದು ಭಾಷಣದಲ್ಲಿ ಅನಾರೋಗ್ಯದಿಂದಾದ ಗಾಂಧೀ ಬಿಡುಗಡೆಯು ಭಾರತ ರಾಜಕೀಯದ ಮೇಲೆ ಪ್ರಭಾವ ಬೀರುವಂತಿಲ್ಲ' ಎಂಬ ಕುತ್ಸಿತ ಬುದ್ಧಿಯೊಟ್ಟಿಗ 'ಈ ನಿಸ್ಸ್ವಾರ್ಥ ಸಂತನು ಮಿಲಿಯಾವಧಿ ಭಾರತೀಯರಿಂದ ಪೂಜಿಸಲ್ಪಡುವ ವ್ಯಕ್ತಿ' ಎಂದು ಕಿಚ್ಚುರಹಿತ ಶ್ಲಾಘನೆಯನ್ನೂ ಸಲ್ಲಿಸಿದ್ದಾರೆ. ಮಹಾತ್ಮರ ಶಾಂತಿಪ್ರೇಮ ಮತ್ತು ಮುಸಲ್ಮಾನ್ ದುರೀಣರನ್ನು ಒಲಿಸಲು ಅವರು ಪಡುತ್ತಿರುವ ಆತುರಗಳನ್ನೆತ್ತಿ ತೋರಿಸಿ 'ಅದಕ್ಕನುಕೂಲತೆಯೊದಗಿಸಿಕೊಡುವಿರಾ?' ಎಂದು ಪ್ರಶ್ನೆ ಬಂದಾಗ ಮಿ. ಅಮೆರಿಯಾದರೂ ಪದ್ಧತಿಯಂತೆ ಕಹಿಬಾಯಿಯನ್ನು ತೆರೆಯದೆ 'ನಿಜಕ್ಕೂ ಅಂತಹ ಪರಿಸ್ಥಿತಿಯಿದ್ದರೆ ಲೋರ್ಡ್ ವೇವೆಲರು ಖಂಡಿತವಾಗಿಯೂ ಅದರ ಉಪಯೋಗಮಾಡಿಕೊಳ್ಳುವರು' ಎಂಬ ಆಶ್ವಾಸನೆಯಿತ್ತಿದ್ದಾರೆ. ಇದರಿಂದ 'ಗುಣಹೊಂದಿದೊಡನೆ ಪುನಃಬಂಧಿಸಲಾರರೆ?' ಎಂಬ ಸಂದೇಹವನ್ನು ಪೂರ್ತಿ ದೂರಮಾಡಿಸಿ ಬಿಡಬಹುದು. ಆದರೆ ತೀರಾ ಜಡುಮುಗಟ್ಟಿ ಹೋಗಿರುವ ರಾಜಕೀಯ ಕಗ್ಗಂಟನ್ನು ಗಾಂಧಿಜೀ ಯಾವ ಎಳೆಯನ್ನೆಳೆದು ಬಿಡಿಸಬಲ್ಲರೋ ಅವರನ್ನಾಡಿಸುವ ಆ 'ಅಂತಃಪ್ರೇರಣೆ'ಗೇ ವೇದ್ಯ!

NOTICE

It has been found that certain chemicals placed on the market under the label of "William George and company, Hull, London" and "T R. Horner & Sons" are spurious. All dealers in drugs are warned against selling such spurious drugs under pain of cancellation of their licences under the Drugs Control Order. Any dealers in this District receiving such spurious drugs from their suppliers or holding stocks of such drugs should immediately bring the fact to the notice of the undersigned.

S Krishna Rao, M.A.
Commercial Tax Officer.

The progress of the **"POPULAR"** is in every aspect a concrete proof of the business acumen and enterprise of **KARNATAKA.**

You have a duty towards your OWN institutions which can be best manifested by your co-operation and patronage.

In taking out your Life Assurance Policy in a LOCAL company or representing it as an AGENT, SPECIAL AGENT or A DISTRICT AGENT, you contribute to the continued Success and Progress of LOCAL institutions.

Prefer the "POPULAR" for your Life Assurance.

1943	New business completed	Rs. 10,40,000
	Life Assurance fund	Rs. 3,76,000
	Renewal expense Ratio	17·6%

Claims Paid exceed Rs. 1,00,000 Assets exceed Rs. 4,60,000

THE POPULAR INSURANCE COMPANY LIMITED,
MANGALORE.

The Pangal Nayak Bank Limited.

(Incorporated in 1920.)

Registered Office Court Road, UDIPI

Branches at— Udipi, Mangalore, Katapadi, Kanhangad, Kinnigoli, and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public.

For business proper please enquire at any one of our Offices.

15th April 1944.

ದಿ ಜುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಬೊಂಬಾಯಿ

ಚೀಫ್ ಏಜನ್ಸಿ ಆಫೀಸು:— ಉಡುಪಿ.

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ನಿಮ್ಮ ಮತ್ತು ನಿಮ್ಮ ಕುಟುಂಬದ ಬಾಳೀ ಕಲ್ಯಾಣಕ್ಕಾಗಿ.

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

ಪಿ. ಡಿ. ನಾಯಕ್,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Co. Ltd., Bombay.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

ಬರ್ಥ್ ಕಂಟ್ರೋಲ

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ — ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಋತುಸಮಯದಲ್ಲಿ ಸೇವಿಸಬೇಕು.

ಪಥ್ಯ:— ಹರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ೧ಬೇರೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ ದಾವಣಗೇರಿ,— ದಾವಣಗೇರಿ ಪ್ರೆಸ್, ಡಾ. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಕಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳವೆ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೬ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ**

FOR SAFETY & SERVICE

THE VIJAYA BANK, LTD.,

Head office: MANGALORE.

Branches at:—Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ

ವಿಜಯಾ ಬೇಂಕ್ ಲಿಮಿಟೆಡ್

ಹೆಡ್ ಆಫೀಸು:— ಮಂಗಳೂರು.

ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.

REGD

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾವು ಕೋಲ್ಡ, ಚೇಳು ವಿಷ ಮುಂತಾದ ಬೇರೆ ಎಷ್ಟೋ ತರ ವೇದನೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ. ಪಥ್ಯಹುರುಕಡ್ಡಿ ಮದ್ದು ನಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ **1-8-0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2-8-0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1920

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. of Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd No. M 3618

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6

Estd. 1921 ಸ್ಥಾಪನೆ

1944ನೇ ಜನವರಿಯಿಂದ ಮೂರನೆ ಸಂಪುಟಾರಂಭ ವಾಗಿದೆ,

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿಗೆ ರೂ. 0-4-0

ಮಾದರಿ ಪ್ರತಿಗೆ ಐದಾಣೆ ಸ್ಟಾಂಪಿನೊಂದಿಗೆ ಬರೆಯುವುದು:

'PRAKASHINI'

NAVAYUGA PRESS

UDIPI

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೩೮

FOUNDER Sri. A. B. Shetty

Vol. 24 No. 38

NAVAYUGA— Kannada Weekly —UDIPI, S. I.

ಉಡುಪಿ • 1—6—1944 • ಮಂಗಳೂರು.

ANTARANGA

UDIPI

ಅಖಿಲ ಕರ್ನಾಟಕದ ಹೊಸ ಮಾದರಿಯ ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ 4-8-0

ಬಿಡಿ ಪ್ರತಿಗೆ 0-1-6

ಮೆನೇಜರ್,

ಅಂತರಂಗ, ಉಡುಪಿ.

The Canara Mutual Assurance Co., Ltd.

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English a good moral character and should be quick at figures.

All applications must be accompanied by two testimonials one from the Headmaster of the School and another from any local gentleman

UDIPI, 5-1-1944. } T. R. A. Pai, MANAGING DIRECTOR

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೋಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಕೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪ್ರತಿ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ವ್ಯಾಪಾರಸ್ಥರ ಏಜಂಸಿಗೆ ಪತ್ರವ್ಯವಹಾರವಾಡಬೇಕೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,

Ayurveda Ousbadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಲ್ಪಡುವುದು.

ಕತೆ ಕಾದಂಬರಿಗಳು—ಕವನ,—ನಾಟಕಗಳು

ಯಾವ ಪುಸ್ತಕ ಬೇಕಾದರೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗಾಂಧಿಜೀ ಹಾದಿ ಹುಡುಕುತಿದ್ದಾರೆ!

ಮಹಾತ್ಮಾಜೀಯನ್ನು ಗುಣಹೊಂದುವದು ಖಂಡಿತ. ಆದರೆ ಗಾಂಧಿಜೀಯು ಕಡೆಗೆ ಹೆಜ್ಜೆಯಿಡುವಾಗ ಅವರಿಗೋ, ಆರೋಗ್ಯ ಶ್ರೀ ಬಹಳವಾಗಿ ಶಂಕಿಸುತ್ತಿರುವಂತೆ ಕಾಣುತ್ತಿದ ಎಲ್ಲಿಯೂ ಸಂದೇಹಪಡುತಿದ್ದಾಗ, ತಾನು ಗುಣ ಹೊಂದುವದೇ ಸರಿ, ಎಂದು ಭರವಸೆಗೊಂಡಿದ್ದ . ಂಧಿಜೀ ಒಮ್ಮೊಮ್ಮೆ ತಾನು ಗುಣಹೊಂದಿಯಾಯಿತು' ಎಂದುನೆನಸಿಕೊಳ್ಳುವವೂ ಇದ. ಮೇ ತಾ 2೧ನೇ ಅತಿ ಮುಂಜಾನೆಯಲ್ಲಿದ್ದು 1942ನೇ ಆಗೋಸ್ತು ಸೆರ್ಬಾರಕ್ಕೆ ಬಂದವನಂತೆ ಕೆಲವು ಪತ್ರ ಬರೆಯುವೆನೆಂದು ಧೈರ್ಯಮಾಡಿ ಕುಳಿತರು. ಅದಾ ಕೂಡಲೇ ರಕ್ತದೊತ್ತಡವೇರಿ ತಾನಿನ್ನೂ ರೋಗಿಯೆಂಬ ಎಚ್ಚರವನ್ನವರಿಗೆ ಕೊಟ್ಟಿತು. ಪ್ರ.. ..ಪ್ರಾಂತಿಪಡೆದವರು ವಾಕ್ಯರಿಂದ ಕಲಿಸಲಾಗದಿದ್ದ 'ಆರೋಗ್ಯ ಮಾಡನಾಟ ಸಲ್ಲದು' ಎಂಬ ಸದ್ಬುದ್ಧಿಯು ಈಗ ಸ್ವತಃ ಗಾಂಧಿಜೀಯಲ್ಲೇ ಮೂಳೆ ಬಂತಿದೆ ಅವರು ತನ್ನ ಆರೋಗ್ಯ ಕಾಣಲಿ ಗ ತಾನೇ ಪರಿಣಾಮಗಳೊಪ್ಪಿದ್ದಾರೆ ಯಾವನ್ನೂ ಕಾಣಲಿಚ್ಛಿಸಲಾರೆನೆಂದಿದ್ದಾರೆ.

ಆರೋಗ್ಯ ಸಾಧನೆ

ಈಗ ಕಾರ್ಯಾಂತರದಿಂದ ಕಲ್ಕತ್ತೆಯಲ್ಲಿನ 'ಗಾಂಧೀ ಡಾಕ್ಟರ್' ಎಂದು ಹೆಸರು ಪಡೆದ ಡಾ ಬಿ ಸಿ ರೋಯಿಗಳು ಸಿದ್ಧವೇ ಮಹಾತ್ಮರನ್ನು ಸಂದರ್ಶಿಸಲಿದ್ದಾರೆ, ಪ್ರಕೃತ ಅಲ್ಲಿಂದಲೇ ಕೆಲವು ಪ್ರೈವೇಟು ಸಲಹೆ ಕೊಟ್ಟಿದ್ದಾರೆ, ರೋಗಿಯ ಹುಟ್ಟಾಭಿಯನ್ನೂ ಸಿನ ದಣಿಯಾಗಿಲ್ಲ ಹೈದರಾಬಾದಿನ ನಿಜಾಮರ ಸರಕಾರವು ಗಾಂಧಿಜೀಯ ರಕ್ತ ಪರೀಕ್ಷೆಗಾಗಿ ಹಿಂದುಸ್ಥಾನದಲ್ಲಿ ಬೇರೆಲ್ಲಿಯೂ ದೊರೆಯದ ಉಪಕರಣವೊಂದನ್ನು ಓರ್ವ ತಜ್ಞ ಪರೀಕ್ಷಕನ ಸಮೇತ ಕಳುಹಿಕೊಟ್ಟಿದೆ ಮಹಾತ್ಮರ ಸಾಪ್ತಾಹಿಕ ಮೌನವ್ರತದ ಮುಕ್ತಾಯ ಮುಹೂರ್ತವು ತಾ. ೨೮ನೇ ಆದಿತ್ಯವಾರ ಮಧ್ಯಾಹ್ನ ಆದರೆ ಪದ್ಧತಿಯಾ ವಾರ ಮೌನ ದಿನವನ್ನೂ ಅದರ ಬೆನ್ನಲ್ಲೇ ಮುಂದುವರಿಸಿ, ಸೋಮವಾರದ ಮಧ್ಯಾಹ್ನಕ್ಕೆ ಮೌನ ವಿಸರ್ಜನೆ ಮಾಡಿದ್ದಾರೆ ಈ ಮೌನಕೃತ್ಯ ಆರೋಗ್ಯ ಲಾಭಕ್ಕೆ ಹಚ್ಚಿನ ಸಹಕಾರಿಯಾಗಿ ಕಂಡುಬಂದಿರುವದರಿಂದ ಅಗತ್ಯ ಕಂಡರೆ ಅವರು ಇನ್ನೊಂದು ಪಕ್ಷ ಪರ್ಯಂತ ಇನ್ನೊಮ್ಮೆ ಮೌನಿಗಳಾಗಿ ಒಹುದು ಜುಹುವನ್ನು ಬಿಡುವ ಸಿದ್ಧತೆಯಲ್ಲಿ ಗಾಂಧಿಜೀಯಿರುವಂತಿದೆ ಆದರೆ ಎಂದಿಗೆ, ಎಲ್ಲಿಗೆ, ಎಂಬುದಿನ್ನೂ ಖಂಡಿತವಾಗಿಲ್ಲ ಬಂದಂತೆ ಪೂನೆಗೆ ಹಿಂದಿರುಗಿ, ಯಾವುದಾದರೊಂದು ತಂಪುಸ್ಥಳಕ್ಕ ಆಲ್ಲಿಂದಲೇ ವರ್ಗಾಯಿಸಿಕೊಳ್ಳುವ ಬಯಕೆ ಪ್ರದರ್ಶಿಸಿದ್ದಾರೆ. ಬಾ, ದೇಸಾಯೀ ಸಮಾಧಿಗಳ ಜ್ಞಾಪಕ ಬಂತೇನೊ!

ಅಮೇರಿ ಪ್ರಲಾಪ

ಹಿಂದುಸ್ಥಾನದ ಪಾಲಿಗೆ 'ಅಕಾಲ ಮರಣ'ದ ಅಪವಾದ ಇನ್ನು ಬರಬೇಕೆಂದಿಲ್ಲ- ಸರಾಸರಿ ಆಯುಷ್ಯ 22ರ ಹಿಂದೆಮುಂದೆ ಇರುವ ಈ ದೇಶದಲ್ಲಿ ಎಪ್ಪತ್ತನಾಲ್ಕರ ಮುಪ್ಪಿನ ಈ ಮನುಷ್ಯ ಹೊರಟುಹೋದರೆ 'ಆಯುಷ್ಯದಲ್ಲಿ ಅರಿವಾಸಿಯನ್ನು ಬಿಟ್ಟೇಹೋದ' ಎಂದು ಯಾರೂ ಹಿಂದೆ ಕರೆಯುವಂತಿಲ್ಲ! ಕೆಲಸವನ್ನು ಅರ್ಧಮರ್ಧಮಾಡಿ ಬಿಟ್ಟುಹೋದ ಅಪವಾದ ಮಾತ್ರ ಗಾಂಧಿಜೀಗೆ ಬಂದೀತು! ಆ ಭಾರತೀಯರ ಭಾವನೆಯಿದಕ್ಕೆ ಮಿಕ್ಕಿದ- ಅವರೆಂದೂ ಗಾಂಧಿಜೀಯನ್ನು ಸಾಯಲು ಬಿಡಲಾರರು' ಆದರೆ ಇಂಗ್ಲೆಂಡು ಅಮೆರಿಕಗಳ ವಿಚಾರವಂತರು ಗಾಂಧಿಜೀಯು ಕ್ಷಿಪ್ರಾರೋಗ್ಯ ಸಂಪಾದನೆಯನ್ನು ಬಯಸುತ್ತಿರುವದು ಭಿನ್ನೋದ್ದೇಶದಿಂದ 'ಜ ಇಂಗೊಂಡ ಯುದ್ಧ ಹರ್ಷದ ದುರ್ಭಿಕ್ಷ ಪಡಲ್ಲಾಗಲಿ' ಎಂಬಂತಹ ಯುದ್ಧಾವಶ್ಯಕ ಬಯಕೆಗೆ ಸಮಾನವಾದ ಆಶಯಿದು. ಭಾರತದ ಬಿಕ್ಕಟ್ಟು ನಿವಾರಣೆಗಾಗುವ ಉಪಕರಣವೆಂದರೆ ಗಾಂಧಿಯೊಬ್ಬನೇ ಎಂಬುವನ್ನರಿತವರು ಆ ಉಪಕರಣದ ಶೀಘ್ರ ದುರಸ್ತಿಯನ್ನು ಬಯಸುತ್ತಿದ್ದಾರ ಇಂಥವರ ಸಾಲಿಗೆ ಸೇರಿದ 11 ಮಂದಿ ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯರು ಮಿ. ಅಮೆರಿಗೊಂದು ವಿಜ್ಞಾಪನಾಪತ್ರ ಬರೆದು "ಇತರ ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಯು ಪ್ರಥಮ ಹೆಜ್ಜೆಯಾಗಿ ಗಾಂಧಿಯವರ ಬಿಡುಗಡೆಯಾಯಿತೆಂದು ನಾವು ನಂಬುತ್ತೇವೆ" ಎಂದು ಆರಿಸಿದ್ದರು. ಮುಂದಿನ ಮಳೆಗಾಲದಲ್ಲಿ ಹಿಂದೂದೇಶದಲ್ಲಿ ಪ್ರಾಂತಿಕ ಹಾಗೂ ಕೇಂದ್ರ ಚುನಾವಣೆಗಳನ್ನು ನಡೆಸಬೇಕೆಂದೂ ಕೇಳಿಕೊಂಡಿದ್ದರು ಅದಕ್ಕೆ ದೊರೆತ ಉತ್ತರ ಪತ್ರದ ಸಹಿ, ಅಕ್ಷರಗಳನ್ನು ನೋಡದೆ ಅದರ ಅರ್ಥವನ್ನಷ್ಟೇ ಕೇಳಿದವರು ಕೂಡಾ 'ಇದು ಅಮೇರಿಯ ಮಾತು' ಎನ್ನಲಾಗುವಂತಹ ಘಂಟಾನಾದವದು! ಈ ವಿಷಜಂತುವೊಂದಲ್ಲದೆ ಲೋಕದ ಇನ್ನಾವ ಮನುಷ್ಯನಾದರೂ ಅದರ ಉಚ್ಚಾರ ಮಾತ್ರದಿಂದ ಮೈ ರೋಮಾಂಚಗೊಳ್ಳುವಷ್ಟು ಕರ್ಕಶತೆ ಅಮೇರಿ ಉತ್ತರದಲ್ಲಿದೆ. "ಗಾಂಧೀ ಬಿಡುಗಡೆಯು ಕೇವಲ ಆರೋಗ್ಯ ಕಾರಣಕ್ಕಾಗಿ. ಇತರ ಕಾಂಗ್ರೆಸ್ ಪ್ರಮುಖರನ್ನು ಬಂಧವಿಮೋಚನೆ

ಗೊಳಿಸುವ ಉದ್ದೇಶ ಸರಕಾರದಲ್ಲಿಲ್ಲ. ಆಲ್ಲ ಅದ್ದರಿಂದ ಸಿರ್ಬಂಧದಲ್ಲಿರುವ ಇತರ ಕಾಂಗ್ರೆಸಿಗರ ಸಂಬಂಧದಲ್ಲೇನೂ ಬದಲಾವಣೆಯಿಲ್ಲ. 'ಬಿಕ್ಕಟ್ಟೆಂ'ಬುದು ಕಾಂಗ್ರೆಸಿಗರ ನಿರ್ಮಾಣ ಅದವರ 1942ನೇ ಆಗೋಸ್ತು ನಿರ್ಧಾರದ ಪರಿಣಾಮ ಇಡೀ ಸರಕಾರೀ ಯಂತ್ರವನ್ನು ಅವಘಡಕ್ಕೀಡು ಮಾಡಿ ತಮ್ಮ ರಾಜಕೀಯ ಬೇಡಿಕೆಗಳನ್ನು ಗಳಿಸಿಕೊಳ್ಳುವುದಕ್ಕೋಸುಗ ಕಂಕಣತೊಟ್ಟು ಒಂದು ಸಂಧಿಗ್ಧಕಾಲ ನೋಡಿ ಅವರದನ್ನಾರಂಭಿಸಿದ್ದರು. ಕಳೆದ ಫೆಬ್ರವರಿಯಲ್ಲಿ ವೈಸರಾಯರು ಸಹಕಾರಕ್ಕಾಗಿ ಮಾಡಿಕೊಂಡ ವಿಜ್ಞಾಪನೆಗಾಗಲೀ ಕಾಂಗ್ರೆಸ್ಸಿನ ಓಗೊಡುವಿಕೆಯಿಲ್ಲ. ಹೀಗೆ ಅವರು ಆಗೋಸ್ತು ನಿರ್ಧಾರಕ್ಕೇನೇ ಕಟ್ಟುಬಿದ್ದಿರುವಾಗ ಭಾರತದ ಭದ್ರತೆ ಮತ್ತು ರಕ್ಷಣೆಯ ಹೊಣೆ ಹೊತ್ತಿರುವ ಗವರ್ನರ್ ಜನರಲ್ ಮತ್ತವರ ಕೌನ್ಸಿಲು ಕಾಂಗ್ರೆಸಿಗರನ್ನು ಬಿಡಲಿಚ್ಛಿಸಬಹುದೆಂದು ಭಾವಿಸುವದು ಅಸಾಧ್ಯವೇ ಸರಿ. ಮಿಕ್ಕ ಪಕ್ಷಗಳ ಅಂತರ್ಯಾವಲೋಕಿಸಿದರೂ, ಇಂತಹ ಬಿಡುಗಡೆಯಿಂದ ಸಾಮಾನ್ಯ ಒಡಂಬಡಿಕೆಗೆ ಅನುಕೂಲವಾಗಬಹುದೆಂದು ನಿರೀಕ್ಷಿಸಲಾಗುವದಿಲ್ಲ ನಿಮ್ಮ ಸೂಚನೆಯಂತೆ ಮಳೆಗಾಲದಲ್ಲಿ ಕೇಂದ್ರ ಮತ್ತು ಪ್ರಾಂತಿಕ ಚುನಾವಣೆಗಳನ್ನು ನಡೆಸುವದು ಅನ್ಯಾಯ ಎಂದೇ ಈ ಮನೋರೋಗಿಯ ನರಳಾಟ!

ಮಹಾತ್ಮರ ಅಚಲ ಅಭಿಪ್ರಾಯ

ಗಾಂಧಿಜೀಯೀಗ ಮಲಗಿದ್ದಾರಾದರೂ ಅವರ ಮನಸ್ಸು ಮಲಗಿಲ್ಲ. ಅಭಿಪ್ರಾಯ ಸಂಗ್ರಹಕ್ಕಾಗಿ ಡಾ' ಜಯಕರ್' ಸರ್. ಸಪ್ರು, ಮಾನ್ಯ ಶಾಸ್ತ್ರಿ. ಪಂಡಿತ ಮಾಲವೀಯ —ಈ ಹಳೆಯ ಸ್ನೇಹಿತರನ್ನವರು ಆಮಂತ್ರಿಸಿದಾಗ, ಈ ಶಾಂತಿ... ಕ್ರಿಗಳು ಕಲ್ಪನಾಕಥೆ ಯಾವುದನ್ನೂ ಕಟ್ಟದಿರಲಿ ಎಂದು ಪ್ಯಾರೇಲಾಲರ ವಿನಂತಿ. "ನಾನು ಅಸಹನೀಯ ವೇದನೆ ಯಾತನೆಯೊಡನೆ ಈ ಪತ್ರ ಬರೆಯುತ್ತಿದ್ದೇನೆ ಸ್ಥಿತಿಗತಿಗಳನ್ನು ಸರಿಯಾಗಿ ತಿಳಿದುಕೊಳ್ಳುವ ದಕ್ಕಾಗಿಯೇ ನಿಮ್ಮ ಭೇಟಿಯ ಬಯಕೆಯು ಕ್ಷದ್ದೇನೆ ಅಗತ್ಯವಿದ್ದರೆ ನಿಮ್ಮೊಡನೆ ವಿಚಾರ ವಿನಿಮಯ ನಡೆಸಲು ನನ್ನ ಖಾಸಗೀ ಕಾರ್ಯದರ್ಶಿ ಪ್ಯಾರೇಲಾಲರನ್ನು ಕಳುಹಿಕೊಡುತ್ತೇನೆ' ಎಂದು ಶಾಂತಿ ಕರ್ತೃಡಿಪ್ಲೋಮಾಧಾರವಾಗಲ್ಲ ಚತುರ್ಗಾಂಭೀರ್ಯವಾದ ಆ ನಾಲ್ವರು ಮುಖಂಡರಿಗೂ ಗಾಂಧಿಜೀಯ ಆಹ್ವಾನ ಪತ್ರ ಹೋಗಿದೆ ಆ ಮರಿಯಂದ ಅವರಿಷ್ಟು ಶಿಕ್ಷಣ ಪಡೆದರೂ ಈಗಲೂ 12ರ ಆಗೋಸ್ತು ಗಾಂಧಿಯಾಗಿ ಯೇ ಉಳಿದಿರೆ 1942ನೇ ಆಗೋಸ್ಟ್ ನಲ್ಲಿ ಆದೊಂದು ನಿರ್ಧಾರವನ್ನು ನಿರ್ಧಾರ ನಾನು ತಪ್ಪು ಮಾಡಿ ಹಿಡಿದಿದ್ದೇನೆಂದು ಅಧಿಕಾರಿಗಳು ನನಗೆ ಮನದಟ್ಟು ಮಾಡಿಕೊಟ್ಟ ಹೊರತು ಅದನ್ನು ಹಿಂದೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ" ಎಂದು ಗಾಂಧಿಜೀಯ ಅಚಲಾಭಿಪ್ರಾಯ. ಈಗ ಕೂಡಾ ತನಗಾವ ಬೇರೆ ಕಾಣಸುತ್ತಿಲ್ಲವೆಂದವರೊಪ್ಪುತ್ತಾರೆ. ಮಾಲವೀಯಾದಿ ಸ್ನೇಹಿತರು ತನಗೆ ಸ್ಥಿತಿಜ್ಞ ಸಮಾನಿಗಳಾಗಿ ಸಹಾಯ ಮಾಡಬಲ್ಲರೆಂದು ಅವರ ಆಸೆ ಮೇಲಿನ ನಾಲ್ವರ ಪೈಕಿ ಮಾಲವೀಯ ಮತ್ತು ಜಯಕರರ ಆರೋಗ್ಯ ಚೆನ್ನಾಗಿಲ್ಲ. ಶ್ರೀ ಭುಲಾಭಾಯಿ ದೇಸಾಯಿ ಮತ್ತು ಶ್ರೀ ಜಿ. ಡಿ ಬಿರ್ಲಾರು ಗಾಂಧೀ ಭೇಟಿ ಪಡೆದಿದ್ದಾರೆ. ದ. ಆಫ್ರಿಕದಿಂದ ಗಾಂಧೀಜಿಯ ಪುತ್ರ ಮಣಿಲಾಲ್ ಗಾಂಧಿ ತಂದೆಯನ್ನು ಕಾಣಲು ಭಾರತಕ್ಕೆ ಹೊರಟಿದ್ದಾರೆ ಮಹಾತ್ಮರು ಗುಣ ಹೊಂದುತ್ತಾ ಬರುತ್ತಿರುವಾಗ ಅವರ ಮಿದುಳು ಮುಖ್ಯ ನಿರ್ಧಾರವೊಂದನ್ನು ಹೆರುವ ಪ್ರಸವ ವೇದನೆಯನುಭವಿಸುತ್ತಿದೆ!

ಪುನಃ ದಸ್ತಗಿರಿಯೇ?

ಮೇಲಿನ ನಾಲ್ಕುಮಂದಿ ಗಾಂಧೀಮಿತ್ರರು ಮಹಾತ್ಮರ ಅಭಿಪ್ರಾಯ ಬದಲಾಯಿಸಲು ಅಶಕ್ತರಾಗದೆ ಹೋದರೆ ಗಾಂಧಿಜೀಯನ್ನು ಪತ್ತೊಂದು 'ಅರಮನೆ' ಕರೆಯುತ್ತಿದೆ ಎಂದೇ ಭಾವಿಸಬೇಕು. ಆಗೋಸ್ತು ನಿರ್ಧಾರಕ್ಕೆ ಕಟ್ಟುಬಿದ್ದವರನ್ನು ಸರಕಾರ ಕ್ಷಮಿಸುವಂತಿಲ್ಲ, ಕಾರಣ ದೊರೆಯದ ಆ ನಿರ್ಧಾರವನ್ನು ಗಾಂಧಿಜೀ ತ್ಯಾಗಮಾಡುವಂತಿಲ್ಲ ಪ್ರಪಂಚದ ವಿಚಾರವಂತರೆಲ್ಲರ ಇಂದಿನ ಬೇಡಿಕೆಯಾಗಿರುವ ನೆಹರು, ಆಜಾದರು ಕರಿಣ ಕಾಹಿಲೆಗೊಳಗಾಗದೆ ಬಿಡುಗಡೆ ಹೊಂದುವಂತಿಲ್ಲ' ಇದನ್ನೂ ಅನುಕೂಲ ಪರಿಸ್ಥಿತಿಯೆನ್ನಬಹುದೆ? ಮಹಾತ್ಮರೊಮ್ಮೆ ಆರೋಗ್ಯ ಲಾಭಹೊಂದಿದೊಡನೆ ಬಿಡುಗಡೆಯ ಕಾರಣವು ಪೂರ್ಣ ಸ್ತಗಿತಗೊಂಡಂತಾಗುವದು, ಆಗ ಸರಕಾರದ ಕಣ್ಣಿಗೆ 1942ನೇ ಆಗೋಸ್ತು ೮ರ ಗಾಂಧಿಯೇ ಕಾಣಿಸಬಹುದು. ಅವರಾಗ ದೇಶರಕ್ಷಣಾ ಶಾಸನದ ಬಂದು ಬೇಟೆಯಾಗುವದೇ ಸರಿ. ಗುಣ ಹೊಂದಿದ ಮರು ಮುಂಜಾನೆಯೇ ಗಾಂಧಿಜೀ ಅದೃಶ್ಯವಾದ ವಾರ್ತೆ ಬರಬೇಕಾದರೆ ಅದ್ಭುತವೇನೊ ನಡೆಯಬೇಕೆಂದಿಲ್ಲ ಆದರೆ ಮಹಾತ್ಮರಿನ್ನೊಮ್ಮೆ ಕಾಯಿದೆ ಭಂಗಿಸುವ ಹುರುಪು ತೋರಿಸುವ ಮೊದಲೇ ಆವರನ್ನು ಬಂಧಿಸುವ ಎದೆಗಾರಿಕೆ ಸರಕಾರಕ್ಕಿರಲಾರದು. ಓರ್ವ ಮಹಾತ್ಮನೊಡನೆ ಬೆಕ್ಕು ಇಲಿಯೊಡನಾಡುವಂತಹ ಆಟವನ್ನು ಸರಕಾರವಾಡಿದರೆ ಲೋಕಸಹಿಸದು ಆಗೋಸ್ತು ನಿರ್ಧಾರವನ್ನು ತ್ಯಜಿಸಲು ಮಹಾತ್ಮರಿಗೆ ಕಾರಣಕೊಡಬೇಕಾದಂತೆ ಮಹಾತ್ಮರನ್ನು ಹಿಡಿಯಲು ಸರಕಾರಕ್ಕೂ ಒಂದು ಕಾರಣಬೇಕೇಬೇಕು. ಸದ್ಯಕ್ಕು ಆ ಕಾರಣ ದೊರಕಿಸುವ ಸ್ಥಿತಿಯಲ್ಲಿ ಮಹಾತ್ಮಾಜೀಯಿಲ್ಲ ವಾದ್ದರಿಂದ ಅಂತಹ ವಿಪತ್ತಿಗೆ ತುಸು ದೂರದಲ್ಲಿದೆ!

ಪ್ರಕಟಣೆ.

ತಾ 21 5 44ರ ಲಾಗಾಯ್ತು ಮಂಗಳೂರು ರೇಶನಿಂಗ್ ಸರಹದ್ದಿನೊಳಗೆ ಜಾರಿಗೆ ಬಂದಿರುವ ರೇಶನಿಂಗ್ ಕಾನೂನು ಪ್ರಕಾರ ಒಂದು ರೇಶನ್ ಯುನಿಟ್ ಅಂದರೆ ಒಂದು ಅಕ್ಕಿ ಪಾವು ಯೆಂತ ಇರುತಿತ್ತು- ಸದ್ರಿ ದರವನ್ನು ಒಂದು ಪಾವುಯೆಂತ ಇದ್ದುದರ ಬದಲಾಗಿ 7/8ನೇ ಪಾವು ಯೆಂತ ಪರಿಗಣಿಸಬೇಕಾಗಿ ಮದ್ರಾಸು ಸರಕಾರದವರ ಹುಕುಂ ಕಲ್ಪಿಸುತ್ತದ ಈ ರೀತಿ ಕಡಿಮೆ ಮಾಡಲ್ಪಟ್ಟ ದರವು ಮಂಗಳೂರ ರೇಶನಿಂಗ್ ಸರಹದ್ದಿನಲ್ಲಿ ತಾ. 25 5-44ರ ಲಾಗಾಯ್ತು ಜಾರಿಗೆ ಬಂದಿರುತ್ತದೆ ಆದುದರಿಂದ ರೇಶನ್ ಕಾರ್ಡು-ಯೂನಿಟುಗಳನ್ನು ಪಡೆದವರೆಲ್ಲರೂ ತಮಗೆ ಸಿಕ್ಕಿರುವ ಯೂನಿಟುಗಳನ್ನು ಉಪಯೋಗಿಸುವ ಬಗ್ಗೆ ಮೇಲೆ ಹೇಳಿದಂತೆ ಕಡಿಮೆ ಮಾಡಲ್ಪಟ್ಟ ದರವನ್ನು (1ಯೂನಿಟ್ =7/8 ಪಾವು) ಜ್ಞಾಪಕದಲ್ಲಿಟ್ಟುಕೊಂಡು ಉಪಯೋಗಿಸಬೇಕಾಗಿ ಸರ್ವ ಜನರಿಗೆ ಈ ಮೂಲಕ ತಿಳಿಸಲಾಗಿರುತ್ತದೆ.

ಯಸ್. ಯು. ಪಿ. ನಾಯ್ಕ
ರೇಶನಿಂಗ್ ಆಫೀಸರ್, ಮಂಗಳೂರು

ಸೆಂಟ್ರಲ್ ರೇಶನಿಂಗ್ ಆಫೀಸು,
ಮಂಗಳೂರು ತಾ. 25-5-44

ಇಟಲಿಯಲ್ಲಿ ನಾಜೀ ದಾಡೆ ಮುರಿಯಿತೆ?

ಹಿಂದಿನ ಹಲವು ತಿಂಗಳಲ್ಲಿ, ಮಿಕ್ಕ ರಣರಂಗಗಳು ರಕ್ತದ ಹನಿಗಳನ್ನು ಮಾತ್ರ ಉದುರಿಸುತಿದ್ದಾಗ ರಶ್ಯವೊಂದರಲ್ಲಿ ರುಧಿರದ ಸೋನೆ ಮಳೆಗರೆಯುತ್ತಿತ್ತು; ಇತ್ತೀಚಿಗಿನ ಕೆಲವು ವಾರಗಳಲ್ಲಿ ಪರಿಸ್ಥಿತಿಯು ತಿರುಗುಮುರುಗಾದಂತಿದೆ. ರಶ್ಯಾ ರಣಕಣ ತಾಟಸ್ಥ್ಯಗೊಂಡು ಇಟಲಿ, ಅಸ್ಸಾಮು ರಂಗಗಳಲ್ಲಿ ಮಾತ್ರ ಜೀವಕಳೆ ಕಾಣಿಸುತ್ತಿದೆ. ಕೆಲ ಕಾಲ ಪ್ರಾಮುಖ್ಯ ದೈನಿಕ ವಾರ್ತೆ ತರುತ್ತಿದ್ದ ಶಾಂತ ಸಮುದ್ರ ವಲಯದ ಹೋರಾಟವೂ ಈಗ ರಶ್ಯಾ ರಂಗದ ಪಂಕ್ತಿ ಹಿಡಿದಿದೆ. ಕಳೆದ ವಾರ ಇಟಲಿ, ಬರ್ಮಾವೆರಡರಲ್ಲಿಯೂ ಮಿತ್ರ ಸೇನೆಗಳ ಶಕ್ತಿ ಪರೀಕ್ಷೆಯೊಮ್ಮೆ ನಡೆದಿದ್ದಿತು; ಎರಡರಲ್ಲೂ ಅವು ಉತ್ತೀರ್ಣಗೊಂಡಿವೆ. ಇಟಲಿಯ ಹಿಟ್ಲರ್ ವ್ಯೂಹದಲ್ಲಿ ಊಹೆಗೂ ನಿಲುಕದಷ್ಟು ಸೇನೋಪಕರಣಗಳನ್ನು ಸರಬರಾಯಿ ಪಡಿಸಿಕೊಂಡು ಜರ್ಮನರು ಧೃತಗತಿಯಿಂದ ಪ್ರತಿಭಟನೆ ಕೊಡುತಿದ್ದಾರೆಂಬ ವಾರ್ತೆ ಬಂದಿತ್ತು; ಒಂದೊಂದು ಬಾರಿಗೆ ಸಾವಿರಕ್ಕೂ ಮಿಕ್ಕ ಜರ್ಮನ್ ಟ್ಯಾಂಕುಗಳನ್ನು ಕಾಣಿಸಿಕೊಳ್ಳುತ್ತಿದ್ದುವಂತೆ. ಆದರದು ನಿಷ್ಫಲಗೊಂಡು ಹಿಟ್ಲರ್ ವ್ಯೂಹ ಛೇದಿಸಲ್ಪಟ್ಟಿದೆ. ಇಟಲಿಯಲ್ಲಿ 'ಯೋಜನೆಗನುಸಾರ ಹಿಮ್ಮೆಟ್ಟುವ' ಘೋಷಣೆ ನಾಜಿಗಳದಲ್ಲ; ಅವರು ಅನನ್ಯೋಪಾಯವಿಲ್ಲದೆ ಹಿಂದ ಬೀಳುತಿದ್ದಾರೆ, ಎಂಬುದು ಇದರಿಂದ ಸ್ಪಷ್ಟ. ಅಸ್ಸಾಮು ರಂಗದಲ್ಲಿಯೂ ಒಮ್ಮೆ ಇದೇ ಕಸರತ್ತು ನಡೆಯಿತು. ಮಳೆಗಾಲ ಸನ್ನಿಹಿತವಾಗುದನ್ನು ಕಂಡ ಜಪಾನರು ಇಂಫಾಲಿನ ಮೇಲೆ ಸಂಚಕಾರ ರೂಪದ ಪ್ರಬಲ ಧಾಳಿ ಹೂಡಿದ್ದಾರೆ, ಎಂಬ ಸುದ್ದಿ ಬಂದ ಮರುದಿನವೇ ಅಸಹನೀಯ ನಷ್ಟಕ್ಕೊಳಗಾಗಿ ತಡೆಗಟ್ಟಲ್ಪಟ್ಟರು ಎಂಬ ವಾರ್ತೆ ಬಂದಿದೆ.

ಇಟಲಿ ಯುದ್ಧದ ಗುಟ್ಟು.

ಹಿಟ್ಲರ್ ಲೈನನ್ನು ಪೂರ್ಣ ನೆಲಸಮ ಮಾಡಿ, ಆ ಭಾಗದ ಹಲವು ಆಯಕಟ್ಟಿನ ಸ್ಥಳಗಳನ್ನು ತಮ್ಮದನ್ನಾಗಿ ಮಾಡಿಕೊಂಡು ಮಿತ್ರರ ೫ನೇ ಮತ್ತು ೮ನೇ ಸೇನೆಗಳು ರೋಮಿನ ಕಟ್ಟಡ ಕಳಸಗಳು ಕಣ್ಣಿಗೆ ಬೀಳುವ ವರೆಗೂ ಮುಂದೊತ್ತಿವೆ. ಆ ಮುಖ್ಯ ಗುರಿಗೆ ಹತ್ತು ಹದಿನೈದೇ ಮೈಲು ದೂರದಲ್ಲಿವೆ. ರೋಮ್ ಮುಂಭಾಗದ ಮುಖ್ಯ ನೆಲೆಗಳಾದ ವೆಲ್ಲೆಟ್ರಿ, ಆಕ್ವಿನೊ, ಪೀಡಿಮೊಂಟೆ, ಮೊಂಟೆಕೊರ್ವೊ, ಕೋರಿ, ಲಿಟ್ಟೋರಿಯಾ ಮೊದಲಾದುವುಗಳ ಮಿತ್ರರ ಹಸ್ತಗತವಾಗಿ ರೋಮಿನ ಸರಿಗೆ ಬರುವದೊಂದೇ ಸದ್ಯಕ್ಕೆ ಬಾಕಿ. ಹಿಟ್ಲರ್ ವ್ಯೂಹ ಛೇದನವೇ ಹಿಟ್ಲರನ ಹೃದಯ ಛೇದನ. ಈ ಲೈನಿನಲ್ಲಿ ನಾಜೀ ಪ್ರತಿಭಟನೆಯೊಮ್ಮೆ ಹದ್ದರಗಿದಂತೆ ಎರಗಿ, ಅದು ನಿಷ್ಫಲವಾದಾಗ ಹದ್ದು ಹಾರಿ ಹೋದಂತೆಯೇ ಮಾಯವಾಗಿದೆ. ಇದಕ್ಕೇನು ಕಾರಣ? ಕಳೆದ ಇಸವಿಯ ಆಚೆಯ ಹಿಟ್ಲರ್ ಈ ವರುಷವೇಕಿಂತಹ ಪಲಾಯನಾವಸರಗೊಂಡಿದ್ದಾನೆ? ಅವನ ಯುದ್ಧ ಹಂಚಿಕೆಯೇನಿರಬಹುದು? ಜರ್ಮನಿಗೀಗ ಇಟಲಿಯ ಅವಶ್ಯಕತೆಯುಳಿದಿಲ್ಲ; ಮುಂಬರುವ ಯುರೋಪು ಆಕ್ರಮಣವನ್ನು ಹಿಟ್ಲರ್ ಜಯಶೀಲವಾಗಿ ಪ್ರತಿಭಟಿಸಬಲ್ಲನಾದರೆ ಹತ್ತು ಇಟಲಿಗಳನ್ನು ಕಳಕೊಂಡರೂ ಅದವನ ಪಾಲಿಗೆ ನಷ್ಟವನ್ನಿಸದು. ಆದ್ದರಿಂದ ಯುರೋಪು ರಕ್ಷಣಾ ಲೈನುಗಳನ್ನು ಬಲಪಡಿಸುವುದಕ್ಕಾಗಿ ಇಟಲಿಯ ಸೇನೆಗಳನ್ನು ಪೋ ಮತ್ತು ಆಲ್ಫ್ಸ್ ಲೈನಿನ ವರೆಗೂ ಹಿಂದೆಗೆದು ನಿಲ್ಲುವ ಹಂಚಿಕೆ ನಾಜಿಗಳದಿರಬಹುದು. ಹಾಗೆ ಮಾಡದರೆ ಸರ್ವವನ್ನಾಹುತಿಕೊಟ್ಟಾದರೂ ಫ್ರಾನ್ಸನ್ನು ಉಳಿಸಿಕೊಳ್ಳಲೇಬೇಕೆಂಬ ಅವರ ಯೋಜನೆಗನುಕೂಲವಾಗುವದು. ಇಟಲಿಯಲ್ಲಿ ಕಳಕೊಂಡ ಮಾನವನ್ನು ಯುರೋಪು ರಂಗವಿಜಯಿಯಾಗಿ ಹಿಟ್ಲರ್ ಮರುಸಂಪಾದಿಸಿಕೊಳ್ಳಬಹುದು. ಅಂತಹ ಒಂದು ಅಡಚಣೆ ಮಿತ್ರ ಸೇನೆಗಳಿಂದಾಗಿ ವ್ಯಂಗೊದಗಿದೆ—ಅವನು ಅದಕ್ಕಾಗಿ ತನ್ನ ಸಮರಶಕ್ತಿ ಸಮೇತ ಹಿಂದೆಗೆಯುತಿದ್ದಾನೆ.

ಅಸ್ಸಾಮು ರಂಗ.

ಇತ್ತಂಡದ ಸೇನೆಗಳನ್ನು ಒಟ್ಟಾಟಕ್ಕೀಡುಮಾಡಿ, ಲೋಕದ ಕಣ್ಣಿಗೊಂದು ಜಿಡುಕಾಗಿ ಕಾಣುತ್ತಿರುವ ಹೋರಾಟ ನೆಲೆಯೆಂದರೆ ಅಸ್ಸಾಮುರಂಗ. ಇಲ್ಲಿ ಯಾವ ಪಕ್ಷದ ಅಭೀಷ್ಟವೂ ಕೈಗೂಡಿಲ್ಲ ವಾರ್ತೆಗಳನ್ನು ನಂಬಬಹುದಾದರೆ, ಕೋಹಿಮಾ ಇಂಫಾಲಗಳೆರಡನ್ನೂ ಮಳೆಗಾಲಕ್ಕೆ ಮೊದಲೇ ಸ್ವಾಹಾಮಾಡಿ ಬಿಡಬೇಕೆಂಬ ಜಪಾನರ ಬಯಕೆ ಹುಸಿಯಾದಂತೆಯೇ. ಟಿಡ್ಡಿಮ್–ಪಾಲೆಲ್, ಟಾಮು–ಪಾಲೆಲ್–ಇಂಫಾಲ್ ಮತ್ತು ಕೋಹಿಮಾ–ದಿಮಾಪುರ್ ರಸ್ತೆಗಳಲ್ಲಿ ಜಪಾನರಿಲ್ಲದಂತೆ ಮಾಡಿಬಿಡಬೇಕೆಂಬ ಮಿತ್ರಸೇನೆಗಳ ಗುರಿಯೂ ಕೈಗೂಡಿಲ್ಲ ಆದರೂ ನಾವೇ ಮೇಲ್ಗೈಯ್ಯಾಗಿದ್ದೇವೆ; ಜಪಾನರ ಮಹೋದ್ದೇಶವಾದ ನಮ್ಮ ದಕ್ಷಿಣೋತ್ತರ ವ್ಯವಹಾರ ಪಥಗಳ ಕಡಿತವು ಅವರಿಂದಾಗಿಲ್ಲ. ಎಂದು ಮಿತ್ರರ ಹೆಗ್ಗಳಿಕೆ. ಉತ್ತರ ಗಡಿಯಲ್ಲಿ ಒಮ್ಮಾ ಚಿಂಡಿಟ್‌ಗಳಿಂದಲೂ, ದಕ್ಷಿಣಗಡಿಯಲ್ಲಿ ಅಸ್ಸಾಮು ಸೇನೆಗಳಿಂದಲೂ ಜಪಾನೀ ಸರಬರಾಯಿ ಪಥಗಳಿಗೆ ಅಪಾಯವೊದಗಿದೆಯಂತೆ. ಉತ್ತರ ಬರ್ಮಾದ ಮಿಯಿಟ್ಕಿನಾವು ಚೀನೀ-ಅಮೇರಿಕಾ ಸೇನೆಗಳಿಂದ ಸುತ್ತುಗಟ್ಟಲ್ಪಟ್ಟು ವಾರ ಕಳೆದರೂ ಕೈ ವಶವಾಗಿಲ್ಲ ಆದರೆ ಅಲ್ಲಿಯ ವಿಮಾನ ನಿಲ್ದಾಣವು ಮಿತ್ರರಿಗೆ ದೊರೆತಿರುವದರಿಂದ ವಿಜಯ ದೂರವಿಲ್ಲವೆನ್ನುತ್ತಾರೆ. ಮಿಯಿಟ್ಕಿಯಾನಾ ಕೈಬಿಟ್ಟರೆ ತಮ್ಮ ಮುಖ್ಯ ಸರಬರಾಯಿ ಲೈನಾದ ಬರ್ಮಾ ರೈಲ್ವೆಗಳನ್ನು ಭದ್ರವಾಗಿ ಹಿಡಿದುಕೊಳ್ಳುವದು ಜಪಾನರಿಗೆ ಪ್ರಯಾಸವಾಗಬಹುದು.

ರಸ್ತೆ ಕಾಣಿಸುತ್ತಿದೆ!

ಮೇಲಿನದ ಅಸ್ಸಾಮು—ಬರ್ಮಾವಲಯದ ಪರಿಸ್ಥಿತಿ; ಇದಕ್ಕೊಂದು ಗೋಣಸಾಗಿ ಬರ್ಮಾ—ಚೀನಾರಂಗವಿದೆ ದೃಷ್ಟಿಯನ್ನೊಮ್ಮೆ ಓಡಿಸಿದರೆ ಹಿಂದುಸ್ಥಾನದೊಂದು ಮೂಲೆಯಲ್ಲಿ ಶಿರಸ್ಸನ್ನು ಚಾಚಿ, ಬರ್ಮಾವನ್ನು ಉದರಪ್ರದೇಶವಾಗಿ ಮಾಡಿ, ಚೀನದ ಒಂದು ಮೂಲೆಯಲ್ಲಿ ಕಾಲು ಚಾಚಿ ರಣಕಾಳಿ ಮಲಗಿಸಿದಂತಿದೆ ಭಾರತ–ಬರ್ಮಾ–ಚೀನಾಗಳ ಈ ಸಂಬಂಧದಿಂದ ಇತ್ತಂಡದರ ಹೋರಾಟೋದ್ದೇಶಗಳನ್ನೂ ಅರಿತುಕೊಳ್ಳಬಹುದು. ಈಗ ಅಂತಿಮಾವಸ್ಥೆಯಲ್ಲಿರುವ ಚೈನಕ್ಕೆ ಸಹಾಯ ಸಾಗಿಸಲು ಒಂದು ರಸ್ತೆ ಸಂಪಾದಿಸಿಕೊಳ್ಳುವುದೇ ಮಿತ್ರರ ಧ್ಯೇಯ; ಚೀನವನ್ನು ಉಸಿರು ಕಟ್ಟಿಸುವವರೊಡನೆ, ಉತ್ತರ ಬರ್ಮಾದ ಮಿತ್ರ ಸೇನೆಗಳನ್ನು ಉಪವಾಸ ಕೆಡಹಲು ಸರಬರಾಯಿ ಪಥಗಳನ್ನೂ ಕೇಂದ್ರಗಳನ್ನೂ ಆಕ್ರಮಿಸಿಕೊಳ್ಳುವದೇ ಜಪಾನರ ಗುರಿ. ಆದರೆ ಇತ್ತಂಡಕ್ಕೂ ತಂತಮ್ಮ ಗುರಿಗಳು ಬಿಸಿಲ್ಗುದುರೆಯಂತೆ ಸಮೀಪ ಸಮೀಪದಲ್ಲೇ ಇರುವಂತೀಗ ತೋರಹತ್ತಿವೆ. ಉತ್ತರ, ಪೂರ್ವ, ಪಶ್ಚಿಮಗಳಿಂದ ಭೂ ಮೂಲಕವೂ ದಕ್ಷಿಣದಿಂದ ಸಮುದ್ರ ಮೂಲಕವೂ ಜಪಾನರನ್ನು ಮುತ್ತಬೇಕೆಂಬ ಆಂಗ್ಲೋ–ಅಮೇರಿಕಾ--ಚೀನೀಯೋಜನೆಯನ್ವಯ ಅತ್ತ ಚೀನಾ ಸರಹದ್ದಿನಲ್ಲೂ ಚೀನೀ ಸೇನೆ ಧಾವಿಸಿಕೊಂಡು ಬರ್ಮಾದತ್ತ ಮುಂದೊತ್ತುತ್ತಿದೆ ಯುನಾನಿನಲ್ಲಿ ಚೀನಾ ಬರ್ಮಾ ರಸ್ತೆಯ ಮುಖದಲ್ಲಿರುವ ಚೆಫಾಂಗ್ ಚೀನೀಯರ ವಶವಾಗಿದೆ ಉತ್ತರ ಬರ್ಮಾದಲ್ಲಿ ಜನರಲ್ ಸ್ಟಿಲ್‌ವೆಲ್ಲರ ನಾಯಕತ್ವದಲ್ಲಿರುವ ಮಿತ್ರ ಸೇನೆಗೂ ಯುನಾನ್ ವಲಯದಲ್ಲಿ ಮುಂದೊತ್ತಿಬರುತ್ತಿರುವ ಈ ಚೀನೀ ಸೇನೆಗೂ ಸಂಬಂಧ ಜೋಡಣೆಯಾದರೆ ಮಧ್ಯ ವಲಯದಲ್ಲಿರುವ ಜಪಾನೀ ಸೇನೆಯಿದ್ದಲ್ಲಿಯೇ ಸುತ್ತುಗಟ್ಟಲ್ಪಡಲಿದೆ ಈ ಅಷ್ಟಪಾದಾಕ್ರಮಣದಿಂದ ಒಂದು ಸ್ಪಷ್ಟ ಸುಖಸ್ವಪ್ನ ಬೀಳಹತ್ತಿದೆ. ಅದೆಂದರೆ ಯುನಾನ್ ವಲಯದ ಚೀನೀ ಸೇನೆ ಮತ್ತು ಉತ್ತರ ಬರ್ಮಾ ವಲಯದ ಸ್ಟಿಲ್‌ವೆಲ್ ದಳಗಳು ಗುರಿಮುಟ್ಟಿದಾಗ ಚೀನಕ್ಕೊಂದು ರಸ್ತೆ ನಿರ್ಮಾಣಗೊಳ್ಳುವದು. ಉತ್ತರ ಬರ್ಮಾ ಬದಿಯಿಂದ ಚೀನಕ್ಕೊಂದು ಸರಬರಾಯಿ ಪಥವಾಗುವದು. ಆದರೆ ಜಪಾನರಿದನ್ನೆಂದೂ ಸಹಿಸಲಾರರು; ಉತ್ತರ ಬರ್ಮಾದಲ್ಲಾಗಲೀ, ಚೀನದ ಯುನಾನ್ ವಲಯದಲ್ಲಾಗಲೀ ಅವರ ಆಟವಡಗಿಲ್ಲವೆಂಬುದನ್ನು ಮರೆಯಬಾರದು. ಮೇಲಾಗಿ, ಈ ನಿಯೋಜಿತ ರಸ್ತೆಯ ಇನ್ನೊಂದು ತುದಿಯಾದ ಅಸ್ಸಾಮು ವಲಯದಲ್ಲಿ ಜಪಾನರ ಪ್ರಭಾವ ವಿನ್ನೂ ಇದೆ ಎಂಬುದೂ ನೆನಪಿರಬೇಕು. ಹೀಗಾಗಿ ಆಶೆ ಅಥವಾ ನಿರಾಶೆಗವಕಾಶವೀಯದೆ, ಬಹುತೇಕವಾಗಿ ಗೊರಿಲ್ಲಾ ರೂಪದಲ್ಲೇ ಅಸ್ಸಾಮು-ಬರ್ಮಾ-ಚೀನಾ ವಲಯಗಳ ಯುದ್ಧ ನಡೆದಿದೆ. ಇಷ್ಟರಲ್ಲೇ ಆರಂಭಿಸಿದಂತಿರುವ ಮಳೆಗಾಲವು ಈ ಸಂಧಿಗ್ಧಾವಸ್ಥೆಗೆ ಇನ್ನೂ ಕೆಲವು ತಿಂಗಳ ಆಯುಷ್ಯದಾನ ಮಾಡುವ ಸಂಭವವೂ ಇದೆ.

It pays always

to Insure with & represent

THE CRESCENT INSURANCE CO. LTD.,

BOMBAY. Estd 1919

Apply to

T A. Vasudevan,

Udipi, S. K

ವಿಮೆಯಿಳಿಸಲು ಮತ್ತು ಪ್ರಾತಿನಿಧ್ಯ ವಹಿಸಲು

ಲಾಭದಾಯೀ ಸಂಸ್ಥೆಯೆಂದರೆ

ದಿ ಕ್ರಸೆಂಟ್ ಇನ್ಶೂರೆನ್ಸ್ ಕೊ.

ಲಿಮಿಟೆಡ್., ಬೊಂಬಾಯಿ

ಸ್ಥಾಪನೆ:— **1919.**

ಬರೆಯಿರಿ:—

ಟಿ. ಎ. ವಾಸುದೇವನ್, ಉಡುಪಿ.

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944 Your patronage is solicited.

Mangalore Jarappa,

Managing Director.

The Canara Banking Corporation Limited.

(Incorporated in British India)

ESTD 1906.

Head Office UDIPI

ANNOUNCEMENT.

A Branch of the bank has been opened at Tobacco Street, CALICUT on 26-5-44.

ನವಯುಗ

ಉಡುಪಿ ಗುರುವಾರ ೧-೬-೧೯೪೪

ಅಪಾಯ ಸೂಚನೆ

ಬಿಡುಗಡೆ ಹೊಂದಿ, ಪರ್ಣಕುಟೀರ ಕಟ್ಟಿನಿಟ್ಟಿನ ನಿರ್ಬಂಧದಲ್ಲಿರುವಾಗ ಕೂಡಾ ತಾನು ಕಳೆದ ವರುಷ ಮಿ. ಜಿನ್ನಾರಿಗೆ ಬರೆದಿದ್ದ ಪತ್ರವನ್ನು ಪ್ರಕಟಿಸುವ ಸಂದರ್ಭದಿಂದ ತಪ್ಪಿಸಿಕೊಳ್ಳಲು ಗಾಂಧೀಜಿಯವರಿಂದಾಗಲಿಲ್ಲ. ಇದಕ್ಕೆ ಕಾಂಗ್ರೆಸ್ ಮುಖಂಡ ಮಿ. ಅಲ್ಲಾಸಾ ಮುಶ್ರುಕಿಯನ್ನು ಹಾಣೆ ಮಾಡುವದಕ್ಕಿಂತ ಗಾಂಧೀ—ಜಿನ್ನಾ ಒಪ್ಪಂದಕ್ಕಾಗಿ ದೇಶವಿದೇಶಗಳಲ್ಲಿದ್ದಿರುವ ಆತುರವೇ ಕಾರಣವೆನ್ನಬಹುದು ತಪ್ಪಲ್ಲ, ಹಿಂದೂ ಮುಸಲ್ಮಾನ್ ಒಪ್ಪಂದವಾಗಲೇಬೇಕು. ಅದಿಲ್ಲದೆ ಕಳೆಯುತ್ತಿರುವ ಪ್ರತಿಯೊಂದು ದಿನವೂ ಭಾರತದ ಪಾಲಿನ 'ಕಪ್ಪುದಿನ'ವಾಗುತ್ತಿದೆ, ಸ್ವಾತಂತ್ರ್ಯ ದಾನ ಮಾಡದಿರಲು ಬ್ರಿಟಿಷ್ ಮುತ್ಸದ್ದಿಗಳೊಂದು ನೆವನವಾಗಿ ತೋರಿಸುತ್ತಿರುವ ಈ ಜಾತಿಗಳ ಪಡಂಬೂತವನ್ನು ಎಷ್ಟು ದೊಡ್ಡ ಬಲಿ ಕೊಟ್ಟಾದರೂ ಓಡಿಸಲೇಬೇಕು ಇಂತಹ ಮಹತ್ಕಾರ್ಯಕ್ಕೆ ಮಿ. ಜಿನ್ನಾರಂಥವರ ಸಹಾಯ ದೊರೆಯುವದಗತ್ಯವಿದೆ. ದೊರೆತರಾಗಬಹುದು ಈ ಪರಿಸ್ಥಿತಿಯನ್ನು ಆಪ್ತಗಳಯ ಬಂದು, ...ತೆಯ ಅತಿರೇಕಗಳಿಸಿಕೊಳ್ಳಲೂ ಕೂಡದು. ಹಿಂದೂ ಮುಸಲ್ಮಾನ್ ಒಪ್ಪಂದವಾಗಬೇಕು', ಸಂಬಂಧಪಟ್ಟವರೆಲ್ಲಾ ಆದರ ಸಾಧನೆಗೆ ಸೇರಲಾಗಬೇಕು'—ಇಷ್ಟಿಲ್ಲದೆ ಇಲ್ಲಿ ಮತ್ತೊಂದು ಪ್ರಶ್ನೆಯಿಲ್ಲ. ಇಷ್ಟಕ್ಕಾಗಿ ಮಿ. ಜಿನ್ನಾರಲ್ಲಿ ಗಾಂಧೀ, ರಾಷ್ಟ್ರೀಯ ಹಕ್ಕಾಗದಾಗಿರುವ ತನ್ನ ಆರೋಗ್ಯವನ್ನು ಗಾಂಧೀಜಿ ಕೆಡಿಸಿಕೊಂಡರೂ ...ಕ್ಷಮೆಯಿಂದ ಈಗ ಪರೀಕ್ಷಿಸಬೇಕು ಡಾ. ಜಿನ್ನಾರನ್ನು ಅವರು ಸಭೆ ? ಸಿದ್ಧರ? ಹಿಂದೂ—ಮುಸ್ಲಿಮ್ ಒಡಂಬಡಿಕೆಯಿಂದುದೊಂದಿದಿಯೇ ...ಮನಸು ಅವರಿಗೀಗ ಉಳಿದಿದೆಯೆ? ಉಗ್ರ ಸ್ವಾತಂತ್ರ್ಯವಾದಿ ಪಂಡಿತ ನೆಹರು ಗಾಂಧಿಯವರ ಬಾಯಿಯಿಂದ ಕೂಡ ಇಂಗ್ಲೆಂಡು ಬೇರೆ ಒಡಂಬಡಿಕೆಯು ಮಾತು ಹೊರಟುದನ್ನು ಕೇಳಿದ್ದಾರೆ, ಆದರ ಇತ್ತೀಚಿಗಿನ ಕೆಲವು ವರುಷಗಳಲ್ಲಿ ಹಿಂದೂ-ಮುಸ್ಲಿಂ ಸಂಧಾನವೆಂಬ ಸೊಲ್ಲನ್ನು ಮಿ. ಜಿನ್ನಾರೆತ್ತಿದುದಿಲ್ಲ, ಅವರೀಗ ಹಿಂದುಸ್ಥಾನ್ ಶಬ್ದವನ್ನೇ ಸಂಧಿ ಪಿಂಗಡಿಸುವ ಪಾಂಡಿತ್ಯ ಪ್ರದರ್ಶನವನ್ನೆದ್ದಾರೆ 'ಪಾಕಿಸ್ತಾನ್ ವಿನಹಾ ಸಂಧಾನವಿಲ್ಲ' ಎಂದು ಸಾವಿರ ಬಾರಿ ಹೇಳಿದ್ದಾರೆ ಅವರನ್ನೆತ್ತಿರುವಂತೆ ಅದು ಅವರ ಪಾಲಿನ ಜೀವನ್ಮರಣ ಪ್ರಶ್ನೆಯಾಗಿರಬಹುದು, ಇಲ್ಲವೇ ರಾಜಕೀಯ ನಾಟಕಗಳಲ್ಲಿ 'ದುಷ್ಮನ್ ಪಾತ್ರ'ಕ್ಕಿರುವ ಮಹತ್ವವನ್ನರಿತು ಸ್ಥಾನ ಸಂಪಾದನೆಗಾಗಿ ಅದನ್ನವರು ಅಂಗೀಕರಿಸಿರಬಹುದು ಕಾರಣವಂತೂ ಇವೆರಡರಲ್ಲೊಂದು, ಯಾವುದೇ ಆಗಿದ್ದರೂ ಕೊನೆ ತನಕ ಬಿಡಲಾಗದಂತಹದಲ್ಲಿ 'ಪಾಕಿಸ್ಥಾನವು ಅವ್ಯವಹಾರ್ಯ ದೇಶಘಾತುಕ ಕಾರ್ಯ' ಎಂಬ ಭಾವನೆಯಿರುವವರು 'ಪಾಕಿಸ್ಥಾನವೇ ಪ್ರಾಣ'ವಾಗಿರುವ ಈ ಅಸಾಧ್ಯ ವ್ಯಕ್ತಿಯನ್ನು ಸಂಧಿಸಿ ಸಾಧಿಸುವದಾದರೂ ಏನನ್ನು? ಸಂಧಿಯಾಚನೆಗೆ ಹೋದವರು ಬರಿಗೈಯಿಂದ ಹಿಂದಿರುಗದಿರಬೇಕಾದರೆ ಜಿನ್ನಾರಿಗೆ ಪಾಕಿಸ್ತಾನ್ ಸಮ್ಮತಿ ಕೊಡಲೇಬೇಕು. ಈ ಕುರಿತು ತೀರ್ಮಾನ ಹೊಂದಿಯೇ ಸಿದ್ಧವೆಂಬ ಹಠ ತೊಡಲು ಮಿ. ಜಿನ್ನಾರನ್ನು ಗಾಂಧೀಜೀ ಪ್ರೇರೇಪಿಸಿರುವದನ್ನು ಕಾಣುವಾಗ ಅವರು ಸ್ವತಃ ಆ ಪ್ರತಿಜ್ಞೆ ತೊಟ್ಟಿದ್ದಾರೆ ಎಂಬ ಊಹೆಗವಕಾಶವಿದೆ ಮೇಲ್ಗಡೆ ನಾವು ನಕಾಶೆ ಬಿಡಿಸಿರುವ ಮಿ. ಜಿನ್ನಾರ ಸ್ವರೂಪದಿಂದಾಗಿ ಈ ಸಂಧಾನ ವ್ಯವಹಾರದಲ್ಲಿ ರಾಷ್ಟ್ರೀಯ ಅಪಾಯದ ಚಿಹ್ನೆ ಕಾಣಿಸುತ್ತಿದೆ

ಮಿ. ಜಿನ್ನಾರಲ್ಲಿ ಅಪಾಯ ಸಂಘಟನೆ ಮಾಡುವ ಶಕ್ತಿಯಿದೆ, ಮತಿಹೀನರನ್ನು ಮಂಕುಗೊಳಿಸುವ ಮಾಯಾ ಜಾಲವಿದೆ, ಆದರೆ ಸಂಧಾನಕ್ಕಾಗುವ ಯೋಗ್ಯತೆ ಮಾತ್ರ ಎಳ್ಳಷ್ಟಿಲ್ಲವೆಂಬುದು ಜಾಹೀರಾಗಿದೆ ಮಹಾತ್ಮಾಜೀಯ ಬಿಡುಗಡೆಗಾಗಿ ಪಕ್ಷಭೇದವಿಲ್ಲದೆ ಎಲ್ಲಾ ಪ್ರಮುಖರೂ ಆನಂದ ಸೂಚಿಸುವಾಗ ತುಟಿ ಬಿಚ್ಚದವರು ಜಿನ್ನಾರೊಬ್ಬರೇ ಈ ಮುಷ್ಕರು ಮಿ. ಜಿನ್ನಾರ ವೈಯಕ್ತಿಕ ದುರಭಿಮಾನದ ದ್ಯೋತಕವಲ್ಲ, ವ್ಯಕ್ತಿಗತ ವ್ಯವಹಾರದಲ್ಲೂ ಬಿಂಕಪ್ರದರ್ಶಿಸುವಷ್ಟು ಅನಾಗರಿಕ ವ್ಯಕ್ತಿ ಮಿ. ಜಿನ್ನಾರಲ್ಲಿ ಜಾತೀಯ ಸಂಧಾನದ ಆವಶ್ಯಕತೆಯಿರುವ ಈ ಕಾಲದಲ್ಲಿ ತಾನಾರಿಗೂ, ಯಾವ ಸಂದರ್ಭದಲ್ಲೂ ಎಟಕುವವನಲ್ಲವೆಂಬುದನ್ನು ಪ್ರದರ್ಶಿಸಿ ಹಿರಿಮೆ ಸಾಧಿಸಿಕೊಳ್ಳುವದೇ ಇಂತಹ ಸಂದರ್ಭಗಳಲ್ಲೂ ಅವರ ಧ್ಯೇಯ. ಗಾಂಧೀಜೀ ಕ್ವಿಯದ್-ಇ-ಆಝಾಮರೊಡನೆ ಅಂಗಲಾಚಿ ಬೇಟಿಗಾಗಿ ಓಡಿ, ರಾಷ್ಟ್ರೀಯ ಮುಸಲ್ಮಾನರನ್ನೆತ್ತಿರುವಂತ ಮಿ. ಜಿನ್ನಾರ ಅಹಂಭಾವದ ಕುಡಿಯನ್ನು ಚಿಗುರಿಸಬಹುದೇ ಹೊರತು ಬೇರೆ ಪ್ರಯೋಜನ ಹೊಂದುವಂತಿಲ್ಲ

ಹಾಗಾದರೆ ಹಿಂದೂ-ಮುಸ್ಲಿಂ ಐಕ್ಯತೆ ಹೇಗೆ? ಜಿನ್ನಾರನ್ನು ಕಡೆಗಣಿಸಿ ಮುಸಲ್ಮಾನ್ ಜನತೆಯನ್ನು ಒಲಿಸಿಕೊಳ್ಳುವ ಮೂಲಕವೇ. ಧಾರ್ಮಿಕ ಭಾವನೆ ಜಾತೀಯ ಭ್ರಮೆಯ ಹೊರತು ಬೇರಾವ ಪ್ರಾಪಂಚಿಕ ಜ್ಞಾನವೂ ಇಲ್ಲದ ಸಾಮಾನ್ಯ ಮುಸಲ್ಮಾನರನ್ನು ಮಿ. ಜಿನ್ನಾರಂತೆ ಮಂಕುಗೊಳಿಸಲು ಮಾತ್ರ ಸಾಧ್ಯ ಹೊರತು ಅಂಥವರಲ್ಲಿ ವಿಚಾರವನ್ನೆಬ್ಬಿಸುವದು ಪ್ರಯಾಸವೆಂಬುದನ್ನೊಪ್ಪುತ್ತೇವೆ. ಆದರೆ ವಿದ್ಯಾವಂತ-ಪುಡಾರಿ ಮಿ. ಜಿನ್ನಾ, ಒಬ್ಬನನ್ನೊಲಿಸುವದರಲ್ಲಿ ಇದಕ್ಕಿಂತ ನೂರ್ಮಡಿಯ ಪ್ರಯಾಸವಿದೆ,ಅಷ್ಟೇ ಏಕೆ? ಮುಸಲ್ಮಾನ್ ಜನತೆಯೇ ಒಂದಲ್ಲದೊಂದು ದಿನವಾದರೂ ಹಾದಿಗೆ ಬರುವ ಆಶಯಿದೆ, ಆದರೆ ಜಿನ್ನಾರು ಈ ಮಟ್ಟಿಗೆ ಆಶಾಜನಕರಲ್ಲವಾದ್ದರಿಂದ ಜಿನ್ನಾರೊಡನೆ ಸಂಧಾನ ಯತ್ನವನ್ನು ವಾಗ ನಿರಾಶೆ, ಜಿಗುಪ್ಸೆಗಳೇಳುತ್ತವೆ.

ದುರ್ಬೀನು

ಅಗರ್ ಬತ್ತಿಯು ಹೊಗೆಯೇಳಲಿ—ಅರಿವೇ ಸುಟ್ಟ ವಾಸನೆ ಬೇಡ, ಉಲ್ಲಾಸ ತೋರಿಸು—ಉಭ್ರಮೆ ಪ್ರದರ್ಶಿಸಬೇಡ.

oo oo oo

ಸತಾಕಿ ಕುಣಿಯಬೇಕು ಹೊರತು ಸರ್ಕಸರಂಗವೇ ಅಲುಗಾಡಬಾರದು, ಹುರುಪು 'ಚಕ್‌ಚಕ್' ಎನ್ನಬೇಕು ಹೊರತು ಹೃದಯವೇ ಚಂಚಲಗೊಳ್ಳಬಾರದು

oo oo oo

ಮುಖ ನೋಡುವವರೇ ಇಲ್ಲವೆಂದ ಮೇಲೆ ಮುಂಡಾಸು ಸುತ್ತಿ ಕುಳಿತುಕೊಳ್ಳುವದೇಕೆ? ಸಹಕಾರಿಗಳೇ ಇಲ್ಲದವನು ಗರ್ವ ಪಟ್ಟೇನು ಫಲ?

oo oo oo

ಮಾನ್ಯರ ಪಾದ ತೊಳೆಯುತ್ತಾರೆ, ಮುದುಳರ ತಲೆಗೆ ನೀರು ಹುಯ್ಯುತ್ತಾರೆ. ಉದಾರಿಯು ಹೆಜ್ಜೆ ತಪ್ಪದಂತೆ ನೋಡಬೇಕು, ಉಭ್ರಮಿಯ ತಲೆ ಹಾಳಾಗದಂತೆ ನೋಡಬೇಕು

oo oo oo

ಉಗುರು ಬೆಳೆದಂತೆ ಬೆರಳು ಬೆಳೆಯುವದಿಲ್ಲ, ಆಸೆ ಹಚ್ಚಿದಂತೆ ಅನುಕೂಲತೆ ಹೆಚ್ಚುವದಿಲ್ಲ

oo oo o

ಗಾದಿಯೇರಿದವನಿಗೆ ಗಾಳಿ ಹಾಕುವವರು ಬೇಕು, ಹಾದಿ ನಡೆವವನಿಗೆ ಬಯಲ ಗಾಳಿಯೇ ದೊರೆಯದೇನು? ಅಧಿಕಾರಾರೂಢನಿಗೆ ಆಲೋಚನೆ ಕೊಡುವವರಿದ್ದು ಕೊಳ್ಳಲಿ, ಅನುದಿನಪೊದ್ದಾಡುವವನಿಗೆ ಸ್ವಾನುಭವವೇ ಸಾಲದೇನು?

oo oo oo

ಹಣ್ಣು ಕಂಪೇರುವದು ಮಾಗಿದಾಗ, ಕಣ್ಣು ಕಂಪೇರುವದು ರೇಗಿದಾಗ ಧನಾಢ್ಯನ ಬಣ್ಣ ಒದಲಾವಣೆ ಭಾಗ್ಯ ಹೆಚ್ಚಿದಾಗ, ಗುಣಾಢ್ಯನ ಬಣ್ಣವೇರುವದು ಪ್ರತಿಕೂಲ ಪರಿಸ್ಥಿತಿಯಲ್ಲೇ

oo oo oo

ಗಾಳಿ ಬೀಸುವ ವರೆಗೂ ಕಾಳು ಮತ್ತು ಹೊಟ್ಟುಗಳಿಗೆ ಒಂದೇ ರಾಶಿ, ಪರೀಕ್ಷೆಯಾಗುವ ವರೆಗೂ ಶಕ್ತ ಮತ್ತು ಹುಂಬನಿಗೆ ಒಂದೇ ಸ್ಥಾನ

oo oo oo

ಭೇರಿ ಬಾರಿಸುವಾಗ ಚೀರಿಕೊಂಡರೆ ಕೇಳಿಸೀತೆ? ಸಂಘ ಪ್ರದರ್ಶಕರ ಮುಂದೆ ಪ್ರಬಲ ಎದುರಿ ನಡೆದೀತೆ?

ಬೊಂಬಾಯಿ ಅಗ್ನಿನಷ್ಟಕ್ಕೆ ಪರಿಹಾರ!

ಬೊಂಬಾಯಿ ಅಗ್ನಿದುರಂತದಿಂದ ಸಾಮಾಗ್ರಿ ನಷ್ಟ ಹೊಂದಿದವರಿಗೆ ಪರಿಹಾರ ದ್ರವ್ಯ ಕೊಡುವ ಕುರಿತು ಸಂಬಂಧಪಟ್ಟ ವಿಮಾ ಸಂಸ್ಥೆಗಳು ಮತ್ತು ಸರಕಾರದೊಳಗೆ ಕೂಲಂಕುಶ ಚರ್ಚೆ ನಡೆದು ಕೊನೆಗೊಂದು ಸಮಾಧಾನಕರ ತೀರ್ಮಾನವಾಗಿದೆ ವಿಮಾ ಶರ್ತಗಳಂತೆ, ಸ್ಫೋಟದಿಂದಾದ ಹಾನಿಯು ಅಗ್ನಿ ಹಾನಿಯ ದರ್ಜೆಗೆ ಸೇರುವದಿಲ್ಲವಾದ್ದರಿಂದ ತಾವು ಬೊಂಬಾಯಿ ನಷ್ಟದಲ್ಲಿ ಯಾವ ಅಂಶವನ್ನು ಕೊಡಲಿಕ್ಕೂ ಬಾಧ್ಯರಲ್ಲವೆಂದು ಇನ್ಶೂರೆನ್ಸ್ ಕಂಪೆನಿಗಳು ಕೊನೆಯ ವರೆಗೂ ವಾದಿಸಿದ್ದವು. ಆದರೆ ಹಿಂದೀ ಸರಕಾರವು ಇಂಡಿಯಾ ಆಫೀಸಿನ ಮೂಲಕ ಲಂಡನಿನ 'ಬೆಂಕಿ ಸಂಸ್ಥೆ'ಯ ಮೇಲೆ ಹಾಕಿದ ಒತ್ತಾಯದ ಪರಿಣಾಮವಾಗಿ ಸಂಬಂಧ ಪಟ್ಟ ವಿಮಾ ಸಂಸ್ಥೆಗಳು ಹಾಗೂ ಸರಕಾರದ ನಡುವೆ ತೀರ್ಮಾನಸಾಧ್ಯವಾಗಿದೆ ಈ ಒಡಂಬಡಿಕೆಯಂತೆ ವಿಮೆ ಮಾಡಲ್ಪಟ್ಟ ಸೊತ್ತುಗಳ ಹಾನಿಯಲ್ಲಿ ಸೇಕಡಾ 72½ಯನ್ನು ಸರಕಾರವೇ ಪಾವತಿ ಮಾಡಬೇಕು, ಉಳಿದ ಅಂಶದಲ್ಲಿ 12½%ಯಷ್ಟನ್ನು ವಿಮೆ ಇಳಿಸಿಕೊಂಡಿದ್ದ ಕಂಪೆನಿಗಳು ತೆರಬೇಕು. ಮತ್ತುಳಿಯುವ ಅಂಶ 15%ರಷ್ಟನ್ನು ನಷ್ಟಹೊಂದಿದವರೇ ಸಹಿಸಿಕೊಳ್ಳಬೇಕು ಪ್ರಕೃತ ತನ್ನ ಮತ್ತು ಇನ್ಶೂರೆನ್ಸ್ ಕಂಪೆನಿಗಳ ಪಾಲಿನ ಜುಮ್ಲಾ ಮೊತ್ತ ಸೇ 85ನ್ನೂ ಸರಕಾರವೇ ಸಂಬಂಧಪಟ್ಟವರಿಗೆ ಪಾವತಿ ಮಾಡಿ, ವಿಮಾ ಕಂಪೆನಿಗಳ ಪಾಲನ್ನು ವಾರ್ಷಿಕ ಕಂತುಗಳ ಮೂಲಕ ಅದೇ ವಸೂಲಿ ಮಾಡಿಕೊಳ್ಳಲಿದೆ

ಸಮುದ್ರ ನಷ್ಟಹೊಂದಿದವರಿಗೆ ಸರಕಾರವೇ ಸೇ 40ರಷ್ಟು ನಷ್ಟವನ್ನು ಭರ್ತಿ ಮಾಡಿ ಕೊಡಲಿದೆ

ಮೇಲಿನ ವ್ಯವಸ್ಥೆಯು ಇನ್ಶೂರ್ ಮಾಡಲ್ಪಟ್ಟ ಸಾಮಾನುಗಳ ಮಟ್ಟಿಗೆ ಮಾತ್ರ ವಿಮೆಯಿಳಿಸಲ್ಪಡದ ಎಷ್ಟೋ ಸಾಮಾನುಗಳೂ ಅಗ್ನಿಪ್ರಳಯಕ್ಕಾಹುತಿಯಾಗಿವೆ, ಅವುಗಳ ಮಾಲಕರಿಗೂ ಸರಕಾರವು ಪರಿಹಾರದ್ರವ್ಯ (ಸೇ. 60ರಷ್ಟು ಅಂದಾಜು) ಕೊಡುವದೆಂದು ಪ್ರಕಟವಾಗಿದೆ ಇನ್ನು ಡಕ್ಕುವಲಯ ಮೊದಲಾದುವುಗಳ ದುರಸ್ತಿ ಇತ್ಯಾದಿ ಬೇರೆಹೊಣೆಗಾರಿಕೆಗಳೂ ಸಹಜವಾಗಿ ಸರಕಾರದ ಮೇಲೆ ಬಿದ್ದಿವೆ ಪರಿಹಾರ ದ್ರವ್ಯವಾಗಿ ಸಂದಾಯವಾಗಬೇಕಾದ ಹಣವೇ ಸುಮಾರು 85 ಕೋಟಿಯಷ್ಟಾಗಬಹುದೆಂದು ತಿಳಿದುಬರುತ್ತದೆ

ಆದರೆ ಕೊನೆಯ ವಾರ್ತೆಯಂತೆ ಬೊಂಬಾಯಿ ವ್ಯಾಪಾರೀ ಸಂಘದ ಬೇಡಿಕೆಯನ್ನು ಮನ್ನಿಸಿ ಸರಕಾರವು ವಿಮೆಮಾಡಲ್ಪಟ್ಟ ಸೊತ್ತುಗಳ ನಷ್ಟಗಳಲ್ಲಿ ಶೇಕಡಾ ನೂರನ್ನೂ ತುಂಬಿಸಿಕೊಡಲು ಒಪ್ಪಿದೆ ಇನ್ಶೂರು ಮಾಡಲ್ಪಡದ ಸಾಮಾನುಗಳ ಹಾನಿಗೇನು ಪರಿಹಾರವೆಂಬುದಿನ್ನೂ ಸ್ಪಷ್ಟವಾಗಿಲ್ಲ ಇಂತಹ ಸೊತ್ತುಗಳಿಗೆ ಶೇಕಡಾ 70ರಿಂದ 75ರ ವರೆಗೆ ಮಾತ್ರ ಪರಿಹಾರ ಸಲ್ಲಿಸುವ ಇಚ್ಛೆಯಲ್ಲಿ ಸರಕಾರವಿರುವಂತಿದೆ ಈ ವ್ಯತ್ಯಾಸವೇಕೋ ತಿಳಿಯದು

ಬೊಂಬಾಯಿ ಕೋರ್ಪರೇಶನಿನ ಅಗ್ನಿಶಾಮಕ ದಳದ ಅಧಿಕಾರಿಗಳು ಹಾಗೂ

ಅಸ್ಸಾಮು ಯುದ್ಧದಲ್ಲಿ ಜಪಾನರಿಗಾದ ಅಸಹನೀಯ ನಷ್ಟ.

ಜಪಾನರ ಸಮಸ್ಯೆ.

ಅಸ್ಸಾಮು--ಬರ್ಮಾ ರಣಕಣಗಳು ಜಪಾನರ ಪಾಲಿಗೆ ಕಾಡ ನೆಲವಾಗಿ ಸುಡುತ್ತಿವೆ ಎಂದು ಮಿತ್ರರ ಅಂಬೋಣ. ಉತ್ತರ ಬರ್ಮದಲ್ಲಿ ಚೀನೀ ಸೇನೆಗಳು ಮತ್ತೊಂದು ನಗರ ವಾರೋಂಗನ್ನು ವಶಪಡಿಸಿಕೊಂಡ ಸುದ್ದಿಯೊಂದಿಗೆ ಅಸ್ಸಾಮಿನಲ್ಲಿ ಇತ್ತೀಚಿಗೆ ಅತಿ ಬಿರುಸಾದ ಕಾಳಗ ನಡೆದ ಬಿಶೆನ್‌ಪುರದ ಬಳಿಯಲ್ಲಿ ಜಪಾನೀ ಸೇನೆಯೊಂದನ್ನು ಹೊಡೆದಟ್ಟಿದ ವಾರ್ತೆ ಬಂದಿದೆ ಮಿತ್ರ ಸೇನೆಗಳಿಗೆ ಈಗೀಗ ಅಧಿಕಾಧಿಕವಾಗಿ ವಿಮಾನಗಳ ಬೆಂಬಲ ದೊರೆಯುತ್ತಿದೆ ಜಪಾನರಿಗೀಗಲೇ ಪ್ರಬಲ ಸಮಸ್ಯೆಯಾಗಿ ಪರಿಣಮಿಸಿ ಮಳೆಗಾಲದಲ್ಲಿ ಇನ್ನಷ್ಟು ದೊಡ್ಡ ಪೇಚಾಟಕ್ಕವರನ್ನು ಈಡು ಮಾಡಲಿರುವ ಒಂದು ಅಭಾವವೆಂದರೆ ವೈದ್ಯಕೀಯ ಉಪಕರಣಗಳದ್ದು. ಅವರಲ್ಲಿ ಮೊದಲಿನಿಂದಲೂ ಇದ್ದ ದೌರ್ಬಲ್ಯವದು. ಅಸ್ಸಾಮಿನ ಗುಡ್ಡಗಾಡುಗಳಲ್ಲಿ ತಮ್ಮ ಗಾಯಗೊಂಡ ಯೋಧರಿಗೆಂದು ಅವಸವಸರದಿಂದ ನಿರ್ಮಿಸಿಕೊಂಡ ಆಸ್ಪತ್ರೆಗಳನ್ನು ಮಿತ್ರರೊತ್ತರದ ವೇಳೆ ಬಿಟ್ಟೋಡಬೇಕಾಗಿ ಒಂದು ಈಗ ಆಸ್ಪತ್ರೆ ಮತ್ತು ಚಿಕಿತ್ಸೋಪಕರಣಗಳ ಅಭಾವವು ಅವರನ್ನು ಕಂಗಡಿಸುತ್ತಿದೆಯಂತೆ

ಅಸಹನೀಯ ನಷ್ಟ

ಮೇಲಾಗಿ ಅಸ್ಸಾಮು ಸಮರವೇ ಅವರ ಪಾಲಿಗೆ ನಷ್ಟದ ವ್ಯಾಪಾರವಾಗಿ ಪರಿಣಮಿಸಿದೆ. ಉತ್ತರ ಬರ್ಮದಲ್ಲಿ ಹೋರಾಟ ಪ್ರಾರಂಭವಾದ 5 ತಿಂಗಳಿನಿಂದ ಮೊನ್ನೆಯ ವರೆಗೆ ಕಡಿಮೆಯೆಂದರೆ ರಣರಂಗಗಳಲ್ಲೇ 9000 ಜಪಾನರು ಶವವಾದರೆಂದೂ ಚಿಂಡಿಟ್ಸ್‌ಗಳ ಗೊರಿಲ್ಲಾ ಯುದ್ಧಕ್ಕೆ ಮತ್ತೊಂದು 3500 ಜಪಾನರು ಬಲಿ ಬಿದ್ದಿರುವರೆಂದೂ ಮಿತ್ರರ ವರದಿ. ಇದಕ್ಕೆ ಪುರವಣಿಯಾಗಿ ವಿಮಾನ ಧಾಳಿಗಳಿಂದವರ ಜನಹಾನಿಗಳನ್ನು ಕೂಡಿಸಲಿದ ಎಷ್ಟವ ... ಮಾಡಿದರೆ ಉತ್ತರ ಬರ್ಮಾ ರಂಗದಲ್ಲೇ 20 ಸಾವಿರ ಜಪಾನರು ಹತರಾದರೆಂದು ಲೆಕ್ಕ ಹಿಡಿಯುವದಕ್ಕೆ ಅಡ್ಡಿಯಿಲ್ಲವಂತೆ. ಇನ್ನು ಇಂಪಾಲಿನ ಎರಡೂವರೆ ತಿಂಗಳ ಹೋರಾಟದಲ್ಲಿ ರಣಕಣದಲ್ಲೇ ಹೆಣವಾದ ಜಪಾನರು 8500, ಈ ಸಂಖ್ಯೆಯಲ್ಲಿ ಆಕಾಶ ಧಾಳಿಯಿಂದಾದ ಮರಣಗಳು ಸೇರಿಲ್ಲ

ಜಪಾನೀ ಪ್ರಮುಖರ ಮುಂಜಾಗ್ರತೆ.

ಜಪಾನೀ ಪ್ರಮುಖರಿಗೆ ಅನ್ಯರಾಷ್ಟ್ರೀಯರಂತೆ ತಮ್ಮ ಜನತೆಗೆ ಹುಸಿಯಾಸೆ ಹುಟ್ಟಿಸುವ ಅಗತ್ಯವಿಲ್ಲ. ಬದಲಿಗೆ ಅವರನ್ನು ಹೆದರಿಸಿ ಮುಂಜಾಗ್ರತೆ ಹುಟ್ಟಿಸುವದೊಂದೇ ಕರ್ತವ್ಯವಾಗಿದೆ ಜಪಾನೀ ಮಿಲಿಟರಿ ವಕ್ತಾರನೊಬ್ಬನು ಶಾಂತ ಸಮುದ್ರದ ಪರಿಸ್ಥಿತಿ ಆತುರದಾಯಿಯಿದೆ ಅಲ್ಲಿ ಮಿತ್ರರು ಅತ್ಯಂತ ಸಂಘಟಿತರಾಗಿದ್ದಾರೆ ಆದ್ದರಿಂದ ಜನರು ಜಪಾನಿನ ಒಂದು ಮೂಲೆಯಲ್ಲಿ ಕಾಣಿಸಿಕೊಂಡ ಬೆಂಕಿಯಂತೆ ಪರಿಗಣಿಸಬೇಕು ಎಂದು ಎಚ್ಚರಿಸಿದ್ದಾನೆ ಬೇಕಿಸೋದಲ್ಲಿ ಅಕ್ಸಿಸ್ ರಾಷ್ಟ್ರ ಪ್ರಮುಖರೂ ಸಮ್ಮೇಳನವೊಂದರಲ್ಲಿ ಆಕ್ಸಿಸ್ ವಿಮಾನ ಬಲವನ್ನು ತುತ್ತ ತುದಿಯವರೆಗೂ ಹೆಚ್ಚಿಸಿಕೊಳ್ಳಬೇಕೆಂಬ ಪ್ರತಿಜ್ಞೆಯ ಸ್ವೀಕಾರವಾಗಿದೆ 'ವಿಜಯ ರೇಖೆಯು ಆಕಾಶ ಯುದ್ಧದಲ್ಲಿದೆ' ಎಂದು ಈ ಕೂಟದ ಘೋಷಣೆ

ಇಟಲಿಯಲ್ಲಿ--

ರೋಮ್ ಮುಂಬಾಗದ ಒಂದೊಂದೇ ಆಯಕಟ್ಟಿನ ಸ್ಥಳಗಳು ಮಿತ್ರ ಸೇನೆಗಳ ವಶವಾಗುತ್ತಿರುವ ವಾರ್ತೆಗಳು ಬರುತ್ತಿವೆ ಮಾರ್ಶಲ್ ಕೆಸರ್‌ಲಿಂಗ್‌ನಿಗೆ, ಉತ್ತರಾಫ್ರಿಕದಲ್ಲಿ ಕೊನೆಕೊನೆಗೆ ರೋಮೆಲನಿಗೊದಗಿದ ಹಿಮ್ಮುಖದೃಷ್ಟವೇ ಒದಗಿದಂತಿದೆ ಇಟಲಿಯ ವಿಜಯೀ ಸೇನೆಗಳನ್ನು ಅಭಿನಂದಿಸಿ ಕೊನೆಯವರೆಗೂ ಇಂತಹ ಲಾಭಗಳೇ ದೊರಕಲಿ ಎಂದು ಹಾರೈಸಿ ಚಕ್ರವರ್ತಿಗಳು ಸಂದೇಶ ಕಳುಹಿದ್ದಾರೆ

ಬಿಯಾಕ್ ಆಕ್ರಮಣ

ಶಾಂತ ಸಮುದ್ರದಲ್ಲಿ ಫಿಲಿಪಾಯನ್ಸ್ ದ್ವೀಪಗಳಿಗೆ 900ಮೈಲಿಗಳಿಂತಲೂ ಸಮೀಪವಲ್ಲಿರುವ ಬಿಯಾಕ್ ದ್ವೀಪವನ್ನು ಅಮೆರಿಕನ ಸೇನೆಗಳು ಆಕ್ರಮಿಸಿಕೊಂಡಿವೆ ಮಾರ್ಶಲ್ಸ್ ದ್ವೀಪ ಗುಂಪುಗಳ ಮೇಲೆ ಗುಂಡಿನ ಮಳೆಗರೆದಿವೆ

ಬಲ್ಗೇರಿಯಾದ ಅಧಿಕಾರಾಪಹಾರ

ಬಲ್ಗೇರಿಯದೊಳಗೆ ನಾಜೀ ಸೇನೆಗಳು ನುಗ್ಗಿ ಅಲ್ಲಿಯ ಆಡಳಿತಾಧಿಕಾರವನ್ನೂ ಸ್ವಾಧೀನಪಡಿಸಿಕೊಂಡಿವೆ ಎಂದು ತಿಳಿದುಬರುತ್ತದೆ

ಚರ್ಚಿಲ್ಲರ ಭಾಷಣ.

ಕಳೆದ ವಾರ ಯುರೋಪು ಪರಿಸ್ಥಿತಿಯ ಕುರಿತು ಪ್ರಧಾನಿ ಚರ್ಚಿಲ್ಲರ ಭಾಷಣವಾಯಿತು. 'ಆತ್ಮವಾರ್ಥ' 'ಮಾರ್ಗದರ್ಶಕ ಕೈಗಂಬ' ಮುಂತಾಗಿ ಹೆಚ್ಚಿನ ಬ್ರಿಟಿಷ್ ಪತ್ರಿಕೆಗಳಿಂದ ಆ ವರ್ಣನೆಯು ಪ್ರಶಂಸಿಸಲ್ಪಟ್ಟಿದೆ. ಟರ್ಕಿಯು ಅನಗತ್ಯವಾಗಿ ಅಧಿಕಾಪಾಯ ನಿರೀಕ್ಷಿಸಿ ಯುದ್ಧ ಮುಗಿಯುವ ವರೆಗೆ ಸಾಗಿಸಿದರೂ ಪೂರ್ಣಗೊಳ್ಳದ ಸಹಾಯವನ್ನು ತಮ್ಮಿಂದ ಯಾಚಿಸಿ, ಯುದ್ಧ ಭಾಗಿಯಾಗಲು ನಿರಾಕರಿಸಿ ನಿರಾಶೆಯನ್ನೊಡ್ಡಿದುದನ್ನು ಪ್ರಸ್ತಾಪಿಸಿದರು. ತನ್ನೊಡನೆ ಒಪ್ಪಂದಕ್ಕೆ ಬಂದ ಸ್ಪೈನಿನ ಸದ್ವರ್ತನೆಯನ್ನು ಹೊಗಳದಿರಲಿಲ್ಲ ಗ್ರೀಸ್, ಯುಗೊಸ್ಲೋವೀಯ ದೇಶಗಳಲ್ಲಿ ತಮ್ಮ ಸಂಬಂಧವು ಸುಗಮಗೊಂಡುದರ ಸಂತುಷ್ಟಿಯನ್ನೆತ್ತಿ, ರಷ್ಯದ ನಾಸ್ತಿಕ ಸಮತಾವಾದಿ ಧೋರಣೆಗಳಲ್ಲಿಯೂ ಕುಲ ತಕ್ಕಂತಹ ಬದಲಾವಣೆಗಳಾಗಿರುವದನ್ನು ಎತ್ತಿ ಹೇಳಿದರು. ಮುಂದಿನ ಲೋಕ ಭದ್ರತೆಯ ರೂಪರೇಷೆಗಳನ್ನು ವಿವರೀಕರಿಸುವದು ಸದ್ಯಕ್ಕೆ ಸಾಧ್ಯವಾದರೂ ರಾಷ್ಟ್ರೀಯ ಸಂಘದಂತಹ ಸಶಕ್ತ ಸಂಸ್ಥೆಯೊಂದರ ಮೂಲಕ ಜಾಗತಿಕ ಶಾಂತಿ ಕಾಪಾಡುವ ಭರವಸೆಯಿತ್ತಿದ್ದಾರೆ

ಚರ್ಚಿಲ್ಲರ ಖಂಡನೆ

ಅಲ್ಪ ರಾಷ್ಟ್ರಗಳ ಅಧಿಕಾರಾಪಹಾರ ಮಾಡಿ ದೊಡ್ಡ ರಾಷ್ಟ್ರಗಳ ಎಂಕೆಯಲ್ಲಿ ತುರುಕಿಸಿಕೊಡಿಸಲು ಮಿ. ಚರ್ಚಿಲ್ಲರು ಕೃತಕ ರಾಷ್ಟ್ರೀಯ ಸಂಘ ನಿರ್ಮಾಣದ ಮನಸ್ಸು ಮಾಡಿರುವದನ್ನು ಅಮೇರಿಕದ 'ನ್ಯೂಯೋರ್ಕ್ ವರ್ಲ್ಡ್ ಟೆಲಿಗ್ರಾಮ್' ಪತ್ರಿಕೆಯು ಕಠಿಣವಾಗಿ ಟೀಕಿಸಿ ಸಂಯುಕ್ತ ಸಂಸ್ಥಾನವೆಂದಿಗೂ ಈ ಒಲೆಯಲ್ಲಿ ಬೀಳಲಾರದೆಂದಿದೆ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಗಾಂಧಿಜೀ, ಜವಾಹರಲಾಲರು ಭಾರತ ಪ್ರತಿನಿಧಿಗಳಾಗಿ ಮುಂಬರುವ ಶಾಂತಿ ಪರಿಷತ್ತಿನಲ್ಲಿ ಭಾಗವಹಿಸುವಂತಾಗಬೇಕೆಂದೂ, ಚರ್ಚಿಲ್ಲರ ಲೋಕ ಶಾಂತಿಯ ವ್ಯವಸ್ಥೆಯು ಸಂಕುಚಿತ ಬುದ್ಧಿಯ ದ್ಯೋತಕವೆಂದೂ ವರ್ಣ ದ್ವೇಷ ತೊಲಗದೆ ಲೋಕ ಶಾಂತಿಯಸಾಧ್ಯವೆಂದೂ ಸ್ಪಷ್ಟಗೊಳಿಸಿದ್ದಾರೆ.

ಕೈದಿಗಳ ಪಲಾಯನ.

ಫ್ರಾನ್ಸಿನ ಮೇಲೆ ಬ್ರಿಟಿಷ್ ವಿಮಾನಗಳು ಸಾವಿರಸಂಖ್ಯೆಯಲ್ಲಿ ನಡಿಸಿದ ಧಾಳಿಗಳು ಅಲ್ಲಿದ್ದ ಮಿತ್ರ ರಾಷ್ಟ್ರೀಯ ಕೈದಿಗಳಿಗೆ ತಪ್ಪಿಸಿಕೊಳ್ಳುವ ಸುಯೋಗವನ್ನು ದೊರಕಿಸಿಕೊಟ್ಟಿವೆ. ಇತರ ದೇಶೀಯರೊಂದಿಗೆ ನೂರಾರು ಮಂದಿ ಭಾರತೀಯ ಕೈದಿಗಳೂ ಬಂಧನ ಶಿಬಿರಗಳಿಂದ ತಪ್ಪಿಸಿಕೊಂಡು ಓಡಿಬಂದಿದ್ದಾರೆ.

ಮಹಾತ್ಮಾ ಗಾಂಧಿ

ವಿಶೇಷ ಬದಲಾವಣೆ ತೋರದೆ ಆರೋಗ್ಯಕರ ಪತ್ರಗಳನ್ನು ಹೊರಡಿಸಬಾರದೆಂಬ ಗಾಂಧೀಜೀಯ ಅಭಿಪ್ರಾಯದಂತೆ ಈಗ ಡಾಕ್ಟರರ ಬುಲೆಟಿನ್‌ಗಳು ಹೊರಡುವದಿಲ್ಲ. ಅವರು ಜುಹುವಾಸವನ್ನಾರಂಭಿಸಿ ಮೂರುವಾರಗಳಾಗುತ್ತಾ ಬಂದಿವೆ. ಒಂದುವಾರಕ್ಕೆ ಮೊದಲೊಮ್ಮೆ ಸೇವಾಗ್ರಾಮಕ್ಕೆ ಹೋಗಬೇಕೆಂದು ಅವರು ಉತ್ಕಟೇಚ್ಛೆ ಪ್ರದರ್ಶಿಸಿದರೂ ಮಧ್ಯಪ್ರಾಂತ್ಯದ ಪ್ರತಿಕೂಲ ಹವಾಮಾನಕ್ಕಂಜಿ ಡಾಕ್ಟರರೊಪ್ಪಲಿಲ್ಲ ಆ ಮೇಲೆ ಪೂನೆಯ ಕಡೆಗೆ ಅವರ ಮನಸ್ಸೋಲಿದಂತೆ ಕಾಣುತ್ತಿದೆ. ಬೆಂಗಳೂರು ಮತ್ತು ಕೊಡಾಯಿಕನಾಲುಗಳ ಹೆಸರೂ ಕೇಳಬರುತ್ತಿದೆ. ಡಾ। ಬಿ. ಸಿ ರೋಯಿಯವರ ವಿನಂತಿಯಂತೆ ಗಾಂಧಿಜೀ ಇನ್ನೂ ಕೆಲವು ದಿನ ಜುಹುವಿನಲ್ಲೇ ನಿಲ್ಲುವ ಸಂಭವವಿದೆ. ತಾ 29ನೇ ಆದಿತ್ಯವಾರ ಗಾಂಧಿಯವರು ತಾನು 15 ದಿನ ಕೈಕೊಂಡ ಮೌನ ವ್ರತವನ್ನು ಕೊನೆಗೊಳಿಸಿದರು. ಈ ವ್ರತದಿಂದ ಮಹಾತ್ಮರಲ್ಲಿ ತುಂಬಾ ಆರೋಗ್ಯಕರ ಬದಲಾವಣೆಯಾಗಿರುವದೆಂದು ಅವರ ಡಾಕ್ಟರರು ಕಂಡರು ಗಾಂಧಿಯವರು ಪುನಃ 10 ದಿನ ಮೌನವ್ರತವನ್ನು ಮುಂದರಿಸಬಹುದು.

ಪಂಜಾಬು ಪ್ರಧಾನಿಗಳ ಮೇಲೆ ಲೀಗ್ ಪ್ರಹಾರ!

ಪಂಜಾಬು ಪ್ರಧಾನಿಗಳ ಮೇಲೆ ಮುಸ್ಲಿಂಲೀಗ್ ಗದೆ!

ಅ. ಬಾ. ಮುಸ್ಲಿಂ ಲೀಗಿನ ಕಾರ್ಯ ಪ್ರವರ್ತಕ ಸಮಿತಿಯು ಲಾಹೋರಿನಲ್ಲಿ ಸೇರಿ ಪಂಜಾಬು ಪ್ರಧಾನಿ ಮಾಲಿಕ್ ಖಿಝರ್ ಹಯಾತ್‌ಖಾನರ ಮೇಲೆ ಶಿಸ್ತು ಜ್ಯಾರಿಮಾಡಿ ಅವರನ್ನು ಲೀಗ್ ಸದಸ್ಯತ್ವದಿಂದ ಹೊರತಳ್ಳಿದೆ. ಈ ಬಹಿಷ್ಕಾರ ಲೀಗುತೆಗೆಯುವ ತನಕವೂ ಅವರು ಹೊರಗಿರತಕ್ಕದ್ದೆಂದೂ ವಿಧಿಸಿದೆ ಜಿನ್ನರ ಪ್ರತಿಷ್ಠೆಯನ್ನು ಕಡೆಗಣಿಸಿ ತನ್ನ ಯೂನಿಯನಿಸ್ಟ್ ಪಕ್ಷವನ್ನೂ ಸಮರ್ಥಿಸಿಕೊಂಡುದೇ ಪಂಜಾಬು ಪ್ರಧಾನಿಗಳು ಮಾಡಿರುವ ಮಹಾಪರಾಧವೆಂಬುದನ್ನು ಮರೆಯಬಾರದು.

ಮದ್ರಾಸಿನಲ್ಲಿ.

ಮೂರು ಭಾಷಾವಾರು ಪ್ರಾಂತ್ಯಗಳ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನ ನೆರೆಯಿಸಲು ಅನುಮತಿ ಕೇಳಿದವರಿಗೆ ಪೋಲೀಸ್ ಕಮಿಶನರರು ನಿರಾಕರಿಸಿದ್ದಾರೆ.

ನೌಕರರು ಆ ಪ್ರಳಯಾಗ್ನಿಯೊಡನೆ ಹೋರಾಡುವದರಲ್ಲಿ ಅಮಾನುಷ ಸಾಹಸ ಪ್ರದರ್ಶಿಸಿದರು, ಕೆಲವರು ಆ ಕಾರ್ಯದಲ್ಲಿ ಪ್ರಾಣವನ್ನು ಕೂಡಾ ಕೊಟ್ಟಿದ್ದರು. ಇಂಥವರ ಸಹಾಯಾರ್ಥವಾಗಿ 'ಬೆಂಕಿದಳಗಳ ಸ್ಮಾರಕ ನಿಧಿ' ಎಂಬ ಒಂದು ಫಂಡು ತೆರೆಯಲ್ಪಟ್ಟಿದೆ. ಬೊಂಬಾಯಿ ಮೇಯರರು ಈ ನಿಧಿಗೆ ಸಹಾಯಯಾಚಿಸಿ ವಿಜ್ಞಾಪನೆಯೊಂದನ್ನು ಹೊರಡಿಸಿದ್ದಾರೆ

ಬೊಂಬಾಯಿ ದುರಂತದ ವಾರ್ತೆ ದೇಶ ವಿದೇಶಗಳಿಗೆ ಸಿಡಿಲಿನಂತೆ ಬಡಿದೊಡನೆ ಹಲವು ಉದಾರಿಗಳು ಕಳುಹಿದ್ದ ಬಿಚ್ಚುಗೈಯ್ಯ ಸಹಾಯಗಳು ಪ್ರತ್ಯೇಕವಿವೆ. ಇವೆಲ್ಲಾ ಶಮನ ಕಾರ್ಯಗಳಿಂದಾಗಿ' ಬೊಂಬಾಯಿಯಲ್ಲಿ ಅತೀವ ನಷ್ಟಕ್ಕೊಳಗಾದ ನಿರಪರಾಧಿಗಳ ಅಗ್ನಿಬೇಗೆ ಸ್ವಲ್ಪ ಮಟ್ಟಿಗಾದರೂ ಶಮನವಾಗಬಹುದು

NOTICE

Free Primary School The Desha Bhakta Karnad Sadashiva Rao Kannada Primary School, situated at Dwarakdas Mansion Benham Hall Lane, Girgaum will re-open on 5th June 1944 For admission form and necessary particulars, please apply to the Hon Secretary, Laxmi Nivas, 314 Vittalbhai Patel Road, BOMBAY.

ತಾರುಣ್ಯ

ಕೆಟ್ಟ ವೀರ್ಯಕ್ಷಯಣೆ ಮಾಡಿ ರಕ್ಷಿಸುವದಲ್ಲಿ ಪರಮಾನಂದವನ್ನುಂಟು ಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧ ಡಬ್ಬಿ 1ಕ್ಕೆ ರೂ. 1 ಮದನಮಂಜರಿ ಫಾರ್ಮಸಿ, 184 ಟ್ರಿನಿ ಬಜಾರ್ ರೋಡ್, ಮದ್ರಾಸ್. ಪುತ್ತೂರು ಏಜಂಟರು. ಪೈ ಫಾರ್ಮಸಿ

CHAMPAE'S
Snow & Castrex
(Sole Distributors for (India)
Sukhananda Stores
Santhekatte, UDIPI, S K.

Degrees Books Medicines
Free H I M S, M. B H M D, etc Free Homeo Ayur UnaniNaturo degree by post also—Practitioner also get soon Homeo Materiamedica, Rs. 5 Homeo Practice book Rs 4 Insanity Cure Pills Rs 10 Enclose 2 annas stamp —
Prof. Dr N H Chhatbar,
Principal Indian Homeopathic Institute & Society (Govt. Regd)
P. O MAHUVA (Kathiawar Dt India.)

Sidha-Kalpa Kavach (Regd.)
No 3 Rs 2 No 2 Rs 5 No 1 Rs. 7 Special Rs. 10 Extra Special Rs 17 for ... marriage health wealth Ask any six questions with M O Re 1/- and get correct answers by return post Life reading Rs 10 No V. P. P Send M.O Free, pa ...
Prof. Dr N H Chhatbar.
P. O MAHUVA (Kathiawar India)

ದಕ್ಷಿಣ ಕನ್ನಡ-

ಮಂಗಳೂರು

ಕಲೆಕ್ಟರರ ಪ್ರಕಟಣೆ.

ದೇಶ ರಕ್ಷಣಾ ಶಾಸನದನ್ವಯ ಜಿಲ್ಲಾ ಕಲೆಕ್ಟರರು ಹೀಗೆ ಪ್ರಕಟಿಸುತ್ತಾರೆ — ಇದೇ ತಾ ೨೧ರ ಅನಂತರ ಹಸುಗೆ ಕ್ಷೇತ್ರದಲ್ಲಿರುವ ರೇಶನಿಂಗ್ ಕ್ರಮಗಳಿಗನುಸಾರವಾಗಿ ಲೈಸನ್ಸ್ ಪಡೆಯದ ಯಾರೊಬ್ಬ ವ್ಯಾಪಾರಿಯು ತನ್ನಲ್ಲಿದ್ದ ಅಕ್ಕಿ ಯಾ ಭತ್ತವನ್ನು ಸ್ಥಳಾಂತರಗೊಳಿಸಬಾರದು ಅಥವಾ ವಿಕ್ರಯಿಸಬಾರದು. (೨) ಪರ್ಮಿಟ್ ಪಡೆಯದೆ ಯಾರೊಬ್ಬನೂ ೧೦ ಮುಡಿಗಿಂತ ಜಾಸ್ತಿ ಅಕ್ಕಿಯಾ ಭತ್ತವನ್ನು ಸ್ಥಳಾಂತರಗೊಳಿಸುವುದು ನಿಷೇಧಿಸಲ್ಪಟ್ಟಿದೆ

ಕಲೆಕ್ಟರರ ಆಹಾರ ಧೋರಣೆಯ ವಿವರಣೆ— ಜಿಲ್ಲಾ ಆಹಾರ ಸಮಿತಿಯು ತಾ. ೨೨ರಂದು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿತು. ಕಲೆಕ್ಟರರು ಮಾತನಾಡುತ್ತಾ 'ನಾಲ್ಕು ವರೆ ಲಕ್ಷ ಮುಡಿ ಅಕ್ಕಿಯನ್ನು ಸರಕಾರಕ್ಕೊಪ್ಪಿಸಲು ರಿಕ್ವಿಸಿಶನ್ ನೋಟೀಸು ಕೊಡಲಾಗಿತ್ತು. ಇದರಲ್ಲಿ ಬಹ್ವಂಶ ಸಫಲವಾಗದುದರಿಂದ ತೀವ್ರ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಯಿತು. ಹೆಚ್ಚಿಗಿದ್ದ ಅಕ್ಕಿಯನ್ನು ಸಂಗ್ರಹಿಸಿಕೊಳ್ಳುವ, ಅಕ್ಕಿಯ ಬಚ್ಚಿಡೋಣವನ್ನು ನಿರ್ಬಂಧಿಸುವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಯಿತು. ಈಗ ೪,೬೨,೦೦೦ ಮುಡಿ ಅಕ್ಕಿಯು ಸಂಗ್ರಹವಾಗಿದೆ. ಈ ಅಕ್ಕಿ ೭ ತಿಂಗಳ ವರೆಗೆ ಸಾಕಾಗಬಹುದು. ಇನ್ನು ಎರಡು ತಿಂಗಳಿಗೆ ಬೇಕಾದುದನ್ನು ಸಂಗ್ರಹಿಸಬೇಕು. ಸಂಗ್ರಹಿಸಲು ಸಾಧ್ಯವಾಗಬಹುದೆಂಬ ಭರವಸೆಯಿದೆ' ಎಂದರು. ಇವರೆನುದಾರರು ಒಮ್ಮೆಗೆ ಎರಡು ಮುಡಿ ಅಕ್ಕಿ ಕೊಟ್ಟು ಬದಲಿಗೆ ಗೋಧಿಯನ್ನು ಪಡೆಯಬಹುದೆಂದಾಯಿತು. ತೆಂಗಿನಕಾಯಿ, ತೆಂಗಿನೆಣ್ಣೆ, ಬೆಲ್ಲ ಇವುಗಳ ನಿಯಂತ್ರಿತ ಮೌಲ್ಯ ನಿರ್ಬಂಧ ಹೊರಿಸಬೇಕೆಂದೂ ಸಮಿತಿಯು ನಿರ್ಧರಿಸಿದೆ.

ಪ್ಲೇಗಿನ ವರದಿ—ತಾ. ೨೦ಕ್ಕೆ ಅಂತ್ಯವಾದ ವಾರದಲ್ಲಿಯೂ ಹೊಸ ಪ್ಲೇಗ್ ತಗಲಿದ ಅಥವಾ ವ್ಯಾಪಿಸಿದವರ ವರದಿಯಿಲ್ಲ. ೫ ಕಡೆಗಳಲ್ಲಿ ಇಲಿಗಳು ಬಿದ್ದು ಪರೀಕ್ಷೆಗಾಗಿ ಕಳುಹಲಾಗಿದೆ. ನಿರೋಧಕ ಕಾರ್ಯಕ್ರಮಗಳು ಸಾಗುತ್ತಲಿವೆ. ೧೫೩೪೮ ಮಂದಿಗೆ ಚುಚ್ಚು ಹಾಕಲಾಗಿದೆ. ಹೊರ ಪ್ರದೇಶದಿಂದ ಬಂದ ಗೋಧಿ ಮೊದಲಾದ ಆಹಾರ ಪದಾರ್ಥಗಳಿಗೆ ಗೇಸ್ ಬಿಟ್ಟು ಶುದ್ಧಿಗೊಳಿಸಲಾಗಿದೆ.

ತಕರಾರಿ ಮದ್ದು—ಪೇಟೆಯಲ್ಲಿ ಸಿಗುವ ಕೆಲವು ರಸಾಯನಿಕ ಔಷಧಗಳು ವಿಲ್ಯಮ್ ಜಾರ್ಜ್ ಮತ್ತು ಕಂಪೆನಿ, ಹಲ್, ಲಂಡನ್; ಮತ್ತು ಟಿ. ಆರ್. ಹಾರ್ನರ್ ಸಹೋದರರು ಎಂಬ ಹೆಸರಿನಿಂದ ಮಾರಲ್ಪಡುತ್ತಿವೆ. ಈ ಮದ್ದುಗಳು ಕೃತಕಗಳು. ಇವುಗಳನ್ನು ಯಾರೂ ವಿಕ್ರಯಿಸಕೂಡದು. ಹಾಗೆ ವಿಕ್ರಯಿಸಿದರೆ, ಡ್ರಗ್ ಕಂಟ್ರೋಲ್ ಆರ್ಡರಿನ ಪ್ರಕಾರ ಅವರ ಮಾರಾಟದ ಲೈಸನ್ಸನ್ನು ರದ್ದುಗೊಳಿಸಲಾಗುವುದು ಎಂದು ಕೆಮಿಕಲ್ ಟೆಸ್ಟ್ ಆಫೀಸರರು ಪ್ರಕಟಿಸುತ್ತಾರೆ

ಬ್ರೆಡ್ ಬಿಸ್ಕೀಟುಗಳಿಲ್ಲ— ಹಲವು ದಿನಗಳಿಂದ ನಗರದಲ್ಲಿ ಬ್ರೆಡ್, ಬಿಸ್ಕೀಟುಗಳಿಲ್ಲ. ಇವುಗಳನ್ನು ತಯಾರಿಸಲು ಆವಶ್ಯವಿರುವ ಬೊಂಬಾಯಿ ಗೋಧಿ ಹಿಟ್ಟು ಪೇಟೆಯಲ್ಲಿ ಸಿಗುತ್ತಿಲ್ಲ. ಕಳ್ಳ ಸಂತೆಯಲ್ಲಿ ಬೊಂಬಾಯಿ ಗೋದಿಹಿಟ್ಟು ಮಣಕ್ಕೆ ರೂ ೨೦ರ ವರೆಗೆ ಧಾರಣೆಯಲ್ಲಿ ಮಾರಾಟವಾಗುತ್ತಿದೆಯಾಗಿ ಸುದ್ದಿ. ನಗರದ ಬೇಕರಿಗಳಿಗೆ, ಕ್ರಮವಾಗಿ ಬೊಂಬಾಯಿ ಗೋದಿ ಹಿಟ್ಟು ನಿಯಂತ್ರಿತ ಧಾರಣೆಯಲ್ಲೇ ದೊರೆವಂತೆ ಏರ್ಪಾಡಾಗುವುದು ಆವಶ್ಯವಿದೆ. ಬೇಕರಿಗಳ ಮಾಲಕರು ಜಿಲ್ಲಾಧಿಪತಿಗಳಲ್ಲಿ ಈ ಬೊಂಬಾಯಿ ಗೋದಿಹಿಟ್ಟಿನ ಅಭಾವದ ಕುರಿತು ನಿವೇದಿಸಿಕೊಂಡಿರುವರೋ ಇಲ್ಲವೋ ತಿಳಿದಿಲ್ಲ. ಚೇಂಬರ್ ಒಫ್ ಕೊಮರ್ಸಿನ ಮೂಲಕವಾದರೂ ನಿವೇದಿಸಿಕೊಳ್ಳಬೇಕು.

ಬಟಾಟೆ—ಇನ್ನೂ ಬಂದಿಲ್ಲ. ಇದೂ ಕಳ್ಳಸಂತೆಯಲ್ಲಿ ಮಣಕ್ಕೆ ರೂ. ೧೦ರ ವರೆಗೆ ಧಾರಣೆಯಿಂದ ವಿಕ್ರಯವಾಗುತ್ತಿದೆಯಾಗಿ ಸುದ್ದಿ.

ಬೈಹುಲ್ಲಿಗೆ ನಿಯಂತ್ರಣ ಬೇಕು- ಅಕ್ಕಿಗೆ ದರ ನಿರ್ಣಯವಾದಂತೆ ಬೈಹುಲ್ಲಿಗೂ ನಿರ್ಣಯವಾಗಬೇಕೆಂದು ಜನರು ಅಪೇಕ್ಷಿಸುತ್ತಾರೆ. ಬೈಹುಲ್ಲಿನ ಧಾರಣೆಯು ಅಸಾಧ್ಯವಾಗಿ ಏರಿದೆ; ಮಳೆಗಾಲದಲ್ಲಿ ಇನ್ನೂ ಹೆಚ್ಚುವಂತಿದೆ. ಅಕ್ಕಿಯು ಈ ಬಾರಿ, ನಿರೀಕ್ಷಿಸಿದಷ್ಟು ಲಾಭವಾಗದಲಾಗದವರಲ್ಲಿ ಬೈಹುಲ್ಲನ್ನು ಸಂಗ್ರಹಿಸಿಟ್ಟು, ಕಾನೂನಿನ ಭಯವಿಲ್ಲದೆ ಅನ್ಯಾಯವಾದ ದರಗಳಿಗೆ ಮಾರಾಟ ಮಾಡುವರು. ಹುಲ್ಲಿಗೆ ಧಾರಣೆ ಏರಲು, ಅನೇಕ ಜನರು ಹಾಲಿನ ವ್ಯಾಪಾರದ ಕಡೆಗೆ ಆಕರ್ಷಿತರಾಗದಿರಲು, ಬೈಹುಲ್ಲಿನ ಧಾರಣೆ ಏರಿದುದೂ ಒಂದು ಕಾರಣ. ಜಿಲ್ಲಾಧಿಪತಿಗಳು ಈ ಕಡೆಗೆ ಗಮನಕೊಡುವರೆ?

ಉಡುಪಿ

ಶ್ರೀ. ಪಿ. ಮಂಜುನಾಥನಾಯ್ಕರ ವಿಚಾರಣೆಯು ತಾ 26ರಲ್ಲು ಉಡುಪಿ ಮೊಕ್ಕಾಮಿನಲ್ಲಿ ಸಬ್ ಕಲೆಕ್ಟರ್ ಶ್ರೀ ಸಾಠೆಯವರಿಂದ ನಡೆಸಲ್ಪಟ್ಟು ತೀರ್ಮಾನದ ಬಗ್ಗೆ ಹೆಚ್ಚು ಮೊಕ್ಕಾಮಿನಲ್ಲಿ ತಾ 31ಕ್ಕೆ ಮುಂದರಿಸಲಾಗಿಯದೆ. ವಕೀಲ್ ಶ್ರೀ ನಂಶಿಂಪ ವಿಠಲ ಕಾಮತರು. ಶ್ರೀ ನಾಯ್ಕರ ಪರವಾಗಿ ವಕಾಲತ್ತು ನಡೆಸುತ್ತಿರುವರು.

ಮುನ್ಸಿಪಲ್ ಕೌನ್ಸಿಲಿನ ಸಭೆಯು ತಾ 28ರಲ್ಲು ಚೆಯರ್ ಮೇನ್ ಶ್ರೀ. ಎ. ಲಕ್ಷ್ಮೀನಾರಾಯಣ ಬಲ್ಲಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಹವಾಮಾನ:—ವಿಪರೀತ ಸೆಕೆಯಿದೆ. ಆಕಾಶವು ಮೋಡಗಳಿಂದ ತುಂಬಿರುವುದು. ಮಳೆಗಾಲ ಆರಂಭದ ಚಿನ್ಹೆಗಳು ತೋರುತ್ತಿವೆ.

ಕಾಶೀ ಮಠಾಧೀಶರ ಶಿಷ್ಯಪರಿಗ್ರಹಣ—ಶ್ರೀ ಕಾಶೀಮಠ ಸಂಸ್ಥಾನಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥ ಸ್ವಾಮಿಗಳವರ ಶಿಷ್ಯ ಪರಿಗ್ರಹಣ ಸಮಾರಂಭವು ವಿಠ್ಠಲೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಊರು ಪರವೂರಿಂದ ಸುಮಾರು ೨೦ ಸಾವಿರ ಮಂದಿ ಗೌಡ ಸಾರಸ್ವತ ಬ್ರಾಹ್ಮಣರು ನೆರೆದಿದ್ದರು. ಅತಿಥಿಗಳೆಲ್ಲರಿಗೂ ಯೋಗ್ಯ ರೀತಿಯ ಆದರಾತಿಥ್ಯಗಳು ನಡೆದವು.

ತಾ ೨೪ರಂದು ಮುಂಚಾನೆ ಶಿಷ್ಯರಾಗಲಿದ್ದ ವಟುವು ಸಂಪ್ರದಾಯದಂತೆ, ಪಾದಚಾರಿಯಾಗಿ ನದೀ ತೀರಕ್ಕೆ ಹೋಗಿ ಚಕ್ರ ವಿಧದ ಸ್ನಾನ ತೀರಿಸಿಕೊಂಡು ಮೆರವಣಿಗೆಯಿಂದ ಮಠಕ್ಕೆ ಬಂದು ಕರ್ಕಾಟಕ ಲಗ್ನದಲ್ಲಿ ಗುರೂಪದೇಶ ಪಡೆದರು. ಬಾಲ ಯತಿಗಳಿಗೆ ಶ್ರೀ ಸುಧೀಂದ್ರತೀರ್ಥರೆಂದು ನಾಮಕರಣ ಮಾಡಲಾಯಿತು. ಊರ ಪರವೂರ ಮಹನೀಯರನೇಕರ ವಿಶೇಷದ ಪಟ್ಟ ಕಾಣಿಕೆಗಳಿದ್ದವು. ಸಂಜೆ ೧೨ ಸಾವಿರ ಮಂದಿಗೆ ಸಂತರ್ಪಣೆಯು ನಡೆಯಿತು. ರಾತ್ರಿ ರಥೋತ್ಸವವೂ ನಡೆಯಿತು.

ಹೆಬ್ರಿ:—ಸ್ಥಳೀಯ ಬೋರ್ಡ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ. 24 4-44ರಲ್ಲು ಶ್ರೀ. ಯು. ಕೃಷ್ಣರಾವ್, ಬಿ. ಎ. ಎಲ್. ಟಿ ಯವರ ಸಭಾಧಿಪತ್ಯದಲ್ಲಿ ವಿಜೃಂಭಣೆಯಿಂದ ಜರಗಿತು.

ಶ್ರೀ. ಎಸ್. ಎಚ್. ರಾಮದಾಸ ಶೆಣೈಯವರ ಬಾಲಾಭ್ಯುದಯ ಭಾಷಣ ಶ್ರೀ. ಎಸ್. ಗಣಪಯ್ಯ ಸೆಟ್ಟಿ ಮತ್ತು ಶ್ರೀ ಶಿಲಕ ಹೆಗ್ಡೆಯವರ ಸಭಿಕರ ಪರವಾದ ಭಾಷಣವಾಗಿ, ಅಧ್ಯಕ್ಷ ಭಾಷಣವಾದ ಮೇಲೆ, ಶಾಲಾ ಬಾಲಕರು ಕೌರವ ಸ್ವಾತಂತ್ರ್ಯ ಮತ್ತು ಜನಮೇಜಯ ಎಂಬ ನಾಟಕಗಳನ್ನೂ ಬಾಲಕಿಯರು ಧರ್ಮಸಂಕಟವೆಂಬ ಸಂಗೀತ ನಾಟಕವನ್ನೂ ಅಭಿನಯಿಸಿದ ಮೇಲೆ ವಿದ್ವಾನ್ ಶ್ರೀ ಪಿ ಕಾಡಪ್ಪನವರ ಧನ್ಯವಾದ ಸಮರ್ಪಣೆಯಾಗಿ, ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿರುವುದು.

ಬಂಟರ ಯಾನೆ ನಾಡವರ ಯೋಳಿಗೆ ನಿಧಿ ಮುಂಬಾಯಿ:— ಈ ನಿಧಿಯ ಕಾರ್ಯಕಾರಿ ಮಂಡಳಿಯ ಸಭೆಯು ಇದೇ ಜೂನ್ ತಾ- 4ಕ್ಕೆ ಆನಂದವಿಹಾರಿನಲ್ಲಿ (ನೇಶನಲ್ ಮೆಡಿಕಲ್ ಕೊಲೇಜಿನ ಬಳಿ) ಸೇರಲಿರುವುದರಿಂದ ಮಂಡಳಿಯ ಸದಸ್ಯರೆಲ್ಲರೂ ಹಾಜರಿರಬೇಕಾಗಿ ವಿನಂತಿ.

ಗೌ। ಕಾರ್ಯದರ್ಶಿಗಳು-

ಬ್ರಹ್ಮಾವರ ನಾರಾಯಣ ಸೆಟ್ಟಿ.

ಮೂಡ ವೀರಪ್ಪ ಸೆಟ್ಟಿ

ಬೆಳ್ಳಿ ಕೇಂದ್ರಕ್ಕೊಂದು ಟಪ್ಪಾಲು ಕಟ್ಟೆಯ ಆವಶ್ಯಕತೆ:-ಶಂಕರನಾರಾಯಣದಿಂದ ಒಂಭತ್ತು ಮೈಲು ದೂರವಿರುವ ಬೆಳ್ವೆ ಗ್ರಾಮದ ಪ್ರಯೋಜನಾರ್ಥವಾಗಿ ಟಪ್ಪಾಲುಕಟ್ಟೆಯೊಂದು ಅತ್ಯಾವಶ್ಯಕವೆಂದೂ ಅದರ ಸ್ಥಾಪನೆ ತ್ವರಿತ ಆಗದೆ ಹೋದರೆ ಗ್ರಾಮವಾಸಿಗಳಿಗೆ ಬರುವ ಕಾಗದ ಪತ್ರ ಇತ್ಯಾದಿಗಳು ಬೇರೆಯಾಗಿ ಕಷ್ಟನಷ್ಟಗಳಾಗುವುವೆಂದೂ ಬಾಧ್ಯಸ್ಥರೊಬ್ಬರು ಬರೆಯುತ್ತಾರೆ.

ಕಾಞಂಗಾಡು ಗ್ರಾಮದಲ್ಲಿ ಸಿಡುಬು:-ಭಯಂಕರವಾಗಿ ಹಬ್ಬುತ್ತಿದೆ. ಈ ತನಕ ಎಂಟು ಜನರು ಮೃತರಾಗಿರುವರಾಗಿಯೂ ೨೫ ಮನೆಗಳಲ್ಲಿ ರೋಗವಿರುವುದಾಗಿಯೂ ತಿಳಿದು ಬರುತ್ತದೆ. ಈ ಕುರಿತು ಆಲೋಚಿಸಲು ಇಲ್ಲಿನ ಪುಂಪ್ರಧಾನಿಗಳ ಒಂದು ಸಭೆಯು ಸ್ಥಳೀಯ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿ ಶ್ರೀ ಎ. ಸಿ. ಕಣ್ಣನ್ ನಾಯರ ಸ್ವಯಂ ಸೇವಕರು ಸಿದ್ಧರಾಗಿ ಮುಂದೆ ಬಂದಿರುತ್ತಾರೆ.

ವಿಮರ್ಶೆ: —ಶ್ರೀ. ಎಸ್. ಎಲ್. ನಾರಾಯಣ ಭಟ್ ಇವರ ಸಂಪಾದಕತ್ವದಲ್ಲಿ ಉಡುಪಿಯಲ್ಲಿ ಪ್ರಕಟವಾಗುವ 'ಬಾಲವೀರ' ಎಂಬ ಹಸ್ತಪತ್ರಿಕೆಯ ವಾರ್ಷಿಕ ವಿಶೇಷ ಸಂಚಿಕೆ, ಶ್ರೀಗಳಾದ ಪಿ. ಶೀನಶೆಟ್ಟಿ, ದೇವಡಿಗರ್, ಮಹಮ್ಮದ್ ಮುಂತಾದ ಕಲಾಪ್ರಿಯ ತರುಣರ ಕೈಚಮತ್ಕಾರದ ಚಿತ್ರಗಳಿಂದ ಕಂಗೊಳಿಸುತ್ತಿದೆ. ಹಿರಿಯರ ಮತ್ತು ಕಿರಿಯರ ಲೇಖನಗಳೂ ಚೆನ್ನಾಗಿವೆ. ಬರೆಹವೂ ಮುದ್ದಾಗಿದೆ. ಹೀಗೆ ಸರ್ವಾಂಗ ಸುಂದರವಾದ ಹಸ್ತಪತ್ರಿಕೆಗಳು ತೀರ ವಿರಳ. ವಿಶೇಷ ಸಂಚಿಕೆಯು ವಿಶೇಷ ಅಭಿನಂದನೀಯವಿದೆ.

ಕೊ. ಶ್ರೀ

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು.

ದ್ವಿತೀಯರಂಗ-ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ-ಜರ್ಮನಿಯಲ್ಲಿ ಜನರ ನೈತಿಕ ಭಂಗ-ಜರ್ಮನರ ಪತನ-ಯುದ್ಧ ಸಮಾಪ್ತಿ-ಯುದ್ಧ ಸಾಮಾಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿರ್ಮೂಲಣದಿಂದ ಆಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿರಾಶಿಯಾಗಿ ಬರೋಣ-ಧಾರಣೆಗಳ ಇಳಿತ-ನಷ್ಟ-ಕೊರತೆ-ಕೇಡುಗಳು-ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ಏರ್ಪಾಡಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.
For Children: 1 to 2 drops with the said decoction

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಿಪಾಡಿ, ದ- ಕನ್ನಡ

ಉಡುಪಿ ಸ್ಟಾಕಿಸ್ಟರು:— **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ** L. I. M.; **ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ**

'ಮೇಡಮ್'ಗಳ ಮೇಲುಪಚಾರಗಳು!

ಪ್ರತಿಷ್ಠಾವಂತರಿಗೆಲ್ಲಾ ಪ್ರಭಾವಶಾಲೀ ಪತ್ನಿಯರೇ ಇರಬೇಕೆಂಬ ನಿಯಮವಿದೆಯೆ? ಸ್ವಾಯರ: ಇಲ್ಲ. ಸಂಸಾರ ರಥವೆಳೆಯುವ ಮಟ್ಟಿಗೆ ಸರಿಯಾಗಬಲ್ಲ ಜತೆಯನ್ನು ನೋಡಿ ವಿವಾಹ ಸಂಬಂಧವುಂಟಾಗುತ್ತದೆ. ಪ್ರತಿಷ್ಠೆಯು ಮನೇಕಾರ್ಯದಿಂದಲ್ಲ-ಸಾರ್ವಜನಿಕ ಕಾರ್ಯಗಳಿಂದ ದೊರೆಯುತ್ತದೆ. ಮಿಲಯಾವಧಿ ಜನರ ಅಂತರಂಗ ಒಲಿಸಿ ಪುರುಷರಿಗೆ ಅಂತಃಪುರವಾಸಿ ಪತ್ನಿ ದೊರೆಯಬಹುದು; ಶ್ರೀಮತಿ ನಾಯುಡುಗಳಂತಹ ಲೋಕಪ್ರಸಿದ್ಧ ಮಹಿಳೆಯರಿಗೆ ಅಜ್ಞಾತವಾಸಿ ಗಂಡನಿರಬಹುದು. ಆದರೊಂದು ಆಶ್ಚರ್ಯ:-ವೀರನ ಪತ್ನಿ ವೀರಮಹಿಳೆಯೆನ್ನಿಸುತ್ತಾಳೆ; ಕವಿಯ ಸತಿ ಕವಯಿತ್ರಿಯಾಗುತ್ತಾಳೆ; ಸ್ಥಾನಾಪನ್ನರ ಅರ್ಧಾಂಗಿನಿಯರೂ ಪದವಿರಾಜಿತರೇ ಆಗಿ ಬಿಡುತ್ತಾರೆ. 'ಅದು ಹೇಗೆ? ಸ್ವಶಕ್ತಿ ಬಲದಿಂದಲ್ಲ; ಸಂಬಂಧ ಬಲದಿಂದ!

ಪ್ರಮುಖರ ಕುಟುಂಬಗಳು

ಧೂರ್ತತನ, ಪರಾಕ್ರಮಣ, ಅತ್ಯಾಚಾರಪ್ರಿಯತೆಗಳ ಮಟ್ಟಿಗೆ, ಇಂದಿನ ಯುದ್ಧಚಾಲಕ ಲೋಕ ಪ್ರಮುಖರಲ್ಲಿ ಮೇಲು-ಕೀಳನ್ನು ಕಾಣುವದು ನಿಷ್ಪಕ್ಷಪಾತಿಗಳಿಗಸಾಧ್ಯ. ಎಲ್ಲರೂ ಸಮತೂಕದವರೇ. ನ್ಯಾಯ, ಶಾಂತಿ, ದಯೆಗಳ ಶಿರಸ್ಸಿಗೇರಿದ ಪಿಂಡತೂಕದ ಕಲ್ಲುಗಳೇ! ಆದರೆ ಒಂದು ವಿಭಾಗದಲ್ಲಿ ಹಿಟ್ಲರ್ ಎಲ್ಲರಿಗಿಂತ ಹಗುರ-ಸಂಸಾರ ಬಾಧೆಯಿಲ್ಲದವ! 'ಲೋಕಕಂಟಕದ ಕೊಡೆಗಾರ' 'ಪಾಶವಿಕ ಶಕ್ತಿಯ ದೈತ್ಯ' 'ಸುಖಶಾಂತಿಗಳ ಮೃತ್ಯು'-ಇತ್ಯಾದಿ ಬಿರುದುಗಳ ಮಾಲೆಯೊಂದನ್ನು ಪೋಣಿಸಿ ಹಿಟ್ಲರನ ಕಂಠಕ್ಕೆ ಹಾಕಿರುವ ಮಿ. ಚರ್ಚಿಲ್ಲರು ಕೂಡಾ 'ಸಂಸಾರರಹಿತ ಕಪಟ ಸನ್ಯಾಸಿ' ಎಂಬ ಪದಕವನ್ನು ಆ ಮೌಕ್ತಿಕ ಹಾರಕ್ಕೆ ಸೇರಿಸಬಹುದೇಕೋ ಮರೆತು ಬಿಟ್ಟಿದ್ದಾರೆ. ಸೇರಿಸಬಹುದಿತ್ತು-ಯಾಕೆಂದರೆ, ಸಂಸಾರಕೊಂಡು ಮಾನ ಹೋಗಬಾರದೆನ್ನುವ ಸ್ಥಿತಿಯಲ್ಲಿ ಚರ್ಚಿಲ್ಲರಾಗಲೀ ರುಸವೆಲ್ಟರಾಗಲೀ ಇಲ್ಲ. ದೊಡ್ಡವರೆಂದೇ ಗೌರವಿಸುವ ಲೋಕಭಾವನೆಯಿರುವವರೆಗೆ, ಅವರು ತಮ್ಮ ಸಂಸಾರಕ್ಕಾಗಿಯೂ ಹಿಗ್ಗಳಿಕ ಪಡಬಹುದು. ಹೃದಯ ಪರೀಕ್ಷಕ ಯಂತ್ರವೊಂದರಿಂದ ಸಾಮಾನ್ಯನೊಬ್ಬನ ಪತ್ನೀಪುತ್ರರನ್ನು ಹಾಗೂ ಲೋಕಪ್ರಮುಖರ ಕುಟುಂಬಗಳನ್ನು ಪರೀಕ್ಷಿಸಿ ನೋಡಿದರೆ ಧೈರ್ಯ ಸಾಹಸಗಳ ಮಟ್ಟಿಗೆ ಲವಲೇಶ ವ್ಯತ್ಯಾಸ ಕಾಣಿಸದು. ರುಸವೆಲ್ಟರ ಪುತ್ರರಿಬ್ಬರು ಸೈನ್ಯಕ್ಕೆ ಸೇರಿ ಹೋರಾಡುತ್ತಿದ್ದಾರೆ. ಚರ್ಚಿಲ್ ಕುವರಿ ಸೇನಾ ವಿಚಕ್ಷಣ ಖಾತೆಯಲ್ಲಿದ್ದಾಳೆ. ಸ್ಟಾಲಿನ್ ಕುವರ ನಾಜಿಗಳಿಗೆ ಸೆರೆ ಸಿಕ್ಕಿದ್ದಾನೆ; ಲೋರ್ಡ್ ಲಿನ್ ಲಿತ್ ಗೋ ಪುತ್ರನಿಗೂ ಅದೇ ಅದೃಷ್ಟವೊದಗಿದೆ. ನಮ್ಮ ನಾದಜೀವಿ ಮಿ. ಅಮೆರಿಯ ಓರ್ವ ಮಗನೂ ರಣರಂಗದಲ್ಲಿದ್ದಾನೆ. ಅವರಿವರೆಂದೇನು, ಪ್ರತಿಯೊಂದು ರಾಷ್ಟ್ರದ ಪ್ರತಿಯೊಬ್ಬ ಪ್ರಮುಖನ ಸಂಬಂಧಿಕರೂ ಯುದ್ಧ ಕಾರ್ಯಗಳಲ್ಲಿ ಜಿಪರು. ರಕ್ತ ಸುರಿಸುತಿದ್ದಾರೆ. ತನ್ನ ರಕ್ತವೇ ಇರುವ ಇನ್ನೊಂದು ಜೀವವನ್ನು ತನ್ನ ಪೀಠಕ್ಕರ್ಪಿಸುವ ಭಾಗ್ಯವಿಲ್ಲದವನು ಆ ಬಹುಮಾತ ಪರೀಕ್ಷಿ ಹಿಟ್ಲರನೊಬ್ಬನೇ.

ಅವರ ಅರ್ಧಾಂಗಿಯರು.

ಯುದ್ಧದಿಂದಾಗಿ ಪುತ್ರವಿಯೋಗ ಹೊಂದಿದ ಪ್ರಮುಖರು ಹಲವರಿರಬಹುದು. ಆದರೆ ಈ ಕಾರಣದಿಂದ ವಿಧುರರಾದ ರಾಷ್ಟ್ರಮುಖಂಡರು ಪ್ರಾಯಶಃ ಯಾರೂ ಇಲ್ಲ. ಯುದ್ಧವೇ ಒಂದು ಅಪ್ರತ್ಯಕ್ಷ ಕಾರಣವಾಗಿ ಪತ್ನಿಯನ್ನು ಕಳಕೊಂಡ ಗಾಂಧೀಜೀ-ಲಕ್ಷ್ಯವನ್ನು ಯುದ್ಧದ ಕಡೆಗೆ ಕೇಂದ್ರೀಕರಿಸಿಕೊಳ್ಳುವದಕ್ಕಾಗಿ ಅವಿವಾಹಿತನಾಗಿ ಉಳಿದಿರುವ ಹಿಟ್ಲರ್, ಇವರಿಬ್ಬರನ್ನು ಬಿಟ್ಟರೆ ಮಿಕ್ಕ ಯಾವ ಪ್ರಮುಖನ ಪತ್ನೀ ಸಂಬಂಧವನ್ನೂ ಈ ಯುದ್ಧ ಕಡಿಸಿಲ್ಲ. ರುಸವೆಲ್ಟ್, ಚರ್ಚಿಲ್, ಚಿಯಾಂಗ್, ಈಡೆನ್, ಕ್ರಿಪ್ಸ್, ಅಮೆರಿ, ಇವರೆಲ್ಲಾ ಯಾವ ಸಮ್ಮೇಲನಕ್ಕಾದರೂ ಸಪತ್ನೀಕರಾಗಿ ಹಾಜರಾಗುತಿದ್ದಾರೆ. ಪಾಶ್ಚಾತ್ಯ ಪ್ರಮುಖರೆಲ್ಲಾ ಬಹುತೇಕವಾಗಿ ಅರ್ಧನಾರೀಶ್ವರರು. ನಮ್ಮಲ್ಲಿಯ ರಾವ್ ಬಹದ್ದೂರನ ಪತ್ನಿ ರಾವ್ ಬಹದ್ದೂರಿಣಿಯಾಗಲಾರಳು. 'ರಾವ್ ಬಹದ್ದೂರು ಮತ್ತು ರಾವ್ ಬಹದ್ದೂರಿಣಿ......ಇವರು ನಿಮ್ಮನ್ನು ಆಮಂತ್ರಿಸುತ್ತಾರೆ' ಎಂಬ ಆಹ್ವಾನ ಪತ್ರ ನಿಮಗೆ ಬರುವಂತಿಲ್ಲ. ಆದರೆ ಇಂಗ್ಲಾಂಡಿನಲ್ಲಿ 'ಡಚೆಸ್' ಹೆಸರು ಕಾಣಿಸದ 'ಡ್ಯೂಕ್' ತನ್ನೊಬ್ಬನ ಹೆಸರಿನಿಂದ ಸೈನ್ಯಕ್ಕೊಂದು ಸಂದೇಶವನ್ನಾದರೂ ಕಳುಹುವಂತಿಲ್ಲ. ಆದ್ದರಿಂದ ಮಿ. ಚರ್ಚಿಲ್ ಎಂದಾಗ ಒಂದೇ ದೇಹವೆಂದು ಭಾವಿಸಬಾರದು; ಹಿಂದುಸ್ಥಾನದ ವೈಸರಾಯ ಪದವಿಯಲ್ಲಿರುವದು ಲೋರ್ಡ್ ಮತ್ತು ಲೇಡಿ ವೇವೆಲ್. ಬ್ರಿಟಿಷ್ ಸಾಮ್ರಾಜ್ಯದ ಮಕುಟ ಧಾರಿಗಳಾಗಿರುವದು ಚಕ್ರವರ್ತಿ ಮತ್ತು ಚಕ್ರವರ್ತಿನಿ. ಇಂದು ಆಗ್ನೇಯ ಏಷ್ಯಾದಲ್ಲಿ ಜಪಾನರ ಮೇಲಿನ ಯುದ್ಧ ಸೂತ್ರವಲಂಗಾವಿಸುತ್ತಿರುವದು ಲೋರ್ಡ್ ಮತ್ತು ಲೇಡಿ ಮೌಂಟ್ ಬೇಟನ್!

ದುರ್ಬಲ ಭಾಗಗಳು.

ಚರ್ಚಿಲ್ ಪ್ರಧಾನಿಯಾದುದು, ರುಸವೆಲ್ಟ್ ಅಧ್ಯಕ್ಷನಾದುದು, ಅಮೆರಿ ಭಾರತ ಕಾರ್ಯದರ್ಶಿಯಾದುದು ಯೋಗ್ಯತಾಪ್ರದರ್ಶನದಿಂದಲೇ. ಆದರೆ ಮಿಸೆಸ್ ರುಸವೆಲ್ಟ, ಮಿಸೆಸ್ ಚರ್ಚಿಲ್, ಮಿಸೆಸ್ ಆಮೆರಿಗಳೂ ಅರ್ಧಾರ್ಧ ಸ್ಥಾನಮಾನ ಹೊಂದಿದುದು ಅಂತಹ ಯೋಗ್ಯತೆಯ ಬಲದಿಂದಲೇನು? ಅಲ್ಲನೇ ಅಲ್ಲ. ಚರ್ಚಿಲ್ಲರ ಫೋಟೋ ತೆಗೆದಾಗ ಅವರ ಸಿಗರ್ ಕೊಳವೆಯ ಚಿತ್ರವೂ ಬರುವಂತೆ, ಪ್ರಮುಖರೊಂದಿಗೆ ಅವರ ಪತ್ನಿಯರೂ ಪ್ರಸಿದ್ಧಿಗೆ ಬಂದಿದ್ದಾರೆ. ಅರ್ಧಾಂಗಿಗಳೇ ಇಂತಹ ಪ್ರಮುಖರ ದುರ್ಬಲ ಭಾಗಗಳು. ಆದರೆ ಪಾಶ್ಚಿಮಾತ್ಯರ ಸಮಾಜಿಕ ಸಂಪ್ರದಾಯಗಳು ರಾಜಕೀಯ, ಯುದ್ಧಕಾರ್ಯಗಳಂತಹ ಕಠಿಣ ಸನ್ನಿವೇಶಗಳಲ್ಲಾದರೂ ಈ ದುರ್ಬಲಾಂಶಗಳನ್ನು ಬಿಟ್ಟು ಬರಲೊಪ್ಪಿಗೆ ಕೊಡುವದಿಲ್ಲ.

ಸರೋಜಿನೀ ದೇವಿ
ಇವರಂತೆ ಸ್ವಶಕ್ತಿಯಿಂದ ರಾಷ್ಟ್ರಮಾನ್ಯತೆ ಪಡೆದ ಮಹಿಳೆ ಇಂಗ್ಲಾಂಡಿನಲ್ಲಿಲ್ಲ.

ನಿಧಿ ಕರ್ತರು

ಮೇಲಾಗಿ ಸ್ಥಾನಬಲದಿಂದ ದೊರೆತ ಕೀರ್ತಿಯು ಪ್ರಮುಖರ ಪತ್ನಿಯರಲ್ಲೂ ಮಹತ್ವಾಕಾಂಕ್ಷೆಯನ್ನು ನಿರ್ಮಿಸಿದೆ. ಶಾಂತಿ ಕಾಲದಂತೆ ನರ್ತನ, ಗಾಯನ, ಗಾಳಿ ವಿಹಾರಗಳಲ್ಲಿ ಕಳೆಯುತ್ತಿದ್ದ ಸಮಯವನ್ನು ಮಂತ್ರಿತ್ವವೋ ರಾಯಭಾರಿತ್ವವೋ ಅಪಹರಿಸಿದೆ, ಪ್ರತಿಯೊಬ್ಬ ಪ್ರಮುಖನೂ ತನ್ನ ಪರಿಶ್ರಮದಲ್ಲೇ ವಿನೋದವನ್ನು ಕಾಣಬೇಕಾಗಿದೆ. ಅವರ 'ಮೇಡಮ್'ಗಳೂ ಅದೇ ಮಾರ್ಗವನ್ನನುಸರಿಸದೆ ನಿರ್ವಾಹವಿದೆಯೆ? ಅದರಂತೆ ಅವರೂ ಈಗ ಒಂದೊಂದು 'ಕಾಲಕ್ಷೇಪವನ್ನಾ'ಗೀಕರಿಸಿಕೊಂಡಿದ್ದಾರೆ. ನಿದರ್ಶನಕ್ಕಾಗಿ ಸತೀ ಚರ್ಚಿಲ್ಲರ 'ರಶ್ಯಾ ನಿಧಿ', ಲೇಡಿ ಕ್ರಿಪ್ಸರ 'ಚೀನಾ ನಿಧಿ'. ರಶ್ಯನರ ಸಹಾಯಾರ್ಥವಾಗಿ ಚರ್ಚಿಲ್ ಪತ್ನಿಯೊಂದು ನಿಧಿಯನ್ನಾರಂಭಿಸಿ ಲೋಕವ್ಯಾಪೀ ಅತಿಪ್ರಸರಣದ ಈ ಯುಗದಲ್ಲಿ ಅತಿ ಹೆಚ್ಚಿನ ಮೊತ್ತವನ್ನು ಸಂಗ್ರಹಿಸಿ ಶ್ಲಾಘನೆ ಪಡೆದಿದ್ದಾರೆ. ಲೇಡಿ ಕ್ರಿಪ್ಸರು ಮತ್ತೊಂದು ದೇಶವಾದ ಚೀನಕ್ಕಾಗಿ ಅಂತಹ ಸಂಗ್ರಹಕ್ಕೆ ತೊಡಗಿದ್ದಾರೆ. ಗುಟ್ಟೆಂದರ ಈ ಮಹಿಳೆಯರು ಆ ಸತ್ಕಾರ್ಯಗಳಿಗಾಗಿ ಮಾಡಿರುವ ದೊಡ್ಡ ತ್ಯಾಗವೆಂದರೆ ತಮ್ಮ ಹೆಸರು ದಾನ ಕೊಂಡೆ. 'ಜೆಯರ್ ಮೆನ್' ಆದವನೊಬ್ಬನ ಬರಿದೇ ಹತ್ತು ಹಲವು ಸಂಸ್ಥೆಗಳ ಅಧ್ಯಕ್ಷಸ್ಥಾನದಲ್ಲಿ ರಾಜಿಸುವ ನಿದರ್ಶನಗಳಿಗೆ ನಮ್ಮಲ್ಲಿಯೂ ಬರಗಾಲವಿಲ್ಲ. ಇದು ಇಂಗ್ಲಾಂಡಿನವರ ಅಂತಹುದೊಂದು ಸ್ಥಾನಭ್ರಮೆ ಹೊರತು ಬೇರೇನೂ ಅಲ್ಲ. ಆದರೆ ಆ ನಿಧಿಗಳಿಂದ ಚೀನಾ, ರಶ್ಯಾಗಳಿಗೆ ಅಳಿಲ ಸೇವೆಯಾದರೂ ದೊರೆಯುತ್ತಿರುವದು ನಿಜ.

ಲೇಡಿ ಅಮೆರಿ

ಹಿಂದುಸ್ಥಾನದ ಪಾಲಿಗೆ ಮೀಸಲಿರುವ ಇಂತಹ ಒಂದು ಭೂಷಣವೆಂದರೆ ಸತಿ ಅಮೆರಿ ತಾನೆ? ಅವರೂ 'ಭಾರತೀಯ ಸೇನಾಧಾರ ನಿಧಿ' ಎಂಬ ನಿಧಿಯೊಂದನ್ನಾರಂಭಿಸಿದ್ದಾರೆ. ತಮಗೆ ಸಂಬಂಧಿಸಿದವರ ಮೇಲೆ ತಮ್ಮ ಲಕ್ಷ್ಯವಿದ್ದೇ ಇದೆ ಎಂಬುದನ್ನು ತೋರಿಸುವದಕ್ಕಾಗಿ ಇಂತಹ ಪ್ರದರ್ಶನಗಳು ಅತ್ಯಗತ್ಯ. ಇತ್ತೀಚೆಗೊಮ್ಮೆ ಪತ್ರಿಕಾ ಪ್ರತಿನಿಧಿಯೊಬ್ಬರು ಸತಿ ಅಮೆರಿಯನ್ನು ಪ್ರಶ್ನಿಸಿದರು. "ಚರ್ಚಿಲ್ ಪತ್ನಿಯ ರಶ್ಯಾ ನಿಧಿ, ಕ್ರಿಪ್ಸ್ ಸತಿಯ ಚೀನಾ ನಿಧಿಯಂತಹ 'ಭಾರತೀಯ ಬರಗಾಲ ನಿವಾರಣಾ ನಿಧಿ, ಕ್ರಿಪ್ಸ್ ಸತಿಯ ಚೀನಾ ನಿಧಿಯಂತಹ 'ಭಾರತೀಯ ಬಂಗಾಲ ನಿವಾರಣಾ ನಿಧಿ'ಯೊಂದನ್ನು ನೀವೇಕೆ ತೆರೆಯಬಾರದು?"-ಇದಕ್ಕೆ ಕೊಟ್ಟ ಉತ್ತರವು 'ಗಂಡನಿಗೆ ತಕ್ಕ ಹೆಂಡತಿ!' ಅನ್ನಿಸಿಬಿಟ್ಟಿದೆ- "ನಮ್ಮ ಸಣ್ಣ ರಾಷ್ಟ್ರವಾದ ಇಂಗ್ಲಾಂಡು ಚೀನಾ ರಶ್ಯಗಳಂತಹ ಅತಿ ವಿಶಾಲ ರಾಷ್ಟ್ರಗಳಿಗೆ ಆಸ್ಪತ್ರೆ ಉಪಕರಣಗಳು, ಸಾಮಾಗ್ರಿ ಮತ್ತು ನಿಧಿಯನ್ನು ಕಳುಹಿಸಿ ಸಹಾಯ ಮಾಡುತ್ತಿದೆ. ಭಾರತಕ್ಕೂ ಅಂತಹ ಸಹಾಯ ಸಲ್ಲಬೇಕೆಂಬುದು ನ್ಯಾಯವೇ ಇದ್ದರೂ ದಾನ ಪಡೆದು ಬದುಕುವ ದೇಶ ಹಿಂದುಸ್ಥಾನವಲ್ಲ" ಹಿಂದುಸ್ಥಾನವು ಅನ್ಯ ದೇಶೀಯರಿಗೆ ಸಹಾಯ ಸಲ್ಲಿಸಿದ ನಿದರ್ಶನಗಳನ್ನಿತ್ತು ತೋರಿಸುತ್ತಾ, "ಸ್ವರಕ್ಷಣೆಯ ಕುರಿತು ಹಿಂದುಸ್ಥಾನಕ್ಕಿರುವ ಅತಿ ಹೆಚ್ಚಿನ ಸ್ವಾಭಿಮಾನವು ಇಂಗ್ಲಾಂಡಿನಲ್ಲೊಂದು ಶಾಶ್ವತ ಭಾರತ ಸಹಾಯ ನಿಧಿ ನಿರ್ಮಾಣ ಮಾಡಬೇಕೆಂಬ ಅಭಿಪ್ರಾಯವನ್ನೇ ರದ್ದುಗೊಳಿದೆ" ಎಂದು ಶ್ರೀಮತಿ ಅಮೆರಿಯ ಅಂಬೋಣ. ಅಮೆರಿ ಅಷಡ್ಡೆ, ವೇವೆಲ್ ಮೇಲುಪಚಾರಗಳ ಒಂದು ಮಿಶ್ರಣದಂತಿದೆ ಈ ಅಭಿಪ್ರಾಯ! ಅನ್ಯ ರಾಷ್ಟ್ರಗಳಿಗೆ ಸಹಾಯ ಸಲ್ಲಿಸಿದ ಅಪರಾಧಕ್ಕಾಗಿ, ಬರಗಾಲಕ್ಕೊಳಗಾದಾಗಲೂ ಹಿಂದುಸ್ಥಾನಕ್ಕೆ ಸಹಾಯವಿಲ್ಲದ ಶಿಕ್ಷೆಯೆ? ಇದೇನೋ ಸ್ಥಾನಬಲವೊಂದಲ್ಲದೆ ಬೇರಾವ ಜ್ಞಾನಬಲವೂ ಇಲ್ಲದ ಮಹಿಳೆಯೊಬ್ಬಳ ಮಾತು. ಆದರೆ ಅಮೆರಿಯ ಮೆದುಳು ಹೇಗೆ ಕೆಲಸ ಮಾಡುತ್ತಿದೆ ಎಂಬುದು ಅವರ ಈ ನೆರಳು ಕೂಡಾ ವಿರುದ್ಧ ದಿಕ್ಕಿಗೆ ಬಿದ್ದ ಈ ನಿದರ್ಶನದಿಂದರಿಯಬಹುದು!

ತಾ. 2—6—44ರಿಂದ
ಶೋಭನಾ ಸಮರ್ಥ ಮತ್ತು ಯಾಕೂಬ್
ನಟಿಸಿರುವ
ದರ್ಪನ್
ತಾರೀಕು 2—6—44ರಿಂದ:-ಪ್ರಥಮ ದೇಖಾವೆ. ಘ. 6ಕ್ಕೆ.
ದ್ವಿತೀಯ ದೇಖಾವೆ ಘ. 9—30ಕ್ಕೆ
ಶ್ರೀ. ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡ್ಪಿ.

The Pangal Nayak Bank Limited.

(Incorporated in 1920)

Registered Office Court Road, UDIPI

Branches at Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public.

For business proper please enquire at any one of our Offices.

15th April 1944.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

FOR SAFETY & SERVICE

THE VIJAYA BANK, LTD.,

Head office: MANGALORE.

Branches at:—Coondapur, Brahmavar, Udipi, Kaup, Karkal, Kadri-Mangalore, City-Mangalore, Kasaragod, Puttur.

All kinds of Banking business transacted.

ಭದ್ರತೆ ಮತ್ತು ಅನುಕೂಲತೆಗಳಿಗೆ
ವಿಜಯಾ ಬೇಂಕ್ ಲಿಮಿಟೆಡ್
ಹೆಡ್ ಆಫೀಸು:—ಮಂಗಳೂರು.
ಜಿಲ್ಲೆಯ ಎಲ್ಲಾ ಕೇಂದ್ರ ಸ್ಥಳಗಳಲ್ಲಿ ಶಾಖೆಗಳು.

REGD

ಅಮೃತಾಂಜನ
ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ಕಡಿದು ಉಂಟಾದ ಬೇನೆ ಪಕ್ಷವಾತ, ಮೊದಲಾದ ಎಲ್ಲ ರೋಗಗಳಿಗೂ ಸಿದ್ಧೌಷಧ.
ಪಲ್ಯಾಟುಗಳಲ್ಲಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತವೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲಾರುಗಳೂ ಪ್ರಕಟ
ವಾಗುತ್ತವೆ.
ವಾರ್ಷಿಕ ಚಂದಾ
ರೂ **1—8—0** ಮಾತ್ರ
ಬೈಂಡು ಮಾಡಿದ ಪ್ರಥಮ
ಸಂಪುಟಕ್ಕೆ ರೂ. **2—8—0**
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಬೊಂಬಾಯಿ.
ಚೀಫ್ ಏಜನ್ಸಿ ಆಫೀಸು:—ಉಡುಪಿ.
ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವ್ಯಾಪಕ ವಿಮಾಸಂಸ್ಥೆ.
ನಿಮ್ಮ ಮತ್ತು ನಿಮ್ಮ ಕುಟುಂಬದ ಬಾವೀ ಕಲ್ಯಾಣಕ್ಕಾಗಿ.
ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.
ಉತ್ಸಾಹೀ ಏಜಂಟರ ಬೇಕಾಗಿದ್ದಾರೆ.

ಪಿ. ಡಿ. ನಾಯಕ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Co. Ltd., Bombay.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರನೀವಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ೧ಆಣೆ.

ಮಾಲಕರು.—ಬಾಲಪ್ಪಾ ಫಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ,—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸ, ಕಮಿಸ್ಸ, ಹಾವೇರಿ, ಬ್ಯಾಡಿಗಿ.

ನವಜೀವಾತು ಎಂಬ ಸೂತಿಕಾರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ಪಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ **ಕೊಡಿಯಾಲಬೈಲು, ದ. ಕ**

ಸ್ಥಾಪನೆ **ಕ್ರೌನ್ ರಬ್ಬರ ಸ್ಟಾಂಪ್ ಕಂಪೆನಿ** 192(

18 ಬಲ್ಮಠ ರಸ್ತೆ, ಮಂಗಳೂರು.
ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.
Approved firm by the Govt. of Mysore.
Certified by the Agent of the Govt of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೪೦	FOUNDER Sri. A. B. Shetty.	Vol. 24 No. 40

NAVAYUGA— Kannada Weekly —UDIPI, S. I.

ಉಡುಪಿ • 8—6—1944 • ಮಂಗಳೂರು.

1944ನೇ ಜನವರಿಯಿಂದ ಮೂರನೆ ಸಂಪುಟಾರಂಭವಾಗಿದೆ.

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿಗೆ ರೂ. 0-4-0

ಮಾದರಿ ಪ್ರತಿಗೆ ಏಎಾಣೆ ಸ್ಟಾಂಪಿನೊಂದಿಗೆ ಬರೆಯುವುದು.

'PRAKASHINI'

NAVAYUGA PRESS

UDIPI

ANTARANGA

UDIPI

ಅಖಿಲ ಕರ್ನಾಟಕದ ಹೊಸ ಮಾದರಿಯ ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ 4-8-0

ಬಿಡಿ ಪ್ರತಿಗೆ 0-1-6

ಮೆನೇಜರ್,

ಅಂತರಂಗ, ಉಡುಪಿ.

The Canara Mutual Assurance Co., Ltd.

NEW APPOINTMENTS.

Applications from candidates of S. S. L. C. standard (both boys & girls) are invited for clerical posts in the Company.

Applicants should possess a good hand, a good command of English, a good moral character and should be quick at figures.

All applications must be accompanied by two testimonials one from the Headmaster of the School and another from any local gentleman.

UDIPI, 3-1-1944. } T. R. A. Pai, MANAGING DIRECTOR

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಅವಲಂಬಿತರ ಮತ್ತು ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿರಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಮುಖ್ಯ ಏಜಂಟರು:-

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್ ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿ ಸ್ಟೋರ್ಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,

Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ವರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ, ಕ್ಯಾಟೆಲಾಗ್ನ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧ ರವಾನಿಸಬಹುದು,

ಉಡುಪಿ ಏಜಂಟರು: — ನವಭಾರತ ಬುಕ್ ಡಿಪೋ

ಕತೆ ಕಾದಂಬರಿಗಳು—ಕವನ,—ನಾಟಕಗಳು

ಯಾವ ಪುಸ್ತಕ ಬೇಕಾದರೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗಾಂಧಿಜೀ 'ಕೈದು ಮಾಡಿ' ಎಂದು ಕರೆಯಲಿದ್ದಾರೆ!

ಮಹಾತ್ಮಾಜೀ ಪೂರ್ಣಾರೋಗ್ಯ ಹೊಂದಲು ಪ್ರಕೃತ ಸ್ವಲ್ಪಾಂತ ಮಾತ್ರ ಬಾಕಿಯಿದೆ. ಅವರ ಅನಾರೋಗ್ಯವು ೯/೧೦ ರಷ್ಟು ನಿವಾರಣೆಗೊಂಡಿದೆ. ಕಳೆದ ಕೆಲವು ದಿನಗಳಲ್ಲಿ ಸಂದರ್ಶಕರೊಡನೆ ನಿಶ್ಶಂಕೆಯಿಂದ ಮಾತಾಡಹತ್ತಿದ್ದಾರೆ. ಇಂತಹ ಸಂಭಾಷಣೆಗಳಿಂದ ಈ ಮೊದಲಾಗುತ್ತಿದ್ದ ದುಷ್ಪರಿಣಾಮಗಳ ಕಾಲ ಕಳೆದಂತಿದೆ. ಅವರ ಮೂತ್ರಪಿಂಡ ಕ್ರಿಯೆ ಯಥಾಸ್ಥಿತಿಗೆ ಬಂದಿದೆ. ಇನ್ನೇನು, ಸರೋಜಿನೀದತ್ತ 'ಪಹಿಲ್ವಾನ್' ಬಿರುದು ಕೆಲವೇ ದಿನಗಳಲ್ಲಿ ಗಾಂಧಿಜೀಯ ದೇಹದಲ್ಲೂ ಪದಿ ಮೂಡುವದೆಂಬ ಆಸೆಯಿದೆ. 'ಗಾಂಧೀ ಆರೋಗ್ಯ ಸಾಧನೆ' ಎಂಬ ಆಧುನಿಕ ಮಹಾಯಜ್ಞದ ಅವಭೃತ ಮುಹೂರ್ತ ಸಮೀಪಿಸಿದೆ. ಈ ಸಂದರ್ಭದಲ್ಲಿ ಬಿಡುಗಡೆ ಮಾಡಿದ ವೈಸರಾಯಿ ವೇವೆಲರಿಂದ ಹಿಡಿದು, ತನ್ನ ಅತ್ಯಾತುರವನ್ನು ದಮನಿಸಿಟ್ಟುಕೊಂಡು ಭೇಟಿಯ ಉಪದ್ರದಿಂದ ಬಿಡುಗಡೆ ಮಾಡಿದ ಸಾಮಾನ್ಯ ಭಾರತೀಯನ ವರೆಗೆ ಎಲ್ಲರನ್ನೂ ಅಭಿನಂದಿಸಬೇಕು. ಪರ್ಣಕುಟಿಯ ಲೇಡಿ ಠಾಕರ್ಸೆ—ಜುಹು ಮಾಲಕ ಮೊರಾರ್ಜಿ—ಡಾಕ್ಟರುಗಳಾದ ಗಿಲ್ಡರ್, ನಾಯರ್, ಗಜ್ಜರ್ ಮೊದಲಾದವರು—ಸರ್ಪಗಾವಲ ಸರೋಜಿನಿ—ಗಾಯಕ ಬರ್ವೆ ಮೊದಲಾದವರು—ಕವಯಿತ್ರಿ ತಯಾಬ್ಜಿ ಮುಂತಾದವರು—ಹಲವು ವರ್ಗಗಳ ಎಷ್ಟೋ ಮಂದಿ ಇದಕ್ಕಾಗಿ ಅಭಿನಂದನೀಯರು. ಗಾಂಧಿಜೀಯ ಆರೋಗ್ಯ ಪ್ರಯತ್ನವೊಂದು ಸೇತುಬಂಧನ ಕಾರ್ಯ; ಆ ಸಾಧನೆಯಲ್ಲಿ ಅಳಿಲ ಸೇವೆಗಳೆಷ್ಟೋ ದೊರತಿವೆ; ಮಲಿಯಾವಧಿ ಜನರ ನಿಟ್ಟುಸುರಿನೊಂದಿಗೆ ಜುಹು ಸಮುದ್ರದ ಶೀತಲ ಗಾಳಿಯೂ ಸ್ಮರಣೀಯ ಉಪಕಾರಿಗಳಲ್ಲೊಂದು!

ಪ್ರಗತಿಪರ ಬದಲಾವಣೆ.

ಆರೋಗ್ಯ ದೇವಿಯನ್ನೊಲಿಸುವ ತಪಸ್ಸಿನಂತಿದ್ದ ತನ್ನ ಹದಿನೈದು ದಿನಗಳ ಮೌನವನ್ನು ಗಾಂಧಿಜೀ ಮೇ ೨೯ನೇ ಅಪರಾಹ್ನ ೪ಘಂಟೆಗೆ ಮುಕ್ತಾಯಗೊಳಿಸಿದರು. ಆ ಮೌನಭಂಗದ ದಿನವು, ಪಾಂಡಿಚೇರಿಯ ಮಹರ್ಷಿ ಅರವಿಂದರ ದರ್ಶನ ದಿನದಂತಾಗಿ, ಆಶ್ರಮವಾಸಿಗಳು, ಗಾಂಧೀ ಸಂಬಂಧಿಕರು ಮತ್ತು ಇತರರು ಸಂಭಾಷಣೆಗಾಗಿ ಬಹು ಸಂಖ್ಯೆಯಲ್ಲಿ ನೆರೆದು ಬಂದಿದ್ದರು. "ನನ್ನ ಮಣ್ಣುಪಟ್ಟಿಯನ್ನು ಈಚೆ ಕೊಡಿ" ಎಂಬುದೇ ಗಾಂಧಿಜೀಯ ಬಾಯಿಯಿಂದ ಅರ್ಧ ತಿಂಗಳ ಬಳಿಕ ಹೊರಬಿದ್ದ ಮೊದಲಮಾತು ಪ್ರಕೃತಿಚಿಕಿತ್ಸೆಯಲ್ಲಿ ಪೂರ್ಣ ವಿಶ್ವಾಸವಿರುವ ಮಹಾತ್ಮರು ಮಣ್ಣಾಲೇಪವನ್ನು ಕಿಬ್ಬೊಟ್ಟೆಗೆ ಹಚ್ಚಿಕೊಳ್ಳುವ ಸಂಪ್ರದಾಯ. ಮೌನಧಾರಣೆಯು ಸತ್ಪರಿಣಾಮವಿತ್ತುದು ಡಾಕ್ಟರರ ಅವಗಾಹನೆಗೆ ಬಂದಿದೆ. ಡಾ॥ ಗಜ್ಜರ್ ಮತ್ತು ರಕ್ತಶೋಧಕ ವಿಶೇಷೋಪಕರಣದೊಂದಿಗೆ ನಿಜಾಮ್ ಸರಕಾರದಿಂದ ಕಳುಹಲ್ಪಟ್ಟಿದ್ದ ಡಾ॥ ರಹಿಮಾನರು ಗಾಂಧಿಜಿಯ ರಕ್ತಪರೀಕ್ಷೆ ನಡಿಸಿ ಅದು ಸುಧಾರಣೆಗೊಂಡಿದೆ ಎಂದರು. ತತ್ಫಲವಾಗಿ, ಅಗತ್ಯವೆಂದು ಕಂಡುಬರುವ ವರೆಗೂ ಪ್ರತಿದಿನ 20ಘಂಟೆ ಗಾಂಧಿಜೀ ಮೌನ ಧಾರಣೆಮಾಡುವ ನಿರ್ಧಾರವಮಾಡಿದ್ದಾರೆ. ಅಪರಾಹ್ನ 1ರಿಂದ 5ಘಂಟೆಗಳ ವರೆಗೆ ಮಾತ್ರ ಅವರು ಮಾತನಾಡುತ್ತಿದ್ದಾರೆ ಈ ನಾಲ್ಕು ಘಂಟೆಗಳಲ್ಲೊಂದು ಘಂಟೆ ಡಾಕ್ಟರರ ಪರೀಕ್ಷೆಗೆ. ಮತ್ತೊಂದು ಘಂಟೆ ನೂಲುವಿಕೆ, ಭಜನ ಶ್ರವಣ ಮತ್ತು ಊಟಕ್ಕೆ—ಹೀಗಿ ಸಂದರ್ಶಕರ ಪಾಲಿಗೆ ಎರಡೇ ಘಂಟೆಗಳು ದೊರೆಯುತ್ತಿವೆ. ಕೊಕ್ಕೇ ಹುಳ ಮತ್ತು ರಕ್ತಾತಿಸಾರಕ್ಕೆ ಡಾ॥ ಬಿ. ಸಿ. ರೋಯಿಗಳು ಕಲ್ಕತ್ತದಿಂದೊಂದು ಔಷಧ ತಯಾರಿಸಿ ಕಳುಹಿದ್ದಾರೆ; ಇಲ್ಲಿರುವ ಡಾಕ್ಟರರು ಅದರ ಸೇವನೆಗೆ ಗಾಂಧಿಜಿಯನ್ನು ತಯಾರಿಸುವದೊಂದೇ ಬಾಕಿ! ಆರೋಗ್ಯ ಕರಪತ್ರಗಳನ್ನು ವಿಶೇಷ ಸಂದರ್ಭಗಳ ಹೊರತು ವಾರಕ್ಕೆರಡಾವರ್ತಿ ಪ್ರಕಟಿಸಿದರೆ ಸಾಕೆಂದು ಡಾಕ್ಟರರ ನಿರ್ಧಾರ. ಮೌನವಾಗಿರುವ ಒಂದು ವ್ಯತ್ಯಾಸವನ್ನು ಬಿಟ್ಟರೆ ಸಂಜೆ ಮುಂಜಾನೆಯ ಸಂಚಾರದ ವೇಳೆ ಮಹಾತ್ಮರೂ ಮಗುವಿನಂತಾಗುತ್ತಾರೆ. ಮೊಣಕಾಲ ನೀರವರೆಗೂ ಸಮುದ್ರ ಬದಿಹಿಡಿದು ನಡೆಯುವದು ಅವರದೊಂದು ಮುಖ್ಯ ವಿನೋದ. ಈ ತಿಂಗಳ ಮೊದಲ ದಿನದಲ್ಲಿ ಗಾಂಧಿಜೀ ತನ್ನ ಪಾಲಿನ ಒಂದು ಅವಲಕ್ಷಣವನ್ನು ಕಂಡರು ಸತ್ತ ದೊಡ್ಡ ಮೀನೊಂದನ್ನು ಸಮುದ್ರದಲೆಗಳು ತಮ್ಮ ಸ್ವಭಾವಕ್ಕನುಸರಿಸಿ ದಡಕ್ಕೊಗೆದಿದ್ದುವು. ಅದನ್ನು ಕಂಡೊಡನೆ ಮಹಾತ್ಮರು ಸಂಕಟಗೊಂಡು ಆ ದೃಶ್ಯವನ್ನು ತಪ್ಪಿಸಲು ಕಣ್ಣು ಮುಚ್ಚಿಕೊಂಡೇ ಅನುಯಾಯಿಗಳ ಸಹಾಯದಿಂದ ಮುಂದೆ ಹೋದರು. ತಾ 2ರಲ್ಲಿ 'ರಾಮರಾಜ್ಯ' ಸಿನೆಮಾದ ಕೆಲವು ರೀಲುಗಳನ್ನವರು ಕಂಡಿದ್ದಾರೆ. ಇದು ಅವರು ಕಂಡ ಎರಡನೇ ಸಿನೆಮ.

ಮೊದುಳು ಯಾತನೆ

ಅಂತೂ, ಕಾಹಿಲೆಯೊಡನೆ ಕಾದಾಡಿ ಗಾಂಧಿಜೀಯೀಗ ಗೆಲ್ಲುತ್ತಿರುವದು ಖಂಡಿತ. ಆದರೆ, ಲೋರ್ಡ್ ಲಿನ್‌ಲಿತ್‌ಗೋ ಕೂಡಾ ಕನಿಕರ ಪಡುವಷ್ಟು ಅವರೀಗ ಮನೋವೇದನೆಗೊಳಗಾಗಿದ್ದಾರೆ. ತನಗೆ ಮಾರ್ಗದರ್ಶಕರಾಗಿ ಬರುವಂತೆ ಸಪ್ರು, ಜಯಕರ್, ಶಾಸ್ತ್ರಿ, ಮಾಲವೀಯರಿಗೆ ಬರೆದಿದ್ದ ಪತ್ರಗಳೇ ಅವರ ಚಿತ್ತಾನ್ವಸ್ಥತೆಗೆ ಉತ್ತಮ ದಾಖಲೆಗಳು. ಆ ಪೈಕಿ ಡಾ॥ ಜಯಕರರಿಗೆ ಬರೆದಿದ್ದ ಪತ್ರದ ಕುರಿತು ಒಂದು ಪತ್ರಿಕೆಯು ಅಸಂಬದ್ಧ ಸಂಗತಿಗಳನ್ನು ಪ್ರಕಟಿಸಿ ದೇಶಕ್ಕೊಂದು ಉಪಕಾರ ಮಾಡಿತು; ಸತ್ಯಸ್ಥಿತಿ ತಿಳಿಸುವದಕ್ಕಾಗಿ ಗಾಂಧಿಜೀ ತನ್ನ ಆ ಖಾಸಗೀ ಪತ್ರವನ್ನು ಬಹಿರಂಗಪಡಿಸಬೇಕಾಗಿ ಬಂತು. 'ಪ್ರಕಟಣೆಗಾಗಿ ಬರೆಯಲ್ಪಡದೆ ಸಹಜವಾಗಿ ಚುಟುಕಿನಲ್ಲಿರುವ ಈ ಪತ್ರದ ಅಭಿಪ್ರಾಯಗಳಿಗೆ ಯಾರೂ ಗೂಢಾರ್ಥಗಳನ್ನು ಲಗ್ತೀಕರಿಸಿಕೊಳ್ಳಬಾರದೆಂದು ಗಾಂಧಿಜೀ ಅಭಿಪ್ರಾಯಪಡುತ್ತಾರೆ' ಎಂದು ಮುಂದಾಗಿ ತಿಳುವಳಿಕೆ ಕೊಟ್ಟೇ, ಕಾರ್ಯದರ್ಶಿ ಪ್ಯಾರೇಲಾಲರದನ್ನು ಇದ್ದಂತೆ ಪ್ರಕಟಿಸಿದ್ದಾರೆ. ಅದರ ಪ್ರತಿಯೊಂದು ಶಬ್ದವೂ ಮಹಾತ್ಮಾಜೀಯ ಹೃದಯ ಸಮುದ್ರದ ಒಂದೊಂದು ತೆರೆಯಾಗಿ ನೈಜ ಪರಿಚಯವನ್ನು ಕೊಡಬಲ್ಲುದಾದ್ದರಿಂದ ಇಲ್ಲಿ ಕೊಟ್ಟಿದ್ದೇವೆ:

ಜುಹು, ಮೇ 20.

ಪ್ರಿಯ ಡಾಕ್ಟರ್ ಜಯಕರರೇ,

ದೇಶವು ನನ್ನಿಂದ ಬಹಳವನ್ನು ನಿರೀಕ್ಷಿಸುತ್ತಿದೆ. ಈ ಬಿಡುಗಡೆಯ ಕುರಿತು ನಿಮ್ಮ ಭಾವನೆ ಹೇಗಿದೆಯೋ ನಾನರಿಯೆ. ನಾನಂತೂ ಸಂತೋಷದಲ್ಲಿಲ್ಲ; ಬದಲಾಗಿ ನಾಚಿಕೆ ಪಡುತ್ತಿದ್ದೇನೆ. ನಾನು ಕಾಹಿಲೆ ಬೀಳಬಾರದಿತ್ತು ಹಾಗಾಗದಂತೆ ಪ್ರಯತ್ನಮಾಡಿದೆ; ಆದರೆ ಕೊನೆಗೂ ಪರಾಭವಗೊಂಡೆ ಸದ್ಯದ ದೇಹ ದೌರ್ಬಲ್ಯದಿಂದ ವಿನಾಯಿತಿ ಹೊಂದಿದೊಡನೆಯೇ ಅವರು ನನ್ನನ್ನವರು ಬಂಧಿಸುವರೆಂದು ನನಗನ್ನಿಸುತ್ತಿದೆ. ಅವರು ನನ್ನನ್ನು ಕೈದುಮಾಡದೆ ಬಿಟ್ಟರೆ ನಾನೇನು ಮಾಡಲಿ? ಆಗಸ್ಟ್ ನಿರ್ಧಾರವನ್ನು ಹಿಂದೆಗೆಯುವದು ನನ್ನಿಂದಾಗದು. ನೀವೇ ನ್ಯಾಯಪೂರ್ವಕ ಹೇಳಿರುವಂತೆ ಅದು ನಿರುಪದ್ರವೀ ನಿರ್ಧಾರ. ಅದರ ಪ್ರಯೋಗದ ಕುರಿತು ನಿಮ್ಮಲ್ಲಿ ಭಿನ್ನಾಭಿಪ್ರಾಯವಿರಬಹುದು; ನನಗದು ಜೀವದುಸಿರು. ತಾ.29 ರ ವರೆಗೆ ನನಗೆ ಮೌನ. ಆ ನಡುವೆ ಪ್ಯಾರೇಲಾಲರನ್ನು ನಿಮ್ಮಲ್ಲಿಗೆ ಕಳುಹಿಕೊಡಲೆ? ಅದು ಕೂಡಾ ನಿಮ್ಮ ಆರೋಗ್ಯವನ್ನು ಹೊಂದಿಕೊಂಡಿದೆ; ನೀವಾರೂ ಆರೋಗ್ಯದಲ್ಲಿಲ್ಲವೆಂದು ನಾನು ಬಲ್ಲೆ.

ನಿಮ್ಮ ಯಥಾರ್ಥವಾದಿ,
ಎಮ್. ಕೆ. ಗಾಂಧಿ.

ದೇಶದ ಅನಾಯಕತ್ವ ಮತ್ತು ತನ್ನ ಅನಾರೋಗ್ಯವನ್ನು ಅದೊಂದು ಉಚ್ಚ ಧ್ಯೇಯಕ್ಕಾಗಿ ಗಾಂಧಿಜೀ ಸಹಿಸಿಕೊಂಡಂತೆ ಮಾಲವೀಯ, ಶಾಸ್ತ್ರೀ, ಸಪ್ರು, ಜಯಕರರು ಸಹಿಸುವವರಲ್ಲ. ಕಗ್ಗತ್ತಲು ಕವಿದ ರಾಷ್ಟ್ರವನ್ನೇ ರಣರಂಗವಾಗಿ ಭಾವಿಸಿ, ರೋಗಿ ಗಾಂಧಿಯು ಸೇನಾನಿ ಘರ್ಜನೆಕೊಡುವದು ಅವರಿಗೆ ಪೂರ್ಣ ಅಸಮ್ಮತವೆಂಬುದು ನಿಸ್ಸಂದೇಹ. ಆದರೆ ದೇಶ ಹಾಗೂ ಮಹಾತ್ಮರ ಮೇಲಿನ ಪ್ರೇಮ ಬಲದಿಂದ ಗಾಂಧಿಜೀಯ ತಪ್ಪನ್ನು ತಿದ್ದುವ ಆತುರ ಮತ್ತು ಶಕ್ತಿಯಿರುವ ಮೇಲಿನ ಚತುರ್ಮುಖರ ಶಕ್ತಿಪರೀಕ್ಷೆಯ ಕಾಲವೀಗ ಬಂದಂತಿದೆ; ಗಾಂಧಿಜೀಯ ಮನೋವೇದನೆಯೊಂದು ಅಂಟುರೋಗವಾಗಿ ಈಗ ಅವರನ್ನೂ ಸೋಂಕಿತೆನ್ನಬಹುದು.

ಗರ್ಭಾಂದೋಲನ.

ಮಹಾತ್ಮರಿಂದಾಜ್ಞಾಪಿಸಲ್ಪಟ್ಟ ಪ್ಯಾರೇಲಾಲರು ಡಾ॥ ಜಯಕರರ ಭೇಟಿಪಡದು ರಾಜಕೀಯ ಸ್ಥಿತಿಗತಿಗಳ ಕುರಿತು ಚರ್ಚೆ ನಡೆಸಿದ್ದಾರೆ. ಮಹಾತ್ಮರ ಭೀಷ್ಮ ನಿರ್ಧಾರವು ದೇಶವಿದೇಶಗಳಲ್ಲಿ ಪ್ರತಿಧ್ವನಿ ಎಬ್ಬಿಸಿ 'ಮುಂದೇನು?' ಎಂಬುದನ್ನೊಂದು ಗಾಢಗಂಭೀರ ಪ್ರಶ್ನೆಯಾಗಿ ಮಾಡಿದೆ. ಈ ನಡುವೆ ಸ್ವಕಾರ್ಯ ನಿಮಿತ್ತವಾಗಿ, ಮಿ॥ ಜಿನ್ನರಿರುವ ಕಾಶ್ಮೀರಕ್ಕೆ ಹೋಗಿರುವ ಸರ್. ಸಪ್ರುಗಳ ಪ್ರಯಾಣದ ಕುರಿತು ಹಲವು ಪತ್ರಿಕೆಗಳು ಪದ್ಧತಿಯಂತೆ ಕಲ್ಪನಾಕಥೆ ಕಟ್ಟಿದ್ದುವು. ಕಾಂಗ್ರೆಸ್-ಲೀಗ್ ಒಪ್ಪಂದಕ್ಕಾಗಿ ತನ್ನ ಪರವಾಗಿ ಮಿ. ಜಿನ್ನರನ್ನು ಕಾಣುವಂತೆ ಗಾಂಧಿಜೀ ಸಪ್ರುಗಳಿಗೆ ಬರೆದಿದ್ದ ಪತ್ರದಲ್ಲಿ ಕೇಳಿಕೊಂಡಿದ್ದುದರಿಂದಲೇ ಸಪ್ರುಗಳತ್ತ ಧಾವಿಸಿರುವರೆಂದು ಪತ್ರಿಕೆಗಳು ತಮ್ಮ 'ಅಂತರ್ವಾಣಿ' ನುಡಿಗೊಟ್ಟಂತೆ ನುಡಿಯಹತ್ತಿದವು. 'ಇದು ಪೂರ್ಣ ಅಸಂಬದ್ಧ. ನಾನು ಬಂದುದು ನನ್ನ ವೈಯಕ್ತಿಕ ಕಾರ್ಯಗಳಿಗಾಗಿ, ಮಿ. ಜಿನ್ನರನ್ನಾಗಲೀ ಇನ್ನಾವ ರಾಜಕೀಯ ವ್ಯಕ್ತಿಯನ್ನಾಗಲೀ ನಾನು ಭೇಟಿ ಮಾಡುವಂತಿಲ್ಲ. ಗಾಂಧಿಜೀಯ ಆರೋಗ್ಯವು ಭೇಟಿಗೆ ಸಮ್ಮತಿಸುವಂತಿದ್ದರೆ ಜುಲಾಯಿಯ ಆದಿಭಾಗದಲ್ಲಿ ನನಗವರನ್ನು

ತಾರುಣ್ಯ

ಕೊಟ್ಟು, ವೀರ್ಯಸ್ತಂಭನ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಾ ವಿಲಾಸಿನಿ** ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,
184 ಚೈನ ಬಜಾರ್ ರೋಡ್, ಮದ್ರಾಸು,
ಪುತ್ತೂರು ಏಜಂಟರು: - **ಪೈ ಫಾರ್ಮಸಿ**

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು.

ದ್ವಿತೀಯರಂಗ-ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ-ಜರ್ಮನಿಯಲ್ಲಿ ಜನರ ನೈತಿಕ ಭಂಗ-ಜರ್ಮನರ ಪತನ-ಯುದ್ಧ ಸಮಾಪ್ತಿ-ಯುದ್ಧ ಸಾಮಾಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿರಾಶಿಯಾಗಿ ಬರೋಣ-ಧಾರಣೆಗಳ ಇಳಿತ-ನಷ್ಟ-ಕೊರತೆ-ಕೇಡುಗಳು-ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

CHAMPAE'S
Snow & Castrex
(Sole Distributors for (India.)
Sukhananda Stores
Santhekatte, UDIPI, S. K.

ಸಂದರ್ಶಿಸಬೇಕೆಂಬ ಬಯಕೆಯಿದೆ''-ಎಂದು ಸರ್. ಸಪ್ರು ಸ್ಪಷ್ಟಪಡಿಸಿದ್ದಾರೆ. ಲಂಡನಿನ 'ನ್ಯೂಸ್ ಕ್ರೋನಿಕಲ್' ಪತ್ರಿಕೆಯ ಬೊಂಬಾಯಿ ಬಾತ್ಮೀದಾರನು ಮಹಾತ್ಮರನ್ನು ಸಂದರ್ಶಿಸಿ, ಹಿಂದೀ ಸರಕಾರವು 1943ರಲ್ಲಿ ಪ್ರಕಟಿಸಿದ್ದ '1942-43ರ ಗೊಂದಲಗಳಿಗೆ ಕಾಂಗ್ರೆಸ್ ಹೊಣೆ' ಎಂಬ ಪುಸ್ತಕದ ಕುರಿತು ಏಳು ಪ್ರಶ್ನೆಗಳನ್ನು ಕೇಳಿದಾಗ ಮಹಾತ್ಮಾಜೀ ನಿರ್ಧಾರಗರ್ಭಿತವಾದ ಉತ್ತರವನ್ನು ಎರಡೇ ಪಂಕ್ತಿಗಳಲ್ಲಿ ಕೊಟ್ಟಿದ್ದಾರೆ. "ಇವೆಲ್ಲಾ ಆರೋಪಗಳಿಗೆ ನನ್ನಲ್ಲಿ ಪೂರ್ಣ ಹಾಗೂ ಸ್ಪಷ್ಟ ಉತ್ತರಗಳಿವೆ. ನಾನು ಆರೋಗ್ಯ ಹೊಂದಿದೊಡನೆ-ಸ್ವತಂತ್ರ ವ್ಯಕ್ತಿಯಾಗಿ ನನ್ನನ್ನು ಉಳಿಯಗೊಟ್ಟರೆ-ನನಗೆ ಹಾಕಲ್ಪಟ್ಟ ಈ ಪ್ರಶ್ನೆಗಳನ್ನೆತ್ತಿಕೊಳ್ಳುವೆ" ಮೇಲಿನ ಬಾತ್ಮೀದಾರನು ಸರಕಾರೀ ಪುಸ್ತಕದ ಆರೋಪಗಳ ಪೈಕಿ ಅತ್ಯಂತ ಪಾಪಕರವಾದ ಈ ಕೆಳಗಿನ ಎರಡು ಮುಖ್ಯ ದೂಷಣೆಗಳ ಕುರಿತೇ ಸಪ್ರುನವಾಲುಗಳನ್ನು ಹಾಕಿದ್ದನು. (1)'ಅಗೋಸ್ತು 8ರ ನಿರ್ಧಾರದ ಮೊದಲೇ ಜಪಾನರೊಡನೆ ಸಂಧಾನಕೂಡುವ ತನ್ನ ಬಯಕೆಯನ್ನು ಗಾಂಧಿಯವರು ಪ್ರದರ್ಶಿಸಿದ್ದರು". 2 "ಕಾಂಗ್ರೆಸೆಂಬುದು ಈ ಮೊದಲೇ ಸಂಪೂರ್ಣ ಪರಾಜಿತ ಬುದ್ಧಿಮಾರ್ಗವನ್ನು ಅಂಗೀಕರಿಸಿದ್ದ ಒಂದು ಪಂಗಡ". ಮೇಲಿನ ಆರೋಪಗಳು ಹಿಂದೀ ಸರಕಾರದ ಪ್ರಕಟಿತ ಪಹಿಯಲ್ಲಿ ಅಕ್ಷರಶಃ ಬಂದಿದ್ದವು ಈ ದೂಷಣೆಗಳು ಮಹಾತ್ಮಾಜೀಯ ಪಾಲಿಗೆ ಗೋಹತ್ಯಾಪಾಪಕ್ಕೆ ಸಮಾನವಾದವುಗಳಿದ್ದು, ಸ್ಮರಣೆ ಮಾತ್ರದಿಂದ ರಕ್ತದೊತ್ತಡವನ್ನು ಮಿತಿಮೀರಿ ಏರಿಸುವಂಥವುಗಳು! ಅವು ಮಹಾತ್ಮರನ್ನು ಕೆರಳಿಸಿವೆ; ಅವರ ಪರಿಶುದ್ಧ ಮನಸ್ಸಾಕ್ಷಿ ಮತ್ತು ವಾದಶಕ್ತಿಗಳು ಈ ಅಸ್ವತಾರೋಪಗಳ ಪ್ರತಿಭಟನೆ ಗಣಿಯಾಗಿವೆ. ಮೇಲಾಗಿ ಗಾಂಧಿಯವರು ಜಾಪಾನೀ ಪಕ್ಷಪಾತಿ; ಮುಖಂಡರ ಬಂಧನಾನಂತರವೆದ್ದ ಗೊಂದಲಗಳು ಪೂರ್ವ ತಯಾರಿಯ ಕೃತ್ಯಗಳು ಎಂಬುದನ್ನಾಧ ... ಮೇಲಿನ ಆರೋಪಗಳನ್ನು ಮಾಡಿದ ಎಂದು, ಗಾಂಧಿಜಿಗೆ ಎಂದೋ ಮಂದಟ್ಟಾಗಿರುವ ವಿಷಯವನ್ನು ಈ ಬಾತ್ಮೀದಾರನೀಗ ಅಂತರಂಗದ ಒಳ ಅಂತಸ್ತಿನ ವರೆಗೂ ಹೊಗಿಸಿದ್ದಾನೆ! ಆದ್ದರಿಂದ ಅಖಿಲ ಪ್ರಪಂಚವಿಂದು ಮಹಾತ್ಮಾಜೀಯ ಉತ್ತರವನ್ನು ಇದಿರು ನೋಡುತ್ತಿದೆ. ಆ ಮೊದಲು, ಗುಣಹೊಂದಿದೊಡನೆಯೇ 'ಕೇವಲ ಚಿಕಿತ್ಸೆಯ ಕಾರಣ'ಕ್ಕಾಗಿ ತನ್ನನ್ನು ಬಿಡುಗಡೆಮಾಡಿದ ಸರಕಾರವು ಈಗ ಬಂಧಿಸಲಿ ಎಂದು ಗಾಂಧಿಜೀ ಆಹ್ವಾನಿಸಬಹುದೆಂದು ವಿಶ್ವಸನೀಯ ವಾರ್ತೆ. ಬಂದಿದೆ. ಇಕ್ಕುಡೆಯವರ ಮನೋಗತಿಯನ್ನು ಅವಲೋಕಿಸುವವರಿಗೂ ಹಾಗಾಗುವದೇ ಸಂಭವನೀಯವನ್ನಿಸುತ್ತಿದೆ!

ಅಸ್ಸಾಮು-ಬರ್ಮಾ ಯುದ್ಧಸ್ಥಿತಿ.

ರೋಮ್ ನಗರದಲ್ಲೀಗ ಮಿತ್ರ ಸೇನೆಗಳ ಕೋಪಿ ಸಿಡಿತ ಕೇಳಿಸುತ್ತಿದೆ. ಜಗದ್ಗುರು ಪೋಪರ ವಾಣಿಯು ಲೋಕದಲ್ಲೇ ಪ್ರತಿಧ್ವನಿಸುವಂತೆ ಮಾಡುತ್ತಿದ್ದ ಕೆಥೋಲಿಕ್ ಪ್ರಪಂಚದ ಪವಿತ್ರ ನಗರದಲ್ಲೀಗ ಸಿಡಿಮದ್ದಿನ ದುರ್ವಾಸನೆಯೆದ್ದಿದೆ. ಕೆಸ್ಸರ್‌ಲಿಂಗನು ರೋಮ್ ಮುಂಭಾಗದಲ್ಲಿ ರಚಿಸಿದ್ದ ಕೊನೆಯ ರಕ್ಷಣಾಲೈನಾದ ಅಲ್ಬಾನ್ ಗುಡ್ಡಗಾಡು ಗೆರೆಯನ್ನು ಐದನೇ ಸೇನೆ ತುಂಡರಿಸಿ ಒಳನುಗ್ಗಿದೆ. ಅಲ್ಲಿಯ ವಲ್ಮಾಂಟೋನ್ ಎಂಬಲ್ಲಿಯ ಚಿಕ್ಕಟ್ಟಾದ ರಸ್ತೆಗಳೊಳಗೆ ಸಿಕ್ಕಿಬಿದ್ದ ನಾಜೀ ಸೇನಾ ತುಕಡಿಗಳು ಮಿತ್ರ ಸೇನೆಗಳಿಂದ ನಾಶವಾಗುವ ಸಂಭವವುಂಟಾಗಿದೆ ಅಲ್ಬನ್ ಪರ್ವತ ವಲಯದಿಂದ ಹಿಂದಟ್ಟಲ್ಪಟ್ಟ ಜರ್ಮನರೀಗ ರೋಮ್ ಮುಂಭಾಗದ ವಿಶಾಲ ಬಯಲಿಗಿಳಿದಿದ್ದಾರೆ. ರೋಮಿನ ದಕ್ಷಿಣ ವಲಯದಲ್ಲೀಗ ನಡೆಯುತ್ತಿರುವ ಹೋರಾಟವು ಯುದ್ಧ ಚರಿತ್ರೆಯಲ್ಲೇ ಗೋಚರಿಸದಷ್ಟು ಭಯಂಕರವಾಗಿದೆ. ರೋಮಿನ ಸರದಿಯನ್ನು ತಪ್ಪಿಸಲು ಯಾವ ದೇವನಿಂದಲೂ ಸಾಧ್ಯವಾಗದೆ ಹೋಯಿತು ಮಿತ್ರ ಸೇನೆಗಳ ಬಹುಕಾಲದ ಗುರಿಯಾಗಿದ್ದ ರೋಮ್ ನೆಲದಲ್ಲಿ ಕಾಲೂರುವ ಯೋಗ ಕೊನೆಗಾದರೂ ಒದಗಿಬಂತು!

ಪೋಪರ ವಿನಂತಿ.

ಈ ಸಂದರ್ಭದಲ್ಲಿ, ಪೋಪ್ ಗುರುಗಳು ಆತುರಾಗ್ರಹ ಪೂರ್ವಕ ರೋಮಿನ ಪಾವಿತ್ರ್ಯವನ್ನುಳಿಸಬೇಕೆಂದು ಬಹಿರಂಗವಾಗಿ ಮೌಖಿಕ ವಿಜ್ಞಾಪಿಸಿಕೊಂಡಿದ್ದಾರೆ ನಗರದೊಳಗೊಂದು ಒಂದು ಆಶ್ರಯ ಪಡೆಯುತ್ತಿರುವ ನಿರ್ಗತಿಕರ ಸಂಖ್ಯೆ ಬೆಳೆದಿರುವದನ್ನು ತಾವವಲೋಕಿಸುವ ಆಶ್ರಯದವನ್ನೂ ಪೋಪರು ವರ್ಣಿಸಿ, ರೋಮ್ ಪಾವಿತ್ರ್ಯ ಭಂಗವು ಪಾಪಕರವೆಂಬುದನ್ನು ಎಂದಟ್ಟು ಸಾರಿ 'ರೋಮಿನ ಮೇಲೆ ಕೈ ಮಾಡಲು ಎಡಗೈಯ್ಯವ ಯಾರಾದರೂ ಲೋಕದಿದಿರು ಮತ್ತು ದೇವನ ನ್ಯಾಯಾಸ್ಥಾನದಿದಿರು ಮಾತೃ ಹತ್ಯಾಪಾತಕಿಯಾಗುತ್ತಾರೆ' ಎಂದಿದ್ದಾರೆ. ಇದಕ್ಕೆ ಭೂಮಧ್ಯ ಸಮುದ್ರದ ಮಿತ್ರ ಸೇನಾನಿ ಜನರಲ್ ಸರ್. ವಿಲ್ಸನುತ್ತರವಿತ್ತು, 'ಜರ್ಮನರು ರೋಮಿನಲ್ಲಿ ಪ್ರತಿಭಟನೆ ಕೊಡಲು ಹವಣಿಸಿದರೆ, ಅವರನ್ನೋಡಿಸಲು ಅಗತ್ಯವುಳ್ಳ ಸೇನಾ ಕಾರ್ಯ ಕೈಕೊಳ್ಳದೆ ಮಿತ್ರರಿಗೆ ನಿರ್ವಾಹವಿಲ್ಲವೆಂದೂ ಆ ಪಾಪದ ಹೊಣೆಯೆಲ್ಲಾ ಜರ್ಮನರ ಮೇಲೆಂದೂ ಸಾರಿದ್ದಾರೆ.

ಅಸ್ಸಾಮು-ಬರ್ಮಾ

ಇಲ್ಲಿಯ ಯುದ್ಧದ ಒಂದು ಅಂಕ ಮುಕ್ತಾಯಗೊಳ್ಳಬೇಕಾದ ಕಾಲವಿದು. ಮಳೆಗಾಲವು ಇಷ್ಟರಲ್ಲೇ ಆರಂಭವಾಗಿರುವದರಿಂದ ಅಸ್ಸಾಮು--ಬರ್ಮಾ ಹೋರಾಟವು ಕುಂಠಿತಗೊಳ್ಳುತ್ತಿದೆ. ಇಂಫಾಲಿನ ಹತ್ತು ಮೈಲು ದೂರದಲ್ಲಿ ಬಿಷ್ಣುಪುರ್ ರಸ್ತೆಯಲ್ಲಿದ್ದ ಜಪಾನರನ್ನು ಕಸದಂತೆ ಗುಡಿಸಿಬಿಟ್ಟುದು ಈ ವಾರದ ಒಂದು ಮುಖ್ಯ ಘಟನೆ; ದಕ್ಷಿಣದಲ್ಲಿ ಬಿಶೆನ್‌ಪುರ್ ರಸ್ತೆಯಲ್ಲಿ ಮಹತ್ವದ ಸಿದ್ಧತೆಯೊಡನೆ ಮುತ್ತಿಕೊಂಡ ಸಶಸ್ತ್ರ ಜಪಾನೀ ದಳಗಳನ್ನು ಮೂರು ಮಾರ್ಗಗಳ ಪ್ರಬಲ ಧಾಳಿಯಿಂದ ಹಿಂದೂಡಲಾಗಿದೆ ಇಂಫಾಲಿನ ಉತ್ತರಗಡೆಯಲ್ಲಿ ಮಣಿಪುರ ರಸ್ತೆಯಲ್ಲಿ ಜಪಾನರನ್ನು ನಿಧಾನವಾಗಿ ಹಿಂದೋಡಿಸಲಾಗುತ್ತಿವೆ. ಇಂಫಾಲ್- ಪಾಲೆಲ್ - ಟಾಮು ರಸ್ತೆಯಲ್ಲಿ ವಿರೋಧಿಯ ಪ್ರಗತಿಗೆ ಭಂಗ ಒದಗಿದೆ. ಕೋಹಿಮಾ ರಂಗದಲ್ಲಿ ಜಪಾನೀ ಸಣ್ಣ ದಳಗಳು ಮಾತ್ರವಲ್ಲದೆ ವಿರೋಧಿಯ ಗಣ್ಯ ಸೇನಾ ವಿಭಾಗಗಳಿಲ್ಲ. ಅತ್ತ ಉತ್ತರ ಬರ್ಮಾದಲ್ಲಿ ಚೀನಾ-ಅಮೇರಿಕ ಸೇನೆಗಳೀಗ ಮಿಟ್ಕಿನಾವನ್ನು ಆವರಿಸಿಕೊಂಡು ಹಬ್ಬಾವಿನಂತೆ ಇಷ್ಟರಲ್ಲೇ ೯ನೇ ಅಂಶದಷ್ಟನ್ನು ನುಂಗಿರೊಂಡಿವೆ. ಇಷ್ಟೆಲ್ಲಾ ಅನುಕೂಲ ವಿದ್ಯಮಾನಗಳಿಗಾಗಿ ಹಿಗ್ಗುವಾಗ, ಜಾಪಾನೀ ಆಕ್ರಮಣವೆಂಬ 'ಅಸ್ಸಾಮು ಕಾಹಿಲೆ' ಗುಣಹೊಂದಿಲ್ಲವೆಂಬುದನ್ನೂ ಇವೆಲ್ಲಾ ರೋಗದ ಸ್ಥಿತಿ ಮಾರ್ಪಾಟುಗಳಷ್ಟೇ ಎಂಬುದನ್ನೂ ಮರೆಯಬಾರದು

ಜಾಪಾನರ ಯುದ್ಧಯೋಜನೆ

ಕಳೆದ ವರುಷ ಅರಕಾನಿನೊಳಗೆ ನುಗ್ಗಿದ ಮಿತ್ರ ಸೇನೆಗಳು ಇದೇ ಸಮಯದಲ್ಲಿ ಮಳೆಗಾಲದ ನೆಪ ಹೇಳಿ ಹಿಂದೋಡಿಬಂದದ್ದುದನ್ನು ಜ್ಞಾಪಿಸಿಕೊಳ್ಳಬೇಕು. ಆ ಬಾರಿ ಅರಕಾನ್ ಸ್ಥಳೀಯ ಘಟನೆಯಾಗಿದ್ದ ಬರ್ಮಾ ಯುದ್ಧದ ಪಾಮನಾವತಾರವು, ಈ ಬಾರಿ ಉತ್ತರದಲ್ಲಿ ಹುಕಾಂಗ್ ಕಂದರದಿಂದ ದಕ್ಷಿಣದಲ್ಲಿ ಅರಕಾನಿನ ಬುಥಿಡಾಂಗ್ ವರೆಗಿನ 800 ಮೈಲು ವಿಸ್ತೀರ್ಣದ ವಿಶ್ವಾಕಾರ ಧರಿಸಿರುವ ವ್ಯತ್ಯಾಸವನ್ನೂ ಮರೆಯಬಾರದು. ಜಪಾನರ ಉದ್ದೇಶವಿಷ್ಟಿದ್ದಿತ್ತು: ಅರಕಾನಿನಲ್ಲಿ ಮಿತ್ರರ ಎರಡು ಡಿವಿಜನ್ ಸೇನೆಗಳನ್ನು ಅಲ್ಲಿಯೇ ತಡೆದಿಟ್ಟು, ಮಣಿಪುರ ಮಾರ್ಗವಾಗಿ ಭಾರತಾಕ್ರಮಣ ನಡಿಸುವದು; ಅದಕ್ಕಾಗಿ ಪ್ರಥಮತಃ ಇಂಫಾಲನ್ನು ಸ್ವಾಧೀನಪಡಿಸಿಕೊಳ್ಳುವದು. ಈ ಗುರಿಯನ್ನು ಜಾಪಾನರೀತನಕ ಮುಟ್ಟಿಲ್ಲ; ಆದರೆ ಪರಾಭವಗೊಂಡುದೂ ಇಲ್ಲ ಅರಕಾನಿನ ಮಿತ್ರ ಸೇನೆಗಳು ಹಿಂದೆಗೆಯಲು ಶಕ್ತವಾದರೂ ಬುಥಿಡಾಂಗ್ ಇತ್ಯಾದಿ ಹೆಸರಾಂತ ನೆಲೆಗಳನ್ನು ಕಳಕೊಂಡಿವೆ. ಮಣಿಪುರ ವಲಯದ ತೀರ್ಮಾನವಿನ್ನೂ ಬಾಕಿಯುಳ್ಳದೆ. ಈ ಸಂದರ್ಭದಲ್ಲಿ ಚೀನದಲ್ಲಿ ಜಪಾನರ ಯೋಜನೆಯು ಜಯಶೀಲವಾಗಿ ಮುಕ್ತಾಯಗೊಳ್ಳುವ ಕಾಲ ಸನ್ನಿಹಿತವಾದುದು ಅತಿಮುಖ್ಯ ವಿಷಯ. ಚೀನದ ಆಗ್ನೇಯ ಪ್ರಾಂತ್ಯ ಹುನಾನಿನ ಮುಖ್ಯ ಪಟ್ಟಣ ಚಾಂಗ್ಶಾವನ್ನಾಕ್ರಮಿಸಿಕೊಳ್ಳಲು ಜಾಪಾನೀ ಸೇನೆಗಳು ಮುಂದಾಗಿವೆ. ಅಂತೆಯೇ ಕ್ವಾಂಗ್ಸಿಪ್ರಾಂತ್ಯದ ರಾಜಧಾನಿ ಕ್ವೆಲಿಂಗನ್ನು ಅವರು ವಶಪಡಿಸಿಕೊಳ್ಳುವ ಅಪಾಯವುಂಟಾಗಿದೆ. ಈ ಕಡೆಗಳಲ್ಲಿರುವ ಮಿತ್ರರ ಮುಖ್ಯ ವಿಮಾನ ನಿಲ್ದಾಣಗಳ ಆಸೆಯನ್ನು ಮುಗಿದಂತೆಯೇ. ಚೀನಕ್ಕೀಗ ಸಹಾಯ ಹೋಗದಿದ್ದರೆ, ಇನ್ನದನ್ನು ಪಡಕೊಳ್ಳಲು ಚೀನವಿರಲಾರದು ಎಂಬಂತಹ ಪರಿಸ್ಥಿತಿಯುಂಟಾಗಿದೆ. ಆದರೆ ಸಾಕಷ್ಟು ಸಹಾಯ ಸಾಗಿಸಲಾಗುವ ಮಿತ್ರರಾಷ್ಟ್ರಗಳ ಪಾಲಿನ ಹಾದಿಗಳು ಎಂದೋ ಅಳಿದು ಹೋಗಿವೆ. ಹತಭಾಗಿ ಚೀನವೀಗ ನಿಟ್ಟುಸಿರೋ, ಕೊನೆಯುಸಿರೋ ಬಿಡುತ್ತಿದೆ!

It pays always

to Insure with & represent

THE CRESCENT INSURANCE CO. LTD.,

BOMBAY.] [Estd 1919

T A Vasudevan,
Udipi, S. K

ವಿಮೆಯಿಳಿಸಲು ಮತ್ತು ಪ್ರಾತಿನಿಧ್ಯ ವಹಿಸಲು ಲಾಭದಾಯೀ ಸಂಸ್ಥೆಯೆಂದರೆ

ದಿ ಕ್ರಸೆಂಟ್ ಇನ್ಸೂರೆನ್ಸ್ ಕೊ.

ಲಿಮಿಟೆಡ್. ಬೊಂಬಾಯಿ.

ಸ್ಥಾಪನೆ:— **1919.**

ಬರೆಯಿರಿ:—

ಟಿ. ಎ. ವಾಸುದೇವನ್. ಉಡುಪಿ.

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of "Parimala Bhavan", opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director.

The Canara Banking Corporation Limited.
(Incorporated in British India)
ESTD 1906
Head Office UDIPI
ANNOUNCEMENT.
A Branch of the bank has been opened at Tobacco Street, CALICUT on 26-5-44.

ನವಯುಗ
ಉಡುಪಿ, ಗುರುವಾರ ೮-೬-೧೯೪೪

ಭಾವೀ ವ್ಯವಸ್ಥೆ.

ಯುದ್ಧಾನಂತರದ ಲೋಕಶಾಂತಿಯ ಯೋಜನೆಗಳಿಗೆ ಕಪ್ಪು ಮುಗಿಲುಗಳಂತೆ ಭವ ಸಾಗರವನ್ನು ಕವಿದಿದ್ದ ಮಿ. ಚರ್ಚಿಲ್ಲರ ಇತ್ತೀಚಿನ ಪಾರ್ಲಿಮೆಂಟ್ ಭಾಷಣದಲ್ಲಿ ರೂಪಿಸಲ್ಪಟ್ಟ ರಾಷ್ಟ್ರೀಯ ಸಂಘವು ನಿರರ್ಥಕ ಜೀವನ ನಡಿಸಿ ಪೂರ್ಣಗೊಂಡಿರುವ ಆ ಹಳೆಯ 'ಲೀಗ್ ಆಫ್ ನೇಶನ್ಸ್'ಗಿಂತ ಭಿನ್ನವಾಗಿಲ್ಲ. ಇದನ್ನು ಸಣ್ಣ ರಾಷ್ಟ್ರಗಳೆಲ್ಲಾ ಸಹಜವಾಗಿ ಆಕ್ಷೇಪಿಸಿವೆ. ಅದರಲ್ಲಿ ಅಮೆರಿಕದಂತಹ ಪ್ರಬಲ ರಾಷ್ಟ್ರವು ತಲೆಯೆತ್ತಿರುವುದಿಲ್ಲ. ಹೀಗಿದ್ದರೂ ಅಮೆರಿಕ ಕಾರ್ಯದರ್ಶಿ ಮಿ. ಕೋರ್ಡೆಲ್ ಹಲ್ಲರು ಸರ್ವಕಡೆಗಳಿಂದ ಸ್ವಾಗತ ಪಡೆದ ಪ್ರಥಮ ಭಾಷಣದಲ್ಲಿ ..... 'ಪರಾಧೀನ ಜನಾಂಗಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಮಾಡುವ ಒದ್ದಾಟಗಳನ್ನು ಅಮೇರಿಕವು ಪ್ರೋತ್ಸಾಹಿಸುವದಲ್ಲದೆ ಅವು ಸ್ವತಂತ್ರ ನಾಡೊಡನೆಯೇ ತನ್ನ ಸನ್ಮೈತ್ರಿಯನ್ನಿಟ್ಟುಕೊಳ್ಳುವದು' ಇದು ಅಶಕ್ತನೊಬ್ಬನ ಸಹಾನುಭೂತಿ ಪ್ರದರ್ಶನದಂತಿದೆ. ಅಮೇರಿಕವು ಮಿತ್ರ ಪಾಳಯದ ಅಗ್ರಗಣ್ಯ ರಾಷ್ಟ್ರ, ಯುದ್ಧಕಾಲದಲ್ಲೂ ಯುದ್ಧಾನಂತರವೂ ಅದರ ಮಾತು ಪ್ರಾಮುಖ್ಯ ಹೊಂದಲೇ ಬೇಕು. ಹಿಂದುಸ್ಥಾನದಂತಹ ದಾಸ್ಯರಾಷ್ಟ್ರದೊಂದಿಗೆ ಅಮೇರಿಕಕ್ಕಿರುವ ಸಂಬಂಧಕ್ಕಿಂತ ಇಂಗ್ಲಾಂಡಿನಂತಹ ಬಲವ ರಾಷ್ಟ್ರದೊಡನೆ ಇರಬೇಕಾಗುವ ಸಂಬಂಧವೇ ನಿಜವಾದುದು. ಪರಿಸ್ಥಿತಿ ಹೀಗಿರಲಾಗಿ ಅಮೇರಿಕವು ಹಿಂದುಸ್ಥಾನದ ಪಕ್ಷವಹಿಸಿ ಸ್ವಾತಂತ್ರ್ಯ ಸಾಧನಕ್ಕೆ ಪ್ರೋತ್ಸಾಹ ಕೊಡುವ ಬದಲಿಗೆ ಇಂಗ್ಲಾಂಡನ್ನು ಒತ್ತಾಯಿಸಿ ಭಾರತ ಸ್ವಾತಂತ್ರ್ಯ ದಾನ ಮಾಡಿಸುವದು ಸುಲಭವಲ್ಲವೇ? ಮಿ. ಕೋರ್ಡೆಲ್ ಹಲ್ಲರ ಮಾತಿಗೆ ಆಧಾರವು ದೊರೆಯದೇ ಗೋಚರಿಸುವದಿಲ್ಲ. 'ಸ್ವಾತಂತ್ರ್ಯ ಹೋರಾಟ'ಗಳನ್ನು ತಾನು ಪ್ರೋತ್ಸಾಹಿಸುವೆನೆಂದು ಅಮೇರಿಕವು ಹೇಳುವ ಯುದ್ಧವಾಗಿದು ಲೋಕವ್ಯವಸ್ಥೆ ನಡೆಯಬೇಕಾದರೂ ಎಲ್ಲಾ ರಾಷ್ಟ್ರಗಳಿಗೂ ಸ್ವಾತಂತ್ರ್ಯ ದೊರೆಯಬೇಕಲ್ಲವೆಂಬುದು ಸ್ವಯಂಸಿದ್ಧ. ಹಾಗೆ ದೊರೆಯುವಂತಿದ್ದರೆ ಅವರ ಈ ಕವಿದ ಪ್ರೋತ್ಸಾಹದ ಅವಶ್ಯಕತೆಯಿಲ್ಲ- ಅಥವಾ ಬ್ರಿಟನಿನೊಡನೆ ತನಗಿರುವ ಮೈತ್ರಿ ಬಲ ಮಾತ್ರದಿಂದ, ಅದರಡಿಯಲ್ಲಿರುವ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಕೊಡಿಸಲು ತನ್ನಿಂದಾಗುವಂತಿಲ್ಲವೆಂಬುದು ಈಗ ತಾನೇ ಅಮೇರಿಕಕ್ಕೆ ಮನವರಿಕೆಯಾಗಿರಬಹುದೇ? ಅದ್ದರಿಂದ ಸರ್ವರಿಗೂ ಸ್ವಾತಂತ್ರ್ಯವಿರಬೇಕೆಂಬ ಉಚ್ಚ ಧ್ಯೇಯ ಪಾಲನೆಗಾಗಿ, ಅಮೇರಿಕವು ನಿರ್ವಾಹವಿಲ್ಲದ ಸ್ವಾತಂತ್ರ್ಯ ಸಾಧಕರ ಪಕ್ಷ ಹಿಡಿಯಲಿವೆಯೆಂದು ಭಾವಿಸಬೇಕೆ? ಯಾವುದೂ ಸ್ಪಷ್ಟವಾಗುವದಿಲ್ಲ, ಸ್ವಾಮಿ ಮಿ. ಹಲ್ಲರಿಗೂ ಏನೊಂದೂ ಅರ್ಥವಾಗದಿರಬೇಕು. ಲೋಕ ಶಾಂತಿಗಾಗಿ, ಸರ್ವ ರಾಷ್ಟ್ರಗಳಿಗೂ ಸ್ವತಂತ್ರ್ಯವಿರಬೇಕಾದುದು ಅಗತ್ಯ, ಇಂದಿನ ಯುದ್ಧವು ಲೋಕಶಾಂತಿ ಸಾಧನೆಗಾಗಿ ಇರುವದು ನಿಜವಾಗಿದ್ದರೆ, ಮಿತ್ರ ರಾಷ್ಟ್ರಗಳು 'ಸರ್ವ ರಾಷ್ಟ್ರಗಳಿಗೂ ಸ್ವಾತಂತ್ರ್ಯ' ಎಂಬುದನ್ನು ತಮ್ಮ ಯುದ್ಧ ಗುರಿಯಾಗಿ ಇಟ್ಟುಕೊಳ್ಳುವದು ಅತ್ಯಗತ್ಯ. ಯುದ್ಧ ಕಾಲಕತ್ತಲಲ್ಲಿ ಅಗ್ರಭಾಗವಹಿಸಿರುವ ಅಮೇರಿಕವು ಇಂತಹ ನೇರವಾದ ಹಾದಿಯಿಂದ ತನ್ನ ಗುರಿಯನ್ನು ಸಾಧಿಸುವ ಬದಲಿಗೆ 'ದಾಸ್ಯರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ' ಎಂಬ ಅಡ್ಡಹಾದಿಯನ್ನು ಹಿಡಿಯುವ ಗುಟ್ಟೇನೋ ನಮಗರಿಯದು. 'ನನ್ನಲ್ಲೊಂದು ಯುದ್ಧಾನಂತರದ ಯೋಜನೆಯಿದೆ' ಎಂದು ರೂಸವೆಲ್ಟರು ಹೇಳಿದ್ದರೆ. ಇಂತಹ ಯೋಜನೆಗಳೀಗ ಚರ್ಚಿಲ್, ಸ್ಟಾಲಿನ್, ಹಿಟ್ಲರ್, ಟೋಜೋ ಮುಂತಾದ ಎಲ್ಲಾ ನಾಯಕರ ಜೇಬುಗಳಲ್ಲಿಯೂ ಒಂದೊಂದು ಇದ್ದೇ ಇವೆ. ಅಮೇರಿಕದ ಯೋಜನೆಯು ಸ್ಥೂಲರೂಪವೀಗ ಬೆಳಕಿಗೆ ಬಂದಿದೆ. ಒಂದು ಅಂತರ್ರಾಷ್ಟ್ರೀಯ ಸಭೆ, ಆ ಸಭೆಗೆ ಕಾರ್ಯಕಾರಿ ಮಂಡಲಿಯಾಗಿ ಒಂದು ಕೌನ್ಸಿಲು. ಶಾಂತಿ ಪಾಲನೆಗಾಗಿ ಮುಖ್ಯತಃ ಮುಖ್ಯ ಚತುರ್ರಾಷ್ಟ್ರಗಳ ಸೇನೆಗಳಿಂದ ಒಂದು ಪೋಲೀಸು ಪಡೆಯನ್ನು ರಚಿಸಲಾಗುವದು. ಈ ದಲಗಳು ತಮ್ಮ ವಿಶಿಷ್ಟತೆಯನ್ನು ಉಳಿಸಿಕೊಳ್ಳುವವಾದರೂ ಎಸೆಂಬ್ಲಿಯ ನಿರ್ಧಾರದನ್ವಯ ಮಾತ್ರವೇ ಉಪಯೋಗಿಸಲ್ಪಡುವವು- ಇದು ಮುಂದಿನ ಜಾಗತಿಕ ವ್ಯವಸ್ಥಾ ಪಾಲನೆಯ ಯೋಜನೆ. ಈ ಪೋಲೀಸು ಬಲ (ಪ್ರಬಲ ಸೇನ)ಗಳನ್ನು ಪ್ರಯೋಗಿಸುವ ಎಸೆಂಬ್ಲಿಯು ಎರಡನೆಯದಾಗಿರುವ 'ಕೌನ್ಸಿಲ್'ಎಂದರೆ ಆ ಪ್ರಬಲ ಚತುರ್ರಾಷ್ಟ್ರಗಳ ಸಮಿತಿಯೆಂಬುದಂತೂ ನಿರ್ವಿವಾದ. ಅರ್ಥಾತ್ ಈ ಲೋಕ ಯುದ್ಧ ಗೆದ್ದವರು ಲೋಕವನ್ನೂ ಗೆಲ್ಲುತ್ತಾರೆ, ಲೋಕವನ್ನೇ ಆಳುತ್ತಾರೆ. ಈಗ ಮಿ. ಕೋರ್ಡೆಲ್ ಹಲ್ಲರ 'ಸ್ವಾತಂತ್ರ್ಯ ಪ್ರೋತ್ಸಾಹ' ಎಂಬ ಮಾತು ಅರ್ಥವಾಗಬಲ್ಲದು. ಯಾವುದಾದರೊಂದು ಆಶ್ರಿತ ರಾಷ್ಟ್ರವು ತನ್ನ ಸ್ವಾತಂತ್ರ್ಯಕ್ಕಾಗಿ ಒದ್ದಾಡಿದ್ದಾರೆ, ಅಂತಹ ರಾಷ್ಟ್ರದ ಮೇಲೆ ಈ ಜಾಗತಿಕ ಸೇನೆಯನ್ನು ಉಪಯೋಗಿಸದಿರುವದೇ ಮಿ. ಹಲ್ಲರಿಂದ ದೊರೆಯುವ ಪ್ರೋತ್ಸಾಹ. ಈ ಸೇನೆಯ ವಿನಹ ಇತರ ಶಕ್ತಿಯಿಂದ ಅಂತಹ ಪ್ರಯತ್ನವು ದಮನಿಸಲ್ಪಡುವದಾದರೆ ಅಂತಹ ಸಂದರ್ಭಗಳಲ್ಲಿ ಅಮೇರಿಕವು ತಟಸ್ಥ! ಮಿ. ಹಲ್ಲರಾಗಲೀ, ಇತರ ಮಿತ್ರ ಪ್ರಮುಖರಾಗಲೀ ಇಷ್ಟು ದ್ವಂದ್ವದ ಕೋರಂಗಗಳನ್ನಳಿಯುವ ಬದಲಿಗೆ 'ಸ್ವಾತಂತ್ರ್ಯವು ಸ್ವಸಾಧನೆಯಿಂದಲೇ ದೊರೆಯುವಂತಹದು' ಎಂದು ಸ್ಪಷ್ಟವಾಗಿ ಹೇಳಿ ಲೋಕಕ್ಕುಪಕಾರ ಮಾಡಬಹುದು. ಅವರೀಗ ಹೇಳದಿದ್ದರೂ ಹಿಂದುಸ್ಥಾನದಂತಹ ದಾಸ್ಯ ರಾಷ್ಟ್ರಗಳಿಗೆ ಈ ಅರ್ಥವಾಗದೆ ಹೋಗದು.

ದುರ್ಬೀನು

ಸಭೆಗೆ ಹಿತವಾಗುವ ತೀರು ಹನೆ ಮುಳಿಗೆ ಅಸಹ್ಯ ಆಪತ್ತಿನಲ್ಲಿ ಪ್ರಿಯವನ್ನಿಸುವ ಹಿತಬೋಧೆ ಸಂಪತ್ತಿನ ವೇಳೆ ಅಪ್ರಿಯ

oo oo oo

ಹಗ್ಗವುದ್ದವಿರಬೇಕು, ಆದರ ಉದ್ದವಿರುವ ಹಾವೂ ಹಗ್ಗವಲ್ಲ, ಪೂಜಾರಿಯಲ್ಲಿ ಪುರುಷತ್ವವಿರಬೇಕು, ಆದರ ಪುರುಷತ್ವವಿರುವ ಪುಂಡನೂ ಪೂಜಾರಿಯಲ್ಲ

oo oo oo

ಹಣ್ಣು ಜಗಿದವನೂ ಬಾಯಿ ಮುಕ್ಕಳಿಸಿಕೊಳ್ಳುವದ ಪಾಪಿ, ಪಣ್ಣು ಮುಕ್ಕಿದವ ಹೇಗೂ ಮುಕ್ಕಳಿಸಿಕೊಳ್ಳಬೇಕು ಸತ್ಕೀರ್ತಿ ಕೇಳಿದವನೂ ಆತ್ಮ ವಿಮರ್ಶೆ ಮಾಡಿಕೊಳ್ಳುವದು ಲೇಸು, ಅಪಕೀರ್ತಿ ಕೇಳಿದವನಂತೂ ಸ್ವವಿಮರ್ಶೆ ನಡಿಸಲೇ ಬೇಕು.

oo oo oo

ಬೇಳೆ ಬೇಯಿಸುವ ಒದಲಿಗ ಬೇರು ಬೇಯಿಸುವ ಕಾಲ ಬಂದರೆ, ದುಷ್ಕಾಲಿ, ಹುರುಳಿದಯೋ ಎಂದು ಪರೀಕ್ಷಿಸುವ ಬದಲಿಗೆ ಹುಟ್ಟು ಮೂಲ ಶೋಧಿಸುವ ಬುದ್ಧಿ ಮೂಡಿದರದು ದುರ್ಬುದ್ಧಿ.

oo oo oo

ನವಮಾಸ ತುಂಬಿದ ಗರ್ಭಿಣಿ ನಾಗಿಣಿ ನೃತ್ಯಕ್ಕಾಗಳು, ಗಾಢ ಯೋಚನ ಮಗ್ನ ಲಘುವಿನೋದಕ್ಕೊಪ್ಪಗಲಾರ.

oo oo oo

ಕಡಲ ದಡದಲ್ಲಿಯೂ ಬೀಸಣಿಗೆ ಬಿಡುವ ನಲ್ಲವದು ಒಳಿಯ ಭೂಷಣಕ್ಕಾಗಿ, ವಿಚಾರಿಗಳ ಮಧ್ಯದಲ್ಲೂ ವಿರಕ್ತ ಭಾವ ಪ್ರದರ್ಶನ ಕೇವಲ ಹೆಗ್ಗಳಿಕೆಗಾಗಿ

oo oo oo

ಹೊಳೆಯು ಸಂಕವನ್ನಾದರೆ ಕೈಬೀಸಿ ಕೊಂಡೇ ದಾಟಬಹುದು ಎತ್ತರ ತೊಂಡಿನ ಅಡ್ಡಮರ ದಾಟುವಾಗ ಮೈಯೆಲ್ಲ ಲೊಡದ ಜಾಗ್ರತ ಬೇಕು ವಿಶಾಲ ಸ್ನೇಹಣೆಯಿದ್ದರು ಸ್ವತಂತ್ರ ವರ್ತನೆಯಿರಬಹುದು, ಸಂಕುಚಿತ ಧೋರಣೆಯಿದ್ದರು 'ನಾಶ' ತಪ್ಪದು

oo oo oo

ಉತ್ಸವದ 'ಗರ್ನಾಲು' ಆಕಾಶಕ್ಕೆ ನೆಗೆದು ಸಿಡಿದಾಯಿತು, ಯುದ್ಧ ಕೋವಿ ಗುರಿ ನೋಡದೆ ಹಾರಲಾರದು ಭೂಷಣ ಜೀವಿ ಬರಿದೇ ಮಾತಾಡಬಲ್ಲ, ಕಾರ್ಯಕರ್ತ ಧೋರಣೆ ಬಿಟ್ಟು ಗುಡುಗಲಾರ

ವಿಶೇಷ ವಿದ್ಯಮಾನಗಳು

ಮಹಾತ್ಮರ ಮನಸ್ಸು

ಈಗ ಸಮತಾವಾದದ ಕಡೆಗೊಲಿದಿರಬಹುದೆಂದು ಊಹೆ. ಅವರು ಬಂಧನದಲ್ಲಿದ್ದಾಗ ಕಾರ್ಲ್ ಮಾರ್ಕ್ಸ್‌ರ ಪುಸ್ತಕಗಳನ್ನು ಅಭ್ಯಾಸಿಸಿದ್ದಾರಂತೆ. ರಶ್ಯವು ಪಡೆದ ಪ್ರಬಲ ವಿಜಯಗಳು ಅವರ ಮನಸ್ಸನ್ನಾಕರ್ಷಿಸಿವೆ. ಈ ಅಪ್ರತಿಮ ಪ್ರತಿಭಟನಾ ಶಕ್ತಿಯನ್ನಾದಗಿ ಸಿಕೊಟ್ಟ ಸಮತಾವಾದದ ಅರುಳನ್ನವರು ಜೀರ್ಣಿಸಿಕೊಂಡಿದ್ದಾರೆ. ಅಂತೆಯೇ ರಾಜಕೀಯ ಸ್ಥಿತಿ ಪರಾಮರ್ಶೆಗಾಗಿ ಕಾರ್ಯದರ್ಶಿ ಪ್ಯಾರೇಲಾಲರನ್ನು ಡಾ. ಜಯಕರರಲ್ಲಿಗೆ ಕಳುಹಿದ ಗಾಂಧೀಜೀ, ತನ್ನ ಶಿಷ್ಯೆ ಮೀರಾ ಬೆನ್ನರನ್ನು ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಮ್ರೇಡ್ ಪಿ. ಸಿ. ಜೋಶಿಯವರ ಅಭಿಪ್ರಾಯ ಸಂಗ್ರಹಿಸಲು ಕಳುಹಿಕೊಟ್ಟಿದ್ದಾರೆ

ವ್ಯಾಪಾರೀ ಧೋರಣೆ

ಬ್ರಿಟನಿನ ಯುದ್ಧಾರ್ಥಿಕ ಮಂತ್ರಿ ಲಾರ್ಡ್ ಸಲ್ಬೋರ್ನಿಯವರು 'ವೈರಿ' ರಾಷ್ಟ್ರಗಳೊಡನೆ ವ್ಯಾಪಾರ ನಡೆಸುವವರ ಕಪ್ಪು ಪಟ್ಟಿಯೊಂದನ್ನು ತಯಾರಿಸಿ ಯುದ್ಧಾನಂತರವೂ ಅವರ ಮೇಲೆ ಪ್ರತಿಕ್ರಿಯೆ ಕೈಗೊಳ್ಳಲಾಗುವದು' ಎಂದು ತಟಸ್ಥ ರಾಷ್ಟ್ರಗಳಿಗೆ ಬೆದರಿಕೆ ಹಾಕಿದ್ದರೂ ಪೋರ್ಚುಗೀಸ್ ವ್ಯಾಪಾರೀ ಸಂಸ್ಥೆಗಳು ಅದನ್ನಳ್ಳಷ್ಟು ಗಣಿಸದೆ ಜರ್ಮನಿಯೊಡನೆ ವ್ಯಾಪಾರ ನಡೆಸುತ್ತಲೇ ಇವೆ 'ಇದೊಂದು ನೈತಿಕ ಪ್ರಶ್ನೆಯಲ್ಲ ಲಾಭದಪ್ರಶ್ನೆ. ಅದು ನೈತಿಕಾಪರಾಧವಾದರೆ ನನ್ನ ಸರಕಾರವೇ ನನಗದನ್ನು ತಿಳಿಸಬೇಕು ಯುದ್ಧಾನಂತರವು ಎಕ್ಸೆಯೆಂಬ ಅಲ್ಪ ಧೋರಣೆಯು-ಕೃತಕವಾದುದು' ಎಂದು ಪೋರ್ಚುಗೀಸಿನ ಪ್ರಸಿದ್ಧ ವ್ಯಾಪಾರಿಯೊಬ್ಬನೆಂದಿದ್ದಾನೆ

ಚರ್ಚಿಲ್ಲರ ಫ್ರಾಂಕೋಮೋಹ

ಬ್ರಿಟಿಷ್ ಪ್ರಧಾನಿ ಮಿ. ಚರ್ಚಿಲ್ಲರು ಕಳೆದ ಬಾರಿಯ ಪಾರ್ಲಿಮೆಂಟ್ ಭಾಷಣದಲ್ಲಿ ಟರ್ಕಿಯನ್ನು ಹಂಗಿಸುವದರೊಡನೆ ಬಿಷ್ಪಂದಕ್ಕೆ ಒಂದ ಸ್ಪೈನಿನ ಜನರಲ್ ಫ್ರಾಂಕೋನನ್ನು ಮನವರಿಕೆ ಶ್ಲಾಘಿಸಿದುದು ಮಿತ್ರ ಪ್ರಮುಖರಿಗೇನೇ ಆಶ್ಚರ್ಯತವಾಗಿದೆ. ಶ್ರೀಮಾನ್ ರೂಸವೆಲ್ಟರದನ್ನು ಬಹಿರಂಗವಾಗಿ ಖಂಡಿಸಿದ್ದಾರಲ್ಲದೆ ಅಧ್ಯಕ್ಷ ರೂಸವೆಲ್ಟರೂ ಒಲ್ಲೆನೆಂದಿದ್ದಾರೆ. ಸದ್ಯದಲ್ಲೇ ಲಂಡನಿಗಾಗಮಿಸುವರೆಂಬ ದಟ್ಟ ವದಂತಿಯದ್ದಿರುವ ಅಧ್ಯಕ್ಷ ರೂಸವೆಲ್ಟರು ಈ ವಿಷಯವನ್ನೂ ಚರ್ಚಿಲ್ಲರೊಡನೆ ಚರ್ಚಿಸಲಿರುವರೆಂದು ತಿಳಿದು ಬರುತ್ತದೆ.

ಆರೋಪೀ ಅಧಿಕಾರಿಗಳು.

ರಾಜಮಹೇಂದ್ರಿಯ ಶ್ರೀ- ಮಾಜಿ ಸಬ್‌ಕಲೆಕ್ಟರ್ ಟಿ ಎಸ್ ಸ್ವಾಮಿನಾಥನ್ ಐ ಸಿ ಎಸ್ ಮತ್ತು ಕೆ ಅಚ್ಯುತರಾಮಯ್ಯರರನ್ನು ಮೋಜಣಿ,ಲಂಚ, ವಿಶ್ವಾಸದ್ರೋಹ ಇತ್ಯಾದಿ ಆರೋಪಗಳ ಮೇಲೆ ರಾಜ ಮಹೇಂದ್ರಿಯ ಸ್ಪೆಶ್ಯಲ್ ಜಡ್ಜರು ವಿಚಾರಿಸಿ, ಇಬ್ಬರನ್ನೂ ಸೆಶ್ಶನ್ಸಿಗೆ ಕಮಿಟ್ ಮಾಡಿರುವರು 1942ನೇ ದಶಂಬರ್ 22ರಲ್ಲಿ ಮೇಲಧಿಕಾರಿಗಳ ಆಜ್ಞೆಯನ್ನು ಉಲ್ಲಂಘಿಸಿ, ಆಕ್ಷೇಪಾರ್ಹ ಘೋಷಗಳನ್ನೆಬ್ಬಿಸಿದ ಜನರ 15ಮಂದಿ ಪೋಲೀಸರು ದಸ್ತಗಿರಿಯಾಗಿ ಕಳೆದ 16 ತಿಂಗಳು ರಿಮಾಂಡಿನಲ್ಲಿರಿಸಲ್ಪಟ್ಟು, ಈಗ ಪ್ರತಿಯೊಬ್ಬರೂ ಮೂರು ಮೂರು ತಿಂಗಳ ಕಠಿಣ ಸಜೆಗೊಳಗಾಗಿದ್ದಾರೆ ಇದು ಆಗೋಸ್ತು ಗಲಭೆಯ ವಿರುದ್ಧ ದಿಕ್ಕಿನಲ್ಲೂ ಪ್ರತಿಧ್ವನಿಸಿಕೊಟ್ಟ ಪರಿಣಾಮವೆನ್ನಬೇಕು

ರೋಮ್ ನಗರವನ್ನು ಮಿತ್ರಸೇನೆ ಹಿಡಿದುಕೊಂಡಿತು!

ಅಖಿಲ ಕೆಥೋಲಿಕ್ ಪ್ರಪಂಚದ ಧಾರ್ಮಿಕ ಕೇಂದ್ರ–ಇಟೆಲಿಯಲ್ಲಿ ಮಿತ್ರ ರಾಷ್ಟ್ರೀಯ ಸೇನೆಗಳ ಮುಖ್ಯ ಹಾಗೂ ಬಹುಕಾಲದ ಆಸೆಯಾಗಿದ್ದ ರೋಮ್ ನಗರವು ಇದೇ ಜೂನ್ ತಾ. 4ನೇ ರಾತ್ರಿಯಲ್ಲಿ ಮಿತ್ರ ಸೇನೆಗಳ ವಶವಾಯಿತು ರೋಮಿನ ಮುಂಭಾಗದಲ್ಲಿ ರಕ್ಷಣಾ ಲೈನನ್ನು ರಚಿಸಿಕೊಂಡಿದ್ದ ನಾಜೀ ಸೇನೆಗಳು ರೋಮನ್ನು ಖಾಲಿಮಾಡಿ ಅದರ ಹಿಂಭಾಗದ ವಾಯುವ್ಯ ಮೂಲೆಯಲ್ಲಿ ಹೊಸ ವ್ಯೂಹವನ್ನು ಕಟ್ಟಿಕೊಂಡು ನಿಂತಿವೆ, ನಗರದೊಳಗೆ ನುಗ್ಗಿ ಬಂದ ಐದನೇ ಸೇನೆಗೆ ಜರ್ಮನರ ಸ್ನಿಪ್ಸ್‌ನ್ಯೂಟರ ಗನ್ನುಗಳ ಹೊಡೆತ ಮತ್ತು ವೈರಿಗಳ ಪ್ರತಿಭಟನೆಗಳ ಹೊರತು ಬೇರೆ ವಿರೋಧವಿರಲಿಲ್ಲ ಜನರಲ್ ಕೆಸ್ಸೆಲಿಂಗನು ರೋಮನ್ನು 'ಬಹಿರಂಗ ನಗರ'ವೆಂದು ಗಣಿಸಬೇಕೆಂಬ ವಿಶೇಷ ಸೂಚನೆಯನ್ನು ಆ ದಿನವೇ ಮಿತ್ರರಿಗೆ ಕಳುಹಿಸಿದ್ದನು ಅದನ್ನು ಉಳಿಸಿಕೊಳ್ಳುವುದು ಅಸಾಧ್ಯವೆಂದು ಖಚಿತವಾದಾಗ, ಆ ಪವಿತ್ರ ನಗರಕ್ಕೆ ವೃಥಾ ಹಾನಿಯೊದಗಬಾರದೆಂಬ ಸದಿಚ್ಛೆಯಿಂದಲೇ ಬಿಟ್ಟಿರುವದನ್ನು ಖುಲಿಮಾಡಿರಬೇಕು. ಪೋಪರ ಹೃದಯದೊಂದು ಪ್ರಾರ್ಥನೆಯಲ್ಲಿಂಗ ನಾಜಿಗಳ ಮೇಲೆ ಕೃತಜ್ಞತೆ ಮೂಡದಿರದು

ರೋಮಿನ ಮಹತ್ವ

ಅಲ್ಲಿಂದ ಹಿಂದೆ ಸರಿದು ಜರ್ಮನರು ಯುದ್ಧ ಕಳಕೊಂಡಂತಾಗಿಲ್ಲ, ಆದರೆ ಪ್ರತಿಷ್ಠೆಗೆ ಧಕ್ಕೆ ಬಂದಷ್ಟು ಪರಿ ಕ್ರಮಶಕ್ತಿಯ ನಿಂದ ಕೊರತೆಯುಂಟಾಗಿಲ್ಲ ಆದರೆ ರೋಮ್, ಲೋಕದ ಇನ್ನಾವುದೇ ನಗರಕ್ಕಿರದ ಒಂದು ವಿಶಿಷ್ಟತೆಯನ್ನು ಪಡೆದಿರುವ ನಗರ ಟೈಬರ್ ಹೊಳೆ ಮುಖದಿಂದ ಸುಮಾರು ಹದಿನೈದು ಮೈಲು ದೂರದಲ್ಲಿ ಇಟೆಲಿಯ ಅಂಗುಷ್ಟಭಾಗ ಮತ್ತು ಆಸ್ಟ್ರಿಯಾ ಗಡಿಗೆ ನಟ್ಟನಡುವೆ ರೋಮ್ ನಗರವಿದೆ ಇಡೀ ಇಟೆಲಿಯ ಎಲ್ಲಾ ರೈಲ್ವೇಗಳನ್ನು ಸಂಧುಗೂಡಿಸುವ ಕೀಲಿಕೈಯಂತಿದೆ ಅಲ್ಲಿ ಅತಿದೊಡ್ಡ ಆರು ರೈಲ್ವೇ ಸ್ಟೇಶನುಗಳಿವೆಯಲ್ಲದೆ ಜನೂವ ಮತ್ತು ಫ್ಲೊರೆನ್ಸ್ ಕಡೆಗೆ ಸಾಗುವ ಹೊಸ ಪಥಗಳು ಇಲ್ಲಿ ಸೇರಿಕೊಂಡಿವೆ ನಗರದ ಸುತ್ತಲೂ ಲಿಟ್ಟೋರಿಯೊ ಮತ್ತು ಸಿಯಾಂಪಿನೊ ಸೇರಿ ಹಬ್ಬಿರುವ ದೊಡ್ಡ ದೊಡ್ಡ ವಿಮಾನ ನಿಲ್ದಾಣಗಳು, ವಿಮಾನ ಹಾಗೂ ಇತರ ಕಾರ್ಖಾನೆಗಳಿವೆ ಟೈಬರ್ ಹೊಳೆಯ ಎರಡು ಬದಿಗಳಲ್ಲೂ ವಿಶಾಲ ಸೇನಾ ಶಿಬಿರಗಳಿವೆ, ಎಲ್ಲಾ ರಸ್ತೆಗಳು ಮುಖ್ಯವಾಗಿ ರೋಮಿನ ಕಡೆಗೆ'ಎಂಬ ಗಾದೆಯು ವಸ್ತುತಃ ಸತ್ಯ ಪಶ್ಚಿಮ ಕರಾವಳಿಗೆ ಹೋಗುವ ಒಂದು ರೈಲ್ವೇ ಮತ್ತು ಒಂದು ರಸ್ತೆಯನ್ನು ಬಿಟ್ಟರೆ ಇಟೆಲಿಯ ಉತ್ತರದಿಂದ ದಕ್ಷಿಣದವರೆಗಿನ ಎಲ್ಲಾ ಪಥಗಳಿಗೂ ರೋಮ್ ಕೇಂದ್ರನೆಲೆ

ಮುಂದೇನು?

ರೋಮ್ ಪತನವು ಮಿತ್ರರಾಷ್ಟ್ರೀಯರಿಗೊಂದು ಹೆಮ್ಮೆ ಇಟೆಲಿಯಲ್ಲಿರುವ ಮಿತ್ರ ಸೇನೆಗಳಿಗೆ ಈ ವಿಜಯವೇ ಒಂದು ಉತ್ಸಾಹಜನಕ ಟೋನಿಕ್ ಆಗಿ ಪರಿಣಮಿಸಬಹುದು ಅಧ್ಯಕ್ಷ ರೂಸವೆಲ್ಟರು ತಾ. 5ರಲ್ಲಿ ರೋಮ್ ವಿಜಯದ ಸಂಭ್ರಮವನ್ನು ರೇಡಿಯೋ ಆಕಾಶವಾಣಿ ಭಾಷಣವೀಯುವ ಮೂಲಕ ಪ್ರದರ್ಶಿಸಿದ್ದಾರೆ. ಐದನೇ ಸೇನೆಯು ರೋಮನ್ನು ಹಾದು ಹೋಗಿ ಟೈಬರ್ ಹೊಳೆಯನ್ನು ಹಲವು ಕಡೆಗಳಲ್ಲಿ ದಾಟಿ ಮುಂಗೂತ್ತಿದೆ ಎಂಬ ವಾರ್ತೆ ಬಂದಿದೆ ರೋಮಿನ ಮುಂಭಾಗದಲ್ಲಿದ್ದ ಜರ್ಮನ್ ಪ್ರತಿಭಟನಾ ಲೈನು ಈಗ ಹಿಂಭಾಗಕ್ಕೆ ಹೋಗಿರುವ ವ್ಯತ್ಯಾಸವೊಂದನ್ನು ಬಿಟ್ಟರೆ ಇಟೆಲಿಯುದ್ಧದಲ್ಲಿ ಬೇರೆ ವಿಶೇಷವೇನೂ ಉಂಟಾಗುವಂತಿಲ್ಲ ಆದರೆ ಮುಂದಿನ ದ್ವಿತೀಯ ರಂಗದ ಕಡೆಗೆ ಸಾಕಷ್ಟು ಲಕ್ಷ್ಯವಿತ್ತಿರುವ ಹಿಟ್ಲರನು, ಫ್ರಾನ್ಸಿನ ರಕ್ಷಣೆಗನುಕೂಲವಾಗುವಂತೆ ಇಟೆಲಿಯಲ್ಲಿ ತನ್ನ ಸೇನೆಗಳು ಹೋರಾಡುತ್ತಾ ಹಿಂದೆಗೆಯುವಂತೆ ಮಾಡುವ ಯೋಜನೆಯನ್ನನುಸರಿಸುತ್ತಿದ್ದಾನೆ ಎಂದು ಈಗ ಖಂಡಿತವಾಗಿ ಊಹಿಸಬಹುದು

ಅಸ್ಸಾಮು – ಬರ್ಮಾ

ಯುದ್ಧದಲ್ಲಿ ಗಣನೀಯ ಮಾರ್ಪಾಟುಗಳೇನೂ ನಡೆದಿಲ್ಲ. ಮಾನ್ಸೂನಿನ ಮಳೆ ಪ್ರಾರಂಭವಾದಲ್ಲಿ ಮಾತ್ರ ಕಳೆದ ಐದು ದಿನಗಳಿಂದ ಅರಕಾನಿನಲ್ಲಿ ವಿಪರೀತ ಮಳೆ ಸುರಿದು ಅಲ್ಲಿಯ ಕಿರುಹಾದಿಗಳೆಲ್ಲಾ ತೊರೆಗಳಾಗಿ ಹೋಗಿವೆ ಅಸ್ಸಾಮಿನಲ್ಲಿ ಮಳೆಗಾಲ ಬಂತೆಂಬುದನ್ನು ಸೂಚಿಸುವ ಹಿಮ ಗಾಳಿ ಬೀಸಹತ್ತಿದೆ. ವಿಶೇಷ ಯುದ್ಧವಾರ್ತೆಗಳು ಇನ್ನು ಆ ಕಡೆಯಿಂದ ಬರಬೇಕಾದರೆ ಋತು ವ್ಯತ್ಯಾಸವಾಗಿಕೊಳ್ಳಬೇಕು. ಚೀನಾ ಕಡೆಯಿಂದ ಉತ್ತರ ಬರ್ಮಾದತ್ತ ಮುಂದೊತ್ತುತ್ತಿರುವ ಚೀನೀ ಸೇನೆಗಳು ಸಾಲ್ವೀನ್ ರಂಗದಲ್ಲಿ ಶ್ವೆಲಿ ಹೊಳೆಯನ್ನು ದಾಟಿ ಉತ್ತರ ಬರ್ಮಾ ರಸ್ತೆಯ 12 ಮೈಲು ದೂರದವರೆಗೂ ಬಂದಿವೆಯಂತೆ

ಸರ್ ದಲಾಲರ ನೇಮಕ

ಯುದ್ಧಾನಂತರದ ಯೋಜನೆಗಾಗಿ ವೈಸರಾಯರು ತನ್ನ ಎಗ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಹೊಸ ಸ್ಥಾನವೊಂದನ್ನು ನಿರ್ಮಿಸಿ, ಹಿಂದುಸ್ಥಾನದ ಪ್ರಮುಖ ಉದ್ಯಮಿಗಳಲ್ಲೊಬ್ಬರಾದ ಸರ್ ಎ. ಆರ್ ದಲಾಲರನ್ನು ಮೆಂಬರರಾಗಿ ನೇಮಿಸಿಕೊಂಡಿರುವರು ಸರ್ ದಲಾಲರು ಭಾರತದ ಸಂಪತ್ತಿನ ಅಭಿವೃದ್ಧಿಗಾಗಿ ಹದಿನೈದು ವರುಷದ ಯೋಜನೆ ತಯಾರಿಸಿದ ರೇಷ್ಟ್ರ ಪ್ರಮುಖರಲ್ಲೊಬ್ಬರು ಬೋರ್ಡ್ ಮೆಂಬರರು ಈ ಹೊಸ ಹೆಜ್ಜೆ ಮತ್ತು ನೇಮಕಕ್ಕೆ ದೇಶವಿದೇಶಗಳಲ್ಲಿ ಸುಸ್ವಾಗತ ದೊರೆತಿದೆ

ಪತ್ರಿಕೋದ್ಯಮಿಗಳಿಗೆ ಶಿಕ್ಷೆ

ನಾಗಪುರದ ಪ್ರೆಸ್ಸಿನ ಡಿಟೆನ್ಯೂಗಳ ಬಗ್ಗೆ ಒಂದು ವಾರ್ತೆಯನ್ನು ಪ್ರಕಟಿಸಿದುದಕ್ಕಾಗಿ ನಾಗಪುರದ 'ಹಿತವಾದ' ಮತ್ತು 'ನಾಗಪುರ ಟೈಮ್ಸ್' ಪತ್ರಿಕೆಗಳ ಮೇಲೂ ಇವರದರ ಜಾತಿದಾರರೂ ಆದ ಶ್ರೀ ಸುಂದರರ ಮೇಲೂ ಸರಕಾರೀ ಮೊಕದ್ದಮೆ ನಡೆಸು, ನಾರದರಿಗೂ ಹಿತವಾದ ಪತ್ರಿಕೆಯ ಮಾಜೀ ಸಂಪಾದಕ ಹಾಗೂ ನಾಗಪುರ ಟೈಮ್ಸಿನ ಸಂಪಾದಕ ಮತ್ತು ಪ್ರಕಾಶಕರಿಗೂ 200ರಿಂದ 400ರ ವರೆಗಿನ ಜುಲ್ಮಾನೆ ತಪ್ಪಿದರೆ 4ರಿಂದ 6 ತಿಂಗಳ ವರೆಗಿನ ಕಠಿಣ ಶಿಕ್ಷೆಗಳು ವಿಧಿಸಲ್ಪಟ್ಟಿವೆ.

ಸಾವರ್ಕರರ ದಾನ

ಮೇ ತಾ 29ರಲ್ಲಿ ತನ್ನ 62ನೇ ಜನ್ಮದಿನದ ಸಂದರ್ಭದಲ್ಲಿ ಶ್ರೀ ಸಾವರ್ಕರರು ಹಿಂದೂ ಸಂಘಟನಾ ಕಾರ್ಯಕ್ಕಾಗಿ ರೂ 50000 ದಾನಮಾಡಿದ್ದಾರೆ

ದಕ್ಷಿಣ ಕನ್ನಡ

ಬಡಗಬೆಟ್ಟು —ಇಲ್ಲಿಯ ಬೋರ್ಡು ಶಾಲಾ ಅಧ್ಯಾಪಕ ಶ್ರೀ ಕಾಪು ... ಮಾಸ್ತರರಿಗೆ ವರ್ಗವಾಗಿದ್ದು,ಅವರನ್ನು ತಾ. 2ರಲ್ಲಿ ಬೀಳ್ಕೊಡಲಾಯಿತು ಈ ಶಾಲೆಯ ಶಿಂಗಳ ಹಬ್ಬವೂ ... ಕೂಟದ ಸಹಿತ ತಾ 1ರಲ್ಲಿ ಶ್ರೀಅನಂತಪದ್ಮನಾಭ ... ದೇರ ಅಧ್ಯಕ್ಷತೆಯಲ್ಲಿ ಜರಗಿತು

ಬಿಲ್ಲವ ಸಮಾಜ ಸೇವಾ ಸಂಘ, ಮೂಲ್ಕಿ —ಇದರ ಶ್ರೀ ... ವಾರ್ಷಿಕ ಮಹಾಸಭೆಯು ಮೇ ತಾ 28 ರಲ್ಲಿ ಶ್ರೀ ಕೆ. ವೈ. ಪೂಜಾರಿ ಬಿ ಎ ಬಿ ಎಲ್ ಎಡ್ವಕೇಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆಯಾದ ಬಳಿಕ ಸಂಘದ ಗೌ ಕಾರ್ಯದರ್ಶಿಯವರಾದ ಶ್ರೀ. ಎಲ್ಲಪ್ಪನವರ (ಜವಾಬ ... ಪಟ್ಟಸವೇತ) ವರದಿಯನ್ನು ಓದಿ ಕೇಳಲು ಅದು ... ಮತದಿಂದ ... ಸಭಿಕರಲ್ಲಿ ಶ್ರೀ ಯ ... ಆರ್ ಪೂಂಜರವರೂ ಶ್ರೀ ಕೆ ವಿಟ್ಟಪ್ಪ ಬಿ.ಎ ಎಲ್ ಟಿ ಯವರೂ ಶ್ರೀ ಯನ್. ಹೂವಯ್ಯನವರೂ ಸಂಘದ ಅಭಿವೃದ್ಧಿಯ ಕುರಿತು ಮಾತನಾಡಿದರು ಅನಂತರ ಅಧ್ಯಕ್ಷರು ಸಂಘದ ಪ್ರಗತಿಯ ಕುರಿತ ಕೆಲವು ಸೂಚನೆಗಳನ್ನಿತ್ತು ಸದಸ್ಯರಲ್ಲಿ ಪರಸ್ಪರ ಪ್ರೀತಿ ಸೌಹಾರ್ದತೆ ಸಹಿತಗೊಂಡು ಸಂಘವು ಉನ್ನತ ಶಿಖರವನ್ನೇರಬೇಕೆಂದು ತಮ್ಮ ಭಾಷಣವನ್ನು ಅಂತ್ಯಗೊಳಿಸಲು ನೆರೆದ ಸಭಿಕರಿಗೂ ಸಭಾಧ್ಯಕ್ಷರಿಗೂ ಕಾರ್ಯದರ್ಶಿಯವರು ಧನ್ಯವಾದವನ್ನಿತ್ತ ನಂತರ ನೆರೆದ ಸಭಿಕರ ಉಪಹಾರ ತಾಂಬೂಲಾದಿ ಸನ್ಮಾನದೊಡನೆ ಸಭೆಯು ಕೊನೆಗೊಂಡಿತು

ವರಂಗ —ಇಲ್ಲಿಯ ಸರಸ್ವತಿ ... ಶಾಲೆಯ ವಾರ್ಷಿಕೋತ್ಸವವು ತಾ 28 ... ರಲ್ಲಿ ಶ್ರೀ ಯು ಕೃಷ್ಣರಾವ್ ಬಿ ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಈ ಸಂದರ್ಭದಲ್ಲಿ ಶ್ರೀ ಕೆ ಎಸ್ ಪದ್ಮನಾಭ ಆಚಾರ್ಯರು ಬರೆದು ಕಲಿಸಿದ ... ಹಾಸ ನಾಟಕವು ಅಭಿನಯಿಸಲ್ಪಟ್ಟಿತು

ಸಕ್ಕರೆ ಮಾರಾಟದ ಅತ್ಯಧಿಕ ಬೆಲೆ —ಜಿಲ್ಲಾ ಕಲೆಕ್ಟರರು ಈ ಕೆಳಗಿನಂತೆ ನಿರ್ಣಯಿಸಿದ್ದಾರೆ ಗೋಣಿಗೆ ರೂ 49 1 6 ಮಣಕ್ಕೆ ರೂ 6 7 2- ರಾತ್ತಲಿಗೆ ರೂ 0 5 11 ಇದು ಮಂಗಳೂರು ನಗರಕ್ಕೆ ಮೇಯಿಂದ ನವಂಬ್ರ ತನಕ ಅನ್ವಯಿಸುವುದು

ಕಾರ್ಕಳ ತಾಲೂಕಿನಲ್ಲಿ ರಾಷ್ಟ್ರಭಾಷಾ ಪ್ರಚಾರ—(1932 1944) ಮತ್ತು ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘದ(1952 -1944)ರ ವರದಿಯು ಸಮಾಲೋಚನೆಗಾಗಿ ನಮ್ಮ ಬಳಿಗೆ ಬಂದಿದೆ ತಾಲೂಕಿನಲ್ಲಿ ಹಿಂದೀ ಪ್ರಚಾರ ಮತ್ತು ಅಭಿವೃದ್ಧಿಗೆ ಶ್ರೀ ಕೆ ಶ್ರೀನಿವಾಸ ಶೆಣ್ಯೆಯವರ ಸತತೋದ್ಯೋಗವೇ ಕಾರಣವೆಂದು ವರದಿಯ ಓದಿ ತಿಳಿದು ಬರುತ್ತದೆ ಇದರಲ್ಲಿ ಸಂಘಕ್ಕೆ ಸಹಾಯಮಾಡಿದವರ ಹೆಸರುಗಳ ಕೊಡಲ್ಪಟ್ಟಿರುವುದಲ್ಲದೆ ಸಂಘಕ್ಕೆ ಇನ್ನಷ್ಟು ಸಹಾಯ ಮಾಡಬೇಕೆಂಬ ವಿನಂತಿಯೂ ಇದೆ ಹಿಂದೀ ಪ್ರೇಮಿಗಳು ಉದಾರ ಸಹಾಯ ಮಾಡಿ ಸಂಘವನ್ನು ಇನ್ನಷ್ಟು ಬಲಪಡಿಸಬೇಕೆಂದು ಕೋರುತ್ತೇವೆ

ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನ, ಮಂಗಳೂರು

ಇದನ್ನು ಕಟ್ಟಿಸುವ ಕುರಿತು ... ಸಹಾಯ ... ದಾನಿಗಳ ... ವಸೂಲಿಯನ್ನು ತಾ 9 3 44ರ ನವಯುಗ ಪತ್ರಿಕೆಯಲ್ಲಿ ಎಲ್ಲರೂ ತಿಳಿದಿರಬಹುದು, ಅದರಲ್ಲಿ ಸೂಚಿಸಿದಂತೆ ತಾ 31 5 44ರ ತನಕ ... ದವರು ವಹಿಸಿ ... ವಸೂಲಿಗಳ ಕೆಳಗಿನಂತಿವೆ

	ಜಮಾ ವಾಗ್ದಾನ	ವಸೂಲಿ
9 3 44ರ ತನಕ	ರೂ 12 195	4, 539
ಶ್ರೀ ... ರೂ 250 ...	150	150
... ಶ್ರೀ ರಂಗ ... ಶೆಟ್ಟಿ ...		
... ಶೆಟ್ಟಿ ...	151	151
ಶ್ರೀ ...	101	101
ಶ್ರೀ ... ಶೆಟ್ಟಿ	101	
ರೂ 51 ರಂತೆ 3 ಮಂದಿ ಗೃಹಸ್ಥರು	153	153
ರೂಪಾಯಿ 25 ರಂತೆ 15 ಮಂದಿ ಗೃಹಸ್ಥರು	375	325
ರೂಪಾಯಿ 10/ ಕ್ಕೆ ಅದರ ಒಳಗೆ 9 ಮಂದಿ	61	61
... ರೂ 25 ರಂತೆ 2 ಮಂದಿ ಗೃಹಸ್ಥರಿಂದ	50	25
ಶ್ರೀ ಎಚ್ ಟಿ ... M Sc ಮೈಸೂರು	250	250
ವಿದ್ಯಾರ್ಥಿನಿ ಭವನ ... ರೂ500 ... ಕಂತುಗಳಿಂದ	1, 700	1, 000
... ಒಬ್ಬ ಗೃಹಸ್ಥರಿಂದ	50	50
... ಒಬ್ಬ ಗೃಹಸ್ಥರಿಂದ	10	10
ಶ್ರೀಮತಿ ... ಎಸ್. ಆರ್ ... ಹೆಸರಲ್ಲಿ ಅವರ ... ರೂ 500 ...	450	200
ಜುಮ್ಲಾ	15, 797	7, 015

ವಸೂಲಿ ಪೈಕಿ ರೂ 6000/ ವನ್ನು ಮಂಗಳೂರು ವಿದ್ಯಾರ್ಥಿನಿ ಭವನದ ಸೆಕ್ರೆಟರಿ ಶ್ರೀಮತಿ ... ಪೂಂಜ B A. ಯವರ ಕೈ ಒಪ್ಪಿಸಲಾಯಿತು

ಇನ್ನೂ ಕೆಲವರನ್ನು ಪತ್ರ ಮೂಲಕ ಕೇಳಿಕೊಂಡಿರುವ ... ಕಳುಹಿಸಿಕೊಡುವರೆಂಬ ಉತ್ತೇಜನ ಪತ್ರಗಳಿವೆ ರೂ 25, 000 ... ಈ ... ಸಹಾಯ ಕೊಟ್ಟವರ ಪೂರ್ಣ ಹೆಸರು ... ಪಟ್ಟಿಯನ್ನು ತಾ 31—7—44ರ ವರೆಗೆ ಪ್ರಕಟಿಸುವೆವು ... ವಾಗ್ದಾನ ಮಾಡಿದವರ ... ಸಹಾಯ ... ಉದಾರ ... ಸಹಾಯವನ್ನು ... 3ನೇ ಶ್ರೀ ರಾಮಕೃಷ್ಣ ಪೂಂಜರಿಗೆ ಕಳುಹಿಸಿ ಕೊಡಬೇಕೆಂದು ವಿನಂತಿಸುವೆವು

ಮಂಗಳೂರು
ತಾ 5 6 44

ಕಾರ್ಕಳ ನಾಗಣ್ಣ ಹೆಗ್ಗಡೆ
ಸೌಕೂರು ಅಂತಯ್ಯ ಶೆಟ್ಟಿ
ಮೂಲ್ಕಿ ರಾಮಕೃಷ್ಣ ಪೂಂಜ

Degrees Books Medicines

Free H L M S, M B H M D, etc Free Homeo Ayur Unani Natureo degree by post also—Practitioner also get soon Homeo Materiamedica Rs 5 Homeo Practice book Rs 4 Insanity Cure Pills Rs 10 Enclose 2 annas stamp —

Prof Dr N H Chhatbar
Principal Indian Homeopathi Institute & Society (Govt Regd)
P. O MAHUVA (Kathiawar Dt India)

Sidha-Kalpa Kavach (Regd)
No 3 Rs 2 No 2 Rs 5 No 1 Rs 7 Special Rs. 10, Extra Special Rs 17 for love marriage health wealth Ask any six questions with M O Re 1/- and get correct answers by returnpost For send Rs 10 No V P Send M O free, prints

Prof. Dr N. H Chhatbar
P. O MAHUVA (Kathiawar India)

ದಕ್ಷಿಣ ಕನ್ನಡ-

ಮಂಗಳೂರು

ಜಿಲ್ಲಾ ಕಲೆಕ್ಟರರಿಗೆ ವರ್ಗ—ಇತ್ತೀಚೆಗೆ ನೇಮಕವಾದ ದ. ಕ. ಜಿಲ್ಲಾ ಕಲೆಕ್ಟರರಾದ ಶ್ರೀ ಪಿ. ರಾಮುಣ್ಣಿಯವರಿಗೆ ಇಲ್ಲಿಂದ ವರ್ಗವಾಗಿದೆ. ಅವರ ಬದಲಿಗೆ ಈಗ ಪಶ್ಚಿಮ ಗೋದಾವರಿಯಲ್ಲಿ ಕಲೆಕ್ಟರರಾಗಿರುವ ಮಿ| ಆರ್. ಸಿ. ರೈ. ತೋ. ಅವರು ಬರಲಿರುವರು.

ಮುನಿಸಿಪಲ್ ಸಭೆಗೆ ಕಲೆಕ್ಟರರ ಸಂದರ್ಶನ.—ತಾ. ೩ರಂದು ನಗರಸಭೆಯು ವಿಶೇಷ ಕೂಟವೊಂದು ಸೇರಲಿದ್ದಾಗ ನಮ್ಮ ಜಿಲ್ಲಾ ಕಲೆಕ್ಟರರು, ಶ್ರೀ| ದತ್ತಾತ್ರೇಯ ರಾವ್ ಮತ್ತು ಶ್ರೀ ನರಸಿಂಹ ಅವರ ಜತೆಗೆ ಬಂದು ಭೇಟಿಯಿತ್ತರು. ನಗರ ಸಭಾಧ್ಯಕ್ಷರಾದ ಮಿ| ಫಿಶ್ಲಿ ಡಿ ಸೋನ್ ಸಾಹೇಬರು ಕಲೆಕ್ಟರರನ್ನು ಸ್ವಾಗತಿಸಿ ಪುಷ್ಪಹಾರ ಅರ್ಪಿಸಿ ಸತ್ಕರಿಸಿದರು. ಕಲೆಕ್ಟರರು ಅತಿಥ್ಯಕ್ಕಾಗಿ ವಂದಿಸುತ್ತ, ನಗರ ಸಭೆಗಳಿಗೆ ಸಕ್ಕರೆ ಹಂಚುವ ತಮ್ಮ ಯೋಜನೆಯನ್ನು ಸಭೆಯ ಮುಂದಿರಿಸಿ ಸಲಹೆ ಕೇಳಿದರು. ಶ್ರೀಗಳ ದ-ಸ್ಸೋಜ, ಹವ್ಯಬ್ಬ ಮೊದಲಾದವರು ಕೆಲವು ಸೂಚನೆಗಳನ್ನು ಕೊಟ್ಟರು. ಬಳಿಕ ಕಟ್ಟಿಗೆಯ ಬೆಲೆ, ಚಿಲ್ಲರೆಯ ಅಭಾವ, ಕೊಟ್ಟಲಿನಲ್ಲಿ ತಿಂಡಿಗಳ ಬೆಲೆ-ಇವುಗಳ ವಿಚಾರವೂ ಚರ್ಚಿಸಲ್ಪಟ್ಟಿತು. ಕೂಪನ್‌ಗಳ ಪದ್ಧತಿಯು ನ್ಯಾಯವಿರುದ್ಧ, ಚಿಲ್ಲರೆಗಾಗಿ ಪಟ್ಟಿಗಳು ಬೇಕು'—ಎಂದು ಕಲೆಕ್ಟರರು ಸೂಚಿಸಿದರು. ಮುನಿಸಿಪಲ್ ಕಮಿಶನರಿಂದ ತಮಗೊದಗಿದ ಸಹಾಯವನ್ನು ಪ್ರಶಂಸಿಸಿದರು. ಸಭೆಯ ಪರವಾಗಿ ಉಪಾಧ್ಯಕ್ಷರಾದ ಶ್ರೀ| ಸಿ. ಎಲ್. ಲೋಬೋ ಅವರು ಕಲೆಕ್ಟರರು ನಗರಸಭೆಯನ್ನು ತಮ್ಮ ವಿಶ್ವಾಸಕ್ಕೊಳಪಡಿಸಿಕೊಂಡುದಕ್ಕಾಗಿ ಪ್ರತಿ ವಂದನೆಗಳನ್ನರ್ಪಿಸಿದರು.

ಮುನ್ಸಿಫ್ ಹುದ್ದೆಗೆ ಆಯ್ಕೆ—ಈ ಬಾರಿಯ ಆಯ್ಕೆಯಲ್ಲಿ ಶ್ರೀಗಳಾದ ಯು| ಕೆ. ವ್ಯಾಸ, ಇ. ಗನ್ಸಾಲ್ವಿಸ್ ಮತ್ತು ಫೀವರ್ ಕೂಯಲೋ ಇವರುಗಳನ್ನು ಮುನ್ಸಿಫ್ ಸ್ಥಾನಗಳಿಗೆ ಆರಿಸಲಾಗಿದೆ.

ಜಿಲ್ಲಾ ಬೋರ್ಡು ಕಟ್ಟಡದಲ್ಲಿ ಇಲಿ:—ಬಿದ್ದುದರಿಂದ ಆಫೀಸನ್ನು ಏಳು ದಿನಗಳ ವರೆಗೆ ಮುಚ್ಚಲಾಗಿದೆ, ಆಫೀಸು ಪುನಃ ತಾ. ೫ರಂದು ಆರಂಭವಾಗುವುದು.

ಹಣ್ಣು ಹಂಪಲು ಪ್ರದರ್ಶನ—ಪಶ್ಚಿಮ ಕರಾವಳಿಯ ಹಣ್ಣು ಹಂಪಲು ಮತ್ತು ತರಕಾರಿಗಳ ಪ್ರದರ್ಶನವೊಂದು ೩ರಂದು ಜಿಲ್ಲಾ ಕಲೆಕ್ಟರರಿಂದ ಗ| ಕಾಲೇಜಿನಲ್ಲಿ ತೆರೆಯಲ್ಪಟ್ಟಿತು. ಆರಂಭದಲ್ಲಿ ಶ್ರೀ| ರಂಗನಾಥ ಪೂಂಜರು ನೆರೆದವರನ್ನು ಸ್ವಾಗತಿಸಿದರು. ಇಂತಹ ಪ್ರದರ್ಶನಗಳ ಆವಶ್ಯಕತೆಯ ವಿಚಾರವಾಗಿ ಶ್ರೀ| ಕೆ. ಸಿ. ನಾಯಕರು ಮಾತನಾಡಿದರು. ಕಲೆಕ್ಟರರು ಉದ್ಘಾಟನೆಯನ್ನು ನೆರವೇರಿಸುತ್ತ, ಉದ್ಯೋಗದಿಂದ ನಿವೃತ್ತರಾದವರು ಮತ್ತಿತರ ಹಳಬರು, ತೋಟಗಾರಿಕೆಯ ಕಲೆಯನ್ನು ಅಭ್ಯಸಿಸಿ ಹೆಚ್ಚು ಆಹಾರ ಬೆಳೆಸುವ ಯೋಜನೆಯು ಫಲದಾಯಕವಾಗುವಂತೆ ಮಾಡಬೇಕೆಂದರು. ರಂಗನಾಥ ಶ್ರೀ| ನಾಯಕರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯ ಮುಂದೆ ಮಾತನಾಡುತ್ತ ಎ. ಆರ್. ಲೋಬೋ ಅವರು ಮಾನವನ ಆಹಾರದಲ್ಲಿ ಹಣ್ಣುಗಳ ಸ್ಥಾನ ಎಂಬ ವಿಚಾರವಾಗಿಯೂ, ಶ್ರೀ| ಸಿದ್ದಪ್ಪ ಅವರು ಹಣ್ಣುಗಳ ರಕ್ಷಣೆ ಎಂಬ ಕುರಿತೂ ಉಪನ್ಯಾಸಗಳನ್ನಿತ್ತರು.

ಶಾಲೆಗೆ ದಾನ—ಕೆನರಾ ಹೈಸ್ಕೂಲಿನ ವಂಡ್ಸ್ಲೆಂಡ್ ಪೇಟೆ ಶಾಖೆಗೆ ಮೆಸರ್ಸ್ ರಾವ್ ಎಂಡ್ ಕೋ ಇದರ ವ್ಯಾಪಾರಿಕರಾದ ಶ್ರೀ| ಬಿ. ಗಣೇಶ ರಾವ್ ಅವರು ರೂ. ೧೫೦೦, ಶ್ರೀ| ಮಂಜುನಾಥ ದೇವದಾಸ ಸ್ವಾಮಿಯವರು ರೂ. ೫೦೦ನ್ನೂ, ಇವರ ಸಂಬಂಧಿಯವರು ರೂ. ೧೦೦೦ನ್ನೂ ದಾನ ಮಾಡಿರುವರು.

ವರ್ಗ.—ಜನಾಬ್ ಮಹಮ್ಮದ್ ಗೌಸ್‌ರವರು ಪುತ್ತೂರಿನ ಮುನ್ಸಿಫರಾಗಿಯೂ, ಶ್ರೀ| ಡಿ. ಆರ್. ವೆಂಕಟೇಶ ಅಯ್ಯರ್‌ರವರು ಕುಂದಾಪುರದ ಪ್ರಿನ್ಸಿಪಾಲ್ ಮುನ್ಸಿಫರಾಗಿಯೂ, ಶ್ರೀ ಮುನಿರಾಜು-ದರ್ಗಾರವರು ಕುಂದಾಪುರದ ಎಡಿಶನಲ್ ಮುನ್ಸಿಫರಾಗಿಯೂ ನೇಮಿಸಲ್ಪಟ್ಟಿರುವರು.

"ರಾವ್ ಸಾಹೇಬ್"—ಪಬ್ಲಿಕ್ ಪ್ರಾಸಿಕ್ಯೂಟರರಾದ ಶ್ರೀ| ಎಚ್. ಕೆ. ನಂಬಿಯಾರ್ ಎ-ಎಚ್-ಲೋ-ಅವರಿಗೆ "ರಾವ್ ಸಾಹೇಬ್" ಪ್ರಶಸ್ತಿಯನ್ನು ಕೊಡುವ ಸಮಾರಂಭವು ಇದೇ ತಾ ೧೫ರಲ್ಲಿ ಗವರ್ನಮೆಂಟ್ ಕೊಲೆಜಿನಲ್ಲಿ ಜರುಗುವುದು.

ಅರ್ಧ ಪಾವು ಕಡಿತ.—ಅಕ್ಕಿ ರೇಶನಿಂಗ್ ಜ್ಯಾರಿಯಾದ ವಾರದಲ್ಲಿ ಪ್ರಾಯಸ್ಥರಿಗೆ ದಿನಕ್ಕೆ ಅರ್ಧ ಸೇರಿನಂತೆ ಅಕ್ಕಿ ಕೊಡಲ್ಪಡುತ್ತಿತ್ತು; ಇದನ್ನು ಎರಡನೇ ವಾರದಲ್ಲಿ ಸೇರಿಗೆ ಅರ್ಧ ಪಾವಿನಂತೆ ಕಡಿದಿರುವರು. ದಿನವಿಡೀ ಮೈಮುರಿದು ಕೆಲಸ ಮಾಡುತ್ತಿರುವ ವರ್ಗದವರ ಮಟ್ಟಿಗೆ ರೇಶನನ್ನು ಹೆಚ್ಚಿಸುವುದು ಉಚಿತವಿದೆ.

ಉಡುಪಿ

ಕೆಪ್ಟನ್ ಕಾಲ್ಬರ್ ವುಡ್, ಅಸಿಸ್ಟೆಂಟ್ ರಿಕ್ರೂಟಿಂಗ್ ಆಫೀಸರ್—ಇವರು ತಾ ೧ರಲ್ಲಿ ತಾಲೂಕು ಕಚೇರಿಯಲ್ಲಿ ಜರಗಿದ ಸಭೆಯಲ್ಲಿ ಯುದ್ಧ ಪ್ರಯತ್ನಕ್ಕೆ ಸರ್ವರೂ ದೇಶಾಭಿಮಾನದಿಂದ ಸಹಾಯ ಮಾಡಬೇಕಾಗಿದೆಯೆಂದೂ ಸೂಚಿಸಿ ಗ್ರಾಮ ಉದ್ಯೋಗಸ್ಥರು ಈ ಭಾಗದಲ್ಲಿ ಮುಂದಾಳುತನ ವಹಿಸಿ ಆರು ತಿಂಗಳ ರಿಕ್ರೂಟ್‌ಮೆಂಟ್ ಪ್ಲ್ಯಾನ್ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿಯೂ ತಿಳಿಸಿದರು. ವಿನ್ಯಬದ್ಧಿ ಮಾಡಲಾದ ಸದ್ಗೃಹಗಳಿಗೆ ಹೆಸರುಪಟ್ಟಿ ದ. ಕ. ಜಿಲ್ಲೆಯು ಯುದ್ಧ ಪ್ರಯತ್ನದಲ್ಲಿ ಸಹ ತನ್ನ ಪಾಲಿನ ಕರ್ತವ್ಯವನ್ನು ಪೂರೈಸಬೇಕೆಂದ ವಿನಂತಿಸಿದರು.

ಸೀದಾ ಪದ್ಧತಿಯಲ್ಲಿ ಗೋಧಿಗೆ ಸ್ಥಾನ:—ಕಳೆದ ವಾರದಿಂದ ಅಕ್ಕಿಯೊಂದಿಗೆ ಗೋಧಿ ಸಹ ಕೊಡಲಾರಂಭವಾಗಿಯದೆ. ಬೆಳ್ತಿಗೆ ಅಕ್ಕಿ ರೇಶನ್‌ನವರಿಗೆ ಸರಾಸರಿ ವಾರಕ್ಕೆ ನಾಲ್ಕು ಸೇರಿನಂತೆ ಮಾತ್ರ ಬೆಳ್ತಿಗೆ ಅಕ್ಕಿ ಕೊಡಲಾಗುತ್ತಿದೆ. ಸೀದಾ ಪದ್ಧತಿ ಜ್ಯಾರಿಗೆ ಬಂದು ಎರಡು ತಿಂಗಳು ಗುತ್ತ ಬಂದರೂ ಒಂದು ವಾರದಲ್ಲಿ ಮಾತ್ರ ಸಂಪೂರ್ಣ ಬೆಳ್ತಿಗೆ ಅಕ್ಕಿ ಸರಬರಾಯಿ ಆಗಿರುವುದು. ಸುಕಪ್ಪು ಬೆಳ್ತಿಗೆ ಅಕ್ಕಿಯ ಸ್ಟಾಕಿನ ಅಭಾವವೇ? ಧಾರಾಳ ಗೋಧಿ ದೊರೆಯಲಾರಂಭವಾದ ಈ ಸಮಯದಲ್ಲಿ ಕಾಫಿ ಹೋಟೆಲುಗಳಿಗೆ ಇಡ್ಲಿ-ದೋಸೆಗೆ ಕೊಡಲಾಗುವ ಬೆಳ್ತಿಗೆ ಅಕ್ಕಿಯ ಪ್ರಮಾಣವನ್ನು ಕಡಿಮೆ ಮಾಡಿದರೆ ಆ ಅಂಶವನ್ನು ಬೆಳ್ತಿಗೆ ಅಕ್ಕಿಯನ್ನಪೇಕ್ಷಿಸುವವರಿಗೆ ಕೊಡಲನುಕೂಲವಾಗುವುದಷ್ಟೆ.

ಹಾಲು ತುಪ್ಪದ ಅಭಾವ:—ಉಡುಪಿಯಲ್ಲಿ ತಲೆದೋರಿದ ನಿಶ್ಚಿತ ಬೆಲೆಯ ಸಧರ್ಮವಾಗಿದ್ದರೆ ಗೋಧಿಯನ್ನು ಉಪಯೋಗಿಸಲಾರಂಭಿಸಿದ ಬಡ ಜನರಿಗೆ ಕಷ್ಟಸಂಭವಿಸಬಹುದು. ಕಟ್ಟಿಗೆ, ಒಣಹುಲ್ಲು ಇವುಗಳ ಬೆಲೆಯೂ ದಿನದಿಂದ ದಿನಕ್ಕೆ ಏರುತ್ತಲಿದೆ.

ಸಂಪ್ರದಾಯ ಶಿಥಿಲವಾಗಬೇಕು.—ಶಾಲೆಗಳು ಈಗ ತಾನೆ ಸೆಕೆಕಾಲದ ರಜೆಯನ್ನು ಮುಗಿಸಿ ಆರಂಭವಾಗಿಯವೆ. ಪ್ರಾಥಮಿಕ ಶಾಲೆಗಳ ಮತ್ತು ಇತರ ಶಾಲೆಗಳ ವಿದ್ಯಾರ್ಥಿಗಳಲ್ಲಿ ಹತ್ತು ತಾಪತ್ರ, ಹದಿನೈದು ತಾಪಿನ, ಇನ್ನೂ ಹೆಚ್ಚಿನ ಪುಸ್ತಕಗಳಾಗಬೇಕೆಂದು ಉಪಾಧ್ಯಾಯರು ಹೇಳುವ ಸಂಬಂಧ ಆಪು ದಿನದ ಮಾತಾಗಿ ತೋರಿದೆ. ಕಾಗದ ತುಟ್ಟಿಯ ಕಾಲದಲ್ಲಿ ಹಿಂದಿನ ಸಂಪ್ರದಾಯ ಶಿಥಿಲವಾಗಬೇಕೆಂಬುದನ್ನು ಸಂಬಂಧಪಟ್ಟವರು ತಿಳಿಯಬೇಕಾಗಿದೆ.

ಅಧಿಕ ಲಾಭದ ಕಳ್ಳ ಸಂತೆಯನ್ನು ನಿಲ್ಲಿಸುವ ಸಲುವಾಗಿ ಉಡುಪಿಯಲ್ಲಿ ತಾ 31ರಲ್ಲಿ ಒಂದು ಕಮಿಟಿಯು ರಚನೆಯಾಗಿದೆ. ಅದಕ್ಕೆ ಉಡುಪಿಯ ಅಸಿಸ್ಟೆಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರು ಪ್ರೆಸಿಡೆಂಟರಾಗಿಯೂ ಶ್ರೀಗಳಾದ ಆರ್. ಫೆರ್ನಾಂಡಿಸ್, ಬಿ. ಎ. ಬಿ. ಎಲ್., ಟಿ. ಎನ್. ಜಿ. ಕೌಂಡಿನ್ಯ, ಬಿ. ಎ., ಎಲ್. ಟಿ. ಮತ್ತು ಬಿ. ರಾಮರಾಯ ಸೆಟ್ಟಿ, ಬಿ. ಎ. ಎಲ್. ಟಿ. ಇವರು ಸದಸ್ಯರಾಗಿಯೂ ನೇಮಿಸಲ್ಪಟ್ಟಿರುವರು. ಇದರಂತೆಯೇ ಕುಂದಾಪುರದಲ್ಲೂ ತಾ 27ರಲ್ಲಿ ಕಮಿಟಿಯು ರಚನೆಯಾದುದಾಗಿ ಅದಕ್ಕೆ ಶ್ರೀಗಳಾದ ವೈ. ಎಸ್. ಸೆಟ್ಟಿ ಎಡ್ವೊಕೇಟ್, ಕೆ. ರಾಮಪ್ಪ ಎಡ್ವೊಕೇಟ್ ಮತ್ತು ರೆ| ಫಾದರ್ ಕೊಲಾಸೋರವರು ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು. ಈ ಕಮಿಟಿಗೂ [illegible] ಟೇಕ್ಸ್ ಆಫೀಸರರೇ ಅಧ್ಯಕ್ಷರು. ಸರಕಾರವು ವಿಧಿಸಿದ ಆಹಾರ ಸಾಮಗ್ರಿಗಳ ಬೆಲೆಯನ್ನು ಜನತೆಯಲ್ಲಿ ಪ್ರಚಾರ ಮಾಡುವುದು, ಅದಕ್ಕೆ ವ್ಯತಿರಿಕ್ತವಾಗಿ ವರ್ತಿಸಿದ ಸಾಹುಕಾರರ ಪತ್ತೆಯನ್ನು ಮೇಲಧಿಕಾರಿಗಳಿಗೆ ತಿಳಿಸುವುದು ಈ ಕಮಿಟಿಯ ಸದಸ್ಯರ ಕರ್ತವ್ಯವಾಗಿದೆ. ಸಾಹುಕಾರರ ಬಂಧುಗಳೂ ಮಹಾಜನರೂ ಈ ಕಡೆ ನಿಗಾ ಕೊಡಬೇಕಾಗಿದೆ.

ಡಾ| ಮೂಂಜೆಯವರ ಆಗಮನ—ಡಾ| ಮೂಂಜೆಯವರು ದ. ಕ. ಜಿಲ್ಲಾ ಹಿಂದೂ ಮಹಾ ಸಭೆಯ ಅಧಿವೇಶನದ ಅಧ್ಯಕ್ಷತೆ ವಹಿಸಲು ಇದೇ ತಾ 3ರಲ್ಲಿ ಉಡುಪಿಗೆ ಚಿತ್ತೈಸಿದ್ದರು.

ಉದ್ಯಾವರ:—ಇಲ್ಲಿಯ ಬಿಲ್ಲವ ಮಹಾಜನ ಸಂಘದವರು ಕಟ್ಟಿಸಿರುವ ಮಂದಿರದ ಪ್ರವೇಶ ಸಮಾರಂಭವು, ಕಳೆದ ೩ನೇ ತಾರೀಖಿನಲ್ಲಿ, ಶ್ರೀ ಮಂಗಳೂರು ಚಾರಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರು ಸಮಾಜದ ಏಳ್ಗೆ, ಸಮಾಜ ಸಮಾಜಗಳೊಳಗೆ ಇರಬೇಕಾದ ಐಕ್ಯ, ಸಂಘ-ಸಂಸ್ಥೆಗಳು ಇನ್ನೂ ಹೆಚ್ಚಬೇಕಾದ ಆವಶ್ಯಕತೆ ಇವುಗಳ ಕುರಿತು ಉಪಯುಕ್ತ ಸಲಹೆಗಳನ್ನಿತ್ತರು.

ಇನ್ನಂಜೆ:—ತಾ 4-6-44ರಲ್ಲಿ ಇಲ್ಲಿಯ ಎಸ್. ವಿ. ಯಚ್. ಹೈಸ್ಕೂಲಿನ ಆರಂಭ ದಿನಾಚರಣೆಯು ಜಿಲ್ಲಾ ಬೋರ್ಡು ವಿದ್ಯಾಧಿಕಾರಿಗಳಾದ ವಿದ್ವಾನ್, ಯಚ್. ರಾಮರಾವ್ M. A. L.T., B O L ಅವರ ನೇತೃತ್ವದಲ್ಲಿ ಜರಗಿತು: ಶ್ರೀ ವಿಷ್ಣುಮೂರ್ತಿ ದೇವರ ಸನ್ನಿಧಿಯಲ್ಲಿ ಪ್ರಾರ್ಥನೆಯಾದ ಬಳಿಕ ಶಾಲೆಯಲ್ಲಿ ಶ್ರೀನಿವಾಸ ವಿಶ್ವಂತಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಶ್ರೀ ಯಚ್. ರಾಮರಾಯರು, ಶಾಲೆಯ ಏಳಿಗೆಗೆ ಬೇಕಾದ ಸುಯೋಗ್ಯ ಹಿತಸೂಚನೆಗಳಾದ ನಂತರ, ಅಧ್ಯಕ್ಷರು ಸಮಯೋಚಿತ ಭಾಷಣವನ್ನಿತ್ತ ಮೇಲೆ ಮುಖ್ಯೋಪಾಧ್ಯಾಯರ ಧನ್ಯವಾದ ಸಮರ್ಪಣೆ, ಲಘೂಪಹಾರಾದಿಗಳಾಗಿ ಸಭಾಂತ್ಯವಾಯಿತು.

ಸುರತಕಲ್:—ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ ಪ್ರಾರಂಭೋತ್ಸವವು ತಾ 31-5-44ರಂದು ಶ್ರೀಕೃಷ್ಣಾಪುರಮಠದ ಶ್ರೀ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರಿಂದ ವಿಜೃಂಭಣೆಯಿಂದ ಜರಗಿಸೋಣವಾಯಿತು. ಊರ ಹೆಬ್ಬಾಗಿಲಿನಲ್ಲಿ ಶಾಲಾ ಸಮಿತಿಯವರೂ ಊರ ಸಭ್ಯ ಮಹನೀಯರೂ ಶ್ರೀ ಶ್ರೀಗಳವರನ್ನು ಬ್ಯಾಂಡು ವಾದ್ಯಗಳೊಡನೆ ಇದಿರ್ಗೊಂಡು ತಾಲೀಂಟು ಕತ್ತಿವರಸೆ ಮೊದಲಾದ ಆಟಗಳೊಂದಿಗೆ ಮೆರವಣಿಗೆಯಲ್ಲಿ ಶಾಲೆಗೆ ಕರೆತರಲಾಯಿತು. ಸ್ವಾಗತಿಸಲ್ಪಟ್ಟ ಕೆಲವು ಮಹನೀಯರು ಹೈಸ್ಕೂಲಿನ ಗೊತ್ತು ಗುರಿ, ಹೈಸ್ಕೂಲಿನ ಮೇಲ್ಮೆ, ಬಾಲಕರ ದಿನಜೀವನ ಇವೇ ಮೊದಲಾದ ವಿಷಯಗಳಲ್ಲಿ ಉಪನ್ಯಾಸವನ್ನಿತ್ತರು. ಶ್ರೀ ಶ್ರೀಗಳವರೂ "ವಿದ್ಯಾ ಪರಾದೇವತಾ" ಎಂಬುದನ್ನುದ್ದೇಶಿಸಿ ವಿದ್ಯೆಯ ತತ್ವವನ್ನು ತಮ್ಮ ಅಮೂಲ್ಯ ವಾಣಿಯಿಂದ ವಿಸ್ತರಿಸಿದರು. ಕೊನೆಗೆ ಬಾಲಕರ ಕೆಲವು ವಿನೋದಗಳಾದನಂತರ ಸಭೆಯು ಮಂಗಳದೊಂದಿಗೆ ಕೊನೆಗೊಂಡಿತು.

ದಿ ವಿದ್ಯಾದಾಯಿನಿ ಸಭಾ, 31 ರ ಘೋನಾಥ್ ದಾದಾಜಿ ಸ್ಟ್ರೀಟ್. ಫೋರ್ಟ್ ಮುಂಬಯಿ, **ಬಿಲ್ಲವ ಸಮಾಜದ ಬಾಲ ಬಾಲಕಿಯರ ತಿಳುವಳಿಕೆಯ ಬಗ್ಗೆ:**—ಮೇಲ್ಕಾಣಿಸಿದ ವಿದ್ಯಾದಾಯಿನಿ ಸಭೆಯಿಂದ ಬಿಲ್ಲವ ಸಮಾಜದ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ಕೊಡಲಾಗುವುದು. ಅರ್ಜಿ ಪತ್ರಗಳು ಸನ್ 1944ನೇ ಇಸವಿ ಜೂನ್ ತಿಂಗಳ 15ನೇ ತಾರೀಕಿನ ಒಳಗೆ ಮೇಲ್ಕಾಣಿಸಿದ ವಿಳಾಸಕ್ಕೆ ಮುಟ್ಟತಕ್ಕದ್ದು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸುಲಭದಲ್ಲಿ ಇಂಗ್ಲಿಷು

ಯುವಕರಿಗೆ ಮತ್ತು ವಯಸ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅನ್ಯ-ಸಹಾಯವಿಲ್ಲದೆ ಕಲಿಸಿ ಕೊಡುವ ಪುಸ್ತಕ.

THE BEST PREVENTIVE IN EPIDEMICS OF CHOLERA

"BHUVANENDRA" CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.

For Children. 1 to 2 drops with the said decoction

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 3ರಿಂದ 5 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ- ಕನ್ನಡ

ಉಡುಪಿ ಸ್ಟಾಕಿಸ್ಟರು:— **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ.**

—ಈ ಘಟನೆಗಳು—
ಆಕರ್ಷಣೀಯವಿದ್ದಂತೆ ಅರ್ಥಗರ್ಭಿತವಿವೆ.

ಡಿ ವೆಲೆರಾ ವಿಜಯ

ಆಯರ್ಲೆಂಡಿನ ಪ್ರಧಾನಿ ಡಿ. ವೆಲೆರಾರೀಗ ತನ್ನ ರಾಷ್ಟ್ರದ ವಿರುದ್ಧ ಪಕ್ಷಗಳ ಮೇಲೆ ಮಾತ್ರವಲ್ಲ, ಆಂಗ್ಲೋ ಅಮೆರಿಕಾದ ಧೋರಣೆಯ ಮೇಲೂ ಚುನಾವಣೆ ಮೂಲಕ ಸ್ಪಷ್ಟ ವಿಜಯ ಸಾರಿದ್ದಾರೆ. ಆಯರ್ಲೆಂಡಿನಲ್ಲಿರುವ ನಾಜೀ ಏಜಂಟರನ್ನೋಡಿಸಬೇಕೆಂದು ಕಳೆದ ಫೆಬ್ರುವರಿಯಲ್ಲಿ ಅಧ್ಯಕ್ಷ ರೂಸವೆಲ್ಟರು ಮುಂದಿಟ್ಟ ಬೇಡಿಕೆಯನ್ನು ಅಸಾಮಾನ್ಯ ಎದೆಗಾರಿಕೆಯಿಂದ ತಿರಸ್ಕರಿಸಿದ ಡಿ. ವೆಲೆರಾ ಮಿತ್ರರಾಷ್ಟ್ರೀಯರ ಕಣ್ಣಿಗೆ ಕಟುಸದಾರ್ಥವಾಗಿ ಕಾಣಿಸುತಿದ್ದರು. ಯುದ್ಧನಿರತ ಪ್ರಬಲ ರಾಷ್ಟ್ರಗಳ ಅನುಗ್ರಹಾಗ್ರಹವಾವುದನ್ನೂ ಗಣಿಸದೆ ಆಯರ್ಲೆಂಡಿನ ತಾಟಸ್ಥ್ಯವನ್ನು ಉಳಿಸಿಕೊಂಡ ವೆಲೆರಾ ಧೈರ್ಯವು ಈ ಕಾಲದಲ್ಲಿ ಅನ್ಯಾದೃಶ್ಯ ಮಾದರಿಯೆನ್ನಬೇಕು. ಆದರೆ ಐರಿಷ್ ಪಾರ್ಲಿಮೆಂಟಾದ 'ಡಯಲ್'ನಲ್ಲಿ ವೆಲರಾ ಪಕ್ಷಕ್ಕೆ ಕೇವಲ ನಾಲ್ಕು ಬಹುಮತಗಳು ಮಾತ್ರವಿದ್ದು, ನೆಲರಾ ಕಾರ್ಯಕಲಾಪಗಳಿಗೆ ಆಗಾಗ ಆತಂಕಗಳೊದಗುತಿದ್ದವು. ಕಳೆದ ಬಾರಿ ಮಂತ್ರಿಮಂಡಲವು ತಂದಿದ್ದ 'ಸಾಗೋಣ ಮಸೂದೆ'ಯು ಒಂದು ವೋಟಿನ ಕೊರತೆಯಿಂದ ಬಿದ್ದುಹೋದ ಸಂದರ್ಭವನ್ನು ಉಪಯೋಗಿಸಿ ಡಿವೆಲರಾ ಸರಕಾರವು ರಾಜೀನಾಮೆ ಕೊಟ್ಟು ಪುನಃ ಚುನಾವಣೆಗೆ ನಿಂತಿತು. ಐರಿಷ್ ಜನಾಂಗವು ಸಂಪೂರ್ಣವಾಗಿ ವೆಲರಾ ಧೋರಣೆಯನ್ನು ಸಮರ್ಥಿಸುತ್ತಿದೆ ಎಂಬುದರ ನಿದರ್ಶನವಾಗಿ ಅವರ 'ಫಿಯನ್ನಾ ಫೈಲ್' ಪಕ್ಷವೀಗ ಪ್ರಬಲ ಬಹುಮತ ಪಡೆದು ನಿರಾತಂಕ ಅಧಿಕಾರ ನಡಿಸುವಷ್ಟು ವಿಜಯಗೊಂಡಿದೆ. ಡಿ. ವೆಲೆರಾ ಪಕ್ಷಕ್ಕೆ 76 ಸ್ಥಾನಗಳೂ, ಇತರ ಎಲ್ಲಾ ವಿರುದ್ಧ ಪಕ್ಷಗಳಿಗೊಟ್ಟಿಗೆ 62 ಸ್ಥಾನಗಳೂ ದೊರೆತು, 14 ಅಧಿಕ ಮತಗಳ ಬಲದಿಂದ ಇನ್ನು ಮುಂದೆ ವೆಲರಾ ವಾಣಿಯೇ ಐರಿಶ್ ಕಾಯಿದೆಯನ್ನಿಸುವಂತಾಗಿದೆ. ರಾಷ್ಟ್ರವೊಂದು ಸ್ವತಂತ್ರವಾಗಿದ್ದರೆ ಎಂತಹ ಕಠಿಣ ಸನ್ನಿವೇಶದಲ್ಲಾದರೂ ತನ್ನ ಸ್ವಾಭಿಮಾನವನ್ನದು ಪ್ರದರ್ಶಿಸಬಲ್ಲುದೆಂಬ ಪಾಠವನ್ನು ಪರತಂತ್ರ ಹಿಂದುಸ್ಥಾನವು ಆಯರ್ಲೆಂಡಿನಿಂದ ಕಲಿಯಬೇಕು. ಎಲ್ಲಾ ರಾಷ್ಟ್ರಗಳ ಭವಿಷ್ಯವೂ ತಮ್ಮ ಕೈಯಲ್ಲಿದೆ ಎಂದು ಬಡಾಯಿ ಹಾರಿಸುತ್ತಿರುವ ಆಂಗ್ಲೋ-ಅಮೆರಿಕಾನರು ಐರಿಶ್ ಚುನಾವಣೆಯನ್ನೇ ಕನ್ನಡಕವಾಗಿ ಉಪಯೋಗಿಸಿ ಲೋಕವನ್ನು ಕಾಣಬೇಕು!

ದ್ವಿತೀಯರಂಗ ವಿನೋದ!

ಕಳೆದ ಎಪ್ರಿಲ್ ತಿಂಗಳಾಂತ್ಯದಲ್ಲಿ 'ಇಂದೋ ನಾಳೆಯೋ ಆರಂಭ'ವೆಂದು ಲೋಕವ್ಯಾಪೀ ಗುಡುಗುಟವೆದ್ದಿದ್ದ ದ್ವಿತೀಯರಂಗದ ಕುರಿತು ಇದೇ ಮೇ ತಿಂಗಳಾಂತ್ಯದಲ್ಲಿ ಅಧ್ಯಕ್ಷ ರೂಸವೆಲ್ಟರೆಂದರು.- 'ಅದು ಜೂನ್, ಜುಲಾಯಿ, ಅಥವಾ ಅಗೋಸ್ತು ತಿಂಗಳೊಳಗೆ ಆರಂಭವಾಗುವದು' ಹನ್ನೆರಡು ತಿಂಗಳುಗಳ ಹೆಸರುಗಳೂ ರೂಸವೆಲ್ಟರ ಬಾಯಿಂದ ಬಾರದೆ, ಅದರ ಕಾಲಂಶದಷ್ಟರ ಮಳೆಗಾಲ ಮಾತ್ರವೇ ಉದ್ಗಾರಗೊಂಡುದರಿಂದ ಲೋಕವು ಈ ಮಳೆಗಾಲದಲ್ಲೂ ತಲೆಬಿಸಿಯಿರಿಸಿಕೊಳ್ಳಲೊಂದು ಅನುಕೂಲ. ಅಂತೂ ಅಗೋಸ್ತು 30ರೊಳಗೆ ನಾವು ಯುರೋಪು ಯುದ್ಧದ ಬೇಗೆಯನುಭವ ಹೊಂದಲಿದ್ದೇವೆ, ಇಲ್ಲವೇ ಇನ್ನೊಂದು ಮೂರು ಮಾಸಗಳ ನಾಮೋಚ್ಚಾರಣೆಯನ್ನು ರೂಸವೆಲ್ಟರ ಬಾಯಿಯಿಂದ ಕೇಳಲಿದ್ದೇವೆ! ಯುರೋಪು ಆಕ್ರಮಣದಂತಹ ಚರಿತ್ರಾಪೂರ್ವ ಸಾಹಸಕ್ಕೆ ಕೈಯಿಕ್ಕುವ ಮೊದಲು, ವಿಳಂಬವಾಗಬಹುದೆಂಬ ಭೀತಿಯಿಂದ ಪೂರ್ವಸಿದ್ಧತೆಯಲ್ಲಿ ಲೋಪ ಮಾಡಬಾರದು ಎಂಬುದಕ್ಕೆ ಲೋಕ ಸಮ್ಮತಿಸುತ್ತದೆ. ಆದರೆ ಮಿತ್ರಪಾಳಯದವರು 'ಈ ದಿನ—ಈ ಕ್ಷಣ' ಎಂಬಂತಹ ಆತುರವನ್ನು ಕೆಲವು ತಿಂಗಳುಗಳಿಂದಲೂ ಹುಟ್ಟಿಸುತ್ತಾ ಬರುತ್ತಿರುವದೇಕೋ ರೂಸವೆಲ್ಟರಿಗೇನೇ ಗೊತ್ತು! "ಪಶ್ಚಿಮದ ಆಕ್ರಮಣಾರಂಭವೀಗ ನಾಯಿದೆ ಮೀರಿ ಬಹು ಕಾಲವಾದ ಸಾಲದಂತಿದೆ. ಇನ್ನೂ ತಡವಾದರೆ, ಯುದ್ಧೋಪಕರಣಗಳ ತಯಾರಿಗೆ ಹಾಸಿ ಹಟ್ಟುವಷ್ಟು ಕಲಸಗಾರರು ಜಿಗುಪ್ಸೆ ಹೊಂದುವದು ಖಂಡಿತ!" ಎಂದು ಲಂಡನಿನ ಒಂದು ವಿಮಾನ ತಯಾರಿ ಕಾರ್ಖಾನೆಯ ಕಲಸಗಾರರು, ಆಕಾಶ ಮಂತ್ರಿ ಸರ್. ಸ್ಟಾಫೋರ್ಡ್ ಕ್ರಿಪ್ಸರಿಗೊಪ್ಪಿಸಿದ ಪತ್ರದಿಂದರಲ್ಲಿ ಸ್ಪಷ್ಟಪಡಿಸಿದ್ದಾರೆ. ಬ್ರಿಟಿಷ್ ಯುದ್ಧಶ್ರಮಿಕರ ಮನಸ್ಸಿಗೆ ಇದಕ್ಕಿಂತ ಹೆಚ್ಚಾಗಿ ಇನ್ನೊಂದೆಡೆಯ ಆತುರವು ನಾಟಲಾರದಾದ್ದರಿಂದ ಈ ಕುರಿತು ಅನ್ಯ ನಿದರ್ಶನಗಳು ಅನಗತ್ಯ. ಈ ನಡುವೆ ಇದೇ ತಾ 3ರಲ್ಲೊಂದು ಅತಿ ಮುಖ್ಯ ವಾರ್ತೆ ಸುಳಿದಾಡಿ, ಕೆಲವೇ ಮಿನಿಟುಗಳಲ್ಲಿ ಆದೊಂದು ವಿನೋದವಾಗಿ ಮಾರ್ಪಟ್ಟಿತು. ಹೊಸಗೈಯ್ಯ ಕ್ಲಾರ್ಕರುಗಳು ಮಾಡುವ ಪ್ರಮಾದಗಳ ಮಾದರಿಯೊಂದು ಒಳಕಿಸಿ ಬಿತ್ತು. 'ಮಿತ್ರಸೇನೆಗಳು ಫ್ರಾನ್ಸಿಗಿಳಿಯುವವೆಂಬ ಸುದ್ದಿಯನ್ನು ಜನರಲ್ ಐಸೆನೋವರರು ಅಧಿಕೃತವಾಗಿ ಪ್ರಕಟಿಸಿದ್ದಾರ' ಎಂಬುದೇ ಆ ವಿಚಿತ್ರ! ಅಮೇರಿಕದ ರೇಡಿಯೋಗಳು ತಮ್ಮ ಕಾರ್ಯಕ್ರಮಗಳನ್ನು ಬದಿಗಿರಿಸಿ ಈ ಲೋಕ ಪ್ರಾಮುಖ್ಯ ಸುದ್ದಿಯನ್ನು ಪ್ರಕಟಿಸಿದ್ದವು. ಆದರೆ ಕೆಲವೇ ಮಿನಿಟ ಗಳಲ್ಲಿ ಅದು ತಪ್ಪೆಂಬ, ಸೂಚನೆ ದೊರೆಯಿತು. ಈ ತಪ್ಪು ಹೇಗಾಯಿತು ಗೊತ್ತೆ? ಲಂಡನಿನಲ್ಲಿ ಹೊಸತಾಗಿ ಕೆಲಸಕ್ಕೆ ಸೇರಿದ ಹುಡುಗಿಯೊಬ್ಬಳು 'ಟೆಲೆಪ್ರಿಂಟರ್' ಅಭ್ಯಾಸ ಮಾಡುತ್ತಿದ್ದಳು. ಅವಳು ತಿಳಿಯದೇನೇ ಅದನ್ನು ಟೈಪ್ ಮಾಡಿಬಿಟ್ಟಳು. ಸಂಪಾದಕ ಮಂಡಲಿಯ ಅವಗಾಹನೆಗೆ ಬಾರದೆ ಅದು ಚಾಲೂಗಬಿಟ್ಟಿತು. ಸತ್ಯಸ್ಥಿತಿಯೇನೆಂಬುದರಿಯದು ಈ ವಾರ್ತೆಯ ರದ್ದತಿಗೆ ದೊರೆತಿರುವ ಕಾರಣ ನೋಲಿಸದು ಇದು ಲಂಡನಿನಲ್ಲಾದ ಪ್ರಮಾದವಾಗಿರಲೂ ಬಹುದು—ಬರ್ಲಿನಿನಲ್ಲಿ ಪ್ರಮಾದಗಳುಂಟಾಗಬೇಕೆಂದು ಈ ಕಣ್ಣುಮುಚ್ಚಾಲೆಯಾಟವಾಡಿರಲೂ ಬಹುದು.

ಪ್ಯಾರೇಲಾಲರ ಸ್ಪಷ್ಟೀಕರಣ.

'ಅಗೋಸ್ತು ನಿರ್ಧಾರವನ್ನು ನಾನು ಹಿಂತೆಗೆಯಬಾರೆ' ಎನ್ನುವಾಗ ಗಾಂಧೀಜೀಯ ಅಭಿಪ್ರಾಯ ಹೇಗಿತ್ತು ಎಂಬುದನ್ನು ಅವರ ಕಾರ್ಯದರ್ಶಿ ಪ್ಯಾರೇಲಾಲರು ಯು ಪಿ ವಿಶೇಷ ಬಾತ್ಮೀದಾರನಿದಿರು ಸ್ಪಷ್ಟೀಕರಿಸಿದ್ದಾರೆ. ಈ ಸ್ಪಷ್ಟೀಕರಣವು ಸಾಮಾನ್ಯ ಊಹೆಗಿಂತ ಭಿನ್ನವಾಗಿದ್ದು, ಹಠಸಾಧನೆಯ ಸ್ಥಾನದಲ್ಲಿ ಸಯುಕ್ತಿಕತೆಯನ್ನು-ನಿರಾಶೆಯ ಸ್ಥಳದಲ್ಲಿ ಆಶೆಯನ್ನು ತಂದಿರಿಸಿದೆ. "ನಾನು ಹಿಂದಗೆಯಲಾರೆ ಎನ್ನುವಾಗ, ಹಿಂದೆಗೆಯುವ ಅಧಿಕಾರ ನನಗಿಲ್ಲವೆಂಬುದೇ ಗಾಂಧೀಜೀಯವರ ಅರ್ಥ"-ಎಂದು ಪ್ಯಾರೇಲಾಲರು ತೋರಿಸಿಕೊಟ್ಟಿದ್ದಾರೆ. ಅಗೋಸ್ತು ನಿರ್ಧಾರವನ್ನು ಹಿಂದೆಗೆಯುವ ಪ್ರಶ್ನೆಯು ನಿಬಂಧನೆಗಳಿಗೆ ಸಂಬಂಧಿಸಿದುದು. ಅ. ಭಾ. ಕಾಂಗ್ರೆಸ್ ಸಮಿತಿಯು ಗಾಂಧಿಯವರಿಗೆ ಕೊಟ್ಟಿದ್ದ ಅಧಿಕಾರವೆಂದರೆ ನಾಯಕತ್ವ ವಹಿಸಿ ಆ ನಿರ್ಧಾರವನ್ನಯ ಕಾರ್ಯಕ್ರಮಗಳ ಸಲಹೆ ಕೊಡುವದನ್ನು ಮಾತ್ರ. ನಿಯಮಬದ್ಧವಾಗಿ ಆ ನಿರ್ಧಾರವನ್ನು ವ್ಯತ್ಯಾಸಗೊಳಿಸುವ ಅಥವಾ ರದ್ದುಪಡಿಸುವ ಅಧಿಕಾರವಿರುವದು ಆ ಸಮಿತಿಗೆ ಮಾತ್ರ-ಈ ರೀತಿ ಪ್ಯಾರೇಲಾಲರು ಆ ಸಿಕ್ಕನ್ನು ಉಳಿಯೊಳಯಾಗಿ ಬಿಡಿಸಿಗೆ ತೋರಿಸಿದ್ದಾರೆ. ಡಾ| ಜಯಕರರಿಗೆ ಬರೆದ ಪತ್ರದಲ್ಲಿದ್ದ 'ಅದರ ಪ್ರಯೋಗ(Sanction)ವು ನನ್ನ ಜೀವದುಸಿರು' ಎಂಬ ಪದಕ್ಕೆ 'ಸಂಧಾನ ಯತ್ನ ನಿಷ್ಫಲವಾದಾಗ ಅನ್ಯಾಯವನ್ನು ಅಹಿಂಸಾತ್ಮಕವಾಗಿ ಪ್ರತಿಭಟಿಸುವದು ಶುದ್ಧ ಸತ್ಯಾಗ್ರಹಿಯಾದ ನನ್ನ ಜೀವದ ಪ್ರಶ್ನೆ' ಎಂಬುದೇ ಮಹಾತ್ಮರ ಅರ್ಥವಂತ. ತನ್ನ ಬಿಡುಗಡೆಯ ಪ್ರಕಟಣೆಯಲ್ಲಿ ಸರಕಾರವಂದಿದ್ದ 'ಕೇವಲ ಆರೋಗ್ಯ ಕಾರಣಕ್ಕಾಗಿ' ಎಂಬ ವಾದದ ಶಬ್ದಾರ್ಥವನ್ನಲ್ಲದೆ ಅದಕ್ಕಿರುವ ಗೂಢಾರ್ಥವನ್ನೂ ಸಹಜವಾಗಿ ಗಾಂಧಿಜೀ ಕಟ್ಟಿಕೊಂಡಿಲ್ಲ. ತಾನು ಪೂರ್ಣಾರೋಗ್ಯ ಹೊಂದುವನಕ ಆವರಾವ ನಿರ್ಧಾರವನ್ನೂ ಮಾಡುವಂತಿಲ್ಲ. ಆ ತನಕ ಎಲ್ಲರೂ ತಾಳ್ಮೆ ವಹಿಸಬೇಕು. ಡಾ| ಜಯಕರರಿಗೆ ಬರೆದ ಪತ್ರದಲ್ಲಿದ್ದ ಅಭಿಪ್ರಾಯವೇ ಕೊನೆಯ ಮಾತೇನೂ ಅಲ್ಲ-ಎಂದು ಪ್ಯಾರೇಲಾಲರು ಮಂಡಟ್ಟುಗೊಳಿಸಿದ್ದಾರೆ. ಕೊನೆಪಕ್ಷ ಕಾಂಗ್ರೆಸ್ ವರ್ಕಿಂಗ್ ಸಮಿತಿ ಮೆಂಬರರನ್ನು ಸರಕಾರವು ಕೂಡಲೇ ಬಿಡುಗಡೆ ಮಾಡುವದೊಂದೇ ಮಹಾತ್ಮರಿಗೆ ಹಾದಿ ತೋರಿಸುವ ಉಪಾಯ. ಆಗ ಗಾಂಧಿಜೀ ನಿಯಮಬದ್ಧರಾಗಿ ಅಗೋಸ್ತು ನಿರ್ಧಾರವನ್ನು ಪುನರ್ಮರ್ಶೆಗೆತ್ತಿಕೊಳ್ಳಲು ಸಾಧ್ಯ. ಇಂದಿನ ಜಾಗತಿಕ ಮಾರ್ಪಾಟುಗಳಿಂದ ನಿಜಕ್ಕೂ ಮಾನಸಿಕ ಬದಲಾವಣೆಗೊಂಡಿರಬಹುದಾದ ನೆಹರೂ, ಅಜಾದರಂಥವರಿಂದ ಕಾಂಗ್ರೆಸ್ ಧೋರಣೆಯಲ್ಲಿ ಸುಧಾರಣೆಯಾಗುವದೂ ಸಂಭವನೀಯ. ಆದರೆ ಸರಕಾರದ ಕಣ್ಣಿಗೆ ಎಲ್ಲವೂ ಕೆಂಪವಾಗಿ ಕಾಣುತ್ತಿರುವಾಗ ಹೀಗಾಗಲು ಸಾಧ್ಯವೆ?

ತಾ. 11—6—44ರಿಂದ
ಅತ್ರೆ ಪಿಕ್ಚರ್ಸಿನವರ ಆದರ್ಶ ಚಿತ್ರ
ತಸ್ವೀರ್ ಅಥವಾ ಭಾವಚಿತ್ರ
ಇದರಲ್ಲಿ ದುರ್ಗಾ ಖೋಟೆ, ರೋತಿಲಾಲ್ ಮತ್ತು ಅಂಜನೀದೇವಿ ಇವರು ಅಭಿನಯಿಸಿರುವರು
ಅನಂತರ
ನಳಿನೀ ಜಯವಂತ್ ಮತ್ತು ಸುಲೋಚನಾ ಅಭಿನೀತ
ಆಂಖ್ ಮಿಚೌಲಿ ಅಥವಾ ಕಣ್ಣುಮುಚ್ಚಾಲೆ

ಪ್ರೇಮವಿದ್ಯಾಪೀಠ, ತುಂಗಭದ್ರಾ

ಕೀ. ಶೇ. ಪಂಡಿತ ತಾರಾನಾಥಜೀಯವರಿಂದ ಸ್ಥಾಪಿತವಾದ ಈ ವಿದ್ಯಾಪೀಠವು, ಇಷ್ಟರವರೆಗೆ ಅದೆಷ್ಟೋ ಯುವಕ ಯುವತಿಯರ ನಿರುದ್ಯೋಗ ಪ್ರಶ್ನೆಯನ್ನು ನಿವಾರಿಸಿ ಜನಸೇವೆ ಮಾಡುತ್ತ ಧನಮಾನಗಳಿಸುವ, ಯೋಗ್ಯತೆಯನ್ನು ಒದಗಿಸಿ ಕೊಟ್ಟ ವಿಷಯವು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ.

ಇದೀಗ ಪಂಡಿತಜೀಯವರ ಧರ್ಮಪತ್ನಿಯವರಾದ ಶ್ರೀ. ಸುಮತಿ ಬಾಯಿಯವರೂ ಮತ್ತು ಪಂಡಿತರ ಪ್ರಮುಖ ಶಿಷ್ಯರೂ ಸೇರಿ ವಿದ್ಯಾಪೀಠವನ್ನು ಮುಂದುವರಿಸುತ್ತಲಿದ್ದಾರೆ. ಎಂದಿನಂತೆ ಬರುವ ಜುಲೈ ತಾ 15ಕ್ಕೆ ಪ್ರೇಮ ಮೆಡಿಕಲ್ ಕೋಲೆಜದ ಕ್ಲಾಸುಗಳು ಆರಂಭವಾಗುವವು.

S S. L C ಅಥವಾ ಮೆಟ್ರಿಕ್ ವರೆಗೆ ಕಲಿತ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ. ವಿಶೇಷ ಮಾಹಿತಿಗಾಗಿ 0—1—0 stamp. ಕಳಿಸಿ ನಮ್ಮ ಪ್ರೋಸ್ಪೆಕ್ಟಸ್ ತರಿಸಿಕೊಳ್ಳಿರಿ.

ಪ್ರಿನ್ಸಿಪಾಲ್
ಪ್ರೇಮ ವಿದ್ಯಾಪೀಠ
P. O Tungabhadra M. S. M. Ry.
Bellary Dist.

The Pangal Nayak Bank Limited.

(Incorporated in 1920.)

Registered Office Court Road, UDIPI

Branches at— Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public.

For business proper please enquire at any one of our Offices.

15th April 1944.

ದಿ ಜುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಬೊಂಬಾಯಿ

ಚೀಫ್ ಏಜನ್ಸಿ ಆಫೀಸು:—ಉಡುಪಿ.

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ನಿಮ್ಮ ಮತ್ತು ನಿಮ್ಮ ಕುಟುಂಬದ ಬಾಳಿಕೆ ಕಲ್ಯಾಣಕ್ಕಾಗಿ.

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

ಪಿ. ಡಿ. ನಾನಯ್ಯ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Co. Ltd., Bombay.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು.—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ.—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ, ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಿಗಿ.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೭ ಔನ್ಸಿನ ೩ ಬಾಟ್ಲಿಗಳು ಹೆಚ್ಚುಕಡಿಮೆ ೪೫ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ**

THE VIJAYA BANK, LTD.

Head office:

MANGALORE.

Glad to announce that a Branch of the Bank will be opened at **Thakurdwar, Bombay,** shortly.

ನಮ್ಮ ಬ್ಯಾಂಕಿನ ಒಂದು ಶಾಖೆಯು ಸದ್ಯದಲ್ಲಿಯೇ ಬೊಂಬಾಯಿಯಲ್ಲಿ ತೆರೆಯಲ್ಪಡುವುದು.

ದಿ ವಿಜಯಾ ಬೇಂಕ್ ಲಿಮಿಟೆಡ್

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವದು, ಚೇಳು ವಿಷ ಮುಂತಾದ ಚೇಸೆ ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಡ್ಡಿ ಮುಲಾಮು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. of Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S, INDIA

Regd. No. M 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೪೧

FOUNDER
Sri. A. B. Shetty.

Vol. 24
No. 41

NAVAYUGA— Kannada Weekly —UDIPI, S. I.

ಉಡುಪಿ • 15—6—1944 • ಮಂಗಳೂರು.

1944ನೇ ಜನವರಿಯಿಂದ
ಮೂರನೆ ಸಂಪುಟಾರಂಭ
ವಾಗಿದೆ

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ
ವಾರ್ಷಿಕ ಚಂದಾ ರೂ. 3-0-0
ಬಿಡಿ ಪ್ರತಿಗೆ ರೂ. 0-4-0
ಮಾದರಿ ಪ್ರತಿಗೆ ಐದಾಣೆ
ಸ್ಟಾಂಪಿನೊಂದಿಗೆ ಬರೆಯುವುದು.

'PRAKASHINI'
NAVAYUGA PRESS
UDIPI

ANTARANGA
UDIPI

ಅಖಿಲ ಕರ್ನಾಟಕದ
ಹೊಸ ಮಾದರಿಯ
ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

ಜೀವವಿಮೆಯು ಇಂದು ಹಿಂದೆಂದೂ ಇರದಷ್ಟು
ಮೌಲಿಕವಾದುದು

ಜಾಗರೂಕರಾಗಿರಿ! ನಿಮ್ಮ ಮತ್ತು ಸಮೀಪದವರ ಮತ್ತು
ಅರ್ಧಾಂಗಿಯ ರಕ್ಷಣೆಗಾಗಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ.

ಇದರಲ್ಲೊಂದು ಪೊಲಿಸಿಯನ್ನು ಪಡೆಯಿರಿ

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಜೀವವಿಮೆಗಾಗಲೀ ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ವಿಚಾರಿಸಿ:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್

ನೇಟಿವ್ ಸ್ಟೇಟ್ಸ್ ಮತ್ತು ದಕ್ಷಿಣ ಭಾರತದ ಪ್ರಾಮುಖ್ಯ ಏಜಂಟರು.

ದಿ ಬೊಂಬೇ ಲೈಫ್ ಬಿಲ್ಡಿಂಗ್, ಉಡುಪಿ. (ದ. ಕನ್ನಡ.)

ಶಾಖಾ ಕಚೇರಿಗಳು:—ಬೆಂಗಳೂರು, ಬೊಂಬಾಯಿ, ಮದ್ರಾಸ್
ಕಲ್ಲಿಕೋಟೆ, ಮಂಗಳೂರು, ಮತ್ತು ತ್ರಿವಾಂಕೂರು

THE BOMBAY LIFE ASSURANCE CO., LTD.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ.-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕೆಂದಾಲಿಸಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗಿಗೆ ಬರೆದಲ್ಲಿ ರೋಗಗಳಿಗೆ ತಕ್ಕದಾದ ಔಷಧಿ ರವಾನಿಸಲಾಗುವು. ಉಡುಪಿ ಏಜಂಟರು: —ನವಭಾರತ ಬುಕ್ ಡಿಪೊ

ಕಥೆ ಕಾದಂಬರಿಗಳು—ಕವನ,—ನಾಟಕಗಳು
ಯಾವ ಪುಸ್ತಕ ಬೇಕಾದರೂ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಫ್ರಾನ್ಸಿನಲ್ಲಿ ದ್ವಿತೀಯರಂಗ

ಅದೃಷ್ಟ ನಿರ್ಮಾಪಕ ಯುದ್ಧ ನಡೆಯುತ್ತಿದೆ.

ಫ್ರಾನ್ಸ್ ಕರಾವಳಿಯಲ್ಲಿ ಅಪಾರ ಸೇನೆಗಳನ್ನಿಳಿಸುವ ಮೂಲಕ, ಅಖಿಲ ಪ್ರಪಂಚದ ದೀರ್ಘ ಕಾಲದ ಬಯಕೆಯಾಗಿದ್ದ ದ್ವಿತೀಯ ರಂಗವನ್ನು ಜೂನ್ ತಾ. 6ನೇ ಸೂರ್ಯೋದಯ ಪೂರ್ವದಲ್ಲಿ ಮಿತ್ರರಾಷ್ಟ್ರೀಯರು ಉದ್ಘಾಟನೆ ಮಾಡಿದರು.

4000 ಹಡಗಗಳು, ಹಲವು ಸಾವಿರ ಕಿರಿನಾವೆಗಳು, ಅಸಂಖ್ಯಾತ ಸೈನಿಕರನ್ನು ಹೊತ್ತುಕೊಂಡು ಇಂಗ್ಲಿಷ್ ಕರಾವಳಿ ಬಂದರಗಳಿಂದ ಹೊರಬಿದ್ದಾಗ, ಅವುಗಳ ಮೈಗಾವಲಿಗೆ ಅಗಣಿತ ವಿನಾಶಿಕೆಗಳ ಛಾವಣಿಯೇ ನಿರ್ಮಾಣಗೊಂಡು ಬ್ರಿಟಿಷ್ ಕಾಲುವೆಯು ಪೂರ್ಣ ಅದೃಶ್ಯವಾಗಿ, ನಾವೆಗಳ ತಳಹದಿ, ಆಕಾಶಯಾನಗಳ ಮಾಡಿನ ಒಂದು ಮಹಾ ನಗರವೇ ಅಲ್ಲಿ ನಿರ್ಮಾಣಗೊಂಡಿತ್ತಿದ್ದಿತು. ಸೇನೆಗಳೆಲ್ಲಾ ಫ್ರಾನ್ಸ್ ಕರಾವಳಿಯ ವಿಶಾಲ ಭಾಗದಲ್ಲಿ ತಳವೂರಿ ಮುಂದೊತ್ತಿವೆ. ನಾಜಿಗಳ ರಕ್ಷಣಾ ಲೈನಿನ ಒಳ ಭಾಗಗಳ ಕೆಲವೆಡೆ ಗಾಳಿ ಕೊಡೆಯವರನ್ನೂ ಇಳಿಸಲಾಗಿದೆ ಈ ಆಕ್ರಮಕ್ಕೆ ಮೊದಲು **2500** ವಿಮಾನಗಳಿಂದ **12** ಘಂಟೆ ಎಡೆಬಿಡದೆ ಧಾಳಿ ಮಾಡಿಸಿ ಫ್ರೆಂಚ್ ಕರಾವಳಿಯ ಗನ್ ತುಪಾಕಿಗಳ ಬಾಯಿಮುಚ್ಚಿಸಲಾಗಿತ್ತು.

ತಳವೂರಿದ ಮಿತ್ರಸೇನೆಗಳು ಸುದೃಢವಾಗಿ ಮುಂದೊತ್ತುತ್ತಿವೆ. ಕೆಲವೆಡೆ ಶಿಲಾ ಘರ್ಷಣೆಯಂತಹ ಹೋರಾಟ ನಡೆದಿದೆ. ಈಗ ತಾನೇ ಜರ್ಮನರು ಕಾದಿಟ್ಟ ಸೇನೆಗಳನ್ನು ತರಿಸಿಕೊಂಡು ವ್ಯವಸ್ಥೆಯಿಂದ ಪ್ರತಿಭಟನೆ ಕೊಡಲು ಹತ್ತಿರುವದರಿಂದ ಮಹಾದ್ಭುತ ಹೋರಾಟವು ಕಣ್ಣ ಮುಂದಿದೆ ಪ್ರಾರಂಭವು ಪರಿಪೂರ್ಣಗೊಂಡಿತೆಂದು ಭರವಸೆ ಪಡುವ ಕಾಲವಿನ್ನೂ ಬಂದಿಲ್ಲ

ಆಕ್ರಮಣ ರೀತಿ.

ಒಂದೆರಡು ವರುಷಗಳಿಂದ ಇಡೀಲೋಕದ ಆತುರ, ರಶ್ಯಾನರ ಒತ್ತಾಯದ ಬೇಡಿಕೆಯಾಗಿದ್ದ ಯುರೋಪು ಆಕ್ರಮಣವನ್ನು 1944ನೇ ಮೇ ಅಂತ್ಯ ಮತ್ತು ಜೂನ್ ಆದಿ ಭಾಗದಲ್ಲಿ ಪ್ರಾರಂಭಿಸುವೆನೆಂದು ಚರ್ಚಿಲ್, ರೂಸವೆಲ್ಟರು ಟೆಹರಾನಿನಲ್ಲಿ ಸ್ಟಾಲಿನರಿಗಾಶ್ವಾಸನೆಯಿತ್ತು ಸಮಾಧಾನಪಡಿಸಿದ್ದರು. ತದನುಗುಣವಾಗಿ ಫ್ರಾನ್ಸ್ ಪ್ರತಿಮುಖವಾಗಿರುವ ಇಂಗ್ಲಾಂಡಿನ ಕರಾವಳಿ ಬಂದರಗಳಲ್ಲಿ ಕಳೆದ ಕೆಲವು ತಿಂಗಳುಗಳಿಂದ ಜಮೆಯಾಗುತ್ತಿದ್ದ ಸೇನೆಗಳು, ಹಡಗಗಳು, ವಿಮಾನಗಳು, ಟೇಂಕುಗಳು ಸಂಖ್ಯಾತೀತವಿದ್ದುವು. ಇಡಿಯ ಇಂಗ್ಲಾಂಡಿನ ರೈಲ್ವೆಗಳು ಅವುಗಳ ಚಲನವಲನೆಗಾಗಿ ಮೀಸಲಾಗಿರಿಸಲ್ಪಟ್ಟಿದ್ದುವು. ಜ್ವಾಲಾಮುಖಿಯ ಗರ್ಭಾಂದೋಲನ ನಡೆಯುತ್ತಿದೆ ಎಂದು ಲೋಕವರಿತಿದ್ದಿತು; ಜರ್ಮನರು ಈ ಕುರಿತು ಮುಂದುಮುಂದಾಗಿ ಕೊಡುತ್ತಿದ್ದ ಸುದ್ದಿಗಳು ಆಶ್ಚರ್ಯಜನಕವಾಗಿದ್ದುವು. ಮಿತ್ರರ ಸನ್ನಾಹವಂತೂ ನಂಬಲಸಾಧ್ಯವಾದಷ್ಟು ಅಗಾಧವಿದ್ದಿತು. ಈಗ ಅಗಣಿತ ಸಂಖ್ಯೆಯಲ್ಲಿ ಫ್ರಾನ್ಸ್ ಕರಾವಳಿಯೊಳಗೆ ಮದ್ದಾನೆ ಗುಂಪಿನಂತೆ ನುಗ್ಗುತ್ತಿವೆ ಎಂಬ ವಾರ್ತೆ ಬರುತ್ತಿರುವ ಭೀಕರಾಳ ಟೇಂಕುಗಳು ಕಾಲುವೆಯ 10 ಅಡಿಗಳ ವರೆಗಿನ ನೀರಿಗಿಳಿದು ಫ್ರೆಂಚ್ ದಡ ಹತ್ತಿದ್ದವು. ಅದಕ್ಕಾಗಿ ಈ ಟೇಂಕುಗಳಿಗೆ 'ವಾಟರ್ ಪ್ರೂಫ್' ಹೊದಿಕೆ ಮುಚ್ಚಲು ಇಂಗ್ಲಾಂಡಿನ ಮಿಕ್ಕ ಆವಶ್ಯಕತೆಗಳನ್ನೂ ಹಲವು ತಿಂಗಳು ಕಡೆಗಣಿಸಿ ಟೇಂಕು ಕಾರ್ಖಾನೆಗಳು ಅವಿಶ್ರಾಂತವಾಗಿ ದುಡಿದಿದ್ದವು. ಇನ್ನು ಗಾಳಿ ಕೊಡೆಯವರಿಗಂತೂ ರಣಹದ್ದಿನ ತರಬೇತಿಯನ್ನೇ ಅತ್ಯಂತ ಪರಿಶ್ರಮಪೂರ್ವಕ ಕೊಟ್ಟಿದ್ದುದರಿಂದಲೇ ಆಕಾಶಾಟದಲ್ಲಿ ಅಸಮಾನರೆನ್ನಿಸಿದ ಜರ್ಮನರಿದಿರಲ್ಲೂ ಅವರು ಅದ್ಭುತವನ್ನು ನಿರ್ಮಿಸಲು ಶಕ್ತರಾದರು. ಆಕ್ರಮಣದ ಸರ್ವೋಚ್ಚ ಸೇನಾನಿ ಜನರಲ್ ಈಸೆನೋವರರ ಮೊದಲ ನಿರ್ಧಾರದಂತೆ ಜೂನ್ 5ಕ್ಕದು ಪ್ರಾರಂಭವಾಗಬೇಕಿದ್ದಿತು. ಆದರೆ ಪ್ರತಿಕೂಲ ಹವಾಮಾನವು ಅದನ್ನು 24 ಘಂಟೆ ಮುಂದೂಡಿತು. ಸರಿ. ತಾ. 5 ಮತ್ತು 6ರ ನಡುವಿನ ರಾತ್ರಿಯನ್ನು ಈಸೆನೋವರರೂ ಅವರ ಸಿಬ್ಬಂದಿಯೂ ಪ್ರಯಾಣ ತಯಾರಿಯಲ್ಲೇ ಕಳೆದರು. ದಂಡಯಾತ್ರೆಯ ಸೇನಾನಿತ್ವ ವಹಿಸಿದ್ದ ಜನರಲ್ ಮಂಟೆಗೋಮೆರಿಯವರು ವಿದ್ಯುಚ್ಛಕ್ತಿ ಬೆಂಬಲದಂತಿದ್ದರು. ಸಮುದ್ರದಲ್ಲಿ 4000ದಿಂದ 6000 ವರೆಗಿನ ಹಡಗಗಳು. ಲಕ್ಷಾವಧಿ ಯೋಧರನ್ನು ತುಂಬಿಸಿಕೊಂಡು ಪಹರೇ ಹಡಗಗಳೊಡನೆ ಸಿದ್ಧವಾಗಿದ್ದವು; ನಿಲ್ದಾಣಗಳಲ್ಲಿ ಸಹಸ್ರ ಸಂಖ್ಯೆಯ ವಿಮಾನಗಳು ನೆಲಬಿಡಲಣಿಯಾಗಿದ್ದವು. ಸರಬರಾಯಿ ಗೃಹಗಳು, ವೈದ್ಯಕೀಯ ನಿಲಯಗಳು ತಮ್ಮ ಮೇಲೆ ಬಿದ್ದ ಹೊಣೆಯ ಭಾರದಿಂದ ಎಚ್ಚರಗೊಂಡಿದ್ದವು. ತಾ. 6ನೇ ಅತಿ ಮುಂಜಾನೆ; ಸುಮಾರು 6 ಘಂಟೆಯಿರಬಹುದು ಮುಖ್ಯ ಕಾರ್ಯಾಲಯದ ಹಿಂಭಾಗದಲ್ಲಿ ಮೋಟಾರ್ ಟ್ರೇಲರೊಂದರಲ್ಲಿ ತನ್ನ ಕೆಲವೇ ಮಂದಿ ಸೇನಾನಿಗಳು ಹಾಗೂ ಯುದ್ಧ ಚಾಲಕರ ನಡುವೆ ಕುಳಿತುಕೊಂಡು ಜನರಲ್ ಈಸೆನೋವರರು ಕೊನೆಯ ಗುಂಡಿಯನ್ನೊತ್ತಿದರು. ಸರಿ. ಚರಿತ್ರೆಯಲ್ಲೊಂದು ಸ್ಥಾನ ಪಡೆದಿರುವ ಆ ಬ್ರಿಟಿಷ್ ಕಾಲುವೆಯೇ ಹಡಗಗಳಾಗಿ ಮಾರ್ಪಟ್ಟು, ತನ್ನ ಮೇಲಾಕಾಶವನ್ನೆ ವಿಮಾನಗಳಾಗಿ ರೂಪಾಂತರಿಸಿಕೊಂಡಿತೆಂಬಂತೆ ಫ್ರಾನ್ಸಿನ ಕಡೆಗೆ ಹರಿಯಲಾರಂಭವಾದೊಡನೆ ತೆರೆತೆರೆಯಾಗಿ ಕ್ಷಣಬಿಡದೆ 12 ಘಂಟೆಯ ವರೆಗೂ ಪ್ರತಿಭಟನಾ ವ್ಯವಸ್ಥೆಗಳನ್ನೆಲ್ಲಾ ಪುಡಿಗುಟ್ಟಿ, ಅಡಿಮೇಲಾಗಿ ಮಾಡಿ, ಬಾಯಿ ಮುಚ್ಚಿಸಲು 2500 ಕ್ಕೂ ಮಿಕ್ಕಿದ ವಿಮಾನಗಳು ಹೋಗಿ ಬಂದಿದ್ದ ಫ್ರೆಂಚ್ ಕರಾವಳಿಯ ಮೇಲೆ ಹಡಗ ಧಾಳಿ ನಡೆಸುತ್ತಾ, ಸೂರ್ಯೋದಯದ ಹೊತ್ತಿಗೆ ಈ ವ್ಯತ್ಯಯ ನೇರವೇರಿಯಿತು. ಎರಡು ನೂರು ಜರ್ಮನ್ ಯು-ಬೋಟುಗಳು ಈ ಕಾಲುವೆ ಕಾಲಬಲವನ್ನು ದಿಗಿಲುಗೊಳಿಸಲು ವಿಫಲ ಪ್ರಯತ್ನಮಾಡಿದವು. ಕರಾವಳಿಯಿಂದಲೂ ಪ್ರಬಲ ಗನ್ನು ಹೊಡೆತಗಳು ಬಿದ್ದವು. ನಿರೀಕ್ಷಿಸಿದಷ್ಟಲ್ಲವಾದರೂ ನಾಜೀ ವಿಮಾನಗಳೂ ಧಾಳಿ ನಡೆಸಿದವು. ಆದರೆ ಮಿತ್ರ ಹಡಗಗಳ ಮತ್ತು ವಿಮಾನಗಳ ಹೊಡೆತಗಳನ್ನೆಲ್ಲಾ ಪ್ರಬಲ ಪ್ರತಿಹೊಡೆತಗಳಿಂದ ಹುಸಿಗೊಳಿಸಿ ಫ್ರೆಂಚ್ ಕರಾವಳಿಯಲ್ಲಿ ಜಯಶೀಲವಾಗಿ ಸೇನೆಗಳನ್ನಿಳಿಸಿದವು. ಈ ಬುನಾದಿಸ್ಥಾಪನೆಯಲ್ಲಿ ಮಿತ್ರ ಸೇನೆಗಳಿಗಾದ ಪ್ರಾಣಹಾನಿಯು ನಿರೀಕ್ಷೆಗಿಂತ ಎಷ್ಟೋ ಪಾಲು ಕಡಿಮೆಯೆಂಬುದೊಂದು ಆಶ್ಚರ್ಯ. ಆ ಭಾಗದಲ್ಲಿ ಮುಂಭಾಗದ ಮಹಾಕೋಟೆಯಾಗಿ ಹಿಟ್ಲರರು ರಚಿಸಿದ್ದ 'ಅಟ್ಲಾಂಟಿಕ್ ಲೈನ್'ನ ಒಳಭಾಗಗಳೊಳಗೆ ಅಧಿಕ ಸಂಖ್ಯೆಯಲ್ಲಿ ಗಾಳಿ ಕೊಡೆಯವರನ್ನಿಳಿಸಿದುದು ಮಾತ್ರವಲ್ಲ; ಅವರನ್ನೆಲ್ಲಾ ತಾವು ಸೆರೆಹಿಡಿದು ಇಲ್ಲವೇ ಹತಮಾಡಿ ಮುಗಿಸಿದೆವೆಂದು ಜರ್ಮನರನ್ನುತ್ತಿರುವಾಗ ಮಿತ್ರರು ಪುನಃಪುನಃ ಹೊಸಹೊಸ ಪೇಚ್ಯೂಟಿಸ್ಟರನ್ನಿಳಿಸುತ್ತಿರುವದೊಂದು ಅದ್ಭುತ.

ಪ್ರಗತಿ

ಫ್ರಾನ್ಸಿನ ಉತ್ತರ ಕರಾವಳಿಯಲ್ಲಿ ಮೂಗಿನಂತೆ ಮುಂದೆ ಬಂದಿರುವ ನೋರ್ಮಂಡಿ ಕ್ಷೇತ್ರವೇ ಈಗ ಮಿತ್ರಸೇನೆಗಳ ಆಕ್ರಮಣ ವಿಭಾಗ. ಆ ಮೂಗಿನ ತುದಿಯಂತಿರುವ ಚೆರ್ಬೋರ್ಗ್ ಬಂದರದಿಂದ ಬಲಭಾಗದ ಬುಡದಂತಿರುವ ಬಿಯೋಕ್ಸ್ ವರೆಗೆ ಈಗ ರಣಕ್ಷೇತ್ರ ವಿಸ್ತರಿಸಿದೆ. ಆ ಇಡಿಯ ವಲಯವು ನೂರು ಮೈಲುಗಳೊಳಗಿನದು. ಆದರೆ ಜರ್ಮನರು ಇತರ ಕಡೆಗಳಲ್ಲೂ ಮಿತ್ರಸೇನೆಗಳಿಳಿಯಬಹುದೆಂಬ ನಿರೀಕ್ಷೆಯಲ್ಲಿದ್ದಾರೆ. ರಣಕ್ಷೇತ್ರವು 400 ಮೈಲುಗಳ ವರೆಗೂ ವಿಸ್ತರಿಸಬಹುದೆಂಬ ಊಹೆಯಿಂದ, ಮಿತ್ರರ ಕೇಂದ್ರ ಗುರಿ ಯಾವುದೆಂಬುದನ್ನು ಅರಿತುಕೊಳ್ಳುವ ಮರ್ಮಸಾಧನೆಯಲ್ಲೇ ಅವರು ಆಕ್ರಮಣದ ಪ್ರಥಮ ದಿನಗಳನ್ನು ಕಳೆದಿದ್ದರು. ಈಗ ಅವರೊಂದು ಅಂದಾಜು ಹಿಡಿದು, ಒಂದೆಡೆ ನುಗ್ಗುವಂತಹ ಘಟನೆಮಾಡಿ, ಇನ್ನೊಂದೆಡೆ ನುಗ್ಗುವ ಹಂಚಿಕೆ ಮಿತ್ರರದಿರಬಹುದೇ ಎಂಬ ಆದಿಯ ಶಂಕೆಯನ್ನು ಪರಿಗಣಿಸಿ ಬಿಟ್ಟು ನೋರ್ಮಂಡಿ ವಿಭಾಗದಲ್ಲಿ ಪ್ರಬಲ ಸೇನಾ ಸರಬರಾಯಿ ಪಡಿಸಿಕೊಂಡು ಅಜೇಯ ಪ್ರತಿಭಟನೆ ಕೊಡಲು ಹತ್ತಿದ್ದಾರೆ ಮಿತ್ರಸೇನೆಗಳ ಮುಂಭಾಗದಲ್ಲಿಳಿದ ಗಾಳಿ ಕೊಡೆದಳಗಳು ಸಂಕ ಸೇತುವೆಗಳಲ್ಲಿ ಜರ್ಮನರೊದಗಿಸಬಹುದಾದ ಅಪಾಯ ನಿವಾರಣೆಗಾಗಿಯೂ, ಸ್ಥಳ ಸಂಪಾದನೆಗಾಗಿಯೂ ವ್ಯವಸ್ಥಿತ ಧಾಳಿ ನಡೆಸುತ್ತಿವೆ ಕರಾವಳಿಯಿಂದ ಸುಮಾರು ಹನ್ನೆರಡು ಮೈಲು ಒಳಗಡೆಯಲ್ಲಿ ಹಿಟ್ಲರರು ಅಟ್ಲಾಂಟಿಕ್ ವ್ಯೂಹವನ್ನು ರಚಿಸಿಕೊಂಡು ಕರಾವಳಿಯಲ್ಲಿ ಸ್ಫೋಟಕ ಗನ್ನುಗಳನ್ನೂ, ಹಿಡಿಹಿಡಿ ಸೇನೆಗಳನ್ನೂ ನಿಲ್ಲಿಸಿದ್ದರು. ಈಗ ಬಹುತೇಕವಾಗಿ ಕರಾವಳಿಯಿಂದ ಜರ್ಮನರು ಪೂರ್ತಿ ಖಾಲಿಯಾದಂತೆಯೇ ಅಟ್ಲಾಂಟಿಕ್ ಲೈನಿನ ಕೆಲವೆಡೆಗಳನ್ನು ಭೇದಿಸಿ, ಮಿತ್ರಸೇನೆಗಳ ಮುನ್ನುಗ್ಗಿದಂತಿವೆ. ಬಿಯೋಕ್ಸ್ ವಿಭಾಗದ ಕೆಯಿನ್ ನಗರದ ಸುತ್ತುವಲಯದ ಹೋರಾಟವು ಅತ್ಯಂತ ಭೀಕರವಾಗಿ ಸಾಗಿದೆ.

(೭ನೇ ಪುಟ ನೋಡಿರಿ.)

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು

ದ್ವಿತೀಯರಂಗ-ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ-ಜರ್ಮನಿಯಲ್ಲಿ ಜನರ ನೈತಿಕ ಭಂಗ-ಜರ್ಮನರ ಪತನ-ಯುದ್ಧ ಸಮಾಪ್ತಿ-ಯುದ್ಧ ಸಾಮಾಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿಲ್ಲೋಣದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ—ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿರಾಶಿಯಾಗಿ ಬರೋಣ-ಧಾರಣೆಗಳ ಇಳಿತ-ನಷ್ಟ-ಕೊರತೆ-ಕೇಡುಗಳು-ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಆಗತ್ಯವಿರಬಹುದೆಂದು ತೋರುವ ಹಣದ ವಿಲೇವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

ಧಾನ್ಯವನ್ನು ಹೆಚ್ಚಾಗಿ ಬೆಳೆಸಿರಿ

ಆದರೆ ಅದು ಹೇಗಾಗಬೇಕು.

'ಹೆಚ್ಚಿಗೆ ಧಾನ್ಯ ಬೆಳೆಯಿಸಿರಿ' ಎಂಬದಾಗಿ ಸರಕಾರದವರು ಪ್ರಚಾರಮಾಡುತ್ತಿದ್ದಾರೆ. ಕಾಗದದ ಮೇಲೆ ಯೋಜನೆಗಳನ್ನು ಸಿದ್ಧಮಾಡುತ್ತಲಿದ್ದಾರೆ ರೈತಂಗೆ ಸಲಹೆ, ಸೂಚನೆಗಳನ್ನು ಕೊಡುತ್ತಾರೆ. ಆದರೆ ಇದರಿಂದ ಆಗಬೇಕಾದಷ್ಟು ಪ್ರಯೋಜನವೇನೂ ಆಗುವದಿಲ್ಲ. ರೈತನಿಗೆ ತನ್ನ ಭೂಮಿಯಲ್ಲಿ ಹೆಚ್ಚು ಬೆಳೆ ಬರುವದು ಬೇಕಾಗಿದೆ. ಆದರೆ ಪರಿಸ್ಥಿತಿಯು ವಿಪರೀತವಾಗಿರುವದರಿಂದ ಕಷ್ಟವಾಗಿದೆ. ಈ ಕಷ್ಟ ನಿವಾರಣೆಗಾಗಿ ರೈತನ ಪ್ರತಿನಿಧಿಗಳು ಸರಕಾರಕ್ಕೆ ಸಲಹೆ ಸೂಚನೆಗಳನ್ನು ಮಾಡಿದರು. ಆದರೆ ಸರಕಾರವು ಅವನ್ನು ಇನ್ನೂ ಗಮನಿಸಿಲ್ಲ. ಸರಕಾರವು ತೆಗೆದುಕೊಳ್ಳಬೇಕೆಂದಿದ್ದ ಧಾನ್ಯದ ಪ್ರಮಾಣದ ಕೋಷ್ಟಕವು ಸರಿಯಾಗಿಲ್ಲೆಂದು ಅನೇಕ ದೂರುಗಳು ಕೇಳಿಬರುತ್ತವೆ. ಧಾನ್ಯ ವಸೂಲ ಮಾಡುವ ಅಧಿಕಾರಿಗಳಿಗೆ ಇದರ ಅನುಭವವು ಬಂದಿರಲು ಸಾಕು.

ರೈತರು ಪ್ರಾಮಾಣಿಕತನದಿಂದ ತಮ್ಮಲ್ಲಿದ್ದ ಹೆಚ್ಚಿನ ಕಾಳುಕಡ್ಡಿಗಳನ್ನು ಸರಕಾರಕ್ಕೆ ಮಾರಿದ್ದಾರೆ. ಕಳ್ಳಪೇಟೆಯಲ್ಲಿ ಮಾರಿಲ್ಲ. ತಮ್ಮ ಆವಶ್ಯಕತೆಯ ಮಟ್ಟಿಗೆ ಇಟ್ಟುಕೊಂಡ ಧಾನ್ಯದಲ್ಲಿಯ ಬಹಳ ಭಾಗವನ್ನು ಕೂಡ ಸರಕಾರೀ ಅಧಿಕಾರಿಗಳು ಒತ್ತಾಯದಿಂದ ತೆಗೆದುಕೊಂಡಿದ್ದಾರೆ. ಹೀಗಾಗಿ ರೈತರಲ್ಲಿ ಈಗ ಬೀಜಕ್ಕೆ ಸಹ ಕಾಳು ಇಲ್ಲದಂತಾಗಿದೆ. ರೈತರು ಮಾರಿದ ಕಾಳಿನ ಬಗ್ಗೆ ಬಂದ ಹಣವೆಲ್ಲ ಅವರ ಕೈಬಿಟ್ಟು ಹೋಗಿದೆ. ಅವರಲ್ಲಿ ಒಕ್ಕಲತನಕ್ಕೆ ಬೇಕಾಗುವ ಎತ್ತು, ಬೀಜ ಹಾಗೂ ಉಪಕರಣಗಳನ್ನು ಕೊಳ್ಳಲಿಕ್ಕೆ ಹಣವು ಉಳಿದಿರುವದಿಲ್ಲ. ಎತ್ತುಗಳ ಬೆಲೆಯು ಮಿತಿಮೀರಿ ಏರಿದೆ. ಇಷ್ಟು ಬೆಲೆ ?ಇಕ್ಕಿ ಕೊಳ್ಳುವದು ರೈತನಿಂದ ಆಗದು. ಧಾನ್ಯವನ್ನು ಸರಕಾರವು ಸಂಗ್ರಹಿಸಿ ಯೋಗ್ಯ ವ್ಯವಸ್ಥೆಯಿಂದ ಇಡದಿದ್ದದರಿಂದ ಬೀಜಕ್ಕೆ ಬೇಕಾಗುವ ಉತ್ತಮವಾದ ಕಾಳು ಸಿಗುವದು ಕಷ್ಟವಾಗಿದೆ. ಒಕ್ಕಲತನಕ್ಕೆ ಆವಶ್ಯವಿದ್ದ ಕೂಲಿಯನ್ನು ಧಾನ್ಯ ರೂಪದಿಂದ ಕೊಡಬೇಕಾಗುತ್ತದೆ. ಆದರೆ ರೈತನಲ್ಲಿ ಧಾನ್ಯವೆಲ್ಲಿದೆ? ಒಕ್ಕಲತನಕ್ಕೆ ಬೇಕಾಗುವ ರೆಂಟೆ, ಕುಂಟೆ ಮೊದಲಾದವುಗಳು ನಿಯಂತ್ರಿತ ಧಾರಣೆಯಿಂದ ಸಿಗುವದಿಲ್ಲ. ಇವೆಲ್ಲ ಕಾರಣಗಳಿಂದಾಗಿ ರೈತನ ಬೇಸಾಯವು ಹೀನಾವಸ್ಥೆಗೆ ಬಂದಿದೆ. ಇವೆಲ್ಲ ಕಾರಣಗಳು ಇಲ್ಲದಂತಾಗಬೇಕಾದರೆ, ೧. ಎತ್ತುಗಳನ್ನು ಕಟುಕರಿಗೆ ಮಾರಲು ಕಾಯಿದೆಯಿಂದ ನಿರ್ಬಂಧವಿರಬೇಕು. ಈಗ ೧೦ವರ್ಷದ ಕೆಳಗಿನವುಗಳನ್ನು ಮಾರಬಾರದೆಂದು ನಿಯಮವಿದೆ. ಆದರೆ ಅ ು ಕಾರ್ಯಕಾರಿಯಾಗಿಲ್ಲ. ೨. ರೈತನಲ್ಲಿ ಇನ್ನೂ ಅಲ್ಪಸ್ವಲ್ಪ ಧಾನ್ಯವಿದ್ದರೆ ಸರಕಾರದವರು ಇಂಥವುಗಳಲ್ಲಿ ಕೆಲವಕ್ಕೆ ತಮ್ಮ 'ಮುದ್ರೆ' ಹಾಕಿ ಬೀಜಕ್ಕಾಗಿ ಕಾಯ್ದಿಡಬೇಕು. ರೈತರಲ್ಲಿ ಸಂಗ್ರಹವಿಲ್ಲದಿದ್ದರೆ ಕೂಡಲೆ ಬೀಜದ ವ್ಯವಸ್ಥೆಯನ್ನು ಸರಕಾರವು ಮಾಡಬೇಕು. ೩. ಕೂಲಿಗೆ ಬೇಕಾಗುವ ಧಾನ್ಯವನ್ನು ರೈತನಿಗೆ ಒದಗಿಸಬೇಕು. ರೈತನಲ್ಲಿಲ್ಲದಿದ್ದರೆ, ೬ ತಿಂಗಳ ಧಾನ್ಯವನ್ನು ಕೂಲಿಗಾಗಿ ಸರಕಾರವು ರೈತನಿಗೆ ಸಿಗುವಂತೆ ಏರ್ಪಾಡುಮಾಡಬೇಕು. ೪. ರೈತರ ಜೀವನಾವಶ್ಯಕ ವಸ್ತುಗಳೆಲ್ಲ ನಿಯಂತ್ರಿತ ಧಾರಣೆಯಿಂದ ಅವರಿಗೆ ಸಿಗುವಂತೆ ವ್ಯವಸ್ಥೆಯಾಗಬೇಕು. ಸರಕಾರಕ್ಕೆ ಮಾರಿದ ಧಾನ್ಯದ ಬೆಲೆಯನ್ನು ಹಣದ ರೂಪದಿಂದ ಕೊಡದೆ ರೈತರಿಗೆ ಬೇಕಾಗುವ ವಸ್ತುಗಳನ್ನು ಆ ಹಣದಲ್ಲಿ ಅವರಿಗೆ ಒದಗಿಸಬೇಕು.

ಇವೆಲ್ಲ ಸೂಚನೆಗಳನ್ನು ಸರಕಾರವು ವಿಚಾರಿಸಿ ಅವುಗಳ ಬಗ್ಗೆ ಯೋಗ್ಯ ಉಪಾಯಗಳನ್ನು ಮಾಡಬೇಕು. ಒತ್ತಾಯದಿಂದ ರೈತರಿಂದ ಧಾನ್ಯವನ್ನು ಮಾರಲಿಕ್ಕೆ ತೆಗೆದುಕೊಳ್ಳುವ ಶಕ್ತಿಯಿರುವದೆಂದು ಸರಕಾರವು ಭಾವಿಸಿ ಸುಮ್ಮನೆ ಕುಳಿತರೆ ಕಾರ್ಯವಾಗಲಾರದು. ಒತ್ತಾಯವು ಶರೀರದ ಮೇಲೆ ಮಾತ್ರ ನಡೆಯಬಹುದು. ಮನಸ್ಸಿನ ಮೇಲೆ ಅದರ ಪರಿಣಾಮವು ವಿಪರೀತವಾಗಬಹುದು.

ಜನತೆಯ ಕರ್ತವ್ಯ.

ಜನರಾದರೂ ತಮ್ಮ ಸಂಘಟನೆಯನ್ನು ಮಾಡಿಕೊಂಡು ತಮ್ಮ ಹಳ್ಳಿಗಳಲ್ಲಿ ಗ್ರಾಮಪಂಚಾಯತಿ ಇಲ್ಲವೆ ಆಹಾರ ಸಮಿತಿಗಳನ್ನು ಸ್ಥಾಪಿಸಿ, ಅವುಗಳ ಮುಖಾಂತರ ತಮಗೆ ಆವಶ್ಯವಾದ ವಸ್ತುಗಳನ್ನು ಸರಕಾರವು ಪೂರೈಸುವಂತೆ ಕೇಳಿಕೊಳ್ಳಬೇಕು. ಸರಕಾರವು ಜನತೆಯ ಆವಶ್ಯಕತೆಗಳನ್ನು ಪೂರೈಸುವ ಹೊಣೆಯನ್ನು ಹೊತ್ತಿದೆ ಆದರೆ ಜನರು ಸುಮ್ಮನೆ ಕುಳಿತರೆ ಮಾತ್ರ ನಡೆಯಲಾರದು. ಜನರು ಎಚ್ಚತ್ತು ಸಂಘಟಿತರಾಗಿ ಸರಕಾರವು ತನ್ನ ಹೊಣೆಯನ್ನು ಯೋಗ್ಯಕಾಲದಲ್ಲಿ ಯೋಗ್ಯ ರೀತಿಯಿಂದ ಪೂರೈಸುವಂತೆ ಮಾಡುವದು ಜನತೆಯ ಕರ್ತವ್ಯವಾಗಿದೆ-

(ಮು. ಗ.)

ಬ್ರಿಟಿಷರಿಗೆ ಪ್ರೊ. ಹಿಲ್ಲರ ಸಲಹೆ

ಪಾರ್ಲಿಮೆಂಟ ಸದಸ್ಯರಾದ ಪ್ರೊ. ಎ. ವಿ. ಹಿಲ್ಲರು 'ಸ್ಪೇಕ್ಟೆಟರ' ಪತ್ರಿಕೆಯಲ್ಲಿ.

"ಇದುವರೆಗೆ ರಾಜ್ಯಾಂಗ ಘಟನಾತ್ಮಕ ದೃಷ್ಟಿಯಿಂದ ಹಿಂದುಸ್ಥಾನದ ಸಮಸ್ಯೆಗಳನ್ನು ನೋಡಲಾಗುತ್ತಿದೆ. ಬ್ರಿಟಿಷ್ ರಾಜಕೀಯ ಪಕ್ಷಗಳು ಹಿಂದುಸ್ಥಾನವನ್ನು ತಮ್ಮ ಗೊಂಬೆಮಾಡಿಕೊಂಡು ಅದರೊಡನೆ ಆಟವಾಡುತ್ತಿವೆ. ಹಿಂದುಸ್ಥಾನಕ್ಕೆ ಸ್ವರಾಜ್ಯವು ಅತ್ಯವಶ್ಯಕ.

ಹಿಂದುಸ್ಥಾನದ ಜನತೆಯ ಕಲ್ಯಾಣ ಮತ್ತು ರಾಷ್ಟ್ರೀಯ ಅಭಿವೃದ್ಧಿಯೇ ಈ ಹೊಸ ಮಾರ್ಗ. ಆಧುನಿಕ ವಿಜ್ಞಾನವನ್ನು ಕಲಿಯಲು ಹಿಂದೀಯರಿಗೆ ಅವಕಾಶ ಕೊಡಬೇಕು. ಇಂಥ ಅವಕಾಶವನ್ನು ಕಲ್ಪಿಸಿಕೊಟ್ಟರೆ ಹಿಂದುಸ್ಥಾನದ ಔದ್ಯೋಗೀಕರಣವಾಗುವದಲ್ಲದೆ ರಾಷ್ಟ್ರೀಯ ಸಂಪತ್ತು ಕೂಡ ಹೆಚ್ಚುವದರಲ್ಲಿ ಸಂದೇಹವಿಲ್ಲ. ಇದನ್ನು ಹಿಂದುಸ್ಥಾನವು ಸಾಧಿಸುವದು ಬಿಡುವದು ಬ್ರಿಟಿಷರ ಕೈಯಲ್ಲಿದೆ. ಬ್ರಿಟಿಷರು ಸಹೃದಯರಾಗಿ ವರ್ತಿಸಬೇಕು. ರಾಜಕೀಯ ಮತ್ತು ಜಾತೀಯ ಭೇದ ಧೋರಣೆ ತ್ಯಜಿಸಬೇಕು. ಹಿಂದೀ ಜನತೆಯ ಕಲ್ಯಾಣಕ್ಕೆ ಬದ್ಧಕಂಕಣರಾಗಿ ಹಿಂದೀಯರಿಗೆ ನೆರವಾಗಬೇಕು".

ನಿಮಗೆ ಯಾವದು ಬೇಕು?


ಆಹಾರ ಪದಾರ್ಥ


ಬಟ್ಟೆ
ಮತ್ತು

ಸೌದೆ

ಅಥವಾ



ರೈಲ್ವೆ ಪ್ರಯಾಣ?

ಎರಡೂ ಬೇಕೆಂದರೆ, ಸಿಗಲಾರವು. ರೈಲ್ವೆಯವರು ಹಿಂದೂಸ್ಥಾನದ ಎಲ್ಲಾ ಭಾಗಗಳಿಗೂ ಜೀವನಕ್ಕೆ ಅತ್ಯವಶ್ಯಕವಾದ ಪದಾರ್ಥಗಳನ್ನು ತಪ್ಪದೆ ಒದಗಿಸಿಕೊಡುವ ಭರವಸೆಯನ್ನು ಕೊಡಲಾಗುವುದಿಲ್ಲ. ಮತ್ತು ಜನಗಳಿಗೆ ಪ್ರಯಾಣಮಾಡಲು ರೈಲುಗಾಡಿಗಳಲ್ಲಿ ಮಿತಿಯಿಲ್ಲದಷ್ಟು ಸ್ಥಳವನ್ನು ಒದಗಿಸಿಕೊಡುವ ಭರವಸೆಯನ್ನೂ ಕೊಡಲಾಗುವುದಿಲ್ಲ. ಸಾಕಾದಷ್ಟು ಎಂಜಿನ್ನುಗಳು, ಗಾಡಿಗಳು, ವಾಗಿನ್ನುಗಳು ಅವರಲ್ಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಹಿಂದೂಸ್ಥಾನಕ್ಕೆ ರೈಲ್ವೆಯವರ ಕರ್ತವ್ಯವು ತಿಳಿದೇ ಇದೆ. ಆಹಾರಪದಾರ್ಥ, ಬಟ್ಟೆ ಮತ್ತು ಸೌದೆ ಇವು ಪ್ರಥಮದಲ್ಲಿ ಬರುತ್ತವೆ. ಇವು ಜೀವನಕ್ಕೆ ಅತ್ಯವಶ್ಯಕವಾದವುಗಳು. ಇವುಗಳಿಲ್ಲದಿದ್ದರೆ, ಜನರು ಸಾಯುವರು. ಈ ಕಾರಣದಿಂದಲೇ ಈಗ ಪ್ಯಾಸೆಂಜರ ಗಾಡಿಗಳು ಅಷ್ಟೊಂದು ಭರ್ತಿಯಾಗಿ, ಸ್ವಲ್ಪವೂ ಸೌಖ್ಯವಿಲ್ಲದೆ ಇರುತ್ತವೆ. ಇದಕ್ಕಾಗಿಯೇ ನೀವುಗಳು ಮನೆಯಲ್ಲಿಯೇ ಉಳಿಯಬೇಕು. ಮತ್ತು ತದ್ವಾರಾ ನಿಮ್ಮ ಜೀವನಕ್ಕೆ ಅತ್ಯವಶ್ಯಕವಾದ ಪದಾರ್ಥಗಳು ನಿಮಗೆ ದೊರೆಯುವರೀತಿ ಖಾತರಿ ಮಾಡಿಕೊಳ್ಳಬೇಕು.

ಕಡಮೆಯಾಗಿ ಪ್ರಯಾಣಮಾಡಿರಿ

681-KN

The Canara Banking Corporation Limited.

(Incorporated in British India)

ESTD 1906.

Head Office - UDIPI

ANNOUNCEMENT.

A Branch of the bank has been opened at Tobacco Street, CALICUT on 26-5-44.

ಉಡುಪಿ, ಗುರುವಾರ ೧೫-೬-೧೯೪೪

ನಗರ ಸಭೆಗಳು

ಹೆಚ್ಚು ಉಪಯುಕ್ತವಾಗುವುದೆಂತು?

ಸ್ಥಾನಿಕ ಸಂಸ್ಥೆಗಳು ಭಾರತದಲ್ಲಿ ಜನ್ಮವೆತ್ತಿ ಅನೇಕ ವರ್ಷಗಳು ಸಂದು ಹೋದವು. ಆದರೂ ಈ ಸಂಸ್ಥೆಗಳು ಜನತೆಗೆ ತಮ್ಮಿಂದ ಸಲ್ಲಬೇಕಾದ ಸೇವೆಯನ್ನು ಇನ್ನೂ ಸಲ್ಲಿಸುತ್ತಿಲ್ಲವೆಂಬುದು ವಿಷಾದದ ಸಂಗತಿಯಾಗಿದೆ. ಹೀಗಾಗುವದಕ್ಕಿರುವ ಅನೇಕ ಕಾರಣಗಳಲ್ಲಿ ಭಾರತದ ಸ್ಥಾನಿಕ ಸಂಸ್ಥೆಗಳ ಆರ್ಥಿಕ ಸ್ಥಿತಿಯೂ ಒಂದು ಕಾರಣವಾಗಿರುವುದು. ಆರ್ಥಿಕ ದೃಷ್ಟಿಯಿಂದ ಸ್ಥಾನಿಕ ಸಂಸ್ಥೆಗಳಿಗೆ ಸರಕಾರದಿಂದ ಯಾವ ಸಹಾಯವು ದೊರೆಯಬೇಕೋ ಅದು ಇನ್ನೂ ಸಂಪೂರ್ಣವಾಗಿ ದೊರೆಯುತ್ತಿರುವುದಿಲ್ಲ. ಸ್ಥಾನಿಕ ಸಂಸ್ಥೆಗಳಿಗೆ ಮೀಸಲಾಗಿರಿಸಿರುವ ಕರ ಮೊದಲಾದ ಉತ್ಪನ್ನದ ಕ್ಷೇತ್ರವು ತೀರ ಸಂಕುಚಿತವಾಗಿರುವುದು. ನವನಾಗರಿಕತೆಯ ಬೇಡಿಕೆಯೊಂದಿಗೆ ಸರಿ ಹೆಜ್ಜೆಯನ್ನಿಟ್ಟುಕೊಂಡು ಆ ಬೇಡಿಕೆಗಳನ್ನು ಜನತೆಗೆ ಪೂರೈಸಿಕೊಡಲು ಈ ಸಂಕುಚಿತ ಕ್ಷೇತ್ರದಿಂದ ಹುಟ್ಟಿಬಂದ ಉತ್ಪನ್ನವು ಸಾಲದಾಗಿದೆ. ಆದುದರಿಂದ ನಗರಾಭ್ಯುದಯವನ್ನು ಸಾಧಿಸಹೊರಟ ನಗರ ಪಿತಾಮಹರ ಆದಿ ಆಕಾಂಕ್ಷೆಗಳು ನೀರ ಮೇಲಣ ಗುಳ್ಳೆಯಂತಾಗಿರುವವು. ಸಾರ್ವಜನಿಕ ಹಿತಸಾಧನೆ ಮತ್ತು ಸೌಕರ್ಯಗಳನ್ನು ಪಾಶ್ಚಿಮಾತ್ಯ ಸ್ಥಾನಿಕ ಸಂಸ್ಥೆಗಳು ಉತ್ತಮ ರೀತಿಯಿಂದ ಮಾಡುತ್ತಿರುವುದನ್ನು ನಾವು ನೋಡುತ್ತಲಿದ್ದೇವೆ. ಅವು ಇದಕ್ಕಾಗಿ ತಮ್ಮ ಉತ್ಪನ್ನದ ಕ್ಷೇತ್ರವನ್ನು ವಿಸ್ತರಿಸಿಕೊಂಡಿರುವವು. ಆದರೆ ಭಾರತ ಸ್ಥಾನಿಕ ಸಂಸ್ಥೆಗಳು ನೀರಿನ ಪೂರೈಕೆ, ಪ್ರಾಥಮಿಕ ಶಿಕ್ಷಣ, ಬೀದಿಗಳ ನಿರ್ಮಾಣ ಮೊದಲಾದುವುಗಳಲ್ಲಿಯೇ ಕಾಲಹರಣ ಮಾಡುತ್ತಿರುವವು. ಪ್ರಾಂತಿಕ ಸರಕಾರಗಳು ಕೂಡ ಈ ಸ್ಥಾನಿಕ ಸಂಸ್ಥೆಗಳ ಉತ್ಪನ್ನವನ್ನು ಹೆಚ್ಚಿಸುವ ಧೋರಣೆಯನ್ನು ಕೈಕೊಂಡಿಲ್ಲ. ಜಾಗತಿಕ ಪರಿಸ್ಥಿತಿಯಲ್ಲಿ ಜನತೆಯ ಬೇಡಿಕೆಯು ದಿನ ದಿನಕ್ಕೆ ಹೆಚ್ಚುತ್ತ ಸಾಗಿದೆ. ಆದರೆ ಉತ್ಪನ್ನವು ಮರ್ಯಾದಿತವಾಗಿರುವುದು. ಈ ಮರ್ಯಾದೆಯಿಂದ ಹೊರಗೆ ಕಾಲಿಡದ ಹೊತು ಗತ್ಯಂತರವಿಲ್ಲ. ಪಾಶ್ಚಿಮಾತ್ಯ ಹಾಗೂ ನ್ಯೂಝಿಲೆಂಡ ಆಸ್ಟ್ರೇಲಿಯಾಗಳ ಸ್ಥಾನಿಕ ಸಂಸ್ಥೆಗಳ ಕಾರ್ಯನಿರ್ವಹಣವನ್ನು ಕೆಲವು ಮಟ್ಟಿಗೆ ಭಾರತೀಯ ಸ್ಥಾನಿಕ ಸಂಸ್ಥೆಗಳು ಅನುಕರಿಸುವುದು ಯೋಗ್ಯವಿದೆ

ಉತ್ಪನ್ನದ ಮಾರ್ಗಗಳು

ಸರ್ವಸಾಧಾರಣವಾಗಿ ನೀರು ಮತ್ತು ಗ್ಯಾಸಿನ ಪೂರೈಕೆಗಳು ಸ್ಥಾನಿಕ ಸಂಸ್ಥೆಗಳ ಕಾರ್ಯರಂಗದಲ್ಲಿ ಬರುವವು. ಸ್ಥೂಲ ದೃಷ್ಟಿಯಿಂದ ನೋಡಲಾಗಿ ಎಲ್ಲ ನಗರ ಸಭೆಗಳೂ ನೀರಿನ ಪೂರೈಕೆಯನ್ನು ತಮ್ಮ ಕಡೆಗೆ ಇಟ್ಟುಕೊಂಡಿರುವುದು ಕಂಡುಬರುವುದು. ಗ್ಯಾಸಿನ ಪೂರೈಕೆಯನ್ನು ತಮ್ಮ ಕಡೆಗೆ ತೆಗೆದುಕೊಳ್ಳುತ್ತಿರುವ ಲಕ್ಷಣಗಳೂ ಕಂಡುಬರುತ್ತಿವೆ. ಸಾರ್ವಜನಿಕ ಒಡೆತನದ ಗ್ಯಾಸ ಕಂಪನಿಗಳನ್ನೂ ನಗರ ಸಭೆಗಳು ಕ್ರಯಕ್ಕೆ ಪಡೆಯುತ್ತಲಿರುವವು. ಬರ್ಮಿಂಗ್ಯಾಮ, ಲಿವರಪೂಲ, ಮ್ಯಾಂಚೆಸ್ಟರ, ಲೀಡ್ಸ ಮೊದಲಾದ ಪಟ್ಟಣಗಳ ನಗರಸಭೆಗಳು ನೀರಿನ ಪೂರೈಕೆಯನ್ನು ತಮ್ಮ ಕಡೆಗೆ ಇಟ್ಟುಕೊಂಡಿರುವವು. ೧೯೩೫ರ ಅಂಕಿ ಸಂಖ್ಯೆಗಳನ್ನು ನೋಡಲಾಗಿ ಇಂಗ್ಲಂಡದ ನೀರಿನ ಪೂರೈಕೆಯಲ್ಲಿ ೧೦೦ಕ್ಕೆ ೮೦ರಷ್ಟನ್ನು ಅಲ್ಲಿಯ ನಗರ ಸಭೆಗಳು ಕೈಕೊಂಡಿದ್ದವು.

ಇವೆರಡಲ್ಲದೆ ನಗರಸಭೆಗಳು ಲಾಭದಾಯಕವಾಗಿ ನಡೆಸಬಹುದಾದ ಇನ್ನೊಂದು ಪ್ರಯತ್ನವೆಂದರೆ ವಿದ್ಯುಚ್ಛಕ್ತಿಯ ಪೂರೈಕೆ. ಜನ ಜೀವನದಲ್ಲಿ ವಿದ್ಯುಚ್ಛಕ್ತಿಯು ಇಂದು ಗಣ್ಯಸ್ಥಾನವನ್ನು ಪಡೆದಿರುವುದು. ಹಲವಾರು ನಗರ ಸಭೆಗಳು ವಿದ್ಯುಚ್ಛಕ್ತಿ ಪೂರೈಸುವ ವ್ಯವಸ್ಥೆಗಳನ್ನು ತಮ್ಮ ವತಿಯಿಂದ ಪ್ರಾರಂಭಿಸಿರುವವು. ಆರಂಭದಲ್ಲಿ ಇಂತಹ ವ್ಯವಸ್ಥೆಗಳು ಇತರರಿಂದ ನಡೆಸಲ್ಪಟ್ಟಿರುವವೆಂಬುದು ನಿಜ. ಆದರೆ ನಗರ ಸಭೆಗಳು ಈಗ ಅಲ್ಲಲ್ಲಿ ವಿದ್ಯುಚ್ಛಕ್ತಿಯ ಪೂರೈಕೆಯ ಕಾರ್ಯಗಳನ್ನು ತೆಗೆದುಕೊಳ್ಳುತ್ತಿರುವುದು ಕಂಡುಬರುವುದು. ಇದರಿಂದ ನಗರ ಸಭೆಯ ಉತ್ಪನ್ನವು ಹೆಚ್ಚುವುದರಲ್ಲಿ ಸಂದೇಹವಿಲ್ಲ. ಬ್ರಿಟನದ ವಿದ್ಯುಚ್ಛಕ್ತಿಯ ಪೂರೈಕೆಯಲ್ಲಿ ೩ರಲ್ಲಿ ೨ ಅಂಶವು ನಗರ ಸಭೆಗಳ ವತಿಯಿಂದ ಪ್ರಾರಂಭಿಸಲ್ಪಟ್ಟ ವಿದ್ಯುಚ್ಛಕ್ತಿಯ ಕಾರ್ಯಾಲಯಗಳಿಂದ ಪೂರೈಸಲ್ಪಡುವದು. ಸ್ವಿಝರಲೆಂಡ, ಕ್ಯಾನಡಾ ವಿನಿಪೆಗ್ ಮೊದಲಾದ ದೇಶಗಳಲ್ಲಿಯೂ ಇದೇ ರೀತಿಯಿದೆ. ೧೯೩೩ರಲ್ಲಿ ನಗರ ಸಭೆಗಳಿಗೆ ವಿದ್ಯುಚ್ಛಕ್ತಿ ಕಾರ್ಯಾಲಯಗಳನ್ನು ಸ್ಥಾಪಿಸಲಿಕ್ಕೆಂದೇ ಅಮೇರಿಕೆ ಸರಕಾರವು ಸಾಲವನ್ನು ಕೊಟ್ಟಿತು. ಜರ್ಮನಿ, ಫ್ರಾನ್ಸ ಮೊದಲಾದೆಡೆಗಳಲ್ಲಿ ನಗರ ಸಭೆ ಮತ್ತು ಜನತೆಯು ಕೂಡಿ ಇಂತಹ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಲಿವೆ. ಆದರೆ ನಮ್ಮ ಭಾರತವು ಇನ್ನೂ ಈ ದೃಷ್ಟಿಯಿಂದ ಸಂಪೂರ್ಣ ಎಚ್ಚತ್ತಂತೆ ಕಾಣುವುದಿಲ್ಲ.

ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಪ್ರಯಾಣದ ಸೌಕರ್ಯವನ್ನು ಈಗ ಹಲವಾರು ಸಂಘ ಸಂಸ್ಥೆಗಳು ಒದಗಿಸಿಕೊಡುತ್ತಲಿರುವುದು ಕಂಡುಬರುತ್ತದೆ. ಬಸ್ಸು, ಟ್ರ್ಯಾಮು, ಮೊದಲಾದ ವಾಹನ ಸಂಸ್ಥೆಗಳು ಹೆಚ್ಚಿನ ಲಾಭವನ್ನು ಗಳಿಸುತ್ತಿರುವುದೂ ತೋರಿಬರುತ್ತದೆ. ಕೆಲವೆಡೆ ಪ್ರಯಾಣಿಕರ ಕಡೆಗೆ ಅಲಕ್ಷ್ಯಭಾವವನ್ನು ತೋರಿಸಿ ಇಲ್ಲವೆ ತೋರಿಸುತ್ತಿರುವ ನಿದರ್ಶನಗಳೂ ಇವೆ. ನಗರ ಸಭೆಗಳು ತಮ್ಮ ಉತ್ಪನ್ನವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಪ್ರಯಾಣದ ಸೌಕರ್ಯವನ್ನು ಒದಗಿಸಿಕೊಡುವ ಬಸ್ಸು ಮೊದಲಾದವುಗಳ ವ್ಯವಸ್ಥೆಗಳನ್ನು ಈಗಾಗಲೇ ಅಲ್ಲಲ್ಲಿ ಸ್ಥಾಪಿಸಿರುವವು. ಇದು ನಿಜವಾಗಿಯೂ ಅಭಿನಂದನೀಯವಿದೆ. ಹೀಗೆ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಜನತೆಗೆ ಪ್ರಯಾಣದ ಸೌಕರ್ಯವನ್ನು ಒದಗಿಸಿ ಕೊಡುವುದರೊಂದಿಗೆ ಅದರಿಂದ ಬಂದ ಉತ್ಪನ್ನದಿಂದ ಇತರ ಉಪಯೋಗೀ ಕೆಲಸಗಳನ್ನು ಮಾಡಲು ನಗರ-ಸಭೆಗಳಿಗೆ ಆರ್ಥಿಕ ಶಕ್ತಿಯು ದೊರೆಯುವುದು. ೧೯೩೫ರಲ್ಲಿ ಇಂಗ್ಲಂಡದಲ್ಲಿಯ ಟ್ರ್ಯಾಮು ಕಂಪೆನಿಗಳಲ್ಲಿ ನೂರಕ್ಕೆ ೮೦ರಷ್ಟು ನಗರ ಸಭೆಗಳ ಒಡೆತನಕ್ಕೆ ಸೇರಿದ್ದುವು. ಈಗ ಎಲ್ಲವೂ ನಗರಸಭೆಯ ಒಡೆತನದ್ದೆಂದು ಹೇಳಬಹುದು.

ಇನ್ನೂ ಹಲವಾರು ರೀತಿಗಳಿಂದ ನಗರ ಸಭೆಗಳು ಜನತೆಗೆ ತಮ್ಮ ಸೇವೆಯನ್ನು ಸಲ್ಲಿಸುವುದರೊಂದಿಗೆ ಅದರಿಂದ ತಮ್ಮ ಉತ್ಪನ್ನವನ್ನೂ ಹೆಚ್ಚಿಸಿಕೊಳ್ಳಬಹುದು ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ

೧. ಅಲ್ಲಲ್ಲಿ ಉತ್ತಮ ರೀತಿಯ ಮನೆಗಳನ್ನು ಕಟ್ಟಿಸಿ ಬಾಡಿಗೆಯಿಂದ ಕೊಡುವುದು. ಇದರಿಂದಾಗಿ ಜನತೆಯ ಆರೋಗ್ಯದ ಕಡೆಗೂ ಗಮನಕೊಟ್ಟಂತಾಗುವುದಲ್ಲದೆ ತಮ್ಮ ಉತ್ಪನ್ನವನ್ನೂ ಹೆಚ್ಚಿಸಿಕೊಂಡಂತಾಗುವುದು. ಪರ ಊರವರಿಗೆ ಮನೆಗಳ ಸೌಕರ್ಯವನ್ನೂ ಒದಗಿಸಿಕೊಟ್ಟಂತಾಗುವುದು.

೨. ಶವದಹನ ಇಲ್ಲವೆ ಹೂಳುವುದಕ್ಕಾಗಿ ಎಲ್ಲ ಸೌಕರ್ಯಗಳೂ ಇರುವ ಸ್ಮಶಾನಗಳನ್ನು ನಿರ್ಮಿಸುವುದು. ದುಃಖಾಶ್ರುಪೂರಿತರಾಗಿ ಹೋದ ಮೃತನ ಸಂಬಂಧಿಕರಿಗೆ ಸ್ಮಶಾನ ಘಟ್ಟದಲ್ಲಿ ಹೆಚ್ಚಿನ ತೊಂದರೆಯಾಗದಂತೆ ದಹನಾದಿ ಕ್ರಿಯೆಗಳಿಗೆ ಬೇಕಾದ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡುವುದು. ಸ್ಮಶಾನ ಘಟ್ಟವನ್ನು ಸುಂದರವಾದ ಉಪವನಗಳಿಂದ ಶೋಭಾಯಮಾನವಾಗಿ ಮಾಡುವುದು.

೩. ಆಹಾರ ಪದಾರ್ಥಗಳನ್ನು ಜನತೆಗೆ ಒದಗಿಸಿಕೊಡುವುದಕ್ಕಾಗಿ ಅಂಗಡಿಗಳನ್ನು ತೆರೆಯುವುದು. ಈ ರೀತಿಯ ಅಂಗಡಿಗಳಲ್ಲಿ ಆರೋಗ್ಯಕ್ಕೆ ಸಾಧಕವಾಗದಂತಹ ಆಹಾರ ಪದಾರ್ಥಗಳನ್ನೇ ಮಾರುವ ಒಂದು ವೈಶಿಷ್ಟ್ಯವನ್ನಿಟ್ಟುಕೊಂಡರೆ ಜನತೆಯ ಆರೋಗ್ಯದ ಕಡೆಗೂ ಲಕ್ಷ್ಯಕೊಟ್ಟಂತಾಗುವುದು.

೪. ಹಾಲಿನ ಪೂರೈಕೆ. ಇದರ ಕಡೆಗೆ ನಗರಸಭೆಯವರು ಹೆಚ್ಚಿನ ಗಮನ ಕೊಡಬೇಕು. ಏಕೆಂದರೂ ಹಾಲಿಗೆ ನೀರು ಬೆರಸಿ ಕೊಡುವ ರೂಢಿಯು ಇನ್ನೂ ಹೋಗಲಿಲ್ಲ. ಅಲ್ಲದೆ ದನದ ಕೊಟ್ಟಿಗೆಗಳನ್ನು ಶುಚಿಯಾಗಿಟ್ಟುಕೊಳ್ಳುವದೂ ಕಂಡುಬರುವುದಿಲ್ಲ. ಹಾಲಿನ ಪೂರೈಕೆಯನ್ನು ನಗರಸಭೆಯವರು ತೆಗೆದುಕೊಂಡದ್ದೇ ಆದರೆ ಶಿಶುಗಳ ಅಕಾಲ ಮರಣವನ್ನು ತಪ್ಪಿಸಿದಂತಾಗುವುದು. ವೆಲ್ಲಿಂಗ್‌ಟನ್ (ನ್ಯೂಝಿಲ್ಯಾಂಡ) ವಿಯನ್ನಾ ಮೊದಲಾದೆಡೆಗಳಲ್ಲಿಯ ನಗರಸಭೆಗಳು ಈ ದೃಷ್ಟಿಯಿಂದ ಹೆಚ್ಚು ಕೆಲಸವನ್ನು ಮಾಡಿರುವವು.

೫. ಹಣ್ಣುಹಂಪಲಗಳು; ಮಾಂಸ ಮೊದಲಾದವುಗಳ ಮಾರಾಟ ಇವುಗಳನ್ನು ನಗರ ಸಭೆಯವರು ತಮ್ಮ ವಶಕ್ಕೆ ತೆಗೆದುಕೊಂಡದ್ದೇ ಆದರೆ ಅದರಿಂದ ಆರ್ಥಿಕ ಲಾಭವು ಮಾತ್ರವಲ್ಲದೆ ಜನತೆಗೆ ಆರೋಗ್ಯ ಲಾಭವೂ ದೊರೆಯುವುದು. ಕೊಳೆತ ಹಣ್ಣುಗಳ ಮಾರಾಟದಿಂದ ಅಥವಾ ನಾರುವ ಮಾಂಸ ಮಾರಾಟದಿಂದಾಗಿ ಉಂಟಾಗುವ ಪರಿಣಾಮವು ತಪ್ಪುವುದು.

ಇವುಗಳಲ್ಲದೆ ನಗರಸಭೆಗೆ ಆರ್ಥಿಕ ಲಾಭವಾಗುವ ಮತ್ತು ಜನತೆಗೆ ಆರೋಗ್ಯ ಲಾಭವು ದೊರೆಯುವ ಇನ್ನೂ ಅನೇಕ ವಿಧದ ಕಾರ್ಯಕಲಾಪಗಳನ್ನು ನಗರ ಸಭೆಯವರು ಕೈಕೊಳ್ಳಲಿಕ್ಕೆ ಶಕ್ಯವಿದೆ.

"ನಮ್ಮ ಉತ್ಪನ್ನವು ಮರ್ಯಾದಿತವಾಗಿದೆ", ನಮಗೆ ಸಾಲವು ದೊರೆಯುವುದಿಲ್ಲ" ಎಂಬುದೇ ಮೊದಲಾಗಿ ಹೇಳಿಕೊಂಡು ನಗರಸಭೆಗಳು ಜನತೆಗೆ ತಾವು ಸಲ್ಲಿಸಬೇಕಾಗಿರುವ ಸೇವೆಯನ್ನು ಸಲ್ಲಿಸದಿರುವುದು ತೀರ ತಪ್ಪು. ಉತ್ಪನ್ನವನ್ನು ಹೆಚ್ಚಿಸಿಕೊಳ್ಳಲು ನಗರಸಭೆಗಳಿಗೆ ಮೇಲೆ ಸೂಚಿಸಿದಂತೆ ಅನೇಕ ಮಾರ್ಗಗಳಿವೆ. ಹಾಗೆ ಮಾಡುವುದನ್ನು ಬಿಟ್ಟು "ಆದಷ್ಟು ಆಗಲಿ" ಎಂಬ ಧೋರಣೆಯನ್ನು ನಗರ ಪಿತಾಮಹರು ವಹಿಸಿದ್ದಾದರೆ ಜನತೆಯ ದ್ರೋಹವಾಗುವದು. ನಿಷ್ಕ್ರಿಯೆಯ ಧೋರಣೆಯನ್ನು ಬಿಟ್ಟು ಜನತೆಗೆ ತಾನು ಯಾವ ರೀತಿಯಿಂದ ಹೇಗೆ ಸಹಾಯ ಮಾಡಬಹುದು ಎಂದು ಪ್ರತಿಯೊಬ್ಬ ನಗರಸಭಾಸದನೂ ಚಡಪಡಿಸುತ್ತಿದರೆ ಹೆಚ್ಚಿನ ಕಾರ್ಯವು ಆಗುವುದು. ಸ್ಥಾನಿಕ ಸಂಸ್ಥೆಗಳಿಗೆ ಸಂಬಂಧಿಸಿದವರೆಲ್ಲರೂ ಜಾಗ್ರತರಾಗಿ ಇತರ ರಾಷ್ಟ್ರಗಳಲ್ಲಿ ಹೇಗೆ ಕಾರ್ಯ ನಡೆದಿದೆಯೆಂಬುದನ್ನು ನೋಡಿಕೊಳ್ಳುವುದು ಅವಶ್ಯವಿದೆ "ಭವಿತವ್ಯಂ ಭವತ್ಯೇವ" ಎಂಬ ಗೀತೆಯ ಮಾತು ನಿಜವಾದರೂ ಕರ್ಮವನ್ನು ಮಾಡದಿರುವುದು ಧರ್ಮವಲ್ಲ. ಜನತಾ ಸೇವೆಯನ್ನು ಮಾಡುವೆವೆಂಬ ಆಶ್ವಾಸನೆಯನ್ನು ಕೊಟ್ಟು ಸ್ಥಾನಿಕ ಸಂಸ್ಥೆಗಳನ್ನು ಪರಿಶೀಲಿಸಿದವರು ಸ್ಥಾನ ದೊರೆತೊಡನೆ ನಿಷ್ಕ್ರಿಯೆಯ ಧೋರಣೆಯನ್ನು ವಹಿಸಬಾರದು. "ಜನಸೇವೆಯೇ ಜನಾರ್ದನ ಸೇವೆ" ಎಂದು ಧ್ಯೇಯವನ್ನಿಟ್ಟುಕೊಂಡದ್ದಾದರೆ ಇದ್ದ ಪರಿಸ್ಥಿತಿಯಲ್ಲಿ ಇನ್ನೂ ಎಷ್ಟೋಪಟ್ಟು ಹೆಚ್ಚು ಅನುಕೂಲತೆಗಳು ಜನತೆಗೆ ಒದಗಲು ಶಕ್ಯವಿದೆ ॥ ೧.

CHAMPAE'S

Snow & Castrex

(Sole Distributers for (India.)

Sukhananda Stores

Santhekatte, UDIPI, S. K.

ಮಹಾತ್ಮರ ಮೊದಲನೆ ಸಾರ್ವಜನಿಕ ಭಾಷಣ.

ತಾ. ೯ರಲ್ಲಿ ಕೆಲಜನರ ಗುಂಪು ಮಹಾತ್ಮರ ಆಶ್ರಮ ಎದುರಿನಲ್ಲಿ ಆಶ್ರಮದ ನಿರ್ಬಂಧಗಳನ್ನು ಲೆಕ್ಕಿಸದೆ ಮಹಾತ್ಮರ ದರ್ಶನಕ್ಕಾಗಿ ಕೂಡಿತ್ತು. ಮಹಾತ್ಮರು ತಮ್ಮ ಆಶ್ರಮದಿಂದ ಹೊರಗೆ ಬಂದು ಅವರಿಗ ದರ್ಶನವಿತ್ತರು. ಜನರು ತಮ್ಮ ದರ್ಶನಕ್ಕಾಗಿ ಹೀಗೆ ತಮಗೆ ತ್ರಾಸಕೊಡಬಾರದೆಂದು ಸೌಮ್ಯ ಮಾತುಗಳಿಂದ ಅವರಿಗೆ ಹೇಳಿದರು. ಅವರು ತಮ್ಮ ಅಶಕ್ತತೆಯ ಮಹತ್ವವನ್ನು ಜನರ ಮನಸ್ಸಿನ ಮೇಲೆ ಬಿಂಬಿಸಿದರು. ಅವರು ಮೆಲ್ಲನೆ ಮಾತಾಡುತ್ತಿದ್ದರು. ಶ್ರೀ. ಪ್ಯಾರೇಲಾಲರು ಅವರ ಭಾಷಣವನ್ನು ಗಟ್ಟಿಯಾಗಿ ಹೇಳುತ್ತಿದ್ದರು.

"ನೀವು ಒಳ್ಳೆಯವರೂ ಪ್ರಾರ್ಥನೆಯಲ್ಲಿ ವಿಶ್ವಾಸವುಳ್ಳವರೂ ಆಗಿರುವಿರೆಂದು ತಿಳಿದಿದ್ದೆ. ಆದರೆ ನನಗೆ ತಿಳಿದ ಸಂಗತಿ ಸತ್ಯವಿದ್ದರೆ ನೀವು ಹಾಗಿಲ್ಲವೆಂದು ಹೇಳಬೇಕಾಗುವದು. ನಾನು ತಪ್ಪು ತಿಳಿದುಕೊಂಡರೆ ನೀವು ನನ್ನನ್ನು ತಿದ್ದಬಹುದು. ನೀವು ಈಗ ನನ್ನ ದರ್ಶನಕ್ಕಾಗಿ ಗೇಟನ್ನು ಮುರಿದು ಒಳನುಗ್ಗಿ ಬಂದಿದ್ದರೆ ನನಗೆ ನಿಮ್ಮ ದರ್ಶನ ಬೇಕಾಗಿಲ್ಲ; ನಾನಾದರೂ ನಿಮಗೆ ದರ್ಶನ ಕೊಡುವದಿಲ್ಲ. ನಮ್ಮ ತಪ್ಪಿದ್ದಲ್ಲಿ ನಾವು ಮಾಫಿಗರ್ಹರಿದ್ದೇವೆ. ನಿಮ್ಮಲ್ಲಿ ಯಾರೂ ಹಿಂದೆ ಉಳಿದಿಲ್ಲವೆಂದು ತಿಳಿದುಕೊಂಡಿದ್ದೆ. ನೀವು ತಡಮಾಡಿಬಂದರೂ ಪ್ರಾರ್ಥನೆಯ ವೇಳೆಗೆ ಸರಿಯಾಗಿ ಬಂದಿರಿ. ಶ್ರೀಮತಿ ಸರೋಜಿನಿ ದೇವಿಯವರು ನಿಮ್ಮನ್ನು ಒಳಗೆ ಬಿಟ್ಟಿರಬಹುದೆಂದು ತಿಳಿದಿದ್ದೆ. ನೀವು ಗದ್ದಲಮಾಡದೆ ಒಳಗೆ ಬಂದಿದ್ದರೆ ನನ್ನದೇನೂ ಅಡ್ಡಿ ಇರಲಿಲ್ಲ. ಹಾಗೆ ಮಾಡದೆ ನೀವು ಕೂಗಾಡುತ್ತಾ ಬಾಗಿಲು ಮುರಿದುಬಂದಿರಿ. ನನಗೆ ನಿಮ್ಮ ದರ್ಶನದಿಂದ ಸಂತೋಷವಾಗಿದೆ. ಆದೇ ನಿಮ್ಮ ಆಚರಣೆಯಿಂದ ದುಃಖವಾಗಿದೆ. ನೀವು ಇನ್ನೊಮ್ಮೆ ಹೀಗೆ ಮಾಡಲಾರಿರೆಂದು ನಾನು ಆಶಿಸುತ್ತೇನೆ. ಇಲ್ಲಿಂದ ಗಲಭೆ ಮಾಡದೆ ಹೊರಟುಹೋದರೆ ನಾನು ನಿಮಗೆ ತುಂಬಾ ಉಪಕೃತನಾಗುವೆನು.

ನಾನು ಇಷ್ಟು ಮಾತಾಡಿದ್ದು ಕೂಡ ನನ್ನ ಶಕ್ತಿ ಮೀರಿ ಹಾಗೂ ಡಾಕ್ಟರರ ಸಲಹೆಯನ್ನು ಅಲ್ಲಗಳೆದು ನನ್ನ ಮನಸ್ಸಿನ ಉದ್ವೇಗವನ್ನು ಕಡಿಮೆಮಾಡಿಕೊಳ್ಳುವ ಸಲುವಾಗಿ ನಾನು ಮಾತಾಡಿದೆ. ಇಲ್ಲವಾದರೆ ನನಗೆ ರಾತ್ರಿ ಚೆನ್ನಾಗಿ ನಿದ್ದೆಹತ್ತುತ್ತಿರಲಿಲ್ಲ. ನೀವು ಇಲ್ಲಿಂದ ಶಾಂತತನದಿಂದ ಹೊರಟುಹೋದರೆ ನನ್ನ ಮನಸ್ಸು ಶಾಂತವಾಗುವದು. ನೀವು ಗಲಭೆಯೆಬ್ಬಿಸಿದರೆ ಮಾತ್ರ ನಾನು ತಿರುಗಿ ಬರಬೇಕಾಗುವದು.

ನಿಮ್ಮಲ್ಲಿ ಯಾರಾದರೂ ಹರಿಜನ ಫಂಡಿಗೆ ಸಹಾಯಮಾಡುವವರಿದ್ದರೆ ಮಾಡಬಹುದು. ನಾನು ನಿಂತಿರಬೇಕೆಂಬ ಅಪೇಕ್ಷೆ...ದವರನ್ನು" ಎಂದು ಮಾತಾಡಿ ಆಶ್ರಮದ ಒಳಗೆ ಹೋದರು.

ಕಮ್ಯುನಿಸ್ಟ ಪಕ್ಷದ ಮುಖಂಡರಾದ ಶ್ರೀ. ಪಿ. ಸಿ ಜೋಶಿಯವರು ಮಹಾತ್ಮರನ್ನು ಭೆಟ್ಟಿಯಾದರು.

ಬಾಲಗಂಧರ್ವರು ತಮ್ಮ ಸಂಗೀತದಿಂದ ಮಹಾತ್ಮರಿಗೆ ಸಂತೋಷವನ್ನುಂಟು ಮಾಡಿದರು.

ದಕ್ಷಿಣ ಫ್ರಾನ್ಸಿನಲ್ಲಿ ಗಂಭೀರ ಪರಿಸ್ಥಿತಿ!

ಝೂರಿಕ್ ೯—ಫ್ರೆಂಚ ದೇಶಪ್ರೇಮಿಗಳ ಒಂದು ದೊಡ್ಡ ಗುಂಪು ಜಾಸ್ಸರ್ ಆವ್ವಿನರ ನೇತೃತ್ವದಲ್ಲಿ ದಕ್ಷಿಣ ಫ್ರಾನ್ಸದಲ್ಲಿ ಬಂಡಾಯ ಹೂಡಿರುವದೆಂದೂ ಪರಿಸ್ಥಿತಿ ಬಹಳ ಗಂಭೀರವಾಗಿರುವದೆಂದೂ ದಂಡಿನ ಕಾಯಿದೆಯಿದ್ದಂತೆ ಭೀಕರ ಯುದ್ಧ ನಡೆದಿದೆಯೆಂದೂ ಫ್ರೆಂಚ ಪೋಲೀಸರಲ್ಲಿ ಅನೇಕರು ಜರ್ಮನಿಯ ಆಜ್ಞೆಯನ್ನು ಮಾನ್ಯ ಮಾಡಲಿಲ್ಲವೆಂದೂ ಮುಂತಾಗಿ ಸ್ವೀಜ್ ಪತ್ರಿಕೆಗಳಿಗೆ ಸುದ್ದಿ ಬಂದಿವೆ.

ಇನ್ನೂ ವಿಶ್ರಾಂತಿ ಅವಶ್ಯ.

ತಾ. ೧೧ರಲ್ಲಿ ಮಹಾತ್ಮಾ ಗಾಂಧಿಯವರನ್ನು ಪರೀಕ್ಷೆಮಾಡಿ ಡಾ. ಬಿ. ಸಿ. ರಾಯರು ಡಾ. ಜೀವರಾಜ ಮೇಥಾ, ಡಾ. ಸುಶೀಲಾ ನಾಯರ ಡಾ. ಕೆ. ಟಿ. ಗಜ್ಜರ ಮತ್ತು ಡಾ. ಎಂ. ಡಿ. ಡಿ. ಗಿಲ್ಡರರು ಈ ರೀತಿ ಆರೋಗ್ಯ ಸಂಬಂಧದ ಪ್ರಕಟಣೆ ಹೊರಡಿಸಿರುವರು.

ನಾವು ಮಹಾತ್ಮಾ ಗಾಂಧಿಯವರನ್ನು ಪರೀಕ್ಷೆಮಾಡಿದ್ದಲ್ಲದೆ ರೋಗ ನಿದಾನ ತಜ್ಞರ ವರದಿಯನ್ನೂ ಪರಿಶೀಲಿಸಿದೆವು. ಮಹಾತ್ಮಾ ಗಾಂಧಿಯವರ ಪ್ರಕೃತಿಯಲ್ಲಿ ನಾವು ಎಣಿಸಿದಷ್ಟು ಬೇಗ ಹಾಗೂ ನಮ್ಮ ಅಪೇಕ್ಷೆಯಂತೆ ಪ್ರಗತಿಯಾಗಿಲ್ಲವಾದರೂ ಅವರ ಆರೋಗ್ಯದಲ್ಲಿ ಎಷ್ಟೋ ಸುಧಾರಣೆಯಾಗಿದೆ. ಅವರು ಕೆಲವು ದಿನಗಳ ವ್ರಟ್ಟಿಗೆ ಪುಣೆಗೆ ಹೋಗಲು ಬಯಸಿದ್ದಾರೆ. ಅಲ್ಲಿಂದ ಸ್ವಲ್ಪ ದಿನಗಳ ನಂತರ ಅವರು ಪಂಚಗಣಿಗೆ ಹೋಗುವ ಅಪೇಕ್ಷೆ ವ್ಯಕ್ತಮಾಡಿದ್ದಾರೆ. ಇವರಿಗೆ ಇನ್ನು ವಿಶ್ರಾಂತಿಯ ಅವಶ್ಯವಿದೆಂಬದನ್ನು ಸಾರ್ವಜನಿಕರು ಲಕ್ಷ್ಯದಲ್ಲಿಟ್ಟುಕೊಳ್ಳಬೇಕೆಂದು ವಿನಂತಿಸಿದ್ದಾರೆ.

ಆಗಾಖಾನ್ ಅರಮನೆಯನ್ನು ಮನಃರಂಜನೆ ಸಂಸ್ಥೆಗೆ ಭಾಡಿಗೆಗೆ ಕೊಡಲಾಗುವದು?

ಮುಂಬೈ ತಾ. ೧೦ ಎನ್ನಾ ಮನೋರಂಜನೆಯ ಕಾರ್ಯಕ್ರಮದ ಉತ್ಪಾದಕ ಕೇಂದ್ರವನ್ನಾಗಿ ಆಗಾಖಾನ ಅರಮನೆಯನ್ನು ಉಪಯೋಗಿಸಲಾಗುವದು ಎಂದು ಪ್ರಕಟವಾದ ಸುದ್ದಿಯಿಂದ ಆಗಾಖಾನರ ಅನುಯಾಯಿಗಳಿಗೆ ಅಂಜಿಕೆ, ಮತ್ತು ಸಂಶಯ ಹುಟ್ಟಿದೆ.

ಮುಂಬೈ ನಗರದಲ್ಲಿ ಜನದಟ್ಟಣೆಯು ಹೆಚ್ಚಾಗಿರುವದರಿಂದ ಮನೋರಂಜನೆಯ ಜನರಿಗೆ ಅಲ್ಲಿ ಸ್ಥಳವಿಲ್ಲದಂತಾಗಿದೆ. ಆದ್ದರಿಂದ ಎನ್ನಾದವರು ಆಗಾಖಾನ ಅರಮನೆಯನ್ನು ತಮಗೆ ಬಾಡಿಗೆಗೆ ಕೊಡಬೇಕೆಂದು ಪತ್ರವ್ಯವಹಾರ ನಡೆಸಿದ್ದಾರೆ. ಅಂದರೆ ಆಗಾಖಾನ ಅರಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳುವದರಿಂದ ಕಲಾವಿದರಿಗೆ ತಮ್ಮ ಕಲೆಯ ಅಭ್ಯಾಸ ಹಾಗೂ ಇನ್ನಿತರ ಮನೋರಂಜನೆಯ ಅಭ್ಯಾಸಕ್ಕೆ ಅನುಕೂಲವಾಗುವದೆಂದು ಹೇಳಲಾಗಿದೆ. ಆದರೆ ಆಗಾಖಾನ ಅರಮನೆಯಲ್ಲಿಯೇ ಪ್ರದರ್ಶನವಗೈರೆ ಮಾಡಿ ಅದರ ಶಾಂತ ವಾತಾವರಣ ಮತ್ತು ಒಡೆಯರ ಗೌರವಕ್ಕೆ ಕುಂದು ಬರುವ ಕೆಲಸವನ್ನು ಮಾಡಲಾಗುವದಿಲ್ಲವೆಂದೂ ಬಾಡಿಗೆಗೆ ಕೊಟ್ಟರೆ ಎನ್ನಾದವರು ಚಿರಋಣಿಯಾಗಿ ಉಳಿಯುವರೆಂದೂ ಮುಂತಾಗಿ ಕೇಳಲಾಗಿದೆ.

ಸರಕಾರಿ ಆರೋಪಗಳಿಗೆ ಮ. ಗಾಂಧಿಯವರ ಉತ್ತರ.

1912-13ರಲ್ಲಿಯ ಅಶಾಂತತೆಯ ಬಗ್ಗೆ ಸರಕಾರದವರು ಹೊರಡಿಸಿದ "ಕಾಂಗ್ರೆಸದ ಹೊಣೆ" ಎಂಬ ಪತ್ರಿಕೆಯ ಬಗ್ಗೆ 'ನ್ಯೂಜ ಕ್ರಾನಿಕಲ್'ದ ಪ್ರತಿನಿಧಿಗೆ ಮಹಾತ್ಮರು ಕೆಳಗಿನ ಉತ್ತರವನ್ನು ಕೊಟ್ಟರು. "ಎಲ್ಲ ಆರೋಪಗಳಿಗೆ ನಾನು ಸವಿಸ್ತಾರವಾದ ಯಥಾಸಾಂಗ ಉತ್ತರವನ್ನು ಕೊಡುವವನಿದ್ದೇನೆ. ನಾನು ನೆಟ್ಟಗಾದ ಮೇಲೆ, ಪುನಃ ಬಂಧಿಸಲ್ಪಡದಿದ್ದರೆ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡುವೆನು".

೦೦ ೦೦ ೦೦

"ಮಾತೃಭೂಮಿಯ ಸ್ವಾತಂತ್ರ್ಯದ ಸಲುವಾಗಿ ಮಾಡಿದ ಯಾವ ಸ್ವಾರ್ಥತ್ಯಾಗವೂ ದೊಡ್ಡದೆನಿಸಲಾರದು. ಪಕ್ಷಭೇದ ಮತ್ತು ತಮ್ಮ ತಮ್ಮೊಳಗಿನ ಜಗಳವನ್ನು ಬಿಟ್ಟುಬಿಡುವ ಅಪೇಕ್ಷೆಯನ್ನು ಹಿಂದೀಯರಿಂದ ಮಾಡುವದು ಬಹಳೆನಿಸುವದೋ? ಉಳಿದ ರಾಷ್ಟ್ರಗಳಲ್ಲಿ ತಮಗೆ ಮರ್ಯಾದೆಯ ಸ್ಥಾನವು ಬೇಕಾಗಿದ್ದರೆ ಹಿಂದೀಯರು ತಮ್ಮ ಸ್ವಾತಂತ್ರ್ಯಕ್ಕೆ ಅಡ್ಡಬರುವ ತೊಂದರೆಗಳನ್ನೆಲ್ಲ ನಿವಾರಿಸಿಕೊಳ್ಳಬೇಕು. ಮಹಾತ್ಮರು ತಮ್ಮ ಸರ್ವಸ್ವವನ್ನೆಲ್ಲ ವೆಚ್ಚಮಾಡಿ ಬಿಕ್ಕಟ್ಟನ್ನು ಬಗೆಹರಿಸುವ ಪ್ರಯತ್ನವನ್ನು ಮಾಡಬೇಕು. ಮತ್ತು ಅವರ ಈ ಪ್ರಯತ್ನಕ್ಕೆ ಎಲ್ಲರೂ ತಮ್ಮ ಹಾರ್ದಿಕ ಸಹಾಯ ಮಾಡಬೇಕು". ಹೀಗೆ ಶ್ರೀ. ಫಾಝುಲ್ ಇಬ್ರಾಹಿಮ ರಹಿಮತುಲ್ಲಾ ಇವರು ಒಂದು ಪತ್ರಿಕೆಯಲ್ಲಿ ಬರೆದಿದ್ದಾರೆ. ಅವರು ಮತ್ತೂ ಹೇಳುವದೇನಂದರೆ—

"ರಾಜಕೀಯ ರಂಗದಲ್ಲಿ ಈಗ ಸ್ತಬ್ಧತೆಯಿದೆ. ಪ್ರಚಾರ ಹಾಗೂ ಚಟುವಟಿಕೆಗಳು ತಣ್ಣಗಾಗಿವೆ. ಗಾಂಧಿಜೀಯವರ ಬಿಡುಗಡೆಯಾದಂದಿನಿಂದ ಮಾತ್ರ ಅವರ ಕಡೆಗೆ ಎಲ್ಲರ ಲಕ್ಷ್ಯವೂ ವೇಧಿಸಿದೆ. ಏನೂ ಆಗದಿದ್ದರೆ ಮಾತ್ರ ದೇಶಕ್ಕೆ ದೊಡ್ಡ ವಿಪತ್ತು ಸಂಭವಿಸುವದು. ಈಗಿನ ವಾತಾವರಣವು ಸ್ವಚ್ಛವಾಗಲಿಕ್ಕೆಬೇಕು. ಅಂದರೆ ಸಂಶಯ, ದ್ವೇಷ ಮೊದಲಾದವುಗಳಿಗೆ ಆಸ್ಪದವು ದೊರೆಯಲಾರದು. ಒಬ್ಬರಿಗೊಬ್ಬರ ವಿಷಯವಾಗಿ ಕಂಡುಬರುವ ನಿರ್ಲಕ್ಷತನವೂ ನಿರ್ಮೂಲವಾಗಬೇಕು. ಯುದ್ಧವು ನಮ್ಮ ಬಾಗಿಲಿಗೇ ಬಂದಿರುವದು. ಹಿಂದುಸ್ಥಾನದಲ್ಲಿಯ ತರುಣರನ್ನು ಯುದ್ಧಕ್ಕೆ ಸನ್ನದ್ಧರಾಗಿ ಮಾಡುವದು ಅವಶ್ಯವಿದೆ. ಶಾಂತತೆ ಮತ್ತು ಐಕ್ಯ ಇವುಗಳ ಸಹಾಯದಿಂದ ಸರ್ವ ಪಕ್ಷಗಳು ಒಂದಾಗಿ ಹೀಗೆ ಮಾಡುವವೆಂದು ಬ್ರಿಟಿಶ ಸರಕಾರದ ಇಚ್ಛೆಯಿದ್ದಂತೆ ತೋರುತ್ತದೆ. ಇದು ಸಾಧ್ಯವಾಗಬೇಕಾದರೆ ಎರಡು ಮಾರ್ಗಗಳಿವೆ. ಒಂದು "ಪಾಕಿಸ್ತಾನ"ಕ್ಕೆ ಮಾನ್ಯ ಕೊಡುವುದು, ಇನ್ನೊಂದು ಮುಸಲ್ಮಾನರೇ ಮೊದಲಾದ ಅಲ್ಪ ಸಂಖ್ಯಾಕರಿಗೆ ವಿಶ್ವಾಸ ಹುಟ್ಟುವಂತಹ ರಾಜ್ಯಘಟನೆಯನ್ನು ಸಿದ್ಧಗೊಳಿಸುವದು"

೦೦ ೦೦ ೦೦

'ಶೀಘ್ರವೇ ಗಾಂಧಿ-ಜಿನ್ನಾರ ಭೆಟ್ಟಿಯು ಆಗಿ ಸಮಾಧಾನಕರ ಒಪ್ಪಂದವಾಗುವದೆಂದು ಪಂಜಾಬ ಲೀಗದ ಅಧ್ಯಕ್ಷರಾದ ಮಮ್ದೋದ ನವಾಬರು ವೃತ್ತ ಪತ್ರಿಕೆಗಳ ಪ್ರತಿನಿಧಿಗಳಿಗೆ ಹೇಳಿದರು. ಆದರೆ 'ಗಾಂಧಿ-ಜಿನ್ನಾರ ಭೆಟ್ಟಿಯ ಬಗ್ಗೆ ನನಗೆ ಅಧಿಕೃತವಾಗಿ ಏನೂ ತಿಳಿದಿಲ್ಲ ಆದರೆ ಸ್ವಲ್ಪ ದಿವಸಗಳಲ್ಲೇ ಈ ಭೆಟ್ಟಿಯ ಯೋಗವುಂಟಾದರೆ ಆಶ್ಚರ್ಯವೇನೂ ಇಲ್ಲ.' ವೆಂದು ಹೇಳಿದರು. ಅವರು ಮತ್ತೂ ಹೇಳುವದೇನಂದರೆ ಈಗ ಗಾಂಧಿ-ಜಿನ್ನಾರಲ್ಲಿ ಒಡಂಬಡಿಕೆಯೆಂದರೆ ಹಿಂದು ಮುಸಲ್ಮಾನರಲ್ಲಿ ಐಕ್ಯತೆ ಉಂಟಾಗುವದು ಅವಶ್ಯವಿದೆ. ಹಿಂದುಗಳು 'ಪಾಕಿಸ್ತಾನ' ತತ್ವಕ್ಕೆ ಮನ್ನಣೆ ಕೊಡಬೇಕು. ಇದು ಒಪ್ಪಂದದ ತಳಹದಿಯಾಗಿದೆ. ಇದರಿಂದ ಉಭಯತರಿಗೆ ತಂತಮ್ಮ ಧ್ಯೇಯದಂತೆ ಪ್ರಗತಿ ಮಾಡಿಕೊಳ್ಳಲು ಅವಕಾಶ ದೊರೆಯುತ್ತದೆ. 'ಪಾಕಿಸ್ತಾನ'ದ ವಿವರಗಳನ್ನು ಹಿಂದಿನಿಂದ ವಿಚಾರ ಮಾಡಬೇಕು."

ಫ್ರೆಂಚರಿಗೆ ಜರ್ಮನರ ಎಚ್ಚರಿಕೆ.

"ಮೂರು ಮಂದಿಗಿಂತ ಹೆಚ್ಚು ಜನರು ರಸ್ತೆಯಲ್ಲಿರಕೂಡದು, ಬಾಗಿಲುಗಳಿಗೆ ಕೀಲು ಹಾಕಕೂಡದು, ಕಿಟಕಿಗಳನ್ನು ಹಾಕಿಡಬೇಕು, ಯಾರೂ ಯಾವದೇ ವಾಹನಗಳಲ್ಲಿ ಸಂಚರಿಸಕೂಡದು, ಚಲಚಿತ್ರ, ನರ್ತನ, ನಾಟಕಾದಿ ವಿನೋದ ಮಂದಿರಗಳೂ, ಹೊಟೆಲುಗಳೂ ಮುಚ್ಚಲ್ಪಡಬೇಕು. ಮಾದಕ ಪದಾರ್ಥಗಳ ವಿಕ್ರಯ ನಿಲ್ಲಿಸಲ್ಪಡಬೇಕು. ಯುದ್ಧ ಪ್ರದೇಶದ ಜನರು ಹಗಲು ಹೊತ್ತಿನಲ್ಲಿ ಸಹ ಹೊರಗೆ ಬರಬಾರದು. ಶತ್ರುವಿಗೆ ಸಹಕಾರವಿತ್ತವರಿಗೆ ಮೃತ್ಯು ಕಾದಿದೆ".

ತಾರೀಖು 15—6—44ರಿಂದ

ಅಮರ್ ಪಿಕ್ಚರ್ಸ್‌ನವರ

ಆಂಖ್ ಮಿಚೌಲಿ

ನಳಿನಿ ಜಯವಂತ್, ಸುಲೋಚನಾ, ಆನಂದ ಪ್ರಸಾದ್ ಮೊದಲಾದವರು ನಟಿಸಿರುವರು.

ಬರುವ ಚಿತ್ರ:—"ನಾರಿ"

ಅನಂತರ:—ಕನ್ಯಾದಾನ್, ದುಹ್ಯಾ, ತಮಾಷ ಇತ್ಯಾದಿ

ದಕ್ಷಿಣ ಕನ್ನಡ

ಮಂಗಳೂರು

ಎಸ್. ಎಸ್. ಎಲ್. ಸಿ. ಫಲಿತಾಂಶ:—ಪಟ್ಟಿಯು ಕಳೆದವಾರ ಹೊರಬಿದ್ದಿದೆ ಕಳೆದ ವರ್ಷ ಒಟ್ಟು ೨೯,೭೦೩ ಮಂದಿ ವಿದ್ಯಾರ್ಥಿಗಳು ಮದ್ರಾಸ್ ಆಧಿಪತ್ಯದಿಂದ ಈ ಪರೀಕ್ಷೆಗೆ ಕುಳಿತಿದ್ದರು, ಇವರಲ್ಲಿ ೩॥ ಸಾವಿರ ಮಂದಿ ಹುಡುಗಿಯರು. ಈ ಪೈಕಿ ಒಟ್ಟು ೧೫,೯೬೩ ಮಂದಿ ಉತ್ತೀರ್ಣರಾಗಿರುವರು. ಈ ವರ್ಷದ ಸಂಖ್ಯೆಯು ಹೊಸ ದಾಖಲೆಯನ್ನು ಸ್ಥಾಪಿಸಿದೆಯಂತೆ, ೬೦ ದೆಂದರೆ ಇಷ್ಟು ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿರಲಿಲ್ಲ. ಮಂಗಳೂರು ನಗರದೊಳಗಿರುವ ೧೧ ಹೈಸ್ಕೂಲುಗಳಿಂದ ಒಟ್ಟು ೩೪೯ ಮಂದಿ ತೇರ್ಗಡೆ ಹೊಂದಿದ್ದಾರೆ.

ಹೊಟೆಲಿನ ವ್ಯಾಲಿಕರಿಗೆ:— ಜಿಲ್ಲಾ ಕಲೆಕ್ಟರರೊಂದು ಆಜ್ಞೆಯನ್ನು ಹೊರಡಿಸುತ್ತಾ, ಕಳೆದ ಮೇ ತಿಂಗಳಲ್ಲಿದ್ದ ಕಾಫಿ ಮತ್ತು ತಿಂಡಿ ಪದಾರ್ಥಗಳ ಬೆಲೆಯನು ಅದರ ೩ನೆಯ ಅಂಶಕ್ಕೆ ಇಳಿಸಬೇಕೆಂದೂ ಇದಕ್ಕೆ ತಪ್ಪಿದರೆ, ಸಕ್ಕರೆಯನ್ನು ಒದಗಿಸಲಾಗುವುದಿಲ್ಲವೆಂದೂ ತಿಳಿಸಿದ್ದಾರೆ, ಹೋಟೆಲುಗಳ ಬಾಗಿಲಲ್ಲಿ, ಮೇ ತಿಂಗಳಲ್ಲಿದ್ದ ದರವನ್ನೂ ಬರೆದು ಪ್ರಕಟಿಸಬೇಕು.

ಇಸ್ಲಾಮಿಯಾ ಕ್ಲಬ್ ದಿನಾಚರಣೆ:—ತಾ ೫ರಂದು ಜಿಲ್ಲಾ ಕಲೆಕ್ಟರ್ ಶ್ರೀ॥ ಪಿ ರಾಮ್‌ದಾಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ನಗರದ ಹಲವಾರು ಮಂದಿ ಮುಸ್ಲಿಮರೂ ಹಿಂದುಗಳೂ ನೆರೆದಿದ್ದರು, ಖಾ॥ ಸಾಹೇಬ್ ಎಚ್. ಎಸ್. ಹುಸೇನ್ ಸಾಹೇಬರು ನೆರೆದವರನ್ನು ಸ್ವಾಗತಿಸಿ ಭಾಷಣವಿತ್ತರು, ಕಾರ್ಯದರ್ಶಿ ಮಿ॥ ಮುಹಮ್ಮದ್ ಪ್ರಧಾನಿ ಅವರು ವರದಿಯನ್ನೊಪ್ಪಿಸಿದರು. ಶ್ರೀಗಳಾದ ಎಂ. ಧನರಾಜ, ಹಮೀದ್ ಹುಸೇನ್,ಅಬ್ದುಲ್ ರಹೀಮ್ ಮೊದಲಾದವರು ಸಭಿಕರ ಪರವಾಗಿ ಕ್ಲಬ್ಬನ್ನು ಪ್ರಶಂಸಿಸಿ ಮಾತನಾಡಿದರು ಅಧ್ಯಕ್ಷರು ಮಾತನಾಡುತ್ತ ಹಿಂದೂಗಳನ್ನೂ ಸಭೆಗೆ ಆಹ್ವಾನಿಸಿದುದಕ್ಕಾಗಿ ಸಂತೋಷ ಪ್ರಕಟಿಸಿದರು. 'ಜಾತೀಯ ಸಂಸ್ಥೆಯೊಂದಿರಬೇಕು ನಿಜ. ಆದರೆ ಸಂಕುಚಿತ ಮನೋಭಾವನೆ ಇರಬಾರದು' ಎಂದರು.

ವೈ. ಯಂ. ಸಿ. ಎ ಶತಾಬ್ದಿ:—ಮಂಗಳೂರು ವೈ. ಯಂ. ಸಿ. ಎ. ಸಂಘದ ಶತಾಬ್ದಿ ಉತ್ಸವವು ತಾ ೬ರಂದು ಬಿ. ಕ್ರೊಲಿ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಕೆನರಾ ವಾಣಿಜ್ಯ ಸಂಘ:—ಈಚೆಗೆ ಶ್ರೀ ಕಸ್ತೂರಿ ನಾಗೇಶ ಪೈ ಅವರ ಅಧ್ಯಕ್ಷತೆಯಲ್ಲಿ ಸಂಘದ ಮಂದಿರದಲ್ಲಿ ಜರುಗಿದ ಅದರ ವಾರ್ಷಿಕ ಸಭೆಯಲ್ಲಿ ವಾರ್ಷಿಕ ಲೆಕ್ಕಪತ್ರ ಇತ್ಯಾದಿಗಳ ಸ್ವೀಕಾರವಾಗಿ ಮುಂದಿನ ವರ್ಷದ ಆಡಳಿತ ಮಂಡಲದ ಚುನಾವಣೆಯಾಯಿತು. ಶ್ರೀ ವಿಠಲ್ದಾಸ್ ಪುರುಷೋತ್ತಮ್ ಶೇಟ್ ಅವರು ಅಧ್ಯಕ್ಷರ; ಜನಾಬ್ ಮುಹಮ್ಮದ್ ಅಬ್ದುಲ್ ಸಕೂರ್ ಅವರು ಉಪಾಧ್ಯಕ್ಷರು; ಶ್ರೀಗಳಾದ ಎಂ. ರಾಘವೇಂದ್ರ ಪೈ. ಅವರೂ ಮಣೇಲ್ ಶ್ರೀನಿವಾಸ ನಾಯ್ಕರೂ ಜತೆಕಾರ್ಯದರ್ಶಿಗಳ; ಶ್ರೀ. ಎಂ. ಎಲ್. ಗೋಪಾಲ ಸೆಟ್ಟಿ ಅವರು ಕೋಶಾಧಿಕಾರಿಗಳು.

ಪೆರಡಾಲ- ವಿದ್ಯಾ ಸಂಘದ ಆಶ್ರಯದಲ್ಲಿ ಈ ದಿನ ಬದಿಯಡ್ಕದಲ್ಲಿ ಶ್ರೀ ಎಂ. ವಿ. ರಾಮವರ್ಮ ರಾಜರವರ ಅಧ್ಯಕ್ಷತೆಯಲ್ಲಿ ಸೇರಿದ ವಿದ್ಯಾಭಿಮಾನಿಗಳ ಸಭೆಯಲ್ಲಿ ಡಾಕ್ಟರ್ ಪಿ. ಎಸ್. ಶಾಸ್ತ್ರಿಗಳು ಸಭಿಕರನ್ನು ಸ್ವಾಗತಿಸಿದ ಬಳಿಕ ಈ ಸಮಾರಂಭದ ಪರವಾಗಿ ಶ್ರೀ ಸಿ. ರಾಧಗೋಪಾಲಾಚಾರ್ಯರಿಂದ ಮತ್ತು ಇತರ ಮಹನೀಯರಿಂದ ಹಾಗೂ ಸಂಸ್ಥೆಗಳಿಂದ ಬಂದ ಶುಭ ಸಂದೇಶಗಳನ್ನು ಓದಿ ಹೇಳಿದರು. ಜಿಲ್ಲಾಬೋರ್ಡು ಅಧ್ಯಕ್ಷರಾದ ಶ್ರೀ. ಎ. ಲಕ್ಷ್ಮೀ ನಾರಾಯಣರಾಯರು "ನವಜೀವನ ಸೆಕೆಂಡರಿ ಶಾಲೆ"ಯ ಪ್ರಾರಂಭೋತ್ಸವವನ್ನು ನೆರವೇರಿಸಿದರಲ್ಲದೆ ಸಂಘಟವದ ಶ್ರಮವನ್ನು ಮತ್ತು ವಿದ್ಯಾಭಿಮಾನದ ಸದುದ್ದೇಶಗಳನ್ನು ಕೊಂಡಾಡಿದರು, ಡಾಕ್ಟರ್ ಪಿ. ಎಸ್. ಶಾಸ್ತ್ರಿಗಳು ಧನ್ಯವಾದಗಳನ್ನರ್ಪಿಸಿದರು.

ಉಡುಪಿ

ಮುಂಬಯಿಯಲ್ಲಿ ವಿಜಯಾ ಬ್ಯಾಂಕಿನ ಶಾಖೆ:—ಯು ಈ ದಿನ ತೆರೆಯಲ್ಪಡುವುದು. ಈ ಶಾಖೆಗೆ ಉಡುಪಿಯಲ್ಲಿ ಏಜಂಟರಾಗಿದ್ದ ಮತ್ತು ವಿಜಯಾ ಬ್ಯಾಂಕಿಗೆ ಕಳೆದ ವರ್ಷ ಅತ್ಯಧಿಕ ಪಾಲುಗಳನ್ನು ಸಂಗ್ರಹಿಸಿದ್ದ ತರುಣೋತ್ಸಾಹಿ ಶ್ರೀ. ಬಿ. ಸಚ್ಚಿದಾನಂದ ಹೆಗ್ಡೇರು ಏಜಂಟರಾಗಿ ಆರಿಸಲ್ಪಟ್ಟು, ಮುಂಬಾಯಿಗೆ ತೆರಳಿರುವರು.

ಫಲಿತಾಂಶ:—ಸ್ಥಳೀಯ ಬೋ. ಹಾ. ಎ. ಶಾಲೆಯ E. S. L. C. ಪರೀಕ್ಷೆಯ ಫಲಿತಾಂಶವು ಸೇ. 90ರಷ್ಟಾಗಿರುವುದು ತುಂಬಾ ಸ್ತುತ್ಯವಾಗಿದೆ, ಹೀಗಿರುವ ಈ ಹಾಯರ್ ಎಲಿಮೆಂಟರಿ ಶಾಲೆಯನ್ನು ಹೈಸ್ಕೂಲಾಗಿ ಬೇಗನೇ ಮಾರ್ಪಡಿಸಬೇಕೆಂಬ ಕುತೂಹಲವು ಸ್ಥಳೀಕರಲ್ಲಿ ಉಂಟಾಗಿ ಈ ಬಗ್ಗೆ ತಕ್ಕ ಪ್ರಯತ್ನಗಳಾಗುತ್ತಿವೆಯೆಂದು ತಿಳಿದು ಬರುತ್ತದೆ.

ಬನ್ನಾಡಿ:—ಇಲ್ಲಿಯ ಪರಮಹಂಸ ಶಾಲೆಯ ಪ್ರೌಢೀಕರಣದ ಪ್ರಾರಂಭೋತ್ಸವವು ಶ್ರೀ. ಕಂಜೀವ ಭಟ್ ಎಮ್. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ತಾ 1-6-44ರಂದು ಸಂಭ್ರಮದಿಂದ ಜರಗಿತು, ಮಕ್ಕಳು ಪ್ರದರ್ಶಿಸಿದ ವಿವಿಧ ವಿನೋದಗಳೂ 'ಸೀತಾಪರಿತ್ಯಾಗ' ಎಂಬ ನಾಟಕವೂ ಚಿತ್ತಾಕರ್ಷಕವಾಗಿದ್ದವು. ನೆರೆಹೊರೆಯ ಜನರು ಆರನೇ ದರ್ಜೆಗೆ ಸೇರಲಿರುವ ತಮ್ಮ ಮಕ್ಕಳನ್ನು ಈ ಸಂಸ್ಥೆಗೆ ಕಳುಹಿಸಿ, ಪ್ರೋತ್ಸಾಹಿಸಬೇಕಾಗಿ ಶಾಲಾ ಚಾಲಕರು ಕೋರುತ್ತಾರೆ.

ತೆಕ್ಕಟ್ಟೆ:—ಸ್ಥಳೀಯ ಶಾಲೆಯಲ್ಲಿ ಕಲಿಯುವ ಊರ ಮತ್ತು ಪರವೂರ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಏರ್ಪಡಿಸಿದ ಬಡವಿದ್ಯಾರ್ಥಿ ಫಂಡಿನಿಂದ ಸಹಾಯವನ್ನು ಅಪೇಕ್ಷಿಸುವವರು ತಾ 15 ರೊಳಗೆ ಅರ್ಜಿ ಮಾಡಬೇಕೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಹೆಬ್ರಿ:—ಶಾಲಾ ಹಿರಿಯ ವಿದ್ಯಾರ್ಥಿ ಮಂಡಲದ ದಿನಾಚರಣೆಯು ಡಾ. ಎನ್. ಪದ್ಮನಾಭ ಸೆಟ್ಟಿ ಅಧ್ಯಕ್ಷತೆಯಲ್ಲಿ ಕಳೆದವಾರ ಜರಗಿ "ದೈವ ಸಂಕಲ್ಪ" ಎಂಬ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿದೆ

ಪುತ್ತೂರು.

ವರ್ಗ—ಸ್ಥಳೀಯ ಡಿಸ್ಟ್ರಿಕ್ಟ್ ಮುನ್ಸಿಫರಾದ ಶ್ರೀ ಡಿ. ಆರ್. ವೆಂಕಟೇಶ ಅಯ್ಯರ್ ಇವರಿಗೆ ಕುಂದಾಪುರಕ್ಕೆ ವರ್ಗವಾಗಿ ಅವರ ಬದಲಿಗೆ ಶ್ರೀ ಮಹಮ್ಮದ ಗೌ. ಸಾಹೇಬ ಬಹದ್ದೂರ್ ಇವರಿಗೆ ಇಲ್ಲಿಗೆ ವರ್ಗವಾಗಿ ತಾ ೬ರಂದು ಚಾರ್ಜು ವಹಿಸಿಕೊಂಡಿರುತ್ತಾರೆ.

ಹೊಸ ವಿದ್ಯಾರ್ಥಿಗಳ ಸಂಕಷ್ಟ—ಸ್ಥಳೀಯ ಬೋರ್ಡ ಹೈಸ್ಕೂಲಿನಲ್ಲಿ III ಫೋರ್ಮ್ C, I ಫೋರ್ಮ್ B ಮತ್ತು ನಾಲ್ಕನೆ ತರಗತಿಯ ಕ್ಲಾಸುಗಳನ್ನು ತೆಗೆದುಹಾಕಲು ಹುಕುಮು ಬಂದಿದೆಯಾಗಿ ತಿಳಿದುಬರುತ್ತದೆ. ಇದರಿಂದ ಬೇರೆ ಶಾಲೆಯಿಂದ ಬಂದು ಸೇರುವ ಮಕ್ಕಳಿಗೆ ಸ್ಥಳ ಸಿಗದೆ ಕುಂಬ ತೊಡಕಾಗಿದೆ. ಈ ನಿಮಿತ್ತ ಕಳೆದ ತಾ. 6ರಂದು ಸಾರ್ವಜನಿಕ ಸಭೆಯೊಂದು ಸೇರಿ ಡಿಸ್ಟ್ರಿಕ್ಟ್ ಬೋರ್ಡಿನವರೊಡನೆ ಕ್ಲಾಸುಗಳನ್ನು ತೆರೆಯಬೇಕಾಗಿ ಕೇಳಿಕೊಳ್ಳಲು ನಿರ್ಣಯಿಸಿರುತ್ತಾರೆ. ಕ್ಲಾಸುಗಳನ್ನು ತೆಗೆದುಹಾಕಿದರೆ ವಿದ್ಯಾರ್ಥಿಗಳು ತುಂಬಾ ಸಂಕಷ್ಟಗಳಿಗೆ ಒಳಗಾಗುವುದರಲ್ಲಿ ಸಂಶಯವಿಲ್ಲ. ಮಾನ್ಯ ಡಿ. ಬೊ. ಪ್ರೆಸಿಡೆಂಟರೂ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರರೂ ಈ ವಿಷಯದಲ್ಲಿ ಉದಾರ ಮನಸ್ಸಿನಿಂದ ಮಹಾಜನರ ಕೋರಿಕೆಯನ್ನು ನೆರವೇರಿಸುವುದು ಅತಿ ಅಗತ್ಯವಿದೆ.

ಕೀ. ಶೇ. ಪಂಡಿತ ತಾರಾನಾಥ ಜೀಯವರ ಜಯಂತಿ:- ಪ್ರೇಮಾಯತನ ಆಶ್ರಮ, ತುಂಗಭದ್ರಾದಲ್ಲಿ ಪಂಡಿತಜೀಯವರ ಜನ್ಮ ದಿನೋತ್ಸವವನ್ನು ಅವರ ಶಿಷ್ಯರೂ ವಿದ್ಯಾರ್ಥಿಗಳೂ ಸ್ನೇಹಿತರೂ ಕೂಡಿ ವಿಜೃಂಭಣೆಯಿಂದ 5-6-44ರಲ್ಲಿ ನೆರವೇರಿಸಿದರು. ಪಂಡಿತಜೀಯವರ ಧರ್ಮ ಪತ್ನಿ ಸುಮತೀ ಬಾಯಿಯವರ ಪ್ರೋತ್ಸಾಹಕರ ಸಂದೇಶ ಓದಿದ ನಂತರ, ಪ್ರೇಮ ವಿದ್ಯಾಪೀಠದ ವಿದ್ಯಾರ್ಥಿ ಸಂಘದ ಸಭೆಸೇರಿ ಈ ಸಂಸ್ಥೆಯಿಂದಲೇ ಇಂದು ಸಮಾಜದಲ್ಲಿ ತಾವು ಒಂದು ಉಂತಸ್ತಿಗೇರಿರುವದರಿಂದ ಮಾತೃ ಸಂಸ್ಥೆಯಾದ ಈ ವಿದ್ಯಾಪೀಠದ ಅಭಿವೃದ್ಧಿಗಾಗಿ ತಾವೆಲ್ಲರೂ ಉತ್ಸುಕತೆಯಿಂದ ಕೆಲಸಮಾಡಬೇಕೆಂಬ ಠರಾವುಗಳು ಪಾಸಾದವು.

ವೈದ್ಯ ಲಕ್ಷ್ಮಣ ಆದೋನಿ, ವೈದ್ಯ ರಾಮಕೃಷ್ಣ ರಾಯಚೂರು, ವೈದ್ಯ ಜಾನ್‌ರತ್ನಂ ದೇವದುರ್ಗ ಇವರು ತಲಾ ಒಂದುನೂರು ರೂಪಾಯಿ ಹಾಗೂ ವೈದ್ಯಕಿ ಬುಲಾಹುಸೇನರು ಐವತ್ತು ರೂಪಾಯಿ ವಾರ್ಷಿಕ ಚಂದಾ ಕೊಡುವದಾಗಿ ವಾಗ್ದಾನಮಾಡಿದರು, ಮತ್ತು ಇನ್ನೂ ಕೆಲವರು ಇಲ್ಲಿಯ ಮೆಡಿಕಲ್ ಕೋಲೇಜನಲ್ಲಿ ಗೌರವಾಧ್ಯಾಪಕರಾಗಿ ಕೆಲಸಮಾಡುವದಾಗಿಯೂ ತಿಳಿಸಿದರು.

ಬಿಲ್ಲವರ ಎಸೋಸಿಯೇಶನ್, ಮುಂಬಯಿ ವಿದ್ಯಾರ್ಥಿವೇತನ.—ಈ ವರ್ಷದ ಸಂಸ್ಥೆಯಿಂದ ವೇತನವನ್ನು ಅಪೇಕ್ಷಿಸುವ ಬಿಲ್ಲವ ಬಡ ವಿದ್ಯಾರ್ಥಿಗಳು ತಾ 15-7-44 ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಎಂದಿನಂತೆ ಯಾವತ್ತೂ ಮಾಹಿತಿಯೊಂದಿಗೆ ಬರೆಕೊಂಡಲ್ಲಿ ವೇತನವನ್ನು ಪಡೆಯಲು ಅರ್ಹರೆಂದು ಕಂಡುಬಂದವರಿಗೆ ವೇತನ ಕೊಡಲಾಗುವುದು ಸದ್ಯಕ್ಕೆ ಕೋಲೇಜಿನ ವಿದ್ಯಾಭ್ಯಾಸಕ್ಕೆ ವೇತನವನ್ನು ಕೊಡಲಾಗುವುದಿಲ್ಲ.

ಗೌರವ ಕಾರ್ಯದರ್ಶಿ,
ದಿ ಬಿಲ್ಲವರ ಎಸೋಸಿಯೇಶನ್.
17, Raghunath Dadaji street
Fort Bombay.

WANTED

Two Sec. Grade Trained teachers one for the S.V.S. Higher Ele. School Katapadi & the other for the Headmaster's post of the P. V. N. Ele. School, Ambadi. Pay Rs. 23/- per mensum plus Rs. 2/- (special allowance) for the duration of war.

Apply to:

Secretary.
S. V. S. Vidyavardhaka Sangha
Post Katapadi, S. K.

It pays always

to Insure with & represent

THE CRESCENT INSURANCE CO. LTD.,

Estd:] **BOMBAY.** [1919

Apply to

T. A. Vasudevan,
Udipi, S. K

ವಿಮೆಯಿಳಿಸಲು ಮತ್ತು ಪ್ರಾತಿನಿಧ್ಯ ವಹಿಸಲು ಲಾಭದಾಯೀ ಸಂಸ್ಥೆಯೆಂದರೆ

ದಿ ಕ್ರಸೆಂಟ್ ಇನ್ಶೂರೆನ್ಸ್ ಕೊ.

ಲಿಮಿಟೆಡ್., ಬೊಂಬಾಯಿ.

ಸ್ಥಾಪನೆ:— **1919.**

ಬರೆಯಿರಿ:—

ಟಿ. ಎ. ವಾಸುದೇವನ್, ಉಡುಪಿ.

ತಾರುಣ್ಯ

ಚೆಲುವು, ವೀರ್ಯಸ್ಥಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣ** ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸು,
ಪುತ್ತೂರು ಏಜಂಟರು:— **ಪೈ ಫಾರ್ಮಸಿ**

ನವಯುಗ

ಚಂದಾ ವಿವರ.

ವರ್ಷಕ್ಕೆ (ಸ್ಥಳೀಯ)3-12-0
(ಟಪ್ಪಾಲು ದ್ವಾರ)-4-8-0

ಚಂದಾ ಹಣ ಬಾಕಿಯಿರುವವರು ದಯಮಾಡಿ ಅದನ್ನು ಕೂಡಲೇ ಕಳುಹಿಸಿಕೊಡುವಂತೆ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of **"Parimala Bhavan"**, opposite Municipal Bus Stand, Udipi, on the 11th April, 1944 Your patronage is solicited.

Mangalore Jarappa,
Managing Director.

ಫ್ರಾನ್ಸಿನಲ್ಲಿ ದ್ವಿತೀಯರಂಗ!

(೩ನೇ ಪುಟದಿಂದ ಮುಂದುವರಿದುದು.)

ಅಲ್ಲಿ ಚರಿತ್ರಪೂರ್ವ ಟ್ಯಾಂಕು ಘರ್ಷಣೆಗಳಾಗುತ್ತಿವೆ. ರಣಕ್ಷೇತ್ರವನ್ನು ನೇರಿಯಂದ ಮುಳುಗಿಸಿ ಜರ್ಮನರು ಮಹಾ ಆತಂಕಪೊಡ್ಡಿದ್ದಾರೆ. ನೋರ್ಮಂಡಿಗೆ ಬಂದಿಳಿದಿರುವ ಮಿತ್ರಸೇನೆಗಳೆಂದರೆ ಹತ್ತು ಮಿಲಿಯ ಯೋಧರಿರುವ 18 ಡಿವಿಜನುಗಳೆಂದು ಜರ್ಮನರ ಅಂದಾಜು. ಇಷ್ಟೇ ಸಂಖ್ಯೆಯ ಸೇನೆಯನ್ನು ನಾಜೀಗಳೂ ಮುಂದೊಡ್ಡಿದ್ದಾರೆ. ಈ ತನಕ ಪ್ರಥಮ ಮರ್ಯಾದೆಯನ್ನಿಸುವಂತಹ ಶಕ್ತಿ ಪರೀಕ್ಷೆ ಕೂಡಾ ನಡೆದಿಲ್ಲ. ಪ್ರಥಮಾಕ್ರಮಣದಲ್ಲೇ ಇಂಗ್ಲಿಷ್ ಕಾಲುವೆಯ 'ಮೈನ್' ಮತ್ತು ಕರಾವಳಿ ಆತಂಕಗಳನ್ನೆಲ್ಲಾ ನಿವಾರಿಸಿಕೊಂಡಿರುವ ಮಿತ್ರರ ಪಾಲಿಗೆ ಕಾಲುವೆಯೊಂದು ಶಾಂತ ಹೊಳೆಯಾಗಿ ಪರಿಣಮಿಸಿರುವದರಿಂದ ಸೇನೆ ಮತ್ತು ಉಪಕರಣಗಳ ಸರಬರಾಯಿಯೀಗ ನಿರಾತಂಕವಾಗಿ ನಡೆಯುತ್ತಿದೆ, ಈ ವರೆಗಿನ ಪ್ರಗತಿಯು ಅತ್ಯಾಶೆ ಅಥವಾ ನಿರಾಶೆಗವಕಾಶವಿಲ್ಲದಂತೆ ಯೋಜನೆಯಲ್ಲೊಂದು ಇಳಿಬಿಡದೆ ಸಾಗುತ್ತಿದೆ ಎಂದು ಮಿತ್ರಸೇನಾನಿಗಳ ಸಮಾಧಾನ. ತಮ್ಮ ರಕ್ಷಣಾ ಸಿದ್ಧತೆಯು ಎಲ್ಲಿ ಪ್ರಬಲವಾಗಿತ್ತೋ ಅಲ್ಲಿಯೇ ಇಳಿದ. ಮಿತ್ರರು ಕೊಂಬು ಹಿಡಿದು ಹೋರಿಯನ್ನೆಳೆಯುವ ಪ್ರಮಾದವಮಾಡಿರುವರೆಂದು ಜರ್ಮನರ ಸಂತೋಷ.

ಆತುರಕ್ಕವಕಾಶವಿದೆ.

ಈ ವರೆಗಿನ ಫ್ರಾನ್ಸ್ ಹೋರಾಟದಿಂದ ಏನನ್ನೂ ನಿಶ್ಚಯವಾಗಿ ಊಹಿಸಲಾಗುವದಿಲ್ಲ. ಪಾರ್ಲಿಮೆಂಟಿನಲ್ಲಿ ಪ್ರಶ್ನಿಸಲ್ಪಟ್ಟಾಗಲಿ, ಚರ್ಚಿಲ್ಲರು ತನ್ನ ಪದ್ಧತಿಯ ಅಖಂಡ ಭರವಸೆಗಳನ್ನು ಕೊಡಲು ನಿರಾಕರಿಸಿ ಬಯಲಾಸೆಯನ್ನಾಗಲೀ ನಿರಾಶೆಯನ್ನಾಗಲೀ ಯಾರೂ ಕಟ್ಟಿಕೊಳ್ಳಬಾರದೆಂದು ಎಚ್ಚರಿಸಿದ್ದಾರೆ. ಹಿಟ್ಲರರು ಸ್ವತಃ ಸೇನಾನಿತ್ವ ವಹಿಸಿ ಫ್ರಾನ್ಸಿಗೆ ಹೊರಡುವೆನೆಂದು ಆತುರಗೊಂಡಿದ್ದ ಚರ್ಚಿಲ್ಲರನ್ನು ತಡೆದು ನಿಲ್ಲಿಸಲು ಬಹಳ ಪ್ರಯಾಸವಾಯಿತಂತೆ. ಜನರಲ್ ಈಸನ್ಹೋವರರು ಆತುರ ತಡೆಯಲಾರದೆ ಅಪಾಯವನ್ನು ಕಡೆಗಣಿಸಿ ಫ್ರಾನ್ಸ್ ಯುದ್ಧರಂಗಗಳನ್ನು ಸಂದರ್ಶಿಸಿ ಬಂದಿದ್ದಾರೆ. ಚಾಲಕ ಸೇನಾನಿ ಜನರಲ್ ಮೊಂಟೆಗೋಮೆರಿಯವರು ಫ್ರಾನ್ಸಿನಲ್ಲೇ ತನ್ನ ಮುಖ್ಯ ಕಾರ್ಯಾಲಯ ಸ್ಥಾಪಿಸಿಕೊಂಡಿದ್ದಾರೆ. ಈಸನೋವರಿಗೆ ಪ್ರತಿಯಾಗಿ ಜರ್ಮನ್ ಕಡೆಯಲ್ಲಿ ರೋಮೆಲ್ ಮೋಂಟೆಗೋಮೆರಿಯವರ ಇದಿರುವಾದಿಯಾಗಿ ರಂಡಲ್ಸ್ಟ ಪ್ರಮುಖ ಸೇನಾನಿಗಳಾಗಿದ್ದಾರೆ. ಆಕ್ರಮಣಾರಂಭದ ದಿನ ಚಕ್ರವರ್ತಿಗಳ ಸ್ಫೂರ್ತಿದಾಯೀ ಘೋಷಣವಿದ್ದಿತು. ಅಧ್ಯಕ್ಷ ರೂಸವೆಲ್ಟರು ಹೋರಾಟವು ಅತಿ ನಿಧಾನವಾಗಿ ಸಾಗುತ್ತಿದೆ ಎಂದಿದ್ದಾರೆ. ಕರಾವಳಿಯಲ್ಲಿ ಕಾಲೂರಲು ಮಿತ್ರ ಸೇನೆಗಳು ಶಕ್ತವ ಮದ—ಹಾಗೂ ಆ ಮೊದಲು ಇಂಗ್ಲೆಂಡು ಕರಾವಳಿಯಲ್ಲಿ ಅವುಗಳ ಸಂಗ್ರಹಕಾರ್ಯ ನಡೆಯುವದನ್ನು ಚವರಿಸುವವರಲ್ಲಿ ತಮ್ಮವರು ಅಶಕ್ತರಾದುದು ಜರ್ಮನ್ ಜನಾಂಗದೊಂದು ಕಹಿಸ್ಮರಣೆಯಾದರೂ ಮುಂದಿನ ಘರ್ಷಣಾರಣೆಗಾ ಶಕ್ತಿಯನ್ನು ಉಳಿಸಿಕೊಂಡಿರುವೆಮ ಅವರು ಸಮಾಧಾನಪಟ್ಟಿದ್ದಾರೆ ಇಂಗ್ಲೆಂಡಿನಲ್ಲೆಲ್ಲಾ ಈ ಕುರಿತು ಆಶ್ಚರ್ಯದಾಯೀ ನಿರಾತುರವಿದೆ. ಧಾಳಿಯ ಪ್ರತಿಯೊಂದು ವಾರ್ತೆಯನ್ನೂ ಮಿತ್ರರಿಗಿಂತ ಮೊದಲೇ ಪ್ರಕಟಿಸುತ್ತಿರುವ ನಾಜಿಗಳು ತಾವೀ ತನಕ ಪ್ರಮಾದಕ್ಕೆ ಒಳಿಯಾಗಿಲ್ಲವೆಂಬ ತೃಪ್ತಿಯಲ್ಲಿರುವರೆಂಬಂತೆ ಅವರ ಯುದ್ಧ ಪ್ರಕಟಣೆಗಳು ಅತ್ಯಂತ ಗಂಭೀರವಾಗಿವೆ. ಮಿತ್ರ ಸೇನಾನಿಗಳಾದ ಜನರಲ್ ಈಸನೋವರ್, ಮೋಂಟೆಗೋಮೆರಿಯವರು ಈ ತನಕ ತಮ್ಮ ಯೋಜನೆಯು 'ಚಾಚೂ ತಪ್ಪಿಲ್ಲವೆನ್ನುತಿದ್ದಾರೆ.

ಮುಂದೇನು?

ಈ ಯುದ್ಧರಂಗದಿಂದ ಕೇಳಿ ಬರುತ್ತಿರುವ ಘರ್ಜನೆಗಳು ಅಪೂರ್ವವಿದ್ದರೂ, ಅದರ ಘನತೆಯು ಅದಕ್ಕಿಂತಲೂ ಮಹತ್ತಾದುದು. ಇದೀಗ ದೀರ್ಘಕಾಲದ ಹಾರೈಕೆಯಾಗಿದ್ದ ನಾಜೀ ಸಂಘದ ರುಂಡ ಹಾರಿಸಲು ಬೀಸಿರುವ ಖಡ್ಗ. ಆದರ ಸಫಲತೆ-ವಿಫಲತೆಗಳೇ ಜಯಾಪಜಯಗಳು, ಹೇಗಿದ್ದರೂ ಇಂದಿನ ಪ್ರಳಯ ನಾಟಕದ ಕೊನೆಯಅಂಗ—ಲೋಕಯಜ್ಞದ ಅವಸಾನ ಬಲಿಯಾಗಿ ದ್ವಿತೀಯ ರಂಗಾರಂಭವಾಗಿದೆ. ಇದಕ್ಕೆ ಹೊಂದಿಕೆಯಾಗಿ ಆ ಕಡೆಯಿಂದ ರಶ್ಯನರು ಮುಂದೊತ್ತುವದೂ ಮಿತ್ರರ ಯೋಜನೆಯ ಒಂದು ಭಾಗ. ಈಗ ಸ್ಪರ್ಶಮಾತ್ರವಾಗಿರುವದು. ಆಗ ತಮ್ಮ ಕೊನೆಯ ಪರೀಕ್ಷೆಯಾಗಲಿದೆ ಎಂದು ಜರ್ಮನರು ಅತೀವ ಮುಂಜಾಗ್ರತೆಯಲ್ಲಿದ್ದಾರೆ ಝೆಕೊಸ್ಲೊವೇಕಿಯದ ಅಧ್ಯಕ್ಷ ಡಾ| ಬೆನೆಸರ ಹೇಳಿಕೆಯಂತೆ ರಶ್ಯನರು ಸದ್ಯದಲ್ಲೇ ತಮ್ಮ ಅಂತಿಮ ತಾಡನಗಳನ್ನೀಯಲಿದ್ದಾರೆ. ಬಾಲ್ಕನ್ಸ್‌ಗಳ ಮೂಲಕ ಜರ್ಮನಿಯ ಪೂರ್ವಭಾಗಕ್ಕೆ—ಪೂರ್ವ ಗೆಲೀಸಿಯಾದಿಂದ ಝೆಕೊಸ್ಲೊವೇಕಿಯಾದ ಮೂಲಕ ಜರ್ಮನಿಗೆ ಮತ್ತು ರುಮೇನಿಯದಿಂದ ಡನ್ಯೂಬ್ ಮೂಲಕ ಬಾಲ್ಕನಿಗೆ ಕೆಂಪು ಸೇನೆ ಮುಂದೊತ್ತಲಿದೆ ಈ ರೀತಿ ಪೂರ್ವ ಪಶ್ಚಿಮಗಳ ಧಾಳಿಗಳ ಕತ್ತರಿಯು ನಡುವೆ ಸಿಕ್ಕಿಸಿ ನಾಜೀ ಜರ್ಮನಿಯನ್ನು ಹತಮಾಡುವದೇ ಮಿತ್ರರಾರಂಭಿಸಿರುವ ಇಂದಿನ ಮಹಾಸಮರದಗುರಿ, ಅದರ ಒಂದು ತೋಳು ಇಷ್ಟರಲ್ಲೇ ಹಿಟ್ಲರನನ್ನಾಲಿಂಗಿಸಿದಂತಾಯಿತು. ಇನ್ನೊಂದೂ ಮುಂದೆಬರುವಾಗ, ಅವು ನಿರೀಕ್ಷೆಯಂತೆ ನಾಜಿತ್ವವನ್ನು ಜಗಿಯುವ ಎರಡು ಮೃತ್ಯು ದವಡೆಗಳಾಗುವವೋ, ಅಥವಾ ಅವೆಂಡನ್ನೂ ಎರಡು ಹೋಳುಗಳೆಂಬಂತೆ ಹಿಟ್ಲರನೊಗೆದು ಬಿಡುವ ಅದ್ಭುತ ಸಾಧಿಸುವನೋ ನೋಡಲಿದೆ!

ನೋಟೀಸು
ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

O. S. no 203/1944

ರಾವ್ ಸಾಹೇಬ ಕಿಂಬಾಗಿಲು ರಾಮಯ್ಯ ಆಳ್ವ—ವಾದಿ.

ಮತ್ತು

1. ಕೆ. ನರಸಿಂಹ ನಾಯ್ಕ 2. S. ಕೃಷ್ಣಮೂರಾವ್, 3. ಕೆ. ಚಿಕ್ಕಪ್ಪ ಬಂಟ—ಪ್ರತಿವಾದಿಗಳು.

ಪ್ರತಿವಾದಿಗಳು ಕೊಗ್ಗಾಲ ಮತ್ತು ಕಂಬಾರು ಗ್ರಾಮದ B ಕಟ್ಟದ ಪರವಾಗಿ ವಾದಿಯು ಬುಬ್ಬು A ಕಟ್ಟದ ಬಗ್ಗೆ ವರ್ಷಂಪ್ರತಿ ಕೊಡತಕ್ಕ ಭತ್ತ ಮುಡಿ 12ನ್ನು ಯಿದೇ ಕಳೆದ 1942, 1943 ಮತ್ತು 1944ನೇ ಯಿಸ್ವಿಗಳಲ್ಲಿ ಬಾಕಿಮಾಡಿಕೊಂಡಿರುವಲ್ಲಿ ಅದರ ವಸೂಲಿ ಬಗ್ಗೆ ವಾದಿಯು ಸಿ. ಪಿ. ಸಿ. ಕೋಡಿನ 1ನೇ ಆರ್ಡರ 8ನೇ ರೂಲ್ ಮೇರೆಗೆ ಮೇಲ್ಕಂಡ ವ್ಯಾಜ್ಯ ದಾಖಲು ಮಾಡಿ ಅದು ನೋಟೀಸು ಬಗ್ಗೆ ತಾರೀಕು 17-6-1944ಕ್ಕೆ ಯಿಟ್ಟಿರುತ್ತದೆ- ಆ ಸಂಸ್ಥೆಯಲ್ಲಿ ಆಕ್ಷೇಪವಿದ್ದವರು ಸದ್ರಿ ಮ್ಯಾದೆಗೆ ಯೀ ಕೋರ್ಟಿನಲ್ಲಿ ಹಾಜರಾಗಿ ಅವರ ಆಕ್ಷೇಪಗಳನ್ನು ಹೇಳಬಹುದು- ತಪ್ಪಿದ್ದರೆ ಕೋರ್ಟಿನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲಾಗುವದು ಎಂತ ಸರ್ವಜನಂಗಳು ಯೀ ಮೂಲ್ಕ ತಿಳಕೊಂಡಾಗಿಯದೆ.

K. P. Anantha Rao.

ಕಾಸರಗೋಡು
12-6-1944 } Advocate for plaintiff

ಪ್ರೇಮವಿದ್ಯಾಪೀಠ, ತುಂಗಭದ್ರಾ

ಶ್ರೀ. ಪೇ. ಪಂಡಿತ ತಾರಾನಾಥಜೀಯವರಿಂದ ಸ್ಥಾಪಿತವಾದ ಈ ವಿದ್ಯಾಪೀಠವು, ಇಷ್ಟರವರೆಗೆ ಆದೆಷ್ಟೋ ಯುವಕ ಯುವತಿಯರ ನಿರುದ್ಯೋಗ ಪ್ರಶ್ನೆಯನ್ನು ನಿವಾರಿಸಿ ಜನಸೇವೆ ಮಾಡುತ್ತ ಧನಮಾನಗಳನ್ನು, ಯೋಗ್ಯತೆಯನ್ನು ಒದಗಿಸಿ ಕೊಟ್ಟ ವಿಷಯವು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ.

ಇದೀಗ ಪಂಡಿತಜೀಯವರ ಧರ್ಮಪತ್ನಿಯವರಾದ ಶ್ರೀ. ಸುಮತಿ ಬಾಯಿಯವರೂ ಮತ್ತು ಪಂಡಿತರ ಪ್ರಮುಖ ಶಿಷ್ಯರೂ ಸೇರಿ ವಿದ್ಯಾಪೀಠವನ್ನು ಮುಂದುವರಿಸುತ್ತಿದ್ದಾರೆ ಎಂದಿನಂತೆ ಬರುವ ಜುಲೈ ತಾ. 15ಕ್ಕೆ ಪ್ರೇಮ ಮೆಡಿಕಲ್ ಕೋಲೆಜದ ಕ್ಲಾಸುಗಳು ಆರಂಭವಾಗುವವು

S. S. L C ಅಥವಾ ಮೆಟ್ರಿಕ್ ವರೆಗೆ ಕಲಿತ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ. ವಿಶೇಷ ಮಾಹಿತಿಗಾಗಿ 0-4-0 stamp. ಕಳಿಸಿ ನಮ್ಮ ಪ್ರೊಸ್ಪೆಕ್ಟಸ್ ತರಿಸಿಕೊಳ್ಳಿರಿ.

ಪ್ರಿನ್ಸಿಪಾಲ್
ಪ್ರೇಮ ವಿದ್ಯಾಪೀಠ
P. O. Tungabhadra M. S. M. Ry.
Bellary Dist.

Degrees: Books: Medicines
Free H. L. M. S. M. B. H M, D, etc Free Homeo Ayur- UnamNatureo degree by post also—Practitioner also get soon Homeo Materiamedica, Rs. 5 Homeo Practice book Rs 4 Insanity Cure Pills Rs 10 Enclose 2 annas stamp:—
Prof, Dr, N, H, Chhatbar,
... Homeopathi
Institute & ...iety (Govt. Regd)
P. O. MAHUVA (Kathiawer Dt. India.)

Sidha-Kalpa Kavach (Regd.)
No 3 Rs 2. No 2 Rs 5 No. 1 Rs. 7 Special Rs. 10, Extra Special Rs. 17 fo ove marriage health wealth. Ask an six questions with M. O Re 1/4 ,an get correct answers by returnpost Life reading Rs,10No V, P P.Send M.O, Free, pmplets.
Prof. Dr. N. H. Chhatbar.
P. O. MAHUVA (Kathiawar India.)

ಸುಲಭದಲ್ಲಿ ಇಂಗ್ಲಿಷು

ಯುವಕರಿಗೆ ಮತ್ತು ವಯಸ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅನ್ಯಸಹಾಯವಿಲ್ಲದೆ ಕಲಿಸಿ ಕೊಡುವ ಪುಸ್ತಕ.

THE BEST PREVENTIVE IN EPIDEMICS OF CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops ,2 to 3 times a day with the decoction of cloves or ajwan.
For Children: 1 to 2 drops with the said decoction
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರಬೇಕಾದ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ- ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

(Incorporated in 1920)

Registered Office: Court Road, UDIPI

Branches at — Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short-term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to date Banking service is at the disposal of all the sections of the discreet public.

For business proper please enquire at any one of our Offices.

15th April 1944

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ. ಲಿಮಿಟೆಡ್.

ಹೆಡ್ ಆಫೀಸು: ಬೊಂಬಾಯಿ

ಚೀಫ್ ಏಜನ್ಸಿ ಆಫೀಸು:— ಉಡುಪಿ.

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ನಿಮ್ಮ ಮತ್ತು ನಿಮ್ಮ ಕುಟುಂಬದ ಭಾವೀ ಕಲ್ಯಾಣಕ್ಕಾಗಿ.

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ

ಉತ್ಸಾಹೀ ಏಜಂಟರ ಬೇಕಾಗಿದ್ದಾರೆ.

ಪಿ. ಡಿ. ನಾಯಕ್,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Co. Ltd., Bombay.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಪರಪೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ನಿರಾಳೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ–ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್ಸ. ಆರ್, ಎಲ್, ಕಲಬದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಪ್ಪ ಸಾಮಾನುಗಳಿವೆ.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ ಅಮೋಘವಾದ **ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೮ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು, ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ**



Head office:
MANGALORE.

Glad to announce that a Branch of the Bank will be opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ 15-6-44ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಡುವುದು.

ದಿ ವಿಜಯಾ ಬೇಂಕ್ ಲಿಮಿಟೆಡ್

REGD.

ಅಮೃತಾಂಜನ ತಲೆವೇದನೆ, ಕಿವಿನೋವು, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವದು, ಚೇಳು ವಿಷ ಮುಂತಾದ ಚೇನೆ ಸೆಳತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತವೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2—8—0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. of Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೪೨

FOUNDER
Sri. A. B. Shetty.

Vol. 24
No. 42

NAVAYUGA— Kannada Weekly —UDIPI, S. I.

ಉಡುಪಿ • 22—6—1944 • ಮಂಗಳೂರು.

1944 ನೇ ಜನವರಿಯಿಂದ ಮೂರನೆ ಸಂಪುಟಾರಂಭವಾಗಿದೆ.

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ. 3-0-0
ಬಿಡಿ ಪ್ರತಿಗೆ ರೂ. 0—0
ಮಾದರಿ ಪ್ರತಿಗೆ ಎರಡಾಣೆ ಸ್ಟಾಂಪಿನೊಂದಿಗೆ ಬರೆಯುವುದು:

'PRAKASHINI'
NAVAYUGA PRESS
UDIPI

ANTARANGA
UDIPI

ಅಖಿಲ ಕರ್ನಾಟಕದ ಹೊಸ ಮಾದರಿಯ ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ.

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

CO-OPERATION - - - -

Life Assurance is the business based on he idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Estd. 1908]
The "Bombay Life" Bldg.,
UDIPI. S. K.

Offices and Agencies throughtout South India.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂಡಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ಗೂ. ಪೋಸ್ಟ ಚಾರ್ಜ ೮ ಆಣೆ.

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕೆಂದುವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
, ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲೆಂಡರ್ ಬರದಲ್ಲಿ ರೋಗಕ್ಕೆ ತಕ್ಕ ಔಷಧ ರವಾನಿಸಬಹುದು. ಉಡುಪಿ ಏಜಂಟರ : — ನವಭಾರತ ಬುಕ್ ಡಿಪೊ

ಕತೆ ಕಾದಂಬರಿಗಳು—ಕವನ,—ನಾಟಕಗಳು
ಯಾವ ಪುಸ್ತಕ ಬೇಕಾದರೂ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಫ್ರಾನ್ಸಿನಲ್ಲಿ ಪ್ರಳಯ ಸದೃಶ ಹೋರಾಟ!

ಜೂನ್ 6ನೆ ತಾರೀಕಿಗೆ ಚರಿತ್ರೆಯಲ್ಲೊಂದು ಸ್ಥಾನ ದೊರೆವಂತೆ, ಆ ದಿನದ ಸೂರ್ಯ ಕಿರಣಕ್ಕೂ ಮುಂಚಿಗ ತಮ್ಮ ತುಫಾಕಿ ಸಿಡಿಗಳಿಂದ ಫ್ರಾನ್ಸಿನ ನೋರ್ಮಂಡಿಯಲ್ಲಿದ್ದ ಜರ್ಮನರನ್ನೆಚ್ಚರಿಸಿದ ಮಿತ್ರ ಸೇನೆಗಳು ಅಲ್ಲಿಯ ಕರಾವಳಿಯಲ್ಲಿ ದೃಢವಾಗಿ ಕಾಲೂರುವ ತಮ್ಮ ಪ್ರಥಮ ವ್ಯವಸ್ಥೆಯಲ್ಲೀಗ ಜಯಶೀಲರಾಗಿವೆ. ನೋರ್ಮಂಡಿ ಕರಾವಳಿಯೀಗ ಮಿತ್ರರದು! ಮಿತ್ರರ ಕಡೆಯ ವಾರ್ತೆಗಳೀ ಈಗೀಗ ಹೇಳ ಹತ್ತಿರುವಂತೆ ಫ್ರೆಂಚ್ ಕರಾವಳಿಯು ಮಿತ್ರ ಸೇನೆಗಳ ಪಾಲಿಗೆ ಸುಡುವ ನೆಲವಾಗಿ ಕಾದಿತ್ತು; ಕರಾವಳಿಯಿಂದ ಮುಂದೊತ್ತಿದ ಮಿತ್ರ ಸೇನೆಗಳು ತುಳಿದುಕೊಂಡು ಹೋದುದು ನೆಲವನ್ನಲ್ಲ-ಹೆಣವನ್ನು! ಮನುಷ್ಯ ನಿರ್ಮಿತ ಅದ್ಭುತದ ಪರಮಾವಧಿಯಾಗ ಜೂನ್, ತಾ 6 7ರಲ್ಲಿ ನೋರ್ಮಂಡಿ ಕರಾವಳಿಯೊಂದು 'ನರಕವೇ ಆಗಿತ್ತೆನ್ನಬಹುದು. ಕವಿಗಳ ಭಾಷೆಯಲ್ಲಿ ಹೇಳುವಹಾದರೆ,—ಆ ಸಮಯದಲ್ಲಿ ಹಿಂದಿನ ಫ್ರಾನ್ಸ್ ನೆಲ ಅದೃಶ್ಯವಾಗಿ, ಹೆಣಗಳ ಗುಡ್ಡೆ-ರಕ್ತದ ನದಿಯ ಒಂದು ಹೊಸ ಭೂಮಿಯು ಅಲ್ಲಿ ನಿರ್ಮಾಣಗೊಂಡಿದ್ದಿತು. ಸಾವಿರ ಸಂಖ್ಯೆಯ ವಿಮಾನಗಳು ಮತ್ತು ಹಡಗುಗಳು ತಮ್ಮ ಅಗ್ನಿವರ್ಷಗಳಿಂದ ಅಂತಹ ಅಪಾರ ಹಾನಿಯನ್ನು ಸಹಿಸಿಕೊಂಡಾದರೂ ಮಿತ್ರ ಸೇನೆಗಳು ದಡಹತ್ತುವಂತೆ ಮಾಡಿದವು. ಹಿಟ್ಲರನ ರಕ್ಷಣಾ ಲೈನಿನ ಒಳಗಡೆ ಧುಮುಕಿದ್ದ ಗಾಳಿ ಕೊಡೆಯವರಲ್ಲಿ ಹೆಚ್ಚಿನವರು ಪ್ರತ್ಯಕ್ಷ ನರಕಕ್ಕೇನೇ ಬಿದ್ದಂತಾಗಿದ್ದರು. ಫ್ರಾನ್ಸಿನ ಅಪರಿಚಿತ ನೆಲಕ್ಕೆ ಆಕಾಶದಿಂದ ಧುಮುಕಿದ ಕೆಲವರು ಹೊಳೆಗೆ ಬಿದ್ದು ತಮ್ಮ ಭಾರವಾದ ಉಪಕರಣಗಳೊಂದಿಗೆ ಗುಂಡು ಹೊಡೆತಗಳನ್ನೂ ಪಡೆದು ಮುಳುಗಿದರು; ಕೆಲವರು ತ್ರಿಶಂಕುಗಳಂತೆ ಮರಗಳ ಮೇಲೆ ಬಂದು ಬಿದ್ದು, ನಾಜಿ ಕೋವಿಗಳಿಂದ ಹಕ್ಕಿಗಳಂತೆ ಸುದಲ್ಪಟ್ಟರು; ಇಂತಹ ಆತಂಕಗಳಿಲ್ಲದೆ ನೆಲಕ್ಕೆ ಬಂದು ಬಿದ್ದವರನ್ನು ಸುತ್ತುಗಟ್ಟಲು ನಾಜೀ ಸೇನೆಗಳು ಅಲ್ಲಿ ತಯಾರಿದ್ದುವು. ಆಳಿದುಳಿದ ಗಾಳಿ ಕೊಡೆಯವರು ಜರ್ಮನರನ್ನು ಹಸಿದ ಹುಲಿಗಳಂತೆ ಗೊಂದಲಕ್ಕೀಡು ಮಾಡಿದ್ದರೆಂಬುದು ನಿಜ. ಆದರೂ ಗಾಳೀ ಕೊಡೆಯ ವ್ಯಾಪಾರವು ಲಾಭದಾಯಿಯಲ್ಲವೆಂಬ ಅನುಭವವನ್ನು ಮಿತ್ರರೀಗ ಪಡೆದಂತಿದೆ.

ಚರಿತ್ರಾರ್ಹ ಘಟನೆ.

ಹೇಗಿದ್ದರೂ ವಿಜಯ ಪ್ರಯಾಣಕ್ಕಾಗಿ ಜೂನ್ ತಾ. 6ರಲ್ಲಿ ಮಿತ್ರ ಸೇನೆಗಳು ಕಾಲಿವೇ ಕಡವು ದಾಟಿದ ಈ ಸಾಹಸಕ್ಕೆ ಚರಿತ್ರೆಯಲ್ಲೊಂದು ಗಣನೀಯ ಸ್ಥಾನ ಮೀಸಲಿದೆ. ಅತಿಶಯೋಕ್ತಿಯ ಮಟ್ಟಿಗೆ ಮೂಕನೇ ಆಗಿರುವ ಸ್ಟಾಲಿನರ ಈ ಕಳಗಿನ ಮಾತುಗಳಿಗಿಂತ ಹೆಚ್ಚಿನ ಬೆಲೆಬಾಳುವ ಇನ್ನೊಂದು ಶಿಫಾರಸು ಮಿತ್ರರಿಗೆ ದೊರಕದು: "ಫ್ರಾನ್ಸಿನಲ್ಲಿ ತಳವೂರಿದುದು ನಿಸ್ಸಂದೇಹವಾಗಿ ನಮ್ಮ ಮಿತ್ರರು ಸಾಧಿಸಿದ ಅನೋಘ ವಿಜಯ. ಗುರಿಯಲ್ಲಿಂತಹ ವಿಶಾಲತೆ, •ಪರಿಮಾಣದಲ್ಲಿಷ್ಟು ಘನತೆ, ಪ್ರಯೋಗದಲ್ಲಿಂತಹ ನಾಯಕತ್ವವಿದ್ದ ಇನ್ನೊಂದು ಕಾರ್ಯವನ್ನು ಯುದ್ಧ ಚರಿತ್ರೆಯೇ ಕಂಡರಿಯದು ಎಂಬುದನ್ನು ಯಾರಾದರೂ ಒಪ್ಪಲೇ ಬೇಕು. 'ಅಜೇಯ' ನೆಪೋಲಿಯನನು ತನ್ನ ಕಾಲದಲ್ಲಿ ಕಾಲುವೆ ದಾಟಿ ಬ್ರಿಟಿಷ್ ದ್ವೀಪಗಳನ್ನು ವಶಪಡಿಸಿಕೊಳ್ಳುವ ಕಾರ್ಯದಲ್ಲಿ ಲಜ್ಜಾವಹ ಪರಾಭವಗೊಂಡುದು ಸರ್ವಶ್ರುತವಿದೆ. ಹಿಟ್ಲರ್-ಅಪಸ್ಮಾರಿ-ಕಾಲುವೆದಾಟಿ ನುಗ್ಗಿಹೋಗುವೆನೆಂದು ಕಳೆದೆರಡು ವರುಷಗಳಿಂದ ಬಡಾಯಿ ಹಾರಿಸುತ್ತಿದ್ದವನು ಅಂತಹ ಪ್ರಯತ್ನವನ್ನು ಕೂಡಾ ಮಾಡಲಾರದೆ ಹೋದ. ಕಾಲುವೆ ದಾಟಿ ದೊಡ್ಡ ಪರಿಮಾಣದಲ್ಲಿ ಸೇನೆಗಳನ್ನಿಳಿಸುವ ಆ ಮಹಾ ಯೋಜನೆಯಲ್ಲಿ ಜಯಶೀಲರಾಗುವ ಗೌರವ ಸಂಪಾದಿಸಲಾದುದು ಇಂಗ್ಲಿಷ್ ಮತ್ತು ಅಮೇರಿಕನ್ ಸೇನೆಗಳಿಗೆ ಮಾತ್ರ. ಚರಿತ್ರೆಯಲ್ಲಿದು ಪ್ರಮುಖ್ಯ ಘಟನೆಯಾಗಿ ಉಲ್ಲೇಖಿಸಲ್ಪಡಲಿದೆ"- ದ್ವಿತೀಯ ರಂಗ ನಿರ್ಮಾಣ ಮಾಡದುದಕ್ಕಾಗಿ ಇದೇ ಸ್ಟಾಲಿನರಿಂದ ಸ್ಪಷ್ಟ ನಿಷ್ಠುರವಾಣಿಗಳನ್ನು ಕೇಳಿದ್ದ ಮಿತ್ರರು ಇಂದು ಇಂತಹ ಶ್ಲಾಘನೆ ಪಡೆದು ಕೃತಾರ್ಥರಾಗಿದ್ದಾರೆ. ಕಾಲುವೆ ದಾಟಿ ಕರಾವಳಿಯಲ್ಲಿಳಿದು ವ್ಯವಸ್ಥಿತವಾಗಿ ತಳವೂರುವ ಮೂಲಕ ದ್ವಿತೀಯ ರಂಗದ ಸುದೀರ್ಘ ಚರಿತ್ರೆಯ ಪ್ರಥಮ ಪರಿಚ್ಛೇದವನ್ನು ಪ್ರಥಮ ವಾರದಲ್ಲೇ ಮುಗಿಸಿದ್ದಾರೆ.

ಅದ್ಭುತ ಹೋರಾಟ.

ಆದರೆ ಆರಂಭದಲ್ಲೇ ತಜ್ಞರೆಚ್ಚರಿಸಿದ್ದಂತೆ-ಈ ಯುದ್ಧದ ಪ್ರಥಮಾವಸ್ಥೆಗಿಂತಲೂ ಅದರ ನಂತರದ ಕಾಲವು ಮಿತ್ರರ ಪಾಲಿಗೆ ಅತಿ ಕಠಿಣವಾಗಿದೆ 'ಏಳನೇ ದಿನದ ನಂತರವೇ ಯುದ್ಧ ಬಿಕ್ಕಟ್ಟಾರಂಭ' ಎಂದ ಜರ್ಮನ್ ವಿಮರ್ಶಕರ ಅಭಿಪ್ರಾಯಾನುಸಾರ ಈಗೀಗ ರೋಮೆಲನ ಪ್ರತಿಘಾತಿಗಳು ಮೊಂಟಿಗೋಮೆರಿಯವರಿಗೆ ಅಸಹನೀಯವಾಗಹತ್ತಿವೆ. ಮಿತ್ರ ಸೇನೆಯೀಗ ತಳವೂರುವ ಪರಿಶ್ರಮದ ಪ್ರಥಮಾಂಕವನ್ನು ಮುಗಿಸಿ, ವಿರೋಧಿಸೇನೆಯನ್ನು ಸಂಧಿಸುವ ಸಾಹಸದ ದ್ವಿತೀಯಾಂಕದಿಂದ, ವೈರಿ ರಿಝರ್ವ್ ಮಹಾದಳಗಳನ್ನಿದಿರಿಸುವ ಶಕ್ತಿ ಪರೀಕ್ಷೆ ಕೊಡುವ ತೃತೀಯಾಂಕಕ್ಕೆ ಬಂದಿದೆ. ಮಿತ್ರರು ಒಮ್ಮೆಗೇ ಹಲವು ಕಡೆಗಳಲ್ಲಿಳಿಯಬಹುದೆಂದು ಜರ್ಮನರೀ ಬಾರಿ ನಿರೀಕ್ಷಿಸಿದ್ದರು. ಆ ಶೋಧನೆಯಲ್ಲೇ ಪ್ರಥಮದ ಒಂದೆರಡು ದಿನಗಳನ್ನು ಕಳೆದಿದ್ದರು. ಈ ತನಕ ಅವರ ನಿರೀಕ್ಷೆ ಫಲಿಸಿಲ್ಲ. ಹಿಟ್ಲರನು ತಮ್ಮನ್ನಾಮಂತ್ರಿಸುವ ವಿಧಾನವು ಅತಿಥಿಗಸಹನೀಯವಾಗುವಷ್ಟಿರಬೇಕೆಂದು ಮಿತ್ರರೂ ಊಹಿಸಿದ್ದರು; ಪ್ರಥಮತ: ಅದು ತಮ್ಮ ನಿರೀಕ್ಷೆಯಷ್ಟಿರಲಿಲ್ಲವೆಂದು ಮಿತ್ರರೆನ್ನುತ್ತಿದ್ದಾರಾದರೂ, ರೋಮೆಲನ ಈಗಿನ ಪ್ರತಿಘಾತಿಗಳನ್ನು ಕಾಣುವಾಗ ಅವರ ನಿರೀಕ್ಷೆ ಸಟೆಯಾಗಲಿಲ್ಲವೆನ್ನಬಹುದು. ಇದುವರೆಗೆ ಮಿತ್ರರಾಕ್ರಮಿಸಿಕೊಂಡಿರುವ ಕರಾವಳಿಯಲ್ಲಿ ಫ್ರಾನ್ಸಿನ ಯಾವುದೊಂದು ಬಂದರವೂ ಸೇರಿಲ್ಲ; ಅಗಾಧ ಸೇನೆಗಳಿಗಾಗಿ ಅಪಾರ ಸರಬರಾಯಿ ಮಾಡಲು ಮಿತ್ರರಿಗೀ ವರೆಗೂ ಬಂದರಗಳ ಅಭಾವವಿದೆ ಎಂಬುದನ್ನು ಮರೆಯಬಾರದು. ಆದಿಭಾಗದಲ್ಲಿ ತಲೆ ಮರೆಸಿಕೊಂಡಂತಿದ್ದ, ಅಪರೂಪವಾಗಿ ಕಾಣಿಸಿಕೊಂಡರೂ ಹೋರಾಟಕ್ಕೆ ಹಿಮ್ಮೆಟ್ಟುತಿದ್ದ 'ಲುಫ್ಟ್‌ವಾಫ್' ವಿಮಾನಗಳೂ ಈಗೀಗ ತಮ್ಮ ಕೈಚಳಕ ತೋರಿಸಹತ್ತಿವೆ; ಮಿತ್ರರ ಭೀತಾಳ ಟೇಂಕುಗಳನ್ನಿದಿರುಗೊಳ್ಳಲು ಜರ್ಮನರೂ ಸಮಬಲ ಟೇಂಕುಗಳನ್ನು ಮುಂದೊಡ್ಡಹತ್ತಿದ್ದಾರೆ. ಅಂತೂ ನಾಜಿಗಳೀಗ ಪೂರ್ಣ ಮನಸ್ಸಿನಿಂದ ತನ್ನಾಟವಾಡುತ್ತಿದ್ದಾರೆ. ನೋರ್ಮಂಡಿಯಲ್ಲೀಗ ಸುಮಾರು 300000 ಜರ್ಮನ್ ಸೇನೆಗಳಿದ್ದು, ಅವುಗಳಲ್ಲೆರಡು ಲಕ್ಷ ಉಪಕರಣ ಸಮೇತ ಕಾರ್ಯರಂಗದಲ್ಲಿವೆ ಎಂದು ತಿಳಿದು ಬರುತ್ತದೆ. ಪ್ರಾಯಶ: 5 ಪಾಂಝರ್ ದಳಗಳನ್ನು ರೋಮೆಲ್ ರಣರಂಗದಲ್ಲಿ ಚಾಲುಮಾಡುತ್ತಿದ್ದಾನೆ. ಮಿತ್ರರು ತಮ್ಮ ಅಧಿಕೃತ ಪ್ರಕರಣೆಗಳಲ್ಲಿ ಈ ತನಕ ತಿಳಿಸಿರುವಂತೆ 9 ಡಿವಿಜನ್ ಸೇನೆಗಳನ್ನವರು ನೋರ್ಮಂಡಿಗಿಳಿಸಿದ್ದಾರೆ. ಈ ಪೈಕಿ ಬ್ರಿಟಿಷ್ 3, ಅಮೇರಿಕನ್ 5, ಕೆನಡಾ 1. ಪಶ್ಚಿಮ ಕರಾವಳಿಯಲ್ಲಿ ಹಿಟ್ಲರನು ನಿಲ್ಲಿಸಿರುವ ಸೇನೆಗಳಲ್ಲಿ ಸೇಕಡಾ 25ರಷ್ಟು ಪೋಲರು, ರುಮೇನಿಯನ್ನರು, ಜೋರ್ಜಿಯಾದವರೇ ಮೊದಲಾದ ವಿದೇಶಿಯರಂತೆ. 'ನಮ್ಮ ನಿರೀಕ್ಷೆಯಿದ್ದಷ್ಟು ಜರ್ಮನ್ ಯೋಧನ ಹೋರಾಟ ಗುಣ ಕಂಡುಬರುವದಿಲ್ಲ' ಎಂದು ಫ್ರಾನ್ಸಿನ ಹೋರಾಟಾನುಭವದಿಂದ ಮಿತ್ರರನ್ನುತಿದ್ದಾರೆ.

ಸಮ ಬಲ ನೂಕಾಟ.

ಅನನ್ಯಾದೃಶ ಹಲವು ಅದ್ಭುತಗಳನ್ನು ನಿರ್ಮಿಸಿರುವ ಇಂದಿನ ಲೋಕ ಮಹಾಯುದ್ಧದ ಮಹಾದ್ಭುತ ಹೋರಾಟಗಳೀಗ ನೋರ್ಮಂಡಿಯಲ್ಲಿ ನಡೆಯುತ್ತಿವೆ. ಯುದ್ಧ ಸ್ಥಿತಿಯನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ, ಆಕ್ರಮಣ ಸೇನೆಗಳ ಭವಿಷ್ಯವಿಂದು ತಕ್ಕಡಿಯಲ್ಲಿ ತೂಗುತ್ತಿದೆ. ಫ್ರಾನ್ಸಿನೊಳಗಡೆಗೆ ಮುನ್ನುಗ್ಗುವ ಅವುಗಳ ಶಕ್ತಿಯನ್ನು ಜರ್ಮನರಿಂದ ಮುಡಿಗುಟ್ಟಲಾಗಿಲ್ಲ; ಅಥವಾ ತಮ್ಮನ್ನು ಹಿಂದೂಡಿ ಕಾಲುವೆಗಿಳಿಸಲಿಕ್ಕೆಂದು ಜರ್ಮನರು ಕೇಂದ್ರೀಕರಿಸಿಕೊಂಡಿರುವ ಶಕ್ತಿಯನ್ನು ಧ್ವಂಸಗೊಳಿಸಲು ಮಿತ್ರ ಸೇನೆಗಳಿಂದಲೂ ಈ ತನಕ ಆಗಿಲ್ಲ. ಮುಂಗಡೆ ಪ್ಯಾರಿಸಿನತ್ತ ಏರಿಹೋಗಲೂ ಬಹುದು—ಹಿಂಗಡೆ ಕಾಲುವೆಯತ್ತ ಜಾರಿ ಬೀಳಲೂ ಬಹುದು, ಎಂಬಂತಹ ಸ್ಥಿತಿಯಲ್ಲೀಗ ಮಿತ್ರ ಸೇನೆಗಳಿವೆ. ಈ ಸಂದಿಗ್ಧ ಕಾಲವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಇತ್ತಂಡದವರೂ ಸರ್ವ ಶಕ್ತಿಯಿಂದ ಹೋರಾಡುತ್ತಿದ್ದಾರೆ. ಈ ತನಕ ನಡೆದಿರದಂತಹ ಭೀಕರ ಹೋರಾಟವೀಗ ನಡೆಯುತ್ತಿದೆ. ನೋರ್ಮಂಡಿ ರಣರಂಗದಲ್ಲೀಗ ಮೇಲ್ಗೈ ಯಾರೆಂಬುದನ್ನರಿಯುವುದೇ ಕಷ್ಟವಾಗಿದೆ; ತಾತ್ಕಾಲಿಕ ಸೋಲು ಗೆಲವುಗಳು ಪ್ರತಿ ದಿನವೂ ಅದಲು ಬದಲಾಗುತ್ತಿವೆ. ಫ್ರಾನ್ಸ್ ತನ್ನ ಮುಸುಡನ್ನು ಉತ್ತರ ಕಡೆಗೆ, ತುಸು ಪಶ್ಚಿಮಕ್ಕೋರೆ ಮಾಡಿ ಚಾಚಿದಂತಿರುವ ಪ್ರದೇಶವೇ ನೋರ್ಮಂಡಿ. 'ಚೆರ್ಬರ್ಗ್' ಅರ್ಧ ದ್ವೀಪವು ಅದರ ಬಲ ಬದಿಯಂತಿರುವ ಪ್ರಾ

(೩ನೇ ಪುಟ ನೋಡಿರಿ).

ಪ್ರೇಮವಿದ್ಯಾಪೀಠ, ತುಂಗಭದ್ರಾ

ಶ್ರೀ. ಶ್ರೀ. ಪಂಡಿತ ತಾರಾನಾಥಜೀಯವರಿಂದ ಸ್ಥಾಪಿತವಾದ ಈ ವಿದ್ಯಾಪೀಠವು, ಇಷ್ಟರವರೆಗೆ ಅದೆಷ್ಟೋ ಯುವಕ ಯುವತಿಯರ ನಿರುದ್ಯೋಗ ಪ್ರಶ್ನೆಯನ್ನು ನಿವಾರಿಸಿ ಜನಸೇವೆ ಮಾಡುತ್ತ ಧನವಾನರಾಗಿ ಸ್ವಪ್ರಯೋಗ್ಯತೆಯನ್ನು ಒದಗಿಸಿ ಕೊಟ್ಟ ವಿಷಯವು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ.

ಇದೀಗ ಪಂಡಿತಜೀಯವರ ಧರ್ಮಪತ್ನಿಯವರಾದ ಶ್ರೀ. ಸುಮತಿ ಬಾಯಿಯವರೂ ಮತ್ತು ಪಂಡಿತರ ಪ್ರಮುಖ ಶಿಷ್ಯರೂ ಸೇರಿ ವಿದ್ಯಾಪೀಠವನ್ನು ಮುಂದುವರಿಸುತ್ತಲಿದ್ದಾರೆ. ಎಂದಿನಂತೆ ಬರುವ ಜುಲೈ ತಾ 15ಕ್ಕೆ ಪ್ರೇಮ ಮೆಡಿಕಲ್ ಕೋಲೇಜದ ಕ್ಲಾಸುಗಳು ಆರಂಭವಾಗುವವು.

S. S. L. C ಅಥವಾ ಮೆಟ್ರಿಕ್ ವರೆಗೆ ಕಲಿತ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ. ವಿಶೇಷ ಮಾಹಿತಿಗಾಗಿ 0-4-0 stamp. ಕಳಿಸಿ ನಮ್ಮ ಪ್ರೊಸ್ಪೆಕ್ಟಸ್ ತರಿಸಿಕೊಳ್ಳಿರಿ.

ಪ್ರೇಮ ವಿದ್ಯಾಪೀಠ

P. O. Tungabhadra M. S. M. Ry.
Bellary Dist.

ದ್ವಿತೀಯ ರಂಗ

ಮಳೆಗಾಲ ಕಳೆಯುವುದರೊಳಗೆ ಏನು ಸಂಭವಿಸಬಹುದು.

ದ್ವಿತೀಯರಂಗ-ರಶ್ಯದ ರಣರಂಗದಲ್ಲಿ ಜರ್ಮನಿಯ ದುರ್ದಶೆ-ಜರ್ಮನಿಯಲ್ಲಿ ಜನರ ನೈತಿಕ ಭಂಗ-ಜರ್ಮನರ ಪತನ-ಯುದ್ಧ ಸಮಾಪ್ತಿ-ಯುದ್ಧ ಸಾಮಾಗ್ರಿಗಳ ತಯಾರಿಕೆಯ ನಿಮಿತ್ತ ಸರಕಾರದೊಡನೆ ಮಾಡಬೇಕಾದ ಕರಾರುಗಳ ನಿರ್ಲೋಪದಿಂದ ಅಂಥ ಕರಾರುಗಳ ಮೂಲಕವಿದ್ದ ಆದಾಯದ ಮುಕ್ತಾಯ-ಜನರ ನಿತ್ಯೋಪಯೋಗದ ಸರಕುಗಳು ಪೇಟೆಗೆ ರಾಶಿರಾಶಿಯಾಗಿ ಬರೋಣ-ಧಾರಣೆಗಳ ಇಳಿತ-ನಷ್ಟ-ಕೊರತೆ-ಕೇಸುಗಳು-ಆರ್ಥಿಕ ಬಿಕ್ಕಟ್ಟು.

—ಇವುಗಳೆಲ್ಲವನ್ನು ಎದುರಿಸಲು ಸಿದ್ಧರಿರುವಿರಾ?

ಕೆನರಾ ಬ್ಯಾಂಕಿನಲ್ಲೊಂದು ಖಾತೆ ತೆರೆದು ಅಗತ್ಯವಿರಬಹುದೆಂದು ತೋರುವ ಹಣದ ವಿಲೆವಾರಿಯನ್ನು ಮುಂಚಿತವಾಗಿಯೇ ಏರ್ಪಡಿಸುವುದರಿಂದ ನೀವು ನಿಮ್ಮ ಭವಿಷ್ಯದ ವಿಷಯ ನಿಶ್ಚಿಂತರಾಗಬಹುದು.

ಸ್ಥಾಪಿತ: 1906.

ಕೆನರಾ ಬೇಂಕ್, ಲಿಮಿಟೆಡ್.

CANARA BANK, Ltd.

> ಸರಕಾರದ ಧೋರಣೆ ಬದಲಾಗದಿದ್ದರೆ ಜೈಲೇ ನನ್ನ ಸ್ಥಾನ
>
> —ಗಾಂಧಿಜೀ

ಗಾಂಧೀ—ವೇವೆಲ್ ಪತ್ರ ವ್ಯವಹಾರ

> ಅಸಹಕಾರವನ್ನು ಹಿಂದೆಗೆದ ವಿನಹ ಧೋರಣೆ ಬದಲಾವಣೆಯಿಲ್ಲ
>
> —ವೇವೆಲ್

ಇದೇ ಜೂನ್ ತಾ. 15ರಲ್ಲಿ ಮಹಾತ್ಮಾಜೀ ಜುಹುವಿನಿಂದ ಪೂನೆಗೆ ಸುಖಪ್ರಯಾಣ ಬೆಳೆಸಿದ್ದಾರೆ. ಸಾವಧಾನ ಪ್ರಗತಿಯಲ್ಲಿರುವ ಅವರ ಆರೋಗ್ಯಕ್ಕಾಗಿ ಇನ್ನೂ ಕೆಲ ಸಮಯದ ವಿಶ್ರಾಂತಿಯ ಆವಶ್ಯಕತೆ ಕಂಡುಬಂದಿದೆ. ದೇಶಕಾರ್ಯನಿಮಿತ್ತ ತಾನಾಮಂತ್ರಣವಿತ್ತವರೊಡನೆ ಸಂಭಾಷಿಸುವದೊಂದನ್ನು ಬಿಟ್ಟು, ಮಿಕ್ಕೆಲ್ಲಾ ಸಮಯ ಮೌನದಲ್ಲಿರುವದೇ ಪೂನೆಯಲ್ಲಿ ಅವರ ದೀಕ್ಷೆ. ಈ ನಡುವೆ ಅವರು ವೈಸರಾಯಿ ವೇವೆಲ್ ಮತ್ತು ಲಿನ್‌ಲಿತ್‌ಗೋರವರೊಡನೆ ನಡಸಿದ್ದ ಪತ್ರವ್ಯವಹಾರಗಳನ್ನು ಪ್ರಕಟಿಸಿದ್ದಾರೆಷ್ಟು. ಲ್‌ಸ್ಕೇಪ್ ಕಾಗದದ 120 ಪುಟದಲ್ಲಿ ಒತ್ತೊತ್ತಾಗಿ ಟೈಪ್ ಮಾಡಲ್ಪಟ್ಟು ತುಂಬಿರುವ ಈ ಪತ್ರಗಳನ್ನೂ, '1942-43ರಗೊಂದಲಗಳಿಗೆ ಕೊಂಗ್ರೆಸ್ ಹೊಣೆ"ಎಂಬ ಹಿಂದೀ ಸರಕಾರದ ಪುಸ್ತಕಕ್ಕುತ್ತರವಾಗಿ ಬರೆದ್ದಮೇಲಿನಷ್ಟೇ ದೊಡ್ಡದಾದ ಮತ್ತೊಂದು ರಿಕಾರ್ಡನ್ನೂ ಅವರೀ ಮೊದಲೇ ದೇಶದ ಎಲ್ಲಾ ರಾಜಕೀಯ ಮುಖಂಡರಿಗೂ ಪರಿಶೀಲನೆಗಾಗಿ ಕಳುಹಿದ್ದರು. ಗಾಂಧಿ ವೇವೆಲ್ ಪತ್ರವ್ಯವಹಾರದ ಮುಖ್ಯಭಾಗವನ್ನಿಲ್ಲಿ ಕೊಡಲಾಗಿದೆ.

ಗಾಂಧಿಜಿಯ ಮೊದಲಪತ್ರ.

ಬಂಧನ ಶಿಬಿರ, 17-2-44.

'ಪ್ರಿಯಮಿತ್ರ,

ನಿಮ್ಮ ಭೇಟಿಯ ಸುಯೋಗ ನನಗೆ ದೊರೆತಿಲ್ಲವಾದರೂ ನಾನು ಉದ್ದೇಶಪೂರ್ವಕ ನಿಮ್ಮನ್ನು 'ಪ್ರಿಯಮಿತ್ರ' ಎಂದು ಸಂಬೋಧಿಸುತಿದ್ದೇನೆ ಬ್ರಿಟಿಷ್ ಸರಕಾರದ ಪ್ರತಿನಿಧಿಗಳು ನನ್ನನ್ನು ಬ್ರಿಟನಿನ ಅತಿದೊಡ್ಡ ವೈರಿಯೆಂದಲ್ಲವಾದರೂ ದೊಡ್ಡ ವೈರಿಯೆಂಬಂತೆ ಕಾಣುತಿದ್ದಾರೆ. ಆದರೆ ಬ್ರಿಟಿಷರನ್ನೊಳಗೊಂಡ ಅಖಿಲಮಾನವನಿಗೆ ಪ್ರೀತಿ ಮತ್ತು ಸೇವಕನೆಂದು ನನ್ನನ್ನು ನಾನು ಭಾವಿಸಿಕೊಂಡಿರುವದರಿಂದ, ನನ್ನ ಸದಿಚ್ಛೆಗನುಸಾರವಾಗೀ-ಭಾರತದಲ್ಲಿ ಬ್ರಿಟಿಷರ ಅಗ್ರಗಣ್ಯ ಪ್ರತಿನಿಧಿಯಾಗಿರುವ ನಿಮ್ಮನ್ನು 'ನನ್ನ ಸ್ನೇಹಿತ' ಎನ್ನುತಿದ್ದೇನೆ. ನನಗೇಕೆ ಸ್ಥಾನಬದ್ಧತೆಯೆಂಬುದನ್ನು ತಿಳಿಸುವ ನೋಟಿಸೊಂದು ಇದೀಗ ಮೊದಲ ಬಾರಿ ಇತರ ಕೆಲವರಂತೆ ನನಗೂ ತಲಪಿದೆ. ಸ್ಥಾನಬದ್ಧತೆಯ ವಿರುದ್ಧವಾಗಿ ನನ್ನ ಹೇಳಿಕೆಯನ್ನು ಮುಂದಿಡುವ ಅಧಿಕಾರವನ್ನೂ ಆ ನೋಟಿಸು ನನಗಿತ್ತಿದೆ. ನಾನು ಸಕಾಲದಲ್ಲಿ ಅದಕ್ಕುತ್ತರ ಕಳುಹಿದ್ದೇನೆ. ಆದರೆ ಈ ವರೆಗೂ ಸರಕಾರದಿಂದ ನನಗಾವ ಸುದ್ದಿಯೂ ಬಂದಿಲ್ಲ 13 ದಿನ ಕಾದು ಕೊನೆಗೊಂದು ನೆನಪೋಲೆಯನ್ನು ಕೂಡಾ ನಾನು ರವಾನಿಸಿದ್ದೆ. ಮೇಲಿನ ನೋಟಿಸಾದರೂ ಕೆಲವರಿಗೆ ಮಾತ್ರ ಹೋಗಿದೆಯೆಂದು ನಾನು ತಿಳಿಯುತ್ತೇನೆ. ಈ ಶಿಬಿರದಲ್ಲಿರುವ ಆರು ಮಂದಿಯಲ್ಲಿ ಮೂವರಿಗೆ ಮಾತ್ರ ಅವು ದೊರೆತಿವೆ. ಎಲ್ಲರಿಗೂ ತಕ್ಕ ಕಾಲದಲ್ಲಿ ಅವು ದೊರೆಯುವವೆಂದು ನನ್ನ ಊಹೆ. ಆದರೆ, ಈ ನೋಟಿಸುಗಳು ಪದ್ಧತಿಯ 'ಫೋರ್ಮ್'ಗಳಂತೆ ಕಳುಹಿಸಲ್ಪಟ್ಟಿವೆಯೇ ಹೊರತು ನ್ಯಾಯ ದಾನ ಮಾಡುವ ಉದ್ದೇಶದಿಂದಲ್ಲವೆಂಬ ಸಂದೇಹವು ನನ್ನ ಮನಸ್ಸಿನಲ್ಲಿ ತುಂಬಿದೆ. ನಾನೀ ಪತ್ರತುಂಬಾ ವಾದವನ್ನು ತುರುಕಿಸಲಿಚ್ಛಿಸುವದಿಲ್ಲ. ನಿಮ್ಮ ಪೂರ್ವಿಕನೊಡನೆ ನಡೆಸಿದ್ದ ಪತ್ರವ್ಯವಹಾರದಲ್ಲಿ ನಾನು ಸ್ಪಷ್ಟಪಡಿಸಿದ್ದ 'ನಮ್ಮ ಮೇಲೆ ಹೊರಿಸಲ್ಪಟ್ಟಿರುವ ಆರೋಪಗಳ ಮಟ್ಟಿಗೆ ಕಾಂಗ್ರೆಸ್ ಮತ್ತು ನಾನು ಸಂಪೂರ್ಣ ನಿರ್ದೋಷಿಗಳು' ಎಂಬುದನ್ನೇ ಇಲ್ಲಿ ಮತ್ತೊಮ್ಮೆ ಹೇಳುತ್ತೇನೆ. ನಿಷ್ಪಕ್ಷಪಾತಿ ವಿಚಾರಣಾ ಸಮಿತಿಯೊಂದು ಸರಕಾರದ ವಾದವನ್ನೂ, ಸರಕಾರದ ಮೇಲಿನ ಕಾಂಗ್ರೆಸ್ ವಾದವನ್ನೂ ವಿಚಾರಿಸಿ ಸತ್ಯಶೋಧನೆ ಮಾಡಬೇಕಲ್ಲದೆ ಅನ್ಯಥಾ ಅಸಾಧ್ಯ ಬಿಡುಗಡೆ ಸೂಚನೆ ಮತ್ತು ಸರೋಜಿನೀದೇವಿಯ ಬಾಯ್ಬಂಧನಾಜ್ಞೆಗಳ ಕುರಿತು ಇತ್ತೀಚೆಗಿನ ಎಸೆಂಬ್ಲಿ ಅಧಿವೇಶನದಲ್ಲಿ ನಡೆದ ಚರ್ಚೆಯ ವೇಳೆ ಮಾಡಲ್ಪಟ್ಟ ಸರಕಾರೀ ಕಡೆಯ ಭಾಷಣಗಳು ಬೆಂಕಿಯಾಟವಾಡುತ್ತಿರುವಂತೆ ನನಗನ್ನಿಸಿದೆ, ಜಾಪಾನೀ ಶಸ್ತ್ರ ಪರಾಭವ ಮತ್ತು ಮಿತ್ರರ ವಿಜಯಗಳೊಳಗಿರುವ ವ್ಯತ್ಯಾಸವನ್ನು ನಾನರಿತವನೇ. ಭಾರತದ ವಿದೇಶೀ ನೊಗದ ಭಾರವಿಳಿಸುವ ಕಾರ್ಯವನ್ನು ಮಿತ್ರರು ಆದರೊಟ್ಟಿಗೇನೇ ಮಾಡಬೇಕು. ಯಾವ ವಿದೇಶೀ ಅಧಿಕಾರವೂ ಇಲ್ಲದ ಸಂಪೂರ್ಣ ಸ್ವಾತಂತ್ರ್ಯವೇ ಹಿಂದುಸ್ಥಾನೀ ಸ್ಫೂರ್ತಿಯ ಬೇಡಿಕೆ. ಅಂತೆಯೇ ಅದು ಬ್ರಿಟಿಷ್ ಅಥವಾ ಇನ್ನೊಬ್ಬರ ನೊಗವನ್ನು ವಿರೋಧಿಸುವಂತೆ ಜಪಾನರನ್ನೂ ಪ್ರತಿಭಟಿಸುವದು. ಈ ಸ್ಫೂರ್ತಿಯ ಪೂರ್ಣರೂಪದ ಪ್ರಾತಿನಿಧ್ಯವೇ ಕಾಂಗ್ರೆಸು. ಅದು ಭರತ ಭೂಮಿಯಲ್ಲಿ ಆಳಕ್ಕೂ ಬೇರುಬಿಟ್ಟು ಬೆಳೆದಿರುವ ಸಂಸ್ಥೆ. ಆದ್ದರಿಂದ ಸದ್ಯಸ್ಥಿತಿಯಿಂದ ಸರಕಾರವು ಸಮಾಧಾನಗೊಂಡಿದೆ ಎಂಬುದನ್ನೋದಿ, ನಾನು ಶಂಕೆಗೊಳಗಾಗಿದ್ದೇನೆ. ಭಾರತೀಯರಿಂದಲೇ ಅವರು ಬೇಕಾದಷ್ಟು ಜನ ಮತ್ತು ಹಣವನ್ನು ಪಡೆದಿಲ್ಲವೆ? ಸರಕಾರೀ ಯಂತ್ರವೀಗ ಸರಾಗವಾಗಿ ಚಾಲಾಗುತ್ತಿಲ್ಲವೆ? ಈ ಸ್ವಸಂತುಷ್ಟಿಯೇ ಬ್ರಿಟನಿನ ಅಧಿಕಾರ ಸ್ಥಾನಾಪನ್ನರ ಹೃದಯ ಶೋಧನಗೆ ತೀವ್ರಾವಕಾಶಕೊಡಲಾರದಾದರೆ-ಬ್ರಿಟನಿನ, ಹಿಂದುಸ್ಥಾನದ ಹಾಗೂ ಲೋಕದ ಹಾನಿಯ ಪೂರ್ವಸೂಚನೆಯಾಗಿದೆ. ಎಲ್ಲಾ ರಾಷ್ಟ್ರಗಳ ಅದೃಷ್ಟವನ್ನೂ ಒಳಗೊಂಡಿದ್ದು ಇಡಿಯ ಮಾನವ ವರ್ಗದ ಪ್ರವೇಶವಾಗಿರುವ ಈ ಯುದ್ಧಮುಖದಲ್ಲಿ, ಭವಿಷ್ಯದ ಭರವಸೆಗಳಿಗೆ ಬೆಲೆಯಿಲ್ಲ. ಈ ಯುದ್ಧವು ಲೋಕಶಾಂತಿಯಲ್ಲಿ ಪರ್ಯವಸಾನಗೊಳ್ಳಬೇಕಾದರೆ-ಇದಕ್ಕಿಂತಲೂ ರಕ್ತಮಯವಾದ ಇನ್ನೊಂದು ಯುದ್ಧಕ್ಕಿದು ತಯಾರಿಯಲ್ಲವೆಂದಾಗಬೇಕಾದರೆ-ಸದ್ಯದ ಖಂಡಿತ ವ್ಯವಸ್ಥೆಯೇ ಪ್ರಾಮುಖ್ಯ. ಆದ್ದರಿಂದ ಭಾರತದ ಬೇಡಿಕೆಯನ್ನು ಸಂತೈಸುವದೇ ನಿಜವಾದ ಯುದ್ಧ ಪ್ರಯತ್ನ. 'ಕ್ವಿಟ್ ಇಂಡಿಯಾ'ವು ಈ ಬೇಡಿಕೆಯ ಒಂದು ಸ್ಪಷ್ಟ ಭಾವನೆ ಮಾತ್ರವಾಗಿದೆ ಹಿಂದೀ ಸರಕಾರವು ಅದಕ್ಕೆ ವಿಪರೀತಾರ್ಥ ಕಟ್ಟಿದ ಹೊರತು, ಅದರಲ್ಲಾವ ಪಾಪ ಪೂರಿತ, ವಿಪರಿತ ಅರ್ಥವೂ ಸೇರಿಕೊಳ್ಳದು. ಇಡೀ ಮಾನವ ವರ್ಗದ ಪರವಾಗಿ ಬ್ರಿಟನಿನ ಕಡೆಗಿನ ಸ್ನೇಹಭಾವವೇ ಅದರಲ್ಲಿರುವ ಒಳತಿರುಳು. ನನ್ನ ವರ್ತನೆ, ನನ್ನ ಚಿಂತನೆಗಳಂತೆ ನಾನು ಬ್ರಿಟಿಷರ ಮಿತ್ರನೆನ್ನಲಾಗುತ್ತದಾದರೆ, ನಿಮ್ಮೊಡನೆ ನನ್ನ ಗಾಢಾಲೋಚನೆಗಳಲ್ಲಿ ಭಾಗವಹಿಸದಂತೆ ನನ್ನನ್ನು ತಡೆಯುವಂತಹದಿಲ್ಲ. ಹೊರಗಿರುವ ಮಿಲಿಯಾಪಥಿ ಜನರು ಆಹಾರಾಭಾವದಿಂದ ನರಳುತ್ತಿರುವದನ್ನು ನಾನು ತಿಳಿದಿರುವಾಗ, ನನ್ನ ಪ್ರಯತ್ನ ವಿನಹ, ಸರ್ವಸೃಷ್ಟಿಜನ್ಯ ಸಲಕರಣೆಗಳೂ ನನಗೆ ದೊರೆಯುತ್ತಿರುವ ಈ ಶಿಬಿರದಲ್ಲಿರುವದು ನನಗೇನೂ ಸಂತೋಷದ ವಿಷಯವಲ್ಲ. ಆದರೆ ನಾನು ಹೊರಗೆ ಹೋದರೂ, ಬಾಳುವೆಗೆ ಬೆಲೆತರುವ ಆಹಾರವನ್ನೇ ಕಾಣದೆ ಹೋದರೆ, ತೀರಾ ನಿಸ್ಸಹಾಯಕನಾಗುತ್ತೇನೆ.

ನಿಮ್ಮ ಯಥಾರ್ಥವಾದಿ

ಎಂ. ಕೆ. ಗಾಂಧಿ.

(ಅನೇ ಪುಟ ನೋಡಿ)

Degrees: Books: Medicines
Free H L. M. S. M. B. H. M. D. etc. Free Homeo-Ayur UnaniNaturco degree by post also—Practitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp:—
Prof. Dr. N. H. Chbatbar,
Principal Indian Homeopathi Institute & Society (Govt. Regd)
P.O. MAHUVA (Kathiawar Dt. India).

Sidha-Kalpa Kavach (Regd.)
No. 3 Rs 2. No. 2 Rs 5 No. 1 Rs 7 Special Rs. 10. Extra Special Rs. 17 for marriage health wealth. Ask any six questions with M. O. Re. 1/4, and get correct answers by return post Life reading Rs. 10 No. V. P.P. Send M.O Free, pamplets.
Prof. Dr. N. H. Chbatbar,
P. O. MAHUVA (Kathiawar India.)

It pays always
to Insure with & represent
THE CRESCENT INSURANCE CO. LTD.,
Estd] BOMBAY. [1919
Apply to
T. A. Vasudevan,
Udipi, S. K
ವಿಮೆಯಿಳಿಸಲು ಮತ್ತು ಪ್ರಾತಿನಿಧ್ಯ ವಹಿಸಲು
ಲಾಭದಾಯೀ ಸಂಸ್ಥೆಯೆಂದರೆ
ದಿ ಕ್ರಸೆಂಟ್ ಇನ್ಶೂರೆನ್ಸ್ ಕೊ.
ಲಿಮಿಟೆಡ್., ಬೊಂಬಾಯಿ.
ಸ್ಥಾಪನೆ:— 1919.
ಬರೆಯಿರಿ:—
ಟಿ. ಎ. ವಾಸುದೇವನ್, ಉಡುಪಿ.

ತಾರುಣ್ಯ
ಕೊಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು 'ರಮಣವಿಲಾಸಿನಿ ಅತ್ಯುತ್ತಮ ಔಷಧಿ
ಡಬ್ಬಿ 1ಕ್ಕೆ ರೂ. 1
ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸ.
ಪುತ್ತೂರು ಏಜಂಟರು: — ಶ್ರೈ ಫಾರ್ಮಸಿ

The Board of Directors,
Sri Narayan Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944 Your patronage is solicited.
Mangalore Jarappa,
Managing Director

The Canara Banking Corporation Limited.

(Incorporated in British India.)

ESTD: 1906.

Head Office · **UDIPI**

ANNOUNCEMENT.

A Branch of the bank has been opened at Tobacco Street, CALICUT on 26-5-44.

ನವಯುಗ

ಉಡುಪಿ, ಗುರುವಾರ ೨೨-೬-೧೯೪೪

ನೆಹರು, ಅಜಾದರನ್ನು ಬಿಡಲಿ

ಗಾಂಧಿಜೀ ಬಂಧನದಲ್ಲಿದ್ದಾಗ ಲೋರ್ಡ್ ವೇವೆಲರಿಗೆ ಬರೆದಿದ್ದ ಪತ್ರಗಳ-ಪಡೆದ ಉತ್ತರಗಳ-ಒಂದು 'ರಿಕಾರ್ಡು ಕಟ್ಟು' ಈಗ ಹೊರಬಿದ್ದಿದೆ. 'ಆಗೋಸ್ತು ಗಲಭೆ' ಎಂದು ಹೆಸರು ಪಡೆದ ಹಿಂಸಾತ್ಮಕ ಗೊಂದಲಗಳಿಗೆ ಕಾಂಗ್ರೆಸಾಗಲೀ ಗಾಂಧಿಯವರಾಗಲೀ ಜವಾಬ್ದಾರರಲ್ಲವೆಂಬುದನ್ನವು ಸ್ಪಷ್ಟಪಡಿಸಿವೆ. 'ಗೊಂದಲಗಳಿಗೆ ಕಾಂಗ್ರೆಸ್ ಹೊಣೆ' ಎಂದು ಸರಕಾರವು ಪ್ರಕಟಿಸಿದ್ದ ಪುಸ್ತಕಕ್ಕೆ ಗಾಂಧಿಜೀ ಕೊಟ್ಟಿದ್ದ ಸವಿವರ ಉತ್ತರವು (ಈ ತನಕ ನಮಗದು ದೊರೆತಿಲ್ಲ) ಇದನ್ನು ಮತ್ತಷ್ಟು ಮುಂದಟ್ಟುಗೊಳಿಸಿರಬೇಕು. ಕಾಂಗ್ರೆಸ್ ಜಾಪಾನೀ ಪಕ್ಷಪಾತಿಯಲ್ಲವೆಂಬುದಕ್ಕೆ ಲೋರ್ಡ್ ವೇವೆಲರ ಒಪ್ಪಿಗೆಯಿದೆ; ಆದರೆ ಆಗೋಸ್ತು ಗಲಭೆಯ ಹೊಣೆಗಾರಿಕೆಯನ್ನು ಗಾಂಧಿಜೀ ಅಥವಾ ಕಾಂಗ್ರೆಸಿನ ಹೆಗಲ ಮೇಲಿಂದ ಇಳಿಸಲು ಅವರು ಸಿದ್ಧರಿಲ್ಲ. ಅದನ್ನು ಹೊರಲು ಗಾಂಧಿಜೀ ಒಪ್ಪುವದಿಲ್ಲ. ಅಂದ ಮೇಲೆ ಈ ವಾದ ತೀರ್ಮಾನವು ಮಹಾತ್ಮಾಜೀಯ ಬೇಡಿಕೆಯಂತೆ ನಿಷ್ಪಕ್ಷಪಾತೀ ವಿಚಾರಣಾ ಮಂಡಲವೊಂದರಿಂದಲೇ ಆಗಬೇಕಲ್ಲವೆ? ಆದರೆ ಆ ಬೇಡಿಕೆಯ ಮಟ್ಟಿಗೆ ಹಿಂದಿನ ಲಿನ್‌ಲಿತ್‌ಗೋರಂತೆ ಇಂದಿನ ವೇವೆಲರೂ ಕಿವುಡುತನ ಪ್ರದರ್ಶಿಸಿದ್ದಾರೆ. ಸ್ವಾರಸ್ಯವೆಂದರೆ ತಮ್ಮ ಉತ್ತರದಲ್ಲಿ ಆ ಪ್ರಸ್ತಾಪವನ್ನೇ ಎತ್ತಿಲ್ಲ. ಅರ್ಥಾತ್ ಸರಕಾರದ ವಾದದಲ್ಲಿ, ನ್ಯಾಯಸ್ಥಾನದಿದಿರು ಹೊತ್ತುಕೊಂಡು ತರಲಾರದಷ್ಟು ನ್ಯಾಯ ಭಾರವಿಂಬೇಕು!

"ಸರಕಾರದ ಧೋರಣೆ ಬದಲಾಗುವವರೆಗೂ ಸನ್ನಂಧವಸಿಗೆ ಜೈಲೇ ಹೇಳಿಸಿದ ಸ್ಥಳ. ಆ ವರೆಗೆ ಕೈದಿಯಾಗಿರುವದೇ ನನಗ ಸಂತೋಷ"- ಎಂದು ಗಾಂಧಿಜೀ ತಿಳಿಸಿದ ಕೆಲವೇ ದಿನಗಳೊಳಗೆ ಅವರ ಬಿಡುಗಡೆಯಾಗಿದೆ. ಸರಕಾರೀ ಧೋರಣೆಯು ಬದಲಾಗಿಲ್ಲವಾದ್ದರಿಂದ ಇದು ಗಾಂಧಿಜೀಗೆ ದೊರೆತ 'ಸ್ಥಾನ ಚ್ಯುತಿ' 'ಸಂತೋಷ ಭಂಗ'ದ ಶಿಕ್ಷೆ! "ನಾನು ಬಿಡುಗಡೆ ಹೊಂದಿ ಜೀವನ ಯೋಗ್ಯವಾದ ಆಹಾರ (ಮಾ ಕೇಯಸಾನುಕೂಲತೆ)ವನ್ನು ಕಾಣದ್ಹೋದರೆ ನಿಸ್ಸಹಾಯಕನಾಗುವೆನು"- ಎಂದು ಗಾಂಧಿಜೀ ಬಂಧನದಲ್ಲಿದ್ದುಕೊಂಡೇ ಬರೆದಿದ್ದರು. ಮಹಾತ್ಮಾಜೀಯು ನಮ್ಮ ದೃಷ್ಟಿಯಲ್ಲಿ ಬಿಡುಗಡೆ ಪಡೆದಿರಬಹುದು; ಆದರೆ ಅವರೆಂತಹ ಶಿಕ್ಷೆಯನ್ನೀಗ ಅನುಭವಿಸುತ್ತಿರುವರೆಂಬುದನ್ನು ಇದರಿಂದ ಊಹಿಸಬಹುದು.

ಲೋರ್ಡ್ ವೇವೆಲರು ಮುಂದಿಟ್ಟ ಸೂಚನೆಗಳ ಪರ್ಯಾಲೋಚನೆಗಾಗಿ 'ನನ್ನನ್ನು ವರ್ಕಿಂಗ್ ಕಮಿಟಿ ಮೆಂಬರರೊಡನೆ ವಿಚಾರ ವಿನಿಮಯಕ್ಕೆ ಬಿಡಿರಿ' ಎಂದು ತನ್ನ ಎರಡನೇ ಪತ್ರದಲ್ಲಿ ಗಾಂಧಿಜೀ ಮುಂದಿಟ್ಟಿದ್ದ ಬೇಡಿಕೆಯು ಇಂದಿನ ಕಗ್ಗತ್ತಲೆಯಲ್ಲಿ 'ದೀಪಗುಂಡಿ' ಇರುವ ಸ್ಥಾನವನ್ನು ವೈಸರಾಯಿಗೆ ತೋರಿಸಿಕೊಟ್ಟಿದೆ. 'ಕಾಂಗ್ರೆಸಿಗರು ಆಗೋಸ್ತು ನಿರ್ಧಾರವನ್ನು ಹಿಂದೆಗೆಯಬೇಕು' ಎಂದು ವೈಸರಾಯರೆಂದುದು ಮನಃಪೂರ್ವಕವಾಗಿಯೆ? ಹಾಗಾದರೆ 'ಆಗೋಸ್ತು ನಿರ್ಧಾರವನ್ನು ನಾನು ಹಿಂದೆಗೆಯಲಾರೆ. (ವ್ಯಕ್ತಿಶಃ ನನಗಾ ಅಧಿಕಾರವಿಲ್ಲ). ಅದು ನನ್ನ ಜೀವದುಸಿರು' ಎಂದ ಮಹಾತ್ಮರ ಮಾತನ್ನು ಗಮನಿಸಬೇಕು. ಅದನ್ನು ಹಿಂದೆಗೆಯುವ ನ್ಯಾಯಬದ್ಧ ಅಧಿಕಾರವುಳ್ಳ ವರ್ಕಿಂಗ್ ಕಮಿಟಿ ಸದಸ್ಯರನ್ನು ಬಿಡಬೇಕು. ಮಹಾತ್ಮರಿಗೆ ಜೀವದುಸಿರಾಗಿದ್ದುದು, ವರ್ಕಿಂಗ್ ಕಮಿಟಿಗೆ 'ಸೀವನೆಯ ಗಾಳಿ' ಮಾತ್ರವಾಗಿದ್ದ ನಿದರ್ಶನಗಳು ಕಾಂಗ್ರೆಸ್ ಚರಿತ್ರೆಯಲ್ಲಿವೆ. ಇಂದಿನ ಪರಿಸ್ಥಿತಿಯಲ್ಲಿ ನೆಹರು ಅಜಾದರ ಮನೋಭಾವವು ಗಾಂಧೀ ಮನೋವೃತ್ತಿಯಿಂದ ಕವಲೊಡೆದು ಹೋಗಿರಬಹುದು. ಗಾಂಧಿಜೀಯಂತೆ ರಾಷ್ಟ್ರೀಯ ಆವಶ್ಯಕತೆಗಿಂತ ಹೆಚ್ಚಾಗಿ ರಾಷ್ಟ್ರದ ಆತ್ಮಶುದ್ಧಿಯನ್ನು ಬಯಸುವವರು ನೆಹರು ಅಜಾದರಲ್ಲ. ಲೋರ್ಡ್ ವೇವೆಲರಲ್ಲಿ ಬುದ್ಧಿವಂತಿಕೆಯಿದ್ದರೆ-ಅವರು ಭಾರತದ ಬಿಕ್ಕಟ್ಟು ನಿವಾರಣೆಯನ್ನು ಹೃದಯತಃ ಅಪೇಕ್ಷಿಸುವದಾದರೆ-ಆಗಾಖಾನ್ ಅರಮನೆಯ ಬಾಗಿಲು ತೆರೆದಂತೆ, ಅಹಮ್ಮದ್ ನಗರದ ಗೇಟಿನ ಸರಳನ್ನೆಳೆಯಲು, ಅಲ್ಲಿ ಮಲೇರಿಯಾ ಹಬ್ಬುವವರೆಗೆ ಕಾಯಬಾರದು! ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರು ಹೊರಬಂದರೆ ಸ್ಥಿತಿ ಬದಲಾವಣೆ ಖಂಡಿತ-ಹಾಗಾಗದೆ ಹೋದರೆ ಮಹಾತ್ಮಾಜೀ ಮತ್ತೊಮ್ಮೆ 'ಅರಮನೆ' ಸೇರುವದು ನಿಜವೆಂದು ಸಮಗನ್ನಿಸುತ್ತದೆ.

CHAMPAE'S

Snow & Castrex

(Sole Distributors for India.)

Sukhananda Stores

Santhekatte, UDIPI, S. K.

ಪಿ. ಸಿ. ರೇ.

ಹಿಂದೂ ರಸಾಯನ ಶಾಸ್ತ್ರದ ಅಮೋಘತ್ವವನ್ನು ಪ್ರಪಂಚದಿದಿರು ಪ್ರಕಾಶಕ್ಕೆ ತಂದ ಅಸಾಧಾರಣ ವಿಜ್ಞಾನಿ, ಲೋಕದ ಪ್ರಥಮ ಶ್ರೇಣಿಯ ಮಹಾಜ್ಞಾನಿ, ಆಚಾರ್ಯ ಸರ್. ಪ್ರಫುಲ್ಲ ಚಂದ್ರರೇ ಇವರ ಇಹಯಾತ್ರೆ ಜೂನ್ ತಾ 16ರಲ್ಲಿ ಮುಗಿಯಿತು! ಆಚಾರ್ಯಜೀಗೆ ಬರುವ ಆಗೋಸ್ತು ತಾ 2ಕ್ಕೆ 83ವರುಷ ತುಂಬಲಿತ್ತು. 'ರೇ' ಭಾರತದ ಅತ್ಯುಜ್ವಲ ಕಿರಣಗಳಲ್ಲೊಂದು. ರವೀಂದ್ರನಾಥ ಟಾಗೋರ್, ಜಗದೀಶ ಚಂದ್ರಬೋಸ್ ಸರ್. ಸಿ. ವಿ. ರಾಮನರಂತೆ, ಸರ್. ಪ್ರಫುಲ್ಲರೂ ಇಡಿಯ ಪ್ರಪಂಚದ ದೃಷ್ಟಿಯನ್ನಾಕರ್ಷಿಸಿದ ಭಾರತದ ಒಂದು ಪ್ರತಿಭೆ. ಆಚಾರ್ಯರು ಲೋಕದ ಅಗ್ರಗಣ್ಯ ವಿಜ್ಞಾನಿಗಳಲ್ಲೊಬ್ಬರು. ಆಧುನಿಕ ರಸಾಯನಶಾಸ್ತ್ರದ ಅಗಾಧ ಜ್ಞಾನಿಯಾಗಿದ್ದ ಸರ್. ರೇಯವರು ಮೂಲ ಹಿಂದೂ ರಸಾಯನದ ಚರಿತ್ರೆಯನ್ನು ಶೋಧಿಸಿ, ಅದರ ಅಮೂಲ್ಯತೆಗೆ ಲೋಕ ಬೆರಗಾಗುವಂತೆ-ಪಾಶ್ಚಾತ್ಯಾನುಕರಣೆಯ ಹಿಂದೀಯರ ಭ್ರಮೆತೊಲಗುವಂತೆ-ಅದರ ತುಕ್ಕನ್ನು ಉಜ್ಜಿ ತೆಗೆದು ಬೆಳಗಿಸಿದ್ದರು. 'ಬೆಂಗಾಲ್ ಕೆಮಿಕಲ್ & ಫಾರ್ಮಸ್ಯೂಟಿಕಲ್ ವರ್ಕ್ಸ್'ನ ಸ್ಥಾಪಕರು ಇವರೇ. ರಸಾಯನ ಶಾಸ್ತ್ರ ಸಂಬಂಧವಾಗಿ 3 ಅಮೂಲ್ಯ ಗ್ರಂಥಗಳನ್ನು ಬರೆದಿದ್ದಾರೆ. 'ಕಲ್ಕತ್ತಾ ಯುನಿವರ್ಸಿಟಿ ಕೊಲೇಜ್ ಓಫ್ ಸಯನ್ಸ್'ನ ಆಧಾರಸ್ತಂಭವೇ ಆಚಾರ್ಯರು ಅಲ್ಲಿಯೇ ವಾಸಿಸುತಿದ್ದು ಅಲ್ಲಿಯೇ ಮರಣಗೊಂಡರು. ಬ್ರಹ್ಮಚಾರಿ; ಬಡಜನ ಪಕ್ಷಪಾತಿ; ಸಮಾಜ ಸುಧಾರಕ; ಖಾದೀ ಭಕ್ತ. ರೇಯಂತೆ ಸರ್ವ ತ್ಯಾಗಮಾಡಿ ಸೇವೆಯನ್ನೇ ಜೀವವಾಗಿ ಧಾರಣೆ ಮಾಡಿದ್ದ ಇಷ್ಟೊಂದು ಮುಖ್ಯ, ಆದರೆ ಇಂತಹ ಸಾದಾ ಜೀವನದ ಮತ್ತೊಬ್ಬನಿರುವದು ದುರ್ಲಭ. 'ಕೊನೆಯ ಪಕ್ಷ ಒಂದು ಶತಮಾನವನ್ನಾದರೂ ತುಂಬುವ ಶಪಥ ತೊಡಲಾರಿರಾ?' ಎಂದು ಗಾಂಧಿಜೀ ಅವರ ಅನಾರೋಗ್ಯದ ವೇಳೆ ತಂತೀ ಮೂಲಕ ಬೇಡಿಕೊಂಡಿದ್ದರು. ಈ ರಾಷ್ಟ್ರ ಸನ್ಯಾಸಿಯ ಸ್ಮಶಾನ ಯಾತ್ರೆಯಲ್ಲಿ ಬಂಗಾಲದ ಪ್ರಮುಖಾಧಿಕಾರಿಗಳೆಲ್ಲಾ ಭಾಗವಹಿಸಿದ್ದರು. ಆಚಾರ್ಯರೇ-ಅತ್ಯುಜ್ವಲ ಕಿರಣ-ಅಸ್ತಂಗತವಾಯಿತು! ಭಾರತಮಾತೆ ಈ ಪುತ್ರಶೋಕವನ್ನು ಮರೆಯಲಾರಳು.

IN THE MATTER OF

Sri Rama Industrial Works, Ltd., Hangarkatta (in liquidation)

and the

Indian Companies Act.

NOTICE

is hereby given that the general meeting of the above company will be held in the registered office of the Company at Hangarkatta on Sunday the 30th July, 1944 at 5 P.M. pursuant to Sec 208D of the Indian Companies Act.

Hangarkatta D/20—5—44 } **A. J. Alse,** Liquidator.

ಕಾರ್ಕಳ ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ.

O. P. No 50/1944

1 ಅಕ್ಕು ಸೆಡ್ತಿ, 2 ವೆಂಕ್ಟ ಸೆಟ್ಟಿ 3 ಮುದ್ದ ಸೆಟ್ಟಿ- ಪಡುಮನೆ ನಾಗು ಹೆಂಗ್ಸಿನ ಮಕ್ಕಳು.

ಉಡ್ಪಿ ತಾಲ್ಲೂ ಪಾದೆಬೆಟ್ಟು ಗ್ರಾಮದ ಪಡುಮನೆಯಲ್ಲಿ ಇರುವವರು. -ಅರ್ಜಿದಾರರು.

ಮತ್ತು

1. ಪದ್ದಕ್ಕ ಸೆಡ್ತಿ-ಗುಂಡಲಾಡಿ ಅಣ್ಣಪ್ಪ ಸೆಟ್ರ ಮಗಳು ವ ಕಾಡ್ಯ ಸೆಟ್ರ ವಿಧವೆ. ಉಡ್ಪಿ ತಾಲ್ಕು ನಡ್ಸಾಲು ಗ್ರಾಮದ ಪಡುಬಿದ್ರೆ ಬೇಂಗ್ರೆಯಲ್ಲಿರುವವಳು—

2. ನರ್ಸಿ ಸೆಡ್ತಿ- 3. ಹೊನ್ನಯ್ಯ ಸೆಟ್ಟಿ--ಕೊಸು ಹೆಂಗ್ಸಿನ ಮಕ್ಕಳು—

ಉಡ್ಪಿ ತಾಲ್ಕು ಪಾದೆಬೆಟ್ಟು ಗ್ರಾಮದ ಪಡುಮನೆಯಿಂಬಲ್ಲಿರುವವರು. —ಎದ್ರಿರು.

ಸದ್ರಿ ಎದ್ರಿರಿಗೆ ವ ಯಿತರ ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರರ ಸಹೋದರ ಯತ್ತ ಲಾಗಿ ಮೃತಪಟ್ಟ ಪಾದೆಬೆಟ್ಟು ಗ್ರಾಮದ ಪಡುಮನೆ ಕಾಡ್ಯ ಸೆಟ್ಟಿಯು ದಿ ಯುಂಡೀ ಯೂನೈಟ್ ಯಿನ್ಶೂರೆನ್ಸ ಕಂಪೆನಿ ಲಿಮಿಟೆಡ್ ಯಿದರಲ್ಲಿ ತಡದ ಪೋಲಿಸಿ ನಂಬ್ರ 3785ನೇ ಬಾಬ್ತು ಆತಗೆ ಬರತಕ್ಕ ಅವೇಜು ರೂಪಾಯಿ 750-0-0ನ್ನು ಪಡೆಯುವರೆ ತಮಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಬೇಕೆಂಗಿ ಆತನ ವಾರಿಸ್‌ದಾರರಾದ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ O. P. No 50/1944 ನೇ ಅರ್ಜಿಯು ಸನ್ನಿ ಬಗ್ಗೆ ತಾರೀಖು 4-7-1944ಕ್ಕೆ ಯಿಟ್ಟಿರುತ್ತದೆ. ಆದ್ದರಿಂದ ಸದ್ರಿ ಸಕ್ಸೇಶನ್ ಸರ್ಟಿಫಿಕೇಟು ಕೊಡುವರೆ ಯಾರಿಗಾದರೂ ಆಕ್ಷೇಪ ಯಿದ್ದರೆ ಸದ್ರಿ ತಾ. 4-7-1944ನೇ ದಿವ್ಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟಿನ ಎಂದೆ ಹಾಜ್ರು ಆಗಿ ಜ್ಯಾಹೀರು ಮಾಡತಕ್ಕದ್ದು. ತಪ್ಪಿದ್ದಲ್ಲಿ ಅರ್ಜಿದಾರರಿಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಲಾಗುವದು ಯೆಂತ ಯಿದರ ಮೂಲಕ ತಿಳಿಸಲಾಗಿಯದೆ.

K. V. Kamath.

Advocate for petitioners,

ಕಾರ್ಕಳ } ತಾರೀಖು 13-6-1944.

NOTICE

ಮಂಗಳೂರು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ.

O. S. No 453/43.

ಉಪ್ಯಕ್ಕೆ ಸಹಾ— ವಾದಿರು.

ಮತ್ತು

ವೀರಯ ಸಹಾ— ಪ್ರತಿವಾದಿರು,

ಯಿವರೊಳಗೆ

13 ಮಂಜಯ್ಯ, ಭಾಮು ಹೆಂಗ್ಸಿನ ಮಗ- ಮಂಗಳೂರು ಕಸಾಬ ವೆಲ್ಸರ್ ಮಾರ್ಕೆಟ್ ಬಳಿಯಿರುವವ.

16. ರಾಗು 17. ಪೂವಕ್ಕ 18. ಗಂಡುಕೂಸು-ಮೈನರಾಯ್ಕ, ಗಾರ್ಡಿಯನ್ ಮುಕ್ತ ಮ್ಯಾನೇಜಾಲ್ಸರ ಸೂಸೆ, ಮಂಗಳೂರು ಕಸಾಬ ಅತ್ತಾವರ ಗ್ರಾಮದಲ್ಲಿರುವವರು.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿರು ದಾಖಲು ಮಾಡಿದ ಮೇಲಿನ ದಾವೆಯು 3-7-1944ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಯಿಟ್ಟಿರುತ್ತದೆ. ಆದ್ದರಿಂದ ನೀವು ಸದ್ರಿ ತಾರೀಖು 3-7-4944ನೇ ದಿವ್ಸ ಹಗಲು ಘಂಟೆ 10-30ಕ್ಕೆ ಮುದ್ದಿನಿಂದಾಗಲಿ ವಕೀಲರ ಮುಖಾಂತರವಾಗಲೀ ಹಾಜರಾಗಿ ಉತ್ತರಿಸುವರೆ ತಪ್ಪಿದಲ್ಲಿ ಸದ್ರಿ ವ್ಯಾಜ್ಯವು ನಿಮ್ಮ ಗೈರುಹಾಜರಿಯಲ್ಲಿ ತೈಸಲು ಮಾಡಲಾಗುವುದು.

M. Janardan Malya.

Pleader for plaintiffs.

Mangalore } Dated 10-6-44

ಗಾಂಧೀ-ವೇವೆಲ್ ಪತ್ರ ವ್ಯವಹಾರ

(೪ನೇ ಪುಟದಿಂದ ಮುಂದುವರಿದುದು)

ವೈಸರಾಯರ ಉತ್ತರ

ವೈಸರಾಯಿ ಕೇಂಪ್,
ನಾಗಪುರ, 25-2-44

ಪ್ರಿಯ ಶ್ರೀಯುತ ಗಾಂಧಿ,

ಫೆಬ್ರವರಿ 17ರ ನಿಮ್ಮ ಪತ್ರಕ್ಕಾಗಿ ಅಭಿನಂದನೆ. ನಿಮ್ಮ ಮನವಿಗೆ ಸೀವೀ ಮೂಲಕ ಉತ್ತರ ಪಡೆದಿರುವಿರಿ. ಆಗಾಖಾನ್ ಅರಮನೆಯಲ್ಲಿರುವವರ ಪೈಕಿ ಮೂವರಿಗಿನ್ನೂ ಆ ನೋಟಿಸು ತಲಪಲಿಲ್ಲವೆಂದು ಕೇಳಿ ನಾನು ವ್ಯಸನಪಡುತ್ತೇನೆ. ಆ ಕುರಿತು ಕೂಡಲೇ ನಿಗಾ ತೆಗೆದುಕೊಳ್ಳಲಾಗುವದು. ನೀವು ಆ ಪತ್ರ ಬರೆದ ದಿನವೇ ನಾನು ನ್ಯಾಯವಿಧಾಯಕ ಸಭೆಗಳಲ್ಲಿತ್ತ ಭಾಷಣದ ವರದಿಯನ್ನು ನೀವು ಪತ್ರಿಕೆಗಳಲ್ಲೋದಿರಬೇಕೆಂದು ನನ್ನ ನಿರೀಕ್ಷೆ. ಅದರಲ್ಲಿ ನನ್ನ ಅಭಿಪ್ರಾಯವು ಬಂದಿದೆಯಾದ್ದರಿಂದ ಆಗ ನಾನು ಹೇಳಿದ್ದನ್ನು ಪುನರುಲ್ಲೇಖಿಸುವ ಆಗತ್ಯವಿಲ್ಲ. ನೀವದನ್ನು ಓದಲಿಚ್ಛಿಸುವದಾದರೆ ನಿಮ್ಮ ಅನುಕೂಲತೆಗಾಗಿ ಅದರದೊಂದು ಪ್ರತಿಯನ್ನು ಇದರೊಂದಿಗೆ ಲಗ್ತೀಕರಿಸಿದ್ದೇನೆ. ಈ ಸಂದರ್ಭವನ್ನು ಉಪಯೋಗಿಸಿ, ಶ್ರೀಮತಿ ಗಾಂಧಿಯವರ ನಿಧನಕ್ಕಾಗಿ ನನ್ನ ಮತ್ತು ನನ್ನ ಪತ್ನಿಯ ಹಾರ್ದಿಕ ಸಹಾನುಭೂತಿಯನ್ನು ನಿಮಗೆ ಸೂಚಿಸುತ್ತೇನೆ. ಹಲವು ವರುಷಗಳ ಜತೆಜೀವನದ ನಂತರ ಒದಗಿದ ಈ ಹಾನಿಯಿಂದ ನಿಮಗೆ ಹೇಗಾಗಿರಬಹುದೆಂಬುದನ್ನು ನಾವರಿಯಬಲ್ಲೆವು.

ನಿಮ್ಮ ವಿಶ್ವಾಸಿ,
(ಸಹಿ) ವೇವೆಲ್.

ಆ ಮೇಲಿನ ಪತ್ರವ್ಯವಹಾರಗಳು.

ಮೇಲಿನ ಪತ್ರಕ್ಕೆ ಮಾರ್ಚ್ 9ರಲ್ಲಿ ಮಹಾತ್ಮರು ಉತ್ತರ ಬರೆದರು. ತನ್ನ ಮತ್ತು ಕಸ್ತೂರಿ ಬಾನ ಸಂಬಂಧ, ಆಕೆಗೆ ತಾನು ಋಣಿಯಾಗಿರುವ ವಿಷಯಗಳನ್ನು ಹೃದಯ ಕರಗುವಂತೆ ವಿವರಿಸಿ, ವೈಸರಾಯರ ಎಸೆಂಬ್ಲಿ ಭಾಷಣಕ್ಕೆ ಸಮರ್ಪಕ ಸವಿವರ ಉತ್ತರಕೊಟ್ಟಿರುವರು. ಬ್ರಿಟಿಷರ ಕ್ರಿಪ್ಸ್ ಯುಕ್ತಿ ಧೋರಣೆ, ಆಗೋಸ್ತು ನಿರ್ಧಾರದ ಪ್ರಾಮಾಣಿಕತೆಗಳನ್ನು ಮಂದಟ್ಟುಮಾಡಿಕೊಟ್ಟು, ತನ್ನನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರೊಡನೆ ಪರ್ಯಾಲೋಚಿಸಲು ಬಿಡಬೇಕೆಂದು ಕೇಳಿಕೊಂಡಿರುವರು. 'ಹಿಂದುಸ್ಥಾನದಲ್ಲೆಲ್ಲಾ ಹಾರಾಡುತ್ತಿರುವ ನೀವು ಅಹಮ್ಮದ್ ನಗರ ಮತ್ತು ಆಗಾಖಾನ್ ಅರಮನೆಗೊಮ್ಮೆ ಭೇಟಿಕೊಟ್ಟು ನಿರ್ಬಂಧಿತ ಧುರೀಣರನ್ನೇಕೆ ಸಂಧಿಸಬಾರದು?" ಎಂದು ಆಮಂತ್ರಿಸಿರುವರು. "ನಾನೊಬ್ಬ ಅಸಾಧ್ಯ ಮನುಷ್ಯನೆನ್ನೋಣ; ಮಾಜೀ ಕಮಾಂಡರ್-ಇನ್-ಚೀಫ್ ಮತ್ತು ನಾವಿಕಾಧಿಪತಿಯ ಮಗಳಾದ ಮೀರಾಬಾಯಿಯನ್ನೇಕೆ ಬಂಧಿಸಿದಿರಿ?"-ಎಂದು ಗಾಂಧಿಜೀಯ ಪ್ರಶ್ನೆ. ಈ ಪತ್ರಕ್ಕೆ ಲೋರ್ಡ್ ವೇವೆಲರು ಲೋರ್ಡ್ ಲಿನ್‌ಲಿತ್ ಗೋರ ಅಂದಿನ ಪತ್ರವನ್ನೇ ಹೋಲುವ ಕಠಿಣ ಉತ್ತರವನ್ನು ಮಾರ್ಚ ತಾ. 28ರಲ್ಲಿತ್ತಿರುವರು. ಕಾಂಗ್ರೆಸು ಅಪರಾಧಿ; ಅಸಹಕಾರವನ್ನು ನಿಲ್ಲಿಸದೆ ಧೋರಣೆ ಬದಲಾವಣೆಯಿಲ್ಲವೆನ್ನುವದೇ ಅವರ ತಿರುಳು. ಎಪ್ರಿಲ್ ತಾ. 9ರಲ್ಲಿ ಮಹಾತ್ಮಾಜೀ ಬರೆದ ಮರುತ್ತರವೂ ವೈಸರಾಯರ ಆಕ್ಷೇಪಣೆಗೆ ನಾಟುವಷ್ಟು ತೀಕ್ಷ್ಣವಿದ್ದಿತು. ಆಗೋಸ್ತು ಗಲಭೆಯು ಸರಕಾರದ ನಿರ್ಮಾಣ, ಅವಿಲ ಹಿಂದುಸ್ಥಾನದಲ್ಲೇ ಮಾರ್ಶಲ್ ಲಾ, ಇಡಿಯ ಭಾರತವೇ ಒಂದು ಸೆರೆಮನೆ'ಯೆಂದು ಕಂಠೋಕ್ತವಾಗಿ ಹೇಳಿ, "ನಿಮ್ಮಲ್ಲಿಂತಹ ಅಭಿಪ್ರಾಯವಿರುವಾಗ ನನ್ನಂಥವನಿಗೆ ಹೇಳಿಸಿದ ಸ್ಥಳವೆಂದರೆ ಸರಕಾರೀ ಜೈಲೇ ಸರಿ. ಸರಕಾರದ ಹೃದಯ, ಅಭಿಪ್ರಾಯ ಮತ್ತು ಧೋರಣೆ ಮಾರ್ಪಾಟಾಗುವ ವರೆಗೆ ನನಗೆ ನಿಮ್ಮ ಕೈದಿಯಾಗಿರುವುದರಲ್ಲೇ ಪೂರ್ಣ ಸಂತೋಷ" ಎಂದಿರುವರು. ಲೋರ್ಡ್ ಲಿನ್‌ಲಿತ್ ಗೋರವರು ಅವಧಿ ಮುಗಿದು ಲಂಡನಿಗೆ ಹೊರಡುವಾಗ ಮಹಾತ್ಮಾಜೀ ಅವರಿಗೂ ಒಂದು ಮೈತ್ರಿಸೂಚಕ ವಿದಾಯ ಪತ್ರ ಬರೆದು, 'ಒಂದು ದೊಡ್ಡ ರಾಷ್ಟ್ರದ ಪ್ರತಿನಿಧಿಯಾಗಿ ನೀವು ಭಾರತದಲ್ಲಿ ಭೀಕರ ತಪ್ಪುಮಾಡಿದ್ದಿರೆಂಬ ತಿಳುವಳಿಕೆಯನ್ನು ಒಂದಲ್ಲೊಂದು ದಿನ ದೇವರು ನಿಮ್ಮ ಹೃದಯದೊಳಗೆ ತೂರುವನೆಂದು ನನ್ನ ಆಸೆ ಮತ್ತು ಪ್ರಾರ್ಥನೆ" ಅಂದಿದ್ದಾರೆ. ಲೋರ್ಡ್ ಲಿನ್‌ಲಿತ್ ಗೋರವರು "ನನ್ನ ಮಾತು ಮತ್ತು ವರ್ತನೆಗಳಿಗೆ ನೀವು ಕಟ್ಟಿಕೊಂಡಿರುವ ಅರ್ಥಗಳಿಗಾಗಿ ವ್ಯಸನಪಡುತ್ತೇನೆ. ಹಾಗೂ ಅಸಮ್ಮತಿ ಸೂಚಿಸುತ್ತೇನೆ"-ಎನ್ನುತ್ತಾ, 'ಕಾಲವು ಕಲಿಸುವ ಪಾಠವನ್ನು ತಿರಸ್ಕರಿಸುವದು ಯಾರ ಪಾಲಿಗೂ ಬುದ್ಧಿವಂತಿಕೆಯಲ್ಲ' ಎಂದು ಎರಡರ್ಥಗಳ ವ್ಯಂಗ್ಯ ಉತ್ತರವಿತ್ತಿದ್ದಾರೆ.

ಚೇರ್ಬರ್ಗ್ ವಿಜಯ

ಚೆರ್ಬರ್ಗ್ ಅರ್ಧದ್ವೀಪವನ್ನು ಮಿತ್ರ

• ಎಲ್ಲಾ ಕಡೆ ಮಿತ್ರರ ಪ್ರಗತಿ! •

ಲಂಡನ್-ಟೋಕಿಯೋ ಮೇಲೆ ವಿಶೇಷ ಧಾಳಿ.

ಸೇನೆಗಳೀಗ ಸಂಪೂರ್ಣಾಕ್ರಮಿಸಿಕೊಂಡು ಫ್ರಾನ್ಸ್ ಹೋರಾಟದ ಮೊದಲ ಮಹಾ ವಿಜಯವನ್ನು ಪಡೆದಿವೆ. ಅಲ್ಲಿದ್ದ 30 ಸಾವಿರ ಜರ್ಮನರು ಬಲೆಯೊಳಗೆ ಬಿದ್ದಿರುವರೆಂದು ತಿಳಿದುಬರುತ್ತದೆ

ಫಿನ್ಲೆಂಡ್ ಆಕ್ರಮಣ

ಫ್ರಾನ್ಸ್ ಆಕ್ರಮಣಾರಂಭದ ಬೆನ್ನಲ್ಲೇ ರಶ್ಯಾ ಗಡಿಯಿಂದ ಕೆಂಪುಸೇನೆ ಫಿನ್ಲೆಂಡಿನೊಳಗೆ ನುಗ್ಗಿ ಒಳಗಡೆಗೆ ಮುಂದೊತ್ತುತ್ತಿದೆ. ಅಲ್ಲಿಯ ಸುಪ್ರಸಿದ್ಧ ಹಾಗೂ ಅಜೇಯ 'ಮೇನ್ನರ್‌ಹ್ಯಾಮ್ ಕೋಟೆ'ಯನ್ನು ಮಹಾ ಸಾಹಸದಿಂದ ರಶ್ಯನರೀಗ ಮುರಿದು ಪ್ರಾಮುಖ್ಯ ನಗರ ವಿಬೋರ್ಗ್‌ಗೆ ಕೇವಲ ಹತ್ತು ಮೈಲು ದೂರದ ವರೆಗೂ ಬಂದಿರುವರು. ಅಮೇರಿಕವು ಫಿನ್ಲೆಂಡಿನ ಸಂಬಂಧ ಕಡಿದುಕೊಂಡಿದೆ.

ಇಟಲಿಯಲ್ಲಿ

ರೋಮ್ ಪತನದ ನಂತರ ಜರ್ಮನರು ಮೇಲಿಂದ ಮೇಲೆ ಪರಾಭವವನ್ನನುಭವಿಸುತ್ತಾ ಹಿಮ್ಮೆಟ್ಟುತ್ತಿದ್ದಾರೆ. ಇದಕ್ಕೆ ಹೊಂದಿಕೆಯಾಗಿ ಉತ್ತರ ಇಟಲಿಯಲ್ಲಿ ಯೂ ಮಿತ್ರರು ಹೊಸ ಸೇನೆಗಳನ್ನಿಳಿಸಿ ಧಾಳಿಯಾರಂಭಿಸಿದ ವಾರ್ತೆ ಬಂದಿದೆ. ಇಟಲಿ ಪಕ್ಕದ ಎಲ್ಬಾ ಕಿರುದ್ವೀಪಕ್ಕೆ ಮಿತ್ರರಿಳಿದು ಜರ್ಮನರ ಪ್ರಬಲ ಪ್ರತಿಭಟನೆಗೊಳಗಾಗಿದ್ದಾರೆ.

ಚತುರ್ಮೂರ್ತಿ ಸಮ್ಮೇಲನ

ಭಾವೀ ಲೋಕವ್ಯವಸ್ಥೆಯ ಯೋಜನೆ ತಯಾರಿಗಾಗಿ ಇಂಗ್ಲಾಂಡು, ಅಮೇರಿಕ, ರಶ್ಯಾ, ಚೀನಾಗಳ ಪ್ರಥಮ ಪರಿಷತ್ತು ಆಗೋಸ್ತಿನಲ್ಲಿ ವಾಷಿಂಗ್ಟನಿನಲ್ಲಿ ನೆರೆಯಲಿರುವದು.

ಟೋಕಿಯೋದ ಮೇಲೆ ಬೋಂಬು.

1942ನೇ ಎಪ್ರಿಲ್ 18ರಲ್ಲಿ ವಿಮಾನ ವಾಹಕ ಹಡಗಗಳಿಂದ ಹೊರಟ ಅಮೇರಿಕನ್ ವಿಮಾನಗಳು ಜಪಾನೀ ರಾಜಧಾನಿ ಟೋಕಿಯೋದ ಮೇಲೆ ಧಾಳಿ ನಡೆಸಿ ಲೋಕವ್ಯಾಪೀ ಉದ್ವೇಗವನ್ನೆಬ್ಬಿಸಿದ್ದುವು. ಕಳೆದ ಗುರುವಾರ ಭಾರತ-ಬರ್ಮಾ-ಚೀನಾ ನಿಲ್ದಾಣಗಳಿಂದ ಹೊರಟ ಕೊತ್ತಳ ವಿಮಾನಗಳು ಟೋಕಿಯೋ, ಜಪಾನರ ಮುಖ್ಯ ಕಾರ್ಖಾನೆ ವಲಯವಾದ ನಗಾಸಕೀ ಮೊದಲಾದ ಪ್ರಾಮುಖ್ಯ ನಗರಗಳ ಮೇಲೆ ಬೋಂಬುಗರೆದಿರುವವು.

ಹಿಟ್ಲರನ ಗುಪ್ತಾಸ್ತ್ರ

ಯುರೋಪು ಆಕ್ರಮಣಾರಂಭವೇ ಪ್ರಯೋಗ ಮುಹೂರ್ತವೆಂದು ನಾಜಿಗಳು ನಿರ್ಧರಿಸಿಟ್ಟಿದ್ದ ಈ ವರೆಗೇನೇನೋ ಊಹಾಪೋಹೆಗವಕಾಶ ಕೊಟ್ಟಿದ್ದ ಹಿಟ್ಲರನ ಗುಪ್ತಾಸ್ತ್ರವೀಗ ಇಂಗ್ಲಾಂಡಿನ ಮೇಲೆ ಬೀಳಹತ್ತಿದೆ. ಅದೆಂದರೆ ರೇಡಿಯೋ ಚಾಲಕ, ಸಾರಥಿ ರಹಿತ ವಿಮಾನ. ಈ ವಿಮಾನಗಳು ತಮ್ಮಷ್ಟಕ್ಕೆ ತೀವ್ರಗತಿಯಿಂದ ಹಾರಿಬರುವುವು; ಗುರಿಯನ್ನು ಸೇರಿದೊಡನೆ ನಿಲ್ಲುವವು. ಅದರ ಮೆಶಿನಿನ ತುದಿಯಿಂದೊಂದು ಬೆಳಕು ಹೊರಬೀಳುವದೇ ತಡ; 5 ರಿಂದ 15 ಸೆಕುಂಡಗಳ ಒಳಗೆ ಅಗ್ನಿವರ್ಷ ಸುರಿಯಲಾರಂಭ. ಇದು ದೂರದ ನಿಲ್ದಾಣದಿಂದ ರೇಡಿಯೋ ಮೂಲಕವೇ ಚಾಲು ಮಾಡಲ್ಪಡುತ್ತದೆ.

ಮುಂಬಯಿಯಲ್ಲಿ ವಿಜಯಾ ಬ್ಯಾಂಕ್

ಮುಂಬಯಿಯಲ್ಲಿ ವಿಜಯಾ ಬ್ಯಾಂಕ್:— ಶಾಖೆಯು (321 ಭಾರತ ದ್ವಾರದಲ್ಲಿ) ತಾ 15-6-44ರಲ್ಲಿ ಶ್ರೀ. ಎ. ಬಿ. ಶೆಟ್ಟಿ ಹಸ್ತದಿಂದ ವಿದ್ಯುಂಭಣೆಯಿಂದ ತೆರೆಯಲ್ಪಟ್ಟಿರುವುದೆಂದು ತಿಳಿದು ಬರುತ್ತದೆ. ಈ ನೂತನ ಶಾಖೆಯ ಅಭಿವೃದ್ಧಿಯನ್ನು ಹೆಂದಲೆಂದು ಹಾರೈಕೆ.

ಮೈಸೂರು ಫಾರೆಸ್ಟ್ ಇಲಾಖೆ

ಹರಾಜು ಇಸ್ತಿಹಾರು.

ಜೋಗಪುರ ಪವರ್ ಸ್ಕೀಮಿನ ದೆಸೆಯಿಂದ ಮುಳುಗಡೆಯಾಗಬಹುದಾದ ಕುಂದಾಪುರ ತಾಲೂಕು ಈ ಕೆಳಗೆ ಕಂಡ ಗ್ರಾಮಗಳಲ್ಲಿರುವ ಮರ, ಸೌದೆ ಮತ್ತು ಬಿದಿರುಗಳನ್ನು ಸಾಗರದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ, ಅವರ ಆಫೀಸಿನಲ್ಲಿ ತಾ. 26-6-1944ನೇ ಮಧ್ಯಾಹ್ನ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

ಕೋಟೆ, ಶೀರೂರು, ನಾಗೋಡಿ ಮತ್ತು ಹೆಬ್ಬಿಗೆ.

ಸಾಗರ,
ತಾ 14-6-1944.

M. Ahmed,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್,
ಸಾಗರ ಡಿವಿಜನ್, ಸಾಗರ.

ತಾರೀಕು 25—6—44ರಿಂದ

ವೀನಸ್ ಚಿತ್ರಪಟ

ನಾರಿ

ತ್ರಿಲೋಕ್. ಲಲಿತಾಪವಾರ್, ಊರ್ಮಿಳಾ.

ಮರೆಯದಿರಿ

ಶಾಂತಾಆಪ್ಟೆ, ಕುಮಾರ್, ನೂರ್‌ಜಹಾನ್ ಅಭಿನೀತ.

ದುಹಾಯಿ

ಕೇರಳ

ವೆಪ್ ಸೋಪ್
VEP SOAP

ವೈದ್ಯಕೀಯ ಸಾಬೂನು

ಚುನಾಯಿತ ದಿನಸುಗಳಿಂದ ತಯಾರಿಸಿದುದು

ಬೇವಿನೆಣ್ಣೆಯ ಸಾರಯುಕ್ತವಾದುದು

ಸುಪ್ರಸಿದ್ಧವಾದ ಚರ್ಮವರ್ಧಕ ಟಾನಿಕ್.

ಕೇರಳಾ ಸೋಪ್ ಇನ್ಸ್ಟಿಟ್ಯೂಟ್.

ಕಲ್ಲಿಕೋಟೆ, ಸಹಕಾರೀ ಸಂಸ್ಥೆ

K. S. I. 2.

ದಕ್ಷಿಣ ಕನ್ನಡ-

ಮಂಗಳೂರು.

ಜನತಾ ಆಹಾರ ಸಮಿತಿಗೆ ನೆರವು ಕೊಡಿರಿ:—ಜನತಾ ಆಹಾರ ಸಮಿತಿಯ ಕಾರ್ಯಕರ್ತರಾದ ಶ್ರೀ| ಎಂ. ಡಿ. ಅಧಿಕಾರಿ ಅವರು ನಮಗೆ ಹೀಗೆ ತಿಳಿಸುತ್ತಾರೆ: ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಕೆಡುತ್ತಿರುವ ಆಹಾರ ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗಿ ಜಿಲ್ಲಾ ಕಲೆಕ್ಟರರ ಹೆಚ್ಚಿನ ನಿಗಾ ಇದೆ= ಎಂದು ಕೇಳಿದ್ದೆ. ಆದರೆ ಅಧಿಕಾರಿಗಳು ಕೈಕೊಂಡಿರುವ ವರ್ತನೆಯು ತೃಪ್ತಿಕರವಿಲ್ಲ ಎಂದು ನನಗೆ ವರದಿ ಬರುತ್ತಿದೆ ಒಂದು ಕಡೆಯಿಂದ ಕಳ್ಳ ಸಂತೆಯು ಪ್ರಾದುರ್ಭವಿಸುತ್ತಿದ್ದಂತೆಯೇ ಹೊಟ್ಟೆಗೆ ಬೇಕಷ್ಟೇ ಹಿಟ್ಟನ್ನು ಇಟ್ಟುಕೊಂಡಿರುವ ನಿರ್ದೋಷಿ ಜನರಿಗೆ ಅನ್ಯಾಯವಾಗುತ್ತಿದೆ. ಹೆಚ್ಚಿನ ಕಡೆ ಹಳ್ಳಿಯಲ್ಲಿ ಅಕ್ಕಿಯನ್ನು ಕೂಲಿಯಾಗಿ ಕೊಡುತ್ತಿದ್ದಾರೆ ಅಲ್ಲಿ ಮುಂದೆ ಬೇಸಾಯವಾಗುವುದೆ ಕಷ್ಟವಾಗಿದೆ. ಕೂಲಿ ಕೊಡಲು ಹಳ್ಳಿಯಲ್ಲಿ ಅಕ್ಕಿ ಇಲ್ಲ. ಹೀಗಾದರೆ, ಮೊದಲೇ ಪರಸ್ಪರ ವಿಶ್ವಸವಿಲ್ಲದಿರುವ ಸರಕಾರ ಮತ್ತು ಜನತೆಯ ಸಂಬಂಧವು ಮತ್ತಷ್ಟು ಕೆಡುವ ಸಂಭವವಿದೆ. ಇನ್ನು ಜನತೆಯಲ್ಲಿಯೂ ನನ್ನ ಪಿಸಂತಿಯಿದೆ, ಆಹಾರದ ಕೊರತೆಯಿಂದ ದೇಶವಿಡೀ ಕಂಗಾಲಾಗಿದ್ದರೂ ಹೆಚ್ಚಿನ ಅಕ್ಕಿ ಇರುವವರು ಕಳ್ಳಸಂತೆಯಲ್ಲಿ ವ್ಯವಹರಿಸುವುದೆಂದರೆ ಅದು ತೀರಾ ಲಜ್ಜಾಸ್ಪದವಾದ ವಿಚಾರ, ಈ ಆಹಾರದ ಕೊರತೆಯು ಇಂದು ನಾಳೆ ನಮ್ಮನ್ನು ತೊಲಗದು, ಆದಷ್ಟು ಹೆಚ್ಚು ಸ್ಥಳವನ್ನು ಕೃಷಿ ಮಾಡಿ ಅಧಿಕ ಆಹಾರ ಬೆಳೆಸುವುದು ಆಗತ್ಯ. ಜನರು ಸುಸಂಘಟಿತರಾಗಿ ಕಾರ್ಯರಂಗಕ್ಕಿಳಿಯಬೇಕಾಗಿದೆ. ಸೋಮಾರಿಗಳಾಗಿ ಕುಳಿತಿರುವ ಕಾಲವಿದಲ್ಲ. ಇದರ ಕುರಿತು ಆಲೋಚಿಸಲು ಜಿಲ್ಲಾ ಜನತಾ ಆಹಾರ ಸಮಿತಿಯೊಂದು ಏರ್ಪಟ್ಟಿದೆ. ಇದು ತನ್ನ ಕಾರ್ಯವನ್ನು ವಿಸ್ತೃತಗೊಳಿಸುವುದಕ್ಕಾಗಿ ಸದ್ಯದಲ್ಲೇ ಎಲ್ಲಾ ತಾಲೂಕುಗಳಿಂದ ಹೆಚ್ಚಿನ ಪ್ರತಿನಿಧಿಗಳನ್ನು ಕರೆದು ಸಭೆ ಸೇರಲಿರುವುದು. ಜನರು ತಮ್ಮ ಆಹಾರ ಸಂಬಂಧವಾದ ಸಂಕಷ್ಟ, ಸಲಹೆ, ಸೂಚನೆಗಳನ್ನು ಕೆಳಗಿನ ವಿಳಾಸಕ್ಕೆ ತಿಳಿಸಬೇಕು—ಶ್ರೀ| ಎಂ. ಡಿ. ಅಧಿಕಾರಿ, C/o ಸುಮ ನಿವಾಸ, ಕೊಡಿಯಾಲ ಬೈಲು, ಮಂಗಳೂರು.

ಹಸುಗೆಯ ತಕ್ಷೀರುಗಳು:—ಮಂಗಳೂರು ಶಹರಿನಲ್ಲಿ ಅಡಗಿಸಿಟ್ಟ ಅಥವಾ ಡಿಕ್ಲರೇಶನ್ ಕೊಡದೆ ಇದ್ದ ಅಕ್ಕಿ ಸಂಗ್ರಹಗಳನ್ನು ಕಂಡು ಹಿಡಿಯುವ ಬಗ್ಗೆ ಮಂಗಳೂರು ಹಸುಗೆಯ ಆಫೀಸರರು ತಾ. ೮-೯-೪೪ರಿಂದ ಮೊದಲ್ಗೊಂಡು ಪ್ರಾರಂಭಿಸಿರುವ ತನಿಕೆಯಲ್ಲಿ ಈ ಕೆಳಗಿನ ಹಸುಗೆಯ ತಕ್ಷೀರುಗಳನ್ನು ಪತ್ತೆ ಮಾಡಿರುತ್ತಾರೆ. ಹತ್ತು ಮುಡಿಗಳಿಗಿಂತ ಹೆಚ್ಚು ದಾಸ್ತಾನು ಇದ್ದು ಡಿಕ್ಲರೇಶನ್ ಕೊಡಲಿಕ್ಕೆ ತಪ್ಪಿದ್ದು—೪ ತಕ್ಷೀರುಗಳು. ಡಿಕ್ಲರೇಶನ್ ಕೊಟ್ಟು ದಾಸ್ತಾನು ಇಟ್ಟವರು ರೇಶನ್ ಕಾರ್ಡು ಉಪಯೋಗಿಸಿ ಅಕ್ಕಿ ಪಡಕೊಂಡುದು—೧ ತಕ್ಷೀರು ಮನೆಯಲ್ಲಿ ಜನರ ಸಂಖ್ಯೆ ಕಡಿಮೆ ಆದ ಮೇಲೂ ರೇಶನ್ ಕಡಿಮೆ ಮಾಡಿಸಿಕೊಳ್ಳದೆ ರೇಶನ್ ಪಡಕೊಂಡದ್ದು—೧ ತಕ್ಷೀರು, ಎಲ್ಲಾ ತಕ್ಷೀರುಗಳಲ್ಲಿಯೂ ಹೆಚ್ಚಾಗಿ ಶ್ರೀಮಂತ ಜನರೇ ತೊಂದರೆಗೆ ಗುರಿಯಾಗುತ್ತಾರೆ- ಎಂದು ಹಸುಗೆ ಆಫೀಸರರು ತಿಳಿಸುತ್ತಾರೆ.

ಕಟ್ಟಿಗೆ ಇದ್ದಲು:—ಮದ್ರಾಸು ಪ್ರಾಂತೀಯ ಸರಕಾರವು ಹೀಗೆ ಪ್ರಕಟಿಸುತ್ತದೆ- ಕಟ್ಟಿಗೆ ಮತ್ತು ಇದ್ದಲನ್ನು ಮದ್ರಾಸು ಪ್ರಾಂತದ ಯಾವುದೇ ಒಂದು ಜಿಲ್ಲೆಯಿಂದ ಹೊರಗಿನ ಯಾವ ಪ್ರದೇಶಕ್ಕೂ, ಅಧಿಕಾರಿಗಳ ಪರ್ಮಿಟ್ ವಿನಾ ನಿರ್ಯಾತ ಮಾಡಬಾರದು= ಎಂದು ವಿಧಿಸಲಾಗಿದೆ.

ಕಟ್ಟಿಗೆ ನಿಯಂತ್ರಣ:—ನಗರದಲ್ಲಿ ಕಟ್ಟಿಗೆಯ ಬೆಲೆ ದಿನದಿಂದ ದಿನಕ್ಕೆ ಏರುತ್ತಿರುವುದರಿಂದ ಅದನ್ನು ಹತೋಟಿಗೆ ತರಲು ಜಿಲ್ಲಾ ಕಲೆಕ್ಟರರು ಭಾರತರಕ್ಷಣಾ ಶಾಸನದನ್ವಯ ಈ ಹುಕುಮನ್ನು ಜಾರಿ ಮಾಡಿದ್ದಾರೆ.-ಇದೇ ತಾ. ೧೫—೬—೪೪ರ ಅನಂತರ ಮಂಗಳೂರು ಮತ್ತು ಉಡುಪಿ ಮುನಿಸಿಪಾಲಿಟಿಗಳೊಳಗೂ, ಪುತ್ತೂರು ಮತ್ತು ಕಾರ್ಕಳ ಪಟ್ಟಣದೊಳಗೂ ಈ ಕೆಳಗಿನ ನಿಬಂಧನೆಗೊಳಪಟ್ಟು ಕಟ್ಟಿಗೆ ವಿಕ್ರಯಿಸತಕ್ಕದ್ದು. (೧) ವ್ಯಾಪಾರಿಯೊಬ್ಬನು ತನ್ನ ಗಿರಾಕಿಗಳಿಗೆ ಕಟ್ಟಿಗೆ ವಿಕ್ರಯಿಸುವಾಗ ಇದೇ ತಾ. ೧೫=೬=೪೪ರಲ್ಲಿ ಸ್ಟಾಕಿನ ೩ಆಂಶಕ್ಕಿಂತ ಜಾಸ್ತಿ ಒಂದು ತಿಂಗಳಲ್ಲಿ ವಿಕ್ರಯಿಸಬಾರದು, ಎಂದರೆ ಈಗಿರುವ ಕಟ್ಟಿಗೆಯ ಸ್ಟಾಕು ನವಂಬರ ಅಂತ್ಯದ ವರೆಗೂ ಬರುವಂತೆ ಪ್ರತಿತಿಂಗಳೂ ಸಮಪಾಲಿನಿಂದ ವಿಕ್ರಯಿಸತಕ್ಕದ್ದು. (೨) ಕಟ್ಟಿಗೆ ವಿಕ್ರಯಿಸುವಾಗ, ವ್ಯಾಪಾರಿಯ ಹೆಸರು, ಗ್ರಾಹಕನ ಹೆಸರು, ಮಾರಿದ ಕಟ್ಟಿಗೆಯ ದರಗಳನ್ನು ಕಾಣಿಸುವ ರಶೀದಿಯನ್ನು ಕೊಡಬೇಕು. ಇದರ ದ್ವಿಪ್ರತಿಯು ವ್ಯಾಪಾರಿಯ ವಶವಿರಬೇಕು.

ಬೆಲೆಯನ್ನು ಇಂತಿಷ್ಟು ಎಂದು ನಿಯಂತ್ರಿಸದಿದ್ದರೂ ತಾ. ೧೫ರ ಮೊದಲಿದ್ದ ದರದಲ್ಲಿ ಮಣಕ್ಕೆ ೧-೨-೦ ಕಡಿಮೆ ಮಾಡಿ ವಿಕ್ರಯಿಸಬೇಕೆಂದು ವಿನಂತಿಸಿಕೊಳ್ಳಲಾಗಿದೆ.

ಕಸ್ತೂರಿ ಬಾ ಸ್ಮಾರಕ ಸಮಿತಿ:-ಜಿಲ್ಲೆಯ ಆಧ್ಯ ಮಹನೀಯರು ಹಿಂದೊಮ್ಮೆ ಮಂಗಳೂರಲ್ಲಿ ಸಭೆ ಸೇರಿ ಕಸ್ತೂರಿ ಬಾ ಸ್ಮಾರಕ ನಿಧಿಗೆ ಹಣ ಸಂಗ್ರಹಿಸಲು ಸಮಿತಿಯೊಂದರ ರಚನೆಯಾಗಿತ್ತು ಈಗ ಧಾರವಾಡದಲ್ಲಿ ಪ್ರಾಂತೀಯ ಸಮಿತಿಯ ರಚನೆಯಾಗುವಾಗ ದ. ಕನ್ನಡದ ಮಟ್ಟಿಗೆ ಪ್ರತ್ಯೇಕವಾದೊಂದು ಉಪಸಮಿತಿಯು ರಚನೆಯಾಗಿದೆ. ಇದರಲ್ಲಿ ಶ್ರೀಯುತರು ವಿ ಎಸ್. ಕುಡ್ವ, ಎಂ. ಡಿ. ಅಧಿಕಾರಿ, ಎ. ದಾಮೋದರ ಪೈ, ಡಾ| ಮಾಧವ ಪೈ ಮತ್ತು ಶ್ರೀಮತಿ ಲೀಲಾಬಾಯಿ ಏಕಾಂಬರರಾವ್ ಈ ಮಹನೀಯರಿರುವರು- ಶ್ರೀ ಕುಡ್ವರು ಸಮಿತಿಯ ಕಾರ್ಯಕರ್ತರು.

ಡಾ| ಯು ಪಿ. ಮಲ್ಯರು:—ಎರಡು ತಿಂಗಳ ಪೆರೋಲಿನ ಮೇಲೆ ಬಿಡುಗಡೆ ಹೊಂದಿ ಬಂದಿದ್ದ ಡಾ| ಮಲ್ಯರು ತಾ. ೧೪ರಂದು ಪುನಃ ತಂಜಾವೂರು ಸ್ಪೆಶಲ್ ಜೈಲಿಗೆ ಹಿಂತೆರಳಿದರು

ಬಿರುದುದಾನ ಸಮಾರಂಭ:—ತಾ. ೧೭ರಂದು ಜಿಲ್ಲಾ ಕಲೆಕ್ಟರರು ದರ್ಬಾರೊಂದನ್ನು ಗವರ್ನಮೆಂಟ್ ಕಾಲೇಜಿನಲ್ಲಿ ಜರಗಿಸಿ,ಜಿಲ್ಲೆಯ ಸರಕಾರಿ ವಕೀಲರಾದ ಶ್ರೀ| ಎಂ, ಕೆ ನಂಬಿಯಾರರಿಗೆ ಬಂದಿದ್ದ ರಾವ್ ಸಾಹೇಬ್ ಬಿರುದನ್ನು ಒಪ್ಪಿಸಿದರು, ಮದ್ರಾಸಿನಲ್ಲಿ ಗವರ್ನಮೆಂಟ್ ಪ್ಲೀಡರರಾಗಿರುವ ಶ್ರೀ| ಬಂಟ್ವಾಳ ಸೀತಾರಾಮರಾಯರಿಗೆ ಬಂದಿದ್ದ ರಾವ್ ಬಹದೂರ್ ಬಿರುದನ್ನು ಅವರಿಗೊಪ್ಪಿಸುವದಾಗಿ ಕಲೆಕ್ಟರರು ತಿಳಿಸಿದರು. ಶ್ರೀಯುತರು ಸಭೆಗೆ ಬಂದಿರಲಿಲ್ಲ. ಕಲೆಕ್ಟರರು; ಚಿಕ್ಕದೊಂದು ಭಾಷಣವೀಯುತ್ತ ಯುದ್ಧ ಯತ್ನಗಳಲ್ಲಿ ಭಾಗವಹಿಸಬೇಕೆಂದೂ ಜಿಲ್ಲೆಯ ಆಹಾರ ಸಮಸ್ಯೆಯನ್ನು ಬಗೆಹರಿಸಲು ನೆರವಾಗಬೇಕೆಂದೂ ಹೇಳಿದರು, ರಾವ್ ಸಾಹೇಬ್ ನಂಬಿಯಾರರು ಸಮರ್ಪಕ ಉತ್ತರವಿತ್ತ ಬಳಿಕ ಸಭೆ ಅಂತ್ಯವಾಯಿತು.

ಮಂಗಳೂರಲ್ಲಿ ತಿಂಡಿ ತೀರ್ಥದ ಖಂಡಿತ ಬೆಲೆ--ಹೋಟೇಲು ಉಪಹಾರ ಗೃಹಗಳ ಸಂಬಂಧ ಜಿಲ್ಲಾ ಕಲೆಕ್ಟರರು ಒಂದು ಆಜ್ಞೆಯನ್ನು ಹೊರಡಿಸುತ್ತ ಮೇ ತಿಂಗಳಲ್ಲಿದ್ದ ಕಾಫಿ ಮತ್ತು ತಿಂಡಿ ಪದಾರ್ಥಗಳ ಬೆಲೆಯನ್ನು ಆ ತಿಂಗಳಲ್ಲಿದ್ದುದಕ್ಕಿಂತ 1/3 ನೆಯಷ್ಟನ್ನು ಇಳಿಸಬೇಕೆಂದೂ ಆ ರೀತಿ ವರ್ತಿಸದಿದ್ದವರಿಗೆ ಸಕ್ಕರೆ ಪೂರೈಕೆ ನಿಲ್ಲಿಸಲಾಗುವುದೆಂದೂ ಮತ್ತು ಮೇ ತಿಂಗಳ ದರ ಮತ್ತು ಈಗಿನ ಇಳಿಸಿದ ದರವನ್ನು ಕಾಣಿಸುವ ಪಟ್ಟಿಯನ್ನು ಪ್ರಕಟಿಸಬೇಕೆಂದೂ ತಿಳಿಸಿರುತ್ತಾರೆ,

ಜಿಲ್ಲಾ ಹರಿಜನ ಸೇವಕ ಸಂಘ-ಜಿಲ್ಲಾ ಹರಿಜನ ಸೇವಕರಾದ ಶ್ರೀ ಯನ್.ಯಸ್. ಕಿಲ್ಲೆಯವರು ತಾ. 1-6-44ರಿಂದ 9-6-44ರ ವರೆಗೆ ಮೂಲ್ಕಿ ಕಿನ್ನಿಗೋಳಿ, ಹಳೆಯಂಗಡಿ ಮತ್ತು ಸುರತ್ಕಲ್ ಮೊದಲಾದ ಸ್ಥಳಗಳಲ್ಲಿ ಪ್ರಚಾರ ಕಾರ್ಯವನ್ನು ಕೈಕೊಂಡು ಸಂಚರಿಸಿದ್ದರು. ರೂ- 461/- ಸಂಗ್ರಹವಾಗಿರುತ್ತದೆ. ಅಲ್ಲದೆ ಇದೇ ಸಂಬಂಧವಾಗಿ ತಾ 9ನೇ ಶುಕ್ರವಾರ ಮೂಲ್ಕಿ ಬೋರ್ಡು ಹೈಸ್ಕೂಲಿನಲ್ಲಿ ಒಂದು ಯಕ್ಷಗಾನ ಸಮಾರಂಭವೂ ನಡೆದಿತ್ತು. ಈ ಕಾರ್ಯದಲ್ಲಿ ಪೂರ್ಣ ಸಹಾಯ ಮತ್ತು ಸಹಕಾರಗಳನ್ನಿತ್ತಿರುವ ಶ್ರೀ ಕೊಲ್ನಾಡು ಸಂಜೀವ ಶೆಟ್ಟಿ, ಯಂ. ಆರ್. ಪೂಂಜರು, ಡಾ| ಯಂ. ಆರ್. ಕಾಮತರು, ಸುಬ್ಬ ಚಂಪನವರು ಮತ್ತು ಶ್ಯಾಮರಾವ್ ಮೊದಲಾದವರಿಗೆ ಸೇವಕರು ತುಂಬಾ ಆಭಾರ ಸೂಚಿಸಿರುವರು-

ಮಂಗಳೂರು-- ದಕ್ಷಿಣ ಕನ್ನಡ ಜಿಲ್ಲಾ ದೇವಾಡಿಗರ ಶುಭೋದಯ ಸಂಘದ ವಾರ್ಷಿಕ ಮಹಾಸಭೆಯನ್ನು ಬರುವ ನವಂಬರ್ ತಿಂಗಳಲ್ಲಿ ಜರಗಿಸುವಂತೆ ಮುಂದರಿಸಿರುತ್ತದಾಗಿಯೂ ಸದ್ರಿ ಮಹಾಸಭೆಯನ್ನು ಈ ವರ್ಷ ಮುಲ್ಕಿಯಲ್ಲಿ ಜರಗಿಸುವಂತೆ ನಿಶ್ಚಯಿಸಿರುತ್ತದಾಗಿಯೂ ತಿಳಿದು ಬರುತ್ತದೆ-

---

ಶ್ರೀ. ಎಚ್. ಆರ್. ನಾಯ್ಕರ ನಿಧನ-ಮಂಗಳೂರಿನ ಕೆನರಾ ಪ್ರಿಂಟಿಂಗ್ ವರ್ಕ್ಸನಲ್ಲಿ ಹಲವು ವರ್ಷಗಳಿಂದ ಮೆನೇಜರರಾಗಿದ್ದ ಶ್ರೀ ಎಚ್ ಆರ್. ನಾಯ್ಕರು ಕಳೆದ ವಾರದಲ್ಲಿ ಮೈಸೂರಲ್ಲಿ ಅಕಾಲ ನಿಧನ ಹೊಂದಿದರೆಂಬುದು ಅತ್ಯಂತ ವಿಷಾದಕರವಿದೆ- ಇವರಿಗೆ 2ತಿಂಗಳುಗಳ ಮೊದಲು ಕ್ಷಯರೋಗ ತಗಲಿದ್ದು ಮೈಸೂರಿಗೊಯ್ಯಲಾಗಿತ್ತು- ಮೃತರು ಉದ್ಯೋಗ ಪ್ರಿಯರೂ, ಬಡವರ ಬಂಧುವೂ ಪರೋಪಕಾರಿಗಳೂ ಆಗಿದ್ದರು- ಅವರ ದುಃಖೀ ಕುಟುಂಬದೊಂದಿಗೆ ನಮ್ಮ ಸಹಾನುಭಾವವಿದೆ

ಉಡುಪಿ

ಶ್ರೀ. ಪಿ. ಮಂಜುನಾಥ ನಾಯ್ಕರ ಬಿಡುಗಡೆ-ಡಿಫೆನ್ಸ್ ಒಫ್ ಇಂಡಿಯಾ ರೂಲ್ಸುಗಳಿಗನುಸಾರವಾಗಿ ದಸ್ತಗಿರಿ ಮಾಡಲ್ಪಟ್ಟ ಶ್ರೀ ಪಿ. ಮಂಜುನಾಥ ನಾಯ್ಕರು ತಪ್ಪಿತಸ್ಥರಲ್ಲವೆಂದು ತೀರ್ಮಾನಿಸಲ್ಪಟ್ಟು ತಾ. 17ರಲ್ಲು ಬಿಡುಗಡೆ ಹೊಂದಿದರು.

ಚಿಲ್ಲರೆ ನಾಣ್ಯಗಳ ಜಪ್ತಿ:—ಸ್ಥಳೀಯ ಪೋಲೀಸ್ ಅಧಿಕಾರಿಗಳು ಇಬ್ಬರ ಅಂಗಡಿಗಳನ್ನು ಪ್ರವೇಶಿಸಿ ಅವರ ವಶವಿದ್ದ ಚಿಲ್ಲರೆ ನಾಣ್ಯಗಳನ್ನು ಸ್ವಾಧೀನಪಡಿಸಿಕೊಂಡು ಅವರನ್ನು ಜಾಮೀನಿನ ಮೇಲೆ ಬಿಟ್ಟಿರುವರು -ಸಬ್ ಕಲೆಕ್ಟರರಲ್ಲಿ ವಿಚಾರಣೆ ನಡೆಯಲಿದೆ,

ಕಳ್ಳಸಂತೆಯಲ್ಲಿ- ಸಾಮಾನುಗಳನ್ನು ನಿಯಂತ್ರಣ ಬೆಲೆಗಿಂತ ಜಾಸ್ತಿ ದರದಲ್ಲಿ ಮಾರಾಟ ಮಾಡಿ ಅಧಿಕ ಲಾಭವನ್ನು ಪಡೆದ ಕೇಸುಗಳನ್ನು ಪತ್ತೆಹಚ್ಚುವರೆ ಸಂಬಂಧಪಟ್ಟ ಅಧಿಕಾರಿಗಳು ವ್ಯಾಪಾರೀ ಬಂಧುಗಳ ಹಳೆ ರಿಕಾರ್ಡುಗಳನ್ನು ಪರಿಶೀಲಿಸುತ್ತಿರುವರೆಂದು ತಿಳಿದುಬರುತ್ತದೆ.

ಬೇಸಾಯ ಸಾಗುವಳಿಯ ಈ ದಿವಸಗಳಲ್ಲಿ-ಹಳ್ಳಿಗರಲ್ಲಿಯ ಬಡ ಕೂಲಿಜನರ ಜಠರಾಗ್ನಿ ಪ್ರಜ್ವಲಿಸತೊಡಗಿದೆ. ಪಾವೋ ಅರ್ಧ ಪಾವೋ, ಅರ್ಧ ಸೇರೋ ಮುಂಚೆ ದೊರೆಯುತ್ತಿದ್ದುದು ಈಗ ದೊರೆಯುವುದಿಲ್ಲವಂತೆ. ಬೇಸಾಯ ಕಸುಬಿಗೆ ಹೋಗಿ ಕೂಲಿ ಬಗ್ಗೆ ಅಕ್ಕಿ ಪಡೆಯುತ್ತಾರೆ ಎಂಬುವುದೇ ಕಾರಣವಂತೆ. ಒಂದು ಮನೆಯಿಂದ ಒಬ್ಬರಿಬ್ಬರು ಬೇಸಾಯ ಕಸುಬಿಗೆ ಹೋದರೆ ಆ ಕಾರಣದಿಂದ ಇಡೀ ಕುಟುಂಬಕ್ಕೇನೇ ಪಡಿಯಕ್ಕಿ ಅನಗತ್ಯವೆಂದು ಭಾವಿಸಲಾಗುವುದೇ? ಬಡಕರುಳಿನ ಕೂಗಿಗೆ ಅಧಿಕಾರಿಗಳು ಈ ವರೆಗೆ ನಿಗಾ ಕೊಡಬೇಕಾಗಿದೆಯಷ್ಟೆ?

ಜಾಸ್ತಿ ಕ್ರಯಕ್ಕೆ ಅಕ್ಕಿ ಮಾರಾಟ ಮಾಡಿದ ಪರಿಣಾಮ-ದಿಂದಾಗಿ ಶ್ರೀ ಮಜೂರು ವೆಂಕಟೇಶ ಭಟ್ಟರಿಗೆ ಒಂದು ಸಾವಿರ ರೂಪಾಯಿ ದಂಡನೆ ಮತ್ತು ಒಂದು ವಾರದ ಶಿಕ್ಷೆ ವಿಧಿಸಲಾಯಿತು. ಅದೇ ತಪ್ಪನ್ನು ಮಾಡಿದ ಶ್ರೀ ಹಿರಿಯಣ್ಣ ಸೆಟ್ಟರಿಗೂ ರೂಪಾ 250 ಜುರುಮಾನೆ ಮತ್ತು ಒಂದು ತಿಂಗಳ ಶಿಕ್ಷೆ ವಿಧಿಸಲಾಗಿದೆ.

ದ. ಕ. ಜಿಲ್ಲಾ ರೈತರ ಯಾ ಭೂ ಮಾಲೀಕರ ಸಂಘದ ವಿನಂತಿ-ನಮ್ಮ ಜಿಲ್ಲೆಗೆ ಗೋಧಿಯು ಧಾರಾಳ ಬಂದಿರುವುದರಿಂದಲೂ ಜನತೆಗೆ ಬೇಕಾದಷ್ಟು ಅಕ್ಕಿ ಇಲ್ಲದೆ ಇರುವುದರಿಂದಲೂ ಮಹಾಜನರೆಲ್ಲರೂ ಅಕ್ಕಿಯೊಂದಿಗೆ ಗೋಧಿಯನ್ನೂ ಅಲ್ಪ ಪ್ರಮಾಣದಲ್ಲಾದರೂ ಉಪಯೋಗಿಸತೊಡಗಿ ಆಹಾರ ಸಮಸ್ಯೆಯು ಸುಗಮವಾಗಿ ಪರಿಣಾಮ ಹೊಂದುವರೆ ಸರ್ವರೂ ಬೆಂಬಲವೀಯಬೇಕಾಗಿಯೂ ಗೋಧಿ ಉಪಯೋಗಕ್ಕೆ ತುಪ್ಪ ಆತ್ಯಗತ್ಯವಿಲ್ಲವೆಂದೂ ಜಿಲ್ಲಾ ಸಂಘದ ಜತೆಕಾರ್ಯದರ್ಶಿಯರಾದ ಶ್ರೀ. ಕೆ. ಬಿ, ಜಿನರಾಜ ಹೆಗ್ಡೆ ಮತ್ತು ಶ್ರೀ. ಕೆ. ಸದಾನಂದ ಹೆಗ್ಡೆಯವರು ವಿನಂತಿಸುತ್ತಾರೆ,

---

THE BEST PREVENTIVE IN EPIDEMICS OF

CHOLERA

"BHUVANENDRA"

CHANDRAMAS

Will give you the best results. Try once and be satisfied with the results.

Dose: For adults:- 3 to 5 drops 2 to 3 times a day with the decoction of cloves or ajwan.

For Children: 1 to 2 drops with the said decoction

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಫ್ರಾನ್ಸಿನಲ್ಲಿ ಪ್ರಳಯಸದೃಶ ಹೋರಾಟ!

(೨ನೇ ಪುಟದಿಂದ ಮುಂದುವರಿದುದು)

ರ್ವ ಭಾಗ. ಚೆರ್ಬರ್ಗ್ ಬಂದರವು ನೋರ್ಮಂಡಿಯ ಉತ್ತರ ತುದಿಯಲ್ಲಿರುವ ಏಕ ಮಾತ್ರ ಮುಖ್ಯ ಬಂದರ. ಆ ಇಡೀ ವಲಯದಲ್ಲಿ ಒಳಗಡೆಯ ಸರ್ವ ಮುಖ್ಯ ಕೇಂದ್ರ ನಗರವೆಂದರೆ ಕೆಯಿನ್. ಚೆರ್ಬರ್ಗ್ ಬಂದರ ಮತ್ತು ಅರ್ಧ ದ್ವೀಪವೂ ಕೆಯಿನ್ ನಗರವೂ ವಶವಾದಾಗಲೇ ಮಿತ್ರ ಸೇನೆಗಳ ಪಾಲಿಗೆ ಮುಂದೊತ್ತುವ ಭಾಗ್ಯವೊಂದೇ ಉಳಿದಂತೆ. ಒಳಗಡೆಯಲ್ಲಿ ಅಡ್ಡೈಸಿ ಬಂದು ಕೆಯಿನನ್ನು ಸ್ವಾಧೀನಪಡಿಸಿಕೊಂಡರೆ, ಚೆರ್ಬರ್ಗ್ ರಕ್ಷಣಾ ವ್ಯವಸ್ಥೆಯೆಲ್ಲಾ ನಿಸ್ತೇಜವಾಗಿ ಅದು ಸ್ವಾಧೀನವಾಗುವದು ಸುಲಭ. ಆದ್ದರಿಂದಲೇ ಕೆಯಿನಿನ ಮೇಲೆ ಮಿತ್ರರು ಪ್ರಬಲ ಟೇಂಕು ದಳ ಸಮೇತ ಅದ್ಭುತ ಧಾಳಿಯಾರಂಭಿಸಿ, ಅದು ತಮ್ಮ ಬಗಲಿಗೆ ಬೀಳಲುಳಿದಿರುವದು ಘಂಟೆಗಳ ಅವಧಿ ಮಾತ್ರವೆಂದೊಮ್ಮೆ ಘೋಷಿಸಿದ್ದರು. ಅಲ್ಲಿ ಈ ಯುದ್ಧದಲ್ಲೇ ಅಪೂರ್ವವಾದ ಮಹಾ ಟೇಂಕು ಕಾಳಗಗಳು ನಡೆದಿದ್ದವು. ಆದರೂ ರೋಮೆಲನು ಅದರ ಸರಹದ್ದಿನ ಮುಖ್ಯ ಕೇಂದ್ರಗಳನ್ನು ಸ್ವಾಧೀನಪಡಿಸಿಕೊಂಡು ತನ್ನ ಪ್ರಬಲ ಪ್ರತಿಧಾಳಿಯಿಂದ ಮಿತ್ರಸೇನೆಗಳನ್ನು ಹಿಂದಕ್ಕೊಗೆದಿದ್ದಾನೆ. ಮಿತ್ರರೊಮ್ಮೆ ವಶಪಡಿಸಿಕೊಂಡ ಟಿಲ್ಲಿ, ಟೋರ್ನ್ ಮೊದಲಾದ ಕೆಲವು ನಗರಗಳನ್ನೂ ಜರ್ಮನರು ಮರಳಿ ಕಸಗೊಂಡಿದ್ದಾರೆ. ಚೆರ್ಬರ್ಗ್ ಅರೆದ್ವೀಪದ ಒಂದು ಸಂದುಕಟ್ಟಿನ ಸ್ಥಳವಾದ ಮೊಂಟೆಬರ್ಗ್ ನಗರವು ಜರ್ಮನ್—ಅಮೇರಿಕನ್ ಸೇನೆಗಳ ನಡುವೆ ಆಟದ ಚೆಂಡಿನಂತೆ ಮೂರು ಬಾರಿ ಕೈಬದಲಾವಣೆ ಹೊಂದಿಕೊನೆಯದಾಗಿ ಅಮೆರಿಕಾನರ ಕೈಯಲ್ಲಿ ಎಂದು ತಿಳಿದುಬರುತ್ತದೆ. ಕೆಯಿನನ್ನಾಕ್ರಮಿಸಿ ಚೆರ್ಬರ್ಗ್ ಅರ್ಧದ್ವೀಪವನ್ನು ಬುಡ [illegible] ಕತ [illegible] ಸಬೇಕೆಂಬ ಯೋಜನೆಯು ನಿಷ್ಫಲ [illegible] ಮಿತ್ರಸೇನೆಗಳೀಗ ಅದರ ತುದಿಯಿಂದಾಕ್ರಮಿಸಿಕೊಳ್ಳಲಾರಂಭಿಸಿವೆ. ಚೆರ್ಬರ್ಗ್ ವಲಯದ ಹೆಚ್ಚಿನ ನಗರಗಳು ಅಮೇರಿಕನ್ ಸೇನೆಗಳ ವಶವಾಗಿವೆ. ಆ ಅರ್ಧ ದ್ವೀಪವಾಗಿ ಅಮೆರಿಕಾವರಿಂದ ಇಭ್ಭಾಗಿಸಲ್ಪಟ್ಟಿದೆ. ಅಲ್ಲಿರುವ ಜರ್ಮನ್ ಸೇನೆಗಳು ಹಿಂದೆಗೆಯಲುಳಿದಿರುವ ಪಶ್ಚಿಮದ ರಸ್ತೆಯಲ್ಲೂ ಮಿತ್ರಸೇನೆ ಅಡ್ಡಗಟ್ಟಿದೆ. ಜರ್ಮನರಿಷ್ಟರಲ್ಲೇ ಚೆರ್ಬರ್ಗ್ ಧಕ್ಕೆಗಳನ್ನು ಧ್ವಂಸಮಾಡಹತ್ತಿದ್ದರಿಂದ ಅದು ಮಿತ್ರರ ಕೈಗೆ ದೊರೆಯುವಾಗ ಸದುಪಯೋಗೀ ಬಂದರವಾಗಿ ಉಳಿಯದೆ, ನಿರುಪಯೋಗೀ ಮರುಭೂಮಿಯಾಗುವದೆಂಬ ಭಯವೆದ್ದಿದೆ. ಮಾತ್ರವಲ್ಲ, ಚೆರ್ಬರ್ಗ್ ತುದಿಗ ಹೋದ ಮಿತ್ರಸೇನೆಗಳಿಗೆ ರೋಮೆಲನ ಕೆಯಿನ್ ವಿಜಯೀ ಸೇನೆಗಳ ಒತ್ತಡ ಬೀಳುವ ಅಪಾಯವೂ ಇದೆ. ಈ ಬಿಕ್ಕಟ್ಟಿನ ಸ್ಥಳ, ಸಂದಿಗ್ಧ ಕಾಲ ನೋಡಿ ರೋಮೆಲನು ತನ್ನ ಮುಖ್ಯ ಧಾಳಿ ಹೂಡುವ ಸಂಭವ ನಿರೀಕ್ಷೆಯಿಂದ ಮೊಂಟಿಗೋಮೆರಿಯವರು ಮುಂದಾಗಿ ಸಾಮೂಹಿಕ ಧಾಳಿಯಾರಂಭಿಸಿದ್ದಾರೆ; ಇದೊಂದು ಸಲ್ಲಕ್ಷಣ, ಅಂತೂ 'ಯುರೋಪು ಆಕ್ರಮಣ'ಕ್ಕೆ ಹೇಳಿಸಿದಷ್ಟು ಮೇಲ್ಮೆಗೈಯ್ಯಾಗಿ ನೋರ್ಮಂಡಿಯಲ್ಲೀಗ ಮಿತ್ರಸೇನಾ ಶಕ್ತಿಯಿಲ್ಲ. ಸಹಬಲ ಮತ್ತು ಅನುಪಮ ಯೋಧಪ್ರವೃತ್ತಿಯ ನಾಜಿಗಳ ಪ್ರತಿಭಟನಾ ದಳಗಳ ಇದಿರಲ್ಲಿ ಮಿತ್ರರ ಸೇನೆಗಳಿನ್ನೀಗ ಅಗಾಧ, ಅಪಾರ, ಎನ್ನುವಂತಿಲ್ಲ. ಫ್ರಾನ್ಸ್ ಕರಾವಳಿಯಲ್ಲಿ ಮಿತ್ರರನ್ನಿಳಿಯಲು ಬಿಟ್ಟದು ಹಿಟ್ಲರನ ದೌರ್ಬಲ್ಯಕ್ಕೊಂದು ನಿದರ್ಶನವಾದರೆ, ನೋರ್ಮಂಡಿಯಲ್ಲಿ ಅವರನ್ನಿಂತಹ ಸೇನಾ ಸುಳಿಯಲ್ಲಿ ಸಿಕ್ಕಿಸಿರುವದು ಅವನ ಪ್ರಾಬಲ್ಯದ್ಯೋತಕ. ನ್ಯೂಯೋರ್ಕಿನಿಂದ ಹೊರಬಿದ್ದಿರುವ ಸಂದೇಹದಂತೆ ಆಕ್ರಮಣ ವಿಜಯಗೊಂಡಿತೆನ್ನಬೇಕಾದರೆ ಇನ್ನೊಂದು ಐದು ವಾರಗಳ ಹೋರಾಟವನ್ನಾದರೂ ನೋಡಿಕೊಳ್ಳಬೇಕು.

ಅಪೂರ್ವ ಘಟನೆಗಳು.

ಮುಖ್ಯ ಸೇನಾನಿ ಜನರಲ್ ಈಸನೋವರರು ಹತ್ತೇ ದಿನಗಳಲ್ಲಿ ಎರಡು ಬಾರಿ ನೋರ್ಮಂಡಿಗೆ ಧಾವಿಸಿ ಹೋರಾಟರಂಗಗಳ ಪ್ರತ್ಯಕ್ಷ ಪರೀಕ್ಷೆ ನಡಿಸಿಬಂದಿದ್ದಾರೆ. ಚರಿತ್ರಾರ್ಹ ಘಟನೆಯೆಂದರೆ ಚಕ್ರವರ್ತಿಗಳ ರಣರಂಗದರ್ಶನ. ಫ್ರಾನ್ಸ್ ಆಕ್ರಮಣ ದಿನ ಧಾಳೀ ಹಡಗಗಳಿಗೆ ಮಾರ್ಗದರ್ಶಿಯಾಗಿ ಹೋಗಿದ್ದ 'ಅರೆತುಸಾ' ಕ್ರ್ಯೂಸರ್ ಹಡಗವನ್ನು ಇದೇ ತಾ 16 ರಲ್ಲಿ ಹತ್ತಿ ಆರನೇ ಜೋರ್ಜರು ನೋರ್ಮಂಡಿಗಿಳಿದು ಮೊಂಟಿಗೋಮರಿಯರ ಮುಖ್ಯ ಕಾರ್ಯಾಲಯಕ್ಕೆ ಬಂದಾಗ ಅವರ ಪ್ರೀತಿಯ 'ಮೋಂಟಿ' ಮುಂದೆಬಂದು 'ಗುಡ್‌ಮೋರ್ನಿಂಗ್ ಯುವರ್ ಮೆಜೆಸ್ಟಿ. ಫ್ರಾನ್ಸಿಗೆ ತಮಗ ಸುಸ್ವಾಗತ" ಎಂ ಕೈಕುಲುಕಿದರು. ರಾಜರು ಮೋಂಟಿಯೊಡನೆ ಔತಣತೀರಿಸಿ, ಭೀಕರ ಹೋರಾಟ ನಡೆಯುತ್ತಿರುವ ಸುಮಾರು ಆರು ಮೈಲು ದ್ವಾದ ರಣರಂಗವನ್ನು ಬಹಿರಂಗವಾಗಿ ಸಂದರ್ಶಿಸಿ 'ಅರೆತುಸಾ' ಏರಿ ಹಿಂದಿರುಗಿದರು. ಇಂಗ್ಲೆಂಡಿನ ಮಕುಟಧಾರಿಯೊಬ್ಬನು ತನ್ನ ಯುದ್ಧ ಸೇನೆಗಳನ್ನು ಪರೀಕ್ಷಿಸಲು ನೋರ್ಮಂಡಿ ನೆಲದಲ್ಲಿ ಹೆಜ್ಜೆಯೂರಿದುದು ಕಳೆದ ನಾಲ್ಕು ಶತಮಾನಗಳಿಂದ ಇದೇ ಮೊದಲ ಬಾರಿಯಂತೆ. ಫ್ರಾನ್ಸ್ ರಣರಂಗಕ್ಕೆ ಭೇಟಿಕೊಟ್ಟು ಬಂದ ಪ್ರಧಾನಿ ಚರ್ಚಿಲ್ಲರ ವರ್ತನೆಯು ಪಾರ್ಲಿಮೆಂಟಿನಲ್ಲಿ ಕಠಿಣವಾಗಿ ಟೀಕಿಸಲ್ಪಟ್ಟಿತು. ಕೇಪ್ಟನ್ ಕನ್ನಿಂಗಾವ್ ರೀಡರು 'ಅನಗತ್ಯವಾಗಿ ಪ್ರಾಣಾಪಾಯ ತಂದುಕೊಳ್ಳುವ ಚರ್ಚಿಲ್ಲರ ವರ್ತನೆ ಖಂಡನೀಯ. ಅವರಿಗೇನಾದರೂ ಸಂಭವಿಸಿದಲ್ಲಿ ಪರಿಣಾಮ ವಿಪರೀತವಾದೀತು. ಸಿಗರ್ ಧಾರಿ ಚರ್ಚಿಲ್ಲರೆಂದರೆ ಅಭೇದ್ಯರೆಂದು ಯಾರೂ ತಿಳಿದುಕೊಳ್ಳಬಾರದು. ಅವರಿಗಿಂತ ದೊಡ್ಡದಾದ ಮತ್ತೊಂದು ಗುರಿ ವೈರಿಗಳಿಗಿದ್ದೀತೆ? ಎನ್ನುತ್ತಾ, ಅವರನ್ನು ಫ್ರಾನ್ಸಿಗೆ ಹೋಗಲನುಮತಿ ಕೊಟ್ಟ ಈಸನೋವರರು ದೂಷಣೆಗರ್ಹರೆಂದರು. ಸುದ್ದಿ ಖಾತೆಯ ಮಂತ್ರಿ ಬ್ರೆಂಡೆನ್ ಬೇಕೆನರಿದಕ್ಕೆ ಉತ್ತರಕೊಡುತ್ತಾ "ಯುದ್ಧಕಾಲದಲ್ಲಿ ಅಪಾಯವಾರನ್ನೂ ಬಿಟ್ಟಿಲ್ಲ. ಪ್ರಧಾನಿಗಳು ರಕ್ಷಣಾ ಮಂತ್ರಿಸ್ಥಾನದಲ್ಲಿಯೂ ಇರುವದರಿಂದ ಹಕ್ಕುಪ್ರಕಾರ ಇಂತಹ ಭೇಟಿಕೊಡಬಲ್ಲರು. ಅವರೀ ಯುದ್ಧದಲ್ಲಿ ಈ ಮೊದಲೂ ಅಪಾಯಗಳನ್ನು ದಾಟಿದ್ದಾರೆ. ಇನ್ನೂ ಹಲವನ್ನು ದಾಟಬಹುದು" ಎಂದರು.

ನಿಮಗೆ ಯಾವುದು ಅವಶ್ಯಕ?



ರೈಲ್ವೆಯವರಿಗೆ ಈಗ ಕೆಲಸವು ಮಿತಿಮೀರಿರುವದರಿಂದ, ಅವರು ಜನರಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವದು ಮತ್ತು ಯುದ್ಧಕ್ಕೆ ಪೂರ್ವದಲ್ಲಿದ್ದಹಾಗೆ ಜನರಿಗೆ ಪ್ರಯಾಣದ ಸೌಕರ್ಯವನ್ನು ಒದಗಿಸಿಕೊಡುವದು ಇವೆರಡರ ಭರವಸೆಯನ್ನು ಕೊಡುವದು ಅವರಿಗೆ ಸಾಧ್ಯವಿಲ್ಲ.

ಜನರು ಇವೆರಡರೊಳಗೆ ಯಾವದಾದರೊಂದನ್ನು ಪಡೆಯಬಹುದೇ ಹೊರತು ಎರಡನ್ನೂ ಪಡೆಯಲಾರರು. ಆದರೆ, ಆಹಾರಪದಾರ್ಥ, ಬಟ್ಟೆ, ಸಾದೆ ಮುಂತಾದ ಉಪಯುಕ್ತ ಸಾಮಗ್ರಿಗಳನ್ನು ಒದಗಿಸಿಕೊಡುವದು, ಪ್ರಯಾಣದ ಸೌಕರ್ಯವನ್ನು ಒದಗಿಸಿಕೊಡುವದಕ್ಕಿಂತಲೂ ಮುಖ್ಯವಾದದ್ದೆಂಬುದು ಎಲ್ಲರಿಗೂ ತಿಳಿದ ವಿಷಯವೆ. ನೀವು ಎಂದಾದರೂ ಆಹಾರ ಸಾಮಗ್ರಿಗಳು ಕೊರತೆಯಿರುವ ಪ್ರದೇಶದಲ್ಲಿ ಇದ್ದಿದ್ದರೆ, ಆ ಪ್ರದೇಶಕ್ಕೆ ಹಸಿದಿರುವ ಜನರಿಗಾಗಿ ಸಾವಿರಾರು ಮಣ ಅತ್ಯಾವಶ್ಯಕವಾದ ಆಹಾರಪದಾರ್ಥಗಳಿಂದ ತುಂಬಿ ಬರುತ್ತಿರುವ ರೈಲುಗಾಡಿಗಳು ಅಲ್ಲಿಯ ಜನರಿಗೆ ಉಂಟುಮಾಡತಕ್ಕ ಪರಿಣಾಮವು ಏನೆಂಬುದು ನಿಮ್ಮ ಅನುಭವಕ್ಕೆ ಬರುವದು.

ಹೌದು! ಜನರಿಗೆ ಪ್ರಯಾಣವು ಅಷ್ಟು ಮುಖ್ಯವಾದದ್ದಲ್ಲ. ಆದರಿಂದಲೇ ಆಹಾರ ಪದಾರ್ಥಗಳಿಗಾಗಿ ಪ್ಯಾಸೆಂಜರ್ ಗಾಡಿಗಳು ಕಡಮೆಯಾಗಿರುತ್ತವೆ ಈ ಕಾರಣದಿಂದಲೇ ಈಗಿನ ಪ್ರಯಾಣದಲ್ಲಿ ಅಷ್ಟು ಪ್ರಯಾಸ ಮತ್ತು ತೊಂದರೆ. ಆದು ಕಾರಣ ನೀವು ರೈಲ್ವೆಯವರಿಗೆ ಮುಖ್ಯತರವಾದ ಕೆಲಸದಲ್ಲಿ ನೆರವಾಗುವಿರಾದರೆ, ನೀವು ನಿಮ್ಮ ಮನೆಗಳಲ್ಲಿಯೇ ಉಳಿಯಬೇಕು.

ಕಡಮೆಯಾಗಿ ಪ್ರಯಾಣಮಾಡಿರಿ

AAA 683 KN

The Pangal Nayak Bank Limited.

(Incorporated in 1920)

Registered Office Court Road, UDIPI

Branches at— Udipi, Mangalore, Katapadi, Kanhangadi, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices

15th April 1944

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

THE VIJAYA BANK, LTD.

Head office: **MANGALORE.**

Glad to announce that a Branch of the Bank has been opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ. 15-6-44ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿರುವುದು

ದಿ ವಿಜಯಾ ಬೇಂಕ್ ಲಿಮಿಟೆಡ್

REGD

ಅಮೃತಾಂಜನ ತಲೆವೇದನ, ಶಿರೋವೇದನ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಸ್ನಾಯುಗಳು ಬಾವು ಕೊಳ್ಳುವದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೊಣಕಾಲು ವೇದನೆ ಎಲ್ಲಾ ರೋಗಗಳಿಗೂ ಸಿದ್ಧೌ

ಸರ್ವಾಂಗಶುದ್ಧಿ ಮದ್ದು ಸಕ ಸಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಪ್ರಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. **1-8-0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2-8-0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಬೊಂಬಾಯಿ

ಚೀಫ್ ಏಜನ್ಸಿ ಆಫೀಸು:— ಉಡುಪಿ.

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ನಿಮ್ಮ ಮತ್ತು ನಿಮ್ಮ ಕುಟುಂಬದ ಬಾವೀ ಕಲ್ಯಾಣಕ್ಕಾಗಿ.

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

ಪಿ. ಡಿ. ನಾನಯ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Co. Ltd., Bombay.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಸಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5-0-0 ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕವಳದಾರ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನು ನಿರ್ಧರಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ **ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು, ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ **ಕೊಡಿಯಾಲಬೈಲು, ದ. ಕ**

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. of Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M 3618.

ವಾರ್ಷಿಕ ಚಂದಾ ರೂ. —8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೪೩

FOUNDER
Sri. A. B. Shetty.

Vol. 24 No. 43

NAVAYUGA— Kannada Weekly —UDIPI, S. I.

ಉಡುಪಿ • 29—6—1944 • ಮಂಗಳೂರು.

1944ನೇ ಜನವರಿಯಿಂದ
ಮೂರನೆ ಸಂಪುಟಾರಂಭ
ವಾಗಿದೆ.

ಪ್ರಕಾಶಿನಿ

ಪುರೋಗಾಮಿ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ. 3-0-0
ಬಿಡಿ ಪ್ರತಿಗೆ 0-4-0
ಮಾದರಿ ಪ್ರತಿಗೆ ಒಂದಾಣೆ
ಸ್ಟಾಂಪಿನೊಂದಿಗೆ ಬರೆಯುವುದು:

'PRAKASHINI'
NAVAYUGA PRESS
UDIPI

ANTARANGA
UDIPI

ಅಖಿಲ ಕರ್ನಾಟಕದ
ಹೊಸ ಮಾದರಿಯ
ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ.

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Estd 1908]
The "Bombay Life" Bldg.,
UDIPI, S. K.

Offices and Agencies throughout South India.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧-ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ:—ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕೆಂದು ವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurv la Ousbadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ, ಕ್ಯಾಟೆಲಾಗ್ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು.
ಉಡುಪಿ ಏಜಂಟರು:— ನವಭಾರತ ಬುಕ್ ಡಿಪೋ

ಕತೆ ಕಾದಂಬರಿಗಳು—ಕವನ,—ನಾಟಕಗಳು
ಯಾವ ಪುಸ್ತಕ ಬೇಕಾದರೂ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಗೋಸ್ತು ಗಲಭೆಗೆ ಯಾರು ಹೊಣೆ?

ಗಾಂಧೀ ಹೃದಯದೊಂದು ಸ್ಫೋಟದಂತಿರುವ ಉಜ್ವಲ ಹೇಳಿಕೆ!

‘ಗಾಂಧೀ–ವೇವೆಲ್ ಪತ್ರವ್ಯವಹಾರ’ ಗಳನ್ನು (ನಮ್ಮ ಕಳೆದ ವಾರದ ಸಂಚಿಕೆಯಲ್ಲಿ ಬಂದಿತ್ತು) ಗಾಂಧೀಜೀ ಪ್ರಕಟಣೆಗೆ ಕೊಟ್ಟುದರಿಂದ, ಸರಕಾರಕ್ಕೆ ಸ್ಪರ್ಧೆಯು ಸ್ಫೂರ್ತಿಮೂಡಿ, ಅದೀಗ 1942ನೇ ಆಗೋಸ್ತಿನಿಂದ 1944ನೇ ಎಪ್ರಿಲ್ ವರೆಗೆ ಗಾಂಧೀ ಮತ್ತು ಸರಕಾರಗಳೊಳಗೆ ನಡೆದಿದ್ದ ಎಲ್ಲಾ ಪತ್ರವ್ಯವಹಾರಗಳನ್ನೂ ಬೆಳಕಿಗೆ ಹಾಕಿದೆ. ಇವುಗಳಲ್ಲಿ ಒಂದು ಕಡೆ ಗಾಂಧೀಜೀ-ಇನ್ನೊಂದು ಕಡೆ ಲೋರ್ಡ್ ಲಿನ್‌ಲಿತ್‌ಗೋ, ಲೋರ್ಡ್ ವೇವೆಲ್, ಲೋರ್ಡ್ ಸಾಮುವೇಲ್ ಮತ್ತು ಹಿಂದೀ ಸರಕಾರದ ಗೃಹಖಾತೆಯು ಪರಸ್ಪರ ಎಸೆದಾಡಿಕೊಂಡ ಪತ್ರಾಸ್ತ್ರ, ಪ್ರತ್ಯಾಸ್ತ್ರಗಳೆಲ್ಲಾ ಇವೆ. ಈ ಪೈಕಿ ಹಿಂದೀ ಸರಕಾರವು ಪ್ರಕಟಿಸಿದ್ದ ‘42-43ರ ಗಲಭೆಗಳಿಗೆ ಕಾಂಗ್ರೆಸ್ ಹೊಣೆ’ ಎಂಬ ಪುಸ್ತಕಕ್ಕೆ ಮಹಾತ್ಮಾಜೀ ಕೊಟ್ಟಿದ್ದ ಉತ್ತರವು, ಹಿಂದುಸ್ಥಾನದ ಸಮಸ್ಯೆ-ಪ್ರಪಂಚದ ಪ್ರಶ್ನೆಯಾಗಿರುವ ಪ್ರಾಮುಖ್ಯವಾದವೊಂದರ ಸ್ಪಷ್ಟೀಕರಣವಾದ್ದರಿಂದ ಇಲ್ಲಿ ಕೊಟ್ಟಿದ್ದೇನೆ. ಸರಕಾರವು ಕಾಂಗ್ರೆಸಿನ ಮೇಲೆ ಹೊರಿಸಿರುವ ಪ್ರತಿಯೊಂದು ಆರೋಪಕ್ಕೂ ಸಯುಕ್ತ, ಸಕಾರಣ ಹಾಗೂ ಸವಿವರ ಉತ್ತರವೀಯುತ್ತಾ ಕೊನೆಯ ಭಾಗದಲ್ಲಿ ಸತ್ಯಾಗ್ರಹೀ ಗಾಂಧಿ ಅಂತಃಕರಣಪೂರ್ವಕ ಬರೆಯುತ್ತಾರೆ:—

ಸರಕಾರದ ಆಪಾದನೆ

‘ಗಲಭೆಯನ್ನು ನೋಡಬೇಕಾದ ತೀರಾ ಸಹಜವಾದ ವಿಧಾನವೆಂದರೆ, ದಸ್ತಗಿರಿಗಳ ನಂತರವೇ ಅದರ ಸ್ಫೋಟವಾಗಿದೆ –ಆದ್ದರಿಂದ ಅದೊಂದೇ ಅದರ ಹೇತುವಾಗಿದೆ, ಸರಕಾರೀ ಆಪಾದನೆಗಳು ಆ ಪುಸ್ತಕದ ಹೆಸರೇ ಹೇಳುತ್ತಿರುವಂತೆ, ಹೊಣೆಗಾರಿಕೆಯನ್ನು ಕಾಂಗ್ರೆಸಿನ ಮೇಲೆ ಹಾಕಬೇಕೆಂಬ ಉದ್ದೇಶವಿಟ್ಟುಕೊಂಡೇ ಜೋಡಿಸಲ್ಪಟ್ಟಿವೆ. ನನಗೆ ಮನವರಿಕೆಯಾದ ಅದರ ವಾದಸರಣಿ ಹೀಗೆ:-ನಾನು ಬ್ರಿಟಿಷ್ ಪಲಾಯನಕ್ಕಾಗಿ ಆ ಸುಪ್ರಸಿದ್ಧ ‘ಕ್ವಿಟ್ ಇಂಡಿಯಾ’ ಘೋಷಣೆಯನ್ನು ಮೊದಲಬಾರಿ ಆರಂಭಿಸಿದಂದಿನಿಂದ, ಅಂದರೆ 1942ನೇ ಎಪ್ರಿಲಿನಿಂದಲೇ, ಪ್ರಥಮತಃ ನಾನು, ಆ ಮೇಲೆ ಕಾಂಗ್ರೆಸು ಸಾಮೂಹಿಕ ಚಳವಳಕ್ಕೆ ಪೂರ್ವರಂಗವನ್ನು ತಯಾರಿಸುತಿದ್ದೆವು. ಸಾಮೂಹಿಕ ಚಳವಳವು ಹಿಂಸೆಯಲ್ಲಿ ಪರ್ಯವಸಾನಗೊಳ್ಳಲೇಬೇಕು. ನಾನು ಮತ್ತು ನನ್ನ ಅನುಯಾಯಿ ಕಾಂಗ್ರೆಸಿಗರು ಅಂತಹ ಹಿಂಸೆಯ ಆವಿರ್ಭಾವವನ್ನು ಅಪೇಕ್ಷಿಸಿದ್ದೆವು ಮುಖಂಡರು ಅದನ್ನೇ ಬೋಧಿಸುತಿದ್ದರು. ಆದ್ದರಿಂದ ಹೀಗಾದ [illegible] ಗಲಭೆಗಳು ನಿರ್ಮಾಣವಾಗುವದು ಖಾತ್ರಿಯಿದ್ದಿತು. ಅಂದಿನ ದಸ್ತಗಿರಿಗಳು ಈ ಹಿಂಸಾತ್ಮಕ ಚಳವಳವನ್ನು ಮುಂದಾಗಿ ನಿರೀಕ್ಷಿಸಿ, ಅದರ ಚಿಗುರನ್ನೇ ಚಿವುಟಿಬಿಟ್ಟವು—ಸರಕಾರಿ ಆಪಾದನೆಯ ಸಾರಾಂಶವದು.

ಸತ್ಯಸ್ಥಿತಿ.

ಬ್ರಿಟಿಷರು ಬಿಡಾರ ಕೀಳಬೇಕೆಂಬ ನನ್ನ ಸೂಚನೆಯನ್ವಯ ಯಾವುದೊಂದು ಸಮೂಹಿಕ ಚಳವಳದ ಕ್ಷೇತ್ರ ತಯಾರಿಯಾಗಲೀ ಅದರ ಸಂಕಲ್ಪವಾಗಲೀ ಇರಲಿಲ್ಲವೆಂಬುದನ್ನು ಖಚಿತಗೊಳಿಸಲು ನಾನು ಪ್ರಯತ್ನಿಸಿದ್ದೇನೆ ಹಿಂಸೆಯ ಉದ್ದೇಶವು ನನಗಾಗಲೀ ಬೇರಾವನೊಬ್ಬ ಕಾಂಗ್ರೆಸ್ ಮುಖಂಡನಿಗಾಗಲೀ ಇರಲಿಲ್ಲ –ಕಾಂಗ್ರೆಸಿಗರೇನಾದರೂ ಹಿಂಸಾಬದ್ಧರಾದರೆ ನಾನವರ ನಡುವೆ ಬದುಕಿ ಉಳಿಯಲಾರೆನೆಂದು ಸಾರಿದ್ದೇನೆ-ಸಾಮೂಹಿಕ ಚಳವಳವನ್ನು ನಾನು ಆರಂಭಿಸಿದುದೇ ಇಲ್ಲ-ಅದನ್ನಾರಂಭಿಸುವ ಏಕಾಧಿಕಾರವಿದ್ದುದು ನನಗೆ ಮಾತ್ರ-ನಾನು ಸರಕಾರದೊಡನೆ ಸಂಧಾನ ನಡೆಸುವ ಸಂಕಲ್ಪದಲ್ಲಿದ್ದೆ–ಆ ಸಂಧಾನವು ನಿಷ್ಫಲವಾದರೆ ಆ ಮೇಲೆಯೇ ನಾನು ಚಳವಳವಾರಂಭಿಸಲಿದ್ದೆ-ಈ ಸಂಧಾನ ಯತ್ನಕ್ಕಾಗಿ ನಾನು ‘ಎರಡು ಅಥವಾ ಮೂರು ವಾರಗಳ ಅವಧಿ ವಿರಾಮ’ ವನ್ನು ಕೂಡಾ ಸೂಚಿಸಿದ್ದೆ. ಹೀಗಾಗಿ ಅಂದಿನ ದಸ್ತಗಿರಿಗಳಾಗದಿರುತ್ತಿದ್ದರೆ, ಆಗೋಸ್ತು 9 ಮತ್ತು ಅನಂತರ ನಡೆದ ಗಲಭೆಗಳೆಂದಿಗೂ ಸಂಭವಿಸುತ್ತಿರಲಿಲ್ಲವೆಂಬುದು ಸ್ಪಷ್ಟ. ಪ್ರಥಮತಃ ಸಂಧಾನವನ್ನು ಸಾಧ್ಯಗೊಳಿಸುವದಕ್ಕಾಗಿ ನಾನು ನನ್ನ ಶಕ್ತಿಯ ಪ್ರತಿಯೊಂದಂಶವನ್ನೂ ವ್ಯಯಿಸಲಿದ್ದೆ; ಎರಡನೆಯದಾಗಿ, ಸಂಧಾನದಲ್ಲಿ ಪರಾಭವಗೊಂಡಾಗ ಗಲಭೆಗಳಾಗದಂತೆ ನೋಡುತ್ತಿದ್ದೆ. ಗೊಂದಲಗಳನ್ನು ದಮನಿಸಲು ಕಳೆದ ಆಗೋಸ್ತಿನಲ್ಲಿದ್ದ ಸರಕಾರದ ಶಕ್ತಿಯು ಆ ಮೇಲೇನೂ ಕಡಿಮೆಯಾಗುತ್ತಿದ್ದಿಲ್ಲ ಹಾಗೆ ಮಾಡುತ್ತಿದ್ದರೆ ನನ್ನ ಮತ್ತು ಕಾಂಗ್ರೆಸಿನ ಮೇಲೆ ಸಾಕಾದಷ್ಟು ಕಾರಣಗಳು ಮಾತ್ರ ಆದಕ್ಕೆ ದೊರಕುತಿದ್ದುವು.

ಸರಕಾರದ ಆದ್ಯ ಕರ್ತವ್ಯವೇನಿತ್ತು?

ನಾನು ಕಾರ್ಯ ಕೈಕೊಳ್ಳುವ ಮೊದಲು ಅ. ಭಾ. ಕಾ. ಸಮಿತಿ ಸಭೆಯಲ್ಲಿ ಕಾಂಗ್ರೆಸ್ ಧುರೀಣರು ಮತ್ತು ನಾನು ಕೊಟ್ಟಿದ್ದ ಭಾಷಣಗಳನ್ನಭ್ಯಾಸಿಸಿ ನೋಡುವದು ಸರಕಾರದ ಆದ್ಯ ಕರ್ತವ್ಯವಿತ್ತು. ಚಳವಳವು ಅಹಿಂಸಾತ್ಮಕವಾಗಿರಬೇಕೆಂದೇ ಕಾಂಗ್ರೆಸ್ ಪ್ರಮುಖರ ಬಯಕೆಯಿದ್ದಿತು. ಯಾಕೆಂದರೆ, ಸದ್ಯಸ್ಥಿತಿಯಲ್ಲಿ ಸರ್ವಶಕ್ತಿ, ಶಸ್ತ್ರೋಪಕರಣ ಸಜ್ಜಿತವಾದ ಒಂದು ಸರಕಾರದೊಡನೆ ಹಿಂಸಾತ್ಮಕವಾಗಿ ಸ್ಪರ್ಧಿಸಿ ಗೆಲ್ಲುವದಸಾಧ್ಯವೆಂದು ಅವರಿಗೆ ಗೊತ್ತಿತ್ತು. ಆದ್ದರಿಂದ ಕಾಂಗ್ರೆಸಿಗರಿರಲಿ, ಕಾಂಗ್ರೆಸೇತರರಿರಲಿ, ಜನರಿಂದೇನಾದರೂ ಹಿಂಸೆ ನಡೆದುದಿದ್ದರೆ, ಅದು ಧುರೀಣರ ಇಚ್ಛೆಗೆ ವಿರುದ್ಧವಾಗಿಯೇ ನಡೆದಿದೆ. ಈ ಕುರಿತು ಸರಕಾರವು ಭಿನ್ನಾಭಿಪ್ರಾಯಪಡುವದಾದರೆ, ನಿಷ್ಪಕ್ಷಪಾತಿ ವಿಚಾರಣಾ ಸಮಿತಿಯೊಂದರ ಮುಂದೆ ಸಂದೇಹವುಳಿಯದ ರೀತಿಯಲ್ಲಿ ಅದು ರುಜುವಾತಾಗಬೇಕು. ಆದರೆ ಕಾರಣವು ಸುಸ್ಪಷ್ಟವಿರುವಾಗ, ಆ ಜವಾಬ್ದಾರಿಯನ್ನೆತ್ತಿ ಕಾಂಗ್ರೆಸಿನ ತಲೆಯ ಮೇಲೇಕೆ ಹಾಕಬೇಕು? ದೇಶವ್ಯಾಪೀ ದಸ್ತಗಿರಿಗಳನ್ನು ಕೈಗೊಂಡ ಸರಕಾರದ ಅಂದಿನ ವರ್ತನೆಯೆಷ್ಟು ಹಿಂಸಾತ್ಮಕವಾಗಿದ್ದಿತೆಂದರೆ, ಕಾಂಗ್ರೆಸಿನೊಡನೆ ಸಹಾನುಭೂತಿಯಿದ್ದ ಜನತೆಯ ಸಹನೆಯೆಲ್ಲಾ ಬರಿದಾಯಿತು. ಹೀಗೆ ಜನತೆಯು ಸ್ವನಿಯಂತ್ರಣ ಕಳೆದುಕೊಂಡುದರಲ್ಲಿ ಕಾಂಗ್ರೆಸಿನ ಒಳಸಂಚು ಗೋಚರಿಸದು; ಬದಲಿಗೆ ಮಾನವನ ಸ್ವಭಾವಿಕ ತಾಳ್ಮೆಗೂ ಒಂದು ಮಿತಿಯಿದೆ ಎಂಬುದರ ಸೂಚನೆಯದು. ಸರಕಾರೀ ಕೃತ್ಯವು ಸ್ವಾಭಾವಿಕ ಮಾನವೀಯ ತಾಳ್ಮೆಗೆ ಮೀರಿ ಇದ್ದಾಗ ಅದನ್ನನುಸರಿಸಿ ನಡೆದ ಸ್ಫೋಟಗಳಿಗೆಲ್ಲಾ ಆ ಕಾರ್ಯಕರ್ತರೇ ಜವಾಬ್ದಾರರು. ದಸ್ತಗಿರಿಗಳ ಆವಶ್ಯಕತೆಯಿತ್ತೆಂದು ಸರಕಾರವನ್ನಬಹುದು. ಹಾಗಿದ್ದರೆ, ತಮ್ಮೀ ಕೆಲಸದ ಪರಿಣಾಮವಾಗಿ ಘಟಿಸಿದವುಗಳ ಹೊಣೆ ಹೊರಲಿಕ್ಕೆ ಮಾತ್ರ ಸರಕಾರವೇಕೆ ಲಜ್ಜಿಸಬೇಕು? ಕಾನೂನೆಂದೇ ತನ್ನ ಬುದ್ಧಿಮಾರ್ಗವೆಂದು ತಿಳಿದಿರುವ ಸರಕಾರಕ್ಕೆ ತನ್ನ ನಡತೆಯನ್ನು ಸಮರ್ಥಿಸಿಕೊಳ್ಳುವ ಆವಶ್ಯಕತೆಯೇನಿದೆ ಎಂಬುದೇ ನನಗೊಂದು ಆಶ್ಚರ್ಯ.

ಸರ್ವಾಧಿಕಾರೀ ಸರಕಾರ

ಇಲ್ಲೀಗ ಸ್ಥೂಲವಾಗಿ ಸರಕಾರೀ ಪದ್ಧತಿಯನ್ನು ಅವಲೋಕಿಸೋಣ. ಪುರಾತನ ನಾಗರೀಕತೆಯ ಸುಮಾರು 400 ಮಿಲಿಯ ಜನರು ವೈಸರಾಯಿ ಮತ್ತು ಗವರ್ನರ್ ಜನರಲ್ ಎಂದು ಕರೆಯಲ್ಪಡುವ ಓರ್ವ ಬ್ರಿಟಿಷ್ ಪ್ರತಿನಿಧಿಯಿಂದಾಳಲ್ಪಡುತ್ತಿದ್ದಾರೆ. ಅವನಿಗೆ ಸಹಾಯಕರಾಗಿ ಕಲೆಕ್ಟರ್ ನಾಮಾಂಕಿತ 250 ಅಧಿಕಾರಿಗಳಿದ್ದು, ಲಕ್ಷ್ಯಪೂರ್ವಕವಾಗಿ ಜನತೆಯಿಂದ ಬೇರ್ಪಡಿಸಿ,ಬ್ರಿಟಿಷರಿಂದಲೇತರಬೇತುಗೊಳಿಸಲ್ಪಟ್ಟ ಬಹುಸಂಖ್ಯಾಕ ಹಿಂದೀ ಯೋಧರೂ ಇರುವ ಪ್ರಬಲ ಬ್ರಿಟಿಷ್ ಸೇನೆಯು ಇವರ ಬೆಂಬಲಕ್ಕಿದೆ ವೈಸರಾಯಿಗೆ ಇಂಗ್ಲಾಂಡಿನ ಚಕ್ರವರ್ತಿಗಿಂತಲೂ ಹೆಚ್ಚಿನ ಅಧಿಕಾರವಿದೆ. ನನಗೆ ತಿಳಿದ ಮಟ್ಟಿಗೆ ಇಂತಹ ಅಧಿಕಾರವು ಜಗತ್ತಿನ ಇನ್ನಾವನೊಬ್ಬ ಮನುಷ್ಯನಿಗೂ ಇಲ್ಲ. ಕಲೆಕ್ಟರನೆಂದರೆ ತನ್ನ ಅಧಿಕಾರದ ಗಡಿಯೊಳಗಿನ ಸಣ್ಣ ವೈಸರಾಯಿ. ಅವರ ಹೆಸರೇ ಹೇಳುತ್ತಿರುವಂತೆ ಮುಖ್ಯವಾಗಿ, ಅವರೆಲ್ಲಾ ತಮ್ಮ ಜಿಲ್ಲೆಯ ಕಂದಾಯ ಸಂಗ್ರಹಾಧಿಕಾರಿಗಳು; ಅದರೊಂದಿಗೆ ‘ಮೆಜಿಸ್ಟ್ರೇಟ್’ಅಧಿಕಾರವೂ ಅವರಿಗಿದೆ. ತಮಗೆ ಅಗತ್ಯವೆಂದು ತೋರಿದಾಗಲೆಲ್ಲಾ ಅವರು ತಮ್ಮ ಸಹಾಯಕ್ಕೆ ಸೈನ್ಯ ಕರೆಸಿಕೊಳ್ಳಬಲ್ಲರು. ಮತ್ತು ತಮ್ಮ ಸರಹದ್ದಿನೊಳಗಿನ ‘ಚೆಫ್ತಾನ’ರಿಗೆ ರಾಜಕೀಯ ಏಜಂಟರಾಗಿದ್ದು, ಅವರ ಮೇಲಧಿದೇವತೆಗಳೂ ಇವರೇ ಆಗಿರುವರು.

ಪ್ರಜಾಸತ್ತಾತ್ಮಕ ಕಾಂಗ್ರೆಸು

ಸಂಖ್ಯಾಬಲದಿಂದಲ್ಲ, ನಿರ್ಧಾರಪೂರ್ವಕ ಅಹಿಂಸೆಯನ್ನೇ ತನ್ನ ಪ್ರಯೋಗವಾಗಿ ಸ್ವೀಕರಿಸಿಕೊಂಡಿರುವದರಿಂದ, ಪರಿಶುದ್ಧ ಪ್ರಜಾಸತ್ತಾತ್ಮಕ ಸಂಸ್ಥೆಯಾಗಿರುವ ಕಾಂಗ್ರೆಸನ್ನೀಗ ಮೇಲಿನದರೊಡನೆ ಹೋಲಿಸಿ ನೋಡಿರಿ. ಅದು ಜನ್ಮತಃ ಪ್ರಜಾಸತ್ತಾತ್ಮಕ ಸಂಸ್ಥೆಯಾಗಿದ್ದು ಅಖಿಲ ಭಾರತದ ಪ್ರಾತಿನಿಧ್ಯ ವಹಿಸಲು ಹವಣಿಸುತ್ತಿದೆ. ಅದರ ಪ್ರಯತ್ನವೆಷ್ಟೇ ದುರ್ಬಲವಿರಲಿ, ಯಾವ ದೋಷವೇ ಇರಲಿ, ಸುಮಾರು60 ವರುಷಗಳ ತನ್ನ ಆಯುಶ್ಚರಿತ್ರೆಯಲ್ಲಿ ಅದೆಂದೂ, ಶಾಂತಿ ಸ್ವಾತಂತ್ರ್ಯವೆಂಬ ಆ ಉಜ್ವಲ ತಾರೆಯ ಕಡೆಗಿಟ್ಟಿದ್ದ ತನ್ನ ದೃಷ್ಟಿಯನ್ನೋರೆ ಮಾಡಿದುದಿಲ್ಲ. ಕಾಂಗ್ರೆಸು ಪ್ರಜಾಸತ್ತೆಯ ಸ್ಫೂರ್ತಿಯನ್ನು ಕಲಿತುದು ಗ್ರೇಟ್‌ಬ್ರಿಟನಿನಿಂದ. ಇದನ್ನು ಯಾವ ಕಾಂಗ್ರೆಸಿಗನೂ ಅಲ್ಲಗಳೆಯಲಾರ. ಆದರೆ ಅದರ ಮೂಲ ಬೇರು ಹಳೆಯ ಪಂಚಾಯತ್ ಕ್ರಮದಿಂದಾರಿಸಲ್ಪಟ್ಟದ್ದಿದೆ. ನಾಜೀ, ಫೇಸಿಸ್ಟ್ ಅಥವಾ ಜಾಪಾನ್ ಆಳ್ವಿಕೆಯು ಅದಕ್ಕೆಂದಿಗೂ ಸಹನವಾಗದು. ಸ್ವಾತಂತ್ರ್ಯವನ್ನೇ ಜೀವದುಸಿರಾಗಿ ಮಾಡಿಕೊಂಡಿರುವ ಒಂದು ಸಂಸ್ಥೆ–ಸಶಕ್ತವಾಗಿ ಸುಸಂಘಟಿಸಲ್ಪಟ್ಟಿರುವ ಅತಿದೊಡ್ಡ ಸಾಮ್ರಾಜ್ಯದೊಡನೆ ಘರ್ಷಣೆಗೆ ನಿಂತಿರುವ ಸಂಸ್ಥೆ–ಯಾವ ವಿದೇಶೀ ಅಧಿಕಾರವನ್ನಾದರೂ ಕೊನೆಯ ಮನುಷ್ಯನುಳಿಯುವ ವರೆಗೂ ಪ್ರತಿಭಟಿಸುವದು. ಅಹಿಂಸಾತ್ಮಕವಾಗಿರುವವರ ಅದನ್ನು ದಮನಿಸುವದಸದಳ; ಜಯಿಸುವದಸಾಧ್ಯ.

(೭ನೇ ಪುಟ ನೋಡಿರಿ).

38 ವರ್ಷಗಳ ಹಿರಿತನ

1906ನೆ ಇಸವಿ ಜುಲೈ 1ನೇ ತಾರೀಕಿನಲ್ಲಿ ಸ್ಥಾಪಿತವಾಗಿ ಕೆನರಾ ಬ್ಯಾಂಕು ಇಂದಿಗೆ 38 ವರ್ಷ ವಯಸ್ಸು ಹೊಂದಿದೆ. ನಾವು 38 ವರ್ಷ ವಯಸ್ಸಿನವರೆಂಬುದೆ ನೀವು ನಮ್ಮೊಡನೆ ವಹಿವಾಟ ನಡೆಸಲು ಸಾಕಾದ ಕಾರಣವಾಗಲಾರದು.

ಆದರೆ ಈ 38 ವರ್ಷಗಳು ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿವೆ—ಎರಡು ಮಹಾ ಯುದ್ಧಗಳು—ಲೋಕವು ಹಿಂದೆಂದೂ ಕಾಣದ ಆರ್ಥಿಕ ಮುಗ್ಗಟ್ಟು—ಈ ಮೊದಲು ಆಗದ ಬ್ಯಾಂಕುಗಳ ಸಂಧಿಗ್ಧಾವಸ್ಥೆ—ಶೇರು ಮಾರ್ಕೆಟುಗಳ ಕಂಗಾಲಾವಸ್ಥೆ—ಇತ್ಯಾದಿ.

ಒಂದು ಬ್ಯಾಂಕು ಈ ಎಲ್ಲಾ ಭಯಂಕರ ಹಲ್ಲೋಲಗಳಿಂದ ಎದೆಗುಂದದೆ ಪಾರಾಗಿರುವುದಾದರೆ—ಈ ಕಠಿಣ ಅನುಭವಗಳಿಂದ ಪ್ರಯೋಜನವನ್ನೇ ಹೊಂದಿ ತನ್ನ ಪ್ರಾಮುಖ್ಯತೆಯನ್ನೂ ವಿಶಾಲತೆಯನ್ನೂ ಮತ್ತೂ ಬೆಳೆಸಿರುವುದಾದರೆ—ಆ ಬ್ಯಾಂಕೇ ನಿಮ್ಮ ವಿಶ್ವಾಸಕ್ಕೆ ಯೋಗ್ಯವಾದದ್ದು.

ನಾವು ನಮ್ಮ ಹಿರಿತನದಿಂದ ಶ್ರೇಷ್ಠರಾದುದಲ್ಲ,
ನಮ್ಮ ಶ್ರೇಷ್ಠತನದಿಂದ ನಾವು
ಹಿರಿಯರಾಗಿದ್ದೇವೆ.

Estd: 1906. **CANARA BANK, Ltd.**

CHAMPAE'S
Snow & Eastrex
(Sole Distributors for India.)
Sukhananda Stores
Santhekatte, UDIPI, S. K.

ವಾರದ ಹೋರಾಟ—ವಿವಿಧ ರಂಗಗಳಲ್ಲಿ

ಈ ಲೋಕ ಮಹಾಯುದ್ಧ ವೀಗ ಚದುರಂಗವಾಗಿ-ಫ್ರಾನ್ಸ್, ರಶ್ಯಾ, ಇಟಲಿ ಮತ್ತು ಬರ್ಮಾ ಚೀನಾ ಶಾಂತ ಸಮುದ್ರ ರಂಗಗಳಲ್ಲಿ-ಸಾಗಿದೆ. ಈ ಪೈಕಿ ಬಿರುಸಾದ ಹಾಗೂ ಖಾಡಾಖಾಡಿಯ ಸಮರಗಳು ಯುರೋಪಿನ, ಮೊದಲ ಮೂರು ಕ್ಷೇತ್ರಗಳಲ್ಲೇ. ಹಿಟ್ಲರನನ್ನೇ ಗುರಿಯಾಗಿಟ್ಟುಕೊಂಡಿರುವ ಆ ಮೂರು ರಂಗಗಳಲ್ಲೂ ಕಳೆದವಾರ ಮಿತ್ರರ ಕೈಮೇಲಾಗಿದೆ. ಯುದ್ಧ ಸ್ಥಿತಿಯಲ್ಲಿ ಗಣನೀಯ ಮಾರ್ಪಾಟಗಳೂ ಆಗಿವೆ. ಜಾಪಾನರೇ ಕೂಳ್ಳಿಯಾಗಿರುವ ನಾಲ್ಕನೆಯದಾದ ಆಸ್ಯಾ ರಣಾರಂಗದಲ್ಲೂ ಆಂಗ್ಲೋ-ಅಮೆರಿಕಾನರ ವರ್ಚಸ್ಸು ಹೆಚ್ಚಿದೆ.

ಫ್ರಾನ್ಸಿನಲ್ಲಿ

ನಾವು ಕಳೆದ ವಾರ ಆರಂಭವಾಗಿದೆ ಎಂದು ತಿಳಿಸಿದ್ದ ನೋರ್ಮಂಡಿಯ ಚೆರ್ಬೋರ್ಗ್ ಅರ್ಧದ್ವೀಪದ ಚೆರ್ಬೋರ್ಗ್ ಬಂದರದ ಮುತ್ತಿಗೆಯನ್ನೀಗ ಅಮೇರಿಕನ್ ಸೇನೆಗಳು ಪೂರ್ಣಗೊಳಿಸಿವೆ. ಈಗ ಮಿತ್ರಸೇನೆಗಳು ಆ ನಗರದ ಮೇಲೆ ಕಲವು ದಿನಗಳಿಂದ ಪ್ರತ್ಯಕ್ಷ ಹೊಡೆಕವೀಯುತ್ತಿವೆ. ಆ ಪಟ್ಟಣದ ಪೂರ್ವದಿಂದ ಪಶ್ಚಿಮದ ವರೆಗಿನ ಸುಮಾರು ಹತ್ತು ಮೈಲುದ್ದಕ್ಕೆ ಅಮೆರಿಕನ್ ಸೇನೆಗಳೀಯುತ್ತಿರುವ ಕೊನೆಯ ಹೊಡೆತಗಳನ್ನು ಸಹಿಸಿಕೊಂಡು ಅಲ್ಲಿರುವ ನಾಜೀ ಸೇನೆಗಳು ಅಚಲವಾಗಿ ಅವಿಶ್ರಾಂತವಾಗಿ ಪ್ರತಿಭಟಿಸುತ್ತಿವೆ. ಅನಗತ್ಯ ಹಾನಿ ತಪ್ಪಿಸಲಿಕ್ಕಾಗಿ ಯುದ್ಧ ನಿಲ್ಲಿಸುವಂತೆ ಮಿತ್ರ ಸೇನಾನಿಗಳು ಜರ್ಮನರನ್ನು ಕೇಳಿಕೊಂಡಿದ್ದರು. ಆದರೆ 'ಸಾಯುವವನಕವೂ ಸಾಧಿಸಿರಿ' ಎಂದು ರೋಮೆಲ್ ತನ್ನ ಸೇನೆಗಾಜ್ಞೆಯಿತ್ತಿದ್ದಾನೆ. ಚೆರ್ಬೋರ್ಗಿನ ಮೇಲೆ ಪ್ರತ್ಯಕ್ಷ ಧಾಳಿಯಾರಂಭವಾಗುವ ಮೊದಲಿನ ರಾತ್ರಿ, ಅಲ್ಲಿದ್ದ ನಾಜೀ ಸೇನೆಗಳು ಏಳು ... ಗಗಳ ಮೂಲಕ ಪಲಾಯನ ಮಾಡಲು ಪ್ರಯತ್ನಿಸಿದ್ದುವೆಂದೂ, ಆದರದನ್ನು ಮಿತ್ರ ನಾವೆಗಳು ತಪ್ಪಿಸಿಬಿಟ್ಟವೆಂದೂ ಮಿತ್ರರ ವಾರ್ತೆ. ಅಲ್ಲಿ ಜರ್ಮನರೀಗ ಅಸಾಧ್ಯ ಪ್ರತಿಭಟನೆ ಕೊಡುತ್ತಿದ್ದಾರಾದರೂ ಚೆರ್ಬೋರ್ಗ್ ಪತನಕ್ಕಿನ್ನು ಕೆಲವೇ ದಿನಗಳ ಅವಧಿಯೆಂಬುದು ಖಂಡಿತ. ಅದನ್ನು ವಶಪಡಿಸಿಕೊಂಡಾಗ ಮಿತ್ರರು ಫ್ರಾನ್ಸಿನಲ್ಲಿ ಪ್ರಥಮ ಮುಖ್ಯ ವಿಜಯ ಪಡೆದಂತಾಗುವದಲ್ಲದೆ, ಒಂದು ಸರಬರಾಯಿಗನುಕೂಲವಾದ ಬಂದರವು ದೊರೆತು ಯುದ್ಧ ಪ್ರಗತಿಗೂ ಮಿತ್ರರ ಧೈರ್ಯೋತ್ತೇಜನಕ್ಕೂ ಕಾರಣವಾಗುವದು.

ಹಾರುವ ಬೊಂಬುಗಳು

ಪೂರ್ವ ಸಂಕಲ್ಪದಂತೆ ಫ್ರಾನ್ಸ್ ಆಕ್ರಮಣಾರಂಭವಾದೊಡನೆ ಜರ್ಮನರು ಬಹುಸಂಖ್ಯೆಯಲ್ಲಿ ಪ್ರಯೋಗಿಸಿದ ನೂತನಾಸ್ತ್ರ, ಸಾರಥಿ ರಹಿತ ವಿಮಾನಗಳು ಇಂಗ್ಲಾಂಡನ್ನು ಭಯಚಕಿತಗೊಳಿಸಿದ್ದವು. ನೋರ್ಮಂಡಿನ ಸಮರವು ಸಂಧಿಗ್ಧಾವಸ್ಥೆಯಲ್ಲಿರುವಾಗಲೇ ಎಲ್ಲರ ಲಕ್ಷ್ಯವೂ ಈ ಅಗ್ನಿ ಮರಿಗಳಿಂದಾಗಿ ಇಂಗ್ಲಾಂಡಿನ ಕಡೆಗೊಮ್ಮೆ ಸರಿದಿದ್ದಿತು. ಬ್ರಿಟಿಷರೆಷ್ಟೇ ಬಚ್ಚಿಟ್ಟರೂ, ಪ್ರಥಮ ಬಾರಿ ಅವೆಲ್ಲಾ ಜರ್ಮನರ ಬಯಕೆಯನ್ನು ಸಲ್ಲಿಸಿರಬೇಕೆಂಬಷ್ಟು ಲಂಡನಿನಲ್ಲಿ ಹಾಹಾಕಾರವೆದ್ದಿದೆ ಆದರೆ ಅವುಗಳ ಪ್ರಯೋಗಕ್ಕಾಗಿ ಫ್ರಾನ್ಸ್ ಕರಾವಳಿಯಲ್ಲೇ ರಚಿಸಿದ್ದ ಎರಡು ನಿಲ್ದಾಣಗಳನ್ನು ಮಿತ್ರಸೇನೆಗಳೀಗ ವಶಪಡಿಸಿಕೊಂಡಿವೆ. ಇತರ ಕಡೆಗಳಿಗೂ ಬೋಂಬು ಹಾಕಿವೆ. ಈ ನೂತನೋಪಕರಣಗಳನ್ನು ಪ್ರತಿಭಟಿಸುವ ನೂತನ ವಿಧಾನಗಳನ್ನೂ ಬ್ರಿಟಿಷರೀಗ ಕಂಡುಹಿಡಿದಿದ್ದಾರೆ ಎಂದು ಜರ್ಮನರೇ ಒಪ್ಪಿದ್ದಾರೆ. ಹೀಗಾಗಿ ಆ ಮೇಲಿನ ದಿನಗಳಲ್ಲಿ ಈ ವಿಚಿತ್ರ ವಿಪತ್ತು ಬಹಳವಾಗಿ ಕಡಿಮೆಯಾದಂತೆ ಕಾಣುತ್ತಿದೆ.

ರಶ್ಯಾದಲ್ಲಿ

ಜರ್ಮನರು 'ಬಿಳಿ ರಶ್ಯಾ'ದ ರಕ್ಷಣೆಯ ಹೆಬ್ಬಾಗಿಲಾಗಿ ಪ್ರಬಲ ಸನ್ನಾಹದಿಂದ ಹಿಡಿದು ನಿಂತಿರುವ ವಿಟೆಬ್ಸ್ಕ ಕ್ಷೇತ್ರದಲ್ಲಿ ಕೆಂಪುಸೇನೆಯು ನೂತನ ಪ್ರಬಲ ಧಾಳಿಯನಾರಂಭಿಸಿ, ಅದು ಬಲಗೊಳ್ಳುತ್ತಿದೆ ಎಂಬ ವಾರ್ತೆಯು ಈ ವಾರದ ಅತಿಮುಖ್ಯ ಸುದ್ದಿಯೆನ್ನಬಹುದು. ದ್ವಿತೀಯ ರಂಗಕ್ಕೊಂದು ಪುರವಣಿಯಾಗಿ ಸ್ಟಾಲಿನರು ಹೂಡುವ ಮಹಾ ಧಾಳಿಯು ಪೋಲೆಂಡ್ ಅಥವಾ ರುಮೇನಿಯದ ಮೂಲಕವಿರಬಹುದೆಂಬ ಊಹೆಯಿದ್ದಿತು. ಆದರೆ ಕೌಶಲ್ಯಕ ನಿರ್ಮಾಣದ ಕಲಿಪುರುಷನಂತಿರುವ ಸ್ಟಾಲಿನ್, ಇಂದಿನ ವಿಟೆಬ್ಸ್ಕ ಧಾಳಿಯನ್ನೇ ಜರ್ಮನರಿಗೊಂದು ಮಹಾ ಕಂಟಕವಾಗಿ ಬೆಳೆಯಿಸುವ ಸಂಭವವಿದೆ. ಫಿನ್ಲೆಂಡಿನ ಆ ಪ್ರಸಿದ್ಧ ಹಳೆಯ ಮತ್ತು ಹೊಸ ಮೇನರ್‌ಹ್ಯಾಮ್ ಕೋಟೆಯನ್ನು ರಶ್ಯಾನರು ಧ್ವಂಸಗೊಳಿಸಿ, ರಾಜಧಾನಿ ಹೆಲ್ಸಿಂಕಿಯನ್ನಾಹುತಿಗೊಳ್ಳುವದರಲ್ಲಿದ್ದಾರೆ. ಲೋಹ ಸರಬರಾಯಿಯ ಮುಖ್ಯ ಕೇಂದ್ರವಾಗಿ ಉತ್ತರಗಡೆಯಲ್ಲಿರುವ ಪೆಟ್ಸಾಮೋವನ್ನು ರಶ್ಯಾನರು ಬಲಿಗೊಂಡಾರೆಂಬ ಭಯದಿಂದ ಜರ್ಮನ್ ಸೇನೆಯು ಮೇನರ್‌ಹ್ಯಾಮ್ ಕೋಟೆ ಬಿಟ್ಟು ಆ ಕಡೆಗೆ ಸರಿದಿದೆ ಎಂಬ ಊಹೆಯಿದೆ. ಅಂತೂ ಫಿನ್ಲೆಂಡಿನಲ್ಲಿ ಕಠಿಣ ಹೋರಾಟದ ಗಡಿಯನ್ನು ರಶ್ಯಾನರಿಷ್ಟರಲ್ಲೇ ದಾಟಿದ್ದಾರೆನ್ನಬಹುದು. ಫಿನ್ನಿಶ್ ಮಂತ್ರಿಮಂಡಲವು ರಾಜಿಕೊಟ್ಟು 'ಸಂಧಾನ ಮಂಡಲ' ನಿರ್ಮಾಣಗೊಳ್ಳುವದೆಂಬ ವದಂತಿಯಿದ್ದರೂ, ಈ ತನಕ ರಶ್ಯಾನರ ಬದ್ಧದ್ವೇಷಿ ಮಾರ್ಶಲ್ ಮ್ಯಾನರ್‌ಹೇಮರ ಕೈಯಲ್ಲೇ ರಾಜ್ಯಸೂತ್ರವುಳಿದಿದೆ. ಫಿನ್ನಿಶ್ ಸೇನೆಗಳು ರಶ್ಯಾನರ ಪ್ರಗತಿಗಾತಂಕವಾಗುವಂತೆ ಕಾಡ್ಗಿಚ್ಚು ಹಬ್ಬಿಸುವದೇ ಮೊದಲಾದ ವಿಧ್ವಂಸಕಾಚರಣೆ ಕೈಗೊಂಡಿವೆ. (೬ನೇ ಪಟ ನೋಡಿರಿ)



ಹಿಂದೆ ಒಂದಾನೊಂದು ಕಾಲದಲ್ಲಿ

ನಾಲ್ಕಾರು ವರ್ಷಗಳ ಹಿಂದೆ ರೈಲ್ವೇ ಸ್ಟೇಶನ್ನಿಗೆ ನೀವು ಸ್ವಲ್ಪವೇ ಖರ್ಚಿನಿಂದಲೂ ಸುಲಭವಾಗಿಯೂ ಬರಬಹುದಿತ್ತು. ಈಗ ಕುದುರೆ, ಎತ್ತು ಮುಂತಾದ ಗಾಡಿಗಳ ಬಾಡಿಗೆಯು ಹಿಂದೆ ಇದ್ದದ್ದಕ್ಕೆ ನಾಲ್ಕರಷ್ಟು ಹೆಚ್ಚಾಗಿದೆ. ಒಂದು ಕಾಲದಲ್ಲಿ ನಿಮ್ಮ ನಿಮ್ಮ ಟಿಕೆಟ್ಟನ್ನು ತಡವಿಲ್ಲದೆ ಪಡೆಯಬಹುದಿತ್ತು—ಈಗ ಟಿಕೆಟ್ಟನ್ನು ಪಡೆಯಬೇಕಾದರೆ, ವಿಶೇಷ ಶ್ರಮವೂ ಆಗುವ್ವದಲ್ಲದೆ, ಒಂದು ಅರ್ಧಗಂಟೆ ಹೊತ್ತಾದರೂ ಹಿಡಿಯುವುದು. ಒಂದುಕಾಲದಲ್ಲಿ ಕೂಲಿಯವರು ನೀವು ಹೇಳಿದ ಕೆಲಸವನ್ನು ಒಂದು ಅಥವಾ ಅರ್ಧಾಣೆಗೆ ಮಾಡುತ್ತಿದ್ದರು. ಈಗ ಕೂಲಿಗಳು ದೊರೆಯುವುದೇ ಪ್ರಯಾಸ. ಒಂದುಕಾಲದಲ್ಲಿ ನೀವು ನಿಮಗೆ ಇಷ್ಟಬಂದಕಡೆ ರೈಲ್ವೇ ಗಾಡಿಯಲ್ಲಿ ಇಷ್ಟಬಂದ ಸ್ಥಳವನ್ನು ಚುನಾಯಿಸಿಕೊಂಡು ಕೂಡಬಹುದಿತ್ತು.

ಈಗ ರೈಲ್ವೇಗಾಡಿಯ ಒಳಕ್ಕೆ ನೀವು ಪ್ರವೇಶಿಸಬಲ್ಲಿರಾದರೆ, ನೀವು ಅದೃಷ್ಟಶಾಲಿಗಳೇ ಸರಿ. ಅನೇಕ ಸಮಯಗಳಲ್ಲಿ ನಿಮಗೆ ಗಾಡಿಯೇ ತಪ್ಪುವದು. ಒಂದುವೇಳೆ ಗಾಡಿಯಲ್ಲಿ ನಿಮಗೆ ಪ್ರವೇಶ ದೊರೆತರೂ, ಗಂಟೆಗಟ್ಟಲೆ ನೀವು ನಿಂತಿರಲೇಬೇಕಾಗುವದು. ಈ ಪ್ರಯಾಸದಲ್ಲಿಯೂ ಗೊಂದಲದಲ್ಲಿಯೂ ನೀವು ನಿಮ್ಮ ಸಾಮಾನುಗಳನ್ನು ಕಳೆದುಕೊಳ್ಳುವದೂ ಅಲ್ಲದೆ, ನಿಮ್ಮ ಹೆಂಗಸರು ಮಕ್ಕಳು ನಿಮ್ಮಿಂದ ತಪ್ಪಿಸಿಕೊಳ್ಳುವರು. ಹೆಂಗಸರು ಮಕ್ಕಳಿಗೆ ಈಗಿನ ರೈಲುಪ್ರಯಾಣದಲ್ಲಿ ಹಿಂದೆ ಇದ್ದಹಾಗೆ ಸ್ವಲ್ಪವೂ ಸೌಖ್ಯವಿರುವದಿಲ್ಲ.

ವಿವೇಕಿಗಳಾಗಿ ಮುಂದೆ ಕಾಲವು ಯಥಾಸ್ಥಿತಿಗೆ ಬರುವವರೆಗೂ ನೀವೂ ನಿಮ್ಮ ಕುಟುಂಬವೂ ರೈಲ್ವೇ ಪ್ರಯಾಣದ ಹವ್ಯಾಸದಿಂದ ದೂರ ಇರಿ.

ಕಡಮೆಯಾಗಿ ಪ್ರಯಾಣಮಾಡಿರಿ

AA.675.KN

The Canara Banking Corporation Limited.
(Incorporated in British India.)
ESTD: 1906.
Head Office · UDIPI·

ANNOUNCEMENT.

A Branch of the bank has been opened at Tobacco Street, CALICUT on 26-5-44.

ಉಡುಪಿ, ಗುರುವಾರ ೨೯-೬-೧೯೪೪

ಸ್ಪಷ್ಟ ಹಾದಿ.

ಗಾಂಧಿಜೀ ದಸ್ತಗಿರಿಯಾಗಿ ಬಿಡುಗಡೆ ಹೊಂದುವವರೆಗೆ, ಆಗಾಖಾನ್ ಅರಮನೆ ಮತ್ತು ವೈಸರಾಯಿ ಅರಮನೆಗಳೊಳಗೆ ನಡೆದಿದ್ದ ಎಲ್ಲಾ ಪತ್ರವ್ಯವಹಾರಗಳೂ ಈಗ ಬಹಿರಂಗವಾಗಿವೆ. ಕಾಂಗ್ರೆಸ್ ಮತ್ತು ಗಾಂಧಿಜೀಯನ್ನು ಬೀಗಹಾಕಿಟ್ಟು, ಆಗೋಸ್ತು ಗಲಭೆಯ ಎಲ್ಲಾ ಹೊಣೆಯನ್ನೂ ಅವರ ತಲೆಯ ಮೇಲೆ ಹೇರಿದರಾಯಿತೆಂಬ ಸರಕಾರದ ದುರ್ಭಾವನೆಯೂ ಅದರೊಂದಿಗೇನೇ ಬಟ್ಟಬಯಲಾಗಿದೆ. ಗಾಂಧಿಜೀಯ 'ಸತ್ಯಾಗ್ರಹ' ತತ್ವವು ಸಾಮೂಹಿಕವಾಗಿ ವಿಜಯಗೊಂಡಿಲ್ಲವೆಂಬುದು ಒಪ್ಪಿಕೊಳ್ಳಬೇಕಾದ ವಿಷಯ. ಆದರೆ ಸತ್ಯಾಗ್ರಹೀ ಗಾಂಧಿಯೇ ಆತ್ಮವಂಚಕನೆಂದು ಹೇಳಬಲ್ಲ ನಾಲಿಗೆಯೊಂದಿದ್ದರೆ ಅದು ಹಾವು ನಾಲಿಗೆಗೆ ಸಮ! ಗಾಂಧಿಜೀಯು ದ್ವಾರೆ ಎಂದು ಒಪ್ಪುವವರೆಲ್ಲಾ ಗಾಂಧೀ ವಾಣಿಯಲ್ಲಿ ಸತ್ಯವಿದೆ ಎಂದು ಒಪ್ಪಲೇಬೇಕು. ಆದರೆ ಈ ವಿಶ್ವಾಸವೊಂದೇ ಇಂದಿನ ವಾದದಲ್ಲಿ ಗಾಂಧಿಜೀಯ ಬೆಂಬಲಕ್ಕಿರುವದಲ್ಲ. ಗಲಭೆಗಳಿಗೆ ಕಾಂಗ್ರೆಸ್ ಹೊಣೆ ಎಂದು ಸರಕಾರವು ಪ್ರಕಟಿಸಿದ್ದ ಆರೋಪಗಳಿಗೆ ಮಹಾತ್ಮರಿತ್ತಿರುವ ಸಾಕ್ಷ್ಯಕಾರಣ, ಸತರ್ಕಭರಿತ ಉತ್ತರವು ಆ ಹೊಣೆಯನ್ನು ಅನಾಯಾಸವಾಗಿ ಸರಕಾರದ ತಲೆಗೆ ವರ್ಗಾಯಿಸಿದೆ. 'ನಿಮಗಿನ್ನೂ ಸಂದೇಹವಿರುವದಾದರೆ ನಿಷ್ಪಕ್ಷಪಾತೀ ವಿಚಾರಣಾ ಸಮಿತಿಯೊಂದರ ತೀರ್ಮಾನಕ್ಕೊಪ್ಪಿಸಿರಿ' ಎಂದು ಗಾಂಧಿಜೀ ಆಹ್ವಾನಿಸಿದ್ದಾರೆ. ಅಂತಹ ಪರೀಕ್ಷೆಗೆ ನಿಲ್ಲಲು ಸರಕಾರವಂಜುತ್ತಿರುವ ಕಾರಣವೇನೆಂಬುದು ಗಾಂಧಿಜೀಯ ಸುಸ್ಪಷ್ಟವಾದ ಅಪೋಹಪತ್ರಿಕೆಯನ್ನೋದಿದವರಿಗೆಲ್ಲಾ ಸ್ವತಃ ವೇದ್ಯವಾಗಬಲ್ಲುದು. ಸಕಾರಣ, ಸತ್ಯವಾದವೇ ಒಂದು ತೀರ್ಮಾನ. ಮಹಾತ್ಮರ ವಾದವನ್ನು ಕೇಳಿದವರು ಮತ್ತೊಂದು ತೀರ್ಮಾನವನ್ನು ಅಪೇಕ್ಷಿಸಲಾರರು. ಕೈದಿ ಗಾಂಧಿಯ ಈ ವಾದಪ್ರವಾಹವು ಸರಕಾರದ ಎಲ್ಲಾ ಕುತರ್ಕಗಳನ್ನೂ ಕೊಚ್ಚಿಕೊಂಡು ಹೋಗಿದೆ. 'ಕಾಂಗ್ರೆಸು ಜಪಾನೀ ಪಕ್ಷಪಾತಿಯಲ್ಲ' ಎಂದು ಲೋರ್ಡ್ ವೇವೆಲರೊಪ್ಪಿದ್ದಾರೆ. 'ಆಗೋಸ್ತು ಗಲಭೆ ನಿರ್ಮಾಣವಾದುದು ಕಾಂಗ್ರೆಸಿನಿಂದಲೇ' ಎಂದು ಲಂಡನಿನಿಂದಾರಂಭಿಸಿ ನವಡಿಲ್ಲಿ ವರೆಗಿನ ಯಾವ ಬಿಳಿಮುಖವೂ ಈಗ ಸ್ಪಷ್ಟೋದ್ಗಾರವೆತ್ತುವದಿಲ್ಲ. 'ಅತಿ ಚತುರ ಹಾಗೂ ಪೂರ್ವಾನುಭವಿಗಳಾದ ನೀವು ನಿಮ್ಮ ಆಗೋಸ್ತು ನಿರ್ಧಾರವು ಇಂತಹ ಪರಿಣಾಮವೀಯಬಹುದೆಂಬುದನ್ನು ಅಂದೇ ಊಹಿಸದಿರಲು ಸಾಧ್ಯವೆ?' ಎಂದು ಮಾತ್ರ ವೇವೆಲರೀಗ ಕೇಳುತ್ತಾರೆ. ಆದರೆ ಲೋರ್ಡ್ ವೇವೆಲರು ಊಹಿಸಿದ್ದ ಚಾತುರ್ಯ ಮತ್ತು ಅನುಭವವು ಗಾಂಧಿಜೀಗಿರಲಿಲ್ಲ! ಅವರೇ ಸ್ಪಷ್ಟಪಡಿಸಿರುವಂತೆ, ಸರಕಾರವು ಸಾಮೂಹಿಕ ದಸ್ತಗಿರಿಯಾರಂಭಿಸಲು ಆ ರೀತಿ ದುಡುಕುವದೆಂದು, ಪೋಲೀಸು ಸುಪರಿಂಟೆಂಡೆಂಟರ ಮುಖ ನೋಡುವ ವರೆಗೂ ಗಾಂಧಿಜೀ ಊಹಿಸಿರಲಿಲ್ಲ. ಆ ದಸ್ತಗಿರಿಗಳ ಪ್ರತಿಕ್ರಿಯೆಯಾದ ಹಿಂಸಾತ್ಮಕ ಗೊಂದಲಗಳನ್ನು ಅವರು ನಿರೀಕ್ಷಿಸುವದಾದರೂ ಹೇಗೆ? ಆದ್ದರಿಂದಲೇ ಈ ಪತ್ರವ್ಯವಹಾರಗಳನ್ನು ಕಂಡ ಮೇಲೆ, 'ಟೈಮ್ಸ್' ಮೊದಲಾದ ಬ್ರಿಟಿಷ್ ಪತ್ರಿಕೆಗಳು ಕೂಡಾ ಗೊಂದಲದ ಹೊಣೆ ಕಾಂಗ್ರೆಸಿನ ಮೇಲಿದೆ ಎನ್ನುವ ಧೈರ್ಯ ಕಳಕೊಂಡಿವೆ. 'ಅಸಾಧ್ಯ ಮನುಷ್ಯ' 'ಕಪಿ ಮುಷ್ಟಿಯ ಬುದ್ಧಿಯವ' 'ಕಾಲಾನುಗುಣ ಧೋರಣೆ ವಹಿಸಲು ತಿಳಿಯದವ'-ಎಂದಿಷ್ಟೇ ಈಗ ಗಾಂಧಿಜೀಯ ಮೇಲೆ ಆ ಪತ್ರಿಕೆಗಳ ಆರೋಪ. ಪ್ರಾಯಶಃ ಬಂಧನವಾಸವು ಗಾಂಧಿಯನ್ನು ದಣಿಸಿ ಶರಣು ಬರುವಂತೆ ಮಾಡಿರಬೇಕು ಎಂದು ಈ ಪತ್ರಿಕೆಗಳು ಆಶಿಸಿದ್ದುವೇನೋ!

ಈಗ ಸಂದೇಹವುಳಿಯದಂತೆ ಸ್ಪಷ್ಟವಾಗಿರುವ ವಿಷಯವಿಷ್ಟು:— ಆಗೋಸ್ತು ಗಲಭೆಯು ಕಾಂಗ್ರೆಸ್ ಧುರೀಣರ ದಸ್ತಗಿರಿಯ ಪರಿಣಾಮ. ದಸ್ತಗಿರಿಯಾಗುವವರೆಗೆ ಧುರೀಣರು ದೇಶಪ್ರೇಮೋತ್ತೇಜಕ ಭಾಷಣಗಳನ್ನಿತ್ತು, ಅದಕ್ಕನುಗುಣವಾದ ಒಂದು ಠರಾವು ಮಾಡಿದುದನ್ನು ಬಿಟ್ಟರೆ ಬೇರಾವ ಅಪರಾಧವನ್ನೂ ಮಾಡಿಲ್ಲ. ಸರಕಾರವು ಅವರನ್ನು ಕೈದುಮಾಡಿದುದು ಅಷ್ಟಕ್ಕಾಗಿ ಅಲ್ಲ-ಮುಂದೆ ಗಲಭೆಯೆಬ್ಬಿಸಲಿದ್ದಾರೆ ಎಂಬ ಭಯದಿಂದ. ಇದೊಂದು ಅವಸರ ಮತ್ತು ಅಪನಂಬಿಕೆಯಿಂದಾದ ಪ್ರಮಾದ. ಯಾಕೆಂದರೆ ಗಾಂಧಿಜೀ ಆಗ ಮಾಡಲಿದ್ದ ಮೊದಲ ಕೆಲಸವೆಂದರೆ ಸಂಧಾನ ಪ್ರಯತ್ನವೊಂದೆ. ಹೀಗಿರುವಾಗ ಗಾಂಧಿಜೀ ಮತ್ತು ಕಾಂಗ್ರೆಸ್, 1942ನೇ ಆಗೋಸ್ತು 8ರಲ್ಲಿದ್ದಂತೆ ಈಗಲೂ ಸಂಧಾನ ಸಾಧಕರಾಗಿ ಪ್ರತ್ಯೇಕವುಳಿಯುತ್ತಾರೆ, ದೇಶವ್ಯಾಪೀ ದಸ್ತಗಿರಿ, ಮತ್ತು ಆ ಮೇಲಿನ ಗಲಭೆಯೊಂದಿಗೆ ಸರಕಾರವು ಮತ್ತೊಂದು ಸಾಲಲ್ಲಿ ನಿಂತಂತೆ ಕಾಣುತ್ತಿದೆ. ಇತ್ತಂಡದವರ ಕಣ್ಣುಮುಂದೆಯೂ ಈಗ ಸ್ಪಷ್ಟ ಹಾದಿಗಳಿವೆ. ತನ್ನ ಅವಸರಕ್ಕಾಗಿ ನಾಚಿಕೊಂಡು, ಎಲ್ಲಾ ಕಾಂಗ್ರೆಸಿಗರನ್ನೂ ಬಂಧವಿಮೋಚನೆಗೊಳಿಸಿ ತನ್ನ ತಪ್ಪನ್ನು ತಾನೇ ತಿದ್ದಿಕೊಳ್ಳುವದು ಸರಕಾರದ ಕರ್ತವ್ಯ. ಆಗ, 1942ನೇ ಆಗೋಸ್ತಿನಲ್ಲಿ ಆಕಸ್ಮಾತ್ ತಡೆಗಟ್ಟಲ್ಪಟ್ಟು ಬಾಕಿಯುಳಿದು ಹೋದ ತನ್ನ ಸಂಧಾನ ಪ್ರಯತ್ನವನ್ನು ಮುಂದೊತ್ತುವದು ಗಾಂಧಿಜೀಯ ಕರ್ತವ್ಯ. ಹೀಗೇಕಾಗಬಾರದು? ಎಂತಹ ಉಗ್ರರಾಷ್ಟ್ರಾಭಿಮಾನಿಯಾದರೂ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾದ ರೀತಿಯಲ್ಲಿ ಸರಕಾರವು ತಾನು ನಿರ್ಮಿಸಿದ ಆಗೋಸ್ತು ಗಲಭೆಯನ್ನು ತಾನೇ ಗೆದ್ದಿದೆ; ಈಗ ಬಾಕಿಯಿರುವದೆಂದರೆ, ಅವೆಲ್ಲಕ್ಕೂ ಹೇತುವಾದ ತನ್ನ ಆ ಮೂಲಾಪರಾಧವನ್ನು ತಿದ್ದಿಕೊಳ್ಳುವದೊಂದೇ; ಅರ್ಥಾತ್ ಕಾಂಗ್ರೆಸಿಗರನ್ನು ಸರಕಾರವು ಬಿಡುಗಡೆ ಮಾಡಿದರೆ, ಆಗ, ತನ್ನ ಅಂದಿನ ಯೋಜನೆಗನುಸಾರವಾಗಿ, ಸಂಧಾನಕ್ಕೆ ಮುಂದಾಗುವದು ಗಾಂಧಿಜೀಯ ಆದ್ಯ ಕರ್ತವ್ಯವಾಗುತ್ತದೆ. ಗಾಂಧಿಜೀ ಮತ್ತು ಸರಕಾರದೊಳಗಿನ ಪತ್ರ ವ್ಯವಹಾರಗಳಲ್ಲಿ ಇಕ್ಕಡೆಯವರೂ ಆವೇಗ ಪ್ರದರ್ಶಿದ್ದಾರಾದರೂ, ಅವುಗಳಲ್ಲಿ ಇದೊಂದು ನ್ಯಾಯವು ಒಡೆದು ಕಾಣುತ್ತದೆ. ಬ್ರಿಟಿಷ್ ಸರಕಾರಕ್ಕೆ-ಮುಖ್ಯವಾಗಿ ಲೋರ್ಡ್ ವೇವೆಲರಿಗೆ-ಈ ನ್ಯಾಯವನ್ನೂ ಪ್ರತಿಭಟಿಸುವ ಹುರುಪಿದೆಯೆ? ಇರಕೂಡದು-ಇರಲಾರದೆಂದು ಹಾರೈಸುತ್ತೇವೆ.

ವಾರದ ಹೋರಾಟ—ವಿವಿಧ ರಂಗಗಳಲ್ಲಿ—

(೩ನೇ ಪುಟದಿಂದ ಮುಂದುವರಿದುದು.)

ಇಟಲಿಯಲ್ಲಿ.

ಜನರಲ್ ಅಲೆಗ್ಝಾಂಡರರ ನೇತೃತ್ವದಲ್ಲಿ ಮಿತ್ರರ ಇಕ್ಕಡೆಯ ಧಾಳಿಗಳು ಜಯಶೀಲವಾಗಿ ಸಾಗಿವೆ. ಮಾರ್ಶಲ್ ಕೆಸ್ಸರ್ಲಿಂಗನಿಗೆ ತನ್ನ ರಕ್ಷಣಾ ಲೈನನ್ನು ನಿರ್ಮಿಸಿಕೊಳ್ಳುವ ಅನುಕೂಲ ನೆಲೆಯೊಂದು ದೊರೆಯದೆ ಅವನು ಹಿಮ್ಮೆಟ್ಟುತ್ತಲೇ ಇದ್ದಾನೆ. ಇಟಲಿಯ ಪಶ್ಚಿಮ ಕರಾವಳಿಯ ಪಕ್ಕದಲ್ಲಿರುವ ಎಲ್ಬಾ ದ್ವೀಪದ ಆಕ್ರಮಣವನ್ನು ಮಿತ್ರರಾರಂಭಿಸಿದ ವಾರ್ತೆಯ ಮೇಲಿಂದ ಅವರಿಗೆ ತಮ್ಮ ಧಾಳಿ ಸೇನೆಗಳಿಗೆ, ಹೊರಬದಿಯಿಂದ ನೆರವಾಗುವ ನಿಲ್ದಾಣಬೇಕಾಗಿದೆ ಎಂಬುದು ಸ್ಪಷ್ಟ. ಹೀಗೆ ಜರ್ಮನರೊಡನೆ ಹೋರಾಟ ನಡೆಯುತ್ತಿರುವ ತ್ರಿರಂಗಗಳ ಪರಿಸ್ಥಿತಿಯೂ ಮಿತ್ರರ ಪಾಲಿಗೆ ಪೂರ್ತಿ ಸಮಾಧಾನಕರವಿದೆ. ಮಿತ್ರಸೇನೆಗಳು ಪ್ರಯಾಸಪಟ್ಟಾದರೂ ವಿಜಯ ಸಂಪಾದನೆಯಲ್ಲಿರುವಾಗ, ಜರ್ಮನ್ ಸೇನೆಗಳಿಗೆ ಎಷ್ಟೇ ಆಯಾಸಗೊಂಡರೂ ಪರಾಭವವನ್ನು ತಪ್ಪಿಸಿಕೊಳ್ಳುವಸಾಧ್ಯವಾಗುತ್ತಿದೆ. 'ಬರುವ ಬೇಸಿಗೆಯೊಳಗೆ ಯುರೋಪಿನಲ್ಲಿ ಪೂರ್ಣ ವಿಜಯ ದೊರೆಯಬಹುದು' ಎಂದು ಮಿ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಭರವಸೆಯಿಂದಾಡಿದ್ದಾರೆ. ಕಾರಣವಿಲ್ಲದೆ ಹಾಗುಡುವವರು ಚರ್ಚಿಲ್ಲರಲ್ಲ.

ಅಸ್ಸಾಮು ಬರ್ಮಾ.

ಅಸ್ಸಾಮು ಕ್ಷೇತ್ರದಲ್ಲಿ ಜಪಾನರನ್ನು ಬಹುಮಟ್ಟಿಗೆ ಝಾಡಿಸಿ ತೆಗೆದಂತಾಗಿದೆ. ಅಲ್ಲಿಯ ದಿಮಾಪುರ ರಸ್ತೆಯ 90 ಮೈಲುದ್ದದ ಇಂಫಾಲ್-ಕೊಹಿಮಾ ಭಾಗದಿಂದ ಜಪಾನರನ್ನೀಗ ಹಿಂದಕ್ಕಟ್ಟಲಾಗಿದೆ. ಇನ್ನೂ ಜಪಾನರ ಬಿಗಿಯಾದ ಹಿಡಿತವಿರುವ ಪ್ರದೇಶಗಳೆಂದರೆ-ಇಂಫಾಲಿನ ದಕ್ಷಿಣ ಭಾಗ- ಬಿಶೆನ್‌ಪುರ್ ಕ್ಷೇತ್ರ; ಟಾಮು ಪಾಲೆಲ್ ರಸ್ತೆ. ಅಂತೂ ಅಸ್ಸಾಮು-ಬರ್ಮಾ ಸರಹದ್ದಿನ ಪರಿಸ್ಥಿತಿಯೀಗ ಕಳೆದ ಮಾರ್ಚ್, ಎಪ್ರಿಲುಗಳಲ್ಲಿದ್ದುದಕ್ಕಿಂತ ವ್ಯತ್ಯಾಸಗೊಂಡು ಸದ್ಯಕ್ಕೆ ಮಿತ್ರರು ಬಹ್ವಂಶ ಗೆದ್ದಂತಾಗಿದೆ. ಉತ್ತರ ಬರ್ಮದಲ್ಲಿ ಚೀನಾ ರಸ್ತೆ ತೆರೆಯಲು ಜನರಲ್ ಸ್ಟಿಲ್‌ವೆಲ್ಲರಾರಂಭಿಸಿದ್ದ ಧಾಳಿಯನ್ನು ನಿಷ್ಫಲಗೊಳಿಸುವದರಲ್ಲೂ ಜಪಾನರು ಪರಾಭವಗೊಂಡಿದ್ದಾರೆ. ಮಾತ್ರವಲ್ಲ, ಅಲ್ಲಿ ಸುಮಾರು 1,40,000 ಜಪಾನರು ಮಡಿದರೆಂದು ಮಿತ್ರರ ಲೆಕ್ಕಾಚಾರ. ಮಧ್ಯ ಶಾಂತ ಸಮುದ್ರದಲ್ಲಿರುವ ಮರಿಯಾನಾಸ್ ದ್ವೀಪವನ್ನು ಅಮೇರಿಕನರು ಆಕ್ರಮಿಸಿಕೊಂಡುದು-ಅದಕ್ಕಿಂತಲೂ ಮುಖ್ಯವಾಗಿ ಅಲ್ಲಿ ಜಪಾನರ ಪ್ರಬಲ ನೌಕಾದಳವನ್ನಿದಿರಿಸಿ ಓಡಿಸಿದುದು-ಈ ವಾರದ ಮುಖ್ಯ ಘಟನೆ. ಮರಿಯಾನಸ್ ಟೋಕಿಯೋಗೆ 1400 ಮೈಲು ದೂರದಲ್ಲಿರುವ ದ್ವೀಪ. ಫಿಲಿಪ್ಪೈನ್ಸ್ ಮತ್ತು ಡಚ್ ಈಸ್ಟ್ ಇಂಡೀಸುಗಳೊಡನೆ ಜಪಾನರು ವ್ಯವಹಾರ ಲೈನುಗಳನ್ನಿಟ್ಟುಕೊಂಡಿರುವದು ಈ ಸ್ಥಳದ ಆಧಾರದಿಂದಲೇ. ಅದನ್ನಾಕ್ರಮಿಸಿಕೊಂಡ ಅಮೇರಿಕಾನರು ವೈರಿಗೆ ಮೇಲಿನ ಅನುಕೂಲತೆಗಳನ್ನು ತಪ್ಪಿಸಿದುದಷ್ಟೇ ಅಲ್ಲ-ಜಪಾನಿನ ಮೇಲೇನೇ ಆಕಾಶ ಧಾಳಿ ನಡಿಸುವ ನಿಲ್ದಾಣವೊಂದನ್ನು ಗಳಿಸಿಕೊಂಡರು. ಆ ದ್ವೀಪ ಪ್ರಾಮುಖ್ಯತೆಯಿಂದಾಗಿ ಕಳೆದೆರಡು ವರುಷಗಳಿಂದ ಕಾದಾಟಕ್ಕೆ ಬಿಡದ ತಮ್ಮ ನೌಕಾದಳಗಳನ್ನು ಜಪಾನರು ಫಿಲಿಪ್ಪೈನಿನಿಂದ ಆ ಕಡೆಗೆ ಕಳುಹಿಕೊಟ್ಟಾಗ ಅಮೇರಿಕಾದ ಹಡಗುಪಡೆಗೂ ಅದಕ್ಕೂ ಮಹಾ ನೌಕಾ ಹೋರಾಟ ನಡೆಯಿತು. ಜಪಾನೀ ಹಡಗು ಸಮೂಹದಲ್ಲಿ 40ಕ್ಕೆ ಮಿಕ್ಕಿ ಜಲಸಮಾಧಿಗೊಂಡು, ಅದಕ್ಕಿಮ್ಮಡಿಯನ್ನು ಜಖಮಿಗೊಳಗಾಗಿ ಪೂರ್ತಿ ಹೋರಾಡದೆ ಪಲಾಯನ ಮಾಡಬೇಕಾಯಿತು. ಆದರೆ ಚೀನದ 'ಅಕ್ಕಿ ಉಗ್ರಾಣ' ಎಂದು ಹೆಸರು ಪಡೆದ ಹುನಾನ್ ಪ್ರಾಂತ್ಯದ ರಾಜಧಾನಿ ಚಾಂಗ್ಶಾವನ್ನು ಜಪಾನರಾಕ್ರಮಿಸಿಕೊಂಡು ಮಹತ್ವದ ಲಾಭ ಪಡೆದಿರುವರು. ಇದರಿಂದಾಗಿ ಹಾಂಕೋ-ಕೇಂಟನಿನ ಪ್ರಾಮುಖ್ಯ ರೈಲ್ವೆಯು ಅವರ ಹಸ್ತಗತವಾಗಿದೆ. ಮಿತ್ರರು ದಕ್ಷಿಣ ಚೀನಾದಿಂದ ಜಪಾನಿನ ಮೇಲೆ ಧಾಳಿಯಾರಂಭಿಸುವ ಉಪಾಯವೂ ನಿವಾರಣೆಯಾಗಿದೆ.

ತಾರುಣ್ಯ
ಕೊಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ
ಪರಮಾನಂದವನ್ನುಂಟು ಮಾಡಲು **ರಮಣಿ
ವಿಲಾಸಿನಿ** ಅತ್ಯುತ್ತಮ ಔಷಧ
ಡಬ್ಬಿ 1ಕ್ಕೆ ರೂ. 1
ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸು.
ಪುತ್ತೂರು ಏಜಂಟರು:— **ಶೈ ಫಾರ್ಮಸಿ**

ಕೊನೆಗೆ ಬಂದ ವಾರ್ತೆಯಂತೆ ಫ್ರಾನ್ಸಿನ ಚೆರ್ಬೋರ್ಗ್ ಬಂದರವು ಅಮೇರಿಕನ್ ಸೇನೆಯ ವಶವಾಯಿತು ಈ ವಾರ್ತೆಯನ್ನು ನಾಜಿಗಳೇ ಮುಂದಾಗಿ ಪ್ರಕಟಿಸಿದ್ದರು. ಜರ್ಮನ್ ವಾರ್ತಾ ಸಂಸ್ಥೆಯಂದಿದೆ:- ವೈರಿಯು ಮುಖ್ಯವಾಗಿ ಆಯುಧ ಮತ್ತು ವಿಮಾನ ಬಲಗಳಲ್ಲಿ ಅತ್ಯಂತ ಮೇಲ್ಮೈಯುಳ್ಳವರಾಗಿದ್ದುದರಿಂದ ಅಮೇರಿಕನ್ ಸೇನೆಯು ಈ ದಿನ (ತಾ. 25) ಚೆರ್ಬೋರ್ಗನ್ನು ವಶಪಡಿಸಿಕೊಂಡಿತೆಂದೇ ಭಾವಿಸಬೇಕು. ಜರ್ಮನ್ ರಕ್ಷಣಾ ಸೇನೆಯು ಕೊನೆಯವರೆಗೂ ಅತಿದೊಡ್ಡ, ಅತಿಕಠಿಣ, ರಕ್ತಮಯ ಪ್ರತಿಭಟನೆಕೊಟ್ಟಿತು'. ಚೆರ್ಬೋರ್ಗಿನೊಳಗೆ ಪ್ರಬಲ ಟೇಂಕುದಳಗಳೊಡನೆ ಅಮೇರಿಕನರು ನುಗ್ಗಿದಾಗ ವೈರಿಗಳ ಧೈರ್ಯಮಟ್ಟವು ಮೊದಲಿನಷ್ಟಿರಲಿಲ್ಲವೆಂದೂ ಜರ್ಮನ್ ಯೋಧರು ಸಾವಿರ ಸಂಖ್ಯೆಯಲ್ಲಿ ಶರಣಾಗತರಾದರೆಂದೂ ಮಿತ್ರರನ್ನುತ್ತಾರೆ.

ಇತರ ರಂಗಗಳಲ್ಲಿ

ಕೊನೆಯ ವಾರ್ತೆಯಂತೆ ನಾಜೀ ಸೇನಾನಿ ಕೆಸ್ಸರ್‌ಲಿಂಗನು ಇಟಲಿಗೆ ಹೆಚ್ಚಿನ ರಿಜರ್ವ್ ಸೇನೆಗಳನ್ನು ತರಿಸಿಕೊಂಡು ಪ್ರತಿಭಟನೆಯನ್ನು ಬಲಗೊಳಿಸಿದ್ದಾನೆ. ರಶ್ಯದ ವಿಟೆಬ್ಸ್ಕಿನಲ್ಲಿ ಭೀಕರ ಬೀದಿ ಹೋರಾಟ ನಡೆಯುತ್ತಿದೆ. ಬೋಬ್ರುಯಿಸ್ಕ್ ವಿಭಾಗದ ನಾಜೀ ರಕ್ಷಣಾ ಲೈನನ್ನು ರಶ್ಯಾನರು ಭೇದಿಸಿ ಮುಂಬೊತ್ತಿದ್ದಾರೆ. ಅಸ್ಸಾಮು ಯುದ್ಧ ವಿಜಯದಿಂದ ಲೋರ್ಡ್ ಮೌಂಟ್ ಬೇಟನರು ಆನಂದಗೊಂಡು, ತನ್ನ ವಿಜಯೋದ್ಗಾರದಲ್ಲಿ, ಹಿಂದುಸ್ಥಾನದ ಆಕ್ರಮಣವು ನಿವಾರಣೆ ಗೊಂಡಿತು ಎಂದಿದ್ದಾರೆ. ಇಂಫಾಲ್ ರಸ್ತೆಯೀಗ ತೆರೆಯಲ್ಪಟ್ಟುದರಿಂದ, ಕಳೆದೆರಡೂವರೆ ತಿಂಗಳುಗಳಿಂದ ಆರೆ ಹೊಟ್ಟೆಯುಳ್ಳಿದ್ದ ಇಂಫಾಲೀಗಿಗ ಮೊದಲ ಬಾರಿ ಬೀರ್, ವ್ಹಿಸ್ಕಿಗಳು ಬರುತ್ತಿವೆ.

ಚೇರ್ಬೋರ್ರೋ ಪತನ!

ವೆಲ್ಲಾಸ್--ಚಿಯಾಂಗ್ ಹೇಳಿಕೆ.

ಅಮೇರಿಕದ ಉಪಾಧ್ಯಕ್ಷ ಮಿ. ವೆಲ್ಲಾಸರು ಚೀನಕ್ಕಾಗಮಿಸಿ ಅಲ್ಲಿಂದ ವೆಲ್ಲಾಸ್ ಚಿಯಾಂಗ್ ಜತೆಹೇಳಿಕೆಯೊಂದು ಹೊರಬಿದ್ದಿದೆ. 'ಏಸ್ಯದ ಎಲ್ಲಾ ದಾಸ್ಯ ಜನಾಂಗಗಳಿಗೂ ಸ್ವಾಧಿಕಾರದ ಮೂಲತತ್ವವನ್ನು ಕೂಡಲೇ ಒಪ್ಪಿಕೊಳ್ಳುವದು ಮತ್ತು ಈ ಆಶ್ರಿತ ಜನರ ರಾಜಕೀಯ, ಆರ್ಥಿಕ ಸಾಮಾಜಿಕ, ಸ್ವಾಯತ್ತೆಗೊಂದು ಅವಧಿ ನಿರ್ಧರಿಸಿ, ಅದಕ್ಕವರನ್ನು ತಯಾರಿಸಲು ಆದಷ್ಟು ಬೇಗನೇ ಕಾರ್ಯಕ್ಕೆಗೊಳ್ಳುವದು' ಎಂಬ ಆಶಾದಾಯೀ ಅಂಶವು ಈ ಹೇಳಿಕೆಯಲ್ಲಿದೆ.

ರಶ್ಯದಲ್ಲಿ ಜರ್ಮನರಿಗಾದ ಹಾನಿ

ಮೂರು ವರುಷಗಳ ರಶ್ಯಾ ಯುದ್ಧದಿಂದ ಇತ್ತಂಡದವರಿಗಾಗಿರುವ ಹಾನಿಯನ್ನು ರಶ್ಯನ್ ವಾರ್ತಾ ಸಂಸ್ಥೆ ಪ್ರಕಟಿಸಿದೆ. 7, 800, 000 ಮಂದಿ ಜರ್ಮನರು ಕೊಲ್ಲಲ್ಪಟ್ಟರು ಅಥವಾ ಸೆರೆಹಿಡಿಯಲ್ಪಟ್ಟರು. 70, 000 ಟೇಂಕುಗಳು, 60 000 ವಿಮಾನಗಳು, 90 000 ಗನ್ನುಗಳನ್ನು ಜರ್ಮನರು ಕಳಕೊಂಡರು. ಈ ಅವಧಿಯಲ್ಲಿ ರಶ್ಯಾನರಿಗಾದ ನಷ್ಟ--5, 300, 000 ಜನ, 49, 000 ಟೇಂಕು 40, 128 ವಿಮಾನ, 48, 000 ಗನ್ನು.

ಬಂಗಾಳಾ ಎಸೆಂಬ್ಲಿಯಲ್ಲಿ-

ಸದ್ಯದ ಮಂತ್ರಿಗಳ ಮೇಲೆ ವಿರುದ್ಧ ಪಕ್ಷೀಯರು ತಂದ ಅವಿಶ್ವಾಸ ಠರಾವುಗಳು ಪರಾಭವ ಗೊಂಡಿವೆ ಇನ್ನೊಂದು ಅವಿಶ್ವಾಸ ಠರಾವು ಚರ್ಚಿಸಲ್ಪಡಲಿದ್ದಾಗ ಗವರ್ನರರು ಅಧಿವೇಶನವನ್ನೇ ಮುಂದೂಡುವ ಹುಕುಮಿತ್ತಿದ್ದಾರೆ ಈ ಆಜ್ಞೆಯನ್ನು ವಿರುದ್ಧ ಪಕ್ಷೀಯರೆಲ್ಲಾ ತೀವ್ರವಾಗಿ ಪ್ರತಿಭಟಿಸಿ, ನಿಷೇಧಾರ್ಥವಾಗಿ ಸಭಾತ್ಯಾಗ ಮಾಡಿದರು.

ಕೇರಳ

ನೂತನ

'ಡೆಂಟಿಫ್ರಿಸ್' ದಂತಚೂರ್ಣ

ಹಲ್ಲುರೋಗಗಳಿಗೆ ಅತ್ಯುತ್ತಮ.

ಶಾಸ್ತ್ರೀಯರೀತ್ಯಾ ತಯಾರಿಸಲ್ಪಟ್ಟುದು

ಮತ್ತು

ಮಿತ ದರದಲ್ಲಿ ಮಾರಾಟಮಾಡಲ್ಪಡುವುದು

ಕಾರ್ಡುಬೋರ್ಡು ಪೊಟ್ಟಣಗಳಲ್ಲೂ 'ಟಿಕಿಲ್ಯಾಟ್' ಕರಡಿಗೆಗಳಲ್ಲೂ ಸೀಸೆಗಳಲ್ಲೂ ಭದ್ರವಾಗಿರಿಸಲ್ಪಟ್ಟಿದೆ.

ತಯಾರಿಸುವವರು.—

ಕೇರಳಾ ಸೋಪು ಇನ್ಸ್ಟಿಟ್ಯೂಟ್, ಕಲ್ಲಿಕೋಟೆ.

(ಸಹಕಾರೀ ಸಂಸ್ಥೆ).

K. S. I. I.

ನಿಮ್ಮಷ್ಟಕ್ಕೆ ನೀವೇ ಸುಲಭವಾಗಿ ಶೀಘ್ರದಲ್ಲಿ ಇಂಗ್ಲಿಷು ಕಲಿತು ಧೈರ್ಯದಿಂದ ವ್ಯಾಕರಣಬದ್ಧವಾಗಿ ಸರಾಗವಾಗಿ ಧಾರಾಳವಾಗಿ ಇಂಗ್ಲಿಷ್ ಬರೆಯುವಂತೆಯೂ ಮಾತಾಡುವಂತೆಯೂ ಮಾಡುವ ಪುಸ್ತಕ ಬೇಕೇ?

ಸುಲಭದಲ್ಲಿ ಇಂಗ್ಲಿಷು

(English made Easy)

ಬರೆದವರು:--ನಿಮಗೆ ಸುಪರಿಚಿತರಾದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು

ಎಂದಮೇಲೆ ಪ್ರತ್ಯೇಕ ಭರವಸೆಯ ಮಾತೇಕೆ?

ಇಂದೇ ಬರೆದು ತರಿಸಿಕೊಳ್ಳಿರಿ.

ದೊರಕುವ ಸ್ಥಳ—ನವಭಾರತ ಪುಸ್ತಕ ಭಂಡಾರ, ಉಡುಪಿ.

ಬೆಲೆ ೧ ರೂಪಾಯಿ

[ವಿ. ಸೂ.—ಯುವಕರಿಗೆ ವಯಸ್ಕರಿಗೆ ಸುಲಭವಾಗಿ ಬೇಗನೆ ಇಂಗ್ಲಿಷ್ ಕಲಿಸಲಿಕ್ಕೂ ಯೋಗ್ಯ ಪಠ್ಯಪುಸ್ತಕ]

NOTICE

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

O. S. No 235/1944

R. I. A. No 468/1944

1. ಅಗಳ ತ್ಯಾಮು ರಾವ್, ಅಗಳ ಸುಬ್ಬಾಯರ ಮಗ. 2. [illegible] ಭೂಜಾರಿ, ದುರ್ಗಿ ಮೊಜಾರಿ ಮಗಳು, 3. [illegible] ಳ ಮಗ—ಉಡ್ಪಿ ತಾಲ್ಲು ಕೋಟ ಗ್ರಾಮ.

—ವಾದಿರು

ಮತ್ತು

1, ಲಿಗೋರಿ ದಾಲ್ಮೀದ 2. ಪೀಟರ್ ದಾಲ್ಮೀದ 3. ಜಾಕೋಬ್ ದಾಲ್ಮೀದ—ದಾವಿದ್ ದಾಲ್ಮೀದರ ಮಕ್ಕಳು. 4. ಲೂಜ ಬ್ಯಾ-ದಾವಿದ್ ದಾಲ್ಮೀದರ ವಿಧವೆ. ಉಡ್ಪಿ ತಾಲೂಕು ಕೋಟೆ ಗ್ರಾಮದಲ್ಲಿರುವವರು- ಪ್ರತಿವಾದಿರು

ಯಿವರೊಳಗೆ

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ವ್ಯಾಜ್ಯದ ವಾದಿರು ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿರನ್ನು ಸ್ವತಹಾ ವ ಉಡ್ಪಿ ತಾಲೂಕು ಕೋಟೆ ಗ್ರಾಮದ ಸ. ನಂ. 3515Aನೇ ಸ್ಥಳಕ್ಕೆ ಸಂಬಂಧಿಸಿದ ಇತರ ಎಲ್ಲಾ ಜನರ ಪರವಾಗಿ ಸಹಾ ಆಕ್ಷಿಯಲ್ಲಿ ಸೇರಿಸಿ ಸದ್ರಿ ದಾವೆಯನ್ನು ಮಾಡಿರುವುದ್ರಿಂದ ಆ ಬಗ್ಗೆ ಸಿ. ಪಿ. ಕೋಡಿನ 1ನೇ ಆರ್ಡರ್ 8ನೇ ರೂಲು ಪ್ರಕಾರ ಪರ್ಮಿಷನ್ ಕೇಳಿ ದಾಖಲು ಮಾಡಿರುವ ಮೇಲ್ಕಂಡ ಅರ್ಜಿಯನ್ನು ತಾರೀಕು 13-7-1944ಕ್ಕೆ ವಿಚಾರಕ್ಕಿದೆ. ಆ ಕುರಿತು ಆಕ್ಷೇಪ ಹೇಳಲುಳ್ಳವರು ಸದ್ರಿ ದಿವಸ ಬೆಳಗ್ಗೆ 10 ಘಂಟೆಗೆ ಈ ಕೋರ್ಟು ಮುಂಬೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದರೆ ಯೀ ಆಪೆಕ್ಷೆ ಇಲ್ಲವಾಗಿ ತೀರ್ಮಾನಿಸಲ್ಪಡುವುದು-

P. V. Achar.

ಮೊಕ್ಕಾಂ ಉಡ್ಪಿ. } Vakil for

ತಾರೀಕು 24 6-44. } Plaintiffs

ನೋಟೀಸು.

ಕುಂದಾಪುರ ಡಿ| ಮು| ಕೋರ್ಟಿನಲ್ಲಿ

O. S. No 117/1944.

ವಾದಿರು. 1. ವೀರಣ್ಣ ಸೆಟ್ಟಿ, ವೆಂಕಪ್ಪ ಸೆಟ್ಟಿ ಅಳಿಯ, 2 ಮುಕ್ತಕ್ಕ ಸೆಟ್ಟಿ, ದುಂಮ್ಮ ಸೆಟ್ಟಿ ಮಗಳು -ಕುಂದಾಪುರ ತಾಲುಕು ಕೆರ್ಗಾಲ ಗ್ರಾಮದಲ್ಲಿರುತ್ತಾರೆ.

ಪ್ರತಿವಾದಿರು-1. ದಾರಮ್ಮ ಸೆಟ್ಟಿ, ಸಂದ್ಯಪ್ಪ ಸೆಟ್ರ ಸೊಸೆ, 2. ಮಹಾಬಲ ಸೆಟ್ಟಿ, 1ನೇ ಪ್ರತಿವಾದಿಳ ಮಗ, ಕುಂದಾಪುರ ತಾಲುಕು ಗೋಳಿ ಹೊಳೆ, ಗ್ರಾಮದಲ್ಲಿರುತ್ತಾರೆ.

ಸದರಿ ಪ್ರತಿವಾದಿರಿಗೆ ತಿಳುಹಿಸುವುದೇನೆಂದರೆ.

ವಾದಿರು ನಿಮ್ಮ ಮೇಲೆ ಮೂಲಗೇಣಿ ಬಾಬ್ತು ರೂಪಾಯಿ 237-8 0 ಬಾಬಾಡಿ ಕೊಳ್ಳುವರೆ ಮಾಡಿದ ಸದರಿ ವ್ಯಾಜ್ಯವನ್ನು ತಾ. 8-7-44ಕ್ಕೆ ತನಿಕೆಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಉಜ್ರು ಇದ್ದರೆ ತಕ್ಕ ಸಮಯದಲ್ಲಿ ಕೋರ್ಟು ಮುಂದೆ ಜಾಹೀರುಮಾಡಬೇಕಾಗಿ ಈ ಮೂಲಕ ನಿಮಗೆ ತಿಳುಹಿಸಿಯದೆ- ಇಲ್ಲವಾದರೆ ನಿಮ್ಮ ಮೇಲೆ ಎಕ್ಸ್‌ಪಾರ್ಟಿಯಿಂದ ಡಿಕ್ರಿ ಕೊಡಲ್ಪಡುವುದು

ತಾ. 19-6-44. } **M. M Ural,**

ಕುಂದಾಪುರ. } Advocate for Plaintiffs.

Sri Rama Industrial Works, Limited,

Hangarkatta.

(In Liquidation)

NOTICE

The creditors of the above named company are required, on or before the 7th day of July, 1944 to send their names and addresses and the particulars of their debts or claims and the names and addresses of their attorneys (if any) to the undersigned's address at Udipi and if so repuired by the undersigned in writing, such creditors shall, either in person or by the attorneys, prove their said debts or claims at such time as shall be specified in such written notice. In default hereof, they will be excluded from the benefit of any distribution made before such debts are proved.

Dated this the twenty seventh day of June, 1944.

S. R. Buildings, } **A. J. Alse,**

Udipi, S. K. } *Liquidator*

ನೋಟೀಸು.

ಕುಂದಾಪುರ ಡಿ| ಮು| ಕೋರ್ಟಿನಲ್ಲಿ

S. E. A. 5/44. S. C. 6/43.

ವಾದಿ-ಮಂಜಯ್ಯ ದೀಕ್ಷಿತ, ಶಿವಾನಂದ ಡಿಕ್ರಿ ಹಕ್ಕು ಟ್ರಾನ್ಸಫರ ಹೊಂದಿದ ನಾಗಪ್ಪ ಬೀಯ—

ಅಮಲ್ ಜಾರಿ ಅರ್ಜದಾರ.

ಪ್ರತಿವಾದಿ-ಕೃಷ್ಣ ಭಟ್ಟು, ಬೇಕೋಡು ನಾಗಾಭಟ್ಟರ ಮಗ, ನಗರ ತಾಲುಕು ಕೊಡೂರು ಗ್ರಾಮ ನಿವಾಸಿ —ಎದ್ರಿ.

ಸದರಿ ಪ್ರತಿವಾದಿಗೆ ತಿಳುಹಿಸುವುದೇನೆಂದರೆ

ಸದರಿ ಡಿಕ್ರಿ ಹಣವಿನ ವಸೂಲಿ ಹಕ್ಕನ್ನು ಅರ್ಜದಾರನು ಟ್ರಾನ್ಸಫರ ಪಡೆದು ನಡಿಸಿದ ಮೇಲ್ಕಂಡ ಅಮಲಜಾರಿಯನ್ನು ತಾ. 30-6-44ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ತಕ್ಕ ಸಮಯದಲ್ಲಿ ಕೋರ್ಟಿಗೆ ಹಾಜರು ಮಾಡಬೇಕಾಗಿಯೂ ಇಲ್ಲವಾದರೆ ನಿಮ್ಮ ಎಕ್ಸ್‌ಪಾರ್ಟಿಯಾದ ಮುಂದಿನ ಹುಕುಂ ಕೊಡಲ್ಪಡುವದಾಗಿಯೂ ಈ ಮೂಲಕ ನಿಮಗೆ ತಿಳುಹಿಸಿಯದೆ

ಕುಂದಾಪುರ, } **M. M. Ural,**

21-6-44 } Advocate for Plaintiff.

Degrees: Books: Medicines

Free H. L M S. M. B. H. M. D, etc, Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4, Insanity Cure Pills Rs, 10 Enclose 2 annas stamp:—

Prof, Dr, N, H, Chhatbar,

Principal Indian Homeopathi Institute & Society (Govt. Regd)

P. O. MAHUVA (Kathiawar Dt. India).

Sidha-Kalpa Kavach (Regd.)

No. 3 Rs. 2 No. 2 Rs 5 No. 1 Rs. 7 Special Rs 10, Extra Special Rs 17 fc over marriage health wealth, Ask an six questions with M. O. Re. 1/-, and get correct answers by return, post Life reading Rs.10No,V, .P.Send M O. Free, pmplets.

Prof, Dr. N. H Chhatbar,

P. O. MAHUVA, (Kathiawar India.)

The Canara Banking Corporation Limited.

(Incorporated in British India)

ESTD 1906.

Head Office · UDIPI·

ANNOUNCEMENT.

A Branch of the bank has been opened at Tobacco Street, CALICUT on 26-5-44.

ನವಯುಗ

ಉಡುಪಿ, ಗುರುವಾರ ೨೯-೬-೧೯೪೪

ಸ್ಪಷ್ಟ ಹಾದಿ.

ಗಾಂಧಿಜೀ ದಸ್ತಗಿರಿಯಾಗಿ ಬಿಡುಗಡೆ ಹೊಂದುವವರೆಗೆ, ಆಗಾಖಾನ್ ಅರಮನೆ ಮತ್ತು ವೈಸರಾಯಿ ಅರಮನೆಗಳೊಳಗೆ ನಡೆದಿದ್ದ ಎಲ್ಲಾ ಪತ್ರವ್ಯವಹಾರಗಳೂ ಈಗ ಬಹಿರಂಗವಾಗಿವೆ. ಕಾಂಗ್ರೆಸ್ ಮತ್ತು ಗಾಂಧಿಜೀಯನ್ನು ಬೀಗಹಾಕಿಟ್ಟು ಅಗೋಸ್ತು ಗಲಭೆಯ ಎಲ್ಲಾ ಹೊಣೆಯನ್ನೂ ಅವರ ತಲೆಯ ಮೇಲೆ ಹೇರಿಸಲಾಯಿತೆಂಬ ಸರಕಾರದ ದುರ್ಭಾವನೆಯೂ ಅದರೊಂದಿಗೇನೇ ಬಟ್ಟಬಯಲಾಗಿದೆ. ಗಾಂಧಿಜೀಯ 'ಸತ್ಯಾಗ್ರಹ' ತತ್ವವು ಸಾಮೂಹಿಕವಾಗಿ ವಿಜಯಗೊಂಡಿಲ್ಲವೆಂಬುದು ಒಪ್ಪಿಕೊಳ್ಳಬೇಕಾದ ವಿಷಯ. ಆದರೆ ಸತ್ಯಾಗ್ರಹೀ ಗಾಂಧಿಯೇ ಆತ್ಮವಂಚಕನೆಂದು ಹೇಳಬಲ್ಲ ನಾಲಿಗೆಯೊಂದಿದ್ದರೆ ಅದು ಹಾವು ನಾಲಿಗೆಗೆ ಸಮ! ಗಾಂಧಿಜೀಯಿದ್ದಾರೆ ಎಂದು ಒಪ್ಪುವವರೆಲ್ಲಾ ಗಾಂಧೀವಾಣಿಯಲ್ಲಿ ಸತ್ಯವಿದೆ ಎಂದು ಒಪ್ಪಲೇಬೇಕು. ಆದರೆ ಈ ವಿಶ್ವಾಸವೊಂದೇ ಇಂದಿನ ವಾದದಲ್ಲಿ ಗಾಂಧಿಜೀಯ ಬೆಂಬಲಕ್ಕಿರುವದಲ್ಲ. ಗಲಭೆಗಳಿಗೆ ಕಾಂಗ್ರೆಸ್ ಹೊಣೆ' ಎಂದು ಸರಕಾರವು ಪ್ರಕಟಿಸಿದ್ದ ಆರೋಪಗಳಿಗೆ ಮಹಾತ್ಮರಿತ್ತಿರುವ ಸಾಕ್ಷ್ಯ, ಕಾರಣ, ಸತರ್ಕಭರಿತ ಉತ್ತರವು ಆ ಹೊಣೆಯನ್ನು ಅನಾಯಾಸವಾಗಿ ಸರಕಾರದ ತಲೆಗೆ ವರ್ಗಾಯಿಸಿದೆ. 'ನಿಮಗಿನ್ನೂ ಸಂದೇಹವಿರುವದಾದರೆ ನಿಷ್ಪಕ್ಷಪಾತೀ ವಿಚಾರಣಾ ಸಮಿತಿಯೊಂದರ ತೀರ್ಮಾನಕ್ಕೊಪ್ಪಿಸಿರಿ' ಎಂದು ಗಾಂಧಿಜೀ ಆಹ್ವಾನಿಸಿದ್ದಾರೆ. ಅಂತಹ ಪರೀಕ್ಷೆಗೆ ನಿಲ್ಲಲು ಸರಕಾರವಂಜುತ್ತಿರುವ ಕಾರಣವೇನೆಂಬುದು ಗಾಂಧಿಜೀಯ ಸುಸ್ಪಷ್ಟವಾದ ಅಪೋಷ ಹೇಳಿಕೆಯನ್ನೋದಿದವರಿಗೆಲ್ಲಾ ಸ್ವತಃ ವೇದ್ಯವಾಗಬಲ್ಲುದು. ಸಕಾರಣ, ಸತ್ಯವಾದವೇ ಒಂದು ತೀರ್ಮಾನ. ಮಹಾತ್ಮರ ವಾದವನ್ನು ಕೇಳಿದವರು ಮತ್ತೊಂದು ತೀರ್ಮಾನವನ್ನು ಅಪೇಕ್ಷಿಸಲಾರರು. ಕೈದಿ ಗಾಂಧಿಯ ಈ ವಾದಪ್ರವಾಹವು ಸರಕಾರದ ಎಲ್ಲಾ ಕುತರ್ಕಗಳನ್ನೂ ಕೊಚ್ಚಿಕೊಂಡು ಹೋಗಿದೆ. 'ಕಾಂಗ್ರೆಸು ಜಾಪಾನೀ ಪಕ್ಷಪಾತಿಯಲ್ಲ' ಎಂದು ಲೋರ್ಡ್ ವೇವೆಲರೊಪ್ಪಿದ್ದಾರೆ. 'ಆಗೋಸ್ತು ಗಲಭೆ ನಿರ್ಮಾಣವಾದುದು ಕಾಂಗ್ರೆಸಿನಿಂದಲೇ' ಎಂದು ಲಂಡನಿನಿಂದಾರಂಭಿಸಿ ನವದಿಲ್ಲಿ ವರೆಗಿನ ಯಾವ ಬಿಳಿಯ ಮುಖವೂ ಈಗ ಸ್ಪಷ್ಟೋದ್ಗಾರವೆತ್ತುವದಿಲ್ಲ. 'ಅತಿ ಚತುರ ಹಾಗೂ ಪೂರ್ವಾನುಭವಿಗಳಾದ ನೀವು ನಿಮ್ಮ ಅಗೋಸ್ತು ನಿರ್ಧಾರವು ಇಂತಹ ಪರಿಣಾಮವೀಯಬಹುದೆಂಬುದನ್ನು ಅಂದೇ ಊಹಿಸದಿರಲು ಸಾಧ್ಯವೆ?' ಎಂದು ಮಾತ್ರ ವೇವೆಲರೀಗ ಕೇಳುತ್ತಾರೆ. ಆದರೆ ಲೋರ್ಡ್ ವೇವೆಲರು ಊಹಿಸಿದ್ದ ಚಾತುರ್ಯ ಮತ್ತು ಅನುಭವವು ಗಾಂಧಿಜೀಗಿರಲಿಲ್ಲ! ಅವರೇ ಸ್ಪಷ್ಟ ಪಡಿಸಿರುವಂತೆ, ಸರಕಾರವು ಸಾಮೂಹಿಕ ದಸ್ತಗಿರಿಯಾರಂಭಿಸಲು ಆ ರೀತಿ ದುಡುಕುವದೆಂದು, ಪೋಲೀಸು ಸುಪರಿಂಟೆಂಡೆಂಟರ ಮುಖ ನೋಡುವ ವರೆಗೂ ಗಾಂಧಿಜೀ ಊಹಿಸಿರಲಿಲ್ಲ. ಆ ದಸ್ತಗಿರಿಗಳ ಪ್ರತಿಕ್ರಿಯೆಯಾದ ಹಿಂಸಾತ್ಮಕ ಗೊಂದಲಗಳನ್ನು ಅವರು ನಿರೀಕ್ಷಿಸುವದಾದರೂ ಹೇಗೆ? ಆದ್ದರಿಂದಲೇ ಈ ಪತ್ರವ್ಯವಹಾರಗಳನ್ನು ಕಂಡ ಮೇಲೆ, 'ಟೈಮ್ಸ್' ಮೊದಲಾದ ಬ್ರಿಟಿಷ್ ಪತ್ರಿಕೆಗಳು ಕೂಡಾ, ಗೊಂದಲದ ಹೊಣೆ ಕಾಂಗ್ರೆಸಿನ ಮೇಲಿದೆ ಎನ್ನುವ ಧೈರ್ಯ ಕಳಕೊಂಡಿವೆ. 'ಅಸಾಧ್ಯ ಮನುಷ್ಯ' 'ಕಪಿ ಮುಷ್ಟಿಯ ಬುದ್ಧಿಯವ' 'ಕಾಲಾನುಗುಣ ಧೋರಣೆ ವಹಿಸಲು ತಿಳಿಯದವ'-ಎಂದಿಷ್ಟೇ ಈಗ ಗಾಂಧಿಜೀಯ ಮೇಲೆ ಆ ಪತ್ರಿಕೆಗಳ ಆರೋಪ. ಪ್ರಾಯಶಃ ಬಂಧನವಾಸವು ಗಾಂಧಿಯನ್ನು ದಣಿಸಿ ಶರಣು ಬರುವಂತೆ ಮಾಡಿರಬೇಕು ಎಂದು ಈ ಪತ್ರಿಕೆಗಳು ಆಶಿಸಿದ್ದುವೇನೊ!

ಈಗ ಸಂದೇಹವುಳಿಯದಂತೆ ಸ್ಪಷ್ಟವಾಗಿರುವ ವಿಷಯವಿಷ್ಟು.— ಅಗೋಸ್ತು ಗಲಭೆಯು ಕಾಂಗ್ರೆಸ್ ಧುರೀಣರ ದಸ್ತಗಿರಿಯ ಪರಿಣಾಮ. ದಸ್ತಗಿರಿಯಾಗುವವರೆಗೆ ಧುರೀಣರು ದೇಶಪ್ರೇಮೋತ್ತೇಜಕ ಭಾಷಣಗಳನ್ನಿತ್ತು, ಅದಕ್ಕನುಗುಣವಾದ ಒಂದು ಠರಾವು ಮಾಡಿದುದನ್ನು ಬಿಟ್ಟರೆ ಬೇರಾವ ಅಪರಾಧವನ್ನೂ ಮಾಡಿಲ್ಲ. ಸರಕಾರವು ಅವರನ್ನು ಕೈದುಮಾಡಿದುದು ಅಷ್ಟಕ್ಕಾಗಿ ಅಲ್ಲ-ಮುಂದೆ ಗಲಭೆಯೆಬ್ಬಿಸಲಿದ್ದಾರೆ ಎಂಬ ಭಯದಿಂದ. ಇದೊಂದು ಅವಸರ ಮತ್ತು ಅಪನಂಬಿಕೆಯಿಂದಾದ ಪ್ರಮಾದ. ಯಾಕೆಂದರೆ ಗಾಂಧಿಜೀ ಆಗ ಮಾಡಲಿದ್ದ ಮೊದಲ ಕೆಲಸವೆಂದರೆ ಸಂಧಾನ ಪ್ರಯತ್ನವೊಂದೆ. ಹೀಗಿರುವಾಗ ಗಾಂಧಿಜೀ ಮತ್ತು ಕಾಂಗ್ರೆಸ್. 1942ನೇ ಆಗೋಸ್ತು 8ರಲ್ಲಿದ್ದಂತೆ ಈಗಲೂ ಸಂಧಾನ ಸಾಧಕರಾಗಿ ಪ್ರತ್ಯೇಕವುಳಿಯುತ್ತಾರೆ. ದೇಶವ್ಯಾಪೀ ದಸ್ತಗಿರಿ, ಮತ್ತು ಆ ಮೇಲಿನ ಗಲಭೆಯೊಂದಿಗೆ ಸರಕಾರವು ಮತ್ತೊಂದು ಸಾಲಲ್ಲಿ ನಿಂತಂತೆ ಕಾಣುತ್ತಿದೆ. ಇತ್ತಂಡದವರ ಕಣ್ಣ ಮುಂದೆಯೂ ಈಗ ಸ್ಪಷ್ಟ ಹಾದಿಗಳಿವೆ. ತನ್ನ ಅವಸರಕ್ಕಾಗಿ ನಾಚಿಕೊಂಡು, ಎಲ್ಲಾ ಕಾಂಗ್ರೆಸಿಗರನ್ನೂ ಬಂಧವಿಮೋಚನೆಗೊಳಿಸಿ ತನ್ನ ತಪ್ಪನ್ನು ತಾನೇ ತಿದ್ದಿಕೊಳ್ಳುವದು ಸರಕಾರದ ಕರ್ತವ್ಯ. ಆಗ, 1942ನೇ ಆಗೋಸ್ತಿನಲ್ಲಿ ಅಕಸ್ಮಾತ್ ತಡೆಗಟ್ಟಲ್ಪಟ್ಟು ಬಾಕಿಯುಳಿದು ಹೋದ ತನ್ನ ಸಂಧಾನ ಪ್ರಯತ್ನವನ್ನು ಮುಂದೊತ್ತುವದು ಗಾಂಧಿಜೀಯ ಕರ್ತವ್ಯ. ಹೀಗೇಕಾಗಬಾರದು? ಎಂತಹ ಉಗ್ರರಾಷ್ಟ್ರಾಭಿಮಾನಿಯಾದರೂ ಅನಿರ್ವಾಹವಾಗಿ ಒಪ್ಪಿಕೊಳ್ಳಬೇಕಾದ ರೀತಿಯಲ್ಲಿ ಸರಕಾರವು ತಾನು ನಿರ್ಮಿಸಿದ ಆಗೋಸ್ತು ಗಲಭೆಯನ್ನು ತಾನೇ ಗೆದ್ದಿದೆ; ಈಗ ಬಾಕಿಯಿರುವದೆಂದರೆ, ಅವೆಲ್ಲಕ್ಕೂ ಹೇತುವಾದ ತನ್ನ ಆ ಮೂಲಾಪರಾಧವನ್ನು ತಿದ್ದಿಕೊಳ್ಳುವದೊಂದೇ, ಅರ್ಥಾತ್ ಕಾಂಗ್ರೆಸಿಗರನ್ನು ಸರಕಾರವು ಬಿಡುಗಡೆ ಮಾಡಿದರೆ, ಆಗ, ತನ್ನ ಅಂದಿನ ಯೋಜನೆಗನುಸಾರವಾಗಿ, ಸಂಧಾನಕ್ಕೆ ಮುಂದಾಗುವದು ಗಾಂಧಿಜೀಯ ಆದ್ಯ ಕರ್ತವ್ಯವಾಗುತ್ತದೆ. ಗಾಂಧಿಜೀ ಮತ್ತು ಸರಕಾರದೊಳಗಿನ ಪತ್ರ ವ್ಯವಹಾರಗಳಲ್ಲಿ ಇಕ್ಕಡೆಯವರೂ ಆವೇಗ ಪ್ರದರ್ಶಿದ್ದಾರಾದರೂ, ಅವುಗಳಲ್ಲಿ ಇದೊಂದು ನ್ಯಾಯವು ಒಡೆದು ಕಾಣುತ್ತದೆ. ಬ್ರಿಟಿಷ್ ಸರಕಾರಕ್ಕೆ-ಮುಖ್ಯವಾಗಿ ಲೋರ್ಡ್ ವೇವೆಲರಿಗೆ- ಈ ನ್ಯಾಯವನ್ನೂ ಪ್ರತಿಭಟಿಸುವ ಹುರುಪಿದೆಯೆ? ಇರಕೂಡದು—ಇರಲಾರದೆಂದು ಹಾರೈಸುತ್ತೇವೆ.

ವಾರದ ಹೋರಾಟ—ವಿವಿಧ ರಂಗಗಳಲ್ಲಿ—

(೩ನೇ ಪುಟದಿಂದ ಮುಂದುವರಿದುದು)

ಇಟೆಲಿಯಲ್ಲಿ.

ಜನರಲ್ ಅಲೆಗ್ಸಾಂಡರರ ನೇತೃತ್ವದಲ್ಲಿ ಮಿತ್ರರ ಇಕ್ಕಡೆಯ ಧಾಳಿಗಳು ಜಯಶೀಲವಾಗಿ ಸಾಗಿವೆ. ಮಾರ್ಶಲ್ ಕೆಸ್ಸರ್ಲಿಂಗನಿಗೆ ತನ್ನ ರಕ್ಷಣಾ ಲೈನನ್ನು ನಿರ್ಮಿಸಿಕೊಳ್ಳುವ ಅನುಕೂಲ ನೆಲೆಯೊಂದು ದೊರೆಯದೆ ಅವನು ಹಿಮ್ಮೆಟ್ಟುತ್ತಲೇ ಇದ್ದಾನೆ. ಇಟೆಲಿಯ ಪಶ್ಚಿಮ ಕರಾವಳಿಯ ಪಕ್ಕದಲ್ಲಿರುವ ಎಲ್ಬಾ ದ್ವೀಪದ ಆಕ್ರಮಣವನ್ನು ಮಿತ್ರರಾರಂಭಿಸಿದ ವಾರ್ತೆಯ ಮೇಲಿಂದ ಅವರಿಗೆ ತಮ್ಮ ಧಾಳಿ ಸೇನೆಗಳಿಗೆ, ಹೊರಬದಿಯಿಂದ ನೆರವಾಗುವ ನೆಲ್ದಾಣ ಬೇಕಾಗಿದೆ ಎಂಬುದು ಸ್ಪಷ್ಟ. ಹೀಗೆ ಜರ್ಮನರೊಡನೆ ಹೋರಾಟ ನಡೆಯುತ್ತಿರುವ ತ್ರಿರಂಗಗಳ ಪರಿಸ್ಥಿತಿಯೂ ಮಿತ್ರರ ಪಾಲಿಗೆ ಪೂರ್ತಿ ಸಮಾಧಾನಕರವಿದೆ. ಮಿತ್ರಸೇನೆಗಳು ಪ್ರಯಾಸಪಟ್ಟಾದರೂ ವಿಜಯ ಸಂಪಾದನೆಯಲ್ಲಿರುವಾಗ, ಜರ್ಮನ್ ಸೇನೆಗಳಿಗೆ ಎಷ್ಟೇ ಆಯಾಸಗೊಂಡರೂ ಪರಾಭವವನ್ನು ತಪ್ಪಿಸಿಕೊಳ್ಳುವದಸಾಧ್ಯವಾಗುತ್ತಿದೆ. 'ಬರುವ ಬೇಸಿಗೆಯೊಳಗೆ ಯುರೋಪಿನಲ್ಲಿ ಪೂರ್ಣ ವಿಜಯ ದೊರೆಯಬಹುದು' ಎಂದು ಮಿ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಭರವಸೆಯಿಂದಾಡಿದ್ದಾರೆ. ಕಾರಣವಿಲ್ಲದೆ ಹಾಗಾಡುವವರು ಚರ್ಚಿಲ್ಲರಲ್ಲ.

ಅಸ್ಸಾಮು-ಬರ್ಮಾ

ಅಸ್ಸಾಮು ಕ್ಷೇತ್ರದಲ್ಲಿ ಜಾಪಾನರನ್ನು ಬಹುಮಟ್ಟಿಗೆ ಝಾಡಿಸಿ ತೆಗೆದಂತಾಗಿದೆ. ಅಲ್ಲಿಯ ದಿಮಾಪುರ ರಸ್ತೆಯ 90 ಮೈಲುದ್ದದ ಇಂಫಾಲ್-ಕೊಹಿಮಾ ಭಾಗದಿಂದ ಜಪಾನರನ್ನೀಗ ಹಿಂದಕ್ಕಟ್ಟಲಾಗಿದೆ. ಇನ್ನೂ ಜಾಪಾನರ ಬಿಗಿಯಾದ ಹಿಡಿತವಿರುವ ಪ್ರದೇಶಗಳೆಂದರೆ-ಇಂಫಾಲಿನ ದಕ್ಷಿಣ ಭಾಗ- ಬಿಶೆನ್‌ಪುರ್ ಕ್ಷೇತ್ರ; ಟಾಮು ಪಾಲೆಲ್ ರಸ್ತೆ. ಅಂತೂ ಅಸ್ಸಾಮು-ಬರ್ಮಾ ಸರಹದ್ದಿನ ಪರಿಸ್ಥಿತಿಯೀಗ ಕಳೆದ ಮಾರ್ಚ, ಎಪ್ರಿಲುಗಳಲ್ಲಿದ್ದುದಕ್ಕಿಂತ ವ್ಯತ್ಯಾಸಗೊಂಡು ಸದ್ಯಕ್ಕೆ ಮಿತ್ರರು ಬಹ್ವಂಶ ಗೆದ್ದಂತಾಗಿದೆ. ಉತ್ತರ ಬರ್ಮದಲ್ಲಿ ಚೀನಾ ರಸ್ತೆ ತೆರೆಯಲು ಜನರಲ್ ಸ್ಟಿಲ್‌ವೆಲ್ಲರಾರಂಭಿಸಿದ್ದ ಧಾಳಿಯನ್ನು ನಿಷ್ಫಲಗೊಳಿಸುವದರಲ್ಲೂ ಜಪಾನರು ಪರಾಭವಗೊಂಡಿದ್ದಾರೆ. ಮಾತ್ರನಲ್ಲ, ಅಲ್ಲಿ ಸುಮಾರು 1,40,000 ಜಾಪಾನರು ಮಡಿದರೆಂದು ಮಿತ್ರರ ಲೆಕ್ಕಾಚಾರ. ಮಧ್ಯ ಶಾಂತ ಸಮುದ್ರದಲ್ಲಿರುವ ಮರಿಯಾನಾಸ್ ದ್ವೀಪವನ್ನು ಅಮೇರಿಕನರು ಆಕ್ರಮಿಸಿಕೊಂಡುದು-ಅದಕ್ಕಿಂತಲೂ ಮುಖ್ಯವಾಗಿ ಅಲ್ಲಿ ಜಾಪಾನರ ಪ್ರಬಲ ನೌಕಾದಳವನ್ನಿದಿರಿಸಿ ಒಡಿಸಿದುದು-ಈ ವಾರದ ಮುಖ್ಯ ಘಟನೆ. ಮರಿಯನಸ್ ಟೋಕಿಯೋಗೆ 1400 ಮೈಲು ದೂರದಲ್ಲಿರುವ ದ್ವೀಪ. ಫಿಲಿಪ್ಪೈನ್ಸ್ ಮತ್ತು ಡಚ್ ಈಸ್ಟ್ ಇಂಡೀಸುಗಳೊಡನೆ ಜಾಪಾನರು ವ್ಯವಹಾರ ಲೈನುಗಳನ್ನಿಟ್ಟುಕೊಂಡಿರುವದು ಈ ಸ್ಥಳದ ಆಧಾರದಿಂದಲೇ. ಅದನ್ನಾಕ್ರಮಿಸಿಕೊಂಡ ಅಮೇರಿಕಾನರು ವೈರಿಗೆ ಮೇಲಿನ ಅನುಕೂಲತೆಗಳನ್ನು ತಪ್ಪಿಸಿದುದಷ್ಟೇ ಅಲ್ಲ-ಜಾಪಾನಿನ ಮೇಲೇನೇ ಆಕಾಶ ಧಾಳಿ ನಡೆಸುವ ನೆಲ್ದಾಣವೊಂದನ್ನು ಗಳಿಸಿಕೊಂಡರು. ಆ ದ್ವೀಪ ಪ್ರಾಮುಖ್ಯತೆಯಿಂದಾಗಿ ಕಳೆದೆರಡು ವರುಷಗಳಿಂದ ಕಾದಾಟಕ್ಕೆ ಬಿಡದ ತಮ್ಮ ನೌಕಾದಳಗಳನ್ನು ಜಾಪನರು ಫಿಲಿಪ್ಪೈನಿನಿಂದ ಆ ಕಡೆಗೆ ಕಳುಹಿಕೊಟ್ಟಾಗ ಅಮೇರಿಕಾದ ಹಡಗಪಡೆಗೂ ಅದಕ್ಕೂ ಮಹಾ ನೌಕಾ ಹೋರಾಟ ನಡೆಯಿತು. ಜಾಪಾನೀ ಹಡಗ ಸಮೂಹದಲ್ಲಿ 40ಕ್ಕೆ ಮಿಕ್ಕಿ ಜಲಸಮಾಧಿಗೊಂಡು, ಅದಕ್ಕಿಮ್ಮಡಿಯಷ್ಟು ಜಖಮಿಗೊಳಗಾಗಿ ಪೂರ್ತಿ ಹೋರಾಡದೆ ಪಲಾಯನ ಮಾಡಬೇಕಾಯಿತು. ಆದರೆ ಚೀನದ 'ಅಕ್ಕಿ ಉಗ್ರಾಣ' ಎಂದು ಹೆಸರು ಪಡೆದ ಹುನಾನ್ ಪ್ರಾಂತ್ಯದ ರಾಜಧಾನಿ ಚಾಂಗ್ಶಾವನ್ನು ಜಾಪಾನರಾಕ್ರಮಿಸಿಕೊಂಡು ಮಹತ್ವಾದ ಲಾಭ ಪಡೆದಿರುವರು. ಇದರಿಂದಾಗಿ ಹಾಂಕೋ-ಕೇಂಟನಿನ ಪ್ರಾಮುಖ್ಯ ರೈಲ್ವೆಯು ಅವರ ಹಸ್ತಗತವಾಗಿದೆ. ಮಿತ್ರರು ದಕ್ಷಿಣ ಚೀನಾದಿಂದ ಜಾಪಾನಿನ ಮೇಲೆ ಧಾಳಿಯಾರಂಭಿಸುವ ಅಪಾಯವೂ ನಿವಾರಣೆಯಾಗಿದೆ.

ತಾರುಣ್ಯ

ಕೊಟ್ಟು ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ** ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು.

ಪುತ್ತೂರು ಏಜಂಟರು:— **ಪೈ ಫಾರ್ಮಸಿ**

ಕೊನೆಗೆ ಬಂದ ವಾರ್ತೆಯಂತೆ ಫ್ರಾನ್ಸಿನ ಚೆರ್ಬೋರ್ಗ್ ಬಂದರವು ಅಮೇರಿಕನ್ ಸೇನೆಯ ವಶವಾಯಿತು. ಈ ವಾರ್ತೆಯನ್ನು ನಾಜಿಗಳೇ ಮುಂದಾಗಿ ಪ್ರಕಟಿಸಿದ್ದರು. ಜರ್ಮನ್ ವಾರ್ತಾ ಸಂಸ್ಥೆಯಂದಿದೆ:—'ವೈರಿಯು ಮುಖ್ಯವಾಗಿ ಆಯುಧ ಮತ್ತು ವಿಮಾನ ಬಲಗಳಲ್ಲಿ ಅತ್ಯಂತ ಮೇಲ್ಮೈಯ್ಯಾಗಿದ್ದುದರಿಂದ ಅಮೇರಿಕನ್ ಸೇನೆಯು ಈ ದಿನ (ತಾ. 25) ಚೆರ್ಬೋರ್ಗನ್ನು ವಶಪಡಿಸಿಕೊಂಡಿತೆಂದೇ ಭಾವಿಸಬೇಕು. ಜರ್ಮನ್ ರಕ್ಷಣಾ ಸೇನೆಯು ಕೊನೆಯವರೆಗೂ ಅತಿದೊಡ್ಡ, ಅತಿಕಠಿಣ, ರಕ್ತಮಯ ಪ್ರತಿಭಟನೆ ಕೊಟ್ಟಿತು'. ಚೆರ್ಬೋರ್ಗಿನೊಳಗೆ ಪ್ರಬಲ ಟ್ಯಾಂಕುದಳಗಳೊಡನೆ ಅಮೇರಿಕಾನರು ನುಗ್ಗಿದಾಗ ವೈರಿಗಳ ಧೈರ್ಯವುಟ್ಟವು ಮೊದಲಿನಷ್ಟಿರಲಿಲ್ಲವೆಂದೂ ಜರ್ಮನ್ ಯೋಧರು ಸಾವಿರ ಸಂಖ್ಯೆಯಲ್ಲಿ ಶರಣಾಗತರಾದರೆಂದೂ ಮಿತ್ರರನ್ನುತ್ತಾರೆ.

ಇತರ ರಂಗಗಳಲ್ಲಿ

ಕೊನೆಯ ವಾರ್ತೆಯಂತೆ ನಾಜೀ ಸೇನಾನಿ ಕೆಸ್ಸೆರ್‌ಲಿಂಗನು ಇಟಲಿಗೆ ಹೆಚ್ಚಿನ ರಿಜರ್ವ್ ಸೇನೆಗಳನ್ನು ತರಿಸಿಕೊಂಡು ಪ್ರತಿಭಟನೆಯನ್ನು ಬಲಗೊಳಿಸಿದ್ದಾನೆ. ರಶ್ಯದ ವಿಟೆಬ್ಸ್ಕನಲ್ಲಿ ಭೀಕರ ಬೀದಿ ಹೋರಾಟ ನಡೆಯುತ್ತಿದೆ. ಬೋಬ್ರೂಯಿಸ್ಕ್ ವಿಭಾಗದ ನಾಜೀ ರಕ್ಷಣಾ ಲೈನನ್ನು ರಶ್ಯಾನರು ಭೇದಿಸಿ ಮುಂಪೋತ್ತಿದ್ದಾರೆ. ಅಸ್ಸಾಮು ಯುದ್ಧ ವಿಜಯದಿಂದ ಲೋರ್ಡ್ ಮೌಂಟ್ ಬ್ಯಾಟನರು ಆನಂದಗೊಂಡು, ತನ್ನ ವಿಜಯೋದ್ಗಾರದಲ್ಲಿ, ಹಿಂದುಸ್ಥಾನದ ಆಕ್ರಮಣವು ನಿವಾರಣೆ ಗೊಂಡಿತು ಎಂದಿದ್ದಾರೆ. ಇಂಫಾಲ್ ರಸ್ತೆಯೀಗ ತೆರೆಯಲ್ಪಟ್ಟುದರಿಂದ, ಕಳೆದೆರಡೂವರೆ ತಿಂಗಳುಗಳಿಂದ ಆರಿ ಹೊಟ್ಟೆಯಲ್ಲಿದ್ದ ಇಂಫಾಲೀಗರ ಮೊದಲ ಬಾರಿ ಬೀರ್, ವಿಸ್ಕಿಗಳು ಬರಹತ್ತಿವೆ.

ಚೇರ್ಬೋರ್ಗರೋ ಪತನ!

ವೆಲ್ಲಾಸ್--ಚಿಯಾಂಗ್ ಹೇಳಿಕೆ.

ಅಮೇರಿಕದ ಉಪಾಧ್ಯಕ್ಷ ಮಿ. ವೆಲ್ಲಾಸರು ಚೀನಕ್ಕಾಗಮಿಸಿ ಅಲ್ಲಿಂದ ವೆಲ್ಲಾಸ್ ಚಿಯಾಂಗ್ ಜತೆಹೇಳಿಕೆಯೊಂದು ಹೊರಬಿದ್ದಿದೆ. 'ಏಸ್ಯದ ಎಲ್ಲಾ ದಾಸ್ಯ ಜನಾಂಗಗಳಿಗೂ ಸ್ವಾಧಿಕಾರದ ಮೂಲತತ್ವವನ್ನು ಕೂಡಲೇ ಒಪ್ಪಿಕೊಳ್ಳುವದು ಮತ್ತು ಈ ಆಶ್ರಿತ ಜನರ ರಾಜಕೀಯ, ಆರ್ಥಿಕ ಸಾಮಾಜಿಕ, ಸ್ವಾಯತ್ತೆಗೊಂದು ಅವಧಿ ನಿರ್ಧರಿಸಿ, ಅದಕ್ಕವರನ್ನು ತಯಾರಿಸಲು ಆದಷ್ಟು ಬೇಗನೇ ಕಾರ್ಯಕ್ಕೆಗೊಳ್ಳುವದು' ಎಂಬ ಆಶಾದಾಯೀ ಅಂಶವು ಈ ಹೇಳಿಕೆಯಲ್ಲಿದೆ.

ರಶ್ಯದಲ್ಲಿ ಜರ್ಮನರಿಗಾದ ಹಾನಿ

ಮೂರು ವರುಷಗಳ ರಶ್ಯಾ ಯುದ್ಧದಿಂದ ಇತ್ತಂಡದವರಿಗಾಗಿರುವ ಹಾನಿಯನ್ನು ರಶ್ಯನ್ ವಾರ್ತಾ ಸಂಸ್ಥೆ ಪ್ರಕಟಿಸಿದೆ. 7, 800, 000 ಮಂದಿ ಜರ್ಮನರು ಕೊಲ್ಲಲ್ಪಟ್ಟರು ಅಥವಾ ಸೆರೆಹಿಡಿಯಲ್ಪಟ್ಟರು. 70,000 ಟ್ಯಾಂಕುಗಳು, 60 000 ವಿಮಾನಗಳು, 90 000 ಗನ್ನುಗಳನ್ನು ಜರ್ಮನರು ಕಳಕೊಂಡರು. ಈ ಅವಧಿಯಲ್ಲಿ ರಶ್ಯಾನರಿಗಾದ ನಷ್ಟ-5, 300,000 ಜನ, 49, 000 ಟ್ಯಾಂಕು 40, 128 ವಿಮಾನ, 48, 000 ಗನ್ನು.

ಬಂಗಾಳಾ ಎಸೆಂಬ್ಲಿಯಲ್ಲಿ-

ಸದ್ಯದ ಮಂತ್ರಿಗಳ ಮೇಲೆ ವಿರುದ್ಧ ಪಕ್ಷೀಯರು ತಂದ ಅವಿಶ್ವಾಸ ಠರಾವುಗಳು ಪರಾಭವ ಗೊಂಡಿವೆ ಇನ್ನೊಂದು ಅವಿಶ್ವಾಸ ಠರಾವು ಚರ್ಚಿಸಲ್ಪಡಲಿದ್ದಾಗ ಗವರ್ನರರು ಅಧಿವೇಶನವನ್ನೇ ಮುಂದೆಹಾಕುವ ಹುಕುಮಿತ್ತಿದ್ದಾರೆ ಈ ಆಜ್ಞೆಯನ್ನು ವಿರುದ್ಧ ಪಕ್ಷೀಯರೆಲ್ಲಾ ತೀವ್ರವಾಗಿ ಪ್ರತಿಭಟಿಸಿ, ನಿಷೇಧಾರ್ಥವಾಗಿ ಸಭಾತ್ಯಾಗ ಮಾಡಿದರು.

ಕೇರಳ
ಪುನತರ
'ಡೆಂಟಿಫ್ರಿಸ್' ದಂತಚೂರ್ಣ
ಹಲ್ಲುರೋಗಗಳಿಗೆ ಅತ್ಯುತ್ತಮ.
ಶಾಸ್ತ್ರೀಯರೀತ್ಯಾ ತಯಾರಿಸಲ್ಪಟ್ಟುದು
ಮತ್ತು
ಮಿತ ದರದಲ್ಲಿ ಮಾರಾಟಮಾಡಲ್ಪಡುವುದು
ಕಾರ್ಡುಬೋರ್ಡು ಪೊಟ್ಟಣಗಳಲ್ಲೂ 'ಬೇಕೆಲೈಟ್' ಕರಡಿಗೆಗಳಲ್ಲೂ ಸೀಸೆಗಳಲ್ಲೂ ಭದ್ರಪಾಗಿರಿಸಲ್ಪಟ್ಟಿದೆ.
ತಯಾರಿಸುವವರು.—
ಕೇರಳಾ ಸೋಪು ಇನ್ಸ್ಟಿಟ್ಯೂಟ್, ಕಲ್ಲಿಕೋಟೆ.
(ಸಹಕಾರೀ ಸಂಸ್ಥೆ).
K. S. I I.

ನಿಮ್ಮಷ್ಟಕ್ಕೆ ನೀವೇ ಸುಲಭವಾಗಿ ಶೀಘ್ರದಲ್ಲಿ ಇಂಗ್ಲಿಷು ಕಲಿತು ಧೈರ್ಯದಿಂದ ವ್ಯಾಕರಣಬದ್ಧವಾಗಿ ಸರಾಗವಾಗಿ ಧಾರಾಳವಾಗಿ ಇಂಗ್ಲಿಷ್ ಬರೆಯುವಂತೆಯೂ ಮಾತಾಡುವಂತೆಯೂ ಮಾಡುವ ಪುಸ್ತಕ ಬೇಕೇ?
ಸುಲಭದಲ್ಲಿ ಇಂಗ್ಲಿಷು
(English made Easy)
ಬರೆದವರು:—ನಿಮಗೆ ಸುಪರಿಚಿತರಾದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು
ಎಂದಮೇಲೆ ಪ್ರತ್ಯೇಕ ಭರವಸೆಯ ಮಾತೇಕೆ?
ಇಂದೇ ಬರೆದು ತರಿಸಿಕೊಳ್ಳಿರಿ.
ದೊರಕುವ ಸ್ಥಳ—ನವಭಾರತ ಪುಸ್ತಕ ಭಂಡಾರ, ಉಡುಪಿ.
ಬೆಲೆ ೧ ರೂಪಾಯಿ
[ವಿ. ಸೂ.—ಯುವಕರಿಗೆ ವಯಸ್ಕರಿಗೆ ಸುಲಭವಾಗಿ ಬೇಗನೆ ಇಂಗ್ಲಿಷ್ ಕಲಿಸಲಿಕ್ಕೂ ಯೋಗ್ಯ ಪಠ್ಯಪುಸ್ತಕ]

NOTICE

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

O. S. No 235/1944

R. I. A. No 468/1944

1. ಅಗಳ ಶ್ಯಾಮ ರಾವ್, ಅಗಳ ಸುಬ್ರಾಯರ ಮಗ. 2. ಅಂಕು ಪೂಜಾರ್ತಿ, ದುಗ್ಗ ಪೂಜಾರ್ತಿ ಮಗಳು, 3. ರಾಮ ಪೂಜಾರಿ- 2ನೇ ವಾದಿಳ ಮಗ—ಉಡ್ಪಿ ತಾಲ್ಕು ಕೋಟೆ ಗ್ರಾಮ.

—ವಾದಿರು

ಮತ್ತು

1, ಲಿಗೋರಿ ದಾಲ್ಮೇದ 2. ಪೀಟರ್ ದಾಲ್ಮೇದ 3. ಜಾಕೋಬ್ ದಾಲ್ಮೇದ—ದಾವಿದ್ ದಾಲ್ಮೇದರ ಮಕ್ಕಳು. 4. ಲೂಜ ಬ್ಯಾ-ದಾವಿದ್ ದಾಲ್ಮೇದರ ವಿಧವೆ. ಉಡ್ಪಿ ತಾಲೂಕು ಕೋಟೆ ಗ್ರಾಮದಲ್ಲಿರುವವರು— ಪ್ರತಿವಾದಿರು-

ಯವರೊಳಗೆ

ಈ ಮೂಲಕ ಸಮಸ್ತ ಜನರಿಗೂ ತಿಳಿಯುವದಿಸುವದೇನೆಂದರೆ—

ಮೇಲ್ಕಂಡ ವ್ಯಾಜ್ಯದ ವಾದಿರು ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿರನ್ನು ಸ್ವತಹಾ ವ ಉಡ್ಪಿ ತಾಲೂಕು ಕೋಟೆ ಗ್ರಾಮದ ಸ. ನಂ- 35/5Aನೇ ಸ್ಥಳಕ್ಕೆ ಸಂಬಂಧಿಸಿದ ಇತರ ಎಲ್ಲಾ ಜನರ ಪರವಾಗಿ ಸಹಾ ಕಕ್ಷಿಯಲ್ಲಿ ಸೇರಿಸಿ ಸದ್ರಿ ದಾವೆಯನ್ನು ಮಾಡಿರುವುದ್ರಿಂದ ಆ ಬಗ್ಯೆ ಸಿ. ಪಿ. ಕೋಡಿನ 1ನೇ ಆರ್ಡರ್ 8ನೇ ರೂಲು ಪ್ರಕಾರ ಪರ್ಮಿಷನ್ ಕೇಳಿ ದಾಖಲ್ಲು ಮಾಡಿರುವ ಮೇಲ್ಕಂಡ ಅರ್ಜಿಯನ್ನು ತಾರೀಕು 13-7-1944ಕ್ಕೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪ ಹೇಳಲುಳ್ಳವರು ಸದ್ರಿ ದಿವಸ ಬೆಳಗ್ಗೆ 10 ಘಂಟೆಗೆ ಈ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದರೆ ಯೋಕ್ತಪಕ್ಷವಾಗಿ ತೀರ್ಮಾನಸಲ್ಪಡುವದು-

P. V. Achar.

ಮೊಕ್ಕಾಂ ಉಡ್ಪಿ. } Vakil for
ತಾರೀಕು 24-6-44. } Plaintiffs

ನೋಟೀಸು.

ಕುಂದಾಪುರ ಡಿ| ಮು| ಕೋರ್ಟಿನಲ್ಲಿ

O. S. No 117/1944.

ವಾದಿರು. 1. ವೀರಪ್ಪ ಸೆಟ್ಟಿ. ವಂಕಪ್ಪ ಸೆಟ್ಟಿ ಅಳಿಯ, 2. ಮುತ್ತಕ್ಕ ಸೆಟ್ಟಿ, ದಾರಮ್ಮ ಸೆಟ್ಟಿ ಮಗಳು-ಕುಂದಾಪುರ ತಾಲೂಕು ಕರ್ಕುಂಜ ಗ್ರಾಮದಲ್ಲಿರುತ್ತಾರೆ.

ಪ್ರತಿವಾದಿರು-1. ದಾರಮ್ಮ ಸೆಟ್ಟಿ, ಸಂಕ್ಕಪ್ಪ ಸೆಟ್ಟಿ ಸೊಸೆ, 2. ಮಹಾಬಲ ಸೆಟ್ಟಿ, 1ನೇ ಪ್ರತಿವಾದಿಳ ಮಗ, ಕುಂದಾಪುರ ತಾಲೂಕು ಗೋಳಿ ಹೊಳೆ, ಗ್ರಾಮದಲ್ಲಿರುತ್ತಾರೆ.

ಸದರಿ ಪ್ರತಿವಾದೀರಿಗೆ ತಿಳುಹಿಸುವದೇನೆಂದರೆ,

ವಾದೀರು ನಿಮ್ಮ ಮೇಲೆ ಮೂಲಗೇಣಿ ಬಾಬ್ತು ರೂಪಾಯಿ 237-8-0 ಬರಮಾಡಿ ಕೊಳ್ಳುವರೆ ಮಾಡಿದ ಸದರಿ ವ್ಯಾಜ್ಯವನ್ನು ತಾ. 8-7-44ಕ್ಕೆ ಕಲಕಿಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಉದಾಹರಣೆ ಇದ್ದರೆ ತಕ್ಕ ಸಮಯದಲ್ಲಿ ಕೋರ್ಟು ಮುಂದೆ ಜಾಹೀರುಮಾಡಬೇಕಾಗಿ ಈ ಮೂಲಕ ನಿಮಗೆ ತಿಳುಹಿಸಿಯದೆ. ಇಲ್ಲದಾದರೆ ನಿಮ್ಮ ಮೇಲೆ ಎಕ್ಸ್‌ಪಾರ್ಟಿಯಿಂದ ಡಿಕ್ರಿ ಕೊಡಲ್ಪಡುವದು.

ತಾ, 19-6-44. } M. M Ural,
ಕುಂದಾಪುರ. } Advocate for Plaintiffs.

Sri Rama Industrial Works, Limited.

Hangarkatta.

(In liquidation)

NOTICE

The creditors of the above named company are required, on or before the 7th day of July, 1944 to send their names and addresses and the particulars of their debts or claims and the names and addresses of their attorneys (if any) to the undersigned's address at Udipi and if so repuired by the undersigned in writing, such creditors shall, either in person or by the attorneys, prove their said debts or claims at such time as shall be specified in such written notice. In default hereof, they will be excluded from the benefit of any distribution made before such debts are proved.

Dated this the twenty seventh day of June, 1944.

S. R. Buildings. } **A. J. Alse,**
Udipi. S. K. } *Liquidator*

ನೋಟೀಸು.

ಕುಂದಾಪುರ ಡಿ| ಮು| ಕೋರ್ಟಿನಲ್ಲಿ

S. E. A. 5/44 S. C. 6/43.

ವಾದಿ-ಮಂಜಯ್ಯ ದೀಕ್ಷಿತ, ಇವರಿಂದ ಡಿಕ್ರಿ ದಕ್ಕ ಟ್ರಿನ್ಸಫರ ಹೊಂದಿದ ನಾಗಪ್ಪ ಬೀಯ—

ಅಮಲ್‌ಜಾರಿ ಅರ್ಜದಾರ.

ಪ್ರತಿವಾದಿ-ಕೃಷ್ಣ ಭಟ್ಟ, ಬೆಳಕೋಡು ನಾಗಭಟ್ಟರ ಮಗ, ನಗರ ತಾಲೂಕು ಕೊಡೂರು ಗ್ರಾಮ ನಿವಾಸಿ —ಎದ್ರಿ.

ಸದರಿ ಪ್ರತಿವಾದಿಗೆ ತಿಳುಹಿಸ ಪುದೇನೆಂದರೆ

ಸದರಿ ಡಿಕ್ರಿ ಹಣದಿನ ವಸೂಲಿ ಹಕ್ಕನ್ನು ಅರ್ಜದಾರನು ಟ್ರಿನ್ಸಫರ ಪಡೆದು ನಡಿಸಿದ ಮೇಲ್ಕಂಡ ಅಮಲಜಾರಿಯನ್ನು ತಾ. 30-6-44ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ತಕ್ಕ ಸಮಯದಲ್ಲಿ ಕೋರ್ಟಿಗೆ ಜಾಹೀರು ಮಾಡಬೇಕಾಗಿಯೂ ಇಲ್ಲವಾದರೆ ನಿಮ್ಮ ಎಕ್ಸ್‌ಪಾರ್ಟಿಯಿಂದ ಮುಂದಿನ ಹುಕುಂ ಕೊಡಲ್ಪಡುವುದಾಗಿಯೂ ಈ ಮೂಲಕ ನಿಮಗೆ ತಿಳುಹಿಸಿಯದೆ

ಕುಂದಾಪುರ, } **M. M. Ural,**
21-6-44 } Advocate for Plaintiff.

Degrees: Books: Medicines
Free H. L. M. S.M, B. H. M. D, etc, Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs. 4, Insanity Cure Pills Rs, 10 Enclose 2 annas stamp:—
Prof, Dr, N, H, Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt. India).

Sidna-Kalpa Kavach (Regd.)
No. 3 Rs. 3 No. 2 Rs 5 No. 1 Rs. 7 Special Rs 10, Extra Special Rs 17 for marriage health wealth. Ask any six questions with M O. Re. 1/4. and get correct answers by return post Life reading Rs,10 No, V, P. Send M. O. Free, pamphlets.
Prof, Dr, N, H Chhatbar,
P. O. MAHUVA, Kathiawar, India.

ದಕ್ಷಿಣ ಕನ್ನಡ-

ಮಂಗಳೂರು

ಪ್ಲೇಗ್ ಪರಿಸ್ಥಿತಿ —ಕಳೆದೆರಡು ವಾರಗಳಿಂದ ಪ್ಲೇಗಿನ ಸೋಂಕು ಇಲ್ಲ ತಾ 17 ರ 44 ಕ್ಕೆ ಅಂತ್ಯವಾಗುವ ವಾರದ ತನಕ ಒಟ್ಟು 65077 ಇಲಿ ಬಿಲಗಳನ್ನು ವಿಷವಾಯುವಿನಿಂದ ಸ್ವಚ್ಛಗೊಳಿಸಿ ದರು. ಒಟ್ಟು 18498 ಜನರಿಗೆ ಪ್ಲೇಗ್‌ನಿವಾರಕ ಇಂಜೆಕ್ಷನ್ ಕೊಡಲಾಗಿದೆ ಕದ್ರೋಳಿಯಲ್ಲಿರುವ ಹಾಜಿ ಇಬ್ರಾಹಿಮ್ ಮಲಾರಿಯವರ ಗಾರ್ಡನಿನಲ್ಲಿ ಬಿದ್ದ ಇಲಿಯು ಪ್ಲೇಗಿನವೆಂದು ನಿರ್ಣಯವಾಗಿದೆ

ಕಟ್ಟಿಗೆ ದರ —ಕಟ್ಟಿಗೆಯ ಬಂದರಿನಲ್ಲಿ ಖಂಡಿಗೆ ರೂ 6 12 0ರಂತೆಯೂ, ಪೇಟೆಯಲ್ಲಿ ರೂ 8ರಂತೆಯೂ ಸಿಗುತ್ತಿದೆ ಚಿಲ್ಲರೆಯಾಗಿ ಮಣಕ್ಕೆ 0 5 6 ಅಥವಾ 0 6 0ಯಂತೆ ಸಿಗುತ್ತಿದೆ ಆದರೆ, ಮೇಲಿನ ಸ್ಟಾಕಿನ 1 6 ಅಂಶವನ್ನು ಮಾತ್ರ ಒಂದು ತಿಂಗಳಿಗೆ ಮಾರಾಟಮಾಡಬಹುದೆಂದು ಕಂಟ್ರೋಲಿದ್ದುದರಿಂದ, ಅನೇಕ ಡಿಪೋಗಳಲ್ಲಿ ಬೆಳಗ್ಗೆ 9 10ರ ಒಳಗಾಗಿಯೇ ಆಯಾ ದಿನದ ಅಂಶವು ಮಾರಾಟವಾಗಿ ಹೋಗಿ, ಹೆಚ್ಚಿನ ಗಿರಾಕಿಗಳಿಗೆ 'ಇಲ್ಲ' ಎಂಬ ಉತ್ತರ ದೊರೆಯುತ್ತಿದೆ ಕೆಲವರು, ಇನ್ನು ಕಟ್ಟಿಗೆ ದೊರೆಯಲು ಹೆಚ್ಚಿನ ಕಷ್ಟಗಳಾಗಬಹುದೆಂದು ಹೆದರಿ, ಸಾಧ್ಯವಿದ್ದಷ್ಟನ್ನು ಕೊಂಡುಕೊಳ್ಳಲು ಯತ್ನಿಸಿಯೂ ಈ ಕಷ್ಟಗಳು ಹೆಚ್ಚಾಗುತ್ತಿವೆ

ಬೈಹುಲ್ಲು:—ಬೈಹುಲ್ಲಿನ ಕ್ರಯವು ದಿನೇ ದಿನೇ ಹೆಚ್ಚುತ್ತಿದ್ದು, ಸಾವಿರಕ್ಕೆ ರೂ 18ರಿಂದ 20/-ರ ವರೆಗೆ ಮಾರಾಟವಾಗುತ್ತಿದೆ ಅಕ್ಕಿಗೆ ಕಂಟ್ರೋಲ್ ಇದ್ದ ಹಾಗೆ ಬೈಹುಲ್ಲಿಗೂ ಅದೇ ವ್ಯವಹಾರದಲ್ಲಿ ಕ್ರಯ ನಿರ್ಣಯವಾಗದೇ ಹೋಗಿದೆ ದನಕರುಗಳಿದ್ದವರಿಗೆ, ಮುಖ್ಯವಾಗಿ ಕಡೆಗಳಿಂದಲೂ ಧಾರಣೆಯೇರಿ, ಹಾಲಿನ ವ್ಯಾಪಾರದಿಂದ ಜೀವಿಸುವವರು ಕಷ್ಟಪಡುತ್ತಿದ್ದಾರೆ ದನಕರುಗಳ ಬೆಲೆಯು, ಮೊದಲಿಗಿಂತ 2 3ಪಾಲು ಹೆಚ್ಚು, ಹಿಂಡಿಯ ಧಾರಣೆ ಹೆಚ್ಚು, ಬೈಹುಲ್ಲಿಗೂ ಕೆಲವು ಪಾಲು ಹೆಚ್ಚು.

ಜಿಲ್ಲಾ ಕಲೆಕ್ಟರರ ವರ್ಗವಿಚಾರ -ಮಾನ್ಯ ಜಿಲ್ಲಾ ಕಲೆಕ್ಟರರಾಗಿರುವ ಶ್ರೀ। ರಾವ್‌ಸಾಹೇಬ್ ಪಿ ರಾಮದಾಸರವರು ಇನ್ನೂ ಕೆಲಕಾಲ ಇಲ್ಲಿಯೇ ಇರಬೇಕೆಂಬ ನೇಮಕವು ಮುಂದರಿಸಲ್ಪಟ್ಟಿದೆಯಾಗಿ ಕೇಳುತ್ತೇವೆ

ಸಿಮೆಂಟ್.—ಚಿಕ್ಕಪುಟ್ಟ ದುರಸ್ತಿಗಾದರೂ ಜನರಿಗೆ ಸಿಮೆಂಟ್ ದೊರೆಯುವುದು ಕಷ್ಟವಾಗಿದೆ ದೊರಕಿದರೂ, ಗೋಣಿಗೆ ರೂ 10ರಿಂದ 16ರ ವರೆಗೆ, ಕಳ್ಳಸಂತೆಯಲ್ಲಿ ಕೊಂಡುಕೊಳ್ಳಬೇಕಾಗಿದೆ ಒಂದವಾರದ ಒಬ್ಬರು ವ್ಯಾಪಾರಸ್ಥರಲ್ಲಿ ಜಿಲ್ಲಾಧಿಕಾರಿಗಳು ಸ್ವತಃ ಹೋಗಿ, ಕೆಲ ಗೋಣಿ ಸಿಮೆಂಟ್ ಇದ್ದುದನ್ನು ಜಪ್ತಿಮಾಡಿ, ವ್ಯಾಪಾರಿಗಳು ಹಿಡಿಯಲ್ಪಟ್ಟಿರು ವರಾಗಿ ಮಾತ್ರ ಈ ಸಿಮೆಂಟ್ ಜಪ್ತಿಯ ಕೂಲಂಕಷ ವಿವರಗಳು ತಿಳಿದುಬಂದಿಲ್ಲ

ಡಿಸ್ಟ್ರಿಕ್ಟ್ ಮುನ್ಸಿಪರ ಜಾಂತ್ಯ -ಈ ಎಂಟು ... ಓರ್ಡರ್ ... ದಿಂದ ನಲ್ಲೂರ ಮಠದ ... ಡಿಸ್ಟ್ರಿಕ್ಟ್ ಮುನ್ಸಿಫರಾಗಿ ಆರಿಸಿರುವರೆಂದು ಪ್ರಕಟವಾಗಿದೆ (ಗವರ್ನ್ಮೆಂಟ್ ಗೆಜೆಟ್ ... ನ್ಯಾಯಿಕ್ (೨) ಮಿ। ಟಿ ವಿ ಬಿ. ಸಿ ಕೃಷ್ಣ ಸ್ವಾಮಿ (೩) ಜನಾಬ್ ಯು ಹಸ್ಸಬ್ಬ, (೪) ಜನಾಬ್ ಎಸ್ ಅಬ್ದುರ್ ರಹಿಮಾನ್ (ಎಡಿಶನಲ್ ಪ್ರೊಸಿಕ್ಯೂಟರ್, ಗುಂಟೂರ)

ಎಕ್ಸರ್‌ಸೈಜ್ ಪುಸ್ತಕ.—ಇವುಗಳಿಗೆ ಬೆಲೆ ನಿರ್ಣಯವಾಗಿದೆ ಬಾಧವಿಲ್ಲ ವಸ್ತುಗಳ ಕರ ಮಾಪಕ ಕಾಗದದ ಪುಸ್ತಕಕ್ಕೆ ಕವರ್ ಸಹಿತ 40 ಪುಟಕ್ಕೆ 0-1 9, 60 ಪುಟ 0-2 6, 80 ಪುಟ 0 3 3 100 ಪುಟ 0 4-0, 120ಪುಟ 0 4 9 ಇದೆ ಕಾಗದದ ಗಟ್ಟಿ ಬ್ಯಾಂಡಿನ ಪುಸ್ತಕಗಳಿಗೆ 100 ಪೇಜು 0-6 6, 120 ಪುಟ 0 7-3 160 ಪುಟ 0 8 9, 200 ಪುಟ 0 10 3, 300 ಪುಟ 0-14 0, 400 ಪುಟ 1 2-0

ಪ್ರೀಮ 'ಲೀಡ್' (ಬಿಳಿ) ಕಾಗದದ ಪುಸ್ತಕಗಳಿಗೆ 40 ಪುಟ 0-2 0, 60 ಪುಟ 0 2 9, 80 ಪುಟ 0 3-6, 100 ಪುಟ 0-4-3 120ಪುಟ 0-5 0, ಇದೇ ತರಗತಿಯ ಗಟ್ಟಿಬ್ಯಾಂಡ್ 100 ಪುಟ 0 7 0, 120 ಪುಟ 0-7 6, 160ಪುಟ 0 9 3, 200 ಪುಟ 0 10-9, 300 ಪುಟ 0 15 3, 400ಪುಟ 1 3 0

ಉಡುಪಿ

ಬೆಳ್ತಿಗೆ ಅಕ್ಕಿ ಪೂರೈಕೆ.-ಮಂಗಳೂರಲ್ಲಿ ತೃಪ್ತಿಕರವಿದ್ದಾಗ್ಯೂ ಉಡುಪಿ ರೇಶನಿಂಗ್ ಪ್ರದೇಶದಲ್ಲಿ ಮಾತ್ರ ತದ್ವಿರುದ್ಧವಾಗುತ್ತದೆ ಪೂರ್ಣ ಬೆಳ್ತಿಗೆ ಅಕ್ಕಿ ರೇಶನಿನವರಿಗೂ ರೇಶನ್ ಪ್ರಮಾಣದಷ್ಟು ದೊರೆಯುವುದಿಲ್ಲ ಕಾರಣವೇನೋ ತಿಳಿಯದಾಗಿದೆ

ರೇಶನಿಂಗ್ ತಾರತಮ್ಯ.-ರೇಶನ್ ಪ್ರದೇಶದ ರೇಶನ್ ಅಂಗಡಿಗಳಲ್ಲಿ ಅಕ್ಕಿ ಸರಬರಾಯಿ ಏಕರೀತಿಯಲ್ಲಿ ನಡೆಯುವುದಿಲ್ಲವೆಂದು ಪದೇ ಪದೇ ದೂರು ಕೇಳಬರುತ್ತಿದೆ ಕೆಲವು ಡಿಪೋಗಳಲ್ಲಿ ಸದಾ ಸರ್ವದಾ ಬೆಲೆಯ ಅಕ್ಕಿ ದೊರೆಯುವುದು ಮತ್ತಿತರ ಡಿಪೋಗಳಲ್ಲಿ ಸರ್ವಸಾಧಾರಣ ಸಾಮಾನ್ಯ ಅಕ್ಕಿಯೇ ದೊರೆಯುವುದು ಬೆಲೆಯ ಮಧ್ಯಮ ಮತ್ತು ಸಾಮಾನ್ಯ ತರಗತಿಯ ಅಕ್ಕಿಯನ್ನು ಎಲ್ಲಾ ಡಿಪೋಗಳಿಗೂ ಒಂದೇ ಪ್ರಮಾಣದಲ್ಲಿ ಸರಬರಾಯಿ ಮಾಡುವುದು ರೇಶನಿಂಗ್ ದೃಷ್ಟಿಯಿಂದ ಸ್ಪೆಶಲ್ ಆಫೀಸರವರು ಹಾಗೂ ರೇಶನಿಂಗ್ ಸಲಹೆ ಸಮಿತಿಯವರು ಕರ್ತವ್ಯವೆಂಬುದನ್ನು ಮರೆಯಬಾರದು ಮುಂದಾದರೂ ಸರ್ವಹಿತ ದೃಷ್ಟಿಯು ಕಾರ್ಯರೂಪದಲ್ಲಿ ಪರಿಣಮಿಸುವುದೆಂದು ನಿರೀಕ್ಷೆ.

ರೇಶನಿಂಗ್ ಕ್ಷೇತ್ರದಲ್ಲಿ ದಿನಾಲೂ ಅಕ್ಕಿ ಕೊಂಡು ಹೋಗುವವರ ಸಂಖ್ಯೆಯು 299 ಮತ್ತು ವಾರಂಪ್ರತಿಯ ಕಾರ್ಡುಗಳು 3752 ಆಗಿರುವುದು ಈ ಅಂಕೆ ಸಂಖ್ಯೆಗಳಲ್ಲಿ ಹೋಟೆಲುಗಳು ಕೂಡಿರುವುದಿಲ್ಲ ಪ್ರತ್ಯೇಕದ ಅಕ್ಕಿ ದಾಸ್ತಾನು ಇನ್ನು ಮೂರು ತಿಂಗಳು ತನಕ ಸಾಕಾಗಬಹುದೆಂದು ತಿಳಿದು ಬರುತ್ತದೆ

ರೇಶನಿಂಗ್ ಸಲಹೆ ಸಮಿತಿ ಸ್ಥಾಪನೆಯಾಗಿ ಎರಡು ಮೂರು ಮೀಟಿಂಗುಗಳಾಗಿರುವಂತೆ, ಬಡವರ, ಕೂಲಿ ಜನರ ಹಾಗೂ ಮಧ್ಯಮ ತರಗತಿಯವರ ಪರವಾಗಿ ಏನೆಲ್ಲಾ ಸಲಹೆ ಸೂಚನೆಗಳು ಕಮಿಟಿಯಲ್ಲಿ ಪರ್ಯಾಲೋಚಿಸಲ್ಪಟ್ಟವು ಎಂಬುದು ತಿಳಿಯದಾಗಿದೆ ಕಮಿಟಿಯ ಹೆಚ್ಚಿನ ಸದಸ್ಯರು ಬೇರೆ ಬೇರೆ ಕಮಿಟಿಯ ಮೆಂಬರರಾಗಿರುತ್ತ ಇವರಿಗೆ ಬಡವರ ಹಾಗೂ ಕೂಲಿಜನರೊಡನೆ ಬೆರೆತು ಅವರ ಕರುಳಿನ ಕೂಗಿನ ಸಂಕಷ್ಟಗಳನ್ನು ಕೇಳಿ ತಿಳಿಯುವಷ್ಟರ ತಾಳ್ಮೆ ಮತ್ತು ಸಮಯವಿದೆಯೋ ಎಂಬುವುದು ಸಂಶಯಾಸ್ಪದವಾಗಿದೆ ಕಮಿಟಿ ಸದಸ್ಯರು ತಾವು ಮಾಡಿದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಪ್ರಸಿದ್ಧಿ ಪಡಿಸುವರೇ?

ಗೋಧಿ ಅಂಗಡಿಯು -ಬಡಗಪೇಟೆಯ ರಿಕ್ವಿಜಿಶನ್ ಅಕ್ಕಿ ಪಡೆಯುವ ಹೋಲ್ ಸೇಲ್ ಸ್ಟೋರಿನ ಡಿಪೋದಲ್ಲಿ ತಾ 26ರಿಂದ ತೆರೆಯಲ್ಪಟ್ಟಿದೆ ಈ ಅಂಗಡಿಯಲ್ಲಿ ಅಕ್ಕಿ ಕೊಟ್ಟು ಗೋಧಿ ಪಡೆಕೊಳ್ಳಬಹುದು ಗೋಧಿ ಮುಡಿಯೊಂದರ ದರವು 10-7 0 ಮಾತ್ರ. ಚಿಲ್ಲರೆಯಾಗಿ ಒಂದು ಮುಡಿಗಿಂತ ಕಡಿಮೆ ಗೋಧಿ ಸಿಗಲಾರದು ರೇಶನಿಂಗ್‌ಕ್ಷೇತ್ರದವರು ರೇಶನಿಂಗ ಆಫೀಸಿನ ಪರ್ಮಿಟ್ ಪಡೆದು ಗೋಧಿ ಪಡೆಯಬಹುದಾಗಿದೆ

ಬೋರ್ಡ್ ಹೈಸ್ಕೂಲಿನಲ್ಲಿ.-ಎಸ್ ಎಸ್ ಎಲ್ ಸಿ. ಪರೀಕ್ಷೆಗೆ ಭಾಷೇತರ ಪಾಠಗಳನ್ನು ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮಿಕವಾಗಿ ಕಲಿಸುವ ಉಭಯ ವರ್ಗಗಳನ್ನೂ ತೆರೆದಿರುವುದು ಹೆತ್ತವರಿಗೂ ವಿದ್ಯಾರ್ಥಿಗಳಿಗೂ ವಿಶೇಷ ಸೌಕರ್ಯ

ಜಿಲ್ಲಾ ಕಲೆಕ್ಟರ್ ಶ್ರೀ ರಾಮದಾಸರು —ಉಡುಪಿಗೆ ಬರುವರೆಂಬ ಸುದ್ದಿಯಿಂದಾಗಿ ಒಂದು ದಿನ ಮಾತ್ರ ಕಟ್ಟುನಿಟ್ಟಾದ ಹಾರೆ ಮತ್ತೆ ಇಲೆಕ್ಟ್ರಿಕ್ ಬಲ್ಬುಗಳು ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಹೊರಬಿದ್ದವು ಕಂಟ್ರೋಲ್ ದರದಲ್ಲಿ ಮಾರಲ್ಪಟ್ಟವು ತದನಂತರ ಸ್ವಸ್ಥಾನವನ್ನು ಸೇರಿಕೊಂಡವು ಕಾಪಿ ಹೋಟೆಲುಗಳಲ್ಲಿ ಚಹಾ ಕಾಫಿಯು ನಿಯಂತ್ರಣ ಬೆಲೆಗೆ ಕೊಡಲಾರಂಭವಾದರೂ ಮುಂಚಿನಷ್ಟು ರುಚಿ ರುಚಿಯಾಗಿರುವುದಿಲ್ಲ ತಿಂಡಿ ತಿನಸುಗಳೂ ರೂಪಾಂತರ ಹೊಂದಿವೆ ಬ್ರೆಡ್, ಬಿಸ್ಕೆಟ್ಸು, ಹುರುಳಿ, ಬೈಹುಲ್ಲು ಇತ್ಯಾದಿಗಳ ದರವು ಮುಂಚಿನಂತೆಯೇ ಅಧಿಕ ಪ್ರಮಾಣದಲ್ಲಿದೆ, ಕೋಳಿ ಬಂತು ಹುಲಿ ಬಂತು ಎಂಬುದು ಬರೇ ಗುಲ್ಲು ಎಂದು ಹೆಚ್ಚಿನವರ ಭಾವಿಸಿಕೊಂಡರೂ ಒಂದಲ್ಲ ಒಂದು ದಿನ ಬಂದೇ ಬರುವುದೆಂಬುದನ್ನು ಸರ್ವರೂ ಗಮನಿಸಬೇಕಾಗಿದೆ.

ಮದುವೆ ಸಮಾರಂಭದಲ್ಲಿ ರೇಶನಿಂಗ್ ಪ್ರಕರಣ —ಇದೇ ತಾ 20ರಲ್ಲು ಕೆಪ್ಟನ್ ಯು ಡಿ ಗೋಪಾಲರಾಯರ ಪುತ್ರಿಯ ಮದುವೆ ಸಮಾರಂಭದ ಭೋಜನಕ್ಕೆ ಸಂಬಂಧಪಟ್ಟ ಅಕ್ಕಿಯ ತಪಾಸಣೆ ನಡೆದು ಪಡಿಯಾಗಿ ಪಡೆದಿದ್ದ ಒಂದು ಮುಡಿ ಇಪ್ಪತ್ತೊಂದು ಸೇರು ಅಕ್ಕಿಯನ್ನು ರೇಶನಿಂಗ್ ಅಧಿಕಾರಿಗಳು ಪೋಲಿಸರ ಸಹಾಯದಿಂದ ಸ್ವಾಧೀನಪಡಿಸಿಕೊಂಡರು. ಭೋಜನಕ್ಕೆ ಬಂದಿದ್ದ ಸಾಧಾರಣ ಇನ್ನೂರಕ್ಕೆ ಮೇಲ್ಪಟ್ಟವರಿಗೆ ಅನ್ನದ ಬದಲಾಗಿ ಅರಳು ಅವಲಕ್ಕಿ ಬಡಿಸಲಾಯಿತು

ಶ್ರೀ ಕೃಷ್ಣ ಮಠಕ್ಕೆ—ಹೊಸ ಪರಿಮಾಣದಂತೆ ಮಠಕ್ಕೆ ನಾಲ್ವತ್ತ ಮೂರು ಮುಡಿ ಹತ್ತೊಂಭತ್ತು ಕಾಲು ಸೇರು ಅಕ್ಕಿ ವಿನಿಯೋಗಿಸಲು ರೇಶನಿಂಗ್ ಕ್ರಮಗಳಿಗನುಸಾರವಾಗಿ ದೊರೆಯುತ್ತದೆ ಆದರೆ ದಿನಾಲೂ ಇಷ್ಟು ಅಕ್ಕಿಯ ಅನ್ನದಾನವು ನಡೆಯುತ್ತಿದೆಯೋ ಎಂದು ಜನರು ಪ್ರಶ್ನಿಸುತ್ತಿದ್ದಾರೆ ರೇಶನಿಂಗ್ ಕಾಲದಲ್ಲಿರುವ ಬೆಳ್ಳಿ ಪಂಚಪಾತ್ರಧಾರಿಗಳಿಗೆ ಸದಾ ಸರ್ವದಾ ಬಡಿಸುವುದಕ್ಕಿಂತ ಅನಾಥ ನಿರ್ಗತಿಕರಿಗೆ ಭೋಜನಶಾಲೆಯಲ್ಲಿಯು ಅನ್ನದಾನದ ಮಿತಿಯನ್ನು ಏರಿಸುವುದು ಅತ್ಯಾವಶ್ಯಕವಷ್ಟೆ?

ಉದ್ಯಾವರ —ಸಿ ಪಿ ಸಿ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಾದ ಶ್ರೀ. ವಿ ಎಸ್. ಕುಡ್ವರು ಉದ್ಯಾವರದ ನೂತನ ಶ್ರೀ ವೀರ ವಿಠಲ ಆಯಿಲ್ ಎಂಡ್ ರೈಸ್ ಮಿಲ್ಲಿನ ಉದ್ಘಾಟನಾ ಸಮಾರಂಭವನ್ನು ಈದಿನ ಸಂಜೆ 4 ತಾಸಿಗೆ ನೆರವೇರಿಸಲಿರುವರು

ತಿದ್ದುಪಡಿ

ಕಳೆದ ವಾರದ ಪತ್ರಿಕೆಯಲ್ಲಿ ಪಿಲಾರು ವೇಂಕಟೇಶ ಬೋಯರ್ ಶಾಲೆಯು ಶ್ರೀ ಎ ಬಿ. ಸೆಟ್ಟರಿಂದ ತೆರೆಯಲ್ಪಟ್ಟಿತು ಎಂದು ತಪ್ಪಾಗಿ ಪ್ರಕಟಿಸಲಾಗಿದೆ ಶಾಲೆಯನ್ನು ತೆರೆದವರು ಡಾ। ವೆಂಕಟರಾವ್, ಬಿ. ಪಿ ಮತ್ತು ಬ್ಯಾಂಕಿನ ಡ್ಯಾರೆಕ್ಟರರ ಪ್ರತಿನಿಧಿಯಾಗಿ ಶ್ರೀ ಎ ಬಿ ಸೆಟ್ಟರು ಹಾಜರಿದ್ದರು ಎಂದು ವಾಚಕರು ತಿದ್ದಿ ಓದಬೇಕಾಗಿದೆ ಸಂ. ನ

—ನನಪಿರಲಿ—

ಖಾನದಾನ ಚಿತ್ರವನ್ನು ಘನತೆಗೇರಿಸಿದ ನೂರಜಹಾನ್‌ಳ ಮಧುರ ಪಂಜಾಬೀ ಗೀತಗಳು —

ಕಾಲದುದಕ್ಕೆ

ಮಹರಾಷ್ಟ್ರದ ಗಾಯನಕೋಕಿಲೆ

ಶಾಂತಾಆಪ್ಟೆಯ ವೀರಭೂಮಿಕೆ —

ದುಹಾ ಅಥವಾ ಶಪಥ

ತಾರೀಕು 29—6—44ರಿಂದ

THE BEST PREVENTIVE IN EPIDEMICS OF

CHOLERA

"BHUVANENDRA"

CHANDRAMAS

Will give you the best results Try once and be satisfied with the results

Dose 1 or adults - 3 to 5 drops 2 to 3 times a day with the decoction of cloves or ajwan

For Children 1 to 2 drops with the said decoction

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ನಾನಾತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ 3ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು — ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ ಆರ್ ಎಸ್. ಕಿಣಿ, ರಥಬೀದಿ; ಡಾ. ಪಿ ಜಿ. ಆಚಾರ್ಸ್ ಫಾರ್ಮೆಸಿ, ಡಾ. ಕೆ ಶೇಷಗಿರಿ ಪೈ L I M., ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

ಆಗೋಸ್ತು ಗಲಬೆಗೆ ಯಾರು ಹೊಣೆ?

೩ನೇ ಪುಟದಿಂದ ಮುಂದುವರಿಸಿದುದು

'ಕ್ವಿಟ್ ಇಂಡಿಯಾ' ಸಂಕಟ

ಸರಕಾರವು ತನ್ನನ್ನು ತಾನೇ ಮರೆಯುವಷ್ಟು ಕಾಂಗ್ರೆಸನ್ನೀರೀತಿ ವಿಶೇಷ ರೀತಿಯಿಂದ ದೂಷಿಸಲೇನು ಕಾರಣ? ಈ ಮೊದಲೆಂದೂ ಸರಕಾರವಿಂತಹ ದ್ವೇಷಾಸೂಯೆ ಪ್ರದರ್ಶಿಸಿದುದಿಲ್ಲ. 'ಕ್ವಿಟ್ ಇಂಡಿಯಾ'ವೇ ಇದಕ್ಕೆ ಕಾರಣವಾಗಿರಬಹುದೆ? ಬ್ರಿಟಿಷರು ಹೊರಡಬೇಕೆಂಬ ಸನ್ನ ಸೂಚನೆಯೊಡನೆಯೇ ಈ ಹೊಟ್ಟೆಯುರಿಯ ಪ್ರದರ್ಶನಕ್ಕಾರಂಭವಾಗಿದ್ದುದರಿಂದ ಗೊಂದಲವು ಇದಕ್ಕೆ ಹೇತುವೆನ್ನಲಾಗುವದಿಲ್ಲ. ಮೊದಲೇ ವ್ಯವಸ್ಥೆ ನಡೆದಿದ್ದು, ಆಗೋಸ್ತು 8ರ ನಿರ್ಧಾರವಾಗುವ ವರೆಗೆ ನೆವನ ಮಾತ್ರಕ್ಕಾಗಿ ಕಾದು, ತಾ. 9ರಲ್ಲಿ ನಡೆದ ಸಾಮೂಹಿಕ ದಸ್ತಗಿರಿಯ ರೂಪದಿಂದ ಈ ದ್ವೇಷ ಕಾಣಿಸಿಕೊಂಡಿತು. 'ಕ್ವಿಟ್ ಇಂಡಿಯಾ' ಒಂದನ್ನು ಬಿಟ್ಟರೆ ಆಗೋಸ್ತು ನಿರ್ಧಾರದಲ್ಲಿ ಹೊಸತೇನೂ ಇರಲಿಲ್ಲ. ಸಾಮೂಹಿಕ ಚಳವಳವೆಂಬುದು 1920 ರಿಂದಲೇ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಬಂದಿದ್ದ ವಿಷಯ. ಆದರೆ ಸ್ವಾತಂತ್ರ್ಯ ಮಾತ್ರ ದೂರವೇ ಉಳಿದಿದೆ. ಹಿಂದೂ ಮುಸ್ಲಿಮ್ ಭಿನ್ನತೆ, ಆಶ್ರಿತ ರಾಜರ ಸಂಬಂಧ, ದಳಿತ ವರ್ಗದವರ ರಕ್ಷಣೆ, ಯುರೋಪಿಯಾನರ ಹಿತ ಸಂಬಂಧ-ಇತ್ಯಾದಿಗಳು ಸ್ವಾತಂತ್ರ್ಯದ ಅಡ್ಡ ಬೇಲಿಯಾಗಿಡಲ್ಪಟ್ಟಿದ್ದುವು. 'ವಿಭಾಗಿಸಿ ಆಳು'ವ ತತ್ವವು ಬತ್ತಿಹೋಗದ ಬಾವಿ. ಕಾಲದ ಉಸುಬು ಎದ್ದು ಹಾರುತ್ತಿದೆ, ಯುದ್ಧ ಪ್ರಸ್ತುತ ರಾಷ್ಟ್ರಗಳಲ್ಲಿ ರಕ್ತದ ನದಿ ತೀವ್ರ ಪ್ರವಾಹದಲ್ಲಿ ಹರಿಯುತ್ತಿದೆ. ಆದರೆ ರಾಜಕೀಯ ಬುದ್ಧಿಯು ಭಾರತ ಕೈಗಾಲು ಬಿಟ್ಟು ನೋಡುತ್ತಿದೆ–ಜನಸಾಮಾನ್ಯರು ಮಂಕಾಗಿದ್ದಾರೆ. ಆದಕ್ಕಾಗಿಯೇ 'ಕ್ವಿಟ್ ಇಂಡಿಯಾ' ಕರೆ. ಅದು ಸ್ವಾತಂತ್ರ್ಯ ಚಳವಳಕ್ಕೊಂದು ರೂಪುಗೊಟ್ಟಿತು. ಉತ್ತರಿಸಲಸಾಧ್ಯವಾದ ಕರೆಯಿದು. ನಾಜೀಶಾಹಿ ಮತ್ತು ಸಾಮ್ರಾಜ್ಯಶಾಹಿ ಎರಡರಿಂದಲೂ ಪ್ರಜಾಶಕ್ತಿಯನ್ನು ಉಳಿಸುವದೇ ಅದರ ಮೂಲಭೂತ ಗುರಿ. ಆದರೆ ಈ ಬೇಡಿಕೆಯು ಸರಕಾರವನ್ನು ಕೆರಳಿಸಿದೆ. ಈ ಬೇಡಿಕೆಯನ್ನನುಕರಿಸಿದವರನ್ನು ಸರಕಾರದವರು ಅವಿಶ್ವಾಸದಿ[illegible]ರು -ಆ ಮೂಲಕ ಅವರು ಸ್ವತಃ ತಾವೇ ಯುದ್ಧ ಪ್ರಯತ್ನದ ಪ್ರಬಲ ಆತಂಕವಾದರು. ಆದ್ದರಿಂದ ಕಾಂಗ್ರೆಸು ಯುದ್ಧ ಯತ್ನಕ್ಕೆ ಭಂಗವೊಡ್ಡಿತೆಂದು ದೂರುವದು ತಪ್ಪು. ಆಗೋಸ್ತು 8ನೇ ರಾತ್ರಿಯ ವರೆಗೂ ಕಾಂಗ್ರೆಸಿನ ಕಾರ್ಯವೆಂದಿದ್ದುದು ಠರಾವುಗಳ ರಚನೆಯೊಂದೇ; ತಾ. 9ನೇ ಸೂರ್ಯೋದಯವಾಗುವ ಮೊದಲು ಕಾಂಗ್ರೆಸು ಬಂಧನಕ್ಕೊಳಗಾಗಿದ್ದಿತು. ಆ ಮೇಲೆ ನಡೆದುದೆಲ್ಲವೂ ಸರಕಾರೀ ಕೃತ್ಯದ ಪ್ರತ್ಯಕ್ಷ ಪರಿಣಾಮ.

ಸರಕಾರವು ನಂಬಿಗೆಗರ್ಹವಾಗಿಲ್ಲ.

ನನ್ನೀ ನ್ಯಾಯ ಹಾಗೂ ಗೌರವಾನ್ವಿತ ಪ್ರತಿವಾದವು, ಯುದ್ಧಾನಂತರದ ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯದ ಕುರಿತು ಸರಕಾರದ ಪರಂಪರಾಗತ ವಿಶ್ವಾಸ ದ್ರೋಹದಿಂದಾಗಿ ಎದ್ದಿರುವ ಜನತೆಯ ಸಂದೇಹದ ಪ್ರತಿಬಿಂಬವಾಗಿದೆ. ಸರಕಾರದಲ್ಲಿ ಪ್ರಾಮಾಣಿಕತೆಯಿರುತ್ತಿದ್ದರೆ ಅದು ಕಾಂಗ್ರೆಸ್ ಸಹಾಯ ಸೂಚನೆಯನ್ನು ಸ್ವಾಗತಿಸುತಿತ್ತು. ಅರ್ಧ ಶತಮಾನಕ್ಕೂ ಮಿಕ್ಕಿ ಸ್ವಾತಂತ್ರ್ಯಕ್ಕಾಗಿ ಹೆಣಗಾಡುತ್ತಿದ್ದ ಕಾಂಗ್ರೆಸಿಗರು, ತಮಗೆ ಹೊಸದಾಗಿ ದೊರೆತ ಭಾರತ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ಓರ್ವ ಮನುಷ್ಯನಂತೆ ಮಿತ್ರರ ಧ್ವಜದಡಿಯಲ್ಲಿ ಜಮೆಯಾಗುತ್ತಿದ್ದರು. ಆದರೆ ಭಾರತವನ್ನು ಸಮಾನ ಪಾಲುಗಾರ ಮತ್ತು ಮಿತ್ರನಂತೆ ಕಾಣಲು ಸರಕಾರವಿಚ್ಛಿಸುವದಿಲ್ಲ. ಆ ಬೇಡಿಕೆಯನ್ನು ಮುಂದಿಟ್ಟವರ ಕಾರ್ಯಕ್ಕೆ ಪ್ರತಿಬಂಧ ಬಿತ್ತು. ಅವರಲ್ಲಿ ಕೆಲವರಂತೂ, ಅಪಾಯಕಾರೀ ತಕ್ಕೀರುಗಾರರೆಂಬಂತೆ ಬೇಟೆಯಾಡಲ್ಪಟ್ಟರು. ಹೀಗನ್ನುವಾಗ ಶ್ರೀ. ಜೈ ಪ್ರಕಾಶ ನಾರಾಯಣ ಮತ್ತು ಅವರಂತಹ ಇತರರು ನನ್ನ ದೃಷ್ಟಿ ಪಥದಲ್ಲಿದ್ದಾರೆ. ಜೈಪ್ರಕಾಶರಡಗಿರುವ ಸ್ಥಳತೋರಿಸಿ ಕೊಟ್ಟವರಿಗೆ ರೂ 5000–ಈಗ ಅದು ಇಮ್ಮಡಿಯಾಗಿದೆ–ಬಹುಮಾನವೆಂದು ಸಾರಲಾಗಿದೆ. ನಾನು ಜೈಪ್ರಕಾಶರ ಉದಾಹರಣೆಯನ್ನೇ ಉದ್ದೇಶ ಪೂರ್ವಕ ಎತ್ತಿಕೊಂಡುದೇಕೆಂದರೆ, ಅವರೇ ಹೇಳಿರುವ ಸತ್ಯಮಾತಿನಂತೆ, ನನಗೂ ಅವರಿಗೂ ಮೂಲಭೂತ ತತ್ವಗಳಲ್ಲೇ ಭಿನ್ನಾಭಿಪ್ರಾಯವಿದೆ. ಆದರೆ ನನ್ನ ಭಿನ್ನಾಭಿಪ್ರಾಯಗಳೆಷ್ಟೇ ದೊಡ್ಡದಿದ್ದರೂ, ಅವರ ಅಭೇದ್ಯ ಧೈರ್ಯ, ಮತ್ತು ದೇಶಪ್ರೇಮಕ್ಕಾಗಿ ಅವರು ಮಾಡಿರುವ ತನ್ನ ಸರ್ವತ್ಯಾಗಗಳ ಕಡೆಗೆ ನಾನು ಕುರುಡಾಗಲಾರೆ. ಸರಕಾರದ ಆಪಾದನೆಯಲ್ಲಿ ಪುರವಣಿಯಾಗಿ ಕೊಡಲ್ಪಟ್ಟದ ಅವರ ಪ್ರಕಟಣೆಯನ್ನು ನಾನು ಓದಿದ್ದೇನೆ. ಅದರ ಕೆಲವಭಿಪ್ರಾಯಗಳಿಗೆ ನನ್ನ ಒಪ್ಪಿಗೆಯಿಲ್ಲವಾದರೂ, ಆ ಪ್ರಕಟಣೆ ತುಂಬಾ ಅವರ ಉಜ್ವಲ ರಾಷ್ಟ್ರಪ್ರೇಮ ಮತ್ತು ವಿದೇಶೀ ಅಧಿಕಾರದ ಮೇಲೆ ಅವರಲ್ಲುಂಟಾಗಿರುವ ಅಸಹಿಷ್ಣುತೆಗಳ ಹೊರತು ಬೇರೇನೂ ಇಲ್ಲ. ಯಾವ ರಾಷ್ಟ್ರವಾದರೂ ಹೆಮ್ಮೆ ಪಡಬೇಕಾದ ಸದ್ಗುಣವಿದು.

ಅಪಾಯಕಾರೀ ಆತ್ಮತೃಪ್ತಿ.

ಖಾದಿ, ಚರಕಾ, ಹರಿಜನ ಕಾರ್ಯವೇ ಮೊದಲಾದ ವಿಧಾಯಕ ಕಾರ್ಯಕರ್ತರನ್ನೂ ಬಂಧಿಸಿ ಉಪಕರಣಗಳನ್ನಪಹರಿಸಿದ ಹಲವು ದೃಷ್ಟಾಂತಗಳನ್ನು ಉಲ್ಲೇಖಿಸಿ ಸರಕಾರದ ನೀತಿಯೇನೆಂದು ಗಾಂಧಿಜೀ ಪ್ರಶ್ನಿಸಿ ಹೀಗನ್ನುತ್ತಾರೆ. ಭಾರತೀಯರು ಆಹಾರ, ವಸ್ತ್ರ ಮತ್ತು ಜೀವನಾವಶ್ಯಕ ಇತರ ಸಾಮಗ್ರಿಗಳ ಅಭಾವದಿಂದ ಕಂಗೆಟ್ಟಿರುವಾಗ, ಈ ದರ್ದೈವೀ ದೇಶದಿಂದ ತಾವು ಅಪರಿಮಿತ ಜನ ಮತ್ತು ಉಪಕರಣಗಳನ್ನು ಪಡೆದೆವೆಂಬ ದೊಡ್ಡದೊಡ್ಡ ಅಧಿಕಾರಿಗಳ ಆತ್ಮತೃಪ್ತಿ ಪ್ರದರ್ಶನವು ಸತ್ಯಕ್ಕೂ ವಿಕಟವಿನೋದದಾಯಿಯಿದೆ. ಅಖಿಲ ಭಾರತ ಕಾಂಗ್ರೆಸ್ ಕೆಲಸಗಾರರನ್ನು ಬಂಧಿಸಿಡುವ ಬದಲಿಗೆ, ಅವರ ಸೇವೆಯನ್ನು ಸರಕಾರವಂಗೀಕರಿಸುತ್ತಿದ್ದರೆ, ಮೇಲಿನ ಬರಗಾಲವು ಪೂರ್ಣ ನಿವಾರಣೆಯಾಗದಿದ್ದರೂ ಬಹುತೇಕವಾಗಿ ಕಡಿಮೆಯಾಗುತ್ತಿತ್ತೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಕಾಂಗ್ರೆಸ್ ಮಧ್ಯವರ್ತಿತ್ವದ ಸತ್ಪರಿಣಾಮದ ಎರಡು ಉತ್ತಮ ನಿದರ್ಶನಗಳು ಸರಕಾರದ ಕಣ್ಣಮುಂದಿವೆ–ಒಂದು ಬಾಬು ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿ ಕಾಂಗ್ರೆಸ್ ಮಾಡಿದ್ದ ಬಿಹಾರ್ ಭೂಕಂಪದ ಅನಾಹುತಶಮನ; ಮತ್ತೊಂದು ಸರದಾರ್ ವಲ್ಲಭಾಯಿಯವರ ನಾಯಕತ್ವದಲ್ಲಿ ನಡೆದಿದ್ದ ಅಷ್ಟೇ ಮಹತ್ವಾದ ಗುಜರಾಥಿನ ನೆರೆಹಾವಳಿ ನಿವಾರಣೆ.

ಆರೋಪ ಹಿಂದೆಗೆಯಿರಿ.

ಸರಕಾರೀ ಆಪಾದನೆಯಲ್ಲಿ ನನ್ನ ಅಥವಾ ಕಾಂಗ್ರೆಸಿನ ಮೇಲಿನ ಯಾವುದೊಂದು ರುಜುವಾತೂ ಇಲ್ಲವೆಂಬುದನ್ನು ಸರಕಾರಕ್ಕೆ ಮನಗಾಣಿಸುವದೇ ನನ್ನೀ ಉತ್ತರದ ಪ್ರಮುಖೋದ್ದೇಶ. ಹಿಂದೀ ಜನತೆಯು ಈ ಆರೋಪಗಳನ್ನು ನಂಬದೆ, ವಿದೇಶಗಳಲ್ಲಿ ಪ್ರಚಾರೋದ್ದೇಶಕ್ಕಾಗಿಯೇ ಅದು ನಿರ್ಮಾಣಗೊಂಡಿದೆ ಎಂದು ತಿಳಿದಿದ್ದಾರೆ ಎಂಬುದು ಸರಕಾರಕ್ಕೆ ಗೊತ್ತಿದೆ. ಸರ್. ಸಪ್ರು, ಜಯಕರರಂತಹ ಮನುಷ್ಯರು ಈ ಆಪಾದನೆಯ ರುಜುವಾತುಗಳಿಗೆ ನ್ಯಾಯಬದ್ಧ ಬೆಲೆಯಿಲ್ಲವೆಂದಿದ್ದಾರೆ. ಆದ್ದರಿಂದ ಸರಕಾರವೀ ಆರೋಪವನ್ನು ಹಿಂದೆಗೆಯಬೇಕು. ಈ ಹೇಳಿಕೆಯಲ್ಲಿ ನಾನೆಲ್ಲಿಯಾದರೂ ತಪ್ಪಿಬಿದ್ದಿದ್ದರೆ ನನಗದನ್ನು ತಿಳಿಸಿದಲ್ಲಿ ಸಂತೋಷಪೂರ್ವಕ ತಿದ್ದಿಕೊಳ್ಳುವೆ. ನನಗೆ ತೋರಿದಂತೆ ಬರೆಯುತ್ತ ಹೋದ ಪತ್ರವಿದು.

It pays always
to Insure with & represent
THE CRESCENT INSURANCE CO. LTD.,
Estd:] BOMBAY. [1919
Apply to.
T. A. Vasudevan,
Udipi, S. K.
ವಿಮೆಯಿಳಿಸಲು ಮತ್ತು ಪ್ರಾತಿನಿಧ್ಯ ವಹಿಸಲು
ಲಾಭದಾಯೀ ಸಂಸ್ಥೆಯೆಂದರೆ
ದಿ ಕ್ರಸೆಂಟ್ ಇನ್ಶೂರೆನ್ಸ್ ಕೊ.
ಲಿಮಿಟೆಡ್., ಬೊಂಬಾಯಿ.
ಸ್ಥಾಪನೆ:— 1919.
ಬರೆಯಿರಿ:—
ಟಿ. ಎ. ವಾಸುದೇವನ್, ಉಡುಪಿ.

WANTED a Secondary Grade Trained Teacher from 1-7-1944.
Apply to.
The Correspondent,
Christian High School,
UDIPI.

NOTICE
In the Court of the District Munsif of Mangalore.
O. S. No. 88/1944.
Between
Kauthakke & others—Plaintiffs.
and
Dasu Shetty & others.
—Defendants.

To the Defendants: 1. Dasu Shetty, 2. Giriya Shetty, 3. ThyampannaShetty, 4 Ramappa Shetty, 5. Kollu alias Akkamina Shedthi, 6. Sanjiva Shetty, 7. Rajeevi, 8. Jayarama Shetty, 9. Bhavani, 10. Poovappa Shetty, 11. T.Madappa Shetty–All reside at Surathkal village, Mangalore Taluk, except No.11 who resdies at Thalipadi village.

Please take notice that the above suit filed against you for deposing the 1st Deft. for ejamanship & for setting aside certain alienations will come for hearing on 30-6-1944 at 11 A. M. In case you fail to appear in person or pleader & contest the same the suit will be decided exparte.

A. Shanker Alva,
Vakil for Plaintiff.
Mangalore, Date 23-6-1944.
(By order of Court.)

The Board of Directors,
Sri Narayan Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director

The Pangal Nayak Bank Limited.

(Incorporated in 1920)

Registered Office Court Road, UDIPI

Branches at— **Udipi, Mangalore, Katapadi, Kanhangadi Kinnigoli and Nileshwar, South Canara District**

Discounting of demand and short-term negotiable instruments for approved parties granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices

15th April 1944

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ **15** ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

THE VIJAYA BANK, LTD.,

Head office

MANGALORE.

Glad to announce that a Branch of the Bank has been opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ. 15-6-44ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿರುವುದು

ದಿ ವಿಜಯಾ ಬೇಂಕ್ ಲಿಮಿಟೆಡ್

REGD

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಚೇನೆ ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಪಧ್ಯ. ಹುಳುಕಡ್ಡಿ ಮುದ್ದು ಸಹ ನಮ್ಮಲ್ಲಿ ಸಿಕ್ಕುತ್ತವೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. **1-8-0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ 2-8-0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ದಿ ಜುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: **ಬೊಂಬಾಯಿ**

ಚೀಫ್ ಏಜನ್ಸಿ ಆಫೀಸು—**ಉಡುಪಿ.**

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲಿ ಲಕ್ಷಾವಧಿ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ನಿಮ್ಮ ಮತ್ತು ನಿಮ್ಮ ಕುಟುಂಬದ ಭಾವೀ ಕಲ್ಯಾಣಕ್ಕಾಗಿ.

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರ ಬೇಕಾಗಿದ್ದಾರೆ

ಪಿ. ಡಿ. ನಾಯಕ್,

ದ. ಕನ್ನಡದ ಚೀಫ್ ಏಜಂಟರು,

ಉಡುಪಿ.

The Jupiter General Insurance Co. Ltd., Bombay.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5-0-0 ಪೋಸ್ಟ ಚಾರ್ಜು ನಿರಾಳ.

ಮಾಲಕರು—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಕುಂಬರವಾಡಿ ಸಪ್ಲಾಯರ್ಸ. ದಾವಣಗೇರಿ—ದಾವಣಗೇರಿ ಪ್ರೆಸ್ಸ್. ಆರ್ ಎಲ್ ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೬ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ.ಕ**

ಸ್ಥಾಪನೆ **ಕ್ರಾನ್ ರಬ್ಬರ ಸ್ಟಾಂಪ್ ಕಂಪನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co, 18 Balmat Road, MANGALORE.

Approved firm by the Govt. of Mysore.

Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618. Estd. 1921 ಸ್ಥಾಪನೆ.

1944ನೇ ಜನವರಿಯಿಂದ
ಮೂರನೆ ಸಂಪುಟಾರಂಭ!
— ಉಡುಪಿ —
ಪ್ರಕಾಶಿನಿ
ಪುರೋಗಾಮಿ ಮಾಸಪತ್ರಿಕೆ
ವಾರ್ಷಿಕ ಚಂದಾ ರೂ. 3-0-0
ಬಿಡಿ ಪ್ರತಿಗೆ 0-4-0
ಮಾದರಿ ಪ್ರತಿಗೆ ಐದಾಣೆ
ಸ್ಟಾಂಪಿನೊಂದಿಗೆ ಬರೆಯುವುದು:
'PRAKASHINI'
UDIPI

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪ ಸಂಚಿಕೆ ೪೪ | FOUNDER Sri. A. B. Shetty. | Vol. 24 No. 44

NAVAYUGA— Kannada Weekly —UDIPI, S. I.

ಉಡುಪಿ • 6—7—1944 • ಮಂಗಳೂರು.

ANTARANGA
UDIPI
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಿನೋದ ವಾರ ಪತ್ರಿಕೆ
ಅಂತರಂಗ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ.

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Estd. 1908]
The "Bombay Life" Bldg.,
UDIPI, S. K.

Offices and Agencies throughout South India.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
-ಔಷಧ-

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೂಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಿಂಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರವಾಗಬೇಕೆಂದುವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟೆಲಾಗ್ ಬರೆದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸಬಹುದು. ಉಡುಪಿ ಏಜೆಂಟರು:—ನವಭಾರತ ಬುಕ್ ಡಿಪೊ

ಸುಲಭದಲ್ಲಿ ಇಂಗ್ಲಿಷ್ ರೂ. ೧— ೦—೦
ನಗೆ ನೋಟಗಳು ರೂ. ೦—೧೨—೦

ಗಾಂಧಿಜೀ ಗಮನ—

ಕಾರ್ಯಕ್ರಮದಂತೆ ಮಹಾತ್ಮಾಜಿಯವರು ಪೂನೆಯಿಂದ ಇಪ್ಪತ್ತು ಮೈಲುಗಳ ದೂರದ ಬದಿಯ ಚಿಕ್ಕ ಆರೋಗ್ಯ ವಸತಿ ಪಾಂಚ್‌ಗನಿಗೆಹೋಗಿದ್ದಾರೆ ಹವಾಮಾನವೊಗ್ಗಿದರೆ ಅಲ್ಲಿಯೇ ಒಂದು ತಿಂಗಳು ವಾಸಿಸುವ ಯೋಚನೆಯಿದೆ. ಮಹಾತ್ಮರು ಬಿಡುಗಡೆ ಹೊಂದಿದಂದಿನಿಂದ ಕನವರಿಸುತ್ತಿರುವ ಸ್ಥಳವೆಂದರೆ ಅವರ ಸ್ವಂತ ಸೇವಾಗ್ರಾಮ ಆದರೆ ಅಲ್ಲಿ ಈ ವರೆಗೂ ಅಸಹನೀಯ ಶಾಖವಿದೆಯಂತೆ. ಅದ್ದರಿಂದ ಪಾಂಚ್‌ಗನಿಯೊಗ್ಗದಿದ್ದರೆ ಮಹಾತ್ಮರಲ್ಲಿಂದ ಪುನಃ ಪೂನೆಗೆ ಹೋಗಬಹುದು. ಆದರೆ ಅವರೊಂದು ಕೊನೆಯ ನಿರ್ಧಾರ ಕೈಗೊಳ್ಳುವದು ಸೇವಾಗ್ರಾಮ ಸೇರಿದ ನಂತರವೇ

ವೈಸರಾಯಿ ನಕಾರ.

ಈ ಬಾರಿ ಪೂನೆಗೆ ಹೋದೊಡನೆಯೇ ಗಾಂಧಿಜೀ ಲೋರ್ಡ್ ವೇವೆಲರಿಗೊಂದು ಪತ್ರ ಬರೆದು—'ಮುಂದಿನ ಕಾರ್ಯಾಲೋಚನೆಗಾಗಿ ವರ್ಕಿಂಗ್ ಕಮಿಟಿ ಮೆಂಬರರ ಬಿಡುಗಡೆಯ ಅಗತ್ಯವಿದೆ; ಆ ಆವಶ್ಯಕತೆಯನ್ನು ತಮಗೆ ಮನಗಾಣಿಸಲು ಅಥವಾ ಸದ್ಯ ಸ್ಥಿತಿಯ ಕುರಿತು ತರ್ಕಿಸಲು ತಾವ ಪೇಕ್ಷಿಸುವದಾದರೆ ಸ್ವತಃ ಭೇಟಿಯಾಗಲು ಸಿದ್ಧನಿದ್ದೇನೆ' ಎಂದು ಕೇಳಿಕೊಂಡಿದ್ದರು. ಇದಕ್ಕೆ ವೈಸರಾಯರಿಂದ ದೊರೆತ ಉತ್ತರದಿಂದ ಪೂನೆಯಲ್ಲೊಮ್ಮೆ ನಿರಾಶೆಯ ಕಾರ್ಮುಗಿಲು ಕವಿದಿತ್ತು

ಗಾಂಧಿಜಿಯ ಪತ್ರ

ಆಶೆ-ನಿರಾಶೆಗಳನ್ನೆಬ್ಬಿಸಿದ, ಗಾಂಧೀ-ವೈಸರಾಯಿ ಕೊನೆಯ ಪತ್ರಗಳೆರಡೂ ಈಗ ಪ್ರಕಟವಾಗಿವೆ.

ಪ್ರಕೃತಿ ಚಿಕಿತ್ಸಾಲಯ, 6 ಟೋಡ್ವಿ ವಾಲಾ ರಸ್ತೆ, ಪೂನಾ,
ಜೂನ್ 17, 44.

ಪ್ರಿಯಮಿತ್ರ,

ಈ ಪತ್ರವು ನಿಮ್ಮ ನಿಶ್ಚಿತ ಕಾರ್ಯಕ್ರಮಗಳಿಗನುಗುಣವಾಗಿ ಇಲ್ಲದಿರುತ್ತಿದ್ದರೆ,ನಾನು ಇನ್ನೊಂದು ಪತ್ರಬರೆದು ನಿಮ್ಮನ್ನು ಉಪದ್ರವಿಸುತ್ತಿರಲಿಲ್ಲ.

ಸಾಕಷ್ಟು ಕಾರಣವಿಲ್ಲದಿದ್ದರೂ, ಇಡೀ ದೇಶವು--ಅಂತೆಯೇ ಹೊರಗಿನ ಕೆಲವರು ಕೂಡಾ--ಸರ್ವಹಿತಸಾಧಕ ನಿರ್ಧಾರವೊಂದನ್ನು ನಾನು ಮಾಡಬೇಕೆಂದು ಹಾರೈಸುತ್ತಿದ್ದಾರೆ ನನ್ನ ಅನಾರೋಗ್ಯದ ಸ್ಥಿತಿಯು ಇನ್ನಷ್ಟು ದೀರ್ಘಾವಧಿಯನ್ನು ಪಡಕೊಳ್ಳುವಂತಿದೆ ಎನ್ನಲು ಶಸ್ತ್ರಾಸ್ತ್ರವಿಲ್ಲ ನಿಶ್ಯಕ್ತನೆ ನಾನು ಪೂರ್ಣಾರೋಗ್ಯದಿಂದಿದ್ದರೂ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಭಿಪ್ರಾಯ ತಿಳಿಯದೆ, ನನ್ನಿಂದ ಸಾಧಿಸಲಾಗುವದು ಅತ್ಯಲ್ಪ,ಅಥವಾ ಏನೂ ಇಲ್ಲವೆಂದರೂ ಸಲ್ಲುವದು. ನಾನು ಕೈದಿಯಾಗಿರುವಾಗಲೂ ಅವರ ಭೇಟಿಯ ಅನುಮತಿಗಾಗಿ ವಾದಿಸಿದ್ದೆ; ಈಗ ಸ್ವತಂತ್ರ ಮನುಷ್ಯನಾಗಿಯೂ ಅದೇ ಅನುಮತಿ ಯಾಚಿಸುತ್ತಿದ್ದೇನೆ. ನೀವೊಂದು ನಿರ್ಧಾರಕ್ಕೆ ಬರುವ ಮೊದಲು ನನ್ನನ್ನು ಕಾಣಬಹುದಾದರೆ,-ದೂರ ಪ್ರಯಾಣಕ್ಕೆ ನನ್ನ ಡಾಕ್ಟರರ ಅನುಮತಿ ದೊರೆತೊಡನೆಯೇ ನೀವು ಅಪೇಕ್ಷಿಸಿದಲ್ಲಿಗೆ ಹೋಗಲು ನಾನು ಸಂತೋಷಪೂರ್ವಕ ತಯಾರಿದ್ದೇನೆ.

ನಾನು ಬಂಧನದಲ್ಲಿದ್ದಾಗ, ಅಧಿಕಾರಿಗಳು ಮತ್ತು ನನ್ನೊಳಗೆ ನಡೆದಿದ್ದ ಪತ್ರ ವ್ಯವಹಾರಗಳ ಪ್ರತಿಗಳನ್ನು ನನ್ನ ಮಿತ್ರರಿಗೆಲ್ಲಾ ಖಾಸಗೀ ಉಪಯೋಗಕ್ಕೆಂದು ವಿತರಣೆ ಮಾಡಿದ್ದೇನೆ ಅದನ್ನು ಪತ್ರಿಕೆಗಳಲ್ಲೂ ಬಹಿರಂಗಪಡಿಸಲೊಪ್ಪಿಗೆಯಿತ್ತು ಸರಕಾರವು ನನ್ನ ಪಾಲಿಗೆ ನ್ಯಾಯ ತೋರಿಸಬೇಕೆಂದು ನನ್ನ ಬಯಕೆ.

ವೈಸರಾಯಿ ಗೃಹಕ್ಕೋ, ಕಾರಾಗ್ರಹಕ್ಕೋ?

30ನೇ ತಾರೀಕಿನ ವರೆಗೆ ನನ್ನ ವಿಳಾಸವು ಮೇಲಿನದೇ.

ನಿಮ್ಮ ಯಥಾರ್ಥವಾದಿ,
ಎಂ. ಕೆ. ಗಾಂಧಿ

ವೈಸರಾಯರ ಉತ್ತರ.

ವೈಸರಾಯಿ ಭವನ, ನವದಿಲ್ಲಿ
ಜೂನ್, 22-1944.

ಪ್ರಿಯ ಶ್ರೀ. ಗಾಂಧಿ

ನಿಮ್ಮ ಜೂನ್ ತಾ 17ರ ಪತ್ರ ಕೈ ಸೇರಿದೆ

ಇತ್ತೀಚೆಗೆ ನಮ್ಮೊಳಗೆ ನಡೆದಿದ್ದ ಪತ್ರ ವ್ಯವಹಾರಗಳಲ್ಲಿ ಖಚಿತವಾಗಿರುವ ತೀವ್ರ ಭಿನ್ನಾಭಿಪ್ರಾಯಗಳ ಮೇಲಿಂದ ನನಗನ್ನಿಸುತ್ತಿದೆ-ಪ್ರಕೃತ ನಾವಿಬ್ಬರೊಂದಾಗಿ ಚರ್ಚಿಸುವದರಿಂದ ಏನೂ ಬೆಲೆ ಬರುವಂತಿಲ್ಲ. ಮತ್ತದು ನಿರಾಶೆಯಲ್ಲಿ ಪರ್ಯವಸಾನಗೊಳ್ಳುವ ಆಸೆಯನ್ನಷ್ಟೇ ಹುಟ್ಟಿಸಬಲ್ಲುದು.

ವರ್ಕಿಂಗ್ ಕಮಿಟಿಯನ್ನು ಕಾಣಬೇಕೆಂಬ ನಿಮ್ಮ ವಿಜ್ಞಾಪನೆಗಾದರೂ ಮೇಲಿನ ಅಭಿಪ್ರಾಯವೇ ಹೊಂದಿಕೆಯಾಗಬಲ್ಲುದೆಂದು ನನ್ನ ಶಂಕೆ ನೀವು 'ಕ್ವಿಟ್ ಇಂಡಿಯಾ' ಠರಾವಿಗಂಟಿಕೊಂಡೇ ಇರುವಿರೆಂಬುದನ್ನು ಇತ್ತೀಚೆಗೆ ಬಹಿರಂಗಪಡಿಸಿರುವಿರಿ. ಅದು, ಕೂಡಲೇ ಕೈಕೊಳ್ಳಬೇಕಾದ ಸಕಾರಣ ಅಥವಾ ವ್ಯವಹಾರ್ಯ ಧೋರಣೆಯಾಗಲಾರದೆಂದು ನನ್ನ ಅಭಿಪ್ರಾಯವಿದೆ.

ಗುಣ ಹೊಂದಿ, ಇನ್ನಷ್ಟು ವಿಚಾರಕ್ಕೊಳಗಾಗಿ, ನೀವೇನಾದರೂ ಭಾರತದ ಕಲ್ಯಾಣ ಸಾಧನೆಗೊಗ್ಗುವ ಸ್ಪಷ್ಟ ಹಾಗೂ ವಿಧಾಯಕ ಧೋರಣೆಯನ್ನು ಸೂಚಿಸುವದಾದರೆ, ನಾನದನ್ನು ಸಂತೋಷಪೂರ್ವಕ ಪರ್ಯಾಲೋಚಿಸಲಿದ್ದೇನೆ.

ನನಗಾವ ಸೂಚನೆಯನ್ನೂ ಕೊಡದೆ, ನೀನಿಷ್ಟರಲ್ಲೇ, ನಮ್ಮೊಳಗಿನ ಪತ್ರ ವ್ಯವಹಾರಗಳನ್ನು ಹಂಚಿರುವದರಿಂದಲೂ, ಅಂತೆಯೇ ಪತ್ರಿಕೆಗಳಲ್ಲವು ಪ್ರಕಟವಾಗಿರುವುದರಿಂದಲೂ ನೀವು ನಿರ್ಬಂಧದಲ್ಲಿರುವಾಗ ಬರೆದಿದ್ದ ಎಲ್ಲಾ ಪತ್ರಗಳನ್ನೂ ಪ್ರಕಟಿಸುವಂತೆ ನಾನು ಸೂಚಿಸಿದ್ದೇನೆ.

ನಿಮ್ಮ ಯಥಾರ್ಥ
ವಾದಿ, ವೇವೆಲ್.

ಮಹಾತ್ಮರು ತಾ 1ರಲ್ಲಿ 'ಕಸ್ತೂರಿಬಾ ಸ್ಮಾರಕ ಸಮಿತಿ'ಯ ಅಧ್ಯಕ್ಷತೆ ವಹಿಸಿ 40 ಮಿನಿಟು ಭಾಷಣವಿತ್ತರು. ತತ್ಪರಿಣಾಮವಾಗಿ ಒಡನೆಯೇ ರಕ್ತದೊತ್ತಡವೇರಿತು. ತಾ 2ರಲ್ಲಿ ಪೂನೆಯಿಂದ ಪಾಂಚ್‌ಗನಿಗೆ ತೆರಳಿದ್ದಾರೆ

ಪೂರ್ತಿ ನಿರಾಶೆಯಿಲ್ಲ.

ಲೋರ್ಡ್ ವೇವೆಲರು, ಇಂದಿನ ಬಿಕ್ಕಟ್ಟನಿಂದ ತೃಪ್ತಿಗೊಂಡು ಮಹಾತ್ಮರ ಬೇಡಿಕೆಯನ್ನು ಅಲ್ಲಗಳೆದುದಲ್ಲ. ಪತ್ರ ವ್ಯವಹಾರಗಳಲ್ಲಿ ಸ್ಪಷ್ಟವಾಗಿರುವ ಗಾಂಧಿಜೀಯ ಅಭಿಪ್ರಾಯಗಳಿದಿರಲ್ಲಿ,—ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿಯು ಅದರ ಪರಂಪರಾಗತ ಬಣ ಪ್ರತಿಷ್ಠೆಯನ್ನು ಹೊತ್ತುಕೊಂಡು ಸಾಗುವದಸಾಧ್ಯವೇ ಸರಿ. ಅದ್ದರಿಂದ ಸಂಧಾನ ಸಾಧ್ಯವಿಲ್ಲವೆಂದಂಜಿಯೇ ಲೋರ್ಡ್ ವೇವೆಲರು ಭೇಟಿ ನಿರಾಕರಿಸಿದ್ದಾರೆ. ಆದರೆ ವೇವೆಲರಿಂದ ಇಂತಹ ಉಡುಗೊರೆ ಪಡೆಯುವದಕ್ಕಾಗಿಯೇ ಆ ಬೇಡಿಕೆ ಮುಂದಿಟ್ಟರೇನೋ ಎಂಬಂತೆ, ಗಾಂಧಿಜೀ ಈ ಧಿಕ್ಕಾರದಿಂದೇನೂ ದಿಗಿಲುಗೊಂಡಿಲ್ಲ; ಪ್ರತೀಕಾರಕ್ಕಾಗಿ ಅವಸರ ಪಡುವಂತಿಲ್ಲ. ಮೇಲಾಗಿ ಲೋರ್ಡ್ ವೇವೆಲರ ಪತ್ರದಲ್ಲಿ "ನೀವು ಪೂರ್ಣಾರೋಗ್ಯ ಹೊಂದಿದ ಮೇಲೆ ಏನಾದರೂ ಹೊಸ ಸೂಚನೆ ಹೊಳೆದು ಚರ್ಚಿಸಲಿಚ್ಛಿಸುವಿರಾದರೆ ನಾನು ಸಿದ್ಧನಿದ್ದೇನೆ" ಎಂಬ ಆಶಾಜನಕ ಪಂಕ್ತಿಯೊಂದು ಬಂದಿದೆ. ವೈಸರಾಯರ ನಿರಾಕರಣೆ ಬಂದೊಡನೆಯೇ "ನನ್ನನ್ನು ಪುನಃ ದಸ್ತಗಿರಿಮಾಡಿ" ಎಂದು ಗಾಂಧಿಜೀ ತಿಳಿಸಲಿದ್ದರೆಂದೂ, ಮುಖಂಡರು—ಮುಖ್ಯವಾಗಿ ರಾಜಾಜಿ—ಹಾಗೆ ಮಾಡದಂತೆ ಗಾಂಧಿಜೀಯನ್ನು ಸಮಜಾಯಿಸುತ್ತಿರುವರೆಂದೂ ಒಮ್ಮೆ ವಾರ್ತೆ ಬಂದಿತ್ತು.ಆದರದೊಂದು ಕಲ್ಪನಾ ಸ್ವಾರಸ್ಯ! ಬಿಕ್ಕಟ್ಟು ನಿವಾರಣೆಗಾಗಿ ತನ್ನ ನೀತಿ ಮತ್ತು ಶಕ್ತಿಗನುಗುಣವಾದ ಎಲ್ಲಾ ಪ್ರಯತ್ನಗಳನ್ನೂ ಮಹಾತ್ಮಾಜೀ ಮಾಡಲಿದ್ದಾರೆ; ಕೊನೆಗೂ ಪೂರ್ಣ ನಿರಾಶೆ ಹೊಂದಿದರೆ, ಆ ಮೇಲೆಯೇ ಬಂಧನ ಯಾಚನೆ ಮಾಡಲಿದ್ದಾರೆ ಎಂದು ತಿಳಿದುಬರುತ್ತದೆ.

ಕಡಿಮೆಯೆಂದರೆ ಇನ್ನೊಂದು ತಿಂಗಳೊಳಗೆ—ಸೇವಾ ಗ್ರಾಮ ಸೇರುವ ಮೊದಲು-ಮಹಾತ್ಮಾಜೀ ಮುಖ್ಯ ಹೆಜ್ಜೆಯಿಡುವಂತಿಲ್ಲ. ಸರಕಾರವು ನಿಷೇಧವನ್ನು ಹಿಂದೆಗೆದರೆ 'ಹರಿಜನ್' ಪತ್ರಿಕೆಯನ್ನು ಪುನಃ ಹೊರಡಿಸಲಿಕ್ಕೂ ಗಾಂಧಿಜೀ ತಯಾರಿದ್ದಾರೆ.

ಪಾಂಚ್‌ಗನಿ ಪಂಚಾಯತಿಕೆ.

ಈ ನಡುವೆ ಪಾಂಚ್‌ಗನಿಯಲ್ಲಿ ಸರ್. ರಾಧಾಕೃಷ್ಣನ್, ಸರ್. ಸಪ್ರು, ಮಾಸ್ತಿ ಶಾಸ್ತ್ರಿ, ಡಾ| ಜಯಕರರೇ ಮೊದಲಾದ ಎಲ್ಲಾ ಪ್ರಮುಖರೂ ಮಹಾತ್ಮರ ಮುಂದೆ ತಮ್ಮ ಅಭಿಪ್ರಾಯವಿಡಲಿದ್ದಾರೆ. ಶ್ರೀ. ಸಿ. ರಾಜಗೋಪಾಲಾಚಾರ್ಯರಂತೂ ಪೂನೆಗೆ ಹೋಗಿ, ಪಾಂಚ್‌ಗನಿ ವರೆಗೂ ಮಹಾತ್ಮರ ಬೆನ್ನು ಹಿಡಿದು ದಿನಂಪ್ರತಿ ಘಂಟೆಗಳ ಅವಧಿಯಲ್ಲಿ ಅವರೊಡನೆ ಮಾತುಕತೆ ನಡೆಸುತ್ತಿದ್ದಾರೆ; ಮಹಾತ್ಮಾಜೀಯ ಮನಸ್ಸಿನಲ್ಲಿ ತನ್ನ ಅಭಿಪ್ರಾಯವನ್ನೊತ್ತಲು ಶಕ್ತಿ ಯುಕ್ತಿಗಳನ್ನೆಲ್ಲಾ ವ್ಯಯಿಸುತ್ತಿದ್ದಾರೆ. ಶ್ರೀಗಳಾದ ಬಿರ್ಲಾ, ಮುನ್ಷಿ, ಮತ್ತು ಸರ್. ಮೋಡಿಯವರು ಹಲವು ಬಾರಿ ಗಾಂಧಿಜೀಯೊಡನೆ ತರ್ಕಿಸಿದ್ದಾರೆ. ಮೇಲಿನ ಧುರೀಣರೆಲ್ಲಾ ಮಹಾತ್ಮಾಜೀಗಾಗಿ ಮತ್ತೊಮ್ಮೆ ಕಾರಾಗ್ರಹದ ಕದ ತೆರೆಯುವದನ್ನು ಸಹಿಸದವರು. ಸರ್ವ ಪ್ರಯತ್ನಗಳನ್ನೂ ಮಾಡಿ ನೋಡಬೇಕೆಂಬ ಮಹಾತ್ಮರಿಚ್ಛೆ (ಆದರೆ ಆ ಯತ್ನಗಳಲ್ಲಾವುದೂ ಗಾಂಧೀ ತತ್ವದ ಆವರಣದಿಂದ ಹೊರಗೆ ಹೋಗುವಂತಿಲ್ಲ!)—ಹೊಸ ಸೂಚನೆಯನ್ನು ಪರ್ಯಾಲೋಚಿಸಲು ತಯಾರಿರುವ ವೇವೆಲರ ಬಯಕೆ—ಗಾಂಧಿಜೀ ಹೊರಗಿರುವ ಈ ಸಂದರ್ಭದಲ್ಲಿಯೂ ರಾಜಕೀಯ ಬಿಕ್ಕಟ್ಟನ್ನು ನಿವಾರಿಸದಿರಕೂಡದೆಂಬ ಮಿಕ್ಕ ಧುರೀಣರ ಛಲ—ಇವೆಲ್ಲವುಗಳ ಮಿಶ್ರಣವು ಸತ್ಫಲದಾಯಿಯಾಗಬಹುದೆಂಬ ಆಶೆಯಿದೆ.

'ನನ್ನ ಈಗಿನ ಸ್ಥಾನ'

ಗಾಂಧಿಜೀ ಮಹಾರಾಷ್ಟ್ರದ ಸುಮಾರು 50ಮಂದಿ ಕಾಂಗ್ರೆಸ್ ಪ್ರತಿನಿಧಿಗಳಿಗೆ ಪೂನೆಯಲ್ಲಿ ಕಳೆದ ವಾರದಲ್ಲಿತ್ತ ಭೋದನೆಯು ಅವರ ಇಂದಿನ ಸ್ಥಾನ ಮತ್ತು ಧೋರಣೆಯನ್ನು ಸ್ಪಷ್ಟಗೊಳಿಸುತ್ತಿದೆ. ಅದರ ಸಾರಾಂಶವಿದು:- "ನಾನೊಂದು ಸಂಗತಿಯನ್ನು ಸ್ಪಷ್ಟ ಪಡಿಸಬೇಕಾಗಿದೆ. ಆಗೋಸ್ತು ನಿರ್ಧಾರಾಂತರ್ಗತ ಕಾಯಿದೆ ಭಂಗ ಚಳವಳವನ್ನು ಮುಂಗೊತ್ತುವ ಪ್ರತಿನಿಧಿಯಾಗಿ ನಾನೀಗ ನಿಮ್ಮ ಭೇಟಿ ಪಡೆದಿಲ್ಲ. ಸತ್ಯಾಗ್ರಹೀ ಭಾಷೆಯಂತೆ ನಾನು

(೬ನೇ ಪುಟ ನೋಡಿ)

38 ವರ್ಷಗಳ ಹಿರಿತನ

1906ನೆ ಇಸವಿ ಜುಲೈ 1ನೇ ತಾರೀಕಿನಲ್ಲಿ ಸ್ಥಾಪಿತವಾಗಿ ಕೆನರಾ ಬ್ಯಾಂಕ' ಇಂದಿಗೆ 38 ವರ್ಷ ವಯಸ್ಸು ಹೊಂದಿದೆ. ನಾವು 38 ವರ್ಷ ವಯಸ್ಸಿನವರೆಂಬುದೆ ನೀವು ನಮ್ಮೊಡನೆ ವಹಿವಾಟ ನಡೆಸಲು ಸಾಕಾದ ಕಾರಣವಾಗಲಾರದು.

ಆದರೆ ಈ 38 ವರ್ಷಗಳು ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿವೆ—ಎರಡು ಮಹಾ ಯುದ್ಧಗಳು—ಲೋಕವು ಹಿಂದೆಂದೂ ಕಾಣದ ಆರ್ಥಿಕ ಮುಗ್ಗಟ್ಟು—ಈ ಮೊದಲು ಆಗದ ಬ್ಯಾಂಕುಗಳ ಸಂಧಿಗ್ಧಾವಸ್ಥೆ—ಶೈರು ಮಾರ್ಕೆಟುಗಳ ಕಂಗಾಲಾವಸ್ಥೆ—ಇತ್ಯಾದಿ.

ಒಂದು ಬ್ಯಾಂಕು ಈ ಎಲ್ಲಾ ಭಯಂಕರ ಹಲ್ಲೋಲಗಳಿಂದ ಎದೆಗುಂದದೆ ಪಾರಾಗಿರುವುದಾದರೆ—ಈ ಕಠಿಣ ಅನುಭವಗಳಿಂದ ಪ್ರಯೋಜನವನ್ನೇ ಹೊಂದಿ ತನ್ನ ಪ್ರಾಮುಖ್ಯತೆಯನ್ನೂ ವಿಶಾಲತೆಯನ್ನೂ ಮಾತ್ರೂ ಬೆಳೆಸಿರುವುದಾದರೆ—ಆ ಬ್ಯಾಂಕೇ ನಿಮ್ಮ ವಿಶ್ವಾಸಕ್ಕೆ ಯೋಗ್ಯವಾದದ್ದು.

ನಾವು ನಮ್ಮ ಹಿರಿತನದಿಂದ ಶ್ರೇಷ್ಠರಾದುದಲ್ಲ,
ನಮ್ಮ ಶ್ರೇಷ್ಠತನದಿಂದ ನಾವು
ಹಿರಿಯರಾಗಿದ್ದೇವೆ.

Estd: 1906. **CANARA BANK, Ltd.**

ವಾರದ ಹೋರಾಟ-ಫ್ರಾನ್ಸಿನಲ್ಲೇಕೆ ಮಂದಗತಿ?

ಈ ವಾರದ ಯುದ್ಧ ಗತಿಯಲ್ಲಿ ಹಿಂದಿನ ವಾರದ ತೀವ್ರತೆ ಕಂಡುಬರುವದಿಲ್ಲ. ಮುಖ್ಯವಾಗಿ ಫ್ರಾನ್ಸ್ ಹೋರಾಟವು-ಯುದ್ಧ ರಂಗದ ನೋಟದಿಂದಲ್ಲ-ಆದರ ರೂಪದ ಮೇಲಿಂದ ನಿರಾಶೆಗವಕಾಶವೀಯುತ್ತಿದೆ.

ಹಿಟ್ಲರನ ಕೈ ಗಟ್ಟಿಯಿದೆ!

ಒಂದು ಕಾಲದಲ್ಲಿ ಭಕ್ಷಣಾ ಯುದ್ಧ ಕೊಡುತ್ತಿದ್ದ ಹಿಟ್ಲರನಿಗೆ ರಕ್ಷಣಾ ಯುದ್ಧ ಕೊಡುವ ದುಸ್ಥಿತಿಯೀಗ ಒಂದಿದೆ ಎಂಬುದು ಗೋಬೆಲ್ಸನಾದರೂ ಒಪ್ಪಿಕೊಳ್ಳಬೇಕಾದ ವಿಷಯು. ಆದರೆ ಒಂದು ಪ್ರಶ್ನೆ. ಹಿಟ್ಲರನು ಮೇಲ್ಗೈಯ್ಯಾಗಿದ್ದಾಗ ಯುರೋಪಿನ ಒಂದೊಂದೇ ರಾಷ್ಟ್ರಗಳನ್ನಾಕ್ರಮಿಸುತ್ತಾ ಬಂದಷ್ಟು ವೇಗದಲ್ಲೇ ಈಗ ಕಳಕೊಳ್ಳುತ್ತಾ ಬರುತ್ತಿದ್ದಾನೆಯೆ? ಸತ್ಯಕ್ಕೂ ಇಲ್ಲ. ಅಂದರೆ ತಮ್ಮ ಪ್ರತಿಕೂಲಕಾಲದಲ್ಲಿ ಇಂಗ್ಲಾಂಡು ಅಮೇರಿಕೆಗಳು ಸೋತಷ್ಟು ಕ್ಷಿಪ್ರದಲ್ಲಿ ತನಗೆ ಪ್ರತಿಕೂಲವಾದ ಈ ಕಾಲದಲ್ಲಿ ಜರ್ಮನಿ ಸೋಲುತ್ತಿಲ್ಲ. ಮಿತ್ರರಿಗಿದ್ದ ಇಳಿತ-ಭರತದಂತೆಯೇ, ಈಗ ಇಳಿತದಲ್ಲಿರುವ ಹಿಟ್ಲರನೂ ಏರುವ ಕಾಲವಿನ್ನು ಬರಲಾರದನ್ನುವದು ಹೇಗೆ? ಅದಿನ್ನು ಅಸಾಧ್ಯವೆನ್ನೋಣ 1942ರ ವರೆಗೂ ಶೀಘ್ರಗತಿಯಿಂದ ಪರಾಜಯದ ಕಡೆಗೆ ಧಾವಿಸುತ್ತಿದ್ದ ಮಿತ್ರರು ಕೂಡಲೇ ತಲೆಯೆತ್ತಿದರಂತೆ-ಇನ್ನೊಂದು ಮುಂದಹೆಜ್ಜೆಯನ್ನು ಹಿಂದಿಕ್ಕಿಡುತ್ತಿರುವ ಹಿಟ್ಲರನ ಶೀಘ್ರಪತನವನ್ನು ನಾವು ನಿರೀಕ್ಷಿಸುವದಾದರೂ ಹೇಗೆ? ಅಂತಹ ಬಯಕೆಯೊಂದು ಬಯಲಾಸೆ ಹೊರತು ವಸ್ತುಸ್ಥಿತಿ ಹಾಗಿಲ್ಲ.

ಫ್ರಾನ್ಸಿನಲ್ಲಿ ಪ್ರತಾಪ ಸಾಲದು

ಫ್ರಾನ್ಸಿನ ಮುಖ್ಯ ಬಂದರುಗಳಲ್ಲೊಂದಾದ ಚೇರ್ಬೋರ್ಗನ್ನು ವಶಪಡಿಸಿಕೊಂಡುದು ಮಿತ್ರರ ಪಾಲಿನ ಒಂದು ಗಣ್ಯ ವಿಜಯವೇನೋ ಸರಿ. ಆದರೆ ದ್ವಿತೀಯ ರಂಗವನ್ನು ಬಹು ಕಾಲದಿಂದ ಹಾರೈಸುತಿದ್ದ ಲೋಕದ ಬಯಕೆಯಿದರಿಂದ ತಣಿದಿದೆಯೆ? ಅದರ ಮಹತ್ವ-ಆದರ ಸಿದ್ಧತೆ-ಅದರ ಗುರಿಗಳಿಗನುಗುಣವಾದಷ್ಟು ದೊಡ್ಡ ಪರಿಮಾಣದಲ್ಲಿ, ಮಿಕ್ಕೆಲ್ಲವನ್ನೂ ಮೀರುವ ಒಂದು ಮಹಾ ಘಟನೆಯಾಗಿ, ಫ್ರಾನ್ಸ್ ಹೋರಾಟವೀಗ ಸಾಗುತ್ತಿ ಇಟಲಿ ಪ್ರವೇಶಿಸುವ ವರೆಗಿದ್ದ ಆಬ್ಬರ ಆ ಮೇಲೆ ಇರಲಿಲ್ಲ; ಫ್ರಾನ್ಸ್ ಪ್ರವೇಶದ ವರೆಗಿದ್ದ ಆಡಂಬರದ ಹತ್ತನೇ ಒಂದು ಪಾಲಷ್ಟಾದರೂ ಈಗ ಗೋಚರಿಸುವದಿಲ್ಲ. ನಿರೀಕ್ಷೆಯಂತೆ ಯುರೋಪಿನ ಇತರ ಕಡೆಗಳಿಗೆ ಮಿತ್ರಸೇನೆ ನುಗ್ಗಿಲ್ಲ. ಫ್ರಾನ್ಸಿನಲ್ಲಾರಂಭವಾದುದನ್ನೇ ಇಡೀ ಯುರೋಪಿಗೆ ವಿಸ್ತರಿಸಲಿದ್ದಾರೆ ಎಂದು ಅನಿಸೋಣವೆ? ಆಕ್ರಮಣಾರಂಭವಾಗಿ ತಿಂಗಳು ಸಮೀಪಿಸಿದರೂ ಉತ್ತರ ಮೂಲೆಯ ನೋರ್ಮಂಡಿ ಕರಾವಳಿಯ ಯುದ್ಧವಿನ್ನೂ ಮುಗಿದಿಲ್ಲ. ಈ ಮಂದಗತಿಗೇನು ಕಾರಣ? ಹಿಟ್ಲರನಲ್ಲಿನ್ನೂ ಸಾಕಷ್ಟು ಶಕ್ತಿಯಿರುವದೇ. ಇದರಿಂದ ನಾವು ಊಹಿಸಲಾಗುವದಿಷ್ಟೆ:—ವಿಶೇಷ ಮೇಲು ಕೀಳಿಲ್ಲದ ಸಮಬಲ ಹೋರಾಟ ನಡೆಯುತ್ತಿದೆ; ಇದು ಶೀರ್ಘ್ರದ ಹೊಂದುವಾಗ ವತ್ಸರಗಳುರುಳಬಹುದು!

ನೋರ್ಮಂಡಿ ಕಾಳಗ.

ಈಗ ಪ್ರತ್ಯಕ್ಷ ರಂಗಗಳ ಕಡೆಗೆ ನೋಡೋಣ. ಕಳೆದ ವಾರವೇ ತಿಳಿಸಿದಂತೆ ಚೆರ್ಬೋರ್ಗ್ F ಬಂದರವು ಅಮೇರಿಕನ್ ಸೇನೆಯ ವಶವಾಯಿತು. ಅದರೊಳಗಡೆಯಿದ್ದ ಜರ್ಮನ್ ಸೇನೆಯು ಶೇಷ ಮಾತ್ರವಿರುವವರೆಗೂ ಹೋರಾಡಿದ್ದರಿಂದ ನಾಜೀ ಕೋವಿಯ ಸದ್ದಡಗಿದುದು ಇದೇ ತಾ. 2ರಲ್ಲೇ. ಆದರೆ ಡಂಕರ್ಕ್ ಪ್ರಕರಣದಂತಹ ವಿಜಯೀ ಪಲಾಯನಮಾಡಲು ಜರ್ಮನರ ಹಡಗಗಳರಲಿಲ್ಲವಾದ್ದರಿಂದಲೇ ಆವರೀ ರೀತಿ ಸಾಯುವವರೆಗೂ ಹೋರಾಡಿದರೆನ್ನುತ್ತಾರೆ, ಚೆರ್ಬೋರ್ಗ್ ಅತಿ ಮುಖ್ಯ ಬಂದರ. ಕಳೆದ ಮಹಾಯುದ್ಧದಲ್ಲಿ ಅಧಿಕೋಪಯೋಗಿಯಾಗಿದ್ದ ನೆಲೆಗಳಲ್ಲಿ ಇದೂ ಒಂದು. ಈಗ ಘೋರ ಸಂಗ್ರಾಮ ನಡೆಯುತ್ತಿರುವದೆಂದರೆ ಪ್ರಾಮುಖ್ಯ ನೆಲೆಯಾದ ಕೇಯಿನ್ ನಗರದ ಬಳಿಯಲ್ಲಿ ಕೆಯಿನ್ ಪ್ಯಾರಿಸಿನ ಬೀಗದ ಕೈಯಂತಿದೆ. ಆದ್ದರಿಂದಲೇ ಅಲ್ಲಿ ಇಂಗ್ಲಿಷ್-ಕೆನಡಾ ಸೇನೆಗಳಿದಿರು ಟೇಂಕು ದಳಗಳೊಡನೆ ಜರ್ಮನರು ಅತಿ ಭೀಕರವಾಗಿ ಕಾದಾಡುತಿದ್ದಾರೆ. ಚತುರ ಸೇನಾನಿ ರೋಮೆಲನೀಗ ವ್ಯಕ್ತಿಶಃ ನೋರ್ಮಂಡಿ ರಣಚಾಲುಮಾಡುತ್ತಿದ್ದಾನೆಂದೂ, ಅವನ ವಶವೀಗ 7 ಟೇಂಕು ದಳಗಳಿವೆಯೆಂದೂ ತಿಳಿದು ಬರುತ್ತದೆ. ಅವನೀಗ ತನ್ನ ಪ್ರಬಲ ಪ್ರತಿಧಾಳಿಯನ್ನು ತ್ರಿಮುಖವಾಗಿ ಆರಂಭಿಸಿರುವನೆಂದೂ ಓಡನ್ ಹೊಳೆಯ ಸಂಕಪಿರದಲ್ಲಿ ಹೂಡಿದ ಧಾಳಿಯನ್ನು ಸಹಿಸಿಕೊಂಡು ಈ ವರೆಗೂ ಮಿತ್ರ ಸೇನೆಯು ಅಲ್ಲಿ ನಿಂತಿರುವದೇ ವಿಶೇಷವೆಂದೂ ವಾರ್ತೆಬಂದಿದೆ. ನೋರ್ಮಂಡಿ ಕಾಳಗದ ರಭಸವನ್ನು ದಿನದಿಂದ ದಿನಕ್ಕೇರಿಸುತಿದ್ದಾರೆ ನಾಜಿಗಳು.

ಜರ್ಮನರು ಹಿಂದಿನಂತಿಲ್ಲ

ನೋರ್ಮಂಡಿ ಕಾಳಗದಲ್ಲಿ ವೈರಿಯ ಹಲವು ದೌರ್ಬಲ್ಯಗಳು ಗೋಚರಿಸಿವೆಯಂತೆ. ಕೌತುಕದ ವಿಷಯವೆಂದರೆ ಜರ್ಮನ್ ವಿಮಾನಗಳ ಗೈರುಹಾಜರಿ. ಫ್ರಾನ್ಸಿನ ರಣರಂಗಕ್ಕೆ ಈಗಿನಷ್ಟು ಅಪರೂಪವಾಗಿ ವಿಮಾನಗಳನ್ನು ಕಳುಹುವಷ್ಟು ಆಕಾಶ ದೌರ್ಬಲ್ಯವು ನಾಜಿಗಳಿಗುಂಟಾಗಿಲ್ಲ. ಆದರೂ ಆ ಹೆಸರುವಾಸಿ ನಾಜೀ ರಣಹದ್ದುಗಳೀಗ ಫ್ರಾನ್ಸ್ ಗಗನದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹಾರಾಡುತ್ತಿಲ್ಲ. ಹೋರಾಡುತ್ತಿರುವ ಯೋಧರಲ್ಲಿ ಮಿಶ್ರ ಜನಾಂಗಗಳಿವೆ. ಶುದ್ಧ ಆರ್ಯರಾದ ಜರ್ಮನರ ಸಂಖ್ಯೆ ಕಡಿಮೆಯಾಗಿದೆ ಎಂಬುದಕ್ಕೆ ಇದೊಂದು ನಿದರ್ಶನ ನೋರ್ಮಂಡಿಯಲ್ಲಿ ವೈರಿಯ ಒಂದು ಸೇನಾ ವಿಭಾಗದ ಯಂತ್ರಗಳೆಲ್ಲಾ 'ಪ್ರೊಡ್ಯೂಸರ್ ಗ್ಯಾಸ್'ನಿಂದಲೇ ಚಲಿಸುತಿದ್ದುವಂತೆ. ಜರ್ಮನಿಯಲ್ಲಿ ಎಣ್ಣೆಯ ಬರಗಾಲವಿದ್ದಿದೆ ಎಂದು ಇದರಿಂದ ಅನಿಸಲಾಗಿದೆ. ಹಿಟ್ಲರನೀಗ ಸರ್ವ ದಿಕ್ಕುಗಳಲ್ಲಿಯೂ ಹೋರಾಡಬೇಕಾಗಿ ಬಂದುದು-ಮಿತ್ರ ವಿಮಾನಗಳು ಜರ್ಮನಿಯ ಕಾರ್ಖಾನೆಗಳನ್ನು ಧ್ವಂಸಮಾಡಿದುದು-ಮೊದಲಾದುವುಗಳಿಂದಾಗಿ, ವೈರಿಗೆ ಎಣ್ಣೆಯಂತಹ ಪ್ರಾಮುಖ್ಯ ಯುದ್ಧಾನುಕೂಲತೆಗಳಲ್ಲೇ ಕೊರತೆಯುಂಟಾಗಿದೆ ಎಂದು ತಿಳಿದುಬರುತ್ತದೆ.

ಅಪಾಯಕರವಾದ ಪ್ರಯಾಣ

ಮಾಡುವದರಲ್ಲಿ ಎಚ್ಚರಿಕೆ!

ಈ ನಿಯಮವನ್ನು ನಿರಾಕರಿಸುವಿರಾದರೆ, ನಿಮ್ಮ ಪ್ರಾಣಹಾನಿಯಾಗಬಹುದು. ಈಚೆಗೆ ಗಾಡಿಗಳು ವಿಶೇಷವಾಗಿ ಭರ್ತಿಯಾಗಿರುವದರಿಂದ ನಿಮಗೆ ಕೆಲವು ಸಮಯಗಳಲ್ಲಿ ಒಳಗೆ ಪ್ರವೇಶಮಾಡಲು ಸಹಿತ ಸಾಧ್ಯವಿರುವದಿಲ್ಲ. ಆದರೆ, ಹೊರಗಡೆ ಗಾಡಿಯ ಮೆಟ್ಟಲಿನ ಮೇಲೆ ನೀವು ಪ್ರಯಾಣಮಾಡುವ ಅಪಾಯಕರವಾದ ಹವ್ಯಾಸಕ್ಕೆ ಬೀಳಬೇಡಿರಿ. ಅದು ಕಾಯಿದೆಗೆ ವಿರುದ್ಧವಾದದ್ದು. ಅದರಿಂದ ಘೋರವಾದ ಅಪಘಾತವಾಗಲಿ, ಪ್ರಾಣಹಾನಿಯಾಗಲಿ ಸಂಭವಿಸಬಹುದು.

ಗಾಡಿಗಳ ಒಂದು ಪಕ್ಕಕ್ಕೂ, ರೈಲುಮಾರ್ಗದಲ್ಲಿ ಸಿಕ್ಕುವ ಸುರಂಗಮಾರ್ಗಗಳ ಗೋಡೆಗಳಿಗೂ ಅಥವಾ ಕೈಕಂಬಗಳಿಗೂ ಇರುವ ಅಂತರವು ಬಹಳಸ್ವಲ್ಪ. ರೈಲು ಗಾಡಿಯು ವೇಗದಿಂದ ಹೋಗುತ್ತಿರುವಾಗ ನಿಮ್ಮ ದೇಹವು ಇವು ಯಾವದೊಂದಕ್ಕಾದರೂ ಬಡಿಯಿತೆಂದರೆ, ಅದೇ ನಿಮ್ಮ ಕಟ್ಟಕಡೆಯ ಪ್ರಯಾಣವಾಗುವದು.

ನಿರ್ದೇಶಿಗಾಗಿ ಗಾಡಿಯಲ್ಲಿ ಸ್ಥಳವಿಲ್ಲದಿದ್ದರೆ, ಸ್ಟೇಷನ್ನಿನಲ್ಲಿಯೇ ಉಳಿದುಬಿಡಿರಿ. ಅಪಾಯಕ್ಕೆ ಒಳಗಾಗಬೇಡಿರಿ. ನಿಮಗೆ ಪ್ರಯಾಣಮಾಡಲು ಸಾಧ್ಯವಿಲ್ಲದಿದ್ದರೆ, ಇದನ್ನು ನೆನಪಿನಲ್ಲಿಡಿರಿ—ರೈಲ್ವೆಯವರ ಮುಖ್ಯಕರ್ತವ್ಯವು ದೇಶದ ಎಲ್ಲಾ ಭಾಗಗಳಿಗೂ ಆಹಾರ ಪದಾರ್ಥ, ಬಟ್ಟೆ ಮತ್ತು ಸಾಧನ ಇವುಗಳನ್ನು ಒದಗಿಸಿಕೊಡುವದು.

ಕಡಮೆಯಾಗಿ ಪ್ರಯಾಣಮಾಡಿರಿ

AAA 683 KN ಮತ್ತು ಅಪಾಯಕರವಾದ ರೀತಿಯಲ್ಲಿ ಎಂದಿಗೂ ಪ್ರಯಾಣಮಾಡದಿರಿ.

The Canara Banking Corporation Limited.

ESTD: 1906.

Authorised Capital	....	Rs. 25.00.000/-
Subscribed Capital	...	„ 16.00.000/-
Paid up Capital	....	„ 13.72.900/-
Reserves	....	„ 4.10.000/-

Total Working Capital—xEceeds One Crore.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers.

ಉಡುಪಿ, ಗುರುವಾರ ೬-೭-೧೯೪೪

ಆಹಾರ ಸ್ಥಿತಿ

'ದ್ವಿತೀಯ ಬರಗಾಲವುಂಟಾಗದಂತೆ ಭಾರತವನ್ನು ರಕ್ಷಿಸಿರಿ' ಎಂದು ಸಪ್ರು, ಜಯಕರ್, ಶಾಸ್ತ್ರಿ, ಮೋಡಿ, ಸರ್ಕಾರ್, ಜಹಾಂಗೀರ್, ರಾಧಾಕೃಷ್ಣನ್, ಬಿರ್ಲಾ, ಪುರುಷೋತ್ತಮದಾಸ್, ಚಮನ್‌ಲಾಲ್, ಕುಂಜ್ರು, ಜೋಶಿ, ಭುಲಾಭಾಯಿಗಳಂತಹ ಸರ್ವ ಪಕ್ಷಗಳ ಪ್ರಮುಖರು ಪಾರ್ಲಿಮೆಂಟ್ ಮತ್ತು ಬ್ರಿಟಿಷ್ ಜನತೆಗೆ ಸಕಾಲದಲ್ಲಿ ಎಚ್ಚರಿಕೆಯಿತ್ತಿದ್ದಾರೆ. ಇದು 'ಗಾಂಧಿಯಂತಹ ಗಲಭೆಗಾರರ ಕ್ವಿಟ್ ಇಂಡಿಯಾದಂತಹ ಮತ್ಸರಪೂರಿತ ಕರೆ'ಯೇನೂ ಅಲ್ಲ. ಹಿಂದುಸ್ಥಾನದ ಉತ್ಪತ್ತಿ ಸಾಲದು; ಹೊರಗಿನಿಂದ ಆಮದುಪಡಿಸಿಕೊಳ್ಳುವ ಆವಶ್ಯಕತೆಯಿದೆ—ಎಂಬುದೇ ಮೇಲಿನ ಮನವಿಗಾರರ ಒತ್ತಾಯದ ಬೇಡಿಕೆ. ಇದು ಅತ್ಯವಸರದಿಂದ ಆಗಬೇಕಾಗಿದೆ. ಇದರ ಹೊಣೆಯೂ ಮುಖ್ಯತಃ ಮಿ. ಅಮೆರಿಯವರ ಮೇಲಿದೆ. ಆದರೆ ಭಾರತ ಕಾರ್ಯದರ್ಶಿಯು ತನ್ನ ಸರ್ವಶ್ರುತ 'ಗುಣನಡತೆ'ಗಳಿಗನುಸಾರವಾಗಿ 'ಹಿಂದುಸ್ಥಾನದಲ್ಲಿ ಉತ್ಪತ್ತಿಯೇನೋ ಸಾಕಷ್ಟಿದೆ; ಅದರೆ ಸರಿಯಾಗಿ ವಿತರಣೆಗೆ ಮಾತ್ರ ಸಿಗುತ್ತಿಲ್ಲ' ಎಂಬ ಅಭಿಪ್ರಾಯ ಕಟ್ಟಿಕೊಂಡಿದ್ದಾರೆ. ಅವರ ತಪ್ಪನ್ನು ತಿದ್ದಬೇಕೆಂದೇ ಮೇಲಿನ ಪ್ರಮುಖರು ಬ್ರಿಟಿಷ್ ಜನತೆ ಮತ್ತು ಪಾರ್ಲಿಮೆಂಟಿನ ಕಡೆಗೆ ನೋಡಿರುವುದು. ಸಾಮಾನ್ಯ ಬ್ರಿಟಿಷರು, ಭಾರತೀಯರ ನರಳಾಟವನ್ನು ಸಂತೋಷಪೂರ್ವಕ ಕೇಳುವಷ್ಟು ಭಾರತದ ದ್ವೇಷಿಗಳಲ್ಲ. ಆಂದಮೇಲೆ ಈ ಸೂಕ್ತ ಸಲಹೆಯಂತೆ ವರ್ತಿಸಬೇಕೆಂದು ಅವರು 'ಇಂಡಿಯಾ ಆಫೀಸ'ನ್ನು ಒತ್ತಾಯಿಸುವರೆಂದು ಆಶಿಸಬಹುದೇ

'ಆಹಾರ ದುಸ್ಥಿತಿಯ ಕುರಿತು ಗಾಂಧೀಜೀಯವರೇನೆನ್ನುವರು?' ಎಂಬುದನ್ನು ತಿಳಿಯಲು ರಾಷ್ಟ್ರವು ಆತುರಗೊಂಡಿದ್ದಿತು. ದೇಶದ ವಿಷಮಾವಸ್ಥೆಯು ಮಹಾತ್ಮರ ಮನಸ್ಸನ್ನು ಕರಗಿಸಿದೆ. ರಾಜಕೀಯಾಧಿಕಾರವಿಲ್ಲದೆ ಇಂತಹ ಬರಗಾಲವನ್ನು ನಿವಾರಿಸುವದಸಾಧ್ಯವೆಂದವರ ಸ್ಪಷ್ಟಾಭಿಪ್ರಾಯ. ಯಾವ ಹಿಂದೀ ಪ್ರಮುಖನೂ ಈ ಕುರಿತು ಭಿನ್ನಾಭಿಪ್ರಾಯದಿಂದಿಲ್ಲ. ಸದ್ಯಸ್ಥಿತಿಯಲ್ಲಿ 'ಅಧಿಕಾರ ದಾನವೇ ಆಹಾರ ದಾನ'ವೆಂಬುದು ನಿರ್ವಿವಾದ. ಆದರವನ್ನು ಕ್ಷಿಪ್ರದಲ್ಲೇ ಬ್ರಿಟಿಷರೀಯಲಾರರು. ಅವರದನ್ನೀಯುವ ವರೆಗೆ ಬರಗಾಲ ತಡೆದು ನಿಲ್ಲಲಾರದು, ಎಂಬುದನ್ನರಿತೇ ಮಿಕ್ಕವರು ತಾತ್ಕಾಲಿಕ ಶಮನಗಳನ್ನು ಸೂಚಿಸುತ್ತಿದ್ದಾರೆ. ಇಂದಿನ ಅಧಿಕಾರಬದ್ಧರು ಅಷ್ಟನ್ನು ಮಾಡಲಿಕ್ಕೂ ಈ ತನಕ ಸಿದ್ಧರಿಲ್ಲವೆಂಬುದು ಅತ್ಯಂತ ಶೋಚನೀಯ.

ಬಹುತೇಕವಾಗಿ ಅಖಿಲ ಹಿಂದುಸ್ಥಾನವೀಗ ಆಹಾರಾಭಾವದ ನಿಕೃಷ್ಟಾವಸ್ಥೆಗೆ ಬಂದಿದೆ. ಸಾಮಾನ್ಯ ವರುಷಗಳಲ್ಲಾದರೂ ಬಡಜನರ ಪಾಲಿಗೆ ಮಳೆಗಾಲವು ಬರಗಾಲವಾಗಿದ್ದಿತು. ಈ ವರುಷವಿಡೀ ಬರಗಾಲವೇ ಇದ್ದುದರಿಂದ, ಇದರ ಮಳೆಗಾಲಕ್ಕೆ ಇನ್ನಷ್ಟು ಭೀಕರವಾದ ಪ್ರತ್ಯೇಕ ಹೆಸರನ್ನೇ ಹುಡುಕಬೇಕಾದೀತು. ಜನತೆಯಿಂದ ಈ ಅವಧಿಯನ್ನು ದಾಟಿಸುವವರು ತಮ್ಮ ಸರ್ವಶಕ್ತಿಯನ್ನು ಆ ಕಾರ್ಯದಲ್ಲಿ ವ್ಯಯಿಸುವವರಿರಬೇಕು. ಜನಾನುರಾಗ ಸಂಪಾದಿಸಿದವರಿರಬೇಕು. ಆ ಯೋಗ್ಯತೆಯು ವಿದೇಶೀ ಅಧಿಕಾರಕ್ಕೆಂದಿಗೂ ಬರಲಾರದು ಆದ್ದರಿಂದ 'ರಾಷ್ಟ್ರೀಯ ಸರಕಾರ ವಿನಹಾ ಆಹಾರಾಭಾವ ನಿವಾರಣೆಯಸಾಧ್ಯ' ಎನ್ನುವವರ ಮೇಲೆ ಸಂದರ್ಭನೋಡಿ ರಾಜಕೀಯೋದ್ದೇಶ ಸಾಧಿಸಿಕೊಳ್ಳುವ ಆರೋಪ ತಟ್ಟುವಂತಿಲ್ಲ. ಅದೀಗ ಭಾರತೀಯರ ಬದುಕಿಗಾಗಿಯೇ ಬೇಕಾಗಿದೆ. ಮಿತ್ರರಾಷ್ಟ್ರೀಯರ ಪಾಲಿನ ಯುದ್ಧಾವಶ್ಯಕತೆ-ಭಾರತೀಯರತಾಗಿರುವ ಆಹಾರಾವಶ್ಯಕತೆ-ಇವೆರಡಕ್ಕೂ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪನೆ ಹೊಂದುವ ಅತ್ಯಾವಶ್ಯಕತೆಯೊದಗಿದೆ. ಮಹಾತ್ಮಾ ಗಾಂಧಿಯವರ ಕಂಠೋಕ್ತ ಬೇಡಿಕೆಯೊಂದು ರಣಘರ್ಜನೆಯೇನೂ ಅಲ್ಲ-ಹೊಟ್ಟೆಯ ಕೂಗು ಎಂಬುದು ಇದರಿಂದ ಸುಸ್ಪಷ್ಟ!

WANTED.

Applications for posts of Agents of Depots and Clerks. Minimum qualifications S. S L. C Apply stating qualifications, Age, Community, Native place, previous employment and whether the applicant is prepared to furnish the security prescribed, by 15th July 1944. Applications must be in the Applicant's own hand and should contain a sample of his writing in Kannada or Maliyalam as the case may be. The appointments will be temporary for the duration of the War, but the hands will be absorbed in permanent services as and when opportunity occurs

Apply:

The Executive officer,
S. K. C. C. W. Stores, Ltd.,
Food Office, Kodiyalbail,
MANGALORE.

ದಕ್ಷಿಣ ಕನ್ನಡ

ಸಕ್ಕರೆ ಮತ್ತು ಚಿಮಿಣಿಎಣ್ಣೆ ರೇಶನಿಂಗ್: ಇದೇ ತಿಂಗಳ ಪ್ರಥಮ ವಾರದಲ್ಲಿ, ಮಂಗಳೂರು ಮುನಿಸಿಪಲ್ ಸರಹದ್ದು ಮತ್ತು ಅಸುಪಾಸ ಗಳಲ್ಲಿ ಸಕ್ಕರೆ ಮತ್ತು ಚಿಮಿಣಿಎಣ್ಣೆಯ ರೇಶನಿಂಗನ್ನು ಜ್ಯಾರಿಗೆ ತರಲಾಗುವುದು. ಈ ಬಗ್ಗೆ ಕಾರ್ಡುಗಳು ಹಂಚಲ್ಪಡುತ್ತಿವೆ. ಕಾರ್ಡುಗಳನ್ನು ಅಧಿಕೃತ ವ್ಯಾಪಾರಸ್ಥರಲ್ಲಿ, ಕಾರ್ಡಿಗೆ 0-0-3ಯಂತೆ ಪ್ರವೇಶಧನವಿತ್ತು ಕೂಡಲೇ ದಾಖಲು ಮಾಡಿಸಬೇಕು. ಮನೆ ಅಥವಾ ಅಂಗಡಿಯಿದ್ದವರು 30-6-44ರೊಳಗೆ ಕಾರ್ಡು ಕಲಪದಿದ್ದರೆ, ಕೂಡಲೇ ಮುನಿಸಿಪಲ್ ಕಮಿಶನರಿಗೆ ಅರ್ಜಿ ಮಾಡಬೇಕು. ಅರ್ಜಿಯಲ್ಲಿ, ವಾರ್ಡು ನಂಬ್ರ, ಮನೆ ನಂಬ್ರ, ವ ನಯ ತಿಂಗಳ ಬಾಡಿಗೆ, ಕೋಣೆಗಳ ಸಂಖ್ಯೆ, ವಿದ್ಯುದ್ದೀಪಗಳಿವೆಯೇ ಅಥವಾ ಇಲ್ಲವೆಂಬ ವಿಷಯ, ಮತ್ತು ಆವಶ್ಯವಿರುವ ಇತರ ವಿಷಯಗಳನ್ನು (ಅವಶ್ಯವಿರುವ ಸಕ್ಕರೆ ಮತ್ತು ಎಣ್ಣೆಯ ಕುರಿತು) ಕಾಣಿಸತಕ್ಕದ್ದು. ಸಾರ್ವಜನಿಕರಿಗೆ ಸಕ್ಕರೆಯ ವಿತರಣ ಮಾಡಲು ಜಿಲ್ಲಾ ಕಲೆಕ್ಟರರಿಗೆ ಸಲಹೆ ಕೊಡುವ ಸಲುವಾಗಿ ನೇಮಕವಾದ ಕಮಿಟಿಯು ಇದನ್ನು ತನಖೆ ಮಾಡಿ ವಾರಕೊಮ್ಮೆ ತಮ್ಮ ಶಿಫಾರಸು ಸಹಿತವಾದ ವರದಿ ಕೊಡುವುದು. "ಸ್ಪೆಶ್ಯಲ್ ಕಮಿಟಿ, ಮುನಿಸಿಪಲ್ ಆಫೀಸು, ಮಂಗಳೂರು" ಇದು ಕಮಿಟಿಯ ವಿಳಾಸವಿರುತ್ತದೆ. ಸಕ್ಕರೆ ಮತ್ತು ಎಣ್ಣೆಯ ಕೋಟಾ ಹೆಚ್ಚಿಸಬೇಕಾಗಿದ್ದರೂ ಇದೇ ಕಮಿಟಿಗೆ ಬರಕೊಳ್ಳಬೇಕು; ಇಂತಹ ಅರ್ಜಿಗಳನ್ನು ಕಮಿಟಿಯು ಪರಿಶೀಲಿಸಿ, ಸಲಹೆಯೊಂದಿಗೆ ಜಿಲ್ಲಾ ಕಲೆಕ್ಟರರಿಗೆ ಕಳಿಸುವುದು. ಯಾರೊಡನೆ ಸಕ್ಕರೆ ಅಥವಾ ಚಿಮಿಣಿ ಎಣ್ಣೆಗೆ ಸ್ಪೆಶಲ್ ಪರ್ಮಿಟ್ ಇರುತ್ತದೋ ಅವರು ಅದನ್ನು ತಮಗೆ ಹೊಸ ಕಾರ್ಡು ತಲಪುತ್ತಲೇ ಕಲೆಕ್ಟರರಿಗೆ ಕಳುಹಿಸಬೇಕು.

ಕಟ್ಟಡಗಳಿಗೆ ತಡೆ?:-ಸಿಮೆಂಟ್, ಕಬ್ಬಿಣ, ಮರ ಮೊದಲಾದ ಯುದ್ಧಾವಶ್ಯಕ ವಸ್ತುಗಳು ಪ್ರಜಾವಶ್ಯಕತೆಗೂ ಬೇಕು. ಇವುಗಳ ಸಂಯೂದ ವಿತರಣವಾಗಲು ನಿಯಂತ್ರಣವಿದೆ. ಇನ್ನು ಮಿತಿಯಿಲ್ಲದ ಹೊಸ ಕಟ್ಟಡಗಳಾಗದಂತೆ ಪ್ರತಿಬಂಧಿಸುವರೆಂದೊಂದು ನಿರಾಧಾರವಾದ ಸುದ್ದಿಯುಂಟು. (ಇಂತಹ ಅಧಿಕೃತ ಆಜ್ಞೆ ಇನ್ನೂ ಪ್ರಕಟವಾಗಿಲ್ಲ,

ಸಿಟಿಬಸ್ ದರಗಳು.-ಸರ್ವಿಸ್ ಬಸ್‌ಗಳಿಗೆ, ಮೈಲಿಗೆ ಅರ್ಧಾಣೆಗಿಂತ ಹೆಚ್ಚಿನ ದರವಿರಬಾರದೆಂದು ವಿಧಿಸಿದಂತೆಯೇ ಸಿಟಿ ಬಸ್ಸುಗಳಿಗೂ ವಿಧಿಸುವುದವಶ್ಯವಿದೆ. ಸಿಟಿ ಬಸ್ಸಿನವರು, ಕನಿಷ್ಠ ಮೊಬಲಗು 0—1—6 ಪಡಕೊಳ್ಳುತ್ತಿರುವರು. ಈ ದರಗಳು ಇಳಿಸಲ್ಪಟ್ಟರಾಗದೇ?

ಪ್ಲೇಗ್ ವರದಿ:-ಕಳೆದೆರಡು ವಾರಗಳಿಂದಲೂ ನಗರದಲ್ಲಿ ಪ್ಲೇಗು ರೋಗಕು ಇಲ್ಲ. ಮಳೆಗಾಲವಾರಂಭವಾಗುವ ಮೊದಲೇ ಇದನ್ನು ನಿರ್ಮೂಲ ಮಾಡುವ ಕಾರ್ಯದಲ್ಲಿ ನಮ್ಮ ಹೆಲ್ತ್ ಆಫೀಸರರು ಯಶಸ್ವಿಯಾಗಿರುವರು.

WANTED immediately a science L. T. or a Math. L. T. (Canarese) and a Secondary Grade Trained Teacher for the S.V H. High School, Viswendra Nagar, Innanje. B A.s also may apply. Pay according to qualifications.

Manager,

Viswendra Nagar,
Innanje,
3-7-19 4.

ನೋಟೀಸು.

ಮಂಗ್ಳೂರು ಡಿ। ಮು। ಕೋರ್ಟಿನಲ್ಲಿ.

R. E. P. No. 648/1943. O. S. No. 35/1930.

ಮಹಮ್ಮದ್ ಅಮೀನುದ್ದೀನ್ ಸಾಹೇಬ—

—ಅರ್ಜಿದಾರ,

ಎದ್ರಿ

ಹಮ್ಮಬ್ಬ ಬ್ಯಾರಿ, ಶಿಹಾಬುದ್ದೀನ್ ಬ್ಯಾರಿಗಳ ಮಗ, ಮಂಗ್ಳೂರು ಶಹರ ಕುದ್ರೋಳಿ—

—ರೆಸ್ಪಾಂಡೆಂಟ್,

ಮೇಲಿನ ಅಮಲ್ಜಾರಿಯಲ್ಲಿ ಸ್ಥಿರಾಸ್ತಿ ಯೇಲಂ ಕುರಿತು ದಾಖಲಾದ ಯೇಲಂ ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸುವರೆ ವಗೈರ ತಾರೀಕು 10-7-1944ಕ್ಕೆ ಪೂರ್ವಾಹ್ನ ಗಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಅಮಲ್ಜಾರಿಯು ತನ್ನಿಗೆ ಯಿಟ್ಟಿರುವದರಿಂದ ರೆಸ್ಪಾಂಡೆಂಟರಾದ ನೀವು ಹಾಜರಾಗಿ ವ್ಯವಹರಿಸದಿದ್ದರೆ ನಿಮ್ಮ ಗೈರ್ ಹಾಜರಿಯಲ್ಲಿ ಸದ್ರಿ ಅಮಲ್ಜಾರಿಯನ್ನು ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

(By order of Court)

G Narayana Rao,
ಅರ್ಜಿದಾರ ಕಡೆ ವಕೀಲ.

Mangalore,
28-6-1944.

Degrees: Books: Medicines
Free H. L. M. S. M. B. H. M. D. etc, Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs, 4. Insanity Cure Pills Rs, 10 Enclose 2 annas stamp:—
Prof, Dr, N, H, Chbatbar,
Principal Indian Homeopatht Institute & Society (Govt. Regd)
P. O. MAHUVA (Kathiawar Dt, India).

Sidha-Kalpa Kavach (Regd.)
No. 3 Rs. 2 No. 2 Rs 5 No. 1 Rs. 7 Special Rs 10, Extra Special Rs, 17 fo over marriage health wealth, Ask an six questions with M. O. Re. 1/4, and get correct answers by return, post Life reading Rs.10No.V. .P.Send M. O. Free, pmplets.
Prof, Dr. N, H Chhatbar,,
P. O. MAHUVA. (Kathiawar India.)

ಕೇರಳ ವಾಷ್‌ವೆಲ್ ಸೋಪು

ಇದನ್ನು ಉಪಯೋಗಿಸಿದಂತೆ ಉಳಿತಾಯ ಹೆಚ್ಚಾಗುವುದು.

ವಾಷ್‌ವೆಲ್ ಸಾಬೂನು ಹೇಗೆ ಕೆಲಸಮಾಡಿ ಉಳಿತಾಯವನ್ನೀಯುವುದು ಎಂಬುವುದನ್ನು ತಿಳಿಯಿರಿ.

ಒಂದು ಚಿಕ್ಕ ತುಂಡು ವಾಷ್‌ವೆಲ್ ಸಬಕಾರದಿಂದ ತುಂಬಾ ನೊರೆ ಹೊರಡುತ್ತದೆ.

ಆನಂದದಾಯಕವಾದ ಈ ನೊರೆಯಿಂದ ಬಟ್ಟೆಯನ್ನು ಒಗೆದರೆ ಬಟ್ಟೆ ಬಾಳಿಕೆ ಬರುತ್ತದೆ.

ಬಟ್ಟೆಯ ಕಶ್ಮಲವು ಸುಲಭವಾಗಿ ತೊಳೆದು ಹೋಗಿ ಶುಭ್ರವಾಗುತ್ತದೆ.

ಸಬಕಾರದ ನೊರೆಯ ಪ್ರಭಾವದಿಂದ ಬಟ್ಟೆ ಶುಭ್ರವಾಗಿ, ಹೆಚ್ಚು ಕಾಲ ಬಾಳಿಕೆ ಬಂದು, ದಿನವಹಿ ಖರ್ಚನ್ನು ಕಡಿಮೆಮಾಡಿ ಉಳಿತಾಯವನ್ನು ವೃದ್ಧಿಸುವುದು.

ಮಿತದರದಲ್ಲಿ ದೊರೆಯುವ ಸಾಬೂನುಗಳಲ್ಲಿ **ವಾಷ್‌ವೆಲ್ ಸೋಪು** ಅತ್ಯುತ್ತಮ.

ತಯಾರಿಸಿದವರು:—

ಕೇರಳಾ ಸೋಪು ಇನ್ಸ್ಟಿಟ್ಯೂಟ್, ಕಲ್ಲಿಕೋಟೆ.

Kerala Soap Institute, CALICUT.

ಇಟಲಿ—ರಶ್ಯ.

ರೋಮಿನ ಚರಿತ್ರಾರ್ಹ ವಿಜಯದನಂತರ ಮಿತ್ರ ಸೇನೆಗಳು ಉತ್ತರ ಕಡೆಗೆ ಎರಡೂ ದಿಕ್ಕಿನಿಂದ ಮುಂದೊತ್ತಿವೆ. ಮಿ. ರೂಸವೆಲ್ಟರಿಂದ ಶ್ಲಾಘನೆ ಪಡೆದ ಹಿಂದೀ ಸೇನೆಗಳು ಅಲ್ಲಿಯ ಯುದ್ಧದಲ್ಲಿ ಗಣನೀಯ ಪಾಲು ವಹಿಸಿವೆ. ಈಗ ಮಿತ್ರ ಸೇನೆಗಳ ಗುರಿಯಾಗಿರುವ ಸ್ಮರಣಾರ್ಹ ನಗರ ಫ್ಲೋರೆನ್ಸಾವನ್ನು 'ಅದರ ಅಮೋಘ ಭಂಡಾರಗಳನ್ನು ಉಳಿಸುವ ಸಲುವಾಗಿ' ಬಹಿರಂಗ ನಗರವೆಂದು ಹಿಟ್ಲರನು ಸಾರಿದ್ದಾನೆ. ರಶ್ಯದಲ್ಲಿ ಸುಮಾರು 15 ದಿನಗಳಿಗೆ ಮೊದಲು ಬಿಳಿ ರಶ್ಯಾರಂಗದಲ್ಲಿ ಸ್ಟಾಲಿನರಾರಂಭಿಸಿದ್ದ ವಸಂತ ಧಾಳಿಯು 250 ಮೈಲು ವಿಸ್ತೀರ್ಣದಲ್ಲಿ ಹರಡಿದೆ. ಅದರ ಮುಖ್ಯ ನಗರ ಮಿನ್ಸ್ಕ್ ಈಗ ಅಪಾಯಕ್ಕೊಳಗಾಗಿದೆ. ಅದರ ಹತ್ತಿರದ ರೈಲ್ವೇ ಕೇಂದ್ರವಿರುವ ಬೊರಿಸೋವ್ ನಗರ ಕೆಂಪು ಸೇನೆಯ ವಶವಾಗಿದೆ. ಫಿನ್ಲೆಂಡಿನೊಳಗಿನ ರಶ್ಯಾನರ ಮುಂದೋಟವೂ ಒತ್ತರದಲ್ಲಿ ಸಾಗಿದೆ. ರಿಬ್ಬೆಂಟ್ರಾಪರು ಫಿನ್ಲೆಂಡಿಗೆ ಧಾವಿಸಿ, ಒಂದು ವ್ಯವಸ್ಥೆಯನ್ನೇರ್ಪಡಿಸಿಕೊಂಡು, ಈಗ ಅಲ್ಲಿಗೆ ಅಧಿಕ ಸಂಖ್ಯೆಯಲ್ಲಿ ನಾಜೀ ಸೇನೆಗಳು ರವಾನೆಯಾಗಿವೆ. ವೈರಿ ಸೇನಾನಿ ಡೀಟ್ಲ್ ರವರು ವಿಮಾನ ಅಪಘಾತದಿಂದ ಕೊಲ್ಲಲ್ಪಟ್ಟರು. ಅವರ ಸ್ಮಶಾನಯಾತ್ರೆಯ ವೇಳೆ ಕಳೆದೈದು ತಿಂಗಳಲ್ಲಿ ಮೌನ ವಹಿಸಿದ್ದ ಹಿಟ್ಲರರು ಶೋಕ ಸೂಚಕ ಭಾಷಣವಿತ್ತು, ಜರ್ಮನರೆಲ್ಲಾ ಡೀಟ್ಲ್‌ರಂತೆಯೇ ತನಗೆ ಬೆಂಬಲವೀಯಬೇಕೆಂದು ಕೇಳಿಕೊಂಡರು

ಬರ್ಮಾ-ಚೀನಾ

ಅಸ್ಸಾಮು ಸರಹದ್ದು ಮತ್ತು ಉತ್ತರ ಬರ್ಮಾ ರಣರಂಗಗಳಲ್ಲಿ ಗಣನೀಯ ಬದಲಾವಣೆಯೇನೂ ನಡೆದಿಲ್ಲ. ಇಂಫಾಲಿನ ಅಪಾಯ ನಿವಾರಣೆಯಾಯಿತೆನ್ನಲಾಗುವದಿಲ್ಲ. ಜಪಾನರೀಗ ಚೀನಾ ಅಂಕವನ್ನು ಮುಗಿಸಿ ಬಿಡುವ ಸನ್ನಾಹದಲ್ಲಿರುವಂತಿದೆ ಅಲ್ಲಿದ್ದ ಮುಖ್ಯ ಅಮೇರಿಕನ್ ವಿಮಾನ ನಿಲ್ದಾಣವನ್ನು ಜಪಾನರು ಸ್ವಾಧೀನಪಡಿಸಿಕೊಂಡಿದ್ದಾರೆ. ಜಪಾನರೀಗ ಕೆಂಟೋನ್ ಕ್ಷೇತ್ರದಿಂದ ಉತ್ತರಾಭಿಮುಖ ಮಹಾಧಾಳಿಯನ್ನಾರಂಭಿಸಿದ್ದಾರೆ. ಹ್ಯಾ-ಕೆಂಟೋನ್ ರೈಲ್ವೇ ಮೂಲಕ ದಕ್ಷಿಣಕ್ಕೊತ್ತುತ್ತಿರುವ ತಮ್ಮ ಇನ್ನೊಂದು ಸೇನಾ ವಿಭಾಗವನ್ನು ಸೇರಿಕೊಳ್ಳುವದೇ ಜಪಾನರ ಗುರಿ. ಈ ಧಾಳಿಗಳು ಚೀನದ ಪಾಲಿಗೆ ಹೃದಯಸ್ತಂಭನದಷ್ಟು ಅಪಾಯಕಾರಿಗಳಿವೆ.

ಆಲಾಂಡ್ ಆಕ್ರಮಣ.

ಸ್ವೀಡನ್ ಮತ್ತು ಫಿನ್ಲೆಂಡಿನ ಮಧ್ಯದಲ್ಲಿರುವ ಆಲಾಂಡ್ ದ್ವೀಪಗಳನ್ನು ಜರ್ಮನ್ ಸೇನೆಗಳಾಕ್ರಮಿಸಿವೆ ಎಂದು ವಾರ್ತೆ ಬಂದಿದೆ.

ತಾರುಣ್ಯ

ಕೆಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುಕ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು,

ಪುತ್ತೂರು ಏಜಂಟರು: - **ಪೈ ಫಾರ್ಮಸಿ**

ಚೀನಕ್ಕೆ ಅಪಾಯ!

ಫಿನ್ಲೆಂಡಿನ ನಿರ್ಧಾರ

ಫಿನ್ಲೆಂಡು ರಶ್ಯಾದೊಡನೆ ಯುದ್ಧವನ್ನು ಮುಂದೊತ್ತುವದೆಂದು ಪ್ರಧಾನಿಗಳು ಇದೇ ತಾ 2ರಲ್ಲಿ ಆಕಾಶವಾಣಿ ಭಾಷಣ ಮೂಲಕ ಘಂಟಾಘೋಷವಾಗಿ ಸಾರಿದ್ದಾರೆ.

ರೋಮೆಲನು

ಫ್ರಾನ್ಸ್ ರಣರಂಗಕ್ಕೆ ರಶ್ಯದಿಂದ ಸೇನೆಗಳನ್ನಾ ಮದು ಪಡಿಸಿಕೊಂಡಿರುವನೆಂದೂ ಅಲ್ಲಿಯ ಪ್ರತಿಭಟನೆಯೀಗ ಬಲಗೊಂಡಿದೆಯೆಂದೂ ತಿಳಿದು ಬರುತ್ತದೆ.

ಕೈದಿಯ ಕೊಲೆ

ಲಾಹೋರಿನ ಮುಲ್ತಾನ್ ಸೆಂಟ್ರಲ್ ಜೈಲಿನಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿದ್ದ ಸಿಖ್ ಕೈದಿಯೊಬ್ಬನು ಬೇರೊಬ್ಬ ಕೈದಿಯ ಪರವಾಗಿ ನ್ಯಾಯ ಯಾಚನೆ ಮಾಡಿದನೆಂಬ ಒಂದೇ ಕಾರಣದಿಂದ ಹೊಡೆತಗಳಿಗೀಡಾಗಿ ಮರಣಗೊಂಡ ಹೃದಯದ್ರಾವಕ ವಾರ್ತೆ ಬಂದಿದೆ.

ಒರಿಸ್ಸಾದಲ್ಲಿ 93ನೇ ಸೆಕ್ಷನ್

ಒರಿಸ್ಸಾ ಪ್ರಧಾನಿಗಳು ರಾಜೀನಾಮೆ ಕೊಟ್ಟು, ಬಿಕ್ಕಟ್ಟು ನಿರ್ಮಾಣಗೊಂಡುದರಿಂದ ಗವರ್ನರರು 93ನೇ ಸೆಕ್ಷನಿನನ್ವಯ ಆಡಳಿತಾಧಿಕಾರವನ್ನು ತಾನೇ ವಹಿಸಿಕೊಂಡಿದ್ದಾರೆ.

ಹಿಂದುಸ್ಥಾನಕ್ಕೆ ಗೋಧಿ

ಇದೇ ಸೆಪ್ಟಂಬರದೊಳಗೆ 4 ಲಕ್ಷ ಟನ್ ಗೋಧಿಯನ್ನು ಹಿಂದುಸ್ಥಾನಕ್ಕೆ ಕಳುಹಿಕೊಡುವ ಹಡಗ ಸಿದ್ಧತೆಯಾಗಿದೆ ಎಂದು ಬ್ರಿಟಿಷ್ ಸರಕಾರವು ಹಿಂದೀ ಸರಕಾರಕ್ಕೆ ತಿಳಿಸಿದೆ.

ಬೊಂಬಾಯಿ ಬೆಂಕಿ

ಸತ್ತವರ ಸಂಬಂಧಿಕರಿಗೆ ಹಾಗೂ ಶಾಶ್ವತವಾಗಿ ಊನಗೊಂಡವರಿಗೆ, ಸೊತ್ತು ನಷ್ಟಹೊಂದಿದವರಿಗೆಲ್ಲಾ ಪರಿಹಾರದ್ರವ್ಯ ಕೊಡುವ ಸರಕಾರದ ವ್ಯವಸ್ಥೆಗಳಂತೆ ಆ ಕುರಿತು ಹೊಸ ಓರ್ಡಿನೆನ್ಸೊಂದು ಜ್ಯಾರಿಯಾಗಿದೆ.

ವೈಸರಾಯರ ನಕಾರ

ಮಹಾತ್ಮಾಜೀಯ ಭೇಟಿ ಯಾಚನೆಯನ್ನು ಅಲ್ಲಗಳೆದ ವೈಸರಾಯರ ವರ್ತನೆಯನ್ನು ಸರ್. ಮಹಾರಾಜಾ ಸಿಂಗ್, ಸರ್. ಗೋಕುಲ ಚಂದ್ ನರಂಗ್ ಮೊದಲಾದ ಪ್ರಮುಖರೂ ಪತ್ರಿಕೆಗಳೂ ಕಠಿಣವಾಗಿ ಟೀಕಿಸಿವೆ.

ಚರಕಾ ಸಂಘದ ವಿಜಯ

ಅ. ಭಾ. ಚರಕಾ ಸಂಘವು ವ್ಯಾಪಾರಿ ಹಾಗೂ ರಾಜಕೀಯ ಸಂಸ್ಥೆಯಾಗಿದ್ದರಿಂದ ಆದಾಯ ತೆರಿಗೆ ತೆರಬೇಕೆಂಬ ಕಮಿಶನರರ ವಾದದಂತೆ ಬೊಂಬಾಯಿ ಹೈಕೋರ್ಟು ತೀರ್ಪುಕೊಟ್ಟಿದ್ದಿತು. ಆ ಕುರಿತು ಚರಕಾ ಸಂಘದ ಕಡೆಯಿಂದ ಪ್ರಿವಿ ಕೌನ್ಸಿಲಿಗೆ ಅಪೀಲಾಗಿ, ಅದು ರಾಜಕೀಯವಲ್ಲವೆಂದೂ, ಆದಾಯ ತೆರಿಗೆ ತೆರಲು ಬಾಧ್ಯವಿಲ್ಲವೆಂದೂ ತೀರ್ಮಾನವಾಗಿದೆ.

ಗಾಂಧೀ ಭರವಸೆ

ಪೂನೆಯಲ್ಲಿ ಕಸ್ತೂರಿಭಾ ಸ್ಮಾರಕ ಸಮಿತಿಯ ಪ್ರಥಮ ಸಭೆಯ ಅಧ್ಯಕ್ಷತೆ ವಹಿಸಿದ ಮಹಾತ್ಮಾಗಾಂಧಿಯವರು, ಇದೊಂದು ರಾಷ್ಟ್ರೀಯ ಸ್ಮಾರಕವಿದ್ದು, ಹಣವು ಸ್ತ್ರೀ ಸಮಾಜದ ಉನ್ನತಿಗಾಗಿಯಲ್ಲದೆ ರಾಜಕೀಯೋದ್ದೇಶಕ್ಕೆ ವ್ಯಯಿಸಲ್ಪಡುವಂತಿಲ್ಲವೆಂದು ಸ್ಪಷ್ಟಪಡಿಸಿರುವರು.

ಹಾರುವ ಬೋಂಬುಗಳು

ದಕ್ಷಿಣ ಇಂಗ್ಲಾಂಡಿನ ಮೇಲೆ ಹಾರುವ ಬೋಂಬುಗಳ ಹಾವಳಿಯಿನ್ನೂ ತಗ್ಗಿಲ್ಲ. ಈ ವಾರದಲ್ಲೇ ಆ ಕುರಿತು ಕಾಮನ್ಸ್ ಸಭೆಯಲ್ಲಿ ಮಿ. ಚರ್ಚಿಲ್ಲರೊಂದು ಹೇಳಿಕೆಯೀಯಲಿದ್ದಾರೆ.

ಕಿಸಾನ್ ಸಭೆಗೆ ಬಹಿಷ್ಕಾರ

ಕೊಚ್ಚಿ ಸರಕಾರವು ಅಲ್ಲಿಯ ಕಿಸಾನ್ ಸಭೆಯನ್ನು ಬೇಕಾಯಿದೇಶೀರವೆಂದು ಸಾರಿದೆ. ಸರಕಾರದ ಶಾಂತಿಪಾಲನಾ ವ್ಯವಸ್ಥೆಯನ್ನು ಆತಂಕಿಸುವದೇ ಅದರ ಗುರಿಯೆಂದು ಅಧಿಕಾರಿಗಳ ಆಕ್ಷೇಪ

ಪಾಕಿಸ್ತಾನ್ ಗುರಿ

ಲಾಹೋರಿನಲ್ಲೀಗ ನೆರೆದಿರುವ ಅಹ್ರಾರ್ ಪರಿಷತ್ತಿನಲ್ಲಿ ಸ್ವಾಗತಾಧ್ಯಕ್ಷ ಮೌಲ್ವಿ ಮಝೂರ್ ಅಲಿಯವರು ಭಾಷಣವೀಯುತ್ತಾ, 'ಪಾಕಿಸ್ತಾನ ಪ್ರಚಾರವು ಕೇವಲ ವೋಟ್ ಸಂಗ್ರಹದ ಹಂಚಿಕೆ ಹೊರತು ಬೇರೇನೂ ಅಲ್ಲ' ವೆಂದಿದ್ದಾರೆ.

ಜರ್ಮನರ ಸಂಧಿ ಸೂಚನೆ?

ಜರ್ಮನಿಯ ವಿದೇಶೀಖಾತೆಯ ಪ್ರಮುಖ ಅಧಿಕಾರಿಗಳು ಸಂಧಾನ ಯತ್ನಕ್ಕಾಗಿ ಸ್ಪೈಯಿನಿಗೆ ಬಂದು ಬ್ರಿಟಿಷರೇನೂ ಎಡೆಕೊಡದುದರಿಂದ ನಿರಾಶರಾಗಿ ಹಿಂದೆ ಹೋದರೆಂದು ವಾರ್ತೆ

'ಬರಗಾಲಕ್ಕೆ ಅಮೆರಿ ಹೊಣೆ.'
'ಡೈಲಿ ಹೆರಾಲ್ಡ್'ನ ಅಭಿಪ್ರಾಯ

ಭಾರತದ ಬರಗಾಲ ಸಂಬಂಧವಾಗಿ, ಇಲ್ಲಿಯ 27 ಮಂದಿ ಪ್ರಮುಖ ಹಿಂದೀಯರು ಕೊಟ್ಟಿರುವ ದೂರನ್ನು ಕ್ಷಣ ತಡಮಾಡದೆ ಪಾರ್ಲಿಮೆಂಟ್ ವಿಚಾರಿಸಬೇಕೆಂದು ಲಂಡನಿನ 'ಡೈಲಿ ಹೇರಾಲ್ಡ್' ಪತ್ರಿಕೆಯು ತನ್ನ ಅಗ್ರಲೇಖನದಲ್ಲಿ ಒತ್ತಾಯ ಪೂರ್ವಕ ಕೇಳಿಕೊಂಡಿದೆ. ಆ ಪತ್ರಿಕೆಯನ್ನುತ್ತಿದೆ. "ಮಿ. ಅಮೆರಿಯನ್ನು ಪೂರ್ಣ ವಾಗ್ಮೂಲವೀಯುವಂತೆ ಕರಯಬೇಕು. ಕಳೆದ ವರುಷದ ಬರಗಾಲದ ಕುರಿತು 'ಅದರ ಮುಖ್ಯ ಜವಾಬ್ದಾರಿ ಸ್ವಾಯತ್ತೆಯನ್ನನುಭವಿಸುತ್ತಿರುವ ಪ್ರಾಂತಿಕ ಸರಕಾರಗಳ ಮೇಲೇನೇ ಇದೆ' ಎಂದು ಅಮೆರಿ ಅಂದಿದ್ದರು. ತನ್ನ ಮೇಲೇನೂ ಇಲ್ಲವೆಂಬುದನ್ನು ತೋರಿಸಲು ಅವರು ಪಟ್ಟಿರುವ ಈ ಕ್ಷುಲ್ಲಕ ಪ್ರಯತ್ನದಿಂದ ಬ್ರಿಟನಿಗೆ ಒಳ್ಳೆಯ ಹೆಸರು ಬರುವಂತಿಲ್ಲ. ಅಲ್ಲಿ ಕಳೆದ ವರುಷ ಭೀಕರ ಬರಗಾಲವೆದ್ದಿತ್ತು; ಕೆಲವು ಭಾರತೀಯ ಪ್ರಮುಖರ ಪ್ರಕಟಣೆಯಂತೆ ಈ ವರುಷ ಅದು ಪುನಃ ಕಾಣಿಸಿಕೊಳ್ಳುವ ಅಪಾಯವಿದೆ.

ಇಂಗ್ಲಿಷು ಕಲಿಯಲಿಲ್ಲವಲ್ಲಾ ಎಂದು ಚಿಂತಿಸುವಿರೇಕೆ?

[ಕೆಲವೇ ಪ್ರತಿಗಳು ಉಳಿದಿವೆ

ಈಗ ನಿಮ್ಮಷ್ಟಕ್ಕೆ ನೀವೇ ಕಲಿತುಕೊಳ್ಳಬಹುದಲ್ಲ

ನಿಮ್ಮಷ್ಟಕ್ಕೆ ನೀವೇ ಸುಲಭವಾಗಿ ಶೀಘ್ರದಲ್ಲಿ ಇಂಗ್ಲಿಷು ಕಲಿತು ಧೈರ್ಯದಿಂದ ವ್ಯಾಕರಣಬದ್ಧವಾಗಿ ಸರಾಗವಾಗಿ ಧಾರಾಳವಾಗಿ ಇಂಗ್ಲಿಷ್ ಬರೆಯುವಂತೆಯೂ ಮಾತಾಡುವಂತೆಯೂ ಮಾಡುವ ಪುಸ್ತಕ

ಸುಲಭದಲ್ಲಿ ಇಂಗ್ಲಿಷು

ಬರೆದವರು:—ನಿಮಗೆ ಸುಪರಿಚಿತರಾದ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು

ಎಂದಮೇಲೆ ಪ್ರತ್ಯೇಕ ಭರವಸೆಯ ಮಾತೇಕೆ?

ಇಂದೇ ಬರೆದು ತರಿಸಿಕೊಳ್ಳಿರಿ

ದೊರಕುವ ಸ್ಥಳ—**ನವಭಾರತ ಪುಸ್ತಕ ಭಂಡಾರ, ಉಡುಪಿ**

ಬೆಲೆ ೧ ರೂಪಾಯಿ

[ವಿ. ಸೂ.—ಯುವಕರಿಗೆ ವಯಸ್ಕರಿಗೆ ಸುಲಭವಾಗಿ ಬೇಗನೆ ಇಂಗ್ಲಿಷ್ ಕಲಿಸಲಿಕ್ಕೂ ಯೋಗ್ಯ ಪಠ್ಯಪುಸ್ತಕ]

ಒಂದು ರೂಪಾಯಿ ಎರಡಾಣೆ ಸ್ಟಾಂಪು ಕಳಿಸಿದರೆ ಬುಕ್‌ಪೋಸ್ಟಾಗಿ, ಒಂದು ರೂಪಾಯಿ ಆರಾಣೆ ಸ್ಟಾಂಪು ಕಳಿಸಿದರೆ ರಿಜಿಸ್ಟರ್ಡ್ ಬುಕ್‌ಪೋಸ್ಟಾಗಿ ಪುಸ್ತಕವು ನಿಮ್ಮ ಮನೆಬಾಗಿಲಿಗೆ ಬರುವುದು.

9—7—44ರಿಂದ ನೆನಪಿರಲಿ 9—7—44ರಿಂದ

ಕೇದಾರ ಶರ್ಮಾ ದಿಗ್ದರ್ಶಿತ

ರಣಜಿತ್ ಕಂಪೆನಿಯ

ವರುದಷ ಅತ್ಯುತ್ತಮ ಚಿತ್ರ

ಅರಮಾನ್ ಅಥವಾ **ಇಚ್ಛಾ**

ಮೋತಿಲಾಲ್ ಮತ್ತು ಶಾಮಿಮ್

ಸಂಗೀತ-"ಜ್ಞಾನದತ್"

ದಕ್ಷಿಣ ಕನ್ನಡ-

ಮಂಗಳೂರು

ಭೂಮಾಲೀಕರಿಗೆ:–ಮಂಗಳೂರು ರೇಶನ್ ಸರಹದ್ದಿನ ಹೊರಗೆ ಅಥವಾ ಒಳಗೆ ಜಮೀನು ಇರುವ ಮತ್ತು ತಮ್ಮ ಅಕ್ಕಿಯ ಭತ್ತದಾಸ್ತಾನು ಇಡಲು ಪರ್ಮಿಟು ಪಡೆದಿರುವ ಎಲ್ಲಾ ಭೂಮಾಲಿಕರು ದಾಸ್ತಾನು ಇಟ್ಟಿರುವ ಅಕ್ಕಿ ಯಾ ಭತ್ತವನ್ನು ಈ ಕೆಳಗಿನ ಉದ್ದೇಶಗಳಿಗೆ ಮಾತ್ರ ಉಪಯೋಗಿಸತಕ್ಕದ್ದು. (1) ರೇಶನ್ ಆರ್ಡರ್ ಪ್ರಕಾರ ಮನೆಯ ಖರ್ಚಿನ ಬಗ್ಗೆ. (2) ಸಂಬಂಧಪಟ್ಟ ಭೂಮಿಯ ಸಾಗುವಳಿಗೆ ಬೀಜದ ಬಗ್ಗೆ (3) ಸಂಬಂಧಪಟ್ಟ ಭೂಮಿಯ ಮುಂದಿನ ಸಾಗುವಳಿಗೆ ಸಂಬಂಧಪಟ್ಟ ಕೆಲಸಗಾರರಿಗೆ ಅಕ್ಕಿ ಯಾ ಭತ್ತದ ರೂಪದಲ್ಲಿ ಮಜೂರಿ ಕೊಡುವ ಬಗ್ಗೆ.

ಈ ಉದ್ದೇಶಗಳ ಹೊರತು ವರ್ಗಾಯಿಸಲು ತಮ್ಮ ದಾಸ್ತಾನಿನಲ್ಲಿರುವ ಅಕ್ಕಿ ಯಾ ಭತ್ತವನ್ನು ಹಬ್ಬ ಪುಣ್ಯಾದಿಗಳಿಗೆ ಯಾ ಮದುವೆ ಮುಂಜಿ ವಗೈರೆ ಶುಭ ಶೋಭನಾದಿಗಳಿಗೆ ವಿಶೇಷ ಪರ್ಮಿಟು. ಅಥವಾ ವಿಶೇಷ ರೇಶನುಗಳನ್ನು ಪಡೆಯದೆ ಅನುಚಿತವಾಗಿ ಖರ್ಚು ಮಾಡಿ ಆ ದಾಸ್ತಾನು ನ್ಯಾಯವಾಗಿ ಇರಬೇಕಾದ ಸಮಯಕ್ಕಿಂತ ಮುಂಚೆ ವ್ಯಯ ಮಾಡಿಬಿಟ್ಟರೆ ಅವರ ಮುಂದಿನ ಖರ್ಚಿನ ಬಗ್ಗೆ ಜಾಸ್ತಿ ರೇಶನುಗಳು ಸಿಗಲಾರವು. ತಮ್ಮ ಬಳಿಯಲ್ಲಿರುವ ಅಕ್ಕಿ ಯಾ ಭತ್ತದ ದಾಸ್ತಾನನ್ನು ದುರ್ವ್ಯಯ ಮಾಡಿ ರೇಶನ್ ಬಗ್ಗೆ ಅರ್ಜಿ ಮಾಡುವವರಿಗೆ ರೇಶನ್ ನಿರಾಕರಿಸಲ್ಪಡುವ ಸಂಭವವಿದೆ. ಸಂಬಂಧಪಟ್ಟ ಎಲ್ಲಾ ಜನರು ಈ ಆಜ್ಞೆಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿ ರೇಶನಿಂಗ್ ಆಫೀಸರ್ ಶ್ರೀ. ಯಸ್. ಯ. ಪಿ ನಾಯ್ಕರು ತಿಳಿಸುತ್ತಾರೆ.

ಮೂಲ್ಕಿ:–ಹಲವಾರು ವರ್ಷಗಳಿಂದ ಮುಂಬೈಯಲ್ಲಿದ್ದು ತಮ್ಮ ಜೀವನ ವೃತ್ತಿಯೊಡನೆಯಲ್ಲಿ ಸಾರ್ವಜನಿಕ ಸೇವೆಯಲ್ಲಿ ತನುಮನಧನಗಳನ್ನರ್ಪಿಸಿ ಬಡವರು ದೊಡ್ಡವರು ಎಂಬ ಭೇದಭಾವವಿಲ್ಲದೆ ಸರ್ವರಿಗೂ ಉಪಕಾರಿಯಾಗಿದ್ದು ಸಕಲರ ಮನ್ನಣೆಗೆ ಪಾತ್ರರಾಗಿದ್ದ ನಮ್ಮ ಊರಿನವರಾದ ಶ್ರೀ ಬಿ ಮಾಮನ್ ಉಮರ್‌ರವರು ಎರಡು ತಿಂಗಳ ರಜೆಯಲ್ಲಿ ಇಲ್ಲಿ ಬಂದಿದ್ದು ಕೆಲವೇ ದಿನಗಳ ಹಿಂದೆ ಮಂಗಳೂರಿಗೆ ತೆರಳಿದವರು ಅಕಸ್ಮಾತ್ ಬೇನೆಬಿದ್ದು ಅದೇ ಕಾರಣದಿಂದ ಕಳೆದ ತಾ 27ರಲ್ಲು ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದ ಪಡುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿಯುಂಟಾಗಲೆಂದು ಅವರ ಕುಟುಂಬಕ್ಕೆ ಸುಖ ಸಮಾಧಾನಗಳು ದೊರೆಯಲೆಂದೂ ಆಶಿಸುವೆವು.

ಕಟ್ಟಿಗೆ ದರ ನಿರ್ಣಯ.

ದ. ಕ. ಜಿಲ್ಲಾ ಕಲೆಕ್ಟರವರು, ಭಾರತ ಸಂರಕ್ಷಣಾ ಕಾನೂನಿನ ರೂಲ್ 81(2)-ತಾ.21-1-42 ನೇ ಜ. ಓ. ನಂಬ್ರ 263 ಪಬ್ಲಿಕ್ (ಫುಡ್) ಅನ್ವಯ, ದ. ಕ. ಜಿಲ್ಲೆಯ ಬೇರೆ ಬೇರೆ ತಾಲೂಕುಗಳಲ್ಲಿ ಕಟ್ಟಿಗೆಗಳ ಧಾರಣೆಗಳು ಈ ಕೆಳಗಿನಂತಿರಬೇಕೆಂದು ಆಜ್ಞೆ ಹೊರಡಿಸಿರುವರು.

ಕಟ್ಟಿಗೆ – ಒಂದು ಟನ್ (ಒಡೆ ಕಟ್ಟಿಗೆಗೆ)2240 ರಾತ್ತಲಿನ ಟನ್ನಿಗೆ ಒಡೆಯದ ..ಒಡೆದ ಚಿಲ್ಲರೆ ದರ (ಒಡೆ ಕಟ್ಟಿಗೆ) 560 ರಾತ್ತಲಿನ ಖಂಡಿಗೆ ಒಡೆಯದ ..ಒಡೆದ ಮಂಗಳೂರು ಮುನಿಸಿಪಾಲಿಟಿಯ ಬಂದರ ನದಿ ಕಿನಾರೆಯ ಎರಡು ಫರ್ಲಾಂಗುಗಳ ಸರಹದ್ದಿನೊಳಗೆ) ಕರಿಮರ ಮತ್ತು ಚಬುಕು—

17-8-0 19-8-0 5-4-0 5-12-0
ಬಿರಕೆ-14-0 0 16-0-0 4-4-0 4-12-0

ಮಂಗಳೂರು ಮುನಿಸಿಪಾಲಿಟಿ (ಬಂದರ ನದಿ ಕಿನಾರೆಯಿಂದ ಎರಡು ಫರ್ಲಾಂಗ್ ಹೊರಗಿನ ಪ್ರದೇಶ) ಕರಿಮರ ಮತ್ತು ಚಬುಕು- 17 8-0 19 8-0 5-8 0 6-0-0 ಬಿರಕೆ- 14 0-0 16 0-0 4-8-0 5-0-0

ಉಡುಪಿ ಮುನಿಸಿಪಾಲಿಟಿ

ಕರಿಮರ ಮತ್ತು ಚಬುಕು-12-8 0 14-8-0 3-14-0 4-6 0 ಬಿರಕೆ- 10-0-0 12-0-0 3-3 0 3-11-0

ಪುತ್ತೂರು ಟೌನ್

ಉತ್ಕೃಷ್ಟ ಜಾತಿ (ಬಾಳಿಪು ಮರ, ತಿರ್ಪ) 8-2 0 10 2-0 2-13-0 3-5-0 ಬಿರಕೆ- 6 8-0 8 8-0 2 4 0 2-12-0

ಕಾರ್ಕಳ ಟೌನ್

ಕರಿಮರ ಮತ್ತು ಚಬುಕ - 8 2 0 10-2-0 2 13-0 3-5-0 ಬಿರಕೆ- 6 8 0 8-8 0 2 4 0 2 12 0

(ಇಪ್ಪಲಿನ ದರವು, ಮಂಗಳೂರು ಮುನಿಸಿಪಾಲಿಟಿಯೊಳಗೆ ರಖಂ—ಟನ್ನಿಗೆ ರೂ. 45-0-0, ಚಿಲ್ಲರೆ ಮಣಕ್ಕೆ 0 10 0 ಇರತಕ್ಕದೆಂದೂ, ಮುನಿಸಿಪಾಲಿಟಿಯ ಹೊರಗೆ ಇದ್ದಲು ತಯಾರಾಗುವಲ್ಲಿ ಟನ್ನಿಗೆ ರೂ. 40-0 0 ಮತ್ತು ಮಣಕ್ಕೆ 0-8 0 ಇರತಕ್ಕದೆಂದೂ ಪ್ರಕಟಿಸಿರುವರು.)

ಪ್ರತಿಯೊಬ್ಬ ವ್ಯಾಪಾರಿಯೂ ಕ್ರಯದ ಪಟ್ಟಿಯನ್ನು ಕಾಣುವಂತೆ ಎದುರಿಗೆ ತೂಗಹಾಕಬೇಕು. ಯಾರಿಗೆ ಯಾವ ದಿನ ಎಷ್ಟು ಕಟ್ಟಿಗೆಕೊಟ್ಟಿದೆಂಬ ವಿವರವನ್ನು ಬರೆದಿಡಬೇಕು. ಸಂಬಂಧಪಟ್ಟ ಅಧಿಕಾರಿಗಳು ತನಿಖೆಗೆ ಬಂದರೆ ಆ ಬಗ್ಗೆ ಸೌಕರ್ಯ ಕೊಡಬೇಕು. ಮೇಲಿನ ದರಗಳಿಗಿಂತ ಹೆಚ್ಚಿನ ದರಕ್ಕೆ ವಿಕ್ರಯಿಸಿದರೆ, ನಿಬಂಧನೆಗಳನ್ನುಲ್ಲಂಘಿಸಿದರೆ, ಮೂರು ವರ್ಷಗಳ ಸಜೆ ಅಥವಾ ದಂಡ — ಇಲ್ಲವೇ ಎರಡಕ್ಕೂ ಗುರಿಯಾಗಬೇಕಾದೀತು

(ಸಹಿ) ಪಿ ಠ. ಮುದಾಲಿಸ್
ಕಲೆಕ್ಟರ್.

ಮಂಗಳೂರು,
ತಾ 14 6 1944.

ಉಡುಪಿ.

ಮುನಿಸಿಪಲ್ ಕೌನ್ಸಿಲಿನ ಮೀಟಿಂಗು

ಕಳೆದ ತಾ 28ರಲ್ಲು ಚೆಯರ್‌ಮನ್ ಶ್ರೀ ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ನಗರರಚನಾ ಕಾರ್ಯದ ಸಲುವಾಗಿ ಶಿಬಂಧಿಯ ನೇಮಕವಾಗಬೇಕೆಂಬ ಟೌನ್ ಪ್ಲೇನಿಂಗ್ ಡ್ಯಾರೆಕ್ಟರರ ಸೂಚನೆಯು ಬಜೆಟು ಕಮಿಟಿಯ ತೀರ್ಮಾನಕ್ಕೆ ಮುಂದರಿಸಲಾಯಿತು. ಮುನಿಸಿಪಲ್ ಕ್ಷೇತ್ರದೊಳಗಿರುವ ರುದ್ರಭೂಮಿ, ಸ್ಮಶಾನ, ವೃಂದಾವನಗಳನ್ನು ರಿಜಿಸ್ತ್ರ ಮಾಡಲು ದರ ನಿರ್ಣಯಿಸುವ ಕುರಿತು ಆಲೋಚಿಸಲಾಗಿ ಕೊನೆಗೆ ಫೀಸು ವಸೂಲ್ಮಾಡದೇ ಧರ್ಮಾರ್ಥ ರಿಜಿಸ್ತ್ರಿ ಮಾಡಬಹುದೆಂದಾಯಿತು. ತೆಂಕಣ ಹುಡುಗಿಯರ ಹಾಯರ್ ಎಲಿಮೆಂಟರಿ ಶಾಲೆಗೆ ಕಟ್ಟಡದ ಅಭಾವವಿರುವುದರಿಂದ ಸ್ವಂತ ಕಟ್ಟೋಣ ಕಟ್ಟಿಸುವರೆ ಬಿ| ಮಾ| ಬಡಗಬೆಟ್ಟು ಗ್ರಾಮದ ಸರ್ವೆ ನಂಬ್ರ97/2, 97/7B ಮತ್ತು 97/3C ನ ಅಂಶಗಳನ್ನು ಪಡೆಯಬೇಕೆಂದಾಯಿತು. ಮುನಿಸಿಪಲ್ ಕ್ಷೇತ್ರದೊಳಗೆ ವಸೂಲಾಗುವ ಜನರಲ್ ಸೇಲ್ಸ್ ಟೇಕ್ಸಿನಲ್ಲಿ ದಶಮಾಂಶವು ನಗರಸಭೆಗೂ ಸಿಕ್ಕಬೇಕೆಂದು. ಮಾಡಿದ ನೆಲ್ಲೂರು ನಗರಸಭೆಯ ಗೊತ್ತುವಳಿಯನ್ನು ಸಮರ್ಥಿಸಲಾಯಿತು. ಹಾಗೆಯೇ ಸರಕಾರಕ್ಕೆ ವಿನಂತಿಸಬೇಕೆಂದಾಯಿತು. ಮುನಿಸಿಪಾಲಿಟಿಗಳಲ್ಲಿಯ ಶಿಬಂಧಿ ನೇಮಕವು ಜಾತಿವಾರು ದೃಷ್ಟಿಯಲ್ಲಿ ಆಗತಕ್ಕದೆಂಬ ಎಲ್ಲೂರು ನಗರಸಭೆಯ ಠರಾವಿಗೆ 'ನ' ಕಾರ ಮನಸ್ಸಿನಿಂದ ರಿಕಾರ್ಡ ಮಾಡಲಾಯಿತು. ಆಟವಾಡುವ ಸ್ಥಳದ ಉಪಯೋಗಾರ್ಥವಾಗಿ 25 ಸೆಂಟ್ಸು ಮುನಿಸಿಪಲ್ ಜಾಗವನ್ನು ದಯಪಾಲಿಸಬೇಕೆಂಬ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲಾ ಮೆನೇಜರರ ಪ್ರಾರ್ಥನೆಯು ಮನ್ನಿಸಲಾಗಲಿಲ್ಲ. ನಗರ ಸಭೆಯ ಉದಾರ ಸಹಾಯವನ್ನಪೇಕ್ಷಿಸಿದ ಮಂಗಳೂರು ಡಿ. ಸ. ಮಿಶನಿನ ಆಶೆ ನಿರಾಶೆಯಾಯಿತು. ಕೌನ್ಸಿಲಿನ ಆರ್ಥಿಕ ದೃಷ್ಟಿಯಿಂದ, ರಸ್ತೆ ದುರಸ್ತಿ ಬಗ್ಗೆ ಅಂದಾಜು ಪಟ್ಟಿ ಮಂಜೂರಾಯಿತು. ಸಾಧಾರಣ ಓಣಿಗಳ ರಿಪೇರಿ ಬಗ್ಗೆ ಶೀಘ್ರ ಗಮನ ಕೊಡಬೇಕಾಗಿದೆ. ನಗರ ಸಭಾಹಾಲಿನಲ್ಲಿ ಪ್ರೇಕ್ಷಕವರ್ಗಕ್ಕೂ ಪತ್ರಿಕಾ ಪ್ರತಿನಿಧಿಗಳಿಗೂ ಯೋಗ್ಯ ಆಸನಗಳ ವ್ಯವಸ್ಥೆ ಶೀಘ್ರ ಆಗತಕ್ಕದೆಂಬ ಚೆಯರ್‌ಮೆನರ ಮಂಡಿಸಿದ ಮಾತುಗಳು ಎತ್ತಿಹೇಳತಕ್ಕದಾಗಿದೆ.

ಉಡುಪಿತಾಲೂಕು ವಾರ್ ಕಮಿಟಿ

ಇದು ಉಪಸಮಿತಿಗಳ ಹೊಸ ಸದಸ್ಯರ ಆಯ್ಕೆಯು ತಾ29ರಲ್ಲಿ ಎ.| ಟಿ| ನೊರೋನ್ಹಾ, ಡಿ| ಮುನ್ಸಿಫ್ ಅವರ ಅಧ್ಯಕ್ಷತೆಯಲ್ಲಿ ಜರಗಿದ ಮಹಾಸಭೆಯಲ್ಲಿ ನಡೆಯಿತು.

ಗೌ| ಸಾ| ಬ್ರಾಹ್ಮಣ ವೃಂದದ

ಗುರುಗಳಾದ ಕಾಶೀಮಠಾಧೀಶ ಶ್ರೀ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು ತಮ್ಮ ಶಿಷ್ಯ ಶ್ರೀ ಸುಧೀಂದ್ರ ತೀರ್ಥಸ್ವಾಮಿಗಳವರೊಂದಿಗೆ ತಾ 29ರಲ್ಲು ಸಂಜೆ ಉಡುಪಿಗೆ ಚಿತ್ತೈಸಿದರು. ಸಮಾಜದ ಹತ್ತು ಹಲವರು ಗುರುಶಿಷ್ಯರನ್ನು ಮೆರವಣಿಗೆಯಿಂದ ಸ್ವಾಗತೀಕರಿಸಿದರು.

ವಿವಾಹ ಸಮಾರಂಭದ ಸತ್ಕಾರ ಕೂಟ:–ಸ್ಥಳೀಯ ಬೋರ್ಡು ಹೈಸ್ಕೂಲ್ ಮಾಸ್ಟರ್ ಶ್ರೀ. ಯು. ವೆಂಕಟ್ರಾವ್ ಬಿ.ಎ.ಎಲ್.ಟಿ. ಅವರು ತಮ್ಮ ದ್ವಿತೀಯ ಪುತ್ರ ಶ್ರೀಪತಿ ರಾಯರ ವಿವಾಹ ಸಮಾರಂಭದ ಸಂತೋಷ ಸೂಚನಾರ್ಥವಾಗಿ ತಾ 29ರಲ್ಲು ಸಂಜೆ ಇಷ್ಟಮಿತ್ರರಿಗೆಲ್ಲಾ ಟೀಪಾರ್ಟಿಯನ್ನಿತ್ತರು.

ಮಳೆ:– ಆರ್ದ್ರಾ ನಕ್ಷತ್ರದ ಮಳೆಯು ಚೆನ್ನಾಗಿದೆ.

ಚಿಮಿಣಿಎಣ್ಣೆ ಮತ್ತು ಸಕ್ಕರೆ:– ವಿಕ್ರಯಿಸುವ ಕೆಲವು ಅಧಿಕೃತ ವ್ಯಾಪಾರಿಗಳು ನ್ಯಾಯವಾದ ತೂಕ ದರದಲ್ಲಿ ಅವನ್ನು ಕೊಡುವುದಿಲ್ಲವಾಗಿ ವಾರ್ತೆ

ಆತ್ಮಹತ್ಯೆ!:-ತಳಿಪರಂಬದಲ್ಲಿ ಎಗ್ರಿಕಲ್ಚರಲ್ ಡಿಮೋನ್‌ಸ್ಟ್ರೇಟರಾಗಿದ್ದ ನಮ್ಮ ಜಿಲ್ಲೆಯ ಶ್ರೀ ಕೆ| ಶೇಖರ ಹೆಗ್ಡೆ, ಬಿ| ಎಸ್| ಸಿAg.ಯವರು ಕಳೆದ ತಾ 29ರಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವರೆಂಬ ಅತ್ಯಂತ ವಿಷಾದಕರ ವಾರ್ತೆ ಬಂದಿದೆ. ವಿಷಪ್ರಯೋಗ ಎಂಬ ಸುದ್ದಿ- ಮೃತರು ಸುಮಾರು 24 ವರ್ಷ ಎಳೆವಯಸ್ಸಿನ ನಯ ವಿನಯಶಾಲಿ ಜನಪ್ರಿಯ ತರುಣರಿದ್ದರು.

ಉದ್ಘಾಟನೆ:-ಶ್ರೀ ವೀರ ವಿಠಲ ಆಯಿಲ್ ಎಂಡ್ ರೈಸ್ ಮಿಲ್ಸ್ ಲಿಮಿಟೆಡ್, ಎಂಬ ಸಂಸ್ಥೆಯು ತಾ 29ರಲ್ಲಿ ಶ್ರೀ ಪಿ ಎಸ್ ಕುದ್ವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಈ ಸಂದರ್ಭದಲ್ಲಿ ಶ್ರೀ ಕೆ ಆರ್-ಶೆಣೈ ದಾಟ್ಯರಾದಿಯವರ ವಿನೋದಲಾದವರ ಭಾಷಣಗಳಿದ್ದವು ಚೆಯರ್‌ಮೆನ್ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಧನ್ಯವಾದಗಳನ್ನಿತ್ತರು.

Notice by Substituted Service

In the Court of the District Munsif of Mangalore.

(Sub Court S. C. No. 28/1938)
R. E. P. No. 69/1944.

Between—
Potail Subbayya Shetty, (Plaintiff)
—Petitioner,
and
Aithappa Pujary (Defendant) Respondent

To
Respondent,—Aithappa Pujary, son of Bandadadi Basava Pujary, Ejaman of the family residing at Thokur Village, Pejavar Magane, Mangalore Taluk.

Whereas in the abovenamed suit, Plaintiff-petitioner, the decree holder has applied for the sale of immoveable property in the above execution petition You are hereby informed that the 14th day of July 1944 has been fixed for settling the terms of the proclamation of sale.

B Vaikunta Baliga,
Vakil for Petitioner.

Mangalore,
1-7-1944



ಕಗ್ಗತ್ತಲೆ? ಇಲ್ಲ!
ಫ್ರೆಂಚ ಪ್ರಕಾಶಕದಿಂದ
ನಿಮ್ಮ ಮನೆಗಳನ್ನು ಬೆಳಗಿಸಿರಿ!
ಚಿಮಿಣಿ ಎಣ್ಣೆ ಬೇಕಾಗಿಲ್ಲ, ಹೆಚ್ಚು ಪ್ರಕಾಶಿತ ದೀಪ, ತೀವ್ರ ಪ್ರಕಾಶ
ಹಂಬತ್ತಿಗಳ ಒಂದು ಪೆಟ್ಟಿಗೆ
ಬೆಲೆ: ರೂ. ೧—೪—೦ ಪ್ರತಿಯೊಂದು ಬತ್ತಿಯು ೨೪ ತಾಸು ಉರಿಯುವದು
೬ ಪೆಟ್ಟಿಗೆಗಳಿಗೆ ಅಂಚೆ ವೆಚ್ಚ ಉಚಿತ ೬ ಪೆಟ್ಟಿಗೆ ಪ್ಯಾಕೆಟದ ಕರಾರುಗಳು.
ಯಾವುದಾದರೂ ಸ್ವಲ್ಪ ವನಸ್ಪತಿ ಎಣ್ಣೆಯನ್ನು ಉಪಯೋಗಿಸಬೇಕು
ಸ್ಯಾಂಪಲ್ಸಿಗೆ ಬೇಕು ಫ್ರೆಂಚ ಲಾಯಿಟರ ಕಂಪನಿ, ೭೫೫ ಚಿಕ್ಕಪೇಟೆ, ಬೆಂಗಳೂರ ಸಿಟಿ

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results
Dose For adults:- 3 to 5 drops 2 to 3 times a day with the decoction of cloves or ajwan
For Children: 1 to 2 drops with the said decoction.
Also a sovereign remedy for diarrhoea, Stomachache, Vomiting and Nausea
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ನೊಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 4ರಿಂದ 8 ಬೊಟ್ಟು. ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ- ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಬಂಧಿಸಲ್ಪಟ್ಟಾಗಲೇ ಆ ಸ್ಥಾನವನ್ನು ಕಳಕೊಂಡಿದ್ದೇನೆ. ಈಗ ನಾನು ಹೊರಗಿದ್ದೇನಾದರೆ ಅದು ನನ್ನ ಅಥವಾ ನಿಮ್ಮ ಶಕ್ತಿ ಬಲದಿಂದಲ್ಲ—ಕೇವಲ ಅನಾರೋಗ್ಯದ ಪರಿಣಾಮವಿದು. ಸತ್ಯಾಗ್ರಹಿಯು ಪಾಲಿಗೆ ಅನಾರೋಗ್ಯವೆಂಬುದು ನಾಚಬೇಕಾದ ವಿಷಯ ಆ ಬಂಧನದೊಂದಿಗೆ ಕಳೆದು ಹೋದ ನನ್ನ ಅಧಿಕಾರವು ಈ ಅವಘಡಾತ್ಮಕ ಬಿಡುಗಡೆಯಿಂದಾಗಿ ನನಗೆ ಮತ್ತೊಮ್ಮೆ ದೊರೆಯುವದಿಲ್ಲ.

ಕಾನೂನಿನ ದೃಷ್ಟಿಯಲ್ಲಿ

ನಮ್ಮಲ್ಲೀಗ ಜ್ಯಾರಿಯಲ್ಲಿರುವ ಕಾನೂನಿನ ದೃಷ್ಟಿಯಲ್ಲಿ ನನ್ನ ಸ್ಥಾನ ಹೇಗೆ ಎಂಬ ವಿಷಯವನ್ನು ನಾನು ಕೆಲವು ಮಿತ್ರ ವಕೀಲರೊಡನೆ ಚರ್ಚಿಸಿ ನೋಡಿದ್ದೇನೆ. ನನ್ನ ಸತ್ಯಾಗ್ರಹೀ ಭಾಷೆಯಲ್ಲಾವುದು ಯಥಾರ್ಥವೋ ಅದು ಕಾನೂನಿನ ದೃಷ್ಟಿಯಲ್ಲೂ ಸತ್ಯವೇ ಆಗಿದೆ ಎಂದು ಅವರೆಲ್ಲರ ಅಭಿಪ್ರಾಯ. ಪ್ರಾಯಶಃ ಇನ್ನು ಕೆಲವೇ ದಿನಗಳೊಳಗೆ, ಕಾಯಿದೇ ಸಂಬಂಧದ ಈ ಅಭಿಪ್ರಾಯವನ್ನವರು ಪ್ರಕಟಿಸಲಿದ್ದಾರೆ. ಹೇಗಿದ್ದರೂ ಕಾಂಗ್ರೆಸಿನ ದೃಷ್ಟಿಯಲ್ಲಿ, ನನಗೀಗ ನಿಮ್ಮಲ್ಲಿ ಯಾರಾದರೊಬ್ಬನಿಗಿರುವದಕ್ಕಿಂತ ವಿಶೇಷಾಧಿಕಾರವೇನೂ ಇಲ್ಲ ನಾನು ಕೆಲವರುಷಗಳಿಗೆ ಮೊದಲೇ ನಾಲ್ಕಾಣೆ ಸದಸ್ಯತನಕ್ಕೂ ರಾಜೀನಾಮೆಕೊಟ್ಟಿರುವದರಿಂದ ಕಾನೂನು ಬದ್ಧವಾಗಿ ನನಗೆ ಕಾಂಗ್ರೆಸಿನಲ್ಲಿ ಸ್ಥಾನವೇ ಇಲ್ಲ. ಆದರೂ ನನಗೆ ಗೊತ್ತಿದೆ—ನಾನು ನಿಮ್ಮ ಹೃದಯಗಳಲ್ಲೊಂದು ದೊಡ್ಡ ಸ್ಥಾನ ಪಡೆದಿದ್ದೇನೆ. ನಾನೇನೇ ಹೇಳಿದರೂ ನೀವದನ್ನು ಬಹಳ ಘನವಾದುದೆಂದು ಭಾವಿಸಿಕೊಳ್ಳುತ್ತೀರಿ. ನಾನೀಗ ಹೇಳುವಂತಹದು ಕೇವಲ ನನ್ನ ಖಾಸಗೀ ಅಭಿಪ್ರಾಯವೆಂದು ಭಾವಿಸಿ, ನಿಮಗೆ ಸರಿದೋರಿದಂತೆ ಅಂಗೀಕರಿಸಬಹುದು, ಇಲ್ಲವೇ ನಿರಾಕರಿಸಬಹುದು. ನಾನೊಂದು ಪ್ರತಿನಿಧಿ ಸ್ಥಾನದಲ್ಲಿದ್ದು ಮಾತಾಡುತಿದ್ದರೆ ಆಗಿನ ಸ್ಥಿತಿ ಬೇರೆ; ಆಗ ಶಿಸ್ತುಬದ್ಧ ಸೈನಿಕರಂತೆ ನೀವು ನನ್ನ ಸೂಚನೆಗಳನ್ನು ಶಿರಸಾವಹಿಸುವಿರೆಂದು ನಿರೀಕ್ಷಿಸುತ್ತಿದ್ದೆ.

ಅಜೇಯ ಅಹಿಂಸೆ

ಸತ್ಯ ಮತ್ತು ಅಹಿಂಸೆಯನ್ನು ಒಂದು ಶಿಸ್ತು ಇಲ್ಲವೇ ಸಾಧನವಾಗಿ ಮಾತ್ರವಲ್ಲ; ಜೀವನದ ಸರ್ವ ವಿಭಾಗಗಳಲ್ಲೂ ನಿಯಮಬದ್ಧ ಆಚರಣೆಯಾಗಿ, ಅಂಗೀಕರಿಸಿಕೊಂಡು, ಪೂರ್ಣವಾಗಿ ಅದಕ್ಕೇನೇ ಕಟ್ಟು ಬಿದ್ದಿರುವ ಮನುಷ್ಯನಾದ ನಾನು ಕ್ಷಣ ತಳುವದೆ ಹೇಳಬಲ್ಲೆ—ನಾನು ಅಸತ್ಯ ಅಥವಾ ಹಿಂಸೆಯನ್ನೆಂದಿಗೂ ಅಂಗೀಕರಿಸಲಾರೆ. ಆದರೆ ಅನ್ಯರಾಚರಣೆಯ ಕುರಿತು ತೀರ್ಮಾನವೀಯುವ ನ್ಯಾಯಾಧೀಶನಾಗಲು ನಾನು ನಿರಾಕರಿಸುತ್ತೇನೆ. ನನ್ನ ಮೇಲಿನ ನಿಮ್ಮ ವಿಶ್ವಾಸವು ನನಗ ಶಿರೋಕವಾಗಿದೆ. ನನ್ನ ಅವಘಡಾತ್ಮಕ ಬಿಡುಗಡೆಯು ದೊಡ್ಡ ದೊಡ್ಡ ನಿರೀಕ್ಷೆಗಳಿ

ಗಾಂಧೀ ಗಮನ-ವೈಸರಾಯಿ ಗೃಹಕ್ಕೋ, ಕಾರಾಗೃಹಕ್ಕೋ

(೨ನೇ ಪುಟದಿಂದ ಮುಂದುವರಿದುದು)

ಗೆಡೆಗೊಟ್ಟಿದೆ. ಇವೆಲ್ಲಾ ವಿಶ್ವಾಸಗಳಿಗ ನುಗುಣವಾದ ಯೋಗ್ಯತೆ ನನ್ನಲ್ಲಿದೆಯೇ ಎಂಬ ಕುರಿತು ನನಗನುಮಾನವಿದೆ. ಆದರೆ ಇಷ್ಟೊಂದನ್ನು ನಾನು ಬಲ್ಲೆ—ನನ್ನಲ್ಲೇನಾದರೂ ಶಕ್ತಿಯಿರುವದಾದರೆ, ನಾನು ಸತ್ಯ ಮತ್ತು ಅಹಿಂಸೆಯ ಆರಾಧಕನಾಗಿರುವದೊಂದೇ ಅದಕ್ಕೆ ಕಾರಣ. ರಾಜಕೀಯದಲ್ಲಿ ಹಾಗೂ ಜಾಗತಿಕ ಅವಸ್ಥಾಂತರಗಳಲ್ಲಿ ಅಹಿಂಸೆಗೆ ಸ್ಥಾನವಿಲ್ಲವೆಂದು ಕೆಲವು ಮಿತ್ರರು ನನಗೆಂದರು ನಾನೊಪ್ಪಲಾರೆ.

ಎದೆಗೆಡುವಿರೇಕೆ?

ಆಗೋಸ್ತು ನಿರ್ಧಾರಾಂತ್ಯದ ಆ ಕೊನೆಯ ಸುವರ್ಣ ಪಂಗ್ತಿಗಳು ನಿಮಗೆ ನೆನಪಿರಲಿ. ಮುಖ್ಯ ಕಾಂಗ್ರೆಸಿಗರು ದಸ್ತಗಿರಿಯಾದೊಡನೆ, ಪ್ರತಿಯೊಬ್ಬ ಕಾಂಗ್ರೆಸಿಗನೂ ತನಗೆ ತಾನೇ ನಾಯಕನಾಗುತ್ತಾನೆ. ಸತ್ಯ ಮತ್ತು ಅಹಿಂಸೆಯ ಗಡಿಯೊಳಗೆ ತನ್ನಿಚ್ಛೆಯಂತೆ ವರ್ತಿಸುವ ಅಧಿಕಾರ ಹೊಂದುತ್ತಾನೆ. ಕಾಂಗ್ರೆಸ್ ಧೋರಣೆಯನ್ನನುಸರಿಸುವವರೆಲ್ಲಾ ಕಾಂಗ್ರೆಸಿಗರೇ. ಕಾಂಗ್ರೆಸ್ ರಿಜಿಸ್ಟ್ರಿಯಲ್ಲಿ ದಾಖಲಾದ ಕೆಲವೇ ಲಕ್ಷ ಸದಸ್ಯರ ಮೇಲೇನೇ ಕಾಂಗ್ರೆಸು ಆಧರಿಸಿಕೊಂಡಿದ್ದರೆ ಅದೊಂದು ಬಡ ಸಂಸ್ಥೆಯಾಗಿ ಹೋದೀತು. ಮೂಕ ಮಿಲಿಯದ ಹಿತ ಸಾಧನಾ ಧ್ಯೇಯವಿದ್ದು, ಸಂಧಿಗ್ಧ ಕಾಲದಲ್ಲಿ ಅವರ ಬೆಂಬಲ ಪಡೆದೇ ಕಾಂಗ್ರೆಸ್ ಅದ್ಭುತ ಶಕ್ತಿಯ ಸಂಸ್ಥೆಯಾಗಿದೆ. ಆದ್ದರಿಂದ ನಾವೇಕೆ ನಿರಾಶೆ ಪಡಬೇಕೋ ನನಗರಿಯದು. ನಾವು ಆಶಿಸಿದ್ದ ಆ ಅವಧಿಯೊಳಗೆ ಗುರಿ ಸೇರಲಾಗಲಿಲ್ಲವೆಂಬುದಕ್ಕಾಗಿ ಈ ನಿರಾಶೆಯೆ? ಆದರಿಂದಾಗಿ ಅತಿ ಹೆಚ್ಚಿನ ಪ್ರತಿಕೂಲಗಳನ್ನಿದಿರಿಸಲು ನಾವು ಪ್ರಯತ್ನವನ್ನೇ ಹೆಚ್ಚಿಸಿಕೊಳ್ಳುವಂತಾಗಿದೆ. ಜಯವು ದೇವರ ಕೈಯಲ್ಲಿದೆ; ಅಥವಾ ನಮ್ಮ ನಿಯಂತ್ರಣಕ್ಕೆ ಸಿಗದ ಇತರ ಹಲವು ವಿದ್ಯಮಾನಗಳನ್ನವಲಂಬಿಸಿದೆ. ನಮ್ಮಲ್ಲೇ ನಮಗೆ ವಿಶ್ವಾಸವಿಲ್ಲದೆ ಹೋದರೆ ಮಾತ್ರ ನಾವು ನಿರಾಶೆಪಡಲು ಕಾರಣವಿದೆ. ಸತ್ಯಾಗ್ರಹ ಶಬ್ದಕೋಶದಲ್ಲಿ 'ನಿರಾಶೆ' ಎಂಬ ಶಬ್ದವೇ ಇಲ್ಲ. ತಮ್ಮ ಆಯುಧದಲ್ಲೇ ವಿಶ್ವಾಸವಿಲ್ಲದವರೊಡನೆ ಅಥವಾ ಕಳಕೊಂಡವರೊಡನೆ ನನ್ನ ಮಾತಿಲ್ಲ

ನಮ್ಮ ಸಮಸ್ಯೆಗಳು

ಜಾತೀಯ ವೈಷಮ್ಯ ನಮ್ಮ ನಡುವೆ ಇದೆ ಎಂಬುದು ನಿಸ್ಸಂದೇಹ. ಆದರದು ಅಣ್ಣತಮ್ಮಂದಿರೊಳಗಿನ ಜಗಳ ಸಾಮಾನ್ಯ ಶಕ್ತಿಯೀಗ ಎಲ್ಲಾ ಕಡೆಗಳಿಂದಲೂ, ನಮ್ಮನ್ನಾವರಿಸಿದೆ ಎಂಬುದನ್ನು ನಾವು ಒಪ್ಪಲೇಬೇಕು. ಸದ್ಯದಷ್ಟು ಅದು ಹಿಂದೆಂದೂ ಪ್ರಬಲವಾಗಿರಲಿಲ್ಲ. ಆದರಷ್ಟರಿಂದ ಅಬ್ಬಾತೆ ಇಲ್ಲವೇ ನಿರಾಶೆಗೊಳ್ಳುವದಲ್ಲ. ಪಾಪದೊಡನೆ ಅಹಿಂಸಾತ್ಮಕ ಅಸಹಕಾರವೆಂಬ ಸುವರ್ಣ ಪದ್ಧತಿಯು ನಮ್ಮಲ್ಲಿದೆ. ನಾವದರಲ್ಲಿ ವಿಜಯಗೊಂಡಿಲ್ಲವಾದರೆ, ಅದರ ಕಾರಣ ನಮ್ಮೊಳಗೇನೇ—ಇದೆ. ಯಾವುದೇ ಒಂದು ಕ್ಷಣ ಹೊತ್ತಾದರೂ ನಾನು ನನ್ನೊಳಗೆ ನಿರಾಶೆಗೀಡಾದುದಿಲ್ಲವೆಂದು ನಿಮಗೆ ಹೇಳಬಲ್ಲೆ. ನಿರಾಶೆಯೆಂಬುದು ನಮ್ಮ ದೌರ್ಬಲ್ಯ ಮತ್ತು ಸ್ವಅವಿಶ್ವಾಸದ ಫಲ. ನಮ್ಮಲ್ಲಿ ಆತ್ಮವಿಶ್ವಾಸವಿರುವ ವರೆಗೆ ಭಾರತದ ಸ್ಥಿತಿ ಹಾಗಾಗಿಲ್ಲ. ಇದೇ ನನ್ನ ಸಂದೇಶ. ಹಿಂದುಸ್ಥಾನಕ್ಕೆ ಯಥಾರ್ಥ ರಾಜಕೀಯಾಧಿಕಾರ ದೊರೆಯದೆ ಜನರ ದುಃಸ್ಥಿತಿ ನಿವಾರಣೆಯಾಗದೆಂದು ನನ್ನ ಮನವರಿಕೆ. ನಾನು ಹಸಿದ ಕೆಲವು ಬಾಯಿಗಳನ್ನಷ್ಟೇ ತಣಿಸಿದರೆ ಆಹಾರ ದುಃಸ್ಥಿತಿ ನಿವಾರಿಸಿದಂತಾಗದು. ನನಗೆ ಶ್ರೀಮಂತರೊಡನೆ ಮೈತ್ರಿ ಸಂಬಂಧವಿದೆ. ಈ ಮಿತ್ರತ್ವವು ನನ್ನ ಖಾಸಗೀ ಲಾಭಕ್ಕೂ ಅಲ್ಲ; ಅವರನ್ನು ಪುಸಲಾಯಿಸುವದಕ್ಕೂ ಅಲ್ಲ. ಅವರ ಐಶ್ವರ್ಯದ ಒಂದಂಶವನ್ನು ಬಡವರ ಸೇವೆಗಾಗಿ ಪಡೆಯುವದಕ್ಕಾಗಿ. ಆದರೆ ಅವರ ಹಣವು ಸದ್ಯದ ಮಿಲಿಯಾವಧಿ ಹಸಿದವರ ಹೊಟ್ಟೆ ತಣಿಸಲಾರದು. ಅಖಿಲ ಭಾರತದ ಇಂದಿನ ಬರಗಾಲದ ಮೂಲಕಾರಣವಾವುದು? ಹಸಿದೇ ಇದ್ದ ಮಿಲಿಯಾವಧಿ ಜನ, ಯುದ್ಧ ಸ್ಥಿತಿಯ ಹೊದಿಕೆಯೊಳಗೆ ಮತ್ತಷ್ಟು ಹಸಿವೆಗೀಡಾದರು. ಬಂಗಾಳ, ಕರ್ನಾಟಕ ಮತ್ತು ಇತರ ಕಡೆಗಳಿಂದ ಬರುತ್ತಿರುವ ಸಂಖ್ಯೆಗಳಿಂದ ಸಂಕಷ್ಟವು ದಿಗಿಲುಗೊಳಿಸುವಷ್ಟು ಅಗಾಧವಿದೆಯೆಂಬುದು ಖಚಿತ. ಪ್ರಾತಿನಿಧಿಕ ರಾಷ್ಟ್ರೀಯ ಸರಕಾರವೊಂದಲ್ಲದೆ ಬೇರಾವುದೂ ಇದನ್ನು ಶಮನಗೊಳಿಸುವಂತಿಲ್ಲ. ಭಾರತವು ಸ್ವತಂತ್ರವಾಗಿರುತ್ತಿದ್ದರೆ, ಆದಕ್ಕೆ ಜಾಪಾನಿನೊಡನೆ ಯುದ್ಧವಿರುತ್ತಿರಲಿಲ್ಲವೆಂದು ನನ್ನ ಅಭಿಪ್ರಾಯ ಒಂದೊಮ್ಮೆಗೆ ಯುದ್ಧವಾಗುತ್ತಿದ್ದರೆ ನಾವದನ್ನು ಈಗಿನದಕ್ಕಿಂತ ಎಷ್ಟೋ ಪಾಲಧಿಕ ಪರಿಣಾಮಕರ ರೀತಿಯಿಂದ ಇದಿರಿಸುತಿದ್ದೆವು. ಯಜಮಾನರ ಬದಲಾವಣೆಯನ್ನು ನಾನು ಅಪೇಕ್ಷಿಸುವದಿಲ್ಲ ನನಗೆ ಎಲ್ಲಾ ವಿದೇಶೀ ಅಧಿಕಾರದಿಂದಲೂ ಬಿಡುಗಡೆ ಬೇಕಾಗಿದೆ.

ಹಳ್ಳಿಗಳ ದುರವಸ್ಥೆ.

ಭಾರತದ ಪಟ್ಟಣಗಳಲ್ಲಿ ಕಾಣಸಿಗುವ ಐಶ್ವರ್ಯದಿಂದ ನಾವು ವಂಚಿಸಲ್ಪಡಬಾರದು. ಅದು ಇಂಗ್ಲಂಡು ಅಥವಾ ಅಮೇರಿಕದಿಂದ ಬಂದಿಲ್ಲ. ಅದು ಅತೀ ಬಡವನ ರಕ್ತದಿಂದ ಬಂತು. ಭಾರತದಲ್ಲಿ ೭ ಲಕ್ಷ ಹಳ್ಳಿಗಳಿವೆಯೆಂದು ಹೇಳಲಾಗುತ್ತದೆ. ಅವುಗಳಲ್ಲೀಗ ಕೆಲವಂತೂ ಪೂರ್ಣ ನಿರ್ನಾಮವಾಗಿವೆ. ಬಂಗಾಳ, ಕರ್ನಾಟಕ ಮತ್ತು ಇತರ ಕಡೆಗಳಲ್ಲಿ ಹಸಿವು ಮತ್ತು ರೋಗಗಳಿಂದ ಸತ್ತ ಇಂತಹ ಸಾವಿರಾರು ಮಂದಿಯ ದಾಖಲೆಯೇ ಸಿಗದು. ಹಳ್ಳಿಗರಾವ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ಸರಕಾರೀ ರಿಜಿಸ್ಟ್ರಿಗಳು ತಿಳಿಸಲಾರವು. ಆದರೆ ಓರ್ವ ಹಳ್ಳಿಗನಾದ ನನಗೆ ಹಳ್ಳಿಗಳ ಸ್ಥಿತಿ ಗೊತ್ತಿದೆ; ಹಳ್ಳಿಯ ಅರ್ಥಿಕಾಂದೋಲನ ತಿಳಿದಿದೆ. ತುದಿಯ ಒತ್ತಾಟವು ಬುಡವನ್ನು ಜಜ್ಜುತ್ತಿದೆ ಎಂದು ನಾನನ್ನುತ್ತೇನೆ. ಈಗ ಅಗತ್ಯ ಬಿದ್ದಿರುವದೆಂದರೆ ಆ ಒತ್ತಡವನ್ನು ನಿಲ್ಲಿಸುವದು. ಪಾಪದೊಡನೆ ಅಸಹಕಾರವೆಂಬುದರ ಅರ್ಥವಿದೇ. ನನಗೆ ಅತ್ಯಂತ ಶೋಕದಾಯೀ ಹಾಗೂ ಎದೆಯುರಿಯುಳ್ಳ ಪತ್ರಗಳು ಬರುತ್ತಿವೆ. ಅಸಹಕಾರದ ಗುಟ್ಟರಿತವರಿಗೆ, ತಮ್ಮ ಎಲ್ಲಾ ಸಂಕಷ್ಟಗಳ ಉತ್ತರವೂ ಅದರಲ್ಲಿಯೇ ಇದೆ. 'ಇಲ್ಲ' ಎನ್ನುವದು ನಮ್ಮ ಕರ್ತವ್ಯವಾಗಿ ಪರಿಣಮಿಸಿದಾಗ ನಾವದನ್ನು ನಿಶ್ಶಂಕೆಯಿಂದ ಹೇಳಿ ಬಿಡಬೇಕು. ಅಸಹಕಾರಿಯ ಬೇಟೆ ಐಶ್ವರ್ಯ ಅಥವಾ ಕೀರ್ತಿಯಲ್ಲ. ನಾವು ತಾಳ್ಮೆಯಿಂದ ಮುಂದೊತ್ತೋಣ; ನಮಗಾಗಿ ಕಾದಿರುವ ಎಲ್ಲಾ ಸಂಕಷ್ಟಗಳನ್ನೂ ಸಹಿಸೋಣ ಆಗ ಮಂಕಾಗಲು ಅಥವಾ ನಿರಾಶೆಹೊಂದಲು ಅವಕಾಶವಿರದು".

ಮನತಣಿದಲ್ಲಿ ನಗುವಿದೆ.
ನಗುವಿದಲ್ಲಿ ಸ್ವರ್ಗವಿದೆ.

ನಗೆ ನೋಟಗಳು

(೧೮ ವಿನೋದ ಚಿತ್ರಗಳ ಸಂಗ್ರಹ)

ದಣಿದ ಮನವನ್ನು ತಣಿಸುವ, ತಣಿಸಿ ನಗುವನ್ನುಂಟುಮಾಡುವ ಪುಸ್ತಕ.

ಬರೆದವರು: ಶ್ರೀ ಕೆ. ವಿಟ್ಠಲ ಶೆಣೈ, ಬಿ ಎ ಎಲ್. ಟಿ

ನೀವೂ ನಕ್ಕು ಅನ್ಯರನ್ನೂ ನಗಿಸಬೇಕಾದರೆ ಈ ಪುಸ್ತಕವು ನಿಮ್ಮ ಬಳಿಯಲ್ಲಿರಲಿ.

ಬೆಲೆ ೦-೧೨-೦

೦-೧೪-೦ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಗುವುದು

ಕೆಲವೇ ಪ್ರತಿಗಳು ಉಳಿದಿವೆ. ತ್ವರೆಮಾಡಿರಿ.

ಕಿರಿಯರ ಪ್ರಪಂಚ, ಉಡುಪಿ. ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ.

CHAMPAE'S
Snow & Castrex
(Sole Distributors for India.)
Sukhananda Stores
Santhekatte, UDIPI, S. K.

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944 Your patronage is solicited.

Mangalore Jarappa,
Managing Director

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short-term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up to-date Banking service is at the disposal of all the sections of the discreet public.

For business proper please enquire at any one of our Offices.

15th April 1944

ದಿ ಜುಪಿಟರ್ ಜನರಲ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಬೊಂಬಾಯಿ

ಚೀಫ್ ಏಜನ್ಸಿ ಆಫೀಸು:—ಉಡುಪಿ.

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ನಿಮ್ಮ ಮತ್ತು ನಿಮ್ಮ ಕುಟುಂಬದ ಬಾಳಿನ ಕಲ್ಯಾಣಕ್ಕಾಗಿ.

ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ.

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

ಪಿ. ಡಿ. ನಾಸಯ್ಯ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ

The Jupiter General Insurance Co. Ltd., Bombay.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

THE VIJAYA BANK, LTD.

Head office:
MANGALORE.

Glad to announce that a Branch of the Bank has been opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ. 15-6-44ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿರುವುದು.

ದಿ ವಿಜಯಾ ಬೇಂಕ್ ಲಿಮಿಟೆಡ್

ನವಜೀವಾತು ಎಂಬ ಸೂತಿಕಾ ರಸಾಯನ

(ಏಪ ರಜಿಸ್ಟರು ಮಾಡಲ್ಪಟ್ಟಿದ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೧೫ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ**

ಅಮೃತಾಂಜನ

REGD

ತಲೆನೋವು, ಶಿರೋವೇದನೆ, ಉಳುಕು, ಶೀತ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾವು ಕೊಳ್ಳುವುದು, ಚೇಳು ವಿಷ ಮುಂತಾದ ಜೇನೆ ಕಚ್ಚುವಿಕೆ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಪಥ್ಯ, ಹುಳುಕಡ್ಡಿ ಮದ್ದು ಸಹ ಸರ್ವಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—6—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. of Mysore.
Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd No. M. 3618.
ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.
Estd. 1921 ಸ್ಥಾಪನೆ.

ಸುಲಭದಲ್ಲಿ ಇಂಗ್ಲಿಷ್
(ಇಂಗ್ಲಿಷ್ ಸ್ವಯಂಬೋಧಿನಿ)
1—0—0

ನಗೆ ನೋಟಗಳು
(೧೧ ಜೀವನ ಚಿತ್ರಗಳ ಸಂಗ್ರಹ)
೦—೧೨—೦

ಅನ್ನ ದೇವರು
ಮತ್ತು
ಇತರ ಕಥೆಗಳು
(೧೪ ಕಥೆಗಳ ಸಂಗ್ರಹ)
೦—೧೨—೦

NAVAYUGA ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೪೫

FOUNDER
Sri. A. B. Shetty.

Vol. 24
No. 45

NAVAYUGA— Kannada Weekly —UDIPI, S. I.

ಉಡುಪಿ • 13—7—1944 • ಮಂಗಳೂರು.

ANTARANGA
UDIPI
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಿನೋದ ವಾರ. ಪತ್ರಿಕೆ
ಅಂತರಂಗ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ 3-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ.

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Estd 1908]
The "Bombay Life" Bldg.,
UDIPI S. K.

Offices and Agencies throughout South India.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ
—ಔಷಧ—

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯಂಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಫ್ರೆಂಡ್ಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕೆಂದುವಿನಂತಿ

ಮಾಲಕರ ವಿಳಾಸ: ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿ ವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು ಕೈಕಾಲು ಬತ್ತುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ರಕ್ತವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತರಕ್ತವನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬರೆದು ರೋಗಕ್ಕೆ ತಕ್ಕ ಔಷಧ ತರಿಸಿಕೊಳ್ಳಿರಿ. ಉಡುಪಿ ಏಜೆಂಟರು:—ನವಭಾರತ ಬುಕ್ ಡಿಪೋ

ಗೀತೆಯ ಕೈಗನ್ನಡಿ ರೂ. ೦—೮—೦
(ಗೀತೆಯ ಸಮೂಲ ಭಾಷಾಂತರ)
ನವಭಾರತ ಪುಸ್ತಕ ಭಂಡಾರ, ಉಡುಪಿ.

★ ಲೋಕ ಯುದ್ಧ—ಹಿಟ್ಲರನಿದಿರು ತ್ರಿಶೂಲ! ★

ಕಳೆದ ವಾರದ ಅತಿ ದೊಡ್ಡ ವಿಜಯದ ಹೆಗ್ಗಳಿಗೆ ಸ್ಟಾಲಿನರಿಗೆ ಸಲ್ಲುತ್ತದೆ. ಫ್ರಾನ್ಸ್ ಮತ್ತು ಇಟೆಲಿ ರಂಗಗಳಲ್ಲಿ ಈ ವಾರ ನಾಜಿಗಳು ಕಟ್ಟಿರುವೆಯಂತೆ ಕಚ್ಚಿ ಹಿಡಿದು ನಿಂತಿದ್ದಾರೆ. ಚೀನಾದಲ್ಲಿ ಜಾಪಾನರ ಧಾಳಿ ಅಪಾಯಕರ ರೀತಿಯಲ್ಲಿ ಸಾಗಿದೆ. ಬರ್ಮಾ ಅಸ್ಸಾಮು ರಣರಂಗಗಳಲ್ಲಿ ಸ್ಥಳೀಯ ಘರ್ಷಣೆ ಮಾತ್ರ-ಇವಿಷ್ಟು ರಣರಂಗಗಳ ಸಾಮಾನ್ಯ ಸ್ಥಿತಿ

ರಶ್ಯದಲ್ಲಿ-

ಕಳೆದ ನೇ ತಿಂಗಳಾಂತ್ಯದಲ್ಲೊಮ್ಮೆ ಕೆಂಪು ಸೇನೆಯು ತನ್ನ ಧಾಳಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿ, ಬೇಸಿಗೆ ಧಾಳಿಗಾಗಿ ಸೇನಾಸಂಘಟನೆಗೆ ತೊಡಗಿದಾಗಲೇ ನಾಜೀ ಸೇನೆ ತನ್ನ ಹಿಂಬದಿಯನ್ನು ನೋಡಿಕೊಳ್ಳಬೇಕು ರಶ್ಯಾರಣ್ಯದ ಸುಮಾರು ಸಾವಿರ ಮೈಲುದ್ದದ ಎಲ್ಲಾ ಕೇಂದ್ರ ಸ್ಥಳಗಳನ್ನೂ ತಾವು ಹಿಡಿದು ನಿಲ್ಲುವುದಸಾಧ್ಯವೆಂಬುದನ್ನು ಹಿಟ್ಲರರು ಆಗಲೇ ನಿರೀಕ್ಷಿಸಿದ್ದರು. ಆದರೆ ಜೂನ್ ತಾ. 23ರಲ್ಲಿ ಬಿಳಿ ರಶ್ಯದಲ್ಲಿ ಸ್ಟಾಲಿನರಾರಂಭಿಸಿದ ಆ ಮಹಾಧಾಳಿಯು ಹದಿನೈದೇ ದಿನಗಳಲ್ಲಿ ನಾಜೀ ಸೇನೆಯನ್ನು ಹಿಂದೆಂದೂ ಅಡಿತಪ್ಪಿಸದಷ್ಟು ಝಾಡಿಸಿಬಿಟ್ಟಿದೆ. ಜರ್ಮನಿಗೆ ಅತ್ಯಪಾಯಕಾರೀ ಪರಿಸ್ಥಿತಿಯುಂಟಾಗಿದೆ. ಸರಾಸರಿ ದಿನ ಕ್ಕಿಪ್ಪತ್ತು ಮೈಲಿನಂತೆ ಮುಂದೊತ್ತಿದ ಕೆಂಪುಸೇನೆಯು 10ನೇ ದಿನದಲ್ಲಿ ಬಿಳಿ ರಶ್ಯದ ಮುಖ್ಯಪಟ್ಟಣ ಮಿನ್ಸ್ಕನ್ನು ವಶಪಡಿಸಿಕೊಂಡು ವಾರ್ಸಾ ನಗರ ಮತ್ತು ಪ್ರತ್ಯಕ್ಷ ಜರ್ಮನಿಯ ಸರಹದ್ದಿನ ಕಡೆಗೀಗ ಧಾವಿಸುತ್ತಿದೆ. ಇಲ್ಲಿಯೂ ಹಿಟ್ಲರ್ 'ಯುದ್ಧ ಹಂಚಿಕೆಗನುಸಾರ ಹಿಮ್ಮೆಟ್ಟುತ್ತಿರಬೇಕು' ಎಂದು ಊಹಿಸಿದರೆ, ನೆರೆ ಕೊಚ್ಚಿಕೊಂಡು ಹೋಗುವ ವ್ಯಾಪಾರಿಯನ್ನು 'ಲಾಭವಿಲ್ಲದೆ ಹೋಗುವವನಲ್ಲ' ಎಂದಂತೆಯೇ! ಆ ವಲಯದ ಪೋಲೊಟ್ಸ್ಕ, ಒರ್ಶ, ಮಿನ್ಸ್ಕ ಮತ್ತು ಮೊಹಿಲೆವ್ ಮೊದಲಾದ ಪ್ರಾಮುಖ್ಯ ನಗರಗಳು ಇಷ್ಟರಲ್ಲೇ ರಶ್ಯನರ ಹಸ್ತಗತವಾಗಿವೆ. ಈಗ ವಿಲ್ನಾದ ಕಡೆಗೆ ಮುಂದೊತ್ತುತ್ತಿಪ್ಪ, ಡ್ವಿನ್ಸ್ಕ, ವಿಲ್ನಾ, ಗ್ರೋಡ್ನೊ, ಬಿಯೊಲೊಸ್ಟೊಕ್, ಪಿನ್ಸ್ಕ ಮೊದಲಾದುವನ್ನು ಆಕ್ರಮಿಸಿಕೊಂಡು ಬಾಲ್ಟಿಕ್ ರಾಷ್ಟ್ರಗಳನ್ನು ಸುತ್ತುಗಟ್ಟುವ ಮಹಾಯೋಜನೆ ಸ್ಟಾಲಿನರದೆಂಬುದೀಗ ಸ್ಪಷ್ಟ. ಕೆಂಪು ಸೇನೆಯ ಪ್ರಗತಿಯಿಂದಾಗಿ ಜರ್ಮನರು ಮಾತ್ರವಲ್ಲ-ಫ್ರಾನ್ಸ್ ಇಟಲಿಗಳಲ್ಲಿ ಹೋರಾಡುತ್ತಿರುವ ಮಿತ್ರರೂ ಬೆರಳು ಕಚ್ಚುವಂತಾಗಿದೆ!

ಜರ್ಮನರ ಅಡಚಣೆ

ಪ್ರತ್ಯಕ್ಷ ಯುದ್ಧಗತಿ, ಹಾಗೂ ಹಿಟ್ಲರ್, ಗೋಬೆಲ್ಸರ ಮಾತುಗಳ ಮೇಲಿಂದ, ರಶ್ಯಾ, ಫ್ರಾನ್ಸ್, ಇಟೆಲಿಗಳ ಮೂರು ಮುಖದ ಹೋರಾಟದಿಂದ ಹಿಟ್ಲರನ ಕೈ ಕಟ್ಟಿದಂತಾಗಿದೆ ಎಂಬುದು ಖಂಡಿತ. ಐದು ವರುಷಗಳ ಅನವರತ ಹೋರಾಟದಲ್ಲಿ ಚರಿತ್ರಾರ್ಹ ಮಹಾ ವಿಜಯಗಳನ್ನು ಸಂಪಾದಿಸಿದ ನಾಜೀ ಸೇನೆಯು ತನ್ನ ಅನ್ಯಾಯಕ್ಕನುಗುಣವಾದ ಪ್ರತಿಫಲವನ್ನು ಉಣ್ಣುವಕಾಲಬರ ಬಹುದು. ಆದರೆ ಜರ್ಮನರ ಯೋಧಪ್ರವೃತ್ತಿ, ಗಂಡೆದೆ, ಚುರುಕು ಬುದ್ಧಿ, ಅಸ್ಪೃಶ್ಯ ಚಾತುರ್ಯಗಳಿಗೆ ಲೋಪ ಅಥವಾ ಅಪವಾದವನ್ನು ತರುವ ಕಾಲ ಬರುವಂತಿಲ್ಲ. "ದಣಿದ, ಹಾಳಾದ ಮತ್ತು ಆಕ್ರಮಣ ಶಕ್ತಿಯ ಬಾಯಿ ಬಹುಮಟ್ಟಿಗೆ ಮೊಂಡಾದ-ಆದರೆ ರಕ್ಷಣಾ ಯುದ್ಧ ಮತ್ತು ಪ್ರತಿಧಾಳಿ ಹೂಡುವದರಲ್ಲಿ ಇನ್ನೂ ಅತ್ಯಂತ ಬಲಶಾಲಿಯಾದ ಸೇನೆ"-ಇದು 'ನ್ಯೂಯೋರ್ಕ್ ಟೈಮ್ಸ್' ಪತ್ರಿಕೆಯ ಚತುರ ಲೇಖಕ ಹೇನ್ಸನ್ ಬಾಲ್ಡ್ವಿನರು ಬಿಡಿಸಿದ ಜರ್ಮನ್ ಸೇನೆಯ ನಿಜಚಿತ್ರ. ಮೂರು ಪ್ರಬಲ ರಾಷ್ಟ್ರಗಳ ಸೇನೆಗಳನ್ನು ಮೂರು ರಂಗಗಳಲ್ಲಿ ಏಕಾಕಿಯಾಗಿ ಎದುರಿಸುವದು ಆಜೇಯ ಹಿಟ್ಲರನಿಗಾದರೂ ಅತ್ಯಂತ ಕಷ್ಟವಾಗಿದೆ.

ತ್ರಿಶೂಲ ಶಿಖಿತ.

ಜರ್ಮನದ ಎಡೆಗಾರಿಕೆಯ ಆಳವರಿಯಬೇಕಾದರೆ ಅವರೀಗ ತಡೆದು ನಿಂತಿರುವ ಅಪಾಯವನ್ನು ಅವಗಾಹನೆಗೆ ತಂದುಕೊಳ್ಳಬೇಕು. ಇಟೆಲಿಯ ಪೂರ್ವ ಕರಾವಳಿಯಲ್ಲಿ ಆಂಕೋನಾ ಬಂದರದ ಕಡೆಗೆ ಇಂಗ್ಲಿಷ್ ಸೇನೆ ತೀವ್ರಗತಿಯಿಂದ ಧಾವಿಸಿ ಬರುತ್ತಿದೆ. ಪಶ್ಚಿಮ ಕರಾವಳಿಯಲ್ಲಿ ಅಮೇರಿಕಾನರು ಲೆಘೊರ್ನನ್ನು ಸಮೀಪಿಸಿದ್ದಾರೆ. ಕೆಸ್ಸಲ್‌ರಿಂಗನೇನು ಮಾಡಬಲ್ಲ? ಅವನು ಪ್ರತಿಭಟಿಸಲು ನಿಂತರೆ ಜರ್ಮನ್ ಸೇನಾ ನಿರ್ನಾಮವೇ ಅದರ ಪ್ರತಿಫಲವಾಗಬಹುದು. ಇನ್ನೂ ಹಿಮ್ಮೆಟ್ಟುತ್ತಾ ಹೋದರೆ ಮಿತ್ರ ಸೇನೆಗಳನ್ನು ಯುಗೊಸ್ಲೋವಿಯಾ ಅಥವಾ ದಕ್ಷಿಣ ಫ್ರಾನ್ಸಿನೊಳಗೆ ನುಗ್ಗಬಿಟ್ಟಂತಾಗಬಹುದು ಇತ್ತ ನೋರ್ಮಂಡಿಯಲ್ಲೂ ಅದೇ ಅವಸ್ಥೆ. ಫ್ರಾನ್ಸಿನ ಹೊಸ ಯುದ್ಧವನ್ನು ಆದಿಯಲ್ಲೇ ಕಳಕೊಳ್ಳಬಾರದೆಂಬ ಉತ್ಕಟೇಚ್ಛೆಯಿಂದ ರೋಮೆಲನು ಈಗ ಹೂಡಿರುವ ಪ್ರತಿಧಾಳಿಯು ಅದ್ಭುತವೆಂಬುದು ನಿಜ. ಪ್ರಾಮುಖ್ಯ ಸಂದುಕಟ್ಟಿನ ಸ್ಥಳವಾದ ಕೆಯೆನ್ ನಗರವನ್ನು ಉಳಿಸಿಕೊಳ್ಳಲು, ಸರ್ವಸ್ವವನ್ನೂ-ರಶ್ಯಾ ಯುದ್ಧಕ್ಕೆಂದಿಟ್ಟಿದ್ದ ಒಂದು ಪಾಂಜರ್ ದಳವನ್ನು ಕೂಡಾ- ರೋಮೆಲ್ ಅಲ್ಲಿ ಮುಂದೊತ್ತಿದ್ದಾನೆ. ಮಿತ್ರಸೇನೆಯನ್ನು ಕಾಲಿಕಿತ್ತು ನೆಗಳಿಸುವ ಅವನ ಆಸೆಯಿನ್ನೂ ಒದಗಿದಾಗಿಲ್ಲ. ಆದರೆ ಅದರ ದುಷ್ಪರಿಣಾಮ ರಶ್ಯಾರಂಗದಲ್ಲಿ ಕಂಡುಬರುತ್ತಿದೆ. ಹೀಗಾಗಿ ಜರ್ಮನರು ಒಂದು ಕ್ಷೇತ್ರದ ಪ್ರತಿಭಟನೆಯನ್ನು ಬಲಗೊಳಿಸುವಾಗ, ಇನ್ನೊಂದು ರಂಗವು ಖಾಲಿಯಾಗುತ್ತಿದೆ. ಅಂತಹ ಅಡಚಣೆಯು ಹಿಟ್ಲರನಿಗೀಗ ಒದಗಿದೆ. ಜರ್ಮನರು, ಮಿತ್ರರ ಆಶಾಪೂರಿತ ನಿರೀಕ್ಷೆಯಷ್ಟು ಕ್ಷಿಪ್ರದಲ್ಲಲ್ಲವಾದರೂ ಒಂದುದಿನ ನಾಶವಾಗಬಹುದು. ಆದರೆ ಎಂದೂ ಶರಣಾಗತರಾಗಲಾರರು; ತಮ್ಮ ಪಾಲಿನ ಕಾರ್ಯದಲ್ಲಿ ಎಳ್ಳಷ್ಟನ್ನಾದರೂ ಬಾಕಿಬಿಟ್ಟು ಧ್ವಂಸವಾಗಲಾರರು. ಆದ್ದರಿಂದ ಜರ್ಮನ್ ವಿನಾಶದ ದಿನವನ್ನು ಬರಿಸುವಷ್ಟು ಪ್ರಯಾಸದ ಕಾರ್ಯವಿನ್ನೊಂದಿಲ್ಲ ಹೇನ್ಸನ್ ಬಾಲ್ಡ್ವಿನರ ಮಾತಿನಂತೆ "ಜರ್ಮನನು ತರ್ಕಸಿದ್ಧಾಂತ ಮನುಷ್ಯ. ತನ್ನ ನಾಯಕರ ಆಜ್ಞೆ ದೊರೆತರೆ ಆವ ಶರಣಾಗತನಾಗಬಲ್ಲ. ಆದರೆ ಆ ನಾಯಕರಿಗೆ ಪ್ರಥಮತಃ ಅಪಜಯ ಮುಂದಟ್ಟಾಗಿಕೊಳ್ಳಬೇಕು. ಈ ಯುದ್ಧದಲ್ಲಿ ತಾವು ಶರಣಾಗತರಾಗಿ ಉಳಿಯುವಂತಿಲ್ಲವೆಂಬುದು ಜರ್ಮನ್ ನಾಯಕರಿಗೆ ಗೊತ್ತಿರುವದರಿಂದ ಈ ಬಾರಿ ಅಂತಹ ನಿರೀಕ್ಷೆ ಬೇಡ."

ಚೀನಾ ದುರಂತ

ಚೀನಾ ಯುದ್ಧವೀಗ 8ನೇ ವರುಷಕ್ಕೆ ಕಾಲಿಟ್ಟಿದೆ. ಪ್ರಥಮ ವರುಷಗಳಲ್ಲಿ ರಶ್ಯವೊಂದನ್ನು ಬಿಟ್ಟು ಮಿಕ್ಕ ಮಿತ್ರರಾಷ್ಟ್ರಗಳಿಂದಲೂ ಕಡೆಗಣಿಸಲ್ಪಟ್ಟದ್ದು ಜಾಪಾನರ ಪಾಶವಿಕ ಅತ್ಯಾಚಾರಗಳನ್ನು ಕಳೆದೇಳು ವರುಷಗಳಿಂದ ಏಕಾಂಗಿಯಾಗಿ ಸಹಿಸಿ ನಿಂತಿರುವ ಚೀನದ ಹೆಸರು ಪ್ರಾತಃಸ್ಮರಣೀಯವಿದೆ. ಆದರೆ ಈಗ ಅದಕ್ಕೆ ಬಂದಿರುವ ಅಪಾಯವು ಅತಿದೊಡ್ಡದು. ಅಲ್ಲಿಯ ಹೊನಾನ್ ಮತ್ತು ಹುನಾನ್ ಪ್ರಾಂತ್ಯಗಳಲ್ಲಿ ಜಾಪಾನರು ಮೃತ್ಯುತಾಂಡವವನ್ನಾರಂಭಿಸಿದ್ದಾರೆ. ಇದರಿಂದ ಅಖಿಲ ಚೀನದ ಪ್ರಾಮುಖ್ಯ ನಗಬರಾಯಿ ರಸ್ತೆಗಳು ಅವರ ನಿಯಂತ್ರಣಕ್ಕೊಳಗಾಗಬಹುದು; ಚೀನದ 'ಧಾನ್ಯ ಕಣಜ'ವೆಂದ್ಬ ಹೆಸರುಪಡೆದ ಆ ಸಮೃದ್ಧ ಸ್ಥಳ ಕೈಬಿಡಬಹುದು; ಎಲ್ಲಕ್ಕಿಂತ ಹೆಚ್ಚಾಗಿ ಮಿತ್ರರು ಜಾಪಾನಿನ ಮೇಲೆ ಧಾಳಿ ನಡೆಸಲಾಗುವ ಚೀನಾದ ಆಗ್ನೇಯ ಭಾಗವು ಕೈಬಿಟ್ಟು ಚೀನದೊಂದಿಗೆ ಮಿತ್ರರಾಷ್ಟ್ರಗಳೂ ಮೇಲೆ ಕೆಳಗೆ ನೋಡುವಂತಾಗುವ ಸಂಭವ. ಇಂತಹ ಕಾರುಣಾವಸ್ಥೆಯಲ್ಲಾದರೂ, ತಮ್ಮ ಪೂರ್ವ ನಿಶ್ಚಿತ ಲೋಕ ಯುದ್ಧ ಯೋಜನೆಯಂತೆ 'ಜರ್ಮನಿಯ ನಂತರ ಜಾಪಾನ್' ಎಂಬ ತತ್ವವನ್ನು ಮಿತ್ರರು ಬಿಡುವಂತಿಲ್ಲವಾದ್ದರಿಂದ ಪ್ರಕೃತ ಚೀನವು ಜೀವನ್ಮೃತವಾದಂತೆಯೇ.

38 ವರ್ಷಗಳ ಹಿರಿತನ

1906ನೆ ಇಸವಿ ಜುಲೈ 1ನೇ ತಾರೀಕಿನಲ್ಲಿ ಸ್ಥಾಪಿತವಾಗಿ ಕೆನರಾ ಬ್ಯಾಂಕು ಇಂದಿಗೆ 38 ವರ್ಷ ವಯಸ್ಸು ಹೊಂದಿದೆ. ನಾವು 38 ವರ್ಷ ವಯಸ್ಸಿನವರೆಂಬುದೆ ನೀವು ನಮ್ಮೊಡನೆ ವಹಿವಾಟ ನಡೆಸಲು ಸಾಕಾದ ಕಾರಣವಾಗಲಾರದು.

ಆದರೆ ಈ 38 ವರ್ಷಗಳು ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿವೆ—ಎರಡು ಮಹಾ ಯುದ್ಧಗಳು—ಲೋಕವು ಹಿಂದೆಂದೂ ಕಾಣದ ಆರ್ಥಿಕ ಮುಗ್ಗಟ್ಟು—ಈ ಮೊದಲು ಆಗದ ಬ್ಯಾಂಕುಗಳ ಸಂಧಿಗ್ಧಾವಸ್ಥೆ—ಶ್ಯೇರು ಮಾರ್ಕೆಟುಗಳ ಕಂಗಾಲಾವಸ್ಥೆ—ಇತ್ಯಾದಿ.

ಒಂದು ಬ್ಯಾಂಕು ಈ ಎಲ್ಲಾ ಭಯಂಕರ ಹಲ್ಲೋಲಗಳಿಂದ ಎದೆಗುಂದದೆ ಪಾರಾಗಿರುವುದಾದರೆ—ಈ ಕಠಿಣ ಅನುಭವಗಳಿಂದ ಪ್ರಯೋಜನವನ್ನೇ ಹೊಂದಿ ತನ್ನ ಪ್ರಾಮುಖ್ಯತೆಯನ್ನೂ ವಿಶಾಲತೆಯನ್ನೂ ಮತ್ತೂ ಬೆಳೆಸಿರುವುದಾದರೆ—ಆ ಬ್ಯಾಂಕೇ ನಿಮ್ಮ ವಿಶ್ವಾಸಕ್ಕೆ ಯೋಗ್ಯವಾದದ್ದು.

ನಾವು ನಮ್ಮ ಹಿರಿತನದಿಂದ ಶ್ರೇಷ್ಠರಾದುವಲ್ಲ,
ನಮ್ಮ ಶ್ರೇಷ್ಠತನದಿಂದ ನಾವು
ಹಿರಿಯರಾಗಿದ್ದೇವೆ.

Estd: 1906. **CANARA BANK, Ltd.**



ಕಗ್ಗತ್ತಲೆ? ಇಲ್ಲ!
ಫ್ರೆಂಚ ಪ್ರಕಾಶಕದಿಂದ
ನಿಮ್ಮ ಮನೆಗಳನ್ನು ಬೆಳಗಿಸಿರಿ!
ಚಿಮಿಣಿ ಎಣ್ಣೆ ಬೇಕಾಗಿಲ್ಲ, ಹೆಚ್ಚು ಪ್ರಕಾಶಿತ ದೀಪ, ತೀವ್ರ ಪ್ರಕಾಶ.
೫೦ ಬತ್ತಿಗಳ ಒಂದು ಪೆಟ್ಟಿಗೆ ಬೆಲೆ: ರೂ ೧—೪—೦. ಪ್ರತಿಯೊಂದು ಬತ್ತಿಯು ೨೪ ತಾಸು ಉರಿಯುವದು.
೬ ಪೆಟ್ಟಿಗೆಗಳಿಗೆ ಅಂಚೆ ಸಚ್ಚ ಉಚಿತ. ೬ ಪೆಟ್ಟಿಗೆ ಪ್ಯಾಕೆಟದ ಕರಾರುಗಳು.
ಯಾವುದಾದರೂ ಸ್ವಲ್ಪ ವನಸ್ಪತಿ ಎಣ್ಣೆಯನ್ನು ಉಪಯೋಗಿಸಬೇಕು.
ಸ್ಟಾಕಿಸ್ಟರು ಬೇಕು: **ಫ್ರೆಂಚ ಲಾಯಿಟರ ಕಂಪೆನಿ,** ೭೫೫ ಚಿಕ್ಕಪೇಟೆ, ಬೆಂಗಳೂರ ಸಿಟಿ

Degrees: Books: Medicines
Free H. L. M. S. M. B. H. M. D. etc, Free Homeo-Ayur- UnaniNatureo degree by post also—Practitioner also get soon Homeo Materiamedica, Rs 5 Homeo Practice book Rs 4 Insanity Cure Pills Rs, 10 Enclose 2 annas stamp.—
Prof, Dr, N, H, Chhatbar
Principal Indian Homeopathi Institute & Society (Govt. Regd)
P. O. MAHUVA (Kathiawar Dt. India).

Sidha-Kalpa Kavach (Regd.)
No. 3 Rs. 2 No. 2 Rs 5 No. 1 Rs. 7 Special Rs 10, Extra Special Rs 17 fo over marriage health wealth, Ask an six questions with M. O. Re. 1/4, and get correct answers by return post Life reading Rs.10No.V. .P.Send M. O. Free pmplets.
Prof. Dr. N. H. Chhatbar,,
P. O. MAHUVA (Kathiawar India.)

ಶುಭವಾರ್ತೆ

ಕಂಣಂಗಾರ ಪಡುಬಿದ್ರೆ ಸಂತೆಕಟ್ಟೆಯಲ್ಲಿ ದಂತ ವೈದ್ಯರಾದ ಬೇಚ ಬಿ. ಅಮೀನರ ಪುತ್ರ ಶ್ರೀ. ನಾರಾಯಣ ಬಿ. ಬಂಗೇರರು ಶ್ರೀ. ಹೊಸಬೆಟ್ಟು ತ್ಯಾಂಪಣ್ಣನವರ ಪುತ್ರಿ ಸೌ ಸುಶೀಲೆಯೆಂಬ ಕನ್ನಿಕೆಯನ್ನು ಕಳೆದ ತಾ.22-6-44ರಲ್ಲಿ ಪುಣ್ಯಕ್ಷೇತ್ರವಾದ ತಿರುಪತಿ ಗಿರಿಯಲ್ಲಿ ವೈದಿಕ ವಿಧಿಪ್ರಕಾರ ವಿವಾಹವಾದರೆಂಬ ಶುಭವಾರ್ತೆಯನ್ನು ಬರೆಯಲು ತುಂಬಾ ಸಂತೋಷಪಡುತ್ತೇವೆ. ನವದಂಪತಿಗಳಿಗೆ, ಭಗವಂತನು ಚಿರಾಯುರಾರೋಗ್ಯ, ಸುಖಸಂಪತ್ತನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ರಾಜಾಜಿ ಸಂಧಾನ ಸೂತ್ರ—ಜಿನ್ನರ ತಿರಸ್ಕಾರ!

ಬರಿಯ ಕಂದರಗಳ ಮೊರೆಗಳಲ್ಲಿ ಅಗ್ರಸ್ಥಾನ ಸಲ್ಲಬೇಕಾದ ಪಾಕಿಸ್ತಾನ್ ಕೂಗನ್ನು ಸಂತೈಸಿ, ಹಿಂದುಸ್ಥಾನದ ಬಿಕ್ಕಟ್ಟನ್ನು ಬಿಡಿಸಬೇಕೆಂದು, ಆ ಕುರಿತು ದೀಕ್ಷಾಬದ್ಧರಾಗಿರುವ ರಾಜಾಜಿಯವರು ಪ್ರಯತ್ನಿಸಿ ಪರಾಭವಗೊಂಡ ಪ್ರಾಮುಖ್ಯ ವಾರ್ತೆಯೊಂದು ಆಚಾರ್ಯರಿಂದಲೇ ಈಗ ಪ್ರಕಟಿಸಲ್ಪಟ್ಟಿದೆ. ಈ ಸಂಧಾನ ಯತ್ನದ ಆರಂಭ 1943 ನೇ ಫೆಬ್ರವರಿ, ಮಾರ್ಚ ತಿಂಗಳಲ್ಲಿ; ಗಾಂಧಿಜೀ 21 ದಿನಗಳ ಉಪವಾಸದಲ್ಲಿದ್ದಾಗ ಅವರ ಭೇಟಿಗೆ ಹೋಗಿದ್ದ ರಾಜಾಜಿ ಕಾಂಗ್ರೆಸ್-ಲೀಗ್ ಒಪ್ಪಂದಕ್ಕಾಗಿ ತಾನು ತಯಾರಿಸಿದ ಯೋಜನೆಗೆ ಗಾಂಧಿಜೀಯ ಪೂರ್ಣ ಸಮ್ಮತಿ ಪಡದಿದ್ದರು. ಆ ಯೋಜನೆ—ಅವರದನ್ನು ತಾ॥8-4-44ರಲ್ಲಿ ಮಿ. ಜಿನ್ನರ ಮುಂದಿಟ್ಟ ನಂತರ, ಲೀಗ್ ಅಧ್ಯಕ್ಷರಿಂದ ಅದಕ್ಕೆ ದೊರೆತ ಸಂಭಾವನೆ-ಅವನ್ನಿಲ್ಲಿ ಕೊಟ್ಟಿದ್ದೇವೆ.

ರಾಜೀ ತೀರ್ಮಾನ ಶರ್ತಗಳು.—

(1) ಭಾರತದ ಸ್ವಾತಂತ್ರ್ಯ ಬೇಡಿಕೆಯನ್ನು ಮುಸ್ಲಿಂ ಲೀಗು ಅಂಗೀಕರಿಸಿಕೊಳ್ಳುತ್ತದೆ; ಮತ್ತು ಬದಲಾವಣೆಯ ಅವಧಿಯೊಳಗೆ ತಾತ್ಕಾಲಿಕ ಸರಕಾರ ರಚಿಸಲು ಕಾಂಗ್ರೆಸಿನೊಡನೆ ಸಹಕರಿಸುತ್ತದೆ (2) ಮುಸಲ್ಮಾನರು ಅಧಿಕ ಸಂಖ್ಯಾಕರಾಗಿರುವ ಭಾರತದ ವಾಯುವ್ಯ ಮತ್ತು ಪೂರ್ವ ಪ್ರಾಂತ್ಯಗಳ ಸರಹದ್ದಿನ ಜಿಲ್ಲೆಗಳ ಗಡಿನಿರ್ಣಯಕ್ಕಾಗಿ ಯುದ್ಧ ಮುಗಿದೊಡನೆಯೇ ಒಂದು ಕಮಿಶನ್ ನೇಮಿಸಲ್ಪಡತಕ್ಕದ್ದು. ಹೀಗೆ ಗಡಿ ನಿರ್ಣಯವಾದ ಸ್ಥಳಗಳು ಹಿಂದುಸ್ಥಾನದಿಂದ ಪ್ರತ್ಯೇಕವಿರಬೇಕೋ ಎಂಬುದನ್ನು ಆ ಸ್ಥಳಗಳ ಎಲ್ಲಾ ಪ್ರಾಯಸ್ಥರ ವೋಟಿನಿಂದ ಅಥವಾ ಇನ್ನಾವುದಾದರೊಂದು ವ್ಯವಹಾರ್ಯ ಮತದಾನ ಪದ್ಧತಿಯ ಮೂಲಕ ನಿರ್ಣಯಿಸಬೇಕು. ಹಿಂದುಸ್ಥಾನದಿಂದ ಪ್ರತ್ಯೇಕವಾದ ರಾಜ್ಯಭಾರ ಬೇಕೆಂಬುದಕ್ಕೇನೇ ಬಹು ಮತದೊರೆತರೆ, ಗಡಿಯಲ್ಲಿರುವ ಜಿಲ್ಲೆಗಳಿಗೆ ತಪ್ಪಿತ್ಛೆಯಿದ್ದ ಕಡೆ ಸೇರುವ ಅಧಿಕಾರವು ಅದ್ದಿವಿನಹಾ ಕೊಡಲ್ಪಡಬೇಕು. (3) ಈ ಮತದಾನವಾಗುವ ಮೊದಲು ಪ್ರತಿಯೊಂದು ಪಕ್ಷಕ್ಕೂ ತಂತಮ್ಮ ಪ್ರಚಾರಮಾಡುವ ಪೂರ್ಣಾಧಿಕಾರವಿದೆ. (4) ಪ್ರತ್ಯೇಕಿಸಲ್ಪಡುವ ಸಂದರ್ಭದಲ್ಲಿ ರಕ್ಷಣೆ, ವ್ಯಾಪಾರ, ಮತ್ತು ವ್ಯವಹಾರ ಹಾಗೂ ಇತರ ಮುಖ್ಯ ಸಂಬಂಧಗಳ ಕುರಿತು ಪರಸ್ಪರ ಒಪ್ಪಂದವಾಗಬೇಕು. (5) ಕೇವಲ ಸ್ವಯಂಪ್ರೇರಣೆಯಿಂದ ಮಾತ್ರವೇ ಜನರ ಅದಲುಬದಲಾವಣೆಯಾಗಬೇಕು. (6) ಇಂಗ್ಲಾಂಡು ಪೂರ್ಣ ಸ್ವಾತಂತ್ರ್ಯ ಹಾಗೂ ಭಾರತದ ಆಡಳಿತಾಧಿಕಾರವನ್ನು ಬಿಟ್ಟುಕೊಟ್ಟರೆ ಮಾತ್ರ ಈ ಶರ್ತಗಳು ಜ್ಯಾರಿಗೆ ಬರಲು ಬದ್ಧವಿವೆ.

ಜಿನ್ನರೊಡನೆ ಸಂಭಾಷಣೆ.

ಮೇಲಿನ ಸೂಚನೆಗಳಿಗೆ ಗಾಂಧಿಜೀಯೊಪ್ಪಿಗೆಯಿತ್ತು ತನ್ನ ಸಮ್ಮತಿಯನ್ನು ಪ್ರಕಟಿಸುವ ಅಧಿಕಾರವನ್ನೂ ರಾಜಾಜಿಗೆ ಕೊಟ್ಟಿದ್ದರು. ತಾ 8-4-44ರಲ್ಲಿ ಆಚಾರ್ಯರು ನವದಿಲ್ಲಿಯಲ್ಲಿ ಜಿನ್ನರನ್ನು ಸ್ವತಃ ಭೇಟಿಯಾಗಿ ಸಂಧಿ ಸೂಚನೆಗಳನ್ನೂ ತನ್ನ ಕೇಳಿಕೆಯನ್ನೂ ಬರೆಹ ಮೂಲಕ ಒಪ್ಪಿಸಿದಾಗ ಕ್ವಯದ್-ಇ-ಅಝಾಮರು ವ್ಯಕ್ತಿಶಃ ತನ್ನ ಅಸಮ್ಮತಿ ಸೂಚಿಸಿದರು. ಕೆಲ ದಿನಗಳ ನಂತರ ಪುನಃ ಮಿ. ಜಿನ್ನರಿಗವರು ಬರೆದ ಪತ್ರ:—

ನವದಿಲ್ಲಿ 17—4—44

ಪ್ರಿಯ ಮಿ. ಜಿನ್ನರೇ.

ನಾವು ಕಳೆದ ಬಾರಿ ಭೇಟಿಯಾದಾಗ ಬರೆಹ ಸಿತಿ ನಿಮಗೊಪ್ಪಿಸಿದ್ದ ಸೂಚನೆಗಳು ಇನ್ನೂ ನಿಮ್ಮ ಬಳಿಯಲ್ಲಿದ್ದಿರಬೇಕು. ಮತ್ತು ಪ್ರಾಯಶಃ ನೀವವುಗಳನ್ನು ಪುನಃ ಪುನಃ ಓದಿಕೊಂಡು ಆ ಕುರಿತು ಮತ್ತೂ ಆಲೋಚನೆಮಾಡಿರಬೇಕು. ಆ ಶರ್ತಗಳನ್ನು ಮಂಜೂರು ಮಾಡಲು ನಿಮಗಸಾಧ್ಯವಾದುದರಿಂದ ನಾನು ಬಹಳ ನಿರಾಶೆಗೀಡಾಗಿದ್ದೇನೆಂಬುದು ನಿಮಗೆ ಗೊತ್ತಿದೆ. ಆದರೆ ನೀವಾ ಕುರಿತು ಮರು ಯೋಚನೆ ಮಾಡಿರಬಹುದೆಂದು ನನ್ನ ಆಶೆ. ಆ ಸೂಚನೆಗಳು ಯೋಗ್ಯ ಹಾಗೂ ಸಮಾಧಾನಕರ ಸಂಧಿಸಲಹೆಗಳೆಂದು ನನ್ನ ಯಥಾರ್ಥಾಭಿಪ್ರಾಯ ನೀವೇನಾದರೂ ಪುನರಾಲೋಚಿಸಿರುವಿರೋ ಎಂಬುದನ್ನು ತಿಳಿಸಿದರೆ ಕೃತಜ್ಞನಿದ್ದೇನೆ.

ನಿಮ್ಮ ಯಥಾರ್ಥವಾದಿ ಸಿ. ಆರ್.

(೫ನೇ ಪುಟ ನೋಡಿರಿ)

ನೋಟೀಸು.

ಬ್ರಹ್ಮಾವರ

ಬರುವ ತಾರೀಕು 17-7-1944ನೇ ಸೋಮವಾರ ಅಪರಾಹ್ನ ಗಂಟೆ 3ಕ್ಕೆ ನಂಬ್ರ L 460ನೇ ಬ್ರಹ್ಮಾವರ ಕೋಪರೇಟಿವ್ ಸ್ಟೋರ್ಸ್ ಲಿಮಿಟೆಡ್—ಇದರ ಮಹಾ ಸಭೆಯು ಸದ್ರಿ ಸ್ಟೋರ್ಸಿನ ಕಟ್ಟಡದಲ್ಲಿ ಜರಗುವ್ವುದು. ಸಂಸ್ಥೆಯ ಮೆಂಬರರೆಲ್ಲರೂ ಅವಶ್ಯ ಹಾಜರಿರಬೇಕಾಗಿ ಅಪೇಕ್ಷಿಸಲಾಗುತ್ತದೆ

I. Narayana Shetty,
President.
9-7-1944.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

S. C. 260/40
S. E. P. No. 360/43
S. E. A. No. 216/1943

ಚೆಂದಮ್ಮ ಶೆಟ್ಟಿ— ಅರ್ಜದಾರಳು.
ರುಕ್ಮಯ ಹೆಗಡೆ— ಎದ್ರಿ

ರುಕ್ಮಯ ಹೆಗಡೆ, ಕೊಡ್ಕಡ್ಕ ದಾಸಯ್ಯ ಹೆಗಡೇರ ಮಗ, ಕಾರ್ಕಳ ತಾಲ್ಲೂಕು ಬೆಳುವಾಯಿ ಗ್ರಾಮದಲ್ಲಿರುವವ— ಎದ್ರಿ

ಅರ್ಜದಾರಳು ಸದ್ರಿ ವ್ಯಾಜ್ಯದಲ್ಲಿ ಎದ್ರಿಯ ಅನ್ನಾರ್ಥ ನಸಬಲಿ ಹಕ್ಕು ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾಳೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸಲಿಕ್ಕೆ ತಾ. 25-7-1944 ನಿಶ್ಚಯಿಸೋಣಾಗಿಯದೆ, ಎಂಬ ಸಂಗ್ತಿ ನ ಅರ್ಜದಾರಳು ತನಗೆ ಬಿಡ್ ಮಾಡುವರೆ ಪರ್ಮಿಶನ್ ಕೇಳಿ ಮಾಡಿದ ಸದರಿ ಅರ್ಜಿ ಕೂಡಾ ಅದೇ ತಾರೀಕಿಗೆ ಇಟ್ಟಿದೆ. ಎದ್ರಿಗೆ ಆ ಕುರಿತು ಆಕ್ಷೇಪ ಇದ್ದಲ್ಲಿ ಸದ್ರಿ ದಿನ್ಸ ಹಾಜರು ಮಾಡಿಕೊಳ್ಳತಕ್ಕದ್ದು.

D. Venkatesh Bhat.

ಕಾರ್ಕಳ, } ಅರ್ಜದಾರಳ ಕಡೆ
ತಾ. 6-7-1944. } ವಕೀಲ್

ರೈಲ್ವೇ ಟಿಕೆಟ್ಟನ್ನು ಪಡೆಯುವದರಲ್ಲಿನ ತೊಂದರೆಗಳು



ಒಂದು ಕಾಲದಲ್ಲಿ ನೀವು ಟಿಕೆಟ್ ಆಫೀಸಿಗೆ ಹೋಗಿ ಟಿಕೆಟ್ ಕೊಡುವದಕ್ಕೆ ಪ್ರಾರಂಭವಾದ ಕೆಲವೇ ನಿಮಿಷಗಳಲ್ಲಿ ನಿಮ್ಮ ಟಿಕೆಟ್ಟನ್ನು ಪಡೆಯಬಹುದಾಗಿತ್ತು. ಏನೇನೂ ಗೊಂದಲವಿದ್ದಿಲ್ಲ; ಕಷ್ಟವಿದ್ದಿಲ್ಲ, ತೊಂದರೆಯಿದ್ದಿಲ್ಲ. ಆದರೆ, ಆ ದಿವಸಗಳು ಹೋದವು. ಈಗ ನೀವು ಜನಗಳ ಗುಂಪಿನಲ್ಲಿ ಸೇರಿಕೊಂಡು ನಿಮ್ಮ ಟಿಕೆಟ್ಟನ್ನು ಪಡೆಯಬೇಕು. ಇದಕ್ಕೆ ಹದಿನೈದು ಇಪ್ಪತ್ತು ನಿಮಿಷಗಳಾದರೂ ಹತ್ತುವದು. ಈ ನಡುವೆ ನಿಮ್ಮ ಸಾಮಾನುಗಳು ಕಳುವಾಗುವ ಸಂಭವವುಂಟು ಅವುಗಳನ್ನು ಕಾದುಕೊಳ್ಳಲು ಕೂಲಿಯೊಬ್ಬನನ್ನು ನೇಮಿಸಬೇಕಾಗುವದು. ಆದರೆ, ಈ ದಿವಸಗಳಲ್ಲಿ ಕೂಲಿಗಳು ಸಿಕ್ಕುವದೇ ಕಷ್ಟ. ಇದರ ಜತೆಗೆ ಗಾಡಿಯಲ್ಲಿ ಸ್ಥಳವನ್ನು ಹುಡುಕೋಣ, ಆಹಾರಕ್ಕಾಗಿ ಅಲೆಯೋಣ ಇವೇ ಮುಂತಾದ ಇತರ ವಿಧವಾದ ಪ್ರಯಾಸಗಳನ್ನು ಸೇರಿಸಿ ನೋಡಿದರೆ, ವಿವೇಕಿಯಾದವನು ಇಂತಹ ಪ್ರಯಾಣದಲ್ಲಿ ಏನೂ ಪ್ರಯೋಜನವಿಲ್ಲವೆಂದು ಖಾತರಿಯಾಗಿ ತಿಳಿಯುವನು ಮುಖ್ಯವಾಗಿ ಹೆಂಗಸರಿಗೆ ಪ್ರಯಾಣವು ಅಸಂತೋಷಕರ ಮತ್ತು ಅಸೌಖ್ಯಕರ, ವಿವೇಕಿಯಾದ ಮನುಷ್ಯನು ಪ್ರಯಾಣ ಮಾಡಿಯೇ ತೀರಬೇಕೆಂಬ ಪ್ರಸಂಗವಿದ್ದ ಹೊರತು, ಬೇರೆ ಪ್ರಸಂಗದಲ್ಲಿ ಪ್ರಯಾಣಮಾಡುವದಿಲ್ಲ. ನೀವೂ ನಿಮ್ಮ ಕುಟುಂಬವೂ ಸಹ ವಿವೇಕಿಗಳಾಗಿ ಮನೆಯಲ್ಲಿಯೇ ಉಳಿಯಿರಿ. ಇದರಿಂದ ಹಣವನ್ನು ಉಳಿಸಿಕೊಳ್ಳುವಿರಿ ಮತ್ತು ಅನೇಕ ತೊಂದರೆಗಳಿಂದ ಪಾರಾಗುವಿರಿ.

ಕಡಮೆಯಾಗಿ ಪ್ರಯಾಣಮಾಡಿರಿ

AAA 679 KN

The Canara Banking Corporation Limited.

ESTD 1906.

Authorised Capital	Rs 25 00 000/-
Subscribed Capital	„ 16 00 000/-
Paid up Capital	„ 13 72 900/-
Reserves	„ 1 10 000/-

Total Working Capital— xEceeds One Crore

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers

ನವಯುಗ

ಉಡುಪಿ ಗುರುವಾರ ೧೩-೭-೧೯೪೪

ಚೀನಾ.

ಜಾಪಾನರ ಪಾಶವೀ ಮದಾಂಧ ದೃಷ್ಟಿಯಲ್ಲಿ ಕೇವಲ ಒಂದು ಪರ್ವಣಿ-ಜಪಾನು ಪ್ರತ್ಯಕ್ಷ ತಮ್ಮ ಮೇಲೆ ಎರಗುವವರೆಗೂ ಇಂಗ್ಲೆಂಡು ಅಮೇರಿಕಗಳ ಸ್ವಾರ್ಥ ದೃಷ್ಟಿಗೆ [illegible]ಸ್ವರ ಹೋರಾಟ-ಅವರೆ, ಹಿಂದುಸ್ಥಾನದಂತಹ ಪರಾಕ್ರಮ ಪೀಡಿತ ದೇಶದ ಕನಿಕರ ಪೂರ್ಣ ದೃಷ್ಟಿಗೆ 'ದೇವಾಸುರ ಕಾಳಗ'ವಾಗಿರುವ ಚೀನಾ ಯುದ್ಧಕ್ಕೀಗ ಎಂಟನೇ ವರುಷ ಹಿಡಿದಿದೆ. ರಶ್ಯವು ಹಿಟ್ಲರನ ಭೀಕರ ದಾಡೆ ಮುರಿದು ಇಂಗ್ಲೆಂಡು ಅಮೇರಿಕಗಳನ್ನುಳಿಸಿದ್ದಾದರೆ, ಚೀನವು ಜಾಪಾನೀ ವಿಷದ ಒಪ್ಪಂದವನ್ನು ಸ್ವತಃ ಹೀರಿ ಮಿತ್ರ ರಾಷ್ಟ್ರಗಳನ್ನು ರಕ್ಷಿಸಿದ ವಿಕ್ರಮವೀರಂತೆ. ಪ್ರಜಾಸತ್ತೆಯ ಹೆಸರು ಮಾತ್ರ ಹೇಳಿಯಲ್ಲ-ಕೇವಲ ಪ್ರಜಾಸತ್ತೆಗಾಗಿಯೇ ಎಲ್ಲರಿಗಿಂತ ಮೊದಲು ಹೋರಾಟಕ್ಕಿಳಿದ ರಾಷ್ಟ್ರವೆಂದರೆ ಚೀನಾ. ಇಂಗ್ಲೆಂಡಿನ ಅನುಕೂಲ ಶಾಸ್ತ್ರವೇ ಚೀನದ ರಣವೇದವಾಗುತ್ತಿದ್ದರೆ ಅದು ಜಾಪಾನಿನ ವೇಲೆ ಯುದ್ಧ ಸಾರಲು ಸಾಧ್ಯವಿತ್ತೇ, ಈಗಲಾದರೂ ಯುದ್ಧ ಮುಂದೊತ್ತುವದು ಸಂಭವವೇ ಎಂಬ ಕರಿತು ಜನುಮಾನವಿದೆ. ಯುದ್ಧಕ್ಕಿಳಿಯುವಾಗ ಜನರಲಿಸಿಮೋ ಚಿಯಾಂಗರಲ್ಲಿ ತನ್ನದೆಂಗಿಂತ ಬ[illegible] ವ ತ್ತೊಂ[illegible] [illegible] ಯಾಂತ್ರಿಕ [illegible] [illegible] [illegible] [illegible] [illegible] [illegible] ಹಿಂದಿದುವಂತಿಲ್ಲ [illegible] ದಿನದಲ್ಲಿ ಚಿಯಾಂಗ [illegible] ತನ್ನ [illegible]ವನ್ನು [illegible] ತ ಸ್ಮರಣೀಯ!

ಮಿತ್ರ ರಾಷ್ಟ್ರಗಳೊಡಗಿರುವ ಇಂದಿನ ಯುದ್ಧ ಯೋಜನೆಯಲ್ಲಿ ಹಿಂದುಸ್ಥಾನವು ಅಂಗೀಕರಣ[illegible] ಮೆಚ್ಚುವ ಒಂದಂಶವೆಂದರೆ—ಚೀನಾ ಮುಕ್ತ. ಈಗದ ಸ್ವತಂತ್ರ ರಕ್ಷಕ ಚರ್ಚಿಲ್ ಸರಕಾರ ಸ್ಥಾಪನೆಯಾದ ಮೇಲೆಯೇ ಬ್ರಹ್ಮಾ ರಸ್ತೆಯನ್ನು ಬ್ರಿಟಿಷರು ಸ್ವಹಸ್ತದಿಂದ ಮುಚ್ಚಿದ್ದರು. ಇಂದು ದಾರಿಯಾಗಿ ರುಧಿರ ತೈಲ ಸುರಿಸಿದರೂ ಆ ಬಾಗಿಲು ತೆರೆಯಲು ಕೇಳುವದಿಲ್ಲ! ಅವರ ತಮ್ಮ ಅವಶ್ಯಕತೆಯೂ ಚೀನದ ಗುರಿಯೂ ಒಂದೇಯಾದ್ದರಿಂದಲೇ ಇಂಗ್ಲೆಂಡು ಅಮೇರಿಕಗಳಿಗೆ ಈ ಚೀನದೊಡನೆ ಸಹಾನುಭೂತಿ. ಆದರೆ ಹಿಂದುಸ್ಥಾನದ ಹೃದಯ ಅಂತಹದಲ್ಲ; ಜಾಪಾನೀ ಪಾಶವಿಕ ಧಾಳಿಯಾರಂಭವಾದೊಡನೆ ಪಂಡಿತ ನೆಹರು ಅವರಂತಹ ಹಿಂದೀ ಮುಖಂಡರು ನೆರವು ನೀಡ ಹತ್ತಿದ ಬೆಂಕಿಯುಂಬಂತದನ್ನು ಶಮನಗೊಳಿಸಲು ಶಕ್ತ್ಯಾನುಸಾರ ಚಡಪಡಿಸಿದ್ದರು. ಹಿಂದುಸ್ಥಾನದಿಂದ 'ವೈದ್ಯಕೀಯ ಮಂಡಲಿ' ಮತ್ತು ಇತರ ಸಹಾಯಗಳು ಸ್ವಯಂಪ್ರೇರಣೆಯಿಂದ ಹೋಗಿದ್ದುವು. ಕಳೆದ ಆಗೋಸ್ತು ಸಿದ್ಧಾಂತದ ವೇಳೆ "ಚೀನಾ ರಶ್ಯಾಗಳಿಗೆ ಹಾನಿಯೊದಗಬಹುದೇನೋ!" ಎಂಬ ಮರುಕದಿಂದ ಪಂಡಿತ ಜವಾಹಿರಲಾಲರು ಕಣ್ಣೀರಿಳಿಸಿದ್ದರೆಂದು ಗಾಂಧಿಜೀ ಸರಕಾರಕ್ಕಿತ್ತ ಉತ್ತರದಲ್ಲಿಂದಿದ್ದಾರೆ. ಆದರೆ ಪರತಂತ್ರ ಭಾರತೀಯ ಮನಸ್ಸು ಹೋದಷ್ಟು ದೂರಕ್ಕೆ ಅವರ ಕಾರ್ಯ ಸಾಗುವ ಅನುಕೂಲತೆಯಿಲ್ಲ. ಮಿತ್ರರಾಷ್ಟ್ರಗಳ ಸ್ಥಾನ ಹಾಗಲ್ಲ, ಚೀನದ ಅಸ್ತಿತ್ವವು ಅವುಗಳ ಸ್ವಕಾರ್ಯಸಾಧನೆಗೇನೇ ಬೇಕಾಗಿದೆ. ತಾವು ಒಂದಿಷ್ಟು ದೊಡ್ಡ ಪರಿಮಾಣದಲ್ಲಿ ಅಪಾಯ ವಹಿಸಲು ಸಿದ್ಧವಾದರೆ ಚೀನದ ಇಂದಿನ ಆಪತ್ತನ್ನು ನಿವಾರಿಸಲಿಕ್ಕೂ ಸಾಧ್ಯವಿದೆ. ಆದರೆ ಮಿತ್ರರಾಷ್ಟ್ರಗಳು ಅಂತಹ ಸಾಹಸಕ್ಕೆ ತಯಾರಿಲ್ಲ. 'ಚೀನವು ತನ್ನ ಪ್ರತಿಭಟನೆಯನ್ನು ಇನ್ನಷ್ಟು ಬಲಗೊಳಿಸುವದೆಂದು ಆಶಿಸುತ್ತೇವೆ' ಎಂದು ಜಪಾನರ ಇತ್ತೀಚಿಗಿನ ಅಪಾಯಕಾರೀ ಆಕ್ರಮಣವನ್ನು ಕಂಡು ಮಿ[illegible]ನೆ ಹೇಳಿದ್ದರು. ಇವು ಉರಿವ ಗಾಯಕ್ಕೆ ಉಪ್ಪಿಸಂತಾಗುವ ಭಾವನೆಗಳು! ಆಧುನಿಕ ಯೋಧಕರಣಗಳಿಲ್ಲದ ಚೀನೀ ಯೋಧರು ಕ್ಯ ಬಿದ್ದಾಗಿದ್ದ, ಸಹಾಯಕ್ಕಾಗಿ ಮೊರೆಯಿಟ್ಟ ಚೀನೀ ಪ್ರಮುಖರ ಕಂಠಶೋಣಗಿದ್ದ, ಇದನ್ನು ಕಂಡು, ಕೇಳಿ, ಅಧ್ಯಕ್ಷ ರೂಸವೆಲ್ಟರು ಕಳುಹಿಕೊಟ್ಟಿದ್ದು, 'ಇನ್ನಷ್ಟು ಹೋರಾಡಿರಿ!' ಎಂಬ ಉಪದೇಶವನ್ನು! ತಾವು ಯುರೋಪು ಯುದ್ಧ ಮುಗಿಸಿ ಏಶ್ಯಾ ಹೋರಾಟಕ್ಕಣಿಯಾಗುವ ವರೆಗೆ ಜಪಾನರನ್ನು ಚೀನಿಯರು ತಮ್ಮ ಸ್ವಶಕ್ತಿಯಿಂದ ತಡೆಗಟ್ಟಿ ನಿಲ್ಲಿಸಿದರೆ ತಾವು ಬಂದೊಡನೆ ಅವರನ್ನು ಗೆದ್ದುಕೊಡುತ್ತೇವೆ ಎಂಬುದೇ ಈಗ ಮಿತ್ರರಾಷ್ಟ್ರಗಳ ಅಂತರ್ಯ. ಚೀನಕ್ಕೆ ಭಾಗ್ಯವಿಲ್ಲವೆಂಬಂತೆ ಕಾಣುತ್ತಿದೆ. ಚೀನದ ಇಂದಿನ ವಿಶೇಷ ಮತ್ತು ಸ್ಥಿತಿಗ್ಗಾಪದ್ಧತಿಯಲ್ಲಿ ಇಡೀ ಲೋಕವದಕ್ಕೆ ಕೃತಜ್ಞತೆಯಿಂದ ತಲೆಬಾಗಬೇಕು.

ಉಡುಪಿ ಬೋರ್ಡು ಹೈಸ್ಕೂಲ್ ಉಡುಪಿಗೆ ಅತ್ಯಾವಶ್ಯಕ

ಉಡುಪಿ ಬೋರ್ಡು ಹೈಸ್ಕೂಲಿನ ಸ್ಥಿರತೆಯ ವಿಷಯವಾಗಿ ಉಡುಪಿಯ ಹಾಗೂ ಸುತ್ತುಮುತ್ತಲಿನ ಜನತೆಯಲ್ಲಿ ಕಳವಳವನ್ನುಂಟುಮಾಡುವ ವಿದ್ಯಮಾನಗಳು ಇತ್ತೀಚೆಗೆ ಪ್ರತಿವರ್ಷವೂ ತಲೆದೋರುತ್ತಿರುವುದು ವಿಚಿತ್ರ ಹಾಗೂ ವಿಷಾದಕರ. ಅಂತಹದೊಂದು ಪ್ರಶ್ನೆಯು ಇದೇ ತಿಂಗಳ ತಾ ೧೯ರಂದು ಜರಗುವ ಡಿ. ಬೋ. ಮೀಟಿಂಗಿನಲ್ಲಿಯೂ ಬರಲಿಕ್ಕಿದೆ ಯೆಂಬುದು ವ್ಯಸನಕರ. ಹಿಂದೆ ಇಂತಹ ಪ್ರಶ್ನೆಯು ಬಂದಾಗಲೆಲ್ಲ ಅದರ ಅಮೂಲಾಗ್ರ ವಿಚಾರವಾಗಿ ಅದನ್ನು ಬಿಂತಳ್ಳಿದ ಮೆಂಬರರ ನ್ಯಾಯಬುದ್ಧಿಯೂ ವಿವೇಕಪೂರ್ಣ ನಿರ್ಣಯವೂ ಪ್ರಶಂಸನೀಯವಿದೆ. ಅವರ ನ್ಯಾಯಶೀಲತೆಯಲ್ಲಿ ಈಗಲೂ ಜನತೆಗೆ ದೃಢವಿಶ್ವಾಸವಿದೆ. ಆದರೂ ಆಯಾ ಸಂದರ್ಭದಲ್ಲಿ ಮುಂಬರುವ ಪೊಳ್ಳು ತರ್ಕಗಳಿಂದ ಅವರ ವಿಚಾರ ಸರಣಿಯು ಪ್ರಮಾದವಶಾತ್ ಒಡ್ಡಹಾದಿ ಹಿಡಿದು ಉಡುಪಿಯಲ್ಲಿ ಈ ಹೈಸ್ಕೂಲು ಅನವಶ್ಯಕ ಎಂಬ ನಿರ್ಧಾರಕ್ಕೆ ಬರಬಾರದೆಂದು ಅಂತಹ ಸಂದರ್ಭಗಳಲ್ಲೆಲ್ಲ ನಿಜಸ್ಥಿತಿಯನ್ನು ಅವರ ಅವಗಾಹನೆಗೆ ತಂದು ಉಡುಪಿಯ ಆವಶ್ಯಕತೆಯನ್ನು ಮನಗಾಣಿಸಿಕೊಡುವದರಲ್ಲಿ ಮಹಾಜನರ ಪರವಾದ ನಮ್ಮ ಕರ್ತವ್ಯವನ್ನು ನಾವು ಮಾಡಿಯೇ ಇದ್ದೇವೆ. ಅಂತೆಯೇ ಈಗಲೂ ಈ ವಿಷಯವಾಗಿ ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ.

ಡಿ. ಬೋರ್ಡು ಕಾಪಿನಲ್ಲೊಂದು ಹೈಸ್ಕೂಲನ್ನು ತೆರೆಯಬೇಕೆಂದು ತಾ ೧೯ರ ಮೀಟಿಂಗಿನಲ್ಲೊಂದು ಠರಾವು ಬರುತ್ತದೆ. ಬಹಳ ಸಂತೋಷ. ಹಳ್ಳಿಹಳ್ಳಿಗಳಲ್ಲಿಯೂ ಹೈಸ್ಕೂಲುಗಳು ತಲೆದೋರುತ್ತಿರುವ ಈ ದಿನಗಳಲ್ಲಿ ಕಾಪಿನವರು ತಮಗೊಂದು ಹೈಸ್ಕೂಲು ಬೇಕೆಂದು ಕೇಳಿಕೊಳ್ಳುವುದಕ್ಕೆ ಉಡುಪಿಯವರದೇನೂ ಆಕ್ಷೇಪವಿಲ್ಲ. ಆದರೆ ತಮ್ಮ ಕಾರ್ಯಸಾಧನೆಯ ಪೂರ್ತಿಕೆಗಾಗಿ ಉಡುಪಿಯ ಹೈಸ್ಕೂಲನ್ನು ಅಲ್ಲಿಗೆ ವರ್ಗಾಯಿಸಬೇಕೆಂದು ಕೇಳಿಕೊಳ್ಳುವ ಎರಡನೆಯ ಠರಾವು ಮಾತ್ರ ನ್ಯಾಯವಲ್ಲ. ಮತ್ತೊಬ್ಬನ ತುತ್ತನ್ನು ಕಸಿದುಕೊಳ್ಳಲು ಪ್ರಯತ್ನಿಸುವುದು ಅರಣ್ಯನ್ಯಾಯವಾಗುತ್ತದೆ. ಉಂಡುವೇಳೆ ಹಸಿವಿಲ್ಲದವನಿಗೆ ಕೊಡುವ ತುತ್ತನ್ನು ತನಗೆ ಕೊಡಿರೆಂದು ಕೇಳುವುದಾಗಿದ್ದರೆ, ಅದು ನಿಜಸ್ಥಿತಿಯನ್ನು ತಿಳಿಯದ ಬೇಡಿಕೆಯಾಗಿದೆ. ಉಡುಪಿಗೆ ಹೈಸ್ಕೂಲಿನ ಹಸಿವು ಬಹಳ ಇದೆ. ಈಗ ಇರುವ ಮೂರು ಹೈಸ್ಕೂಲುಗಳಿಂದಲೂ ಅದು ತಣಿಯದೆ ಇನ್ನೊಂದು ಬೇಕೆನ್ನುವಷ್ಟು ಇದೆ. ಇದರ ಪೂರ್ತಿಕೆಯಾಗದೆ ಉಡುಪಿಯು ತನ್ನ ಮಕ್ಕಳನ್ನು ಕಲ್ಯಾಣಪುರಕ್ಕೋ ಇನ್ನೆಲ್ಲಿಗೋ ಕಳುಹಿಸತೊಡಗಿರುತ್ತದೆ. ಬೋರ್ಡು ಹೈಸ್ಕೂಲಿನಲ್ಲಿ ಪ್ರವೇಶಾಪೇಕ್ಷಿಗಳಾಗಿ ನೂರಾರು ಮಕ್ಕಳು ಬಂದು ಸ್ಥಳಾಭಾವದಿಂದ ನಿರಾಶರಾಗಿ ಹಿಂತಿರುಗುತ್ತಾರೆಂದು ಕೇಳುತ್ತೇವೆ. ಈಗ ಉಡುಪಿಯ ಮತ್ತು ಆಸ್ಪಾಸಿನ ಮಕ್ಕಳಿಗ ಈಗಿರುವ ಹೈಸ್ಕೂಲುಗಳೇ ದಕ್ಕಷ್ಟು ಆಶ್ರಯಕೊಡಲು ಅಸಮರ್ಥವಾಗಿರುವಾಗ ಈ ಹೈಸ್ಕೂಲನ್ನೂ ಮನ್ನಾಮಾಡಿದರೆ ಇವರಲ್ಲಿರುವ ಐನೂರಕ್ಕೂ ಮಿಕ್ಕಿದ ವಿದ್ಯಾರ್ಥಿಗಳಿಗೆ ಆಶ್ರಯವಲ್ಲಿ? ಮೆಂಬರರು ಇದನ್ನು ಪರ್ಯಾಲೋಚಿಸಬೇಕು. ಆವಶ್ಯವಿದ್ದರೆ ಉಡುಪಿಗೆ ಬಂದಾದರೂ ಪರಿಸ್ಥಿತಿಯನ್ನು ಪರಿಶೀಲಿಸಬೇಕು.

ಮಾತ್ರವಲ್ಲ, ಹುಡುಗರಿಗಾಗಿ ಉಡುಪಿಯಲ್ಲಿರುವ ಮತ್ತೊಂದು ಹೈಸ್ಕೂಲೆಂದರೆ ಕ್ರಿಶ್ಚನ್ ಹೈಸ್ಕೂಲು. ಕೇವಲ ಹುಡುಗಿಯರಿಗಾಗಿಯೇ ಕಾನ್ವೆಂಟು ಹೈಸ್ಕೂಲೊಂದು ಇದೆ. ಇವೆರಡೂ ಒನ್ನೆಲೆಯಲ್ಲಿ ಜಾತೀಯತೆಯ ವರ್ಚಸ್ಸಿರುವ ಖಾಸಗಿ ಸಂಸ್ಥೆಗಳು. ಉಡುಪಿಯಂತಹ ದೊಡ್ಡ ಪಟ್ಟಣದಲ್ಲಿ ಇಂತಹ ಜಾತೀಯತೆಯ ಪ್ರತಿಷ್ಠೆಯಿಲ್ಲದ ಸಾರ್ವಜನಿಕ ಶಾಲೆಯೊಂದು ಅತ್ಯಾವಶ್ಯಕವಷ್ಟೆ. ಉಡುಪಿಯ ಹಿಂದಿನ ಮುಂದಾಳುಗಳೆಲ್ಲ ಹಲವು ವರ್ಷ ಸರಕಾರವನ್ನು ಯಾಚಿಸಿ ಯಾಚಿಸಿ ವರಪ್ರಸಾದರೂಪವಾಗಿ ಈ ಹೈಸ್ಕೂಲನ್ನು ದೊರಕಿಸಿಕೊಂಡು ಅನಂತರದವರು ಕಳೆದ ೨೫ ವರುಷಗಳಿಂದ ದಕ್ಕಿಸಿಕೊಂಡು ಬಾಳಿಸಿಕೊಂಡು ಊರ್ಜಿತಗೊಳಿಸಿಕೊಂಡು ಬಂದಿರುತ್ತಾರೆ. ಇದರ ಸ್ಥಾಪನೆಗಾಗಿ ಹಿಂದೆ ಫಂಡನ್ನು ಒದಗಿಸಿಕೊಟ್ಟಿದ್ದಾರೆ ಮಾತ್ರವಲ್ಲ, ಇದೇ ವರ್ಷ ವಂತಿಗೆಯಿಂದ ಸುಮಾರು ಹತ್ತುಸಾವಿರ ರೂಪಾಯಿ ವೆಚ್ಚಮಾಡಿ ಈಗಾಗಲೆ ಏಕಶಿಲಾ ಹೋಲನ್ನು ಕಟ್ಟಿಸಿದ್ದಾರೆ. ಅದರ ಪೂರ್ತಿಗಾಗಿ ಇನ್ನೂ ಒಂದೆರಡು ಸಾವಿರ ವೆಚ್ಚಮಾಡುವುದರಲ್ಲಿ ಉದ್ಯುಕ್ತರಾಗಿದ್ದಾರೆ. ಉಡುಪಿಯವರಿಗೆ ಈ ಸಾರ್ವಜನಿಕ ಶಾಲೆಯು ಅತ್ಯಾವಶ್ಯಕವಿದೆ ಯೆಂಬುದು ಈ ಬಗೆಯ ಅವರ ಹಿಂದಿನ ಮತ್ತು ಇಂದಿನ ಇತಿಹಾಸದಿಂದಲೇ ಸುವ್ಯಕ್ತವಾಗುತ್ತದೆ. ಇಂತಹ ಅತ್ಯಾವಶ್ಯಕತೆಯನ್ನು ಬೋರ್ಡು ಅಪಹರಿಸಬಾರದು. ಉಡುಪಿಯು ಈ ರೀತಿ ಈ ಶಾಲೆಯ ಬಗ್ಗೆ ಮಾಡಿರುವ ವಿಶೇಷ ತ್ಯಾಗಗಳೆಲ್ಲ ಈ ಶಾಲೆಯನ್ನು ಬೋರ್ಡು ನಡೆಯಿಸಿಕೊಂಡು ಹೋದೀತೆಂಬ ದೃಢವಿಶ್ವಾಸದಿಂದಲೇ. ಡಿ. ಬೋರ್ಡು ಈ ವಿಶ್ವಾಸವನ್ನು ನಿಷ್ಕಾರಣವಾಗಿ ಕಳೆದುಕೊಳ್ಳಬಾರದು.

ಈ ಶಾಲೆಯನ್ನು ಮುಚ್ಚುವುದರಿಂದಾಗಲೀ ಸ್ಥಾನಾಂತರಗೊಳಿಸುವುದರಿಂದಾಗಲೀ ಬೋರ್ಡಿಗೆ ವಿಶೇಷ ಲಾಭವಾಗುವಂತಿಲ್ಲ. ಮಂಗಳೂರಿನಲ್ಲಿದ್ದ ಮಿಡ್ಲ್ ಸ್ಕೂಲಿನ ಮತ್ತು ಈ ಹೈಸ್ಕೂಲಿನ ನಿವ್ವಳ ವೆಚ್ಚವನ್ನು ಸರಕಾರವು ಕೊಡುವ ಗ್ರಾಂಟ ಪ್ರತಿ ಜಿ. ಓ. ದ ಮೇರೆಗೆ ಇವು ತೆರೆಯಲ್ಪಟ್ಟಿದ್ದು. ಮೂಡುಬಿದ್ರೆಯದನ್ನು ಮುಚ್ಚಿದ ಕಾರಣ ಸರಕಾರವು ಬೋರ್ಡಿಗೆ ಕೊಡುತ್ತಿದ್ದ ಗ್ರಾಂಟಿನಲ್ಲಿ ಮೂರುಸಾವಿರ ರೂಪಾಯಿ ಮನ್ನಾಮಾಡಿದೆ. ಈ ಹೈಸ್ಕೂಲನ್ನು ಮುಚ್ಚಿದರೆ ಏಳೆಂಟು ಸಾವಿರ ಮನ್ನಾಮಾಡುವುದು ನಿಶ್ಚಯ. ಹಾಗೆ ಮನ್ನಾಮಾಡದೆ ಇದಕ್ಕೆ ಕೊಡುತ್ತಿದ್ದ ಗ್ರಾಂಟನ್ನು ಕಾಪಿನಲ್ಲಿ ತೆರೆಯುವ ಶಾಲೆಗೆ ಸರಕಾರವು ವರ್ಗಾಯಿಸಿಕೊಟ್ಟೀತೆಂದು ತಿಳಿಯುವುದು ತಪ್ಪು. ಇದ್ದ ಶಾಲೆಯನ್ನು ಮುಚ್ಚಿದರೆ ಗ್ರಾಂಟಿನ ಕಡಿತ ನಿಶ್ಚಯ. ಇನ್ನೊಂದು ಕಡೆ ಅದನ್ನು ತೆರೆದರೆ ಅದರ ವಿಷಯವಾಗಿ ಸರಕಾರವು ಪರ್ಯಾಲೋಚನೆ ಮಾಡುವ ಪ್ರಶ್ನೆಯೇ ಬೇರೆ.

ಇನ್ನು ಉಡುಪಿ ಮುನ್ಸಿಪಲ್ ಕ್ಷೇತ್ರದೊಳಗೆ ಬೋರ್ಡಿನ ಹಣವೇಕೆ ಬೀಳಬೇಕೆಂದು ಕೇಳಬಹುದು. ಬೋರ್ಡಿನ ಹಣವೆಂದರೆ ಕೃತಾಪಿ ಜನರದು. ಉಡುಪಿಯಲ್ಲಿ ಅಷ್ಟಮಠಗಳೂ ದೊಡ್ಡ ಭೂಮಾಲಿಕರಾಗಿ ಇದ್ದಾರೆ. ಅವರ ಆಸ್ತಿಪಾಸ್ತಿಗಳೆಲ್ಲ ಮುನ್ಸಿಪಾಲಿಟಿಯ ಹೊರಗೇ ಇದ್ದು ಡಿ. ಬೋರ್ಡಿನ ಆದಾಯಕ್ಕೆ ಸಹಕಾರಿಯಾಗಿದೆ. ಎಂದ ಮೇಲೆ ಬೋರ್ಡು ಉಡುಪಿಗೆ ಸಲ್ಲದ ಆದಾಯವನ್ನೇನೂ ಉಡುಪಿಯಲ್ಲಿ ಸುರಿಯುತ್ತಿದೆಯೆನ್ನಲು ಆಸ್ಪದವಿಲ್ಲ.

ಉಡುಪಿ ಮುನ್ಸಿಪಾಲಿಟಿಗೆ ಈ ಹೈಸ್ಕೂಲನ್ನು ನಡೆಯಿಸುವ ಆರ್ಥಿಕತೆಯಿಲ್ಲದಿದ್ದರೂ ನಡೆಯಿಸಲೇಬೇಕೆಂಬ ನಿರ್ಬಂಧವಿಲ್ಲದಿದ್ದರೂ ತನ್ನ ಕ್ಷೇತ್ರದೊಳಗೆ ಬೋರ್ಡು ನಡೆಯಿಸುವ ಈ ಹೈಸ್ಕೂಲಿಗಾಗಿ ತನ್ನ ಸಹಕಾರ ಸೂಚಕವಾಗಿ ಶಕ್ತ್ಯಾನುಸಾರ ಸಹಾಯ ದ್ರವ್ಯವನ್ನು ಕೊಡುವ ರೀತಿನೀತಿಗಳನ್ನು ಹುಡುಕಬೇಕು. ಈ ಭಾಗದಲ್ಲಿ ಅದು ವಿಚಾರಮಾಡುತ್ತಿದೆ ಎಂದು ತಿಳಿಯುತ್ತೇವೆ. ಎಂದ ಮೇಲೆ ಡಿ. ಬೋರ್ಡು ಅವಸರ ಪಡುವದರಲ್ಲಿ ನ್ಯಾಯವಿಲ್ಲ.

ಒಂದು ವೇಳೆ ಮುನ್ಸಿಪಾಲಿಟಿಯು ಏನೊಂದೂ ಸಹಾಯ ಮಾಡುವುದಿಲ್ಲವೆಂಬ ನಿರ್ಧಾರಕ್ಕೆ ಬಂದರೆ, ಅದರ ಕ್ಷೇತ್ರದೊಳಗೆ ಡಿ. ಬೋರ್ಡು ಶಾಲೆಯನ್ನು ನಡೆಯಿಸುವುದಿಲ್ಲವೆಂಬ ಛಲವನ್ನು ತೊಟ್ಟರೆ, ಸ್ಥಳೀಯ ಸ್ವರಾಜ್ಯದ ಸೂತ್ರಧಾರಿಗಳಂತಿರುವ ಈ ಉಭಯ ಸಂಸ್ಥೆಗಳ ಹಟದಿಂದಾಗಿ ಉಡುಪಿಯ ಜನತೆಗೆ ಸಂಕಷ್ಟ ಬರಬಾರದು. ಉಡುಪಿಯ ಆವಶ್ಯಕತೆಯನ್ನು ಪೂರೈಸಲಾಗುವಂತೆಯೂ ಮುನ್ಸಿಪಾಲಿಟಿಯ ಹೊರಗೆ ಅನತಿ ದೂರದಲ್ಲೇ ಡಿ. ಬೋರ್ಡಿನ ಕ್ಷೇತ್ರದಲ್ಲಿ ಕಾಪಿನವ

ರಂತೆಯೇ ಜಾಗ ಕಟ್ಟೋಣಗಳನ್ನು ಒಪಗಿಸಿಕೊಡುವ ಮಹನೀಯರೂ ಉಡುಪಿಯಲ್ಲಿರಬಹುದು. ಅವರಿಗೆ ವಿಚಾರಮಾಡಲು ತಕ್ಕಷ್ಟು ಅವಕಾಶವನ್ನು ಕೊಡದೆ ಮಹಾಜನರಿಗೂ ಈ ವಿಷಯ ಕೂಲಂಕುಷ ತಿಳಿಯಗೊಳಿಸುವಷ್ಟು ಸಮಯವೀಯದೆ, ಒಮ್ಮಿಂದೊಮ್ಮೆಗೆ ಮುಂಬರುವ ಮೀಟಿಂಗಿನಲ್ಲಿ ಈ ಪ್ರಶ್ನೆಯನ್ನು ಇತ್ಯರ್ಥಿಸಿ ಬಿಟ್ಟರೆ ಉಡುಪಿಗೆ ಅಕ್ಷಮ್ಯವಾದ ಅನ್ಯಾಯಮಾಡಿದಂತಾದೀತು.

ರಾಜಾಜಿ ಸಂಧಾನ ಸೂತ್ರ–ಜಿನ್ನರ ತಿರಸ್ಕಾರ!

(೩ನೇ ಪುಟದಿಂದ ಮುಂದುವರಿದುದು)

ಜಿನ್ನರ ಘೋಷಣೆ.

ಮೇಲಿನ ಪತ್ರಕ್ಕೆ ಮಿ. ಜಿನ್ನರು ಮೌನ! ರಾಜಾಜಿ ಮೊನ್ನೆ ತಾನೇ ಪೂನೆಗೆ ಹೋಗಿ ಗಾಂಧೀಜೀಯ ಭೇಟಿ ಪಡೆದು, ತಾ. 30-6-44ರಲ್ಲಿ ಅಲ್ಲಿಂದಲೇ ಶ್ರೀನಗರದಲ್ಲಿರುವ ಜಿನ್ನರಿಗೆ ತಂತಿ ಬಿಟ್ಟರು:- 'ತಾ 17ರ ಪತ್ರಕ್ಕೆ ಉತ್ತರ ಬಂದಿಲ್ಲ. ಗಾಂಧೀಜೀಯ ಭೇಟಿ ಪಡೆದೆ. ಅವರೀಗಲೂ ಆ ಸೂಚನೆಗಳನ್ನೊಪ್ಪುತ್ತಾರೆ. ಸಂಧಿಯೋಜನೆ ಮತ್ತು ನಿಮ್ಮ ನಿರಾಕರಣೆ ಪ್ರಕಟಿಸಲು ಅನುಮತಿ ಕೊಡಿ ಗಾಂಧೀಜೀಯ ಮಂಜೂರಾತಿ ಪಡೆದೇ ಈ ತಂತಿ ಬಿಟ್ಟಿದ್ದೇನೆ. ಈಗಲಾದರೂ ನಿಮ್ಮ ನಿರಾಕರಣೆಯ ಕುರಿತು ಪುನರಾಲೋಚಿಸಬೇಕೆನ್ನುತ್ತೇನೆ-- ರಾಜಗೋಪಾಲಾಚಾರಿ'. ಇದಕ್ಕೆ ತಾ 2-7-44ರಲ್ಲಿ ಮಿ. ಜಿನ್ನರ ತಂತೀ ಉತ್ತರ:—'ನಿಮ್ಮ ಯೋಜನೆಯ ಪ್ರಕಟಣೆಗಾಗಿ ನಿಮ್ಮ ವಿಜ್ಞಾಪನೆ. ನನ್ನ ಸಂಭಾಷಣೆಯಲ್ಲಿ ನಾನದನ್ನು ನಿರಾಕರಿಸಿದೆನೆಂದು ನೀವು ಕಟ್ಟಿರುವ ತಪ್ಪು ಅರ್ಥವು ಅಯೋಗ್ಯ ಮತ್ತು ಆಶ್ಚರ್ಯಕರವಿದೆ. ಸತ್ಯಸ್ಥಿತಿ ಹೀಗೆ:—ನಿಮ್ಮ ಸಂಧಾನ ಸೂತ್ರಗಳಲ್ಲಿ ಸುಧಾರಣೆಗವಕಾಶವಿಲ್ಲವಾದರೂ, ಅದನ್ನು ಮುಸ್ಲಿಂ ಲೀಗ್ ಕಾರ್ಯಕಾರೀ ಸಮಿತಿಯ ಮುಂದಿಡಲು ನನ್ನಸಮ್ಮತಿಯಿದೆ ಆದರೆ ಹಾಗೆ ಮಾಡಲು ನೀವು ಒಪ್ಪಲಿಲ್ಲ. ಆದ್ದರಿಂದಲೇ ಆ ಕುರಿತು ಹೆಜ್ಜೆ ಮುಂದಿಡಲಿಲ್ಲ ವ್ಯಕ್ತಿಶಃ ಅದನ್ನು ನಿರಾಕರಿಸುವ ಅಥವಾ ಅಂಗೀಕರಿಸುವ ಹೊಣೆ ನಾನು ಹೊರುವಂತಿಲ್ಲವೆಂಬುದೇ ನನ್ನ ಪ್ರತಿವಾದ. ನನ್ನ ಸ್ಥಾನ ಈಗಲೂ ಅದೇ ಗಾಂಧಿಯವರೇ ನೇರಾಗಿ ಈ ಸೂತ್ರಗಳನ್ನು ಕಳುಹಿದರೂ ನಾನವನ್ನು ಲೀಗ್ ವರ್ಕಿಂಗ್ ಕಮಿಟಿಯ ಮುಂದಿಡಲು ತಯಾರಿದ್ದೇನೆ-ಜಿನ್ನಾ'

ವ್ಯವಹಾರ ಮುಕ್ತಾಯ

ತಾ. 4ರಲ್ಲಿ ಈ ತಂತಿಗೆ ಆಚಾರ್ಯರು ಮತ್ತೊಂದು ತಂತಿ ಬಿಟ್ಟು, ಸಂಧಾನ ಸೂತ್ರಗಳನ್ನು ವ್ಯಕ್ತಿಶಃ ಮಿ. ಜಿನ್ನರು ನಿರಾಕರಿಸಿದರೆಂದು ತಾನು ಭಾವಿಸಿದುದಾಗಿಯೂ, ಜಿನ್ನರ ತಂತೀ ಸೂಚನೆಯಂತೆ ಅವರದನ್ನು ನಿರಾಕರಿಸಿಲ್ಲವಾದರೆ ಸಂತೋಷವೆಂದೂ, ಗಾಂಧೀಜೀಗೀಮಟ್ಟಿಗೆ ವಿಶೇಷ ಅಥವಾ ಪ್ರಾತಿನಿಧಿಕ ಅಧಿಕಾರವಿಲ್ಲವಾದರೂ, ಅವರ ವರ್ಚಸ್ಸಿನಿಂದಾಗಿ ಕಾಂಗ್ರೆಸದನ್ನು ಅಂಗೀಕರಿಸುವದು ಸಿದ್ಧವೆಂದೂ ತಿಳಿಸಿದ್ದಾರೆ 'ನೀವು ಆ ಸೂತ್ರಗಳನ್ನಂಗೀಕರಿಸಲು ತಯಾರಿಲ್ಲ; ಆದರೆ ಲೀಗ್ ಸಮಿತಿಯ ಮುಂದಿಡಲು ಮಾತ್ರ ತಯಾರಿರುವಿರಿ. ಆದರೆ ನಿಮ್ಮ ಬೆಂಬಲವಿಲ್ಲದೆ ಆ ಸೂಚನೆಯನ್ನು ಹಾಗೆ ಮುಂದಿಡುವದರಿಂದ ಪ್ರಯೋಜನವಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ 'ನನ್ನ ಹಿಂದಿನ ತಂತಿಗಿಂತ ಹೆಚ್ಚಿಗೆ ಹೇಳಲಿಕ್ಕೇನೂ ಇಲ್ಲ' ಎಂದಿದಕ್ಕೆ ಮರುದಿನವೇ ಜಿನ್ನರ ಉತ್ತರ ಬಂತು. ರಾಜಾಜೀ ಎಲ್ಲವನ್ನೂ ಪ್ರಕಟಣೆಗೆ ಕೊಟ್ಟರು

NOTICE

In the court of the District Munsif of Mangalore

O. S. No. 88/1944

Between:—

Kanthakke and others—

Plaintiffs

and

Dasu Shetty and others—

—Defendants.

To

Giriya Shetty, Ramappa Shetty and Madappa Shetty, Defendants 2,4&11 respectively

Please take notice that the bove suit stands posted toa 21-7-1944 for your appearance at 11 A. M. You may appear in person or pleader and contest the suit; or else it will be decided exparte.

A. Shanker Alva,

Vakil for Plaintiffs

Mangalore, 10-7-1944.

(By order of Court).

ಸ್ಥಾಪನೆ] ' ಕಿ ರಿ ಯ ರ ಪ್ರ ಪಂ ಚ ' ದ [1930

ನೋಡಿದರೆ ಬಿಡದಿರುವ ಪುಸ್ತಕಗಳು.

ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳಿಂದ

ಅನ್ನದೇವರು ಮತ್ತು ಇತರ ಕಥೆಗಳು ಬೆಲೆ ೦ ೧೨ ೦

ವಿಚಾರಕ್ರಾಂತಿಯನ್ನುಂಟುಮಾಡುವ ೧೦ ಸಣ್ಣ ಕತೆಗಳ ಸಂಗ್ರಹ

ಶ್ರೀ ಕೆ. ವಿಟ್ಠಲ ಶೆಣೈ, ಬಿ. ಎ., ಎಲ್ ಟಿ.ಯವರಿಂದ

ನಗೆನೋಟಗಳು ಬೆಲೆ ೦-೧೨-೦

ದಣಿದ ಮನವನ್ನು ತಣಿಸಿ ವಿನೋದದೊಡನೆ ವಿವೇಕವನ್ನೂ ಉಂಟುಮಾಡುವ ೧೧ ಜೀವನ ಚಿತ್ರಗಳ ಸಂಗ್ರಹ.

ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ

ಮೂರು ಪ್ರಹಸನಗಳು ಬೆಲೆ ೦-೧೪-೦

ಓದಿದರೂ ಅಭಿನಯಿಸಿದರೂ ಸ್ವಾರಸ್ಯವಾಗಿ ತೋರುವ ಮೂರು ಪ್ರಹಸನಗಳ ಸಂಗ್ರಹ.

ಭಾರತೀಯ ಕತೆಗಳು ಬೆಲೆ ೦-೧೪-೦

ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ ಎ , ಐ. ಸಿ. ಯಸ್., ಬಾರ್ ಎಟ್ ಲಾ. ಇವರ Tales of Ind ಎಂಬ ಕಥಾವಳಿಯ ಕನ್ನಡ ಅನುವಾದ

ನಂದಾದೀಪ ಬೆಲೆ ೦-೧೦-೦

ಸ್ವಳೀಕ ಪಾ... 'ರಣದ ಮೇಲಿಂದ ಬರೆಯಲ್ಪಟ್ಟ ಬೋಧಪ್ರದವಾದ ... ...ಗಳ ಸಂಗ್ರಹ.

ಶ್ರೀ.. ಕೆ. ಕ. ಶೆಟ್ಟರಿಂದ

ಪ್ರೇಮವಿಜಯ ಬೆಲೆ ೦-೧೨-೦

ಹಿಂದು ಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರಪ್ರಚೋದಕ ನಾಟಕ

ದೇಶಭಕ್ತ ಬೆಲೆ ೦-೧೪-೦

ರಾಜಕೀಯ ಸಾಮಾಜಿಕ ನಾಟಕ. ಕನ್ನಡದಲ್ಲಿ ಹೊಸ ಪ್ರಯೋಗ

ಸನ್ಯಾಸಿಯ ಸೋಗಿನಲ್ಲಿ ಬೆಲೆ ೦-೮-೦

ವೇಶ್ಯಾಪುತ್ರಿಯಾದರೂ ನೀತಿವಂತ ಜೀವನ ನಡೆಸುವ ಮನಸುಳ್ಳವಳಾದರೆ ಸಮಾಜವು ಅದಕ್ಕೆ ಅಡ್ಡಿಯೊಡ್ಡಿ ಅವಳ ಜೀವನವನ್ನು ಹೇಗೆ ಕೆಡಿಸುತ್ತದೆಂಬುದನ್ನು ಚಿತ್ರಿಸುವ ನವೀನ ಸಾಮಾಜಿಕ ಕಾದಂಬರಿ.

ಪುರುಷ ವಧು ಬೆಲೆ ೦-೪-೦

ಮುದುಕನ ಮದುವೆಯ ಭ್ರಾಂತಿಯ ಚಿತ್ರವನ್ನು ಕಣ್ಣಮುಂದಿರಿಸುವ ಪ್ರಹಸನ.

ಹೆಂಡ್ತಿ ಗಂಡನಾದರೆ? ಬೆಲೆ ೦-೪-೦

ಸ್ತ್ರೀಸ್ವಾತಂತ್ರ್ಯವನ್ನು ಮಾರ್ಮಿಕವಾಗಿ ಪ್ರತಿವಾದಿಸುವ ಬೋಧಪರವೂ ವಿಚಾರಪರವೂ ಆದ ಪ್ರಹಸನ.

ವ್ಯಭಿಚಾರಿಣಿ ಯಾರು? ಬೆಲೆ ೦-೧೨-೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನು ಹೃದಯಭೇದಕವಾಗಿ ಚಿತ್ರಿಸುವ ವಿಚಾರಕ್ರಾಂತಿಕಾರಕ ನಾಟಕ.

ಮುಂದಿನ ದೇವರು ಬೆಲೆ ೦-೩-೦

ಹಿಂದಿನ, ಇಂದಿನ ಮತ್ತು ಮುಂದಿನ ಸಮಾಜದ ವ್ಯವಸ್ಥೆಯನ್ನು ವಿಚಾರಪೂರ್ಣವಾಗಿ ಸೂಕ್ಷ್ಮವಾಗಿ ವಿವರಿಸುವ ಪ್ರಬಂಧ.

ಕುಶಲವ ಬೆಲೆ ೦-೫-೦

ನವ ಪೌರಾಣಿಕ ನಾಟಕ

ಸಂಶಯ ಪಿಶಾಚಿ ಬೆಲೆ ೦-೮-೦

ಅಳಿಯಕಟ್ಟಿನ ಮುಖ್ಯವಾಗಿ ಬಂಟ ಸಮಾಜದ ಸದ್ಯದ ನಡವಳಿಕೆಯನ್ನೂ ಅದರ ದುಷ್ಪರಿಣಾಮವನ್ನೂ ಚಿತ್ತಭೇದಕವಾಗಿ ಚಿತ್ರಿಸಿ ಸಮಾಜದೇಳಿಗೆಯ ಮಾರ್ಗ ಸೂಚಿಸುವ ನಾಟಕ.

ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ

ಸ್ವತಂತ್ರ ಜೀವನೋಪಾಯ ಬೆಲೆ ೦-೩-೦

ಜೀವನದ ಹೋರಾಟವನ್ನು ಕಣ್ಣಮುಂದಿರಿಸಿ ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪ್ರಹಸನ

ವಿವಿಧ ಕತೆಗಾರರಿಂದ

ನಾಡಕತೆಗಳು ಬೆಲೆ ೦-೪-೦

ಸಮಾಜದ ಸ್ವಾಭಾವಿಕ ಚಿತ್ರಗಳನ್ನೊಳಗೊಂಡ ೬ ಸಣ್ಣ ಕತೆಗಳ ಸಂಗ್ರಹ

ಮಧುವನ ಬೆಲೆ ೩-೦-೦

ಕರ್ನಾಟಕದ ಪ್ರಸಿದ್ಧ ಕತೆಗಾರರ ಉಚ್ಚ ತರಗತಿಯ ಕಥಾಸಂಗ್ರಹ.

ವಿವಿಧ ಕವಿಗಳಿಂದ

ಕಾವ್ಯ ಸಾಮ್ರಾಜ್ಯ ಬೆಲೆ ೦-೧೨-೦

ಆಧುನಿಕ ಕವಿತೆಗಳ ಉತ್ತಮ ಸಂಗ್ರಹ.

ಶ್ರೀ. ಎಸ್. ವೆಂಕಟರಾಜರಿಂದ

ರಂಗಭೂಮಿ ಬೆಲೆ ೦-೬-೦

ಅಪಾತ್ರರು 'ರಂಗಭೂಮಿ'ಯ ಸೇವೆಗೆ ಹೊರಟರೆ ಆಗುವ ದುಷ್ಪರಿಣಾಮವನ್ನು ತೋರಿಸುವ ವಿನೋದಪರ ನಾಟಕ.

ಶ್ರೀ. ಎಸ್. ಎಲ್. ಸುಬ್ರಹ್ಮಣ್ಯರಿಂದ

ಸೇವಾಪಥ ಬೆಲೆ ೦-೮-೦

ಶೇಟ್ ಗೋವಿಂದದಾಸರ ಹಿಂದೀ ನಾಟಕದ ಅನುವಾದ. ಭಾರತದ ಆಧುನಿಕ ರಾಜಕೀಯ ವಾತಾವರಣದಿಂದ ಕಲ್ಪಿತವಾದುದು

ನಾರೀ ಹೃದಯ ಬೆಲೆ ೦-೧೨-೦

ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ ಶ್ರೀಮತಿ ಶಿವರಾಣಿ ದೇವಿಯರ ಹದಿನಾಲ್ಕು ಹಿಂದೀ ಕತೆಗಳ ಅನುವಾದ.

ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆಯವರಿಂದ

ಪ್ರಕಾಶ ಬೆಲೆ ೧-೧೨-೦

ಶೇಟ್ ಗೋವಿಂದ ದಾಸರ ರಾಜಕೀಯ ಸಾಮಾಜಿಕ ನಾಟಕದ ಭಾಷಾಂತರ. ಅತಿಕ್ರಾಂತಿಕಾರಕ.

ವಿಕ್ರಯಾಧಿಕಾರಿಗಳು:

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಶರ್ಸ್, ಉಡುಪಿ.

(ಕಟಲಾಗಿಗೆ ಒಂದಾಣೆಯ ಸ್ಟಾಂಪಿನೊಂದಿಗೆ ಬರೆಯಬೇಕು.)

ದಕ್ಷಿಣ ಕನ್ನಡ

ಮಂಗಳೂರು

ಪೆಟ್ರೋಲ್ ದುರುಪಯೋಗ— ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಸೇತು ಮಾಧವನ್ ಮೆನನ್‌ರವರು, ಕಟ್ಟಿಗೆ ಕಂಟ್ರೋಲ್ ಆರ್ಡರಿಗೆ ವಿರುದ್ಧವಾಗಿ ನಡೆದ ನಾಲ್ಕು ತಕ್ಸೀರುಗಳನ್ನಲ್ಲದೆ ಇತ್ತೀಚೆಗೆ ಪೆಟ್ರೋಲ್ ದುರುಪಯೋಗದ ಒಂದು ತಕ್ಸೀರನ್ನೂ ಪತ್ತೆ ಮಾಡಿರುವರೆಂದು ತಿಳಿದು ಬರುತ್ತದೆ. ಒಂದು ಮೋಟರ್ ಬಂಡಿಗೆ ಉಪಯೋಗಿಸಲ್ಪಟ್ಟದೆಯೆಂದು ಕಾಣಲಾದ ಪೆಟ್ರೋಲನ್ನು ಮತ್ತೊಂದಕ್ಕೆ ಉಪಯೋಗಿಸಿದ ಸಂಬಂಧವಾಗಿ, ಒಬ್ಬ ಮೆನೇಜರರಿಗೆ ರೂ 1000 ದಂಡ, ಪೆಟ್ರೋಲ್ ಬಂಕ್ ಲೈಸನ್ಸದಾರರಿಗೆ ರೂ 300 ದಂಡ, ಮತ್ತು ಪೆಟ್ರೋಲ್ ಬಂಕ್ ಕ್ಲೀನರಿಗೆ ರೂ. 100 ದಂಡ. ಹೀಗೆ ದಂಡ ವಿಧಿಸಿರುವುದಾಗಿ ತಿಳಿಸುತ್ತದೆ

ವರ್ಗಾವರ್ಗಿ— ಶ್ರೀ ಬಿ. ಗಣೇಶ ಅವರು ಫಸ್ಟ್ ಗ್ರೇಡ್ ಕುಂದಾಪುರಕ್ಕೂ, ಶ್ರೀ. ಪಿ. ಎಸ್ ತಿಮ್ಮಪ್ಪ ಶೆಟ್ಟಿ ಅವರು ಕುಂದಾಪುರದಿಂದ ಪುತ್ತೂರಿಗೂ ತಹಶೀಲ್ದಾರರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ

ಶ್ರೀ ಯು. ಲಿಂಗಪ್ಪಯ್ಯ ಅವರು ಕಾಸರಗೋಡಿನಿಂದ ಕುಂದಾಪುರಕ್ಕೂ, ಶ್ರೀ ಪಿ. ಸೀತಾರಾಮ ಶೆಟ್ಟಿ ಕುಂದಾಪುರದಿಂದ ಕಾಸರಗೋಡಿಗೂ ಸಬ್ ಮ್ಯಾಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿದ್ದಾರೆ

ಉಡುಪಿ ಹೆಡ್ ಕ್ವಾರ್ಟರ್ಸ್ ಡೆಪ್ಯುಟಿ ತಹಶೀಲ್ದಾರ್ ಮಿ ಎಲ್ ಫೆರ್ನಾಂಡಿಸರು ಮಂಗಳೂರಿನ ಗ್ರೈನ್ ಪರ್ಚೇಸಿಂಗ್ ಡೆಪ್ಯುಟಿ ತಹಶೀಲ್ದಾರರಾಗಿಯೂ ಮಂಗಳೂರಿನ ಗ್ರೈನ್ ಪರ್ಚೇಸಿಂಗ್ ಡೆ॥ ತಹಶೀಲ್ದಾರ್ ಎ ಅಬ್ದುಲ್ ರಹಿಮಾನ್ ಸಾಹೇಬ್ ಅವರು ಉಡುಪಿಯ ಗ್ರೈನ್ ಪರ್ಚೇಸಿಂಗ್ ಡೆ॥ ತಹಶೀಲ್ದಾರರಾಗಿಯೂ, ಉಡುಪಿಯ ಗ್ರೈನ್ ಪರ್ಚೇಸಿಂಗ್ ಡೆ॥ ತಹಶೀಲ್ದಾರ್ ಮಿ. ಸಯ್ಯದ್ ಮುಹಮ್ಮದ್ ಅವರು ಉಡುಪಿ ಹೆಡ್ ಕ್ವಾರ್ಟರ್ಸ್ ಡೆ॥ ತಹಶೀಲ್ದಾರರಾಗಿಯೂ ನೇಮಕ ಹೊಂದಿರುತ್ತಾರೆ.

ಕಸ್ತೂರ್ ಬಾ ಸ್ಮಾರಕ ನಿಧಿ— ಜಿಲ್ಲಾ ಕಸ್ತೂರ್ ಬಾ ಸ್ಮಾರಕ ನಿಧಿ ಸಮಿತಿಯನ್ನು ರಚಿಸುವ ಬಗ್ಗೆ, ಕಳೆದ ತಾ. 2 7-44ನೇ ರವಿವಾರ, ನವಭಾರತ ಆಫೀಸಿನಲ್ಲಿ ಶ್ರೀ ಬಿ ವೈಕುಂಠ ಬಾಳಿಗರವರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿ ಈ ಕೆಳಗಿನಂತೆ ಸಮಿತಿಯು ರಚನೆಯಾಯಿತು ಶ್ರೀ. ಬಿ ವೈಕುಂಠ ಬಾಳಿಗ, ಬಿ ಎ. ಬಿ. ಎಲ್, ವಕೀಲ್ (ಅಧ್ಯಕ್ಷರು) ಶ್ರೀ ಎ ಬಿ. ಶೆಟ್ಟಿ ಮತ್ತು ಶ್ರೀ ಕೆ. ಬಿ. ಜಿನರಾಜ ಹೆಗ್ಡೆ (ಎಮ್ ಎಲ್. ಎ. ಸೆಂಟ್ರಲ್) ಉಪಾಧ್ಯಕ್ಷರು, ಶ್ರೀ ಎಮ್ ಡಿ. ಅಧಿಕಾರಿ, ಪ್ರಧಾನ ಕಾರ್ಯದರ್ಶಿ, ಶ್ರೀ ಬಿ. ವಿ ಬಾಳಿಗ, ಜತೆ ಕಾರ್ಯದರ್ಶಿ, ಮತ್ತೆ 24 ಮಂದಿ ಸದಸ್ಯರು.

ತಾಲೂಕು ಸಮಿತಿಗಳು— ಜಿಲ್ಲಾ ಕಸ್ತೂರ್ ಬಾ ನಿಧಿ ಸಮಿತಿಗೆ ಸಹಾಯಕವಾಗಿ ತಾಲೂಕು ಸಮಿತಿಗಳು ರಚಿಸಲ್ಪಡುವುವು. ಶ್ರೀ ಎ. ದುರ್ಗಾದಾಸ ಮೈಯರು, ಮಂಗಳೂರು ತಾಲೂಕು ಸಮಿತಿಯನ್ನು, ಶ್ರೀ ಪಿ. ಲಕ್ಷ್ಮೀನಾರಾಯಣ ತಾಲೂಕು ಸಮಿತಿಯನ್ನು ಉಡುಪಿ ತಾಲೂಕು, ಶ್ರೀ ಎನ್. ಎಸ್. ಅಧಿಕಾರಿ ಮತ್ತು ಶ್ರೀ ಡಿ ವೆಂಕಟೇಶ ಭಟ್—ಕಾರ್ಕಳ ತಾಲೂಕು, ಶ್ರೀ ವೈ. ಸಂಜೀವ ವಿಶ್ವಕರ್ಮ—ಪುತ್ತೂರು ತಾಲೂಕು, ಶ್ರೀ ಎಮ್. ಉಮೇಶ ರಾವ್—ಕಾಸರಗೋಡು ತಾಲೂಕು, ಹೀಗೆ ಸಮಿತಿಗಳನ್ನು ಸ್ಥಾಪಿಸಬೇಕೆಂದು ನಿರ್ಣಯವಾಗಿದೆ

ಆಹಾರ ಪರಿಸ್ಥಿತಿ— ಮಂಗಳೂರು ತಾಲೂಕಿನ ಅಕ್ಕಿ ಪರಿಸ್ಥಿತಿಯು ಸಮಾಧಾನಕರವಾಗಿಲ್ಲವಾಗಿ ತಿಳಿಯಲಾಗಿದೆ ಈಗಿನ ಸಂಗ್ರಹವು ಇನ್ನೆರಡು ತಿಂಗಳಿಗೆ ಮಾತ್ರ ಸಾಕಾಗುವುದು, ಅಕ್ಕಿ ಸಂಗ್ರಹ ಕಾರ್ಯವು ಒಂದು ರೀತಿಯಲ್ಲಿ ಮುಗಿದಂತೆಯೇ ಆಗಿದೆ, ಶ್ರೀಮಂತ ವರ್ಗದಾರರಿಂದ ಇನ್ನೂ ಹೆಚ್ಚಿನ ಅಕ್ಕಿ ಪಡೆಯುವುದವಶ್ಯವೆಂದು ಜಿಲ್ಲಾ ಆಹಾರ ಸಮಿತಿಯ ತೀರ್ಮಾನ

ರಾಗಿ, ಗೋದಿ— ಹೆಚ್ಚಿನ ರಾಗಿ ಮತ್ತು ಗೋದಿಯನ್ನು ಆಮದು ಮಾಡಲು, ಜಿಲ್ಲಾಧಿಪತಿಗಳು ಸಿವಿಲ್ ಸಪ್ಲಾಯಿಸ್ ಕಮಿಶನರರಿಗೆ ಬರೆಕೊಳ್ಳುವರೆಂದು ತಿಳಿಯಲಾಗಿದೆ. (20,000 ಗೋಣಿ ರಾಗಿಗಾಗಿ ಬರೆಕೊಳ್ಳಲಾಗಿದೆಯೆಂದೂ ತಿಳಿಯುತ್ತೇವೆ.)

ಅವಲಕ್ಕಿ ರಫ್ತಿಗೆ ತಡೆ— ಅವಲಕ್ಕಿ ಜಿಲ್ಲೆಯ ಹೊರಗೆ ಹೋಗದಂತೆ ತಡೆ ಹಾಕಲಾಗಿದೆ ಜಿಲ್ಲೆಯೊಳಗಾದರೂ ರೈಲು ಬಂಡಿ ಮೂಲಕ ಸಾಗಿಸದಂತೆ ನಿರ್ಬಂಧವಿದೆ

ಒಂಭತ್ತು ಸಾವಿರ ಹಾರೆಗಳು— ಮಂಗಳೂರಿನ ಸಾಹುಕಾರರು ಕಂಟ್ರೋಲ್ ದರಕ್ಕೆ, ಒಂಭತ್ತು ಸಾವಿರ ಹಾರೆಗಳನ್ನು ಮಾರಾಟ ಕ್ಕಿಟ್ಟಿರುವರು

ಬಸ್ ಸ್ಟೇಂಡು— ಕೊಡಿಯಾಲ ಬೈಲ (ಗಣಪತಿ ಹೈಸ್ಕೂಲಿನ ಹತ್ತಿರ)ದಲ್ಲಿದ್ದ ಬಸ್ ಸ್ಟೇಂಡು ಹಂಪನ ಕಟ್ಟೆಗೆ ಅಧಿಕಾರಿಗಳ ಅಪ್ಪಣೆಯಂತೆ, ಒಯ್ಯಲ್ಪಟ್ಟಿತು. ನಗರದ ಎಲ್ಲ ಬಸ್ಸುಗಳೂ ಅಲ್ಲಿಂದಲೇ ಹೊರಡುವುವು.

ಚೂರಿಯಿಂದ ತಿವಿತ! ಒಬ್ಬನ ಮರಣ! ಮತ್ತೆ ಮೂರು ಮಂದಿಗೆ ಜಖಂ! ಶ್ರೀ ಎ ಕೃಷ್ಣಾಜಿರಾವ್ ಅವರ ದಸ್ತಗಿರಿ— ಮಂಗಳೂರು ಲೇಡಿ ಗೋಶನ್ ಆಸ್ಪತ್ರೆಯ ಒಂದುಗಡೆಯ, ರಸ್ತೆಯಲ್ಲಿ, ತಾ 5ನೇ ನಡು ರಾತ್ರಿ ಅನುಚಿತ ಘಟನೆ ನಡೆಯಿತು ಮೈಸೂರಿನಿಂದ ಯಾರೋ ಐದು ಮಂದಿ ಬಂದು, ಮಾಜಿ ಕ್ರಿಸ್ಟ ಸಿನೆಮದ ವ್ಯಾಪಾರಿಕರಾಗಿದ್ದ ಶ್ರೀ ಎ. ಕೃಷ್ಣಾಜಿರಾವ್ ಅವರಿಗೆ ಸಂಬಂಧಪಟ್ಟ, ಒಂದು ಕೊಠಡಿ ಯನ್ನು ಪಡಕೊಂಡಿದ್ದರು ತಾ- 5ನೇ ನಡು ರಾತ್ರಿ ಗಲಭೆಯೆದ್ದಿತು. ಆ ಐವರಲ್ಲಿ ಲಿಂಗರಾಜ ಅರಸ ಎಂಬವನು ಚೂರಿಯಿಂದ ತಿವಿಯಲ್ಪಟ್ಟನೆಂದೂ, ಮತ್ತ ಮೂವರಿಗೆ ಕಬ್ಬಿಣದ ಸಲಾಕೆಯಿಂದ ಪೆಟ್ಟುಬಿದ್ದು, ಅವರಲ್ಲಿ ಒಬ್ಬನು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದು ಮತ್ತಿಬ್ಬರಿಗೆ ಸಣ್ಣ ಪೆಟ್ಟು ಇರುವಿಗೆ ಚಿಕಿತ್ಸೆಯಾಗುತ್ತಿದೆಯೆಂದೂ, ತಿವಿಯಲ್ಪಟ್ಟ ಲಿಂಗರಾಜನನ್ನು ಆ ಕೂಡಲೇ ಆಸ್ಪತ್ರೆಗೆ ಸಾಗಿಸಿದಾಗ— ಚಿಕಿತ್ಸೆಗಿಟ್ಟಿಸುವ ಮೊದಲೇ ಪ್ರಾಣಬಿಟ್ಟನೆಂದೂ ತಿಳಿಯಲಾಗಿದೆ ಐದನೆಯವನು, ಗಲಭೆಯ ಸ್ಥಳದಿಂದ ಓಡಿಹೋಗಿ ಅಪಾಯದಿಂದ ತಪ್ಪಿಸಿಕೊಂಡನೆನ್ನಲಾಗಿದೆ. ವರ್ತಮಾನ (ತಾ 6) ಬೆಳಿಗ್ಗೆ 10 ಘಂಟೆಗೆ ಪೋಲಿಸರು, ಆ ಅನಾಹುತದ ಸಂಬಂಧವಾಗಿ ಶ್ರೀ ಎ. ಕೃಷ್ಣಾಜಿರಾಯರನ್ನು ದಸ್ತಗಿರಿ ಮಾಡಲು ಹೋದರು. ಶ್ರೀ ಕೃಷ್ಣಾಜಿರಾಯರು ಅಲ್ಲೇ ಮಹಡಿಯ ಮೇಲೆ ಕುಳಿತಿದ್ದು ಒಳಗಿನಿಂದ ಬೀಗ ಹಾಕಲಾಗಿತ್ತೆಂದೂ, ಬಾಗಿಲು ತೆರೆಯಲು ಕೇಳಿಕೊಂಡಾಗ, ಆ ಕೋಣೆಯ ಕಿಟಿಕಿಯಿಂದ ಕೆಳಗೆ ಹಾರಿದರೆಂದೂ, ಅಲ್ಲಿ ಕಾಲುಗಳಿಗೂ ಸೊಂಟಕ್ಕೂ ಪೆಟ್ಟಾಗಿ ಏಳಲಾಗದಿರಲು ಪೋಲಿಸರು ಅವರನ್ನು ದಸ್ತಗಿರಿ ಮಾಡಿ ಒಯ್ದರೆಂದೂ ಕೇಳಬರುತ್ತದೆ. ಶ್ರೀ ಕೃಷ್ಣಾಜಿರಾಯರಿಗೆ ಪೋಲಿಸ್ ಕಾವಲಿನಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆಯೂ ಗುತ್ತಿದೆ ಮೃತಪಟ್ಟ ಲಿಂಗರಾಜನಿಗೆ ಎದೆಯ ಮೇಲೆ ಚೂರಿಯ ತಿವಿತವಾಗಿದ್ದು, ಶ್ವಾಸಕೋಶಕ್ಕೂ ಘಾಯ ತಗಲಿದೆಯೆನ್ನಲಾಗಿದೆ ಶವ ಪರೀಕ್ಷೆ ನಡೆದು, "ತಿವಿತದಿಂದುಂಟಾದ ಅತಿಯಾದ ರಕ್ತಸ್ರಾವದಿಂದ ಮರಣಪಟ್ಟ"ನೆಂದು ತೀರ್ಮಾನವಾಗಿದೆ. ಚೂರಿಯಿಂದ ತಿವಿಯಲ್ಪಟ್ಟವನೂ ಪತ್ತೆ ಸಾಲ್ಲ ದೂ, ಕೋಣೆಯ ಹೊರಗೆ ಜಗಲಿಯ ಮೇಲಿದ್ದ ರೆಂದೂ, ತಿವಿಯಲ್ಪಟ್ಟವನು ರಸ್ತೆಗೆ ಬಂದು ಬಿದ್ದನೆಂದೂ, ಉಳಿದ ನಾಲ್ವರು ಅವನನ್ನು ಆಸ್ಪತ್ರೆಗೆ ಸಾಗಿಸಿದರೆಂದೂ ಸುದ್ದಿ. ಮಂಗಳೂರು ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಸೇತು ಮಾಧವ ಮೆನನ್‌ರವರು ಈ ಮೊಕದ್ದಮೆಯ ತನಿಖೆ ಕೈಕೊಂಡಿರುವರು. ಚಾರ್ಜಶೀಟು ತಯಾರಾಗುತ್ತಿದೆ ಈ ಅನಾಹುತ ವಾರ್ತೆಯು ನಗರದಲ್ಲಿ ಅತ್ಯಧಿಕ ಕೋಲಾಹಲ ಗಳನ್ನುಂಟುಮಾಡಿದೆ. ಶ್ರೀ ಕೃಷ್ಣಾಜಿರಾಯರು ಸಿನೆಮಾ ಪ್ರದರ್ಶಕರಾಗಿ ಹೆಚ್ಚಿನವರಿಗೆ ಪರಿಚಿತರಾಗಿದ್ದವರು.

ಉಡುಪಿ.

ಪುನರ್ವಸು ನಕ್ಷತ್ರದಲ್ಲಿ— ಮಳೆಯು ಸತತ ಧಾರಾಕಾರವಾಗಿ ಸುರಿಯುತ್ತಲಿದೆ. ಚಿಕ್ಕ ಪುಟ್ಟ ತೋಡುಗಳಲ್ಲಿ ನೆರೆಯಿದೆ

ಬೆಳ್ತಿಗೆ ಅಕ್ಕಿ ಅಭಾವದ ಕಾಲದಲ್ಲಿ— ಯಾರೋ ಪಾಪ, ಪುಣ್ಯಾತ್ಮರು ತಮ್ಮ ಕೊಡೆ ಅಂತರಂಗದಲ್ಲಿದ್ದ ಚಲೋ ಬೆಳ್ತಿಗೆ ಅಕ್ಕಿಯನ್ನು ತೋಡಿಗೆ ಬಿಸಾಡಿ ತಮ್ಮ ಸ್ಥಾನ ಮಾನವನ್ನು ಕಾಪಾಡಿಕೊಂಡಿರುವರು. ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದ ಅಕ್ಕಿಯ ಪ್ರಮಾಣವು ಹತ್ತು ಪಲ್ಲಕ್ಕಿಂತಲೂ ಕಡಿಮೆಯಾಗಲಾರದೆಂದು ಪೇಟೆಯಲ್ಲಿ ಸುದ್ದಿ.

ಉಡುಪಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಜುಲೈ ವರುಷದ ಆಡಳಿತ ಅಧಿಕಾರಿಗಳ ವಿವರ ಹೀಗಿದೆ ಶ್ರೀಗಳಾದ ಬಿ ರಘುರಾಮ ಶೆಟ್ಟಿ ಮತ್ತು ಕೆ. ಕರುಣಾಕರ ಹೆಗ್ಡೆ (ಅಕೌಂಟ್ಸ್ ಮತ್ತು ವಾಚನಾಲಯ) ಎಮ್. ರವೀಂದ್ರ ಹೆಗ್ಡೆ ಮತ್ತು ಸದಾಶಿವ ಶೆಟ್ಟಿ (ಭಜನೆ ಮತ್ತು ಹಸ್ತ ಲಿಖಿತ ಪತ್ರಿಕೆ) ಎನ್. ಶಿವರಾಮ ಶೆಟ್ಟಿ ಮತ್ತು ಬಿ ಕೃಷ್ಣಯ್ಯ ಹೆಗ್ಡೆ, (ಸ್ಪೋರ್ಟ್ಸ್) ಐ. ವಿಶ್ವನಾಥ ಶೆಟ್ಟಿ, ಬಿ ರಾಮದಾಸ ಹೆಗ್ಡೆ, ಎ. ಘನಶ್ಯಾಮದಾಸ ಹೆಗ್ಡೆ (ಕೃಷಿ ಕೋಟೆ ಮತ್ತು ಅಂಗಸಾಧನೆ) ವಿ. ಬಾಲಕೃಷ್ಣ ಹೆಗ್ಡೆ (ಹಾಜರಿ ಪುಸ್ತಕ)

ಕಟಪಾಡಿ— ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಮಿತಿಯ ವಾರ್ಷಿಕ ಮಹಾ ಸಭೆಯು ತಾ. 16-7-44ನೇ ಮಧ್ಯಾಹ್ನ ಗಂ. 2ಕ್ಕೆ ಸಮಿತಿಯ ಭವನದಲ್ಲಿ ಜರಗಲಿಕ್ಕಿದೆ.

ಉಚ್ಚಿಲ— ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪ್ರಾಯಮ್ಯ ಭಜಕರಲ್ಲೊಬ್ಬರಾದ ಶ್ರೀ ಶಿವರಾಮ ನಾವಡರು ಇದೇ ತಾ. 6ರಲ್ಲಿ ತಮ್ಮ 92ನೆ ವಯಸ್ಸಿನಲ್ಲಿ ದೈವಾಧೀನರಾದರೆಂಬುದು ವಿಷಾದವನಿತ್ತದೆ ಪ್ರಿಯರು ಬಡವರ ಬಂಧುವಾಗಿದ್ದು ಪರೋಪಕಾರ ಸ್ವಭಾವದವರಿದ್ದರು

ಕುಂದಾಪುರ— ತಾಲೂಕಿನ ಚಿಂತಾಜನಕ ಆಹಾರ ಪರಿಸ್ಥಿತಿಯ ಕುರಿತು ತಾ 7 7 1944 ರಲ್ಲು ಮಾನ್ಯ ಜಿಲ್ಲಾ ಕಲೆಕ್ಟರರನ್ನು ಶ್ರೀಗಳಾದ ಬಿ. ಸಬ್ಬಣ್ಣ ಶೆಟ್ಟಿ ಬಿ. ಶಿವರಾಮ ಶೆಟ್ಟಿ, ಶ್ರೀ ದತ್ತಾತ್ರೇಯ ರಾವ್, ಶ್ರೀ ಕೆ ಕೃಷ್ಣ ಭಟ್ಟರು, ಶ್ರೀ ನಾರಾಯಣ ರಾಯರು ಮತ್ತು ಶ್ರೀ ಜನಾರ್ದನ ರಾಯರು ನೋಡಿ ತಮ್ಮ ಡಿವಿಜನ ಸಬ್ ಕಲೆಕ್ಟರರು ತಾಲೂಕಿನ ತಹಶೀಲ್ದಾರರು, ಭೂಮಾಲಿಕ ಮತ್ತು ಇತರ ಮಹನೀಯರ ಸಹಾಯ ಸಹಕಾರದಿಂದ ಸುಮಾರು 63,673 ಮುಡಿ ಅಕ್ಕಿಯನ್ನು ತಾಲೂಕಿನ 11 ಸೊಸ್ಯಾಯಿಟಿಗಳಲ್ಲಿ ಸಂಗ್ರಹ ಮಾಡಿಟ್ಟಿದ್ದರು. ಇದರಲ್ಲಿ ಸುಮಾರು ಇಪ್ಪತ್ತೊಂದು ಸಾವಿರ ಮುಡಿಗಿ ಅಕ್ಕಿ ಮಂಗಳೂರಿಗೆ ಸಾಗಿಸಲ್ಪಟ್ಟಿದೆ. ಈಗ ತಾಲೂಕಿನ ಸೊಸೈಟಿಗಳಲ್ಲಿ ಬೇಸಾಯಗಾರರಲ್ಲದವರಿಗೆ ಅಂದರೆ ರೇಶನ್ ಕಾರ್ಡ ಹೊಂದಿದ ಇತರರಿಗೆ ಕೊಡಲು ಒಂದು ತಿಂಗಳಿಗೆ ಬೇಕಾಗುವಷ್ಟು ಅಕ್ಕಿ ಮಾತ್ರ ಇದೆ ತಾಲೂಕಿನ ಜನ ಸಂಖ್ಯೆ ಸಾಧಾರಣ ಒಂದು ಲಕ್ಷದ ಐವತ್ತೊಂಭತ್ತು ಸಾವಿರದ ಇನ್ನೂರ ನಲ್ವತ್ತು (1, 59, 240) ಇದೆ. ಇಲ್ಲಿಯ ಬೆಳೆಯ ಉತ್ಪತ್ತಿಯು ಸಾಧಾರಣ ಐದು ಲಕ್ಷದ ಐವತ್ತು ನಾಲ್ಕು ಸಾವಿರದ ಐನೂರ ಅರುವತ್ತು (5,54,560) ತಾಲೂಕಿನ ಜನರ ಜೀವನಕ್ಕೆ ಸಾಧಾರಣ ಐದು ಲಕ್ಷದ ತೊಂಭತ್ತು ಎರಡು ಸಾವಿರದ ನಾಲ್ವತ್ತೊಂದು (5,92,041) ಮುಡಿಗೆ ಅಕ್ಕಿ ಬೇಕಾಗುತ್ತದೆ. ಹೀಗಾಗಿ ಜನತೆಯ ಜೀವನಕ್ಕೆ ಮೂವತ್ತೇಳು ಸಾವಿರದ ನಾನ್ನೂರ ಎಂಭತ್ತೊಂದು (37, 481) ಮುಡಿಗಿ ಅಕ್ಕಿ ಕಡಿಮೆ ಬೀಳುತ್ತದೆ.

ನಮ್ಮ ತಾಲೂಕು ಆಹಾರದ ಭಂಡಾರವೆಂಬ ದೇಶೀಯ ಸಾಜ- ಅದರೆ ತಾಲೂಕಿನ ಬೆಳೆಯ ಉತ್ಪತ್ತಿಯ ದೃಷ್ಟಿಯಿಂದಲ್ಲ—ತಾಲೂಕಿನ ಕರಾವಳಿಯ ಭೂಮಿಯು ಉಪ್ಪುನೀರಿನಲ್ಲಿ ಚಿಕ್ಕ ಪಟ್ಟ ನದಿಗಳಿಂದ ಆವರಿಸಲ್ಪಟ್ಟು ಮತ್ತು ಘಟ್ಟ ಪ್ರಾಂತ್ಯಕ್ಕೆ ಭೂಮಿಯು ಕಾಡು ಪ್ರಾಣಿಗಳ ಹಾವಳಿಗೆ ತುತ್ತಾಗಿ ಬೆಳೆಯು ಬೇಕಾದಷ್ಟು ಬೆಳೆಯದೇ ಸರಕಾರದ ಲೆಕ್ಕದ ಪ್ರಕಾರವೇ ಈ ತಾಲೂಕಿನ ಜನತೆ ಜೀವನಕ್ಕೆ ಅಕ್ಕಿ ಕಡಿಮೆ ಬೀಳುತ್ತದೆ.

ಯುದ್ಧಕ್ಕೆ ಮೊದಲು ಮೈಸೂರು ಪ್ರಾಂತ್ಯದಿಂದ ಕಲೆ ಹೊರೆ, ಗಾಡಿ, ಲೋರಿ, ವಗೈರೆಗಳಿಂದ ಸಾಧಾರಣ ನಾಲ್ಕಾರು (4, 6) ಲಕ್ಷ ಮುಡಿ ಭತ್ತ, ಸಾಧಾರಣ ಎರಡು ಲಕ್ಷ ಮುಡಿ ಬೆಳ್ತಿಗೆ ಅಕ್ಕಿ, ಸಾಧಾರಣ ಹತ್ತು ಸಾವಿರ ಮುಡಿಗೆ ರಾಗಿ ಕುಂದಾಪುರ ತಾಲೂಕಿಗೆ ಬಂದು ಇಲ್ಲಿರುವ ಮಿಲ್ಲುಗಳಲ್ಲಿ ಅಕ್ಕಿಯಾಗಿ ಮಾರ್ಪಟ್ಟು ತಾಲೂಕಿನ ಹೊರ ಪ್ರಾಂತ್ಯಗಳಿಗೆ ಒಯ್ಯಲ್ಪಡುತ್ತಿತ್ತು. ಆದರೆ ಇಂತಹ ಏರುಪೇರಿಯು ಮೈಸೂರ ಸರಕಾರದ ಕಂಟ್ರೋಲ ದೆಸೆಯಿಂದ ನಿಲ್ಲಿಸಲ್ಪಟ್ಟ ಜಿಲ್ಲೆಯ ಆಹಾರ ಭಂಡಾರವೆಂದೆನಿಸಿಕೊಂಡ ನಮ್ಮ ತಾಲೂಕಿನ ಉಗ್ರಾಣವು ಇಂದು ಬರಿದಾಗಿದೆ. ಇನ್ನು ನಾಲ್ಕು ತಿಂಗಳಿಗೆ ಬೇಕಾಗುವ ಅಕ್ಕಿ ಮತ್ತು ರಾಗಿಯನ್ನು ಕೊಡಿಸಬೇಕಾಗಿಯೂ, ಮಾನ್ಯ ಜಿಲ್ಲಾ ಕಲೆಕ್ಟರರು ನಮ್ಮ ತಾಲೂಕನ್ನು ಸ್ವತಹ ಬಂದು ಸಂದರ್ಶಿಸಿದಲ್ಲಿ ಪರಿಸ್ಥಿತಿಯು ತಮಗೆ ಸಮಾಧಾನವಾಗುವದೆಂದೂ ಮತ್ತು ತಾಲೂಕಿನಲ್ಲಿ ಮುಖ್ಯವಾಗಿ ರೇಶನಿಂಗ್ ಜ್ಯಾರಿಗೆ ತಂದು ನಮ್ಮ ತಾಲೂಕಿನಲ್ಲಿ ಹೆಚ್ಚಾದುದನ್ನು ತಾಲೂಕಿನ ಹೊರಗೆ ವ್ಯಯಿಸಬೇಕೆಂದು ಮಾಡಿಕೊಂಡ ವರದಿಗೆ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಸುಧಾರಿಸುವ ಜವಾಬ್ದಾರಿಯು ತಮ್ಮ ಭಾಗಿರುವದರಿಂದ ನಮ್ಮ ತಾಲೂಕಿಗೆ ಆಹಾರದ ಕೊರತೆ ಬಾರದ ಹಾಗೆ ಸಂಧಾನಿಸುವನೆಂದೂ ರಾಗಿ ಜಿಲ್ಲೆಯ ಹೊರಗಿನಿಂದ ಬಂದೊಡನೆ ನಮಗೆ ಒದಗಿಸುವೆನೆಂಬದಾಗಿಯೂ ಭರವಸೆಕೊಟ್ಟರು

ಬೇಕಾಗಿದ್ದಾರೆ.

ಡಾಯರ್ ಟ್ರೈನ್ಡ್ ಒಬ್ಬರು, ಸೆಕೆಂಡರಿ ಟ್ರೈನ್ಡ್ ಒಬ್ಬರು, ಹೀಗೆ ಇಬ್ಬರು ಉಪಾಧ್ಯಾಯರು ಯಾ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ ಅಪೇಕ್ಷೆಯುಳ್ಳವರು ಮುಖತಃ ಭೆಟ್ಟಿಯಾಗುವುದು ಯಾ ಪತ್ರ ಬರೆಯುವುದು

R K. Patker,
ಮೆನೇಜರ್,
ಶಾರದಾ ಹಾಯರ್ ಎಲಿಮೆಂಟ್ರಿ ಶಾಲಾ,
ಬೇಕಡ್ಡಿ.
ಪೋಸ್ಟ್, ಕೊಕ್ಕರ್ಣೆ.

CHAMPAE'S
Snow & Castrex
(Sole Distributors for (India)
Sukhananda Stores
Santhekatte, UDIPI, S. K.

WANTED

A competant clerk who knows to keep proper accounts of controlled articles. Qualification- S. S. L. C. Decent pay will be offered, Hindu preferred. Security essential Apply to.

The Secretary,
Shirva Cooperative Stores, Ltd No L. 458. Shirva (S.K)

ನೋಟೀಸು

ದ ಕ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 134/1944

ಆ ಸಂಗಮ ಕೋಡಾ —ವಾದಿಯು—

ಮತ್ತು.

ಬೈಲ್ ಇದ್ದಿನಬ್ಬ ಬ್ಯಾರಿ ಕೋಡಾ

—ಪ್ರತಿವಾದಿಯು

5ನೇ ಪ್ರತಿವಾದಿ ಮೋನು ಬ್ಯಾರಿ— ಇದಿನಬ್ಬ ಬ್ಯಾರಿ ಯಾನೆ ಬೆಲ್ಲಿಬಾವಬ್ಯಾರಿ ಮಗ. ಮಂಗಳೂರು ಬಂದರ ಗೋಳಿಕಟ್ಟೆ ಬಜಾರಲ್ಲಿ ಅಬ್ಬಿರಿ ವಾಸಸ್ಥ

ಮೇಲೆ ಹೆಸರು ಕಾಣ್ಸಿದ ವಾದಿಯು ತಂದು ಹಿಸೆ ಪಿಂಗಡಿಸಿ ಅದರ ಹುಟ್ಟುವಳಿ, ಸಮೇತ ಸ್ವಾಧೀನ ಪಡಿಯುವ ಬಗ್ಗೆ ದಾವ್ಯ ಮಾಡಿದ ಮೇಲಿನ ದಾವ್ಯವು ತಾ- 25—7—1944ಕ್ಕೆ ಅಖೈರು ತನಿಖೆ ಬಗ್ಗೆ ಇಟ್ಟಿರುತ್ತದೆ. ಆ ಕುರಿತು 5ನೇ ಪ್ರತಿವಾದಿಗೆ ಏನಾದ್ದು ಆಕ್ಷೇಪವಿದ್ದರೆ ಸದ್ರಿ ತಾರೀಕಿನ ಬೆಳಿಗ್ಗೆ 11ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜಾಹೀರುಪಡಿಸಿಕೊಳ್ಳಬಹುದು ತಪ್ಪಿದರೆ ಅವರ ಗೈರ್ ಹಾಜರಿನಲ್ಲಿ ಸದ್ರಿ ದಾವ್ಯವು ತೀರ್ಮಾನಿಸಲಾಗುವುದು.

ಕೋರ್ಟಿನ ಹುಕ್ಮಿನಂತೆ

B. R. Vyasraya Achar
ವಾದಿಪರ ವಕೀಲ.
ಮಂಗಳೂರು ತಾ 8 7 1944.

ಸ್ಥಿತಿಗೆ ತಕ್ಕ ಮಾತು

ಹಿಟ್ಲರ್—ಚರ್ಚಿಲ್—ಗೋಬೆಲ್ಸ್.

ಹಿಟ್ಲರ್ ಭರವಸೆ

ಜರ್ಮನಿಯ ಯುದ್ಧೋಪಕರಣ ಮಂತ್ರಿಯು ಕರೆದಿದ್ದ ಅಖಿಲ ಜರ್ಮನಿಯ 'ಯುದ್ಧೋಪಕರಣ ಉತ್ಪಾದನಾಧಿಕಾರಿಗಳ ಪರಿಷತ್ತಿನಲ್ಲಿ ಫ್ಯುರರ್ ಭರವಸೆಯ ಭಾಷಣವಿತ್ತಿದ್ದಾನೆ "ಇಂತಹ ಅಗಾಧ ಯುದ್ಧದ ಭವಿಷ್ಯವನ್ನು ತಾತ್ಕಾಲಿಕ ಜಯಾಪಜಯಗಳಿಂದ ನಿರ್ಣಯಿಸಲಿಕ್ಕಾಗದು. ಈ ಕಾಲದಲ್ಲಿ ಪ್ರತಿಯೊಬ್ಬ ಜರ್ಮನನೂ ತನ್ನ ಆದ್ಯ ಕರ್ತವ್ಯವಾಗಿ ಜಯ ದೊರೆಯುವ ವರೆಗೆ ಅವಿಶ್ರಾಂತವಾಗಿ ದುಡಿಯಬೇಕು. ಅಗಾಧ ಮನೋದಾರ್ಢ್ಯ ಮತ್ತು ಅಸಾಧಾರಣ ಸಂಕಲ್ಪ ಶಕ್ತಿಗಳ ಆವಶ್ಯಕತೆಯಿರುವ ಕಾಲವಿದು.ಆದರೆ ಎಂತಹ ಸಂಕಷ್ಟದಿದಿರಲ್ಲೂ ದೊಗ್ಗಲೂರದಂತಹ ತತ್ವದಾದರ್ಶವನ್ನೇ ನಾವು ಕೈಕೊಂಡಿದ್ದೇವೆ. ನಾಲ್ಕು ವರುಷಗಳಲ್ಲಿ ಎಡೆಬಿಡದೆ ವಿಜಯ ಪಡೆಯುತ್ತಾ ಬಂದ ಜರ್ಮನ್ ನಾಯಕತ್ವವು ಈಗ ವಿಫಲಗೊಂಡೀತೆಂಬ ಸಂದೇಹ ಯಾರಿಗಾದರೂ ಇದೆಯೆ? 'ಇಲ್ಲ' ಎಂಬುದೇ ಸುಸ್ಪಷ್ಟ ಉತ್ತರ. ಇದು ಕೇವಲ ಸೋಲ್ಜರನ ಯುದ್ಧವಲ್ಲ; ವಿಶೇಷತಃ ಮರ್ಮತಜ್ಞರ ಯುದ್ಧ. ವೈರಿಗಳು ಹಲವು ಕ್ಷೇತ್ರಗಳಲ್ಲಿ ಈ ಮಾರ್ಮಿಕ ಜಾಣ್ಮೆಯಲ್ಲಿ ನಮ್ಮನ್ನ ಸರಿಗಟ್ಟಲು-ಕೆಲವೆಡೆ ನಮ್ಮನ್ನು ತಾತ್ಕಾಲಿಕವಾಗಿ ಮೀರಿಯೂ-ಶಕ್ತರಾಗಿದ್ದಾರೆ ಆದರೆ ಜರ್ಮನರ ಶೋಧನಾವಿಶೇಷತ್ವವು ಪುನಃ ತೋರಿಬರಲಿವೆ. ಆದರಿಂದ ಈ ಯುದ್ಧಚಕ್ರವನ್ನೇ ಪೂರ್ತಿ ತಿರುಗಿಸಿ ಬಿಡುವಸ್ಥಿತಿ ನಿರ್ಮಾಣವಾಗಲಿದೆ" ಎಂದು ಹಿಟ್ಲರನ ಆಶ್ವಾಸನೆ.

ಹಾರುಬೋಂಬಿನ ಹಾವಳಿ

ಜರ್ಮನರ ಹಾರುವ ಬೋಂಬು ಯಾನೆ ಸಾರಥಿ ರಹಿತ ವಿಮಾನಗಳು ಇಂಗ್ಲಾಂಡಿನಲ್ಲೆಬ್ಬಿಸಿರುವ ಕೋಲಾಹಲವು ಅತಿದೊಡ್ಡದೆಂಬುದು ಮಿ ಚರ್ಚಿಲ್ಲರು ಆ ಕುರಿತು ಕಾಮನ್ಸ್ ಸಭೆಯಲ್ಲಿತ್ತ ವಿಶೇಷ ಭಾಷಣದಿಂದ ಸ್ಪಷ್ಟವಾಗಿದೆ "ಈ ನೂತನ ಧಾಳಿಯ ಅಗಾಧತೆಯನ್ನು ಅಲ್ಪವೆಂದು ಭಾವಿಸುವದು ಪ್ರಮಾದವೇ ಸರಿ" ಎಂದು ಚರ್ಚಿಲ್ಲರು ಸ್ಪಷ್ಟವಾಗಿ ಹೇಳಿದ್ದಾರೆ ಜರ್ಮನರು ಲಂಡನನ್ನು ಸುಡಲು ನೂತನೋಪಕರಣ ತಯಾರಿಸುತಿದ್ದಾರೆಂದು 1943ರ ಆದಿಭಾಗದಲ್ಲೇ ... ಸುದ್ದಿಬಂದಿತ್ತು. ನಾವದು 'ರೋಕೆಟ್' ಆಗಿರಬೇಕೆಂದು ಭಾವಿಸಿದೆವು. ಆದರ ಮುಖ್ಯ ಕಾರ್ಖಾನೆಗಳ ಮೇಲೂ 100 ಸಿಲ್ವಾಣಗಳ ಮೇಲೂ ಭೀಕರ ಬೋಂಬು ಧಾಳಿ ನಡಿಸದಿರುತ್ತಿದ್ದರೆ ಆರು ತಿಂಗಳ ಮೊದಲೇ ಈ ಧಾಳಿಯು ಇನ್ನಷ್ಟು ದೊಡ್ಡ ಪರಿಮಾಣದಲ್ಲಿ ನಡೆಯುತಿತ್ತು. ಜರ್ಮನರ ಮುಖ್ಯ ಗುರಿ ಲಂಡನೇ ಆಗಿದೆ. ಆನಾಹುತವೆಷ್ಟೇ ಪ್ರಬಲವಿದ್ದರೂ ಸರಕಾರವು ಲಂಡನ್ ಬಿಡುವಂತಿಲ್ಲ. ನಾವು ಲಂಡನಿನಿಂದಲೇ ಯುದ್ಧವಾರಂಭಿಸಿದೆವು; ಇನ್ನದನ್ನು ಇಲ್ಲಿಂದಲೇ ಮುಗಿಸಲಿದ್ದೇವೆ--ಎಂದು ಚರ್ಚಿಲ್ಲರ ಸ್ಪಷ್ಟ ವಿವರಣೆ.

ಜನಹಾನಿ

ತಾ ೬ರ ವರೆಗೆ 2754 ಹಾರುವ ಬೋಂಬುಗಳು ಧಾಳಿನಡಿಸಿವೆ; 2752 ಮಂದಿ ಸತ್ತಿದ್ದಾರೆ. ಸುಮಾರು 8000 ಮಂದಿ ಜಖಂಗೊಂಡಿದ್ದಾರೆ ಅಂತೂ 10 ಸಾವಿರಕ್ಕೆ ಮಿಕ್ಕಿ ಜನಹಾನಿಯಾಗಿದೆ ಈ ತನಕ ಮಿಲಿಟರಿಯವರಿಗೆ ಮಾತ್ರ ಉಪಯೋಗಿಸುತ್ತಿದ್ದ 'ಪೆನಿಸಿಲಿನ್' ಚಿಕಿತ್ಸೆಯನ್ನು ಈ ಹಾವಳಿಗೊಳಗಾದವರಿಗೂ ಕೊಡಲಾಗುವದು. ಈ ಅಪಾಯವೆಷ್ಟೇ ದೊಡ್ಡದಿದ್ದರೂ ನಾವು ಜರ್ಮನಿಯ ಮೇಲೆಮಾಡಿದ ಬೊಂಬು ಹಾವಳಿಗೆ ಸರಿಗಟ್ಟುವಂತಿಲ್ಲ ಹಾರುವ ಬೋಂಬುಗಳ ದೆಸೆಯಿಂದಾಗಿ ನಾವು ಯುದ್ಧರಂಗಗಳಿಗೆ ಕಳುಹಬೇಕಾಗಿದ್ದ ಆಕಾಶ ಬಲಗಳ ಗಣನೀಯ ಭಾಗವನ್ನು ಇಲ್ಲಿ ಪ್ರಯೋಗಿಸುವ ತೊಂದರೆಯೊದಗಿದೆ. ಅಂತೆಯೇ ಈ ಬೋಂಬು ನಿರ್ಮಾಣದಿಂದಾಗಿ ಜರ್ಮನ ವಿಮಾನ ತಯಾರಿ ಶಕ್ತಿಯೂ ಹರಿಹಂಚಾಗಿದೆ ಈ ವೈಶಿ ವಿಶೇಷ ನಷ್ಟವಾರಿಗೆಂಬುದನ್ನು ನೋಡಲಿಕ್ಕಿದೆ, ಆನಾಹುತವೆಂತಹದಿದ್ದರೂ ಇದಕ್ಕಾಗಿ ನಾವೀಗ ಹೂಡಿರುವ ಯುದ್ಧಗಳ ಮೇಲಿನ ಲಕ್ಷ್ಯವನ್ನು ಕಡಿಮೆಮಾಡುವಂತಿಲ್ಲ; ಆದುನೂಡಲಕಾರ್ಯ ಇಂತಹ ವಿಶೇಷ ರೀತಿಯ ಆಯುಧವನ್ನು ಜರ್ಮನರು ಉಪಯೋಗಿಸಿರುವದರಿಂದ ಗಂಭೀರ ಪ್ರಶ್ನೆಯೆದ್ದಿದೆ; ಆ ಕುರಿತು ಈಗ ನಾನೇನೂ ಹೇಳುವಂತಿಲ್ಲ ಆಗತ್ಯವಿಲ್ಲದವರು ಲಂಡನ್ ಬಿಡಲಿಚ್ಛಿಸಿದರೆ ಅವರಿಗೆ ಸೌಕರ್ಯವೊದಗಿಸಲಾಗುವದು—ಎಂದು ಬ್ರಿಟಿಷ್ ಪ್ರಧಾನಿ ಕಠೋರ ಸತ್ಯವನ್ನಾಡಿದ್ದಾರೆ.

ಫ್ರಾಂಕೋನ ಸಹಾಯ.

ಇಂತಹ ಪ್ರಳಯಾಗ್ನಿ ವಿಮಾನ ತಯಾರಿಯಲ್ಲಿ ಸ್ಪೈನಿನ ಜನರಲ್ ಫ್ರಾಂಕೋ ಹಿಟ್ಲರನಿಗೆ ನೆರವಾಗಿದ್ದನೆಂಬ ವದಂತಿಯಿತ್ತು. ಸ್ಪೈನಿನಲ್ಲಿ ಅವು ತಯಾರಾದುವು, ಅಥವಾ ಸ್ಪೈನಿನೊಂದು ಸ್ಥಳದಲ್ಲಿ ಅವುಗಳ ಪ್ರಯೋಗ ನಡೆಯಿತು ಎಂಬ ಅಪವಾದಬಂದು ಆ ಕುರಿತು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಕೇಳಲಾಯಿತು. ಸ್ಪೈನ್ ಸರಕಾರವು ಅದನ್ನು ನಿರಾಕರಿಸಿದೆ. ಇಂತಹ ಅನಾಹುತವನ್ನು ನಿಲ್ಲಿಸುವಂತೆ ಪೋಪರನ್ನು ಕೇಳಿಕೊಳ್ಳಬೇಕೆಂದು ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಬಂದಾಗ, ವಿದೇಶ ಮಂತ್ರಿ ಮಿ- ಈಡನರು ಸ್ವಾಭಿಮಾನದಿಂದ ತಿರಸ್ಕರಿಸಿದ್ದಾರೆ, ಸಾರಥಿರಹಿತ ವಿಮಾನಗಳು ದಕ್ಷಿಣ ಇಂಗ್ಲಾಂಡು-ಮುಖ್ಯವಾಗಿ ಲಂಡನ್-ವಲಯದಲ್ಲಿ ಮಾಡುತ್ತಿರುವ ಅನಾಹುತವು ಅಸಹನೀಯವಿದ್ದರೂ ಬ್ರಿಟಿಷರದನ್ನನುಭವಿಸಿಯೇ ಸಿದ್ಧವೆಂದು ತಮ್ಮ ಸಹಜ ಹೆಗ್ಗುಣವಾದ ಛಲದಿಂದಿದ್ದಾರೆ.

'ಜರ್ಮನಿಗೆ ಅಪಾಯ'!

ನಾಜೀ ಪ್ರಚಾರ ಮಂತ್ರಿ ಡಾ! ಗೋಬೆಲ್ಸನು ತನ್ನೊಂದು ಭಾಷಣದಲ್ಲಿ ಹೀಗೆಯೆಂದಿದ್ದಾನೆ;'ಜರ್ಮನ್ ರಾಷ್ಟ್ರವು ಅಪಾಯದಲ್ಲಿದೆ. ವೈರಿಯು ಯುರೋಪಿನಲ್ಲಿ ತನ್ನ ಮಹಾಧಾಳಿಯಾರಂಭಿಸಿರುವ ಈ ಕಾಲದ ಕರೆಯನ್ನು ಮನ್ನಿಸಿ, ಪ್ರತಿಯೊಬ್ಬನೂ ವ್ಯಕ್ತಿಶಃ ತನ್ನ ಮತ್ತು ಇಡೀ ರಾಷ್ಟ್ರದ ಸಾಮಗ್ರಿ ಮತ್ತು ಶಕ್ತಿಯ ಪ್ರತಿಯೊಂದಂಶವನ್ನೂ ಮುಂದೊಡ್ಡಬೇಕು. ಯುದ್ಧದಲ್ಲಿ ಅಥವಾ ಕೆಲಸದಲ್ಲಿ ಇರುವ ಪ್ರತಿಯೊಬ್ಬನೂ ಸ್ವತಃ ತನ್ನ ಪ್ರಾಣಕ್ಕೇನೇ ಅಪಾಯ ಬಂದಿದೆ ಎಂಬಂತೆ ಕೆಲಸಮಾಡಬೇಕು ಜರ್ಮನ್ ಜನತೆಯ ಜೀವನ, ಆದರ, ಶಾಂತಿ ಮತ್ತು ತಾಯಿಬೇರನ್ನು ಕೂಡಾ ಕಿತ್ತೊಗೆಯಬೇಕೆಂದು ಜರ್ಮನ್ ವಿರೋಧಿಗಳ ಬಯಕೆ. ಈ ನಿರ್ಣಯಾತ್ಮಕ ಕಾಲದಲ್ಲಿ ನಾವು ನಮ್ಮ ಹೊಡೆತಗಳನ್ನು ಪ್ರತಿಭಟಿಸಲು ಅಶಕ್ತರಾದರೆ, ಇನ್ನೊಮ್ಮೆ 10ಅಥವಾ 50 ವರುಷಗಳಲ್ಲಿ ಇಂತಹ ಹೋರಾಟ ಹೂಡಲು ನಮ್ಮಿಂದಾಗುವಂತಿಲ್ಲ"! ಎಂದು ಜರ್ಮನ್ ಜನತೆಗೆ ಗೋಬೆಲ್ಸನ ಮಾರ್ಮಿಕ ಎಚ್ಚರಿಕೆ.

ಹಾಗಾದರೆ. . . .

ವರ್ಗದಾರ—ಪಟೇಲರೆ, ಆರನೇ ಕ್ಲಾಸಿನಲ್ಲೊ ಏನೋ ಶಾಲೆ ಬಿಟ್ಟ ನೀವು ತಹಶೀಲ್ದಾರರೊಡನೆ ಸರಾಗವಾಗಿ ಇಂಗ್ಲಿಷು ಮಾತಾಡಿದಿರಲ್ಲ? ಯಾರು ಕಲಿಸಿದರು ನಿಮಗೆ?

ಪಟೇಲ -ಯಾರೇತಕ್ಕೆ? ನಾನೇ ನನ್ನಷ್ಟಕ್ಕೆ ಕಲಿತುಕೊಂಡೆ. 'ಸುಲಭದಲ್ಲಿ ಇಂಗ್ಲಿಷು' ಎಂಬ ಪುಸ್ತಕವನ್ನ ಅಭ್ಯಾಸಿಸಿದೆ ಅದನ್ನು ಕಲಿತರೆ ಯಾವ ಆಫೀಸರರೊಡನೆಯೂ ಇಂಗ್ಲಿಷಿನಲ್ಲಿ ಮಾತಾಡುವ ಸಾಮರ್ಥ್ಯ ಬರುತ್ತದೆ. ಈ ಕಾಲದಲ್ಲಿ ಅಷ್ಟು ಇಂಗ್ಲಿಷು ಕಲಿತುಕೊಳ್ಳದಿದ್ದರೆ ನಮ್ಮ ಅನುದಿನದ ವ್ಯವಹಾರದಲ್ಲಿ ಬಾಯಿ ಕಟ್ಟಿದಂತಾಗುತ್ತದಲ್ಲ?

ವರ್ಗದಾರ—ಅದು ನಿಜ ಆದರೆ ನನಗೆ ಇಂಗ್ಲಿಷು ಅಕ್ಷರವೂ ಗೊತ್ತಿಲ್ಲವಲ್ಲ!

ಪಟೇಲ—ಕನ್ನಡ ಗೊತ್ತಿದ್ದರೆ ಸಾಕು. ಮತ್ತೆಲ್ಲ ಆ ಪುಸ್ತಕ ಸುಲಭವಾಗಿ ಕಲಿಸಿ ಬಿಡುತ್ತದೆ. ಇಂದೇ ಕೊಂಡುಕೊಂಡು ಅಭ್ಯಾಸಮಾಡಿರಿ.

ವರ್ಗದಾರ—ಎಲ್ಲಿ ಸಿಗುತ್ತದೆ? ಬೆಲೆ ಏನು?

ಪಟೇಲ—ಉಡುಪಿಯ 'ನವಭಾರತ ಪುಸ್ತಕ ಭಂಡಾರ'ದಲ್ಲಿದೆ. ಬೆಲೆ ಬರೇ ಒಂದು ರೂಪಾಯಿ! ಯಾವ ವೃತ್ತಿಯವರೇ ಇರಲಿ, ಅವರಿಗೆ ಸ್ವಲ್ಪ ಇಂಗ್ಲಿಷು ಗೊತ್ತಿದ್ದರೆ ಅವರ ಕಸುಬಿಗೆ ಕಳೆಯೇರುತ್ತದೆ. ಆದುದರಿಂದ ವ್ಯಾಪಾರಿಗಳು, ಚಿಕ್ಕ ಸಣ್ಣ ನೌಕರರು, ಕೆಲಸಗಾರರು ಈ ಪುಸ್ತಕದ ಅಭ್ಯಾಸದಿಂದ ತಮ್ಮ ತಮ್ಮ ಉದ್ಯೋಗಗಳನ್ನು ಮಿರುಗುಗೊಳಿಸಬಹುದು. ಇಂಗ್ಲಿಷು ಮಾತಾಡಲಿಕ್ಕೆ, ಆರ್ಡರು ಕೊಡಲಿಕ್ಕೆ, ತಂತಿ ಬಿಡಲಿಕ್ಕೆ, ಎಡ್ರೆಸ್ಸು ಬರೆಯಲಿಕ್ಕೆ, ಎಲ್ಲಾ ಗೊತ್ತಾಗುತ್ತದೆ.

ವರ್ಗದಾರ— ಹಾಗಾದರೆ ಇಂದೇ ಅದನ್ನು ಕೊಂಡುಕೊಳ್ಳಬೇಕು

THE BEST PREVENTIVE IN EPIDEMICS OF
CHOLERA
"BHUVANENDRA"
CHANDRAMAS
Will give you the best results. Try once and be satisfied with the results.
Dose: For adults:- 3 to 5 drops 2 to 3 times a day with the decoction of cloves or ajwan
For Children: 1 to 2 drops with the said decoction
Also a sovereign remedy for diarrhoea, Stomachache, Vomiting and Nausea
BHUVANENDRA PRODUCTS Ltd.

"ಭುವನೇಂದ್ರ"
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರಬೇಕಾದ ಅತ್ಯುತ್ತಮ ಔಷಧಿ
ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು. ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆ ನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

The Pangal Nayak Bank Limited.

(Incorporated 1920)

Registered Office Court Road, UDIPI

Branches at— Udipi, Mangalore, Katapadi, Kanhangad, Kinnigoli and Nileshwar South Canara District

Discounting of demand and short-term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public

For business proper please enquire at any one of our Offices

15th April 1944

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು: ಬೊಂಬಾಯಿ

ಚೀಫ್ ಏಜನ್ಸಿ ಆಫೀಸು — ಉಡುಪಿ.

ಇಂಡಿಯಾ, ಬರ್ಮಾ, ಸಿಲೋನ್ ಮತ್ತು ಬ್ರಿಟಿಷ್ ಈಸ್ಟ್ ಆಫ್ರಿಕ ಮೊದಲಾದ ಕಡೆಗಳಲ್ಲೆಲ್ಲಾ ಶಾಖೆ ಮತ್ತು ಪ್ರಾತಿನಿಧ್ಯವಿರುವ ಜಗದ್ವಿಖ್ಯಾತ ವಿಮಾಸಂಸ್ಥೆ.

ನಿಮ್ಮ ಮತ್ತು ನಿಮ್ಮ ಕುಟುಂಬದ ಬಾವೀ ಕಲ್ಯಾಣಕ್ಕಾಗಿ ತ್ವರೆಯಾಗಿ ಈ ಕಂಪೆನಿಯಲ್ಲಿ ಪಾಲಿಸಿಯನ್ನು ಪಡೆಯಿರಿ

ಉತ್ಸಾಹೀ ಏಜಂಟರ ಬೇಕಾಗಿದ್ದಾರೆ.

ಪಿ. ಡಿ. ನಾಯಕ,
ದ. ಕನ್ನಡದ ಚೀಫ್ ಏಜಂಟರು,
ಉಡುಪಿ.

The Jupiter General Insurance Co. Ltd., Bombay.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮೈನೆರೆಯುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷದವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:— ಹೆರಪೀಪಲ್ಲಿ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೫—0—0 ಪೋಸ್ಟ ಚಾರ್ಜು ನಿರಾಳ

ಮಾಲಕರು.— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ— ಕುಂಬರವಾಡಿ ಸ್ಟೋರ್ಸ ಡಾವಣಗೇರಿ— ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾಸಿ, ಕೆಮಿಸ್ಟ, ಹಾವೇರಿ ಬ್ಯಾಡಗಿ



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ **ಕೊಡಿಯಾಲಬೈಲು, ದ. ಕ**

THE VIJAYA BANK, LTD.

Head office:
MANGALORE.

Glad to announce that a Branch of the Bank has been opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ. **15-6-44**ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿರುವುದು

ದಿ ವಿಜಯಾ ಬೇಂಕ್ ಲಿಮಿಟೆಡ್

REGD

ಅಮೃತಾಂಜನ

ತಲೆಬೇನೆ, ಶಿರೋವೇದನೆ, ಉಳುಕು, ಕತ್ತಿಗೆ, ಛೇದ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಚಾಕು ಕೊಯ್ತ ಪುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೊದಿನ ನೋವುಗಳು ಎಲ್ಲಾ ರೋಗಗಳಿಗೂ ಸಿದ್ಧ

ತಗ್ಗು ಕ್ರಯದಲ್ಲಿ ಎಲ್ಲ ಕಡೆ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ

ರೂ **1-8-0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ **2-8-0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಸ್ಥಾಪನೆ **ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. of Mysore

Certified by the Agent of the Govt. of India in Ceylon.

EDITED PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA

Regd. No. M. 3618.

Estd. 1921 ಸ್ಥಾಪಿತ.

ವಿನಂತಿ

ಇದೇ ಬರುವ ಅಗೋಸ್ತು ತಿಂಗಳಾಂತ್ಯಕ್ಕೆ ನವಯುಗದ ೨೪ ನೇ ಸಂಪುಟವು ಕೊನೆಗೊಂಡು ಸಪ್ಟಂಬರ ಆದಿಯಿಂದ ಹೊಸ ವರ್ಷಾರಂಭವಾಗುವುದು. ಈ ಸಮಯಕ್ಕೆ ಅವಧಿ ಮುಗಿದು ಚಂದಾ ಹಣ ಬಾಕಿಯಿರುವವರು ಅದನ್ನು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಡುವಂತೆ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್,

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪
ಸಂಚಿಕೆ ೪೬

FOUNDER
Sri. A. B. Shetty.

Vol. 24
No. 46

NAVAYUGA— Kannada Weekly —UDIPI, S. I.

ಉಡುಪಿ • **20—7—1944** • ಮಂಗಳೂರು.

ANTARANGA
UDIPI

ಅಖಿಲ ಕರ್ನಾಟಕದ
ಹೊಸ ಮಾದರಿಯ
ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6

ಮೆನೇಜರ್,
ಅಂತರಂಗ, ಉಡುಪಿ.

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Estd 1908]
The "Bombay Life" Bldg.,
UDIPI, S. K.

Offices and Agencies throughout South India.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

—ಔಷಧ—

೭ ದಿವಸಗಳಲ್ಲಿ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಥೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಮಾಲಕರ ವಿಳಾಸಕ್ಕೆ ಪತ್ರವ್ಯವಹಾರಮಾಡಬೇಕೆಂದುವಿನಂತಿ

ಮಾಲಕರ ವಿಳಾಸ. **ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ

Revanasiddappa Halappa Davangeri,
Ayurveda Oushadalaya, GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲೆಂಡರ್ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ಪಡಿಸಬಹುದು. ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ

ಗೀತೆಯ ಕೈಗನ್ನಡಿ ರೂ. ೦—೮—೦
(ಗೀತೆಯ ಸಮೂಲ ಭಾಷಾಂತರ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಗಾಂಧಿಜೀಯ ಸಂಧಿ ಸೂತ್ರ

ಮುಸ್ಲಿಂ ಲೀಗಿಗೆ—

○ ಯುದ್ಧಾವಧಿಯ ತಾತ್ಕಾಲಿಕ ರಾಷ್ಟ್ರೀಯ ಸರಕಾರ ಸ್ಥಾಪನೆಯಲ್ಲಿ ಲೀಗು ಕಾಂಗ್ರೆಸಿನೊಡನೆ ಸಹಕರಿಸಬೇಕು.

○ ಮುಸಲ್ಮಾನರು ಅತ್ಯಧಿಕ ಬಹುಸಂಖ್ಯಾತರಾಗಿರುವ ಈಶಾನ್ಯ ಮತ್ತು ಪೂರ್ವ ಸರಹದ್ದುಗಳನ್ನು ನಿರ್ಣಯಿಸಲು ಯುದ್ಧ ಮುಗಿದೊಡನೆ ಸಮಿತಿಯೊಂದನ್ನು ನೇಮಿಸಬೇಕು.

○ ನಿರ್ಧರಿತ ಗಡಿಗಳು ಹಿಂದುಸ್ಥಾನದಿಂದ ಪ್ರತ್ಯೇಕವಾಗಬೇಕೋ ಎಂಬುದನ್ನು ಆ ಗಡಿಗಳ ಪ್ರಾಯಸ್ಥರೆಲ್ಲರ ಮತದ ಮೂಲಕ, ಅಥವಾ ವ್ಯವಹಾರ್ಯವಾದ ಇನ್ನಾವುದಾದರೊಂದು ಚುನಾವಣಾ ಪದ್ಧತಿಯಿಂದ ನಿರ್ಧರಿಸಬೇಕು.

○ ಪ್ರತ್ಯೇಕ ರಾಜ್ಯಭಾರಕ್ಕೇನೇ ಬಹುಮತ ದೊರೆತರೆ ಅದನ್ನು ಕೂಡಲೇ ಒಪ್ಪಿಕೊಳ್ಳಬೇಕಲ್ಲವೆ, ಗಡಿಯ ಜಿಲ್ಲೆಗಳಿಗೆ ತಮಗಿಷ್ಟವಿದ್ದ ಕಡೆಗೆ ಸೇರುವ ಪೂರ್ಣಾಧಿಕಾರವಿರಬೇಕು

○ ಮತದಾನದ ಮೊದಲು ತಂತಮ್ಮ ಕಡೆಯ ಪ್ರಚಾರ ಮಾಡುವ ಅಧಿಕಾರ ಎಲ್ಲಾ ಪಕ್ಷಗಳಿಗೂ ಇದೆ

○ ಬೇರ್ಪಡಿಸಲ್ಪಟ್ಟ ದೇಶಗಳೊಳಗಿನ ಜನ ಬದಲಾವಣೆಯು ಬದಲಾಯಿಸಲ್ಪಡುವ ಜನರ ಇಚ್ಛೆಯಂತಿರಬೇಕು!

○ ಬ್ರಿಟಿಷರು ಪೂರ್ಣಾಧಿಕಾರ ಬಿಟ್ಟುಕೊಡುವದಾದರೆ ಮಾತ್ರವೇ ಈ ಸೂತ್ರಗಳು ಜಾರಿಗೆ ಬರಲು ಬಾಧ್ಯವಿವೆ.

ಸರಕಾರಕ್ಕೆ—

○ ಯುದ್ಧ ಮುಗಿದೊಡನೆ ಪೂರ್ಣ ಸ್ವಾತಂತ್ರ್ಯವೆಂಬ ಘೋಷಣೆಯೊಡನೆ ಯುದ್ಧಾವಧಿಯ ಮಟ್ಟಿಗೆ ಸಂಪೂರ್ಣ ನಾಗರಿಕಾದಳಿತೆಯ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕು. ಈ ಸರಕಾರವು ಕೇಂದ್ರ ಎಸೆಂಬ್ಲಿಯ ಚುನಾಯಿತ ಸದಸ್ಯರಿಂದ ರಚಿಸಲ್ಪಡತಕ್ಕುದು.

○ ರೈಲ್ವೇ, ಬಂದರ, ಇತ್ಯಾದಿಗಳೆಲ್ಲಾ ರಾಷ್ಟ್ರೀಯ ಸರಕಾರದ ಸ್ವಾಧೀನವಿದ್ದರೂ ಸೈನಿಕರಿಗೆ ಅವುಗಳ ಪೂರ್ಣಾನುಕೂಲತೆಯನ್ನೊದಗಿಸಬೇಕು.

○ ಇಂಗ್ಲೆಂಡಿನ ಚಕ್ರವರ್ತಿಯಂತೆ, ಹೊಸ ಸರಕಾರ ಮಂತ್ರಿಗಳ ಸೂಚನೆಯಂತೆ ವರ್ತಿಸುವದೇ ವೈಸರಾಯರ ಸ್ಥಾನ.

○ ಸೇನಾ ವಿಭಾಗದ ಪೂರ್ಣಾಧಿಕಾರವು ವೈಸರಾಯ ಮತ್ತು ಕಮಾಂಡರ್-ಇನ್-ಚೀಫರಿಗೆ ಇರತಕ್ಕದ್ದು.

○ ರಕ್ಷಣಾ ವಿಭಾಗವು ರಾಷ್ಟ್ರೀಯ ಸರಕಾರಕ್ಕೆ ಸೇರದುದು. ಸೇನಾ ಕಾರ್ಯಗಳಲ್ಲಾದರೂ ಸಲಹೆ ಕೊಡುವ ಹಾಗೂ ವಿಮರ್ಶೆ ಮಾಡುವ ಅಧಿಕಾರ ರಾಷ್ಟ್ರೀಯ ಸರಕಾರಕ್ಕಿದೆ

○ ತನ್ನ ಕ್ಷೇತ್ರಗಳಲ್ಲಿ ನಡೆಸಲ್ಪಡುವ ಯುದ್ಧ ಕಾರ್ಯದ ವೆಚ್ಚವನ್ನು ಹಿಂದುಸ್ಥಾನ ಹೊರುವಂತಿಲ್ಲ.

ರಾಜಾಜೀಯಿಂದ ತಯಾರಿಸಲ್ಪಟ್ಟು ಗಾಂಧಿಜೀಯ ಸಮ್ಮತಿ ಪಡೆದ ಕಾಂಗ್ರೆಸ್-ಲೀಗ್ ಸಂಧಾನ ಸೂತ್ರಗಳ ವಿವರ ಮತ್ತು ಆ ಕುರಿತಾದ ರಾಜಾಜಿ-ಜಿನ್ನಾ ವ್ಯವಹಾರಗಳು ನಮ್ಮ ಕಳೆದ ವಾರದ ಸಂಚಿಕೆಯಲ್ಲೇ ಬಂದಿವೆ ಗಾಂಧಿಜೀಗೆ ಹಿಟ್ಲರ್ ಟೋಜೋರ ಪಂಗ್ತಿಯನ್ನು ಕೊಟ್ಟಿದ್ದ ವಿದೇಶೀಯರೆಲ್ಲಾ ದಂಗು ಬಡೆಯುವಷ್ಟು ಸಾಧುವಾದ ಮತ್ತೊಂದು ಸಂಧಿ ಸೂಚನೆಯು ಸರಕಾರಕ್ಕೀಗ ಗಾಂಧಿಜೀಯಿಂದ ದೊರೆತಿರುವದರಿಂದ ಇಡೀ ವಾತಾವರಣವೇ ಬದಲಾಗಿದೆ ಎರಡನೇ ಸೂಚನೆಗಳ ಪ್ರಕಟಣೆಯೊಂದು ಸ್ವಾರಸ್ಯವಾದ ಕಥೆ; ಪತ್ರಿಕೋದ್ಯೋಗಿಯೊಬ್ಬನ ಇಂದ್ರಜಾಲದ ಪರಿಣಾಮವದು!

ಬಾತ್ಮೀದಾರನ ವಂಚನೆ!

ಲಂಡನಿನ 'ನ್ಯೂಸ್ ಕ್ರಾನಿಕಲ್' ಪತ್ರಿಕೆಯ ಬಾತ್ಮೀದಾರ 'ಗೆಲ್ಡರ್' ಎಂಬವರು ಪಾಂಚ್ ಗನಿಗೆ ಹೋಗಿ ಮಹಾತ್ಮರ ಭೇಟಿ ಪಡೆದು 'ನನ್ನ ಸಂಪಾದಕರಿಗೆ ಹಿಂದೀ ರಾಜಕೀಯ ಬಿಕ್ಕಟ್ಟು ನಿವಾರಣೆಗೆ ಸಹಾಯವಾಗಬೇಕೆಂಬ ಆತುರ ಬಹಳ. ನಾನು ವಿಲಾಯ್ತಿಗೆ ಹೋಗಿ ನಿರಾಶೆಗೊಂಡು ನೀವು ನನ್ನನ್ನು ನಿರಾಶೆಗೊಳಿಸಲಾರಿರೆಂದು ನನ್ನ ಆಶ್' ಎಂದು ನಿವೇದಿಸಿಕೊಂಡರು. ತಾನೊಬ್ಬ ಪತ್ರಿಕೋದ್ಯೋಗಿಯಾಗಿ ಬಂದಿಲ್ಲ; ಬಿಕ್ಕಟ್ಟು ನಿವಾರಣೆಗೆ ಸಹಾಯ ಮಾಡುವದಷ್ಟೇ ನನ್ನ ಕೆಲಸವೆಂದು ಗಾಂಧಿಜೀಯನ್ನು ನಂಬಿಸಿದರು. ಈ ಆಶ್ವಾಸನೆಯಲ್ಲಿ ವಿಶ್ವಾಸವಿಟ್ಟು ಮಹಾತ್ಮರು ಮೂರು ದಿನಗಳಲ್ಲಿ ಮೂರು ಘಂಟೆಗಳ ಕಾಲ ಆ ಬಾತ್ಮೀದಾರನಿಗೆ ತನ್ನ ಧೋರಣೆಯನ್ನು ವಿವರವಾಗಿ ಹೇಳಿ, ಎರಡು ಹೇಳಿಕೆಗಳನ್ನು ಬರೆಯಿಸಿದರು. ಒಂದರಲ್ಲಿ ತಾನು 1942ರ ಆಂದೋಲನವನ್ನು ಪುನಃ ಆರಂಭಿಸುವಂತಿಲ್ಲವೆಂಬ ಆಶ್ವಾಸನೆಯನ್ನು ಸರಕಾರಕ್ಕೆ ಕೊಟ್ಟು, ಗೆಲ್ಡರರು ವೈಸರಾಯರಲ್ಲಿಗೆ ಹೋಗಿ ಸಂಗತಿಯನ್ನೆಲ್ಲಾ ಅವರಿಗೆ ಮಂದಟ್ಟು ಮಾಡಿದ ಮೇಲೆ ತನಗೆ ತಿಳಿಸಿ ಅದನ್ನು ಪ್ರಕಟಿಸಬಹುದೆಂದು ಅನುಮತಿಕೊಟ್ಟರು. ರಾಷ್ಟ್ರೀಯ ಸರಕಾರ ಸ್ಥಾಪನೆಯ ಶರ್ತಗಳುಳ್ಳ ಎರಡನೆಯ ಹೇಳಿಕೆಯನ್ನು, ವೈಸರಾಯೀ ಭೇಟಿಯ ಅನಂತರ, ಇತರ ಮುತ್ಸದ್ದಿಗಳಿಗೆ ಖಾಸಗೀ ಪರ್ಯಾಲೋಚನೆಗಾಗಿ ತೋರಿಸಬಹುದೇ ಹೊರತು, ತನ್ನ ಅನುಮತಿ ಪಡೆಯದೆ ಪ್ರಕಟಿಸಕೂಡದೆಂಬ ನಿರ್ಬಂಧ ಹಾಕಿದರು ಗೆಲ್ಡರ್ ಎಲ್ಲಕ್ಕೂ ಸೈಗುಟ್ಟಿ ಹೊರಬಂದರು. ಬಂದವರೇ ಆವೆರಡು ಹೇಳಿಕೆಗಳ ಸಾರವನ್ನೊಂದುಗೂಡಿಸಿ, ಒಂದು ತಲೆ ಬರೆಹ ಪೋಣಿಸಿ, ತನ್ನ ಪತ್ರಿಕೆಗೂ, ಹಿಂದುಸ್ಥಾನದ ಪ್ರಸಿದ್ಧ ಯುರೋಪಿಯನ್ ಪತ್ರಿಕೆಯಾದ 'ಟೈಮ್ಸ್ ಓಫ್ ಇಂಡಿಯಾ'ಕ್ಕೂ ಪ್ರಕಟಣೆಗೆ ಕೊಟ್ಟುಬಿಟ್ಟರು! ಅವರು ಪಾಂಚ್‌ಗನಿಗೆ ಬಂದಿದ್ದುದು, ಅಮೂಲ್ಯ ವಾರ್ತಾನಿಧಿಯನ್ನು ಬಂಚಿಸಿ ಕಸಕೊಳ್ಳುವ ಇಂಗ್ಲಿಷ್ ಬಾತ್ಮೀದಾರನಾಗಿಯೇ! ಈ ರೀತಿ ತನ್ನ ಪ್ರಾಮುಖ್ಯ ಹೇಳಿಕೆಯೊಂದನ್ನು ಕೇವಲ ಯುರೋಪಿಯನ್ ಪತ್ರಿಕೆಗಳಿಗೆ ಮುಂದಾಗಿ ಕೊಟ್ಟ ಗಾಂಧಿಜೀಯ ಅಪರಾಧವು ಭಾರತೀಯ ಪತ್ರಿಕೆಗಳಿಗೆ ಅಕ್ಷಮ್ಯವಾಗಿ ಕಂಡಿತು. ಬೇಸರಗೊಂಡು ಪಾಂಚ್ ಗನಿಗೆ ಧಾವಿಸಿದ ಹಿಂದೀ ಪತ್ರಿಕೋದ್ಯೋಗಿಗಳೊಡನೆ ಮಹಾತ್ಮಾಜೀ ತನ್ನ ತಪ್ಪಿಗಾಗಿ ಕ್ಷಮೆ ಕೇಳಿ, ತನ್ನ ಮೂಲ ಹೇಳಿಕೆಗಳೆರಡನ್ನೂ ಪ್ರಕಟಣೆಗಾಗಿ ಅವರಿಗೊಪ್ಪಿಸಿದರು.

ಗಾಂಧಿಜೀಯ ಸ್ಪಷ್ಟೀಕರಣ

ಮೇಲಿನ ಸೂಚನೆಗಳು ಕೇವಲ ತನ್ನ ಖಾಸಗೀ ಅಭಿಪ್ರಾಯವೆಂದು ಗಾಂಧಿಜೀ ಸ್ಪಷ್ಟಪಡಿಸಿ ಈ ಹೇಳಿಕೆಯಲ್ಲಿ ಹೀಗಂದಿದ್ದಾರೆ. "ಚಂತ್ರೆ ಪುನರಾವರ್ತಿಸಲ್ಪಡುವದಿಲ್ಲ.—1942ರ ಪರಿಸ್ಥಿತಿ ಈಗಿಲ್ಲ, ಕಳೆದೆರಡು ವರುಷಗಳಿಂದ ಪ್ರಪಂಚ ಬದಲಾಗಿದೆ. ಪರಿಸ್ಥಿತಿಯನ್ನೀಗ ಆಮೂಲಾಗ್ರವಾಗಿ ಪುನರ್ವಿಮರ್ಶಿಸಬೇಕಾಗಿದೆ. ಆದ್ದರಿಂದ ವರ್ಕಿಂಗ್ ಕಮಿಟಿಯೊಡನೆ ನಾನು ಚರ್ಚಿಸುವದೆಂದರೆ, ಬಿಡುಗಡೆ ಹೊಂದಿದಂದಿನಿಂದ ನಾನು ಸಂಪಾದಿಸಿರುವ ಅನುಭವದ ಕುರಿತು ಅದಗೆ ಅಭಿಪ್ರಾಯವೇನೆಂಬುದೇ 1942ರಲ್ಲಿ ಸರಕಾರದಿಂದ ಕಡಿಯಲ್ಪಟ್ಟ ಸೂತ್ರವನ್ನೇ ನಾನು ಮತ್ತೊಮ್ಮೆ ಎತ್ತಿಕೊಳ್ಳಲಿದ್ದೇನೆ. ನಾನಾಗ ಪ್ರಥಮತಃ ಸಂಧಾನ ಹೂಡಲಿದ್ದೆ, ಅದು ಅಪಜಯಗೊಂಡು, ನನಗಗತ್ಯವೆಂದು ತೋರಿದರೆ ಆ ಮೇಲೆ ಕಾಯಿದೇ ಭಂಗ ಹೂಡಲಿದ್ದೆ. ವೈಸರಾಯರೊಡನೆ ವಾದಿಸುವ ಬಯಕೆ ನನ್ನದು. ಹಾಗೆ ಮಾಡಬೇಕಾದರೆ ವರ್ಕಿಂಗ್ ಕಮಿಟಿಯ ಮನಸ್ಸನ್ನು ನಾನರಿಯಬೇಕು. ಆದರೆ, ವ್ಯಕ್ತಿಶಃ ವೈಸರಾಯರ ಬಯಕೆ ಯಾವುದಿದ್ದರೂ ರಾಜಕೀಯ ಕ್ಷೇತ್ರದಲ್ಲಿ ಅವರಿಗಧಿಕಾರವಿಲ್ಲವೆಂದೇ ನಮ್ಮೊಳಗಿನ ಸಾಮಾನ್ಯ ಅಭಿಪ್ರಾಯ. ಮಿ. ಚರ್ಚಿಲ್ಲರಿಗೆ ಯಾವ ಒಪ್ಪಂದವೂ ಬೇಕಾಗಿಲ್ಲ. ಅವರ ಕುರಿತು ಬರುವ ವರದಿಗಳು ಸತ್ಯವಾಗಿದ್ದರೆ, ನನ್ನನ್ನು ನಿರ್ನಾಮಗೊಳಿಸಬೇಕೆಂದು ಅವರಿಚ್ಛೆಯಿದೆ. ಆ ವರದಿಗಳನ್ನು ಅವರೆಂದೂ ಅಲ್ಲಗಳೆದಿಲ್ಲ. ಅದರಲ್ಲಿರುವ ನನ್ನ ಪಾಲಿನ ಹೆಗ್ಗಳಿಕೆ, ಅವರ ಪಾಲಿನ ಮರುಕದ ವಿಷಯವೆಂದರೆ, ಸಂತೋಷಪೂರ್ವಕ ದೇಹತ್ಯಾಗಕ್ಕೆ ಸಿದ್ಧನಿರುವ ಸತ್ಯಾಗ್ರಹಿಯೊಬ್ಬನನ್ನು ನಮನಿಸಲು ಯಾರಿಂದಲೂ ಸಾಧ್ಯವಿಲ್ಲ ಅದು ಸ್ಫೂರ್ತಿಗೆ ಸ್ವಾತಂತ್ರ್ಯವನ್ನೀಯುತ್ತದೆ".

ವಿಮರ್ಶಕರಿಗೆ ಸಮಾಧಾನ

ಲೀಗ್ ಮತ್ತು ಸರಕಾರಕ್ಕೆ ಕೊಟ್ಟ ಎರಡು ಸಂಧಿಸೂಚನೆಗಳಿಂದಾಗಿ ಗಾಂಧಿಜೀ ದೇಶವ್ಯಾಪೀ ಕಟುಟೀಕೆಗೊಳಗಾಗಿದ್ದಾರೆ "ಲೀಗಿಗೆ ಕೊಟ್ಟ ಶರ್ತಗಳು ನನ್ನ ಖಾಸಗೀ ಅಭಿಪ್ರಾಯ ನಾನೊಬ್ಬ ಹಿಂದುವಾಗಿ ಅಲ್ಲ—ಆದಿಯಿಂದ ಅಂತ್ಯದವರೆಗೂ ಕೇವಲ ಭಾರತೀಯನಾಗಿಯೇ ಅವುಗಳಿಗೊಪ್ಪಿಗೆಯಿತ್ತಿದ್ದೇನೆ ನನ್ನ ಹಿಂದೂತ್ವವು ಭಿನ್ನವಾದುದು. ಅದು ಎಲ್ಲಾ ಧರ್ಮಗಳನ್ನೂ ಒಳಗೊಂಡಿದೆ. ಆದ್ದರಿಂದ ನಾನೊಬ್ಬ ಹಿಂದುವಾಗಿ ಮುಸಲ್ಮಾನರನ್ನು ಸಂಧಿಸಿಲ್ಲ" ಎಂದು ಗಾಂಧಿಜೀಯ ಸ್ಪಷ್ಟೀಕರಣ. "ಸರಕಾರಕ್ಕೆ ಕೊಟ್ಟ ಸೂಚನೆಯಲ್ಲಿ ಮಂದಗಾಮಿಗಳ ಹಾಗೂ ದುಡ್ಡಿದ್ದವರ ವರ್ಚಸ್ಸಿಗೊಳಗಾಗಿ ನಾನು ರಾಷ್ಟ್ರಕ್ಕೆ ದ್ರೋಹಮಾಡಿದೆನೆಂದು ಕಠಿಣಾರೋಪ ಹೊರಿಸಿ ನನಗೆ ಪತ್ರಗಳು ಬರುತ್ತಿವೆ. ನಾನು ಮಂದಗಾಮಿಗಳ, ಶ್ರೀಮಂತರ ಹಾಗೂ ಎಲ್ಲರ ಸ್ನೇಹಿತ. ನನ್ನ ಅಸಹಕಾರವು ಪಾಪದೊಡನೆ ಹೊರತು ಪಾಪಿಯೊಡನಲ್ಲ. ಆಗೋಸ್ತು ನಿರ್ಧಾರದ ತತ್ವ ಮತ್ತು ನನ್ನ ಈಗಿನ ಸೂಚನೆಗಳೊಳಗೆ ಭಿನ್ನತೆಯಿಲ್ಲ. ಬ್ರಿಟಿಷ್ ಸರಕಾರವು ಬಾಯಿ ಬಿಡುವವರೆಗೆ ವಿಮರ್ಶಕರು ತಾಳಲಾರರೇ? ಯಾಕಂದರೆ ನನ್ನ ಹೇಳಿಕೆಯ ಮುಖ್ಯ ಗುರಿ ಸರಕಾರ" ಎಂದು ಮಹಾತ್ಮಾಜೀ ಕೇಳಿಕೊಂಡಿದ್ದಾರೆ.

38 ವರ್ಷಗಳ ಹಿರಿತನ

1906ನೆ ಇಸವಿ ಜುಲ್ಯ 1ನೇ ತಾರೀಕಿನಲ್ಲಿ ಸ್ಥಾಪಿತವಾಗಿ ಕೆನರಾ ಬ್ಯಾಂಕು ಇಂದಿಗೆ 38 ವರ್ಷ ವಯಸ್ಸು ಹೊಂದಿದೆ. ನಾವು 38 ವರ್ಷ ವಯಸ್ಸಿನವರೆಂಬುದೆ ನೀವು ನಮ್ಮೊಡನೆ ವಹಿವಾಟು ನಡೆಸಲು ಸಾಕಾದ ಕಾರಣವಾಗಲಾರದು.

ಆದರೆ ಈ 38 ವರ್ಷಗಳು ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿವೆ—ಎರಡು ಮಹಾ ಯುದ್ಧಗಳು—ಲೋಕವು ಹಿಂದೆಂದೂ ಕಾಣದ ಆರ್ಥಿಕ ಮುಗ್ಗಟ್ಟು—ಈ ಮೊದಲು ಆಗದ ಬ್ಯಾಂಕುಗಳ ಸಂಧಿಗ್ಧಾವಸ್ಥೆ—ಶೇರು ಮಾರ್ಕೆಟುಗಳ ಕಂಗಾಲಾವಸ್ಥೆ—ಇತ್ಯಾದಿ.

ಒಂದು ಬ್ಯಾಂಕು ಈ ಎಲ್ಲಾ ಭಯಂಕರ ಹಲ್ಲೋಲಗಳಿಂದ ಎದೆಗುಂದದೆ ಪಾರಾಗಿರುವುದಾದರೆ—ಈ ಕಠಿಣ ಅನುಭವಗಳಿಂದ ಪ್ರಯೋಜನವನ್ನೇ ಹೊಂದಿ ತನ್ನ ಪ್ರಾಮುಖ್ಯತೆಯನ್ನೂ ವಿಶಾಲತೆಯನ್ನೂ ಮಾತ್ರ ಬೆಳೆಸಿರುವುದಾದರೆ—ಆ ಬ್ಯಾಂಕೇ ನಿಮ್ಮ ವಿಶ್ವಾಸಕ್ಕೆ ಯೋಗ್ಯವಾದದ್ದು.

ನಾವು ನಮ್ಮ ಹಿರಿತನದಿಂದ ಶ್ರೇಷ್ಠರಾದುದಲ್ಲ,
ನಮ್ಮ ಶ್ರೇಷ್ಠತನದಿಂದ ನಾವು
ಹಿರಿಯರಾಗಿದ್ದೇವೆ.

Estd. 1906. **CANARA BANK, Ltd.**



ಕಗ್ಗತ್ತಲೆ? ಇಲ್ಲ!

ಫ್ರೆಂಚ ಪ್ರಕಾಶಕದಿಂದ

ನಿಮ್ಮ ಮನೆಗಳನ್ನು ಬೆಳಗಿಸಿರಿ!

ಚಿಮಿಣಿ ಎಣ್ಣೆ ಬೇಕಾಗಿಲ್ಲ, ಹೆಚ್ಚು ಪ್ರಕಾಶಿತ ದೀಪ, ತೀಕ್ಷ್ಣ ಪ್ರಕಾಶ.
೫೦ ಬತ್ತಿಗಳ ಒಂದು ಪೆಟ್ಟಿಗೆ ಬೆಲೆ. ರೂ. ೧-೪-೦. ಪ್ರತಿಯೊಂದು ಬತ್ತಿಯು ೨೪ ತಾಸು ಉರಿಯುವದು.

೬ ಪೆಟ್ಟಿಗೆಗಳಿಗೆ ಅಂಚೆ ವೆಚ್ಚ ಉಚಿತ. ೬ ಪೆಟ್ಟಿಗೆ ಪ್ಯಾಕೆಟಿನ ಕರಾರುಗಳು.
ಯಾವುದಾದರೂ ಸ್ವಲ್ಪ ವನಸ್ಪತಿ ಎಣ್ಣೆಯನ್ನು ಉಪಯೋಗಿಸಬೇಕು.
ಸ್ಟಾಕಿಸ್ಟರು ಬೇಕು: ಫ್ರೆಂಚ ಲ್ಯಾಂಟರ ಕಂಪೆನಿ, ೨೫೩ ಚಿಕ್ಕಪೇಟೆ, ಬೆಂಗಳೂರ ಸಿಟಿ

CHAMPAE'S
Snow & Castrex
(Sole Distributers for (India.)
Sukhananda Stores
Santhekatte, UDIPI, S. K.

ಯುದ್ಧಸ್ಥಿತಿ-ರಶ್ಯಾ-ಜಪಾನುಗಳೇನಂತೆ

'ಬರ್ಲಿನನ್ನು ಮುಂದಾಗಿ ಮುಟ್ಟುವವರಾರು? ಇಟಲಿಯ ಸೇನೆಯೋ, ಫ್ರಾನ್ಸ್ ಸೈನ್ಯವೋ, ಕೆಂಪು ಸೇನೆಯೋ?'-ಇಂತಹದೊಂದು ಜೂಜಿನ ಸ್ಫೂರ್ತಿಯೀಗ ಮೂಡಿದೆ. 'ಮುಟ್ಟಬಹುದಾದರೆ, ಅದನ್ನು ಮುಂದಾಗಿ ಸೇರುವದು ನಿಸ್ಸಂಶಯವಾಗಿ ಕೆಂಪು ಸೇನೆ' ಎಂದಿದಕ್ಕೆ ಖಂಡಿತೋತ್ತರ ಕೊಡಬಹುದು. ರಶ್ಯಾನರು ಇತ್ತೀಚೆಗಿನ ಒಂದೆರಡು ವಾರಗಳಿಂದ ಪಡೆಯುತ್ತಿರುವ ವಿಜಯುವಂತಹದು.

ಪ್ರಳಯ ನೆರೆ

'ಪರಿಸ್ಥಿತಿ ಗಂಭೀರವಾಗಿದೆ ಸರ್ವವೂ ಪಂಥಕ್ಕೊಡ್ಡಲ್ಪಟ್ಟಿದೆ. ರಶ್ಯನ್ ನೆರೆಯು ನಮ್ಮ ಪವಿತ್ರ ಜರ್ಮನ್ ಭೂಮಿಯತ್ತ ಧಾವಿಸುತ್ತಿದೆ'ಎಂದು ಜರ್ಮನ್ ವಾರ್ತಾಸಂಸ್ಥೆಯು ಬಿದೆ ಗುಂಡಿಗೆಯಿಂದ ಒಪ್ಪಿಕೊಂಡಂತೆ ರಶ್ಯಾನರ ಮುಂದೋಟ ಅತ್ಯಂತ ಪ್ರಬಲ ಹಾಗೂ ಅಪಾಯಕಾರಿಯಿದೆ. ಪೂರ್ವಪ್ರಶ್ಯ ಮತ್ತು ಪೋಲೆಂಡಿನ ರಾಜಧಾನಿ ವಾರ್ಸಾ, ಹಾಗೂ ಲುಬ್ಲಿನ್ ಕಡೆಗೆ ಓಟ ಸಾಗಿದೆ. ಇದಕ್ಕುತ್ತರ ಕಡೆ ರಶ್ಯಾ ಸರಹದ್ದಿನೊಳಗುಳಿದಿರುವ ಜರ್ಮನರನ್ನೆಲ್ಲಾ ಗುಡಿಸಿಬಿಡಲು ಪ್ಸ್ಕೋವ್ ವಲಯದಲ್ಲೂ ರಶ್ಯಾನರು ನೂತನ ಧಾಳಿ ಹೂಡಿದ್ದಾರೆ.

ಮುಂದಿನ ಗುರಿ?

ಪ್ರಶ್ಯಾಪೋಲೆಂಡ್ ವಲಯದ ಧಾಳಿಗಳಿಂದ ಜರ್ಮನರನ್ನೋಡಿಸಿಕೊಂಡು ಪ್ರತ್ಯಕ್ಷ ಜರ್ಮನಿಯ ಗಡಿಯೊಳಗೆ ನುಗ್ಗುವದೇ ಸ್ಟಾಲಿನರ ಗುರಿಯೆಂಬಂತೆ ಕಂಡರೂ, ರಶ್ಯಾಧಾಳಿಯಾರಂಭಿಸುವಾಗ ತಮ್ಮ ಕೇಂದ್ರ ನಿಲ್ದಾಣವಾಗಿ ಜರ್ಮನರು ಉಪಯೋಗಿಸಿದ್ದ ಪೂರ್ವ ಪ್ರಶ್ಯವು ಅಭೇದ್ಯವಿರಬಹುದೆಂದು ಅವರಿಗೆ ಗೊತ್ತಿದೆ. ಆದ್ದರಿಂದ ಅವರು ಇಲ್ಲಿ ನುಗ್ಗದಂತೆ ನಟಿಸಿ, ಅತ್ತ ರುಮೇನಿಯ ಗಡಿಯೊಳಗೆ ನುಗ್ಗಬಹುದೆಂಬ ಭೀತಿಯುದ್ದಿದೆ. ಪ್ರಕೃತ ಮಧ್ಯ ಪೋಲೆಂಡಿನ ದ್ವಾರದಲ್ಲಿ ಹಿಟ್ಲರರ ರಕ್ಷಣಾ ಲೈನು ಧ್ವಂಸವಾಗುತ್ತಿದೆ. ಪೂರ್ವಪ್ರಶ್ಯದ ಬಹುಭಾಗವನ್ನು ಜರ್ಮನರು ಖಾಲಿಮಾಡುತ್ತಿದ್ದಾರೆ.

ಫ್ರಾನ್ಸಿನಲ್ಲಿ —

ಕೆಯಿನನ್ನಾಕ್ರಮಿಸಿಕೊಂಡುದೂ ಚೆಬೋರ್ಗ್‌ದಿಂದ ದಕ್ಷಿಣಾಭಿಮುಖವಾಗಿ ಪ್ರಬಲ ಧಾಳಿಯಾರಂಭಿಸಿರುವದೂ ಮಿತ್ರ ಸೇನೆಗಳು ಹೆಮ್ಮೆ ಪಡಬೇಕಾದ ವಿಜಯಗಳು. ಆದರೆ ನೋರ್ಮಂಡಿ ರಣಕ್ಷೇತ್ರದಲ್ಲಿ ರೋಮೆಲನು ತನ್ನ ಯುದ್ಧ ಲೈನನ್ನು ಅನುಕೂಲತೆ ನೋಡಿ ಬದಲಾಯಿಸುತ್ತಿದ್ದಾನೆ ಹೊರತು ಎಲ್ಲಿಯೂ ಪೂರ್ಣ ಪರಾಭವಗೊಂಡಿಲ್ಲ. ಈಗಂತೂ ಆತನು ಅತಿಹೆಚ್ಚಿನ ಸರಬರಾಯಿ ಪಡಿಸಿಕೊಂಡು ನಿರ್ಣಯಾತ್ಮಕ ಭೀಕರ ಹೋರಾಟಕ್ಕಣಿಯಾಗುತ್ತಿರುವನೆಂದು ಮಿತ್ರರೊಪ್ಪಿದ್ದಾರೆ. ಇತ್ತೀಚೆಗಿನ ಕೆಲವು ದಿನಗಳಲ್ಲಿ ಮಿತ್ರರ ಪ್ರಗತಿ ಕುಂಠಿತವಾಗಿದೆ.

ಇಟಲಿಯಲ್ಲೇನು?

ಮಿತ್ರಸೇನೆಗಳ ಮುಂದೋಟ ನಿಧಾನಗೊಂಡಿದೆ; ಆದರೂ ದೃಢವಾಗಿದೆ. ಯುದ್ಧವು ಉತ್ತರ ಇಟಲಿಯ ಕಡೆಗೆ ಸಾಗಿದಂತೆ ಜರ್ಮನರ ತೊಂದರೆಗಳು ಹೆಚ್ಚುತ್ತಿವೆ. ಕೆಸ್ಸರ್‌ಲಿಂಗನು ಇಟಲಿಯಿಂದ ಸಂಪೂರ್ಣ ಹಿಂದೆಗೆದು ಬವೇರಿಯಾದ ರಕ್ಷಣೆಗೆ ನಿಲ್ಲಬಹುದೆಂಬ ಊಹೆಯೂ ಇದೆ. ಆದರೆ ಈ ತನಕ ಜರ್ಮನರ ಪ್ರತಿಭಟನೆಯೇನೂ ಸಡಿಲುಗೊಂಡಿಲ್ಲ.

ಜಪಾನ್ ಹೇಗೆ?

ಶಾಂತ ಸಮುದ್ರದಲ್ಲಿ ಟೋಕಿಯೋವಿಗೆ 1200 ಮೈಲು ದೂರದ ಸಾಯಿಪಾನ್ ದ್ವೀಪವನ್ನು ಅತಿ ಸಾಹಸದಿಂದ ಅಮೇರಿಕಾನರು ವಶಪಡಿಸಿಕೊಂಡುದು ಗಣನೀಯ ಘಟನೆ. ಇತ್ತ ಚೀನಾದ ಹುನಾನ್ ಮತ್ತು ಹೋನಾನ್ ಪ್ರಾಂತ್ಯಗಳಲ್ಲಿಜಪಾನರು ಹೂಡಿದ್ದ ಅಪಾಯಕಾರೀ ಧಾಳಿಯಿದಿರು ಚೀನೀಯರು ಪ್ರತಿಧಾಳಿ ಹೂಡಿ ಕೆಲವು ಕಡೆ ವಿಜಯ ಪಡೆದಿದ್ದಾರೆ. ಆತುರ ಮತ್ತು ಆಶ್ಚರ್ಯದಾಯೀ ನೂತನ ವಿದ್ಯಮಾನವೆಂದರೆ ಜಪಾನರು ತಮ್ಮ ವಿಜಯೀ ಹುನಾನ್ ಧಾಳಿಯನ್ನು ಅರ್ಧದಲ್ಲೇ ಸ್ತಬ್ಧಗೊಳಿಸಿ, ಅಲ್ಲಿಯ ಹೆಚ್ಚಿನ ಸೇನೆಗಳನ್ನು ರಶ್ಯಾ ... ಚೂರಿಯಾಕ್ಕೊಯ್ದಿರುವದು. ಈ ಕುರಿತು ವಿವಿಧ ಊಹಾಪೋಹೆಗಳೆದ್ದಿವೆ. ಹಿಟ್ಲರರ ಪ್ರೇರಣೆಯಂತೆ ಜಪಾನು ರಶ್ಯದ ಮೇಲೆ ಬೀಳಲಿದೆ ಎಂಬುದೊಂದು; ವಿಜಯೀ ರಶ್ಯವೇ ಮಂಚೂರಿಯವನ್ನಾಕ್ರಮಿಸಬಹುದೆಂಬುದಿನ್ನೊಂದು. ಸದ್ಯಸ್ಥಿತಿಯಲ್ಲಿ ಎರಡನೆಯದೇ ಜಪಾನೀಭೀತಿಗೆ ಕಾರಣವಿರಬಹುದು. ಬರ್ಮಾ-ಅಸ್ಸಾಮು ಗಡಿಯಲ್ಲಿ ವಿಶೇಷ ಘಟನೆಗಳಿಲ್ಲ.

ತಾರುಣ್ಯ

ಕೊಟ್ಟು, ವೀರ್‍ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣ ವಿಲಾಸಿನಿ** ಅತ್ಯುತ್ತಮ ಔಷಧ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನ ಬಜಾರ್ ರೋಡ್, ಮದ್ರಾಸು.

ಪುತ್ತೂರು ಏಜಂಟರು: —**ಶ್ಯೆ ಫಾರ್ಮಸಿ**

ನೋಟೀಸು

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 502/1943

ಶಿವಪ್ಪ ಕೊಡಾ—ವಾದಿರು

ಮತ್ತು

ಅಪ್ಪು ಹೆಂಗ್ಸು ಕೊಡಾ—ಪ್ರತಿವಾದಿರು,

5ನೇ ಪ್ರತಿವಾದಿ ಅಪ್ಪಪ್ಪ ಪರಮೇಶ್ವರಿ ಹೆಂಗ್ಸಿನ ಮಗ, ಮಂಗ್ಳೂರು ತಾಲ್ಲೂಕು ನಡುಗ್ರಾಮದಲ್ಲಿರುವವಗೆ.

ಸದ್ರಿ ಅಪ್ಪು ಹೆಂಗ್ಸು ವಗ್ಯೆರಿಕ ಮೇಲೆ ವಾದಿಯು ಜೀವನಾಂಶದ ಬಗ್ಗೆ ದಾಖಲು ಮಾಡಿದ ಮೇಲಣ ದಾವೆಯು ಅಖ್ಯೆರಿ ಚನ್ನಿಗೆ ತಾ 25-7-1944ಕ್ಕೆ ಇದೆ, ಆ ದಿವ್ಸ ನೀವು ಸದ್ರಿ ಕೋರ್ಟು ಮುಂದೆ ಪೂರ್ವಾಹ್ನ 10-30ಕ್ಕೆ ಹಾಜರಾಗಿ ಉದಹರಿಸಲು ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲಾದೀತು.

K. Suryanarayana Adiga

Advocate for Plf.

ಮಂಗ್ಳೂರು, 15-7-1944

ಎಂದಿಗೂ ಇದನ್ನು ಮಾಡದಿರಿ

ಗಾಡಿಯ ಹೊರಗಡೆ ಪ್ರಯಾಣಮಾಡದಿರಿ. ಹಾಗೆ ಮಾಡಿದಿರಾದರೆ, ಕೈಕಂಬಕ್ಕೋ, ಸೇತುವೆಗೋ ತಗಲಿ, ನಿಮ್ಮದೇಹವು ಚೂರುಚೂರಾಗುವದು. ಈ ರೀತಿಯ ಪ್ರಯಾಣವು ಕಾಯಿದಾ ವಿರುದ್ಧವಾದದ್ದರಿಂದ, ಅಪಘಾತವು ಸಂಭವಿಸಿದರ, ಅದಕ್ಕಾಗಿ ಯಾವ ಉಪಶಮನವೂ ಸಿಕ್ಕುವದಿಲ್ಲ. ಗಾಡಿಯ ಒಳಕ್ಕೆ ಪ್ರವೇಶವು ಸಿಕ್ಕದಿದ್ದರೆ, ಪ್ರಯಾಣವನ್ನೇ ಮಾಡದಿರಿ. ಮರಣಕ್ಕೂ ಅಪಾಕತಕ್ಕೂ ಆಸ್ಪದಕೊಡತಕ್ಕ ಅಪಾಯಕರವಾದ ಹವ್ಯಾಸವು ನಿಮಗೂ, ನಿಮ್ಮ ಕುಟುಂಬಕ್ಕೂ ಒಪ್ಪಿಯದಲ್ಲ.

ರೈಲುಗಾಡಿಗಳ ಮತ್ತು ರೈಲುಡಬ್ಬಿಗಳ ಸಂಖ್ಯೆಯು ಕಡಮೆಯಾಗಿರುವದರಿಂದ, ಈಚೆಗೆ ಗಾಡಿಗಳು ವಿಶೇಷವಾಗಿ ಜನರಿಂದ ಭರ್ತಿಯಾಗಿರುತ್ತವೆ. ಹೀಗೆ ಕಡಮೆಯಾಗಿರುವದಕ್ಕೆ ಕಾರಣವೆಂದರೆ, ಈಗ ರೈಲ್ವೆಯವರ ಪ್ರಥಮಕೆಲಸವೆಂದರೆ, ದೇಶದ ಎಲ್ಲಾ ಭಾಗಕ್ಕೂ ಆಹಾರಪದಾರ್ಥ, ಬಟ್ಟೆ ಮತ್ತು ಸಾಮಾನುಗಳನ್ನು ರವಾನಿಸುವದು. ಪ್ರಯಾಣಕ್ಕಿಂತಲೂ ನಿಮಗೆ ನಿಮ್ಮ ಆಹಾರ, ಬಟ್ಟೆ ಮತ್ತು ಆರೋಗ್ಯ ಇವುಗಳೇ ಮುಖ್ಯವಾದವುಗಳು.

ಕಡಮೆಯಾಗಿ ಪ್ರಯಾಣಮಾಡಿರಿ

AAA 684 KN

ಮತ್ತು ಅಪಾಯಕರವಾದ ರೀತಿಯಲ್ಲಿ ಎಂದಿಗೂ ಪ್ರಯಾಣ ಮಾಡದಿರಿ.

The Canara Banking Corporation Limited.

ESTD' 1906.

Authorised Capital	Rs. 25.00.000/-
Subscribed Capital ...	,, 16.00.000/-
Paid up Capital	,, 13 72.900/-
Reserves	,, 4 10 000/-

Total Working Capital—xEceeds One Crore.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers.

ನವಯುಗ

ಉಡುಪಿ, ಗುರುವಾರ ೨೦-೭-೧೯೪೪

ಸೋತು ಸರೀಕ್ಷಿಸೋಣ!

ಪಾಕಿಸ್ತಾನ್ ತತ್ವಕ್ಕೊಪ್ಪಿಗೆ ಕೊಡುವ ಮತ್ತು ಯುದ್ಧಾವಧಿಯಲ್ಲಿ ನಾಗರಿಕಾಡಳಿತೆಯ ರಾಷ್ಟ್ರೀಯ ಸರಕಾರದಿಂದಲೇ ತೃಪ್ತಿಪಡುವ, ಗಾಂಧೀ ಸಮ್ಮತ ಮತ್ತು ಗಾಂಧೀ ನಿರ್ಮಿತ ಸಂಧಾನ ಸೂತ್ರಗಳೆರಡು ಪ್ರಕೃತದ ರಾಜಕೀಯ ಸರ್ವಸ್ವವಾಗಿ ಸಾರ್ವಜನಿಕರ ಮುಂದಿವೆ. ಸ್ಪಷ್ಟವಾಗಿ ಹೇಳುವದಾದರೆ, ಇವೆರಡರಲ್ಲೂ ಗಾಂಧಿಜೀ ಸೋತು ಮುಸ್ಲಿಂ ಲೀಗ್ ಮತ್ತು ಸರಕಾರಕ್ಕೆ ವಿಜಯ ದೊರಕಿಸಿಕೊಟ್ಟಿದ್ದಾರೆ; 'ಸವಾಯಿ ರಾಜಾಜೀ'ಯಾಗಿದ್ದಾರೆ! ಭಾರತದ ರಾಜಕೀಯ ಬಿಕ್ಕಟ್ಟು ನಿವಾರಣೆಯಾಗಬೇಕು. ಗಾಂಧಿಜೀಯಿಂದಲೇ ಎಂದು ಅಂದಿನಿಂದ ಇದು ವರೆಗೂ ರಾಷ್ಟ್ರದ ಅಂಬೋಣ; ಲೀಗ್ ಮತ್ತು ಸರಕಾರದ ಹೇಳಿಕೆಯೂ 'ಮೊದಲ ಹೆಜ್ಜೆಯನ್ನು ಗಾಂಧಿಯವರೇ ಇಡಬೇಕು' ಎಂಬುದೇ. ಗಾಂಧಿಜೀಯಿಗ ಆ ಹೆಜ್ಜೆಯಿಟ್ಟಿದ್ದಾರೆ. ಸಮರ ಸೇನಾನಿ ಗಾಂಧಿ ಮತ್ತು ಸಂಧಾನ ಸಾಧಕ ಗಾಂಧಿ ಪ್ರತ್ಯೇಕ ಮನುಷ್ಯರೆಂಬಷ್ಟು ಅವರು ವಿನಯ ಪ್ರದರ್ಶಿಸಿದ್ದಾರೆ. ಪ್ರಕೃತ ಮಹಾತ್ಮಾಜೀ ಚಳವಳಗಾರರ ನಾಯಕರಾಗಿಲ್ಲ; ಮಂದಗಾಮಿಗಳ ಮುಂಭಾಗದಲ್ಲಿದ್ದಾರೆ ಮಿ. ಅಮೆರಿಯಾಗಲೀ, ಮಿ. ಜಿನ್ನಾರಾಗಲೀ ಗಾಂಧಿಜೀಯಿಂದ ಇಷ್ಟನ್ನು ನಿರೀಕ್ಷಿಸಿದ್ದರೆ? ಇದಕ್ಕಿಂತಲೂ ಹೆಚ್ಚಿನದನ್ನು ಕೇಳಲು ಸಾಧ್ಯವೇ?

ಗಾಂಧಿಜೀಯನ್ನು ಈ ರೀತಿ ಮತಾಂತರಗೊಳಿಸಿದುದಾವುದು? ಡಾ। ಬಿಡೆಯವರ ಸಂಜೀವನಾ ಚಿಕಿತ್ಸೆ,'ಅನಾರೋಗ್ಯ ಮತ್ತು ಮುದಿ ವಯಸ್ಸಿನ ಬಂಧನ'ವೇ; 1942ರಲ್ಲಿದ್ದ ಜಪಾನೀ ಆಕ್ರಮಣದ ಅಪಾಯೀಗ ನಿವಾರಣೆಗೊಂಡಿರುವದರಿಂದ ನಿಸ್ಸಹಾಯಕ ಗಾಂಧಿಜೀಗೆ ಸೆರೆಗೊಡ್ಡುವ ದೀನತ್ವ' ಒಂದಿಲ್ಲ ದೇಶದ ನಿಸ್ಸಹಾಯಕ ಸ್ಥಿತಿಯೇ ಅವರಿಗೀ ಪ್ರೇರಣೆ ಕೊಟ್ಟಿದೆ ಸದ್ಯದ ಆಹಾರಾಭಾವ, ಅನಾಯಕತ್ವಗಳು. ಗಾಂಧೀ ಹೃದಯವನ್ನು ಸೆರೆಹಿಡಿದ ಉಪಸಮಸ್ಯೆಗಳಾಗಿದ್ದರೆ ಅವರು ಭಾರತದ ನಾಯಕರಾಗಲು ಅಯೋಗ್ಯರನ್ನಿಸುತಿದ್ದರು. ಆದರೆ, ರಾಷ್ಟ್ರೀಯ ಸರಕಾರ ವಿನಹ ಇಂದಿನ ದುಸ್ಥಿತಿ ನಿವಾರಣೆಯು ಸಾಧ್ಯವೆಂಬುದು ಗಾಂಧಿಜೀಗೆ ಮನವರಿಕೆಯಾಗಿರುವ ವಿಷಯ. ಇಂತಹ ಸ್ಥಿತಿಯಲ್ಲಿ ಅವರೇನು ಮಾಡಬೇಕು? ಪೂರ್ಣ ಸ್ವಾತಂತ್ರ್ಯ ಧ್ಯೇಯಕ್ಕೆ ಭಂಗವೊಡ್ಡದ ತಾತ್ಕಾಲಿಕ ರಾಷ್ಟ್ರೀಯ ಸರಕಾರದಿಂದ ತೃಪ್ತಿಪಡುವೆನೆನ್ನ ಬೇಕಾಯಿತು. ಮೂಕ ಮಿಲಿಯ ಭಾರತೀಯರನ್ನು ನಿರಾಹಾರಿಗಳನ್ನಾಗಿ, ನಿಶ್ಚೇತರನ್ನಾಗಿ ಮಾಡಿರುವ ಇಂದಿನ ಬಿಕ್ಕಟ್ಟನ್ನು ಉಗ್ರ ರಾಷ್ಟ್ರಾಭಿಮಾನಕ್ಕನುಗುಣವಾಗಿ ಬಿಡಿಸಬೇಕಾದರೆ ಬ್ರಿಟಿಷರಿಂದ ಕೂಡಲೇ ಸ್ವಾತಂತ್ರ್ಯ ಕಿತ್ತುಗೊಳ್ಳುವ ಸಾಧ್ಯತೆಯಿರಬೇಕು. ಅದು ನಿಂತ ಹೆಜ್ಜೆಯಲ್ಲೇ ನಡೆಯುವಂತಿಲ್ಲವೆಂಬುದನ್ನು ಆಗೋಸ್ಟ್ ಗಲಭೆ ಕಲಿಸಿದೆ. ಅದಕ್ಕಿಂತ ಭಿನ್ನವಾದ ವ್ಯವಸ್ಥಿತ ರೀತಿಯಿಂದ ಅದನ್ನು ಸಾಧಿಸಲಾಗುವ ಕಾಲ ಇದಲ್ಲ. ಆ ಸ್ವಾತಂತ್ರ್ಯಕ್ಕಾಗಿ ಸ್ವಾಭಿಮಾನ ಮತ್ತು ಗಂಡೆದೆಯನ್ನು ಉಳಿಸಿಕೊಂಡು ಅನುಕೂಲ ಕಾಲ ಬರುವ ವರೆಗೆ ಕಾಯುವಷ್ಟು ತಾಳ್ಮೆ ರಾಷ್ಟ್ರಕ್ಕಿದೆ; ಆದರೆ ಸರ್ವನಾಶಕ್ಕೆ ಹೇತುವಾದ ಸದ್ಯದ ಬಿಕ್ಕಟ್ಟನ್ನು ಸಹಿಸಿಕೊಳ್ಳುವದು ಮಾತ್ರ ಅಸಾಧ್ಯ ಮತ್ತು ಅಪಾಯಕರ. ಅಂದಮೇಲೆ ರಾಷ್ಟ್ರಾಭಿಮಾನಕ್ಕೆ ಕುಂದಿಲ್ಲದ ಸಂಧಾನ ಸಾಧನೆಯೊಂದೇ ಸದ್ಯದ ಹಾದಿ; ಮಹಾತ್ಮಾಜೀಯ ರಾಷ್ಟ್ರೀಯ ಸರಕಾರದ ಬೇಡಿಕೆಯು ಇಂತಹ ಆಪದ್ಧರ್ಮವಾದ್ದರಿಂದ, ಸಮ್ಮತಿಸದವರು ಕೂಡಾ ಅದನ್ನು ಸ್ವಾಗತಿಸದೆ ನಿರ್ವಾಹವಿಲ್ಲ.

ರಾಜಾಜಿಯ ಬಲೆಗೆ ಬಿದ್ದು, ಪಾಕಿಸ್ತಾನ್ ಧೋರಣೆ ಸ್ವೀಕರಿಸಿ ಗಾಂಧಿಜೀ ಇಡೀ ರಾಷ್ಟ್ರವನ್ನು ವಿಭಾಗಗೊಳಿಸಿದ್ದಾರೆನ್ನಬೇಕು. ಇದು ಅನ್ಯಾಯವೆನ್ನಲು ನಾವೊಂದಿಷ್ಟು ಸಂದೇಹ ಪಡುವದಿಲ್ಲ—ಸದ್ಯ ಸ್ಥಿತಿಯಲ್ಲಿ ಅಗತ್ಯವೆಂಬ ಕುರಿತೂ ನಮ್ಮ ಅನುಮಾನವಿದೆ. ರಾಷ್ಟ್ರೀಯ ಸರಕಾರ ಸ್ಥಾಪನೆಯಾಗಬೇಕಾದರೆ ಹಿಂದೂ-ಮುಸ್ಲಿಂ ಒಪ್ಪಂದವಾಗಿ ಕೊಳ್ಳಬೇಕು ಎಂಬ ಕಠಿಣ ಶರ್ತವಿರುವದು ನಿಜ; ಗಾಂಧಿಜೀಯ ರಾಷ್ಟ್ರೀಯ ಸರಕಾರದ ಬೇಡಿಕೆಗೊಪ್ಪಿಗೆ ಕೊಡುವವರು,ಅದಕ್ಕಾಧಾರವಾಗಿರುವ ಅವರ ಈ ಸೂಚನೆಗೆ ಒಪ್ಪಲೆಂತೂ ಬಾಧ್ಯರಿದ್ದಾರೆ ಆದರೆ ಕೇವಲ ಸದ್ಯದ ಅನುಕೂಲತೆಗಾಗಿ ರಾಷ್ಟ್ರವು ತನ್ನ ಭಾವೀ ಜೀವಮಾನವನ್ನೇ ಕುಂಠಿತಗೊಳಿಸುವಷ್ಟು ಬಿಲಿತೆರಲು ಎಂತಹ ಸಂದರ್ಭಸಾಧಕನೂ ಒಪ್ಪಲಾರನು. ಇದೀಗ ದೇಶದ ಮುಂದೆ ಒಂದಿರುವ ವಿಷಮ ಜಾತೀಯ ಸಮಸ್ಯೆ.ಒಪ್ಪಂದವಾಗದೆ ರಾಷ್ಟ್ರೀಯ ಸರಕಾರವಿಲ್ಲ; ಲೀಗು ಸಮಾಧಾನ ಹೊಂದದೆ ಒಪ್ಪಂದವಿಲ್ಲ; ಪಾಕಿಸ್ತಾನ್ ವಿನಹ ಲೀಗಿಗೆ ಸಮಾಧಾನವಿಲ್ಲ—ಆದ್ದರಿಂದ ರಾಷ್ಟ್ರೀಯ ಸರಕಾರ ಸ್ಥಾಪನೆಗಾಗಿ ಪಾಕಿಸ್ತಾನ!

ಆ ಲಾಭ ಹೆಚ್ಚಿನದೋ, ಅದಕ್ಕಾಗಿ ಹೊಂದುವ ಈ ನಷ್ಟ ಹೆಚ್ಚಿನದೋ ಎಂಬುದನ್ನು ತೂಗಿ ನೋಡಬೇಕು. ಒಂದು ನ್ಯಾಯವಾದ ತಿದ್ದುಪಡಿಯನ್ನು ಅಂಗೀಕರಿಸಿದಲ್ಲಿ ಇದು ಲಾಭದಾಯೀ ವ್ಯಾಪಾರವೆನ್ನಬಹುದು. ರಾಜಾಜೀ ಸೂಚನೆಗಳಲ್ಲಿರುವಂತೆ ಯುದ್ಧ ಮುಗಿದೊಡನೆ ಗಡಿ ನಿರ್ಣಯಿಸಿಡಬೇಕು; ಆ ಗಡಿಯು ಹಿಂದುಸ್ಥಾನದಿಂದ ಪ್ರತ್ಯೇಕವಾಗಬೇಕೋ ಎಂಬುದನ್ನು, ಆ ಗಡಿಯೊಳಗಿನ ಮತಗಣನೆಯ ಬದಲಿಗೆ ಇಡೀ ರಾಷ್ಟ್ರದ ಮತಗಣನೆಯಿಂದ ನಿರ್ಧರಿಸಬೇಕು. ಯಾಕಂದರೆ ಆ ನಿರ್ಧಾರ ಹೊಂದುವನಕ ಇದು ಅಖಿಲ ಭಾರತದ ಪ್ರಶ್ನೆ ಹೊರತು ಒಂದು ಸರಹದ್ದಿನೊಳಗಿನ ಪ್ರಶ್ನೆಯಲ್ಲ. ಮುಸಲ್ಮಾನರು ಬಹುಸಂಖ್ಯಾಕರಾಗಿರುವ ಒಂದು ಗಡಿಯನ್ನು ಮುಂದಾಗಿ ವಿಂಗಡಿಸಿಟ್ಟ ಮೇಲೆ, ಅದರೊಳಗೇನೇ ಮತ ತೆಗೆಯುವ ಆವಶ್ಯಕತೆಯೇನು? ಅದು 'ಬೇರೆ ರಾಷ್ಟ್ರವಾಗಿ ಹೋಯಿತು' ಎಂದು ಸಾರಿದರೆ ಸಾಲದೆ? ವಿಭಾಗವನ್ನಪೇಕ್ಷಿಸದಂತೆ ಚುನಾವಣೆಯ ಮೊದಲು ಮುಸಲ್ಮಾನ್ ಬಹುಮತವನ್ನು ತಮ್ಮ ಕಡೆಗೊಲಿಸಿಕೊಳ್ಳಬಹುದೆಂಬ ವಿಶ್ವಾಸ ಗಾಂಧಿಜೀಗಾಗಲೀ ರಾಜಾಜಿಗಾಗಲೀ ಇರುವದಾದರೆ, ಅದನ್ನೀಗಲೇ ಸಾಧಿಸಿ, ಜಿನ್ನಾರಿಗೆ ಮುಸಲ್ಮಾನರಿಂದಲೇ ಉತ್ತರ ಕೊಡಿಸಬಾರದೇಕೆ? ಮುಸ್ಲಿಂ ಬಹುಮತದ ಅಭಿಪ್ರಾಯವನ್ನಿನ್ನು ತಿಳಿಯಬೇಕೆಂದಾದರೆ ಪಾಕಿಸ್ತಾನ್ ಕೂಗು ಜಿನ್ನರೊಬ್ಬರದೇ, ಎಂದಾಯಿತು. ಒಬ್ಬನ ಮಾತಿನಂತೆ ಒಂದು ರಾಷ್ಟ್ರವನ್ನು ಮುಂದಾಗಿ ವಿಂಗಡಿಸದೆ, ಇಡೀ ರಾಷ್ಟ್ರದ ಮುಂದೆ ಅದನ್ನಿಟ್ಟು ಮತಗಣನೆಯ ಮೂಲಕ ಅಭಿಪ್ರಾಯ ಪಡೆಯುವದೇ ನ್ಯಾಯವಲ್ಲವೆ?

ಆದರೆ ಮಿ. ಜಿನ್ನರಾಗಲೀ ಲೀಗಾಗಲೀ ರಾಜಾಜೀ ಸಂಧಾನ ಸೂತ್ರವನ್ನು ಈಗಿನ ರೂಪದಲ್ಲಿಯೇ ಒಪ್ಪಿಕೊಳ್ಳುವ ಸಂಭವವಿಲ್ಲ, ಅಂತೆಯೇ ಸರಕಾರವೂ ರಾಷ್ಟ್ರೀಯ ಸರಕಾರದ ಬೇಡಿಕೆಗೆ ಪೂರ್ಣ ಸಮ್ಮತಿ ಕೊಡಲಾರದು. ಅಧಿಕೃತ ಉತ್ತರವು ಈ ತನಕ ಇಕ್ಕಡೆಯವರಿಂದಲೂ ಬಂದಿಲ್ಲ. 'ಸ್ವೀಕರಿಸಿದೆವು' 'ಅಥವಾ ನಿರಾಕರಿಸಿದೆವು' ಎಂದು ಸ್ಪಷ್ಟವಾಗಿ ಯಾವ ಕಡೆಯವರೂ ಹೇಳಲಾರರೆಂಬುದು ಖಂಡಿತ. ಗಾಂಧಿಜೀಯಿಗ ಕೊಡದುಳಿದಿರುವ ಅಂಶಗಳನ್ನೂ ಕಿತ್ತುಕೊಳ್ಳುವ ಸೂಚನೆಗಳು ಅವರಿಂದ ಮುಂದೆ ಬರಬಹುದು ಆದ್ದರಿಂದ ರಾಷ್ಟ್ರೀಯ ಸ್ಫೂರ್ತಿಯೀಗ ಪಹರೆ ನಡಿಸಬೇಕು-"ನೀವು ಸೋತವನಂತೆ ಯಾಚನೆ ಮಾಡಿದಿರಿ. ಆಗಲಿ, ಹೃದಯವನ್ನೊತ್ತಿಹಿಡಿದು, ಕಂಠ ಬಿಗಿ ಹಿಡಿದು, ಈ ಕಹಿಯನ್ನು ನುಂಗಿಕೊಂಗಿಕೊಳ್ಳುತ್ತೇವೆ. ಆದರೆ ನಿಮ್ಮ ದೇವರಾಣೆಯಿದ. ಇನ್ನು ಒಂದೇ ಒಂದಿಂಚು ಮುಂದೊತ್ತಬೇಡಿ"ಎಂದು ಅಖಿಲ ರಾಷ್ಟ್ರವೀಗ ಗಾಂಧಿಜೀಯನ್ನು ಅಲ್ಲಿಯೇ ತಡೆದು ನಿಲ್ಲಿಸಬೇಕು. ಯಾಕಂದರೆ ಗಾಂಧಿಜೀಯೀಗ ಸ್ವಾತಂತ್ರ್ಯ ಮತ್ತು ಪರಾಧೀನತೆಯ ನಡುವಿನ ಸಂದಿಗ್ಧ ಗೆರೆಯಲ್ಲಿ ನಿಂತಿದ್ದಾರೆ; ಇನ್ನೊಂದೇ ಒಂದು ಹೆಜ್ಜೆ ಮುಂದಿಟ್ಟರೆ ರಾಷ್ಟ್ರೀಯತೆಯ ಪತನ ಖಂಡಿತ!

ರಶ್ಯಾನರ ಪ್ರಗತಿ

ಪೂರ್ವ ಪ್ರಶ್ಯದ ಗಡಿಯಿಂದ 45 ಮೈಲು ದೂರದಲ್ಲಿದ್ದು ಮಧ್ಯ ಪೋಲೆಂಡಿನ ರೈಲು ಮತ್ತು ರಸ್ತೆಕೇಂದ್ರವಾದ ಗ್ರೊಡ್ನೋವನ್ನು ಕೆಂಪುಸೇನೆ ವಶಪಡಿಸಿಕೊಂಡಿದೆ. ಪೂರ್ವ ಪ್ರಶ್ಯದಲ್ಲೇ ರಶ್ಯಾನರ ಪ್ರಗತಿಯನ್ನು ತಡೆಗಟ್ಟಿ ಪ್ರತ್ಯಕ್ಷ ಜರ್ಮನಿಗೇನೇ ಸಮೀಪಿಸುತ್ತಿರುವ ಈ ಅಪಾಯವನ್ನು ನಿವಾರಿಸಲು ಜರ್ಮನಿಯಲ್ಲಿದ್ದ ರಿಜರ್ವ್ ಸೇನೆಗಳು ಹೋಗುತ್ತಿವೆಯೆಂದು ತಿಳಿದು ಬರುತ್ತಿದೆ.

ಇಟಲಿಯಲ್ಲಿ

ಮಾರ್ಶಲ್ ಕೆಸ್ಸರ್ ಲಿಂಗನ ಈಗಿನ ಗೋಧ್ರಿಕ್ ಲೈನಿನ ಹೆಬ್ಬಾಗಿಲಾದ ಅರೆಝೋವನ್ನು ಎಂಟನೇ ಸೇನೆ ವಶಪಡಿಸಿಕೊಂಡಿದೆ. ಅಲ್ಲಿಯ ಮುಖ್ಯ ಹೆದ್ದಾರಿಯೊಂದನ್ನು ಕಡಿಯುವದರಲ್ಲಿ ಹಿಂದೀಸೇನೆಯು ಪಟ್ಟ ಸಾಹಸವು ಶ್ಲಾಘಿಸಲ್ಪಟ್ಟಿದೆ.

ಫ್ರಾನ್ಸಿನಲ್ಲಿ

ಕೆಲವು ದಿನ ನಿಧಾನಗೊಂಡಿದ್ದ ನೋರ್ಮಂಡಿಯಲ್ಲಿ ಪಶ್ಚಿಮಕರಾವಳಿಯಿಂದ ಬ್ರಿಟಿಷ್ ಸೇನೆ ಪುನಃ ತೀವ್ರವಾಗಿ ಧಾಳಿಯಿಡಹತ್ತಿದೆ. ಅಮೇರಿಕನ್ ಸೇನೆಯು ಸೈಂಟ್‌ಲೋದ ಕಡೆಗೆ ರಭಸದಿಂದ ಮುನ್ನುಗ್ಗುತ್ತಿದೆ.

ಅಸ್ಸಾಮು—ಬರ್ಮಾ

ಅಸ್ಸಾಮು ವಲಯದಲ್ಲಿ ಬಿಶೆನ್‌ಪುರ ಬಳಿಯಲ್ಲಿ ಜಪಾನರನ್ನು ಪುನಃ ಹಿಂದೋಡಿಸಲಾಗಿದೆ. ಉತ್ತರ ಬರ್ಮದಲ್ಲಿ ಕೆಲವು ತಿಂಗಳುಗಳಿಂದ ಸಾಗುತ್ತಿರುವ ಮಿಯಿಟ್ಕಿಯಾನಾ ಹೋರಾಟವು ಬಿರುಸಾಗಿ, ಆದರೆ ಅಲ್ಲಿಯೇ ನಡೆಯುತ್ತಿದೆ. ಮೋಗಾಂಗಿನ ದಕ್ಷಿಣ ಕಡೆಯ ಯುದ್ಧದಲ್ಲಿ ಚೀನೀ ಸೇನೆಯೊಂದು ವಿಜಯಪಡೆಯಿತೆಂದು ತಿಳಿದು ಬರುತ್ತದೆ.

ದ್ವೀಪಾಕ್ರಮಣ?

ಉತ್ತರ ಶಾಂತಸಮುದ್ರದಲ್ಲಿ ಜಪಾನಿಗೆ ಈಶಾನ್ಯ ದಿಕ್ಕಿನಲ್ಲಿರುವ ಕುರೈಲ್ ದ್ವೀಪಗಳನ್ನಾಕ್ರಮಿಸಿಕೊಳ್ಳಲು ಅಮೇರಿಕಾನರು ಸಿದ್ಧತೆಯಲ್ಲಿರುವರೆಂದು ಜಪಾನರಂದಿದ್ದಾರೆ. ಕೆಲವು ದಿನಗಳಿಂದ ಈ ದ್ವೀಪದ ಮೇಲೆ ಭಾರೀ ಆಕಾಶ ಧಾಳಿನಡೆಯುತ್ತಿದೆಯಲ್ಲದೆ ಅಮೇರಿಕನ್ ಸಬ್ ಮೇರೀನ್ ಚಟುವಟಿಕೆಗಳೂ ಕಂಡು ಬರುತ್ತಿವೆ.

ಬೋಂಬುಧಾಳಿ.

ಬರ್ಲಿನಿನ ಮೇಲೆ ಮತ್ತು ಸಾವಿರ ವಿಮಾನಗಳು ಮ್ಯುನಿಚಿನ ಮೇಲೆ ಮತ್ತೊಮ್ಮೆ ಬೋಂಬುಧಾಳಿ ನಡೆಸಿದವು.

ಸ್ವತಂತ್ರ ಫ್ರೆಂಚರು.

ಸ್ವತಂತ್ರ ಫ್ರೆಂಚ್ ನಾಯಕ ಜನರಲ್ ಡಿ ಗೋಲೆಯವರು ಅಮೇರಿಕಕ್ಕೆ ಹೋಗಿ, ಅಧ್ಯಕ್ಷ ರುಸವೆಲ್ಟರ ಭೇಟಿ ಪಡೆದು ಫ್ರಾನ್ಸ್ ಭವಿಷ್ಯದ ಕುರಿತು ಮಾತುಕತೆ ನಡೆಸಿ ಬಂದಿದ್ದಾರೆ. ಸದ್ಯದಲ್ಲೇ ಅವರು ಫ್ರಾನ್ಸಿಗೆ ತನ್ನ ಮುಖ್ಯ ಕಾರ್ಯಾಲಯವನ್ನೊಯ್ಯಲಿದ್ದಾರೆ.

ಫ್ರಾನ್ಸಿಗೆ ಸ್ವಾತಂತ್ರ್ಯ

ಒಂದು ವರುಷದೊಳಗೆ ಫ್ರಾನ್ಸಿನಿಂದ ಜರ್ಮನರನ್ನೋಡಿಸಲಾಗುವದೆಂದು ರುಸವೆಲ್ಟರ ಭವಿಷ್ಯ.1945ನೇ ಜುಲೈ 14 ರೊಳಗೆ ಫ್ರೆಂಚ್ ಜನತೆಯು ಆಕ್ರಮಣಗಾರರಿಂದಲೂ ವಿಚಿ ಗೊಂಬೆ ಸರಕಾರದಿಂದಲೂ ಬಿಡುಗಡೆ ಪಡೆದು ಸ್ವತಂತ್ರಗೊಳಿಸಲ್ಪಡುವದೆಂದು ಇದೇ ತಾ 14ರಲ್ಲಿ ಫ್ರಾನ್ಸಿಗೆ ಸಂದೇಶವಿತ್ತಿದ್ದಾರೆ.

ಕೆಂಪು ಸೇನೆಯ ಅಜೇಯ ಧಾಳಿ

ಗಾಂಧೀ ಸೂಚನೆಗೆ ಚರ್ಚಿಲ್ ಅಮೆರಿ ಉತ್ತರವೇನು?

ಅಸ್ಸಾಮು ಯುದ್ಧ ವೆಚ್ಚ

ಅಸ್ಸಾಮಿನಿಂದ ಜಾಪಾನರನ್ನೋಡಿಸುವ ಯುದ್ಧ ವೆಚ್ಚವು ಒಪ್ಪಂದಕ್ಕನುಸಾರವಾಗಿ ಭಾರತದ ಮೇಲೆಯೇ ಬೀಳುತ್ತದೆಂದು ಪಾರ್ಲಿಮೆಂಟಿನ ಪ್ರಶ್ನೆಯೊಂದಕ್ಕೆ ಮಿ. ಅಮೆರಿ ಉತ್ತರವಿತ್ತಿದ್ದಾರೆ.

ಹಾರುವ ಬೋಂಬು ಹಾವಳಿ

ಇಂಗ್ಲಾಂಡಿನ ಮೇಲೆ ಸಾರಥಿರಹಿತ ವಿಮಾನಗಳ ಧಾಳಿಯು ನಿರಾತಂಕವಾಗಿ ಮತ್ತು ನಿರಂತರವಾಗಿ ಸಾಗಿದ ಇತ್ತೀಚೆಗೆ ಈ ವಿಮಾನಗಳು ಹೆಚ್ಚಾಗಿ ಉತ್ತರ ದಿಕ್ಕಿನಿಂದ ಬರಹತ್ತಿರುವದರಿಂದ ಜರ್ಮನರು ಫ್ರಾನ್ಸಿನಂತೆಯೇ ಬೆಲ್ಜಿಯಮಿನಲ್ಲಿಯೂ ನಿಲ್ದಾಣಗಳನ್ನು ರಚಿಸಿಕೊಂಡಿರುವರೆಂದು ಗೊತ್ತಾಗಿದ

ಪೆಗ್ಗಿಂಗ್ ಮಸೂದೆ

ದ ಆಫ್ರಿಕದ ಸರಕಾರವು ಅಲ್ಲಿಯ ಹಿಂದೀಯರ ವಿರುದ್ಧ ಜ್ಯಾರಿಗೆತಂದಿದ್ದ ಪೆಗ್ಗಿಂಗ್ ಮಸೂದೆಯ ಕುರಿತು ಮಾಡಿಕೊಂಡ ಒಪ್ಪಂದದ ಕುರಿತು ಭಾರತೀಯ ಧುರೀಣ ಸ್ವಾಮಿ ಭವಾನಿ ದಯಾಳರು ಅಭಿಪ್ರಾಯ ವ್ಯಕ್ತಮಾಡುತ್ತಾ ಹಿಂದೀ ಸರಕಾರವು ಈ ಕುರಿತು ನಿರ್ಧರಿಸಿದ್ದ ಸಂಕ್ಷ ನುಗಳನ್ನು ಜ್ಯಾರಿಗೆ ತರಲಿಲ್ಲವೆಂದು ದೂರಿದ್ದಾರ.

ಹಣಕಾಸಿನ ಪರಿಷತ್ತು.

ಮಿತ್ರರಾಷ್ಟ್ರಗಳ ಜಾಗತಿಕ ಹಣಕಾಸಿನ ಪರಿಷತ್ತಿನಲ್ಲಿ ಭಾರತದ ಹಿತದೃಷ್ಟಿಯಿಂದ ಇಲ್ಲಿಯ ಪ್ರತಿನಿಧಿ ಸರ್ ಷಣ್ಮುಖಂ ಚೆಟ್ಟಿಯಾರರು ಮುಂತಂದ ಸೂಚನೆಗಳೆಲ್ಲಾ ಬಿದ್ದುಹೋಗಿವೆ. ಮುಖ್ಯವಾಗಿ ಅಮೇರಿಕನ್ ಪ್ರತಿನಿಧಿಗಳೇ ವಿರೋಧಿಸಿದರಂತೆ.

ಗಾಂಧಿಜೀಯ ಧೋರಣೆ

ಮಹಾತ್ಮಾಜೀಯ ಸಂಧಾನ ಸೂಚನಗಳು ಅಖಿಲ ಅಮೇರಿಕದಲ್ಲಿ ತೃಪ್ತಿ ಮತ್ತು ಆಸೆಯನ್ನೆಬ್ಬಿಸಿವೆ ಅಮೇರಿಕನ್ ಪತ್ರಿಕೆಗಳು ಭಾರತದ ಬಿಕ್ಕಟ್ಟು ನಿವಾರಣೆಯ ಹೆಬ್ಬಾಗಿಲನ್ನು ತೆರೆದ ಗಾಂಧಿಜೀಯನ್ನು ಶ್ಲಾಘಿಸಿವೆ . . . . ಬಹಳ ಸಮಸ್ಯಾತ್ಮಕವಾದ ಹಾಗೂ ಅಸ್ಪಷ್ಟವಾದ ಅಭಿಪ್ರಾಯಗಳೆದ್ದಿವೆ ಸಂಧಾನ ಶರ್ತಗಳನ್ನು ಸ್ಪಷ್ಟಪಡಿಸಲುಳಿದಿದೆಯೆಂದೂ ಮುಂದಾಗಿ ಹಿಂದೂ ಮುಸ್ಲಿಂ ಒಪ್ಪಂದವಾಗಿಕೊಳ್ಳುವದು ಮುಖ್ಯವೆಂದೂ ಸೂಚನೆಗಳು ಹೊರಟಿವೆ ಚರ್ಚಿಲ್, ಅಮೆರಿಯವರು ಯುದ್ಧಾವಧಿಯಲ್ಲಿ ಅರ್ಧರ್ಧ ಅಧಿಕಾರ ವಿಂಗಡಿಸುವಕ ರಾಷ್ಟ್ರೀಯ ಸರಕಾರದ ಪ್ರಶ್ನೆಯನ್ನೆತ್ತಿಕೊಳ್ಳುವಂತಿಲ್ಲವೆಂದು ಹೆಚ್ಚಿನವರ ಅಭಿಪ್ರಾಯ ಈ ಕುರಿತು ಕಾಮನ್ಸ್ ಸಭೆಯಲ್ಲಿ ಸವಿವರ ಚರ್ಚೆಯು ಸದ್ಯದಲ್ಲೇ ನಡೆಯಲಿದೆ

ರಾಜಾಜಿಯ ನಿವೇದನೆ.

ಹಿಂದೂ ಮಹಾಸಭೆಯೊಂದನ್ನು ಬಿಟ್ಟು ಮಿಕ್ಕ ಬಹುಮತವು ತನ್ನ ಸಂಧಿ ಸೂತ್ರಗಳಿಗನುಕೂಲವಿರುವದು ಸಂತೋಷವೆಂದೂ, ಮಹಾಸಭೆಯ ಅಭಿಪ್ರಾಯವನ್ನು ಮಾನ್ಯ ಮಾಡಿದಲ್ಲಿ ಹಿಂದೂ ಮುಸ್ಲಿಂ ಒಪ್ಪಂದವಾಗಲೀ ಬ್ರಿಟಿಷ್ ಆಳ್ವಿಕೆಯ ಅಂತ್ಯವಾಗಲೀ ಎಂದೆಂದಿಗೂ ಅಸಾಧ್ಯವೆಂದೂ ರಾಜಾಜೀ ಹೇಳಿಕೆಯಿತ್ತಿದ್ದಾರೆ. ಕಾಂಗ್ರೆಸಿನ ಅತಿ ಹೆಚ್ಚಿನ ಬಹುಮತವೂ ರಾಷ್ಟ್ರೀಯ ಭಾವನೆಯುಳ್ಳವರೂ ಇದಕ್ಕನುಕೂಲವಿರುವದು ಖಂಡಿತ. ಗಾಂಧಿಜೀಯಂತೆ ಜಿನ್ನರೂ ಇದಕ್ಕೆ ತನ್ನ ನೈತಿಕ ಬೆಂಬಲ ಕೊಟ್ಟು ಲೀಗ್ ಕಾರ್ಯಕಾರೀ ಸಮಿತಿಯ ಮುಂದಿಡಬೇಕು. ಹಾಗಾಗದಿದ್ದರೆ, ಇದನ್ನೊಂದು ಸಾರ್ವಜನಿಕ ಅಭಿಪ್ರಾಯವಾಗ ಲೀಗು ಪರ್ಯಾಲೋಚನೆಗೆತ್ತಿಕೊಳ್ಳಬೇಕು ಯಾವ ಹೊತ್ತಿನಲ್ಲಾದರೂ ಪ್ರತ್ಯೇಕವಾಗುವ ಅಧಿಕಾರವಿದರಲ್ಲಿ ಕೊಡಲ್ಪಟ್ಟಿದೆ ಕಾಂಗ್ರೆಸಿಗರು ಪ್ರಚಾರ ಬಲದಿಂದ ಮುಸಲ್ಮಾನ್ ಜನತೆಯ ಮತ ಪಡಕೊಂಡಾರೆಂಬ ಡಾ| ಅಂಬೇಡ್ಕರರ ಆರೋಪವು ಪೂರ್ಣ ಸುಳ್ಳು -ಎಂದು ರಾಜಾಜಿಯ ಸ್ಪಷ್ಟೀಕರಣ

ಗಾಂಧಿಜೀಯ ಕರೆ

'ನನ್ನ ಈಗಿನ ಧೋರಣೆಯು ಅಧಿಕಾರಿಗಳಿಗೆ ಸಮಾಧಾನಕರವಾಗಿ ಕಂಡು ಒಂದರೆ ಅವರು ಜೈಲು ದ್ವಾರಗಳನ್ನು ತೆರೆದು ಅಧಿಕಾರ ಬದ್ಧವಾಗಿ ಮಾತಾಡಬಲ್ಲವರನ್ನು ನನ್ನ ಸೂಚನೆಗಳ ಕುರಿತು ಅಭಿಪ್ರಾಯ ಕೊಡಲು ಬಿಡಬೇಕು; ಇಲ್ಲವೇ ಕೊನೆಯ ಪಕ್ಷ ನನ್ನನ್ನವರ ಭೇಟಿಪಡೆಯಲಿಕ್ಕಾದರೂ ಬಿಡಬೇಕು'ಎಂದು ಗಾಂಧಿಜೀ ಸೂಚಿಸಿದ್ದಾರೆ ಮಿ. ಜಿನ್ನರನ್ನು ಭೇಟಿಯಾಗಲು ತಾನು ಸದಾ ಸಿದ್ಧನೆಂದಿದ್ದಾರೆ.

ಕಾಗದನಿಯಂತ್ರಣಾಜ್ಞೆ.

ಹಿಂದೀ ಸರಕಾರವು ಕಳದ ಜೂನ್ ಮಧ್ಯದಿಂದ ಜಾರಿಗೆ ತಂದ ಪತ್ರಿಕಾ ಮಿತವ್ಯಯ ಶಾಸನವು ನ್ಯೂಸ್‌ಪ್ರಿಂಟ್ ಕಾಗದವನ್ನಲ್ಲದೆ, ಇತರ ಕಾಗದಗಳನ್ನುಪಯೋಗಿಸುವ ಎಲ್ಲಾ ಪತ್ರಿಕೆಗಳ ಪುಟಗಳಲ್ಲೂ ಪತ್ರಿಕಾಲಯಗಳ ಕೆಲಸಗಳಲ್ಲೂ ಸರ್ವಸಾಮಾನ್ಯ ಶೇಕಡಾ 70ರಷ್ಟು ಕಡಿತ ಹಾಕಿರುವದರಿಂದ ದೇಶದಲ್ಲೆಲ್ಲಾ ಹಾಹಾಕಾರವೆದ್ದಿದೆ. ಈ ಕುರಿತು ಸರ್. ಅಕ್ಬರ್ ಹೈದರಿಯವರ ಅಧ್ಯಕ್ಷತೆಯಲ್ಲಿ ಬೊಂಬಾಯಿಯಲ್ಲಿ ಜರಗಿದ ಸಮ್ಮೇಲನದಲ್ಲೂ ಅಲ್ಪಸ್ವಲ್ಪ ಬದಲಾವಣೆಗಳ ಹೊರತು ಮೂಲತಪ್ಪನ್ನು ತಿದ್ದುವದಸಾಧ್ಯವಾಯಿತು. ನ್ಯೂಸ್ ಪ್ರಿಂಟನ್ನು ಉಪಯೋಗಿಸುವ ಕುರಿತಿರುವ ನಿಯಂತ್ರಣಾಜ್ಞೆಯಲ್ಲಿ ಈ ವರೆಗಿದ್ದ ವಾರ್ತಾ ಪತ್ರಿಕೆಗಳ ಬೆಲೆನಿಯಂತ್ರಣವನ್ನು ಸರಕಾರವೀಗ ರದ್ದುಗೊಳಿಸಿದು. ಇನ್ನು ಪತ್ರಿಕೆಗಳಿಗೆ ದರವೇರಿಸುವ ಅಥವಾ ಇಳಿಸುವ ಅಧಿಕಾರವಿದೆ.

WANTED

A competant clerk who knows to keep proper accounts of controlled articles. Qualification- S S. L. C. Decent pay will be offered. Hindu preferred. Security essential. Apply to

The Secretary,
Shirva Coopetative Stores, Ltd No L. 458. Shirva (S.K)

ಸ್ಥಾಪನೆ] 'ಕಿರಿಯರ ಪ್ರಪಂಚ'ದ [1930

ನೋಡಿದರೆ ಬಿಡದಿರುವ ಪುಸ್ತಕಗಳು

ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳಿಂದ

ಅನ್ನದೇವರು ಮತ್ತು ಇತರ ಕಥೆಗಳು
ವಿಚಾರಕ್ರಾಂತಿಯನ್ನುಂಟುಮಾಡುವ ೧೪ ಸಣ್ಣ ಕತೆಗಳ ಸಂಗ್ರಹ ಬೆಲೆ ೦-೧೨-೦

ಶ್ರೀ ಕ ವಿಟ್ಠಲ ಶೆಣೈ ಬಿ ಎ, ಎಲ್ ಟಿ ಯವರಿಂದ

ನಗೆನೋಟಗಳು ಬೆಲೆ ೦-೧೨-೦
ದಣಿದ ಮನವನ್ನು ತಣಿಸಿ ವಿನೋದದೊಡನೆ ವಿವೇಕವನ್ನೂ ಉಂಟು ಮಾಡುವ ೧೧ ಜೀವನ ಚಿತ್ರಗಳ ಸಂಗ್ರಹ

ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ

ಮೂರು ಪ್ರಹಸನಗಳು ಬೆಲೆ ೦-೧೪-೦
ಓದಿದರೂ ಅಭಿನಯಿಸಿದರೂ ಸ್ವಾರಸ್ಯವಾಗಿ ತೋರುವ ಮೂರು ಪ್ರಹಸನಗಳ ಸಂಗ್ರಹ

ಭಾರತೀಯ ಕತೆಗಳು ಬೆಲೆ ೦-೧೪-೦
ಶ್ರೀ ಎ ಎಸ್ ಪಂಚಾಪಕೇಶ ಐಯ್ಯರ್, ಎಂ ಎ, ಐ ಸಿ ಯಸ್, ಬಾರ್ ಎಟ್ ಲಾ ಇವರ Tales of Ind ಎಂಬ ಕಥಾವಳಿಯ ಕನ್ನಡ ಅನುವಾದ

ನಂದಾದೀಪ ಬೆಲೆ ೦-೧೦-೦
ಬೋಧಪ್ರದವಾದ ೧೧ ಕಥೆಗಳ ಸಂಗ್ರಹ

ಶ್ರೀ ಕ ಕೆ ಶೆಟ್ಟರಿಂದ

ಪ್ರೇಮವಿಜಯ ಬೆಲೆ ೦-೧೨-೦
ಕ್ರಾಂತಿಕಾರಕ, ಹೃದ್ರಾವಕ, ವಿಚಾರಪ್ರಚೋದಕ ನಾಟಕ

ದೇಶಭಕ್ತ ಬೆಲೆ ೦-೧೪-೦
ರಾಜಕೀಯ ಸಾಮಾಜಿಕ ನಾಟಕ ಹೊಸ ಪ್ರಯೋಗ

ಸನ್ಯಾಸಿಯ ಸೋಗಿನಲ್ಲಿ ಬೆಲೆ ೦-೮-೦
ವೇಶ್ಯಾಪುತ್ರಿಯಾದರೂ ನೀತಿವಂತ ಜೀವನ ನಡೆಸುವ ಮನಸುಳ್ಳವಳಾದರ ಸಮಾಜವು ಅದಕ್ಕೆ ಅಡ್ಡಿಯೊಡ್ಡಿ ಅವಳ ಜೀವನವನ್ನು ಹೇಗೆ ಕೆಡಿಸುತ್ತದೆಂಬುದನ್ನು ಚಿತ್ರಿಸುವ ನವೀನ ಸಾಮಾಜಿಕ ಕಾದಂಬರಿ

ಪುರುಷ ವಧು ಬೆಲೆ ೦-೪-೦
ಮುಮುಕನ ಮದುವೆಯ ಭ್ರಾಂತಿಯ ಪ್ರಹಸನ

ಹೆಂಡ್ತಿ ಗಂಡನಾದರೆ? ಬೆಲೆ ೦-೪-೦
ಸ್ತ್ರೀಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಪ್ರಹಸನ

ವ್ಯಭಿಚಾರಿಣಿ ಯಾರು? ಬೆಲೆ ೦-೧೨-೦
ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕ

ಮುಂದಿನ ದೇವರು ಬೆಲೆ ೦-೩-೦
ಹಿಂದಿನ, ಇಂದಿನ ಮತ್ತು ಮುಂದಿನ ಸಮಾಜವ್ಯವಸ್ಥೆಯನ್ನು ವಿಚಾರಪೂರ್ಣವಾಗಿ ಸೂಕ್ಷ್ಮವಾಗಿ ವಿವರಿಸುವ ಪ್ರಬಂಧ

ಕುಶಲವ ಬೆಲೆ ೦-೫-೦
ನವ ಪೌರಾಣಿಕ ನಾಟಕ

ಸಂಶಯ ಪಿಶಾಚಿ ಬೆಲೆ ೦-೮-೦
ಅಳಿಯಕಟ್ಟಿನ ಮುಖ್ಯವಾಗಿ ಬಂಟ ಸಮಾಜದ ಸದ್ಯದ ನಡವಳಿಕೆಯನ್ನೂ ಅದರ ದುಷ್ಪರಿಣಾಮವನ್ನೂ ಚಿತ್ತವೇದಕವಾಗಿ ಚಿತ್ರಿಸಿ ಸಮಾಜದೇಳಿಗೆಯ ಮಾರ್ಗ ಸೂಚಿಸುವ ನಾಟಕ

ಶ್ರೀ. ಕೆ ಹೂನ್ನಯ್ಯ ಶೆಟ್ಟರಿಂದ

ಸ್ವತಂತ್ರ ಜೀವನೋಪಾಯ ಬೆಲೆ ೦-೩-೦
ಜೀವನದ ಹೋರಾಟವನ್ನು ಕಣ್ಣ ಮುಂದಿರಿಸಿ ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪ್ರಹಸನ

ವಿವಿಧ ಕತೆಗಾರರಿಂದ

ನಾಡಕತೆಗಳು ಬೆಲೆ ೦-೩-೦
ಸಮಾಜದ ಸ್ವಜಚಿತ್ರಗಳನ್ನೊಳಗೊಂಡ ಕತಾಸಂಗ್ರಹ

ಮಧುವನ ಬೆಲೆ ೩-೦-೦
ಕರ್ನಾಟಕದ ಪ್ರಸಿದ್ಧ ಕತೆಗಾರರ ಉಚ್ಚ ತರಗತಿಯ ಕಥಾಸಂಗ್ರಹ.

ವಿವಿಧ ಕವಿಗಳಿಂದ

ಕಾವ್ಯ ಸಾಮ್ರಾಜ್ಯ ಬೆಲೆ ೦-೧೨-೦
ಆಧುನಿಕ ಕವಿತೆಗಳ ಉತ್ತಮ ಸಂಗ್ರಹ

ಶ್ರೀ ಎಸ್. ವೆಂಕಟರಾಜರಿಂದ

ರಂಗಭೂಮಿ ಬೆಲೆ ೦-೮-೦
ಅಪಾತ್ರರು 'ರಂಗಭೂಮಿ'ಯ ಸೇವೆಗೆ ಹೊರಟರ ಆಗುವ ದುಷ್ಪರಿಣಾಮವನ್ನು ತೋರಿಸುವ ವಿನೋದಪರ ನಾಟಕ.

ಶ್ರೀ ಎಸ್ ಎಲ್ ಸುಬ್ರಹ್ಮಣ್ಯರಿಂದ

ಸೇವಾಪಥ ಬೆಲೆ ೦-೮-೦
ಶೇಟ್ ಗೋವಿಂದದಾಸರ ಹಿಂದೀ ನಾಟಕದ ಅನುವಾದ ಆಧುನಿಕ ರಾಜಕೀಯ ವಾತಾವರಣದಿಂದ ಕಲ್ಪಿತವಾದುದು

ನಾರೀ ಹೃದಯ ಬೆಲೆ ೦-೧೨-೦
ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ ಶ್ರೀಮತಿ ಶಿವರಾಣಿ ದೇವಿಯರ ಹದಿನಾಲ್ಕು ಹಿಂದೀ ಕತೆಗಳ ಅನುವಾದ.

ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆಯವರಿಂದ

ಪ್ರಕಾಶ ಬೆಲೆ ೧-೧೨-೦
ಶೇಟ್ ಗೋವಿಂದ ದಾಸರ ರಾಜಕೀಯ ಸಾಮಾಜಿಕ ನಾಟಕದ ಭಾಷಾಂತರ. ಅತಿಕ್ರಾಂತಿಕಾರಕ.

ವಿಕ್ರಯಾಧಿಕಾರಿಗಳು

ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಷರ್ಸ್,
ಉಡುಪಿ.

(ಕೆಟಲಾಗಿಗ ಒಂದಾಣೆಯ ಸ್ಟಾಂಪಿನೊಂದಿಗೆ ಬರೆಯಿರಿ.)

ದಕ್ಷಿಣ ಕನ್ನಡ-

ಮಂಗಳೂರು

ಸಂಗೀತ:-ಮಂಗಳೂರು ಸಂಗೀತ ಮಂಡಳಿಯ ಆಶ್ರಯದಲ್ಲಿ, ರಾವ್‌ಬಹದ್ದೂರ್ ಎನ್. ಎಮ್. ಅದ್ಯಂತಾಯ, ಬಿ. ಎಸ್. ಸಿ., (ಎಡಿನ್‌ಬರೊ) ಇವರ ಸಂಗೀತಕಚೇರಿಯೂ, ಶ್ರೀ ಎಚ್. ಶಾರದನಾಥರಾವ್ ಇವರ ತಬ್ಲಾವಾದನವೂ ಶ್ರೀ ರಂಗಭವನದಲ್ಲಿ ಕಳೆದ ತಾ 9ನೇ ರವಿವಾರ ಸಾಯಂಕಾಲ 5 45ಕ್ಕೆ ನಡೆಯಿತು.

ಸೆಂಟ್ರಲ್ ಮೈದಾನ್:-ಈ ವರ್ಷ ಸೆಂಟ್ರಲ್ ಮೈದಾನು, ಯುದ್ಧಕಾಲದ ದೊಡ್ಡ ಒರೆ ಹೊತ್ತಿದ್ದೆ, ಸ್ಥಳಗಿನ ಕಾರಣದಿಂದ ನೆಟ್‌ಸ್ಪ್ರ್‌ ವಾರ್ಕೆಟನ್ನು ಮೂರು ತಿಂಗಳು ಜೊತ್ತಿತು; ಈಗ ಮಿಲಿಟರಿಗಾಗಿ ಸಾಗಿಸಲ್ಪಡುವ ಹಂಚು ದಾಸ್ತಾನಿಗೆ ಈ ಸ್ಥಳವನ್ನು ಉಪಯೋಗಿಸಲಾಗುತ್ತಿದೆ. ಸ್ಥಳಾನುಕೂಲತೆಯಿಲ್ಲದೆ ಈ ವರ್ಷ ಕ್ರಿಕೆಟ್ ಆಟಗಳಿಲ್ಲವೆಂದು ತೋರುವುದು.

ಮೀನು, ಮಾಂಸ, ತರಕಾರಿಗಳಿಗೆ ದರ ನಿರ್ಣಯ:-ಮೀನು, ಮಾಂಸ, ತರಕಾರಿ, ಹಣ್ಣು ಹಂಪಲು—ಇವಕ್ಕೆಲ್ಲ ದರ ನಿರ್ಣಯ ಮಾಗಬೇಕೆಂದು ಮುನಿಸಿಪಲ್ ಕೌನ್ಸಿಲಿನವರು ಜಿಲ್ಲಾಧಿಕಾರಿಗಳಿಗೆ ಅರಿಕೆಮಾಡಿಕೊಂಡಿದ್ದರು. ಮುನಿಸಿಪಲ್ ಕೌನ್ಸಿಲಿನವರು, ದರ ನಿರ್ಣಯಿಸಿ ಅದನ್ನುಲ್ಲಂಘಿಸುವವರಿಗೆ ಅಧಿಕೃತ ಮಾರ್ಕೆಟುಗಳೊಳಗೆ ವ್ಯಾಪಾರಕ್ಕೆ ಸ್ಥಳಕೊಡದೆ ಸಿರಾಕರಿಸಬಹುದೆಂದು ಜಿಲ್ಲಾಧಿಕಾರಿಗಳು ಬರೆದಿರುವರಾಗಿ ತಿಳಿದು ಬರುತ್ತದೆ. ತಾ 17ಕ್ಕೆ ಜರಗಲಿರುವ ಮುನಿಸಿಪಲ್ ಸಭೆಯಲ್ಲಿ ಈ ವಿಚಾರವು ಇತ್ಯರ್ಥವಾಗಲಿದೆ.

ಶ್ರೀ ಎ. ಕೃಷ್ಣಾಜಿರಾವ್:-ದಸ್ತಗಿರಿಮಾಡಲ್ಪಟ್ಟ ಶ್ರೀ ಎ. ಕೃಷ್ಣಾಜಿರಾವ್, ಅವರು ಇನ್ನೂ ಪೋಲಿಸ್ ಕಾವಲಿನಲ್ಲಿ ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಹೊಂದುತಿದ್ದಾರೆ. ಪೂರ್ಣ ಗುಣಹೊಂದಲು ಇನ್ನೂ 12-15 ದಿನಗಳು ಬೇಕಾಗಬಹುದೆಂದು ತಿಳಿದುಬರುತ್ತದೆ. ತಾ. 5ನೇ ರಾತ್ರಿ ಜಮಿಂದೊಂದಿದ ಮೈಸೂರಿನ ಎರಡು ಮಂದಿ ಪೂರ್ಣಗುಣಹೊಂದಿ, ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುವರು, ಶ್ರೀ. ಕೃಷ್ಣಾಜಿರಾಯರ ಮೇಲೆ 'ಚಾರ್ಜುಶೀಟು' ತಯಾರಾಗುತ್ತಿದೆ.

ಕೆನರಾ ಚೇಂಬರ್ ಒಫ್ ಕೊಮರ್ಸ್:-ಕೆನರಾ ಚೇಂಬರ್ ಒಫ್ ಕೊಮರ್ಸ್ ಇದರ ಸದಸ್ಯರಲ್ಲಿ ಆಹಾರ ಜೀನಸುಗಳ ವ್ಯಾಪಾರ ನಡಿಸುವಂಥವರು, ಜಿಲ್ಲೆಯಲ್ಲಿನ ಅಕ್ಕಿಯ ಅಭಾವವನ್ನು ಮನಗಂಡು ರೇಶನಿಂಗ್ ಜ್ಯಾರಿಯಲ್ಲಿಲ್ಲದಂತಹ ಗ್ರಾಮಗಳಲ್ಲಿ ಅಕ್ಕಿಯ ಬೆಲೆಯಲ್ಲಿ ಒಂದಂಶವಾಗಿ ಜನರಿಗೊದಗುವಂತೆ ಅಧಿಕೃತ ವ್ಯಾಪಾರಸ್ಥರ ಮೂಲಕ ಮಾರಾಟಕ್ಕೊಪ್ಪಿಸಲು, ಜಿಲ್ಲಾಧಿಕಾರಿಗಳಿಗೆ ಹೆಸರು, ಕಡಲೆ ಮತ್ತು ತಡಗಿಣೆ ಇವರ ಒಟ್ಟು 2700 ಗೋಣಿ (ಸುಮಾರು 6500 ಮುಡಿ) ಒದಗಿಸಲು ನಿಶ್ಚಯಿಸಿರುವರು. ಜಿಲ್ಲಾಧಿಪತಿಗಳು ಇದನ್ನಂಗೀಕರಿಸುವರೆಂದು ನಿರೀಕ್ಷಿಸಲಾಗಿದೆ

ಬಟಾಟೆ-ಮಣಕ್ಕೆ ರೂ 10|-ರಂತೆ ಮಾರಾಟವಾಗುತ್ತಿದ್ದ ಬಟಾಟೆಯನ್ನು, ಅಧಿಕಾರಿಗಳು ಕಳೆದ ಶನಿವಾರ ಮಾರಾಟಕ್ಕೆ ಬಿಟ್ಟುಕೊಟ್ಟರು. ಮಣಕ್ಕೆ ರೂ 3-14 0ರಂತೆ ಮಾರಾಟವಾಗುತ್ತಿದೆ.

ಕಾಗದ ನಿಯಂತ್ರಣಾಜ್ಞೆಗೆ ನಿಷೇಧ
ಸರಕಾರದವರು ಹೊರಡಿಸಿರುವ ಕಾಗದ ನಿಯಂತ್ರಣ (ಮಿತವ್ಯಯ) ಆರ್ಡರ್, 1944)ಇದರ ಬಗ್ಗೆ ನಿಷೇಧ ಸೂಚಿಸಿ, ಮಂಗಳೂರಿನ ಛಾಪಖಾನಾ ಮಾಲಿಕರು ಸೇಕಡಾ 70ರ ಕಡಿತವನ್ನು ಇನ್ನೂ ಕಡಿಮೆ ಮಾಡಿಸಬೇಕೆಂದು ಕೇಂದ್ರ ಸರಕಾರದಲ್ಲಿ ಕೇಳಿಕೊಳ್ಳಲು ಸಭೆಗೂಡಲಿರುವರೆಂದು ತಿಳಿಯುತ್ತೇವೆ

ಮಂಗಳೂರು ಮೋಟಾರ ಆಫೀಸಿನಲ್ಲಿ ಪ್ರಯಾಣಿಕರ ಗೋಳಾಟ:-

"ದಕ್ಷಿಣ ಕನ್ನಡಾ ಜಿಲ್ಲೆಯ ಕೇಂದ್ರಸ್ಥಳ ಹಾಗೂ ಮುಖ್ಯ ಪಟ್ಟಣವಾದ ಮಂಗಳೂರು ಪೇಟೆಯ ಎರಡು ಬಸ್ಸು ಆಫೀಸುಗಳಲ್ಲಿ ಪ್ರಯಾಣಕ್ಕೆ ಬಸ್ಸಿನ ಸೌಕರ್ಯವೂ ಪ್ರಯಾಣಿಕರಿಗೆ ಕೂತುಕೊಳ್ಳುವ ಸ್ಥಳದ ಸೌಕರ್ಯವೂ ಇಷ್ಟರವರೆಗೆ ಚಕ್ಕಮುಟ್ಟಿಗೆ ಒಳ್ಳೆ ಸ್ಥಿತಿಯಲ್ಲಿತ್ತೆಂದು ಹೇಳಬಹುದು, ಇತ್ತೀಚೆಗೆ ಬಸ್ಸು ಸರ್ವಿಸು ಕಡಿಮೆಮಾಡಿದ್ದರೂ ಚಿಂತಿಲ್ಲ. ಆದರೆ ಎರಡು ಮೋಟಾರು ಆಫೀಸುಗಳನ್ನು ಒಂದುಗೂಡಿಸಿದ್ದಾರೆ, ಪಾಪ ಪ್ರಯಾಣಿಕ ಹೆಂಗಸರು ಮಕ್ಕಳಿಗೆ ಬಸ್ಸು ಆಫೀಸಿನಲ್ಲಿ ಕುಳಿತುಕೊಳ್ಳುವರೆ ಯಾವತರದ ಸೌಕರ್ಯವೂ ಇಲ್ಲದೆ ಮಳೆಗಾಳಿಯಲ್ಲಿ ಕೊಡೆಹಿಡಿದು ಬೀದಿಯಲ್ಲಿ ನಿಂತು ಗೋಳಿಡುವ ಆ ಬಿಂತಾಜನಕ ಪರಿಸ್ಥಿತಿಯನ್ನು ನೋಡುವುದು ಅಸಾಧ್ಯವೂ ಅಸಹ್ಯವೂ ಆಗಿದೆ. ಬೀದಿಯ ಮಳೆನೀರು ಆಫೀಸಿನ ಒಳಕ್ಕೇನೆ ಬರುತ್ತಿದೆ. ಕೂತುಕೊಳ್ಳಲೊಂದು ಬೆಂಚು ಕೂಡಾ ಇಲ್ಲ. ಉಡುಪಿಯಂಥಾ ಚಿಕ್ಕ ಪಟ್ಟಣದಲ್ಲಿ ಮುನ್ಸಿಪಾಲ್ಟಿಯವರು ಬಸ್ಸು ಪ್ರಯಾಣಿಕರ ಸೌಕರ್ಯಕ್ಕಾಗಿ ನಿಲ್ದಾಣವನ್ನೇರ್ಪಡಿಸಿದ್ದನ್ನು ನೋಡಿಯಾದರೂ ಮಂಗಳೂರು ಮುನ್ಸಿಪಾಲ್ಟಿಯವರಾಗಲೀ ಬಸ್ಸುಕಂಪೆನಿಯವರಾಗಲೀ ಒಂದು ನಿಲ್ದಾಣವನ್ನೇರ್ಪಡಿಸಿ ಪ್ರಯಾಣಿಕ ಹೆಂಗಸರು ಮಕ್ಕಳ ಈ ಗೋಳಾಟವನ್ನು ನಿವಾರಣೆ ಮಾಡಬಾರದೆ? ಇಂಥಾ ಪಟ್ಟಣದಲ್ಲಿ ಈ ಗೋಳಾಟವನ್ನುನೋಡಲು ನಾಚಿಕೆಯಾಗುವುದಿಲ್ಲವೆ? ಈ ಗೋಳಾಟವನ್ನ ನೋಡುವುದರಲ್ಲಿ ಬಸ್ಸು ಕಂಪೆನಿಯವರಿಗೂ ಮುನ್ಸಿಪಾಲಿಟಿಯವರಿಗೂ ಆನಂದವೇ? ದಯಮಾಡಿ ಆಫೀಸನ್ನು ಮೊದಲು ಇದ್ದಲ್ಲಿಗಾದರೂ ವರ್ಗಾಯಿಸಿರಿ |ಇಲ್ಲವಾದರೆ ಬೇಗನೇ ಒಂದು ನಿಲ್ದಾಣವನ್ನೇರ್ಪಡಿಸಿರಿ" ಎಂದು ಪ್ರಯಾಣಿಕರೊಬ್ಬರು ಬರೆಯುತ್ತಾರೆ.

ಉಡುಪಿ

ಕೀರ್ತಿಶೇಷ ಅಂಗರ ಸೆಟ್ಟರ ಭಾವಚಿತ್ರ ಅನಾವರಣ:-ಸ್ಥಳೀಯ ಡಿ|ಮು| ಕೋರ್ಟಿನಲ್ಲಿ 15ವರುಷಗಳ ತನಕ ಪ್ಲೀಡರಾಗಿದ್ದು 1905ರಲ್ಲಿ ದಿವಂಗತರಾದ-ಕೀರ್ತಿಶೇಷ ಅಂಗರ ಸೆಟ್ಟರ ಭಾವಚಿತ್ರವನ್ನು ವಕೀಲ್ ಶ್ರೀ ವಿಠಲ ಕಾಮತರು ತಾ 13ರಲ್ಲು ಬಾರ್ ಎಸೋಸಿಯೇಶನ್ ರೂಮಿನಲ್ಲಿ ಅನಾವರಣ ಮಾಡಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಡಿ| ಮುನ್ಸಿಫ್ ಮಿ| ಡಿ| ನೊರೊನಾ ಅವರು ವಹಿಸಿದ್ದರು, ಸಬ್‌ಕಲೆಕ್ಟರ್ ಶ್ರೀ ಸಾಥೆಯವರು ಸಹ ಹಾಜರಿದ್ದರು ದಿವಂಗತರ ಸಹಪಾಟಿಗಳಾಗಿದ್ದ ವಕೀಲ್ ಮಿ| ಫೆರ್ನಾಂದೀಸರು ಶ್ರೀ ಅಂಗರ ಸೆಟ್ಟರ ಗುಣಕಥನಮಾಡಿದರು, ತರುವಾಯ ಅಧ್ಯಕ್ಷರ ಕಾಲೋಚಿತ ಮಾತುಗಳಾದುವು. ವಕೀಲ್ ಶ್ರೀ. ಕೆ. ಸದಾಶಿವ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು. ಭಾವಚಿತ್ರವನ್ನು ತಯಾರಿಸಿ ಕೊಟ್ಟವರು ದಿವಂಗತರ ಪ್ರಥಮ ಪುತ್ರ ಶ್ರೀ ಕೆ ಅನಂತ ಸೆಟ್ಟರು.

ಕಸ್ತೂರಿಬಾ ಸ್ಮಾರಕನಿಧಿ ಸಂಗ್ರಹದ ಸಲುವಾಗಿ:-ತಾ 16ರಲ್ಲು ನವಯುಗ ಪ್ರೆಸ್ಸಿನಲ್ಲಿ ಸಭೆಯೊಂದು ಜರಗಿ ನಿಧಿ ಸಂಗ್ರಹದ ಸಲುವಾಗಿ ಕಾರ್ಯಕಾರೀ ಮಂಡಲಿಯ ರಚನೆಯಾಯಿತು. ಶ್ರೀಯುತರುಗಳಾದ ಕೊಚ್ಚಿಕಾರ್ ಪದ್ಮನಾಥ ಪೈ, ಅಧ್ಯಕ್ಷ; ಕೆ, ಜೆ ಬಲ್ಲಾಳ್, ಯು.ಎ. ಪೈ, ಡಾ| ಪಿ. ಜಿ. ಆಚಾರ್, ಉಪಾಧ್ಯಕ್ಷರು; ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್ ಪ್ರಧಾನ ಕಾರ್ಯದರ್ಶಿ ಮತ್ತು ಖಜಾಂಚಿ; ಬಾಳ್ಕಟ್ಟುಬೀಡು ಕೃಷ್ಣಯ್ಯ ಹೆಗ್ಡೆ, ಜತೆಕಾರ್ಯದರ್ಶಿ, ಬಿ, ಜಿ, ಕಾಮತ್, ಎಮ್, ವಾಮನ ಭಟ್, ಪಂಡಿತ್, ಟಿ, ಎನ್ ಕೇಳು ನಂಬಿಯಾರ್, ನಾನಾಲಾಲ್ ಶೇಟ್, ಯು, ನಾಗಪ್ಪ ಶಾವತ್, ಕೆ, ಹೊನ್ನಯ್ಯ ಸೆಟ್ಟಿ, ಆರ್. ಆರ್. ಕುಂಜೂರು, ನರಶಿಂಹ ವಿಠಲ ಕಾಮತ್, ಕಾನಾಡ್ ಮಂಗೇಶರಾವ್, ಆರ್-ಎಮ್ ಅಂಬ್ರಾಡೆ ಮತ್ತು ಶ್ರೀಮತಿ ಪಿ ಮನೋರಮಾ ಬಾಯಿ ಇವರು ಸದಸ್ಯರು, ಉಡುಪಿಗೆ ತಕ್ಕುದಾದ ನಿಧಿಸಂಗ್ರಹ ಕಾರ್ಯದಲ್ಲಿ ಮಹಾಜನರು ಶಕ್ತ್ಯಾನುಸಾರ ಸಹಕರಿಸಬೇಕಾಗಿ ವಿನಂತಿ.

ವಿಷಮ ಜ್ವರ:-ನಗರದಲ್ಲಿ ದಿನೇ ದಿನೇ ವಿಷಮ ಜ್ವರದ ಸೋಂಕಣೆ ಮತ್ತು ಮರಣಗಳ ಕೂಗು ಕೇಳಿಸುತ್ತಿದೆ. ಡಾಕ್ಟರರಿಗೆಪುರುಸತ್ತು ಯಿಲ್ಲದಂತಾಗಿದೆ.

ಹುಚ್ಚುತನ ಉಚ್ಚಾಟನೆಯ ವೈದ್ಯರು:-ಉಡುಪಿ ತಾಲೂಕು ಕೊಡವೂರು ಗ್ರಾಮದ ಪೆಗ್ಗುವ ರಕಾಲ ಎಂಬವಂಗೆ ಸಾಧಾರಣ 12ವರ್ಷಗಳಿಂದ ಹಿಡಿದಿದ್ದ ಹುಚ್ಚುತನವನ್ನು ಬರೀ 15 ದಿನಗಳ ಔಷಧಿಯಿಂದ ಮಂಗಳೂರಿನ ಶ್ರೀ ಅಚ್ಯುತ ವೈದ್ಯರು ಸಂಪೂರ್ಣ ಹೋಗಲಾಡಿಸಿರುತ್ತಾರೆ. ವೈದ್ಯರ ಮೆರವಣಿಗೆಯು ಆಗೋಸ್ತು ತಾ 1ರಲ್ಲು ನಗರದ ನಡೆಯಲಿಕ್ಕಿರುವುದಾಗಿ ತಿಳಿಯುತ್ತೇವೆ-

ಡಾಕಿನ ಗಲಾಟೆ:-ಹಳ್ಳಿಹಳ್ಳಿಗಳಲ್ಲಿ ಪರ್ಷಂಪ್ರತಿಯೂ ಪತ್ರಿಕೆಯಬ್ಬನಿಗೂ ಡಾಕು ಹಾಕುವರೆಂದು ಎಲ್ಲೆಲ್ಲೂ ಕೇಳಬರುತ್ತದೆ, ಅರೆ ಹೊಟ್ಟೆಯ ವೇಳೆ ಡಾಕುಬೇಕೇ?

ಪಡುಬಿದ್ರೆ:-ಇಲ್ಲಿಯ ಜವಳಿ ಸಾಹುಕಾರ್ ಶ್ರೀ ಕೆ. ಕರಿಯಣ್ಣ ಸೆಟ್ಟರ ಮಗ ಸಾಧಾರಣ ಎಂಟೊಮರೆ ವರ್ಷ ಪ್ರಾಯದ ಜಯರಾಮನೆಂಬವನು ಕಳೆದ ತಾ 21ರಲ್ಲು ಸಂಜೆ ಆಕಸ್ಮಿಕ ಮರಣಗೊಂಡ ವಿಷಾದಕರ. ಒಂದು ದಿನದ ಜ್ವರಕ್ಕೆ ತುತ್ತಾದ ಎಳೆ ಬಾಲಕನ ಮರಣದಿಂದುಂಟಾದ ಆತನ ತಂದೆ ತಾಯಿ ಬಂಧುವರ್ಗದವರ ಶೋಕದಲ್ಲಿ ಸಹ ಸಂತಾಪವನ್ನು ಸೂಚಿಸುವೆವು. ಬಾಲಕನ ಆತ್ಮಕ್ಕೆ ಶಾಂತಿಯುಂಟಾಗಲಿ.

ಬಿಲ್ಲವರ ಎಸೋಸಿಯೇಶನ್ ಮುಂಬಯಿ:-ಇದರ ವಾರ್ಷಿಕ ಹಾಗೂ ಒಂದು ವಿಶೇಷ ಮಹಾಸಭೆಗಳು ತಾ.23-7-44ಕ್ಕೆ ಎಸೋಸಿಯೇಶನಿನ ಮಂದಿರದಲ್ಲಿ ಜರಗಲಿರುವುದು.

ಸ್ವೀಕಾರ— ವಿಮರ್ಶೆ

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ:--ಈ ಸಂಸ್ಥೆಯ 1944ನೇ ದಶಂಬರಾಂತ್ಯದ ವರೆಗಿನ 41ನೇ ವಾರ್ಷಿಕ ವರದಿ (ಪರಿಶೋಧಿತ ಲೆಕ್ಕ ಪತ್ರಗಳನ್ನೊಳಗೊಂಡದ್ದು) ನಮ್ಮ ಕೈಸೇರಿದೆ. ಹಿಂದುಳಿದ ಸಮಾಜವಾದ ಮೊಗವೀರರ ಅಭ್ಯುದಯ ಸಾಧನೆಗಾಗಿ 1902 ರಲ್ಲಿ ಸ್ಥಾಪನೆಗೊಂಡು, ಅಭಿವೃದ್ಧಿ ಪಥದಲ್ಲಿ ವಿಶಾಲ ಹೆಜ್ಜೆಯಿಡುತ್ತಾ ಬಂದಿರುವ ಈ ಜನೋಪಯೋಗಿ ಹಿರಿಯ ಸಂಸ್ಥೆಯು, ವಿದ್ಯಾರ್ಥಿ ವೇತನ, ಮುಂಬಯಿಯಲ್ಲೊಂದು ಪ್ರೈವೇಟ್ ಹೈಸ್ಕೂಲು, ಒಂದು ತ್ರೈಮಾಸಿಕವಹಿ, ಇತ್ಯಾದಿಗಳ ಮೂಲಕ ಅತ್ಯುಪಯುಕ್ತ ಸೇವೆ ಸಲ್ಲಿಸಿದೆ. ಸಾಧಾರಣ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲೂ ಗಣನೀಯ ಕಾರ್ಯಮಾಡಿದೆ. ಧನಾಢ್ಯರ ಆರ್ಥಿಕ ಬೆಂಬಲ, ಗುಣಾಢ್ಯರ ಸಹಾನುಭೂತಿ, ಕಾರ್ಯಕರ್ತರ ಅವಿಶ್ರಾಂತ ಪರಿಶ್ರಮದಿಂದ ಮೊಗವೀರ ಸಮಾಜದ ಪ್ರಗತಿಯನ್ನು ಸಾಧಿಸುತ್ತಿರುವ 'ಮಂಡಳಿಗೆ' ಸರ್ವತೋಮುಖ ಬೆಂಬಲ ದೊರೆಯಲೆಂದು ಹಾರೈಕೆ.

ಹರಿಜನ ಸೇವಾ ಸಂಘ, ಕಾರ್ಕಳ
31—3—1944ಕ್ಕೆ ಅಂತ್ಯವಾಗುವ 8ನೇ ವರುಷದ, ಪರಿಶೋಧಿತ ಲೆಕ್ಕ ಪತ್ರ ಮತ್ತು ವರದಿಯು ಪರಿಶೀಲನೆಗಾಗಿ ಬಂದಿದೆ: ವಕೀಲ್ ಶ್ರೀ. ಕೆ. ಮಹಾಬಲ ಹೆಗ್ಡೆಯವರು ಅಧ್ಯಕ್ಷರಾಗಿಯೂ ಸೇವಾಸಕ್ತ ಆಢ್ಯ ಮಹನೀಯರು ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ, ಇತರ ಮಹನೀಯ—ಮಹಿಳೆಯರು ಸಾಮಾನ್ಯ ಸದಸ್ಯರಾಗಿಯೂ ತಾಲೂಕಿನಲ್ಲಿ ಹರಿಜನ ಸೇವೆಯನ್ನು ಮುಖ್ಯವಾಗಿ ಹರಿಜನ ಭವನವನ್ನು ಸ್ವಂತ ವ್ಯವಸ್ಥೆಯಿಂದ ನಡಿಸುತ್ತಿದ್ದಾರೆ. ವರದಿಯು ಪ್ರಗತಿ ಪರವಿದೆ, ಈ ದಲಿತೋದ್ಧಾರ ಕಾರ್ಯಕ್ಕೆ ಸರ್ವರ ಬೆಂಬಲವಿರಲೆನ್ನುತ್ತೇವೆ.

ಅನಾಥ ಶಿಶು ಸಂರಕ್ಷಣಾಲಯ, ಮಲ್ಲೇಶ್ವರಂ, ಬೆಂಗಳೂರು:-ಹಿಂದೂ ಸಮಾಜದ ಶಿಶು ಹತ್ಯೆಗೆ ಬಾಲಕರನ್ನು ತಡೆಗಟ್ಟುವ ಉಚ್ಚ ಧ್ಯೇಯದಿಂದ ಆಳ್ವಿಕೆ ಕೇಸರಿ ವೇ|ಬ್ರ| ಶಿವಮೂರ್ತಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ 1942ರಲ್ಲಿ ಸ್ಥಾಪನೆಗೊಂಡಿದ್ದ ಸಂಸ್ಥೆ. ಮೈಸೂರಿನ ಆರೋಗ್ಯ ಸಚಿವ ಶ್ರೀ. ಬಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಜರಗಿದ ವಾರ್ಷಿಕೋತ್ಸವ ಕಾಲದ ಸಚಿತ್ರ ವರದಿ ವಿಮರ್ಶೆಗಾಗಿ ನಮ್ಮ ಬಳಿ ಬಂದಿದೆ. ದಯಾಪೂರಿತ ಸಹಾಯಕ್ಕಾಗಿ ಮೀಸಲಿರುವ ಈ ಸಂರಕ್ಷಣಾಲಯದ ಅಭಿವೃದ್ಧಿಯನ್ನು ಕೋರುತ್ತೇವೆ.

Degrees. Books: Medicines
Free H. L M, S, M, B H. M, D, etc, Free Homeo-Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs 4 Insanity Cure Pills Rs, 10 Enclose 2 annas stamp —
Prof, Dr, N, H, Chbatbar,
Principal Indian Homeopathi Institute & Society (Govt, Regd)
P O. MAHUVA (Kathiawar Dt, India).

Sidha-Kalpa Kavach (Regd)
No, 3 Rs, 2 No 2 Rs 5 No. 1 Rs, 7 Special Rs 10, Extra Special Rs, 17 for marriage health wealth, Ask any six questions with M O, Re. 1|4, and get correct answers by return,post Life reading Rs,10No,V, P.Send M, O. Free, pmplets.
Prof. Dr. N, H Chhatbar,,
P. O. MAHUVA (Kathiawar India.)

ನಡಿಯುವ ಚಿತ್ರ-
ಪಾಂಚೋಳಿ ಚಿತ್ರ.
ಜಮೀನ್ದಾರ್
ಅನಂತರ
ಸನ್‌ರ್ಯಾಸ್ ಚಿತ್ರ-
ಸೋಹಾಗನ್ ಅಥವಾ ಸೌಭಾಗ್ಯವತಿ
ಖಜ್ಜನ್ ಮತ್ತು ಕುಮಾರ್

Read & Advertise in
ANTARANGA

The Board of Directors,
Sri Narayan Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director

ಗಾಂಧಿಜೀಯ ಸಂಧಾನ ಸೂತ್ರಗಳು

ದೇಶ ವಿದೇಶಗಳವರ ಅಭಿಪ್ರಾಯ.

'ತಮ್ಮ ಸ್ವಂತ ಜವಾಬ್ದಾರಿಯಿಂದ ದೇಶದ ಪೂರ್ವ ಮತ್ತು ವಾಯುವ್ಯ ಗಡಿಗಳನ್ನು ಯಾರಾದರೊಬ್ಬರಿಗೆತ್ತಿಕೊಡಲು ಅವು ಗಾಂಧಿಜೀಯ ಅಥವಾ ರಾಜಾಜೀಯ ಸ್ವಂತಾಸ್ತಿಗಳಲ್ಲ' -ಶ್ರೀ ಸಾವರ್ಕರ್.

'ಮುಸ್ಲೀಮರಿಗೆ ಪ್ರತ್ಯೇಕಾಧಿಕಾರ ಕೊಟ್ಟು ರಾಜಗೋಪಾಲಾಚಾರ್ಯರು ಪಡೆವ ಲಾಭವೇನು? ಕ್ರೈಸ್ತರು, ಸಿಖ್ಖರೇ ಮೊದಲಾದವರು ಇದೇ ಬೇಡಿಕೆಯನ್ನು ಮುಂದಿಟ್ಟರೆ, ಮತ್ತು ಈಗಲೇ ಎದ್ದಿರುವ ದ್ರಾವಿಡ ಸ್ಥಾನ್ ಬೇಡಿಕೆಗೆ 'ಇಲ್ಲ' ಎನ್ನಲು ಆಚಾರ್ಯರಿಗಿನ್ನು ಸಾಧ್ಯವೆ?'

-ಡಾ| ಮೂಂಜೆ.

'ಮಹಾತ್ಮಾ ಗಾಂಧಿಯಂತಹ ದೃಢ ಬುದ್ಧಿಯ ಮನುಷ್ಯನು, ರಾಜಗೋಪಾಲಾಚಾರಿ ಯೋಜನೆಗೆ ಸಮ್ಮತಿಕೊಟ್ಟುದು, ತೀವ್ರವಾಗಿ ದಿಗಿಲುಗೊಳಿಸುವಂತಹದಿದೆ ಮುಸಲ್ಮಾನರಿಗೆ ಜಿನ್ನರಂತಹ ಕಠಿಣ ನಿರ್ಧಾರದ ನಾಯಕನಿರುವಾಗ ಗಾಂಧಿಜೀ ರಾಜಾಜೀಯಂತಹ ಧುರೀಣರನ್ನು ಪಡೆದ ಹಿಂದುಗಳ ಭವಿಷ್ಯಕ್ಕೆ ಅಂಧಕಾರ ಕವಿದಿದೆ'-ಭಾಯಿ ಪರಮಾನಂದ.

'ಗಾಂಧಿಜೀಯ ಪಾಕಿಸ್ತಾನ್ ತತ್ವ ಸ್ವೀಕಾರ' (ಜಮೀನ್ದಾರ್), 'ಲೀಗಿನ ಅತ್ಯಮೋಘ ವಿಜಯ'(ಉರಾನ್), 'ಕಾಂಗ್ರೆಸು ಸಂದರ್ಭವಶಾತ್ ಪಾಕಿಸ್ತಾನ್ ತತ್ವ ಸ್ವೀಕರಿಸಿತು' (ಶಾಬಾಝ್).

-ಲೀಗ್ ಪತ್ರಿಕೆಗಳು.

'ಒಪ್ಪಂದಕ್ಕಾಗಿ ಗಾಂಧಿಜೀ ಪಡುತ್ತಿರುವ ಆತುರವೆಂತಹದೆಂಬುದು ಇದರಿಂದ ಸ್ಪಷ್ಟ. ಇನ್ನು ತಡ ಮಾಡದೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರನ್ನು ಬಿಡಬೇಕು; ಅಥವಾ ಅವರೊಡನೆ ಸಂಭಾಷಿಸಲು ಗಾಂಧಿಜೀಯನ್ನು ಬಿಡಬೇಕು'

—ಸರ್ ಸಪ್ರು.

'ರಾಜಾಜೀ ಸೂಚನೆಗೊಪ್ಪಿಗೆಕೊಟ್ಟು ರಾಷ್ಟ್ರೀಯತೆಯನ್ನು ಗಾಂಧಿಜೀಯೊಂದೇ ಒಂದು ಇಂಚು ಮುಂದೊಯ್ದಿಲ್ಲ; ಬದಲಿಗೆ ಅದನ್ನು ಬಹಳವಾಗಿ ಹಿಂದೂಡಿದ್ದಾರೆ. ಎಲ್ಲಾ ಕಡೆಗಳಲ್ಲೂ ಸತತವತ್ತ ಧಾವಿಸುತಿದ್ದ ಜಿನ್ನರನ್ನು ಕಾಂಗ್ರೆಸು ಕೈಕೊಟ್ಟು ಉದ್ಧರಿಸಿತು'

—ಡಾ| ಎಸ್. ಪಿ ಮುಖರ್ಜಿ

'ಜಿನ್ನರ ಪಾಕಿಸ್ತಾನ್ ಎಂಬುದು ಸ್ವಾತಂತ್ರ್ಯ ಹಾದಿಗೊಂದು ಅಡ್ಡ ಬೇಲಿ ಹಿಂದುಸ್ಥಾನವನ್ನು ವಿಭಾಗಿಸುವ ಪ್ರಶ್ನೆಯ ಮೇಲೆ ಜಿನ್ನರಿಗಾಗಲೀ ಅವರ ಲೀಗಿಗಾಗಲೀ, ಮುಸ್ಲೀಂ ಬಹುಮತವಿರುವ ಪ್ರಾಂತ್ಯಗಳಲ್ಲಾದರೂ ಚುನಾವಣೆಗೆ ನಿಲ್ಲುವ ಧೈರ್ಯವಿಲ್ಲವೆಂಬುದು ಖಂಡಿತ".

—ಮಿ. ಖವಾಜಾ

'ಜಿನ್ನರಿದನ್ನು ಅಂಗೀಕರಿಸಿದರೆ ಲೀಗಿನ ರಾಜಕೀಯ ಹತ್ಯೆಯನ್ನೂ ತನ್ನ ಆತ್ಮಹತ್ಯೆಯನ್ನೂ ಮಾಡಿಕೊಂಡಂತಾಗುವದು —ನಿರಾಕರಿಸಿದರೆ ಜಾಗತಿಕ ಅಭಿಪ್ರಾಯದಿದಿರು ಮಹಾ ಅಪಕೀರ್ತಿಗೊಳಗಾಗಬೇಕಾಗುವದು. ಜಿನ್ನರನ್ನೀಗ ಅಭಿನಂದಿಸಬೇಕು ಜಿನ್ನರೇ ಹೊರತು ಇನ್ನೊಬ್ಬರಿಲ್ಲ'

—ಸರ್. ಅಬ್ದುಲ್ ಗಜ್ನವಿ.

'ಅತಿದೊಡ್ಡ ವ್ಯವಹಾರಜ್ಞ ಗಾಂಧಿಜೀ ಸಂದರ್ಭಕ್ಕೆ ಸರಿಯಾಗಿ ರಾಷ್ಟ್ರೀಯ ಸರಕಾರ ಸ್ಥಾಪನೆಗೊಪ್ಪಿದ್ದಾರೆ. ಗತಕಾಲದ ಕಹಿ ಅನುಭವವನ್ನು ಸಂಪೂರ್ಣ ಮರೆತು ಬ್ರಿಟಿಷ್ ಮತ್ತು ಹಿಂದೀಯರೊಂದಾಗಬೇಕು'

—ಶ್ರೀ ಮುನ್ಷಿ.

''ಸದ್ಯ ಸ್ಥಿತಿಯಲ್ಲಿ ಎಲ್ಲಾ ಜಾತಿಮತಗಳವರೂ ರಾಜಾಜೀ ಸೂಚನೆಗಳನ್ನೊಪ್ಪಿಕೊಳ್ಳುವದು ಭಾವೀ ಪ್ರಗತಿಗನುಕೂಲ'' —ದೇಶಪಾಂಡೆ ಮತ್ತು ಲಟ್ಟೆ.

'ಎಲ್ಲಾ ಧರ್ಮ, ಜಾತಿ, ಸಂಸ್ಕೃತಿಗಳಿಗೆ ರಕ್ಷಣಾ ಏರ್ಪಾಡು ಇರಬೇಕೆಂಬುದಕ್ಕೆ ನಮ್ಮ ಒಪ್ಪಿಗೆಯಿದ್ದರೂ ದೇಶವನ್ನೀರೀತಿ ವಿಭಾಗಿಸುವ ಯೋಜನೆಗೆ ನಾವು ಸಂಪೂರ್ಣ ವಿರೋಧಿ'

—ಸರ್. ಚಿಮನಲಾಲ್ ಮತ್ತು ಸರ್. ಚಂದಾವರಕರ್.

'1942ರ ಪರಿಸ್ಥಿತಿ ಈಗ ಇಲ್ಲವೆಂಬ ಗಾಂಧೀಮಾತು ಸತ್ಯ. ಆಗ ಯುದ್ಧಸ್ಥಿತಿ ವೈರಿಗಳಿಗನುಕೂಲವಿತ್ತು—ಈಗ ಬ್ರಿಟಿಷರಿಗನುಕೂಲವಿದೆ ಆಗ ಗಾಂಧಿಯವರಲ್ಲಿ ಹೋರಾಟದ ಸ್ಫೂರ್ತಿ ಇತ್ತು; ಈಗ ಕಾಹಿಲೆ ಮತ್ತು ವೃದ್ಧಾಪ್ಯದ ಬಂಧನದಿಂದ ಅವರು ಪೂರ್ತಿ ಜಗ್ಗಿದ್ದಾರೆ. ಸದ್ಯದ ವೈಸರಾಯೀ ಸದಸ್ಯರು ಸೂತ್ರದ ಗೊಂಬೆಗಳೆನ್ನುವವರಿದ್ದಾರೆ. ಗಾಂಧಿಯವರ ರಾಷ್ಟ್ರೀಯ ಸರಕಾರದಲ್ಲಿರುವದೂ ಈ ಗೊಂಬೆಗಳ ಬದಲಿಗೆ ಬೇರೆ ಗೊಂಬೆಗಳೇ'

—ಡಾ| ಖರೆ.

'ನನ್ನ ಈಗಿನ ಸ್ಥಿತಿಯಲ್ಲಿ ನಾನು ರಾಜಕೀಯ ಜಗಳಗಳಲ್ಲಿ ಕೈಹಾಕುವಂತಿಲ್ಲವಾದರೂ ಹೆಚ್ಚಿನ ಆಶ್ರಿತ ರಾಜ್ಯಗಳು ದೇಶದ ವಿಭಾಗವನ್ನು ವಿರೋಧಿಸುವವೆಂದು ನಿರ್ಭಯವಾಗಿ ಹೇಳಬಲ್ಲೆ'. —ಸರ್. ಸಿ ಪಿ.

'ರಾಜಾಜೀ ಸೂಚನೆಗಳನ್ನು ಮಹಾತ್ಮರೇ ಸೂಚಿಸಬೇಕಿತ್ತು. ಕೆಲವು ಕೊರತೆಗಳಿರುವವಾದರೂ ಜಿನ್ನರಿವನ್ನೊಪ್ಪಿಕೊಳ್ಳುವದಗತ್ಯ.' ಡಾ| ಅಂಬೇಡ್ಕರ್.

'ಗಾಂಧಿಯವರು ಈ ರೀತಿ ತಿರುಗಿ ನಿಂತುದರಿಂದ ಆರೆಗಪಕಾಶವಿದೆ ಕ್ರಿಪ್ಸ್ ಸೂಚನೆಯ ನಿರಾಕರಣೆಯಿಂದೆದ್ದ ಬಿಕ್ಕಟ್ಟು ನಿವಾರಣೆಯಾಗುವ ಲಕ್ಷಣ ಕಾಣುತ್ತಿದೆ.

—ನ್ಯೂಯೋರ್ಕ್ ರೇಡಿಯೋ.

'ಹಿಂದೂ-ಮುಸ್ಲಿಂ ಒಪ್ಪಂದ ಯತ್ನಗಳು ಆರಂಭವಾಗುತ್ತಿರುವ ಬದಲಿಗೆ ಅಂತ್ಯಗೊಂಡಂತೆ ಕಾಣುತ್ತಿದೆ ಗಾಂಧಿಯವರ ಸೂಚನೆಗಳು ಎಲ್ಲಾ ವಿಧದಲ್ಲೂ ಸ್ಪಷ್ಟವಾಗಿಲ್ಲ.' —'ಟೈಮ್ಸ್' ಲಂಡನ್.

'ಎರಡು ವರುಷಗಳ ಮೊದಲಿನ ತನ್ನ ಮುಷ್ಕರವನ್ನು ಗಾಂಧಿಯವರೀಗ ಬಿಟ್ಟಂತಿದೆ ಈಗ ವೇವೆಲ್ ಮತ್ತು ಅಮೆರಿಯವರು ಸಹಾಯಕ ಧೋರಣೆ ವಹಿಸಬೇಕಾದ ಸಮಯ ಬಂದಿದೆ.'

-'ನ್ಯೂಸ್ ಕ್ರಾನಿಕಲ್' ಲಂಡನ್.

'ಈ ರೀತಿ ಗಾಂಧಿಯವರಂತೆ ತಮ್ಮ ತಪ್ಪನ್ನು ಜಾಹೀರಾಗಿ ತಿದ್ದಿಕೊಂಡು ಪರಿಸ್ಥಿತಿಗೆ ತಕ್ಕಂತೆ ಧೋರಣೆ ಬದಲಾಯಿಸಬಲ್ಲ ಪ್ರಮುಖರು ಪಾಶ್ಚಾತ್ಯರಲ್ಲಿ ಬಹುಮಂದಿಯಿಲ್ಲ. ಸರಕಾರವು ಇದಕ್ಕೂ ಮಿಕ್ಕ ಏನನ್ನು ತಾನೇ ಕೇಳಬಲ್ಲುದು?'

-'ಡೈಲಿವರ್ಕರ್' ಲಂಡನ್.

'ಮಹಾತ್ಮನ ವ್ಯವಹಾರಾತ್ಮಕ ಸದ್ಧೋರಣೆಯಿಂದಾಗಿ ಕ್ರಾಂತಿಯ ಸ್ಥಾನದಲ್ಲಿ ಸರಕಾರ ನಿಂತಿದೆ ಇದನ್ನನುಸರಿಸಿ ಕಾಂಗ್ರೆಸ್ ಕೈದಿಗಳ ಬಿಡುಗಡೆಯಾಗಬೇಕು '-'ನ್ಯೂ ಸ್ಟೇಟ್ಸ್‌ಮೇನ್' ಲಂಡನ್.

'ಗಾಂಧೀಯವರ ಧೋರಣೆಯ ಮೇಲೆ ಇನ್ನಷ್ಟು ಬೆಳಕು ಬೀಳದೆ ನಾವೊಂದು ನಿರ್ಧಾರ ಮಾಡಬಾರದು. ಪಾಕಿಸ್ತಾನವು ಅವ್ಯವಹಾರ್ಯವಾಗಿ ಕಾಣುತ್ತಿದೆಯಲ್ಲದೆ, ಅಲ್ಲಿ ಇಂತಹ ಬೇರೆ ಜಾತಿಗಳೂ ಇವೆ.'

-'ಯೋರ್ಕ್‌ಶಯರ್ ಪೋಸ್ಟ್' ಲಂಡನ್

'ಯುದ್ಧವು ಜಪಾನಿಗೆ ಪ್ರತಿಕೂಲವಾದುದರಿಂದ ಗಾಂಧಿಯೀಗ ತನ್ನ ಸ್ವರಕಾರ್ಯ ಸಾಧನೆಗೆ ಪರಿಸ್ಥಿತಿಯನ್ನು ಪಯೋಗಿಸಿಕೊಳ್ಳುವಂತಿಲ್ಲವೆಂಬುದು ಸ್ಪಷ್ಟ ಆವರೀಗ ಕ್ರಿಪ್ಸ್ ಸೂಚನೆಯನ್ನು ಸಮ್ಮತಿಸಿದ್ದಾರೆ.'

-'ದಿ ಸ್ಟೇಟ್ಸ್‌ಮೇನ್' ಲಂಡನ್.

NOTICE

In the Court of the District Munsif of Mangalore.

Small Cause suit No. 122/1944

Between

M. Srinivas —Plaintiff.

and

Doomanna Shetty [illegible]

To

Doomanna Shetty son of Bantu Shetty residing in Varkadi village, Kasargode Taluk the Defendant in the suit.

Please take notice that the above suit filed by the Plaintiff for recovery of arrears of rent due to to Sunnangala Thimmappa Mada from the Defendant which the Plaintiff has taken in transfer by Registered document will come on for hearing on 29-7-1944 at 11 A. M. in the above Court, and you may appear either in person, or by pleader on the said date, failing which the same will be decided in your absence.

By order of the Court

K. K. Rai,

Advocate for the Plaintiff

Mangalore, 12-7-1944.

THE VIJAYA BANK, LTD.

Head office:

MANGALORE.

Glad to announce that a Branch of the Bank has been opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ 15-6-44ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿರುವುದು

ದಿ ವಿಜಯಾ ಬೇಂಕ್ ಲಿಮಿಟೆಡ್

ಸುಲಭ ಉಪಾಯ - - - -?

ಮಾಸ್ತರ್—ದೇಜಪ್ಪ, ಬೊಂಬಾಯಿಯಲ್ಲಿ ಮೊದಲಿದ್ದ ಆಫೀಸಿನಲ್ಲೇ ಈಗಲೂ ಇದ್ದೀಯಾ? ಮೆನೇಜರರು ಏನಾದರೂ ಸಂಬಳ ಏರಿಸಿದ್ದಾರೆಯ?

ದೇಜಪ್ಪ—ಸ್ವಲ್ಪ ಏರಿಸಿದ್ದಾರೆ. ನನಗೆ ಒಂದಿಷ್ಟು ಇಂಗ್ಲಿಷು ಬರುತ್ತಿದ್ದರೆ ಇನ್ನೂ ಹೆಚ್ಚಿಗೆ ಕೊಡುತ್ತಿದ್ದರು. ಅವರು ಪಾಸುಗೀಸು ಕೇಳೋದಿಲ್ಲ. ಸಾಧಾರಣ ಇಂಗ್ಲಿಷು ಬಂದರಾಯಿತು.

ಮಾಸ್ತರ್—ಅಷ್ಟೇ ತಾನೆ! ಹಾಗಾದರೆ ನಿನ್ನ ಸಂಬಳ ಏರಲಿಕ್ಕೆ ಸುಲಭ ಉಪಾಯವಿದೆ. 'ಸುಲಭದಲ್ಲಿ ಇಂಗ್ಲಿಷು' ಎಂಬ ಪುಸ್ತಕವನ್ನು ಅಭ್ಯಾಸ ಮಾಡು. ಯಾರ ಹಂಗೂ ಇಲ್ಲದೆ ಇಂಗ್ಲಿಷು ಬರುವುದು ಸಂಬಳ ಏರುವುದು?

ದೇಜಪ್ಪ—ಇಂಗ್ಲಿಷು ಭಾಷೆಯ ಗುಟ್ಟನ್ನು ಅಷ್ಟು ಸುಲಭವಾಗಿ ಹೇಳಿದ್ದಾರೆಯೋ ಆ ಪುಸ್ತಕದಲ್ಲಿ.

ಮಾಸ್ತರ್—ಆ ಪುಸ್ತಕವನ್ನು ಅಭ್ಯಾಸಿಸಿದರೆ ಬಾಳೆಯ ಹಣ್ಣು ಸುಲಿದು ತಿಂದಷ್ಟು ಸುಲಭವಾಗಿ ಇಂಗ್ಲಿಷು ಬರುತ್ತದೆ. **ನವಭಾರತ ಪುಸ್ತಕ ಭಂಡಾರ, ಉಡುಪಿ, ಅಲ್ಲಿ ಸಿಗುತ್ತದೆ ಬೆಲೆ ೧ ರೂಪಾಯಿ.** ಇಂಗ್ಲಿಷನ್ನು ಕಲಿಸಿ ಕಲಿಸಿ ನುರಿತ ಉಪಾಧ್ಯಾಯರೊಬ್ಬರು ಬರೆದ ಪುಸ್ತಕ ಅದು ಗಿಳಿಗೆ ಮಾತು ಕಲಿಸಿದಂತೆ ಇಂಗ್ಲಿಷಿನಲ್ಲಿ ನಾಲ್ಕು ಮಾತಾಡಲಿಕ್ಕೆ ಕಲಿಸುವ ಪುಸ್ತಕವಲ್ಲ ಸ್ವತಂತ್ರವಾಗಿ ಮಾತಾಡುವ ಸಾಮರ್ಥ್ಯ ಬರುವಂತೆ ಕ್ರಮವಾಗಿ ಕಲಿಸಿಕೊಡುವ ಪುಸ್ತಕ -- ನೀನದನ್ನು ಅವಶ್ಯವಾಗಿ ಅಭ್ಯಾಸಮಾಡಬೇಕು.

ದೇಜಪ್ಪ—ಬಗಲಿ ಸ್ವಾಮಿ, ನೀವು ಶಿಫಾರಸು ಮಾಡಿದ ಮೇಲೆ ಆ ಪುಸ್ತಕದಿಂದ ನನಗೆ ಪ್ರಯೋಜನವಾಗುವುದು ಖಂಡಿತ. ಇಂದೇ ಕೊಂಡುಕೊಳ್ಳುತ್ತೇನೆ.

The Pangal Nayak Bank Limited.

(Incorporated in 1920)

Registered Office Court Road, UDIPI

Branches at Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices

15th April 1944

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಸಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ನಿರಾಳ.

ಮಾಲಕರು:— **ಹಾಲಪ್ಪಾ ಫಕೀರಪ್ಪಾ ಜಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ–ಸಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ಬಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ —ಹುಂಬರವಾಡಿ ಸ್ಟೋರ್ಸ ಜಾವಣಗೇರಿ.—ಜಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಾಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಿಗಿ

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೂಜಿಟುಗಳಿಗೆ ಉತ್ತಮ ದರದಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd. Moolky, S. K.

ನವಜೀವಾತು ಎಂಬ ಸೂತಿಕಾ ರಸಾಯನ



(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ** ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ**

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE.

Approved firm by the Govt. of Mysore.

Certified by the Agent of the Govt. of India in Ceylon.

ಅಮೃತಾಂಜನ

ತಲೆವೇದನ, ಶಿರೋವೇದನೆ, ಉಳುಕು, ಶರ್ತಿಗೆ, ಭುಜ, ಹಲ್ಲು ವೇದನಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವದು, ಚೇಳು ವಿಷ ಮುಂತಾದ ಜೇನೆ ಪಕ್ಷಘಾತ, ಮೊಡವೆ ಮೊದಲಾದ ೧೮ ರೋಗಗಳಿಗೂ ಸಿದ್ಧ

ABG

ಪ್ರಸಿದ್ಧ ಉಳುಕಡ್ಡಿ ವಾಟ್ಸ ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ

ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

THE BEST PREVENTIVE IN EPIDEMICS OF CHOLERA

"BHUVANENDRA"

CHANDRAMAS

Will give you the best results. Try once and be satisfied with the results.

Dose For adults— 3 to 5 drops 2 to 3 times a day with the decoction of cloves or ajwan

For Children 1 to 2 drops with the said decoction.

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS Ltd.

"ಭುವನೇಂದ್ರ"

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರಬೇಕಾದ ಅತ್ಯುತ್ತಮ ಔಷಧಿ

ದೊಡ್ಡವರಿಗೆ ೪ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1 ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆ ನೋವು, ಹಲ್ಲು ನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:— ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ. ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ L. I. M.; ಡಾ. ವೆಂಕಟ ರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd No. M. 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6 Estd. 1921 ಸ್ಥಾಪನೆ

Typewriter repairs of every description undertaken at the

BASEL MISSION PRESS,
MANGALORE, S. K.

NAVAYUGA
ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.
KANNADA WEEKLY, UDIPI.
ಸಂಪುಟ ೨೪ ಸಂಚಿಕೆ ೪೭ ● Vol 24 No. 47
Founder SRI A. B. SHETTY.
ಉಡುಪಿ ● 27—7—1944 ● ಮಂಗಳೂರು.

ANTARANGA
UDIPI
ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ
ಅಂತರಂಗ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ.

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Estd 1908]
The "Bombay Life" Bldg.,
UDIPI S. K.

Offices and Agencies throughout South India.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಬಂಧನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2 ಬೊಟ್ಟು ಜೀರಿಗೆ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು —ಡಾ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ ಆರ್. ಎಸ್. ಶೆಣೈ, ರಥಬೀದಿ, ಡಾ ಟಿ. ಜಿ. ಆಚಾರ್ಸ್ ಫಾರ್ಮಸಿ, ಡಾ. ಕೆ. ಶೇಷಗಿರಿ ಪೈ, L. I. M., ಡಾ. ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೋ

—ಮಕ್ಕಳನ್ನು ಹಡೆಯುವದು ಸಾಕು—

ಅಧಿಕ ಸ್ತ್ರೀಯರಿಗ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ.—ಹರವೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜ ೧೦ಆಣೆ.

ಮಾಲಕರು.—ಹಾಳಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ

ಸಿಕ್ಕುವದು —ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ —ಹುಂಬರವಾಡಿ ಸ್ಟೋರ್ಸ. ದಾವಣಗೇರಿ,—ದಾವಣಗೇರಿ ಪ್ರೆಸ್. ಆರ್. ಎಲ್. ಕವಲಯಾಸಿ, ಕೆಮಿಸ್ಟ, ಹುಮ್ನಾ ಬ್ಯಾಡಗಿ.

Ayurveda Oushadalaya, GADAG CITY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಿದ್ದು ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

The Board of Directors,
Sri Narayan Guru Bank, Ltd., Mangalore
announce that a Branch of this Bank has been opened at the premises of "Parimala Bhavan", opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director

ಹಿಟ್ಲರರನ್ನು ಕೊಲ್ಲುವ ನಿಷ್ಫಲ ಯತ್ನ!

ಜರ್ಮನಿಯಲ್ಲಿ ಸೇನಾ ಬಂಡಾಯ.



ಇದೇ ತಾ 20ರಲ್ಲಿ ಸಮಯ ಸ್ಫೋಟಕ ಬೋಂಬೊಂದು ಹಿಟ್ಲರರ ಬಲಭಾಗದಲ್ಲಿ ಆರೇ ಅಡಿ ದೂರದಲ್ಲಿ ಸಿಡಿದು ಅವರೊಂದಿಗಿದ್ದ ಲೆಪ್ಟನೆಂಟ್ ಜನರಲ್ ಶ್ಮಮುಂಟ್, ಕರ್ನಲ್ ಬ್ರೇಂಡ್ಟ್, ಲೆಫ್ಟನೆಂಟ್ ಕರ್ನಲ್ ಬೊರ್ಗ್‌ಮೇನ್ ಮೊದಲಾದ ಹಲವರು ದೊಡ್ಡ ಸಣ್ಣ ಜಖಮಿಗೊಳಗಾಗಿದ್ದಾರೆ- ಪತ್ರಿಕಾ ಸ್ಟೆನೊಗ್ರಾಫರ್ ಬೆರ್ಗರ್ ಎಂಬವನು ಆಸ್ಪತ್ರೆಯಲ್ಲಿ ಮಡಿದ್ದಾನೆ. ಆದರೆ ಹಿಟ್ಲರರಿಗೇನೋ ಆಗಿಲ್ಲ!

ಹಿಟ್ಲರರನ್ನು ವಧಿಸಿ ನಾಜೀ ಸರಕಾರವನ್ನು ಕಿತ್ತೊಗೆದು ಜರ್ಮನಿಯಲ್ಲಿ ಪ್ರತ್ಯೇಕ ಸರಕಾರ ಸ್ಥಾಪಿಸುವ ಹಂಚಿಕೆಯಲ್ಲಿ ರುಂಡ್‌ಸ್ಟೆಡ್ (ಮೊನ್ನೆಯ ವರೆಗೆ ಯುರೋಪು ಆಕ್ರಮಣ ವಿರೋಧದ ಕಮಾಂಡರ್-ಇನ್-ಚೀಫ್) ಲೀಬ್, ಮತ್ತು ಬೋಕ್ ಮೊದಲಾದ ಜರ್ಮನಿಯ ಸಮರ್ಥ ಹಾಗೂ ನಿವೃತ್ತ ಸೇನಾನಿಗಳ ಒಂದು ತಂಡವೇ ಪ್ರವೃತ್ತಿಸಿದೆ ಎಂದು ಖಂಡಿತವಾಗಿ ತಿಳಿದುಬರುತ್ತಿದೆ ಹಿಟ್ಲರರ ಬಳಿ ಟೈಮ್ ಬೋಂಬನ್ನು ಮಡಗಿದವನು 37ವರುಷ ಪ್ರಾಯದ ಕರ್ನಲ್ ಕ್ಲಾಸ್ ವೋನ್‌ಸ್ಟಫೆನ್‌ಬರ್ಗ್ ಎಂಬವನು. ಆವನನ್ನು ಕೂಡಲೇ ಗುಂಡಿಟ್ಟು ಕೊಲ್ಲಲಾಯಿತಲ್ಲದೆ, ಒಳಸಂಗೆ ಸೇರಿದ ಸೇನಾನಿಗಳಲ್ಲಿ ಕೆಲವರು ಕೊಲೆ ಮಾಡಲ್ಪಟ್ಟರು; ಉಳಿದವರು ಆಗಲೇ ಆತ್ಮಹತ್ಯೆ ಮಾಡಿಕೊಂಡರು

ತನ್ನ ಕೊಲೆಯ ನಿಷ್ಫಲ ಯತ್ನ ನಡೆದ ಮರುಕ್ಷಣದಲ್ಲೇ ಹಿಟ್ಲರರು ಆರು ಮಿನಿಟುಗಳ ತನಕ ಜರ್ಮನ್ ಜನತೆಗೆ ಸ್ಫೂರ್ತಿದಾಯಕ ಭಾಷಣವಿತ್ತು ಗೆಸ್ಟೆಪೋನಾಯಕ ಹಿಮ್ಲರನನ್ನು ರಾಜ್ಯ ವ್ಯವಸ್ಥೆಯ ಸರ್ವ ಸೇನಾನಿಯಾಗಿ ನೇಮಿಸಿದ್ದಾರೆ ಹಿಮ್ಲರನೀಗ ಸಂಚುಗಾರರನ್ನು ಕಠಿಣ ಹಸ್ತದಿಂದ ಸಮೂಲವಾಗಿ ನಿರ್ನಾಮ ಮಾಡುತ್ತಿದ್ದಾನೆ

ಹಿಟ್ಲರನನ್ನು ಬಂದಿಸಿಟ್ಟದ್ದಾರೆ, ಎಂಬ ಅಂಕಾರದಿಂದ ಒತ್ತೊತ್ತಾಗಿ ವಾರ್ತೆ ಬರುತ್ತಿದೆ ಸಂಚುಗಾರರ ಮೂಲ ನಾಯಕರು ಜರ್ಮನಿಯೊಂದೆಯಲ್ಲಿ ಸುರಕ್ಷಿತರಾಗಿರುವರೆಂದು ಸುದ್ದಿ, ಅವರು ಆಕಾಶವಾಣಿ ಭಾಷಣ ಮತ್ತು ಸೇನೆಗಳಿಗೆ ಹುಸಿಯಾಜ್ಞೆಗಳನ್ನು ಕೊಡುವ ಮೂಲಕ ಜರ್ಮನಿಯಲ್ಲೆಲ್ಲಾ ಗೊಂದಲವೆಬ್ಬಿಸಿದ್ದಾರೆ.

ಹಿಟ್ಲರರ ಭಾಷಣ

ಬೋಂಬು ಸ್ಫೋಟದ ಬೆಂಕಿ ರವಷ್ಟು ಹಿಟ್ಲರರಿಗೆ ತಾಗಿದೆಯಾದರೂ ಪಾಯವೇನೂ ಆಗಿಲ್ಲ ಅವರು ಆ ಕೂಡಲೇ ಅಸ್ಖಲಿತ ವಾಣಿಯಿಂದ ಜರ್ಮನ್ ಜನತೆಗೆ ಮಾಡಿದ ಭಾಷಣವಿದು-'ಇದೀಗ ಮೂರನೇ ಬಾರಿ ನನ್ನ ಪ್ರಾಣಾಪಹಾರದ ಹಂಚಿಕೆ ಹೂಡಲ್ಪಟ್ಟು ಜ್ಯಾರಿಯಾಯಿತು ಮೊದಲನೆಯದಾಗಿ ನೀವು ಸ್ವತಃ ನನ್ನ ಸ್ವರವನ್ನು ಕೇಳಿ, ನಾನೇನೂ ಜಖಮಿಗೊಳಗಾಗದೆ ಸೌಖ್ಯದಲ್ಲಿದ್ದೇನೆ ಎಂಬುದನ್ನು ತಿಳಿಯಬೇಕು, ಎರಡನೆಯದಾಗಿ, ಜರ್ಮನ್ ಚರಿತ್ರೆಯಲ್ಲೇ ಅಗೋಚರವಾದ ಈ ಅಪರಾಧದ ಕುರಿತು ನೀವು ಅರಿಯುವಂತಾಗಬೇಕು-ಎಂಬುದೇ ನಾನೀ ದಿನ ನಿಮಗೆ ಭಾಷಣ ಮಾಡುವರೆ ಕಾರಣ ಅತ್ಯಾಶೆಯ, ಬೇಜವಾಬ್ದಾರಿಯ, ಬುದ್ಧಿಹೀನ ಹಾಗೂ ವಿವೇಕರಹಿತ ತಕ್ಸಿರುಗಾರ ಅಧಿಕಾರಿಗಳ ಅಲ್ಪಸಂಗಡವೊಂದು ನನ್ನನ್ನೂ ನನ್ನೊಂದಿಗೆ ಜರ್ಮನ್ ರಾಷ್ಟ್ರೀಯ ನಾಯಕರನ್ನೂ ನಿರ್ನಾಮ ಮಾಡುವ ಹಂಚಿಕೆ ತಯಾರಿಸಿದ್ದಿತು. ಬೋಂಬನ್ನಿಟ್ಟುದು ಕರ್ನಲ್ ಗ್ರಾಫ್‌ವೋನ್ ಸ್ಟಫೆನ್‌ಬರ್ಗ್ ಅದು ನನ್ನ ಬಲಭಾಗದಲ್ಲಿ ಆರಡಿ ದೂರದಲ್ಲೇ ಸಿಡಿಯಿತು ನನ್ನೊಂದಿಗಿದ್ದವರಲ್ಲಿ ಒಬ್ಬನು ಸತ್ತಿದ್ದಾನೆ ಆದರೆ ನನಗೆ ಎಳ್ಳಷ್ಟೂ ಜಖಮಾಗಿಲ್ಲ ನನ್ನ ಮೇಲೆ ತಾನು ಹೇರಿರುವ ಕಾರ್ಯಭಾರವನ್ನು, ಈ ವರೆಗಿನಂತೆ ನನ್ನ ಆಯುಷ್ಯದ ಮುಂದಿನ ಹಾದಿಯಲ್ಲೂ ಸಾಧಿಸಿಕೊಂಡು ಹೋಗಬೇಕೆಂಬ ತನ್ನಿಚ್ಛೆಯನ್ನು ಭಗವಂತನೀ ಮೂಲಕ ಸ್ಪಷ್ಟಪಡಿಸಿದನೆಂದೇ ನಾನು ಭಾವಿಸುತ್ತೇನೆ. ನಾನು ರಾಷ್ಟ್ರಕ್ಕೆ ಮಾಡಿಕೊಳ್ಳುವ ನಿವೇದನೆ ಯಿಷ್ಟೆ' ನಾನು ವಿಲ್ ಹೆಲ್ಮ್ ಸ್ಟ್ರಾಸನ್ನು ಹತ್ತಿದಂದಿನಿಂದ ನನ್ನಲ್ಲಿದ್ದ ಯೋಚನೆಯೊಂದೇ-ಯುದ್ಧವನ್ನು ಹಿಂದೆ ಹಾಕಲು ಸಾಧ್ಯವಿಲ್ಲವೆಂದು ನನಗೆ ಮನವರಿಕೆಯಾದಂದಿನಿಂದ ನನ್ನ ಪ್ರಾಣವದಕ್ಕೆ ಮೀಸಲಿರಬೇಕೆಂಬುದೇ. ನಾನು ಕಾರ್ಯಕ್ಕಾಗಿ-ಕಾರ್ಯವೊಂದಕ್ಕಾಗಿಯೇ-ಜೀವಿಸಿದ್ದೇನೆ

ದ್ರೋಹಿಗಳ ಮಹಾಪರಾಧ.

ಜರ್ಮನ್ ಸೇನೆಗಳು ಕಠಿಣ ಸಂಗ್ರಾಮ ನಿರತವಾಗಿರುವ ಈ ಸಂದಿಗ್ಧ ಕಾಲದಲ್ಲಿ ಜರ್ಮನಿಯನ್ನು ಬೆಂಗಡಯಿಂದ ತಿವಿಯುವ ಮೂಲಕ 1918ನ್ನು ಪುನರಾವರ್ತಿಸಬಹುದೆಂಬ ಆಸೆಯಿಂದ ಇಟಲಿ ಮತ್ತು ಜರ್ಮನಿಯ ಅಲ್ಪರ ಸಂಗಡವೊಂದು ಅಕಸ್ಮಾತ್ ಮುಂದಾಗಿದೆ, ಆದರೆ ಈ ಬಾರಿ ಅವರೊಂದು ಹೇಯ ಪ್ರಮಾದ ಮಾಡಿದ್ದಾರೆ. ಈ ದಗಾಖೋರರ ಸಂಗಡವು ಅತ್ಯಲ್ಪವಿದ್ದು, ಜರ್ಮನ್ ರಾಷ್ಟ್ರೀಯ ಸ್ಫೂರ್ತಿಯೊಡನೇನೂ ಸಂಬಂಧವಿಲ್ಲದುದಾಗಿದ, ಎಲ್ಲಕ್ಕಿಂತ ಹೆಚ್ಚಾಗಿ ಅವರಲ್ಲಾರೂ ಜರ್ಮನ್ ಜನತೆಯೊಡನೆ ಸಂಬಂಧವಿದ್ದವರಲ್ಲ ಈ ದಗಾಖೋರ ಜನರ ದುರ್ಬಲ ಸಂಗಡವು ಈಗ ತಾನೇ ನಿರ್ದಾಕ್ಷಿಣ್ಯವಾಗಿ ಧ್ವಂಸಗೊಳಿಸಲ್ಪಡಲಿದೆ ಆದ್ದರಿಂದ ನಾನೀಗ ಕೊಡುವ ಆಜ್ಞೆಯೆಂದರೆ-ಸೈನ್ಯಾದಿಕಾರಿಯಿರಲಿ, ದಳಾಧಿಕಾರಿಯಿರಲಿ, ಅಥವಾ ರಣಕ್ಷೇತ್ರದ ಯಾರೇ ಆದರೂ ಈ ರಾಜ್ಯಾಪಹಾರೀ ಸಂಗಡದ ಆಜ್ಞೆಯನ್ನಂಗೀಕರಿಸಕೂಡದು. ಅಂತೆಯೇ ಅಂತಹ ಆಜ್ಞೆಯನ್ನು ಕೊಡುವ ಇಲ್ಲವೇ ತಂದೊಪ್ಪಿಸುವ ಯಾರನ್ನಾದರೂ ತಂಲೂಡನೆಯೇ ದಸ್ತಗಿರಿಮಾಡಬೇಕು, ಅವರು ವಿರೋಧಿಸಿದರಾದರೆ ಅಲ್ಲಿಯೇ ಕೊಂದು ಹಾಕಬೇಕು ಎಂದು ಪ್ರತಿಯೊಬ್ಬನಿಗೂ ನನ್ನಾಜ್ಞೆಯಿದೆ. ಎಲ್ಲಾ ಸೇನೆಗಳಿಗೂ ನನ್ನಾಜ್ಞೆಗಳು ಹೋಗಿವೆ. ಇದು ಜರ್ಮನ್ ರಾಷ್ಟ್ರೀಯ ವೈಶಿಷ್ಟ್ಯತೆಗನುಸಾರವಾಗಿ ಕಣ್ಣು ಮುಚ್ಚಿ ಜ್ಯಾರಿಮಾಡಲ್ಪಡುವದು. ಆದ್ದರಿಂದೀಗ ರೀಖ್‌ಮಂತ್ರಿ ಹಿಮ್ಲರರನ್ನು ಗೃಹಸೇನೆಯ ಕಮಾಂಡರ್-ಇನ್-ಚೀಫ್ ಆಗಿ ನೇಮಿಸಿದ್ದೇನೆ. ನನ್ನ ಅತ್ಯಂತ ಪ್ರೀತಿಯ ಕೆಲವು ಅನುಯಾಯಿಗಳು ತೀವ್ರ ಜಖಮಿಗೊಳಗಾಗಿದ್ದಾರೆ. ಈ ಅಲ್ಪ ಸಂಗಡಿಗ ದ್ರೋಹಿಗಳು, ಕಟ್ಟಕಡೆಗೆ ನಮ್ಮ ಹಿಂಭಾಗದಲ್ಲೇ ಯುದ್ಧರಂಗದಂತಹ ವಾತಾವರಣವನ್ನು ನಿರ್ಮಿಸಿದರೆಂದು ನನಗೆ ಮನವರಿಕೆಯಾಗಿದೆ. ನಮ್ಮ-ನೂರಾರು, ಸಾವಿರಾರು, ಮಿಲಿಯಾವಧಿ ವೀರಯೋಧರು ರಣರಂಗಗಳಲ್ಲಿ ಪ್ರಾಣಾರ್ಪಣೆ ಮಾಡುತ್ತಿರುವಾಗ, ಪಾಪಪೂರಿತ ಹೆಬ್ಬಯಕೆಯ ಈ ಅಲ್ಪಸಂಗಡಿಗರು ಗೃಹರಂಗದಲ್ಲಿ ನಿರಾಶೆಯ ಬೀಜ ಬಿತ್ತುವದನ್ನು ಸಹಿಸಿಕೊಳ್ಳಲು ಸಾಧ್ಯವೆ?! ರಾಷ್ಟ್ರೀಯ ಸಮತಾವಾದಿ ಜರ್ಮನಿಯ ಪದ್ಧತಿಯಂತೆ ಈ ಬಾರಿ ನಾವವರನ್ನು ಸಂಪೂರ್ಣವಾಗಿ ಧ್ವಂಸ ಮಾಡಿಸಿತೆಗೆಯುತ್ತೇವೆ ಪ್ರತಿಯೊಬ್ಬ ಯೋಗ್ಯ ಅಧಿಕಾರಿ ಪ್ರತಿಯೊಬ್ಬ ವೀರಯೋಧನೂ, ಈ ಕಾಲದ ಇಂತಹ ಆವಶ್ಯಕತೆಯನ್ನು ಮನಗಾಣುವನೆಂದು ನನಗೆ ಖಾತ್ರಿಯಿದೆ.

ಭಗವಂತನಿಗೆ ಧನ್ಯವಾದ.

ನನ್ನ ಪ್ರಾಣಾಪಹಾರದ ಈ ಪ್ರಯತ್ನವು ವಿಜಯಗೊಳ್ಳುತ್ತಿದ್ದರೆ, ಜರ್ಮನರನ್ನು ಎಂತಹ ಅದೃಷ್ಟ ಕಾಯುತ್ತಿತ್ತೋ, ಅದು ಊಹಿಸಲಾಗದಷ್ಟು ಭೀಕರವಿದೆ ನನ್ನ ಪ್ರಾಣವನ್ನು ಉಳಿಸಿದುದಕ್ಕಾಗಿ ನಾನು ದೇವರನ್ನು ಶ್ಲಾಘಿಸುತ್ತಿಲ್ಲ ಕೇವಲ ನನ್ನ ಜನರ ಸೇವೆ ಮತ್ತು ರಕ್ಷಣೆಗಾಗಿ ನನ್ನ ಜೀವವಿದೆ. ಈ ರಕ್ಷಣಾ ಹೊಣೆ ಹೊತ್ತು ನನ್ನ ಮನಸ್ಸಾಕ್ಷಿಯ ಸೂಚನೆಯಂತೆ ಕೆಲಸ ಸಾಗಿಸುತ್ತಾ ಹೋಗಲು ಉಳಿಸಿದುದಕ್ಕಾಗಿಯೇ ಭಗವಂತನಿಗೆ ನನ್ನ ಧನ್ಯವಾದಗಳು. ನಾನು ಸತ್ತು ಹೋದನೆಂದು ಆ ರಾಜ್ಯಾಪಹಾರಕರು ಮಾಡಿರುವ ಘೋಷಣೆಯು—ನನ್ನ ದೇಶಬಂಧುಗಳೇ—ನಾನೇ ನಿಮ್ಮೊಡನೀಗ ಮಾತನಾಡುತ್ತಿರುವದರಿಂದ ಈಗಲೇ ಸುಳ್ಳಾಗಿದೆ. ನನ್ನ ಮಟ್ಟಿಗಲ್ಲ, ಆದರೆ ಜರ್ಮನ್ ಜನತೆಗೆ ಅನಾಹುತಕಾರಿಯಾಗಬಲ್ಲ ಅಪಾಯದಿಂದ ನಾನು ಮತ್ತೊಮ್ಮೆ ಪಾರಾಗಿದ್ದೆಂಬುದು ಪುನಃ ಖಚಿತವಾಯಿತು. ನನ್ನ ಕೆಲಸವನ್ನು ನಾನು ಮಾಡಬೇಕು ಮತ್ತು ಮಾಡುವೆನು ಎಂಬುವನ್ನು ದೇವರು ಈ ಮೂಲಕ ಬೆಳಕಿತ್ತು ತೋರಿಸಿದ್ದಾನೆ".

ಗೊಂದಲ ನಿರ್ಮಾಪಕ ಹುಸಿ ಯಾಜ್ಞೆಗಳು!

ಪುರಾರನ ಕೊಲೆಯ ಯತ್ನದ ವಾರ್ತೆ

೭ನೇ ಪುಟ ನೋಡಿ

38 ವರ್ಷಗಳ ಹಿರಿತನ

1906ನೆ ಇಸವಿ ಜುಲಾಯಿ 1ನೇ ತಾರೀಕಿನಲ್ಲಿ ಸ್ಥಾಪಿತವಾಗಿ ಕೆನರಾ ಬ್ಯಾಂಕು ಇಂದಿಗೆ 38 ವರ್ಷ ವಯಸ್ಸು ಹೊಂದಿದೆ. ನಾವು 38 ವರ್ಷ ವಯಸ್ಸಿನವರೆಂಬುದೆ ನೀವು ನಮ್ಮೊಡನೆ ವಹಿವಾಟ ನಡೆಸಲು ಸಾಕಾದ ಕಾರಣವಾಗಲಾರದು.

ಆದರೆ ಈ 38 ವರ್ಷಗಳು ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿವೆ—ಎರಡು ಮಹಾ ಯುದ್ಧಗಳು—ಲೋಕವು ಹಿಂದೆಂದೂ ಕಾಣದ ಆರ್ಥಿಕ ಮುಗ್ಗಟ್ಟು—ಈ ಮೊದಲು ಆಗದ ಬ್ಯಾಂಕುಗಳ ಸಂದಿಗ್ಧಾವಸ್ಥೆ—ಶೇರು ಮಾರ್ಕೆಟುಗಳ ಕಂಗಾಲಾವಸ್ಥೆ—ಇತ್ಯಾದಿ.

ಒಂದು ಬ್ಯಾಂಕು ಈ ಎಲ್ಲಾ ಭಯಂಕರ ಹಲ್ಲೋಲಗಳಿಂದ ಎದೆಗುಂದದ ಪಾರಾಗಿರುವುದಾದರೆ—ಈ ಕಠಿಣ ಅನುಭವಗಳಿಂದ ಪ್ರಯೋಜನವನ್ನೇ ಹೊಂದಿ ತನ್ನ ಪ್ರಾಮುಖ್ಯತೆಯನ್ನೂ ವಿಶಾಲತೆಯನ್ನೂ ಮತ್ತೂ ಬೆಳೆಸಿರುವುದಾದರೆ—ಆ ಬ್ಯಾಂಕೇ ನಿಮ್ಮ ವಿಶ್ವಾಸಕ್ಕೆ ಯೋಗ್ಯವಾದದ್ದು.

ನಾವು ನಮ್ಮ ಹಿರಿತನದಿಂದ ಶ್ರೇಷ್ಠರಾದುದಲ್ಲ, ನಮ್ಮ ಶ್ರೇಷ್ಠತನದಿಂದ ನಾವು ಹಿರಿಯರಾಗಿದ್ದೇವೆ.

ESTD 1906 **Canara Bank, Limited.**

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ 18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE.

ESTD 1906 Approved firm by the Govt. of Mysore. Certified by the Agent of the Govt. of India in Ceylon.

ಜಪಾನಿನಲ್ಲಿ ಅಧಿಕಾರ ಬದಲಾವಣೆ

ಟೋಜೋ ಮಂತ್ರಿಮಂಡಲದ ರಾಜೀನಾಮೆ!

ಜಾಪಾನರನ್ನು ಯುದ್ಧಕ್ಕಿಳಿಸಿ ಆದಿ ಭಾಗದಲ್ಲಿ ಆಕಸ್ಮಿಕ ಹಾಗೂ ಅತಿ ಮುಖ್ಯ ವಿಜಯಗಳನ್ನದಕ್ಕೆ ಸಂಪಾದಿಸಿ ಕೊಟ್ಟ ಪ್ರಧಾನಿ ಟೋಜೋ ತನ್ನ ಮಂತ್ರಿ ಮಂಡಲದೊಡನೆ ರಾಜೀನಾಮೆಯಿತ್ತಿದ್ದಾನೆ. ಜಾಪಾನ್ ಚಕ್ರವರ್ತಿಗಳು ಅದನ್ನಂಗೀಕರಿಸಿ ಜನರಲ್ ಕುನಿಯಾಕಿ ಕ್ಯೊಸೊ ಮತ್ತು ಎಡ್ಮಿರಲ್ ಯೋನಾಯಿಯವರನ್ನು ಮಂತ್ರಿಮಂಡಲ ರಚಿಸಲು ಕೇಳಿಕೊಂಡಂತೆ ಕ್ಯೊಸೋ ಪ್ರಧಾನ ಮಂತ್ರಿ ಯೋನಾಯಿ ಹಡಗ ಮಂತ್ರಿ, ಮಾಮೋರು ಸಿಗೆಮೆಟ್ಸು ವಿದೇಶ ಮಂತ್ರಿಯಾಗಿರುವ ಹೊಸ ಮಂತ್ರಿಮಂಡಲ ರಚಿಸಲ್ಪಟ್ಟಿದೆ. ಇತ್ತೀಚೆಗೆ ಕೇಳಿಬರುತ್ತಿದ್ದ ಜಾಪಾನಿನ ನೆಲ ಮತ್ತು ಜಲ ಸೇನೆಗಳೊಳಗಿರುವ ವೈಮನಸ್ಸೇ ಟೋಜೋನ ಪತನಕ್ಕೆ ಕಾರಣವಾಯಿತೆಂದು ಊಹೆ. ಆದ್ದರಿಂದ ಚಕ್ರವರ್ತಿಗಳ ಪದ್ಧತಿಗೆ ವಿರುದ್ಧವಾಗಿ ನೆಲ ಮತ್ತು ಜಲಾಧಿಕಾರಿಗಳಿಬ್ಬರಿಗೆ ಮಂತ್ರಿ ಮಂಡಲ ರಚನೆಯ ಅಧಿಕಾರ ಕೊಟ್ಟುದೆಂದೂ, ಈ ಉಭಯ ಪಕ್ಷ ಸಮ್ಮತ ಮಂತ್ರಿಗಳು ದೇಶದಲ್ಲಿ ಒಗ್ಗಟ್ಟನ್ನು ಸ್ಥಾಪಿಸಿ, ಸರ್ವ ಶಕ್ತಿಯಿಂದ ಯುದ್ಧ ಮುಂದೊತ್ತುವರೆಂದೂ ತಿಳಿದುಬರುತ್ತದೆ.

ಜಪಾನ್ ಚಕ್ರವರ್ತಿಯ ಆತುರ

ತನ್ನ ಪದವೀ ತ್ಯಾಗದ ಕೆಲವೇ ದಿನಗಳಿಗೆ ಮೊದಲು ಜನರಲ್ ಟೋಜೋ ತನ್ನ ಭಾಷಣದಲ್ಲಿ 'ಇಂದಿನ ಯುದ್ಧ ಸ್ಥಿತಿಯು ಚಕ್ರವರ್ತಿಯನ್ನು ಆತುರಗೊಳಿಸಿದೆ ಎಂಬುದರಿಂದ ನಾನು ಕಂಪಿಸಿದ್ದೇನೆ. ನಿಜವಾದ ಯುದ್ಧವು ಇನ್ನು ತಾನೇ ಪ್ರಾರಂಭವಾಗಲಿದೆ'ಎಂದು ಘೋಷಿಸಿದ್ದರು. ಅಮೇರಿಕದ ಹಡಗ ಬಲವು ಶಾಂತ ಸಮುದ್ರದಲ್ಲಿ ಅಧಿಕಾರ ನಡಿಸುತ್ತಿದೆ. ಅಲ್ಲಿಯ ಸೈಪಾನ್ ದ್ವೀಪಗಳೂ ಅಮೇರಿಕಾನರ ವಶವಾದುದರಿಂದ ಜಾಪಾನರು ಧೃತಿಗುಂದಿದ್ದಾರೆ. ಸಾಲದುದಕ್ಕೆ ಟೋಕಿಯೋವಿಗೆ 700ಮೈಲು ದೂರದ ಬೋನಿನ್ ದ್ವೀಪಗಳ ಮೇಲೂ ಧಾಳಿಯಾರಂಭವಾಗಿದೆ. ಇತ್ತ ಅಸ್ಸಾಮಿನೊಳಗೆ ನುಗ್ಗಿದ ಜಪಾನೀಸೇನೆ ಹಿಮ್ಮೆಟ್ಟಬೇಕಾಗಿ ಬಂದಿದೆ ಚೀನದಲ್ಲಿಯೂ ಪ್ರಥಮತಃ ದೊರೆತ ವಿಜಯಗಳು ಕೊನೆ ಕೊನೆಗೆ ಅಗೋಚರವಾಗುತ್ತಾ ಬಂದವು. ಅತ್ತ ರಶ್ಯದ ಸಂಬಂಧವೂ ಸುಗಮವಾಗಿಲ್ಲ. ಇವೆಲ್ಲಾ ವಿದ್ಯಮಾನಗಳು ಟೋಜೋ ಸರಕಾರದ ಅಸಮರ್ಥತೆಯ ದ್ಯೋತಕವಾಗಿ ಚಕ್ರವರ್ತಿಯ ಕಣ್ಣಿಗೆ ಕಂಡಿರಬಹುದೆಂಬ ಭಯದಿಂದಲೇ ರಾಜಭಕ್ತಿಯಲ್ಲಿ ಅಗ್ರಗಣ್ಯ ಸ್ಥಾನ ಸಲ್ಲಬೇಕಾದ ಜಾಪಾನು ಟೋಜೋನನ್ನು ಉರುಳಿಸಿಬಿಟ್ಟಿತೆನ್ನಬೇಕು.

ಹೊಸ ಮಂತ್ರಿಗಳ ಧೋರಣೆ

ಅಧಿಕಾರ ಸ್ವೀಕರಿಸಿದೊಡನೆಯೇ ಪ್ರಧಾನಿ ಕುನಿಯಾಕಿ ಕ್ಯೊಸೋ ರಾಷ್ಟ್ರಕ್ಕಿತ್ತ ಭಾಷಣದಲ್ಲಿ, ರಾಷ್ಟ್ರದ ಸರ್ವಶಕ್ತಿಯನ್ನೊಂದು ಗೂಡಿಸಿ, ವಿರೋಧಿಗಳ ಪ್ರತಿಧಾಳಿಗಳನ್ನು ನಿರ್ನಾಮಗೊಳಿಸಿ, ಈ ವರೆಗಿನ ವಿದೇಶಿ ಧೋರಣೆಯನ್ನೇ ಊರ್ಜಿತಗೊಳಿಸಿ ಮುಂದೊತ್ತುವೆವೆಂದು ಘೋಷಿಸಿದ್ದಾನೆ. ಜರ್ಮನಿಯೊಡನೆ ನಿಕಟ ಸಂಬಂಧ ಬೆಳೆಸುವ ಸೂಚನೆಕೊಟ್ಟಿದ್ದಾನೆ ಈ ಬದಲಾವಣೆಯ ಕುರಿತು ಮಿತ್ರರಾಷ್ಟ್ರಗಳ ಅಭಿಪ್ರಾಯ ಬೇರೆ ಬೇರೆಯಾಗಿದೆ. ಯುದ್ಧವನ್ನು ಮುಂದೊತ್ತುವದಸಾಧ್ಯವೆಂದು ತಿಳಿದು ಬಂದಾಗ ಮೃದು ಧೋರಣೆಯ ಮಂತ್ರಿ ಮಂಡಲ ಸ್ಥಾಪಿಸಿ, ಸಂಧಾನ ಹೂಡುವ ಹಂಚಿಕೆಗನುಸಾರವಾಗಿಯೇ ಈ ಬದಲಾವಣೆಯೆಂದು ಕೆಲವರ ಊಹೆ. ಜಾಪಾನಿನಲ್ಲೀಗ ಸೇನಾಧಿಕಾರದ ಬದಲು ರಾಜಕೀಯಾಧಿಕಾರ ಬಂತೆಂದೂ ಇದು ದೂರ ದೃಷ್ಟಿಯ ದ್ಯೋತಕವೆಂದೂ ಮಿತ್ರರಾಷ್ಟ್ರೀಯರ ಮತ.

ಇವರೆಲ್ಲಾ ಸಜ್ಜನರಂತೆ!

'ಕೋರಿಯಾದ ಹುಲಿ'ಎಂದು ಹೆಸರು ಹೊದ ಕ್ಯೊಸೋವಿನ ಧೋರಣೆಯೆಂದರೆ ಜಾಪಾನಿನ ರಕ್ಷಣಾ ವ್ಯವಸ್ಥೆಯನ್ನು ಭದ್ರಪಡಿಸಿ ಇಂಗ್ಲಾಂಡು ಅಮೇರಿಕಗಳು ಸುದೀರ್ಘ ಯುದ್ಧದಿಂದ ಬೇಸರಗೊಂಡು ಜಪಾನಿನೊಡನೆ ರಿಯಾಯತಿಯ ಸಂಧಾನಕ್ಕೆ ಬರುವಂತೆ ಮಾಡುವದೇ. ಇದೂ ಅಸಾಧ್ಯವಾದರೆ ಮಿತ್ರರ ದೃಷ್ಟಿಯಲ್ಲಿ ಅತ್ಯಂತ ಸಜ್ಜನನಾದ ಒಡ್ಮಿರಲ್ ಯೋನಾಯಿಯೇ ಪ್ರಧಾನಿಯಾಗಬಹುದು. ಜಾಪಾನಿನ ಸಾಮ್ರಾಜ್ಯವಾದದ ಅಮಲೇರಿರುವ ತರುಣ ಅಧಿಕಾರಿಗಳಿಗಿಂತ ಹೆಚ್ಚಿನ ಪ್ರಪಂಚ ಪರಿಚಯವುಳ್ಳ ಮನುಷ್ಯ ಯೋನಾಯಿ. ಅವನು 1932ರಲ್ಲಾದ ಜಾಪಾನಿ-ಜರ್ಮನ್ ಒಪ್ಪಂದಕ್ಕೆ ವಿರುದ್ಧವಿದ್ದ. 1910ರಲ್ಲಿ ಜಾಪಾನು ಯುದ್ಧಕ್ಕಿಳಿಯಬಾರದೆಂದೇ ಅವನ ಅಭಿಮತವಿತ್ತು. ಅಂತೆಯೇ ಈ ಮೊದಲು ಲಂಡನಿನಲ್ಲಿ ಜಾಪಾನೀ ರಾಯಭಾರಿಯಾಗಿದ್ದು 'ಚತುರ ರಾಜನೀತಿಜ್ಞ'ನೆಂದು ಬ್ರಿಟಿಷರಿಂದ ಶ್ಲಾಘಿಸಲ್ಪಟ್ಟ ಸಿಗೆಮಿಟ್ಸು ವಿದೇಶಮಂತ್ರಿಯಾದುದು ಆಶೆಗಾಸ್ಪದವಿತ್ತಿದೆ. ಆದರೆ ಜಾಪಾನಿಗೀತನಕ ಕಠಿಣ ಪರಾಭವವಾಗಿಲ್ಲವಾದ್ದರಿಂದ ಈ ಅಧಿಕಾರ ಬದಲಾವಣೆಯಿಂದ ಹೋರಾಟವು ಬಲಗೊಳ್ಳಲಿದೆ ಎಂದೂಹಿಸಬೇಕು.



ನೀವು ಎಂದಾದರೂ ರೈಲ್ವೇ ಪ್ಲಾಟ್‌ಫಾರಮ್ಮಿನಲ್ಲಿ ಗಾಡಿಗಾಗಿ ಕಾದು ನಿಂತಿರುವಿರಾ?

ಒಂದುಕಾಲದಲ್ಲಿ ರೈಲ್ವೇ ಪ್ಲಾಟ್‌ಫಾರಮ್ಮುಗಳು ಅಗಲವಾಗಿಯೂ ವಿಶಾಲವಾಗಿಯೂ ಇರುತ್ತಿದ್ದವು. ನಿಮ್ಮ ಗಾಡಿಗಾಗಿ ಕಾದು ನಿಂತಿರಲು ನಿಮಗೆ ಯಥೇಚ್ಛವಾಗಿ ಸ್ಥಳವಿರುತ್ತಿತ್ತು. ಆದರೆ ಈಗ ರೈಲ್ವೇ ಪ್ಲಾಟ್‌ಫಾರಮ್ಮುಗಳು ಪೆಟ್ಟಿಗೆಗಳಿಂದಲೂ, ಪಾರ್ಸಲುಗಳಿಂದಲೂ ತುಂಬಿರುತ್ತವೆ. ಸ್ವಲ್ಪ ಸರಿದಾಡಲು ಸಹ ಸ್ಥಳ ಸಿಕ್ಕುವದು ದುರ್ಲಭ. ಕೂತುಕೊಂಡು ವಿಶ್ರಮಿಸಿಕೊಳ್ಳುವ ಆಸೆಯಂತೂ ಇಲ್ಲವೇ ಇಲ್ಲ. ಒಂದುವೇಳೆ ನಿಮಗೆ ಸ್ಥಳ ಸಿಕ್ಕಿತಾದರೂ, ರೈಲ್ವೇ ನೌಕರರು ಟ್ರಾಲಿಗಳನ್ನು ತಳ್ಳಿಕೊಂಡು ಹೋಗುತ್ತಿರುವಾಗ ನಿಮ್ಮ ಕಾಲುಗಳಮೇಲೆ ಹರಿಯಬಹುದು. ನಿಮಗೆ ಏನಾದರೂ ಫಲಾರದ ಸಾಮಾನುಗಳು ಬೇಕಾದರೆ, ನಿಮ್ಮ ಸಾಮಾನುಗಳನ್ನು ಬಿಟ್ಟು ಹೋಗಲು ನಿಮಗೆ ಧೈರ್ಯವಿರುವದಿಲ್ಲ. ಅವುಗಳನ್ನು ನೋಡಿಕೊಳ್ಳಲು ಕೂಲಿಯೂ ಸಿಕ್ಕುವದು ಕಷ್ಟ. ಇದರ ಜತೆಗೆ ಟಿಕೆಟ್ಟನ್ನು ಪಡೆಯುವದರಲ್ಲಿ ತಕರಾರು ತೋರಿ, ಗಾಡಿಯ ಒಳಕ್ಕೆ ಪ್ರವೇಶ ದೊರೆಯುವ ಅಸಾಧ್ಯತೆ. ಇವುಗಳನ್ನು ಸೇರಿಸಿ ನೋಡಿದರೆ, ಪ್ರಯಾಣವು ಎಷ್ಟೊಂದು ಕಷ್ಟ. ಇಂತಹ ಪ್ರಯಾಣದಲ್ಲಿ ಏನೂ ಪ್ರಯೋಜನವಿಲ್ಲ. ಕಾಲವು ಪುನಃ ಯಥಾಸ್ಥಿತಿಗೆ ಬರುವವರೆಗೂ ವಿವೇಕಿಗಳಾಗಿ ಮನೆಯಲ್ಲಿಯೇ ಉಳಿಯಿರಿ. ಇದು ಒಂದೇ ಸೂಕ್ತವಾದ ಕೆಲಸವು.

ಕಡಮೆಯಾಗಿ ಪ್ರಯಾಣಮಾಡಿರಿ

NOTICE

In the court of the Dt. munsif of Mangalore.

S. C. 155/1944

Between

J M. mascarenhas — Pltf

and

Thyampa Poojary, nephew of Kantappa Poojary, residing in Bajip Nadu village, Mangaloor Taluq

To

The abovenamed deft Notice is here by given that the pltf. abovenamed has filed the above suit against the deft. for recovery of arrears of rent amounting to Rs- 214-8 0 and that the said suit stands posted to 28-7-1944 for hearing you may appear either in person or by pleader and file your defence if any on that date Failing which the suit will be decreed exparte.

By order of the court

P. D. Souza B. A. B. L.

L. C. Pais B. A. B. L

Vakils for pltf.

The Canara Banking Corporation Limited.

ESTD 1906.

Authorised Capital	Rs. 25.00.000/-
Subscribed Capital	„ 16.00.000/-
Paid up Capital	„ 13 72 900/-
Reserves	„ 1 10 000/-

Total Working Capital—xEceeds One Crore.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers

ಉಡುಪಿ, ಗುರುವಾರ ೨೭-೭-೧೯೪೪

ಯುದ್ಧಸ್ಥಿತಿ

ಕೆಲಕಾಲದಿಂದ ಮಿತ್ರರಿಗನುಕೂಲವಾಗಿದ್ದ ಯುದ್ಧಗತಿಯು ಈಗೀಗ ಜರ್ಮನಿಗಪಾಯಕರವಾಗಿ ಸಾಗುತ್ತಿರುವದು ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಿದೆ. ಪೂರ್ವ ಪ್ರಶ್ಯ ಮತ್ತು ಪೋಲೆಂಡಿನ ಕೇಂದ್ರವನ್ನು ಗುರಿಯಾಗಿಟ್ಟುಕೊಂಡು ಕೆಂಪುಸೇನೆಯೀಗ ಪ್ರಾರಂಭಿಸಿರುವ ಧಾಳಿಯು ನಾಜಿಗಳ ಮರ್ಮಸ್ಥಾನಕ್ಕೆ ಬಿದ್ದ ಪ್ರಬಲ ತಾಡನವೇ ಸರಿ. ಅಲ್ಲಿಯ ಬಗ್ ಮತ್ತು ನೀಮೆನ್ ಹೊಳೆಗಳನ್ನು ದಾಟಿ ಪೋಲಂಡ್ ರಾಜಧಾನಿ ವಾರ್ಸಾವನ್ನಾಕ್ರಮಿಸಿಕೊಳ್ಳಲು ರಶ್ಯನರೀಗ ಆತುರದಲ್ಲಿದ್ದಾರೆ. ಇತ್ತ ಫ್ರಾನ್ಸ್ ರಣವಾದರೋ ಜರ್ಮನರಿಚ್ಛೆಯಂತೆ ನಡೆಯುತ್ತಿಲ್ಲ. ಮಿತ್ರರಾಷ್ಟ್ರಗಳು ಹೆಗ್ಗಳಿಕೆ ಪಡುವಂತಹ ಪ್ರಗತಿಯಲ್ಲಿ ಕಂಡುಬರುತ್ತಿಲ್ಲವಾದರೂ ಸಮಾಧಾನಕ್ಕೆ ಕೊರತೆಯಿಲ್ಲ. ಮುಖ್ಯವಾಗಿ ಅಲ್ಲಿಯ ಕೆಯಿನ್ ಸಂಹದ್ದಿನಲ್ಲಿ ಇತ್ತಂಡದವರೂ ಪ್ರಬಲಸಿದ್ಧತೆಯಿಂದ, ಒಂದು ಮಹಾ ಹೋರಾಟವನ್ನಿದಿರು ನೋಡುತ್ತಿದ್ದಾರೆ. ಇಟೆಲಿಯಲ್ಲಿಯೂ ಆಂಗ್ಲೋ-ಅಮೆರಿಕಾನ ಸೇನೆಗಳು ಮುಂದೋಟದಲ್ಲೇ ಇವೆ; ಕೆಸ್ಸಲ್‌ರಿಂಗನಿಗೆ ಬೆನ್ನಲ್ಲೇ ಕಣ್ಣಿದ್ದಂತಿದೆ! ಅಸ್ಸಾಮಿನಲ್ಲಿ ಇಂಫಾಲ್ ಮೈದಾನಿನಿಂದ ಜಪಾನರನ್ನು ಬೆನ್ನಟ್ಟಿ ತೆಗೆಯುವ ಕಾರ್ಯವು ಸಂತೋಷಕರವಾಗಿ ಸಾಗುತ್ತಿದೆ. ಶಾಂತಸಮುದ್ರದಲ್ಲಿ ಗುವಾಮ್ ದ್ವೀಪದಲ್ಲಿ ಅಮೇರಿಕನ್ ಸೇನೆ ಹೊಸದಾಗಿ ಹೆಜ್ಜೆಯೂರಿದೆ.

ಅಂತೂ ರಣಕ್ಷೇತ್ರಗಳೂ ಜರ್ಮನಿ ಜಪಾನುಗಳನ್ನೀಗ ಹಂಗಿಸಹತ್ತಿವೆ. 'ತಾತ್ಕಾಲಿಕ ಜಯಾಪಜಯಗಳಿಂದ ಯುದ್ಧದೃಷ್ಟವು ನಿರ್ಣಯಿಸಲ್ಪಡುವದಿಲ್ಲ' ಎಂಬ ಹಿಟ್ಲರನ ಮಾತು ಸರ್ವಸಮ್ಮತ. ಆದರೆ ಕೆಲಕಾಲದಿಂದ ಸರ್ವರಂಗಗಳಲ್ಲೂ ಏಕಪ್ರಕಾರ ಹಿಮ್ಮೆಟ್ಟುತ್ತಾ ಹೋಗಬೇಕಾಗಿ ಬಂದಿರುವ ನಾಜೀ ದುರದೃಷ್ಟವೂ 'ತಾತ್ಕಾಲಿಕ ಘಟನೆ'ಯಲ್ಲ. ಕಳೆದ ಮಹಾಯುದ್ಧದಲ್ಲಿ ಜರ್ಮನಿಗಾದ ಪರಾಜಯವೂ ಇಂತಹದೊಂದು ತಾತ್ಕಾಲಿಕ ಘಟನೆ. ಮಿತ್ರಪ್ರಮುಖರ ರಾಜಿ ರಾಜಿ ಆಶ್ವಾಸನೆಗಳಿದ್ದರೂ, ಲೋಕವು ಇನ್ನೊಮ್ಮೆ ಮಹಾಯುದ್ಧವನ್ನು ಕಾಣಲಾರದೆಂಬ ವಿಶ್ವಾಸವು ಹೆಚ್ಚಿನವರಿಗುಂಟಾಗಿಲ್ಲವಾದ್ದರಿಂದ, ಇಂದಿನ ಯುದ್ಧದ ಪರ್ಯವಸಾನವೂ ಒಂದು ತಾತ್ಕಾಲಿಕ ಸಂಗತಿಯಾಗಬಹುದು. ಆ ಮಾತು ಬೇರೆ. ಈಗಿನ ಯುದ್ಧಗತಿಯನ್ನವಲೋಕಿಸುವಾಗ, ಹಿಟ್ಲರ್ ಸೇನೆಯೀಗ ಕಾಲೆಡವಿದ ಕ್ಷಣಿಕಾವಘಡಕ್ಕೊಳಗಾಗಿರುವದು ಮಾತ್ರವಲ್ಲ, ಕೈಸೋತ ಲಕ್ಷಣಗಳೇ ಕಂಡುಬರುತ್ತಿವೆ. ಮಿಕ್ಕ ರಂಗಗಳ ಮಟ್ಟಿಗೆ ಹಿಟ್ಲರನು ಕೊಡುವ ಬೇರೆ ಕಾರಣಗಳಿರಬಹುದು. ಆದರೆ ರಶ್ಯದ ಇಂದಿನ ಧಾಳಿಯು ಜರ್ಮನಿಯ ಪಾಲಿಗೆ ಚಿಕಿತ್ಸಾತೀತ ರೋಗದಂತೆ ಕಾಣುತ್ತಿದೆ. ಜಪಾನರ ಇದುವರೆಗಿನ ಪರಾಭವದಿಂದ ನಾವದರ ಶಕ್ತಿಯನ್ನಳೆಯುವದಲ್ಲ. ಈಗ ತನ್ನ ಪಾಲಿಗೆ ಬಂದಿರುವ ಸುಮುಹೂರ್ತವನ್ನು ಉಪಯೋಗಿಸಿಕೊಳ್ಳುವ ಶಕ್ತಿ ಸಾಕಷ್ಟಿಲ್ಲದಿರುವದೇ ಅದರ ದೊಡ್ಡ ದೌರ್ಬಲ್ಯ. ಮಿತ್ರರ ಸೇನಾ ಶಕ್ತಿಯ ಬಹುಭಾಗವೀಗ ಹಿಟ್ಲರನ ಪಾಲಿಗೆ ಮೀಸಲಿದೆ. ಸದ್ಯದ ಆಗುಹೋಗುಗಳ ಆಧಾರದಿಂದ ಹೇಳುವದಾದರೆ ಅವನ ಅವಸಾನಕಾಲ ಸಮೀಪಿಸುತ್ತಿದೆ. ಜರ್ಮನಿಯಂತ್ಯಗೊಳ್ಳುವ ವರೆಗೂ ಆಕ್ರಮಣ ಯುದ್ಧ ಹೂಡುವ ಸ್ಥಿತಿ ಜಪಾನಿಗಿರಬೇಕಿದ್ದಿತು. ಹಿಟ್ಲರನನ್ನು ಮುಗಿಸಿ ಮಿತ್ರರ ಸೇನೆಗಳೆಲ್ಲಾ ಏಕಪ್ರವಾಹವಾಗಿ ತನ್ನೆಡೆಗೆ ನುಗ್ಗಿ ಬರುವಾಗಲೇ ಅದು ರಕ್ಷಣಾ ಯುದ್ಧ ಕೊಡಬೇಕಾದುದು. ಇದಕ್ಕೆ ಬದಲಾಗಿ ಜಪಾನು ಮುಂದಿನ ದುಸ್ಥಿತಿಗೆ ಇಂದೇ ಮುಟ್ಟಿದಂತಿದೆ. ಇದು ಸಲ್ಲಕ್ಷಣವಲ್ಲ. ಏಕಕಾಲದಲ್ಲಿ ಜರ್ಮನಿ ಜಪಾನುಗಳೆರಡೂ, ರಕ್ಷಣಾ ಯುದ್ಧ ಕೊಡಬೇಕಾಗಿ ಬಂದಿರುವಾಗ, ಒಂದರ ಅವತಾರ ಸಮಾಪ್ತಿಯಾದೊಡನೆ ಇನ್ನೊಂದರ ಆಯುಷ್ಯ ಮುಗಿದಂತೆಯೇ!

ಇಂತಹ ಸಂಧಿಗ್ಧಕಾಲದಲ್ಲೇ ಜರ್ಮನಿಯಲ್ಲಿ ಒಳಗೊಂದಲವೆದ್ದಿದೆ, ಜಪಾನಿನಲ್ಲಿ ಅಧಿಕಾರ ಬಿಡಲಾಗಿದೆ. ಜಪಾನಿನ ಬದಲಾವಣೆಯೊಂದು ಅಪಲಕ್ಷಣವೆನ್ನಬಹುದಾದರೂ ಅಪಾಯಕರವಲ್ಲ. ಜರ್ಮನಿಯ ಒಳಬಂಡಾಯಕ್ಕೆ ಮಿತ್ರರಾಷ್ಟ್ರೀಯ ಪ್ರಚಾರಕರು ಹಚ್ಚಿರುವ ಬಣ್ಣಾನಿಲ್ಲಲಾರದು. ಆದರೂ ಹಿಟ್ಲರ್ ಮತ್ತು ಅವನ ಯುದ್ಧಚಾಲಕರಲ್ಲಿ ಪರಾಭವಗಳಿಂದುಂಟಾಗಿರುವ ಮೆದುಳು ಬಾಧೆಯೊಂದಿಗೆ, ಇದೊಂದು ಹೃದಯಶೂಲೆಯೂ ಸೇರಿಕೊಂಡಿತೆನ್ನಬೇಕು. ಜರ್ಮನಿಯ ಅಗ್ರಗಣ್ಯ ಸೇನಾನಿಗಳೇ ಈ ಬಂಡಾಯದಲ್ಲಿ ಸೇರಿಕೊಂಡಿದ್ದು, ಸೇನೆಗಳಿಗೆ ಹುಸಿಯಾಜ್ಞೆ ಕೊಡುತ್ತಿರುವದರಿಂದ, ವೈರಿಗಳಿಂದ ಪುಡಿಗುಟ್ಟಲ್ಪಡುತ್ತಿರುವ ನಾಜೀ ಯುದ್ಧಯಂತ್ರಕ್ಕೀಗ, ತನ್ನವರಿಂದಲೇ ಸಂದು ಕೀಲು ಕಳಚಲ್ಪಡುವ ಅಪಾಯವೂ ಒದಗಿದೆ. ಇಟೆಲಿ ತನ್ನನ್ನು ವಂಚಿಸಿದಾಗ 'ಜರ್ಮನಿಯಲ್ಲೊಬ್ಬ ಬೊಡೊಗ್ಲಿಯೋ ಹುಟ್ಟಲಾರ' ಎಂದು ಹಿಟ್ಲರ್ ಎದೆ ತಟ್ಟಿಕೊಂಡಿದ್ದ. ಒಬ್ಬನ ಬದಲಿಗೆ ಹಲವು ಬೊಡೊಗ್ಲಿಯೋಗಳು ಅಲ್ಲಿ ಹುಟ್ಟುವ ಮೂಲಕ ಹಿಟ್ಲರನ ಮಾತು ನಿಜವಾಗಿದೆ! ಆದರೆ ಹಿಟ್ಲರ್ ಮುಸಲನಿಯಾಗಲಾರ. ಅವನೀ ಒಳಬಂಡಾಯವನ್ನು ಇಷ್ಟರಲ್ಲೇ ಅಡಗಿಸಿದ್ದಾನೆ; ಆದರದಕ್ಕೆ ಹೇತುವಾದ ಪರಾಭವಸ್ಥಿತಿಯುಳಿದಿದೆ. ಇದು ಮಿತ್ರರಾಷ್ಟ್ರಗಳ ಪೂರ್ಣ ವಿಜಯದೊಡನೆ ಪರ್ಯವಸಾನಗೊಳ್ಳಬಹುದು.

ಉಡುಪಿ

ಬಸ್ಸಿನಡಿಗೆ ಬಿದ್ದು ಮರಣ:— ತಾ 25 7 44ರಲ್ಲಿ ಕಟಪಾಡಿ ಸಾಯ್ಕರ ಮನೆಯ ಸಮೀಪದ ಧಕ್ಕೆಯ ಬಳಿಯ ಸಂಕದ ಮೇಲೆ ಶಂಕರ್ ವಿಟ್ಠಲ್ ಬಸ್ ಹೋಗುವಾಗ ಸುಮಾರು 8ವರ್ಷದ ಹುಡುಗನೊಬ್ಬನು ಬಸ್ಸಿನಡಿಗೆಬಿದ್ದು ಮೃತಹೊಂದಿರುವನೆಂದು ತಿಳಿದುಬರುತ್ತದೆ.

ಕಜೆಅಕ್ಕಿ.—ರಿಕ್ವಿಜಿಸನ್ ಆದ ಸುಮಾರು 1000ಮುಡಿ ಕಜೆ ಅಕ್ಕಿಯು ಸಹಕಾರಿ ಸ್ಟೋರಿನಲ್ಲಿದ್ದು ಸದ್ಯವೇ ಡಿಪೋಗಳ ಮೂಲಕ ಹಂಚಲ್ಪಡಲಿರುವದೆಂದು ತಿಳಿದುಬರುತ್ತದೆ. ಈ ಕಜೆಅಕ್ಕಿಯು ಜನರ ಉಪಯೋಗಕ್ಕೆ ಅಯೋಗ್ಯವಾದುದೆಂದೂ ಕುಟ್ಟಿ ಹಂಚುವ ವ್ಯವಸ್ಥೆಯನ್ನು ಸಂಬಂಧಪಟ್ಟವರು ಮಾಡಬೇಕೆಂದೂ ತಜ್ಞರು ಅಭಿಪ್ರಾಯಪಡುತ್ತಾರೆ. ಇದ್ದಂತೆ ಕೊಂಡುಹೋಗಿ ಕುಟ್ಟಿದರೆ ಅಕ್ಕಿ ಕಡಿಮೆ ಬಂದು ಉಪಯೋಗಿಸುವವರಿಗೆ ನಷ್ಟವಾಗುವುದೆಂದೂ ಬಾತ್ಮಿ.

ತಾಲೂಕು ವಾರ್ ಕಮಿಟಿಯ ಮಹಾ ಸಭೆಯು ತಾ 19ರಲ್ಲು ಮಿ। ಡಿ। ಸೊರೋಸ್ಸಾ, ಡಿ। ಮುನ್ಸೀಫ್ ಅವರ ಅಧ್ಯಕ್ಷತೆಯಲ್ಲಿ ಜರಗಿ ರೆಡ್‌ಕ್ರಾಸ್, ಫ್ಯಾನನ್ಸ್ ಮತ್ತು ಯುದ್ಧಪ್ರಚಾರ ಉಪಸಮಿತಿಗಳ ಸದಸ್ಯರ ಚುನಾವಣೆ ನಡೆಯಿತು.

ಮುನಿಸಿಪಲ್ ಕೌನ್ಸಿಲಿನ ಮೀಟಿಂಗು ತಾ 25ರಲ್ಲು ಚೆಯರ್‌ಮೆನ್ ಶ್ರೀ। ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಕೌನ್ಸಿಲಿನ ಗತವರುಷದ ಆಡಳಿತ ವರದಿ ಸ್ವೀಕರಿಸಲಾಯಿತು. ಮಿ। ಆರ್ ಎ. ಸ್ವಾಮಿನ್ಸರ ಪ್ರಶ್ನೆಗಳಿಗೆ ಉತ್ತರವೀಯಲಾಯಿತು. ನಗರದೊಳಗಿನ ರಸ್ತೆಗಳು ಮತ್ತು ಓಣಿಗಳು ನಾದುರಸ್ತಿಯಲ್ಲಿವೆ ಎಂದು ಮಿ। ಸ್ವಾಮಿನ್ಸರ ವಾದ.

ಜಿಲ್ಲಾ ಕಲೆಕ್ಟರರು ಉಡುಪಿಯಲ್ಲಿ ತಾ 19ರಿಂದ 4 ದಿನ ಮೊಕ್ಕಾಂ ಮಾಡಿದುದರ ಪರಿಣಾಮವಾಗಿ ಕಟ್ಲರಿ ಸಾಮಾನುಗಳು ಕಡಿಮೆ ದರದಲ್ಲಿ ಹೊರಬಿದ್ದವು. ಉದ್ದು, ಹೆಸರು, ಮುರುಳಿ ಮೊದಲಾದುವುಗಳ ದರವು ಇನ್ನೂ ನಿರ್ಣಯವಿಲ್ಲದೆ ಒಂದೇ ಸಮನೆ ಏರುತ್ತಿದೆ.

ಪ್ರಕಟಣೆ

ಡಿ. ಬಾಕೂರರು ಎಲ್ಲನಜಾಟಿ ಸಂಘ, ಬೊಂಬಾಯಿ ಇವರು ತಾ 25 5 44ರ ನವಯುಗದಲ್ಲಿ ಕೊಟ್ಟ ಪ್ರಕಟಣೆಗೆ ಉತ್ತರ

ನಿಮ್ಮ ಪ್ರಕಟಣೆಯು ನ್ಯಾಯಕ್ಕೂ, ಸತ್ಯ ಮತ್ತು ಧರ್ಮ ನೀತಿಗಳಿಗೂ ತೀರಾ ವಿರೋಧವಾಗಿದೆ. ಆದ್ದರಿಂದ ಸದ್ರೀ ಪ್ರಕಟಣೆಗೆ ಮನ್ನಣೆಯನ್ನೀಯದೆ ಈ ಮೂಲಕ ಆಕ್ಷೇಪಿಸಲಾಗಿದೆ. ಈ ತರದ ನಿಮ್ಮ ಪ್ರಕಟಣೆಗಳಿಗೆ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ಕಟಪಾಡಿಯು ಸದಾ ಮನ್ನಣೆ ಕೊಡದೆ ತಿರಸ್ಕರಿಸುವುದೆಂದು ನೀವು ತಿಳಿದುಕೊಳ್ಳತಕ್ಕದ್ದು.

K Deju ಗೌ ಕಾರ್ಯದರ್ಶಿ.
ಬ್ರ ಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ, ಕಟಪಾಡಿ, ದ ಕ 25 7 1944

ಪ್ರಕಟಣೆ.

ಉಡ್ಪಿ ತಾಲೂಕು ಪರೋಡಿ ಗ್ರಾಮದ ಅಂತೋನಿ ಲುವಿಸರ ಮಗ ಇಗ್ನೇಶಿಯಸ್ ಲುವೀಸನು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ—ತಾ 16—9—42ರ ವರೆಗೆ ನಾನು ನನ್ನ ಸಮಸ್ತ ವ್ಯವಹಾರಗಳಲ್ಲಿಯೂ ನಾನು ಸೇರಿದ ಯಾವತ್ತು ರಿಕಾರ್ಡುಗಳಲ್ಲಿಯೂ 'I Lewis' ಯೆಂತ ಇಂಗ್ಲಿಷಿನಲ್ಲಿ ದಸ್ಕತು ಮಾಡಿಕೊಂಡು ಬರುತ್ತಿದ್ದೆ. ಆದರೆ ಸದ್ರೀ ತಾರೀಕಿನಲ್ಲಿಯೂ ಆ ಅನಂತರ ನನ್ನಿಂದಾದ ಯಾವತ್ತು ದಾಕ್ಲೆಗಳೂ, ದಸ್ತಾವೇಜುಗಳೂ ಮ ನನ್ನ ಯಾವತ್ತೂ ವ್ಯವಹಾರಗಳಲ್ಲಿಯೂ ರಿಕಾರ್ಡುಗಳಲ್ಲಿಯೂ 'ಇಗ್ನೇಶಿಯಸ್ ಲುವೀಸ್' ಯೆಂತ ಕನ್ನಡದಲ್ಲಿ ದಸ್ಕತು ಮಾಡಿಕೊಂಡು ಬರುತ್ತಿದ್ದೇನೆ. ಇನ್ನು ಮುಂದೆಯೂ ಅದೇ ಪ್ರಕಾರ ಕನ್ನಡದಲ್ಲಿ ದಸ್ಕತು ಮಾಡುತ್ತೇನೆ, ಈ ಸಂಗತಿಯನ್ನು ಸಮ್ಮಂಧಪಟ್ಟ ಸಮಸ್ತ ಜನರೂ ತಿಳಿದುಕೊಂಡಿರಲಿ.

ಇಗ್ನೆಸಿಯಸ್ ಲುವೀಸನ ರುಜು.
ಸಾಕ್ಷಿ ನ್, 20-7-44

ಚಂದಾದಾರರಲ್ಲಿ.

ನವಯುಗದ ಚಂದಾದಾರರು ತಮ್ಮ ವಿಳಾಸ ಬದಲಾಗಿದ್ದರೆ ಅದನ್ನು ದಯಮಾಡಿ ಸಕಾಲದಲ್ಲಿ ತಿಳಿಸುವಂತೆಯೂ ಚಂದಾಹಣ ಬಾಕಿ ಇದ್ದವರು ಅದನ್ನು ಕೂಡಲೇ ಕಳುಹಿಸುವಂತೆಯೂ ಅಪೇಕ್ಷಿಸಲಾಗುತ್ತದೆ.

ವಾಚಕರಲ್ಲಿ-

ಶ್ರೀ ಕೆ. ಜಗನ್ನಾಥ ಶೆಟ್ಟರು ಚಂದಾದಾರರನ್ನು ಸೇರಿಸಲು ಪೂನಾ, ಬೊಂಬಾಯಿ ಮೊದಲಾದ ಕಡೆಗಳಲ್ಲಿ ಸಂಚರಿಸ ತೊಡಗಿದ್ದಾರೆ. ಅವರೊಡನೆ ಎಲ್ಲರೂ ಸಹಕರಿಸಿ, ಚಂದಾದಾರರಾಗಿ, ಚಂದಾದಾರರನ್ನೊದಗಿಸಿ, ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗೊಡುವುದು, ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವದು. ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3|- ಕ್ವಿಮಿರಿದ ಕೇಸು—ಗೆ ರೂ. 5, (ವಿ. ಪಿ. 12ಆಣೆ ಅಲಾಯಿದ)

Mrs. P DEVEE, F. D, S, (N)
TOLLYGUNGE, CALCUTTA
ಸ್ಟಾಕಿಸ್ಟ್ Popular Stores,
P, B, 60, MANGALORE
Shah Co, Mangalore

ತಾರುಣ್ಯ

ಕೊಟ್ಟ ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ
ಡಬ್ಬಿ 1ಕ್ಕೆ ರೂ. 1
ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸು,
ಪುತ್ತೂರು ಏಜಂಟರು, ಪೈ ಫಾರ್ಮಸಿ

CHAMPAE'S
Snow & Castrex
(Sole Distributors for (India.)
Sukhananda Stores
Santhekaite, UDIPI, S K.

★ ಇಡೀ ರಶ್ಯದ ನಾಜೀಗ್ರಹಣ ಬಿಡುಗಡೆ! ★

ಕೆಂಪು ಸೇನೆಯ ಪ್ರಗತಿ.

ಪೋಲೆಂಡ್ ಮತ್ತು ಪೂರ್ವ ಪ್ರಶ್ಯಾದಲ್ಲಿ ರಶ್ಯಾನರ ಅದ್ಭುತ ಧಾಳಿಯು ಅಮೋಘ ವಿಜಯಗಳನ್ನು ಪಡೆಯುತ್ತಿದೆ. ಪ್ಸ್ಕೋವನ್ನು ಸ್ವಾಧೀನ ಪಡಿಸಿಕೊಂಡು ಈಗ ಲುಬ್ಲಿನ್‌ನಲ್ಲಿ ಬೀದಿಕಾಳಗ ಕೊಡುತ್ತಿದೆ. ಪೋಲೆಂಡಿನ ರಾಜಧಾನಿ ವಾರ್ಸಾದ ಪತನವು ಸನ್ನಿಹಿತವಾದಂತಿದೆ. ಜರ್ಮನರು ಈ ವರೆಗಿನ ಪ್ರತಿಭಟನೆಗಿಂತ ನಾಲ್ಮಡಿಯ ಸನ್ನಾಹದಿಂದ ವಿರೋಧವೊಡ್ಡದಿದ್ದರೆ ವಾರ್ಸಾ ನಗರವು ಒಂದೆರಡು ದಿನಗಳೊಳಗೆ ರಶ್ಯಾನರ ವಶವಾಗಬಹುದು. ಅಲ್ಲಿಯ ಸಂದುಕಟ್ಟಿನ ಸ್ಥಳಗಳೆಲ್ಲಾ ಕೆಂಪುಸೇನೆಗೆ ದೊರೆತಿವೆ.

ಪ್ಸ್ಕೋವ್ ವೈಶಿಷ್ಟ್ಯ

ಕಠಿಣ ಹೋರಾಟದ ಬಳಿಕ ರಶ್ಯಾನರ ಕೈಗೆ ಸಿಕ್ಕಿದ ಪ್ಸ್ಕೋವ್ ನಗರದೊಂದಿಗೆ ಜರ್ಮನಾಕ್ರಮಿತ ರಶ್ಯದ ಪ್ರತಿಯೊಂದಿಂಚು ಸ್ಥಳವನ್ನೂ ಕೆಂಪುಸೇನೆ ಮರಳಿ ಪಡೆದಂತಾಯಿತು. 1939ರ ಯುದ್ಧಾರಂಭದ ಮೊದಲಿದ್ದ ಇಡೀ ರಶ್ಯವು ಈಗ ರಶ್ಯಾನರ ವಶಕ್ಕೆ ಬಂದಂತಾಯಿತು. ರಶ್ಯಾದ ಭೂಮಿಯೊಳಗಡೆ ಈಗ ಓರ್ವ ನಾಜೀ ಯೋಧನೂ ಉಳಿದಿಲ್ಲ; ರಶ್ಯದ ಒಂದಿಂಚು ನೆಲವೂ ಜರ್ಮನರ ಕೈಯ್ಯಲ್ಲಿಲ್ಲ. ಲೇಟ್ವಿಯಾ ಮತ್ತು ಎಸ್ಟೋನಿಯಾಗಳ ಗಡಿಯಲ್ಲಿರುವ ಈ ಕೊನೆಯ ನಗರವು ವಶವಾದುದರಿಂದ 'ಇನ್ನು ಕೆಂಪುಸೇನೆ ರಭಸದಿಂದ ಬಾಲ್ಟಿಕಿನೊಳಗೆ ನುಗ್ಗುವದಲ್ಲದೆ ಪೋಲೆಂಡ್ ಪ್ರಶ್ಯಾ ಒತ್ತಡವೂ ಬಲಗೊಳ್ಳಲಿದೆ

ನೋರ್ಮಂಡಿ ಸಮರ

ಮುಖ್ಯವಾಗಿ ಕೆಯಿನ್ ಸಂಹದ್ದಿನಲ್ಲಿ ಮಹಾ ಹೋರಾಟಪ್ರಾರಂಭವಾಗುವದರಲ್ಲಿದೆ ಮಿ. ಚರ್ಚಿಲ್ಲರು ಮೂರು ದಿನ ಫ್ರಾನ್ಸ್ ರಣರಂಗಗಳನ್ನು ಸಂದರ್ಶಿಸಿ ಬಂದಿದ್ದಾರೆ. 'ಜರ್ಮನಿಯೊಳಗಡೆಯಿಂದಲೇ ದೌರ್ಬಲ್ಯದ ಸ್ಪಷ್ಟ ಚಿಹ್ನೆಗಳು ಕಾಣಿಸಹತ್ತಿವೆ. ಅವರೊಬ್ಬರನ್ನೊಬ್ಬರನ್ನು ಗುಂಡಿಟ್ಟು ಕೊಲ್ಲುತ್ತಿದ್ದಾರೆ' ಎಂದು ಅಲ್ಲಿಯ ಸೈನಿಕರನ್ನು ಹುರಿದುಂಬಿಸಿದ್ದಾರೆ. ಪೂರ್ವ ನಿಶ್ಚಯದಂತೆ ಫ್ರಾನ್ಸಿನಲ್ಲಿ ಪ್ರಗತಿಯಾಗಿಲ್ಲವೆಂಬ ವಿಮರ್ಶೆ ಮಿತ್ರ ಪಾಳಯದಲ್ಲೇ ಕೇಳಬರುತ್ತಿದೆಯಾದರೂ ಸ್ಥಳಾಕ್ರಮಣಕ್ಕಿಂತಲೂ ವಿರೋಧಿಯ ಸೈನ್ಯ ನಾಶವೇ ಮುಖ್ಯವಾದ್ದರಿಂದ ನೋರ್ಮಂಡಿ ಯುದ್ಧದ ಪರಿಣಾಮವು ಸಮಾಧಾನಕರವೆನ್ನಲಾಗಿದೆ.

ಇಟೆಲಿಯಲ್ಲಿ

ಒಂದೆಡೆಯಲ್ಲಿ ಅಮೇರಿಕನ್ ಸೇನೆಗಳು ಸೆರ್ನೋ ಹೊಳೆಯ ಬದಿಯ ಪಿಸಾ ನಗರವನ್ನು ವಶಪಡಿಸಿಕೊಂಡಿವೆ. ಇನ್ನೊಂಡೆಡೆಯ ಬ್ರಿಟಿಷ್ ಮತ್ತು ಹಿಂದೀ ಸೇನೆಗಳು ಟೈಬರ್ ಕಂದರದ ಮೂಲಕ ಮುಂದೊತ್ತಿ ಕೆಸ್ಸರ್‌ಲಿಂಗನ ಈಗಿನ ಮುಖ್ಯ ರಕ್ಷಣಾ ಲೈನಾದ ಗೋತಿಕ್ ಲೈನಿನ ಬದಿಗೆ ಬಂದಿವೆ. ಜರ್ಮನಿಯ ಸದ್ಯದ ಆಂತ:ಕಲಹವು ಸಂಧಾನ ಪ್ರಯತ್ನಕ್ಕವಕಾಶ ಕೊಟ್ಟಿರುವದರಿಂದ ಜಗದ್ಗುರು ಪೋಪರು ಶಾಂತಿಯತ್ನ ನಡೆಸಬಹುದೆಂದು ಊಹಾಪೋಹೆಯೆದ್ದಿದೆ. ಡೊಡಕೇನೀಸ್ ದ್ವೀಪಗಳಲ್ಲೊಂದಾದ ಸಿಮಿಯನ್ನು ಆಂಗ್ಲೋ-ಅಮೇರಿಕಾನ ಸೇನೆಗಳು ಜರ್ಮನರಿಂದ ಕಿತ್ತುಕೊಂಡಿವೆ.

ಶಾಂತ ಸಮುದ್ರದಲ್ಲಿ

ದೊಡ್ಡ ಧಾಳಿಯನ್ನಾರಂಭಿಸಿ ಜಪಾನಿನ ಒಳಗಡೆಯ ರಕ್ಷಣಾ ಲೈನುಗಳನ್ನು ಭೇದಿಸಿ ಯುದ್ಧವನ್ನು ಜಪಾನಿಗೇನೇ ಕೊಂಡೊಯ್ಯುವ ಕಾಲ ಸಮೀಪಿಸಿದೆಎಂದು ಅಮೇರಿಕದ ನಾವಿಕಾಧಿಪ ಫೋರೆಸ್ಟಲ್ ಅಂದಿದ್ದಾರೆ. ಶಾಂತ ಸಮುದ್ರದ ಸೈಪಾನ್ ದ್ವೀಪಕ್ಕೆ ಮೂರು ಮೈಲು ದೂರದ ಟಿನಿಯನ್ ದ್ವೀಪಕ್ಕೂ ಅಮೇರಿಕನ್ ಸೇನೆಗಳಿಳಿದಿವೆ. ತಾವು ರಶ್ಯದೊಡನೆ ಮೈತ್ರಿ ಸಂಬಂಧವನ್ನಿಟ್ಟುಕೊಳ್ಳುವೆವೆಂದೂ ಧೋರಣೆಯಲ್ಲಿ ಮೂಲ ಭೂತ ವ್ಯತ್ಯಾಸವಿಲ್ಲವೆಂದೂ ಜಪಾನಿನ ಹೊಸ ಪ್ರಧಾನರಂದಿದ್ದಾರೆ.

ಮಹಾತ್ಮಾಗಾಂಧಿ

ತನ್ನ ಇತ್ತೀಚೆಗಿನ ಸಂಧಿ ಸೂಚನೆಗಳಿಂದಾಗಿ ಹಲವು ಕಟು ವಿಮರ್ಶೆಗೊಳಗಾಗಿದ್ದಾರೆ. ಹಲವು ನಿಷೇಧಾತ್ಮಕ ಹಾಗೂ ಪ್ರಶ್ನಾತ್ಮಕ ಪತ್ರಗಳು ಅವರಿಗೆ ಬರುತ್ತಿವೆ. ಇವುಗಳಿಗುತ್ತರ ಕೊಡುತ್ತಾ, ತಾನು ನೋಲಿನ ಅನುಭವದಿಂದ ಈ ಸೂಚನೆಗಳನ್ನು ಮುಂದಿಟ್ಟುದಲ್ಲ; ರಾಷ್ಟ್ರಕ್ಕೆ ಸ್ವಾತಂತ್ರ್ಯ ದೊರೆಯುವದಾದರೆ ತಾನು ಪತನ ಹೊಂದಲಿಕ್ಕೂ ತಯಾರು. ಆಂದೋಲನದಲ್ಲಿ ಜನರು ಮಾಡಿರುವ ತ್ಯಾಗವು ಅವರ್ಣನೀಯ, ಅಮೋಘ, ಹಾಗೂ ರಾಷ್ಟ್ರದ ಸ್ಥಾನವನ್ನು ಮೇಲೇರಿಸುವಂತದಿಹದ್ದಿತು. ಆದರೆ ಅಹಿಂಸೆಯ ಕೊರತೆಯಿದ್ದುದರಿಂದಲೇ ನಿಶ್ಚಿತಾವಧಿಯಲ್ಲಿ ಸ್ವಾತಂತ್ರ್ಯ ಹೊಂದಲಾಗಲಿಲ್ಲ, ಎಂದು ಕಾರಣ ಹೇಳಿದ್ದಾರೆ.

ದೇಶದ ಬಿಕ್ಕಟ್ಟು.

ಮೇಲಿನ ಕಾರಣವೂ ದೇಶದ ಘೋರ ಬಂಗಾಲವೂ 1942ಕ್ಕಿಂತ ಭಿನ್ನವಾದ ನಿರ್ಧಾರವನ್ನು ತನ್ನಿಂದ ಮಾಡಿಸಿದುವೆಂದು ಹೇಳಿ ಸರಕಾರವು ಈ ಗೌರವಾರ್ಹ ಸೂಚನೆಗಳನ್ನೊಪ್ಪಿಕೊಳ್ಳಬೇಕೆಂದು ಒತ್ತಿಹೇಳಿದ್ದಾರೆ ಹಿಂದೂ ತರುಣರು ಕೆಲವರು ಪಾಂಚಗನಿಗೆ ಹೋಗಿ ಪ್ರಾರ್ಥನೆಯ ವೇಳೆ ಮಹಾತ್ಮರವಿರುದ್ಧ ಘೋಷಗಳ ಮೂಲಕ ಗಲಭೆಯೆಬ್ಬಿಸಿದರು. ಆ ಸಮಯದಲ್ಲಿ ಮಹಾತ್ಮರಿಗೆ ತಿಳಿಯದಂತೆಯೇ ನಾಲ್ವರು ಸಶಸ್ತ್ರ ಸರಕಾರೀ ಪತ್ತೇದಾರರು ಅವರ ನೈಗಾವಲಿಗಿದ್ದರೆಂದು ತಿಳಿದುಬರುತ್ತದೆ. ಅವರ ಆರೋಗ್ಯವೀಗ ಬಹುಮಟ್ಟಿಗೆ ಸುಧಾರಿಸಿದೆ. ಆಗೋಸ್ತು ಮೊದಲವಾರದಲ್ಲಿ ಗಾಂಧಿಜೀ ಸೇವಾಗ್ರಾಮಕ್ಕೆ ಹೋಗಲಿದ್ದಾರೆ,

ರಾಜಗೋಪಾಲಾಚಾರ್ಯರು ಆಗಾಖಾನ್ ಅರಮನೆಯಲ್ಲಿ ಉಪವಾಸ ವ್ರತಕೈಗೊಂಡಾಗ ಗಾಂಧಿಜೀಯವರೇ ಒಪ್ಪಂದ ಮಾತುಕತೆ ನಡಿಸಲು ತನ್ನನ್ನು ಬರಮಾಡಿಸಿದುದಲ್ಲದೆ ತಾನು ಒತ್ತಾಯಿಸಿದುದಿಲ್ಲವೆಂದು ರಾಜಾಜಿಯ ಅಂಬೋಣ. ಸರ್ ಸಪ್ರುಗಳಂತಹ ಹೆಚ್ಚಿನ ಪ್ರಮುಖರು ಮಹಾತ್ಮಾಜೀಯ ಸಂಧಾನದಾತುರವನ್ನು ಮನಗಂಡು ಸರಕಾರವು ಕೂಡಲೇ ಧುರೀಣರನ್ನು ಬಿಡುಗಡೆ ಮಾಡತಕ್ಕದ್ದೆಂದು ಆಗ್ರಹಪಡಿಸುತ್ತಿದ್ದಾರೆ.

ಸ್ಥಾಪನೆ] 'ಕಿರಿಯರ ಪ್ರಪಂಚ'ದ [1930

ನೋಡಿದರೆ ಬಿಡದಿರುವ ಪುಸ್ತಕಗಳು

ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳಿಂದ

ಅನ್ನದೇವರು ಮತ್ತು ಇತರ ಕಥೆಗಳು
ವಿಚಾರಕ್ರಾಂತಿಯನ್ನುಂಟುಮಾಡುವ ೧೪ ಸಣ್ಣ ಕತೆಗಳ ಸಂಗ್ರಹ ಬೆಲೆ ೦-೧೨-೦

ಶ್ರೀ. ಕೆ. ವಿಟ್ಠಲ ಶೆಣೈ, ಬಿ. ಎ., ಎಲ್. ಟಿ ಯವರಿಂದ

ನಗೆನೋಟಗಳು ಬೆಲೆ ೦-೧೨-೦
ದಣಿದ ಮನವನ್ನು ತಣಿಸಿ ವಿನೋದದೊಡನೆ ವಿವೇಕವನ್ನೂ ಉಂಟು ಮಾಡುವ ೧೧ ಜೀವನ ಚಿತ್ರಗಳ ಸಂಗ್ರಹ.

ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ

ಮೂರು ಪ್ರಹಸನಗಳು ಬೆಲೆ ೦-೧೪-೦
ಓದಿದರೂ ಅಭಿನಯಿಸಿದರೂ ಸ್ವಾರಸ್ಯವಾಗಿ ತೋರುವ ಮೂರು ಪ್ರಹಸನಗಳ ಸಂಗ್ರಹ.

ಭಾರತೀಯ ಕತೆಗಳು ಬೆಲೆ ೦-೧೪-೦
ಶ್ರೀ. ಎ. ಎಸ್. ಪಂಚಾಪಕೇಶ ಐಯ್ಯರ್, ಎಂ. ಎ., ಐ. ಸಿ. ಯಸ್., ಬಾರ್ ಎಟ್. ಲಾ. ಇವರ Tales of Ind ಎಂಬ ಕಥಾವಳಿಯ ಕನ್ನಡ ಅನುವಾದ.

ನಂದಾದೀಪ ಬೆಲೆ ೦-೧೦-೦
ಬೋಧಪ್ರದವಾದ ೨೧ ಕಥೆಗಳ ಸಂಗ್ರಹ.

ಶ್ರೀ. ಕೆ. ಕೆ. ಶೆಟ್ಟರಿಂದ

ಪ್ರೇಮವಿಜಯ ಬೆಲೆ ೦-೧೨-೦
ಕ್ರಾಂತಿಕಾರಕ, ಹೃದ್ರಾವಕ, ವಿಚಾರಪ್ರಚೋದಕ ನಾಟಕ.

ದೇಶಭಕ್ತ ಬೆಲೆ ೦-೧೪-೦
ರಾಜಕೀಯ ಸಾಮಾಜಿಕ ನಾಟಕ ಹೊಸ ಪ್ರಯೋಗ.

ಸನ್ಯಾಸಿಯ ಸೋಗಿನಲ್ಲಿ ಬೆಲೆ ೦-೮-೦
ವೇಶ್ಯಾಪುತ್ರಿಯಾದರೂ ನೀತಿವಂತ ಜೀವನ ನಡೆಸುವ ಮನಸ್ಸುಳ್ಳವಳಾದರೆ ಸಮಾಜವು ಅದಕ್ಕೆ ಅಡ್ಡಿಯೊಡ್ಡಿ ಅವಳ ಜೀವನವನ್ನು ಹೇಗೆ ಕೆಡಿಸುತ್ತದೆಂಬುದನ್ನು ಚಿತ್ರಿಸುವ ನವೀನ ಸಾಮಾಜಿಕ ಕಾದಂಬರಿ.

ಪುರುಷ ವಧು ಬೆಲೆ ೦-೪-೦
ಮುದುಕನ ಮದುವೆಯ ಭ್ರಾಂತಿಯ ಪ್ರಹಸನ.

ಹೆಂಡ್ತಿ ಗಂಡನಾದರೆ? ಬೆಲೆ ೦-೪-೦
ಸ್ತ್ರೀಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಪ್ರಹಸನ.

ವ್ಯಭಿಚಾರಿಣಿ ಯಾರು? ಬೆಲೆ ೦-೧೨-೦
ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕ.

ಮುಂದಿನ ದೇವರು ಬೆಲೆ ೦-೩-೦
ಹಿಂದಿನ, ಇಂದಿನ ಮತ್ತು ಮುಂದಿನ ಸಮಾಜವ್ಯವಸ್ಥೆಯನ್ನು ವಿಚಾರಪೂರ್ಣವಾಗಿ ಸೂಕ್ಷ್ಮವಾಗಿ ವಿವರಿಸುವ ಪ್ರಬಂಧ.

ಕುಶಲವ ಬೆಲೆ ೦-೫-೦
ನವ ಪೌರಾಣಿಕ ನಾಟಕ.

ಸಂಶಯ ಪಿಶಾಚಿ ಬೆಲೆ ೦-೮-೦
ಅಳಿಯಕಟ್ಟಿನ ಮುಖ್ಯವಾಗಿ ಬಂಟ ಸಮಾಜದ ಸದ್ಯದ ನಡವಳಿಕೆಯನ್ನೂ ಅದರ ದುಷ್ಪರಿಣಾಮವನ್ನೂ ಚಿತ್ತವೇಧಕವಾಗಿ ಚಿತ್ರಿಸಿ ಸಮಾಜದೇಳಿಗೆಯ ಮಾರ್ಗ ಸೂಚಿಸುವ ನಾಟಕ.

ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ

ಸ್ವತಂತ್ರ ಜೀವನೋಪಾಯ ಬೆಲೆ ೦-೩-೦
ಜೀವನದ ಹೋರಾಟವನ್ನು ಕಣ್ಣಮುಂದಿರಿಸಿ ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ನಿವರಿಸುವ ಚಿಕ್ಕ ಪ್ರಹಸನ.

ವಿವಿಧ ಕತೆಗಾರರಿಂದ

ನಾಡಕತೆಗಳು ಬೆಲೆ ೦-೩-೦
ಸಮಾಜದ ನೈಜಚಿತ್ರಗಳನ್ನೊಳಗೊಂಡ ಕತಾಸಂಗ್ರಹ.

ಮಧುವನ ಬೆಲೆ ೩-೦-೦
ಕರ್ನಾಟಕದ ಪ್ರಸಿದ್ಧ ಕತೆಗಾರರ ಉಚ್ಚ ತರಗತಿಯ ಕಥಾಸಂಗ್ರಹ.

ವಿವಿಧ ಕವಿಗಳಿಂದ

ಕಾವ್ಯ ಸಾಮ್ರಾಜ್ಯ ಬೆಲೆ ೦-೧೨-೦
ಆಧುನಿಕ ಕವಿತೆಗಳ ಉತ್ತಮ ಸಂಗ್ರಹ.

ಶ್ರೀ. ಎಸ್. ವೆಂಕಟರಾಜರಿಂದ

ರಂಗಭೂಮಿ ಬೆಲೆ ೦-೮-೦
ಅಪಾತ್ರರು 'ರಂಗಭೂಮಿ'ಯ ಸೇವೆಗೆ ಹೊರಟರೆ ಆಗುವ ದುಷ್ಪರಿಣಾಮವನ್ನು ತೋರಿಸುವ ವಿನೋದಪರ ನಾಟಕ.

ಶ್ರೀ. ಎಸ್. ಎಲ್. ಸುಬ್ರಹ್ಮಣ್ಯರಿಂದ

ಸೇವಾಪಥ ಬೆಲೆ ೦-೮-೦
ಶೇಟ್ ಗೋವಿಂದದಾಸರ ಹಿಂದೀ ನಾಟಕದ ಅನುವಾದ. ಆಧುನಿಕ ರಾಜಕೀಯ ವಾತಾವರಣದಿಂದ ಕಲ್ಪಿತವಾದುದು.

ನಾರೀ ಹೃದಯ ಬೆಲೆ ೦-೧೨-೦
ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ ಶ್ರೀಮತಿ ಶಿವರಾಣಿ ದೇವಿಯರ ಹದಿನಾಲ್ಕು ಹಿಂದೀ ಕತೆಗಳ ಅನುವಾದ.

ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆಯವರಿಂದ

ಪ್ರಕಾಶ ಬೆಲೆ ೧-೧೨-೦
ಶೇಟ್ ಗೋವಿಂದ ದಾಸರ ರಾಜಕೀಯ ಸಾಮಾಜಿಕ ನಾಟಕದ ಭಾಷಾಂತರ. ಅತಿಕ್ರಾಂತಿಕಾರಕ.

ವಿಕ್ರಯಾಧಿಕಾರಿಗಳು:

ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಶರ್ಸ್,
ಉಡುಪಿ.

(ಕೆಟಲಾಗಿಗೆ ಒಂದಾಣೆಯ ಸ್ಟಾಂಪಿನೊಂದಿಗೆ ಬರೆಯಿರಿ.)

ದಕ್ಷಿಣ ಕನ್ನಡ-

ಮಂಗಳೂರು

'ಮಂಗಳೂರು ಗವರ್ನಮೆಂಟ್ ಕಲಾಶಾಲೆಯ ವಿದ್ಯಾರ್ಥಿ ಉಪಾಧ್ಯಾಯ ಸಂಘದ ಪ್ರಥಮ ಸಭೆಯು ತಾ 19-7-44ರಲ್ಲಿ ಹೆಡ್ ಮಾಸ್ತರರಾದ ಎ| ಯಸ್| ವೆಂಕಟರಾವರ ಅಧ್ಯಕ್ಷತೆಯಲ್ಲಿ ಜರಗಿತು ಈ ಕೆಳಗಿನವರನ್ನು ಚುನಾಯಿಸಲಾಯ್ತು. ಶ್ರೀ ನಂದಳಿಕೆ ನಾರಾಯಣ ಶೆಟ್ಟಿ ಕಾರ್ಯದರ್ಶಿಯರಾಗಿ, ಶ್ರೀ ಯಸ್| ನಾರಾಯಣ ಶೆಟ್ಟಿ ಉಪಕಾರ್ಯದರ್ಶಿಯರಾಗಿ, ಶ್ರೀ ಕೆ ನಾರಾಯಣ ರೈಗಳು ಸಂಪಾದಕರಾಗಿ, ಶ್ರೀ ಯಚ್ ಕೃಷ್ಣಭಟ್ಟರು ಸಹ ಸಂಪಾದಕರಾಗಿ, ಶ್ರೀ ಜಿ| ಬಿ| ಲಿಂಗಣ್ಣ, ಶ್ರೀ ಮಾಧಯಪ್ಪ ಹೆಬ್ಬ ಶ್ರೀ ವಿಠಲದಾಸ್, ಶ್ರೀ ರಾಮಚಂದ್ರರಾವ್ ಇವರು ಕಮಿಟಿ ಮೆಂಬರರಾಗಿ ಆರಿಸಲ್ಪಟ್ಟರು ಅಧ್ಯಕ್ಷರು ಸಭಿಕರಿಗೆ ಮಾರ್ಗದರ್ಶಕವಾದ ಸಲಹೆಗಳನ್ನಿತ್ತ ಬಳಿಕ ಕಾರ್ಯದರ್ಶಿಯವರ ವಂದನೆಗಳನ್ನರ್ಪಿಸಿದರು.'

ಕಾಗದ ನಿಯಂತ್ರಣಾಜ್ಞೆಗೆ ವಿರೋಧ.—ಜಿಲ್ಲಾ ಪ್ರೆಸ್ ಕೆಲಸಗಾರರ ಸಂಘದ ಮಹಾಸಭೆಯು ತಾ. ೧೬ರಂದು ಸಂಜೆ ಶ್ರೀ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಸರಕಾರವು ಇತ್ತೀಚೆಗೆ ಕಾಗದ ಉಪಯೋಗದ ಮೇಲೆ ಹೊರಿಸಿದ ನಿರ್ಬಂಧಕಾಜ್ಞೆಯನ್ನು ಖಂಡಿಸಿತು

ಕೋ—ಆಪರೇಟಿವ್ ಸ್ಟೋರುಗಳ ಮೂಲಕ ಸೌದೆ:—ಇದ್ಯದಲ್ಲಿ ನಗರದಲ್ಲಿ ಸೌದೆಯ ಅಭಾವವಾಗಬಹುದೆಂಬುದನ್ನು ಮನಗಂಡು ಅಧಿಕಾರಿಗಳು ನಗರದ ಹೊರಗೆ ಜಿಲ್ಲೆಯ ಇತರ ಪ್ರದೇಶಗಳಿಂದ ಕಟ್ಟಿಗೆಯನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದು, ನಗರಕ್ಕೆ ತಂದು ಕೋ.ಅಪರೇಟಿವ್ ಸ್ಟೋರುಗಳಿಗೆ ಒಪ್ಪಿಸುತ್ತಿದ್ದಾರೆ. ಕೇಂದ್ರ ಸ್ಟೋರಿನವರು ಕಲೆಕ್ಟರರ ಸೂಚನೆಯಂತೆ ಈ ಕಟ್ಟಿಗೆಯನ್ನು ನಗರದ ಕಟ್ಟಿಗೆ ಡಿಪೋಗಳಿಗೆ ಹಂಚುವರು

ಮುನ್ಸಿಪಲ್ ಕೌನ್ಸಿಲ್ ಸಭೆ:—ನಗರ ಸಭೆಯ ಸಾಮಾನ್ಯ ಸಭೆಯು ತಾ. ೧೬ರಂದು ಸಂಜೆ ಜನಾಬ್ ಹುಸ್ಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿದಾಗ "ಪ್ರಾಂತಿಕ ಸರಕಾರವು ಒಡನೆ ೧೧,೦೦೦ ಟನ್ ಅಕ್ಕಿಯನ್ನು ನಗರದ ಮತ್ತು ಜಿಲ್ಲೆಯ ಇತರ ಸ್ಥಳಗಳ ಉಪಯೋಗಕ್ಕಾಗಿ ಕಳುಹಬೇಕೆಂದು ನಗರ ಸಭೆ ವಿನಂತಿಸುತ್ತದೆ" ಎಂಬ ನಿರ್ಣಯ ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. ನಗರ ಸಭೆಯ ಮಾರ್ಕೆಟುಗಳಲ್ಲಿ ಮಾರಾಟವಾಗುವ ಬೀಫ್-ಪೋರ್ಕ್-ಮಟನ್‌ಗಳ ಬೆಲೆ ನಿಯಂತ್ರಿಸುವ ಗೊತ್ತುವಳಿಯಾಯಿತು

ಜಿಲ್ಲಾ ಬೋರ್ಡು ಸಭೆ — ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ತಾ ೧೯ರಂದು ಪೂರ್ವಾಹ್ನ ೧೧ಘಂಟೆಗೆ ಶ್ರೀ| ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಎಲ್ಲಾ ಸದಸ್ಯರು (೪೩ ಮಂದಿ) ಹಾಜರಾಗಿದ್ದರು. ಗತ ವರ್ಷದ ವರದಿ ಓದಿಯಾದನಂತರ ಯುದ್ಧಾನಂತರದ ಯೋಜನೆಯ ಕುರಿತು ಚರ್ಚೆ ನಡೆಯಿತು. ಜಿಲ್ಲೆಯಲ್ಲಿ ಹೊಸ ರೈಲು ಮಾರ್ಗಗಳು, ಹೊಸ ಆಸ್ಪತ್ರೆಗಳು ರಚನೆಯಾಗಬೇಕೆಂಬ ನಿರ್ಣಯವಾಯಿತು. ಸಧ್ಯದ ಪರಿಸ್ಥಿತಿಯಲ್ಲಿ ಆರೋಗ್ಯ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಫಲ ಆವಶ್ಯವಿಲ್ಲವೆಂಬ ಉಪಸಮಿತಿಯ ಸಲಹೆಯನ್ನು ಸಭೆ ಅನುಮೋದಿಸಿತು. ಉಡುಪಿ ಬೋರ್ಡ್ ಹೈಸ್ಕೂಲನ್ನು ಕಾಪಿಗೆ ಸ್ಥಳಾಂತರಿಸುವ ಬಗ್ಗೆ ತೀವ್ರ ಚರ್ಚೆ ನಡೆದು, ಕೊನೆಗೆ ಏನೊಂದೂ ನಿರ್ಧಾರವಾಗದೆ ಚರ್ಚೆಯನ್ನು ಮುಂದಿನ ಸಭೆಗೆ ಮುಂದುವರಿಸಲಾಯ್ತು. "ಈ ಜಿಲ್ಲೆಗೆ ಸರಕಾರವು ಒಡನೆಯೇ ೧೧,೦೦೦ ಟನ್ ಅಕ್ಕಿಯನ್ನು ಕಳುಹಿಸಿಕೊಡಬೇಕು" ಎಂಬ ನಿರ್ಣಯ ಸರ್ವಾನುಮತದಿಂದ ಮಂಜೂರಾಯಿತು.

ಕಟಪಾಡಿ:—ಬ್ರಹ್ಮಶ್ರೀ, ನಾರಾಯಣ ಗುರು ಸ್ವಾಮಿ ಸೇವಾ ಸಮಿತಿಯ ಹನ್ನೆರಡನೇ ವಾರ್ಷಿಕ ಮಹಾ ಸಭೆಯು ತಾ 16 7 44ರಲ್ಲಿ ಸಮಿತಿಯ ಭವನದಲ್ಲಿ ಶ್ರೀ. ಯು. ಯಸ್. ಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಗತ ವರ್ಷದ ವರದಿ ಆಯವ್ಯಯಗಳ ಪಟ್ಟಿ ಮಂಜೂರಾದ ಬಳಿಕ, ಚಾಲ್ತಿ ವರ್ಷದ ಆಡಳಿತೆ ಕಮಿಟಿಯು, ಸದಸ್ಯರಿಂದ ಆರಿಸಲ್ಪಟ್ಟಿತು. ಶ್ರೀಗಳಾದ ಯು ಯಸ್ ಗಿರಿಯಪ್ಪನವರು ಅಧ್ಯಕ್ಷರಾಗಿಯೂ, ಗುಡ್ಡೆಮನೆ ಪೂಜಾರಿಯವರು ಉಪಾಧ್ಯಕ್ಷರಾಗಿಯೂ ಕೋಟಿ ರಂಗಸ್ವಾಮಿಯವರು ಗೌ| ಕಾರ್ಯದರ್ಶಿಯವರಾಗಿಯೂ, ದಾದು ಮಾಸ್ತರ್ ಸಹಾಯಕ ಕಾರ್ಯದರ್ಶಿಯವರಾಗಿಯೂ ಕೆ ಬೂದನವರು ಕೋಶಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟರು. ಚಾಲ್ತಿ ವರ್ಷದ ಅಂದಾಜ ಬಜೆಟು ಮಂಜೂರಾದ ಬಳಿಕ ಶ್ರೀಗಳಾದ ಮಣಿಪುರ ಅಂಗರ, ದಾದು ಮಾಸ್ತರ್, ಕೆ. ಮೈಂದ, ವೆಂಕ ಮಾಸ್ತರ್ ಮತ್ತು ಸಭಾಧ್ಯಕ್ಷರ ಭಾಷಣಗಳಾಗಿ ಸಭೆಯು ಅಂತ್ಯವಾಯಿತು.

ಕಾರ್ಕಳ —ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘವು ತನ್ನ ಜೀವನದ ಮೂರನೆಯ ವರ್ಷದಲ್ಲಿಯೂ, ಒಳ್ಳೆಯ ಸ್ಫೂರ್ತಿ ಮತ್ತು ಉತ್ಸಾಹಗಳಿಂದ ತನ್ನ ಕಾರ್ಯನಿರ್ವಾಹವನ್ನು ಮಾಡುತ್ತಾ ಇದೆ. ಇದೇ ಅಗೋಸ್ತಿನಲ್ಲಿ ನಡೆಯುವ ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯ ಬೇರೆ ಬೇರೆ ಪರೀಕ್ಷೆಗಳಿಗೆ ಈ ತಾಲೂಕಿನಿಂದ 39 ಮಂದಿ ಆವೇದನ ಪತ್ರಗಳನ್ನು ಕಳುಹಿಸಿಕೊಟ್ಟಿದ್ದಾರೆ ಭಾಷಾಭ್ಯಾಸಿಗಳು ಸಂಘದ ಹಿಂದೀ ಪುಸ್ತಕ ಭಂಡಾರದ ಪೂರ್ಣ ಪ್ರಯೋಜನವನ್ನು ತೆಗೆದುಕೊಳ್ಳುತ್ತಲಿರುವರು. ಸಂಘವು ಉದಾರ ಮಹನೀಯರ ಸಹಾಯ ಪ್ರೋತ್ಸಾಹಗಳಿಗೆ ಪಾತ್ರವಾಗಿದೆ

ಶ್ರೀ ಮಂಜೆಟ್ಟು ತಿಮ್ಮಪ್ಪ ಹೆಗ್ಡೇರ ನಿಧನ:-ನಮ್ಮ ಜಿಲ್ಲೆಯ ಪ್ರತಿಷ್ಠಿತ ಬಂಟ ಗೃಹಸ್ಥರಲ್ಲೊಬ್ಬರೂ ಹಿರಿಯಡ್ಕ ದೇವಸ್ಥಾನದ ಆಡಳ್ತೆ ಮೊಕ್ತೇಸರರೂ ಆದ ಶ್ರೀ ಅಂಜಾರು ಮಂಜೆಟ್ಟು ತಿಮ್ಮಪ್ಪ ಹೆಗ್ಡೇರು ಸುಮಾರು 2 3ತಿಂಗಳುಗಳಿಂದ ಮೂತ್ರವ್ಯಾಧಿ ಪೀಡಿತರಾಗಿದ್ದು ತಾ19-7-44ನೇ ಬುಧವಾರ ಸಂಜೆ ತನ್ನ 70ನೇ ವರ್ಷದಲ್ಲಿ ಮಂಗಳೂರಲ್ಲಿ ಅವರಿಂದಲೇ ಸ್ಥಾಪಿತವಾದ ಸತ್ಯನಾರಾಯಣ ಟೈಲ್ ಫ್ಯಾಕ್ಟರಿಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಬಹು ಚಿಕ್ಕ ಪ್ರಾಯದಲ್ಲಿಯೇ ಅಂದರೆ ಸುಮಾರು 15ನೇ ವರ್ಷದಲ್ಲಿಯೇ ಮನೆಯ ಆಡಳಿತೆಯು ಬಂದಿದ್ದು ಕೊನೆತನಕವೂ ಮಾದರಿಯ ಯಜಮಾನರಾಗಿದ್ದರು. ತನ್ನ ಯಜಮಾನಿಕೆಯಲ್ಲಿ ಒಕ್ಕಲುಗಳ ಮೇಲೆಯಾ ಇತರರ ಮೇಲೆ ಯಾವತರದ ಕೋರ್ಟ ವ್ಯವಹಾರವನ್ನೂ ನಡೆಸಿರಲಿಲ್ಲ 1915ರಲ್ಲಿ ಹಿರಿಯಡ್ಕ ದೇವಸ್ಥಾನದ ಆಡಳಿತೆಯು ದೊರಕಿದ್ದು ಸರ್ವಕಾರ್ಯಗಳನ್ನೂ ಯಥಾಸಾಂಗವಾಗಿ ನೆರವೇರಿಸುತ್ತಿದ್ದರು. ಸ್ವತಂತ್ರ ಪ್ರಿಯರಾಗಿದ್ದು ತನ್ನ ಪರೇಲಿಕೆಗೆ ಕೊಡ ರಾಜಿನಾಮೆಯಿತ್ತಿದ್ದರು ತಾಲೂಕು ಮತ್ತು ಜಿಲ್ಲಾ ಬೋರ್ಡು ಸದಸ್ಯರಾಗಿದ್ದು ಜನಸೇವೆ ಸಲ್ಲಿಸಿದ್ದರು. ಕುಂಬಾ ವಿನಯಪರರೂ ದಯಾಳುವೂ ಆಗಿ ಸರ್ವ ಜನಪ್ರಿಯರಾಗಿದ್ದರು. ಮೃತರ ಆತ್ಮಕ್ಕೆ ಶಾಂತಿ ದೊರಕಲಿ.

ಮೈಸೂರು 'ದಾಸಪ್ರಕಾಶ'ದಲ್ಲಿ ಸತ್ಕಾರಕೂಟ:-ಮೈಸೂರು "ದಾಸಪ್ರಕಾಶ" (ಮಾಡರ್ನ ಕೆಫೆ)ಮಾಲೀಕರಾದ ಶ್ರೀ ಕೆ| ಸೀತಾರಾಮಯ್ಯರು ಆಸ್ಥಾನ ವಿದ್ವಾನ್ ಕೆ| ವಾಸುದೇವಾಚಾರ್ಯರಿಗೂ, ಮದರಾಸಿನ ಟೈಗರ್ ವರದಾಚಾರ್ಯರವರಿಗೂ ಶ್ರೀಮನ್ಮಹಾರಾಜರವರು "ಸಂಗೀತ ಶಾಸ್ತ್ರ ವಿಶಾರದ" ಎಂಬ ಬಿರುದನ್ನು ದಯಪಾಲಿಸಿದ ಸಂತೋಷಾರ್ಥವಾಗಿ ತಾ 16-7 44ರಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದರು. ಬಂದ ಅತಿಥಿಗಳೆಲ್ಲರಿಗೂ ಶ್ರೀ ಕೆ ಸೀತಾರಾಮರಾಯರು ಸ್ವಾಗತವನ್ನಿತ್ತರು. ಫೋಟೋ ತೆಗೆಯಲ್ಪಟ್ಟು ಉಪಾಹಾರಗಳಾಗಿ ಶ್ರೀ ರಾಮರಾಜಪ್ಪನವರು ಮಾತನಾಡುತ್ತ ಸಂಗೀತ ವಿದ್ವಾಂಸರುಗಳು ಇತ್ತೀಚೆಗೆ ಜನರಿಂದ ಪಡೆಯತಕ್ಕ ವಿಶೇಷವಾದ ಮನ್ನಣೆಯನ್ನು ವಿವರಿಸಿ ಉಭಯತರಿಗೂ ಶ್ರೇಯೋಭಿವೃದ್ಧಿಯನ್ನು ಕೋರಿದರು

ನೃತ್ಯ ಭಾರತೀಯ ಕಾರ್ಯಕ್ರಮಗಳು.—ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರು ತಮ್ಮ ನೃತ್ಯಮಂಡಲಿಯೊಡನೆ ಮುಂಬಯಿ ಕರ್ನಾಟಕದ ದಕ್ಷಿಣಕನ್ನಡ ಜಿಲ್ಲೆ ಹಾಗೂ ಮೈಸೂರ ಪ್ರಾಂತಗಳಲ್ಲಿಯ ಪ್ರಮುಖ ಕೇಂದ್ರಗಳಲ್ಲಿ ತಮ್ಮ ನೃತ್ಯಗಳನ್ನು ಪ್ರದರ್ಶಿಸಿ ತಮ್ಮ ನೃತ್ಯ ಕೇಂದ್ರ ಸ್ಥಾನವಾದ ಮದ್ರಾಸಿಗೆ ಮರಳಿ ಬಂದು ಇದೇ ತಿಂಗಳಿಗೆ ದಕ್ಷಿಣ ಹಿಂದೂಸ್ಥಾನದ ಸುಪ್ರಸಿದ್ಧ ಕ್ಷೇತ್ರಗಳಲ್ಲೊಂದಾದ ಕಂಚೀವರದಲ್ಲಿ ತಮ್ಮ ನೃತ್ಯಮಂಡಳಿಯೊಡನೆ ನರ್ತನಗಳನ್ನು ಪ್ರದರ್ಶಿಸಲು ತೆರಳಿದ್ದಾರೆ. ಈ ಕಾರ್ಯಕ್ರಮವು ನಂತರದಲ್ಲಿ ಕೊಲ್ಹಾಪೂರ ಸ್ಟುಡಿಯೋದಲ್ಲಿ ಪ್ರಭಾತ ಕಂಪೆನಿಯವರು ತೆಗೆಯುತ್ತಲಿರುವ ಹಿಂದಿಯೊಂದು ಚಲನಚಿತ್ರದಲ್ಲಿ ನರ್ತನಗಳನ್ನು ಜೋಡಿಸುವದಕ್ಕಾಗಿ ಹೋಗಲಿರುವರೆಂದು ತಿಳಿದು ಬರುತ್ತದೆ

ತಾ 29—7—1944ರಿಂದ

ಸುಹಾಗನ್

ಅಥವಾ

ಸೌಭಾಗ್ಯ

ಕುಮಾರ್, ಖಜ್ಜನ್ ಮೊದಲಾದವರು

ಬರುವುದು.—ಇಶಾರಾ ಪ್ಯಾಸ್, ವಸಂತಸೇನಾ ಇತ್ಯಾದಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡ್ಪಿ.

10,000

ಪ್ರತಿಗಳಿಗೂ ಮಿಕ್ಕಿ ವಿಕ್ರಯವಾಗಿ ಕರ್ನಾಟಕದಲ್ಲೆಲ್ಲಾ ಜನಪ್ರೀತವಾಗಿರುವ ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

(ಹೂಸಕೆರೆ ಚಿದಂಬರಯ್ಯನವರಿಂದ ವಿರಚಿತ)

"ಯಾವ ಸಮಾಜವೇ ಆಗಲಿ, ಉನ್ನತಿಯ ಶಿಖರವನ್ನೇರಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯುತ್ತಮವಾದದ್ದು"

ಪುಟಗಳು 440 ಬೆಲೆ 0—8—0

ನೋಡಿದರೆ ಸಾಕು! ಓದದೆ ಬಿಡಲಾರಿರಿ!!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ, ತೊಡಗಿದಾಗ ಹೇಗೆ ಮುಗಿಯುವುದಿದು ಎಂದು ಕೌತುಕಪಡಿಸುವ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೨—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹವನ್ನು ಓದಿನೋಡಿ ೦—೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು ಬೆಲೆ ೦—೬—೦

ಎಲ್ಲಕ್ಕೂ ಟಪಾಲು ಪ್ರತ್ಯೇಕ ಕೆಲವೇ ಪ್ರತಿಗಳು ಉಳಿದಿವೆ

ಬರೆಯಿರಿ — **ಅಂತರಂಗ ಕಾರ್ಯಾಲಯ, ಉಡುಪಿ**

(ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ ದೊರೆಯುತ್ತವೆ)

Announcement

We have pleasure to announce that a Branch of the Bank will be shortly opened at Padubidri

The Udipi Bank Ltd

ನೋಟೀಸು

ಮಂಗ್ಳೂರು ಡಿ ಮು ಕೋರ್ಟಿನಲ್ಲಿ
S C. ನಂಬ್ರ 153/44

ದಿ ಪ್ಯಾನ ನ ಬೇಂಕ್ ಲಿಮಿಟೆಡ್ ಮಂಗ್ಳೂರ —ವಾದಿ

1 ಯನ್. ಐತಪ್ಪ 2 ಕೆ ಸಂಜೀವ. 3 ಎ ಕ್ಯಾಂಪಾ —ಪ್ರತಿವಾದಿರು

1ನೇ ಪ್ರತಿವಾದಿ ಯನ್. ಐತಪ್ಪ ಸೋಮಯ್ಯನವರ ಮಗ—ಮಂಗ್ಳೂರು ಕಾರ ಸ್ಟ್ರೀಟ್‌ನಲ್ಲಿ ಟೈಲರ್, ಯವರಿಗೆ—

ಮೇಲ್ಕಂಡ ವ್ಯಾಜ್ಯದಲ್ಲಿ 1ನೇ ಪ್ರತಿವಾದಿಗೆ ಸಬ್ಸ್ಟಿಟ್ಯೂಟೆಡ್ ಸರ್ವಿಸ್ ಪ್ಯಾಂ ಬಗ್ಗೆ ತಾರೀಕು 3 8-44ಕ್ಕೆ ಇಟ್ಟಿರುತ್ತದೆ 1ನೇ ಪ್ರತಿವಾದಿಗೆ ಯೇನಾದ್ರು ಉದಾಹರಣೆ ಕೊಡುವದೆ ಇದ್ರೆ ತಾರೀಕು 3-8-44ಕ್ಕೆ ಹಗಲು 11 ಗಂಟೆಗೆ ಖುದ್ದಾಗಿ ಯಾವ ವಕೀಲ ದ್ವಾರದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹೇಳಿಕೊಳ್ಳದಿದ್ರೆ ವ್ಯಾಜ್ಯವು ಯೇಕ ಪಕ್ಷವಾಗಿ ತೀರ್ಮಾನಿಸಲ್ಪಡುವದು. ತಿಳಿದಿರುವದು.

G Narayana Rao, Vakil for plaintiff

ಮಂಗ್ಳೂರು 17-7-44

ನೋಟೀಸು

ಕಾರ್ಕಳ ಡಿ. ಮು. ಕೋರ್ಟನಲ್ಲಿ
O. P No- 66/1944

ಅಂತಕ್ಕೆ ಶೆಟ್ತಿ —ಅರ್ಜಿದಾರಳು

ಸಮಸ್ತ ಜನರಿಗೆ ತಿಳಿಸುವದೇನಂದ್ರೆ,

ಅರ್ಜಿದಾರಳ ಮಗ ಹಾಲಿ ಮೃತಪಟ್ಟಿರುವ ಕೆ. ಪದ್ಮನಾಭ ಶೆಟ್ರಿಗೆ ಹೊರಗಿನಿಂದ ಬರತಕ್ಕ ಆಸ್ತಿ ವಾಜಗಳನ್ನು ವಸೂಲು ಮಾಡುವರೆ ತನ್ನ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ದಾಖಲ್ಲು ಮಾಡಿದ ಸದ್ರಿ ಅರ್ಜಿಯು ಮೇಲ್ಕಂಡ ಕೋರ್ಟನಲ್ಲಿ ತಾ, 5 8-44ಕ್ಕೆ ಇಡೋಣಾಗಿಯದೆ.

Sd **P Shamba Shetty**
Vakil for Petitioner

Karkala,
21-7-44

ಹಿಟ್ಲೆರರನ್ನು ಕೊಲ್ಲುವ ನಿಷ್ಫಲ ಯತ್ನ!

(೨ ನೇ ಪುಟದಿಂದ ಮುಂದುವರಿದುದು)

ಕೇಳಿದೊಡನೆ ಗೋರಿಂಗರು ಆ ಸ್ಥಳಕ್ಕೆ ಧಾವಿಸಿದರು. ಗೋರಿಂಗ್ ಮತ್ತು ನಾವಿಕಾಧಿಪ ಎಡ್ಮಿರಲ್ ಡೋನಿಟ್ಸರು ಆಕಾಶವಾಣಿ ಭಾಷಣಗಳ ಮೂಲಕ ಹಿಟ್ಲರರ ಪ್ರಾಣ ರಕ್ಷಣೆಗಾಗಿ ದೈವವನ್ನು ಅಭಿನಂದಿಸಿ, ದ್ರೋಹಿಗಳನ್ನು ನಿರ್ನಾಮ ಮಾಡುವಂತೆ ಜನತೆಯನ್ನು ಪ್ರೇರೇಪಿಸಿ, ಘಾತುಕ ಪಂಗಡವು ಹೊರಡಿಸುವ ಆಜ್ಞೆಗಳ ಕುರಿತು ಜರ್ಮನ್ ಜನತೆಗೆ ಕಂಠೋಕ್ತ ಎಚ್ಚರಿಕೆಯಿತ್ತಿದ್ದಾರೆ. ಹಿಟ್ಲರರ ಈಗಿನ ನಿವಾಸ ಸ್ಥಳ ಓಬೆರ್‌ಸಾಲ್ಸ್‌ಬರ್ಗ್‌ನಲ್ಲಿ ಪದ್ಧತಿಯಂತೆ ನಡೆಯುವ ಪರಿಷತ್ತಿನ ಸಮಯದಲ್ಲೇ ಈ ಟೈಮ್ ಬೋಂಬು ಇಡಲ್ಪಟ್ಟದ್ದಿತೆಂದೂ, ಹಿಟ್ಲರರು ಬರುವಗ ಎರಡು ಮಿನಿಟು ತಡವಾಗಿ ಬೋಂಬು ಸ್ಫೋಟವಾಗುವಾಗ ಅವರು ಬಾಗಿಲಿಗೆ ಮಾತ್ರ ಬಂದಿದುದರಿಂದ ಜಖಮಾಗಲಿಲ್ಲವೆಂದೂ ತಿಳಿದು ಬರುತ್ತದೆ. ಈ ನಿಷ್ಫಲ ಯತ್ನದ ನಂತರವೂ ಜರ್ಮನ್ ರೇಡಿಯೋದಲ್ಲಿ 'ವಿರುದ್ಧ ಸೇನಾ ಪಂಗಡದ ಪರವಾಗಿ ಜರ್ಮನ್ ಜನತೆಗೆ ಒಂದು ಸ್ಫೂರ್ತಿದಾಯೀ ವಿನಂತಿ ಕೇಳಿ ಬಂದಿದೆ. ಹಿಟ್ಲರನನ್ನು ಕೊಲ್ಲಲು ಹೋದ ಒಬ್ಬ ಸ್ಟೆಫನ್‌ಬರ್ಗ್ ಸತ್ತರೆ ನಮ್ಮಲ್ಲಿ ಅಂತಹ ಸಾವಿರ ಸ್ಟೆಫನ್‌ಬರ್ಗರಿದ್ದಾರೆ. ಹಿಟ್ಲರನ ಕಾಲ ಮುಂದಿದೆ. ಸೈನಿಕರು ಬಂಡಾಯ ವೇಳ ಬೇಕು. ಪ್ರತಿಯೊಬ್ಬ ಅಧಿಕಾರಿ ಮತ್ತು ಯೋಧನೂ ನಮ್ಮ ಆಜ್ಞೆಗೆ ಹೊರತು ಹಿಟ್ಲರನ ಮತ್ತು ಅವನ ಪಂಗಡಿಗರ ಆಜ್ಞೆಗೆ ಕಿವಿಕೊಡಬಾರದು. ಗೆಸ್ಟೆಪೋಗಳನ್ನು ಸಶಸ್ತ್ರವಾಗಿ ಪ್ರತಿಭಟಿಸಬೇಕು. ಆಕ್ರಮಿತ ರಾಷ್ಟ್ರಗಳಲ್ಲಿ ಹೆಂಗಸರು ಮಕ್ಕಳನ್ನು ಕೊಲೆಮಾಡಿದ, ತಮ್ಮ ಜನರ ಪ್ರಾಣಾಹುತಿಕೊಡುವಂತೆ ಅಧಿಕಾರಿಗಳನ್ನು ಒತ್ತಾಯಿಸುತ್ತಿರುವ ಈ ರಾಷ್ಟ್ರವಿಘಾತುಕ ನಾಜೀ ಆಳ್ವಿಕೆಯನ್ನು ಕಿತ್ತೊಗೆಯಬೇಕು ಹಿಟ್ಲರನೇ, ನಮ್ಮ ಸಹೋದ್ಯೋಗಿಗಳ ಕೊಲೆಯಿಂದ ನಾವು ಹಿಂಜರಿಯುವಂತಿಲ್ಲ' ಎಂದೆಲ್ಲಾ ಅದು ಘೋಷಿಸಿದೆ. ಈ ಸಂಚುಗಾರರು ಸೇನೆಗಳಿಗೆ ವಿರುದ್ಧಾಜ್ಞೆಗಳನ್ನು ಹೊರಡಿಸುತ್ತಿರುವದರಿಂದ ಗಲಿಬಿಲಿಯೆದ್ದಿದೆ. ಬರ್ಲಿನ್ ಸೇನಾಧಿಕಾರಿಯೊಬ್ಬನಿಗೆ 'ಹಿಟ್ಲರ್ ಆಕಸ್ಮಿಕ ಕರಿಣಾ... ತ್ತಾಗಿರುವದರಿಂದ ಬರ್ಲಿನಿನ ಸರಕಾರೀ ಕಾರ್ಯಾಲಯಗಳನ್ನು ವಶಪಡಿಸಿಕೊಳ್ಳತಕ್ಕದ್ದೆಂಬ' ಆಜ್ಞೆ ಬಂತು ಆತನು ಮುಂದೊತ್ತಿದ್ದಾಗ ಗೋಬೆಲ್ಸನು ಆ ತಪ್ಪನ್ನು ತಿದ್ದಬೇಕಾಯಿತು. ಸಂಚುಗಾರರು ಹಿಟ್ಲರನು ಸತ್ತನೆಂಬ ಆಧಾರದ ಮೇಲೆ ಬರ್ಲಿನಿನ ಮಾರ್ಮಿಕ ಸ್ಥಾನಗಳಲ್ಲಿದ್ದ ಅಧಿಕಾರಿಗಳಿಗೆ ಹೊರಡಿಸಿದ್ದ ಆಜ್ಞೆಗಳನ್ನು ಮೂಲದಲ್ಲೇ ಹಿಮ್ಲರ್ ಕತ್ತರಿಸಿ ಹಾಕಿದುದರಿಂದ ಬರ್ಲಿನಿನ ಶಾಂತಿ ಭಂಗವಾಗಿಲ್ಲ.

ಮೂರನೇ ಬಾರಿ.

ಇದೀಗ ಹಿಟ್ಲರ್ ಕೊಲೆಯ ಮೂರನೇ ದುರ್ದೈವೀ ಯತ್ನ. ಯುದ್ಧಾರಂಭದಲ್ಲಿ 1930ನೇ ನವಂಬರ್ 8ರಲ್ಲಿ ಮ್ಯೂನಿಚ್‌ನಲ್ಲಿ ಹಿಟ್ಲರ್ ಭಾಷಣವಿತ್ತು ಹೊರಟೊಡನೆಯೇ ಸಭಾಭವನದಲ್ಲಿ ಅಪಾಯಕಾರಿ ಬೋಂಬೊಂದು ಸ್ಫೋಟವಾಗಿದ್ದಿತು. ಹಿಟ್ಲರ್ ಮತ್ತು ನಾಜೀ ಪ್ರಮುಖರ ಕೊಲೆಯ ಹಂಚಿಕೆ ನಡಿಸಿದ್ದರೆಂದು ಜರ್ಮನಿಯ ಪ್ರಸಿದ್ಧ ರಾಷ್ಟ್ರೀಯ ಲೇಖಕ ನಿಷಿಚ್ ಮತ್ತು ಇತರ 20 ಮಂದಿ 1939ನೇ ಜನವರಿಯಲ್ಲಿ ಜೀವಾವಧಿ ಕಠಿಣ ಶಿಕ್ಷೆಗೊಳಗಾಗಿದ್ದರಲ್ಲದೆ, ಬೇರೆ 50 ಮಂದಿ ಶಿಕ್ಷಿಸಲ್ಪಟ್ಟಿದ್ದರು. ಅದೇ ವರುಷ ಹಿಮ್ಲರನು ಪೋಲೆಂಡ್ ರಣರಂಗದಲ್ಲಿ ಪರಿಶೋಧನಾ ಸಂಚಾರ ನಡಿಸುತ್ತಾ ಹಿಟ್ಲರ್ ಕೊಲೆಯ ಒಂದು ಹಂಚಿಕೆ ನಡೆದಿರುವದನ್ನು ಕಂಡು ಹಿಡಿದು ಸಮೂಲವಾಗಿ ನಿರ್ಮೂಲ ಮಾಡಿದ್ದ. ಈ ಬಾರಿ ಸಂಚುಗಾರರ ಶೇಷ ಮಾತ್ರವನ್ನೂ ಉಳಿಸದೆ ಝಾಡಿಸಿ ಬಿಡಬೇಕೆಂದು ಹಿಟ್ಲರನು ಬೋಂಬಿನುದ್ರೇಕದ ವೇಳೆಯಲ್ಲೇ ಅವಸರದಿಂದ ನಿರ್ಧರಿಸಿ ಗೃಹವ್ಯವಸ್ಥೆಯ ಸರ್ವಾಧಿಕಾರವನ್ನು ಹಿಮ್ಲರನಿಗೆ ಕೊಟ್ಟುದರಿಂದ, ಎಲ್ಲಾ ಸಂಚುಗಾರರೊಂದಿಗೆ, ಸಂದೇಹಾಸ್ಪದರು ಮತ್ತು ನಿರಪರಾಧಿಗಳು ಕೂಡಾ ಈ ಕಾಲಯಮನಿಗಾಹುತಿಯಾಗುವ ಸಂಭವವಿದೆ. ಸ್ಥಾನಮಾನಗಳ ತಾರತಮ್ಯವಿಲ್ಲದೆ ಚೆಚ್ಚಿನವರು ಇಷ್ಟರಲ್ಲೇ ಗುಂಡಿಗಾಹುತಿಯಾದ ವಾರ್ತೆ ಬಂದಿದೆ. ಕೆಲವರು ಆತ್ಮಹತ್ಯೆಮಾಡಿಕೊಂಡಿದ್ದಾರೆ ಹಿಮ್ಲರನ ಖಡ್ಗದಾಟದಿಂದ ಜರ್ಮನಿಯು ಕಸಾಯಿ ಗೃಹದಂತಾಗಿದೆ.

ಯಾರು ಮತ್ತು ಯಾಕೆ?

ಈ ಯುದ್ಧದ ಪ್ರಮುಖ್ಯ ರಂಗಗಳಲ್ಲಿ ಸೂತ್ರಧಾರಿಗಳಾಗಿದ್ದು, ಸಂದರ್ಭಾನುಸಾರವಾಗಿ ಹಿಟ್ಲರನಿಂದ ಡಿಸ್‌ಮಿಸ್ ಮಾಡಲ್ಪಟ್ಟಿದ್ದ ಜರ್ಮನಿಯ ಪ್ರಮುಖ ಜನರಲರು ಮತ್ತು ಫೀಲ್ಡ್ ಮಾರ್ಶಲರೆಲ್ಲಾ ಈ ಒಳಸಂಚಿನಲ್ಲಿ ಸೇರಿದ್ದಾರೆ. ಯುರೋಪಿನ ಸರ್ವ ಸೇನಾನಿ ಫೀಲ್ಡ್ ಮಾರ್ಶಲ್ ರುಂಡ್‌ಸ್ಟೆಡ್, ಹೊಲ್ಲೆಂಡಿನ ಸರ್ವ ಸೇನಾನಿ ಜನರಲ್ ಫಾಕೆನ್‌ಹಾಸೆನ್, ಜರ್ಮನ್ ಸೇನಾ ಸರ್ವ ಸೇನಾನಿ ಫೀಲ್ಡ್ ಮಾರ್ಶಲ್ ವೋನ್ ಬ್ರಾಚಿಟ್ಚ್, ರಶ್ಯದ ಸೇನಾನಿ ಫೀಲ್ಡ್ ಮಾರ್ಶಲ್ ವೋನ್ ಬೋಕ್, ರಶ್ಯದ ಸೇನಾನಿ ಫೀಲ್ಡ್ ಮಾರ್ಶಲ್ ವೋನ್‌ಲೀಬ್, ದಕ್ಷಿಣ ರಶ್ಯದ ಸರ್ವ ಸೇನಾನಿ ಫೀಲ್ಡ್ ಮಾರ್ಶಲ್ ಮೇನ್‌ಸ್ಟೀನ್, ಮತ್ತು ಫೀಲ್ಡ್ ಮಾರ್ಶಲ್ ವೋನ್‌ಕ್ಲೇಸ್ಟ ಮೊದಲಾದ ಜರ್ಮನಿಯ ವೀರಾಗ್ರೇಸರರ ಹೆಸರು ಕೇಳಿಬರುತ್ತಿದೆ. ಇವರೆಲ್ಲಾ ಜರ್ಮನಿಯ ಹುಟ್ಟುಯೋಧರಿದ್ದರೂ ಹಿಟ್ಲರನ ಬಲವು ಹೊಸಬರು ಮತ್ತು ಶುದ್ಧ ನಾಜೀ ಪಂಥಾನುಯಾಯಿ ಸೇನಾನಿಗಳ ಮೇಲೆ ಹೆಚ್ಚಾಗಿದ್ದುದರಿಂದ ಆದಿಯಿಂದಲೂ ಸೇನಾ ಪ್ರಮುಖರೊಳಗೆ ತೀವ್ರ ಮತಭೇದವಿದ್ದೇ ಇತ್ತು. ಅದಕ್ಕಾಗಿಯೇ ಹಿಟ್ಲರನು ಸ್ವತಃ ಸರ್ವ ಸೇನಾನಿತ್ವ ವಹಿಸಿ ಸಂದರ್ಭಾನುಸಾರ ವಿರುದ್ಧ ಪಂಗಡದ ಸೇನಾನಿಗಳನ್ನೆಲ್ಲಾ ರದ್ದುಗೊಳಿಸುತ್ತಾ ಬಂದ ಸ್ಟಾಲಿನ್‌ಗ್ರಾಡ್ ಪರಾಭವವು ಈ ಮತಭೇದಕ್ಕೆ ಪಿರಾಟ್ರೋಪ ಕೊಟ್ಟಿತು. ಈಗ ಬಾಲ್ಟಿಕ್ ದ್ವೀಪದಲ್ಲಿ ಸುಮಾರು 30 ಡಿವಿಜನ್ ಸೇನೆಗಳನ್ನಿರಿಸಿ ಅಲ್ಲಿ ಇನ್ನೊಂದು ಸ್ಟಾಲಿನ್‌ಗ್ರಾಡನ್ನು ನಿರ್ಮಿಸುವ ಪ್ರಮಾದವನ್ನು ಹಿಟ್ಲರನು ಮಾಡುತ್ತಿದ್ದಾನೆ; ರಶ್ಯಾದಿದಿರು ಹೆಜ್ಜೆ ಹಿಂದಿಡಬಾರದೆಂದು ಕಟ್ಟಾಜ್ಞೆಯಿತ್ತಿದ್ದಾನೆ, ಎಂಬ ಅಪಾಯ ನಿರೀಕ್ಷಣೆಯು ಈ ವಿರುದ್ಧ ಪಂಗಡಿಗರನ್ನು ಉದ್ರೇಕಿಸಿ, ಹಿಟ್ಲರನ ನಿರ್ನಾಮವಾಗದೆ ಜರ್ಮನಿಗೆ ಉಳಿಗಾಲವಿರದೆಂದು ಅವರಿಂತಹ ಉಗ್ರಕಾರ್ಯ ಪ್ರವೃತ್ತರಾದರೆಂದು ತಿಳಿದುಬರುತ್ತದೆ.

ಜರ್ಮನಿಯಲ್ಲಿ ಸೇನಾ ಬಂಡಾಯ.

ರಶ್ಯದಲ್ಲಿರುವ 'ಸ್ವತಂತ್ರ ಜರ್ಮನರ ಸಮಿತಿ'ಯು ಬಂಡಾಯವನ್ನು ಬಲಗೊಳಿಸಿ ನಾಜೀ ಸರಕಾರವನ್ನು ಕಿತ್ತೊಗೆಯಬೇಬೇಕೆಂದು ಜರ್ಮನರಿಗೆ ಆಗ್ರಹದ ವಿನಂತಿಮಾಡಿಕೊಂಡಿದೆ. ಬಂಡಾಯಗಾರರ ಕೆಲಕಾಲದಿಂದ ವಿರೋಧೀ ರಾಷ್ಟ್ರಗಳೊಡನೆ ಸಂಬಂಧವಿಟ್ಟುಕೊಂಡಿದ್ದಾರೆಂದು ನಾಜಿಗಳ ಶೋಧ. ನಾಜೀ ಲೇಬರ್ ನಾಯಕ ಡಾ। ಲೇಯವರು "ಇಂಗ್ಲೆಂಡಿನಿಂದಾಮದು ಮಾಡಲ್ಪಟ್ಟ ಭೀಕರಾಕೃತಿಯ ಮೈನ್ ಹುಗಿಯಲ್ಪಟ್ಟದ್ದಿತು. ಮೋಸ್ಕೋದ ಒಬ್ಬ ಯೆಹೂದಿಯದನ್ನು ತರಿಸಿದ್ದ; ಇಂಗ್ಲೆಂಡು ಮತ್ತದರ ಲೋರ್ಡ್‌ಗಳು ಅದನ್ನು ಸರಬರಾಯಿ ಮಾಡಿದ್ದರು. ಜರ್ಮನಿಯ ಧನವಂತರದನ್ನು ಒಗೆದಿದ್ದರು. ದಗಾಖೋರರು, ರಕ್ತಪಿಪಾಸಿ ಘಾತುಕರು" ಎಂದಾರ್ಭಟಿಸಿದ್ದಾರೆ. ವಾರ್ತೆಗಳು ಹೊರಹೋಗದಂತೆ ಪೂರ್ಣ ಪ್ರತಿಬಂಧವಿದ್ದರೂ ಜರ್ಮನಿಯ ಸೇನಾವಿಭಾಗಗಳು ಅಲ್ಲಲ್ಲಿ ಬಂಡಾಯವೆದ್ದ ವಾರ್ತೆ ಬರುತ್ತಿದೆ. ಬರ್ಲಿನಿನ ರಸ್ತೆ ರಸ್ತೆಗಳಲ್ಲಿ ಸಶಸ್ತ್ರ ಗೆಸ್ಟೆಪೋ ಪಹರೆ ನಡಿಯುತ್ತಿದೆ ದಕ್ಷಿಣ ಜರ್ಮನಿಯಲ್ಲೆಲ್ಲಾ ತೀವ್ರ ಹೋರಾಟ ನಡೆಯುತ್ತಿದೆ ಎಂದು ವಾರ್ತೆ. ಜರ್ಮನಿಯ ಕೆಲವು ಭಾಗಗಳಲ್ಲಿ ಬಂಡಾಯಗಾರರು ಹೊಸ ಸರಕಾರ ಸ್ಥಾಪಿಸಿ ಅಲ್ಲಿಯ ನಾಜೀ ಅಧಿಕಾರಿಗಳನ್ನೆಲ್ಲಾ ದಸ್ತಗಿರಿ ಮಾಡಿಟ್ಟಿದ್ದಾರೆ. ರಶ್ಯಾ ಯುದ್ಧದ ಈಗಿನ ಮುಖ್ಯರಂಗ ಪೂರ್ವ ಪ್ರಶ್ಯದಲ್ಲಿ ನಾಜೀ ಸೇನೆಗಳು ತಿರುಗಿ ಬಿದ್ದು ಘರ್ಷಣೆ ನಡಿಯುತ್ತಿದೆ ಎಂಬ ಚತುರದಾಯೀ ವಾರ್ತೆ ಬಂದಿದೆ ಎಷ್ಟೋ ಮಂದಿ ಸತ್ತು ಹಲವರು ದಸ್ತಗಿರಿಮಾಡಲ್ಪಟ್ಟರೂ ದಂಗೆಗಾರ ನಾಯಕರು ಅಧಿಕ ಸಂಖ್ಯೆಯಲ್ಲಿದ್ದಾರೆಂದೂ ಬರ್ಲಿನ್, ಕೀಲ್, ಹೇಂಬರ್ಗ್, ಮ್ಯುನಿಚ್, ಸ್ಟುಟ್‌ಗಾರ್ಟ್, ಬ್ರೆಮೆನ್, ಲಿನ್ಸ್ ಮೊದಲಾದ ನಗರಗಳಲ್ಲಿ ದಂಗೆಯೆದ್ದಿದೆಯೆಂದೂ ವಾರ್ತೆ. ಹಿಟ್ಲರರು ಮುಸಲನಿಯೊಡನೆ ದೀರ್ಘ ಸಂಭಾಷಣೆ ನಡಿಸಿದ್ದಾರೆ. ಹಿಟ್ಲರ್ ಮತ್ತು ಅವನ ಅನುಯಾಯಿಗಳನ್ನು ಹೊತ್ತುಕೊಂಡು ಹಾರಲು ನಾಲ್ಕು ದೊಡ್ಡ ವಿಮಾನಗಳು ತಯಾರಾಗಿ ನಿಂತಿವೆಯೆಂದೂ, 6000 ಮೈಲು ಹಾರಾಟಕ್ಕೆ ಸಾಕಾಗುವ ಪೆಟ್ರೋಲನ್ನು ಅವುಗಳಿಗೆ ತುಂಬಿಸಲಾಗಿದೆಯೆಂದೂ ವಿರುದ್ಧ ಪಕ್ಷೀಯರ ಪ್ರಚಾರ. ಈ ಪೆಟ್ರೋಲಿನ ಬಲದಿಂದ ದಕ್ಷಿಣ ಅಮೇರಿಕ ಅಥವಾ ಜಾಪಾನಾಕ್ರಮಿತ ಪೂರ್ವ ಏಸ್ಯಾದ ವರೆಗೆ ಹಾರಬಹುದು. ಹೀಗೆ ಅನುಕ್ರಮವಾಗಿ ಹಿಟ್ಲರನ ಮರಣದ, ಬಂಧನದ, ಮತ್ತು ಪಲಾಯನ ತಯಾರಿಯ ವಾರ್ತೆಗಳು ಬರುತಿದ್ದರೂ, ಹಿಟ್ಲರನು 'ಇವೆಲ್ಲವುಗಳ ವಿರುದ್ಧವಾಗಿ ವಿಜಯವು ನಮ್ಮದಾಗುವದು' ಎಂದು ಸೇನೆಗೆ ಸ್ಫೂರ್ತಿಯ ಸಂದೇಶವಿತ್ತು ಹಿಮ್ಲರನ ಸಹಾಯದಿಂದ ಜರ್ಮನಿಯ ಆಡಳಿತೆಯನ್ನು ಇನ್ನಷ್ಟು ಬಿಗಿಗೊಳಿಸುತಿದ್ದಾನೆ.

ಸಂಶಯವುಂಟೆ?

ಸರೋಜ—ಪದ್ಮಾ, ನಿನೂ ನನ್ನಂತೆ ಐದನೇ ಕ್ಲಾಸು ಕಲಿತು ಶಾಲೆ ಬಿಟ್ಟವಳು. ಆದರೆ ನೀನು ನಿನ್ನ ಗಂಡನೊಡನೆ ಇಂಗ್ಲಿಷು ಮಾತಾಡಿದುದನ್ನು ಕಂಡು ಪರಮಾಶ್ಚರ್ಯವಾಯಿತು. ಅವರು ನಿನಗೆ ಕಲಿಸಿದರೇ?

ಪದ್ಮ—ಅವರಿಗೆಲ್ಲಿದೆ ಬಿಡುವು? ನಾನೇ ಕಲಿತುಕೊಂಡೆ.

ಸರೋಜ—ಏನು ಹಸಿಹಸಿ ಸುಳ್ಳು ಹೇಳುತ್ತೀಯ ಪದ್ಮಾ!

ಪದ್ಮ—ಹಸಿ ಸುಳ್ಳೂ ಅಲ್ಲ; ಒಣ ಸುಳ್ಳೂ ಅಲ್ಲ; ರೂಪಾಯಿಗೆ ಹದಿನಾರಾಣೆಯ ಸತ್ಯ! ಇಲ್ಲಿವೆ ನೋಡು —'ಸುಲಭದಲ್ಲಿ ಇಂಗ್ಲಿಷು'. ಇದರಿಂದಲೇ ನಾನು ಕಲಿತುಕೊಂಡೆ ನಿನ್ನ ಬಿಡುವಿನ ಸಮಯವನ್ನು ವ್ಯರ್ಥ ಹರಟೆ ಹೊಡೆಯುವುದರಲ್ಲಿ ಹಾಳು ಮಾಡದೆ ಈ ಪುಸ್ತಕವನ್ನು ತರಿಸಿಕೊಂಡು ಅಭ್ಯಾಸಮಾಡು. ಇಂಗ್ಲಿಷು ಸುಲಭವಾಗಿ ಬಂದು ಬಿಡುತ್ತೆ!

ಸರೋಜ—ಇದನ್ನು ಕಲಿತರೆ ಮನೆಯಲ್ಲಿ ಗಂಡಸರು ಇಂಗ್ಲಿಷು ಮಾತಾಡುವುದೆಲ್ಲ ಗೊತ್ತಾಗುವುದಲ್ಲ? ನಾನೂ ಮಾತಾಡಬಹುದಲ್ಲ?

ಪದ್ಮ—ಸಂಶಯವುಂಟೇ? ನೀನೇ ಈಗ ಕೇಳಿದೆಯಲ್ಲ ನಾನು ಮಾತಾಡುತ್ತಿದ್ದುದನ್ನು?

ಸರೋಜ—ಹಾಗೇ ನನಗೂ ಮಾತಾಡಲಿಕ್ಕೆ ಬರಬೇಕು. ಈಗ ಮನೆಯಲ್ಲಿಯೂ ಹೊರಗೂ ಎಲ್ಲಿಯೂ ಇಂಗ್ಲಿಷು ಆಗಿ ಬಿಟ್ಟಿದೆ. ಇಂಗ್ಲಿಷು ಬಾರದಿದ್ದ ಹೆಂಗಸು ಶುದ್ಧ ಹಳ್ಳಿಗಾಡಿನವಳಂತೆ ಪಿಳಿಪಿಳಿ ನೋಡಬೇಕಾಗುತ್ತದೆ. ಹೇಗೆ ಇಂಗ್ಲಿಷು ಕಲಿಯಲೀ ಎಂದು ಹಂಬಲಿಸುತ್ತಿದ್ದೆ. ನೀನು ದಾರಿ ತೋರಿಸಿದೆ. ಆ ಪುಸ್ತಕ ಎಲ್ಲಿ ಸಿಗುತ್ತೆ? ಬೆಲೆ ಏನು?

ಪದ್ಮ—'ನವಭಾರತ ಪುಸ್ತಕ ಭಂಡಾರ' ಉಡುಪಿ, ಅಲ್ಲಿ ಸಿಗುತ್ತೆ. ಬೆಲೆ ಬರೇ ಒಂದು ರೂಪಾಯಿ!

Degrees: Books: Medicines
Free H. L. M. S. M. B. H. M. D. etc. Free Homeo Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs 4, Insanity Cure Pills Rs, 10 Enclose 2 annas stamp:—

Prof, Dr, N. H. Chhatbar,
Principal Indian Homeopathi Institute & Society (Govt. Regd)
P. O. MAHUVA (Kathiawar Dt India).

Sidha-Kalpa Kavach (Regd.)
No. 3 Rs. 2 No. 2 Rs 5 No. 1 Rs. 7 Special Rs 10, Extra Special Rs 17 for over marriage health wealth, Ask any six questions with M. O. Re. 1/4, and get correct answers by return post Life reading Rs,10 No,V. P. Send M. O. Free, pmplets.

Prof, Dr. N. H. Chhatbar,
P. O. MAHUVA (Kathiawar India.)

The Pangal Nayak Bank Limited.

(Incorporated in 1920)

Registered Office Court Road, UDIPI

Branches at— Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices.

1944

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನ್ನಿಸಬಹುದು, ಉಡುಪಿ ಏಜಂಟರು: — ನವಭಾರತ ಬುಕ್ ಡಿಪೋ

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya GADAG.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೮ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. ೫ ಕೊಡಿಯಾಲಬೈಲು, ದ. ಕ

THE VIJAYA BANK, LTD.

Head office: MANGALORE.

Glad to announce that a Branch of the Bank has been opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ. **15-6-44**ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿರುವುದು.

ದಿ ವಿಜಯಾ ಬೇಂಕ್ ಲಿಮಿಟೆಡ್

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕೆಮ್ಮು, ಚಳಿ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಿಗಳು ಬಾತುಕೊಳ್ಳುವದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2—8—0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಸೀಮೆ ಎಣ್ಣೆ ಇಲ್ಲವೆ?? ಚಿಂತೆ ಇಲ್ಲ! ? ಸ್ವಲ್ಪ ವನಸ್ಪತಿ ಎಣ್ಣೆ ಮತ್ತು ನೀರು ಇದ್ದರೆ ಸಾಕು.

ಫ್ರೆಂಚ ಲೈಟರ್‌ನಿಂದ

(ನಿಮ್ಮ ಮನೆಗಳನ್ನು ಬೆಳಗಿಸಿರಿ)

(ವಿಜ್ಞಾನ ಯುಕ್ತ ನೂತನ ಸಂಶೋಧನೆ) ನೋಡಲು ಚಂದ-ಬೆಳಗಿಸಲು ಆನಂದ. ಅಗ್ಗ ಮತ್ತು ಸುಂದರ. ಸರಳ ಮತ್ತು ಸುಲಭ

ಫ್ರೆಂಚ ಲೈಟರ್.

50 ಬತ್ತಿಗಳ ಪೆಟ್ಟಿಗೆ 1ಕ್ಕೆ ರೂ- 1-4-0 ಟ. ಹಾ. 0-8-0 (ಒಂದು ಬತ್ತಿ ಸುಮಾರು 24 ತಾಸು ಉರಿಯುವುದು.

ಸ್ಟಾಕಿಸ್ಟರು ಬೇಕಾಗಿದ್ದಾರೆ.

ಏಜನ್ಸಿ ಕರಾರುಗಳೊಡನೆ 6 ಪೆಟ್ಟಿಗೆಗೆ ಟ. ಹಾ ಉಚಿತ

ಉ. ಟಿ. ತ. ಸ್ಯಾಂಪಲು ಕಳಿಸುವದಿಲ್ಲ.

ಫ್ರೆಂಚ ಲೈಟರ್ ಕಂಪನಿ ಚಿಕ್ಕಪೇಟೆ, ಬೆಂಗಳೂರು ಸಿಟಿ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. India

Regd. No. M. 3618. ವಾರ್ಷಿಕಚಂದಾ ರೂ. —8—0 ಬಿಡಿ ಸಂಚಿಕೆ 0—1—6. Estd. 1921 ಸ್ಥಾಪನೆ.

Typewriter repairs of every description undertaken at the

BASEL MISSION PRESS,
MANGALORE, S. K.

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.
KANNADA WEEKLY, UDIPI.
ಸಂಪುಟ ೨೪ ಸಂಚಿಕೆ ೪೭ ● Vol. 24 No. 47
Founder SRI A. B. SHETTY.
ಉಡುಪಿ ● 3—8—1944 ● ಮಂಗಳೂರು.

ANTARANGA
UDIPI
ಅಖಿಲ ಕರ್ನಾಟಕದ
ಹೊಸ ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕ
ಅಂತರಂಗ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ.

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Estd 1908]
The "Bombay Life" Bldg.,
UDIPI, S. K.

Offices and Agencies throughout South India.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯ .ಬ್ಬನೂಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

—ಮಕ್ಕಳನ್ನು ಹಡೆಯುವದು ಸಾಕು—
ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಘಂಟರಮಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd. Moolky, S. K.

The Board of Directors,
Sri Narayan Guru Bank, Ltd., Mangalore
announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944 Your patronage is solicited.

Mangalore Jarappa,
Managing Director

ಗಾಂಧಿಜೀ ಸಂಧಿ ಸೂಚನೆಗೆ ಪಾರ್ಲಿಮೆಂಟಿನ ನಕಾರ!

ಲೋರ್ಡ್ಸ್ ಮತ್ತು ಕಾಮನ್ಸ್ ಸಭೆಯಲ್ಲಿ ಚರ್ಚೆ

ಜುಲಾಯಿ ತಾ 25 ಮತ್ತು ಇಪ್ಪತ್ತೆಂಟರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಲೋರ್ಡ್ಸ್ ಮತ್ತು ಕಾಮನ್ಸ್ ಸಭೆಗಳಲ್ಲಿ ಹಿಂದೂ ದೇಶದ ಕುರಿತು ಚರ್ಚೆ ನಡೆಯಿತು. ಗಾಂಧಿಜೀಯ ಮಾತಿನಂತೆ 'ಮಿಕ್ಕವರಿಗೊಂದು ಬಿಕ್ಕಟ್ಟಾಗಿ ತೋರುತ್ತಿರುವ ಭಾರತದ ಸದ್ಯಸ್ಥಿತಿಯು ಬ್ರಿಟಿಷರಿಗೆ ಹಾಗೆ ಕಾಣುತ್ತಿಲ್ಲವಾದ್ದರಿಂದ ಅವರೀ ಕುರಿತು ನ್ಯಾಯವಾದ ಒಂದು ತೀರ್ಮಾನ ಹೊಂದುವ ಅಪೇಕ್ಷೆಯಲ್ಲೇ ಇಲ್ಲ'-ಎಂಬುದು ಭಾರತದ ಉಪ ಕಾರ್ಯದರ್ಶಿ ಲೋರ್ಡ್ ಮನ್ಸ್ಟರರು ಲೋರ್ಡರ ಸಭೆಯಲ್ಲಿಯೂ, ಕಾರ್ಯದರ್ಶಿ ಮಿ. ಅಮೆರಿಯವರು ಕಾಮನ್ಸ್ ಸಭೆಯಲ್ಲಿಯೂ ಕೊಟ್ಟ ಉತ್ತರದಿಂದ ಸ್ಪಷ್ಟವಾಗುತ್ತಿದೆ. 'ಕ್ರಿಪ್ಸ್ ಕೊಡುಗೆಗೆ ಅಂದಿನ ಯುದ್ಧಾಪಜಯ ಸ್ಥಿತಿ ಹೇತುವಾಗಿರಲಿಲ್ಲ; ಅದ್ದರಿಂದ ಅಂದಿನ ಪರಾಭವ ಸ್ಥಿತಿಯಂತೆ ಇಂದಿನ ವಿಜಯೀ ಪರಿಸ್ಥಿತಿಯಲ್ಲೂ ಅದು ಅಸ್ತಿತ್ವದಲ್ಲಿದೆ. ಅದರ ತಿರುಳೆಂದರೆ ಯುದ್ಧಾವಧಿಯಲ್ಲಿ ಯಾವ ರಾಜ್ಯರಚನಾ ಬದಲಾವಣೆಯನ್ನೂ ಮಾಡದೆ, ಯುದ್ಧಾನಂತರ ಹಿಂದೀಯರು ತಮ್ಮೊಳಗೆ ಮಾಡಿಕೊಳ್ಳುವ ಒಪ್ಪಂದಕ್ಕನುಸಾರವಾದ ಪೂರ್ಣಾಧಿಕಾರವನ್ನು ಅವರಿಗೊಪ್ಪಿಸುವದೇ. ಕ್ರಿಪ್ಸ್ ಸಂಧಾನ ಭಂಗಕ್ಕೆ ಹೇತುವಾದ ಅಂದಿನ ಕಾರಣವನ್ನೇ ಇಂದು ಗಾಂಧಿಯವರು ಎತ್ತಿಕೊಂಡಿದ್ದಾರಲ್ಲದೆ ಹೊಸತೇನೂ ಹೇಳಿಲ್ಲ. ವೈಸರಾಯರು ಗಾಂಧಿಯವರಿಗೆ ಬರೆದ ಪತ್ರದಲ್ಲಿ ಯಾಚಿಸಿದ ವಿಧಾಯಕ ಸೂಚನೆಯು ಇದಲ್ಲವೇ ಅಲ್ಲ. ಅದ್ದರಿಂದ ಸಂಧಾನ ಮಾತುಕತೆ ಹೂಡುವ ಅಥವಾ ಕಾಂಗ್ರೆಸ್ ಪ್ರಮುಖರನ್ನು ಬಿಡುಗಡೆ ಮಾಡುವ ಪ್ರಶ್ನೆ ಬರುವಂತಿಲ್ಲ' ಎಂಬುದೇ ಅವರಿಬ್ಬರ ಕಂಠೋಕ್ತ ಉತ್ತರ.

ಲೋರ್ಡರ ಸಭೆಯಲ್ಲಿ-

ಹಿಂದುಸ್ಥಾನದ ಚರ್ಚೆಯನ್ನಾರಂಭಿಸಿದ ಲೋರ್ಡ್ ಸ್ಟ್ರಾಬೋಲ್ಗಿಯವರು ಹಿಂದುಸ್ಥಾನದಲ್ಲಿರುವ ಸುದ್ದೀಕದಿತದ ಕ್ರೂರತೆಯನ್ನು ವರ್ಣಿಸಿ, ಅಂದು ಜಪಾನರ ಧಾಳಿ ನಿರೀಕ್ಷೆಯಿಂದಾಗಿ ಮುಂದೆ ಬಂದಿದ್ದ ಕ್ರಿಪ್ಸ್ ಸೂಚನೆಯನ್ನು, ಇಂದಿನ ವಿಜಯೀ ಸ್ಥಿತಿಯಲ್ಲಿ ಮೂಲೆಸಾಲು ಮಾಡಲಾಗಿದೆ ಎಂಬ ಭೀತಿಯುಂಟಾಗಿದೆಯೆಂದೂ, ಗಾಂಧಿಯವರ ಸಂಧಾನ ಸೂಚನೆಗಳಿಂದಾಗಿ ವಾತಾವರಣದ ಮುಖವು ಪ್ರಸನ್ನಗೊಂಡಿರುವದರಿಂದ ಸರಕಾರವು ಬಿಕ್ಕಟ್ಟು ನಿವಾರಣೆಗೆ ಮುಂದಾಗಬೇಕೆಂದೂ ವಾದಿಸಿದರು. ವಿಸ್ಕೌಂಟ್ ಎಲ್ಲಿಬೇಂಕರು ಗಾಂಧಿಜೀಯನ್ನು ಕಠಿಣವಾಗಿ ಖಂಡಿಸಿ, 'ಈ ಶತಮಾನದಲ್ಲಿ ಹಾಗೂ ಪೌರ್ವಾತ್ಯ ಚರಿತ್ರೆಯಲ್ಲೇ ಅಪೂರ್ವವಾದ ಸಂಧಾನಕ್ಕೊಂದು ಕಂಟಕ ಮತ್ತು ಜನರ ವಂಚಕನಾಗಿರುವ ಓರ್ವ ವ್ಯಕ್ತಿಯೆಂದರೆ ಗಾಂಧಿ" ಎಂದರು 'ಅವನು ತನ್ನ ದೇಶೀಯರಂತೆಯೇ ಇಲ್ಲಿಯ ಹಲವರನ್ನೂ ವಂಚಿಸಿದ್ದಾನೆನ್ನಲು ನನಗೆ ವ್ಯಸನವಾಗುತ್ತದೆ. ಗಾಂಧೀ ವಂಚನೆಯ ಒಂದು ಮಾದರಿಯೆಂದರೆ ಸಾಯುವ ವರೆಗೆ ಉಪವಾಸವೆನ್ನುತ್ತಾ ಸಹಾನುಭೂತಿ ಸಂಪಾದಿಸಿ, ಪುನಃ ಜನತೆಯನ್ನು ಸಂಕಷ್ಟದ ಮಡುವಿಗೆ ತಳ್ಳುವದು' ಎನ್ನುತ್ತಾ ಲೋರ್ಡ್ ವೇವೆಲರ ಮೇಲೆ ಪೂರ್ಣ ವಿಶ್ವಾಸವಿಡಬೇಕೆಂದು ವಿನಂತಿಸಿಕೊಂಡರು. ಲೋರ್ಡ್ ಮನ್ಸ್ಟರರು ಸರಕಾರದ ಪರವಾಗಿ ಉತ್ತರವೀಯುತ್ತಾ, ಗಾಂಧಿಜೀ ರಾಜಾಜೀ ಸೂಚನೆಗಳನ್ನು ವಿವರಿಸಿ ಹೇಳಿ ವೈಸರಾಯರದಿಟ್ಟ ಅಧಿಕಾರಕ್ಕೆ ಭಂಗ ಬರುವ, ಹಾಗೂ ಕ್ರಿಪ್ಸ್ ಕೊಡುಗೆಗೆ ಮಿಕ್ಕಿದ ಯಾವ ಬದಲಾವಣೆಗೂ ಸರಕಾರವು ತಯಾರಿಲ್ಲ ಎಂಬುದನ್ನು ಖಚಿತ ಪಡಿಸಿದರು.

ಮಹಾತ್ಮರ ನಿರಾಶೆ-ರಾಜಾಜಿಯ ಘುರವೀಳ್ಯ.

"ನಾನು ನಿರಾಶೆಗೊಂಡೆ ನನ್ನದು, ನನ್ನ ಪಾಲಿನ ಅತ್ಯಂತ ವಿಧಾಯಕ ಸೂಚನೆ ಇದು ಸಂಧಾನಕ್ಕೊಂದು ಪೀಠಿಕೆಯಾಗಿ, ಅಧಿಕೃತವಾಗಿ ಮಾತಾಡಬಲ್ಲ ವರ್ಕಿಂಗ್ ಕಮಿಟಿ ಸದಸ್ಯರನ್ನು ಭೇಟಿಯಾಗುವ ಸಮ್ಮತಿಯನ್ನು ಕೂಡಾ ನನಗೆ ದೊರಕಿಸಲಾರದೆ ಹೋದರೆ-ಇಂದಿನ ದುಸ್ಥಿತಿಯನ್ನೊಂದು ಬಿಕ್ಕಟ್ಟಾಗಿ ಸರಕಾರವು ಭಾವಿಸುತ್ತಿಲ್ಲವಾದ್ದರಿಂದ ಅದಕ್ಕೆ ನ್ಯಾಯವಾದ ಒಂದು ಒಪ್ಪಂದ ಬೇಕಾಗಿಲ್ಲವೆಂದು, ನಾನು ತಿಳಿಯಬೇಕಾಗುತ್ತದೆ. ತೀರ್ಮಾನ ಹೊಂದುವ ಪ್ರಯತ್ನದಲ್ಲಿ ನಾನೆಷ್ಟೇ ತಲ್ಲೀನನಾದರೂ, ಬ್ರಿಟಿಷ್ ಸರಕಾರದಿಂದ ದಕ್ಕೆ ತಕ್ಕ ಸ್ವಾಗತ ಸಿಗದಿದ್ದರೆ ನನ್ನಿಂದೇನೂ ಆಗಲಾರದೆಂದು ನಾನು ಬಲ್ಲೆ. ಆ ಚರ್ಚೆಯಲ್ಲಿ ಜಾತೀಯ ಜಗಳದ ತಕ್ಕು ಕಾರಣವು ಏಳುವಂತಹದಲ್ಲ. ಆಳುವವರ ಮೂರನೇ ಪಕ್ಷವೊಂದು ಪ್ರೇರಣೆಕೊಡುತ್ತಿರುವ ವರೆಗೆ, ಜಾತೀಯಭಿನ್ನಭಾವ ತೊಲಗುವಂತಿಲ್ಲವೆಂದು ನನ್ನಲ್ಲಿದ್ದ ಮತ್ತು ಈಗಲೂ ಇರುವ ಅಭಿಪ್ರಾಯ. ನನ್ನ ಪಾಲಿನ ಸತ್ಯವನ್ನು ನಾನಾಡಿದ್ದೇನೆ; ಯಾಕೆಂದರೆ ಇಂದಿನ ಸಂದರ್ಭವು ಅದನ್ನು ಮರೆಮಾಜಲಾಗದಷ್ಟು ಗಂಭೀರದ್ದಿದೆ"-ಎನ್ನುತ್ತಾ ಗಾಂಧಿಜೀ ಲೋರ್ಡ್ಸ್ ಸಭೆಯ ಟೀಕೆಗಳಿಗೆ ಜಿಗುಪ್ಸೆ ಪ್ರದರ್ಶಿಸಿದ್ದಾರೆ. ರಾಜಾಜಿಯವರು ಬ್ರಿಟಿಷ್ ವಿಮರ್ಶಕರಿಗೆ ಉತ್ತರ ಕೊಡುತ್ತಾ, 'ಯುದ್ಧಾವಧಿಯಲ್ಲಿ ರಚನಾತ್ಮಕ ಬದಲಾವಣೆಯಿಲ್ಲದೇನೇ, 1937ರಲ್ಲಿ ಕಾಂಗ್ರೆಸ್ ಮಂತ್ರಿಗಳು ಗವರ್ನರರುಗಳೊಡನೆ ಮಾಡಿಕೊಂಡ ಒಳ ಒಪ್ಪಂದದಂತಹ ಒಂದು ಒಪ್ಪಂದವನ್ನು ರಾಷ್ಟ್ರೀಯ ಸರಕಾರವು ವೈಸರಾಯರೊಡನೆ ಮಾಡಿಕೊಂಡರಾಯಿತೆಂದು ಸೂಚಿಸಿದ್ದಾರೆ. ತನ್ನ ಸಂಧಿಸೂಚನೆಯನ್ನು ಮಿ. ಜಿನ್ನರಲ್ಲಿಗಳೆಯುವಂತೆ ಪ್ರೇರಿಸಿ ಕುಹಕ ವಿಮರ್ಶೆ ನಡೆಸಿರುವ ಲಂಡನಿನ 'ಟೈಮ್ಸ್' ಪತ್ರಿಕೆಯ ವರ್ತನೆಯನ್ನು ನಿಷೇಧಿಸಿ, 'ಬ್ರಿಟಿಷರ ಹಿತಕಾರಿಯಾಗಿರದೆ, ಮುಸಲ್ಮಾನರ ಹಿತಕ್ಕಾಗಿಯೇ ಇರುವ ಬದಲು ಸೂಚನೆಯೊಂದನ್ನು ಬ್ರಿಟಿಷರು ತಯಾರಿಸಿ ಕೊಡಲಿ-ಗಾಂಧಿಜೀ ಮತ್ತು ನಾನು ಅದನ್ನಂಗೀಕರಿಸಲು ತಯಾರಿದ್ದೇವೆ' ಎಂದು ರಾಜಾಜಿಯ ಆಹ್ವಾನ.

ಕಾಮನ್ಸ್ ಸಭೆಯಲ್ಲಿ—

ತಾ. 28ರಲ್ಲಿ ಕಾಮನ್ಸ್ ಸಭೆಯಲ್ಲಿ ನಡೆದ ಭಾರತದ ಕುರಿತಾದ ಚರ್ಚೆಯು ಪದ್ಧತಿಗೆ ವಿರುದ್ಧವಾಗಿ, ನಿಂದೆ ಆರೋಪಗಳ ಬದಲಿಗೆ ವಾದ ಪ್ರತಿವಾದಗಳಿಂದ ತುಂಬಿದ್ದಿತು. ಸಂಪ್ರದಾಯ ಬದ್ಧ ತಾತ್ಸಾರಕ್ಕೊಳಗಾಗದೆ ತುಸು ಪ್ರಾಮುಖ್ಯತೆಯನ್ನೂ ಪಡೆದಂತಿದ್ದಿತು. ಆದರೆ ಮಿ. ಸೋರೆನ್ಸನರೊಬ್ಬರನ್ನು ಬಿಟ್ಟರೆ, ಮಿಕ್ಕವರೆಲ್ಲಾ ಉದ್ದೇಶ ಪೂರ್ವಕವಾಗಿ ಭಾರತದ ಆರ್ಥಿಕ ಪ್ರಶ್ನೆಗೆ ಮಹತ್ವ ಕೊಟ್ಟು ರಾಜಕೀಯ ಸಮಸ್ಯೆಗಳನ್ನು ಮೂಲೆಗುಂಪು ಮಾಡುವ ಲೋರ್ಡ್ ವೇವೆಲರ ಅನುಕೂಲ ಶಾಸ್ತ್ರವನ್ನೇ ಎತ್ತಿಕೊಂಡಂತಿದೆ. ಚರ್ಚೆಯನ್ನು ಪ್ರಾರಂಭಿಸಿದ ಮಿ. ಪೆಥಿಕ್ ಲೋರೆನ್ಸರು ಮಿ. ಅಮೆರಿಯವರಿಂದ ಕೂಡಾ 'ಚಾತುರ್ಯಪೂರ್ಣ ಹಾಗೂ ವಿಚಾರ ಭರಿತ'ವೆಂದು ಶ್ಲಾಘಿಸಲ್ಪಟ್ಟ ಮೃದು ಭಾಷಣದಲ್ಲಿ 'ಭಾರತೀಯರ ಅವಿಶ್ವಾಸವನ್ನು ನಿವಾರಿಸಬೇಕು; ಬೊಂಬಾಯಿಯ ಆರ್ಥಿಕ ಯೋಜನೆ ಸಂಗ್ರಾಹ್ಯವಿದೆ; ಸರಕಾರವು ಸಂಧಾನಕ್ಕಾಗಿ ಹೆಜ್ಜೆ ಮುಂದಿಡಬೇಕು; ಪ್ರಮುಖರನ್ನು ಆದಷ್ಟು ಬೇಗನೇ ಬಿಡುಗಡೆ ಮಾಡಬೇಕು'—ಇತ್ಯಾದಿ ಸೂಚನೆಯಿತ್ತರು. ಮಿ ವಾಲ್ಟರ್ ಎಲಿಯೆಟ್, ಸರ್ ಜೋರ್ಜ್ ಶ್ಟುಶ್ಟರ್, ಮಿ. ರೈಸ್. ಪ್ರೊ ಹಿಲ್., ಮಿ. ದೇವಿಸ್, ಮಿ, ಸೋರೆನ್ಸನ್, ಮಿ. ನಿಕೋಲ್ಸನ್, ಮಿ. ಹಾರ್ವೆ. ಸರ್. ಮಿಲ್ನೆ, ಮಿ. ಮೋಂಟೆಗ್ಯೂ, ಅರ್ಲ್ ವಿಂಟರ್ಟನ್, ಸರ್. ರೀಡ್ ಮೊದಲಾದವರಿಂದ ಭಿನ್ನಾಭಿಪ್ರಾಯಗಳು ಮಂಡಿಸಲ್ಪಟ್ಟವು. 'ರಾಜಕೀಯವನ್ನು ಬದಿಗೊತ್ತುವದಕ್ಕಾಗಿ! ಆರ್ಥಿಕ ಸುಧಾರಣೆಯ ಯುಕ್ತಿ ಹೂಡಬೇಡಿ'ಎಂದ ಮಿ. ಸೋರೆನ್ಸನರ ಎಚ್ಚರಿಕೆಯಂತೆಯೇ, 'ನಾವು ಭಾರತೀಯರೊಡನೆ ಸಹಕರಿಸಲು ಜೀವಾವಧಿ ಆತುರದಲ್ಲಿದ್ದೇವೆ ಎಂದು ಲೋಕವೇ ಅರಿತಿರುವಾಗ, ಎದ್ದು ನಿಂತು 'ಸಹಕರಿಸಬೇಕು' ಎನ್ನುವ ಸದಸ್ಯರೆಲ್ಲಾ ತಿಳಿಗೇಡಿಗಳು. ಎಂದ ಸರ್ ಮಿಲ್ನೆಯವರ ಆತ್ಮತೃಪ್ತಿಯಂತಹ ಭಿನ್ನಮತಗಳೂ ಇದ್ದುವು ಪಾಕಿಸ್ತಾನದಂತೆ ಆಶ್ರಿತ ರಾಜರು, ದಳಿತ ವರ್ಗದವರು, ಕೆಲಸಗಾರರ ವಾದಗಳೂ ಮುಂದೊಡ್ಡಲ್ಪಟ್ಟವು. ಮಿ. ಅಮೆರಿಯವರು ತನ್ನ ಸುದೀರ್ಘ ಉತ್ತರದಲ್ಲಿ ಲೋರ್ಡ್ ಮನ್ಸ್ಟರರ ಬಾಯಿಂದ ಬಂದ ಸರಕಾರದ ನಿಶ್ಚಿತ ಧೋರಣೆಯನ್ನೇ ಮತ್ತಷ್ಟು ಸ್ಪಷ್ಟಗೊಳಿಸಿದರು ಗಾಂಧಿಯವರ ಸೂಚನೆಗಳು ಸ್ಪಷ್ಟವಾಗಿಲ್ಲ. ಆದರೆ, ಕ್ರಿಪ್ಸ್ ಕೊಡುಗೆಯ ಧಿಕ್ಕಾರಕ್ಕೆ ಹೇತುವಾದ ಕೇಂದ್ರಾಧಿಕಾರವನ್ನೇ ಈಗ ಪುನಃ ಗಾಂಧಿಯವರು ಯಾಚಿಸಿರುವದರಿಂದ ಮಿಕ್ಕ ವಿವರಣೆ ಬೇಕಾಗಿಲ್ಲ. ಅದ್ದರಿಂದ ಇದನ್ನಾಧರಿಸಿ ಲೋರ್ಡ್ ವೇವೆಲರೊಡನಾಗಲೀ, ವರ್ಕಿಂಗ್ ಕಮಿಟಿಮೆಂಬರರೊಡನಾಗಲೀ ಗಾಂಧಿಯವರನ್ನು ಸಂಭಾಷಿಸಲು ಬಿಟ್ಟು ಪ್ರಯೋಜನವಿಲ್ಲ. ಕ್ರಿಪ್ಸ್ ಕೊಡುಗೆಯೊಂದೇ ಸರಕಾರದ ಅಚಲ ಧೋರಣೆಯಾಗಿ ಅಂದಿನಂತೆ ಇಂದೂ ಇದೆ-ಎಂದು ಅಮೆರಿ ಗಾಂಧಿಯವರ ಸಂಧಿ ಸೂತ್ರಗಳನ್ನು ನಿರಾಕರಿಸಿಬಿಟ್ಟಿದ್ದಾರೆ.

☞ ಮುಟ್ಟಾಗುವಿಕೆ ☜

ಪಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣ ಅಥವಾ ಇನ್ಯಾವ ಕಾರಣದಿಂದಲೂ 'ಕುಂಮಾರಿ' (Govt Regd) ಖಚಿತ ಪರಿಣಾಮ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗುವುದು; ಬೇಕಾದಾಗ ಗರ್ಭಧಾರಣೆಯನ್ನು ಪಡೆಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3|- ಕ್ಲಿಷ್ಟವಾದ ಕೇಸುಗಳಿಗೆ ರೂ 5, (ವಿ. ಪಿ. 12ಆಣೆ ಅಧಿಕ)

Mrs. P DEVEE, F. D, S, (N)
TOLLYGUNGE, CALCUTTA
ಸ್ಟಾಕಿಸ್ಟ್ Popular Stores,
P, B, 60, MANGALORE
Shah Co, Mangalore

38 ವರ್ಷಗಳ ಹಿರಿತನ

1906ನೆ ಇಸವಿ ಜುಲೈ 1ನೇ ತಾರೀಕಿನಲ್ಲಿ ಸ್ಥಾಪಿತವಾಗಿ ಕೆನರಾ ಬ್ಯಾಂಕು ಇಂದಿಗೆ 38 ವರ್ಷ ವಯಸ್ಸು ಹೊಂದಿದೆ. ನಾವು 38 ವರ್ಷ ವಯಸ್ಸಿನವರೆಂಬುದೆ ನೀವು ನಮ್ಮೊಡನೆ ವಹಿವಾಟ ನಡೆಸಲು ಸಾಕಾದ ಕಾರಣವಾಗಲಾರದು.

ಆದರೆ ಈ 38 ವರ್ಷಗಳು ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿವೆ—ಎರಡು ಮಹಾ ಯುದ್ಧಗಳು—ಲೋಕವು ಹಿಂದೆಂದೂ ಕಾಣದ ಆರ್ಥಿಕ ಮುಗ್ಗಟ್ಟು—ಈ ಮೊದಲು ಆಗದ ಬ್ಯಾಂಕುಗಳ ಸಂಧಿಗ್ಧಾದಷ್ಟೆ—ಶ್ಯೇರು ಮಾರ್ಕೆಟುಗಳ ಕಂಗಾಲುವಸ್ಥೆ—ಇತ್ಯಾದಿ.

ಒಂದು ಬ್ಯಾಂಕು ಈ ಎಲ್ಲಾ ಭಯಂಕರ ಹಲ್ಲೋಲಗಳಿಂದ ಎದೆಗುಂದದೆ ಪಾರಾಗಿರುವುದಾದರೆ—ಈ ಕಠಿಣ ಅನುಭವಗಳಿಂದ ಪ್ರಯೋಜನವನ್ನೇ ಹೊಂದಿ ತನ್ನ ಪ್ರಾಮುಖ್ಯತೆಯನ್ನೂ ವಿಶಾಲತೆಯನ್ನೂ ಮತ್ತೂ ಬೆಳೆಸಿರುವುದಾದರೆ--ಆ ಬ್ಯಾಂಕೇ ನಿಮ್ಮ ವಿಶ್ವಾಸಕ್ಕೆ ಯೋಗ್ಯವಾದದ್ದು.

ನಾವು ನಮ್ಮ ಹಿರಿತನದಿಂದ ಶ್ರೇಷ್ಠರಾದುದಲ್ಲ, ನಮ್ಮ ಶ್ರೇಷ್ಠತನದಿಂದ ನಾವು ಹಿರಿಯರಾಗಿದ್ದೇವೆ.

ESTD 1906 **Canara Bank, Limited.**

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ 18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.
Crown Rubber Stamp Co. 18 Balmat Road, MANGALORE.
ESTD 1906 Approved firm by the Govt. of Mysore.
Certified by the Agent of the Govt. of India in Ceylon.

CHAMPAE'S
Snow & Castrex
(Sole Distributers for India.)
Sukhananda Stores
Santhekatte, UDIPI, S. K.

ಸಂಧಿ ಸೂತ್ರಗಳಿಗೆ ಮಿ. ಜಿನ್ನರ ಆಕ್ಷೇಪ

ಇದೇ ತಾ. 30ರಲ್ಲಿ ಲಾಹೋರಿನಲ್ಲಿ ಸೇರಿದ ಅ. ಭಾ. ಲೀಗ್ ಕೌನ್ಸಿಲಿನಲ್ಲಿ ಮಿ ಜಿನ್ನರು, ರಾಜಾಜೀ-ಗಾಂಧಿಜೀ ಸಂಧಿ ಸೂಚನೆಗಳ ಕುರಿತು ತನ್ನ ಅಭಿಪ್ರಾಯವನ್ನು ಮಂಡಿಸಿದರು. ಈ ಸೂಚನೆಗಳು ಮುಸ್ಲಿಂ ಲೀಗಿನ 1940ರ ನಿರ್ಧಾರಕ್ಕನುಗುಣವಾಗಿ ಇಲ್ಲ ಮತಗಣನೆ ಬೇಕಾಗಿಲ್ಲ; ತಾತ್ಕಾಲಿಕ ಸರಕಾರದ ರೂಪರೇಖೆಯೇನೆಂಬುದನ್ನು ಸ್ಪಷ್ಟಪಡಿಸಿಲ್ಲ; ಸರಕಾರವು ಅಧಿಕಾರ ದಾನ ಮಾಡಿದರೆ ಮಾತ್ರ ಈ ಸೂಚನೆಗಳು ಮಾನ್ಯವಾಗಬೇಕೆಂಬ ಶರ್ತದಿಂದಾಗಿ ಕುದುರೆಯ ಮುಂದೆ ಗಾಡಿ ಕಟ್ಟಿದಂತಾಗಿದೆ—ಎಂದು ಮಿ ಜಿನ್ನರ ಆಕ್ಷೇಪ. ಸಂಧಾನ ವ್ಯವಹಾರ ನಡಿಸುವ ಸರ್ವಾಧಿಕಾರವನ್ನು ಲೀಗ್ ಕೌನ್ಸಿಲು ಮಿ ಜಿನ್ನರಿಗಿತ್ತಿದೆ.

ಮಿ. ಜಿನ್ನರ ಆಕ್ಷೇಪ.

"ಶ್ರೀ ರಾಜಗೋಪಾಲಾಚಾರೀ ಸೂತ್ರವು, ಮುಸ್ಲಿಂ ಲೀಗಿನ 1940ನೇ ಮಾರ್ಚಿಯ ನಿರ್ಧಾರಗಳಿಗೊಂದು ನಕಾರವಾಗಿದ, ಮತ್ತದಕ್ಕೆ 'ಟೋರ್ಪೆಡೋ' ಹೊಡೆಯುವ ಇಚ್ಛೆಯಿಂದ ಮುಂದೆ ಬಂದಿದ. ಈ ಸೂತ್ರವು ಮುಸ್ಲಿಂ ಲೀಗಿನ ಎಲ್ಲಾ ಬೇಡಿಕೆಗಳನ್ನೂ ಮಾನ್ಯಮಾಡಿದೆ ಎಂಬ ಅವರ ಮಾತು ಪೂರ್ಣ ಯದ್ವಾತದ್ವಾ. ಪ್ರಥಮತಃ ನಮ್ಮ ಆಂದಿನ ಠರಾವಿನಲ್ಲಿ ಮತ ಗಣನ'ಯಂತಹದೇನಾದರೂ ಇರುವದನ್ನು ಅವರು ಕಂಡಿದ್ದಾರೆಯೇ ಅಂದ ಮೇಲೆ ಜಿಲ್ಲಾವಾರು ಮತಗಣನೆಯಂತಹ ಅಪಹಾಸ್ಯಕರ ಸೂಚನೆಯೇಕೆ" ಎಂದು ಪ್ರಶ್ನಿಸುತ್ತಾ ಮಿ ಜಿನ್ನರು ಸಂಧಿ ಸೂಚನೆಗಳ ಕಲಮು ಕಲಮುಗಳನ್ನೆತ್ತಿ ಟೀಕಿಸಿದ್ದಾರೆ ಪ್ರಥಮತಃ ರಾಜಾಜೀಯ ಮಾತಿನಂತೆ, ಕಾಂಗ್ರೆಸಿನ ಅಧಿಕಾರ ಅಥವಾ ವ್ಯಕ್ತಿಗತ ಪ್ರಾತಿನಿಧ್ಯವೇನೂ ಇಲ್ಲದ ಮಹಾತ್ಮರು, ಸೂಚನೆಗಳಿಗೆ. ತನ್ನ ಆಶೀರ್ವಾದವನ್ನು ಹಿಂದೆಗೆಯಬಲ್ಲರು, ಆದರೆ ಅದನ್ನೊಂದು ಆಧಾರವಾಗಿ ಅಂಗೀಕರಿಸಿಕೊಂಡಲ್ಲಿ ಮುಸ್ಲಿಂ ಲೀಗ್ ತದನುಗುಣವಾಗಿ ... ಬೇಕಾಗ ವದು—ಎಂದು ಮಿ ಜಿನ್ನರ ಆಕ್ಷೇಪ.

ಅಪವಾದ, ಅಪನಂಬಿಕೆ ಮತ್ತು ಅಸ್ಪಷ್ಟತೆ.

'ಭಾರತದ ಸ್ವಾತಂತ್ರ್ಯಬೇಡಿಕೆಯನ್ನು ನಾವು ಅನುಮೋದಿಸತಕ್ಕದ್ದೆಂಬ ಒಂದು ಕೇಳಿಕೆಯದರಲ್ಲಿದೆ ನಾವು ಭಾರತೀಯರ ಸ್ವಾತಂತ್ರ್ಯಕ್ಕೆ ವಿರುದ್ಧವಿದ್ದೇವೆ ಎಂದಿದದರಿಂದ ಅರ್ಥವಾಗುತ್ತದೆ, ಇದೊಂದು ಅಸಂಬದ್ಧಾರೋಪವಾಗಿದ್ದು ತಾವು ಲೀಗಿನ ಮೇಲೆ ಅನಗತ್ಯವಾದ ಅಪನಂಬಿಕೆಯನ್ನು ಹೇರಿದ್ದೇವೆ ಎಂಬುದನ್ನು ಶ್ರೀಯುತ ಗಾಂಧಿ ಮತ್ತು ಶ್ರೀ ರಾಜಗೋಪಾಲಾಚಾರ್ಯರಿಬ್ಬರೂ ಬಲ್ಲರು. ಇನ್ನು ಬದಲಾವಣೆಯ ಅವಧಿಯಲ್ಲಿ ಸ್ಥಾಪಿಸಲ್ಪಡುವ ತಾತ್ಕಾಲಿಕ ಸರಕಾರದ ಆಕಾರವಾವುದು, ಗುಣನಡತೆ ಹೇಗೆ, ಅಧಿಕಾರವಾರದು, ಎಂಬ ಕುರಿತು ಏನೊಂದೂ ಸೂಚನೆಯಿಲ್ಲ. ಯುದ್ಧಾನಂತರ ಮುಸಲ್ಮಾನರ ಬಹುಮತವಿರುವ ಪ್ರಾಂತ್ಯಗಳಲ್ಲಿ ಜಿಲ್ಲಾವಾರು ಮತಗಣನೆ ಪಡೆಯಲು ಒಂದು ಸಮಿತಿಯು ನೇಮಿಸಲ್ಪಡುವ ಸೂಚನೆಯಿದೆ. ಈ ಕಮಿಶನನ್ನು ನೇಮಿಸುವವರಾರು? ಅದರ ಆಕಾರ ಮತ್ತು ಅಧಿಕಾರವೇನು? ಅದರ ನಿರ್ಧಾರಗಳನ್ನು ಜ್ಯಾರಿಗೆ ತರುವವರಾರು? ಎಂಬ ಕುರಿತು ಏನನ್ನೂ ಹೇಳಿಲ್ಲ ಇಂತಹ ಸೂತ್ರವು ಮುಸಲ್ಮಾನರ 1940ರ ಬೇಡಿಕೆಯನ್ನೆಲ್ಲಾ ಮನ್ನಿಸಿದೆ ಎಂದು ರಾಜಗೋಪಾಲಾಚಾರ್ಯರು ಬಹಿರಂಗವಾಗಿ ಹೇಗೆ ಹೇಳಬಲ್ಲರು?

ಕುದುರೆಯ ಮುಂದೆ ಗಾಡಿ!

ಬ್ರಿಟಿಷರು ಪೂರ್ಣಾಧಿಕಾರ ಮತ್ತು ಹೊಣೆಗಾರಿಕೆಯನ್ನು ಬಿಟ್ಟುಕೊಟ್ಟರೆ ಮಾತ್ರವೇ ಇವೆಲ್ಲಾ ಸೂಚನೆಗಳು ಅಸ್ತಿತ್ವದಲ್ಲಿರಲು ಬಾಧ್ಯವಿವೆಯೆಂಬ ಕೊನೆಯ ಶರ್ತವೊಂದಿದೆ ಆದರೆ ಅದನ್ನು ಯಾರಿಗೆ ಮತ್ತು ಯಾವಾಗ ಕೊಡತಕ್ಕದ್ದೆಂಬ ಕುರಿತು ಏನೂ ಹೇಳಿಲ್ಲ ಪಾಕಿಸ್ತಾನ್ ಆಧಾರದ ಮೇಲೆ ಶುದ್ಧ ಹಾಗೂ ಅಸಂದಿಗ್ಧ ವಾಣಿಯೊಡನೆ ಗಾಂಧಿಯವರು ಮುಸ್ಲಿಂ ಲೀಗಿನ ಕೈಗೆ ಕೈಕೊಡಲು ಮುಂದಬರಲಿ. ಆಗ ಗಾಂಧಿಯವರೊಬ್ಬರಿಗೇನೇ ಅಲ್ಲ, ದೇಶದ ಮಿಲಿಯಾವಧಿ ಜನರ ಹೃದಯದಾತುರವಾಗಿರುವ ಸ್ವಾತಂತ್ರ್ಯವನ್ನು ನಾವು ಸಮೀಪಿಸುವೆವು ಈ ಶರ್ತಗಳಿಗೆ ಜೆಲೆ ಬರಬೇಕಾದರೆ ಸರಕಾರವು ಗಾಂಧೀ ಬಯಕೆಯ ಅಧಿಕಾರದಾನ ಮಾಡಿಕೊಳ್ಳಬೇಕು ಎನ್ನುವ ಗಾಂಧಿ ಮತ್ತು ಆಚಾರ್ಯರು ಕುದುರೆಯ ಮುಂಗಡೆ ಗಾಡಿಯನ್ನು ಕಟ್ಟುತಿನ್ನಾರೆ ಹಿಂದೂ ಮುಸ್ಲೀಮರೊಂದಾಗಿ ಒಗ್ಗಟ್ಟಿನಿಂದ ಬ್ರಿಟಿಷ್ ಆಳರಸರ ಕೈಯಿಂದದನ್ನು ಕಿತ್ತುಕೊಳ್ಳಬೇಲ್ಲದೆ ಮೇಲಿನಂತಹ ಸಂದರ್ಭ ಬರುವಂತಿಲ್ಲ. ಹೇಗಿದ್ದರೂ, ಭಾರತದ ಪಾಲು ಅಥವಾ ವಿಭಾಗಕ್ಕೆ ಗಾಂಧಿಯವರು ಖಾಸಗಿಯಿಂದಾದರೂ ಒಪ್ಪಿದುದು ಮುಂದಿನ ಅಭಿವೃದ್ಧಿಗೆ ಹಿತ ಮತ್ತು ಅನುಕೂಲ. ಈಗ ತೀರ್ಮಾನ ವಾಗಲುಳಿದಿರುವದು ಅದನ್ನು ಜ್ಯಾರಿಗೆ ತರುವದು ಹೇಗೆ ಮತ್ತು ಯಾವಾಗ ಎಂಬ ಪ್ರಶ್ನೆಯೊಂದೆ"

ಜಿನ್ನರಿಗೆ ಸರ್ವಾಧಿಕಾರ.

ತಬ್ಬಿಲಿಗೊಳಪಡದ 'ಡಿಕ್ಟೇಟರ್'ನಂತಿರುವ ಈಗಿನ ಸೂಚನೆಯಿಂದ ಸಂಧಾನವ ಸಾಧ್ಯ. ಗಾಂಧಿಯವರು ಛಾಯೆ, ಮತ್ತು ಗಲಿಬಿಲಿಯ ಕೃತಕ ಪಾಕಿಸ್ತಾನವನ್ನಿತ್ತು ತನ್ನ ಪಾಕಿಸ್ತಾನ್ ಯೋಜನೆಯನ್ನು ಹಾದುಹೋಗಲು ಯತ್ನಿಸುತ್ತಿದ್ದಾರೆಂದು ಜಿನ್ನರ ಆರೋಪ. ಗಾಂಧಿಯವರು ಜುಲಾಯಿ 17ರಲ್ಲೇ ತನ್ನ ಭೇಟಿಯಾಚಿಸಿ ಪತ್ರಬರೆದಿದ್ದರು; ಆಗೋಸ್ತು ಮಧ್ಯದಲ್ಲಿ ಬೊಂಬಾಯಿಯ, ತನ್ನ ಮನೆಗೆ ಅವರನ್ನು ಕರೆಸಿಕೊಳ್ಳಲು ಸಂತೋಷಿಸುತ್ತೇನೆ, ಎಂದು ತಾ 24ರಲ್ಲಿ ತಾನು ಉತ್ತರಬರೆದಿದ್ದೇನೆ—ಎಂದು ಮಿ.ಜಿನ್ನರು ತಿಳಿಸಿದರು ಮುಂದಿನ ಸಂಧಿವ್ಯವಹಾರ ನಡಿಸುವ ಪೂರ್ಣಾಧಿಕಾರವನ್ನು ಲೀಗ್ ಕೌನ್ಸಿಲು ಒಮ್ಮತದಿಂದ ಮಿ. ಜಿನ್ನರಿಗಿತ್ತಾಗ 'ನನ್ನನ್ನಾಶೀರ್ವದಿಸಿರಿ ಮತ್ತು ಪ್ರಾರ್ಥಿಸಿರಿ ಎಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ ದೇವರ ದಯೆಯಿಂದ ನಾವೊಂದು ಗೌರವಾರ್ಹ ಒಪ್ಪಂದ ಹೊಂದಬಹುದು' ಎಂದು ಪ್ರಬಲ ಕರತಾಡನಗಳ ನಡುವೆ ಜಿನ್ನರಂದರು.

ನೀವು ಎಂದಾದರೂ ರೈಲ್ವೇ ಪ್ಲಾಟ್‌ಫಾರಮ್ಮಿನಲ್ಲಿ ಗಾಡಿಗಾಗಿ ಕಾದು ನಿಂತಿಯುವಿರಾ?



ಒಂದುಕಾಲದಲ್ಲಿ ರೈಲ್ವೇ ಪ್ಲಾಟ್‌ಫಾರಮ್ಮುಗಳು ಅಗಲವಾಗಿಯೂ ವಿಶಾಲವಾಗಿಯೂ ಇರುತ್ತಿದ್ದವು. ನಿಮ್ಮ ಗಾಡಿಗಾಗಿ ಕಾದು ನಿಂತಿರಲು ನಿಮಗೆ ಯಥೇಚ್ಛವಾಗಿ ಸ್ಥಳವಿರುತ್ತಿತ್ತು. ಆದರೆ, ಈಗ ರೈಲ್ವೇ ಪ್ಲಾಟ್‌ಫಾರಮ್ಮುಗಳು ಪೆಟ್ಟಿಗೆಗಳಿಂದಲೂ, ಪಾರ್ಸಲುಗಳಿಂದಲೂ ತುಂಬಿರುತ್ತವೆ ಸ್ವಲ್ಪ ಸರಿದಾಡಲು ಸಹಿತ ಸ್ಥಳ ಸಿಕ್ಕುವದು ದುರ್ಲಭ, ಕೂತುಕೊಂಡು ವಿಶ್ರಮಿಸಿಕೊಳ್ಳುವ ಆಸೆಯಂತೂ ಇಲ್ಲವೇ ಇಲ್ಲ. ಒಂದುವೇಳೆ ನಿಮಗೆ ಸ್ಥಳ ಸಿಕ್ಕಿತಾದರೂ, ರೈಲ್ವೇ ನೌಕರರು ಟ್ರಾಲಿಗಳನ್ನು ತಳ್ಳಿಕೊಂಡು ಹೋಗುತ್ತಿರುವಾಗ ನಿಮ್ಮ ಕಾಲುಗಳಮೇಲೆ ಹರಿಯಬಹುದು. ನಿಮಗ ಏನಾದರೂ ಫಲಾಹದ ಸಾಮಾನುಗಳು ಬೇಕಾದರೆ, ನಿಮ್ಮ ಸಾಮಾನುಗಳನ್ನು ಬಿಟ್ಟು ಹೋಗಲು ನಿಮಗೆ ಧೈರ್ಯವಿರುವದಿಲ್ಲ. ಅವುಗಳನ್ನು ನೋಡಿಕೊಳ್ಳಲು ಕೂಲಿಯೂ ಸಿಕ್ಕುವದು ಕಷ್ಟ. ಇದರ ಜತೆಗೆ ಟಿಕೆಟ್ಟನ್ನು ಪಡೆಯುವವರಲ್ಲಿರತಕ್ಕ ತೊಂದರೆ ಗಾಡಿಯ ಒಳಕ್ಕೆ ಪ್ರವೇಶ ದೊರೆಯುವ ಅಸಾಧ್ಯತೆ ಇವುಗಳನ್ನು ಸೇರಿಸಿ ನೋಡಿದರೆ, ಪ್ರಯಾಣವು ಎಷ್ಟೊಂದು ಕಷ್ಟ. ಇಂತಹ ಪ್ರಯಾಣದಲ್ಲಿ ಏನೂ ಪ್ರಯೋಜನವಿಲ್ಲ. ಕಾಲವು ಪುನಃ ಯಥಾಸ್ಥಿತಿಗೆ ಬರುವವರೆಗೂ ವಿವೇಕಿಗಳಾಗಿ ಮನೆಯಲ್ಲಿಯೇ ಉಳಿಯಿರಿ. ಇದು ಒಂದೇ ಸೂಕ್ತವಾದ ಕೆಲಸವು.

ಕಡಮೆಯಾಗಿ ಪ್ರಯಾಣಮಾಡಿರಿ

AAA 680KN

The Canara Banking Corporation Limited.

ESTD 1906.

Authorised Capital ...	Rs. 25.00 000/-
Subscribed Capital ...	„ 16 00.000/-
Paid up Capital	„ 13 72 900/-
Reserves	„ 4 10 000/-

Total Working Capital—xEceeds One Crore.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers

ನವಯುಗ

ಉಡುಪಿ, ಗುರುವಾರ ೩-೮-೧೯೪೪

ವಿನಯದಿದಿರು ವಿರೋಧ!

ಮುಸ್ಲಿಂ ಲೀಗ್ ಮತ್ತು ಸರಕಾರದಿದಿರು ಗಾಂಧಿಜೀ ಮುಂದೊಡ್ಡಿದ್ದ ಎರಡು ಸಂಧಾನ ಸೂತ್ರಗಳನ್ನು ಪ್ರಕಟಿಸಿದ ಎರಡನೇ ವಾರದಲ್ಲೇ ಇಕ್ಕಡೆಯವರ ಉತ್ತರಗಳನ್ನೂ ಪ್ರಕಟಿಸುವ ಯೋಗ ನಮಗೊದಗಿದೆ. ನಮ್ಮ ಇಂದಿನ ನಿರೀಕ್ಷೆ ಸುಳ್ಳಾಗಲಿಲ್ಲ. ಪಾರ್ಲಿಮೆಂಟಿನ ಲೋರ್ಡ್ಸ ಮತ್ತು ಕಾಮನ್ಸ್ ಸಭೆಗಳಲ್ಲಿ ಲೋರ್ಡ್ ಮನ್ಸ್ಟರ್ ಮತ್ತು ಮಿ ಅಮೆರಿಯವರೂ, ಲೀಗ್ ಕೌನ್ಸಿಲ್ ಸಭೆಯಲ್ಲಿ ಮಿ. ಜಿನ್ನರೂ ಗಾಂಧಿಜೀ ಸಂಧಾನಕ್ಕಾಗಿ ಮುಂದೊಡ್ಡಿದ ಎರಡು ಹಸ್ತಗಳನ್ನೂ ಏಕಬಾರಿ ಹಿಂದೆ ತಳ್ಳಿದ್ದಾರೆ. 1942ರ ಕ್ರಿಪ್ಸ್ ಕೊಡುಗೆಗಿಂತ ಹೆಚ್ಚಿನದನ್ನೀಯುವಂತಿಲ್ಲವೆಂದು ಮಿ ಅಮೆರಿಯವರ ನಕಾರ, 1940ರ ಲೀಗ್ ಬೇಡಿಕೆಗಿಂತ ಕಡಿಮೆಯದನ್ನು ಅಂಗೀಕರಿಸುವಂತಿಲ್ಲವೆಂದು ಮಿ ಜಿನ್ನರ ಧಿಕ್ಕಾರ. ಈ ಸೂಚನೆಗಳ ಮೃದು ಧೋರಣೆಯಿಂದಾಗಿ ಗಾಂಧಿಜೀ ತನ್ನ ಅನುಯಾಯಿಗಳಲ್ಲಿ ಬಹುಸಂಖ್ಯಾಕರ ಮನನೋಯಿಸಿದ್ದಾರೆ; ಈ ಮನನೋಯಿಕೆಯಾದರೂ ಮಹಾತ್ಮರ ಸೌಜನ್ಯದ ದ್ಯೋತಕವೇ ಹೊರತು ದೌರ್ಬಲ್ಯದ ಚಿಹ್ನೆಯಲ್ಲವೆಂಬುದನ್ನು ಸರಕಾರ ಮತ್ತು ಲೀಗ್ ಮರೆತಂತಿದೆ. ಮಿ. ಅಮೆರಿ ಮತ್ತು ಮಿ. ಜಿನ್ನರ ದೃಷ್ಟಿ ದೋಷವಂತಹದು! ಮಿ ಅಮೆರಿ ದೃಷ್ಟಿಗೆ, ಗಾಂಧಿಜೀ ತನಗೆ ಹಕ್ಕಿಲ್ಲದುದನ್ನು ಯಾಚಿಸುವ ಭಿಕ್ಷುಕನಾಗಿ ಕಾಣುತ್ತಿದ್ದಾರೆ, ಮಿ ಜಿನ್ನರ ನೋಟಕ್ಕೆ, ತನ್ನ ಹಕ್ಕಿನದಲ್ಲದುದನ್ನು ಉಳಿಸಿಕೊಳ್ಳುವ ವಂಚಕನಾಗಿ ತೋರುತ್ತಿದ್ದಾರೆ! ಇಕ್ಕಡೆಯವರ ಉತ್ತರಗಳೂ ವಿಚಾರಿಗಳಲ್ಲಿ ನಿರಾಶೆ, ರಾಷ್ಟ್ರಾಭಿಮಾನಿಗಳಲ್ಲಿ ಆವೇಗ ಹೆಬ್ಬಿಸದಿರಲಾರವು.

ಅಮೆರಿ ಮತ್ತು ಜಿನ್ನರ ಧೋರಣೆಗಳೊಳಗಿರುವ ವ್ಯತ್ಯಾಸವನ್ನೂ, ಇವೆರಡು ನಕಾರಗಳ ಹಿಂಗಡೆಯಲ್ಲಿರುವ ಏಕರೀತಿಯ ಸ್ವಾರ್ಥವನ್ನೂ ಸೂಕ್ಷ್ಮವಾಗಿ ಗ್ರಹಿಸಬೇಕು. ಅಮೆರಿ, ಜಿನ್ನರಂತಹ ಕುಹಕಿಗಳೊಡನೆ, ಮುಂದಾಗಿ ಔದಾರ್ಯ ಪ್ರದರ್ಶಿಸುವದು ಎಂತಹ ಅನಿಷ್ಟಕಾರಿ ಎಂಬುದನ್ನು ಈಗ ತಿಳಿಯಬಹುದು. ಸರಕಾರಕ್ಕೆ ಕೊಟ್ಟ ಸೂಚನೆಯಲ್ಲಿರುವ ರಾಷ್ಟ್ರೀಯ ಸರಕಾರ ಸ್ಥಾಪನೆಯು ಕೂಡಲೇ ಆಗತಕ್ಕ ಕಾರ್ಯ; ಆದರೆ ಲೀಗಿಗೆ ದಾನವಾಗಿ ಕೊಟ್ಟ ಪಾಕಿಸ್ತಾನವು ಯುದ್ಧಾನಂತರದ ವ್ಯವಸ್ಥೆ. ಅದಕ್ಕನುಗುಣವಾಗಿ ಮಿ ಅಮೆರಿಯವರು 'ಇದರಲ್ಲಿ ಹೊಸತೇನೂ ಇಲ್ಲ' ಎಂದು ಕಂಠೋಕ್ತವಾಗಿ ಹೇಳಿ ದೂರಸೋಗಿದ್ದಾರೆ; ಆದರೆ ಮಿ॥ ಜಿನ್ನರು 'ಹೊಸತೇನೋ ಇದೆ; ಆದರೆ ಇಷ್ಟು ಸಾಲದು' ಎಂದು ಹತ್ತಿರಬಂದಿದ್ದಾರೆ. ಈ ತಾರತಮ್ಯಗಳ ಗೂಢವಿಷ್ಟೆ: ಗಾಂಧೀ ಸೂಚನೆಯಿಂದ ಮಿ. ಅಮೆರಿ ಕಳಕೊಳ್ಳತಕ್ಕ ಅಂಶವಿದೆ; ಆದರೆ ಮಿ. ಜಿನ್ನರದರಿಂದ ಲಾಭಗೊಂಡತಕ್ಕವರು. ಅರ್ಥಾತ್ ಕೊಡತಕ್ಕವರು ಏನನ್ನೂ ಕೊಡಲಾರೆನೆಂದು ಹಿಂದೆ ಸರಿಯುತ್ತಿದ್ದಾರೆ; ಪಡಕೊಳ್ಳತಕ್ಕವರು ಸರ್ವಸ್ವವನ್ನೂ ಅಪಹರಿಸಲು ಮುಂದೆ ಬರುತ್ತಿದ್ದಾರೆ. ಕಾಂಗ್ರೆಸು ಅಥವಾ ರಾಷ್ಟ್ರೀಯತೆಯು ಈ ಸಂದರ್ಭದಲ್ಲಿ ಮುಷ್ಟಿ ಬಿಗಿಹಿಡಿದುಕೊಳ್ಳದಿದ್ದರೆ ಸರ್ವವನ್ನೂ ಕಳಕೊಳ್ಳುವ ಸಂಭವವಿದೆ.

ಆಸೆಗಾಸ್ಪದವಿದೆ ಎನ್ನುವವರು ಇನ್ನೂ ಇರಬಹುದು, ಸತ್ಯಕ್ಕೂ ಇದೆ. ಯಾಕೆಂದರೆ ಗಾಂಧಿಯವರ ವಿನಯವನ್ನು ವಿಧೇಯತೆಯಾಗಿ ಮಾರ್ಪಡಿಸಿ ತಮ್ಮ ಸ್ವಾರ್ಥವನ್ನು ಪೂರ್ತಿಯಾಗಿ ಸಾಧಿಸಿಕೊಳ್ಳಲು ಅಮೆರಿ ಜಿನ್ನಾ ಸಾಹೇಬರುಗಳೀಗ ಧಿಕ್ಕಾರದ ನಟನೆ ಮಾಡುತ್ತಿದ್ದಾರೆ ಹೊರತು ಈ ಸಂಧಾನ ಸಂಬಂಧವನ್ನು ಕಡಿದುಕೊಳ್ಳುವ ಬಯಕೆ ಅವರಿಬ್ಬರಿಗೂ ಇಲ್ಲ. ವೈಸರಾಯರ ಕಾದಿಟ್ಟ ಅಧಿಕಾರವನ್ನು ಮುಟ್ಟದ ಒಂದು ಸರಕಾರ ಸ್ಥಾಪಿಸಲ್ಪಟ್ಟು ಅದಕ್ಕೆ 'ರಾಷ್ಟ್ರೀಯ ಸರಕಾರ' ಎಂದು ನಾಮಕರಣವಾಗುವದಾದರೆ ಮಿ ಅಮೆರಿಯವರ ಆಕ್ಷೇಪವಿರಲಾರದು. ಯುದ್ಧಾನಂತರ ಮತಗಣನೆಯಂತಹ ಉಪದ್ರವ ಕೊಡದೆ, ತಾನು ಗರಿಯೆಳೆದ ಪ್ರಸ್ಥಳವನ್ನು ಗಡಿವಿಂಗಡಿಸಿ ಕೊಡುವ ದಕ್ಕೊಪ್ಪಿ, ರಾಷ್ಟ್ರೀಯ ಸರಕಾರದಲ್ಲಿ ಮುಸಲ್ಮಾನರಿಗೆ ಸಮಪಾಲಷ್ಟು ಸ್ಥಾನಗಳನ್ನು ಕೊಡುವದಾದರೆ ಮಿ ಜಿನ್ನರೂ ಒಪ್ಪಬಹುದು. ಹಾಗಾಗಬೇಕೆಂದೇ ಈಗಿನ ಸೂಚನೆಗಳಿಗೆ ನಕಾರ. ನಮ್ಮ ಕಡೆಯ ಇಬ್ಬರು 'ಜೀ'ಗಳು ಅಲ್ಲಿವರೆಗೂ ಮುಂದೊತ್ತಬಹುದೆ? ಗಾಂಧಿಜೀ, ರಾಜಾಜಿಗಳ ಸಂಧಿಯತ್ನವು ಕಾಂಗ್ರೆಸಿನಂತೆಯೇ ಸರಕಾರ ಮತ್ತು ಲೀಗಿಗೂ ಅಸಹನೀಯವಾಗಿರುವ ಬಿಕ್ಕಟ್ಟು ನಿವಾರಣೆಗಾಗಿ ಹೊರತು ಸ್ವಂತ ಲಾಭಕ್ಕಲ್ಲ. ದೇಶದ ಇಂದಿನ ನಿಸ್ಸಹಾಯಕತೆಯು ದೇಶ ಪ್ರತಿನಿಧಿ ಸಂಸ್ಥೆಯಾದ ಕಾಂಗ್ರೆಸನ್ನು ಸಂಧಿಗೆ ಪ್ರೇರೇಪಿಸಿದಂತೆ ಸ್ವಾರ್ಥ ಸಾಧಕ ಸರಕಾರ ಮತ್ತು ಲೀಗನ್ನು ಪ್ರೇರೇಪಿಸುವದು ಅಸಾಧ್ಯ. ಈ ವ್ಯತ್ಯಾಸವೊಂದನ್ನು ಬಿಟ್ಟರೆ ಆವೆರಿ ಜಿನ್ನರನ್ನು ಯಾಚಿಸುವ ಬೇರಾವ ಆವಶ್ಯಕತೆಯೂ ಗಾಂಧಿಜೀ-ರಾಜಾಜಿಗಿಲ್ಲ. ಆದರೆ ಈ ಯಾಚನೆಗುತ್ತರವಾಗಿ, ಬಿಕ್ಕಟ್ಟಿಗಿಂತಲೂ ಕಳತೆಯ ಭೀಭತ್ಸ ಸ್ಥಿತಿಯನ್ನೇ ಸರಕಾರ ಮತ್ತು ಲೀಗ್ ಮುಂದೊಡ್ಡುತ್ತವಾದರೆ, ಅದನ್ನು ಪೂರ್ಣವಾಗಿ ಧಿಕ್ಕರಿಸಿ ಬೇರೆ ದಾರಿ ಹಿಡಿಯುವದು ರಾಷ್ಟ್ರದ ಆದ್ಯಕರ್ತವ್ಯವೆನ್ನುತ್ತೇವೆ.

— ಹಳ್ಳಿಗರನ್ನು ಹೀಗೆ ಕೊಲ್ಲಬಾರದು! —

(ಓರ್ವ 'ನ್ಯಾಯ ಪಕ್ಷಪಾತಿ'ಯಿಂದ)

ಇಡೀ ದಕ್ಷಿಣ ಕನ್ನಡದಲ್ಲಿ ಅಧಿಕಾರಿಗಳು ಕೈಗೊಂಡಿದ್ದ ಆಹಾರ ವ್ಯವಸ್ಥೆಯು ಈಗ ಸಂಪೂರ್ಣಗೊಂಡಿದೆ. ಆಹಾರಾಭಾವದ ಸಂಧಿಗ್ಧಾವಧಿಯೀಗ ಬಂದಿದೆ. ಮಳೆಗಾಲದ ಅಗೋಸ್ತು, ಸಪ್ಟಂಬರ ತಿಂಗಳುಗಳು ಇದ್ದ ಅಕ್ಕಿಯೊಪ್ಪ ಮುಗಿದುಹೋಗುವ ಮಾಸಗಳು. ದಕ್ಷಿಣ ಕನ್ನಡದ ಹಳ್ಳಿಗರು ಅರೆಹೊಟ್ಟೆಯಿಂದ ವರುಷಂಪ್ರತಿ ಇವೆರಡು ತಿಂಗಳುಗಳನ್ನೂ ಎರಡು ಯುಗಗಳಂತೆ ಅತಿ ಪ್ರಯಾಸದಿಂದ ದೂಡುವ ಸಂಪ್ರದಾಯ. ಇಂತಹ ಕಹಿ ಅನುಭವವು ಪಟ್ಟಣಿಗರಿಗೆ ಈ ಮೊದಲೂ ಇರಲಿಲ್ಲ; ಸರಕಾರದ ಅನುಗ್ರಹದಿಂದ ಈ ವರುಷವೂ ಆಗಿಲ್ಲ. ಆದರೆ ಇಷ್ಟು ವರುಷ ಮಳೆಗಾಲದಲ್ಲಿ ಅರೆಜೀವ ಹಿಡಿದುಕೊಂಡು ಮೇಲೆ ಬೀಳುತ್ತಿದ್ದ ಹಳ್ಳಿ ರೈತನ ಹೊಟ್ಟೆಗೆ, ಈ ವರುಷದ ಧಾನ್ಯವಿತರಣಾ ವ್ಯವಸ್ಥೆಯು ಕಲ್ಲನ್ನೇ ಹಾಕಿದೆ ಎಂಬುದನ್ನು ಯಾರಾದರೂ ಅರಿತಿರುವರೆ?

ಪಟ್ಟಣದ ಹಿತವೇ ಪ್ರಾಮುಖ್ಯವೆ?

ಇಂದಿನ ಆಹಾರ ವ್ಯವಸ್ಥೆಯ ಮುಖ್ಯೋದ್ದೇಶವು ಪಟ್ಟಣಿಗರ ಹೊಟ್ಟೆತುಂಬಿಸುವದೊಂದೇ ಎಂಬುದು ಸ್ಪಷ್ಟವಾಗುತ್ತಿದೆ. ರೆಕ್ವಿಶಿಶನ್ ಜ್ಯಾರಿಗೆ ಬಂದಂದಿನಿಂದ, ಬೇಸಾಯಗಾರನ ಸಂಗ್ರಹವು ಹಲವು ಬಾರಿ ಜಪ್ತಿಯಾಗಿ ಹೋಗಿದೆ. ಪಟ್ಟಣಿಗರಿಗೆ ವಿತರಣವಾಡುವ ಸ್ಟೋರುಗಳಲ್ಲಿ ಅಕ್ಕಿ ಕಡಿಮೆಯಾದೊಡನೆ ಹಳ್ಳಿಗಳಿದು, ಒಂದೆರಡು ಬಾರಿ ರೆಕ್ವಿಜಿಶನ್ ಆಗಿ ಉಳಿದ ಶೇಷಾಂಶ ಅಕ್ಕಿಯನ್ನೂ ಹೇರಿಸಿಕೊಂಡು ಪಟ್ಟಣಕ್ಕೊಯ್ಯುವದು ಅಧಿಕಾರಿಗಳ ಸಂಪ್ರದಾಯವಾಗಿ ಹೋಗಿದೆ. ರೈತನ ಮನೆಯೆಂದರೆ ಅಕ್ಷಯ ಪಾತ್ರೆಯೇನೂ ಅಲ್ಲ. ಒಮ್ಮೆ ತಾವೇ ಲೆಕ್ಕ ಹಾಕಿ ತಮ್ಮ ಲೆಕ್ಕಾಚಾರದಂತೆ ಸಾಗುವಳಿ ಮತ್ತು ಕುಟುಂಬಿಕರ ಊಟಕ್ಕೆಂದು ಬಿಟ್ಟ ಬಂದ ಅಕ್ಕಿಯನ್ನೇ ಮತ್ತೊಮ್ಮೆ ಹೋಗಿ ಕಸಗೊಂಡು ಬಂದರೆ ರೈತರು ಉಣ್ಣುವದೆಲ್ಲಿಂದ? ಈ ಅನ್ಯಾಯದ ಬೀಕರತೆಯು ಯಾರಿಗೂ ಮನವರಿಕೆಯಾಗಿಲ್ಲ; ಪಟ್ಟಣಿಗರಿಗೆ ಇಂತಹ ಅಭಾವವುಂಟಾಗುತ್ತಿದ್ದರೆ, ಅಧಿಕಾರಿಗಳಿಗರ್ಥವಾಗುವ ಹಾಹಾಕಾರವೇಳುತಿತ್ತು. ಈಗ ನಿರ್ಧರಿಸಿರುವ ರೇಶನಿಂಗ್ ಪರಿಮಾಣದ ಧಾನ್ಯವನ್ನೂ ಪಟ್ಟಣಿಗರಿಗೆ ಮನ್ನಾಪಡಿಸಿಬಿಟ್ಟರೆ ಎಂತಹ ಗಲಭೆಯೇಳುತ್ತಿತ್ತು ಎಂಬುದನ್ನು ಸಂಬಂಧಪಟ್ಟವರು ಊಹಿಸಿಕೊಂಡು, ಆ ಆಧಾರದಿಂದಲಾದರೂ ಹಳ್ಳಿಗರೀಗ ಎಂತಹ ಸಂಕಷ್ಟಕ್ಕೊಳಗಾಗಿದ್ದಾರೆ ಎಂಬುದನ್ನು ಗ್ರಹಿಸಬೇಕು. ಪಟ್ಟಣಿಗರು ಉಣ್ಣಲೇಬೇಕಾದ್ದರಿಂದ ಹಳ್ಳಿಗರು ಊಟದ ಅಭ್ಯಾಸ ಬಿಡಬೇಕೆಂದು ಇದರ ಅರ್ಥವೆ? ಈ ಅನ್ಯಾಯವನ್ನು ಸರಕಾರಕ್ಕೆ ಮನಗಾಣಿಸುವ ಉಪಾಯಗಳನ್ನು ಪಟ್ಟಣಿಗರಂತೆ ಹಳ್ಳಿಗರರಿತಿಲ್ಲ. ಆದರೆ ಸಂಬಂಧಪಟ್ಟವರು ಪಾಪ ಭೀತಿಯಿಂದಲಾದರೂ ಹೀಗೆ ಮಾಡಬಾರದು.

ಹಳ್ಳಿಗರಿಗೆ ಅನ್ನವೊಂದೇ ಆಹಾರ.

ಪಟ್ಟಣಿಗರಂತೆಯೇ ಹಳ್ಳಿಗರಿಗೂ ನಿರ್ಧರಿಸಿದ ತಲೆಗೊಂದೂವರೆ ಪಾವಿನ ದೈನಿಕ ಪಡಿಯನ್ನು ಅಧಿಕಾರಿಗಳು ಅಪಹರಿಸಿಕೊಂಡು ಬರುತ್ತಿರುವ ಈ ಅತಿದೊಡ್ಡ ಅನ್ಯಾಯ ಹಾಗಿರಲಿ; ಪಟ್ಟಣದ ಸುಖ ಜೀವಿಗಳ ಮತ್ತು ಹಳ್ಳಿಯ ಶ್ರಮಜೀವಿಗಳ ಹೊಟ್ಟೆಗಳು ಏಕ ಪ್ರಕಾರವಿವೆಯೆ? ಪಟ್ಟಣಿಗರಿಗೆ ಅನ್ನವು ಆಹಾರದ ಒಂದು ಭಾಗ. ಆದರೆ ಹಳ್ಳಿಗರಿಗೆ ಅದೇ ಸರ್ವಸ್ವ. ಊಟ ಬಿಟ್ಟರೂ ಚಹಾ ಕಾಫಿ ಬಿಡಲಾಗದವರು ಪಟ್ಟಣಿಗರು; ಊಟ ಬಿಟ್ಟರೆ ಪ್ರಾಣವನ್ನೇ ಬಿಡಬೇಕಾದವರು ಹಳ್ಳಿಗರು. ಹಳ್ಳಿಗರಿಗೆ ಮೂರು ಹೊತ್ತಿನ ಊಟವೇ ಗತಿಯಾದರೆ ಪಟ್ಟಣಿಗರಲ್ಲಿ ಮುಂಜಾನೆಯ ಗಂಜಿಯೂಟದ ಅಭ್ಯಾಸವಿರುವವರು ಅಪರೂಪವೆನ್ನಬಹುದು. ಮಿಕ್ಕ ಎರಡು ಹೊತ್ತಿನ ಊಟಗಳಾದರೂ ಪಟ್ಟಣಿಗರಿಗೆ ಸರ್ವ ಸಾಮಾನ್ಯ ಸರ್ತಿಗರೆಪಾವಿನಷ್ಟು ಸಾಕೆನ್ನಬಹುದು. ಆದರೆ ಕೂಳೇ ಗತಿಯಾಗಿರುವ ಹಳ್ಳಿಗರಿಗೆ ಸರ್ವ ಸಾಧಾರಣ ಒಂದು ಊಟಕ್ಕರ್ಧ ಸೇರಿನಂತೆ ಲೆಕ್ಕ ಹಿಡಿಯಲೇ ಬೇಕು. ಆದರೆ ಈ ಭಿನ್ನವರ್ಗಗಳಿಗೆ ಅಧಿಕಾರಿಗಳು ಅಕ್ಕಿ ಕೊಡುತ್ತಿರುವದು ಒಂದೇ ಅಳತೆಯಲ್ಲಿ. ಇದರ ಪರಿಣಾಮವಾಗಿ ಪಟ್ಟಣಿಗರ ಸಣ್ಣ ಹೊಟ್ಟೆ ಪೂರ್ತಿ ತುಂಬುತ್ತಿದೆ; ಹಳ್ಳಿಗರ ದೊಡ್ಡ ಹೊಟ್ಟೆಯು ಮುಕ್ಕಾಲಂಶ ಖಾಲಿ ಬೀಳುತ್ತಿದೆ. ಎಳ್ಳಷ್ಟು ದೂರ ದೃಷ್ಟಿಯುಳ್ಳವರು ಇಂತಹ ತಪ್ಪನ್ನು ಮಾಡಲಾರರು. ಎಲ್ಲರ ಆಹಾರವಾದ ಧಾನ್ಯೋತ್ಪತ್ತಿಯಾಗಬೇಕು ಬೇಸಾಯಗಾರನ ದುಡಿತದಿಂದ; ಎಂದಿನಂತೆ ಅರೆಹೊಟ್ಟೆಯಾದರೂ ತುಂಬದೆ ಅವ ದುಡಿಯಲಾರ; ಆದ್ದರಿಂದ ಇಡೀ ಜಿಲ್ಲೆಯ ಜೀವಾಳವಾದ ಬೇಸಾಯ ವೃತ್ತಿಗೇನೇ ಬೀಳುತ್ತಿರುವ ಧಕ್ಕೆಯೆಂಬುದನ್ನು ಸಂಬಂಧಪಟ್ಟವರು ಮರೆಯಬಾರದು. ಜಿಲ್ಲೆಯ ದಾಸ್ತಾನು ಸಾಕಾಗುವಂತಿಲ್ಲವಾದ್ದರಿಂದ ಹೊರಗಿನಿಂದ ಆಮದು ಪಡಿಸಿಕೊಳ್ಳುವ ಆವಶ್ಯಕತೆಯೆಂತೂ ಇದೆ. ಬೇಸಾಯಗಾರರ ಊಟದ ಅಕ್ಕಿಯನ್ನು ಅವರಲ್ಲೇ ಬಿಡುವುದು ಮತ್ತು ಕಡಿಮೆಯಿದ್ದವರಿಗದನ್ನು ಒದಗಿಸಿಕೊಡುವದು ತಮ್ಮ ಪ್ರಥಮ ಕರ್ತವ್ಯವೆಂದೂ, ಪಟ್ಟಣಿಗರ ಆವಶ್ಯಕತೆಯು ಅನಂತರದ್ದೆಂದೂ ಅಧಿಕಾರಿಗಳು ಗಣಿಸಿ, ಇವೆರಡನ್ನೂ ಪೂರೈಸಲು ಕಡಿಮೆಯಾಗುವ ಅಂಶವನ್ನು ಆಮದು ಪಡಿಸಿಕೊಂಡ ಅಕ್ಕಿಯಿಂದ ತುಂಬಿಸಿಕೊಳ್ಳುವದು ನ್ಯಾಯವಲ್ಲವೆ? ರೈತರನ್ನಿಂದಿನಂತೆ ಸಾವಧಾನವಾಗಿ ಸಾಯಬಿಡುತ್ತಿರುವ ಮಹದನ್ಯಾಯವನ್ನು ಕೂಡಲೇ ನಿವಾರಿಸಲಾರರೆ?

ಕೆಂಪು ಸೇನೆಯು ಜರ್ಮನಿಗೂ ನುಗ್ಗುವದೆ?

ವಿಜಯೀ ರಶ್ಯ!

ರಶ್ಯವು ತನ್ನ ಪ್ರತಿಯೊಂದಿಂಚು ನೆಲವನ್ನೂ ನಾಜಿಗಳಿಂದ ಕಸಗೊಂಡು ಈಗ ಪೋಲೆಂಡ್ ಮತ್ತು ಬಾಲ್ಟಿಕ್ ರಾಷ್ಟ್ರಗಳೊಳಗೆ ತೀವ್ರ ಗತಿಯಿಂದ ನುಗ್ಗಿ ಹೋಗುತ್ತಿದೆ. ಮುಖ್ಯ ಗುರಿಯಾಗಿ ಪೋಲೆಂಡಿನ ರಾಜಧಾನಿ ವಾರ್ಸಾವನ್ನು ಆಹುತಿಗೊಳ್ಳಲು ಮೂರು ಮುಖದಿಂದ ಪ್ರಬಲ ಧಾಳಿ ನಡೆಸುತ್ತಿದೆ. ವಾರ್ಸಾದ ಹೊರವಳಯದ ರಕ್ಷಣಾ ಲೈನನ್ನು ಕೆಂಪು ಸೇನೆ ಇಷ್ಟರಲ್ಲೇ ನುಚ್ಚು ನುರಿ ಮಾಡಿದೆ. ವಾರ್ಸಾದ ಆಗ್ನೇಯ ದಿಕ್ಕಿನಲ್ಲಿ ಜರ್ಮನರು ಪ್ರಬಲ ಟೇಂಕು ದಳಗಳೊಡನೆ ಅಭೇದ್ಯ ಪ್ರತಿಭಟನೆ ಕೊಡುತ್ತಿದ್ದಾರಾದರೂ ಆ ನಗರವನ್ನುಳಿಸಿಕೊಳ್ಳುವದು ಅವರಿಂದ ಅಸಾಧ್ಯವೇ ಸರಿ. ಯುದ್ಧರಂಗದ ಉತ್ತರಗಡೆಯಲ್ಲಿ ಲಿಥುವೇನಿಯದೊಳಗೆ ಬಹು ದೂರದವರೆಗೂ ಕೆಂಪು ಸೇನೆ ನುಗ್ಗಿದೆ. ಒಂದು ಸೇನಾ ದಳವು ಲೇಟ್ವಿಯಾದ ಗಡಿದಾಟಿ ಪ್ರಾಮುಖ್ಯ ಕೇಂದ್ರ ರಿಗಾವನ್ನು ಕಸಗೊಳ್ಳಲು ಧಾವಿಸುದೆ. ಇಡೀ ಯುದ್ಧ ಮುಖದ ಎಲ್ಲಾ ಸಂದುಕಟ್ಟಿನ ನೆಲೆಗಳೂ ಇಷ್ಟರಲ್ಲೇ ಕೆಂಪು ಸೇನೆಯ ಹಸ್ತಗತವಾಗಿವೆ.

ಪೋಲೆಂಡ್ ಸಮಸ್ಯೆ

ಲಂಡನಿನಲ್ಲಿರುವ ಪೋಲೆಂಡ್ ಸರಕಾರವು ಪೋಲೆಂಡ್ ಗಡಿ ನಿರ್ಣಯದ ಕುರಿತು ಸ್ಟಾಲಿನರ ಸೂಚನೆಗಳಿಗೊಪ್ಪದುದರಿಂದ ಸ್ಟಾಲಿನರು ಮೋಸ್ಕೋದಲ್ಲಿಯೇ ಪ್ರತ್ಯೇಕ 'ಸ್ವತಂತ್ರ ಪೋಲೆಂಡ್ ಸರಕಾರ'ವೊಂದನ್ನು ಸ್ಥಾಪಿಸಿಕೊಂಡು ಲಂಡನಿನ ಗೊಂಬೆ ಸರಕಾರವನ್ನು ಅಲ್ಲಗಳೆದಿದ್ದಾರೆ. ಕಳೆದ ಮಹಾ ಯುದ್ಧಾನಂತರವೂ ರಶ್ಯದ ಸ್ಥಳವೇ ಆಗಿದ್ದು ಅನಿವಾರ್ಯವಾಗಿ ಪೋಲೆಂಡಿಗೆ ಬಿಟ್ಟು ಕೊಡಬೇಕಾಗಿ ಬಂದಿದ್ದ ಭಾಗವನ್ನು ರಶ್ಯಕ್ಕೆ ಸೇರಿಸಿ ಕೊಡುವ ಕರ್ಝನ್ ಲೈನೇ ರಶ್ಯಾ ಪೋಲೆಂಡ್ ಗಡಿಯಾಗಿರತಕ್ಕುದ್ದೆಂದು ರಶ್ಯನರ ವಾದ. ಇದಕ್ಕೆ ಇಂಗ್ಲಾಂಡು ಅಮೇರಿಕಗಳ ಸಮ್ಮತಿಯಿದ್ದರೂ ಲಂಡನಿನ ಪೋಲೆಂಡ್ ಸರಕಾರವು ಒಪ್ಪಿರಲಿಲ್ಲ. ಈಗ ಅದನ್ನು ಯುದ್ಧಾವಧಿಯ ವರೆಗೊಪ್ಪಿಕೊಂಡು, ಶಾಶ್ವತ ಗಡಿಯನ್ನು ಯುದ್ಧಾನಂತರ ನಿರ್ಧರಿಸ ಬಹುದೆಂಬ ಸಮ್ಮತಿಯೊಡನೆ ಪೋಲೆಂಡ್ ಪ್ರಧಾನಿಗಳು ಟೆಹರಾನಿಗೆ ಹೋಗಿ ಸ್ಟಾಲಿನರ ಆಮಂತ್ರಣ ಕಾಯುತಿದ್ದಾರೆ. ಪೋಲೆಂಡಿನಲ್ಲಿ ಯುದ್ಧಕಾರ್ಯದ ಹೊರತು ಯಾವ ಸ್ಥಳಾಕ್ರಮಣದ ಆಸೆಯೂ ತನಗಿಲ್ಲವೆಂದೂ ರಶ್ಯದೊಡನೆ ಸುಸಂಬಂಧವಿಟ್ಟುಕೊಳ್ಳುವ ತಮ್ಮಿಚ್ಛೆಯ ಸರಕಾರವನ್ನು ಪೋಲಿಶ್ ಜನರೇ ಆರಿಸಿಕೊಳ್ಳಬಹುದೆಂದೂ ರಶ್ಯವು ಆಶ್ವಾಸನೆ ಕೊಟ್ಟಿದೆ. ಮೋಸ್ಕೋವಿನ ಸ್ವತಂತ್ರ ಪೋಲಿಷ್ ಮಂಡಳಿಯು ರಶ್ಯದೊಡನೆ ಒಪ್ಪಂದ ಮಾಡಿಕೊಂಡು ತನ್ನ ಪೂರ್ಣ ಬೆಂಬಲವಿತ್ತಿದೆ.

ಟರ್ಕಿ ಜರ್ಮನ್ ವಿರುದ್ಧ ಯುದ್ಧಕ್ಕಿಳಿಯುವದು!

ಸ್ಟಾಲಿನರ ಧೋರಣೆಯೇನು?

ವಾರ್ಸಾ, ಬಾಲ್ಟಿಕ್ ರಾಷ್ಟ್ರಗಳು, ಮತ್ತು ಪೂರ್ವ ಪ್ರಶ್ಯವನ್ನು ಕ್ರಮಿಸಿಕೊಂಡು ಕೆಂಪುಸೇನೆ ಯುದ್ಧ ನಿಲ್ಲಿಸುವದೇ, ಜರ್ಮನಿಯೊಳಗಡೆ ನುಗ್ಗುವದೇ ಎಂದೀಗ ಆತುರದ ಪ್ರಶ್ನೆ. ಜರ್ಮನಿಗೆ ನಿಶ್ಶರ್ತ ಸೋಲನ್ನೊಡ್ಡಿ, ಕೊನೆಗದನ್ನು ಮೂರು ತುಂಡುಗಳಾಗಿ ಹಂಚಿಹಾಕಿ, ಅದರ ಅಪಾಯಕಾರೀ ರಾಷ್ಟ್ರೀಯತೆಯನ್ನು ಪೂರ್ತಿ ನಾಶಮಾಡುವದೇ ಆಂಗ್ಲೋ-ಅಮೇರಿಕಾನರ ಗುರಿ. ಈ ಕುರಿತು ರಶ್ಯ ಮತ್ತು ಮಿತ್ರರಾಷ್ಟ್ರಗಳೊಳಗೊಪ್ಪಂದವಾಗಿದೆಯೆಂಬ ವಾರ್ತೆಯಿದೆಯಾದರೂ ರಶ್ಯವು ಅಂತಹ ಪ್ರತೀಕಾರವನ್ನು ಇಚ್ಛಿಸುವದಿಲ್ಲ. ನಾಜೀ ರಾಜ್ಯಭಾರ ನಿರ್ನಾಮವಾಗಿ ಜರ್ಮನಿಯಲ್ಲಿ ಕಮ್ಯೂನಿಸ್ಟ್ ಸರಕಾರ ಸ್ಥಾಪನೆಗೊಂಡರೆ ಸ್ಟಾಲಿನರು ತೃಪ್ತಿಹೊಂದಬಹುದು ತಾವು ಅಷ್ಟರಲ್ಲೇ ತೃಪ್ತಿಗೊಳ್ಳಲಾರೆವೆಂದು ಚರ್ಚಿಲ್ಲರು ಸ್ಪಷ್ಟಪಡಿಸಿದ್ದಾರೆ. ಆದರೆ ಕೆಂಪುಸೇನೆ ಈಗ ಜರ್ಮನಿಗೆ ಸಮೀಪವಾಗಿರುವುದರಿಂದ ಸ್ಟಾಲಿನರ ಬಯಕೆಯೇ ಮುಂದಾಗಿ ಫಲಿಸಬಹುದು.

ಆ ಮೇಲೆ? ಜರ್ಮನಿಯು ಸ್ಟಾಲಿನ್ ಸಮ್ಮತ ಕಮ್ಯೂನಿಸ್ಟ್ ಸರಕಾರಕ್ಕೂ ಇಂಗ್ಲಾಂಡು ಅಮೇರಿಕಗಳಿಗೂ ಘರ್ಷಣೆಯೆ? ರಶ್ಯಾ-ಇಂಗ್ಲಾಂಡಮೇರಿಕಾ ಹೋರಾಟವೆ? ಪೋಲೆಂಡ್ ಯುದ್ಧ ಮುಗಿಸಿ ರಶ್ಯವು ಸುಮ್ಮಗಾಗುವ ಸಂಭವವಿಲ್ಲ. ಹಾಗಾದರೆ ಇಂಗ್ಲಾಂಡು ಅಮೇರಿಕಗಳನ್ನು ಇನ್ನಾದರೂ ಹಿಟ್ಲರ್ ಪ್ರಬಲವಾಗಿ ಇದಿರಿಸಬಹುದು. ಅಲ್ಲಿ ವಿಜಯಗೊಂಡರೆ ಆ ಮೇಲೆ ಪುನಃ ರಶ್ಯದ ಮೇಲೆ ಆತ ಬೀಳಬಹುದು. ಇಂದು ಅಮೋಘ ವಿಜಯ ಪಡೆದಿರುವ ಅಪಾರಶಕ್ತಿಯ ಸ್ಟಾಲಿನರು ಇವೆಲ್ಲಾ ವಿದ್ಯಮಾನಗಳನ್ನು ತೂಗಿ ನೋಡುತಿದ್ದಾರೆ. ಆದ್ದರಿಂದ ಅವರು ಹಿಟ್ಲರನನ್ನು ಮುಗಿಸುವವರೆಗೂ ಮುಂದೊತ್ತುವದು ಖಂಡಿತವೆಂದೂ, ಅನಂತರ ಈಗಿನ ಮಿತ್ರಪಾಳಯವು ಒಡೆದು ಈ ಯುದ್ಧಕ್ಕೆ ಹೊಸಅಧ್ಯಾಯ ಸೇರಬಹುದೆಂದೂ ಈಗಿನ ಸ್ಥಿತಿಗತಿಗಳಿಂದ ನಾವು ಊಹಿಸಬಹುದು.

ಟರ್ಕಿ ಜರ್ಮನಿಯೊಡನೆ ಯುದ್ಧಕ್ಕಿಳಿಯುವದು'

ಟರ್ಕಿಯು ಜರ್ಮನಿಯ ಸಂಬಂಧ ಕಡಿದುಕೊಂಡು ಮಿತ್ರರಾಷ್ಟ್ರಗಳಿಗೆ ವಿಮಾನ ನಿಲ್ದಾಣಗಳನ್ನು ಕೊಡಲು ತಯಾರಿರುವದೆಂದೂ ಅದಕ್ಕಾಗಿ ಟರ್ಕಿಯಲ್ಲೆಲ್ಲಾ ಸಿದ್ಧತೆ ನಡೆಯುತ್ತಿರುವದೆಂದೂ ತಿಳಿದು ಬರುತ್ತದೆ. ಈ ವಾರದಲ್ಲೇ ಟರ್ಕಿಯ ಡಿಪ್ಯುಟಿಗಳ ಗುಪ್ತ ಸಭೆಯೂ ಪಾರ್ಲಿಮೆಂಟ್ ಅಧಿವೇಶನವೂ ಕೂಡಲಿದೆ. ಟರ್ಕಿಯಲ್ಲಿ ವಿಮಾನ ಬಲ, ಆಧುನಿಕೋಪಕರಣ, ಧಾಳಿ ನಿರೋಧಕ ಸಲಕರಣೆಗಳು ಸಾಕಷ್ಟಿಲ್ಲದಿದ್ದದೇ ಈ ತನಕ ಅದು ತಾಟಸ್ಥ್ಯ ವಹಿಸಲು ಕಾರಣವಂತೆ. ಟರ್ಕಿಯಲ್ಲಿರುವ ಜರ್ಮನರಿಗೆಲ್ಲಾ ಪಲಾಯನ ವ್ಯವಸ್ಥೆಯಾಗುತ್ತಿದೆ. ಜರ್ಮನ್ ಪತ್ರಿಕೆಗಳು ಟರ್ಕಿಗೆ ತೀಕ್ಷ್ಣ ಎಚ್ಚರಿಕೆಯನ್ನು ಕೊಡ ಹತ್ತಿವೆ. ಆಗೋಸ್ತಿನೊಳಗೆ ಟರ್ಕಿ-ಜರ್ಮನಿ ಸಂಬಂಧ ಕಡಿದುಹೋಗಲಿದೆ; ನಾಜಿಗಳು ಪ್ರತೀಕಾರ ಮಾಡುವ ಸಂಭವವೂ ಇದೆ.

ರೋಮೆಲ್ ಮಡಿದನೆ?

ನೋರ್ಮಂಡಿಯ ಫಾಲಾಯಿಸೆ ಬಳಿಯಲ್ಲಾದ ಬೋಂಬು ಧಾಳಿಯಿಂದ ಜಖಂಗೊಂಡ ರೋಮೆಲ್ ಆಸ್ಪತ್ರೆಯಲ್ಲಿ ಮಡಿದನೆಂದು ಅಲ್ಲಿದ್ದ ಫ್ರೆಂಚ್ ರೆಡ್ ಕ್ರೋಸ್ ಸದಸ್ಯೆಯೊಬ್ಬಳು ಜರ್ಮನ್ ಕೈದಿಗಳು ಹೇಳಿರುವ ವಾರ್ತೆಯನ್ನವಳು ಹೊರಗೆಡಹಿದ್ದಾಳೆ. ಇಟೆಲಿಯಲ್ಲಿ ಜೋರ್ಜ್ ಚಕ್ರವರ್ತಿಗಳ ಸಮೀಪದಲ್ಲಿ ಜರ್ಮನ್ 'ಮೈನ್'ಗಳು ಸಿಡಿದುವೆಂದು ವಾರ್ತೆ.

ಉಡುಪಿ

ಶ್ರೀ ಕೊಚ್ಚಿಕಾರ್ ಪದ್ಮನಾಭಪೈಗಳ ಷಷ್ಠ್ಯಬ್ದ ಪೂರ್ತಿ ಸಪ್ತಾಹ ಸಮಾರಂಭ:—ಬೊಂಬೆ ಲೈಫ್ ಇನ್ಶೂರೆನ್ಸ್ ಕಂಪೆನಿಯನ್ನು ದಕ್ಷಿಣ ಭಾರತದಲ್ಲಿ ಸತತ ಪ್ರಚಾರಗೊಳಿಸಿ ಜನತಾ ಜನಾರ್ದನ ಸೇವೆಯನ್ನು ಸಲ್ಲಿಸಿ, ಸಲ್ಲಿಸುತ್ತಿರುವ ಶ್ರೀ ಕೊಚ್ಚಿಕಾರ್ ಪದ್ಮನಾಭಪೈಗಳವರು ತಮ್ಮ 60ನೇ ವಯಸ್ಸನ್ನು ಕಳೆದು ದಾಟ 61ನೆ ವಯಸ್ಸಿನಲ್ಲಿ ಪಾದಾರ್ಪಣ ಮಾಡುವ ಶುಭಸಂದರ್ಭವಾಗಿ ಇದೇ ತಾ. 1 ರಲ್ಲು ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡಿನ ಡೈರೆಕ್ಟರ ಮಂಡಳಿಯವರು ಟಿಯುರ್ ಮೇನರಾದ ಶ್ರೀ ಪದ್ಮನಾಭ ಪೈಗಳವರಿಗೆ ಉಪಹಾರ ಕೂಟವನ್ನೇರ್ಪಡಿಸಿ ಗೌರವಿಸಿದರು. ಈ ಸಮಾರಂಭಕ್ಕೆ ನಗರದ ಗೃಹಸ್ಥ ಗೃಹಿಣಿಯರನೇಕರ ಆಮಂತ್ರಿತರಾಗಿದ್ದರು. ಸತ್ಕಾರಕೂಟ ಪೂರ್ವದಲ್ಲಿ ಶ್ರೀ ರಾಮರಾಯರ ಪ್ರಾರ್ಥನಾ ಸಂಗೀತವಾದ ಬಳಿಕ ಶ್ರೀ ಪದ್ಮನಾಭಪೈಗಳವರಿಗೆ ಹಾರ ತುರಾಯಿಗಳನ್ನರ್ಪಿಸಲಾಯಿತು. ತದನಂತರ ಶ್ರೀ ಪೈಗಳವರಿಗೆ ದೀರ್ಘಾಯುರಾರೋಗ್ಯ ಸಂಪದಭಿವೃದ್ಧಿಯನ್ನು ಕೋರಿ ಬಂದ ಧರ್ಮಾಧಿಕಾರಿಗಳೇ ಮೊದಲಾದ ಹಲವರ ಶುಭಸಂದೇಶಗಳನ್ನು ಓದಲಾಯಿತು. ಶ್ರೀ ಪೈಗಳ ಅತಿಥಿಯ ಜನಪ್ರಿಯತೆ, ಕಾರ್ಯಸಾಧನ, ಕರ್ತೃತ್ವ ಶಕ್ತಿ, ಬಡವರು ಬಲ್ಲಿದರು, ಸಿರಿವಂತರು ಗರೀಬರು ಸರ್ವರನ್ನು ಸಮಾನದೃಷ್ಟಿಯಿಂದ ಕಾಣುವ ಅವರ ಪೂರ್ವ ಔದಾರ್ಯವೇ ಮೊದಲಾದ ಹತ್ತು ಹಲವು ಸದ್ಗುಣಗಳ ಪ್ರಶಂಸನೀಯ ವಿಷಯಗಳನ್ನೆತ್ತಿ ಪಂಡಿತ ವೆಂಕಟ್ರಮಣಾಚಾರ್, ರಾ। ಬ। ಸೇಜಿ. ವಿ। ಡಿ। ನೊರೊನ್ಹಾ, ಶ್ರೀ ಉಪೇಂದ್ರ ಪಿ. ನಾರಾಯಣ ಪ್ರಭು, ಬಿ. ವ್ಯಾಮರಾಯ ಸೆಟ್ಟಿ, ಎ ಎಸ್ ಕಾರ್ಲೆಟ್, ಜಿ. ಸಿ. ರೇನಾ, ಡಾ। ಟಿ ಮಾಧವ ಪೈ ಮೊದಲಾದವರ ಭಾಷಣಗಳಾದುವು. ಅಧ್ಯಕ್ಷ ಸ್ಥಾನವನ್ನು ವಹಿಸಿದ ಡಾ। ಸುಂದರರಾಮ ಪೈಗಳವರು ಪೂರ್ವ ಭಾಷಣಗಾರರ ಅಭಿಪ್ರಾಯವನ್ನು ಪುಷ್ಟೀಕರಿಸಿ ಕೊಚ್ಚಿಕಾರ್ ಬ್ರದರ್ಸ್‌ರಿಗೆ ಸರ್ವಸನ್ಮಂಗಲವನ್ನು ಬಯಸಿದರು. ಕೊಚ್ಚಿಕಾರ್ ಬಾಲಕೃಷ್ಣ ಪೈಗಳು ಧನ್ಯವಾದಗಳನ್ನರ್ಪಿಸಿದರು. ಮರುದಿನ ಬೆಳಿಗ್ಗೆ 9 ಗಂಟೆಗೆ ಕೊಚ್ಚಿಕಾರ್ ಆಫೀಸು ಸಿಬಂದಿಯವರು ಡಿ। ಮುನ್ಸಿಫ್ ವಿ ನೊರೊನ್ಹಾ ಅಧ್ಯಕ್ಷತೆಯಲ್ಲಿ ಶ್ರೀ ಪದ್ಮನಾಭ ಪೈಗಳವರಿಗೆ ಮಾನಪತ್ರ ಹಾಗೂ ಟೀಪಾರ್ಟಿಯನ್ನಿತ್ತು ಗೌರವಿಸಿದರು. ಈ ಸಂದರ್ಭದಲ್ಲಿ ಡಾ। ಟಿ. ಮಾಧವ ಪೈ, ಶ್ರೀಗಳಾದ ಯು. ವೆಂಕಟ್ರಾವ್, ಎಂ. ಆರ್. ಕಾಮತ್, ಸ್ವಾಮಿ. ಹಂಸ ಮೊದಲಾದವರು ಶ್ರೀ. ಪೈಗಳ ಗುಣಕಥನ ಮಾಡಿದರು. ಸಿಬಂದಿಯ ಪರವಾಗಿ ಶ್ರೀ. ಎಚ್. ನಾರಾಯಣ ನಾಯ್ಕರು ಭಂಗಾರದ ಹಾರವನ್ನು ಶ್ರೀಯುತ ಪೈಗಳಿಗರ್ಪಿಸಿದರು.

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

ಕ್ರಮವ್ಯಾಜ್ಯನಂಬ್ರ 170/1944

Between—

ವೈಂದಪ್ಪಳ್ಳ . .. . ವಾದಿ

ಮತ್ತು

ಮುತ್ತಪ್ಪಶೆಟ್ಟಿ .. ..ಪ್ರತಿವಾದಿ

ಈ ಮೇಲಿನ ವಾದಿಯು ಕೃಷೇತ್ರಿನಲ್ಲಿ ಕೇಳಿದ ಗೇಣಿ ಬಾಕಿ ವಗೈರೆ ನಿವೃತ್ತಿಗಳ ಬಗ್ಗೆ ಸದ್ರಿ ಮೇಲಿನ ಪ್ರತಿವಾದಿಯ ಮೇಲೆ ಕ್ರಮವ್ಯಾಜ್ಯನಂಬ್ರ 170/1944ನೇ ವ್ಯಾಜ್ಯ ದಾಖಲು ಮಾಡಿದ್ದು ಸದ್ರಿ ವ್ಯವಹರಣೆಯು ಇದೇ ಬರುವ ತಾ 9-9-1944ಕ್ಕೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಆದದರಿಂದ ಸದ್ರಿ ವ್ಯವಹರಣೆಗೆ ನಿಮಗೇನಾದರೂ ಆಕ್ಷೇಪಣೆ ಇದ್ದರೆ ಅದನ್ನು ನೀವು ಮುದ್ದಾಗಿಯಾಗಲೀ ಯಾ ವಕೀಲ್ ಮುಖಾಂತ್ರವಾಗಲೀ ಕೋರ್ಟು ಮುಂದೆ ಸದ್ರಿ ತಾರೀಕು 9-9-1944ಕ್ಕೆ ಹಾಜ್ರು ಪಡಿಸತಕ್ಕದ್ದು. ಇಲ್ಲವಾದರೆ ಸದ್ರಿ ವ್ಯವಹರಣೆಯು ನಿಮ್ಮ ಗೈರುಹಾಜ್ರಿನಲ್ಲಿ ತೀರ್ಮಾನಿಸಲ್ಪಡುವುದು. ತಿಳಿದಿರಲಿ,

(By order)

B. L. N. Rai.
Advocate for Plaintiff.

ಮಂಗ್ಳೂರು
ತಾ 29-7-44

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು **ರಮಣಿ ವಿಲಾಸಿನಿ** ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸ್.
ಪುತ್ತೂರು ಏಜಂಟರು: – **ಪೈ ಫಾರ್ಮಸಿ**

ತಾ 3—8—44 ರಿಂದ

ಬೆಂಜಮಿನ್, ಸುನೇತ್ರಾ, ನೂರ್‌ಜಹಾನ್ ನಟಿಸಿರುವ

ಪ್ರತಿ ವಿಧದಲ್ಲೂ ಅಚ್ಚುಕಟ್ಟಾಗಿ ಅದ್ಭುತ ವಿಚಾರಗಳ ಸಾಹಸ, ನರ್ತನ, ಗಾಯನಪೂರ್ಣವಾದ

ಸ್ಟೇಂಡಾರ್ಡ್ ಚಿತ್ರ

ಪರವಾನಾ ಅಥವಾ ಪತಂಗ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡ್ಪಿ.

ಬರುವ ಚಿತ್ರ

ರೈತುಬಿಡ್ಡ - ಸೂರ್ಯ ಕುಮಾರಿ

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

O S, No 169/1944.

Between:—

ಅಪ್ಪಕ್ಕ . . . . ..ವಾದಿಳು,

ಮತ್ತು

ಉಮ್ಮಾತುಮ್ಮ ಕೊಡು .. ..ಪ್ರತಿವಾದಿಯು,

ಮೇಲ್ಕಾಣ್ಸಿದ ವಾದಿಳು ಕೃಷೇತ್ರಿನಲ್ಲಿ ಕೇಳಿದ ಗೇಣಿ ಬಾಕಿ ವಗೈರೆ ನಿವೃತ್ತಿಗಳ ಬಗ್ಗೆ ಸದ್ರಿ ಮೇಲಿನ ಪ್ರತಿವಾದಿಯಾಗಳ ಮೇಲೆ ಕ್ರಮ ವ್ಯಾಜ್ಯ ನಂಬ್ರ 169/1944ನೇ ವ್ಯಾಜ್ಯವನ್ನು ದಾಖಲು ಮಾಡಿರುತ್ತಾಳೆ. ಸದ್ರಿ ವ್ಯವಹರಣೆಯನ್ನು ಬರುವ ತಾರೀಕು 9 8 1944ಕ್ಕೆ ನಿಮಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ವ್ಯವಹರಣೆಗೆ ನಿಮಗೇನಾದರೂ ಆಕ್ಷೇಪಣೆ ಇರುವಲ್ಲಿ ಅದನ್ನು ನೀವು ಮುದ್ದಾಗಿಯಾಗಲೀ ಯಾ ವಕೀಲ್ ಮುಖಾಂತ್ರವಾಗಲೀ ಈ ಕೋರ್ಟು ಮುಂದೆ ಸದ್ರಿ ತಾರೀಕು 9 8-1944ಕ್ಕೆ ಹಾಜ್ರುಪಡಿಸತಕ್ಕದ್ದು. ಇಲ್ಲವಾದರೆ ಸದ್ರಿ ವ್ಯವಹರಣೆಯು ನಿಮ್ಮ ಗೈರುಹಾಜ್ರಿನಲ್ಲಿ ತೀರ್ಮಾನಿಸಲ್ಪಡುವುದು. ತಿಳಿದಿರಲಿ

(By order)

B L. N Rai.
ಎಡ್ವಕೇಟ್ ಫೋರ್ ಪ್ಲೇಯಿಂಟಿಫ್

ಮಂಗ್ಳೂರು ತಾ 29 8 44.

ದಕ್ಷಿಣ ಕನ್ನಡ-

ಮಂಗಳೂರು

ಉದ್ಘಾಟನೆ— ತಾ. 24ರಂದು ಸಂಜೆ ಜಿಲ್ಲಾ ಕಲೆಕ್ಟರ್ ರಾವ್ ಸಾಹೇಬ್ ಪಿ. ರಾವ ದಾಸರು ಹೊಸತಾಗಿ ಕಟ್ಟಲ್ಪಟ್ಟ ವೆಬ್‌ಸ್ಟರ್ ಮಾರ್ಕೆಟಿನ ಉದ್ಘಾಟನೆಯನ್ನು ಮಾಡಿದರು. ನಗರ ಸಭಾ ಕಮಿಶನರಾದ ಶ್ರೀ ಕೆ. ರಾಮಸ್ವಾಮಿ ಮುದಲಿಯಾರರು ಕಲೆಕ್ಟರರನ್ನು ಸ್ವಾಗತಿಸಿದ ಮೇಲೆ ನಗರ ಸಭಾ ಸದಸ್ಯೆ ಶ್ರೀಮತಿ ಏಮಿ ಅರಾಞ್ಞೊ ಅವರು ಕಲೆಕ್ಟರರಿಗೆ ಹೂಮಾಲೆ ಹಾಕಿದರು. ಕಲೆಕ್ಟರರು ಭಾಷಣದಲ್ಲಿಯೇ ತ್ತಾ 'ಹೊಟೆಲುಗಳಲ್ಲಿ ಊಟದ ಬೆಲೆಯನ್ನು ಕಡಿಮೆ ಮಾಡಲು ನಿರ್ಧರಿಸಿದ್ದೇವೆ. ಮಾರ್ಕೆಟು ಪದಾರ್ಥಗಳ ಬೆಲೆಯೂ ಕಡಿಮೆಯಾಗುವ ಅಗತ್ಯವಿದೆ' ಎಂದರು. ಕಲೆಕ್ಟರರ ಇಂಗ್ಲಿಷ್ ಭಾಷಣವನ್ನು ಸಿ. ಸಿ. ಎಲ್. ಲೋಬೋ ಕನ್ನಡಿಗೆ ಭಾಷಾಂತರಿಸಿದರು.

ಚಿಲ್ಲರೆ ಶೇಖರಿಸಿದ ಹೆಂಗಸಿರಿಗೆ ಶಿಕ್ಷೆ—ಎಪ್ಪತ್ತೊಂಭತ್ತು ರೂಪಾಯಿಗಳ ಚಿಲ್ಲರೆಯನ್ನು ದಾಸ್ತಾನು ಮಾಡಿದ ಅಪರಾಧಕ್ಕೆ ವೇಲೆನ್ಸಿಯ ಗೋಳಿಯ ಶ್ರೀಮತಿ ಸರಿಯಮ್ಮ ಕಾರಂತ್ತ ಬಾಯಿಯನ್ನು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ ಶ್ರೀ ಪಿ. ವಿ. ಮಾಧವರಾಯರು ತಾ. ...ರಂದು ಮೂರು ತಿಂಗಳ ಕಠಿಣ ಶಿಕ್ಷೆ ಮತ್ತು ೩೦೦ರೂ ಜುಲ್ಮಾನ ತಪ್ಪಿದರೆ ಪುನಃ ಮೂರು ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಿರುವರು.

ಬೆಲ್ಲದ ಮೇಲೂ ನಿಯಂತ್ರಣ—ಬಂದರದಲ್ಲಿರುವ ಎಲ್ಲಾ ವ್ಯಾಪಾರಿಗಳಲ್ಲಿಗೆ ಅಧಿಕಾರಿಗಳು ಹೋಗಿ ದಾಸ್ತಾನು ಬೆಲ್ಲವನ್ನೆಲ್ಲಾ ದಾಖಲೆ ಮಾಡಿರುವರು. ಕಬ್ಬು ಬೆಳೆಸುವವರ ಸಹಕಾರಿ ಸಂಘದ ಬೆಲ್ಲವನ್ನೂ ಸ್ವಾಧೀನಪಡಿಸಿಕೊಂಡಿರುವರು. ಬೆಲ್ಲದ ಬೆಲೆಯನ್ನು ಅಧಿಕಾರಿಗಳು ನಿಯಂತ್ರಿಸುವ ಸಂಭವವಿದೆ.

ಒಂದು ತಿಂಗಳ ಜಾಮೀನಿನ—ಮೇಲೆ ಬಿಡುಗಡೆ ಹೊಂದಿದ ವೆಲ್ಲೂರಿನಲ್ಲಿ ಸ್ಥಾನಬದ್ಧ ಕೈದಿಯಾಗಿರುವ ಶ್ರೀ ಬಿ. ದಾಮೋದರ ಬಾಳಿಗರು ಮಂಗಳೂರಿಗೆ ಬಂದಿರುವರು.

ನಿಷೇಧಾಜ್ಞೆಗೆ ಜೀವದಾನ—ಮಂಗಳೂರು ಮತ್ತು ಉಡುಪಿ ಮ್ಯುನಿಸಿಪಾಲಿಟಿ ಗಡಿಯೊಳಗೆ ಮತ್ತು ಕಾಸರಗೋಡು ಇಡೀ ತಾಲೂಕಿನೊಳಗೆ ಸಭೆ ಮೆರವಣಿಗೆ ಇತ್ಯಾದಿಗಳನ್ನು ಜರಗಿಸಬಾರದೆಂಬ ಆಜ್ಞೆಯನ್ನು ಇದೇ ಜುಲೈ ತಾ. ...ರ ಅನಂತರ ಮತ್ತೆರಡು ತಿಂಗಳುಗಳ ವರೆಗೆ ಜಿಲ್ಲಾ ಕಲೆಕ್ಟರರು ಊರ್ಜಿತಗೊಳಿಸಿದ್ದಾರೆ.

ಸದ್ಯಮೇ ಬಿನರ್ಲಾಸಿಗೆ—ತೆರಳಲಿರುವ ಶ್ರೀಯುತ ಎಂ. ಯನ್. ಮಾಧವರಾವ್ ಮತ್ತು ಶ್ರೀಮತಿ ರಮಾಬಾಯಿ ಮಾಧವರಾವ್ ಅವರನ್ನು ಬೀಳ್ಕೊಡುವುದಕ್ಕಾಗಿ ಮಂಗಳೂರಿನ ಕಲ್ಚರಲ್ ಎಸೋಸಿಯೇಷನಿನವರು ತಾ. ...ರಂದು ಒಂದು ಟೀಪಾರ್ಟಿ ಸತ್ಕಾರವನ್ನೇರ್ಪಡಿಸಿದರು. ಶ್ರೀಯುತರು ಎಸ್. ಮುಕುಂದರಾವ್, ಜಿನರಾಜ ಹೆಗ್ಡೆ, ... ಆಳ್ವ ಮತ್ತು ಡಾ. ಬಸಕಾರ್ಟ ಇವರು ಆ ಸಂದರ್ಭದಲ್ಲಿ ಮಾತನಾಡಿ ದಂಪತಿಗಳಿಗೆ ವಿದಾಯ ಹೇಳಿದರು.

> **ಚಂದಾದಾರರಲ್ಲಿ**
>
> ನವಯುಗದ ಚಂದಾದಾರರು ತಮ್ಮ ವಿಳಾಸ ಬದಲಾಗಿದ್ದರೆ ಅದನ್ನು ದಯಮಾಡಿ ಸಕಾಲದಲ್ಲಿ ತಿಳಿಸುವಂತೆಯೂ ಚಂದಾ ಹಣ ಬಾಕಿ ಇದ್ದವರು ಅದನ್ನು ಕೂಡಲೇ ಕಳುಹಿಸುವಂತೆಯೂ ಅಪೇಕ್ಷಿಸಲಾಗುತ್ತದೆ.
>
> **ವಾಚಕರಲ್ಲಿ-**
>
> ಶ್ರೀ ಕೆ. ಜಗನ್ನಾಥ ಶೆಟ್ಟರು ಚಂದಾದಾರರನ್ನು ಸೇರಿಸಲು ಪೂನಾ, ಬೊಂಬಾಯಿ ಮೊದಲಾದ ಕಡೆಗಳಲ್ಲಿ ಸಂಚರಿಸುತ್ತಿದ್ದಾರೆ. ಅವರೊಡನೆ ಎಲ್ಲರೂ ಸಹಕರಿಸಿ, ಚಂದಾದಾರರಾಗಿ, ಚಂದಾದಾರರನ್ನೂ ಮಾಡಿಸಿ, ಪ್ರೋತ್ಸಾಹಿಸಬೇಕಾಗಿ ವಿನಂತಿ.
>
> ಮೆನೇಜರ್
> ನವಯುಗ.

ಶ್ರೀ ಮುಳಿಯ ತಿಮ್ಮಪ್ಪಯ್ಯನವರು—ಮಂಗಳೂರಿನ ಸೈಂಟ್ ಅಲೋಸಿಯಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ವಿದ್ವಾನ್ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಬೆಂಗಳೂರಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ "ಕವಿ ಮುದ್ದಣ್ಣ, ಕವಿರಾಜಮಾರ್ಗ" ವಿಷಯಗಳ ಕುರಿತು ಉಪನ್ಯಾಸ ಮಾಡಿದರು. ಕವಿ ಪಾರ್ಥಿವ ಸುಬ್ಬನ ಕೆಲವು ಯಕ್ಷಗಾನ ಹಾಡುಗಳನ್ನು ಹಾಡಿದರು. ರಾಜಸೇವಾ ಪ್ರಸಕ್ತ, ಮಾಸ್ತಿ ವೆಂಕಟೇಶ ಅಯ್ಯಂಗಾರರು ಉಪನ್ಯಾಸಕರನ್ನೂ ಸಭಿಕರನ್ನೂ ವಂದಿಸಿದರು.

ಉಡುಪಿ

ಸಿನೆಮಾ ಥಿಯೇಟರಿನ ಸಮೀಪದ ಬೀಡಾವ್ಯಾಪಾರಿ ಕುಂಜಿಕಟ್ಟಿಯು ತನ್ನ ಉಪಯೋಗಕ್ಕೆ ಬೇಕಾದುದಕ್ಕಿಂತ ಹೆಚ್ಚು ಚಿಲ್ಲರೆ ನಾಣ್ಯಗಳನ್ನು ಇಟ್ಟುಕೊಂಡ ತಪ್ಪಿಗೆ ಗುರಿಯಾಗಿ ಡಿಫೆನ್ಸ್ ಒಫ್ ಇಂಡಿಯಾ ಶಾಸನದನುಸಾರವಾಗಿ ಒಂದು ತಿಂಗಳ ಕಠಿಣ ಶಿಕ್ಷೆ ಮತ್ತು ರೂಪಾಯಿ ಹತ್ತು ದಂಡ, ತಪ್ಪಿದರೆ ಪುನಃ ಒಂದು ತಿಂಗಳ ಹೆಚ್ಚಿನ ಶಿಕ್ಷೆ ಅನುಭವಿಸಬೇಕೆಂದು ಸಬ್ ಕಲೆಕ್ಟರ್ ವಿಧಿಸಿರುವರು.

ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ವಾಡಿಕೆಯಂತೆ ಕಳೆದ ಮಂಗಳವಾರ ಆರಂಭಗೊಂಡ ಭಜನಾಸಪ್ತಾಹವು ತಾ. 1ರಂದು ಮಂಗಲೋತ್ಸವದೊಡನೆ ಕೊನೆಗೊಂಡಿತು.

ಇನ್ನಂಜೆ—ಇಲ್ಲಿಯ ಎಸ್. ವಿ. ಯಚ್. ಹೈಸ್ಕೂಲಿನಲ್ಲಿ ಇಂಗ್ಲಿಷ್, ಕನ್ನಡ ಹೊರತು ಇತರ ವಿಷಯಗಳನ್ನು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ (English-medium) ಕಲಿಸಬಹುದೆಂದು ಸ್ಕೂಲ್ಸ್ ಡೈರೆಕ್ಟರವರಿಂದ ಅನುಮತಿಯು ದೊರೆತಿರುವುದು.

ಕಾರ್ಕಳ—ಕಾರ್ಕಳದ ಮಿಯ್ಯಾರು ಜೋಡುಕಟ್ಟೆ ಪ್ರದೇಶದಲ್ಲಿ ಜಾನುವಾರು ರೋಗವು ಪುನಃ ಉಲ್ಬಣಾವಸ್ಥೆಗೆ ಬರುತ್ತಲಿದೆಯೆಂದು ತಿಳಿದು ಬಂದಿದೆ. ಪಶು ವೈದ್ಯ ಇಲಾಖೆಯ ಉದ್ಯೋಗಸ್ಥರು ರೋಗ ನಿವಾರಣೆಯ ಸಮಯೋಚಿತ ಉಪಾಯಗಳನ್ನು ಕೂಡಲೇ ಕೈಕೊಳ್ಳದಿದ್ದರೆ, ಈಗ ಶಾಂತವಾಗಿರುವ ಈ ರೋಗವು ಪುನಃ ಪೇಟೆಯಲ್ಲಿ ಹರಡಿಕೊಳ್ಳುವದರಲ್ಲಿ ಸಂದೇಹವಿಲ್ಲ. ಆದ್ದರಿಂದ ಇಲಾಖಾ ಉದ್ಯೋಗಸ್ಥರು ಶೀಘ್ರ ಈ ಕಡೆಗೆ ತಮ್ಮ ಲಕ್ಷ್ಯವನ್ನು ಕೊಡಬೇಕಾಗಿದೆ.

ಪುತ್ತೂರು—ಈ ಮೊದಲು ಮಳೆಯು ಸಾಕಷ್ಟು ಬಾರದ್ದರಿಂದಲೂ, ನಂತರ ಕೆಲಸಕ್ಕೆ ಬೇಕಾದ ಬೀಜಾವರಿಯೂ ನೇಜಿಯು ಸಿಕ್ಕಾಗದೆಯೂ, ಮಲೇರಿಯಾ ಜ್ವರಕ್ಕೆ ಬಲಿಬಿದ್ದು ಕೆಲಸ ಮಾಡಲು ಅಸಾಧ್ಯವಾಗಿಯೂ, ಕೆಲವು ಕಡೆ ಜಾನುವಾರು ರೋಗಕ್ಕೆ ಬಲಿಯಾಗಿ ಕೆಲಸಕ್ಕೆ ಜಾನುವಾರುಗಳು ಇಲ್ಲದೆಯೂ ಅಲ್ಲಲ್ಲಿ ಈ ವರ್ಷದ ಸಾಗುವಳಿ ಕೆಲಸವು ಬಾಕಿ ಉಳಿದಿದೆಯಾಗಿ ತಿಳಿದುಬರುತ್ತದೆ. ಕೆಲವು ಕಡೆ ಅಕ್ಕಿಯ ಮಬೀಜದ ಅಭಾವವು ಕೂಡ ಇದಕ್ಕೆ ಕಾರಣವಾಗುತ್ತದೆಯಾಗಿ ತಿಳಿದು ಬರುತ್ತದೆ.

ಶಂಕರನಾರಾಯಣ—ಇಲ್ಲಿಯ ಪೋಸ್ಟಾಫೀಸಿಗೆ ಬರುತ್ತಿರುವ ಬೆಳ್ವೆ ಮೊದಲಾದ ಕಡೆಗಳ ಕಾಗದ ಪತ್ರಗಳು ಸರಿಯಾಗಿ ಬಟವಾಡೆಯಾಗುತ್ತಿಲ್ಲವೆಂದೂ ಸಂಬಂಧಪಟ್ಟವರು ಪತ್ತೆ ನಡೆಸಬೇಕೆಂದೂ 'ನವಯುಗ' ಪತ್ರಿಕೆಯು ಸರಿಯಾಗಿ ಬಟವಾಡೆಯಾಗದ ಚಂದಾದಾರರೊಬ್ಬರು ಬರೆಯುತ್ತಾರೆ.

ಸ್ವೀಕಾರ—ವಿಮರ್ಶೆ.

○

ದಿ ನಾರ್ದರ್ನ್ ಇನ್ಶ್ಯೂರೆನ್ಸ್ ಕೊ, ಲಿಮಿಟೆಡ್—ಇದರ 1943ನೇ ಡಿಸೆಂಬರ್ 31ಕ್ಕೆ ಅಂತ್ಯವಾಗುವ ವರುಷದ ವರದಿ ಮತ್ತು ಲೆಕ್ಕ ಪತ್ರಗಳ ತಪಶೀಲುಗಳು ಪರಿಶೀಲನೆಗಾಗಿ ಬಂದಿವೆ. ನಾರ್ದರ್ನ್ ವಿಮಾ ಸಂಸ್ಥೆಯ ವಿಜಯೀ ದಶವರುಷಗಳು ಮುಗಿದ ಪ್ರಾಮುಖ್ಯಾವಧಿಯ ವರದಿಯಿದು.

ತನ್ನ ಮೊದಲ ದಶಮಾನವನ್ನು ಈ ತರುಣ ಹಾಗೂ ಅಭಿವೃದ್ಧಿದಾಯೀ ಸಂಸ್ಥೆಯು ವರುಷದಿಂದ ವರುಷಕ್ಕೆ ಪ್ರಗತಿ ಪಥದಲ್ಲಿ ಹೆಜ್ಜೆಯಿಡುತ್ತಾ ಕಳೆದಿದೆ ಎನ್ನಲು ನಮಗಾನಂದವಾಗುತ್ತಿದೆ. 1943ರ ಅಂಕೆ ಸಂಖ್ಯೆಗಳಂತೂ ಇದರ ಚರಿತ್ರೆಯ ಒಂದು ಹೊಸ ಧಾಖಲೆಗಳಾಗಿ ಆಕರ್ಷಿಸುತ್ತವೆ. ಶುಭ ಸಂದೇಶದಂತಹ ಇಂತಹ ಪ್ರಗತಿಪರ ವರದಿಯನ್ನು ತಮ್ಮ ಪಾಲುಗಾರರು ಮತ್ತು ಪೋಲಿಸಿದಾರರಿಗೊಪ್ಪಿಸಿದ ಸುದ್ಯಮೀ ಡೈರೆಕ್ಟರರು ಅಭಿವಂದನೀಯರು.

ವರದಿಯ ವರುಷದಲ್ಲಿ ಕಂಪೆನಿಯು ರೂ. 71, 85, 983 ಮೌಲ್ಯದ 3673 ಹೊಸ ಪ್ರೊಪೋಸಲುಗಳನ್ನು ಪಡೆದಿದ್ದಿತು. ಅ ಪೈಕಿ 3195 ಪ್ರೊಪೋಸಲುಗಳು ರೂ. 62, 50, 762ರ ಮೌಲ್ಯದ ಪೋಲಿಸಿಗಳಾಗಿ ಮಾರ್ಪಟ್ಟಿವೆ. ಇದು ಹಿಂದಿನ ವರುಷಕ್ಕಿಂತ 137%ರಷ್ಟು ಅಧಿಕವಿದೆ. ಅಸಾಮಾನ್ಯ ಪ್ರಗತಿ.

ಈ ವರುಷದ ಒಟ್ಟು ವಹಿವಾಟು ರೂ. 1,70, 00,000, ಅರ್ಥಾತ್ ಹಿಂದಿನ ವರುಷಕ್ಕಿಂತ 58% ರಷ್ಟು ಅಧಿಕ.

ಕಂಪೆನಿಯ ಉತ್ಪತ್ತಿಯು ಶ್ಲಾಘನೀಯ ಪ್ರಗತಿ ಪಡೆದಿದೆಯಾದರೂ ಖರ್ಚಿನ ಪರಿಮಾಣವನ್ನು 22%ಯಷ್ಟು ತಗ್ಗಿಸಿಕೊಂಡಿರುವದು ಆಡಳಿತೆಯ ಜಾಣ್ಮೆಯನ್ನು ತೋರಿಸುತ್ತಿದೆ.

ಸರ್. ಚಿನುಭಾಯಿ ಮಾಧವಲಾಲರಂತಹ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮರ್ಥ ಡೈರೆಕ್ಟರ ಮಂಡಳಿಯ ನೆರವಿನಿಂದ, ಕೇವಲ ಹತ್ತೇ ವರುಷಗಳ ಕಾರ್ಯಗಳಿಂದ ಜನತೆಯ ನ್ನಾಕರ್ಷಿಸಲು ಶಕ್ತವಾಗಿರುವ ಈ ಜೀವ ವಿಮಾ ಸಂಸ್ಥೆಗೆ ಇನ್ನಷ್ಟು ಅಭಿವೃದ್ಧಿಯನ್ನು ಹಾರೈಸುತ್ತೇವೆ.

ಸುಲಭ ಉಪಾಯ - - - -?

ಮಾಸ್ತರ್—ದೇಜಪ್ಪ, ಬೊಂಬಾಯಿಯಲ್ಲಿ ಮೊದಲಿದ್ದ ಆಫೀಸಿನಲ್ಲೇ ಈಗಲೂ ಇದ್ದೀಯಾ? ಮೆನೇಜರರು ಏನಾದರೂ ಸಂಬಳ ಏರಿಸಿದ್ದಾರೆಯೆ?

ದೇಜಪ್ಪ—ಸ್ವಲ್ಪ ಏರಿಸಿದ್ದಾರೆ. ನನಗೆ ಒಂದಿಷ್ಟು ಇಂಗ್ಲಿಷು ಬರುತ್ತಿದ್ದರೆ ಇನ್ನೂ ಹೆಚ್ಚಿಗೆ ಕೊಡುತ್ತಿದ್ದರು. ಆವರು ಪಾಸುಗೀಸು ಕೇಳೋದಿಲ್ಲ. ಸಾಧಾರಣ ಇಂಗ್ಲಿಷು ಬಂದರಾಯಿತು.

ಮಾಸ್ತರ್—ಅಷ್ಟೇ ತಾನೆ! ಹಾಗಾದರೆ ನಿನ್ನ ಸಂಬಳ ಏರಲಿಕ್ಕೆ ಸುಲಭ ಉಪಾಯವಿದೆ. 'ಸುಲಭದಲ್ಲಿ ಇಂಗ್ಲಿಷು' ಎಂಬ ಪುಸ್ತಕವನ್ನು ಅಭ್ಯಾಸ ಮಾಡು. ಯಾರ ಹಂಗೂ ಇಲ್ಲದೆ ಇಂಗ್ಲಿಷು ಬರುವುದು. ಸಂಬಳ ಏರುವುದು!

ದೇಜಪ್ಪ—ಇಂಗ್ಲಿಷು ಭಾಷೆಯ ಗುಟ್ಟನ್ನು ಅಷ್ಟು ಸುಲಭವಾಗಿ ಹೇಳಿದ್ದಾರೆಯೇ ಆ ಪುಸ್ತಕದಲ್ಲಿ?

ಮಾಸ್ತರ್—ಆ ಪುಸ್ತಕವನ್ನು ಅಭ್ಯಾಸಿಸಿದರೆ ಬಾಳೆಯ ಹಣ್ಣು ಸುಲಿದು ತಿಂದಷ್ಟು ಸುಲಭವಾಗಿ ಇಂಗ್ಲಿಷು ಬರುತ್ತದೆ. **ನವಭಾರತ ಪುಸ್ತಕ ಭಂಡಾರ, ಉಡುಪಿ. ಅಲ್ಲಿ ಸಿಗುತ್ತದೆ. ಬೆಲೆ ೧ ರೂಪಾಯಿ.** ಇಂಗ್ಲಿಷನ್ನು ಕಲಿಸಿ ಕಲಿಸಿ ನುರಿತ ಉಪಾಧ್ಯಾಯರೊಬ್ಬರು ಬರೆದ ಪುಸ್ತಕ ಅದು. ಗಿಳಿಗೆ ಮಾತು ಕಲಿಸಿದಂತೆ ಇಂಗ್ಲಿಷಿನಲ್ಲಿ ನಾಲ್ಕು ಮಾತಾಡಲಿಕ್ಕೆ ಕಲಿಸುವ ಪುಸ್ತಕವಲ್ಲ. ಸ್ವತಂತ್ರವಾಗಿ ಮಾತಾಡುವ ಸಾಮರ್ಥ್ಯ ಬರುವಂತೆ ಕ್ರಮವಾಗಿ ಕಲಿಸಿಕೊಡುವ ಪುಸ್ತಕ ಅದು. ನೀನದನ್ನು ಅವಶ್ಯವಾಗಿ ಅಭ್ಯಾಸಮಾಡಬೇಕು.

ದೇಜಪ್ಪ—ಆಗಲಿ ಸ್ವಾಮಿ, ನೀವು ಶಿಫಾರಸು ಮಾಡಿದ ಮೇಲೆ ಆ ಪುಸ್ತಕದಿಂದ ನನಗೆ ಪ್ರಯೋಜನವಾಗುವುದು ಖಂಡಿತ. ಇಂದೇ ಕೊಂಡುಕೊಳ್ಳುತ್ತೇನೆ.

10,000

ಪ್ರತಿಗಳಿಗೂ ಮಿಕ್ಕಿ ವಿಕ್ರಯವಾಗಿ ಕರ್ನಾಟಕದಲ್ಲೆಲ್ಲಾ ಜನಪ್ರಿಯವಾಗಿರುವ ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

(ಹೂವಿನಕೆರೆ ಚಿದಂಬರಯ್ಯನವರಿಂದ ವಿರಚಿತ)

"ಯಾವ ಸಮಾಜವೇ ಆಗಲಿ, ಉನ್ನತಿಯ ಶಿಖರವನ್ನೇರಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯಾವಶ್ಯಕವಾದದ್ದು"

ಪುಟಗಳು 440 ಬೆಲೆ 0—8—0

ನೋಡಿದರೆ ಸಾಕು! ಓದದೆ ಬಿಡಲಾರಿರಿ!!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ, ತೊಡಗಿದಾಗ ಹೇಗೆ ಮುಗಿಯುವುದಿದು ಎಂಬ ಕೌತುಕಪಡಿಸುವ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ ಬಹಿರಂಗವನ್ನು ಹೋಳಿಸಿ ಹರಿಯುವ ಮಾತು

ಪ್ರೇಮಪ್ರವಾಹವು ಹೇಗ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹವನ್ನು ಓದಿನೋಡಿ ೦—೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಎಲ್ಲಕ್ಕೂ ಟಿ ಬಿ ಪ್ರತ್ಯೇಕ ಕೆಲವೇ ಪ್ರತಿಗಳು ಉಳಿದಿವೆ.

ಬರೆಯಿರಿ.— **ಅಂತರಂಗ ಕಾರ್ಯಾಲಯ, ಉಡುಪಿ**

(ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ ದೊರೆಯುತ್ತವೆ)

ಗುಪ್ತಾಂದೋಲನಗಳ ಕುರಿತು ಗಾಂಧಿಜೀಯ ನಿಷೇಧ!

ಮಹಾತ್ಮಾಜೀ ಈ ಬಾರಿಯ ಚಳವಳದಲ್ಲೂ ಶುದ್ಧ ಅಹಿಂಸೆಯನ್ನಲ್ಲದೆ ಬೇರಾವುದನ್ನೂ ಬಯಸಿರಲಿಲ್ಲವೆಂಬುದನ್ನು ಅವರ ಇತ್ತೀಚೆಗಿನ ಹೇಳಿಕೆಗಳು ಸ್ಪಷ್ಟ ಖಚಿತಪಡಿಸಿವೆ

ಮಂತ್ರಿಯೊಬ್ಬನ ಮರುಳಾರೋಪ!

ಸಿಂಧ್ ಎಸೆಂಬ್ಲಿಯಲ್ಲಿ, ಸದಸ್ಯರೊಬ್ಬರನ್ನು ಬಾಗಿಲಲ್ಲೇ ಪೋಲಿಸರಿಂದ ತಡೆಗಟ್ಟಿಸಿದ ಕುರಿತು ಪ್ರಶ್ನೆಬಂದಾಗ ಅಲ್ಲಿಯ ಗೃಹಮಂತ್ರಿ ಮಿ. ಗಝ್ದಾರರು 'ಮಹಾತ್ಮಾ ಗಾಂಧಿಯವರ ಬಿಡುಗಡೆಯಾದಂದಿನಿಂದ ಇಡೀ ರಾಷ್ಟ್ರದಲ್ಲಿ ವಿಧ್ವಂಸಕ ಚಳವಳಗಳ ಪುನರಾರಂಭವಾಗಿದ್ದು, ಅದರ ಹಿನ್ನೆಲೆಯಲ್ಲಿರುವ ಪ್ರಮುಖರು ಅದರ ಸೂತ್ರಧಾರಿತ್ವ ವಹಿಸಲು ಪುನಃ ಪ್ರಯತ್ನಿಸುತ್ತಿದ್ದಾರೆ'' ಎಂದು ಆರೋಪಿಸಿದ್ದರು. ಈ ಕಠೋರ ಅನೃತದಿಂದ ಮನನೊಂದ ಮಹಾತ್ಮರು 'ವಿಘಾತುಕ ಚಳವಳವೆಂದರೇನು? ಅದರ ಪುನರಾವರ್ತನೆಯಾಗುತ್ತಿದೆಯೆಂಬ ಕುರಿತು ಗಝ್ದಾರರಿಗೆ ದೊರೆತಿರುವ ರುಜುವಾತುಗಳೇನು? ಅದರ ಹಿನ್ನೆಲೆಯ ಸೂತ್ರಧಾರಿ ನಾಯಕರಾರು?' ಎಂದು ಪ್ರಶ್ನಿಸಿ ತಾನು ಹಿಂಸಾತ್ಮಕ ಗೂಢ ಚಳವಳಕ್ಕೆ ಬದ್ಧವಿರೋಧಿಯೆಂಬುದನ್ನು ಮತ್ತೊಮ್ಮೆ ಖಚಿತಪಡಿಸಿ ತನಗೆ ಆ ಮೊದಲೇ ಚಳವಳ ಹೂಡುವ ಸಂದರ್ಭ ತಪ್ಪಿ ಹೋಗಿರುವಾಗ ಈಗ ಅದರ ಪುನರಾವರ್ತನೆಯೆಂದರೆ ಹೇಗೆ? ಎಂದು ಪ್ರಶ್ನಿಸಿದ್ದಾರೆ. ಸಿಂಧ್ ಮಂತ್ರಿಗಳು ತನ್ನ ಹುಸಿವಾದವನ್ನು ಸಮರ್ಥಿಸಿಕೊಳ್ಳಲಾರದೆ, ಅದು ತನ್ನ ಊಹೆಯೆಂದು ಒಪ್ಪಿಕೊಂಡಿದ್ದಾರೆ. ಲಾಹೋರಿನ ಪ್ರಮುಖ ಮುಸಲ್ಮಾನ್ ಪ್ರೊಫೆಸರ್ ಅಬ್ದುಲ್ ಮಜೀದರು, ಸಿಂಧ್ ಮಂತ್ರಿಗಳ ಈ ಬೇಜವಾಬ್ದಾರೀ ಆರೋಪವನ್ನು ಕಟುವಾಣಿಯಿಂದ ಖಂಡಿಸಿ 'ಗಾಂಧೀ ಸಮ್ಮತ ರಾಜಾಜೀ ಸಂಧಿಸೂಚನೆಗಳು ಆಕಾಲಿಕವಾಗಿ ಪ್ರಕಟಗೊಂಡುದರಿಂದಲೇ ಸಿಂಧ್, ಗಡಿನಾಡು ಮತ್ತು ಬಂಗಾಳದ ಕ್ಷುದ್ರ ಹಾಗೂ ಅಲ್ಪಾಯುಷ್ಯ ... ಮಂತ್ರಿಗಳ ಅವಧಿಯನ್ನು ಬೆಳೆಯಿಸಿತೆಂಬುದನ್ನು ಮರೆಯಬಾರದು' ಎಂದಿದ್ದಾರೆ.

ಗುಪ್ತ ಚಳವಳವು ಅಹಿಂಸೆಗೆ ಅಸಮ್ಮತ

ಸೊತ್ತು ನಾಶವನ್ನೊಳಗೊಂಡ ಎಲ್ಲಾ ವಿಧ್ವಂಸಾತ್ಮಕ ಕ್ರಿಯೆಗಳೂ ಪ್ರತ್ಯಕ್ಷ ಹಿಂಸೆಗಳೆಂದು ಮಹಾತ್ಮಾಜೀ ತನ್ನ ಇತ್ತೀಚೆಗಿನ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ 'ಗುಪ್ತ ಚಳವಳಗಳಿಗೆ ನನ್ನ ಸಮ್ಮತಿಯಿದೆಯೋ, ಎಂಬ ಕುರಿತು ನನ್ನೊಡನೆ ಹಲವರು ಚರ್ಚಿಸುತ್ತಿದ್ದಾರೆ. ತಲೆಮರೆಸಿಕೊಂಡು ಸೂತ್ರಚಾಲು ಮಾಡುವ ಕೆಲವರಾದರೂ ಇಲ್ಲದೆ ಒಂದು ಚಳವಳ ನಡೆಯಲಾರದೆಂದು ನನಗೆ ಉಪದೇಶಿಸಲಾಗುತ್ತಿದೆ. ಪ್ರಾಣಹಾನಿಯಿಲ್ಲದ ತಂತಿ, ಸಂಕ ಇತ್ಯಾದಿ ಆಸ್ತಿ ನಾಶಗಳೂ ಅಹಿಂಸೆಯೆಂದೇ ಕೆಲವರ ಸಮಾಧಾನ ಇದಕ್ಕಾಗಿ ಅನ್ಯ ರಾಷ್ಟ್ರಗಳ ನಿದರ್ಶನಗಳನ್ನು ಕೊಡಲಾಗುತ್ತಿದೆ. ಇವಕ್ಕೆಲ್ಲಾ ನನ್ನ ಉತ್ತರವಿಷ್ಟೆ: ಯಾವ ರಾಷ್ಟ್ರವೂ ನಮ್ಮಂತೆ ತನ್ನ ಸ್ವಾತಂತ್ರ್ಯಕ್ಕಾಗಿ ಈ ತನಕ ಅಹಿಂಸೆ, ಅಸಹಕಾರಗಳನ್ನು ಅಂಗೀಕರಿಸಿದುದಿಲ್ಲ. ಹೀಗಾಗಿ, ಎಷ್ಟೇ ನಿರ್ದೋಷಿಯಾಗಿರುವ ಗುಪ್ತ ಚಳವಳಕ್ಕಾದರೂ ಅಹಿಂಸೆಯಲ್ಲಿ ಸ್ಥಾನವಿಲ್ಲವೆಂದು ನಾನೆನ್ನುತ್ತೇನೆ. ಆಸ್ತಿ ಸೊತ್ತು ಹಾನಿಗಳನ್ನೊಳಗೊಂಡ ಎಲ್ಲಾ ವಿಧದ ಒಳಸಂಚುಗಳೂ ಪ್ರತ್ಯಕ್ಷ ಹಿಂಸೆಯೇ ಸರಿ. ಈ ಕೃತ್ಯಗಳಿಂದಾಗಿ ಕೆಲವರಲ್ಲಿ ಉತ್ಸಾಹ, ಭಾವೋದ್ರೇಕಗಳೆದ್ದಿರಬಹುದಾದರೂ, ಇಡೀ ಚಳವಳಕ್ಕವುಗಳಿಂದ ಹಾನಿಯಾಗಿದೆ ಎನ್ನಲು ನಾನು ಸಂದೇಹಪಡುವದಿಲ್ಲ. ಈಗಲೂ ತಲೆಮರೆಸಿಕೊಂಡಿರುವ ಕಾರ್ಯಕರ್ತರಿಗೆ ನನ್ನ ಉಪದೇಶವಿಷ್ಟೇ: 'ಗುಪ್ತ ಚಳವಳವು ಅಹಿಂಸಾತ್ಮಕ ಹುರುಪಿನ ಬೆಳವಣಿಗೆಗೆ ಸಹಾಯಕಾರಿಯಲ್ಲವೆಂಬ ನನ್ನ ವಿಶ್ವಾಸವನ್ನು ನೀವು ಒಪ್ಪುನಿಂರಾದರೆ, ನೀವಾಗಿ ಮುಂದೆ ಬಂದು ಬಂಧನವಾಸದ ಅಪಾಯವನ್ನಂಗೀಕರಿಸಿರಿ. ಆ ರೀತಿಯನುಭವಿಸುವ ಶಿಕ್ಷೆಯೂ ಸ್ವಾತಂತ್ರ್ಯ ಚಳವಳಕ್ಕೊಂದು ಸಹಾಯವೆಂದು ನಂಬಿರಿ'' ಎನ್ನುತ್ತಾ ಖಾದಿ, ಗ್ರಾಮೋದ್ಧಾರ, ಅಸ್ಪೃಶ್ಯತಾ ನಿವಾರಣೆ, ಭಾಷಾಸೇವೆ, ಆರ್ಥಿಕ ಸಮಾನತೆ ಇತ್ಯಾದಿ ವಿಧಾಯಕ ಕಾರ್ಯಕ್ರಮಗಳಲ್ಲಿ ತನಗಿರುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಜಿನ್ನರ ಅಹಂಪೂರಿತ ಅನುಮತಿ.

ಆಗೋಸ್ತು ಎರಡನೇ ವಾರದಲ್ಲಿ ಗಾಂಧೀ-ಜಿನ್ನಾ ಭೇಟಿಯು ಬೊಂಬಾಯಿಯಲ್ಲಿ ನಡೆಯಲಿರುವದೆಂದು ತಿಳಿದು ಬರುತ್ತದೆ. ಕಾಂಗ್ರೆಸ್ ಲೀಗ್ ಒಪ್ಪಂದಕ್ಕಾಗಿ ಮುಖತಃ ಚರ್ಚಿಸುವ ಬಯಕೆಯನ್ನು ಜಿನ್ನರು ಶ್ರೀನಗರದಲ್ಲಿರುವಾಗಲೇ ಗಾಂಧಿಜೀ ಬರೆದು ತಿಳಿಸಿದ್ದರು. ಗಾಂಧಿಜೀಯನ್ನು ಬೊಂಬಾಯಿಗೆ 'ಕರೆಸಿಕೊಂಡು' ಚರ್ಚಿಸಲು ತಾನು ಸಿದ್ಧನಿದ್ದೇನೆ ಎಂದು ಮಿ. ಜಿನ್ನರು ಒಪ್ಪಿದ್ದಾರೆ. ಜುಲಾಯಿ ೨೯ರಲ್ಲಿ ಲಾಹೋರಿನಲ್ಲಿ ಸೇರಿದ ಮುಸ್ಲಿಂ ಲೀಗ್ ಕಾರ್ಯಕಾರೀ ಸಮಿತಿಯು ರಾಜಾಜೀ ಸೂಚನೆಗಳ ಕುರಿತು ಒಂದೂವರೆ ಘಂಟೆ ಚರ್ಚೆ ನಡೆಸಿತು. ತಾ. ೩೦ರಲ್ಲಿ ಸೇರಿದ ಲೀಗ್ ಕೌನ್ಸಿಲ್ ಸಭೆಯಲ್ಲಿ ಮಿ. ಜಿನ್ನರು ಈ ಸಂಧಿ ಸೂಚನೆಗಳ ಕುರಿತು ತನ್ನ ಘೋಷಣೆಯನ್ನು ಸವಿವರವಾಗಿ ಮುಂದಿಟ್ಟರು.

Degrees: Books: Medicines
Free H. L. M. S. M. B. H. M. D, etc, Free Homeo-Ayur- UnaniNaturee degree by post also—Practitioner also get soon Homeo Materiamedica, Rs. 5 Homeo Practice book Rs 4. Insanity Cure Pills Rs, 10 Enclose 2 annas stamp:—
Prof, Dr, N, H, Chhatbar,
Principal Indian Homeopathi Institute & Society (Govt. Regd)
P. O, MAHUVA (Kathiwar Dt. India).

Sidha-Kalpa Kavach (Regd.)
No. 3 Rs. 2 No. 2 Rs 5 No. 1 Rs. 7 Special Rs 10, Extra Special Rs. 17 for over marriage health wealth, Ask any six questions with M. O. Re. 1/4, and get correct answers by return, post Life reading Rs.10No,V. P.Send M. O. Free, pmplets.
Prof, Dr. N, H. Chhatbar,,
P. O. MAHUVA (Kathiawar India.)

ಸ್ಥಾಪನೆ] 'ಕಿರಿಯರ ಪ್ರಪಂಚ'ದ [1930

ನೋಡಿದರೆ ಬಿಡದಿರುವ ಪುಸ್ತಕಗಳು

● ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳಿಂದ—

ಅನ್ನದೇವರು ಮತ್ತು ಇತರ ಕಥೆಗಳು
ವಿಚಾರಕ್ರಾಂತಿಯನ್ನುಂಟುಮಾಡುವ ೧೪ ಸಣ್ಣ ಕತೆಗಳ ಸಂಗ್ರಹ. ಬೆಲೆ ೦-೧೨-೦

● ಶ್ರೀ. ಕೆ ವಿ. ಶೆಣೈ, ಬಿ. ಎ., ಎಲ್. ಟಿ. ಯವರಿಂದ—

ನಗೆನೋಟಗಳು ಬೆಲೆ ೦-೧೨-೦
ದಣಿದ ಮನವನ್ನು ತಣಿಸಿ ವಿನೋದದೊಡನೆ ವಿವೇಕವನ್ನೂ ಉಂಟು ಮಾಡುವ ೧೧ ಜೀವನ ಚಿತ್ರಗಳ ಸಂಗ್ರಹ.

● ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರಿಂದ —

ಮೂರು ಪ್ರಹಸನಗಳು ಬೆಲೆ ೦-೧೪-೦
ಓದಿದರೂ ಅಭಿನಯಿಸಿದರೂ ಸ್ವಾರಸ್ಯವಾಗಿ ತೋರುವ ನಗದವರನ್ನೂ ನಗಿಸುವ ಮೂರು ಪ್ರಹಸನಗಳ ಸಂಗ್ರಹ

ಭಾರತೀಯ ಕತೆಗಳು ಬೆಲೆ ೦-೧೪-೦
ಶ್ರೀ. ಎ. ಎಸ್. ಪಿ. ಐಯ್ಯರ್, ಎಂ. ಎ., ಐ. ಸಿ. ಯಸ್., ಇವರ Tales of Ind ಕಥಾವಳಿಯ ಅನುವಾದ.

ನಂದಾದೀಪ ಬೆಲೆ ೦-೧೦-೧
ಬೋಧಪ್ರದವಾದ ೧೧ ಸಾಮಾಜಿಕ ಕಥೆಗಳ ಸಂಗ್ರಹ. ಸರಳ ಶೈಲಿ

● ಶ್ರೀ ಕೆ. ಕೆ. ಶೆಟ್ಟರಿಂದ—

ಪ್ರೇಮವಿಜಯ ಬೆಲೆ ೦-೧೨-೦
ಕ್ರಾಂತಿಕಾರಕ, ಹೃದ್ರಾವಕ, ವಿಚಾರಪ್ರಚೋದಕ ನಾಟಕ.

ದೇಶಭಕ್ತ ಬೆಲೆ ೦-೧೪-೦
ರಾಜಕೀಯ ಸಾಮಾಜಿಕ ನಾಟಕ ಹೊಸ ಪ್ರಯೋಗ

ಸನ್ಯಾಸಿಯ ಸೋಗಿನಲ್ಲಿ ಬೆಲೆ ೦-೮-೦
ವೇಶ್ಯಾಪುತ್ರಿಯ ಜೀವನ ಚಿತ್ರವನ್ನೂ ಸನ್ಯಾಸಿಯ ಗುಟ್ಟನ್ನೂ ನಿರ್ದಾಕ್ಷಿಣ್ಯವಾಗಿ ಚಿತ್ರಿಸುವ ನವೀನ ಸಾಮಾಜಿಕ ಕಾದಂಬರಿ

ಪುರುಷ ವಧು ಬೆಲೆ ೦-೪-೦
ಮುದುಕನ ಮದುವೆಯ ಭ್ರಾಂತಿನಿರಸನಗೊಳಿಸುವ ಪ್ರಹಸನ.

ಹೆಂಡ್ತಿ ಗಂಡನಾದರೆ? ಬೆಲೆ ೦-೪-೦
ಮಾರ್ಮಿಕವಾಗಿ ಸ್ತ್ರೀಸ್ವಾತಂತ್ರ್ಯ ಪ್ರತಿಪಾದಿಸುವ ಪ್ರಹಸನ.

ವ್ಯಭಿಚಾರಿಣಿ ಯಾರು? ಬೆಲೆ ೦-೧೨-೦
ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನು ಹೃದಯಭೇದಕವಾಗಿ ಚಿತ್ರಿಸುವ ಸಾಮಾಜಿಕ ನಾಟಕ.

ಮುಂದಿನ ದೇವರು ಬೆಲೆ ೦-೩-೦
ಹಿಂದಿನ, ಇಂದಿನ ಮತ್ತು ಮುಂದಿನ ಸಮಾಜವ್ಯವಸ್ಥೆಯನ್ನು ವಿಚಾರಪೂರ್ಣವಾಗಿ ಸೂಕ್ಷ್ಮವಾಗಿ ವಿವರಿಸುವ ಪ್ರಬಂಧ.

ಕುಶಲವ ಬೆಲೆ ೦-೫-೦
ಶಿಕ್ಷಣ ಕ್ರಮದಲ್ಲಿ ಸುಧಾರಣೆ ಸೂಚಿಸುವ ನವ ಪೌರಾಣಿಕ ನಾಟಕ.

ಸಂಶಯ ಪಿಶಾಚಿ ಬೆಲೆ ೦-೮-೦
ಅಳಿಯಕಟ್ಟಿನ ಸಭ್ಯರ ನಡವಳಿಕೆಯ ದುಷ್ಪರಿಣಾಮವನ್ನು ಚಿತ್ರಿಸಿ ಸಮಾಜದೇಳಿಗೆಯ ಮಾರ್ಗ ಸೂಚಿಸುವ ನಾಟಕ

● ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ—

ಸ್ವತಂತ್ರ ಜೀವನೋಪಾಯ ಬೆಲೆ ೦-೩-೦
ಜೀವನದ ಹೋರಾಟವನ್ನು ಕಣ್ಣಮುಂದಿರಿಸಿ ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪ್ರಹಸನ.

ನಾಡಕತೆಗಳು (ವಿವಿಧ ಕತೆಗಾರರಿಂದ) ಬೆಲೆ ೦-೩-೦
ಸಮಾಜದ ನೈಜಚಿತ್ರಗಳನ್ನೊಳಗೊಂಡ ಕತಾಸಂಗ್ರಹ.

ಮಧುವನ (ವಿವಿಧ ಕತೆಗಾರರಿಂದ) ಬೆಲೆ ೩-೦-೦
ಪ್ರಸಿದ್ಧ ಕತೆಗಾರರ ಉಚ್ಚ ತರಗತಿಯ ೨೫ ಕತೆಗಳ ಸಂಗ್ರಹ.

ಕಾವ್ಯ ಸಾಮ್ರಾಜ್ಯ (ವಿವಿಧ ಕವಿಗಳಿಂದ) ಬೆಲೆ ೦-೧೨-೦
ಕನ್ನಡ ಸಾಹಿತ್ಯಕ್ಕೆ ರತ್ನಪ್ರಾಯವಾದ ಆಧುನಿಕ ಕವಿತೆಗಳ ಸಂಗ್ರಹ

● ಶ್ರೀ. ಎನ್. ವೆಂಕಟರಾಜರಿಂದ—

ರಂಗಭೂಮಿ ಬೆಲೆ ೦-೮-೦
ಅಪಾತ್ರರು 'ರಂಗಭೂಮಿ'ಯ ಸೇವೆಗೆ ಹೊರಟರೆ ಆಗುವ ದುಷ್ಪರಿಣಾಮವನ್ನು ತೋರಿಸುವ ವಿನೋದಪರ ನಾಟಕ.

● ಶ್ರೀ. ಎಸ್. ಎಲ್. ಸುಬ್ರಹ್ಮಣ್ಯರಿಂದ —

ಸೇವಾಪಥ ಬೆಲೆ ೦-೮-೦
ಶೇಟ್ ಗೋವಿಂದದಾಸರ ಹಿಂದೀ ನಾಟಕದ ಅನುವಾದ ಆಧುನಿಕ ರಾಜಕೀಯ ವಾತಾವರಣದಿಂದ ಕಲ್ಪಿತವಾದುದು.

ನಾರೀ ಹೃದಯ (ಕಥಾ ಸಂಗ್ರಹ) ಬೆಲೆ ೦-೧೨-೦
ಸ್ವರ್ಗೀಯ ಪ್ರೇಮಚಂದ್ರರ ಧರ್ಮಪತ್ನಿ ಶ್ರೀಮತಿ ಶಿವರಾಣಿ ದೇವಿಯವರ ನಾರೀ ಹೃದಯವನ್ನು ಸೂಚಿಸುವ ಹಿಂದೀ ಕತೆಗಳ ಅನುವಾದ

● ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆಯವರಿಂದ—

ಪ್ರಕಾಶ (ಅನುವಾದ) ಬೆಲೆ ೧-೧೨-೦
ಶೇಟ್ ಗೋವಿಂದ ದಾಸರ ರಾಜಕೀಯ ಸಾಮಾಜಿಕನಾಟಕ.

ವಿಕ್ರಯಾಧಿಕಾರಿಗಳು:

ನವಭಾರತ ಪುಸ್ತಕ ಭಂಡಾರ, ಉಡುಪಿ.
ರಿಜಿಸ್ಟರ್ಡ್ ಪಬ್ಲಿಷರ್ಸ್,
(ನಮ್ಮಲ್ಲಿ ದೊರೆಯುವ ಆಧುನಿಕ ಪುಸ್ತಕಗಳ ಕೆಟಲಾಗಿಗೆ ಒಂದಾಣೆಯ ಸ್ಟಾಂಪಿನೊಂದಿಗೆ ಬರೆಯಿರಿ.)

● ಕೊರಡ್ಕಲ್ ಶ್ರೀನಿವಾಸರಾಯರ

ಸುಲಭದಲ್ಲಿ ಇಂಗ್ಲಿಷ್ ಬೆಲೆ ೧-೪-೦
ಯುವಕರಿಗೂ ವಯಸ್ಕರಿಗೂ ಸುಲಭವಾಗಿ ಅನ್ಯಸಹಾಯವಿಲ್ಲದೆ ಇಂಗ್ಲಿಷ್ ಕಲಿಯುವ ಪುಸ್ತಕ.

The Pangal Nayak Bank Limited.

(Incorporated in 1920)

Registered Office Court Road, UDIPI

Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

Discounting of demand and short-term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public.

For business proper please enquire at any one of our Offices.

15th April 1944

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷದಿಗಳು ದೊರೆಯುತ್ತವೆ. ಕ್ಯಾಲಿಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷದಿ ರವಾನ್ನಿಬಹುದು, ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, . ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya GADAG.

THE VIJAYA BANK, LTD.

Head office:

MANGALORE.

Glad to announce that a Branch of the Bank has been opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ. 15-6-44ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿರುವುದು.

ದಿ ವಿಜಯಾ ಬೇಂಕ್ ಲಿಮಿಟೆಡ್

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದ .

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವವು, ಅಂದರೆ ಕೇವಲ ೪ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ. ಕ

REGD

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಸೀಮೆ ಎಣ್ಣೆ ಇಲ್ಲವೋ?? ಚಿಂತೆ ಇಲ್ಲ! ? ಸ್ವಲ್ಪ ವನಸ್ಪತಿ ಎಣ್ಣೆ ಮತ್ತು ನೀರು ಇದ್ದರೆ ಸಾಕು.



ಫ್ರೆಂಚ ಲೈಟರ್ ದಿಂದ

(ನಿಮ್ಮ ಮನೆಗಳನ್ನು ಬೆಳಗಿಸಿರಿ)

(ಕ್ಷುತ ವ್ಯಯಕ್ಕೆ ನೂತನ ಸಂಶೋಧನೆ) ನೋಡಲು ಚಂದ-ಬೆಳಗಿಸಲು ಆನಂದ. ಅಗ್ಗ ಮತ್ತು ಸುಂದರ. ಸರಳ ಮತ್ತು ಸುಲಭ

ಫ್ರೆಂಚ ಲೈಟರ್.

50 ಬತ್ತಿಗಳ ಪೆಟ್ಟಿಗೆ 1ಕ್ಕೆ ರೂ. 1 4 0 ಟ. ಹಾ. 0-8 0 (ಒಂದು ಬತ್ತಿ ಸುಮಾರು 24ತಾಸು ಉರಿಯುವುದು.

ಸ್ಟಾಕಿಸ್ಟರು ಬೇಕಾಗಿದ್ದಾರೆ.

ಏಜನ್ಸಿ ಕರಾರುಗಳೊಡನೆ 6 ಪೆಟ್ಟಿಗೆಗೆ ಟ. ಹಾ. ಉಚಿತ

ಉ. ಟಿ ತ. ಸ್ಟ್ಯಾಂಪಲು ಕಳಿಸುವದಿಲ್ಲ.

ಫ್ರೆಂಚ ಲೈಟರ್ ಕಂಪೆನಿ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

EDITED RINTED & UBLISHED BY K H. SHETTY AT THE NA VAYUGA PRESS, UDIPI, S, INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6. Estd. 1921 ಸ್ಥಾಪನೆ.

Typewriter repairs of every description undertaken at the

BASEL MISSION PRESS,
MANGALORE, S. K.

NAVAYUGA

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.
KANNADA WEEKLY, UDIPI.
ಸಂಪುಟ ೨೪ ಸಂಚಿಕೆ ೪೮ • Vol. 24 No. 48
Founder SRI A. B. SHETTY.
ಉಡುಪಿ • 10—8—1944 • ಮಂಗಳೂರು.

ANTARANGA
UDIPI
ಅಖಿಲ ಕರ್ನಾಟಕದ
ಹೊಸ ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ
ಅಂತರಂಗ
ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ.

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Estd 1908]
The "Bombay Life" Bldg.,
UDIPI, S. K.

Offices and Agencies throughout South India.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea. Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮ.
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು.—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಪ್ಪಲ್; ನವಭಾರತ ಬುಕ್ ಡಿಪೊ.

— ಮಕ್ಕಳನ್ನು ಹಡೆಯುವದು ಸಾಕು—
ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ;—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

The Board of Directors,
Sri Narayan Guru Bank, Ltd., Mangalore
announce that a Branch of this Bank has been opened at the premises of "Parimala Bhavan", opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director

ಜರ್ಮನಿಯ ಮೇಲೆ ಮೂರು ಕಡೆಗಳಿಂದೊತ್ತಾಟ!

ಜಾಪಾನರ ಪರಾಭವ!

ರಣರಂಗ ಮತ್ತು ವ್ಯವಹಾರ ರಂಗಗಳಲ್ಲಿ ಆಕ್ಸಿಸ್ ರಾಷ್ಟ್ರಗಳನ್ನು ಕಂಗೆಡಿಸುವ ಚರಿತ್ರಾರ್ಹ ಘಟನೆಗಳು ಕಳೆದವಾರ ಸಂಭವಿಸಿವೆ. ನಾಜೀ ವಕ್ತಾರರ 'ಹೊಸ ಪ್ರಯೋಗಗಳ ಮೂಲಕ ಈ ಯುದ್ಧವನ್ನು ಗೆಲ್ಲುವೆವು' ಎಂಬ ಭರವಸೆಗೆ ಇಂದಿನ ಹೊಸ ಪರಿಸ್ಥಿತಿಯಲ್ಲೇನೂ ಬೆಲೆ ಬರಲಾರದನ್ನಿಸುತ್ತದೆ. ಯುದ್ಧ ಪ್ರವಾಹವು ರಭಸದಿಂದ ಜರ್ಮನಿಯ ಕಡೆಗೆ ನುಗ್ಗಿ ಬರುತ್ತಿದೆ; ನಾಜೀ ಅಣೆಕಟ್ಟುಗಳು ಇನ್ನದನ್ನು ತಡೆದಿಟ್ಟುಕೊಳ್ಳುವದು ಅಸಾಧ್ಯವೆಂಬುದು ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಾ ಹೋಗುತ್ತಿದೆ.

ವಾರ್ಸಾ ಧಾಳಿ.

ಪೋಲೆಂಡಿನ ರಾಜಧಾನಿ ವಾರ್ಸಾದ ಕಡೆಗೆ ಸ್ಟಾಲಿನರು ತ್ರಿಶೂಲದಂತೆ ಮುಂದೆ ಚಾಚಿದ್ದ ತ್ರಿಮುಖ ಧಾಳಿಯು ಈ ವಾರದಲ್ಲಿ ಗಣನೀಯ ಪ್ರಗತಿ ಪಡೆದಿದೆ. ಅವೈಕಿ ಉತ್ತರಗಡೆಯಿಂದ ಹೊರಟಿದ್ದ ಕೆಂಪು ಸೇನೆ ವಾರ್ಸಾವನ್ನು ದಾಟಿ ಮುಂದೆ ಸರಿದಿದೆ. ಮಧ್ಯಗಡೆಯಲ್ಲಿ ರಶ್ಯಾನರು ವಾರ್ಸಾದ ಹೊರವಲಯಕ್ಕೆ ಬಂದು ತಾಗಿದ್ದಾರೆ. ಇದಕ್ಕೆ ಹೊಂದಿಕೆಯಾಗಿ ದಕ್ಷಿಣಗಡೆಯ ಸೇನೆಯೂ ಬಂದು ಸೇರಿದೆ. ಈ ನಡುವೆ ಮತ್ತೊಂದು ವಿಶೇಷ ಘಟನೆ –ಕೆಂಪು ಸೇನೆ ವಾರ್ಸಾದೊಳಗೆ ಪ್ರವೇಶಿಸುವ ಮೊದಲೇ ಅಲ್ಲಿ ತೆರೆಯ ಮರೆಯಲ್ಲಿದ್ದ ಸ್ವತಂತ್ರ ಪೋಲಿಸ್ ಸೇನೆಗಳು ಬಯಲಿಗೆ ಬಿದ್ದು ನಾಜೀ ಸೇನೆಗಳೊಡನೆ ಭೀಕರ ಕಾಳಗಕೊಡುತ್ತಿವೆ. ವಾರ್ಸಾದ ಒಂದು ಭಾಗವೂ, ಅದರ ಆಸುಪಾಸಿನ ಜಿಲ್ಲೆಗಳೂ ಈ ಪೋಲಿಶ್ ಪಡೆಯ ವಶವಾಗಿವೆಯೆಂದೂ ಶಸ್ತ್ರೋಪಕರಣಗಳ ಸಹಾಯಕ್ಕಾಗಿ ಇವು ರಶ್ಯಾನರನ್ನು ಯಾಚಿಸಿವೆಯೆಂದೂ ತಿಳಿದು ಬರುತ್ತದೆ

ಜರ್ಮನಿಗೆಪಾಯ.

ಇಲ್ಲಿಯೇ ದಕ್ಷಿಣಗಡೆಯಿಂದ ಕ್ರಾಕೋವಿಗಭಿಮುಖವಾಗಿ ಹೊರಟಿರುವ ಕೆಂಪು ಸೇನೆಯು ಪ್ರತ್ಯಕ್ಷ ಜರ್ಮನಿಯೊಳಗೇನೇ ನೃತ್ಯ ಸಂದೇಶವೊಯ್ಯಲಣಿಯಾಗಿರುವಂತೆ ಕಾಣುತ್ತಿದೆ. ಜರ್ಮನಿಯ ಸಾಮಗ್ರಿ ನಿರ್ಮಾಪಕ ಪ್ರಾಂತ್ಯವಾದ ಸಿಲೆಸಿಯಾದ ಹೆಬ್ಬಾಗಿಲಾಗಿ ಕ್ರಾಕೋವ್ ನಗರ ನಿಂತಿದೆ. ವಾರ್ಸಾದಿಂದ 115 ಮೈಲು ಪಶ್ಚಿಮಕ್ಕೆ ಕ್ರಾಕೋವಿನಿಂದ 90 ಮೈಲು ಈಶಾನ್ಯಕ್ಕಿರುವ ಸಾಂಡೋಮಿರ್ಸ್‌ನ ಬಳಿಯಲ್ಲಿ ವಿಸ್ತಾರ ಸಂಕಶಿರ ರಚಿಸಲ್ಪಟ್ಟಿದೆ ಕ್ರಾಕೋವಿಗೆ 63 ಮೈಲು ದೂರದ ಸ್ಟಾನ್ಸೋವು ರಶ್ಯಾನರ ವಶವಾಗಿದೆ. ಈ ನಡುವೆ ಕಾರ್ಪೇಥಿಯನ್ ಮತ್ತು ಕಪ್ಪು ಸಮುದ್ರಗಳ ಜರ್ಮನ್ ಸೇನೆಗಳ ಮಧ್ಯದ ಮುಖ್ಯ ಸರಬರಾಯಿ ರಸ್ತೆ ಕತ್ತರಿಸಲ್ಪಟ್ಟಿದೆ. ತೀರಾ ದಕ್ಷಿಣಗಡೆಯಲ್ಲಿ ಕಾರ್ಪೇಥಿಯನ್ ಪರ್ವತ ಮೂಲೆಯ ಜ್ಲೋನಿಕಾ ಕಣಿವೆಗಳನ್ನಾಕ್ರಮಿಸಿಕೊಂಡು ಹಂಗೇರಿಯನ್ ಸೇನೆಗಳನ್ನು ಝೆಕೊಸ್ಲೊವೇಕಿಯ ದೊಳಗೆ ರಶ್ಯನ್ ಸೇನೆ ಬೆನ್ನಟ್ಟುತ್ತಿದೆ

ಪೂರ್ವ ಪ್ರಶ್ಯಾ ಗಡಿಗೆ

ಕೇವಲ ಕೈ ಬೆರಳೆಣಿಕೆಯ ಮೈಲುಗಳ ವರೆಗೂ ರಶ್ಯನ್ ಸೇನೆ ಮುಂದೊತ್ತಿದೆ. ಅಲ್ಲಿಯ ಮಿಲ್ಯಾ ವಿಸ್ಕಿಸ್ ಅಥವಾ ಕೌನಾಸ್ ವಲಯಗಳ ಮೂಲಕ ಕೆಂಪು ಸೇನೆ ಪೂರ್ವ ಪ್ರಶ್ಯದೊಳಗೆ ಯಾವ ಮುಹೂರ್ತದಲ್ಲಾದರೂ ನುಗ್ಗಬಹುದು. ಮೇಲಿನ ಎರಡು ನೆಲೆಗಳ ಮಧ್ಯ ವಲಯವು ಕೆರೆ, ಗುಡ್ಡಗಾಡುಗಳಿರುವ ಅಸಾಧ್ಯ ಸ್ಥಳ. ಬಾಲ್ಟಿಕ್ ರಾಷ್ಟ್ರಗಳ ನಾಜೀ ಸೇನೆಗಳನ್ನು ಕತ್ತರಿಸಿ ಹಾಕಲು ಕೆಂಪು ಸೇನೆ ಹೂಡಿರುವ ಕತ್ತರಿ ಧಾಳಿಯೂ ಆಶ್ಚರ್ಯಕರ ಪ್ರಗತಿಯಲ್ಲಿದೆ. ರಿಗಾಕ್ಕೆ 30 ಮೈಲು ದೂರದ, ಪೂರ್ವ ಪ್ರಶ್ಯ ಮತ್ತು ಲೇಟ್ವಿಯಾದ ರಾಜಧಾನಿಯನ್ನು ಜೋಡಿಸುವ 5 ರೈಲ್ವೆಗಳ ಕೇಂದ್ರವಾದ ಮಿಟಾವು ರಶ್ಯಾನರ ಹಸ್ತಗತವಾಗಿದೆ. ಪೂರ್ವ ಪ್ರಶ್ಯ ಮತ್ತು ಬಾಲ್ಟಿಕ್ ರಾಷ್ಟ್ರಗಳೊಳಗಿನ ಸಂಬಂಧ ಕೇಂದ್ರಗಳನ್ನೆಲ್ಲಾ ಕೆಂಪು ಸೇನೆ ಕಡಿದು ಹಾಕಿರುವುದರಿಂದ ಜರ್ಮನರು ಅವಸರವಸರದಿಂದ ಅಲ್ಲಿಯ ಸೇನೆಗಳನ್ನು ಸಮುದ್ರ ಮೂಲಕ ಹಿಂದೊಯ್ಯುತ್ತಿದ್ದಾರೆ.

ನೋರ್ಮಂಡಿ ಮತ್ತು ಇಟಲಿ

ಫ್ರಾನ್ಸ್ ಆಕ್ರಮಣಾರಂಭವಾಗಿ ತಿಂಗಳೆರಡು ಕಳೆದವು. ಈಗೀಗ ಮಿತ್ರ ಸೇನೆಗಳ ವೇಗ ಆದಿಭಾಗಕ್ಕಿಂತ ಹೆಚ್ಚಿದಂತೆ ಕಾಣುತ್ತಿದೆ ಚೆರ್ಬೊರ್ಗ್ ಬಂದರದಿಂದ 100 ಮೈಲುಗಳಿಗೂ ಮಿಕ್ಕಿ ಅಮೇರಿಕನ್ ಸೇನೆ ಮುಂದೊತ್ತಿ ಹೋಗಿದೆ. ಮಿತ್ರ ಸೇನೆಗಳನ್ನು ಚೆರ್ಬೊರೋ ಅರ್ಧದ್ವೀಪದಲ್ಲಿ ಸುತ್ತುಗಟ್ಟಿ ನಿಲ್ಲಿಸುವ ತಮ್ಮ ಸರಹದ್ದು ಎಂದು ಜರ್ಮನರು ಜಂಭವಾಡುತ್ತಿದ್ದ ಕೆಯಿನ್—ಆವ್ರೇಂಚಸ್ ಲೈನಿನೊಳಗಡೆಗೂ ಈಗ ಮಿತ್ರ ಸೇನೆ ನುಗ್ಗಿದೆ. ತಮ್ಮ ರಕ್ಷಣಾ ಲೈನನ್ನು ಕಿರಿದುಗೊಳಿಸುವ ನೆವದಿಂದ ಜರ್ಮನರೀಗ ಅಲ್ಲಿಯ ಹೆಚ್ಚಿನ ಭಾಗದಿಂದ ಹಿಂದೆ ಸರಿದು ನಿಲ್ಲಬೇಕಾದ ಪ್ರಸಂಗ ಬಂದರೂ ಮಿತ್ರ ಸೇನೆಗಳಿನ್ನೂ ನುಗ್ಗಿ ಹೋಗುತ್ತಲೇ ಇವೆ. ಇಟಲಿಯಲ್ಲಿ ಫ್ಲೋರೆನ್ಸನ್ನು ಸ್ವಾಧೀನಪಡಿಸಿಕೊಳ್ಳಲು ಮಿತ್ರರು ಧಾವಿಸುತ್ತಿರುವದೊಂದನ್ನು ಬಿಟ್ಟರೆ ಬೇರೆ ವಿಶೇಷ ಘಟನೆ ನಡೆದಿಲ್ಲ. ಲೆಘೋರ್ನ್ ಮತ್ತು ಅಂಕೋನಾ ಬಂದರಗಳ ದುರಸ್ತಿಯಲ್ಲಿ ಮಿತ್ರ ಸೇನೆ ಸಮಯ ತೆಗೆದುದರಿಂದ ಜರ್ಮನ್ ಸೇನಾನಿ ಕೆಸ್ಸರ್ ಲಿಂಗನಿಗೆ ಅದರ ಹಿಂಬದಿಯ ತನ್ನ ಗೋಥಿಕ್ ಲೈನನ್ನು ಭದ್ರಪಡಿಸಿಕೊಳ್ಳಲು ಸಮಯ ಸಿಕ್ಕಿದಂತಿದೆ. ಫ್ಲೋರೆನ್ಸಿನ ಬಳಿಯ ಪೆಸಾ ನದಿಯನ್ನು ದಾಟಿ ಮುಂದೊತ್ತುವದರಲ್ಲಿ ಹಿಂದೀ ಸೇನೆ ಪ್ರದರ್ಶಿಸಿದ ಸಾಹಸವು ಮುಕ್ತ ಕಂಠದಿಂದ ಶ್ಲಾಘಿಸಲ್ಪಟ್ಟಿದೆ.

ಜಾಪಾನರ ಸೋಲು

ಈ ರೀತಿ ಜರ್ಮನಿಯ ದುರ್ದೈವವು ಮೂರು ಕಡೆಗಳಿಂದ ಬಾಯಿದೆರೆದಿರುವಾಗ ಜಾಪಾನಾದರೂ ನಿಶ್ಚಿಂತೆಯಲ್ಲಿದೆಯೆನ್ನೋಣವೆ? ಉತ್ತರ ಬರ್ಮದಲ್ಲಿ ಜಾಪಾನರ ಮುಖ್ಯ ನಿಲ್ದಾಣವಾಗಿದ್ದು, ಕಳೆದ 80 ದಿನಗಳಲ್ಲಿ ಏಕ ಪ್ರಕಾರ ಹೋರಾಟ ಸಾಗುತ್ತಿದ್ದ ಮಿಯಿಟ್ಕೀನಾವು ಈಗ ಜನರಲ್ ಸ್ಟಿಲ್‌ವೆಲ್ಲರ ವಶವಾದುದು ಪ್ರಾಮುಖ್ಯ ಯುದ್ಧ ಘಟನೆ. ಮಿಯಿಟ್ಕೀನಾ ಬರ್ಮಾದ ಉತ್ತರ ಮೂಲೆಯ ರೈಲು ನದಿ ವಾಹನಗಳ ಕೇಂದ್ರ ನೆಲೆಯಾಗಿದ್ದು, ರಕ್ಷಣಾ ಯುದ್ಧ ಅಥವಾ ಆಕ್ರಮಣ ಹೂಡಲು ಜಾಪಾನರಿಗಾ ಭಾಗದ ಏಕ ಮಾತ್ರ ಆಶ್ರಯಸ್ಥಾನವಾಗಿದ್ದಿತು. ಇದಕ್ಕೆ ಹೊಂದಿಕೆಯಾಗಿ ಚೀನಾ ಕಡೆಯಿಂದ ಮುಂದೊತ್ತಿದ ಚೀನೀ ಸೇನೆ ಟೆಂಗ್‌ಚುಂಗನ್ನು ವಶಪಡಿಸಿಕೊಂಡಿದೆ. ಇವೆರಡು ಪ್ರಯತ್ನಗಳು ಇದೇ ರೀತಿ ಮುಂದೊತ್ತಿ ನಡುವಿನ ಸುಮಾರು 60 ಮೈಲು ಸ್ಥಳಗಳನ್ನಾಕ್ರಮಿಸಿಕೊಂಡರೆ ಬರ್ಮಾ ರಸ್ತೆಯೊಂದು ತೆರೆಯಲ್ಪಡಲು ಸಾಧ್ಯವಿದೆ. ಅಸ್ಸಾಮು ಸರಹದ್ದಿನಲ್ಲಿ ಗಣನೀಯ ಯುದ್ಧ ಘಟನೆಗಳಿಲ್ಲ. ಶಾಂತ ಸಮುದ್ರದಲ್ಲಿ ಗುವಾಮಿನಲ್ಲಿ ಅಮೇರಿಕನ್ ಸೇನೆಗಳು ಪ್ರಗತಿ ಪಡೆದಿದ್ದು, ಉಳಿದುಳಿದ ಜಾಪಾನೀ ಸೇನಾಂಶವನ್ನು ನಿರ್ಮೂಲ ಮಾಡುವ ಕೊನೆಯ ಅಂಕದಲ್ಲಿವೆ ಎಂದು ತಿಳಿದು ಬರುತ್ತದೆ

ಟರ್ಕಿ-ಜರ್ಮನಿ ವಿಚ್ಛೇದ!

ಟರ್ಕಿ ಜರ್ಮನಿ ಸಂಬಂಧವಿಚ್ಛೇದ

ಹೀಗೆ ಯುದ್ಧ ಕಳೆಕೊಳ್ಳುತ್ತಿರುವ ಆಕ್ಸಿಸ್ ರಾಷ್ಟ್ರಗಳು ಪ್ರತಿಷ್ಠೆ ಕಳಕೊಳ್ಳುವದೂ ಸ್ವಾಭಾವಿಕ. ಹಿಟ್ಲರನ ಹಿಂದಿನ ವರ್ಚಸ್ಸೀಗ ಉಳಿದಿಲ್ಲವೆಂಬ. ದಕ್ಕೆ ಟರ್ಕಿಯು ಜರ್ಮನಿಯ ಸಂಬಂಧ ಕಡಿದುಕೊಂಡ ಅತಿ ಮುಖ್ಯ ಘಟನೆಯೊಂದು ನಿದರ್ಶನ. ಯುದ್ಧಾರಂಭದಿಂದ ಈ ವರೆಗೂ ಇಕ್ಕಡೆಯವರೊಡನೆಯೂ ಆರ್ಥಿಕ ವ್ಯವಹಾರ ಸಂಬಂಧವನ್ನಿಟ್ಟುಕೊಂಡು ನಂ. 1ನೇ ತಟಸ್ಥ ರಾಷ್ಟ್ರವಾಗಿದ್ದ ಟರ್ಕಿಯು ಅಗೋಸ್ತು 2ರಲ್ಲಿ ಜಾಹೀರಾಗಿ ಜರ್ಮನಿಯೊಡನದನ್ನು ಕಡಿದುಕೊಂಡಿತು ಜರ್ಮನಿಯೊಡನೆ ಆರ್ಥಿಕ ಮತ್ತು ವ್ಯವಹಾರ ಸಂಬಂಧಬಿಡಬೇಕೆಂದು ಇಂಗ್ಲಾಂಡು ಅಮೇರಿಕಗಳು ಕೇಳಿದವು—ಅದರಿಂದುಂಟಾಗಬಹುದಾದ ತೊಂದರೆಗಳ ನಿವಾರಣೆಗಾಗಿ ಟರ್ಕಿ ಯಾಚಿಸಿದ ಆರ್ಥಿಕ ಮತ್ತು ಯುದ್ಧೋಪಕರಣಗಳ ಸಹಾಯವನ್ನು ಮಿತ್ರ ರಾಷ್ಟ್ರಗಳು ಕೊಡಲೊಪ್ಪಿರುವವು—ಇದೇನೂ ಯುದ್ಧ ನಿರ್ಧಾರವಲ್ಲ—ಯುದ್ಧಕ್ಕಿಳಿಯುವದು ಜರ್ಮನಿಯ ಧೋರಣೆಯನ್ನಾಧರಿಸಿದೆ—ಎಂದು ಟರ್ಕಿ ಪ್ರಧಾನಿ ಸರಜೋಗ್ಲುರವರು ಘೋಷಿಸಿರುವರು. ಅಲ್ಲಿಯ ನಾಜೀ ರಾಯಭಾರಿ ವೋನ್‌ಪೇಪನರು ಬರ್ಲಿನಿಗೆ ಹೊರಟು ಹೋಗಿರುವರು ಪೇಪನರ ಹೇಳಿಕೆಯನ್ನಾಧರಿಸಿ ಟರ್ಕಿ ಸಂಬಂಧದ ಜರ್ಮನ್ ಧೋರಣೆಯು ರೂಪುಗೊಳ್ಳಲಿದೆ. ಕಳದ ವಾರ ಕಾಮನ್ಸ್ ಸಭೆಯಲ್ಲಿ ಮಿ. ಚರ್ಚಿಲ್ಲರು ಯುದ್ಧ ಸ್ಥಿತಿಯ ಕುರಿತು ಆಶಾದಾಯೀ ಭಾಷಣವಿತ್ತು ಜರ್ಮನಿಯ ಪತನವಾದೊಡನೆ ಜಾಪಾನಿನ ಅಂತ್ಯಕ್ಕೆ ಹೆಚ್ಚು ಸಮಯಬೇಕಾಗಿಲ್ಲವೆಂದು ಭರವಸೆಯಿಂದಾಡಿದ್ದಾರೆ. ಪೂರ್ವ ಸಮುದ್ರದ ಹಡಗ ಬಲವನ್ನು ಈ ವರ್ಷಾಂತ್ಯದೊಳಗೆ ಹೆಚ್ಚಿಸಿಕೊಳ್ಳುವೆವೆಂದಿದ್ದಾರೆ. ವಿಜಯೋದಯವಾಗುತ್ತಿರುವದನ್ನರಿತ ಮಿ. ಚರ್ಚಿಲ್ಲರ ಉದಯರಾಗವಿದು ಎಂಬಷ್ಟು ಅವರ ಈ ಬಾರಿಯ ಭಾಷಣದಲ್ಲಿ ಭರವಸೆ ತುಂಬಿದ್ದಿತು.

38 ವರ್ಷಗಳ ಹಿರಿತನ

1906ನೆ ಇಸವಿ ಜುಲೈ 1ನೇ ತಾರೀಕಿನಲ್ಲಿ ಸ್ಥಾಪಿತವಾಗಿ ಕೆನರಾ ಬ್ಯಾಂಕು ಇಂದಿಗೆ 38 ವರ್ಷ ವಯಸ್ಸು ಹೊಂದಿದೆ. ನಾವು 38 ವರ್ಷ ವಯಸ್ಸಿನವರೆಂಬುದೆ ನೀವು ನಮ್ಮೊಡನೆ ವಹಿವಾಟ ನಡೆಸಲು ಸಾಕಾದ ಕಾರಣವಾಗಲಾರದು.

ಆದರೆ ಈ 38 ವರ್ಷಗಳು ಇತಿಹಾಸದಲ್ಲಿ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿವೆ—ಎರಡು ಮಹಾ ಯುದ್ಧಗಳು—ಲೋಕವು ಹಿಂದೆಂದೂ ಕಾಣದ ಆರ್ಥಿಕ ಮುಗ್ಗಟ್ಟು—ಈ ಮೊದಲು ಆಗದ ಬ್ಯಾಂಕುಗಳ ಸಂಧಿಗ್ಧಾವಸ್ಥೆ—ಶ್ಯೇರು ಮಾರ್ಕೆಟುಗಳ ಕಂಗಾಲಾವಸ್ಥೆ—ಇತ್ಯಾದಿ.

ಒಂದು ಬ್ಯಾಂಕು ಈ ಎಲ್ಲಾ ಭಯಂಕರ ಹಲ್ಲೋಲಗಳಿಂದ ಎದೆಗುಂದದೆ ಪಾರಾಗಿರುವುದಾದರೆ—ಈ ಕಠಿಣ ಅನುಭವಗಳಿಂದ ಪ್ರಯೋಜನವನ್ನೇ ಹೊಂದಿ ತನ್ನ ಪ್ರಾಮುಖ್ಯತೆಯನ್ನೂ ವಿಶಾಲತೆಯನ್ನೂ ಮತ್ತೂ ಬೆಳೆಸಿರುವುದಾದರೆ—ಆ ಬ್ಯಾಂಕೇ ನಿಮ್ಮ ವಿಶ್ವಾಸಕ್ಕೆ ಯೋಗ್ಯವಾದದ್ದು.

ನಾವು ನಮ್ಮ ಹಿರಿತನದಿಂದ ಶ್ರೇಷ್ಠರಾದುದಲ್ಲ, ನಮ್ಮ ಶ್ರೇಷ್ಠತನದಿಂದ ನಾವು ಹಿರಿಯರಾಗಿದ್ದೇವೆ.

ESTD 1906

Canara Bank, Limited.

ಕ್ರೌನ ರಬರ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

ESTD 1906

Approved firm by the Govt. of Mysore.
Certified by the Agent of the Govt. of India in Ceylon.

ತಾರುಣ್ಯ

ಕಳೆಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣಿ ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು,

ಪುತ್ತೂರು ಏಜಂಟರು: – ಪೈ ಫಾರ್ಮಸಿ

CHAMPAE'S

Snow & Castrex

(Sole Distributers for (India.)

Sukhananda Stores

Santhekatte, UDIPI, S. K.

ವ್ಯಕ್ತಿ ಚಿತ್ರ

ರಾಜಾಜಿ—ಅಸಾಧ್ಯ ಮನುಷ್ಯ!

ಇಡೀ ಹಿಂದುಸ್ಥಾನದಲ್ಲಿ ಬ್ರಿಟಿಷರ ಕಿವಿಯರಳಿಸಬಲ್ಲ ವ್ಯಕ್ತಿಗಳಿರುವದು ನಾಲ್ಕೇ ಮಂದಿ—ಅವರ ಕಿವಿಗಿಂಪಾಗಬಲ್ಲ ನಾದದಿಂದ ಮಿ. ಜಿನ್ನ, ಅವರಿಂದ ಧಿಕ್ಕರಿಸಲಾಗದಂತಹ ತೂಕದ ಮಾತಿನಿಂದ ಸರ್ ಸಪ್ರು, ಅವರಿಗಸಹನೀಯವಾಗುವ ಸಶಕ್ತ ಬೇಡಿಕೆಯ ಮೂಲಕ ಮ. ಗಾಂಧಿ; ಅವರ ಮನಸ್ಸಾಕ್ಷಿಯನ್ನೇ ಕಲುಕಿಸಿಬಿಡುವ ಯುಕ್ತಿವಾದದಿಂದ ರಾಜಾಜೀ.

ಭಾರತೀಯರಿಂದ ಮಿ. ಜಿನ್ನ ಬೆಂಬಲ ಅಥವಾ ವಿರೋಧ ಗಳಿಸಬಲ್ಲರು. ಸರ್. ಸಪ್ರು ಗೌರವ ಪಡೆಯಬಲ್ಲರು. ಮ. ಗಾಂಧಿ ಪೂಜ್ಯತೆಯೊಂದನ್ನೇ ಪಡೆಯಬೇಕು. ಆದರೆ ರಾಜಾಜಿ?—ಅವರು ಪಡೆಯುವದು ವಿಜಯವನ್ನು!

ಭಾರತವು ಸ್ವತಂತ್ರವಾಗುವದೆಷ್ಟು ಸತ್ಯವೋ, ಪಾಕಿಸ್ಥಾನ ನಿರ್ಮಾಣವು ಇನ್ನು ಅಷ್ಟೇ ಸತ್ಯ. ಅದಕ್ಕೆ ಅಸ್ತಿತ್ವ ದೊರೆತಾಯಿತು; ಆಕಾರರೂಪುಗೊಳ್ಳುವದೊಂದೇ ಬಾಕಿ. ಇದರ ನಿರ್ಮಾಣವಾರಿಂದ? ಮಿ. ಜಿನ್ನರು ಮತ್ತವರ ಮುಸ್ಲಿಂಲೀಗಿನಿಂದಲೋ? ಸ್ವಾತಂತ್ರ್ಯ ಸಂಪಾದನೆಗಿಂತ ಪಾಕಿಸ್ಥಾನ್ ಸಂಪಾದನೆಯು ಸುಲಭಕಾರ್ಯವಲ್ಲ. ದೇಶ ಸ್ವಾತಂತ್ರ್ಯವನ್ನು ರಕ್ತದ ಕೋಡಿ ಹರಿಸಿಯೂ ಸಾಧಿಸಲಾಗದಿರುವಾಗ, ಪಾಕಿಸ್ಥಾನಕ್ಕಾಗಿ ಹನಿರಕ್ತ ಚೆಲ್ಲದ ಲೀಗು ಅದನ್ನು ಸಾಧಿಸಿಕೊಂಡಿತೆಂದರದು ಪೂರ್ಣ ಅಬದ್ಧವೇ ಸರಿ. ರಾಜಾಜಿಯ ಚಾತುರ್ಯವದನ್ನು ಸಾಧಿಸಿಕೊಟ್ಟಿತು. ಮಿ. ಜಿನ್ನರಲ್ಲಿ ಮಾನವ ಸಹಜ ಕೃತಜ್ಞತೆಯಿದ್ದರೆ ಪಾಕಿಸ್ಥಾನ್ ಪಾರ್ಲಿಮೆಂಟ್ ಭವನಕ್ಕೆ 'ರಾಜಾಜೀ ಹೋಲ್' ಎಂಬ ಹೆಸರಿಡದಿರಲಾರರು!

ಅವರ ಎದೆಗಾರಿಕೆ

ರಾಜಾಜೀ ಈಗ ತಾನೇ ತೇರ್ಗಡೆಯೊಂದಿರುವ ಈ ಪರೀಕ್ಷೆಯೆಷ್ಟು ಕಠಿಣವಾಗಿತ್ತೆಂಬುದನ್ನು ಊಹಿಸಿದರೆ ಅವರ ಎದೆಗಾರಿಕೆ ಹಾಗೂ ಆತ್ಮವಿಶ್ವಾಸದ ಪರಿಚಯವಾಗದಿರದು. ಮದ್ರಾಸಿನ ಕಾಂಗ್ರೆಸ್ ಲೆಜಿಸ್ಲೇಟಿವ್ ಪಕ್ಷದ ವತಿಯಿಂದ ಪಾಕಿಸ್ಥಾನ್ ತತ್ವಸ್ವೀಕಾರವನ್ನು ರಾಜಾಜೀ ಪ್ರಥಮತಃ ಕಾಂಗ್ರೆಸಿಗೆ ಶಿಫಾರಸು ಮಾಡಿ ಕಳುಹಿದೊ... ನುಗ್ಗಿದ ಹುಲಿಯೆಂಬಂತದನ್ನು ಕಾಂಗ್ರೆಸಿಗರೆಲ್ಲಾ ಬೇಟೆಯಾಡಿದರು. ಮೌಲಾನಾ ಅಜಾದರು ಕಿಡಿ ಕಾರಿದರು. ಪಂಡಿತ ನೆಹರು ಆರ್ಭಟಿಸಿದರು, ಮಹಾತ್ಮಾಜೀ ಅಸಂದಿಗ್ಧವಾಣಿಯಲ್ಲಿ ಖಂಡಿಸಿದರು. ತತ್ಫಲವಾಗಿ, ವರ್ಕಿಂಗ್ ಕಮಿಟಿಯ ಅ. ಭಾ. ಸಮಿತಿಯ ಹಾಗೂ ಕಾಂಗ್ರೆಸಿನಲ್ಲಿದ್ದ ತನ್ನ ಎಲ್ಲಾ ಸ್ಥಾನಮಾನಗಳನ್ನೂ ರಾಜಾಜೀ ಕಳಕೊಳ್ಳಬೇಕಾಯಿತು. ಈ ಹೊಡೆತವೆಷ್ಟು ಭೀಕರವೆಂಬ ದಕ್ಕೆ ರಾಷ್ಟ್ರಭೂಷಣ ಸುಭಾಸ್, ವೀರ ನರಿಮನ್, ಡಾ| ಖಾರೆಯವರ ಈಗಿನ ಜೀವಮಾನಾಗಳೇ ನಿದರ್ಶನ. ರಾಜಾಜೀ ನುಂಗಿ ಜೀರ್ಣಿಸಿಕೊಂಡ ಈ ಹೊಡೆತದಿಂದಾಗಿಯೇ ಸುಭಾಸರು ಜಾಪಾನಿಗೆ ನೆಗೆದರು—ನರಿಮನ್ ಅಜ್ಞಾತವಾಸ ಕೈಗೊಂಡರು—ಖರೆ ವೈಸರಾಯಿ ಕೌನ್ಸಿಲ್ ಸೇರಿದರು. ಬ್ರಿಟಿಷ್ ಸಾಮ್ರಾಜ್ಯಶಕ್ತಿಯೇ ಬಾಯಿದೆರೆದು ಬಿದ್ದರೂ ಬೋಸ್, ನರಿಮನರ ರಾಷ್ಟ್ರೀಯ ಸ್ಫೂರ್ತಿ ಮುರಿಯಲ್ಪಡುವಂತಹದಲ್ಲ—ಆದರೆ ಕಾಂಗ್ರೆಸ್ ಶಿಸ್ತು ಅದನ್ನು ತುಂಡರಿಸಿತು. ಅದನ್ನೂ ಗೆದ್ದವರೆಂದರೆ ರಾಜಾಜಿಯೊಬ್ಬರೇ. ಬಹಿಷ್ಕೃತ ಆಚಾರ್ಯರಿಗೆ ಬೋಸ್ ನರಿಮನರಿಗಿದ್ದ ಜನಸಹಾನುಭೂತಿಯಾದರೂ ಇದ್ದಿತೆ? ಮಧುರೆಯ ಸಭೆಯಲ್ಲಿ ಹಲವು ಕೈಗಳು ಅವರ ಶರ್ಟು ಹರಿದವು; ಬೊಂಬಾಯಿಯಲ್ಲಿ ಮುಖಕ್ಕೆ 'ಟಾರು' ಬಿತ್ತು. ತಾನು ಮಾಡಿದ ಶಿಫಾರಸನ್ನು ತಾನೇ ಅಲ್ಲಗಳೆದು ಮದ್ರಾಸ್ ಕಾಂಗ್ರೆಸ್ ಪಕ್ಷವೂ ತನ್ನ ನಾಯಕನ ಮುಖಕ್ಕೆ ಮಂಗಳಾರತಿ ಹಿಡಿಯಿತು. ಇಂತಹ ಪ್ರತಿಕೂಲ ಸ್ಥಿತಿಯಲ್ಲಾದರೂ ರಾಜಾಜಿ ಹೆಜ್ಜೆ ಹಿಂದಿಟ್ಟರೆ? ಅವರ ಸಂಧಿ ಗೆದ್ದಿದೆ—ಈಗ ಎಲ್ಲರೂ ತಪ್ಪು, ರಾಜಾಜಿ ಮಾತ್ರ ಸರಿ! 'ದೇಶ ವಿಭಾಗವೊಂದು ಪಾಪ'ವೆಂದಿದ್ದ ಗಾಂಧಿಜೀಯೇ ಈಗ ಪಾಪಿ! ದಾಕ್ಷಿಣ್ಯವೇಕೆ—ಎಲ್ಲರ ಪಂದವೂ ಚಂಚಲ, ರಾಜಾಜಿಯೊಬ್ಬನದೇ ಅಚಲ!

ಅವರ ಚಾತುರ್ಯ

ರಾಜಾಜೀ ವಿಜಯದ ಗುಟ್ಟೇನು? ಅದು ಚಾತುರ್ಯಕ್ಕಾದ ಜಯ. ಸತ್ಯಕ್ಕೂ ಆಚಾರ್ಯರು ಆಂದೋಲನಕ್ಕೆ ಹೇಳಿಸಿದ ಜನವಲ್ಲ. ಗಾಂಧಿಜೀಯ ಹೆಚ್ಚಿನ ಚಳವಳಿಗಳಲ್ಲಿ ರಾಜಾಜೀ ಭಾಗವಹಿಸಿದುದಿದೆ. ಆದರೆ ಹೋರಾಟ ರಂಗಗಳಲ್ಲಿ ಅವರ ಸಾಹಸ ಒಬ್ಬ ಸಾಮಾನ್ಯ ಸ್ವಯಂಸೇವಕನಷ್ಟೆ. ವ್ಯವಹಾರ ರಂಗದಲ್ಲೋ?—ಈ ಮದ್ರಾಸೀ ಪ್ರಮುಖನನ್ನು ಸರಿಗಟ್ಟುವ ಮತ್ತೊಬ್ಬನಿರುವದು ಅಸಾಧ್ಯ. ಈ ವರ್ಗದವರಿಂದ 'ಪಾಕಿಸ್ಥಾನದಂತಹ ಅಡಿಮೇಲುಗಳ ಹೊರತು' ಬೇರಾವ ಕ್ರಾಂತಿಯೂ ನಿರ್ಮಾಣವಾಗದು. ಪಾಕಿಸ್ಥಾನವು ರಾಜಾಜಿಯ ಅಪೇಕ್ಷೆಯಲ್ಲ—ಆವಶ್ಯಕತೆ ಮಾತ್ರ. ತಮ್ಮ ಕಾರ್ಯಸಿದ್ಧಿಗಾಗಿ ಕಷ್ಟಾಪಮಾನಗಳನ್ನು ಸಹಿಸಿಕೊಂಡು ಗುರಿದೊರೆತಾಗ ಹೊಡೆಯುವ ಮರ್ಮಜ್ಞಾನವು ಆಚಾರ್ಯರಂತಹ ವ್ಯವಹಾರ ನಿಪುಣರಲ್ಲಿರಲೇ ಬೇಕಾದ ಗುಣ. ಮಹಾತ್ಮಾಜೀ 21ದಿನ ಉಪವಾಸದಲ್ಲಿದ್ದಾಗ ಈ ಕಿರಿಮೂರ್ತಿ ಆಗಾಖಾನ್ ಅರಮನೆ ನುಗ್ಗಿತು; ಗಾಂಧಿಜೀಯನ್ನು ಯುಕ್ತಿವಾದದಿಂದ ಸೋಲಿಸಿತು. ಮುಸಲ್ಮಾನರಿಗೆ ದಸ್ಕತ್ತು ಮಾಡಿ ಖಾಲಿ ಚೆಕ್ ಕೊಡುವೆನೆಂದಾಡಿದ್ದ ಗಾಂಧಿಜೀಯ ಮಾತು——ಎಲ್ಲರಿಗೂ ಸ್ವನಿರ್ಧಾರದ ಹಕ್ಕನ್ನಿತ್ತಿರುವ ಕಾಂಗ್ರೆಸ್ ಆಶ್ವಾಸನೆ—ಜಾತಿ ಜಗಳ ತೀರ್ಮಾನದ ಆವಶ್ಯಕತೆ ಮೊದಲಾದ ಸಜೀವ ದಾಖಲೆಗಳನ್ನು ಮುಖದೆದುರು ಹಿಡಿದು 'ಏನನ್ನುವಿರಿ?' ಎಂದು ಪ್ರಶ್ನಿಸಿದರೆ ಗಾಂಧಿಜೀ 'ಊಹೂಂ' ಅನ್ನುವದು ಹೇಗೆ? ಬೇರಾವ ರೀತಿಯಿಂದ ಹಿಂದೂ—ಮುಸ್ಲಿಂ ಪ್ರಶ್ನೆ ಬಗೆಹರಿಸಬಹುದು? ಸರಿ. ನಿರ್ವಾಹವಿಲ್ಲದೆ ಪಾಕಿಸ್ಥಾನ್ ತತ್ವಕ್ಕೆ ಮಹಾತ್ಮರೊಪ್ಪಿದರು. ಆ ಒಪ್ಪಿಗೆಯೊಡನೆ ತಾನು ಕಳಕೊಂಡುದೆಲ್ಲವನ್ನೂ ಮರಳಿ ಪಡೆದೆನೆಂದು ರಾಜಾಜೀಗೆ ಗೊತ್ತು. 'ರಾಜಾಜೀ ರೈಟ್' ಎಂದಾದಾಗ ದೇಶ ತುಂಬಾ ಗಲಿಬಿಲಿಯೆದ್ದಿದೆ—ಇಡೀ ರಾಷ್ಟ್ರ ದಿದಿರು ಅಪರಾಧಿಯಾಗಿದ್ದಾಗ ರಾಜಾಜಿಯೊಂದಿಂಚು ಅಲುಗಾಡಿದುದಿದೆಯೇ? ಇದೀಗ ಈ ಕಿರಿಮೂರ್ತಿಯ ಸಾಮರ್ಥ್ಯ!

ಗೆದ್ದೇ ಬಿಟ್ಟರು!

ಮಿ. ಜಿನ್ನರಿಂದಾದುದು 'ಪಾಕಿಸ್ಥಾನ್ ಸ್ಫೂರ್ತಿ'ಯ ನಿರ್ಮಾಣ ಮಾತ್ರ—ಅದರ ಸಮಂಜಸತೆ, ಆವಶ್ಯಕತೆ, ಆಕಾರಗಳನ್ನು ಮುಂದಿಟ್ಟುಮಾಡಿದವರು ಆಚಾರ್ಯರೊಬ್ಬರೇ. ಒಂದು ರೋದನವನ್ನೆಸಿದ್ದ, ಪಾಕಿಸ್ಥಾನ್ ಕರೆಗೆ ಆಚಾರ್ಯರು ಶ್ರುತಿ ಹಿಡಿದು ಗಾಯನವನ್ನೆಸಿದರು. ಪಾಕಿಸ್ಥಾನ್ ಪ್ರಯೋಗದ ವಿಧಾನಗಳನ್ನು, ಜಿನ್ನರೂ ಆಚಾರ್ಯರಿಂದ ಕಲಿಯಬೇಕು. ಅವುಗಳಿಗೆ ಬರುವ ಆಕ್ಷೇಪಗಳನ್ನಂತೂ ಆಚಾರ್ಯರ ವಾದವೇ ಅಡ್ಡಗಾಲಾಗಿ ಕಡವಬೇಕು. ಹೀಗೆ ರಾಜಾಜಿಯ ವಕಾಲತಿನಿಂದ ಪಾಕಿಸ್ಥಾನ್ ವ್ಯಾಜ್ಯ ಗೆದ್ದಿತು. ಅನ್ಯಾಯವೇನೋ ಆಯಿತು, ಆದರೆ ಹಾಗಾಯಿತೆಂದು ತಿಳಿಸುವ ಬಗೆ ಹೇಗೆ? ಅದಿ ಇಲ್ಲವೇ ಮಾಡಿ ತಿಳಿಸಲು ರಾಜಾಜಿಯ ಚಾತುರ್ಯದಿದಿರು ಅಸಾಧ್ಯ; ಅನ್ಯಾಯವಾದುದನ್ನು ಅನುಭವಿಸಿಯೇ ತಿಳಿಯಬೇಕು. ರಾಜಾಜಿಯ ಚಾತುರ್ಯಕ್ಕೆ ಹಣೆಬಡಿದುಕೊಂಡು 'ಸಲಾಂ' ಕೊಡಬೇಕು!

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗೊಡುವುದು, ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು, ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3|- ಕೈಮೀರಿದ ಕೇಸುಗಳಿಗೆ ರೂ 5, (ವಿ ಪಿ 12ಆಣೆ ಅಲಾಯಿದ)

Mrs P DEVEE, F, D, S, (N)
TOLLYGUNGE, CALCUTTA
ಸ್ಟಾಕಿಸ್ಟ್ Popular Stores,
P, B, 60, MANGALORE
Shah Co, Mangalore

WANTED.

Wanted a Candidate for a Lady Instructor's post in the W. A. R. P. C. Pay Rs 50/- 5/2—75—+ conveyance allowance Rs 7—8—0 Applications may be sent before 15-8-44 to—

Mrs. Shambavi, R. Punja Branch Leader W. A. R. P. C.

MANGALORE, 3-8-1944 } Ram Bhavan, Mangalore

ಜಾಹೀರು ಪ್ರಕಟಣೆ

ದಿ ವಾರ್ಡನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್—

ಇದರ ಪೊಲಿಸಿದಾರರ ಹಾಗೂ ಪ್ರತಿನಿಧಿಗಳ ಸೌಕರ್ಯಕ್ಕಾಗಿ ಸದ್ಯವೇ **ಮಂಗಳೂರಲ್ಲಿ** ಬ್ರಾಂಚ್ ಆಫೀಸೊಂದು ತೆರೆಯಲ್ಪಡಲಿದೆಯೆಂದು ತಿಳಿಸಲು ತುಂಬಾ ಸಂತೋಷವೆನಿಸುತ್ತದೆ. ಪಶ್ಚಿಮ ಕರಾವಳಿಯಲ್ಲಿ ಕಂಪೆನಿಯು ದಿನೇ ದಿನೇ ಜನಪ್ರಿಯವಾಗಿ ಬರುತ್ತಲಿರುವುದರಿಂದ ಕಂಪೆನಿಯ ಇನ್ಸ್‌ಪೆಕ್ಟರಾಗಿ ಆಕರ್ಷಕ ಪಗಾರದಿಂದ ಕೆಲಸಮಾಡಲಿಚ್ಛಿಸುವವರಿಗೆ ಸುಸಂಧಿ

ಇಂದೇ ಬರೆಯಿರಿ.-

ಶ್ರೀ. ಎಮ್. ಸುಂದರರಾಮ ಸೆಟ್ಟಿ.

ಏಜನ್ಸಿ ಮೆನೇಜರ್

ವಾರ್ಡನ್ ಹೌಸ್

ಸರ್ ಫಿರೋಜ್‌ಷಾ ಮೆಹತಾ ರೋಡ್

ಫೋರ್ಟ್, ಬೊಂಬಾಯಿ

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 68/1944.

1, ತುಂಗಮ್ಮ ಶೆಟ್ಟಿ 2 ವಿಠಲ ಶೆಟ್ಟಿ 3 ನಾರಾಯಣ ಸೆಟ್ಟಿ, 4 ಬಲದ ಶೆಟ್ಟಿ } ಅರ್ಜಿದಾರರು,

ಬಾಗಿ ಸೆಟ್ಟಿ ರಾಮಯ ಸೆಟ್ರ, ಸೊಸ. ಕಾರ್ಕಳ ತಾಲ್ಲೂ, ಹಿರ್ಗಾನಗ್ರಾಮದಲ್ಲಿರುವವರು } ಎದ್ರಿ.

ಎದ್ರಿಗೆ ವ ಇತರ ಸಮಸ್ತರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ 1ನೇ ಅರ್ಜಿದಾರಳ ಗಂಡ, 2ನೇ ಬಾಗ್ಯಾತಿನ ಅರ್ಜಿದಾರರ ತಂದೆ ವ ಎದ್ರಿಯ ಮಾವ ಪಾಲಿಚ್ಛಿಕ ಸೆಟ್ಟಿ ರಾಮಯ ಸೆಟ್ಟರು ವಾದಿಯಾಗಿ ಉಡ್ಪಿ ಡಿ. ಮು. ಕೋರ್ಟಿನ O S No 218/1940ಕ್ಕೆ ಶಿವರ ಮಟ್ಟಾರ ಅಕ್ಕಮ್ಮ ಸೆಟ್ಟಿ ವ ಸೇಸು ಸೆಟ್ಟರ ಮೇಲೆ ಪಡದ ಡಿಕ್ರಿಯ ಅಯಿವೇಜನ್ನು ವಸೂಲು ಪಡೆಯುವರೆ ಸದ್ರಿ ರಾಮಯ ಸೆಟ್ಟರು ತಾ 15 10-1938ರಲ್ಲಿ ಬರೆದಿಟ್ಟದ್ದ ವಿಲುನಾಮ ಪ್ರಕಾರ 1ನೇ ಅರ್ಜಿದಾರಳು ಹಕ್ಕುದಾರಳಾದ್ದರಿಂದ ಸದ್ರಿ ಡಿಕ್ರಿಯ ಅಯಿವೇಜನ್ನು ವಸೂಲು ಮಾಡುವ ಬಗ್ಗೆ ಅಗತ್ಯವಾದ ಸಾಕ್ಸೆಸು ಸರ್ಟಿಫಿಕೇಟನ್ನು ತನ್ನ ಬಗ್ಗೆ 1ನೇಯವಳ ಹೆಸರಲ್ಲಿ ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಈ ಅರ್ಜಿಯ ತನ್ನಿಖೆಯು ತಾ 29 8 1944ಕ್ಕೆ ಇರುವುದರಿಂದ ಈ ಕುರಿತು ಆಕ್ಷೇಪವುಳ್ಳವರು ಆ ದಿನ ಬೆಳಗ್ಗೆ 10ಘಂಟೆಗೆ ಸದರಿ ಕೋರ್ಟಿನಲ್ಲಿ ಹಾಜರಾಗಿ ಅವರ ಆಕ್ಷೇಪಗಳನ್ನು ಹೇಳತಕ್ಕದ್ದು. ತಪ್ಪಿದರೆ ಸದರಿ ಅರ್ಜಿಯು ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲಾಗುವದು. ತಿಳಿದಿರಲಿ

(By order of the Court)

P V Upadhayya,
B. A., LL. B.,
Vakil for petitioners

ಕಾರ್ಕಳ, 3 8 1944

The Canara Banking Corporation Limited.

ESTD 1906.

Authorised Capital	....	Rs. 25 00,000/-
Subscribed Capital	...	,, 16,00,000/-
Paid up Capital		,, 13 72,900/-
Reserves	....	,, 4 10 000/-

Total Working Capital—xEceeds One Crore.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers

ಉಡುಪಿ, ಗುರುವಾರ ೧೦-೮-೧೯೪೪

ಹಳ್ಳಿಗರ ದುರವಸ್ಥೆ.

ಇಂದಿನ ಅಕ್ಕಿಭತ್ತ ನಿಯಂತ್ರಣದಿಂದಾಗಿ ಮುಖ್ಯವಾಗಿ ಸಂಬಂಧಪಟ್ಟ ಅಧಿಕಾರಿಗಳ ವರ್ತನೆಯಿಂದಾಗಿ ದಕ್ಷಿಣ ಕನ್ನಡದ ಹಳ್ಳಿಗಳಲ್ಲುಂಟಾಗಿರುವ ಆಹಾರಾಭಾವದ ಕುರಿತು ಹೃದಯ ಕರಗಿಸುವ ಹಲವು ದೂರುಗಳು ನಮ್ಮೆಡೆಗೆ ಬರುತ್ತಿವೆ ಕಾಲಸ್ಥಿತಿಗನುಗುಣವಾಗಿ, ಧಾನ್ಯ ರೆಕ್ವಿಜಿಶನ್ ಮತ್ತು ನಿಯಂತ್ರಣ ಬೆಲೆಯಲ್ಲಿ ಅದರ ವಿತರಣೆಯಾಗುವ ಕ್ರಮವು ಇಳಿಬಿಡದೆ ಜ್ಯಾರಿಗೆ ಬರಬೇಕು ಎಂಬುದನ್ನು ನಾವು ಕಂಠೋಕ್ತವಾಗಿ ಅನುಮೋದಿಸುತ್ತಾ ಬಂದಿದ್ದೇವೆ. ಆದ್ದರಿಂದ ಕಾಲಾನುಗುಣ ಸಂಕಷ್ಟವಾವುದು, ಅಧಿಕಾರಿಗಳ ಅತಿರೇಕ ವರ್ತನೆಯಿಂದುಂಟಾಗಿರುವ ದುಸ್ಥಿತಿಯಾವುದು ಎಂಬುವನ್ನು ತೂಗಿ ನೋಡಿಯೇ 'ಹಳ್ಳಿಗರಿಗೆ ಅಕ್ಷಮ್ಯ ಅನ್ಯಾಯವಾಗುತ್ತಿದೆ' ಎಂದು ಕೂಗಿ ಹೇಳುವ ಆವಶ್ಯಕತೆ ನಮಗೊದಗಿದೆ. ಹಳ್ಳಿಗಳ ಇಂದಿನ ಯಥಾರ್ಥ ಸ್ಥಿತಿಯ ಮೇಲಿಂದ 'ಬಂಗಾಳದ ಬರಗಾಲದಿಂದ ನಮ್ಮಲ್ಲಿಯ ಅಧಿಕಾರಿಗಳು ಪಾಠ ಕಲಿತಿರುವದು ನಿಜವೆ?' ಎಂದು ಪ್ರಶ್ನಿಸ ಬೇಕಾಗುತ್ತದೆ ಇಲ್ಲಿ ಕಲಿಯಲಿಕ್ಕಿರುವ ಅಂಶವಿಷ್ಟೆ. ಬಂಗಾಳದ ಹಳ್ಳಿಗರು ಕಲ್ಕತ್ತದ ರಸ್ತೆಗಳಲ್ಲಿ ಬಿದ್ದು ಹುಳಗಳಂತೆ ಸಾಯುವ ಬದಲಿಗೆ ತಮ್ಮ ಅಜ್ಞಾತ ಗುಡಿಸಲುಗಳಲ್ಲೇ ನರಳಿ ಸಾಯುತ್ತಿದ್ದರೆ 'ಬಂಗಾಳದಲ್ಲಿ ಬರಗಾಲವಿದೆ' ಎಂದು ಪ್ರಪಂಚಕ್ಕೆ ತಿಳಿಯುತ್ತಿರಲಿಲ್ಲ. ಹಳ್ಳಿಗಳಲ್ಲಾಗುವದೂ ಸರಕಾರ ಮತ್ತು ಜನಪ್ರಮುಖರಿಗೆ ತಿಳಿಯುತ್ತಿದ್ದರೆ ಬಂಗಾಳದ ಬರಗಾಲವು ಇಷ್ಟೊಂದು ಭೀಕರವಾಗುವವರೆಗೆ ಅವರು ಕಾಯುತ್ತಿರಲಿಲ್ಲ. ದಕ್ಷಿಣ ಕನ್ನಡದ ಇಂದಿನ ಸ್ಥಿತಿಯು, ಬಂಗಾಳದಿಂದ ನಾವು ಪಾಠ ಕಲಿತಿಲ್ಲವೆಂಬುದಕ್ಕೊಂದು ನಿದರ್ಶನ. ನಮ್ಮೀ ವಾದದ ಜೀವಂತ ದಾಖಲೆಯಾಗಿ ಹಳ್ಳಿಗಳ ದುಸ್ಥಿತಿಯೇ ಕಣ್ಣಮುಂದಿರುವಾಗ ಅದರ ದೃಷ್ಟಾಂತಗಳನ್ನೆತ್ತಿ ತೋರಿಸುವ ಬದಲಿಗೆ 'ದಯಮಾಡಿ ಹಳ್ಳಿಗಳಿದು ನೋಡಿರಿ' ಎಂದು ಅಧಿಕಾರಿಗಳನ್ನು ಆಮಂತ್ರಿಸುತ್ತೇವೆ ದಕ್ಷಿಣ ಕನ್ನಡದ ಇಂದಿನ ಮಾನ್ಯ ಕಲೆಕ್ಟರರು, ತನ್ನ ಸ್ಥಾನಕ್ಕನಿವಾರ್ಯವಾದ ಸಂಪ್ರದಾಯಬದ್ಧ ಕಾರ್ಯರೀತಿಗಳಿಂದಲೇ ತೃಪ್ತಿ ಹೊಂದುವವರಲ್ಲಿ ಸ್ಥಾನಾಪನ್ನರಲ್ಲಪರೂಪವಾಗಿರುವ ಜನೋಪಕಾರದ ಒಂದು ವಿಶೇಷ ಹುರುಪಿದ್ದವರು ದಕ್ಷಿಣ ಕನ್ನಡಕ್ಕೆ ಬಂದಂದಿನಿಂದ ಲಾಭಖೋರತನದ ಮೇಲೆ ಅವರು ಹೂಡಿರುವ ಬಹುಮುಖ ಹೋರಾಟವು ಶ್ಲಾಘನೀಯ ವಿಜಯ ಪಡೆದಿದೆ. ಅದರಲ್ಲೂ ಅವರು ಸ್ವತಃ ಸೇನಾನಿತ್ವ ವಹಿಸಿ ಜನರ ಜೀವನಾವಶ್ಯಕ ಕೊಡಕೊಂಡವನ್ನು ತನ್ನ ವ್ಯಕ್ತಿಗತ ಪ್ರಭಾವದಿಂದ ಸುಧಾರಿಸಲು ಶಕ್ತರಾದುದರಿಂದ ಜನತೆಯ ಹೃದಯದಲೊಂದು ಸ್ಥಾನಗಳಿಸಿದಂತೆ ಕಾಣುತ್ತಿದೆ ಇಂಥವರು ಪರೀಕ್ಷಾರ್ಥವಾಗಿ ಒಂದೆರಡು ಹಳ್ಳಿಗಳನ್ನಾದರೂ ಸಂದರ್ಶಿಸಬಾರದೇಕೆ? ಈ ಕಾಲದಲ್ಲಿ ಸರಕಾರೀ ಉದ್ಯೋಗಸ್ಥರೆಲ್ಲರಿಗೂ ಬೆನ್ನು ಮುರಿಯುವಷ್ಟು ಕೆಲಸವಿದೆ ಎಂದು ನಮಗೆ ಗೊತ್ತಿದೆ. ತನ್ನ ನಂಬಿಗೆಯ ಕೆಲವು ಅನಧಿಕಾರೀ ಗೃಹಸ್ಥರನ್ನಾದರೂ ಹಳ್ಳಿಗಳ ಪರಿಸ್ಥಿತಿಯನ್ನು ಪ್ರತ್ಯಕ್ಷ ಪರೀಕ್ಷಿಸಿ ವರದಿಯೊಪ್ಪಿಸಲು ಜಿಲ್ಲಾಧಿಕಾರಿಗಳು ಕಳುಹಿಕೊಡಬಾರದೇಕೆ? ಪಟ್ಟಣಗಳು ಹೇಗಿವೆ ಎಂಬುದನ್ನು ತಿಳಿದಿರುವ ಅಧಿಕಾರಿಗಳಿದ್ದಾರೆ; ಆದರೆ ಹಳ್ಳಿಗಳಿಗೇನಾಗಿದೆ, ಎಂಬ ಸತ್ಯಸ್ಥಿತಿ ಗೊತ್ತಿದ್ದವರಿಲ್ಲ ಎಂದು ಶಪಥ ಪೂರ್ವಕ ಹೇಳಬಲ್ಲೆವು. ಅದನ್ನು ತಿಳಿಯುವುದು ಅವರ ಆದ್ಯಕರ್ತವ್ಯ ಮತ್ತು ಹಾಗೆ ಪ್ರತ್ಯಕ್ಷ ಪರಿಶೀಲನೆ ನಡೆಸಿಯೇ ದುಸ್ಥಿತಿ ನಿವಾರಣೆ ಸಾಧ್ಯವೆಂಬುದರಿಂದ ಸಂಬಂಧಪಟ್ಟ ಅಧಿಕಾರಿಗಳಲ್ಲಿ ನಮ್ಮ ಮುಖ್ಯ ವಿಜ್ಞಾಪನೆಯೆಂದರೆ-'ಹಳ್ಳಿಗಳಿದು ನೋಡಿಬನ್ನಿ ಈ ಕೆಳಗಿನ ಸೂತ್ರಗಳನ್ನಾಧರಿಸಿ ಪರಾಮರ್ಶೆ ನಡಿಸಿರಿ:—

1. ಫಲಾಹಾರ ಪಾನೀಯಗಳ ಅನುಕೂಲತೆ ಮತ್ತು ಅಭ್ಯಾಸವಿರುವ ಪಟ್ಟಣಿಗರಿಗೂ ಅನ್ನಾಹಾರವೊಂದೇ ಆಧಾರವಾಗಿರುವ ಶ್ರಮಜೀವಿ ಹಳ್ಳಿಗರಿಗೂ ಒಂದೇ ಪರಿಮಾಣದಲ್ಲಿ ರೇಶನ್ ಅಕ್ಕಿ ಹಂಚುವದು ಸರಿಯೆ? ಹತ್ತು ವರುಷಕ್ಕಿಂತ ಕೆಳಗಿನವರು ಮತ್ತು ಮೇಲಿನವರೊಳಗೆ ವ್ಯತ್ಯಾಸಮಾಡಿದಂತೆ ಪಟ್ಟಣಿಗರಿಗಿಂತ ಹಳ್ಳಿಗರಿಗೆ ಅಧಿಕ ಪರಿಮಾಣದಲ್ಲಿ ಅಕ್ಕಿಕೊಡುವ ಆಗತ್ಯವಿಲ್ಲವೆ?

2 ಕೂಲಿಗಾರರಿಗೆ ಒಂದಂಶ ಅಧಿಕ ಅಕ್ಕಿ ಕೊಡಬೇಕೆಂದು ರೇಶನಿಂಗ್ ಕ್ರಮವಿರುತ್ತಾ ಶ್ರಮಜೀವಿ ಹಳ್ಳಿಗರಿಗೆ ಅದನ್ನು ಕೊಡಲಾಗುತ್ತಿದೆಯೆ? ಅಂಥಾ ರಿಯಾಯತಿಯಿದೆ ಯೆಂಬುದನ್ನು ಅವರಿಗೆ ತಿಳಿಸಲಾಗಿದೆಯೆ?

3. ಕುಟುಂಬದ ಊಟ ಮತ್ತು ಬೀಸಾಯದ ಖರ್ಚಿಗೆಂದು ಏಕ ಪ್ರಕಾರದ ರೇಶನಿಂಗ್ ಕ್ರಮದಂತೆಯೇ ಒಮ್ಮೆ ಬಿಟ್ಟು ಬಂದ ಅಕ್ಕಿಯನ್ನು ಮತ್ತೊಮ್ಮೆ ಹೋಗಿ ಜಪ್ತಿಮಾಡಿಕೊಂಡು ಬಂದುದಿದೆಯೆ? ಮುಂದೆ ಅವರಿಗೂ ಕಾರ್ಡು ಮೂಲಕ ಅಕ್ಕಿ ಕೊಡಲಾಗುತ್ತದಾದರೆ, ರೈತರಿಗೆ ಅನವಶ್ಯಕ ನಷ್ಟವಾಗದಂತೆ, ಅವರು ಕೊಟ್ಟಿದ್ದ ಬೆಲೆಗೇನೇ ಮರಳಿ ಪಡೆಯುವ ಒಂದು ವಿಶೇಷ ರಿಯಾಯತಿಯಿದೆಯೆ? ಸಾಗುವಳಿ ಖರ್ಚಿನ ಅಕ್ಕಿಯನ್ನೂ ತಂದು ಬೇಸಾಯಕ್ಕಾಗಿರುವ ಹಾನಿಯನ್ನು ನಿವಾರಿಸುವದು ಹೇಗೆ?

4 ಸೇಕಡಾ 90ರಷ್ಟು ಒಕ್ಕಲು ರೈತರು ಗೇಣಿಸಂದಾಯ ಮಾಡಿ, ಮಳೆಗಾಲದ ಊಟಕ್ಕೆ ಕೂಲಿ ಮತ್ತು ಬಡ್ಡಿಗೆ ಅಕ್ಕಿ ತಂದು ಉಣ್ಣುವ ಸಂಪ್ರದಾಯ. ಈ ವರುಷ ಅವರ ಗೇಣಿ ಮಾತ್ರವಲ್ಲದೆ ಊಟ ಮತ್ತು ಖರ್ಚಿನ ಅಕ್ಕಿಯೂ ರೆಕ್ವಿಜಿಶನ್ ಆಗಿ ಹೋಗಿರುತ್ತಾ, ಬೇರೆ ಸಂಪಾದನೆಯಿಲ್ಲದೆ ಕಾರ್ಡು ಅಕ್ಕಿ ಪಡೆಯುವದಕ್ಕೂ ಹಣವಿಲ್ಲದಿರುವ ಅಂಥವರಿಗೆ ಸಹಾಯದ ಏರ್ಪಾಡೇನಿದೆ.?

ಗಾಂಧಿ—ಜಿನ್ನಾ ಒಪ್ಪಂದಕ್ಕಾಗಿ ಕ್ಷೇತ್ರ ತಯಾರಿ

ಭಾರತದಲ್ಲಿ ಆಶೋದಯ–ಇಂಗ್ಲಾಂಡಿನಲ್ಲಿ ಆತುರವೆಬ್ಬಿಸಿರುವ ಗಾಂಧಿ–ಜಿನ್ನಾ ಮಾತುಕತೆಯ ದಿನನಿಶ್ಚಯವಿನ್ನೂ ಆಗಿಲ್ಲ ಮಹಾತ್ಮಾ ಗಾಂಧಿಯವರು ಪೂರ್ತಿ ಎರಡು ವರುಷಗಳ ನಂತರ ತನ್ನ ನಿವಾಸವಾದ ಸೇವಾಗ್ರಾಮಕ್ಕೆ ಹೋಗಿ ಸೇರಿದ್ದಾರೆ. ಮಿ. ಜಿನ್ನರು ಲಾಹೋರಿನಿಂದ ಬೊಂಬಾಯಿಗೆ ಹೊರಟಿದ್ದಾರೆ ರಾಜಾಜಿ ಸೇವಾಗ್ರಾಮಕ್ಕೆ ಹೋಗಿ ಗಾಂಧಿಜೀಯೊಡನೆ ದೀರ್ಘ ಸಂಭಾಷಣೆ ನಡೆಸಿದ್ದಾರೆ. ಗಾಂಧಿ–ಜಿನ್ನಾ ಭೇಟಿಯ ವೇಳೆಯಲ್ಲಿ, ಜಾತೀಯ ಜಗಳ ತೀರ್ಮಾನ ಸೂತ್ರದ ನಿರ್ಮಾತೃ ರಾಜಾಜೀ ಹಾಜರಿರುವದು ಅಸಂಭವ ತನ್ನ ಸೂತ್ರಗಳು ಸುಸ್ಪಷ್ಟವಿರುವದರಿಂದ ತನ್ನ ಹಾಜರಿಯನಗತ್ಯವೆಂದು ರಾಜಾಜಿಯ ಅಂಬೋಣ 'ಈ ಸೂಚನೆಯ ಸ್ವೀಕಾರ ಮತ್ತು ನಿರಾಕರಣೆ ಸಾಧ್ಯವಿರುವಂತೆಯೇ ಅವರ ತಿದ್ದುಪಡಿಯೂ ಸಾಧ್ಯ'ವೆಂದು ಗಾಂಧಿಜಿಯೆಂದಿದ್ದಾರೆ; 'ಜಿನ್ನರ ಶರ್ತಗಳ ಸ್ವಾಗತಕ್ಕಾಗಿ ಗಾಂಧಿಜೀ ಇನ್ನಷ್ಟು ಮುಂದೆ ಹೋಗಬಹುದು ಅವರು ಈ ಕುರಿತ. ಫಲತೊಟ್ಟು ನಿಂತಾರೆಂದು ಊಹಿಸಿ ಕೊನೆಗೆ ನಿರಾಶೆಗೊಳ್ಳಬೇಡಿ" ಎಂದು ರಾಜಾಜೀ ಮುಂದಾಗಿ ಎಚ್ಚರಿಕೆ ಕೊಟ್ಟಿದ್ದಾರೆ. ಹೀಗಾಗಿ, ಜಾತೀಯ ಒಪ್ಪಂದ ಸಾಧಿಸಿಯೇ ತೀರಬೇಕೆಂಬ ಶಪಥದಿಂದ ಗಾಂಧಿಜೀಯವರು ಮಿ. ಜಿನ್ನರ ಬೇಡಿಕೆಗಳನ್ನೆಲ್ಲಾ ಬಹುತೇಕವಾಗಿ ಒಪ್ಪಿಕೊಳ್ಳುವ ಸಂಭವವಿದೆ.

ಜಿನ್ನರ ಅನುಕೂಲ ಮನೋವೃತ್ತಿ.

ಮತದಾನದ ಮೂಲಕ ದೇಶವಿಭಾಗದ ಪ್ರಶ್ನೆ ತೀರ್ಮಾನವಾಗಬೇಕೆಂಬ ರಾಜಾಜೀ ಸೂಚನೆಯ ಶರ್ತಕ್ಕೆ ಮಿ ಜಿನ್ನರು ಬದ್ಧವಿರುದ್ಧವಿರುವಂತೆಯೇ, ಆ ಶರ್ತವನ್ನು ರದ್ದುಗೊಳಿಸಲು ಸಹಜವಾಗಿ ಗಾಂಧಿಜೀ ರಾಜಾಜಿಯವರ ಪ್ರಬಲಾಕ್ಷೇಪಗಳಿವೆ. ಆದರೂ ಮಿ ಜಿನ್ನರು ಸಂಧಾನಕ್ಕನುಕೂಲವಾಗಿ ತನ್ನ ಮನೋವೃತ್ತಿಯನ್ನು ಬದಲಾಯಿಸಿಕೊಂಡಿದ್ದಾರಲ್ಲದೆ, ದೇಶದೊಡನೆಯೂ ಅಂತಹ ವಾತಾವರಣ ನಿರ್ಮಿಸಲು ವಿನಂತಿ ಮಾಡಿಕೊಂಡಿದ್ದಾರೆ. ಲಾಹೋರಿನ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ 'ಸರಕಾರಕ್ಕೆ ಗಾಂಧಿಯವರು ಮತ್ತು ಆಚಾರ್ಯರು ಕೊಟ್ಟಿರುವ ಸೂಚನೆಗಳ ಮೊದಲೇ ಹಿಂದೂ-ಮುಸ್ಲಿಮ್ ತೀರ್ಮಾನವಾಗಬೇಕೆಂದೂ ಅದಕ್ಕಾಗಿ ತಾನು ಮತ್ತು ಗಾಂಧಿಯವರು ಭೇಟಿಯಾಗಲಿರುವದರಿಂದ, ಹಿಂದೂ ಮುಸ್ಲಿಂ ರಾಷ್ಟ್ರಗಳೆರಡಕ್ಕೂ ಸ್ವಾತಂತ್ರ್ಯ ಸಾಧಿಸುವ ತಮ್ಮ ಉತ್ಕಟೇಚ್ಛೆ ಫಲಿಸುವಂತೆ ಒಪ್ಪಂದಕ್ಕಾಗಿ ಸೌಹಾರ್ದ್ರ ವಾತಾವರಣ ನಿರ್ಮಿಸಿದರೆಂದೂ ವಿಜ್ಞಾಪಿಸಿಕೊಂಡಿದ್ದಾರೆ. ಸಿಕ್ಕರು ಮತ್ತು ದಲಿತ ವರ್ಗದವರೇ ಮೊದಲಾದ ಅಲ್ಪ ಸಂಖ್ಯಾಕ ಸಮಾಜಗಳವರಿಗೆ, ನ್ಯಾಯದಾನಮಾಡು ಆಶ್ವಾಸನೆಕೊಡುತ್ತಾ ತನಗೆ ಮತ್ತು ಗಾಂಧಿಯವರಿಗೆ ಯಾವ ಜಾತಿಯ ಮೇಲೂ ದ್ವೇಷವಿಲ್ಲವೆಂದಿದ್ದಾರೆ.

ಮಹಾತ್ಮರ ವಿನಂತಿ

ಇದೇ ಅಗೋಸ್ತು ತಾ 9ರ ದಿನಾಚರಣೆಗಾಗಿ ಕಾಂಗ್ರೆಸಿಗರಿಗೆ ಹೇಳಿಕೆಯೊಂದನ್ನು ಕೊಡುತ್ತಾ, ಪೋಲಿಸ್ ಬಹಿಷ್ಕಾರವನ್ನು ವಿರೋಧಿಸದೆ, ಎಲ್ಲರೂ ತನ್ನ 14ವಿಧಾಯಕ ಕಾರ್ಯ ಕ್ರಮಗಳನ್ನೇ ಕೈಗೊ

ಸುಲಭದಲ್ಲಿ ಇಂಗ್ಲಿಸ್

ಕಲಿಯಬೇಕೆಂದಿರುವವರಲ್ಲಿ—

ಈಗಾಗಲೇ ಕರ್ನಾಟಕದಲ್ಲೆಲ್ಲಾ ಪ್ರಚಾರವಾಗಿ ಜನಪ್ರೀತವಾಗಿರುವ ನಮ್ಮ 'ಸುಲಭದಲ್ಲಿ ಇಂಗ್ಲಿಷ್' (English Made Easy) ಪುಸ್ತಕದ ಕೆಲವೇ ಪ್ರತಿಗಳು ಉಳಿದಿದ್ದು ಅದನ್ನು ಇನ್ನು ಥಕ್ಕನೆ ಮುದ್ರಿಸಲು ಈಗಿನ ಕಾಗದ ನಿಯಂತ್ರಣ ಕಾನೂನಿನ ದೆಸೆಯಿಂದ ಅಸಾಧ್ಯವಾದುದರಿಂದಲೂ, ಆ ಪುಸ್ತಕವು 25 ವರ್ಷಗಳ ಅನುಭವದ ಪರಿಶ್ರಮದಿಂದ ಬರೆಯಲ್ಪಟ್ಟಿರುವುದರಿಂದಲೂ ಅದರಲ್ಲಿ 150ಕ್ಕೂ ಮಿಕ್ಕಿ ಪುಟಗಳಿರುವುದರಿಂದಲೂ ಅಗೋಸ್ತು ತಾ 1ರಿಂದ ಅದರ ಬೆಲೆಯನ್ನು ರೂ 1–0–0 ರಿಂದ ರೂ 1–4–0ಕ್ಕೆ ಏರಿಸಿರುತ್ತೇವೆ. ಅಗತ್ಯವುಳ್ಳವರು ಪ್ರತಿಗಳನ್ನು ತೀವ್ರವೇ ತರಿಸಿಕೊಳ್ಳಬೇಕಾಗಿ ವಿನಂತಿ. ರೂ 1–8–0 ನ್ನು ಮನಿಯಾರ್ಡರು ಮಾಡಿದರೆ ಯಾ ರೂ 1–8–0ರ ಪೋಸ್ಟಲ್ ಆರ್ಡರ್ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳುಹಿಸಲಾಗುವದು.

ರಖಂ ವ್ಯಾಪಾರಿಗಳಿಗೆ ತುಂಬಾ ಕಮಿಶನ್ ಇದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಯುದ್ಧ ಸ್ಥಿತಿ

ಟಾಮು ಪತನ.

ಮಣಿಪುರ ಪರ್ವತ ವಲಯದಲ್ಲಿ ಧಾಳಿ ಹೊಡುತ್ತಾ ಮುಂದೊತ್ತಿದ ಮಿತ್ರ ಸೇನೆಯು ಬರ್ಮ ಗಡಿ ವರೆಗೂ ಕಾಬಾ ಕಂದರದ ಮೂಲಕ ನುಗ್ಗಿ ಟಾಮುವನ್ನು ವಶಪಡಿಸಿಕೊಂಡಿದೆ.

ಪೂರ್ವ ಪ್ರಶ್ಯ ಪ್ರವೇಶ

ಕೆಂಪು ಸೇನೆಯು ಪೂರ್ವ ಪ್ರಶ್ಯದ ಗಡಿಯೊಳಗೆ ನುಗ್ಗಿದೆ. ಆ ಗಡಿಯಲ್ಲಿ ಟೇಂಕು ಮತ್ತು ವಿಮಾನಗಳ ವಿಶೇಷ ಸಂಬರಾಯಿ ಪಡಿಸಿಕೊಂಡು ಜರ್ಮನರು ಪ್ರಾಣಾವಧಿ ಪ್ರತಿಭಟನೆ ಕೊಡಹತ್ತಿದ್ದಾರೆ. ಪೂರ್ವ ಪ್ರಶ್ಯಾದ ಬಳಿಯ ಆಗಸ್ಟೊವ್ ಮತ್ತು ಶ್ಯಾಕನ್ ವಲಯದ ನಡುವೆ ಅತಿ ಭೀಕರ ಕಾಳಗ ನಡೆಯುತ್ತಿದೆ.

ಶಾಂತ ಸಮುದ್ರದಲ್ಲಿ.

ಬೋನಿನ್ ಬಳಿಗೆ ಮಿತ್ರರ ಹಡಗದಳವು ಜಾಪಾನೀ ದ್ವೀಪ ನಿಲ್ದಾಣಗಳ ಮೇಲೆ ಧಾಳಿ ನಡಿಸಲು ಹೊರಟಿದೆಯೆಂದೂ ವಿಮಾನ ವಾಹಕ ಹಡಗಗಳ ಮೂಲಕ ಧಾಳಿ ನಡೆಸಲಾಗಿದೆಯೆಂದೂ ಜಪಾನಿನಲ್ಲಿ ಆತುರವೆದ್ದಿದೆ.

ಯುದ್ಧಕ್ಕಾಗಿ ಸರ್ವ ಸಂಗ್ರಹ.

ಜಾಪಾನಿನಲ್ಲಿ ಸಾರ್ವತ್ರಿಕ ಯುದ್ಧ ಸಿದ್ಧತೆ ಕೈಗೊಳ್ಳುವ ಅಶ್ವಾಸನೆಯನ್ನು ಪ್ರಧಾನಿಗಳು ಚಕ್ರವರ್ತಿಗಳಿಗಿತ್ತು ಭರದಿಂದ ಕಾರ್ಯಾರಂಭವಾಗಿದೆ.

ಮಿಯಿಟ್ಕೀನಾ ಪತನ

ಉತ್ತರ ಬರ್ಮದಲ್ಲಿ ಈಗ ತಾನೇ ಮಿತ್ರರ ವಶವಾಗಿರುವ ಮಿಯಿಟ್ಕೀನಾ ಯುದ್ಧದಲ್ಲಿ ೫0 ಸಾವಿರ ಜಾಪಾನರು ಮಡಿದರೆಂದು ಮಿತ್ರಸೇನಾನಿ ಸ್ಟಿಲ್‌ವೆಲ್ಲರಂದಿದ್ದಾರೆ. ಚೀನಾ ರಸ್ತೆ ತೆರೆಯುವ ಪ್ರಯತ್ನ ನಡೆದಿದೆ. ರಂಗೂನನ್ನು ನೆಲಹಾದಿಯಿಂದ ಮುಟ್ಟುವ ಸಾಧ್ಯತೆಯಿದೆಯೆಂದು ಸ್ಟಿಲ್‌ವೆಲರ ಅಂಬೋಣ.

ನೋರ್ಮಂಡಿಯಲ್ಲಿ

ಅವ್ರೇಂಚಸಿನಿಂದ ಮುಂದೊತ್ತಿ ಬ್ರಿಟಾನ್ನಿ ವಲಯವನ್ನು ಪ್ರವೇಶಿಸಿದ ಮಿತ್ರಸೇನೆಗಳೀಗ ಅಲ್ಲಿಯ ಮುಖ್ಯ ಬಂದರಗಳಾದ ಬ್ರೆಸ್ಟ್, ಲೋರಿಯೆಂಟ್ ಮತ್ತು ನಾಝೋರಿಯನ್ನಾಕ್ರಮಿಸಿಕೊಳ್ಳಲು ಧಾವಿಸುತ್ತಿವೆ. ಮುಂದಿನ ಮೂರು ವಾರಗಳಲ್ಲಿ ಜರ್ಮನಿಯು ಮಹಾ ಅನಾಹುತಗಳಿಗೀಡಾಗುವದೆಂದು ಒಬ್ಬ ತಜ್ಞ ಸೇನಾನಿಯ ಅಭಿಪ್ರಾಯ.

ಗೌರವ ತನಿಖಿ.

ಸೇನೆಗಳ ವಿಜ್ಞಾಪನೆಯಂತೆ ಸೇನಾನಿಗಳ ಯಥಾರ್ಥತೆಯನ್ನು ಪರೀಕ್ಷಿಸುವ ಕೋರ್ಟೊಂದನ್ನು ಹಿಟ್ಲರ್ ನೇಮಿಸಿದ್ದಾನೆ. ಜರ್ಮನಿಯಲ್ಲೆಲ್ಲಾ ಸಾರ್ವತ್ರಿಕ ಯುದ್ಧ ಸಿದ್ಧತೆಯು ಗೋಬೆಲ್ಸನ ನಾಯಕತ್ವದಲ್ಲಿ ಆರಂಭವಾಗಿದೆ. 'ನಾನು ವೈರಿಗಳ ಹೋರಾಟಕ್ಕಂಜುವದಿಲ್ಲ ಕಟ್ಟಕಡೆಗೆ ಅವರನ್ನು ನಿರ್ನಾಮ ಮಾಡುವದು ಖಂಡಿತ ನಮ್ಮಲ್ಲಿ ಒಕ್ಕಟ್ಟು ಮತ್ತು ವಿಧೇಯತೆ ಮಾತ್ರಬೇಕು' ಎಂದು ಹಿಟ್ಲರ್ ಸಂದೇಶವಿತ್ತಿದ್ದಾನೆ.

ಪ್ರಕಟಣೆ—ಈ ಜಿಲ್ಲೆಯಲ್ಲಿ ಜನತೆಯ ಜೀವನಕ್ಕೆ ಪ್ರಾಮುಖ್ಯವಾಗಿ ಅವಶ್ಯವಿಳ್ಳ ಅಕ್ಕಿ ಭತ್ತ, ಮತ್ತು ಇತರ ಆಹಾರ ಧಾನ್ಯಗಳ ಅಭಾವವು ಈಗೀಗ ಹೆಚ್ಚುಹೆಚ್ಚಾಗಿ ಕಂಡುಬರುತ್ತಿದ್ದು ಇದಕ್ಕೆ ಮುಖ್ಯವಾದ ಒಂದು ಕಾರಣವು. ಕೆಲವರು ಸದರಿ ಅಕ್ಕಿ, ಭತ್ತ, ಇತ್ಯಾದಿಗಳನ್ನು ಮಿತಿಮೀರಿದ ಬೆಲೆಗೆ ಕಳ್ಳಾಟಕೆಯಿಂದ ಮಾರುವ ದುರಾಸೆಯಿಂದ, ಅಲ್ಲಲ್ಲಿ ಗುಪ್ತವಾಗಿ ಇರಿಸಿರುವ ಸಂಗತಿಯೇ ಎಂದು ನಮ್ಮ ತಿಳುವಳಿಕೆಗೆ ಬಂದಿರುತ್ತದೆ ಇಂತಹ ಬಚ್ಚಿಟ್ಟ ಪದಾರ್ಥಗಳನ್ನು ಪತ್ತೆ ಮಾಡಲು ಅನುಕೂಲವಾದ ವರ್ತಮಾನಗಳನ್ನು ಕೊಡುವವರಿಗೆ ಬಹುಮಾನಗಳನ್ನು ಜಿಲ್ಲಾ ಕಲೆಕ್ಟರ್ ದೊರೆಗಳು ಕೊಡುವರೆಂಬುದನ್ನು ಈ ಮೂಲಕ ತಿಳಿಸಲಾಗುತ್ತದೆ.

ರೇಶನ್ ಕಾರ್ಡು ಇಲ್ಲ:—ತಮ್ಮ ಅಕ್ಕಿ ಸಾಕಾಗದೆ ಕ್ರಯಕ್ಕೆ ಪಡದು ಜೀವಿಸುವ ತುಂಡು ವರ್ಗದಾರರ ಸುದ್ದಿಯಂತಿರಲಿ, ಬಾಲಗೇಣಿ ಯಾ ಮೂಲಗೇಣಿ ವಕ್ಲುಗಳಿಗೆ ಕೂಡಾ ಹಳ್ಳಿಗಳಲ್ಲಿ ರೇಶನ್ ಕಾರ್ಡುಗಳು ಕೊಡಲ್ಪಡುವುದಿಲ್ಲವೆಂದೂ ಇದರಿಂದ ಅವರು ಉಪವಾಸ ಬೀಳುವ ಪ್ರಸಂಗವೊದಗಿರುವುದೆಂದೂ ವಾರ್ತೆಯೊಂದು ನಮ್ಮ ಬಳಿಗೆ ಬಂದಿದೆ. ನಿಜವಾಗಿ ಅಕ್ಕಿ ಇಲ್ಲದವರಿಗೆ ರೇಶನ್ ಕಾರ್ಡುಗಳನ್ನು ಕೊಡುವ ಕುರಿತು ಸಂಬಂಧಪಟ್ಟವರು ವಿಚಾರಿಸುವರೆ?

ಬೆಳ್ಳಾರೆ:—ಶ್ರೀ [illegible]ಗಣೇಶ ಸುಬ್ಬಯ್ಯನವರ ಧರ್ಮಪತ್ನಿ ಸಾವಿತ್ರಿಯಮ್ಮನವರ ಸ್ಮಾರಕ ಫಂಡಿಗಾಗಿ ತಾ 5ರಲ್ಲಿ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಯಕ್ಷಗಾನ ಕೂಟವೊಂದು ಜಯಶೀಲವಾಗಿ ಜರಗಿತು.

ಬೊಂಬಾಯಿ ದ. ಕ. ಜಿಲ್ಲಾ ಬ್ರಾಹ್ಮಣರ ಸಂಘ ಸ್ಥಾಪನೆಯು ಕಳೆದ ತಾ 23ರಲ್ಲಿ ಶ್ರೀ ಕೆ. ಭುಜಂಗರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಕಾರ್ಯಕಾರೀ ಮಂಡಳಿಯ ಸ್ಥಾಪನೆಯಾಗಿ ಸ್ವಸಮಾಜದ ಬಡ ವಿದ್ಯಾರ್ಥಿಯೊಬ್ಬನಿಗೆ ರೂಪಾಯಿ 300/ರ ವೇತನ ಸಹಾಯ ಕೊಡುವರೆ ನಿರ್ಧಾರವಾಯಿತು.

- - - - - - -

ಕೃಬೇಕೆಂದು ಗಾಂಧಿಜೀ ವಿನಂತಿಸಿದ್ದಾರೆ. ಜಾತೀಯ ತೀರ್ಮಾನ ಹೊಂದುವಂತೆ ತನಗೂ ಕ್ವಯದ್-ಇ-ಆಝಾಮರಿಗೂ ಪ್ರೇರಣೆಕೊಡುವಂತೆ ಹಿಂದೂ ಮುಸಲ್ಮಾನರೊಂದಾಗಿ ಪ್ರಾರ್ಥನೆ ನಡಿಸಬೇಕೆಂದು ಕೇಳಿಕೊಂಡಿದ್ದಾರೆ. ದೇಶದ ಹೆಚ್ಚಿನ ಮುಖಂಡರಿಂದಲೂ ಸಂಘಸಂಸ್ಥೆಗಳಿಂದಲೂ ಗಾಂಧಿ-ಜಿನ್ನಾ ಒಪ್ಪಂದಕ್ಕೆ ಬೆಂಬಲ ದೊರೆತಿದೆ.

ಮಹಾ ಸಭೆಯ ವಿರೋಧ

ಹಿಂದೂ ಮಹಾ ಸಭೆಯ ಕಾರ್ಯಕಾರೀ ಅಧ್ಯಕ್ಷ ಡಾ| ಶ್ಯಾಮ ಪ್ರಸಾದ ಮುಖರ್ಜಿಯವರು ಸೇವಾ ಗ್ರಾಮಕ್ಕೆ ಬಂದು ಗಾಂಧಿಜೀ ಮತ್ತು ರಾಜಾಜಿಯೊಡನೆ ದೀರ್ಘ ಸಂಭಾಷಣ ನಿ[illegible]ಧಿಜೀಯವರ ಪರಸ್ಪರ ವಿರುದ್ಧ ಧೋರಣೆಗಳನ್ನು ಅವರು ಅಂದಿನ ಮತ್ತು ಇಂದಿನ ಹೇಳಿಕೆಗಳ ದಾಖಲೆ ಕೊಟ್ಟು ಡಾ| ಮುಖರ್ಜಿಯವರು ಮುಂದಿಟ್ಟು ಪಡಿಸಿದರು. ರಾಜಾಜೀ ಸೂಚನೆಯಂಗೀಕರಿಸಿಲ್ಪಟ್ಟರೆ ಬಂಗಾಳವೇ ನಿರ್ನಾಮವಾಗುವದು; ಅಲ್ಲಿ ಅಂತರ್ಯುದ್ಧವೇಳುವದು ಎಂಬುದನ್ನು ತಾನು ಬಿಡಿಸಿ ತಂದಿದ್ದ ಬಂಗಾಳದ ಹಲವು ನಕಾಶೆಗಳ ಮೂಲಕ ಡಾ| ಮುಖರ್ಜಿ ತಿಳಿಯಪಡಿಸಿದರು. ೫0 ವರುಷಗಳ ಮಹಾ ಪ್ರಯತ್ನದಿಂದ ಸಾಧಿಸಿದ ರಾಷ್ಟ್ರೀಯ ಐಕ್ಯವನ್ನು ೬ ವರುಷಗಳ ಪಾಕಿಸ್ತಾನ್ ಕೂಗಿಗಾಗಿ ಬಲಿಗೊಡುವದೆಂದರೆ ಮಹಾ ಅನಾಹುತ ನಿರ್ಮಿಸುವದೆಂದು ವಾದಿಸಿದರು. ಭೂಲಾಭಾಯಿ ದೇಸಾಯಿ, ಕಿರಣ ಶಂಕರ ರೋಯಿಗಳಂತಹ ಪ್ರಮುಖರೂ ಶಿಷ್ಟಮಂಡಲ[illegible] ಭೇಟಿ ಪಡೆದಿವೆ. ಅಂತೂ ಮುಂಬರುವ ಗಾಂಧೀ-ಜಿನ್ನಾ ಮಾತುಕತೆಗಾಗಿ ಪ್ರಾಮುಖ್ಯ ವ್ಯವಹಾರಾಂದೋಲನ ನಡೆದಿದೆ.

ಬಿಸಿ ದೋಸೆಯಂತೆ

ವಿಕ್ರಯವಾಗುತ್ತಿರುವ ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸುಲಭದಲ್ಲಿ ಇಂಗ್ಲಿಷ್ 1-1-0
ಶ್ರೀ. ಕೊಂಡ್ಕಲ್ ಶ್ರೀನಿವಾಸರಾಯರಿಂದ ಬರೆಯಲ್ಪಟ್ಟ ಯುವಕರಿಗೆ ಮತ್ತು ವಯಸ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅನ್ಯ ಸಹಾಯವಿಲ್ಲದೆ ಕಲಿತ ಇಂಗ್ಲಿಷ್ ಸ್ವಯಂಬೋಧಿನಿ

ನಗೆನೋಟಗಳು 0-14-0
ಶ್ರೀ. ಕೆ. ವಿ. ಶೆಣೈ. ಬಿ ಎ., ಎಲ್. ಟಿ. ಅವರಿಂದ ರಚಿತವಾದ ೧೧ ವಿನೋದ ಜೀವನಚಿತ್ರಗಳು

ಅನ್ನದೇವರು ಮತ್ತು ಇತರ ಕಥೆಗಳು 1-0-0
ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳಿಂದ ರಚಿತವಾದ ವಿಚಾರಕ್ರಾಂತಿಯ ೧೧ ಕತೆಗಳ ಸಂಗ್ರಹ,

ಗೀತೆಯ ಕೈಗನ್ನಡಿ 0-8-0
ಹೊಸಕೆರೆ ಚಿದಂಬರಯ್ಯನವರು ಬರೆದ ಭಗವದ್ಗೀತೆಯ ಸಮೋಲ ಸರಳ ಭಾಷಾಂತರ

ಮೂರು ಪ್ರಹಸನಗಳು	0-14-0
ಭಾರತೀಯ ಕತೆಗಳು	0-14-0
ನಂದಾದೀಪ (ಕತೆಗಳು)	0-11-0
ಪ್ರೇಮ ವಿಜಯ (ನಾಟಕ)	0-12-0
ದೇಶಭಕ್ತ (ನಾಟಕ)	0-11-0
ಸನ್ಯಾಸಿಯ ಸೋಗಿನಲ್ಲಿ	0-8-0
ಪುರುಷವಧು (ಪ್ರಹಸನ)	0-1-0
ಹೆಂಡ್ತಿಗಂಡನಾದರೆ (ಪ್ರಹಸನ)	0-4-0
ವ್ಯಭಿಚಾರಿಣಿ ಯಾರು (ನಾಟಕ)	0-12-0
ಮುಂದಿನ ದೇವರು (ಪ್ರಬಂಧ)	0-4-0
ಕುಶಲವ (ನಾಟಕ)	0-5-0
ಸಂಶಯ ಪಿಶಾಚಿ (ನಾಟಕ)	0-8-0
ಸ್ವತಂತ್ರ ಜೀವನೋಪಾಯ	0-3-0
ನಾಡಕತೆಗಳು	0-3-0
ಮಧುವನ (ಕಥಾಸಂಗ್ರಹ)	3-0-0
ಕಾವ್ಯಸಾಮ್ರಾಜ್ಯ (ಕವಿತೆಗಳು)	0-12-0
ರಂಗಭೂಮಿ (ನಾಟಕ)	0-8-0
ಏಶ್ಯಾ ಖಂಡದ ಜಾಗ್ರತಿ	1-4-0
ವೈದ್ಯರಾಜ (ನಾಟಕ)	1-4-0
ಸತ್ವಶಾಲಿ ರಶಿಯಾ	1-4-0
ಸಾಮ್ಯವಾದವೇಕೆ	1-1-0
ರಾಜ್ಯಾಡಳಿತ ಪದ್ಧತಿ ಬದಲಿಸುವ ವಿಧಾನ	1-1-0
ನಾರೀಹೃದಯ (ಕತೆಗಳು)	0-14-0
ಪ್ರಕಾಶ (ನವೀನ ನಾಟಕ)	1-12-0
ಅಂತರಂಗದ ಕತೆಗಳು	0-10-0
ಪ್ರೇಮಪ್ರವಾಹ (ಪ್ರಣಯ ಕತೆ)	0-6-0
ಆರ್ಟ್‌ಚಿತ್ರಗಳು (ನೈಜಚಿತ್ರಗಳು)	0-6-0
ಮುಗುಳು (ಪದ್ಯಾವಳಿ)	0-3-0
ವೀರಭೂಮಿ (ಕಾದಂಬರಿ)	0-2-0
ಆಹುತಿ ಇತ್ಯಾದಿ ಕತೆಗಳು	0-12-0
ವತ್ಸಲಾ (ಕಾದಂಬರಿ)	0-8-0
ಮೀರಾಬಾಯಿ (ನಾಟಕ)	0-8-0
ಮುದುಕನ ಹೆಂಡ್ತಿ ಧಕಪ್ಪೆ ರಾಧೆ	0-2-0
ಧರ್ಮಸಂಕಟ (ನಾಟಕ)	0-1-0
ಆರೋಗ್ಯ ಪ್ರತಾಪ (ನಾಟಕ)	0-12-0
ಚಲಚ್ಚಿತ್ರ ಪದ್ಯಾವಳಿ (೫ ಭಾಗ)	0-5-0
ಪಂಚಾರತಿ (ನಾಟಕಗಳು)	0-6-0
ಪ್ರತೀಕಾರ (ನಾಟಕ)	0-6-0
ಶ್ರೀಮುಖ (ಕವಿತೆಗಳು)	1-0-0
ರಾಷ್ಟ್ರಸಭೆಯ ಇತಿಹಾಸ	2-8-0
ಆರೋಗ್ಯ ಸಾಧನ (ಮ. ಗಾಂಧಿ)	0-12-0
ಧರ್ಮನೀತಿ (ಮ. ಗಾಂಧಿ)	0-6-0
ಪುರಂದರದಾಸರ ಕೀರ್ತನೆಗಳು	1-0-0
ಶಾಂತಿ ಪುರಾಣ (ಪೊನ್ನ)	3-0-0
ಲೋಪಾಮುದ್ರೆ	0-6-0
ಬಾಲವಾಙ್ಮಯ	0-3-0
ಸೇವಾಪಥ (ನಾಟಕ)	0-8-0
ಎಕ್ಸ್‌ರೇ	1-0-0
ಮಿತಸಂತತಿ (ನವೀನ ಶೋಧ)	0-8-0
ಜನನೇಂದ್ರಿಯಗಳ ರೋಗ ಬಾಧಾ ನಿವಾರಣೆ	0-8-0
ನಿಶ್ಚಯಜ್ಞಾನ	0-8-0
ಬಣ್ಣದ ಬೀಸಣಿಗೆ (ನಾಟಕಗಳು)	1-0-0
ದೇವದಾಸ (ಕಾದಂಬರಿ)	1-8-0
ಮಗಳಿಗೆ ತಂದೆಯ ಓಲೆಗಳು	1-8-0
ಹತ್ತು ಕತೆಗಳು	0-8-0
ನಡುಮನೆಯಲ್ಲಿ (ನಾಟಕಗಳು)	0-8-0
ನಟಿ (ಕಥಾ ಸಂಗ್ರಹ)	0-8-0
ಕಾಶ್ಮೀರ ಪ್ರವಾಸ	0-8-0
ಪರಾಗ (ಕವಿತೆಗಳು)	0-8-0
ಆನಂದ ಅಥವಾ ಮನೆ ಅಳಿಯ	1-0-0
ಲಹರಿ (ಕತೆಗಳು)	0-6-0
ವೀರ ವಲ್ಲಭಾಯಿ	0-10-0
ಪರಿವರ್ತನೆ (ಕಥಾಸಂಗ್ರಹ)	0-8-0
ಆರತಿ (ಹೆಂಗಸರ ಕತೆಗಳು)	0-12-0
ಪ್ರೇಮಬಾಧ (ಕಾದಂಬರಿ)	0-4-0
ಚಿತ್ರ (ಕಥೆಗಳು)	0-10-0
ನಮ್ಮೂರ ನಡತೆ (ನಾಟಕಗಳು)	0-5-0
ಕೆಚ್ಚು (ಸಣ್ಣ ಕತೆಗಳು)	0-8-0
ಸಾಮುದ್ರಿಕ ಶಾಸ್ತ್ರ	0-8-0
ವೀಣಾನಾದ (ಕತೆಗಳು)	0-9-0
ಬೆಳಕಿನ ಕತ್ತಲೆ (ಕಥೆಗಳು)	0-12-0
ಅಕ್ಕಾಜಿ (ಕಾದಂಬರಿ)	0-10-0
ಆರು ಕಥೆಗಳು	1-0-0
ನಮ್ಮ ಊರಿನ ರಸಿಕರು	1-4-0
ಅಕ್ಕತಂಗಿ (ಕಾದಂಬರಿ)	2-0-0
ಪ್ರಾಚೀನ ರಾಜ್ಯಪದ್ಧತಿಗಳು	1-1-0
ಶಾರದೆಯ ಸಂಸಾರ	1-4-0
ಖಾದಿ ಶಾಸ್ತ್ರ	1-4-0
ರಶಿಯಾದ ರಾಜ್ಯಕ್ರಾಂತಿ	1-8-0
ಚಿಕ್ಕ ದೊಡ್ಡವರು (ಹರಟೆಗಳು)	0-9-0
ಕುಲದೀಪಕರು	0-10-0
ಗ್ಯಾ ಡಿ ಮೋಪಾಸನ ಕಥೆಗಳು	0-12-0
ದೂರ ಹೋದಳು (ನೀಳ್ಗತೆ)	0-6-0
ಮುಡ್ಡಿನ ಕಣಿ (ಕತೆಗಳು)	0-12-0
ಸೌಂದರ್ಯ ಲಹರಿ	1-0-0
ಚಂದ್ರನಾಥ (ಕಾದಂಬರಿ)	0-6-0
ಬಂಗಾದ ಹಾಟ (ಕತೆಗಳು)	0-11-0
ಗುರುಪೀಠಗಳ ಅವನತಿ	0-4-0
ವಿದ್ಯಾರಣ್ಯರ ಕಾವ್ಯ	1-0-0
ಮಹಾತ್ಮಾ ಗಾಂಧಿ	0-4-0
ಬಿಸ್ವಾಡಿ ಚಳ್ಳಿ (ನಾಟಕಗಳು)	0-7-0
ಭಾವಪ್ರಭಾತ (ಕತೆಗಳು)	0-8-0
ಸನ್ಯಾಸಿನಿ (ನಾಟಕ)	0-10-0
ಬೆಳ್ಳಿಯ ಹಬ್ಬ (ನಾಟಕ)	0-8-0
ಧರ್ಮ ಸಾಮ್ರಾಜ್ಯ	1-8-0
ಎರಡು ನಾಟಕಗಳು	0-8-0
ಚಂದ್ರಗುಪ್ತ ಚಕ್ರವರ್ತಿ	1-0-0
ಅದ್ಭುತರಮ್ಯ ಕಥೆಗಳು	1-0-0
ಪ್ರಬಂಧ ಮುಕ್ತಾವಳಿ	1-0-0

ನವಭಾರತ ಪುಸ್ತಕ ಭಂಡಾರ, ಉಡುಪಿ.

Navabharat Book Depot., Udipi.

ದಕ್ಷಿಣ ಕನ್ನಡ-

ಮಂಗಳೂರು

ತೆಂಗಿನ ಮರದ ಫೀಸು—ಮೂರ್ತೆಗೆ ವಹಿಸಿಕೊಳ್ಳುವ ತಾಳೆ ಮರಗಳ ಬಗ್ಗೆ ಸರಕಾರಕ್ಕೆ ಕೊಡಬೇಕಾದ ಫೀಸನ್ನು (ಪ್ರತಿ ಮರಕ್ಕೆ) ರೂ. 4 ಕ್ಕೂ ತೆಂಗಿನ ಮರಕ್ಕೆ ರೂ. 9 ಇದ್ದುದನ್ನು ರೂ. 12ಕ್ಕೂ ಏರಿಸಿರುವರಾಗಿ ತಿಳಿದುಬರುತ್ತದೆ.

ಹಿತ್ತಾಳೆ ದರ ನಿರ್ಣಯ—ಕೇಂದ್ರ ಸರಕಾರದವರು ಹಿತ್ತಾಳೆ ಪಾತ್ರಗಳ ದರವನ್ನು ನಿರ್ಣಯಿಸಿರುವರು, ಕನಿಷ್ಟ ಬೆಲೆ ರಾತ್ತಲಿಗೆ 1—14—0; ಹೆಚ್ಚೆಂದರೆ 2—4—0. ಈ ದರದ (ರೂ. 1-14-0ರಿಂದ ರೂ. 2—4—0ರ ವರೆಗೆ) ಆಯಾ ಪಾತ್ರಗಳ ತರಗತಿಯನ್ನು ಹೊಂದಿಕೊಂಡಿದೆ.

ಪುತ್ತೂರು—ನರಿಮೊಗ್ರು ಗ್ರಾಮದ ಪರ್ಲ ಮೈಂಕ ಬಂಟ ಎಂಬವರು ಎರಡು ಮುಡಿ ಅಕ್ಕಿಯನ್ನು ಕಾಯಿದೆ ಪ್ರಕಾರದ ಬೆಲೆಗಿಂತ ಮಾರಿದರೆಂಬ ಆರೋಪದ ಮೊಕದ್ದಮೆಯು ಪುತ್ತೂರು ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಯಾಗಿ ಪರ್ಲರಿಗೆ ರೂ. 3,000 ಜುಲ್ಮಾನೆ ತಪ್ಪಿದರೆ 6 ತಿಂಗಳ ಕಠಿಣ ಸಜೆ ಎಂದೂ, ಅದನ್ನು ಸಾಗಿಸಲು ಸಹಾಯಮಾಡಿದ ಲಾರಿ ಡ್ರೈವರ್ ದಾಸಪ್ಪ ಕಾಮತ್ ಎಂಬವರಿಗೆ ರೂ. 200 ಜುಲ್ಮಾನೆ ತಪ್ಪಿದರೆ 4 ತಿಂಗಳ ಕಠಿಣ ಸಜೆ ಎಂದು ವಿಧಿಸಲಾಗಿದೆ.

ದಕ್ಷಿಣ ಕನ್ನಡ ಮತ್ತು ಮಲಬಾರಿನ ಚಿರಕಲ್ ತಾಲೂಕಿನ ಪರವಾಗಿ ಮಂಗಳೂರಿನ ಪಳ್ನೀರ್ ರೋಡಿನಲ್ಲಿಯ 'ಲಕ್ಷ್ಮೀಸದನ'ದಲ್ಲಿ ಹಿಂದೂ ರಿಲಿಜಿಯಸ್ ಎಂಡೋಮೆಂಟಿನ ಅಸಿಸ್ಟೆಂಟ್ ಕಮಿಶನರರ ಆಫೀಸು ತಾ 17-7-44ರಲ್ಲು ತೆರೆಯಲಾಗಿದೆ. ಇನ್ನು ಮುಂದೆ ಎಂಡೋಮೆಂಟು ಇನ್ಸ್‌ಪೆಕ್ಟರ್ ಎಂಬವರ ಬದಲಾಗಿ ಅಸಿಸ್ಟೆಂಟ್ ಕಮಿಶನರರಿಗೆ ಪತ್ರವ್ಯವಹಾರ ನಡಿಸಬೇಕಾಗಿ ದೇವಸ್ಥಾನ ಟ್ರಸ್ಟಿಗಳು ಗಮನಿಸಬೇಕಾಗಿದೆ.

ಬೆಲ್ಲದ ಬೆಲೆ ನಿಯಂತ್ರಣ—ಜಿಲ್ಲಾ ಕಲೆಕ್ಟರರು ಒಂದು ಆಜ್ಞೆ ಹೊರಡಿಸಿ, ಬೆಲ್ಲದ ಬೆಲೆಯನ್ನು ನಿಯಂತ್ರಿಸಿರುವರು. ೨೮ ರಾತಲಿನ ಒಳ್ಳೆಯ ಬೆಲ್ಲ ಮಣಕ್ಕೆ ರೂ. ೪-೮-೦; ಎರಡನೆ ತರಗತಿಯ ಬೆಲ್ಲ ಮಣಕ್ಕೆ ರೂ. ೪-೦-೦; ೬೦ ರಾತಲುಗಳ ಪ್ರವ ಬೆಲ್ಲ ಮಣಕ್ಕೆ ರೂ. ೮-೦-೦ (ಟಿನ್ನಿಗೆ ಪ್ರತ್ಯೇಕ ೮ ಆಣೆ); ೨೮ ರಾತಲುಗಳ ಮಣಕ್ಕೆ ರೂ. ೪; (ಟಿನ್ನಿಗೆ ೮ ಆಣೆ ಪ್ರತ್ಯೇಕ) ೩೬ ರಾತಲುಗಳ ಮಣಕ್ಕೆ ರೂ. ೩-೮-೦.

ಕಲೆಕ್ಟರರಲ್ಲಿಗೆ 'ಜಾಥಾ'— ನಗರದಿಂದ ಸ್ವಲ್ಪ ದೂರದಲ್ಲಿರುವ ಕಾವೂರು ಗ್ರಾಮದ ೧೫೦ ಮಂದಿ ಹೆಂಗಸರೂ ಕೆಲವು ಗಂಡಸರೂ ತಾ. ೩ರಂದು ಸಂಜೆ ಹಜೂರು ಕಚೇರಿಗೆ ಮೆರವಣಿಗೆ ಹೋಗಿ ಕಲೆಕ್ಟರರನ್ನು ಕಂಡು, ತಮ್ಮ ಸಂಕಷ್ಟಗಳನ್ನು ತಿಳಿಸಿದರು. ಕಾವೂರಿನ ಸ್ಟೋರಿನವರು ಜನರಿಗೆ ಅಕ್ಕಿ ಒದಗಿಸುತ್ತಿಲ್ಲವೆಂದೂ ಜುಲೈ ತಿಂಗಳಲ್ಲಿ ಬರೇ ಮೂರು ದಿನ ಅವರಿಗೆ ಅಕ್ಕಿ ಕೊಡಲಾಯಿತೆಂದೂ, ಕಳ್ಳಸಂತೆಯಲ್ಲಿ ಕೆಲವರಿಗೆ ಸೇರಿಗೆ ಎಂಟಾಣೆಯಂತೆ ಅಕ್ಕಿ ಮಾರುತ್ತಿದ್ದಾರೆಂದೂ ಅವರ ಮನವಿಯ ಅಭಿಪ್ರಾಯವಾಗಿತ್ತು. ಕಲೆಕ್ಟರರು ಮನವಿಗೆ ಕಿವಿಗೊಟ್ಟು, ಆ ಪ್ರದೇಶದ ಮನೆಗಾರರನ್ನು ಕರೆಸಿ, ಕಾವೂರಿನ ಸ್ಟೋರಿಗೆ ಅಕ್ಕಿ ಹೋಗುವಂತೆ ಏರ್ಪಡಿಸಿದರು.

ಜೆಪ್ಪು ಮಾರ್ಕೆಟು ನೆಲಸಮವಾಯಿತು—ತಾ. ೧ರಂದು ಸಂಜೆ ೮ ಗಂಟೆಯ ಸಮಯಕ್ಕೆ ಬಲವಾದ ಸುಳಿಗಾಳಿಯೊಂದು ಬೀಸಿ, ಜೆಪ್ಪು ಮ್ಯುನಿಸಿಪಲ್ ಮಾರ್ಕೆಟನ್ನು ನೆಲಸಮಮಾಡಿತು. ಮಾರ್ಕೆಟು ಮುಗುಚಿ ಬೀಳುವ ಹೊತ್ತಿಗೆ ಸಾಮಾನು ಮಾರುವ ಮತ್ತು ಕೊಂಡುಕೊಳ್ಳಲು ಬಂದಿದ್ದ ಕೆಲವರೂ ಮಳೆಯಿಂದ ರಕ್ಷೆ ಪಡೆಯಲು ಒಳಸೇರಿದ್ದ ಜನರೂ ಮಾರ್ಕೆಟಿನಲ್ಲಿದ್ದರು. ೨೦ಕ್ಕೂ ಮಿಕ್ಕ ಜನರು ಗಾಯಹೊಂದಿದ್ದಾರೆ. ವೆನ್‌ಲಾಕ್ ಆಸ್ಪತ್ರೆಗೆ ೧೬ ಮಂದಿ ಗಂಡಸರೂ ಗೋಶೆನ್ ಆಸ್ಪತ್ರೆಗೆ ೬ ಮಂದಿ ಹೆಂಗಸರೂ ಅದೇ ರಾತ್ರಿ ಒಯ್ಯಲ್ಪಟ್ಟರು. ಹದಿನಾರು ಮಂದಿಯಲ್ಲದೆ ಇನ್ನೂ ಹಲವರಿಗೆ ಗಾಯಗಳಾಗಿರುವುವು. ಹೆಂಗಸರಲ್ಲಿ ಒಬ್ಬಾಕೆ ಲಕ್ಷಿಬಾಯಿ ಎಂಬವಳು ಅಂಬ್ಯುಲೆನ್ಸ್ ವಾಹನದಲ್ಲೇ ತೀರಿಕೊಂಡಳು. ಗಾಯಗೊಂಡವರಲ್ಲಿ ಮತ್ತಿಬ್ಬರು ಆಸ್ಪತ್ರೆಯಲ್ಲಿ ತೀರಿಕೊಂಡರೆಂದು ಕೇಳಿ ಬರುತ್ತದೆ.

ಉಡುಪಿ

ಸೇಂದಿಯಂಗಡಿಗಳ ಏಲಂ— ತಾ 7 ಮತ್ತು 8ರಲ್ಲಿ ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರರ ನೇತೃತ್ವದಲ್ಲಿ ನಡೆಯಿತು. ಕಳೆದ ವರುಷಕ್ಕಿಂತ ಈ ವರುಷ ಜಾಸ್ತಿ ಉತ್ಪತ್ತಿಯಾಗಿರುವುದಾಗಿ ತಿಳಿದುಬರುತ್ತದೆ.

ಶ್ರೀ. ಕೊಚ್ಚಿಕಾರ್ ಪದ್ಮನಾಭ ಪೈಗಳೆ—ಪಷ್ಟ್ಯಬ್ಧ ಪೂರ್ತಿ ಸಪ್ತಾಹ ಸಮಾರಂಭದ ಸಲುವಾಗಿ ತಾ 1ರಿಂದ ಏಳು ದಿವಸಗಳ ಕನಕ ಟ್ರೆಂಚ್ ಲೈಫ್ ಆಫೀಸಿನಲ್ಲಿ ದಿನಾಲೂ ಬೇರೆ ಬೇರೆ ಗುಂಪಿಗೆ ಟೀಪಾರ್ಟಿ ಮತ್ತು ಭಾಷಣಗಳು ನಡೆದುವು. ತಾ 2ರಲ್ಲಿ ಸಿಂಡಿಕೇಟಿನ ಮತ್ತು ಅದಕ್ಕೆ ಸಂಬಂಧಿಸಿದ ಇತರ ಸಂಸ್ಥೆಗಳ ಪರವಾಗಿ ವೈಕುಂಠ ನಿವಾಸದಲ್ಲಿ ಶ್ರೀ. ಪೈಗಳಿಗೆ ಉಪಹಾರ ಸತ್ಕಾರ ನಡೆಯಿತು. ವಕೀಲ್ ಶ್ರೀ ವೈಕುಂಠ ಬಾಳಿಗರು ಅಂದು ಸಭಾಧ್ಯಕ್ಷತೆ ವಹಿಸಿದ್ದರು. ಸಪ್ತಾಹದ ಕೊನೆ ದಿನದ ಸಮಾರಂಭದ ಅಗ್ರಪೀಠವನ್ನು ಡಾ। ಮಾಧವ ಪೈಗಳವರು ವಹಿಸಿದ್ದರು.

ಜಠರಾಗ್ನಿಸ್ತಂಭನ ಸಮಸ್ಯೆ— ಸಾಕಷ್ಟು ಅಕ್ಕಿ ದಾಸ್ತಾನು ಇಲ್ಲದ ದೆಸೆಯಿಂದ ಹಳ್ಳಿ ಹಳ್ಳಿಗಳಲ್ಲಿ ಪಚ್ಚೆ ಹೆಸರು, ಕಡಲೆ, ರಾಗಿ ಕೊಡಲಾರಂಭವಾಗಿಯದೆ. ರೇಶನಿಂಗ್ ಕ್ಷೇತ್ರದಲ್ಲಿಯ ವರ್ಗದಾರ ಹಾಗೂ ಇತರರ ಸ್ವಾಧೀನದಿರಕ್ಕೆ ನಾಲ್ಕಾರು ತಿಂಗಳ ದಾಸ್ತಾನು ಅಕ್ಕಿಯು ಕೆಲವಂಶ ಈಗ ಕಾನೆ ರಿಕ್ವಿಜಿಶನ್ ಮಾಡಲಾರಂಭವಾಗಿಯದೆ.

ಸೆಂಟರ್ ಉಪಾಧ್ಯಾಯರ ಕೇಂದ್ರಸಭೆಯು ತಾ 5-8-44ರಲ್ಲಿ ಶ್ರೀ ಕೆ. ಸಂಜೀವ ಭಟ್ M. A. L. T. ಇವರ ಅಧ್ಯಕ್ಷತೆಯಲ್ಲಿ ಶ್ರೀ. N. C. ಸುಬ್ಬಯ್ಯ B. A. B. E. D. (ಕೊಡಗಿನ ಸಹಾಯಕ ಜಿಲ್ಲಾ ವಿದ್ಯಾಧಿಕಾರಿಗಳು) ಇವರ ಸಮ್ಮುಖದಲ್ಲಿ ಜರಗಿತು. ಶ್ರೀ B. V. ರಮಣ M. A. L. T (ಜಿಲ್ಲಾ ವಿದ್ಯಾಧಿಕಾರಿಗಳ ಸಹಾಯಕರು) ಇವರು ಈಗಿನ ಯುದ್ಧದಲ್ಲಿ ಉಪಾಧ್ಯಾಯರ ಸ್ಥಾನ ಮತ್ತು ಕರ್ತವ್ಯಗಳ ವಿಷಯ ಭಾಷಣವನ್ನಿತ್ತರು. ಶ್ರೀಯುತ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು, ಕಳೆಲಿ ಮತ್ತು ಚರಕಗಳಿಂದ ನೂಲುವುದನ್ನು ಪ್ರದರ್ಶಿಸಿದರು.

ಹೋಲ್‌ಸೇಲ್ ಸ್ಟೋರು ಮತ್ತು ಪ್ರೈಮರಿ ಸ್ಟೋರುಗಳ ಅವಗಾಹನೆ ಬಗ್ಗೆ:—ತಾ 28-8-44ನೇ ಆದಿತ್ಯವಾರ ಮಧ್ಯಾಹ್ನ ಘಂಟೆ 2ಕ್ಕೆ ಪ್ರೈಮರಿ ಸ್ಟೋರು ಪ್ರತಿನಿಧಿಗಳ ಪರಿಷತ್ತು ಕೂಡಲಿರುವುದಷ್ಟೆ.

ಪ್ರತಿನಿಧಿಗಳು ತಾ 13-11-43ರಲ್ಲಿ ಒಮ್ಮೆ ಕೂಡಿ ಬಂದಿದ್ದೆವು. ಪ್ರೈಮರಿ ಸ್ಟೋರುಗಳು ಹೆಚ್ಚುತ್ತಾ ಬಂದು ಅವುಗಳ ಪ್ರಯೋಜನಕ್ಕಾಗಿ ಹೋಲ್‌ಸೇಲ್ ಸ್ಟೋರು ಜನನಕ್ಕೆ ಬಂದುದಾಗಿರುತ್ತದೆ. ಜನನಕ್ಕೆ ಬರುತ್ತಾ ಅಕ್ಕಿ ಮತ್ತು ಆಹಾರ ಸಾಮಾನು ವಿಷಯದ ಕೆಲಸವನ್ನು ಸರಕಾರದವರು ಅದಕ್ಕೆ ಕೊಡುವುದಕ್ಕೂ ಹಾಗೆ ಅವನ್ನು ಪಡಿಯುವುದಕ್ಕೂ ಅನುಕೂಲವಾಯಿತು. ಮುಂದಿನ ವರ್ಷಕ್ಕೂ ಈ ಕೆಲಸವನ್ನು ಸ್ಟೋರಿಗೆ ವಹಿಸಿಕೊಡಲಾಗಿದೆ. ಈ ಸಂದರ್ಭ ಈ ಪರಿಷತ್ತು ಕೂಡಿಬರಲು ಅನುಕೂಲ ದೊರೆತುದರಿಂದ ಪ್ರತಿನಿಧಿಗಳು ತಪ್ಪದೆ ಬಂದು ಸ್ಟೋರು ಬೆಳವಣಿಗೆಗೆ ತಾವು ಮಾಡತಕ್ಕ ಕರ್ತವ್ಯವನ್ನು ತಾವಾಗಿ ತಿಳಿದು ಮತ್ತು ಇತರರಿಗೆ ತಿಳಿಸಿ ಅವುಗಳ ಮೇಲ್ಮೆಗೆ ಪ್ರಯತ್ನಿಸುವುದು ಅಗತ್ಯವಿದೆ.

ಪ್ರತಿ ಸ್ಟೋರಿನಿಂದ ಒಬ್ಬ ಪ್ರತಿನಿಧಿಯ ಬದಲು ಇಬ್ಬರನ್ನು ಚುನಾಯಿಸಿ ಕಳುಹಿಸಿ ಕೊಡಲಾಗುವಂತೆ ಪ್ರಯತ್ನಿಸುವುದರಲ್ಲಿ ಪ್ರಯೋಜನ ಕಾಣುವುದಾದರೆ ಹಾಗೆ ಯತ್ನಿಸಿರಿ.

ಪರಿಷತ್ತಿನಲ್ಲಿ ಈ ಕೆಳಗಿನ ವಿಷಯಗಳ ಕುರಿತು ನಿರ್ಣಯಿಸಲು ಬರಕೊಂಡಿರುತ್ತದೆ. 1 (a) ಸ್ಟೋರು ಬೆಳವಣಿಗೆಗೆ ಅಗತ್ಯವಾದ ಸೂಪರ್ವಿಜನ್ ಮತ್ತು ಆಡಿಟ್ ಇವೆರಡನ್ನೂ ಧರ್ಮಾರ್ಥವಾಗಿ ಕೊಡಿಸುವಂತೆ ಯತ್ನಿಸುವುದು. (b) ಈಗ ವಿಧಿಸಿರುವ ಸೂಪರ್ವಿಜನ್ ಮತ್ತು ಆಡಿಟ್ ಚಾರ್ಜುಗಳಲ್ಲ ಆದಷ್ಟು ಕಡಿಮೆ ಮಾಡಲು ಸಾಧಿಸುವುದು. 2. ಸ್ಟೋರುಗಳನ್ನು ಸೇಲ್ಸ್ ಟೇಕ್ಸಿನಿಂದ ವಿನಾಯತಿಗೊಳಿಸುವುದು. ಸಾಧ್ಯವಾಗದಿರುವಲ್ಲಿ ಆಹಾರ ಸಾಮಗ್ರಿಗಳ ವಿಷಯ ಮತ್ತು ಇತರ ವಿಷಯಗಳಲ್ಲಿ ಈಗ ಕೊಡುತ್ತಿರುವ ಎರಡು ಟೇಕ್ಸಿನ ಬದಲು ಒಂದರಿಂದಾದರೂ ಸುಧಾರಿಸಿಕೊಳ್ಳುವಂತೆ ಯತ್ನಿಸುವುದು. 3. ಸ್ಟೋರುಗಳು ಬರೇ ಸಾಮಾನು ವಿಕ್ರಯದ ಅಂಗಡಿಗಳಾಗದೆ ಕೊಂಡುಕೊಳ್ಳುವ ಮತ್ತು ಪಡಿಯುವ ಸಂಸ್ಥೆಗಳಾಗಿ ಕೂಡಾ ಕೆಲಸವನ್ನು ಮಾಡುವುದು. 4. ಶ್ರೀ ಸದ್ಸಪ್ಪಯ್ಯನವರು, ಟೆಕ್ಕಪತ್ರವನ್ನಿಟ್ಟು ಯಾರನ್ನು ಮತ್ತು ಎಷ್ಟರ ಮಟ್ಟಿನ ಜವಾಬ್ದಾರರು ಮಾಡಬಹುದಾಗಿ, ಬರೆದ ಕಾಗದ (5) ಡೆಪ್ಯುಟಿ ರಿಜಿಸ್ಟ್ರಾರರಿಂದ ಆಗಾಗ ಬಹು ತರದ ಅನೇಕ ಸರ್ಕ್ಯುಲಾರುಗಳು ಬರುತ್ತಿರುವುದರಿಂದ ಅವುಗಳ ಕುರಿತು ಸ್ಟೋರುಗಳು ಎಷ್ಟರ ಮಟ್ಟಿನ ಜಾಗ್ರತೆಯನ್ನಿಟ್ಟು ಕೆಲಸಮಾಡಲು ಸಾಧ್ಯ. (6) ರಿ ಯವರು ರಿಜರ್ವ್ ಫಂಡನ್ನು ಏರಿಸಬೇಕಾಗಿಯೂ, ಡಿವಿಡೆಂಡು ಕಡಿಮೆ ಮಾಡಬೇಕಾಗಿಯೂ ಕೊಡುವ ಸರ್ಕ್ಯುಲಾರು. ಈ ರೀತಿಯ ಸರ್ಕ್ಯುಲಾರು ಎಷ್ಟರ ನ್ಯಾಯವಾದದ್ದು. (7) ಪಾಲು ಭಂಡವಾಳದಲ್ಲಿ ಅರೆವಾಸಿಯನ್ನು ಪ್ರೈಮರಿ ಸ್ಟೋರುಗಳು ಹೋಲ್‌ಸೇಲ್ ಸ್ಟೋರಿನಲ್ಲಿ ಹಾಕತಕ್ಕದ್ದೇ ಯಾ ಅವರ ಮುನಾಸಬಿಗೆ ಬಿಡಬಹುದೇ? (8) ಸ್ಟೋರುಗಳು ತಮ್ಮ ವ್ಯಾಪಾರವನ್ನು ಮುನಾಫೆ ದೃಷ್ಟಿಯಿಂದ ಮಾಡತಕ್ಕದ್ದೇ, ಯಾ ಬಹುಜನರ ಪ್ರಯೋಜನಾರ್ಥವಾಗಿ ಬೆಳೆಸುವವರಿಗೆ ಆದಷ್ಟು ಹೆಚ್ಚಿಗೆ, ಪಡಿಯುವವರಿಗೆ ಆದಷ್ಟು ಕಡಿಮೆ ಧಾರಣೆಯಲ್ಲಿ ಕೊಡುವ ಪ್ರಯತ್ನ ನ್ಯಾಯವಾಗುವುದೇ? (9) ಹೋಲ್‌ಸೇಲ್ ಸ್ಟೋರು ಪ್ರೈಮರಿ ಸ್ಟೋರುಗಳಿಗೆ ಯಾವ ತರದ ಏರ್ಪಾಟಿನಿಂದ ಹೆಚ್ಚಿನ ಪ್ರಯೋಜನಕಾರಿಯಾಗಿ ಬೆಳೆದು ಬರಲು ಸಾಧ್ಯವಿದೆ ಮತ್ತು ಪ್ರಯತ್ನಿಸಬಹುದು. (10) ಪ್ರೈಮರಿ ಸ್ಟೋರುಗಳು ಇನ್ನಷ್ಟು ಸಂಖ್ಯೆಯಿಂದ ಬೆಳೆದು ಬರುವುದು ಅಗತ್ಯವೇ ಮತ್ತು ಯಾವ ಪ್ರಯತ್ನದಿಂದ.

ನಿಮಗೆ ತೋರುವ ಇತರ ವಿಷಯಗಳನ್ನು ನೀವು ಸಹ ಪ್ರೆಸಿಡೆಂಟರಿಗೆ ಬರೆದು ತಿಳಿಸಿ ಪೂರ್ಣ ಸಹಕಾರದಿಂದ ತಪ್ಪದೆ ಬಂದು ಪರಿಷತ್ತನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುವ

ಹೋಲ್‌ಸೇಲ್ ಸ್ಟೋರು ಡೈರೆಕ್ಟರರಲ್ಲಿ ಪ್ರೈಮರಿ ಸ್ಟೋರು ಪ್ರತಿನಿಧಿ

ಎಮ್. ಆರ್. ಪೂಂಜ.

ಅಧ್ಯಕ್ಷ- ಮೂಲ್ಕಿ ಪ್ರೈಮರಿ ಸ್ಟೋರು ಲಿಮಿಟೆಡ್

ಮೂಲ್ಕಿ 5-8-44

ಹಾಗಾದರೆ....

ವರ್ಗದಾರ—ಪಟೇಲರೆ, ಆರನೇ ಕ್ಲಾಸಿನಲ್ಲೊ ಏನೋ ಶಾಲೆ ಬಿಟ್ಟ ನೀವು ತಹಶೀಲ್ದಾರರೊಡನೆ ಸರಾಗವಾಗಿ ಇಂಗ್ಲಿಷು ಮಾತಾಡಿದಿರಲ್ಲ? ಯಾರು ಕಲಿಸಿದರು ನಿಮಗೆ?

ಪಟೇಲ -ಯಾರೇತಕ್ಕೆ? ನಾನೇ ನನ್ನಷ್ಟಕ್ಕೆ ಕಲಿತುಕೊಂಡೆ. 'ಸುಲಭದಲ್ಲಿ ಇಂಗ್ಲಿಷು' ಎಂಬ ಪುಸ್ತಕವನ್ನು ಅಭ್ಯಸಿಸಿದೆ. ಅದನ್ನು ಕಲಿತರೆ ಯಾವ ಆಫೀಸರರೊಡನೆಯೂ ಇಂಗ್ಲಿಷಿನಲ್ಲಿ ಮಾತಾಡುವ ಸಾಮರ್ಥ್ಯ ಬರುತ್ತದೆ. ಈ ಕಾಲದಲ್ಲಿ ಇಷ್ಟು ಇಂಗ್ಲಿಷು ಕಲಿತುಕೊಳ್ಳದಿದ್ದರೆ ನಮ್ಮ ಅನುದಿನದ ವ್ಯವಹಾರದಲ್ಲಿ ಬಾಯಿ ಕಟ್ಟಿದಂತಾಗುತ್ತದಲ್ಲ?

ವರ್ಗದಾರ—ಅದು ನಿಜ ಆದರೆ ನನಗೆ ಇಂಗ್ಲಿಷು ಅಕ್ಷರವೂ ಗೊತ್ತಿಲ್ಲವಲ್ಲ!

ಪಟೇಲ—ಕನ್ನಡ ಗೊತ್ತಿದ್ದರೆ ಸಾಕು. ಮತ್ತೆಲ್ಲ ಆ ಪುಸ್ತಕ ಸುಲಭವಾಗಿ ಕಲಿಸಿ ಬಿಡುತ್ತದೆ. ಇಂದೇ ಕೊಂಡುಕೊಂಡು ಅಭ್ಯಾಸಮಾಡಿರಿ

ವರ್ಗದಾರ—ಎಲ್ಲಿ ಸಿಗುತ್ತದೆ? ಬೆಲೆ ಏನು?

ಪಟೇಲ—ಉಡುಪಿಯ 'ನವಭಾರತ ಪುಸ್ತಕ ಭಂಡಾರ'ದಲ್ಲಿದೆ. ಬೆಲೆ ಬರೇ 1—4—0! ಯಾವ ವೃತ್ತಿಯವರೇ ಇರಲಿ, ಅವರಿಗೆ ಸ್ವಲ್ಪ ಇಂಗ್ಲಿಷು ಗೊತ್ತಿದ್ದರೆ ಅವರ ಕಸುಬಿಗೆ ಕಳೆಯೇರುತ್ತದೆ. ಆದುದರಿಂದ ವ್ಯಾಪಾರಿಗಳು, ಚಿಕ್ಕಪುಟ್ಟ ನೌಕರರು, ಕೆಲಸಗಾರರು ಈ ಪುಸ್ತಕದ ಅಭ್ಯಾಸದಿಂದ ತಮ್ಮ ತಮ್ಮ ಉದ್ಯೋಗಗಳನ್ನು ಮಿರುಗುಗೊಳಿಸಬಹುದು. ಇಂಗ್ಲಿಷು ಮಾತಾಡಲಿಕ್ಕೆ, ಆರ್ಡರು ಕೊಡಲಿಕ್ಕೆ, ತಂತಿ ಬಿಡಲಿಕ್ಕೆ, ಎಡ್ರೆಸ್ಸು ಬರೆಯಲಿಕ್ಕೆ, ಎಲ್ಲಾ ಗೊತ್ತಾಗುತ್ತದೆ

ವರ್ಗದಾರ ಹಾಗಾದರೆ ಇಂದೇ ಅದನ್ನು ಕೊಂಡುಕೊಳ್ಳಬೇಕು.

9—8—1944

A. R. ಕರ್ದಾರ್ ದಿಗ್ದರ್ಶಿತ

ಸಿರ್ಕೊ ಕಂಪೆನಿಯ

ಉತ್ತಮ ಚಿತ್ರ

ನಯಿ ದುನಿಯಾ

ಅಥವಾ

ಹೊಸ ಜಗತ್ತು

ಚಂದಾದಾರರಲ್ಲಿ.

ನವಯುಗದ ಚಂದಾದಾರರು ತಮ್ಮ ವಿಳಾಸ ಬದಲಾಗಿದ್ದರೆ ಅದನ್ನು ದಯಮಾಡಿ ಸಕಾಲದಲ್ಲಿ ತಿಳಿಸುವಂತೆಯೂ ಚಂದಾಹಣ ಬಾಕಿ ಇದ್ದವರು ಅದನ್ನು ಕೂಡಲೇ ಕಳುಹಿಸುವಂತೆಯೂ ಅಪೇಕ್ಷಿಸಲಾಗುತ್ತದೆ

ವಾಚಕರಲ್ಲಿ-

ಶ್ರೀ. ಕೆ. ಜಗನ್ನಾಥ ಶೆಟ್ಟರು ಚಂದಾದಾರರನ್ನು ಸೇರಿಸಲು ಪೂನಾ, ಬೊಂಬಾಯಿ ಮೊದಲಾದ ಕಡೆಗಳಲ್ಲಿ ಸಂಚರಿಸ ತೊಡಗಿದ್ದಾರೆ. ಅವರೊಡನೆ ಎಲ್ಲರೂ ಸಹಕರಿಸಿ, ಚಂದಾದಾರರಾಗಿ, ಚಂದಾದಾರರನ್ನೊದಗಿಸಿ, ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್

ನವಯುಗ.

— ಬಡ ಕೃಷಿಕರ ಹಸಿವಿನಗೋಳು —

ಗುರಿಯಿಲ್ಲದ ಜೀವನ, ಶಕ್ತಿಯಿಂದದಿ ದುಡಿದು ಬರಿ ಹೊಟ್ಟೆಯಲ್ಲಿ ದಿನ ಕಳೆಯುವ ಬಾಳು, ಹಗಲಿರುಳು ಎಂದೆನ್ನದೆ, ಹೊಲ ಗದ್ದೆಗಳಲ್ಲಿ ರಕ್ತ ಸೂಸಿ ಕಷ್ಟಕೃತ ಮಾಡುವ ಬಡ ಕೃಷಿಕರು ಯಿಂದು ಬಾಯಿಗೆ ಬಟ್ಟೆ ಹಾಕಿಕೊಂಡು, ಬಂಗಾಳದ ಬರಗಾಲವನ್ನ ಅನುಭವಿಸುವ ಪರಿಸ್ಥಿತಿಯನ್ನು ವಿಮರ್ಶಿಸುವುದಾದರೆ, ಕನ್ನಡಿಗರ ಬಾಳು ದಿನವು ಸಮೀಪಿಸುತ್ತಿದೆಯೆಂದು ಧೈರ್ಯದಿಂದ ಹೇಳಬಹುದು, ಸ್ವಾರ್ಥಪರರು ದೊಡ್ಡ ರೈತರು ತಮ್ಮನ್ನು ಹೊಂದಿಕೊಂಡಿರುವ ಜನಾಂಗದ ಆಹಾರ ಅಭಾವವನ್ನು ಎಣಿಸದೆ, ಅಧಿಕಾರಿಗಳ ಬಲಿಗೆ ಬೀಳುವೆವು ಎಂದು ಬೆದರಿ ತಮ್ಮ ಕಣಜಗಳನ್ನು ಖಾಲಿ ಮಾಡಲು ನೆರವಾಗಿದ್ದಾರೆ. ಹಳ್ಳಿಗರ ಪ್ರಲಾಪ, ಮಕ್ಕಳ ಹಸಿವಿನ ಗೋಳು. ಯಿವುಗಳನ್ನೆಲ್ಲಾ ಎಣಿಸುವುದಾದರೆ, ಪ್ರಕೃತಿಯೇ ಮಾನವಕುಟುಂಬವನ್ನು ಒರಸುವ ಸ್ವಭಾವದಿಂದ, ಹೃದಯರಹಿತವಾಗಿ, ಒಂದೇ ಸವನೆ ಕಟುಕ ಹೃದಯದಿಂದ ನುಂಗುವಳೋ ಎಂಬಂತೆ ಭಾಸವಾಗುತ್ತಿದೆ. ಬಂಗಾಳದ ಎಣಿಸಲಸಾಧ್ಯವಾದ ಬರಗಾಲದ ದೃಶ್ಯವನ್ನು ಕಳೆದ ವರುಷ ವರ್ತಮಾನ ಪತ್ರಿಕೆಗಳಲ್ಲಿ ಓದಿ ಎದೆನಡೆಯುವಂತಿದ್ದ ಚಿತ್ರ ಯಿಂದು ಕನ್ನಡಿಗರ ಕಣ್ಮುಂದೆ ತಾಂಡವ ನೃತ್ಯ ಮಾಡುತ್ತಿದೆ.

ಮಾನ್ಯ ದಯಾಳು ಕಲೆಕ್ಟರ್ ದೊರೆಗಳವರು ಜಿಲ್ಲೆಯ ಹಳ್ಳಿ ಮೂಲೆಗಳ ನಿಜಸ್ಥಿತಿಯನ್ನರಿತು, ಪ್ರಾಂತಿಕ ಸರಕಾರವನ್ನು ಕೇಳಿಕೊಂಡು, ಜಿಲ್ಲೆಯನ್ನು ಎತ್ತಿ ಹಿಡಿಯಬೇಕೆಂದು, ಹಸಿದ ಕನ್ನಡಿಗರು ಬೇಡಿಕೊಳ್ಳುವರು, ಸರಕಾರದವರು, ರೇಶನಿಂಗ್ ಸ್ಥಳಗಳನ್ನು ಕಾಪಾಡುವ ಒಂದೇ ದೃಷ್ಟಿಯನ್ನು ಇಟ್ಟುಕೊಂಡರೆ, ಹೊರ ವಲಯದಲ್ಲಿರುವ ಕೃಷಿಕರನ್ನು ರಕ್ಷಿಸುವವರಾರು? ಇವರುಗಳು ತಮ್ಮ ಹಾಲಾಹಲವಾಣಿಯನ್ನು ಮಾನ್ಯ ಕಲೆಕ್ಟರ್ ದೊರೆಗಳ ಮುಂದೆ ಹೇಳಿಕೊಳ್ಳಲು ನಾಲಿಗೆಯಿಲ್ಲದೆ, ಮೂಕ ಸನ್ನೆಯಿಂದ ತಮ್ಮ ಹಸಿವೆಯನ್ನ ಇನ್ನೆಷ್ಟು ದಿವಸ ಸಹಿಸಿಕೊಂಡಾರು? ಮಾಲುಕಳುವಿನಿಂದ ಕುಂದಾಪುರದ ವರೆಗೆ ಹಬ್ಬಿಕೊಂಡಿರುವ ಸಮುದ್ರ ತೀರದ ಪ್ರತಿಯೊಂದು ಹಳ್ಳಿಗರಲ್ಲಿಯೂ ಈವಾಗಲೇ ಆಹಾರ ಸಾಕಷ್ಟಿಲ್ಲದೆ, ಒಂದೆರಡು ಉಪವಾಸದಿಂದ ಕಂಗೆಟ್ಟು, ಸಮ ದೃಶ್ಯ ಪೂರ್ವ ದಿಕ್ಕಿನಲ್ಲಿರುವ ಒಳ ಹಳ್ಳಿಗೆ ಇಳಿದು, ಅಕ್ಕಿಗಾಗಿ ಅಂಗಲಾಚಿ ಬೇಡುವ ಆದೃಶ್ಯವನ್ನು ಕಂಡರೆ, ಹೃದಯ ಒಡೆದಂತಾಗುವುದು. ಯಿತ್ತ ಕುಂದಾಪುರ ತಾಲೂಕಿನ ಒಳ ಹಳ್ಳಿಗಳು ಸಾಮಾನ್ಯ ಕಾಳಾವರ, ಕೆದೂರು, ಅಸೋಡು, ಹಲ್ಸೂರು, ಕೋಗಿ, ಹೊಸಕುತ್ತೂರು, ಮೊಳಹಳ್ಳಿ, ಜಪ್ತಿ, ಗುಲ್ವಾಡಿ, ಸಾಕೂರು, ಕಂಡ್ಲೂರು, ಯಿನ್ನೆಷ್ಟೋ ಹಳ್ಳಿಗಲು, ಆಹಾರ ಅಭಾವದಿಂದ ಗಾಬರಿಸಿದ್ದು, ತಮ್ಮ ಮಕ್ಕಳ ಗತಿಯೇನು, ತಮ್ಮನ್ನು ಕಾಪಾಡುವವರು ಯಾರು, ಎಂದು ಹಸಿದ ಹೊಟ್ಟೆಯಿಂದ ಬೊಬ್ಬಿಡುತ್ತಾಯಿದ್ದಾರೆ. ಹಳ್ಳಿಗರ ಹಸಿವಿನ ಕೂಗು ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರಿಗೆ ಕೇಳಿಸಿರುವುದೇ? ವರ್ಗದಾರ ಸಂಘದವರು ವಿಚಾರಿಸಿರುವರೆ? ಸ್ಥಳೀಕ ವರ್ಗದಾರರು ಬಡ ಕುಟುಂಬಗಳ ಗೋಳನ್ನು ಸರಕಾರಕ್ಕೆ ಚಿತ್ರಿಸಿ ಸಂಕಷ್ಟದಿಂದ ಪಾರುಮಾಡಲು ಬೇಡಿಕೊಂಡಿರುವರೇ? 'ದೇವರೇ ಗತಿ'!

ಹಳ್ಳಿಗಳ ಒಕ್ಕಲಿಗರ ಮನೆಯಿಂದಾಗುತ್ತಿರುವ ಧಾನ್ಯ ಸಹಾರವಾದರೂ ಅಸಹನೀಯವಿದೆ. 10 ಜನರಿರುವ ಒಂದು ಕುಟುಂಬದಲ್ಲಿ, ದಿನಕ್ಕೆ ರೇಶನಿಂಗ್ ಪ್ರಕಾರ 3½ ಸೇರು ಅಕ್ಕಿಯಂತೆ ತಿಂಗಳಿಗೆ 1 ಮುಡಿ 33 ಸೇರು ಬೇಕಾಗುತ್ತದೆ, (ಆದರೆ ಈ ಕೃಷಿಕ ಜನಾಂಗಕ್ಕೆ ಈ ರೇಟಿನಲ್ಲಿ ಅಕ್ಕಿ ಸಿಕ್ಕಿದರೆ ಮುಂದಿನ ಸಾಗುವಳಿ ಕೆಲಸ ಮಾಡಲು ಶಕ್ತಿ ಬರಲಿಕ್ಕಿಲ್ಲ.) ಹೀಗೆ ಹೊಸ ಪೈರು ಬರುವುದರೊಳಗೆ 10 ಜನರಿರುವ ಒಂದು ಕುಟುಂಬಕ್ಕೆ ಮೇಲಿನ ಲೆಕ್ಕಾಚಾರ ಪ್ರಕಾರ 5 ಮುಡಿ 1 ಕಳ್ಸಿಗೆ 1 ಸೇರು ಅಕ್ಕಿ ಬೇಕಾಗುತ್ತದೆ, ಆದರೂ, ಇವರಲ್ಲಿ 4 ಮುಡಿ ಅಕ್ಕಿ ಸ್ಟೋಕ್ ಯಿದ್ದಲ್ಲಿ ಇಂಥಾ ಕುಟುಂಬದಿಂದ ಹೆದರಿಸಿ 2 ಮುಡಿ ಅಕ್ಕಿಯನ್ನು ಸ್ಟೋರಿಗೆ ಅಧಿಕಾರ ಪೂರ್ವಕ ಹಾಕಿಸಿ ಹೋಗುತ್ತಿದ್ದಾರೆ.

ವರ್ಗದಾರ ಸಂಘದವರೂ, ಧನಿಕರವೂ, ಮಹನೀಯರೂ ಬಡವರ ಬಗ್ಗೆ ಅಲ್ಲಲ್ಲಿ ಅನ್ನದಾನ ಮಾಡುವರೆ (starvation relief fund) ಅಲ್ಲಲ್ಲಿ ಕಮಿಟಿ ಮಾಡಿ, ಧನ ಸಂಗ್ರಹ ಮಾಡಿ ಸರಕಾರಕ್ಕೆ ಒಪ್ಪಿಸಿ, ಬೇಕಾದಲ್ಲಿಗೆ, ದೀನದರಿದ್ರರಿಗೆ, ಆಹಾರ ಒದಗಿಸುವರೆ ಏರ್ಪಾಡಾಗಬೇಕು. ಸರಕಾರದವರೂ, ಶಿಕ್ಷಿತ ನಾಗರಿಕರೂ, ರೈತ ಸಂಘದವರೂ, ಧನಿಕರೂ ಸೌಹಾರ್ದ ದೃಷ್ಟಿಯಿಂದ ಕೂಡಿ ನಡೆದು ಬಡವರನ್ನು ರಕ್ಷಿಸುವ ವ್ಯವಸ್ಥೆ ಮಾಡಬೇಕಾಗಿ ವಿನಯದಿಂದ ಬೇಡಿಕೊಳ್ಳುವೆ.

ಬಡವರ ಬಂಧು
K· Vittal shetty.

Degrees: Books: Medicines
Free H. L M. S. M. B. H. M. D. etc, Free Homeo-Ayur- UnaniNatureo degree by post also—Fractitioner also get soon Homeo Materiamedica, Rs. 5 Homeo Practice book Rs. 4. Insanity Cure Pills Rs. 10 Enclose 2 annas stamp.—
Prof. Dr. N. H. Cnbatbar,
Principal Indian Homeopathi Institute & Society (Govt Regd)
P. O. MAHUVA (Kathiawar Dt. India).

Sidha-Kalpa Kavach (Regd.)
No. 3 Rs. 2 No. 2 Rs. 5 No. 1 Rs. 7 Special Rs 10, Extra Special Rs. 17 fo over marriage health wealth, Ask an six questions with M. O. Re. 1/4, and get correct answers by return, post Life reading Rs 10No, V. P. Send M. O. Free, pmplets.
Prof. Dr. N. H. Chhatbar,,
P. O. MAHUVA. (Kathiawar India.)

ಪಬ್ಲೀಕ್ ನೋಟಿಸು.

ಉಪ್ಪಿ ತಾಲ್ಲೂ ಬಳಸಾವರ ಮಾಗಣೆ ನಂಬ್ರ 93ನೇ ಮಜೂರು ಗ್ರಾಮದ ರಾಮನಾಥ ಭಟ್ಟರ ಮಗ ಅನಂತ ಭಟ್ಟನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ:—

ನನ್ನ ಮೊಮ್ಮಗ ಮ ಮ್ಮತ ಬಾಬಣ್ಣ ಭಟ್ಟನ ಮಗ ಕೇಶವ ಭಟ್ಟನು ನನ್ನ ಕಠಿಣ ಅಸ್ವಸ್ಥದ ಕಾಲದಲ್ಲಿ ನನ್ನ ಆಸ್ತಿ ಬಾಬ್ತು ಯಾವತ್ತೂ ರಿಕಾರ್ಡನ್ನು ಅಪಹರಿಸಿ ಕದ್ದುಕೊಂಡು ಹೋದದ್ದಲ್ಲದೆ ತನ್ನ ಹೆಸರಲ್ಲಿ ನನ್ನ ಸ್ಥಿರ ಚರ ಸೊತ್ತುಗಳ ಕುರಿತು ಒಂದು ಸ್ವಪ್ನನೆ ವೀಲು ತಯ್ಯಾರಿಸಿರುತ್ತಾನಾಗಿಯೂ ಮ ೧ದರ ಆಧಾರದ ಮೇಲೆ ನನ್ನ ಆಸ್ತಿ ಬಾಬ್ತು ಗೇಣಿಯನ್ನು ತನ್ನ ವಿನಹಾ ಇತರರಿಗೆ ಕೊಡಬಾರದಾಗಿ ದುರ್ಭೋಧನೆ ಕೊಡುತ್ತಾನಾಗಿಯೂ ಮ ಖಾಲಿ ಕಾಗದಗಳ ಮೇಲೆ ನನಗೆ ಸ್ಮೃತಿ ಇಲ್ಲದಿರುವ ಕಾಲದಲ್ಲಿ ನನ್ನ ಎಡಕೈ ಹೆಬ್ಬೆಟ್ಟಿನ ಗುರ್ತುಗಳನ್ನು ತೆಗೆದುಕೊಂಡು ಇಟ್ಟಿರುತ್ತಾನಾಗಿಯೂ ನನ್ನ ತಿಳುವಳಿಕೆಗೆ ಬಂದದ್ದರಿಂದ ನಾನು ನನ್ನ ಕುಟುಂಬದಲ್ಲಿ ರಿಜಿಸ್ಟ್ರನಿ ಆದ ವಿಭ... ...

ಸಂಪೂರ್ಣ ಹಕ್ಕಿನ ಸ್ಥಿರಚರ ಆಸ್ತಿ ಕುರಿತು ತಾ. 26-7-44ರಲ್ಲಿ ನನ್ನ ಮಗ ವೆಂಕಟೇಶ ಭಟ್ಟನ ಹೆಸರಲ್ಲಿ ಒಂದು ರಿಜಿಸ್ಟ್ರನಿ ವೀಲನಾಮೆಯನ್ನು ಬರೆದಿಟ್ಟಿರುತ್ತೇನೆ. ಸದ್ರಿ ವೀಲು ನನ್ನ ಎರಡನೆ ಮತ್ತು ಆಖೈರಿ ವೀಲಾಗಿರುತ್ತದೆ. ನಾನು ನನ್ನ ಮೊಮ್ಮಗ ಕೇಶವ ಭಟ್ಟನ ಹೆಸರಲ್ಲಿ ವೀಲು ಮಾಡಿಟ್ಟಿರುತ್ತೇನೆಂಬುದು ಯಥಾರ್ಥವಾದದ್ದಲ್ಲಾ. ಸದ್ರಿ ಕೇಶವ ಭಟ್ಟನು ಮೋಸದಿಂದ ಪಡಕೊಂಡ ನನ್ನ ಎಡಗೈ ಹೆಬ್ಬೆಟ್ಟಿನ ಗುರ್ತುಗಳಿರುವದೆಂಬ ಕಾಗದಗಳಿಂದ ನನ್ನ ಯೂ ನನ್ನ ಮಗ ವೆಂಕಟೇಶ ಭಟ್ಟನ ವಿರುದ್ಧ ತಯ್ಯಾರಿಸಬಹುದಾದ ಯಾವದೇ ತರದ ಸ್ವಪ್ನನೆಯ ರಿಕಾರ್ಡು ನನಗೆ ಯೂ ನನ್ನ ಸ್ಥಿರ ಚರ ಆಸ್ತಿಗೆಯೂ ನನ್ನ ಸಹಸ್ರಕಾಲದ ನಂತ್ರ ನನ್ನ ಸ್ಥಿರಚರ ಆಸ್ತಿಗಳನ್ನು ಇಚ್ಛಾನುಸಾರ ಅನುಭವಿಸಲಿಕ್ಕೆ ಅರ್ಹನಾದ ನನ್ನ ಮಗ ವೆಂಕಟೇಶ ಭಟ್ಟಗೆ ಬಾಧಕಕ್ಕದ್ದಲ್ಲ. ನನ್ನ ಸಹಸ್ರಕಾಲದ ನಂತ್ರ ನನ್ನ ಮಗ ವೆಂಕಟೇಶ ಭಟ್ಟನು ನನ್ನ ಸ್ಥಿರಚರ ಸೊತ್ತುಗಳಿಗೆ ಸಂಪೂರ್ಣ ಹಕ್ಕುದಾರನಲ್ಲದೆ ನನ್ನ ಮಗ ಬಾಬಣ್ಣ ಭಟ್ಟನ ಮಕ್ಕಳಿಗೆ ಯಾರಿಗಾದರೂ ನನ್ನ ಸ್ಥಿರ ಚರ ಆಸ್ತಿಗಳಲ್ಲಿ ಹಕ್ಕು ಸಂಬಂಧ ಬಾಧ್ಯತೆ ಇರುವುದಿಲ್ಲಾ ಎಂಬ ಸಂಗ್ತಿ ಈ ಮೂಲಕ ಸರ್ವರಿಗೂ ತಿಳುಹಿಸಲಾಗುತ್ತದೆ.

ಮಜೂರು ಅನಂತ ಭಟ್.

ತಾ 5-8-1944. }
ಮೊಕ್ಕಾಂ. ಮಜೂರು }

ನಿಮಗೆ ಯಾವುದು ಅವಶ್ಯಕ?



ರೈಲ್ವೆಯವರಿಗೆ ಈಗ ಕೆಲಸವು ಮಿತಿಮೀರಿರುವದರಿಂದ, ಅವರು ಜನರಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವದು ಮತ್ತು ಯುದ್ಧಕ್ಕೆ ಪೂರ್ವದಲ್ಲಿದ್ದಹಾಗೆ ಜನರಿಗೆ ಪ್ರಯಾಣದ ಸೌಕರ್ಯವನ್ನು ಒದಗಿಸಿಕೊಡುವದು ಇವೆರಡರ ಭರವಸೆಯನ್ನು ಕೊಡುವದು ಅವರಿಗೆ ಸಾಧ್ಯವಿಲ್ಲ.

ಜನರು ಇವೆರಡರೊಳಗೆ ಯಾವದಾದರೊಂದನ್ನು ಪಡೆಯಬಹುದೇ ಹೊರತು ಎರಡನ್ನೂ ಪಡೆಯಲಾರರು. ಅವರೆ, ಆಹಾರಪದಾರ್ಥ, ಬಟ್ಟೆ, ಸೌದೆ ಮುಂತಾದ ಉಪಯುಕ್ತ ಸಾಮಗ್ರಿಗಳನ್ನು ಒದಗಿಸಿಕೊಡುವದು, ಪ್ರಯಾಣದ ಸೌಕರ್ಯವನ್ನು ಒದಗಿಸಿಕೊಡುವದಕ್ಕಿಂತಲೂ ಮುಖ್ಯವಾದದ್ದೆಂಬುದು ಎಲ್ಲರಿಗೂ ತಿಳಿದ ವಿಷಯವಷ್ಟೆ. ನೀವು ಎಂದಾದರೂ ಆಹಾರ ಸಾಮಗ್ರಿಗಳು ಕೊರತೆಯಿರುವ ಪ್ರದೇಶದಲ್ಲಿ ಇದ್ದಿದ್ದರೆ, ಆ ಪ್ರದೇಶಕ್ಕೆ ಹಸಿದಿರುವ ಜನರಿಗಾಗಿ ಸಾವಿರಾರುಮಣ ಅತ್ಯಾವಶ್ಯಕವಾದ ಆಹಾರಪದಾರ್ಥಗಳಿಂದ ತುಂಬಿ ಬರುತ್ತಿರುವ ರೈಲುಗಾಡಿಗಳು ಅಲ್ಲಿಯ ಜನರಿಗೆ ಉಂಟುಮಾಡತಕ್ಕ ಪರಿಣಾಮವು ಏನೆಂಬುದು ನಿಮ್ಮ ಅನುಭವಕ್ಕೆ ಬರುವದು.

ಹೌದು! ಜನರಿಗೆ ಪ್ರಯಾಣವು ಅಷ್ಟು ಮುಖ್ಯವಾದದಲ್ಲ. ಆದರಿಂದಲೇ ಆಹಾರ ಪದಾರ್ಥಗಳಿಗಾಗಿ ಪ್ಯಾಸೆಂಜರ್ ಗಾಡಿಗಳು ಕಡಿಮೆಯಾಗಿರುತ್ತವೆ. ಈ ಕಾರಣದಿಂದಲೇ ಈಗಿನ ಪ್ರಯಾಣದಲ್ಲಿ ಅಷ್ಟು ಪ್ರಯಾಸ ಮತ್ತು ತೊಂದರೆ. ಆದುಕಾರಣ ನೀವು ರೈಲ್ವೆಯವರಿಗೆ ಮುಖ್ಯತರವಾದ ಕೆಲಸದಲ್ಲಿ ನೆರವಾಗುವಿರಾದರೆ, ನೀವು ನಿಮ್ಮ ಮನೆಗಳಲ್ಲಿಯೇ ಉಳಿಯಬೇಕು.

ಕಡಿಮೆಯಾಗಿ ಪ್ರಯಾಣಮಾಡಿರಿ

AAA 682 KN

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public.

For business proper please enquire at any one of our Offices.

15th April 1944.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya GADAG.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹ ಸ್ಥಿತಿಯನ್ನು ಏರ್ಪಡಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ರ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೮೦ ದಿವಸಗಳಿಗೆ ಬರುವವು. ಅಂದರೆ ಕೇವಲ ೮ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ.ಕ

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾವಕಾಶ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ, ಕ್ಯಾಲೆಸಂಗ್ರಿ ಬರದಲ್ಲಿ ರೋಗಿಗಳಿಗೆ ತಕ್ಕ ಹಾದ ಔಷಧಿ ರವಾನಿಸಬಹುದು, ಉಡುಪಿ ಏಜಂಟರು:— ನವಭಾರತ ಬುಕ್ ಡಿಪ್ಪೊ

THE VIJAYA BANK, LTD.

Head office: MANGALORE.

Glad to announce that a Branch of the Bank has been opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ. 15-6-44ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿರುವುದು.

ದಿ ವಿಜಯಾ ಬೇಂಕ್ ಲಿಮಿಟೆಡ್

ಅಮೃತಾಂಜನ ತಲೆನೋವು, ಶೀತ, ನೆಗಡಿ, ಗಂಟಲು ಬೇನೆ, ಹಲ್ಲು, ಉಳುಕು, ಕೀಲುಬೇನೆ, ಬೆನ್ನುನೋವು, ಜ್ವರ, ಕೆಮ್ಮು, ಹುಳು, ಸೊಳ್ಳೆಗಳು ಕಚ್ಚುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಪಥ್ಯ ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಸೀಮೆ ಎಣ್ಣೆ ಇಲ್ಲವೇ?? ... ಚಿಂತೆ ಇಲ್ಲ! ? ಸ್ವಲ್ಪ ವನಸ್ಪತಿ ಎಣ್ಣೆ ಮತ್ತು ನೀರು ಇದ್ದರೆ ಸಾಕು.

ಫ್ರೆಂಚ ಲೈಟರ್‌ದಿಂದ

(ನಿಮ್ಮ ಮನೆಗಳನ್ನು ಬೆಳಗಿಸಿರಿ)

(ಮಿತವ್ಯಯಕ್ಕೆ ನೂತನ ಸಂಶೋಧನೆ) ನೋಡಲು ಚಂದ-ಬೆಳಗಿಸಲು ಆನಂದ. ಅಗ್ಗ ಮತ್ತು ಸುಂದರ, ನವಳತೆಯ ಸುಲಭ

ಫ್ರೆಂಚ ಲೈಟರ್.

50 ಬತ್ತಿಗಳ ಪೆಟ್ಟಿಗೆ 1ಕ್ಕೆ ರೂ. 1-4-0 ಟಿ. ಹಾ. 0-8-0 (ಇಂದು ಬತ್ತಿ ಸುಮಾರು 24 ತಾಸು ಉರಿಯುತ್ತದೆ). ಸ್ಟಾಕಿಸ್ಟರು ಬೇಕಾಗಿದ್ದಾರೆ.

ಏಜನ್ಸಿ ಕರಾರುಗಳೊಡನೆ 6 ಪೆಟ್ಟಿಗೆಗೆ ಟಿ. ಹಾ. ಉಚಿತ

ಉ. ಚಿ. ತ. ಸ್ಟಾಂಪಲು ಕಳಿಸುವದಿಲ್ಲ.

ಫ್ರೆಂಚ ಲೈಟರ್ ಕಂಪೆನಿ ಚಿಕ್ಕಪೇಟೆ, ಬೆಂಗಳೂರು ಸಿಟಿ.

Regd. No. M. 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6. Estd. 1921 ಸ್ಥಾಪಿ.

ANTARANGA
UDIPI
ಅಖಿಲ ಕರ್ನಾಟಕದ
ಹೊಸ ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ
ಅಂತರಂಗ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0 1-6
ಮ್ಯಾನೇಜರ್,
ಅಂತರಂಗ, ಉಡುಪಿ

NAVAYUGA
ನವಯುಗ
ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ.
KANNADA WEEKLY, UDIPI.
ಸಂಪುಟ ೨೪ ಸಂಚಿಕೆ ೪೯ ● Vol. 24 No. 49
Founder SRI A. B. SHETTY.
ಉಡುಪಿ ● 17-8-1944 ● ಮಂಗಳೂರು.

ವಿವೇಕಿಗಳು
ತಮ್ಮ ಭಾವೀ ಕಲ್ಯಾಣವನ್ನು ಹಾರೈಸುತ್ತಾರೆ.
ಜೀವವಿಮೆಯು ಭಾವೀ ಕಲ್ಯಾಣದ ಪ್ರಾಮುಖ್ಯ ಸಾಧನಗಳಲ್ಲೊಂದು.
ವಿಮೆ ಮಾಡಲಿಕ್ಕಾಗಲಿ, ಪ್ರತಿನಿಧಿ ಏಜಂಟ ರಾಗಲಿ ಅತ್ಯುತ್ತಮ ವಿಮಾಸಂಸ್ಥೆಯೆಂದರೆ
ದಿ ಜುಪಿಟರ್ ಜನರಲ್ ಇನ್ಶ್ಯೂರೆನ್ಸ್ ಕಂಪೆನಿ ಲಿ.
-ಬೊಂಬಾಯಿ
ಪಿ ಡಿ ನಾಯಕ್,
ದ. ಕನ್ನಡದ ಚೀಫ್ ಏಜಂಟರು
ಉಡುಪಿ
The Jupiter General Insurance Company Ltd

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Estd: 1908]
The "Bombay Life" Bldg.,
UDIPI S. K.

Offices and Agencies throughout South India.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, stomachache, Vomiting and Nausea
BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ —ಕಾಲರಾ ಬೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬರ ಉಪಯೋಗಕ್ಕೆ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ತೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2 ತೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ, ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

—ಮಕ್ಕಳನ್ನು ಹಡೆಯುವದು ಸಾಕು—
ಅಧಿಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ನಿರಾಳೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ—ಕುಂಬಾರಮಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

The Board of Directors,
Sri Narayan Guru Bank, Ltd., Mangalore
announce that a Branch of this Bank has been opened at the premises of "Parimala Bhavan", opposite Municipal Bus Stand, Udipi, on the 11th April, 1944 Your patronage is solicited.

Mangalore Jarappa,
Managing Director

ಯುದ್ಧ ಹೇಗೆ ಸಾಗಿದೆ?

ಮಿತ್ರರ ಪಾಲಿನ ವಿಜಯೀ ಹೆಜ್ಜೆಗಳ ಲೆಕ್ಕಾಂದಾಗಿ ಮತ್ತೊಂದು ವಾರವೂ ಕಳೆಯಿತು. ಜರ್ಮನಿಯು ವಿಜಯ ಪಡೆದ ವಾರ್ತೆಯೊಂದನ್ನು ಕೇಳದೆ ಮಾಸಗಳು ಸಂದಿವೆ ಮೂರು ಕಡೆಗಳಲ್ಲಿ ಮೂರು ಪ್ರಬಲ ರಾಷ್ಟ್ರಗಳನ್ನು ಏಕಾಕಿಯಾಗಿ ಇದಿರಿಸುವ ಸಂಕಷ್ಟಾನುಭವವೊಂದೇ ಹಿಟ್ಲರನ ಅದೃಷ್ಟವೆಂಬುದು ಈಗ ನಿಚಿತವಾಗಿದೆ. ನಾಜೀ ಪ್ರತಿಭಟನೆಯು ಒಮ್ಮೊಮ್ಮೆ ಆಂಗ್ಲೋ-ಅಮೇರಿಕಾನರ ಸಮ್ಮುಖದಲ್ಲಿ ಬಲಗೊಂಡರೆ, ಮತ್ತೊಮ್ಮೆ ರಶ್ಯಾನಂದಿರು ವಿಶೇಷವಾಗುವ ಸಂಪ್ರದಾಯ ಸರ್ತಿ ಬಿಡದೆ ಹಲವು ವಾರಗಳಿಂದ ರಷ್ಯಾನರ ಧಾಳಿಯು ಆಂಗ್ಲೋ-ಅಮೇರಿಕಾನರ ಧಾಳಿಗಳಿಗಿಂತ ಪ್ರಬಲವಿತ್ತು. ಕಳೆದ ವಾರದಲ್ಲಿ ಮಾತ್ರ ಇಟಲಿ,ಫ್ರಾನ್ಸಗಳಲ್ಲಾದಷ್ಟು ಪ್ರಗತಿ, ರಶ್ಯಾ ರಂಗದಲ್ಲಿ ಕಂಡುಬರುವದಿಲ್ಲ

ಮುಖ್ಯಾಫೀಸು ಮುಂದೆ ಹೋಯಿತು!

ಮಿತ್ರ ಸೇನೆಗಳನ್ನು ಫ್ರಾನ್ಸ್ ಅಥವಾ ಇಟಲಿಯಿಂದ ಹಿಂದಕ್ಕೋಡಿಸುವ ಹಿಟ್ಲರನ ಆಸೆ ಮುಗಿಯಿತು ಎಂಬುದಕ್ಕೆ ಕಳೆದ ವಾರ ಮಿತ್ರರು ತಮ್ಮೆರಡು ಯುದ್ಧ ಕಚೇರಿಗಳನ್ನು ರಣಕಣಗಳಿಗೆ ವರ್ಗಾಯಿಸಿಕೊಂಡುದೊಂದು ಉಜ್ವಲ ನಿದರ್ಶನ ವೊನ್ನೆ ವರೆಗೂ ಇಟಲಿ ಯುದ್ಧ ಚಾಲಕ ಹೆಡ್ ಕ್ವಾರ್ಟರ್ಸ್ ಆಲ್ಜೀರ್ಸ್‌ನಲ್ಲಿತ್ತು. ಫ್ರಾನ್ಸ್ ಯುದ್ಧ ನಾಯಕ ಈಸನೋವರರು ಇಂಗ್ಲಾಂಡಿನಲ್ಲೇ ಕಾರ್ಯಾಲಯ ವಿರಿಸಿಕೊಂಡಿದ್ದರು. ಕಳೆದ ವಾರದಲ್ಲಿ ಮೊದಲನೆಯದು ಇಟಲಿಗೂ ಎರಡನೆಯದು ಫ್ರಾನ್ಸಿಗೂ ವರ್ಗಾಯಿಸಲ್ಪಟ್ಟಿದೆ. ಆಲ್ಜೀರ್ಸಿನಿಂದ ಇಟಲಿಯಷ್ಟು ದೂರದ ಸ್ಥಳಕ್ಕೆ ಒಂದು ಕಚೇರಿವರ್ಗ ನಡೆದುದು ಯುದ್ಧ ಚರಿತ್ರೆಯಲ್ಲೇ ಇಲ್ಲವಂತೆ. ಕಾರ್ಯಾಲಯಗಳ ವರ್ಗಾವರ್ಗಿ ಮಾಡುವದರಲ್ಲಿ ಜರ್ಮನರಷ್ಟು ಮಿತ್ರರು ಅಸಡ್ಡೆ ಮಾಡುವವರಲ್ಲ. ಒಂದು ಪ್ರಾಮುಖ್ಯ ಹೋರಾಟವೆಲ್ಲಿಯಾದರೂ ಹೊಸದಾಗಿ ಆರಂಭವಾದ ಕೂಡಲೇ ಹಿಟ್ಲರನು ಸ್ವತಃ ಸೇನಾನಿತ್ವ ವಹಿಸಿ ರಣರಂಗದ ಹಿಂಭಾಗದಲ್ಲಿ ಧೇರೆ ಹೊಡೆದು ನಿಲ್ಲುತ್ತಾನೆ. ಆದರೆ ಮಿತ್ರರ ಮುಖ್ಯ ಸೇನಾನಿಗಳು ಅಷ್ಟು ಸ್ಥಳಗಳ ರಾಷ್ಟ್ರರ ಹಕ್ಕೊ ತಮ್ಮ ಕೈಗೆ ಬಂತು ಎಂದು ಖಚಿತವಾಗದ ಹೊರತು ಅಲ್ಲಿ ಬಿಡಾರ ಬಿಡುವದಿಲ್ಲ ಆದ್ದರಿಂದಲೇ ಇದುವರೆಗೂ ಇಟಲಿ ದಳಪತಿಗಳು ಅತಿ ದೂರದ ಆಲ್ಜೀರ್ಸಿನಿಂದ ಆಜ್ಞೆ ಪಡೆಯುತ್ತಿದ್ದರು ಫ್ರಾನ್ಸ್ ಸೇನಾನಿಗ ಕಾಲುವೆಯ ಇನ್ನೊಂದು ಪಡದಿಂದ ಮುಖ್ಯ ಸೂಚನೆಗಳ ಆಪುದುಗುತ್ತಿತ್ತು. ಫ್ರಾನ್ಸಿನಲ್ಲಿ ಅಥವಾ ಇಟಲಿಯಲ್ಲಿ ಮಿತ್ರರು ಇನ್ನು ಹಿಂಜರಿಯುವ ಸಂದರ್ಭ ಬರುವಂತಿಲ್ಲವೆಂಬುದನ್ನು ಮುಖ್ಯಾಫೀಸುಗಳ ವರ್ಗದಿಂದ ಊಹಿಸಬಹುದು

ಫ್ರಾನ್ಸಿನಲ್ಲಿ ಪ್ರಗತಿ

ರಣರಂಗಗಳ ಸ್ಥಿತಿಗತಿಗಳೂ ಅದಕ್ಕನುಗುಣವಾಗಿಯೇ ಸಾಗಿವೆ. ಫ್ರಾನ್ಸಿನಲ್ಲಿ ಬ್ರಿಟನ್ ಕ್ಷೇತ್ರದೊಳಗೆ ನುಗ್ಗಿರುವ ಅಮೇರಿಕನ್ ಸೇನೆಯು ಜರ್ಮನರ ದೊಡ್ಡ ದೊಡ್ಡ ಸಬ್‌ಮರೀನ್ ನಿಲ್ದಾಣಗಳಾದ ಬ್ರೆಸ್ಟ್, ಲೋರಿಯೆಂಟ್ ಸ್ಟೆಂಟ್ ಮಾಲೋಗಳನ್ನೂ ಇತರ ಪ್ರಾಮುಖ್ಯ ಸ್ಥಳಗಳನ್ನು ವಶಪಡಿಸಿಕೊಂಡಿವೆ ಎಲ್ಲ

ಕ್ಕಿಂತ ಮುಖ್ಯವಾಗಿ, ದಕ್ಷಿಣಾಭಿಮುಖವಾಗಿ ಪ್ಯಾರಿಸನ್ನು ಗುರಿಯಾಗಿಟ್ಟುಕೊಂಡು ಧಾಳಿಯಿಡುತ್ತಾ ಅಮೇರಿಕನ್ ಸೇನೆ ಮುಂದೊತ್ತುತ್ತಿದೆ. ಮಾಯನ್ನೇ ಹೊಳೆ ದಾಟಿ ಪ್ಯಾರಿಸಿಗೆ ಸಮೀಪವಾಗಿದೆ. 'ಕೋವಿಯ ಗುರಿಗೆ ತಪ್ಪದೆ ತುತ್ತಾಗಬಲ್ಲ ಸ್ಥೂಲಕಾಯರು' ಎಂದು ಇದುವರೆಗೂ ಅಮೇರಿಕಾನರನ್ನು ನಾಜಿಗಳು ಅಪಹಾಸ್ಯ ಮಾಡುತ್ತಿದ್ದರು ಮಿ ಚರ್ಚಿಲ್ಲರಂದಂತೆ ಜರ್ಮನರ ಈ ಭಾವನೆ ಬದಲಾಗುವಂತ ಫ್ರಾನ್ಸ್ ಹೋರಾಟದಲ್ಲಿ ಅಮೆರಿಕಾನರು ಸಾಹಸ ತೋರಿಸಿ ದರೆನ್ನಬೇಕು ಕೆಯಿನ್ ವಿಭಾಗದಲ್ಲಿ ಜರ್ಮನರ ದೊಡ್ಡ ಸೇನಾಭಾಗವನ್ನು ಬ್ರಿಟಿಷ್-ಕೆನಡಾ ಸೇನೆಗಳಿದಿರಿಸುತ್ತಿವೆ ಅಂತೂ ಫ್ರಾನ್ಸಿನ ಇದುವರೆಗಿನ ಮಹಾ ಹೋರಾಟದಲ್ಲಿ---ಜನರಲ್ ಮೋಂಟ್‌ಗೋಮೆರಿಯವರು ಅಸಾದ್ಯ ಚಾತುರ್ಯದಿಂದ ಜರ್ಮನರ ೩೧ ಡಿವಿಜನ್ ಸೇನೆಗಳನ್ನು ಪಶ್ಚಿಮ ಕಡೆಗೆ ಹಿಂದಟ್ಟಲು ಶಕ್ತರಾಗಿದ್ದಾರೆ. ಈಗ ಅಖಿಲ ಫ್ರಾನ್ಸಿನ ಹೋರಾಟ ಸಾಗುತ್ತಿದೆ ಜರ್ಮನರ ಇಂತಹ ಹಿಂದೋಟಕ್ಕೆ ಮಿತ್ರರು ಇನ್ನೂ ಹೆಚ್ಚು ಕಡೆಗಳಲ್ಲಿ ಸೇನೆಗಳನ್ನು ತಂದಿಳಿಸಬಹುದೆಂಬ ಭಯಜನಿತ ನಿರೀಕ್ಷೆಯೂ ಒಂದು ಕಾರಣ.

ಇಟಲೀ ಹೋರಾಟ

ಇಡೀ ಪ್ರಪಂಚದಲ್ಲೇ, ಪುರಾತನ ಕಲಾಸಂಗ್ರಹಕ್ಕೆ ಹೆಸರು ಹೋದ ಇಟಲಿಯ ಫ್ಲೋರೆನ್ಸ್ 'ನಗರದಲ್ಲಿ ಜರ್ಮನರು ಹೋರಾಟ ಕೊಡದೆ ಹಿಂದೆಗೆದು ಲೋಕದ ಗುಪ್ತ ಶ್ಲಾಘನೆಗೆ ಪಾತ್ರರಾಗಿದ್ದಾರೆ ಪವಿತ್ರ ನಗರ ರೋಮ್, ಮತ್ತು ಫ್ಲೋರೆನ್ಸ್‌ಗಳ ಅಮೂಲ್ಯ ಪಾರಮಾರ್ಥಿಕ ಲೌಕಿಕ ಸಂಪತ್ತುಗಳನ್ನು ಉಳಿಸುವ ಸದಿಚ್ಛೆಗಾಗಿ ಅಲ್ಲಿಂದ ಮುಂದಾಗಿ ಕಾಲ್ತೆಗೆದ ಹಿಟ್ಲರನ ಮೇಲೆ ಜಗದ್ಗುರು ಪೋಪರಿಗ ಸೌಹಾರ್ದ ಮೂಡಿದೆ ಎಂದು ವಾರ್ತೆ ಆದರೆ ಫ್ಲೋರೆನ್ಸಿನ ಅಕ್ಕ ಪಕ್ಕಗಳಿಂದ ಜರ್ಮನರು ಪ್ರತಿಭಟನೆ ಕೊಟ್ಟಿದ್ದಾರೆ ಈಗ ಆ ಇಡೀ ವಲಯವು ಎಂಟನೇ ಸೇನೆಯ ವಶವಾಗಿದೆ ಇತ್ತೀಚಿಗೆ ಚಕ್ರವರ್ತಿಗಳು ಸಂದರ್ಶಿಸಿ ಬಂದ ಇಟಲಿ ರಂಗಕ್ಕೆ ಈಗ ಮಿ. ಚರ್ಚಿಲ್ಲರು ಭೇಟಿಕೊಟ್ಟಿದ್ದಾರೆ. ಅತ್ತ ದಕ್ಷಿಣ ಫ್ರಾನ್ಸಿನ ಮೇಲಾಗುತ್ತಿರುವ ವಿಮಾನ ಧಾಳಿಗಳಲ್ಲಿಯೂ ಏನೋ ಒಂದು ಉದ್ದೇಶವಿರುವಂತೆ ಕಾಣುತ್ತಿದೆ. ಇಟಲಿಯ ಆಕ್ರಮಣವನ್ನು ಬೇಗನೇ ಮುಗಿಸಿ, ಮುಂದೊತ್ತಿ ಮತ್ತೊಂದೆಡೆಯಿಂದ ಫ್ರಾನ್ಸನ್ನಾಕ್ರಮಿಸಿಕೊಳ್ಳುವ ಹಂಚಿಕೆ ನಡೆದಿರಬೇಕೆಂದು ಊಹೆ ಪೋಪ್ ಗುರುಗಳು ಸಂಧಾನ ಸಾಧನೆಯ ಆತುರದಲ್ಲಿದ್ದಾರಾದ್ದರಿಂದ, ಆ ಸಂಬಂಧದ ಗುಪ್ತಗಾಮೀ ವ್ಯವಹಾರಕ್ಕಾಗಿ ಚರ್ಚಿಲ್ಲರು ಹೋಗಿರಬಹುದೆಂಬಂತಹ ಗಾಳೀವಾರ್ತೆಗಳೂ ಸುಳಿದಾಡುತ್ತಿವೆ

ರಶ್ಯಾ ರಣಕಣ

ಕೆಲವು ವಾರಗಳಿಂದ ವಿಜಯ ಶೃಂಖಲೆ ನಿರ್ಮಿಸುತ್ತಾ ಬಂದ ಕೆಂಪು ಸೇನೆಯು ಈ ವಾರದಲ್ಲಿ ಅದಕ್ಕೊಂದು ಹೊಸ ಗೊಣಸನ್ನು ಸೇರಿಸಿಲ್ಲ ಇದಕ್ಕೆ ಕಾರಣ, ಮುಂದಿನ ಮಹಾ ಹೋರಾಟಕ್ಕೆ ಮಾಡುತ್ತಿರುವ ತಯಾರಿ, ರಶ್ಯವಿನ್ನು ಯುದ್ಧ ಮಾಡಬೇಕಾದುದು ಪ್ರತ್ಯಕ್ಷ ಜರ್ಮನಿಯಲ್ಲಿ ಎರಡು ವರುಷಗಳಿಗ ಮೊದಲು ಹಿಟ್ಲರನು ಯಾವ ಅಪಾಯವನ್ನು ನಿರೀಕ್ಷಿಸಿ ಮುಂದಾಗಿ ರಶ್ಯದ ಮೇಲೇರಿ ಹೋಗಿದ್ದನೋ ಆ ಅಪಾಯವೀಗ ಸನ್ನಿಹಿತವಾಗಿದೆ—ಜರ್ಮನಿಯ ಆಕ್ರಮಣಾರಂಭವಾಗುತ್ತಿದೆ ಅದಕ್ಕಾಗಿ ಪೂರ್ವ ಪ್ರಶ್ಯಾದ ಗಡಿಯಲ್ಲಿ ಜರ್ಮನರು ಪ್ರಬಲ ಟೇಂಕು ಬಲ ಸಮೇತ ವಿಶೇಷ ಸೇನೋಪಕರಣ ಜಮಾಯಿಸಿಕೊಂಡಿದ್ದಾರೆ ಪೋಲೆಂಡಿನ ರಾಜಧಾನಿ ವಾರ್ಸಾದ ರಕ್ಷಣೆಗಾಗಿ ಜರ್ಮನರು ಪ್ರಾಣಾವಧಿ ಪ್ರತಿಭಟನೆ ಕೊಡುವದು ಖಂಡಿತವೆಂಬುದು ಈಗ ಸ್ಪಷ್ಟವಾಗಿರುವದರಿಂದ ಅಲ್ಲಿಯೂ ಸನ್ನಾಹ ಸಾಗಿದೆ. ಇತ್ತ ಉತ್ತರಗಡೆಯಲ್ಲಿ ಬಾಲ್ಟಿಕ್ ರಾಷ್ಟ್ರಗಳಲ್ಲ ಸುತ್ತುಗಟ್ಟಲ್ಪಟ್ಟಿರುವ ಸುಮಾರು ೩೦ ಡಿವಿಜನ್ ಜರ್ಮನ್ ಸೇನೆಗಳುಯಾವ ಕಡೆಯಿಂದಲೂ ನುಸುಳಿ ಹೋಗದಂತೆ ರಶ್ಯಾನರು ,ಪ್ರತಿಯೊಂದು ದ್ವಾರದ ಮೂಲಕವೂ ವತ್ತಿಗೆಯನ್ನು ಬಿಗಿಯುತಿದ್ದಾರೆ ಆದ್ದರಿಂದ ಮುಂದಿನ ಒಂದೆರಡು ವಾರಗಳೊಳಗೆ ಅತಿ ಬಿರುಸಾದ ಹೋರಾಟಗಳು ಈರಂಗಗಳಲ್ಲ ನಡೆಯಲಿಕ್ಕಿವೆ.

ಶಾಂತ ಸಮುದ್ರದಲ್ಲಿ

ಅಧ್ಯಕ್ಷ ರುಸವೆಲ್ಟರು ಶಾಂತ ಸಮುದ್ರದ ಕೆಲವು ನೆಲೆಗಳಿಗೆ ಗುಪ್ತ ಭೇಟಿಕೊಟ್ಟು, ಸೇನಾನಿಗಳೊಡನೆ ಮಂತ್ರಾಲೋಚನೆ ನಡೆಸಿ, ಇದೇ ತಾ 12ರಲ್ಲಿ ತನ್ನ ರಾಷ್ಟ್ರಕ್ಕಿತ್ತ ಆಕಾಶವಾಣಿ ಭಾಷಣದಲ್ಲಿ 'ಜಪಾನೀ ಯುದ್ಧವು ಸಂಪೂರ್ಣವಾಗಿ ನಮ್ಮ ಅಂಕೆಯಲ್ಲಿದೆ' ಎಂದು ಆಶ್ವಾಸನೆಯಿತ್ತಿದ್ದಾರೆ ಇದೇ ಸಂದರ್ಭದಲ್ಲಿ ಅಮೇರಿಕವು ಜಾಪಾನೀ ಆಕ್ರಮಣವನ್ನು ಕಣ್ಣಿಗೆಣ್ಣೆಯಿಟ್ಟು ಕಾಯುತ್ತಿರಬೇಕೆಂದೂ ಎಚ್ಚರಿಸಿದ್ದಾರೆ 'ಜಾಪಾನಿನ ಪ್ರಾಣರಕ್ಷಣೆಯ ಸಾಧನವಾದ ಅದರ ಹಡಗ ಬಲವು ಮೂಲ ಜಾಪಾನಿನ ಸಮೀಪದ ಸಮುದ್ರಗಳಲ್ಲಿ ಮಾತ್ರವೇ ಯುದ್ಧಕ್ಕಿಳಿಯುವದು' ಎಂದು ಟೋಕಿಯೋ ರೇಡಿಯೋ ಸಾರಿದೆ. ಇದರಿಂದ, ತನ್ನ ವಿಸ್ತಾರ ಸಾಮ್ರಾಜ್ಯವನ್ನೆಲ್ಲಾ ರಕ್ಷಿಸಿಕೊಳ್ಳುವ ರಕ್ತಿ ಜಾಪಾನಿಗುಳಿದಿಲ್ಲವೆಂಬುದು ಸುಸ್ಪಷ್ಟ ಆದರೆ ಜಾಪಾನಿಗೆ ತೀರಾ ಸಮೀಪದ ಬೊನಿನ್ ದ್ವೀಪಗಳನ್ನು ಅಮೆರಿಕಾನರಾಕ್ರಮಿಸುವಾಗಲೂ ಜಾಪಾನರಿಂದದನ್ನು ತಡೆಗಟ್ಟಲಾಗದುದರಿಂದ, ಮೂಲ ನೆಲವನ್ನುಳಿಸಿಕೊಳ್ಳುವ ಶಕ್ತಿಯುಳಿದಿರುವದೂ ಸಂದೇಹಾಸ್ಪದ ಶಾಂತ ಸಮುದ್ರ ಮತ್ತು ಬರ್ಮಾ ವಲಯಗಳ ಹೋರಾಟಗಳಲ್ಲಿ ಹೆಚ್ಚಿನ ವಿಶೇಷ ಘಟನೆಗಳಿಲ್ಲ.

ನಿಮ್ಮ ಬ್ಯಾಂಕಿಂಗ್ ಸಂಬಂಧ

ನಿಮ್ಮ ಉದ್ಯಮದಲ್ಲಿ ನಿಮ್ಮ ಬ್ಯಾಂಕು ಎಂತಹ ಸಹಕಾರಿ ಎಂದು ನೀವು ಮನಗಂಡೊಡನೆ—ನಿಮ್ಮ ದನ ಸಹಾಯಕನಿಂದ ಯಥ ಯೋಗ್ಯ ಸಹಕಾರವು ಎಷ್ಟೊಂದು ಆವಶ್ಯವು—ನೀವು ನಿಮ್ಮ ಬ್ಯಾಂಕಿಂಗ್ ಸಂಬಂಧವನ್ನು ಜಾಗರೂಕತೆಯಿಂದ ಚೆನ್ನಾಗಿ ವಿಚಾರಿಸಿಯೇ ನಿರ್ಧರಿಸುವಿರಿ.

ನಮ್ಮದೀ ಸೂಚನೆ ವಿಪುಲ ಧನವುಳ್ಳ ಈ ಬ್ಯಾಂಕನ್ನೇ ನಿಮ್ಮ ಅಧಿಕ ಸಹಾಯಕ ಸಂಸ್ಥೆಯಾಗಿ ಆರಿಸಿಕೊಳ್ಳಿರಿ ಅದರ ಹೆಸರು ಗೌರವಗಳು ನಿಮಗೆ ನಿಮ್ಮ ಆರ್ಥಿಕ ಸ್ಥಿತಿಗೆ ಅಮೂಲ್ಯವಾದ ಹಿನ್ನೆಲೆಯನ್ನೊದಗಿಸುವುದು

ಇಂದೇ ನಮ್ಮ ಏಜಂಟರಿಗೆ ಮಾಹಿತಿಯ ಬಗ್ಗೆ ವಿಚಾರಿಸಿರಿ

ಶಾಖೆಗಳು	ಸೇವೆ
ಕ್ವಿಲೋನ್ ಬೆಳಗಾಂವ, ಆಲ್ಲಪ್ಪಿ, ಧಾರವಾಡ, ಕೊಚ್ಚಿ, ಚಿಕ್ಕಮಗಳೂರು, ಕಣ್ಣಾನೂರು ಹುಬ್ಬಳ್ಳಿ, ಮಂಗಳೂರು, ದಾವಣಗೆರೆ, ಬೆಂಗಳೂರು ಇತ್ಯಾದಿ ಇತ್ಯಾದಿ	ಸೇವಿಂಗ್ಸ್ ಖಾತೆ, ಚಾಲು ಖಾತೆ, ನಿರಖು ರೇವಣಾತಿ ಓವರ್ ಡ್ರಾಫ್ಟುಗಳು, ಸಾಲಗಳು, ಡಿಸ್ಕೌಂಟಿಂಗ್,
ಬೊಂಬಾಯಿ ನಗರದಲ್ಲಿ 4 ಶಾಖೆಗಳು	ಸಂಚೂರ ಮೇಲಣ ಡ್ರಾಫ್ಟುಗಳು.

ESTD 1906 **Canara Bank, Limited.**

(Incorporated in British India with limited Liability)

ದಣಿದ ಮನವನ್ನು ತಣಿಸಿ, ನಗಿಸಲು

ನಗೆನೋಟಗಳು

೧೧ ವಿನೋದ ಚಿತ್ರಗಳ ಅಪೂರ್ವ ಸಂಗ್ರಹ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ 18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು

Crown Rubber Stamp Co 18 Balmat Road, MANGALORE.

ESTD 1906 Approved firm by the Govt of Mysore

Certified by the Agent of the Govt of India in Ceylon

Degrees Books Medicines

Free H L M. S.M, B H M. D, etc, Free Homeo Ayur Unani Nature degree by post also—Practitioner also get soon Homeo Materiamedica, Rs 5 Homeo Practice book Rs 4 Insanity Cure Pills Rs, 10 Enclose 2 annas stamp —

Prof, Dr N, H, Chhatbar,
Principal Indian Homeopathi Institute & Society (Govt Regd)
P O, MAHUVA (Kathiawar Dt Ind a).

ಗಾಂಧಿ-ಜಿನ್ನಾ ಸಂಧಾನ ಸಿದ್ಧತೆ

ಗಾಂಧಿಜಿನ್ನಾ ಮಾತುಕತೆಯ ಕುರಿತು ದೇಶದ ಆದ್ಯಂತ ಆತುರವೆದ್ದಿರುವದು ಕಂಡುಬರುತ್ತಿದೆ. ಸಂಘ ಸಂಸ್ಥೆಗಳ, ವ್ಯಕ್ತಿಗಳ ಪರಸ್ಪರ ವಿರುದ್ಧಾಭಿಪ್ರಾಯಗಳು ಹೊರಬೀಳುತ್ತಿವೆ. ರಾಜಾಜೀ ಸೂತ್ರಗಳು ದೇಶದೆಲ್ಲೊಂದು ನವಚಿಂತನೆ,ಹರ್ಷ, ಉದ್ವೇಗ, ಆತುರಾವಸರಗಳ ಜೀವಂತ ವಾತಾವರಣ ನಿರ್ಮಿಸಿದೆ.

ಜಿನ್ನರಿಗೆ ಅಪೂರ್ವ ಸ್ವಾಗತ.

ಅಗೋಸ್ತು ತಾ 11ರಲ್ಲಿ ಮಿ. ಜಿನ್ನರು ಬೊಂಬಾಯಿಗೆ ಬಂದು ಮುಟ್ಟಿದಾಗ, ಭಾರತದ ಜೀವಂತ ಧುರೀಣರಲ್ಲಿ ಗಾಂಧೀ ನೆಹರುಗಳನ್ನು ಬಿಟ್ಟರೆ ಮಿಕ್ಕಾವ ಪ್ರಮುಖನೂ ಪಡೆಯದಂತಹ-ಸ್ವತಃ ಜಿನ್ನರು ತನ್ನ ಜೀವಮಾನದಲ್ಲಿ ಇದುವರೆಗೆ ಪಡೆದಿರದಂತಹ-ಅತ್ಯಪೂರ್ವ ಸ್ವಾಗತ ದೊರೆಯಿತು. ಮಿ. ಜಿನ್ನರ ರೈಲು ಸ್ಟೇಶನಿಗೆರಡು ಘಂಟೆ ತಡವಾಗಿ ಮುಟ್ಟಿತು. ಆದರೆ ನಿಲ್ದಾಣದಲ್ಲಿ ಕೆಲವು ಗಂಟೆಗಳಿಗೆ ಮುಂಚಿತವಾಗಿ ಜನಸಮುದ್ರವೇ ಸೇರಿದ್ದಿತು. ಅಲ್ಲಿಂದ ಲೀಗ್ ಆಫೀಸಿನ ವರೆಗೆ ನಡೆದ ಪ್ರಚಂಡ ಮೆರವಣಿಗೆಯಲ್ಲಿ ಸುಮಾರು ಒಂದು ಲಕ್ಷ ಜನಸೇರಿದ್ದರೆಂದು ಅಂದಾಜು ಕಟ್ಟಲಾಗಿದೆ. ಆಫೀಸಿನಲ್ಲಿ ಲೀಗ್ ಧ್ವಜಾರೋಹಣ ಮಾಡುತ್ತಾ "ಪಾಕಿಸ್ತಾನ ವಿನಹ ಮುಸಲ್ಮಾನರು ತೃಪ್ತಿಗೊಂಡವರಲ್ಲ; ಅದವರ ಜೀವನ್ಮರಣ ಪ್ರಶ್ನೆ; ಅದಕ್ಕಾಗಿ ಸರ್ವತ್ಯಾಗಕ್ಕೆ ಮುಸಲ್ಮಾನರು ಸಿದ್ಧರಿದ್ದಾರೆ" ಎಂದು ಜಿನ್ನರಂದಿದ್ದಾರೆ.

ತಾ 19ಕ್ಕೆ

ತಾ. 11ಕ್ಕೆ ತಾನು ಬೊಂಬಾಯಿಗೆ ಮುಟ್ಟುತ್ತೇನೆಂದೂ ಆ ಮೇಲಿನ ಯಾವ ದಿನದಲ್ಲಾದರೂ ಭೇಟಿಗೆ ತಾನು ತಯಾರಿರುವದರಿಂದ ಗಾಂಧಿಜೀಯ ಅನುಕೂಲ ದಿನವನ್ನು ತಿಳಿಸಬೇಕೆಂದೂ ಮಿ. ಜಿನ್ನರು ಭೋಪಾಲದಿಂದಲೇ ಗಾಂಧಿಜೀಗೆ ಬರೆದಿದ್ದರು. ಇದೇ ತಾ. 19ಕ್ಕೆ ಭೇಟಿಯ ದಿನ ನಿಶ್ಚಯವಾಗಿದೆಯೆಂದು ತಿಳಿದು ಬರುತ್ತದೆ. ಮಹಾತ್ಮರು ಈ ಸಂಭಾಷಣೆಗಳಿಗಾಗಿ ಬೊಂಬಾಯಿಗೆ ಹೋದಾಗ 'ಬಿರ್ಲಾ ಗೃಹ'ದಲ್ಲಿ ನಿಲ್ಲಲಿದ್ದಾರೆ.

ಅನುಕೂಲ-ಪ್ರತಿಕೂಲ

ರಾಜಾಜೀ ಸೂತ್ರಗಳಿಗೆ ವಿರುದ್ಧವಾಗಿ ಹಿಂದೂ ಮಹಾ ಸಭೆಯು, ಇಡೀ ರಾಷ್ಟ್ರದಲ್ಲಿ ವಿರೋಧ ಸಂಘಟನೆ ಮಾಡುತ್ತಿದೆ. ಪಂಜಾಬಿನ ಸಿಖ್ಖರದನ್ನು ಪ್ರಬಲವಾಗಿ ವಿರೋಧಿಸಿದ್ದಾರೆ. ಕೆಲಕಾಲದಿಂದ ರಾಜಕೀಯದಿಂದ ನಿವೃತ್ತರಾಗಿದ್ದ ಧೀರ ನಾಯಕ ಮಾಸ್ಟರ್ ತಾರಾ ಸಿಂಘರು ಈ ಕಾರಣದಿಂದಲೇ ಪುನಃ ಸಿಖ್ಖರ ನಾಯಕತ್ವವಹಿಸಿದ್ದಾರೆ. ಕಮ್ಯೂನಿಸ್ಟರು ಮತ್ತು ಕೆಲವು ಮಂದಿ ಕಾಂಗ್ರೆಸಿಗರನ್ನು ಬಿಟ್ಟರೆ ಅಖಿಲ ಬಂಗಾಲವು ದೇಶ ವಿಭಜನೆಗೆ ವಿರೋಧವಿದೆ. ಬಂಗಾಳದ ಅಧಿಕೃತ ಕಾಂಗ್ರೆಸ್ ಪಕ್ಷೀಯ ನಾಯಕ ಶ್ರೀ. ಕಿರಣ ಶಂಕರ ರೋಯರುಗಳು ಶಿಷ್ಟ ಮಂಡಲದೊಡನೆ ಗಾಂಧಿಜೀಯ ಭೇಟಿ ಪಡೆದು, ರಾಜಾಜೀ ಸೂತ್ರಗಳಿಗೆ ಬಂಗಾಳದ ಅಖಂಡ ವಿರೋಧವನ್ನು ಮುಂದಟ್ಟುಮಾಡಿ ಹೋಗಿದ್ದಾರೆ. ಮಾನ್ಯ ಶ್ರೀನಿವಾಸಶಾಸ್ತ್ರೀ, ಸರ್. ಸಿ. ಪಿ., ಡಾ| ಖರೆ, ಸರ್. ಪರಾಂಜಪೆ, ಡಾ| ಅರುಂಡೇಲ್, ಮೊದಲಾದ ಪ್ರಮುಖರು ಈ ದೇಶ ವಿಭಜನಾ ಯತ್ನವನ್ನು ಕಂಠೋಕ್ತವಾಗಿ ಖಂಡಿಸಿದ್ದಾರೆ, ಕಮ್ಯೂನಿಸ್ಟರು, ವಿದ್ಯಾರ್ಥಿಗಳು, ಕೆಲಸಗಾರ ಸಂಘಗಳು, ಮತ್ತು ಹೆಚ್ಚಿನ ಕಾಂಗ್ರೆಸ್ ಪ್ರಮುಖರು ಹಾಗೂ ಕೆಲವು ಸ್ಥಳೀಯ ಸಂಸ್ಥೆಗಳು ಕೂಡಾ ಗಾಂಧೀಜೀ ರಾಜಾಜೀ ಸಂಧಾನ ಸೂತ್ರಗಳಿಗೆ ಅನುಮೋದನೆ ಮತ್ತು ಬೆಂಬಲಕೊಟ್ಟಿವೆ. ಸರ್. ತೇಜ ಬಹದೂರು ಸಪ್ರುಗಳು ಮಹಾತ್ಮಾಜಿ ರಾಜಾಜಿಗಳೊಡನೆ ದೀರ್ಘಸಂಭಾಷಣೆ ನಡಿಸಿ, ಜಿನ್ನರ ಅತಿರೇಕಾಕಾಂಕ್ಷೆಯಿಂದ ತನ್ನಲ್ಲುಂಟಾಗಿರುವ ಭಾವನೆಗಳನ್ನು ಮುಂದಟ್ಟುಗೊಳಿಸಿದ್ದಾರೆ.

ಮುಸ್ಲಿಂ ಮನೋವೃತ್ತಿ.

ಹೆಚ್ಚಿನ ಮುಸಲ್ಮಾನರು ತಮ್ಮ ಟೋಪಿಗೊಂದು ಹೊಸಗರಿ ಮೂಡಿತೆಂಬಂತೆ ವಿಜಯೀ ಹೆಗ್ಗಳಿಕೆ ಪ್ರದರ್ಶಿಸಿದ್ದಾರೆ. ಪಾಕಿಸ್ತಾನದ ಅನುಕೂಲತೆಗಾಗಿ ವಿಶೇಷ ಸ್ಥಳಸೌಕರ್ಯ ವಿರಬೇಕು; ಹಿಂದುಸ್ಥಾನದಲ್ಲಿರುವ ತಮ್ಮ ಪವಿತ್ರ ಸ್ಥಳಗಳ ಹಕ್ಕನ್ನು ಕಾದಿಡಬೇಕು; ಹಿಂದುಸ್ಥಾನದಲ್ಲಿರುವ ಮುಸಲ್ಮಾನರಿಗನ್ಯಾಯವಾದರೆ ಪ್ರತೀಕಾರಮಾಡಲಾಗುವಂತೆ ಪಾಕಿಸ್ತಾನದಲ್ಲಿ ಹಿಂದುಗಳನ್ನು ಇರಿಸಿಕೊಳ್ಳಬೇಕು-ಇತ್ಯಾದಿ ಉಗ್ರಾಭಿಪ್ರಾಯಗಳು ಪ್ರಕಟವಾಗಿವೆ. ಮುಸ್ಲಿಂ ಲೀಗಿನ ಮುಖಪತ್ರ 'ಡಾನ್' ಪಾಕಿಸ್ತಾನಕ್ಕೆ ಸಾಕಷ್ಟು ಆರ್ಥಿಕ, ವ್ಯವಹಾರಾನುಕೂಲತೆಗಳು ದೊರೆಯುವಂತೆ ಅದರ ವಿಸ್ತಾರವನ್ನು ಹೆಚ್ಚಿಸತಕ್ಕದ್ದೆಂಬ ಅಭಿಪ್ರಾಯ ಸೂಚಿಸಿದೆ 'ಮುಸಲ್ಮಾನರ ಬಹುಸಂಖ್ಯೆಯಿರುವ ಭಾಗವು ಒಂದು ಪ್ರತ್ಯೇಕ ರಾಜ್ಯವಾಗಿರಲು ಅಶಕ್ತವಾಗಿದ್ದರೆ ಪಾಕಿಸ್ತಾನ್ ಯೋಜನೆಯನ್ನೇ ಬಿಡುವದು—ಅಥವಾ ಅದಕ್ಕೆ ವಿರುದ್ಧವಾಗಿ ಮತಕೊಡುವಂತೆ ಆ ಭಾಗದವರನ್ನು ಕೇಳಿಕೊಳ್ಳುವದೇ ಇದಕ್ಕಿರುವ ಪರಿಹಾರ' ಎಂದು ರಾಜಾಜೀ ಸೂಮಾರ್ಮಿಕವಾಗಿ ಉತ್ತರವಿತ್ತಿದ್ದಾರೆ. ಲಕ್ನೋವಿನ ಮುಸ್ಲಿಂ ಲೀಗ್ ಪತ್ರಿಕೆ 'ಹಕೆ'ಯು, 'ಗಾಂಧಿಯವರು ಮುಸಲ್ಮಾನರಿಗೆ ಖಾಲಿ ಚಕ್ಕಿಗೆ ಸಹಿ ಹಾಕಿ ಕೊಟ್ಟರೇನೇ ಸಂಧಾನ ಸಾಧ್ಯ' ಎಂದು ಸೂಚಿಸಿದೆ.

ತಿದ್ದುಪಡಿ—ಕಳದ ವಾರದ ಸಂಚಿಕೆಯ ಆರನೆ ಪುಟದ ಮೂರನೆ ಕಲಮಿನಲ್ಲಿ 'ಹೋಲ್‌ಸೇಲ್ ಸ್ಟೋರು ಮತ್ತು ಪ್ರೈಮರಿ ಸ್ಟೋರುಗಳ ಅವಗಾಹನೆ ಬಗ್ಗೆ' ಎಂಬ ತಲೆಬರಹದಲ್ಲಿಯ ಲೇಖನದಲ್ಲಿ ಸಪ್ಲೈರು ಪ್ರತಿನಿಧಿಗಳ ಪರಿಷತ್ತು ತಾ 26 8 44ರ ಬದಲು ತಾ 20-8-44ನೆ ಆದಿತ್ಯವಾರ ಎಂದು ತಿದ್ದಿ ಓದಬೇಕಾಗಿದೆ. ಸ| ನ.

Read & Advertise in

ANTARANGA

ಬಿಸಿ ದೋಸೆಯಂತೆ

ವಿಕ್ರಯವಾಗುತ್ತಿರುವ ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸುಲಭದಲ್ಲಿ ಇಂಗ್ಲಿಷ್ 1-4-0

ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ಬರೆಯಲ್ಪಟ್ಟ ಯುವಕರಿಗೆ ಮತ್ತು ವಯಸ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅನ್ಯ ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ

ನಗೆನೋಟಗಳು 0-14-0

ಶ್ರೀ. ಕೆ. ವಿ. ಶೆಣೈ, ಬಿ. ಎ., ಎಲ್. ಟಿ ಅವರಿಂದ ರಚಿತವಾದ ೧೧ ವಿನೋದ ಜೀವನಚಿತ್ರಗಳು

ಅನ್ನದೇವರು ಮತ್ತು ಇತರ ಕಥೆಗಳು 1-0-0

ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳಿಂದ ರಚಿತವಾದ ವಿಚಾರಕ್ರಾಂತಿಯ ೧೪ ಕತೆಗಳ ಸಂಗ್ರಹ,

ಗೀತೆಯ ಕೈಗನ್ನಡಿ 0-8-0

ಹೊಸಕೆರೆ ಚಿದಂಬರಯ್ಯನವರು ಬರೆದ ಭಗವದ್ಗೀತೆಯ ಸಮೂಲ ಸರಳ ಭಾಷಾಂತರ

ಮಹಾ... ಪ್ರಸಿದ್ಧ	1 14-0
ಭಾರತೀಯ ಕತೆಗಳು	0-11-0
ನಂದಾದೀಪ (ಕತೆಗಳು)	0-11-0
ಪ್ರೇಮವಿಜಯ (ನಾಟಕ)	0-12-0
ದೇಶಭಕ್ತ (ನಾಟಕ)	0-11-0
ಸನ್ಯಾಸಿಯ ಸೋಗಿನಲ್ಲಿ	0-8-0
ಪುರುಷವಧು (ಪ್ರಹಸನ)	0-1-0
ಹೆಂಡ್ತಿಗಂಡನಾದರೆ (ಪ್ರಹಸನ)	0-4-0
ವ್ಯಭಿಚಾರಿಣಿ ಯಾರು (ನಾಟಕ)	0-12-0
ಮುಂದಿನ ದೇವರು (ಪ್ರಬಂಧ)	0-3-0
ಕುಶಲವ (ನಾಟಕ)	0-5-0
ಸಂಶಯ ಪಿಶಾಚಿ (ನಾಟಕ)	0-8-0
ಸ್ವತಂತ್ರ ಜೀವನೋಪಾಯ	0-3-0
ನಾಡಕತೆಗಳು	0-3-0
ಮಧುವನ (ಕತಾಸಂಗ್ರಹ)	3-0-0
ಕಾವ್ಯಸಾಮ್ರಾಜ್ಯ (ಕವಿತೆಗಳು)	0-12-0
ರಂಗಭೂಮಿ (ನಾಟಕ)	0-8-0
ವಿಶ್ವ ಖಂಡದ ಜ ...	1-4-0
ವೈದ್ಯರಾಜ (ನಾಟಕ)	1-4-0
ಸತ್ಯವಾಲಿ ರಶಿಯಾ	1-4-0
ಸಾಮ್ಯವಾದನೀತಿ	1-1-0
ರಾಜ್ಯದಾಯವೂ ಬಡತನವೂ	1-1-0

ನಾರೀಹೃದಯ (ಕತೆಗಳು)	0-14-0
ಪ್ರಕಾಶ (ನವೀನ ನಾಟಕ)	1-12-0
ಅಂತರಂಗದ ಕತೆಗಳು	0-10-0
ಪ್ರೇಮಪ್ರವಾಹ (ಪ್ರಣಯ ಕತೆ)	0-6-0
ಆರ್ಟ್ ಚಿತ್ರಗಳು (ನೈಜಚಿತ್ರಗಳು)	0-6-0
ಮುಗುಳು (ಪದ್ಯಾವಳಿ)	0-3-0
ವೀರಭೂಮಿ (ಕಾದಂಬರಿ)	0-2-0
ಆಹುತಿ ಇತ್ಯಾದಿ ಕತೆಗಳು	0-12-0
ವತ್ಸಲಾ (ಕಾದಂಬರಿ)	0-8-0
ಮೀರಾಬಾಯಿ (ನಾಟಕ)	0-8-0
ಮುದುಕನ ಹೆಂಡ್ತಿ ಧಕಧೈ ರಾಘ	0-2-0
ಧರ್ಮಸಂಕಟ (ನಾಟಕ)	0-4-0
ಆರೋಗ್ಯ ಪ್ರತಾಪ (ನಾಟಕ)	0-12-0
ಚಲಚ್ಚಿತ್ರ ಪದ್ಯಾವಳಿ (೫ ಭಾಗ)	0-5-0
ಪಂಚಾರತಿ (ನಾಟಕಗಳು)	0-6-0
ಪ್ರತೀಕಾರ (ನಾಟಕ)	0-6-0
ಶ್ರೀಮುಖ (ಕವಿತೆಗಳು)	1-0-0
ರಾಷ್ಟ್ರಸಭೆಯ ಇತಿಹಾಸ	2-8-0
ಆರೋಗ್ಯ ಸಾಧನ (ಮ. ಗಾಂಧಿ)	0-12-0
ಧರ್ಮನೀತಿ (ಮ. ಗಾಂಧಿ)	0-6-0
ಪುರಂದರದಾಸರ ಕೀರ್ತನೆಗಳು	1-0-0
ಶಾಂತಿ ಪುರಾಣ (ಪೊನ್ನ)	3-0-0
ಲೋಪಾಮುದ್ರೆ	0-6-0
ಬಾಲವಾಙ್ಮಯ	0-3-0
ಸೇವಾಪಥ (ನಾಟಕ)	0 8-0
ಎಕ್ಸ್‌ರೇ	1 0-0
ಮಿತಸಂತತಿ (ನವೀನ ಶೋಧ)	0-8-0
ಜನನೇಂದ್ರಿಯಗಳ ರೋಗ ಬಾಧಾ ನಿವಾರಣೆ	0-8-0
ನಿಶ್ಚಯಜ್ಞಾನ	0-8-0
ಬಣ್ಣದ ಬೀಸಣಿಗೆ (ನಾಟಕಗಳು)	1-0-0
ದೇವದಾಸ (ಕಾದಂಬರಿ)	1-8-0
ಮಗಳಿಗೆ ತಂದೆಯ ಓಲೆಗಳು	1-8-0
ಹತ್ತು ಕತೆಗಳು	0-8-0
ನಡುಮನೆಯಲ್ಲಿ (ನಾಟಕಗಳು)	0-8-0
ನಟಿ (ಕತಾ ಸಂಗ್ರಹ)	0-8-0
ಕಾಶ್ಮೀರ ಪ್ರವಾಸ	0-8-0
ಪರಾಗ (ಕವಿತೆಗಳು)	0-8-0
ಆನಂದ ಅಥವಾ ಮನೆ ಅಳಿಯ	1-0-0
ಲಹರಿ (ಕತೆಗಳು)	0-6-0

ವೀರ ವಲ್ಲಭಭಾಯಿ	0-10-0
ಪರಿವರ್ತನೆ (ಕಥಾಸಂಗ್ರಹ)	0-8-0
ಆರತಿ (ಹೆಂಗಸರ ಕತೆಗಳು)	0-12-0
ಪ್ರೇಮಬಾಧ (ಕಾದಂಬರಿ)	0 1-0
ಚಿತ್ರ (ಕಥೆಗಳು)	0-10-0
ನಮ್ಮೂರ ನಡತೆ (ನಾಟಕಗಳು)	0-5-0
ಕಿಚ್ಚು (ಸಣ್ಣ ಕತೆಗಳು)	0-8-0
ಸಾಮುದ್ರಿಕ ಶಾಸ್ತ್ರ	0-8-0
ವೀಣಾನಾದ (ಕತೆಗಳು)	0-9-0
ಬೆಳಕಿನ ಕತ್ತಲೆ (ಕಥೆಗಳು)	0-12-0
ಅಕ್ಕಾಜಿ (ಕಾದಂಬರಿ)	0-10-0
ಆರು ಕಥೆಗಳು	1-0-0
ನಮ್ಮ ಊರಿನ ರಸಿಕರು	1-4-0
ಅಕ್ಕತಂಗಿ (ಕಾದಂಬರಿ)	2-0-0
ಪ್ರಾಚೀನ ರಾಜ್ಯಪದ್ಧತಿಗಳು	1-1-0
ಶಾರದೆಯ ಸಂಸಾರ	1-4-0
ನಾಡಿ ಶಾಸ್ತ್ರ	1-1-0
ರಶಿಯಾದ ರಾಜ್ಯಕ್ರಾಂತಿ	1-8-0
ಚಿಕ್ಕ ದೊಡ್ಡವರು (ಹರಟೆಗಳು)	0-9-0
ಕುಲದೀಪಕರು	0-10-0
ಗ್ರಾಜ್ಯುಯೇಟ ಮೋಪಾಸನ ಕಥೆಗಳು	0-12-0
ದೂರ ಹೋದಳು (ನೀಳ್ಗತೆ)	0-6-0
ಮುದ್ದಿನ ಕಣಿ (ಕತೆಗಳು)	0-12-0
ಸೌಂದರ್ಯ ಲಹರಿ	1-0-0
ಚಂದ್ರನಾಥ (ಕಾದಂಬರಿ)	0-8-0
ಬಂಗಾರದ ಡಾಬು (ಕತೆಗಳು)	0-11-0
ಗುರುಶಿಷ್ಯರ ಅವನತಿ	0-1-0
ವಿದ್ಯಾರಣ್ಯರ ಕಾವ್ಯ	1-0-0
ಮಹಾತ್ಮಾ ಗಾಂಧಿ	0-1-0
ಬಿಸ್ವಾಡಿ ಚಲ್ವಿ (ನಾಟಕಗಳು)	0-7-0
ಭಾವಪ್ರಭಾತ (ಕತೆಗಳು)	0-8-0
ಸನ್ಯಾಸಿನಿ (ನಾಟಕ)	0-10-0
ಬೆಳ್ಳಿಯ ಹಬ್ಬ (ನಾಟಕ)	0-8-0
ಧರ್ಮ ಸಾಮ್ರಾಜ್ಯ	1-8-0
ಎರಡು ನಾಟಕಗಳು	0-8 0
ಚಂದ್ರಗುಪ್ತ ಚಕ್ರವರ್ತಿ	1-0-0
ಅದ್ಭುತರಮ್ಯ ಕಥೆಗಳು	1-0-0
ಪ್ರಬಂಧ ಮುಕ್ತಾವಳಿ	1-0-0

ನವಭಾರತ ಪುಸ್ತಕ ಭಂಡಾರ, ಉಡುಪಿ.

Navabharat Book Depot., Udipi.

Sidha-Krlpa Kavach (Regd.)

No. 3 Rs. 2 No. 2 Rs. 5 No. 1 Rs.7 Special Rs 10, Extra Special Rs. 17 of over marriage health wealth, Ask an six questions with M. O. Rc. 1/4, and get correct answers by return, post Life reading Rs.10No,V, .P.Send M. O, Free, pmplets.

Prof, Dr. N, H. Chhatbar,,
P. O. MAHUVA (Kathiawar India.)

The Canara Banking Corporation Limited.
ESTD: 1906.

Authorised Capital	....	Rs. 25.00.000/-
Subscribed Capital	...	„ 16.00.000/-
Paid up Capital	....	„ 13.72.900/-
Reserves	...	„ 4 10 000/-

Total Working Capital—xEceeds One Crore.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers.

ನವಯುಗ

ಉಡುಪಿ, ಗುರುವಾರ ೧೭-೮-೧೯೪೪

ಕಸ್ತೂರಿಬಾ ನಿಧಿ

ಬರುವ ಒಕ್ಟೋಬರ್ ತಾ. ೨ಕ್ಕೊದಗುವ ಗಾಂಧಿಜೀಯ 75ನೇ ಜನ್ಮದಿನದಲ್ಲಿ ಕಸ್ತೂರಿಬಾನ ಸ್ಮಾರಕವಾಗಿ ಅವರಿಗೆ ರೂ. 75 ಲಕ್ಷದ ನಿಧಿಯನ್ನು ಸಮರ್ಪಿಸುವ ನಿಶ್ಚಿತ ಯೋಜನೆಯಂತೆ ಈಗ ಅಖಿಲ ಭಾರತದಲ್ಲಿ ಭರದಿಂದ ಹಣ ಸಂಗ್ರಹವಾಗುತ್ತಿದೆ. ಗಾಂಧಿಜೀಗೆ 75 ಹಿಡಿಯಲು-- ನಿಧಿಗೆ 75 ಲಕ್ಷ ತುಂಬಲು, ಇಂದಿನಿಂದ ಉಳಿದಿರುವದು ಒಂದೂವರೆ ತಿಂಗಳು ಮಾತ್ರ. ಬೊಂಬಾಯಿಯಲ್ಲಿರುವ ಕೇಂದ್ರ ಸಮಿತಿಯ ಪ್ರಕಟಣೆಯಿಂದ ತಿಳಿದುಬರುವಂತೆ, ಜುಲಾಯಿ ಅಂತ್ಯದ ವರೆಗೆ, ನಿಶ್ಚಯದ ಅರೆವಾಸಿಯಷ್ಟು ಮಾತ್ರ ಸಂಗ್ರಹವಾಗಿದೆ. ಈ ಸಂಗ್ರಹಕ್ಕಾರಂಭಿಸಿ ನಾಲ್ಕೈದು ತಿಂಗಳುಗಳಾದುವು. ಮೊದಲಿನ ಅರೆವಾಸಿ ಸಂಗ್ರಹಕ್ಕೆ ಇಷ್ಟು ಕಾಲ ತಾಗಿರುವಾಗ ಇನ್ನುಳಿದ ಅರ್ಧವನ್ನು ಎರಡೇ ತಿಂಗಳುಗಳಲ್ಲಿ ತುಂಬಿಸಿಕೊಳ್ಳಬೇಕಾಗಿದೆ. ಮೇಲಾಗಿ ಈ ನಿಧಿಯ ಮೂಲ ನಿಯಮವಾಗಿ, 75 ಲಕ್ಷಕ್ಕೆ ಕಡಿಮೆಯಾಗಬಾರದೆಂಬ ಧೋರಣೆಯಿದೆಯೇ ಹೊರತು ಮಿಕ್ಕಬಾರದೆಂಬ ನಿರ್ಬಂಧವಿಲ್ಲ. ಆದ್ದರಿಂದ ಸಂಗ್ರಹವು ದೇಶದಲ್ಲೆಲ್ಲಾ ಅತಿ ರಭಸದಿಂದ ಸಾಗಬೇಕಾಗಿದೆ. ನಿಧಿಯು ಪೂರ್ಣಗೊಳ್ಳುವಾಗ ನಿಶ್ಚಿತ ಸಂಖ್ಯೆಯನ್ನು ದಾಟಿ ಮುಂದೊತ್ತುವದೆಂಬ ಕುರಿತು ಸಂದೇಹವಿಲ್ಲ. ಇದುವರೆಗೆ ಸಂಗ್ರಹಕಾರ್ಯವು ನಿಧಾನವಾಗಿ ಸಾಗಿದ್ದರೆ, ದೇಶದ ಮೂಲೆಮೂಲೆಗಳಲ್ಲೂ ವ್ಯವಸ್ಥೆಯಿಂದ ಉಪಸಮಿತಿಗಳನ್ನು ಸ್ಥಾಪಿಸಲು ತಾಗಿದ ಸಮಯವೇ ಅದಕ್ಕೆ ಕಾರಣವಲ್ಲದೆ ಜನತೆಯ ಅಸಡ್ಡೆಯಲ್ಲ. ಈಗ ವ್ಯವಸ್ಥೆ ಪೂರ್ಣಗೊಂಡಿದೆ; ಕೆಲಸವು ರಭಸದಿಂದಾರಂಭವಾಗಿದೆ; ವಾಯಿದೆಯೂ ಸಮೀಪಿಸುತ್ತಿದೆ.

ಕಸ್ತೂರಿಬಾ ನಿಧಿಗೆ ಸಹಾಯಮಾಡುವಂತೆ ಜನತೆಯನ್ನು ಒತ್ತಾಯಿಸುವ ಒಂದು ಆವಶ್ಯಕತೆಯುಳಿದಿಲ್ಲ; ಆ ಒತ್ತಾಯವನ್ನು ಅವರವರ ಹೃದಯದಿಂದಲೇ ಹುಟ್ಟಿಸಬಲ್ಲ ಅಮೂಲ್ಯ ಸ್ಮಾರಕವಿದು. ಆದರೆ ಇಷ್ಟನ್ನು ಹೇಳಬಲ್ಲೆವು: ಉದ್ದೇಶ, ಆಡಳಿತೆ ಮತ್ತು ಪ್ರಯೋಗ, ಈ ಮೂರು ವಿಧಗಳಲ್ಲೂ ಕಸ್ತೂರಿಬಾ ನಿಧಿಯಷ್ಟು ಅಮೂಲ್ಯವಾದ ಇನ್ನೊಂದು ನಿಧಿಯಿರಲಾರದು; ತಮ್ಮ ಸ್ವಂತ ಭಕ್ತಿ, ಬಯಕೆ ಮತ್ತು ಅನುಕೂಲತೆ, ಇವು ಮೂರನ್ನೂ ಪೂರೈಸಿಕೊಳ್ಳಲು ಕಸ್ತೂರಿಬಾ ನಿಧಿಗೆ ಸಮಾನವಾದ ಮತ್ತೊಂದು ಸತ್ಪಾತ್ರಕ್ಕೆ ದಾನ ಮಾಡುವ ಸುಯೋಗವು ಹಿಂದೀಯರಿಗೆ ದೊರಕಲಾರದು. ಕಸ್ತೂರಿಬಾನಂತಹ ಸತೀಮಣಿಯ ಪುಣ್ಯಸ್ಮಾರಕ-- ಅಖಿಲ ಭಾರತದ ಅದೃಷ್ಟ ನಿರ್ಮಾಪಕ ಗಾಂಧಿಜೀಯೇ ಅದರ ವ್ಯವಸ್ಥಾಪಕ-- ಹಳ್ಳೀ ಮಹಿಳೆಯರ ಉದ್ಧಾರಕ್ಕಾಗಿ ಅದರ ವಿನಿಯೋಗ--ಇಂತಹದೊಂದು ನಿಧಿಗೆ ಕೊಟ್ಟ ಹಣವೇ ತನ್ನ ಇತರ ಎಲ್ಲಾ ವ್ಯಯಗಳನ್ನೂ ಮಿಕ್ಕಿದ ಸದ್ವಿನಿಯೋಗವೆಂಬ ಹೆಗ್ಗಳಿಕೆಯೊಡನೆ ಪ್ರತಿಯೊಬ್ಬನೂ ಇದಕ್ಕೆ ಸಹಾಯಮಾಡಬೇಕಾಗಿದೆ. ಇಂದು ಹಣದ ಅತಿಪ್ರಸರಣದ ಯುಗ; ಆದ್ದರಿಂದ ಅಪವ್ಯಯದ ಕಾಲ. ಈ ಸಂದರ್ಭದಲ್ಲಿ ಕಸ್ತೂರಿಬಾ ನಿಧಿಯು, ಅಡ್ಡ ಹಾದಿ ಹಿಡಿಯುವವರ ಮುಂದೆ ಕೈಗಂಬದಂತಿದ್ದು, ಸದ್ವಿನಿಯೋಗದ ಸದ್ದಾರಿ ತೋರಿಸುತ್ತಿದೆ. ಮೇಲಾಗಿ ಇಂತಹ ಸ್ಮಾರಕವೊಂದರ ರಚನೆಯಾಗದಿರುತ್ತಿದ್ದರೆ ಹಿಂದೀಯರನ್ನೊಂದು ಋಣ ಬಾಧೆ ಪೀಡಿಸುವಂತಾಗುತಿತ್ತು. ದೇಶಕ್ಕಾಗಿ ಪ್ರಾಣವನ್ನಿತ್ತ ಮಹಿಳೆ ಮತ್ತು ಆಕೆಯ ಪತಿ ಮಹಾತ್ಮನು ಈ ರಾಷ್ಟ್ರದಲ್ಲಿ ಹುಟ್ಟಿದುದೇ ಬಂದ. ಅಪರಾಧವನ್ನಿಸುತಿತ್ತು, ಹಿಂದೀಯರಿಗೊಂದು ಅಪವಾದ ತರುತಿತ್ತು. ಹಾಗಾಗದಂತೆ ಮಾಡಿದುದಕ್ಕಾಗಿ, ಈ ನಿಧಿ ನಿರ್ಮಾಪಕರು, ಸಹಾಯ ಮಾಡುವ ಜನತೆಯನ್ನು ಅಭಿನಂದಿಸುವ ಬದಲಿಗೆ, ನಿಧಿ ನಿರ್ಮಿಸಿದವರಿಗೇನೇ ಜನತೆಯ ಕೃತಜ್ಞತೆ ಸಲ್ಲಬೇಕು.

ದಕ್ಷಿಣ ಕನ್ನಡವು ಹಿಂದುಳಿಯಬಾರದು. ಜಿಲ್ಲಾ ಸಮಿತಿ ಮತ್ತು ತಾಲೂಕು ಸಮಿತಿಗಳ ಪರವಾಗಿ ಸಂಗ್ರಹಕಾರ್ಯವೀಗ ನಡೆಯುತ್ತಿದೆ. ಈ ಸಂದರ್ಭದಲ್ಲಿ ಎಲ್ಲಾ ಮಹನೀಯರೂ ಮಹಿಳೆಯರೂ ಬಿಚ್ಚುಗೈಯ ಉದಾರಿಗಳಾಗಿ ಮುಂದೆ ಬರಬೇಕು. ಜಿಲ್ಲೆಯವರ ರಾಷ್ಟ್ರೀಯ ಭಾವನೆ, ಗಾಂಧೀ ಭಕ್ತಿ, ಕಸ್ತೂರಿಬಾನ ಮೇಲಿನ ಪೂಜ್ಯಭಾವ--ಇವು ಪ್ರಶ್ನಿಸಲ್ಪಡದಿರಬೇಕಾದರೆ, ಈ ನಿಧಿಗೆ ದಕ್ಷಿಣ ಕನ್ನಡದ ಪಾಲು ಪೂರ್ತಿಯಾಗಿ ಸಲ್ಲಬೇಕು. ಆಯಾಯಾ ಸ್ಥಳಗಳಲ್ಲಾಗುವ ಜಮೆಯ ಒಂದಂಶವು ಸ್ಥಳೀಯ ವಿನಿಯೋಗಕ್ಕಾಗಿ ದೊರೆಯಲಿದೆ ಎಂಬುದನ್ನೂ ಈ ಸಂದರ್ಭದಲ್ಲಿ ಮರೆಯಬಾರದು. ಹೀಗಾಗಿ ಕಸ್ತೂರಿಬಾ ನಿಧಿಗೆ ಇಲ್ಲಿಂದ ಹೋಗುವ ಸಹಾಯದ ಪರಿಮಾಣದ ಮೇಲಿಂದ ಜಿಲ್ಲೆಯ ರಾಷ್ಟ್ರಪ್ರೇಮ ವ್ಯಕ್ತವಾಗಲಿದೆ; ಅದನ್ನಾಧರಿಸಿಯೇ ಜಿಲ್ಲೆಯ ನಿರ್ಗತಿಕ ಹಳ್ಳೀ ಮಹಿಳೆಯರಿಗೆ ಶಿಕ್ಷಣ, ವೈದ್ಯಕೀಯ ಸಹಾಯ ಮೊದಲಾದ ಸೌಕರ್ಯಗಳ ಏರ್ಪಾಡೂ ಆಗಲಿದೆ. ಆದ್ದರಿಂದ ಕಸ್ತೂರಿಬಾ ನಿಧಿಯು ಜಿಲ್ಲಾ ಸಮಿತಿ ಮತ್ತು ತಾಲೂಕು ಸಮಿತಿಗಳಿಗೂ ಉಡುಪಿ ತಾಲೂಕು ಸಮಿತಿಯಿಂದ ಅಧಿಕೃತರಾಗಿರುವ ಅದರ ಉತ್ಸಾಹೀ ಕಾರ್ಯದರ್ಶಿಗೂ ಎಲ್ಲಾ ಜನರು-- ಮುಖ್ಯವಾಗಿ ಶ್ರೀಮಂತರು-ಉದಾರಹಸ್ತದಿಂದ ನೆರವಾಗಬೇಕೆಂದು ನಮ್ಮ ವಿನಂತಿ.

ಹಿಂದುಸ್ಥಾನವು ಪಾಲಾಗಬಲ್ಲುದಾದರೆ ಹೋಳಾಗಲೂ ಬಲ್ಲುದು!

ಶ್ರೀ ಗುಂಡಪ್ಪನವರ ಅಭಿಪ್ರಾಯ.

ಕನ್ನಡನಾಡಿನ ಪ್ರತಿಭಾವಂತರಲ್ಲಿ, ಚಿಂತಕರಲ್ಲಿ, ಮತ್ತು ಸಾಹಿತಿಗಳಲ್ಲಿ ಪ್ರಥಮ ಶ್ರೇಣಿಯವರಾದ ಶ್ರೀ. ಡಿ. ವಿ. ಗುಂಡಪ್ಪನವರ ಸಮರ್ಥ ವಾದವಿದು. ಅವರ ಇಂಗ್ಲಿಷ್ ಹೇಳಿಕೆಯ ಅಭಿಪ್ರಾಯವನ್ನಿಲ್ಲಿ ಕೊಡಲಾಗಿದೆ:-

"ಒಂದಕ್ಕಿಂತ ಮಿಕ್ಕಿ ಹಿಂದುಸ್ತಾನಗಳಿರಬಹುದಾದರೆ, ಎರಡೇ ಅಲ್ಲ, ಹತ್ತು ಹಲವು ಇರಲೇ ಬೇಕಾಗುವದೆಂಬುದನ್ನು ಸಕಾಲದಲ್ಲಿ ಗಾಂಧಿಜೀ ಮತ್ತು ಮಿ. ಜಿನ್ನರಿಗೆ ನೆನಪು ಹುಟ್ಟಿಸುವದಕ್ಕೋ ಎಂಬಂತೆ, ಹೈದರಾಬಾದ್, ಭೋಪಾಲ್, ನವನಗರ್ ಮತ್ತು ತಿರುವಾಂಕೂರುಗಳು ಸ್ವನಿರ್ಧಾರ ಸೂತ್ರದ ತಮ್ಮ ಸ್ವಂತ ರೀತಿಗಳನ್ನಿತ್ತಿ ತಿಳಿಸಿವೆ. ಪಾಕಿಸ್ತಾನವಿರಲೇ ಬೇಕಾದರೆ ಮತ್ತೆ ಹಿಂದುಸ್ತಾನವೊಂದೇ ಇರಬೇಕೆಂದಿಲ್ಲ-ಒಂದು ಸಿಖ್ ಸ್ಥಾನ, ಒಂದು ದ್ರಾವಿಡಸ್ಥಾನ, ಒಂದು ಹರಿಜನಿಸ್ಥಾನ, ಒಂದು ಕ್ರಿಸ್ತಿಸ್ತಾನ, ಇತ್ಯಾದಿ ಇತ್ಯಾದಿ, ಮತ್ತು 562ಕ್ಕೆ ಕಡಿಮೆಯಾಗದಷ್ಟು ನರೇಂದ್ರಸ್ಥಾನಗಳೂ ಇರಬೇಕು. ಒಂದರಂತಿನ್ನೊಂದು ಪ್ರತ್ಯೇಕ ಸಾಮ್ರಾಜ್ಯ ಮತ್ತು ಸ್ವತಂತ್ರ ರಾಷ್ಟ್ರವಾಗಿಯೇ ಇರಬೇಕು. ರಾಜ್ಯಗಳು ಬಹಳವಾಗಿ ಹೋದರೆ, ಮತ್ತವುಗಳೆಲ್ಲಾ ಪ್ರತ್ಯಪ್ರತ್ಯೇಕ ರಾಜ್ಯಗಳಾಗಿದ್ದರೆ, ಒಂದು ಇನ್ನೊಂದರ ಮೇಲೆ ಪರಿಣಾಮವನ್ನುಂಟುಮಾಡಲು ಸಾಧ್ಯವಿದೆ ಎಂಬ ಕುರಿತು ಹಿಂದುಸ್ಥಾನದ ಚರಿತ್ರೆ ಮೌನವಾಗಿ ಇಲ್ಲವೇ ಗುಟ್ಟಾಗಿ ಇಲ್ಲ. ಪುರಾತನದಿಂದ ಬಾಳಿ ಬಂದಿರುವ ನಮ್ಮ ಸಂಸ್ಥಾನಗಳು ತಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿ ವಂಶಪಾರಂಪರ್ಯವಾಗಿ ಉಪಯೋಗಿಸುತ್ತಾ ಬಂದಿರುವ ಏಕ ಮಾತ್ರ ಉಪಾಯವೆಂದರೆ ಪರಸ್ಪರ ಹೋರಾಟ; ಪರಕೀಯರಿಗೆ ಸಂದರ್ಭ ದೊರೆತಿರುವದೂ ಇದರಿಂದಲೇ. ಆ ಕಾಲದ ಸ್ವತಂತ್ರ ಆಶ್ರಿತ ರಾಜರ ಪೈಕಿ ಒಬ್ಬನ ಮಿತ್ರನಾಗಿ ಇನ್ನೊಬ್ಬನ ಮೇಲೇರಿ ಹೋಗುವ ಸಂದರ್ಭಗಳೊದಗದಿರುತ್ತಿದ್ದರೆ ಅಲೆಕ್ಸಾಂಡರ್ ಅಥವಾ ಘಜ್ನಿಗಳು ಎಲ್ಲಿರುತ್ತಿದ್ದರು? ಸಂಖ್ಯಾಧಿಕ್ಯದಿಂದ ಪರಸ್ಪರ ಒತ್ತಾಟ--ಆ ಒತ್ತಾಟದಿಂದ ಮೂರನೆಯ ಅಥವಾ ನಾಲ್ಕನೆಯ ಪಕ್ಷವೊಂದಕ್ಕೆ ನಡುವೆ ಪ್ರವೇಶಿಸಲಾಗುವ ಅನುಕೂಲತೆ. ಒಗ್ಗಟ್ಟಿರುವದು ಅಸಾಧ್ಯವಾದರೆ ಸ್ವಾತಂತ್ರ್ಯವಿರುವದೂ ಅಸಾಧ್ಯ.

ಒಂದು ರಾಜ್ಯವನ್ನು ಧಾರ್ಮಿಕ ಅಸ್ತಿವಾರದ ಮೇಲೆ-ಅದೂ, ಧರ್ಮ ಸಿದ್ಧಾಂತದ ಕಠಿಣ ಹಸ್ತವು ವೈಜ್ಞಾನಿಕ ಪ್ರಖರ ಕಿರಣದಿದಿರು ಮತ್ತು ಚೇತನಯುಕ್ತ ವಿವೇಕದಿದಿರು ಸಡಿಲಾಗುತ್ತಿರುವ ಈ ಕಾಲದಲ್ಲಿ--ಕಟ್ಟುವದೆಂದರೆ, ಆಶ್ರಿತ ರಾಜರೂ ಕಾಲಬಾಧೆಗೊಳಗಾಗಿರುವ ತಮ್ಮ ಹಳೇ ಕರಾರು ಮತ್ತು ಸನದುಗಳ ಆಧಾರದಿಂದ ತಮಗೂ ಒಂದು ಕೋಟೆಕಟ್ಟಿಕೊಳ್ಳುವಂತೆ ಮಾಡುವ ಕಂಟಕ ನಿರ್ಮಿಸಿಕೊಳ್ಳುವದೆಂದೇ ಅರ್ಥ. 'ಸ್ವನಿರ್ಧಾರ' ಎಂಬುದು ವ್ಯವಸ್ಥಿಕ ನಾಗರಿಕ ಹಕ್ಕನ್ನು ನಿರ್ಮಿಸಿಕೊಳ್ಳುವದಕ್ಕಾಗಿ ಇರುವ ಒಂದು ಸೂತ್ರವೇ ಹೊರತು ಧರ್ಮ ಬದ್ಧ ಜಾತಿಗಳನ್ನು ವಿಂಗಡಿಸುವದಕ್ಕಾಗಿ ಇರುವಂತಹವಲ್ಲ. ಸ್ವತಂತ್ರ ಬುದ್ಧಿಯ ಶಕ್ತಿ ಪ್ರಚಾರದ ಮೂಲಕ ಬಹು ಸಂಖ್ಯಾಕರು ನಾಸ್ತಿಕರಾಗದೆ ಹೋದರೂ, ಪಾರಮಾರ್ಥಿಕವನ್ನು ಅಥವಾ ಧರ್ಮ ಗ್ರಂಥಾಧಿಕಾರಿಗಳನ್ನು ಅಲ್ಲಗಳೆಯುವವರಾಗಿ ಹೋದರೆ ಹಿಂದುಸ್ಥಾನ ಅಥವಾ ಪಾಕಿಸ್ತಾನದ ಗತಿಯೇನಾಗಬಹುದು? ದೇವ ಶಾಸ್ತ್ರ ವಿಚಾರ ಮತ್ತು ಧರ್ಮ ಬೋಧಕರ ಹಿಡಿತಗಳಿಂದ ಹೊರ ಬಂದ ಒಂದು ರಾಜ್ಯವೇ ರಾಜಕೀಯ ವಿಕಾಸದ ಉತ್ತಮ ಮಾದರಿ. ಆದ್ದರಿಂದ ನಾಗರಿಕ ಸಭ್ಯತೆಗೆ ಹಾನಿಯೊಡ್ಡತಕ್ಕ ಧಾರ್ಮಿಕ ಸಂಬಂಧವನ್ನು ಜೋಡಿಸಲು ಸಮ್ಮತಿಸುವಾಗ, ನಾವು ಬೆಳಕಿನ ಕಡೆಗೆ ಬೆನ್ನು ಹಾಕಿದಂತೆಯೇ ಸರಿ.

ಇವೆಲ್ಲಾ ಯೋಚನೆಗಳು ಗಾಂಧಿಜೀಯ ಮನಸ್ಸಿಗೆ ಬಂದಿಲ್ಲವೆಂದು ಭಾವಿಸಲಿಕ್ಕಾಗದು. ಸಿ. ಆರ್. ಸೂತ್ರಗಳಿಗೆ ಅವರು ಕೊಟ್ಟ ಒಪ್ಪಿಗೆಗೊಂದು ಕಾರಣವಾಗಿ -ಆ ಸೂತ್ರವು ಪ್ರತ್ಯಕ್ಷವಾಗಿ ಕಾರ್ಯಕ್ಕೆ ಹಚ್ಚಲ್ಪಡುವಾಗ, ಅದರಲ್ಲಿರುವ ಅಪೂರ್ಣತೆ ಮತ್ತು ಅಪಾಯಗಳು ಹೊರಬಿದ್ದು ಅದು ತಾನಾಗಿ ನಿರರ್ಥವಾಗುವದೆಂದು ಗಾಂಧಿಜೀಗೆ ಮನದಟ್ಟಾಗಿದೆ ಎಂದು ಊಹಿಸಬಹುದು. ಆದರೆ ಇಂತಹ ಊಹೆಯು ಗಾಂಧಿಜೀಯ ವರ್ತನೆಯ ಕುರಿತು ಜನರು ಕಟ್ಟಿಕೊಂಡಿರುವ ಅಭಿಪ್ರಾಯಕ್ಕೆ ಹೊಂದಿಕೆಯಾಗುವದಿಲ್ಲ. ಅವರು ನಮ್ಮ ಪಾಲಿನ ನೈತಿಕಗುರು; ಕೇವಲ ರಾಜಕೀಯ ಧುರೀಣರಷ್ಟೇ ಅಲ್ಲ. ಅವರು ಸಾಮಾನ್ಯ ರಾಜಕೀಯವಾದಿಯ ತಾತ್ಕಾಲಿಕ ಚಾತುರ್ಯ ಪ್ರಯೋಗಕ್ಕಿಂತ ಎಷ್ಟೋ ಮೇಲ್ಮಟ್ಟವನ್ನೇರಿದವರು. ಅತ್ಯುತ್ತಮ ಹಾಗೂ ಅತ್ಯುನ್ನತ ಆದರ್ಶಗಳಿಗಾಗಿ ಮಾತ್ರವೇ ನಾವು ಗಾಂಧಿಜೀಯ ಕಡೆಗೆ ನೋಡುತ್ತೇವೆ. ತಾತ್ಕಾಲಿಕ ವ್ಯವಹಾರಿಕ ಮತ್ತು ಮಾರ್ಮಿಕ ಘಟನೆಗಳು ಹೇಗೇನೇ ಇರಲಿ-ಗಾಂಧಿಜೀಯವರು ತನ್ನ ಹಕ್ಕಿನ ಸ್ಥಾನವಾದ ಅಮೂಲ್ಯತೆಯ ಅಗ್ರಸ್ಥಾನದಿಂದ ಕೆಳಗಿಳಿದರೆ ನಾವೆಲ್ಲಾ ದೀನರಾಗಬೇಕಾದೀತು; ನಮ್ಮ ತತ್ವವು ದುರ್ಬಲಗೊಂಡೀತು.

ತಾ. 19ನೇ ಶನಿವಾರ ಗಾಂಧಿ—ಜಿನ್ನಾ ಬೇಟಿ

ಇದೇ ತಾ 19ನೇ ಶನಿವಾರ ಬೊಂಬಾಯಿಯಲ್ಲಿರುವ ಮಿ. ಜಿನ್ನರ ಗೃಹದಲ್ಲಿ ಗಾಂಧಿ-ಜಿನ್ನಾ ಮಾತುಕತೆಗೆ ದಿನ ನಿಶ್ಚಯವಾಗಿದೆ. ಚರ್ಚೆಯು ಎರಡು ಅಥವಾ ಮೂರು ದಿನ ನಡೆಯಬಹುದೆಂದು ನಿರೀಕ್ಷಿಸಲಾಗಿದ. ಮಹಾತ್ಮಾಜೀಯವರು ಶುಕ್ರವಾರ ಸಂಜೆಯ ಮೈಲಿನಲ್ಲಿ ಹೊರಟು ಶನಿವಾರವೇ ಬೊಂಬಾಯಿಯನ್ನು ಸೇರಲಿದ್ದಾರೆ. ಶ್ರೀ. ಸಿ. ರಾಜಗೋಪಾಲಾಚಾರ್ಯರು ಒಂದು ದಿನ ಮೊದಲೇ ಹೋಗುವರು.

ಚರಿತ್ರಾರ್ಹ ಘಟನೆ

ಗಾಂಧಿ ಜಿನ್ನಾ ಮಾತುಕತೆಯ ಪರಿಣಾ

ಸತ್ಯಾಗ್ರಹದ ಭಾಷೆಯಲ್ಲಿ ಜನಸಾಮಾನ್ಯರು ಕಟ್ಟಿರುವ ಅರ್ಥಕ್ಕಿಂತ ಭಿನ್ನವಾದ ಒಂದು ಅರ್ಥವು ಈ ಜಾತೀಯ ಸೂತ್ರದಲ್ಲಿದೆ ಎಂದು ಹೇಳಿ ಗಾಂಧಿಜೀ ಆ ಸಂಬಂಧದ ಎಲ್ಲಾ ವಿಮರ್ಶೆಗಳನ್ನೂ ನಿವಾರಿಸಬಲ್ಲರೆಂಬುದು ನಿಜ. ನಾವು ಸರಿಯಾಗಿ ಅರ್ಥಮಾಡಿಕೊಂಡಿರದ ಕೆಲವು ಕಲಮುಗಳು ಅದರಲ್ಲಿರಬಹುದು ಪ್ರಾಯಶಃ ಈ ಸೂತ್ರದ 4ನೇ ಶರ್ತವು-ರಕ್ಷಣೆ, ವ್ಯಾಪಾರ ಮತ್ತು ಇತರ ಮುಖ್ಯ ವಿಷಯಗಳನ್ನೊಳಗೊಂಡಿರುವ ಭಾಗ--ಆಚರಣೆಯಲ್ಲಿ ಬರುವಾಗ ನಮ್ಮ ಎಲ್ಲಾ ಹೆದರಿಕೆಗಳನ್ನೂ ತೊಲಗಿಸುವ ಸಂಭವವಿರಬಹುದು ಹಾಗಿದ್ದಾಗ, ಸಂದೇಹ ಮತ್ತು ಸಂಕಷ್ಟಗಳನ್ನು ಗಾಂಧಿಜೀಗೆ ಸ್ಪಷ್ಟಪಡಿಸುವ ನಮ್ಮ ವಿಮರ್ಶೆಗಳಿಂದ ಉಪಕಾರವೇ ಇದೆ. ಅವರು ಮಿ ಜಿನ್ನರೊಡನೆ ಸಂಧಾನ ವ್ಯವಹಾರ ನಡೆಸುವಾಗ, ದೇಶದಲ್ಲಿದ್ದಿರುವ ಆತುರಗಳನ್ನು ಆ ಮಹಾ ನಾಯಕನಿಗೆ ಮಂದಟ್ಟು ಮಾಡಿಕೊಟ್ಟು, ಆ ಮೂಲಕ ಏಕ ಮತ್ತು ಅಭೇದ್ಯ ಭಾರತವನ್ನು ಉಳಿಸುವ ಅಮೂಲ್ಯತತ್ವವನ್ನು ಪಾಲಿಸಬಹುದು.

ಮಾಡಿದರೂ ಭಾರತದ ಚರಿತ್ರೆಯಲ್ಲಿ ಈ ಸಂಧಾನ ವ್ಯವಹಾರವೊಂದು ಪ್ರಮುಖ್ಯ ಸ್ಥಾನ ಪಡೆಯುವದರಲ್ಲಿ ಸಂದೇಹವಿಲ್ಲ ಬೊಂಬಾಯಿಯಲ್ಲಿದ್ದು ಈ ಮಾತುಕತೆಗಳ ನಿಕಟ ಪರಿಚಯವುಳ್ಳ ಧುರೀಣರ ಅಭಿಪ್ರಾಯದಂತೆ, ಅದು ಸತ್ಪರಿಣಾಮಕಾರಿಯಾಗುವ ಸಂಭವವಿದ. ಮುಖ್ಯತಃ ಮತದಾನದ ಮೂಲಕವೇ ವಿಭಾಗ ನಿರ್ಣಯವಾಗಬೇಕೆಂದು ಗಾಂಧಿಜೀಯವರೂ, ಅದಸಾಧ್ಯವೆಂದು ಜಿನ್ನರೂ ಹಠ ಹಿಡಿಯುವ ಸಂಭವವಿದೆ, ಆದರಲ್ಲೂ ಪಾಕಿಸ್ತಾನಕ್ಕೊಂದು ಅಸ್ತಿತ್ವ ದೊರೆಯಬೇಕಾದರೆ ಮುಸಲ್ಮಾನರ ಬಹುಸಂಖ್ಯೆಯಿರದ ಆಸುಪಾಸಿನ ಸ್ಥಳಗಳನ್ನೂ ಅದಕ್ಕೆ ಸೇರಿಸಿಕೊಡಬೇಕಾಗಬಹುದು. ಇದು ಸಂಧಾನ ಸಾಧ್ಯತೆಗಿರುವ ಮತ್ತೊಂದು ಪ್ರಬಲಾತಂಕ. ಆದರೆ ಗಾಂಧಿಜೀ ಮತ್ತು ಮಿ ಜಿನ್ನಾ ಇವರಿಬ್ಬರೂ ಈಗ ಅತ್ಯನುಕೂಲ ಸೌಹಾರ್ದ್ರ ಭಾವನೆ ವಹಿಸಿರುವದರಿಂದ ಸಂಧಾನವು ವಿಜಯಗೊಳ್ಳುವ ಸಂಭವವಿದ.

ಅಭಿಪ್ರಾಯ ತೂಕ

ದೇಶದ ಈಗಿನ ಅಭಿಪ್ರಾಯಗಳನ್ನು ಈ ರೀತಿ ವಿಂಗಡಿಸಿ ಹಾಕಬಹುದು ಎಲ್ಲಾ ಹಿರಿಯ ಮುಖಂಡರು, ಮಂದ ಪಕ್ಷೀಯರು, ಯೋಚನಾಧಿಕಾರವುಳ್ಳ ಗಾರವಾನ್ವಿತರು ರಾಜಾಜೀ ಸೂತ್ರಗಳಿಗೆ ವಿರೋಧವಿದ್ದಾರೆ. ಪಕ್ಷಪಂಗಡಗಳ ಪೈಕಿ ಹಿಂದೂ ಮಹಾಸಭೆ, ಸಿಖ್ಖರು, ಮತ್ತು ಪಕ್ಷಭೇದವಿಲ್ಲದೆ ಬಂಗಾಳಾ ಪಂಜಾಬುಗಳ ಮುಸಲ್ಮಾನೇತರರು ಈ ಸೂತ್ರಗಳಿಗೆ ವಿರೋಧ ಇದಕ್ಕನುಕೂಲಾಭಿಪ್ರಾಯ ಕೊಟ್ಟವರೆಂದರೆ ಬಹುತೇಕವಾಗಿ ತರುಣವರ್ಗ, ಕಮ್ಯೂನಿಸ್ಟರು ಮತ್ತು ವಿದ್ಯಾರ್ಥಿಗಳು. ಮಹಾತ್ಮರ ಮಂಜೂರಾತಿಯಿಂದಾಗಿ ಅಖಿಲ ಭಾರತದ ಅಧಿಕ ಸಂಖ್ಯಾಕ ಕಾಂಗ್ರೆಸಿಗರು ಇದಕ್ಕೆ ಸೈಗುಟ್ಟಿದ್ದಾರೆ.

ರಾಜಾಜೀ ಸಮರ್ಥನೆ

ಈ ಸೂತ್ರಗಳ ವಿರುದ್ಧವಾಗಿ ಬಂದ [illegible] ಪ್ರಾಯದ ಬೆಂಬಲವಿರುವದರಿಂದ ಸ್ವಾಭಾವಿಕವಾಗಿ ಆಜೇಯವಿವೆ ಅವುಗಳಿಗೆ ಸಮರ್ಪಕ ಉತ್ತರವಿತ್ತವರೆಂದರೆ ರಾಜಾಜಿಯೊಬ್ಬರೆ ಈ ಸಂಬಂಧವಾಗಿ 'ನಿಮ್ಮ ಹಿಂದಿನ ಮತ್ತು ಇಂದಿನ ಅಭಿಪ್ರಾಯಗಳೊಳಗೆ ಪರಸ್ಪರ ಹೋಲಿಕೆಯಿಲ್ಲ' ಎಂದು ಗಾಂಧಿಜೀಯೊಡನೆ ಬಾತ್ಮೀದಾರರೊಬ್ಬರೆಂದಾಗ 'ಈ ಸೂತ್ರದ ಗುಣದೋಷಗಳನ್ನಷ್ಟೇ ವಿಚಾರಿಸಬೇಕಲ್ಲದೆ ಬೇರೆ ವಿಚಾರ ಬೇಡ' ಎಂದು ಗಾಂಧಿಜೀಯ ಉತ್ತರ ಅದರ ಮುಖ್ಯ ಹೊಣೆಯನ್ನು ಅವರು ರಾಜಾಜಿಗೆ ಬಿಟ್ಟುಕೊಟ್ಟಂತಿದೆ. ಆಚಾರ್ಯರು ಪಾಕಿಸ್ತಾನ ವಿಭಾಗಕ್ಕಿಂತ ದೂರವಿರುವವರಾದ್ದರಿಂದ ಅವರಿಗೆ ಸ್ಥಿತಿಗತಿ ತಿಳಿದಿಲ್ಲ-ದೇಶ ವಿಭಜನೆಯು ಅನಾಹುತಕಾರಿ-ಇತರ ಅಲ್ಪ ಸಂಖ್ಯಾಕರನ್ನು ಕಡೆಗಣಿಸಲಾಗಿದೆ, ಇತ್ಯಾದಿ ಹಲವು ದೂರುಗಳಿಗೆ ರಾಜಾಜೀ ತಲೆಕೊಟ್ಟಿದ್ದಾರೆ. 'ನಾವು ದೂರದವರಾಗರೆ ಬ್ರಿಟಿಷರೇನೂ ಹತ್ತಿರದವರಲ್ಲ ಅದನ್ನು ಮತದಾನದ ಮೂಲಕ ತೀರ್ಮಾನಿಸುವ ಅಧಿಕಾರವನ್ನು ಆಯಾ ಭಾಗಗಳಿಗೇನೇ ಕೊಟ್ಟಿದ್ದೇವೆ ಆಶ್ರಿತ ರಾಜ್ಯಗಳಿಗೆ ಪ್ರತ್ಯೇಕವಿರುವಷ್ಟು ಪಾಕಿಸ್ತಾನ ವಿಭಾಗವು ಅಪಾಯಕರವಲ್ಲ ಅಲ್ಪ ಸಂಖ್ಯಾಕರಿಗೆ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನೀಯುತ್ತೇವೆ'-ಎಂದೆಲ್ಲಾ ಈ ಆರೋಪಗಳಿಗೆ ರಾಜಾಜಿಯ ಉತ್ತರ. ಅಂತೂ ಬೊಂಬಾಯಿಯಲ್ಲಿ, ಇನ್ನೆರಡೇ ದಿನಗಳಲ್ಲಾರಂಭವಾಗಲಿರುವ ಗಾಂಧಿ-ಜಿನ್ನಾ ಮಾತುಕತೆಯ ಫಲಿತಾಂಶವನ್ನು ದೇಶವಿದೇಶಗಳು ಆತುರದಿಂದ ನಿರೀಕ್ಷಿಸುತ್ತಿವೆ

ಮಂಗಳೂರು ಡಿ। ಮು। ಕೋರ್ಟಿನಲ್ಲಿ

O. S No. 208/1944.

Between

ಪರಮೇಶ್ವರಿ ಹೆಂಗ್ಸು —ವಾದಿಳು.

ಮತ್ತು

ಉಮ್ಮಾತುಮ್ಮಾ ಕೂಡಾ -ಪ್ರತಿವಾದಿರು.

ಮೇಲ್ಕಾಣ್ಸಿದ ವಾದಿಳು ಕೈಸೇರ್ತಿನಲ್ಲಿ ಕೇಳಿದ ಗೇಣಿ ಬಾಕಿ ವಗೈರೆ ನಿವೃತ್ತಿಗಳ ಬಗ್ಯೆ ಸದ್ರಿ ಮೇಲಿನ ಪ್ರತಿವಾದಿರುಗಳ ಮೇಲೆ ಕ್ವಮುವ್ವಾಜ್ಯ ನಂಬ್ರ 208/1944 ನೇ ವ್ಯಾಜ್ಯವನ್ನು ದಾಕ್ಲು ಮಾಡಿರುತ್ತಾ ಸದ್ರಿ ವ್ಯವಹರಣೆಯನ್ನು ಇದೇ ಬರುವ ತಾರೀಕು 24-8-1944ಕ್ಕೆ 3ನೇ ಪ್ರತಿವಾದಿ ಕೊಯಿಸನೆ ಬ್ಯಾರಿಗೆ ನೋಟೀಸು ಬಗ್ಯೆ ಇಟ್ಟಿರುತ್ತದೆ. ಆದುದರಿಂದ ಸದ್ರಿ ವ್ಯವಹರಣೆಗೆ 3ನೇ ಪ್ರತಿವಾದಿ ಆದ ನಿಮಗೇನಾದ್ರೂ ಆಕ್ಷೇಪಣೆ ಇರುವಲ್ಲಿ ಅದನ್ನು ನೀವು ಖುದ್ದಾಗಿಯಾಗಲೀ ಯಾ ವಕೀಲ್ ಮುಖಾಂತ್ರವಾಗಲೀ ಈ ಕೋರ್ಟಿನ ಮುಂದೆ ಸದ್ರಿ ತಾರೀಕು 24-8-1944ಕ್ಕೆ ಹಾಜ್ರುಪಡಿಸತಕ್ಕದ್ದು. ಇಲ್ಲವಾದರೆ ಸದ್ರಿ ವ್ಯವಹರಣೆಯು ನಿಮ್ಮ ಗೈರು ಹಾಜ್ರಲ್ಲಿ ತೀರ್ಮಾನಿಸಲ್ಪಡುವುದು- ತಿಳಿದಿರಲಿ

(By order)

Mangalore, D. 14-8-44 — B L. N Rai. Advocate for Pltf.

ಇಂಗ್ಲಾಂಡಿನಲ್ಲಿ ಘಂಟೆಗೆ 700 ಮನೆ ಧ್ವಂಸ!

ಪೂರ್ವ ಪ್ರಶ್ಯಾದ ಗಡಿಯಲ್ಲಿ

ಬಗ್ ಹೊಳೆಯನ್ನು ದಾಟಿ ಮುಂದೊತ್ತಿದ ಮಾರ್ಶಲ್ ರೊಕೋಸ್ಸೋವ್‌ಸ್ಕಿಯ ಸೇನೆಯೂ, ಬಿಯಾಲಿಸ್ಟೋಕಿನಿಂದ ಮುಂದೊತ್ತಿದ ಜನರಲ್ ಝುಕಾರೋವನ ಸೇನೆಯೂ ಈಗ ಒಂದುಗೂಡಿ, ಮಹಾರಶ್ಯನ್ ಸೇನೆಯಾಗಿ ಪೂರ್ವ ಪ್ರಶ್ಯದ 100 ಮೈಲು ವಿಸ್ತೀರ್ಣದ ಕ್ಷೇತ್ರದಲ್ಲಿ ಪ್ರಬಲ ಹಾಗೂ ಅಪಾಯಕಾರೀ ಧಾಳಿಯಾರಂಭಿಸಿವೆ.

ನೋರ್ಮಾಂಡಿಯಲ್ಲಿ

ನೋರ್ಮಾಂಡಿಯ ಇಕ್ಕಟ್ಟಾದ ಪಲಾಯಿಸೀ ಕಂದರದ ಮೂಲಕ ಪಾರಾಗಲು ಹವಣಿಸುತಿದ್ದ ಒಂದು ಲಕ್ಷ ಸೇನೆ ಮತ್ತು ನೂರಾರು ಜರ್ಮನ್ ಟ್ಯಾಂಕುಗಳ ಮೇಲೆ ಮಿತ್ರರು ಆಕಾಶ ಧಾಳಿ ನಡಿಸಿ ಭಯಂಕರ ಹಾವಳಿಯೊಡ್ಡಿದರೆಂದು ವರದಿಯಾಗಿದೆ. ಇತರ ರಣರಂಗಗಳಲ್ಲೂ ಪ್ರಾಮುಖ್ಯ ನೆಲೆಗಳು ಮಿತ್ರಸೇನೆಗಳ ಕೈವಶವಾಗಿವೆ.

ಘಂಟೆಗೆ 700 ಮನೆ

ಜರ್ಮನರ ರೆಕ್ಕೆ ಬಾಂಬುಗಳು ಇಂಗ್ಲಾಂಡಿನಲ್ಲಿ ಪ್ರತಿ ಘಂಟೆಗೇಳ್ನೂರು ಮನೆಗಳಂತೆ ಧ್ವಂಸಮಾಡುತ್ತಿವೆ ಎಂದು ಅಮೇರಿಕದಲ್ಲಿ ಬ್ರಿಟಿಷ್ ರಾಯಭಾರಿಯಾಗಿರುವ ಲೋರ್ಡ್ ಹೆಲಿಫೇಕ್ಸರು ಪತ್ರಿಕಾಪ್ರತಿನಿಧಿಗಳೆದುರು ತಿಳಿಸಿದ್ದಾರೆ ಆದರೆ ಈ ಯುದ್ಧವನ್ನು ಮುಂದೂತ್ತಬೇಕೆಂಬ ಬ್ರಿಟಿಷ್ ಜನತೆಯ ದೃಢ ಸಂಕಲ್ಪವು ಒಂದಿಷ್ಟು ತಪ್ಪಿದ್ದಾಗಲಿಲ್ಲವಂತೆ.

ರೂಸವೆಲ್ಟರ ಆಶ್ವಾಸನೆ

ಶಾಂತ ಸಮುದ್ರದಲ್ಲಿ ಯುದ್ಧ ವಿಜಯವ ಹೊರತು ಬೇರಾವ ಸ್ಥಳಾಪೇಕ್ಷೆಯೂ ತಮಗಿಲ್ಲವೆಂದು ಅಮೆರಿಕಾಧ್ಯಕ್ಷ ರೂಸವೆಲ್ಟರು ತನ್ನೊಂದು ಭಾಷಣದಲ್ಲಿಂದಿದ್ದಾರೆ ಕಳೆದೆರಡು ತಿಂಗಳುಗಳಿಂದ ಮುತ್ತಿಗೆಗೊಳಗಾಗಿದ್ದು ಇತ್ತೀಚೆಗೆ ಜಾಪಾನರ ವಶವಾಗಿದ್ದ ಹೊನಾನ್ ಪ್ರಾಂತ್ಯದ ಹೆಂಗ್ಯಾಂಗ್ ನಗರದ ಪುನರಾಧೀನತೆಗಾಗಿ ಚೀನೀಯರು ಪ್ರತಿಧಾಳಿ ಹೂಡಿದ್ದಾರೆ.

'ಅನ್ನ-ಅನ್ನ'ವೆಂದು ಬಾಯ್ಬಿಡುತ್ತಿರುವ ಈ ದುರ್ಭಿಕ್ಷ ಕಾಲದಲ್ಲಿ

ಅನ್ನದೇವರು ಮತ್ತು ಇತರ ಕಥೆಗಳು

ಹಸಿದ ಮನಕ್ಕೆ ಸೊಗಸಿನ ಊಟ!

ನೋಟೀಸು

ಮಂಗಳೂರು ಡಿ। ಮು। ಕೋರ್ಟಿನಲ್ಲಿ

S E. P. ನಂಬ್ರ 221/1944

(S. C ನಂಬ್ರ 473/1943)

ಇಂತು. ಡಿಸೋಜ ಅರ್ಜಿದಾರ—(ವಾದಿ)

ಮತ್ತು

1 ಸುಂದರ—ಜಾತಂಮನ ಮಗ 3 ಸಾರೋಜಿನಿ, 4 ನಳಿನಿ, 5 ಸುನೀತಿ ಜಾತಮ್ಮನ ಮ್ಯಾನರ್ ಮಕ್ಕಳ —1, 3ರಿಂದ 5ನೇ ವರೇಗಿನ ರೆಸ್ಪೊಂಡೆಂಟರು -1, 3ರಿಂದ 5ನೇ ವರೇಗಿನ ಪ್ರತಿವಾದಿಯರು

ಮೇಲಿನ ಎಲ್ಲಾ ರೆಸ್ಪೊಂಡೆಂಟರು ಮಂಗ್ಳೂರು ತಾಲೂಕಿನ ಅತ್ತಾವರ ನಂದಿಗುಡ್ಡೆ ರಸ್ತೆ ಶ್ರೀ ಅರಸು ಮಂಡಿತ್ತಾಯ ದೈವಸ್ಥಾನದ ಬಳಿಯಲ್ಲಿ ಇರುವವರು. ಇವರ ಇವರ ಅಸ್ಸಿರ್ ವಾಸಸ್ಥಾನವಾಗಿರುತದೆ—

ಸದ್ರಿ ರೆಸ್ಪೊಂಡೆಂಟರಿಗೆ—

ಮೇಲಿನ ನಂಬರಿನಲ್ಲಿ ಅಂದರೆ ಈ ಕೋರ್ಟಿನ R E. P ನಂಬ್ರ 403/43,) S. ನಂಬ್ರ 344/42ನೇ ವ್ಯಾಜ್ಯದಲ್ಲಿ ನಮ್ಮ ಕ್ರೆಡಿಟಿಗೆ ಈ ಕೋರ್ಟಿನಲ್ಲಿ ಡಿಪೋಜಿಟ್ ಮಾಡಿದ ರೂಪಾಯಿ 752-3-4ರಿಂದ ಅರ್ಜಿದಾರಿಗೆ ಸಲುವ ಡಿಕ್ರಿ ಹ್ಯಾಪಜನು ಆತಗೆ ಕೊಡಿಸಿ ಡಿಕ್ರಿಯ ಪೂರ್ಣ ಸಮಾಧಾನವನ್ನು ರೆಕಾರ್ಡು ಮಾಡಿಸಬೇಕೆಂತ ಅಥವಾ ಮೇಲ ಹೇಳಿದ ಡಿಕ್ರಿಯನ್ನು ಯೆಕ್ಸಿಕ್ಯೂಟ್ ಮಾಡುವರೆ ಅರ್ಜಿದಾರಗೆ ಪರ್ಮಿಶ್ಯನ್ ಕೊಡಬೇಕೆಂತ ಪ್ರಾರ್ಥಿಸಿ ಸದ್ರಿ ಅರ್ಜಿದಾರನು ಸಲ್ಲಿಸಿದ ಅರ್ಜಿ ದಾಖಿಲ್ ಮಾಡಿರುವದರಿಂದ ಅದನ್ನು ಕುರಿತು ಆಕ್ಷೇಪವಿದ್ದರೆ ಬಾಕೀರು ಬರುವ ಒಗ್ಗೆ 1944ನೇ ಇಸವಿ ಆಗೋಸ್ಟು ತಿಂಗಳು ತಾರೀಕು 24ನೇ ಹಗಲು 10½ ಘಂಟೆಗೆ ಸದ್ರಿ ಮೇಲಿನ ಕೋರ್ಟಿನಲ್ಲಿ ತಮ್ಮ ಆಕ್ಷೇಪಿಸುತ್ತದೆ ಮತ್ತು ನೀವು ಹಾಜರಾಗಿ ವ್ಯವಹರಿಸದಿದ್ದರೆ ನಿಮ್ಮ ಗೈರ್ ಹಾಜರಿಯಲ್ಲಿ ಸದ್ರಿ ಅರ್ಜಿ ತೀರ್ಮಾನವಾಗುವದು ಎಂಬ ಸಂಗ್ತಿ ಈ ಮೂಲಕ ತಿಳಿಸಿದೆ—

M. A. Shartri

Advocate for Petitioner

ನೋಟೀಸು

ಉಡ್ಪಿ ಡಿ। ಮು ಕೋರ್ಟಿನಲ್ಲಿ.

(1) H. ಪಾಂಡುರಂಗರಾವ್- (2) H ಗೋಪಾಲಕೃಷ್ಣರಾವ್- H. ರಾಮರಾಯರ ಮಕ್ಕಳು-

1ನೇಯವನು ಈಗ ಹಾಲಿ ಕುಂದಾಪುರ ಕಸ್ಬಯಲ್ಲಿಯೂ 2ನೇಯವನು ಉಡ್ಪಿ ತಾಲ್ಕು ಹಿರೆಬೆಟ್ಟು ಗ್ರಾಮದಲ್ಲಿಯೂ ಇರುವವರು— ಅರ್ಜಿದಾರರ -

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದ್ರೆ:-

ತಾರೀಕು 22-10-1943ರಲ್ಲಿ ಉಡ್ಪಿ ತಾಲೂಕು ಬಳಿ ಸಾವಿರ ಮಾಗಣೆ ಬಡಗಬೆಟ್ಟು ಗ್ರಾಮದಲ್ಲಿ ಮೃತಪಟ್ಟಿರುವ ಅರ್ಜಿದಾರ್ರ ಸಹೋದರ H ಆನಂದರಾಯರ ಬಾಬ್ತು ದಿ ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಮದ್ರಾಸ್ ಯಿದರಲ್ಲಿರುವ ನಂಬ್ರ 11571ನೇ ಪ್ರೋಲಿಸಿ ಹಣವನ್ನೂ, ದಿ ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಬೊಂಬಾಯಿ ಯಿದರಲ್ಲಿರುವ ನಂಬ್ರ 551015ನೇ ಪ್ರೋಲಿಸಿ ಹಣವನ್ನೂ ಪಡಿಯುವರೆ 1ನೇ ಅರ್ಜಿದಾರನ ಹೆಸರಲ್ಲಿ ಒಂದು ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರ್ರು ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 24-8-44ಕ್ಕೆ ಯಿಟ್ಟಿದೆ ಆಕ್ಷೇಪವುಳ್ಳವರು ಆ ದಿವ್ಸ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ವ್ಯಾಜ್ಯ ಮಾಡಿಕೊಳ್ಳಬಹುದು.

K Ramakrishna Rao,

Vakil For Petitioners.

Udipi Dated 9 8-1944

ದಕ್ಷಿಣ ಕನ್ನಡ.

ಮಂಗಳೂರು

ವಿದ್ಯಾರ್ಥಿ ಸಂಘಗಳು ಈ ತನಕ ಎರಡು ಇದ್ದುದನ್ನು ಮುಂದಕ್ಕೆ ಒಂದೇ ಆಗಿ ಮಾಡುವ ನಿರ್ಧಾರವಾಗಿ, ಆರಂಭದ ಕೆಲಸಕ್ಕೋಸ್ಕರ ತಾತ್ಕಾಲಿಕ ಸಮಿತಿಯೊಂದು ನೇಮಿಸಲ್ಪಟ್ಟಿದೆ.

ಟಾಗೋರ್ ದಿನವು ಸೋಮವಾರ ಸಂಜೆ ಪ್ರಕಾಶ ಸಾಹಿತ್ಯ ಕೂಟದ ಆಶ್ರಯದಲ್ಲಿ ಡಾ| ಪಿ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಕೂಟದ ಉಪಾಧ್ಯಕ್ಷ ಶ್ರೀ| ಪಿ. ಕೆ. ನಾರಾಯಣರು ನೆರೆದವರನ್ನು ಸ್ವಾಗತಿಸಿದರು. ಶ್ರೀ| ಕೆ. ಕೃಷ್ಣರಾಯರು ಉದ್ಘಾಟನಾ ಭಾಷಣವಿತ್ತರು. ದಿವಂಗತ ಕವಿಯ ಜೀವನ ಮತ್ತು ಕೃತಿಗಳ ಕುರಿತು ಶ್ರೀಯುತರ ಎಸ್| ಮುಕುಂದ ರಾವ್, ಕೆ. ಕೆ. ಶೆಟ್ಟಿ, ಕುಳಕುಂದ ಶಿವರಾಯ ಮತ್ತು ಎ. ಗ. ಪ್ರಭು ಇವರು ಮಾತನಾಡಿದರು. ಕೊನೆಯಲ್ಲಿ ಕಾರ್ಯದರ್ಶಿ ಶ್ರೀ| ಚಿತ್ತರಂಜನದಾಸರು ಧನ್ಯವಾದಗಳನ್ನು ಸೂಚಿಸಿದರು.

ಜೆಪ್ಪು ಮಾರ್ಕೆಟು ಮುಗುಚಿ ಬಿದ್ದುದರ ಫಲವಾಗಿ ಮಡಿದವರ ಸಂಖ್ಯೆ ಒಟ್ಟು ಮೂರು. ಘಟನೆಯ ದಿನವೇ ಮೃತಳಾದ ಶ್ರೀಮತಿ ಲಸಿಬಾಯಿ ಯಲ್ಲದೆ ಶ್ರೀಯುತರು ಜಾರಪ್ಪ ಪೂಜಾರಿ (ಹಂಚು ಕಾರ್ಖಾನೆ ಮುಕಾಂ ಮತ್ತು ದೇಜಪ್ಪ ಬಲ್ಲಾಡ (ಬೇಸಾಯಗಾರ) ಇವರು ವೆನ್‌ಲೋಕ್ ಆಸ್ಪತ್ರೆಯಲ್ಲಿ ತೀರಿಕೊಂಡರು

ಮಿಲಿಟರಿ ಉಪಯೋಗಕ್ಕಾಗಿ ಈ ಜಿಲ್ಲೆಯಲ್ಲಿ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೂ ಕೊಂಡುಕೊಳ್ಳುವುದಕ್ಕೂ ನೇಮಿಸಲ್ಪಟ್ಟಿರುವ ಶ್ರೀಯುತರು :ಬಿ. ಜೋಗಪ್ಪ, ಜಿ. ಕೊಂಡಯ್ಯ ಮತ್ತು ಭವಾನಿ ಶಂಕರ ರಾವ್ ಇವರು ಮಂಗಳೂರಿಗೆ ಬಂದು ತಲಪಿದ್ದು, ಇಷ್ಟರಲ್ಲೆ ಪ್ರವಾಸವನ್ನು ಕೈಕೊಂಡಿರುವರು.

ಶ್ರೀ ಕೊಚ್ಚಿಕಾರ್—ಪದ್ಮನಾಭ ಪೈ ಅವರ [ಬಾಂಬೆ ಲೈಫ್ ಎಶ್ಯೂರೆನ್ಸಿನ ಪ್ರಧಾನ ಏಜೆಂಟರಾದ ಕೊಚ್ಚಿಕಾರ್ ಸಹೋದರರಲ್ಲಿ ಹಿರಿಯರು] ಷಷ್ಠ್ಯಬ್ದ ಪೂರ್ತಿಯು ಸೋಮವಾರ ಸಂಜೆ ಕೆನರಾ ಹೈಸ್ಕೂಲಿನಲ್ಲಿ ಜಿಲ್ಲಾ ಸೆಶ್ಶನ್ಸ್ ನ್ಯಾಯಾಧೀಶ ಮಿ| ಎಂ. ಸಿ. ಬಿ ಕೋಮನ್ ಅವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಸತ್ಕಾರ ಕೂಟದ ಸಮಯದಲ್ಲಿ ಶ್ರೀಯುತರು ಅಮ್ಮೆಂಬಳ ಶ್ರೀನಿವಾಸ ಪೈ, ಡಾ| ಕೇಶವ ಪೈ, ಜಿನರಾಜ ಹೆಗ್ಡೆ, ಎ ಬಿ ಶೆಟ್ಟಿ, ದಿ. ಸಾ. ಎಂ. ಕೆ ನಂಬಿಯಾರ್ ಮಿತ್ರ ಪರರು ಮಾತಾನಾಡಿದರು. ಶ್ರೀ. ಬಿ ವೆಂಕಟಪ್ಪಯ್ಯ ಬಾಳಿಗರು ಸಮಾರಂಭದ ಕೊನೆಯಲ್ಲಿ ಧನ್ಯವಾದಗಳನ್ನರ್ಪಿಸಿದರು.

ಗವರ್ನಮೆಂಟ್ ಹಾ. ಟ್ರೈನಿಂಗ್ ಶಾಲಾ ವಿದ್ಯಾರ್ಥಿ ಅಧ್ಯಾಪಕ ಸಂಘದ ಉದ್ಘಾಟನಾ ಸಮಾರಂಭವು ಶ್ರೀ| ಯು. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ| ಕೆ. ಗೋಪಾಲರಾವ್ ಇವರ ಸ್ವಸ್ತಿವಾಚನದೊಡನೆ ತಾ ೧೦ರಂದು ಜರಗಿತು.

ಅಕ್ಕಿ ಬರುತ್ತಿದೆ—ಉತ್ತರ ಅರ್ಕಾಟ ಜಿಲ್ಲೆ ಏದ ವೇಗನುಗಳಷ್ಟು ಬೆಳ್ತಿಗೆ ಅಕ್ಕಿಯು ಇಷ್ಟರಲ್ಲೇ ಮಂಗಳೂರಿಗೆ ಬಂದು ತಲುಪಿದೆ. ಕೆಚ್ಚಿನ ಅಕ್ಕಿ ಬರುತ್ತಲಿದೆ

೧೩ ಮಂದಿಯ ಮೇಲೆ ವ್ಯವಹರಣೆ—ಇಸಗೆ ಪದ್ಧತಿಯು ಮಂಗಳೂರಲ್ಲಿ ಜ್ಯಾರಿಗೆ ಬಂದ ಮೇಲೆ ರೇಶನಿಂಗ್ ನಿಯಮಗಳನ್ನು ಮುರಿದುದಕ್ಕಾಗಿ ೧೩೦ ಮಂದಿಯ ಮೇಲೆ ಕಾರ್ಯಕ್ರಮ ಕೈಕೊಳ್ಳಲ್ಪಟ್ಟಿದೆ. ಅವರಲ್ಲಿ ಕೆಲವು ಮಂದಿಯನ್ನು ಎಚ್ಚರಿಕೆ ಕೊಟ್ಟು ರೇಶನಿಂಗ್ ಆಫೀಸರರು ಬಿಟ್ಟಿರುವರು. ಉಳಿದವರ ಮೇಲೆ ವ್ಯವಹರಣೆಯಾಗಲಿದೆ. ರೇಷನಿಂಗ್ ನಿಯಮಗಳನ್ನು ಮೀರಿದ ಅಪಾದನೆಯ ಮೇಲೆ ೧೩ ಮಂದಿಗೆ ವಿರುದ್ಧವಾಗಿ 'ಚಾರ್ಜ್ ಶೀಟ್'ಗಳ ಸಿದ್ಧವಾಗಿವೆ ಇವರಲ್ಲಿ ನಗರದ ಪ್ರಸಿದ್ಧ ಹೋಟೆಲ್‌ಗಳವರೂ ಇರುವರು.

ಪೋಲಿಸ್ ಪಹರೆಯಿಂದ ತಪ್ಪಿಸಿಕೊಂಡ ಹುಡುಗನಿಗೆ ಶಿಕ್ಷೆ— ಕಳೆದ ತಾ ೭ರಲ್ಲಿ ಸ್ಥಳೀಯ ಪೋಲಿಸ್ ಪಹರೆಯಿಂದ ತಪ್ಪಿಸಿಕೊಂಡ ಪರಾರಿಯಾಗಲು ಪ್ರಯತ್ನಪಟ್ಟು, ಕಡೆಗೆ ಪೋಲಿಸ್‌ರಿಂದ ಹಿಡಿಯಲ್ಪಟ್ಟು ಬಂದೋಬಸ್ತಿನಲ್ಲಿಡಲ್ಪಟ್ಟ ಮಾಪಿಳ್ಳೆ ಜಾತಿಯ ಹುಡುಗನೊಬ್ಬನ ಕಕ್ಷೀರು ತನ್ನಿಯಾಗಿ, ತಾ ೪ರಂದು ಡಿ| ಕಲೆಕ್ಟರ್‌ರವರು ಅವನಿಗೆ ಮೂರು ವರ್ಷಗಳ ವರೆಗೆ ಬೋರ್ಸ್ಟಲ್ ಶಾಲೆ (ಮೈನರ್‌ನ ದುದರಿಂದ) ಯಲ್ಲಿ ತರಬೇತಿಗಾಗಿ ಹುಕುಂ ಕೊಟ್ಟಿರುತ್ತಾರಾಗಿ ತಿಳಿದುಬರುತ್ತದೆ. ಅಲ್ಲಲ್ಲಿ ಕಳ್ಳತನ ನಡಿಸಿದನೆಂಬ ತಕ್ರಾರೇ ಮೇಲಿನ ಶಿಕ್ಷೆಗೆ ಕಾರಣವಾಗಿದೆ ಎಂದು ತಿಳಿದುಬರುತ್ತದೆ.

ಉಡುಪಿ.

ಡಿಪ್ಯುಟಿ ಡ್ಯಾರೆಕ್ಟರ್ ಓಫ್ ಸಿವಿಲ್ ಸಪ್ಲೈಸ್—ಮಿ| ರಾಘೋರವರು ಉಡುಪಿಯಲ್ಲಿ ಮೊಕ್ಕಾಂ ಮಾಡಿದ ವೇಳೆ ತಾ 14ರಲ್ಲಿ ಉಡುಪಿ ತಾಲೂಕು ಭೂಮಾಲಿಕ ಸಂಘದ ಪರವಾಗಿ ಶ್ರೀಗಳಾದ ಕೆ. ಬಿ. ಬಲ್ಲಾಳ್ ಮತ್ತು ಬಿ. ವಾಸುದೇವರಾಯರು ಅವರನ್ನು ಭೇಟಿಯಾಗಿ ಪಟ್ಟಣದ ಮತ್ತು ಹಳ್ಳಿಗಳ ಆಹಾರ ಪರಿಸ್ಥಿತಿಯನ್ನು ವಿವರಿಸಿ ಹೇಳಿದರು, ಹೊರಗಿನಿಂದ ಇಲ್ಲಿ ಅಕ್ಕಿ ಬರಬೇಕಾದ ಅವಶ್ಯಕತೆಯನ್ನು ಸೂಚಿಸಿ ಈಗ ಅಕ್ಕಿಗೆ ಇರುವ ಕ್ರಯವನ್ನೇ ಊರ್ಜಿತದಲ್ಲಿಡಬೇಕು. ಮುಂದಿನ ರಿಕ್ವಿಜಿಶನ್ ವೇಳೆ ಮಿಗಿತೆಯ ಅಕ್ಕಿಯನ್ನು ಆಗಾಗ್ಗೆ ಪಡಕೊಳ್ಳುವ ಬದಲಾಗಿ ಒಂದೇ ಬಾರಿ ಪೂರ್ಣ ಪಡಕೊಳ್ಳಬೇಕು ಎಂದು ನಿವೇದಿಸಿಕೊಂಡರು. ಮಿ| ರಾಘೋರವರು ಕೇಳಿ, ಪರ್ಯಾಲೋಚಿಸುವುದಾಗಿ ಹೇಳಿದರು.

ಮಾನಪತ್ರ—ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್, ಇದರ ಚಾಲಕತ್ವದಲ್ಲಿ, 27 ವರ್ಷಗಳಿಂದಲೂ, ತನುಮನ ಧನಗಳನ್ನರ್ಪಿಸಿ, ಅತಿ ಸಾಹಸದಿಂದ ದುಡಿದು, ನಿಬಂಧನ ನಿಯಮಗಳಿಗನುಸಾರವಾಗಿ, ಈಗ ತಾನೇ ತನ್ನ 55 ನೇ ವರ್ಷದಲ್ಲಿ, ಬ್ಯಾಂಕಿನ ಕೆಲಸದಿಂದ ನಿವೃತ್ತರಾದ ಡಾ| ಎಮ್. ಶ್ರೀನಿವಾಸ ಪ್ರಭುಗಳಿಗೆ, ಬ್ಯಾಂಕಿನ ಸಿಬ್ಬಂದಿಯವರೆಲ್ಲರೂ ಒಟ್ಟುಗೂಡಿ ಒಂದು ಮಾನಪತ್ರವನ್ನೂ, ಚಿಕ್ಕದೊಂದು ನಿಧಿಯನ್ನೂ ತಾ 14-8-1944ರಲ್ಲಿ ಅರ್ಪಿಸಿದರು. ಸಭೆಯ ಅಧ್ಯಕ್ಷ ಸ್ಥಾನವನ್ನು ದಾ| ಕೊಚ್ಚಿಕಾರ ಪದ್ಮನಾಭ ಪೈ, ಬಿ ಎ., ಇವರು ವಹಿಸಿದ್ದರು, ಸಭಾಧ್ಯಕ್ಷರೂ ಬ್ಯಾಂಕಿನ ಅಧ್ಯಕ್ಷರಾದ ಡಾ| ಯು ಸುಂದರರಾಮ ಪೈಗಳೂ, ಬ್ಯಾಂಕಿನ ಜನರಲ್ ಮೇನೇಜರಾದ ಶ್ರೀ ವಿ. ಆರ್. ಕಾಮತ್ ಮೊದಲಾದವರೂ ಸಂದರ್ಭೋಚಿತ ಭಾಷಣವಿತ್ತರು.

ಅವಧಿ ಬೆಳೆಯಿತು:—ಈಗ ಜಿಲ್ಲಾ ರೇಶನಿಂಗ್ ಆಫೀಸರರಾಗಿರುವ ಶ್ರೀ| ಕೆ. ಕೃಷ್ಣಯ್ಯ ಅವರ ಹುದ್ದೆಯ ಅವಧಿಯು ಇನ್ನು ಒಂದು ವರ್ಷಕ್ಕೆ ಬೆಳಸಲ್ಪಟ್ಟಿದೆ.

ಕಟೀಲು ನೆರೆಯಲ್ಲಿ ಸಂಕಷ್ಟಕ್ಕೊಳಗಾದವರಿಗೆ ಸಹಾಯ ಕೊಡುವುದಕ್ಕಾಗಿ ಜಿಲ್ಲಾ ಫ್ಲಡ್ ರಿಲೀಫ್ ಕಮಿಟಿಯಿಂದ ಮತ್ತು ಮಹಾಜನ ನೆರೆ ನಿವಾರಣಾ ಸಮಿತಿಯಿಂದ (ಹಿಂದಿನ ನೆರೆಗಳ ಸಮಯದಲ್ಲಿ ಸ್ಥಾಪಿತವಾದವು) ಸ್ವಲ್ಪ ಹಣವನ್ನು ಜಿಲ್ಲಾ ಜನತಾ ಆಹಾರ ಸಮಿತಿಯವರು ಪಡೆದಿರುವರು.

ಕಾಸರಗೋಡು

ದಂಪತಿಗಳ ಮರಣ— ಇತ್ತೀಚೆಗೆ ಬೇಳಗ್ರಾಮದ ಬೊಳುಂಬು ಎಂಬಲ್ಲಿರುವ ಹವಿಕ ಬ್ರಾಹ್ಮಣ ಮನೆತನದ ಶ್ರೀ| ಶಂಕರನಾರಾಯಣ ಭಟ್ಟರು ಮತ್ತು ಅವರ ಧರ್ಮ ಪತ್ನಿ ಲಕ್ಷ್ಮಿ ಎಂಬವರು ಒಂದೇ ದಿನ ಒಂದೇ ಹೊತ್ತಿಗೆ ಸ್ವರ್ಗಸ್ಥರಾದರು. ಗಂಡ ಗತಿಸಿದೊಡನೆಯೇ ಹೆಂಡತಿಗೂ ಪ್ರಾಣೋತ್ಕ್ರಮಣಕ್ಕೆ ಆರಂಭವಾಗಿತ್ತು. ವಿಶೇಷ ಕಾಯಿಲೆಯೇನೂ ಇರಲಿಲ್ಲ. ದಿವಂಗತ ಪುಣ್ಯ ದಂಪತಿಗಳ ಆತ್ಮಕ್ಕೆ ಚಿರಶಾಂತಿಯಿರಲಿ!

ಕಾಸರಗೋಡಿನಲ್ಲಿ ಆಹಾರ ಪರಿಸ್ಥಿತಿ ಕೆಡುತ್ತಿದೆ:—ಕಾಸರಗೋಡು ತಾಲೂಕಿನ ಹಲವು ಹಳ್ಳಿಗಳಲ್ಲಿ ಸಂಚಾರಮಾಡಿ ಆಹಾರ ಪರಿಸ್ಥಿತಿಯನ್ನು ಅಭ್ಯಾಸಿಸಿರುವ ಜನತಾ ಆಹಾರ ಸಮಿತಿಯ ಶ್ರೀ| ಬಿ. ದೇವಪ್ಪ ಆಳ್ವರು, "ಪರಿಸ್ಥಿತಿಯು ಕೆಡುತ್ತಾ ಬಂದಿದೆ. ಸ್ಟೋರುಗಳು ಖಾಲಿಯಾಗಿವೆ. ಸರಬರಾಯಿ ಮತ್ತು ವಿತರಣದ ವ್ಯವಸ್ಥೆ ಯಾವುದೂ ಸರಿಯಾಗಿಲ್ಲ. ಹೊರಗಿನಿಂದ ಈ ತಾಲೂಕಿಗೆ ಸಕಾಲದಲ್ಲಿ ಅಕ್ಕಿ ಬಂದು ತಲುಪುವುದು ಅಗತ್ಯವಿದೆ" ಎಂದಿರುವರು.

ಬಂಟವಾಳದಲ್ಲಿ ಶಿಕ್ಷೆ:—ಪಾಣೆ ಮಂಗಳೂರಿನ ಮೆಸರ್ಸ್ ಶ್ರೀನಿವಾಸ ರಾಮಚಂದ್ರ ಪೈ ಮತ್ತು ಸಂಸ್ಥೆಯ ಹಿರಿಯ ಪಾಲುಗಾರ ಶ್ರೀ| ಅಚ್ಚುತ ಪೈಯವರನ್ನು ಆಹಾರ ಧಾನ್ಯಗಳ ನಿಯಂತ್ರಣವನ್ನು ಉಲ್ಲಂಘಿಸಿದರೆಂಬ ಅಪಾದನೆಯ ಮೇಲೆ, ಬಂಟ್ವಾಳದ ಸಬ್ ಮ್ಯಾಜಿಸ್ಟ್ರೇಟ್ ಶ್ರೀ| ಸುಬ್ರಹ್ಮಣ್ಯ ಅಯ್ಯರರು ೨೦೦ ರೂ ಗಳ ಜುರುಮಾನೆಗೆ ಗುರಿಮಾಡಿದರು.

ದಿ ಪಡುಬಿದ್ರೆ ಬಿಲ್ಲವ ಯೂನಿಯನ್:—ನಡಿಸಾಲು, ಹೇಂಗ್ರೆ, ಅವರಾಲು, ಕರವ್ ಈ ನಾಲ್ಕು ಗ್ರಾಮಗಳಿಂದ ಕೂಡಿದ ಪಡುಬಿದ್ರೆ ಬಿಲ್ಲವ ಸಮಾಜದ ಒಂದು ಸಭೆಯು ಮುಂಬಯಿ ಕೋಟೆಯೊಳಗಿನ ಸೊಲೊಮನ್ ಕಂಪೆನಿಯ ಪರಾರದಲ್ಲಿ ತಾ. 23-7-44ರಲ್ಲಿ ಶ್ರೀ|ಎಂ. ರಂಗ R-I-ಮಂಗಳೂರು M-C-ಇವರ ಅಧ್ಯಕ್ಷತೆಯಲ್ಲಿ ಜರಗಿ ಪಡುಬಿದ್ರೆಯಲ್ಲಿಯೂ ಮುಂಬಯಿಯಲ್ಲಿಯೂ ತಮ್ಮ ಸಂಘಗಳನ್ನು ಸ್ಥಾಪಿಸಬೇಕೆಂದಾಗಿ ಕಾರ್ಯಕಾರೀ ಮಂಡಳಿಯ ರಚನೆಯಾಯಿತು.

ಬಿಲ್ಲವ ಸಮಾಜ ಸೇವಾ ಸಂಘ ಮೂಲ್ಕಿ—ಈ ಸಂಘವು ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಿರುವ ಸ್ವಜಾತಿ ಮಕ್ಕಳಿಗೆ ಅವರ ಯೋಗ್ಯತೆಯಂತೆ ಧನ ಸಹಾಯಮಾಡಲು ನಿರ್ಧರಿಸಿ ಹಣ ಮಂಜೂರು ಮಾಡಿರುತ್ತದೆ, ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಿರುವ ಯೋಗ್ಯ ಮಕ್ಕಳು ಆಯಾ ಶಾಲಾ ಮುಖ್ಯೋಪಾಧ್ಯಾಯರ ಸಿಫಾರಸು ಪತ್ರದೊಂದಿಗೆ ಅರ್ಜಿ ಹಾಕಿದರೆ ಅರ್ಜಿ ಪರಿಶೀಲಿಸಲ್ಪಟ್ಟು ಯೋಗ್ಯತೆಗನುಸಾರವಾಗಿ ಧನ ಸಹಾಯ ಕೊಡಲಾಗುವುದು.

ಇಂಗ್ಲಿಷ್ ಕಲಿಯಲಿಲ್ಲವಲ್ಲಾ ಎಂದು ಚಿಂತಿಸಬೇಡಿರಿ.

ಸುಲಭದಲ್ಲಿ ಇಂಗ್ಲಿಷ್

ಎಂಬ ಅನ್ಯಸಹಾಯವಿಲ್ಲದೆ ಸುಲಭವಾಗಿ ಇಂಗ್ಲಿಷ್ ಕಲಿಸುವ ಪುಸ್ತಕವನ್ನು ಅಭ್ಯಾಸಮಾಡಿರಿ.

ತಾ 18—8—44ರಿಂದ
ಡಿ. ಆರ್. ಡಿ. ಯವರ
ಸ್ವಾರಸ್ಯಮಯ ಸಾಮಾಜಿಕ ಚಿತ್ರ

ಇಶಾರ

ಹೊಸ ನಟ ಸುರೈಯಳೊಂದಿಗೆ ಪೃಥ್ವಿರಾಜ್,
ಜಗದೀಶ್ ಮೊದಲಾದವರು
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ಬರುವ ಚಿತ್ರ-ತಮಿಳು ಹಾಸ್ಯಮಯ 'ನನ್ನ ಪತ್ನಿ'
ಅನಂತರ-ಕನ್ನಡ ವಸಂತಸೇನಾ

ಜಾಹೀರು ಪ್ರಕಟಣೆ

ದಿ ವಾರ್ಡನ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್—
ಇದರ ಪೊಲಿಸಿದಾರರ ಹಾಗೂ ಪ್ರತಿನಿಧಿಗಳ ಸೌಕರ್ಯಕ್ಕಾಗಿ ಈಗ್ಗವೇ
ಮಂಗಳೂರಲ್ಲಿ ಬ್ರಾಂಚ್ ಆಫೀಸೊಂದು ತೆರೆಯಲ್ಪಡಲಿದೆಯೆಂದು ತಿಳಿಸಲು ತುಂಬಾ ಸಂತೋಷವೆನಿಸುತ್ತದೆ ಪಶ್ಚಿಮ ಕರಾವಳಿಯಲ್ಲಿ ಕಂಪೆನಿಯು ದಿನೇ ದಿನೇ ಜನಪ್ರಿಯವಾಗಿ ಬರುತ್ತಲಿರುವುದರಿಂದ ಕಂಪೆನಿಯ ಇನ್ಸ್‌ಪೆಕ್ಟರರಾಗಿ ಆಕರ್ಷಕ ಪಗಾರದಿಂದ ಕೆಲಸಮಾಡಲಿಚ್ಛಿಸುವವರಿಗೆ ಸುಸಂಧಿ.

ಇಂದೇ ಬರೆಯಿರಿ.-
ಶ್ರೀ. ಎಮ್. ಸುಂದರರಾಮ ಸೆಟ್ಟಿ.
ಏಜನ್ಸಿ ಮೆನೇಜರ್
ವಾರ್ಡನ್ ಹೌಸ್
ಸರ್ ಫಿರೋಜ್‌ಷಾ ಮೆಹತಾ ರೋಡ್
ಫೋರ್ಟ್, ಬೊಂಬಾಯಿ.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. No. 107/1930
R. E. P. No. 244/1944

1. ವಾದಿ ತ್ರ್ಯಂಬಕಜೋಯಿಸ ಉಪ್ಪುಂದ ಮಹಾಲಿಂಗ ಜೋಯಿಸರ ಮಗ ಕುಂದಾಪುರತಾಲ್ಲೂಕು ಯಡ್ತರೆ ಗ್ರಾಮದಲ್ಲಿರುವವ ವಾಯಿದೆಯಿಂದ ಡಿಕ್ರಿ ಹಕ್ಕು ಟ್ರಾನ್ಸ್‌ಫರ ಪಡದ ಅರ್ಜಿದಾರ ಸುಬ್ಬಯ್ಯ ಪುರಾಣಿಕ ಸೀತಾರಾಮ ಪುರಾಣಿಕನ ಮಗಾ ಕುಂದಾಪುರ ತಾಲ್ಲೂಕು ಉಪ್ಪುಂದ ಗ್ರಾಮದಲ್ಲಿರುವವಾ. 2. ಪ್ರತಿವಾದಿರು- 1. ವೆಂಕಟ್ರಮಣ ಭಟ್ಟ, ತಮ್ಮಯ್ಯ ಭಟ್ಟನ ಮಗಾ, ಪೇಟೆ ಮಾರಿಸ್ತಾರ, 2. ತಮ್ಮಯ್ಯಭಟ್ಟ ಸದ್ರಿ ವೆಂಕಟ್ರಮಣ ಭಟ್ಟನ ಮಗಾ, ಈಗ ಪ್ರಾಯಬಂದವ, ಕುಂದಾಪುರ ತಾಲ್ಲೂಕು ಬಿಜೂರು ಗ್ರಾಮದ ಮಕ್ಕಿ ದೇವಸ್ಥಾನದಲ್ಲಿರುವವಾ. ಎದ್ರಿರು,

ಮೇಲಿನ ಡಿಕ್ರಿ ಸಮಾಧಾನದ ಬಗ್ಗೆ ನಡ್ಸಿದ ಸೇಲಿನ ಅಮಲಜಾರಿ ಅರ್ಜಿಯಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 30-8-1944ಕ್ಕೆ ತನಿಖೆಗೆ ಯಿಡೋಣಾಗಿರುತ್ತದೆ. ಆ ಕುರಿತು ನಿಮ್ಮ ದೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿನ್ನ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡತಕ್ಕದ್ದು. ತಪ್ಪಿದ್ದ ಸದ್ರಿ ವ್ಯವಹರಣೆಯಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿ ಮಾಡಿ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ಅಮಲಜಾರಿ ಅರ್ಜಿ ತೀರ್ಮಾನಿಸೋಣ-ದೀತೆಂತ ಈ ಮೂಲಕ ತಿಳಿಸಿರುತ್ತದೆ.

Sd/ **M. Mahabala Hebbar.**
Advocate for Petitioner

ಮೊಕ್ಕಾಂ ಕುಂದಾಪುರ
ತಾರೀಖು 11-8-1944

'ಮುಂಬಯಿ'ಯ ಮೂಲವೆಲ್ಲಿ?

೧೨ನೇ ಶತಮಾನದ ವರೆಗೂ ಮುಂಬಯಿ ಮತ್ತು ಸುತ್ತುಮುತ್ತಲಿನ ಜನಭಾಷೆ ಕನ್ನಡವೇ ಆಗಿತ್ತು

●

ಮುಂಬಯಿ ವಿಶ್ವವಿದ್ಯಾಲಯ ಪತ್ರಿಕೆಯಲ್ಲಿ ಡಾ| ಭಾ. ಅ. ಸಾಲೇತೂರರ ಲೇಖ.

●

ಮುಂಬಯಿಯ ಹಲವು ವ್ಯುತ್ಪತ್ತಿಗಳು.

ಮುಂಬಯಿ, ಅಥವಾ ಇಂಗ್ಲೀಷಿನಲ್ಲಿ ಪ್ರಚಾರದಲ್ಲಿರುವಂತೆ ಬಾಂಬೆ, ನಗರದ ಹೆಸರಿನ ವ್ಯುತ್ಪತ್ತಿ ಹೇಗಾಯಿತೆಂಬ ಬಗ್ಗೆ ಶತಮಾನಗಳಿಂದ ಊಹಾಪೋಹ ನಡೆದಿದೆ. ಆದರೆ, ಮನವರಿಕೆ ಮಾಡುವಂಥ ನಿಷ್ಪತ್ತಿಯನ್ನು ಇನ್ನೂವರೆಗೆ ಯಾರೂ ಮಾಡಿಲ್ಲ.

ಬಾಂಬೆ ಎಂಬ ಶಬ್ದವನ್ನು ಪೋರ್ತುಗೀಜ ಭಾಷೆಗೆ ಗಂಟುಹಾಕಿ ೧೫೩೮ರಲ್ಲಿ ಜೆ. ಡಿ. ಕಾಸ್ಟ್ರೋ ಅವರು ಒಂದು ನಿಷ್ಪತ್ತಿಯನ್ನು ಸೂಚಿಸಿದರು. ಅವರೆನ್ನುವಂತಾದರೆ, ಬೊಂಬೇ ಎಂಬುದು Boa-vida (ಬೋವಾ-ವಿಡಾ) ಎಂಬ ಶಬ್ದದಿಂದ ಹೊರಟಿತು. ಬೋವಾ-ವಿಡಾ ಎಂದರೆ ಒಳ್ಳೆಯ ಉಪಸಾಗರ ಎಂದರ್ಥ, ಅದು ಇಂಗ್ಲೀಷಿನಲ್ಲಿ ಅದೇ ಅರ್ಥದ ಬೂನ್-ಬೇ (Boon-Bay) ಎಂದಾಗಿ ಬಾಂಬೇ ಆಯಿತೆಂದು ಅವರ ವಾದವಾಗಿತ್ತು. ಈ ಊಹೆಯನ್ನು ಕೇವಲ ಎಳತಂದು ಕೂಡಿಸಿದ ಕಲ್ಪನೆಯೆಂದು ನಿರಾಕರಿಸಲಾಗಿದೆ.

ಸಾಮಾನ್ಯವಾಗಿ ಪ್ರಚಲಿತವಾಗಿರುವ ಇನ್ನೊಂದು ವದಂತಿಯೆಂದರೆ, ಮುಂಬಯಿ ಶಬ್ದ-ಮುಂಬಯಿಯಲ್ಲಿರುವ ಪ್ರಾಚೀನ ಮುಂಬಾ-ದೇವಿಯ ಗುಡಿಗೆ ಸಂಬಂಧಿಸಿದುದೆಂದು. ಈ ಊಹೆಗೆ ಸಾಮಾನ್ಯವಾಗಿ ವಿದ್ವಾಂಸರ ಬೆಂಬಲ ದೊರಕಿದೆ. ಆದರೂ ಇದಕ್ಕೆ ಮುಖ್ಯತಃ ಕರ್ಣಾಕರ್ಣಿಕೆಯೇ ಮೂಲ, ಹೊರತು. ಮುಂಬಾ-ದೇವಿಯ ದೇವಾಲಯ ಎಂದಿನದು ಮತ್ತು ದ್ವೀಪದ ಆ ಹೆಸರು ಎಂದಿನಿಂದ ಪ್ರಚಾರಕ್ಕೆ ಬಂತು, ಎಂಬ ಮಾತುಗಳು ಕತ್ತಲೆಯಲ್ಲೇ ಉಳಿದಿವೆ.

ಬಾಂಬೇ ಶಬ್ದ ಬೂನ್-ಬೇಯಿಂದ ನಿಷ್ಪನ್ನವಾಯಿತೆಂದು ಪೋರ್ತುಗೀಜರು ಹೇಳುತ್ತಿರುವದರಲ್ಲಿ ಕೃತ್ರಿಮತೆ ಒಡೆದು ಕಾಣುವದೆಂದು ೧೫೫೦ರಲ್ಲಿಯೇ ಕೊರಿಯಾ ಎಂಬ ಲೇಖಕ ಬರೆದಿದ್ದ. ಮುಸಲ್ಮಾನ ಇತಿಹಾಸಕಾರರ ಲೇಖಗಳಂತೂ ಈ ಬೂನ್-ಬೇ ಕಲ್ಪನೆಯನ್ನು ಅಲ್ಲಗಳೆಯಲು ಬೇಕಾದಷ್ಟು ಸಾಧನಗಳನ್ನು ಒದಗಿಸುತ್ತವೆ. ೧೫ನೇ ಶತಮಾನದಲ್ಲಿ ಮಾಹಿಮ್ ಎಂಬ ಈಗ ಮುಂಬಯಿ ದ್ವೀಪದ ಭಾಗವೇ ಆಗಿರುವ ದ್ವೀಪವೇ ಹೆಚ್ಚು ಪ್ರಧಾನವಾಗಿತ್ತೆಂದು ಅವರ ಬರವಣಿಗೆಗಳಿಂದ ಸಿದ್ಧವಾಗುತ್ತದೆ. ಅವರಲ್ಲಿ ಕೆಲವರು ಮುಂಬಾ-ದೇವಿ ಅಥವಾ ಮುಂಬಯಿ ಅಥವಾ ಪೋರ್ತುಗೀಜರನ್ನುವಂತೆ ಬಾಂಬ್-ಬೆಯಿಮ್, ಬೂನ್‌ಬೇ ಎಂಬ ಯಾವ ಹೆಸರಿಂದಲೂ ಮುಂಬಯಿ ದ್ವೀಪವನ್ನು ಕರೆಯದೆ ಬರಿ ಮಾಹಿಮದ "ಸಮೀಪವರ್ತಿ ದ್ವೀಪ" ವೆಂದಷ್ಟೇ ಉಲ್ಲೇಖಿಸಿದ್ದಾರೆ. ಆದರೆ ಮಿರತ್-ಇ-ಅಹಮ್ಮದೀ ಗ್ರಂಥದ ಲೇಖಕನಾದ ಆಲಿ ಮಹಮ್ಮದ ಖಾನನು ಗುಜರಾಥಿನ ಸುಲ್ತಾನನೂ ತುರ್ಕಸ್ಥಾನದ ವಜೀರನೂ ಒಂದಾಗಿ ಪೋರ್ತುಗೀಜರ ಹಡಗುಪಡೆಯನ್ನು ಮುರಿದ ಕತೆಯನ್ನು ಬಣ್ಣಿಸಿ, ಮುಂದೆ ಗುಜರಾತಿನ ಸುಲ್ತಾನನು ೧೫೦೭ರಲ್ಲಿ "ವಸಯಿ ಮತ್ತು ಮುಂಬಣಿಗಳ ಮೇಲೆ ತನ್ನ ಅಧಿಕಾರವನ್ನು ಕೂಡಿಸಿ ಅಹಮದಾಬಾದಿಗೆ ಹಿಂದಿರುಗಿದನು" ಎಂದು ಬರೆದಿದ್ದಾನೆ.

ಮುಂಬಣಿಯಿಂದ ಮುಂಬಯಿ.

"ಮುಂಬಣಿ" ಯೆಂಬೀ ಹೆಸರೇ ಮುಂಬಯಿ ಶಬ್ದದ ಸಮಸ್ಯೆಗೆ ಉತ್ತರವನ್ನೊದಗಿಸುತ್ತದೆ. ಮುಂಬಣಿ ಮತ್ತು ಮಾಹಿಮ್ ಎಂದು ಕರೆಯಿಸಿಕೊಳ್ಳುವ ಅದರ ಈಶಾನ್ಯಭಾಗ ಇವು ಸೇರಿ ಈಗಿನ ಮುಂಬಯಿ ದ್ವೀಪವಾಗಿರಬೇಕು. ಮತ್ತು ಕಾಲಾಂತರದಲ್ಲಿ, ದಕ್ಷಿಣ ಭಾಗವಾದ, ಒಂದು ಕಾಲದಲ್ಲಿ ಕೇವಲ ಹೆಸರಿಲ್ಲದ "ಸಮೀಪವರ್ತಿ ದ್ವೀಪ" ಎನಿಸಿದ್ದ, 'ಮುಂಬಣಿ' ಯೇ ಪ್ರಾಮುಖ್ಯಕ್ಕೆ ಏರಿತಾಗಿ ಅದರ ಹೆಸರೇ ಇಡೀ ದ್ವೀಪಕ್ಕೆ ಬಿತ್ತೆಂದು ಊಹಿಸಬಹುದು. ೧೫೩೮ರಿಂದ೧೫೭೦ರ ವರೆಗಿನ ಪೋರ್ತುಗೀಜ ಇತಿಹಾಸಕಾರರು ಮುಂಬಾಯಿಮ್, ಮುಂಬಯಿನ್, ಬಾಂಬಯಿಮ್ ಮತ್ತು ಬಾಂಬೆನ್ ಎಂಬ ಹೆಸರುಗಳಿಂದ ಈ ದ್ವೀಪವನ್ನು ಕರೆಯುತ್ತಿದ್ದರು. ಇವೆಲ್ಲ ಮುಂಬಣಿಯ ರೂಪಾಂತರಗಳಾಗಿವೆಯೆಂದು ತಿಳಿಯಲು ಅಡ್ಡಿಯಿಲ್ಲ.

ಮುಂಬಣಿ, ಆದರೆ ಅದಕ್ಕಿಂತ ಹಿಂದೆ? ಪೋರ್ತುಗೀಜರಾಗಲಿ ಮುಸ್ಲಿಮರಾಗಲಿ ಅದರಿಂದ ಹಿಂದೆ ನಮಗೆ ದಾರಿತೋರುವದಿಲ್ಲ. ಆದರೆ ನೇಪಾಳದಲ್ಲಿ ಹರಪ್ರಸಾದ ಶಾಸ್ತ್ರಿಗಳು ಸಂಶೋಧಿಸಿ ಪ್ರಕಟಿಸಿದ "ಡಾಕಾರ್ಣವ" ಎಂಬ ೧೦ನೇ ಶತಕದ ಮಹಾಯಾನ ಬೌದ್ಧತಾಂತ್ರಿಕ ಗ್ರಂಥ ಈ ಪ್ರಶ್ನೆಯ ಮೇಲೆ ತಕ್ಕಷ್ಟು ಬೆಳಕು ಚಲ್ಲುತ್ತದೆ. ಅದರಲ್ಲಿ ಅಂತರ್ಜಗತ್ತಿನ ೬೦ ಬಾಹ್ಯ ಜಗತ್ತಿನ ೬೦ ದೇವತೆಗಳನ್ನು ಉಲ್ಲೇಖಿಸಿ ಅಂತರ್ಜಗತ್ತಿನ ದೇವತೆಗಳಲ್ಲಿ ಮುಂಬಯಿ ದ್ವೀಪದಲ್ಲಿರುವ ಮುಂಬಣಿ ದೇವಿಯೊಬ್ಬಳೆಂದು ಹೇಳಲಾಗಿದೆ. ಆದುದರಿಂದ ಈ ದೇವಾಲಯ ಮೂಲತಃ ಮಹಾಯಾನ ಬೌದ್ಧರದಾಗಿತ್ತೆಂದು ಸಿದ್ಧ. ಅದು ೧೦ನೇ ಶತಮಾನದಲ್ಲಿಯೇ ಅಸ್ತಿತ್ವದಲ್ಲಿತ್ತೆಂಬುದೂ ನಿಸ್ಸಂದೇಹ.

ಮುಂದುವರಿಯುವದು

ಸಹಾಯ—ದಕ್ಷಿಣ ಕನ್ನಡ ಜಿಲ್ಲೆ ಪೊಳಲಿ ಶ್ರೀ ರಾಜ ರಾಜೇಶ್ವರಿ ಸನ್ನಿಧಿಯ ಬಳಿ ಹನುಮ ದೇವಸ್ಥಾನ ಜೀರ್ಣೋದ್ಧಾರದ ಬಗ್ಗೆ ಉಡುಪಿ ಪಲಿಮಾರು ಮಠದ ಶ್ರೀ ಪಾದಂಗಳವರು ಶ್ರೀ. ಕೆ. ತಿಮ್ಮಪ್ಪ ಭಟ್ಟರವರಿಗೆ 100 ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ಹಿಂದೆ ಒಂದಾನೊಂದು ಕಾಲದಲ್ಲಿ

ನಾಲ್ಕಾರು ವರ್ಷಗಳ ಹಿಂದೆ ರೈಲ್ವೇ ಸ್ಟೇಶನ್ನಿಗೆ ನೀವು ಸ್ವಲ್ಪವೇ ಖರ್ಚಿನಿಂದಲೂ ಸುಲಭವಾಗಿಯೂ ಬರಬಹುದಿತ್ತು. ಈಗ ಕುದುರೆ, ಎತ್ತು ಮುಂತಾದ ಗಾಡಿಗಳ ಬಾಡಿಗೆಯು ಹಿಂದೆ ಇದ್ದದ್ದಕ್ಕೆ ನಾಲ್ಕರಷ್ಟು ಹೆಚ್ಚಾಗಿದೆ. ಒಂದು ಕಾಲದಲ್ಲಿ ನಿಮ್ಮ ನಿಮ್ಮ ಟಿಕೆಟ್ಟನ್ನು ತಡವಿಲ್ಲದೆ ಪಡೆಯಬಹುದಿತ್ತು—ಈಗ ಟಿಕೆಟ್ಟನ್ನು ಪಡೆಯಬೇಕಾದರೆ, ವಿಶೇಷ ಶ್ರಮವೂ ಆಗುವುದಲ್ಲದೆ, ಒಂದು ಅರ್ಧಗಂಟೆ ಹೊತ್ತಾದರೂ ಹಿಡಿಯುವುದು. ಒಂದು ಕಾಲದಲ್ಲಿ ಕೂಲಿಯವರು ನೀವು ಹೇಳಿದ ಕೆಲಸವನ್ನು ಒಂದು ಅಥವಾ ಅರ್ಧಾಣೆಗೆ ಮಾಡುತ್ತಿದ್ದರು. ಈಗ ಕೂಲಿಗಳು ದೊರೆಯುವುದೇ ಪ್ರಯಾಸ. ಒಂದು ಕಾಲದಲ್ಲಿ ನೀವು ನಿಮಗೆ ಇಷ್ಟಬಂದಕಡೆ ರೈಲ್ವೇ ಗಾಡಿಯಲ್ಲಿ ಇಷ್ಟವಾದ ಸ್ಥಳವನ್ನು ಚುನಾಯಿಸಿಕೊಂಡು ಕೂಡಬಹುದಿತ್ತು.

ಈಗ ರೈಲ್ವೇಗಾಡಿಯ ಒಳಕ್ಕೆ ನೀವು ಪ್ರವೇಶಿಸಬಲ್ಲಿರಾದರೆ, ನೀವು ಅದೃಷ್ಟಶಾಲಿಗಳೇ ಸರಿ. ಅನೇಕ ಸಮಯಗಳಲ್ಲಿ ನಿಮಗೆ ಗಾಡಿಯೇ ತಪ್ಪುವದು. ಒಂದುವೇಳೆ ಗಾಡಿಯಲ್ಲಿ ನಿಮಗೆ ಪ್ರವೇಶ ದೊರೆತರೂ, ಗಂಟೆಗಳಕಾಲ ನೀವು ನಿಂತಿರಲೇಬೇಕಾಗುವದು. ಈ ಪ್ರಯಾಸದಲ್ಲಿಯ ಗೊಂದಲದಲ್ಲಿಯೂ ನೀವು ನಿಮ್ಮ ಸಾಮಾನುಗಳನ್ನು ಕಳೆದುಕೊಳ್ಳುವದೂ ಅಲ್ಲದೆ, ನಿಮ್ಮ ಹೆಂಗಸರು ಮಕ್ಕಳು ನಿಮ್ಮಿಂದ ತಪ್ಪಿಸಿಕೊಳ್ಳುವರು. ಹೆಂಗಸರು ಮಕ್ಕಳಿಗೆ ಈಗಿನ ರೈಲುಪ್ರಯಾಣದಲ್ಲಿ ಹಿಂದೆ ಇದ್ದಹಾಗೆ ಸ್ವಲ್ಪವೂ ಸೌಖ್ಯವಿರುವದಿಲ್ಲ.

ವಿವೇಕಿಗಳಾಗಿ ಮುಂದೆ ಕಾಲವು ಸುಧಾರಿಸುವವರೆಗೂ ನೀವೂ ನಿಮ್ಮ ಕುಟುಂಬವೂ ರೈಲ್ವೇ ಪ್ರಯಾಣದ ಹವ್ಯಾಸದಿಂದ ದೂರ ಇರಿ.

ಕಡಿಮೆಯಾಗಿ ಪ್ರಯಾಣಮಾಡಿರಿ

AAA.678.KN.

WANTED

A Secondary Grade Trained Teacher Application should reach the under-signed before 31-8-44

Manager,
Halnad Higher Elementary School, Kavrady, Kandlur, P.O.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public.

For business proper please enquire at any one of our Offices.

15th April 1944.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಳಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya GADAG.

THE VIJAYA BANK, LTD.

Head office: MANGALORE.

Glad to announce that a Branch of the Bank has been opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ. 15-6-44ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿರುವುದು.

ದಿ ವಿಜಯಾ ಬೇಂಕ್ ಲಿಮಿಟೆಡ್

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ರೂಪಾಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 **ಕೊಡಿಯಾಲಬೈಲು, ದ. ಕ**

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಸಣ್ಣಮಾತ್ರ ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

REGD

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. 2—8—0

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ಯಾವ ಕಾರಣವಿದ್ದರೂ— 'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಪರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3|- ಕೈಮೀರಿದ ಕೇಸುಗಳಿಗೆ ರೂ. 5, (ವಿ. ಪಿ. 12ಆಣೆ ಅಲಾಯಿದ)

Mrs P DEVEE, F, D, S, (N)

TOLLYGUNGE, CALCUTTA

ಸ್ಟಾಕಿಸ್ಟ್ **Popular Stores,**

P, B, 60, MANGALORE

Shah Co, Mangalore

CHAMPAE'S

Snow & Castrex

(Sole Distributers for (India.)

Sukhananda Stores

Santhekatte, UDIPI, S. K.

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡುವ **ಕಾಮಿನಿ** ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸ್,

ಪುತ್ತೂರು ಏಜಂಟರು: — **ಶ್ರೈ ಫಾರ್ಮಸಿ**

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S, INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6. Estd. 1921 ಸ್ಥಾಪನೆ.

NAVAYUGA

ನವಯುಗ

ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

KANNADA WEEKLY, UDIPI.

ಸಂಪುಟ ೨೪ ಸಂಚಿಕೆ ೫೦ • Vol. 24 No. 50

Founder SRI A. B. SHETTY.

ಉಡುಪಿ • 24—8—1944 • ಮಂಗಳೂರು.

ANTARANGA
UDIPI

ಅಖಿಲ ಕರ್ನಾಟಕದ
ಹೊಸ ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ

ಅಂತರಂಗ

ಚಂದಾದಾರರಾಗಿ ಪ್ರೋತ್ಸಾಹಿಸಿ.
ವಾರ್ಷಿಕ ಚಂದಾ ರೂ 4-8-0
ಬಿಡಿ ಪ್ರತಿಗೆ 0-1-6
ಮೆನೇಜರ್,
ಅಂತರಂಗ, ಉಡುಪಿ.

ವಿವೇಕಿಗಳು
ತಮ್ಮ ಭಾವೀ ಕಲ್ಯಾಣವನ್ನು ಹಾರೈಸುತ್ತಾರೆ.
ಜೀವವಿಮೆಯು ಭಾವೀ ಕಲ್ಯಾಣದ ಪ್ರಾಮುಖ್ಯ ಸಾಧನಗಳಲ್ಲೊಂದು
ವಿಮಾ ಮಾಡಲಿಕ್ಕಾಗಲಿ, ಪ್ರಾತಿನಿಧ್ಯ ವಹಿಸಲಿಕ್ಕಾಗಲಿ ಅತ್ಯುತ್ತಮ ವಿಮಾಸಂಸ್ಥೆಯೆಂದರೆ-
ದಿ ಜುಪಿಟರ್ ಜನರಲ್
ಇನ್ಶ್ಯೂರೆನ್ಸ್ ಕಂಪೆನಿ ಲಿ.
-ಬೊಂಬಾಯಿ
ಪಿ. ಡಿ. ನಸಯ್ಯ,
ದ. ಕನ್ನಡದ ಚೀಫ್ ಏಜಂಟರು.
ಉಡುಪಿ
The Jupiter General Insurance Company Ltd

Like a Bad Coin

When you are hale and hearty any insurance company will insure your life.

But, when your health has failed, your life is rejected like a bad coin by every company you propose to.

So insurance is a privilege of healthy persons only.

THE
CANARA MUTUAL
ASSURANCE CO., LTD., UDIPI.

CO-OPERATION - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
Estd 1908.
The "Bombay Life" Bldg.,
UDIPI S. K.

Offices and Agencies throughout South India.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ'
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬರೂ ... ಉತ್ಕೃಷ್ಟವಾದ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ... ವಂಗ ಯಾ ಪಿಮುಹ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಾಲದಲ್ಲಿ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲೂ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ್ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು.—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಚಿಕ್ಕೋಡಿಯಲ್ಲಿ —ಕುಂಬಾರಮಾಡಿ ಸ್ಟೋರ್ಸ ದಾವಣಗೇರಿ.—ದಾವಣಗೇರಿ ಪ್ರೆಸ್, ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ದಿ ಮುಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd. Moolky, S. K.

The Board of Directors,

Sri Narayan Guru Bank, Ltd., Mangalore announce that a Branch of this Bank has been opened at the premises of "Parimala Bhavan", opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director

ಗಾಂಧಿ-ಜಿನ್ನಾ ಮಾತುಕತೆ-ಜಿನ್ನರ ಜ್ವರದಿಂದ ಮುಂದೆಬಿತ್ತು

ಈ ವಾರಾಂತ್ಯದೊಳಗೆ ಸಂಭಾಷಣೆ

ಇಡೀ ರಾಷ್ಟ್ರವು ಗಾಂಧಿ ಜಿನ್ನಾ ಮಾತುಕತೆಗಾಗಿ ಅಗೋಸ್ತು ತಾ 19ನೇ ಶನಿವಾರವನ್ನು ಅತ್ಯಾತುರದಿಂದ ನಿರೀಕ್ಷಿಸುತ್ತಿರುವಾಗಲೇ ತಾ 17ರಲ್ಲಿ ಮಿ. ಜಿನ್ನರು ಅಸ್ವಸ್ಥರಾಗಿದ್ದಾರೆಂದು ಬೊಂಬಾಯಿಯ ಅವರ ಮನೆಯಿಂದ ಸೇವಾ ಗ್ರಾಮದಲ್ಲಿದ್ದ ಗಾಂಧಿಜೀಗೆ ಟ್ರಂಕ್ ಟೆಲಿಫೋನ್ ವಾರ್ತೆ ಬಂತು ತಾ 18ಕ್ಕೆ ಬೊಂಬಾಯಿಗೆ ಹೊರಡುವ ತನ್ನ ಕಾರ್ಯಕ್ರಮವನ್ನು ಗಾಂಧಿಜೀ ರದ್ದು ಪಡಿಸಿಕೊಂಡರು. ತಾ 17ರಲ್ಲಿ ಮಿ. ಜಿನ್ನರು ಗಾಂಧಿಜೀಗೆ ಬಿಟ್ಟ ತಂತಿ —

'ಅತ್ಯಂತ ಪಶ್ಚಾತ್ತಾಪ ಪಡುತ್ತೇನೆ. ಜ್ವರ ತಾಗಿ ಮಲಗಿದ್ದೇನೆ. ಶನಿವಾರ (19ನೇ ಅಗೋಸ್ತು) ನಿಮ್ಮನ್ನು ಭೇಟಿಯಾಗುವದು ಅಸಾಧ್ಯವೆಂದು ಡಾಕ್ಟರರುಗಳ ಸಲಹೆ ಸಾಕಷ್ಟು ಗುಣ ಹೊಂದಿದ ಕೂಡಲೇ ತಾರೀಕನ್ನು ಸೂಚಿಸುತ್ತೇನೆ."

ಅವಸರದ ತಬ್ದೀಲು

ಪೂರ್ವ ನಿಶ್ಚಯದಂತೆ ತಾ 17ರ ಸಂಜೆಯಲ್ಲೇ ಸೇವಾ ಗ್ರಾಮದಿಂದ ಬೊಂಬಾಯಿಗೆ ಹೊರಟಿದ್ದ ರಾಜಾಜಿಗೆ ವಾರ್ಧಾ ಸ್ಟೇಶನಿನಲ್ಲಿ ಈ ವಾರ್ತೆ ದೊರೆಯಿತು ಅವರು ಅಲ್ಲಿಂದಲೇ ಸೇವಾ ಗ್ರಾಮಕ್ಕೆ ಹಿಂತಿರುಗಿ ಮದ್ರಾಸಿಗೆ ಹೊರಟು ಹೋಗಿದ್ದಾರೆ. ಮಿ. ಜಿನ್ನರಿಗೆ ಸೋಮವಾರದಿಂದ ಚಳಿ ಜ್ವರಕ್ಕಾರಂಭ. ಅವರು ಮಂಗಳವಾರ ದಾರಭ್ಯ ತನ್ನ ಎಲ್ಲಾ ಕಾರ್ಯಗಳನ್ನು ರದ್ದುಪಡಿಸಿಕೊಂಡು, ಪೂರ್ಣ ವಿಶ್ರಾಂತಿ ಪಡೆದು ಗಾಂಧೀ ಭೇಟಿಯ ಮೊದಲು ಜ್ವರ ನಿವಾರಿಸಿಕೊಳ್ಳುವ ಆತುರದಿಂದಿದ್ದರು ಆದರೆ ಜ್ವರವು 102 ಡಿಗ್ರಿಯವರೆಗೂ ಏರಿತು. ಗುರುವಾರ ಡಾಕ್ಟರರ ಸಲಹೆಯಂತೆ ಭೇಟಿಯ ದಿನವನ್ನು ರದ್ದು ಪಡಿಸಬೇಕಾಯಿತು. ಅಂದಿನಿಂದ ಅವರ ಜ್ವರವಿಳಿಯುತ್ತಾ ಬಂದು ಈಗ ಪೂರ್ತಿ ಬಿಟ್ಟಿದೆ ಆದರೆ ನಿತ್ರಾಣವಿದೆ. ಈ ವಾರಾಂತ್ಯದೊಳಗೆ ಗಾಂಧಿ-ಜಿನ್ನಾ ಭೇಟಿ ನಡೆಯಲಿರುವದೆಂದೂ, ವಾರಾದಿಯಲ್ಲೇ ಮಿ ಜಿನ್ನರು ನಿಶ್ಚಿತ ದಿನವನ್ನು ಗಾಂಧಿಜೀಗೆ ತಿಳಿಸಲಿರುವರೆಂದೂ ಪ್ರಕಟವಾಗಿದೆ. ಈ ಭೇಟಿಯ ಸಮಯದಲ್ಲಿ ಬೊಂಬಾಯಿಯಲ್ಲಿ ಸಭೆ ಮೆರವಣಿಗೆಗಳನ್ನು ಮಾಡದಂತೆ ಪೋಲಿಸ್ ಕಮಿಶನರರ ಕಟ್ಟುಗ್ರ ನಿಷೇಧಾಜ್ಞೆಯಿದೆ

ಗಾಂಧೀ—ವೈಸರಾಯೀ ಪತ್ರ ವ್ಯವಹಾರ

ಹಿಂದೂ—ಮುಸ್ಲಿಮ್ ಒಪ್ಪಂದ ಮಾತ್ರವಲ್ಲ, ಭಾರತದ ಸರ್ವ ಪಕ್ಷಗಳೊಳಗೆ ಒಮ್ಮತವಾದರೂ ಯುದ್ಧಾವಧಿಯಲ್ಲಿ ಆಡಳಿತೆ ಬದಲಾವಣೆ ಮಾಡಲು ಸರಕಾರವೆಷ್ಟು ಕ್ಕೂ ತಯಾರಿಲ್ಲವೆಂಬುದು, ಗಾಂಧೀ-ವೈಸರಾಯಿಗಳೊಳಗಿನ ಇತ್ತೀಚೆಗಿನ ಪತ್ರ ವ್ಯವಹಾರಗಳಿಂದ ಖಚಿತವಾಗಿದೆ ವೈಸರಾಯರ ಖಾಸಗೀ ಅವಗಾಹನೆಗೆಂದು ಗಾಂಧಿಜೀ 'ನ್ಯೂಸ್ ಕ್ರಾನಿಕಲ್' ಬಾತ್ಮೀದಾರನಿಗೆ ಕೊಟ್ಟಿದ್ದ ರಾಷ್ಟ್ರೀಯ ಸರಕಾರ ಸ್ಥಾಪನೆಯ ಸೂಚನೆಯು ನಾಯಿಂದೆಗೆ ಮೊದಲೇ ಸ್ಫೋಟಗೊಂಡೊಡನೆ, ಗಾಂಧಿಜೀ ಆ ಸೂಚನೆಗಳ ಕುರಿತು ಲೋರ್ಡ್ ವೇವೆಲರೊಡನೆ ಪತ್ರ ವ್ಯವಹಾರವಾರಂಭಿಸಿದ್ದರು ಈಗ ಅವು ಪ್ರಕಟಿಸಲ್ಪಟ್ಟಿವೆ. ಸರಕಾರದ ಅಂತಿಮ ಹೇಳಿಕೆ ಮತ್ತು ನಿಶ್ಚಲ ಧೋರಣೆಯಾಗಿ ಸದ್ಯದ ಬಿಕ್ಕಟ್ಟೇನ್ನೇ ಯುದ್ಧಾವಧಿಯ ವರೆಗೆ ಮುಂದುವರಿಯಲಿದೆಯೆಂಬುದೀಗ ಖಚಿತವಾಗಿದೆ. ಯುದ್ಧಾನಂತರ, ಅಲ್ಪ ಸಂಖ್ಯಾಕರ ಮತ್ತು ಸರ್ವ ಪಕ್ಷಗಳ ಒಮ್ಮತದ ಯೋಜನೆಯೊಂದನ್ನು ಹಿಂದೀಯರೇ ತಯಾರಿಸಿ ಕೊಟ್ಟರೆ, ಅಂತಹ ಸ್ವತಂತ್ರ್ಯ ದಾನ ಮಾಡಲು ಸರಕಾರವು ಬಾಧ್ಯವಿದೆ ಯುದ್ಧಾವಧಿಯಲ್ಲಿ ಏನೇ ಆದರೂ ರಾಜ್ಯಾಂಗ ಬದಲಾವಣೆ ಮಾಡುವದು ಅಸಾಧ್ಯವೆಂದೇ ವೈಸರಾಯೀ ಉತ್ತರದ ಮಥಿತಾರ್ಥ ಸರಕಾರದ ಈ ಕಪಿಮುಷ್ಟಿ ಧೋರಣೆಯು ಎಲ್ಲಾ ಹಿಂದೀ ಪ್ರಮುಖರನ್ನೂ ನಿರಾಶೆ ಮತ್ತು ಜಿಗುಪ್ಸೆಗೀಡುಮಾಡಿದೆ.

ಮಹಾತ್ಮರ ಸಂಧಾನಾತುರ

ಪಾರ್ಲಿಮೆಂಟಿನ ತರ್ಕಕ್ಕೆ ಬಲುವಳಿಯಾಗಿ ವೈಸರಾಯರ ಸ್ಪಷ್ಟ ನಕಾರವೂ ದೊರೆತುದರಿಂದ, ಸರಕಾರದ ಕೈಯಿಂದ ಅಧಿಕಾರವನ್ನು ಕಿತ್ತುಗೊಳ್ಳುವರೆ ಹಿಂದೂ—ಮುಸ್ಲಿಂ ಒಪ್ಪಂದವನ್ನು ಸಾಧಿಸಿಯೇ ತೀರಬೇಕೆಂಬ ಛಲ ಗಾಂಧಿಜೀಗೆ ಮೂಡಿದಂತಿದೆ. "ನಾನು ಸಂಧಾನ ಪಥದ ಯಾವ ಕಲ್ಲನ್ನಾದರೂ ಮಗುಚಿ ನೋಡದೆ ಬಿಟ್ಟಿಲ್ಲವೆಂಬುದು ಇದರಿಂದ ಸ್ಪಷ್ಟ. ಅಂತೆಯೇ ಸರಕಾರವು ಸಾರ್ವಜನಿಕ ಬೆಂಬಲದ ಬಯಕೆಯಲ್ಲಿಲ್ಲವೆಂಬುದಕ್ಕೂ ಇದು ಸ್ಪಷ್ಟ ನಿದರ್ಶನ. 400 ಮಿಲಿಯ ಮಂದಿಯೊಟ್ಟಾಗಿ ಸರಕಾರದ ಕೈಯಿಂದ ಅಧಿಕಾರ ಕಿತ್ತುಕೊಳ್ಳಬೇಕಲ್ಲದೆ, ಸರಕಾರವದನ್ನು ಬಿಟ್ಟು ಕೊಡಲು ತಯಾರಿಲ್ಲವೆಂಬುದೀಗ ಸ್ಫಟಿಕದಷ್ಟು ಸ್ಫುಟವಾಗಿದೆ. ಹಿಂದುಸ್ಥಾನವು ಕೇವಲ ನೈತಿಕ ವಿಧಾನದಿಂದ ಹಾಗೆ ಮಾಡಿಯೇ ತೀರುವದೆಂಬ ಆಶೆಯನ್ನು ನಾನೆಂದೂ ಕಳಕೊಳ್ಳುವಂತಿಲ್ಲ" ಎನ್ನುತ್ತಾ ಈ ಸಂದರ್ಭದಲ್ಲೇ ಮಿ. ಜಿನ್ನರು ಅಸ್ವಸ್ಥಗೊಂಡುದಕ್ಕಾಗಿ ಗಾಂಧಿಜೀ ಪಾಶ್ಚಾತ್ತಾಪ ಪಟ್ಟಿರುವರು

ಆದರೆ ಸಂಧಾನ ಸಾಧ್ಯವ?

ವೇವೆಲರ ಕೊನೆಯ ಉತ್ತರವು ಜಾತೀಯ ತೀರ್ಮಾನಕ್ಕಾಗಿ ಇಬ್ಬರು ಪ್ರಮುಖರಿಗೂ—ಮುಖ್ಯವಾಗಿ ಗಾಂಧಿಜೀಗೆ—ಅತಿ ಹೆಚ್ಚಿನ ಪ್ರೇರಣೆ ಕೊಟ್ಟಂತಿದೆ. 'ನಾನು ಮತ್ತು ಕ್ವಯದ್-ಈ-ಅಝಾಮರು ಒಂದು ತೀರ್ಮಾನ ಹೊಂದುವ ವರೆಗೂ ಬೀಗ ಹಾಗಿ ಕುಳಿತುಕೊಳ್ಳಬೇಕೆಂದೇ ನನ್ನ ಅಪೇಕ್ಷೆ' 'ಸಾಯುವ ಮೊದಲು ಭಾರತದ ಸ್ವಾತಂತ್ರ್ಯವನ್ನು ಕಾಣುವ ಆಸೆಯಿದೆ'—ಎಂದು ಗಾಂಧಿಜೀ ಅಲಿಘಡ್ ಶಿಷ್ಯ ಮಂಡಲದೊಡನೆ ಹೇಳಿರುವರು "ಮೂರನೇ ಪಕ್ಷವೊಂದು ಕಾದು ನಿಂತಿದೆ- ಅದು ನಮ್ಮ ಎಲ್ಲಾ ಪ್ರಯತ್ನಗಳನ್ನೂ ಒಳಗಿಂದೊಳಗೆ ಕೊರೆಯುವ ಯತ್ನ ಮಾಡಿದೆ ಮತ್ತು ಮಾಡಲಿದೆ"—ಎಂದು ಲಾಹೋರಿನ ಪತ್ರಿಕಾ ಪ್ರತಿನಿಧಿಗಳ ಮುಂದೆ ಮಿ. ಜಿನ್ನರೂ ಸರಕಾರದ ಕಡೆಗೆ ಬೆಟ್ಟು ತೋರಿಸಿದ್ದರು. ಮಾತ್ರವಲ್ಲ, ಇತ್ತೀಚೆಗಿನ ಭಾಷಣಗಳಲ್ಲಿ "ನಮಗವರ ಆಟವನ್ನನುಭವಿಸಿ ಸಾಕಾಗಿದೆ—ಇನ್ನವರು ನಮ್ಮನ್ನು ವಿಭಾಗಿಸುತ್ತಾ ಹೋಗಲಾರರು" ಎಂದು ಮಿ. ಜಿನ್ನರು ಹಲವು ಬಾರಿ ನುಡಿದಿದ್ದಾರೆ. ಈ ರೀತಿ ಗಾಂಧೀ—ಜಿನ್ನರಿಬ್ಬರೂ ಬ್ರಿಟಿಷರನ್ನು ಸೋಲಿಸುವ ಹಾದಿಯಲ್ಲಿ ತಮ್ಮೊಳಗಿನ ಮಾತುಕತೆಗಳನ್ನೊಯ್ಯುವದು ಖಂಡಿತ. ಆದರೆ ಇವರಿಬ್ಬರ ಹೃದಯದಲ್ಲಿ ಪರಸ್ಪರ ಸೌಹಾರ್ದತೆ ಮೂಡಿದಂತೆ, ಅವರ ಕರ್ತವ್ಯ ಸೂತ್ರಗಳೊಳಗೆ ಸಾಮ್ಯತೆ ಕಾಣುವದಿಲ್ಲವಾದ್ದರಿಂದ ಸಂಧಾನವು ಸಾಧ್ಯವನ್ನಿಸುವದಿಲ್ಲ. ಈ ಮಾತುಕತೆಯ ಪೂರ್ವದಲ್ಲಿ ಹರ್ಷ ಮತ್ತು ಕ್ಲೇಶಗಳ ಅಸಾಧಾರಣ ಉದ್ವೇಗವನ್ನು ಅಖಿಲ ರಾಷ್ಟ್ರವನುಭವಿಸುತ್ತಿದೆ. ಸಂಭಾಷಣೆಯು ಅಪಜಯದಲ್ಲಿ ಮುಗಿಯಬೇಕಾಗಿ ಒಂದರೆ ಪಕ್ಷಭೇದವಿಲ್ಲದೆ ಅಖಿಲ ರಾಷ್ಟ್ರದಲ್ಲೇ ನಿರಾಶೆಯ ಗೊಂದಲವೇಳುವ ಸಂಭವವಿದೆ ಯಾದ್ದರಿಂದ ಗಾಂಧಿಜೀ, ರಾಜಾಜಿಯವರದನ್ನು ಮುರಿಯ ಬಿಡದೆ ಮುಂದುವರಿಸಿಡುವ ಯುಕ್ತಿ ಹೂಡಬಹುದು. ಮಿ. ಜಿನ್ನರ ಭಾವನೆಯೆಂದರೆ, ಪಾಕಿಸ್ತಾನಕ್ಕೆ ಅಸ್ತಿತ್ವ ದೊರೆತಿದೆ ಎಂಬುದನ್ನಾಧರಿಸಿ ಅದಕ್ಕೊಂದು ಆಕಾರ ಕೊಡಲಿಕ್ಕಾಗಿಯೇ ಮಾತುಕತೆ ನಡಿಸಬೇಕು. ಯುದ್ಧಾವಧಿಯ ರಾಷ್ಟ್ರೀಯ ಸರಕಾರ ಯಾಚನೆಯು ಆ ನಂತರದ ಎರಡನೇ ಪ್ರಶ್ನೆ. ಆದರೆ ಪಾಕಿಸ್ತಾನದ ನಿರ್ಣಯವನ್ನು ಸಂಬಂಧಪಟ್ಟ ಪ್ರಾಂತ್ಯಗಳೇ ಮಾಡಬೇಕಲ್ಲದೆ ಗಾಂಧಿಜೀ ಅದರ ಹೊಣೆ ಹೊರುವಂತಿಲ್ಲ. ಈ ಒಪ್ಪಿಗೆಗಾದರೂ ಪ್ರಾತಿನಿಧ್ಯ ಸ್ವರೂಪ ಬರಬೇಕಾದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರರ ಬಿಡುಗಡೆಯಾಗಬೇಕು. ಮತ್ತು ಗಾಂಧಿಜೀಯ ಅಭಿಪ್ರಾಯದಲ್ಲಿ ಕೂಡಲೇ ರಾಷ್ಟ್ರೀಯ ಸರಕಾರ ಸ್ಥಾಪನೆಯಾಗುವದೇ ಮುಖ್ಯ ಹೀಗೆ ಗಾಂಧಿ—ಜಿನ್ನಾ ಅಭಿಪ್ರಾಯಗಳಲ್ಲಿ ಪೂರ್ವ—ಪಶ್ಚಿಮಗಳಂತಹ ವಿರೋಧ ಕಂಡು ಬರುತ್ತಿದೆ. ಇವೆರಡನ್ನೊಂದು ಗೂಡಿಸುವ ಬೆಸುಗೆಯಾಗಲು ರಾಜಾಜಿಯವರಂಥವರಿಂದ ಸಾಧ್ಯವೇ?

ಏಲಂ ನೋಟೀಸು

ಈ ಕೆಳಗೆ ಹೆಸರಿ. ಕಾಣಿಸಿದವರ ಬಾಬ್ತು ಸಿದ್ದಾಪುರು ಗ್ರಾಮದಲ್ಲಿರುವ 70 ದೂಪದ ಮರಗಳು, 8 ಮಾವು, 2 ಕಾಟು ಜಾತಿಯ ಮರಗಳನ್ನು 2 ಲೋಟಾಗಿ ಇದೇ ಬರುವ ಸಪ್ಟಂಬರ ತಿಂಗಳ ತಾ 3ನೇ ಆದಿತ್ಯವಾರ ಅಪರಾಹ್ನ ಗಂಟೆ 1ಕ್ಕೆ ಸಿದ್ದಾಪುರು ಕಸ್ಬಯಲ್ಲಿರುವ ಬಿಂದನೆಯವರ ಜವುಳಿ ಅಂಗಡಿಯಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಶರ್ತಗಳನ್ನು ಅದೇ ಏಲಂ ಮುಂಚಿತ ಹೇಳಲಾಗುವುದು.

ಬೇಳಿಂಜೆ ಕೃಷ್ಣಯ್ಯ ಹೆಗ್ಡೆ,
ಅಂಬ ಬಲ್ಲಾಳ್ತಿ.

ನಿಮ್ಮ ಬ್ಯಾಂಕಿಂಗ್ ಸಂಬಂಧ

ನಿಮ್ಮ ಉದ್ಯಮದಲ್ಲಿ ನಿಮ್ಮ ಬ್ಯಾಂಕು ಎಂತಹ ಸಹಕಾರಿ ಎಂದು ನೀವು ಮನಗಂಡೊಡನೆ-ನಿಮ್ಮ ಧನ ಸಹಾಯಕನಿಂದ ಯಥಾಯೋಗ್ಯ ಸಹಕಾರವು ಎಷ್ಟೊಂದು ಅವಶ್ಯವು-ನೀವು ನಿಮ್ಮ ಬ್ಯಾಂಕಿಂಗ್ ಸಂಬಂಧವನ್ನು ಜಾಗರೂಕತೆಯಿಂದ ಚೆನ್ನಾಗಿ ವಿಚಾರಿಸಿಯೇ ನಿರ್ಧರಿಸುವಿರಿ.

ನಮ್ಮದೀ ಸೂಚನೆ ವಿಪುಲ ಧನವುಳ್ಳ ಈ ಬ್ಯಾಂಕನ್ನೇ ನಿಮ್ಮ ಅಧಿಕ ಸಹಾಯಕ ಸಂಸ್ಥೆಯಾಗಿ ಆರಿಸಿಕೊಳ್ಳಿರಿ. ಅದರ ಹೆಸರು ಗೌರವಗಳು ನಿಮಗೆ ನಿಮ್ಮ ಆರ್ಥಿಕ ಸ್ಥಿತಿಗೆ ಅಮೂಲ್ಯವಾದ ಉನ್ನತಿಯನ್ನೊದಗಿಸುವುದು

ಇಂದೇ ನಮ್ಮ ಏಜಂಟರಿಗೆ ಮಾಹಿತಿಯ ಬಗ್ಗೆ ವಿಚಾರಿಸಿರಿ.

ಶಾಖೆಗಳು	ಸೇವೆ
ಕ್ವಿಲೋನ್, ಬೆಳಗಾಂವ, ಆಲ್ಲೆಪ್ಪಿ, ಧಾರವಾಡ, ಕೊಚ್ಚಿ, ಚಿಕ್ಕಮಗಳೂರು, ಕಣ್ಣಾನೂರು, ಹುಬ್ಬಳ್ಳಿ, ಮಂಗಳೂರು, ದಾವಣಗೆರೆ, ಬೆಂಗಳೂರು ಇತ್ಯಾದಿ ಇತ್ಯಾದಿ,	ಸೇವಿಂಗ್ಸ್ ಖಾತೆ, ಚಾಲು ಖಾತೆ, ನಿರಖು ಠೇವಣಾತಿ ಓವರ್ ಡ್ರಾಫ್ಟುಗಳು, ಸಾಲಗಳು, ಡಿಸ್ಕಾಂಟಿಂಗ್,
ಬೊಂಬಾಯಿ ನಗರದಲ್ಲಿ 4 ಶಾಖೆಗಳು.	ಸಂಚೂರ ಮೇಲಣ ಡ್ರಾಫ್ಟುಗಳು

ESTD 1906

Canara Bank, Limited.

(Incorporated in British India with limited Liability)

ಕ್ರೌನ ರಬ್ಬರ್ ಸ್ಟಾಂಪ್ ಕಂಪನಿ

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE.

ESTD 1906

pproved firm by the Govt. of Mysore

Certified by the Agent of the Govt of India in Ceylon.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ.

R. E P. 110/1944.

ಕೆನರಾ ಬೇಂಕ್ ಲಿಮಿಟೆಡ್ ವಾದಿ-ಅರ್ಜಿದಾರ.

ಕುಂಞಮ್ಮ ಕೂಡಾ-ರೆಸ್ಪೋಂಡೆಂಟ್ರು

ಕುಂಜತ್ತೂರು ಗ್ರಾಮದಲ್ಲಿರ್ವ ಕರ್ತಪ್ಪ ಬೆಳ್ಚಪಾಡರ ತಂಗಿ ಕುಂಞಮ್ಮ ಯೀಕೆ ಮಗ ಕಂಣ, ಸದ್ರಿ ಕರ್ತಪ್ಪ ಬೆಳ್ಚಪಾಡರ ಮಗ ಕೃಷ್ಣ ಇವರಿಗೆ:

ಮೇಲ್ಕಂಡ ಅಮ್ಲುಜ್ಯಾರಿಯಲ್ಲಿ ಜಪ್ತಾದ ಆಸ್ತಿ ಯೇಲಂಮಿನ ಬಗ್ಗೆ ಅರ್ಜಿದಾರರು ಹಾಜ್ರುಪಡಿಸಿದ ಯೇಲಂ ಇಸ್ತಿಹಾರನ ಶರ್ತಗಳು ನಿರ್ಣಯಿಸುವ ಬಗ್ಗೆ ತಾ. 30-8-1944ನೇ ದಿವ್ಸ ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟಿಗೆ ಹಾಜ್ರಿರು ಮಾಡಿಕೊಳ್ಳತಕ್ಕದ್ದೆಂತ 1. 3. ನೇ ರೆಸ್ಪೋಂಡೆಂಟರಿಗೂ ಯಿತರ ರೆಸ್ಪೋಂಡೆಂಟರಿಗೂ ಯಿ ಮೂಲಕ ತಿಳಿಸೋಣಾಗುತ್ತದೆ

M. Madhava Rao.
Vakil for Petr.

Mangalore, 9 8-1944

ದಕ್ಷಿಣ ಕನ್ನಡದ ಆಹಾರ ಸಮಸ್ಯೆ

ಇನ್ನು ಮುಂದಿನ ಅಕ್ಕೀ ಸಂಗ್ರಹ ವ್ಯವಸ್ಥೆ

(ಶ್ರೀ. ಎ. ಬಿ ಶೆಟ್ಟರಿಂದ)

1 ಸದ್ಯದ ಧಾನ್ಯಾಭಾವ

ಕೋಪರೇಟಿವ್ ಸ್ಟೋರುಗಳಲ್ಲಿ ಈಗ ದಾಸ್ತಾನಿರುವ ಅಕ್ಕಿಯು, ಮುಂದಿನ ಆಟಾವಿನ ಅಕ್ಕಿ ಬರುವ ವರೆಗೂ ಹಂಚಲ್ಕೇ ಬೇಕಾಗಿರುವ ಜಿಲ್ಲೆಯ ಬೇರೆ ಬೇರೆ ಕಡೆಗಳ ಜನರಿಗೆ ಹಂಚಲು ಸಾಕಾಗದು ಮಂಗಳೂರಿನಲ್ಲಿ (ರೇಶನಿಂಗ್ ಕ್ಷೇತ್ರದೊಳಗೆ) ಇರುವ ಅಕ್ಕಿ ಸಂಗ್ರಹವು, ಅಲ್ಲಿಯ ಜನರಿಗೆ ಇನ್ನು 10ದಿನಗಳ ಊಟಕ್ಕೆ ಸಾಕಾಗುವಷ್ಟು ಮಾತ್ರವಿದೆ. ಮಂಗಳೂರಿಗೆ ದಿನಕ್ಕೆ 1200 ಮುಡಿ ಅಕ್ಕಿಯಂತೆ ಬೇಕು ಸುಮಾರು 2500ಟನ್ನು (1 ಟನ್ನಿಂದರ ಸಾಧಾರಣ 26 ಮುಡಿ) ಅರ್ಥಾತ್ 650,0 ಮುಡಿ ಅಕ್ಕಿಯನ್ನು ಮದ್ರಾಸ್ ಸರಕಾರವು ಇಲ್ಲಿಗೆ ಕಳುಹಿ ಕೊಡುವದೆಂಬ ನಿರೀಕ್ಷೆಯಿದೆ ಹೊಸ ಅಕ್ಕಿ ಬರುವ ದರಂಬರದ ವರೆಗೆ ದಿನದೂಡಲು ಇದು ಕೂಡಾ ನಮಗೆ ಸಾಕಾಗುವಂತಿಲ್ಲ. ಧಾನ್ಯದ ಕೊರತೆಯಿರುವ ಕಾಸರಗೋಡು ತಾಲೂಕಿಗಂತೂ ಅದರ ಸ್ವಂತ ಸಮಸ್ಯೆಯೇ ಇದೆ ಅಲ್ಲಿಗೆ ಪ್ರತಿ ತಿಂಗಳಿಗೂ 1200ಟನ್ನು ಅಕ್ಕಿಯಂತೆ ಕಳುಹಿಕೊಡುವದನ್ನು ಸರಕಾರವು ವಹಿಸಿಕೊಂಡಿದೆ ಈ ಪೈಕಿ ಈ ತಿಂಗಳಾಂತ್ಯದ ವರೆಗೆ ಕಾಸರಗೋಡಿಗೆ ಬರಬೇಕಾಗಿದ್ದ ಅಕ್ಕಿಯಲ್ಲಿ 3000ಟನ್ನು ಇನ್ನೂ ಬಂದಿಲ್ಲ. ಜಿಲ್ಲೆಯಲ್ಲೀಗ ಆಹಾರಾಭಾವದ ಸಮಸ್ಯೆಯೆದುರಿಸಿದೆ ವರ್ಗದಾರರು ಮತ್ತು ಒಕ್ಕಲುಗಳಲ್ಲಿರಬಹುದಾದ ಉಳಿತಾಯದ ಎಲ್ಲಾ ಅಕ್ಕಿಯನ್ನೂ ಸಿಕ್ಕಿದಲ್ಲಿಂದ ಹೆಕ್ಕಿತರುವ ಪ್ರಯತ್ನದಲ್ಲಿ ರೆವಿನ್ಯೂ ಅಧಿಕಾರಿಗಳಿದ್ದಾರೆ ಆ ಪೈಕಿ ಕೆಲವು ಅತಿರೇಕ ಹುರುಪಿನ ನೌಕರರು, ಅಕ್ಕಿ ಜಪ್ತಿ ಮಾಡುವ ಮನೆಯ ಕುಟುಂಬದ ಆಹಾರ ಮತ್ತು ವ್ಯವಸಾಯದ ಅಂಶವನ್ನು ಬಿಡತಕ್ಕದ್ದೆಂಬ ಕಲೆಕ್ಟರರ ಸೂಚನೆಯನ್ನು ಸರಿಯಾಗಿ ಪಾಲಿಸುತ್ತಿಲ್ಲವೆಂಬ ದೂರು ಕೇಳಿಬರುತ್ತದೆ ಇಂತಹ ಕೃತ್ಯಗಳಿಂದಾಗಿರುವ ಅನ್ಯಾಯ ಮತ್ತು ಸಂಕಷ್ಟಗಳನ್ನು ಕಲೆಕ್ಟರರ ಗಮನಕ್ಕೆ ತರಲಾಗುತ್ತಿದೆ. ಸಾಧ್ಯವಿದ್ದ ಉಳಿತಾಯದ ಅಕ್ಕಿಯನ್ನೆಲ್ಲಾ ಸಂಗ್ರಹಿಸಲು ಸದ್ಯದ ಕಲೆಕ್ಟರರು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದಾರೆ ನಮ್ಮನ್ನು ಸದ್ಯದ ಬಿಕ್ಕಟ್ಟಿನಿಂದ ಪಾರುಮಾಡಲು ಸಾಕಾಗುವಷ್ಟು ಅಕ್ಕಿಯನ್ನು ಕಳುಹಿಕೊಡುವಂತೆ ಮದ್ರಾಸಿನ ಅಧಿಕಾರಿಗಳಿಗೆ ಮೇಲಿಂದ ಮೇಲೆ ಬರೆಯಲಾಗಿದೆ ಸ್ವತಃ ಮದ್ರಾಸ್ ಪ್ರಾಂತ್ಯದಲ್ಲೇ ಅಕ್ಕಿ ಮತ್ತು ಜೋಳಗಳ ಕೊರತೆಯಿದೆ. ಆದ್ದರಿಂದ ಮಲಬಾರ್, ತಿರುವಾಂಕೂರು ಮತ್ತು ದಕ್ಷಿಣ ಕನ್ನಡದಂತಹ ಜಿಲ್ಲೆಗಳಿಗೆ ಸಾಕಷ್ಟು ಆಹಾರ ಧಾನ್ಯಗಳನ್ನು ಕಳುಹಿಕೊಡುವದು ಅದಕ್ಕೆ ಕಷ್ಟವಾಗಿ ಪರಿಣಮಿಸಿದೆ. ಈ ಸಂದರ್ಭದಲ್ಲಿ ತಮ್ಮಲ್ಲಿರುವಂತಹ ಉಳಿತಾಯದ ಅಕ್ಕಿಯನ್ನೆಲ್ಲಾ ಸ್ವಯಂ ಪ್ರೇರಣೆಯಿಂದ ಕೋಪರೇಟಿವ್ ಸ್ಟೋರುಗಳಿಗೆ ಒಪ್ಪಿಸುವದು ಎಲ್ಲಾ ವರ್ಗದಾರರ ಆದ್ಯ ಕರ್ತವ್ಯವಾಗಿದೆ ಹಾಗೆ ಮಾಡಿದಲ್ಲಿ, ಅವರು ಸದ್ಯದ ಆಹಾರ ಸಂಕಷ್ಟ ನಿವಾರಣೆಗೆ ಸಹಾಯ ಮಾಡಿದಂತಾಗುವದು ಮಾತ್ರವಲ್ಲ, ಇನ್ನು ಮುಂದಿನ ರಿಕ್ವಿಜಿಶನಿನ ಕುರಿತು ಮತ್ತು ಅದಕ್ಕೆ ದೊರೆಯಬೇಕಾದ ದಾರಣೆಯ ಕುರಿತು ವರ್ಗದಾರ ಸಂಘವು ಮುಂದಿಡುತ್ತಿರುವ ಬೇಡಿಕೆಗಳಿಗೆ ಕಲೆಕ್ಟರರ ಮತ್ತು ಮದ್ರಾಸ್ ಸರಕಾರದ ಸಹಾನುಭೂತಿ ದೊರೆಯುವಂತೆಯೂ ಮಾಡಬಲ್ಲರು ತಮ್ಮ ದಾಸ್ತಾನನ್ನು ಬಚ್ಚಿಟ್ಟುಕೊಂಡು ಕಳ್ಳಾಟಕೆಯಿಂದ ಅಧಿಕ ಬೆಲೆಗೆ ಮಾರುವವರು ಸಾರ್ವಜನಿಕ ದ್ರೋಹ ಮಾಡುವದು ಮಾತ್ರವಲ್ಲ; ಅವರು ತಾವೇ ತಮ್ಮನ್ನು ಕಠಿಣ ಶಿಕ್ಷೆಗೆ ಗುರಿ ಮಾಡಿಕೊಳ್ಳುತ್ತಿದ್ದಾರೆ.

II. ಸಿವಿಲ್ ಸಪ್ಲೈಸ್ ಡೆಪ್ಯುಟಿ ಕಮಿಶನರ್ ರಾವ್ ಸಾಹೇಬ್ ರಾಠೋರವರಿಗೆ ಮಾಡಿಕೊಂಡ ಮನವಿ.

ಕಳೆದ ವಾರ ಆಗಮಿಸಿ ಈ ಜಿಲ್ಲೆಯಲ್ಲಿ ಸಂಚರಿಸಿದ್ದ ಮೇಲಿನ ಅಧಿಕಾರಿಯನ್ನು ವರ್ಗದಾರ ಸಂಘದ ಪ್ರತಿನಿಧಿಗಳು ಕಳೆದ ಮಂಗಳವಾರದಲ್ಲಿ ಭೇಟಿಯಾಗಿ ವರ್ಗದಾರ ಸಂಘ ಮತ್ತು ಅದರ ಕಮಿಟಿಯಿಂದ ತಯಾರಿಸಲ್ಪಟ್ಟಿದ್ದ ಸೂಚನೆಗಳನ್ನು ಅವರ ಮತ್ತು ಕಲೆಕ್ಟರರ ಮುಂದಿಟ್ಟರು ಕಳೆದ ವರ್ಷ ಅಕ್ಕಿ ಮುಡಿಗೆ ನಿರ್ಣಯಿಸಿದ್ದ ಬೆಲೆಯೂ ಇನ್ನು ಮುಂದೆ ಕಡಿಮೆ ಮಾಡಲ್ಪಡುವ ಸಂಭವವಿದೆ ಸಂಘದ ಒತ್ತಾಯದ ಕೇಳಿಕೆ

(1) ಜೀವನ ವೆಚ್ಚದ ಹೆಚ್ಚಳ, ಸಾಗುವಳೀ ಖರ್ಚಿನ ಆಧಿಕ್ಯ ಮತ್ತು ಜಾನುವಾರುಗಳ ಅಧಿಕ ಬೆಲೆಯ ಮೇಲಿಂದ ಅಕ್ಕಿಯ ಮಾಡಲಿನ ಧಾರಣೆಗಳನ್ನು ಇನ್ನಮುಂದೆಯೂ ಹಾಗೇನೇ ಇಡತಕ್ಕದ್ದು (2) ಮೈಸೂರಿನಿಂದ ನಮ್ಮ ಜಿಲ್ಲೆಗೆ ಜಾನುವಾರುಗಳ ಆಮದಾಗುವಂತೆ ಅನುಕೂಲತೆಯಾಗಬೇಕು

ವರ್ಗದಾರರಿಂದ ಅಕ್ಕಿ ಸಂಗ್ರಹಿಸುವ ಮುಂದಿನ ರಿಕ್ವಿಜಿಶನಿನ ಕುರಿತು ಈ ಕೆಳಗಿನ ಸೂಚನೆಗಳನ್ನು ಮುಂದಿಡಲಾಗಿದೆ

(1) ಪ್ರತಿಸಲ ಜಾರಿ ರಿಕ್ವಿಜಿಶನ್ ಮಾಡುವಾಗ, 25 ರೂ. ಗಳಿಗೆ ಮಿಕ್ಕ ತೀರ್ವೆ ತೆರುವವರಿಂದ ಧಾನ್ಯ ಬೆಳೆಯುವ 'ಸಂಜಾ' ಭೂಮಿಗಳ ಪೈಕಿ 1ನೇ ಮತ್ತು 2ನೇ ವರ್ಗದ ಸಂಜಾ ಭೂಮಿಗಳ ಬಗ್ಗೆ ತೀರ್ವೆಯ 1 ರೂಪಾಯಿಗೆ (ತೀರ್ವೆಯನ್ನು ಕಳೆದು) ½ಮುಡಿ ಅಕ್ಕಿಯಂತೆ ಪಡೆಯಬಹುದು, ಅಂತಯೇ 3ನೇ ವರ್ಗದ 'ಸಂಜ' ಭೂಮಿಗಳ ಬಗ್ಗೆ ತೀರ್ವೆಯ 1 ರೂಪಾಯಿಗೆ (ತೀರ್ವೆಯನ್ನು ಕಳೆದು) ¼ಮುಡಿ ಅಕ್ಕಿಯಂತೆ ಪಡೆಕೊಳ್ಳಬಹುದು ಗೇಣಿಯ ಆಧಾರದಿಂದ ರಿಕ್ವಿಜಿಶನ್ ಮಾಡಿದರೆ, ಹಲವು ಪಟ್ಟಾದಾರರು ತಮ್ಮ ಗೇಣಿಯ ಮುಳ್ಳು ಸಂಖ್ಯೆ ಕೊಡುತ್ತಾರೆಂದೂ, ಗ್ರಾಮೋದ್ಯೋಗಸ್ಥರು ಕೂಡಾ ತಮ್ಮ ಒಲವು ಮತ್ತು ದ್ವೇಷಗಳಿಗನುಸಾರವಾಗಿ ಗೇಣಿ ಸಂಖ್ಯೆಗಳನ್ನು ಹೆಚ್ಚು ಕಡಿಮೆ ಮಾಡುತ್ತಾರೆಂದೂ ತಿಳಿದುಬಂದಿದೆ ಆದ್ದರಿಂದ ಜಮೀನಿಯ ಮೇಲಿನ ತೀರ್ವೆಯ ಆಧಾರದಿಂದಲೇ ರಿಕ್ವಿಜಿಶನ್ ಮಾಡಬೇಕೆಂದು ಸೂಚಿಸಲಾಗಿದೆ

(2) ಉಳಿತಾಯದ ಅಕ್ಕಿಯಿರುವವರಿಂದ ಮತ್ತೊಮ್ಮೆ ರಿಕ್ವಿಜಿಶನ್ ಮಾಡುವದಾದರೆ ಈ ಕೆಳಗಿನ ಖರ್ಚುಗಳಿಗಾಗಿ, ಅವುಗಳ ಮುಂಗಡ ಸಮೂದಿಸಿರುವಷ್ಟು ಅಕ್ಕಿಯನ್ನು ಅವರಿಗೆ ಬಿಡತಕ್ಕದ್ದು.

(a) ಜೀವನ ವೆಚ್ಚಕ್ಕಾಗಿ—ಮನೆಯವರಲ್ಲಿ 12 ವರುಷ ಪ್ರಾಯ ಮಿಕ್ಕಿದವರಿಗೆ ಒಬ್ಬನಿಗೆ ¾ ಸೇರಿನಂತೆ ಮತ್ತು ಮಕ್ಕಳಿಗೆ ½ ಸೇರಿನಂತೆ.

(b) ಅತಿಥಿಗಳ ವೆಚ್ಚಕ್ಕಾಗಿ—ಅಕ್ಕೀ ಹುಟ್ಟುವಳಿಯ ಸೇಕಡಾ 2ರಷ್ಟು

(c) ಸಾಗುವಳಿ ವೆಚ್ಚಕ್ಕಾಗಿ ಒಕ್ಕಲುಗಳಿಗೆ, ಒಂದು ಎಕ್ರೆ ಸ್ಥಳದ ಒಂದು ಬಾರಿಯ ಸಾಗುವಳಿಗಾಗಿ ೩ ಮುಡಿ. ವರ್ಗದಾರನೇ ಮನೆ ಸಾಗುವಳಿ ಮಾಡುತ್ತಾನಾದರೆ, ಒಂದು ಎಕ್ರೆ ಸ್ಥಳದ ಒಂದು ಬಾರಿಯ ಸಾಗುವಳಿಗೆ 4 ಮುಡಿ.

(d) ಗೇಣಿ ಬಾಕಿ ಅಥವಾ ಬೆಳೆ ಹಾನಿ ಮೂದಕ್ಕಾಗಿ ಅಕ್ಕಿ ಗೇಣಿ ಅಥವಾ ಹುಟ್ಟುವಳಿಯ ಶೇಕಡಾ 10ರಷ್ಟು.

(e) ನೇಜಿ ಅಥವಾ ಬೀಜಕ್ಕಾಗಿ ಒಂದು ಎಕ್ರೆಯ ಒಂದು ಬಾರಿಯ ಸಾಗುವಳಿಗೆ ಒಂದು ಮುಡಿ ಅಕ್ಕಿಯಂತೆ

(f) ಒಕ್ಕಲುಗಳ ಊಟ ಅಥವಾ ಬೇಸಾಯದ ಖರ್ಚಿಗಾಗಿ ಮುಂಗಡವಾಗಿ ಅಕ್ಕೀ ಗೇಣಿಯ ಶೇಕಡಾ 10ರಷ್ಟು

(3) ಉಳಿತಾಯದ ಅಕ್ಕಿಗಾಗಿ ರಿಕ್ವಿಜಿಶನ್ ನಡೆವಾಗ ಅದಕ್ಕೆ ವಿರುದ್ಧವಾಗಿ ಕೊಡಲ್ಪಡುವ ಅರ್ಜಿ ದಸಖಿಯನ್ನು ಬೇರೆ ಅಧಿಕಾರಿಗಳು ಮಾಡಬೇಕಲ್ಲದೆ, ರಿಕ್ವಿಜಿಶನ್ ಮಾಡಿದ ಅಧಿಕಾರಿಯೇ ಅದನ್ನು ನಡಿಸುವಂತಾಗಬಾರದು, ಮತ್ತು ಅರ್ಜಿ ದಸಖಿ ಮುಗಿಯುವ ವರೆಗೆ ಅಕ್ಕಿಯನ್ನು ಅಲ್ಲಿಂದ ಕೊಂಡು ಹೋಗಬಾರದು.

ಎಲ್ಲಾ ಸಾಗುವಳಿಗಾರರೂ ತಮ್ಮ ಎಲ್ಲಾ ಉಳಿತಾಯದ ಅಕ್ಕಿಯನ್ನೂ ಕೋಪರೇಟಿವ್ ಸ್ಟೋರುಗಳಿಗೆ ಕೊಟ್ಟರೆ, ಮತ್ತು ಮಲಬಾರ್ ಹಾಗೂ ಉತ್ತರ ಕನ್ನಡಗಳಿಗೆ ಜಾರಿ ಹೋಗುವ ಅಕ್ಕಿಯನ್ನು ಜಯಶೀಲವಾಗಿ ತಡೆಗಟ್ಟಿದರೆ, ಬರುವ ವರ್ಷದಲ್ಲಿ ನಮ್ಮ ಜಿಲ್ಲೆಯ ಆಹಾರ ಸರಬರಾಯಿ ಸಮಸ್ಯೆಯನ್ನೆದಿರಿಸುವದು ಸುಲಭವಾಗಲಿದೆ. ಆಗತ್ಯವಿರುವ ಅಕ್ಕಿಯನ್ನು ಆಮದುಮಾಡಿಸಿಕೊಳ್ಳುವ ಮೂಲಕ, ಕಾಸರಗೋಡು ತಾಲೂಕಿನ ಆವಶ್ಯಕತೆಯನ್ನು ಸರಕಾರವೇ ಪೂರೈಸಬಹುದು.

ತಾ 17 8-44.

ಜನತೆಯ ವಿಶ್ವಾಸದ ನಿಶ್ಚಿತ ದೃಷ್ಟಾಂತ -ಭಾವಿ ಕಲ್ಯಾಣದ ಒಂದು ಆಶ್ವಾಸನೆ.

1934-44 — ಕೇವಲ 10 ವರುಷಗಳಲ್ಲೇ "ವಾರ್ಡನ್" ಇತರ ಶ್ರೇಷ್ಠ ಕಂಪೆನಿಗಳಲ್ಲಿ ಅಭಿಮಾನಿಯ ದಾಖಲೆಯನ್ನುಂಟುಮಾಡಿ ಅದ್ವಿತೀಯ ಸ್ಥಾನವನ್ನು ಪಡೆದಿರುವುದು.

1943ನೇ ಇಸವಿಯ ವಿಮಾ ಉತ್ಪನ್ನವು ಬೆರಗುಗೊಳಿಸುವ, ವಿಶಾಲ ಗಾಢ್ಯವಾದ ಅಭಿವೃದ್ಧಿಯ ದಾಖಲೆಯಾಗಿರುವದು. ಈ ಆಶ್ಚರ್ಯಕರವಾದ ವಿಮಾ ಉತ್ಪನ್ನವು ಕಂಪೆನಿಯ ಖರ್ಚಿನ ಪ್ರಮಾಣವನ್ನು 7ರ ಸಲೆಯಲ್ಲಿ ಇಳಿಸಿ ಈಗಿನ ಖರ್ಚನ್ನು ಶೇಕಡಾ 22ರಲ್ಲಿ ತಂದಿಡಲಾಗಿದೆ ಇದು ಕಂಪೆನಿಯ ಜೋಪಾನ ಮತ್ತು ಮಿತವ್ಯಯದ ಆಡಳಿತೆಯನ್ನು ಸೂಚಿಸುತ್ತದೆ. ಪೋಲಿಸಿಗಳ ಗತಿಸಿ ಹೋಗುವಿಕೆಯು ತೀರಾ ಕಡಿಮೆಯಾಗಿದ್ದು ಸ್ವೀಕೃತ ಶೇಕಡಾ 8ರ ಸಲೆಯಲ್ಲಿದೆ. ಇದು ಹಿಂದುಸ್ಥಾನದ ಅತೀ ಕಡಿಮೆ ಸಂಖ್ಯೆಯು

ತಾ. 31-12-1943ರಲ್ಲಿನ ಅಂಕೆಗಳು.		ಕಳೆದ ವರುಷದ ಸಂಖ್ಯೆಗಳ ಮೇಲಿನ ಹೆಚ್ಚಿತ.
ಹೊಸ ವಿಮೆ	63,00,000	137%
[illegible] ..	36,00,000	40%
ಜೀವ ವಿಮಾ ನಿಧಿ ..	22,50,000	71%
ಜೀವ ವಿಮಾ ಉತ್ಪನ್ನ ..	10,00,000	52%
ಇತರ ಉತ್ಪನ್ನಗಳು ..	7,50,000	80%
ಆಸತ್ ಮತ್ತು ಇತರ ನಿಧಿ ..	2,60,000	200%

ನಮ್ಮ ದಾಖಲೆಯು ಅಭಿಮಾನಾಸ್ಪದವು ಅದರ ಗತ ವೈಭವದಿಂದಾಗಿ ನಾವು ಸುಮ್ಮನಿರದ ಭವಿಷ್ಯಕ್ಕಾಗಿ ಕಾರ್ಯತತ್ಪರರಾಗಿರುವೆವು. ಮುಂದೊತ್ತುವ ಹಾಗೂ ಮಿತವ್ಯಯದ ಈ ಸಂಸ್ಥೆಯಲ್ಲಿ ಕಳೆದ ದಾಖಲೆಗಳಿಗಿಂತ ಭವಿಷ್ಯದ ಸಂದರ್ಭಾನುಸಾರಗಳು ಪ್ರಾಮುಖ್ಯವಾಗಿರುವವು.

ನಮ್ಮಂತೆ ನಿಮ್ಮ ಅಭಿಪ್ರಾಯವೂ ಇದ್ದಲ್ಲಿ—ಮುಂದಿನ ವಿಳಿಗೆಗಾಗಿ ಘನವಾದ ಕಾರ್ಯದಕ್ಷತೆಯಿಂದ ಕೂಡಿದ ಸಂಸ್ಥೆಯನ್ನು ನೀವು ಅಪೇಕ್ಷಿಸಿದಲ್ಲಿ— ಇನ್ನು ನೀವು ಕಾರ್ಯದಕ್ಷತೆಯ ವಾತಾವರಣದಲ್ಲಿ ಕೆಲಸವನ್ನು ಮಾಡಲು ಬಯಸಿದಲ್ಲಿ — ಬೆಳವಣಿಗೆ ಮತ್ತು ಶಕ್ತಿಯಲ್ಲಿ ನೆಲೆಗೊಂಡಂಥ ಈ ಕಂಪನಿಯನ್ನು ನೆಚ್ಚಬಹುದು.

ಜೀವ — ಬೆಂಕಿ — ಅಪಘಡದ ವಿಮೆಗಳು.

ಚೆಯರ್‌ಮೇನ್ :— ಸರ್ ಚುನಿಲಾಲ್ ವಿ. ಮೆಹ್ತಾ ಕೆ. ಸಿ. ಎಸ್. ಐ.

ಮೆನೇಜಿಂಗ್ ಡೈರೆಕ್ಟರ್: ಎಸ್. ಎಚ್. ಥಾಕರ್,

ದಿ ವಾರ್ಡನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ವಾರ್ಡನ್ ಹೌಸ್, ಸರ್ ಫಿರೋಜ್‌ಶಾ ಮೆಹ್ತಾ ರೋಡ್ ಫೋರ್ಟ್ ಬೊಂಬಾಯಿ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ ನಂಬ್ರ 467/1943.

ಆರ್. ಇ. ಪಿ. ನಂಬ್ರ 95/1944

ಕಾಲಿಸ್ತ ವೇಗಸ್, ಫ್ರಾನ್ಸಿಸ್ ವೇಗಸರ ಮಗ, ಮಂಗಳೂರು ತಾಲ್ಲೂಕು ಮೂಡು ಶೆಡ್ಡೆ ಗ್ರಾಮಸ್ಥ—ಅರ್ಜಿದಾರ,(ವಾದಿ)

ಎದ್ರು

ಪಾಸ್ಕಲ ಬ್ರ್ಯಾ, ಗಾಬ್ರು ವೇಗಸರ ವಿಧವೆ, ಮಂಗಳೂರು ತಾಲ್ಲೂಕು ತೋಕೂರು ಗ್ರಾಮದಲ್ಲಿರುವವರು.

ರೈಸ್ಪೊಂಡೆಂಟ್ (1ನೇ ಪ್ರತಿವಾದಿ)

ಸದರಿ ಪ್ರತಿವಾದಿ-ರೈಸ್ಪೊಂಡೆಂಟರೀಗೆ-ನೋಟೆ ಕಾಣಿಸಿದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವರಾದ ವಾದಿ- ಅರ್ಜಿದಾರರು ಸದರಿ ಅಮಲ್ದಾರಿಯಲ್ಲಿ ನಿಮ್ಮ ಬಾಬ್ತು ಜಪ್ತಾದ ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾರೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ 1944ನೇ ಇಸವಿ ಆಗೋಸ್ತು ತಿಂಗಳ 30ನೇ ತಾರೀಕು ನಿಶ್ಚಯಿಸಲಾಗಿಯದೆಂತ ನಿಮಗೆ ಇದರಿಂದ ತಿಳಿಸಲಾಗಿಯದೆ.

H Vasudeva Kamath
ಅಡ್ವೊಕೇಟ್

ಮಂಗಳೂರು, ತಾ 18-8-1944

The Canara Banking Corporation Limited.

ESTD 1906.

Authorised Capital	Rs. 25.00 000/-
Subscribed Capital	„ 10 00.000/-
Paid up Capital	„ 13 72 900/-
Reserves ...	„ 4 10 000/-

Total Working Capital—xEceeds One Crore.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers

ನವಯುಗ

ಉಡುಪಿ, ಗುರುವಾರ ೨೪-೮-೧೯೪೪

ಯುದ್ಧಗತಿ

ಮಿ. ಚರ್ಚಿಲ್ಲರ ಇಟೆಲಿ ಪ್ರವಾಸ ಮತ್ತು ದಕ್ಷಿಣ ಫ್ರಾನ್ಸಿನ ಮೇಲುಗುತ್ತಿದ್ದ ಆಕಾಶ ಧಾಳಿಗಳ ಮೇಲಿಂದ ನಾವು ಕಳೆದ ವಾರ ಕಟ್ಟಿದ್ದ ಊಹೆ ಆಗಲೇ ನಿಜವಾಗಿದೆ. ಉತ್ತರ ಫ್ರಾನ್ಸಿನಲ್ಲಿ ಹೊಕ್ಕ 70 ದಿನಗಳ ನಂತರ ಭೂಮಧ್ಯ ಸಮುದ್ರದೆಡೆಯಿಂದ ದಕ್ಷಿಣ ಫ್ರಾನ್ಸಿನೊಳಗಡೆ ಮಿತ್ರ ಸೇನೆಗಳು ನುಗ್ಗುವ ಚರಿತ್ರಾರ್ಹ ಸಾಹಸ ನಡೆಸಿ, ಈಗ ಜಯಶೀಲವಾಗಿ ಮುಂದೊತ್ತುತ್ತಿವೆ. ಫ್ರಾನ್ಸ್ ಆಕ್ರಮಣಕ್ಕೆ ನೋರ್ಮಂಡಿಯೊಂದೇ ದ್ವಾರವಲ್ಲವಾದ್ದರಿಂದ ಬೇರೆ ಕಡೆಗಳಲ್ಲಿಯೂ ಮಿತ್ರ ಸೇನೆಗಳಿಳಿಯುವುದನ್ನು ಆದಿಯಿಂದಲೇ ನಿರೀಕ್ಷಿಸಲಾಗಿತ್ತು. ಆದರೆ ಈಗಿನ ನವಾಕ್ರಮಣದಲ್ಲಿ ಇಮ್ಮಡಿ ಶಕ್ತಿಯಿದೆ. ನೋರ್ಮಂಡಿ ರಣರಂಗದಲ್ಲಿ ನಾಜೀ ಸೇನೆಗಳು ಗಂಡಾಂತರಕ್ಕೆ ಬಲಿಬಿದ್ದಿರುವ ಸಂದರ್ಭ ನೋಡಿಯೇ ದಕ್ಷಿಣ ಫ್ರಾನ್ಸಿನೊಳಗೆ ಸೇನೆ ನುಗಿಸಲಾಗಿದೆ. ನೋರ್ಮಂಡಿಯ ಫೆಲಾಸೀ ವಲಯದಲ್ಲಿ ಜರ್ಮನರ 7ನೇ ಸೇನೆಯು ಪೂರ್ಣ ಸುತ್ತುಗಟ್ಟಲ್ಪಟ್ಟು ಸಮೂಲ ನಾಶವಾಗಿದೆ. ಮುಂದೊತ್ತಿದ ಮಿತ್ರ ಸೇನೆಯು ಸ್ಯೆನ್ ಹೊಳೆ ದಾಟಿ ಪ್ರತ್ಯಕ್ಷ ಪ್ಯಾರಿಸಿನೊಳಗೆ ನುಗ್ಗಿದು ಫ್ರೆಂಚ್ ರಾಜಧಾನಿಯು ಆಯುಷ್ಯವೀಗ ದಿನಸಂಖ್ಯೆಯ ಗಣನೆಗೊಳಗಾಗಿದೆ. ಫ್ರಾನ್ಸಿನ ಪಶ್ಚಿಮ ಕರಾವಳಿಯ ಉತ್ತರ ಮತ್ತು ದಕ್ಷಿಣ ಕಡೆಯಿಂದಾಕ್ರಮಿಸುತ್ತಾ ಮುಂದೊತ್ತುತ್ತಿರುವ ಮಿತ್ರಸೇನೆಗಳೊಳಗೆ ಸಂಬಂಧ ನಿರ್ಮಾಣಗೊಂಡು ನಿನ್ನವರೆಗೂ ಸ್ಥಳೀಕ ಹೋರಾಟದಂತಿದ್ದ ಅಲ್ಲಿಯ ಯುದ್ಧವೀಗ ಅಖಿಲ ಫ್ರಾನ್ಸಿನ ಜೀವನ್ಮರಣ ಪ್ರಶ್ನೆಯಾಗಿ ಮಾರ್ಪಟ್ಟಿದೆ. ಪ್ಯಾರಿಸ್ ಪತನ ನಿಶ್ಚಯ, ಅದರೊಂದಿಗೆ ಜರ್ಮನರು ಇಡೀ ಫ್ರಾನ್ಸಿನ ಆಶೆಯನ್ನೇ ಬಿಡುವಂತಾಗುವದೂ ಖಂಡಿತ. ಇಟೆಲಿಯಲ್ಲಿರುವ ಮಿ. ಚರ್ಚಿಲ್ಲರ ಚಟುವಟಿಕೆಗಳ ಮೇಲಿಂದ ಯುಗೊಸ್ಲಾವಿಯದ ಧಾಳಿಯನ್ನೂ ನಿರೀಕ್ಷಿಸಬಹುದು.

ಇತ್ತ ರಶ್ಯನರು ಪೋಲೆಂಡಿನ ರಾಜಧಾನಿ ವಾರ್ಸಾದ ಮೇಲೆ ಕತ್ತರೀ ದಾಳಿ ಹೂಡಿದ್ದಾರೆ. ಅದಕ್ಕೆ ಹೊಂದಿಕೆಯಾಗಿ ಬಾಲ್ಟಿಕಿನಲ್ಲಿರುವ ಪ್ರಬಲ ನಾಜೀ ಸೇನೆಗಳನ್ನು ಹೊರ ನುಸುಳದಂತೆ ಸುತ್ತುಗಟ್ಟಿ ಧ್ವಂಸಮಾಡುವ ಸನ್ನಾಹದಲ್ಲಿದ್ದಾರೆ. ಈ ಮುತ್ತಿಗೆಯನ್ನು ಭೇದಿಸಿ ಹೊರನುಗ್ಗಲು ಜರ್ಮನರು ಪಡುತ್ತಿರುವ ಒದ್ದಾಟದ ಮೇಲಿಂದ ಅಲ್ಲಿಯ ಯುದ್ಧದ ಪ್ರಾಮುಖ್ಯತೆಯು ಒಡೆದು ಕಾಣುತ್ತಿದೆ. ವಾರ್ಸಾ-ಬಾಲ್ಟಿಕ್-ಪೂರ್ವ ಪ್ರಶ್ಯಾ ವಲಯಗಳಲ್ಲೀಗ ನಾಜೀ ಸೇನೆಗಳ ಒಂದು ಮಹಾಬಲಿಕೊಡಲು ರಶ್ಯನರು ಸಿದ್ಧತೆಮಾಡುತ್ತಿರುವಂತೆ ಕಾಣುತ್ತಿದೆ. ಅದಕ್ಕೆ ಬಲಿಯಾಗದಂತೆ ಜರ್ಮನರು ನಡಿಸುತ್ತಿರುವ ಪ್ರಾಣಾವಧಿ ಸಾಹಸವು ಜಯಗೊಳ್ಳಲು ಏನಾದರೊಂದು ಅದ್ಭುತ ನಿರ್ಮಾಣಗೊಂಡರೇನೇ ಸಾಧ್ಯ.

ಬರ್ಮಾ-ಮಣಿಪುರ ವಲಯಗಳ ಯುದ್ಧದಲ್ಲಿ ಜಪಾನರನ್ನು ಹಿಂದೂಡುತ್ತಾ, ಹಿಂದೂ ದೇಶದ ಸೇನೆಯು ಬರ್ಮಾ ಗಡಿ ದಾಟಿ ಮುಂದೊತ್ತಿದ ವಾರ್ತೆಯಿದೆ. ಹಿಂದೂ ದೇಶದ ನೆಲದಲ್ಲೀಗ ಸಂಘಟಿತ ಜಪಾನೀ ದಳವುಳಿದಿಲ್ಲವೆನ್ನಬಹುದು. ಉತ್ತರ ಬರ್ಮಾದಲ್ಲಿ ರೂಪುಗೊಳ್ಳುತ್ತಿರುವ ಧಾಳಿಗಳೂ ಹಂಚಿಕೆಗನುಸಾರವಾಗಿ ವಿಜಯಗೊಂಡಲ್ಲಿ ಬರ್ಮಾ ರಸ್ತೆಯೊಂದು ತೆರೆಯಲ್ಪಡುವದಷ್ಟೇ ಅಲ್ಲ-ಬರ್ಮಾವನ್ನು ನೆಲಧಾಳಿಯಿಂದಲೇ ಗೆಲ್ಲಬಹುದೆಂಬ ಸ್ಟಿಲ್‌ವೆಲ್ಲರ ಭವಿಷ್ಯವೂ ಸತ್ಯವಾಗಬಹುದು.

ಈಗ ಆಕ್ಸಿಸ್ ರಾಷ್ಟ್ರಗಳ ಕಣ್ಮುಂದ ತಮ್ಮ ಪ್ರಾಣರಕ್ಷಣೆಯ ಪ್ರಶ್ನೆ ಬಂತು, ಎಂಬುದು ನಿರ್ವಿವಾದ. ಯುರೋಪನ್ನು ಹಿಡಿದುಕೊಂಡಿರುವ ಜರ್ಮನಿಯ ಮುಷ್ಟಿ ಸಡಿಲಾಗುತ್ತಿರುವದಷ್ಟೇ ಅಲ್ಲ-ಅದರ ಹೃದಯವೇ ಯುದ್ಧಗುರಿಯಾಗಿದೆ. ಹಿಟ್ಲರ್ ಅವಸಾನದ ಬಳಿಕ ಜಾಪಾನಿನ ಅವತಾರ ಸಮಾಪ್ತಿ ಬಹಳ ಮುಂದೆ ಬೀಳದು. ಅಂತೂ ಆ ಎರಡು ರಾಷ್ಟ್ರಗಳೂ ತಮ್ಮ ದಿನ ಸಮೀಪಿಸುತ್ತಿರುವದನ್ನೇ ಕಾಣುತ್ತಿವೆ. ಆದರೂ ಧೈರ್ಯಗುಂದಿಲ್ಲ. ಕೆಲವು ಆಯಕಟ್ಟಿನ ಅನುಕೂಲತೆಗಳು ಇನ್ನೂ ಆಕ್ಸಿಸ್ ರಾಷ್ಟ್ರಗಳಿಗಿವೆ ಎಂಬುವದನ್ನು ಮರೆಯಬಾರದು. ಮೇಲಾಗಿ ತಮ್ಮ ಅವಸಾನಾಂಕದಲ್ಲಿ ಜರ್ಮನಿ ಜಪಾನುಗಳು ಲೋಕಸಿಯಮ ಮುರಿದು ಕರಾಳಾವತಾರ ಧರಿಸಬಹುದೆಂಬುದನ್ನು ಮಿತ್ರರೂ ನಿರೀಕ್ಷಿಸಿದ್ದಾರೆ. ಹಿಟ್ಲರನ ರೆಕ್ಕೆಬೋಂಬಿನ ಹಾವಳಿಯ ಮೇಲಿಂದ ಮಿತ್ರ ಪ್ರಮುಖರೇ ಊಹಿಸಿರುವ ಇನ್ನಷ್ಟು ಭೀಕರವಾದ ನಾಜೀ ಗುಪ್ತಾಸ್ತ್ರಗಳು ಮುಂದೆ ಪ್ರಳಯವನ್ನೇ ನಿರ್ಮಿಸಬಹುದು. ಜಪಾನಿನ ಪ್ರಬಲ ನೌಕಾಪಡೆಯು, ಅದನ್ನೇ ಲಕ್ಷ್ಯಮಾಯ ಒರುವಾಗಿನ ಉಪಯೋಗಕ್ಕಾಗಿ ಜತನದಲ್ಲಿಡಲ್ಪಟ್ಟಿದೆ. ಕಷ್ಟಕಾಲದ ನಿಧಿಯಾಗಿ ಜರ್ಮನ್ ಜಪಾನುಗಳೆರಡೂ ಪ್ರಬಲ ಸೇನೆಗಳನ್ನು ಶೇಖರಿಸಿಟ್ಟಿರುವದೂ ನಿಜ. ಆದ್ದರಿಂದ ದುಷ್ಟಶಕ್ತಿಗಳ ವಿರಾಟ್ಸ್ವರೂಪವನ್ನು ಇನ್ನು ಮುಂದಿನ ಹೋರಾಟದಲ್ಲಿ ಕಾಣಲಿಕ್ಕಿದೆಯೆಂಬುದನ್ನು ಮರೆಯಬಾರದು.

ದ. ಕ. ಹಳ್ಳಿಗರ ಅವಗಾಹನೆಗೆ—

ನೀವೀಗ ಆಹಾರಾಭಾವದ ಅತಿರೇಕ ಸಂಕಷ್ಟದಲ್ಲಿರುವಿರಿ. ಪೇಟೆ ಪಟ್ಟಣಗಳ ಜನತೆಯನುಭವಿಸುತ್ತಿರುವ ಅನಾನುಕೂಲತೆಗಳಿಗಿಂತ ಭಿನ್ನವಾದ ಮತ್ತು ಕಠೋರವಾದ ಸಂಕಷ್ಟಗಳು ನಿಮ್ಮವು. ಆದರೆ ಪಟ್ಟಣಿಗರಿಗೆ ದೊರೆಯುವಷ್ಟು ಆಹಾರ ಸೌಕರ್ಯಗಳು ಕೂಡಾ ನಿಮಗೆ—ಧಾನ್ಯೋತ್ಪತ್ತಿ ಮಾಡಿಕೊಡುತ್ತಿರುವ ನಿಮಗೇನೇ-ದೊರಕುತ್ತಿಲ್ಲ. ಇದಕ್ಕೆ ಕಾರಣವೇನು ಗೊತ್ತೇ? ಅಧಿಕಾರಿಗಳ ಮತ್ತು ಪ್ರಮುಖರ ಕಣ್ಣು ತೆರೆಯಿಸುವಷ್ಟು ನಿಮ್ಮ ದುಸ್ಥಿತಿಗೆ ಬೆಳಕು ಬೀಳದಿರುವದೇ ಕಾರಣ. ಈ ವರುಷ ನೀವು ಪಡೆದಿರುವ ಅನುಭವವು ನಿಮ್ಮ ಜೀವಾವಧಿ ವರೆಗೂ ಸಾಕು. ಆದರೆ ಅಕ್ಕಿಭತ್ತ ಸಂಗ್ರಹ ಮತ್ತು ಅವುಗಳನ್ನು ಹಂಚಿ ಹಾಕುವ ಈ ವರ್ಷದ ವ್ಯವಸ್ಥೆಯೇ ಅಲ್ಪ ಸ್ವಲ್ಪ ಬದಲಾವಣೆಗಳೊಡನೆ ಇನ್ನೂ ಕೆಲವು ವರ್ಷಗಳ ವರೆಗೆ ಜ್ಯಾರಿಯಲ್ಲಿರಬಹುದು, ಮುಂದಿನ ವರ್ಷವಂತೂ ಖಂಡಿತವಾಗಿ ಇದೆ. ಇದೇನೂ ದೈವದತ್ತವಾದ ಘಟನೆಯಲ್ಲ. ಕಾಲಸ್ಥಿತಿಗನುಸಾರವಾಗಿ ಎಲ್ಲರಿಗೂ ಆಹಾರ ದೊರೆಯುವ ಏರ್ಪಾಡು ಮಾಡಲು ಅಧಿಕಾರಿಗಳು ಜಿಲ್ಲೆಯವರ ಸ್ಥಿತಿ ಮತ್ತು ಅಭಿಪ್ರಾಯವನ್ನು ತಿಳಿದುಕೊಂಡೇ ಮಾಡುವ ಒಂದು ವ್ಯವಸ್ಥೆ. ನೀವು ನಿಮ್ಮ ಸತ್ಯಸ್ಥಿತಿ ಮತ್ತು ನ್ಯಾಯವಾದ ಬೇಡಿಕೆಗಳನ್ನು ಸ್ಪಷ್ಟ ರೀತಿಯಿಂದ ಮುಂದಿಟ್ಟು ನ್ಯಾಯಹೊಂದಬೇಕಾಗಿದೆ. ಆ ರೀತಿ ಪ್ರಯತ್ನ ಮಾಡಲಾಗುವಂತೆ ಪ್ರತಿಯೊಂದು ಗ್ರಾಮದವರೂ ಈ ಕೆಳಗಿನ ಪ್ರಶ್ನಾಮಾಲಿಕೆಗೆ ಉತ್ತರರೂಪವಾದ ವರದಿಯನ್ನು ನಿಮ್ಮ ತಾಲೂಕಿನ ಜನತಾ ಆಹಾರ ಸಮಿತಿಗಾಗಲೀ, ತಾಲೂಕು ಸಮಿತಿಗಳಿಲ್ಲದ ಕಡೆ ದ. ಕ. ಜನತಾ ಆಹಾರ ಸಮಿತಿ' ಗಾಗಲೀ ಕೂಡಲೇ ಕಳುಹಿಕೊಡಿರಿ.

ಪ್ರಶ್ನಾಮಾಲಿಕೆ

1 ನಿಮ್ಮ ಪ್ರದೇಶವು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಿರುವದೇ, ಯಾ ಇಲ್ಲವೇ? ಆಹಾರ ಧಾನ್ಯಗಳ ಕೊರತೆ ಅಥವಾ ಆಧಿಕ್ಯವಿದ್ದರೆ ಎಷ್ಟರಮಟ್ಟಿಗೆ?

2) ಭೂಮಾಲಿಕರಿಂದ ಅಕ್ಕಿ ರಿಕ್ವಿಶಿಶನ್ ಮಾಡುವ ಈಗಿನ ವ್ಯವಸ್ಥೆಯು ನ್ಯಾಯವೇ ಮತ್ತು ಜಯಶೀಲವಾಗಿದೆಯೆ? ಇಲ್ಲವಾದರೆ ಬೇರಾವ ರೀತಿಯ ರಬೇಕೆಂದು ನಿಮ್ಮ ಅಭಿಪ್ರಾಯ?

3) ರಿಕ್ವಿಶಿಶನಿನಿಂದ ನಿಮ್ಮ ಪ್ರದೇಶದಲ್ಲಿ ಅನ್ಯಾಯ ಅಥವಾ ಪಕ್ಷಪಾತಗಳು ನಡೆದಿರುವವಾದರೆ ಅವುಗಳ ತಪಶೀಲು.

4) ಕೋಪರೇಟಿವ್ ಸ್ಟೋರುಗಳ ಮೂಲಕ ಅಕ್ಕಿ ಹಂಚುವ ವ್ಯವಸ್ಥೆಯು ನಿಮ್ಮಲ್ಲಿ ಹೇಗೆ ಸಾಗಿದೆ?

5) ಸ್ಟೋರುಗಳನ್ನು ಸ್ಥಾಪಿಸಲಾಗದ ದೂರದ ಪ್ರದೇಶವಾಗಿದ್ದರೆ, ಅಲ್ಲಿ ಯಾವ ವ್ಯವಸ್ಥೆಯಿಂದ ಧಾನ್ಯ ಹಂಚಬಹುದು?

6) ದವಸ ಧಾನ್ಯಗಳನ್ನು ಕಂಟ್ರೋಲ್ ದರದಲ್ಲಿ ಖಾಸಗೀ ವ್ಯಾಪಾರಿಗಳನ್ನೇ ಮಾರ ಬಿಡುವ ಕುರಿತು ನಿಮ್ಮ ಅಭಿಪ್ರಾಯವೇನು?

7) ನಿಮ್ಮ ಪ್ರದೇಶದಲ್ಲಿ ಕಳ್ಳವ್ಯಾಪಾರ ನಡೆಯುತ್ತಿದೆಯೆ? ಇದೆಯಾದರೆ ಕಾರಣವೇನು? ಅದನ್ನು ಹೇಗೆ ತಡೆಗಟ್ಟಬಹುದು?

8) ಆಹಾರ ಸಂಬಂಧದಲ್ಲಿ ಅದಕ್ಕೆ ಸಂಬಂಧಪಟ್ಟ ನೌಕರರ ಲಂಚ, ವಂಚನೆ ಇತ್ಯಾದಿಗಳು ನಿಮ್ಮ ಗಮನಕ್ಕೆ ಬಂದಿದ್ದರೆ ಅವುಗಳ ತಪಶೀಲು

9) ಅಕ್ಕಿಯ ಹೊರತು ಇತರ ಯಾವ ವಸ್ತುಗಳ ರಿಕ್ವಿಶಿಶನ್ ಮತ್ತು ಕಂಟ್ರೋಲ್ ಅಗತ್ಯವಿದೆ?

10) ನಿಮ್ಮ ಪ್ರದೇಶದಲ್ಲಿ ಭೂಮಾಲಿಕರು ಒಕ್ಕಲುಗಳಿಂದ ಅಕ್ಕಿಯ ಬದಲಿಗೆ ನಗದೀ ಗೇಣಿಯನ್ನು ಕಂಟ್ರೋಲ್ ದರಕ್ಕೆ ಮಿಕ್ಕಿದ ಧಾರಣೆಯಲ್ಲಿ ವಸೂಲುಮಾಡುವದಿದೆಯೆ? ಇದೆಯಾದರೆ ತಪಶೀಲು ಮತ್ತು ಅವುಗಳನ್ನು ಹೇಗೆ ತಡೆಗಟ್ಟಬಹುದು?

11) ನಿಮ್ಮ ಪ್ರದೇಶದಲ್ಲಿ ಕೃಷಿಕರಲ್ಲದವರಿಗೆ ಅಕ್ಕಿ ಕೊಡುವ ಏರ್ಪಾಡೇನಿದೆ? ಅದರ ವಿವರ.

12) ನಿಮ್ಮ ಪ್ರದೇಶಕ್ಕೆ ಪ್ರತ್ಯೇಕವಾಗಿ ಸಂಬಂಧಿಸುವ ಮತ್ತು ನಿಮಗೆ ಸೂಚಿತವಾಗುವ ಬೇರೇನಾದರೂ ವಿಷಯಗಳಿದ್ದರೆ ಅವುಗಳಾವುವು?

Degrees Books Medicines

Free H L, M S M, B, H, M' D, etc, Free Homeo Ayur UnaniNaturco degree by post also—Practitioner also get soon Homeo Materiamedica Rs 5 Homeo Practice book Rs 4 Insanity Cure Pills Rs. 10 Enclose 2 annas stamp —

Prof, Dr N. H, Chhatbar,
Principal Indian Homeopathi Institute & Society (Govt Regd)
P O, MAHUVA (Kathiawar Dt India.)

ನಮ್ಮ ಚಂದಾದಾರರಲ್ಲಿ-

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ ನವಯುಗದ ಇನ್ನೊಂದು ಸಂಪುಟವು ಕೊನೆಗೊಂಡು ಬರುವ ಸಪ್ಟಂಬರ ಆದಿಯಿಂದ ಹೊಸ ವರ್ಷಾರಂಭವಾಗುವುದು. ಈ ಸಮಯದಲ್ಲಿ ಚಂದಾಅವಧಿ ಮುಗಿಯುವವರು ದಯಮಾಡಿ ತಮ್ಮ ಚಂದಾ ಹಣವನ್ನು (ಚಾಲ್ತಿ ಮತ್ತು ಹಿಂದಿನ ಬಾಕಿ ಇದ್ದರೆ ಅದನ್ನೂ) ಆದಷ್ಟುತ್ವರೆಯಲ್ಲಿ ಕಳುಹಿಸಿಕೊಡುವಂತೆ ಅಪೇಕ್ಷಿಸುತ್ತೇವೆ.

ಹೊಸತಾಗಿ ಚಂದಾದಾರರಾಗುವವರಿಗೆ ಇದೀಗ ಸುಸಂದರ್ಭ

ಮೆನೇಜರ್,

ನವಯುಗ'ಕ್ಕೆ
ಮುಂಬಯಿ ಕನ್ನಡಿಗರ ಪ್ರೋತ್ಸಾಹ.

ನವಯುಗದ ಪ್ರತಿನಿಧಿಯಾಗಿ ಮುಂಬಯಿಗೆ ತೆರಳಿದ ಶ್ರೀ ಕೆ ಜಗನ್ನಾಥ ಶೆಟ್ಟರಿಗೆ ಮುಂಬಯಿಯ ಕನ್ನಡಿಗರು ಹೋದಲ್ಲೆಲ್ಲಾ ಪ್ರೀತಿಪೂರ್ವಕ ಸ್ವಾಗತವಿತ್ತು ಪ್ರೋತ್ಸಾಹಿಸುತ್ತಿರುವದಕ್ಕಾಗಿ ನಾವವರಿಗೆ ಆಭಾರಿಗಳಾಗಿದ್ದೇವೆ. ನೂರಾರು ಜನರು ಈಗಾಗಲೇ ಚಂದಾದಾರರಾಗಿ ಸೇರಿ ಪ್ರೋತ್ಸಾಹಿಸಿ ನಮ್ಮನ್ನು ಉಪಕೃತರನ್ನಾಗಿ ಮಾಡಿದ್ದಾರೆ. ಹಲವು ಜನರು ಚಂದಾದಾರರಾಗುವ ಭರವಸೆ ಇದೆ.

ಕೆಲವರು 'ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್'ನ ಪಾಲುಗಳನ್ನು ಪಡೆದು ನೆರವಾಗುತ್ತಿದ್ದಾರೆನ್ನಲು ಸಂತೋಷವಾಗುತ್ತದೆ.

—ಮೆನೇಜರ್,

ಪ್ಯಾರಿಸ್ ಪತನ ನಿಶ್ಚಯ!

ಪ್ಯಾರಿಸ್-ವಾರ್ಸಾ

ರಶ್ಯಾ ಸರಹದ್ದು ಮತ್ತು ಫ್ರಾನ್ಸಿನಲ್ಲಿ ಜರ್ಮನ್ ಸೇನೆಗೊದಗಿರುವ ಗಂಡಾಂತರಗಳಲ್ಲಿ ಒಂದು ಸಾಮ್ಯತೆಯಿದೆ. ಎರಡು ರಣರಂಗಗಳೂ ನಾಜೀ ಸೇನೆಯ ಪಾಲಿಗೆ ಎರಡು ಮಡುವಿನಂತಾಗಿವೆ. ಪೋಲೆಂಡ್ ಪ್ರಶ್ಯಾ ಸರಹದ್ದಿನಲ್ಲಿ ಜರ್ಮನರ ಬಾಲ್ಟಿಕ್ ಸೇನೆ ಮುಕ್ತಿಗೆಳಗಾಗಿ ಪಾರಾಗುವ ಹಾದಿ ತೋರದೆ ಚಡಪಡಿಸುತ್ತಿದೆ; ನೋರ್ಮಂಡಿಯಲ್ಲಿ ಫೆಲಾಸೀವಲಯದಲ್ಲಿ ಸುತ್ತುಗಟ್ಟಲ್ಪಟ್ಟ ಒಂದು ನಾಜೀ ದಳವೇ ನಿರ್ನಾಮಗೊಂಡಿದೆ. ಆ ಭಾಗದಲ್ಲಿ ಪಾರ್ಸಾದ ಕಡೆಗೆ ಕತ್ತರೀ ಧಾಳಿ ನಡೆಯುತ್ತಿದೆ; ಪಟ್ಟಣದ ಭಾಗವುರಿಯುತ್ತಿದೆ; ಪಟ್ಟಣದೊಳಗಡೆ ಸ್ವತಂತ್ರ ಫ್ರೆಂಚರು ದಂಗೆಯೆದ್ದಿದ್ದಾರೆ. ಈ ಭಾಗದಲ್ಲಿ ಪ್ಯಾರಿಸಿನೊಳಗೇನೇ 3 ಅಮೆರಿಕನ್ ದಂಡುಗಳು ನುಗ್ಗಿಹೋಗಿವೆ; ಗಾಳೀಕೊಡೆಯವರು ಅಲ್ಲಿ ಇಳಿದಿದ್ದಾರೆ; ನಗರದಲ್ಲಿ ಸ್ವತಂತ್ರ ಫ್ರೆಂಚರು ದಂಗೆಯೆದ್ದಿದ್ದಾರೆ. ಅಲ್ಲಿ ಪೂರ್ವ ಪ್ರಶ್ಯಾದ ಮೂಲಕ ರಶ್ಯಾನರು ಜರ್ಮನಿಯ ಆಕ್ರಮಣ ನಡಿಸಲಿದ್ದಾರೆ; ಇಲ್ಲಿಯೂ ಫ್ರಾನ್ಸಿನಿಂದ ಜರ್ಮನಿಯೊಳಗಡೆ ವರೆಗೆ ನುಗ್ಗುವ ಯೋಚನೆ ಆಂಗ್ಲೋ-ಅಮೆರಿಕಾನರಿಗಿದೆ.

ಇಟಲಿಯಲ್ಲಿ.

ಜರ್ಮನ್ ಸೇನೆಯನ್ನು ದೃಢವಾಗಿ ಉತ್ತರ ಕಡೆಗೊತ್ತುತ್ತಾ ಮಿತ್ರ ಸೇನೆ ಮುಂದೊತ್ತುತ್ತಿದೆ. ಫ್ಲೋರೆನ್ಸ್ ನಗರದ ಮಧ್ಯ ಭಾಗಕ್ಕೆ ಜರ್ಮನರು ಗುಂಡಿನ ಮಳೆಗರೆದು ಇನ್ನೂ ಆ ಪರಾರದಲ್ಲಿ ಹಾವಳಿಮಾಡುತ್ತಿದ್ದಾರೆ. ಆಫ್ರಿಕಾ ಯುದ್ಧದಲ್ಲಿ ನಂ 1ನೆ ಸ್ಥಾನ ಸಂಪಾದಿಸಿದ 4ನೇ ಹಿಂದೀ ಸೇನೆಯು ಇಟಲಿಯಲ್ಲೀಗ ಹೋರಾಡುತ್ತಿದೆ. ಜರ್ಮನರು ಹಿಂಜರಿಯಬೇಕಾಗಿ ಬಂದ ಕ್ರೋಧದಿಂದ ಇಟಲಿಯಲ್ಲಿ ಅಮಾನುಷ ಅತ್ಯಾಚಾರಗಳನ್ನು ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಈ ಅತ್ಯಾಚಾರಿಗಳ ಹೆಸರನ್ನು ಬರೆದಿಟ್ಟುಕೊಂಡು ಯುದ್ಧಾನಂತರ ಅವರಿಗೆ ಯೋಗ್ಯೋಚಿತ ಕಠಿಣ ಶಿಕ್ಷೆಯೀಯಲಾಗುವದೆಂದು ಮಿತ್ರಪಾಳಯದಿಂದ ಎಚ್ಚರಿಕೆ ಹೋಗಿದೆ.

ಒಳಾಂದೋಲನಗಳು.

ಸ್ವತಂತ್ರ ಫ್ರೆಂಚ್ ನಾಯಕ ಡಿ. ಗೋಲೆಯವರು ಫ್ರಾನ್ಸಿಗೆ ಬಂದಿದ್ದಾರೆ. ನಾಜೀ ಪಕ್ಷಪಾತಿ ವಿಚಿ ಮಂತ್ರಿಗಳಾದ ಲಾವೆಲ್, ಡಾರ್ನಾಂಡ್ ಮೊದಲಾದವರು ಜರ್ಮನ್ ಗಡಿಯ ಬೆಲ್ಫೋರ್ಟಿಗೋಡಿ ನಿಂತಿದ್ದಾರೆಂದು ತಿಳಿದುಬರುತ್ತದೆ. ಫ್ರಾನ್ಸಿನೊಳಗಡೆ ಫ್ರೆಂಚ್ ಸೇನೆಗಳು ಹೋರಾಟಕ್ಕೇಳುವ ಚಿಹ್ನೆ ಕಾಣುತ್ತಿದೆ. ಫ್ರಾನ್ಸ್-ಸ್ವಿಸ್ ಗಡಿಗೆ ಜರ್ಮನರು ಮುಂಜಾಗ್ರತೆಯಿಂದ ಅಧಿಕಾಧಿಕ ಸೇನಾ ಸಂಚಾರಮಾಡಿಕೊಂಡಿದ್ದಾರೆ. ವಾರ್ಸಾದಲ್ಲಿ ದಂಗೆಯೆದ್ದು ರಶ್ಯದಿಂದ ಸಹಾಯ ದೊರೆಯದೆ ಸ್ವತಂತ್ರ ಪೋಲೆಂಡ್ ದಳಗಳು ನಿರ್ನಾಮವಾದ ತಪ್ಪನ್ನು ಲಂಡನಿನ ಪೋಲೆಂಡ್ ಸರಕಾರವು ರಶ್ಯದ ಮೇಲೂ ರಶ್ಯವು ಲಂಡನಿನ ಆ ಸರಕಾರದ ಮೇಲೂ ಹೊರಿಸಿವೆ.

ಗೋರಿಂಗನ ದಿಗ್ಬಂಧನ?

ಹಿಟ್ಲರನ ಕೊಲೆಯತ್ನ ನಡಿಸಿ ಘಾಶಿ ಶಿಕ್ಷೆಗೊಳಗಾದ ಕೆಲವು ಸೇನಾನಿಗಳ ಪ್ರಾಣವುಳಿಸಲು ಪ್ರಯತ್ನಿಸಿದುದಕ್ಕಾಗಿ ಜರ್ಮನಿಯ ಗೋರಿಂಗ ಮತ್ತು ಅವನ ಪತ್ನಿಯನ್ನು ಸ್ವಂತ ಮನೆಯಲ್ಲೇ ದಿಗ್ಬಂಧನಗೊಳಿಸಿಟ್ಟಿದ್ದಾರೆಂದು ಅನಧಿಕೃತ ವಾರ್ತೆ.

ಇಟಲಿಗೆ ವಸಾಹತು.

ಇಟಲಿ ಯುದ್ಧ ಮಂಡಲದ ಪ್ರಮುಖರಲ್ಲೊಬ್ಬರಾದ ಕೌಂಟ್ ಕಾರ್ಲೋ ಸ್ಫೋರ್ಝಾರವರು ಮಿತ್ರರಾಷ್ಟ್ರಗಳ ಹಿತ ದೃಷ್ಟಿಯಿಂದಲೇ ಇಟಲಿಯ ಎಲ್ಲಾ ವಸಾಹತುಗಳನ್ನೂ ಅದಕ್ಕೆ ಕೊಡತಕ್ಕದ್ದೆಂಬ ಅಭಿಪ್ರಾಯ ಸೂಚಿಸಿದ್ದಾರೆ.

ಚರ್ಚಿಲ್— ರುಸವೆಲ್ಟ್ ಭೇಟಿ?

ಸದ್ಯದಲ್ಲೇ ಮತ್ತೊಮ್ಮೆ ಚರ್ಚಿಲ್ ರುಸವೆಲ್ಟ್ ಭೇಟಿ ನಡೆಯಲಿರುವದೆಂದೂ ಇನ್ನೊಂದು ಮಹಾ ಧಾಳಿ ಯೋಜನೆಯು ಅಲ್ಲಿ ರೂಪಿಸಲ್ಪಡಬಹುದೆಂದೂ ದಟ್ಟವದಂತಿಯಿದೆ. ನವಂಬರಿನ ಅಧ್ಯಕ್ಷ ಚುನಾವಣೆಗೆ ಮೊದಲೇ ಲಂಡನ್ ಅಥವಾ ಪ್ಯಾರಿಸಿನಲ್ಲಿ ಈ ಸಭೆಸೇರಬಹುದೆಂಬ ವದಂತಿಯನ್ನು ರುಸವೆಲ್ಟರ ಖಾಸಗೀ ಕಾರ್ಯದರ್ಶಿ ಸ್ಟೆಫೆನ್ ಅರ್ಲಿಯವರು ಅಲ್ಲಗಳೆದಿದ್ದಾರೆ.

ಜಾಪಾನಿನ ಮೇಲೆ ಬೋಂಬು

ಅಮೇರಿಕದ ಕೊತ್ತಳ ವಿಮಾನಗಳು ಜಾಪಾನಿನ ಮೂಲ ನೆಲವಾದ ಕ್ಯುಶು ನಗರದ ಮೇಲೆ ಬಲವಾಗಿ ಆಕಾಶ ಧಾಳಿ ನಡಿಸಿದವು.

ಡಿವೆಯವರ ಅಭಿಪ್ರಾಯ.

ಮುಂದಿನ ಅಧ್ಯಕ್ಷ ಚುನಾವಣೆಯಲ್ಲಿ ರುಸವೆಲ್ಟರ ಪ್ರತಿಸ್ಪರ್ಧಿಯಾಗಿ ರಿಪಬ್ಲಿಕನ್ ಪಕ್ಷದಿಂದ ನೇಮಕಗೊಂಡಿರುವ ಗವರ್ನರ್ ಥೋಮಸ್ ಡಿವೆಯವರು, ಯುದ್ಧಾನಂತರವೂ ಇಡೀ ಲೋಕವನ್ನು ಆಳಲಾಗುವಂತೆ ಇಂಗ್ಲಾಂಡು, ಅಮೇರಿಕಾ ರಶ್ಯಾ, ಚೀನಾಗಳು ಸೈನಿಕ ಒಪ್ಪಂದಮಾಡಿಕೊಳ್ಳುವ ಅಪಾಯವಿದೆಯೆಂದೂ, ಎಲ್ಲರಿಗೂ ಸಮಾನ ಸ್ವಾತಂತ್ರ್ಯವೀಯುವದೇ ಲೋಕಶಾಂತಿಯ ಸದ್ದಾರಿಯೆಂದೂ ಸಾರಿದ್ದಾರೆ. ಅಮೇರಿಕದ ಸ್ಟೇಟ್ ಸೆಕ್ರೆಟರಿ ಮಿ. ಕೋರ್ಡೆಲ್ ಹಲ್ಲರು ಇದಕ್ಕುತ್ತರವಿತ್ತು, ಅಂತರಾಷ್ಟ್ರೀಯ ಸಂಘವೊಂದರ ಮೂಲಕ ಲೋಕವ್ಯವಸ್ಥೆ ಮಾಡುವದೇ ತಮ್ಮ ಉದ್ದೇಶವಲ್ಲದೆ ಚತುರ್ರಾಷ್ಟ್ರಗಳ ಅಧಿಕಾರ ಸ್ಥಾಪಿಸುವ ಧ್ಯೇಯವಲ್ಲವೆಂದಿದ್ದಾರೆ.

ಬೊಂಬಾಯಿ ಕಾಂಗ್ರೆಸ್ ಪಕ್ಷೀಯರ ಸಭೆ.

ಮಾಜಿ ಕಾಂಗ್ರೆಸ್ ಪ್ರಧಾನಿ ಶ್ರೀ ಖೇರರ ನೇತೃತ್ವದಲ್ಲಿ ಬೊಂಬಾಯಿಯಲ್ಲಿ ಸೇರಿದ ಪ್ರಾಂತಿಕ ಕಾಂಗ್ರೆಸ್ ನ್ಯಾಯವಿಧಾಯಕ ಸದಸ್ಯರ ಸಭೆಯಲ್ಲಿ ಜಾತೀಯ ಸಂಧಾನ ಪ್ರಯತ್ನದಲ್ಲಿ ಗಾಂಧಿ-ಜಿನ್ನಾ ಮಾತುಕತೆಗೆ ಬೆಂಬಲ, ರಾಷ್ಟ್ರೀಯ ಸರಕಾರದ ಬೇಡಿಕೆ ಮೊದಲಾದ ನಿರ್ಧಾರಗಳಾಗಿವೆ. 'ಸರಕಾರವೆಷ್ಟೇ ಬಲಶಾಲಿಯಿದ್ದರೂ ಹಿಂದೂ-ಮುಸ್ಲಿಮರೊಂದಾಗಿ ಮುಂದಿಡುವ ಒಂದು ಯೋಜನೆಯನ್ನು ಧಿಕ್ಕರಿಸುವದು ಅದಕ್ಕೆ ಅಸಾಧ್ಯವಾಗುವದು' ಎಂದು ಶ್ರೀ. ಖೇರರ ಅಭಿಪ್ರಾಯ.

ಹಿಂದುಸ್ಥಾನಕ್ಕೆ ಧಾನ್ಯವೇಕೆ ಆಮದಾಗದು?

ಅಂತರಾಷ್ಟ್ರೀಯ ಮಹಿಳಾ ಸಂಘದ ಮೆಂಚೆಸ್ಟರ್ ಶಾಖೆಯ ಕಾರ್ಯದರ್ಶಿ ಮಿಸ್. ಫಿಲಿಪ್ಸಳು 'ಮೆಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾಳೆ: 'ದ್ವಿತೀಯ ಬರಗಾಲ ನಿರ್ಮಾಣವಾಗದಂತೆ ಬ್ರಿಟಿಷ್ ಮತ್ತು ಹಿಂದೀ ಸರಕಾರಗಳು ಬಹಳ ಪ್ರಯತ್ನ ಮಾಡಿರುತ್ತಾವಾದರೂ ಇನ್ನೂ ಎಷ್ಟೋ ಆಗಬೇಕಾಗಿದೆಯೆಂಬುದು ವರದಿಗಳಿಂದ ಗೊತ್ತಾಗುತ್ತದೆ. ಹಿಂದುಸ್ಥಾನಕ್ಕಗತ್ಯವಿದೆ ಎಂದು ಕೇಂದ್ರ ಆಹಾರ ಸಮಿತಿಯಿಂದ ಶಿಫಾರಸು ಮಾಡಲ್ಪಟ್ಟ ಆಹಾರ ಧಾನ್ಯಗಳ ಪರಿಮಾಣದಲ್ಲಿ 7ಲಕ್ಷ ಟನ್ನು ಕಡಿಮೆಮಾಡಿ ಕಳುಹುವ ವ್ಯವಸ್ಥೆಯನ್ನು ಬ್ರಿಟಿಷ್ ಸರಕಾರವು ಮಾಡಿದೆಯೆಂಬುದನ್ನು ತಿಳಿದು ಅತೀವ ಸಂಕಟವಾಗುತ್ತಿದೆ. ಕೌನ್ಸಿಲು ಬ್ರಿಟಿಷ್ ಸರಕಾರದ ವರ್ತನೆಯ ಕುರಿತು 'ಬಲವಾದ ಅಸಮಾಧಾನ' ಸೂಚಿಸಿರುವದು ಸೋಜಿಗವಲ್ಲ. ಇದಕ್ಕೆ ಹಡಗದ ಅನಾನುಕೂಲತೆಗಳ ಕಾರಣವನ್ನು ಮಿ. ಅಮೆರಿ ಕೊಡುತಿದ್ದಾರೆ. ಇದು ಹಿಂದೀಯರನ್ನು ಸಮಾಧಾನಪಡಿಸುವ ತಿಲ್ಲ. ಇಂಗ್ಲಾಂಡಿಗೆ ಆಹಾರ ಆಮದು ಪಡಿಸಿಕೊಳ್ಳುವದಕ್ಕಾದರೆ ಅತ್ಯನುಕೂಲವಿದೆ ಎಂಬುದು ಅವರಿಗೆ ಗೊತ್ತಿದೆ. ಆದ್ದರಿಂದ ಹಸಿವು ಪೀಡಿತ ಭಾರತೀಯರಿಗಾಗಿ ಧಾನ್ಯ ಕಳುಹಿಸುವ ಪ್ರಶ್ನೆ ಬಂದಾಗಲೆಲ್ಲಾ ಹಡಗಾನುಕೂಲತೆಯೇಕೆ ತಪ್ಪಿಹೋಗುತ್ತಿದೆ ಎಂದು ಅವರು ಸ್ವಾಭಾವಿಕವಾಗಿ ಪ್ರಶ್ನಿಸುತ್ತಾರೆ".

ಬೊಂಬಾಯಿಯಲ್ಲಿ ಪೋಲಿಸ್-ಪಠಾಣ ಬಡಿದಾಟ.

ತಾ. 18ನೇ ರಾತ್ರಿ ಬೊಂಬಾಯಿಯಲ್ಲಿ ಪೋಲಿಸರಿಗೂ ಪಠಾಣರಿಗೂ ಹೊಡೆದಾಟವಾಗಿ ಪೋಲೀಸರು ಗುಂಡುಹಾರಿಸಿದರೆಂದೂ 36 ಜನರ ದಸ್ತಗಿರಿಯಾಗಿದೆಯೆಂದೂ ತಿಳಿದುಬರುತ್ತದೆ. ಗಲಭೆಯ ಕಾರಣವಿಷ್ಟೆ: ವರ್ಲಿಯಲ್ಲಿ ಪೋಲಿಸನೊಬ್ಬನು ಕಾಕು ಬೀಸುವ ಸಲುವಾಗಿ ಹಿಟ್ಟಿನ ಗಿರಣಿಗೆ ಹೋಗಿದ್ದ. ಗಿರಣಿಯ ಪಠಾಣ ಕಾವಲುಗಾರನು 1½ ಆಣೆ ಮಜೂರಿ ಹೇಳಿದ. ಪೋಲಿಸನು ತನ್ನ ಕೆಲಸ ಮುಗಿಸಿ ಒಂದಾಣೆ ಮಾತ್ರ ಕೊಟ್ಟು ಅರ್ಧಾಣೆ ಕೊಡಲು ನಿರಾಕರಿಸಿದ. ಅವರಿಬ್ಬರು ಬೈದಾಡಿಕೊಂಡು ಹೊಡೆದಾಟಕ್ಕೆ ಹತ್ತಿದಾಗ ಆಸುಪಾಸಿನ ಪೋಲೀಸರೂ ಪಠಾಣರೂ ಇಕ್ಕಡೆಗೂ ಸೇರಿ ಗಲಭೆ ಬಲಗೊಂಡಿತು. ಅಂತೂ ಅದು ಆರು ಪೈ ಬೆಲೆಯ ಜಗಳ!

ಕಟಪಾಡಿ—ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿ- ಕಟಪಾಡಿ ದ. ಕ. ಇವರು ಸಮಿತಿಯ ಭವನದಲ್ಲಿ ಇದೇ ಬರುವ ತಾ- 1-9-1944ನೇ ಶುಕ್ರವಾರ, ಸಾಯಂ, ಗಂಟೆ 7ಕ್ಕೆ- ಶ್ರೀ ನಾರಾಯಣ ಗುರು ಜಯಂತಿ ಉತ್ಸವವನ್ನು ಜರಗಿಸುವರು, ಶ್ರೀ ಗುರು ಪಟ ಮೆರವಣಿಗೆ, ಗುರು ಚರಿತ್ರೆಯ ಕುರಿತು ಭಾಷಣ, ಗುರು ಪೂಜೆ ಇತ್ಯಾದಿ ಸತ್ಕಾರ್ಯಗಳಲ್ಲಿ ಸಹಭಾಗಿಯಾಗಲು ಗುರು ಭಕ್ತರಿಗೆಲ್ಲಾ ಸುಸಂದರ್ಭ-

ಕಸ್ತೂರಿ ಬಾ ಸ್ಮಾರಕ ನಿಧಿ.

ಶ್ರೀ. ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರ ಮೂಲಕ ವಸೂಲಾದದ್ದು.

ರೂ. ಇಂಹರಂತೆ ಕೊಟ್ಟವರು:- ಶ್ರೀ ಪಾಂಗಾಳ ಮಂಜುನಾಥ ನಾಯ್ಕರು ಮತ್ತು ಸಹೋದರರು- (ವಾಗ್ದಾನ) ರೂ ೧೦೧ರಂತೆ ಓರ್ವ ಸಹಾನುಭೂತಿಗಳಿಂದ- ರೂ- ೩೫ರಂತೆ ಕೆ- ಮಂಜುನಾಥ ಕಾಮತ್ ಮತ್ತು ಕಂಪೆನಿ- ರೂ- ೨೫ರಂತೆ- ಶ್ರೀ- ಕೆ ಮುಕುಂದ ಶಾನುಭಾಗ ಮತ್ತು ಪುತ್ರರು- (ಕಾಪು) ಶ್ರೀ. ಕೆ- ಮಂಜುನಾಥ ಮತ್ತು ಸಹೋದರರು (ಶಿರ್ವ) ಶ್ರೀ- ಕೆ- ಬಾಬು ಕಾಮತ್ ಶ್ರೀ- ಯು. ಎ- ಶೆಣ್ಯೆ (ಪಡುಬಿದ್ರಿ)-

(ಮುಂದುವರಿವುದು)

ಇಂಗ್ಲಿಷ್ ಕಲಿಯಲಿಲ್ಲವಲ್ಲಾ ಎಂದು ಚಿಂತಿಸಬೇಡಿರಿ

ಸುಲಭದಲ್ಲಿ ಇಂಗ್ಲಿಷ್

ಎಂ ಅನ್ಯ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲಿಷ್ ಕಲಿಸುವ ಪುಸ್ತಕವನ್ನು ಅಭ್ಯಾಸಮಾಡಿರಿ.

ನಮ್ಮಲ್ಲಿ ಸಿಗುವ ಕನ್ನಡ ಪುಸ್ತಕಗಳ ಪಟ್ಟಿಗಾಗಿ 0-2 0 ಸ್ಟಾಂಪಿನೊಂದಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

23—8 -1944ರಿಂದ

ಪ್ರಗತಿಯವರ ವಿನೋದ ಚಿತ್ರ

'ನನ್ನ ಪತ್ನಿ' ಅಥವಾ

ಸಂಶಯ ಕಲ್ಲೋಲ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರ- ಕನ್ನಡ ವಸಂತಸೇನಾ

WANTED

A Secondary Grade Trained Teacher and a Secondary Grade Untrained Teacher. Application should reach the under-signed before 31-8-44.

Manager,
Halnad Higher Elementary School, Kavrady, Kandlur, P.O.

ದಕ್ಷಿಣ ಕನ್ನಡ-

ಮಂಗಳೂರು

ಪ್ಲೇಗ್ ವರದಿ—ತಾ| 12 8 44ಕ್ಕೆ ಅಂತ್ಯವಾಗುವ ವಾರದಲ್ಲಿ, 6ನೇ ವಾರ್ಡಿನಲ್ಲಿ, ಮುಂಚಿನ ವಾರ ಬಿದ್ದಲ್ಲಿಯೇ ಮತ್ತೊಂದು ಇಲಿಯೂ, ಮತ್ತೆರಡು ಕಡೆಗಳಲ್ಲಿ ಎರಡು ಇಲಿಗಳೂ ಬಿದ್ದ ವರದಿಯಾದೆ ಆ ಮನೆಗಳನ್ನು ಖಾಲಿಮಾಡಿಸಿ ಸ್ವಚ್ಛಗೊಳಿಸಲಾಗಿದೆ. ಬೇರೆಬೇರೆ ಕಡೆಗಳಲ್ಲಿ ಒಟ್ಟು 1797 ಇಲಿ ಬಿಲಗಳನ್ನು ವಿಷ ಪದಾರ್ಥದಿಂದ ಸ್ವಚ್ಛಗೊಳಿಸಿರುವರು. ಈ ವರೆಗೆ ಸ್ವಚ್ಛಗೊಳಿಸಲ್ಪಟ್ಟ ಇಲಿ ಬಿಲಗಳು 91,208- ಈ ತನಕ ಪ್ಲೇಗು ನಿವಾರಕ ದಾಕು ಹಾಕಿದ ಸಂಖ್ಯೆ 26,682. ಪ್ಲೇಗು ರೋಗ ಯಾರಿಗೂ ತಗಲಿಲ್ಲ ಆರೋಗ್ಯಾಧಿಕಾರಿಗಳು, ಎಂದಿನಂತೆ ಸದಾ ಎಚ್ಚರದಿಂದಿದ್ದು, ವಿಚಕ್ಷಣತೆಯಿಂದ ನಿವಾರಣಾಕಾರ್ಯವನ್ನು ಮುಂದೊತ್ತುತ್ತಿರುವರು

ಮಾಂಸ ಮಾರಾಟ—ರೂಪಾಯಿಗೆ ಎರಡು ರಾತ್ರಿನಂತೆ ಕುರಿಮಾಂಸವನ್ನು ಮಾರಾಟ ಮಾಡಬೇಕೆಂದು ಮುನಿಸಿಪಾಲಿಟಿಯವರು ವಿಧಿಸಿದಂದಿನಿಂದ ನಿಂತುಹೋದ ಮಾರಾಟವು, ಈಗ, ರಾತ್ತಲಿಗೆ 0 14 0ಯಂತೆ ಮಾರಬಹುದೆಂದು ಗೊತ್ತಾದ ನಂತರ ಆರಂಭವಾಗಿದೆ. ರೂಪಾಯಿಗೆರಡು ರಾತ್ರಿನಂತೆ ಮಾರಾಟವಾಡುವುದು ಹೇಗೆ ಅಸಾಧ್ಯವೆಂದು ಅಧಿಕಾರಿಗಳಿಗೆ ವಿವರಿಸಲಾಯಿತೆಂದೂ, ಅನಂತರ ಮೇಲ್ಕಾಣಿಸಿದ ದರದಲ್ಲಿ ಮಾರಾಟಮಾಡುವಂತೆ ಅನುಮತಿ ದೊರೆಯಿತೆಂದೂ ತಿಳಿಯಲಾಗಿದೆ.

ಸಪ್ಪೆ ಆಟ—ಆನುಪ್ರಿದ್ದರಿಂಬ ಅಪಾದನೆಯಲ್ಲಿ, ಕಳೆದ ಶುಕ್ರವಾರ ಕೆಲವರ ಕೈಸ್ಟು ಆಗಿದೆ.

ಹೊಸ ನೋಟುಗಳು—ರಿಸರ್ವ್ ಬೇಂಕಿನವರು ಬೇಗನೆ ಹೊಸ ಹತ್ತು ರೂಪಾಯಿ ನೋಟುಗಳನ್ನು ಹೊರಡಿಸಲಿರುವರೆಂದು ಪ್ರಕಟವಾಗಿದೆ. ಈ ನೋಟು 5⅝' ಉದ್ದ 3⅛' ಅಗಲವಾಗಿರುವುವು.

ಶವ ಸಿಕ್ಕಿದೆ—ಸಲಿಕ್ಸ್‌ಪ್ರೆಸ್ ಬಜಾರಿನ ಬಾವಿಯಲ್ಲಿ, ಒಬ್ಬ ಮಲೆಯಾಳಿ ಯುವಕನ ಶವವು, ಕಳೆದ ಶುಕ್ರವಾರ ಬೆಳಗ್ಗೆ ತೇಲುತಿದ್ದುದು ಕಂಡು ಬಂದಿದೆ. ಇವನು ಕೆಲತಿಂಗಳ ಹಿಂದೆ ಮಂಗಳೂರಿಗೆ ಬಂದಿದ್ದನೆಂದೂ, ಹೋಟೆಲ ಕೆಲಸಕ್ಕಿದ್ದನೆಂದೂ ತಿಳಿಯಲಾಗಿದೆ ಸ್ವಚ್ಛ ಬಟ್ಟೆಗಳನ್ನು ಧರಿಸಿಕೊಂಡಿದ್ದನು.

ಉಡುಪಿ

ಕರ್ನಾಟಕ ಸಂಘ ಸ್ಥಾಪನೆಯಸಲುವಾಗಿ ತಾ| 19ರಲ್ಲು ಸಂಜೆ ಮುನಿಸಿಪಲ್ ಮ್ಯಾನ್ ಶಾಲೆಯಲ್ಲಿ ಶ್ರೀ| ಕಡೆಕಾರು ರಾಜಗೋಪಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಮಹಾ ಜನ ಸಭೆಯೊಂದು ಜರಗಿತು. ಕರ್ನಾಟಕ ಸಂಘ ಸ್ಥಾಪನೆಯು ಅತ್ಯಾವಶ್ಯಕವೆಂದು ನಿರ್ಧರಿಸಲ್ಪಟ್ಟ ಬಳಿಕ ನಿಯಮಾವಳಿಗಳನ್ನು ತಯಾರಿಸಿ ತಾ| 26ರಲ್ಲು ಜರಗಲಿರುವ ಮಹಾ ಸಭೆಯ ಮುಂದಿರಿಸುವರೆ ಏಳು ಮಂದಿಯುಳ್ಳ ಕಮಿಟಿ ನೇಮಕವಾಯಿತು -

ನಗರ ಸಭೆಗೆ-ಸಂಬಂಧಿಸಿದ ನಗರ ಸಭೆಯ ದೃಷ್ಟಿಯಿಂದ ಖಾಲಿ ಸ್ಥಳವೆಂದು ಪರಿಗಣಿಸಿ ಸದ್ರಿ ಸ್ಥಳದ ಟೇಕ್ಸ್ ವಸೂಲಿ ಬಗ್ಗೆ ಸ್ಥಳೀಯ ಡಿ| ಮು| ಕೋರ್ಟಿನಲ್ಲಿ ಹೂಡಲಾಗಿದ್ದ ವ್ಯಾಜ್ಯವೊಂದು ವಾದಿಗೆ ಅನುಕೂಲವಾಗಿ ತೀರ್ಮಾನಿಸಲ್ಪಟ್ಟಿತೆಂದು ತಿಳಿದು ಬರುತ್ತದೆ

ಸೀಮೆ ಎಣ್ಣೆ—ಸಾಮಿಂದ ಆರುವರಿ ಗೋಲ್ ಹುಂಡಿಯನ್ನು ಜಿಲ್ಲಾಧಿಪತಿಗಳು ಜನರಿಗೆ ಸೇರಿಗೆ 0-4 9ರಂತೆ ವಿಕ್ರಯಿಸುವ ಬಗ್ಗೆ ಮೆಸರ್ಸ್ ಆದಮ್ ಹಾಜಿ ಪೀರ್ ಮಹಮ್ಮದ ಇಸ್ಮಾಕ್, ಬಂದರು ಇವರಿಗೆ ಲೈಸೆನ್ಸ್ ಮಾಡಿದ್ದು, ಜನರು ಖಾಸಗಿ ಉಪಯೋಗಕ್ಕೆ ದಿನಕ್ಕೆ ಒಂದು ಸೇರಿನಂತೆಯೂ, ಪಟ್ಟಣ-ಗಾಡಿಗಳವರು 3 ಸೇರಿನಂತೆಯೂ ಪಡೆಯಬಹುದೆಂದು ಜಾಹೀರುಮಾಡಿರುವರು

ರಮಜಾನ್ ಹಬ್ಬಕ್ಕೆ ಡಬ್ಬಲ್ ಸಕ್ಕರೆ—ರಮಜಾನ್ ಹಬ್ಬದ ಸಲುವಾಗಿ ಈ ತಿಂಗಳಲ್ಲಿ ಮಹಮ್ಮದೀಯ ಬಂಧುಗಳಿಗೆ ಅವರವರ ರೇಶನ್ ಕಾರ್ಡುಗಳಲ್ಲಿ ಸೂಚಿಸಲ್ಪಟ್ಟ ಮಿತಿಯ ಡಬ್ಬಲ್ ಸಕ್ಕರೆಯು ಕೊಡಲಾಗುವುದೆಂದು ಜಿಲ್ಲಾ ಕಲೆಕ್ಟರರ ಪ್ರಕಟಣೆಯಿಂದ ಜಾಹೀರುಪಡಿಸುತ್ತದೆ

ಅಕ್ಕಿ, ಭತ್ತ, ಅವಲಕ್ಕಿ, ಹುರಿಯಕ್ಕಿ, ಅಕ್ಕಿ ಹಿಟ್ಟು—ಇವಿಷ್ಟನ್ನು ಜಿಲ್ಲಾ ಕಲೆಕ್ಟರರು ಯಾ ಅವರಿಂದ ಅಧಿಕೃತರಾದವರಿಂದ ಪರ್ಮಿಟು ಪಡೆದ ವಿನಹಾ ಜಿಲ್ಲೆಯ ಒಂದು ತಾಲೂಕಿನಿಂದ ಇನ್ನೊಂದು ತಾಲೂಕಿಗೆ ನೆಲ, ಜಲ, ರೈಲ್ ಮಾರ್ಗವಾಗಿ ಒಯ್ಯಕೂಡದಾಗಿಯೂ ಈ ಕಾನೂನನ್ನು ಮುರಿದವರಿಗೆ ಮೂರು ವರ್ಷಗಳ ಅಧಿಕ ಶಿಕ್ಷೆ ಮತ್ತು ದಂಡನೆ ವಿಧಿಸಲಾಗುವುದೆಂದೂ ಜಿಲ್ಲಾ ಕಲೆಕ್ಟರರು ಪ್ರಕಟಣೆ ಕೊಟ್ಟಿರುವರು

ಪ್ರಚಾರ—ಜಿಲ್ಲಾ ವಿದ್ಯಾಧಿಕಾರಿಗಳ ಸಹಾಯಕರಾದ ಶ್ರೀ| ಬಿ| ವಿ| ರಮಣ ಬಿ, ಎ ಎಲ್, ಟಿ, ಯವರು ಇದೇ ತಾ| 15ರಲ್ಲಿ ಕುಂದಾಪುರ ಬೋರ್ಡ್ ಹೈಸ್ಕೂಲಿನಲ್ಲಿಯೂ, ತಾ| 17ರಲ್ಲಿ ಉಡುಪಿ ಬೋರ್ಡ್ ಹೈಸ್ಕೂಲು ಮತ್ತು ಮಿಶನ್ ಹೈಸ್ಕೂಲುಗಳಲ್ಲಿಯೂ ಭಾಷಣಗಳನ್ನಿತ್ತು ಯುವಕರಿಗೆ ಯುದ್ಧದಿಂದೊದಗಿರುವ ಸುಸಂದರ್ಭ, ಕೈಗಾರಿಕಾಶಿಕ್ಷಣ ಮತ್ತು ಮಿಲಿಟರಿ ಖಾತೆಗಳಲ್ಲಿ ಪಡೆಯುವ ಇತರ ಪ್ರಯೋಜನ ವೇದಲಾದುವುಗಳ ಕುರಿತು ಭಾಷಣವಿತ್ತರು. ಕೆಲವರು ಯುದ್ಧ ಖಾತೆಗೆ ಸೇರಿದರಾಗಿ ತಿಳಿದು ಬರುತ್ತದೆ.

ಜಿಲ್ಲಾ ಕಲೆಕ್ಟರರ ಪ್ರಕಟಣೆ.

ಅಕ್ಕಿ ವ ಭತ್ತ ರಿಕ್ವಿಜಿಶನ್ ಸೂತ್ರಗಳನ್ನು ಉಲ್ಲಂಘಿಸಿ ಮಾಡಿದ ಈ ವರೆಗಿನ ಅಪರಾಧಗಳ ಮೇಲೆ ವ್ಯವಹಾರ ನಡೆಸಲಾಗುವುದಿಲ್ಲವೆಂದೂ ಆದುದರಿಂದ ಈ ತಿಂಗಳಾಂತ್ಯದೊಳಗಾಗಿ ರಿಕ್ವಿಜಿಶನ್ ಮಾಡಲ್ಪಟ್ಟ ಅಥವಾ ಮಿಗಿತೆಯ(surplus) ಅಕ್ಕಿಯನ್ನು ತಾವಾಗಿಯೇ ಸ್ವಸಂತೋಷದಿಂದ ದ. ಕ ಹೋಲ್‌ಸೇಲ್ ಸ್ಟೋರಿಗಾಗಲೀ ಅದರ ಇತರ ಡಿಪೋಗಳಿಗಾಗಲೀ ಕಳುಹಿಸಿಕೊಡಬೇಕಾಗಿಯೂ ದ. ಕ- ಜಿಲ್ಲಾ ಕಲೆಕ್ಟರರು ಸರ್ವರ ಅವಗಾಹನೆಗೂ ಈಮೂಲಕ ಜಾಹಿರು ಪಡಿಸಿರುತ್ತಾರೆ.

ತಿದ್ದುಪಡಿ-ಕಳೆದ ಸಂಚಿಕೆಯ 5ನೇ ಪುಟದಲ್ಲಿ ವಕೀಲ್ ಶ್ರೀ| ಕೆ- ರಾಮಕೃಷ್ಣರಾಯರು ಪ್ರಕಟಿಸಿದ ಉಡುಪಿ ಡಿ| ಮು| ಕೋರ್ಟಿನ ನೋಟೀಸಿನ ವ್ಯವಹಾರ ನಂಬ್ರವು O P, 64/44 ಆಗಿರುತ್ತದೆ. —ಸಂ| ನ|

"ಬಡ ಜನರ ಹಸಿವೆಯು ಹಲವರ ಚೀಲವನ್ನು ಭರ್ತಿಮಾಡಿತು".

ನಮ್ಮ ನಾಡಿನಲ್ಲಿ ಕೂಳಿಲ್ಲದೆ ಕೂಗು ಎಲ್ಲಿ ನೋಡಿದರಲ್ಲಿ ಬಡಜನರ ಬಾಯಿಂದ ಕೇಳಬರುತ್ತಿದೆ- ರೇಷನಿಂಗ್ ಕಾರ್ಡುಗಳು ಸರಕಾರದಿಂದ ಕೊಟ್ಟಿರುವುದಾದರೂ, ಅವರ ಅರೆಹೊಟ್ಟೆಗೆ ಸಾಕಾಗುವಂತಿಲ್ಲ. ಅದರಲ್ಲಾ ವಾರದ ಮಧ್ಯ ಅಕ್ಕಿಯು ಬದಲಿಗೆ ಕಾಳುಗಳ ವಿತರಣೆ ಹೀಗಾಗಿ ಬಡವರ ಹಸಿವೆಯ ಕಿಚ್ಚು ಮತ್ತಷ್ಟು ಪ್ರಜ್ವಲಿಸಿ ಅಕ್ಕಿಯ ದಾಸ್ತಾನು ಎಲ್ಲಿರುವುದೆಂದು ಮೂಷಿಕಗಳು ತಮ್ಮ ಮೂಗಿನಿಂದಲೇ ತಿಳಕೊಳ್ಳುವಂತೆ, ಈ ದರಿದ್ರರೂ ಕೂಡ ಅವರಿವರಿಂದ ತಿಳುಕೊಂಡು ಆ ಅಕ್ಕಿಯ ಅಸ್ವಾಮಿಯ ಮನೆಗೆ ಹೋಗಿ ಸಾಲಮಾಡಿ ತಂದಿರುವ ತಮ್ಮ ಹಣವನ್ನು ದುಬಾರಿ ದರದಲ್ಲಿ ಅವನ ಕೈಗೆ ಕೊಟ್ಟು ಕತ್ತಲಾದೊಡನೆ ಪೇಟಾಟದಿಂದ ಹೊತ್ತುಕೊಂಡು ಹೋಗಿ ಮನೆಯಲ್ಲಿಟ್ಟುಕೊಂಡು ತಿನ್ನುವರು- ಎಷ್ಟೋ ಜನರು ಇದರಿಂದ ತಮ್ಮ ರೇಷನಿಂಗ್ ಕಾರ್ಡುಗಳನ್ನು ರದ್ದುಮಾಡಿಕೊಂಡರು. ಬಡಪಾಯಿ ಹೊಟ್ಟೆಗಿಲ್ಲದ ಸಂಕಟ, ಇನ್ನೊಂದು ಬದಿಯಲ್ಲಿ ದುಬಾರಿ ದರದಲ್ಲಿ ಹಣಕೊಟ್ಟ ಪಶ್ಚಾತ್ತಾಪ

ಇಷ್ಟಾದರೂ ತಾವು ತಂದಿರುವ ಅಕ್ಕಿಯ ಪ್ರಸ್ತಾಪವನ್ನು ಎತ್ತಲಿಕ್ಕೆ ಹೆದರುವರು- ಯಾಕೆಂದರೆ ವಸ್ತ್ರ ಅಕ್ಕಿಯಾರು ಕೊಟ್ಟರು ಎಂಬ ಭೀತಿಯೇ ಅವರನ್ನು ಹಿಂಬಾಲಿಸುತ್ತಿದೆ, ಇನ್ನು ಕೆಲವರು ಪೆಟ್ಟು ಸಹಾ ತಿನ್ನಬೇಕಾಗ ಬಹುದು ಎಂಬ ಭೀತಿಯಿಂದಲೇ ಸುಮ್ಮನಿರುವರು.

ಇದರಿಂದ ಕಳ್ಳ ಸಂತೆಯಲ್ಲಿ (ಬ್ಲಾಕ್ ಮಾರ್ಕೆಟ್) ಮಾರಾಟ ಮಾಡುವ ಜನರಿಗೆ ಮತ್ತಷ್ಟು ಧೈರ್ಯ ಹುಟ್ಟಿ, ತಮ್ಮ ಚೀಲವನ್ನು ಭರ್ತಿಮಾಡಿಕೊಳ್ಳುವ ಆಲೋಚನೆಯಲ್ಲೇ ಇಡೀ ದಿನ ಮಗ್ನರಾಗಿರುವರಲ್ಲದೆ, ಬಡ ಜನರ ಹಸಿವೆಯ ಗೋಳನ್ನು ಕ್ಷಣಕಾಲವೂ ಎಣಿಸಲಾರರು ಇಂತಹ ಲೋಭಿಗಳು ಊರಿನಲ್ಲಿ ಅನೇಕರಿರುವರು. ಅವರಲ್ಲಿ ಕೆಲವರು ಮಾನ್ಯ ಸರಕಾರದವರ ದೃಷ್ಟಿಗೆ ಬಿದ್ದು ನ್ಯಾಯಕ್ಕೆ ಗುರಿಪಟ್ಟಿರುವರು. ಬಡ ಜನರು ಸತ್ತರೂ ಚಿಂತಿಲ್ಲ, ತಮ್ಮ ಕೈಗೆ ಹಣ ಸಿಕ್ಕಬೇಕೆಂಬ ದುರಾಸೆಯೇ ಅವರಲ್ಲಿ ಹೆಚ್ಚಿರುವುದು ವಿಚಾರ ಪರದೃಷ್ಟಿ ಅವರಲ್ಲಿಲ್ಲ- ದೇಶ ಪ್ರೇಮವು ಮೊದಲೇ ಇಲ್ಲ- ಬಡ ಜನರ ಹೊಟ್ಟೆಯ ಉರಿಯನ್ನು ಅವರೇನ ಬಲ್ಲರು? ಸಾವನ್ನು ತಪ್ಪಿಸಿಕೊಳ್ಳಲೋಸುಗ ಪೇಚಾಟಪಟ್ಟು ಅವರು ಹೇಳಿದಷ್ಟು ಹಣವನ್ನು ಕೊಟ್ಟು, ಅಕ್ಕಿಯನ್ನು ತರುವರು-

ಈ ತರದ ಪೇಚಾಟವನ್ನು ಇನ್ನೆಷ್ಟು ದಿನ ನೋಡಿಯಾರು? ಹಣವೆಲ್ಲಿಂದ ಈ ದರಿದ್ರರಿಗೆ ಸಿಕ್ಕಬೇಕು? "ಕೂಳಿಲ್ಲ ಕೂಳಿಲ್ಲ"ವೆಂದು ಕೂಗುವುದಕ್ಕಿಂತ ಕಳ್ಳ ಸಂತೆಯಲ್ಲಿ ಅಕ್ಕಿಯನ್ನು ಮಾರಾಟ ಮಾಡುವ ಮನುಷ್ಯರನ್ನು ಸರಕಾರಕ್ಕೆ ಏತಕ್ಕೆ ತಿಳಿಸಬಾರದು? ಹಾಗೆ ತಿಳಿಸುವುದರಿಂದ ಪುಣ್ಯವೂ, ಸರಕಾರದಿಂದ ಕೀರ್ತಿಯೂ, ಸಿಕ್ಕುವುದರಲ್ಲಿ ಸಂದೇಹವಿಲ್ಲ- ಬಡ ಜನರೇ ನಿಮ್ಮನ್ನು ಇಂದು ಇಂತಹ ವಿಷಮ ಪರಿಸ್ಥಿತಿಯಿಂದ, ಸಾಕಿ ಸಲಹುವುದು ಸರಕಾರವೊಂದೇಯಲ್ಲದೆ ಮತ್ತಾರೂ ಇಲ್ಲವೆಂಬುದನ್ನು ದೃಢವಾಗಿ ತಿಳಿದು ಧೈರ್ಯತಾಳಿರಿ!

ಎನ್. ಎಸ್. ಬೇಳೂರ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ—ಇದರ ವಾರ್ಷಿಕೋತ್ಸವವೂ ಮೊಗವೀರ ಫ್ರೀ ನೈಟ್ ಹೈಸ್ಕೂಲಿನ ಪಾರಿತೋಷಕ ಹಂಚೋಣದ ಸಮಾರಂಭವೂ ಇದೇ ತಾ, ೨೦ರಲ್ಲಿ ಸರ್ ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾಸದನದಲ್ಲಿ, ಧರ್ಮಪ್ರಕಾಶ ಶ್ರೀ|ಬಿ. ಎಂ. ಶ್ರೀನಿವಾಸಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು.

ಬಿಲ್ಲವರ ಎಸೋಸಿಯೇಶನ್ ಮುಂಬಯಿ—ಇದರ ಬಾಲ್ತಿ ವರ್ಷದ ಕಾರ್ಯಕರ್ತರು:—ಶ್ರೀ ಬಿ. ಯಸ್. ಅಮೀನರು (ಅಧ್ಯಕ್ಷರು), ಶ್ರೀ. ಟಿ. ಕೆ. ಅಮೀನರು (ಉಪಾಧ್ಯಕ್ಷರು), ಶ್ರೀ ಬಿ. ಟಿ. ಅಂಚನ್, (ಪ್ರಧಾನ ಜನರಲ್‌ಕಾರ್ಯದರ್ಶಿ), ಶ್ರೀ ಜಿ ಎ ಕೋಟಿಯನ್ (ಉಪಕಾರ್ಯದರ್ಶಿ), ಶ್ರೀಗಳಾದ ಆನಂದ ಯಸ್. ಪಾಲ್ಕೆ ಮತ್ತು ರಘುವೀರ ಯಂ, ಕೋಟಿಯನ್ (ಗೌರವ ಜೊತೆ ಕೋಶಾಧಿಕಾರಿಗಳು.)

ಯೇಲಂ ಇಸ್ತಿಹಾರು ಪ್ರಕಟಣೆ

ಕಾರ್ಕಳ ತಾಲೂಕ ಬೆಳುವಾಯಿ ಗ್ರಾಮದ ಕಡಂಬಬೆಟ್ಟು ವ ಕ್ಷೇತ್ರ ಸದ್ರಿ ತಾಲೂಕು ಪುತ್ತಿಗೆ ಗ್ರಾಮದ ಸಾಮಣಬೆಟ್ಟುಯೆಂಬಲ್ಲಿರುವ ಬಂಟರ ಜಾತಿ ಅಳಿಯ ಸಂತಾನ ಅವಿಭಕ್ತ ಕುಟುಂಬಿಕರು ತಾರೀಕು 25-9 1943ರಲ್ಲು ನಮಗೆ ಬರಕೊಟ್ಟ ಪಂಚಾಯ್ತ್ ಎಗ್ರಿಮೆಂಟ್ ಮೇರೆಗೆ ಸದ್ರಿ ಯಿಡೀ ಕುಟುಂಬಕ್ಕಿರುವ ಸಾಲ ನಿವಾರಣೆಯ ಬಗ್ಗೆ ಸದ್ರಿ ಎವಾರ್ಡು ಪಂಚಾಯ್ತ್‌ದಾರರಾಗಿ ನಾವು ಸದ್ರಿ ಕುಟುಂಬದ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಗಳನ್ನು ಬಹಿರಂಗವಾಗಿ ತಾರೀಕು 8-9-1944ರಲ್ಲು ಸಾಯಂ ಗಂಟೆ 5ಕ್ಕೆ ನಮ್ಮ ಪೈಕಿ ಶ್ರೀ| ಬಿ| ಬಿ| ಸೆಟ್ಟಿ, ಎಡ್ವಕೇಟ್, ಯವರ ಕಾರ್ಕಳದಲ್ಲಿರುವ ಆಫೀಸಿನಲ್ಲಿ ಬಹಿರಂಗವಾಗಿ ಕೆಳಗೆ ಕಾಣಿಸಿದ ಶರ್ತಗಳಿಗೆ ಒಳಪಟ್ಟು ಯೇಲಂ ಮಾಡುವವರಾಗಿ ಸರ್ವ ಜನರಿಗೂ ಈ ಮೂಲಕ ತಿಳಿಸಿದ್ದೇವೆ.

ಮಾರಾಟದ ಶರ್ತಗಳು

1 ಕೆಳಗೆ ಕಾಣಿಸಿದ ಆಸ್ತಿಗಳಲ್ಲಿ ನಮಗೆ ತಿಳಿದಮಟ್ಟಿನ ಆಸ್ತಿಗಳ ಮೇಲಣ ಜವಾಬ್ದಾರಿಕೆಗಳನ್ನು ಕಾಣಿಸಿಯದೆ. ಮಿಕ್ಕ ಜವಾಬ್ದಾರಿಕೆಗಳೇನಾದರೂ ಯಿದ್ದರೆ, ಅದನ್ನು ದರಕಾಸ್ತುದಾರನೇ ನೋಡಿಕೊಳ್ಳತಕ್ಕದ್ದು. ಹಾಗೆ ತಿಳಿದುಕೊಂಡೇ ಆತನ ದರಖಾಸ್ತಿಗೆ ನಿಂತದ್ದಾಗಿ ಎಣಿಸಲಾಗುವುದು

2 ದರಕಾಸ್ತುದಾರನು ಆಸ್ತಿಯ ನಿರ್ಣಯಿಸಿದ ಅಂದಾಜು ಕ್ರಯಕ್ಕಿಂತ ಹೆಚ್ಚಿಗೆ ಏವೇಜಿಗೆ ಮಾತ್ರ ನಿಲ್ಲಬೇಕು. ಅತ್ಯಧಿಕ ಏವೇಜಿಗೆ ನಿಂತ ದರಕಾಸ್ತುದಾರನ ಹೆಸರಲ್ಲಿ ಯೇಲಂ ಕಾಯಂ ಮಾಡಲ್ಪಡುವುದು ಆದರೆ ಯೇಲಂ ಕಾಯಂ ಮಾಡುವ ಯಾ ನಿರಾಕರಿಸುವ ಯಾ ಮುಂದುವರಿಸುವ ಯಾ ಹೆಚ್ಚು ಲೋಟುಗಳನ್ನು ಒಂದೇ ಲೋಟನ್ನಾಗಿ ಯೇಲಂ ಮಾಡುವ ಯಾ ಒಂದು ಲೋಟನ್ನು ಹೆಚ್ಚು ಲೋಟುಗಳನ್ನಾಗಿ ವಿಂಗಡಿಸಿ ಯೇಲಂ ಮಾಡುವ ಯಾವತ್ತೂ ಅಧಿಕಾರ ವ ಸ್ವತಂತ್ರವನ್ನು ನಾವು ಯಿಟ್ಟುಕೊಂಡಿದ್ದೇವೆ ಪ್ರತಿ ಒಂದು ಏರಿಸುವಿಕೆಯೂ ರೂ-5/-ಕ್ಕಿಂತ ಕಡಿಮೆ ಆಗಕೂಡದು

3 ನಮಗೆ ಯುಕ್ತ ತೋರಿದಲ್ಲಿ ಇಲ್ಲಿ ಪ್ರಕಟಿಸಿದ ಯಾವುದೇ ಆಸ್ತಿಯನ್ನು ಯಾ ಅದರ ಅಂಶವನ್ನು ಯೇಲಂ ಮಾಡುವುದನ್ನು ನಿಲ್ಲಿಸಿ, ಇಲ್ಲಿ ಪ್ರಕಟಿಸಿದ ಸದ್ರಿ ಕುಟುಂಬದ ಯಿತರ ಆಸ್ತಿಗಳ ಪೈಕಿ ನಮಗೆ ಯುಕ್ತ ತೋರುವ ಆಸ್ತಿಯನ್ನು ಸದ್ರಿ ಸಮಯದಲ್ಲಿ ಏಲಂಮಿಗೆ ತರುವ ಅಧಿಕಾರ ಸ್ವತಂತ್ರಗಳನ್ನು ನಾವು ಯಿಟ್ಟುಕೊಂಡಿರುತ್ತೇವೆ.

4 ದರಕಾಸ್ತುದಾರನು ತನ್ನ ಹೆಸರಲ್ಲಿ ಮ ಊರ. ವಾರು ಕಾಯಂ ಆದ ಆಸ್ತಿಯ ಏವೇಜನ್ನು, ಕೂಡಲೇ ನಮಗೆ ತೆರತಕ್ಕದ್ದು. ಯಾವನೊಬ್ಬ ದರಕಾಸ್ತುದಾರನಿಗೂ ದರಕಾಸ್ತು ಕಾಯಂ ಮಾಡುವ ತನಕ ತನ್ನ ದರಕಾಸ್ತು ಹಿಂತೆಗೆಯುವ ಹಕ್ಕಿರುವುದಿಲ್ಲ.

5 ದರಕಾಸ್ತುದಾರನು ತನ್ನ ವಿಕ್ರಯದ ಕ್ರಯಚೀಟಿನ ರಸ್ಮ, ರಿಜಿಸ್ತ್ರಿ ಫೀಸು, ವಗೈರೆ ಮುಂತಾದ ಸಮಸ್ತ ಖರ್ಚನ್ನು ತಾನೇ ವಹಿಸಿಕೊಳ್ಳತಕ್ಕದ್ದು. ಮತ್ತು ಕ್ರಯಚೀಟನ್ನು ಬರಿಸಿ ತಕ್ಕ ಸಮಯದಲ್ಲಿ ಪಡಕೊಳ್ಳುವ ಜವಾಬ್ದಾರಿಯು ದರಕಾಸ್ತುದಾರನದ್ದೇ ಆಗಿರುತ್ತದೆ.

6 ದರಕಾಸ್ತುದಾರನು ಯೇಲಂಮಿಗೆ ಹಾಕಿದ ಆಸ್ತಿಯ ಬಗ್ಗೆ ಮುಂದಿನ ಯೆಲ್ಲಾ ತೀರ್ವೆ-ಸೆಸ್ಸು ಮುಂತಾದ್ದನ್ನು ಕೊಡಲುಬದ್ಧನು. ಯೇಲಂವಿನ ಏವೇಜು ಸಂಪೂರ್ಣ ಸಲ್ಲಿಸಿದ ವಿನಹ ದರಕಾಸ್ತುದಾರನಿಗೆ ಆಸ್ತಿಯಲ್ಲಿ ಯಾವ ತರದ ಹಕ್ಕು ಇರುವುದಿಲ್ಲ.

ಏಲಂ ಆಗತಕ್ಕ ಆಸ್ತಿಗಳ ವಿವರ

ದ| ಕ| ರಿ| ಕಾರ್ಕಳ ಸ| ಡಿ| ಗೆ ಸೇರಿದ ಕಾರ್ಕಳ ತಾಲೂಕು ಮರಪಾಡಿಗ್ರಾಮದ ಬಾಬ್ತು -

ಐಟಮು ನಂಬ್ರ	ಸ| ನಂಬ್ರ	ಸ| ಡಿ| ನಂಬ್ರ	ಕ್ಲಾಸಿ	ವಿಸ್ತೀರ್ಣ	ತೀರ್ವೆ
I	76	1	ನಂಜ II ಪಟ್ಲ	3 40	18-12-0

ಪರಾ—ಬೆದ್ರುಮಾರು ಕಂಬ್ಳ ಎಂಬ ಗದ್ದೆ. ಇದಕ್ಕೆ 40 ಮುಡಿ ಅಕ್ಕಿ ಗೇಣಿಯಿರುತ್ತದೆ. ಸದ್ರಿ ಗದ್ದೆಯು ಸಾಮಣಬೆಟ್ಟು ಭಾಗದವರು ೨ಪಾಡಿ, ಯಿನ್ನೊಂದು ಭಾಗವು ಈಗ ಒಪ್ಪದ 1941ನೇ ಯಿಸವಿ ಮಾಲ್ಚಿ ಬಹುಳ 30ರಲ್ಲು ಬಿಂಹಿತ ಪಡಿಸಿ, ನಿರ್ವಿವಾದವಾಗಿ ಸ್ವಾಧೀನಪಡೆಯಬಹುದಾದ ರೂಪಾಯಿ 700)– ಭೋಗ್ಯಾದಿ ಸಾಲಕ್ಕೆ ಒಳಪಟ್ಟಿರುತ್ತದೆ. ಸದ್ರಿ ಗದ್ದೆಯು ಆ ನಿಮಿತ್ತ ಈಗ ಭೋಗ್ಯಾದಿದಾರನ ಸ್ವಾಧೀನವಿರುತ್ತದೆ.

ಸದ್ರಿ ಸ| ಡಿ|ಗೆ ಸೇರಿದ ಸದ್ರಿ ತಾಲ್ಲೂಕು ಬೆಳುವಾಯಿ ಗ್ರಾಮದ ಬಾಬ್ತು —

ಐಟಮು ನಂಬ್ರ	ಸ| ನಂಬ್ರ	ಸ| ಡಿ| ನಂಬ್ರ	ಕ್ಲಾಸಿ	ವಿಸ್ತೀರ್ಣ	ತೀರ್ವೆ
II	44	1	ನಂಜ II ಪಟ್ಲ	2 60	17 9 0

ಪರಾ—ಅಂಬು೨ ಪಟ್ಲಗದ್ದೆ. ಇದಕ್ಕೆ ವರ್ಷಾವಧಿ ಅಕ್ಕಿ ಮುಡಿ 32 ಗೇಣಿಯಿರುತ್ತದೆ.

ಐಟಮು ನಂಬ್ರ	ಸ| ನಂಬ್ರ	ಸ| ಡಿ| ನಂಬ್ರ	ಕ್ಲಾಸಿ	ವಿಸ್ತೀರ್ಣ	ತೀರ್ವೆ
III	37	7	ನಂಜ II ಪಟ್ಲ	0-73	4-15-0

ಪರಾ—ಕೆಸ್ರುಗದ್ದೆ, ಪಟ್ಲ ಎಂಬ 8 ಮುಡಿ ಅಕ್ಕಿ ಗೇಣಿ ಬರುವ ಗದ್ದೆ,

ಐಟಮು ನಂಬ್ರ	ಸ| ನಂಬ್ರ	ಸ| ಡಿ| ನಂಬ್ರ	ಕ್ಲಾಸಿ	ವಿಸ್ತೀರ್ಣ	ತೀರ್ವೆ
IV	29	2	ನಂಜ I	0-58	4 14 0
		12	ನಂಜ II	0 37	3 2 0

ಪರಾ—ಚಿಕ್ಕಯ್ಯಾಚಾರಿ ಬೈಲು ಗದ್ದೆ ವಡಿಗಳು 2. ಸದ್ರಿ 2 ವಡಿಗಳಿಗೆ ವರ್ಷಾವಧಿ ಗೇಣಿ ಅಕ್ಕಿ ಮುಡಿ 8.

ಮೊಕ್ಕಾಂ: ಕಾರ್ಕಳ,
ತಾರೀಕು 19-8-1914

B B. Shetty, *Advocate*,
K. M. Hegde, *Vakil*,
ಪಂಚಾಯ್ತ್‌ದಾರರು.

Sidha-Kalpa Kavach (Regd.)
No 3 Rs 2 No 2 Rs 5 No. 1 Rs 7 Special Rs 10, Extra Special Rs 17 of over marriage health wealth, Ask any six questions with M O Re 1/4 and get correct answers by return,post Life reading Rs,10No,V, or Send M, O Free, pmplets.
Prof, Dr. N, H Chhatbar,,
P. O. MAHUVA (Kathiawar India.)

'ಮುಂಬಯಿ'ಯ ಮೂಲವೆಲ್ಲಿ?

(ಕಳೆದ ಸಂಚಿಕೆಯಿಂದ ಮುಂದುವರಿದುದು).

ಕನ್ನಡಿಗರಾದ ಶಿಲಹಾರರ ನಾಡು

ಶಿಲಾಶಾಸನಗಳ ಆಧಾರದಿಂದ ೧೧ನೇ ಶತಮಾನದಲ್ಲಿ ಈಗಿನ ಮುಂಬಯಿ ಮತ್ತು ಅದರ ಹತ್ತಿರದ ನಾಡುಗಳನ್ನು ಆಳುತ್ತಿದ್ದವರು ಶಿಲಹಾರ ವಂಶದ ಅರಸರೆಂದು ಗೊತ್ತುಹಚ್ಚಲಾಗಿದೆ. ಈ ಶಿಲಹಾರ ಮನೆತನ ಮೂರು ಕವಲುಗಳಾಗಿ ಒಡೆದಿದ್ದು ದಕ್ಷಿಣ ಕೊಂಕಣದ ಶಿಲಹಾರರು, ಉತ್ತರ ಕೊಂಕಣದವರು ಮತ್ತು ಕರಾಡ ಕೊಲ್ಹಾಪುರದವರೆಂದು ಹಬ್ಬಿತ್ತು. ಮುಂಬಯಿ ಮತ್ತು ಅದಕ್ಕೆ ಹೊಂದಿದ ನಾಡುಗಳನ್ನು ಆಳಿದವರು ಉತ್ತರ ಕೊಂಕಣದ ಶಿಲಹಾರರು.

ಶಿಲಹಾರ ವಂಶ ಶುದ್ಧ ಕನ್ನಡಿಗರದು. ಉತ್ತರ ಕೊಂಕಣದ ಶಿಲಹಾರರ ಇತಿಹಾಸ ೭ನೇ ಶತಮಾನದ ವರೆಗೂ ಜ್ಞಾತವಾಗಿದೆ. ಅವರು ಸಾಧಾರಣವಾಗಿ ಠಾಣಾ ಪಟ್ಟಣದಿಂದ ಆಳುತ್ತಿದ್ದರು. ಆದರೆ ಒಮ್ಮೊಮ್ಮೆ ಆಗ ಪುರಿ ಎಂದು ಪ್ರಸಿದ್ಧವಾಗಿದ್ದ ಈಗಿನ ಎಲಿಫೆಂಟಾ (ಮುಂಬಯಿಯ ಸಮೀಪದ) ವೂ ಅವರ ರಾಜಧಾನಿಯಾಗಿದ್ದದುಂಟು ಅನೇಕ ವರ್ಷಗಳ ಹಿಂದೆ ಉಪಲಬ್ಧವಾಗಿ ಈಗ ಕಳೆದು ಹೋಗಿರುವ ತಾಮ್ರ ಶಾಸನವೊಂದು ಟಗರಾದಲ್ಲಿರುವ ಒಂದು ರೇವು ಎಂದು ''ಮಂಬಣಿ''ಯನ್ನು ಉಲ್ಲೇಖಿಸಿತ್ತೆಂದು ಹೇಳಲಾಗಿತ್ತು. ಅದಂತಿರಲಿ.

ಉತ್ತರ ಕೊಂಕಣದ ಶಿಲಹಾರರಲ್ಲಿ ಮುಮ್ಮಣಿ, ಮುಂಬಣಿ ಮಾಮ್ವಣಿ, ಮುಮ್ಮುರಿ, ಮತ್ತು ಮುಂವಣಿ ಎಂಬ ವಿಧವಿಧ ಹೆಸರುಗಳಿಂದ ಪ್ರಸಿದ್ಧರಾದ ಇಬ್ಬರು ಅರಸರಿದ್ದರು. ಅವರಲ್ಲಿ ಮೊದಲನೆ ಮುಮ್ಮಣಿಯನ್ನು ಪಶ್ಚಿಮ ಚಲುಕ್ಯ ಚಕ್ರವರ್ತಿ ಎರಡನೇ ಪುಲಿಕೇಶಿ ಯುದ್ಧದಲ್ಲಿ ಕೊಂದನು. ಎರಡನೇ ಮುಮ್ಮಣಿಗೆ ಅದೇ ಚಲುಕ್ಯ ವಂಶದ ಎರಡನೇ ಸೋಮೇಶ್ವರನಿಂದ ಪರಾಭವವೊದಗಿತು.

ಉತ್ತರ ಕೊಂಕಣದ ನಾಡೆಲ್ಲ ಹಿಂದೆ ಬೌದ್ಧ ಧರ್ಮಕ್ಕೆ ಆಶ್ರಯವಾಗಿತ್ತೆಂದೂ ಆ ಜಾಗದ ಶಿಲಹಾರ ರಾಜರೂ ನಿಷ್ಠರಾದ ಬೌದ್ಧರಾಗಿದ್ದರೆಂದೂ ಹಲವು ...ದಿಂದ ಸಿದ್ಧವಾಗಿದೆ. ಆದ್ದರಿಂದ ಅವರಿಬ್ಬರೂ ಬೌದ್ಧ ಸ್ಥಳದೇವತೆಯಾದ ಮುಂಬಣಿಯ ಹೆಸರನ್ನೇ ಇಟ್ಟುಕೊಂಡಿದ್ದರೆಂದು ಭಾವಿಸುವದು ತಪ್ಪಾಗಲಾರದು

ಮುಮ್ಮಣಿ, ಮುಮ್ಮುಣಿ, ಮಾಂವಣಿ, ಮುನ್‌ಬಣಿ, ಮುಮ್ಮುರಿಯೆಂಬೀ ಶಬ್ದಗಳೆಲ್ಲ ಅಚ್ಚ ಕನ್ನಡದವು. ಮುಂ ಅಥವಾ ಮುನ್ ಎಂಬ ಶಬ್ದಗಳು ಮುಂದೆ ಅಥವಾ ಮೊದಲು ಎಂಬರ್ಥದವು. ಮಣಿ ಎಂಬ ಶಬ್ದ ರತ್ನಾರ್ಥಕವಾದುದು. ಮುಮ್ಮಣಿಯೇ ಮುಂಬಣಿ ದೇವಿ ಯೆಂದು ಮಾರ್ಪಟ್ಟಿರಬೇಕು. ಬೌದ್ಧ ಧರ್ಮದ ಪ್ರಾಮುಖ್ಯ ದೇವತೆಗೆ ದೇವತಾ ಶಿರೋಮಣಿಯೆಂಬರ್ಥದಲ್ಲಿ ಈ ಹೆಸರಿಟ್ಟಿರುವುದು ಸ್ವಾಭಾವಿಕ ಮತ್ತು ಉಚಿತವೇ ಇದೆ. ಅಥವಾ ಮುಂಬಣಿ ಶಬ್ದವನ್ನು ಮುನ್-ಬನಿ ಯೆಂದು ವಿಂಗಡಿಸಬಹುದು. "ಬನಿ" ಎಂದರೆ ''ವಸ್ತು''ವೆಂದರ್ಥ. ಇನ್ನು ಮುಮ್ಮುರಿ ಎಂದರೆ ಸುಡುವ ಉರುಬೆಂದು ಅರ್ಥವಾಗುತ್ತದೆ. ಶತ್ರುಗಳಿಗೆ ಮುಮ್ಮುರಿಯಂತೆ ಎಂಬುದು ಕನ್ನಡ ಅರಸರು ಹೆಮ್ಮೆಯಿಂದ ಇಟ್ಟುಕೊಳ್ಳುವ ಅಭಿದಾನ.

ಇದಿಷ್ಟು ಆ ಅರಸರ ಹೆಸರುಗಳ ಕನ್ನಡ ಮೂಲವನ್ನು ಕುರಿತು. ಅದರೆ ಇಂಥ ಹೆಸರನ್ನು ಕನ್ನಡಿಗರು ಇಟ್ಟುಕೊಳ್ಳುತ್ತಿದ್ದರೆಂಬುದನ್ನೂ ಸುಲಭವಾಗಿ ತೋರಿಸಬಹುದು. ಮುಮ್ಮಾಯಿ ಅಥವಾ ಮೊಮ್ಮಾಯಿ ಎಂಬ ಹೆಸರು ಕೋಲಾರ ಜಿಲ್ಲೆ (ಮೈಸೂರು)ಯ ೧೫೩೪ರ ಶಾಸನವೊಂದರಲ್ಲಿ ಬರುತ್ತದೆ. ಮುಮ್ಮಣಿ ಮತ್ತು ಮುಮ್ಮಾಯಿ ಎಂಬವು ಒಂದು ಇನ್ನೊಂದರ ಅಪಭ್ರಂಶ, ಇಷ್ಟೆ.

ಈಸ್ಟ ಇಂಡಿಯಾ ಕಂಪೆನಿಯ ಹುಕುಮು ಕನ್ನಡದಲ್ಲಿ

ಇನ್ನು ಮುಂಬಯಿಯಲ್ಲಿ ಸಮಾಪದ ನಾಡು ಕನ್ನಡಿಗರದಾಗಿತ್ತೆ? ಪ್ರಾಚೀನ ಕರ್ನಾಟಕದ ಉತ್ತರ ಮೇರೆ ಮುಂಬಯಿಯಿಂದಲೂ ಆಚೆಗೆ ಚಾಚಿತ್ತೆಂದು ನಾವು ಲಕ್ಷಿಸಬೇಕಾಗಿದೆ. ಅಷ್ಟೇ ಏಕೆ? ೧೭ನೆಯ ಶತಮಾನದ ವರೆಗೂ ಮುಂಬಯಿಯ ಸುತ್ತಲೆಲ್ಲ ಕನ್ನಡವೇ ದೇಶಭಾಷೆಯಾಗಿತ್ತೆಂಬುದನ್ನು ಈಸ್ಟ್ ಇಂಡಿಯಾ ಕಂಪನಿಯ ಸುರತ ಕಾರಖಾನೆಯ ಲಿಖಿತಗಳಿಂದ ಸ್ಥಾಪಿಸಬಹುದು. ಏಕೆಂದರೆ ೧೬೭೦ರಲ್ಲಿ ಮುಂಬಯಿ ದ್ವೀಪದ ಆಡಳಿತೆಯನ್ನು ವಹಿಸಿಕೊಂಡ ಕಂಪನಿಯ ಸುರತ ಕೌನ್ಸಿಲಿನಲ್ಲಿ ಸರಕಾರದ ನಾಗರಿಕ ಮತ್ತು ಇತರ ಕಾಯಿದೆಗಳನ್ನು ಆದಷ್ಟು ಬೇಗನೆ ಪೋರ್ತುಗೀಜ ಮತ್ತು "ಕನರಿನ್" (Canarin) ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸಬೇಕೆಂದು ನಿರ್ಣಯವಾಗಿತ್ತೆಂದು ಓದುತ್ತೇವೆ. ಆದರೆ ಪಾಶ್ಚಿಮಾತ್ಯ ಇತಿಹಾಸಕಾರರು "ಕನರಿನ್" ಎಂದರ ಸುತ್ತಣ ನಾಡಿನ ಕೊಂಕಣಿಯೆಂದು ತಪ್ಪು ಅರ್ಥ ಮಾಡಿದ್ದಾರೆ. "ಕನರಿನ್" ಎಂದರೆ ಕನ್ನಡವಲ್ಲದ ಬೇರಲ್ಲವೆಂದು ಧೈರ್ಯವಾಗಿ ಹೇಳಬಹುದು ೧೬ನೆಯ ಶತಮಾನದಿಂದಲೂ ಯುರೋಪಿಯನರೆಲ್ಲ ಕನ್ನಡವನ್ನು ಕನರಾ ಎಂದೇ ಸಂಬೋಧಿಸಿದ್ದಾರೆ.

ಫ್ರಯರರು ಹೊನ್ನಾವರವನ್ನು ಕುರಿತು ಬರೆಯುತ್ತ, ಅದನ್ನು 'ಪೋರ್ತುಗಾಲರು ಕಟ್ಟಿದರು ಮತ್ತು ಕನರೀನರು ಅವರಿಂದ ಡಚ್ಚರ ಸಹಾಯದಿಂದ ಕಿತ್ತುಕೊಂಡರು" ಎಂದು ಬರೆದುದರಿಂದ ಮೊದಲಿಗರಾದ ಇಂಗ್ರೇಜರು ಕನರೀನರೆಂಬು ಕನ್ನಡಿಗರನ್ನೇ ಹೊರತು ಇತರರನ್ನು ಸಂಬೋಧಿಸಲಿಲ್ಲೆಂದು ಸ್ಪಷ್ಟವಾಗುತ್ತದೆ. ಮುಂಬಯಿ ದ್ವೀಪದ ಕಾಯಿದೆಯನ್ನು ಕನರೀನ್ ಭಾಷೆಯಲ್ಲಿ ಅನುವಾದಿಸಿ ಪ್ರಕಟಿಸಬೇಕೆಂದು ಹೇಳಿರುವಾಗ ಆ ದ್ವೀಪ ಮತ್ತು ಅದರ ಸುತ್ತು ಮುತ್ತ ಕನ್ನಡವೇ ಪ್ರಚಲಿತವಾಗಿತ್ತೆಂದು ಬೇರೆ ಹೇಳಬೇಕಿಲ್ಲ.

ಪ್ರಸಿದ್ಧ ಉತ್ತರ ಕೊಂಕಣ ಶಿಲಹಾರರ ರಾಜಧಾನಿಗೆ ಸಮೀಪವಾಗಿದ್ದ ಮತ್ತು ಅವರ ಆರಾಧ್ಯ ದೇವತೆಯ ಆವಾಸವಾಗಿದ್ದ ಈ ದ್ವೀಪ ಮೊದಲು ಏಕೆ ಪ್ರಸಿದ್ಧಿಗೆ ಬರಲಿಲ್ಲ? ಅದಕ್ಕೆ ಹಲವು ಕಾರಣಗಳಿವೆ. ಚಾಲುಕ್ಯ-ಶಿಲಹಾರರ ಯುದ್ಧ ಮತ್ತು ಮುಂಬಣಿ ದ್ವೀಪ ಮನುಷ್ಯನಿವಾಸಕ್ಕೆ ಅಯೋಗ್ಯವೆನಿಸುವಷ್ಟು ರೋಗನಿವಾಸವಾಗಿದ್ದುದು ಮೊದಲಾದ ಹಲವು ಕಾರಣಗಳನ್ನು ಹೇಳಬಹುದು. ಅಷ್ಟೇಕೆ, ೧೭೭೦ರ ವರೆಗೆ "ಎರಡು ಮಳೆಗಾಲಗಳನ್ನು ಸಜೀವವಾಗಿ ಕಳೆಯಲು ಸಾಧ್ಯವಿಲ್ಲ" ಈ ದ್ವೀಪದಲ್ಲಿ ಎಂದು ಪ್ರಸಿದ್ಧಿಯಿತ್ತು. ಇಂಗ್ಲೀಷರೂ ಮೊದಲು ಇದನ್ನು ದೊಡ್ಡ ಕೇಂದ್ರವಾಗಿ ಮಾಡುವುದು ಅಸಾಧ್ಯವೆಂದೇ ಭಾವಿಸಿದ್ದರು. -ಕಮಾನರಿಂದ

ಅಪಾಯಕರವಾದ ಪ್ರಯಾಣ

ಮಾಡುವದರಲ್ಲಿ ಎಚ್ಚರಿಕೆ!

ಈ ನಿಯಮವನ್ನು ನಿರಾಕರಿಸುವಿರಾದರೆ, ನಿಮ್ಮ ಪ್ರಾಣಹಾನಿಯಾಗಬಹುದು. ಈಚೆಗೆ ಗಾಡಿಗಳು ವಿಶೇಷವಾಗಿ ಭರ್ತಿಯಾಗಿರುವದರಿಂದ ನಿಮಗೆ ಕೆಲವು ಸಮಯಗಳಲ್ಲಿ ಒಳಗೆ ಪ್ರವೇಶಮಾಡಲು ಸಹಿತ ಸಾಧ್ಯವಿರುವದಿಲ್ಲ. ಆದರೆ, ಹೊರಗಡೆ ಗಾಡಿಯ ಮೆಟ್ಟಿಲಿನ ಮೇಲೆ ನಿಂತು ಪ್ರಯಾಣಮಾಡುವ ಅಪಾಯಕರವಾದ ಪ್ರಯಾಸಕ್ಕೆ ಬೀಳಬೇಡಿರಿ. ಅದು ಕಾಯಿದೆಗೆ ವಿರುದ್ಧವಾದದ್ದು. ಅದರಿಂದ ಭೀಕರವಾದ ಅಪಘಾತವಾಗಲಿ, ಪ್ರಾಣಹಾನಿಯಾಗಲಿ ಸಂಭವಿಸಬಹುದು.

ಗಾಡಿಗಳ ಒಂದು ಪಕ್ಕಕ್ಕೂ, ರೈಲುಮಾರ್ಗದಲ್ಲಿ ಸಿಕ್ಕುವ ಸುರಂಗಮಾರ್ಗಗಳ ಗೋಡೆಗಳಿಗೂ ಅಥವಾ ಕಂಬಗಳಿಗೂ ಇರುವ ಅಂತರವು ಬಹಳಸ್ವಲ್ಪ. ರೈಲುಗಾಡಿಯು ವೇಗದಿಂದ ಹೋಗುತ್ತಿರುವಾಗ ನಿಮ್ಮ ದೇಹವು ಇವು ಯಾವದೊಂದಕ್ಕಾದರೂ ಒಡಿಯಿತೆಂದರೆ, ಅದೇ ನಿಮ್ಮ ಕಟ್ಟಕಡೆಯ ಪ್ರಯಾಣವಾಗುವದು.

ಪಿನೇಶಿಗಾಗಿ ಗಾಡಿಯಲ್ಲಿ ಸ್ಥಳವಿಲ್ಲದಿದ್ದರೆ, ಸ್ಟೇಶನ್ನಿನಲ್ಲಿಯೇ ಉಳಿಯಬೇಡಿರಿ. ಅಪಾಯಕ್ಕೆ ಒಳಗಾಗಬೇಡಿರಿ. ನಿಮಗೆ ಪ್ರಯಾಣಮಾಡಲು ಸಾಧ್ಯವಿಲ್ಲದಿದ್ದರೆ, ಇದನ್ನು ನೆನಪಿನಲ್ಲಿಡಿ—ರೈಲ್ವೆಯವರು ಮುಖ್ಯಕರ್ತವ್ಯವು ದೇಶದ ಎಲ್ಲಾ ಭಾಗಗಳಿಗೂ ಆಹಾರ ಸರಬರಾಜು, ಬಟ್ಟೆ ಮತ್ತು ಸಾಧನ ವಸ್ತುಗಳನ್ನು ಒದಗಿಸಿ ಕೊಡುವದು.

ಕಡಮೆಯಾಗಿ ಪ್ರಯಾಣಮಾಡಿರಿ

AAA 683 KN ಮತ್ತು ಅಪಾಯಕರವಾದ ರೀತಿಯಲ್ಲಿ ಎಂದಿಗೂ ಪ್ರಯಾಣಮಾಡದಿರಿ.

The Pangal Nayak Bank Limited.

(Incorporated in 1920)

Registered Office Court Road, UDIPI

Branches at— Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices.

1st April 1944

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯುವಾಗಿದ್ದರೆ, .. ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸರ ತಕ್ಕೊಳ್ಳಬೇಕು. ಮುಂದೆ ದಿನ ದಿವಸ ಬೆಳಿಗ್ಗೆ ಒಂದೇ ಸಾರ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ,, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ.-ಗದಗ ಫಾರ್ಮಸಿ, ಹುಬ್ಬಳ್ಳಿ.-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ.— ಬಾಗಲಕೋಟೆ ಫಾರ್ಮಸಿ, ಧಾರವಾಡ.—ಧಾರವಾಡ ಫಾರ್ಮಸಿ, ದಾವಣಗೇರಿ-ದಾವಣಗೇರಿಪ್ರೇಸ್ ಪತ್ರ ವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya GADAG.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ಸ್ಮರ್ಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರ ದ್ರವ ರಸಾಯನ ಅಲ್ಪ ಮೌಲ್ಯದಿಂದ ಒಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

ಎರಡು ಬಾಟ್ಲಿಗಳು ಹತ್ತು ಕಡಿಮೆ ಉದಿವಸಗಳಿಗೆ ಬರುವವು, ಅಂದರೆ ಕೇವಲ ಆರೂವ್ಯಾಗಳೇ ಒ... ಎಣಿಕೆತನಕ್ಕೆ ... ಕಾಗುವವು, ವಿಶೇಷ ವಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ. ಕ

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷದಿಗಳು ದೊರೆಯುತ್ತವೆ, ಕ್ಯಾಲೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷದಿ ದವಾನ್ನಿಬಹುದು. ಉಡಪಿ ಏಜಂಟರು: — ನವಭಾರತ ಬುಕ್ ಡಿಪೋ

THE VIJAYA BANK, LTD.

Head office: MANGALORE.

Glad to announce that a Branch of the Bank has been opened at 321 **Thakurdwar, Bombay,** on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ 15-6-44ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿರುವುದು.

ದಿ ವಿಜಯಾ ಬೇಂಕ್ ಲಿಮಿಟೆಡ್

REGD

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೊಡವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಯುರುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಎರಡನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. **1—8—0** ಮಾತ್ರ

ಬೈಂಡು ಮಾಡಿದ ಪ್ರಥಮ ಸಂಪುಟಕ್ಕೆ ರೂ. **2—8—0**

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

CHAMPAE'S

Snow & Castrex

(Sole Distributers for (India.)

Sukhananda Stores

Santhekatte, UDIPI, S. K.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣ ಅಥವಾ ಇನ್ನಾವ ಕಾರಣವಿದ್ದರೂ 'ಕುಮಾರಿ' (Govt Regd). ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ. ಕೆಲವೇ ಗಂಟೆಗಳಲ್ಲಿ ಸರಿಯಾಗೊದುವುದು, ಬೇಕಾದಾಗ ಗರ್ಭಧಾರಣೆಯನ್ನು ಸಿದ್ಧಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕೈವಿಡಾದ ಕೇಸುಗಳಿಗೆ ರೂ 5, (ವಿ.ಪಿ.12 ಆಣೆ ಅಲಾಯಿದ) Mrs P. DEVEE, 1, D. S (N) Tollygunge Calcutta ಸ್ಟಾಕಿಸ್ಟ್ ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ತಾರುಣ್ಯ

ಕೊಟ್ಟು, ವೀರ್ಯಸ್ತಂಭನೆ ಮಾಡಿ ರತಿಸುಖಪಟ್ಟಿ ಆನಂದವನ್ನುಂಟು ಮಾಡಲು ರಮಣ ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

184 ಚೈನ ಬಜಾರ್ ರೋಡ್, ಮದ್ರಾಸು,

ಪುತ್ತೂರು ಏಜಂಟರು, ಶ್ರೀ ಫಾರ್ಮಸಿ

EDITED PRINTED & PUBLISHED BY K H. SHETTY AT THE NAVAYUGA PRESS, UDIPI, S, INDIA